ನವಯುಗ

2—1—1969

೨೦
ಪೈಸೆ

ಕಥಾ ಪ್ರಪಂಚ

ರೋಜಾ ಜಾರಿ ಬಿದ್ದಳು!

ಬರೆದವರು
ಶ್ರೀ ಕೆ. ಸಚ್ಚಿದಾನಂದ ಉಡುಪ.

ಅಮಿತ ಕಾಲು ಚೀಲದ, ಹೊರಬದಿಯಲ್ಲಿ ಜೋತಾಡುತ್ತಿದ್ದ ನೂಲಿನ ಪರಿವೆಯೇ ಇಲ್ಲದವನಂತೆ, ಅದನ್ನು ಹಾಗೆಯೇ ಸಡಿಲಿಸಿ ಮನೆಯಿಂದ ಹೊರ ಓಡುವನು. ಮನೆಯಿಂದ ಹೊರ ಕಾಲಿಡುತ್ತಲೇ ಮಾರ್ಗದ ದೂರದ ವರೆಗೂ ದೃಷ್ಟಿ ಹಾಯಿಸುವನು. ಅವನು ಮಾರ್ಗದ ಒಂದು ತುದಿಯಲ್ಲಿದ್ದರೆ ಮತ್ತೊಂದು ಕೊನೆಯೇ ಇವನು ಕಲಿಯುತ್ತಿರುವ ಶಾಲೆ. ದಾರಿಯಲ್ಲಿ ತುಸು ದೂರದ ವರೆಗೆ ಓಡೋಡುತ್ತಾ ಹೋಗುವನು. ಮತ್ತೆ ಪುನಃ ಮೆಲ್ಲ-ಮೆಲ್ಲನೆ ಹೆಜ್ಜೆಯಿಡುವನು. ಇತ್ತೀಚಿಗಿನ ದಿನಗಳು ಅಮಿತನಿಗೆ ಆ ದಾರಿಯಲ್ಲಿ ನಡೆಯುವುದು ಅಭ್ಯಾಸವಾಗಿ ಬಿಟ್ಟಿದೆ. ಅವನು ಅಮ್ಮನ ಸಹಾಯವಿಲ್ಲದೆ ಶಾಲೆಗೆ ಹೋಗುವನು.

ಅಮಿತನಿಗೆ ಅವನ ಮನಸ್ಸು ಅವಳ ಕಡೆಗೆ ಹೇಗೆ ಹಾರಿತೋ, ಅವಳು ಇವನಿಗೆ ಹೇಗೆ ಹಿಡಿಸಿದಳೋ ತಿಳಿಯದು. ಅಮಿತ, ಅಮ್ಮನಿಗೆ ಒಬ್ಬನೇ ಒಬ್ಬ ಪುಟ್ಟ ಹುಡುಗ. ಅಮಿತನ ಸ್ಕೂಲಿನ ಬಳಿಯಲ್ಲೇ ಹುಡುಗಿಯರ ಕಾಲೇಜು. 'ಕಾಲೇಜು' ಎಂದರೆ ದೊಡ್ಡ ಶಾಲೆಯೆಂದು ತಿಳಿದುಕೊಳ್ಳುವನು. ಅವಳ ವಿದ್ಯಾಭ್ಯಾಸ ಆ ಕಾಲೇಜಿನಲ್ಲಿ. ಅಮಿತ ಅವಳನ್ನು ಸದಾ ಧ್ಯಾನಮಗ್ನನಾಗಿ ನೋಡುವನು.

ಪ್ರಾಯಶಃ ಅವನು ಶಾಲೆಗೆ ಬರುತ್ತಲೇ ಅವಳು ದಾರಿಯಲ್ಲಿ ಸಂಧಿಸುವಳು. ತದನಂತರ ಅಮಿತ ಅವಳ ಹಿಂಬದಿಯಲ್ಲೇ ಮುಂದೆ ಸಾಗುವನು. ಅವನು ಬಾರಿ ಬಾರಿಯೂ ಅವಳ ಬಟ್ಟೆಬರೆ, ನೀಳವಾದ ದೇಹ, ಕೈಯ ಅಂಚುಗಳಲ್ಲಿ ಹಿಡಿದ ಪುಸ್ತಕಗಳ ಕಟ್ಟು— ಇವುಗಳನ್ನೆಲ್ಲಾ ನೋಡುತ್ತಾ ನೋಡುತ್ತಾ ಮುಂದೆ ಸಾಗುವನು. ಕೆಲವೊಮ್ಮೆ ಅವಳು ಅಮಿತನನ್ನು ನೋಡುತ್ತಾ ಮುಗುಳ್ನಗುವಳು. ಆಗ ಅಮಿತ ಅನಾಯಾಸವಾಗಿ ವ್ಯಂಗ್ಯವಾಗಿ ಸಿಳ್ಳು ಬಾಯಿಯಲ್ಲಿ ಹೊಡೆಯಲಾರಂಭಿಸುವನು.

"ಬಹಳ ಸಿಳ್ಳು ಹೊಡೆಯುತ್ತೀಯಲ್ಲೋ ಪುಟ್ಟ, ರೈಲಿನ ಗಾರ್ಡಾಗಿ ಬಿಡು, ಬಹಳ ಚೆನ್ನಾಗುತ್ತೆ" ಎಂದಾಗ ಅಮಿತ ನಾಚಿಕೊಳ್ಳುವನು. ಮಗುದೊಮ್ಮೆ ಅವಳ ಉಡಿಗೆ ತೊಡಿಗೆಗಳ ಮೇಲೆ ದೃಷ್ಟಿ ಹಾಯಿಸುತ್ತಾ ನಗುವನು. ಆವಾಗ ಅವಳ ವರ್ತನೆಯಲ್ಲಿ ಏನೋ ಒಂದು ತರಹದ ಕುತೂಹಲಕಾರಿ ಭಾವನೆ ಮೂಡುವುದು.

"ನಿಮ್ಮ ಹೆಸರೇನು?" ಒಮ್ಮೆ ತುಂಟ ಅಮಿತ ಕೇಳಿಯೇ ಬಿಟ್ಟ.

"ಏಕೆ?....ನನ್ನ ಹೆಸರಾ....?....ರೋಜಾ...."

"ತಾವು ಓದುವುದು ಕಾಲೇಜಿನಲ್ಲಿ?" ಅವಸರ-ಅವಸರವಾಗಿ ನುಡಿಯುವನು. ಅವಳು ತಲೆದೂಗುತ್ತಾ "ಹಾಂ" ಎನ್ನುವಳು.

ಅಮಿತ ಮನಸ್ಸಿನಲ್ಲಿ ಹಲವು ಬಾರಿ ಗೊಣಗುತ್ತಾ ಇರುವನು— "ರೋಜಾ-ಅಮಿತ", "ಅಮಿತ ರೋಜಾ" "ರೋಜಾ...." "ಅಮಿತ...."

ಮಗುದೊಮ್ಮೆ ಕಾಗದದ ಹಾಳೆಯ ಮೇಲೆ "ರೋಜಾ-ಅಮಿತ" ಎಂದು ಅಸ್ಪಷ್ಟವಾದ ದಪ್ಪ ಅಕ್ಷರಗಳಲ್ಲಿ ಬರೆದು ತನ್ನ ಪೆಟ್ಟಿಗೆಯಲ್ಲಿ ಜೋಪಾನವಾಗಿಡುವನು.

ಶಾಲೆಯಿಂದ ಮನೆಗೋಡಿ ಬಂದು ಅಮ್ಮನಲ್ಲಿ "ಅಮ್ಮ, ಅಮ್ಮ, ನಮ್ಮ ಮನೆಯಲ್ಲೊಬ್ಬಳೂ ಹುಡುಗಿಯೇ ಇಲ್ವಲ್ಲಾ?" ಒಂದೊಮ್ಮೆ ಹುಡುಗಿಯಿರುತ್ತಿದ್ದರೆ....ಯಿರುತ್ತಿದ್ದರೆ...?" ಎನ್ನುವನು.

"ಅವಳಿದ್ದರೆ ನೀನೇನು ಮಾಡುವಿ?" ತಾಯಿ ಅಮಿತನಲ್ಲಿ ಕೆನ್ನೆ ಚಿವುಟಿ ಕೇಳುವಳು.

"ಏನೂ ಇಲ್ಲ...." ನಾಚುತ್ತಾ ವ್ಯಂಗ್ಯವಾಗಿ ನುಡಿಯುವನು.

ತಾಯಿಗೇನು ಗೊತ್ತಿತ್ತು ಮುದ್ದು ಮಗನ ಮಾತಿನ ಕುರಿತು?

"ನಮ್ಮ ಮನೆಯಲ್ಲಿ ಹುಡುಗಿಯಿರುತ್ತಿದ್ದರೆ? ಯಾರು ಇರುತ್ತಿದ್ದರೆ....? ರೋಜಾ...? ಅಚ್ಚುಕಟ್ಟಿನ ರೋಜಾ....? ಉಹೂಂ ಯಾರಾದರೂ ಇರುತ್ತಿದ್ದರೆ? ಅವಳ ಜೊತೆಯಲ್ಲೇ ನಿತ್ಯ ಇರುತ್ತಿದ್ದೆ" ಎಂದು ದಿನವಿಡೀ ಯೋಚನೆ ಮಾಡುತ್ತಾ ಇರುತ್ತಾನೆ.

ಅಂದು ಘನ್ನನೆ ಕಾಫಿ ಕುಡಿಯುತ್ತಿದ್ದ ಅಮಿತ ಓಡಿ ಬಂದು ಮನೆಯ ಎದುರುಗಡೆಯ ಮರದೆಡೆಯಲ್ಲಿ ಕೂರಿಕೊಳ್ಳುವನು.

"ಏಕೆ ಹಾಗೆ ಮಾಡ್ತಿ?....ಮರದೆಡೆಯಲ್ಲಿ ಏನಿದೆ ಅಮಿತ.." ತಾಯಿಯೆಂದಾಗ ಅಮಿತ ಕೈಬೆರಳನ್ನು ಬಾಯ ಮೇಲಿಟ್ಟು ಬೆರಳಾಡಿಸುತ್ತಾ "ಛು! ಛ! ಗುಲ್ಲೆಬ್ಬಿಸಬೇಡಮ್ಮಾ...." ಅನ್ನುವನು. ಅವನ ಮನಸ್ಸಿನಲ್ಲಿ "ರೋಜಾ ಬರುವಳು ಎನ್ನುವ ಭಾವನೆ ಮೂಡಿದಾಗ "ಒಂದು........ ಎರಡು....ಮೂರು........ನಾಲ್ಕು......" ಎಂದು ಎಣಿಕೆ ಮಾಡುತ್ತಾ ಕೊನೆಗೆ 'ಇಗೋ ಬಂದಳು' ಅನ್ನುತ್ತಾ ಅಮ್ಮನಿಂದ ಕೈಯನ್ನು ಜಾರಿಸುತ್ತಾ ತನ್ನ ಜಾಗಕ್ಕೆ ಬಂದು ಜಾರಿಬಿಡುವನು. ಮತ್ತೊಮ್ಮೆ ಉತ್ಸಾಹ ಭರಿತನಾಗಿ "ನೋಡಿದಿಯಾ ಅಮ್ಮಾ?...." ಎಂದು ತಾಯಿಯನ್ನು ಕೇಳುವನು.

ತಾಯಿ ನಗುವಳು. "ಹುಚ್ಚ, ಅಲ್ಲಿ ಹುಡುಗಿ ಕಂಡರೆ ನಿನಗೇನು ಪ್ರಯೋಜನ? ನಿನ್ನ ಅವಳ್ಯಾರೋ ಹುಡುಗಿ?" ತಾಯಿಯು ತನ್ನ ಕೆಲಸದಲ್ಲಿ ನಿರತಳಾದಾಗ ಅವಳ ಮಾತು ಕೇಳಿಯೂ ಕೇಳದಂತೆ ವರ್ತಿಸುತ್ತಾ ಮನೆಯಿಂದ ಹೊರಗೆ ಧಾವಿಸಿ ರೋಜಾಳನ್ನು ಸೇರುವನು.

○ ○ ○

ಅಂದು ಜೋರಾಗಿ ಮಳೆ ಸುರಿಯುತ್ತಿತ್ತು. ಅಮಿತ ಕೊಡೆಯ ಹೊರತಾಗಿಯೇ ಶಾಲೆಗೆ ಬರುವನು.

"ಉಹುಂ ತಡವಾಗುತ್ತದೆ......ಪ್ರಾಯಶಃ ರೋಜಾ ಮುಂದೆ ಹೋಗಿರಬೇಕು......" ಮನಸ್ಸಿನಲ್ಲಿಯೇ ಎಣಿಸುತ್ತಾ ದಾರಿಯುದ್ದಕ್ಕೂ ಅತ್ತ ಇತ್ತ ಎಂದು ಅವಳಿಗಾಗಿ ಹುಡುಕುತ್ತಾ ಮಳೆಯಲ್ಲೇ ಓಡಾಡುವನು.

"ಏಯ್! ಅಲ್ಲೇ ನಿಂತಿದ್ದಾಳಲ್ಲಾ ರೋಜಾ. ಅವಳ ಜೊತೆ ಬೇರಿಬ್ಬರು ಗೆಳತಿಯರಿದ್ದಾರೆ. ರೋಜಾ ಕೆಂಪು ಕೊಡೆ ಕೈಯಲ್ಲಿ ಹಿಡಿದಿದ್ದಾಳೆ." ಅಮಿತನ ಮೈಯೆಲ್ಲಾ ಒದ್ದೆಯಾಗುವುದು. ಅವನು ಓಡುವನು. ಸಿಳ್ಳು ಹೊಡೆಯತೊಡಗುವನು. ರೋಜಾಳು ಅಮಿತನನ್ನು ನೋಡಿ ಮುಗುಳ್ನಗುವಳು.

ಅಮಿತನೂ ಅವಳನ್ನೇ ನೋಡುತ್ತಾ ಮುಂದಕ್ಕೆ ಓಡುತ್ತಾ ಮಳೆಗೆ ಒದ್ದೆಯಾಗುವನು. ಮತ್ತೊಮ್ಮೆ ಬೀಳುವನು. ಅದೂ ಎಲ್ಲಿ? ರೋಜಾಳ ಎದುರಿನಲ್ಲೇ! ಆದರೆ ಅವಳು ಸಹಾಯಕ್ಕೆ ಬಾರದೆ ಗೆಳತಿಯರ ಕೂಡೆ ನಗುತ್ತಾ ಮುಂದೆ ಸಾಗುವಳು. ಕಣ್ಣನ್ನು ಅವಳ ಕಡೆಗೆ ಓರೆಗೊಳಿಸಿ ಸುಳ್ಳು ದೃಷ್ಟಿಯಿಂದ ರೋಜಾಳನ್ನು ಮೆಲ್ಲನೆ ನೋಡುವನು. ಅವಳು ಮತ್ತು ಜೋರಾಗಿ ಗೆಳತಿಯರ ಜೊತೆಗೆ ನಗುವಳು. ಅಮಿತನ ಕಣ್ಣಲ್ಲಿ ನೀರು ಹರಿಯಲು ಪ್ರಾರಂಭಿಸಿತು. ಮೆಲ್ಲ ಬಿಕ್ಕಂದೇಳುತ್ತಾ ಕಾಲು ಕುಂಟುತ್ತಾ ಮನೆಗೆ ಬಂದು, ಅಮ್ಮನ ಎದೆಯಲ್ಲಿ ಜೋರಾಗಿ ಕೂಗಲು ಪ್ರಾರಂಭಿಸುವನು. ತಾಯಿ ಗಾಯಕ್ಕೆ ಮದ್ದು ಹಚ್ಚಿ ಹಾಸಿಗೆಯ ಮೇಲೆ ಮಲಗಿಸುವಳು.

"ಅಮ್ಮ ಮನೆಯಲ್ಲಿ ಹುಡುಗಿಯರೇ ಇರಬಾರದು" ಹಾಸಿಗೆಯಲ್ಲಿ ಮಲಗುತ್ತಾ ನುಡಿಯುವನು.

ತಾಯಿ ಕೆಲಸದಲ್ಲಿ ಮಗ್ನಳಾಗಿದ್ದ ಕಾರಣ ಮಗುವಿನ ಮಾತಿನ ಉತ್ತರಕ್ಕೆ ಅವಕಾಶ ಇಲ್ಲದಾಯಿತು.

ತಾಯಿಯಿಂದ ಉತ್ತರ ಬಾರದುದನ್ನು ಕಂಡು "ಅಲ್ವೆ ಟೈಗರ್!" ಎಂದು ಅಮಿತ ಮಂಚದ ಕಾಲಿಗೆ ಕಟ್ಟಿಹಾಕಿದ ನಾಯಿಯ ವೃದ್ಧವಾದ ಬೆನ್ನ ಮೇಲೆ ಕೈಯನ್ನು ಸವರಿಸುತ್ತಾ ತನ್ನ ಮಮತೆಗೆ ಪ್ರಾಶಸ್ತ್ಯವನ್ನೀಯುವನು.

"ಈ ಹುಡುಗಿಯರು ಬಹಳ ಕೆಟ್ಟವರು."

(ಹನ್ನೊಂದನೇ ಪುಟ ನೋಡಿರಿ)

ದಿ ವಿಜಯ ಬ್ಯಾಂಕ್ ಲಿಮಿಟೆಡ್
ಇದರ
ಅಧ್ಯಕ್ಷರು ಡೈರೆಕ್ಟರ್‌ಗಳು,
ಕಾರ್ಯನಿರ್ವಾಹಕ ವರ್ಗದವರು
ಮತ್ತು ನೌಕರರು
ತಮ್ಮೆಲ್ಲ
ಹಿತೈಷಿಗಳಿಗೂ ಪಾಲುದಾರರಿಗೂ
ಮತ್ತು
ಸ್ನೇಹಿತರಿಗೂ



ಹೊಸ
ವರ್ಷ
ಸುಖಪ್ರದ ಮತ್ತು ಸಿದ್ಧಿದಾಯಿ ಆಗಲೆಂದು
ಶುಭಾಶಯಗಳನ್ನು ಅರ್ಪಿಸುತ್ತಾರೆ

ಎಂ. ಸುಂದರರಾಮ ಶೆಟ್ಟಿ
ಅಧ್ಯಕ್ಷ

ಫೋನ್ : 526

ಸಂಪುಟ ೪೮ ಸಂಚಿಕೆ ೧೭

VOL. 48 No. 17

1921 ಸ್ಥಾಪನೆ

ಸ್ಥಾಪಕರು: ದಿ| ಎ. ಬಿ. ಶೆಟ್ಟರು

ಸಂಪಾದಕರು: ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨—೧—೧೯೬೯

ಉಡುಪಿಯ ಕಲಾವೃಂದ

ಒಂದು ಸಾರ್ವಜನಿಕ ಸೇವಾ ಸಂಸ್ಥೆ ಇಪ್ಪತ್ತೈದು ವರ್ಷಗಳ ಕಾಲ ಉಸಿರು ಹಿಡಿದುಕೊಂಡಿರುವುದೇ ವಿಶೇಷದ ಸಂಗತಿ—ಇಂದಿನ ಸ್ಪರ್ಧಾ ಮನೋಭಾವದಿಂದ ತುಂಬಿ ತುಳುಕಾಡುತ್ತಿರುವ ಈ ಜಗತ್ತಿನಲ್ಲಿ. ಸ್ವಯಂ ಆರ್ಥಿಕ ಕಸುವಿಲ್ಲದೆ, ಸರಕಾರದ ಯಾವ ರೀತಿಯ ಸಹಾಯವೂ ಇಲ್ಲದೆ, ಇಂದಿನ ಹೆಚ್ಚಿನ ಜನರುಚಿಗೆ ನಿತ್ಯಜೀವನದಲ್ಲಿ ಬೇಡವಾದ ಕಲೆ, ಸಂಸ್ಕೃತಿ, ಸಾಹಿತ್ಯಾದಿಗಳ ಸೇವೆಯನ್ನು ಮಾಡಲು ಉಡುಪಿಯಂತಹ ಪುಟ್ಟ ನಗರದಲ್ಲಿ ಕಲಾವೃಂದವು ಸ್ವಾತಂತ್ರ್ಯಪೂರ್ವದಲ್ಲಿ ಸ್ಥಾಪನೆ ಹೊಂದಿ ಇದೀಗ ತನ್ನ ಈ ಬೆಳ್ಳಿ ಹಬ್ಬವನ್ನು ಆಚರಿಸಿತು. ತಾ. ೨೭ರಿಂದ ಆರಂಭವಾದ ಈ ಹಬ್ಬವು ಕಲಾವೃಂದದ ಇತಿಹಾಸದಲ್ಲೇ "ನ ಭೂತಃ" ಎಂಬುದಾಗಿ ಕರ್ಣ ರಸಾಯನವಾಗಿ ಕಣ್ಣಿಗೆ ರಮಣೀಯವಾಗಿ ಮನಸ್ಸಿಗೆ ಮಲ್ಲಿಗೆಯಾಗಿ ಬುದ್ಧಿಗೆ ವೇದ್ಯವಾಗಿ ಹೃದಯಕ್ಕೆ ಹೃದ್ಯವಾಗಿ ಭವ್ಯವಾಗಿ ನವ್ಯವಾಗಿ ನಡೆಯಿತು.

ಬೆಳ್ಳಿಹಬ್ಬದ ಉದ್ಘಾಟನೆಯನ್ನು ರಾಜ್ಯದ ಕಂದಾಯ ಮಂತ್ರಿ ಮಾನ್ಯ ರಾಜಲಗಿ ಮಾಡುತ್ತ, ಕಲಾರಾಧನೆಯ ಬಗ್ಗೆ ಜನತಾ ಸರಕಾರ ನೀಡಬೇಕಾದಷ್ಟು ಲಕ್ಷ್ಯ ನೀಡಿಲ್ಲವೆಂದು ಹೇಳುತ್ತ, ಕಲಾವೃಂದಕ್ಕೆ ಏನಾದರೂ ಸರಕಾರಿ ನೆರವು ನೀಡುವಲ್ಲಿ ಪ್ರಯತ್ನ ನಡೆಸುವೆನೆಂದು ಹೇಳಿದರು—ಇದು ಮಂತ್ರಿ ಮಹೋದಯರ ಭಾಷಣ ಮಾತ್ರವಾಯಿತು. ಕಲೆಯ ಬಗ್ಗೆ ಸಂಸ್ಕೃತಿಯ ಬಗ್ಗೆ ಉದ್ದುದ್ದ ಮಾತನಾಡುವ ಮಂತ್ರಿಗಳು ತಮ್ಮ ಸರಕಾರದ ಬೊಕ್ಕಸ ದೇಣಿಗೆಯಿಂದಲೇ ಅವುಗಳ ಉದ್ಧಾರವೆಂದು ತಿಳಿದಿದ್ದರೆ ಅದು ಬರೀ ಭ್ರಾಂತಿ. 'ಅಂತಹ ಸರಕಾರದ ಸಹಾಯ ಬೇಡ; ಜನತೆಯ ಉದಾರ ಸಹಾಯ ಅದಕ್ಕೆ ದೊರೆಯುತ್ತದೆ' ಎಂದ ಶ್ರೀ ಬೈಕಾಡಿ ವೆಂಕಟಕೃಷ್ಣರಾಯರ ಉದಾರ ಹೃದ್ಗತ ಅನುಭವದ ಮೂಸೆಯಿಂದ ಹೊರಬಂದುದು. ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷ ಡಾ. ನಾಗಪ್ಪ ಆಳ್ವರು ಕಲೆ-ಸಂಸ್ಕೃತಿ ಮತ್ತು ಕಲಾವೃಂದದ ಬಗ್ಗೆ ಮಾಡಿದ ವಿಶ್ಲೇಷಣೆ ಅರ್ಥಗರ್ಭಿತವಾಗಿದೆ; ಯಥಾರ್ಥವಾಗಿದೆ. "ಸಂಸ್ಕೃತ ಕಾಲೇಜು ವಿದ್ಯಾರ್ಥಿಗಳಲ್ಲಿ ಲೌಕಿಕ ಜ್ಞಾನವಿಲ್ಲ" ಎಂಬ ಆರೋಪವನ್ನು ದೂರ ಮಾಡುವುದಕ್ಕಾಗಿ; ಅವರಲ್ಲಿ ಪ್ರಾಪಂಚಿಕ ಜ್ಞಾನವನ್ನು ಬೆಳೆಸುವುದಕ್ಕಾಗಿ, ಅವರಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಆದರ ಹುಟ್ಟಿಸುವುದಕ್ಕಾಗಿ ಆರಂಭವಾದ ಉಡುಪಿಯ ಕಲಾವೃಂದ ಆರಂಭದ ಹಲವು ವರ್ಷಗಳಲ್ಲಿ "ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳೇ ಪ್ರಧಾನರಾಗಿರುವ' ಸಂಸ್ಥೆಯಾಗಿ ಉಳಿಯಿತು. ಆದರೆ, ಕಾಲಕ್ರಮೇಣ ಸಂಸ್ಕೃತ ಕಾಲೇಜ್ ಮತ್ತು ಇನ್ನಿತರ ಶಿಕ್ಷಣ ಸಂಸ್ಥೆಗಳ ನಡುವಣ "ಮಾನಸಿಕ ಅಸಮತೋಲನ' ದೂರವಾಗುತ್ತ ಬಂದಂತೆ ಈ ಪರಿಸ್ಥಿತಿ ಬದಲಾಗುತ್ತ ಬಂತು. ರಿಜಿಸ್ಟರ್ಡ್ ಸಂಸ್ಥೆಯಾಗಿ ಪರಿವರ್ತನೆಹೊಂದಿದ ಮೇಲೆ "ನವ ತರುಣ"ರ ಅಧಿಕಾರದ ಕಕ್ಷೆಯೊಳಗೆ ಬಂತು. ಆರಂಭದ ಹತ್ತಾರು ವರ್ಷಗಳಲ್ಲಿ ಉಡುಪಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ, ಕಲೆ—ಸಾಹಿತ್ಯ ತನ್ಮೂಲಕ ಸಂಸ್ಕೃತಿಯ ಪ್ರಚಾರದ ಅಧ್ವರ್ಯುವಾಗಿ ಇದು ದುಡಿದದ್ದನ್ನು ನಾವೆಂದಿಗೂ ಮರೆಯಲಾರೆವು. ಕಾಲಕ್ರಮೇಣ, ಕಾಲೇಜುಗಳು ಪರ್ಯಾಯ ಮಠಗಳು ಮತ್ತಿತರ ಸಂಸ್ಥೆಗಳು ಈ ದಿಸೆಯಲ್ಲಿ ನಿರಂತರವಾಗಿ ಸಾಗತೊಡಗಿದ್ದುವು. "ಕಲಾವೃಂದ" ಮಾಡಬೇಕೆಂದಿರುವ ಕಾರ್ಯಕ್ರಮಗಳು ಇನ್ನಿತರ ಮೂಲಗಳಿಂದ ಉಡುಪಿಯ ಜನತೆಗೆ ದೊರೆಯುತ್ತ ಬಂದುವು. ಆದರೂ ಮಾಸಿಕೋತ್ಸವಾದಿ ಒಂದೆರಡು ಕಾರ್ಯಕ್ರಮಗಳನ್ನು 'ಕಲಾವೃಂದ'ವು ಸಂಯೋಜಿಸುತ್ತಿತ್ತು ಎಂಬುದನ್ನು ನಾವು ನೆನಪಿಡುತ್ತೇವೆ.

"ಕಲಾವೃಂದ'ವು ತನ್ನ ಬೆಳ್ಳಿಹಬ್ಬವನ್ನು ಆಚರಿಸುವಾಗ ಉತ್ತಮ ಕಾರ್ಯಕರ್ತರನ್ನು ಸಹಕಾರವನ್ನು ಪಡೆದಿದೆ. ಶ್ರೀ ಕಾಣಿಯೂರು ಮಠದ ಶ್ರೀ ಶ್ರೀ ವಿದ್ಯಾವಾರಿನಿಧಿ ತೀರ್ಥರು ಸನ್ಯಾಸಾಶ್ರಮವನ್ನು ಸ್ವೀಕರಿಸಿ ೨೫ ವರ್ಷಗಳಾದುವು. ತನ್ನ ಆಶ್ರಮ ಸ್ವೀಕಾರದ ಬೆಳ್ಳಿಹಬ್ಬವನ್ನೇ ಕಲಾವೃಂದದ ಬೆಳ್ಳಿಹಬ್ಬವೆಂದು ತಿಳಿದು ಆಚರಿಸಲು ಸರ್ವಪ್ರಕಾರದ ಉತ್ತೇಜನ ನೆರವು ನೀಡಿದುದು ನಿಜಕ್ಕೂ ಪ್ರಶಂಸನೀಯ. ಶ್ರೀ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀಪಾದರು ಬೆಳ್ಳಿಹಬ್ಬವರ್ಷದಲ್ಲಿ ಕಲಾವೃಂದದ ಅಧ್ಯಕ್ಷರೂ ಆಗಿದ್ದಾರೆ. ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾವ್ ಇವರ ತೆರೆಮರೆಯ ದುಡಿಮೆಯನ್ನೂ ಶ್ರೀಗಳಾದ ಆರ್. ಎಸ್. ಪಾಂಗಣ್ಣಾಯ ಮತ್ತು ಎಸ್. ಬಿ. ಪಾಂಗಣ್ಣಾಯರ ಕಾರ್ಯತತ್ಪರತೆಯನ್ನೂ ಇನ್ನೂ ಹಲವಾರು ಕಾರ್ಯಕರ್ತರ ಪರಿಶ್ರಮ ಪೂರ್ಣ ಸಹಕಾರವನ್ನೂ ಸ್ಮರಿಸಲೇ ಬೇಕು. ಶ್ರೀಪಾದಂಗಳವರು ತನ್ನ ಅಧ್ಯಕ್ಷಾವಧಿಯಲ್ಲಿ ಕಲಾವೃಂದದ ಮೂಲಕ ಉಡುಪಿಯ ಮತ್ತು ಆಸುಪಾಸಿನ ನಾಗರಿಕರು ಸಾಹಿತ್ಯ-ಕಲೆ ಮತ್ತು ಸಂಸ್ಕೃತಿಯ ಸಮ್ಮೇಳನದ ಸಾರವನ್ನು ಸವಿಯುವಂತೆ ಮಾಡಿದರು ಎಂಬರೆ ಅತಿಶಯೋಕ್ತಿಯಲ್ಲ. ಇದಕ್ಕಾಗಿ ನಾವು ಅವರನ್ನು ಪ್ರತ್ಯೇಕವಾಗಿ ಅಭಿವಂದಿಸುತ್ತೇವೆ. 'ಕಲಾವೃಂದ'ವು ಇನ್ನೂ ಒಳ್ಳೆಯ ದಿನಗಳನ್ನು ನವತರುಣರ ನೇತೃತ್ವದಲ್ಲಿ ಕಾಣುವಂತಾಗಲೆಂದು ಹಾರೈಸುತ್ತೇವೆ.

ವರುಷವೊಂದು ಕಳೆಯಿತು

೧೯೬೮ ಕಳೆಯಿತು. ಮುಂದಿನ ಕ್ಷಣ ಏನಾಗಬಹುದೆಂದು ಹೇಳಲಾಗದ ಪರಿಸ್ಥಿತಿಯಲ್ಲಿ ಭವಿಷ್ಯದತ್ತ ಗಮನ ಹರಿಸುವುದು ಅಸಮಂಜಸವಾದರೂ ಭೂತವನ್ನೇಕೆ ನೋಡಬಾರದು? ೧೯೬೮ ಯಾರಿಗೂ ಎಲ್ಲಿಯೂ ತೃಪ್ತಿ ನೀಡಿದ ವರ್ಷವಲ್ಲ. ಬಡದೇಶಗಳಿಗೆ ಸದಾ ಬಡತನದ ಚಿಂತೆ; ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಹಣಕ್ಕಾಗಿ ಪರರ ಮುಖ ನೋಡುವ ಚಿಂತೆ; ಸಂಪನ್ನ ದೇಶಗಳಿಗೆ? ಅವರಿಗೆ ಅವರದ್ದೇ ಚಿಂತೆ. ಚಿಂತೆ ಯಾರನ್ನೂ ಬಿಟ್ಟಿಲ್ಲ. ಅಮೆರಿಕೆಯ ಅಪೊಲ್ಲೋ-೮ ಚಂದ್ರಲೋಕವನ್ನು ಅತ್ಯಂತ ಹತ್ತಿರದಿಂದ ತಿರುಗಾಡಿತು, ಅದರಲ್ಲಿನ ತ್ರಿಮೂರ್ತಿಗಳು ಸುಕ್ಷೇಮವಾಗಿ ಮರಳಿ ಪೃಥ್ವಿಗೆ ಬಂದರು. ಡೆಮೊಕ್ರೆಟರು ಅಧ್ಯಕ್ಷ ಪದವಿಯನ್ನು ರಿಪಬ್ಲಿಕನ್ನರಿಗೆ ಬಿಟ್ಟುಕೊಟ್ಟರು. ರಶ್ಯಾ—ಅದೂ ಕಡಿಮೆಯಿಲ್ಲ. ರಾಜಕೀಯ ಕಣ್ಣುಮುಚ್ಚಾಲೆಗೆ ಆರಂಭ ಮಾಡಿತು. ಕೆಂಪು ಚೀನಾ ಆಂತರಿಕವಾಗಿಯೇ ಹೋರಾಡುತ್ತಿದೆ. ಬ್ರಿಟನ್ ಕೂಡ ಆರ್ಥಿಕವಾಗಿ ತಲೆಯೆತ್ತಿಲ್ಲ. ಪಾಕಿಸ್ತಾನದಲ್ಲಿ ಅಧ್ಯಕ್ಷ ಅಯ್ಯೂಬಖಾನರ ಸಿಂಹಾಸನದಡಿಯಲ್ಲಿ ಭೂಕಂಪ ನಡೆಯುತ್ತಿದೆ; ಭಾರತದಲ್ಲಿ? ಕೇಂದ್ರ ಸರಕಾರದಲ್ಲಿ ಆರಂಭದಲ್ಲಿ ಕಂಡುಬಂದಿದ್ದ ದುರ್ಬಲತೆ ಯಾಗ ಮಾಯವಾಗುತ್ತ ಬಂದಿದ್ದು, ಅದು ಸುದೃಢವಾಗಿದೆ ಎಂದು ಹೇಳಲೇ ಬೇಕು.

ಮಧ್ಯ ಪ್ರದೇಶದ ಕಾಂಗ್ರೆಸ್ ಸರಕಾರ ಪಕ್ಷದೊಳಗಿನ ಹೋರಾಟದಿಂದ ಕುಸಿದು ವಿರೋಧಿಗಳು ಅಧಿಕಾರ ಪಡೆದರು. ಬಂಗಾಲ, ಬಿಹಾರ, ಉತ್ತರ ಪ್ರದೇಶ, ಹರಿಯಾಣ, ಪಂಜಾಬುಗಳಲ್ಲಿ ಸಂಯುಕ್ತ ದಳ ದಳ ಸರಕಾರಗಳು ತಮ್ಮ ಅಸಮರ್ಥತೆಯಿಂದಾಗಿಯೇ ಉರುಳಿ ಹೋದುವು. ಹರಿಯಾಣದಲ್ಲಿ ಕಾಂಗ್ರೆಸ್ ಅಧಿಕಾರವೇನೋ ಮರುಚುನಾವಣೆಯಲ್ಲಿ ಗಳಿಸಿತು. ೧೯೬೮ರಲ್ಲಿಯೇ 'ನಕ್ಸಲೀಯರು' ಎಂಬ ಹೊಸತೊಂದು ಗುಂಪು ತಲೆದೋರಿ ರಕ್ತ ಹರಿಸುವ ಕ್ರಾಂತಿಯ ಜ್ವಾಲೆಯನ್ನು ಆರಂಭದಲ್ಲಿ ಬಂಗಾಳದಲ್ಲಿ ಕೊನೆಯಲ್ಲಿ ಕೇರಳದಲ್ಲಿ ಹರಡಿಸ ತೊಡಗಿದರು. ಇನ್ನು ಹೆಚ್ಚಿನ ರಾಜ್ಯ ಸರಕಾರಗಳು ಕುಡಿತ ಜೂಜಾಟದಲ್ಲಿ ಆಸಕ್ತವಾಗಿ ಗಾಂಧೀ ಶತಮಾನವನ್ನು ಆಚರಿಸುವ ಅವಕಾಶ ಕಲ್ಪಿಸಿದುವು. ಜೀವನ ವೆಚ್ಚದಲ್ಲಿ ೧೯೬೭ಕ್ಕಿಂತ ೧೯೬೮ರಲ್ಲಿ ನಿಜಕ್ಕೂ ನಾವು ಮೇಲೇರಿದ್ದೇವೆಂದು ಎದೆತಟ್ಟಿ ಹೇಳಬೇಕು.

ವಿದ್ಯಾರ್ಥಿ ಅತೃಪ್ತಿ ಬಗ್ಗೆ ಪ್ರೊ. ಕು. ಶಿ.

ನವದೆಹಲಿ, ತಾ. 21. 'ಅಧ್ಯಾಪಕರು ತಮ್ಮ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದಲ್ಲಿ ಮತ್ತು ವಿದ್ಯಾರ್ಥಿಗಳು ಮುಂದಾಲೋಚನೆಯಿಟ್ಟುಕೊಂಡು ಅಭ್ಯಾಸಮಾಡಿದಲ್ಲಿ ಇಂದಿನ ವಿದ್ಯಾರ್ಥಿ ಅತೃಪ್ತಿ ದೂರವಾಗಲು ಸಾಧ್ಯ' ಎಂಬುದಾಗಿ ಪ್ರೊ. ಕು. ಶಿ. ಹರಿದಾಸ ಭಟ್ಟರು ನವದೆಹಲಿಯ ಜಾಹೀರಾತು ಮತ್ತು ದೃಶ್ಯ ಪ್ರಚಾರ ನಿರ್ದೇಶಾಲಯದ ಅಧ್ಯಯನ ಗೋಷ್ಠಿಯಲ್ಲಿ ದಿನಾಂಕ 20ರಂದು ಮಾತನಾಡುತ್ತ ತಿಳಿಸಿದರು.

'ವಿದ್ಯಾರ್ಥಿಗಳಲ್ಲಿ ವಿಚಾರಶೀಲತೆ ಇನ್ನೂ ಬೆಳೆಯಬೇಕು. ಅಧ್ಯಾಪಕರು ಹೆಚ್ಚು ಆಸಕ್ತಿ ವಹಿಸಿ ಅವರಿಗೆ ಯೋಗ್ಯ ಮಾರ್ಗದರ್ಶನ ನೀಡಬೇಕು. ರಾಜಕೀಯ ಮುಂದಾಳುಗಳು ಉತ್ತಮ ವರ್ತನೆಯ ಮೂಲಕ ಮೇಲ್ಪಂಕ್ತಿ ಹಾಕಿ ಕೊಡಬೇಕು. ವಿದ್ಯಾರ್ಥಿ ಅಶಿಸ್ತಿಗೆ ಇದಕ್ಕಿಂತ ಉತ್ತಮ ಪರಿಹಾರ ಇನ್ನೊಂದಿಲ್ಲ' ಎಂದು ಪ್ರೊ. ಭಟ್ಟರು ಅಭಿಪ್ರಾಯಪಟ್ಟರು.

ಯುವಜನಾಂಗ ಮತ್ತು ಸಾಮಾಜಿಕ ಬದಲಾವಣೆ ಎಂಬ ವಿಷಯದ ಮೇಲೆ ಪ್ರೊ. ಭಟ್ಟರು ಭಾಷಣ ಮಾಡುತ್ತ, 'ವಿದ್ಯಾರ್ಥಿ ಸಮುದಾಯದಲ್ಲಿ ಅತೃಪ್ತರು ಕೆಲವೇ ಮಂದಿ. ಗಲಭೆಗಳಿಗೆ ಪ್ರಚೋದನೆ ನೀಡುವವರು ಇವರೇ. ಬಹ್ವಂಶ ವಿದ್ಯಾರ್ಥಿಗಳಿಗೆ ಯಾವುದೇ ಗಲಭೆ ಗೊಂದಲಗಳಲ್ಲಿ ನಿಜವಾದ ಆಸಕ್ತಿಯಿಲ್ಲ. ಆದರೆ ಅತೃಪ್ತರ ಸಣ್ಣ ಗುಂಪುಗಳು ಉಳಿದವರನ್ನೆಲ್ಲ ತಮ್ಮತ್ತ ಎಳೆಯಲು ಶಕ್ತವಾಗಿವೆ. ಈ ಪ್ರವೃತ್ತಿ ಬಗ್ಗೆ ಎಚ್ಚರ ವಹಿಸಬೇಕು ಮಾತ್ರವಲ್ಲ ಅದರ ಕುರಿತು ವಿಸ್ತೃತ ಪರಿಶೀಲನೆ ನಡೆಸಬೇಕು ಎಂದು ಪ್ರೊ. ಭಟ್ಟರು ಸೂಚಿಸಿದರು.

ಅಧ್ಯಯನ ಗೋಷ್ಠಿಯ ಕಾರ್ಯದರ್ಶಿ ಮತ್ತು ಸಂಪಾದಕ ಶ್ರೀ ಕೃಷ್ಣಾನಂದ ಹೆಗ್ಡೆಯವರು ಸ್ವಾಗತ ಭಾಷಣದಲ್ಲಿ ಪ್ರೊ. ಭಟ್ಟರ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷತೆ ವಹಿಸಿದ್ದ ಡೆಪ್ಯುಟಿ ಡೈರೆಕ್ಟರ್ ಶ್ರೀ ರಾಜನಾರಾಯಣ ಗುಪ್ತ ಅವರು ವಿದ್ಯಾರ್ಥಿ ಅತೃಪ್ತಿ ಗ್ರಾಮಾಂತರ ಪ್ರದೇಶಗಳಿಗಿಂತ ನಗರಗಳಲ್ಲಿ ಹೆಚ್ಚು ಪ್ರಕಟವಾಗುತ್ತಿದೆ. ಆರ್ಥಿಕ ಪರಿಸ್ಥಿತಿ ಇದಕ್ಕೆ ಮುಖ್ಯ ಕಾರಣವಾಗಿರಬಹುದು ಎಂದು ಅಭಿಪ್ರಾಯಪಟ್ಟರು.

ಇಂದಿನ ಪ್ರಾಮುಖ್ಯ ಸಮಸ್ಯೆಯೊಂದರ ಬಗ್ಗೆ ವಿಚಾರಪ್ರಚೋದಕವಾಗಿ ಮಾತನಾಡಿದ ಬಗ್ಗೆ ಪ್ರೊ. ಭಟ್ಟರನ್ನು ಅಭಿನಂದಿಸುತ್ತ ಕ್ಯಾಂಪೈನ್ ಆಫೀಸರ್ ಶ್ರೀ ಎಸ್. ಎನ್. ಪಿಳ್ಳೆ ಅವರು ವಿದ್ಯಾರ್ಥಿಗಳ ಮುಂದೆ ಅಧ್ಯಾಪಕರು ಸಮಾಜನಾಯಕರಂತಹ ನಿರ್ದಿಷ್ಟ ವಿಚಾರ ಪ್ರಣಾಳಿಯನ್ನಿರಿಸಿ ಅದರ ಬಗ್ಗೆ ವಿದ್ಯಾರ್ಥಿಗಳು ತಮ್ಮ ಶಕ್ತಿ ಹರಿಸುವಂತೆ ಮಾಡಬೇಕೆಂದು ಸೂಚಿಸಿದರು. ದೇಶದ ಸುಧಾರಣೆಯ ಬಗ್ಗೆ ವಿದ್ಯಾರ್ಥಿಗಳು ವ್ಯಕ್ತಪಡಿಸುತ್ತಿರುವ ಕಳಕಳ ಸಾಲದು. ಅವರ ಅತೃಪ್ತಿ ಇನ್ನಷ್ಟು ಹೆಚ್ಚಬೇಕು ಎಂದರು.

ನೋಡಿರಿ

ಗೇಹರಾಜ್ಯದಲ್ಲಿ

ಗಗನಂ ಗಗನಾಕಾರಂ

"ಅಲ್ಲಿ, ನಿಜಕ್ಕೂ ಅಮರಾವತಿಯ ಸಾಹಸ ಪಟ್ಟಬೇಕಾದ್ದೇ...'

"ಹ್ಞಂ...ಅಲ್ಲ, ಯಾಕೇಂತ?"

"ಅಯ್ಯೋ, ಅಷ್ಟೂ ತಿಳಿಯೋದಿಲ್ವೆ? ತ್ರಿಮೂರ್ತಿಗಳು ಚಂದ್ರನನ್ನು ಅತ್ಯಂತ ಸಮೀಪದಲ್ಲಿ ಹತ್ತು ಪ್ರದಕ್ಷಿಣೆ ಬಂದು ಮತ್ತೆ ಭೂಮಿಗಿಳಿದಿರುವರು ಎಂದರೆ..."

"ಸರೀನ್ನಿ. ಮೊತ್ತಮೊದಲು ದಾಖಲೆ ನಿರ್ಮಿಸಿದರು. ಭೂಮಿಯ ಆಕರ್ಷಣ ಕ್ಷೇತ್ರದಿಂದ ಹೊರ ಹೋದದ್ದು ಮತ್ತೆ ಅದರೊಳಗೆ ಪ್ರವೇಶಿಸಿದ್ದು ನಿಜಕ್ಕೂ ಅದ್ಭುತ ಸಾಧನೆ. ಯಂತ್ರ ವಿಜ್ಞಾನವು ಅಲ್ಲಿ ಚಂದ್ರನನ್ನೂ ಮುಟ್ಟಬಲ್ಲುದ.'

"ಅದೇ ನೋಡಿ, ಅಂತರ್ಗ್ರಹಯಾನದಲ್ಲಿನ ಮಹತ್ವದ ಸವಾಲನ್ನು ಅವ್ರು ಎದುರಿಸಿದ್ರು. ಇನ್ನೇನ, ಯಾವಾಗ ಬೇಕಾದ್ರೂ ಚಂದ್ರನಲ್ಲಿ ಇಳಿಯಬಹುದು...'

"ಅಷ್ಟು ಸುಲಭವಿಲ್ಲ ಕಣೆ. ಅಂತೂ ಜೂನ್ ತಿಂಗಳಲ್ಲಿ ಇಳಿದರೂ ಇಳಿಯಬಹುದು ಅನ್ನುತ್ತಾರಲ್ಲಾ ವಿಜ್ಞಾನಿಗಳು.'

"ಅಲ್ಲಿ ಅಂತರಿಕ್ಷ ಯಾತ್ರೆ ಹೇಗಿರುತ್ತೇಂತ! ಮತ್ತೆ ಚಂದ್ರನ ಬಳಿಯಿಂದ ನೋಡುವಾಗ...."

"ಅಯ್ಯೋ, ಅದೇನು ಹೇಳ್ತೀಯೊ? ಯಾರೋ ಒಬ್ಬ ಅಂದಿದ್ದನಂತೆ—ಗಗನಂ ಗಗನಾಕಾರಂ...'

'ಇದೊಳ್ಳೇ ಕತೆಯಾಯ್ತು....."

"ಹಾಗಲ್ವೇ ಇದು ಅನನ್ಯಯಾಂತ ಅರ್ಥ....'

"ಅಂದ್ರೆ?'

"ಅಂದ್ರೆ ನೋಡು, ನಮ್ಮದ್ರ ಹೇಗಿದೇಂತ ಕೇಳಿದ್ರೆ ಏನುತ್ತರ ಹೇಳೋದು? ಬೆಂಕಿ ಉರಿಯುತ್ತೆ, ಮುಟ್ಟಬೇಡಾಂತಂದ್ರೆ, ಉರಿಯೋದು ಅಂದ್ರೆ ಏನೂಂತ ಸವಾಲು ಹಾಕಿದ್ರೆ...."

"ಅಂದ್ರೆ ಅದನ್ನೆಲ್ಲಾ ಪ್ರತ್ಯಕ್ಷವಾಗಿಯೇ ಅನುಭವಿಸಬೇಕೂಂತ...'

"ಹ್ಞಾಂ....'

"ಅದೆಲ್ಲ ನಮಗೆಲ್ಲಿ ಸಾಧ್ಯ? ವಿಮಾನ ಹತ್ತಿರದಲ್ಲಿ ನೋಡೋದಕ್ಕೂ ಸಾಧ್ಯವಿಲ್ಲದ ನಮಗಂಥದ್ದು..."

"ಅಲ್ವೆ, ಅಷ್ಟೂ ನಿರಾಶೆಯಾದ್ರೆ ..."

"ಅತಿ ಇಟ್ಟುಕೊಳ್ಳೋಕೆ ಆಶ್ರಯ ಬೇಕಲ್ಲಾ....'

"ನೋಡ, ಬೆಟ್ಟಕ್ಕೆ ಮಣ್ಣು ಹೊತ್ತು ಹಾಕಿದ್ರೆ ಅದು ಮತ್ತೂ ಎತ್ತರಕ್ಕೇ ಹೋಗುತ್ತೆ; ಹೊಂಡಕ್ಕೆ ಹಾಕಿದ್ರೂ ಏರುತ್ತೇನ್ನು. ಅದ್ರೆ ಆ ಬೆಟ್ಟ ಮತ್ತು ಹೊಂಡಗಳು ಸಮಾನತೆಗೆ ಬರುವುದು ಸಾಧ್ಯವೇನ?"

"ಅದು ಹೇಗೆ ಆದೀತು?"

"ಹಾಗೇನೇ ನಮ್ಮದು ಪಾತಳಿ. ಇಲ್ಲಿ ಏನು ಪ್ರಗತಿ ಕಂಡ್ರೂ ಮೇಲೆ ಬಂದದ್ದೇ ಕಾಣೋದಿಲ್ಲ. ಈ ಇಪ್ಪತ್ತು ವರ್ಷಗಳಲ್ಲಿ ನಾವೂ ಮೇಲೆ ಬಂದಿದ್ದೇವೆನ್ನಿ. ಆದರೆ, ನಮ್ಮದು ಸಾಲದು, ಅಂದ್ರೆ ಅವರಿಂತ ಚಂದ್ರಗ್ರಹದಲ್ಲಿ ಇಳಿಯಲು ರಾಕೆಟ್ ಹಾರಿಸುವಾಗ ನಾವು ಹವಾಮಾನ ಅಧ್ಯಯನಕ್ಕೆ ರಾಕೆಟ್ ಹಾರಿಸುತ್ತೇವೆ...."

"ಅದು ಸರೀನ್ನಿ, ನಮ್ಮಲ್ಲಿ ವೈಜ್ಞಾನಿಕ ಸಾಧನೆ ಸಲಕರಣೆಗಳು ಜನಸಾಮಾನ್ಯರ ಪಾಲಿಗೆ ಬಂದದ್ದೂ ಸೊನ್ನೆ ಸೊನ್ನೆ ...."

"ಹಾಗಿರುವಾಗ ಚಂದ್ರನನ್ನು ದೂರದಲ್ಲಿಯೇ ಕಂಡು ಆನಂದತುಂದಿಲರಾಗುವ, ತೃಪ್ತರಾಗುವ ನಮ್ಮ ಸಹಜ ಪ್ರವೃತ್ತಿ...."

'ನೋಡಿ, ಸದ್ಯ ನಮ್ಮಲ್ಲಿ ಆದಾದರೂ ಇದೆ."

"ಹ್ಞಂ.... ಅಂತಲೇ ನಾವಿನೂ ಇದ್ದೇವೆ. ನಮ್ಮ ದೇಶದ ಸಂಸ್ಕೃತಿ ಸುಖ-ಭೋಗಗಳತ್ತ ನಮ್ಮನ್ನು ಒಯ್ದು ಮುಟ್ಟಿಸಿತ. ಅವುಗಳನ್ನು ಅನುಭವಿಸಿದ ನಾವು ಇರೆಲ್ಲವೂ ನಿರುಪಯುಕ್ತ ಎಂದು ಭಾವಿಸಿದೆವು. ಆಧ್ಯಾತ್ಮದತ್ತ ಮನಹರಿಸಿದೆವು..."

'ನಾವು ಅಂದರೆ?'

"ನಮ್ಮ ಪೂರ್ವಜರು..."

"ಆದರೆ, ಈಗ ಪರಿಸ್ಥಿತಿ ಬದಲಾಗುತ್ತಿದೆಯಲ್ಲಾ?"

"ಅದೇ ನೋಡು, ನಮ್ಮ ಮನೋವೃತ್ತಿಯೂ ಬದಲಾಗುತ್ತಿದೆ. ನಮ್ಮ ಸಂಪನ್ನತೆ ಛಿದ್ರಭಿನ್ನವಾಗಿ ನಾವೀಗ ದಟ್ಟದರಿದ್ರರಿದ್ದೇವೆ. ಭೋಗವಿಲಾಸಗಳಲ್ಲೇ ವೈಪರೀತ್ಯ ದಾರಿದ್ರ್ಯ ಬೆನ್ನಹಿಂದೆ ಬರುತ್ತಿದೆ...."

"ಹ್ಞಾಂ...ಅದು ಸರೀನ್ನಿ. ನಾವೀಗ ಪಾಶ್ಚಾತ್ಯರ ವಸ್ತು ನಿಷ್ಠವಾದವನ್ನು ನೆಮ್ಮತೊಡಗಿದ್ದೇವೆ. ಆದರೆ ಅವರಿಗೆ ಈವಾದ ರಕ್ತಗತವಾಗಿ ಬೇಸರಿಕೆಯನ್ನು ತಂದಿರಬಹುದ...."

"ಹ್ಞಾ....ಅದ್ದರಿಂದಲೇ ಅಲ್ಲಿ ಕೆಲವರ ಮನಸ್ಸು ಆಧ್ಯಾತ್ಮಿಕದತ್ತ ಹರಿಯುತ್ತದೆ....'

'ಏನೇ ಇರಲಿ, ವೈಜ್ಞಾನಿಕ ನೆಲೆಯಲ್ಲಿ ಅಥವಾ 'ಆಧುನಿಕತೆ'ಯಲ್ಲಿ ನಾವು ಎತ್ತರಕ್ಕೆ ಏರುವುದು ಸಾಧ್ಯವಿಲ್ಲಾಕ್ಷಿ. ಮತ್ತೆ ಆಧ್ಯಾತ್ಮಿಕತೆಯ ತತ್ತ್ವದಿಗೇನೋ ಏರಿದ್ದೆವು; ಆದರೆ, ಅಲ್ಲಿಂದ ಸದ್ಯ ಪಾತಳಿಗೆ ಉರುಳಿ ಬಿದ್ದಿದ್ದೇವೆ—ಯಾರು ಎತ್ತುವರೆಂದು ಪರಸಹಾಯವನ್ನು ಎದುರು ನೋಡುತ್ತಿದ್ದೇವೆ."

"ನಮ್ಮನ್ನು ನಾವೇ ಉದ್ಧಾರ ಮಾಡಿಕೊಳ್ಳಬೇಕು...."

"ಆ ಶಕ್ತಿ ನಮ್ಮಲ್ಲಿಲ್ಲವಾದರೆ...."

"ಬೇರೆಯವರನ್ನು ಕಂಡು ಸಂಪಾದಿಸಬೇಕ...."

"ಅದೂ ಅಸಾಧ್ಯವೆನಿಸಿದರೆ....'

"ಪರರನ್ನೇ ನಂಬಿದರೆ.... ನಂಬಿಕೆ ಇರುವ ತನಕ ಪರವಾಗಿಲ್ಲ, ಆ ಬಳಿಕ...."

"ಅದು ಸರೀನ್ನಿ ..."

"ಅಲ್ವೆ, ಮೊನ್ನೆ ರಾಜ್ಯ ಸಭೆಗೆ ಮನು ವನ್ನು ಎಳೆತಂದರಂತೆ..."

"ಯಾವ ಮನುವೆ?"

'ಮನು ಅಂದರೆ ..ಮಾನವರ ಮೂಲ ಪುರುಷ ಮನು ಧರ್ಮ ಶಾಸ್ತ್ರ ಪ್ರಸಿದ್ಧ...."

''ಓ; ಆ ಗಂಡಸು....ನ ಸ್ತ್ರೀ ಸ್ವಾತಂತ್ರ್ಯ ಮಹರ್ತಿ ಅಂತ ಅಂದ ಬಿರುದು ಪಡೆದವನ...."

"ಅಲ್ವೆ, ಸಭೆಯಲ್ಲಿ ಅವಶ್ಯಕ ಸೇವಾ ನಿರ್ವಹಣಾ ವಿಧೇಯಕದ ಚರ್ಚೆ ನಡೆಯುತ್ತಿತ್ತು. ಜನಸಂಘದ ಸದಸ್ಯರೊಬ್ಬರು ನೌಕರರ ಅಧಿಕಾರಗಳನ್ನು ಎತ್ತಿಹಿಡಿಯಲು ಮನುವನ್ನು ಎಳೆದು ತಂದರು. ಆದರೆ, ಅಂಥದ್ದ ಮಹಿಳಾಮಣಿಯೊಬ್ಬರು ಮನುವನ್ನು ಪ್ರಮಾಣ ಪುರುಷನೆಂದು ಒಪ್ಪಲಿಲ್ಲ. ಬಿಡಿಂದ ಮಹಾಶಯರೊ

(ಒಂಭತ್ತನೇ ಪುಟ ನೋಡಿರಿ)

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

I. A. 1/1968 in O S. 21/1966.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್ ಉಡುಪಿ—ವಾದಿ, ಅರ್ಜಿದಾರ.

ಮತ್ತು

ಗೋದಾವರಿ ಕಾಡಾ—ಪ್ರತಿವಾದಿಗಳು, ಎದುರು

ಸದ್ರಿ ವ್ಯಾಜ್ಯದಲ್ಲಿ ಸಪ್ಲಿಮೆಂಟು ಪ್ರತಿವಾದಿಗಳಾಗಿ ಸೇರಿಸತಕ್ಕ 15ನೇ ಶಂಕರಿ ಯಾನೆ ನಿರ್ಮಲಾ ಬಾಯಿ, 16ನೇ ಸುಧಾಕರರಾವ್, ಸದ್ರಿ 15ನೇಯವಳ ಮಗ, ಮಂಗಳೂರು ತಾಲೂಕ್, ಪಾಂಡೇಶ್ವರದಲ್ಲಿರುವವರು.

17ನೇ ಸರ್ವೋತ್ತಮ ರಾವ್, ಜಲಜಾಬಾಯಿ ಮಗ, 21ನೇ ಜಲಜಾಬಾಯಿ, ಕಮಲಾಬಾಯಿ ಮಗಳು, 22ನೇ ಕಲ್ಯಾಣಿ ಬಾಯಿ, ಜಲಜಾ ಬಾಯಿ ಮಗಳು, 26ನೇ ರವಿ, ಕಲ್ಯಾಣಿ ಬಾಯಿ ಮಗ, ಉಡುಪಿ ತಾಲೂಕು ಕೊಕ್ಕರ್ಣೆಯಲ್ಲಿರುವವರು,

ಇವರಿಯ್ಯವರಿಗೆ—

ಸದರಿ ವ್ಯಾಜ್ಯದಲ್ಲಿ ನಿಮ್ಮನ್ನು ಸಪ್ಲಿಮೆಂಟು ಪ್ರತಿವಾದಿಗಳಾಗಿ ಸೇರಿಸಲಿಕ್ಕೆ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು 1969ನೇ ಇಸ್ವಿ ಜನವರಿ 17ನೇ ತಾರೀಕು ಹಗಲು 11 ಘಂಟೆಗೆ ಸದರಿ ಕೋರ್ಟಿನಲ್ಲಿ ನೀವು ಖುದ್ದಿನಿಂದಾಗಲೀ ವಕೀಲರ ದ್ವಾರಾವಾಗಲೀ ಹಾಜರಾಗಿ ಹಾಜರು ಪಡಿಸಿಕೊಳ್ಳತಕ್ಕದ್ದು. ಹಾಗೆ ಹಾಜರಾಗದಿದ್ದರೆ ಸದರಿ ವಿಷಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನವಾಗಲ್ಪಡುವುದು ಎಂತ ಈ ಮೂಲಕ ತಿಳಿಯಪಡಿಸಲಾಗಿಯದೆ.

By order of the Court

H. Ramanatha Pai,

Advocate for (Plff.) Petitioner.

ತಾ. 25-12-1968

ಉಡುಪಿ

ಉಳಿತಾಯದ ಅಣೆಕಟ್ಟು

ಹರಿಯುವ ನೀರು ತೊರೆಯಾಗಿ ಹೊಳೆಯಾಗಿ ದಾರಿಗುಂಟ ಸಾಗುವಾಗ ಅಲ್ಲಲ್ಲಿ ಕವಲೊಡೆದು ಬಂಜರು ನೆಲ, ಮರುಭೂಮಿ, ಶಿಲಾಮಯ ಪ್ರದೇಶಗಳಲ್ಲಿ ಹರಿದು ನೀರಿನ ಅಪವ್ಯಯವಾಗುತ್ತದೆ. ನೀರಿನ ಅಪವ್ಯಯವನ್ನು ತಡೆಹಿಡಿಯಲು ಅಣೆಕಟ್ಟನ್ನು ಹಾಕಿ, ನೀರನ್ನು ಶೇಖರಿಸಿ, ಅವಶ್ಯಕ ಸಂದರ್ಭದಲ್ಲಿ ವ್ಯವಸಾಯ ಮತ್ತಿತರ ಉಪಯುಕ್ತಕರ ಉದ್ದೇಶಕ್ಕಾಗಿ ನೀರು ದೊರೆಯುವಂತೆ ಮಾಡುತ್ತಾರೆ.

ನಿಮ್ಮ ಆದಾಯವು ಸಾಮಾನ್ಯವಾಗಿ ಒಂದೇ ದಾರಿಯಿಂದ ಹರಿದು ಬರುತ್ತದೆ. ಅದನ್ನು ವೆಚ್ಚಮಾಡಲು ಇರುವ ದಾರಿಗಳು ನೂರು. ಹಣದ ಅಪವ್ಯಯವನ್ನು ತಡೆಹಿಡಿದು, ಅದನ್ನು ಉಪಯುಕ್ತ ಮಾರ್ಗದಲ್ಲಿ ಬಳಸಲು ಹೊಳೆಗೆ ಅಣೆಕಟ್ಟನ್ನು ಹಾಕಿದಂತೆ ನಿಮ್ಮ ಖರ್ಚಿನ ಹಾದಿಗೆ ಒಂದು ಕಟ್ಟನ್ನು ಹಾಕಬೇಕು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನೀವು ತೆರೆದ ಉಳಿತಾಯ ಖಾತೆಯೇ ನಿಮ್ಮ ವ್ಯಯದ ದಾರಿಗೆ ಹಾಕಿದ ಅಣೆಕಟ್ಟು. ಹಣ ನಿಮ್ಮ ಖಾತೆಯಲ್ಲಿ ಜಮೆಯಾಗಿ, ಕ್ರಮೇಣ ಅದು ಬೆಳೆದು, ಅವಶ್ಯಕ ಬಿದ್ದಾಗ ಉಪಯುಕ್ತ ಮಾರ್ಗದಲ್ಲಿ ಅದನ್ನು ಬಳಸಬಹುದು.

FAITHFUL FRIENDLY SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ

ಸಾಧನ ಸಂಪತ್ತು: ರೂ. 100 ಕೋಟಿಗೂ ಮಿಕ್ಕಿ.

ಶಾಖೆಗಳು: 250ಕ್ಕೂ ಮಿಕ್ಕಿ.

ಶ್ರೀ ಟಿ. ಎ. ಪೈ, ಚೆಯರ್‌ಮೇನ್.

In the Court of the Prl Munsiff, Puttur, S K.

O. S. No. 27/1963

B. M. Ismail ... Plff.

— Vs —

B. Laxminarayana Rao & Others . Defts

To 6th defendant,

Lingappa alias Somanatha, S/o Doomappa, Savanoor village, Lorry Owner, residing at Subraya's compound, Kankanady, Mangalore—2.

Take notice that the above suit filed by the plff against the defts for possession and damages, making you also a supplemental defendant, stands posted to 7-1-69 and if you fail to appear and oppose the same will be heard on merits, exparte.

/ By order of the court /

B. Sripati Rao,

Advocate for plff.

Puttur, 13-12-68.

ಕನಕದಾಸರ ಕೀರ್ತನೆಗಳು

ಬರೆದವರು: ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು

ಕನ್ನಡ ಸಾಹಿತ್ಯದಲ್ಲಿಯೂ ಸಂಸ್ಕೃತ ಸಾಹಿತ್ಯದಂತೆ ಭಕ್ತಿಗೀತೆಗಳನ್ನು ರಚಿಸಲು ಹರಿದಾಸ ಕೂಟದವರು ಮುಂದಾದರು. ಈ ಬಗೆಗೆ ಆ ಮೊದಲು ಬರೆದ ಶಿವಶರಣರ ಭಕ್ತಿಗೀತೆಗಳು ಆದರ್ಶವಾದುವೆನ್ನುತ್ತಾರೆ. ಪರಂತು, ಶ್ರೀ ಮಧ್ವಾಚಾರ್ಯರ (ಇಸ್ವಿ 1200-78) ಸಾಕ್ಷಾತ್ ಶಿಷ್ಯರಲ್ಲಿ ಒಬ್ಬರಾದ ಕಲಿಂಗ ಹಾಗೂ ಕನ್ನಡದಲ್ಲಿ ಹೊಳೆದು ಬೆಳಕೆಯಿದ್ದ ಶ್ರೀ ನರಹರಿ ತೀರ್ಥರು ಈ ಭಕ್ತಿಗೀತೆಗಳ ಆದ್ಯಕರ್ತರೆಂಬುದು ಈಗ ತಿಳಿದುಬಂದಿದೆ. ಶ್ರೀ ನರಹರಿ ತೀರ್ಥರು ಬರೆಯಿಸಿದ ಶಿಲಾಶಾಸನವು (ಇಸ್ವಿ 1294 ರದು) ಗಂಜಾಂ ಜಿಲ್ಲೆಯ ಶ್ರೀಕೂರ್ಮದಲ್ಲಿದೆ. ಆದುದರಿಂದ ಶ್ರೀ ನರಹರಿ ತೀರ್ಥರ ವಿಚಾರ ಕೇವಲ ಕಲ್ಪಿತವೆನ್ನಬರುವುದಿಲ್ಲ.

ಶ್ರೀ ನರಹರಿತೀರ್ಥರ ಬಳಿಕ ಒಂದೆರಡು ಶತಕಗಳಲ್ಲಿ ಹರಿಭಕ್ತಿ ಗೀತೆಗಳನ್ನು ರಚಿಸಿದವರ ಬಗೆಗೆ ಇನ್ನೂ ತಿಳಿದುಬಂದಿಲ್ಲ. ಹದಿನೈದನೆಯ ಶತಕದಲ್ಲಿದ್ದ ಶ್ರೀಪಾದರಾಯರು, ಅವರ ಶಿಷ್ಯರಾದ ಶ್ರೀ ವ್ಯಾಸರಾಯರು, ಅವರ ವಿದ್ಯಾಶಿಷ್ಯರಾದ ಶ್ರೀ ವಾದಿರಾಜರು ಈ ಹರಿದಾಸ ಪಂಥವನ್ನು ಜನಮಾನ್ಯವಾಗುವಂತೆ ಹಾಗೂ ರಾಜಮಾನ್ಯವಾಗುವಂತೆ ಸಹ ಮಾಡುವವರಾಗಿದ್ದರು. ಇದೇ ಕಾಲದಲ್ಲಿದ್ದ ಶ್ರೀ ಪುರಂದರ ದಾಸರು ಮತ್ತು ಶ್ರೀ ಕನಕದಾಸರು ಈ ವಿಚಾರಕ್ಕೆ ಬಹಳವಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಕೃತ 'ಕನಕದಾಸರ ಕೀರ್ತನೆಗಳು' ಎಂಬೀ ಬರೆಹದಲ್ಲಿ ಅವರ ಕೆಲವು ಕೀರ್ತನೆಗಳ ವೈಶಿಷ್ಟ್ಯವನ್ನು ಎತ್ತಿ ಬರೆಯಲೆಳಸಿದೆ. ಆ ಮೊದಲು ಅವರ ಕೆಲವು ವಿಚಾರಗಳೂ ಬರೆಯಲಾಗಿವೆ.

ಕನಕದಾಸನೆಂದರೇನು? ಎಂಬೀ ವಿಚಾರದಲ್ಲಿ ಇಬ್ಬಗೆಯ ವಿಷಯಾಂಶಗಳು ಕೇಳುತ್ತವೆ. ಕನಕದ ರಾಶಿಯೇ ಅವರಿಗೆ ತಿರುಪತಿ ತಿಮ್ಮಪ್ಪನ ದಯೆಯಿಂದ ದೊರೆತುದರಿಂದಾಗಿ ಆ ಹೆಸರು ಬಂದಿರಬೇಕೆಂಬುದು ಒಂದು ಹೇಳಿಕೆಯಾಗಿದೆ. ಈ ಸಂಗತಿಗೆ ಉದ್ಧರಿಸತಕ್ಕ ಆಧಾರಗಳೇನೂ ದೊರೆತಿಲ್ಲ. ಜನರ ಬಾಯ್ದೆರೆ ಹರಡಿರುವುದೇ ಮೂಲವಾಗಿದೆ. ಕನಕದಾಸರು ಒಮ್ಮೆ ಉಡುಪಿಗೆ ಬಂದಾಗ, ಕೀಳು ತರದವನೆಂದು ದೇವಾಲಯಕ್ಕೆ ಪ್ರವೇಶ ಮಾಡಲಿಲ್ಲ. ಕನಕದಾಸರ ಭಕ್ತಿಯ ಬಲದಿಂದ ಉಡುಪಿಯ ಶ್ರೀಕೃಷ್ಣನು ಮೂಡು ಮೋರೆಯಾಗಿದ್ದವನು ಪಡುಮೋರೆಯಾಗಿ ತಿರುಗಿದನೆಂದು ಹೇಳುತ್ತಾರೆ. ಅದೂ ಅವನಿಗೆ ಅಲ್ಲಿ ಪಡಿಯಕ್ಕಿ ಕೂಡಾ ದೊರಕದೆ, ಕೊನೆಗೆ ದೇವರೇ ಅವನಿಗೆ ದಿನಕ್ಕೊಂದು ಆಭರಣವಂತೆ ಕೊಡುತ್ತಿದ್ದುದು, ಆ ಆಭರಣವನ್ನು ಉಡುಪಿಯ 'ಚಿನ್ನವರದ' ರೊಬ್ಬರಲ್ಲಿ ಅವನು ಅಡವಿಟ್ಟು ಜೀವನಕ್ಕೆ ಬೇಕಾದ ವಸ್ತು ತರುತ್ತಿದ್ದುದು, 180 ಆಭರಣಗಳು (ಸಾಧಾರಣ ಆರು ತಿಂಗಳಲ್ಲಿ) ಕಳೆದುಹೋದುದು, ಕೊನೆಗೆ ಶ್ರೀ ವಾದಿರಾಜರು ಸೋದೆಯಿಂದ ಉಡುಪಿಗೆ ಬಂದು ವಿಚಾರಿಸಿದಾಗ, ಸತ್ಯಾಂಶವೆಲ್ಲಾ ತಿಳಿದುದು, ಆ 'ಚಿನ್ನವರದ'ರು ಈ ಬಗೆಗೆ ತಮ್ಮ ಸೇವೆಯೆಂದು ಕೆಲವು ಆಸ್ತಿಗಳನ್ನು ಶ್ರೀಕೃಷ್ಣನಿಗೆ ದತ್ತಿಬಿಟ್ಟುದು, ಶ್ರೀ ವಾದಿರಾಜರು ವೀರಭಕ್ತನಾದ 'ಪಾಳೆಪಟ್ಟ ನಾಯಕ'ನಾದ ಈ ಹರಿದಾಸರಿಗೆ 'ಕನಕದಾಸ'ರೆಂಬ ಹೆಸರಿತ್ತುದು ಇದೀಗ ತಿಳಿಯಬಂದಿದೆ. ಉಡುಪಿಯ ಶ್ರೀ ಪೇಜಾವರ ಮಠದಲ್ಲಿಪ್ಪ ಈ ಒಂದು ತಾಳೆಗರಿಯ ಓಲೆ 1933ರಲ್ಲಿ ದೊರಕಿದೆ. ಅದನ್ನು ಉಡುಪಿ ಪಡುಪೇಟೆಯ ಸ್ಥಿರವಾಸಿ, ನಿವೃತ್ತ ಮಣೇಗಾರ ಶ್ರೀ ನರಸಿಂಹಾಚಾರ್ಯರು ಆಗಲೇ ಮುದ್ರಿಸಿದರು. ಅನಂತರ, ಕನಕದಾಸರ ನಾಲ್ಕನೂರನೆಯ ವರ್ಷದ ಮಹೋತ್ಸವ ಕಾಲದಲ್ಲಿ ಪ್ರಕಟಿತ "ಪ್ರಜಾಮತ" ಪತ್ರಿಕೆಯಲ್ಲಿ, ಶ್ರೀ ಆಸ್ಥಾನ ವಿದ್ವಾನ್ ಬಿ. ಶಿವಮೂರ್ತಿ ಶಾಸ್ತ್ರಿ ಮತ್ತು ಡಾ| ಕೆ. ಎಂ. ಕೃಷ್ಣರಾವ್ ಸಂಕಲಿತ ಪುಸ್ತಕದಲ್ಲೂ ಈ ಓಲೆಯ ಪಡಿಯಚ್ಚು ಪ್ರಕಟವಾಗಿವೆ. 'ಚಿನ್ನವರದ'ನ ದತ್ತಿಬಿಟ್ಟ ಶಾಸನ ವಿಚಾರಾಂಶ ಹಾಗೂ ಇತರ ವಿಷಯಾಂಶಗಳನ್ನು ಉಲ್ಲೇಖಿಸಿದ ನನ್ನ ಬರೆಹವು 'ಸಂಯುಕ್ತ ಕರ್ನಾಟಕ'ದಲ್ಲಿ ದಾಸವಾಣಿಯಲ್ಲಿ ಪ್ರಕಟವಾಗಿದೆ. ಒಟ್ಟಿನಲ್ಲಿ, ಶ್ರೀ ವಾದಿರಾಜರು ಈ ಹರಿದಾಸರಿಗೆ 'ಕನಕದಾಸ'ರೆಂದು ಹೆಸರಿತ್ತರೆಂಬುದೇ ಸಾಧಾರವೂ ಸಪ್ರಾಮಾಣ್ಯವೂ ಆಗಿದೆ.

ಕನಕದಾಸರು ಹರಿಕೀರ್ತನೆಗಳನ್ನು ಮಾತ್ರವಲ್ಲ, ಹರಿಭಕ್ತಿಸಾರ, ರಾಮಧಾನ್ಯ ಚರಿತೆ, ನಳ ಚರಿತೆ, ಹಾಗೂ ಮೋಹನ ತರಂಗಿಣಿ (ಉಷಾ ಪರಿಣಯದ ಕತೆ) ಬರೆದು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ನೂತನ ದೃಷ್ಟಿಕೋನವನ್ನು ಹರಿಯಿಸಿದ್ದಾರೆ. ಹರಿಕೀರ್ತನೆ ಮತ್ತು ಮೋಹನ ತರಂಗಿಣಿಯಲ್ಲಿ ರಾಮಾನುಜ ಪಂಥದವರೂ, ತನ್ನ ಗುರುಗಳೂ ಆದ ತಿರುಮಲಾಚಾರ್ಯರನ್ನು ಸ್ತುತಿಸಿದ್ದಾನೆಂದುದರಿಂದ ಈತನು ವಿಶಿಷ್ಟಾದ್ವೈತಿಯಾಗಿರಬೇಕೆನ್ನುತ್ತಾರೆ. ಅದು ಮಾತ್ರವಲ್ಲ, ಈ ನಾಲ್ಕು ಕೃತಿಗಳ ಶೈಲಿಗಳಲ್ಲಿ ವಿಭಿನ್ನತೆ — ಅಂತರ ಕಾಣುವುದುಂಟು. ಆದುದರಿಂದ ಹರಿಕೀರ್ತನೆಗಳ ರಚಕನೇ ಇವೆಲ್ಲವನ್ನೂ ಬರೆದನೆನಲು ಸಾಧ್ಯವಿಲ್ಲೆಂದು ಕೆಲವರಿಗೆ ಅನಿಸಬಹುದು. ಆದರೆ, ಕನಕದಾಸರು ಮೊದಲು ರಾಮಾನುಜ ಮತದವರಿದ್ದರೂ, ಆಮೇಲೆ ಶ್ರೀ ವ್ಯಾಸರಾಯರು ಹಾಗೂ ಶ್ರೀ ವಾದಿರಾಜರು ತನಗೆ ಗುರುಗಳಾಗಿರಲೆಂದು ಮತಾಂತರಗೊಳ್ಳಬಾರದೆಂದಿಲ್ಲ. ಮೋಹನ ತರಂಗಿಣಿಯಲ್ಲಿ "ತ್ರಿವಿಕ್ರಮ ದಾಸದಾಸ" ನೆಂದುದು ಗಮನೀಯ. ಉಡುಪಿಯ ಓಲೆಗರಿಯಲ್ಲಿ (ಈ ಮೇಲೆ ಬರೆದಂತೆ) ಶ್ರೀ ವಾದಿರಾಜರ ಹಾಗೂ ಕನಕದಾಸರ ಸಂಬಂಧಿಕತೆ ಸ್ಪಷ್ಟವಾಗುತ್ತದೆ. ಅಂತೆ ಕೆಲವು ಕೀರ್ತನೆಗಳಲ್ಲಿ ಇದ ಸಾರಲಾಗಿದೆ. ಒಬ್ಬನ ಮೊದಲು ಓದಿದ ಕೃತಿಗೂ ಅನಂತರ ಓದಿದ ಕೃತಿಗಳಿಗೂ ಅಂತರಗಳಿರುವುದು ಸಾಹಿತ್ಯ ಪ್ರಪಂಚದಲ್ಲಿ ಅನೇಕ ಉದಾಹರಣೆಗಳಿಂದ ವ್ಯಕ್ತವಾಗುತ್ತದೆ. ಹರಿದಾಸನಾಗಿ ಮತಾಂತರಗೊಳ್ಳುವ ಮೊದಲು ಆ ಕೃತಿರತ್ನತ್ರಯಗಳನ್ನು ಈತನು ರಚಿಸಿರಬೇಕು. ಹರಿಭಕ್ತಿಸಾರ ಹಾಗೂ ಕೀರ್ತನೆಗಳು ಹರಿದಾಸರಾದ ಮೇಲೆ ರಚಿಸಿದವುಗಳೆನ್ನಲು ಅಡ್ಡಿಯಿಲ್ಲ. ಕನಕದಾಸರ ಕೃತಿಗಳು ಉಡುಪಿ, ಬೆಂಗಳೂರು, ಧಾರವಾಡಗಳಲ್ಲಿ ಪ್ರಕಟವಾಗಿವೆ; ಅವೆಲ್ಲವುಗಳ ಮೂಲಪ್ರತಿಗಳನ್ನು ಇನ್ನೂ ಕಲೆಹಿ, ಪರಿಶೋಧಿಸಿ, ಸೂಕ್ತವಾದ ರೀತಿಯಲ್ಲಿ ಸಂಕಲಿಸಿ ಪ್ರಕಟಿಸುವುದು ಯುಕ್ತವೆಂದು ತೋರುತ್ತದೆ. ಈ ಬಗೆಗೆ ಯಾವ ಪೂರ್ವ ಕಲ್ಪನೆಯಾಗಲೀ, ಇತರ ಕಾರಣಗಳಾಗಲೀ ತಡೆಯಾಗಬಾರದು. ಇದೀಗ ಮೈಸೂರು ವಿಶ್ವವಿದ್ಯಾಲಯದ ವತಿಯಿಂದ ತೊಡಗಿದ ಹರಿದಾಸ ಸಾಹಿತ್ಯ ಸಂಶೋಧನ ವಿಭಾಗದಲ್ಲಿ ಈ ಬಗೆಗೆ ಅತ್ಯಂತ ಪ್ರಾಮುಖ್ಯ ಗಮನವೀಯಬಹುದೆಂದು ಆಶಿಸುತ್ತೇವೆ (ಪ್ರಕೃತ ಬರೆಯುತ್ತಿರುವ "ಕನಕದಾಸರ ಕೀರ್ತನೆಗಳು" ಎಂಬೀ ಕಿರುಬರೆಹದಲ್ಲಿ ಉಡುಪಿ ಪ್ರತಿಯನ್ನು ಆಧರಿಸಿಕೊಳ್ಳಲಾಗಿದೆಯೆಂದು ವಿನಂತಿ) ೧) ಕನಕದಾಸರು ಕೀರ್ತನೆಗಳನ್ನು ರಚಿಸುವಂದ, ಹರಿದಾಸರಾಗಿ ಪರಿವರ್ತಿತರಾದರು. ಈ ಬಗೆಯು ಇವರ ಕೀರ್ತನೆಗಳಲ್ಲಿ ಸುಸ್ಪಷ್ಟವಾಗುತ್ತದೆ. ಉದಾ: "ಹರಿಯ ನಿಂದಿಸಿ ಕರಘನನೆಂದು ನರಕಕ್ಕೆ ಬೀಳಬಾರದು' (ಪು. 2), 'ನರರ ಸ್ವತಂತ್ರರೇ?' (ಪು.5) "ಅಂಧಂತಮಸ್ಸು ಮತ್ತಿನ್ನವರಿಗೆ ಗೋವಿಂದ ನಿಂದಿಸುವವರಿಗೆ' (ಪು. 6), "ಏಕದೇವ ದ್ವಿತೀಯನೆಂಬುವಗ" (ಪು. 18), 'ಇಲ್ಲವೆಂದವಗೆ ಅಲ್ಲಿ ಪಡೆದ ಬಂದ ದನ್ನುವನಂದು ತೀರಬೇಕು. (ಪು. 21), 'ತತ್ತ್ವವೇದವನರಿತ ಭಕ್ತಿಸಾಟಿ' (ಪು. 28), 'ಪರಮಪದವೀವ ಗುರು ಮಧ್ವಮುನಿ' (ಪು. 32), 'ಸಿರಿ ಸರ್ವರ ... ಬಿಡದೆ ಸಕಲ ... ' (ಪು. 91), "ಸೋಹಂ ಅಭೇದ ಜೀವರಿಗೆ ಅಂತರ್ ತವು (ಪು. 97)

ಇತ್ಯಾದಿ ನುಡಿಗಳು ಕಾಣುತ್ತವೆ. ಇಂತಹ ಮತೀಯ ವಾಕ್ಯಗಳೂ ಪದ್ಯಗಳೂ ಪ್ರಸ್ತುತಗಳಿರುವುದು ಸಹಜದ ಮಾತು. ಹರಿದಾಸರೆಲ್ಲರ-ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು, ಶ್ರೀ ಪುರಂದರದಾಸರು ಮೊದಲಾದವರೆಲ್ಲರ ಕೀರ್ತನೆಗಳಲ್ಲಿ ಇಂತಹ ಹಲವು ವಿಚಾರವಿದ್ದೇ ಇರಬೇಕು. ಅಂದರೆ, ಹರಿಭಕ್ತಿ ಮತ್ತು ಸಂಗೀತ ಹಾಗೂ ಸಾಹಿತ್ಯಗಳೆಂಬ ತ್ರಿವೇಣೀ ಕೂಟಗಳೇ ಹರಿದಾಸರ ಕೃತಿಗಳೆಂಬುದು ಎಲ್ಲರಿಗೂ ಗೊತ್ತಾದುದೇ. ಹಾಗಿಲ್ಲದಿರೆ, 'ಹರಿದಾಸ'ರೆಂಬುದಾದರೂ ಹೇಗೆಂದು ಪ್ರಶ್ನೆಯುಂಟಾಗುವುದಿಲ್ಲವೇ? ಹರಿದಾಸರಿಗೆ ಹರಿಭಕ್ತಿ ಪ್ರಾಮುಖ್ಯವಾಗಿವೆಯೆಂದರೆ ಅತಿಯಾಗದು!

೨) ಸಂಗೀತದ ಬಗೆಗೆ ಕನಕದಾಸರ ಒಂದು ನುಡಿಯಾದರೂ ಉಲ್ಲೇಖನೀಯವಿದೆ: ಸ್ವರಭೇದವಿಲ್ಲದಿಹ ಸಂಗೀತ ವಿಂಗೀತ" (ಪು 9) ಎಂದರೆ ಕೀರ್ತನಾವಾಗ

(ಎಂಟನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರಶಸ್ತವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಚಾರುಚಯನ

ಚಂದ್ರಕಕ್ಷೆಯಲ್ಲಿ ತ್ರಿಮೂರ್ತಿಗಳು

೧೯೬೧ರಲ್ಲಿ ಅಮೇರಿಕನ್ ಅಧ್ಯಕ್ಷರಾಗಿದ್ದ ಜಾನ್ ಕೆನ್ನೆಡಿ ಅಂದಿದ್ದರು— "ಇನ್ನು ಹತ್ತು ವರ್ಷಗಳಲ್ಲಿ ಅಮೇರಿಕನ್ನರು ಚಂದ್ರಲೋಕದಲ್ಲಿ ಇಳಿಯುವರು." ಅವರು ಭವಿಷ್ಯ ನುಡಿದದ್ದು ಸತ್ಯವಾಗುತ್ತಲೇ ಬಂದಿದೆ. ಅಮೇರಿಕೆಯ ಅಪೊಲೊ—೮ ಉಪಗ್ರಹ ಹಲವು ವರ್ಷಗಳ ಸಹಸ್ರಾರು ಕುಶಲ ಯಂತ್ರ ತಜ್ಞರ ಪರಿಶ್ರಮದ ಪ್ರತೀಕ. ಈ ರಥದಲ್ಲಿ ಫ್ರಾಂಕ್ ಬೋರ್ಮನ್, ಜೇಮ್ಸ್ ಲೊವೆಲ್ ಮತ್ತು ವಿಲಿಯಂ ಆಂಡರ್ಸ್ ತ್ರಿಮೂರ್ತಿಗಳು ಆಸೀನರಾಗಿ ಚಂದ್ರಲೋಕ ದಿಗ್ವಿಜಯಾರ್ಥ ಹಾರಿದರು. ಇದು ವರೆಗಿನ ಪ ದಿನಗಳಂತೆ ಅವರು ಯಶಗಳಿಸಿದ್ದಾರೆ; ಹಲವಾರು ಆತಂಕ—ವಿಘ್ನ ವಿಡಂಬರಗಳನ್ನು ಎದುರಿಸಿಯೂ ಅವರು ಮತ್ತೆ ಭೂಮಿಗಿಳಿದು ಬರುವರು.

ಚಂದ್ರಲೋಕವನ್ನು ಮುಟ್ಟುವಲ್ಲಿ ಹಲವು ವರ್ಷಗಳಿಂದಲೂ ಪ್ರಯೋಗಗಳು ನಡೆಯುತ್ತಲೇ ಇವೆ. ಅಮೇರಿಕ—ರಶ್ಯಗಳು ಈ ದಿಸೆಯಲ್ಲಿ ಸಾಹಸ ಪ್ರದರ್ಶಿಸಿವೆ. ರಶ್ಯ ಅಂತರಿಕ್ಷಯಾತ್ರೆಯಲ್ಲಿ ಮನುಷ್ಯನನ್ನೇ ಕಳಿಸಿತು. ಆದರೆ ತಾಸಿಗೆ ೨೫ ಸಾವಿರ ಮೈಲುಗಳಷ್ಟು ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ಮೀರಿ, ಚಂದ್ರನ ಕಕ್ಷೆಯನ್ನು ಪ್ರವೇಶಿಸಿದ ಮೊತ್ತ ಮೊದಲ ಅಂತರಿಕ್ಷನೌಕೆ ಅಪೊಲೋ-೮. ಚಂದ್ರನ ಕಕ್ಷೆಯಲ್ಲಿಯೂ ಅದರ ಗುರುತ್ವಾಕರ್ಷಣ ಶಕ್ತಿಗನುಕೂಲವಾದ ರೀತಿಯಲ್ಲಿ ಚಲನೆಯಿಲ್ಲವಾದರೆ, ಅದು ಚಂದ್ರನ ಮೇಲೆ ಬಿದ್ದು ನಷ್ಟವಾದೀತು. ಇದಕ್ಕೆ ತಕ್ಕ ತಾಂತ್ರಿಕತೆಯಿಂದ ಕೂಡಿದ ಅಪೊಲೊ—೮ ಚಂದ್ರನನ್ನು ಬರಿಯ ೭೦ ಮೈಲಿ ದೂರದಿಂದ ಸುತ್ತುವರಿಯಿತು. ಇಲ್ಲಿ ಅದು ಚಂದ್ರನಿಗೆ ಆತನ ಕಕ್ಷೆಯಲ್ಲಿ ಹತ್ತು ಸುತ್ತು ಬಂದು ಮತ್ತೆ ಭೂಮಿಗಿಳಿಯುವುದು. ಆಗಲೂ ಚಂದ್ರನ ಕಕ್ಷೆಯಿಂದ ಭೂಮಿಯ ಕಕ್ಷೆಗೆ ಬರಬೇಕು; ಭೂಮಿಯ ಆಕರ್ಷಣ ಶಕ್ತಿಯನ್ನು ಎದುರಿಸಬೇಕು. ಇದಕ್ಕೆ ತಕ್ಕ ಪ್ರಾಯೋಗಿಕ ನಿರ್ಮಾಣ ಅಪೊಲೊ—೮ರಲ್ಲಿದೆ.

ಈ ಗಗನಯಾತ್ರಿಗಳು ತಮ್ಮ ಹೆಚ್ಚಿನ ಸಮಯವನ್ನು ಯಂತ್ರಗಳ ಕಡೆಗೇ ವಿನಿಯೋಗಿಸಬೇಕಾಗಿದೆ. ಆದರೂ ಚಂದ್ರನ ಸ್ವರೂಪವನ್ನು ಕಂಡುತಿಳಿಯುವ ಪ್ರಯತ್ನವನ್ನವರು ಮಾಡಿದರು. ಚಂದ್ರನ ಬಣ್ಣ ಕಂದಾಗಿರಬೇಕಿತ್ತು; ಆದರೆ, ಅಲ್ಲಿ ಯಾವ ಬಣ್ಣವೂ ಕಾಣಿಸುವುದಿಲ್ಲ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಬಣ್ಣವನ್ನು ಹೋಲುತ್ತದೆ. 'ಸೀ ಆಫ್ ಫರ್ಟಿಲಿ'ಯು ಅಲ್ಲಿಯೂ ಇಲ್ಲಿನಂತೆಯೇ ಕಾಣುತ್ತದೆ. ಜ್ವಾಲಾಮುಖಿ ಶಿಖರಾಕಾರದ ಪ್ರದೇಶಗಳು ಗೋಲಾಕೃತಿಯಲ್ಲಿವೆ; ಉಲ್ಕಾಪಾತಗಳಿಂದ ಅಥವಾ ಇನ್ನಿತರ ಚಲಿಸುತ್ತಿರುವ ಬಾಹ್ಯಾಂತರಿಕ್ಷವಸ್ತುಗಳ ಕ್ರೇಟರ್‌ಗಳನ್ನು ಅಪ್ಪಳಿಸುತ್ತಿರುವಂತೆ ಭಾಸವಾಗುತ್ತದೆ.

ಅಪೋಲೋ-೮ರ ಯಾತ್ರಿಕರು ಅಧಿಕ ಮಾಹಿತಿಯನ್ನು ಕಲೆ ಹಾಕಿದ್ದಾರೆ; ಟಿ. ವಿ. ಚಿತ್ರಗಳನ್ನು ಕಳಿಸಿದ್ದಾರೆ; ಆಗಾಗ್ಗೆ ಸಂದೇಶಗಳನ್ನೂ ರವಾನಿಸಿದ್ದಾರೆ. ೨೫ ಸಾವಿರ ಮೈಲುದೂರದಿಂದ ಬರುತ್ತಿರುವ ಈ ಸಂದೇಶಗಳು ಸ್ಪಷ್ಟವಾಗಿಯೇ ಇದ್ದುವು. ಚಂದ್ರಲೋಕದಲ್ಲಿ ಇಳಿಯಲು ಅನುಕೂಲವಾದ ಸ್ಥಳವೊಂದನ್ನು ಅವರು ವೀಕ್ಷಿಸಿದ್ದಾರೆ. ಮುಂದೆ ಅಲ್ಲಿ ಇಳಿಯಲು ತಕ್ಕ ಸಿದ್ಧತೆಯೊಂದಿಗೆ ಹೋಗುವುದಂತೂ ಖಂಡಿತವೇ. ಚಂದ್ರಲೋಕದ ಕಕ್ಷೆಯನ್ನು ಮುಟ್ಟಿ ಆತನಿಗೆ ಅತಿನಿಕಟದಲ್ಲಿ ಸುತ್ತುವರಿದ ಅಮೇರಿಕನ್ ತ್ರಿಮೂರ್ತಿಗಳು ನಿಜಕ್ಕೂ ಪ್ರಶಂಸಾರ್ಹರು. ಚಂದ್ರನಲ್ಲಿ ಇಳಿಯುವ ಮುಹೂರ್ತ ಯಾವ ಘಳಿಗೆ?

o o o

ಚೀನಾ—ಪಾಕಿಸ್ತಾನಗಳ ನಡುವೆ ರಾಜಕೀಯ ವಿರಸ ಹುಟ್ಟಿಕೊಂಡಿದೆ ಎಂಬ ವದಂತಿಯನ್ನು ಪಾಕ್ ವಿದೇಶ ಮಂತ್ರಿಗಳು ನಿರಾಕರಿಸಿದ್ದಾರೆ. ಭುಟ್ಟೋ ಮತ್ತವರ ಬೆಂಬಲಿಗರು ಕೆಂಪುಚೀನಕ್ಕೆ ಸದಾ ಬೇಕಾದವರು. ಅಯ್ಯೂಬಖಾನರು ಅವರನ್ನು ಜೈಲಿನಲ್ಲಿಟ್ಟದ್ದರಿಂದ ಕೆಂಪುಚೀನರು ನಿಜಕ್ಕೂ ಅಪ್ರಸನ್ನರಾಗಿದ್ದಾರೆ. ಅತ್ತ ಭಾರತದ ಗೌರವಕ್ಕೆ ಮಸಿ ಬಳಿಯುವ ಪಾಶ್ಚಾತ್ಯ ರಾಷ್ಟ್ರಗಳ ನೆರವು ದೊರೆಯುವುದಿಲ್ಲವೆಂದು ತಿಳಿದು ಬಂದಿದೆ. ದೇಶದ ಪ್ರಜೆಗಳ ಗಮನವನ್ನು ಆಂತರಿಕ ರಾಜಕೀಯದಿಂದ ಭಾರತ ವಿದ್ವೇಷದತ್ತ ಹರಿಸುವುದು ಅಯ್ಯೂಬರ ಆಶೆ. ಅದಕ್ಕಾಗಿ ಕಾಶ್ಮೀರ ಮತ್ತು ಫರಕ್ಕಾ ಅಣೆಕಟ್ಟಿನ ಪ್ರಶ್ನೆಯನ್ನು ಭದ್ರತಾ ಸಮಿತಿಯಲ್ಲಿ ಎತ್ತುವ ಹವಣಿಕೆ ಅವರದ್ದು. ಆದರೆ, ಅಮೇರಿಕೆ ಮತ್ತು ಬ್ರಿಟನ್‌ಗಳು ಇದಕ್ಕೆ ಅನುಕೂಲ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ. ಈ ಮೊದಲು ಅನೇಕ ಬಾರಿ ಮುಖ ಭಂಗಮಾಡಿಕೊಂಡ ಇವು ಈ ಬಾರಿ ಮೌನವಾಗಿವೆ. "ನೀವುನೀವೇ ನೋಡಿಕೊಳ್ಳಿ" ಎಂದು ಉಪದೇಶ ಮಾಡಿವೆ. ಇದರಿಂದ ಅಯ್ಯೂಬಖಾನರು ತುಸು ಕಂಗಾಲಾಗಿದ್ದಾರೆ. ಅಂತೂ ೧೯೬೯ರಲ್ಲಿ ಫೀಲ್ಡ್ ಮಾರ್ಶಲ್ಲರ ದೆಸೆ ತಿರುಗಿರುವಂತೆ ಭಾಸವಾಗುತ್ತದೆ. ಅವರು ಮುಟ್ಟಿದ್ದು ಈ ಮೊದಲೆಲ್ಲ ಬಂಗಾರವಾಗಿಲ್ಲವೆಂಬುದು ನಿಜ; ಆದರೆ, ಈಗ ಮಾಸಿಹೋಗತೊಡಗಿದೆ ಎಂಬ ದಂತಕಥೆ ಸ

ಕ್ಷಯರೋಗದ ಸಾಮಾನ್ಯ ಲಕ್ಷಣಗಳಿವು: ಆಯಾಸವಾದಂತೆ ತೋರುವಿಕೆ, ಜೀರ್ಣಶಕ್ತಿ ಮತ್ತು ಭಾರ ಕಡಿಮೆಯಾಗುವಿಕೆ, ಲಘು ಜ್ವರ, ವಿಶೇಷತಃ ಬೆಳಗ್ಗಿನ ಹೊತ್ತು ಕೆಮ್ಮು, ಎದೆಯಲ್ಲಿ ನೋವು, ಮತ್ತು ರಕ್ತ ಅಥವಾ ರಕ್ತಲೇಪಿತ ಕಫ ಉಗುಳುವಿಕೆ. ಕ್ಷಯರೋಗದ ಲಕ್ಷಣಗಳು ತೋರುವ ಮೊದಲೇ ಅದನ್ನು ಕಂಡುಕೊಳ್ಳಲು ತಪಾಸಣೆಗಾಗಿ ಸಮೀಪದ ಟಿಬಿ ಕ್ಲಿನಿಕ್‌ಗೆ ಹೋಗಿರಿ.

ನಿಮ್ಮ ರಾಜ್ಯದ ಟಿಬಿ ಸಮಿತಿಗೆ ಅವರ ಕೈಕೆಳಗಿರುವ ಟಿಬಿ ಕ್ಲಿನಿಕ್‌ಗಳ ಸೇವಾಕಾರ್ಯವನ್ನು ವಿಸ್ತರಿಸಲು ಸಹಾಯ ಮಾಡಿರಿ. **ಟಿಬಿ ಮೊಹರುಗಳನ್ನು ಕೊಂಡುಕೊಂಡು** ಅವುಗಳನ್ನು ನಿಮ್ಮ ಕಾಗದ ಪತ್ರಗಳ ಮೇಲೆ ಅಂಟಿಸಿರಿ. ಒಂದು ಟಿಬಿ ಮೊಹರಿನ ಬೆಲೆ ಬರೇ 10 ಪೈಸೆ ಮಾತ್ರ.

ಮೊಹರುಗಳು ಸಿಗುವ ಸ್ಥಳ: ದಕ್ಷಿಣ ಕನ್ನಡ ಜಿಲ್ಲಾ ಟಿಬಿ ಎಸೋಸಿಯೇಶನ್, ಮಂಗಳೂರು ಮತ್ತು ಅದರ ಬೇರೆ ಬೇರೆ ಏಜನ್ಸಿಗಳು.

ನಕಾಶೆಗಳು ಬೇಕಾಗಿವೆ: ದಿ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, 3, ರೆಡ್ ಕ್ರೋಸ್ ರೋಡು, ನ್ಯೂಡೆಲ್ಲಿ—1 ಇವರಿಗೆ ವಿವರವಾದ ಫಾರ್ಮುಗಳಿಗೆ ಬರೆಯಿರಿ ಮತ್ತು ಆಯ್ಕೆಯಾದ ಟಿಬಿ ಮೊಹರು ನಕಾಶೆಗೆ ರೂ. 1,000/- ಬಹುಮಾನ ಪಡೆಯಿರಿ.

19ನೆ ಟಿಬಿ ಮೊಹರು ಮಾರಾಟ ಚಳವಳ

(ಭಾರತದ ಕ್ಷಯರೋಗ ಸಮಿತಿ, ನವದೆಹಲಿ–1 ಇವರಿಂದ ನಡೆಸಲ್ಪಡುವಂಥಾದ್ದು)

ಸ್ಥಳದಾನ: **ನವಯುಗ, ಉಡುಪಿ.**

ದೇವರು ಮತ್ತು ಸತ್ಯ

[ದೇವರೆಂದರೆ ಸತ್ಯ—ಎಂದು ಗಾಂಧೀಜಿ ಅಚಲವಾಗಿ ನಂಬಿದ್ದರು. ದೇವರು ಮತ್ತು ಸತ್ಯದ ಬಗ್ಗೆ ಗಾಂಧೀಜಿಯವರಿಗಿದ್ದ ಕಲ್ಪನೆ ಏನು ಎಂಬುದನ್ನು ಅವರ ಮಾತಿನಲ್ಲಿಯೇ ಕೇಳಿ—]

'ದೇವರೆಂದರೆ ಸತ್ಯ'—ಇದು ನನ್ನ ಅಮೂಲ್ಯ ಭಾಂಡಾರ. ನಮ್ಮಲ್ಲಿ ಪ್ರತಿಯೊಬ್ಬನಿಗೂ ದೇವರು ಆ ರೀತಿಯಾಗಿ ತೋರಲಿ. ನಮ್ಮ ಬದುಕಿಗೆ ನವ ಧ್ವನಿ ದೊರೆಯುವುದೇ ಸತ್ಯಕ್ಕೆ ನಿಷ್ಠೆ ತೋರುವುದರಿಂದ.

ಹಾಗಾದರೆ, ಸತ್ಯವೆಂದರೇನು?

ಇದು ಕಠಿಣ ಪ್ರಶ್ನೆಯು ಹೌದು. ನನ್ನ ಮಟ್ಟಿಗೆ ಮಾತ್ರ, ನಾನು ಈ ಪ್ರಶ್ನೆಯನ್ನು ಬಿಡಿಸಿದ್ದೇನೆ—ನಿನ್ನ ಅಂತರಾತ್ಮ ನಿನಗೇನು ಹೇಳುವುದು—ಅದುವೆ ಸತ್ಯ ಎಂದು ನಾನು ಭಾವಿಸಿದ್ದೇನೆ. ಹಾಗೆ ನಾನು ಹೇಳಿದರೆ, ಬೇರೆ ಬೇರೆ ಜನರು ಭಿನ್ನ ಮತ್ತು ವಿರೋಧಾಭಾಸದ ಸತ್ಯವನ್ನು ಏಕೆ ಹೇಳುವರು ಎಂದು ನೀವು ಕೇಳಬಹುದು. ಈಗ ಈ ಪ್ರಶ್ನೆಯನ್ನು ಕೂಲಂಕಷವಾಗಿ ನೋಡೋಣ.

ಮನುಷ್ಯನ ಮನಸ್ಸು ಅಸಂಖ್ಯಾತ ಮಾಧ್ಯಮಗಳ ಮೂಲಕ ಕೆಲಸಮಾಡುತ್ತದೆ. ಅಲ್ಲದೆ ಎಲ್ಲರ ಮನಸ್ಸಿನ ಉತ್ಕ್ರಾಂತಿ ಒಂದೇ ಬಗೆಯದಾಗಿರುವುದಿಲ್ಲ. ಆದುದರಿಂದ ಯಾವುದು ಒಬ್ಬರಿಗೆ ಸತ್ಯವಾಗಿ ತೋರುವುದೋ ಅದು ಮತ್ತೊಬ್ಬರಿಗೆ ಅಸತ್ಯವಾಗಿ ಕಾಣಬಹುದು. ಆದುದರಿಂದ ಸತ್ಯ ಸಂಶೋಧನೆಯಲ್ಲಿ ತೊಡಗಿದ ಅನೇಕರ ಸತ್ಯಪ್ರಯೋಗವನ್ನು ಮಾಡುವುದಕ್ಕೆ ಕೆಲವು ನಿರ್ಬಂಧಗಳನ್ನು ಅವಲಂಬಿಸಬೇಕು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ತಾವು ಮನಸ್ಸಾಕ್ಷಿಯ ಧ್ವನಿಯನ್ನು ಆಲಿಸಿದ್ದೇವೆ ಎಂದು ಪ್ರತಿಯೊಬ್ಬರೂ ಹೇಳಿಕೊಳ್ಳುವುದು ಸರಿಯಲ್ಲ ಎಂದು ಸತ್ಯಸಂಶೋಧನೆಯಲ್ಲಿ ತೊಡಗಿದ ಜನರೆಲ್ಲರೂ ಬಲ್ಲರು. ಯಾವ ಶಿಸ್ತು ಮತ್ತು ನಿಯಮಗಳನ್ನು ಪಾಲಿಸದೆ ಅಂತಸ್ಸಾಕ್ಷಿಯ ಹಕ್ಕನ್ನು ಪ್ರತಿಯೊಬ್ಬನೂ ಈಗ ಚಲಾಯಿಸಲು ಯತ್ನಿಸುತ್ತಿರುವುದರಿಂದಲೇ ಜಗತ್ತಿನಲ್ಲಿ ಅನೇಕ ಅಸತ್ಯ ಸಂಗತಿಗಳನ್ನು ಬೀರಲಾಗುತ್ತಿದೆ. ಅತ್ಯಂತ ನಮ್ರಭಾವದಿಂದ ನಾನು ಹೇಳಬಯಸುವುದೇನೆಂದರೆ, ಯಾರಬಳಿಯಲ್ಲಿ ಅಪಾರ ನಮ್ರತೆ ಇರುವುದಿಲ್ಲವೋ ಅವನು ಸತ್ಯವನ್ನು ಹೊಂದಿರಲಾರ. ಸತ್ಯಸಾಗರದ ತೆರೆಗಳ ಮೇಲೆ ನೀವು ಈಸಬಯಸುವಿರಾದರೆ ನೀವು ಶೂನ್ಯದಷ್ಟು ಹಗುರಾಗಿ ವರ್ತಿಸಬೇಕು.

ದೇವರು ವ್ಯಕ್ತಿಯಲ್ಲ

ದೇವರು ಒಂದು ವ್ಯಕ್ತಿ ಎಂದು ನಾನು ಭಾವಿಸುವುದಿಲ್ಲ. ನನ್ನ ಪಾಲಿಗೆ ಸತ್ಯವೇ ದೇವರು. ಭೂಮಿಯ ಮೇಲಿನ ರಾಜ ಮತ್ತು ಅವನ ಆಜ್ಞೆಗಳು ಹೇಗೆ ವಿಭಿನ್ನವಾಗಿಲ್ಲವೋ ಅದೇ ರೀತಿ ದೇವರು ಮತ್ತು ಆತನ ಆಣತಿಗಳೂ ವಿಭಿನ್ನವಾಗಿರಲಾರವು. ನನ್ನ ದೃಷ್ಟಿಯಲ್ಲಿ ದೇವರು ಸತ್ಯ ಮತ್ತು ಪ್ರೇಮ ರೂಪಿಯಾಗಿದ್ದಾನೆ. ದೇವರು, ನೀತಿಯ ಮತ್ತು ಶೀಲದ ಮೂಲವಾಗಿದ್ದಾನೆ. ದೇವರೆಂದರೆ ಅಭಯ ಅಥವಾ ನಿರ್ಭೀತಿ ಸ್ವರೂಪ. ದೇವರೆಂದರೆ ಪ್ರೇಮ ಎಂದು ಹೇಳುವವರ ಜತೆಗೆ ನಾನೂ ದೇವರೆಂದರೆ ಪ್ರೇಮ ಎಂದು ದನಿಗೂಡಿಸುತ್ತೇನೆ. ಆದರೆ ದೇವರು ಪ್ರೇಮಮಯಿ ಇರಬಹುದು, ಆದರೆ ಅದಕ್ಕೂ ಹೆಚ್ಚಾಗಿ ದೇವರು ಸತ್ಯರೂಪಿ ಆಗಿದ್ದಾನೆ ಎಂಬುದು ನನ್ನ ಅಂತರಾಳಕ್ಕೆ ಗೊತ್ತು. ಆದರೆ ಸತ್ಯ ಸಂಶೋಧನೆಗೆ ಹತ್ತಿರದ ದಾರಿ ಪ್ರೇಮದ ಮುಖಾಂತರವೆ ಲಭ್ಯ.

ಸತ್ಯವೇ ದೇವರು

ಸತ್ಯಾನ್ವೇಷಣೆಯ ಹಮ್ಮಿಕದಲ್ಲಿ ನಾಸ್ತಿಕರು ದೇವರ ಅಸ್ತಿತ್ವವನ್ನೇ ಅಲ್ಲಗಳೆಯಲು ಹಿಂಜರಿದಿಲ್ಲ. ಅವರು ತಮ್ಮ ದೃಷ್ಟಿಯ ಪಾದದಲ್ಲಿ ಸರಿಯಾಗಿ ಇರಬಹುದು. ಏನೇ ಇರಲಿ—ದೇವರೆಂದರೆ ಸತ್ಯ ಎಂದು ಹೇಳುವುದಕ್ಕಿಂತ ಸತ್ಯವೇ ದೇವರು ಎಂದು ಹೇಳುವುದು ಸರಿ ಎಂದು ನಾನು ಭಾವಿಸಿದ್ದೇನೆ.

ಆದರೆ ಈ ಪಾರ್ಥಿವ ಪಂಜರದಲ್ಲಿ ನಾವು ಸೆರೆಯಲ್ಲಿರುವವರೆಗೆ ಪೂರ್ಣ ಸತ್ಯದ ಸಾಕ್ಷಾತ್ಕಾರ ನಮಗೆ ಆಗಲು ಸಾಧ್ಯವಿಲ್ಲ. ನಮ್ಮ ಕಲ್ಪನೆಯಲ್ಲಿ ಅದರ ಸ್ವರೂಪವನ್ನು ನಾವು ಗುರುತಿಸಬಹುದು. ಈ ಕ್ಷಣಭಂಗುರ ದೇಹದ್ವಾರದಿಂದ ಶಾಶ್ವತವಾಗಿರುವ ಸತ್ಯವನ್ನು ನಾವು ಮುಖಾಮುಖಿ ನೋಡಲಾರೆವು. ಆದುದರಿಂದಲೇ ಕಟ್ಟಕಡೆಗೆ ನಾವು ನಂಬಿಕೆಯ ಆಶ್ರಯವನ್ನು ಪಡೆಯಬೇಕಾಗುವುದು.

ಸ್ವಾಭಾವಿಕವಾಗಿಯೇ ಸತ್ಯವು ಸ್ವತಸ್ಸಿದ್ಧವಾದುದು. ಸತ್ಯದ ಸುತ್ತಮುತ್ತಲು ಹೆಣದುಕೊಂಡ ಅಜ್ಞಾನದ ಪೊರೆಯನ್ನು ನೀವು ಭೇದಿಸಿದ ಕೂಡಲೆ ಸತ್ಯವು ಪ್ರಕಾಶಬೀರಲು ಪ್ರಾರಂಭಿಸುವುದು. ಸೂರ್ಯನಿಗೆ ತನ್ನ ಪ್ರಕಾಶವನ್ನು ಬಚ್ಚಿಡಲು ಸಾಧ್ಯವೆ? ಅದರಂತೆ ಸತ್ಯದ ಪ್ರತಿಯೊಂದು ಅಭಿವ್ಯಕ್ತಿಯಲ್ಲಿಯೂ ಪ್ರಕಾಶದ ಶಕ್ತಿ ಇದೆ.

ಜೀವನದ ಕ್ಲಿಷ್ಟತೆ

ಜೀವನ ಬಹಳ ಕ್ಲಿಷ್ಟಮಯವಾಗಿದೆ. ಸತ್ಯ ಮತ್ತು ಅಹಿಂಸೆಗಳು ಅನೇಕಸಲ ಪೃಥಕ್ಕರಣ ಅಥವಾ ನ್ಯಾಯ ನಿರ್ಣಯಗಳನ್ನು ನಿರಾಕರಿಸುವಂಥ ಸಮಸ್ಯೆಗಳನ್ನು ತಂದೊಡ್ಡುತ್ತವೆ. ಸಹನಶೀಲ ಪ್ರಯತ್ನ ಮತ್ತು ಮೂಕ ಪ್ರಾರ್ಥನೆಯ ಮೂಲಕ ಸತ್ಯಾಗ್ರಹದ ಮಾರ್ಗವನ್ನು ಹಿಡಿಯಬೂ, ಸತ್ಯ ಶೋಧನೆಯನ್ನು ಮಾಡಲೂ ಸಾಧ್ಯವಾಗುವುದು. ಸತ್ಯಶೋಧಕರು ಅರಸುವ ಕಿರಿದ ಆದರೆ ಸುಂದರ ಮಾರ್ಗವನ್ನೇ ನಾನು ನನ್ನ ದೃಢ ಪ್ರಯತ್ನದಿಂದ ಸಿದ್ಧಿಸಿದ ಪ್ರಾರ್ಥನೆಯಿಂದ ಅನುಸರಿಸುತ್ತೇನೆ — ಎಂಬ ಭಾವನೆಯನ್ನು ನಮ್ಮೆಲ್ಲ ಮಿತ್ರರಿಗೆ ನೀಡಬಯಸುತ್ತೇನೆ.

ಅನಂತ ಶಕ್ತಿ

ಆ ಅನಂತ ಶಕ್ತಿಯನ್ನು ಅಲ್ಲಾ ಅಥವಾ ಖುದಾ ಅಥವಾ ದೇವರು ಎಂಬ ಹೆಸರಿನಿಂದ ಕರೆಯದೆ ಸತ್ಯದ ಹೆಸರಿನಿಂದ ಕರೆಯುವೆ. ನನ್ನ ಪಾಲಿಗೆ ಸತ್ಯವೇ ದೇವರಾಗಿದ್ದಾನೆ. ನನ್ನೆಲ್ಲ ಯೋಜನೆಗಳಿಗೂ ಮೀರಿ ಸತ್ಯ ಕೆಲಸಮಾಡುತ್ತದೆ. ಆ ಅನಂತ ಶಕ್ತಿಯು ಹೃದಯದಲ್ಲಿರುವುದರಿಂದಲ್ಲಿ ಸತ್ಯವೇ ಪೂರ್ಣವಾಗಿ ವ್ಯಾಪಿಸಿದೆ. ದೇವ ಅಜ್ಞೇಯನೆಂದು ನಾನು ನಂಬುವಂತೆ ಅಜ್ಞೇಯ ಒಬ್ಬ ದೊಡ್ಡ ಇಂಗ್ಲಿಷ್ ಮಹಾಶಯನು ನನಗೆ ತಿಳಿಸಿದ್ದಾನೆ. ದೇವರ ಜ್ಞೇಯನೇ ಆಗಿದ್ದಾನೆ, ಆದರೆ ನಮ್ಮ ಪರಿಮಿತ ಬುದ್ಧಿ ಎಲ್ಲಿಯವರೆಗೆ ಗೋಚರಿಸುವುದೋ ಅಷ್ಟು ಮಾತ್ರ ದೇವಜ್ಞೇಯನಾಗಿದ್ದಾನೆ.

ಕೋಟ್ಯವಧಿ ಜನರ ದೇವರ ಹೆಸರನ್ನು ತೆಗೆದುಕೊಳ್ಳುತ್ತಾರೆ, ಮತ್ತು ದೇವರ ಹೆಸರಿನಲ್ಲಿ ನಡೆದ ಹೇಯ ಕೃತ್ಯಗಳೂ ಅಸಂಖ್ಯ. ಸತ್ಯದ ಹೆಸರಿನಲ್ಲಿ ಅನೇಕ ಸಲ ವಿಜ್ಞಾನಿಗಳು ಕ್ರೂರ ಕೃತ್ಯಗಳನ್ನು ಎಸಗುವುದಿಲ್ಲ ಎಂದೇನು ಅಲ್ಲ. ಸತ್ಯ ಮತ್ತು ವಿಜ್ಞಾನದ ಹೆಸರಿನಲ್ಲಿ ಮೂಕ ಪ್ರಾಣಿಗಳನ್ನು ಅಮಾನುಷ ರೀತಿಯಲ್ಲಿ ಕ್ರೂರ ಪ್ರಯೋಗಗಳಿಗೆ ಈಡು ಮಾಡುತ್ತಿರುವುದನ್ನು ನಾನು ಬಲ್ಲೆ. ಈ ರೀತಿ ಸತ್ಯದ ಪಥದಲ್ಲಿ ಅನೇಕ ತೊಂದರೆಗಳು ಇವೆ—ನೀವು ದೇವನನ್ನು ಯಾವ ರೀತಿಯಿಂದ ಬಣ್ಣಿಸಲು ಪ್ರಯತ್ನಿಸಿದರು. ಆದರೆ ಮನಸ್ಸಿನ ಮನಸ್ಸು ಪರಿಮಿತವಾದುದು. ಮನಸ್ಸಿನ ಗ್ರಹಣ ಶಕ್ತಿಗೆ ದೂರವಾಗಿರುವ ಅನಂತತ್ವದ ಒಂದು ಅಂಶ ನೀವು ಎಂದು ನೀವು ಭಾವಿಸಲು ಅನೇಕ ನಿರ್ಬಂಧಗಳನ್ನು ಅಡೆತಡೆಗಳನ್ನೂ ನೀವು ಎದುರಿಸಬೇಕಾಗುವುದು.

ಹಿಂದು ತತ್ವಜ್ಞಾನ

ಹಿಂದು ಅಧ್ಯಾತ್ಮ ತತ್ವದಂತೆ ದೇವನೊಬ್ಬನೆ ಸತ್ಯ ಉಳಿದುದೆಲ್ಲ ಅಸತ್ಯ. ಇದೇ ಮಾತನ್ನು ಇಸ್ಲಾಮ ಕಲೀಮಾದಲ್ಲಿ ಸಮರ್ಥಿಸಲಾಗಿದ, ಸ್ವೀಕರಿಸಲಾಗಿದೆ. ದೇವ ಮಾತ್ರ ಇದ್ದಾನೆ. ಉಳಿದುದುದೂ ಅಸ್ತಿತ್ವದಲ್ಲಿಯೇ ಇಲ್ಲ—ಎಂಬ ಮಾತು ಇಲ್ಲಿ ಸ್ಪಷ್ಟವಾಗಿದೆ. ಸಂಸ್ಕೃತದಲ್ಲಿ ಸತ್ಯ ಎಂಬುದು 'ಸತ್' (ಇದೆ) ಎಂಬ ಪದದಿಂದಲೇ ಹುಟ್ಟಿದೆ. ಈ ಎಲ್ಲ ಮಾತುಗಳನ್ನು ಮನಗಂಡು ನಾನು ಹೇಳುತ್ತೇನೆ ಸತ್ಯವೇ ದೇವರು ಎಂದು. ಈ ಮಾತು ನನಗೆ ಅನಿರ್ವಚನೀಯ ಅನಂತ ತೃಪ್ತಿಯನ್ನು ನೀಡಿದೆ. ನೀವು ಸತ್ಯವನ್ನು ದೇವರೆಂದು ಕಂಡುಕೊಳ್ಳಬೇಕೆಂದರೆ ಪ್ರೇಮ ಅಂದರೆ ಅಹಿಂಸೆಯ ಏಕೈಕ ಮಾರ್ಗದಿಂದ ಸಾಗಬೇಕು. ಕೊನೆಗೆ ಗುರಿ ಮತ್ತು ಸಾಧನೆಗಳು ಪರಿವರ್ತನೀಯ ಪದಗಳಾಗಿ ಪರ್ಯವಸಾನ ಹೊಂದುವುದರಿಂದ, ದೇವರೆಂದರೆ ಪ್ರೇಮ ಎಂದು ಹೇಳಲು ನಾನು ಹಿಂಜರಿಯೆ.

ತ್ನ. ಈ ಬಿಕ್ಕಟ್ಟಿನಿಂದ ಅಯ್ಯೂಬಖಾನರು ಹಿಂದಕ್ಕೆ ದೂರವುಳಿಯಬಲ್ಲರೆ? ಇದಕ್ಕಿರುವ ಏಕಮೇವ ಮಾರ್ಗವೆಂದರೆ, ಭಾರತದೊಡನೆ ಮೈತ್ರಿಯನ್ನು ಬೆಳೆಸುವುದು— ಗೌರವಯುತವಾಗಿ ತಾಷ್ಕೆಂಟ್ ಒಡಂಬಡಿಕೆಯನ್ನು ಅಕ್ಷರಶಃ ಪರಿಪಾಲಿಸುವುದು. ಇದು ಬಿಟ್ಟು ತನ್ನ ದುಷ್ಕೃತ್ಯಗಳನ್ನು ಮರೆಮಾಚಲು ಪರದ್ವೇಷದ ಉಪದೇಶ ನೀಡಿದರೆ, ಅದು ಮತ್ತೊಂದು ದಿನ ತನ್ನ ಬುಡಕ್ಕೇ ಬರುವುದು. ಇದಕ್ಕೆ ಪಾಕ್ ನೀತಿಯ ಕಪ್ಪು ಅದರ ಸ್ವರೂಪಕ್ಕೇ ಉದಾಹರಣೆ.

ಂ ಂ ಂ

ಇತ್ತೀಚೆಗೆ ತಮ್ಮ ಕಣ್ಣೆದುರು ಜರುಗಿದ್ದನ್ನು ಆಚರಿಸಿದ ನಾಯಕ ಶಿರೋಮಣಿ ರಾಜಾಜಿ ತಮ್ಮದೇ ದಶಕದ ಸಲಹೆಗಳನ್ನು ಮುಂದಿಡಲು ಆರಂಭಿಸಿದ್ದಾರೆ. ಕಾಶ್ಮೀರ ಸಮಸ್ಯೆಯನ್ನು ಪರಿಹರಿಸುವುದು ಪಾಕಿಸ್ತಾನ ಮತ್ತು ಭಾರತ ಎರಡಕ್ಕೂ ಹಿತಸಾಧನೆಗಳೆಂದು ಅವರು ಹೇಳುತ್ತಾರೆ. ಎರಡೂ ದೇಶಗಳಿಗೂ ಪ್ರಜಾತಂತ್ರಾತ್ಮಕವಾಗಿ ಒದಗುವುದು ಅವೇ ಕ್ಷೇಪಿಸುವುದರಿಂದ ಸೈನಿಕ ಶಕ್ತಿ ಸಂಗ್ರಹಕ್ಕಾಗಿ ಎರಡೂ ದೇಶಗಳು ಹಣವೆಚ್ಚ ಮಾಡುವುದನ್ನು ಬಿಡಬೇಕು. ಇದಕ್ಕಾಗಿ ಯೋಗ್ಯ ಒಡಂಬಡಿಕೆ ಮಾಡಿಕೊಳ್ಳಬೇಕು.

ರಾಜಾಜಿಯ ಸಲಹೆ ಇಷ್ಟಕ್ಕೇ ನಿಲ್ಲಲಿಲ್ಲ. ಕಾಶ್ಮೀರದ ಭವಿಷ್ಯದ ಧರ್ಮದ ಪ್ರಶ್ನೆಯನ್ನು ಅವರು ಬಿಡಿಸಲು ದಾರಿ ತೋರಿಸಿದ್ದಾರೆ— ಅಮೇರಿಕ—ಬ್ರಿಟನ್ ಮತ್ತು ರಷ್ಯಾಗಳ ಅಧ್ಯಕ್ಷ ಹಕೋಟಿ ಮಂಡಳಿಯೊಂದನ್ನು ರಚಿಸಿ ಕಾಶ್ಮೀರದ ಆಡಳಿತವನ್ನು ಹತ್ತು ವರ್ಷಗಳ ಕಾಲ ಅದಕ್ಕೆ ಒಪ್ಪಿಸಬೇಕು. ಈ ಅವಧಿ ಮುಗಿದ ಬಳಿಕ ಜನತೆಯ ಅಭಿಪ್ರಾಯವನ್ನು ತಿಳಿದು ಅದರಂತೆ ನಡೆಯಬೇಕು— ಮಂಡಳಿ ನಿವೃತ್ತವಾಗಬೇಕು.

ಇದು ದಿಟ್ಟ ಹೆಜ್ಜೆ. ಇದಕ್ಕಾಗಿ ಧೈರ್ಯ ಪೂರ್ವಗ್ರಹ ಮತ್ತು ಪ್ರತಿಷ್ಠೆ ಇವೆಲ್ಲವನ್ನೂ ಬದಿಗೊತ್ತಬೇಕು. ಭಾರತ ಪಾಕಿಸ್ತಾನ್ ನಡುವೆ ಶಾಶ್ವತ ಸಂಧಿ ಸಾಧ್ಯವಾಗಬೇಕು — ಸಹಬಾಳ್ವೆ. ಹೀಗೆ ನಲ್ಲಿ ಇತಿಹಾಸವನ್ನಾದರೂ ಬದಲಾಯಿಸಲು, ಇತಿಹಾಸದ ಪಾಠ ಮರೆಯಲು ಈ ಹಳೆಯ ಹುಲಿಯ ಅಪೂರ್ವ ಸಲಹೆ. ಆದರೆ, ಇದನ್ನು ಸ್ವೀಕರಿಸಲು ಪ್ರಾಯಃ ಭಾರತೀಯರಾರೂ ಸಿದ್ಧರಿಲ್ಲ.

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ
ಮತ್ತು ಉಪಾಯಗಳನ್ನು ವಿವರಿಸುವ ಕೃತಿ

ಬೆಲೆ 0–75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಪಾಲುಕೋಟೆ, ಉಡುಪಿ, ದ. ಕ.

ಕನಕದಾಸರ ಕೀರ್ತನೆಗಳು

(ಐದನೇ ಪುಟದಿಂದ)

ಳಲ್ಲಿ ಸಂಗೀತದ ಅಂಶವು ಸಾಧುವಾಗಿರಬೇಕೆಂದೇ ಭಾವನೆಯಾಗಿದೆ.

೩) ಅಗಣ ಕಾಲದ ಕೆಲವು ವಿಶೇಷ ಘಟನೆಗಳೂ ಇಲ್ಲಿ ಸೂಚಿತವಾಗಿವೆ. ಈ ಬಗೆಗೆ ಇನ್ನೂ ಹೆಚ್ಚು ಸಂಶೋಧಿಸಬೇಕಾಗಿದೆ: "ಯತಿಯ ಕೈ ನೋಡಯ್ಯ ಶರಣಾಗತನ ಕೊಡೆಯಿಂ ಮಾಯವಾದ| ಮಗುವ ಕಾಣಿರಯ್ಯ" (ಪು 19).

೪) ಪೌರಾಣಿಕ ಕಥೆಗಳನ್ನು ತುಸು ಹೊಸರೀತಿಯಲ್ಲಿ ಅವರ ಪರಿಚಯಿಸಿದ್ದು, ಆ ಕಾಲದಲ್ಲಿ ಹೀಗೆ ಪ್ರಚಾರವಿದ್ದಿರಬೇಕು. ಅಜಾಮಿಳನು ಬಲು ಪಾಪಿಯಾಗಿದ್ದರೂ ಕೊನೆಗೆ ತನ್ನ ಪುತ್ರ ನಾರಾಯಣ ನಾಮವನ್ನು ಹೇಳಿ ಪ್ರಾಣವನ್ನು ನೀಗಿಕೊಂಡನೆಂಬುದು ಪುರಾಣಗಳಲ್ಲಿದೆ. ಇಲ್ಲಿ ಅದೇ ಬೇರೆ ರೀತಿಯಲ್ಲಿ ಹೇಳಿದೆ: "ಹೇ ನಾರಗಾ ಎಂದಜಾಮಿಳಗೆ ಸಾಯುಜ್ಯ ನೀ ನೊಲಿದು ಕೃಪೆ ಮಾಡಿದೆ"ಯೆಂಬುದರಲ್ಲಿ "ನಾರಗಾ" ಎಂಬುದು ಅವನ ಮಗನೊಬ್ಬನ ಹೆಸರಾಗಿ ಹೇಳಲಾಗಿದೆ. ಅಲ್ಲಿ "ನಾರಾಯಣ" ಎಂಬಂತೆ 'ನಾರ-ಗಾ' ಎಂಬರ್ಥವಿದೆಯೆಂಬುದೇ ಸಾರಾಂಶ.

ಪಾಂಡವರು ಕೌರವರಲ್ಲಿ ಜೂಜಾಡಿ ಸೋತು ಕಾಡಿಗೈದಿ, ವನ ಮುಗಿದ ಮೇಲೆ ರಾಜ್ಯಕ್ಕಾಗಿ ಹೋರಾಡಿ ಕೌರವರನ್ನು ಕೊಂದುದು ಮಹಾಭಾರತದ ಸಾರವಾಗಿದೆ. ಅಲ್ಲಿ, ಯಾರು ಕೌರವರನ್ನು ಕೊಂದರೆಂಬುದನ್ನು ಕನಕದಾಸರು ಚಲವಾರು ಪ್ರಶ್ನಾರ್ಥಕವಾಗಿ ವಿವರಿಸಿದ್ದಾರೆ. ಸದ್ಯ ಶಕುನಿಸುನ್ನು ಕುರಿತು ಹೇಳಿದುದು ಹೀಗಿದೆ: "ಮುನ್ನಿನ ವೈರದಿ ಕಡು ಸ್ನೇಹವ ಮಾಡಿ ಉನ್ನಂತಲೆತ್ತ ಪಗಡೆಯಾಡಿಸಿ ತನ್ನ ಕುಹಕದಿಂದ ಕುರುಬಲವನೆ ಕೊಂದ ಗನ್ನ ಘಾತಕಿ ಶಕುನಿಯೊ ಪಾಂಡವರೊ?" (ಪು. 25). ಈ ಕತೆ 'ತುರಂಗ ಭಾರತ'ದಲ್ಲಿ ವಿಸ್ತಾರವಾಗಿ ಬಂದಿದೆ. (ಕೌರವರೂ ಪಾಂಡವರೂ ಹೇಗೆ ಜೂಜಾಡಿದರು, ಈ ಕತೆ ಹೇಗೆ ಹೇಳಲಾಗಿದೆಯೆಂದು 'ಸಾಹಿತ್ಯ ಹಾಗೂ ಸಂಶೋಧನೆ'ಯಲ್ಲಿರುವ 'ಜೂಜಾಟದ ಕತೆ' ನೋಡಿ).

೫) ಆ ಕಾಲದ ಸಾಮಾಜಿಕ ವಿಚಾರಗಳೂ ಇಲ್ಲಿ ತುಸು ಮಿನುಗುತ್ತಿವೆ: ಊರಿಗೊಬ್ಬ 'ಮಂಡಲಾಧಿಪತಿ', 'ತಳವಾರ' ಇದ್ದರು (ಪು. 20). "ಹರಕೆಯ ಹೊತ್ತುದ ಒಪ್ಪಿಸದಿದ್ದರೆ ಗುರುತು ತೋರಲು ಬಂತೇನೋ" ಹಾವು—ಎಂಬ ನಂಬಿಕೆಯು ಉದ್ಧರಿಸಲಾಗಿದೆ (ಪು. 24).

ಆಗ ಹಳ್ಳಿಗರಲ್ಲಿ ಬೊಂಬೆಯಾಟದ ಪ್ರಚಾರವಿತ್ತು. ಯಕ್ಷಗಾನ-ಬಯಲಾಟಗಳಂತೆ ಇದೂ ಕನ್ನಡದ ಜಾನಪದ ಕಲಾ ಪ್ರದರ್ಶನವಾಗಿದೆ. ಯಕ್ಷಗಾನ ಕೂಟ (ತಾಳಮದ್ದಳೆ) ಮತ್ತು "ಬೊಂಬೆಯಾಟ"ಗಳಿಗೆ ದತ್ತಿಬಿಟ್ಟ ಬಗ್ಗೆ ಶಿಲಾಶಾಸನಗಳೇ ಸಾಕ್ಷಿಗಳಾಗಿವೆ. ಈ ಬಗೆಗೆ ಕನಕದಾಸರು ಸವಿಸ್ತಾರವಾಗಿ ಹೇಳಿದ್ದಾರೆ: "ಬೊಂಬೆಯಾಟವನಾಡಿಸಿದೆ ಮಹಾ ಭಾರತದ" ಎಂಬೀ ಆಯ್ದು ಸೊಲ್ಲಿನ ಹಾಡು ಈ ಬಗೆಯ ವಿವರವಾಗಿದೆ. (ಪು. 28).

ಆ ಕಾಲದಲ್ಲಿ ಹಳ್ಳಿಗಾಡಿನವರು ಪೂಜಿಸುತ್ತಿದ್ದ ಕೆಲವು ವಿಚಿತ್ರ ದೈವಿಕ ವಿಚಾರಗಳನ್ನು ಇವರು ಟೀಕಿಸಿದ್ದಾರೆ: "ಐಬಗೆ ದೈವದ ಗೊಡವೆ ಬೇಡ - ನರಕ ತಪ್ಪದು — ಎಕ್ಕನಾತಿ ಯರು ಕಾಟ ಚಿಕ್ಕಯ್ಯರು". (ಪು. 70). ಇಂತಹ ಕ್ಷುದ್ರ ದೇವತೆಗಳಿಗಿಂತ ಹರಿಯೇ ನಮಗೆ ಶರಣ್ಯವೆಂದು ಸಾರಿದ್ದಾರೆ: ಕಣಿಯ ಹೇಳಬಂದೆ ನಾರಾಯಣನಲ್ಲದಿಲ್ಲವೆಂದು". ಇತರ ಕೃತಿಗಳಲ್ಲೂ ಈ ಬಹುದೈವಗಳ ಆರಾಧನೆಯ ಬಗ್ಗೆ ಆಕ್ಷೇಪವಿದೆ. ಕನಕದಾಸರೂ ಸಮರ್ಪಕವಾಗಿ ಹರಿಭಕ್ತಿಯೇ ಮೇಲೆಂದು ಸಾರಿದ್ದಾರೆ!

೬) ಕನಕದಾಸರ ಕೀರ್ತನೆಗಳಲ್ಲಿ ಕೆಲವೆಡೆ ಹಸ್ತಪ್ರತಿಕಾರರ ಸ್ಖಾಲಿತ್ಯಾದಿಗಳು ಉಳಿದಿವೆ. ಈ ಬಗೆಗೆ ಇನ್ನು ಹೆಚ್ಚು ಸಮೀಕ್ಷೆ ನಡೆಯಬೇಕು: "ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ ನಿಮ್ಮೊಳಗಿಹನ್ಯಾರಮ್ಮ" ಎಂಬಲ್ಲಿ "ಶಾರದೆ"ಯ ಬದಲ ಪಾಡಿಯಿರಬೇಕು. ಶಾರದೆಗೂ ಗಣಪತಿಗೂ ವಿಶೇಷ ಸಂಬಂಧವಿರುವುದಿಲ್ಲ ತಾನೆ! (ಪು. 1).

"ಶ್ರೀರಂಗ ಶಾಯಿ"ಯನ್ನು ಹೊಗಳುವ ಪದ್ಯದಲ್ಲಿ (ಪು. 14) ೧—೨ನೆಯ ಸೊಲ್ಲುಗಳು ಅದಲು ಬದಲಾಗಿರಬೇಕಾದೀತು.

"ಕಣ್ಣಿಗೆ ಸೇರುವ ಕಂಡೆಸು ತಾಳು ಮನವೆ' ಎಂಬಲ್ಲಿ (ಪು. 21) "ನವಿಲಿಂಗೆ ಚಿತ್ರ ಬಣ್ಣವನು ರಚಿಸಿದರ್ ಯಾರು" ಎಂಬುದರ ಬದಲು "ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ'ವೆಂದು ಬೇರೆ ಕೇಳುತ್ತದೆ. ಆದರೆ "ಅಡವಿ"ಯೆಂಬ ಸೊಲ್ಲು ಇಲ್ಲಿ ಬೇಕಾಗಿಲ್ಲ. ಇತರ ಸೊಲ್ಲುಗಳಂತೆ ಅದರಲ್ಲಿ ಆವೊಂದು ಪ್ರಾಣಿ-ಪಕ್ಷಿಯ ಉದಾಹರಣವಿಲ್ಲ. ಹಾಗಾಗಿ, "ನವಿಲಿಂಗೆ" ಎಂಬ ಸೊಲ್ಲು ಸರಿಯಾದೀತು.

'ಕೀರ್ತನೆಯ ಮಾಡಿ ಕೈವಲ್ಯ ಪಡೆವರು ಇವರು" ಎಂಬ ಹಾಡಿನ ೨ನೆಯ ಸೊಲ್ಲಿನಲ್ಲಿ ಒಂದು ಸಾಲು ಇಲ್ಲ'(ಪು97).

೭) "ಸಾರಿ ದೂರಿ ಹೇಳುತ್ತೇನೆ'ಎಂಬೀ ಪದ್ಯವು ಶ್ರೀ ವಾದಿರಾಜರ ಕೃತಿಯಾಗಿ "ಹಯವದನ" ಮುದ್ರಿಕೆಯಲ್ಲಿ—ಒಂದು ನೂರ ವರ್ಷಕ್ಕಿಂತಲೂ ಹಿಂದಣ ಹಸ್ತಪ್ರತಿಯಲ್ಲಿದೆ (ಶ್ರೀ ವಾದಿರಾಜರ ಕೀರ್ತನೆಗಳೆಲ್ಲವೂ ಇನ್ನೂ ಅಚ್ಚಾಗಿಲ್ಲ, ಅಲ್ಲಲ್ಲಿ ಹುಡುಕಿದರೆ ಮತ್ತೂ ಕೀರ್ತನೆಗಳು ದೊರೆಯುತ್ತವೆ — ಈ ಬಗ್ಗೆ "ಸಾಹಿತ್ಯ ಹಾಗೂ ಸಂಶೋಧನೆ"ಯಲ್ಲಿ "ಶ್ರೀವಾದಿರಾಜರ ಕೀರ್ತನೆಗಳು" ನೋಡಿರಿ.)

೮) ಕನ್ನಡ ನುಡಿಯಲ್ಲಿ ಕೆಲವು ಇದೀಗ ಬಳಕೆಯಲ್ಲಿ ಮರೆಯಾಗುತ್ತಿರುವವೂ ಇಲ್ಲಿ ಕಂಗೊಳಿಸುತ್ತಿವೆ. ಇಂತಹ ನುಡಿ ಮುತ್ತುಗಳ ಬದಲು ಶುದ್ಧ ಸಂಸ್ಕೃತ ಶಬ್ದಗಳನ್ನೆ ನಾವು ದಿನಾಲೂ ಬಳಸುತ್ತಿದ್ದೇವೆ. ಕನ್ನಡಿಗರು ಇನ್ನಾದರೂ ತಮ್ಮ ನುಡಿಗಳಲ್ಲಿ ಇಂತಹ ಹಳೆಯ ಬಳಕೆಗಳನ್ನು ಅಳವಡಿಸಿಕೊಂಡರೆ ತುಂಬ ಸೊಗಸಾದೀತೆನ್ನಲಡ್ಡಿಯಿಲ್ಲ. ಕನಕದಾಸರು ಮಾತ್ರವಲ್ಲ, ಇತರ ಹರಿದಾಸರಲ್ಲೂ ಇಂತಹ ಅಚ್ಚಗನ್ನಡದ ದ್ರಾವಿಡ ವರ್ಗದ ನುಡಿಗಳಿರುತ್ತವೆ:

ಡಿಂಗರಿಗ, (ಡಿಂಗ), ಗಹಗ ಬೆಳೆದ ಕಜ್ಜ, ಬೊಕ್ಕಣ್ಣ, ಚಳ್ಳಪಿಳ್ಳಿ, ರವಣ, ದಾರು, ಮಡಿಕೆ, ಕೊಂಡೆ, ಪಣ್ಣಣ, ಕುಂಡೆ, ಆನೆ, ಸೀಕರಣೆ, ಇಪ್ಪಗಿಲ, ಮುಂಚೆ, ಇತ್ಯಾದಿ.

ಕನಕದಾಸರ ಜಯಂತಿ ಇತ್ತೀಚೆಗೆ ಪ್ರತಿವರ್ಷ ಎಲ್ಲೆಡೆ ಆಚರಿಸಲಾಗುತ್ತಿದೆ. ಉಡುಪಿ, ಕಾಗಿನೆಲೆಗಳಲ್ಲಿ ಕನಕದಾಸರ ಸ್ಮಾರಕ ಗುಡಿಗಳಿವೆ. ಕನಕದಾಸರು ಬರೆದ ಹಲವು ಕೃತಿಗಳು (ಕಾವ್ಯ ಗ್ರಂಥ ಸಂಕಲನ, ಹಾಗೂ ಹಲವು ಕೀರ್ತನೆಗಳು) ಉಳಿದು ಬಂದಿವೆ. ಆದರೆ, ಕನಕದಾಸರ ಕೀರ್ತನೆಗಳ—ಕೃತಿಗಳ ಸರಸ ಪರಿಚಯ—ವಿಮರ್ಶನಗಳು ಸಾಕಷ್ಟು ಆಗಿಲ್ಲ. ಈ ಕನಕದಾಸರ ಕೃತಿಗಳ ಬಗೆಗೆ ಹಾಗೂ ಇತರ ಹರಿದಾಸರಲ್ಲಿ ಮುಖ್ಯರ ಕೀರ್ತನೆಗಳ ಬಗೆಗೆ ಪ್ರತ್ಯೇಕ ಪರಿಚಯಾತ್ಮಕ ನಿಬಂಧಗಳನ್ನು ಬರೆಯಬೇಕು. ವಿಶ್ವವಿದ್ಯಾಲಯಗಳು ಈ ಬಗೆಗೆ ವಿಶೇಷ ಪ್ರಶಸ್ತಿ (ಡಾಕ್ಟರೇಟ್, ಡಿ. ಲಿಟ್.) ನೀಡಬೇಕು. ಕನ್ನಡ ಜನರು ಈ ಕೃತಿಗಳ ಸಾರವನ್ನು ಆಸ್ವಾದಿಸುವಂತಾಗಬೇಕು. ಆಗ ತಾನೇ ಇಂತಹ ಜಯಂತಿಗಳು ಸಾರ್ಥಕಗೊಳ್ಳುತ್ತವೆಯೆಂದು ಹೇಳಲಡ್ಡಿಯಿಲ್ಲ.

ಯಕ್ಷಗಾನ ಕೂಟ

ಯಕ್ಷಗಾನ ಕಲಾಮಂಡಳಿ (ರಿ) ಉಡುಪಿ, ಇವರು ಆದಿಉಡುಪಿ ಪ್ರೌಢ ಪ್ರಾಥಮಿಕ ಶಾಲಾವರಣದಲ್ಲಿ ಎಳ್ಳಮಾವಾಸ್ಯೆಯ ದಿನದಂದು ರಿವಾಜಿಯಂತೆ ಜರಗುವ ಯಕ್ಷಗಾನ ಕಾಲಕ್ಷೇಪವನ್ನು ಕಲಾಪೂರ್ಣವಾಗಿ ಜರಗಿಸಿದರು. ಆರಂಭದಲ್ಲಿ ಯಕ್ಷಗಾನ ಮುಖ್ಯ ವೇಷಧಾರಿ ಹಾರಾಡಿ ರಾಮಗಾಣಿಗರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ದಿವಂಗತ ಶ್ರೀ ಅಂಬಲ್ಪಾಡಿ ಹರಿಯಣ್ಣ ಶೆಟ್ಟರು ಮತ್ತು ಸಂದುಬೆಟ್ಟು ಶೀನಪ್ಪ ಶೆಟ್ಟರ ನೆನಪಿಗಾಗಿ ಜರಗಿಸುತ್ತಿರುವ ಈ ಕಾರ್ಯಕ್ರಮದ ವಿಶೇಷತೆಯನ್ನು ವಿವರಿಸಿ ಶ್ರೀ ಬಾಡಿಗಾರು ಲಕ್ಷ್ಮೀನಾರಾಯಣ ಉಪಾಧ್ಯಾಯರು ಮೊತನಾಡಿ ಸ್ವಾಗತ ಬಯಸಿದರು.

ದಿವಂಗತ ಸಂದುಬೆಟ್ಟು ಶೀನಪ್ಪ ಶೆಟ್ಟರ ಭಾವಚಿತ್ರವನ್ನು ಅವರ ಸುಪುತ್ರರು ಯಕ್ಷಗಾನ ಕಲಾಮಂಡಳಿಯ ಅಧ್ಯಕ್ಷ ಶ್ರೀ ಪೊಲ್ಯ ದೇಜಪ್ಪ ಶೆಟ್ಟರಲ್ಲಿ ಒಪ್ಪಿಸಿದಾಗ ಅನಾವರಣ ಮಾಡಿದರು. ಶ್ರೀ ಜನ್ನಬೆಟ್ಟು ಗೋಪಾಲ ಶೆಟ್ಟರು ಸಂದರ್ಭೋಚಿತವಾಗಿ ಮಾತನಾಡಿದರು.

ಕಲಾಪ್ರದರ್ಶನದಲ್ಲಿ ರಾಜಸೂಯಾಧ್ವರ ಕಥಾಭಾಗವನ್ನು ಶ್ರೀ ಕೆ. ನಾರಾಯಣ ಶೆಟ್ಟರು (ಭಾಗವತರು), ಶ್ರೀ ಮಟ್ಟು ಸುಬ್ಬರಾವ್ ಮತ್ತು ಕಿಟ್ಟು ಬಾಂ (ಮೃದಂಗ), ಶ್ರೀಗಳಾದ ಗೋವರ್ಧನ ರಾವ್ (ಚಂಡೆ) ಪೊಲ್ಯ ದೇಜಪ್ಪ ಶೆಟ್ಟರು, ಮಟ್ಟು ಕೋಟಿ ಸುಬ್ಬರಾವ್, ಸೀತಾನದಿ ಗಣಪಯ್ಯ ಸೆಟ್ಟಿ, ಎಂ ವೆಂಕಟಾಚಲರಾವ್, ಜನ್ನಬೆಟ್ಟು ಗೋಪಾಲ ಶೆಟ್ಟಿ ಅರ್ಥಧಾರಿಗಳು ಭಾಗವಹಿಸಿದ್ದರು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯನ್ನು

ನಿಮ್ಮ ಉಳಿತಾಯಕ್ಕನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—೧.

Phone— 5711, 5712, 5713 } 3 Lines.

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,

ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ

ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ

ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ ಮೂಡಬಿದ್ರಿ — ಬಂಗಾಡಿ ಕಿಲ್ಲೂರು, ನಾವೂರು — ಚಾರ್ಮಾಡಿ ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

ಗಗನಂ ಗಗನಾಕಾರಂ

(ನಾಲ್ಕನೇ ಪುಟದಿಂದ)

ಷ್ಟರು ಹೆಂಗಸರ ಬಗ್ಗೆಯೂ ಮಹಾ ಒಳ್ಳೆಯ ಮಾತುಗಳಾಡಿದ್ದಾನೆಂದರೆ, ಅವು ಪಾಶ್ಚಾತ್ಯರು ಭಾರತ ಸ್ತ್ರೀಯರಲ್ಲಿ ಅಪಮಾನತೆಯ ಬೀಜವನ್ನು ಬಿತ್ತಿದ ಮನುವನ್ನು ತಿರಸ್ಕರಿಸಿ ಮಾರ್ಕ್ಸನನ್ನೇ ಆಲಿಂಗಿಸಿದರು...."

"ಏನ ಯಾತು?"

"ಆಗೋದೇನು? ಎಲ್ಲರೂ ಪಿನ್ನಂತಿಯೇ ಅನ್ನ..."

"ಅಂದ್ರೆ..."

"ನೋಡ, ಹಿಂದೊಮ್ಮೆ ದ್ರಾವಿಡ ಕಳಗಂದ ರಾಮಸ್ವಾಮಿ ನಾಯ್ಕರರು ಮನಸ್ಮೃತಿಯ ಪ್ರತಿಗಳನ್ನು ಸುಡುವ ಚಳುವಳಿ ಆರಂಭಿಸಿದರು...."

"ಹ್ಞಾಂ...."

"ಅದಾಹೆಯೆಂದರೆ, ಆಗ ಮನುಸ್ಮೃತಿಯ ಪ್ರತಿಗಳೇ ದೊರೆಯುತ್ತಿರಲಿಲ್ಲ!"

'ಓ....ನೀವನ್ನೋದು ಅಂದ್ರೆ......'

"ಅಲ್ವೆ, ನೀನು ಮನಸ್ಮೃತಿಯನ್ನು ಓದದೇನೇ ಮನು ಅಂದ್ರೆ ಸ್ತ್ರೀಯರನ್ನು ಪುರುಷರ ಕೈಗೊಂಬೆಯನ್ನಾಗಿ ಮಾಡಿದವ ಅನ್ನಲಿಲ್ಲವೆ?"

'ಅಲ್ರಿ, ಎಲ್ಲಿಯೋ ಓದಿದ ನೆನಪು."

'ನೋಡು ನಮ್ಮಲ್ಲಾ ಹೀಗೇ.........ಎಲ್ಲಾ ಅರ್ಥಾನರ್ಥ....ಯಾವುದೂ ಇಲ್ಲ...."

'ಯಾರಿಗೆ?"

' ಇಲ್ಲದವನಿಗೆ..."

"ನಮಗೆ....?"

"ನಾವೇನು ಲೋಕಕ್ಕೆ ಹೊರತಾಗಿದ್ದೇವೆಯೆ?..."

"ನಾವೂ ಲೌಕಿಕರ ...ಉಪ್ಪು, ಅನ್ನ ತಿನ್ನುವವರು...."

"ಹ್ಞಾಂ...."

"ಏನು?"

"ಏನೂ ಇಲ್ಲಾನ್ನ..."

"ಹ್ಞ ಹ್ಞ...!"

— ಗೋರಾ.

ಪುತ್ತೂರು ಲೇಂಡ್ ಟ್ರಿಬ್ಯೂನಲ ಕೋರ್ಟಿನಲ್ಲಿ

R. P. 1185/68.

ಮುತ್ತಪ್ಪ ಗೌಡ — ಅರ್ಜಿದಾರ

ವಿರುದ್ಧ

ಕರಿಯಪ್ಪ ಗೌಡ — ಎದುರು

ಕರಿಯಪ್ಪ ಯಾನೆ ಕೃಷ್ಣಪ್ಪ ಗೌಡ, ತಿಮ್ಮಪ್ಪ ಗೌಡರ ಮಗ, ಸುಳ್ಯ ತಾಲೂಕು ಐನೆಕಿದು ಗ್ರಾಮದಲ್ಲಿ, Post ಐನೆಕಿದು (ದ. ಕ.)

ಅರ್ಜಿದಾರ ನು 1966-67ನೇ ವರ್ಷದ ಗೇಣಿ ವಸೂಲು ಬಗ್ಗೆ ಮಾಡಿದ ಮೇಲಿನ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 28-1-69ಕ್ಕೆ ಮುಂದೆ ಇಟ್ಟಿರುತ್ತದೆ. ಆ ದಿನ ನೀವು ಖುದ್ದು ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು, ತಪ್ಪಿದರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿಯದೆ.

| By order of the Court |

U. P. SHIVARAMA.

Advocate for Petitioner.

Puttur, S. K.

Dated: 18-12-68.

ಕಡಲಿ ಕಾಳುಗಳು

ಮೈಲಾರಿದಿಲ್ಲ ಕಬ್ಬಿಣ ಅದಿರು ಗಣಿಗಳ ಉದ್ಘಾಟನಾ ಸಭೆಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಯಿತು ಎಂಬುದನ್ನು ಓದಿದ ಶ್ರೀ ಸಾಮಾನ್ಯನು ಅದಕ್ಕಾಗಿಯೇ ಉದ್ಘಾಟನಾ ಸಮಾರಂಭಗಳು ಆರಂಭವಾದವು ಎಂದು ಕೇಳಿದನಂತೆ.

ಮಹಾಜನ ಆಯೋಗದ ವರದಿಯನ್ನು ಸಭ್ಯತೆಯ ಮೂಲಕ ಮಾಡಿದ ಜನನ ದನ್ನು ತಿರಸ್ಕರಿಸಿ ಕವಿ ಶಕ್ತಿನ ವರದಿಯನ್ನು ಹಿಂದೆ ತಳ್ಳುತ್ತ ಮುಖ್ಯಮಂತ್ರಿಗಳು ಅನುಸರಿಸುವ ಧ್ಯಾನದಲ್ಲಿ ತೊಡಗಿದ್ದಾರೆ ಎಂಬುದಿನ್ನೂ ಪ್ರಾರ್ಥ ದೃಢಪಟ್ಟಿಲ್ಲ.

ವಾಣಿಜ್ಯ ಸಂಸ್ಥೆಗಳ ಆಕ್ರಮ ವ್ಯವಹಾರಕ್ಕೆ ಸಂಕರದ ಅಧಿಕಾರಿಗಳ ಬೆಂಬಲ.

— ಬೇಲಿ ದಾರಿಗೊಡದೆ ದನ ಮೇಯಬಲ್ಲದೇ ಆಗ್ಯಾ?

ಮುಸ್ಲಿಂ ಸಮಾಜಗಳಂತೆಯೇ ಪ್ರಗತಿಪರ ಸಮಾಜಗಳ ಸ್ಥಾಪನೆಗೆ ಪ್ರೋತ್ಸಾಹ ನೀಡದಿರುವುದ ಆ ಮಾನವೀಯ ಪ್ರತೀಕ. ಈ ಅನ್ಯಾಯವನ್ನು ಪ್ರತಿಭಟಿಸಲು ಪುರುಷರು ಪ್ರದರ್ಶಿಸಬೇಕೆಂದಿರಲು ಸ್ಪರ್ಧಿಸಿ ಹೆಂಡಂದಿರ ಅನುಮತಿಗಾಗಿ ಕಾಯುತ್ತಿದ್ದಾರೆಂದ ಅನಧಿಕೃತ ಸುದ್ದಿ.

ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಿ ವಿ ರಾಮನ್ ವಿಶ್ವವಿದ್ಯಾಲಯದ ತರುಣರನ್ನು ಕೇಳಿಕೊಂಡರು.

—"ನಿ ವರ್ಜಿತ ಸೊತ್ತುಗಳ ಮೇಲೆ, ಪೋಲೀಸರ ಮೇಲೆ ಕಲ್ಲು ಇಟ್ಟಿಗೆ ತೂರುವುದನ್ನು ಬಿಟ್ಟು ಬೈಬಾಂಬು, ನಮಗೂ ಎಸೆಯಬೇಕೆಂದು ಇದಕ್ಕೆ ವ್ಯಾಖ್ಯಾನ ಮಾಡಿದರಂತೆ ಓರ್ವ ಕಾಡಿಯಾ ಸೇರ ತರುಣ ಕಾಲೇಜ ವಿದ್ಯಾರ್ಥಿ.

ಯುವಕರಲ್ಲಿ ಎಲ್ಲ ಧರ್ಮಗಳ ಬಗ್ಗೆ ಅರಿವು ಮೂಡಬೇಕು.

— ಆದ್ದರಿಂದ ಶಾಲೆ ಕಾಲೇಜ ಗಳಲ್ಲಿ ಧರ್ಮ ಶಿಕ್ಷಣಕ್ಕೆ ವಿರೋಧ.

ಆಡಳಿತ ದ ಧಾರಣೆ ಹೇಗೆ ಸಾಧ್ಯ?

— ಸರಿಕಾರಿ ನಾಮ ಸವಿ ತೆಗೆ ಸೇವಿಸಿದ ಡಿಂದ.

— ಬಚ್ಚಿಗೆ ಗೋಷ್ಠಿಯಿಂದ.

— ವರದಿಗಳ ಸ್ವೀಕರಣದಿಂದ.

— ಕಾರ್ಯಾಲಯದಲ್ಲಿ ಕೈಕಟ್ಟಿ ಕೂರುವುದರಿಂದ.

ಬಿಹಾರದಲ್ಲಿ ಭಾಷಾ ಚಳುವಳಿ ಆರಂಭವಾಗುವುದಕ್ಕೂ ಮುದ್ರಣದ ಇಂಗ್ಲಿಷ್ ಸದ್ದಿ ಪ್ರಸಾರ ಸಮಯದ ಒಂದು ಲೇಖನ ವಿರೋಧಿಸಿ ಮಿತಿ ಸಂಬಂಧವಿಲ್ಲವೆಂದು ಭಾಷಾ ಚಳುವಳಿಗಾರರ ಸ್ಪಷ್ಟೀಕರಣ ನೀಡಲಿದ್ದಾರಂತೆ.

ಆಪೊಲೋ—8 ಅವೆರಿಕನ್ ಉಪಗ್ರಹ ಚಂದ್ರನಿಗೆ ಬಹಳ ಹತ್ತಿರವಾಗಿ ಸುತ್ತು ಬಂತು.

— ಚಂದ್ರನೂ ಮರು ... ?

ಮುದ್ರಾಂಕ ಸರಕಾರವು ನಡೆಸಿದ್ದ ಎರಡು ಲಾಟರಿಗಳಿಂದ ಎರಡು ಕೋಟಿ ರೂಪಾಯಿ ಲಾಭವಾಗಿದೆ.

— ಪ್ರತಿ ತಿಂಗಳು ಒಂದೊಂದು ಲಾಟರಿ ನಡೆಸಿದರೆ ತೆರಿಗೆ ಕಡಿಮೆ ಮಾಡಬಹುದು.

ರಷ್ಯನ್ ನಿಯೋಗವೊಂದು ಪಕ್ಕೋಡ ವನೇಕೆ ಇಲ್ಲಿಗೆ ಬನ್ನಿ ಮಾಡಬಹುದು ಎಂದು ಕೇಳಿತು.

— ಮಾವು, ಬಸ್ಸಿನ ಪಕೋಡ ವ್ಯವಹಾರಿಕ ವರದಿಕ್ಕೆ ಬೇಕಾಗದೇಕೆ ಗೂತ್ತು?

ನೂತನ ನಿಯುಕ್ತಿಗಳು ಸ್ಥಳೀಯ ರಿಗೆ ಆದರ ಕೊಟ್ಟು ಪಾಲು ವಹಿಸಲಿ.

— ಜನತೆಯು ಪ್ರತಿನಿಧಿಗಳು, ಮಂತ್ರಿಗಳು ಅವರ ಮತದಾರರು.

ನಕ್ಷೇತ್ರದ ತಾಪ ಮಾತ್ರ ಬೆರಿಸುದು ತಪ್ಪು ಎಂಬ ದನ್ನು ತಿಳಿದುಕೊಳ್ಳುವಂತೆ ಮನವೊಲಿಸಬೇಕು ಎನ್ನುತ್ತಾರೆ ನಂಬಿಕೆದಾರಿಯುವರು.

— ಮನೆಯಲ್ಲೇ ಆಗಲಿ, ಕಳ್ಳತನ ಮಾಡುವುದು ತಪ್ಪೆಂದು ಯಾರಿಗೆ ಗೊತ್ತಿಲ್ಲ? ಆದರೂ...

ಶಾಲಾ ವಾರ್ಷಿಕೋತ್ಸವ

ಶ್ರೀ ಉಡುಪಿ ಪೇಜಾವರ ಮಠಾಧೀಶರ ಉದಾರಾಶ್ರಯದಲ್ಲಿ ನಡೆಯುತ್ತಿರುವ ಶ್ರೀ ರಾಮಕೃಷ್ಣೇಶ್ವರ ಪ್ರೌಢಶಾಲೆಯ ವಾರ್ಷಿಕೋತ್ಸವವು ಶಿಕ್ಷಣ ಅಸಿಸ್ಟೆಂಟ್ ಕಮಿಷನರ್ ಶ್ರೀ ಎಸ್. ಗಂಗಾಧರನ್ ಅವರ ಅಧ್ಯಕ್ಷತೆಯಲ್ಲಿ 22.12.1968ರಂದು ವೈಭವದಿಂದ ಜರಗಿತು. ಶಾಲಾ ವರದಿವಾಚನ, ಸ್ವಾಗತ ಭಾಷಣ, ಸಂದೇಶವಾಚನ, ವಿವಿಧ ಆಟಪಾಠಗಳಲ್ಲಿ ಜಯಗಳಿಸಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆ, ಶಾಲಾ ಬಾಲಕ-ಬಾಲಕಿಯರಿಂದ ಕನ್ನಡ ಮತ್ತು ತುಳು ನಾಟಕಗಳ ಅಭಿನಯ ಮತ್ತು ಹಳೆ ವಿದ್ಯಾರ್ಥಿಗಳಿಂದ ಯಕ್ಷಗಾನ ನಾಟಕಾಭಿನಯ ಮೊದಲಾದ ಕಾರ್ಯಕ್ರಮಗಳಿದ್ದವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸುಮಾರು 50 ವರ್ಷಗಳ ಹಿಂದೆ ಸಂಸ್ಕೃತ ಪಾಠಶಾಲೆಯಾಗಿ ಪ್ರಾರಂಭಿಸಲ್ಪಟ್ಟ ಈ ಶಾಲೆಯು ಈಗ 17 ವರ್ಷಗಳಿಂದ ಹೈಸ್ಕೂಲ್ ಆಗಿ ಪರಿವರ್ತಿಸಲ್ಪಟ್ಟು ಸರ್ವತೋಮುಖವಾದ ಅಭಿವೃದ್ಧಿ ಹೊಂದುತ್ತಿರುವ ವಿಷಯವನ್ನು ... ಸಂಸ್ಥೆಗೆ ... ಹೈಸ್ಕೂಲಿನಲ್ಲಿ ಕಲಿಯುವ ... ದ್ದು ಹೈಸ್ಕೂಲಿನ ... ಪ್ರಶಂಸಿಸಿದ ... ವಿದ್ಯಾರ್ಥಿಗಳು ತಮ್ಮ ... ತಮ್ಮ ... ತಮ್ಮ ಅಭಿಪ್ರಾಯ ... ಪ್ರಕಟಿಸಿದರು.

IN THE COURT OF THE MUNSIFF UDIPI

O S No 400/65,

Laxmina ... Bhatta —*Plaintiff*

Ananta ... a Bhatta

and ... others —*Dfts.*

In this suit filed against the defendants to enforce the mortgage, the defendants are directed to appear before the Court on 8-1-69 at 11 a m either in person or by pleader and file their statements if any failing which the matter will be decided in their absence.

B O.

K L AITHAL,
Vakil for Plaintiff.

Udipi 27-12-68

ಪುತ್ತೂರು ಎಡಿಶನಲ್ ಮುನ್ಸೀಫ ಕೋರ್ಟಿನಲ್ಲಿ

I. A. 2/1968 in Ex C 197 68.

ಮೋನಪ್ಪ ... — ಅರ್ಜಿದಾರ

... — ಎದುರು

... ಎದುರು ...

ಮೇಲ್ಕಂಡ ಅರ್ಜಿಯು ತಾರೀಕು 17 1.69ರಂದು ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ನೀವು ಆ ದಿನ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ತಮ್ಮ ಉತ್ತರ ಕೊಡಬೇಕು. ಹಾಜರಾಗತಕ್ಕದ್ದು, ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ಪ್ರಕಾರ ತೀರ್ಮಾನ ಮಾಡಲಾಗುವುದು, ತಿಳಿಯಿರಿ.

PUNDARIK M K.
Advocate for Petitioner.

ಪುತ್ತೂರು, 27.12.68.

ಉಡುಪಿ ಕಲಾವೃಂದದ ಅಭೂತಪೂರ್ವ ರಜತೋತ್ಸವ

ಉಡುಪಿಯ ಕಲಾವೃಂದದ ರಜತೋತ್ಸವವು ತಾ. 27ರಂದು ಉಡುಪಿಯ ಸಂಸ್ಕೃತ ಕಾಲೇಜಿನ ಪರಿಸರದಲ್ಲಿ ರಚಿಸಿದ ಭವ್ಯವಾದ ವಾದಿರಾಜ ಮಂಟಪದಲ್ಲಿ ಜರಗಿತು. ಸಮಾರಂಭದ ಅಧ್ಯಕ್ಷತೆಯನ್ನು ಪರ್ಯಾಯ ಶ್ರೀ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು ವಹಿಸಿದ್ದರು. ಕಲಾವೃಂದದ ಅಧ್ಯಕ್ಷರಾದ ಶ್ರೀ ಕಾಣಿಯೂರು ಮಠದ ಶ್ರೀ ವಿದ್ಯಾವಾರಿಧಿ ತೀರ್ಥ ಶ್ರೀಪಾದಂಗಳವರು ಸ್ವಾಗತಿಸಿ ಕಳೆದ 25 ವರ್ಷಗಳಲ್ಲಿ ಕಲೆ ಮತ್ತು ಸಾಹಿತ್ಯ ರಂಗದಲ್ಲಿ ಕಲಾವೃಂದವೂ ತನ್ನ ಸೇವೆ ಸಲ್ಲಿಸಿದೆಂದು ಹೇಳಿದರು. ಮಾನ್ಯ ಸಚಿವರು ಎಚ್. ವಿ. ಕೌಜಲಗಿಯವರು ಸಮಾರಂಭವನ್ನು ಉದ್ಘಾಟಿಸುತ್ತಾ, ಶಿಲ್ಪಕಲೆ, ಚಿತ್ರಕಲೆ, ಸಂಗೀತ ಇವು ಎಲ್ಲರಿಗೂ ಲಭ್ಯವಲ್ಲ. ಇದೊಂದು ದೇವರ ದೇಣಿಗೆಯಾಗಿರುತ್ತದೆ. ಇದರಿಂದ ಉತ್ತಮ ಕಲಾವಿದರು ಇತರರಿಗೆ ಆನಂದವನ್ನುಂಟುಮಾಡುವವರಾದರು. ಕಲಾವಿದನ ಬದುಕು ಇಂದು ನಿರಾಶಾದಾಯಕವಾಗಿದೆ. ಹಿಂದೆ ರಾಜ ಮಹಾರಾಜರಿಂದ ಕಲೆಗೆ ಪ್ರೋತ್ಸಾಹ ದೊರೆಯುತ್ತಲಿತ್ತು. ಆಂತೆಯೇ ಇಂದು ಸ್ವಾಮಿಗಳಿಂದ ಮತ್ತು ಸಮಾಜದಿಂದ ದೊರೆಯುತ್ತಿದೆ ಎಂದರು.

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ನಾಗಪ್ಪ ಆಳ್ವರು ಮಾತನಾಡುತ್ತ ಕಲೆ ಸಾಹಿತ್ಯಗಳಿಂದ ಜೀವನ ಪರಿಪೂರ್ಣವಾಗಬೇಕು, ಮಠಾಧಿಪತಿಗಳ ಸಹಾಯದಿಂದ ಧರ್ಮದ ಮೂಲಕ ದುಷ್ಟ ಶಕ್ತಿಗಳನ್ನು ಎದುರಿಸಬೇಕೆಂದರು.

ಶ್ರೀ ಕು. ಶಿ. ಹರಿದಾಸ ಭಟ್ಟರು ತರುಣರಿಗೆ ಉತ್ತೇಜನ ಕೊಡುತ್ತಾ ಧರ್ಮಪೀಠದಲ್ಲಿದ್ದು ಇಂತ ಸಂಸ್ಥೆಗಳನ್ನು ಪ್ರೋತ್ಸಾಹಿಸಿದವರಿಗೆ ಅಭಿನಂದನೆಗಳನ್ನರ್ಪಿಸಿದರು.

ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು ಕರ್ನಾಟಕದಲ್ಲೇ ಕನ್ನಡ ಬದುಕಬೇಕಾಗಿದ್ದಲ್ಲಿ ಸಂಘಟನೆ ಬೇಕು ಎಂದರು. ಸರಕಾರವು ಇಂತಹ ಕಾರ್ಯಗಳಿಗೆ ಮನ್ನಣೆ ನೀಡಬೇಕೆಂದರು.

ಶ್ರೀ ಎ. ಜಿ. ಅಲ್ಸೆಯವರು ಕಲಾವೃಂದದಲ್ಲಿ ಧರ್ಮಕ್ಕೊಂದು ಸ್ಥಾನಕಲ್ಪಿಸಿರುವುದು ಒಂದು ವೈಶಿಷ್ಟ್ಯವೆಂದರು.

ಡಾ| ಟಿ. ಮಾಧವ ಪೈಗಳವರು ರಜತೋತ್ಸವದ ಅಂಗವಾಗಿ ಪ್ರಕಟಿಸಲಾದ ಸವ್ಯಸಾಚಿ ಸಾಹಿತ್ಯಾಂಕವನ್ನು ಉದ್ಘಾಟಿಸುತ್ತಾ ಕಲೆ ಇಲ್ಲದೆ ಕಾರ್ಯವನ್ನು ಶ್ರದ್ಧೆಯಿಂದ ಮಾಡಿದರೆ ಗುರಿಯನ್ನು ಮುಟ್ಟಲು ಸಾಧ್ಯ. ಕಲಾವೃಂದ ತನ್ನ ಸೇವೆಯಿಂದ ಉಡುಪಿಯ ಶೋಭೆಯನ್ನು ಹೆಚ್ಚಿಸಿದೆಂದರು.

ಅಧ್ಯಕ್ಷ ಸ್ಥಾನದಿಂದ ಪರ್ಯಾಯ ಶ್ರೀ ಪೇಜಾವರ ಶ್ರೀಗಳವರು ಮಾತನಾಡುತ್ತಾ ಸಾಹಿತ್ಯದ ಜತೆಯಲ್ಲಿ ಆಧ್ಯಾತ್ಮಿಕ ವಿಚಾರ ಬೆಳೆಯಬೇಕು. ಹಾಗೂ ಕಲೆ ಉನ್ನತವಾಗಿ ಬೆಳೆಯಬೇಕಾಗಿದ್ದರೆ ರಾಜರ ಮತ್ತು ಸರಕಾರದ ಪ್ರೋತ್ಸಾಹ ಅವಶ್ಯಕವಾಗಿದೆಯೆಂದರು. ಕಲಾವೃಂದ ಪೂರ್ಣ ಚಂದ್ರನಂತೆ ಬೆಳಗಲೆಂದು ಆಶಿಸಿದರು.

ಶ್ರೀ ಆರ್. ನರಸಿಂಹ ಪಾಂಗಣ್ಣಾಯರು ಧನ್ಯವಾದ ಸಮರ್ಪಿಸಿದರು.

ಅಂದು ಸಂಜೆ ಶ್ರೀ ಗೋಪಾಲಕೃಷ್ಣ ದೀಕ್ಷಿತರಿಂದ ಜಲತರಂಗವು ರಾತ್ರಿ ಬೆಂಗಳೂರಿನ ಶ್ರೀ ಆರ್. ಆರ್. ಕೇಶವ ಮೂರ್ತಿಯವರ ಪಿಟೀಲು ವಾದನ ಕಾರ್ಯಕ್ರಮವೂ ಇದ್ದವು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಗೋಪಿಚಂದರಾಯರು ಧನ್ಯವಾದವರ್ಪಿಸಿದರು.

ಎರಡನೆಯ ದಿನ ಪೂರ್ವಾಹ್ನ 'ಇಂಗ್ಲಿಷ್ ಸಾಹಿತ್ಯದಿಂದ ಕನ್ನಡ ಕಾವ್ಯ ಪ್ರಕಾರಗಳ ಮೇಲೆ ಆಗಿರುವ ಪ್ರಭಾವ' ಎಂಬ ಕುರಿತು ವಿಚಾರಗೋಷ್ಠಿ ನಡೆಯಿತು. ಇದನ್ನು ಶ್ರೀ ಎಂ. ಗೋಪಾಲಕೃಷ್ಣ ಅಡಿಗರು ಉದ್ಘಾಟಿಸಿದರು. ಶ್ರೀ ಕೆ. ಎಸ್. ನರಸಿಂಹ ಸ್ವಾಮಿಯವರು ನಿರ್ವಾಹಕರಾಗಿದ್ದರು. ಶ್ರೀ ಎಂ. ರಾಜಗೋಪಾಲ ಆಚಾರ್ಯ ಮತ್ತು ಶ್ರೀ ಎಸ್. ವೆಂಕಟರಾಜರು ಈ ವಿಷಯದಲ್ಲಿ ಬರೆದ ನಿಬಂಧಗಳನ್ನು ಓದಿದರು. ಮುಂದೆ ನಡೆದ ಚರ್ಚೆಯಲ್ಲಿ ಶ್ರೀಗಳಾದ ರಾಮದಾಸ, ಕೆ. ವಿ. ತಿರುಮಲೇಶ, ಕಯ್ಯಾರ ಕಿಂಞಣ್ಣ ರೈ, ಸೋಮಶೇಖರ ಇಮ್ರಾಪೂರ ಮತ್ತು ಯು. ಕೆ. ವಿ. ಆಚಾರ್ಯರು ಭಾಗವಹಿಸಿದ್ದರು. ಚರ್ಚೆಯು ವಿಷಯಾಂತರಕ್ಕೆ ಹೊರಳಿ ಗೋಷ್ಠಿಯು ಪರಸ್ಪರ ಆರೋಪ-ಪ್ರತ್ಯಾರೋಪಗಳ ರೂಪವನ್ನು ತಾಳುತ್ತಬಂದು, ಇದು ನೀರಸವೆಂಬಂತಾಗಿಸಿತು.

ಅಂದು ಅಪರಾಹ್ನ ಶ್ರೀ ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಇದರಲ್ಲಿ ಸರ್ವಶ್ರೀ ಎಸ್. ವೆಂಕಟರಾಜ, ಕೊಡತ್ತೂರು ಅನಂತಪದ್ಮನಾಭ ಉಡುಪ, ರಾಮದಾಸ, ಕೆ. ವಿ. ತಿರುಮಲೇಶ, ಎಸ್. ಆರ್. ಎಕ್ಕುಂಡಿ, ಅ. ಗೌ. ಕಿನ್ನಿಗೋಳಿ, ಇದಿನಬ್ಬ, ಇಮ್ರಾಪುರ, ಕಯ್ಯಾರ, ಕೆ. ಎಸ್. ನರಸಿಂಹ ಸ್ವಾಮಿ ಇವರು ಭಾಗವಹಿಸಿದ್ದರು. ಗೋಷ್ಠಿಯು ತೃಪ್ತಿಕರವಾಗಿತ್ತು.

ಸಂಜೆ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ವಹಿಸಿದ್ದರು. ಶ್ರೀಗಳಾದ ಗೋವಿಂದ ಪಾಲಿಪಾಳ, ಕಯ್ಯಾರ, ಇಮ್ರಾಪುರ ಮತ್ತು ರಾಮದಾಸರು ಕಲೆ-ಸಾಹಿತ್ಯಗಳ ಕುರಿತು ಮಾತನಾಡಿದರು. ಶ್ರೀ ಕಯ್ಯಾರರು ಉಡುಪಿಯಲ್ಲಿ ನಡೆದ ಕಲೆ ಸಂಸ್ಕೃತಿಗಳ ಕಾರ್ಯಕ್ರಮಗಳನ್ನು ಅವಲೋಕಿಸಿದರೆ, ಶ್ರೀ ರಾಮದಾಸರು ರಾಮಾಯಣದ ರಾವಣನ ಮೇಲೆ ನವ್ಯ ದೃಷ್ಟಿಯನ್ನು ಬೀರಿದರು. ಅಧ್ಯಕ್ಷರು ಮಾತನಾಡುತ್ತ ನವ್ಯದೃಷ್ಟಿಯ ಹೆಸರಿನಲ್ಲಿ ಅಪಚಾರ ಮಾಡುವುದು ಸಾಹಿತ್ಯ ರಂಗಕ್ಕೆ ಶ್ರೇಯಸ್ಕರವಲ್ಲವೆಂದೂ ನನ್ನ ಹಿಂದಿನ ತಲೆಮಾರಿನವರಗಿನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ, ಸಮಕಾಲೀನ ಪರಿಸ್ಥಿತಿಯನ್ನು ಅರಿತುಕೊಂಡು ವಿವೇಚಿಸಬೇಕೆಂದೂ ಹೇಳಿದರು. ಧರ್ಮವಿಲ್ಲದವನಿಗೆ ಧರ್ಮಸಂಕಟವೇ ಬರಲಾರದೆಂದು ಹೇಳಿದ ಅವರು ಸಾಹಿತ್ಯ-ಧರ್ಮಗಳ ಸಮನ್ವಯ ಅಗತ್ಯವೆಂದು ಪ್ರತಿಪಾದಿಸಿದರು. ಸಭಾ ಕಾರ್ಯಕ್ರಮ ಅತ್ಯಂತ ಉನ್ನತ ಮಟ್ಟದಲ್ಲಿ ನಡೆದು ಸಭಾಸದರು ತೃಪ್ತರಾದಂತಿತ್ತು. ರಾತ್ರಿ ಶ್ರೀ ಯು. ಎಸ್. ಕೃಷ್ಣರಾಯರ ಶಿಷ್ಯರಿಂದ ನೃತ್ಯವಿತ್ತು. "ಅಲೆಗ್ಸಾಂಡರ್" ನಾಟಕವನ್ನು ಕಲಾವೃಂದದ ಗೆಳೆಯರು ಅಭಿನಯಿಸಿದರು.

[ಕೊನೆಯ ದಿನದ ಕಾರ್ಯಕ್ರಮದ ವಿವರವನ್ನು ಬರುವ ವಾರದ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.]

ಪದವೀಧರರ ಸತ್ಕಾರ ದಿನಾಚರಣೆ

ಉಡುಪಿ ಲಾ ಕಾಲೇಜ್ ಯೂನಿಯನಿನವರು ತಾರೀಕು 27—12—68ರಂದು ಲಾ ಕಾಲೇಜಿನಲ್ಲಿ ಏರ್ಪಡಿಸಿದ ಪದವೀಧರರ ಸತ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾದ ಮೈಸೂರು ಸರಕಾರದ ರೆವಿನ್ಯೂ ಮಂತ್ರಿ ಶ್ರೀ ಎಚ್. ವಿ. ಕೌಜಲಗಿಯವರು ಮಾತನಾಡುತ್ತ ವಕೀಲ ವೃತ್ತಿಯು ಉನ್ನತವಾದುದೆಂದೂ ವಕೀಲರುಗಳಿಗೆ ಪ್ರಸಂಗಾವಧಾನತೆ ಮುಖ್ಯವೆಂದೂ ಹೇಳಿ ಕಿರಿಯ ವಕೀಲರು ಇದಿರಿಸಬೇಕಾದ ಕೆಲವು ತೊಂದರೆಗಳನ್ನು ವಿವರಿಸಿ ಈ ಕಾಲೇಜಿನ ಪ್ರಗತಿಗಾಗಿ ಸಂತೋಷ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ| ಕೆ. ನಾಗಪ್ಪ ಆಳ್ವರು ಲಾ ಕಲಿತವರು ಬೇರೆ ಬೇರೆ ಉದ್ಯೋಗಕ್ಕೆ ಸೇರಿಕೊಳ್ಳುತ್ತಿರುವುದು ಯೋಗ್ಯವಾದುದೆಂದು ಹೇಳಿ ಕೆಲವೊಂದು ಪ್ರಚಲಿತ ಸಮಸ್ಯೆಗಳನ್ನು ವಿವರಿಸಿದರು.

ಆರಂಭದಲ್ಲಿ ಪ್ರಿನ್ಸಿಪಾಲ್ ಡಿ. ಜಿ. ದೇಶಪಾಂಡೆಯವರೂ ಯೂನಿಯನ್ ಅಧ್ಯಕ್ಷ ಶ್ರೀ ಬಿ. ಶ್ರೀಧರ ರೈಯವರೂ ಸ್ವಾಗತಿಸಿದರು. ಡಾ| ಟಿ. ಎಂ. ಎ. ಪೈಯವರು ಕಾಲೇಜಿನ ಹುಟ್ಟು, ಬೆಳವಣಿಗೆಯನ್ನು ಪ್ರಸ್ತಾಪಿಸಿದರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಪಿ. ಗೋಪಾಲ ಕಾರಂತ್ ಧನ್ಯವಾದಗಳನ್ನಿತ್ತರು.

ತಾಲೂಕು ಬೋರ್ಡು ಅಧ್ಯಕ್ಷರ ಚುನಾವಣೆ

ಮಂಗಳೂರು :

ತಾ. 26.12.68ರಂದು ಜರಗಿದ ಮಂಗಳೂರು ತಾಲೂಕು ಬೋರ್ಡು ಅಧ್ಯಕ್ಷರ ಚುನಾವಣೆಯಲ್ಲಿ ಶ್ರೀ ಬಿ. ರಾಜೀವ ಭಂಡಾರಿಯವರು ಅಧ್ಯಕ್ಷರಾಗಿ ಪುನರಾಯ್ಕೆ ಹೊಂದಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಕಮ್ಯೂನಿಷ್ಟ ಪಕ್ಷದ ಶ್ರೀ ಕೊರಗಪ್ಪ ರೈಯವರೂ ಸ್ಪರ್ಧಿಸಿದ್ದು ಅವರಿಗೆ ನಾಲ್ಕು ಮತಗಳೂ ಶ್ರೀ ರಾಜೀವ ಭಂಡಾರಿಯವರಿಗೆ 17 ಮತಗಳೂ ದೊರೆತವು.

ತಾಲೂಕುಬೋರ್ಡು ಉಪಾಧ್ಯಕ್ಷರಾಗಿ ಶ್ರೀ ಪುರುಷೋತ್ತಮ ಶೆಟ್ಟರು ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ.

ಕುಂದಾಪುರ :

ಕುಂದಾಪುರ ತಾಲೂಕುಬೋರ್ಡು ಅಧ್ಯಕ್ಷರಾಗಿ ಶ್ರೀ ಬಿ. ನೀರರಾಜೇಂದ್ರ ಹೆಗ್ಡೆಯವರೂ, ಉಪಾಧ್ಯಕ್ಷರಾಗಿ ಶ್ರೀ ಆರ್. ಕೆ. ಸಂಜೀವರಾಯರೂ ತಾ. 28ರಲ್ಲಿ ಚುನಾಯಿಸಲ್ಪಟ್ಟಿದ್ದಾರೆ.

ಪುತ್ತೂರು :

ತಾ. 28ರಂದು ನಡೆದ ಪುತ್ತೂರು ತಾಲೂಕು ಬೋರ್ಡ್ ಅಧ್ಯಕ್ಷರ ಚುನಾವಣೆಯಲ್ಲಿ ಶ್ರೀ ಸಂಕಪ್ಪ ರೈಯವರು ಅಧ್ಯಕ್ಷರಾಗಿಯೂ ಶ್ರೀ ರಾಮ ಭಟ್ಟ ಅವರು ಉಪಾಧ್ಯಕ್ಷರಾಗಿಯೂ ಅವಿರೋಧವಾಗಿ ಆಯ್ಕೆಗೊಂಡರು.

ತುಂಡು ಕತೆ—೬

ತಾನು ಕೊಟ್ಟದ್ದೇ ತನಗೆ ಕೈಕೊಟ್ಟು

ಪುಟ್ಟನಿಗೆ ಐದು ವರ್ಷ ತುಂಬಿದ ಕೂಡಲೇ ಅವನ ಅಪ್ಪ ಅವನನ್ನು ಶಾಲೆಗೆ ಸೇರಿಸಿದ.

ಎರಡು-ಮೂರು ದಿನ ಅಕ್ಕನ ಜತೆಯಲ್ಲಿ ಉತ್ಸಾಹದಿಂದ ಶಾಲೆಗೆ ಹೋದ ಪುಟ್ಟ. ಆ ಮೇಲೆ ಶಾಲೆ ಬೇಡ, ಹೋಗುವುದಿಲ್ಲ ಅಂತ ಹಟಮಾಡತೊಡಗಿದ. ಏನೇನೋ ಮಾಡಿ ಹೇಗೆಹೇಗೋ ಮಂಗಾಡಿಸಿ ಕಳುಹಿಸಬೇಕಾದರೆ ಬಹಳ ಕಷ್ಟವಾಯಿತು.

"ಇಕ್ಕೋ ದುಡ್ಡು. ದಿನಾ ಶಾಲೆಗೆ ಹೋದರೆ ನಿಂಗೆ ದಿನಾ ಐದು ಪೈಸೆ ಕೊಡುತ್ತೇನೆ" ಎಂದ ಅಪ್ಪ. ಆಗ ಸಂತೋಷದಿಂದ ಶಾಲೆಗೆ ಹೊರಟ ಪುಟ್ಟ.

ಎರಡ-ಮೂರು ದಿವಸಗಳ ನಂತರ ದುಡ್ಡು ಕೊಡುವುದನ್ನು ಅಪ್ಪ ನಿಲ್ಲಿಸಿಬಿಟ್ಟ. "ದುಡ್ಡು ಕೊಟ್ಟರಷ್ಟೇ ನಾ ಶಾಲೆಗೆ ಹೋಗೋದು" ಎಂದ ಪುಟ್ಟ.

"ದುಡ್ಡಿನ ಆಸೆ ಒಳ್ಳೆಯದಲ್ಲಪ್ಪ."

"ಮತ್ತೆ, ನಿನ್ನೆ ಮೊನ್ನೆ ಎಲ್ಲಾ ಯಾಕೆ ಕೊಟ್ಟದ್ದು?"

"ನಿನಗೆ ಸಂತೋಷಾಗಲೀ ಅಂತ."

"ಸಂತೋಷಾದರೆ ಒಳ್ಳೇದಾ?"

"ಹೌದು. ಯಾವಾಗಲೂ ಸಂತೋಷಾಗಿರಬೇಕು."

"ನೀ ದುಡ್ಡು ಕೊಟ್ಟರೆ ನಂಗೆ ಸಂತೋಷಾಗುತ್ತಲ್ಲಾ?"

"ಸರಿ, ಬಿಡೋಲ್ಲ ನೀನು. ಕೊಡ್ತೇನೆ. ಕೊಡುವ ದುಡ್ಡನ್ನು ಹಾಗೇ ಸೇರಿಸಿ ಇಡುತ್ತೀಯಾ?"

"ಇಲ್ಲಪ್ಪ, ಖರ್ಚ್ ಮಾಡಿ ಬಿಡ್ತೇನೆ. ಏನಾದರೂ ತಕ್ಕೊಂಡು ತಿಂದುಬಿಡುತ್ತೇನೆ."

"ಸುಮ್ಮನೆ ಯಾಕೆ ತಿನ್ನೋದು ಹೊಟ್ಟೆ ತುಂಬಿಕೊಂಡಿರುವಾಗ?"

"ದುಡ್ಡಿನ ಆಸೆ ಒಳ್ಳೆಯದಲ್ಲ ಎಂದೆಯಲ್ಲಾ? ಅದಕ್ಕೇ ಖರ್ಚ್ ಮಾಡಿ ಬಿಡ್ತೇನೆ."

"ಸೇರಿಸಿಟ್ಟರೆ ಪುಸ್ತಕ, ಪೆನ್ಸಿಲು ತಕ್ಕೊಳ್ಳಬಹುದು."

"ಅದೆಲ್ಲಾ ನೀನೇ ತಂದುಕೊಡುತ್ತಿ ಅಪ್ಪ."

……ಮುಂದೆ ಏನು ಹೇಳಲಿಕ್ಕೂ ಅಪ್ಪನಿಗೆ ತೋರಲಿಲ್ಲ. ದಿನಾ ಪುಟ್ಟನಿಗೆ ಐದು ಪೈಸೆ ಕೊಡಲೇ ಬೇಕಾಯಿತು ಅಪ್ಪ.

—ನವಗಿರಿನಂದ

ಪುಸ್ತಕ ವ್ಯಾಪಾರಿಗಳಿಗೆ
ಪ್ರಿಯವಾದ ಸಮಾಚಾರ

ಜನವರಿ 69ರಿಂದ
ಮಾರ್ಚಿ 30ನೇ ತಾರೀಖಿನ ವರೆಗೆ

300=00 ರೂ. ನಿಮ್ಮಳ ವ್ಯಾಪಾರ ಮಾಡಿದರೆ
ಒಂದು Steel Desk (ಬರೆಯುವ-ವಾಟ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ— ಭಾಗ 1— ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ— ಭಾಗ 2— „	2—50
ಉಂಡಾಡಿ ಗುಂಡ— ಪರ್ವತವಾಣಿ	2—00
ಧರ್ಮದೇವತೆ— ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ— ಎಸ್. ನರಸಿಂಹಯ್ಯ	3—00
ಎರಡು ತಲೆ ಹಾವು — ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರೆರಿ ಸೀಸನ್‌ಗಾಗಿ ತ್ವರೆ ಮಾಡಿರಿ :—
ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು,
ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

READ &
ADVERTISE IN
NAVAYUGA WEEKLY

ನಾನು ಕಾಫಿ ಮಾಡಿದೆ!!!

ಬರೆದವರು: ಶ್ರೀ ಬಿ. ದೇ. ಮಲ್ಯ.

ಪಿಶ್…ಇಷ್ಟೇನೆ? ನಾನು ಏನೋ ಅಂದ್ಕೊಂಡಿದ್ದೆ! ಕಾಫಿ ಮಾಡೋದು (ಕುಡಿಯೋದು) ಏನು ಮಹಾ? ಅನ್ನಬೇಡಿ.

ನಿಮಗೆ (ಕೆಲವರು ಮಾತ್ರ) ರಾತ್ರಿ ಹನ್ನೆರಡು ಘಂಟೆಯ ವರೆಗೆ ಓದಿ ಬೆಳಗ್ಗೆ ಮೂರು ಘಂಟೆಗೆ ಎದ್ದು ಓದುವ ಅಭ್ಯಾಸ ಇದೆಯೇ? ಮತ್ತೆ ಆ ಹೊತ್ತಲ್ಲಿ ಹೊಟ್ಟೆ ತಂಪು ಮಾಡಲಿಕ್ಕೆ ನಿದ್ರೆ ಬರುವಂತೆ… ಅಲ್ಲಲ್ಲ ನಿದ್ರೆಬಾರದಂತೆ ಕಾಫಿ..ಟೀ ಕುಡಿಯುವ ಅಭ್ಯಾಸ ಇದೆಯೇ? ಹೆಂಡತೀನ ಎಬ್ಬಿಸಿ ಆಕೇನ ಗೋಳು ಹುಯ್ದು ಆಕೆ ಸಿಡಿಮಿಡಿಗುಟ್ತಾ ಎದ್ದು ಸ್ಟ್ರಾಂಗ್ ಕಾಫಿ ಮಾಡಿ ಕೊಟ್ರೆ ಕುಡಿಯುವ ಅಭ್ಯಾಸ ಇದೆಯೇ? ಸರಿ. ಅದ್ರೆ, ಒಂದು ದಿನ ನೀವು ಆಕೇನ ಎಷ್ಟು ಎಬ್ಬಿಸಿದ್ರೂನೂ ಆಕೆ ಏಳೊಲ್ಲಾ….ನೀವೆ ಮಾಡ್ಕೊಳ್ಳಿ ಬೇಕಾದ್ರೆ ಎಂದು ರಾಗ ಎಳೆದಾಗ ಏನು ಮಾಡ್ತೀರಾ? ಕಾಫಿ ಮಾಡ್ಸಿಕೊಂಡು ಕುಡಿದು ಅಭ್ಯಾಸ ಆದವರಿಗೆ ಏನು ಮಾಡಿದ್ರೂ ಕುಡೀಲೇ ಬೇಕಾಗುತ್ತೆ. ಅಂದ ಮೇಲೆ ನೀವೇ ಸ್ವಹಸ್ತ; ಸ್ವಬುದ್ಧಿಯಿಂದ ಮಾಡ್ಕೊಂಡು ಕುಡೀಲೇಬೇಕಾಗುತ್ತೆ. ಸರಿ ತಾನೆ?

"ಅಂದ್ರೆ! ನಮಗೆ ಕಾಫಿ ಮಾಡೋಕೆ ಬರೋಲ್ವೆ? ಹ್ಞ…ಹ್ಞ….ಒಂದೀಟು ನೀರು ಬಿಸಿ ಮಾಡಿದ್ರೆ ಸೈ; ಒಂದೀಟು ಕಾಫಿ ಹುಡಿ ಹಾಕಿ ಗಾಳ್ಸಿದ್ರೆ ಸೈ; ಹಾಲು ಹಾಕಿದ್ರೆ ಸೈ; ಕಡೆಗೆ ಕುಡಿದ್ರೆ ಸೈ" ಎನ್ನುತ್ತೀರಾ? ಹಾಗಾದರೆ ಹೀಗೆ ಕಾಫಿ ಮಾಡಿ ಕುಡೀರಿ! ಯಾಕೆ ಚಪ್ಪೆಯೇ? ಮತ್ತೆ ನೀವು ಸಕ್ರೆ ಹಾಕಿದ್ದು ಎಲ್ಲಿಂಟ್ರೆ? ಹ್ಞ—ಹ್ಞ….ಹ್ಞ….

ಆ ದಿನ ಪರೀಕ್ಷೆ ರಾತ್ರಿ ಬೇಗ ಮಲಗಿ ಬೇಗ ಏಳ್ಬೇಕು ಅಂತಿದ್ದೆ. "ಟರ್ರ್—ಟರ್ರ್—ರ್ರ್ರ್" ಎಂದು 3ಕ್ಕೆ ಅಲಾರಂ ಕೂಗಿದಾಗ ಕಿವಿ ಹಿಂಡಿ ಸುಮ್ಮನಾಗಿಸಿದೆ. ಸ್ವಲ್ಪ ನಿದ್ರೆ ಮಂಪರು ಇಳಿಯಲೆಂದು ಕಣ್ಣುಬಿಟ್ಟು ಒಂದು ಘಳಿಗೆ ಮಲಗಿದೆ. ಅದ್ರೆ ಯಾವ ಇಂದ್ರಜಾಲವೊ ಏಳುವಾಗ ನಾಲ್ಕು ಆಗಿತ್ತು!

ಸರಿ, ಬೇಗ ಎದ್ದು ಆಕೇನ ಎಬ್ಬಿಸಿದೆ. "ನೀವು ಓದೋಕೆ ಕುಳ್ತ್ಕೊಳ್ಳಿ! ಈಗ ಬಂದೆ" ಎಂದು ಹೇಳಿದಳು. ಕಾಫಿ ಬರವಷ್ಟೇ ಹಾರೈಸುತ್ತಾ ಓದೋಕೆ(!) ಕುಳಿತೆ. ಅರ್ಧ ಗಂಟೆಯಾದರೂ ಕಾಫಿ ಇಲ್ಲ. ಸೀದಾ ಅಡುಗೆ ಮನೆಗೆ ಹೋಗಿ ನೋಡಿದೆ. ತನ್ನ ಸೀರೆಯ ಸೆರಗನ್ನೇ ಹಾಸಿಕೊಂಡ ಮಲಗಿ ಗೊರಕೆ ಹೊಡೆಯುತ್ತಿದ್ದಳು! ಸರಿ; ಇನ್ನು ಈಕೆ ಎದ್ದಂತೇ ಇದೆ; ಎಂದುಕೊಂಡೆ. ಈ ದಿನ ನಾನೇ ಯಾಕೆ ಕಾಫಿಮಾಡಿ ಹೆಂಡ್ತಿ ಕೈಲಿ "ಶಹಭಾಷ್….ಎಷ್ಟು ಚೆನ್ನಾಗಿ ಮಾಡ್ತೀರಿ….

("ಇವತ್ತು ಪ್ರತಿದಿನ ನೀವೆ ನನಗೆ ಕಾಫಿ ಮಾಡಿ ಕೊಡ್ರಿ!") ಎನ್ನಿಸಿಕೊಳ್ಳಬೇಕೆಂದು ಎಣಿಸಿದೆ. ದೀಪದ ಸ್ವಿಚ್ ಹಾಕಿದೆ. ದರಿದ್ರ ಕರೆಂಟೇ ಹೋಗಿದೆ! ಕುರುಡಿನಲ್ಲೇ ಅಪಶಕುನ ಎಂದುಕೊಂಡು ಚಿಮಣಿ ಹಚ್ಚಿದೆ. ಚಿಮಣಿಯಲ್ಲಿ ಎಣ್ಣೆನೇ ಇಲ್ಲ. ಸರಿ; ಮೇಲು ಕೋಣೆಯಲ್ಲಿ ಎಣ್ಣೆ ಇದೆ ಎಂದು ತಡವುತ್ತಾ ತಡವುತ್ತಾ ಆ ಕೋಣೆಗೆ ಹೋಗಿ ಬಳಚಿ ಬಳಚಿ ಒಂದು ಬಾಟ್ಲ್ ಹಿಡಿದೆ. ಚಿಮಣಿ ಎಣ್ಣೆ ಹೌದೋ ಅಲ್ಲವೋ ಎಂದು ಸಂಶಯವಾಯ್ತು. ಒಂದಿಷ್ಟು ತೆಗೆದು ಮೂಸಿದೆ. ಅಷ್ಟರಲ್ಲಿ ಏನೋ ಒಂದು ಧೊಪ್ಪೆಂದು ಮೈಮೇಲೇ ಬಿತ್ತು. ಹಾರಿ ಬಿದ್ದೆ. ಚಿಮಣಿಎಣ್ಣೆ ಬಾಟ್ಲ್ ಅಷ್ಟು ದೂರ; ನಾನ ಇಷ್ಟು ದೂರ… ಹತ್ತಿರದಲ್ಲಿ ದರಿದ್ರ ಇಲಿಗೆ ಕೊಟ್ಟದ್ದು ಹೆಚ್ಚಾಗಿ ಮ್ಯಾಂವ್ ಎನ್ನುವ ಬೆಕ್ಕು! ಶನಿರಂಡೆದು ಎಂದುಕೊಂಡು ಬಿದ್ದ ಇಷ್ಟು ಎಣ್ಣೆಯನ್ನೆ ಒಟ್ಟೆಯಲ್ಲಿ ಹಿಂಡಿ ಹೇಗೋ ದೀಪ ಹಚ್ಚಿಕೊಂಡು ಬಂದೆ. ದರಿದ್ರ ಅಡಗೆ ಕೋಣೆ ಬರುವಷ್ಟರಲ್ಲಿ ನಂದಿಯೇ ಹೋಯಿತು! ಗ್ರಹಚಾರ ಎಂದುಕೊಂಡು ಕಿಸೆಗೆ ಕೈಹಾಕಿ ಬೆಂಕಿ ಪೆಟ್ಟಿಗೆ ತೆಗೆದೆ. ಒಂದೇ ಒಂದು ಕಡ್ಡಿ ಇಲ್ಲ. ತೆಗೆದು ಅಪ್ಪಚ್ಚಿ ಮಾಡಿ ಬಿಸಾಡಿದೆ. ಅದು ಅಲ್ಲಿಯೇ ಮಲಗಿದ್ದ ತನ್ನ ಹೆಣ ಸೊಡ್ಡಿನ ಮೇಲೆ ಬಿತ್ತ್ಯಾಂತ ಕಾಣ್ತೆ. ಹಾ…ಎಂದು ಮತ್ತೊಂದು ಮಗ್ಗುಲಾಗಿ ಮಲಗಿಗೊರಕೆ ಹೊಡೆಯತೊಡಗಿದಳು.

ಅಲ್ಲೇ ಬೀರುವಿನಲ್ಲಿ ಬೆಂಕಿಪೆಟ್ಟಿಗೆ ಇದ್ದ ಸಂಗತಿ ನನಗೆ ಗೊತ್ತು! ಅಲ್ಲಿ ಹೋಗಿ ಬಾಗಿಲು ತೆಗೆದ ಹುಡುಕಿದೆ. ಟಣ್….ಟಣೀಲ್ ಎಂದು ಏನೋ ಬಿದ್ದು ಚಪ್ಪಾಳೆ ಚೂರಾಯಿತು. ತಡಕಿ ಬೆಂಕಿಕಡ್ಡಿ ಹುಡುಕಿ ಗೀರಿ ನೋಡಿದೆ. ಒಂದು ಔಷಧದ ಬಾಟ್ಲ್!! ಅಯ್ಯೋ ದೇವರೇ, ಈಗ ಈಕೆ ನೋಡಿದರೆ ಏನು ಎಂದುಕೊಳ್ಳುತ್ತಾಳೋ? ಎಂದುಕೊಂಡೆ…ಅದು ಆಕೆಯ ಯಾವುದೋ ಒಂದು ಸುಡುಗಾಡು ಔಷಧದ ಬಾಟ್ಲ್ !!

ಘಂಟೆ ನೋಡಿದೆ. ನಾಲ್ಕುವರೆ ಆಗಿತ್ತು. ಸರಿ; ಬೇಗ ಬೇಗ ಬಂದು ಚಿಮಣಿ ಹಚ್ಚಿ ಸ್ಟವ್ ಹಚ್ಚಿದೆ. ಉರಿಯತೊಡಗಿತು. ಇದೊಂದು ಹಾಳಾಗಿಲ್ಲವಲ್ಲ ಸದ್ಯ ಎಂದು ಒಂದು ಪಾತ್ರೆ ಇಟ್ಟು ಒಂದೀಟ (!)ನೀರು ಸುರಿದೆ. ಸ್ವಲ್ಪ ಹೊತ್ತಿನಲ್ಲೇ ಎಣ್ಣೆ ಖರ್ಚಾಯಿತೋ ಏನೋ, "ಟಿಸ…" ಎಂದು ನಂದಿಯೇ ಹೋಯಿತು. ಇದೊಂದು ಕೇಡು ಎಂದುಕೊಂಡು ಬೆಂಕಿಪೆಟ್ಟಿಗೆಗೆ ಕೈಹಾಕಿದೆ. ಅದು ನಾಪತ್ತೆ!! ಅರೆ! ಸ್ಟವ್ ಹಚ್ಚಿದ ಮೇಲೆ ಎಲ್ಲಿ ಹೋಯ್ತು? ಎಂದು ಆಲೋಚಿಸಿದೆ. ಏನು ಮಾಡಿದರೂ ನೆನಪಿಗೆ ಬೊಳೆಯಲಿಲ್ಲ. ಸರಿ; ಹುಡುಕದಿದ್ದರೆ ಉಪಾಯವಿದೆಯೋ? ಅಲ್ಲಿ ಇಲ್ಲಿ ಹುಡುಕಿದೆ. ಹುಡುಕಾಟದಲ್ಲಿ ಅದೆಷ್ಟು ಲೋಟಗಳು ಉರುಳಿ ಬಿದ್ದವೋ! ಅದೆಷ್ಟು ಪಾತ್ರೆಗಳು ಸ್ಥಾನಪಲ್ಲಟ ಹೊಂದಿದವೋ ದೇವರಿಗೇ ಗೊತ್ತು. ಅಂತೂ ಸಿಕ್ಕಿತು. ಎಲ್ಲಿ? ಸ್ಟವಿನ ಅಡಿಯಲ್ಲಿ! ಸ್ಟವ್ ಹಚ್ಚಿದ ಮೇಲೆ ಅದು ಹೇಗೆ ಅದರಡಿ ಹೋಯಿತೋ ಶಿವನಿಗೆ ತಿಳಿಯದು.

ನೀರು ಮಟ್ಟ ನೋಡಿದೆ. ಸಾಧಾರಣ ಬೆಚ್ಚಗಿತ್ತು. ಅಡ್ಡಿ ಇಲ್ಲ ಎಂದುಕೊಂಡು ಕಾಫಿ ಹುಡಿ ಡಬ್ಬಿ ಹುಡುಕಿದೆ. ಸಿಕ್ಕಿತು. ಅಯ್ಯಬ್ಬ ಇದನ್ನು ಹುಡುಕುವ ಸಂದರ್ಭ ಬರಲಿಲ್ಲ ಎಂದುಕೊಂಡು ಎರಡು ಚಮಚ ಹಾಕಿದೆ. ಇದಿಷ್ಟು ಚಿಮಣಿ ದೀಪದ ಮಿಣಿಮಿಣಿ ಬೆಳಕಿನಲ್ಲಿ ಎಂದು ಹೇಳಬೇಕಾಗಿಲ್ಲವಲ್ಲ!

ಸೋಸಿ ಹಾಲು ಹುಡುಕಿದೆ. ಹಾಲು ಮೇಲೆ ಅಡ್ಡ ಹಲಗೆಯಲ್ಲಿತ್ತು. ಅಲ್ಲಿ ಕೈ ಹಾಕಿದೆ. "ಮ್ಯಾಂವ್" ಎಂದಿತು ಬೆಕ್ಕು! ಮತ್ತೆ ಕಣ್ಣು ಮುಚ್ಚಿ ಅದು ತಪಸ್ಸು(!) ಮಾಡುವಾಗ ಅಡ್ಡಿ ಮಾಡಿದರೆ ಸಿಟ್ಟು ಬರೋದಿಲ್ವೆ ಅದಕ್ಕೆ? ಹಾಲು ಪಾತ್ರೆ ತೆಗೆದು ನೋಡಲು ಮುಕ್ಕಾಲಂಶ ಹಾಲು ಖಾಲಿಯಾಗಿತ್ತು! ಉಳಿದುಳಿದ ಅಷ್ಟನ್ನು ಹಾಲು ಹಾಕಿದೆ. ಸಕ್ರೆ ಹಾಕಿದ್ದೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲವಲ್ಲ!

ಘಂಟೆ ನೋಡಿದೆ. 5–10 ಆಗಿತ್ತು. ಹೊರಗೆ ನೋಡಿದೆ. ಬೆಳ್ಳಂಬೆಳಗಾಗಲು ಸ್ವಲ್ಪ ಹೊತ್ತಿತ್ತು. ಇನ್ನು ಓದಿದ ಹಾಗೆ ಇದೆ ಎಂದುಕೊಂಡು ಮುಖ ತೊಳೆಯಲು ಹೊರಟೆ. ಇಷ್ಟು ಹೊತ್ತಿಗೆ ಮನೆಯಾಕೆ ಮೈ ಮುರಿಯುತ್ತಾ ಎದ್ದಿದ್ದಳು.

ಅವಳಿಗೊಂದು ಲೋಟಾ ತೆಗೆದಿಟ್ಟು ನಾನು ಒಂದು ಲೋಟ ತೆಗೆದು ಕಾಫಿ(!) ಹೀರಲಾರಂಭಿಸಿದೆ. ಅದು ಕಾಫಿಯೋ ಮತ್ತೇನೋ ಎಂದು ತಿಳಿಯಲಿಲ್ಲ. ಏನೋ ಒಗರು ಒಗರಾಗಿದ್ದ ನೀರು ಕುಡಿದ ಹಾಗಿತ್ತು!

ಅವಳು ಬಂದು ಕುಡಿದು ಕೇಳಿದಳು "ನೀವು ಹೊಸ ಡಬ್ಬದ ಕಾಫಿಹುಡಿ ಹಾಕಿದ್ರಾ? ಇದು ಕಾಫಿ ಕುಡಿದ ಹಾಗೇ ಇಲ್ಲ ಅಂತೆಂದಳು. ಎದೆ ಧಸಕ್ಕೆಂದಿತು. ಕಾಫಿ ಹುಡಿಯೆಂದು ಹಾಕಿದ ಡಬ್ಬ ತೆಗೆದು ನೋಡಿದೆ. ಅದು ಕಾಫಿ ಹುಡಿಯಾಗಿರದೇ ಸೋಡಾ ಹುಡಿಯಾಗಿದ್ದಿತ್ತು!

ಜಗ್ಗಂದಿತು ದೀಪ. ದರಿದ್ರ ಕರೆಂಟು ತನ್ನನ್ನು ಇಷ್ಟು ಹೊತ್ತು ಸತಾಯಿಸಿ ಕಾಫಿ ಕುಡಿವ ಹೊತ್ತಲ್ಲಿ ಬಂತು. ಒಡೆದು ಬಿದ್ದ ಬಾಟ್ಲ್ ನೋಡಿ ಕೂಗಲು ಶುರು ಮಾಡಿದಳವಳು: "ಅಯ್ಯಯ್ಯೋ ನನ್ನ ಔಷಧದ ಬಾಟ್ಲ್! ಕಾಲ ಮೈಮೇಲೇ ಬಂದಹ್ಲಾಂತ ಕಾಣುತ್ತೆ. ನೀವು ಯಾಕ್ರೀ ಅಲ್ಲಿ ಬಾಗಿಲು ತೆಗೆದ್ರಿ?" ಎಂದು ಕೂಗಿದಳು. "ಬೆಂಕಿಪೆಟ್ಟಿಗೆ ತೆಗೆಯಲು" ಎಂದು ಮೆತ್ತಗೆ ಹೇಳಿದೆ. "ಅಲ್ಲೇ ಯಾಕ್ರೀ ಬೆಂಕಿಪೆಟ್ಟಿಗೆ ಇರಬೇಕು? ಬೇರೆ ಕಡೆ ಇಲ್ಲಿಲ್ವಾ? ಹೋಗ್ಲಿ ನಿಮಗೆ ಸಿಗರೇಟು ಸೇದಲು ಸಿಗರೇಟ್ ಲೈಟರ್ ಉಂಟು; ದೀಪ ಹಚ್ಚಲು ಉಪಯೋಗಿಸಬಾರದಿತ್ತಾ?" ಎಂದಳು. ಹೌದಲ್ಲ! ಸಿಗರೇಟ್ ಲೈಟರ್ ಆ ಹೊತ್ತಿನಲ್ಲಿ ನೆನಪಿಗೇ ಬರಲಿಲ್ಲ. ನಾನಾದರೂ ಏನು ಮಾಡಲಿ? ಕಡೆಗೆ ಅವಳೇ ಕಾಫಿ ಮಾಡಿ ಕೊಟ್ಟಳೆನ್ನಿ; ಆ ದಿನ ಓದಿದ್ದು ಮಾತ್ರ ಅಷ್ಟಕ್ಕಷ್ಟೇ!!!

ರೋಜಾ ಜಾರಿ ಬಿದ್ದಳು

(ಎರಡನೇ ಪುಟದಿಂದ)

ಕಾಲೇಜಿನಲ್ಲಿ ಓದುವುದು ದಾರಿಯಲ್ಲಿ ಬಿದ್ದಾಗ ನಗುವುದು. ರೋಜಾ ಜಾರಿ ಬೀಳುವುದಿಲ್ಲವೇ? ಬರೀ ನಾನು ಮಾತ್ರವೇ? …" ಕಣ್ಣೀರು ಒರಸುತ್ತಾ ಅನ್ನುವನು.

ಟೈಗರ್ ಅವಿ ತನ ಮಾತನ್ನು ಅರ್ಥ ಮಾಡಿಕೊಂಡಂತೆ ಅವನ ಗಾಯವನ್ನು ಮೆಲ್ಲನೆ ಮೆಲ್ಲನೆ ನೆಕ್ಕುವುದು.

ತನ್ನ ಪೆಟ್ಟಿಗೆಯಿಂದ "ರೋಜಾ-ಅವಿತ" ಎಂದು ಅಸ್ಪಷ್ಟವಾಗಿ ದಪ್ಪ ಅಕ್ಷರಗಳಲ್ಲಿ ಬರೆದ ಕಾಗದದ ಹಾಳೆಯನ್ನು ತೆಗೆದು "ಅವಿತ" ಎಂಬುದನ್ನು ಆ ಕಾಗದದಿಂದ ಹರಿದು ಬರೀ "ರೋಜಾ" ಎನ್ನುವುದರ ಅಡಿಯಲ್ಲಿ ರೋಜಳ ಅಸ್ಪಷ್ಟ 'ಸ್ಕೆಚ್' ಬಿಡಿಸಿ, ಅದರ ಕೆಳಗಡೆ "ರೋಜಾ ಜಾರಿ ಬಿದ್ದಳು" ಎಂದು ಬರೆದು ಅಲ್ಲಿ ಇರುವ ಕಿಟಕಿಯ ಹೊರಗಡೆ ಬಿಸಾಡುವನು.

ಪುನಃ ಹೊರಗೆ ಬಿಟ್ಟ ಕಾಗದದ ಮೇಲೆ ಬಿಡಿಸಿದ ಚಿತ್ರವನ್ನು ನೋಡುತ್ತಾ ಚಿಂತಿಸ ತೊಡಗಲು ಪ್ರಾರಂಭಿಸುವನು. ಈ ರಹಸ್ಯಮಯ ಶೋಧನೆಯನ್ನು ಏಕಮಾತ್ರ ಸಾಕ್ಷಿಯಾದ 'ಟೈಗರ್' ನಾಯಿ ಅವನ ಬಳಿಯಲ್ಲೇ ಕೂತು ನೋಡುತ್ತಿತ್ತು.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—27

NAVAYUGA 2—1—1969

Registered with the Registrar
of News Papers for India
under No. R. N. 3546/'57

REGD: No: B. G: 176
LICENCE No. 31
Licensed to Post without Prepayment

ಕುಟುಂಬಯೋಜನೆ – ವಿಶೇಷ ಲೇಖನ

ಗಂಡ ಸಲಹೆ ನೀಡಿದರು— ಅಮ್ಮ ಧೈರ್ಯ ಕೊಟ್ಟಳು

"ಶಕುಂತಲೆ ನನ್ನ ಹಿರಿಯ ಮಗಳು. ಆಕೆಗೆ ಮದುವೆಯಾಗಿ ನಾಲ್ಕು ವರುಷ ಕಳೆದವು. ಆಕೆಗೆ ಒಂದೇ ಮಗು. ಸ್ವರ್ಣ, ಯಮುನಾ, ಶಾಂತಾ, ಅನ್ನಪೂರ್ಣ, ಮಂಜುಳಾ, ಶಿವ್ಪೇಶಿ ಅಲ್ಲದೆ ಇನ್ನೂ ಐದು ಜನರಿದ್ದಾರೆ. ರಾಜಶೇಖರನಿಗೆ ಈಗ ನಾಲ್ಕು ವರ್ಷ. ಅವನೇ ನನ್ನ ಕೊನೆಯ ಮಗು. ನಾನು ಹಾಸನದ ಮಿಶನ್ ಆಸ್ಪತ್ರೆಯಲ್ಲಿ ಆಪರೇಶನ್ ಮಾಡಿಸಿಕೊಂಡೆ. ನನಗೆ ಮೊದಲೇ ಮಾಡಿಸಿಕೊಳ್ಳಬೇಕೆಂಬ ಆಶೆಯಿತ್ತು. ಆದರೆ ಆಗ ನನಗೆ ಯಾರೂ ಹೇಳಿದವರಿಲ್ಲ. ಹತ್ತಿರದಲ್ಲಿ ಆಪರೇಶನ್ ಬಗ್ಗೆ ಈಗಿನಂತೆ ಯಾವ ಸೌಕರ್ಯವೂ ಇದ್ದಿಲ್ಲ" ಎಂದಳು ಮಲ್ಲಮ್ಮ.

ಮಲ್ಲಮ್ಮ ತನ್ನ ಮಗಳನ್ನು ನೋಡಿಕೊಳ್ಳಲು ಅರಸೀಕೆರೆಯಿಂದ ಮೊನ್ನೆ ಬಂದಿದ್ದಳು. ನಿನ್ನೆಯೇ ಮಗಳು ಸ್ವರ್ಣಳಿಗೆ ಆಪರೇಶನ್ ಆಗಿತ್ತು. ಸ್ವರ್ಣಳ ತಲೆಯ ಬದಿ ಕುಳಿತು ಮಲ್ಲಮ್ಮ "ಚೆನ್ನಾಗಿದ್ದೀಯಾ" ಎಂದಾಗ ಸ್ವರ್ಣ ನಸು ನಕ್ಕಳು. ಸ್ವರ್ಣಳಿಗೆ ಅರುಣಾ, ಅಶೋಕ, ಆನಂದ ಎಂದು ಮೂರು ಮುದ್ದು ಮಕ್ಕಳು. ಇವರಲ್ಲಿ ಕೊನೆಯ ಮಗು ಆನಂದ. ಸ್ವರ್ಣಳಿಗೆ ನಿಜವಾಗಿಯೂ ಆನಂದ ತಂದವನು. ಇನ್ನು ಆಕೆಗೆ ಹೆರಿಗೆಯ ಚಿಂತೆ ಇಲ್ಲ. ಇದ್ದ ಮಕ್ಕಳನ್ನು ಅಕ್ಕರೆಯಿಂದ ಸಾಕಿ ಸಲಹಿ ಬುದ್ಧಿವಂತರನ್ನಾಗಿ ಮಾಡಲು ಕಷ್ಟವಾಗಲಿಕ್ಕಿಲ್ಲ ಎಂದು ಸ್ವರ್ಣಳಿಗೆ ಆನಂದ. "ಗಂಡ ಸಲಹೆ ನೀಡಿದರು, ಅಮ್ಮ ಧೈರ್ಯ ಕೊಟ್ಟರು" ಎಂದು ಸ್ವರ್ಣ ಎದ್ದು ಕುಳಿತು ಹತ್ತಿರವಿದ್ದ ತಂಗಿ ಶಾಂತಾಳ ಕೈಯಲ್ಲಿದ್ದ ಆನಂದನ ಕೈ ಹಿಡಿದು "ಹೋಗು, ಆಡಿಕೋ" ಮುಗುಳ್ನಕ್ಕಳು.

ಮಲ್ಲಮ್ಮ ಹನ್ನೆರಡು ಮಕ್ಕಳನ್ನು ಹೊತ್ತು ಹೆತ್ತು ಸಾಕಿ ಸಲಹಿದ ಮಾತಾಯಿ. ಆ ಮೇಲೆ ತನಗೆ ಮಕ್ಕಳು ಸಾಕೆಂದು ನಿರ್ಣಯಿಸಿದ ವಿಚಾರಶೀಲೆ. ಮಲ್ಲಮ್ಮನಿಗೆ ಮಕ್ಕಳು ಸಾಕೆನಿಸಲು ಬಡತನ ಕಾರಣವಲ್ಲ; ಆಕೆಯ ಅನಾರೋಗ್ಯವೂ ಕಾರಣವಲ್ಲ. "ಹೆಚ್ಚು ಮಕ್ಕಳಿದ್ದರೆ ಅವರ ಲಾಲನೆ ಪಾಲನೆ, ಶಿಕ್ಷಣ, ಮದುವೆ ಇತ್ಯಾದಿಗಳು ತುಂಬ ಕಷ್ಟ. ಒಂದರ ಮೇಲೊಂದು ಕೈಗೂಸಿದ್ದರೆ ಚಿಕ್ಕ ಮಕ್ಕಳ ಊಟ, ತಿಂಡಿ, ಸ್ನಾನ, ಬಟ್ಟೆಬರೆ ಇತ್ಯಾದಿಗಳನ್ನು ನೋಡಿಕೊಳ್ಳಲು ಕಷ್ಟವಾಗುತ್ತದೆ. ಅಲ್ಲದೆ ಎಷ್ಟಾದರೂ ಮಕ್ಕಳೆಂದರೆ ಮಕ್ಕಳು. ಮಕ್ಕಳು ಹೆಚ್ಚಿದ್ದಂತೆ ಅವರಲ್ಲಿ ಪರಸ್ಪರ ಜಗಳ, ಹೊಟ್ಟೆಕಿಚ್ಚು ಇದಕ್ಕೆಲ್ಲ ಅವಕಾಶವೂ ಹೆಚ್ಚು. ನನಗೆ ದೇವರು ಸಾಕಷ್ಟು ಸಂಪತ್ತು ಕೊಟ್ಟಿದ್ದಾನೆ. ಆದರೂ ಎರಡು ಅಥವಾ ಮೂರು ಮಕ್ಕಳಿಗಿಂತ ಹೆಚ್ಚಾದರೆ, ಮಕ್ಕಳನ್ನು ನೋಡಿಕೊಂಡು ಬೆಳೆಸಿ ದೊಡ್ಡವರನ್ನಾಗಿ ಮಾಡಲು ಸಾಧ್ಯವಿಲ್ಲ ಎಂಬುದೇ ನನ್ನ ಅಭಿಪ್ರಾಯ" ಎಂದಳು ಮಲ್ಲಮ್ಮ.

"ನನ್ನ ಗಂಡ ಅರಸೀಕೆರೆಯಲ್ಲಿ ದೊಡ್ಡ ವ್ಯಾಪಾರಿಗಳು. ಎಲ್ಲರಿಗೂ ಬೇಕಾದವರು. ನಮ್ಮ ಜನಕ್ಕೆಲ್ಲ ಅವರೇ ಹಿರಿಯರು. ಸುಖ-ದುಃಖಗಳಲ್ಲಿ ಸಲಹೆ ಸಹಕಾರ ನೀಡುವವರು. ಹೆಚ್ಚುಕಡಿಮೆ ನಮ್ಮಲ್ಲಿ ಯಾರೂ ಅವರ ಸಲಹೆ ಕೇಳದೆ ಯಾವ ಕೆಲಸವನ್ನೂ ಮಾಡುವುದಿಲ್ಲ. ಅವರು ತಮ್ಮಲ್ಲಿಗೆ ಬರುವ ಅನೇಕರಿಗೆ ಕುಟುಂಬ ಯೋಜನೆ ವಿಚಾರವಾಗಿ ಹೇಳಿದ್ದಾರೆ. ಈಗಲೂ ಹೇಳುತ್ತಿದ್ದಾರೆ. ಕೆಲವರು ಈಗಾಗಲೇ ಕುಟುಂಬ ಯೋಜನೆಯಲ್ಲಿ ಪಾಲುಗೊಂಡಿದ್ದಾರೆ.

"ನಾವು ನನ್ನ ಮಗಳಿಗೆ ನಮ್ಮ ಊರಲ್ಲೇ ಆಪರೇಶನ್ ಮಾಡಿಸಿಕೊ ಎಂದು ಹೇಳಿದೆ. ಆದರೆ ಆಕೆಯ ಗಂಡನಿಗೆ ಅದು ಇಷ್ಟವಿದ್ದಿಲ್ಲ. ಆತನೇ ಈಗ ಈಕೆಯನ್ನು ನೋಡಿಕೊಳ್ಳಲು ಇಲ್ಲಿಗೆ ನನ್ನನ್ನು ಕರೆಸಿದ್ದಾನೆ" ಎನ್ನುವಾಗ ಮಲ್ಲಮ್ಮನ ಮುಖದಲ್ಲಿ ನಗು ಮಿಂಚಿತು.

ಸ್ವರ್ಣ ಮಾತ್ರವಲ್ಲ, ಇನ್ನು ಇಪ್ಪತ್ತಾರು ಮಹಿಳೆಯರು ತ್ಯಾಮಗೊಂಡ್ಲು ಕಂಬೈಂಡ್ ಡಿಸ್ಪೆನ್ಸರಿಯಲ್ಲಿ ಆಪರೇಶನ್ ಮಾಡಿಸಿಕೊಂಡಿದ್ದಾರೆ. ಇವಳೇ ಸಿದ್ದಗಂಗಮ್ಮ. ಈಕೆಗೆ ನಾಲ್ಕು ಮಕ್ಕಳು. ಹೆತ್ತ ಹದಿನಾರನೆಯ ದಿನ ಈಕೆಗೆ ಆಪರೇಶನ್ ಆಗಿದೆ, ಚೆನ್ನಾಗಿದ್ದಾಳೆ. ಈಕೆಯ ಗಂಡನಿಗೆ ಆಪರೇಶನ್ ಮಾಡಿಸಿಕೊಳ್ಳಬೇಕೆಂದಿತ್ತು. ಆದರೆ ಸಿದ್ದಗಂಗಮ್ಮ ಗಂಡನ ಬದಲು ತಾನೇ ಆಪರೇಶನ್ ಮಾಡಿಸಿಕೊಳ್ಳುತ್ತೇನೆಂದು ಮುಂದೆ ಬಂದಳು.

ಇವಳು ಚನ್ನಮ್ಮ. ಇವಳ ಗಂಡ ರೈತ, ಈಕೆ ಎಂಟು ಮಕ್ಕಳ ತಾಯಿ. ಇವರಲ್ಲಿ ನಾಲ್ಕು ಗಂಡು, ನಾಲ್ಕು ಹೆಣ್ಣು. ಈಕೆಗೆ "ಆಪರೇಶನ್" ಎಂದರೆ ತುಂಬ ಭಯ. ಏನಾಗುತ್ತೋ, ಎಷ್ಟು ನೋವಾಗುತ್ತೋ? ಎಂದು ನಡುಗುತ್ತಿದ್ದಳು. ಆದರೆ ಈಕೆಯ ಗೆಳತಿ ಏಳು ಮಕ್ಕಳ ತಾಯಿ ಹನುಮಕ್ಕ ಆಪರೇಶನ್ ಮಾಡಿಸಿಕೊಂಡು ಸುಖವಾಗಿರುವುದನ್ನು ನೋಡಿ ತಾನೂ ಮಾಡಿಸಿಕೊಳ್ಳಬೇಕೆಂಬ ಆ(ಸೆ)ಯಾಯಿತು. "ಏನೇ ಆಗಲಿ ದೇವ(ರಿ)ದ್ದಾನೆ" ಎಂದು ಧೈರ್ಯ ತಾಳಿದಳು. ತನ್ನ ಗಂಡನೊಂದಿಗೆ ತ್ಯಾಮಗೊಂಡ್ಲುವಿಗೆ ಬಂದು ಆಪರೇಶನ್ ಮಾಡಿಸಿಕೊಂಡಳು.

"ಹೇಗಿದ್ದೀ ಚನ್ನಮ್ಮ" ಎಂದು ನಾ(ವು) ಕೇಳಿದಾಗ "ಚೆನ್ನಾಗಿದ್ದೇನಮ್ಮ" ಎಂದ(ು) ಗೋಡೆಯ ಕಡೆ ನೋಡಿ ನಕ್ಕಳು. ಇ(ಂದು) ಇಲ್ಲಿ ಆಪರೇಶನ್ ಮಾಡಿಸಿಕೊಂಡವರ ಪ್ರತಿಯೊಬ್ಬಳಿಗೂ ಈಗ ಸಂತೋಷವಾಗಿದೆ. ಇನ್ನು ತನಗೆ ಮಕ್ಕಳನ್ನು ಹೊತ್ತು ಹೆತ್ತು ಸಾಕುವ ಹೊರೆ ಇಲ್ಲವಲ್ಲ ಎಂದ(ು) ನೆಮ್ಮದಿ ಬಂದಿದೆ.

ತ್ಯಾಮಗೊಂಡ್ಲು ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲೂಕಿನಲ್ಲಿದೆ. ಇ(ದು)ಗೆ ಬೆಂಗಳೂರು ನಗರದಿಂದ 26 ಮೈ(ಲು) ದೂರ. ಇಲ್ಲಿ ಕುಟುಂಬ ಯೋಜನೆ ಬಗ್ಗೆ ಬೇಕಾದ ಸಲಹೆ, ಶಸ್ತ್ರಕ್ರಿಯೆ ಇತ್ಯಾದಿಗಳೆಲ್ಲ ಸುಲಭವಾಗಿ ದೊರೆಯುವುವು. ಅಮ್ಮ! ನಿಮಗೆ ಎರಡು ಅಥವಾ ಮೂರು ಮಕ್ಕಳಿದ್ದರೆ ತ್ಯಾಮಗೊಂಡ್ಲುವಿ(ನ)ನಂತಹ ಯಾವ ಕೇಂದ್ರಕ್ಕಾದರೂ ಒಮ್ಮೆ ಹೋಗಿಬನ್ನಿ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ.
ಬೆಲೆ : ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ಮಾದರಿ ಪತ್ರ ಸಂಕಲನ. ಬೆಲೆ : ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ : ರೂ. 1—50

ಮನೆ-ಮದ್ದು Home Remedies

ಡಾ|| ಬಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳನ್ನು ಹಾಗೂ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಸಂಗ್ರಾಹ್ಯ ಸಂಕಲನಗಳು

ವಿರಾಂಕ ನಾಟಕಗಳು	1—
ಭಾರತದ ನಾಲ್ಕು ಮುಖಗಳು	1—
ದೇಶವಿದೇಶದ ಮಹಾಜೀವಿಗಳು	1—8
ಹೆಂಗುಸರ ಕತೆಗಳು	2—
ನುಡಿಮುತ್ತುಗಳು	1—2
ವಿಚಿತ್ರ ಕಳ್ಳಪೇಟೆ	1—5
ಶಿಲ್ಪಿ	1—5
ಪ್ರತಿಜ್ಞಾ ಪೂರ್ತಿ	1—0
ನೀತಿ ವಿನೋದ ಕತೆಗಳು	1—0
ಕಥಾವಳಿ	2—
ಪರಿಚಯ ಪ್ರಬಂಧಗಳು	1—
ನಾಟಕ ಪ್ರಪಂಚ	1—5
ಜೀವನಕಲೆ	1—0
ಅನುವಾದಿತ ಕತೆಗಳು	1—20
ಕುಂಚ ಸುಮನ	1—2
ಮುತ್ತಿನ ಮಾಲೆ	1—8
ಹೂ ಗೊಂಚಲು	1—7
ಕಂಚಗನ್ನಾಯ	2—0
ಮಧುವನ	3—
ಪುಷ್ಪವನ	2—0
ಸರಸ್ವತಿ	1—5

ನವಭಾರತ ಪುಸ್ತಕ ಭಂಡಾರ, ಉಡುಪಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

9—1—1969

೨೦
ಪೈಸೆ

ಇಪ್ಪತ್ತು ಪೈಸೆಗಳು

ಬರೆದವರು: ಶ್ರೀ ಬಿ. ದೇವರಾಯ ಮಲ್ಯ

"ಅಮ್ಮಾ...."

....

"ಅಮ್ಮಾ...." ಸೀನು ಮೆಲ್ಲಧ್ವನಿಯಲ್ಲಿ ಕರೆದ—

'ಏನೋ?'

ಒಲೆ ಊದಿ ಊದಿ ಕೆಂಪಗಾಗಿದ್ದ ಕಣ್ಣುಗಳನ್ನು ಇದಿಗೆ ಹೊರಳಿಸುತ್ತಾ ತಾಯಿ ಕೇಳಿದಳು.

'ನಾನೊಂದು ಮಾತು ಕೇಳ್ತೀನಿ.... ನಡೆಸಿಕೊಡ್ತೀಯೊ?"

"ಏನೆಂದೆ? ಯಾವ ಮಾತು?"

ಒಲೆಯ ಮೇಲಿನ ಮಡಕೆಯಲ್ಲಿ ಕೊತಿದ ಅಕ್ಕಿಯನ್ನು ಸುರುವುತ್ತಾ ಕೇಳಿದಳು ನಾಗು.

'ಯಾಕೆ ಹಾಗೇ ಮಾತಾಡ್ತಿದ್ದೀಯೊ? ನನ್ನ ಒಪ್ಪಿಗೆ ಪಡೆಯೋಕೆ?

"ಏನಿಲ್ಲಾ ಮ್ಮಾ.... ನನಗೆ.... ನಾನು..." ಹೇಳಲೋ ಬೇಡವೋ ಎಂಬ ಸಂಕೋಚ ಅವನಿಗೆ.

'ಬೇಗ ಹೇಳ್ಬಯಾದರೆ ಹೇಳು. ಇಲ್ಲದಿದ್ದರ ಬೇರೆ ಕೆಲಸ ನೋಡ್ಕೋತೀನಿ. ಒಂದೇ ಕೆಲಸ ಅಲ್ಲ ನನಗೆ... ತಿಳಿತೇನೊ?'

"ಅಲ್ಲಮ್ಮಾ ಇವತ್ತು........ದೀಪಾವಳಿ ತಾನೆ?"

ಮಗನ ಮನದ ಇಂಗಿತ ತಿಳಿದ ನಾಗೂ ಗೊತ್ತಿದ್ದೂ ಕೇಳಿದಳು.

"ದೀಪಾವಳಿ ಹೌದು.... ಯಾಕೆ? ಏನಾಯ್ತು?'

"ಅಲ್ಲಮ್ಮಾ ನಾಣಿ, ರಾಮೂ ಎಲ್ಲಾ ....ಮದ್ದು ಸುಡ್ತಾರಂತೆ... ನಾನೂ.... ಸುಡ್ಲೇನೊ?"

"........."

"ಏನಮ್ಮಾ ನಾವು ಸುಡಬಾರದೇನು? ಕೇವಲ ನಾಲ್ಕಾಣೆ ಅಷ್ಟೇ" ಸೀನು ಅಂಗಲಾಚಿದ. "ಅಮ್ಮಾ, ರಾಮೂನ ತಂದೆ ಅವಂಗೆ ಎಷ್ಟು ಮದ್ದು ತಂದಿದ್ದಾರೆ ಗೊತ್ತೇನು? ನಕ್ಷತ್ರ ಮಾಲೆ... ಹೂ ಮಂತಾಪಬಾಲ.... ಕೇಪು.... ಪಟಾಕಿ.... ಎಲ್ಲದೆ...."

"ಹೌದು, ಅವರು ಶ್ರೀಮಂತರು. ಮದ್ದು ಸುಡ್ತಾರೆ...ಆದರೆ ನಾಲ್ಕಾಣೆ ಎಲ್ಲಿಂದ ಅಂತ ತರಲಿಯೋ ನಾನು? ಇವತ್ತೀನೆ ನಾಲ್ಕಾಣೆ ಅಕ್ಕಿ ತೊಗೊಂಡು ಬಂದೆ. ನೀನೂ ರಾಮೂನೂ ಕೂಡಿ ಆಮೇಕೆ ಸುಡ್ತಾರ್ದ್ದಿ?"

"ಹೌದಮ್ಮಾ. ನಾನೂ ರಾಮೂನ ಹತ್ರ ಒಂದು ಪೊಣ್ಣ ಕೇಪು ಕೊಡ್ತಿಯೇನೂ? ಎಂದು ಕೇಳಿದೆ. ಅವ ಕೊಡೋದಿಲ್ವಂತೆ.... ಅವನ ತಂದೆ ಅವಂಗೆ ಅಂತ ತಂದದ್ದಂತೆ ಅಮ್ಮಾ... ನನ್ನ ತಂದೆ ಎಲ್ಲಿದ್ದಾರಮ್ಮಾ?...."

ಒಮ್ಮೆಲೇ ನಾಗಮ್ಮ ಬೆಚ್ಚಿಬಿದ್ದಳು. ಮಗನಿಂದ ಈ ರೀತಿಯ ಪ್ರಶ್ನೆ ಬಂದೀತೆಂದು ಆಕೆ ಕನಸು ಮನಸಲ್ಲೂ ನೆನೆಸಿರಲಿಲ್ಲ. ಆಕೆ ಸಂಭಾಳಿಸಿಕೊಂಡು ಹೇಳಿದಳು.

"ಯೋಚನೆ ಮಾಡ್ತೀನಿ. ನೀನು ಜಾಣ ಮರಿ ಅಲ್ವಾ ಓದ್ಕೋ ಹೋಗು".

ತಾಯಿಯಿಂದ 'ಜಾಣಮರಿ' ಎಂಬ ಹೊಗಳಿಸಿಕೊಂಡು ಉಬ್ಬಿದ ಸೀನು ಹೇಳಿದ, "ನಿನ್ನೆ ಶಾಲೇಲಿ ರಾಮು ಏನು ಹೇಳಿದ ಗೊತ್ತೇನಮ್ಮಾ?....ಮೇಷ್ಟ್ರು ನಮಗೆ ಐದು ಲೆಕ್ಕ ಕೊಟ್ರು. ಅವನಿಗೆ ಮಾಡೋಕೆ ಬರಲೇ ಇಲ್ಲ.... ನನ್ನ ಹತ್ರ ಬಂದು ಕೇಳಿದ ಅಮ್ಮಾ.... ನಾನು ನನಗೇನು ಕೊಡ್ತೀಯಾ ಎಂದು ಕೇಳಿದೆ... ನಿಂಗೆ ನಾನು ನಾಳೆ ಕೇಪು ಎಲ್ಲಾ ಕೊಡ್ತೀನಿ.... ಲೆಕ್ಕ ಹೇಳಿಕೊಡ್ತೀಯೊ? ಎಂದ... ನಾನು ಮೇಷ್ಟ್ರ ಕೈಲಿ ಪೆಟ್ಟು ತಿನ್ನುತ್ತಾನಲ್ಲಾ ಎಂದು ಹೇಳಿಕೊಟ್ಟೆ. ಆಮ್ರ ಹೋದಮ್ಮಾ ಇವತ್ತು ಅಂಗೆ ಕೇಪೂ ಕೊಡಲಿಲ್ಲ. ಏನೂ ಕೊಡಲಿಲ್ಲ' ಅಂದೇ ಅವನಕ್ಕ ಅವಂಗೆ ಪೈಸೂರಿಂದ ಬರುವಾಗ ಒಂದು ಪೇಂಟು ತಂದಿದ್ದಾರೆ ಗೊತ್ತೇನಮ್ಮಾ? ಎಷ್ಟು ಸಂದಾಗಿದೆ ಅಂತೀನಿ'

ಹರಿದ ಚಡ್ಡಿಯ ಲಾಡಿಯನ್ನು ಸೊಂಟಕ್ಕೆ ಸುತ್ತಿಕೊಂಡು ಸೀನು ಹೇಳಿದ. "ಅಗ್ಲಿ ಈಗ ಹೋಗಿ ಓದ್ಕೋ. ಕಡೆಗೆ ನೋಡ್ತೀನಿ" ಎಂದು ಅವನನ್ನು ಕಳಿಸಿ ದೇವರ ಪಟದ ಮುಂದೆ ದೀಪ ಹಚ್ಚಿದಳು... ಅಂತೆಯೇ ಆಕೆಯ ಮನಸ್ಸು ಏಳು ವರ್ಷಗಳ ಹಿಂದಿನ ಜೀವನವನ್ನು ಮೆಲುಕುಹಾಕತೊಡಗಿತು.

೦ ೦ ೦ ೦

ಗೋಪಾಲ ರಾಯರು ಸ್ಥಳೀಯ ಒಂದು ಆಫೀಸಿನಲ್ಲಿ ಗುಮಾಸ್ತರಾಗಿದ್ದರು. ಆ ದುಬಾರಿ ಬೆಲೆಯ ಕಾಲದಲ್ಲಿ ಮನೆಯಲ್ಲಿ ಇಬ್ಬರೇ ಇದ್ದರೂ ಅವರ ಸಂಬಳ ಅವರಿಗೆ ಸಾಲುತ್ತಿರಲಿಲ್ಲ. ದೇವರಲ್ಲಿ ಬಲು ಭಕ್ತಿ ಗೋಪಾಲರಾಯರಿಗೆ. ಅವರು ಲಂಚ ಇತ್ಯಾದಿ ತೆಗೆದ ಕೊಳ್ಳುತ್ತಿರಲಿಲ್ಲ. ಒಂದ ದಿನ ಅವರ ಲಂಚ ಪಡೆಯುವ ಸ್ನೇಹಿತರು ಅವರನ್ನು ಲಂಚ ತೆಗೆದುಕೊಳ್ಳಲು ಹೇಳಿದಾಗ ಖಡಾಖಂಡಿತವಾಗಿ ತಿರಸ್ಕರಿಸಿ ಹೇಳಿದರು. 'ನೋಡಿ ರಾಯರೇ ನೀವು ನನ್ನ ಸ್ನೇಹಿತರಾಂತ ನಾನು ನಿಮಗೆ ಇದನ್ನು ಹೇಳ್ತೀನಿ, ಬೇಜಾರು ಪಟ್ಕೋಬೇಡಿ ನೋಡಿ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನ್ಯೇ ಏನಾದರೂ ಒಂದು ದಾರಿ ತೋರಿಸುತ್ತಾನೆ. ಸಂಬಳ ಸಾಲೋದಿಲ್ಲಾ ಅಂತ ಲಂಚ ತೆಗೆದುಕೊಂಡರೆ ದೇವರಿಗೆ ಅದು ಸರಿಯೆ ನಿಸೀತೆ? ಲಂಚ ತಿಂದೋರು ಉದ್ಧಾರವಾಗ್ತಾರ್ಯೆ? ಲಂಚತಿಂದು ಮರ್ಜಿ ಯಾರು ಮಾಡ್ತಾರೆ ನೋಡಿ ಅವರಿಂದಲೇ ನಮ್ಮ ದೇಶ ಹಾಳಾಗಿರೋದು. ಯಾರ ಬಡವರ ಹೊಟ್ಟೆಯ ಮೇಲೆ ಹೊಡೆದು ಲಂಚ ತೊಗೊಳ್ತಾರೆ ನೋಡಿ, ಮೊದಲು ಅವರನ್ನು ಗುಂಡಿಕ್ಕಿ ಕೊಲ್ಲಬೇಕು ಬಸದಂಡ ಮಜಾ...."

'ನೋಡಿ ಗೋಪಾಲರಾಯರೇ, ಮನೆ ಸೇರೋಕೆ ತಡವಾಗುತ್ತೆ. ಹೋಗ್ತೀನಿ' ಎಂದು ಮುಖ ಭಂಗಿತರಾಗಿ ಆ ರಾಯರು ಹೊರಟದ್ದರು.

ಅಷ್ಟು ಕಷ್ಟ ಪಟ್ಟು, ನಿಯಮ ನಿಷ್ಠೆ ಅವರ ಜೀವನದಲ್ಲಿ ಹಾಸು ಹೊಕ್ಕಾಗಿ ಬೆರೆತಿತ್ತು. ದೇವರ ವಿರುದ್ಧ ಅನ್ಯಾಯದ ಕೆಲಸ ಮಾಡಲು ಅವರು ಒಪ್ಪುತ್ತಿರಲಿಲ್ಲ. ದೇವರೇ ತಮ್ಮ ಸಂಸಾರ ನೌಕೆಗೆ ನಾವಿಕನೆಂದು ಅವರು ಎಣಿಸಿದ್ದರು. ಕೆಲಸದ ಬಗ್ಗೆ ಯೂ ಅವರು ಅಷ್ಟೇ. ಒಂದು ದಿವಸವಾದರೂ ರಜೆ ಹಾಕುವುದೆಂದರೆ ಅವರಿಗೆ ಆಗದು.

ಆ ದಿನ ಗೋಪಾಲ ರಾಯರು ಹಾಸಿಗೆಯಿಂದ ಏಳುವಾಗ ಸ್ವಲ್ಪ ಬಿಸಿಯಾಗಿ ಮುಟ್ಟಿದರೆ ಕಂಡವಾಗಿತ್ತು. ನಾಗೂ ಹೌಹಾರಿದಳು. ಆಕೆಗೆ ಏನ ಮಾಡಲೂ ತೋಚಲಿಲ್ಲ. ಆಕೆ ಬೇಗ ಓಡಿ ಪಂಡಿತರನ್ನು ಕರೆದು ತಂದಳು. ಪಂಡಿತರು ಬಂದು, ಔಷಧಿ ಕೊಟ್ಟರು, ದುಡ್ಡು ತಗೆದುಕೊಂಡು ಹೋದರು. ಆದರೆ ಗೋಪಾಲರಾಯರ ಜ್ವರ ಇಳಿಯಲಿಲ್ಲ. ಸಂಜೆಗೆ ಜ್ವರ ಉಲ್ಬಣ ಸ್ಥಿತಿಗೆ ಮುಟ್ಟಿತು. ಜ್ವರ 104 ಡಿಗ್ರಿಗೇರಿತು. ಆದರೂ ಗೋಪಾಲರಾಯರು ಆಫೀಸಿಗೆ ಹೊರಟರು. ನಾಗೂ ಅಂಗಲಾಚಿದಳು, ಬೇಡಿದಳು. ಆದರೆ ಗೋಪಾಲರಾಯರು ಕೇಳಲಿಲ್ಲ. ಅವರು ಹೇಗ ದರೂ ಆಫೀಸು ಮುಟ್ಟಿದರು. ತಮಾಷೆಯಾಗಿ ಬಂದುದಕ್ಕೆ ಮೇಲಧಿಕಾರಿಗಳ ಬಯ್ಗಳೂ ಸಿಕ್ಕಿತು. ಸಂಜೆ ಮನೆಗೆ ಹೊರಟದ್ದ ರಾಯರ ಜೀವನದ ಕೊನೆ ಆಗುವುದಿಲ್ಲತ್ತು. ಆಫೀಸಿನ ಮೆಟ್ಟಲುಗಳನ್ನಿಳಿದ ಅವರು ಹತ್ತು ಹೆಜ್ಜೆ ಹೋಗುವುದರಲ್ಲಿಯೇ ತಲೆ ಸುತ್ತಿದಂತಾಗಿ ಬವಳಿ ಬಂದು ಬಿದ್ದರು. ನೋಡಿ ಹೌಹಾರಿದ ಸಹೋದ್ಯೋಗಿಗಳು ಅವರನ್ನು ಮನೆಗೆ ಸೇರಿಸಿದರು. ಹೀಗಾಗಿ ಬಹುದೆಂದು ತಿಳಿದಿದ್ದ ನಾಗೂನ ದುಃ

(ಹನ್ನೊಂದನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S No. 161/1968

ಶಾಸ್ತ್ರಿನ್ ಶೋಧ್ರ ಬ್ಯಾ —ವಾದಿಳು ಮತ್ತು

ನೋರಿ ಡಿ. ಲೀಮೂ ಬ್ಯಾ ಕೂಡಾ — ಪ್ರತಿವಾದಿರು.

ಇವರೊಳಗೆ

ಉಡುಪಿ ತಾಲೂಕು ಶೊಡವೂರು ಗ್ರಾಮದ ದುಜ್ಜಾಡಿಯೋ ಲಸ್ರಾದರ ಹೆಂಡ್ತಿ 1ನೇ ಪ್ರತಿವಾದಿಗೆ ಮತ್ತು ಮೂಡುತೋನ್ನೆ ಗ್ರಾಮದ ಅಲೀಕ್ಸ್ ಡೇಸಾ ಮಕ್ಕಳು:—4ನೇ ಪ್ರತಿವಾದಿಳು ಲೂಸಿ ಡೇಸಾ ಬ್ಯಾ, 5. ಎಡ್ವಿನ್ ಡೇಸಾ, 6. ಡೇವಿಡ್ ಡೇಸಾ ಕೂಡಾ ಇವರಿಗೆ—ವಾದಿಳು ಪ್ಲೆಂಟು ಮೂಲಗೇಣಿ ಚೀಟಿನ ಸ್ಥಿರಾಸ್ತಿ ಬಾಬ್ತು ಕಳ್ಳ ಶ್ರೀ ಪ್ರಾಧಿ ಸಂರದ ಗೇಣಿ ವಸೂಲಿ ಬಗ್ಗೆ ಹೂಡಿದ ಮೇಲಿನ ದಾವೆಯು ತಾ. 17-1-1969ಕ್ಕೆ ಮುಟ್ಟಿದೆ. ಸದ್ರಿ ದಾವೆಯಲ್ಲಿ ನಿಮ್ಮ ಉದಾಹರಣೆಯಿದ್ದರೆ ಅದಿವಸ ಹಗಲು ಗಂಟೆ 11ಕ್ಕೆ ನೀವು ಈ ಕೋರ್ಟಿನ ಮುಂದೆ ಹಾಜರಾಗಿ ಸ್ವಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ದ ನಿಮ್ಮ ಗೈರುಹಾಜರಿಯಲ್ಲಿ ಈ ದಾವೆಯು ತೀರ್ಮಾನಿಸಲ್ಪಡುವುದು.

B. Vasudeva Rao,
Counsel for Plaintiff.

Udipi, 30-12-68.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರನಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಕೀಟುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಫೋನ್ : 526

ಸಂಪುಟ ೪೮
ಸಂಚಿಕೆ ೧೮
VOL. 48
No. 18

1921 ಸ್ಥಾಪನೆ

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೯—೧—೧೯೬೯

ನೌಕರಶಾಹಿಯ ಕಡೆಗೆ

ಸರ್ದಾರ್ ವಲ್ಲಭಭಾಯಿ ಪಟೇಲರು ಸ್ವತಂತ್ರ ಭಾರತದ ಮೊತ್ತಮೊದಲ ಗೃಹ ಮಂತ್ರಿಯಾಗಿದ್ದಾಗ—ಅಂದಿನ ದಿವಸಗಳೇ ಸುವರ್ಣಯುಗವೆಂದು ಕರೆಯುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಲೇ ಇದೆ—ಅಧಿಕಾರಿಗಳನ್ನು ಕುರಿತು ಹೇಳಿದ ಒಂದು ಮಾತು "ಮಂತ್ರಿಮಂಡಳವು ಕೈಕೊಂಡ ನಿರ್ಧಾರಗಳನ್ನು ತಡವಿಲ್ಲದೆ ಕೃತಿಗಿಳಿಸಬೇಕು" ಎಂದು. ಸಚಿವ ಸಂಪುಟವು ನೀತಿ ರೂಪಿಸುವುದಕ್ಕಾಗಿ ಮಾತ್ರವಿರುವುದಲ್ಲವೆ, ಅದನ್ನು ಕಾರ್ಯಗತಗೊಳಿಸುವುದು ಕಾರ್ಯಾಂಗದ ಕೆಲಸ. ಸಚಿವ ಸಂಪುಟವು ಬದಲಾಗಬಹುದು; ಅದು ಅಸ್ಥಿರ ತಳಹದಿಯದ್ದು; ಆದರೆ, ಸರಕಾರದ ಕಾರ್ಯಾಂಗವು ಸ್ಥಿರ ತಳಹದಿಯದ್ದು. ಸರ್ದಾರ್ ಪಟೇಲರ ಪ್ರತಿಯೊಂದು ಸಂಗತಿಯನ್ನೂ ರಾಜಕೀಯ ದೃಷ್ಟಿಯಿಂದಲೇ ನೋಡಿ ನಿರ್ಣಯಕ್ಕೆ ಬರುತಿದ್ದರು. ಹಾಗಾಗಿ ನೌಕರರು ಈ ಉಕ್ಕಿನ ಮನುಷ್ಯನ ನೀತಿ-ನಿರೂಪಣೆಯಲ್ಲಿ ಯಾವ ಕುಂದನ್ನು ಲೋಪದೋಷಗಳನ್ನೂ ಕಾಣುತ್ತಿರಲಿಲ್ಲ; ರೂಪಿತ ನೀತಿಯನ್ನು ಚಾಚೂ ತಪ್ಪದೆ ಅನುಷ್ಠಾನಕ್ಕೆ ತರುತಿದ್ದರು. ಅಂತಲೇ ಸಚಿವ ಸಂಪುಟದ ನಿರ್ಣಯಗಳು ಕಾರ್ಯಗತವಾಗುತ್ತಿದ್ದವು. ಜನಪ್ರಿಯ ಸರಕಾರದ ಆಡಳಿತೆ ಪ್ರತ್ಯಕ್ಷವಾಗಿಯೇ ನಡೆಯುತಿತ್ತು. ಆದರೆ, ಮೊನ್ನೆ ಮೊನ್ನೆ ಮದ್ರಾಸದ ಮುಖ್ಯ ಮಂತ್ರಿ, ಶ್ರೀ ಅಣ್ಣಾದೊರೈಯವರು ಈ ಸಂಬಂಧದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವು ಪ್ರಜಾಪ್ರಭುತ್ವಕ್ಕೆ ಘಾತುಕವಾದುದೆಂದು ಹೇಳದೆ ನಿರ್ವಾಹವಿಲ್ಲ.

ಅಧಿಕಾರಿಗಳ ಸಂಘದ ವಾರ್ಷಿಕೋತ್ಸವದ ವೇದಿಕೆಯಲ್ಲಿ ಮಾತಾಡುತಿದ್ದ ಅಣ್ಣಾದೊರೈ ವೇದಿಕೆಯನ್ನೂ ಅದರ ಮುಂದೆ ಸೇರಿದ್ದ ಸಭಾಸದರನ್ನೂ ಗಮನಿಸಿಯೇ 'ರಾಜಕೀಯ ಪುಢಾರಿ'ಗಳ ಭಾಷಣ ಮಾಡುತಿದ್ದರೆ, ಆ ಸಂಗತಿ ಬೇರೆ. ಆದರೆ, ಈಗ ಅಣ್ಣಾ ತಮಿಳುನಾಡಿನ ಮುಖ್ಯಮಂತ್ರಿಯೆಂಬುದನ್ನು ಮರೆಯಲಾಗದು. ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳ ಕರ್ತವ್ಯ ಮತ್ತು ಹೊಣೆಗಾರಿಕೆಯನ್ನು ವಿವರಿಸುತ್ತ ಅಣ್ಣಾರೆಂದರು—"ಜನಪ್ರಿಯ ಮಂತ್ರಿಗಳಿಂದ ಪ್ರಮಾದವಶಾತ್ ಆಗಬಹುದಾದ ತಪ್ಪುಗಳನ್ನು ಸರಿಮಾಡುವುದು, ಮತ್ತು ಮಂತ್ರಿಗಳನ್ನು ಎಚ್ಚರಿಸುವುದು ಹಾಗೂ ಅವರನ್ನು ಉತ್ತೇಜಿಸುವುದು ಅಧಿಕಾರಿಗಳ ಪ್ರಾಥಮಿಕ ಹೊಣೆಗಾರಿಕೆ ಮತ್ತು ಮುಖ್ಯ ಕೆಲಸ.' ಸರ್ದಾರ ಪಟೇಲರ ಮಾತಿಗೂ ಅಣ್ಣಾದೊರೈಯವರ ಅಭಿಪ್ರಾಯಕ್ಕೂ ತಾಳಮೇಳವಿಲ್ಲವೆ ಮಾತ್ರವಲ್ಲ, ತಲೆಕೆಳಗು. ಸರ್ದಾರರು ಜನಪ್ರಿಯ ಮಂತ್ರಿಗಳು ಕೈಕೊಳ್ಳುವ ನಿರ್ಧಾರಗಳನ್ನು ಅನುಷ್ಠಾನಕ್ಕೆ ತರುವುದು ಅಧಿಕಾರಿ ವರ್ಗದ ಕರ್ತವ್ಯವೆಂದು ಸಾರಿದರೆ, ಅಣ್ಣಾರ ಅಭಿಪ್ರಾಯದಲ್ಲಿ ಸಚಿವರಿಗೆ ದಾರಿತೋರಿಸಿ ಅವರನ್ನು ಮುಂದೆ ಕರೆದುಕೊಂಡು ಹೋಗುವುದೇ ಕರ್ತವ್ಯವೆಂದು ಹೇಳಿದರು. ಸರದಾರರು ಅಂದಿನ ಸ್ಥಿತಿಯಲ್ಲಿ ಅಳೆದರೆ, ಅಣ್ಣಾ ಇಂದಿನ ಮನಃಸ್ಥಿತಿಯನ್ನು ಅನುಲಕ್ಷಿಸಿ ಈ ರೀತಿ ಅಂದಿದ್ದಾರೆನ್ನೋಣವೆ? ಸರಕಾರಿ ನೌಕರಿಗೆ ಸೇರಲು ಎಸ್‌ಎಸ್‌ಎಲ್‌ಸಿಯನ್ನು ಕನಿಷ್ಠ ಶೈಕ್ಷಣಿಕ ಅರ್ಹತೆಯಾಗಿದ್ದರೂ "ಜನಪ್ರಿಯ ಮಂತ್ರಿ"ಯೆನಿಸಲು ಬರಿಯ ಪ್ರಾಯದ ಯೋಗ್ಯತೆಯಿದ್ದರೆ ಸರಿ—ಸರ್ದಾರರ ಅಭಿಪ್ರಾಯದಲ್ಲಿ ಮಂತ್ರಿಗಳಿಗೆ ನೌಕರರ ಸಲಹೆ ಬೇಡ, ವಸ್ತುಸ್ಥಿತಿಯ ಪರಿಜ್ಞಾನದಲ್ಲಿ ದೂರಾಲೋಚನೆಯಲ್ಲಿ "ಜನಪ್ರಿಯ ಮಂತ್ರಿ"ಗಳೇ ಅಧಿಕಾರಿಗಳಿಗಿಂತ ಬುದ್ಧಿವಂತರು ಎಂದರೆ, ಅವರು ಜನತೆಯಿಂದಲೇ ಆಯ್ಕೆಗೊಂಡವರು, ಜನತೆಯ ಆಶೋತ್ತರಗಳನ್ನು ಮನವರಿಕೆ ಮಾಡಿಕೊಂಡವರು. ಅವರ ಒಳಿತಿಗಾಗಿಯೇ ತತ್ವಗಳನ್ನು ನಿರ್ದೇಶಿಸಿ, ನೀತಿ ರೂಪಿಸುವವರು. ಅವರ ನೀತಿ ಜನತೆಯ ನೀತಿ—ಆದುದರಿಂದ ಅಧಿಕಾರಿ ವರ್ಗ ಅದನ್ನು ಕೃತಿಗಿಳಿಸಲೇ ಬೇಕು. ಸಚಿವರ ನೀತಿಯು ದೋಷಪೂರ್ಣವಾಗುವುದಿಲ್ಲ. ಕಾನೂನಿಗೆ ವಿರೋಧವಾಗುವುದಿಲ್ಲ — ಏಕೆಂದರೆ, ನೀತಿ ನಿರೂಪಿಸುವಾಗ ಅವು ಎಲ್ಲವನ್ನೂ ಕೂಲಂಕಷವಾಗಿ ಅಧ್ಯಯನ ಮಾಡುತ್ತಾನೆ. ಆದರೆ, ಅಣ್ಣಾರ ಅಭಿಪ್ರಾಯದಲ್ಲಿ "ಜನಪ್ರಿಯ ಮಂತ್ರಿ" ಎಂದರೆ, ಉತ್ಸವದ ಮೂರ್ತಿ. ಆತನನ್ನು ಹೊತ್ತುಕೊಂಡು ಬರುವುದು, ಅನುಸರಾದಿ ಮಾಡುವುದು ಎಲ್ಲವೂ ಅಧಿಕಾರಿಗಳ ಕರ್ತವ್ಯ. ಇಂದಿನ "ಜನಪ್ರಿಯ ಮಂತ್ರಿ"ಗಳ ಪರಿಸ್ಥಿತಿ ಹೀಗೆಯೇ ಇದೆಯೆ? ಪೂರ್ಣ ಇಲ್ಲವೆನ್ನಲಾಗದು. ಹಲವಾರು ಸರಕಾರಿ ಕಾಯಿದೆಗಳು ನೀತಿಗಳು ನ್ಯಾಯಾಲಯದಲ್ಲಿ ಅಕ್ರಮವೆಂದು ಘೋಷಿತವಾದುದನ್ನು ನಾವು ಮರೆಯುವಂತಿಲ್ಲ. ಅಂದರೆ, ಶಾಶ್ವತ ರೂಪದಲ್ಲಿರುವ ಅಧಿಕಾರಿ ವರ್ಗವು ಈ "ಜನಪ್ರಿಯ ಮಂತ್ರಿ"ಗಳಿಗೆ ಸೂಕ್ತ ಮಾರ್ಗದರ್ಶನ ಮಾಡುವುದರಿಂದ ಇಂತಹ ಅಕ್ರಮಗಳು ನಡೆಯಲಾರವೆಂಬುದನ್ನು ಒಪ್ಪಬೇಕು.

ಆದರೆ ಆಗ ನಮ್ಮ ಆಡಳಿತ ಪದ್ಧತಿಯು ಮಾತ್ರ ಬದಲಾಯಿತೆನ್ನದೆ ವಿಧಿಯಿಲ್ಲ. ನಾವು ಪ್ರಜಾ ಪ್ರಭುತ್ವವನ್ನು ತ್ಯಜಿಸಿ "ನೌಕರ ಶಾಹಿ" ಯನ್ನು ಅಪ್ಪಿಕೊಂಡಂತಾಯಿತು. ಸರಕಾರಿ ನೌಕರರ ಮಾರ್ಗದರ್ಶನದಲ್ಲಿ ಸರಕಾರದ ನೀತಿ ನಿರೂಪಿತವಾಗುವುದಾದರೆ, ಮಂತ್ರಿಗಳು ಅವರ ಕೈಗೊಂಬೆ ಮಾತ್ರ. ಅದರೆ ಪ್ರಾಣಿಯು ಬಾಲವಾಡಿಸಬೇಕೇ ಹೊರತು ಬಾಲವು ಪ್ರಾಣಿಯನ್ನಾಡಿಸುವುದಲ್ಲ. ಬಾಲದ ಗುಣವೊಂದೇ; ಪ್ರಾಣಿಯ ಗುಣ ಬದಲಾಗಬಹುದು. ಜನಪ್ರಿಯ ಸರಕಾರದ ಮಂತ್ರಿಗಳ ನೀತಿಯನ್ನು ಅನುಷ್ಠಾನಕ್ಕೆ ತರುವುದೇ ನೌಕರರ ಹೊಣೆಗಾರಿಕೆ. ಆದರೆ, ಮಂತ್ರಿಗಳು ನೀತಿ ನಿರೂಪಣೆ ಮಾಡುವಾಗ ಜಾಗರೂಕರಾಗಿರುವುದೂ ತಪ್ಪಾಗದಂತೆ ಎಚ್ಚರರಾಗಿರುವುದೂ ಅಗತ್ಯ. ಅಣ್ಣಾದೊರೈ ಹೋರಾಟದಲ್ಲಿಯೇ ಜೀವನ ತೇದು ಈಗ್ಗೆ ಮುಖ್ಯ ಮಂತ್ರಿಯಾದವರು. ನೌಕರರ ಶಕ್ತಿಯ ಅರಿವು ಅವರಿಗೀಗ ಆಗಿರಬಹುದು; ಸಚಿವ ಸಂಪುಟದ ಜನಪ್ರಿಯ ಮಂತ್ರಿಗಳ ಧೋರಣೆಯನ್ನೂ ಅವರು ಅರ್ಥಮಾಡಿಕೊಂಡಿರಬಹುದು. ಹಾಗಾಗಿ ಈ ರೀತಿಯ ಉದ್ಗಾರ ಅವರ ಬಾಯಿಯಿಂದ ಬಂತು. ಅಣ್ಣಾದೊರೈ ಸ್ಪಷ್ಟವಾಗೇ ನುಡಿದರು. ಆದರೆ, ದೇಶದ ವಿದ್ಯಮಾನಗಳನ್ನು ನೋಡುವಾಗ ಧೃತರಾಷ್ಟ್ರನು ದುರ್ಯೋಧನನ ಬಗ್ಗೆ ಮಾಡಿದ ಉದ್ಗಾರವೊಂದು ನೆನಪಾಗುತ್ತಿದೆ. "ಎಮಗಂಧ ಯಷ್ಟಿಯಾಗಿದೇ ಮಗನೆ' ಎಂದ. ಕುರುರಾಜ ಧೃತರಾಷ್ಟ್ರ, ಗಾಂಧಾರಿಯರಿಗೆ ದುರ್ಯೋಧನ ಊರುಗೋಲಾಗಿದ್ದನಂತೆ. ಹಾಗೆಯೇ ಶಾಸನಾಂಗದ ಪ್ರಜ್ಞೆಯಿಲ್ಲದ ದೂರಾಲೋಚನೆಯಿಲ್ಲದ ಜನಹಿತದ ಸ್ಪಷ್ಟ ಹಿತ ಚಿಂತನಾ ದೃಷ್ಟಿಯಿಲ್ಲದ, ಅಧಿಕಾರದ ಉಳಿವಿಗಾಗಿಯೇ ಪ್ರಯತ್ನಶೀಲರಾಗಿರುವ "ಜನಪ್ರಿಯ ಮಂತ್ರಿ"ಗಳಿಗೆ ನೌಕರಶಾಹಿಯೇ ಊರುಗೋಲು. ಪ್ರಜಾ ಪ್ರಭುತ್ವವಾದಿಗಳು ಈ ಅಂಶವನ್ನು ಗಮನಿಸಿ ಎಚ್ಚರಾಗದೆ ಹೋದರೆ, ಸಂಘಗಳ ಮೂಲಕ ಬೆದರಿಸುವ ಸರಕಾರೀ ನೌಕರರೇ ಒಂದು ದಿನ ಜನತೆಯ ಪ್ರಭುಗಳೂ ಆಗಬಹುದು.

ನಿರೀಕ್ಷಿಸಿರಿ! ನಿರೀಕ್ಷಿಸಿರಿ!

ಕರ್ನಾಟಕದ ಪ್ರಸಿದ್ಧ ಬರಹಗಾರರ ವಿಚಾರಪೂರಿತ ಲೇಖನ, ಕವನಾದಿಗಳನ್ನೊಳಗೊಂಡು ವೈಶಿಷ್ಟ್ಯಪೂರ್ಣವಾಗಿ ಹೊರಡುವ

ಪ್ರಜಾರಾಜ್ಯ
ವಿಶೇಷ ಸಂಚಿಕೆ

ಯನ್ನು ನಿರೀಕ್ಷಿಸಿರಿ!

ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ತ್ವರೆಯಾಗಿ ಕಳಿಸಿ ಸಹಕರಿಸುವಂತೆ ಕೋರಲಾಗಿದೆ.

ಏಜಂಟರು ತಮಗೆ ಬೇಕಾದ ಪ್ರತಿಗಳಿಗೆ ಮುಂದಾಗಿ ಬರೆಕೊಳ್ಳುವುದು.

ಟಪ್ಪಾಲು ವೆಚ್ಚ ಸಹಿತ ಒಂದು ರೂಪಾಯಿ ಕಳಿಸಿದರೆ ಒಂದು ಪ್ರತಿ ಕಳಿಸಲಾಗುವುದು.

ಮೆನೇಜರ್,
ನವಯುಗ, ಉಡುಪಿ

ಡೊಂಕರ ಡೊಂಕು ಮಾರ್ಗ

ತನ್ನ ತಪ್ಪನ್ನು ಮುಚ್ಚಿಡಲು ಬೇರೆಯವರ ಮೇಲೆ ತಪ್ಪು ಆರೋಪಿಸುವುದು ಬಾಲ್ಯಚಪಲ. ಇಂದು ಇದೇ ಬಗೆಯ ಚಪಲ ನಮ್ಮ ರಾಜಕೀಯ ಕ್ಷೇತ್ರದ ಮನೆಮಾತಾಗಿದೆ. ಹಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸನ್ನು ಸೋಲಿಸಿ, ಅಧಿಕಾರ ಗದ್ದುಗೇರುವ ತವಕದಿಂದ ಏನೇನೋ ವೇಷತೊಟ್ಟ ಕಾಂಗ್ರೆಸ್ಸೇತರ ಪಕ್ಷಗಳು ಕೆಲವೆಡೆ ಒಡ್ಡೋಲಗ ಕೊಟ್ಟವು—ಸಂಯುಕ್ತ ವಿಧಾಯಕ ದಳವೆಂದು ಒಂದಾದುವು. ಆದರೆ, ಅವುಗಳ ದೃಷ್ಟಿ ವಕ್ರವಾಗಿದ್ದುದರಿಂದ, ಅಂತಃಕಲಹದಿಂದಲೇ ಅಧಿಕಾರ ವಂಚಿತವಾದುವು. ಸಂಯುಕ್ತ ದಳಗಳು ಮಧ್ಯಾವಧಿ ಚುನಾವಣೆಗಳನ್ನು ಎದುರಿಸುತ್ತಿವೆ. ಆದರೆ, ನೇರವಾಗಿ ಜನತೆಯ ಮತವನ್ನು ಸಂಪಾದಿಸಲು ಅಸಮರ್ಥವಾದುದ

(ಹತ್ತನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
S. C. 110/68

ಮುಹಬಲ ಸುಕ್ರನ್ – ವಾದಿ
ಮತ್ತು
ಚೆರಿಯಬ್ಯಾರ್ತಿ – ಪ್ರತಿವಾದಿ

ಚೇರಿಯಬ್ಯಾರ್ತಿ ಕೋಮ ಮುಸ್ಲಿ ಬ್ಯಾರಿಗಳ ವಿಧವೆ, ಉಡುಪಿ ತಾಲೂಕು ನಡ್ಸಾಲು ಗ್ರಾಮದ ಭಂಡಸಾಲೆ ಕೋಟೆ ಎಂಬಲ್ಲಿ ವಾಸ ಇರುವ ಪ್ರತಿವಾದಿಯಾದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ.—

ನೀವು ವಾದಿಯೊಳಗೆ ಬಾಡಿಗೆಗೆ ಅನುಭವಿಸಿ ಬರುವ ಮನೆಯ ಸ್ವಾಧೀನತೆಗೂ, ಬಾಡಿಗೆ ಬಾಕಿಗೂ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ತಾರೀಖು 8-1-1969ಕ್ಕೆ ನಿಮ್ಮ ಹಾಜರಿಗೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ಸದ್ರಿ ದಿವಸ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ದಾವಾ ತೀರ್ಮಾನವಾಗುವುದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿದೆ.

Sd/- V. V. UPADHYAYA,
ವಾದಿ ಪರ ಎಡ್ವೊಕೇಟ್,
ಕಾರ್ಕಳ
ತಾ: 3-1-69

ಗೇಹರಾಜ್ಯದಲ್ಲಿ

ಒಲಿಗುಂಡನೊಬ್ಬನೇ ಮೆಲಬಹುದೆ?

"ಅಲ್ಪ ಬೆಟ್ಟವನೊಬ್ಬ ಹಾರಬಹುದೆಂದಿಹರೆ ಹಾರಬಹುದೆಂದು ಎನಬೇಕು ಮೂರ್ಖನೊಡ..."

"ಏ, ಏನೇ ಇದು ಹೊಸರಾಗ?"

"ಏನಿಲ್ಲಾರೀ ಹೀಗೆ ಬೇರೂಗೆ ಕೈ ಹಾಕಿದಾಗ ಸಿಕ್ತು. ಬಿಡ್ಸಿ ನೋಡ್ದಾಗ ಹಾಳೆ ತೆರೆಯಿತು — ಹೀಗೇ ಓದೋಕೆ ಶುರು ಮಾಡಿದೆ...."

'ಹ್ಞಾಂ...ಅದು ಸರೀನ್ಸ....ಅಂದ್ರೆ ಇದೆಲ್ಲ ಸರ್ವಜ್ಞನೆಂಬೋ ಬಿರುದುಳ್ಳವನ ಮಾತುಗಳು ಇಂದಿನ ಕಾಲಕ್ಕೆ ಹೊಂದಿಕೊಳ್ಳೋದಿಲ್ಲಾನ್ಸ...ಅದ್ದರಿಂದ ಅದೆಲ್ಲಾ ಕಳಪೆ...."

"ಒಳ್ಳೇ ಮಾತಂತೀರಿ. ಹದುದು ಭಾರತ, ಜೈವಿ ನಿಭಾರತಗಳಂತೆಯೇ ದಾಸರ ಕೀರ್ತನೆಗಳು, ಶಿವಶರಣರ ವಚನಗಳು ಮತ್ತೆ ಸರ್ವಜ್ಞನ ವಚನಗಳು ಮನೆಮನೆಯಲ್ಲೂ ಹಾಡುತ್ತಿರಬೇಕಾದ್ರೆ ಏನೂ ಇಲ್ಲ ಅಂತೀರಾ?"

"ಹ್ಞಾಂ...ಇದೂ ಒಂದು ಕತ್ತಾನ್ಸ. ಆಗಲಿ, ಮುಂದೆ...."

"ಮೂರು ಗಾವುದವನ್ನು ಹಾರಬಹುದೆಂದಿಹರೆ ಹಾರಬಹುದೆಂದು ಎನಬೇಕು'

"ಹಾಂ...."

"ಒಲಿಗುಂಡನೊಬ್ಬನೇ ಮೆಲಬಹುದು ಎಂದಿಹರೆ, ಮೆಲಬಹುದು ಎಂಬವನೆ ಜಾಣ...."

"ಸರೀನ್ಸ..."

'ನೆಲವನ್ನು ಮುಗಿಲನ್ನು ಹೊಲಿವ ಕುಂಟೆಂದರವ ಹೊಲಿವರು ಹೊಲಿವರೆನಬೇಕ ....'

"ಇದೀಗ ಸರಿ...."

'ಯಾವುದು?'

'ಹೊಲಿವರು ಹೊಲಿವರೆನಬೇಕು".

'ಅಂದ್ರೆ ಉಳಿದದ್ದು ತಪ್ಪೆನ್ನುತ್ತೀರಾ?'

"ಹ್ಞಾ, ಮುಂದ ನೋಡೋಣ.'

"ಬೆಟ್ಟವನು ಕೊಂಡೊಬ್ಬನಿಟ್ಟಹನು ಎಂದಿಹರ ಇಟ್ಟನೆಂದು ಎನಬೇಕು."

"ಆ ಮೇಲೆ?"

"ಹೊಳೆಯ ನೀರೊಬ್ಬನೆ ಅಳೆಯಬಹುದೆಂದರವ ಅಳೆಯಬಹುದೆಂದು ಎನಬೇಕು...."

"ಹ್ಞಾಂ......ಮಾಗೀತರಾಂತ ತೋರುತ್ತೆ...."

"ಹ್ಞಾ. ಸರಿ. ನಿಮ್ಮ ಬಾಣ ಬತ್ತಳಿಕೆಯಿಂದ ಹೊರಬರಲಿ."

"ನನ್ನದೇನು ಮಹಾ? ಆ ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?"

"ಅಂದ್ರೆ?"

"ಅಲ್ಲ ಯಾವುದೋ ಒಂದು ಕಾಲದಲ್ಲಿ ಇದ್ದ ಅಭಿಪ್ರಾಯವನ್ನು ಹಾಗೆಯೇ ಇಟ್ಟುಕೊಳ್ಳುವುದು ಸಾಧ್ಯವಾಗುತ್ತೆಯೇ?'

"ಅಂದ್ರೆ?'

'ನೋಡನ್ನೂ, ಲಕ್ಷ್ಮಣನಿದ್ದಲ್ಲಿಗೆ ಶೂರ್ಪಣಖಿ ಬಂದಳು; ತನ್ನನ್ನ ವಿವಾಹವಾಗಬೇಕು ಅಂದಳು, ಆತ ಏನು ಮಾಡಿದ?"

"ಮತ್ತೇನು, ಪಾಪ, ಮೂಗು ಕಿವಿಗಳನ್ನೇ ಕೊಯ್ದು ಹಾಕಿದ...."

'ನೋಡಿ.... ಇವತ್ತು ಆ ಕಥೆ ಬರೆಯುವರು ಹೇಳಬಹುದ - ಲಕ್ಷ್ಮಣ ತಾನು ವಿವಾಹಿತನಾದ್ದರಿಂದ ದ್ವಿಪತ್ನಿಯರನ್ನು ಇಟ್ಟುಕೊಳ್ಳುವುದು ಕಾನೂನು ಬಾಹಿರ.'

"ಅಯ್ಯೋ, ರಾಮಾಯಣದ ಕಾಲದಲ್ಲಿ ಏಕಪತ್ನಿವ್ರತಸ್ಥನಾಗಬೇಕೆಂಬ ಕಾನೂನಿತ್ತೇನು? ದಶರಥನೇ ಮೂರು ಹೆಂಡಂದಿರನ್ನು ಆಳುತ್ತಿರಲಿಲ್ಲವೆ?"

"ಅದಕ್ಕೆ ನೋಡು, ಆ ಕಾಲದ ಘಟನೆಗಳನ್ನ, ಈ ಕಾಲದ ಪರಿಸ್ಥಿತಿಯಿಂದ ನೋಡ ಬಾರದಲ್ಲ ಆದರೂ ದೇಶ-ಕಾಲ-ವಾತಾವರಣಗಳಿಗೆ ಚ್ಯುತಿ ಬರದಂತೆ ಲಕ್ಷ್ಮಣ ನನ್ನ ವಾದವನ್ನು ಬೇರೆಯೇ ರೀತಿಯಲ್ಲಿ ಒಯ್ಯಬಹುದು...."

"ಅದು ಹೇಗೆ?"

'ತಾನು ವಿವಾಹಿತನೆನ್ನುತ್ತಾನೆ...."

"ಪುರುಷರು ಬಹು ವಿವಾಹ ಮಾಡಿಕೊಳ್ಳಲು ಶಾಸ್ತ್ರಾಧಾರವಿದೆ. ಆದರೆ, ಸ್ತ್ರೀಯರಿಗೆ ಮಾತ್ರ ಅಂತಹ ಅಧಿಕಾರವಿಲ್ಲ. ನಾನು ನಿನ್ನನ್ನು ಮೋಹಿಸಿಕವಾಗಿ ನೋಡಿದ್ದೇನೆ...ಅದ್ದರಿಂದ...."

"ತಿಳಿಯಿತು ಬಿಡು, ಆದರೆ, ಸ್ತ್ರೀಯರ ಪತಿವ್ರತಾಧರ್ಮವನ್ನು ಪುರಸ್ಕಾರ ಮಾಡುತ್ತಾರೆಂದ ಗೌರವಿಸುತ್ತಾರೆ, ಪ್ರಶಂಸಿಸುತ್ತಾರೆ. ಅದೇ ರೀತಿ ಪುರುಷರೂ ಏಕಪತ್ನೀವ್ರತಸ್ಥರೇ ಆಗಿರಬೇಕೆಂದು ನನ್ನ ಖಚಿತ ಅಭಿಪ್ರಾಯ...."

"ಓ, ಶೂರ್ಪಣಖಿ ನೋಕ ಬಿದ್ದಳು.."

"ಹಾಗೆ....ನಿನ್ನ ಎದೆಯ ದನಿಯೇ ನಿನಗೆ ಮನ.ಧರ್ಮ ಶಾಸ್ತ್ರ. ಅಂತಃಕರಣದ ಧ್ವನಿಯನ್ನು ಅದುಮಿಡುವುದು ಮೂರ್ಖತನ."

"ಸರಿ. ಅದಕ್ಕೂ ಇದಕ್ಕೂ ಸಂಬಂಧ?"

"ನೋಡು, ಸರ್ವಜ್ಞನಿಗೆ ಬೆಟ್ಟವನ್ನು ಕೊಂಡೊಬ್ಬನಿಟ್ಟನೆಂಬ ಮಾತಿನಲ್ಲಿ ವಿಶ್ವಾಸವಿಲ್ಲ. ಆತ ಹನುಮಂತನು ಸಂಜೀವಿನಿ ತಂದಿದ ಬೆಟ್ಟವನ್ನು ಕಂಡೆಗೊಳ್ಳಬಂಬ ಮಾತನ್ನು ಒಪ್ಪುವುದಿಲ್ಲ. ಅಂದ್ರೆ ರಾಮಾಯಣದ ಕಥೆಗಳ ಅವನಿಗೆ ವಿಶ್ವಾಸವಿಲ್ಲ ..."

"ಛೆ...ಅದೇಗಾದೀತ? ನೋಡಿ ಅವನೇ ಹೇಳಿದ್ದಾನೆ—ಅಂದು ರಾವಣನ ಬಂಧು ಸಂದುದಿಷ್ಕರಿಸಿದ ಮುಂದೆ ಬಂದಿಹನು ವೀರ ಬಸವಂತನಾ ಕಂದದಿಳೆಗೆಂದ...'

"ಸರಿ. ಏನಾಯ್ತು?'

"ರಾಮನಲ್ಲಿ ನಂಬಿಕೆಯಿಲ್ಲ ಅನ್ನೋಕೆ ಬೇರೆ ಆಧಾರ ಬೇಕೆ?"

"ಬೇಡ."

'ಆ ರಾಮನೆ ಬಳಿಕ ವೀರ ಬಸವಂತನು ಬಂದಿದ್ದಾನೆ ಲೋಕ ಕಲ್ಯಾಣಕ್ಕೆ ಅಂದರೆ, ರಾಮನೇ ಮುಂದೆ ವೀರ ಬಸವಂತನಾಗಿ ಅವತರಿಸಿದನೆಂದು ನಂಬುತ್ತಾನೆ...."

"ಸರಿ...."

"ರಾಮನಲ್ಲಿ ವಿಶ್ವಾಸವಿದ್ದ ಮೇಲೆ, ರಾಮಾಯಣದಲ್ಲಿ ಇಲ್ಲ ಅಂದರೆ ಹೇಗಾದೀತು?"

'ಹ್ಞಾಂ, ಹನುಮಂತನೊಬ್ಬ ಬೆಟ್ಟ ತಂದಾಂತ, ನಾನೂ ಬೆಟ್ಟ ತಂದೇಂತ ಹೇಳಿದರೂ ಅಂದರೇಂತ ಅದಕ್ಕೆ ಸಂಕೇತ ತೋರಿಸಬೇಕು..."

'ಅಯ್ಯಪ್ಪ....ಅದಕ್ಕೇನಂತೆ?"

"ಮತ್ತೆ ನೋಡು, ಆತ ಬೆಟ್ಟವಲ್ಲ, ಆರು ಲೋಕಗಳನ್ನೂ ದಾಟಿ ಮನುಷ್ಯ ಹಾರತೊಡಗಿದ್ದಾನೆ...."

"ಹ್ಞಾಂ... ಪೂರೈಲ ಇದಕ್ಕೆ ಸಾಕ್ಷಿ .."

"ಮೂರು ಗಾವುದವನ್ನಲ್ಲ, ಮೂರು ಲೋಕಗಳಲ್ಲೂ ಮನುಷ್ಯ ಹಾರಲು ತಯಾರಾಗಿದ್ದಾನೆ...."

"ಆಯ್ತು—ಒಲೆಗುಂಡನ್ನು ಮೆದ್ದವರಿದ್ದಾರೆಯೆ?"

"ಭೀಮ...."

"ಛೆ....ಛೆ....ಅವನು ವಿಷದ ಲಡ್ಡು ತಿಂದು ಕರಗಿಸಿದ್ದಾನೆ. ನಡೆಯುವಾಗ ಕಲ್ಲು ಗುಂಡುಗಳೂ ಪುಡಿಯಾಗುತ್ತಿದ್ದವು. ಆದ್ರೆ ಯಾವ ಭಾರತದಲ್ಲೂ ಆತ ಒಲೆಗುಂಡನ್ನು ತಿಂದ ಬಗ್ಗೆ ಉಲ್ಲೇಖವಿಲ್ಲ. ...."

'ಹ್ಞಾಂ...ಅದೊಂದು ಸರಿ..."

'ಮತ್ತೆ, ಹೊಳೆಯ ನೀರೊಬ್ಬನೆ ಅಳೆಯಬಹುದೇನ?'

'ಯಾಕಾಗದು? ನಿನಾ ಮೇಕ್ರಲ್ಲಿ ಬರುತ್ತಲ್ಲಾ, ಕೃಷ್ಣರಾಜ ಸಾಗರದ ಜಲಮಟ್ಟ— ಇಷ್ಟು ನೀರು ಬಂತು ... ಇಷ್ಟು ಹೊರಗೆ ಹೋಯ್ತು...'

'ಅದು ಸರಿ. ಆದ್ರೆ ನೋಡಿ ಅದೆಲ್ಲ ಯಂತ್ರಗಳ ಸಹಾಯದಿಂದ ಯಂತ್ರ ತಯಾರಿಯನ್ನು ಒಬ್ಬನೇ ಎಲ್ಲಿ ಮಾಡಿದ್ದಾನೆ? ಪರಸ್ಪರ ಸಹಕಾರ, ಸಾಮೂಹಿಕಂಬ ಫೆ ಹೆಚ್ಚುತ್ತಿರುವ ಈ ದಿವಸಗಳಲ್ಲಿ ಒಬ್ಬನಿಂದ ಯಾವ ಕಾರ್ಯವೂ ಆಗದು."

(ಒಂಭತ್ತನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 230/64, Ex. C. No. 78/1968.

ಚಿನ್ನು ಹೆಂಗ್ಸು — ಅರ್ಜಿದಾರಳು.

ಮತ್ತು

ಗೋವಿಂದ ಕಿದಿಯೂರು, ಕಿದ್ದಾಯ ಪಿಪ್ಪನಾಥಯ್ಯನ ಮಗ, ಉಡುಪಿ ತಾಲೂಕು ತೆಂಕ ಗ್ರಾಮದ ಯಮೂರ್ಗ— ಯದ್ರಿ.

ಇವರೊಳಗೆ

ಸದ್ರಿ ಯದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ :—

ಮೇಲ್ಕಂಡ ಅಮಲ್ದಾರಿಯಲ್ಲಿ ಯದ್ರಿಯ ಹಕ್ಕಿನ ಸ್ಥಿರಾಸ್ತಿ ಜಪ್ತು ಸ್ಥಿತಿ. ಅರ್ಜಿಯ ಬಗ್ಗೆ ತಾ. 17-1-70ಕ್ಕೆ ಇಡಲಾಗಿಯದೆ. ಆ ಬಗ್ಗೆ ಯದ್ರಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ದರೆ ಸದ್ರಿ ದಿವಸ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಹಾಜರುಮಾಡಿಕೊಳ್ಳತಕ್ಕದ್ದೆಂತ ಯದ್ರಿಗೆ ಈ ಮೂಲಕ ತಿಳಿಸಲಾಗಿಯದೆ.

N. V. Kamath,
Advocate for Petitioner,

ಉಡುಪಿ, 31-12-69.

ಗುಡ್ಡಮ್ಮಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಜೀರ್ಣೋದ್ಧಾರ

ಸೇನಾಪುರ ಗುಡ್ಡಮ್ಮಾಡಿ ಎಂಬುದು ಸೃಷ್ಟಿ ಸೌಂದರ್ಯದಿಂದೊಪ್ಪುವ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿದೆ. ಊರ ಮಧ್ಯದಿಂದ ಸೌಪರ್ಣಿ ನದಿಯು ಮಂದ ಮಂದವಾಗಿ ತುಂಬಿ ಹರಿಯುತ್ತಿದೆ. ಇಂತಹ ಚಿತ್ತಾಕರ್ಷಕ ಸನ್ನಿವೇಶದಲ್ಲಿ ವೈಮಾನಗಳು ದಿವ್ಯಶಾಂತಿಯು ಅನಿರ್ವಚನೀಯ ಆನಂದವನ್ನು ಹೊಂದುದರಿಂದಲೇ ಭಕ್ತ ಕಾಮಧೇನುವೆನಿಸಿದ ಶ್ರೀ ಸುಬ್ರಹ್ಮಣ್ಯ ದೇವರಸಾನಿಧ್ಯ ಇಲ್ಲಿದೆ. ನಾಡಿನ ಎಲ್ಲೆಡೆಯ ಭಕ್ತರು ಇಲ್ಲಿ ಬಂದು ದಿವ್ಯ ಶಾಂತಿಯನ್ನನುಭವಿಸಿ, ಶ್ರೀ ಸುಬ್ರಹ್ಮಣ್ಯನ ಕರುಣೆಗೆ ಪಾತ್ರರಾಗಿ ಅನುಗ್ರಹಿತರಾಗುತ್ತಿರುವರು.

ಶ್ರೀ ದೇವರ ಸನ್ನಿಧಿಯಲ್ಲಿ ಪ್ರತಿ ಸಂಕ್ರಮಣ ಪುಷ್ಯ ಶುದ್ಧ ಷಷ್ಠಿಯ ದಿನ ಮಹಾ ಸೇವೆ ನಡೆಯುತ್ತಿದೆ. ಮಾಘದ ನಾಗಮಂಡಲ, ಹಾಲಾಭಿಷೇಕ, ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಮೊದಲಾದ ಸೇವೆಗಳು ಕ್ರಮವಾಗಿ ಊರ ಪರವೂರ ಭಕ್ತ ಸಮೂಹದ ಸಹಕಾರದಿಂದಲೇ ನಡೆಸಲಾಗುತ್ತಿದೆ. ಮಹಾಸೇವೆಯಂದು ಊರಿನಿಂದ ಆಗಮಿಸಿದ ಭಕ್ತವೃಂದದವರಿಗೆ ಸಮಾರಾಧನೆ ನೆರವೇರುವುದು.

ಶ್ರೀ ದೇವರ ಕರುಣಾ ಪ್ರಸಾದಕ್ಕೆ ಪಾತ್ರರಾಗಲು ವರ್ಷಂಪ್ರತಿ ಅಧಿಕಾಧಿಕ ಸಂಖ್ಯೆಯಲ್ಲಿ ಸೇರುತ್ತಿರುವ ಭಕ್ತವೃಂದದವರಿಗೆ ದೇವರ ಸನ್ನಿಧಿಯಲ್ಲಿ ತಂಗಿ, ದೇವತಾ ಉತ್ಸವಗಳಲ್ಲಿ ಭಾಗವಹಿಸಲು ಅನುಕೂಲವಾದ ಸ್ಥಳಾವಕಾಶವಿಲ್ಲದ ಕೊರತೆಯುಂಟಾಗಿದೆ. ಶ್ರೀ ದೇವರ ಗರ್ಭಗೃಹ ಜೀರ್ಣವಾಗಿದೆ. ಹೊರಪೌಳಿ, ಹೆಬ್ಬಾಗಿಲು, ಅಗತ್ಯ ಕಟ್ಟುವ ಸಂದರ್ಭ ಒದಗಿದೆ.

ದೇವಸ್ಥಾನಕ್ಕೆ ಶಾಶ್ವತವಾದ ಉಂಬಳಿ ಉತ್ಪತ್ತಿಗಳು ಇಲ್ಲದಿರುವುದರಿಂದ ದೇವಸ್ಥಾನದ ಸಂಪೂರ್ಣ ಜೀರ್ಣೋದ್ಧಾರದ ಈ ಮಹಾಕಾರ್ಯವು ಭಕ್ತವೃಂದದ ಉದಾರ ತನು, ಮನ, ಧನ ಸಹಾಯದಿಂದಲೇ ನೆರವೇರಬೇಕಾಗಿಯದೆ. ಆದುದರಿಂದ ತಾವು ಈ ಮಹಾ ಕಾರ್ಯದಲ್ಲಿ ಯಥಾಶಕ್ತಿ ಸಹಭಾಗಿಗಳಾಗಿ ಭಕ್ತ ಕಲ್ಪತರುವಾದ ಶ್ರೀ ಸುಬ್ರಹ್ಮಣ್ಯನ ಪೂರ್ಣ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

B. Arunakumara Shetty, B. Sc., B. L.
ಮೆನೇಜಿಂಗ್ ಟ್ರಸ್ಟಿ
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಗುಡ್ಡಮ್ಮಾಡಿ
ಬಂಟ್ವಾಡಿ ಪೋಸ್ಟ್, ಕುಂದಾಪುರ ತಾಲೂಕು, ದ. ಕ.

ಚಾರುಚಯನ

ಸಮಜಾಯಿಶಿಯ ಪ್ರಧಾನಿಪದ

೧೯೬೬ನೆಯ ಇಸವಿ ಜಾರುತ್ತ ಬಂದಾಗ ಪ್ರಧಾನಿ ಇಂದಿರಾಗಾಂಧಿಯವರ ಸ್ಥಾನ—ಮಾನಗಳೂ ಜಾರುತ್ತಲೇ ಬಂದಿವೆಯೆನ್ನುವವರಿದ್ದಾರೆ. ತೋರಿಕೆಗೆ ಅದು ಬಲಗೊಳ್ಳುತ್ತಿರುವಂತೆ ಕಂಡರೂ ಸರಕಾರದ ನೆಲೆಯಲ್ಲಿ ಅದು ಸುಭದ್ರವೆನಿಸಿದರೂ ಪಕ್ಷದಲ್ಲಿ ಅವರ ಬಗ್ಗೆ ಅನಾದರ ಹೆಚ್ಚುತ್ತಲೇ ಇದೆ. ಕಳೆದ ವರ್ಷ ತನ್ನ ಸಚಿವ ಸಂಪುಟವನ್ನು ಪುನರ್ಘಟಿಸುವ ಬಗ್ಗೆ ಒಂದಲ್ಲ ಹಲವು ಬಾರಿ ಅವರು ಆಲೋಚಿಸಿದರೆಂದೂ ವರದಿಯಾದದ್ದೇನೋ ನಿಜ; ಆದರೆ, ಪುನರ್ಘಟನೆ ಮಾತ್ರ ನಡೆಯಲಿಲ್ಲ. ಅಂದರೆ, ಇಂದಿರಾಗಾಂಧಿಯವರಿಗೆ ಪಕ್ಷದ ಸಹಕಾರ ಸಿಗಬೇಕಾದಷ್ಟು ಸಿಗಲಿಲ್ಲ ಎಂದೇ ಅರ್ಥ.

ಇದೇಕೆ ಹೀಗೆ? ಇಂದಿರಾ ಗಾಂಧಿಯವರದು ಒಂದು ನೀತಿ. ಆಕೆ ತನ್ನ ತಂದೆಯನ್ನೇ ಅನುಕರಿಸ ಹೊರಟಿದ್ದಾರೆ. ಜವಾಹರಲಾಲರು ಪಕ್ಷೀಯ ಸಂಗತಿಗಳಿಗೆ ಹೆಚ್ಚು ಬೆಲೆ ಕೊಡುತ್ತಿರಲಿಲ್ಲ. ತನ್ನ ನೀತಿ—ಧೋರಣೆಗಳನ್ನೇ ಪಕ್ಷದ ನೀತಿ—ಧೋರಣೆಗಳನ್ನಾಗಿ ಮಾಡುವ ಚೈತನ್ಯ ಅವರಲ್ಲಿತ್ತು. ಜವಾಹರರ ಮೇಲೆ ಕಾಂಗ್ರೆಸು ಸಂಪೂರ್ಣ ವಿಶ್ವಾಸವಿಟ್ಟ ಸಮಯವಿತ್ತು; ದೇಶವೂ ಅವರ ಉನ್ನತ ವ್ಯಕ್ತಿತ್ವದ ಮುಂದೆ ತಲೆ ತಗ್ಗಿಸುತಿತ್ತು—ಏಕೆ? ಜವಾಹರರ ಶಕ್ತಿ—ಚೇತನ—ವ್ಯಕ್ತಿತ್ವ ಅಂತಹುದಾಗಿತ್ತು. ಅಂತಲೇ ಅವರ ಸರ್ವಾಧಿಕಾರ ಪ್ರವೃತ್ತಿಯನ್ನು ಯಾರೂ ಟೀಕಿಸುತ್ತಿರಲಿಲ್ಲ. ಆದರೆ, ಇಂದಿರಾಗಾಂಧಿಯವರಲ್ಲಿ ಅಂತಹ ಯೋಗ್ಯತೆಯಿಲ್ಲ; ಆದರೂ ಅವರು ತಂದೆ ನಡೆದ ದಾರಿಯಲ್ಲೇ ನಡೆಯುತ್ತಿದ್ದಾರೆ.

ಇಂದಿರಾಗಾಂಧಿಯವರ, ಸತ್ಯ ಹೇಳುವುದಾದರೆ ಸಮಜಾಯಿಶಿಯ ಅಭ್ಯರ್ಥಿ. ಲಾಲ್ ಬಹದೂರ್ ಶಾಸ್ತ್ರಿಯವರು ಅಕಾಲವಾಗಿ ಮೃತ್ಯುಮುಖರಾದಾಗ, ನಾಯಕತ್ವದ ಬಗ್ಗೆ ಹೋರಾಟ ನಡೆದು ದೇಶ ಇಬ್ಭಾಗವಾಗಬಾರದೆಂಬ ಧ್ಯೇಯದಿಂದ, ಮುರಾರ್ಜಿ ಬಾಯಿಯವರು ಅಧಿಕಾರಕ್ಕೆ ಬರಬಾರದು ಎಂದು ಬಗೆದವರು ಸಮಜಾಯಿಶಿ ನಡೆಸಿ ಇಂದಿರಾ ಗಾಂಧಿಯವರನ್ನು ಎತ್ತಿ ಕಟ್ಟಿದರು; ಅಂದ ಮಾತ್ರಕ್ಕೆ ಆಕೆಯು ಈ ಪ್ರಧಾನಿ ಪದಕ್ಕೆ ಅರ್ಹಳು ಎಂಬ ಅರ್ಥ ಬರುವುದಿಲ್ಲ. ಆಕೆಯನ್ನು ಆಯ್ಕೆ ಮಾಡಿದಾಗ, ಕಾಂಗ್ರೆಸ್ಸಿನ ಮುಂದೆ ಶಾಸ್ತ್ರಿಯವರ ಮಾದರಿಯಿತ್ತು. ಶಾಸ್ತ್ರಿಯವರು ಪ್ರಧಾನಮಂತ್ರಿಯಾದರೂ ಅಧಿಕಾರವನ್ನು ಏಕಾಕಿಯಾಗಿ ಬಳಸುತ್ತಿರಲಿಲ್ಲ. "ಸಾಮೂಹಿಕ ನಾಯಕತ್ವ"ದ ನೆಲೆಯಲ್ಲಿ ಅವರು ಆಡಳಿತ ನಡೆಸುತ್ತಿದ್ದರು. ಇದೇ ರೀತಿ ಇಂದಿರಾಗಾಂಧಿಯವರೂ "ಸಾಮೂಹಿಕ ನಾಯಕತ್ವ"ವನ್ನು ಮನ್ನಿಸುವರೆಂದು ನಂಬಿದ್ದವರಿಗೆ ಇಂದಿರಾ ವರ್ತನೆಯಿಂದ ಬೇಸರ ಬಂದಿದೆ; ನಿರಾಶೆಯಾಗಿದೆ.

ಇಂದಿರಾ ಗಾಂಧಿಯವರ ಮೇಲೆ ಹಲವು ಆರೋಪಗಳಿವೆ. ಮೊದಲನೆಯದಾಗಿ ಅವರು ಯಾವುದೇ ದೃಢ ನಿರ್ಧಾರವನ್ನು ಶೀಘ್ರವಾಗಿ ಕೈಗೊಳ್ಳುವುದಿಲ್ಲ. ರಾಜಮಹಾರಾಜರ ರಾಜಧನದ ಪ್ರಶ್ನೆ ದಿನದಿನಕ್ಕೂ ಒಂದೊಂದು ರೂಪ ತಾಳುತ್ತಿದೆ; ಪಂಚವಾರ್ಷಿಕ ಯೋಜನೆಯು ಮೂರು ವರ್ಷಗಳು ಯೋಜನೆ ಇಲ್ಲದೇನೇ ಕಳೆದುವು. ಮಹಾಜನ ಆಯೋಗದ ವರದಿ ನನೆಗುದಿಗೆ ಬಿದ್ದಿದೆ... ಈ ಪಟ್ಟಿಯನ್ನು ಎಷ್ಟು ಉದ್ದಕ್ಕೂ ಕೊಂಡೊಯ್ಯಬಹುದು. ಇಂದಿರಾ ಗಾಂಧಿಯವರ ಅತ್ತೆ, ವಿಜಯಲಕ್ಷ್ಮಿ ಪಂಡಿತರೇ ಸೂಚಿಸುವಂತೆ ಸರಕಾರದ ನೀತಿ—ನಿಲುವುಗಳ ಮೇಲೆ ಜೋರುಗೊಂಡ ಲೋಕಾಭಿಪ್ರಾಯಕ್ಕೆ ಸ್ಥಾನವೇ ರಂಜನೆಗೆ ಕೊಟ್ಟು ಎಂದಮೇಲೆ ಬೇರೆ ವ್ಯಾಖ್ಯಾನ ಅನಗತ್ಯ.

ಈ ನಡುವೆ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಪಕ್ಷೀಯ ನೆಲೆಯಲ್ಲಿ ದೃಢ ನೀತಿಯನ್ನು ಹೊಂದಿದ್ದರೆ ಪಕ್ಷತ್ಯಾಗ, ಪಕ್ಷಾಂತರಗಳಿಗೆ ಎಡೆಯನ್ನು ನೀಡುತ್ತಿಲ್ಲ. ಇದರಿಂದ ಇದುವರೆಗಿನ "ತೋಳ ಬಂತೋ" ಎಂಬ ಬೆದರಿಕೆಗೆ ಅಂಜುತ್ತಿದ್ದ ಕಾಂಗ್ರೆಸ್ಸು ಸ್ಥೈರ್ಯ ಹೊಂದುತ್ತಿದೆ. ನಿಜಲಿಂಗಪ್ಪನವರು ಹೇಳುತ್ತಾರೆ—ಕಾಮರಾಜ ಮತ್ತು ಎಸ್. ಕೆ. ಪಾಟೀಲರು ಲೋಕಸಭೆಗೆ ಬರಬೇಕು ಎಂದು. ಇವರಿಬ್ಬರೂ ಲೋಕಸಭೆಗೆ ಬಂದರೆಂದರೆ, ಇಂದಿರಾ ಗಾಂಧಿಯವರ ನಾಯಕತ್ವ ಬದಲಾಗಬಹುದು. ಕಾಮರಾಜರು ಲೋಕಸಭೆಗೆ ಸ್ಪರ್ಧಿಸಿದ್ದಾರೆ. ಅವರು ಆಯ್ಕೆಯಾಗುವ ಭರವಸೆಯೂ ಇದೆ. ಅವರು ಆಯ್ಕೆಗೊಂಡರೆ, ಲೋಕಸಭಾ ಕಾಂಗ್ರೆಸ್ ಪಕ್ಷದಲ್ಲಿ ಮಹತ್ವದ ಪಾತ್ರವಾಡುತ್ತಾರೆಂದೂ ಇದರಿಂದ ಕಾಂಗ್ರೆಸ್ ಪಕ್ಷದ, ತನ್ಮೂಲಕ ಸರಕಾರದ ದೌರ್ಬಲ್ಯಗಳು ದೂರವಾಗುತ್ತವೆಂದೂ ನಂಬಿದವರಿದ್ದಾರೆ.

ಇಂದು ಇಂದಿರಾ ಗಾಂಧಿಯವರೂ ಗೃಹಮಂತ್ರಿ ಚವಾಣರೂ ಒಂದಾಗಿ ನೀತಿ-ನಿರೂಪಣೆಯ ಕಾರ್ಯ ಮಾಡುತ್ತಿದ್ದಾರೆ. ಸಂರಕ್ಷಣಾ ಮಂತ್ರಿಯಾಗಿ ಗಳಿಸಿದ ಜನವಿಶ್ವಾಸವನ್ನು ಚವಾಣರು ಗೃಹಮಂತ್ರಿಯಾಗಿ ಕಳೆದುಕೊಂಡಿದ್ದಾರೆಂಬುದು ಸರ್ವವಿದಿತ. ಹಾಗಿರುವಾಗ "ಹಾವು ಸಾಯದ, ಕೋಲು ಮುರಿಯದ" ನೀತಿಯಿಂದ ದೇಶದ ಸಮಸ್ಯೆಗಳಿಗೆ ಉತ್ತರ ದೊರೆಯದು. ಆದುದರಿಂದ ಇವರಿಬ್ಬರನ್ನೂ ಬಿಟ್ಟು ಮೂರನೆಯವರತ್ತ ದೃಷ್ಟಿ ಹಾಯಿಸಿದವರೂ ಇದ್ದಾರೆ. ಪಕ್ಷದ ಬಗ್ಗೆ ನಿಷ್ಠೆ, ಆದರ್ಶಕ್ಕೆ ಅಂಟಿಕೊಳ್ಳುವ ಪ್ರವೃತ್ತಿ, ಬಹುಕಾಲದ ಆಡಳಿತಾನುಭವ ಮತ್ತು ಪ್ರತಿಪಕ್ಷೀಯರಿಗೆ ಹೊಂದಾದ ಮುರಾರ್ಜಿಯವರನ್ನಾದರೂ ಪ್ರಧಾನಿ ಪದಕ್ಕೇರಿಸಬೇಕೆಂದು ಬಯಸುವ ಕೆಲವರಾದರೂ ಇದ್ದಾರೆ.

ದೇಶದ ಆಂತರಿಕ ಆರೋಗ್ಯ ಬಹಳ ಕೆಟ್ಟಿದೆ; ಬಾಹ್ಯಾರೋಗ್ಯವೆಂಬುದೇ ಇಲ್ಲ. ಕಾಂಗ್ರೆಸ್ ಪಕ್ಷದ ಇಂದಿನ ಈ ವಿಚ್ಛಿದ್ರತೆಗೆ ಇಂದಿರಾಗಾಂಧಿಯವರ ದುರ್ಬಲ ನಾಯಕತ್ವವೇ ಕಾರಣವೆಂದು ದೂರುವವರಿದ್ದಾರೆ. ವಿವಿಧ ರಾಜ್ಯಗಳಲ್ಲಿ ಕಾಂಗ್ರೆಸ್ ಶಿಥಿಲಗೊಂಡು ಬಲಗುಂದುತ್ತಿರುವುದಕ್ಕೆ ಪಕ್ಷ ಮತ್ತು ಕೇಂದ್ರ ಸರಕಾರಗಳ ನಡುವಣ ಕಂದಕ ವಿಶಾಲಗೊಳ್ಳುತ್ತಿರುವುದೇ ಕಾರಣವೆಂದು ಆರೋಪಿಸುವವರಿದ್ದಾರೆ. ಇದನ್ನು ಸಂಪೂರ್ಣ ಅಲ್ಲಗಳೆಯುವುದಸಾಧ್ಯ.

ಜವಾಹರ್‌ಲಾಲರಂತಹ ವಿಭೂತಿಪುರುಷರೂ ಕೊನೆಕೊನೆಗೆ ಜನತೆಯ—ಪಕ್ಷದ ಸದಸ್ಯರ ಅಭಿಮಾನಕ್ಕೆ ಪಾತ್ರರಾಗಲಿಲ್ಲವೆಂಬುದನ್ನು ಮರೆಯಬಾರದು. ಜವಾಹರರ ಮುಂದೆ ತಲೆಬಾಗಿಸಿಯೋ ಅವರು ಮೆನನ್ನರನ್ನು ಸಚಿವ ಸಂಪುಟದಿಂದ ಬಿಟ್ಟುಕೊಟ್ಟರು. ಅಂತಹ ತಂದೆ ಸಾಧಿಸಲಾಗದ್ದನ್ನು ಈ ಮಗಳು ಸಾಧಿಸುತ್ತೇನೆಂದು ಪಟ್ಟು ಹಿಡಿದರೆ ಆಕೆಯ ನಾಯಕತ್ವ ಬಹುದಿನ ಉಳಿಯಲಾರದು. ಪ್ರಜಾತಂತ್ರ ಭಕ್ತರಾಗಿದ್ದೂ ಜವಾಹರರಿಗೆ ಜನತೆ ಬೌದ್ಧಿಕವಾಗಿ ದಾಸವಾಗಿತ್ತು; ಇಂದು ಆ ಸ್ಥಿತಿ ಉಳಿದಿಲ್ಲ—ಇದು ಒಂದು ಪಕ್ಷದ ವಾದ.

ಇಂತಹ ದುರ್ಘಟನೆಗಳಿಗೆ ಇಂದಿರಾ ಗಾಂಧಿಯವರು ಅವಕಾಶ ಕೊಡರು; ತನ್ನ ತಪ್ಪನ್ನು ಬೇಗನೇ ತಿದ್ದಿಕೊಳ್ಳುವರು ಎಂಬುದು ಕೆಲವರ ಸದಾಶಯ. ಈ ರೀತಿ ಅವರು ತಿದ್ದಿಕೊಳ್ಳಲು ಲೋಕಸಭೆಯಲ್ಲಿ ಕಾಮರಾಜರು, ಪಾಟೀಲರು ಬೇಕು ಎನ್ನುವವರು ಮತ್ತೆ ಕೆಲವರು. ಅಂತೂ ಇಂದಿರಾ ಗಾಂಧಿ "ಸರ್ವಾಧಿಕಾರದ ಪ್ರವೃತ್ತಿ ಬದಿಗಿಟ್ಟರೆ, ಸಮಜಾಯಿಶಿ ಪ್ರಧಾನಿಯಾಗಿ ಬಹುಕಾಲ ಮುಂದುವರಿಯಬಹುದು.

° ° °

'ಎಲ್ಲಿಂದ ಸೀನ್ ಬಂದೆ, ಅಲ್ಲಿಂದ ಏನ್ ತಂದೆ' ಎಂಬುದರಲ್ಲಿ 'ಮರಳಿ ಮಣ್ಣಿಗೆ' ಎಂಬ ತತ್ತ್ವ ಹುದುಗಿದೆ. 'ಮರಳಿ ಮಣ್ಣಿಗೆ' ಮೊದಲೋ 'Back to the soil' ಮೊದಲೋ ಎಂಬುದರ ಬಗ್ಗೆ ದೀರ್ಘ ವಿಶ್ಲೇಷಣೆ ಅನಗತ್ಯ. ಆದರೆ, ಆಂಗ್ಲೇಯ ಸಂಸ್ಕೃತಿಗಿಂತ, ಅವರ ಭಾಷೆಗಿಂತ, ಕನ್ನಡ ಸಂಸ್ಕೃತಿಯು ಪ್ರಾಚೀನವಾದ್ದರಿಂದ 'ಮರಳಿ ಮಣ್ಣಿಗೆ'ಯೇ ಮೊದಲಿನದೆಂದು ಹೇಳೋಣ. ಏಕೆಂದರೆ, ಮಂತ್ರಶಕ್ತಿಯು ಇಂಗ್ಲಿಷಿನ ಮೂಲಕ ಪ್ರಚಾರವಾಗುವುದಕ್ಕೆ ಮೊದಲು, ಶರೀರದ ಪಂಚಭೂತಾತ್ಮಕತೆ ಸಂಸ್ಕೃತದ ಮೂಲಕ ಕನ್ನಡಿಗರಿಗೆ ತಿಳಿದಿತ್ತು. ಇದೆಲ್ಲಾ ಏಕೆ? ವಿಷಯಕ್ಕೆ ಬರೋಣ.

ದಂಡಕಾರಣ್ಯ ಪ್ರದೇಶದಲ್ಲಿನ ಆದಿವಾಸಿ ತರುಣನ ಮಗ ಹನುಮಯ್ಯನಿಗೀಗ ಬಾಲ ಬರುತ್ತಿದೆಯಂತೆ! ಈ ಹುಡುಗನ ಕೈಕಾಲುಗಳು ಬೆಳೆಯುತ್ತಿರುವಂತೆಯೇ ಬೆನ್ನುಹುರಿಯ ಕೊನೆಯಲ್ಲಿ ಬಾಲವೂ ಬೆಳೆಯುತ್ತಿದೆ. ಈ ಬಾಲವು ಮೃದುವಾಗಿದೆ. ಇದರಲ್ಲಿ ಎಲುಬುಗಳಿಲ್ಲ; ಮನಬಂದಂತೆ ಕೈಕಾಲುಗಳಂತೆ ಆತ ಬಾಲವನ್ನು ಆಡಿಸಲಾರ. ಓಡಾಡುತ್ತಿರುವಾಗ ಅದೂ ಓಲಾಡುತ್ತದೆ. ಈ ಬಾಲವು ಬೆನ್ನುಹುರಿಯ ಮುಂದುವರಿದ ಭಾಗವಲ್ಲ. ಈ ಬಾಲದಿಂದಾಗಿ ಬೆನ್ನುಮೂಳೆಯ ಆಕಾರಕ್ಕೆ ಚ್ಯುತಿ ಬಂದಿಲ್ಲ. ಅದು ವಿಕಾರವಾಗಿಲ್ಲ. ಈ ಎಲುಬಿಲ್ಲದ ಮೃದು ಬಾಲಕ್ಕೆ ಸ್ಪರ್ಶಗುಣ ಇದೆ. ಬಿಸಿ, ನೋವುಗಳ ಅನುಭವವಾಗುತ್ತದೆ ಚೆನ್ನಾಗಿಯೇ.

ಡಾರ್ವಿನ್ ತನ್ನ ವಿಕಾಸವಾದವನ್ನು ಹೊರಗೆಡಹಿ ಮಾನವನ ಹಿಂದಿನ ರೂಪ ಹನುಮಂತನ ರೂಪದ ಪರಿಷ್ಕಾರವೆಂದಿದ್ದಾನೆ. ಈ ಹನುಮಯ್ಯನು ರಾಮದಾಸ ಹನುಮಂತನ ಅವತಾರವಾಗಿರಲೂ ಬಹುದು; ಅಥವಾ ಮಾನವನ ವಿಕಾಸವಾದ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿರಬಹುದೆ? ಮಾನವರು ಮಾನವತೆಯನ್ನು ಬಿಟ್ಟು ಕೋತಿತನವನ್ನೇ ಪ್ರೀತಿಸುತ್ತಿರುವಾಗ, ಮನೋವೃತ್ತಿಗನುಸಾರವಾಗಿ ಶರೀರ ರಚನೆಯೂ ಮಾರ್ಪಡಾಗುತ್ತ ಬರುತ್ತಿದೆಯೆನ್ನಬೇಕೆ? ಯಾವುದಕ್ಕೂ ತೀವ್ರತೆ ಅನಗತ್ಯ. ತಜ್ಞರನ್ನಾದರೂ ತಣಿಸಿ ಕಾಡಿಸಬೇಕೆಂದು ಬಲ್ಲವರ ಮಾತು. ಈ ಹನುಮಯ್ಯನಂತೆಯೇ ಇನ್ನೂ ಕೆಲವಾರು ಬಾಲವಂದಿಗರು ಕಾಣಿಸಿಕೊಂಡರೆ, ಆಗ ಸಂಶೋಧಕ ವಿಜ್ಞಾನಿಗಳ ಗಮನ ಇತ್ತ ಹರಿಯಲಾರದೇನು? ಅಜ್ಜ ನೆಟ್ಟ ಗೋಳೀ ಮರದ ನೆರಳಲ್ಲಿ ಆರಾಮವಿರುವ ನಮಗೇಕದರ ಗೊಡವೆ? ಮಂಗನೇ ಮಾನವನಾದನೆಂದವರೇ ಮಾನವನು ಮಂಗನಾಗುತ್ತ ಬರುತ್ತಿದ್ದಾನೆನ್ನಲಿ.

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡಿನಲ್ಲಿ ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ— ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ ಮೂಡಬಿದ್ರಿ — ಬಂಗಾಡಿ [illegible], ನಾವೂರು — ಚಾರ್ಮಾಡಿ ಮುಂಡಾಜೆ — ಉಜ್ರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ
ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

ಗಾಂಧೀ ಜನ್ಮಶತಾಬ್ಧಿ –
1968

ಅಹಿಂಸೆಯಿಂದಲೇ ವಿಶ್ವ ಶಾಂತಿ

ಲೇಖಕರು:
ಶ್ರೀ ಉಥಾಂಟ್, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ.

ಮಹಾತ್ಮಾ ಗಾಂಧೀ ಜನ್ಮ ಶತಾಬ್ಧಿ ಸ್ಮಾರಕ ಗ್ರಂಥಕ್ಕೆ ನನ್ನ ಚಿಕ್ಕ ಕಾಣಿಕೆ ಸಲ್ಲಬೇಕು—ಎಂದು ಡಾ॥ ರಾಧಾಕೃಷ್ಣನ್ ಆಮಂತ್ರಿಸಿದ್ದಾರೆ. ಅವರ ಆಮಂತ್ರಣವನ್ನು ಸಂತೋಷದಿಂದ ಅಂಗೀಕರಿಸುತ್ತಿದ್ದೇನೆ. ಮಹಾತ್ಮಾ ಗಾಂಧೀಜಿಯವರ ವಿಚಾರಗಳು ಪ್ರಪಂಚದ ಅನೇಕ ಭಾಗಗಳ ಜನರ ಮೇಲೆ ಪ್ರಭಾವ ಬೀರಿವೆ; ಅಮೇರಿಕೆಯಲ್ಲಿನ ನಾಗರಿಕ ಹಕ್ಕುಗಳ ಆಂದೋಲನವೂ ಮಹಾತ್ಮಾಜಿಯವರಿಂದಲೇ ಪ್ರಭಾವಿತವಾಗಿದೆ. ಮಹಾತ್ಮಾಜಿಯವರು ಬೋಧಿಸಿದ ಅನೇಕ ವಿಚಾರಗಳೂ ವಿಶ್ವಸಂಸ್ಥೆಯ ತತ್ವಗಳೂ ಒಂದೇ ಆಗಿವೆ.

ಸಾಮಾಜಿಕ ಪ್ರಗತಿ ಹೆಚ್ಚಿಸಲೂ ಉತ್ತಮ ಜೀವನ ಮಟ್ಟ ಸಾಧಿಸಲೂ ವ್ಯಾಪಕ ಸ್ವಾತಂತ್ರ್ಯ ಪಡೆಯಲೂ ವಿಶ್ವಸಂಸ್ಥೆಯು ಪ್ರಣಾಳಿಕೆಯೊಂದು ನಮಗೆಲ್ಲ ಕರೆ ಇತ್ತಿದೆ. ಮೂಲ ಮಾನವೀಯ ಹಕ್ಕುಗಳು, ಮನುಷ್ಯತ್ವದ ಗೌರವ, ಸ್ತ್ರೀ ಪುರುಷರಿಗೆ ಸಮಾನ ಹಕ್ಕುಗಳು, ಚಿಕ್ಕ ದೊಡ್ಡ ರಾಷ್ಟ್ರಗಳಿಗೂ ಸಮಾನ ಹಕ್ಕುಗಳು ಮುಂತಾದ ವಿಷಯಗಳಲ್ಲಿ ವಿಶ್ವಸಂಸ್ಥೆ ತನ್ನ ವಿಶ್ವಾಸವನ್ನು ದೃಢಪಡಿಸಿದೆ. ಒಂದು ದೇಶ ಮತ್ತೊಂದು ದೇಶದ ಸ್ವಾತಂತ್ರ್ಯ ಹರಣ ಮಾಡಕೂಡದು— ಎಂಬ ಗುರಿ ವಿಶ್ವಸಂಸ್ಥೆಯದು. ಬಲ ಪ್ರಯೋಗದ ಬೆದರಿಕೆ —ಹಾಕಬಾರದು ಅಥವಾ ಬಲ ಪ್ರಯೋಗ ಮಾಡಬಾರದು ಎಂದು ವಿಶ್ವಸಂಸ್ಥೆ ನಮ್ಮೆಲ್ಲರನ್ನ ಕೇಳಿಕೊಂಡಿದೆ.

ಮನುಷ್ಯತ್ವದ ಗೌರವವನ್ನು ಎತ್ತಿಹಿಡಿಯಲೆಂದೇ ಮಹಾತ್ಮಾ ಗಾಂಧೀಜಿಯವರು ಈ ಶತಮಾನದ ಆದಿಭಾಗದಲ್ಲಿ ದಕ್ಷಿಣ ಆಫ್ರಿಕೆಯಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದು. ಸತ್ಯದ ಅರ್ಥವನ್ನು ಚೆನ್ನಾಗಿ ತಿಳಿದುಕೊಂಡು ಉತ್ತಮ ಉದ್ದೇಶಕ್ಕಾಗಿ ಬಳಸಿಕೊಂಡರೆ, ಸತ್ಯವೆಂಬ ಶಸ್ತ್ರದಿಂದ, ಯಾವ ಹಿಂಸೆಯೂ ಇಲ್ಲದೆ, ಅನೇಕಾನೇಕ ಮಹತ್ವದ ಬದಲಾವಣೆಗಳನ್ನು ಶಾಂತಿಯುತವಾಗಿ ನೆರವೇರಿಸಬಹುದು ಎಂದು ಮಹಾತ್ಮಾಜಿಯವರು ನಂಬಿದರು. ನಮ್ಮೀ ಶತಮಾನದ ಸರ್ವೋಚ್ಚ ವಿಚಾರಗಳಲ್ಲಿ ಒಂದಾಗಿದೆ ಗಾಂಧೀಜಿಯವರ ಈ ವಿಚಾರ.

ಅಹಿಂಸೆಯ ದೃಷ್ಟಾಂತ

ಪ್ರಪಂಚದ ಎಲ್ಲ ಮುಖ್ಯ ಧರ್ಮಗಳು ಅಹಿಂಸೆಯ ಶ್ರೇಷ್ಠತೆಯನ್ನು ಮಾನ್ಯ ಮಾಡಿವೆ. ಗಾಂಧೀಜಿಯವರು ಅಹಿಂಸೆಯ ಪ್ರವರ್ತನಾಚಾರ್ಯರೆಂದೆನಿಸಿದ್ದಾರೆ. ಬೌದ್ಧಧರ್ಮದ ವಿಚಾರ ಪ್ರಣಾಳಿಕೆಗಳಲ್ಲಿ ಅಹಿಂಸೆಯ ತತ್ವವೇ ಮುಖ್ಯವಾದದ್ದು. ಬುದ್ಧ ತನ್ನ ಅನಂತ ಪ್ರೀತಿಯನ್ನು ಸುರಿಸಿ ಮನುಷ್ಯರನ್ನು ಪರಿವರ್ತಿಸಿದ. ಬುದ್ಧನಿಗಾಗಿ ಹಥಿಯಾರ ಹಿಡಿದ ಪ್ರಸಂಗ ಚರಿತ್ರೆಯಲ್ಲಿಲ್ಲ. ಶತ್ರುಗಳು ವಿರುದ್ಧ ಹಿಂಸಾಚಾರ ಕೈಕೊಳ್ಳದಿರಲೂ ದ್ವೇಷಭಾವನೆ ತ್ಯಜಿಸಲೂ ಬುದ್ಧ ತನ್ನ ಅನುಯಾಯಿಗಳಿಗೆ ಬೋಧಿಸಿದ. ಆದರೆ ಅಹಿಂಸೆಯು ನಿಷೇಧಾರ್ಥಕ ವಿಚಾರ ಎಂದು ಯಾರೂ ಭಾವಿಸಕೂಡದು. ಹಿಂಸೆ ಸಾಧಿಸಲಾರದ್ದನ್ನು ಅಹಿಂಸೆಯ ಮಾರ್ಗ ಸಾಧಿಸಬಲ್ಲದು ಎಂದು ಗಾಂಧೀಜಿ ಪೂರ್ತಿ ನಂಬಿದ್ದರು. ಸಿದ್ಧಿ ಎಷ್ಟು ಮಹತ್ವದ್ದೋ ಅದನ್ನು ಸಾಧಿಸುವ ಮಾರ್ಗವೂ ಅಷ್ಟೇ ಮಹತ್ವದ್ದು ಎಂದು ಗಾಂಧೀಜಿ ಭಾವಿಸಿ, ಶಾಂತಿ ಮಾರ್ಗದಿಂದಲೇ ಸಿದ್ಧಿಯನ್ನು ಪಡೆಯಬೇಕು ಎಂದು ಅವರು ಬಯಸಿದರು.

ಗಾಂಧೀಜೀಯವರಿಗೆ ಸಿದ್ಧಿಗಿಂತ ಸಾಧನೆಯ ಮಾರ್ಗ ಮುಖ್ಯವಾಗಿತ್ತು. ಉತ್ತಮ ಗುರಿಯೆಂದನ್ನು ಅನುಚಿತ ಮಾರ್ಗಗಳಿಂದ ಮುಟ್ಟಲು ಗಾಂಧೀಜಿ ಒಪ್ಪಲಿಲ್ಲ. ಅವರಿಗೆ ಸಿದ್ಧಿಯಲ್ಲಿಯೆ ಸಾಧನೆ ಸಮ್ಮಿಲನಗೊಂಡಿತು. ಇದರಿಂದ ಸಿದ್ಧಿ ಇನ್ನಷ್ಟು ಪುನೀತವಾಯಿತು. ಅಯೋಗ್ಯ ಸಾಧನ ಮಾರ್ಗವನ್ನು ಅವರೆಂದೂ ಸಮರ್ಥಿಸಲಿಲ್ಲ.

ಭಾರತದ ಸ್ವಾತಂತ್ರ್ಯ

ಬ್ರಿಟಿಷರ ಆಡಳಿತ ಮುಷ್ಟಿಯಿಂದ ಭಾರತವನ್ನು ವಿಮೋಚನಗೊಳಿಸಲು ಮಹಾತ್ಮಾ ಗಾಂಧೀಜಿಯವರು ಸತ್ಯಾಗ್ರಹ ತಂತ್ರವನ್ನು ಬಳಸಿದರು. ಭಾರತದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಅವರು ಎಷ್ಟು ಕಾತರರಾಗಿದ್ದರೋ ಅಷ್ಟೇ ಕಾತರರಾಗಿದ್ದರವರು ಭಾರತದಲ್ಲಿನ ಸಾಮಾಜಿಕ ಅಧಿಕಾರಗಳ ಬಗೆಗೂ. ನಿಜವಾಗಿ ಹೇಳುವದಾದರೆ ಪ್ರಾರಂಭಕ್ಕೆ ಸತ್ಯಾಗ್ರಹದ ತಂತ್ರವನ್ನು ದಕ್ಷಿಣ ಭಾರತದ ಹಳ್ಳಿಯೊಂದರಲ್ಲಿನ ಅಸ್ಪೃಶ್ಯತಾ ಕಳಂಕದ ವಿರುದ್ಧವಾಗಿಯೆ ಬಳಸಿದ್ದುಂಟು. ಜಾತಿಮತ ಪಂಥಗಳನ್ನು ಬದಿಗಿಟ್ಟು ಮನುಷ್ಯತ್ವದ ಹಿರಿಮೆಗಳ ಬಗ್ಗೆ ಗಾಂಧೀಜಿ ಒತ್ತಿ ಹೇಳಿದರು. ಭಾರತದ ಸಮಸ್ತ ಜನಕ್ಕೆ ಸಾಮಾಜಿಕ ನ್ಯಾಯ ದೊರಕಿಸುವ ಬಗ್ಗೆ ಗಾಂಧೀಜಿ ಹೋರಾಡಿದರು.

ನಾನೀ ಮೊದಲು ಹೇಳಿರುವಂತೆ ಅಹಿಂಸೆ ವಿಶ್ವಸಂಸ್ಥೆಯ ಶಾಸ್ತ್ರಪಟದ ತತ್ವಗಳಲ್ಲಿ ಒಂದು. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಅಂತಾರಾಷ್ಟ್ರೀಯ ಸಂಬಂಧದಲ್ಲಿ ಬಲಪ್ರಯೋಗದಿಂದ ದೂರವಿರಲು ಒಪ್ಪಿಕೊಂಡಿದ್ದುಂಟು. ಮಾನವ್ರೊಲಿಸುವಿಕೆಯಿಂದ ಶಾಂತಿ ಅನಮತಿಯಿಂದ ಮಾತ್ರ ಯಾವುದೇ ಮಾನವೀಯ ಸಮಸ್ಯೆಗಳ ಸ್ಥಾಯೀ ಪರಿಹಾರ ಸಾಧ್ಯ ಎಂಬ ಮಾನ್ಯತೆ ಇತಿಹಾಸ ಕಲಿಸುತ್ತದೆ. ಹಿಂಸೆ ಎರಡಂಚಿನ ಅಲಗು. ಪ್ರತಿಕ್ರಿಯೆಗೆ ಮೂಲ. ಮತ್ತೆ ಹಿಂಸೆ ಕಾಣಿಸಿಕೊಳ್ಳಲು ಕಾರಣ. ಆದುದರಿಂದಲೇ ಅಂತಾರಾಷ್ಟ್ರೀಯ ವಿದ್ಯಮಾನಗಳಲ್ಲಿ ಬಲಪ್ರಯೋಗವನ್ನು ತ್ಯಜಿಸಲು ವಿಶ್ವಸಂಸ್ಥೆಯು ಪ್ರಣಾಳಿಕೆಗೆ ಗೌರವ ಸಲ್ಲಿಸಿ ಅದರಂತೆ ನಾವು ನಡೆದುಕೊಳ್ಳೋಣ.

ಐವತ್ತು ವರ್ಷಗಳ ಹಿಂದೆ ಅಹಿಂಸೆಯ ಪ್ರವರ್ತಕರಾದ ಮಹಾತ್ಮಾಜಿಯವರು ಕೊಲೆಗಡುಕನ ಕೈಗೆ ಸಿಲುಕಿ ಸ್ವರ್ಗಾಧೀನರಾದದ್ದು ಒಂದು ಅಣಕ. ಶಾಂತಿಗಾಗಿ ಜೀವಮಾನವೆಲ್ಲ ಪರಿತಪಿಸಿದ ಮಹಾನುಭಾವರು ಕೊನೆಗೆ ಹಿಂಸೆಯಿಂದ ಕೊನೆಯುಸಿರನ್ನು ಬಿಟ್ಟ ಪ್ರಸಂಗ ಇದು ಮೊದಲನೆಯದಲ್ಲ; ಅಥವಾ ಇದು ಕೊನೆಯದೂ ಆಗಲಿಕ್ಕಿಲ್ಲವೆಂದು ನಾನು ಹೆದರಿದ್ದೇನೆ. ಇದರರ್ಥ ಅಹಿಂಸೆಯ ತತ್ವ ಹುಸಿ ಎನಿಸಿತು ಎಂದಲ್ಲ. ಅಹಿಂಸೆಯ ಮಹತ್ವವನ್ನೇ ಅದು ಎತ್ತಿ ತೋರಿಸುತ್ತದೆ. ಹಿಂಸಾವಾದಿಗಳು ಅಹಿಂಸಾ ಮೂರ್ತಿಯನ್ನೂ ಕೊನೆಗೊಳಿಸಲು ಹಿಂಸೆಯನ್ನೇ ಬಳಸಬೇಕಾಯಿತು. ಏಕೆಂದರೆ ಹಿಂಸಾಮಾರ್ಗವನ್ನು ಅನುಸರಿಸಲು ಉಳಿದ ಜನಕೋಟಿಗೆ ಹೇಳಿದಾಗ, ಜನತೆ ಹಿಂಸಾವಾದಿಗಳ ವಾದವನ್ನು ತಿರಸ್ಕರಿಸಿತು. ಇತಿಹಾಸವು ಮರುಕಳಿಸಿ ಬರುತ್ತದಂತೆ. ಡಾ॥ ಮಾರ್ಟಿನ್ ಲೂಥರ್ ಕಿಂಗ್ ಅವರೂ ಇದೇ ರೀತಿ ಕೊಲೆಗಡುಕನ ಬಲಿಯಾದರು. ಹಿಂಸೆ ಹೆಚ್ಚಿದಂತೆ ಅಹಿಂಸೆಯ ಬೆಲೆ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಪ್ರಕ್ಷುಬ್ಧ ಜಗತ್ತಿನಲ್ಲಿ ನಾವಿಂದು ಬಾಳುತ್ತಿದ್ದೇವೆ. ಎಲ್ಲೆಡೆ ಚಿಂತೆ ವ್ಯಾಪಿಸಿದೆ. ಬದಲಾವಣೆಗಾಗಿ ಜನ ಕಾತರಿಸಿದೆ. ಬದಲಾವಣೆ ಬೇಕಾಗಿದೆ ಎಂಬುದು ಗೋಡೆಯ ಮೇಲಿನ ಬರಹದಷ್ಟು ಸ್ಪಷ್ಟವಾಗಿದೆ. ಜಗತ್ತಿನ ನಾಯಕರು ಈ ಬರಹವನ್ನು ನೋಡಲು ತಪ್ಪಿದರೆ ಹಿಂಸಾಮಾರ್ಗದಿಂದ ಆ ಬದಲಾವಣೆ ಬರಬಹುದು. ಆದರೆ ಶಾಂತಿ ಮಾರ್ಗದಿಂದ ಬಂದ ಬದಲಾವಣೆಗಳು ಮಾತ್ರ ಅಪೇಕ್ಷಣೀಯವಾಗಿವೆ. ಏಕೆಂದರೆ ಅಂತಹ ಬದಲಾವಣೆಗಳು ಮಾತ್ರ ಬಹುಕಾಲ ಬಾಳಬಲ್ಲವು.

ಗಾಂಧೀಜಿಯವರು ಬೋಧಿಸಿದ ತತ್ವಜ್ಞಾನವು, ಗಾಂಧೀಜಿಯವರ ದೇಶ, ಕಾಲದ ವ್ಯಾಪ್ತಿಯಾಚೆ ಮಹತ್ವವನ್ನು ಪಡೆದಿದೆ ಎಂದು ನಾನು ಭಾವಿಸಿದ್ದೇನೆ. ಗಾಂಧೀಜಿಯವರ ಅನೇಕ ತತ್ವಗಳು ವಿಶ್ವಮಾನ್ಯವಾಗಿವೆ, ಚಿರಂತನವಾಗಿ ಬದುಕುವಂತಹವಿವೆ. ಶಾಂತಿಯುತ ಬದಲಾವಣೆಗಳನ್ನು ತರುವಲ್ಲಿ ಅಹಿಂಸೆಯ ಬಗ್ಗೆ ಗಾಂಧೀಜಿ ಇರಿಸಿಕೊಂಡಿದ್ದ ಅಚಲ ಶ್ರದ್ಧೆ ಬರುವ ವರ್ಷಗಳಲ್ಲಿ ಇನ್ನೂ ಹೆಚ್ಚು ಸಮರ್ಥನೆ ಪಡೆಯುವದರಲ್ಲಿ ಸಂಶಯವಿಲ್ಲ.

(ಡಾ॥ ರಾಧಾಕೃಷ್ಣನ್ ಅವರು ಸಂಪಾದಿಸಿದ "ಮಹಾತ್ಮಾ ಗಾಂಧಿ—ನೂರು ವರ್ಷಗಳು" ಎಂಬ ಗ್ರಂಥವನ್ನು ನವದೆಹಲಿಯ ಗಾಂಧೀ ಶಾಂತಿ ಪ್ರತಿಷ್ಠಾನದವರು ಪ್ರಸಿದ್ಧಿಸಿದ್ದಾರೆ. ಮೇಲಿನ ಲೇಖನವನ್ನು ಆ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ಕಾಪಿರೈಟ್, ಗಾಂಧೀ ಶಾಂತಿ ಪ್ರತಿಷ್ಠಾನ).

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ವಿಜ್ಞಾನಿಗಳು ರೂಪಿಸಿದ ಹೊಸ ಆಲೂಗಡ್ಡೆ ತಳಿ

ಆಲೂಗಡ್ಡೆ ಭಾರತದ ಆಹಾರ ಸಮಸ್ಯೆ ಪರಿಹರಿಸುವುದರಲ್ಲಿ ಗಣ್ಯ ಪಾತ್ರವಹಿಸುವುದೆಂದು ಕೃಷಿ ವಿಜ್ಞಾನಿಗಳ ಅಭಿಪ್ರಾಯ. ಅನೇಕ ಯುರೋಪಿಯನ್ ನಿವಾಸಿಗಳ ನಿತ್ಯ ಆಹಾರದಲ್ಲಿ ಆಲೂಗಡ್ಡೆಯ ಪ್ರಮಾಣ ಶೇಕಡ 56 ರಷ್ಟು ಇರುವುದೆಂದು ಕೃಷಿ ವಿಜ್ಞಾನಿಗಳು ಹೇಳುತ್ತಾರೆ.

ಭಾರತೀಯ ಆಹಾರ ಸೇವನೆಯಲ್ಲಿ ಆಲೂಗಡ್ಡೆ ನೂತನ ಅತಿಥಿಯಾಗಿದೆ. ಆಲೂಗಡ್ಡೆ ಯುರೋಪಿನಲ್ಲಿ ಬಳಕೆಗೆ ಬರುವುದಕ್ಕೆ ನಾಲ್ಕು ದಶಕಗಳಿಗೆ ಮುಂಚೆ, ಎಂದರೆ 17ನೇ ಶತಮಾನದ ಆರಂಭದಲ್ಲಿ ಪೋರ್ಚುಗೀಸರು ಈ ಆಹಾರವನ್ನು ಭಾರತದಲ್ಲಿ ಬೆಳೆಯಲು ಆರಂಭಿಸಿದ್ದರು.

1015 ಇಸವಿಯಲ್ಲಿ ಆಲ್ಫ್ ಜಾನ್ ಸರ್ ಥಾಮಸ್ ರವರೊಂದಿಗೆ ಏರ್ಪಡಿಸಿದ ಔತಣ ಕೂಟದಲ್ಲಿ ಭಾರತದಲ್ಲೇ ಪ್ರಪ್ರಥಮವಾಗಿ ಆಲೂಗಡ್ಡೆಯನ್ನು ಬಳಸಲಾಯಿತೆಂದು ಟೆರ್ರಿಯು ವರ್ಣಿಸಿದ್ದಾನೆ. 1675ನೇ ಇಸವಿಯ ವೇಳೆಗೆ ಕರ್ನಾಟಕ ಮತ್ತು ಸೂರತ್ ನಗರದ ತೋಟಗಳಲ್ಲಿ ಆಲೂಗಡ್ಡೆ ಬೆಳೆಯಲಾಗುತ್ತಿತ್ತು. 19ನೇ ಶತಮಾನದ ಆರಂಭದಲ್ಲೇ ಆಲೂಗಡ್ಡೆ ಭಾರತೀಯರ ಪ್ರಮುಖ ತರಕಾರಿಯಾಗಿತ್ತು.

ಭಾರತದಲ್ಲಿ ಸಂಶೋಧನೆ

ಕಳೆದ ಎರಡು ದಶಕಗಳಿಂದಲೂ ಆಲೂಗಡ್ಡೆಯ ಬೆಳೆ ಹೆಚ್ಚಿಸಲು ಹಾಗೂ ಗುಣವನ್ನು ಉತ್ತಮಪಡಿಸಲೆಂದು ಭಾರತದಲ್ಲಿ ಸಂಶೋಧನೆ ನಡೆಯುತ್ತಿದೆ. ಚಳಿಗಾಲದ ಬೆಳೆಯಾದ ಆಲೂಗಡ್ಡೆಯನ್ನು ಸುಮಾರು ಐದು ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆಯಲಾಗುತ್ತಿದೆಯೆಂದು ಅಂದಾಜು ಮಾಡಲಾಗಿದೆ. ಉತ್ತಮ ಬೀಜಗಳು ಹಾಗೂ ಕೃಷಿ ವಿಜ್ಞಾನದ ಪ್ರಸಾರದಿಂದ ಭಾರತದಲ್ಲಿ ಬೆಳೆಯುತ್ತಿರುವ 40 ಲಕ್ಷ ಟನ್ ಆಲೂಗಡ್ಡೆಯ ಪ್ರಮಾಣವನ್ನು ದ್ವಿಗುಣಗೊಳಿಸಬಹುದು.

1948ನೇ ಇಸವಿಯಲ್ಲಿ ಉತ್ತರ ಭಾರತದ ಬೆಟ್ಟ ಪ್ರದೇಶಗಳಲ್ಲಿ ಮೊದಲ ಬಾರಿಗೆ ವಾಣಿಜ್ಯ ಮಟ್ಟದಲ್ಲಿ ಆಲೂಗಡ್ಡೆ ಬೀಜ ಪ್ರಮಾಣೀಕರಣ ವಿಧಾನವನ್ನು ವ್ಯವಸ್ಥೆಗೊಳಿಸಲಾಯಿತು. ಅತ್ಯುತ್ತಮ ಆಲೂಗಡ್ಡೆ ಬೀಜದ ಬೆಳೆ ತೆಗೆಯುವ ಚಟುವಟಿಕೆಯಲ್ಲಿ ಸಿಮ್ಲಾದ ಕೇಂದ್ರ ಆಲೂಗಡ್ಡೆ ಸಂಶೋಧನಾ ಸಂಸ್ಥೆ ಅಗ್ರಗಾಮಿಯಾಗಿದೆ. ಈ ಸಂಸ್ಥೆಯ ಆಶ್ರಯದಲ್ಲೇ ಕಾರ್ಯನಿರ್ವಹಿಸುತ್ತಿರುವ ಉದಕಮಂಡಲ, ಕುಫ್ರಿ, ಜಲಂಧರ, ಮುಕ್ತೇಶ್ವರ, [illegible] ಫಾರ್ಮ್, ಪಾಟ್ನಾ, ಡಾರ್ಜಲಿಂಗ್, ಶಿಲಾಂಗ್ ಮತ್ತು ಬೇರೆಡೆಗಳಲ್ಲಿ ಒಂಭತ್ತು ಆಲೂಗಡ್ಡೆ ಸಂಶೋಧನಾ ಕೇಂದ್ರಗಳಿವೆ.

ಜಲಂಧರ ಕೇಂದ್ರ

1957ನೇ ಇಸವಿಯಲ್ಲಿ ಕಾರ್ಯಾರಂಭ ಮಾಡಿದ ಜಲಂಧರದ ಸಂಶೋಧನಾ ಕೇಂದ್ರ, ಆಲೂಗಡ್ಡೆ ಉತ್ತಮಪಡಿಸುವ ಕೃಷಿವಿಧಾನ, ರೋಗ ನಿರೋಧ ಮುಂತಾದ ವಿವಿಧ ಅಂಶಗಳನ್ನು ಅಭ್ಯಸಿಸಿದೆ. ಈ ಕೇಂದ್ರ ರೋಗಮುಕ್ತ ಬೀಜ ಆಲೂಗಡ್ಡೆ ಉತ್ಪಾದನೆ ಹಾಗೂ ಅಭಿವೃದ್ಧಿಗೆ ಗಮನಬೀರುತ್ತದೆ.

ಈ ಕೇಂದ್ರಕ್ಕೆ ಸೇರಿರುವ 200 ಎಕರೆ ಭೂಮಿಯಲ್ಲಿ ಕಳೆದ ವಾರ್ಷಿಕ ಸಾಲಿನಲ್ಲಿ 10,700 ಕ್ವಿಂಟಾಲ್ ಆಲೂಗಡ್ಡೆ ಬೆಳೆ ತೆಗೆಯಲಾಯಿತು. ಇದರಿಂದ 5.08 ಲಕ್ಷ ರೂಪಾಯಿಯ ನಿವ್ವಳ ಲಾಭ ಬಂದಿತು. ಈ ಕೇಂದ್ರ ಇದುವರೆಗೆ ಅಧಿಕ ಬೆಳೆ ಕೊಡುವ ಹಾಗೂ ವಿವಿಧ ಸಸ್ಯ ರೋಗಗಳಿಂದ ವಿಮುಕ್ತವಾದಂತಹ 14 ವಿವಿಧ ಜಾತಿಯ ಬೀಜ ಆಲೂಗಡ್ಡೆಗಳನ್ನು ವಾಣಿಜ್ಯ ಮಟ್ಟದಲ್ಲಿ ಬಿಡುಗಡೆಮಾಡಿದೆ.

ಜಾಗತಿಕ ಸಹಕಾರದಿಂದ ಹಾಗೂ ದೀರ್ಘ ಅವಧಿಯ ಸಂಶೋಧನೆಯಿಂದ ತಯಾರಿಸಿದ ವಿವಿಧ ಜಾತಿಯ ಆಲೂಗಡ್ಡೆಗಳು ಅಲ್ಪಾವಧಿಯಲ್ಲಿ ಅಧಿಕ ಬೆಳೆ ಕೊಡುತ್ತವೆ. ಇದರಿಂದ ಬೇಸಾಯಗಾರರು ಒಂದೇ ಭೂಮಿಯಲ್ಲಿ ವರ್ಷಕ್ಕೆ ಎರಡು-ಮೂರು ಬೆಳೆ ತೆಗೆಯಲು ಸಾಧ್ಯವಾಗುತ್ತದೆ.

ಸಂಕರತಳಿ

ಹೊಸ ಆಲೂಗಡ್ಡೆ ತಳಿಗಳಲ್ಲಿ "ಕುಫ್ರಿ ಸಿಂಧೂರಿ" ಎಂಬುದು ಅತ್ಯುತ್ಕೃಷ್ಟವಾದುದು. ಇವುಗಳಿಗೆ ದುಂಡನೆಯ ಕೆಂಪು ಕಂದಗಳಿರುತ್ತವೆ. ಒಂದು ಹೆಕ್ಟೇರಿಗೆ 500 ಕ್ವಿಂಟಾಲ್ ಬೆಳೆ ತೆಗೆಯಬಹುದು.

ಈಗ ಕೆಲವು ತಿಂಗಳ ಹಿಂದೆ ಬಿಡುಗಡೆ ಮಾಡಿದ "ಚಂದ್ರಮುಖಿ" ಎಂಬ ಹೊಸ ತಳಿ ಬಿತ್ತನೆಯ ನಂತರ [illegible] ದಿನದಲ್ಲಿ ಸಿದ್ಧವಾಗುತ್ತದೆ. ಇದನ್ನು ಸಮತಟ್ಟಿನ ಭೂಮಿ ಹಾಗೂ ಗುಡ್ಡಗಾಡಿನಲ್ಲಿ ಬೆಳೆಯಬಹುದು.

ಸಾಧಾರಣ ವರ್ಗಕ್ಕೆ ಸೇರಿರುವ ದೊಡ್ಡ ಆಕಾರ ಹೊಂದಿರುವ ಹಾಗೂ ಶೀಘ್ರವಾಗಿ ಕೊಳೆಯದಿರುವ "ಶಕ್ತಿ" ಮತ್ತು "ಅಲಂಕಾರ್" ತಳಿಗೆ ಸೇರಿದ ಆಲೂಗಡ್ಡೆ ವಾಣಿಜ್ಯ ಜಗತ್ತಿನಲ್ಲಿ ಅತ್ಯಂತ ಜನಪ್ರಿಯವಾಗಿವೆ.

ಸಿಮ್ಲಾದ ಕೇಂದ್ರ ಆಲೂಗಡ್ಡೆ ಸಂಶೋಧನಾ ಸಂಸ್ಥೆಯು ಸಸ್ಯವ್ಯಾಧಿ ರಹಿತವಾದ ಸಂಕರ ಆಲೂಗಡ್ಡೆ ಬೆಳೆಯಲು ಪ್ರಯೋಗ ನಡೆಸುತ್ತಿದೆ.

ಭಾರತದ ವಾಯವ್ಯ ವಲಯದಲ್ಲಿ "ಕುಫ್ರಿ ಜ್ಯೋತಿ" ಮತ್ತು "ಜೀವನ್" ವರ್ಗದ ಆಲೂಗಡ್ಡೆ ಬೆಳೆ, ಈಶಾನ್ಯ ವಲಯದಲ್ಲಿ "ಕುಫ್ರಿ ನವೀನ" ಮತ್ತು "ಖಾಸಿ-ಗಾರೊ" ವರ್ಗದ ಬೆಳೆ ಹಾಗೂ ದಕ್ಷಿಣ ಭಾರತದ ಬೆಟ್ಟಗಾಡಿನಲ್ಲಿ "ಕುಫ್ರಿ ನೀಲಮಣಿ" ವರ್ಗದ ಬೆಳೆ ತೆಗೆಯಲು ಅತ್ಯುತ್ತಮವಾಗಿದೆ.

ಮಿತವ್ಯಯ ಸಾಧನೆ

ಇತ್ತೀಚಿನ ಕೆಲವು ವರ್ಷಗಳಲ್ಲಿ ಆಲೂಗಡ್ಡೆ ಕೃಷಿಯಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ. ರೋಗಮುಕ್ತ ಆಲೂಗಡ್ಡೆ ಬೀಜದ ಬೆಳೆ ತೆಗೆಯುವ "ಸೀಡ್ ಪ್ಲಾಟ್" ವಿಧಾನವನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಇದರಿಂದ 90ರಿಂದ 100 ದಿವಸಗಳ ಅವಧಿಯಲ್ಲಿ ಒಂದು ಹೆಕ್ಟೇರಿನಲ್ಲಿ 300ರಿಂದ 500 ಕ್ವಿಂಟಾಲ್ ಬೆಳೆ ಪಡೆಯುವುದು ಸಾಧ್ಯವಾಗಿದೆ.

[illegible] ವ್ಯಾಪಕವಾದ ಈ ವಿಧಾನದಿಂದ ತೆಗೆಯುವ ಬೆಳೆಯಲ್ಲಿ ಬೀಜ ಸಾಗಾಣಿಕೆ ಮಿತವ್ಯಯ ಸಾಧಿಸಲು ಸಾಧ್ಯವಾಗಿರುವುದು ಆಶಾದಾಯಕ ಅಂಶವಾಗಿದೆ. ಇದಕ್ಕೆ ಮುಂಚೆ ಬೀಜದ ಆಲೂಗಡ್ಡೆಗಳನ್ನು ಗುಡ್ಡಗಾಡಿನಲ್ಲಿ ಬೆಳೆದು ಸಮತಟ್ಟಿನ ಭೂಪ್ರದೇಶಕ್ಕೆ ಸಾಗಿಸಬೇಕಾಗಿತ್ತು. ಹೊಸದಾಗಿ ಅಭಿವೃದ್ಧಿಪಡಿಸಿದ ಬೀಜ ತಳಿಗಳಿಂದ ಸಮತಟ್ಟಿನ ಭೂಪ್ರದೇಶದ ಬೇಸಾಯಗಾರರು ಗುಡ್ಡಗಾಡಿನ ಆಲೂಗಡ್ಡೆ ಬೀಜವನ್ನು ಅವಲಂಬಿಸಬೇಕಾಗಿಲ್ಲ. ಈಗ ಬೇಸಾಯಗಾರರು ರೋಗಮುಕ್ತ ಆಲೂಗಡ್ಡೆ ಬೀಜದ ಬೆಳೆ ತೆಗೆಯಬಹುದಾಗಿರುವುದರಿಂದ ಉತ್ಪಾದನಾ ವೆಚ್ಚದಲ್ಲಿ ಮಿತವ್ಯಯ ಸಾಧಿಸಬಹುದಾಗಿದೆ.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾದ ಸಮಾಚಾರ — ಜನವರಿ 10ರಿಂದ ಮಾರ್ಚಿ 30ನೇ ತಾರೀಖಿನ ವರೆಗೆ

300=00 ರೂ. ನಿವ್ವಳ ವ್ಯಾಪಾರ ಮಾಡಿದರೆ

ಒಂದು Steel Desk (ಬರೆಯುವ-ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ— ಭಾಗ 1— ಸಾವಿತ್ರಿ ದೇವಿ ತಾಯ್ಸು	2—50
ಕೆಸರಿನ ಕಮಲ— ಭಾಗ 2— ”	2—50
ಉಂಡಾಡಿ ಗುಂಡ— ಪರ್ವತವಾಣಿ	2—00
ಧರ್ಮದೇವತೆ— ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ— ಎಲ್. ನರಸಿಂಹಯ್ಯ	3—00
ಎರಡು ತಲೆ ಹಾವು — ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—

ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು

ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಕಲಾವೃಂದದ ರಜತೋತ್ಸವದ ಸಮಾರೋಪ ಸಮಾರಂಭ

ತಾ. 29ರಂದು ಬೆಳಿಗ್ಗೆ ಡಾ|| ಯು. ಆರ್. ಅನಂತಮೂರ್ತಿಯವರ ಅಧ್ಯಕ್ಷತೆಯಲ್ಲಿ 'ಕನ್ನಡ ಸಾಹಿತ್ಯ—ಹಿಂದೆ ಮತ್ತು ಇಂದು' ಎಂಬುದರ ಮೇಲೆ ವಿಚಾರಗೋಷ್ಠಿ ನಡೆಯಿತು. 'ಭಾಷೆ ಮತ್ತು ಸಂವೇದನೆ' ಎಂಬುದರ ಮೇಲೆ ಶ್ರೀ ಡಿ. ಎಸ್. ರಘುನಾಥ ರಾವ್, 'ಸಣ್ಣ ಕತೆಗಳು—ಹಿಂದೆ ಮತ್ತು ಇಂದು' ಎಂಬುದರ ಮೇಲೆ ಶ್ರೀ ಉದ್ಯಾವರ ಮಾಧವ ಆಚಾರ್ಯ, ಶ್ರೀ ಬೈರಪ್ಪನವರ 'ತಬ್ಬಲಿಯು ನೀನಾದೆ ಮಗನೆ' ಎಂಬ ಕಾದಂಬರಿಯ ಮೇಲೆ ಶ್ರೀ ಸಿ. ಎಸ್. ಯಾದವಾಡರು ನಿಬಂಧಗಳನ್ನು ಮಂಡಿಸಿದರು. ಚರ್ಚೆಯಲ್ಲಿ ಸರ್ವಶ್ರೀ ರಾಮದಾಸ, [illegible], ಎಸ್. ಸದಾಶಿವ ರಾವ್, ಬಿ.ವಿ. ಕೆದ್ಲಾಯ, ಗೋವಿಂದ [illegible] ಭಾಗವಹಿಸಿದರು. ಅಧ್ಯಕ್ಷರು ಭಾಷಣ ಮಾಡುತ್ತಾ 'ನವ್ಯ'ವೆಂದರೆ ಒಂದು ಶೈಲಿಯಲ್ಲ, ತಂತ್ರ ಅಲ್ಲ, ಅದೊಂದು ನೋಡುವ ದೃಷ್ಟಿ ಎಂದು ಹೇಳಿ ಹಲವಾರು ಉದಾಹರಣೆಗಳೊಂದಿಗೆ ಸ್ಪಷ್ಟೀಕರಿಸಿದರು.

ಶ್ರೀ ಡಿ. ಎಸ್. ರಘುನಾಥರಾಯರ ನಿಬಂಧದಲ್ಲಿ [illegible] ಬಳಿಕ ಗೋಪಾಲಕೃಷ್ಣ ಅಡಿಗರ 'ಸಂವೇದನೆ' ಮಾನ್ಯವೆಂದೂ [illegible] ಮತ್ತು ನವ್ಯ ಕವಿಗಳ ಸಮಾನ ವಾತಾವರಣದಲ್ಲಿರುವರೆಂದೂ ಹೇಳಲಾಗಿತ್ತು. ಇದು ಸಭಾಸದರ ಒಂದು ಗುಂಪಿಗೆ ಪ್ರಿಯವಾಗಿ ಅನಿಸಲಿಲ್ಲ. ಶ್ರೀ ಬೈರಪ್ಪನವರ ನಿಯೋಜಿತ ಕಾದಂಬರಿಯನ್ನು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದವರಲ್ಲಿ ಹೆಚ್ಚಿನವರು ಓದಿಯೇ ಇರಲಿಲ್ಲ. ಅಂತೂ ವಿಚಾರವಿಮರ್ಶೆಯಲ್ಲಿ ಸಾಕಷ್ಟು ರುಚಿಕಾಣದಿದ್ದರೂ ಡಾ|| ಅನಂತಮೂರ್ತಿಯವರ ಭಾಷಣವು ಮನೋಜ್ಞವಾಗಿತ್ತು; ಮೆಚ್ಚುಗೆಯನ್ನು ಪಡೆದಂತೆ ಭಾಸವಾಯಿತು.

ಸಂಜೆ ಶ್ರೀ ಅ. ನ. ಕೃ. ರವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಶ್ರೀ ದೇವಂಗಿ ಚಂದ್ರಶೇಖರರ ಕಾವ್ಯವಾಚನ ಮನೋಜ್ಞವಾಗಿತ್ತು. ಶ್ರೀ ನಾಡಿಗೇರ ಕೃಷ್ಣರಾಯರ ಉಪನ್ಯಾಸ ಹಾಸ್ಯದ ಹೊನಲನ್ನು ಹರಿಸಿತು. ಅನಕೃ ರವರ ಭಾಷಣದ [illegible] ಮೆಚ್ಚಬಹುದಾಗಿತ್ತು; ಆದರೆ ವಿಷಯಸಂಯೋಜನೆಯಲ್ಲಿ ಅಸ್ಪಷ್ಟ ಅಲ್ಲವೆ ಎನ್ನುವಂತಿತ್ತು. ಸಾಹಿತ್ಯ ಮತ್ತು ಕಲೆಗಳ ಮೇಲೆ ಸಭೆಯನ್ನು ಆಕರ್ಷಿಸುವ ರೀತಿಯಲ್ಲಿ ಅವರ ಭಾಷಣ ನಡೆಯಿತು. ಕಲಾವೃಂದದ ಅಧ್ಯಕ್ಷ ಶ್ರೀ ವಿದ್ಯಾವಾರಿಧಿ ತೀರ್ಥ ಶ್ರೀಪಾದರು ಈ ಉತ್ಸವವನ್ನು ನಡೆಸುವಲ್ಲಿ ಎಲ್ಲರೂ ಸಹಕಾರ ನೀಡಿದ್ದನ್ನು ಮೆಚ್ಚಿ ಮಾತನಾಡಿದರು. ಬೆಳ್ಳಿಹಬ್ಬದ ಸಂಬಂಧ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಶ್ರೀ ಅನಕೃರವರಿಂದ ಹಂಚಲಾಯಿತು. ಆರಂಭದಲ್ಲಿ ವೃಂದದ ಹಿಂದಿನ ಕಾರ್ಯದರ್ಶಿ ಶ್ರೀ ಕೆ. ಆ. ಉಡುಪರು ಆ ದಿನಗಳ ಕೆಲವು ನೆನಪುಗಳನ್ನು ಸ್ಮರಿಸಿದ್ದರು.

ಉತ್ಸವದ ಸಂಬಂಧ ನಡೆಸಿದ ಅಖಿಲ ಕರ್ನಾಟಕ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆಯುವ ಅರ್ಹತೆಯುಳ್ಳ ಕಥೆ ಬರಲಿಲ್ಲವೆಂದೂ, ದ್ವಿತೀಯ ಬಹುಮಾನವು ಇಬ್ಬರಿಗೆ ಹಂಚಿಹೋಗುವುದರಿಂದ ಇದರ ಮೊತ್ತವನ್ನು ರೂ. 100ರಿಂದ ರೂ. 150ಕ್ಕೆ ಏರಿಸಿ ಪ್ರತಿಯೊಬ್ಬರಿಗೂ ರೂ. 75/-ರಂತೆ ನೀಡಲಾಗುವುದಾಗಿಯೂ ಘೋಷಿಸಲಾಯಿತು. ಸಭಾಕಾರ್ಯಕ್ರಮ [illegible] ಶ್ರೀ ಆರ್. ನರಸಿಂಹ [illegible] ಬೆಳ್ಳಿಹಬ್ಬವನ್ನು [illegible] ಯಶಗೊಳಿಸಿದ ಸರ್ವರಿಗೂ ಕಲಾವೃಂದದ ಪರವಾಗಿ ಧನ್ಯವಾದ ಸಮರ್ಪಿಸಿದರು.

ರಾತ್ರಿ ರಂಗಭೂಮಿ ಯುವ [illegible] ಎಂಬ ನಾಟಕವನ್ನು ಮನಸೆಳೆಯುವಂತೆ ಅಭಿನಯಿಸಿದರು.

ನಾಟಕಗಳಿಗೆ [illegible] ಯರ್ಶಿತ್ವ [illegible] ಕೊಂಡಿದ್ದುದು ಈ ಜಿಲ್ಲೆಯ ಹಲವಾರು ಮೂಲೆಗಳಿಂದಲೂ ಕಲಾರಾಧಕರು ಸಮಾವೇಶಗೊಂಡದ್ದು ಈ ಬೆಳ್ಳಿಹಬ್ಬದ ವೈಶಿಷ್ಟ್ಯವಾಗಿತ್ತು. ಇದಕ್ಕಾಗಿ ವೃಂದದ ಅಧ್ಯಕ್ಷರು, ಕಾರ್ಯದರ್ಶಿಗಳೂ, ಇನ್ನಿತರ [illegible] ಕಾರ್ಯಕರ್ತರೂ ಅಭಿನಂದನಾರ್ಹರು.

ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ಹೊಣೆ

ಲೇಖಕರು: ಶ್ರೀ ಕೆ. ಪದ್ಮನಾಭಯ್ಯ ಬಲ್ಲಾಳ್ - ವಿಟ್ಲ ಅರಮನೆ

ಸ್ವಾತಂತ್ರ್ಯ ಮಾನವ ಮಾತ್ರರಿಗೆ ಅತ್ಯಂತ ಪವಿತ್ರ. ವ್ಯಕ್ತಿ-ರಾಷ್ಟ್ರ ಈ ಎರಡು ದೃಷ್ಟಿಗಳಿಂದ ನೋಡಿದರೂ ಜೀವನದ ಪೂರ್ಣ ಸುಖವನ್ನು ಅನುಭವಿಸಲು ಸ್ವಾತಂತ್ರ್ಯ ಅವಶ್ಯ. ಎಂದೇ ನಮ್ಮ ಪೂರ್ವಿಕರಾದ ಅಸಂಖ್ಯ ನಾಯಕರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ತಮ್ಮ ಜೀವನವನ್ನೇ ಅರ್ಪಿಸಿದರು. ಅವರ ಬಲಿದಾನ ಭಾವೀ ಜನಾಂಗಕ್ಕೆ ಒಂದು ಆದರ್ಶವನ್ನು ಎಚ್ಚರಿಕೆಯನ್ನೂ ಕೊಟ್ಟಿದೆ.

ಮನುಷ್ಯನಾದವನು ಹೇಗಾದರೂ ಬದುಕಿದರೆ ಸಾಲದು. ತನಗಾಗಿ ತಾನು ಬದುಕಿದರೂ ಸಾಲದು. ಸಮಾಜದ ಅವಿಭಾಜ್ಯ ಅಂಗವಾಗಿ ತಿಳಿದುಕೊಂಡು ಎಲ್ಲ ರೀತಿಯಿಂದಲೂ, ಸಮಾಜಕ್ಕೆ, ರಾಷ್ಟ್ರಕ್ಕೆ ತಾನು ಸಲ್ಲಿಸಬೇಕಾದ ಸೇವೆಯನ್ನು ಸಲ್ಲಿಸಿದಾಗ ಜೀವನ ಸಾರ್ಥಕವಾಗುತ್ತದೆ. ಈ ರೀತಿಯ ಅನುಕೂಲತೆಯನ್ನು ಲಕ್ಷ್ಯಕ್ಕೆ ತಂದುಕೊಂಡೇ ನಮ್ಮ ದೇಶದ ನಾಯಕರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು, ಅದನ್ನು ಗಳಿಸಿಯೂ ಗಳಿಸಿದರು. ಇಂದಿಗೆ ನಮ್ಮ ಮುಂದಿನ ಪ್ರಶ್ನೆ, ಈ ಸ್ವಾತಂತ್ರ್ಯವನ್ನು ಉಳಿಸುವ ಬಗೆ ಹೇಗೆ? ಅದಕ್ಕಾಗಿ ನಾವು ಮಾಡಬೇಕಾದ್ದೇನು? ಎಂಬುದೇ ಆಗಿದೆ. ಸ್ವಾತಂತ್ರ್ಯದ ಹಕ್ಕಿನೊಡನೆ ಸ್ವಾತಂತ್ರ್ಯದ ಬಾಧ್ಯತೆಯೂ ಇದೆ; ಎಂಬುದರ ಕುರಿತು ಸ್ವತಂತ್ರ ಭಾರತದ ಪ್ರಜೆಯು ಇಂದು ತನ್ನನ್ನೇ ತಾನು ಅರಿತುಕೊಂಡಿಲ್ಲ. ರಾಷ್ಟ್ರದಾದ್ಯಂತ ಅಲ್ಲಲ್ಲಿ ಗೋಣ ದ್ವ ಹೊಟ್ಟೆಗಾಗಿ ಆಕ್ರಂದ ಎಬ್ಬಿಸುತ್ತಿರುವಾಗ, ಇನ್ನೊಂದೆಡೆ ಸ್ವಾರ್ಥ, ಅಜ್ಞಾನಗಳಿಂದಾಗಿ ಮತ್ಸರವೇ ಮೊದಲಾದ ಪೈಶಾಚಿಕ ಕೃತ್ಯಗಳು ತಾಂಡವವಾಡುತ್ತಿವೆ. ಯಾವುದೇ ಒಂದು ಮೂಲಧ್ಯೇಯವಿಲ್ಲದ ಈ ಕೃತ್ಯಗಳನ್ನು ಊಹಿಸಿದರೆ ಕಣ್ಣೀರು ಕಟ್ಟೊಡೆದು ಹರಿಯುವಂತಿದೆ. ನಮ್ಮ ಹಿರಿಯರ ಅವಿಶ್ರಾಂತ ದುಡಿತದ ಫಲದಿಂದಾಗಿ ಲಭ್ಯವಾದ ಅಮೂಲ್ಯ ಸ್ವಾತಂತ್ರ್ಯವನ್ನು ಅವಿವೇಕದಿಂದ ಕೊಲ್ಲಬಾರದು.

ಆ ಕುರಿತು ತನ್ನನ್ನೇ ತಾನು ಅರಿತುಕೊಂಡಾಗ, ಅಂದರೆ ಸ್ವತಂತ್ರ ದೇಶದ ಆದರ್ಶ ಪ್ರಜೆ ತಾನು ಎಂದಾಗ, ತನಗೂ—ದೇಶದ ಸ್ವಾತಂತ್ರ್ಯಕ್ಕೂ ಇರುವ ನಿಕಟ ಸಂಬಂಧದ ಅರಿವಾಗುತ್ತದೆ. ಆದ್ದರಿಂದ ದೇಶದ ಸ್ವಾತಂತ್ರ್ಯದ ಕುರಿತು ಕಳಕಳಿ ಇರುವ ತನ್ನ ಅರ್ಹತೆಯನ್ನು ಎತ್ತರಿಸಿ, ಬಿತ್ತರಿಸುವಲ್ಲಿ ಸ್ವಾತಂತ್ರ್ಯದ ಹುಟ್ಟಿದೆ. ಪ್ರಜೆಯು ಇಂದೇನೋ ರಾಜಕೀಯವಾಗಿ ಸ್ವಾತಂತ್ರ್ಯನಾಗಿದ್ದಾನೆ! ಆರ್ಥಿಕವಾಗಿ? ಭೌದ್ಧಿಕವಾಗಿ? ಮಾನಸಿ

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಕೃಷ್ಣವೇಣಿ	ಎಂ. ಎಸ್. ಸುಲೋಚನ ಭಾಗ ೧	2	00
ಕೃಷ್ಣವೇಣಿ	,, ಭಾಗ ೨	2	00
ಹಳ್ಳಿಯಿಂದ ದಿಳ್ಳಿಗೆ	ಸರೋಜ ನಾರಾಯಣ ರಾವ್	2	00
ತುಂಬಿದ ಬಾಳು	ಶ್ರೀನಿವಾಸ ಉಡುಪ	3	00
ವೇಣುಗಾನ	ಎನ್. ಶಾಂತ	3	00
ನದೀ ಜನರು	ಎಮ್. ಕೇಶವ ಭಟ್	3	10
ಶುಭ ಮುಹೂರ್ತ	ವೈ. ಸು. ಶೇ.	2	75
ಪ್ರೀತಿ ದೇವತೆ ಸನ್ನಿಧಿಯಲ್ಲಿ	ಉಷಾದೇವಿ	2	75
ಮಧುವನ	ಪ್ರಿಯದರ್ಶಿ	4	00
ಕಾಲ ಹೋಯಿತು	ಶ್ಯಾಮೂ	2	75
ವಿಶ್ವನಾಥ	ಧನ್ವಸ್ತ	2	00
ಹರಿಯಾಳಾದೇವಿ	ಕೃಪು. ವೆಂಕಟರಾವ್	2	25
ಹೇಮಾಲಿ	,,	2	00
ಕವಲೊಡೆದ ಮನ	,,	2	50
ಕಾರಂಜಿ	ಉಷಾದೇವಿ	1	50
ಮುರಿದ ಸರಪಳಿ	,,	2	25
ಪ್ರೇಮದ ಬಲೆ	ಭಗವತೀ ಚರಣ ವರ್ಮ	2	50
ಅಲೆಯೋಗಿ	ಕಲ್ಕಿ	2	00
ಶುಕ್ರವಾರದ ಲಕ್ಷ್ಮಿ	ತ. ರಾ. ಸು.	2	25
ನಿಜವಾದ ಸಿಂಹಿಣಿ	,,	1	50
ಯಕ್ಷ ಪ್ರಶ್ನೆ	,,	2	50
ಶಿಶು ದೈತ್ಯ	,,	1	00
ನೆನಸಿದ್ದೇ ಬೇರೆ	ಮ. ರಾಮಮೂರ್ತಿ	2	50
ನಂಬಿ ಕೆಟ್ಟವರು	ನವರಂಗ	2	50
ಬಂಗಾರದ ಕನಸು	,,	1	50
ಬಸ್ ಕಂಡಕ್ಟರ್	ಕಾಮರಾಜ	2	50
ಪಥ ವಿಹೀನ	ಎಂ. ಜಿ. ಭೀಮರಾವ್	2	50
ವಿಶಾಲ ನಯನ	,,	4	00
ನೆಳಲು ಬೆಳಕು	,,	2	50
ಹೊಸ ಬಾಳಿನ ಹೊಸ ಹಾದಿ	,,	2	25
ರಾಜೀವಪುರ	,,	3	00
ಹತ್ತು ಮುತ್ತಿನ ಹಾರ	ಎಮ್. ಜಿ. ಭೀಮರಾವ್	2	00
ಮುಕ್ತಿ ಕಾಂತಿ	ಸಿ. ಬಿ. ಚಂದ್ರಶೇಖರ್	2	50
ಗೌತಮನ ಶಾಪ	ಶ್ರೀರಂಗ	1	75
ನಗೆ ತಂದ ಸಂದೇಶ	ಸುರಂಗ	2	50
ವಜ್ರೇಶ್ವರಿ	ಕೆ. ಗುಂಡಣ್ಣ	2	50
ಅಣ್ಣ—ತಂಗಿ	ಟಿ. ಮಹಾಬಲೇಶ್ವರ ಭಟ್ಟ	2	50
ಸಾವು ಬರಲಿಲ್ಲ	ಕಾವೇರಿತನಯ	2	50
ಯಶಸ್ವಿನಿ	ಮಾ. ಭಿ. ಶಿವಗಿರಿ	2	50
ಹುಲ್ಲಿಗಿಯ ಮಂಚ	,,	2	00
ಕಂಬನಿಯ ಮಾಲೆ	,,	2	25
ಜೀವನ ಚದುರಂಗ	,,	2	50
ಚಕ್ರ ವ್ಯೂಹ	ಪಾಡಿಗೇರ ಕೃಷ್ಣರಾಯ	2	50
ದಿಕ್ಕೆಟ್ಟ ದೇಶ	,,	2	50
ನಾಟ್ಯ ಗಂಗಾವತಾರ	ಕೆ. ಎಸ್. ಮೂರ್ತಿ	2	50
ಸುಧಾಕರ	ಕೆ. ಕೃಷ್ಣಗೋಪಾಲ	2	50
ಅಪರಾಧಿ ಸಿ. ಮ್ಯಾಟ್	ಸೀತಾರಾಮ ಶಾಸ್ತ್ರಿ	2	00
ಚೆನ್ನಿಯ ಚೆಲುವು	ಎಚ್. ವೆಂಕಟೇಶ	3	00
ತ್ರಿಮೂರ್ತಿಗಳು	ಟಿಂಪ್ರೋರಾವ್	1	25
ಕಪ್ಪು ಗುಲಾಬಿ—44	,,	1	50
ಗಗನ ಸಖಿ ಭಾಗ—೧	,,	1	25
ಗಗನ ಸಖಿ ಭಾಗ—೨	,,	1	25
ಕೊಲೆಯಾದವನೆ ಕೊಲೆಗಾರನೆ ಭಾಗ-೧	,,	1	25
ಕೊಲೆಯಾದವನೆ ಕೊಲೆಗಾರನೆ ಭಾಗ-೨	,,	1	25
ಶಾಂತಿಯ ಜನನ	ಎ ಎಸ್. ಮೂರ್ತಿ	1	25
ಥಳಕು ಬೆಳಕು	ಪಾಂಡುರಂಗ	2	25
ಪ್ರೇಮದ ಫಲ	ಪಾನ್ಯಂ ಶಂಕರಮೂರ್ತಿ	2	25
ಸ್ವಪ್ನ ಸೌಧ	,,	2	00
ಸವತಿಯ ನೆರಳು	ಅರ್ಯಾಂಬ ಪಟ್ಟಾಭಿ	3	00
ನಕ್ಷತ್ರಗಾಥೆ	ಇಂದಿರಾತನಯ	2	00
ಪೂಜಾ ಮಂತ್ರ	,,	3	00
ಸೇಡಿನ ಕಿಡಿ	,,	3	00
ಹುತಾತ್ಮ ಮಾರ್ಟಿನ್ ಲೂಥರ್ ಕಿಂಗ್	ಕರುಣಾಕರನ್	3	50
ಪ್ರೇಮಾವತಿ	ನವಗಿರಿನಂದ	3	00
ಗಂಡು ಹೆಣ್ಣಾದಾಗ	ಕೆ. ಎಸ್. ಕರುಣಾಕರನ್	2	50
ದ್ಯಾವರು ಒದ್ದರೆ	ಸಂಪಿಗೆ ತಿಬ್ಬಣ್ಣ	2	50
ವಿರೂಪಾಕ್ಷಿಯ ಲೀಲೆ	ಜಂಬಿನ್ ವಿ. ಸಿ.	2	00
ದೇವ ಮಂದಿರದಲ್ಲಿ	ವಿಜಯ ಕುಮಾರ್	2	00
ಬಾಂಬೆಯ ಮದುವೆ ಬಾ. ಸ. ರಾಜಶೇಖರ್		2	00
ಸಾರ್ಥಕ ಸಾಹಿತ್ಯ	ಅ. ನ. ಕೃ	3	00
ಸಮರ ಸುಂದರಿ	,,	1	50
ಪಂಕಜ	,,	2	00
ಪದ್ಮಾವತಿ	ವೈ. ವಿ. ಪಾರ್ಶ್ವನಾಥ	2	00
ಸ್ವಪ್ನ	ನರಸು	1	50
ಶಚಿ ಗೌರಿ	ಅನುರಾಧ	1	50
ಕಾಂಚನಾ	ಜೆ. ಬಿ. ಪಾಟೀಲ	1	50
ಪಯಣದ ಹಾದಿಯಲ್ಲಿ	ಎಸ್. ಅನಂತ ನಾರಾಯಣ	1	50
ಶಾರದೆ—ಶಾಮಲೆ	ರಮಾತನಯ	1	00
ವೀಣೆ ನುಡಿಯಿತು	ಎಂ. ಶಿವಾಜಿರಾವ್	2	50
ಯಾವ ಜನ್ಮದ ಮೈತ್ರಿ	,,	2	50
ದೇವಾಲಯದಲ್ಲಿ	,,	2	50
ಪಚ್ಚೆ ತೋರಣ	ಟಿ. ಕೆ. ರಾಮರಾವ್	2	50
ಹಂಬಲ ಚಿಗುರಿತು	ಟಿ ಕ. ಆರ್.	2	00
ಅಂಧಕಾರ	ಎಸ್. ಎನ್. ರತ್ನ	1	50
ಭ್ರಾಂತಿ ತಿಮಿರ	ಜೆ. ಮಲ್ಲಾರಿ ಭಟ್ಟ	1	50
ಹೂವಾದ ಬಾಳು	ಜೆ. ಅತಂತ ಕಿಣಿ	1	00
ನಾನೇಕೆ ಹೀಗಾದೆ	ಬನ್ನಂಜೆ ರಾಮಾಚಾರ್ಯ	1	25
ಮಂಗಳ ಮಾಂಗಲ್ಯ (ನಾಟಕ)	ಹಿ. ಮ. ನಂಜಯ್ಯ	2	25
ಶಾಂತಿ ಸದನ	ನಾಗೇಶ ಶ್ಯಾನ ಭಾಗ	1	50
ಉಭಯ ಲೋಕೇಶ್ವರ	ಶ್ರೀನಿವಾಸ ಕೊರಟಿ	2	50
ವಿಟ ವ್ಯಾಮೋಹ	ತ್ರಿವಿಕ್ರಮ	2	50
ಒಲವಿನ ಒಸರು	ಬಿ ಜೆ. ಸತ್ಯಮೂರ್ತಿ	2	00
ಲಂಚ ಕೇಳುವ ಮಂಚ	ಬಿ ಕೆ. ಸುಂದರ್‌ರಾಜ್	2	50
ಬೀದಿಗೆ ಬಂದ ಸೂಳೆಯರು	,,	2	50
ಚಂದ್ರವದನೆಯ ಉದ್ಯಾನವನ	,,	2	50
ನಿಶ್ಚಿತಾರ್ಥ	ಸರೋಜ ರಾಕೋಡು	2	00
ಸೂಳೆಯ ಮಗಳು	ಎಂ. ರಾಮನ್	2	00
ಬಾಳಲಾರದ ಹೆಣ್ಣು	ಶಾರದಾಸುತ	1	50
ಉತ್ಕಲಾ	ಹರಿಜಾತ	3	00
ಹೃದಯೇಶ್ವರಿ	ಬಿ. ವೆಂಕಟೇಶ್	2	00
ಗಂಡನಲ್ಲದ ಗಂಡ	ಎಸ್. ನರಸಿಂಹಯ್ಯ	3	00
ಹೆಣ್ಣುಗಳ ಕೊಂಪೆ	,,	2	25
ಅತ್ತಿಮನೆ ಅಳಿಯ	,,	2	25
ರಾಗಿಣಿಯ ರಹಸ್ಯ	ಎನ್. ಸುಂದರಾಶಾಸ್ತ್ರಿ	1	75
ಅವನು ಕೊಲೆಗಾರನೇ	ನಾರಾಯಣ ಶಿಡೇನೂರ	2	50
ಗಣಗಣ ಹೊಗಿತು ಗಂಟೆ	ಶಕುಂತಲಾ ನಾಗರಾಜ	2	00
ಸ್ತ್ರೀ	ಮ ಪ್ಪಾಳ ರಂಗನಾಯಕಮ್ಮ	3	00
ಗಂಡಿನ ಹೃದಯ	ಎಸ್. ರಾಜರತ್ನಂ	2	50
ಅಮರ ಪ್ರೇಮ	,, ,,	3	50
ವಣ್ಣನ ಮಗ	ಎಸ್. ವಿ. ಶ್ರೀನಿವಾಸರಾವ್	1	50
ಹೃದಯ ವೀಣೆ	ಬಿ. ಜಿ. ಸತ್ಯಮೂರ್ತಿ	2	00
ಶೀಲಾ—ಸುಮ	ಅನಂತಪದ್ಮನಾಭ ರಾವ್	2	00
ಕಾವ್ಯಾರಾಧನ	ಸಿ. ಪಿ. ಕೆ.	3	75
ಬಿಳಿ ಕೊಕ್ಕರೆ	ಗಣೇಶ ರಾಯ್ಕಣಿ	1	25
ಭೂಮಿ ಜನ್ಮಂದ ಮುತ್ತು ಚಾತ್ರಿ	ಎಚ್. ವಿ. ನಾರಾಯಣ	1	50
ಪ್ರಾಚೀನ ಹಿಂದೂ ರಾಜ್ಯಪದ್ಧತಿ	ಎ. ಎನ್. ನಂಜುಂಡ ಸ್ವಾಮಿ	1	50
ಬಂಜೆ ಬೆಂಕಿ	ನಾ. ಡಿ ಸೋಜ	3	00
ದುಷ್ಯಂತ—ಶಕುಂತಲಾ	ಕಾಶೀನಾಥ ರಾಮಚಂದ್ರ ಕರಡೀಕರ	2	00
ತಿರುಗಿದ ಕುರ್ಚಿ	ಬಾಲಚಂದ್ರ	2	00
ಸೈರಂಧ್ರಿ	ಕೃಷ್ಣಮೂರ್ತಿ ಪುರಾಣಿಕ	1	50
ಸೇತುವೆಯಲ್ಲಿ ಮರಣ ರಾದಿತ್ಯ	ಸೇ. ವ. ಮಲ್ಲ	1	25
ಒಡ್ಡಿದ ಉರುಳು	ಅ. ಗೌ ಕಿನ್ನಿಗೋಳಿ	1	25
ಎಲೆಮರೆಯ ಹೂ	ಸ. ರಾಮದಾಸ	1	15
ಮಿಯಾ ಮಲ್ಹಾರ್	ಅ. ನ. ಕೃ.	2	50

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ವಾಗಿ? ಈ ಪ್ರಶ್ನೆಗಳಿಗೆ ಉತ್ತರವೆಲ್ಲಿದೆ? ಈ ದೆಸೆಯಲ್ಲಿ ನಾವು ಸಾಧಿಸಿಯೇ ತೀರಬೇಕಾದ ಪ್ರಗತಿ ಬಹಳವಿದೆ.

ಪ್ರಸ್ತುತ ವಿದ್ಯಾರ್ಥಿಗಳಾದವರು ದೇಶದ ಸ್ವಾತಂತ್ರ್ಯಕ್ಕಾಗಿ ಏನಾದರೂ ಮಾಡಬಯಸಿದ್ದರೆ! ನಿಮ್ಮ ಹೊಣೆ ಇದ್ದರೆ! ಈ ದೆಸೆಯಲ್ಲಿ ನಿಮ್ಮ ಗಮನ ಹರಿಸಬೇಕು. ದೇಶದ ವ್ಯಕ್ತಿತ್ವಕ್ಕೆ ಒಪ್ಪುವ ಸಂಸ್ಕೃತಿಯನ್ನು ಸ್ವತಂತ್ರವಾಗಿ ರೂಢಿಸಿಕೊಳ್ಳಬೇಕು. ಅನ್ಯರ ಅವಲಂಬನೆ, ಅನುಕರಣೆ ಎಂದೂ ಸಲ್ಲದು. ವಿದ್ಯಾರ್ಥಿಗಳಾಗಿ ನೀವು ಛಲ ತೊಟ್ಟು, ಋಣ ತೊಟ್ಟು ಈ ಗುರಿಯತ್ತ ಸಾಗಬೇಕು. ಆತ್ಮಾಭಿಮಾನವನ್ನು ಬಿಟ್ಟು ಸ್ವಾತಂತ್ರ್ಯಕ್ಕೆ ಅಸ್ತಿತ್ವವಿಲ್ಲ. ಆರ್ಥಿಕವಾಗಿ, ಬೌದ್ಧಿಕವಾಗಿ, ಮಾನಸಿಕವಾಗಿ; ಸ್ವಾವಲಂಬನೆ, ಸ್ವಸಾಮರ್ಥ್ಯ ನೀವು ಮೈಗೂಡಿಸಿಕೊಂಡಾಗ ನೀವು ಸ್ವತಂತ್ರರು ಎಂಬ ಮಾತು ದಿಟವಾಗುತ್ತದೆ. ಹೀಗಾಗಲು ನಿಮ್ಮ ಈ ವಿದ್ಯಾರ್ಥಿ ದೆಸೆಯಲ್ಲಿ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ನೀವು ಮಾಡತಕ್ಕ ಸರ್ವಪ್ರಥಮ ಕರ್ತವ್ಯವೆಂದರೆ ಶಕ್ತಿಪೂರ್ಣ ವಿದ್ಯಾರ್ಜನೆ. ಏಕ[illegible]ಯೊಡನೆ ಹೇಳುವುದಾದರೆ ಈ ಶಕ್ತಿಪೂರ್ಣ ವಿದ್ಯಾರ್ಜನೆಯಲ್ಲಿ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ, ಬೆಳೆಸಿಕೊಳ್ಳುವ ಊರ್ಜಿತಗೊಳಿಸುವ, ಎಲ್ಲ ಅರ್ಹತೆಗಳೂ ಇವೆ. ವಿದ್ಯಾರ್ಥಿಯು ವಿದ್ಯಾರ್ಥಿಯೇ ಆಗಿರಬೇಕು. ಅಂದರೆ ತನ್ನನ್ನು ತಾನು ಅರ್ಹನಾಗಿಸಿಕೊಳ್ಳಬೇಕು. ವಿದ್ಯೆಯ ಪೂರ್ಣತ್ವವನ್ನು ತಾನು ಪಡೆದುಕೊಳ್ಳಬೇಕು. ತಾನು ಶಕ್ತಿಪೂರ್ಣನಾಗಬೇಕು. ತನ್ನ ಶಕ್ತಿಯು ತನಗೆ ಮಾತ್ರವಲ್ಲ, ದೇಶಕ್ಕಾಗಿ ಎಂದು ತಿಳಿಯಬೇಕು. ತಾನು ಶಕ್ತನಾದರೆ ಆ ಶಕ್ತಿಯ ಉಪಯೋಗ ದೇಶಕ್ಕಾಗಬೇಕು. ಈ ದೃಷ್ಟಿಯಲ್ಲಿ ವಿದ್ಯಾರ್ಥಿಯು ಮುನ್ನಡೆಯಬೇಕು. ಆಗ ಅವನಿಗೆ ಜೀವನ ಅರ್ಥವಾಗುತ್ತದೆ. ಜೀವನದ ಪೂರ್ಣ ಅರ್ಥ ತಿಳಿಯುತ್ತದೆ. ತನ್ನಲ್ಲಿ ಇದ್ದುದನ್ನು ಕೊಟ್ಟುಬಿಟ್ಟ ದಾನಶೀಲನೆನ್ನಿಸುತ್ತಾನೆ. ತಾನೇ ಪರಿಪೂರ್ಣನಾದರೆ ಆತನು ಏನು ತಾನೆ ಕೊಡಲಿಕ್ಕಿಲ್ಲ? ಅಂತೆಯೇ ವಿದ್ಯಾರ್ಥಿಯು ಈ ಮೊದಲು ಹೇಳಿದ ರೀತಿಯಲ್ಲಿ ಶಕ್ತಿಪೂರ್ಣ ವಿದ್ಯಾರ್ಜನೆಯಿಂದ ಸ್ವತಂತ್ರ ಪ್ರಜೆ ಎನಿಸಿಕೊಳ್ಳುತ್ತಾನೆ. ಆಗ ತನ್ನ ದೇಶದ ಸ್ವಾತಂತ್ರ್ಯಕ್ಕೆ ಅವನು ನೀಡಬೇಕಾದ ಕಾಣಿಕೆಗಳೆಲ್ಲವನ್ನೂ ನೀಡಿದಂತೆಯೇ ಸರಿ.

ನೂತನ ವರ್ಷಾರಂಭದಲ್ಲಿ ಸನ್ಮಾನಿಸಲ್ಪಟ್ಟ ಶ್ರೀಗಳಾದ ಕ್ರ.
ಕೆ. ಭುಜಂಗರಾವ್, ವೈ. ಸಿ. ಎಂ. ಪತ್ರಾವೊ, ಕೆ. ಕೆ. ಶೆಟ್ಟಿ, ಕೆ. ವಿ. ಕಾಮತ್.

ನೂತನ ವರ್ಷದ ಪ್ರಶಸ್ತಿ

ಮಣಿಪಾಲದ ಎಕೆಡೆಮಿ ಮತ್ತು ಉಡುಪಿಯ ರೋಟರಿ ಕ್ಲಬ್ಬುಗಳು ಈ ವರ್ಷ ಶ್ರೀ ಕೆ. ಭುಜಂಗ ರಾವ್, ವೈ. ಸಿ. ಎಂ. ಪತ್ರಾವೊ, ಶ್ರೀ ಕೆ. ಕೆ. ಶೆಟ್ಟಿ ಮತ್ತು ಶ್ರೀ ಕೆ. ವಿ. ಕಾಮತ್‌ರವರು ಕ್ರಮವಾಗಿ ಉದ್ಯಮ, ಶಿಕ್ಷಣ, ರಾಜಕೀಯ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ತೋರಿಸಿದ ಅಸಾಧಾರಣ ಪ್ರತಿಭೆಗಾಗಿ ನೂತನ ವರ್ಷದ ಪ್ರಶಸ್ತಿಗಳನ್ನು ನೀಡಿ ಗೌರವಿಸಿದುವು. ಆರಂಭದಲ್ಲಿ ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರು ಸ್ವಾಗತಿಸಿದರು. ಡಾ| ಪಿ. ಆರ್. ನಾಯಕರು ಪ್ರಶಸ್ತಿ ವಿಜೇತರಿಗೆ ಹಾರಾರ್ಪಣೆ ಮಾಡಿದರು. ಶ್ರೀ ಕು. ಶಿ. ಹರಿದಾಸ ಭಟ್ಟ, ಶ್ರೀ ಪಿ. ಶ್ರೀಪತಿ ಆಚಾರ್ಯ, ಶ್ರೀ ಎಂ. ಡಿ. ಕಾಮತರು ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಶ್ರೀ ಕೆ. ಭುಜಂಗ ರಾಯರು ಅನಾರೋಗ್ಯದ ಕಾರಣದಿಂದ ಸಮಾರಂಭದಲ್ಲಿ ಅಲ್ಪ ಸೇವೆಗಾಗಿ ನೀಡಿದ ಗೌರವಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರಲ್ಲದೆ ಡಾ| ಪೈಯವರ ಅಸಾಮಾನ್ಯ ವ್ಯಕ್ತಿತ್ವ—ಸಾಧನೆಗಳನ್ನು ಪ್ರಶಂಸಿಸಿದರು. ಶ್ರೀ ಭುಜಂಗ ರಾಯರ ಭಾಷಣವನ್ನು ಶ್ರೀ ಟಿ. ರಮೇಶ ಪೈಯವರು ಓದಿ ಹೇಳಿದರು. ಗಂಧದ ಕರಂಡಕಗಳಲ್ಲಿ ಪ್ರಶಸ್ತಿಗಳನ್ನು ಅರ್ಪಿಸಲಾಗಿತ್ತು. ಕೊನೆಗೆ ಶ್ರೀ ಟಿ. ರಮೇಶ ಪೈಯವರು ಧನ್ಯವಾದವರ್ಪಿಸಿದರು.

ಮಹಾವೀರ ಕಾಲೇಜ್, ಮೂಡಬಿದ್ರಿ

ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ನಿನ ಅಧ್ಯಕ್ಷ ಮತ್ತು ರಿಜಿಸ್ಟ್ರಾರರಾದ ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರು ಮೂಡಬಿದ್ರಿಯ ಮಹಾವೀರ ಕಾಲೇಜಿಗೆ ಅಧಿಕೃತ ಸಂದರ್ಶನವನ್ನು ತಾ. ೨೬ರಂದು ನೀಡಿದರು. ಅವರಿಗೆ ಧರ್ಮದರ್ಶಿಗಳೂ ಅಧ್ಯಾಪಕರೂ ವಿದ್ಯಾರ್ಥಿಗಳೂ ಮೂಡಬಿದ್ರೆಯ ನಾಗರಿಕರೂ ಪ್ರೀತಿಯ ಸ್ವಾಗತ ನೀಡಿದರು. ಕಾಲೇಜಿನ ಅಭಿವೃದ್ಧಿಗೆ ಸಂಬಂಧಿಸಿದ ವರದಿಯನ್ನು ಪ್ರಿನ್ಸಿಪಾಲ್ ಶ್ರೀನಿವಾಸ ಉಪಾಧ್ಯಾಯರು ಓದಿದರು. ಡಾ| ಪೈಯವರ ಸಮರ್ಥ ಮಾರ್ಗದರ್ಶನಕ್ಕಾಗಿ ಅವರನ್ನು ಅಭಿನಂದಿಸಿದರು, ವಿವಿಧ ಸಂಘ ಸಂಸ್ಥೆಗಳ ಪರವಾಗಿ ಅವರಿಗೆ ಹಾರಾರ್ಪಣೆ ಮಾಡಿದ ತರುವಾಯ ವಿವಿಧ ಸಂಘಗಳ ಕಾರ್ಯದರ್ಶಿಗಳು ಅವರಿಗೆ ಮಾನಪತ್ರಗಳನ್ನು ಅರ್ಪಿಸಿದರು. ಮಾನವ ಸಂಪತ್ತನ್ನು ಸಮುಚಿತವಾಗಿ ಜನತೆಯ ಕಲ್ಯಾಣ ಮತ್ತು ಸುಖಕ್ಕಾಗಿ ಬಳಸಿಕೊಳ್ಳಬೇಕೆಂದೂ ಮೂಡಬಿದ್ರೆಯ ಘನತೆಗೆ ತಕ್ಕಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಮುನ್ನಡೆಯಬೇಕೆಂದೂ ಡಾ| ಪೈಯವರು ಬಯಸಿದರು.

ಮಹಾವೀರ ಕಾಲೇಜು ಸಂಘಟಿಸಿದ ಕಲೆ ಮತ್ತು ವಿಜ್ಞಾನ ಪ್ರದರ್ಶನವನ್ನು ಡಾ| ಪೈ ಉದ್ಘಾಟಿಸಿದರು. ಕಾಲೇಜಿನಲ್ಲಿ ಆರಂಭಿಸಿದ 'ಪುಸ್ತಕನಿಧಿ'ಗೆಂದು ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರರ ಪರವಾಗಿ ಶ್ರೀ ಜನಾರ್ಧನ ಪೈಯವರು ರೂ. ೫,೦೦೦|-ದ ಚೆಕ್ಕನ್ನು ನೀಡಿದರು. ಸಮಾಜಸೇವಾದಳ ಮತ್ತು ಕ್ರೀಡಾಕೂಟಗಳು ಏರ್ಪಡಿಸಿದ್ದ ಯಕ್ಷಗಾನದಿಂದ ಕೂಡಿಸಿದ ರೂ. ೨,೬೬೩-೯೫ರ ಚೆಕ್ಕನ್ನು ಕ್ರೀಡಾಂಗಣದ ಅಭಿವೃದ್ಧಿಗೆಂದು ಪ್ರಾಚಾರ್ಯ ಉಪಾಧ್ಯಾಯರು ಅರ್ಪಿಸಿದರು.

ಶ್ರೀ ಯು. ಕಾಶಿನಾಥ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು. ಡಾ| ಪೈಯವರು ಧರ್ಮದರ್ಶಿ ಮತ್ತು ಅಧ್ಯಾಪಕರನ್ನು ಉದ್ದೇಶಿಸಿಯೂ ಮಾತನಾಡಿದರು. ಶ್ರೀ ಜಿ. ವಿ. ಪೈಯವರು ಡಾ| ಪೈಗಳ ಅಮೂಲ್ಯ ಉಪದೇಶಗಳಿಗಾಗಿ ವಂದಿಸಿದರು. ಅಂದಿನ ಕಾರ್ಯಕ್ರಮವು ಕಾಲೇಜು ವಿದ್ಯಾರ್ಥಿಗಳಿಂದ 'ಸುಧನ್ವ ಕಾಳಗ' ಯಕ್ಷಗಾನ ಪ್ರದರ್ಶನದೊಂದಿಗೆ ಮುಗಿಯಿತು.

ಕಾಲೇಜಿನ ಕ್ರೀಡೋತ್ಸವವನ್ನು ತಾ. 29ರಂದು ಶ್ರೀ ಗೋಪಾಲ ಪೈಯವರು ಉದ್ಘಾಟಿಸಿದರು. ಅಂತಿಮ ಕ್ರೀಡಾ ಘಟಕಗಳು ಅಂದು ನಡೆದುವು. ವಿದ್ಯಾರ್ಥಿಗಳಲ್ಲಿ ಶ್ರೀ ಸ್ವಾಮಿ ಪಿಂಟೊ, ವಿದ್ಯಾರ್ಥಿನಿಯರಲ್ಲಿ ಫಿಲೋಮಿನಾ ಫರ್ನಾಂಡಿಸ್ ವೈಯಕ್ತಿಕ ಪ್ರಶಸ್ತಿಗಳಿಸಿದರು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಶ್ರೀ ನೇಮಿರಾಜ ಹೆಗ್ಡೆಯವರು ಸ್ವಾಗತಿಸಿದರು, ಕ್ರೀಡಾಕೂಟದ ಕಾರ್ಯದರ್ಶಿ ಶ್ರೀ ಜಯಚಂದ್ರನಾಥ ಧನ್ಯವಾದವರ್ಪಿಸಿದರು. ಪ್ರಾಚಾರ್ಯ ಶ್ರೀ ಉಪಾಧ್ಯಾಯರು ವಿದ್ಯಾರ್ಥಿಗಳಿಂದ ಗೌರವ ರಕ್ಷೆಯನ್ನು ಸ್ವೀಕರಿಸಿದರು.

ತಾ. 30ರಂದು ಪ್ರಿನ್ಸಿಪಲ್ ಯು. ದೇವದಾಸ ನಾಯ್ಕರ ಅಧ್ಯಕ್ಷತೆಯಲ್ಲಿ 'ಹಾಸ್ಟೆಲ್ ಡೇ'ಯನ್ನು ಆಚರಿಸಲಾಯಿತು. ತಾ. 31ರಂದು ಮಹಾಕವಿ ರತ್ನಾಕರ ವರ್ಣಿ ಸಾಹಿತ್ಯೋತ್ಸವವು ಪ್ರಿನ್ಸಿಪಲ್ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಎಸ್. ವಿ. ಪರಮೇಶ್ವರ ಭಟ್ಟ ಮತ್ತು ಶ್ರೀ ಎನ್. ಪ್ರಹ್ಲಾದ ರಾಯರು ಅಂದಿನ ಮುಖ್ಯ ಭಾಷಣಕಾರರಾಗಿದ್ದರು. ತಾ. 1ರಂದೂ ಇದೇ ಉತ್ಸವವು ಮುಂದುವರಿಯಿತು. ಶ್ರೀ ಬಿ. ಎಸ್. ಭಂಡಾರಿಯವರ ಅಧ್ಯಕ್ಷತೆಯಲ್ಲಿ ಶ್ರೀ ಎಚ್. ಜೆ. ಲಕ್ಕಪ್ಪ ಗೌಡರು ಭಾಷಣ ಮಾಡಿದರು. ತಾ. 2ರಂದು ಗಾಂಧಿಶತಮಾನೋತ್ಸವವು ನಡೆಯಿತು. ಡಾ| ಕೆ. ಬಿ. ರಾಮಕೃಷ್ಣ ರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎನ್. ಶ್ರೀಶ ಬಲ್ಲಾಳರು ಮುಖ್ಯ ಭಾಷಣಕಾರರಾಗಿದ್ದರು. ತಾ. 3ರಂದು ವಿವಿಧ ಸಂಘಗಳ ದಿನವನ್ನು ಡಾ| ಎಂ. ವಿ. ಹೆಗ್ಡೆಯವರ ನೇತೃತ್ವದಲ್ಲಿ, ತಾ. 4ರಂದು ಕಾಲೇಜ್ ದಿನವನ್ನು ಡಾ| ಜೆ. ಡಿ. ಪೇರಿಯರ್‌ರ ಹಿರಿತನದಲ್ಲಿ ವೈಭವಪೂರ್ಣವಾಗಿ ಆಚರಿಸಲಾಯಿತು. ತಾ. 28ರಂದು ಆರಂಭವಾಗಿ ತಾ. 4ರಂದು ಕೊನೆಗೊಂಡ ಈ ಕಾಲೇಜಿನ ಸಮಾರಂಭಗಳು ಉತ್ತಮ ರೀತಿಯಲ್ಲಿ ನಡೆದಿದ್ದುವು. ಮನರಂಜನೆಯ ವಿವಿಧ ಕಾರ್ಯಕ್ರಮಗಳಿದ್ದುವು. ನಾಟಕಾಭಿನಯ, ಭರತನಾಟ್ಯ, ಭಕ್ತಿಪರ ಗೀತೆ, ಯಕ್ಷಗಾನ, ಕಾವ್ಯವಾಚನಗಳು ಮೊದಲಾದ ವೈವಿಧ್ಯಗಳು ಇಡೀ ಕಾರ್ಯಕ್ರಮಗಳಿಗೆ ಮೆರುಗು ನೀಡಿದ್ದುವು.

ಒಲೆಗುಂಡನೊಬ್ಬನೇ ಮೊಲಬಹುದೇ?

(ನಾಲ್ಕನೇ ಪುಟದಿಂದ)

"ಅದಿಲ್ಲ, ನಮ್ಮ ನೀನು ಹೇಳುವುದೇನ!"

"ಅಯ್ಯೋ, ನಾನೇನು ಹೇಳುವುದು? ನಾನೇನೋ ನನ್ನಷ್ಟಕ್ಕೆ ಹಾಡುತ್ತ ಇರುವಾಗ ಮಧ್ಯೆ ಪ್ರವೇಶಿಸಿದ ಭೂಪತಿಗಳು ನೀವೇ ತಾನೇ"

"ಅಂದ್ರೆ ನನ್ಗೇ ಹೇಳ್ಲಿಕ್ಕಿರಬೇಕು."

"ಇರಬಹುದು...."

"ಏನು ಹೇಳ್ಬೇಕು?"

"ಏನು ಹೇಳ್ಬೇಕೂಂತ ಬಂದ್ರೋ ಅದನ್ನ ನಿರ್ವಂಚನೆಯಿಂದ ನಿರಾತಂಕದಿಂದ ಹೇಳಿಬಿಡೋದು...."

"ಅಯ್ಯೋ, ಅದು ಯಾರಿಗೆ ನೆನಪಿದೆ?"

"ಇದೊಳ್ಳೇ ಕಥೆಯಾಯ್ತು...."

"ಹೇಳ್ಬೇಕೂಂತ ಬಂದದ್ರ ಆ ಮಾತನ್ನೇ ಮರ್ತ್ಬಿಟ್ಟೆ...."

"ಅಂತ, ಭಾರಿಯೇನೂ ಇಲ್ಲಾನ್ನಿ ಇಂದಿನ ನಮ್ಮ ಕಾವ್ಯಗಳ ಯುಗದಲ್ಲಿ ಸರ್ವಜ್ಞ ಯಾತಕ್ಕೂ ಬೇಡಾದವ..."

"ಇರಬಹುದು, ನಮ್ಮಂತವರಿಗೆ ಅವನೇ ಬೇಕು. ನೀವು, ಸಂಕೇತ ಪ್ರತಿಮೆ—ರೂಪಕ—ಪ್ರತೀಕಾಂತ ಹೇಳೋಕೆ ಹೊರಟರೆ ನಮ್ಮಂಥ ಅನಭಿಜ್ಞರಿಗೆ ಹೇಗೆ ಅರ್ಥವಾಗಬೇಕು?"

"ಅದು ಸರೀನ್ನಿ. ನಮ್ಮ ಕವಿಗಳು ಮುಂದುವರಿದಿದ್ದಾರೇನೋ ನಿಜ; ಆದರೆ, ಅವರನ್ನು ಜನತೆ ಹಿಂಬಾಲಿಸಿಲ್ಲ; ಅವರೂ ಜನತೆಯನ್ನು ಮುಟ್ಟಲಿಲ್ಲ—ಆಂಗ್ಲ ಸಾಮ್ರಾಜ್ಯಶಾಹಿಯಂತೆ... ...ಆಂಗ್ಲರ ಸಾಮ್ರಾಜ್ಯ ಆಂಗ್ಲ ದೇಶಕ್ಕೆ ಹೋದಂತೆಯೇ ಈ ಜನತೆಯಿಂದ ದೂರವಾದ ಕಾವ್ಯ ಪದ್ಧತಿಯೂ ನಿಕಟ ಭವಿಷ್ಯದಲ್ಲಿ ಹೆಡೆ ಮಲ್ಲಬಹುದು .."

"ನಾಳೆ ಏನಾಗುತ್ತೇಂತ ಯಾರಿಗೆ ಗೊತ್ತು? ಸರ್ವಜ್ಞನೇ ಅಂದಿಲ್ಲವೆಂದ ಮೇಲೆ ...."

"ನನಗಿರುವ ಆಧಾರ ಅದೊಂದೇ..."

"ಈ ಆಧಾರದಿಂದಲೇ ಶಂಕೆಯನ್ನು ದೂರ ಮಾಡ ಬಹುದು...."

"ಹ್ಞಾಂ...."

"ಹ್ಞಾಂ...."

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S C 215/68

ಸಿಟಿ ಸ್ಟೋರ್ ಮ್ಯಾನೇಜರ್ — ವಾದಿ

ಮತ್ತು

S. ರಘುನಾಥ ಹೆಗ್ಡೆ, ಜೋಗಪ್ಪ ಹೆಗ್ಡೆರ ಮಗ, ಶಿರ್ವ ಗ್ರಾಮದ ಕಲ್ಲಬೆಟ್ಟು

ಪ್ರತಿವಾದಿ.

ವಾದಿಗೆ ಪ್ರತಿವಾದಿಯು ತಾ. 17-7-68 ರಲ್ಲಿ ರೂ. 150|-ಕ್ಕೆ ಬರೆಕೊಟ್ಟ ಡಿಮಾಂಡ್ ನೋಟು ಪ್ರಕಾರ ಬರ, ಅನ್ವೇಷಿಸಿ ದಾಖಲುಮಾಡಿದ ಮೇಲಿನ ದಾವೆಯು ತಾರೀಕು 10.1.69ಕ್ಕೆ ಇಟ್ಟಿದೆ. ಪ್ರತಿವಾದಿಯು ಸದ್ರಿ ತಾ. 10.1.1969ನೇ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ನ್ಯಾಯಾಲಯದಲ್ಲಿ ಸ್ವಲ್ಪಂತ ಕೋರ್ಟು ಮುಂದೆ ಹಾಜರಾಗುವರೆ ತಪ್ಪಿದ್ದಲ್ಲಿ ಪ್ರತಿವಾದಿಯ ಗೈರುಹಾಜರಿಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

(*Sd.*) Gratian C. Rego,
Pleader for Plaintiff,
ತಾ. 4-1-69.

ತಾ। ಬೊ। ಅಧ್ಯಕ್ಷರಾಗಿ

ಮಧ್ವರಾಜ್,

ಅದ್ಯಂತಾಯ,

ಸದಾಶಿವ ಭಂಡಾರಿ

ಇವರ ಆಯ್ಕೆ

ಉಡುಪಿ ತಾಲೂಕುಬೋರ್ಡು ಅಧ್ಯಕ್ಷರಾಗಿ ಶ್ರೀ ಎಂ. ಮಧ್ವರಾಜರೂ, ಕಾರ್ಕಳ ತಾ। ಬೋರ್ಡು ಅಧ್ಯಕ್ಷರಾಗಿ ಶ್ರೀ ಎಸ್. ಮೋಹನದಾಸ ಅದ್ಯಂತಾಯರೂ ಅವಿರೋಧವಾಗಿ ಪುನರಾಯ್ಕೆಗೊಂಡಿರುವರು. ಬಂಟ್ವಾಳ ತಾ। ಬೋರ್ಡು ಅಧ್ಯಕ್ಷರಾಗಿ ಶ್ರೀ ಕೆ. ಸದಾಶಿವ ಭಂಡಾರಿಯವರು ಚುನಾಯಿಸಲ್ಪಟ್ಟಿದ್ದಾರೆ.

ಶ್ರೀಗಳಾದ ಬಿ. ಸುಬ್ಬಣ್ಣ ಹೆಗ್ಡೆ (ಉಡುಪಿ) ಎಸ್. ಡಿ. ಸಾಮ್ರಾಜ್ಯ (ಕಾರ್ಕಳ), ಕೆ. ರಾಮ ನಾಯಕ್ (ಬಂಟ್ವಾಳ) ಇವರು ಅನುಕ್ರಮವಾಗಿ ಆಯ್ಕೆಯಾಗಿದ್ದಾರೆ.

(ಮೂರನೇ ಪುಟದಿಂದ)

ರಿಂದಲೇ ಪುಂಡಾಟಿಕೆಯ ದಾರಿ ಹಿಡಿದಿವೆ. ಪುಂಡಾಟಿಕೆಗೆ ಬಹಳ ಹೆಸರಾದ ಪಶ್ಚಿಮ ಬಂಗಾಳದಲ್ಲಿ ಘಟಿಸಿದ ಗೊಂದಲ ಇದಕ್ಕೊಂದು ಜ್ವಲಂತ ನಿದರ್ಶನ. ದಕ್ಷಿಣದ ನಾಗರಕೋಯಿಲ್‌ನಲ್ಲಿ ಕಾಮರಾಜರ ವಿರುದ್ಧದ ಹೋರಾಟದಲ್ಲಿಯೂ ಅವರ ವಿರೋಧಿಗಳು ನೇರ ದಾರಿ ತುಳಿಯುತ್ತಿಲ್ಲ. ಮತದಾರರಿಗೆ ತಮ್ಮ ನೀತಿಯನ್ನು— ತಮ್ಮ ಗುರಿಯನ್ನು— ಅಧಿಕಾರದಲ್ಲಿರುವಾಗ ಸಾಧಿಸಿದ ಸಾಧನೆಗಳನ್ನು ಮುಂದಿಡಲಾಗದೆ ಈ ರೀತಿ ಪ್ರಾಯಸದಲ್ಲಿ ಪಾಪಾಸು ಎಸೆಯುವ ಹವ್ಯಾಸಕ್ಕೆ ತೊಡಗಿರುವು ಪ್ರಜಾಪ್ರಭುತ್ವಕ್ಕೊಂದು ಕಲಂಕ. ಜನತೆ ಶೀಘ್ರ ಜಾಗ್ರತವಾಗಿ ನಡೆದುಕೊಳ್ಳುವುದೆಂದು ಹಾರೈಸಬಹುದೆ?

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 69/1968.

ಭಾಗೀರಥಿ ಯಾನೆ ನೇತ್ರಾವತಿ ಬಾಯಿ ಕೂಡಾ— ವಾದಿರು

ಮತ್ತು

ಬಿ. ಚಂದ್ರಶೇಖರ ಹೆಗ್ಡೆ ಕೂಡಾ — ಪ್ರತಿವಾದಿರು

ಇವರೊಳಗೆ

ನೋಟೀಸು

ಉಡುಪಿ ತಾಲ್ಲೂಕು ಆತ್ರಾಡಿ ಗ್ರಾಮದಲ್ಲಿರುವ ಬಿ. ಚಂದ್ರಶೇಖರ ಹೆಗ್ಡೆಯವರ ಮಗ, ಮೋಲ್ಕಂಡ ದಾವೆಯ 2ನೇ ಪ್ರತಿವಾದಿ ಶ್ರೀನಿವಾಸ ಹೆಗ್ಡೆಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,-

ಮೇಲೆ ಹೆಸರು ಕಾಣಿಸಿದ ವಾದಿರು ನಿಮ್ಮ ಮೇಲೆ ಕೂಡಾ ಪ್ಲೈಂಟು ನಿವೃತ್ತಿಗೋಸ್ಕರ ವ್ಯಾಜ್ಯ ದಾಖಲು ಮಾಡಿದ್ದಾರೆ. ಸದ್ರಿ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 8-2-69ಕ್ಕೆ ಇಟ್ಟಿರುತ್ತದೆ. ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಆ ದಿನ ಕೋರ್ಟು ಮುಂದೆ ಬೆಳಿಗ್ಗೆ 11.00ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕೋರ್ಟು ಹುಕ್ಕುಂ ಪ್ರಕಾರ

P. N. K. RAO, *B. A., LL. B.*

Advocate for Plaintiff.

ಉಡುಪಿ, ದ. ಕ.

ತಾರೀಕು, 8-1-1969.

ಮೊಗವೀರ ಮಂಡಳಿಯ

ವಾರ್ಷಿಕೋತ್ಸವ

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ, ಇದರ 65ನೆಯ ವಾರ್ಷಿಕೋತ್ಸವ ಮತ್ತು ಮೊಗವೀರ ರಾತ್ರಿ ಶಾಲೆಯ ಬಹುಮಾನ ವಿತರಣೆ ಸಮಾರಂಭವು ತಾರೀಕು 22-11-68ರಂದು ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾಸದನದಲ್ಲಿ ಶ್ರೀ ಎಂ. ಎಸ್. ಖನ್ನಾರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮಂಡಳಿಯ ಅಧ್ಯಕ್ಷ ಶ್ರೀಯುತ್ ಕೆ. ಪುತ್ರನರು ಶ್ರೀ ಮತ್ತು ಶ್ರೀಮತಿ ಖನ್ನಾರವರ ಪರಿಚಯವನ್ನು ನೆರೆದ ಸಭಿಕರಿಗೆ ಮಾಡಿದಲ್ಲದೆ, ಮಂಡಳಿಯು ಕಳೆದ 65 ವರ್ಷಗಳಿಂದ ವಿದ್ಯಾಕ್ಷೇತ್ರದಲ್ಲಿ ಮಾಡಿದ ಕಾರ್ಯವನ್ನು ವಿವರಿಸಿ, ಸರ್ವರನ್ನೂ ಸ್ವಾಗತಿಸಿದರು.

ಜೊತೆಕಾರ್ಯದರ್ಶಿ ಶ್ರೀ ಕೆ. ಬಿ. ಕರ್ಕೇರರು ಶುಭ ಸಂದೇಶಗಳನ್ನು ಓದಿಹೇಳಿದರು. ಹಾಗೆಯೇ ಜೊತೆ ಕೋಶಾಧಿಕಾರಿ ಶ್ರೀ ನಾಗಪ್ಪ ಪಿ. ಸುವರ್ಣರು ವಾರ್ಷಿಕೋತ್ಸವದ ಸಮಯದಲ್ಲಿ ಧನಸಹಾಯವಿತ್ತ ಸಂಘ ಸಂಸ್ಥೆಗಳು ಮತ್ತು ಹೊಸತಾಗಿ ಸೇರಿ ಪ್ರೋತ್ಸಾಹಿಸಿದ ಸದಸ್ಯರ ಮತ್ತು ಪೋಷಕರ ಹೆಸರುಗಳನ್ನು ಓದಿಹೇಳಿದರು.

ಆ ಮೇಲೆ ಶ್ರೀಮತಿ ಲಕ್ಷ್ಮೀಬಾಯಿ ಖನ್ನಾರವರು ಮಂಡಳಿಯ ಕಾರ್ಯಕರ್ತರಿಗೆ ಹಾಗೂ ಶಾಲಾಮಕ್ಕಳಿಗೆ ಪಾರಿತೋಷಕಗಳನ್ನು ಹಂಚಿದರು. ಸಭಿಕರ ಪೈಕಿ ಸರ್ವಶ್ರೀ ಕೆ. ಎಸ್. ಧಾರಿಯ, ಪ್ರೊ. ಬಿ. ಯಂ. ಕೋಡಿಕಲ್, ಮುರೂರು ಸಂಜೀವ ಶೆಟ್ಟಿ, ಆರ್. ಎಂ. ಪುತ್ರನ್, ಗೋಪಾಲ್ ಆರ್. ಕೋಟಿಯನ್ ಮತ್ತು ಡಿ. ಎ. ಕರ್ಕೇರರು ಭಾಷಣ ಮಾಡಿದರು. ಶ್ರೀ ಖನ್ನಾರವರು ತನ್ನ ಅಧ್ಯಕ್ಷ ಭಾಷಣದಲ್ಲಿ ಸಂಸ್ಥೆಗೆ ಶುಭವನ್ನು ಕೋರಿ ಸಹಾಯದ ಭರವಸೆಯನ್ನಿತ್ತರು. ಆ ಮೇಲೆ ಶ್ರೀ ಗಂಗಾಧರ ಕೆ. ಕರ್ಕೇರರು ಉಪಕಾರ ಸ್ಮರಿಸಿದರು. ಅನಂತರ ಮನರಂಜನಾ ಕಾರ್ಯಕ್ರಮಗಳಾದುವು.

ಕಡಲಿಕಾಳುಗಳು

ಹೊಸ ವರ್ಷ ಶುಭದಾಯಕವಾಗಲಿ ಅಂತ ಎಲ್ಲರೂ ಎಲ್ಲರಿಗೂ ಹೇಳುತ್ತಾರೆ.

—ಆಡುವ ಮಾತಿಗೂ ಒಳಗಿನ ಭಾವಕ್ಕೂ ಎಷ್ಟೋಸಲ ಅನ್ನೋದು ಯಾರಿಗೆ ಗೊತ್ತಿಲ್ಲ?

o o o

ರೋಟರ್ ಸಿಂಡಿಕೇಟ್ ಟೂರ್ನಮೆಂಟಿನ ಸಮಾರೋಪ ಸಮಾರಂಭ

ಉಡುಪಿ— ತಾ. 20-12-68ರಂದು ಡಾ। ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಜೆ. ಸಿ. ರೇಗೋರವರಿಂದ ಉದ್ಘಾಟಿಸಲ್ಪಟ್ಟ ರೋಟರ್ ಸಿಂಡಿಕೇಟ್ ಟೂರ್ನಮೆಂಟಿನ ಸಮಾರೋಪ ಸಮಾರಂಭವು ತಾ. 1ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಆರಂಭದಲ್ಲಿ ಶ್ರೀ ಟಿ. ರಮೇಶ ಪೈಗಳು ಸ್ವಾಗತಿಸಿದರು. ಡಾ। ಟಿ. ಮಾಧವ ಪೈಗಳು ಸಮಾರೋಪ ಭಾಷಣ ಮಾಡುತ್ತಾ, ಇಂದಿನ ಸಮಾಜದಲ್ಲಿ ಆಟೋಟ, ಸಂಗೀತ ಮುಂತಾದ ಮನರಂಜನೆ ಕಾರ್ಯಗಳು ಮಾನ್ಯತೆ ಪಡೆಯುವುದಕ್ಕೆ ಸಂತೋಷ ವ್ಯಕ್ತಪಡಿಸಿ ಉಡುಪಿಯಲ್ಲಿ ಸ್ಪೋರ್ಟ್ಸ್‌ಗಳನ್ನು ನಡೆಸಲು ಅನುಕೂಲವಾಗುವ ಕ್ರೀಡಾಂಗಣವನ್ನು ರಚಿಸುವುದು ಅವಶ್ಯವೆಂದು ನುಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ಶಿಕ್ಷಣ ಪದ್ಧತಿಯಲ್ಲಿ ತರುಣರನ್ನು ಎಲ್ಲಾ ರೀತಿಯಲ್ಲಿ ಸಮಾಜಕ್ಕೆ ಉಪಯುಕ್ತರಾಗುವ ವ್ಯಕ್ತಿಯನ್ನಾಗಿ ಮಾಡುವ ಅವಕಾಶವಿಲ್ಲವೆಂದೂ, ಅವರ ದೇಹ ಮತ್ತು ಮನಸ್ಸುಗಳನ್ನು ಪ್ರಸನ್ನಗೊಳಿಸುವ ಇಂತಹ ಸ್ಪರ್ಧೆಗಳನ್ನು ರೋಟರಿ ಕ್ಲಬ್, ಎಕಾಡೆಮಿ ಮತ್ತು ಸಿಂಡಿಕೇಟ್ ಬ್ಯಾಂಕಿನವರು ಸಂಯುಕ್ತ ಪ್ರಯತ್ನದಿಂದ ಆರಂಭಿಸಿದುದನ್ನು ಪ್ರಶಂಸಿಸಿದರು. ಜನರು ತಮ್ಮನ್ನು ತಾವೇ ಸುಧಾರಿಸಿಕೊಳ್ಳದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲವೆಂದು ನುಡಿದರು. ಟೂರ್ನಮೆಂಟಿನ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ಧನ್ಯವಾದ ಸಮರ್ಪಿಸಿದರು.

ಭಾರತದ ಅಂಚೆ ಚೀಟುಗಳು ಬಣ್ಣಬಣ್ಣಗಳಿಂದ ಅಚ್ಚಾಗಲು ಆರಂಭಿಸಿವೆ.

—ಬಣ್ಣದ ಚೀಟಿಗಳ ನಡುವೆ ಇದೊಂದು ಏಕ ವರ್ಣವಾಗಿರುವುದು ವ್ಯಾಮೋಹವಾದಕ್ಕೆ ಅಪಚಾರವಲ್ಲವೆ?

o o o

1972ರಲ್ಲಿ ನಡೆಯುವ ಪಾರ್ಕ್ ಅಧ್ಯಕ್ಷ ಚುನಾವಣೆಯಲ್ಲಿ ಫೀಲ್ಡ್ ಮಾರ್ಷಲ್ ಅಯೂಬಖಾನರು ಸ್ಪರ್ಧಿಸಬೇಕೋ ಬೇಡವೋ ಎಂದು ಇನ್ನೂ ನಿರ್ಧರಿಸಿಲ್ಲವಾದ್ದರಿಂದ ಅವರೂ ಜಾನ್ಸನ್ನರ ದಾರಿ ತುಳಿಯುತ್ತಾರೆಂಬ ವರದಿಗಳಿಗೆ ಇನ್ನೂ ಪೂರ್ಣ ಪುಷ್ಟಿ ದೊರೆತಿಲ್ಲ.

o o o

ಅರೆನಗ್ನ, ಪೂರ್ಣನಗ್ನ, ವರ್ಣರಂಜಿತ ಚಿತ್ರಗಳು, ಸಿನಿಮಾ ತಾರೆ ಸುರ ಚಿತ್ರಗಳನ್ನು ಬಿಡಿಸಿ ಬೇಸತ್ತ ಕಲಾವಿದರು ಸಾಹಿತಿಗಳ ಸರ್ವಾಂಗ ಸುಂದರ ಚಿತ್ರ ಬರೆಯಲು ತೊಡಗಿದ್ದಾರಂತೆ:

—ಬಚ್ಚಲು ಮನೆಯಲ್ಲಿ ಸಾಹಿತಿ ... ಮತಿ.... ಇವರ ಚಿತ್ರಗಳಿಗೇನೇ ಹೆಚ್ಚಿನ ಗಿರಾಕಿ ಎಂದೂ ರೇಗಲ್ಲದಂತಹ ಅರೆನಗ್ನ ಹುಡುಗಿ ಇರೋ ಚಿತ್ರ ಬಿಚ್ಚುವರು ಗೊಣಗಿದರಂತೆ.

o o o

ಬ್ರಿಟಿಷ್ ಸರಕಾರದ ಕೆಲವು ಪ್ರಮುಖ ದಾಖಲೆಯು ಕಾಗದ ಪತ್ರಗಳು ಕಾಣೆಯಾಗಿದ್ದು ಅವನ್ನು ಪತ್ತೆ ಮಾಡಲು ಮಾಡಿದ ಪ್ರಯತ್ನಗಳು ವಿಫಲವಾಗಿವೆ.

—ನಮ್ಮ ಮೈಸೂರು ಸರಕಾರದ ಗಾಳಿ ಬ್ರಿಟಿಷ್ ಸರಕಾರಕ್ಕೂ ಬೀಸತೊಡಗಿತಲ್ಲಾ, ನಮ್ಮಿಂದಲೂ ಅವರು ಕಲಿಯ ತೊಡಗಿದರು, ಹೊಸವರ್ಷದ ಶುಭಾಶಯಗಳು.

o o o

ಪಕ್ಷ ನಿಷ್ಠೆಯು ಮುಂದೆ ಪ್ರಧಾನಿ ಪದವಿ ತೃಣ ಸಮಾನವೆಂದ, ಇಂದಿರಾ ಗಾಂಧಿ ಅಂದರು.

—ತೃಣ ಸಮಾನ ಮಾತ್ರವಲ್ಲ, ಹುಲ್ಲಿಗಿಂತ ಕೀಳು ಎನ್ನಬೇಕಿತ್ತು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O.S. 197/1968

ಮೂಲ್ಕಿ ಶ್ರೀ ವೆಂಕಟ್ರಮಣ ದೇವರ ಭಂಡಾರ ಯಿದ್ರ ಟ್ರಸ್ಟಿಗಳು U. ಕೃಷ್ಣರಾವ್ ಸಹಾ ... ... ವಾದಿ,

ಮರ್ನ್ಸಿನ ಅರಂಜ ಬಾಯಿ ಸಹಾ

—ಪ್ರತಿವಾದಿರು.

1. ಮರ್ನ್ಸಿನ ಅರಂಜ ಬಾಯಿ, ಬೆಳ್ಮರ ಅರಂಜಾರ ವಿಧವೆ; 3 ... 4. ಸ್ವಾಮಿನ ಅರಂಜ—ಬೆಳ್ಮರ ಅರಂಜರ ಮಕ್ಕಳು—ಮಂಗಳೂರು ತಾಲ್ಲೂಕು ಕೊಡೆತ್ತೂರು ಗ್ರಾಮದ ಕಲ್ಲಕುಮೇರಿಯೆಂಬಲ್ಲಿರುವವರು.

ಸದ್ರಿ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಸುವದೇನೆಂದರೆ—

ನೀವು ಮಗ್ಗರೆ ವಾದಿರದೇವರ ಭಂಡಾರದ ಮಳಗೆಬಾಲಗೇಣಿ ಹಕ್ಕಿನಿಂದ ಅನುಭವಿಸುವ ಆಸ್ತಿ ಬಾಬ್ತು ವಾದಿ ದೇವರ ಭಂಡಾರಕ್ಕೆ ಕಳೆದ ತಾ 31-3-1967ನೇ ವ್ಯಾದಿಗೆಬರತಕ್ಕ ಬಾಕಿ ಬಾಲಗೇಣಿ ಗೇಣಿ ಬಡಿ ಕೂಡಾ ರೂಪಾಯಿ 1844.31ಕ್ಕೆ ವಾದಿಯರು ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 21-1-1969ಕ್ಕೆ ನಿಮಗೆ ನೋಟೀಸಿನ ಬಗ್ಗೆ ಇಟ್ಟಿದೆ. ಆಕ್ಷೇಪ ಇದ್ದರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ದರೆ ನಿಮ್ಮ ಗೈರುಹಾಜರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕ್ಕುಂ ಪ್ರಕಾರ ತಿಳಿಯಿಸಿದೆ.

K. S. KAMATH,

Advocate for Plaintiffs

Karkala, 5-1-69.

ಮತ್ತೊಮ್ಮೆ ಧನ್ಯವಾದಗಳು

ಸಿಂಡಿಕೇಟ್ ಬ್ಯಾಂಕಿನ ಠೇವಣಾತಿಗಳು

31-12-68 ರಲ್ಲಿದ್ದಂತೆ 113 ಕೋಟಿಗಳಿಗೂ ಮೀರಿದುವು

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್ ತನ್ನ ಎಲ್ಲಾ ಗ್ರಾಹಕರಿಗೂ ಹಿತಚಿಂತಕರಿಗೂ ಹೊಸ ವರುಷದ ಶುಭಾಶಯಗಳನ್ನು ಅರ್ಪಿಸಲು ಆನಂದಿಸುತ್ತದೆ. ಮತ್ತು 1968ನೇ ದಶಂಬರ್ 31ರಲ್ಲಿದ್ದಂತೆ ಅದರ ಠೇವಣಾತಿಗಳು 113 ಕೋಟಿಗಳಿಗೂ ಮೀರಿದೆಯೆಂದು ಪ್ರಕಟಿಸಲು ಸಂತೋಷಿಸುತ್ತದೆ. ಈ ಹೊಸ ಶಿಖರವನ್ನು ಮುಟ್ಟಲು ಸಾಧ್ಯವಾಗುವಂತೆ ಈ ಎಲ್ಲಾ ವರ್ಷಗಳಲ್ಲಿ ತಮ್ಮ ನಿರಂತರ ವಿಶ್ವಾಸ ಮತ್ತು ಪ್ರೋತ್ಸಾಹ ವಿತ್ತುದಕ್ಕೆ ದೇಶದಾದ್ಯಂತ ಇರುವ ತನ್ನ ಅಸಂಖ್ಯಾತ ಘಟಕಗಳಿಗೆ ಅದು ವಂದನೆಗಳನ್ನರ್ಪಿಸುತ್ತದೆ. ಮುಂದಿನ ವರುಷಗಳಲ್ಲಿ ಕೂಡಾ ಇದೇ ಸೇವಾಸ್ಫೂರ್ತಿಯಿಂದ ದೇಶದ ಮತ್ತು ಜನಸಾಮಾನ್ಯರ ಸೇವೆಯನ್ನು ಮಾಡುವ ಮುನ್ನೋಟವಿರಿಸಿಕೊಂಡಿದೆ.

ಕರ್ತವ್ಯನಿಷ್ಠೆ ಮತ್ತು ಉತ್ಸಾಹದಿಂದ ಈ ಅದ್ಭುತ ಪ್ರಗತಿಸಾಧನೆಯನ್ನು ಸಾಧ್ಯಗೊಳಿಸಿದ ತನ್ನ ಸಿಬ್ಬಂದಿಗೆ ಕೂಡಾ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್ ತನ್ನ ಧನ್ಯವಾದಗಳನ್ನರ್ಪಿಸುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

"ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗಾಗಿ ಪ್ರತಿಯೊಬ್ಬರ ಬ್ಯಾಂಕ್"

ರಜಿಸ್ಟರ್ಡ್ ಆಫೀಸು, ಮಣಿಪಾಲ | 254ಕ್ಕೂ ಮಿಕ್ಕಿದ ಶಾಖೆಗಳು | ಟಿ. ಎ. ಪೈ ಅಧ್ಯಕ್ಷರು

ಇಪ್ಪತ್ತು ಪೈಸೆಗಳು

(ಎರಡನೇ ಪುಟದಿಂದ)

ಬಳ್ಳಿ ಹಾರವಿರಲಿಲ್ಲ. ಕೊನೆಯುಸಿರೆಳೆಯುತ್ತಿದ್ದ ರಾಯರು "ನಾಗೂ...ನಾ... ...ನು ಹೋಗುತ್ತಿದ್ದೇನೆ......... ಹೊಟ್ಟೆಯಲ್ಲಿರುವ ಕಂದನನ್ನು ಜೋಪಾನವಾಗಿ ನೋಡಿಕೊ.......ಅದಕ್ಕೆ ತಂದೆ ಇಲ್ಲವೆಂಬ ದುಃಖವನ್ನು ನೀನು ಮರೆಸು..." ಎಂದು ಕೊನೆಯುಸಿರೆಳೆದರು. ನಾಗೂಳ ತಲೆಯಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ತನ್ನ ಸಂಸಾರದ ಏಕ ಮಾತ್ರ ಆಧಾರ ಕಂಭವೂ ಉರುಳಿ ಬಿದ್ದುದರಿಂದ ನಾಗೂಗೆ ಬದುಕುವ ಉಪಾಯ ಕಾಣಲಿಲ್ಲ. ಪತಿಹಾದಿ ಸೇರಲೇ ಎಂದೆಣಿಸಿದರೂ ಹೊಟ್ಟೆಯಲ್ಲಿದ್ದ ಶಿಶುವಿಗೆ ದ್ರೋಹವಾದೀತೆಂದು, ಆ ಶಿಶುವಿಗಾಗಿ ಅವಳು ಬದುಕಿ ಉಳಿಯಲು ನಿರ್ಧರಿಸಿದಳು. ಸೀನೂ ಹುಟ್ಟಿದ. ನಾಗೂಗೆ ತನ್ನ ಮಗನ ಮೇಲಿನ ಪ್ರೀತಿ ಅಷ್ಟಿಷ್ಟಲ್ಲ. ಅತನ ಪಾಲನ ಪೋಷಣೆಗಳಿಗಾಗಿ ಮನೆಯಲ್ಲಿದ್ದ ಒಂದೊಂದು ಸಾಮಾನು ಮಾರಿ ಹೋಗತೊಡಗಿತು. ಮುಂದಿನ ಜೀವನಕ್ಕಾಗಿ, ತನ್ನ ಜೀವನದ ಇನ್ನು ಮುಂದಿನ ಆ ತಂತುವಿನ ಪೋಷಣೆ ರಕ್ಷಣೆಗಾಗಿ ಆಕೆ ಇತರರ ಮನೆಗೆಲಸಕ್ಕೆ ಸೇರಿದಳು. ಆಕೆಗೆ ಮನೆಗೆಲಸಕ್ಕೆ ಹೋಗಲೂ ಪುರುಸೊತ್ತಿಲ್ಲವಾಗಿತ್ತು. ತನ್ನ ಮಗುವಿನ ಪಾಲನೆ ಪೋಷಣೆಯಲ್ಲಿಯೇ ಆಕೆ ದಿನ ಕಳೆಯತೊಡಗಿದಳು. ಆದರ ಆಟ ಪಾಟಗಳಲ್ಲಿ ಅವಳು ತನ್ನ ಪತಿಶೋಕವನ್ನು ಸ್ವಲ್ಪ ಮಟ್ಟಿಗೆ ಮರೆಯುವಂತಾಯಿತು. ಸೀನೂ ದೊಡ್ಡವನಾದ. ತನ್ನ ಮಗನ ವಿದ್ಯಾಭ್ಯಾಸಕ್ಕೆ ಅಡ್ಡಿ ಬರಲು ಅವಳಿಗೆ ಇಚ್ಛೆಯಿರಲಿಲ್ಲ. ಅವಳು ಅವನನ್ನು ಶಾಲೆಗೆ ಸೇರಿಸಿದಳು. ಆಟ ಪಾಟಗಳಲ್ಲಿ ಬುದ್ಧಿವಂತನಿದ್ದ ಮಗನ ಬಗ್ಗೆ ಹೆಮ್ಮೆ ಅವಳಿಗೆ. ಮಗನ ಬೇಕು—ಬೇಡಗಳನ್ನು ಪೂರೈಸುವುದಕ್ಕಾಗಿ ಆಕೆ ಹಿಂಜರಿಯುತ್ತಿರಲಿಲ್ಲ. ಆದರೆ ಬಡತನ...

o o o o

ಇನ್ನೆಷ್ಟು ಹೊತ್ತು ಆಕೆ ಯೋಚನೆಯಲ್ಲಿಯೇ ಕಳೆಯುತ್ತಿದ್ದಳೋ ಏನೋ. ಸೀನೂ ತಾಯಿಯನ್ನು ಅಲುಗಾಡಿಸಿ ಆಕೆಯನ್ನು ಹೊರ ಪ್ರಪಂಚಕ್ಕೆ ತಂದ. ವಿದ್ಯುತ್ ದೀಪವನ್ನು ಹಚ್ಚುತ್ತಾ ನಾಗೂ ಸೀನೂನ ಕೇಳಿದಳು. "ಸೀನೂ ನಿನಗೆ ಮದ್ದು ಬೇಕೇಬೇಕೇನು?...."

ಸೀನೂನ ಮುಖ ಕಳೆಗುಂದಿತು. ತಾಯಿಯಿಂದ ಆಗಲೇ ಭರವಸೆ ಪಡೆದಿದ್ದ ಆತನಿಗೆ ತಾಯಿ ಮತ್ತೆ ಈ ರೀತಿ ಕೇಳುವಳೆಂದು ಆಕೆ ಎಣಿಸಿರಲಿಲ್ಲ. ಮಗುವಿನ ದುಃಖವನ್ನು ನೋಡಿ ನಾಗೂ ಪೌಡರಿನ ಡಬ್ಬದಲ್ಲಿದ್ದ ಹತ್ತು ಪೈಸೆಯ ಎರಡು ಪಾವಲಿಗಳನ್ನು ತೆಗೆದು ಕೊಟ್ಟಳು.

ಸೀನೂಗೆ ಆಕಾಶ ಮೂರೇ ಗೇಣು ಉಳಿಯಿತು. ಆತ ಮದ್ದು ತೆಗೆದುಕೊಳ್ಳುವ ಆತುರದಲ್ಲಿದ್ದ. ಪೇಟೆಗೆ ಓಡಿದ ಆತನಿಗೆ ತಾಯಿ ಮಾತು ಕಿವಿಗೆ ಬೀಳಲಿಲ್ಲ.

o o o

ದವ್ವ ಬೀದಿ ಸೀನೂ ಓಡುತ್ತಿದ್ದ. ಆತನ ಮನದಲ್ಲಿ ಯೋಚನೆಗಳ ಅಲೆಗಳು ಎದ್ದು ಎದ್ದು ದಡಕ್ಕೆ ಬಡಿಯುತ್ತಿದ್ದವು. 'ಯಾವ ಅಂಗಡಿಯಿಂದ ತೆಗೆದುಕೊಳ್ಳಲಿ?....ತ್ರಿವೇಣಿ ಸ್ಟೋರ್ಸ್?.... ಥೂ....ಬೇಡ...ಅಲ್ಲಿಯ ಮದ್ದು ಪ್ರಯೋಜನ ಇಲ್ಲ....ಮದ್ದು ಹೊಟ್ಟೋದೇ ಇಲ್ಲ ....ಹಾಂ ಹೌದು! ರಾಮೂನ ತಂದೆ ತೊಗೊಂಡ್ಬಂದಿದ್ದಾರಲ್ಲ ಅಲ್ಲಿ! ಸರಿ..." ಸೀನೂನ ಕಾಲುಗಳು ತ್ವರಿತ ಗತಿಯಿಂದ ಓಡತೊಡಗಿದವು. ಕೈ ಮುಷ್ಟಿ ಎರಡು ನಾಣ್ಯಗಳನ್ನು ಭದ್ರವಾಗಿ ಹಿಡಿದಿತ್ತು. "ಆದರೆ ಯಾವ ಮದ್ದು ತೆಗೆದುಕೊಳ್ಳಲಿ?...ನಕ್ಷತ್ರ ಮಾಲೆ...ಕೇಪು ... ಪಟಾಕಿ ಯಾವುದಾದೀತು? ನಕ್ಷತ್ರ ಮಾಲೆ ಎಷ್ಟು ಸಿಕ್ಕುತ್ತೆ ಮಣ್ಣು...ಟುಸ್ಸು ...ಕಿ....ಆಸ್ಬೆಸ್ಟ್?....ಪಟಾಕಿ ಬೇಡಪ್ಪ ...ಜೋರು ಶಬ್ದ ಮಾಡಿ ಹೊಟ್ಟುತ್ತೆ ಅದು...ಹೆದರಿಕೆ ಆಗುತ್ತಪ್ಪಾ ನಂಗೆ.... ಕೇಪೇ ಸರಿ....ಕೇಪು ಎಷ್ಟು ಸಿಗಬಹುದು? ಏನೋ ಯಾರಿಗ್ಗೊತ್ತು?...ಆದರೆ...."

ಓಡುತ್ತಿದ್ದ ಸೀನೂನ ಮನಸ್ಸು ಈ ಲೋಕದಲ್ಲೇ ಇರಲಿಲ್ಲ. ಆತನ ಗಮನ ಮದ್ದಿನಲ್ಲೇ ಅಡಗಿತ್ತು. ದಾರಿ ಪರಿಚಯದ್ದಾದ್ದರಿಂದಲೇ ಮನಸ್ಸು ಬೇರೆ ಕಡೆ ಇದ್ದರೂ ಕಾಲುಗಳು ತ್ವರಿತ ಗತಿಯಲ್ಲಿ ಸರಿಯಾದ ದಾರಿಯಲ್ಲೇ ಸಾಗುತ್ತಿದ್ದವು.

ಆದರೆ....ಒಂದು ತಿರುವಿನಲ್ಲಿ ತಿರುಗುತ್ತಿದ್ದ ಸೀನನಿಗೆ ಮುಂದೆ ಬರುತ್ತಿದ್ದ ಲಾರಿ ತೋರಲಿಲ್ಲ. ಲಾರಿಯವನಿಗೂ ತನ್ನ ಲೋಡು ತುಂಬಿದ ಗಾಡಿಯನ್ನು ನಿಯಂತ್ರಣಕ್ಕೆ ತರಲು ಆಗಲಿಲ್ಲ. ಒಂದೇ ಕ್ಷಣ....ಸೀನೂ ಲಾರಿಯ ಅಡಿಯಲ್ಲಿದ್ದ... ರಕ್ತದ ಮಡುವಿನಲ್ಲಿ ಬಿದ್ದಿದ್ದ ಆತನನ್ನು ಜನ ಸುತ್ತುಗಟ್ಟಿದರು.

ನಾಗೂಗೆ ಸುದ್ದಿ ತಿಳಿದಾಕ್ಷಣ ಹೃದಯದ ಬಡಿತವೇ ನಿಂತಂತಾಯಿತು. ಆಕೆ ಹುಚ್ಚಿಯಂತೆ ಓಡಿ ಸೀನೂನ ಮೇಲೆ ಬಿದ್ದು ರೋಧಿಸತೊಡಗಿದಳ.

ಮಾತೃ ಹೃದಯ ಪುತ್ರನ ಆಕಸ್ಮಿಕ ಮರಣದಿಂದ ಕರಗುತ್ತಿತ್ತು. ದೂರದಲ್ಲಿ....ಹರಿದಿದ್ದ ರಕ್ತದಲ್ಲಿ...ಹತ್ತು ಪೈಸೆಯ ಎರಡು ನಾಣ್ಯಗಳು ಚೆಲ್ಲಾಪಿಲ್ಲಿಯಾಗಿ.. ಅನಾಥವಾಗಿ ಬಿದ್ದಿದ್ದುವು.

o o o

ಮರುದಿನ ನಾಗೂ ಕೆಲಸಕ್ಕೆ ಹೋಗಲಿಲ್ಲ. ಆಕೆ ಮನೆಗೆಲಸ ಮಾಡುತ್ತಿದ್ದ ಮನೆಯವರೂ ಆಕೆಯನ್ನು ಕರೆಯಲು ಬಂದರು. "ನಾಗೂ" ಎಂದು ಕರೆದ ಕರೆಗೆ ಒಳಗಿಂದ ಉತ್ತರವಿರಲಿಲ್ಲ. ಬಾಗಿಲು ತೆಗೆಯಲು ಒಳಗಿನಿಂದ ಅಗುಳಿ ಹಾಕಿತ್ತು...

ಜನರು ಗಾಬರಿಯಿಂದ ಬಾಗಿಲನ್ನು ತೆರೆದು ಒಳಹೊಕ್ಕು ನೋಡಿದರು...ದಿಗ್ಭ್ರಾಂತರಾದರು....

ನಾಗೂ ಪತಿ ಮತ್ತು ಪುತ್ರನ ಬಳಿಗೆ ತೆರಳಿದ್ದಳು.

o o o

ಕಥೆ ಕೇಳಿ ನನ್ನ ಕಣ್ಣು ಹನಿಗಣ್ಣಾಯಿತು. ದೂರದ ದಿಗಂತದತ್ತ ನೋಡುತ್ತಿದ್ದ ಗೆಳೆಯ ಹೇಳಿದ—"ಹೆಣ್ಣಿನ ಹೃದಯ ಅದೆಷ್ಟು ಶೋಕಗಳನ್ನು ತಾಳಿಕೊಳ್ಳಬಹುದು ಹೇಳು....ಪತಿಯ ಮರಣ....ಪುತ್ರನ ಮರಣ...ಬಡತನ...... ಇವುಗಳಿಂದ ಆಕೆ ಹೇಗೆ ಬಿಡುಗಡೆ ಹೊಂದಿದಳು....ಬಡತನದಲ್ಲೂ ಆಕೆಯ ಜೀವಕ್ಕೆ ಬೆಲೆಯೇ ಇರಲಿಲ್ಲ. ತಂತಿಯು ಕಡಿದ ಮೇಲೆ ವೀಣೆ ಹಾಳಾಗಲಿಕ್ಕೆ ಬೇಕಷ್ಟೇ?....ಸರಿ; ಹೋಗೋಣವೇ?"

ಕಣ್ಣುಜ್ಜಿಕೊಂಡು ಮೇಲೆದ್ದೆ....ಮನಸ್ಸು [illegible] ಹಾಕುತ್ತಿತ್ತು.

ಚುಟುಕ

ರಾಜ್ಯೋತ್ಸವ

ರಾಜ್ಯೋತ್ಸವದ ಪುಣ್ಯಜಲದಲಿ ಮಿಂದೂ
ಅನಿಯಂಬಾರಿಯಲಿ ಮೆರವಣಿಗೆ ಬಂದೂ
"ಕರ್ನಾಟಕ"ದ ಹೆಸರು ಕೇಳಿಬರಲಿಲ್ಲ —
ಕನ್ನಡಾಂಬೆಯ ಬಯಕೆ ಬರಿದಾಯಿತಲ್ಲ!

ಕನಸಿನಾ ಮಂಡಿಗೆ

"ಮನೆಗೊಂದು ಕನ್ನಡದ ಪತ್ರಿಕೆ" ಯ
ಘೋಷ
ಕನ್ನಡಾಭಿಮಾನಿಗಳ ಪ್ರೇಮದಾವೇಶ
ಹರುಷದಲಿ ಸೇರಿ ಸಂಪಾದಕರ ವೃಂದ
ಕನಸಿನಾ ಮಂಡಿಗೆಯ ಮುಕ್ಕಿದರು ಕಂದ ||

ಪಂಚವಾರ್ಷಿಕ ಯೋಗ

ಪಂಚವಾರ್ಷಿಕ ಯೋಜನೆಗೆ ಬಾತು ರೋಗ
[illegible] ಇಂದಿರಾಳ 'ಮಹಾಯೋಗ'
ಕುಲಪುರೋಹಿತ [illegible] 'ಮುರಾರಿ'
ಬಡ ಜನರ ಬಲಿಗೊಟ್ಟು ಎಲ್ಲಾ ಪರಾರಿ ||

ವಿದ್ಯಾರ್ಥಿಗಳ ಗಲಭೆ

ದೇಶದಾದ್ಯಂತ ವಿದ್ಯಾರ್ಥಿಗಳ ಗಲಭೆ
[illegible]
[illegible]
[illegible]

ವೇತನ ಆಯೋಗ

[illegible]

ಉಚಿತ ಶಿಕ್ಷಣ

ಉಚಿತ ಶಿಕ್ಷಣದಿಂದ [illegible]
[illegible]
[illegible]
[illegible] ||

— "ದೇವಕಿನಂದ"
ವಿಜಾರ್ನ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 16-4-1966.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಶ್ರೀ

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೨.

Phone— 5711, 5712, 5713 } 3 Lines.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ–ಸತ್ಕಾರಕ್ಕೆ ಸಿದ್ಧವಿರುವ

ಹೋಟೆಲ್ ಸತ್ಕಾರ್

ಕಾರ್ಪೋರೇಷನ್ ಆಫೀಸಿನ ಬಳಿ, 9, ಮಿಷನ್ ರಸ್ತೆ
ಬೆಂಗಳೂರು — 27

ಇಲ್ಲಿಗೆ ಸಂದರ್ಶನ ಕೊಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR
Boarding & Lodging
Near Corporation Office, 9, Mission Road
Bangalore — 27

Registered with the Registrar
of News Papers for India
under No. R. N. 3546/'57

REGD: No: B. G: 176
LICENCE No. 31
Licensed to Post without Prepayment

ಮಕ್ಕಳೆಂದರೆ ಎಲ್ಲರಿಗೂ ಅಕ್ಕರೆ ಆದರೆ ....

ಬೆಂಗಳೂರು 'ಸಿಟಿ ಮಾರ್ಕೆಟ್' ಎಂದರೆ ತುಂಬ ಪ್ರಸಿದ್ಧ. ಇಲ್ಲಿಂದ ಸುಮಾರು ಎರಡು ಮೈಲಿ ದೂರದಲ್ಲಿದೆ ಪಾದರಾಯನಪುರ. ಸಣ್ಣ ಪುಟ್ಟ ದಿನಸಿನ ಹಾಗೂ ಬಟ್ಟೆ ಅಂಗಡಿಗಳು, ಹೋಟೆಲುಗಳು, ಚಿಕ್ಕ ಚಿಕ್ಕ ಮಗ್ಗಗಳು. ಅಗಲಕಿರಿದಾದ ರಸ್ತೆಗಳು— ಇವೆಲ್ಲ ಒಂದೆಡೆ ಇದ್ದರೆ ಇನ್ನೊಂದೆಡೆ ಗುಡಿಸಲುಗಳ ಗುಂಪು. ಅಲ್ಲಿ ಇಲ್ಲಿ ಎಂದು ಸ್ಥಳವಿದ್ದಲ್ಲೆಲ್ಲ ಕಟ್ಟಿದ ಈ ಗುಡಿಸಲುಗಳು ಸ್ಮಶಾನ ಭೂಮಿಯನ್ನೂ ಬಿಟ್ಟಿಲ್ಲ. ಗುಡಿಸಲ ಸುತ್ತಮುತ್ತ ಕಸಕಡ್ಡಿ— ಬಚ್ಚಲನೀರು. ಆದರೂ ಈ ಪ್ರದೇಶವನ್ನು ಸಮೀಪಿಸುತ್ತಿದ್ದಂತೆಯೇ ಗಮಗಮಿಸುವ ಸುವಾಸನೆ ವಾತಾವರಣವನ್ನು ತುಂಬಿರುವುದು ಇಲ್ಲಿಯ ಒಂದು ವೈಶಿಷ್ಟ್ಯ.

ಇಲ್ಲಿ ಪ್ರತಿಯೊಂದು ಗುಡಿಸಲೂ ಒಂದು ಚಿಕ್ಕ ಕಾರ್ಯಾಗಾರ. ಗುಡಿಸಲ ಬಾಗಿಲಿಂದ ಒಳಗೆ ಇಣಿಕಿದರೆ ಒಂದೆಡೆ ಕಾಣುತ್ತಿರುವುದು ಊದುಬತ್ತಿಗಳ ರಾಶಿ. ಇನ್ನೊಂದೆಡೆ ಒಂದು ಹಲಗೆ, ಊದುಬತ್ತಿ ತಯಾರಿಕೆಗೆ ಬೇಕಾದ ಸಾಮಗ್ರಿ. ನೋಡುವಾಗ ರಾಗಿ ಮುದ್ದೆಯಂತೆ ಕಂಡರೂ ಇದು ರಾಗಿ ಮುದ್ದೆಯಲ್ಲ, ಗೋಧಿಪುಡಿ ಹಾಗೂ ಪರಿಮಳಕ್ಕಾಗಿ ಬೆರಸಿದ ಶೊರಟೆ ಹಾಗೂ ಇತರ ವಸ್ತುಗಳನ್ನು ಅರೆದು ತಯಾರಿಸಿದ ಮುದ್ದೆ. ಈ ಮುದ್ದೆಯನ್ನು ಸವರಿದ ಮಣೆಯ ಮೇಲೆ ಬಿದಿರಿನ ಸಪೂರವಾದ ಕಡ್ಡಿಗಳನ್ನು ಇಟ್ಟು ಉರುಳಿಸುವುದರಿಂದ ಊದುಬತ್ತಿ ತಯಾರಾಗುತ್ತಿದೆ. ಹೀಗೆ ಗುಡಿಸಲ ಒಳಗೂ ಹೊರಗೂ ಗಾಳಿ-ಬಿಸಿಲಿಗೆ ಒಣಗಲು ಬಿಡಿಸಿಟ್ಟ ಊದುಬತ್ತಿಗಳು ಪ್ರತಿ ಗುಡಿಸಲನ್ನೂ ಪರಿಮಳಿಸುತ್ತಿವೆ. ಇದರಿಂದ ಮನಸ್ಸಿಗೆ ಉಲ್ಲಾಸ; ಆಗಂತುಕರಿಗೆ ಆನಂದ.

ಆದರೆ ಈ ಗುಡಿಸಲುಗಳಲ್ಲಿ ವಾಸ ಮಾಡುತ್ತಿರುವವರಿಗೆ, ಇಡೀ ದಿನ ದುಡಿದರೆ ಸಿಗುವುದು ಕೇವಲ ಒಂದೂವರೆ ಅಥವಾ ಎರಡು ರೂಪಾಯಿಗಳು. ಈ ಕೆಲಸದಲ್ಲಿ ತೊಡಗಿದವರಲ್ಲಿ ಹೆಚ್ಚು ಕಡಿಮೆ ಎಲ್ಲರೂ ಮುಸ್ಲಿಂ ಮಹಿಳೆಯರು, ಹುಡುಗರು, ಹುಡುಗಿಯರು. ಮನೆ ಮಂದಿಯೆಲ್ಲ ಎಡೆಬಿಡದೆ ದುಡಿಯುವವರು. ಗಂಡಸರಿಗೆ ಅಲ್ಲಿ ಇಲ್ಲಿ ಕೂಲಿ ಕೆಲಸ. ಕೆಲವರಿಗೆ ಬೆಂಗಳೂರಿನ ಸುತ್ತಮುತ್ತಲ ಕಾರ್ಖಾನೆಗಳಲ್ಲಿ ಮಜೂರಿ ಕೆಲಸ. ಏನಿದ್ದರೂ ಇವರಿಗೆ ಹೊಟ್ಟೆ ಬಟ್ಟೆಗೆ ಸಾಕಾಗುತ್ತಿಲ್ಲ. ಪ್ರತಿ ಗುಡಿಸಲಿನಲ್ಲೂ ಮೂರು-ನಾಲ್ಕು ಮಕ್ಕಳು, ಕೈಗೂಸುಗಳು. ಕೆಲವರಿಗೆ ಹತ್ತು-ಹನ್ನೆರಡು ಮಕ್ಕಳೂ ಇದ್ದಾರೆ. ಮಕ್ಕಳೆಂದರೆ ಎಲ್ಲರಿಗೂ ಅಕ್ಕರೆ. ಮಕ್ಕಳು ಬೇಡ ಎನ್ನುವವರಾರು? ಆದರೆ ದೇವರು ಕೊಡುವ ಮಕ್ಕಳನ್ನೆಲ್ಲ ಸಾಕಿ ಸಲಹಿ ದೊಡ್ಡವರನ್ನಾಗಿ ಮಾಡಲು ನಮಗೆ ಸಾಕಷ್ಟು ಶಕ್ತಿ ಇಲ್ಲದಿರುವುದು ವಿಚಾರಣೀಯ. ಮಕ್ಕಳ ಕಡೆ ನೋಡುವಾಗ ತಾಯಂದಿರ ಮುಖ ಸಂತೋಷದಿಂದ ಅರಳಿದಂತೆ ಮಕ್ಕಳು ಹಸಿದು ಮರುಗುವಾಗ ಅವರಿಗೆ ಬಟ್ಟೆಬರೆಗಳನ್ನು ತೊಡಿಸಿ ತಿಂಡಿತಿನಸುಗಳನ್ನು ಕೊಡಲು ಕಷ್ಟವಾದಾಗ, ಅದೇ ತಾಯಂದಿರ ಮುಖ ಬಾಡುವುದೂ ಸಹಜ.—ಇದು ಪಾದರಾಯನಪುರದ ಗುಡಿಸಲುಗಳಲ್ಲಿ ಮಾತ್ರವಲ್ಲ, ಇತರ ಕಡೆಗಳಲ್ಲಿಯೂ ಎದ್ದು ಕಾಣುವ ಸಂಗತಿ.

ಕಳೆದ ಅಕ್ಟೋಬರ್ 7. ಇದು ಪಾದರಾಯನಪುರದ ಗುಡಿಸಲು ನಿವಾಸಿಗಳಿಗೆ ಒಂದಿಷ್ಟು ನೆಮ್ಮದಿ ತಂದ ದಿನ. ಕುಟುಂಬ ಯೋಜನೆಯ ಬಗ್ಗೆ ಕುಮಾರಿ ಫರಂಖಾ ಸುಲ್ತಾನ್ ಈ ಜನರಿಗೆ ತಿಳುವಳಿಕೆ ಕೊಡಲು ಪ್ರಾರಂಭಿಸಿದ ದಿನ. ನಗರಾಭಿವೃದ್ಧಿ ಯೋಜನಾ ಸಿಬ್ಬಂದಿಯವರೊಡನೆ ಕುಮಾರಿ ಸುಲ್ತಾನ್ ಇಲ್ಲಿಯ ಪ್ರತಿ ಗುಡಿಸಲುಗಳಿಗೂ ಹೋಗಿ ಅವರ ಯೋಗಕ್ಷೇಮಗಳನ್ನು ವಿಚಾರಿಸಿದರು. ಮಹಿಳೆಯರಿಗೆ ಸಂತಾನ ನಿಯಂತ್ರಣದ ಬಗ್ಗೆ ತಿಳುವಳಿಕೆ ಕೊಡತೊಡಗಿದರು. ಹಿರಿಯರು ಈಕೆಯನ್ನು ತಮ್ಮ ಮಗಳಂತೆ ಕಿರಿಯರು ಸೋದರಿಯಂತೆ ಆದರಿಸಿದರು. ಆ ಮೊದಲ್ಗೊಂಡು ಇಲ್ಲಿ ಚಲಚ್ಚಿತ್ರ ಪ್ರದರ್ಶನ, ವಾದ್ಯವೃಂದ ಹಾಗೂ ಸಾಮೂಹಿಕ ಮಾತುಕತೆ ಇತ್ಯಾದಿ ಕಾರ್ಯಕ್ರಮಗಳು ನಡೆದುವು. ಕುಟುಂಬ ಯೋಜನಾ ಪ್ರಚಾರಕರು ಅತ್ಯಾಸಕ್ತಿಯಿಂದ ಕೆಲಸ ಮಾಡಿದರು. ಇದರಿಂದ ಈ ವರೆಗೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ತಮ್ಮ ಕುಟುಂಬದ ಬಗ್ಗೆ ಏನು ಮಾಡಬೇಕೆಂದು ದಿಕ್ಕು ತೋರದೆ ಚಿಂತೆಯಲ್ಲಿದ್ದ ಮಹಿಳೆಯರಿಗೆ ಒಂದು ಹೊಸ ದಾರಿ ತೋರಿತು. ಇದ್ದ ಮಕ್ಕಳನ್ನು ಸರಿಯಾಗಿ ಸಾಕಿಕೊಂಡರೆ ಸಾಕೆಂದು ಮನದಟ್ಟಾಯಿತು. ಸಂತಾನ ನಿಯಂತ್ರಣದ ಅತಿ ಸುಲಭದ ಸಾಧನವಾದ 'ನಿರೋಧ'ದ ಬಗ್ಗೆ ಇವರಲ್ಲಿ ಆಸಕ್ತಿ ಹುಟ್ಟಿತು. ಆರೇ ವಾರಗಳಲ್ಲಿ ಹನ್ನೆರಡು ಸಾವಿರಕ್ಕೂ ಹೆಚ್ಚು ನಿರೋಧಗಳನ್ನು ಈ ಗುಡಿಸಲು ನಿವಾಸಿಗಳು ಆಸಕ್ತಿಯಿಂದ ಸ್ವೀಕರಿಸಿದರು.

ಪಾದರಾಯನಪುರದಂತೆ ಇತರ ಕಡೆಗಳಲ್ಲಿಯೂ ಜನತೆ ಆಸಕ್ತಿ ವಹಿಸಿದರೆ ಜನಸಂಖ್ಯೆಯ ಆಸ್ಫೋಟವನ್ನು ತಡೆಹಿಡಿಯಲು ಸಾಧ್ಯವೆಂಬುದರಲ್ಲಿ ಸಂದೇಹವಿಲ್ಲ.

ತುಂಡು ಕತೆ — ೨

ಅಜ್ಜಿಯ ತಾಯಿತ

ಅಜ್ಜಿಗೆ ಒಬ್ಬ ಮೊಮ್ಮಗ ಹುಟ್ಟಿದ. ಈ ಮಗು ದೀರ್ಘಾಯುಸ್ಸಾಗಿ ಬಾಳಬೇಕೆಂದು ಅಜ್ಜಿಯ ಆಸೆ. ಅದಕ್ಕಾಗಿ ಒಂದು ಮಂತ್ರದ ತಾಯಿತ ಮಾಡಿಸಿ ಮಗುವಿನ ಕುತ್ತಿಗೆಗೆ ಕಟ್ಟಿಸಿದಳು.

"ಈ ಮಗು ದೊಡ್ಡವನಾಗಿ ಮುದುಕನಾಗಿ ಸಾಯುವ ವರೆಗೂ ಈ ತಾಯಿತ ಕುತ್ತಿಗೆಯಲ್ಲಿರಬೇಕು"—ಎಂಬುದು ಅಜ್ಜಿಯ ಶಾಸನ.

ಮಗು ಬೆಳೆಯುತ್ತಾ ದೊಡ್ಡವನಾದ. ತಾಯಿತ ಕುತ್ತಿಗೆಯನ್ನು ಬಿಗಿಯತೊಡಗಿತು. ಅಜ್ಜಿ ಹೇಳಿದ ಹಾಗೇ ಬಿಟ್ಟುಬಿಟ್ಟರೆ ಅವನು ಕುತ್ತಿಗೆ ಬಿಗಿದು ಸಾಯುತ್ತಾನೆ.

"ಇನ್ನು ಹೇಗಪ್ಪ" ಅನಿಸಿತು ಎಲ್ಲರಿಗೂ.

ಆಗ ಬುದ್ಧಿವಂತರೊಬ್ಬರು ತಾಯಿತವನ್ನು ಮಾತ್ರ ಹಾಗೇ ಇಟ್ಟು ಅದರ ದಾರವನ್ನು ವಯಸ್ಸಿಗೆ ತಕ್ಕ ಹಾಗೆ ಬದಲಾವಣೆ ಮಾಡಲು ಹೇಳಿ ಅವನ ಪ್ರಾಣ ಉಳಿಸಿದರು.

ಹೀಗೆಯೇ ಹಳೆಯ ಶಾಸ್ತ್ರ ಆಚಾರಗಳ ಮೂಲ ಉದ್ದೇಶಗಳನ್ನು ತತ್ವಗಳನ್ನು ಹಾಗೇ ಉಳಿಸಿಕೊಂಡು, ಆಚರಿಸುವ ವಿಧಾನದಲ್ಲಿ ಕಾಲಕ್ಕೆ ತಕ್ಕಹಾಗೆ ಬದಲಾಯಿಸಿ ಕೊಳ್ಳುವುದೇ ಬುದ್ಧಿಶಾಲಿತನವೆನಿಸುತ್ತದೆ. ಅಲ್ಲವೆ?

'ನವಗಿರಿನಂದ'

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ
ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0-75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ
ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು
ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಬಾಲುಕೋಟೆ, ಉಡುಪಿ, ದ. ಕ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ : ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ| ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಚಿಕಿತ್ಸೆ ಮಾಡುವ ವಿಧಾನಗಳಿವೆ, ಹೇಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೧.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

16—1—1969

೨೦
ಪೈಸೆ

ಚಾರಿತ್ರಿಕ ಕಥೆ

ಪ್ರೇಮ ಮಾಡಿದ ವಂಚನೆ

ಶ್ರೀ ಕಥೆಗಾರರು: ಸುರತ್ಕಲ್ ರಾಮಕೃಷ್ಣ ಹೆಬ್ಬಾರ್

ಅಕ್ಬರ ಬಾದಶಹನ ವ್ಯಕ್ತಿತ್ವವೇ ಹಾಗಿತ್ತು. ಸುಂದರವಾದ ಆಕಾರ, ಅಗಲವಾದ ಹುಬ್ಬು, ವಿಶಾಲವಾದ ಹಣೆ, ಹೀಗೆ ಆತನ ಪ್ರತಿಯೊಂದು ಅಂಗ ಸೌಷ್ಠವವೂ ಸುಂದರವಾಗಿತ್ತು. ಅವನ ಮಾತಿನ ಸೌಂದರ್ಯವೇ ಸುಮಧುರವಾಗಿತ್ತು. ಆತನ ಪ್ರತಿಯೊಂದು ಮಾತೂ ಸಂತೋಷ ಬರಿಸುವಂತಿತ್ತು.

ಇಷ್ಟೆಲ್ಲಾ ಅಲ್ಲದೆ ಆತನು ದಯಾವಂತನೂ ಆಗಿದ್ದನು. ದೈನಂದಿನ ಅವಿಶ್ರಾಂತ ದುಡಿಮೆಯಿಂದಲೂ, ರಾಜ್ಯಕಾರಣದ ವಿವಿಧ ವಿಚಾರಗಳನ್ನು ಚರ್ಚಿಸಿ—ವಿಮರ್ಶಿಸಿ ಬಳಲಿದ ಅರಸನಿಗೆ ದಿನವೂ ವಿಶ್ರಾಂತಿಯು ಅಗತ್ಯವಿತ್ತು.

ತನ್ನ ಸಂಬಂಧಿಕರ ಹೆಣ್ಣಾದ ಸಲೀಮಳನ್ನು ವಿವಾಹವಾದನು. ಸಲೀಮಳು ಸುಂದರಿ ಮಾತ್ರವಲ್ಲದೆ ಆತನ ಮೆಚ್ಚುಗೆಯ ರಾಣಿಯೆನ್ನಿಸಿಕೊಂಡಳು. ಅಕ್ಬರ ಹೃದಯದಲ್ಲಿ ದಿನವೂ ಅವಳೇ ಸುಳಿಯುವಂತೆ ಆತನಿಗೆ ಸಲೀಮಳ ಬಗ್ಗೆ ಅಪಾರ ಮಮತೆಯಿತ್ತು. ಆದರೆ ಈಗ ಕೆಲವಾರು ದಿನಗಳಿಂದ ತನ್ನ ಬಿಡುವಿಲ್ಲದ ಕಾರ್ಯಕಲಾಪಗಳಿಂದಾಗಿ ಸಲೀಮಳೊಂದಿಗೆ ಕಾಲ ಕಳೆಯಲು ಸಮಯವೇ ಸಿಗದಾಯಿತು.

ಅರಸನು ಸಲೀಮಳಿಗೆ ಸಕಲ ಸೌಖ್ಯಗಳನ್ನು ಒದಗಿಸಿದ್ದರೂ, ವಿವಾಹದ ಪೂರ್ವದಲ್ಲಿದ್ದ ಸ್ವಾತಂತ್ರ್ಯ ಅವಳಿಗೀಗ ಇರಲಿಲ್ಲ. ವಿವಾಹದ ಮೊದಲು ಅವಳು ಗರಿಬಿಚ್ಚಿದ ಹಕ್ಕಿಯಂತೆ ಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದಳು. ಯಾವ ಬಂಧನವೂ ಆಗ ಇದ್ದಿಲ್ಲ. ತನ್ನ ಇಷ್ಟಬಂದುದನ್ನು ತಿನ್ನುತ್ತಾ, ಕುಡಿಯುತ್ತಾ, ಎಲ್ಲೆಂದರಲ್ಲಿ ಹೋಗುತ್ತಾ-ಬರುತ್ತಾ ಇರುತ್ತಿದ್ದಳು. ಇಷ್ಟ ಬಂದ ವಸ್ತ್ರಗಳನ್ನು ಉಡುತ್ತಿದ್ದಳು; ಮಾತ್ರ ಯಾರನ್ನೂ ಮೆಚ್ಚಿಸುವುದಕ್ಕಲ್ಲ! ಈಗಲಾದರೋ—ಈ ಅರಮನೆಯಲ್ಲಿ ಅರಸನನ್ನು ಮೆಚ್ಚಿಸಲಿಕ್ಕಾಗಿ ಅವಳು ನಿರ್ದಿಷ್ಟವಾದ ವಸ್ತ್ರಗಳನ್ನೇ ತೊಡಬೇಕಾಗುತ್ತಿತ್ತು. ಅರಸನು ಅವಳಿರುವಲ್ಲಿಗೆ ಯಾವ ಹೊತ್ತಿಗೆ ಬರುವನೆಂಬುದು ಯಾರಿಗೆ ಗೊತ್ತು! ಅದಕ್ಕಾಗಿ ಅವಳು ಎಲ್ಲವನ್ನೂ ಅರಸನ ಮೆಚ್ಚುಗೆಗಾಗಿಯೇ ಮಾಡಬೇಕಾಗಿತ್ತು. ನಾಲ್ಕು ಗೋಡೆಗಳ ನಡುವೆ ಸಿಕ್ಕಿಬಿದ್ದಂತೆ ಅವಳಿಗೆ ಭಾಸವಾಗುತ್ತಿತ್ತು.

ಆಗ ಸೆಕೆಗಾಲವಾಗಿತ್ತು. ಅದಕ್ಕಾಗಿ "ಆಯೆಷ್‌ಬಾಗ್"ನಲ್ಲಿರುತ್ತಿದ್ದ ಅಕ್ಬರನು ಅದನ್ನು ಬಿಟ್ಟು "ಇಷ್ಕ್ ಮಹಲ್" ಎಂಬ ಸುಂದರವಾದ ಅರಮನೆಯಲ್ಲಿ ಇರತೊಡಗಿದನು. ಅದರ ಮಹಡಿಯ ಮೇಲಿನಿಂದ ಕೆಳಗೆ ನೋಡಿದಾಗ ಝುಳ ಝುಳನೆ ಹರಿಯುವ ನದಿಯೂ, ಬಣ್ಣ ಬಣ್ಣದ ಹೂವುಗಳ ಉದ್ಯಾನವನ, ಪಚ್ಚೆ ಪೈರುಗಳಿಂದ ಕೂಡಿದ ರಮ್ಯ ತೋಟಗಳಿಂದಲೂ, ಬಿಳಿಯಾದ ಇಬ್ಬನಿಗಳು ತುಂಬಿದ ಬೆಟ್ಟಗಳ ಸಾಲುಗಳಿಂದಲೂ--ತೋಟವು ರಮ್ಯವಾಗಿ ಕಾಣಿಸುತ್ತಿತ್ತು. ಅಕ್ಬರ ಮತ್ತು ಸಲೀಮ ಯಾವಾಗಲೂ ಮಹಡಿಯ ಆರಾಮಾಸನದ ಮೇಲೆ ಕುಳಿತುಕೊಂಡು ಈ ಸುಂದರ ದೃಶ್ಯಗಳನ್ನು ಸವಿಯುತ್ತಲಿದ್ದರು. ಕೆಲವೊಮ್ಮೆ ಉದ್ಯಾನ ವನದಲ್ಲಿದ್ದ ಪಕ್ಷಿಗಳು ಹಾಗೂ ಸಾಧು ಪ್ರಾಣಿಗಳೊಂದಿಗೆ ಆಡುತ್ತಲಿದ್ದರು. ಹೀಗೆ ಸಲೀಮಳನ್ನು ಅಕ್ಬರನು ಒಂದು ನಿಮಿಷವೂ ಅಗಲಲಾರದೆ ಅವಳ ಜೊತೆ ಜುಲ್ಲೇ ಇರುತ್ತಿದ್ದನು.

ಒಮ್ಮೆ ಅಕ್ಬರನು ಮೃಗಬೇಟೆಗೆ ಹೋಗಲು ನಿಶ್ಚಯಿಸಿದನು. ಆತನಿಗೆ ಬೇಟೆಯೆಂದರೆ ಪಂಚಪ್ರಾಣವಾಗಿತ್ತು. ಅಕ್ಬರನನ್ನು ಅಗಲಿ ಅದೆಷ್ಟು ದಿನ ಇರಬೇಕೋ ಎಂದು ಸಲೀಮಳು ಚಿಂತೆಗೊಳಗಾದಳು. ಆದರೆ ಅಕ್ಬರನ ಆಸಕ್ತಿಯೂ, ತಾನು ಬರೀ ಮೂರು ದಿನ ಮಾತ್ರ ಅಗಲಿ ಇರುವೆನೆಂದು ಹೇಳಿದುದರಿಂದಲೂ ಸಲೀಮಳು ಬೇರೆ ದಾರಿ ಕಾಣದೆ ಅದಕ್ಕೆ ಒಪ್ಪಿದಳು.

ಆತನು ಬೇಟೆಗೆ ಹೋಗುವ ಮೊದಲು ಸಲೀಮಳೊಂದಿಗೆ ಇರಲು ಕೆಲವು ದಾಸಿಯರನ್ನು ನಿಯಮಿಸಿದ್ದನು. ಅವಳಿಗೆ ಬೇಸರವಾಗಬಾರದೆಂದು ಯಾವಾಗಲೂ ಒಬ್ಬ ದಾಸಿಯು ಅವಳೊಂದಿಗೇ ಇರುತ್ತಿದ್ದಳು.

ಆದರೂ ಅವಳ ಬೇಸರವನ್ನು ಈ ದಾಸಿಯರು ನೀಗಿಸದೆ ಹೋದರು. ಯಾವುದರಲ್ಲೂ ಅವಳಿಗೆ ಅಭಿರುಚಿಯಿಲ್ಲದಾಯಿತು. ಅಂದು ಸಂಜೆ ಸಲೀಮಳು ಮ್ಲಾನವದನದಿಂದಲೇ ಹೊರಗಿನ ದೃಶ್ಯಗಳನ್ನು ನೋಡುತ್ತಿದ್ದಳು. ಸೂರ್ಯನು ಅಸ್ತಮಿಸುತ್ತಾ ಇದ್ದನು. ಹಕ್ಕಿಗಳೆಲ್ಲಾ ತಮ್ಮ ತಮ್ಮ ವಾಸಸ್ಥಳದತ್ತ ಧಾವಿಸುತ್ತಿದ್ದವು. ಸಲೀಮಳು ದಾಸಿಯನ್ನು ಕರೆದು ಹೀಗೆಂದಳು—"ನನಗೆ ಇಂದು ಗಾಯನ ಕೇಳಬೇಕೆಂದು ಇಚ್ಛೆಯಾಗಿದೆ. ಏಕೋ ನನಗೆ ತುಂಬಾ ಬೇಸರವಾಗಿದೆ."

"ಬೇಗಂ, ನೀವು ಅನುಮತಿ ನೀಡಿದರೆ ಸೈ. ಇಂದೇ ಒಬ್ಬಳು ವೀಣೆ ಬಾರಿಸುವ ಹೆಂಗಸೊಬ್ಬಳು ಅರಮನೆಗೆ ಕೆಲಸಕ್ಕೆ ಸೇರಿದ್ದಾಳೆ. ಅವಳನ್ನೇ ಕರೆದುಕೊಂಡು ಬರುತ್ತೇನೆ." ದಾಸಿ ಕೂಡಲೇ ಕೇಳಿದಳು.

ಸರಿ ಅವಳನ್ನೇ ಕರೆ. ಬೇಗ. ನನಗೆ ಇಂದೇಕೆ ಇಷ್ಟು ಬೇಸರವಾಗುತ್ತಿದೆಯೆಂದು ತಿಳಿಯದು." ಎಂದಳು ಸಲೀಮಳು.

ಹೊಸ ದಾಸಿಯು ವೀಣೆಯೊಂದಿಗೆ ಅಲ್ಲಿಗೆ ಬಂದಳು. "ನಿನ್ನ ಹೆಸರೇನ? ನೀನು ಈ ಅರಮನೆಗೆ ಹೊಸಬಳಾಗಿರುವೆಯಲ್ಲವೇ?"

"ಹೌದು. ಜನರು ನನ್ನನ್ನು ಜ್ಯೇನತ್ ಎಂದು ಕರೆಯುತ್ತಾರೆ. ನನ್ನ ಉದ್ಯೋಗ ಹಾಡುಗಾರಿಕೆ. ಅದರಿಂದಲೇ ನನ್ನ ಜೀವನ ಸಾಗಬೇಕು. ಅದಕ್ಕಾಗಿಯೇ ನಾನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಂಚರಿಸುತ್ತಾ ಇರುತ್ತೇನೆ. ಚಕ್ರವರ್ತಿಯ ಅರಮನೆಯಲ್ಲಿ ದಾಸಿಯೊಬ್ಬಳು ಬೇಕಾಗಿರುವಳೆಂದು ತಿಳಿದು ನಾನು ಇಲ್ಲಿಗೆ ಬಂದೆನು. ಅಂತೆಯೇ ನಿಮ್ಮ ದಾಸಿಯಾಗುವ ಭಾಗ್ಯ ಲಭಿಸಿತು."

ಅವಳ ಧ್ವನಿಯಾದ ಮಾತುಗಳಿಂದ ಸಲೀಮಳಿಗೆ ಬಹಳ ಆನಂದವಾಯಿತು. ಜ್ಯೇನತ್ ವೀಣೆ ಬಾರಿಸತೊಡಗಿದಳು. ಅದು ದುಃಖದ ಹಾಡನ್ನು ವೀಣೆಯಲ್ಲಿ ಬಾರಿಸತೊಡಗಿದಳು. ಆ ಹಾಡಿನ ಅರ್ಥ ಈ ರೀತಿಯಾಗಿತ್ತು: "ಓ ದುಷ್ಟ ಪ್ರಿಯಕರನೇ, ನೀನು ನನ್ನನ್ನು ಮರುಭೂಮಿಯನ್ನಾಗಿಸಿದ. ನೀನು ನನ್ನಿಂದ ಬಹುದೂರ ಹೋಗಿರುವಿ. ನಾನು ನಿನ್ನನ್ನು ಇನ್ನೆಂದೂ ಕಾಣದಾದೆ. ನೀನು ನನ್ನನು ಇನ್ನೆಂದೂ ಕಾಣದಾದೆ. ನೀನು ನನ್ನನು ಮರೆತಿರುವೆಯಾದರೂ ನನ್ನ ಹೃದಯವು ನಿನ್ನ ಮೂರ್ತಿಯನ್ನೇ ಸ್ಮರಿಸುತ್ತಿದೆ.'

ಈ ಹಾಡನ್ನು ಕೇಳಿ ಸಲೀಮಳ ಮುಖವು ವಿವರ್ಣವಾಯಿತು. ಜ್ಯೇನತ್‌ಳನ್ನು ಕಳುಹಿಸಿಕೊಟ್ಟು ತಾನು ನಿದ್ರೆ ಹೋದಳು.

ಮರುದಿನ ಪುನಃ ಸಲೀಮಳು ಜ್ಯೇನತ್‌ಳನ್ನು ಕರೆದು ತುಂಬಾ ಮಾತುಕತೆ ಹಾಡಿದಳು. ಸಂಜೆಯಾಗುತ್ತಲೇ ಪುನಃ ಅದೇ ದುಃಖದ ಹಾಡನ್ನು ವೀಣೆಯಲ್ಲಿ ಬಾರಿಸುತ್ತಾ ಹಾಡೆಂದ ಜ್ಯೇನತ್‌ಳನ್ನು ಒತ್ತಾಯಿಸಿದಳು. ಜ್ಯೇನತ್ ಅದನ್ನೇ ಮತ್ತೂ ಚೆನ್ನಾಗಿ ಹಾಡಿದಳು. ಸಲೀಮಳು ಜ್ಯೇನತ್‌ನ ಕೈಯನ್ನು ತನ್ನ ಕೈಯಲ್ಲಿ ಹಿಡಿದು—"ಜ್ಯೇನತ್, ನೀನು ಯಾರನ್ನಾದರೂ ಮನಸಾರೆ ಪ್ರೇಮಿಸಿರುವೆಯೋ?" ಎಂದು ಕೇಳಿದಳು.

"ಇಲ್ಲ, ಬೇಗಂ; ಭಿಕ್ಷುಕರಂತಿರುವ ನಾವು ಯಾರನ್ನು ಪ್ರೇಮಿಸುವುದು? ನಮ್ಮಂತವರಿಗೆ ಭಿಕ್ಷುಕರಿಗೆ ಭಿಕ್ಷೆ ಸಿಕ್ಕುವುದೇ ಶ್ರೀಮಂತಿಕೆ!"

"ಸುಳ್ಳು; ನಾನು ನಂಬಲಾರೆ ಜ್ಯೇನತ್, ನೀನು ಖಂಡಿತವಾಗಿಯೂ ಯಾರನ್ನೋ ಪ್ರೇಮಿಸಿರುವಿ. ಅವನು ನಿನ್ನನ್ನು ವಂಚಿಸಿದ್ದಾನೆ. ಆದಕ್ಕಾಗಿಯೇ ನೀನು ಈ ರೀತಿ ದುಃಖ ಸೂಚಕ ಹಾಡನ್ನೇ ಹಾಡುತ್ತಲಿರುವಿ!"

"ಇಲ್ಲ; ಬೇಗಂ....",

"ಜ್ಯೇನತ್, ಸುಳ್ಳು ಹೇಳಬೇಡ! ಅವನ ಹೆಸರನ್ನು ಹೇಳು. ಸಾಧ್ಯವಾದರೆ ನಾನು ಅವನನ್ನು ನಿನಗೆ ವಿವಾಹವಾಗುವಂತೆ ಪ್ರಯತ್ನ ಮಾಡುವೆನು' ಎಂದು ಅನಿಕರದಿಂದ ಹೇಳಿದಳು.

"ಹಾಗೇನಿಲ್ಲ ಬೇಗಂ; ನನಗೆ ಚಿಕ್ಕಂದಿನಿಂದಲೇ ವೀಣೆ ಹಾಗೂ ಹಾಡುಗಾರಿಕೆಯಲ್ಲಿ ಬಹಳ ಮಮತೆ. ಅದನ್ನೇ ಅಭ್ಯಸಿಸುತ್ತಾ ಅದರಲ್ಲೇ ತಲ್ಲೀನಳಾಗುತ್ತಿದ್ದೆನು. ನನಗೆ ಈ ಸಂಗೀತದಿಂದಲೇ ಶಾಂತಿ, ಸಂತೋಷ ಎಲ್ಲವೂ. ಈ ಸಂಗೀತ ಮತ್ತು ಹಾಡು—ಇವಲ್ಲದೆ ನನಗೆ ಈ ಜಗತ್ತಿನಲ್ಲಿ ಬೇರಾವುದರ ಮೇಲೂ ಪ್ರೇಮ, ಪ್ರೀತಿ ಮಮತೆ—ಇಲ್ಲ" ಎಂದಳು.

ಂ ಂ ಂ

ಎರಡು ದಿನಗಳುರುಳಿದುವು. ಮೂರನೇ ದಿನ ಚಕ್ರವರ್ತಿಯು ಮರಳಿ ಬರುವ ದಿನ. ಸಲೀಮಳಿಗೆ ಸಂತೋಷದ ದಿನ. ಬೆಳಿಗ್ಗೆ ಬೇಗನೇ ಎದ್ದು ಎಲ್ಲಾ ವಸ್ತುಗಳನ್ನೂ ಚೊಕ್ಕವಾಗಿ ಇರಿಸುವ ಗೊಡವೆಯಲ್ಲಿ ಸಲೀಮಳು ಮಗ್ನಳಾಗಿದ್ದಳು.

(ಹನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರಶಸ್ತಿಕವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526

1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೧೯
VOL. 48
No. 19

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೬—೧—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಕಾಮರಾಜ ವಿಜಯ

ಸ್ವಮತದಾರ ಕ್ಷೇತ್ರ ವಿರುಧನಗರವು ಕಾಮರಾಜರಿಗೆ ೧೯೬೭ರಲ್ಲಿ ವಿರುದ್ಧವಾಯಿತು—ಓರ್ವ ಎಳೆಯ ವಿದ್ಯಾರ್ಥಿ ನಾಯಕ ಅವರನ್ನು ಸೋಲಿಸಿದ್ದನು. ಆದರೆ ನಾಗರಕೋಯಿಲ್‌ನ ಜನತೆ ಚುನಾವಣೆಗಳಲ್ಲೂ ಲೋಕಸಭೆಗೆ ಕಾಂಗ್ರೆಸ್ ಅಭ್ಯರ್ಥಿಯನ್ನೇ ಆರಿಸುವ ಪರಿಪಾಠವನ್ನು ಈ ಬಾರಿಯೂ ಮುಂದುವರಿಸಿತು. ೧೯೬೭ರಲ್ಲಿ ಕಾಂಗ್ರೆಸ್ ಟಿಕೇಟಿನಿಂದ ಆಯ್ಕೆಯಾದ ಶ್ರೀ ಮಣಿಯವರ ನಿಧನದಿಂದ ಈ ಸ್ಥಾನ ತೆರವಾಗಿತ್ತು; ಕಾಮರಾಜರು ಲೋಕಸಭೆಗೆ ಸ್ಪರ್ಧಿಸಲೆಂದು ಅವಕಾಶ ದೊರೆಯಿತು. ಚುನಾವಣೆಯ ಮೊದಲು ತುಸು ಗೊಂದಲ ನಡೆದದ್ದಾದರೂ ಮುಂದೆ ಪರಿಸ್ಥಿತಿ ಅತ್ಯಂತ ಶಾಂತಮಯವಾಗಿತ್ತು—ಚುನಾವಣೆ ಕಾಮರಾಜರಿಗೆ ಅನುಕೂಲವಾಯಿತು; ಅವರ ವಿರೋಧಿಗಳು ಒಟ್ಟು ಪಡೆದಷ್ಟು ಮತಗಳನ್ನೂ ಅವರು "ಬಹುಮತ"ವಾಗಿ ಗಳಿಸಿದರು ಎಂದರೆ ಅತಿಶಯವಲ್ಲ. ಅಂತೂ ವಿರೋಧಿಗಳ ಮೂಗು ಮುರಿಯಿತು; ಕಾಂಗ್ರೆಸ್‌ನ ಹೆಸರು ಉಳಿಯಿತು; ಅದರ ಭವಿಷ್ಯ ಹಸನಾಗುವ ಆಶೋದಯವಾಯ್ತು.

ಕಾಮರಾಜರು ಕಾಂಗ್ರೆಸ್ ಅಧ್ಯಕ್ಷ ಪದವಿಯಿಂದ ಕೆಳಗಿಳಿದ ಮೇಲೆ ಸುಮಾರು ಒಂದು ವರ್ಷದ ಕಾಲ ತುಮುಲದಲ್ಲಿ ಬಿದ್ದಿದ್ದರೆನ್ನಬೇಕು. ತನ್ನ ಭವಿಷ್ಯದ ಬಗ್ಗೆ ಅವರು ಯೋಚನೆಯಲ್ಲಿ ಮುಳುಗಿದ್ದರೆನ್ನಬಾರದೇಕೆ? ಪ್ರತ್ಯಕ್ಷ ರಾಜ್ಯಕೀಯದಲ್ಲಿ ಭಾಗವಹಿಸಬೇಕೇ ಬೇಡವೇ ಎಂಬ ಪ್ರಶ್ನೆ ಅವರನ್ನು ಕಾಡದಿರಲಾರದು. ಕೇಂದ್ರದ ರಾಜಕೀಯದ ಮೇಲೆ ಕೈಯಾಡಿಸುವ ಕಾಂಗ್ರೆಸ್ ಅಧ್ಯಕ್ಷ ಪದದಲ್ಲಿದ್ದು ಅವರು ಹಲವಾರು ಕಹಿ-ಸಿಹಿ ಅನುಭವಗಳನ್ನು ಪಡೆದಿದ್ದಾರೆ. ಲಾಲ ಬಹದ್ದೂರ್ ಮತ್ತು ಇಂದಿರಾಗಾಂಧಿಯವರನ್ನು ಪ್ರಧಾನ ಮಂತ್ರಿಗಳಾಗಿ ಆಯ್ಕೆ ಮಾಡುವಾಗ ಅವರು ತೋರಿಸಿದ್ದ ಮುತ್ಸದ್ದಿತನ ವಿದೇಶೀಯರಿಂದಲೂ ಪ್ರಶಂಸೆ ಪಡೆದಿತ್ತು. ಕೇಂದ್ರ ರಾಜ್ಯಕೀಯದ ದಾಂಧಲೆ ಅವರಿಗೆ ಅಪ್ರಿಯವಾಗಿ ಪರಿಣಮಿಸಿದುದರಿಂದಲೇ ಅವರು ವಿಧಾನ ಸಭೆಯಲ್ಲೇ ಉಳಿಯಬಯಸಿದ್ದರು. ಆದರೆ, ಪ್ರಾಯಃ ಅವರ ಭಾಗ್ಯದಲ್ಲಿ ಅಷ್ಟೇ ಬರೆದಿರಲಿಲ್ಲ. ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರೂ ಅಂದಿನಿಂದಲೂ ಒಂದು ಮಾತಾಡುತ್ತಲೇ ಬಂದಿದ್ದಾರೆ. "ಕಾಮರಾಜ ಮತ್ತು ಎಸ್. ಕೆ. ಪಾಟೀಲರಂತಹ ವ್ಯಕ್ತಿಗಳು ಲೋಕಸಭೆಯಲ್ಲಿರಬೇಕು; ಆಗ ಆಡಳಿತಕ್ಕೆ ನೇರವಾದ ಸಹಾಯವಾಗುವುದು." 'ಅಂಥ ವ್ಯಕ್ತಿ'ಗಳು ಬೇರೆ ಯಾರು ಎಂಬುದು ಸದ್ಯ ಅನಗತ್ಯವಾದರೂ ಕಾಮರಾಜ ಮತ್ತು ಪಾಟೀಲರದ್ದು ತಿರಸ್ಕಾರಾರ್ಹವಲ್ಲ. ನಾಗರಕೋಯಿಲ್‌ನಲ್ಲಿ ಮರು ಚುನಾವಣೆ ನಡೆಯಬೇಕಾಗಿ ಬಂದ ಸಂದರ್ಭದಲ್ಲಿ ಕಾಮರಾಜರನ್ನು ಅದರಲ್ಲಿ ಸ್ಪರ್ಧಿಸಲು ಒತ್ತಾಯಪಡಿಸಿದ ಪ್ರಥಮ ವ್ಯಕ್ತಿ ನಿಜಲಿಂಗಪ್ಪನವರು. (ಎಸ್. ಕೆ. ಪಾಟೀಲರನ್ನು ತುಮಕೂರು ಪ್ರದೇಶದಲ್ಲಿ ನಿಲ್ಲಿಸುವ ಯೋಜನೆ ಮಾಡಿದ್ದು, ಇದನ್ನು ಕನ್ನಡಿಗರು ಪ್ರಬಲವಾಗಿ ವಿರೋಧಿಸಿದ್ದರಿಂದ ಕೈಬಿಟ್ಟದ್ದು ಎಲ್ಲರಿಗೂ ಗೊತ್ತು) ಕಾಮರಾಜರು ತುಂಬ ಯೋಚನೆಗೊಳಗಾದರು. ತಾವು ರಾಜ್ಯಕೀಯ ರಂಗದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೇ ಬೇಡವೇ ಎಂಬ ಪ್ರಶ್ನೆ ಭೂತಾಕಾರವಾಗಿ ಅವರನ್ನು ಕಾಡಿತ್ತು. "ನಾನಿನ್ನೂ ಏನನ್ನೂ ನಿರ್ಧರಿಸಿಲ್ಲ" ಎಂದು ಮೊದ ಮೊದಲು ಹೇಳಿಕೊಂಡರು. ಆದರೆ, ದಿನ ಹತ್ತಿರ ಬಂದಂತೆ ಒತ್ತಾಯವೂ ಹೆಚ್ಚಿದಾಗ ಕಾಮರಾಜರೂ ಒಂದು ನಿರ್ಧಾರಕ್ಕೆ ಬರುವುದು ಅನಿವಾರ್ಯವಾಯ್ತು. ತಾನೊಂದು ಬಾರಿ ಮತದಾರ ಕ್ಷೇತ್ರವನ್ನು ಕಂಡು, ಅಲ್ಲಿಯ ಜನ ತನ್ನನ್ನೇ ಬಯಸುವುದಾದರೆ ಸ್ಪರ್ಧಿಸುವೆನೆಂದರು. ಸರಿ, ಸಂದರ್ಶನ ಮುಗಿಯಿತು, ಕಾಮರಾಜರು ಕಾಂಗ್ರೆಸ್ ಅಭ್ಯರ್ಥಿಯೂ ಆದರು; ಮತ್ತೀಗ ಗೆದ್ದೂ ಬಂದರು.

ನಾಗರಕೋಯಿಲ್‌ನ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲುವುದು ಅಷ್ಟು ಸುಲಭವಾಗಿರಲಿಲ್ಲ. ಕಾಮರಾಜರು ಯಾವ ಮಂತ್ರಿಮಹೋದಯರನ್ನೂ (ಮದ್ರಾಸಿನದ್ದಂತೂ ಅವರ ಮಂತ್ರಿಗಳೆಲ್ಲಾ ಈಗ ಮಾಜಿ ಆಗಿದ್ದಾರೆ) ಸಹಾಯಕ್ಕೆ ಕರೆಯಲಿಲ್ಲ. ಕಾಂಗ್ರೆಸ್ ಪಕ್ಷ, ನಾಗರಕೋಯಿಲ್‌ನ ಸಾರ್ವಜನಿಕರ ಬೆಂಬಲದಿಂದ ರಂಗದಲ್ಲಿ ದುಮುಕಿದರು. ವಿರೋಧ ಪಕ್ಷಗಳಲ್ಲಿ ಮಾರ್ಕ್ಸಿಸ್ಟ್‌ಗಳ ಅಭ್ಯರ್ಥಿಯೊಬ್ಬರಿದ್ದರೂ, ಸ್ವತಂತ್ರ ಪಕ್ಷವನ್ನು ಆಳುವ ದ್ರಾವಿಡ ಕಳಗಂ ಬೆಂಬಲಿಸಿತ್ತು, ಮಾತ್ರವಲ್ಲದೆ ಅದರ ಮಂತ್ರಿಗಳು ಚುನಾವಣಾ ಕ್ಷೇತ್ರದಲ್ಲೇ ಹಲವು ದಿನಗಳಿಂದ ಬಿಡಾರ ಬಿಟ್ಟಿದ್ದರು, ತಮ್ಮ ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸಿ ಚುನಾವಣಾ ರಂಗಕ್ಕೆ ಇಳಿದಿದ್ದರು. ಆದರೆ, ನಾಗರಕೋಯಿಲ್‌ನ ಜನತೆ ಕಾಮರಾಜರನ್ನೇ ಬಯಸಿತ್ತು, ಬೆಂಬಲಿಸಿತು. ಚುನಾವಣಾ ಪೂರ್ವದಲ್ಲಿ ಏರಿದ್ದ ಕಾವು ಇಳಿಯಿತು, ವಿರೋಧ ದೂರವಾಯಿತೆಂದೂ ಹೇಳಬಹುದು. ಫೆಬ್ರವರಿ ೧೭ರಂದು ಆರಂಭವಾಗಲಿರುವ ಲೋಕಸಭಾಧಿವೇಶನದಲ್ಲಿ ಕಾಮರಾಜರೂ ಭಾಗವಹಿಸುವರು. ಅಲ್ಲಿ ಅವರು ಯಾವ ಪಾತ್ರವನ್ನಾಡುವರು ಎಂಬುದಿನ್ನೂ ನಿರ್ಧಾರವಿಲ್ಲ. ಕಾಮರಾಜರು ಬರಿಯ ಮೂಕ ಪ್ರೇಕ್ಷಕರಾಗಿ ಉಳಿಯಲಾರರು; ಆದರೆ ಸಕ್ರಿಯರಾಗಿ ನಿಜಲಿಂಗಪ್ಪನವರ ಅಭಿಪ್ರಾಯದಂತೆ ಕಾಮರಾಜರು ಮಂತ್ರಿಯಾಗಬೇಕು. ಇದನ್ನು ನಿರ್ಧರಿಸುವವರು ಇಂದಿರಾಗಾಂಧಿ. ಶ್ರೀಮತಿಯವರು ಕಾಮರಾಜರನ್ನು ಸಂಪುಟದಲ್ಲಿ ಸೇರಿಸಿಕೊಳ್ಳುವರೆಂದೂ ಅವರಿಗೆ ಮುಖ್ಯವಾದ ಖಾತೆಯನ್ನು ಕೊಡುವರೆಂದೂ ನಂಬಲಾಗಿದೆ. ಇದು ಇನ್ನು ಕೆಲವು ಸಮಯದಲ್ಲೇ ನಿರ್ಧಾರವಾಗುವುದು. ಎಸ್. ಕೆ. ಪಾಟೀಲರನ್ನೂ ಲೋಕಸಭೆಗೆ ಎಳೆದು ತರುವ ಪ್ರಯತ್ನವೇನೋ ನಡೆಯುತ್ತಿದೆ. ಆದರೆ ಈಗಿನ ಲೋಕಸಭೆಯ ಅಧಿಕಾರಾವಧಿಯ ಅರ್ಧದಷ್ಟು ಕಳೆಯುತ್ತಲೇ ಬಂತು. ಆದುದರಿಂದ ಪಾಟೀಲರಿಗಾಗಿ ಹೆಚ್ಚು ಚಿಂತಿಸದೆ ಆಡಳಿತೆಯನ್ನು ಸಮರ್ಥ ಮತ್ತು ಜನಪ್ರಿಯ ರೀತಿಯಲ್ಲಿ ನಡೆಸುವಲ್ಲಿ ಇದ್ದವರೇ ಮುಂದಾಗಬೇಕು. ಉತ್ತರಭಾರತದ ಪ್ರಕೃತ್ ರಾಜ್ಯಗಳ ಮಧ್ಯಾವಧಿ ಚುನಾವಣೆಗಳ ಮೇಲೆ ನಾಗರಕೋಯಿಲ್‌ನ ಪ್ರಭಾವವೆಷ್ಟು ಬೀಳಬಹುದೆಂದು ಈಗಲೇ ಹೇಳುವಂತಿಲ್ಲ; ಆದರೆ, ಲೋಕಸಭೆಯ ಮೇಲೂ ಕೇಂದ್ರ ಸರಕಾರದ ಮೇಲೂ ಈ ಪ್ರಭಾವ ಧಾರಾಳವಾಗಿಯೇ ಬೀಳುವುದು.

ಮುಖಚಿತ್ರ

ಕಲಾವೃಂದದ ಉತ್ಸಾಹಿ ಅಧ್ಯಕ್ಷರಾದ ಕಲಾಭಿಮಾನಿ ಶ್ರೀ ಕಾಣಿಯೂರು ಮಠದ ವಿದ್ಯಾವಾರಿಧಿ ತೀರ್ಥ ಶ್ರೀಪಾದಂಗಳವರು

ಹಿಂದಿ ಮಾಧ್ಯಮ ವಿಶ್ವವಿದ್ಯಾಲಯ

ಕರ್ನಾಟಕದ ಬೆಂಗಳೂರು ವಿಶ್ವವಿದ್ಯಾಲಯವನ್ನು ಕೇಂದ್ರೀಯ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂಬುದು ರಾಜ್ಯ ಸರಕಾರದ ಬಹುದಿನದ ಬೇಡಿಕೆ. ದಕ್ಷಿಣದಲ್ಲೊಂದು ಕೇಂದ್ರೀಯ ವಿಶ್ವವಿದ್ಯಾಲಯ ಬೇಕಾಗಿದೆ ಎಂಬ ಕೇಂದ್ರದ ಆಲೋಚನೆ ಇದಕ್ಕೆ ಪುಷ್ಟಿ ಕೊಡುತ್ತ ಬಂದಿತ್ತು. ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ದಕ್ಷಿಣದ ಕರ್ನಾಟಕದಲ್ಲಿ ಹಿಂದೀ ಮಾಧ್ಯಮದ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಅವರು ಸಮ್ಮತಿಸಿದ್ದರು; ಇಂದಿನ ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರೂ ಇದನ್ನು ಅನುಮೋದಿಸುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯವನ್ನೇ ಹಿಂದೀ ಮಾಧ್ಯಮದ ವಿಶ್ವವಿದ್ಯಾಲಯವಾಗಿ ಪರಿವರ್ತಿಸುವ ಸಾಧ್ಯಾಸಾಧ್ಯತೆಯ ಬಗ್ಗೆ ವಿವೇಚನೆ ನಡೆಯುತ್ತಿದೆ. ಈ ಸಂಬಂಧದಲ್ಲಿ ರಾಷ್ಟ್ರಕವಿ

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ

ಕಳ್ಳಚಿನ್ನ ಸಾಗಾಣಿಕೆಯಲ್ಲಿ ಪಾಕಿಸ್ತಾನಿಗಳೊಂದಿಗೆ ಕೇರಳೀಯನ ಕೈವಾಡವೂ ಇದೆಯಂತೆ— ಈ ಕೇರಳೀಯನ ಕೈ ಮುಕ್ತ ಎಲ್ಲೆಲ್ಲಿದೆಯೋ!

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ
ಹೊಟೆಲ್ ಸತ್ಕಾರ್
ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27
ಇಲ್ಲಿಗೆ ಸಂದರ್ಶನ ಕೊಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ, ಊಟ, ಉಪಾಹಾರದ ವ್ಯವಸ್ಥೆಯಿದೆ.
Phone: 28837
29887
HOTEL SATKAR
Boarding & Lodging
Near Corporation Office, 9, Mission Road
Bangalore—27

ಗೇಹ ರಾಜ್ಯದಲ್ಲಿ

ಆಶ್ಚರ್ಯ, ಅತ್ಯಾಶ್ಚರ್ಯಕರ

'ಅಂತೂ ಚುನಾವಣೆಯೊಂದು ಮುಗೀತೂಂತಾಯ್ತು...'

'ಅಲ್ವೇ ಮತ್ತೆ, ಪಾಪ, ಯಾರೂ ಎಲ್ಲೂ ಪಡದಿದ್ದ ಸಂಕಟವನ್ನುಂಡ ಉಮೇದ್ವಾರಿಗಳ ಉಮೇದೆಲ್ಲಾ ಕ್ಷೀಣಿಸಿತು...'

"ಯಾಕೆ ಹಾಗಂತೀರಾ?"

'ಅಲ್ಲ, ಏನಾದ್ರೂ ಹೊಡೆದಾಟವಾಡಬೇಕಾದ್ರೆ ಚುನಾವಣೆಯ ದಿನದ ವರೆಗೆ ಕಾಯುತಿದ್ರೆ ಅದಕ್ಕೆ ಭಾರೀ ರುಚಿ."

"ಅಯ್ಯೋ, ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ನಿಷ್ಪಕ್ಷಪಾತವಾಗಿ ನಿರಾತಂಕವಾಗಿ ನಡೀಬೇಕಲ್ಲಾ...?'

"ಇಲ್ಲಿ, ಅಂತೂ ಈ ಮಟ್ಟಿಗೆ ನಾವೇ ವಾಸೀನ್ನು....'

"ಯಾಕೆ?"

"ನೋಡು, ಅಮೆರಿಕೆಯಲ್ಲಿ ಅಧ್ಯಕ್ಷಸ್ಥಾನದ ಅಭ್ಯರ್ಥಿಯನ್ನೇ ಗುಂಡಿಟ್ಟು ಕೊಂದ್ರು; ಸುದೈವದಿಂದ ನಮ್ಮಲ್ಲಿ ಅಂತಹ ದುರ್ಘಟನೆ ನಡೆಯಲಿಲ್ಲ...."

'ಕೇರಳದಲ್ಲಾಗುತಿದ್ರೆ ಅದನ್ನೂ ನೋಡುಹುದಾಗಿತ್ತೋ ಏನೋ....'

"ಓಹೋ, ನಿಮಗೂ ಕೇರಳಕ್ಕೂ.... ಹ್ಞೂ, ಸರೀನ್ನ, ಅಲ್ಲಿಯ ರಾಜ್ಯಕೀಯವೂ ದಿನಾದಿನಾ ಬಣ್ಣ ಬದಲಾಯಿಸುತ್ತಲೇ ಇದೆ..."

"ಅಲ್ರಿ, ನಿಜಲಿಂಗಪ್ಪನವರು ಕೇರಳದಲ್ಲಿ ಕೇಂದ್ರದ ಹಸ್ತಕ್ಷೇಪ ನಡೆಯುವ ದಿನ ಸನ್ನಿಹಿತವಾಗುತ್ತಿದೆ ಎಂದಿದ್ದಾರಲ್ಲಾ?"

"ಅಲ್ವೆ, ಇದಕ್ಕೆ ನೀನ್ಯಾಕೆ ಚಿಂತಿಸಬೇಕು?"

"ಚಿಂತೆ ಯಾಕೆ? ಇದರ ಅರ್ಥ ಏನೂಂತ?"

"ಅರ್ಥ ಹೆಚ್ಚಿಗೆ ಏಕೆ ಕಟ್ಟಿಕೋಬೇಕು? ನಂಬೂದರಿ ಸಂಪುಟದ ಆಯುಷ್ಯ ನಿನ್ನೆಗಿಂತ ಇಂದು ಒಂದು ದಿನ ಕಡಿಮೆಯಾಗಿದಯಲ್ಲಾ...."

"ಹೋಗಿ ಬಡೀಂದ್ರೆ, ನೀವೊಂದು. ಎಲ್ಲವನ್ನೂ ತಮಾಷೆಯಾಗಿಯೇ ತೆಗೆದುಕೊಳ್ತೀರು."

'ಅಲ್ವಾ, ಪ್ರತಿ ಸಂಗ್ತಿಯನ್ನೂ ಭಾರೀ ಸೀರಿಯಸ್ಸಾಗಿ ತೆಗೆದುಕೊಂಡ್ರೆ ನಮ್ಮ ತಲೆ ನೆಲಗುಮ್ಮವಾದೀತು....'

"ಅದು ಸರೀನ್ರಿ, ನೋಡಿ, ಹತ್ತು ವರ್ಷಗಳ ಹಿಂದೆ ಇಂದಿರಾ ಗಾಂಧಿ ಕಾಂಗ್ರೆಸ್ ಅಧ್ಯಕ್ಷಸ್ಥಾನದಲ್ಲಿದ್ದಾಗಲೂ ಇದೇ ರೀತಿಯ ಮಾತುಗಳನ್ನಾಡಿದ್ದರಂತೆ— ಮತ್ತೆ ನಂಬೂದರಿಯವರನ್ನು ಸಚಿವಾರ ಮನೆಗೆ ಕಳಿಸಲಾಯಿತು...."

"ನಂಬೂದರಿ ಅದಕ್ಕೂ ಸಿದ್ಧ, ಮತ್ತೆ ನೋಡ, ಹೇಳಿದ್ದಾರಲ್ಲ? ನಮ್ಮನ್ನು ಕಿತ್ತೊಗೆದರೂ ನಾವು ಹೋರಾಟ ಬಿಡಲಾರೆವು...."

'ಅದು ಹೋಗಲಿ ಬಿಡಿ, ಅದ್ರೆ ನೋಡಿ, ಅವರು ಹುಟುವಿನಿಂದ ಮಾತುಗಳನ್ನು ಆಡಿದ್ದಾರೆನಿಸುತ್ತದೆ..."

"ಏನದು ಅಂಥದ್ದು?"

'ತಮಗಿರುವ ಅಧಿಕಾರ ಬೇರೆ, ಹೋರಾಟ ಬೇರೆ ಎಂದವರು ಒಪ್ಪುತ್ತದಿಲ್ಲ. ಅಧಿಕಾರ ಕೈಯಲ್ಲಿ ಹಿಡಿದುಕೊಂಡೇ ಕೇಂದ್ರ ಸರಕಾರದ ವಿರುದ್ಧ ಹೋರಾಟ ನಡೆಸುವುದೇ ತನ್ನ ಗುರಿ ಎಂದಿದ್ದಾರೆ....?"

"ಅಯ್ಯೋ, ಇದು ಅವರ್‍ಯಾಕೆ ಹೇಳಬೇಕು? ಈ ಎರಡು ವರ್ಷಗಳಲ್ಲಿ ಅವರು ಮಾಡಿದ್ದಾದರೂ ಏನು? ಅಂತೂ ತುಂಬ ಬೇಕು...."

"ಏನು?"

"ಪಾಪದ ಬಲೂನ್....ಅಗ ತಾನೇ ಅದು ಒಡೆಯುತ್ತದೆ...."

"ಅಲ್ರಿ, ಅದು ವರೆಗೆ ಕಾದರೆ, ಕೇರಳ ಹೇಳ ಹೆಸರಿಲ್ಲದಂತಾದೀತು..."

'ಅದು ಹೇಗೆ?'

"ಮೂವತ್ತಿಗೆ ಮೂಲಗೇಣಿಗೆ ಕೊಡದಿರುತ್ತಾರೆಯೆ ಈ ಆಳಿಯುಂದಿರು....?"

'ಹ್ಞಾಂ, ಅದು ಸರೀನ್ನ. ಆದರೂ ನೋಡು, ಶಿಶುಪಾಲ ನೂರು ಬಾರಿ ಬೈಯುವ ವರೆಗೂ ಶ್ರೀಕೃಷ್ಣ ಕಾದಿದ್ದ; ನೂರೊಂದನೆಯ ಬೈಯೊಂದಿಗೆ ಅವನ ಮುಂಡ ರುಂಡಕ್ಕೆ ಬೈ ಬೈ ಎಂದಿತು...'

'ಅಲ್ರಿ, ಅದೆಂಥದ್ದು ಇದೆಂಥದ್ದು? ಅಲ್ಲಿ ಕೃಷ್ಣ ಶಿಶುಪಾಲನ ತಾಯಿಗೆ ಆ ರೀತಿ ಮಾತು ಕೊಟ್ಟಿದ್ದ. ಅದಕ್ಕಾಗಿ ಕಾಯಲೇಬೇಕಾಯ್ತು. ಇಲ್ಲ ಅಂಥ ಸಮಸ್ಯೆಯಿಲ್ಲ.'

'ಅದು ಹೌದೂನ್ನು. ಆದ್ರೆ ಜನತೆಯೇ ಬಹುಮತದಿಂದ ಆರಿಸಿದ "ಜನಪ್ರಿಯ" ಸರಕಾರವನ್ನು ಕಿತ್ತೊಗೆಯಬೇಕಾದರೆ ನೂರು ಸಲ ಯೋಚನೆ ಮಾಡಬೇಕ. ಜನತೆಯಿಂದಲೇ ಆ ಬಗ್ಗೆ ಒತ್ತಾಯದ ಬೇಡಿಕೆ, ಬರಬೇಕು. ಇಲ್ಲವಾದರೆ, ಪ್ರಜಾಸತ್ತೆ ಸತ್ತೇ ಹೋದೀತು..."

"ಹ್ಞಾಂ....ಅಂತೂ ಕೇರಳ ಮಾರಿ ಹೋದರೂ ನಾವು ಮಾತಾಡುವ ಹಾಗಿಲ್ಲ...."

'ಪ್ರಜಾತಂತ್ರದಲ್ಲಿ ಸಂವಿಧಾನ ಪ್ರಧಾನ. ರಾಜ್ಯದ ಶಾಂತಿ—ಸುವ್ಯವಸ್ಥೆ, ನ್ಯಾಯ ಪರಿಪಾಲನೆಯೆಲ್ಲ ರಾಜ್ಯ ಸರಕಾರಕ್ಕೆ ಸೇರಿದ್ದು. ಅದುವೇ ಕೇಂದ್ರ ಸರಕಾರದೊಡನೆ ಹೋರಾಟಕ್ಕಿಳಿದರೆ ಮತ್ತೆ ಉಳಿದವರ ಪಾಡೇನು? ಕೇರಳದ ಜನ ಹೊರಗಡೆ ಕಮ್ಯುನಿಸ್ಟರನ್ನು ಬಯ್ಯುತ್ತಾರೆ. ಆದರೆ, ಮತಪೆಟ್ಟಿಗೆ ಹೊಕ್ಕೊಡನೆಯೇ ಕಣ್ಣು ಮುಚ್ಚಿ ಅವರಿಗೇ ಮತವೀಯುತ್ತಾರೆ.'

"ಸಧ್ಯ ಕಮ್ಯುನಿಸ್ಟರ ರಾಜ್ಯಭಾರ ಅವರ ಕಣ್ಣು ತೆರೆಸೀತು...."

"ಹಾಗೇಂತ ಭರವಸೆಯಿಡೋದ ಕ್ಕೇನಡ್ಡಿ?"

"ಎಂಥದೋ...ಇದನ್ನೆಲ್ಲಾ ನೋಡುವಾಗ ಹೊಸ ವೈದ್ಯನಿಗಿಂತ ಹಳೆಯ ರೋಗಿಯೇ ವಾಸಿಯೆನಿಸುತ್ತದೆ."

"ಎಷ್ಟೆಸೇ ಕತೆ ಬೇರೆ; ಆಗೋ ಕತೆ ಬೇರೆ."

"ಯಾಕೆ?"

"ನೋಡಮ್ಮ, ಮಧ್ಯರೇಲ್ವೆಯಲ್ಲಿ ಅನುಭವದ ಆಧಾರದ ಮೇಲೆ ಹರಿಯ 'ಎಸ್ ಎಸ್ ಸಿ'ಗಳನ್ನು ಪ್ರಯೋಗಶಾಲಾ ಸಹಾಯಕರಾಗಿ ಭರ್ತಿ ಕೊಟ್ಟದ್ದು ಅನ್ಯಾಯವೆಂತ ಒಬ್ಬರು ದೂರಿದ್ದಾರೆ. ಅವರೆನ್ನುವಂತೆ ಅನುಭವಕ್ಕಿಂತ ಪ್ರಶಸ್ತಿ ಪತ್ರಕ್ಕೇನೇ ಪ್ರಾಧಾನ್ಯವೀಬೇಕು.'

"ಅಂದರೆ?"

'ಹಳೆಯ ರೋಗಿಗೆ ಅನುಭವವಿದೇಂತ ವೈದ್ಯನ ಸ್ಥಾನದಲ್ಲಿ ನೇಮಕ ಮಾಡಲಾಗದು."

"ಆಯ್ತಪ್ಪ, ಅದು ಹಾಗಿರ್ಲಿ. ಪ್ರಜಾತಂತ್ರದಲ್ಲಿ ಎಲ್ಲವೂ ಹೊಸತಾಗಬೇಕು........"

'ಅದಕ್ಕೇ ನೋಡು, ಕಡಿಮೆಯೆಂದರೆ ಐದು ವರ್ಷಗಳಗೊಮ್ಮೆ ಚುನಾವಣೆ ನಡೆಯುವುದು...."

"ಅಗ್ಲಿ ಬಿಡಿ, ಅಲ್ರಿ ಕಾಮರಾಜರ ಕತೆಯೇನಾಯ್ತು...."

'ಅಯ್ಯೋ, ಅದೇನು ಹೇಳ್ತಿಯಾ? ಭಾರೀ ಭಾರೀ ವಿಜಯ....'

"ಏನು ತಮಾಷೆ ಮಾಡ್ತೀರಾ?"

'ಅಯ್ಯೋ, ಅದ್ರಲ್ಲೂ ಸಂಶಯಾನೆ? ನೋಡು, ಐದು ಲಕ್ಷಕ್ಕೂ ಮಿಕ್ಕಿದ ಮತದಾರರಲ್ಲಿ 397 ಸಾವಿರ ಚಲಾಯಿಸಿದ ಮತಗಳು. ಇವುಗಳಲ್ಲಿ ಸೇ 63 ಅಂದರೆ, 249 ಸಾವಿರ ಮತಗಳು ಕಾಮರಾಜರಿಗೆ...."

"ಅಲ್ರಿ, ಎಂಥದಿದೂಂದ್ರೆ..."

"ಅವರ ನಿಕಟ ಪ್ರತಿಸ್ಪರ್ಧಿ ಡಿ.ಎಂ.ಕೆ ಮತ್ತು ಮುಸ್ಲಿಂ ಲೀಗ್ ಬೆಂಬಲಿತ ಸ್ವತಂತ್ರ ಪಕ್ಷದ ಅಭ್ಯರ್ಥಿಗೆ 120 ಸಾವಿರ, ಪಕ್ಷೇತರ, ಕಮ್ಯುನಿಸ್ಟರ ಬೆಂಬಲ[?]ದವರಿಗೆ 21 ಸಾವಿರ. ಉಳಿದದ್ದು ಇ[?]ಕ್ಕೆ ಉಳಿದ ನಾಲ್ವರು ಸರ್ವತಂತ್ರ ಸ್ವತಂತ್ರರಿಗೆ."

"ಅಂದ್ರೆ ಇಂದು ಆಶ್ಚರ್ಯ!"

'ಹೆ[?], ತನ್ನ ಮತದಾರ ಕ್ಷೇತ್ರವಿರುಧನಗರದಲ್ಲಿ ಕಾಮರಾಜರು ಸೋತದ್ದೂ ಆಶ್ಚರ್ಯವೇ ಅನ್ನು. ರಾಜಕೀಯದಲ್ಲಿ ಹೀಗೆಯೂ ಒಮ್ಮೊಮ್ಮೆ ಆಗುವುದುಂಟು..."

"ಕಾಮರಾಜರ ವಿಜಯ, ಕಾಂಗ್ರೆಸ್ಸಿಗೆ ಹೊಸ ಶಕ್ತಿಯನ್ನು ತಂದೀಯಬಲ್ಲುದು...."

"ಅದು ಸರಿ. ನಿಜಲಿಂಗಪ್ಪನವರ ಕಾರ್ಯಾಕರ್ತೃದಿಂದ ಕಾಂಗ್ರೆಸ್ ಪಕ್ಷ ಚೇತರಿಸಿದರೆ, ಅದು ಕನ್ನಡಿಗರಿಗೆ ಹೆಮ್ಮೆ..."

"ಹ್ಞಾಂ...."

"ಏನು?"

"ಏನೂ ಇಲ್ಲಪ್ಪ...."

"ನಂಗೆ ಬೊತ್ತು, ಪಾಪ, ಹೊಟ್ಟೆ ಭಾರೀಯಾಯ್ತು."

—ಗೋರಾ

ತುಂಡುಕತೆ ೮

ದಿಟ್ಟ ಪುಟ್ಟ

"ನನ್ನ ಎತ್ತಿಕೋ ಅಪ್ಪಾ" ಎಂದು ಹಟ ಮಾಡಿದ ಪುಟ್ಟ.

"ನೀನೊಬ್ಬ ದಡ್ಡ ಕಣೋ, ಬರೀ ದಡ್ಡ" ಎನ್ನುತ್ತಾ ಅಪ್ಪ ಅವನನ್ನು ಎತ್ತಿಕೊಂಡ.

"ಇಲ್ಲ ನಾ ಗಟ್ಟಿಗ" ಎಂದ ಪುಟ್ಟ ಅಪ್ಪನ ಬೆನ್ನಿಗೆ ಗುದ್ದುತ್ತ.

ಆಗ ಒಂದು ಬೆಕ್ಕು ಗೋಡೆ ಮೇಲೆ ಏರಿ ಮಾಡಿನ ಮೇಲೆ ಹೋಯಿತು.

"ನೋಡಿದೆಯಾ, ಆ ಬೆಕ್ಕನ್ನು! ಅಷ್ಟು ಸಣ್ಣ ಬೆಕ್ಕಿಗ ಎಷ್ಟು ಗಟ್ಟಿಗತನ! ನಿನ್ನಿಂದಾದೀತೇ, ಅದರ ಹಾಗೆ ಓಡಲಿಕ್ಕೆ, ಹಾರಲಿಕ್ಕೆ, ಹತ್ತಲಿಕ್ಕೆ?" ಎಂದು ಕೇಳಿದ ಅಪ್ಪ.

"ಇಕೊ, ನಿನ್ನ ಮೇಲೆ ಹತ್ತಿದ್ದೇನಲ್ಲಾ!" ಎಂದ ಪುಟ್ಟ.

"ನೀನು ಹತ್ತಿದ್ದಲ್ಲ. ನಾನೇ ನಿನ್ನ ಎತ್ತಿದ್ದು. ಬೆಕ್ಕು ಬೆಕ್ಕನ್ನ ಎತ್ತಿಕೊಳ್ಳೋದಿಲ್ಲ, ಗೊತ್ತಾ?" ಎಂದ ಅಪ್ಪ.

"ಹಂ, ಅದರ ಅಪ್ಪನಿಗ ಎತ್ತಿಕೊಳ್ಳೋಕೆ ಬರೋದಿಲ್ಲ ಗೊತ್ತಿಲ್ಲ" ಎಂದ ಪುಟ್ಟ.

"ಹಾಗಾದರೆ ನೀನು ಆ ಬೆಕ್ಕಿಗಿಂತ ದಡ್ಡ ತಾನೆ? ನೋಡಿದೆಯಾ ಆ ಬೆಕ್ಕು ಎಷ್ಟು ಸ್ವರ ಮಾಡಿನ ಮೇಲೆ ಹತ್ತಿತು" ಎಂದು ಅಪ್ಪ ಹೇಳಿದ ಕೂಡಲೇ, ದಿಟ್ಟ ಪುಟ್ಟ ಆ ಬೆಕ್ಕನ್ನು ನೋಡುತ್ತಾ, "ನೀನು ಸಹಾ ಆ ಬೆಕ್ಕಿಗಿಂತ ದಡ್ಡ ಅಪ್ಪಾ!" ಎಂದ.

—"ನವಗಿರಿನಂದ"

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾದ ಸಮಾಚಾರ

ಜನವರಿ ೧೯ರಿಂದ ಮಾರ್ಚ 30ನೇ ತಾರೀಖಿನ ವರೆಗೆ

300=00 ರೂ. ನಿಮ್ಮಳ ವ್ಯಾಪಾರ ಮಾಡಿದರೆ

ಒಂದು **Steel Desk** (ಬರೆಯುವ—ಮಾಟ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ—	ಭಾಗ 1— ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ—	ಭಾಗ 2— "	2—50
ಉಂಡಾಡಿ ಗುಂಡ—	ಪರ್ವತವಾಣಿ	2—00
ಧರ್ಮದೇವತೆ—	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎಚ್. ನರಸಿಂಹಯ್ಯ	3—00
ಎರಡು ತಲೆ ಹಾವು —	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—

ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಗೋವಿಂದನಾರಾಯಣರು ಆಡುತ್ತಿರುವ

ರಾಜಕೀಯ ನಾಟಕ - ಅಧಿಕಾರ ರಕ್ಷೆ

ಮಧ್ಯ ಪ್ರದೇಶವು ಭಾರತದ ಪ್ರಮೋದಮಯ ಪ್ರದೇಶವೆಂದರೂ ತಪ್ಪಲ್ಲ. ತ್ರಿಪುರಾರಿಯು ನಾಶ ಮಾಡಿದ ತ್ರಿಪುರಗಳಲ್ಲಿನ ದುರವಸ್ಥೆಗಿಂತಲೂ ಇಲ್ಲಿನ ಅವ್ಯವಸ್ಥೆ—ದುರ್ವ್ಯವಸ್ಥೆ ಮಿತಿ ಮೀರಿದೆ. ನಾಲ್ಕನೆಯ ಸಾರ್ವತ್ರಿಕ ಚುನಾವಣಾ ನಂತರ ಕಾಂಗ್ರೆಸ್ ಡಿ. ಪಿ. ಮಿಶ್ರಾರ ಮಂತ್ರಿ ಮಂಡಳ ಉರುಳಿದ ಬಳಿಕ ಗೋವಿಂದ ನಾರಾಯಣ ಸಿಂಗರ ಸಂಪುಟಕ್ಕೂ ಇಂದಿರೂ ರಟ್ಟಿಗೂ ಏನೊಂದೂ ವ್ಯತ್ಯಾಸ ಕಾಣುತ್ತಿಲ್ಲ. ಏಕೆಂದರೆ ಇಂದಿರೂ ರಟ್ಟಿಗನ್ನು ಹಿಗ್ಗಿಸಬಹುದಾದರೆ, ಸಿಂಗ ಸಂಪುಟವನ್ನು ಮನ ಬಂದಾಗ ಬೆಳೆಸಿಕೊಳ್ಳುವ ಸಾಧ್ಯತೆ ಸದಾ ಕಾಲವೂ ಇದ್ದೇ ಇದೆ. ಕಾಂಗ್ರೆಸ್ ಬಹುಮತ ಪಡೆಯುದಲ್ಲಿ ಸಂಯುಕ್ತ ವಿಧಾಯಕ ದಳವು ಅಧಿಕಾರ ಗಳಿಸಿದಲ್ಲಿ ಒಂದೊಂದು ರಾಜ್ಯದ ಗತಿವಿಧಿಗಳು ಒಂದೊಂದು ತೆರನಾಗಿದ್ದು ಸರ್ವವೇದ್ಯ. ಬಂಗಾಳ, ಬಿಹಾರ, ಉತ್ತರ ಪ್ರದೇಶ, ಹರಿಯಾಣ, ಪಂಜಾಬುಗಳು ರಾಷ್ಟ್ರಪತಿಗಳ ಆಳಿಕೆಯಲ್ಲಿ ಒಂದು ಹಂತವನ್ನು ಬೇಗನಾಗಿಯೋ ತಡವಾಗಿಯೋ ಹೊಂದಿದವು. ಕೇರಳದಲ್ಲಿ ರಾಷ್ಟ್ರಪತಿ ಆಳಿಕೆಯು ಕನ್ನಾಲಿಗೆ ಚಾಚಲಣಿಯಾಗಿದೆ—ಕೆಂಪೇಗುರಪ್ಪ ಅಡುಮಡಿ ಅಲ್ಲಿ ಪ್ರಜಾಶಕ್ತಿಗೆ ಉಳಿಗಾಲವಿಲ್ಲವೆಂಬುದನ್ನು ಜನಜನವೂ ಮನವಂಕೆ ಮಾಡಿಕೊಂಡಿದ್ದೆ. ಒರಿಸ್ಸಾದ ರಾಜಕಾರಣ ಇನ್ನೊಂದು ಬಗೆಯದಾದರೆ, ಏಕಸ್ವಾಮ್ಯ ಪಡೆದ ತಮಿಳುನಾಡಿನ 'ದ್ರಾವಿಡ'ದ ಆಡಳಿತ ಭ್ರಾಮಕವಾಗಿಯೇ ಮುನ್ನಡೆಸಿದೆ. ಆದರೆ, ಮಧ್ಯಪ್ರದೇಶದ ರಾಜಕಾರಣವು ಮುಂದ ಸಾಗುವ ದಾರಿಯೇ ಬೇರೆ. ಇಲ್ಲಿ ಪ್ರಜಾತಂತ್ರವಿದೆ; ಆದರೆ, ಅದರಿಂದ ಪ್ರಜೆಗಳಿಗೆ ಮಾತ್ರ ಯಾವ ಲಾಭವೂ ಇಲ್ಲ; ಬದಲು, ರಾಷ್ಟ್ರಪತಿ ಆಳಿಕೆ (ಇದು ಪ್ರಜಾತಂತ್ರಕ್ಕೆ ಕುಠಾರ ವೆನ್ನುವುದು ಸರ್ವಮಾನ್ಯ ಭಾವನೆ) ಬಾರದಂತೆ ತಡೆಯುವುದರಲ್ಲೇ ಗೋವಿಂದ ನಾರಾಯಣ ಸಿಂಗರು ಕಾರ್ಯಮಗ್ನರಾಗಿದ್ದಾರೆ.

ಮಧ್ಯ ಪ್ರದೇಶವು ಭಾರತದ ದೊಡ್ಡ ರಾಜ್ಯ. ಇದೆಂದು ರಾಜಕಾರಣದ ಕ್ರೀಡಾಂಗಣವಾಗಿದೆಯೆಂದರೆ ತಪ್ಪಲ್ಲ. ಹಿಂದಿನಿಂದಲೂ ಇದು ರಾಜಕೀಯ ಚೇಳೆಯಾಟವಾಡುವವರಿಗೆ ಸರಿಯಾದ ರಾಜ್ಯ. ರಾಜ್ಯ ಪುನರ್ಘಟನೆಯ ನಂತರ ಇದು ಹಲವು ರಾಜ್ಯಗಳ ಘಟಕವಾಯಿತು. ಕರ್ನಾಟಕದಲ್ಲಿ 'ಎ' ರಾಜ್ಯದ ಭಾಗಗಳು 'ಬಿ' ರಾಜ್ಯ (ಮೈಸೂರು), ಮತ್ತು 'ಸಿ' ರಾಜ್ಯ (ಕೊಡಗು)ಗಳು ಕೂಡಿಕೊಂಡಿದ್ದರೂ ಇಲ್ಲಿ ತಲೆದೋರದ ಬೃಹತ್ ಸಮಸ್ಯೆ ಮಧ್ಯ ಪ್ರದೇಶದಲ್ಲಿ ಕಾಣಿಸಿತು. ಹಿಂದಿನ 'ಎ' ರಾಜ್ಯ ಮಧ್ಯ ರಾಜ್ಯಗಳ ಹಿಂದೀ ಮಾತನಾಡುವ ಪ್ರದೇಶಗಳು, 'ಬಿ' ರಾಜ್ಯ ಮಧ್ಯ ಭಾರತದ ಭಾಗ ಮತ್ತು 'ಸಿ' ರಾಜ್ಯಗಳಾಗಿದ್ದ ವಿಂಧ್ಯ ಪ್ರದೇಶ ಮತ್ತು ಭೋಪಾಲಗಳ ಕಲಸು ಮೇಲೋಗರವೇ ಇಂದಿನ ಮಧ್ಯಪ್ರದೇಶವಾಯಿತು. ಗ್ವಾಲಿಯೋರ್, ಇಂದೋರ್ ಮತ್ತಿತರ ಮಧ್ಯಭಾರತದ ಸಂಸ್ಥಾನಗಳನ್ನು ಒಗ್ಗೂಡಿಸಿ ಮಧ್ಯಭಾರತವು ನಿರ್ಮಾಣವಾಗಿತ್ತು. ಬುಂದೇಲ್ ಖಂಡ, ಬಾಗೇಲ್ಖಂಡ ದೇಶಗಳು ಮಧ್ಯ ಪ್ರದೇಶದಲ್ಲಿ ಸೇರ್ಪಡೆಯಾದುವು. ವಿಂಧ್ಯ ಪ್ರದೇಶದಲ್ಲಿ ಜನಪ್ರಿಯ ರಾಜಕೀಯ ಪಕ್ಷವೆಂಬುದೇ ಇರಲಿಲ್ಲ. ಆಂದಿನ ಗೃಹ ಮಂತ್ರಿಯಾಗಿದ್ದ ಸರ್ದಾರ ಪಟೇಲರು ವಿಂಧ್ಯಪ್ರದೇಶದಲ್ಲಿ ರಾಜಕೀಯ ಸ್ಥಿರತೆಯನ್ನು ಕಂಡಿಲ್ಲ ಆದನ, ಸಂಯುಕ್ತ ಪ್ರಾಂತ್ಯ ಮತ್ತು ಮಧ್ಯಭಾರತಗಳಲ್ಲಿ ವಿಂಗಡಿಸಲು ಆಲೋಚಿಸಿದ್ದರು. ಆದರೆ, ಅಂದ ರಾಜ್ಯಕಾರಣಿಗಳು ಈ ಆಲೋಚನೆಯು ಹೊಂದಿರುವ ಉತ್ತಮ ಧ್ಯೇಯವನ್ನು ಅರಿತುಕೊಳ್ಳಲಿಲ್ಲ. ಹಾಗಾಗಿ ಪರಿಸ್ಥಿತಿ ಹಾಗೆಯೇ ಮುಂದುವರಿಯಿತು. ಗ್ವಾಲಿಯೋರ್ ಮತ್ತು ಇಂದೂರಗಳ ಪರಸ್ಪರ ಶಕ್ತಿ ಪ್ರದರ್ಶನದಿಂದ ಅಲ್ಲಿ ಯಾವುದೇ ಮಂತ್ರಿ ಮಂಡಳವು ಸ್ಥಿರವಾಗಿ ಉಳಿಯಲಿಲ್ಲ. ಭೋಪಾಲವೂ ಪ್ರತ್ಯೇಕತೆಗೇನೇ ಪ್ರಾಧಾನ್ಯ ನೀಡುತಿತ್ತು.

ಈ ಸಮಸ್ಯೆಗಳ ನಾಡುಗಳನ್ನು ಒಂದಾಗಿಸಿ 'ಮಧ್ಯ ಪ್ರದೇಶ'ವೆಂಬ ವಿಶಾಲ ರಾಜ್ಯ ನಿರ್ಮಾಣವಾದಾಗ, ಪ್ರಾದೇಶಿಕ ಸೆಳೆತಗಳಲ್ಲಿಯೇ ಶಕ್ತಿಹ್ರಾಸಗೊಳಿಸುವ ಪ್ರವೃತ್ತಿಯಿಂದ ದೂರವುಳಿದು ಹೊಸ ರಾಜ್ಯವಕ್ಷ ಎಲ್ಲರೂ ಒಂದಾಗಿ ರಾಜ್ಯದ ಅಭಿವೃದ್ಧಿಗಾಗಿ ಹೋರಾಡುವ ಪಣ ರಾಜಕೀಯದಲ್ಲಿ ಮಾಡಲಾಗುವುದೆಂದು ಗೋಪುರ ಕಟ್ಟಲಾಗಿತ್ತು. ಗುಡ್ಡಗಾಡು ಜನರೇ ಹೆಚ್ಚಾಗಿರುವ ಈ ರಾಜ್ಯದಲ್ಲಿ ನ್ಯಾಯ ಮತ್ತು ಸುವ್ಯವಸ್ಥೆಗೆ ಇವರೇ ಬಹುದೊಡ್ಡ ಆತಂಕ. ಡಾ| ಕೈಲಾಸನಾಥ ಖಟ್ಜು ಅವರು ಮುಖ್ಯ ಮಂತ್ರಿಯಾದಾಗ, ಗ್ವಾಲಿಯೋರದ ಅಂದಿನ ಮಹಾರಾಣಿ ವಿಜಯರಾಜೆಯವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಲೋಕ ಸಭೆಗೆ ಆಯ್ಕೆಯಾದಾಗ, ಈ ದುರವಸ್ಥೆ ತಪ್ಪಬಹುದೆಂದು ಆಶಿಯಿಡಲಾಗಿತ್ತು. ಮುಂದೆ, ದ್ವಾರಕಾ ಪ್ರಸಾದ ಮಿಶ್ರರ ಮುಖ್ಯ ಮಂತ್ರಿತ್ವ ಹಾಗೂ ಗ್ವಾಲಿಯೋರಿನ ರಾಜ ಮಾತೆಯವರೊಡನೆ ಅವರ ನಿಕಟ ಸಂಪರ್ಕವೂ ಇಂತಹ ಆಶಯಕ್ಕೆ ಪುಟವಿಟ್ಟಿತ್ತು. ಆದರೆ, ಇವೆಲ್ಲವೂ ಕನಸಿನ ಮಂಡಿಗೆಯಾಯಿತು. ರಾಜಮಾತೆಯು ಮಿಶ್ರರೊಡನಿರುವ ಹೊಂದಾಣಿಕೆಯಿಂದ ಬೇರೆಯಾದರು—ಯಾಕೆ? ಯಾರಿಗೂ ಏನೂ ಇಂದಿಗೂ ತಿಳಿಯದು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಯ ನಂತರ ಮಿಶ್ರರು ಸ್ವಲ್ಪಕಾಲ ಮುಖ್ಯ ಮಂತ್ರಿಯಾಗಿ ಮುಂದುವರಿದರು. ಆದರೆ, ಅಲ್ಪಾವಧಿಯಲ್ಲೇ ಗೋವಿಂದ ನಾರಾಯಣ ಸಿಂಗರ ಮುಂದಾಳುತನದಲ್ಲಿ ಬೃಹತ್ಪ್ರಮಾಣದ ಕಾಂಗ್ರೆಸ್ ಎಮ್ಮೆಲ್ಲೆಗಳು ಪಕ್ಷತ್ಯಾಗ ಮಾಡಿದರು. ಈ ಘಟನೆಯ ಸೂತ್ರಧಾರಿಣಿ ರಾಜಮಾತೆ. ರಾಜಮಾತೆಯು 'ಲೋಕಸೇವಕ ದಳ'ವನ್ನು ಈ ಪಕ್ಷತ್ಯಾಗಿಗಳ ಮತ್ತು ತನ್ನ ಪ್ರಭಾವಕ್ಕೆ ಒಳಗಾದವರ ಸಹಾಯದಲ್ಲಿ ರಚಿಸಿದರು. ಜನಸಂಘೀಯ ಮತ್ತು ಕಮ್ಯುನಿಸ್ಟರಿಗೂ ಅಧಿಕಾರದ ರುಚಿ ನೋಡುವ ಹುಮ್ಮಸ್ಸು ತಲೆದೋರಿತು. ಬಂಗಾಳ, ಬಿಹಾರ, ಉತ್ತರ ಪ್ರದೇಶ, ಪಂಜಾಬುಗಳ ಮಾದರಿ ಅವರ ಕಣ್ಣ ಮುಂದೆ ಕುಣಿದಾಡುತ್ತಿತ್ತು. ಹಾಗಾಗಿ ಪಕ್ಷತ್ಯಾಗಿಗಳ ಮತ್ತು ಅಧಿಕಾರ ಲೋಲುಪರ ಕೂಡಿಕೆಯಿಂದ ಸಂಯುಕ್ತ ವಿಧಾಯಕ ದಳದ ಅವತಾರವಾಯಿತು. ಗೋವಿಂದನಾರಾಯಣ ಸಿಂಗರ ನೇತೃತ್ವದಲ್ಲಿ ಅದು ಸರಕಾರ ರಚಿಸಿತು.

ಸಂಯುಕ್ತ ವಿಧಾಯಕ ದಳವು ಗೋವಿಂದ ನಾರಾಯಣ ಸಿಂಗರನ್ನೇ ತನ್ನ ನಾಯಕರನ್ನಾಗಿ ಆರಿಸಿಕೊಂಡದ್ದರಲ್ಲೂ ಒಂದು ವೈಶಿಷ್ಟ್ಯವಿದೆ. ಮಂತ್ರಿಯಾಗುವ ಆಶೆಯಿದ್ದವರನ್ನೆಲ್ಲಾ ಮಂತ್ರಿ ಪದಕ್ಕೇರಿಸುವಷ್ಟು ಉದಾರಿ ರಾಜ್ಯಕಾರಣಿ ಇವರನ್ನು ಬಿಟ್ಟರೆ ಮತ್ತಾರೂ ಇರಲಿಲ್ಲ. ಯಾರಿಗೆ ಯಾವಾಗ ಬೇಕಾದರೂ ಮಂತ್ರಿಪಟ್ಟ ನೀಡುವ ಉದಾರ ನೀತಿಗೆ ಗೋವಿಂದ ನಾರಾಯಣ ಸಿಂಗರು ಪ್ರಸಿದ್ಧರು. ಶ್ರೀ ಸಿಂಗರು ಮುಖ್ಯ ಮಂತ್ರಿಯಾದ ಬಳಿಕ ಯಿಂದ ಅಲ್ಲಿನ ರಾಜಕೀಯದ ಗಾಳಿ ಬಿಸಿಯಾಗುತ್ತಲೇ ಬಂತು. ಆದರೆ, ವಿಚಿತ್ರ ಸಂಗತಿಯೊಂದುಂಟು. ಸಚಿವರು ತಂತಮ್ಮ ಇಚ್ಛೆ ಬಂತೆ ಸ್ವೈರವೃತ್ತಿ ಪರಾಯಣರಾದರೂ ಸಂಪುಟ ಉರುಳಲಿಲ್ಲ; ಅಥವಾ ಸಂಯುಕ್ತ ವಿಧಾಯಕ ದಳದ ಸದಸ್ಯರು ಭಿನ್ನಮತವನ್ನು ತ್ಯಜಿಸಿ ಒಂದಾಗಿ ದುಡಿಯಲೂ ಮುಂದಾಗಲಿಲ್ಲ. ಪರಿಣಾಮ ಗೊತ್ತೇ ಇದೆ. ರಾಜ್ಯಕೀಯದಲ್ಲಿ ಪ್ರತಿಕ್ಷಣವೂ ಅಸಮತೋಲನ, ಜತೆಯಲ್ಲಿ ಆರ್ಥಿಕ ಉನ್ನತಿ ಗತಪ್ರಾಣ

ವಿರೋಧಿ ಪಕ್ಷದ ನೆಲೆಯಲ್ಲಿರುವ ಕಾಂಗ್ರೆಸ್ಸಿನ ತನ್ನ ಆಂತರಿಕ ವಿಷಮತೆಯಿಂದ ಒಂದಾಗಲು ಅಸಮರ್ಥವಾಗಿದೆ. ಹಾಗಾಗಿ ಸರಕಾರಕ್ಕೆ ಪಂಥಾಹ್ವಾನ ನೀಡಲು ಅಶಕ್ತವಾಗಿದೆ. ಮಿಶ್ರ ಮತ್ತು ಶು

(ಎಂಟನೇ ಪುಟ ನೋಡಿರಿ)

ಕ್ಷಯ ರೋಗಕ್ಕೆ ಗೃಹ ಚಿಕಿತ್ಸೆ

ಕ್ಷಯ ರೋಗಿಗಳಿಗೆ ಮನೆಯಲ್ಲಿಯೇ ಚಿಕಿತ್ಸೆ ಮಾಡುವುದು ಆಗಿನ ಕ್ರಮ. ಈ ಉದ್ದೇಶಕ್ಕಾಗಿ ಪ್ರತಿ ಜಿಲ್ಲೆಯಲ್ಲಿಯೂ ಚೆನ್ನಾಗಿ ಸಜ್ಜುಗೊಳಿಸಲ್ಪಟ್ಟ ಒಂದು ಚಿಕಿತ್ಸಾಲಯವನ್ನು ಸ್ಥಾಪಿಸಲು ಸರಕಾರವು ಯೋಚಿಸುತ್ತಿದೆ. ಗೃಹ ಚಿಕಿತ್ಸೆಯನ್ನು ಪರಿಣಾಮಕಾರಿಯಾಗಿ ಮಾಡಬೇಕಾದರೆ ಚಿಕಿತ್ಸಾಲಯಗಳಲ್ಲಿ ಸಾಧನ ಸಲಕರಣೆಗಳು, ತರಬೇತಿ ಸಿಬ್ಬಂದಿ, ರೋಗಿಗಳಿಗೆ ಉಚಿತವಾಗಿ ಕೊಡಲು ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳು ಬೇಕಾಗುತ್ತದೆ. ಅಲ್ಲದೆ ಡಾಕ್ಟರು ತಿಳಿಸಿದಂತೆ ರೋಗಿಗಳು ಸಕಾಲದಲ್ಲಿ ಔಷಧ ಸೇವಿಸುವರೆಂಬುದನ್ನು ಸ್ಥಿರಪಡಿಸಿಕೊಳ್ಳಬೇಕು. ಎಲ್ಲೆಡೆಗಳಿಂದಲೂ ಕೇಳಿ ಬರುವ ಶಾಶ್ವತವಾದ ದೂರು ಎಂದರೆ ಔಷಧ ಸೇವನೆಯು ಕಾಲ ಕಾಲಕ್ಕೆ ಸರಿಯಾಗಿ ನಡೆಯುವುದಿಲ್ಲ ಎಂದು. ಈ ಸಂದರ್ಭದಲ್ಲಿಯೇ ಸ್ವಯಂಸೇವಕ ಸಂಸ್ಥೆಗಳ ಪ್ರಮುಖ ಪಾತ್ರದ ಆವಶ್ಯಕತೆ ಬರುವದು. ಇವುಗಳ ಆಶ್ರಯದಲ್ಲಿ ನುರಿತ ಸ್ವಯಂಸೇವಕರುಗಳಿದ್ದು ಡಾಕ್ಟರ ಸಲಹೆಯ ಪ್ರಕಾರವೇ ರೋಗಿಗಳು ಕ್ರಮವಾಗಿ ಔಷಧಿ ತೆಗೆದುಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆಯೂ ಔಷಧಗಳನ್ನು ಹಂಚುವುದರ ಬಗ್ಗೆ ಸರಕಾರೀ ಏಜನ್ಸಿಗಳಿಗೆ ಸಹಾಯ ಮಾಡಬೇಕು.



ಕ್ಷಯ ರೋಗ ಸಂಸ್ಥೆಯಲ್ಲಿ ಸಾಕಷ್ಟು ಹಣವಿಲ್ಲದಿದ್ದರೆ ಸ್ವಯಂಸೇವಕರಿಗೆ ತರಬೇತಿ ಕೊಡಲು ಮತ್ತು ಅವರನ್ನು ಇಟ್ಟುಕೊಳ್ಳಲು ಸಾಧ್ಯವಾಗಲ್ಲ. ಮುದ್ರೆಗಳ ಮಾರಾಟ ಚಳವಳಿಯು ಹಣ ಸಂಗ್ರಹಿಸುವ ನೇರವಾದ ಕ್ರಮ. ಬಡವರಾದ ಕ್ಷಯರೋಗಿಗಳ ಸಾಮಾಜಿಕ ಅವಶ್ಯಕತೆಗಳು ... ವಿದ್ಯಾಭ್ಯಾಸ, ಸಮಾರಂಭ ಸಂದರ್ಭಗಳ ಖರ್ಚು ಮೊದಲಾದವುಗಳಿಗೆ ಸಹಾಯ ಮಾಡಲಿಕ್ಕೂ ಹಣ ಬೇಕಾಗುತ್ತದೆ.

ಕ್ಷಯ ರೋಗದ ಮುದ್ರೆಗಳನ್ನು ಪಡೆಕೊಂಡು ಈ ಮೇಲಿನ ಉದ್ದೇಶಗಳಿಗಾಗಿ ಹಣ ಸಂಗ್ರಹಿಸಲು ಸಹಾಯ ಮಾಡಿ

ಒಂದು ಟಿಬಿ ಸೀಲಿನ ಬೆಲೆ ೧೦ ಪೈಸೆ ಮಾತ್ರ

ಮುದ್ರೆಗಳು ಸಿಕ್ಕುವ ಸ್ಥಳ:— ದಕ್ಷಿಣ ಕನ್ನಡ ಜಿಲ್ಲಾ ಟಿಬಿ ಎಸೋಸಿಯೇಶನ್ ಮತ್ತು ಇತರ ಏಜನ್ಸಿಗಳು.

ನಕಾಶೆಗಳು ಬೇಕಾಗಿವೆ: ದಿ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, 3, ರೆಡ್ ಕ್ರೋಸ್ ರೋಡು, ನ್ಯೂಡೆಲ್ಲಿ–1 ಇವರಿಗೆ ವಿವರವಾದ ಫಾರ್ಮುಗಳಿಗೆ ಬರೆಯಿರಿ ಮತ್ತು ಆಯ್ಕೆಯಾದ ಟಿಬಿ ಮೊಹರು ನಕಾಶೆಗೆ ರೂ. 1,000/- ಬಹುಮಾನ ಪಡೆಯಿರಿ.

ಸ್ಥಳದಾನ ಮಾಡಿದವರು

Praga Tools Ltd., Secunderabad

ಗೇಹೆ ರಾಜ್ಯದಲ್ಲಿ

ಆಶ್ಚರ್ಯ, ಅತ್ಯಾಶ್ಚರ್ಯಕರ

'ಅಂತೂ ಚುನಾವಣೆಯೊಂದು ಮುಗೀತೋಂತಾಯ್ತು...'

'ಅಲ್ವೇ ಮತ್ತೆ, ಪಾಪ, ಯಾರೂ ಎಲ್ಲಿಯೂ ಪಡದಿದ್ದ ಸಂಕಟವನ್ನುಂಡ ಉಮೇದ್ವಾರಿಗಳ ಉಮೇದೆಲ್ಲಾ ಫಿರಾಯಿತು..'

"ಯಾಕೆ ಹಾಗಂತೀರಾ?"

'ಅಲ್ಲ, ಏನಾದ್ರೂ ಹೊಡೆದಾಟವಾಡಬೇಕಾದ್ರೆ ಚುನಾವಣೆಯ ದಿನದ ವರೆಗೆ ಕಾಯುತಿದ್ರೆ ಆದಕ್ಕೆ ಭಾರೀ ರುಚಿ."

"ಅಯ್ಯೋ, ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ನಿಷ್ಪಕ್ಷಪಾತವಾಗಿ ನಿರಾತಂಕವಾಗಿ ನಡೀಬೇಕಲ್ಲಾ...?'

"ಇಲ್ಲಿ, ಅಂತೂ ಈ ಮಟ್ಟಿಗೆ ನಾವೇ ವಾಸೀನ್ನಿ....'

"ಯಾಕೆ?"

"ನೋಡು, ಅಮೇರಿಕೆಯಲ್ಲಿ ಅಧ್ಯಕ್ಷಸ್ಥಾನದ ಅಭ್ಯರ್ಥಿಯನ್ನೇ ಗುಂಡಿಟ್ಟು ಕೊಂದ್ರು; ಸುದೈವದಿಂದ ನಮ್ಮಲ್ಲಿ ಅಂತಹ ದುರ್ಘಟನೆ ನಡೆಯಲಿಲ್ಲ...."

'ಕೇರಳದಲ್ಲಾಗುತಿದ್ರೆ ಅದನ್ನೂ ನೋಡಬಹುದಾಗಿತ್ತೋ ಏನೋ....'

"ಓಹೋ, ನಿನಗೂ ಕೇರಳಕ್ಕೂ.... ಹ್ಞಾ, ಸರೀನೆ, ಅಲ್ಲಿಯ ರಾಜ್ಯಕೀಯವೂ ದಿನಾದಿನಾ ಬಣ್ಣ ಬದಲಾಯಿಸುತ್ತಲೇ ಇದೆ..."

"ಅಲ್ರಿ, ನಿಜಲಿಂಗಪ್ಪನವರು ಕೇರಳದಲ್ಲಿ ಕೇಂದ್ರದ ಹಸ್ತಕ್ಷೇಪ ನಡೆಯುವ ದಿನ ಸನ್ನಿಹಿತವಾಗುತ್ತಿದೆ ಎಂದಿದ್ದಾರಲ್ಲಾ?"

"ಅಲ್ವೆ, ಇದಕ್ಕೆ ನೀನ್ಯಾಕೆ ಚಿಂತಿಸಬೇಕು?"

"ಚಿಂತೆ ಯಾಕೆ? ಇದರ ಅರ್ಥ ಏನೂಂತ?"

"ಅರ್ಥ ಹೆಚ್ಚಿರಿ ಏಕೆ ಕಟ್ಕೋಬೇಕು? ನಂಬೂದಿರಿ ಸಂಪುಟದ ಆಯುಷ್ಯ ನಿಜ್ಲಿಂಗಿಂತ ಇಂದು ಒಂದು ದಿನ ಕಡಿಮೆಯಾಗಿದೆಯಲ್ಲಾ...."

"ಹೋಗಿ ಬಿಡೀಂದ್ರೆ, ನೀವೊಂದು. ಎಲ್ಲವನ್ನೂ ತಮಾಷೆಯಾಗಿಯೇ ತಗದುಕೊಳ್ತೀರು."

'ಅಲ್ವಾ, ಪ್ರತಿ ಸಂಗ್ತಿಯನ್ನೂ ಭಾರೀ ಸೀರಿಯಸ್ಸಾಗಿ ತಗೊಂಡ್ರೆ ನಮ್ಮ ತಲೆ ನೆಲದುಮ್ಮಾದೀತು....'

"ಅದು ಸರೀನ್ನಿ. ನೋಡಿ, ಹತ್ತು ವರ್ಷಗಳ ಹಿಂದೆ ಇಂದಿರಾ ಗಾಂಧಿ ಕಾಂಗ್ರೆಸ್ ಅಧ್ಯಕ್ಷಸ್ಥಾನದಲ್ಲಿದ್ದಾಗಲೂ ಇದೇ ರೀತಿಯ ಮಾತುಗಳನ್ನಾಡಿದ್ದರಂತೆ— ಮತ್ತೆ ನಂಬೂದರಿಯವರನ್ನು ಸರಕಾರದ ಮನೆಗೆ ಕಳಿಸಲಾಯಿತು...."

"ನಂಬೂದರಿ ಅದಕ್ಕೂ ಸಿದ್ಧ. ಮತ್ತೆ ನೋಡ, ಹೇಳಿದ್ದಾರಲ್ಲ? ನಮ್ಮನ್ನು ಕಿತ್ತೊಗೆದರೂ ನಾವು ಹೋರಾಟ ಬಿಡಲಾರೆವು...."

'ಅದು ಹೋಗಲಿ ಬಿಡಿ, ಅದ್ರೆ ನೋಡಿ, ಅವರು ತುಟಿಮೀರಿದ ಮಾತುಗಳನ್ನು ಆಡಿದ್ದಾರೆನಿಸುತ್ತದೆ..."

"ಏನದು ಅಂಥದ್ದು?"

'ತಮಗಿರುವ ಅಧಿಕಾರ ಬೇರೆ, ಹೋರಾಟ ಬೇರೆ ಎಂದವರು ಒಪ್ಪುವುದಿಲ್ಲ. ಅಧಿಕಾರ ಕೈಯಲ್ಲಿ ಹಿಡಿದುಕೊಂಡೇ ಕೇಂದ್ರ ಸರಕಾರದ ವಿರುದ್ಧ ಹೋರಾಟ ನಡೆಸುವುದೇ ತನ್ನ ಗುರಿ ಎಂದಿದ್ದಾರೆ....?"

"ಅಯ್ಯೋ, ಇದು ಅವರ್‍ಯಾಕೆ ಹೇಳಬೇಕು? ಈ ಎರಡು ವರ್ಷಗಳಲ್ಲಿ ಅವರು ಮಾಡಿದ್ದಾದರೂ ಏನು? ಅಂತೂ ತುಂಬಬೇಕು...."

"ಏನು?"

"ಪಾಪದ ಬೆಲೂನ್....ಆಗ ತಾನೇ ಅದು ಒಡೆಯುತ್ತದೆ...."

"ಅಲ್ರಿ, ಅದು ವರೆಗೆ ಕಾದರೆ, ಕೇರಳ ಹೇಳ ಹೆಸರಿಲ್ಲದಂತಾದೀತು..."

'ಅದು ಹೇಗೆ?'

"ಮಾವನಿಗೆ ಮೂಲಗೇಣಿಗೆ ಕೊಡದಿರುತ್ತಾರೆಯೆ ಈ ಅಳಿಯಂದಿರು....?"

'ಹ್ಞಾಂ, ಅದು ಸರೀನ್ನ. ಆದರೂ ನೋಡು, ಶಿಶುಪಾಲ ನೂರು ಬಾರಿ ಬೈಯುವ ವರೆಗೂ ಶ್ರೀಕೃಷ್ಣ ಕಾದಿದ್ದ; ನೂರೊಂದನೆಯ ಬೈಯೊಂದಿಗೆ ಅವನ ಮುಂಡ ರುಂಡಕ್ಕೆ ಬೈ ಬೈ ಎಂದಿತು...'

'ಅಲ್ರಿ, ಅದೆಂಥದ್ದು ಇದೆಂಥದ್ದು? ಅಲ್ಲಿ ಕೃಷ್ಣ ಶಿಶುಪಾಲನ ತಾಯಿಗೆ ಆ ರೀತಿ ಮಾತು ಕೊಟ್ಟಿದ್ದ. ಅದಕ್ಕಾಗಿ ಕಾಯಲೇಬೇಕಾಯ್ತು. ಇಲ್ಲ ಅಂಥ ಸಮಸ್ಯೆಯಿಲ್ಲ.'

'ಅದು ಹೌದೂನ್ನು. ಆದ್ರೆ ಜನತೆಯೇ ಬಹುಮತದಿಂದ ಆರಿಸಿದ "ಜನಪ್ರಿಯ" ಸರಕಾರವನ್ನ ಕಿತ್ತೊಗೆಯ ಬೇಕಾದರೆ ನೂರು ಸಲ ಯೋಚನೆ ಮಾಡಬೇಕ.. ಜನತೆಯಿಂದಲೇ ಆ ಬಗ್ಗೆ ಒತ್ತಾಯದ ಬೇಡಿಕೆ, ಬರಬೇಕು. ಇಲ್ಲವಾದರೆ, ಪ್ರಜಾಸತ್ತೆ ಸತ್ತೇ ಹೋದೀತು..."

"ಹ್ಞಾಂ...ಅಂತೂ ಕೇರಳ ಮಾರಿ ಹೋದರೂ ನಾವು ಮಾತಾಡುವ ಹಾಗಿಲ್ಲ ..."

'ಪ್ರಜಾತಂತ್ರದಲ್ಲಿ ಸಂವಿಧಾನ ಪ್ರಧಾನ. ರಾಜ್ಯದ ಶಾಂತಿ—ಸುವ್ಯವಸ್ಥೆ, ನ್ಯಾಯ ಪರಿಪಾಲನೆಯೆಲ್ಲ ರಾಜ್ಯ ಸರಕಾರಕ್ಕೆ ಸೇರಿದ್ದು. ಅದುವೇ ಕೇಂದ್ರ ಸರಕಾರದೊಡನೆ ಹೋರಾಟಕ್ಕಿಳಿದರೆ ಮತ್ತೆ ಉಳಿದವರ ಪಾಡೇನು? ಕೇರಳದ ಜನ ಹೊರಗಡೆ ಕಮ್ಯುನಿಸ್ಟರನ್ನು ಬಯ್ಯುತ್ತಾರೆ. ಆದರೆ, ಮತಪೆಟ್ಟಿಗೆ ಹೋಕ್ಕೊಡನೆಯೇ ಕಣ್ಣು ಮುಚ್ಚಿ ಅವರಿಗೇ ಮತವೀಯುತ್ತಾರೆ.'

"ಸದ್ಯ ಕಮ್ಯುನಿಸ್ಟರ ರಾಜ್ಯಭಾರ ಅವರ ಕಣ್ಣು ತೆರೆಸೀತು...."

"ಹಾಗೇಂತ ಭರವಸೆಯಿಡೋದ ಕ್ಕೇನಡ್ಡಿ?"

"ಎಂಥದೋ ..ಇದನ್ನೆಲ್ಲಾ ನೋಡುವಾಗ ಹೊಸ ವೈದ್ಯನಿಗಿಂತ ಹಳೆಯ ರೋಗಿಯೇ ವಾಸಿಯೆನಿಸುತ್ತದೆ."

"ಎನಿಸೋ ಕತೆ ಬೇರೆ; ಆಗೋ ಕತೆ ಬೇರೆ."

"ಯಾಕೆ?"

"ನೋಡಮ್ಮ, ಮಧ್ಯರೇಲ್ವೆಯಲ್ಲಿ ಅನುಭವದ ಆಧಾರದ ಮೇಲೆ ಬರಿಯ 'ಎಸ್ ಎಸ್ ಸಿ' ಗಳನ್ನು ಪ್ರಯೋಗಶಾಲಾ ಸಹಾಯಕರಾಗಿ ಭರ್ತಿ ಕೊಟ್ಟದ್ದು ಅನ್ಯಾಯವೆಂತ ಒಬ್ಬರು ದೂರಿದ್ದಾರೆ. ಅವರೆನ್ನುವಂತೆ ಅನುಭವಕ್ಕಿಂತ ಪ್ರಶಸ್ತಿ ಪತ್ರಕ್ಕೇನೇ ಪ್ರಾಧಾನ್ಯವಿಂಬೇಕು.'

"ಅಂದರೆ?"

'ಹಳೆಯ ರೋಗಿಗೆ ಅನುಭವವಿದ್ದೇಂತ ವೈದ್ಯನ ಸ್ಥಾನದಲ್ಲಿ ನೇಮಕ ಮಾಡಲಾಗದು."

"ಅಸ್ತುಕ್ಕ, ಅದು ಹಾಗಿರ್ಲಿ. ಪ್ರಜಾತಂತ್ರದಲ್ಲಿ ಎಲ್ಲವೂ ಹೊಸತಾಗಬೇಕು ...."

'ಅದಕ್ಕೇ ನೋಡು, ಕಡಿಮೆಯೆಂದರೆ ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಯುವುದ...."

"ಅಲ್ಲ ಬಿಡಿ. ಅಲ್ರಿ ಕಾಮರಾಜರ ಕತೆಯೇನಾಯ್ತು...."

'ಅಯ್ಯೋ, ಅದೇನು ಹೇಳ್ತೀಯೊ? ಭಾರೀ ಭಾರೀ ವಿಜಯ....'

"ಏನು ತಮಾಷೆ ಮಾಡ್ತೀರಾ?"

'ಅಯ್ಯೋ, ಅದ್ರಲ್ಲಾ ಸಂಶಯಾನೆ? ನೋಡು, ಐದು ಸಾವಿರಕ್ಕೂ ಮಿಕ್ಕಿದ ಮತದಾರರಲ್ಲಿ 397 ಸಾವಿರ ಚಲಾಯಿಸಿದ ಮತಗಳು, ಇವುಗಳಲ್ಲಿ ಸೇ 63 ಅಂದರೆ, 249 ಸಾವಿರ ಮತಗಳು ಕಾಮರಾಜರಿಗೆ...."

"ಅಲ್ರಿ, ಎಂಥದಿದೂಂದ್ರೆ..."

"ಅವರ ನಿಕಟ ಪ್ರತಿಸ್ಪರ್ಧಿ ಡಿ.ಎಂ.ಕೆ ಮತ್ತು ಮುಸ್ಲಿಂ ಲೀಗ್ ಬೆಂಬಲದ ಸ್ವತಂತ್ರ ಪಕ್ಷದ ಅಭ್ಯರ್ಥಿಗೆ 120 ಸಾವಿರ, ತೊಕ್ಸಿಸ್ಟ್ ಕಮ್ಯುನಿಸ್ಟರ ಅಭ್ಯರ್ಥಿಗೆ 21 ಸಾವಿರ. ಉಳಿದದ್ದು ಮತ್ತೆ ಉಳಿದ ನಾಲ್ವರು ಸರ್ವತಂತ್ರ ಸ್ವತಂತ್ರರಿಗೆ."

"ಅಂದ್ರೆ ಇಂದು ಆಶ್ಚರ್ಯ!"

'ಹ್ಞಿ, ತನ್ನ ಮತದಾರ ಕ್ಷೇತ್ರ ವಿರುಧನಗರದಲ್ಲಿ ಕಾಮರಾಜರು ಸೋತದ್ದೂ ಆಶ್ಚರ್ಯವೇ ಅನ್ನು. ರಾಜಕೀಯದಲ್ಲಿ ಹೀಗೆಯೂ ಒಮ್ಮೊಮ್ಮೆ ಆಗುವುದುಂಟು..."

"ಕಾಮರಾಜರ ವಿಜಯ, ಕಾಂಗ್ರೆಸ್ಸಿಗೆ ಹೊಸ ಶಕ್ತಿಯನ್ನು ತಂದೀತು ಬಲ್ಲುದು...."

"ಅದು ಸರಿ. ನಿಜಲಿಂಗಪ್ಪನವರ ಕಾಯಕಲ್ಪದಿಂದ ಕಾಂಗ್ರೆಸ್ ಮತ್ತೆ ಚೇತರಿಸಿದರೆ, ಅದು ಕನ್ನಡಿಗರಿಗೂ ಹೆಮ್ಮೆ...."

"ಹ್ಞಾಂ...."

"ಏನು?"

"ಏನೂ ಇಲ್ಲಾಪ್ಪಿ...."

"ನಂಗೆ ಬೇಕು, ಪಾಪ, ಹೊತ್ತು ಭಾರೀಯಾಯ್ತು."

—ಗೋರಾ.

ತುಂಡು ಕತೆ ೮

ದಿಟ್ಟ ಪುಟ್ಟ

"ನನ್ನ ಎತ್ತಿಕೋ ಅಪ್ಪಾ" ಎಂದು ಹಟ ಮಾಡಿದ ಪುಟ್ಟ.

"ನೀನೊಬ್ಬ ದಡ್ಡ ಕಣೋ, ಬರೀ ದಡ್ಡ" ಎನ್ನುತ್ತಾ ಅಪ್ಪ ಅವನನ್ನು ಎತ್ತಿಕೊಂಡ.

"ಇಲ್ಲ ನಾ ಗಟ್ಟಿಗ" ಎಂದ ಪುಟ್ಟ ಅಪ್ಪನ ಬೆನ್ನಿಗೆ ಗುದ್ದುತ್ತ.

ಆಗ ಒಂದು ಬೆಕ್ಕು ಗೋಡೇ ಮೇಲೆ ಏರಿ ಮಾಡಿನ ಮೇಲೆ ಹೋಯಿತು.

"ನೋಡಿದಿಯಾ, ಆ ಬೆಕ್ಕನ್ನ! ಅಷ್ಟು ಸಣ್ಣ ಬೆಕ್ಕಿಗೆ ಎಷ್ಟು ಗಟ್ಟಿಗತನ! ನಿನ್ನಿಂದಾದೀತೇ, ಅದರ ಹಾಗೆ ಓಡಲಿಕ್ಕೆ, ಹಾರಲಿಕ್ಕೆ, ಹತ್ತಲಿಕ್ಕೆ?" ಎಂದು ಕೇಳಿದ ಅಪ್ಪ.

"ಇಕೊ, ನಿನ್ನ ಮೇಲೆ ಹತ್ತಿದ್ದೇನಲ್ಲಾ!" ಎಂದ ಪುಟ್ಟ.

"ನೀನು ಹತ್ತಿದ್ದಲ್ಲ. ನಾನೇ ನಿನ್ನ ಎತ್ತಿದ್ದು. ಬೆಕ್ಕು ಬೆಕ್ಕನ್ನ ಎತ್ತಿಕೊಳ್ಳೋದಿಲ್ಲ, ಗೊತ್ತೋ?" ಎಂದ ಅಪ್ಪ.

"ಹಂ. ಅದರ ಅಪ್ಪನಿಗೆ ಎತ್ತಿಕೊಳ್ಳೋಕೆ ಗೊತ್ತಿಲ್ಲ" ಎಂದ ಪುಟ್ಟ.

"ಹಾಗಾದರೆ ನೀನು ಆ ಬೆಕ್ಕಿಗಿಂತ ದಡ್ಡ ತಾನೆ? ನೋಡಿದಿಯಾ ಆ ಬೆಕ್ಕು ಎಷ್ಟೆತ್ತರ ಮಾಡಿನ ಮೇಲೆ ಹತ್ತಿತು!" ಎಂದು ಅಪ್ಪ ಹೇಳಿದ ಕೂಡಲೇ, ದಿಟ್ಟ ಪುಟ್ಟ ಆ ಬೆಕ್ಕನ್ನು ನೋಡುತ್ತಾ, "ನೀನು ಸಹಾ ಆ ಬೆಕ್ಕಿಗಿಂತ ದಡ್ಡ ಅಪ್ಪಾ!" ಎಂದ.

—"ನವಗಿರಿನಂದ"

ಪುಸ್ತಕ ವ್ಯಾಪಾರಿಗಳಿಗೆ
ಪ್ರಿಯ ಮಂದ ಸಮಾಚಾರ

ಜನವರಿ ೧೯ರಿಂದ
ಮಾರ್ಚಿ 30ನೇ ತಾರೀಖಿನ ವರೆಗೆ

300=00 ರೂ. ನಿಮ್ಮ ವ್ಯಾಪಾರ ಮಾಡಿದರೆ

ಒಂದು **Steel Desk** (ಬರೆಯುವ—ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ— ಭಾಗ 1— ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ— ಭಾಗ 2— ”	2—50
ಉಂಡಾಡಿ ಗುಂಡ— ಪರ್ವತವಾಣಿ	2—00
ಧರ್ಮದೇವತೆ— ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ— ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು — ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—
ವ್ಯಾಪಾರಿಗಳು, ಶಾಲಾ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು
ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಗೋವಿಂದನಾರಾಯಣರು ಆಡುತ್ತಿರುವ

ರಾಜಕೀಯ ನಾಟಕ - ಅಧಿಕಾರ ರಕ್ಷೆ

ಮಧ್ಯ ಪ್ರದೇಶವು ಭಾರತದ ಪ್ರಮೂದಮಯ ಪ್ರದೇಶವೆಂದರೂ ತಪ್ಪಲ್ಲ. ತ್ರಿಪುರಾರಿಯು ನಾಶ ಮಾಡಿದ ತ್ರಿಪುರಗಳಲ್ಲಿನ ದುರವಸ್ಥೆಗಿಂತಲೂ ಇಲ್ಲಿನ ಅವ್ಯವಸ್ಥೆ—ದುರ್ವ್ಯವಸ್ಥೆ ಮಿತಿ ಮೀರಿದೆ. ನಾಲ್ಕನೆಯ ಸಾರ್ವತ್ರಿಕ ಚುನಾವಣಾ ನಂತರ ಕಾಂಗ್ರೆಸ್ ಡಿ. ಪಿ. ಮಿಶ್ರಾರ ಮಂತ್ರಿ ಮಂಡಳ ಉರುಳಿದ ಬಳಿಕ ಗೋವಿಂದ ನಾರಾಯಣ ಸಿಂಗರ ಸಂಪುಟಕ್ಕೂ ಇಂದಿರಾ ರವರಿಗೂ ಏನೊಂದೂ ವ್ಯತ್ಯಾಸ ಕಾಣುವುದಿಲ್ಲ. ಬೇಕೆಂದಾಗ ಇಂದಿರಾ ರವರನ್ನ ಹಿಗ್ಗಿಸಬಹುದಾದರೆ, ಸಿಂಗ ಸಂಪುಟವನ್ನು ಮನ ಬಂದಾಗ ಬೆಳೆಸಿಕೊಳ್ಳುವ ಸ್ಥಿತಿ ಸದಾ ಕಾಲವೂ ಇದ್ದೇ ಇದೆ. ಕಾಂಗ್ರೆಸ್ ಬಹುಮತ ಪಡೆದುದಲ್ಲಿ ಸಂಯುಕ್ತ ವಿಧಾಯಕ ದಳವು ಅಧಿಕಾರ ಗಳಿಸಿದಲ್ಲಿ ಒಂದೊಂದು ರಾಜ್ಯದ ಗತಿವಿಧಿಗಳು ಒಂದೊಂದು ತೆರನಾದುದು ಸರ್ವವೇದ್ಯ. ಬಂಗಾಳ, ಬಿಹಾರ, ಉತ್ತರ ಪ್ರದೇಶ, ಹರಿಯಾಣ, ಪಂಜಾಬುಗಳು ರಾಷ್ಟ್ರಪತಿಗಳ ಆಳಿಕೆಯಲ್ಲಿ ಒಂದು ಹಂತವನ್ನು ಬೇಗನಾಗಿಯೋ ಬೇಡವಾಗಿಯೋ ಹೊಂದಿದವು. ಕೇರಳದಲ್ಲಿ ರಾಷ್ಟ್ರಪತಿ ಆಳಿಕೆಯು ಕೆನ್ನಾಲಗೆ ಚಾಚಲಣಿಯಾಗಿದೆ—ಕೆಂಪೇಸುರನ್ನು ಅದುಮದೆ ಅಲ್ಲಿ ಪ್ರಜಾಶಕ್ತಿಗೆ ಉಳಿಗಾಲವಿಲ್ಲವೆಂಬುದನ್ನು ಜನಜನವೂ ಮನವರಿಕ ಮಾಡಿಕೊಂಡಿವೆ. ಒಂದಿನ್ನಾದ ರಾಜಕಾರಣ ಇನ್ನೊಂದು ಬಗೆಯದಾದರೆ, ಏಕಸ್ವಾಮ್ಯ ಪಡೆದ ತಮಿಳುನಾಡಿನ 'ದ್ರಾವಿಡ'ದ ಆಡಳಿತ ಭ್ರಾಮಕವಾಗಿಯೇ ಮುನ್ನಡೆಸಿದೆ. ಆದರೆ, ಮಧ್ಯಪ್ರದೇಶದ ರಾಜಕಾರಣವು ಮುಂದ ಮಾಡುವ ದಾರಿಯೇ ಬೇರೆ. ಇಲ್ಲಿ ಪ್ರಜಾತಂತ್ರವಿದೆ; ಆದರೆ, ಅದರಿಂದ ಪ್ರಜೆಗಳಿಗೆ ಮಾತ್ರ ಯಾವ ಲಾಭವೂ ಇಲ್ಲ; ಬದಲು, ರಾಷ್ಟ್ರಪತಿ ಆಳಿಕೆ (ಇದು ಪ್ರಜಾತಂತ್ರಕ್ಕೆ ಕುಠಾರ ವೆನ್ನುವುದು ಸರ್ವಮಾನ್ಯ ಭಾವನೆ) ಬಾರದಂತೆ ತಡೆಯುವುದರಲ್ಲೇ ಗೋವಿಂದ ನಾರಾಯಣ ಸಿಂಗರು ಕಾರ್ಯ ಮಗ್ನರಾಗಿದ್ದಾರೆ.

ಮಧ್ಯ ಪ್ರದೇಶವು ಭಾರತದ ದೊಡ್ಡ ರಾಜ್ಯ. ಇದಂದು ರಾಜಕಾರಣದ ಕ್ರೀಡಾಂಗಣವಾಗಿದಿಯೆಂದರೆ ತಪ್ಪಲ್ಲ. ಹಿಂದಿನಿಂದಲೂ ಇದು ರಾಜಕೀಯ ಬೇಳೆ ಬೇಯಿಸುವವರಿಗೆ ಸರಿಯಾದ ರಾಜ್ಯ. ರಾಜ್ಯ ಪುನರ್ಘಟನೆಯ ನಂತರ ಇದು ಹಲವು ರಾಜ್ಯಗಳ ಘಟಕವಾಯಿತು. ಕರ್ನಾಟಕದಲ್ಲಿ 'ಎ' ರಾಜ್ಯದ ಭಾಗಗಳೂ 'ಬಿ' ರಾಜ್ಯ (ಮೈಸೂರು), ಮತ್ತು 'ಸಿ' ರಾಜ್ಯ (ಕೊಡಗು)ಗಳು ಕೂಡಿಕೊಂಡಿದ್ದರೂ ಅಲ್ಲಿ ತಲೆದೋರದ ಬೃಹತ್ ಸಮಸ್ಯೆ ಮಧ್ಯ ಪ್ರದೇಶದಲ್ಲಿ ಕಾಣಿಸಿತು. ಹಿಂದಿನ 'ಎ' ರಾಜ್ಯ ಮಧ್ಯ ರಾಜ್ಯಗಳ ಹಿಂದೀ ಮಾತನಾಡುವ ಪ್ರದೇಶಗಳು, 'ಬಿ' ರಾಜ್ಯ ಮಧ್ಯ ಭಾರತದ ಭಾಗ ಮತ್ತು 'ಸಿ' ರಾಜ್ಯಗಳಾಗಿದ್ದ ವಿಂಧ್ಯ ಪ್ರದೇಶ ಮತ್ತು ಭೋಪಾಲಗಳ ಕಲಸು ಮೇಲೋಗರವೇ ಇಂದಿನ ಮಧ್ಯಪ್ರದೇಶವಾಯಿತು. ಗ್ವಾಲಿಯೋರ್, ಇಂದೋರ್ ಮತ್ತಿತರ ಮಧ್ಯಭಾರತದ ಸಂಸ್ಥಾನಗಳನ್ನು ಒಗ್ಗೂಡಿಸಿ ಮಧ್ಯಭಾರತವು ನಿರ್ಮಾಣವಾಗಿತ್ತು. ಬುಂದೇಲ್ ಖಂಡ, ಬಾಗೇಲ್ಖಂಡ ರೇವಾಗಳು ಮಧ್ಯ ಪ್ರದೇಶದಲ್ಲಿ ಸೇರ್ಪಡೆಯಾದುವು. ವಿಂಧ್ಯ ಪ್ರದೇಶದಲ್ಲಿ ಜನಪ್ರಿಯ ರಾಜಕೀಯ ಪಕ್ಷವೆಂಬುದೇ ಇರಲಿಲ್ಲ. ಅಂದು ಗೃಹ ಮಂತ್ರಿಯಾಗಿದ್ದ ಸರ್ದಾರ ಪಟೇಲರು ವಿಂಧ್ಯಪ್ರದೇಶದಲ್ಲಿ ರಾಜಕೀಯ ಸ್ಥಿರತೆಯನ್ನು ಸಂರಕ್ಷಿಸಲು ಅದನ್ನು ಸಂಯುಕ್ತ ಪ್ರಾಂತ್ಯ ಮತ್ತು ಮಧ್ಯಭಾರತಗಳಲ್ಲಿ ವಿಂಗಡಿಸಲು ಆಲೋಚಿಸಿದ್ದರು. ಆದರೆ, ಅಂದು ರಾಜಕಾರಣಿಗಳು ಈ ಆಲೋಚನೆಯ ಹಿಂದಿರುವ ಉತ್ತಮ ಧ್ಯೇಯವನ್ನು ಅರಿತುಕೊಳ್ಳಲಿಲ್ಲ. ಹಾಗಾಗಿ ಪರಿಸ್ಥಿತಿ ಹಾಗೆಯೇ ಮುಂದುವರಿಯಿತು. ಗ್ವಾಲಿಯೋರ್ ಮತ್ತು ಇಂದೂರಗಳ ಪರಸ್ಪರ ಶಕ್ತಿ ಪ್ರದರ್ಶನದಿಂದ ಅಲ್ಲಿ ಯಾವುದೇ ಮಂತ್ರಿ ಮಂಡಳವು ಸ್ಥಿರವಾಗಿ ಉಳಿಯಲಿಲ್ಲ; ಭೋಪಾಲವೂ ಪ್ರತ್ಯೇಕತೆಗೇನೇ ಪ್ರಾಧಾನ್ಯ ನೀಡುತ್ತಿತ್ತು.

ಈ ಸಮಸ್ಯೆಗಳ ನಾಡುಗಳನ್ನ ಒಂದಾಗಿಸಿ 'ಮಧ್ಯ ಪ್ರದೇಶ'ವೆಂಬ ವಿಶಾಲ ರಾಜ್ಯ ನಿರ್ಮಾಣವಾದಾಗ, ಪ್ರಾದೇಶಿಕ ನೆಲೆಗಳಲ್ಲಿಯೇ ಶಕ್ತಿಹ್ರಾಸಗೊಳಿಸುವ ಪ್ರವೃತ್ತಿಯಿಂದ ದೂರವುಳಿದು ಹೊಸ ರಾಜ್ಯದಲ್ಲಿ ಎಲ್ಲರೂ ಒಂದಾಗಿ ರಾಜ್ಯದ ಅಭಿವೃದ್ಧಿಗಾಗಿ ಹೋರಾಡುವ ಪಣ ರಾಜಕೀಯದಲ್ಲಿ ನಡೆಯಲಾಗುವುದೆಂದು ಗೋಪುರ ಕಟ್ಟಲಾಗಿತ್ತು. ಗುದ್ದಾಡುವ ಜನರೇ ಹೆಚ್ಚಾಗಿರುವ ಈ ರಾಜ್ಯದಲ್ಲಿ ನ್ಯಾಯ ಮತ್ತು ಸುವ್ಯವಸ್ಥೆಗೆ ಇವರೇ ಬಹುದೊಡ್ಡ ಆತಂಕ. ಡಾ| ಕೈಲಾಸನಾಥ ಖಟ್ಜು ಅವರು ಮುಖ್ಯ ಮಂತ್ರಿಯಾದಾಗ, ಗ್ವಾಲಿಯೋರದ ಅಂದಿನ ಮಹಾರಾಣಿ ವಿಜಯರಾಜೆಯವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಲೋಕ ಸಭೆಗೆ ಆಯ್ಕೆಯಾದಾಗ, ಈ ದುರವಸ್ಥೆ ತಪ್ಪಬಹುದೆಂದು ಆಶೆಯಿಡಲಾಗಿತ್ತು. ಮುಂದೆ, ದ್ವಾರಕಾ ಪ್ರಸಾದ ಮಿಶ್ರರ ಮುಖ್ಯ ಮಂತ್ರಿತ್ವ ಹಾಗೂ ಗ್ವಾಲಿಯೋರಿನ ರಾಜಮಾತೆಯವರೊಡನೆ ಅವರ ನಿಕಟ ಸಂಪರ್ಕವೂ ಇಂತಹ ಆಶಯಕ್ಕೆ ಪುಟವಿಟ್ಟಿತ್ತು. ಆದರೆ, ಇವೆಲ್ಲವೂ ಕನಸಿನ ಮಂಡಿಗೆಯಾಯಿತು. ರಾಜಮಾತೆಯು ಮಿಶ್ರರೊಡನಿರುವ ಹೊಂದಾಣಿಕೆಯಿಂದ ಬೇರೆಯಾದರು—ಯಾಕೆ? ಯಾರಿಗೂ ಏನೂ ಇಂದಿಗೂ ತಿಳಿಯದು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಯ ನಂತರ ಮಿಶ್ರರು ಸ್ವಲ್ಪಕಾಲ ಮುಖ್ಯ ಮಂತ್ರಿಯಾಗಿ ಮುಂದುವರಿದರು. ಆದರೆ, ಅಲ್ಪಾವಧಿಯಲ್ಲೇ ಗೋವಿಂದ ನಾರಾಯಣ ಸಿಂಗರ ಮುಂದಾಳುತನದಲ್ಲಿ ಬೃಹತ್ಪ್ರಮಾಣದ ಕಾಂಗ್ರೆಸ್ ಎಮ್ಮೆಲ್ಲೆಗಳು ಪಕ್ಷತ್ಯಾಗ ಮಾಡಿದರು. ಈ ಘಟನೆಯ ಸೂತ್ರಧಾರಿಣಿ ರಾಜಮಾತೆಯೇ. ರಾಜಮಾತೆಯ 'ಲೋಕಸೇವಕ ದಳ'ವನ್ನು ಈ ಪಕ್ಷತ್ಯಾಗಿಗಳ ಮತ್ತು ತನ್ನ ಪ್ರಭಾವಕ್ಕೆ ಒಳಗಾದವರ ಸಹಾಯದಲ್ಲಿ ರಚಿಸಿದರು. ಜನಸಂಘೀಯ ಮತ್ತು ಕಮ್ಯುನಿಸ್ಟರಿಗೂ ಅಧಿಕಾರದ ರುಚಿ ನೋಡುವ ಹುಮ್ಮಸ್ಸು ತಲೆದೋರಿತು. ಬಂಗಾಳ, ಬಿಹಾರ, ಉತ್ತರ ಪ್ರದೇಶ, ಪಂಜಾಬುಗಳ ಮಾದರಿ ಅವರ ಕಣ್ಣ ಮುಂದೆ ಕುಣಿದಾಡುತ್ತಿತ್ತು. ಹಾಗಾಗಿ ಪಕ್ಷತ್ಯಾಗಿಗಳ ಮತ್ತು ಅಧಿಕಾರ ಲೋಲುಪರ ಕೂಡಿಕೆಯಿಂದ ಸಂಯುಕ್ತ ವಿಧಾಯಕ ದಳದ ಅವತಾರವಾಯಿತು. ಗೋವಿಂದನಾರಾಯಣ ಸಿಂಗರ ನೇತೃತ್ವದಲ್ಲಿ ಅದು ಸರಕಾರ ರಚಿಸಿತು.

ಸಂಯುಕ್ತ ವಿಧಾಯಕ ದಳವು ಗೋವಿಂದನಾರಾಯಣ ಸಿಂಗರನ್ನೇ ತನ್ನ ನಾಯಕರನ್ನಾಗಿ ಆರಿಸಿಕೊಂಡದ್ದರಲ್ಲೂ ಒಂದು ವೈಶಿಷ್ಟ್ಯವಿದೆ. ಮಂತ್ರಿಯಾಗುವ ಆಶೆಯಿದ್ದವರನ್ನೆಲ್ಲಾ ಮಂತ್ರಿ ಪದಕ್ಕೇರಿಸುವಷ್ಟು ಉದಾರಿ ರಾಜಕಾರಣಿ ಇವರನ್ನು ಬಿಟ್ಟರೆ ಮತ್ಯಾರೂ ಇರಲಿಲ್ಲ. ಯಾರಿಗೆ ಯಾವಾಗ ಬೇಕಾದರೂ ಮಂತ್ರಿಪಟ್ಟ ನೀಡುವ ಉದಾರ ನೀತಿಗೆ ಗೋವಿಂದ ನಾರಾಯಣ ಸಿಂಗರು ಪ್ರಸಿದ್ಧರು. ಶ್ರೀ ಸಿಂಗರು ಮುಖ್ಯ ಮಂತ್ರಿಯಾದ ಬಳಿಕ ಯಿಂದ ಅಲ್ಲಿನ ರಾಜಕೀಯದ ಗಾಳಿ ಬಿಸಿಯಾಗುತ್ತಲೇ ಬಂತು. ಆದರೆ, ವಿಚಿತ್ರ ಸಂಗತಿಯೊಂದುಂಟು. ಸಚಿವರು ತಂತಮ್ಮ ಇಚ್ಛೆಯಂತೆ ಸ್ವೈರವೃತ್ತಿ ಪರರಾಗಿದ್ದರೂ ಸಂಪುಟ ಉರುಳಲಿಲ್ಲ; ಅಥವಾ ಸಂಯುಕ್ತ ವಿಧಾಯಕ ದಳದ ಸದಸ್ಯರು ಭಿನ್ನಮತವನ್ನು ತ್ಯಜಿಸಿ ಒಂದಾಗಿ ದುಡಿಯಲೂ ಮುಂದಾಗಲಿಲ್ಲ. ಪರಿಣಾಮ ಗೊತ್ತೇ ಇದೆ. ರಾಜಕೀಯದಲ್ಲಿ ಪ್ರತಿಕ್ಷಣವೂ ಅಸಮತೋಲನ, ಜತೆಯಲ್ಲಿ ಆರ್ಥಿಕ ಉನ್ನತಿ ಗಜಪ್ರಾಣ

ವಿರೋಧಿ ಪಕ್ಷದ ನೆಲೆಯಲ್ಲಿರುವ ಕಾಂಗ್ರೆಸ್ಸೂ ತನ್ನ ಆಂತರಿಕ ವಿಷಮತೆಯಿಂದ ಒಂದಾಗಲು ಅಸಮರ್ಥವಾಗಿದೆ. ಹಾಗಾಗಿ ಸರಕಾರಕ್ಕೆ ಪಂಥಾಹ್ವಾನ ನೀಡಲು ಅಶಕ್ತವಾಗಿದೆ. ಮಿಶ್ರ ಮತ್ತು ಶು

(ಎಂಟನೇ ಪುಟ ನೋಡಿರಿ)

ಕ್ಷಯ ರೋಗಕ್ಕೆ ಗೃಹ ಚಿಕಿತ್ಸೆ

ಕ್ಷಯ ರೋಗಿಗಳಿಗೆ ಮನೆಯಲ್ಲಿಯೇ ಚಿಕಿತ್ಸೆ ಮಾಡುವದು ಈಗಿನ ಕ್ರಮ. ಈ ಉದ್ದೇಶಕ್ಕಾಗಿ ಪ್ರತಿ ಜಿಲ್ಲೆಯಲ್ಲಿಯೂ ಚೆನ್ನಾಗಿ ಸಜ್ಜುಗೊಳಿಸಲ್ಪಟ್ಟ ಒಂದು ಚಿಕಿತ್ಸಾಲಯವನ್ನು ಸ್ಥಾಪಿಸಲು ಸರಕಾರವು ಯೋಚಿಸುತ್ತಿದೆ. ಗೃಹ ಚಿಕಿತ್ಸೆಯನ್ನು ಪರಿಣಾಮಕಾರಿಯಾಗಿ ಮಾಡಬೇಕಾದರೆ ಚಿಕಿತ್ಸಾಲಯಗಳಲ್ಲಿ ಸಾಧನ ಸಲಕರಣೆಗಳು, ತರಬೇತಿ ಸಿಬ್ಬಂದಿ, ರೋಗಿಗಳಿಗೆ ಉಚಿತವಾಗಿ ಕೊಡಲು ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳು ಬೇಕಾಗುತ್ತದೆ. ಅಲ್ಲದೆ ಡಾಕ್ಟರು ತಿಳಿಸಿದಂತೆ ರೋಗಿಗಳು ಸಕಾಲದಲ್ಲಿ ಔಷಧ ಸೇವಿಸುವರೆಂಬುದನ್ನು ಸ್ಥಿರಪಡಿಸಿಕೊಳ್ಳಬೇಕು. ಎಲ್ಲೆಡೆಗಳಿಂದಲೂ ಕೇಳಿ ಬರುವ ಶಾಶ್ವತವಾದ ದೂರು ಎಂದರೆ ಔಷಧ ಸೇವನೆಯು ಕಾಲ ಕಾಲಕ್ಕೆ ಸರಿಯಾಗಿ ನಡೆಸುವದಿಲ್ಲ ಎಂದು. ಈ ಸಂದರ್ಭದಲ್ಲಿಯೇ ಸ್ವಯಂಸೇವಕ ಸಂಸ್ಥೆಗಳ ಪ್ರಮುಖ ಪಾತ್ರದ ಅವಶ್ಯಕತೆ ಬರುವದು. ಇವುಗಳ ಆಶ್ರಯದಲ್ಲಿ ತರಬೇತಿ ಸ್ವಯಂಸೇವಕರುಗಳನ್ನು ಡಾಕ್ಟರ ಸಲಹೆಯ ಪ್ರಕಾರವೇ ರೋಗಿಗಳು ಕ್ರಮವಾಗಿ ಔಷಧಿ ತೆಗೆದುಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆಯೂ ಔಷಧಗಳನ್ನು ಹಂಚುವದರ ಬಗ್ಗೆ ಸರಕಾರೀ ಏಜನ್ಸಿಗಳಿಗೆ ಸಹಾಯ ಮಾಡಬೇಕು.



ಕ್ಷಯ ರೋಗ ಸಂಸ್ಥೆಯಲ್ಲಿ ಸಾಕಷ್ಟು ಹಣವಿಲ್ಲದಿದ್ದರೆ ಸ್ವಯಂಸೇವಕರಿಗೆ ತರಬೇತಿ ಕೊಡಲು ಮತ್ತು ಅವರನ್ನು ಇಟ್ಟುಕೊಳ್ಳಲು ಸಾಧ್ಯವಾಗದಿಲ್ಲ. ಮುದ್ರೆಗಳ ಮಾರಾಟ ಚಳವಳಿಯು ಹಣ ಸಂಗ್ರಹಿಸುವ ನೇರವಾದ ಕ್ರಮ. ಬಡವರಾದ ಕ್ಷಯರೋಗಿಗಳ ಸಾಮಾಜಿಕ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಿದ್ಯಾಭ್ಯಾಸ, ಸಮಾರಂಭ ಸಂದರ್ಭಗಳ ಖರ್ಚು ಮೊದಲಾದವುಗಳಿಗೆ ಸಹಾಯ ಮಾಡಲಿಕ್ಕೂ ಹಣ ಬೇಕಾಗುತ್ತದೆ.

ಕ್ಷಯ ರೋಗದ ಮುದ್ರೆಗಳನ್ನು ಪಡೆಕೊಂಡು ಈ ಮೇಲಿನ ಉದ್ದೇಶ್ಯಗಳಿಗಾಗಿ ಹಣ ಸಂಗ್ರಹಿಸಲು ಸಹಾಯ ಮಾಡಿರಿ

ಒಂದು ಟಿಬಿ ಸೀಲಿನ ಬೆಲೆ ೧೦ ಪೈಸೆ ಮಾತ್ರ.

ಮುದ್ರೆಗಳು ಸಿಕ್ಕುವ ಸ್ಥಳ:— ದಕ್ಷಿಣ ಕನ್ನಡ ಜಿಲ್ಲಾ ಟಿಬಿ ಎಸೋಸಿಯೇಶನ್ ಮತ್ತು ಇತರ ಏಜನ್ಸಿಗಳು.

ನಕಾಶೆಗಳು ಬೇಕಾಗಿವೆ: ಧಿ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, 3, ರೆಡ್ ಕ್ರಾಸ್ ರೋಡು, ನ್ಯೂಡೆಲ್ಲಿ-1 ಇವರಿಗೆ ವಿವರವಾದ ಫಾರ್ಮುಗಳಿಗೆ ಬರೆಯಿರಿ ಮತ್ತು ಆಯ್ಕೆಯಾದ ಟಿಬಿ ಮೊಹರು ನಕಾಶೆಗೆ ರೂ. 1,000/- ಬಹುಮಾನ ಪಡೆಯಿರಿ.

ಸ್ಥಳದಾನ ಮಾಡಿದವರು

Praga Tools Ltd., Secunderabad

ಗಾಂಧೀಜಿ ಜನ್ಮ ಶತಾಬ್ದಿ ವಿಶೇಷ ಲೇಖನ:

ಮಾನವ ಜನಾಂಗದ ಹಿತಚಿಂತಕ—ಗಾಂಧೀಜಿ

ಬರೆದವರು: ಶ್ರೀ ಆರ್ನಾಲ್ಡ್ ಜೋಸೆಫ್ ಟಾಯ್ನ್‌ಬಿ

ಗಾಂಧೀಜಿ ಹೆಸರು, ಸಾರ್ಥಕ ನಾಮ. ಅದು ಅವರ ಬಗ್ಗೆ ಗೌರವವನ್ನು ಮಾತ್ರವಲ್ಲ, ಅವರ ವ್ಯಕ್ತಿತ್ವದ ನೈಜತೆಯ ದ್ಯೋತಕ. ಗಾಂಧೀಜಿಯವರು ನಿಜಕ್ಕೂ "ಮಹಾನ್ ಆತ್ಮ"ರಾಗಿದ್ದರು. ಅವರು ನಮ್ಮ ಕಾಲದಲ್ಲಿ ಬದುಕಿ ಬಾಳಿದ ಮಹಾವ್ಯಕ್ತಿಗಳಲ್ಲೇ ಶ್ರೇಷ್ಠರು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಗಾಂಧೀಜಿಯವರು ಎಂತಹ ವ್ಯಕ್ತಿಗಳು, ಅವರು ತಮ್ಮ ಜೀವಿತ ಕಾಲದಲ್ಲಿ ಏನೇನು ಮಾಡಿದರು ಎಂಬುದನ್ನು ಬಲ್ಲ, ಬಹುತೇಕ ಜನರ ಅಭಿಪ್ರಾಯವೂ ಇದೇ ಆಗಿದೆ ಎಂದು ನಾನು ದೃಢವಾಗಿ ನಂಬಿದ್ದೇನೆ.

ನಾನು ಆಂಗ್ಲನಾದ ಕಾರಣ ಗಾಂಧೀಜಿಯವರ ವಿಚಾರದಲ್ಲಿ ಅವರಿಗೆ ಅನುಕೂಲವಾದ ಅಭಿಪ್ರಾಯ ತಳೆದಿದ್ದೇನೆಯೆ? ನನ್ನ ಸದ್ವಿವೇಕ ಬುದ್ಧಿಗೆ ತೋರಿದಂತೆ ಹೇಳುವುದಾದರೆ ಗಾಂಧೀಜಿಯವರ ಪರವಾಗಿಯೇ ನನ್ನ ತೀರ್ಪು ಎಂಬುದು ಸುಸ್ಪಷ್ಟ. ನನ್ನ ದೃಷ್ಟಿಯಲ್ಲಿ ಗಾಂಧೀಜಿಯವರು ತಮ್ಮ ದೇಶಕ್ಕೆ ಹೇಗೆಯೋ ಹಾಗೆ ನನ್ನ ದೇಶಕ್ಕೂ ಉಪಕಾರಿಯಾಗಿದ್ದರು. ಗಾಂಧೀಜಿ ಭಾರತದಲ್ಲಿ ಬ್ರಿಟಿಷ್ ಆಳಿಕೆ ಮುಂದುವರಿಯುವುದು ದುಸ್ತರವಾಗುವಂತೆ ಮಾಡಿದರು. ಅದೇ ಕಾಲಕ್ಕೆ ನಾವು ಯಾವುದೇ ಮುಜುಗರವಿಲ್ಲದೇ ಗೌರವಯುತವಾಗಿ ಅಧಿಕಾರ ತ್ಯಾಗ ಮಾಡಲು ಅವರು ಕಾರಣರಾದರು. ಪರಸ್ಪರ ರಕ್ತಪಾತವಿಲ್ಲದೇ ಅಧಿಕಾರದ ಹಸ್ತಾಂತರ ನಡೆಸಲು ಭಾರತ ಸರ್ಕಾರಕ್ಕೆ ಸಾಧ್ಯವಾಗುವಂತಹ ವಾತಾವರಣವನ್ನು ಅವರು ಸೃಷ್ಟಿಸಿದರು.

ಬ್ರಿಟಿಷರು ರಾಜನೈತಿಕವಾಗಿ ಭಾರತೀಯರಿಂದ ಬೇರ್ಪಟ್ಟರೂ, ಸಮಾನತೆಯ ಆಧಾರದ ಮೇಲೆ ಎರಡೂ ದೇಶದ ಪ್ರಜೆಗಳೂ ಮಿತ್ರರಾಗಿ ಉಳಿದರು, ಈ ಶ್ರೇಯಸ್ಸು ಗಾಂಧೀಜಿಯವರಿಗೆ ಸಲ್ಲುತ್ತದೆ.

ಪ್ರಭುಗಳು ಹಾಗೂ ಪ್ರಜೆಗಳು ಎಂಬ ಒಂದು ಕೃತ್ರಿಮವಾದ ಅಸಹಜವಾದ ಸಂಬಂಧದ ತ್ಯಾಗ ಸುಲಭವಾಗಿರಲಿಲ್ಲ. ಬ್ರಿಟಿಷರು ಭಾರತದಲ್ಲಿ ಸ್ಥಾಪಿಸಿದ್ದ ಸಾಮ್ರಾಜ್ಯದ ತೊಡಕಿನಿಂದ ಬಿಡಿಸಿಕೊಳ್ಳಲು ಗಾಂಧೀಜಿಯವರು ಅವರಿಗೆ ನೆರವಾದರು. ಸಾಮ್ರಾಜ್ಯ ಕಟ್ಟುವುದೇನೋ ಸುಲಭ ಆದರೆ ಅದನ್ನು ತ್ಯಜಿಸಿ ಹೋಗುವುದು ಅಷ್ಟು ಸುಲಭವಲ್ಲ.

1917ನೇ ಇಸವಿ, ಪ್ರಥಮ ವಿಶ್ವಸಮರದ ಕಾಲ. ಈ ಸಂದರ್ಭದಲ್ಲಿ ವೆಸ್ಟ್‌ಮಿನಿಸ್ಟರ್‌ದಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಭಾರತಕ್ಕೆ ಹಂತ-ಹಂತವಾಗಿ ಸ್ವಾತಂತ್ರ್ಯ ನೀಡಲು ನಿರ್ಧರಿಸಿತು. ಈ ನಿರ್ಣಯ ಬ್ರಿಟಿಷ್ ಜನತೆಯ ಆಶೋತ್ತರಗಳ ಪ್ರತಿಬಿಂಬ. ಆಗ ಯುರೋಪಿನಲ್ಲಿ ನಮಗೆ ಒದಗಿದ್ದ ಸಂಕಟ ಪರಿಸ್ಥಿತಿಯಲ್ಲಿ ಭಾರತೀಯರು ತೋರಿದ ಔದಾರ್ಯಯುಕ್ತ ಪ್ರತಿಕ್ರಿಯೆಯಿಂದ ನಮ್ಮ ಹೃದಯ ತುಂಬಿ ಬಂದಿತು. ಭಾರತೀಯರು ವಿದೇಶೀ ಆಳರಸರಿಗೆ ಒದಗಿದ್ದ ಪರಿಸ್ಥಿತಿಯ ದುರ್ಲಾಭ ಪಡೆಯಲು ಯತ್ನಿಸಲಿಲ್ಲ. ಬ್ರಿಟಿಷ್ ಸೇನಾಬಲವನ್ನು ಸೇರಿ ಫ್ರಾನ್ಸಿನಲ್ಲಿ ಅವರಿಗಾಗಿ ಸೇವೆ ಸಲ್ಲಿಸಲು ನೂರಾರು ಸಾವಿರದ ಸಂಖ್ಯೆಯಲ್ಲಿ ಸ್ವಪ್ರೇರಣೆಯಿಂದ ಮುಂದೆ ಬಂದರು! ಎಂತಹ ಉದಾತ್ತವಾದ ನಡೆವಳಿಕೆ!

ಬ್ರಿಟಿಷರು ಭಾರತೀಯರಿಗೆ ಸ್ವಯಮಾಡಳಿತದ ಹಕ್ಕನ್ನು ನೀಡುವುದನ್ನು ತಡೆಹಿಡಿದಿದ್ದರೂ ಕೂಡ ಬ್ರಿಟನ್ ಸ್ವಾತಂತ್ರ್ಯ ನೀಡಲು ತತ್ವಶಃ ಸಿದ್ಧವಿದೆ. ಯುರೋಪಿನಲ್ಲಿ ಈಗ ಅದು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆ. ಭಾರತದ ಬೆಂಬಲದಿಂದ ಈ ಸಮರದಲ್ಲಿ ವಿಜಯಿಯಾದರೆ-ವಿಜಯಿಯಾಯಿತು ಕೂಡ-ಸ್ವಾತಂತ್ರ್ಯಕ್ಕಾಗಿ ಅಂದು ಹೋರಾಡುತ್ತಿದ್ದರು. ಭಾರತಕ್ಕೆ ಖಂಡಿತ ಸ್ವಾತಂತ್ರ್ಯ ನೀಡುವುದೆಂಬ ಭಾವನೆ ಆಗ ಎಲ್ಲರಲ್ಲಿ ಬೇರೂರಿದ್ದಿತು. ಭಾರತೀಯರು ಪ್ರಕಟಿಸಿದ ಪ್ರತಿಕ್ರಿಯೆ ಬ್ರಿಟಿಷರ ಮೇಲೆ ಇದೇ ಪರಿಣಾಮ ಮಾಡಿತು.

1917ರಲ್ಲಿ ಬ್ರಿಟಿಷರು ಕೈಕೊಂಡ ನಿರ್ಣಯವು ಪ್ರಾಮಾಣಿಕವಾಗಿತ್ತು. ಬ್ರಿಟಿಷರ ಈ ನಿರ್ಣಯವನ್ನು ಕಾರ್ಯರೂಪಕ್ಕಿಳಿಸಲು ಪ್ರಾರಂಭಿಸಿದರು. ಆದರೂ ಅಧಿಕಾರ ಕೈಯಲ್ಲಿದ್ದಾಗ ಅದನ್ನೇ ಸುಲಭವಾಗಿ ತ್ಯಜಿಸುವುದು ಮಾನವ ಸ್ವಭಾವಕ್ಕೆ ಒಗ್ಗದ ವಿಷಯ. ಬ್ರಿಟಿಷರು ಭಾರತಕ್ಕೆ ಹಂತ—ಹಂತವಾಗಿ ಸ್ವಾತಂತ್ರ್ಯ ಕೊಡುವ ಬಗ್ಗೆ ಮಾಡಿದ್ದ ದೃಢಸಂಕಲ್ಪವನ್ನು ಕಾರ್ಯರೂಪಕ್ಕೆ ತರಲು ವಿಳಂಬ ಮಾಡಿರಬಹುದು. ಈ ವಿಳಂಬದಿಂದ ಭಾರತೀಯರು ತಾಳ್ಮೆಯನ್ನೂ ನಂಬಿಕೆಯನ್ನೂ ಕಳೆದುಕೊಂಡಿರಬಹುದು. ಭಾರತೀಯರು ಕ್ರಾಂತಿಕಾರಿ ಹಿಂಸೆಗೆ, ಬ್ರಿಟಿಷರ ದಬ್ಬಾಳಿಕೆಯ ಕ್ರಮಗಳಿಗೆ ಇಂತಹ ಪರಿಸ್ಥಿತಿ ಎಡೆಕೊಟ್ಟಿರಬಹುದು. ಆದರೂ ಹಿಂಸೆ ಎಲ್ಲೆಮೀರಿ ವ್ಯಾಪಕವಾಗಿ ಹಬ್ಬಿದ್ದರೆ ಪರಿಸ್ಥಿತಿ ಕೈಮೀರಿ ಹೋಗುವ ಸಂದರ್ಭವಿತ್ತು.

ಇಂತಹ ಘಟನೆಗೆ ಕಾರಣವಾಗಬಹುದಾದ ಅನೇಕ ದುರದೃಷ್ಟಕರ ಘಟನೆಗಳೂ ನಡೆದವು ಎಂಬುದಕ್ಕೆ ಇತಿಹಾಸವೇ ಸಾಕ್ಷಿ. ಗಾಂಧೀಜಿಯವರು ದುರಂತಕ್ಕೆ ಕಾರಣವಾಗಬಹುದಿದ್ದ ಈ ಘಟನಾವಳಿಗೆ ಹೊಸ ತಿರುವು ನೀಡಿ ಎಲ್ಲವೂ ಸುಖಾಂತವಾಗಿ ಮುಗಿಯುವಂತೆ ಮಾಡಿದರು. ಭಾರತ—ಬ್ರಿಟನ್ ಸಂಬಂಧಗಳು ಹಿತಕರವಾಗಿಯೇ ಉಳಿದವು.

ನಾನು ಆಂಗ್ಲನಾದರೂ ಏಕೆ ಗಾಂಧೀಜೀಯ ಪಕ್ಷಪಾತಿಯಾಗಿದ್ದೇನೆ? ಎಂಬುದಕ್ಕೆ ಇದೇ ಕಾರಣ. ನಾನು ಬ್ರಿಟನ್ನಿನಲ್ಲಿ ಜನಿಸದೇ ಇರಾನಿನಲ್ಲೇ ಅಥವಾ ಇಥಿಯೋಪಿಯ ಅಥವಾ ಸ್ವೀಡನ್ನಿನಲ್ಲೇ ಜನ್ಮತಾಳಿದ್ದರೆ ಗಾಂಧೀಜಿಯವರ ಬಗೆಗಿನ ನನ್ನ ಅಭಿಪ್ರಾಯದಲ್ಲಿ ಕೊಂಚ ಬದಲಾವಣೆ ಆಗುತ್ತಿದ್ದಿತೆ? ಇಲ್ಲ, ಖಂಡಿತವಾಗಿಯೂ ಇಲ್ಲ. ಗಾಂಧೀಜಿಯವರು ಭಾರತ—ಬ್ರಿಟನ್‌ಗಳಿಗೆ ಸಲ್ಲಿಸಿದ ಸೇವೆ ಇಡೀ ಮಾನವ ಜನಾಂಗಕ್ಕೆ ಸಲ್ಲಿಸಿದ ಸೇವೆ.

ಗಾಂಧೀಜಿಯವರು ಸ್ವಲ್ಪವೂ ರಕ್ತಪಾತವಿಲ್ಲದೇ ರಾಜಕೀಯ ಪರಿವರ್ತನೆ—ರಾಜಕೀಯ ಅಧಿಕಾರದ ಹಸ್ತಾಂತರ ಸರಳವಾಗಿ ನಡೆಯಬಹುದಾದ ಮಾರ್ಗವನ್ನು ಹುಡುಕಿದರು. ಅವರು ಮಾರ್ಗವನ್ನು ಹುಡುಕಿದರು ಮಾತ್ರವಲ್ಲ ಕೋಟ್ಯಂತರ ಜನರು ಅದೇ ಮಾರ್ಗವನ್ನು ಅನುಸರಿಸುವಂತೆ ಮಾಡಿದರು. ಭಾರತ ಹಾಗೂ ಬ್ರಿಟಿಷ್ ಜನತೆಗೆ ಈ ಮಾರ್ಗ ತೋರಿಸಿಕೊಟ್ಟ ಅವರು ಇಡೀ ವಿಶ್ವಕ್ಕೆ ಒಂದು ಆದರ್ಶವನ್ನು ಹಾಕಿಕೊಟ್ಟರು.

ಗಾಂಧೀಜಿ ಮಾನವ ಜನಾಂಗಕ್ಕೆ ರಾಜಕೀಯದಲ್ಲಿ ನೈತಿಕ ಪಾಠವನ್ನು ಕಲಿಸಿಕೊಟ್ಟರು. ಅಣುಯುಗದ ಆರಂಭದ ಸಂಧಿಕಾಲದಲ್ಲಿ ಅವರು ಕಲಿಸಿದ ಈ ಪಾಠ ಮಹತ್ವಪೂರ್ಣ.

ಅಣುವಿನಲ್ಲಿ ಅಗಾಧವಾದ ಭೌತಿಕ ಶಕ್ತಿ ಅಡಕವಾಗಿದೆ. ಮಾನವ ಕಲ್ಯಾಣಕ್ಕಾಗಿ ಈ ಶಕ್ತಿಯನ್ನು ಬಳಸುವ ವಿಧಾನವನ್ನು ಶೋಧಿಸಲಾಯಿತು. ಈ ಶೋಧ ತಾಂತ್ರಿಕ ಹಾಗೂ ವೈಜ್ಞಾನಿಕ ಕ್ಷೇತ್ರದಲ್ಲಿ ಮಾನವನು ಸಾಧಿಸಿದ ಅದ್ಭುತ ಪ್ರಗತಿಯ ಸಂಕೇತ. ಅಗಾಧವಾದ ಈ ಶಕ್ತಿಯನ್ನು ಘಾತುಕವಾದ ಆಯುಧ ತಯಾರಿಕೆಗೆ ಬಳಸಿಕೊಂಡಿರುವುದು ಒಂದು ಕಡೆ, ಮಾನವನ ತಾಂತ್ರಿಕ ಪ್ರಗತಿಯ ನಿದರ್ಶನವಾದರೆ; ಇನ್ನೊಂದು ಕಡೆ ಅವನ ನೈತಿಕ ಅಧಃಪತನದ ಪ್ರತೀಕವಾಗಿದೆ.

ಮಾನವನ ಭೌತಿಕ ಸಂಪತ್ತು ಅಧಿಕವಾಗುತ್ತ ನಡೆದಂತೆ ಅವನ ಆಧ್ಯಾತ್ಮಿಕ ಬಲ ಕಡಿಮೆಯಾಗುತ್ತ ಹೋಗುತ್ತದೆ, ಈ ಅಂತರ ಹೆಚ್ಚುತ್ತ ನಡೆದರೆ, ಅದೂ ಮಾನವನಿಗೆ ಅತ್ಯಾಘಾತುಕವಾಗುತ್ತದೆ.

ಅಣುಬಾಂಬಿನ ಶೋಧ ಈ ಅಪಾಯವನ್ನು ತೀವ್ರಗೊಳಿಸಿದೆ. ನೈತಿಕ ಏಳಿಗೆಯ ಮೂಲಕವೇ ಮಾನವನು ತನ್ನನ್ನು ಈ ವಿನಾಶದಿಂದ ಪಾರು ಮಾಡಿಕೊಳ್ಳಲು ಸಾಧ್ಯ. ಇದು ಇಂದಿನ ಅತ್ಯಗತ್ಯವಾದ ಆವಶ್ಯಕತೆ.

ಹಿಂಸೆಯನ್ನು ತ್ಯಜಿಸುವುದು ಈಗ ಅತ್ಯಾವಶ್ಯಕವಾಗಿದೆ. ಕೇವಲ ಯುದ್ಧಗಳ ವಿಷಯದಲ್ಲಿ ಹಿಂಸೆಯನ್ನು ತ್ಯಜಿಸಿದರೆ ಸಾಲದು. ಮಾನವ-ಮಾನವರ ಪರಸ್ಪರ ವ್ಯವಹಾರಗಳಲ್ಲಿ-ನಡೆವಳಿಕೆಗಳಲ್ಲಿ ಹಿಂಸೆ ತ್ಯಾಜ್ಯವಾಗಬೇಕು.

ವಿಜ್ಞಾನ ಹಾಗೂ ತಂತ್ರಶಾಸ್ತ್ರ ಮಾನವನ ಅಸಾಧಾರಣವಾದ ವಿಜಯದ ಸೂಚಕ. ಮಾನವನ ಸಂಬಂಧಗಳಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಕೆಲವರೊಂದಿಗೆ ವ್ಯವಹರಿಸುವಾಗ ನಾವು ಹೆಚ್ಚು ನೈತಿಕ ಪ್ರಜ್ಞೆಯನ್ನು ತೋರುತ್ತೇವೆ. ಮತ್ತೆ ಕೆಲವು ಕಡೆಗಳಲ್ಲಿ ಇದರ ಅಭಾವ ಕಂಡು ಬರುತ್ತದೆ.

ಗಂಡ—ಹೆಂಡತಿ—ಪಾಲಕರು—ಮಕ್ಕಳು, ಮಿತ್ರರು ಇತ್ಯಾದಿ ಖಾಸಗಿ ಸಂಬಂಧಗಳಲ್ಲಿ ನಾವು ಪ್ರಗತಿ ಸಾಧಿಸಿಲ್ಲ. ವೈಯಕ್ತಿಕವಲ್ಲದ ಸಂಸ್ಥೆಗಳ ಮೂಲಕ ವ್ಯವಹರಿಸಬೇಕಾಗುವ ಪರೋಕ್ಷ ಸಂಬಂಧಗಳಲ್ಲಿ ನಾವು ಇನ್ನೂ ಹಿಂದುಳಿದಿದ್ದೇವೆ. ಮಾನವನು ತೀರ ಹಿಂದುಳಿದಿರುವ ಕ್ಷೇತ್ರವಾದರೂ ಇದೇ. ಇಂತಹ ಹಿಂದುಳಿದ ಕ್ಷೇತ್ರದಲ್ಲಿ ತೀರ ಕೊಳಕಾದ ಪ್ರದೇಶವೆಂದರೆ ರಾಜಕೀಯ.

ಕೊಳಕು ಪ್ರದೇಶವನ್ನು ಸ್ವಚ್ಛಗೊಳಿಸಬೇಕಾಗುತ್ತದೆ. ಆದರೆ ಇದಕ್ಕೆ ಜನರು ಬೇಕು. ಈ ಕೊಳಕು ನಿವಾರಣೆ ಮಾಡಲು ಹೋದರೆ ತಾವೂ ಕೊಳಕಾಗುವ ಸಂಭವವೂ ಉಂಟು. ರಾಜಕೀಯದ ಕೊಳಕು-ನೈತಿಕ ಕೊಳಕಾಗಿದೆ. ಇಂತಹ ಒಂದು ಕೊಳಕಿನಲ್ಲಿ ವಾಸಿಸುವ ಕಾರ್ಯಕರ್ತನಿಗೆ ನೈತಿಕ ಅಧಃಪತನದ ಸಾಂಕ್ರಾಮಿಕ ರೋಗದ ಭಯ ಬಾಧಿಸುತ್ತದೆ. ಈ ಒಂದು ಕಾರಣದಿಂದಲೇ ಸೂಕ್ಷ್ಮ ಮನಸ್ಸಿನವರಾದ ಅನೇಕರು ಪ್ರವೇಶಿಸಲು ಹಿಂಜರಿಯುತ್ತಾರೆ. ಅವರ ಈ ಅನಾಸಕ್ತಿ ಸಹಜವಾದರೂ ಅದರಿಂದ ಈ ಕೊಳಕಿನ ಸಮಸ್ಯೆಯೂ ವಿಷವೃಕ್ಷದ ನಿರ್ಮಾಣಗೊಂಡಿದೆ. ಯಾವ ಆಕರ್ಷಣೆಯೂ ಇಲ್ಲದೆ ಈ ಕ್ಷೇತ್ರವನ್ನು ಪ್ರವೇಶಿಸಲು ಮಹಾನ್ ವ್ಯಕ್ತಿಗಳು ಈ ಕಾರ್ಯದಲ್ಲಿ ಶ್ರದ್ಧಾವಂತರಾಗಿ ಶ್ರಮಿಸಬೇಕಾಗುತ್ತದೆ. ರಾಜಕೀಯದ ಶುದ್ಧಿಗೆ ಇದೇ ಅಗತ್ಯ.

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ
ಮೂಡಬಿದ್ರಿ — ಬಂಗಾಡಿ, ಕುದುರೆಮುಖ, ಧರ್ಮಸ್ಥಳ — ಚಾರ್ಮಾಡಿ
ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ
ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

ಗಾಂಧೀ ಜನ್ಮ ಶತಾಬ್ದಿ–

ಪೌರತ್ವ ಹಕ್ಕುಗಳು ಮತ್ತು ಕರ್ತವ್ಯ

ಅಹಿಂಸೆಯ ಮೇಲೆ ಆಧಾರಿತವಾಗಿರುವ ಸ್ವರಾಜ್ಯದಲ್ಲಿ, ಜನ ತಮ್ಮ ಹಕ್ಕುಗಳನ್ನು ತಿಳಿಸಿರಬೇಕೆಂದಿಲ್ಲ. ಆದರೆ ಅವರು ತಮ್ಮ ಕರ್ತವ್ಯಗಳನ್ನು ಮಾತ್ರ ತಿಳಿದಿರುವುದು ಅತ್ಯವಶ್ಯವಾಗಿದೆ. ಪೌರರು ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿದಾಗ ದೊರೆಯುವ ಹಕ್ಕುಗಳೇ ನಿಜವಾದ ಹಕ್ಕುಗಳು. ನಾವು ಇರುವ ದೇಶಕ್ಕೆ ಶ್ರದ್ಧಾಪೂರ್ವಕ ಸೇವೆ ಸಲ್ಲಿಸುವವರಿಗೇ ನಿಜವಾದ ಪೌರತ್ವದ ಹಕ್ಕುಗಳು ಲಭಿಸುತ್ತವೆ. ಇಂತಹ ಪೌರರೇ ತಮಗೆ ದೊರೆತ ಹಕ್ಕುಗಳನ್ನು ನ್ಯಾಯಸಮ್ಮತವಾಗಿ ಬಳಸಿಕೊಳ್ಳಬಲ್ಲರು.

ಕರ್ತವ್ಯ ನಿರ್ವಹಣೆಯಿಂದ ಹಕ್ಕುಗಳನ್ನು ಪಡೆದ ಅವರು ಸಮಾಜದ ಹಿತಕ್ಕಾಗಿಯೇ ಅವುಗಳನ್ನು ಉಪಯೋಗಿಸಿಕೊಳ್ಳುತ್ತಾರೆ, ಸ್ವಹಿತಕ್ಕಾಗಿ ಎಂದೂ ಉಪಯೋಗಿಸುವುದಿಲ್ಲ. ಜನತಾ ಸ್ವರಾಜ್ಯವೆಂದರೆ, ವ್ಯಕ್ತಿಗಳ ಸ್ವಾತಂತ್ರ್ಯ ಅಥವಾ ಸ್ವಯಮಾಡಳಿತವೆಂದು ಅರ್ಥ. ವ್ಯಕ್ತಿಗಳು ಪೌರರಾಗಿ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದರೆ ಸ್ವರಾಜ್ಯ ಬರುತ್ತದೆ. ಇಂತಹ ಒಂದು ಸ್ವರಾಜ್ಯದಲ್ಲಿ ಯಾರೂ ತಮ್ಮ ಹಕ್ಕುಗಳ ಬಗ್ಗೆ ವಿಚಾರ ಮಾಡುವುದಿಲ್ಲ. ಅಗತ್ಯಬಂದಾಗ ಉತ್ತಮ ಮಟ್ಟದ ಕರ್ತವ್ಯ ನಿರ್ವಹಣೆಗಾಗಿ ಆ ಹಕ್ಕುಗಳು ಬಂದೇ ಬರುತ್ತವೆ.

ಎಲ್ಲಾ ಹಕ್ಕುಗಳೂ ಕರ್ತವ್ಯವನ್ನು ಉತ್ತಮ ರೀತಿಯಿಂದ ನಿರ್ವಹಿಸಿದಾಗಲೇ ಬರುತ್ತವೆ. ಹೀಗೆ ವಿಶ್ವದ ಪೌರರಾಗಿ ನಮ್ಮ ಕರ್ತವ್ಯಗಳನ್ನು ನಾವು ಸರಿಯಾಗಿ ನಿರ್ವಹಿಸಿದಾಗಲೇ, ನಮಗೆ ಈ ವಿಶ್ವದಲ್ಲಿ ಬಾಳುವ ಹಕ್ಕು ದೊರೆಯುತ್ತದೆ.

ಎಲ್ಲರೂ ತಮ್ಮ ಹಕ್ಕುಗಳ ವಿಷಯವಾಗಿಯೇ ಒತ್ತಾಯ ಪಡಿಸುತ್ತ ತಮ್ಮ ಕರ್ತವ್ಯಗಳನ್ನು ಕಡೆಗಣಿಸಿದರೆ, ಅದು ಅರಾಜಕತೆ ಹಾಗೂ ಅವ್ಯವಸ್ಥೆಗೆ ಕಾರಣವಾಗುತ್ತದೆ. ಪ್ರತಿಯೊಬ್ಬರು ತಮ್ಮ ತಮ್ಮ ಹಕ್ಕುಗಳ ಬಗ್ಗೆ ಒತ್ತಾಯ ಮಾಡದೇ ತಮ್ಮ ತಮ್ಮ ಕರ್ತವ್ಯದಲ್ಲಿ ನಿರತರಾದರೆ ವಿಶ್ವದಲ್ಲಿ ಶಾಂತಿ ಸುವ್ಯವಸ್ಥೆ ತಾನಾಗಿಯೇ ನೆಲೆಗೊಳ್ಳುತ್ತದೆ.

ಆಳುವುದು ದೊರೆಗಳ ದೈವದತ್ತವಾದ ಹಕ್ಕು ಎಂದಾಗಲಿ ಅಥವಾ ಒಡೆಯನಿಗೆ ವಿಧೇಯನಾಗಿರುವುದು ರೈತರ ವಿಧ್ಯುಕ್ತ ಕರ್ತವ್ಯವೆಂದಾಗಲಿ ಇಲ್ಲ. ಈ ಕಾರಣದಿಂದಾಗಿ ಹಕ್ಕುಗಳು ಮತ್ತು ಕರ್ತವ್ಯಗಳ ನಡುವಣ ಸಂಬಂಧಗಳನ್ನು ಅರಿತುಕೊಳ್ಳುವುದು ಅತ್ಯಗತ್ಯ.

ಸಮಂಜಸವಾದ ರೀತಿಯಲ್ಲಿ ಕರ್ತವ್ಯ ಮಾಡಿದಾಗಲೂ ನೇರವಾಗಿ ದೊರಕದ ಹಕ್ಕುಗಳು, ಹೊಂದಲು ಅರ್ಹವಾದ ಹಕ್ಕುಗಳಲ್ಲವೆಂದು ನಾನು ಹೇಳ ಬಯಸುತ್ತೇನೆ. ಮಕ್ಕಳ ವಿಷಯದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸದೇ ಅವರಿಂದ ವಿಧೇಯತೆಯನ್ನು ಅಪೇಕ್ಷಿಸುವ ದುಷ್ಟ ತಂದೆಗೆ ದೊರೆಯುವುದು ಮಕ್ಕಳ ತಿರಸ್ಕಾರ ಮಾತ್ರ.

ಹಕ್ಕುಗಳ ನಿಜವಾದ ಉಗಮ ಸ್ಥಾನವೆಂದರೆ ಕರ್ತವ್ಯ. ಹಕ್ಕುಗಳನ್ನು ಶೋಧಿಸಲು ನಾವು ಬಹುದೂರ ಹೋಗಬೇಕಾಗಿಲ್ಲ. ಕರ್ತವ್ಯಗಳನ್ನು ಬಿಟ್ಟು ಹಕ್ಕುಗಳ ಬೆನ್ನು ಹತ್ತಿದರೆ, ಹಕ್ಕುಗಳು ನಮ್ಮೊಂದಿಗೆ ಕಣ್ಣುಮುಚ್ಚಾಲೆ ಆಡುತ್ತವೆ. ಇದನ್ನೇ ಶ್ರೀ ಕೃಷ್ಣ ಪರಮಾತ್ಮನು ಈ ರೀತಿ ಹೇಳಿದ್ದಾನೆ. "ಕೆಲಸ ಮಾಡುವುದಕ್ಕೆ ಮಾತ್ರ ನಿನಗೆ ಅಧಿಕಾರವಿದೆ. ಹೊರತು ಕಾರ್ಯದ ಫಲದ ವಿಷಯದಲ್ಲಿ ನಿನಗೆ ಅಧಿಕಾರವಿಲ್ಲ." ಕೆಲಸವೇ ಕರ್ತವ್ಯ. ಆದರಿಂದ ದೊರೆಯುವ ಫಲವೇ ಹಕ್ಕು ಎಂದು ಹೇಳಬಹುದು. ನನ್ನ ಅಭಿಪ್ರಾಯದಲ್ಲಿ ಸತ್ಯಾಗ್ರಹದ ಶಾಸನವೆಂದರೆ, ಕರ್ತವ್ಯಗಳು ಹಾಗೂ ಅದರಿಂದ ದೊರಕುವ ಹಕ್ಕುಗಳ ಬಗ್ಗೆ ಮೆಚ್ಚುಗೆಯೇ ಆಗಿದೆ.

ಅಹಿಂಸೆ ಯಾವುದೇ ಒಬ್ಬ ವ್ಯಕ್ತಿಯ ಗುಣಧರ್ಮವಲ್ಲ. ಇತರ ಗುಣಗಳಂತೆಯೇ ಇದೂ ಒಂದು ಸಾಮಾಜಿಕ ಗುಣಧರ್ಮವಾಗಿದೆ. ಅಹಿಂಸೆಯಿಂದಲೇ ಸಮಾಜದ ಏಳಿಗೆ ಸಾಧ್ಯ. ಈ ಅಹಿಂಸೆಯು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಣೆಗೆ ಬರಬೇಕು. ಈ ಗುರಿಯತ್ತ ನಾವು ಎಷ್ಟು ದೂರ ಮುನ್ನಡೆಯುತ್ತೇವೆಯೋ ಅಷ್ಟು ಸುಖ–ಶಾಂತಿ ಸಮಾಧಾನಗಳು ನಮಗೆ ಲಭಿಸುತ್ತವೆ. ಅಷ್ಟು ಮಟ್ಟಿಗೆ ಅಹಿಂಸಾ ಪ್ರಧಾನವಾದ ಸಮಾಜವನ್ನು ನಿರ್ಮಿಸಿ ನಾವು ಕೃತಾರ್ಥರಾಗುತ್ತೇವೆ.

ಮಾನವನ ಭೌತಿಕ ಸಂಪತ್ತು ಹೆಚ್ಚುತ್ತ ನಡೆದಂತೆ ಅವನನ್ನು ರಾಜಕೀಯ ಕ್ಷೇತ್ರದಲ್ಲಿ ಆಕ್ರಮಿಸುವ ಸಾಧ್ಯತೆ ಹೆಚ್ಚುತ್ತದೆ. ಇಂದಿನ ಅಣುಯುಗದಲ್ಲಿ ಸಂತರು ಆಧ್ಯಾತ್ಮಿಕ ಅಪಾಯವಿದ್ದರೂ ಅಳುಕದೇ ರಾಜಕೀಯದ ಕೆಸರಿನಲ್ಲಿ ಪ್ರವೇಶಿಸಬೇಕು. ಗಾಂಧೀಜಿಯವರು ಈ ಕಷ್ಟಗಳು ಮೃತ್ಯುವಿನ ವರೆಗೆ ಬಂದಾಗಲೂ ಎದುರಿಸಿದರು. ರಾಜಕೀಯದ ಕೊಳಕಿನಲ್ಲಿ ನಡೆದರೂ ಅವರಿಗೆ ಅದರ ಕೊಳೆ ಅಂಟಲಿಲ್ಲ. ಅವರ ಆಧ್ಯಾತ್ಮ ಪ್ರವೃತ್ತಿಗೆ ಎಳ್ಳಷ್ಟೂ ಬಾಧೆ ಬರಲಿಲ್ಲ.

ನಾವಜೀಯರು .....

ದಿ॥ ವಿ ನರಸಿಂಹ ವರ್ಮ,
ವಿಟ್ಲ ಅರಮನೆ

ನಾವಜೀಯರು ಭಾರತೀಯರು ।
ಸತ್ಯವಿದು ಚಿರಸತ್ಯವು ।
ಸಾವು ನೋವನು ನಾವು ಗಣಿಸೆವು ।
ಕದಲದೆಮ್ಮಯ ಸ್ವಾಸ್ಥ್ಯವು ॥ ॥೧॥
ಜನ್ಮವು ನಮ್ಮದು ಭಯವು ಸೋಂಕದು ।
ಅಭಯ ಕವಚವು ನಮಗಿದೆ ॥
ಭರತ ಮಾತೆಯ ಅಮೃತ ಪುತ್ರರು
ಧಮನಿ ಧಗ ಧಗ ಹರಿಸಿದೆ ॥ ॥೨॥
ನಿಲಯ ರುದ್ರನ ರುದ್ರ ರೂಪವು ।
ರಾಷ್ಟ್ರ ಪುರುಷನ ಕದಡೊಳು ॥
ಮೆರೆಯುತಿದೆ ಉರುಳುತಿದೆ ಅಭಿನವ ।
ಚಂಡ ಮಂಡರ ಶಿರಗಳು ॥ ॥೩॥
ಚೀನ - ಪಾಕಿಸ್ತಾನಗಳ ಅನು-
ಕೂಲ ಅನುಕೂಲ ಪ್ರಣಯವು ಸಾಗಿದೆ
"ಮನಕೆ ಮುಳಿಯದೆ-ಹುಲಿಗೆ ವನವಿದೆ"
ಎಂಬ ರೀತಿಯೊಳಾಗಿದೆ ॥ ॥೪॥
ದ್ರೋಹ ಬಗೆದರು ಬೆನ್ನ ಹಿಂದಿರು
ಭಾರತೀಯರು ಸೊರಗರು ॥
ಪಾತಕರಿಯರು - ಚೀನ ಎಳೆಗರು ।
ನಾವು ನಿತ್ಯ ಸ್ವತಂತ್ರರು ॥ ॥೫॥
ನಮ್ಮ ನೆಲವನು ಪುಣ್ಯ ಫಲವನು ।
ದಕ್ಕಲೀಯೆವು ಪರರಿಗೆ ।
ಜನದ ರೋಷವು ನಿಜದ ರೋಷವು ।
ಮುಟ್ಟದಿರ್ದಪರಿಗೆ । ॥೬॥

(ಸಂಗ್ರಾಹಕ — ಕೆ. ಪದ್ಮನಾಭಯ ಬಲ್ಲಾಳ)

ಭಾರತೀಯ ಅಂಚೆ ಮತ್ತು ತಂತಿ ಇಲಾಖೆ ರಾಷ್ಟ್ರೀಯ ಐಕ್ಯತೆಗಾಗಿ ಮತ್ತು ಅಂತರರಾಷ್ಟ್ರೀಯ ತಿಳಿವಳಿಕೆಗಾಗಿ ಕೆಲಸ ಮಾಡುತ್ತಿವೆ



1,00 000 ಪೋಸ್ಟ್ ಆಫೀಸುಗಳು
10,000 ಟೆಲಿಗ್ರಾಫ್ ಆಫೀಸುಗಳು
ಮತ್ತು 10,00,000 ಟೆಲಿಫೋನುಗಳು
ನಿಮ್ಮ ಸೇವೆಯಲ್ಲಿ ನಿರತವಾಗಿವೆ.
ಈ ಮೂಲಕ
ಅಂಚೆ ತಂತಿ ಇಲಾಖೆಯು
ಭಾರತದ 50 ಕೋಟಿ ಜನರನ್ನು
ಪ್ರಪಂಚದ 300 ಕೋಟಿ ಜನರನ್ನು
ಒಂದುಗೂಡಿಸುತ್ತಿದೆ.

ಭಾರತೀಯ ಅಂಚೆ ಮತ್ತು ತಂತಿ ಇಲಾಖೆ

ರಾಜಕೀಯ ನಾಟಕ—ಅಧಿಕಾರ ರಕ್ಷೆ

(ಐದನೇ ಪುಟದಿಂದ)

ಕ್ಷರ ಗುಂಪುಗಳ ನಡುವೆ ಅಧಿಕಾರಕ್ಕಾಗಿ ನಡೆಯುತ್ತಿರುವ ಹೋರಾಟ ಇನ್ನೂ ನಿಂತಿಲ್ಲ. ನಗರಸಭಾ ಚುನಾವಣೆಗಳಲ್ಲಿ ಜನಸಂಘದ ಮುಂದೆ ಕಾಂಗ್ರೆಸ್ಸು ಪ್ರಚಂಡ ಸೋಲನ್ನುಂಡು ತನ್ನ ಬಲಗೈಯನ್ನೇ ಮುರಿದುಕೊಂಡಿತು. ಇದರಿಂದ ನೊಂದ ಕಾಂಗ್ರೆಸ್ಸು ಸಂಯುಕ್ತ ವಿಧಾಯಕ ದಳದ ವಿರುದ್ಧ ಸತ್ಯಾಗ್ರಹ ಹೂಡಿ ಅದನ್ನು ಉರುಳಿಸಿ, ಮಧ್ಯಾವಧಿ ಚುನಾವಣೆಗೆ ಅವಕಾಶ ಕಲ್ಪಿಸುವ ಹವಣಿಕೆಯಲ್ಲಿದೆ.

ಕಳೆದ ಮೇ ತಿಂಗಳಲ್ಲಿ ಜನಸಂಘವು 'ಕಛ್ ಸತ್ಯಾಗ್ರಹ'ಕ್ಕೆ ಕರೆಕೊಟ್ಟಿತು. ಮಧ್ಯಪ್ರದೇಶದಲ್ಲಿ ಅದು ಸಚಿವ ಸಂಪುಟದ ತನ್ನ ಸದಸ್ಯರನ್ನು ಹಿಂದೆ ಕರೆದುಕೊಂಡಿತು.—ಇದರ ಹಿಂದೆ ಅಡಗಿದ ರಾಜಕೀಯ ಕಾರಣ ಬೇರೆಯೇ ಇದೆ. ತನ್ನವರಲ್ಲೇ ಕೆಲವರ ಮೇಲೆ ಸೇಡು ತೀರಿಸಿಕೊಳ್ಳಲು ಆ ಪಕ್ಷದ ನಾಯಕರು ಹೂಡಿದ ತಂತ್ರ ರಹಸ್ಯವಾಗುಳಿದಿಲ್ಲ—ಅಂದು ಸಿಂಗರ ಪತನಕ್ಕೆ ಆರಂಭವಾಯಿತು. ಮುಖ್ಯ ಮಂತ್ರಿಯವರು ಉನ್ನತ ಅಧಿಕಾರಿಗಳನ್ನು ವರ್ಗಮಾಡಿದ್ದನ್ನು ಜನಸಂಘವು ವಿರೋಧಿಸಿತು. ಕೆಲವು ತಿಂಗಳುಗಳ ಬಿಸಿ ವಾತಾವರಣದ ನಂತರ ಮತ್ತೆ ಜನಸಂಘವು ಸಂಯುಕ್ತ ವಿಧಾಯಕ ದಳದ ಸಂಪುಟದಲ್ಲಿ ಸೇರಿತು—ಈ ಬಾರಿ ಅದಕ್ಕೆ ಹೆಚ್ಚು ಸಂಖ್ಯೆಯ ಮಂತ್ರಿಪದ ಲಭಿಸಿತು. ವಿ.ಕೆ. ಸಕ್ಲೇಚರು ಉಪಮುಖ್ಯಮಂತ್ರಿಯಾಗಿಯೇ ಮುಂದುವರಿದರು.

ಸಂಯುಕ್ತ ಸಮಾಜವಾದಿ ಪಕ್ಷದಿಂದ ಮುಖ್ಯ ಮಂತ್ರಿಗಳಿಗೆ ಯಾವ ಲಾಭವೂ ಇಲ್ಲ. ಈ ಪಕ್ಷದ ಸದಸ್ಯರು ಮಂತ್ರಿಪದದಲ್ಲಿದ್ದುಕೊಂಡೇ ಕಛ್ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಆದರೆ, ಜುಲೈಯಲ್ಲಿ ಭೂಕಂದಾಯವನ್ನು ರದ್ದುಗೊಳಿಸದೆ ಹೋದರೆ ತಾನು ಸಂಪುಟದಿಂದ ಹೊರಬರುವುದಾಗಿ ಈ ಪಕ್ಷವು ಬೆದರಿಕೆ ಹಾಕಿತು. ರಾಜ್ಯಪಾಲರಿಗೆ ಈ ಪಕ್ಷದ ಮಂತ್ರಿಗಳು ನೇರವಾಗಿಯೇ ತ್ಯಾಗಪತ್ರ ಕಳಿಸಿದರು. ಇವರನ್ನು ಪ್ರಸನ್ನಗೊಳಿಸುವುದಕ್ಕಾಗಿ ವಾರ್ಷಿಕ ರೂ. ಏಳು ಕೋಟಿ ಆಯ ಬರುವ ಭೂಕಂದಾಯವನ್ನು ರದ್ದುಗೊಳಿಸಿ ಭೂ ಅಭಿವೃದ್ಧಿ ತೆರಿಗೆಗಳನ್ನು ಸುಗ್ರೀವಾಜ್ಞೆಯ ಮೂಲಕ ವಿಧಿಸಲಾಯಿತು. ಇನ್ನು ಪ್ರಸಮಾಪಕ್ಷವೂ ಇಲ್ಲಿ ತನ್ನ ಬಾಲವನ್ನಾಡಿಸುತ್ತಲೇ ಇದೆ. ಒಂಭತ್ತು ಸದಸ್ಯಬಲವಿರುವ ಪ್ರಸಮಾಪ ಜೂನ್ ತಿಂಗಳಲ್ಲಿ ಸಂವಿದ ಸರಕಾರಕ್ಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿತು. ಆದರೆ, ಇವರಲ್ಲಿ ಐವರು ತಮ್ಮ ನಿರ್ಧಾರವನ್ನು ಬದಲಾಯಿಸಿ ಮತ್ತೆ ಸಂವಿದಕ್ಕೆ ಬೆಂಬಲ ನೀಡತೊಡಗಿದರು.

ಸಂಯುಕ್ತ ವಿಧಾಯಕ ದಳದ ಅಂಗಪಕ್ಷಗಳು ತಂತಮ್ಮ ನಾಟಕದ ದೃಶ್ಯಗಳನ್ನು ಆಡುತ್ತಿದ್ದಂತೆಯೇ ಸರಕಾರದ ನಾಯಕ ಗೋವಿಂದನಾರಾಯಣ ಸಿಂಗರೂ ತಮ್ಮದೇ ಆದ ವಿನೋದಪ್ರದ ನಾಟಕವಾಡತೊಡಗಿದರು. ಕಳೆದ ಜೂನ್ ತಿಂಗಳಲ್ಲಿ ಅವರು ದೀರ್ಘಾವಧಿಯ ವರೆಗೆ ರಾಜಧಾನಿಯಿಂದ ದೂರವಿದ್ದರು. ತನ್ನ ಮನೆಯಲ್ಲಿಯೇ ನಡೆದ ಸಂವಿದದಳದ ಸಮಗ್ರತಾ ಸಮಿತಿಯ ಸಭೆಗಳಲ್ಲೂ ಅವರು ಹಾಜರಾಗಲಿಲ್ಲ. ನವದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡಿನೊಡನೆ ಮನಸ್ಸನ್ನು ಒಲಿಸುವ ಪ್ರಯತ್ನದಲ್ಲಿ ನಿರತರಾಗಿದ್ದರೆಂದು ತಿಳಿಯುತ್ತದೆ. ತನಗೆ ಉಚಿತವಾದ ಅವಕಾಶಗಳನ್ನು ಕಾಂಗ್ರೆಸ್ಸು ನೀಡುವುದಾದರೆ, ತನ್ನೊಡನೆ ಪಕ್ಷತ್ಯಾಗ ಮಾಡಿದವರೊಂದಿಗೆ ಮತ್ತೆ ಕಾಂಗ್ರೆಸ್ಸಿಗೆ ಮರಳುವುದಕ್ಕೂ ಅವರು ಸಿದ್ಧರಿದ್ದರು—ಆದರೆ, ಈ ಪಕ್ಷತ್ಯಾಗಿಗಳನ್ನು ಅಷ್ಟು ಸಲೀಸಿನಲ್ಲಿ ತನ್ನಲ್ಲಿ ಸೇರಿಸಿಕೊಳ್ಳಲು ಹೈಕಮಾಂಡು ನಿರಾಕರಿಸಿತು. ಗೋವಿಂದ ನಾರಾಯಣರ ನಾಟಕದ ಮೊದಲನೆಯ ಅಂಕ ನಿರಾಶೆಯಲ್ಲಿ ಕೊನೆಗೊಂಡಿತು. ಮುಂದಿನ ಅಂಕಗಳಿಗೆ ನಾಂದಿಯೂ ಆಯಿತು.

ಇಲ್ಲಿಂದ ಅವರ ನಾಟಕದ ಎರಡನೆಯ ಅಂಕ ಆರಂಭವಾಯಿತು. ಆಗಸ್ತ ತಿಂಗಳಲ್ಲಿ ಅವರು ಹಳೆಯ ಚತ್ತೀಸಘರ್‌ಗೆ ಪ್ರಯಾಣ ಮಾಡಿದರು. ಉದ್ದೇಶ, ಮತ್ತಷ್ಟು ಅತೃಪ್ತ ಕಾಂಗ್ರೆಸಿಗರನ್ನು ತನ್ನ ಬಲೆಯಲ್ಲಿ ಸೆಳೆದುಕೊಳ್ಳುವುದು. ತಾನು ಅಧಿಕಾರದಿಂದ ಬೇಸತ್ತೆನೆಂದೂ ತನಗದರಲ್ಲಿ ಆಸಕ್ತಿಯಿಲ್ಲವೆಂದೂ ಬೆಕ್ಕು ಸನ್ಯಾಸಿಯಾದರು. ಮುಖ್ಯ ಮಂತ್ರಿಯ ಪದವಿಗೆ ತಕ್ಕವನಾದೊಬ್ಬನು ಬೇಕಾಗಿದೆಯೆಂದೂ ಘೋಷಿಸಿದರು. ಈ ಬಲಿಗಂಟಕ್ಕೆ ಬಿಗಿಯಲು ಅವರಿಗೊಂದು ಆಡು ತಾನಾಗಿಯೇ ಸಿಕ್ಕಿತು. ಮಿಶ್ರ ಸಂಪುಟದಲ್ಲಿದ್ದ ಸಾರಂಘರದ ರಾಜಾ ನರೇಶ ಸಿಂಘರು ಮನವೊಲಿಸಿ ರಾಜಮಾತೆಯವರನ್ನು ಒಪ್ಪಿಸಿದರು. ರಾಜಾ ನರೇಶ ಸಿಂಗರ ಕೈಗೆ ಗೋವಿಂದನಾರಾಯಣ ಸಿಂಗರ ರಾಜಿನಾಮೆಯ ಪತ್ರವೂ ಸೇರಿತು; ತತ್‌ಕ್ಷಣ ರಾಜರು ಸಂವಿದಳವನ್ನು ಸೇರಿದರು. ತನ್ನ ಉದ್ದೇಶ ಸಾಧನೆಯಾದ ಕೂಡಲೇ ಗೋವಿಂದನಾರಾಯಣರ ಮಾತಿನ ದಾಟಿ ಬದಲಿಸಿತು. ತನ್ನ ಬಾಲ ಬಡಗರಾದ ಹದಿನೈದು ಮಂತ್ರಿಗಳಿಂದ 'ಗೋವಿಂದ ನಾರಾಯಣರು ರಾಜಿನಾಮೆ ನೀಡುವುದಾದರೆ, ನಮ್ಮದೂ ರಾಜಿನಾಮೆ'ಯೆಂದು ಹೇಳಿಸಿ ಪ್ರಕಟಿಸಿದರು. ಸಾರಂಘರದ ರಾಜರು ಸುಮ್ಮನಿರದೇನು ಮಾಡಿಯಾರು?

ಮೂರನೆಯ ಅಂಕ ಗೋವಿಂದ ನಾರಾಯಣರು ತನಗಾಗಿ ಆಡಿದರೆನ್ನುವುದಕ್ಕಿಂತ ಬೇರೆಯವರಿಗಾಗಿ ಆಡಿಸಿದರೆಂದರೆ ಸರಿಯಾದೀತು. ಅಕ್ಟೋಬರ ತಿಂಗಳಲ್ಲಿ ಪಕ್ಷತ್ಯಾಗಿ ಕಾಂಗ್ರೆಸಿಗರ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿ ಜನಸಂಘವು ನಾಟಕದಲ್ಲಿ ನೇರವಾಗಿ ಭಾಗವಹಿಸಿತು. ಸಿಂಗರು ಆ ಮಂತ್ರಿಗಳ ರಾಜಿನಾಮೆ ಬರೆಸಿ ತೆಗೆದುಕೊಂಡರು. ಅವನ್ನು ತಲೆಯಡಿಯಿಟ್ಟು ನಿದ್ರಿಸಿದರು. ರಾಜಮಾತೆಯೂ ಲೋಕಸೇವಕ ದಳಕ್ಕೆ ರಾಜಿನಾಮೆ ಕೊಟ್ಟರು. ಇದೇ ಸಮಯದಲ್ಲಿ ೬೦ ಸದಸ್ಯ ಬಲವಿರುವ ಜನಸಂಘ ಮತ್ತು ರಾಜಮಾತೆಯ ನಡುವೆ ಸಂಧಾನದ ಮಾತುಕತೆ ಆರಂಭವಾಯಿತು. ತನ್ನ ಸ್ಥಾನಕ್ಕೆ ಬರಬಹುದಾದ ಗಂಡಾಂತರದಿಂದ ಪಾರಾಗಲು ಗೋವಿಂದ ನಾರಾಯಣರು ರಂಗಕ್ಕೆ ಧುಮುಕಲೇ ಬೇಕಾಯಿತು. ಅವರು ತಲೆಯಡಿಯಿಂದ ರಾಜಿನಾಮೆಗಳ ಗಟ್ಟನ್ನು ಎತ್ತಿ ಅವನ್ನು ಸ್ವೀಕರಿಸಿದ್ದೇನೆಂದು ಘೋಷಿಸಿದರು. ಅಂಕದ ಕೊನೆಯಲ್ಲಿ ಆ ಇಪ್ಪತ್ತು ಜನರಿಗೂ ಗೊತ್ತು—ತಮ್ಮನ್ನು ಮತ್ತೆ ಗೋವಿಂದ ನಾರಾಯಣರು ಕರೆದುಕೊಳ್ಳುತ್ತಾರೆ ಎಂದು. ಪನ್ನಾದ ಮಹಾರಾಜ ನರೇಂದ್ರ ಸಿಂಗರು ಮುಖ್ಯ ಮಂತ್ರಿಗಳ ಪರವಾಗಿ ಸಂಪುಟದಲ್ಲಿ ಯಾರ್ಯಾರನ್ನು ಸೇರಿಸಬೇಕು ಎಂದು ಮಾತುಕತೆ ನಡೆಸತೊಡಗಿದರು.

೧೯೬೯ರ ಆರಂಭದಲ್ಲಿ ಈ ನಾಟಕದ ನಾಲ್ಕನೆಯ ಅಂಕ ಆರಂಭವಾಯಿತು. ಗೋವಿಂದ ನಾರಾಯಣ ತನ್ನ ಸಚಿವ ಸಂಪುಟವನ್ನು ವಿಸ್ತರಿಸಿ ಜನತೆಗೆ ಹೊಸ ವರ್ಷದ ಉಡುಗೊರೆಯಾಗಿ ಹೆಚ್ಚಿನ ಮಂತ್ರಿಗಳನ್ನು ನೀಡಿದರು. ೧೭ ಹೊಸ ಮಂತ್ರಿಗಳಲ್ಲಿ ಇಬ್ಬರದು ಹೊಸ ಮುಖ. ಉಳಿದ ೧೫ ಮುಖಗಳೂ ರಾಜಿನಾಮೆ ನೀಡಿ ಹೊರಗೆ ಕಾಯುತ್ತಿದ್ದ ಪಕ್ಷತ್ಯಾಗಿ ಕಾಂಗ್ರೆಸಿಗರು. ಇವರಲ್ಲಿ ಕ್ಯಾಬಿನೆಟ್ ಮಂತ್ರಿಗಳಿದ್ದಾರೆ, ಸ್ಟೇಟ್ ಸಚಿವರಿದ್ದಾರೆ, ಉಪಮಂತ್ರಿಗಳೂ ಇದ್ದಾರೆ. ಪಾರ್ಲಿಮೆಂಟರಿ ಸೆಕ್ರೆಟರಿಗಳ ನೇಮಕ ಮಾಡುವ ಆಲೋಚನೆಯೂ ಸಿಂಗರ ಹೃದಯದಾಳದಲ್ಲಿದೆ. ಇನ್ನೂ ಐವರು ಮಾಜಿ ಮಂತ್ರಿಗಳಿಗೆ ಇವರು ಸ್ಥಾನ ಕಲ್ಪಿಸಲಿಲ್ಲ. ಇವರಲ್ಲಿ ಒಬ್ಬರು ಮತ್ತೆ ಕಾಂಗ್ರೆಸ್ ಸೇರಿದ್ದಾರೆ. ಉಳಿದ ನಾಲ್ವರಿಗೆ ನಿಕಟ ಭವಿಷ್ಯದಲ್ಲೇ ಮಂತ್ರಿಪದ ನೀಡುವ ವ್ಯವಸ್ಥೆ ಗೋವಿಂದ ನಾರಾಯಣಸಿಂಗರು ಮಾಡದಿರುವಷ್ಟು ದ್ರೋಹಿಯಲ್ಲ. ಇಲ್ಲವಾದರೆ, ತಾನೊಬ್ಬ ಆಡಿದ ನಾಟಕವನ್ನೇ ಈ ನಾಲ್ವರೂ ಅಭಿನಯಿಸ ತೊಡಗಿದರೆ? ಅವರ ರಾಜಕೀಯ ನಾಟಕ ಮುಗಿದಂತೆಯೇ ಸರಿ.

ಗೋವಿಂದ ನಾರಾಯಣರ 'ಅಧಿಕಾರ ರಕ್ಷೆ'ಯ ನಾಟಕದ ನಾಲ್ಕನೆಯ ಅಂಕದ ಕೊನೆಯ ದೃಶ್ಯ ಮಾತ್ರ ಬಾಕಿ ಉಳಿದಿದೆ. ಈ ನಾಟಕವು ನಾಲ್ಕೇ ಅಂಕಗಳಲ್ಲಿ ಮುಕ್ತಾಯಗೊಳ್ಳುವುದೆಂದು ನಿರೀಕ್ಷಿಸಿದರೆ ಅದು ತಪ್ಪು ಗ್ರಹಿಕೆಯೆನಿಸೀತು. ಅಂತಹ ಹೊರಗಿನವರಿಗೆ ಈ ಸಿಂಗರ ನಾಟಕವೊಂದು ವಿನೋದದ ಮನರಂಜನೆಯ ವಸ್ತುವೆನಿಸಿದರೂ ರಾಜ್ಯದ ಜನತೆಗೆ ಪ್ರಗತಿ ಮಾರಕವಾಗಿದೆ. ತಾನೂ ತಿನ್ನದ ಇತರರಿಗೂ ತಿನಗೊಡದ ಪಣತಿಯಂತೆ ಇವರ ನಾಟಕ ನುಂಗಲಾರದ ತುತ್ತು. ಪ್ರತ್ಯೇಕ ಮನಸ್ಸಿನವರೂ ತನ್ನದೇ ಆದ ವ್ಯಕ್ತಿತ್ವವಿದ್ದರೆ, ವ್ಯಕ್ತಿತ್ವವೇ ಇಲ್ಲದ ವ್ಯಕ್ತಿಗಳು ಮಧ್ಯ ಪ್ರದೇಶದ ರಾಜಕೀಯದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದ್ದಾರೆ—ಯಾರೂ ಏನೂ ಮಾಡದ ಅಸಹಾಯಕ ಸಮರ್ಥನೆನಿಸಿದ್ದಾರೆ. ಮುಂದಿನ ಚುನಾವಣೆಯಲ್ಲಿ ಬೀಳುವ ಈ ನಾಟಕದ ಅಂಕದ ಪರದೆ ಮತ್ತೆ ಏಳಲಾರದು ಎಂಬುದಿಷ್ಟೇ ಸದ್ಯದ ಸದಾಶಯ. ಅದು ವರೆಗೆ ಗೋವಿಂದ ನಾರಾಯಣರ ನಾಟಕವನ್ನು ಮಧ್ಯ ಪ್ರದೇಶದ ಜನತೆ ಗೋವಿಂದ ನಾರಾಯಣ ಎಂದೇ ನೋಡಬೇಕು.

In the Court of the Munsiff, Udipi

Execution case 190/68

Mothi Souza — Petitioner

Vs.

1. Appi alias Bastyam Souza
2. Mary Souza Bai
3. Mark Souza

—Respondents.

The Execution case filed by the Petitioner seeking the attachment and sale of your properties is posted for your appearance on 17—1—69 at 11 a. m. If you fail to appear in Court on that day, the matter will be decided in your absence.

B. O.

K. L. Aithal;
Vakil for Petitioner:

Udipi, 6-1-69.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
89 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕಿಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಶ್ರೀ

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೧.

Phone— 5711, 5712, 5713 } 3 Lines.

ಚಾರುಚಯನ

ಸಾಹಿತ್ಯಕಾರನ ಶತಮಾನೋತ್ಸವ

ಇರಾನಿನ ಶಹರು ಹನ್ನೆರಡು ದಿನಗಳ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡು ಭಾರತಕ್ಕೆ ಬಂದರು. ಇರಾನ್ ಎಂದೊಡನೆಯೇ ಗರ್ಜನರ ನೆನಪು ಪ್ರತಿ ಭಾರತೀಯನಿಗೂ ಆಗಿಯೇ ಆಗುತ್ತದೆ. ಪಾಕಿಸ್ತಾನವು ಭಾರತದ ಮೇಲೆ ಆಕ್ರಮಣ ಮಾಡಿದಾಗ, ಇರಾನದ ಬೆಂಬಲ ಅದಕ್ಕಿತ್ತು. ಪಾಕ್ ಸಾಬರ್ ಜೆಟ್ ವಿಮಾನಗಳ ರಿಪೇರಿ, ಜರ್ಮನಿಯಿಂದ ತನ್ನ ಮೂಲಕ ವಿಮಾನಗಳ ಸರಬರಾಜಿನ ಯೋಜನೆ ಇತ್ಯಾದಿ ಮಾಡಿದ್ದು ಇನ್ನೂ ಇಲ್ಲಿ ಹಸಿರಾಗಿಯೇ ಉಳಿದಿದೆ.

ಅಂದಿಗೂ ಇಂದಿಗೂ ತುಂಬ ವ್ಯತ್ಯಾಸ ಕಾಣುತ್ತದೆ. ಇರಾನದ ಶಹರ ನೀತಿಯಲ್ಲೂ ಗಣನಾರ್ಹ ಅಂತರವನ್ನು ಈಗ ನಾವು ಕಾಣುತ್ತೇವೆ. ಭಾರತ ಮತ್ತು ಇರಾನಗಳ ನಡುವಣ ಸಂಪರ್ಕ ಇಂದು ನಿನ್ನೆಯದಲ್ಲ; ಕ್ರಿಸ್ತಶಕಕ್ಕೂ ಮೊದಲೇ ಇತ್ತು. ಪಂ. ನೆಹರುರವರು ಗರ್ಜನರಲ್ಲಿ ಈ ಸಂಬಂಧವನ್ನು ಮತ್ತೆ ಕುದುರಿಸುವ ಆಶಯವನ್ನು ವ್ಯಕ್ತಪಡಿಸಿದ್ದರು. ಅದೇ ಕಾಲ ಶಹಾ ಮತ್ತವರ ಸರಕಾರ ಈ ಬಗ್ಗೆ ಹೆಚ್ಚಿನ ಉತ್ಸಾಹ ತೋರಿಸಲಿಲ್ಲ. ಹತ್ತು ವರ್ಷಗಳ ನಂತರ ಶಹರ ಬಾಯಿಯಿಂದಲೇ ಇಂತಹ ಮಾತು ಬಂದಿದೆ— ಅದು ಕಾರ್ಯರೂಪಕ್ಕೂ ಬರುತ್ತಿದೆ. ಸಾಂಸ್ಕೃತಿಕ, ವಾಣಿಜ್ಯ ಮತ್ತು ತಾಂತ್ರಿಕ ಸಹಕಾರದ ಬಗ್ಗೆ ಮಂತ್ರಿಮಟ್ಟದ ಮಾತುಕತೆಗಳು ಆಗಾಗಲೇ ಆರಂಭವಾಗಿದ್ದು ನಿರ್ಣಾಯಕ ಹಂತದಲ್ಲಿವೆ.

ಇರಾನಿನ ಶಹರು ಇಂದು ಭಾರತದೊಡನೆ ಮೈತ್ರಿಯನ್ನು ಬಯಸುತ್ತಾರೆ. ಅವರ ಮಾತುಗಳಿಂದ ಒಂದು ಸ್ಪಷ್ಟವಾಗುತ್ತದೆ—ಏಶ್ಯನ್ ದೇಶಗಳು ಕೆಂಪು ಚೀನೀಯರ ಭಯದಿಂದ ದೂರವಿರಬೇಕಾದರೆ ಇವೆಲ್ಲವೂ ಒಂದಾಗಬೇಕು. ಅವರ ಆಶೆ ಈಗ ದೂರದೇ ಇದೆ. ಇದಕ್ಕೆ ಕಾರಣ ಪಾಕಿಸ್ತಾನ. ಕೆಂಪು ಚೀನೀಯರ ಹತ್ತಿರ ಹತ್ತಿರ ಸರಿಯುತ್ತಿರುವ ಪಾಕಿಸ್ತಾನವನ್ನು ಕೆಂಪುಜುರ ಪ್ರಭಾವದಿಂದ ದೂರಗೊಳಿಸದೆ ಹೋದರೆ ಅಪಾಯ ಕಂಡಿತವೇ. ಅಯ್ಯೂಬಖಾನರು ಈ ಅಪವಿತ್ರ ಮೈತ್ರಿಗೆ ಒಲಿದುದು ಕಾಶ್ಮೀರದ ಕಾರಣದಿಂದ. ಆದುದರಿಂದ ಶಹಾರ ಮಾತಿನ ಅಭಿಪ್ರಾಯ—ಕಾಶ್ಮೀರದ ಬಗ್ಗೆ ವಿವಾದವನ್ನು ಕೊನೆಗೊಳಿಸಿ, ಪಾಕ್—ಭಾರತಗಳು ಸ್ನೇಹ ಸ್ಥಾಪಿಸಬೇಕು — ಆಗ ಎಲ್ಲವೂ ಸವಿಯಾಗವುದು.

ಕಾಶ್ಮೀರದ ಬಗ್ಗೆಯೂ ಶಹರ ನಿಲುವು ಬದಲಾಗಿದೆ. ಹಿಂದೆ ಅದಕ್ಕಾಗಿ ನಡೆದ ಹೋರಾಟದಲ್ಲಿ ಅವರು ಸಹಾನುಭೂತಿ ತೋರಿಸಿದ್ದರೂ ಇಂದು ಅಂತಹ ಪರಿಸ್ಥಿತಿಯಿಲ್ಲ. ಪಾಕಿಸ್ತಾನವು ಇನ್ನೊಮ್ಮೆ ಆಕ್ರಮಣ ಮಾಡಿದರೆ, ಶಹಾ, ಏನು ಮಾಡುವರು? ಪ್ರಾಯಃ ಮೂಕಪ್ರೇಕ್ಷಕರಾಗಿಯೇ ಉಳಿಯಬಹುದು; ಅಲ್ಲ ಹೋರಾಟವನ್ನು ತಡೆಯುವ ಪ್ರಯತ್ನವನ್ನೂ ಮಾಡಬಹುದು. 'ಕಾಶ್ಮೀರ ಸಂಬಂಧ'ದಲ್ಲಿ ನಾವು ಸಂಯುಕ್ತರಾಷ್ಟ್ರ ಸಂಘದ ಪ್ರತಿಯೊಂದು ಗೊತ್ತುವಳಿಯ ಹಿಂದೆಯೂ ಇದ್ದೇವೆ' ಎಂಬವರ ಉದ್ಗಾರ, ಅವರ ಬದಲಾದ ನೀತಿಯ ದ್ಯೋತಕ. ಒಬ್ಬ ಆಕ್ರಮಣಕಾರನಾದ ಪಾಕಿಸ್ತಾನವು ತನ್ನ ಆಕ್ರಮಣವನ್ನು ಹಿಂತೆಗೆದುಕೊಳ್ಳಬೇಕು ಎಂದು ಮೊದಲ ಗೊತ್ತುವಳಿಯ ಅಂಶವನ್ನು ನೆನಪಿಸಿದಾಗ, ಆದರ ಹಿಂದೆಯೂ ನಾವಿದ್ದೇವೆ ಎಂದ ಶಹರ ಮಾತಿನಲ್ಲಿ ಪರಿಸ್ಥಿತಿಯ ಬದಲಾವಣೆಯನ್ನು ಅರಿತುಕೊಂಡಿದ್ದಾರೆಂದೇ ಹೇಳಬೇಕು.

ಎಲ್ಲಕ್ಕಿಂತ ಹೆಚ್ಚಾಗಿ ಅಧ್ಯಕ್ಷ ಅಯ್ಯೂಬಖಾನರಿಂದ ಪ್ರಧಾನಿ ಇಂದಿರಾಗಾಂಧಿಯವರಿಗೊಂದು ಖಾಸಗಿ ಸಂದೇಶವನ್ನು ಅವರು ತಂದಿದ್ದಾರೆಂದು ಪಟ್ಟಿವರದಿ. ಇದರಲ್ಲಿ ಏನಿರಬಹುದು? ಅದು ಊಹನಾತೀತ. ಆಂತರಿಕ ಸಂಘರ್ಷದಿಂದ 'ಎಣ್ಣೆಗಾಯಿ ನೀರಗಾಯಿ'ಯಾದ ಅಯ್ಯೂಬರ ಹೃದಯ ಹೇಗಿದ್ದೀತು? ಅದನ್ನು ಅವರೇ ಹೇಳಬೇಕು. ಶಹ ಬಹರೀನದ ಬಗ್ಗೆಯೂ ಆಡಿದರು; ಬಲಾತ್ಕಾರದಿಂದ ಅದನ್ನು ಇರಾಣದಲ್ಲಿ ಸೇರಿಸುವುದಿಲ್ಲವೆಂದು ಹೇಳಿದರು. ಇದು ಪಾಕಿಸ್ತಾನಕ್ಕೊಂದು ಎಚ್ಚರಿಕೆಯೇಕಿರಬಾರದು? ಕಾಶ್ಮೀರವು ಭಾರತದ ಒಂದು ರಾಜ್ಯವಾಗಿರುವಾಗ, ಅದನ್ನು ಬಲಾತ್ಕಾರದಿಂದ ಪಾಕಿಸ್ತಾನ ಕಿತ್ತುಕೊಳ್ಳುವುದು ನ್ಯಾಯವಾಗದು ತಾನೆ?

ಶಹರ ಭಾರತ ಭೇಟಿ ಮಹತ್ವಪೂರ್ಣವಾದದ್ದು. ಉಭಯ ದೇಶಗಳ ನಡುವಿದ್ದ ವೈಮನಸ್ಸನ್ನು ದೂರಗೊಳಿಸಿ ಬೆಸೆಯಲು ಪ್ರೇರಕವಾದದ್ದು. ಈ ನಡುವೆ ಭಾರತ ಪಾಕ್‌ಗಳ ನಡುವೆ ಕಾಶ್ಮೀರಸಂಬಂಧದ ಮಧ್ಯಸ್ಥನಾಗಿರಲೂ ಶಹ ಉತ್ಸಾಹದಿಂದಿದ್ದರೆ—ಅವಶ್ಯವೆನಿಸಿದರೆ. ಜತೆಗೆ ಪರಿಹಾರವನ್ನು ತಾವಿಲ್ಲದೇನೇ ಹುಡುಕಲು ಸಮರ್ಥರೆಂದೂ ಅಂದಿದ್ದಾರೆ. ಭಾರತದ ಮಟ್ಟಿಗೆ ಹೇಳುವುದಾದರೆ ಮೂರನೆಯವರ ಮಧ್ಯಸ್ಥಿಕೆ ಎಳ್ಳಷ್ಟೂ ಬೇಕಾಗಿಲ್ಲ; ಇನ್ನು ಎಂದೋ ಇತ್ಯರ್ಥವಾಗಿರುವ ಪ್ರಶ್ನೆಯ ಮೇಲೆ ವಿವಾದ ಎಲ್ಲಿಯದು?

o o o

ಸುಮಾರು ಒಂದೂವರೆ ದಶಕದ ಹಿಂದೆ ಭೂಮಂಡಲದ ಅತ್ಯುಚ್ಚ ಸ್ಥಾನದಲ್ಲಿದ್ದ ಟಿಬೇಟದ ಮೇಲೆ ಕೆಂಪು ಚೀನೀಯರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಪರಮಾವಧಿ ಬೌದ್ಧಗುರು ದಲೈಲಾಮರು ಭಾರತಕ್ಕೆ ಓಡಿಬಂದು ರಕ್ಷಣೆ ಪಡೆದರು. ಮತ್ತೊಬ್ಬ ಲಾಮ ಪಂಚೆನ್ ಲಾಮರನ್ನು ಜೇಲಿಗಟ್ಟಲಾಯಿತು — ಅವರೇನಾದರು ಯಾರಿಗೂ ಗೊತ್ತಿಲ್ಲ. ಕೆಂಪು ಸೇನೆಯ 'ವಿಚಾರ ಪ್ರಚಾರ' ವಿಭಾಗವು ಈ ವರ್ಷಗಳಲ್ಲಿ ಅದ್ಭುತ ಸಾಧನೆಯನ್ನು ಮಾಡಿದೆ; ತಪ್ಪೇನಾಮವಾಗಿ ಟಿಬೇಟಿಯನ್ನರ ವಿಚಾರಧಾರೆಯು ಅತ್ಯಂತ ಪ್ರಗತಿಶೀಲವಾಗಿದೆ—ಬುದ್ಧನ ಪ್ರತಿಮೆಗಳ ಬದಲಿಗೆ ಅವರು ಮಾವನ ಭಾವಚಿತ್ರವನ್ನು ಪೂಜಿಸುತ್ತಾರೆ.

ಅಲ್ಲಲ್ಲಿ ನಾಟಲಾಗಿದ್ದ ದೇವ–ದೇವತೆಗಳ ಮೂರ್ತಿಗಳ ಸ್ಥಾನವನ್ನು ಮಾವೋ ಘೋಷಣೆಗಳು ಆಕ್ರಮಿಸಿವೆ.

ಬುದ್ಧನ ಪವಿತ್ರ ಉಪದೇಶಭರಿತ ಪುಸ್ತಕಗಳನ್ನು ಹಿಡಿಯುತ್ತಿದ್ದ ಅವರ ಕೈಗಳು ಇಂದು 'ಕೆಂಪು ಪವಿತ್ರ ಪುಸ್ತಕ'ವನ್ನು ಗೌರವಿಸುತ್ತಿವೆ.

ಬುದ್ಧನ ಆಶೀರ್ವಾದ ಬೇಡುವ 'ಆವರ ಪ್ರಾರ್ಥನಾ ಪದ್ಯ 'ಪೂರ್ವದಿಶೆಯು ಕೆಂಪು'ವಿನಲ್ಲಿ ಬದಲಾವಣೆ ಹೊಂದಿದೆ.

ಮಾವನ ಚಿತ್ರದ ಮುಂದೆ ಬೆಳಗ್ಗೆ ಭಕ್ತಿ ಗೌರವದಿಂದ ಆತನ ಉಪದೇಶ ಕೇಳುತ್ತಾರೆ; ಸಂಜೆ ಅದರ ಮುಂದೆ ತಲೆ ಬಾಗಿ ತಮ್ಮ ಕಾರ್ಯಗಳನ್ನು ವರದಿ ಮಾಡುತ್ತಾರೆ.

ಈ ಬಗೆಯ ಸಾಂಸ್ಕೃತಿಕ ಕ್ರಾಂತಿಯನ್ನು ಸೇನೆಯ ಮೂಲಕ ಸಾಧಿಸಲಾಯಿತು. ಇದರಲ್ಲಿ ಪೂರ್ಣ ಸತ್ಯಾಂಶವಿಲ್ಲದಿರಬಹುದು. ಆದರೆ ಅತಿಶಯೋಕ್ತಿಯನ್ನು ದೂರವಿಟ್ಟಾಗಲೂ ವಾಸ್ತವಿಕಾಂಶವನ್ನು ಕಡೆಗಣಿಸುವುದು ಅಸಾಧ್ಯ. ಕೇರಳ—ಆಂಧ್ರ—ಬಂಗಾಳಗಳಿಂದ ಆಗಾಗ ಬರುತ್ತಿರುವ ವರದಿ, ಕೇರಳದ ಮುಖ್ಯಮಂತ್ರಿಯವರು 'ದೇವರ' ಬಗ್ಗೆ ಮಾಡಿದ ವ್ಯಾಖ್ಯಾನ, ಅಲ್ಲಿನ ವಿದ್ಯಮಾನಗಳು, ನಮ್ಮ ಜನತೆಯಲ್ಲೂ ವೈಚಾರಿಕ—ಸಾಂಸ್ಕೃತಿಕ ಕ್ರಾಂತಿಯನ್ನು ರಕ್ತ ನದಿಯ ಮೂಲಕವೇ ಬೆಳೆಸಲು ನಂಬೂದರಿ ಯೋಜನೆ—ಇದಕ್ಕೆ ಮಾವನ ಪೂರ್ಣ ಬೆಂಬಲವಿದ್ದೇ ಇದೆ. ಇನ್ನೂ ನಾವು ಕಣ್ಣು ಮುಚ್ಚಿದ್ದರೆ ಹೇಗೆ?

o o o

ಹತ್ತೊಂಭತ್ತನೆಯ ಶತಮಾನದಲ್ಲಿ ಕನ್ನಡವನ್ನು ಕನ್ನಡಿಗರೇ ಮರೆತಾಗ, ಎರಡು ತೇಜೋವಂತ ತಾರೆಗಳು ಉದಯಿಸಿ ಕನ್ನಡಿಗರಿಗೆ ಬೆಳಕು ತೋರಿದವು. ಹಿಂದುಗಡಲ ದಿಗಂತದಲ್ಲಿ ಕವಿವರ ಮುದ್ದಣನು ಹಳಗನ್ನಡ ಶೈಲಿಯಲ್ಲಿ ಕಾವ್ಯ ಪ್ರಪಂಚಕ್ಕೆ ಕಾಣಿಕೆ ನೀಡಿದರೆ, ಗಳಗನಾಥರು ಹೊಸಗನ್ನಡವನ್ನು ಅಪ್ಪಿಕೊಂಡರು. ಉತ್ತರ ಕರ್ನಾಟಕದಲ್ಲಿ ಕನ್ನಡದ ಬಗ್ಗೆ ಗೌರವಾದರಗಳನ್ನು ಗಳಿಸಿಕೊಟ್ಟ ಧೀಮಂತ ಶಕ್ತಿ ಗಳಗನಾಥರದು.

ಗಳಗನಾಥರು ಹೊಸಗನ್ನಡದ ಪ್ರವರ್ತಕರು, ಭಾಷಾಭಿಮಾನಿ, ಸಾಹಿತ್ಯಾಭಿರುಚಿಗಳನ್ನು ಜನತೆ ಯಲ್ಲಿ ಹುಟ್ಟಿಸಿದವರು. ಅವರ ವ್ಯಕ್ತಿತ್ವ ಉದಾರವಾದುದು, ಉನ್ನತವಾದುದು, ಧಾರ್ಮಿಕ ಭಾವನೆ ವಿಶಾಲವಾದುದು, ಸ್ವದೇಶಾಭಿಮಾನ, ಸ್ವಭಾಷಾಭಿಮಾನ ಮತ್ತು ಸ್ವಧರ್ಮಾಭಿಮಾನಗಳು ಪ್ರಶಂಸನೀಯವಾದುವುಗಳು. ಸಾಹಿತ್ಯದ ಮೂಲಕ ಜನಜಾಗೃತಿಯನ್ನು ಸಾಧಿಸಿದ ಗಳಗನಾಥರು ಬರೆದ ೬೦ ಗ್ರಂಥಗಳು ಅಚ್ಚಾಗಿವೆ. ಇವುಗಳಲ್ಲಿ ಹೆಚ್ಚಿನವು ಭಾಷಾನುವಾದಗಳು—ದೇಶಭಕ್ತಿ—ಧರ್ಮ ಭಕ್ತಿಯಿಂದ ತುಂಬಿ ತುಳುಕಾಡುತ್ತಿರುವಂಥವು. 'ಸದ್ಬೋಧ ಚಂದ್ರಿಕೆ'ಯೆಂಬ ಗ್ರಂಥಮಾಲೆಯ ಮೂಲಕ ಸಾಹಿತ್ಯ ಪ್ರಚಾರಕ್ಕೆ ಆರಂಭ ಮಾಡಿದವ

ಮುಂದುವರಿಸಿದೆ

CANARA BANK'S DEPOSITS REACH Rs. 146 CRORES

Canara Bank has shown satisfactory progress during the year 1968. Preliminary un-audited figures indicate, that the Bank's Deposits have increased from Rs. 126·56 Crores as at 31-12-67 to Rs. 146 Crores as at end of 1968.

During the year 1968, with a view to strengthen the Banking structure in India, the Canara Bank took over the Pangal Nayak Ltd. Including the Branches taken over from the Pangal Nayak Bank, 55 new branches were added during 1968, making a total of 302 Branches as at end of 1968. The Branches cover 11 States and the Union Territories of Delhi, Pondicherry and Goa. 177 Branches serve rural and semi-urban areas.

ರ—ಕನ್ನಡನಾಡಿಗೆ ಗುರಿಯಾದ ವ್ಯಕ್ತಿ.

ಬೆಳಗನಾಥರನ್ನು ಆಧುನಿಕ ಸಾಹಿತ್ಯದ ದಿಕ್ಸೂಚಿಯೆನ್ನಲೂಬಹುದು, ಕನ್ನಡದ ಸಾವಿತ್ರಿಯರೆಂದರೂ ಸಲ್ಲಬಹುದು. ಜೀವನದುದ್ದಕ್ಕೂ ಮಾಡಿದ ಹೋರಾಟ—ಪರಿಶ್ರಮಗಳ ಪರಿಣಾಮವಾಗಿ ಕ್ಯಾನ್ಸರ್ ರೋಗಕ್ಕೆ ತುತ್ತಾದ ಬೆಳಗನಾಥರು ಕನ್ನಡದ ಒಂದು ಅಮೂಲ್ಯ ರತ್ನ—ಇದನ್ನು ಯಾವ ಕನ್ನಡಿಗನೂ ಮರೆಯಲಾರ. ಈ ಮಹಾ ವ್ಯಕ್ತಿಯ ಶತಮಾನೋತ್ಸವವನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಆಶ್ರಯದಲ್ಲಿ ಆಚರಿಸಿದುದು ನಿಜಕ್ಕೂ ಪ್ರಶಂಸನೀಯ.

(ಮೂರನೇ ಪುಟದಿಂದ)

ಕುವೆಂಪುರವರು ತಮ್ಮ ಸಭಾಸ್ಥಾನ ಸಮಾರಂಭದಲ್ಲಿ ಆಡಿದ ಮಾತುಗಳನ್ನು ಅಲಕ್ಷ್ಯಿಸುವಂತಿಲ್ಲ. ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಮಾಧ್ಯಮವನ್ನು ಎಲ್ಲ ಹಂತಗಳಲ್ಲಿಯೂ ಪ್ರಯುಕ್ತ ಅತ್ಯಂತ ಮಂದಗತಿಯಲ್ಲಿ ನಡೆಯುವುದರ ಬಗ್ಗೆ ಅವರು ವಿಷಾದಿಸಿದರು. ಈ ಮಂದಗತಿಗೆ "ಇಂಗ್ಲಿಷ್ ಪ್ರೇಮಿ"ಗಳ "ಮಡಿವಂತಿಕೆ"ಯೇ ಕಾರಣ. ಆದುದರಿಂದ ಶಿಕ್ಷಣ ಮಾಧ್ಯಮವನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಪರಿವರ್ತಿಸುವ ಕಾರ್ಯ ಮೊದಲು ಸಾಧಿತವಾಗಬೇಕು; ಆ ಮೇಲೆ ಹಿಂದೀ ಮಾಧ್ಯಮದ ವಿಶ್ವವಿದ್ಯಾಲಯದ ಪ್ರಶ್ನೆ. ಅಖಿಲ ಭಾರತ ಸೇವಾವರ್ಗದವರ ಮಕ್ಕಳಿಗೆ ತೊಂದರೆಯಾಗುವುದೆಂಬ ಭಯವಿದ್ದರೆ, ಕನ್ನಡ ಮಾಧ್ಯಮದೊಡನೆ ಹಿಂದೀ ಮಾಧ್ಯಮವನ್ನೂ ಕಲವೆಡೆ ಆರಂಭಿಸಬಾರದೇಕೆ? ಕನ್ನಡ ರಾಜ್ಯದಲ್ಲಿ ಕನ್ನಡವನ್ನು ಮೆಟ್ಟಿ ಇಂಗ್ಲಿಷ್ ನಿಲ್ಲಬಾರದು; ಹಿಂದಿಯೂ ನಿಲ್ಲಬಾರದು. ಕನ್ನಡದ ಉಸಿರು ಕನ್ನಡವೇ. ಆದುದರಿಂದ ರಾಜ್ಯದ ಸಚಿವಸಂಪುಟ ಈ ಸಂಬಂಧದಲ್ಲಿ ಆವಸರ ಮಾಡಬಾರದು; ಹಿಂದಿಯನ್ನು ಐಚ್ಛಿಕವಾಗಿ ಕಲಿಯುವವರಿಗೆ, ಕಲಿಸುವವರಿಗೆ ಅಧಿಕ ಆರ್ಥಿಕ ಪ್ರೋತ್ಸಾಹ ನೀಡಿ, ಅದರ ಪ್ರಚಾರ ಸಾಧಿಸಲು ಕನ್ನಡಿಗರ ಆಕ್ಷೇಪವಿಲ್ಲ.

ಡಾ। ಕೆ. ಕೆ. ಹೆಗ್ಡೆಯ ನಿಧನ

ರಾಜ್ಯದ ಮಾಜಿ ಆರೋಗ್ಯ ಮಂತ್ರಿಗಳಾಗಿದ್ದ ಡಾ। ಕೆ. ಕೆ. ಹೆಗ್ಡೆಯವರು ಇದೇ ತಾ. 10 ರಂದು ಬೆಂಗಳೂರಿನ ತಮ್ಮ ನಿವಾಸದಲ್ಲಿ ತಮ್ಮ 67ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಪ್ರಸಿದ್ಧ ಕೆದಿಂಜೆ ಮನೆತನದವರಾಗಿದ್ದು, ಇವರ ವಿದ್ಯಾಭ್ಯಾಸವು ಮಂಗಳೂರಿನಲ್ಲಿಯೂ ಮದರಾಸಿನಲ್ಲಿಯೂ ನಡೆಯಿತು. ಇವರು ಹಿರಿಯ ಕಾಂಗ್ರೆಸ್ ಕರ್ತರಾಗಿದ್ದರಲ್ಲದೆ ಜಿಲ್ಲಾ ಬೋರ್ಡಿನಲ್ಲಿ ಎರಡು ಸಲ ಸದಸ್ಯರಾಗಿದ್ದರು. ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದರು. ಡಾ। ಹೆಗ್ಡೆಯವರು ಸಮಾಜ ಸುಧಾರಕರೂ, ಸಮಾಜ ಬಂಧುಗಳೂ, ನಿಷ್ಪಕ್ಷಪಾತಿಗಳೂ ಆಗಿದ್ದು ಜನಪ್ರಿಯತೆ ಮತ್ತು ಯಶಸ್ಸುಗಳಿಸಿದ್ದರು. ಉಡುಪಿಯ ಅಜ್ಜರಕಾಡಿನ ಹೊಸ ಸರಕಾರೀ ಆಸ್ಪತ್ರೆಯ ನಿರ್ಮಾಣಕ್ಕೆ ಇವರೇ ಕಾರಣರಾಗಿದ್ದರು.

ಕನಕದಾಸರ ಜಯಂತಿ

ಸುರತ್ಕಲ್ಲು ವಿದ್ಯಾದಾಯಿನಿ ಶಾಲೆಯಲ್ಲಿ ವಿಜಯ ಸಾಹಿತ್ಯಮಾಲೆಯ ವತಿಯಿಂದ ತಾ. 8ರಲ್ಲು ಕನಕದಾಸರ ಜಯಂತಿ ನಡೆಯಿತು. ಶ್ರೀ ಪಂಡಿತ ಕವಲಿಯವರು ಸಭಾಧ್ಯಕ್ಷರಾಗಿದ್ದರು. ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್, ಶ್ರೀ ಮಂದಾರ ಕೇಶವ ಭಟ್, ಶ್ರೀ ಸೀತಾರಾಮಾಚಾರ್ಯರು ಭಾಷಣಕಾರರಾಗಿದ್ದರು. ಕೀರ್ತನೆಗಳ ಸ್ಪರ್ಧೆಯ 8 ಮಕ್ಕಳಿಗೆ ಬಹುಮಾನ ವಿತರಣೆ, ಚಂದ್ರಹಾಸ ಅಂತಿ-ಯಕ್ಷಗಾನ ಕೃತಿಯ ಮುದ್ರಣಾರಂಭ ನಡೆದುವು. ಸಂದೇಶವಾಚನವನ್ನು ಮಾಡಿದ ಮೇಲೆ, ಶ್ರೀ ಶ್ರೀಧರಾಚಾರ್ಯರು ಕನಕದಾಸ-ಚಿತ್ರ-ಪ್ರಕಟಣೆ ಬಿತ್ತರಿಸಿದರು. ಶ್ರೀ ಎಚ್. ಸಂಜೀವರಾವ್, ಶ್ರೀ ಐ. ಕೆ. ನಾರಾಯಣ ರಾವ್ ಸಾಥಿಗಳಾಗಿದ್ದರು. ಪ್ರಾಚೀನ ವಸ್ತು ಸಂಗ್ರಹಪ್ರಿಯ ಶ್ರೀ ಕೆ. ವೆಂಕಟರಾಯಾಚಾರ್ಯರು ಧನ್ಯವಾದ ಸೂಚಿಸಿದರು.

ಕೀರ್ತನೆಗಳ ಸ್ಪರ್ಧೆ

ಸುರತ್ಕಲ್ಲು ವಿಜಯ ಸಾಹಿತ್ಯಮಾಲೆಯಿಂದ ನಡೆದ ಕೀರ್ತನೆಗಳ ಸ್ಪರ್ಧೆಯಲ್ಲಿ ಕುಮಾರಿ ಸಾವಿತ್ರಿ, ಕು. ಲೀಲಾವತಿ, ಕು. ಇಂದುಮತಿಯರು ಬಹುಮಾನಿತರಾಗಿದ್ದಾರೆ. ಶ್ರೀ ಪಿ. ಸಿ. ವಾಸುದೇವ ರಾವ್, ಶ್ರೀ ಐ. ಕೆ. ನಾರಾಯಣ ರಾವ್, ಶ್ರೀ ಎಚ್. ನಾಗೇಶ ರಾವ್ ತೀರ್ಮಾನಕರಾಗಿದ್ದರೆಂದು ತಿಳಿದುಬಂದಿದೆ.

"ಕಂಜಾಕ್ಷಿ ಕಲ್ಯಾಣ"

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ಅವರಿಂದ ವಿರಚಿತವಾದ "ಕಂಜಾಕ್ಷಿ ಕಲ್ಯಾಣ" ಎಂಬ ಕಥಾಭಾಗದ ಯಕ್ಷಗಾನ ಕೂಟವು ಕಳೆದ ದಿನಾಂಕ 28ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಶ್ರೀ ಕೃಷ್ಣ ನ್ಯಾಕರ ವ್ಯವಸ್ಥಾಪಕತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸರ್ವಶ್ರೀ ಕೀ. ಪ. ಕೇಶವ, ಬಂದ್ಯಡ್ಕ ಅಣ್ಣಯ್ಯ ಗೌಡ, ಹಳೆಮನೆ ರಾಮಯ್ಯ ಗೌಡ (ಹಿಮ್ಮೇಳ), ನಾರಾಯಣ ನಾಯಕ್ ಮಾಸ್ತರ್, ಡಾ। ವಿಷ್ಣುವಿನೋದ ಭಟ್, ಅಣ್ಣಯ್ಯ ಭಂಡಾರಿ, ಕಲ್ಲಡ್ಕ ಬಾಬು ರೈ, ಮಾಸ್ತರ್ ಸಾಂತಪ್ಪ, ಗೋಪಾಲಕೃಷ್ಣ ಭಟ್, ರಾಮು ಪಾಟಾಳಿ, ಶೀನಪ್ಪ ಗೌಡ, ಸಾಂತಪ್ಪ ರೈ, ರಾಧಾಕೃಷ್ಣ ರೈ (ಅರ್ಥವಿವರಣೆ) ಮೊದಲಾದವರು ಭಾಗವಹಿಸಿದ್ದರು.

ಸುಳ್ಯ ತಾ। ಬೋ। ಅಧ್ಯಕ್ಷ ಚುನಾವಣೆ

ಸುಳ್ಯ ತಾಲೂಕು ಬೋರ್ಡಿನ ಅಧ್ಯಕ್ಷರಾಗಿ ಶ್ರೀ ಜಿ. ಪರಮೇಶ್ವರ ಮತ್ತು ಉಪಾಧ್ಯಕ್ಷರಾಗಿ ಶ್ರೀ ಬಿ. ಕಿಟ್ಟಣ್ಣ ರೈ ಇವರು ಅವಿರೋಧವಾಗಿ ಚುನಾಯಿಸಲ್ಪಟ್ಟಿದ್ದಾರೆ.

ವಿಟ್ಲ ಹೈಯರ್ ಸೆಕೆಂಡರಿ ಶಾಲಾ ವರ್ಧಂತ್ಯುತ್ಸವ

ವಿಟ್ಲ ಹೈಯರ್ ಸೆಕೆಂಡರಿ ಹಾಗೂ ಬಾಲಿಕಾ ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಜಂಟಿ ವರ್ಧಂತ್ಯುತ್ಸವವು ಇತ್ತೀಚೆಗೆ ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ನಾರಾಯಣ ಭಟ್ಟರು ಸ್ವಾಗತಿಸಿ, ವಿಟ್ಲ ಕ್ಷೇತ್ರದ ಐತಿಹಾಸಿಕ ಹಿನ್ನೆಲೆಯನ್ನು ಪರಿಚಯ ಮಾಡಿಕೊಟ್ಟರು. ಶ್ರೀ ಎನ್. ತ್ಯಾಗರಾಜರು ಸಂದೇಶಗಳನ್ನು ಓದಿದರು. ಹಳೆ ವಿದ್ಯಾರ್ಥಿ ಶ್ರೀ ಎಂ. ಜನಾರ್ದನ ಮಲ್ಯರು ಶಿ. ಲಂ. ಶ ಭಾ. ಶಂಸನೆ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಸಿ. ಕೃಷ್ಣ ಶಾಸ್ತ್ರಿ ಮತ್ತು ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ಜಿ. ನಿರ್ಮಲಾ ಶೆಣೈ ಇವರು ತಮ್ಮ ತಮ್ಮ ಶಾಲೆಗಳ ಪ್ರಗತಿಪರವಾದ ವರದಿಗಳನ್ನು ಸಭೆಯ ಮುಂದಿಟ್ಟರು. ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನವಿತರಣೆ ನಡೆಯಿತು. ಅಧ್ಯಕ್ಷರು ಕೊಡಗು ತುಳುನಾಡಿನ ಭವ್ಯಪರಂಪರೆಯನ್ನು ಶ್ಲಾಘಿಸುತ್ತಾ, ಕನ್ನಡ ನುಡಿ, ಅದರ ಬೆಳವಣಿಗೆ ಹಾಗೂ ಉದಾತ್ತ ಸಂಸ್ಕೃತಿಯನ್ನು ಸೊಗಸಾಗಿ ಮನಮುಟ್ಟುವಂತೆ ವಿವರಿಸಿದರು. ಶ್ರೀ ಎಸ್. ಸುಬ್ರಹ್ಮಣ್ಯ ಭಟ್ಟರು ಧನ್ಯವಾದ ಸಮರ್ಪಿಸಿದರು. ಬಳಿಕ ಮನೋರಂಜನಾ ಕಾರ್ಯಕ್ರಮಗಳಾದುವು.

ವಿಟ್ಲ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ವಿಟ್ಲ ಹೈಯರ್ ಸೆಕೆಂಡರಿ ಶಾಲಾ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇತ್ತೀಚೆಗೆ ಪುತ್ತೂರು ಬೋರ್ಡ್ ಹೈಯರ್ ಸೆಕೆಂಡರಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಂ. ಅಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಪದ್ಮನಾಭ ಕೆದಿಲಾಯರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಪಿ. ಎಸ್. ಶೆಟ್ಟಿಗಾರರು ಸಂಘದ ವಾರ್ಷಿಕ ವರದಿಯನ್ನು ಓದಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನವಿತರಣೆಯಾದ ಬಳಿಕ ಅಧ್ಯಕ್ಷರು ಮಾತನಾಡಿ, ಶಾಲಾ ಭಿವೃದ್ಧಿಯ ಸತ್ಕಾರ್ಯದಲ್ಲಿ ಹಳೆವಿದ್ಯಾರ್ಥಿಗಳ, ಪಾಲಕರ, ಶಿಕ್ಷಕರ, ಹಾಗೂ ಬಾಲಕರ ಪಾತ್ರ, ಕರ್ತವ್ಯ ಮತ್ತು ಹೊಣೆಗಾರಿಕೆಗಳನ್ನು ವಿವರಿಸಿ, ಸಂಸ್ಥೆಗೆ ಶುಭಕೋರಿದರು. ಹಳೆವಿದ್ಯಾರ್ಥಿಗಳಿಂದ ವಿವಿಧ ನಾಟಕಗಳೂ ಹಾಸ್ಯಗಳೂ ಸೊಗಸಾಗಿ ಜರಗಿದವು.

ನೇಮಕ

ಹಾಸನದಲ್ಲಿ ವಕೀಲರಾಗಿದ್ದ ಶ್ರೀ ಯಸ್. ಯಸ್. ರೈಗಳು ಬೆಳಗಾಂ ಜಿಲ್ಲೆಯ ಹುಕ್ಕೇರಿ ಎಂಬಲ್ಲಿಗೆ ಮುನಸೀಫರಾಗಿ ನೇಮಿಸಲ್ಪಟ್ಟಿರುತ್ತಾರೆಂದು ತಿಳಿದುಬರುತ್ತದೆ.

ಪುತ್ತೂರಿನ ಮಾಜಿ ಎ. ಪಿ. ಪಿ. ಶ್ರೀ ನಾಗಯ್ಯ ಶೆಟ್ಟಿ ಉ. ಕನ್ನಡದ ಸಿರಸಿ ಎಂಬಲ್ಲಿಗೆ ಮುನಸೀಫರಾಗಿ ನೇಮಿಸಲ್ಪಟ್ಟಿರುತ್ತಾರೆಂದೂ ತಿಳಿದುಬರುತ್ತದೆ.

ಕಳೆದ ವರುಷ ಮುನಸೀಫ ಪರೀಕ್ಷೆಯಲ್ಲಿ ದ. ಕನ್ನಡದಿಂದ ಪಾಸಾದವರು ಇವರು ಈರ್ವರಾಗಿರುತ್ತಾರೆ.

ಕೋಟಿ

ರೂಪಾಯಿ ಠೇವಣಿಯನ್ನು ಸಂಚಯಿಸಿದ ಸಿಂಡಿಕೇಟ್ ಬ್ಯಾಂಕಿನ ಅಪ್ರತಿಮ ಸಾಧನೆ ಈ ಬ್ಯಾಂಕಿನ ಇತಿಹಾಸದಲ್ಲೇ ಒಂದು ಪ್ರಮುಖ ಮೈಲಿಗಲ್ಲಾಗಿದೆ.

1967ರಲ್ಲಿ 80 ಕೋಟಿ ರೂಪಾಯಿ ಠೇವಣಿಯನ್ನು ಹೊಂದಿದ್ದ ಸಿಂಡಿಕೇಟ್ ಬ್ಯಾಂಕು 1968ರಲ್ಲಿ 113 ಕೋಟಿ ರೂಪಾಯಿಗೆ ತನ್ನ ಠೇವಣಿಯನ್ನು ಏರಿಸಿ 41 ಸೇಕಡಾ ಹೆಚ್ಚಳವನ್ನು ಸಾಧಿಸಿದೆ.

ಸಿಂಡಿಕೇಟ್ ಬ್ಯಾಂಕು ತನ್ನ ಅಸಂಖ್ಯಾತ ಮಂದಿ ಚಿಕ್ಕ, ದೊಡ್ಡ ಠೇವಣಿದಾರರಿಗೆ ಈ ಸಂದರ್ಭದಲ್ಲಿ ತನ್ನ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

FAITHFUL

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರತಿಯೊಂದು ಬ್ಯಾಂಕಿಂಗ್ ಸೇವೆಗೆ ಪ್ರತಿಯೋರ್ವನ ಬ್ಯಾಂಕು

ರಿಜಿಸ್ಟರ್ಡ್ ಆಫೀಸು :
ಮಣಿಪಾಲ, ಮೈಸೂರು ರಾಜ್ಯ

ಟಿ. ಎ. ಪೈ
ಚೆಯರ್‌ಮೆನ್

ಪ್ರಜಾರಾಜ್ಯ ವಿಶೇಷ ಸಂಚಿಕೆ

ಯನ್ನು ನಿರೀಕ್ಷಿಸಿರಿ!

ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ತ್ವರೆಯಾಗಿ ಕಳಿಸಿ ಸಹಕರಿಸುವಂತೆ ಕೋರಲಾಗಿದೆ.

ಪ್ರೇಮ ಮಾಡಿದ ವಂಚನೆ

[ಎರಡನೇ ಪುಟದಿಂದ]

ಸಂಜೆಯಾಗಲು ಸಲೀಮಳು ಸುಂದರವಾದ ಉಡುಗೆ-ತೊಡುಗೆಗಳನ್ನು ಧರಿಸಿ 'ದುಲ್ಹಾ ದುಲ್ಹನ್'ನಂತೆ ಅಲಂಕರಿಸಿ ಆತುರದಿಂದ ಚಕ್ರವರ್ತಿಯ ಆಗಮನವನ್ನೇ ಕಾಯುತ್ತಾ ಮಹಡಿಯ ಗ್ಯಾಲರಿಯಲ್ಲಿ ಕುಳಿತು ಹೊರಗೇ ನೋಡುತ್ತಾ ಇದ್ದಳು. ನಿಮಿಷ ನಿಮಿಷಕ್ಕೂ ಕನ್ನಡಿಯನ್ನು ನೋಡುತ್ತಾ, ಬಟ್ಟೆಗಳನ್ನು ಆಗಾಗ ಸರಿಪಡಿಸುತ್ತಾ, ಪುನಃ ಬಂದು ಪಕ್ಕದಲ್ಲಿ ಕುಳಿತುಕೊಳ್ಳುವಳು. ಗಂಟೆಗಳು ಉರುಳುತ್ತಾ ಹೋದರೂ ಬಾದಶಹನ ಆಗಮನದ ಸೂಚನೆಯೇನೂ ಕಂಡುಬರಲಿಲ್ಲ.

ಸಲೀಮಳ ಮನಸ್ಸಿಗೆ ಶಾಂತಿಯೇ ಇಲ್ಲದಾಯಿತು. ಬೇಸರ ಹಾಗೂ ಸಿಟ್ಟು ಅವಳಲ್ಲಿ ಉಂಟಾಯಿತು. ಜ್ಸೀನತ್‌ಳನ್ನು ಕರೆದಳು. "ಜ್ಸೀನತ್, ಬಾದಶಹರು ಇನ್ನೂ ಬಂದಿಲ್ಲ ನನಗೆ ಈಗ ಸಿಟ್ಟು ಬರುತ್ತಿದೆ. ವಿಶ್ರಾಂತಿ ನನಗೆ ಅವಶ್ಯವಿದೆ. ನೀನು ನಿನ್ನ ಆ ಪ್ರೀತಿಯ ಹಾಡನ್ನು ಹಾಡುವಿಯಾ? ಆ ಹಾಡಿನಿಂದ ನನಗೆ ಶಾಂತಿಯಿದೆ."

ಜ್ಸೀನತ್ ಹಾಡುತ್ತಾ ಇದ್ದಂತೆ ಸಲೀಮಳು ಅದರಲ್ಲೇ ಮೈಮರೆತಳು. ಇನ್ನೂ ಬಾದಶಹನ ಆಗಮನವಾಗಲಿಲ್ಲ. ದ್ರಾಕ್ಷಾರಸವನ್ನು ತರಿಸಿ ಕುಡಿದು ಅಲ್ಲಿಯೇ ಮಲಗಿ ನಿದ್ದೆ ಹೋದಳು.

ಈಗ ಜ್ಸೀನತ್ ಏಕಾಂತವಾಸದಲ್ಲಿರಬೇಕಾಯಿತು. ಮಲಗಿದ್ದ ಸಲೀಮಳ ಅಂಗಸೌಷ್ಠವವನ್ನ ದೃಷ್ಟಿಸುತ್ತಾ—ವರ್ಣಿಸುತ್ತಾ ಕುಳಿತಳು.

ಬೆಲೆಬಾಳುವ ವಸ್ತ್ರಗಳನ್ನು ಧರಿಸಿದ ಸಲೀಮಳು ನಿಜವಾಗಿಯೂ ಸುಂದರಿಯಾಗಿ ಕಾಣುತ್ತಿದ್ದಳು. ತಲೆ ಕೂದಲು ಅಂದವಾಗಿ ಬಾಚಲ್ಪಟ್ಟಿತ್ತು. ಅವಳ ಕಣ್ಣುಗಳು ಜಿಂಕೆಯ ಕಣ್ಣಿನಂತೆ ಸುಂದರವಾಗಿತ್ತು. ಕಪ್ಪಾದ ಹುಬ್ಬುಗಳು, ಮೃದುವಾದ ಅಂಗಾಂಗ, ಗುಲಾಬಿಯಂತಹ ಕೆನ್ನೆ—ಇವುಗಳನ್ನೆಲ್ಲಾ ಕಂಡು ಜ್ಸೀನತ್ ಕೂಡಾ ಮರುಳಾದಳು. ಅವಳ ಮುಖಕ್ಕೆ ಜ್ಸೀನತ್ ಮುತ್ತಿನ ಮಳೆಗರೆದಳು. ಅಷ್ಟರಲ್ಲಿಯೇ ಚಕ್ರವರ್ತಿಯು ಅಲ್ಲಿಗೆ ಬಂದನು. ಜ್ಸೀನತ್ ಭಯದಿಂದ ಎದ್ದು ಕುಳಿತು ಚಕ್ರವರ್ತಿ ಸುತ್ತ ತಿರುಗಿದಳು. ಅಷ್ಟರಲ್ಲಿ ಬಾಗಿಲಿನ ಬಳಿ ನಿಂತುಕೊಂಡು ಈ ಚುಂಬನದೃಶ್ಯವನ್ನು ನೋಡುತ್ತಾ ಇದ್ದನು. ಅದನ್ನು ಕಂಡು ಜ್ಸೀನತ್ ಚಕಿತಳಾದಳು.

ಬಾದಶಹನ ಮುಖ ನೋಡಲೂ ಅವಳಿಗೆ ಧೈರ್ಯವಾಗಲಿಲ್ಲ. ಆಗ ಕೋಪದಿಂದ ಕೆಂಡದಂತಾದ ಅಕ್ಬರನು— "ಏನು ನೀನು? ಈ ನಡು ರಾತ್ರಿಯಲ್ಲಿ ಇಲ್ಲಿ ಏನು ಮಾಡುತ್ತಿರುವೆ?" ಎಂದು ಅಬ್ಬರಿಸಿದನು.

ಜ್ಸೀನತ್ ಮೌನದಿಂದ ಬಾಡಿದ ಮುಖದಿಂದ ಎದ್ದು ನಿಂತಳು.

"ಸತ್ಯ ಹೇಳುವೆಯೋ ಇಲ್ಲವೋ! ಇಲ್ಲವಾದರೆ ನಿನ್ನನ್ನೀಗಲೇ ಸುಟ್ಟುಬಿಡುವೆ"

"ನಾನು.... ಒಬ್ಬ.... ನಾ...ನು....!"

ಎಂದು ಜ್ಸೀನತ್ ಹೇಳುವಷ್ಟರಲ್ಲಿ 'ಸಾಕು ...! ಮುಚ್ಚು ಬಾಯಿ! ನಂಬಿಕೆ ದ್ರೋಹದ ನಾಯಿ! ನಿನಗೆ ಈ ರೀತಿ ವರ್ತಿಸಲು ಅದೆಷ್ಟು ಧೈರ್ಯ?' ಎಂದು ಅಬ್ಬರಿಸಿದನಲ್ಲದೆ ಸೇವಕನೊಬ್ಬನನ್ನು ಕರೆಯಿಸಿ ಆತನನ್ನು ಬಂಧನದಲ್ಲಿರಿಸಿದನು.

ಮರುದಿನ ಬೆಳಿಗ್ಗೆ ಸಲೀಮಳು ಬೇಗನೇ ಎದ್ದಳು. ಆಗ ಕುಡಿದ ಅಮಲೆಲ್ಲಾ ಇಳಿದಿತ್ತು. ಅವಳು ಎದ್ದು ಸುತ್ತಮುತ್ತ ನೋಡಿದಳು. ಆದರೆ ಅವಳ ಪರಿಚಾರಿಕೆಯು ಯಾರೂ ಅಲ್ಲಿರಲಿಲ್ಲ. ಕಿಟಕಿ-ಬಾಗಿಲುಗಳೆಲ್ಲಾ ಮುಚ್ಚಲ್ಪಟ್ಟಿದ್ದವು.

ಸಲೀಮಳು ಬಾಗಿಲು ತಟ್ಟಿದಳು. ಆಗ ಒಬ್ಬಳು ಖಡ್ಗಧಾರಿಣಿಯಾದ ಹೆಂಗಸು ಅಲ್ಲಿ ಹಾಜರಾದಳು.

"ಇದೆಲ್ಲಾ ಏನು? ಹೀಗೇಕೆ ಇಲ್ಲಿ ಕಾಯುತ್ತಿರುವೆ?" ಎಂದು ಆಶ್ಚರ್ಯದಿಂದ ಸಲೀಮಳು ಕೇಳಿದಳು.

"ಚಕ್ರವರ್ತಿಯ ಆಜ್ಞೆಯಂತೆ ಇಲ್ಲಿರುವೆನು" ಸೇವಕಿ ಉತ್ತರಿಸಿದಳು.

'ಬೇಟೆಯಿಂದ ಬಾದಶಹರು ಬಂದಿರುವರೇ?' ಆಶ್ಚರ್ಯದಿಂದ ಸಲೀಮಳು ಪ್ರಶ್ನಿಸಿದಳು.

"ಹೌದು; ಅವರು ಬರುವಾಗ ರಾತ್ರಿ ತುಂಬಾ ಹೊತ್ತಾಗಿತ್ತು.'

"ಮತ್ತೆ ಈಗ ಎಲ್ಲಿದ್ದಾರೆ?'

"ಮೋತಿಮಹಲ್‌ನಲ್ಲಿದ್ದಾರೆ"

° ° °

ಹೌದು, ಮೋತಿಮಹಲ್! ಅಕ್ಬರನು ತನ್ನ ಸಂಬಂಧಿಕರ ಪೈಕಿ ರುಕ್ಸಯ್ಯಾ ಎಂಬವಳನ್ನು ವಿವಾಹವಾಗಿದ್ದನು. ಅವಳು ಮೋತಿಮಹಲ್‌ನಲ್ಲಿ ಇರುತ್ತಿದ್ದಳು.

ಎಷ್ಟು ದಿನಗಳಾದರೂ ಅಕ್ಬರನು ಸಲೀಮಳಿದ್ದಲ್ಲಿಗೆ ಬರಲೇ ಇಲ್ಲ. ಅವಳ ಯೋಗಕ್ಷೇಮ ವಿಚಾರಿಸುವುದಂತೂ ಇರಲಿ; ಅವಳ ಗಮನವೇ ಅವನಿಗಿರಲಿಲ್ಲ. ಇದರಿಂದ ಬೇಸರಗೊಂಡ ಸಲೀಮಳು ಬಾದಶಹನಿಗೊಂದು ಪತ್ರವನ್ನು ಬರೆದು ಸೇವಕನೊಂದಿಗೆ ಕಳುಹಿಸಿದಳು.

ಬಾದಶಹನು ಆ ಪತ್ರವನ್ನೋದಿ ಸಿಟ್ಟಿನಿಂದ ಹರಿಯುತ್ತಾ— 'ಇಷ್ಟು ದೊಡ್ಡ ತಪ್ಪನ್ನು ಮಾಡಿ, ಏನೂ ತಿಳಿಯದಂತೆ ಬರೆದಿದ್ದಾಳೆ! ನಾನು ನಿದ್ರಿಸಿದ್ದೆಂದ ತಪ್ಪಂತೆ. ಹೋಗಿ ಅವಳಿಗೆ ಸಾಯಲಿಕ್ಕೆ ಹೇಳು.'

ಇದನ್ನು ಕೇಳಿ ಸಲೀಮಳಿಗೆ ಆಶ್ಚರ್ಯವೂ ದುಃಖವೂ ಆಯಿತು. ತಾನು ಯಾವ ತಪ್ಪನ್ನು ಮಾಡಿದುದೆಂದು ತಿಳಿಯದಾಯಿತು. ಮತ್ತೊಂದು ಪತ್ರವನ್ನು ಹೀಗೆಂದು ಬರೆದಳು. 'ನನ್ನ ಜೀವನದ ದೇವರಿಗೆ, ಇವು ನನ್ನ ಅಂತ್ಯದ ಮಾತುಗಳು. ನಿಮ್ಮ ಬಾಯಿಯಿಂದಲೇ ಸಾಯಬೇಕೆಂದ ಆಜ್ಞೆ ಬಂದಿರಲು—ನಾನು ಸಾಯುವುದು ಖಂಡಿತ. ಆದರೆ ನಾನು ಸಾಯುವ ಮೊದಲು ನನ್ನದೊಂದು ವಿನಂತಿ. ನನ್ನ ಅಪರಾಧವೇನೆಂಬುದನ್ನು ತಿಳಿಸಿರಿ. ಅನಂತರ ನಾನು ಸುಖವಾಗಿ ಸಾಯುವೆನು.

'ಸಲೀಮ'

ಆ ಪತ್ರವನ್ನು ಕಂಡು—ಬಾದಶಹನು ಬಂಧನದಲ್ಲಿದ್ದ ಜ್ಸೀನತ್‌ನನ್ನು ಬಿಡಿಸಿ ಅವನನ್ನು ವಿಚಾರಿಸಿದನು. "ನಿನಗೆ ಖಂಡಿತ ದಂಡನೆಯಾಗುವ ಮೊದಲು ನಿನ್ನ ಕೊನೆಯ ಹೇಳಿಕೆಯನ್ನು ಹೇಳಿಬಿಡು."

ಜ್ಸೀನತ್ ವ್ಯಸನದಿಂದಲೇ ಹೀಗೆಂದನು—"ನಾನು ಸಲೀಮಳನ್ನು ಚಿಕ್ಕಂದಿನಿಂದಲೇ ಪ್ರೇಮಿಸುತ್ತಿದ್ದೆನು. ಅವಳು ದೊಡ್ಡವಳಾದ ನಂತರ ಅವಳನ್ನ ಭೇಟಿಯಾಗಲು ನನ್ನಿಂದ ಆಗಲಿಲ್ಲ. ನಿಮ್ಮನ್ನವಳು ವಿವಾಹವಾದ ನಂತರ ಅವಳು ನನ್ನನ್ನು ಮರೆತಳು. ಆದರೆ ನಾನು ಅವಳನ್ನು ಮರೆಯಲಿಲ್ಲ. ಅವಳು ಇಲ್ಲಿರುವಳೆಂದು ತಿಳಿದು ನಾನು ಈ ವೇಷ ಧರಿಸಿ ಬಂದು ನೀವಿಲ್ಲದ ವೇಳೆಯಲ್ಲಿ—ಸಲೀಮಳು ನಿದ್ರಿಸಿದ್ದಾಗ—ನನ್ನ ಪ್ರೇಮವನ್ನು ಬಚ್ಚಿಡಲಾಗದೆ, ಅವಳಿಗೆ ಮುತ್ತನ್ನು ಕೊಟ್ಟೆನು. ಈಗ ನನಗೆ ಯಾವ ಶಿಕ್ಷೆಯನ್ನು ಕೊಟ್ಟರೂ ನಾನು ಸಂತೋಷದಿಂದಲೇ ಅನುಭವಿಸುವೆನು." ಎಂದುದಾಗಿ ಹೇಳಿದನು.

"ಸಲೀಮಳಿಗೆ ನೀನು ಗಂಡಸೆಂದು ತಿಳಿದಿದೆಯೇ?"

"ಇಲ್ಲ. ಅವಳಿಗೆ ಏನೂ ತಿಳಿಯದು."

ತಕ್ಷಣವೇ ಬಾದಶಹನು ಸಲೀಮಳ ಹತ್ತಿರ ಧಾವಿಸಿದನು. ಸಲೀಮಳು ವಿಷ ಸೇವಿಸಿ ಕೊನೆ ಉಸಿರನ್ನೆಳೆಯುತ್ತಿದ್ದಳು. ಬಾದಶಹನನ್ನು ಕಂಡು ಮೆಲ್ಲನೆ ನಗುತ್ತಾ ಏಳಲು ಪ್ರಯತ್ನಿಸುತ್ತಾ— 'ಪತಿದೇವಾ, ನನಗೆ ಇನ್ನೇನೂ ಬೇಡ; ನನ್ನ ಅಪರಾಧವೇನೆಂದು ತಿಳಿಯಬೇಕು. ಅದಕ್ಕಾಗಿಯೇ ನಾನು ಈ ತಪ್ಪನ್ನು ಮಾಡಿದೆ"

"ಸಲೀಮಾ, ಆ...ಸಖಿ—ಸಂಗೀತಗಾರ್ತಿ—ಗಂಡಸೆಂದು ನಿನಗೆ ತಿಳಿದಿದೆಯೇ? ಅವಳು ಹೆಂಗಸಲ್ಲ. ಅದು ಜ್ಸೀನತ್ ಎಂದು ದುಃಖದಿಂದಲೇ ಅಕ್ಬರನು ಅವಳ ಸಮೀಪ ಕುಳಿತು ಕೇಳಿದನು.

"ಹಾಗಿದ್ದರೆ, ನಿಮ್ಮಿಂದ ಕೊಡಲ್ಪಡುವ ಯಾವ ಶಿಕ್ಷೆಗೂ ನಾನು ಅರ್ಹಳು. ನಾನಿನ್ನು ಹೇಳಲಾರೆ. ನಿಮ್ಮ ಕ್ಷಮೆಯನ್ನು ಕೋರುವೆನು. ಕ್ಷಮಿಸಿರಿ" ಸಲೀಮಳು ಉಸಿರಾಟವನ್ನು ನಿಲ್ಲಿಸಿದಳು.

ಚಕ್ರವರ್ತಿಯು ದುಃಖದಲ್ಲಿ ಮುಳುಗಿದನು. ತನ್ನ ಅನ್ಯಾಯಕ್ಕಾಗಿ [illegible] ದೇವರಲ್ಲಿ ಹಲವು ವಿಧದಲ್ಲಿ ಮೊರೆಯಿಟ್ಟನು.

ತನ್ನ ಪಾಡಿಗೇ ಅಕ್ಬರನು [illegible] ದನು.

(ಇಂಗ್ಲಿಷ್‌ನಿಂದ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಕೂಡಿದ ಭೋಜನ, ಸಕಲ ವಿಧದ ತಿಂಡಿತಿನಿಸುಗಳು
ಪಾರ್ಟಿಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4.65-66 dated 26—4—1966.

Registered with the Registrar of News Papers for India under No. R. N. 3546/'57

REGD: No: B. G: 176
LICENCE No. 31
Licensed to Post without Prepay men[t]

ನಾಗರ ಬುಸ್ಸೆಂದಿತು

ನಾಗರ ಕೋಯಿಲ್-

ತಮಿಳುನಾಡಿನ ದಕ್ಷಿಣದಲ್ಲಿರುವ ಈ ನಾಗರಕೋಯಿಲ್‌ನಲ್ಲಿ ಮರು ಚುನಾವಣೆ—

ಎರಡು ವರ್ಷಗಳಿಗೆ ಮೊದಲು ಆಯ್ಕೆಯಾದ ಕಾಂಗ್ರೆಸ್ ಅಭ್ಯರ್ಥಿ ಮೃತ್ಯುವಶನಾದುದರಿಂದ.

ಕಾಮರಾಜರನ್ನು ಮತ್ತೆ ಕೇಂದ್ರ ರಾಜಕೀಯಕ್ಕೆ ತರಬೇಕು—ಎಲ್ಲರಿಗಿಂತ ಹೆಚ್ಚು ನಿಜಲಿಂಗಪ್ಪನವರಿಗೆ ಆಸೆ. ಸ್ವಂತ ಮತದಾರ ಕ್ಷೇತ್ರ ವಿರುದ್ಧ ನಗರ ಅವರಿಗೆ ವಿರುದ್ಧವಾಗಿ ನಿಂತಿತ್ತು.

ನಾಗರಕೋಯಿಲ್ ಅವರ ವಿರೋಧಿಗಳಿಗೆ ನಾಗರವಾಗುತ್ತದೆಂದು ಖಾತ್ರಿಯಾದ ನಂತರವೇ ಕಾಮರಾಜರು ತಮ್ಮ ನಿರ್ಧಾರವನ್ನು ಘೋಷಿಸಿದರು.

—ಕಾಮರಾಜರು ಕಾಂಗ್ರೆಸ್ ಅಭ್ಯರ್ಥಿಯಾದರು.

ಡಿ ಎಂ ಕೆಗೆ ನುಂಗಲಾರದ ತುತ್ತು. ಸ್ವತಂತ್ರ ಪಕ್ಷದ ಮುಖಂಡರಿಗೆ ತನ್ನ ಸಚಿವ ಸಂಪುಟದ ಪೂರ್ಣ ಬೆಂಬಲ ಘೋಷಣೆ— ಕಾರ್ಯಾಚರಣೆ — ನಾಗರಕೋಯಿಲ್ ಕಾಂಗ್ರೆಸ್, ಮತ್ತು ಡಿ ಎಂ ಕೆ ಬೆಂಬಲಿತ ಸ್ವತಂತ್ರ ಪಕ್ಷಕ್ಕೆ ಪ್ರತಿಷ್ಠೆಯ ಚುನಾವಣೆ

ಉಳಿದವರು—ಕಮ್ಯೂನಿಸ್ಟ್ ಒಬ್ಬರು, ಸರ್ವಸ್ವತಂತ್ರರು ಮೂವರು—ಸೋಲೂ ಗೆಲವೂ ಏಕಪ್ರಕಾರವಾಗಿರುವ ಇವರಿಗೆ ಚುನಾವಣೆಯು ಪ್ರತಿಷ್ಠೆಯದೂ ಅಲ್ಲ— ಅಪ್ರತಿಷ್ಠೆ ತರುವಂತಹದ್ದೂ ಅದಲ್ಲ— ಚುನಾವಣೆ ಚುನಾವಣೆಗಾಗಿ; ಸ್ಪರ್ಧೆ— ಪ್ರಜಾಪ್ರಭುತ್ವದ ಬೆಳವಣಿಗೆಗಾಗಿ.

ಕಾಂಗ್ರೆಸ್-ಡಿಎಂಕೆ ಕಾದಾಟ, ಬಡಿದಾಟ, ಕೆಲವರಿಗೆ ಗಾಯ, ವಾಹನಗಳಿಗೆ ತೂರಾಟ...... ಒಬ್ಬನ ಮೃತ್ಯು....

—ಈ ದುರದೃಷ್ಟ ಡಿಎಂಕೆ ಕಾರ್ಯಕರ್ತ.

—ಅನಂತರ ಸ್ಮಶಾನ ಯಾತ್ರೆ ಶಾಂತಿಯುತವಾಗಿಯೇ ನೆರವೇರಿತು. ಇದನ್ನೇ 'ಸ್ಮಶಾನ ಗಾಂಭೀರ್ಯ,' 'ರುದ್ರ ಮೌನ' ಎಂಬ ವಿಶೇಷಣಗಳಿಂದ ಕರೆಯುವುದು ತಾನೆ?

ಚುನಾವಣಾ ಮುಖ್ಯ ಕಮಿಶನರ್ ಸೇನ್ ಗುಪ್ತರು ನಾಗರಕೋಯಿಲಿಗೆ ಹಾರಿ ಬಂದರು-ಕಲೆಕ್ಟರರು ಘರ್ಷಣೆ ನಡೆಯದಂತೆ ಎರಡೂ ಕಡೆ ಹೊಂದಾಣಿಕೆ ಸಾಧಿಸಿದರು, ಮೂಕತೆ ಸಾರ್ಥಕವಾಯ್ತು. ಪರಿಣಾಮ?

ಚುನಾವಣೆಯ ಪ್ರಚಾರದ ವೈಖರಿ ಇದೀಗ ಮತ್ತೆರಡು ವರ್ಷಗಳನ್ನು ಮುಂದುವರಿದಿದೆ. ಜವಾಹರರ ಕಾಲದಲ್ಲಿ ಶಾಂತಿ ಮನೆಮಾಡಿತ್ತು. ಎರಡು ವರ್ಷಗಳ ಹಿಂದೆ ಕಲ್ಲು ಚಪ್ಪಲಿಗಳ ತೂರಾಟಕ್ಕೆ ಆರಂಭವಾಯಿತು. ಇದೇ ಈಗ ಕೊಲೆ ಮಾಡುವವರೆಗೆ ಮುಂದುವರಿದಿದೆ—ಚುನಾವಣೆಯ ಗೌರವ—ಪ್ರತಿಷ್ಠೆಗಳನ್ನು ಕಡಿಮೆ ಪಕ್ಷ ಕಾರ್ಯಕರ್ತರಾದರೂ ಕಂಡುಕೊಂಡಿದ್ದಾರೆ. ಆದರೂ ಒಂದು ದುಃಖ.

ನಮ್ಮ ಸುವಿಸ್ತೃತ ಪ್ರಜಾ ಪ್ರಭುತ್ವವು ನಿಷ್ಪಕ್ಷಪಾತ ಚುನಾವಣೆಗಳಿಗೆ ಹೆಸರಾದದ್ದು. ಈಗ ಅದಕ್ಕೆ ಕಳಂಕತರುವ ದುರ್ಘಟನೆಗಳಿಗೆ ನಾಂದಿ— ಇದು ಹಳಬರ ಅಂಬೋಣ.

ಹೃದಯ ಪಕ್ಷಕ್ಕಿಂತ ಬುದ್ಧಿ ಪಕ್ಷಕ್ಕೆ ಮಹತ್ವ ನೀಡುವ ಭವ್ಯ ಪಂಪಾಟವೇ ಇದಕ್ಕೆ ಕಾರಣವಿರಬಹುದೆ? ಕೋಯಿಲ್‌ನ ನಾಗನೇಕೆ ಬುಸ್ಸೆಂದಿತು?

ಮಂತ್ರಿಗೆ ಮಜಾ — ಮಹಂತಗೆ ವಜಾ

ಬರೆದವರು: ಶ್ರೀ ಶಿವಶಂಕರ

ಆಂಧ್ರಪ್ರದೇಶದಲ್ಲಿರುವ ಮಹಾ ಪವಿತ್ರ ಕ್ಷೇತ್ರ ತಿರುಪತಿ. ಅಲ್ಲಿರುವ ಓರ್ವ ಮಹಂತರ ಹೆಸರು ಶ್ರೀ ದಿವ್ಯದರ್ಶನ ರಾಜೇಂದ್ರ ರಾಮದಾಸಜೀ. ಅವರನ್ನು ಆಂಧ್ರದ ಹಿಂದೂ ಮತೀಯ ವರ್ಷಾಶನಾಧಿಕಾರಿಯು ಆ ಸ್ಥಾನದಿಂದ ತೆಗೆದು ಹಾಕಿದರು, ಅಧಿಕಾರಿಯು ಹೊರಿಸಿರುವ ಆರೋಪವೆಂದರೆ, ಕುದುರೆ ಓಟ (ರೇಸ್ ಕೋರ್ಸಿನಲ್ಲಿ) ನಡೆಯುವಲ್ಲಿ ಅವರು ಕೆಮರಾದಲ್ಲಿ ಫೋಟೋ ತೆಗೆಯುತ್ತಿದ್ದರು. ಕುದುರೆ ಓಟ ಒಂದು ರೀತಿಯ ಜೂಜು ಇದೆ. ಮತೀಯ ದೃಷ್ಟಿಯಲ್ಲಿ ಜೂಜು ಮಹಾಪರಾಧವಿದೆ. ರಾಜಾಧಿರಾಜರು ಜೂಜಾಡಿದುದರ ಫಲವಾಗಿ ಪಡಬಾರದ ಕಷ್ಟಗಳನ್ನು ಪಡೆದಿರುವರು. ಯೇಸು ಜೂಜಾಡುತ್ತಿದ್ದವರಿಗೆ ಹೊಡೆದಿದ್ದನೆ. ಖುರಾನಿನ ಕೋನದಿಂದಲೂ ಜೂಜು ಅಪರಾಧವಿದೆ. ಕಾಡಿಕ, ಜೂಜು, ವ್ಯಭಿಚಾರ, ಕಳ್ಳತನ.... ಹೀಗೆ ಪಟ್ಟಿ ಬೆಳೆಯುತ್ತದೆ. ಮತೀಯ ಮಂದಿಗಳು ರೇಸ್ ಕೋರ್ಸಿನಲ್ಲಿ ಭಾಗವಹಿಸುವದು ಅಕ್ಷಮ್ಯ ಅಪರಾಧವಿದೆ. ಬಡಜನರ ಹಾಗೂ ಇತರ ಮುಗ್ಧ ಜನರ ಹಣವನ್ನು ಈ ರೀತಿ ವೈಯಕ್ತಿಕ ಉಪಯೋಗ ಭೋಗಕ್ಕಾಗಿ ದುಂದುವೆಚ್ಚ ನಡೆಸುತ್ತಿರುವವರಿಗೆ ಸಾಧಾರಣ ಶಿಕ್ಷೆ ಸಾಲದು. ಅಖಿಲ ಜಗತ್ತಿಗೆ ಧಾರ್ಮಿಕ ಗುರುವಾಗಿದ್ದ ಭಾರತವನ್ನು ಧಾರ್ಮಿಕ ಅಂಧ ಶ್ರದ್ಧ[ೆಯ]
ಆಗರವನ್ನಾಗಿ ಮಾಡಿದವರು ಇಂ[...]
ಕೆಲ ಮತೀಯ ಮುಂದಾಳುಗಳೇ [...]
ಜನರಿಗೆ ಮತೀಯ ಹಾಗೂ ನೈ[...]
ವಿಷಯಗಳನ್ನು ಬೋಧಿಸಲಿಕ್ಕಾಗಿ [...]
ರು ಇದ್ದಾರೆಯೋ ಅವರೇ ಆ ರೀತಿ ವ[...]
ಸಿದಲ್ಲಿ ಮತವನ್ನು ಆ ಮದದ ನ[...]
ತರಿಂದ ಮಹೇಶ್ವರನೇ ಕಾಪಾಡಬೇಕು.

ಶ್ರೀ ಮಹಂತ ಮಹಾರಾಜರು [...]
ತದ ಅತ್ಯುಚ್ಚ ನ್ಯಾಯಾಲಯದ [...]
ರಿಸಿದ್ದಾರೆ ಸರಕಾರದ ಅಧಿಕಾರಿ[...]
ಹೊರಿಸಿರುವ ಆರೋಪಕ್ಕೆ ಆಧಾರ[...]
ಇಲ್ಲ, ಅವು ಕಪೋಲ ಕಲ್ಪಿತ [...]
ನ್ನೆಂಬ ವಿಷಯ. ತಿರುಪತಿಯ ವೆಂ[ಕಟ]
ರಮಣನಿಗೇನೇ ಗೊತ್ತು.

ಆಂಧ್ರ ಪ್ರದೇಶದ ಮತೀಯ ದತ್ತಿ[...]
ರಿ ಸೂಚಿಸಿರುವ ರೇಸ್ ಕೋರ್ಸ್ [...]
ವದಲ್ಲಿ?—ಆಂಧ್ರದಲ್ಲೇ ಇದೆ. [...]
ಆಂಧ್ರ ಸರಕಾರದ ಉಗಾದಿ ನಲ್ಲಿದೆ [...]
ಕಾರವು ಜೂಜಿಗೆ ಪ್ರೋತ್ಸಾಹ ನೀ[...]
ಹುದು! ಇನ್ನು ಆಡಬಾರದು! ಹೇ[...]
ನ್ಯಾಯ? ರೇಸ್ ಮಂತ್ರಿಗೆ ಮಜಾ, [ಮ]
ಹಂತಗೆ ವಜಾ!

ಜೂಜು, ಕಡಿತ, ಸರೆ, ಡೈ [...]
ಇತ್ಯಾದಿಗಳಿಗೆ ಪ್ರೋತ್ಸಾಹ ನೀಡು[...]
ಮಂತ್ರಿ ಮಂಡಲವೇ ಇರುವದರಿಂದ[...]
ನಮ್ಮ ದೇಶದ ಗತಿ ಹೀಗಾಗಿರ[...]
ಧಿಕಾರ ಅಥವಾ ರಾಜದಂಡ ಆ [...]
ಬ್ರಹ್ಮದಂಡ ಈ ರೀತಿಯಾದಲ್ಲಿ ಸಾಮಾ[...]
ಜನರ ಸ್ಥಿತಿ ಹೇಳಬೇಕೇನು? ಅವ[...]
ರಕ್ಷೆ ಯಾರಿಂದ? ಶ್ರೀ ಕೃಷ್ಣನೇ [...]
ಬೇಕೇನು? ಬುದ್ಧನೇ ಬರಬೇ[...]
ಟ್ಟಮೇಲೆ, ಖಂಡಿತ ಸಾಧ್ಯವೇ[...]
ಸಂಸ್ಕೃತಿ ಅಲ್ಲಿಯ ವರೆಗೆ ಹೋಗಿಲ್ಲ [...]
ತೆ ಮನಸ್ಸು ಮಾಡಿದಲ್ಲಿ ಈಗಲೂ [...]
ರಿಸಿಕೊಳ್ಳಲು ಸಾಧ್ಯವಿದೆ. ಮಹಂತರ[...]
ದ ಸ್ಥಿತಿಯೇ ಮಂತ್ರಿ ಮಂಡಲಕ್ಕೂ [...]
ಬೇಕು. ಆಗ ಎಲ್ಲಾ ಸರಿಯಾಗುತ್ತ[...]
ಅದುವೇ ಧರ್ಮ ಜಾಗೃತ ಜನ ಜಾಗ[...]
ಪಡೆದಾಗ ಆಗಲು ಸಾಧ್ಯ. ಆಗ [...]
ಯೇ ರಾಷ್ಟ್ರ ರಕ್ಷಣೆಯಾಗುತ್ತದೆ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂ ಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ, 450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ, ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮಿತ ಕುಟುಂಬ ಯೋಜನೆ[ಗೆ]
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧನದ ವಿ[...]
ಮತ್ತು ಉಪಾಯಗಳನ್ನು ನಿರೂಪಿಸುವ ಕೃ[ತಿ]

ಬೆಲೆ 0-75 ಪೈಸೆ ಮಾತ್ರ.

0-90 ಪೈಸ M. O. ಮಾಡಿ, [...]
ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು
ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಬಾಲುಕೋಟೆ, ಉಡುಪಿ, ದ. [ಕ.]

Edited, Printed & Published by K. H. Shetty, at the Navayuga Press, Udipi, S. India.

ನವಯುಗ

REPUBLIC DAY SPECIAL 1969

೫೦
ಪೈಸೆ

UNEXPECTED GUESTS
ARE NO PROBLEM
IF YOUR KITCHEN SHELF

IS EQUIPPED WITH

**Coronet 'ANCHOR' Brand
Canned & Frozen Seafood**

CONTACT YOUR NEAREST STOCKISTS

**CORONET
CANNING COMPANY**

INDUSTRIALISTS & EXPORTERS

MALPE. SOUTH INDIA

TEL: "CORONET" MALPE

PHONE: 33, 34, 45 MALPE

ಪ್ರಜಾರಾಜ್ಯ ದಿನದ ಶುಭಾಶಯಗಳು

ಪ್ರಜಾರಾಜ್ಯ ವಿಶೇಷಾಂಕ ೧೯೬೯

ಫೋನ್ : 526 — 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೨೦
VOL. 48
No. 20

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

೧೯೬೯ನೆಯ ವರ್ಷದ ಪ್ರಜಾರಾಜ್ಯೋತ್ಸವದ ದಿನ ಈ ಹಿಂದಿನ ಎಲ್ಲ ದಿನಗಳಿಗೂ ವೈಶಿಷ್ಟ್ಯಪೂರ್ಣವಾದುದು. ಪ್ರಜೆಗಳು ತಮ್ಮನ್ನು ತಾವೇ ಆಳಿಕೊಳ್ಳುವ ಶಾಸನ ಪ್ರಣಾಳಿಕೆಯು ರಾಜ್ಯ ಪ್ರಜಾರಾಜ್ಯ. ಅಂದರೆ ಜನತೆಯ ಪ್ರತಿನಿಧಿಗಳ ಮೂಲಕ ಅರ್ಥಾತ್ ಜನಪ್ರಿಯ ಸರಕಾರಗಳ ನೇತೃತ್ವದಲ್ಲಿ ಆಡಳಿತೆ ನಡೆಯುವುದು ಪ್ರಜಾರಾಜ್ಯದ ಪರಿಪಾಠ. ಈ ಹಿಂದಿನ ವರ್ಷಗಳಲ್ಲಿಯೂ ಕೆಲವೊಮ್ಮೆ ಒಂದೊಂದು ರಾಜ್ಯದಲ್ಲಿ ಜನಪ್ರಿಯ ಸರಕಾರವಿಲ್ಲದೇನೇ ನಾವು ಪ್ರಜಾರಾಜ್ಯ ದಿನವನ್ನು ಆಚರಿಸಿ, ಪ್ರಜಾಪ್ರಭುತ್ವವೇ ಕೈಲಾಸವೆಂದು ಉದ್ಘೋಷಿಸಿದ್ದೂ ಇದೆ. ಆದರೆ ಈ ಬಾರಿಯದು "ನ ಭೂತೋ ನ ಭವಿಷ್ಯತಿ" ಎಂಬ ಮಾದರಿಯದೆನ್ನಬಹುದು.

ಸದ್ಯ ಪಶ್ಚಿಮ ಬಂಗಾಲ, ಬಿಹಾರ, ಉತ್ತರ ಪ್ರದೇಶ ಮತ್ತು ಪಂಜಾಬಗಳಲ್ಲಿ ಜನಪ್ರಿಯ ಸರಕಾರಗಳು ಅಧಿಕಾರದಲ್ಲಿಲ್ಲ; ಅಂದರೆ, ಅಲ್ಲಿ ರಾಷ್ಟ್ರಪತಿಗಳ ಆಡಳಿತೆ ನಡೆಯುತ್ತದೆ. ಅಲ್ಲಿ ಪ್ರತಿನಿಧಿ ಸರಕಾರಗಳು ಪತಿತವಾದುದರಿಂದ ರಾಷ್ಟ್ರಪತಿ ಆಳಿಕೆಯನ್ನು ಅಲ್ಲಿ ಹೇರುವುದು ಅನಿವಾರ್ಯವಾಯಿತು. ಪ್ರಜಾಪ್ರಭುತ್ವವನ್ನು ಈ ರಾಷ್ಟ್ರಪತಿ ಪ್ರಭುತ್ವವು ಮೆಟ್ಟನಿಲ್ಲುವಂತಹ ಪರಿಸ್ಥಿತಿ ತಲೆದೋರಿತು; ಅಂದರೆ, ಅಲ್ಲಿ ಪ್ರಜಾರಾಜ್ಯ ಸಂಪೂರ್ಣ ಅಸಫಲವಾಯಿತು ಎಂದೇ ಅರ್ಥ. ಒಂದು ರಾಜ್ಯದಲ್ಲಿ ಈ ಬಗೆಯ ಪರಿಸ್ಥಿತಿ ತಲೆದೋರಿದ್ದರೆ ಆ ಬಗ್ಗೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲವಿತ್ತು; ಭಾರತದಂತಹ ಸುವಿಶಾಲ ದೇಶದಲ್ಲಿ ೨೦ಕ್ಕೂ ಮಿಕ್ಕಿರುವ ರಾಜ್ಯ ಸಮುದಾಯದಲ್ಲಿ ಇದು ವಾಸ್ತವಿಕಕ್ಕೆ ಬಹು ದೂರವಲ್ಲವೆನ್ನಬಹುದಿತ್ತು. ಆದರೆ ಪಾಂಡಿಚೇರಿಯನ್ನೂ ನಾವು ಸೇರಿಸಿದಾಗ ಐದು ರಾಜ್ಯಗಳಲ್ಲಿ ಈಗ ರಾಷ್ಟ್ರಪತಿಗಳ ಅಧಿಕಾರ ನಡೆಯುತ್ತಿದೆ. ದೇಶದ ವಿಸ್ತೀರ್ಣದಲ್ಲಿ ಮೂರರಲ್ಲೊಂದು ಪಾಲು, ಜನತೆಯಲ್ಲಿ ಸುಮಾರು ಅರ್ಧಾಂಶದಷ್ಟು ಇಂದು ಪ್ರಜಾರಾಜ್ಯದಿಂದ ವಂಚಿತರಾಗಿದ್ದಾರೆ. ಇಂತಹ ಸಮಯದಲ್ಲಿ ನಾವು ಪ್ರಜಾರಾಜ್ಯ ದಿನವನ್ನು ಸರಳವಾಗಿಯೋ ವೈಭವಪೂರ್ಣವಾಗಿಯೋ ಆಚರಿಸುತ್ತೇವೆ. ಇದಕ್ಕಿಂತ ಹೆಚ್ಚಿನ ಖೇದದಾಯಕ ಪರಿಸ್ಥಿತಿ ಮತ್ತಾವುದಿದೆ?

ಪ್ರಜಾರಾಜ್ಯದ ಸಂರಕ್ಷಕರಾರು?

ರಾಷ್ಟ್ರಪತಿ ಆಡಳಿತೆಯು ಪ್ರಜಾತಂತ್ರಕ್ಕೆ ಕುಠಾರವೆಂಬುದು ಸರ್ವವಿದಿತ. ಆದರೆ, ರಾಜ್ಯದ ರಾಜ್ಯಕಾರಣವು ತೀರ ವಿನೋದದ ವೇದಿಕೆಯಾಗಿ, ಪ್ರಜೆಗಳ ನಿತ್ಯ ಜೀವಿತಗಳು ರಾಜ್ಯದ ಕಾನೂನು — ವ್ಯವಸ್ಥೆಗಳು ಸಂಪೂರ್ಣ ಅಲಕ್ಷಿತವಾದಾಗ ಅಲ್ಲಿ ರಾಷ್ಟ್ರಪತಿಗಳ ಮಧ್ಯಪ್ರವೇಶ ಅನಿವಾರ್ಯವೇ. ಈಗ ರಾಷ್ಟ್ರಪತಿ ಆಡಳಿತೆಯ ರೀತಿ ಎಲ್ಲೆಡೆಯೂ ನಡೆದುದು ರಾಜಕೀಯದ ವಿಡಂಬನೆ. ಅಲ್ಲಿ ಚುನಾಯಿತ ಪ್ರತಿನಿಧಿಗಳ ಸರಕಾರಗಳು ಸ್ಥಾಪಿತವಾಗಿದ್ದರೂ ಅವು ತಮ್ಮ ಸ್ವಾರ್ಥವನ್ನೇ ನೆನೆ ನೆನೆದು ರಾಜಕೀಯ ದ್ರೋಹವನ್ನು ಮಾಡಿ ಜನತೆಯನ್ನು ವಂಚಿಸಿದುವು. ಹಲವು ಸಮಗಾರರು ಸೇರಿ ಚರ್ಮ ಹದಗೊಳಿಸಿದಂತೆ ಸಂಯುಕ್ತ ವಿಧಾಯಕ ದಳದ ಹೆಸರಿನಲ್ಲಿ ನವಿಲ — ಸರ್ಪ, ಸಿಂಹ — ಜಿಂಕೆ ಅಧಿಕಾರ ಛತ್ರದಡಿಯಲ್ಲಿ ಆಶ್ರಯ ಪಡೆದುವು; ಅಧಿಕಾರ ಮೋಹ ಆರಂಭದಲ್ಲಿ ಪರಸ್ಪರ ಕಚ್ಚಾಟದಿಂದ ತಡೆದರೂ ನವಿಲು ನವಿಲೇ; ಸರ್ಪ ಸರ್ಪವೇ. ವಸಂತ ಕಾಲದಲ್ಲಿ ಕಾಗೆ ಕಾಗೆಯೇ, ಕೋಗಿಲೆ ಕೋಗಿಲೆಯೇ ಆಯಿತು.

ಇದೀಗ ಅಲ್ಲೆಲ್ಲ ಮಧ್ಯಾವಧಿ ಚುನಾವಣೆಗಳು ನಡೆಯಲಿವೆ. ಇದರ ಪರಿಣಾಮವೇನೆಂಬುದು ಈಗಲೇ ಹೇಳುವಂತಿಲ್ಲ. ಪಶ್ಚಿಮ ಬಂಗಾಳ ಮತ್ತು ಪಂಜಾಬುಗಳಲ್ಲಿ ಕಾಂಗ್ರೆಸ್ಸು ಬಹುಮತ ಪಡೆಯುವುದು ಕಷ್ಟಸಾಧ್ಯವೆಂದು ಕೆಲವು ರಾಜಕೀಯ ಧುರೀಣರ ಅಭಿಪ್ರಾಯ. ಹಾಗಾದರೆ ಆಗ ಮತ್ತೆ ಪ್ರಜಾಪ್ರಭುತ್ವಕ್ಕೆ ಕಡೆ. ಇನ್ನು ಮಧ್ಯಪ್ರದೇಶದಲ್ಲಿ ಗೋವಿಂದ ನಾರಾಯಣ ಸಿಂಗರ ಸಂ. ವಿ. ದಳದ ಸರಕಾರ ಬಹುಮತೀಯ ಸರಕಾರವಷ್ಟೇ ಹೊರತು ಅದು ಜನಪ್ರಿಯ ಸರಕಾರವೆನ್ನುವುದು ಸಾಧ್ಯವಿಲ್ಲ. ಶ್ರೀ ಸಿಂಗರು ರಾಜಕೀಯ ವೇದಿಕೆಯ ಮೇಲೆ ರಾಜಕೀಯ ನಾಟಕವನ್ನು ಅಭಿನಯಿಸುತ್ತ, ಜನತೆಯನ್ನು ಸಂಪೂರ್ಣ ಅಲ್ಲಗಳೆದಿದ್ದಾರೆ. 'ಕಾಂಗ್ರೆಸ್ ದ್ವೇಷ' ವೆಂಬ ಒಂದು ತತ್ವದ ಬಲದಿಂದ ಅಧಿಕಾರ ಮೋಹಿಗಳು ಅಧಿಕಾರದಲ್ಲಿ ಉಳಿಯಲು ಯಾವ ಪಾತ್ರವನ್ನಾದರೂ ಆಡಲು ಸಿದ್ಧರಾಗಿದ್ದಾರೆ. ಆದುದರಿಂದಲೇ ಗೋವಿಂದ ನಾರಾಯಣ ಸಿಂಗರು ರಾಷ್ಟ್ರಪತಿ ಆಳಿಕೆಯನ್ನು ತಡೆಯುವಲ್ಲಿ ಸಮರ್ಥರಾಗಿದ್ದಾರೆ. ಯಾರನ್ನೂ ಯಾವ ಕಾಲದಲ್ಲೂ ಮಂತ್ರಿಮಾಡುವ ಜಾದೂವಿನ ಬಲ ಅವರಲ್ಲಿ ಮಾತ್ರವೇ ಇದೆ.

ಕೇರಳದ ಕತೆ ಇದಕ್ಕೆ ಭಿನ್ನ. ಅಲ್ಲಿನ ನಂಬೂದರಿ ಸರಕಾರದ ಉದ್ದೇಶ ಕೇಂದ್ರವನ್ನು ಹಣ್ಣು ಮಾಡುವುದು; ಜನತೆಯನ್ನು ಉದ್ರೇಕಿಸುವುದು; ಕ್ರಾಂತಿಯನ್ನು ಪ್ರಚೋದಿಸಿ, ಅಶಾಂತಿಯನ್ನು ಹರಡಿಸಿ, ಅರಾಜಕತೆಯನ್ನು ನಿರ್ಮಿಸುವುದು. ಆಗ ಕೇಂದ್ರ ಸರಕಾರ ಅನಿವಾರ್ಯವಾಗಿ ನಡುವೆ ಪ್ರವೇಶಿಸಲೇಬೇಕಾಗುತ್ತದೆ. ಆದರೆ, ನಂಬೂದರಿಯವರ ಕಾಲುಕೆದರಿ ಜಗಳ ತೆಗೆಯುವ ಪ್ರವೃತ್ತಿಯನ್ನು ಕೇಂದ್ರವು ಸೂಕ್ಷ್ಮವಾಗಿ ಪರಿಶೀಲಿಸುತ್ತಲೇ ಇದೆ. 'ಅತ್ಯಂತ ಅನಿವಾರ್ಯ'ವೆನ್ನುವ ಪರಿಸ್ಥಿತಿ ಬರುವವರೆಗೆ ಅಲ್ಲಿ ನಂಬೂದರಿಯವರು 'ಜನಪ್ರಿಯ ಸರಕಾರ'ದ ನೇತಾರರಾಗಿದ್ದು ಜನರ ರಕ್ತ ಹೀರುತ್ತಲಿರಬಹುದು. ಪಶ್ಚಿಮ ಬಂಗಾಳವು ಕಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ನಂತರ ಒಂದು ವಧುವನ್ನೂ ಮತ್ತೊಂದು ವರನನ್ನೂ ದೇಶಕ್ಕೆ ನೀಡಿದೆ. 'ಘೇರಾವೋ ವಧು'ವಿನ ತೋಳತೆಕ್ಕೆಗೆ ಸಿಗದವರು ಯಾರು? ಈ ಬಂಗಾಳದ ತರುಣಿ ತವರ್ಮನೆಯಿಂದಲೇ ತೃಪ್ತಳಾಗದೇ ಕೇರಳದಲ್ಲೂ ವಿಹರಿಸಲಾರಂಭಿಸಿದಳು; ಸದ್ಯ ಇಡಿಯ ಭಾರತವೇ ಈಕೆಯ ವಿಹಾರಭೂಮಿಯಾಗಿದೆ; ಈಕೆಯ ಮುಂದೆ ತಲೆಬಾಗದವರು ಇಲ್ಲವೇ ಇಲ್ಲವೆಂದರೂ ಸಲ್ಲಬಹುದು. ಇನ್ನು 'ನಕ್ಸಲೀಯ ವರ'ನನ್ನು ಬಂಗಾಳದಿಂದ ಓಡಿಸುವ ಪ್ರಯತ್ನವೇನೋ ನಡೆಯಿತು. ಆತ ಕೇರಳದಲ್ಲಿ ಬಿಡಾರ ಮಾಡಿದ್ದಾನೆ; ತನ್ನ ದಸ್ಯುತನವನ್ನು ಮೆರೆದಾಡುತ್ತಿದ್ದಾನೆ. ಅಲ್ಲಲ್ಲಿ ಈತನ ಪ್ರತಿಮೂರ್ತಿಗಳೂ ಸಂಚರಿಸುತ್ತಿವೆ; ಆಂಧ್ರದಲ್ಲೂ ಈತನ ಪೀಡೆಗೆ ಆರಂಭವಾಗಿದೆ. ಈ ಭಯೋವರನ ವಿಹಾರ ಇಡಿಯ ದೇಶದಲ್ಲೂ ಇದೆಯೆನ್ನುವ ಜ್ಯೋತಿಷಿಗಳೂ ಇದ್ದಾರೆ. ಆದರೆ, ಈ ನವ ವಧು ಮತ್ತು ವರರಿಂದಾಗಿ ದೇಶದ ಪ್ರಜಾಶಕ್ತಿ ನಿರ್ನಾಮವಾಗುವುದ — ಈ ವರ್ಷ ನಕ್ಸಲೀಯ ಪಿಡುಗಿನ ಉಪದ್ರವವನ್ನು ಕಣ್ಣಾರೆ ಕಂಡ ಮೇಲೆ, ಈ ಬಗ್ಗೆ ತೀವ್ರ ಎಚ್ಚರಿಕೆಯುಳ್ಳಿರಬೇಕು.

ಸಮರ್ಥ ಸಬಲ ವಿರೋಧೀ ಪಕ್ಷವೊಂದರ ಅಭಾವವೇ ನಮ್ಮ ಹೆಚ್ಚಿನ ರಾಜಕೀಯ ಸಮಸ್ಯೆಗಳಿಗೆ ಮೂಲ. ನಮ್ಮಲ್ಲಿ ಮಳೆಗಾಲ ಕಳೆಯಂತೆ ರಾಜಕೀಯ ಪಕ್ಷಗಳ ಸಂಖ್ಯೆ ಹುಲುಸಾಗಿ ಬೆಳೆಯುತ್ತಿದೆ. ಹಿಂದೆ ಜಾತಿಗಳ ಬೆಳೆ ಬೆಳೆದುದರಿಂದ ನಮ್ಮ ಅಧೋಗತಿಯಾಯಿತು, ಇಂದು ಸಮನ್ವಯ ದೃಷ್ಟಿ ಬೇಕೆನ್ನುವ ನಾವು ರಾಜಕೀಯ ಪತನದಿಂದ ನಮ್ಮನ್ನು ಎತ್ತರಿಸಲು ಸೂಕ್ತ ಕ್ರಮ ಕೈಕೊಳ್ಳಬೇಕಾದುದು ಅತ್ಯಗತ್ಯ. ಇಲ್ಲವಾದರೆ ನಮ್ಮ ಪ್ರಜಾತಂತ್ರವನ್ನು ಯಾರು ಕಾಪಾಡಬೇಕು? ನಮ್ಮ ಕೈಯನ್ನು ನಾವೇ ಬಿಟ್ಟರೆ ಹಿಡಿದೆತ್ತುವವರಾರು?

ಹೃದ್ಗತ

"ನವಯುಗ"ದ ಈ ಪ್ರಜಾರಾಜ್ಯ ಸಂಚಿಕೆಯನ್ನು ಶುಭಾಶಯಗಳೊಂದಿಗೆ ನಿಮ್ಮ ಕೈಗಳಲ್ಲಿಡುತ್ತೇವೆ. ಕೆಲವು ಬರಹಗಾರರಿಂದ ಈ ವಿಶೇಷ ಸಂಚಿಕೆಗಾಗಿಯೇ ಲೇಖನಗಳನ್ನು ತರಿಸಿಕೊಂಡಿದ್ದರೂ ಅನಿವಾರ್ಯ ಕಾರಣಗಳಿಂದ ಅವನ್ನು ಅಳವಡಿಸಿಕೊಳ್ಳಲಾಗಲಿಲ್ಲವೆನ್ನಲು ವಿಷಾದಪಡುತ್ತೇವೆ.

ಈ ಸಂಚಿಕೆಯನ್ನು ಪ್ರಕಾಶಪಡಿಸುವಲ್ಲಿ ನೆರವಾದ ನಮ್ಮ ಲೇಖಕ ಬಳಗ, ಜಾಹೀರಾತುದಾರರು ಮತ್ತು ಹಿತೈಷಿಗಳ ಹೃತ್ಪೂರ್ವಕ ಸಹಕಾರವನ್ನು ಮನಸಾರೆ ನೆನೆಯುತ್ತೇವೆ. ಇವರೆಲ್ಲರ ನೆರವಿಗೂ ವಾಚಕರ ಸಹೃದಯತೆಗೂ ನಾವು ಕೃತಜ್ಞರಾಗಿದ್ದೇವೆ.

ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಪಾತ್ರ ಮಹತ್ವಪೂರ್ಣವೆಂಬುದನ್ನು ಅಲ್ಲಗಳೆಯುವಂತಿಲ್ಲವಾದರೂ, ಇಂದಿನ ದಿನಗಳು ದೊಡ್ಡ ಪತ್ರಿಕೆಗಳ ಅಸ್ತಿತ್ವಕ್ಕೆ ಮಾತ್ರ ಪರಿಪಕ್ವವಾಗಿವೆ. ಈ ದುಸ್ಥಿತಿ ದೂರವಾಗದೆ ಹೋದರೆ ಪ್ರಜಾರಾಜ್ಯದ ಒಂದು ಶಕ್ತಿಯು ಬಹುಭಾಗ ಕುಂಠಿತವಾಗುವುದು. ಹೀಗಾಗದಿರಲಿ; ಪ್ರಜಾಪ್ರಭುತ್ವ ಸುದೃಢವಾಗಿ ಬೆಳೆಯಲಿ ಎಂದು ಆಶಿಸುತ್ತೇವೆ.

ಆಮದಿನ ಅಂತ್ಯ ಗೀತೆ

ದೇಶದ ಅರ್ಥ ವ್ಯವಸ್ಥೆ ಬಲಗೊಳ್ಳ ಬೇಕಾದರೆ ವಿದೇಶೀ ವಿನಿಮಯವನ್ನು ಸಂಪಾದಿಸಬೇಕು ; ಇದಕ್ಕೆ ರಫ್ತು ಹೆಚ್ಚಿಸಿ ಆಮದನ್ನು ಕಡಿಮೆ ಮಾಡುವುದೇ ಉಪಾಯ.

ಚತುರ್ಥ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಿದೇಶೀ ಸಹಾಯದ ಅವಲಂಬಿಕೆಯನ್ನು ಶೇಕಡ 50ರಷ್ಟು ಕಡಿಮೆ ಮಾಡಬೇಕೆಂಬ ಕರಡು ಯೋಜನೆಯ ಧ್ಯೇಯೋದ್ದೇಶದಲ್ಲಿ ಯೋಜನಾ ಆಯೋಗ ವಿವರಿಸಿದೆ. "ಈ ಗುರಿಯ ಸಾಧನೆಗೆ ಆಮದು ಬದಲಿಕೆ ಮತ್ತು ರಫ್ತು ಸಂವರ್ಧನೆ ಎರಡು ಮುಖ್ಯ ಆಧಾರಗಳಾಗಿವೆ" ಎಂದು ಯೋಜನಾ ಆಯೋಗದ ಸದಸ್ಯ ಶ್ರೀ ಆರ್. ವೆಂಕಟರಾಮನ್ ಹೇಳಿದ್ದಾರೆ.

ವಿದೇಶೀ ವಿನಿಮಯದ ಮೇಲಿನ ಒತ್ತಡ ಸಡಿಲಿಕೆಗೆ ಹಾಗೂ ದೇಶದ ಕೈಗಾರಿಕಾ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಳ್ಳಲು ಆಮದು ಬದಲಿಕೆ ಅತಿ ಮುಖ್ಯ. ಇದು ದೇಶೀಯ ಬೇಡಿಕೆಯನ್ನು ಜಾಗೃತಗೊಳಿಸಿ ಸ್ಥಳೀಯ ಸಂಪನ್ಮೂಲ, ಪ್ರತಿಭೆಗಳಿಗೆ ಶಕ್ತಿ ಚಾಲನೆ ಮಾಡುತ್ತದೆ. ಕಳೆದ 15 ವರ್ಷಗಳಲ್ಲಿ ಬೆಳೆದಿರುವ ಕೈಗಾರಿಕಾ ಸಾಮರ್ಥ್ಯ ನಮಗೆ ಅಗತ್ಯವಾದ ಕೈಗಾರಿಕಾ ಸಲಕರಣೆ, ಮಧ್ಯವರ್ತಿ ಉತ್ಪನ್ನಗಳು ಹಾಗೂ ಗ್ರಾಹಕ ಸರಕುಗಳನ್ನು ಸರಬರಾಜು ಮಾಡುವಂತಹ ಕೈಗಾರಿಕಾ ಸಾಮರ್ಥ್ಯ ನೀಡಿದೆ. ದೇಶದಲ್ಲಿ ಸ್ಥಾಪಿಸಿರುವ ಇಂಜಿನಿಯರಿಂಗ್ ಕೈಗಾರಿಕೆಗಳ ಫಲವಾಗಿ ಸಲಕರಣೆಗಳ ಆಮದು ಕಡಿಮೆಯಾಗಿದೆ. ಅಧಿಕ ಪ್ರಮಾಣದ ಆಮದು ಬೇಡಿಕೆ ಯಂತ್ರ ಅಥವಾ ಸಿದ್ಧ ವಸ್ತುಗಳಿಗಾಗಿಲ್ಲ. ಕೈಗಾರಿಕೆಗಳ ಮುಂದ ವರಿಕೆಗೆ ಅಗತ್ಯವಾದ ಕಚ್ಚಾವಸ್ತುಗಳು, ಉಪಭಾಗಗಳು, ಬಿಡಿಭಾಗಗಳು ಮತ್ತಿತರ ವಸ್ತುಗಳ ಬಗ್ಗೆ ಆಮದು ಬೇಡಿಕೆಯಿತ್ತು.

ಏರುತ್ತಿರುವ ಆಮದು

ನಮ್ಮ ನಿಯೋಜಿತ ಅಭಿವೃದ್ಧಿಯ ಆರಂಭದಲ್ಲಿ ಬಿರುಸಾಗಿ ಏರಿದ್ದ ಯಂತ್ರಗಳ ಆಮದು 1965-66ನೇ ಸಾಲಿನಲ್ಲಿ 775 ಕೋಟಿ ರೂಪಾಯಿಯಿಂದ 1967-68 ನೇ ಸಾಲಿನಲ್ಲಿ 496 ಕೋಟಿ ರೂಪಾಯಿಗೆ ಇಳಿಯಿತು. ಇದೇ ಅವಧಿಯಲ್ಲಿ ಕೈಗಾರಿಕಾ ಕಚ್ಚಾ ವಸ್ತುಗಳ ಆಮದು 483 ಕೋಟಿ ರೂಪಾಯಿಯಿಂದ 568 ಕೋಟಿ ರೂಪಾಯಿಗೆ ಏರಿತು. ಚತುರ್ಥ ಯೋಜನೆಯ ಅವಧಿಯ ಅಧಿಕ ಕೈಗಾರಿಕಾ ಚಟುವಟಿಕೆಯಿಂದಾಗಿ ಈ ಆಮದಿನ ಪ್ರಮಾಣ ಏರುವ ಸಂಭವವಿದೆ. ಸಾಧಾರಣ ಅಂದಾಜಿನ ಪ್ರಕಾರ ಆಹಾರ ವಸ್ತು ಸೇರದಿರುವ ಆಮದು ಹಿಂದಿನ ಚತುರ್ಥ ಯೋಜನೆಯಲ್ಲಿ ಸುಮಾರು 7,700 ಕೋಟಿ ರೂಪಾಯಿಗಳಾಗುತ್ತವೆ. ಪೆಟ್ರೋಲಿಯಂ, ಉಕ್ಕು, ಕಬ್ಬಿಣೇತರ ಲೋಹಗಳು, ರಾಸಾಯನಿಕ ಗೊಬ್ಬರಗಳು, ಮುದ್ರಣ ಕಾಗದ, ಬಿಡಿಭಾಗಗಳು ಆಮದಿನ ಮುಖ್ಯ ವಸ್ತುಗಳಾಗುತ್ತವೆ. ಯಂತ್ರ ಸಲಕರಣೆಗಳ ಆಮದು ಸುಮಾರು 1,300 ಕೋಟಿ ರೂಪಾಯಿಗಳಾಗುವುದೆಂದು ನಿರೀಕ್ಷೆ.

ಸರ್ಕಾರ ಆಮದು ಬದಲಿಕೆಗೆ ಗಮನೀಯವಾದ ಶ್ರದ್ಧಾ ಶಕ್ತಿ ಬೀರಿದೆ. ಪಾಕಿಸ್ತಾನದ ಘರ್ಷಣೆಯ ನಂತರ ದೇಶದ ಸಂರಕ್ಷಣಾ ಕಾರ್ಯ ಮತ್ತು ಅರ್ಥ ವ್ಯವಸ್ಥೆಯನ್ನು ರಕ್ಷಿಸುವುದಕ್ಕಾಗಿ ಅಗತ್ಯವಾದ ಆಮದು ಸರಕುಗಳ ಅಗತ್ಯವನ್ನು ವಿಮರ್ಶಿಸಲು ವಿಶೇಷ ತಾತ್ಕಾಲಿಕ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿ ಅನೇಕ ಸಭೆಗಳನ್ನು ನಡೆಸಿ ಅಧ್ಯಯನ ಕೈಕೊಂಡಿತು.

1967ನೇ ಇಸವಿ ಆಗಸ್ಟ್ ಮಾಸದಲ್ಲಿ ಮೆಶೀನ್‌ಟೂಲ್ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಲಾಯಿತು. ಈ ಗೋಷ್ಠಿಯಲ್ಲಿ ಮೆಶಿನ್‌ಟೂಲ್ ತಯಾರಕರ, ಕೈಗಾರಿಕಾ ಯೋಜನಾಧಿಕಾರಿಗಳ ಸಮ್ಮಿಳನವಾಯಿತು. ಮುಂದಿನ ಎರಡು ಮೂರು ವರ್ಷಗಳಲ್ಲಿ ರೂಪಿಸುವ ವಿವಿಧ ಕೈಗಾರಿಕೆಗಳ ಪಟ್ಟಿ ತಯಾರಿಸಲು ಕೈಗಾರಿಕಾ ಯೋಜಕರಿಗೆ ಪ್ರಾರ್ಥಿಸಿಕೊಳ್ಳಲಾಯಿತು. ದೇಶದೊಳಗೇ ಸರಬರಾಜು ಮಾಡುವ ವಸ್ತುಗಳನ್ನು ಪತ್ತೆ ಮಾಡುವ ಬಗ್ಗೆ ಪರಸ್ಪರ ಚರ್ಚೆ ನಡೆಯಿತು. ಇದರ ಫಲವಾಗಿ 14ಕೋಟಿ ರೂಪಾಯಿ ವಿದೇಶೀ ವಿನಿಮಯ ರಕ್ಷಣೆ ಆಯಿತು. ಈ ವಿಚಾರಗೋಷ್ಠಿಯ ಫಲವಾಗಿ ಮೆಶೀನ್ ಟೂಲ್ ಕೈಗಾರಿಕೆಯಲ್ಲಿದ್ದ ಹಿಂಜರಿಕೆಯನ್ನು ಸ್ವಲ್ಪಮಟ್ಟಿಗೆ ಕಳೆಯಲು ಸಾಧ್ಯವಾಯಿತು.

ಹೊಸ ದಾಖಲೆ

ಅಧಿಕ ಪ್ರಮಾಣದಲ್ಲಿ ಸಿದ್ಧವಸ್ತುಗಳನ್ನು, ಯಂತ್ರಗಳನ್ನು ರಫ್ತು ಮಾಡಲು ಸರ್ಕಾರ ಗಮನ ಬೀರಿದೆ. ಹಿಂದೂಸ್ಥಾನ್ ಮೆಶೀನ್ ಟೂಲ್ಸ್ ಸಂಸ್ಥೆಯು ಅಮೇರಿಕಾದ ಷಿಕಾಗೋ ನಗರದಲ್ಲೂ, ಪಶ್ಚಿಮ ಜರ್ಮನಿಯ ಡಸ್ಸೆಲ್‌ಡಾರ್ಫ್‌ನಲ್ಲೂ ಉಪಶಾಖೆಗಳನ್ನು ಸ್ಥಾಪಿಸಿದೆ. ಇವು ಮಾರಾಟ ನಂತರದ ಸೇವೆ ಸಲ್ಲಿಸಲು ಸಜ್ಜಾಗಿವೆ. ಸರ್ಕಾರದ ಪ್ರಯತ್ನಗಳ ಫಲವಾಗಿ 1967-68ನೇ ಸಾಲಿನಲ್ಲಿ ಮೆಷೀನ್ ಟೂಲ್ಸ್‌ಗಳ ರಫ್ತಿನಲ್ಲಿ ಶೇಕಡ 25ರಷ್ಟು ಏರಿಕೆಯಾಯಿತು. ಇದೀಗ ಮುಕ್ತಾಯಗೊಂಡ ವರ್ಷದಲ್ಲಿ ದೇಶದ ರಫ್ತು ವ್ಯಾಪಾರ ಉತ್ತಮವಾಗಿತ್ತು. 1968ನೇ ಇಸವಿಯ

(ಮೂವತ್ತೊಂಭತ್ತನೇ ಪುಟ ನೋಡಿರಿ)

With best compliments from

V. R. BHAGWAT
Merchant & Agent, L. I. C.
SIRSI (N. K.)

ವ್ಹಿ. ಆರ್. ಭಾಗ್ವತ
ವ್ಯಾಪಾರಿಗಳು ಹಾಗೂ ಜೀವ-ವಿಮಾ ಏಜೆಂಟರು
ಶಿರಸಿ (ಉತ್ತರ ಕನ್ನಡ)

೧) ಅಡಿಕೆ, ಮೆಣಸು, ಯಾಲಕ್ಕಿ ವ್ಯಾಪಾರಿಗಳು
೨) ಕೋಕ ಕಿರಾಣಿ ಜೀನಸುಗಳ ವ್ಯಾಪಾರಿಗಳು
೩) ಏಜಂಟರು ಜೀವ ವಿಮಾ

ತಮ್ಮ ವೃದ್ಧ ಜೀವನಕ್ಕೆ ಮಕ್ಕಳ ಶಿಕ್ಷಣ ವ ಮದುವೆಗೆ ಕುಟುಂಬದ ಭದ್ರತೆಗೆ ನಮ್ಮ ದೇಶದ ಕಲ್ಯಾಣಕ್ಕೆ
ಜೀವ ವಿಮಾ ಉಳಿತಾಯವೇ
ಸರ್ವಶ್ರೇಷ್ಠ ಉಳಿತಾಯ

● ಜೀವ ವಿಮಾ ಸಂಬಂಧಿ ಸಲಹೆ, ಪಾಲಿಸಿದಾರರಿಗೆ ಸಾಲ ವಗೈರೆ ದೊರಕಿಸಿ ಕೊಡುವುದೇ ಮೊದಲಾದ ಸೇವೆಯನ್ನು ಉಚಿತವಾಗಿ ನೀಡಲಾಗುವುದು.

AGENTS for
Life & General Insurance
Licence: D-62771
Code No. 638632

Life Insurance Provides Money When You Need It Most

MODERN GARAGE
UDIPI
With
Service Station attached

Undertakes
Overhauling & Maintenance of BENZ Vehicles
By
Technically Qualified Benz Experts

Phone 65, 234 — Residence 180

ಗಾಂಧಿ ಲಹರಿ

ಕವಿ :— ಎಸ್ ತಿರುಮಲೇಶ್ವರ ಭಟ್, ವಿದ್ವಾನ್.

೧

ಭಾರತ ಭೂಮಿಯಲಿ ಜನಿಸುತಲಿ ಸಂದ ಗಾಂಧಿ
ಪುಣ್ಯಸ್ತೋತ್ರ
ದಾಸ್ಯಸಂಕಲೆಯನು ತೊಳೆದು ಸ್ವಾತಂತ್ರ್ಯವನು
ನೀಡಿದಾತ
ಸತ್ಯಶಾಂತ್ಯಹಿಂಸೆಗಳ ಸಂಗಮ ವಿರಾಜಮಾನ ಮೂರ್ತಿ
ಸ್ವಾಹಿನಿಯ ಲಹರಿಗಳು ಕೊಡಲಿ ಶಕ್ತಿಭಕ್ತಿ
ಸ್ಫೂರ್ತಿ !

೨

ಬಿಳಿಯರಾಳ್ವಿಕೆಯದಿ ಛಿನ್ನಕೋಲಗಾದ ಭಾರತವನು
ಕಂಡು,
ಶಾಂತಿರಣಾಂಗಣದೊಳಿಳಿಯೆ ಓಡೆ, ಜನ ಜವದಿ
ಜಾಗೃತಿಯನುಗೊಂಡು
ತತ್ವಸೂತ್ರದಲಿ ಶಾಂತಿರಣ ನಡೆಯಲಾಂಗ್ಲರಂದು
ಬಿಟ್ಟು ಭಾರತವ, ಕೊಟ್ಟು ಪೋದರಾ ಗಾಂಧಿ
ತತ್ವಸಿಂಧು !

೩

ಸ್ವಚೇತನವ ಜನರಿಗಿತ್ತಿರುವ ಗಾಂಧಿ ತತ್ವಲಹರಿ
ಜಾತಿಭೇದವನು ಕಳೆದು ಘೋಷಿಸಿತು ಜಗದೊಳೈಕ್ಯ
ಸಾರಿ
ಭಾರತಖಂಡವಿದು ಭಾರತೀಯರದು ಎಂಬ ದೇಶಭಕ್ತಿ
ಶಕ್ತಿ ಬೆಳೆಯಿಸಿತು ಜನರ ಹೃದಯದಲಿ
ಗಾಂಧಿತತ್ವಶಕ್ತಿ !

೪

ಸ್ವದೃಢವ ನಿರ್ಮೂಲನಗೆಯ್ದ ಗಾಂಧಿ ಪುಣ್ಯಪುರುಷ
ಸ್ಪರ್ಶಲೋಹವನು ತತ್ವ ಸ್ಪರ್ಶದಿ ಸುವರ್ಣಗೆಯ್ದ
ಪುರುಷ
ಸ್ವ ಸಿಂಗಾಲು ಮೆಟ್ಟಿದೆಲ್ಲೆಡೆಯು ನೆಲವದಾಯ್ತು
ಪಾವ
ನಿತಬಡ್ವಾರಗೈದ ಗಾಂಧಿ ಅವತರಿಸಿ, ಹರಸಿ ಕೋಟಿ !

೫

ಗಾಂಧಿ ತತ್ವಲಹರಿಗಳ ಮೇಲಿಂದ ಬೀಸಿ ಬಂದ ಗಾಳಿ
ಸ್ವಾರ್ಥಲಂಪಟತ್ವಾಯ ತಾಪವನು ಕಳೆಯೆ,
ಸೌಖ್ಯ ತಾಳಿ
ಸ್ವ ಮಾರ್ಗದಲಿ ಶಾಂತಿಸ್ಥಾನದಲಿ ಸಾಗಿ
ವಿಚ್ಛ ಪಯಣ

ಪಡೆವರಮರ ಸ್ವಾತಂತ್ರ್ಯ ಸುಖವ ಜನರಲ್ತೆ !
ಗಾಂಧಿ ಶರಣ !

೬

ಜನರೊಳಸ್ಪೃಶ್ಯರೆಂಬ ಭೇದವನು ಹರಿಸಿ ಹಿತವನುಯಿಸಿ
ಸಮತೆ ಸೌಜನ್ಯ-ಸಖ್ಯ ಸೌಹಾರ್ದದಿಂದ ಬಾಳ ಕಲಿಸಿ
ನವಸಮಾಜ ನಿರ್ಮಾಣಕಡಿಗಲ್ಲನಿಟ್ಟ ಗಾಂಧಿ ಶಿಲ್ಪಿ
ಅಮರವಾಯ್ತು ವರ ಧವಳ ಕೀರ್ತಿ ಹಿಮಗಿರಿಯ
ತುದಿಯ ನೆಟ್ಟಿ !

೭

ಸರಳ ಜೀವನವು ಸುಖಕೆ ಸಾಧನವು, ಖಾದಿ ಸುಖದ
ಹಾದಿ
ಎಂದು ಬೋಧಿಸಿದ ಗಾಂಧಿ ಆಚರಿಸಿ
ಕ್ರಾಂತಿಕಹಳೆಯೂದಿ
ಒಂದೆ ಧರ್ಮಮತವೊಂದೆ, ನುಡಿಯೊಂದೆ ಎಂಬ
ಗಾಂಧಿತತ್ವ
ತಂದುದಲ್ತೆ ಸ್ವಾತಂತ್ರ್ಯವದರಿಂದಲೇ ಪ್ರಜಾಪ್ರಭುತ್ವ !

೮

ಸತ್ಯ- ಪ್ರಾಮಾಣಿಕತೆಯ ಪಥದಿ ನಡೆಯುವುದೆ ತಾ
ಸ್ವರಾಜ್ಯ
ಮೋಹ-ಮತ್ಸರ-ದ್ವೇಷ- ಪರಹಿಂಸೆ-ದೋಷ
ದೂರ ತ್ಯಾಜ್ಯ
ಜನರು ನಿಃಸ್ವಾರ್ಥಿಗಳ, ವಿವೇಕಿಗಳು, ಕರ್ಮಶೀಲರಾಗಿ
ನಡೆಯುವಂತೆ ಬೋಧಿಸಿದ ಗಾಂಧಿ ತಾನಲ್ತೆ
ಕರ್ಮಯೋಗಿ !

೯

ಲಾಭಕಾಗಿ ಅನ್ಯಾಯವೆಸಗುವುದು ಘೋರಪಾತಕರವು
ಎಂದ ಗಾಂಧಿ ದುರ್ವ್ಯಾಪಾರಕ್ಕೆ ಮಹಾರಥಿಗಳ ಕಲಿಲ್ಲ
ಜಟವು
ಮಂತ್ರಿ—ಅಧಿಕಾರಿ ಮೇಲ್ ವರ್ಗದವರೆಲ್ಲರಾಗಿ ಗಾಂಧಿ
ತುಳಿದ ದಾರಿ
ಬಿಡದೆ ನಡೆದಂದು ರಾಮರಾಜ್ಯ ತಾನಹುದು
ಸೌಖ್ಯಕಾರಿ

೧೦

ಸುಪ್ತವಾಗಿರ್ದ ದೇಶಭಕ್ತಿ ಕಿಡಿಯನ್ನು ಜ್ವಲನಗೊಳಿಸಿ
ಭಾರತದಲಿ ಸ್ವಾತಂತ್ರ್ಯ ಯಜ್ಞ ನಡೆಯಿಸಿದ
ಗಾಂಧಿ ಮಹರ್ಷಿ
ಐಕ್ಯಮಂತ್ರದಿಂ ತ್ಯಾಗತಂತ್ರದಿಂ ಪಡೆದ ಫಲ ಸ್ವರಾಜ್ಯ
ವಿಶ್ವಬಂಧು ವಿಖ್ಯಾತನಾ ಗಾಂಧಿ ಅಮರಲೋಕ ಪೂಜ್ಯ!

[ಗಾಂಧಿ ಜನ್ಮಶತಾಬ್ದಿಯ ಆಚರಣೆಯ ಸಂದರ್ಭದಲ್ಲಿ
ಬರೆದೋದಿದ ಕವನ]

ಭಾರತದ ವೀರ

ಓ, ನನ್ನ ಬಾಂಧವರೆ, ಕೆಚ್ಚೆದೆಯ ಕಲಿಗಳೇ ಕೇಳಿ....

ಉತ್ತರದಿ ಎತ್ತರದ ಹಿಮಪರ್ವತದ ಮೇಲೆ
ಗಟ್ಟಿಯಾಗಿ ನಿಂತಿದೆ ಶತ್ರುಕೂಟವು ನೋಡಿ;
ಕತ್ತಿ ಮಸೆಯುತ್ತಿಹರು, ಬೆಂಕಿ ಕೊಳ್ಳಿಯ ಹಿಡಿದು,
ತೊತ್ತಾಗಿ ಬನ್ನಿರಿ ನೀವು ನಮ್ಮ ಎಂದು || ೧ ||

ಸಾರಿ ಹೇಳಿರಿ ನೀವು ಶತ್ರು ಕುರಿಕೂಟಕೆ
ಹಿರಿಯಾಸೆ ಬಿಡಿ ನಿಮ್ಮ ಜಗವನಾಳುವೆವೆಂಬ;
ಭಾರತಿಯ ವರಿಕಂದ ಸಾಕು, ನಿಮ್ಮ ಹಿಮ್ಮೆಟ್ಟಿಸಲು,
ಕರುನಾಡ ಕಡಲಲಿ ಮುಳುಗಿಹವನ ಬಲಗೈ-
ಯಾಗಿರಲು. || ೨ ||

ಕತ್ತು ಹೋಗುವ ತನಕ ಕೆಚ್ಚುಕೊಳಲಾರೆರೆಂದು
ಎತ್ತಿ ಕಟ್ಟಿದ ಕಚ್ಚೆ ಬಿಚ್ಚಲಾರೆವು ಎಂದು,
ಬತ್ತಲಾರವು ನಮ್ಮ ಕೆಚ್ಚೆದೆಯ ಬಿಸಿ ರಕ್ತ,
ಕಟ್ಟಕೊನೆಯುಸಿರ ಬಿಸಿಗಾಳಿಯಿರುವ
ತನಕ || ೩ ||

ಮೆಟ್ಟಲಾರಿರಿ ನಮ್ಮ ಭರತಮಾತೆಯ ನೆಲವ,
ಕಟ್ಟ ಹೋಗದಿರಿ ನಮ್ಮ ಕಣಕಿನ ಗುದು;
ಗಟ್ಟಿಮುಟ್ಟಾದ ಜನ ನಮ್ಮ ಭಾರತದಲಿಹರು
ಕಟ್ಟುನಿಟ್ಟಾಗಿಹರು ರಕ್ಷಿಸಲು ಭಾರತಿಯ || ೪ ||

ಶತ್ರುಜನ ಯಾರಿರಲಿ ಉತ್ತರದ ಎತ್ತರದಿ
ತತ್ತರಿಸಿ ನಡುಗಿಸುವ ಹಿಮ ಪರ್ವತದ ಗಡಿಲಿ,
ಕತ್ತಿ ಹಿಡಿದಿಹ ಶೂರ "ಭಾರತದ ವೀರ"
ನಿತ್ಯಲೂ ಇರುತಿಹನು ರಕ್ಷಿಸಲು ಭಾರತಿಯ || ೫ ||

—"ಶೈನಾಭ"

ನಮ್ಮ ಗ್ರಾಹಕರಿಗೂ
ಹಿತೈಷಿಗಳಿಗೂ
ಪ್ರಜಾರಾಜ್ಯ ದಿನದ
ಹಾರ್ದಿಕ ಶುಭಾಶಯಗಳು
ನವಭಾರತ ಪುಸ್ತಕ ಭಂಡಾರ
ಪ್ರಕಾಶಕರು ಹಾಗೂ ಪುಸ್ತಕ ವ್ಯಾಪಾರಿಗಳು,
ಪಾಲುಕೋಟಿ, ಉಡುಪಿ.

ಕಿರಿಯರ ಹಿರಿಯ ಕಾಣಿಕೆ

ಸುಖೀ ಜೀವನಕ್ಕೆ ನಾಂದಿ ಕುಟುಂಬಯೋಜನೆ. ಇದರ ಆವಶ್ಯಕತೆಯನ್ನು ಅರಿವುಮಾಡುವಲ್ಲಿ ಗ್ರಾಮೀಣ ನಾಯಕರೂ ಆಸಕ್ತಿ ತೋರುತ್ತಿದ್ದಾರೆ.

ಗುಜರಾತಿನ ಕೈರಾ ಜಿಲ್ಲೆಯ ಮಲ್ಟನ್ ಗ್ರಾಮದ ೬೫ ವಯಸ್ಸಿನ ವೃದ್ಧ ಸರಪಂಚ ಬಾಬೂಭಾಯ್ ಲಲ್ಲೂಭಾಯ್ ಪಟೇಲ್ ತನ್ನ ಮನೆಯ ವರಾಂಡದಲ್ಲಿ ಹೂಕಾ ಸೇದುತ್ತ ಕುಳಿತು ಸಂತೃಪ್ತಿಯ ನಗೆ ಬೀರಿದ. ಅವನ ಜೀವನಯಾತ್ರೆ ಸುಗಮವಾಗಿರುವುದರ ಬಗ್ಗೆ ಸ್ಮರಿಸಿಕೊಳ್ಳುತ್ತಿದ್ದ. ಇತರರ ಜೀವನದಂತೆಯೇ ಅವನ ಬದುಕಿನಲ್ಲೂ ಅಡ್ಡಿ ಆತಂಕಗಳಿದ್ದವು, ಅವೆಲ್ಲವನ್ನೂ ಧೈರ್ಯದಿಂದ ಎದುರಿಸಿದ್ದ. ಕೆಲವು ವರ್ಷಗಳ ಹಿಂದೆ ಮಡದಿ ಮರಣಗೊಂಡುದು ತೀವ್ರ ಆಘಾತ ಮಾಡಿತ್ತು. ಆ ಆಘಾತದಿಂದ ಈಗ ಚೇತರಿಸಿಕೊಂಡಿದ್ದ. ಅಂತಿಮವಾಗಿ ತನ್ನ ಕುಟುಂಬಕ್ಕೆ ಒಲಿದು ಬಂದಿದ್ದ ಸಂತಸದ ಬುಗ್ಗೆಯನ್ನು ಮಡದಿ ನೋಡಬೇಕಾಗಿತ್ತೆಂಬುದು ಅವನ ಆಶಯವಾಗಿತ್ತು.

ಬಾಬೂಭಾಯ್‌ಗೆ ತನ್ನ ಮೊಮ್ಮಕ್ಕಳು ಆರೋಗ್ಯಶಾಲಿಗಳಾಗಿರಬೇಕೆಂಬ, ಉತ್ತಮ ವಸ್ತ್ರಧಾರಿಗಳಾಗಿ, ಚೆನ್ನಾಗಿ ಊಟಮಾಡಿ ಸಂತಸದಿಂದಿರಬೇಕೆಂಬ ಹಂಬಲ. ಅವರು ಉತ್ತಮ ಶಿಕ್ಷಣಪಡೆದು, ಜೀವನದಲ್ಲಿ ಬರುವ ಉತ್ತಮ ಅವಕಾಶಗಳನ್ನು ಅನುಭವಿಸಬೇಕೆಂಬ ಬಯಕೆ. ಈ ಸದವಕಾಶಗಳನ್ನು ಅವರಿಗೆ ಒದಗಿಸಿಕೊಡಲು ಬಾಬೂಭಾಯ್ ತನ್ನ ಕೈಲಾದಷ್ಟು ಶ್ರಮಿಸಿದ.

ಮನೆಯ ಆದರ್ಶ

ಇವನು ಹಳ್ಳಿಯ ಸರಪಂಚನಾದ್ದರಿಂದ ಗ್ರಾಮಸ್ಥರು ಇವನಿಂದ ಸಹಾಯ, ಸಲಹೆ, ಮಾರ್ಗದರ್ಶನ ಪಡೆಯುತ್ತಿದ್ದರು. ಈ ಪ್ರಕಾರ ಮಗ—ಸೊಸೆಯರೂ ಬಾಬೂಭಾಯಿಯ ಸಲಹೆ ಕೇಳುತ್ತಿದ್ದರು. ತನ್ನ ಮಗ — ಸೊಸೆ ಮಕ್ಕಳ ಸಂಖ್ಯೆಯನ್ನು ಎರಡಕ್ಕೆ ನಿಯಂತ್ರಿಸಬೇಕೆಂದು ತಿಳಿಸಿದ.

ಬಾಬೂಭಾಯಿಗೆ ದೊಡ್ಡ ಕುಟುಂಬದ ಅನಾನುಕೂಲತೆಗಳ ಅರಿವಿತ್ತು. ತಾನು ವಾಸಿಸುವ ಹಳ್ಳಿಯಲ್ಲಿ ಸಣ್ಣ ಕುಟುಂಬಗಳು ದೊಡ್ಡವಾಗಿ ಬೆಳೆದು ಅನಿಯಂತ್ರಿತವಾಗಿ ಬೃಹತ್ತಾಗುತ್ತಿದ್ದುದನ್ನು ಕಣ್ಣಾರೆ ಕಂಡಿದ್ದ. ಇಂತಹ ಕುಟುಂಬಗಳ ಸುಖ-ಸಮೃದ್ಧಿ, ಕ್ಷೀಣಿಸಿ ಅಲ್ಲಿನ ಮಕ್ಕಳು ಚಿಂದಿ ಬಟ್ಟೆಯುಟ್ಟು, ಶಿಕ್ಷಣದಿಂದ ವಂಚಿತರಾಗಿ, ಆಹಾರಾಭಾವದಿಂದ ನರಳುತ್ತಿದ್ದುದನ್ನು ಬಾಬೂಭಾಯಿ ನೋಡಿದ್ದ.

ಕೇವಲ ಸದಸ್ಯ ಸಂಖ್ಯೆಯನ್ನು ನಿಯಂತ್ರಿಸುವುದಲ್ಲದೆ ಕುಟುಂಬದ ಸಾಮೂಹಿಕ ಕಲ್ಯಾಣಕ್ಕಾಗಿರುವ ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಬೆಂಬಲ ನೀಡಬೇಕೆಂದು ಕುಟುಂಬ ಯೋಜನಾ ಕ್ಷೇತ್ರಕಾರ್ಯಕರ್ತರು ತನ್ನ ಬಳಿಗೆ ಬಂದಾಗ ಬಾಬೂಭಾಯಿ ಹರ್ಷಿಸಿದ. ಮಲ್ಟನ್ ಗ್ರಾಮಕ್ಕೆ ಮೂರು ಮೈಲಿ ದೂರದಲ್ಲಿರುವ ಸೆವಾಲಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ|| ಗೋಸ್ವಾಮಿ ಬಾಬೂಭಾಯಿಯ ನೆಚ್ಚಿನ ಮಿತ್ರನಾದ. ಇವರಿಬ್ಬರೂ ಜೊತೆಗೂಡಿ ಹಳ್ಳಿಯ ಸ್ತ್ರೀ ಪುರುಷರು ಕುಟುಂಬ ಯೋಜನೆ ಅನುಸರಿಸುವಂತೆ ಪ್ರೇರೇಪಿಸಲು ಸಿದ್ಧರಾದರು.

ಯಶಸ್ಸಿನ ದಾರಿ

ಬಾಬೂಭಾಯಿಯ ಸೊಸೆ ಎರಡನೇ ಮಗುವನ್ನು ಹಡೆದ ನಂತರ ಟ್ಯುಬೆಕ್ಟಮಿ ಚಿಕಿತ್ಸೆ ಮಾಡಿಸಿಕೊಂಡಳು. ಕ್ರಮೇಣ ಇತರರೂ ಮಿತಕುಟುಂಬ ಆದರ್ಶಪಾಲನೆಗೆ ಮುಂದೆ ಬಂದರು. ಸಾಂಪ್ರದಾಯಿಕ ಕುರುಡು ನಂಬಿಕೆ ಮತ್ತು ಅವ್ಯಕ್ತ ಭಯಗಳಿಂದಾಗಿ ಈ ಕಾರ್ಯಸಾಧನೆ ಸುಲಭವಾಗಿರಲಿಲ್ಲ. ಗ್ರಾಮದ ಹಿರಿಯನಾದ ಬಾಬೂಭಾಯಿ ವೈದ್ಯಮಿತ್ರರ ನೆರವಿನಿಂದ ನಿರಾಧಾರಿತ ಭಯ ಹೋಗಲಾಡಿಸುವಲ್ಲಿ ಯಶಸ್ವಿಯಾದ. ಪ್ರೇರೇಪಣೆ ಕಾರ್ಯದಲ್ಲಿ ಯಶಸ್ವಿಯಾದನಂತರ ಈ ಗ್ರಾಮದ ೧೬೧೩ ಜನಸಂಖ್ಯೆಯಲ್ಲಿದ್ದ ಸಂತಾನಶಕ್ತಿ ಹೊಂದಿದ ೧೫೯ ದಂಪತಿಗಳು ಬಾಬೂಭಾಯಿಯ ನೇತೃತ್ವದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ಧಾವಿಸಿದರು. ಇವರಲ್ಲಿ ೭೪ ಮಂದಿ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು. ಇತರರು ಗರ್ಭನಿರೋಧಕಗಳನ್ನು ಸ್ವೀಕರಿಸಿದರು.

ಇದೇ ಕಾಲದಲ್ಲಿ ಕೈರಾ ಜಿಲ್ಲೆಯ ಮೋತಿಖಡೋಲ್ ಗ್ರಾಮದ ಸರಪಂಚ ಚಿತನಭಾಯ್ ಕಿಶೋರಭಾಯ್ ಪಟೇಲ್ ಗ್ರಾಮದ ಪ್ರತಿ ಕುಟುಂಬಕ್ಕೂ ಕುಟುಂಬಯೋಜನಾ ಸಂದೇಶ ಮುಟ್ಟಿಸಲು ಸ್ಥಳೀಯ ಮಹಿಳಾ ಮಂಡಲದ ಬೆಂಬಲಗಳಿಸಲು ಸನ್ನದ್ಧನಾಗಿದ್ದ. ಅವನಿಗೆ ಇಬ್ಬರು ಪುತ್ರಿಯರಿದ್ದರು; ಅವನು ಕುಟುಂಬ ಯೋಜನೆ ಪರಿಪಾಲಿಸುತ್ತಿದ್ದ. ಈ ಕಾರ್ಯದಲ್ಲಿ ಎದುರಿಸಬೇಕಾದ ಕಷ್ಟಗಳ ಅರಿವು ಪಂಚಾಯಿತಿಗೆ ತಿಳಿದಿತ್ತು. ಶ್ರೀಮತಿ ಮಣಿಬೆನ್ ಛೋಟೋಭಾಯ್ ಪಟೇಲ್ ನೇತೃತ್ವದಲ್ಲಿ ಮಹಿಳಾ ಮಂಡಳಿ ಬೆಂಬಲ ನೀಡಲು ಒಪ್ಪಿದಾಗ ಶೀಘ್ರವೇ ಗುರಿಸಾಧಿಸಬಹುದೆಂಬ ನಂಬಿಕೆ ಮೂಡಿತು.

ಕೇವಲ ಒಂದು ವರ್ಷದ ಅವಧಿಯಲ್ಲಿ ಮೋತಿಖಡೋಲಿನ ೮೧೩ ಜನಸಂಖ್ಯೆಯಲ್ಲಿದ್ದ ೮೩ ಸಂತಾನಶಕ್ತಿ ಹೊಂದಿದ್ದ ದಂಪತಿಗಳು ಯಾವುದಾದರೊಂದು ಕುಟುಂಬ ಯೋಜನಾ

(ಮೂವತ್ತೇಳನೇ ಪುಟ ನೋಡಿರಿ)

ಪ್ರಜಾರಾಜ್ಯ ದಿನದ ಶುಭಾಶಯಗಳು!

ತೃಪ್ತಿಕರ ಬೆಲೆಗೆ—
ಸಂತೃಪ್ತಿಕರ ಕಲಾಪೂರ್ಣ ಆಭರಣಗಳಿಗೆ—

ಮಂಗಳೂರಿನ ಪ್ರಗತಿಯ ಮುನ್ನಡೆಗೆ ಕಲಶಪ್ರಾಯವೆನಿಸಿದ

ಕೆನರಾ ಜ್ಯುವೆಲರ್ಸ್

ಮಂಗಳೂರು

ಪ್ರಾಮಾಣಿಕ ವಿತರಣೆಯ ಜನಪ್ರಿಯ ಸಂಸ್ಥೆ

Telegrams: 'PALKEBROS'
Phone: (H. O. : 4756 (Res. : 5544 (Br. : 6030 (Res. : 3855

CANARA JEWELLERS
[Head Office: G. H. School Road]
HAMPANKATTA,
MANGALORE-1
(S. India)
"An Air Conditioned Show Room"

ಹೊಸ ವರ್ಷ ಹಾಗೂ ಮಹಾ ಮಾಧ್ವ ಸಮ್ಮೇಳನದ
ಹಾರ್ದಿಕ ಶುಭಾಶಯಗಳು

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ, ಉಡುಪಿ, ಫೋನ್ 366

ಉತ್ತಮ ನಮೂನೆ ಚಿನ್ನದ ಆಭರಣಗಳನ್ನು ಮತ್ತು ಬೆಳ್ಳಿಯ ಸಾಮಾನುಗಳನ್ನು ಒಡವೆಗಳನ್ನ ಖಾತ್ರಿಯಾಗಿ ಮನಸ್ಸಿಗೆ ಒಪ್ಪುವಂತೆ ತಯಾರಿಸಿ ಕೊಡುತ್ತೇವೆ.

ಶ್ರೀ ಕೃಷ್ಣಾ ಮೆರ್ಚಂಟ್ ಸ್ಟೋರ್ಸ್

ತೆಂಕಪೇಟೆ ಉಡುಪಿ, ಫೋನ್ 360

ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳು, ಫ್ಯಾನುಗಳು, ಸ್ಟೀಲು ಕಪಾಟು, ಸೋಫಾ ಕಂಬೆಡ್, ಹೊಲಿಗೆ ಯಂತ್ರಗಳು, ಗಡಿಯಾರಗಳು, ಎಲ್ಲಾ ತರದ ಸ್ಟೈನ್‌ಲೆಸ್ ಸ್ಟೀಲಿನ ಪಾತ್ರೆ, ಇತ್ಯಾದಿಗಳಿಗೆ ಇಂದೇ ಸಂದರ್ಶಿಸಿರಿ!
ಮಾಲಕರು: ಯು. ರಾಘವೇಂದ್ರ ಕೃಷ್ಣ ಭಟ್.

ಆರೋಗ್ಯಕರ ಹಾಗೂ ರುಚಿಕರವಾದ
ಊಟ, ತಿಂಡಿ ತಿನಸು ಹಾಗೂ ಚಾ, ಕಾಫಿ ವಗೈರೆ ಪಾನೀಯಗಳಿಗೆ
ಇಂದೇ ಸಂದರ್ಶಿಸಿರಿ!!

ಗೋಪಾಲಾಶ್ರಮ

ಊಟ-ಉಪಾಹಾರ ಗೃಹ

ಹೆಡ್ ಪೋಸ್ಟ್ ಅಫೀಸು ರಸ್ತೆ, ಕೋಳದ ಪೇಟೆ, ಉಡುಪಿ,
ಫೋನ್: 566

ಸಂಚಾಲಕರು: ಯು. ರಾಘವೇಂದ್ರ ಕೃಷ್ಣ ಭಟ್.



ಗೋವರ್ಧನ ಪಂಪುಸೆಟ್ಟು

ವಿಪುಲ ಸಂಪತ್ ಸಮೃದ್ಧಿಗೆ

ವಿತರಣೆಗಾರರು

ರೂರಲ್ ಎಗ್ರಿಕಲ್ಚರಲ್ ಸಿಂಡಿಕೇಟ್ ಪ್ರೈ. ಲಿಮಿಟೆಡ್

ಉಡುಪಿ, ಕುಂದಾಪುರ ಮತ್ತು ಮಂಗಳೂರು.

ಪ್ರಜಾರಾಜ್ಯ ದಿನದ ಹಾರ್ದಿಕ ಶುಭಾಶಯಗಳು

ಕಣ್ಮನ ತಣಿಸುವ ಬೆಂಗಳೂರು ಮಹಾನಗರದ ಅತ್ಯಂತ ಕೇಂದ್ರಸ್ಥಾನದಲ್ಲಿರುವ

ಮಹೋನ್ನತ ಊಟ ಮತ್ತು ವಸತಿ ಗೃಹ

ಹೋಟೆಲ್ ಟೂರಿಸ್ಟ್ (ರಿಜಿಸ್ಟರ್ಡ್)

ಪ್ರತಿ ಕೋಣೆಗೂ ಸ್ನಾನಾಗಾರದ ವ್ಯವಸ್ಥೆ ಇರುವ 150 ಕೊಠಡಿಗಳ ಅತ್ಯಾಧುನಿಕ ವಸತಿ ಭೋಜನ ಮತ್ತು ಉಪಾಹಾರ ಮಂದಿರ

ರೇಸ್ ಕೋರ್ಸ್ ರೋಡು, ಆನಂದ ರಾವ್ ಸರ್ಕಲ್,

ಬೆಂಗಳೂರು—9

ಪ್ರೊ: ಕೆ. ಗುರುರಾಜಾಚಾರ್

HOTEL TOURIST

(Regd.)

Race Course Road, Ananda Rao Circle,

BANGALORE-9.

High Class Vegetarian Boarding, Lodging & Restaurant

Phona—72381 (5 lines)

Grams—HOTELTOUR

K. Gururajachar,
Prop

With Best Compliments of

SHASHI TRADERS

For all varieties of "STAINLESS STEEL UTENSILS"

Please visit:-

SHASHI TRADERS

BANNUR ROAD,
MANDYA.

ಎಲ್ಲಾ ತರದ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು
ನಮ್ಮಲ್ಲಿ ನಿಖರವಾದ ಬೆಲೆಗೆ ದೊರೆಯುತ್ತವೆ.

ಪ್ರೊಪ್ರೈಟರ್ -
G. S. BASAVARAJ.

ನವಯುಗದ ನವ ಸಂದೇಶ!!

"ಜನತೆಯ ಕಲ್ಯಾಣ ಸಹಕಾರ ಮಾರ್ಗದಿಂದ
ಮಾತ್ರ ಸಾಧಿಸಲ್ಪಡುವುದು"

ಈ ದಿಸೆಯಲ್ಲಿ...........

ದ. ಕ. ಕೇಂದ್ರ ಸಹಕಾರ ಬ್ಯಾಂಕ್ ಲಿ.,

ಮಂಗಳೂರು.

ಶಾಖೆಗಳು: ಕುಂದಾಪುರ, ಪುತ್ತೂರು, ಬಂಟ್ವಾಳ
ಮತ್ತು ಉಡುಪಿ

ಎಲ್ಲಾ ತರದ ಬೆಳೆಗಳಿಗೆ ಕಡಿಮೆ ಬಡ್ಡಿಯ ದರದ ಸಾಲ
ಸೌಲಭ್ಯ ನೀಡಿ ಜನತೆಯ ಕಲ್ಯಾಣ ಮಾರ್ಗದಲ್ಲಿ
ಊರುಗೋಲಾಗಿ ಸಹಕರಿಸುವುದು.

ಶ್ರೀ ಬಿ. ಪ್ರಭಾಕರ ರಾವ್,
M. A., B. L.,
ಉಪಾಧ್ಯಕ್ಷ.

ಶ್ರೀ ಬಿ. ನಾರಾಯಣ ನಾಯಕ್,
ಅಧ್ಯಕ್ಷ.

The New Bhuvanendra Ayurvedic Pharmacy,

KATAPADI, S. K.

ಹೆತ್ತ ಹೆಮ್ಮಕ್ಕಳಿಗೊಂದು ಕಿವಿಮಾತು!
ಪುರುಷರಿಗೊಂದು ಸವಿಮಾತು!!
ಪ್ರತಿಯೊಬ್ಬರ ಮನೆಮಾತು!!!

"ನ್ಯೂ ಭುವನೇಂದ್ರ"

ದಶಮೂಲಾರಿಷ್ಟ

ಹೆರಿಗೆಯಿಂದ ಸೊರಗಿದ ಶರೀರ, ಕರಗಿದ ಶಕ್ತಿ
ಇವುಗಳನ್ನು ಮರಳಿಪೊಂದಲು
ಅತ್ಯುಪಯುಕ್ತ.

ದಿ ನ್ಯೂ ಭುವನೇಂದ್ರ ಆಯುರ್ವೇದಿಕ್ ಫಾರ್ಮಸಿ,

ಕಟಪಾಡಿ, ದ. ಕನ್ನಡ.

For prompt delivery of
22 ct. Jewellery
at reasonable price

Please visit

S. L. SHET DIAMOND HOUSE

Diamond Merchants & Mfg. Jewellers

K. S. RAO ROAD, HAMPANKATTA
MANGALORE-1.

Prop:
S. L. SHET

Telegrams : "GOLDKING"

Telephone { Diamond House : 3242
Residence : 3272

ಶ್ರೀ ಜಗಜೀವನ ರಾಮ್

ಶ್ರೇಷ್ಠ ಸಮಾಜ ಸುಧಾರಕ - ಗಾಂಧೀಜಿ

ಗಾಂಧೀಜಿ ಅರ್ವಾಚೀನ ಕಾಲದಲ್ಲಿ ಜನಿಸಿದ ಪ್ರಾಚೀನ ಋಷಿಪುಂಗವ. ಹಿಂದೂ ಧರ್ಮ ಮತ್ತು ಸಮಾಜದಲ್ಲಿ ರೂಢಮೂಲವಾಗಿದ್ದ ಲೋಪದೋಷಗಳ ನಿವಾರಣೆಗಾಗಿ ಅವರು ಜೀವನದುದ್ದಕ್ಕೂ ಶ್ರಮಿಸಿದರು. ಶ್ರೀ ಜಗಜೀವನ ರಾಮ್ ಅವರು ಪ್ರಸ್ತುತ ಲೇಖನದಲ್ಲಿ, ಸಮಾಜ ಸುಧಾರಕರಾಗಿ ಗಾಂಧೀಜಿಯವರು ನಿರ್ವಹಿಸಿದ ಪಾತ್ರದ ಮಹತಿಯನ್ನು ವಿವರಿಸಿದ್ದಾರೆ.

ನಾವು ಒಂದು ರಾಷ್ಟ್ರವಾಗಿ ಎರಡು ದಶಕಗಳಿಗೂ ಹೆಚ್ಚು ಕಾಲವಾಯಿತು. ನಮ್ಮ ಐಕ್ಯತೆ ಇನ್ನೂ ಪೂರ್ಣಗೊಂಡಿಲ್ಲ ಎಂಬ ಅರಿವು ನಮಗೆ ಈಗ ಮೂಡತೊಡಗಿದೆ. ಒಂದೇ ಸಮಾಜದವರಾದ ನಾವು ಪರಸ್ಪರ ಒಗ್ಗಟ್ಟಿನಿಂದ ಬಾಳಬೇಕಾದ ಅಗತ್ಯ ಎಂದಿಗಿಂತಲೂ ಈಗ ಹೆಚ್ಚಿದೆ.

ಕೆಲ ಕಾಲದಿಂದ ನಮ್ಮ ದೇಶದಲ್ಲಿ ಹೊಸ ವಾತಾವರಣ ರೂಪಗೊಂಡಿದೆ. ಈ ವಾತಾವರಣಕ್ಕೆ ಪುರಾತನ ಪರಂಪರೆಗೂ ಸಂಪರ್ಕವಿಲ್ಲ. ಫಲಸ್ವರೂಪವಾಗಿ ಸಮಾಜದ ವಿವಿಧ ವಿಭಾಗಗಳನ್ನು ಏಕಸೂತ್ರದಲ್ಲಿ ಬಂಧಿಸಿದ ಐಕವಾಕ್ಯದ ಬಂಧ ಶಿಥಿಲಗೊಂಡಿದೆ. ಈಗ ಹಿಂದೂ ಸಮಾಜದ ವಿಕಾಸ, ಪರಸ್ಪರ ಸಮಾನತೆಯ ಆಧಾರದ ಮೇಲೆಯೇ ಆಗಬೇಕಾಗಿದೆ.

ಜಾತಿ—ಪದ್ಧತಿ ಪುರಾತನ ಹಿಂದೂ ಧರ್ಮದ ಆಧಾರವಾಗಿದ್ದಿತು. ಇದರಿಂದಾಗಿ ಸಮಾಜದಲ್ಲಿ ಸಾವಿರಕ್ಕೂ ಹೆಚ್ಚು ಸಂಘಟನೆಗಳು ತಲೆದೋರಿದುವು. ಈ ಸಂಘಟನೆಗಳಿಗೆ ಸೇರಿದ ಜನರ ಪರಸ್ಪರ ಸಂಪರ್ಕ ಕಡಿಮೆಯಾಗುತ್ತ ಬಂದಿತು. ಮೇಲು—ಕೀಳು ಭಾವನೆ ಬೇರೂರಿತು. ಈ ಶ್ರೇಷ್ಠತಾ ಭಾವನೆ ಮೂಲವಾಗಿ ನಾವೆಲ್ಲರೂ ಒಂದೇ ಎಂಬ ಭಾವನೆ ಬೆಳೆದು ಬರಬೇಕು. ಪ್ರಗತಿಗೆ ಇದು ಅತ್ಯವಶ್ಯ. ಜಾತಿ— ಪದ್ಧತಿಯಿಂದಾಗಿ ಸಾಮೂಹಿಕ ಹೊಣೆಗಾರಿಕೆಯ ಭಾವನೆ ನಷ್ಟವಾಗಿದೆ. ಜಾತಿ ಪದ್ಧತಿಯ ನಿವಾರಣೆಯು ಇಂದು ಅನಿವಾರ್ಯವಾಗಿರುವ ಒಂದು ಐತಿಹಾಸಿಕ ಘಟನೆಯಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಮಾನಸಿಕ ಅಭದ್ರತೆಯ ಕಾರಣಗಳಿಂದಾಗಿ ಜನರು ಇನ್ನೂ ಈ ವ್ಯವಸ್ಥೆಗೆ ಅಂಟಿಕೊಂಡಿದ್ದಾರೆ. ರಾಜನೀತಿಜ್ಞರು ಮತ್ತು ರಾಜಕೀಯ ಪಕ್ಷಗಳೂ ಸಹ ಚುನಾವಣೆಯಲ್ಲಿ ಗೆಲ್ಲಲು ಜಾತಿಪದ್ಧತಿಯ ದುರುಪಯೋಗ ಮಾಡಿಕೊಂಡಿದ್ದಾರೆ.

ಮಹಾವೀರ ಗೌತಮ ಬುದ್ಧರು ಆಗಿನ ಕಾಲದ ಬ್ರಾಹ್ಮಣ ಪ್ರಭುತ್ವದ ವಿರುದ್ಧ ಬಂಡೆದ್ದರು. ನಿರರ್ಥಕವಾದ ಧಾರ್ಮಿಕ ಆಡಂಬರಕ್ಕಿಂತಲೂ ಸದಾಚಾರದ ಮೌಲ್ಯವನ್ನು ಅವರು ಒತ್ತಿ ಹೇಳಿದರು. ರಾಮಾನಂದ; ಕಬೀರ, ನಾನಕ, ಸಂತ ಸೂರದಾಸರು ಮಾನವನಲ್ಲಿ ಅಡಗವಾಗಿರುವ ದೈವತ್ವಕ್ಕೆ ಹೆಚ್ಚಿನ ಮಹತ್ವ ನೀಡಿದರಲ್ಲದೆ, ವ್ಯಕ್ತಿಗೆ ಸಮಾಜದಲ್ಲಿ ಗೌರವದ ಸ್ಥಾನವಿರಬೇಕೆಂದು ಅಭಿಪ್ರಾಯಪಟ್ಟರು. ವಿವೇಕಾನಂದ, ಸ್ವಾಮಿ ದಯಾನಂದ, ರಾಮಮೋಹನ ರಾಯ್ ಮೊದಲಾದವರೂ ಈ ದಿಶೆಯಲ್ಲಿ ಶ್ರಮಿಸಿದರು. ಹಿಂದೂ ಸಮಾಜದ ದೌರ್ಬಲ್ಯದಿಂದಾಗಿ ಸಾಮ್ರಾಜ್ಯಶಾಹಿ ನಮ್ಮ ದೇಶದಲ್ಲಿ ಬೇರೂರಿತು.

: ಗಾಂಧೀಜಿಯ ಉದಯ :

ಮೋಹನದಾಸ ಕರಮಚಂದ ಗಾಂಧಿ ಅವರು ಸರಳತೆ — ವಿನಮ್ರತೆ ಹಾಗೂ ಮಹಾನ್ ಗುಣಗಳ ಖನಿಯಾಗಿದ್ದರು. ಅವರು ರಾಜಕೀಯ ರಂಗವನ್ನು ಪ್ರವೇಶಿಸಿದಾಗ, ದೇಶದ ಆಗಿನ ಪರಿಸ್ಥಿತಿ ಹೆಚ್ಚು ಕಡಿಮೆ ಒಂದೇ ಬಗೆಯಾಗಿದ್ದಿತು. ಗಾಂಧೀಜಿ ಅರ್ವಾಚೀನ ಕಾಲದಲ್ಲಿ ಜನಿಸಿದ ಪ್ರಾಚೀನ ಋಷಿಪುಂಗವರಾಗಿದ್ದರು. ನಾವು ನಮ್ಮ ದೌರ್ಬಲ್ಯಗಳ ಕಾರಣದಿಂದಲೇ ಬ್ರಿಟಿಷರ ದಾಸರಾಗಿದ್ದೆವೇ ವಿನಾ ಬ್ರಿಟಿಷರ ಬಂದೂಕಿನ ಭಯದಿಂದಲ್ಲವೆಂದು ಅವರು ಅರಿತುಕೊಂಡರು. ಜಾತಿಪದ್ಧತಿ, ಪ್ರಾದೇಶಿಕವಾದ ಸಾಮಾಜಿಕವಾದ ಅಜ್ಞಾನದಿಂದ ತಲೆದೋರಿದ ದೌರ್ಬಲ್ಯಗಳ ಬಗ್ಗೆ ಅವರಿಗೆ ಸ್ಪಷ್ಟ ಕಲ್ಪನೆಯಿದ್ದಿತು.

ಗಾಂಧೀಜಿ ನಿಷ್ಠಾವಂತ ಹಿಂದೂ. ದೃಢವಾದ ಹಾಗೂ ಗಹನವಾದ ಧಾರ್ಮಿಕ ನಿಷ್ಠೆಯುಳ್ಳ ವ್ಯಕ್ತಿಯಾಗಿದ್ದರು. ಗಾಂಧೀಜಿಯವರ ಧರ್ಮದೃಷ್ಟಿ ವಿಶಾಲವಾಗಿದ್ದಿತು. ಜೀವನವು ಪ್ರತ್ಯೇಕಿಸಲು ಬರದಂತಹ ಹಲವಾರು ಅಂಶಗಳ ಎಳೆಗಳಿಂದ ಹೆಣೆದಿರುವ ಒಂದು ಸೂತ್ರವೆಂದು ಗಾಂಧೀಜಿ ನಂಬಿದ್ದರು. ಇದು ಒಂದು ಮಹೋನ್ನತವಾದ ವಿಚಾರ. ಗಾಂಧೀಜಿಯವರ ಉಪದೇಶ ಮತ್ತು ಆಚರಣೆಯಲ್ಲಿ ಎಳ್ಳಷ್ಟೂ ಭೇದವಿಲ್ಲ. ಮಾತು ಮತ್ತು ಕೃತಿಗಳ ನಡುವೆ ಸಮನ್ವಯವಿರಬೇಕೆಂದು ಹೇಳಿದ ಅವರು ಜೀವನದುದ್ದಕ್ಕೂ ನುಡಿದಂತೆ ನಡೆದರು.

ಅವರೆಂದೂ, ವಿರಾಮಕ್ಕಾಗಿ ಹಳೆಯ ವಿಚಾರಗಳನ್ನೇ ಕಟ್ಟಿ ಬಿದ್ದವರಲ್ಲ. ಹೊಸ ಹೊಸ ಅನುಭವಗಳ ಆಧಾರದ

(ಮೂವತ್ತೈದನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿ.,
(ಸ್ಥಾಪನೆ : 1906)

ರಿಜಿಸ್ಟರ್ಡ್ ಆಫೀಸು — ಉಡುಪಿ
ಆಡಳಿತ ಆಫೀಸು — ಮಂಗಳೂರು

ಸಣ್ಣ ಉಳಿತಾಯದಿಂದಲೇ
ವೈಯಕ್ತಿಕ ಜೀವನದಲ್ಲಿ
ಮಹತ್ ಸಾಧನೆಗಳು ಸಾಧ್ಯ!

ಸಾಧ್ಯವಿರುವಾಗ ಉಳಿಸುವುದಾದರೆ
ಚಿಲ್ಲರೆ ನಾಣ್ಯಗಳೇ ನಿಮ್ಮ
ಆಪದ್ಧನವಾಗುವುದು.

ಕೂಡಲೇ ಒಂದು ಜನತಾ ಡಿಪೊಸಿಟ್
(ದೈನಂದಿನ ಉಳಿತಾಯ ಯೋಜನೆ)
ಎಕೌಂಟನ್ನು ತೆರೆಯಿರಿ. ದಿನಂಪ್ರತಿ
25 ಪೈಸೆ ಯಾ ಹೆಚ್ಚಿಗೆ ಮೊಬಲಗನ್ನು ಕಟ್ಟಬಹುದು.

ಹೆಚ್ಚಿನ ಮಾಹಿತಿಯನ್ನು ನಿಮಗೆ ಸಮೀಪವಿರುವ
ಬೇಂಕಿನ ಶಾಖೆಯಿಂದ ಪಡೆಯಬಹುದು.

ಕೆ. ರಾಮದಾಸ್ ನಾಯಕ್
ಜನರಲ್ ಮೆನೇಜರ್

• ಉಡುಪಿಯು ಭಾರತದಲ್ಲಿ 900 ವರ್ಷಗಳಿಂದ ಸುಪ್ರಸಿದ್ಧ ಕ್ಷೇತ್ರ!
• ಉಡುಪಿಯಲ್ಲಿ 90 ವರ್ಷಗಳಿಂದ ಪ್ರಸಿದ್ಧ ಐರೋಡಿಯವರ ಪಾತ್ರೆ ಭಂಡಾರ!

ಕಡಿಮೆ ಕ್ರಯದಲ್ಲಿ
ಉತ್ತಮ ಸೌಂದರ್ಯದ
ಮನೆ, ಮಠ,
ದೇವಾಲಯಗಳಿಗೆ ಬೇಕಾಗುವ
ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಸ್ಟೀಲು,
ಎಲ್ಯುಮಿನಿಯಮ್ ಪಾತ್ರೆಗಳು
ರಖಂ ಆಗಿಯೂ ಚಿಲ್ಲರೆಯಾಗಿಯೂ ಸಿಗುವ
—:ಒಂದೇ ಅಂಗಡಿ:—

ಮೆಸರ್ಸ್
ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಿ, ಅನಂತೇಶ್ವರ ಸನ್ನಿಧಿ,
ರಥಬೀದಿ ಉಡುಪಿ, ದ. ಕನ್ನಡ.

ವಿಶೇಷ ಸೂಚನೆ:— ದೇವತಾರ್ಚನೆ ಪಾತ್ರೆಗಳ ಸಚಿತ್ರ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಲಾಗುವುದು.

ಶ್ರೀ ತಡ್ಡಲಸೆ ವಿಘ್ನೇಶ್ವರ ಶರ್ಮಾ

ದಿನಾಚರಣೆಗಳ ಕರ್ಮಕಥೆ

ಇಂದು ದಿನನಿತ್ಯವೆಂಬಂತೆ ನಡೆಯುತ್ತಿರುವ ದಿನಾಚರಣೆಗಳು ಹೊಸತೇನಲ್ಲ. ಆದರೆ, ಹಿಂದಿನಿಂದಲೂ ಆಚರಿಸುತ್ತ ಬರುತ್ತಿರುವ ಹಬ್ಬ ಹರಿದಿನಗಳಂತೆಯೇ ಈ ಆಚರಣೆಗಳೂ ಅರ್ಥಹೀನ, ಭಾಷಣಗಳ ಸಮಾವೇಶಯ ದಿನಗಳಾಗಿವೆಯೆಂದರೆ ತಪ್ಪೇನು? ರಾಷ್ಟ್ರೀಯ ದಿನಗಳು ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಅಸಹಾಯಕವೆನಿಸಿದರೆ, ದಿನವನ್ನು ಆಚರಿಸಿ ಶಕ್ತಿ-ಸಮಯಗಳನ್ನು ಅಪವ್ಯಯ ಗೊಳಿಸಬೇಕೆ?

ನಮ್ಮಲ್ಲಿ ಪ್ರಚಾರ ಆಚಾರಗಳಲ್ಲಿರುವ ವ್ರತ ಕಥೆಗಳ ಬಗ್ಗೆ ಒಂದು ಕಥೆಯನ್ನು ಹೀಗೆ ಹೇಳಲಾಗುತ್ತಿದೆ—"ಹಿಂದೆ ದ್ವಾಪರದಲ್ಲಿ ಧರ್ಮರಾಜನಿಗೆ ಕಷ್ಟ ಬಂದಾಗ ದಿನವೂ ಒಂದೊಂದು ದೇವರಿಗೆ ಪೂಜಿಸಿ—ಪ್ರಾರ್ಥಿಸಿ, ಕಷ್ಟ ಪರಿಹಾರಕ್ಕೆ ಕೇಳಿಕೊಂಡಿದ್ದ. ಅವೆಲ್ಲ ಒಂದೊಂದು ವ್ರತಗಳೇ ಆಗಿವೆ...." ಎಂದು. ಅಂದು ದಿನವೂ ಪೂಜಿಸಲು ಒಂದೊಂದು ಪ್ರತ್ಯೇಕವಾದ ವ್ರತಗಳಿದ್ದಂತೆ ಇಂದು ಆಚರಿಸಲು ಅನುಕೂಲವಾದ ದಿನಾಚರಣೆಗಳು ಇದ್ದೇ ಇವೆ. ಯಾವ ದಿನವೂ 'ಇಂದು ದಿನಾಚರಣೆ ಇಲ್ಲ' ಎಂದು ಧೈರ್ಯದಿಂದ ಹೇಳುವ ಹೇಳಿ ಬಿಡುವ ದಿವಸಗಳೇ ಇಲ್ಲವೆಂದು ಹೇಳಿದರೆ ಅಷ್ಟೇನೂ ದೊಡ್ಡ ತಪ್ಪಾಗದು.

ಈ ದಿನಾಚರಣೆಗಳ ಕರ್ಮ ಕಥೆಯೇನೂ ಸಣ್ಣದಲ್ಲ. ದಿನದಿಂದ ಹಿಡಿದು, ಸಪ್ತಾಹ, ತಿಂಗಳುಗಳ ವರೆಗೂ ನಡೆಸುವಷ್ಟು ಅದು ದೊಡ್ಡದು. ಎಲ್ಲಾ ವಸ್ತು, ವಿಷಯ, ವ್ಯವಹಾರ, ವ್ಯವಸ್ಥೆ, ವಿಚಾರಗಳ ಮೇಲೆಲ್ಲಾ ಈ ದಿನಾಚರಣೆಗಳ ಕ್ರಿಯಾಚರಣೆ ನಡೆಯುತ್ತದೆ. ಈ ಮೂಲಕವಾಗಿ ಆದರೂ ಜನತೆಯ ಲಕ್ಷ್ಯ ಸೆಳೆಯಲು ಇದೊಂದು ವಿಶಿಷ್ಟ ಯೋಜನೆ ಇರಬೇಕು ಎನಿಸುತ್ತದೆ.

ಆಚರಣೆಯ ಚರಿತ್ರೆ

ಈ ಆಚರಣೆಯ ಚರಿತ್ರೆ ಬಹು ಹಿಂದಿನಿಂದಲೂ ಬೆಳೆದು ಬಂದಿದೆ. ಹಿಂದೆಯೂ ದೊಡ್ಡ ದೊಡ್ಡ ವ್ಯಕ್ತಿಗಳು ಶಕ್ತಿಗಳ ಹೆಸರಿನಲ್ಲಿ ಆಯಾ ದಿನಗಳ ಆಚರಣೆ ನಡೆಯುತ್ತಿತ್ತು. ಆಯಾ ದಿನದ ವ್ಯಕ್ತಿಗಳ ವಿಚಾರ ನಮ್ಮ ಮನಸ್ಸಿನ ಮೇಲೆ ಮೂಡಿ ಹೋಗದೆ, ಅವು ಹಚ್ಚ ಜಾಗ್ರತವಾಗಿ ಇರಬೇಕೆಂಬುದೇ ಅದರ ರಹಸ್ಯ. ಈ ಕಾರಣದಿಂದಾಗಿ ದಿನಾಚರಣೆಯ ಸಂಪ್ರದಾಯ ಬೆಳೆದಿದೆ.

ನಮ್ಮ ಹಬ್ಬ ಹರಿದಿನಗಳೂ ಸಹ ಇದೇ ತಾತ್ವಿಕತೆಯ ಮೇಲೆಯೇ ಅನುಷ್ಠಾನಕ್ಕೆ ಬಂದವೆಂದು ಹೇಳಬಹುದು. ಬೇರೆ ಬೇರೆ ದೇವತೆಗಳ ಹೆಸರಿನಲ್ಲಿ ಪೂಜೆ-ಪ್ರಾರ್ಥನೆಗಳು ನಡೆಯುತ್ತವೆ. ಅಂದರೆ ಅವನ್ನು ಬೇರೆ ಬೇರೆ ಗುಣ, ಕ್ರಿಯೆ, ಫಲ ವಿಶಿಷ್ಟವಾದ ಮೂಲಕ ಅಂಥ ಆರಾಧನಾ ಕ್ರಮ ನಿಯೋಜಿತ ಇರಬೇಕು. ಈ ಹಿನ್ನೆಲೆಯ ಆಧಾರದ ಮೇಲೆಯೇ ಈ ದಿನಾಚರಣೆಯೂ ಬಂದಿದೆಯೋ ಏನೋ!

ಚರಣವಿಲ್ಲದ ಆಚರಣೆ

ಈ ಆಚರಣೆಯ ಸಂಪ್ರದಾಯ ದಿವ್ಯವಾಗಿ ಭವ್ಯವಾಗಿ ಇದ್ದರೂ ಇಂದು ಅದನ್ನು ನಡೆಸುತ್ತಿರುವ ರೀತಿ-ನೀತಿಗಳನ್ನು ಕಂಡಾಗ ಈ ದಿನಾಚರಣೆಗೆ ಚರಣಗಳೇ (ಕಾಲುಗಳು) ಇಲ್ಲವೇನೋ ಎನಿಸುತ್ತದೆ. ಕಾಲುಗಳಿಲ್ಲದವ ನಡೆಯ ಹೊರಟರೆ ಎಷ್ಟು ದೂರ ಸಾಗಬಲ್ಲ? ಎಂಬಂತೆಯೇ ಆಗಿದೆ ಈ ಆಚರಣೆಯ ವಿಚಾರ. ಎಷ್ಟೋ ದಿನದಿಂದ ಇವನ್ನು ನಾವು ಆಚರಿಸುತ್ತ ಬಂದಿದ್ದರೂ ಯಾಕೆ ಇವನ್ನು ಆಚರಿಸುತ್ತಿದ್ದೇವೆ ಎಂಬ ಸ್ಪಷ್ಟವಾದ ಕಲ್ಪನೆಯೂ ಜನ ಸಾಮಾನ್ಯರಿಗೆ ಬಂದಿರಲಿಕ್ಕಿಲ್ಲ. ಆದ ಮೇಲೆ ಈ ಆಚರಣೆಯ ಪ್ರಭಾವ ನಮ್ಮ ಬಾಳಿನಲ್ಲಿ ಏನೂ ಪರಿಣಾಮ ಮಾಡದಿರುವಾಗ ಅವು ಎಷ್ಟು ಫಲಶ್ರುತಿಯುವಾಗಿರಬೇಕು?

ತಿಂದ ಆಹಾರ ಜೀರ್ಣಿಸದೇ ಇದ್ದರೆ ಅದರಿಂದ ಶರೀರಕ್ಕೆ ಏನೂ ಉಪಯೋಗವಾಗದೇ ಕೆಲವು ಸಾರೆ ದುಷ್ಪರಿಣಾಮವೇ ಆಗುತ್ತದೆ. ಹಾಗೆಯೇ ನಮ್ಮ ಹಬ್ಬಗಳೂ ಆಚರಣೆಗಳೂ ನಮಗೆ ಯಾವ ಪ್ರೇರಣೆಯನ್ನೂ ನೀಡದೆ ಕ್ರಿಯಾಶೂನ್ಯವಾಗಿ ನಡೆದರೆ ಅದರಿಂದ ನಮ್ಮ ಶ್ರಮ, ಕಾಲ, ಹಣಗಳ ದುರುಪಯೋಗವೇ ಆದಂತಾಗುತ್ತದೆ.

ಭಾವನೆ ಬೆಳೆಸದ ಸಾಧನೆ

ಹಿಂದೆ ಹಬ್ಬಗಳು ಧಾರ್ಮಿಕವೋ—ಆಗಿನ ಸಾಮಾಜಿಕವೋ ಆದ ಕಲ್ಪನೆಗಳ ಮೇಲೆ ನಡೆದಂತೆ ಇಂದು ರಾಜಕೀಯ, ರಾಷ್ಟ್ರೀಯ, ಸಾಮಾಜಿಕ ಸ್ಥಿತಿ-ಗತಿಗಳ ಪ್ರಜ್ಞಾ ವಿಕಾಸಕ್ಕಾಗಿ ನಡೆಯುವ ಪರಿಪಾಠ ಬಂದಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಯ ಮನೋಧರ್ಮದಂತೆ ಅಂದಿನ ರಾಜಕೀಯ ಸಂಸ್ಥಿತಿ ನಿರ್ಮಾಣವಾಗುತ್ತಿರುವುದರಿಂದ ಪ್ರಜೆಯ ಮನೋಧರ್ಮವನ್ನು ಸಂಸ್ಕೃತಗೊಳಿಸುವ ಪ್ರಸಂಗಗಳು ತೀರ ಅವಶ್ಯವಿರುತ್ತವೆ. ಈ ದೃಷ್ಟಿಯಿಂದ ರಾಷ್ಟ್ರೀಯ ಉತ್ಸವಗಳನ್ನು, ದಿನಗಳನ್ನು ಆಚರಣೆಯಲ್ಲಿ ತರುವದು ನಮ್ಮ ವಿವೇಕಕ್ಕೆ ಹೆಚ್ಚಿನ ಅವಕಾಶ ಒದಗಿಸಲಾಗುತ್ತದೆ. ಆದರ ನಮ್ಮ ದಿನಾಚರಣೆಗಳಲ್ಲಿ ಈ ಭಾವನೆ ಮೂಡಿಸಿ ಬೆಳೆಸುವ ಸಾಧನೆ ನಡೆದಿದೆಯೇ ಎಂಬುದು ಮುಖ್ಯ ಪ್ರಶ್ನೆಯಾಗಿದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಸ್ವಾತಂತ್ರ್ಯೋತ್ಸವ, ಪ್ರಜಾರಾಜ್ಯೋತ್ಸವಗಳು ದೊಡ್ಡ ಪ್ರಮಾಣದಿಂದ ನಡೆಯುತ್ತಿವೆ. ಜನ ಸಾಮಾನ್ಯರಿಗೂ ತಿಳಿಯುವಂತೆ ಸಾರ್ವಜನಿಕ ಸ್ಥಳಗಳಲ್ಲಿ ಸರಕಾರೀ ಕಾರ್ಯಾಲಯಗಳಲ್ಲಿ ಈ ಉತ್ಸವ ಸಾಮಾನ್ಯವಾಗಿ ಆದರೂ ನಡೆಯುತ್ತಲೇ ಇದೆ. ಆದರೆ ಈ ಉತ್ಸವದಿಂದ ಎಷ್ಟು ಜನಕ್ಕೆ ಅದರ ಸರಿಯಾದ ಭಾವನೆ ಉಂಟಾಗಿದೆ? ಸ್ವಾತಂತ್ರ್ಯದ, ಪ್ರಜಾರಾಜ್ಯದ ಅರ್ಥವತ್ತಾದ ಕಲ್ಪನೆ ಏನಾದರೂ ಉಂಟಾಗಿದೆಯೇ? ಉಂಟಾಗಿದ್ದರೆ, ನಮ್ಮ ಭಾವನೆಯಲ್ಲಿ ರಾಷ್ಟ್ರೀಯತೆಯ, ಏಕಾಂಗವೇಕೆ ಆಗಿಲ್ಲ?

ದೇಶ ನಮ್ಮದು

ನಮ್ಮಲ್ಲಿ ಏನೂ ಬೆಳೆಯದೇ ಇದ್ದರೂ ಭಾವನೆಯಲ್ಲಿ "ದೇಶ ನಮ್ಮದು" ಎಂಬ ರಾಷ್ಟ್ರೀಯತೆಯ ಜಾಗೃತಿಯೊಂದಾದರೆ, ದೇಶಕ್ಕಾಗಿ ದುಡಿಯುವ ಹಂಬಲ ನಮ್ಮಲ್ಲಿ ಉಂಟಾಗುತ್ತಿತ್ತು. ಈ ಭಾವನೆಯ ಕೊರತೆಯೇ ದೊಡ್ಡದಾಗಿದೆ.

ಜನಕ್ಕೆ ಏನಾದರೂ ತೊಂದರೆ ಬಂದರೆ, ಸಮಸ್ಯೆ ಉದ್ಭವವಾದರೆ ಅದನ್ನು ಸೂಕ್ತವಾಗಿ ಸಂಬಂಧಿಸಿದವರ ಗಮನಕ್ಕೆ ತರುವದು ಸಾಧು ಮಾರ್ಗ. ಪ್ರಜೆ ಮತ್ತು ಪ್ರಭುಗಳ ಮಧ್ಯಂತರದ ಸ್ನೇಹಸೇತುವೆಯಾಗಿ ಇದು ಹೆಚ್ಚಿನ ಕೆಲಸ ಮಾಡುತ್ತದೆ. ಆದರೆ ಇಂದು ಹಾಗಿರುವುದಿಲ್ಲ. ಸಣ್ಣ ಕಟ್ಟ ವಿಷಯಕ್ಕೂ ಗಲಭೆ, ಗೊಂದಲಗಳು; ರಾಷ್ಟ್ರೀಯ ಸೊತ್ತು ವಿತ್ತಗಳನ್ನು ಲೂಟಿ ಮಾಡುವುದು ಇದೆಲ್ಲ ನಡೆಯುತ್ತಿವೆ. ಸಾರ್ವಜನಿಕ ಸೇತುವೆ, ಕಟ್ಟಡ, ರಸ್ತೆಗಳನ್ನು ಹಾಳು ಮಾಡುವುದು, ರೈಲುಗಾಡಿಗಳನ್ನು ಸುಡುವುದು, ಜನರ ಸಂಚಾರವನ್ನು ತಡೆಯುವುದು, ಇವೆಲ್ಲ ಎಂಥ ಕಾರ್ಯಗಳು? ದೇಶಕ್ಕೆ ಹಾನಿಯಾದರೆ, ಅದು ಅಪ್ರತ್ಯಕ್ಷವಾಗಿ ಯಾರಿಗೆ ಹಾನಿಯಾದಂತೆ? ಈ ಕಲ್ಪನೆಯೂ ಇಲ್ಲದೆ, ಹೆಜ್ಜೆ—ಹೆಜ್ಜೆಗೂ ರಾಷ್ಟ್ರೀಯತೆಯನ್ನು ಬದಿಗೊತ್ತಿ ನಡೆಯುತ್ತಿರುವದು ದಿನನಿತ್ಯದ ವ್ಯವಹಾರವಾಗಿಬಿಟ್ಟಿದೆ. ಅಂದವೇಳೆ ಸ್ವಾತಂತ್ರ್ಯ ಬಂದು, ದೇಶ ನಮ್ಮದಾಗಿ-ಅದರ ಉತ್ಸವ ಆಚರಿಸುತ್ತಿರುವಾಗಲೂ 'ದೇಶ ನಮ್ಮದು' ಎಂಬ ಭಾವನೆ ಬರದಿದ್ದರೆ ಮುಂದೇನು ಗತಿ? ದೇಶದ ಹಿತಕ್ಕೆ ಈ ಉತ್ಸವ ಏನು ತಂದಂತಾಯಿತು?

ಈ ದಿನಾಚರಣೆಗಳ ನಾಮ, ರೂಪಗಳು ಹಲವಾರು. ಇವೆ ಸಾಮಾನ್ಯ ಜಯಂತಿ, ವರ್ಧಂತಿಗಳ ಉತ್ಸವ ಬಿಟ್ಟರೂ ಈ ಆಚರಣೆಯ ದಿವಸಗಳು ಕಡಿಮೆಯಾಗಿಲ್ಲ. ಕೆಲವು ದೊಡ್ಡ ವಿಷಯಕ್ಕೆ ಸಪ್ತಾಹವೂ ನಡೆಯುತ್ತದೆ. ಎಷ್ಟೋ ವರ್ಷಗಳಿಂದ ವನಮಹೋತ್ಸವ ಸಪ್ತಾಹ ನಡೆಯುತ್ತ ಬಂದಿದೆ. ಆದರ ಇದರಿಂದ ಬೆಳೆದದ್ದು ಎಷ್ಟು? ನಾಶವಾದದ್ದೆಷ್ಟು? ಎಂಬ ವಿಚಾರ ಗೂಢವಾಗಿಯೇ ಇದೆ. ಇದಕ್ಕೆ ಮತ್ತೊಂದು ಸಪ್ತಾಹವೇ ಬೇಕು! ಶಾಂತಿ ದಿನಾಚರಣೆ, ಸೌಜನ್ಯ ದಿನಾಚರಣೆ, ಬಾಲಕರ ದಿನಾಚರಣೆ, ಪ್ರವಾಸ ದಿನಾಚರಣೆ,- ಇನ್ನೂ ಹಲವಾರು ಆಚರಣೆಗಳು.

ಆದರೆ ಈ ಆಚರಣೆಗಳೆಲ್ಲ ಆ ದಿನದ ಮಟ್ಟಿಗೆ ಮಾತ್ರ. ಕೆಲವು ಸಾರ ಅದೂ

(ಮೂವತ್ತನೂರನೇ ಪುಟ ನೋಡಿರಿ)

THE CANARA MOTOR & GENERAL INSURANCE COMPANY LTD.,

Subsidiary Company of

THE PREMIER INSURANCE COMPANY LTD., MYSORE.

A Leading Motor Insurance Company in South India having branches all over India and Offering Unique Service to all the Policy Holders.

RENOWNED FOR QUICK SETTLEMENT OF CLAIMS

M. N. BASAVARAJIAH
MANAGING DIRECTOR

ಶ್ರೀಮತಿ ರತ್ನಮ್ಮ ಸುಂದರ ರಾವ್.

ದೋಣಿಯ ಪ್ರಯಾಣ

ಬೆಂಗಳೂರಿನಿಂದ ನೋಟ ಬದಲಾವಣೆಗೆಂದು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಮಾಡಿದ ಶ್ರೀಮತಿಯವರು ಇಲ್ಲಿನ ದೋಣಿ ಪ್ರಯಾಣದ ಸಂಸ್ಮರಣೆಯನ್ನು ಇಲ್ಲಿ ಮಾಡುತ್ತಿದ್ದಾರೆ. ಈಗ ನದಿಗಳಿಗೆಲ್ಲ ಸಂಕವಾದರೂ ವಿಶಾಲ ಸಮುದ್ರದಲ್ಲಂತೂ ದೋಣಿಯೇ ಬೇಕಲ್ಲಾ? ದೋಣಿ ಪ್ರಯಾಣದ ಸವಿಯನ್ನು ಬಲ್ಲವರು ಹಲವರು; ಹೇಳುವವರು ಕೆಲವರು ಮಾತ್ರ.

"ಸಮುದ್ರದಲ್ಲಿ ಆಳೆತ್ತರದ ಅಲೆಗಳೇಳುತ್ತವೆ. ಒಂದೊಂದು ಸಲವಂತೂ ತೆಂಗಿನ ಮರದಷ್ಟು ಎತ್ತರದ ಅಲೆಗಳೂ ಬರುವುದುಂಟು...... ದೋಣಿಯ ಮೂಲಕ ನದಿಗಳನ್ನು ದಾಟುವುದೇ ಒಂದು ಮೋಜು. ದೋಣಿಯಲ್ಲಿ ಕುಳಿತು ನೀರಿನಲ್ಲಿ ಕೈ ಇಳಿಬಿಟ್ಟು ಕುಳಿತುಕೊಳ್ಳುವುದೇ ಒಂದು ಸೊಗಸು......" ಇತ್ಯಾದಿ ವರ್ಣನೆಗಳನ್ನು ನಾನು ಪುಸ್ತಕಗಳಲ್ಲಿ ಓದಿದ್ದೆನೇ ಹೊರತು ಪ್ರತ್ಯಕ್ಷವಾಗಿ ಅವುಗಳನ್ನು ಕಂಡ ಅನುಭವ ನನಗಿರಲಿಲ್ಲ.

ನಾವಿರುವ ಬೆಂಗಳೂರಿನಲ್ಲಿ ನದಿ ಸಮುದ್ರಗಳೆಲ್ಲಿ ಬರಬೇಕು? ಇಲ್ಲಿನ ಸದ್ದು, ಗದ್ದಲ, ಗಲಾಟೆಗಳಿಂದ ಬೇಸತ್ತ ನನಗೆ ನೋಟದಲ್ಲಿ ಏನಾದರೂ ಬದಲಾವಣೆ ಮಾಡಿಕೊಳ್ಳಬೇಕೆಂದು ಮನಸ್ಸಾಯಿತು. ಹಾಗಾದರೆ ಸಮುದ್ರವನ್ನೇ ನೋಡಿ ಬರಬೇಕು. ದೋಣಿ ಪಯಣವನ್ನೇ ಮಾಡಿ ಬರಬೇಕು— ಎಂದು ಆಶಿಸಿತು ಮನಸ್ಸು.

ಕೊನೆಗೊಮ್ಮೆ ಮಂಗಳೂರು, ಉಡುಪಿಗಳಿಗೆ ಹೋಗಿ ಬರಬೇಕೆಂದು ನಿರ್ಧರಿಸಿದ್ದಾಯಿತು. ಕಾಸರಗೋಡಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವೂ ನಡೆಯುವ ಏರ್ಪಾಡಾಗಿದ್ದುದರಿಂದ ಅದರಲ್ಲಿಯೂ ಭಾಗವಹಿಸುವ ಕಾರ್ಯಕ್ರಮವನ್ನಿಟ್ಟುಕೊಂಡು ಸಮ್ಮೇಳನ ನಡೆಯುವ ನಾಲ್ಕು ದಿನಗಳ ಮುಂಚೆ ನಾವು (ನಾನು ಮತ್ತು ನನ್ನ ಪತಿ) ಬೆಂಗಳೂರನ್ನು ಬಿಟ್ಟು ಹೊರಟೆವು.

ಮೈಸೂರಿನವರೆಗೂ ರೈಲು ಪ್ರಯಾಣ. ಮೊದ ಮೊದಲು ಮಾರ್ಗದಲ್ಲಿ ಸಿಕ್ಕಿದ ನದಿಗಳನ್ನು ನೋಡಿದಾಗ — 'ಇದನ್ನು ಕಾಲ್ನಡಿಗೆಯಲ್ಲೇ ದಾಟಬಹುದಲ್ಲಾ! ಇದಕ್ಕೆ ದೋಣಿ ಏಕೆ?'—ಎಂದು ಅನ್ನಿಸಿತು. ಕಾವೇರಿ ನದಿಯನ್ನು ಕಂಡಾಗ ಈ ಭಾವನೆಯಲ್ಲಿ ಸ್ವಲ್ಪ ಬದಲಾವಣೆ ಕಂಡಿತ್ತು. ಮೈಸೂರನ್ನು ತಲುಪಿದ ಮೇಲೆ ಮುಂದಕ್ಕೆ ಮಡಿಕೇರಿಗೆ ಬಸ್ ಪ್ರಯಾಣ. ಮಡಿಕೇರಿಯನ್ನು ಸೇರಬೇಕಾದರೆ ಪಶ್ಚಿಮ ಘಟ್ಟಗಳನ್ನು ಏರಿ, ಇಳಿದು ಸಾಗಬೇಕು. ಬೆಟ್ಟಗುಡ್ಡಗಳನ್ನೇರಿ ಸಾಗುವ ಆ ಪ್ರಯಾಣವಂತೂ ಬೆಂಗಳೂರಿನವರಿಗೆ ಒಂದು ಹೊಸ ಅನುಭವವೇ ಸರಿ. ಮಡಿಕೇರಿಯಲ್ಲಿ ಬಸ್ ಬದಲಿಸಿ ಮುಂದೆ ಮಂಗಳೂರಿಗೆ ಪ್ರಯಾಣ. ಇನ್ನೇನು, ಮಂಗಳೂರು ಇಪ್ಪತ್ತು ಮೈಲಿಗಳಿರಬಹುದೆನ್ನುವಾಗ ನಮಗಂತೂ ಬಸ್ ಪ್ರಯಾಣದಿಂದಾಗಿ ಬೇಸರವೇ ಆಗಿತ್ತು. ಮೈಲಿಕಲ್ಲುಗಳನ್ನು ಎಣಿಸುತ್ತ ದಾರಿಯನ್ನು ಕಳೆದದ್ದಾಯಿತು. ಮಂಗಳೂರನ್ನು ತಲುಪಿ ಆ ರಾತ್ರಿ ಪೂರ್ತಿ ವಿಶ್ರಾಂತಿ.

ಮರುದಿನ ಮಂಗಳೂರಿನಲ್ಲಿ ನಮ್ಮ ಓಡಾಟ ಆರಂಭ. ಸ್ತಂಭ, ಅಲೋಶಿಯಸ್ ಕಾಲೇಜ್, ಕದರಿ ಮಂಜುನಾಥ ದೇವಸ್ಥಾನ, ಲೈಟ್ ಹೌಸ್‌ಗಳನ್ನು ನೋಡಿ ಸಮುದ್ರದ ಕಡೆ ಹೊರಟೆವು. ಸಮುದ್ರಕ್ಕೆ ಹೋಗಬೇಕಾದರೆ ನೇತ್ರಾವತೀ ನದಿಯನ್ನು ದಾಟಿಯೇ ಹೋಗಬೇಕು. ನಾವು ನದಿಯ ದಡಕ್ಕೆ ಹೋದೆವು. ಹಲವಾರು ದೋಣಿಗಳು ದಡದಲ್ಲಿದ್ದುವು. ನಾವು ಅದರಲ್ಲಿ ಕುಳಿತು ನದಿಯನ್ನು ದಾಟಬೇಕಾಗಿತ್ತು. ಎಂದೂ ದೋಣಿಯನ್ನು ಕಂಡರಿಯದ ನನಗೆ ಅದರಲ್ಲಿ ಕುಳಿತುಕೊಳ್ಳುವ ಸಂದರ್ಭ ಒದಗಿ ಬಂದಿದ್ದ ಆ ಸಮಯದಲ್ಲಿ ಕೈಕಾಲುಗಳು ಒಂದೇ ಸಮನೆ ನಡುಗತೊಡಗಿದ್ದುವು. 'ತುಂಬುಹೊಳೆ; ದೋಣಿ ಮುಳುಗಿ ಕೊಂಡುಬಿಟ್ಟರೆ?'—ಎನ್ನುವ ಗಾಬರಿ ಬೇರೆ. ಹೇಗೂ ಧೈರ್ಯ ಮಾಡಿಕೊಂಡು ದೋಣಿಯಲ್ಲಿ ಕಾಲಿಟ್ಟರೆ, ಅದು ಹಾಗೂ ಹೀಗೂ ತೂಗಾಡಿ ನನ್ನ ಗಾಬರಿಯನ್ನೂ ಹೆದರಿಕೆಯನ್ನೂ ಮತ್ತಷ್ಟು ಹೆಚ್ಚಿಸಿತು. ನಾನು ತಕ್ಷಣ ಕಾಲನ್ನು ಹೊರತೆಗೆದು ಹೆದರುತ್ತ ನಿಂತುಬಿಟ್ಟೆ. ಆ ದೋಣಿಯ ಚಾಲಕನಿಗೆ ನನ್ನ ಪೇಚಾಟ ಅರ್ಥವಾಗಿದ್ದಿರಬೇಕು. ಕೂಡಲೇ ಅವನೂ ಅವನ ಸಹಾಯಕನೂ ದೋಣಿಯನ್ನು ಅಲುಗಾಡದಂತೆ ಹಿಡಿದುಕೊಂಡರು. ನಾವು ದೋಣಿಯೊಳಗೆ ಕುಳಿತೆವು. ದೋಣಿ ಆ ವರೆಗೆ ಇದ್ದ ಮಟ್ಟಕ್ಕಿಂತ ಸ್ವಲ್ಪ ಒಳಕ್ಕೆ ಇಳಿಯಿತು. ನಮ್ಮ ಭಾರದಿಂದ ಹಾಗಾಯಿತೆಂಬುದು ನನಗೆ ತಕ್ಷಣ ಹೊಳೆಯಲಿಲ್ಲ. ದೋಣಿ ಮುಳುಗುತ್ತಿರುವುದೆಂದೇ ಭಾಸವಾಗಿ ನನಗೆ ಗಾಬರಿ ಹೆಚ್ಚತೊಡಗಿತ್ತು. ನನ್ನ ಕಳವಳ ಕಂಡು ದೋಣಿಯವ ಧೈರ್ಯ ಹೇಳಿದ. ಸ್ವಲ್ಪ ಹೊತ್ತಿನಲ್ಲೇ ದೋಣಿಯು ತುಂಬ ಜನ ತುಂಬಿಕೊಂಡರು. ಅಂಬಿಗ ದೋಣಿಯೊಳಗೆ ಕುಳಿತು ಹುಟ್ಟು ಹಾಕತೊಡಗಿದ. ದೋಣಿ ಮೆಲ್ಲಮೆಲ್ಲನೆ ಚಲಿಸತೊಡಗಿತು. ಅಕಸ್ಮಾತ್ ಈ ದೋಣಿ ಹೀಗೇ ಮಗುಚಿಕೊಂಡುಬಿಟ್ಟರೆ ಗತಿಯೇನು? ಎಂದೆಲ್ಲ ಯೋಚನೆ ನನಗೆ. ಸದ್ಯ ಹಾಗಾಗಲಿಲ್ಲ. ಹತ್ತುಪ್ಪತ್ತು ನಿಮಿಷಗಳಲ್ಲಿ ದೋಣಿ ಎದುರು ದಡವನ್ನು ಸೇರಿತು. ನಾನು ಸಮಾಧಾನದ ನಿಟ್ಟುಸಿರು ಬಿಟ್ಟೆ.

ದೋಣಿಯಿಂದ ಇಳಿದು ಸುಮಾರು ಅರ್ಧ ಫರ್ಲಾಂಗಿನಷ್ಟು ದೂರ ಹೋದರೆ ಸಮುದ್ರ. ನದಿಯಿಂದ ಮುಂದೆ ಕೆಲವು ಗಜಗಳಷ್ಟು ದೂರ ಹೋಗುವುದರಲ್ಲಿ ಸಮುದ್ರ ರಾಜನ ಘರ್ಜನೆ ಕಿವಿಗಳಿಗೆ ಬಂದು ಅಪ್ಪಳಿಸತೊಡಗಿತು. ಬೇಗಬೇಗನೆ ಹೊರಟು ನಾವು ಸಮುದ್ರವನ್ನು ಸಮೀಪಿಸಿದೆವು. ನಾನಂತೂ ಬೆರಗಾಗಿ ನೋಡುತ್ತಾ ನಿಂತುಬಿಟ್ಟೆ. ದೃಷ್ಟಿಗೆ ನಿಲುಕುವವರೆಗೂ ನೀರೇ ನೀರು: ನೀಲಿಯ ಬಣ್ಣ, ಈ ತುದಿಯಿಂದ ಆ ತುದಿಯ ವರೆಗೂ ಓಡೋಡಿ ದಡಕ್ಕೆ ಬಂದು ಐಕ್ಯವಾಗುತ್ತಿದ್ದ ಅಲೆಗಳು. ಆ ಅಲೆಗಳನ್ನೇ ನೋಡುತ್ತ ಮೂಕಳಾಗಿ ಅದೆಷ್ಟು ಹೊತ್ತು ನಿಂತಿದ್ದೆನೋ! ಆ ಕಡಲ ವೈಭವವನ್ನು ಎಷ್ಟು ನೋಡಿದರೂ ತೃಪ್ತಿಯಿಲ್ಲ.

ಆ ಅಲೆಗಳು ಹಿಂದಕ್ಕೆ ಸರಿಯುವಾಗ ಅದನ್ನೇ ದೃಷ್ಟಿಸಿ ನೋಡುತ್ತಿದ್ದ ನಮಗೆ ತಲೆಸುತ್ತಿ ಬಂದಂತಾಗುತ್ತಿತ್ತು. ಸಮುದ್ರದ ಹತ್ತಿರ ಹೋಗಲು ನನಗೆ ಅಂಜಿಕೆ. ಕೊನೆಗೊಮ್ಮೆ ಧೈರ್ಯ ಮಾಡಿ ಹತ್ತಿರಕ್ಕೆ ಹೋದೆ. ಸಮುದ್ರದ ಒಂದು ಅಲೆ ಓಡೋಡಿ ಬಂದು ನನ್ನ ಕಾಲುಗಳಿಗೆ ಕಚಗುಳಿ ಇಟ್ಟು ಓಡಿಹೋಯಿತು. ಇದೇ ಒಂದು ಮೋಜೆನಿಸಿತು ನಮಗೆ.

ಅಲೆಗಳು ಬಗೆಬಗೆಯ ಕಪ್ಪೆ ಚಿಪ್ಪುಗಳನ್ನು ದಡದಲ್ಲಿ ತಂದು ಹರಡಿದ್ದವು. ನಾನು ಆರಿಸಿಕೊಳ್ಳತೊಡಗಿದೆ. ಮೂದಂಗೊಂದೊಂದು ಬಗೆಯೆಂದು ಆರಿಸಿದರೂ ಒಂದು ದೊಡ್ಡ ಗಂಟೇ ಆಯಿತು. ಒಂದರಂತೆ ಮತ್ತೊಂದಿಲ್ಲ. ಘಂಟೆಗಟ್ಟಲೆ ನಾವು ಸಮುದ್ರವನ್ನು ವೀಕ್ಷಿಸಿದೆವು. ಸೂರ್ಯ ನೆತ್ತಿಯ ಮೇಲಕ್ಕೆ ಏರತೊಡಗಿದ್ದ. ಅವನ ಇರವು ನಮಗೆ ಅರಿವಾಗುತ್ತಿದ್ದಂತೆ ಕಾಲ ಕೆಳಗಿನ ಮರಳು ಸೂರ್ಯನ ಶಾಖಕ್ಕೆ ಕಾದು, ನಮ್ಮ ಅಂಗಾಲುಗಳು ಬಿಸಿಯಾಗತೊಡಗಿದವು. ಜೊತೆಗೆ ಹೊಟ್ಟೆಯೂ ಚುರುಗುಟ್ಟತೊಡಗಿ, ಎಲ್ಲ ವಿಧವಾದ ತಾಳಗಳನ್ನು ಹಾಕತೊಡಗಿತು. ಆದುದರಿಂದ ನಾವು ಹಿಂತಿರುಗಬೇಕಾದುದು ಅನಿವಾರ್ಯವೇ ಆಯಿತು. ಪುನಃ ನದಿಯ ಬಳಿಗೆ ಬಂದು ದೋಣಿಯೊಳಗೆ ಕುಳಿತೆವು. ಈ ಸಲ ಹೆಚ್ಚು ಗಾಬರಿಯಾಗಲಿಲ್ಲ. ಧೈರ್ಯದಿಂದಲೇ ಕುಳಿತಿದ್ದು ದೋಣಿ ಪಯಣದ ಸವಿಯನ್ನು ಕಂಡೆವು. ನದಿಯನ್ನು ದಾಟಿದ್ದಾಯಿತು.

ನಾವು ತಂಗಿದ್ದ ಮನೆ ನದಿಯಿಂದ ಸುಮಾರು ದೂರವೇ ಇತ್ತು. ಆದ್ದರಿಂದ ದಾರಿಯಲ್ಲೇನಾದರೂ ಕೊಂಡು ತಿನ್ನೋಣವೆಂದುಕೊಂಡು ಬರುತ್ತಿದ್ದೆವು. ಅಲ್ಲೊಂದು ಕಡೆ ಹೆಂಗಸೊಬ್ಬಳು ಬುಟ್ಟಿಯಲ್ಲಿ ಏನನ್ನೋ ಇಟ್ಟುಕೊಂಡು ಮಾರುತ್ತಿದ್ದುದು ಕಣ್ಣಿಗೆ ಬಿತ್ತು. ಅವಳ ಬಳಿ ಜನಗಳ ಒಂದು ಸಣ್ಣ ಗುಂಪೇ ನೆರೆದಿತ್ತು. ನಾವೂ ಹೋಗಿ ಅದೇನೆಂದು ನೋಡಿದೆವು. ಆ ಬುಟ್ಟಿಯಲ್ಲಿದ್ದುದು ನೋಡಲಿಕ್ಕೆ ಒಂದು ಬಗೆಯ ಕಾಯಿಗಳಂತೆ ಇದ್ದುವು. ನೇರಳೇ ಹಣ್ಣಿನ ಬಣ್ಣ, ಅಷ್ಟೇ ದಪ್ಪ. ಆಕಾರ ಮಾತ್ರ ಬಾದಾಮಿ ಕಾಯಿಯದು. ಅದೇನು—ಹಣ್ಣೇ, ಕಾಯಿಯೇ? ಅಥವಾ ಕಡಲೆ ಕಾಯಿಯಂತೆ ಸಿಪ್ಪೆ ಬಿಡಿಸಿ ತಿನ್ನುವುದೇ? ಹಾಗೇ ತಿನ್ನುವುದೇ? ನಮಗೊಂದೂ ಗೊತ್ತಿಲ್ಲ. ಆ ವರೆಗೆ ಅದನ್ನು ಕೊಂಡ ಜನರು ಅದನ್ನು ಹೇಗೆ ತಿನ್ನುವರೋ ಹಾಗೇ ನಾವು ತಿನ್ನೋಣವೆಂದುಕೊಂಡು ನಾವೂ ಅದನ್ನು ಸ್ವಲ್ಪ ಕೊಂಡೆವು. ನಮ್ಮ ದುರಾದೃಷ್ಟವೆಂಬಂತೆ ಕೊಂಡವರು ಯಾರೂ ಅದನ್ನು ನಮ್ಮೆದುರು ತಿನ್ನಲಿಲ್ಲ. ಕೊಂಡ ತಕ್ಷಣವೇ ಆ ಸ್ಥಳ ಬಿಟ್ಟು ನಡೆದು ಬಿಡುತ್ತಿದ್ದರು. ಕೊನೆಗೆ ನಾವು ನಮ್ಮ ಅಜ್ಞಾನವನ್ನು ಪ್ರದರ್ಶಿಸಲೇ ಬೇಕಾಯಿತು. ಮಾರುತ್ತಿದ್ದ ಆಕೆಯನ್ನೇ ಕೇಳಿದೆವು—"ಇದನ್ನು ತಿನ್ನುವುದು ಹೇಗೆ?"

ಆಗವಳು ಮಂಗಳೂರು ಕನ್ನಡದ ಧಾಟಿಯಲ್ಲಿ ರಾಗವಾಗಿ ಉತ್ತರಿಸಿದಳು. "ಈ ಚಿಪ್ಪಿನೊಳಗೆ ಹುಳು ಉಂಟು. ಚಿಪ್ಪನ್ನು ಬಿಡಿಸಿ, ಹುಳುವನ್ನು ತೆಗೆದುಕೊಂಡು ಅಡಿಗೆ ಮಾಡಿ ತಿನ್ನಬೇಕು."

ಹುಳುವೇ?!! ನಾವಂತೂ ಹೌಹಾರಿದೆ. ಶುದ್ಧ ಶಾಖಾಹಾರಿಗಳಾದ ನಾವು ಕೊಂಡದ್ದನ್ನ ಅವಳಿಗೇ ಹಿಂತಿರುಗಿಸಿ, ನಮ್ಮ ಅಜ್ಞಾನವನ್ನು ಅವಳೆದುರಿನಲ್ಲಿ ಒಪ್ಪಿಕೊಂಡು ಹೊರಟುಬಂದೆವು. ಅವಳು ನಸುನಕ್ಕು ಸುಮ್ಮನಾದಳು.

ಹಸಿವನ್ನೂ ಜೊತೆಯಲ್ಲೇ ಇರಿದುಕೊಂಡೇ ನಾವು ತಂಗಿದ್ದ ಮನೆಯನ್ನು ಸೇರಿದೆವು. ಆ ದಿನದ ಅಡಿಗೆ ಹೇಗಾದರೂ ಇರಲಿ: ನಮ್ಮ ನಾಲಿಗೆಗೆ ಮಾತ್ರ ಅತ್ಯಂತ ರುಚಿಯಾಗಿತ್ತೆಂಬುದಂತೂ ನಿಜ. ಪ್ರತಿ ದಿನ ನಾವು ಊಟ ಮಾಡುವ ವೇಳೆಗಿಂತ ಅಂದು ಎರಡು ಘಂಟೆಗಳಷ್ಟು ಕಾಲ ತಡವಾಗಿದ್ದುದೇ ಇದಕ್ಕೆ ಕಾರಣವಿರಬೇಕು.

ಮುಂದಿನ ನಮ್ಮ ಕಾರ್ಯಕ್ರಮ ಉಡುಪಿಗೆ ಹೋಗಿ ಬರುವುದು. ಮಂಗಳೂರಿನಿಂದ ಉಡುಪಿಗೆ ಎರಡು ಬಗೆಯ ಮಾರ್ಗಗಳುಂಟು. ಒಂದು ನೇರವಾದ ರಸ್ತೆಯ ಮಾರ್ಗ. ಇನ್ನೊಂದು—ಒಂದಾದ ಮೇಲೊಂದರಂತೆ ನಾಲ್ಕು ನದಿಗಳನ್ನು ದಾಟಿ ಹೋಗುವುದು. ನಾವು ಈ ಎರಡನೆಯ ಮಾರ್ಗದಿಂದಲೇ ಹೋಗಿ ಬರಲು ನಿಶ್ಚಯಿಸಿದೆವು. ಮಂಗಳೂರಿನಲ್ಲಿ ಬಸ್ ಹತ್ತಿ ಹೊರಟೊಡನೆ ಮೊದಲು ಸಿಕ್ಕಿದುದು ಗುರುಪುರ ಹೊಳೆ, ಬಸ್ಸಿನಿಂದಿಳಿದು ದೋಣಿಯಲ್ಲಿ ಕುಳಿತು ನದಿ ದಾಟಿದೆವು. ಎದುರು ದಡದಲ್ಲಿ ಬಸ್ ಸಿದ್ಧವಾಗಿ ನಿಂತಿತ್ತು. ಅದರಲ್ಲಿ ಕುಳಿತು ಪುನಃ ಹತ್ತು-ಹದಿನೈದು ಮೈಲಿಗಳ ಪ್ರಯಾಣ. ಪುನಃ ಹೊಳೆ. ದೋಣಿಯಲ್ಲಿ ಕುಳಿತು ಅದನ್ನೂ ದಾಟಿದೊಡನೆ, ಎದುರು ದಡದಲ್ಲಿ ಸಿದ್ಧವಾಗಿದ್ದ ಬಸ್ಸಿನಲ್ಲಿ ಮುಂದಕ್ಕೆ ಪ್ರಯಾಣ. ಪುನಃ ಹೊಳೆ. ಎದುರು ದಡದಲ್ಲಿ ಮತ್ತೊಂದು ಬಸ್ ಹಾಜರು. ಅದರಲ್ಲಿ ಕುಳಿತು ಮತ್ತೆ ಹತ್ತು-ಹನ್ನೆರಡು ಮೈಲಿಗಳ ಪ್ರಯಾಣ. ಪುನಃ ನದಿ. ಹೀಗೆ ನಾಲ್ಕು ಹೊಳೆಗಳನ್ನೂ ದಾಟಿದ್ದಾಯಿತು. ಈ ಮಾರ್ಗವಂತೂ ನನಗೆ ಅತ್ಯಂತ ಆಹ್ಲಾದಕರವಾಗಿತ್ತು. ಸಮುದ್ರದ ಪಕ್ಕದಲ್ಲೇ (ಸ್ವಲ್ಪ ದೂರದಲ್ಲಿ) ರಸ್ತೆ. ಬಸ್ಸಿನಲ್ಲಿ ಕುಳಿತು ಹೋಗುತ್ತಿದ್ದರೆ, ನಮ್ಮ ಎಡ ಭಾಗಕ್ಕೆ ಸ್ವಲ್ಪವೇ ದೂರದಲ್ಲಿ ಸಮುದ್ರ ಕಾಣಿಸುತ್ತಿತ್ತು. ಮಧ್ಯೆ ಮಧ್ಯೆ ನದಿ; ದೋಣಿ ಪಯಣ. ನಾಲ್ಕನೆಯ ಹೊಳೆ ದಾಟಿ ನಾಲ್ಕೈದು ಮೈಲಿಗಳನ್ನು ಬಸ್ಸಿನಲ್ಲಿ ಕುಳಿತು ಕಳೆದೊಡನೆ ಉಡುಪಿ ಸಿಕ್ಕಿತು. "ಇಷ್ಟು ಬೇಗ ಉಡುಪಿ ಸಿಕ್ಕಿತೇ? ಇನ್ನೂ ನಾಲ್ಕು ಹೊಳೆ ದಾಟಿ ಬಂದಿದ್ದರೆ

(ಮೂವತ್ತೆರಡನೇ ಪುಟ ನೋಡಿ)

"ಅಮ್ಮಾ......ಅಮ್ಮಾ"

ಶಾಲೆಯಿಂದ ಮನೆಗೆ ಓಡಿಬರುತ್ತ ರವಿ ಇನ್ನೊಮ್ಮೆ ಕೂಗಿದನು. ನೀರು ತರಲು ಬಾವಿಗೆ ಹೋಗಿದ್ದ ಮೋಹಿನಿ ಮಗನ ಕೂಗು ಕೇಳಿ ಗಾಬರಿಗೊಂಡಳು. ಬಾವಿಯಲ್ಲಿ ಮುಳುಗಿಸಿದ ಕೊಡವನ್ನು ಬೇಗನೇ ಎತ್ತಿಕೊಂಡು ತಿರುಗುವಷ್ಟರಲ್ಲೇ ಮುದ್ದು ರವಿ ಅಲ್ಲೇ ಪ್ರತ್ಯಕ್ಷನಾದನು! ಮೊಗದಲ್ಲಿ ಸಂತೋಷವು ಚಿಮ್ಮುತಿತ್ತು!

"ಅಮ್ಮಾ...ಇಂದು ಶಾಲೆಯಲ್ಲಿ ನನಗೊಂದು ಬಹುಮಾನ ದೊರಕಿದೆ." ಸಂತೋಷವನ್ನು ತಡೆಯಲಾರದೆ ರವಿ ಕುಣಿಯುತಿದ್ದನು! ಮಗನ ಆನಂದವನ್ನು ನೋಡಿ ಮೋಹಿನಿಯ ಮೊಗವೂ ಅರಳಿತು.

ರವಿ ಇನ್ನೂ ಚಿಕ್ಕವನಾದರೂ ತುಂಬಾ ಚುರುಕು ಸ್ವಭಾವದವನು. ಕಲಿಯುವುದರಲ್ಲಿ ಆತನು ತರಗತಿಯಲ್ಲಿ ಪ್ರಥಮನಾಗಿದ್ದ. ಶಾಲೆಯ ಸಮಾರಂಭಗಳಲ್ಲಿ ಬಹುಮಾನವು ಆತನಿಗೆ ಕಟ್ಟಿಟ್ಟ ಗಂಟು. ಹೀಗೆ ಅಗಾಧ ಬಹುಮಾನಗಳನ್ನು ತಂದು ತನ್ನ ತಾಯಿಯ ನೊಂದ ಹೃದಯವನ್ನು ಸಂತೈಸುತಿದ್ದನು. ರವಿಯೇ ಮೋಹಿನಿಯ ಜೀವನ ಜ್ಯೋತಿ. ಆಶೆಯ ಅಂಕುರ!

ರವಿ ಕುಣಿಯುತ್ತ ಮನೆಯ ಜಗಲಿಯನ್ನೇರಿ ಬಹುಮಾನದ ಗಂಟನ್ನು ಬಿಡಿಸತೊಡಗಿದ. ಮೋಹಿನಿ ಅವಸರದಲ್ಲಿ ನೀರಿನ ಕೊಡವನ್ನು ಅಡುಗೆ ಮನೆಯಲ್ಲಿಟ್ಟು ಅಲ್ಲಿಗೆ ಬಂದಳು. ರವಿ ಪೇಕೇಟನ್ನು ಬಿಡಿಸಿ ತೋರಿಸಿದ "ಅಮ್ಮಾ ನೋಡು, ಎಷ್ಟು ಚಂದವಿದೆ!"

ಮೋಹಿನಿ ತುಸು ಚಕಿತಳಾಗಿ ದಿಟ್ಟಿಸಿ ನೋಡ ತೊಡಗಿದಳು. ತನ್ನ ಕಣ್ಣುಗಳನ್ನೇ ನಂಬಲಾರದಂತೆ ಅದನ್ನೇ ದಿಟ್ಟಿಸುತಿದ್ದಳು! ವಿಷಯವೇ ಆಕೆಗೆ ತಿಳಿಯದಾಗಿತ್ತು. ಪೇಕೇಟಿನಲ್ಲಿ ಖಾಕಿ ಮತ್ತು ಬಿಳಿ ವಸ್ತ್ರದ ತುಂಡುಗಳಿದ್ದುವು!

'ಇಂದು ಶಾಲೆಯಲ್ಲಿ ಮಕ್ಕಳ ದಿನಾಚರಣೆ ಇತ್ತು. ನನಗೆ ಈ ಬಹುಮಾನ ಕೊಟ್ಟರು' ತಾಯಿಯ ಸಂಶಯವನ್ನರಿತೋ ಏನೋ ರವಿ ತನ್ನ ಮಾತನ್ನು ಮುಂದುವರಿಸಿದ. ಆದರೆ ಮೋಹಿನಿಯ ಮುಖ ಮುದ್ರೆ ಬದಲಾಗಲಿಲ್ಲ!

ಮಕ್ಕಳ ದಿನಾಚರಣೆ!...ಬಹುಮಾನ! ...ಬಟ್ಟೆಗಳು!!.... ಮೋಹಿನಿಯ ಮನಸ್ಸು ವಿಚಾರದ ಸುಳಿಯಲ್ಲಿ ತಿರುಗುತ್ತಲೇ ಇತ್ತು. ತನ್ನ ತಾಯಿಯ ಮನಸ್ಸಿನಲ್ಲಿದ್ದ ಗೊಂದಲ ಮುದ್ದು ರವಿಗೆ ಹೇಗೆ ಗೊತ್ತಾಗಬೇಕು? ಆತ ಸಂತೋಷದ ಹುಮ್ಮಸಿನಿಂದ ಪುನಃ ಹೇಳಿದ—

"ನೋಡಮ್ಮಾ, ಒಳ್ಳೆಯ ಹೊಸ ವಸ್ತ್ರ ಎಲ್ಲರಿಗೂ ಕೊಡಲಿಲ್ಲ. ನಮ್ಮ ತರಗತಿಯಲ್ಲಿ ನಾಲ್ಕು ಮಂದಿಗೆ ಮಾತ್ರ ಕೊಟ್ಟಿದ್ದಾರೆ....ಬೊಮ್ಮ ಹರಿಜನರಿಗೆ ಮಾತ್ರ ಕೊಟ್ಟಿದ್ದಾರೆ!"

"ಬೊಮ್ಮ ಹರಿಜನರಿಗೆ ಕೊಟ್ಟಿದ್ದಾರೆ!" ಇಷ್ಟರ ವರೆಗೆ ಅಸ್ಪಷ್ಟವಾಗಿ ಮಂಜಿನಲ್ಲಿದ್ದ ವಿಷಯವು ಇದೀಗ ಮಿಂಚಿನಂತೆ ಹೊಳೆಯಿತು! ವಿಷಯ ತಿಳಿದಂತೆ ಆಕೆಯ ಮೊಗ ಬಾಡಿತು. ನಿರಾಶಾ ನಿಟ್ಟುಸಿರೊಂದು ಆಕೆಗೆ ತಿಳಿಯದಂತೆ ಹೊರಹೊಮ್ಮಿತು. ಹತ್ತಾರು ವಿಚಾರಗಳು ಮನಸ್ಸನ್ನು ಮುತ್ತಲು ಕಣ್ಣುಗಳಲ್ಲಿ ನೀರೂರಿತು!

ರವಿ ಏನೊಂದೂ ತಿಳಿಯದವನಾಗಿದ್ದ. ಪ್ರತಿ ಸಲವೂ ಬಹುಮಾನ ತಂದಾಗ ತನ್ನ ಸಂತಸದ ಕುಣಿತಕ್ಕೆ ತಾಳ ಹಾಕಿದಂತೆ ತಾನೂ ಹಿಗ್ಗಿ ಮುದ್ದಿಸುತಿದ್ದ ತನ್ನ ತಾಯಿ ಇದೇಕೆ ಅಂದು ಮೌನವಾಗಿದ್ದಾಳೆನ್ನುವುದು ಆತನ ಮನಸ್ಸಿಗೆ ನಿಲುಕದ ವಿಷಯವಾಗಿತ್ತು. ತಾಯಿಯ ಕಣ್ಣುಗಳಲ್ಲಿ ನೀರೂರಿದುದನ್ನು ನೋಡಿ ಆತನ ಸಂತಸ ಆದಾಗಲೇ ಮಾಯವಾಗಿತ್ತು. ಆದರೂ ತಾಯಿಯನ್ನು ಸಂತೈಸಲು 'ಯಾಕಮ್ಮ ಅಳುತ್ತಿ? ಬಟ್ಟೆ ಚೆನ್ನಾಗಿದೆಯಲ್ಲ....ನೋಡಿಲ್ಲಿ." ಎಂದು ಪೇಕೇಟನ್ನು ಮೇಲಕ್ಕೆತ್ತಿ ತೋರಿಸಲು ಆಕೆಯ ದುಃಖ ಜ್ವಾಲಾಮುಖಿಯಂತೆ ಹೊರ ಹೊಮ್ಮಿತು! ಸರ್ರನೇ ಪೇಕೇಟನ್ನು ಸೆಳೆದು ಒಗೆದೇ ಬಿಟ್ಟಳು! ಆಂ! ರವಿ ತಬ್ಬಿಬ್ಬಾದ! ಆತನ ಕೋಮಲ ಮನಸ್ಸಿಗೆ ಏನೊಂದೂ ತೋರಲಿಲ್ಲ; ಮನಸ್ಸು ಬಾಡಿತು. ಆತನ ಕಣ್ಣುಗಳಲ್ಲೂ ನೀರೂರಿತು!

"ನಿಜಕ್ಕೂ ಶಾಲೆಯಲ್ಲಿ ಕೊಟ್ಟರು.... ನಾನಾಗಿ ಕೇಳಲಿಲ್ಲ"....... ರವಿ ತಾಯಿಯ ಮೊಗವನ್ನು ನೋಡುತ್ತ ಮರುಗುವ ಧ್ವನಿಯಲ್ಲಿ ತಿಳಿಸಿದ. ತಾಯಿಯ ಕಣ್ಣೀರನ್ನು ಕಂಡು ಆಕೆಯ ಅಳುವಿನಲ್ಲಿ ತಾನೂ ಪಾಲ್ಗೊಂಡು ಮರುಗತೊಡಗಿದ.

"ನಾನಾಗಿ ಕೇಳಲಿಲ್ಲ...." ಮಾತಿದು ಆಕೆಯ ನೊಂದ ಹೃದಯವನ್ನು ಬರ್ಚಿಯಂತೆ ತಿವಿಯಿತು. ಕಣ್ಣುಗಳಲ್ಲಿ ನೀರು ಧಾರೆಯಾಗಿ ಹರಿಯತೊಡಗಿತು.

"ಅಯ್ಯೋ....ರವಿ...." ಎಂದು ತನ್ನ ಕಂದನನ್ನು ತಬ್ಬಿಕೊಂಡು ಅಲ್ಲೇ ಒರಗಿದಳು. ವಿಷಯ ಸ್ಪಷ್ಟವಾಗಿ ತಿಳಿಯದಿದ್ದರೂ ತಾಯಿಯ ಅಳಲನ್ನು ನೋಡಿ ರವಿಯೂ ಬಿಕ್ಕಿ ಬಿಕ್ಕಿ ಅಳತೊಡಗಿದ.

ತಾಯಿಯ ಮಗ್ಗುಲಲ್ಲಿ ಬಿದ್ದುಕೊಂಡು ಅಳುತಿದ್ದಂತೆ ಆತನಿಗೆ ತನ್ನ ತಾಯಿಯ ದುಃಖದ ಅರಿವು ತಾನಾಗಿ ಉಂಟಾಯಿತು. ಅಲ್ಲೇ ಎದುರಿನ ಗೋಡೆಯಲ್ಲಿ ತೂಗಹಾಕಿದ್ದ ತನ್ನ ಪತಿಯ ಪಟವನ್ನು ಆಕೆ ಆಗಾಗ ನೋಡಿ ಅಳುತ್ತಿದ್ದಳು. ರವಿಗೂ ತನ್ನ ತಂದೆಯ ನೆನಪಾಗಿ ದುಃಖವು ಉಕ್ಕಿ ಬಂತು. ಹೌದು...! ಆತನನ್ನು ಅವರೆಷ್ಟು ಪ್ರೀತಿಯಿಂದ ಮುದ್ದಿಸುತ್ತಿದ್ದರು! ಅವರೊಂದಿಗೆ ಸೈಕಲಲ್ಲಿ ಕುಳಿತು ಆಫೀಸಿಗೆ ಹೋಗುದೂ ಪೇಟೆಯಲ್ಲಿ ಅವರೊಡನೆ ಸಂತೋಷದಿಂದ ತಿರುಗಾಡಿ ತನಗೆ ಬೇಕಾದ ಸಾಮಾನುಗಳನ್ನು ಪಡೆದುದೂ ಆತನ ನೆನಪಿಗೆ ಬಂದು—"ಅಯ್ಯೋ ಅಪ್ಪಾ" ಎಂದು ಮನಸ್ಸು ಮರುಗತೊಡಗಿತು.

'ಅಯ್ಯೋ ರವಿ...ನಿನ್ನ ತಂದೆ...... ಇದ್ದಿದ್ದರೆ...." ಎಂದು ಆತನನ್ನು ಅಪ್ಪಿಕೊಂಡು ಬಿಕ್ಕಿಬಿಕ್ಕಿ ಅಳುವ ತಾಯಿಯ ದುಃಖದ ಆಳವನ್ನು ಅರಿಯತೊಡಗಿದ. ತಾನು ತಂದೆಯನ್ನು ಒಂದು ವರ್ಷದ ಹಿಂದೆ ಕಳೆದುಕೊಂಡ ಭೀಕರ ಚಿತ್ರವೂ ಆತನ ಕಣ್ಣಿಗೆ ಕಟ್ಟಿದಂತಾಯಿತು. ತಾನು ತಂದೆಯಿಲ್ಲದ ನಿರ್ಭಾಗ್ಯನೆಂದು ಮರುಗತೊಡಗಿದ.

ಇತ್ತ ಮೋಹಿನಿಯೂ ತನ್ನ ಗತವೈಭವದ ಸವಿನೆನಹುಗಳನ್ನು ಮೆಲುಕು ಹಾಕುತ್ತಾ ಮರುಗುತ್ತಿದ್ದಳು. ಆಕೆ ಹುಟ್ಟಿದ್ದು ಶ್ರೀಮಂತ ಮನೆತನದಲ್ಲಿ. ಲಗ್ನವಾದ ಬಳಿಕ ತಂದೆಯ ಶ್ರೀಮಂತಿಕೆ ಬಡಕಲಾದರೂ ಆಕೆಯ ಸಂತೋಷದ ಜೀವನಕ್ಕೆ ಏನೂ ಕಡಿಮೆಯಿರಲಿಲ್ಲ. ಕೈಹಿಡಿದ ಪತಿದೇವರು ತಾಲೂಕು ಕಛೇರಿಯಲ್ಲಿ ಗುಮಾಸ್ತರಾಗಿದ್ದರು. ಅವರದು ಕಿರಿಯ ಸಂಸಾರವಾಗಿದ್ದು ಆಧುನಿಕ ಆದರ್ಶ ಜೀವನದ ಮಾದರಿಯಾಗಿತ್ತು! ಆದರೇನು? ಸರಾಗವಾಗಿ ಸಂತೋಷದಿಂದ ಸಾಗುತಿದ್ದ ಬಾಳ ನೌಕೆ ಒಮ್ಮೆಗೆ ಬಿರುಗಾಳಿಗೆ ಸಿಕ್ಕಿತು. ಒಂದು ವರ್ಷದ ವರೆಗಿನ ಪತಿಯ ಅಸೌಖ್ಯದಿಂದಾಗಿ ಜೀವನದಲ್ಲಿ ಎಣಿಸದ ಕಷ್ಟವನ್ನು ಅನುಭವಿಸಬೇಕಾಯಿತು. ಅದೆಲ್ಲವನ್ನು ತಾಳ್ಮೆಯಿಂದ ಸಹಿಸಿಕೊಂಡರೂ ಕ್ರೂರ ವಿಧಿಗೆ ಕರುಣೆ ಬರಲಿಲ್ಲ. ಕೊನೆಗೆ ಬಾಳಿನ ದೈವವೇ ಅಸ್ತ ಹೋಗಿ ಎಲ್ಲೆಲ್ಲೂ ಕತ್ತಲೆ ಆವರಿಸಲು ಮುಂದಿನ ದಾರಿಯನ್ನೇ ಕಾಣದಾದಳು. ಹೀಗೆ ಆವರಿಸಿದ ಕತ್ತಲೆಯಲ್ಲಿ ಮುದ್ದು ರವಿಯೇ ಆಕೆಯ ಆಶಾಜ್ಯೋತಿಯಾಗಿದ್ದನು!

ಇಬ್ಬರೂ ಅಲ್ಲೇ ಬಿದ್ದುಕೊಂಡು ಅಳುತಿದ್ದರು. ಸ್ವಲ್ಪ ಸಮಯದ ನಂತರ ರವಿ ಮೆಲ್ಲಗೆ ಎದ್ದನು! ಮರುಕದಿಂದಾಗಿ ಆತನ ಮೊಗ ಬಾಡಿತ್ತು. ತಾಯಿಯ ಕಡೆಗೆ ಒಮ್ಮೆ ನೋಡಿದನು. ಇನ್ನೂ ಮರುಗುತ್ತಲೇ ಇದ್ದಳು! ಎದ್ದು ನಿಂತೊಡನೆ ತಂದೆಯ ಪಟ ಕಣ್ಣಿಗೆ ಬೀಳಲು ದುಃಖದ ಕಾರಂಜಿ ಪುನಃ ಚಿಮ್ಮಿತು. ಕಣ್ಣುಗಳಲ್ಲಿ ನೀರು ಧಾರೆಯಾಗಿ ಹರಿಯುತ್ತಿತ್ತು! ಭಾರವಾದ ಮನಸ್ಸಿನಿಂದಾಗಿ ತಲೆ ತಗ್ಗಿಸಲು ಬಿಸಾಡಿದ ಪೇಕೇಟು—ಆತನ 'ಬಹುಮಾನ' ಕಣ್ಣಿಗೆ ಬಿತ್ತು!

(ಮೂವತ್ತೊಂದನೇ ಪುಟ ನೋಡಿರಿ)

WITH BEST COMPLIMENTS OF:

M. S. RAMANNA,

INSPECTOR,

THE NEW INDIA ASSURANCE COMPANY LTD.,

MANDYA.

ಶ್ರೀ ಎಚ್. ಶಾಮ ಭಟ್, ಬಿ.ಎ., ಬಿ. ಇಡಿ.

ವೈವಿಧ್ಯತೆಯಲ್ಲಿ ಏಕತೆ ಬರಲಿ

ಆಸೇತು ಹಿಮಾಚಲ ಹರಡಿದ ಭಾರತದಲ್ಲಿ ವಿವಿಧ ಭಾಷೆ, ಮತ, ಪಂಥ ಮೊದಲಾದ ಭೇದಗಳಿರುವುದು ಸಹಜ. ಈ ವಿವಿಧತೆಯಲ್ಲೇ ಹಿಂದೆ ಏಕತೆ ಮೂಡಿ ಬಂದಿತ್ತು; ಭಾರತೀಯ ಸಂಸ್ಕೃತಿ ದಿಗ್ದಿಗಂತಗಳಲ್ಲಿ ವ್ಯಾಪಿಸಿತ್ತು; ಲೋಕಕ್ಕೆ ಬೆಳಕು ತೋರಿತ್ತು. ನಾವೂ ಇಂದು ಏಕತೆಯನ್ನು ರೂಢಿಸಿಕೊಂಡರೆ, ಇತರ ರಾಜಕೀಯ-ಸಾಮಾಜಿಕ ಸಮಸ್ಯೆಗಳನ್ನು ದೂರ ಮಾಡಲು ನೂರು ಆನೆಯ ಬಲ ಬರುತ್ತದೆ.

ಪ್ರಾಚೀನ ಭಾರತವು ಇತಿಹಾಸ ಕಾಲ ಪೂರ್ವದಲ್ಲೇ ನಾಗರಿಕತೆಯತ್ತ ಕೈದೀವಿಗೆ ತೋರಿ ಮುನ್ನಡೆಸುವ ಮಾರ್ಗದರ್ಶಕ ಬೃಹದ್ರಾಷ್ಟ್ರವಾಗಿತ್ತು. ಮುಸ್ಲಿಮರಿಂದ ತೊಡಗಿ ಆಂಗ್ಲೇಯರ ತನಕದ ವಿವಿಧ ವಿದೇಶೀ ಆಕ್ರಮಣಗಳಿಂದಲೂ ಅಚ್ಚಳಿಯದೆ ಉಳಿಸಿಕೊಳ್ಳುವ ಭವ್ಯ ಪರಂಪರೆ ಈ ನಾಡಿಗಿತ್ತು. ಸತ್ಯ, ನ್ಯಾಯ, ಧರ್ಮ, ಅಹಿಂಸೆಗಳ ಮಹಾಸ್ತಂಭಗಳಿಂದ ಹೊರಲ್ಪಟ್ಟ ಸಂಸ್ಕೃತಿಯ ಗೋಪುರ ಅಭೇದ್ಯವಾಗಿತ್ತು. ವಿದೇಶೀ ಆಕ್ರಮಣಗಳಿಂದ ಪರಿಣಾಮಕಾರೀ ಪ್ರಭಾವವುಂಟಾಗಿದ್ದರೂ, ತನ್ನದೇ ಆದ ವೈಶಿಷ್ಟ್ಯಪೂರ್ಣ ಸನಾತನ ಧರ್ಮವನ್ನು ಈ ನಾಡು ಉಳಿಸಿಕೊಂಡು ಬಂದಿದೆಯೆನ್ನುವಾಗ ಅದರ ಹಿರಿಮೆಯ ಅರ್ಥವನ್ನು ಪ್ರಸಾಯ ಅರಿತುಕೊಳ್ಳಲು ಸಾಧ್ಯವಿದೆ. ವಿಪುಲ ಸಂಪದ್ಭರಿತವಾಗಿದ್ದ ದೇಶ ಪರಕೀಯ ದಬ್ಬಾಳಿಕೆಯಿಂದ ದಾರಿದ್ರ್ಯದ ಕಹಿ ಅನುಭವದೊಂದಿಗೆ ದಾಸ್ಯದ ಸಂಕಷ್ಟವನ್ನೂ ಸಹಿಸಬೇಕಾಯಿತು.

ಜಾಗೃತ ಭಾರತವು ತನ್ನ ಸ್ವಾತಂತ್ರ್ಯವನ್ನು ಪಡೆದು ಸಂಪದಭ್ಯುದಯದತ್ತ ಮುಂದುವರಿಯಬೇಕೆಂಬ ಕನಸನ್ನು ನನಸಾಗಿಸಲು ಹವಣಿಸುತ್ತಿದೆ. ಕಾಲಗತಿಯೊಂದಿಗೆ ವರ್ಧಿಸುತ್ತಿರುವ ವೈಜ್ಞಾನಿಕ ಪ್ರಭಾವದಿಂದಾಗಬಹುದಾದ ವಿಶ್ವಸಂಗ್ರಾಮವನ್ನು ತಪ್ಪಿಸಿ, ತನ್ಮೂಲಕ ಜಗತ್ತಿನಲ್ಲಿ ಶಾಂತಿಯು ಸದಾ ನೆಲೆನಿಲ್ಲಬೇಕೆಂಬ ಮಹತ್ವಾಕಾಂಕ್ಷೆಯಿಂದ, ಶತ ಪ್ರಯತ್ನ ಮಾಡುತ್ತಿರುವುದು ಅಭಿಮಾನಪೂರ್ವಕ ಸ್ಮರಿಸಬಹುದಾದ ವಿಷಯವಾಗಿದೆ.

ಜನವರಿ ಇಪ್ಪತ್ತಾರು ಭಾರತದ ಇತಿಹಾಸದಲ್ಲಿ ಮಾತ್ರವಲ್ಲ, ವಿಶ್ವದ ಇತಿಹಾಸದಲ್ಲೇ ಸುವರ್ಣಾಕ್ಷರಗಳಿಂದ ಬರೆಯಬೇಕಾದ ಮಹತ್ವಪೂರ್ಣ ದಿನ. ಹೇರಳ ಜನಸಂಖ್ಯೆಯಿರುವ ಒಂದು ವಿಶಾಲ ರಾಷ್ಟ್ರದಲ್ಲಿ—[illegible] ಒಂದು ಚಕ್ರಾಧಿಪತ್ಯದಿಂದ ಸಂಪೂರ್ಣವಾಗಿ— ವಿಮೋಚನೆ ಹೊಂದಿ ಗಣರಾಜ್ಯದ ಅರುಣೋದಯವಾದ ಸುದಿನ. ಕತ್ತಲೆಯಲ್ಲಿ ಕಣ್ಣು ಕಾಣದೆ ಮುಗ್ಗರಿಸುತ್ತಿದ್ದಾಗ ಬೆಳಕಿನ ಪ್ರಾಪ್ತಿಯಾದಾಗ ಆಗುವ ಆನಂದ ಭಾರತೀಯರಲ್ಲಿ ಅಂದು ಗೋಚರಿಸಿತು. ಆದರೆ ಸ್ವತಂತ್ರ ಭಾರತದ ಸಮಸ್ಯೆಗಳನ್ನು ವಿವೇಚಿಸಿದಾಗ ಆನಂದದ ಕ್ಷಣಿಕಕ್ಕೆ ಅವಕಾಶವಾದರೂ ಹೇಗೆ ಸಾಧ್ಯ?

ಸ್ವರಾಜ್ಯವನ್ನು ಪಡೆಯುವುದಕ್ಕಿಂತಲೂ ಅದನ್ನು ರಕ್ಷಿಸಿಕೊಳ್ಳುವುದು ತ್ರಾಸದಾಯಕವೆಂಬುದು ರಾಜನೀತಿಜ್ಞರ ಮತ. ಏಕೆಂದರೆ ರಾಜತಂತ್ರ ಮತ್ತು ಲೋಕತಂತ್ರ ಪದ್ಧತಿಗಳಲ್ಲಿ ವಿಶೇಷವಾದ ಅಂತರವಿದೆ. ರಾಜತಂತ್ರದಲ್ಲಿ ರಾಜ್ಯದ ಸರ್ವಾಧಿಕಾರವು ಒಬ್ಬನ ಅಧೀನದಲ್ಲಿದೆ. ಆದರೆ ಲೋಕತಂತ್ರದಲ್ಲಿ ಒಡೆತನ ಮತ್ತು ಹೊಣೆಗಾರಿಕೆಗಳು ಪ್ರತಿಯೊಬ್ಬ ಪ್ರಜೆಯ ಮೇಲೂ ಇವೆಯೆಂಬುದನ್ನು ಪ್ರತಿಯೊಬ್ಬನೂ ಅರಿತುಕೊಳ್ಳಬೇಕಾದುದು ಪ್ರಮುಖ ವಿಚಾರವಾಗಿದೆ. ದೇಶದ ಉನ್ನತಿ ಅಥವಾ ಅವನತಿಯು ಪೌರನ ಕರ್ತವ್ಯ ದಕ್ಷತೆಯನ್ನು ಹೊಂದಿಕೊಂಡಿದೆಯೆಂಬುದನ್ನು ಸದಾ ನೆನಪಿನಲ್ಲಿಟ್ಟುಕೊಂಡು ದೇಶದ ಪ್ರಗತಿಗಾಗಿ ಕಾಯೇನ ಮನಸಾ ವಾಚಾ ದುಡಿಯಬೇಕಾದುದು ಪ್ರತಿಯೊಬ್ಬ ಭಾರತೀಯ ಪೌರನ ಹೊಣೆಯಾಗಿದೆ.

ಹಾಗಾಗಿ ಜನವರಿ ಇಪ್ಪತ್ತಾರರ ಪ್ರಜಾಪ್ರಭುತ್ವ ದಿನಾಚರಣೆಯೊಂದಿಗೆ ನಾವು ಒಂದು ವರ್ಷದಲ್ಲಿ ಸಾಧಿಸಿದ, ಮುಂದಿನ ವರ್ಷದಲ್ಲಿ ಸಾಧಿಸಬೇಕಾದ ವಿಚಾರಗಳ ಕುರಿತು ಕೂಲಂಕಷವಾಗಿ ವಿಮರ್ಶಿಸಿ ದೇಶವನ್ನು ಇಂದಿನ ವೈಜ್ಞಾನಿಕ ಯುಗದಲ್ಲಿ ಆರ್ಥಿಕ, ನೈತಿಕ ಹಾಗೂ ಸಾಮಾಜಿಕ ಉನ್ನತಿಯನ್ನು ಸಾಧಿಸಿ, ರಶ್ಯಾ ಅಮೇರಿಕದಂತಹ ವಿಶ್ವದ ಬಲಿಷ್ಠ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಿಸುವ ಹೊಣೆ ಪ್ರತಿಯೊಬ್ಬನ ಹೆಗಲ ಮೇಲೂ ಭಾರವಾಗಿ ನಿಂತಿದೆಯೆಂಬುದನ್ನು ಜ್ಞಾಪಕದಲ್ಲಿಟ್ಟು ಸದಾ ಕರ್ತವ್ಯಶೀಲರಾಗಬೇಕಾದುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯವಾಗಿದೆ.

ಅಧಿಕಾರದ ವ್ಯಾಮೋಹದಿಂದ, ಜನರನ್ನು ಪೊಳ್ಳು ಮಾತುಗಳ ಮಧ್ಯದ ಅಮಲಿನಲ್ಲಿ ಸಿಲುಕಿಸಿ, ಓಟನ್ನು ಗಿಟ್ಟಿಸಿ, ಕರ್ತವ್ಯ ವಿಮುಖರಾಗಿ, ಸ್ವಚಿಂತನೆಯನ್ನು ಮಾತ್ರ ಮಾಡಬಲ್ಲ ರಾಜಕಾರಣಿಗಳಿಂದ ದೇಶದ ಉದ್ಧಾರವಾಗುವುದು ಸಾಧ್ಯವಿಲ್ಲ. ಲಂಚಗುಳಿತನ, ಭ್ರಷ್ಟಾಚಾರಗಳಿಂದ ಒಂದು ರಾಷ್ಟ್ರದ ಉನ್ನತಿಯಾಗುವುದು ಸರ್ವಥಾ ಸಾಧ್ಯವಿಲ್ಲ.

ಹಾಗೆಂದು ಸರಕಾರವನ್ನು ದೂರುವುದಕ್ಕಿಂತಲೂ, ಕರ್ತವ್ಯ ಪರಾಯಣರಾಗಬೇಕಾದುದು ಮುಖ್ಯವಾಗಿದೆ. ಸರಕಾರವು ಕಲ್ಲುಮುಳ್ಳುಗಳಿಂದ ಕೂಡಿದ ದುರ್ಗಮ ಮಾರ್ಗವನ್ನು ಹಿಡಿಯುವುದಾದರೆ, ತಾವು ಸರಕಾರದೊಂದಿಗೆ ಸಹಕಾರ ತೋರಿ ಜೊತೆಯಲ್ಲೇ ಬರಲಾರೆವು ಎನ್ನುವುದಕ್ಕಿಂತ, ಕಲ್ಲುಮುಳ್ಳುಗಳನ್ನು ಹೋಗಲಾಡಿಸಿ,

(ಮೂವತ್ತನೇ ಪುಟ ನೋಡಿರಿ)

They're here!

The '1210' Series

TATA MERCEDES-BENZ VEHICLES

Authorised Dealers:

ARVIND MOTORS

BALMATTA ROAD, MANGALORE.

Telephone : 4762 Telegrams: 'ARVIND'

ಶ್ರೀ ಶಿವಶಂಕರ

ಪ್ರಜಾಪ್ರಭುತ್ವದ ಪರಿಹಾಸ್ಯ

ನಮ್ಮದು ಪ್ರಜಾಪ್ರಭುತ್ವವೇ? ಅಥವಾ ಅದರ ಪರಿಹಾಸ್ಯವೆ? — ಎಂಬ ಸಂದೇಹ ಹಲವೆಡೆ ಮೂಡಿದೆ. ಇದಕ್ಕೆ ಒಂದು ಉತ್ತರ ಇಲ್ಲಿದೆ.

ಜನವರಿ ೨೬—ಪ್ರಜಾಪ್ರಭುತ್ವ ದಿನಾಚರಣೆ! ವಿಜೃಂಭಣೆಯಿಂದ ಉತ್ಸವವನ್ನು ಆಚರಿಸಲಾಗುತ್ತಿದೆ. ಅದು ರಾಷ್ಟ್ರೀಯ ಉತ್ಸವ. ಅಂದು ದೇಶದಾದ್ಯಂತ ಸಾರ್ವತ್ರಿಕ ರಜಾ ದಿನ. ಈ ವರ್ಷ ಜನವರಿ ೨೬ ಆದಿತ್ಯವಾರವಿರುವದರಿಂದ ಸಾರ್ವತ್ರಿಕ ರಜೆಯ ಪ್ರಶ್ನೆಯೇ ಬರುವದಿಲ್ಲ. ಜನವರಿ ೨೬ ಬೇರೆ ಬೇರೆ ವರ್ಷ ಬೇರೆ ಬೇರೆ ದಿವಸ ಬರುವದು ಸಹಜವೇ ಇದೆಯಾದರೂ, ಈ ವರ್ಷ ಅಂದು ಆದಿತ್ಯವಾರವಿರುವದಕ್ಕೇನಾದರೂ ವಿಶಿಷ್ಟ ಅರ್ಥ ಇದೆಯೇ? ಇದೆಯೆನ್ನುವಂತೆ ಕಂಡು ಬರುತ್ತಿದೆ. ಯಾಕೆಂದರೆ ನಿಜವಾಗಿ ಈಗ ಪ್ರಜಾಪ್ರಭುತ್ವ ನಡೆಯುತ್ತಿದೆಯೇನು? ರಾಜಕೀಯ ಉದ್ಯಮಿಗಳ ರಾಗರಸರಂಜಿತ ಉತ್ತರ ಬೇಡ. ಶ್ರೀಸಾಮಾನ್ಯನ ಸಾಧಾರಣ ಸಹಜ ಸರಳ ಉತ್ತರಬೇಕು.

ಭಾರತದ ಸಂಸದ್ ಹಾಗೂ ಸರ್ವೋಚ್ಚ ನ್ಯಾಯಾಲಯಗಳು ಕೂಡಾ ಶ್ರೀಸಾಮಾನ್ಯನ ಯೋಚನೆಗೆ ಬರುವಂತಹವಲ್ಲವೆನ್ನಬಹುದು. ಅವನಿಂದು ಅವುಗಳ ವಿಷಯ ಆಲೋಚಿಸುವಂತೆಯೂ ಇಲ್ಲ. ಆದುದರಿಂದ ಅವುಗಳ ವಿಷಯದಲ್ಲಿ ನಡೆದಿರುವ ಸಣ್ಣಾಟದ ಕುರಿತು ಇಲ್ಲಿ ಮಾತು ತೆಗೆಯುವದಿಲ್ಲ. ಶ್ರೀಸಾಮಾನ್ಯನು ತನಗಿಷ್ಟ ಬಂದವನಿಗೆ ಮತವಿತ್ತು ಲೋಕಸಭೆಗೆ ಕಳುಹಿಸಿರುವದು ನಿಜ. ಸರ್ವೋಚ್ಚ ನ್ಯಾಯಾಲಯದಲ್ಲಿರುವ ಮುಖ್ಯ ನ್ಯಾಯಾಧೀಶರಾದರೋ ವಂಶಪಾರಂಪರ್ಯವಾಗಿ ಬಂದಿರುವ ಹಕ್ಕಿನ ಬಲದಿಂದ ಅಲ್ಲಿ ಆಸೀನರಾಗಿರುವವರಲ್ಲ. ಅವರು ಸ್ವ-ಸಾಮರ್ಥ್ಯದ ಮೇಲೆ ಹೋಗಿರುವವರಿದ್ದಾರೆ. ಇಲ್ಲೂ ರಾಜಕೀಯವಿಲ್ಲವೆಂದಿಲ್ಲ. ರಾಜಕೀಯ ಪಕ್ಷ ಅಧಿಕಾರದ ಆಸನವನ್ನೇರಿದೊಡನೆ ನ್ಯಾಯಾಲಯದ ಆಸನದ ಮೇಲೆ ಕಣ್ಣಿಟ್ಟುಕೊಂಡು, ತಮಗೆ ಬೇಕಾದಂತೆ ಬದಲಾವಣೆ ಮಾಡುವದಿದೆ. ಏನೇ ಇರಲಿ, ಇದರಲ್ಲಿ ಯಾವದು ಮೇಲು, ಯಾವದು ಕೀಳು ಎಂದು ಅಳೆಯಲು ಸಾಧ್ಯವಿಲ್ಲ. ಹಾಗಿದ್ದರೂ ಶ್ರೀ ಸಾಮಾನ್ಯನಿಗೆ ಒಂದು ವಿಷಯ ತಟ್ಟನೆ ಜ್ಞಾಪಕಕ್ಕೆ ಬರದಿರಲಾರದು. ಸರ್ವೋಚ್ಚ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಾಧೀಶರಾಗಿ ಶ್ರೀ ಸುಬ್ಬರಾಯರಿದ್ದರು. ಅವರು ರಾಜಿನಾಮೆ ಕೊಟ್ಟು ರಾಷ್ಟ್ರಾಧ್ಯಕ್ಷಸ್ಥಾನಕ್ಕೆ ಸ್ಪರ್ಧೆ ಹೂಡಿದರು. ಈಗ ಶ್ರೀ ಸುಬ್ಬರಾಯರು ಶ್ರೀಸಾಮಾನ್ಯನ ದೃಷ್ಟಿಗೆ ಬರುತ್ತಿದ್ದಾರೆ. ಶ್ರೀ ಸುಬ್ಬರಾಯರು ಅದೇನು ಮಾಡಿದರೂ, ಈ ಜನ್ಮದಲ್ಲಿ, ಪುನಃ ಮುಖ್ಯನ್ಯಾಯಾಧೀಶ ಹಾಗಿರಲಿ, ನ್ಯಾಯಾಧೀಶರಾಗುವಂತೆಯೂ ಇಲ್ಲ. ಅವರ ಸಮಯ ಆಗಿಹೋಯಿತು. ಆದರೆ ಅದೇ ಶ್ರೀ ಸುಬ್ಬರಾಯರು ಬರುವ ಸಲ ಮಾತ್ರವಲ್ಲ, ಜೀವಂತವಾಗಿರುವವರೆಗೆ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಹುದು. ಅದುಮಾತ್ರವಲ್ಲ, ಅವರು ಇಚ್ಛಿಸಿದಲ್ಲಿ, ಅದೆಲ್ಲಾದರೂ ಮರುಚುನಾವಣೆಯಲ್ಲಿ ಸ್ಪರ್ಧಿಸಿ ಲೋಕಸಭೆಗೆ ಹೋಗಬಹುದು. ಸ್ಪರ್ಧಿಸಲು ಮನಸ್ಸಿಲ್ಲವಾದಲ್ಲಿ ಮುಂದಕ್ಕೆ ಬರುವ ರಾಜ್ಯಸಭಾ ಚುನಾವಣೆಯ ಸಮಯ ಸುಲಭವಾಗಿ ರಾಜ್ಯಸಭೆಗೆ ಹೋಗಬಹುದು. ಆದರೆ ಉಚ್ಚ ನ್ಯಾಯಾಲಯದ ಆಸನವನ್ನು ಮುಟ್ಟುವಂತಿಲ್ಲ. ಶ್ರೀಸಾಮಾನ್ಯ ವಿಷಯವನ್ನಿಲ್ಲಿಗೆ ಬಿಡುವದೆ ಒಳ್ಳೆಯದು.

ಇಂದು ಚುನಾವಣೆಗಳು ಹೇಗೆ ನಡೆಯುತ್ತಿವೆ? ಮೋಸ-ದಗಲ್ಬಾಜಿ, ಲಾಚ-ಲಡಾಯಿ ಇಲ್ಲದೆಯೆ ನಡೆಯುತ್ತಿದೆಯೇ? ಸ್ಪರ್ಧಿಸಬೇಕಾದರೂ ಇಡುಗಂಟು ಇಡಲೇಬೇಕು. ಅದಿಲ್ಲದ ಬಡವ ಚುನಾವಣೆಯಲ್ಲಿ ಮತ ಚಲಾಯಿಸುವದನ್ನು ಬಿಟ್ಟು, ಮತಪಡೆಯುವ ಕುರಿತು ಯೋಚಿಸುವಂತಿಲ್ಲ. ದುಡ್ಡಿನ ದೊಡ್ಡಪ್ಪಗಳು ಪಂದ್ಯದ ಕಳದಲ್ಲಿಳಿಯುತ್ತವೆ. ಅನಂತರದ ಪ್ರಚಾರ ಕ್ರಮವಾದರೂ ಹೇಗಿದೆ? ದುಡ್ಡಿನ ಬಲ ಇರುವವರಿಗೆ ಮಾತ್ರ ಭಾರೀ ದುಬಾರೀ ಪ್ರಚಾರಪತ್ರಗಳನ್ನು ಹಾಕಲು ಸಾಧ್ಯ. ಪ್ರಚಾರ ಭಾಷಣಗಳಿಗೆ ಏರ್ಪಾಟು ಮಾಡಲು ಸಾಧ್ಯ. ಹಣವಿಲ್ಲದವನು ಅದೆಷ್ಟು ಒಳ್ಳೆಯವನಾದರೂ ಅವನು 'ಬೆಂಬಲ' ಇಲ್ಲದವನೇ ಸರಿ. ಹಾಗೆ ಅಪ್ಪಿತಪ್ಪಿ ತನ್ನ ವೈಯಕ್ತಿಕ ಜನಪ್ರಿಯತೆ ಹಾಗೂ ತನ್ನ ಪಕ್ಷದ ಮೇಲಿನ ಪ್ರಜಾನುರಾಗದ ಬೆಂಬಲದಿಂದ ಅವನು ಸ್ಪರ್ಧೆಯಲ್ಲಿ ಭಾಗವಹಿಸಿದನೆಂದರೆ ತೀರಿತು, ಅವನ ಬೆನ್ನ ಹಿಂದುಗಡೆ ಅವನ ನೆರಳಿನಂತೆ ಕೆಲವು ಕರಾಳ ಛಾಯೆಗಳು, ಅನುಸರಿಸುತ್ತವೆ. ಈ ಕರಾಳ ಛಾಯೆಗಳಿಗೆ ಕೆಲಸವೇನೆಂದರೆ ಎಲ್ಲಾದರೂ ಅಂತಹ ಶ್ರೀ ಸಾಮಾನ್ಯನ ಪ್ರತಿನಿಧಿ ಒಬ್ಬಂಟಿಗನಾಗಿ ಸಿಕ್ಕಿದಲ್ಲಿ ಅವನ ಬೆನ್ನು ಮುರಿಯುವದು, ಅಲ್ಲದೆ ಅವನಿಗೆ ಯಾರಾದರೂ ಸಹಾಯಮಾಡಿದಲ್ಲಿ ಅವರನ್ನು ಸರಿಮಾಡುವದೇ ಇದೆ. ಮಂದರಾಸು ಶಹರದಲ್ಲಿ ನಗರಸಭೆ ಚುನಾವಣೆ ನಡೆದ ವೇಳೆ ಶ್ರೀ ಸಾಮಾನ್ಯನು ದಾರಿಯಲ್ಲಿ ನಡೆಯುವಂತಿರಲಿಲ್ಲ. ವಿರುದ್ಧ ಅಭ್ಯರ್ಥಿಗೆ ಮತದಾನ ಉತ್ಸವವಾಗಿ

(ಇಪ್ಪತ್ತೊಂಭತ್ತನೇ ಪುಟ ನೋಡಿರಿ)

With best compliments

from

BALLAL

MOTOR SERVICE

MOODABIDRI - - - MANGALORE

ಡಾ। ಪಿ. ಗುರುರಾಜ ಭಟ್ಟ

ತುಳುನಾಡ ಇತಿಹಾಸದ ಸಿಂಹಾವಲೋಕನ

ಒಂದು ಅರಸೊತ್ತಿಗೆಯು ಒಂದೇ ರಾಜ್ಯವನ್ನು ಒಂದೂವರೆ ಸಾವಿರ ವರ್ಷಗಳ ಕಾಲ ಆಳಿತು ಎಂದರೆ, ಮೂಗಿಗೆ ಬೆರಳೇರಿಸುವ ಪ್ರಸಂಗ. ಜಾಗತಿಕ ಇತಿಹಾಸದಲ್ಲಿ ಇದಕ್ಕೆ ಅದ್ವಿತೀಯ ಉದಾಹರಣೆ ತುಳುನಾಡು ಮಂಡಲವನ್ನು ಆಳಿದ ಆಳುಪರು!

ತುಳುನಾಡೆಂಬುದು ದಕ್ಷಿಣ ಕನ್ನಡ ಜಿಲ್ಲೆಗೆ ಇದ್ದ ಐತಿಹಾಸಿಕ ಹೆಸರು. ಇತಿಹಾಸ ಪ್ರಸಿದ್ಧಿಯನ್ನು ಪಡೆದ ಈ ತುಳುನಾಡಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ವರೆಗಿನ ಕೆಲವು ಭಾಗಗಳೂ ಘಟ್ಟದ ಮೇಲಣ ಕೆಲವು ಭಾಗಗಳೂ ಸೇರಿದ್ದುವು.

ಇದಿನ ವರೆಗೂ ತುಳುನಾಡಿಗೆ ಸಂಬಂಧಿಸಿದ ಹಲಕೆಲವು ಚಾರಿತ್ರಿಕ ಪ್ರಶ್ನೆಗಳು ಬಗೆಹರಿಯದೆ ಸಮಸ್ಯಾತ್ಮಕವಾಗಿಯೇ ಉಳಿದಿವೆ. ಆಳವಾದ ಅಧ್ಯಯನದ ದೆಸೆಯಿಂದ ಇವುಗಳನ್ನು ಬಗೆಹರಿಸಲು ಪ್ರಯತ್ನಿಸಬೇಕಷ್ಟೆ! ತುಳುವರೆಂದರೆ ಯಾರು, ಅವರ ಒಂದು ವಿಶಿಷ್ಟವಾದ ಜನಪ್ರಭೇದವೇ, ಅವರ ವಂಶೀಯ ವೈಲಕ್ಷಣ್ಯಗಳಾವುವು, ತುಳು ಭಾಷೆಯು ಎಂದಿನಿಂದ ಬಳಕೆಯಲ್ಲಿತ್ತು, ಕಲ್ಯಾಣಪುರ ನದಿಯಿಂದ ಉತ್ತರಕ್ಕೆ ತುಳು ಭಾಷೆಯು ಏನೇನೂ ಪ್ರಚಾರದಲ್ಲಿಲ್ಲದಿರಲು ಕಾರಣಗಳಾವುವು, ತುಳು ಭಾಷೆಯು ಬಳಕೆಯಿಲ್ಲದ ಬಾರಕೂರು, ಬಸರೂರು, ಹಾಡುವಳ್ಳಿಗಳು ತುಳುದೇಶದ ಕೇಂದ್ರ ಸ್ಥಳಗಳಾಗಲು ಕಾರಣವೇನು, ತುಳುವು ಲಿಖಿತ ರೂಪವನ್ನು ಹೊಂದದಿರಲು ಏನು ಕಾರಣ, ತುಳುನಾಡಿನಲ್ಲಿ ಮೂಲಿಗರು ಯಾರಾಗಿದ್ದರು, ಮೊಗೇರರು ಮತ್ತು ಬಿಲ್ಲವರ ಪ್ರಾಚೀನತೆ ಯಾವುದಿರಬಹುದು, ಬಂಟರ ಮೂಲವಾವುದು, ಬ್ರಾಹ್ಮಣ್ಯ ಎಂದಿನಿಂದ ಪ್ರಾರಂಭವಾಗಿದ್ದಿರಬಹುದು, ಜೈನ ಧರ್ಮದ ಉಗಮ ಈ ನಾಡಿನಲ್ಲಿ ಎಂದಾಯಿತು, ಭೂತಾರಾಧನೆಯ ಕಾಸ್ಮಿಕ ಹಿನ್ನೆಲೆಯೇನು, ದೇವಸ್ಥಾನ ನಿರ್ಮಾಣ ಕೆಲಸ ಎಂದಿನಿಂದ ಪ್ರಾರಂಭವಾಯಿತು, ಅಳಿಯ ಕಟ್ಟಿನ ವೈಶಿಷ್ಟ್ಯವೇನು ಎಂಬಿತ್ಯಾದಿ ಪ್ರಶ್ನೆಗಳಿಗೆ ಅಲ್ಲಲ್ಲಿ ಇಷ್ಟಿಷ್ಟು ಮಾತ್ರ ಉತ್ತರವನ್ನೀಯಬಹುದಷ್ಟೆ. ಸಂಶೋಧನಾ ಮಾರ್ಗದಲ್ಲಿ ಮುಂದೊತ್ತುವವರಿಗೆ ತುಳುನಾಡಿನ ಇತಿಹಾಸವು ಸ್ವಾರಸ್ಯವಾದ ಮೂಲವಸ್ತುವನ್ನು ಒದಗಿಸುತ್ತದೆ.

ಪ್ರಾಚೀನತೆಯ ದೃಷ್ಟಿಯಿಂದ ಈ ಅಧ್ಯಯನವನ್ನು ಮುಂದುವರಿಸುವುದಾದರೆ ತುಳುನಾಡಿನಲ್ಲಿ ಕೆಲವು ಸ್ಥಳಗಳಲ್ಲಾದರೂ ಅತಿಶಯವಾದ ಪ್ರಾಚೀನತೆಯ ಕುರುಹುಗಳೇನಿವೆ ಎಂಬುದನ್ನು ಗೊತ್ತುಹಚ್ಚಬೇಕು. ಉಡುಪಿಯ ಸಮೀಪವಿರುವ ಉದ್ಯಾವರ (ಉದಯಪುರ), ಬಾರಕೂರು (ಬಾರಕನ್ಯಾಪುರ), ಮಂಗಳೂರು (ಮಂಗಲಾಪುರ), ಸುಬ್ರಹ್ಮಣ್ಯ (ಕುಕ್ಕೆ), ಕೊಲ್ಲೂರು (ಕುವಲಯಪುರ), — ಈ ಸ್ಥಳಗಳು ಇಂತಹ ಪ್ರಾಕ್ತನ ಅಗೆತಕ್ಕೆ ಯೋಗ್ಯವಾದುವುಗಳೆನ್ನಲಡ್ಡಿಯಿಲ್ಲ. ಉದ್ಯಾವರ, ಬಾರಕೂರು ಮತ್ತು ಮಂಗಳೂರುಗಳಂತೂ ಅಗೆತ ಮಾಡುವುದರಿಂದಾಗಿ ಕ್ರಿ. ಶ.ದ ಆದಿಯ ಶತಮಾನಗಳ ಹಾಗೂ ಕ್ರಿಸ್ತಪೂರ್ವದ ಕೆಲವು ಶತಮಾನಗಳ ಇತಿಹಾಸವನ್ನು ಬೆಳಕಿಗೆ ತರಬಹುದು.

ಅಶೋಕನ ಶಿಲಾಲೇಖದಲ್ಲಿ ಉಲ್ಲೇಖಗೊಂಡಿರುವ ಸತಿಯ ಪುತ್ರವು ತುಳುನಾಡೆಂಬುದಾಗಿ ತಿಳಿಯಲ್ಪಟ್ಟಿದೆ. ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದರೂ ಇದಕ್ಕೆ ಸಂಬಂಧಿಸಿದ ಸಂಶೋಧನೆ ಯೋಗ್ಯರೀತಿಯಲ್ಲಿ ನಡೆಯಬೇಕೆಂಬುದು ನಿರ್ವಿವಾದವಾದರೂ ಈ ಸತಿಯ ಪುತ್ರವು ತುಳುನಾಡೆಂದು ಸ್ಥೂಲವಾಗಿ ಅಂಗೀಕರಿಸಬಹುದು. ಇಂದಿಗೂ ಮೊಗೇರ ಮತ್ತು ಬಿಲ್ಲವ ವರ್ಗಗಳಲ್ಲಿ 'ಸದಿಯ' ಎಂಬ ಕುಲನಾಮವಿದೆ. ಈ ಎರಡೂ ಜನಪ್ರಭೇದವು ಬಹಳ ಪ್ರಾಚೀನವೆನ್ನುವುದರಲ್ಲಿ ಸಂದೇಹವಿರಲಾರದು. ಸಂಖ್ಯೆಯಲ್ಲಿ ಇವರ ಆಧಿಕ್ಯ ತುಳುನಾಡಿನಲ್ಲಿ ಇದ್ದುದು ತಿಳಿದುಬರುತ್ತದೆ.

ತುಳುನಾಡಿನ ಇತಿಹಾಸಕ್ಕೆ ಅನ್ವಯಿಸಿಕೊಂಡು ಪರಶುರಾಮನ ಕತೆ, ಮಯೂರವರ್ಮನ ಕತೆ, ಭೂತಾಳಪಾಂಡ್ಯನ ಕತೆ — ಇವುಗಳನ್ನು ಹೇಳುವುದಿದೆ. ಆದರೆ ನಮಗಿಷ್ಟರ ವರೆಗೆ ದೊರಕಿದ ಯಾವ ಅಧಿಕೃತ ದಾಖಲೆಗಳಲ್ಲೂ ಇವುಗಳಿಗೆ ಸ್ವಲ್ಪವಾದರೂ ಉಲ್ಲೇಖ ದೊರಕುವುದಿಲ್ಲ. ಅಧಿಕೃತವಾಗಿ ಕ್ರಿ. ಶ. 7ನೇ ಶತಮಾನದಿಂದ ಆರಂಭವಾಗಿ ತುಳುವದ ಇತಿಹಾಸವನ್ನು ಬರೆಯಬಹುದು. ಆದರೆ ತುಳುನಾಡು ಯಾವುದೋ ಒಂದು ಕಾಲದಲ್ಲಿ ಸಮುದ್ರದಿಂದ ಆವರಿಸಲ್ಪಟ್ಟಿತ್ತೆಂದೂ, ಕ್ರಮೇಣ ಜನವಸತಿ ಉಂಟಾಯಿತೆಂದೂ ತಿಳಿದುಕೊಳ್ಳಬಹುದು.

ತುಳುನಾಡಿನಲ್ಲಿ ಸುಮಾರು ಕ್ರಿ. ಶ. ಒಂದೆರಡು ಶತಕಗಳಿಂದ ಆರಂಭವಾಗಿ ವಿಜಯನಗರದ ಸ್ಥಾಪನೆಯ ವರೆಗೆ ಆಳಿದ ಅರಸುಮನೆತನವೆಂದರೆ ಆಳುಪರದ್ದು. ಈ ಮನೆತನದಿಂದ ಈ ಪ್ರದೇಶಕ್ಕೆ "ಆಳ್ವಖೇಡ"ವೆಂಬ ಹೆಸರು ಪ್ರಸಿದ್ಧವಾಗಿತ್ತು. ಈ ಮನೆತನವು ಅವಿಚ್ಛಿನ್ನವಾಗಿ ಒಂದೂವರೆ ಸಾವಿರ ವರ್ಷಗಳ ತನಕ ಆಳಿಕೊಂಡಿದ್ದುದು ಅವರ ಪ್ರಾಬಲ್ಯ ದಕ್ಷತೆಯನ್ನು ಸೂಚಿಸುತ್ತದೆ. ಗ್ರೀಕ್ ಭೂಗೋಳ ಶಾಸ್ತ್ರಜ್ಞನಾದ ಟಾಲೆಮಿಯ ದಾಖಲೆಯಲ್ಲಿ ಬರುವ "ಓಲಖೈರಾ" ಎಂಬುದು ಆಳ್ವಖೇಡವೇ ಆಗಿದೆ. (ಕ್ರಿ. ಶ. ೨ನೇ ಶತಕ) ಎಂದರೆ ಕ್ರಿ. ಶ. ಎರಡನೇ ಶತಕಕ್ಕೆ ಈ ಭೂಭಾಗವು ವ್ಯವಸ್ಥಿತವಾದ ರಾಜ್ಯ ಆಳಿಕೆಯೊಳಗಿತ್ತೆಂದು ಊಹಿಸಬಹುದು. ಕ್ರಿ. ಶ. 7ನೇ ಶತಮಾನಕ್ಕಿಂತ ಮೊದಲು ಆಳುಪರ ಕುರಿತಾಗಿಯಾಗಲೀ ಇಲ್ಲಿಯ ಜನಜೀವನದ ವಿಷಯವಾಗಲೀ ನಮಗೆ ಸಮರ್ಪಕವಾದ ದಾಖಲೆಗಳು ದೊರಕದಿರುವುದೇ ಆ ಕಾಲದ ಐತಿಹಾಸಿಕ ಪರಿವೆ ಇಲ್ಲದಿರಲು ಕಾರಣ.

ಕ್ರಿ. ಶ. 7ನೇ ಶತಮಾನದಲ್ಲಿ ಆಳುವರಸರು ಕದಂಬ ಮಂಡಲವನ್ನು ಆಳುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಆಂಧ್ರಪ್ರದೇಶದಲ್ಲಿ ದೊರಕಿದ ಬಾದಾಮಿಯ ಚಾಲುಕ್ಯ ಚಕ್ರವರ್ತಿಯಾದ ಒಂದನೇ ವಿಕ್ರಮಾದಿತ್ಯನ ಕಾಲದ ತಾಮ್ರಶಾಸನದಲ್ಲಿ ಆಲುಕ ರಾಜನಿಗೆ ಉಲ್ಲೇಖವಿದೆ. ಈತನು ಮಂಗಲಾಪುರದ ಒಡೆಯನೆಂದೂ ಮಂಗಲಾಪುರದಿಂದ ಮೊರುಟೂರಿಗೆ ಕನ್ನ ತಾಮ್ರಪತ್ರಗಳನ್ನು ಕಡೆಗಣಿಸಿ ಚಾಲುಕ್ಯ ಚಕ್ರವರ್ತಿಯ ಆಜ್ಞೆ ಮೇರೆಗೆ ಹೋಗಿದ್ದನೆಂದೂ ಈ ಶಾಸನ ತಿಳಿಸುತ್ತದೆ. ಈ ಆಳುವರಸರು ಕ್ರಮಾಗತವಾಗಿ ಬಾದಾಮಿಯ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ದ್ವಾರಸಮುದ್ರದ ಹೊಯ್ಸಳರು ಮತ್ತು ವಿಜಯನಗರದ ಸಾಮ್ರಾಟರ ಅಧೀನವಾಗಿದ್ದರೆಂದು ತಿಳಿದುಬರುತ್ತದೆ. ಆದಾಗ್ಯೂ ಆಳ್ವಖೇಡದ ಸಂಪೂರ್ಣ ಒಡೆತನವು ಅವರ ಕೈಯಲ್ಲೇ ಇತ್ತು. ಅವರು [illegible] ರಾಜಾಧಿರಾಜ, ರಾಜಪರಮೇಶ್ವರವೆಂಬ ಬಿರುದುಗಳನ್ನು ಹೊಂದಿದ್ದರು. ಆಳುಪರ ರಾಜಧಾನಿಯು ಮೊದಲು ಮಂಗಲಾಪುರವಾಗಿತ್ತು. ಅನಂತರ ಉದಯಪುರಕ್ಕೆ ಕೊಂಡೊಯ್ಯಲಾಯಿತು. ಅನಂತರ ಬಾರಕೂರು ಕೇಂದ್ರ ಸ್ಥಳವಾಯಿತು. ಕಡೆಗೆ ಪುನಃ ಮಂಗಲಾಪುರವೇ ಕೇಂದ್ರ ಸ್ಥಳವಾಗಿ ವ್ಯವಹರಿಸಲ್ಪಡುತ್ತಿತ್ತು.

ಆಳುಪರು ಶೈವ ಮತ್ತು ಶಾಕ್ತ ಧರ್ಮಾವಲಂಬಿಗಳಾಗಿಯೂ ಕೆಲವೊಮ್ಮೆ ಜೈನ ಧರ್ಮಾವಲಂಬಿಗಳಾಗಿಯೂ ಇದ್ದರು. ನಾಥ ಪಂಥಕ್ಕೆ ಪ್ರೋತ್ಸಾಹವಿತ್ತಂತೆಯೂ ಕಂಡುಬರುತ್ತದೆ. ಇವರ ಕಾಲದಲ್ಲಿ 52ರಿಂದ 56 ಗ್ರೈನು ಭಾರವುಳ್ಳ ಚಿನ್ನದ ಗದ್ಯಾಣಗಳೆಂಬ ನಾಣ್ಯಗಳು ಬಳಕೆಯಲ್ಲಿದ್ದುವು. ಎರಡು ಮೀನುಗಳೂ ಒಂದು ಕಡೆ ಪೂರ್ಣಕುಂಭ ಇನ್ನೊಂದೆಡೆ ಚಾಮರವುಳ್ಳ ಲಾಂಛನವು ಆಳುಪರದ್ದಾಗಿತ್ತು ಎಂದು ಸ್ಥೂಲವಾಗಿ ಹೇಳಬಹುದು. ಇವುಗಳು ಪಾಂಡ್ಯ ಗದ್ಯಾಣಗಳೆಂದು ಕರೆಯಲ್ಪಡುತ್ತಿದ್ದುವು. ಪಾಂಡ್ಯ ಧನಂಜಯವೆಂಬ ಬರಹವು ನಾಣ್ಯದ ಇನ್ನೊಂದು ಬದಿಯಲ್ಲಿರುತ್ತಿತ್ತು.

ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯಾದ ನಂತರ (ಕ್ರಿ. ಶ 1336) ತುಳುನಾಡು ಮಂಗಳೂರು ಮತ್ತು ಬಾರಕೂರು ಎಂಬ ನಿರ್ದಿಷ್ಟವಾದ ಎರಡು ಪ್ರಾಂತ್ಯಗಳಾಗಿ ವಿಭಾಗಿಸಲ್ಪಟ್ಟವು. ಇವುಗಳನ್ನು ಇಬ್ಬರು ರಾಜ್ಯಪಾಲರುಗಳು ದಕ್ಷತೆಯಿಂದ ಆಳುತ್ತಿದ್ದರು. ವಿಜಯನಗರ ಸಾಮ್ರಾಜ್ಯಕ್ಕೆ ಈ ಎರಡು ಪ್ರಾಂತ್ಯಗಳಿಂದ ಎಂದರೆ ತುಳುನಾಡಿನಿಂದ ತುಂಬಾ ಲಾಭವಿತ್ತು. ಸಮುದ್ರಯಾನ ವ್ಯವಹಾರಕ್ಕೆ ತುಳುನಾಡಿನ ಆವಶ್ಯಕತೆ ಇತ್ತು. ಸಾಮ್ರಾಜ್ಯದ ಶ್ರೇಷ್ಠವಾದ 28 ನಗರಗಳಲ್ಲಿ ನಾಲ್ಕು ನಗರಗಳು ತುಳುನಾಡಿಗೆ ಸೇರಿದ್ದುವು—ಮಂಗಳೂರು, ಬಾರಕೂರು, ಭಟ್ಕಳ ಮತ್ತು ಹೊನ್ನಾವರ. ವಿಜಯನಗರದ ಆಧಿಪತ್ಯ ಕಾಲದಲ್ಲಿ ತುಳುನಾಡಿನಲ್ಲಿ ಹಲವು ಅರಸೊತ್ತಿಗೆಗಳಿದ್ದವು. ಇವುಗಳು ಸಾಂಪ್ರದಾಯಿಕವಾಗಿ ಆಡಳಿತೆಯ ಕರ್ತವ್ಯವನ್ನು ಸ್ಥಳೀಯವಾಗಿ ನಡೆಸುತ್ತಿದ್ದವು. ಬಂಗವಾಡಿಯ ಬಂಗರು, ಪುತ್ತಿಗೆಯ ಚೌಟರು, ವೇಣೂರಿನ ಅಜಿಲರು, ಕಾರ್ಕಳದ ಭೈರರಸರು, ಮೂಲಿಕೆಯ ಸಾವಂತರು, ಸೂರಾಲಿನ ತೊಳಹರು, ಕಾಪಿನ ಮರ್ದ ಹೆಗ್ಗಡೆಯರು, ಎರ್ಮಾಳಿನ ಮೂರಮ್ಮ ಹೆಗ್ಗಡೆಯರು, ಎಲ್ಲೂರಿನ ಕುಂದ ಹೆಗ್ಗಡೆಯರು, ಹೊಂಗಡಿಯ ಹೊನ್ನೆಯ ಕಂಬಳಿ ಅರಸರು, ಕುಂಬಳೆಯ ರಾಜರು, ಹಾಡುವಳ್ಳಿ ಮತ್ತು ಗೇರುಸೊಪ್ಪೆಯ ತುಳುವರಸರು—ಇವರಲ್ಲಿ ಮುಖ್ಯರಾದವರಿದ್ದರು. ಆಡಳಿತೆಯಲ್ಲಿ ಇವರಿಗೆ ಸಹಾಯಕರಾಗಿ ಸೇನಾನಿಗಳೂ, ಕರಣಿಕರೂ, ಸೇನಭೋವರೂ, ಹೆಗ್ಗಡೆಗಳೂ, ಬಲ್ಲಾಳರುಗಳೂ, ಪುರೋಹಿತರೂ ಸೇವೆಸಲ್ಲಿಸುತ್ತಿದ್ದರು.

ಕುಟುಂಬಗಳು ನಾನಾ ತರದ "ಬಳಿ"ಗಳ ಮುಖೇನ ತಮ್ಮ ವೈಶಿಷ್ಟ್ಯಗಳನ್ನು ಹೊಂದಿದ್ದವು. ಬ್ರಾಹ್ಮಣರಿಗೆ ಗೋತ್ರಗಳಿದ್ದಂತೆ ಬ್ರಾಹ್ಮಣೇತರರಿಗೆ ಬಳಿಗಳಿದ್ದ

(ಎಪ್ಪತ್ತೆಂಟನೇ ಪುಟ ನೋಡಿರಿ)

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್

ವೀರವರ ರಾಮಸಿಂಹ!

ಸಾಮ್ರಾಟ್ ಷಹಜಹಾನನ ಕಾಲದ ಈ ಘಟನೆ ರೋಮಾಂಚಕಾರಿಯಾಗಿದೆ; ಭಾರತೀಯ ವಿಶ್ವದ ಪರಿಚಯ ಮಾಡಿಕೊಡುತ್ತದೆ.

ರಕ್ತರಂಜಿತ ಇತಿಹಾಸದ ಒಂದು ಪುಟ!

ಸಾಮ್ರಾಟ್ ಷಹಜಹಾನನ ಆಸ್ಥಾನದಲ್ಲಿ ಅನೇಕ ಮಂದಿ ರಜಪೂತ ವೀರರೂ ಉನ್ನತ ಅಧಿಕಾರಿಗಳಾಗಿದ್ದರು. ಅಂತಹ ವೀರರಲ್ಲಿ ಅಮರ ಸಿಂಹನು ಪ್ರಮುಖನಾಗಿದ್ದನು. ಷಹಜಹಾನನ ಭಾವನೆಂಟನಾದ ಸಲಾಬತ್‌ಖಾನ್ ಎಂಬವನು ಒಂದು ಸಲ, ತುಂಬಿದ ಆಸ್ಥಾನದಲ್ಲಿಯೇ ಅಮರ ಸಿಂಹನನ್ನು ಅಪಮಾನಗೊಳಿಸಿದ್ದನು. ಇದರಿಂದಾಗಿ ಅಮರಸಿಂಹನು ಬೇಸರಗೊಂಡಿರುವಾಗಲೇ ಯಾರೋ ವೈರಿಗಳು ಹೊಂಚುಹಾಕಿ ಸಲಾಬತ್‌ಖಾನನನ್ನು ಕೊಲೆ ಮಾಡಿಬಿಟ್ಟರು. ಇದು ಕಾಕತಾಳೀಯ ನ್ಯಾಯದಂತೆ ಆಗಿಹೋಗಿತ್ತು. ಬಹಿರಂಗವಾಗಿ ಈ ಅಪವಾದವನ್ನು ಅಮರ ಸಿಂಹನ ಮೇಲೆ ಯಾರೂ ಹೊರಿಸದಿದ್ದರೂ, ಈ ಕೊಲೆ ಅಮರ ಸಿಂಹನ ಒಳಸಂಚಿನಿಂದಲೇ ನಡೆದಿರಬೇಕೆಂದು ಎಲ್ಲರೂ ಸಂದೇಹ ಪಡುತ್ತಲೇ ಇದ್ದರು.

ಇಂತಹ ಒಂದು ಸಂದರ್ಭವನ್ನೇ ನಿರೀಕ್ಷಿಸುತ್ತಿದ್ದ ಅಮರಸಿಂಹನ ಭಾವನೆಂಟನಾದ ಅರ್ಜುನನು ಸಾಮ್ರಾಟನ ಕಿವಿಗಳನ್ನೂದಿ ತನ್ನ ಸ್ವಾರ್ಥ ಸಾಧನೆಗಾಗಿ ಹೊಂಚು ಹಾಕ ತೊಡಗಿದನು. ಅಮರ ಸಿಂಹನ ಮೇಲಿನ ಸೇಡು ತೀರಿಸಬೇಕಾದರೆ ಇದಕ್ಕಿಂತ ಯೋಗ್ಯವಾದ ಸಂದರ್ಭವೇ ದೊರೆಯದೆಂದು ಬಗೆದ ಅರ್ಜುನನು, ಸಲಾಬತ್‌ಖಾನನ ಕೊಲೆಗೆ ಅಮರಸಿಂಹನೇ ಕಾರಣನೆಂಬುದನ್ನು ಸಾಮ್ರಾಟನಿಗೆ ಖಚಿತಪಡಿಸಿ ಕೊಟ್ಟನಲ್ಲದೆ, ಅದಕ್ಕೆ ಪ್ರತೀಕಾರವೆಂಬಂತೆ ಅಮರಸಿಂಹನನ್ನು ಅರಮನೆಯಲ್ಲಿಯೇ ಮೋಸದಿಂದ ಕೊಲ್ಲುವುದಾಗಿಯೂ, ಹೇಳಿ ಸಾಮ್ರಾಟನನ್ನು ಒಪ್ಪಿಸಿದನು. ಇದಕ್ಕನುಸಾರವಾಗಿ ಒಂದು ದಿನ ಅಮರಸಿಂಹನು ತನ್ನ ಪಾಡಿಗೆ ತಾನು ಮುಂದೆ ಹೋಗುತ್ತಿರುವಾಗ, ಅರ್ಜುನನು, ಹಿಂದಿನಿಂದಲೇ ಒಂದೇ ಪೆಟ್ಟಿನಿಂದ ಸಿಂಹಸಂಭೂತಿಯಾಗಿದ್ದ ಅಮರಸಿಂಹನ ತಲೆಯನ್ನು ಕಡಿದುರುಳಿಸಿ ಬಿಟ್ಟನು! ಅರಮನೆಯ ಆವರಣದೊಳಗೇ ಅಮರ ಸಿಂಹನ ಕೊಲೆಯಾಯಿತು!

ಕುರಿಯಂತೆ ತಲೆ ಕಡಿದು ಕೆಡವಲ್ಪಟ್ಟ ಅಮರಸಿಂಹನನ್ನು ನೋಡಲು ಅಂದು ನೂರು ಜನರಲ್ಲಿ ಅಲ್ಲಿ ನೆರೆದರು. ತನ್ನ ಭಾವ ನೆಂಟನನ್ನು ಕೊಲ್ಲಿಸಿದನೆಂಬ ಅಪವಾದಕ್ಕೆ ಗುರಿಯಾಗಿದ್ದ ಅಮರಸಿಂಹನು ಮಡಿದು ಬಿದ್ದಿರುವುದನ್ನು ನೋಡಿ ಸಾಮ್ರಾಟನಿಗೆ ಅಪರಿಮಿತ ಆನಂದವಾಗಿತ್ತು. ಅರ್ಜುನನ ಮೇಲೆ ಸಾಮ್ರಾಟನ ಕೃಪಾಕಟಾಕ್ಷ ಪೂರ್ಣವಾಗಿ ಬಿದ್ದಿತು. ಅಮರಸಿಂಹನ ಮರಣದ ಆನಂದವನ್ನು ಎಲ್ಲರೂ ಅನುಭವಿಸುವಂತೆ ಸಾಮ್ರಾಟನು ತಕ್ಕ ಏರ್ಪಾಡು ಮಾಡಿದನು. "ಈ ಅಮರಸಿಂಹನ ರುಂಡವನ್ನು ಮುಂಡಕ್ಕೆ ಜೋಡಿಸಿ ಪ್ರೈಬಟ್ಟೆಗಳನ್ನೆಲ್ಲ ತೆಗೆದು, ಚಿತ್ತಲೆಯೊಡ ಹೆಣವನ್ನು ಕೋಟೆಯ ಮೇಲ್ಭಾಗದಲ್ಲಿ ಚೆನ್ನಾಗಿ ಎಲ್ಲರಿಗೂ ಕಾಣುವಂತೆ ತೂಗಹಾಕಿಬಿಡಿ!" ಎಂದು ಸೈನಿಕರಿಗೆ ಆಜ್ಞೆ ಮಾಡಿದನು. ಸಾಮ್ರಾಟನ ಆಜ್ಞೆ ಕೂಡಲೇ ಕಾರ್ಯಗತವಾಯಿತು.

ಅಮರಸಿಂಹನ ದುರ್ಮರಣ ಹಾಗೂ ಅವನ ಹೆಣವನ್ನು ಬಹಿರಂಗವಾಗಿ ತೂಗಹಾಕಿದ ಸುದ್ದಿ ಆ ಕ್ಷಣವೇ ಅಮರಸಿಂಹನ ಮಹಲಿಗೆ ಮುಟ್ಟಿತು! ಈ ಕರ್ಣಕಠೋರವಾದ ವಾರ್ತೆಯನ್ನು ಕೇಳಿದ ಅಮರ ಸಿಂಹನ ಪತ್ನಿ ಥಟ್ಟನೆ ಪ್ರಜ್ಞೆ ತಪ್ಪಿ ಉರುಳಿ ಮೂರ್ಛೆಹೋದಳು. ದಾಸ ದಾಸೀ ಜನರು ದುಃಖದಿಂದ ಅವಳಿಗಾಗಿ ನಿಂತರು! ಒಂದು ಕ್ಷಣ ಹೊತ್ತಿನಲ್ಲೇ ಮೂರ್ಛೆ ತಿಳಿದೆದ್ದ ಆ ರಜಪೂತ ರಮಣಿ ಬೇರೆ ಉಪಾಯಗಾಣದೆ ಬಿಕ್ಕಿ ಬಿಕ್ಕಿ ಅಳುತ್ತಲೇ "ನಾನು ಸಹಗಮನ ಮಾಡಿಕೊಳ್ಳುತ್ತೇನೆ! ಬೇಗನೇ ಚಿತೆಯನ್ನು ಸಿದ್ಧಮಾಡಿರಿ!" ಎಂದು ಹೇಳಿದಳು. ಆದರೆ ರಾಣಿಗೆ ಮರುಕ್ಷಣವೇ ಆ ಭೀಕರ ಪರಿಸ್ಥಿತಿಯು ಅರಿವಾಯಿತು. ಪತಿಯ ಮೃತ ದೇಹ ಅರಮನೆಯ ಕೋಟೆಯ ಮೇಲ್ಭಾಗದಲ್ಲಿ ತೂಗಹಾಕಲ್ಪಟ್ಟಿದೆ! ಸುತ್ತಲೂ ಸಶಸ್ತ್ರ ಸೈನಿಕರ ಪಹರೆ ಇದೆ! ಪತಿಯ ಮೃತದೇಹವನ್ನು ತರುವವರಾರು? ಪತಿಯ ದೇಹದ ಹೊರತು ಸತಿಯ ಸಹಗಮನವಾದರೂ ಹೇಗೆ ಸಾಧ್ಯ? ಎಂಬ ಈ ಭಯಂಕರವಾದ ಸಮಸ್ಯೆ ತಲೆ ಎತ್ತಿ ನಿಂತಿತು. ಅಲ್ಲಿದ್ದ ನಾಲ್ಕೆಂಟು ಮಂದಿ ರಜಪೂತ ವೀರರು ಸಶಸ್ತ್ರರಾಗಿ ಮೃತ ದೇಹವನ್ನು ತರಲು ತೆರಳಿದರು. ಇವರು ಅಲ್ಲಿಗೆ ತಲುಪಿ ನೋಡುತ್ತಾರೆ! ನೂರಾರು ಮಂದಿ ಸೈನಿಕರು ಅಲ್ಲಿ ಆ ಮೃತ ದೇಹವನ್ನು ಕಾಯುತ್ತಿದ್ದಾರೆ! ಆ ಸೈನಿಕರ ಮುಂದೆ ಈ ರಜಪೂತ ವೀರರ ಪೌರುಷ ನಡೆಯದಾಯಿತು. ಹೋದವರೆಲ್ಲರೂ ಮಡಿದು ಬಿದ್ದರು! ಅಮರಸಿಂಹನ ಮೃತ ದೇಹ ಇದ್ದಲ್ಲಿಯೇ ಉಳಿಯಿತು! ರಜಪೂತ ವೀರರೆಲ್ಲರೂ ಮಡಿದು ಬಿಟ್ಟುದನ್ನು ನೋಡಿದ ಷಹಜಹಾನನು ಅಟ್ಟಹಾಸದೊಡನೆ ನಗುತ್ತ—"ಈಗ ನೋಡಿ! ಪರಾಕ್ರಮ ಶಾಲಿಯೆಂದು ಹೇಳುತ್ತಿದ್ದ ಈತನ ಹೆಣವನ್ನು ಹದ್ದು—ಕಾಗೆಗಳು ಕುಕ್ಕಿ ಕುಕ್ಕಿ ತಿನ್ನುತ್ತಿವೆ! ಇಂತಹ ವೀರನ ಹೆಣವನ್ನಾದರೂ ಬಿಡಿಸಿಕೊಂಡು ಹೋಗುವ ಎದೆಗಾರಿಕೆಯುಳ್ಳವರು ಈತನ ವಂಶದಲ್ಲಿ ಯಾರೊಬ್ಬರೂ ಇಲ್ಲ! ಹಹ ಹಾಹಾ" ಎಂದನು. ಸಾಮ್ರಾಟನ ಈ ಅಟ್ಟಹಾಸ್ಯ ದಿಗಂತದಲ್ಲಿ ಪ್ರತಿಧ್ವನಿಸಿತು!

ಇತ್ತ ದುಃಖದಿಂದ ಕೊರಗುತ್ತಿದ್ದ ರಾಣಿಗೆ ಈ ವರ್ತಮಾನವೂ ತಿಳಿಯಿತು. ಇನ್ನು ಪತಿಯ ದೇಹವನ್ನು ತರುವವರಾರು? ಎಂದು ಹಲುಬುತ್ತ ಆ ವೀರ ನಾರಿ, ತನ್ನ ಸಂಬಂಧಿಕರೆಲ್ಲರಲ್ಲಿ ತನ್ನ ಈ ಸಂಕಟವನ್ನು ತೋಡಿಕೊಂಡು, ಪತಿಯ ದೇಹವನ್ನು ತರುವಂತೆ ಅಂಗಲಾಚಿ ಬೇಡಿದಳು. ಆದರೆ, ಈ ಕಾರ್ಯಕ್ಕಾಗಿ ಹೋಗಿ ತಮ್ಮ ಪ್ರಾಣಾರ್ಪಣೆ ಮಾಡಲು ಯಾರೂ ಮುಂದಾಗಲಿಲ್ಲ. ಆ ಧೀರ್ಘ ಹತಾಶಳಾದ ರಾಣಿಯ ಕಣ್ಣೀರು ಇಂಗಿತು. ಎದೆ ಕಲ್ಲಾಯಿತು—"ನನ್ನ ಪತಿದೇವರನ್ನು ನಾನೇ ಸ್ವತಃ ಹೋರಾಡಿ ತರುತ್ತೇನೆ. ನನ್ನ ಕಠಾರಿ ನ್ನು ಇತ್ತ ಕೊಡಿ! ಎಂಬ ದಾಗಿ ರಾಣಿಯು ತೀಕ್ಷ್ಣವಾಗಿ ದನಿ ಮೊಳಗಿದಳು. ಅಲ್ಲಿದ್ದ ದಾಸ-ದಾಸಿಯರಿಗೂ— 'ನೀವೆಲ್ಲರೂ ನನ್ನ ಹಿಂದೆಯೇ ಹೊರಡಿ!' ಎಂದು—ಆಜ್ಞಾಪಿಸಿದಳು. ಅಷ್ಟರಲ್ಲಿ ಅಲ್ಲೊಂದು ಘಟನೆ ನಡೆದಂತೆ, ವೀರ ತೇಜಸ್ವೀ ಕುಮಾರನೋರ್ವನ ಕೈಯಲ್ಲಿ ಕತ್ತಿಯನ್ನು—ಹಿಡಿದು ರಾಣಿಯ ಮುಂದೆ ಬಂದು ಆಕೆಯ ಕಾಲು ಮುಟ್ಟಿ ನಮಸ್ಕರಿಸಿ ಹೇಳಿದನು.

"ಅಮ್ಮಾ....ರಾಠೋರ ವಂಶದ ಈ ವೀರಕುಮಾರನಾದ ನಾನಿರುವಾಗ ನಿಮ್ಮ ಅಪೇಕ್ಷೆಯನ್ನು ಈಡೇರಿಸಲಾರೆನೇ ಅಮ್ಮಾ...? ನೀವು ದಯವಿಟ್ಟು ಒಂದು ಹೆಜ್ಜೆ ಮುಂದಿಡಬಾರದು. ನಾನೊಬ್ಬನೇ ಹೋಗಿ ಆ ಮೃತ ದೇಹವನ್ನು ಈಗಲೇ ತಂದು ನಿಮ್ಮ ಮುಂದಿಡುತ್ತೇನೆ! ಅಮ್ಮಾ...ನನ್ನನ್ನು ಆಶೀರ್ವದಿಸಿರಿ!" ಎನ್ನುತ್ತ ಆ ವೀರಕುಮಾರನು ಖಡ್ಗವನ್ನು ರಾಣಿಯ ಕಾಲುಗಳ ಮೇಲಿಟ್ಟು ನಿಂತಿರಲು ಈ ವೀರಕುಮಾರನ ಧೈರ್ಯವನ್ನು ಕಂಡ ರಾಣಿ, ಭಾವೋದ್ವೇಗದೊಡನೆ ಗಳಗಳನೆ ಅಳುತ್ತ ಆನಂದಬಾಷ್ಪಗಳನ್ನು ಸುರಿಸುತ್ತ—"ಮಗು! ಈ ಸಮಯಕ್ಕೆ ಸರಿಯಾಗಿ ನೀನು ಆಪದ್ಬಾಂಧವನಂತೆ ಇಲ್ಲಿಗೆ ಬಂದೆಯಪ್ಪಾ! ವೀರವಂಶದ ಕುಡಿಯೆಂದರೆ ನೀನೇ ಅಗರುವೆ! ದುರ್ಗಾದೇವಿಯು ನಿನ್ನನ್ನು ಕಾಪಾಡಲಿ!' ಎಂದು ಆಶೀರ್ವದಿಸುತ್ತ ಖಡ್ಗವನ್ನೆತ್ತಿ ಆತನ ಕೈಗೆ ಕೊಟ್ಟು ರಾಣಿ ಬಿಕ್ಕಿಬಿಕ್ಕಿ ಅಳತೊಡಗಿದಳು.

"ಅಮ್ಮಾ...ಅಳಬೇಡ!" ಎನ್ನುತ್ತ ಆ ವೀರಕುಮಾರನು ಕುದುರೆಯನ್ನೇರಿ ವಾಯುವೇಗದಿಂದ ಹೊರಟು ಹೋದನು.

ಈ ವೀರ ಕುಮಾರನ ವಯಸ್ಸು ಇನ್ನೂ ಹದಿನಾರು ಪೂರ್ತಿಯಾಗಿರಲಿಲ್ಲ. ಈತನು ಅಮರಸಿಂಹನ ಹಿರಿಯ ಬಂಧು

(ಅಪ್ಪತ್ತೇಳನೇ ಪುಟ ನೋಡಿರಿ)



ಮನೆಮನೆಯಲ್ಲೂ ಇರಲೇಬೇಕಾದ ಪವಿತ್ರ ಧಾರ್ಮಿಕ ಗ್ರಂಥ

ಪುಟ 450ಕ್ಕೂ ಮಿಕ್ಕಿ — ಬೆಲೆ ರೂ. 1-50

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ, ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:

ಟಿ. ಎಸ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು—2

ಶ್ರೀ ಮಾದರಬೆಟ್ಟು ರಂಗರಾವ್

ಉತ್ಸವಗಳು

ಉತ್ಸವವೆಂಬುದೇನೂ ಬೃಹತ್ತಲ್ಲ; ತೀರ ಸಾಮಾನ್ಯ ವಿಚಾರ. ಆದರೆ, ಇದರ ಹಿನ್ನೆಲೆ ಸಹಸ್ರಾನು ಸಹಸ್ರ ವರ್ಷಗಳಷ್ಟು ಹಿಂದಿದೆ; ಅದು ಮುನ್ನೆಲೆಯೂ ಹೌದು ಎಂದರೆ, ಮೂಗು ಮುರಿಯಬೇಡಿ. ಸಾಮಾನ್ಯ ವಿಷಯವನ್ನೆತ್ತಿಕೊಂಡು ಆ ಬಗ್ಗೆ ಉತ್ತಮ ಜಿಜ್ಞಾಸೆಯನ್ನು ಮಾಡಿದ ಶ್ರೀ ರಂಗರಾಯರು ಅದೊಂದು ಶಿಷ್ಟಾಚಾರವೆಂಬ ತೀರ್ಮಾನಕ್ಕೆ ಬಂದಿದ್ದಾರೆ.

ನಮಗೆ ಚಿಕ್ಕಂದಿನಿಂದಲೇ ಉತ್ಸವದ ಮಹತ್ವ ಗೊತ್ತು. ದೇವಸ್ಥಾನದ ಉತ್ಸವ ಅಂತ ಅದು ಮೊದಲು ಗೊತ್ತಾಗುತ್ತದೆ. ಉತ್ಸವಕಾಲ ಅಂದರೆ ಮಕ್ಕಳಿಗೆಲ್ಲ ತುಂಬ ಸಡಗರ.

ದೈವಿಕ ಸಂಬಂಧವಾದ ಪೂಜೆ ವೈಭವಗಳಿಗೆ ಉತ್ಸವ ಅನ್ನುತ್ತಾರೆಂದು ನಮಗೆ ಗೊತ್ತಾಗಿರುತ್ತೆ. ಉತ್ಸವ ಅಂದ ಕೂಡಲೇ ಅದರಲ್ಲಿ ದೈವ ದೇವರುಗಳ ಸಂಬಂಧ ಇದೆಯೆಂತಲೇ ನಮಗೆ ಕಾಣುತ್ತದೆ. ಅಂದರೆ ನಿರ್ದಿಷ್ಟ ಕಾಲದಲ್ಲಿ ದೇವರನ್ನು ಸಂತೋಷಪಡಿಸುವುದು. ಹಾಗೆ ಸಂತೋಷಪಡಿಸಿದವರಿಗೂ ಕೂಡಿದವರಿಗೂ ನೋಡಿದವರಿಗೂ ಸಂತೋಷ, ತೃಪ್ತಿ.

ಆದರೆ ದೇವಾಲಯಗಳಲ್ಲಿ ಮಾತ್ರ ಉತ್ಸವವೆ? ಅಲ್ಲ; ಮಾನವನ ವೈಯಕ್ತಿಕ ವೈಭೋಗಗಳೂ ಉತ್ಸವವೇ. ಮದುವೆ-ಮುಂಜಿಗಳೂ ಉತ್ಸವವೇ. ಸೀಮಂತೋತ್ಸವ, ವಿವಾಹೋತ್ಸವ–ಹೀಗೆ ಎಲ್ಲವೂ ಉತ್ಸವಗಳೇ. ದೊಡ್ಡ ದೊಡ್ಡವರಿಗೆ ನಡೆಯುವ ಸನ್ಮಾನ ಸಮಾರಂಭಗಳೂ, ಸಾಹಿತ್ಯ ಸಮಾರಂಭಗಳೂ ಉತ್ಸವವೆನಿಸುತ್ತವೆ. ಉತ್ಸವವೆಂದ ಕೂಡಲೇ ಅದರಲ್ಲಿ ದೈವಿಕ ಭಾವನೆ ಇದೆ ಎಂದೂ ಆಗುತ್ತದೆ.

ಶುಭವೇ ಆಗಲಿ, ಅಶುಭವೇ ಆಗಲಿ, ಹತ್ತು ಜನರು ಸೇರುವಂತೆ ಮಾಡುವುದೆಲ್ಲವೂ ಉತ್ಸವವೇ. ಆದರಲ್ಲಿ ದೈವಿಕ ಭಾವನೆಗಳು ಬಹಿರಂಗದಲ್ಲಿ ತೋರಲಿ, ಬಿಡಲಿ—ಅಡಗಿರುವುದಂತೂ ನಿಜ. ಮದುವೆ, ಮುಂಜಿ, ಸೀಮಂತ, ಗೃಹಪ್ರವೇಶ, ಗೃಹಶಾಂತಿ ಮೊದಲಾದುವನ್ನು ಶಾಸ್ತ್ರೀಯವಾಗಿ ಮಾಡುವುದಾದರೆ ಅವುಗಳೆಲ್ಲಕ್ಕೂ ಬೇರೆ ಬೇರೆ ಬಗೆಯ ಹೋಮಗಳಿವೆ. ಹೋಮ ಧೂಮವೇಳದ ಶುಭಕಾರ್ಯಗಳಿಲ್ಲ; ಸತ್ತವರಿಗೆ ಮಾಡುವ ಅಪರಕರ್ಮಗಳಿಗೂ—ಅವೂ ದೈವಿಕವಾದುದರಿಂದ—ಹೋಮವಿದೆ. ಹೋಮಗಳಿಗೂ ಉತ್ಸವಗಳಿಗೂ ಹೀಗಿದೆ ಗಂಟು ನಂಟು.

ಹಿಂದಿನ ಕಾಲದಲ್ಲಿ ಯಾವ ಸಮಾರಂಭಗಳಾದರೂ ದೇವಕಾರ್ಯ ಮೂಲಕವಾಗಿಯೇ ನಡೆಯುತ್ತಿದ್ದುವು. ಅದಕ್ಕೆಲ್ಲಾ ಹೋಮಗಳೆಂದೂ ಯಾಗಗಳೆಂದೂ ಹೆಸರಿದ್ದುವು. ಪುರಾಣಗಳೆಲ್ಲಾ ಯಾಗಮಯ, ಹೋಮಮಯ.

ಆದರೆ ಈಗ ಹೋಮ ಧೂಮಗಳೆಲ್ಲ ಹಳೆಯ ಗೊಡ್ಡು ಆಚಾರಗಳೆಂದು ಬಹಳ ಮಂದಿ ಹೇಳುವುದನ್ನು ಕೇಳುತ್ತೇವೆ. ಉತ್ಸವಗಳೇನೋ ನಡೆಯುತ್ತವೆ. ಅವುಗಳಲ್ಲಿ ಬಾಹ್ಯಾಡಂಬರಗಳೂ, ತಿಂದುಣ್ಣುವ ಭೋಗ ವಿಲಾಸಗಳೂ ತುಳುಕಾಡುವುದನ್ನು ಕಾಣುತ್ತೇವೆ. ಸುಮ್ಮನೆ ಹೋಮದ ಕುಂಡಕ್ಕೆ ತುಪ್ಪ ಮೊದಲಾದ ಬೆಲೆಬಾಳುವ ಸಾಮಗ್ರಿಗಳನ್ನು ಸುರಿದು ಹಾಳು ಮಾಡುವುದೇಕೆ? ಹಿಂದಿನವರು ಮೂಢತನದಿಂದ ದ್ರವ್ಯವನ್ನು ಭಸ್ಮ ಮಾಡುತ್ತಿದ್ದರು ಎಂದು ವ್ಯಾಖ್ಯಾನಿಸುತ್ತಾರೆ ಈಗಿನ ನವನಾಗರಿಕರು.

ಒಬ್ಬರಿಂದ ಒಂದು ಉಪಕಾರವಾದರೆ ಕೃತಜ್ಞತೆ ಸೂಚಿಸುವುದು ಶಿಷ್ಟಾಚಾರವೆಂದು ಎಲ್ಲರೂ ಒಪ್ಪುತ್ತಾರೆ. "ಥ್ಯಾಂಕ್ಸ್, ಉಪಕಾರವಾಯ್ತು, ತುಂಬಾ ಖುಷಿ" ಎಂದೆಲ್ಲ ಹೇಳುತ್ತೇವೆ. ಪ್ರತ್ಯುಪಕಾರ ಮಾಡುವುದೂ ಬಿಡುವುದೂ ಮುಖ್ಯವಲ್ಲ. ಕೃತಜ್ಞತೆ ಸೂಚಿಸುವುದೊಂದು ಶಿಷ್ಟಾಚಾರ, ಮುಖ್ಯ.

ಹೋಮ ಮಾಡುವುದೂ ಅಂತಹುದೇ ಒಂದು ಶಿಷ್ಟಾಚಾರವೇ. ಈ ಶಿಷ್ಟಾಚಾರ ಪದ್ಧತಿಯನ್ನು ಇತ್ತೀಚಿನವರೆ ಕಂಡುಹಿಡಿದುದೇನಲ್ಲ. ವೇದಗಳ ಕಾಲದಲ್ಲೇ ಇದ್ದು ಹೋಮಕಾರ್ಯದ ರೂಪದಲ್ಲಿ ಅದು ನಡೆಯುತ್ತಿತ್ತು. ಕಾಲಪ್ರವಾಹದಲ್ಲಿ ಅದರ ಉದ್ದೇಶದ ಮೇಲೆ ಧೂಳು ಮುಚ್ಚಿ ಏನೋ ಅದೊಂದು ಮೂಢಾಚಾರವೆನಿಸಿತು.— ಈಗಿನ ಬುದ್ಧಿವಂತರಿಂದ.

ಈಗಿನ ಬುದ್ಧಿವಂತರಾದರೂ ಸ್ವತಃ ಸಂಪಾದಿಸಿಕೊಂಡ ಜ್ಞಾನವೇ? ಹೊರಪ್ರಪಂಚದ ಸಂಪರ್ಕವು ಸಮೀಪವಿರುವಾದಂತೆ, ಪರದೇಶದವರ ಆಚಾರ ವಿಚಾರಗಳನ್ನು, ಒಳಿತಾವುದು, ಕೆಡುಕಾವುದು ಎಂಬ ತಾರತಮ್ಯವಿಲ್ಲದೆ ಅನುಸರಿಸಿಕೊಂಡ. ಸಾಧಿಸಿದ ಜ್ಞಾನದ ಪರಿಣಾಮವೇ ಹೀಗಾಯಿತು.

ಎಲ್ಲೆಲ್ಲೋ ಕಾಣುವ ಒಳಿತುಗಳನ್ನು ಸ್ವೀಕರಿಸಿ ನಮ್ಮ ಒಳಿತುಗಳನ್ನು ಅಭಿವೃದ್ಧಿಪಡಿಸುವುದರ ಬದಲಿಗೆ, ಪರಕೀಯರದು ಏನಿದ್ದರೂ ಚೆಂದವೆಂಬಂತೆ ಸ್ವೀಕರಿಸಿದರೆ ಆಗುವುದು ಹೀಗೆಯೇ.

ಎಷ್ಟು ಆಧುನಿಕ ಜ್ಞಾನ ಸಂಪಾದಿಸಿದರೂ ಹೊಟ್ಟೆಯ ಸಮಸ್ಯೆ ಬಿಟ್ಟು ಹೋಗುವಂತಹುದಲ್ಲ; ಅಂದಿಗೂ ಇಂದಿಗೂ ಎಂದೆಂದಿಗೂ ಅದು ಒಂದೇ ರೀತಿ. ಹೊಟ್ಟೆಯಲ್ಲಿರುವುದು ಜಠರಾಗ್ನಿ ತಾನೆ? ಆದುದರಿಂದ ನಿತ್ಯ ಮೊದಲು ಜಠರಾಗ್ನಿಗೆ ಹೋಮವಾಗಲೇ ಬೇಕು. ಆ ಅಗ್ನಿಗೆ ಇಂಧನಗಳನ್ನು ಹಾಕಿ ಹೋಮಿಸದಿದ್ದರೆ ದೇಹವೂ ಬೆಳೆಯದು; ನಡೆಯದು, ಯಾವುದೂ ಸಾಗದು. ಆಹಾರ ಪದಾರ್ಥಗಳನ್ನು ಸೇವಿಸುವುದೇ ಉದರಾಗ್ನಿಯ ಹೋಮ; ನಿತ್ಯ ಮೂರು ಹೊತ್ತೂ ನಡೆಯುವ ಹೋಮ. ಈ ಹೋಮವು ಅನಾವಶ್ಯಕ ಖರ್ಚು ಎಂದು ಯಾರೂ ಹೇಳುವಂತಿಲ್ಲ.

ಈ ಸ್ವಂತ ಹೋಮ ಸಾಂಗವಾಗಿ ಸಾಗಲಿಕ್ಕಾಗಿಯೇ ಉಳಿದ ಹೋಮಗಳೂ ಕೃತಜ್ಞತಾ ಸೂಚಕ ಶಿಷ್ಟಾಚಾರಕ್ಕೆ ಅಗತ್ಯವೆಂದು ಹಿಂದಿನ ಕಾಲದವರು ನಿರ್ಣಯಿಸಿದ್ದಾರೆ.

"ಯಾರಿಗೆ ಕೃತಜ್ಞತೆ ತೋರಿಸಬೇಕು? ಏಕೆ? ನಾವು ಸಂಪಾದಿಸುತ್ತೇವೆ, ತಿನ್ನುತ್ತೇವೆ. ಇದರಲ್ಲಿ ಕೃತಜ್ಞತೆಗೆ ಏನಿದೆ?" ಎಂದು ಕೇಳಬಹುದು.

ಹೀಗೆ ಕೇಳುವವರು ನಾಸ್ತಿಕರಾದರೆ ಅವರಿಗೆ ಇಲ್ಲಿ ಉತ್ತರವಿಲ್ಲ. ಕೇಳುವವರು ಮೊದಲು ತಾವು ನಿಜವಾದ ನಾಸ್ತಿಕರೋ, ಆಸ್ತಿಕರೋ ಎಂಬುದನ್ನು ನೋಡಿಕೊಳ್ಳಬೇಕು. ಏಕೆಂದರೆ ಸಾಮಾನ್ಯವಾಗಿ ಎಲ್ಲರೂ ಸಮಯ ಬಂದ ಹಾಗೆ ನಾಸ್ತಿಕರಾಗಿಯೂ ಆಸ್ತಿಕರಾಗಿಯೂ ಕಾಣಿಸುತ್ತಾರೆ. ನಿಜವಾದ ನಾಸ್ತಿಕರು ನಿಜವಾದ ಮಹಾತ್ಮರ ಹಾಗೆ ತೀರ ಅಪರೂಪ. ನಾಸ್ತಿಕರಂತೆ ಕಾಣುವ ಆಸ್ತಿಕರೇ ಎಲ್ಲರೂ.

ಆದುದರಿಂದ, ನಮಗೆ ನಾವೇ ಸಂಪಾದಿಸಿಕೊಂಡು ತಿನ್ನುವವರಾದರೂ, ಆಸ್ತಿಕ ದೃಷ್ಟಿಯಿಂದ ನೋಡುವಾಗ, ಯಾರಿಗೋ ಕೃತಜ್ಞತೆ ಸಲ್ಲಿಸಬೇಕಾದುದು ನ್ಯಾಯವೆಂದೇ ಆಯಿತು.

ಅದು ಯಾರಿಗೆ?— ಸೃಷ್ಟಿಕರ್ತನಾದ ದೇವರಿಗೇ, ದೇವತಾರೂಪಗಳಿಗೇ.

ನಮಗೆ ನಾವೇ ಸಂಪಾದಿಸುವೆವು ನಿಜ; ಸಂಪಾದಿಸಲಿಕ್ಕೂ, ಫಲವು ನಮಗೆ ಸಿಗಲಿಕ್ಕೂ ಈ ಸೃಷ್ಟಿಯ ವಸ್ತುಗಳ ಸಹಾಯ ನಮಗೆ ಬೇಕೇ ಬೇಕು. ಅದು ನಮಗೆ ಒದಗುವಂತೆ ಅಳವಡಿಸಿ ಇಟ್ಟವನು ದೇವರು ತಾನೆ?

'ಏನನ್ನೇ ಆಗಲಿ, ನನಗೆ ಸಮರ್ಪಿಸನೆ

(ಇಪ್ಪತ್ತಾರನೇ ಪುಟ ನೋಡಿ.)

For your Motor Transport Needs in South Kanara

REMEMBER

THE HANUMAN TRANSPORT COMPANY (PRIVATE) LIMITED,

Post Box No. 27, UDIPI, S. K.

(Estd: 1930)

Telephone:
Managing Director : 319
Controller of Works & Stores : 319 A

Telegrams:
"HANUMANCO"

ರಾಮಾಯಣದ ಕೆಲವು ವಿಚಾರಗಳು

ಶ್ರೀ ಕೆ. ವೆಂಕಟ್ರಾಯಾಚಾರ್ಯ, ಸುರತ್ಕಲ್ಲು.

ರಾಮಾಯಣವು ಭಾರತೀಯರ ಆದಿ ಕಾವ್ಯ; ಆದರಣೀಯ ಕಾವ್ಯ. ಸಾಕಷ್ಟು ಪುರಾತನವಾದ ಈ ಕೃತಿಯಲ್ಲಿ ರಾಮ ಮತ್ತು ರಾಮಾಯಣಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು ತುಂಬಿವೆ. ಕೆಲವಂತೂ ಜಿಜ್ಞಾಸೆಗೂ ಕಾರಣವಾಗಿವೆ. ಇವುಗಳಲ್ಲಿ ಕೆಲವು ವಿಚಾರಗಳು ಇಲ್ಲಿ ಸಾಧಾರವಾಗಿ ನಿರೂಪಿಸಲಾಗಿದೆ.

೧) ರಾಮಾಯಣದ ವೈಶಿಷ್ಟ್ಯವೇನೆಂದು ಇಲ್ಲಿ ಹೇಳುವುದು ಸೂಕ್ತ: ಭಾರತ ದೇಶದ ಪ್ರಾಚೀನ ಗ್ರಂಥಗಳಲ್ಲಿ ಅಂದಿನ ಜನಜೀವನದ ಚರಿತ್ರೆ ತಿಳಿಯ ಬರುತ್ತದೆ. ಅಂತಹ ಆದರ್ಶ ಗ್ರಂಥಗಳಲ್ಲಿ ವೇದ ಉಪನಿಷತ್ತುಗಳಂತೆ ಮಹಾಭಾರತ ರಾಮಾಯಣಗಳು ಪರಿಗಣಿಸಲಾಗಿವೆ. ಮಹಾಭಾರತದ ಕಾಲವೂ ಕ್ರಿಸ್ತಪೂರ್ವ 3 ಸಾವಿರ ವರ್ಷಗಳಷ್ಟು ಪ್ರಾಚೀನವಾದರೆ, ರಾಮಾಯಣವು ಅದಕ್ಕಿಂತಲೂ ಹಿಂದಿನದಾಗಿರಬೇಕು. ಪರಂತು ಕಾಲಾಂತರದಲ್ಲಿ ಅವುಗಳ ಪರಿಷ್ಕರಣ—ಸಂವರ್ಧನಗಳಿಗೆಡೆಯಿತ್ತಾದರೂ, ಅವು ಮೂಲತಃ ಕಲ್ಪನೆಗಳೆನಿಸಿಲ್ಲವೆಂದು ಹೇಳಲಡ್ಡಿಯಿಲ್ಲ. ರಾಮಾಯಣ ರಚನೆಯಾದರೋ ಶ್ರೀ ರಾಮನು ರಾವಣನನ್ನು ಕೊಂದು ಮರಳಿದ ವೇಳೆಯೇ ತೊಡಗಿದುದೆಂದು ತಿಳಿಯ ಬರುತ್ತದೆ:

"ಕೋನ್ವಸ್ಮಿನ್ ಸಾಂಪ್ರತಂ ಲೋಕೇ
ಗುಣವಾನ್ ಕಶ್ಚ ವೀರ್ಯವಾನ್ ||"
(ಬಾ. 1—2)

ಎಂಬಿವೇ ಮೊದಲಾದ ಉದಾಹರಣೆಗಳು ಇಲ್ಲಿ ಹೇಳತಕ್ಕವುಗಳಿವೆ (ಜಯಕರ್ನಾಟಕ, 1942 ಮತ್ತು ಮಂಗಳೂರ 1967ರ ಪತ್ರಿಕೆಗಳಲ್ಲಿ ನನ್ನ ಲೇಖನ ನೋಡಿರಿ).

೨) ರಾಮಾಯಣದ ಪರಿಮಿತಿಯೆಷ್ಟೆಂದು ತಿಳಿಯುವುದು ಸೂಕ್ತ: ಗಾಯತ್ರಿ ಛಂದಸ್ಸಿನಂತೆ 24 ಅಕ್ಷರಗಳುಳ್ಳ "ಗಾಯತ್ರೀ" ಮಂತ್ರದ 24 ಅಕ್ಷರಗಳು ಪ್ರತಿಯೊಂದು ಸಾವಿರ ಗ್ರಂಥಗಳ ಮೊದಲಲ್ಲಿದ್ದುದರಿಂದ "ಚತುರ್ವಿಂಶತಿಸಾಹಸ್ರಿಕಾ" ಎಂದು ಇದಕ್ಕೆ ಹೇಳುತ್ತಾರೆ. ವ್ಯಾಸ ಭಾಗವತವು 18 ಸಾವಿರ ಗ್ರಂಥದಷ್ಟು ದೊಡ್ಡದಿದೆ. (ಒಂದು ಗ್ರಂಥವೆಂದರೆ 32 ಅಕ್ಷರಗಳ ಸಮೂಹವೆಂದು ಅರ್ಥ). ಹಾಗಾದರೆ, ರಾಮಾಯಣವು ವ್ಯಾಸ ಭಾಗವತಕ್ಕಿಂತ ಮೂರನೆಯೊಂದು ಪಾಲಿನಷ್ಟು ಹೆಚ್ಚಿನದಾಗಿದೆ. ವ್ಯಾಸ ಭಾರತದ ಸುಮಾರು ಕಾಲು ಪಾಲಿನಷ್ಟು ಚಿಕ್ಕದಾಗಿದೆ. ರಾಮಾಯಣವು ಸಂಸ್ಕೃತದಲ್ಲಿ ಆದಿಕಾವ್ಯವೆಂದು ಹೇಳುತ್ತಾರೆ. ಹಾಗಾದರೆ, ವಾಲ್ಮೀಕಿಯು ಸಂಸ್ಕೃತದಲ್ಲಿ ಆದಿಕವಿ ಎಂದು ಅರ್ಥ.

೩) ಶ್ರೀ ರಾಮ ಹುಟ್ಟಿದ ಅಯೋಧ್ಯೆಯು ಉತ್ತರಾಪಥದಲ್ಲಿರುವ ಪ್ರದೇಶ. ಅಲ್ಲಿಯ ರಾಮನು ದಕ್ಷಿಣಾಪಥದ ಪಂಪಾ-ಲಂಕಾ ನಗರಗಳಿಗೆ ಸಾಗಿಬಂದವನೆಂದು, ಅಲ್ಲಿಯ ಜನರೊಂದಿಗೆ ಸಂಪರ್ಕವನ್ನು ಬೆಳೆದವನೆಂದು (ಅಲ್ಲಿಯ ದುಷ್ಟರನ್ನು ಕಡೆದು ಶಿಷ್ಟರನ್ನು ಪಾಲಿಸಿದನೆಂದು) ರಾಮಾಯಣ ವಾಚಕರಿಗೆ ತಿಳಿಯದುದಲ್ಲ! ಇಡೀ ಭಾರತ ದೇಶದ ಹೊಕ್ಕುಬಳಕೆಗಳನ್ನು ಪಡೆದ ಶ್ರೀ ರಾಮನು ಉಭಯ ಪ್ರದೇಶಗಳಲ್ಲೂ ಆದರ್ಶ-ಪೂಜ್ಯನಾಗಿ ಇಂದಿಗೂ ಗೌರವಿಸಲ್ಪಡುತ್ತಾನೆ. ಕೆಲವು ಅವತಾರಗಳು ಸ್ವಲ್ಪ ಕಾಲಾವಧಿಯಲ್ಲಿ ಪ್ರಭಾವಿಗಳಾಗಿವೆ, ಕೆಲವು ಸ್ವಲ್ಪ ದೇಶಾವಧಿಯಲ್ಲಿ ಮೆರೆದವು, ಕೆಲವು ಅವತರಣಗಳು ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ ಗಮಿಸಿದ್ದುವು. ಶ್ರೀರಾಮನು ಅಖಂಡ ಭಾರತದಲ್ಲಿ (ನೆರೆಯ ದೇಶಗಳಲ್ಲಿ) ಪ್ರಮಿತನಾಗಿದ್ದಾನೆ. ಪರಂತು, ಅವೆಲ್ಲಾ ಅವತಾರಗಳು ಎಂದೆಂದೂ ತ್ರಿಕಾಲಗಳಲ್ಲೂ ಆಸ್ತಿಕರಿಂದ ಆದೃತಗಳಾಗಿವೆಯೆಂಬುದು ಮರೆಯಲಾಗದ ಸಂಗತಿಯಾಗಿದೆ!

೪) ಶ್ರೀ ರಾಮನು ದಿವ್ಯ—ಅಮಾನುಷ ಪುರುಷನೆಂಬುದನ್ನು ಕುರಿತು ತುಸ ಬರೆಯಬೇಕಾಗಿದೆ. ರಾಮಾಯಣದಲ್ಲಿ ಈ ಬಗ್ಗೆ ಕೆಲವೆಡೆ ಉದಾಹರಣೆಗಳು ಕಾಣಬರುತ್ತಿವೆಯಾದರೂ, ಕೆಲವರು ಈ ತರದಲ್ಲಿ ತುಸ ಉದಾಸೀನತೆಯಿಂದ ಕೂಡಿರುತ್ತಾರೆಂಬುದು ಸರಿಯಲ್ಲ. ರಾಮನವತಾರದಲ್ಲಿ ಇತರ ಅವತಾರಗಳಂತೆ ಹಲವು ಬಾರಿ ಅಮಾನುಷ ರೀತಿಗಳು ಕಾಣುವುದಿಲ್ಲವಾದರೂ, ಕೆಲವೊಂದೆಡೆ ಈ ಬಗೆತಕ್ಕೆ ಅವಕಾಶವಿದೆ.

"ಕಸ್ಯ ಬಿಭ್ಯತಿ ದೇವಾಶ್ಚ
ಜಾತರೋಷಸ್ಯ ಸಂಯುಗೇ"
(ಬಾ. 1—4)

"ಯುದ್ಧದಲ್ಲಿ ಸಿಟ್ಟುಗೊಂಡ ಅವಾತನಿಗೆ ದೇವತೆಗಳೂ ಹೆದರುತ್ತಾರೆಂದು" ವಾಲ್ಮೀಕಿ ಪ್ರಶ್ನಿಸುವಲ್ಲಿ, ಅತಿಮಾನವ ರೀತಿ ಮಾತ್ರವಲ್ಲ, ಅತಿ ದಿವ್ಯರೂಪವೂ ಒಳಗೊಂಡಂತೆ ಕಾಣುತ್ತದೆ!

೫) ಶ್ರೀ ರಾಮಾವತರಣದ ಮೊದಲು ಪುತ್ರಕಾಮೇಷ್ಟಿಯಲ್ಲಿ ಅಗ್ನಿದತ್ತ ಪಾಯಸವನ್ನು ದಶರಥನು ಪಡೆದು, ತನ್ನ ಮಡದಿಯರಿಗೆ ಹಂಚಿದನು, ಆ ಕ್ರಮ ಹೀಗೆನ್ನಲಾಗಿದೆ:

"ಕೌಸಲ್ಯಾಯೈ ನರಪತಿಃ
ಪಾಯಸಾರ್ಧಂ ದದೌ ತದಾ ||
ಅರ್ಧಾದರ್ಧಂ ದದೌ ಚಾಪಿ
ಸುಮಿತ್ರಾಯೈ ನರಾಧಿಪಃ |
ಕೈಕೇಯ್ಯೈ ಚಾವಶಿಷ್ಟಾರ್ಧಂ
ದದೌ ಪುತ್ರಾರ್ಥ ಕಾರಣಾತ್ ||
ಪ್ರದದೌ ಚಾವಶಿಷ್ಟಾರ್ಧಂ
ಪಾಯಸಸ್ಯಾಮೃತೋಪಮಂ |
ಅನುಚಿಂತ್ಯ ಸುಮಿತ್ರಾಯೈ
ಪುನರೇವ ಮಹೀಪತಿಃ ||"
(ಬಾ. 16—26)

ಇಲ್ಲಿ ಆ ಪಾಯಸದ ಎಂಟನೆಯೊಂದು ಪಾಲು ಕೈಕೆಯಿಗೆ, ಎಂಟನೆಯ ಮೂರು ಪಾಲು ಸುಮಿತ್ರೆಗೆ, ಎಂಟನೆಯ ನಾಲ್ಕು ಪಾಲು ಕೌಸಲ್ಯೆಗೆ ಕೊಟ್ಟದ್ದನೆಂಬುದು ಸಾಮಾನ್ಯಾರ್ಥ. ಇಲ್ಲಿಯ ಪಾಯಸ ವಿತರಣದಿಂದ ಈ ರಾಮಾದಿಯರಲ್ಲಿ ಅಂತರವಿಲ್ಲೆಂಬುದು ಮಾತ್ರ ವಿಶೇಷತಃ ತಿಳಿದಿರಬೇಕಾಗಿದೆ. ಏಕೆಂದರೆ, ದಿವ್ಯ ಶಕ್ತಿಯಲ್ಲಿ ಅದೆಷ್ಟು ಭಾಗದ ಪಟ್ಟಿಗೂ ಪೂರ್ಣಶಕ್ತಿಯ ಸಂಪರ್ಕವಿದೆಯೆಂಬ ಅಲೌಕಿಕ ವಿಚಾರವಿಲ್ಲಿದೆ. (ಶ್ರೀಕೃಷ್ಣ—ಬಲರಾಮರು ಶ್ರೀಹರಿಯ ಕೃಷ್ಣ—ಶುಕ್ಲ ಕೇಶಗಳಿಂದ ಅವತರಿಸಿದರೆಂಬುದು ಪುರಾಣಾಂತರದಿಂದ ತಿಳಿದರೂ, ಆ ಅವತಾರಗಳು ಸುಪೂರ್ಣಗಳಾಗಿವೆಯಷ್ಟೆ!) ಉಪನಿಷತ್ತಿನ ಮಂತ್ರವೊಂದರಲ್ಲಿ ಈ ವಿಚಾರ ಹೇಳಲಾಗಿದೆ: "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ" ಎಂಬೀ ವಿಷಯ ಗಮನೀಯ! (ಶ್ರೀ ಸಿ. ರಾಜಗೋಪಾಲಾಚಾರ್ಯರು ಬರೆದ ಶ್ರೀ ರಾಮನ ಕತೆಯಲ್ಲಿ ಈ ವಿಚಾರವೆತ್ತಿಕೊಂಡಿದೆ!) ಇಲ್ಲಿಯೂ ಶ್ರೀರಾಮನು ದಿವ್ಯ ಭಾವ ಪೂರ್ಣನೆಂದು ಹೇಳಲಡ್ಡಿಯಿಲ್ಲ!

೬) ಶ್ರೀರಾಮನು ಬಾಲ್ಯಾವಸ್ಥೆಯಲ್ಲಿರುವಾಗಲೆ ವಿಶ್ವಾಮಿತ್ರನು ದಶರಥನಲ್ಲಿಗೈದಿ, ರಾಕ್ಷಸರ ನಾಶಕ್ಕೆ ಶ್ರೀರಾಮನನ್ನು ತನ್ನೊಡನೆ ಕಳುಹೆಂದು ಕೇಳುವಲ್ಲಿದೆ:

"ಶಕ್ತೋ ಹ್ಯೇಷ ಮಯಾ ಗುಪ್ತೋ
ದಿವ್ಯೇನ ಸ್ವೇನ ತೇಜಸಾ |
ರಾಕ್ಷಸಾ ಯೇ ವಿಕರ್ತಾರಃ
ತೇಷಾಮಪಿ ವಿನಾಶನೇ |"
(ಬಾ. 19—9)

"ಅಹಂ ವೇದ್ಮಿ ಮಹಾತ್ಮಾನಂ
ರಾಮಂ ಸತ್ಯ ಪರಾಕ್ರಮಂ |
ವಸಿಷ್ಠೋಽಪಿ ಮಹಾತೇಜಾ
ಯೇ ಚೇಮೇ ತಪಸಿ ಸ್ಥಿತಾಃ ||"
(ಬಾ. 19—14)

ಶ್ರೀರಾಮನ ದಿವ್ಯರೂಪ ವಿಚಾರವಿಲ್ಲಿ ಸ್ಪಷ್ಟತಃ ಹೇಳಲಾಗಿದೆ!

೭) ವಾಲಿವಧೆಯಾದ ಬಳಿಕ ವಾಲಿಯ ವಿವಾದಕ್ಕೆದುರಾಗಿ ಶ್ರೀರಾಮನು ಉತ್ತರಿಸುವ ವಾಕ್ಯದಲ್ಲಿದೆ:

"ಇಕ್ಷ್ವಾಕೂಣಾಮಿಯಂ ಭೂಮಿಃ
ಸಶೈಲ ವನ ಕಾನನಾ |
ಮೃಗಪಕ್ಷಿ ಮನುಷ್ಯಾಣಾಂ
ನಿಗ್ರಹಾನುಗ್ರಹಾವಪಿ ||"
(ಕಿ. 18—6)

ಭಾರತ ಭೂಮಿಯ ಅಧಿಪತ್ಯದಲ್ಲಿ—

(ಇಪ್ಪತ್ತೈದನೇ ಪುಟ ನೋಡಿ)

ಗುಡ್ಡಮ್ಮಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ
ಜೀರ್ಣೋದ್ಧಾರ

ಸೇನಾಪುರ ಗುಡ್ಡಮ್ಮಾಡಿ ಎಂಬುದು ಸೃಷ್ಟಿ ಸೌಂದರ್ಯದಿಂದೊಪ್ಪುವ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿದೆ. ಊರ ಮಧ್ಯದಿಂದ ಸೌಪರ್ಣಿ ನದಿಯು ಮಂದ ಮಂದವಾಗಿ ತುಂಬಿ ಹರಿಯುತ್ತಿದೆ. ಇಂತಹ ಚಿತ್ತಾಕರ್ಷಕ ಸನ್ನಿವೇಶದಲ್ಲಿ ವೈಮನಗಳು ದಿವ್ಯಶಾಂತಿಯು ಅನಿರ್ವಚನೀಯ ಆನಂದವನ್ನು ಹೊಂದುದರಿಂದಲೇ ಭಕ್ತರ ಕಾಮಧೇನುವೆನಿಸಿದ ಶ್ರೀ ಸುಬ್ರಹ್ಮಣ್ಯ ದೇವರ ಸಾನ್ನಿಧ್ಯ ಇಲ್ಲಿದೆ, ನಾಡಿನ ಎಲ್ಲೆಡೆಯ ಭಕ್ತರು ಇಲ್ಲಿ ಬಂದು ದಿವ್ಯ ಶಾಂತಿಯನ್ನನುಭವಿಸಿ, ಶ್ರೀ ಸುಬ್ರಹ್ಮಣ್ಯನ ಕರುಣೆಗೆ ಪಾತ್ರರಾಗಿ ಅನುಗ್ರಹಿತರಾಗುತ್ತಿರುವರು.

ಶ್ರೀ ದೇವರ ಸನ್ನಿಧಿಯಲ್ಲಿ ಪ್ರತಿ ಸಂಕ್ರಮಣ ಪುಷ್ಯ ಶುದ್ಧ ೬ಯು ದಿವಸ ಮಹಾಸೇವೆ ನಡೆಯುತ್ತಿದೆ. ಮರುದಿನ ನಾಗಮಂಡಲ, ತುಲಾಭಾರ, ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಮೊದಲಾದ ಸೇವೆಗಳು ಕ್ರಮವಾಗಿ ಊರ ಪರವೂರ ಭಕ್ತ ಸಮಸ್ತರ ಸಹಕಾರದಿಂದಲೇ ನಡೆಸಲಾಗುತ್ತಿದೆ. ಮಹಾಸೇವೆಯಂದು ಊರ ಪರವೂರುಗಳಿಂದ ಆಗಮಿಸಿದ ಭಕ್ತವೃಂದದವರಿಗೆ ಮಹಾಸಂತರ್ಪಣೆ ನೇರವೇರುವುದು.

ಶ್ರೀ ದೇವರ ಕರುಣಾ ಪ್ರಸಾದಕ್ಕೆ ಪಾತ್ರರಾಗಲು ವರ್ಷಂಪ್ರತಿ ಅಧಿಕಾಧಿಕ ಸಂಖ್ಯೆಯಲ್ಲಿ ನೆರೆಯುತ್ತಿರುವ ಭಕ್ತವೃಂದದವರಿಗೆ ದೇವರ ಸನ್ನಿಧಿಯಲ್ಲಿ ತಂಗಿ, ದೇವತಾ ಉತ್ಸವಗಳಲ್ಲಿ ಭಾಗವಹಿಸಲು ಅನುಕೂಲವಾದ ಸ್ಥಳಾವಕಾಶವಿಲ್ಲದ ಕೊರತೆಯುಂಟಾಗಿದೆ. ಶ್ರೀ ದೇವರ ಗರ್ಭಗೃಹ ಜೀರ್ಣವಾಗಿದೆ. ಹೊರಪೌಳಿ, ಹೆಬ್ಬಾಗಿಲು, ಅವಶ್ಯ ಕಟ್ಟುವ ಸಂದರ್ಭ ಒದಗಿದೆ.

ದೇವಸ್ಥಾನಕ್ಕೆ ಶಾಶ್ವತವಾದ ಉಂಬಳಿ ಉತ್ಪತ್ತಾದಿಗಳು ಇಲ್ಲದಿರುವುದರಿಂದ ದೇವಸ್ಥಾನದ ಸಂಪೂರ್ಣ ಜೀರ್ಣೋದ್ಧಾರದ ಈ ಮಹಾಕಾರ್ಯವು ಭಕ್ತವೃಂದದ ಉದಾರ ತನು, ಮನ, ಧನ ಸಹಾಯದಿಂದಲೇ ನೆರವೇರಬೇಕಾಗಿರುವುದರಿಂದ ತಾವು ಈ ಮಹಾ ಕಾರ್ಯದಲ್ಲಿ ಯಥಾಶಕ್ತಿ ಸಹಭಾಗಿಗಳಾಗಿ ಭಕ್ತಕಲ್ಪತರುವಾದ ಶ್ರೀ ಸುಬ್ರಹ್ಮಣ್ಯನ ಪೂರ್ಣ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

B. Arunakumara Shetty, B. Sc., B. L.
ಮೆನೇಜಿಂಗ್ ಟ್ರಸ್ಟಿ
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಗುಡ್ಡಮ್ಮಾಡಿ
ಬಂಟ್ವಾಡಿ ಪೋಸ್ಟ್, ಕುಂದಾಪುರ ತಾಲೂಕು, ದ. ಕ.

ಶ್ರೀ ಯು ನಾ. ಉಡುಪ

ವ್ಯಾಸ - ಕುಮಾರವ್ಯಾಸರ ಉತ್ತರಕುಮಾರರು

ಭಾರತದ ಉತ್ತರಕುಮಾರ ಕುಲೀನ ರಾಜವಂಶೀಯನೇನೋ ಹೌದು; ಆದರೆ, ಬಯಲಾಟದ ಹಾಸ್ಯಗಾರನಿಗಿಂತ ಮೇಲ್ಪಟ್ಟವನೆಂದು ಹೇಳುವಂತಿಲ್ಲ. ವ್ಯಾಸನಿಗಿಂತಲೂ ಕುಮಾರವ್ಯಾಸನು ಈ ಉತ್ತರಕುಮಾರನ ಸುಂದರ ಪಾತ್ರವನ್ನು ಸ್ವಪ್ರತಿಭೆಯಿಂದ ಮೂಡಿಸಿ ನಗೆಗಡಲಲ್ಲಿ ಓದುಗರನ್ನು ಮುಳುಗಿಸಿ ತಾನೂ ಮುಗುಳ್ನಕ್ಕಿದ್ದಾನೆ.

ಮಾನವನ ಸಂಸ್ಕೃತಿಯ ವಿಭಿನ್ನ ಅಭಿವ್ಯಕ್ತಿಗಳನ್ನು ಶಾಸ್ತ್ರೀಯವಾಗಿ ತುಲನಾತ್ಮಕವಾಗಿ ಚಿತ್ರಿಸಿದ ಮಹಾಗ್ರಂಥಗಳಲ್ಲಿ ವೇದವ್ಯಾಸರ ಮಹಾಭಾರತವೊಂದು ಅದ್ವಿತೀಯ ಪ್ರಮಾಣ ಗ್ರಂಥ. ಇದರ ಆಖ್ಯಾನಗಳೂ, ಉಪಾಖ್ಯಾನಗಳೂ ಅನೇಕ ಕವಿಗಳ ಸ್ಫೂರ್ತಿಗೆ ಮತ್ತು ಕೀರ್ತಿಗೆ ಉಗಮ ಸ್ಥಾನವೆನ್ನಿಸಿದುವು. ಇದು ಕ್ಷತ್ರಿಯರ ಪೌರುಷದ ನಿಧಿ; ದ್ವಿಜೋತ್ತಮರ ವೇದಫಲಕ; ಯೋಗಿಗಳ ತತ್ತ್ವರಸದೋರೆ; ಶೃಂಗಾರಾದಿ ನವರಸಗಳ ಸಹರ್ಷ ಸಾಗರ; ವಿದ್ಯಾಪುರುಷರ ಅಲಂಕಾರಗಳ ಅನುಪಮ ವರ್ಷ; ಧರ್ಮಬೋಧೆಯ ಸತ್ಯಾಕರ್ಷ ಪ್ರತೀಕ; ಪ್ರಾಚೀನ ಭಾರತದ ಸಂಗ್ರಾಹ್ಯ ಧರ್ಮಕೋಶ! ಇದು ಪುರಾತನ ಭಾರತದ ರಾಜಕೀಯ ಕಾವ್ಯವೂ ಹೌದು; ಅಂದಿನ ಲೌಕಿಕ ಜೀವನದ ಮಣಿದರ್ಪಣವೂ ಹೌದು.

ಭಾರತದ ವಿವಿಧ ಭಾಷೆಯ ಕವಿಗಳು ತಮ್ಮ ಸಾಹಿತ್ಯಕ್ಕೆ ಇದರ ಸವಿಕಟ್ಟನ್ನು ಬಟ್ಟಿ ಇಳಿಸಿ ಜನತೆಯ ಹೃದಯಕ್ಕೆ ಅದನ್ನು ತುಂಬಿ ಪಾವನಗೊಳಿಸಿದಂತೆ, ಕನ್ನಡ ಕವಿವರೇಣ್ಯನಾದ ಗದುಗಿನ ನಾರಣಪ್ಪನು ವ್ಯಾಸ ಭಾರತವನ್ನು ಆಮೂಲಾಗ್ರವಾಗಿ ಓದಿ, ರಸಾಸ್ವಾದನೆಯಿಂದ ಪರವಶನಾಗಿ ರೋಮಾಂಚನಕಾರಿಯಾದ ರಸೋತ್ಕರ್ಷ ಪ್ರಪೋಷಕವಾದ ನಿರ್ದುಷ್ಟ ಶೈಲಿಯಲ್ಲಿ ಈ ಆರ್ಷಕಾವ್ಯವನ್ನು ಹೃದಯಂಗಮವಾಗಿ ರಚಿಸಿದನು. ಕನ್ನಡ ಕಬ್ಬಗಳನ್ನೆಲ್ಲಾ ಇಕ್ಕಿಮೆಟ್ಟಿದ ನಾಡೋಜ ಪಂಪನ ಭಾರತ ಕನ್ನಡ ಸಾಹಿತ್ಯವನ್ನು ಕಲ್ಪಾಂತಪರ್ಯಂತ ಬೆಳಗುತ್ತಿರುವಾಗ ನಾರಣಪ್ಪನು ಅದೇ ಸಾಹಸಕ್ಕೆ ಮತ್ತೊಮ್ಮೆ ಕೈ ಇಕ್ಕಿದನೇಕೆ? ಪಂಪನು ಪಂಡಿತ ಕವಿ; ಅವನ ಕಾವ್ಯ ಪಂಡಿತೋತ್ತಮರ ಪಂಚಾಮೃತ! ಅದರಲ್ಲಿ ಪ್ರೌಢಿಮೆ ರಾಜಗಾಂಭೀರ್ಯಗಳ ಮೆರವಣಿಗೆ ಮಾತ್ರ ಕಂಡು ಬರುತ್ತದೆ. ಕನ್ನಡ ಸಾಹಿತ್ಯದ ಆಚಾರ್ಯರಾದ ಕುವೆಂಪುರವರು ಹೇಳಿದಂತೆ ಪಂಪನೊಬ್ಬ ಕಲಿತವರ ಕಲ್ಪವೃಕ್ಷ! ಅಂದು ಪಂಡಿತರಿಗೆ ಅವಶ್ಯಕವಿದ್ದಷ್ಟೇ ಪಾಮರರಿಗೂ ಮನೋಲ್ಲಾಸಕಾರಿಯಾದ ಕಾಮಧೇನು ಬೇಕಿತ್ತು. ಪಂಪನು ಹಿಮಾಲಯದ ಗೌರೀ ಶಂಕರ; ವೀರ ನಾರಾಯಣನ ಭಕ್ತನು ಗಗನ ಚುಂಬಿಯಾದ ಧವಳಗಿರಿ!

ನಾರಣಪ್ಪನು ಪಂಪನ ಯುಗದಿಂದ ಸಿಡಿದ, ಜನತಾ ಜನಾರ್ದನರಿಗಾಗಿ ಆಪ್ತವಾಗುವಂತೆ ವ್ಯಾಸಭಾರತದ ವಿಷಯಗಳನ್ನು ತಗ್ಗಿಸಿ ಹಿಗ್ಗಿಸಿ ಕದಲಿಸಿ ಬದಲಿಸಿ ಹಾಡಿಸಿ ನೋಡಿಸಿ ಜನರಿಗೆ ಸ್ಪಷ್ಟವಾಗಬೇಕೆಂಬ ಚೇತನದಿಂದ ಪ್ರಚೋದಿತನಾಗಿ ತನ್ನ ಭಾರತದ ಪಾತ್ರಗಳನ್ನೆಲ್ಲ ತನ್ನ ಮೆಚ್ಚಿನ ಮಾರ್ಗದಲ್ಲಿ ಚಿತ್ರಿಸಿದ. ಅವನ ಶ್ರೀ ಕೃಷ್ಣನ ಚಿತ್ರಣವು ವೇದವ್ಯಾಸನದಲ್ಲ. ಆ ಸಾಹಸದ ಒಂದು ಪರಿಣಾಮವೇ ವಿರಾಟನ ಮಗನಾದ ಭೂಮಿಂಜಯನ ಅಥವಾ ಉತ್ತರ ಕುಮಾರನ ಚಿತ್ರಣ!

ಕವಿ ನಾರಣಪ್ಪನು ತನ್ನ ಭಾರತದ ಮುಖ್ಯ ಪಾತ್ರಗಳ ಪೋಷಣೆಯಿಂದ ಮಾತ್ರ ತೃಪ್ತನಾಗಿಲ್ಲ. ವಿರಾಟಪರ್ವದಲ್ಲಿ ರಂಗವನ್ನು ಪ್ರವೇಶಿಸಿ ಅಭಾಸ ಅಸಹ್ಯ ನಟನೆನ್ನಿಸಿ ಹೊರಲಾರದಷ್ಟು ಅಪಕೀರ್ತಿಯನ್ನು ಹೊತ್ತು ಭೀಷ್ಮ ಪರ್ವದ ಆದಿಯಲ್ಲೇ ಜಗತ್ತಿನಿಂದಲೇ ಅದೃಶ್ಯನಾದ ಉತ್ತರಕುಮಾರನನ್ನೂ ಅಲಕ್ಷಿಸಿಲ್ಲ. ಉತ್ತರನು ವ್ಯಾಸಭಾರತದಲ್ಲಿ ಗಣ ಹೇಡಿ—ಬರೀ ಜಗಭಂಡ! ಗದುಗುಭಾರತದಲ್ಲಿ ಅವನ ಹೇಡಿತನವು ಹಾಸ್ಯದಿಂದ ಜೀವಿತವಾಗಿದೆ. ಅವನು ಗದುಗು ಭಾರತದಲ್ಲೊಬ್ಬ ಹಾಸ್ಯನಾಯಕ! ಉತ್ತಮ ವಿದೂಷಕ!

ಸಂಸ್ಕೃತ ಭಾರತದಲ್ಲಿ ಕೌರವ ಮಹಾರಥರಿಂದ ಪೆಟ್ಟು ತಿಂದ ಗೊಲ್ಲರ ಆಕ್ರಂದನಕ್ಕೆ ಮರುಗಿದ ಗೋವಳರ ನಾಯಕನು ರಥವೇರಿ ಅರಮನೆಗೆ ಬರುವಾಗಲೇ ನಡುದಾರಿಯಲ್ಲಿ ವಿರಾಟನ ಮಗನಾದ ಭೂಮಿಂಜಯನು (ಉತ್ತರ)ನನ್ನು ಕಂಡನು. ಕನ್ನಡ ಭಾರತದಲ್ಲಿ "ಗಜಕೇಸರಿ ಮಧ್ಯದಲಿ ಮೆರೆದಿಹ ಉತ್ತರನ ಕಂಡನು" ಎಂದಿದೆ. ವ್ಯಾಸರು, ಉತ್ತರನು ತುಂಬಾ ಆತ್ಮಾಭಿಮಾನವುಳ್ಳವನೆಂದು ಹೇಳಿದ್ದರೂ, ಭಾರತದಲ್ಲಿ ಅವನ ಉತ್ತಮಾಭಿಮಾನಗಳಿಗೆ ಎಲ್ಲೆಲ್ಲೂ ದೃಷ್ಟಾಂತ ದೊರೆಯುವುದಿಲ್ಲ. ಅಲ್ಲದೆ ವ್ಯಾಸರ ಗೊಲ್ಲನಾಯಕನಿಗೆ ಯುದ್ಧದಲ್ಲಿ ಪರಿಶ್ರಮವಿದ್ದಂತೆ ಕಂಡರೂ, ಆತನ ಬಾಯಿಯಿಂದ-

ಶಿಷ್ಟೇ॥ ಪಾಶೇಯುಧಾನಾಂ ಜ್ಯಾ-
ತಂತ್ರೀಂ ಚಾಪದಂಡಾಂ ಮ-
ಹಾಸ್ವನಾಂ
ಶರವರ್ಣಾಂ ಧನುರ್ವೀಣಾಂ
ಶತ್ರು ಮಧ್ಯೇ ಪ್ರವಾದಯ॥
॥ ವಿ. ಪ. ೩೫–೧೩ ॥

"ನಾಣೆನ ತಂತಿಗಳೆಂಬ ಬಿರಡೆಗಳಿಂದಲೂ, ಹೆದೆಯೆಂಬ ತಂತಿಯಿಂದಲೂ, ಚಾಪದಂಡವೆಂಬ ದಂಡಿಯಿಂದಲೂ, ಬಾಣಗಳೆಂಬ ಸ್ವರಸ್ಥಾನಗಳಿಂದಲೂ ಶೋಭಿತವಾಗಿ ಮಹಾಧ್ವನಿಯನ್ನು ಕೊಡುತ್ತಿರುವ ಬಿಲ್ಲೆಂಬ ವೀಣೆಯನ್ನು ಶತ್ರುಗಳ ನಡುವೆ ಬಾಜಿಸು." ಈ ಅಲಂಕಾರಯುಕ್ತವಾದ ಮಾತುಗಳು ಬರತಕ್ಕವುಗಳಲ್ಲ; ಉತ್ತರನು ಅವನ್ನು ಅರ್ಥಮಾಡಿಕೊಳ್ಳಬಲ್ಲವನೂ ಅಲ್ಲ. ಉತ್ತರನ ಮಾತುಗಳಲ್ಲಿ ಎಲ್ಲೂ ಪಾಂಡಿತ್ಯದ ಗಂಧ ಗಾಳಿಯೂ ಕಾಣಿಸುವುದಿಲ್ಲ. ಇದನ್ನು ಕುಮಾರ ವ್ಯಾಸನೆಲ್ಲೂ ಮರೆತಿಲ್ಲ.

ಗದುಗು ಭಾರತದ ಗೋವಳನ ಕೈಯಲ್ಲಿ ಬಿಲ್ಲಿದ್ದಂತೆ ತೋರುತ್ತದೆ. ಅವನು 'ಕರೆದ ಬಿಲ್ಲನು ಬಿಸುಟು ಬದಿಕಿನ ಶಿರವ ತಡವುತ ಪುರಕೆ ಹರಿತಂದು ನೃಪ ವಿರಾಟನ ಮಗನ ಕಾಲಿಗೆರಗಿದನು; ಕಳವಳವ ದೂರಿದನು" ಎಂಬಲ್ಲಿಂದ ಉತ್ತರನ ಪೌರುಷದ ನಾಟಕವಾರಂಭವಾಗುವುದು. ಕನ್ನಡ ಕಾಳಿದಾಸನ ಮಾತಿನ ಕವಿ ಮುಂದೆ ಸ್ಪಷ್ಟವಾಗುವುದು. ಗೊಲ್ಲನು ಆತುರದಿಂದ "ಏಳು ಮನ್ನೆಯ ಗಂಡನಾಗು ನೃಪಾಲ ಸೇನೆ ಬಂದುದು ದಣಿಸುಗಲದಲಿ. ರಾಜಿ ವಾಸದ ಗೂಳೆಯವ ತೆಗೆಸು" ಎನ್ನುವ ಮಾತಿನಲ್ಲೇ ಆತನು ಅನುಭವಿಸಿದ ಯುದ್ಧದ ಪರಿಣಾಮವು ಸ್ಪಷ್ಟವಾಗುವುದು.

ಸಂಸ್ಕೃತ ಭಾರತದಲ್ಲಿ ವಿರಾಟನು ಮಗನನ್ನು ಉತ್ತಮ ಬಿಲ್ಲುಗಾರನೆಂದು ಹೊಗಳುತ್ತಿದ್ದನೆಂದು (ವಿ. ಪ. ಅ. ೩೫ ೧೨-೧೩) ಗೋಪ ನಾಯಕನ ಬಾಯಿಯಿಂದ ವ್ಯಾಸ ಮಹರ್ಷಿಗಳು ನುಡಿಸಿದ್ದಾರೆ. ಇವನಿಗೆ ಭೂಮಿಂಜಯನೆಂದು ಹೆಸರಿದ್ದಂತೆ, ಸಿಂಹ ಧ್ವಜನೂ ಹೌದು, ಆದರೆ ಈ ಬಡಾಯಿ ತರುಣನು ಬಿಲ್ಲು ವಿದ್ಯೆಯಲ್ಲಿ ಚಾತುರ್ಯವಿದ್ದವನೆಂಬುದಕ್ಕೆ ಎಲ್ಲೂ ಆಧಾರ ತೋರುವುದಿಲ್ಲ. ಒಂದು ಕಡೆಯಲ್ಲಿ ಸೈರಂಧ್ರಿಯೊಡನೆ 'ನಾನು ನಪುಂಸಕರೊಡನೆ ಸಂಭಾಷಣೆ ಮಾಡತಕ್ಕವನಲ್ಲ' ಎಂದು ಬೃಹನ್ನಳೆಯ ಕುರಿತು ಡಂಭದ ಮಾತಾಡಿದರೂ, ಅವನಂತಹ ಷಂಡ ಶಿರೋಮಣಿಯು ಕ್ಷತ್ರಿಯ ವರ್ಗದಲ್ಲೇ ನಾವು ಕಂಡು ಕೇಳುವಂತಿಲ್ಲ. ಅವನು ಬಲವಾದ ದೀರ್ಘ ದೇಹವಿದ್ದ ತರುಣ. ಅವನು ಕುರು ಸೇನೆಯನ್ನು ಕಂಡು ಭಯ ಜ್ವರದಿಂದ ಆಡುವ ಮಾತುಗಳಿಗೆ ಅರ್ಥವಿಲ್ಲ. ಅವನು ಅರ್ಜುನನೊಡನೆ "ನನ್ನ ತಾಯಿ ನನ್ನನ್ನು ಪಕ್ಕದಲ್ಲೇ ಮಲಗಿಸಿಕೊಳ್ಳುತ್ತಿರುವಳು.... ಮುಖ್ಯ ಜನರನ್ನೂ ನಾನು ಕಣ್ಣಿನಿಂದ ಕಂಡವನಲ್ಲ... ಪ್ರಾಯದ ಕೆಟ್ಟಿಂದ ಬಾಯಿಗೆ ಬಂದಂತೆ ಹುಟಿವನು, ...ನೀನು ನನ್ನನ್ನು ಬಿಡದಿದ್ದರೆ ನಿನ್ನ ಮುಂದೆಯೇ ಪ್ರಾಣ ಬಿಡುವೆನು" ಈ ಮಾತುಗಳನ್ನು ಕೇಳಿ ಪೂರ್ವ ಲೋಕದ

(ಇಪ್ಪತ್ನಾಲ್ಕನೇ ಪುಟ ನೋಡಿ)

WITH BEST COMPLIMENTS OF:-

K. V. Veerappa & Brothers

CALTEX DEALERS, MANDYA.

ಶ್ರೀ ಎಂ. ವಿ. ಶರ್ಮಾ, ತಡ್ಡಲಸೆ

ಮಕ್ಕಳ ಮನೋದೌರ್ಬಲ್ಯ

ಮಕ್ಕಳ ಮನೋದೌರ್ಬಲ್ಯಕ್ಕೆ ಅವಕಾಶ ನೀಡಿದರೆ, ಅದು ಅತ್ಯಹಿತಕ್ಕೆ ನಾಂದಿಯಾಗುವುದು. ನಮ್ಮ ಹಲವಾರು ಅನಪೇಕ್ಷಿತ ಸಮಸ್ಯೆಗಳಿಗೆ ಇದೇ ಮೂಲ. ಆದುದರಿಂದ ಹೆತ್ತವರೂ ಹಿರಿಯರೂ ಮಕ್ಕಳು ದೃಢಕಾಯರಾಗುವಂತೆ ಎಚ್ಚರಿಕೆ ವಹಿಸುವುದಕ್ಕಿಂತ ಮಿಗಿಲಾಗಿ ದೃಢ ಮನಸ್ಕರೂ ಆಗುವಂತೆ ನೋಡಿಕೊಳ್ಳಬೇಕು.

'A sound mind in a sound body' ಎಂಬಂತೆ ಮನುಷ್ಯನ ಬೆಳವಣಿಗೆಯು ಸಂಪೂರ್ಣವಾಗಬೇಕಾದರೆ ಸ್ವಸ್ಥ ದೇಹದಲ್ಲಿ ಸ್ವಸ್ಥ ಮನಸ್ಸಿನ ವಿಕಾಸವಾಗಬೇಕು. ಭವ್ಯ ಭಾರತದ ನಿರ್ಮಾಣದತ್ತ ನಮ್ಮೆಲ್ಲಾ ಸಮಾಜ ವಿಕಾಸ ಯೋಜನೆಗಳು ಸಾಗುತ್ತಿವೆಯಾದರೂ ಯಾವುದೇ ವಿಕಾಸ ಯೋಜನೆ ಕಿರಿಯರ ಪ್ರಪಂಚವನ್ನು ಮೂಲವಾಗಿಟ್ಟುಕೊಂಡು ಹೋದರೇನೇ ಆ ಯೋಜನೆಗಳು ಹೆಚ್ಚು ಯಶಸ್ವಿಯೂ, ಫಲಕಾರಿಯೂ ಆದಾವು. ಪ್ರಗತಿಪಥದಲ್ಲಿರುವ ಪ್ರಪಂಚದಲ್ಲಿ ಜೀವನವು ದಿನೇದಿನೇ ಆಡಂಬರ ಯುಕ್ತವೂ ಸಮಸ್ಯಾತ್ಮಕವೂ ಆಗುತ್ತಿರುವುದು ಕಂಡುಬರುತ್ತಿದೆ. ಅದಲ್ಲದೆ ಬಾಹ್ಯ ಪ್ರಪಂಚದಲ್ಲಿ ಆವರಿಸಿರುವ ನಿರಾಶಾವಾದವು ಮಕ್ಕಳ ಮಾನಸಿಕ ಆರೋಗ್ಯವನ್ನು ಅಧಿಕ—ಅಧಿಕವಾಗಿ ಹದಗೆಡಿಸುತ್ತಿದೆ. ಸಮಾಜದ ಸರ್ವಾಂಗೀಣ ಸಾಧನೆಯ ವಿಚಾರವನ್ನೆತ್ತಿಕೊಳ್ಳುವಾಗ ಮಕ್ಕಳ ಮನೆ ಮಾಡಿಕೊಂಡಿರುವ ಈಗ ಅತಿಯಾಗುತ್ತಿರುವ ಮಾನಸಿಕ ಅಸ್ವಸ್ಥತೆಯ ಕಡೆಗೆ ವಿಮರ್ಶಾತ್ಮಕ ದೃಷ್ಟಿಯನ್ನು ಬೀರುವುದು ಯೋಗ್ಯವಾದೀತು.

"ಕಿರಿಯರ ಸ್ವಭಾವ ಮತ್ತು ಅವರ ವ್ಯಕ್ತಿತ್ವದ ಯೋಗ್ಯ ಬೆಳವಣಿಗೆಗೆ ಶಾರೀರಿಕ ಆರೋಗ್ಯವು ಎಷ್ಟು ಅನಿವಾರ್ಯವೋ ಅಷ್ಟೇ ಪ್ರಾಮುಖ್ಯವಾದುದು ಮಾನಸಿಕ ಆರೋಗ್ಯ. ದೇಶದ ಹಿರಿಯ ಮೇಧಾವಿಗಳು ಈ ವಿಚಾರದಲ್ಲಿ ಲಕ್ಷ್ಯ ಕೊಟ್ಟುದರ ಫಲವಾಗಿ ಎಂದೋ ಅಸ್ತಿತ್ವಕ್ಕೆ ಬರಬೇಕಾಗಿದ್ದ 'ಮಕ್ಕಳ ಮಾರ್ಗದರ್ಶನ ಕೇಂದ್ರಗಳು' ಅಲ್ಲಲ್ಲಿ ತಲೆಯೆತ್ತಿ ಅಭಿವೃದ್ಧಿಗೊಳ್ಳುತ್ತಿವೆ. ಈ ಚಿಕಿತ್ಸಾ ಕೇಂದ್ರವು (ಕ್ಲಿನಿಕ್) ಯಾವುದೇ ರೋಗಕ್ಕೆ ಹೆಸರನ್ನು ನೀಡುವ ಗುರಿಯನ್ನು ಇಟ್ಟುಕೊಂಡಿಲ್ಲ. ಇದು ಮಕ್ಕಳಲ್ಲಿನ ಮಾನಸಿಕ ಅವ್ಯವಸ್ಥೆಯ ಮೂಲ ಕಾರಣಗಳನ್ನು ಕಂಡುಹಿಡಿದು ಇವುಗಳಿಗೆ ಸೂಕ್ತ ಪರಿಹಾರವನ್ನು ನೀಡಲು ಪ್ರಗತಿಪರವಾಗಿ ಪ್ರಯತ್ನಿಸುತ್ತದೆ." ನವದೆಹಲಿ ಲೇಡಿ ಹಾರ್ಡಿಂಗ್ ಕಾಲೇಜಿಗೆ ಸೇರಿದ ಮಕ್ಕಳ ಮಾರ್ಗದರ್ಶನ ಕೇಂದ್ರದ ಡೈರೆಕ್ಟರ್‌ರವರ ಮಾತುಗಳಿವು.

ಮಕ್ಕಳ ವಿಕೃತ ವರ್ತನೆಗೆ ಅವುಗಳ ದೈಹಿಕ ಕುಂದು-ಕೊರತೆಗಳು ಬಹುಮಟ್ಟಿಗೆ ಕಾರಣವಾಗಿವೆಯೆಂದು ಸಾಮಾನ್ಯ ವಿಶ್ಲೇಷಣೆಯಿಂದ ತಿಳಿಯುತ್ತಿದೆ. 'ಕುಂಟನಿಗೆ ಎಂಟು ಬುದ್ಧಿ' ಎಂಬಂತೆ ದೇಹ ಮತ್ತು ಮನಸ್ಸುಗಳ ಅನ್ಯೋನ್ಯತೆಯನ್ನು ಸೂಚಿಸುತ್ತದೆ. ಹಾಗೆಯೇ ನಿಶ್ಶಕ್ತನು ವಿನಾಕಾರಣ ತಾಳ್ಮೆಗೆಡುವುದೂ ಕೋಪಗೊಳ್ಳುವುದೂ ಸರ್ವಸಾಮಾನ್ಯ ವಿಷಯ. ದೈಹಿಕ ಆರೋಗ್ಯವು ಉತ್ತಮವಿಲ್ಲದೆ ಇರುವಾಗ ಮಾನಸಿಕ ಅಸ್ಥಿರತೆಯುಂಟಾಗುವುದು ಪ್ರಬುದ್ಧರಿಗೂ ತಪ್ಪದುದಲ್ಲ! ಹಾಗಿರುವಾಗ ಅಪಕ್ವವಾದ ಮನಸ್ಸುಳ್ಳ ಬಾಲಕರು ಅದರಿಂದ ತಪ್ಪಿಸಿಕೊಳ್ಳುವುದಂತೂ ಸಾಧ್ಯವೇ ಇಲ್ಲ!

ಬಾಲಕರಲ್ಲಿಯ ಅಸಭ್ಯ ವರ್ತನೆಗೆ ಅವರ ಕುಟುಂಬದ ಹಾಗೂ ತಂದೆ-ತಾಯಿಗಳ ಪ್ರವೃತ್ತಿಯೂ ಕಾರಣವಾಗಿರುತ್ತದೆ. ಮತ್ತು ಸುತ್ತಲಿನ ಸಾಮಾಜಿಕ ವಾತಾವರಣವು; ಆರ್ಥಿಕ ಪರಿಸ್ಥಿತಿಗಳು; ಬಾಲಕರ ಸ್ವಭಾವವನ್ನು ರೂಪಿಸುವದರಲ್ಲಿ ಹಾಗೂ ಅವರಲ್ಲಿ ಅನೈತಿಕತೆಯನ್ನುಂಟು ಮಾಡುವದರಲ್ಲಿ ಗಮನಾರ್ಹವಾದ ಪ್ರಭಾವವನ್ನು ಬೀರುತ್ತವೆ. ಹೀಗೆ ವಿಶಿಷ್ಟವಾದ ಸಾಮಾಜಿಕ ಮತ್ತು ಆರ್ಥಿಕ ಅನಾನುಕೂಲತೆಗಳು; ಶಾರೀರಿಕ ಕುಂದುಕೊರತೆಗಳು ಬಾಲ-ಬಾಲಕಿಯರ ಮನಸ್ಸಿನ ವಾಸ್ತವಿಕ ಬೆಳವಣಿಗೆಯ ಸಮತೋಲನವನ್ನು ಹದಗೆಡಿಸಿ ಆ ಬಾಲಕರು ದುಷ್ಕಾರ್ಯ ಮತ್ತು ದುರ್ವರ್ತನೆಗಳಲ್ಲಿ ತೊಡಗುವಂತೆ ಹಾಗೂ ಸಾಮಾಜಿಕ ವ್ಯವಹಾರದಲ್ಲಿ; ಶಿಕ್ಷಣದಲ್ಲಿ ನಿರೀಕ್ಷಣೆಗಿಂತ ತೀರ ಹಿಂದೆ ಉಳಿಯುವಂತೆ ಮಾಡುತ್ತವೆ.

ಇಂದಿನ ಶಾಲಾ ವಾತಾವರಣವೂ ಕ್ಷೇಮಕರವಾಗಿರದೆ, ಮಕ್ಕಳ ಮನೋದೌರ್ಬಲ್ಯಕ್ಕೆ ಹೆಚ್ಚು ಕಾರಣವಾಗಿದೆ. ತಂದೆ ತಾಯಿಗಳ ಪ್ರೇಮಮಯ ವಾತ್ಸಲ್ಯಾವರಣದಿಂದ ದೂರವಾಗಿ; ತನ್ನ ಹೃದಯದಲ್ಲಿ ಗುರುಗಳನ್ನು ಪ್ರತಿಷ್ಠಿಸಬಯಸುವ ಮಗು; ಮತ್ತು ಮಗುವಿನ ಭವಿತವ್ಯವನ್ನು ರೂಪಿಸುವ ಹೊಣೆಗಾರಿಕೆ ತನ್ನದು ಎನ್ನುವ ಗುರು—ಇವರೊಳಗೆ ನಿಕಟ ಬಾಂಧವ್ಯವಿರಲು ಇಂದಿನ ವಿದ್ಯಾಭ್ಯಾಸದಲ್ಲಿ ಎಡೆಯುಳ್ಳದೆ? ಒತ್ತಾಯಕ್ಕೆ ಬಲಿಬಿದ್ದು ಒಪ್ಪದ, ಒಗ್ಗದ ತನ್ನ ಹಿತಕ್ಕೆ ಮೀರಿದ ವಿಷಯಗಳನ್ನು ಕಲಿಯಬೇಕಾದಾಗ ಮಕ್ಕಳ ಸ್ವಭಾವದಲ್ಲಿ ವೈಪರೀತ್ಯ ಉಂಟಾಗದೇ ಇದ್ದೀತೆ? ಬಾಲಕರ ಅತೃಪ್ತ ಒಳ ಆಕಾಂಕ್ಷೆಗಳು ಮಾನಸಿಕ ಬಿರುಗಾಳಿಯನ್ನುಂಟುಮಾಡಿ, ಅವರ ಸ್ವಭಾವವನ್ನು ತಿಳಿದೂ ತಿಳಿದೂ ಇಂದಿನ ತಪ್ಪ ಕ ಆಲಕ್ಷಿಸಿದುದು ದುರ್ದೈವದ ಸಂಗತಿಯಾಗಿದೆ!

ದೆಹಲಿಯ ಕ್ಲಿನಿಕ್‌ನಲ್ಲಿ ಮಕ್ಕಳ ಮನೋದೌರ್ಬಲ್ಯಕ್ಕೆ ಚಿಕಿತ್ಸೆಯನ್ನು ಮಾಡುತ್ತಿದ್ದಾರೆ. ಆದರೆ ವಿಕೃತಿಯನ್ನು ಹೊಡೆದೋಡಿಸಲು ಯಾವ ಔಷಧಿಯೂ ಇರುವದಿಲ್ಲ. ಅವರ ವಿಪರೀತ ವರ್ತನೆಯ ಮೂಲ ಕಾರಣವನ್ನು ಕಂಡುಹಿಡಿದ; ಅದನ್ನು ತೊಡೆದು ಹಾಕಬೇಕಾಗುವದು. ಹಾಗೆ ಮಾಡದೆ ಹೋದರೆ ಮಕ್ಕಳು ಪ್ರೌಢರಾಗಿ ಅವರಲ್ಲಿ ಒಡಮೂಡಿ ಬೆಳೆದು ಬಂದ ಸಮಾಜ ವಿರೋಧಿ ಪ್ರವೃತ್ತಿಗಳು ಬಲಿತು ಬಲಗೊಂಡು ಅವರೇ ಸಮಾಜದ ಸಮಸ್ಯೆಗಳಾಗಿ ಉಳಿಯುತ್ತಾರೆ. ಮಕ್ಕಳ ಮಾರ್ಗದರ್ಶನ ಕೇಂದ್ರಗಳಲ್ಲಿ ಅವರ ದುರ್ವರ್ತನೆಯನ್ನು ಹುಡುಕಿ, ಕಾರಣ ತಿಳಿದು ಮಾನಸಿಕ ವಿಕೃತಿಯನ್ನು ದೂರಗೊಳಿಸಲು ಪ್ರಯತ್ನಿಸುತ್ತಾರೆ. ಇಲ್ಲಿ ಸಾಧಾರಣ 3ರಿಂದ 15 ವರ್ಷಗಳವರೆಗಿನ ಮಕ್ಕಳನ್ನು ಪರೀಕ್ಷೆಗೊಳಪಡಿಸಲಾಗುವದು. ಅಲ್ಲದೆ ಈ ಕೇಂದ್ರವು ಹೆತ್ತವರಿಗೆ ಅವರ ಮಕ್ಕಳ ಪೋಷಣೆಯ ವಿಷಯದಲ್ಲಿ ಸೂಕ್ತ ಸಲಹೆಯನ್ನು ನೀಡುವುದು.

ಮಕ್ಕಳ ಸದ್ಯದ ವ್ಯವಹಾರ; ವರ್ತನೆಯ ಮೇಲೆ ಗಮನವಿಟ್ಟು ಅವರ ವಿಕೃತಿಯನ್ನು ಪರಿಶೀಲಿಸುವದು ಹಾಗೂ ಅವರ ತಂದೆ-ತಾಯಿಗಳು, ಕೌಟುಂಬಿಕ ವಾತಾವರಣ, ವಂಶೀಯತೆ ಚರಿತ್ರೆಗಳನ್ನು ಪರಿಶೀಲಿಸಿ ಮಕ್ಕಳ ಮನೋದೌರ್ಬಲ್ಯದ ಕಾರಣವನ್ನು ಕಂಡುಹಿಡಿಯುತ್ತಾರೆ. ಸೂಕ್ತ ಪರಿಹಾರೋಪಾಯಗಳನ್ನು ಅನುಸರಿಸುತ್ತಾರೆ.

ಮಕ್ಕಳ ಮನೋರೋಗದ ಈ ಕಾಯಿಲೆಗೆ ಅವರ ಸುಪ್ತಚಿತ್ತವೇ ಕಾರಣ. ಪ್ರತಿಯೊಬ್ಬ ಮಾನವನಿಗೂ ಎರಡು ಮನಸ್ಸು. ಒಂದು ಜಾಗೃತ; ಇನ್ನೊಂದು ಸುಪ್ತಚೇತನ. ಚೇತನ ಮನಸ್ಸಿನ ಮೇಲೆ ಮೂಡುವ ಚಿತ್ರಗಳು ನಮ್ಮ ಬುದ್ಧಿಗೆ ಗೋಚರವಾಗುತ್ತವೆ. ಆದರೆ ಸುಪ್ತಚೇತನದ ಕಾರ್ಯಗಳು ನಮಗೆ ಗೋಚರವಾಗುವದಿಲ್ಲ. ಅವರ ಸುಪ್ತ ಮನಸ್ಸನ್ನು ಡಾಕ್ಟರು ಪರಿಶೋಧಿಸಿ ಅವರ ವಿಚಿತ್ರ ವರ್ತನೆಗೆ ಕಾರಣವನ್ನು ಕಂಡುಹಿಡಿಯುತ್ತಾರೆ. ಅವರ ಮನಸ್ಸು ಆ ಸಮಯದಲ್ಲಿ ತನ್ನ ವ್ಯಕ್ತಿತ್ವನ್ನೇ ಕಳೆದುಕೊಂಡಿರುತ್ತದೆ. ಯಾರನ್ನಾದರೂ ಕೊಲೆ ಮಾಡಲು ಸಲಹೆ ಕೊಟ್ಟರೂ ಸಹ ಅವನು ಹಿಂಜರಿಯಲಾರನು. ಅವರ

FOR GLAMOUR & EMBELLISHMENT,
Sole Agents For:
MAFATLAL GROUP OF MILLS
TATA MILLS, MODI AND
VINAR TERYLENES AND
GUARANTEED PURE SILK SAREES IN
DHARMAVARAM, KANCHEEPURAM, ARNI AND
BANGALORE SILKS.
Dealers In:
Well Known Calico netting, Readymade nets,
Coats stitching and Anchor embroidery threads.
Please remember that we are at your Service.
Telephone No Shop:- 207.
Residence:- 287.
SRI LAKSHMI VILAS
ಶ್ರೀ ಲಕ್ಷ್ಮೀ ವಿಲಾಸ್
ರೇಷ್ಮೆ ಜವಳಿ ಅಂಗಡಿ
ಮಂಡ್ಯ.
TEXTILE SHOW ROOM
MANDYA
(MYSORE STATE)
Proprietors:
A. Seenappa & Sons
The firm wishes you a happy new year.

ಮನಸ್ಸು ಡಾಕ್ಟರರ ವಶವಾಗಿರುವ ಸಮಯದಲ್ಲಿ ಅವನ ಜ್ಞಾಪಕ ಶಕ್ತಿ ಆಶ್ಚರ್ಯಕರವಾಗಿರುತ್ತದೆ. ಜಾಗೃತ ಮನಸ್ಸಿನ ಎಲ್ಲೆಯನ್ನು ಮೀರಿ ಸುಪ್ತ ಮನಸ್ಸಿನಲ್ಲಿ ಅಡಗಿರುವ ಪ್ರತಿಯೊಂದು ವಿಚಾರವೂ ಅವರ ಬುದ್ಧಿಗೆ ಗೋಚರವಾಗುತ್ತದೆ!

ಸ್ವಭಾವ ವೈಪರೀತ್ಯವನ್ನು ವಿಶ್ಲೇಷಿಸಿದ ತರುವಾಯ ಚಿಕಿತ್ಸೆಯನ್ನು ಮೂರು ಹಂತಗಳಲ್ಲಿ ಕೈಕೊಳ್ಳುವರು. ಮೊದಲನೆಯದಾಗಿ ಮಕ್ಕಳನ್ನು ಅವರ ದುರ್ವರ್ತನೆಗೆ ಕಾರಣವಾದ ವಾತಾವರಣದಿಂದ ತಪ್ಪಿಸಿ ಅನುಕೂಲ ವಾತಾವರಣದಲ್ಲಿಡುವದು; ಸಮಾನ ಭೂಮಿಕೆಯವರಾದ ಮಾತುಗಳಿಂದ ನಿಕಟ ಮೈತ್ರಿ ಬೆಳೆಸುವದು; ಮಕ್ಕಳೊಂದಿಗೆ ಮಾತುಕತೆಯನ್ನು ಬೆಳೆಸುವದು; ಅವರಿಂದ ಮಾನಸಿಕ ವಿಕೃತಿಯ ಕಾರಣ ತಿಳಿಯುವದು. ಅನಂತರ ಚಿಕಿತ್ಸೆ ಪ್ರಾರಂಭಿಸುವದು. ಚಿಕಿತ್ಸೆಯಲ್ಲಿ ಅನುಸರಿಸಬೇಕಾದ ವಿಧಾನವನ್ನು ನಿರ್ಧರಿಸಲು ಮಕ್ಕಳ ಮಾತುಕತೆಗಳಿಂದ ಆದ ಪರಿಣಾಮವನ್ನು ನಿಷ್ಕರ್ಷಿಸಲಾಗುವದು. ಮನಶ್ಶಾಸ್ತ್ರಜ್ಞರು ಮಕ್ಕಳ ತಂದೆ-ತಾಯಿಗಳೊಡನೆ ಸಮಾಲೋಚನೆ ನಡೆಸಿ ಆ ಚಿಕಿತ್ಸಾ ವಿಧಾನವನ್ನು ನಿರ್ಧರಿಸಿಕೊಳ್ಳುವರು.

ಸ್ವಭಾವ ವೈಪರೀತ್ಯಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಮಾನಸಿಕ ಅಸ್ವಸ್ಥತೆಯಿಂದ ಇತರರು ಮಾಡುವಷ್ಟು ಕೆಲಸವನ್ನು ಮಾಡಲು ತಾವು ಅಸಮರ್ಥರಾದರೆ, ಇತರ ಮಕ್ಕಳನ್ನು ದ್ವೇಷಿಸುವದು, ಹಾಗೆಯೇ ಹೆತ್ತವರು ಮಕ್ಕಳಲ್ಲಿ ಶಾಂತವನ್ನು ತೋರಿಸಿದರೆ ಆಗಲೂ ಮಕ್ಕಳು ಅರ್ಥವಿಲ್ಲದ ರೀತಿಯಲ್ಲಿ ವರ್ತಿಸುತ್ತಾರೆ. ಬೆರಳನ್ನು ಚೀಪುವದು, ಅಬಲರ ಮೇಲೆ ಬಲಪ್ರಯೋಗ, ಸುಳ್ಳು, ಕಳ್ಳತನ ಇವೆಲ್ಲ ವರ್ತನೆಯ ವಿಕೃತಿಗಳಾಗಿವೆ.

ಪಾಲಕರೇ, ಮಕ್ಕಳ ಮನೋದೌರ್ಬಲ್ಯಕ್ಕೆ ಎಡೆಗೊಡಬೇಡಿ. ಅದು ಆತ್ಮಹತ್ಯಕ್ಕೆ ನಾಂದಿಯಾದೀತು...!

---

oo oo oo oo

ಅತೃಪ್ತಿ ಇರುವ ಮನುಷ್ಯನಿಗೆ ಯಾವ ಕುರ್ಚಿಯೂ ಸುಖ ನೀಡದು.

oo oo oo oo

ಶ್ರೀ ಎಚ್. ಎಂ. ನಾರಾಯಣ ಭಟ್

ಎಲ್ಲರೂ ಒಬ್ಬನಿಗೆ ನೆರವಾಗುವ

ಸಹಕಾರ ತತ್ವದ ದಿವ್ಯ ಸಂದೇಶ

ಆರೋಗ್ಯವಂತ ಸಹಕಾರ ಸಂಘಗಳು ದೇಶದ ಆರೋಗ್ಯವನ್ನು ಹೆಚ್ಚಿಸುವವು, ಸರಕಾರದ ಹತೋಟಿಯಿಂದ ಸ್ವತಂತ್ರವಿರುವ ವಿದೇಶೀ ಸಹಕಾರ ಸಂಘಗಳು ಅದ್ವಿತೀಯವೆನಿಸಿದೆ. ಆ ಪರಿಸ್ಥಿತಿ ಇಲ್ಲಿಯೂ ಒದಗಬಹುದೆ?

"ಸಹಕಾರ ಸಪ್ತಾಹ" ನವೆಂಬರ್ ತಿಂಗಳಲ್ಲಿನ ಪೂರ್ವಾರ್ಧದಲ್ಲಿ ಭಾರತ ಸಹಿತ ಜಗತ್ತಿನ ವಿವಿಧ ಭಾಗಗಳಲ್ಲಿ ಆಚರಿಸಲ್ಪಡುತ್ತಿದೆ. ಈ ಸಪ್ತಾಹದ ಆಚರಣೆಯ ವೇಳೆ ಜನಸಾಮಾನ್ಯರು ಜನಸಾಮಾನ್ಯರಿಗಾಗಿಯೇ ಪ್ರಾರಂಭಿಸಿದ ಚಳವಳಿಯೊಂದರ ಸಂದೇಶಗಳು ದಿಗಂತಗಳಿಂದಲೂ ಪ್ರತಿಧ್ವನಿಗರೆಯುವಂತಾಗಬೇಕು.

ಇಂಗ್ಲಾಂಡಿನ ರೋಚ್‌ಡೇಲ್ ಎಂಬಲ್ಲಿ ನೂರೈವತ್ತು ವರ್ಷಗಳ ಹಿಂದೆ ಕೇವಲ ಇಪ್ಪತ್ತೆಂಟು ನೇಕಾರರು ಹದಿನಾಲ್ಕು ಪವನು ಮೂಲಧನ ನಿಕ್ಷೇಪಿಸಿ ಒಂದು ಸಣ್ಣ ಸಹಕಾರ ಸಂಘವನ್ನು ರೂಪಿಸಿದರು. ಆ ಸಣ್ಣ ಸಂಘದೊಂದಿಗೆ ಸಹಕಾರದ ವಿಶಾಲ ಹಸ್ತಗಳು ವಿಶ್ವವನ್ನೇ ಆವರಿಸಿ ಇಂದಿನ ಸ್ಥಾನಮಾನಗಳೊಂದಿಗೆ ಬೆಳೆದಿದೆ. ಕೋಟಿಗಟ್ಟಲೆ ಜನರ ಜೀವನಾಧಾರ ಹಾಗೂ ಕೋಟಿಗಟ್ಟಲೆ ರೂಪಾಯಿ ನಿಕ್ಷೇಪಿಸಲ್ಪಟ್ಟ ಒಂದು ಮಹಾ ಚಳವಳಿಯಾಗಿ ಪರಿಣಮಿಸಿದೆ.

ಧನಿಕ ರಾಷ್ಟ್ರಗಳಲ್ಲಿಯೂ ಬಡ ರಾಷ್ಟ್ರಗಳಲ್ಲಿಯೂ ಸಹಕಾರ ಹಸ್ತದ ಚಟುವಟಿಕೆ ವಿವಿಧ ಕ್ಷೇತ್ರಗಳನ್ನು ಪ್ರವೇಶಿಸಿ ತನ್ನ ಪ್ರಭಾವ ಬೀರಿದೆ.

ಒಬ್ಬನು ಎಲ್ಲರಿಗೆ; ಎಲ್ಲರೂ ಒಬ್ಬನಿಗೆ

ಇದು ಸಹಕಾರ ಚಳವಳಿಯ ದಿವ್ಯ ಸಂದೇಶ. ಸಾಮಾನ್ಯವಾಗಿ ವ್ಯಾಪಾರದ ಅಭಿವೃದ್ಧಿಗೆ ಉತ್ಪಾದನೆ ಹೆಚ್ಚಳಕ್ಕೆ ಹಾಗೂ ಸಾಲ ನಿವಾರಣೆಗೆ ಈ ಆಶಯ ಸಹಾಯಕ. ಸಹಕಾರ ತತ್ವದ ತಳಹದಿಯಲ್ಲಿಯೇ ಔದ್ಯೋಗಿಕ ಕ್ಷೇತ್ರದಲ್ಲಿ ಮಹತ್ಸಾಧನೆ ಗಳಿಸಿ ಇತರ ರಾಷ್ಟ್ರಗಳಿಗೆ ಮಾರ್ಗದರ್ಶನವಿತ್ತ ಅನೇಕ ಸಣ್ಣ ರಾಷ್ಟ್ರಗಳಿವೆ.

ರೋಚ್‌ಡೇಲ್‌ನ ನೇಕಾರರು ಅಧಿಕ ಮುಗ್ಗಟ್ಟಿನಲ್ಲಿದ್ದರು. ನಿತ್ಯೋಪಯೋಗಿ ಸಾಧನಗಳ ಬೆಲೆ ಏರುತ್ತಲಿತ್ತು. ಆ ಕಾಲದಲ್ಲಿ ಇಂಗ್ಲಾಂಡಿನ ನೌಕರ—ಮಜೂರ ವರ್ಗದವರ ದುಸ್ಥಿತಿ ಕಠಿಣವಾಗಿತ್ತು. ದಾರಿದ್ರ್ಯವು ಅವರನ್ನು ಬಾಧಿಸಿತ್ತು. ಹೊಸದಾಗಿ ಜನ್ಮವೆತ್ತಿದ ಸಣ್ಣ ಸಹಕಾರ ಸಂಘವು ರಖಂ ಬೆಲೆಗೆ ನಿತ್ಯೋಪಯೋಗಿ ವಸ್ತುಗಳನ್ನು ಅದರ ಸದಸ್ಯರಿಗಾಗಿ ಖರೀದಿಸಿ ಹಂಚಿತು. ಆಗ ಏನು ಸಂಭವಿಸಿತು?

ರಖಂ ಬೆಲೆಗೂ ಚಿಲ್ಲರೆ ಬೆಲೆಗೂ ಇದ್ದ ಲಾಭವು ಸದಸ್ಯರಿಗೇ ಲಭಿಸಿತು. ತಾವು ತಮಗಾಗಿ ಖರೀದಿಸಿದ ಸಾಧನಗಳ! ಅಳತೆ ತೂಕದಲ್ಲೂ ಮೋಸವಿಲ್ಲದಾಯ್ತು. ದುರ್ವಿತರಣವಿಲ್ಲದಾಯ್ತು. ವ್ಯಾಪಾರದ ಲಾಭ ಮಾತ್ರವಲ್ಲ—ಸಂಘದ ಆಡಳಿತೆಯೂ ಎಲ್ಲಾ ಸದಸ್ಯರದ್ದಾಯ್ತು.

ಇದೇ ಆಶಯ ಮತ್ತೆ ಬೆಳೆದು ವಿಶ್ವವನ್ನೇ ವ್ಯಾಪಿಸಿತು.

ಜರ್ಮನಿಯಲ್ಲಿ

ಸಾಲದ ಭಾರವನ್ನು ಹೊರಲಾರದ ಕೃಷಿಕರ ಹಿತಸಾಧನೆಗಾಗಿ ಸಹಕಾರ ಚಳವಳಿ ಪ್ರಾರಂಭವಾಯಿತು. ಪ್ರಾರಂಭಿಸಿದುದೂ ಓರ್ವ ಸಾಧಾರಣ ವ್ಯಕ್ತಿ. ಶೂಲ್ಸ್ ಡೆಲಿಟ್ಸ್ ಆತನ ಹೆಸರು. ಭಾರತದ ಕೃಷಿಕರ ಹಿತಸಾಧನೆಗಾಗಿ ಜರ್ಮನ್ ಮಾದರಿಯ ಸಹಕಾರ ಸಂಘಗಳ ಸ್ಥಾಪನೆಯಾಗಿತ್ತು. ಜನಸಾಮಾನ್ಯರೇ ಸಂಘಟಿಸಿ ಅವರೇ ಆಡಳಿತೆ ನಿರ್ವಹಿಸುವರು. ನಮ್ಮ ದೇಶದಲ್ಲಿ ಸರಕಾರದ ಅಧಿಕಾರ ಹಸ್ತಕ್ಷೇಪವಿದೆ.

ರಷ್ಯಾದಲ್ಲಿ

ರಾಜಕೀಯ ಚರಿತ್ರೆಯ ಒಂದು ಅವಿಭಾಜ್ಯ ಘಟಕವೆಂದೇ ಸಹಕಾರ ಚಳವಳಿಯು ಸೋವಿಯಟ್ ರಷ್ಯಾದ ಪರಿಗಣಿಸಲ್ಪಟ್ಟಿದೆ. ಝಾರ್ ಚಕ್ರವರ್ತಿಯ ಕಾಲಕ ಪ್ರಾರಂಭವಾದ ಈ ಪದ್ಧತಿಯು ರಷ್ಯಾ—ಜಪಾನ್ ಯುದ್ಧದ ವೇಳೆ ಸೈನಿಕರಿಗೆ ಆಹಾರ ಸಾಮಗ್ರಿ ಪೂರೈಕೆಯ ಹೊಣೆಗಾರಿಕೆ ವಹಿಸಿಕೊಂಡು ಬೆಳೆಯಿತು. ಅಲ್ಲಿ ಎರಡು ವಿಧದ ಸಾಮೂಹಿಕ ಕೃಷಿ—ಸಹಕಾರ ಕೃಷಿ ಪದ್ಧತಿಗಳಿವೆ. ಒಂದರ ಹೆಸರು "ಕೋಲ್ ಖೋಸಿ"; ಮತ್ತೊಂದು "ಸೋವ್ ಖೋಸಿ". ಸರಕಾರದ ಆಡಳಿತೆಗೊಳಪಟ್ಟು — ಸರಕಾರದ ಮೇಲ್ನೋಟದಲ್ಲಿ ಜನರು ನಡೆಸುವ ಸಹಕಾರ ಪದ್ಧತಿ "ಕೋಲ್ ಖೋಸಿ'. ಸರಕಾರದ ನಿಯಂತ್ರಣದಲ್ಲಿರುವ 'ಕೂಟ ಕೃಷಿ' ಪದ್ಧತಿ "ಸೋವ್ ಖೋಸಿ' ಈ ಪೈಕಿ ಮೊದಲ ಪದ್ಧತಿಗೇ ಪ್ರಚಾರ ಹೆಚ್ಚು.

ಡೆನ್ಮಾರ್ಕಿನಲ್ಲಿ

ಹಾಲು ವಿತರಣಾ ಕಾರ್ಯಗಳಿಗಾಗಿ ಅಲ್ಲಿನ ಓರ್ವ ಪುರೋಹಿತ ಕ್ರಿಶ್ಚನ್ ಸೊಂಡಿ ಎಂಬಾತನು ಸಹಕಾರ ಚಳವಳಿಯನ್ನಾರಂಭಿಸಿದ್ದಾಗಿ ಹೇಳಲಾಗಿದೆ. ಸಣ್ಣ ರಾಷ್ಟ್ರವಾದರೂ ಅತ್ಯಧಿಕ ಸಂಖ್ಯೆಯಲ್ಲಿ ಸಹಕಾರ ಸಂಸ್ಥೆಗಳಲ್ಲಿವೆ. ಸಹಕಾರ ಹಸ್ತಗಳ ಮೂಲಕವೇ ಈ ರಾಷ್ಟ್ರದ ಜನರು ಮುಕ್ತ ಐಶ್ವರ್ಯವಂತ ರಾಷ್ಟ್ರದ ಜನರಿಗೆ ಸಮಾನ ಜೀವನ ಮಟ್ಟವನ್ನು ಏರಿಸಲು ಸಾಧ್ಯವಾದುದು. ಹಾಗಿದ್ದರೆ, ಸಹಕಾರ ಚಳವಳಿಯ ಮೂಲಕ ಕೃಷಿ, ಕೈಗಾರಿಕೆ-ವ್ಯಾಪಾರ ವ್ಯವಹಾರಗಳಷ್ಟು ಅಭಿವೃದ್ಧಿ ಹೊಂದಲೂ ಸಾಧ್ಯ.

ಸಹಕಾರ ಪದ್ಧತಿಯನ್ನು ಯಶಸ್ವಿಯಾಗಿ ಅಳವಡಿಸಿದ ಇತರ ಸಣ್ಣ ರಾಷ್ಟ್ರಗಳೂ ಇವೆ. ಇವುಗಳ ಪೈಕಿ ಜಪಾನಿಗೆ ಮೊದಲ ಸ್ಥಾನ ಸಲ್ಲುತ್ತಿದೆ. ಸಹಕಾರ ಕ್ಷೇತ್ರದಲ್ಲಿ 'ಜಪಾನೀ ಪದ್ಧತಿ'ಯನ್ನು ಭಾರತ ಸಹಿತ ಹಲವು ರಾಷ್ಟ್ರಗಳೂ ಅನುಕರಿಸಿವೆ.

ಸೂಪರ್ ಮಾರ್ಕೆಟ್

ಸೂಪರ್ ಮಾರ್ಕೆಟುಗಳೂ ಬಜಾರ್‌ಗಳೂ ಫ್ರಾನ್ಸ್ ದೇಶದ ಸಂಭಾವನೆಗಳು.

ನಮ್ಮ ದೇಶದಲ್ಲಿ ಈ ಚಳವಳಿ ಅದು ಸಾಕಷ್ಟು ಪ್ರಮಾಣದಲ್ಲಿ ಬೆಳೆದಿಲ್ಲವೆಂಬುದು ವಿಷಾದಕರ. ಇನ್ನೂ ಬೆಳವಣಿಗೆ

(ಇಪ್ಪತ್ತೆರಡನೇ ಪುಟ ನೋಡಿರಿ)

ಉತ್ತಮ ಗಿಡಮೂಲಿಕೆಗಳ ಆಯ್ಕೆ, ಶಾಸ್ತ್ರೀಯ ರೀತಿ, ನಿಷ್ಠಾವಂತ ಪದ್ಧತಿ,
ತನ್ಮೂಲಕ ರೋಗಿಗಳ ಹಾಗೂ ವೈದ್ಯರ ಪ್ರೀತಿ ವಿಶ್ವಾಸ—
ಇದುವೆ ನಮ್ಮ ನಿಜವಾದ ಸಂಪತ್ತು.

ವಿಶ್ವಾಸದಾಯಕ ಆಯುರ್ವೇದ ಔಷಧಿಗಳಿಗೆ
ನಿಮ್ಮ ವಿಶ್ವಾಸದ ಸಂಸ್ಥೆ—

ನಾಯಕ ಆಯುರ್ವೇದಾಶ್ರಮ, ಕಟಪಾಡಿ, ದ. ಕನ್ನಡ.

ಸ್ಥಾಪಕ— ಪಾಂಗಾಳ ಲಕ್ಷ್ಮೀನಾರಾಯಣ ನಾಯಕ.

ಪ್ರೊ| ಎಂ. ಎಸ್. ಎಸ್. ರಾವ್, ಎಂ. ಎಸ್‌ಸಿ.

ಸಂತಾನ ವಿಜ್ಞಾನ

'ಸಂತಾನ ನಿಯಂತ್ರಣ'ದ ಕಾರ್ಯದಲ್ಲಿ ಮತ್ತೊಂದು ಹೆಜ್ಜೆ ಮುನ್ನಡೆದರೆ ಸಂತಾನ ವಿಜ್ಞಾನವು ಒಂದು ಘಟ್ಟಕ್ಕೆ ಬರುತ್ತದೆ. "ವಿಜ್ಞಾನ"ದ ಇತರ ಅಂಗಗಳಲ್ಲಿರುವಂತೆಯೇ ಇದರಲ್ಲೂ ಹಲವು ಲೋಪದೋಷಗಳಿವೆ. ಆದರೂ ಸಮಾಜವು ತಾನು ಬಯಸುವಂತಹ ಮಕ್ಕಳನ್ನು ಪಡೆಯಲು ಸಾಧ್ಯವೆನ್ನುತ್ತದೆ ಈ ವಿಜ್ಞಾನ.

ಮನುಷ್ಯನು ಸಾಧ್ಯವಿದ್ದಲ್ಲೆಲ್ಲ ತಾನು ಕಲಿತದ್ದನ್ನೆಲ್ಲವನ್ನೂ ತನ್ನ ಹಿತಕ್ಕಾಗಿಯೇ ಬಳಸುವನು. ಅಂತೆಯೇ ಮಾನವನು ಅನುವಂಶಿಕತೆಯ ಜ್ಞಾನವನ್ನು ತನ್ನ ಸುಧಾರಣೆಗೇ ಬಳಸುವುದನ್ನು ನೋಡಲು ಅನೇಕ ತಳಿ ಶಾಸ್ತ್ರಜ್ಞರು ಆತುರರಿದ್ದಾರೆ.

ಪ್ರತಿಯೊಂದು ಶಿಶುವೂ ಅತ್ಯುತ್ತಮ ತರದ ಗುಣಗಳನ್ನು ನಿರ್ಧರಿಸಬಲ್ಲ, ಕೋಶ ಬೀಜದ ವಿಶಿಷ್ಟ ವಸ್ತುಗಳಾದ "ಜೀನ್"ಗಳನ್ನೇ ಪಡೆಯುವಂತೆ, ಮಾನವರು ಲಗ್ನಗಳನ್ನು (ವಿವಾಹಗಳನ್ನು) ಒಂದು ನಿರ್ದಿಷ್ಟ ರೀತಿಯಲ್ಲಿಯೇ ನಡೆಸುವಂತೆ ಅವರನ್ನು ಮನವೊಲಿಸುವುದಾದರೆ, ಆಗ ಮಾನವ ಸಂತತಿಯು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಬಹಳ ಸುಧಾರಿಸಬಹುದೆಂಬುದು ಅವರ ನಂಬಿಕೆ.

ಶ್ರೇಷ್ಠ ಮಕ್ಕಳು ಉತ್ತಮ ಗುಣದ ಉಳ್ಳ ಉಚ್ಚ ಮಟ್ಟದ ತಂದೆ-ತಾಯಿಗಳಿಂದಲೇ ಜನಿಸುವಂತಾಗಬೇಕು. ದೋಷಯುಕ್ತವಾದ ಮತ್ತು ಕೆಳಮಟ್ಟದ ತಂದೆ ತಾಯಿಗಳಿಂದ ಮಕ್ಕಳು ಜನಿಸುವುದು ಸಾಧ್ಯವಿದ್ದಷ್ಟು ಕಡಿಮೆ ಪ್ರಮಾಣದಲ್ಲಿ; ಏಕೆ ಇಲ್ಲದಿದ್ದರೂ ಚಿಂತೆಯಿಲ್ಲ.

ಒಳ್ಳೆಯ ಅಪೇಕ್ಷಣೀಯವಾದ "ಜೀನ್"ಗಳನ್ನೇ ಜಾಣತನದಿಂದ, ಒಂದು ನಿರ್ದಿಷ್ಟ ರೀತಿಯಲ್ಲಿ ಕೂಡಿಸಿ ಸಂಯೋಗಿಸುವಂತಾಗಿ, ಮಾನವನ ಸಂತತಿಯ ಸುಧಾರಣೆಯ ಕಡೆ ಲಕ್ಷ್ಯಕೊಡುವ ತಳಿಶಾಸ್ತ್ರದ ಶಾಖೆಯೇ ಸಂತಾನ ವಿಜ್ಞಾನವೆನಿಸಿಕೊಳ್ಳುತ್ತದೆ; ಅಂದರೆ ಒಪ್ಪುವ ರೀತಿಯಲ್ಲಿ ಜನಿಸುವ ವಿಜ್ಞಾನ ಎಂದು ಹೆಸರು. ಇದರಿಂದ ಅನುವಂಶಿಕವಾಗಿ ಗಂಭೀರ ಪ್ರಮಾಣದ ದೋಷಯುಕ್ತವಾದ ಮನುಷ್ಯರು ಮಕ್ಕಳನ್ನು ಪಡೆಯುವುದಕ್ಕೆ ಅಡ್ಡಿ ಪಡಿಸಿದಂತಾಯಿತು.

ನಿರ್ದಿಷ್ಟ ದೋಷಯುಕ್ತರಾದ ಮಾನವರೆಲ್ಲ ನಿರ್ವೀರ್ಯೀಕರಣ ಮಾಡಿಸಿಕೊಳ್ಳಬೇಕೆಂದು ಅನೇಕ ಸಂತಾನ ವಿಜ್ಞಾನಿಗಳು ಇಚ್ಛಿಸುತ್ತಾರೆ; ಏಕೆಂದರೆ— ಮನುಷ್ಯರು ಸಂತಾನೋತ್ಪತ್ತಿಯನ್ನು ಕಳೆದುಕೊಳ್ಳುವಂತೆ ಇತ್ತೀಚೆಗೆ ಶಸ್ತ್ರಕ್ರಿಯೆಗಳಿಂದ ನಿರ್ವೀರ್ಯೀಕೃತರಾಗುವುದು ಸಾಧ್ಯವಿದೆ. ಇದು ಒಂದು ಜಾಣತನದ ಕ್ರಮವೆನಿಸಬಹುದು. ಆದರೆ ಅಂತಹ ಶಸ್ತ್ರಕ್ರಿಯೆಗಳಿಂದ ಮನುಷ್ಯರನ್ನು ನಿರ್ವೀರ್ಯೀಕೃತರನ್ನಾಗಿ ಮಾಡುವುದಕ್ಕೆ ಮೊದಲು ಅತ್ಯಂತ ಸಮರ್ಥರಾದ ವೈದ್ಯರ ಹಾಗೂ ವಕೀಲರ ತೀರ್ಮಾನವನ್ನು ಪಡೆದೇ ಮುಂದೆ ಸಾಗಬೇಕು.

ಇಂತಹ ವಿಜ್ಞಾನ ನಿಯಂತ್ರಣದಿಂದ ದೋಷಯುಕ್ತರಾದ ಮನುಷ್ಯರೆಲ್ಲರ ನಿರ್ವೀರ್ಯೀಕರಣದಿಂದ ಮುಂದಿನ ಪೀಳಿಗೆಯಲ್ಲಿ ಬರಬಹುದಾದ ದೋಷಯುಕ್ತರಾದ ಮಕ್ಕಳನ್ನು ಪೂರ್ಣ ತಡೆಗಟ್ಟಿದಂತಾಗುವುದಿಲ್ಲ.

ಮನಸ್ಸಿನ ಅಸ್ಥೈರ್ಯವನ್ನೇ ಉದಾಹರಣೆಗೆ ತೆಗೆದುಕೊಳ್ಳೋಣ. ಸುಮಾರು ಅರ್ಧಕ್ಕಿಂತ ಸ್ವಲ್ಪ ಕಡಿಮೆ ಮನಸ್ಸಿನ ಅಸ್ಥೈರ್ಯವುಳ್ಳ ಮಕ್ಕಳಿಗೆಲ್ಲ ಒಬ್ಬೊಬ್ಬರಾದರೂ ನಿಸ್ಸಂದೇಹವಾಗಿಯೂ ಖಚಿತವಾದ ಮನಸ್ಸಿನ ಅಸ್ಥೈರ್ಯವುಳ್ಳ ತಂದೆ ಅಥವಾ ತಾಯಿ ಇದ್ದೇ ಇರುತ್ತಾರೆ; ಅಂದರೆ ಈ ಅಸ್ಥೈರ್ಯವುಳ್ಳ ಮಕ್ಕಳಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಎಲ್ಲರೂ ನೆಟ್ಟಗಿರುವ ತಂದೆ-ತಾಯಿಗಳಿಂದಲೇ ಜನಿಸಿರುತ್ತಾರೆ. ಆದರೆ ಅಂತಹ ತಂದೆ-ತಾಯಿಗಳು ಇಬ್ಬರೂ ತಮ್ಮಲ್ಲಿ ಮನಸ್ಸಿನ ಅಸ್ಥೈರ್ಯಕ್ಕೆ ಕಾರಣವಾದ ಒಂದೇ ತರಹದ 'ಅಬಲ ಜೀನ್'ಗಳನ್ನೇ ಹೊಂದಿರುತ್ತಾರೆ. ಈ ಒಂದು ಪೀಳಿಗೆಯಲ್ಲಿ ಮನಸ್ಸಿನ ಅಸ್ಥೈರ್ಯವುಳ್ಳ ಅಂತಹ ಮನುಷ್ಯರಲ್ಲಿ ಯಾರೂ ಮಕ್ಕಳನ್ನು ಪಡೆಯದಂತೆ ನಿರ್ವೀರ್ಯೀಕೃತರಾಗುವರು ಎಂದು ಊಹಿಸೋಣ. ಇಂತಹ ಒಂದು ಉಗ್ರ ಕ್ರಮದಿಂದ ಕಂಡು ಬರುವ ಅತಿ ಹೆಚ್ಚಿನ ಫಲ ಎಂದರೆ— ಮುಂದಿನ ಪೀಳಿಗೆಯಲ್ಲಿ ಮನಸ್ಸಿನ ಅಸ್ಥೈರ್ಯದ ದೋಷವುಳ್ಳ ಮಕ್ಕಳ ಜನನವನ್ನು ಸ್ವಲ್ಪ ಮಟ್ಟಿಗೆ ಮಾತ್ರ ಕಡಿಮೆ ಮಾಡಿದಂತಾಗುತ್ತದೆ.

ಇದು ಹೀಗೆಯೇ ಏಕೆಂದರೆ— ಕೆಲವು ನೆಟ್ಟಗಿರುವ ತಂದೆ-ತಾಯಿಗಳು ಅಸ್ಥೈರ್ಯದ ದೋಷವುಳ್ಳ ಮಕ್ಕಳನ್ನು ಮುಂದಿನ ಪೀಳಿಗೆಯಲ್ಲಿ ಪಡೆದೇ ತೀರುತ್ತಾರೆ

ಇದು ವರೆಗೆ ಮನಸ್ಸಿನ ಅಸ್ಥೈರ್ಯದ ದೋಷಕ್ಕೆ ಹೇಳಿದ್ದು. ಇದೇ ತರಹದ ಇನ್ನೂ ಅನೇಕ ದೋಷಗಳಿಗೆ ಅನ್ವಯಿಸುತ್ತದೆ. ಅಂದ ಮೇಲೆ ಮನುಷ್ಯರಲ್ಲಿ ಇರುವ ದೋಷಗಳನ್ನು ಬರೀ ಶಸ್ತ್ರಕ್ರಿಯೆಗಳಿಂದ ಅಂತಹವರನ್ನು ನಿರ್ವೀರ್ಯೀಕೃತರನ್ನಾಗಿ ಮಾಡಿ, ಅವರನ್ನು ದೋಷರಹಿತರಾಗಿ ಮಾಡುವುದು ಸಾಧ್ಯವಿಲ್ಲ. ದೋಷದೆಡೆಗೆ ಕೊಡುವ ಅನೇಕ ಅಬಲ ಜೀನ್‌ಗಳು ಮಾನವ ಕುಟುಂಬದಲ್ಲೆಲ್ಲಾ ಬಹು ವ್ಯಾಪಕವಾಗಿ ಪಸರಿಸಿದ್ದು, ಹಿಂದಿನ ಸಂತಾನ ವಿಜ್ಞಾನಿಗಳು ಬಯಸಿದ್ದಂತೆ, ಅವುಗಳನ್ನು ಸಂಪೂರ್ಣ ನಿರ್ಮೂಲ ಮಾಡಿ ಯಶಸ್ವಿಯಾಗುವುದು. ಈಗ ಅಷ್ಟೇನೂ ಸುಲಭದ ಮಾತಲ್ಲ. ಇಂತಹ ಯಾವುದೇ ಒಂದು ನಿರ್ದಿಷ್ಟ ಕ್ರಮದಿಂದ ಮನುಷ್ಯರಲ್ಲಿರುವ ದೋಷಗಳು ಅಥವಾ ಕುಂದುಕೊರತೆಗಳನ್ನು ಬುಡಸಹಿತ ನಿರ್ಮೂಲ ಮಾಡುವುದು ಸಾಧ್ಯವಿಲ್ಲ ಎಂದು ಅರ್ಥವಾಗುತ್ತದೆ.

ಕುಟುಂಬದಲ್ಲಿ ಮುಂದುವರೆಯ ಬಹುದಾದ ದೋಷಗಳು:

ಅನುವಂಶಿಕತೆಯ ನಿಯಮಗಳನ್ನಾಗಲೀ, ಜೀವಕೋಶಗಳಲ್ಲಿ ಕ್ರೋಮೋಸೋಮುಗಳನ್ನಾಗಲೀ ಕಂಡುಹಿಡಿಯುವುದಕ್ಕೆ ಬಹುಮುಂಚೆಯೇ ಮಾನವನು ಅನೇಕ ಕುಟುಂಬಗಳಲ್ಲಿ ಕೆಲವು ಗುಣಗಳು ವಂಶಪಾರಂಪರ್ಯವಾಗಿ ಮುಂದುವರಿಯುವುದನ್ನು ನೋಡಿದ್ದನು. ಮನುಷ್ಯನಲ್ಲಿ ದೋಷಗಳು ಅಥವಾ ನ್ಯೂನತೆಗಳು ಸಹಜ (ಸಾಧಾರಣ) ಗುಣಗಳಿಗಿಂತ ಹೆಚ್ಚು ಎದ್ದು ಕಣ್ಣಿಗೆ ಕಾಣುವುದರಿಂದ ಅಂತಹ ದೋಷಗಳು ವಂಶಪಾರಂಪರ್ಯವಾಗಿ ಮುಂದುವರಿಯುವುದನ್ನು ಮನುಷ್ಯನು ಲಕ್ಷ್ಯಪೂರ್ವಕವಾಗಿ ಪರಿಶೀಲಿಸಬೇಕು. ಒಂದು ಕುಟುಂಬದಲ್ಲಿ ಒಬ್ಬ ಯಜಮಾನ ಮನೋದಾರ್ಢ್ಯವಿಲ್ಲದವನಿದ್ದರೆ ಅವನ ಸಂತತಿಯಲ್ಲಿ ಅಂತಹ ದೋಷವಿದ್ದವರೇ ಹೆಚ್ಚಾಗಿ ಇರುವುದನ್ನು ನೋಡಲು ಅನೇಕ ನಿದರ್ಶನಗಳು ದೊರೆಯುತ್ತವೆ. ಅಂಧತೆ ಕಿವುಡು, ಬಣ್ಣಗಳನ್ನು ಗುರುತಿಸಲಾಗದ ದೃಷ್ಟಿ, ದೋಷಯುಕ್ತವಾದ ಅಥವಾ ಹೆಚ್ಚು ಬೆರಳುಗಳುಳ್ಳ ವ್ಯಕ್ತಿಗಳನ್ನು ಎಲ್ಲ ಕಡೆಯಲ್ಲಲ್ಲದಿದ್ದರೂ, ಕೆಲವೇ ಕುಟುಂಬಗಳಲ್ಲಿಯಾದರೂ ಕಾಣಬರುತ್ತದೆ.

ತಳಿ ಶಾಸ್ತ್ರಜ್ಞರು ಮನುಷ್ಯನ ಅನುವಂಶಿಕತೆಯನ್ನು ಪರಿಶೀಲಿಸಲು ಪ್ರಾರಂಭ ಮಾಡಿದಾಗ ಇಂತಹ ದೋಷಗಳನ್ನು ವಂಶಪಾರಂಪರ್ಯವಾಗಿ ಪೀಳಿಗೆಯಿಂದ ಪೀಳಿಗೆಗೆ ಮುಂದುವರೆಯುವುದನ್ನು ಗುರುತಿಸುವುದು ಅನೇಕ ಸಲ ಸುಲಭವಾಯಿತು. ಅಂತಹ ದೋಷಗಳು ಅನುವಂಶಿಕವಾಗಿದ್ದರೆ ಅವು ಅವ್ಯಕ್ತ ಜೀನ್‌ಗಳಿಂದ ನಿಯಂತ್ರಿಸಲ್ಪಟ್ಟಿರುತ್ತವೆಯೆಂಬುದು ಈಗ ನಮಗೆ ಗೊತ್ತಿದೆ. ಅಂಡವು ಗರ್ಭಧಾರಣೆ ಹೊಂದುತ್ತಿರುವಾಗ ತಂದೆ ತಾಯಿಗಳಿಬ್ಬರ ಈ "ಅವ್ಯಕ್ತ ಜೀನ್"ಗಳೇ ಕೂಡಿ ಸಂಯೋಗವಾದರೆ ಆಗ ಮೇಲೆ ಹೇಳಿದ ದೋಷಗಳು ಮುಂದೆ ಕಾಣಿಸಿಕೊಳ್ಳುತ್ತವೆ. ತಂದೆತಾಯಿಗಳು ಸಾಮಾನ್ಯ ಮತ್ತು ಯಥಾಸ್ಥಿತಿಯವರಾದರೂ ಕೆಲವು ಸಂದರ್ಭಗಳಲ್ಲಿ ಮನೋದಾರ್ಢ್ಯವಿಲ್ಲದ ಶಿಶುವನ್ನು ಇಂತಹ ಕಾರಣಗಳಿಂದ ಪಡೆಯಬಹುದೆಂಬುದು ವ್ಯಕ್ತವಾಗುತ್ತದೆ. ತಂದೆತಾಯಿಗಳಿಬ್ಬರಲ್ಲಿ ಮನಸ್ಸಿನ ಅಸ್ಥೈರ್ಯಕ್ಕೆ ಸಂಬಂಧಪಟ್ಟ ಒಂದೇ ತರಹದ ಅವ್ಯಕ್ತ ಜೀನ್‌ಗಳನ್ನು ಪಡೆದಿದ್ದರೆ ಇಂತಹ ಅಬಲ ಜೀನ್‌ಗಳು ಅವರ ದೇಹದಲ್ಲಿಯೇ ಪ್ರಬಲ ಜೀನ್‌ಗಳಿಂದ ಒತ್ತಲ್ಪಟ್ಟಿದ್ದರೂ, ಯಾವಾಗಲೂ ಪ್ರತಿ ನಾಲ್ಕರಲ್ಲಿ ಒಂದರ ಸರಾಸರಿಯಂತೆ ಅಬಲವಾದ ಜೀನ್ ಉಳ್ಳ ವೀರ್ಯಾಣುವು ಅಂತಹದೇ "ಅಬಲ ಜೀನ್"ವುಳ್ಳ ಅಂಡದೊಡನೆ ಸಂಯೋಗಿಸಬಹುದು. ಅಂತಹ ಸಂಯೋಗ ಪಡೆದ ಅಂಡದಿಂದ ಜನಿಸುವ ಶಿಶು ಮನಸ್ಸಿನ ಅಸ್ಥೈರ್ಯವನ್ನು ಪಡೆಯುವಂತಹದೇ ಆಗಿರುತ್ತದೆ.

ಅನುವಂಶಿಕತೆಯ ಬಗ್ಗೆ ಇರುವ ಇಂತಹ ವಿಷಯಗಳು ಅಣ್ಣತಮ್ಮಂದಿರ ಸಂಡು ಮತ್ತು ಹೆಣ್ಣು ಮಕ್ಕಳು ಲಗ್ನವಾಗುವುದು ಏಕೆ ಅಷ್ಟು ಅಪೇಕ್ಷಣೀಯವಲ್ಲವೆಂಬುದನ್ನು ವಿವರಿಸಿದಂತಾಗುತ್ತದೆ; ಏಕೆಂದರೆ ಅವರು ಒಂದೇ ಮೂಲ ವಂಶಜರಿಂದ 'ಜೀನ್'ಗಳನ್ನು ಪಡೆದಿರುತ್ತಾರೆ. ಆದ್ದರಿಂದ ಅವರು ಸ್ವತಃ ನೋಡುವುದಕ್ಕೆ ಎಲ್ಲ ದೃಷ್ಟಿಯಿಂದ ನೆಟ್ಟಗಿದ್ದರೂ, ಅವರಲ್ಲಿ ಭಿನ್ನ ವಂಶದವರಿಗಿಂತ ಅದೇ ದೋಷಯುಕ್ತವಾದ 'ಅಬಲ ಜೀನ್'ಗಳಿರುವ ಸಂಭವವು ಹೆಚ್ಚಿರುತ್ತದೆ. ಉದಾಹರಣೆಗೆ— ಒಂದು ಕುಟುಂಬದಲ್ಲಿ ಅಬಲ ಜೀನ್‌ಗಳಿಂದ ಉಂಟಾಗುವಂತಹ ಕಿವುಡುತನವುಳ್ಳ ಹಲವು ಮಂದಿ ಇರುತ್ತಾರೆಂದು ಇಟ್ಟುಕೊಳ್ಳೋಣ. ಈ ಕುಟುಂಬದಲ್ಲಿ ಇಬ್ಬರು ಅಣ್ಣತಮ್ಮಂದಿರ ಮಕ್ಕಳು (ಒಬ್ಬ ಗಂಡಸು, ಒಬ್ಬ ಹೆಂಗಸು) ಎಲ್ಲ ದೃಷ್ಟಿಯಿಂದ ನೆಟ್ಟಗಿದ್ದು ವಿವಾಹವಾಗುತ್ತಾರೆಂದು ಊಹಿಸೋಣ. ಜೀನ್‌ಗಳು ಅಂಡ ಮತ್ತು ವೀರ್ಯಕಣ ಇವೆರಡರ ನಡುವೆ ವಿಂಗಡಣೆ ಹೊಂದಿದಾಗ ವೀರ್ಯಕಣದ ಅರ್ಧ ಭಾಗ ಮತ್ತು ಅಂಡದ ಅರ್ಧ ಭಾಗದ ಕಿವುಡುತನಕ್ಕೆ ಕಾರಣವಾದ ಅಬಲ ಜೀನ್‌ಗಳನ್ನು ಪಡೆಯಲೇಬೇಕು. ಇದರಿಂದ ಮುಂದೆ ಅವರಲ್ಲಿ ಜನಿಸುವ ಪ್ರತಿ ನಾಲ್ಕು ಕೂಸುಗಳಲ್ಲಿ ಒಂದು ಕಿವುಡುತನವನ್ನು ಅನುಭವಿಸಿದಂತಾಗುತ್ತದೆ. ಹೀಗೆ ಮಾಡದೆ ಪ್ರತಿಯೊಬ್ಬರೂ ಕಿವುಡುತನಕ್ಕೆ ಕಾರಣವಾದ ಅಬಲ ಜೀನ್‌ಗಳನ್ನು ಹೊಂದದ ಬೇರೆ ಕುಟುಂಬದವರನ್ನು ವಿವಾಹವಾಗಿದ್ದಿದ್ದರೆ ಆಗ ಅವರಿಗೆ ಜನಿಸುವ ಕೂಸು ಅದು ಹೆಚ್ಚೆಂದರೆ, ಒಂದೇ ಒಂದು ಅಂತಹ ಅಬಲಜೀನ್‌ವನ್ನು ಪಡೆಯುತ್ತಿತ್ತು. ತಂದೆ ತಾಯಿಗಳಲ್ಲಿ ಯಾರಾದರೊಬ್ಬರ ಜೀನ್ ಯಥಾಸ್ಥಿತಿಯೂ ಮತ್ತು ಪ್ರಬಲವೂ ಇದ್ದುದಾದರೆ ಆಗ ಶಿಶುವಿನ ಕಿವುಡುತನ ತಪ್ಪುವುದು. ಜನಿಸಿದ ಕೂಸಿಗೆ ತಂದೆ ಮತ್ತು ತಾಯಿ ಇಬ್ಬರೂ ಇರುವುದು ಅನೇಕ ಉಪಯೋಗಗಳಲ್ಲಿ ಇದೂ ಒಂದು. ತಂದೆ ತಾಯಿ ಇವರಲ್ಲಿ ಒಬ್ಬರು ಅವರಿಗೆ ಜನಿಸಿರುವ ಶಿಶುವಿಗೆ ಯಥಾಸ್ಥಿತಿಯ ಮತ್ತು "ಪ್ರಬಲ ಜೀನ್"ನನ್ನು ಕೊಟ್ಟು, ಇನ್ನೊಬ್ಬರಿಂದ ಬಂದ ದೋಷಯುಕ್ತವಾದ ಅಬಲ ಜೀನ್‌ವನ್ನು ಬದಿಗೆ ಸರಿಸುವಂತೆ (ಮುಟ್ಟುವಂತೆ) ಮಾಡುತ್ತಾರೆ. ಇದರಿಂದಲೇ ಮನುಷ್ಯರಲ್ಲಿ ದೋಷಯುಕ್ತವಾದ ವ್ಯಕ್ತಿಗಳ ಪ್ರಮಾಣ ಬಹು ಕಡಿಮೆ ಇರುತ್ತವೆ.

ಒಂದು ಕುಟುಂಬದಲ್ಲಿ ಯಾವುದೇ ಒಂದು ತರಹದ ದೋಷಯುಕ್ತ ಗುಣವನ್ನೊಳಗೊಂಡ ಅಬಲ ಜೀನ್ ಇರುವುದಾದರೆ ಅಂತಹ ಕುಟುಂಬದಲ್ಲಿ ಅಣ್ಣತಮ್ಮಂದಿರ ಮಕ್ಕಳು ಪರಸ್ಪರ ವಿವಾಹವಾಗುವುದು ಹಿತವಲ್ಲ. ಒಂದು ಕುಟುಂಬದಲ್ಲಿ ದೋಷಯುಕ್ತವಾದ ಗುಣವನ್ನೊಳಗೊಂಡ ಜೀನ್ ಇರದೇ ಇದ್ದ ಪಕ್ಷಕ್ಕೆ ಆಗ ಅಣ್ಣತಮ್ಮಂದಿರ ಮಕ್ಕಳ (ಗಂಡು ಮತ್ತು ಹೆಣ್ಣು) ವಿವಾಹವಾದರೂ, ಯಾವ ದೋಷವನ್ನೂ ಒಳಗೊಳ್ಳದ ಬಿನ್ನ ವಂಶದವರಂತೆಯೇ ಇರುತ್ತದೆ. ಆದರೆ ಮನುಷ್ಯನಲ್ಲಿ ಈ ತರಹದ ಅಬಲ ಜೀನ್‌ಗಳನ್ನು ಕಂಡು ಹಿಡಿಯಲು

(ಇಪ್ಪತ್ತೊಂದನೇ ಪುಟ ನೋಡಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:- ಮೈಸೂರು, ಬೆಂಗಳೂರು ಮತ್ತು ಮಂಗಳೂರು.

ಗತಕಾಲದ ತುಳುನಾಡಿನ ಪ್ರಜಾಸಾಮಾನ್ಯರು

ಗತಕಾಲದ ತೌಳವರು ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮದಾಗಿದ್ದ ಸ್ವಾತಂತ್ರ್ಯವನ್ನು ಶಿಸ್ತಿನಿಂದ ಕಾಪಾಡಿಕೊಂಡು ಬಂದಿದ್ದರು. ಈ ಸ್ವಾತಂತ್ರ್ಯವು ಪರಪಂಥ, ಪರಧರ್ಮಗಳ ಸಹಿಷ್ಣುತೆಯಿಂದಲೂ ಕೂಡಿತ್ತು. ಪ್ರಜಾರಾಜ್ಯದ ಪ್ರಜೆಗಳಾದ ನಾವು ಇದನ್ನು ನೆನಪಿಸಿ ದೇಶದ ಸರ್ವತೋಮುಖ ಪ್ರಗತಿಗಾಗಿ ದುಡಿಯಬೇಕು.

ರಾಜಕೀಯ ರಂಗದಲ್ಲಿ ಪ್ರಜಾಪ್ರಭುತ್ವದ ಹಾದಿಯನ್ನು ತುಳಿದಿರುವ ನಮ್ಮ ದೇಶವನ್ನು ಒಂದು ಪಲ್ಲಕ್ಕಿಗೆ ಹೋಲಿಸಬಹುದು. ಪಯಣಿಗರೆಲ್ಲರೂ ಪಲ್ಲಕ್ಕಿಯಲ್ಲಿ ಕೂಡಬಯಸಿದರೆ ಹೊರುವವರಾರೂ ಇರುವುದಿಲ್ಲ. ಎಲ್ಲರೂ ಪಲ್ಲಕ್ಕಿಯನ್ನು ಹೊರಲು ಸಿದ್ಧರಾದರೆ ಅದು ವ್ಯರ್ಥ ಪ್ರಯಾಸವೇ ಆಗುವುದು. ಅಂದ ಮೇಲೆ ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವವರು ಹಲವರಾದರೆ ಅದನ್ನು ಹೊರುವವರು ಕೆಲವರಾಗುತ್ತಾರೆ. ಇನ್ನು ಪ್ರಜಾಪ್ರಭುತ್ವವೆಂಬ ಪಲ್ಲಕ್ಕಿಯ ವಿಷಯದಲ್ಲಿ — ಅದರಲ್ಲಿ ಕೂಡುವವರು ಪ್ರಜೆಗಳು, ಅದನ್ನು ಹೊರುವವರು ಆ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳು. ಪಲ್ಲಕ್ಕಿಯು ಪಯಣದ ಹಾದಿಯಲ್ಲಿ ಸುರಕ್ಷಿತವಾಗಿ, ಸುಸೂತ್ರವಾಗಿ ಸಾಗಿ ಹೆಚ್ಚಿನ ವಿಳಂಬವಿಲ್ಲದೆ ತನ್ನ ಗುರಿ ಸೇರಬೇಕಾದಲ್ಲಿ ಅದನ್ನು ಹೊತ್ತು ಮುನ್ನಡೆಯುವವರ ಹೊಣೆಗಾರಿಕೆಯೇನೋ ಮಹತ್ವದ್ದೇ. ಆದರೆ ಪ್ರಜಾಪ್ರಭುತ್ವದ ಪಲ್ಲಕ್ಕಿಯನ್ನು ಹೊತ್ತು ಮುಂದೆ ಸಾಗುವ ಹೊಣೆಗಾರಿಕೆಯನ್ನು ಅವರವರಿಗೆ ವಹಿಸಿಕೊಡುವಲ್ಲಿ ಸ್ವತಃ ಪ್ರಭುಗಳಾದ ಪ್ರಜೆಗಳ ಹೊಣೆಗಾರಿಕೆಯೂ ಅಷ್ಟೇ ಮಹತ್ವದ್ದು. ಏಕೆಂದರೆ ಪ್ರಜೆಗಳಿಂದ ಚುನಾಯಿತರಾದವರು ನಿಷ್ಠಾವಂತರೂ ಪ್ರಾಮಾಣಿಕರೂ ಕಾರ್ಯದಕ್ಷರೂ ಆಗಿರದಿದ್ದಲ್ಲಿ ಪಯಣವು ಸುಗಮವಾಗದೆ, ಪ್ರಜಾಪ್ರಭುತ್ವದ ಪಲ್ಲಕ್ಕಿಯು ಅನಪೇಕ್ಷಿತಗಳಿಗೀಡಾಗಿ ಪಯಣದ ಗುರಿ ಕಷ್ಟನಷ್ಟಗಳಿಗೊಳಗಾಗುವುದು; ದಾರಿ ತಪ್ಪಿ ಗುರಿಯು ದೂರವಾಗುವುದು. ಹೀಗಾಗದಿರಬೇಕಾದರೆ ಪ್ರಜಾಪ್ರಭುತ್ವದ ಪಲ್ಲಕ್ಕಿಯನ್ನು ಹೊರುವವರನ್ನು ಚುನಾಯಿಸುವವರು ಕಾರ್ಯಸಾಧಕರನ್ನೇ ಆರಿಸಿಕೊಳ್ಳುವಷ್ಟು ಸಾಮರ್ಥ್ಯಶಾಲಿಗಳೂ ವಿದ್ಯಾವಂತರೂ ಆಗಿರುವುದು ಅಗತ್ಯ.

ಭಾರತೀಯರಾದ ನಾವೆಲ್ಲರೂ ನಮ್ಮ ದೇಶದ ಸರ್ವಮಾನ್ಯ ಒಡೆಯರಾದ ಮೇಲೆ ಇಂದಿಗೆ ಎರಡು ದಶಕಗಳು ಉರುಳಿ ಹೋಗಿವೆ. ಪ್ರಾಯಶಃ ಭಾರತೀಯರಿಗೆ ಅರ್ಥವತ್ತಾದ ಮತ್ತು ಉಪಯುಕ್ತವಾದ ವಿದ್ಯೆಯು ದೊರೆತಿಲ್ಲದೆ ಪ್ರಜಾಪ್ರಭುತ್ವವು ಪರಿಣಾಮಕಾರಿಯಾಗದು, ಎಲ್ಲಿಯವರೆಗೆ ಈ ಶ್ರೇಷ್ಠ ಧ್ಯೇಯವು ಬರಿಯ ಹಗಲುಗನಸಾಗಿಯೇ ಉಳಿಯುವುದೆಂದೂ ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ನಮ್ಮಲ್ಲಿ ಹೆಚ್ಚಿನವರು ಮನಗಂಡಿದ್ದೇವೆ. ದೇಶದ ಎಲ್ಲೆಡೆಗಳಲ್ಲಿಯೂ ಹಬ್ಬಿ ಬೆಳೆದಿರುವ ಮತ್ತು ನಮ್ಮ ರಾಜಕೀಯ ಜೀವನವನ್ನು ತಡೆಹಿಡಿದಿರುವ ಕ್ಷುದ್ರತೆಯನ್ನು ಹೋಗಲಾಡಿಸಲೋಸುಗ ದೇಶದ ಆಡಳಿತ ವರ್ಗದವರೂ ಪ್ರಭಾವಶಾಲೀ ವ್ಯಕ್ತಿಗಳೂ ಖಾಸಗೀ ಸಂಸ್ಥೆಗಳೂ ಕೈಗೊಂಡಿರುವ ಭಗೀರಥ ಪ್ರಯತ್ನಗಳು ಇಡೀ ವಿಶ್ವದ ಮೆಚ್ಚುಗೆಯನ್ನು ಗಳಿಸಿವೆ.

ಆದರೆ ಓದು ಬರಹವನ್ನು ಕಲಿತ ಮಾತ್ರಕ್ಕೇ ಪ್ರಜೆಗಳೆಲ್ಲರೂ ಪ್ರಜಾಪ್ರಭುತ್ವವನ್ನು ಬೆಳಗಿಸುವಲ್ಲಿ ಸಮರ್ಥರಾಗಿ ಬಿಡುವುದಿಲ್ಲ. ಯಾವುದೇ ರಾಷ್ಟ್ರವು ರಾಜಕೀಯ ವಿಜ್ಞಾನದಿಂದ ಮಾನವ ಹಿತವನ್ನು ಸಾಧಿಸಲಿಚ್ಛಿಸಿದರೆ ಅದು ತಾನು ಬಳಸುತ್ತಿರುವ ರಾಜಕೀಯ ಪದ್ಧತಿಯನ್ನು, ಆ ಪದ್ಧತಿಯು ಪ್ರಜಾಪ್ರಭುತ್ವವೇ ಆಗಿದ್ದರೂ ಸರಿ, ತನ್ನದೇ ಆದ ರಾಷ್ಟ್ರೀಯ ಸಾಂಪ್ರದಾಯಿಕತೆಗೆ ಅನುಗೊಳಿಸಿಕೊಳ್ಳುವುದು ಅತ್ಯಗತ್ಯ. ನಾವಿಂದು ಅನ್ಯ ರಾಷ್ಟ್ರಗಳಲ್ಲಿ ಹುಟ್ಟಿ, ಶತಮಾನಗಳ ಕ್ಲೇಶ ತ್ರಾಸ ಪ್ರಯೋಗಗಳ ನಂತರ ಆ ರಾಷ್ಟ್ರಗಳ ಮಟ್ಟಿಗೆ ಒಂದು ವ್ಯವಸ್ಥಿತ ರೂಪ ತಾಳಿರುವ ರಾಜಕೀಯ ಪದ್ಧತಿಯನ್ನು (ಅಂದರೆ ಪ್ರಜಾಪ್ರಭುತ್ವವನ್ನು) ನಿರ್ಲಕ್ಷ್ಯತೆಯಿಂದ, ಅಂಧಶ್ರದ್ಧೆಯಿಂದ ಹಿಂಬಾಲಿಸುವ ತಪ್ಪು ಮಾಡುತ್ತಿದ್ದೇವೆ. ನಮ್ಮ ದೇಶದಲ್ಲಿ ಇಂದು ಪ್ರಜಾಪ್ರಭುತ್ವವು ಎದುರಿಸುತ್ತಿರುವ ಕಷ್ಟಗಳು ಕೊನೆಗೊಂಡು ನಾವು ರಾಜಕೀಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬೇಕಾದರೆ ನಾವಿಂದು ಬಳಸುತ್ತಿರುವ ಪ್ರಜಾಪ್ರಭುತ್ವವು ನಮ್ಮ ರಾಷ್ಟ್ರೀಯ, ಸಾಂಪ್ರದಾಯಿಕತೆಯ ಹಿನ್ನೆಲೆಯಲ್ಲಿ ಹೊಸ ರೂಪ ತಾಳಬೇಕು.

ಈ ರಾಷ್ಟ್ರೀಯ ಸಾಂಪ್ರದಾಯಿಕತೆಯನ್ನು ಜನಸಾಮಾನ್ಯರಿಗೆ ತಿಳಿಯಗೊಡುವುದು ಇತಿಹಾಸ. ಇತಿಹಾಸವೆಂಬುದು ಕೇವಲ ಗತಕಾಲದ ರಾಜ ಮಹಾರಾಜರುಗಳ ಚೇಷ್ಟೆ ಕುಚೇಷ್ಟೆಗಳು ಮತ್ತು ಅವರಿಗೂ ಇವರಿಗೂ ನಡುವೆ ನಡೆದು ಹೋದ ಹೋರಾಟಗಳ ಕ್ರಮ ಪಟ್ಟಿ ಮಾತ್ರವಲ್ಲ, ಅದು ನಮ್ಮ ಪೂರ್ವಜರು, ಅಂದರೆ ನಮ್ಮಂತಹ ಆದರೆ ನಮಗಿಂತ ಹಿಂದೆ ಬಾಳಿ ಬದುಕಿದ ಪ್ರಜಾಸಾಮಾನ್ಯರ, ಒಪ್ಪು ತಪ್ಪುಗಳ ಪಟ್ಟಿ, ಒಂದು ಅಮೂಲ್ಯ ಪುಸ್ತಕ. ಶತಮಾನಗಳ ಅವಧಿಯಲ್ಲಿ ನಮ್ಮ ಪೂರ್ವಜರು ಇಟ್ಟು ಬೆಳೆಸಿದ ಸಂಪ್ರದಾಯಗಳು ಕಟ್ಟುಕಟ್ಟಳೆಗಳೂ ನಮ್ಮ ಜನಾಂಗದ ಹುಟ್ಟು ಬೆಳವಣಿಗೆಗಳ, ಆಶೆ ಆಕಾಂಕ್ಷೆಗಳ, ಶಕ್ತಿ ಸಾಮರ್ಥ್ಯಗಳ ಉಗಮ ಸ್ಥಾನಗಳು. ಹೀಗಾಗಿ ನಾವು ನಮ್ಮ ರಾಷ್ಟ್ರೀಯ ಸಾಂಪ್ರದಾಯಿಕತೆಯನ್ನು ಕಡೆಗಣಿಸಿ, ಪರರಾಷ್ಟ್ರಗಳಿಂದ ಬರಮಾಡಿಕೊಂಡ ಪದ್ಧತಿಯನ್ನು, ಅದು ಆ ರಾಷ್ಟ್ರಗಳಲ್ಲಿ ಎಷ್ಟೇ ವ್ಯವಸ್ಥಿತ ರೂಪದಲ್ಲಿ ಜಾರಿಯಲ್ಲಿದ್ದರೂ, ಕೇವಲ ಅಂಧ ಶ್ರದ್ಧೆಯಿಂದ ಮಾತ್ರ ಜಾರಿಗೆ ತರುವ ಸಾಹಸ ನಡೆದುದೇ ಆದರೆ ಅದು ವ್ಯರ್ಥ ಪ್ರಯಾಸವೇ ಆಗುವುದು.

ಈ ಮೇಲಿನ ಮಾತುಗಳು ಕಡು ಸತ್ಯವೆಂಬುದು ನನ್ನ ದೃಢ ವಿಶ್ವಾಸ. ಅದೇ ಕಾರಣದಿಂದ, ಈ ಕಿರು ಲೇಖನದಲ್ಲಿ ನಾನು ನಮ್ಮ ತುಳುನಾಡಿನ ಪೂರ್ವಜರ, ಅಂದರೆ ಪ್ರಜಾಸಾಮಾನ್ಯರ, ರಾಜಕೀಯ ಮತ್ತು ಸಾಮಾಜಿಕ ಸ್ಥಾನಮಾನಗಳೇನಿದ್ದವೆಂಬ ಬಗೆಗೆ ಶಾಸನಾಧಾರವಾದ ಕೆಲವೊಂದು ಅಂಶಗಳನ್ನು ಚರ್ಚಿಸಿ ಓದುಗರ ಮುಂದಿಡಲು ಬಯಸುತ್ತೇನೆ.

ಆಳುಪರ ಕಾಲದ ತುಳುನಾಡಿನ ಪ್ರಜಾಸಾಮಾನ್ಯರು

ಕ್ರಿ. ಶ. ೭ನೆಯ ಶತಮಾನದಿಂದ ೧೪ನೆಯ ಶತಮಾನದ ಮಧ್ಯಭಾಗದ ವರೆಗೂ ರಾಜಕೀಯ ಕ್ಷೇತ್ರದಲ್ಲಿ, ಕೆಲವೊಂದು ಸಂದರ್ಭಗಳನ್ನು ಬಿಟ್ಟರೆ ಹೆಚ್ಚು ಕಡಿಮೆ ನಿರಂತರವಾಗಿಯೂ, ತುಳುನಾಡು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬಂದಿತ್ತು. ಭೂವಿಸ್ತಾರದ ದೃಷ್ಟಿಯಿಂದ ಆ ಪ್ರದೇಶವು ಕಿರಿದೇ ಆಗಿದ್ದ ಕಾರಣ ಅಲ್ಲಿಯ ಮತ್ತು ಕರ್ನಾಟಕ ಸಾಮ್ರಾಜ್ಯದ ಪ್ರಜೆಗಳ ನಡುವೆ ಆಯಾ ರಾಜಕೀಯ ಸ್ಥಾನಮಾನಗಳ ವಿಷಯದಲ್ಲಿ ಮುಖ್ಯವೆಂದೊಂದು ವ್ಯತ್ಯಾಸ ಇದ್ದು ಬಂದಿತ್ತು. ಕರ್ನಾಟಕದ ಚಕ್ರವರ್ತಿಗಳು ಹೆಸರಿಗೆ ಮಾತ್ರ ಇಡಿಯ ಸಾಮ್ರಾಜ್ಯದ ಪ್ರಜೆಗಳಿಗೂ ಒಡೆಯರೆಂದೆನಿಸಿಕೊಂಡಿದ್ದರು, ವಾಸ್ತವಾಂಶದಲ್ಲಿ ಸಾಮ್ರಾಜ್ಯದ ಬೇರೆ ಬೇರೆ ನಾಡುಗಳಲ್ಲಿ ವಾಸಿಸುತ್ತಿದ್ದ ಪ್ರಜೆಗಳು ಆಯಾ ನಾಡಿನ ಮಂಡಲೇಶ್ವರರ ನೇರ ಪ್ರಜೆಗಳೇ ಆಗಿದ್ದರು. ಅಲ್ಲದೆ ಅಂತಹ ಪ್ರಾಂತಗಳಲ್ಲಿ ಅಸಂಖ್ಯಾತ ಸಾಮ್ರಾಜ್ಯಶಾಹೀ ಮತ್ತು ಮಾಂಡಲಿಕ ಅಧಿಕಾರಿಗಳು ಆಡಳಿತ ನಡೆಸುತ್ತಿದ್ದರಾಗಿ, ಪ್ರಜೆಗಳ ಮಟ್ಟಿಗೆ ಚಕ್ರವರ್ತಿಗಳಷ್ಟೇ ಅಲ್ಲದೆ ಮಂಡಲೇಶ್ವರರೂ ಕೂಡ ಬಲುದೂರದ ಅಪರಿಚಿತ ವ್ಯಕ್ತಿಗಳೇ ಆಗಿದ್ದರು. ತುಳುನಾಡಿನಲ್ಲಾದರೆ ಆ ನಾಡು ಸ್ವತಂತ್ರವಾಗಿದ್ದ ಕಾರಣ ಅಲ್ಲಿ ಸಾಮ್ರಾಜ್ಯಶಾಹೀ ಅಧಿಕಾರಿಗಳಾರೂ ಇರಲಿಲ್ಲವಾಗಿದ್ದು, ಆ ನಾಡಿನ ಅರಸುಗಳ ನೇರ ಅಧಿಕಾರಕ್ಕೊಳಗಾಗಿದ್ದ ಅಧಿಕಾರಿಗಳ ಸಂಖ್ಯೆಯೂ ತೀರಾ ವಿರಳವೇ ಆಗಿದ್ದ ಕಾರಣ, ಅಲ್ಲಿಯ ಅರಸು-ಪ್ರಜೆಗಳ ನಡುವೆ ನಿಕಟ ಸಂಪರ್ಕ ಬೆಳೆಯುವುದು ಸುಲಭ ಸಾಧ್ಯವಾಗಿತ್ತು. ಅರಸುಗಳೂ ಅಧಿಕಾರಿಗಳೂ ಪ್ರಜಾಸಾಮಾನ್ಯರೂ ಅವರ ಪ್ರಾತಿನಿಧಿಕ ಸಂಘಸಂಸ್ಥೆಗಳೂ ಪರಸ್ಪರ ಸಹಚಾರಿಗಳಾಗಿದ್ದರೆಂಬುದು ಗತಕಾಲದ ತುಳುನಾಡಿನ ಒಂದು ಗಮನಾರ್ಹ ವೈಶಿಷ್ಟ್ಯವೇ ಆಗಿತ್ತು. ಈ ಸತ್ಯವು ಕರ್ನಾಟಕದ ಹಾಗೂ ತುಳುನಾಡಿನ ಶಾಸನಗಳ ತೌಲನಿಕ ಅಧ್ಯಯನದಿಂದ ಸುವಿದಿತವಾಗುತ್ತದೆಯಷ್ಟೆ. ಉದಾಹರಣೆಗೆ, ಕರ್ನಾಟಕದ ಶಾಸನಗಳಲ್ಲಿ ಮೊದಲು ಚಕ್ರವರ್ತಿಯ ಬಿರುದುಗಳನ್ನೂ ಹೆಸರನ್ನೂ ಅನಂತರ ಅವನ ಸಾಮಂತನ ಬಿರುದುಗಳನ್ನೂ ಹೆಸರನ್ನೂ ಆ ನಂತರ ಪ್ರಖ್ಯಾತ ದಂಡನಾಯಕರ ಮತ್ತು / ಅಥವಾ ಊರೊಡೆಯರ ಮತ್ತು / ಅಥವಾ ಮಹಾಜನರ ವರ್ಣನೆಯನ್ನು ಕೊಟ್ಟು ಕೊನೆಗೆ ದಾನಗಳ ವಿವರಗಳನ್ನೀಯುವಲ್ಲಿ ಮಾತ್ರ ಅವುಗಳೊಡನೆ ಸಂಬಂಧವಿದ್ದ ಪ್ರಜಾಸಾಮಾನ್ಯರ ಪ್ರಸ್ತಾಪಗಳೂ ಕಾಣಸಿಗುತ್ತವೆ. ಹಾಗಲ್ಲದೆ ತುಳುನಾಡಿನ ಶಾಸನಗಳಲ್ಲಿ ರಾಜನ ಉಲ್ಲೇಖವಾದ ನಂತರ ಕೊರೆಯಲಾಗಿರುವ ಅಂಶಗಳಲ್ಲೇ ದಾನಗಳ ವಿವರಗಳೂ ಪ್ರಜಾಸಾಮಾನ್ಯರ ಪ್ರಸ್ತಾಪಗಳೂ ಕಂಡುಬರುತ್ತವೆ.

ಹೀಗೆ ಅರಸು — ಪ್ರಜೆಗಳ ನಡುವೆ ಹೆಚ್ಚಿನ ಅಂತರವಿರದಿದ್ದ ಕಾರಣ ತುಳುನಾಡಿನ ಅರಸುಗಳೂ ಅಲ್ಲಿಯ ಪ್ರಜೆಗಳಂತೆಯೇ ಹಲವು ಕಷ್ಟನಷ್ಟಗಳಿಗೆ ಗುರಿಯಾಗಿದ್ದರು. ಉದಾಹರಣೆಗೆ 'ದೇವಾಲಯದಲು ಅರಮನೆಕಟ್ಟುವ ಮಾರಿಯಾವಿ ಇಲ್ಲ', 'ಇಂತಿವೆಲ್ಲವಂ ವಿಚಾರಿಸಿ ರಕ್ಷಿಸದಿದ್ದಡೆ ಅಂಸಿಂಗ ಗಂಗೆ ರಾಮೇಶ್ವರದಲು ಸಾಸಿರ ಕವಿಲೆ ಸಾಸಿರ ಬ್ರಾಹ್ಮಣರ ಕೊಂದ ಪಾಪ' ಎಂದು ಮುಂತಾದ ಉಕ್ತಿಗಳು ಆಳುಪರ ಕಾಲದ ತುಳುನಾಡಿನ ಶಾಸನಗಳಲ್ಲಿ ಕಾಣಸಿಗುತ್ತವೆ.

ಪ್ರಾಚೀನ ಕಾಲದಿಂದಲೂ ತುಳುನಾಡಿನ ಸಮಾಜವೂ ಜಾತಿಭೇದಗಳಿಂದ ಕೂಡಿದ್ದಾಗಿತ್ತು. ತುಳುನಾಡಿನಲ್ಲಿ ದೊರೆತಿರುವ ಶಾಸನಗಳಲ್ಲೆಲ್ಲ ಪ್ರಾಚೀನತಮವಾದ ವಡ್ಡರ್ಸೆ ಶಾಸನದಲ್ಲಿ ಬ್ರಾಹ್ಮಣರ ಪ್ರಸ್ತಾಪವಿದೆ. ಆ ಕಾಲದ ತುಳುನಾಡಿನ ಬ್ರಾಹ್ಮಣರು ವೇದವೇದಾಂಗ ಪಾರಗರೂ ಷಟ್ಕರ್ಮ ನಿರತರೂ ಆಗಿದ್ದು, ಪ್ರಜೆಗಳ ಪ್ರೀತಿ ಗೌರವಗಳಿಗೂ ರಾಜರ ಮತ್ತು ಧನಿಕರ ದಾನಗಳಿಗೂ ಪಾತ್ರರಾಗಿದ್ದರು. ಬ್ರಾಹ್ಮಣ ಭೋಜನಕ್ಕಾಗಿ ಎಂದು ಬಿಡಲಾದ ದಾನಗಳ ವಿವರಗಳನ್ನೀಯುವ ಹಲವು ಶಾಸನಗಳು ತುಳುನಾಡಿನಲ್ಲಿ ದೊರೆಯುತ್ತವೆ.

ಇನ್ನು ಮಧ್ಯಯುಗೀನ ಕರ್ನಾಟಕದಲ್ಲಿ ಅನೇಕ ಬ್ರಾಹ್ಮಣರು ಅನುವಂಶಿಕವಾಗಿ ಕ್ಷಾತ್ರ ವೃತ್ತಿಯನ್ನವಲಂಬಿಸಿ ರಣರಂಗಗಳಲ್ಲಿ ಧೈರ್ಯ ಸಾಹಸಗಳನ್ನು ತೋರಿ ದಂಡನಾಯಕರೆನಿಸಿಕೊಂಡು ಚಕ್ರವರ್ತಿಗಳ ಮೆಚ್ಚುಗೆಯನ್ನು ಗಳಿಸಿಕೊಂಡಿದ್ದರೆಂಬುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಆದರೆ ತುಳುನಾಡಿನ ಮಟ್ಟಿಗೆ, ಅಲ್ಲಿ ದೊರೆತಿರುವ ಶಾಸನಗಳಾವುದರಲ್ಲಿಯೂ ಆ ನಾಡಿನ ಬ್ರಾಹ್ಮಣರು ಸೈನಿಕ ವೃತ್ತಿಯನ್ನವಲಂಬಿಸಿದ್ದರೆಂದು ಹೇಳುವ ಆಧಾರಗಳು ಕಂಡುಬರುವುದಿಲ್ಲ.

ಅಲ್ಲಿಯ ಜನರು ತಮ್ಮ ತಮ್ಮ ಜಾತಿಗನುಗುಣವಾಗಿ ಸೈನಿಕ ವೃತ್ತಿಯನ್ನೋ, ವಾಣಿಜ್ಯವನ್ನೋ, ವ್ಯವಸಾಯವನ್ನೋ ಅವಲಂಬಿಸಿ ಜೀವನ ಸಾಗಿಸುತ್ತಿದ್ದರು. ಇವರೆಲ್ಲರೂ ರಾಜಕೀಯ ಮತ್ತು ಸಾಮಾಜಿಕ ಸ್ಥಾನಮಾನಗಳ ದೃಷ್ಟಿಯಿಂದ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾಕಷ್ಟು ಸ್ವಾತಂತ್ರ್ಯವನ್ನೂ ಪ್ರಾಧಾನ್ಯತೆಯನ್ನೂ ಗಳಿಸಿಕೊಂಡಿದ್ದರು. ರಾಜನ ಪರವಾಗಿ ಕಾಳಗಗಳಲ್ಲಿ ಕಾದಿ ಮಡಿದು ಸಾವನ್ನಪ್ಪಿದ ಸೈನಿಕರ ಸ್ಮಾರಕಾರ್ಥವಾಗಿ ವೀರಗಲ್ಲುಗಳನ್ನು ನಡಲಾಗುತ್ತಿತ್ತಲ್ಲದೆ ಅಂತಹ ಭಟರ ಕುಟುಂಬದವರಿಗೆ ಪುರಸ್ಕಾರ ಮಾನ್ಯಗಳನ್ನು ಕೊಡಲಾಗುತ್ತಿತ್ತು. ವರ್ತಕರ ಮತ್ತು ಒಕ್ಕಲಿಗರ, ಕೃಷಿಕರ ಮತ್ತು ಗ್ರಾಮಸ್ಥರ ಸ್ಥಾನಮಾನಗಳನ್ನು ಸಂರಕ್ಷಿಸಿಕೊಂಡು ಬಂದಲ್ಲಿ ಪ್ರಾತಿನಿಧಿಕ ಸಂಘ ಸಂಸ್ಥೆಗಳು ಮಹತ್ತ್ವದ ಪಾತ್ರವಹಿಸಿದ್ದವು.

ಗತಕಾಲದ ತುಳುನಾಡಿನ ಪ್ರಜಾಸಾಮಾನ್ಯರು ಜಾತಿ ಪದ್ಧತಿಯನ್ನು ಶ್ರದ್ಧೆಯಿಂದ ಕಾಪಾಡಿಕೊಂಡು ಬಂದಿದ್ದರು. ಪ್ರಜೆಗಳಾದರೂ ಸಮಾಜದ ಮತ್ತು ಧಾರ್ಮಿಕ ಕಟ್ಟುಕಟ್ಟಳೆಗಳ ವಿರುದ್ಧ ಅಪರಾಧಗಳನ್ನೆಸಗದಂತೆ ತಡೆಯುವ, ಜಾತಿಯಿಂದ ಬಹಿಷ್ಕರಿಸುವ ದಂಡನೆಯು ಪರಿಣಾಮಕಾರಿಯಾಗಿತ್ತು. ಇದರಲ್ಲಿ ವಿಷಾದನೀಯ ಸಂಗತಿಯೆಂದರೆ ಹೀಗೆ ತಪ್ಪೆಸಗಿದವರನ್ನು ದಂಡಿಸುವಲ್ಲಿ ಅಪರಾಧಿಗಳ ಜಾತಿಯನ್ನು ಗಮನಕ್ಕೆ ತೆಗೆದುಕೊಳ್ಳಲಾಗುತ್ತಿದ್ದುದು. ಉದಾಹರಣೆಗೆ, ಮಂಗಳೂರಿನ ಕ್ರಿ. ಶ. ೧೨೦೪ರ ಶಾಸನವೊಂದರಲ್ಲಿ ಆ ಶಾಸನದ ಮರ್ಯಾದೆಯನ್ನು ಅಲ್ಲಗಳೆಯುವವರಿಗೆ ದಂಡನೆಗಳನ್ನು ವಿಧಿಸುತ್ತ ಈ ರೀತಿ ಹೇಳಲಾಗಿದೆ: 'ನಾಲ್ಕು ಜಾತಿಯೊಳು ಬ್ರಾಹ್ಮಣ ಮಾಡಿದಡೆ ನಾಲ್ಕು ಜಾತಿಯಿಂ ಪೊರಗು; ಸೆಟ್ಟಿ ಮಾಡಿದಡೆ ಸಮಯಕ್ಕೆ ಬಾಹಿರನಾಗಿಂ ಪೋಗು; ಒಕ್ಕಲು ಮಕ್ಕಳು ಮಾಡಿದಡೆ ಒಂದು ತಲೆ ಸಾಸಿರ ಹೊನ್ನು (ದಂಡ)'

ಇನ್ನೂ ಪ್ರಾಚೀನ ಮತ್ತು ಮಧ್ಯಯುಗೀನ ತುಳುನಾಡಿನಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ಮತಸಂಬಂಧದ ವಿಷಯಗಳಲ್ಲಿ ಪ್ರಜಾಸಾಮಾನ್ಯರಿಗೆ ಪೂರ್ಣ ಸ್ವಾತಂತ್ರ್ಯವಿತ್ತು. ಆ ಕಾಲದ ತುಳುನಾಡಿನ ಬಹುಸಂಖ್ಯಾತ ಪ್ರಜೆಗಳೂ ಆಳುವ ಅರಸುಮನೆತನದವರೂ ಶೈವಧರ್ಮಾವಲಂಬಿಗಳಾಗಿದ್ದರೂ ವೈಷ್ಣವ ಮತ್ತು ಜೈನ ಧರ್ಮಗಳೂ ಅಲ್ಲಿ ಪ್ರಚಾರದಲ್ಲಿದ್ದವು. ಈ ಕ್ಷೇತ್ರದಲ್ಲಿ ಅಂದಿನ ತೌಳವರಿಗಿದ್ದ ಸ್ವಾತಂತ್ರ್ಯವನ್ನು ವಿಶದಪಡಿಸಲು ಆಳುವ ಅರಸರಿಗೆ ಸಂಬಂಧಿಸಿದ ಒಂದೆರಡು ವಿಷಯಗಳನ್ನೇ ಇಲ್ಲಿ ಉದಾಹರಿಸಬಹುದಾಗಿದೆ. ಕ್ರಿ. ಶ. ೭ನೆಯ ಶತಮಾನದಿಂದ ೧೪ನೆಯ ಶತಮಾನದವರೆಗೆ ಆಳುಪ ಸಿಂಹಾಸನದ ಮೇಲೆ ಕುಳಿತು ರಾಜ್ಯವಾಳಿದ ೧ನೆಯ ಚಿತ್ರವಾಹನನು ಬಾದಾಮಿಯ ಚಾಳುಕ್ಯ ಚಕ್ರವರ್ತಿ ವಿಜಯಾದಿತ್ಯನ ತಂಗಿ ಕುಂಕುಮ ದೇವಿಯನ್ನು ಮದುವೆಯಾಗಿದ್ದನು. ಚಿತ್ರವಾಹನನು ಶೈವಧರ್ಮದವನಾಗಿದ್ದರೂ ಅವನ ರಾಣಿಯು ಪರಮ ಜಿನಭಕ್ತೆಯಾಗಿದ್ದಳು. ಪುರಿಗೆರೆ ಪಟ್ಟಣದಲ್ಲಿ ಅವಳು ಕಟ್ಟಿಸಿದ ಜಿನಬಸದಿಗೆ ಗುಡಿಗೆರೆಯೆಂಬ ಗ್ರಾಮವನ್ನು ದತ್ತಿಯಾಗಿ ಕೊಡಬೇಕೆಂದು ಚಿತ್ರವಾಹನನು ತಾನೇ ವಿಜಯಾದಿತ್ಯನಲ್ಲಿ ಬಿನ್ನವಿಸಿಕೊಂಡನೆಂಬುದು ಆ ಕಾಲದ ತೌಳವರು ವಿವಿಧ ಧರ್ಮಗಳ ಬಗೆಗೆ ತಾಳಿದ್ದ ಸಮತಾ ದೃಷ್ಟಿಗೆ ಒಂದು ನಿದರ್ಶನವಷ್ಟೆ. ಕ್ರಿ. ಶ. ೧೪ನೆಯ ಶತಮಾನದಲ್ಲಿ ರಾಜ್ಯವಾಳಿದ ಆಳುಪ ಮನೆತನದ ೩ನೆಯ ಕುಲಶೇಖರನ 'ನ ಪೂರ್ವಜರಂತೆಯೆ ಶೈವಧರ್ಮದವನೆ' ಆದ್ದರೂ ಅನ್ನನು ಜೈನಗುರು ಚಾರುಕೀರ್ತಿ ದೇವರ 'ದಿವ್ಯ ಶ್ರೀಪಾದ ಪದ್ಮಾರಾಧಕ' ನೆಂದು ವರ್ಣಿಸಿಕೊಂಡಿರುತ್ತಾನೆ.

ವಿಜಯನಗರ ಕಾಲದ ತುಳುನಾಡಿನ ಪ್ರಜಾಸಾಮಾನ್ಯರು

ಕ್ರಿ. ಶ. ೧೪ನೆಯ ಶತಮಾನದ ಮಧ್ಯಭಾಗದಲ್ಲಿ ತುಳುನಾಡು ಆಗತಾನೆ ಹುಟ್ಟಿ ಬೃಹದಾಕಾರ ತಾಳ ತೊಡಗಿದ್ದ ವಿಜಯನಗರ ಸಾಮ್ರಾಜ್ಯದೊಂದಿಗೆ ವಿಲೀನಗೊಂಡಿತು. ಅಂದಿನಿಂದ ಆ ನಾಡು ಕರ್ನಾಟಕದ ಇತರ ಪ್ರಾಂತಗಳಂತೆಯೆ ತನ್ನ ಪ್ರಾದೇಶಿಕ ಸ್ವಾತಂತ್ರ್ಯವನ್ನು ಕಳೆದುಕೊಂಡು ದೊಡ್ಡದೊಂದು ಸಾಮ್ರಾಜ್ಯದ ಸಣ್ಣ ಪ್ರಾಂತವಾಗಿಯೆ ಉಳಿಯಬೇಕಾಯಿತು. ಇದರಿಂದಾಗಿ ಅಲ್ಲಿಯ ಪ್ರಜಾಸಾಮಾನ್ಯರ ಸ್ಥಾನಮಾನಗಳಲ್ಲಿ ಮಹತ್ತ್ವದ ಬದಲಾವಣೆಗಳುಂಟಾದವು. ಇವುಗಳಲ್ಲಿ ಮುಖ್ಯವಾದ ಬದಲಾವಣೆಯು ವಿಜಯನಗರದ ಸಾಮ್ರಾಟರ ಮತ್ತು ತುಳುನಾಡಿನ ಪ್ರಜೆಗಳ ನಡುವಿನ ಸಂಪರ್ಕಕ್ಕೆ ಸಂಬಂಧಿಸಿದ್ದು. ಆ ಕಾಲದ ತುಳುನಾಡಿನಲ್ಲಿ ಹಲವು ಸಣ್ಣಪುಟ್ಟ ಸಂಸ್ಥಾನಗಳು ಉಳಿದುಕೊಂಡಿದ್ದವಾಗಿ, ಅಲ್ಲಿಯ ಪ್ರಜೆಗಳು ಆ ಸಂಸ್ಥಾನದ ತುಂಡರಸುಗಳ ನೇರ ಪ್ರಜೆಗಳಾಗಿದ್ದರು. ಈ ಸಂಸ್ಥಾನಗಳ ಅಧಿಕಾರ ವರ್ಗದವರಷ್ಟೇ ಅಲ್ಲದೆ ಅನೇಕಾನೇಕ ಸಾಮ್ರಾಜ್ಯಶಾಹೀ ಅಧಿಕಾರಿಗಳೂ ತುಳುನಾಡಿನುದ್ದಕ್ಕೂ ಅಧಿಕಾರ ಚಲಾಯಿಸುತ್ತಿದ್ದರು. ಹೀಗಾಗಿ ಆಳುಪರ ಕಾಲದ ತೌಳವೇತರ ಕನ್ನಡಿಗರಂತೆಯೇ ವಿಜಯನಗರ ಕಾಲದ ತೌಳವರ ಪಟ್ಟಿಗೂ ಸಾಮ್ರಾಟರು ದೂರದ ಅಪರಿಚಿತ ವ್ಯಕ್ತಿಗಳಾದರು.

ತುಳುನಾಡು ತಮ್ಮ ಕೈಕೆಳಗಿದ್ದರೂ ಸಾಮ್ರಾಜ್ಯದವರು ಶತಮಾನಗಳಿಂದ ಆ ನಾಡಿನಲ್ಲಿದ್ದು ಬಂದ ವಿಶಿಷ್ಟ ಕಟ್ಟುಕಟ್ಟಳೆಗಳನ್ನೂ ಅಲ್ಲಿಯ ಪ್ರಜೆಗಳ ಸ್ಥಾನಮಾನಗಳನ್ನೂ ಅಲ್ಲಗಳೆಯುವ ಪ್ರಯತ್ನ ಮಾಡಲಿಲ್ಲ. 'ಈ ಧರ್ಮವನು ಯಾರೊಬ್ಬರು ಅಳುಪಿದರೆ ತುಳುರಾಜ್ಯದ ಧರ್ಮವ ಕೆಡಿಸಿದವರು' ಎಂದು ಮುಂತಾದ ಉಕ್ತಿಗಳು ತುಳುನಾಡಿನಲ್ಲಿಯ ವಿಜಯನಗರದವರ ಶಾಸನಗಳಲ್ಲಿ ಕಾಣಸಿಗುತ್ತವೆ. ಆದರೂ ಸಾಮ್ರಾಜ್ಯದ ಒಬ್ಬೊಬ್ಬರ ಅಧಿಕಾರಿಗಳ ಉದ್ಧಟ ವರ್ತನೆಯಿಂದಾಗಿ ಕೆಲವೊಮ್ಮೆ ತುಳುನಾಡಿನ ಕೆಲವು ಭಾಗಗಳ ನಿವಾಸಿಗಳು ಕಷ್ಟನಷ್ಟಗಳನ್ನನುಭವಿಸದಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ತೌಳವರು ತೋರಿದ ಒಗ್ಗಟ್ಟು ಮತ್ತು ಸಹಕಾರ ಅಮೋಘವಾದುವೇ ಸರಿ. ಉದಾಹರಣೆಗೆ, ಕ್ರಿ. ಶ. ೧೪೩೬-೩೭ರಲ್ಲಿ ಬಾರಕೂರು ರಾಜ್ಯವನ್ನು ಆಳುತ್ತಿದ್ದ ಅಣ್ಣಪ್ಪ ಒಡೆಯನು ಯಾವುದೋ ರಾಜಕಾರಣದಿಂದ ಶಿವಳ್ಳಿ ಗ್ರಾಮದ ಮೇಲೆ ದಾಳಿಮಾಡಿದನಾಗಿ ಅದರ ಪರಿಣಾಮವಾಗಿ ಉಡುಪಿಯ ಶ್ರೀಕೃಷ್ಣದೇವಸ್ಥಾನದ ಆನ್ಯತಾನ್ಯಗಳು ತಪ್ಪಿ, ಶ್ರೀಕೃಷ್ಣದೇವರ ಪ್ರತಿದಿನದ ಸ್ನಾನಾಂತರಗೊಡು ಪೂಜೆ ಪುನಸ್ಕಾರಗಳು ನಿಂತುಹೋಗಿದ್ದವು. ಇದರಿಂದ ಮನನೊಂದ ಶಿವಳ್ಳಿ ಗ್ರಾಮದವರನ್ನು ಸಂತೈಸಿದ ಬಾರಕೂರು ನಗರದ ಕಟ್ಟಳೆಯವರು ಕೃಷ್ಣದೇವಸ್ಥಾನವು ಯಥಾಸ್ಥಿತಿಗೆ ಹಿಂದಿರುಗುವಂತೆ ಮಾಡಬೇಕೆಂದು ಸಾಮ್ರಾಟ ೧ನೆಯ ದೇವರಾಯನಲ್ಲಿ ಕೇಳಿಕೊಂಡರು. ಅವರ ಬೇಡಿಕೆ ಮನ್ನಿಸಿ ಸಾಮ್ರಾಟನು ಅಣ್ಣಪ್ಪ ಒಡೆಯನಿಗೆ ಆಜ್ಞೆ ಮಾಡಲು ಆತನ ನಿರೂಪದಿಂದ ಸಿಂಗರಸ ಒಡೆಯನೆಂಬಾತನು ಕೃಷ್ಣದೇವಸ್ಥಾನಕ್ಕೆ ಹಲವು ದಾನಗಳನ್ನು ಮಾಡಿದನು. ಇದರ ಪರಿಣಾಮವಾಗಿ ಶಿವಳ್ಳಿ ಗ್ರಾಮದ ಪರಿಸ್ಥಿತಿಯು ಎಂದಿನಂತೆ ಸುಧಾರಿಸಿಕೊಂಡಿತು. ಇನ್ನು ಕ್ರಿ. ಶ. ೧೫೫೭ರಲ್ಲಿ ಕೊಂಡಪ್ಪ ಒಡೆಯನು ಬಾರಕೂರು ರಾಜ್ಯವನ್ನಾಳುತ್ತಿದ್ದಾಗ ಯಾವುದೋ ರಾಜಕಾರಣದ ಮೇಲೆ ಅವನು ಉಪ್ಪೂರ ಗ್ರಾಮದ ಮೇಲೆ ದಂಡೆತ್ತಿ ಹೋಗಬೇಕಾಯಿತು. ಆ ಸಂದರ್ಭದಲ್ಲಿ ಅವನು ಮತ್ತು ಸಾಮ್ರಾಜ್ಯದ ಸೈನಿಕರು ವಿವೇಚನೆಯಿಲ್ಲದೆ ನಡೆದುಕೊಂಡ ಕಾರಣ ಆ ಗ್ರಾಮದ 'ಹೆಣ್ಣಿನ ಸೆರಗಿಗೆ' (ಅಂದರೆ ಸ್ತ್ರೀಯರ ಪರಿಶುದ್ಧಿಗೆ) ಮತ್ತು 'ದಂಡಿನ ತಲೆಗೆ ತಪ್ಪಿದಕ್ಕೆ' ಅವನು ತೆರಿಗೆಯ ಕೆಲವು ಆದಾಯಗಳನ್ನು ಪರಿಹಾರವಾಗಿ ಬಿಟ್ಟುಕೊಡಬೇಕಾಯಿತು. ಅಷ್ಟೇ ಅಲ್ಲದೆ ಉಪ್ಪೂರ ಗ್ರಾಮದವರ ಮೇಲೆ ನಡೆಸಿದ ಈ ಅತ್ಯಾಚಾರಕ್ಕಾಗಿ ಕೊಂಡಪ್ಪ ಒಡೆಯನು ರಾಜ್ಯಪಾಲ ಪದವಿಯನ್ನು ಕಳೆದುಕೊಳ್ಳಬೇಕಾಯಿತು. ಇದರಂತೆಯೆ ಕೆಲವೊಮ್ಮೆ ಸಾಮ್ರಾಜ್ಯದ ಅಧಿಕಾರಿಗಳ ದುರಾಗ್ರಹಕ್ಕೆ ಒಳಗಾಗುತ್ತಿದ್ದ ತುಳುನಾಡಿನ ಪ್ರಾತಿನಿಧಿಕ ಸಂಘಗಳು ಅಂತಹ ದುರಂತಗಳನ್ನು ಎದುರಿಸಿ ತಮ್ಮ ಸ್ಥಾನಮಾನಗಳನ್ನು ಕಾಪಾಡಿಕೊಳ್ಳುವಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದರೆಂಬ ಬಗೆಗೆ ಕಳೆದ ವರ್ಷದ ನವಯುಗದ ಪ್ರಜಾರಾಜ್ಯ ಸಂಚಿಕೆಯಲ್ಲಿ ಪ್ರಕಟವಾದ ಲೇಖನವೊಂದರಲ್ಲಿ ಚರ್ಚಿಸಿದ್ದೇನಷ್ಟೆ.

ಆಳುಪರ ಕಾಲದಂತೆಯೆ ವಿಜಯನಗರ ಕಾಲದಲ್ಲೂ ತೌಳವರು ಜಾತಿ ಪದ್ಧತಿಯನ್ನು ಶ್ರದ್ಧೆಯಿಂದ ಉಳಿಸಿಕೊಂಡು ಬಂದಿದ್ದರು. ಆ ಕಾಲದ ಶಾಸನಗಳಲ್ಲಿ ಹಲವು ಬ್ರಾಹ್ಮಣರ ಭೋಜನಕ್ಕಾಗಿ ಮಾಡಲಾದ ದಾನಗಳ ವಿವರಗಳನ್ನೊಳಗೊಂಡಿದ್ದಾಗಿವೆ. ಆದರೆ ಆಳುಪರ ಕಾಲದಂತಲ್ಲದೆ ವಿಜಯನಗರ ಕಾಲದ ತುಳುನಾಡಿನ ಶಾಸನಗಳ ಪೈಕಿ ವೀರಗಲ್ಲುಗಳ ಸಂಖ್ಯೆ ತೀರಾ ಕಡಿಮೆ. ಅಂದಮೇಲೆ ಆ ಕಾಲದ ತುಳುನಾಡಿನಲ್ಲಿ ಯುದ್ಧಗಳು ಹೆಚ್ಚಾಗಿ ನಡೆದಿಲ್ಲವೆಂದಲ್ಲ. ಬಹುಶಃ ಕಾಳಗಗಳಲ್ಲಿ ಮಡಿದ ವೀರರನ್ನು ವೀರಗಲ್ಲುಗಳಲ್ಲಿ ಸ್ಮರಿಸುವ ಪದ್ಧತಿಯು ಬಳಕೆ ತಪ್ಪಿ ಹೋಗಿರಬೇಕು. ವಿಜಯನಗರ ಕಾಲದ ತೌಳವರ ವಿದ್ಯೆ, ಸಂಸ್ಕೃತಿ, ಕಲಾಭಿರುಚಿ, ಧಾರ್ಮಿಕ ಬುದ್ಧಿ ಇವುಗಳನ್ನು ವರ್ಣಿಸುವ ಪದ್ಯಗಳು ಆ ಕಾಲದ ಕೆಲವು ಶಾಸನಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ಈ ಕೆಳಗೆ ಕೊಡುತ್ತೇನೆ. ಮೂಡಬಿದಿರೆಯ ಶಾಸನವೊಂದರಲ್ಲಿ ಆ ಊರಿನ ಜನಸಾಮಾನ್ಯರ ವರ್ಣನೆಯು ಈ ರೀತಿಯದ್ದಾಗಿದೆ.

"ಅಂತಾ ಪುರವಾಸಿ ..
ಕರ್ಣಂಗೆ ದೊರೆಯಿಪ ಧನದಗೆ
ಸರಿಯೆ ಬ॥
ತ್ಯಂತ ವಿಶಾರದಾದಿ ನ ಡಿ
ರಂತ ಪರೋಪಕಾರಿ ದೊರೆ ಮ
ಕಾರ್ತಿಕ ಕರ ॥"

'ಬಾಲಕರೆಲ್ಲ ರುಕ್ಮ ಜಿನ ದರ್ಶನ
ಸಾರದಿನ ಪೂಜೆಯೊಳ್
ಲೀಲೆಯಿನಿಪ್ಪರಾ ಕರ್ಣಿಕ
ಜನರೋ ಶಾಸ್ತ್ರ ದಿ ಲೀಲ್ ।
ಬಾಲೆಯರಾತ್ಮನಾಥರನು ಕೂಲೆಯ
ರಾಗಿಂ ತಿದರೆಂದೊಡಂ
ಕಾಲಗೆ ಯಾವದುಂಟು ಪೊಗಳಲ್ ಕರೆ
ವೇಣು ಪ್ರಭಾವವಂ ॥'

ಅದೇ ಊರಿನ ಮತ್ತೊಂದು ಶಾಸನದಲ್ಲಿ ಕಂಡುಬರುವ ಎರಡು ಪದ್ಯಗಳಿವು:

'ತುಳು ದೇಶಕ್ಕೆ ವಿಶಿಷ್ಟಮಪ್ಪ ನಗರಂ
ಶ್ರೀವೇಣು ನಾಮಂಪುರಂ
ವಿಲಸತ್ಸ್ವಚ್ಛ ಜಿನಪ್ರವರ್ಗಗಳ
ಒತರಿಂ ಸಂಗಳಂ ।
ನಲವಿಂ ನಾಲ್ಕು ಸ ಧರ್ಮರಿಂ ಜಿನ
ಕಥಾಳಾಪಂಗಳಿಂ ಸಾಧು ಸಂ—
ಕುಳದಿಂ ಕೇಳ್ವ ಸುಶೀಲ ಪತ್ರ
ದಿಂದ ಸೊಪ್ಪುದಂತಿಪ್ಪುದಂ ॥
ಘನದ ಕೆಂಪಾಗುರು ಧೂಪ
ವಿಚಲನ ಸ್ಥಾನ ಮಾಡಿ ಪ್ರೀತಿಯಿಂ—
ದಮರಿ ಎಸಗೆ ಯತಿ
ಪಾರೇಶ್ವರದಿಂ ಸ —
ಘನದ ಧರ್ಮ ಸೇವೆಯಿಂ ಗುಣದ
ಕಾವ್ಯ ಸಾಹಿತ್ಯಂ ಸಂ—
ಜನ ಜೀವಂ ಎಕ್ರಯ ಪ್ರಮೋದದಿಂ
ಚೆಲ್ವುದಿಪ್ಪುದಂ ॥'

ಆಳುಪರ ಕಾಲದಂತೆಯೆ ವಿಜಯನಗರ ಕಾಲದ ತುಳುನಾಡಿನಲ್ಲಿ ಜನ್ಯಗಳ ಚಲಾವಣೆಯು ನಿರಾತಂಕವಾಗಿತ್ತು. ಸಾಮ್ರಾಜ್ಯದವರ ಉತ್ತೇಜನ ಪಡೆದು ಅಭೂತಪೂರ್ವ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಸ್ವದೇಶೀ ಮತ್ತು ವಿದೇಶೀ ವಾಣಿಜ್ಯದಿಂದಲೂ ವರ್ತಕರೂ ಒಕ್ಕಲಿಗರೂ ಸಂಪದ್ಭರಿತರಾಗಿದ್ದರು. ಈ ಹಿನ್ನೆಲೆಯಲ್ಲಿ ಪ್ರಾತಿನಿಧಿಕ ಸಂಘಗಳ ಸಂಖ್ಯೆ ಮತ್ತು ಪ್ರಭಾವ ಹೆಚ್ಚಿದುದು ಸಹಜವೇ ಆಗಿತ್ತು. ನಾಣ್ಯಗಳ ಚಲಾವಣೆಯು ಹೆಚ್ಚಿದಂತೆ ಜನಸಾಮಾನ್ಯರಿಗೆ ದೇವಾಲಯಗಳಿಗೂ ಮತ್ತು ಧಾರ್ಮಿಕ ಕಾರ್ಯಗಳ ಪ್ರವರ್ತನೆಗೂ ದಾನಗಳನ್ನು ಕೊಡುವ ಶಕ್ತಿಯೂ ಹೆಚ್ಚಿತು. ಇದಕ್ಕೆ ತಕ್ಕಂತೆ ವಿಜಯನಗರ ಕಾಲದ ತುಳುನಾಡಿನ ಧಾರ್ಮಿಕ ಕ್ಷೇತ್ರದಲ್ಲೂ ಗಮನಾರ್ಹವಾದ ಬದಲಾವಣೆಗಳಾಗುತ್ತಿದ್ದವು. ಅಲ್ಲಿಯ ವರೆಗೆ ಶೈವಧರ್ಮವೇ ಅತಿಯಾಗಿ ಪ್ರಚಾರದಲ್ಲಿದ್ದ ಆ ನಾಡಿನಲ್ಲಿ ವೈಷ್ಣವ ಮತ್ತು ಜೈನ ಧರ್ಮಗಳೂ ಜನಪ್ರ

(ಮೂವತ್ತನಾಲ್ಕನೇ ಪುಟ ನೋಡಿ)

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

ಆರ್ಯ ವೈದ್ಯ ಶಾಲಾ

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು ಟೆಲಿಫೋನುಗಳು: ಕೋಟ್ಟಕಲ್ ಎಕ್ಸ್‌ಚೇಂಜ್.

ಮೆನೇಜಿಂಗ್ ಟ್ರಸ್ಟಿಯುವಂಗೆ ಎಕ್ಸ್‌ಟೆನ್ಸನ್ ಇದ್ದು ಅಫೀಸು ಫೋನ್ ನಂ. 31

ನರ್ಸಿಂಗ್ ಹೋಮ್ ಫೋನ್ ನಂ. 44

ಪ್ರಧಾನ ವೈದ್ಯರು ಫೋನ್ ನಂ. 25

ಮೆನೇಜಿಂಗ್ ಟ್ರಸ್ಟಿ (ಮನೆ) ಫೋನ್ ನಂ. 27

ನಮ್ಮ ಹೊಸ ಶಾಖೆಯು

ನಂ. 1, ಕೃಷ್ಣಮಾಚಾರಿ ರಸ್ತೆ, ನಂಗಂಬಾಕಂ, ಮದ್ರಾಸು–34 ಇಲ್ಲಿ ತೆರೆಯಲ್ಪಟ್ಟಿದೆ.

(ಫೋನ್ ನಂ. 811275)

ಅಲ್ಲದೆ ನಮ್ಮ ಶಾಖೆಗಳು

ಕೋಝಿಕೋಡ್	— (ಫೋನ್ ನಂ. 2155)	ತಿರೂರು	— (ಫೋನ್ ನಂ. 31)
ಪಾಲ್ಘಾಟ್	— (ಫೋನ್ ನಂ. 104)	ಎರ್ನಾಕುಲಂ	— (ಫೋನ್ ನಂ 3026)
ಆಳ್ವಾಯಿ, ತ್ರಿವೆಂಡ್ರಮ್	— (ಫೋನ್ ನಂ. 3924)	ಈರೋಡು	— (ಫೋನ್ ನಂ. 172)

ಮತ್ತು

70ಕ್ಕೂ ಮಿಕ್ಕ ಅಧಿಕೃತ ಏಜನ್ಸಿಗಳು ಹಾಗೂ ಸೇಲ್ಸ್ ಡಿಪೋಗಳಿವೆ.

ಕೋಟ್ಟಕಲ್‌ನಲ್ಲಿರುವ ನಮ್ಮ ಪ್ರಧಾನ ಕಛೇರಿಯಲ್ಲೂ ಎಲ್ಲಾ ಶಾಖೆಗಳಲ್ಲೂ ಖಾತ್ರಿಯಾದ ಉತ್ಕೃಷ್ಟ ವಟ್ಟದ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯರು ಪತ್ರ ವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯರ ಮೇಲ್ವಿಚಾರಣೆಯಲ್ಲಿ ನಮ್ಮ ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್‌ನಲ್ಲಿ ನಡೆಸಲ್ಪಡುತ್ತವೆ.

ಮೆನೇಜಿಂಗ್ ಟ್ರಸ್ಟಿ.

ಎರಡು ಅಥವಾ ಮೂರು ಮಕ್ಕಳು... ಸಾಕು !



ಕೆಂಪು ತ್ರಿಕೋಣವು ಕುಟುಂಬ ಯೋಜನಾ ಕೇಂದ್ರದ ಚಿಹ್ನೆ

ಬಾನು ಬೆಳಗಲು ಇಹರು ಸೂರ್ಯ ಚಂದ್ರ; ಬಾಳು ಬೆಳಗಲು ಸಾಕು ಮಕ್ಕಳೆರಡು.

ಕುಟುಂಬ ಯೋಜನೆ

ವಿವರಗಳಿಗೆ ನಿಮ್ಮ ಸಮೀಪದ ಆರೋಗ್ಯ ಕೇಂದ್ರವನ್ನು ಭೇಟಿಮಾಡಿ.

ಸಂತಾನ ವಿಜ್ಞಾನ

(ಹದಿನಾರನೇ ಪುಟದಿಂದ)

ಯಾವ ವಿಧಾನವೂ ಇದ ವರೆಗೆ ಲಭ್ಯವಿರವುದಿಲ್ಲ.

ಇಂದಿನ ಸಂತಾನ ವಿಜ್ಞಾನ:

ಇಂದು ಸಂತಾನ ವಿಜ್ಞಾನಿಗಳ ಇಚ್ಛಿತ ಕಾರ್ಯಕ್ರಮದಂತೆ ಸಮಾಜದಲ್ಲಿ ಆರ್ಥಿಕ ದೃಷ್ಟಿಯಿಂದ ಮೇಲ್ಮಟ್ಟದಲ್ಲಿರುವವರಿಗೆ ಹೆಚ್ಚು ಮಕ್ಕಳಾಗಬಹುದೆಂತಲೂ, ಕೆಳಮಟ್ಟದಲ್ಲಿರುವವರಿಗೆ ಕೆಲವೇ ಮಕ್ಕಳು ಅಥವಾ ಮಕ್ಕಳಿಲ್ಲದಿದ್ದರೂ ಒಳ್ಳೆಯದೇ ಎಂದು ಪರಿಗಣಿಸಲಾಗಿದೆ. ಆರ್ಥಿಕ ದೃಷ್ಟಿಯಿಂದ ಮೇಲ್ಮಟ್ಟದಲ್ಲಿರುವ ಅಥವಾ ವಿವಿಧ ಮಾನಸಿಕ ವೃತ್ತಿಗಳಲ್ಲಿ ತೊಡಗಿರುವ ಡಾಕ್ಟರುಗಳು, ವಕೀಲರು, ಪ್ರಾಧ್ಯಾಪಕರು, ಇಂಜನಿಯರು ಮುಂತಾದವರಲ್ಲಿ ಸಾಧಾರಣವಾಗಿ ಒಟ್ಟಿನಲ್ಲಿ ತಮ್ಮ ತಮ್ಮ ಪೀಳಿಗೆಯಲ್ಲಿ ಉತ್ತಮ ತರಹದ ಜೀನ್‌ಗಳನ್ನೇ ಪಡೆದಿರುತ್ತಾರೆಂತಲೂ, ಸಮಾಜದಲ್ಲಿ ಕೆಳಮಟ್ಟದಲ್ಲಿರುವವರು (ಆರ್ಥಿಕ ಹಾಗೂ ಸಾಮಾಜಿಕ) ಕಡು ಬಡವರು, ಮತ್ತು ರೋಗಗ್ರಸ್ತರು, ಒಟ್ಟಿನಲ್ಲಿ ಸಾಧಾರಣವಾಗಿ ಕನಿಷ್ಟ ತರಹದ ಜೀನ್‌ಗಳನ್ನೇ ಪಡೆದಿರುತ್ತಾರೆಂದ ಕೆಲವು ಸಂತಾನ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಸಂತಾನ ವಿಜ್ಞಾನಿಗಳು—ಹಣವಂತರು, ಉಚ್ಚ ಪಂಕ್ತಿಯ ಬುದ್ಧಿವಂತರ, ಸಮಾಜದಲ್ಲಿ ತಮ್ಮ ತಮ್ಮ ವೃತ್ತಿಗಳಲ್ಲಿ ಹೆಚ್ಚೆಚ್ಚು ಯಶಸ್ವಿಯಾದವರು ಹೆಚ್ಚು ಮಕ್ಕಳನ್ನು ಅಂದರೆ ಕನಿಷ್ಟಪಕ್ಷ 1-5 ಮಕ್ಕಳನ್ನಾದರೂ ಪಡೆಯಬೇಕೆಂದು ಒತ್ತಾಯ ಮಾಡುತ್ತಾರೆ. ನಿರ್ಗತಿಕರಲ್ಲಿ, ಕಡು ಬಡವರಲ್ಲಿ, ಸಮಾಜದಲ್ಲಿ ವಿವಿಧ ವೃತ್ತಿಗಳಲ್ಲಿ ತೀರ ಅಯಶಸ್ವಿಯಾದವರಲ್ಲಿ ಹಾಗೂ ರೋಗಗ್ರಸ್ತರಾದವರಲ್ಲಿ ಅತ್ಯಂತ ಕಡಿಮೆ ಮಕ್ಕಳ ಉತ್ಪಾದನೆ ಆಗಬೇಕೆಂದು ಆಗ್ರಹಪಡುತ್ತಾರೆ. ಈ ರೀತಿ ಪ್ರತಿಯೊಂದ ಹೊಸ ಪೀಳಿಗೆಯಲ್ಲಿಯೂ ಮಾನವನ ಮಟ್ಟವನ್ನು ಎಲ್ಲ ದೃಷ್ಟಿಯಿಂದಲೂ ಎತ್ತರಿಸಬಹುದೆಂದು ಅವರು ಆಶಿಸುತ್ತಾರೆ.

ವ್ಯವಸಾಯ ಪದ್ಧತಿಯಲ್ಲಿ ಸಾಕು ಪ್ರಾಣಿಗಳ ತಳಿಗಳನ್ನುಂಟು ಮಾಡುವಾಗ ನಾವು ಉತ್ತಮ ತಳಿಗಳನ್ನೇ ಆರಿಸುವುದಿಲ್ಲವೇ?

ಬೀಜಗಳನ್ನು ಹಿಡಿದಿಡುವಾಗ ಉತ್ತಮ ಗಿಡದ ಬೀಜಗಳನ್ನಷ್ಟೇ ಮುಂದಿನ ಪೀಳಿಗೆಗೆ ಆಷ್ಟು ಇಟ್ಟುಕೊಳ್ಳುವುದಿಲ್ಲವೇ? ಎಂದು ಪ್ರಶ್ನಿಸುತ್ತಾರೆ. ನಿಜ! ಪ್ರಾಣಿಗಳ ಮತ್ತು ಸಸ್ಯಗಳ ಮೇಲೆ ನಮಗೆ ಸಾಕಷ್ಟು ನಿಯಂತ್ರಣವಿರುತ್ತದೆ. ಆದರೆ ಸಮಾಜದ ಮೇಲ್ಮಟ್ಟದಲ್ಲಿ ಸ್ಥಿತಿವಂತರಲ್ಲಿ ಬೇಕೆಂದರೂ ಮಕ್ಕಳ ಉತ್ಪಾದನೆ ಕಡಿಮೆ. ಕೆಳಮಟ್ಟದಲ್ಲಿಯೋ—ಬೇಡ ಬೇಡವೆಂದರೂ ಹಂದಿ ನಾಯಿಗಳಂತೆ ಜೊಳ್ಳು ಮತ್ತು ಹೀನತ್ವ ಶಾಲಿಗಳಾದ ದುರ್ದೈವೀ ಮಕ್ಕಳ ಉತ್ಪಾದನೆ ಹೆಚ್ಚುತ್ತಲೇ ಇರುತ್ತದೆ. ಇದನ್ನು ನಿಯಂತ್ರಿಸುವವರು ಯಾರು?

ಉತ್ತಮ ಕುಟುಂಬದಲ್ಲಿಯೆ ಹೆಚ್ಚೆಚ್ಚು ಸಂತಾನೋತ್ಪತ್ತಿ ನಡೆಸಿ ಮನುಷ್ಯನನ್ನು ಸುಧಾರಿಸಬೇಕೆಂಬ ಈ ಉಚ್ಚಧ್ಯೇಯದ ಕಾರ್ಯಕ್ರಮದಲ್ಲಿ ಏನು ಕುಂದು ಕೊರತೆ ಇದೆಯೆಂಬುದನ್ನು ನೋಡೋಣ. ಮೊದಲಿಗೆ- ಈ ಕಾರ್ಯಕ್ರಮವನ್ನು ಪುಷ್ಟೀಕರಿಸುವವರು ಜೀನ್‌ಗಳು ಒಂದೊಂದು ಗುಣವನ್ನು ಮಾತ್ರ ನಿಯಂತ್ರಿಸಬಲ್ಲದು ಎಂಬುದನ್ನು ಮರೆತು ಬಿಡುತ್ತಾರೆ.

ಒಬ್ಬ ಮನುಷ್ಯನ ಜೀನ್‌ಗಳನ್ನೆಲ್ಲ ಒಟ್ಟಿಗೆ ಕೂಡಿಸಿ ಅವು ಅಪೇಕ್ಷಣೀಯವೇ ಇಲ್ಲ ಅನಪೇಕ್ಷಣೀಯವೇ ಎಂಬುದನ್ನು ನಿರ್ಧರಿಸುವುದು ಸುಲಭದ ಕೆಲಸವಲ್ಲ. ಅವುಗಳನ್ನು ಒಂದೊಂದಾಗಿ ನೋಡಿ ಪರೀಕ್ಷಿಸಬೇಕು. ಏಕೆಂದರೆ ಜೀನ್‌ಗಳು ಒಂದೊಂದೂ ಒಂದು ಸ್ವತಂತ್ರ ಗುಣವನ್ನು ಪ್ರತಿನಿಧಿಸುತ್ತದೆ. ಅದು ಸ್ವತಂತ್ರವಾಗಿಯೇ ಅನುವಂಶಿಕ ರೀತಿಯಲ್ಲಿ ಮುಂದುವರಿಯುತ್ತದೆ. ಒಬ್ಬ ಉತ್ತಮ ಮತ್ತು ಯಶಸ್ವಿಯಾಗುವ ಮನುಷ್ಯನಲ್ಲಿ ಯಾವುದೇ ಒಂದು ನಿರ್ದಿಷ್ಟ ಕಾರ್ಯದಲ್ಲಿ ಯಶಸ್ವಿಯಾಗಗೊಳಿಸುವಂತೆ ನಿರ್ದೇಶಿಸುವ ಜೀನ್‌ಗಳನ್ನು ಪಡೆದಿದ್ದರೂ, ಅವನಲ್ಲಿ ಜತೆಗೆ ಇನ್ನೂ ಅನೇಕ ಕನಿಷ್ಠತರದ ಜೀನ್‌ಗಳು ಇರಬಹುದ; ಸಾಧಾರಣವಾಗಿ ಇದ್ದೇ ಇರುತ್ತವೆ. ಉದಾಹರಣೆಗೆ ನಮ್ಮ ಮಾನವ ವರ್ಗದಲ್ಲಿಯೇ ಅತ್ಯಂತ ಯಶಸ್ವಿಯಾದ ವೈದ್ಯನೊಬ್ಬನಲ್ಲಿ ಅನಪೇಕ್ಷಣೀಯವಾದ ಮತ್ತು 'ಕ್ಯಾನ್ಸರ್' ರೋಗಕ್ಕೆ ಸುಲಭವಾಗಿ ಎರವಾಗಬಹುದಾದ ಜೀನ್‌ಗಳನ್ನು ಪಡೆದಿರಬಹುದು. ಈ ವಿಷಯವನ್ನು ಅನಲಕ್ಷಿಸಿದರೆ ಗುಣಗಳು ಸ್ವತಂತ್ರವಾಗಿ ಅನುವಂಶಿಕ ರೀತಿಯಲ್ಲಿ ಮುಂದುವರಿಯುತ್ತದೆ ಎಂಬುದನ್ನು ಅಲ್ಲಗಳೆದಂತಾಗುತ್ತದೆ.

ಉತ್ತಮ ಕುಲದಲ್ಲಿ ಸಂತಾನೋತ್ಪತ್ತಿಯನ್ನು ಹೆಚ್ಚಿಸಿ, ಮಾನವ ವರ್ಗವನ್ನು ಸುಧಾರಿಸುವ ಕಾರ್ಯಕ್ರಮದಲ್ಲಿ ನಿರತರಾದವರು ಒಬ್ಬ ವ್ಯಕ್ತಿಯ ಗೆಲುವು ಅಥವಾ ಸೋಲನ್ನು ನಿರ್ಧರಿಸುವ ಸನ್ನಿವೇಶದ ಮುಖ್ಯ ಪಾತ್ರವನ್ನು ಮರೆಯುವ ಸಂಭವವಿರುತ್ತದೆ. ಒಬ್ಬನ ಶಕ್ತಿ ಸಾಮರ್ಥ್ಯಗಳನ್ನು ನಿರ್ಧರಿಸಲು ಅವನಲ್ಲಿರುವ ಕೆಲವು ಜೀನ್‌ಗಳೇನೋ ನಿಸ್ಸಂದೇಹವಾಗಿ ಸಹಾಯಮಾಡುತ್ತವೆ. ಆದರೆ ಸನ್ನಿವೇಶವೂ ಕೂಡ ಅದರಲ್ಲಿ ಸಹಕರಿಸುತ್ತದೆ; ಏಕೆಂದರೆ ಅಂತಹ ಶಕ್ತಿ ಸಾಮರ್ಥ್ಯಗಳು ಕಾರ್ಯಮಾಡಲು ಸನ್ನಿವೇಶ (ಪರಿಸ್ಥಿತಿ) ವೇ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಉದಾಹರಣೆಗೆ ಒಬ್ಬ ವ್ಯಕ್ತಿಯಲ್ಲಿ ಒಂದು ಭಾಷೆಯನ್ನು (ಇಂಗ್ಲೀಷ್,

Estd : 1965 Phone : 172

SREE MAHADEV
COMMERCIAL CHIT-FUND COMPANY (P) LTD.,
GUTHALU COLONY, MANDYA (Mysore State)
(Regd. No. 1566)

ಸ್ಥಾಪನೆ : 1965 ರಿ. ನಂ. 1566

ಶ್ರೀ ಮಹದೇವ್
ಕಮರ್ಷಿಯಲ್ ಚಿಟ್-ಫಂಡ್ ಕಂಪೆನಿ (ಪ್ರೈ) ಲಿ.,
ಗುತ್ತಲು ಕಾಲೋನಿ, ಮಂಡ್ಯ.
(ಫೋನ್ ನಂ. 172)

ನಮ್ಮಲ್ಲಿ ದಿನ ಚೀಟಿಗಳು ಮತ್ತು ತಿಂಗಳ ಚೀಟಿಗಳು ನಡೆಯುತ್ತವೆ.
ಅಲ್ಲದೆ ಹೆಚ್ಚಿನ ಲಾಭಾಂಶ ಸಹ ಸಿಗುತ್ತೆ.
ನಾವು ಬಡ್ಡಿ ಚೀಟಿಯನ್ನೂ ಸಹ ಹರಾಜು ಮಾಡುತ್ತೇವೆ.
ಪ್ರಾಮಾಣಿಕ ವ್ಯವಹಾರ! ಆಕರ್ಷಕ ಡಿವಿಡೆಂಡ್!!

ಹೆಚ್ಚಿನ ವಿವರಗಳಿಗೆ—
ಕಂಪೆನಿಯ ಆಫೀಸಿಗೆ ಖುದ್ದು ಯಾ ಫೋನ್ ಮೂಲಕ ವಿಚಾರಿಸಿಕೊಳ್ಳಿ

ಬಿ. ದೇವಯ್ಯ, ಮ್ಯಾನೇಜಿಂಗ್ ಡೈರೆಕ್ಟರ್

ಫ್ರೆಂಚ್, ಜರ್ಮನ್ ಇತ್ಯಾದಿ ಯಾವುದೇ ಇರಲಿ) ಚೆನ್ನಾಗಿ ಮಾತನಾಡುವುದಕ್ಕೆ ಸಾಮರ್ಥ್ಯವನ್ನು ಒದಗಿಸಿಕೊಡುವ ಅತ್ಯುತ್ತಮ ಜೀನ್‌ಗಳಿರಬಹುದು.

ಆದರೆ ಸನ್ನಿವೇಶವು ಆತನಿಗೆ ಮೊದಲು ಆ ಭಾಷೆಯನ್ನು ಕಲಿಯುವುದಕ್ಕೆ ಒಂದು ಅವಕಾಶವನ್ನು ಒದಗಿಸಬೇಕು. ಇಲ್ಲದಿದ್ದರೆ ಆ ಭಾಷೆಯನ್ನು ಚೆನ್ನಾಗಿಯೋ ಕೆಟ್ಟಾಗಿಯೋ ಹೇಗೆಯೋ ಆಗಲಿ, ಮಾತನಾಡಲು ಕಲಿಯುವಂತೆಯೇ ಇಲ್ಲ.

ಸಹಜವಾಗಿ ಬಡತನದ ಕುಟುಂಬದಲ್ಲಿ ಜನಿಸಿದ ಮಕ್ಕಳಿಗೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಪೋಷಕವಾಗುವ ಮತ್ತು ಬೇಕಾದಷ್ಟು ಒಳ್ಳೆಯ ಅವಕಾಶಗಳನ್ನು ಪಡೆಯುವಂತಹ ವಾತಾವರಣ ಅಥವಾ ಪರಿಸ್ಥಿತಿ, ಸುಸ್ಥಿತಿ ಕುಟುಂಬದಲ್ಲಿ ಜನಿಸಿದ ಮಕ್ಕಳಿಗೆ ಇದ್ದ ಹಾಗೆ ಪ್ರೋತ್ಸಾಹಕರವಿರುವುದಿಲ್ಲ. ಇದು ಎಲ್ಲಿಯ ವರೆಗೆ ನಿಜವೋ ಅಲ್ಲಿಯ ವರೆಗೆ ಕಡು ಬಡವರ ಅನೇಕ ಮಕ್ಕಳು ಜಯಗಳಿಸಲು ಅಶಕ್ತರಾದರೆ, ಅದು ಅವರಲ್ಲಿರುವ ಜೀನ್‌ಗಳ ಸ್ವಭಾವವೇ ಇರಬೇಕೆಂದು ಅಂತಿಮ ನಿರ್ಧಾರಕ್ಕೆ ಬರುವುದು ತಪ್ಪಾಗುತ್ತದೆ. ಅವರಲ್ಲಿ ಜೀನ್‌ಗಳು ಚೆನ್ನಾಗಿ ಪ್ರೋತ್ಸಾಹಕರವಾಗಿಯೇ ಇದ್ದರೂ ಪರಿಸ್ಥಿತಿ (ವಾತಾವರಣ) ಅವರ ಯಶಾಪಯಶಸ್ಸಿಗೆ ಕಾರಣವಾಗಬಹುದು. ಒಂದು ಗಿಡದಲ್ಲಿ ಹಸಿರು ಬಣ್ಣದ ಹರಿತ್ತಿನ ಅಭಾವವು ಆ ಹರಿತ್ತಿಗೆ ಸಂಬಂಧಪಟ್ಟ ಜೀನ್‌ನ ಅಭಾವವೇ ಇರಬೇಕೆಂದೂ ಅಥವಾ ಬೆಳಕಿನ ಅಭಾವವಿರಬೇಕೆಂದೂ ನಂಬುತ್ತೇವೆ. ಯಾವುದೇ ಒಂದು ಹತ್ತು ಹಸಿರಿಲ್ಲದ ಗಿಡಗಳಲ್ಲಿ ಹರಿತ್ತಿಗೆ ಸಂಬಂಧಪಟ್ಟ ಜೀನ್ ಇದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಬೇಕಾದರೆ, ಆ ಎಲ್ಲ ಹತ್ತು ಗಿಡಗಳನ್ನೂ ಬೆಳಕಿಗೆ ಒಡ್ಡುವುದು. ಒಂದೇ ವಾರ. ಆಗಲೇ ಯಾವ ಸಸ್ಯಗಳಲ್ಲಿ ಹರಿತ್ತಿಗೆ ಸಂಬಂಧಪಟ್ಟ ಜೀನ್‌ನ ಅಭಾವವಿದೆ, ಮತ್ತು ಯಾವ ಯಾವ ಗಿಡಗಳಲ್ಲಿ ಬೆಳಕಿನ ಅಭಾವದಿಂದಲೇ ಹರಿತ್ತು ಇದ್ದರೂ ಅಪ್ರಯೋಜಕವಾಗಿದೆ ಎಂಬುದನ್ನು ಹೇಳಬಹುದು.

ಮಾನವ ಸಮಾಜವು ಎಂದು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವಂಶ ಪಾರಂಪರಾಗತವಾದ ಶಕ್ತಿಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಪೋಷಕವಾಗುವ ಸಮಾನ ಅವಕಾಶಗಳನ್ನು ಎಲ್ಲರಿಗೂ ಒಂದೇ ರೀತಿ ಒದಗಿಸುವಂತಹ ವಾತಾವರಣವನ್ನು ಕಲ್ಪಿಸಿಕೊಡುವುದೋ, ಅಂದು ಮಾತ್ರವೇ ಆಯಾ ವ್ಯಕ್ತಿಯ ಜಯಾಪಜಯಗಳನ್ನು ನೋಡಿ, ಅವನ ಜೀನ್‌ಗಳು ಆ ಜಯಾಪಜಯಕ್ಕೆ ಎಷ್ಟರಮಟ್ಟಿಗೆ ಕಾರಣವಿದೆ ಎಂಬುದನ್ನು ಪರಿಶೀಲಿಸಿ ಖಚಿತವಾದ ಒಂದು ಅಂತಿಮ ನಿರ್ಣಯಕ್ಕೆ ಬರಬಹುದು. ಆದರೆ ವ್ಯಕ್ತಿಗಳ ಹಾಗೂ ಸಮಾಜದ ಸನ್ನಿವೇಶದಲ್ಲಿ ಈಗ ಇದ್ದಂತೆ ಅನೇಕ ದೃಷ್ಟಿಗಳಿಂದ ಏರುಪೇರುಗಳಿದ್ದರೆ ಆಗ ಒಬ್ಬನ ಅಧಿಕ ಜಯಾಪಜಯದಿಂದ ಅವನಲ್ಲಿ ಉತ್ತಮ ಅಥವಾ ಕನಿಷ್ಠತರದ ಜೀನ್‌ಗಳಿವೆಯೆಂದು ಅಂತಿಮ ನಿರ್ಣಯಕ್ಕೆ ಬರುವುದು ವಿಜ್ಞಾನದ ದೃಷ್ಟಿಯಿಂದ ಸಲ್ಲದು; ಅಷ್ಟೇ ಅಲ್ಲ, ಅವ್ಯವಹಾರ್ಯವು ಕೂಡ.

ಮಾನವವರ್ಗವನ್ನು ಸುಧಾರಿಸುವ ಉದ್ದೇಶದಿಂದ ಉತ್ತಮ ಕುಟುಂಬಗಳು ಹೆಚ್ಚು ಮಕ್ಕಳನ್ನು ಉತ್ಪಾದಿಸುವಂತೆ ಪ್ರೋತ್ಸಾಹಿಸುವ ಇಂತಹ ಕಾರ್ಯಕ್ರಮವೊಂದರಲ್ಲಿ ಎರಡು ಮೂಲಭೂತ ತಪ್ಪು ಅಭಿಪ್ರಾಯಗಳಿವೆ.

1) ಜೀನ್‌ಗಳು ಸ್ವತಂತ್ರ ಗುಣಗಳನ್ನು ಪ್ರತಿನಿಧಿಸುವುವೆಂಬುದನ್ನು ಅದು ಲಕ್ಷಿಸುವುದ.

2) ಸನ್ನಿವೇಶದ ಅವಕಾಶಗಳು ವ್ಯಕ್ತಿ ವ್ಯಕ್ತಿಗೂ ಕಾಲ ಕಾಲಕ್ಕೂ ಬಹಳ ಬದಲಾಗುತ್ತಿದ್ದರೂ ಅವನ್ನು ಗಮನಕ್ಕೆ ತಂದುಕೊಳ್ಳದೆ ಯಾವುದೇ ಒಂದು ವ್ಯಕ್ತಿಯ ಜಯಾಪಜಯವನ್ನೇ ನೋಡಿ ಅವನ ಜೀನ್‌ಗಳ ಬಗ್ಗೆ ಸಾಕಷ್ಟು ಖಚಿತವಾಗಿ ನಿರ್ಣಯ ಕೊಡಬಹುದು ಎಂದು ತಿಳಿಯುವುದು.

ತಳಿ ವಿಜ್ಞಾನ (ಸಂತಾನ ವಿಜ್ಞಾನ) ಭವಿತವ್ಯ

ಮಾನವ ವರ್ಗವನ್ನು ಸುಧಾರಿಸುವಲ್ಲಿ ತಳಿ ಶಾಸ್ತ್ರವು ವೈಜ್ಞಾನಿಕ ದೃಷ್ಟಿಯಲ್ಲಿ ಮನುಷ್ಯನನ್ನು ಮುನ್ನಡೆಸಿಕೊಂಡು ಹೋಗಬಲ್ಲದಾದರೆ, ಯಾವ ವ್ಯಕ್ತಿಯಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಅಪೇಕ್ಷಣೀಯವಾದ ಉತ್ತಮ ತರದ ಜೀನ್‌ಗಳಿವೆಯೆಂಬುದನ್ನು ಕಂಡುಹಿಡಿಯಲು ಒಂದು ವೈಜ್ಞಾನಿಕ ಕ್ರಮವನ್ನೇ ಕಂಡುಹಿಡಿಯುವುದು ಅವಶ್ಯವಾದೀತು. ಅದಲೂ ಕೂಡ ಜೀನ್‌ಗಳಲ್ಲಿ ಯಾವುದು ಅಪೇಕ್ಷಣೀಯ ಯಾವುದು ಇಲ್ಲ ಎಂಬುದನ್ನು ನಿರ್ಧರಿಸುವುದು ಅಗತ್ಯ. ಬರೀ ಹಣವನ್ನು ಗಳಿಸಲು ಹೆಚ್ಚು ಸಹಾಯಕವಾಗುವಂತಹ ಜೀನ್‌ಗಳನ್ನು ಪಡೆದ ವ್ಯಕ್ತಿಗಳನ್ನೇ ಮುಂದಿನ ಪೀಳಿಗೆಗೆ ಯೋಗ್ಯರು ಎಂದು ಆರಿಸೋಣವೇ? ಇಲ್ಲ. ಒಳ್ಳೆ ವೈಜ್ಞಾನಿಕ ರೀತಿಯಲ್ಲಿ ವಿಚಾರ ಮಾಡುವ ಶಕ್ತಿಯುಳ್ಳ ಜೀನ್‌ಗಳನ್ನು ಪಡೆದವರನ್ನೇ? ಯಾವ ತರದ ಜೀನ್‌ಗಳು ಅತ್ಯಂತ ಅಪೇಕ್ಷಣೀಯವೆಂದು ಆರಿಸಬೇಕು? ಒಂದು ಜೀನ್ ಅಪೇಕ್ಷಣೀಯವೋ ಅನಪೇಕ್ಷಣೀಯವೋ ಎಂಬುದನ್ನು ಮನಸ್ಸಿನ ಅಸ್ಥೈರ್ಯ ರಕ್ತಸ್ರಾವ ಇತ್ಯಾದಿಗಳನ್ನು ಬಿಟ್ಟು ಉಳಿದುದನ್ನು ನಿರ್ಣಯಿಸುವವರು ತಾನೇ ಯಾರು?

ಇದೇ ಕೆಲವು ಪ್ರಶ್ನೆಗಳು ನಾಳೆ ನಮ್ಮ ಮುಂದೆ ಬಂದು ನಿಲ್ಲುವಂತಹವು. ಒಂದಲ್ಲ ಒಂದು ದಿನ ನಾವು ಅವನ್ನು ಎದುರಿಸಲೇಬೇಕು. ಈಗ ತಳಿ ವಿಜ್ಞಾನಿಗಳು (ಸಂತಾನ ವಿಜ್ಞಾನಿಗಳು) ಸನ್ನಿವೇಶದಂತಹ ಕೆಲವು ತೊಡಕಿನ ಸಮಸ್ಯೆಗಳ ಪರಿಹಾರಕ್ಕೆ ಇನ್ನೂ ದಾರಿ ಕಂಡುಕೊಳ್ಳಬೇಕಾಗಿರುವುದು ಅನಿವಾರ್ಯವಾಗಿದೆ. ಸನ್ನಿವೇಶದಂತಹ ತೊಡಕಿನ ಸಮಸ್ಯೆಗಳಲ್ಲಿ ಅವಸರವಾದುವು ಹೀಗಿವೆ:

1) ಎಲ್ಲೆಲ್ಲೂ ತಾಂಡವವಾಡುವ ದಾರಿದ್ರ್ಯ ಮತ್ತು ಬಡತನ.

2) ಅದರ ಪರಿಣಾಮವಾಗಿ ಅಸಮಾನ ಅವಕಾಶಗಳು ಇದ್ದು ಮಾನವ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀನ್‌ಗಳ ರೀತಿನೀತಿಗಳನ್ನು ಪರೀಕ್ಷಿಸುವುದು ದುಸ್ತರವಾಗಿದೆ.

ಸಹಕಾರ ತತ್ವದ ದಿವ್ಯ ಸಂದೇಶ

(ಹದಿನೈದನೇ ಪುಟದಿಂದ)

ಅವಕಾಶವಿದೆಯೆಂಬುದು ಸರ್ವವಿದಿತ ಹಾಗೂ ಆಶಾದಾಯಕ.

ಸರಕಾರದ ಹಸ್ತಕ್ಷೇಪ ಕಡಿಮೆಯಾದಷ್ಟೂ ಸಹಕಾರ ಚಳವಳ ಆರೋಗ್ಯಕರವಾಗಿ ಬೆಳೆಯುವುದೆಂದು ವಿದೇಶಗಳಿಂದ ಉದಾಹರಣೆಗಳಿವೆ. ಜನರೂ ಆ ಮಟ್ಟವನ್ನೇರಬೇಕು. ಆಡಳಿತ ವರ್ಗಕ್ಕೆ ಆಯ್ಕೆಯಾದವರ ವರ್ತನೆಗಳನ್ನು ಹೊಂದಿಯೇ ಒಂದು ಸಹಕಾರ ಸಂಘದ ಭವಿಷ್ಯವಿರುವುದು.

ನಮ್ಮ ದೇಶದ ಸಹಕಾರ ಸಂಸ್ಥೆಗಳನ್ನು ಬಾಧಿಸಿದ ಕೃತ್ರಿಮ, ವಂಚನೆ ಮುಂತಾದವುಗಳಿಗೆ ಸಂಬಂಧಿಸಿದ ವರದಿಯೊಂದಿಗೆ ಅಸಹನೀಯ "ವ.ಜೀ"ಯೂ ಇಲ್ಲಿ ಈ ಪದ್ಧತಿ ಹೆಚ್ಚು ಹೆಚ್ಚಾಗಿ ಬೆಳೆಯುವುದನ್ನು ನಿರುತ್ಸಾಹಗೊಳಿಸಿರಬಹುದು. ಆದರೂ ಸಹಕಾರ ಚಳವಳ ಬೆಳೆದಿದೆ,

1955—56ರಲ್ಲಿ ಕೇವಲ ರೂ. 53 ಕೋಟಿ ಬೆಲೆಯ ಕೃಷಿ ಉತ್ಪನ್ನಗಳ ವ್ಯಾಪಾರ ಸಹಕಾರ ಸಂಸ್ಥೆಗಳ ಮೂಲಕ ನಡೆದಿದ್ದ ನಮ್ಮ ದೇಶದಲ್ಲಿ 1967-68ನೇ ಸಾಲಿನಲ್ಲಿ ರೂ. 400 ಕೋಟಿ ಬೆಲೆಯ ಸರಕುಗಳ ವಹಿವಾಟು ನಡೆದಿದೆ. ಚತುರ್ಥ ಯೋಜನೆಯ ಕೊನೆಗೆ ಈ ಪ್ರಮಾಣ ಇನ್ನೂ ಇಮ್ಮಡಿ ಹೆಚ್ಚಲಿದೆ.

ಜನ ಸಾಮಾನ್ಯರು ಸಹಕಾರ ಪದ್ಧತಿಯ ಪ್ರಯೋಜನಗಳ ಸದುಪಯೋಗ ಹೊಂದುವಂತೆ ಸಹಕಾರ ಚಳವಳ ಮುನ್ನಡೆಸಬೇಕು. ಸಹಕಾರದ ಮೂಲಕವೇ ಸಂಪತ್ತು-ಸಂತುಷ್ಟಿ. —(ಸಂಗ್ರಹ)

With Best Compliments of:-

SRI RAJA RAJESHWARI TRADING CO.,

SANJAYA TALKIES BUILDING, MANDYA.

Ideal Home

For

Quality "DURGA" Steel Furniture

and Sofa Sets

WITH BEST COMPLIMENTS OF:-

MANDYA EXHIBITORS
ENTERTAINMENT CENTRES OF THE TOWN.



When at Mandya Please visit:-

THEATRE SANJAYA.
NANDA PICTURE HOUSE.
GIRIJA PICTURE PALACE.

H. C. CHANNIAH. **M. K. PAPIAH.**

ವ್ಯಾಸ - ಕುಮಾರವ್ಯಾಸರ ಉತ್ತರಕುಮಾರರು

(ಹದಿಮೂರನೇ ಪುಟದಿಂದ)

ಕ್ಕೆ ನಡುಗಿಸಬಲ್ಲ ಪಾರ್ಥನು ಬಿಡಲು ಬಿರಿಯುವಂತೆ ನಕ್ಕಿರಬಹುದು.

ಕುಮಾರವ್ಯಾಸನ ಉತ್ತರಕುಮಾರನು ದೊಡ್ಡ ಹಾಸ್ಯಗಾರ. ಪಂತ್ರಮೊದಲು ಗೋವಳನ ಮಾತಿನ ನೇಲಿದ್ದ ಸುಣ್ಣದ ಗೆರೆ ಅವನಿಗೆ ಆಶ್ಚರ್ಯ ಹುಟ್ಟಿಸಿತು. ಅವನು ಹದಿನಾರರ ಹರೆಯದ ತರುಣಿಯರ ಕೋಟೆಗಳಲ್ಲಿ ಬಂಧಿತವಾದ ಒಂದು ಚೆಲುವಿನ ಗಿಳಿಮರಿ! ಅದಕ್ಕೆ ಪ್ರಪಂಚದ ಜ್ಞಾನವೇ ಇಲ್ಲ. ಯುದ್ಧ ವಿದ್ಯೆಯಲ್ಲಿ ಓ ನಾಮಕ್ಕಿಂತ ವಿರಾಟನು ಹೆಚ್ಚು ಓದಿಸಿಲ್ಲ. ತಾನು ರಾಜಕುಮಾರನೆಂಬ ಜಂಭವೇನೋ ಮಿತಿಮೀರಿದೆ. ಅವನು ಗೋವಳನೊಡನೆ "ತಗೆ ಹೊಯ್ದೇಕೆ ಬಂದೆ? ನಿನ್ನ ದಣಿವನು ಅಯ್ಯನು ಗೆಲಿದುದೇನಾಯ್ತು?" ಎಂದು ಆತುರದಿಂದ ಕೇಳಿದನು. ಅವನು ತಿಮಿನ ಕದನ ರಂಗಕ್ಕಿಂತ ವೀರರ ರಣರಂಗ ಮಿಗಿಲೆಂದು ಭಾವಿಸಿರಲಿಲ್ಲ. ಅವನ ಬಡಾಯಿಯ ಮಾತುಗಳನ್ನು ಚೆನ್ನಾಗಿ ಚಿತ್ರಿಸಿದ ನಾರಣಪ್ಪನ ಶಕ್ತಿ ಅನ್ಯಾದೃಶವಾದುದು. ಆಗ ಉತ್ತರನು ಎಳೆಯ ಹರೆಯದ ತರುಣಿಯರ ಮಧ್ಯದಲ್ಲಿ ಮಂಡಿಸಿದ್ದಾನೆ! ಆತನು "ಕೆಲಬಲನ ನೋಡಿದನು; ಮೀಸೆಯನಲುಗಿದನು. ತನ್ನಿದಿರ ಮೇಳದ ಲಲನೆಯರ ಮೊಗ ನೋಡಿ ತುತ್ತುರ ಬಿರುದ ಕೆದರಿದನು."

"ಈಗ ಕಲ್ಪಿಯ ನೋಡು. ಆಹವದ ಭೀತಾಕುಳನು! ಹೆಂಡಿರ ಲೌಲ್ಯತೆಯ ಲೊಪ್ಪೈಸಿ ಬಂದು ಕಾಳ ಬಳಸುವನಿವನು. ತಾನುದ್ರೇಕಿಸಿಯೆ ಸಮರದಲಿ ಫಲುಗುಣ ಸಾರಥಿಗೆ ಪೋರಟು." ಕನ್ನಡದ ಮಾತುಗಳ ಸೊಗಸು ಸಂಸ್ಕೃತದಲ್ಲಿ ಬಂದಿಲ್ಲ. ಇಲ್ಲಿನ ಹಲವು ಭಾಗಗಳು ನಾರಣಪ್ಪನ ಸ್ವತಂತ್ರ ಪ್ರತಿಭೆಯಿಂದ ಮೂಡಿದವುಗಳು.

ಕುಮಾರನ ಮಾತಿನ ಪೌರುಷಕ್ಕೆ ಗೋವಳನು ಬೆದರಿದನು. 'ಜೀಯ ಎನಿತು ಬಲುಹನು ಪಾಡೆಹೆನು? ನಿನಗೆ ಗಹನವೆ? ಜಗದಲಿ ದಿನಪನಿದಿರಲಿ ತಮದ ಗಾವಳಿಗೆ ದಿಟ್ಟತನವೆ?...' ಕುಮಾರನ ಮಾತಿನ ರಭಸಕ್ಕೆ ಗೊಲ್ಲನೇ ಬೆಪ್ಪಾದಂತೆ ಜವ್ವನೆಯರೂ ಬೆರಗಾದರು. ಕೌರವರು ಉತ್ತರನ ಕೋಪಾಗ್ನಿಯಲ್ಲಿ ನಿಜವಾಗಿ ಹೋಮವಾಗುವರೆಂದು "ಅಯ್ಯೋ ಪಾಪ" ಎಂದು ನಿಟ್ಟುಸಿರು ಬಿಟ್ಟರು.

ಸಂಸ್ಕೃತದಲ್ಲಿ ಉತ್ತರನು- "ಈಗಲೇ ರಣರಂಗಕ್ಕೆ ಹೋಗಿ ಶತ್ರು ಸೇನೆಯನ್ನು ಪ್ರವೇಶಿಸಿ, ನನ್ನ ಶಸ್ತ್ರಾಸ್ತ್ರ ಪ್ರತಾಪದಿಂದ ಕೌರವರನ್ನೆಲ್ಲಾ ನಿರ್ವೀರ್ಯರನ್ನಾಗಿ ಮಾಡುವೆನು. ದುರ್ಯೋಧನ, ಭೀಷ್ಮ, ಕರ್ಣ, ಕೃಪ, ಪುತ್ರಸಹಿತನಾದ ದ್ರೋಣನನ್ನು ಇಂದ್ರನು ದಾನವರನ್ನು ಓಡಿಸುವಂತೆ ನಾನು ಓಡಿಸಿ ನಮ್ಮ ಗೋವುಗಳನ್ನು ಹಿಂದಿರುಗಿಸುವೆನು...ಆ ಕೌರವರು ನನ್ನನ್ನು ಕುಂತೀ ಪುತ್ರನಾದ ಅರ್ಜುನನೆಂದು ತಿಳಿದರೇನು?' ಎಂದು ಆರ್ಭಟಿಸಿ ಇಲ್ಲಿಗೇ ಮುಗಿಸುತ್ತಾನೆ. (ವಿ.ಪ. ಅ ೩೬). ಕನ್ನಡದ ಉತ್ತರನು ಪಟಾಕಿ ಹೊಟ್ಟಿಸು ಷದರಲ್ಲಿ ಅಗ್ರೇಸರ. "ಅಹ ದಹುದು ತಪ್ಪೇನ? ದುರ್ಯೋಧನನು ಜೂಜಿನ ಕುಹದಲಿ ಪಾಂಡವರ ಸೋಲಿಸಿ ಮಹಿಯ ಕೊಂಡಂತೆನ್ನ ಕೆಣಕಿದಪೆ? ಸಹಸದಿಂದ ಪೆ ತರುವ ಮಾರಿಚಿತಹೆನು, ಹಸ್ತಿನಪುರವ ಸೂರೆಗೊಂಬೆನು. ಬಳಿಕ ಯುಧಿಷ್ಠಿರನೆಂದು ಬಗೆದನೆ? ತನ್ನ ವೈರವನು ನೆನೆದು ದುರ್ಯೋಧನನು ಕಾಮೋದಿನಿಯನಾಳ್ವನೆ?..." ಆ ಕೌರವನು ತನ್ನ ಹಗೆತನವನ್ನು ಕೈಗೊಂಡ ಪರಿಣಾಮವು ಸಾಮಾನ್ಯ ರೀತಿಯಲ್ಲಿ ಎಂದೂ ಮುಗಿಯಲಾರದು. "ಆವನ ವೀನೆಯ ಮುರಿದನೊ? ವ್ಯತ್ಯಾಸನ ಪೋಲುದ ಸೆಳೆದನೊ? ಕೇಸರಿಯ ಕೆಣಕಿದನೊ? ಅಕಟ! ಕೌರವ ಮರುಳಾದನು."

ಇಷ್ಟಕ್ಕೇ ಉತ್ತರನ ಬಡಾಯಿ ವಿರಾಮಗೊಳ್ಳಲಿಲ್ಲ. "ಕುರುಸೇನೆಯಲ್ಲಿ ತನ್ನೊಡನೆ ಹೋರಾಡಲು ಯಾರಿದ್ದಾರೆ?" —ಎನ್ನಲೂ ಉತ್ತರನಿಗೆ ಸಂಕೋಚವಾಗಲಿಲ್ಲ. "ಆರೊಡನೆ ಕಾದುವೆನು? ಕೆಲಬರು ಹಾಸುವರು; ಕೆಲರಂತಕನ ನೆರೆಯೂರವರು; ಕೆಲರಧಮ ಕುಲದಲಿ ಸಂದುಬಂದವರು. ವೀರರೆಂಬವರಿವರ; ಬೇಲಿನ್ನಾರ ಹೆಸರ ಂಟವರೊಳ್?.... ಪೊಡವಿಪತಿಗಳು ಬಂದು ತುರುಗಳ ಹಿಡಿವರೆ? ಲೋಕದಲಿ ಅಧಮರ ಬಡ ಮನದ ಮನ್ನೆಯರ ಪನ್ನಿಸಿ ಕೌರವನೊಳಾಯ್ತು.... ಎನ್ನೊಳು ತೊಡಕಿ ಬದುಕುವನಾವನೆಂದನು ಖಂಡೆಯವ ಜಡಿದು" ಕುಮಾರನು ನೆಣಗೊಬ್ಬಿನಲಿ ಹೆಂಗಳದಿರಿನಲ್ಲಿ ಪೌರುಷ ಕೊಚ್ಚತೊಡಗಿದನ.

ಉತ್ತರನು ಕೌರವನಿಗೆ ತಕ್ಕ ಶಾಸ್ತ್ರಿ ಮಾಡದಿರುವನೆ?

"ಖಳನ ಮುರಿವೆನು, ಹಸ್ತಿನಾಪುರದೊಳಗೆ ರಾಜ್ಯಾಂತರವ ನಿಕ್ಕುವೆ. ಕೌರವನ ಸೇನೆಯ ಧೂಳೀಪಟ ಮಾಡಿ ಗೆಲುವ ತಹೆನು...ಗಾಂಗೇಯನನು ಅರಿಯನೆ? ದ್ರೋಣ ತಾನರಿಯದವನೆ? ಕುಲದಲಿ ಕೊರತೆಯೆನಿಸುವ ಕರ್ಣನೆಂಬವನೆನಗೆ ಸಮಬಲನೆ...." ಇಲ್ಲಿಗೆ ಉತ್ತರನ ಬಡಾಯಿಯು ಒಂದಂಶ ಮುಗಿಯಿತ.

ಮುಂದೆ ಯುದ್ಧರಂಗದಲ್ಲಿ ಕುರುಸೇನೆಯನ್ನು ಕಂಡೊಡನೆ ಸಂಸ್ಕೃತ ಭಾರತದಲ್ಲಿ ಹೇಳಿದ ರೀತಿಯಲ್ಲಿ ಅಷ್ಟೊಂದು ವೈಶಿಷ್ಟ್ಯವಿಲ್ಲ. "ಕುರುಸೇನೆ ಕಂಡೊಡನೆ ಉತ್ತರನ ಬುದ್ಧಿ ತಬ್ಬಿಬ್ಬಾಗಿ ರೋಮಾಂಚನಗೊಂಡಿತು. ಕಣ್ಣುಗಳು ಭಯದಿಂದ ತನ್ನಷ್ಟಕ್ಕೇ ಮುಚ್ಚಿಕೊಂಡವು. 'ಬೃಹನ್ನಳೇ, ಈ ಕೌರವರೊಡನೆ ನಾನು ಯುದ್ಧ ಮಾಡುವುದಿರಲಿ, ದೇವತೆಗಳೂ ಇದಿರಿಸಲಾರರು. ಅಯ್ಯೋ, ಅವರ ಕೈಗಳಲ್ಲಿದ್ದ ಬಿಲ್ಲು ಮತ್ತು ಭಯಂಕರವಾದ ಆಯುಧಗಳನ್ನು ನೋಡು. ಆ ಸೈನ್ಯದಲ್ಲಿದ್ದ ವೀರರಾದ ಭೀಷ್ಮ, ದ್ರೋಣ, ಕೃಪ, ಕರ್ಣ, ವಿವಿಂಶತಿ, ಅಶ್ವತ್ಥಾಮ, ವಿಕರ್ಣ, ಸೋಮದತ್ತ, ಬಾಹ್ಲೀಕ ಮೊದಲಾದ ಪ್ರತಿಯೊಬ್ಬರೂ ಧೀರರೇ....' ಉತ್ತರನಿಗೆ ಕುರುಸೇನೆಯ ವೀರರ ಪರಿಚಯವಿದ್ದುದು ಪರಮಾಶ್ಚರ್ಯ!

ಅರ್ಜುನನ ಮುಂದೆ ಉತ್ತರನು ರೋದಿಸಲು ತೊಡಗಿದನು. "ಬೃಹನ್ನಳೆ (ಬೃಹನ್ನಡೆ), ನಾನಿನ್ನೂ ಬಾಲ; ಅಸ್ತ್ರಗಳಲ್ಲಿ ಪರಿಶ್ರಮವಿಲ್ಲ. ಇಂತಹ ನಾನು ಯುದ್ಧವಿದ್ಯೆಯಲ್ಲಿ ಸುಶಿಕ್ಷಿತರಾದ ಇವರನ್ನು ಹೇಗೆ ಇದಿರಿಸಲಿ? ಬೃಹನ್ನಳೆ, ರಥವನ್ನು ಹಿಂದಿರುಗಿಸು.'

ಅರ್ಜುನನು ನಗುತ್ತಾ "ರಾಜಕುಮಾರ,...ಶತ್ರುಗಳಿಂದ ಗೋವುಗಳನ್ನು ಬಿಡಿಸಿಕೊಳ್ಳದೆ ಹಿಂದಿರುಗಿದರೆ ವೀರರೂ ಹೆಂಗಸರೂ ನಿನ್ನನ್ನು ಹಾಸ್ಯಮಾಡುವುದಿಲ್ಲವೆ?" ಎಂದನು.

ಉತ್ತರನು ನಡುಗುತ್ತಿದ್ದನು. "ಬೃಹನ್ನಳೆ, ಕೌರವರೆಲ್ಲಾ ಕೂಡಿಬಂದು ಮತ್ಸ್ಯದೇಶದ ಸಂಪತ್ತನ್ನು ಕಿತ್ತುಕೊಂಡು ಹೋದರೂ ಹೋಗಲಿ. ಹೆಂಗಸರೂ ಗಂಡಸರೂ ಬೇಕಾದಂತೆ ನನ್ನನ್ನು ಹಾಸ್ಯ ಮಾಡಲಿ."

ಉತ್ತರನು ರಥದಿಂದ ಧುಮುಕಿ ರಾಜಧಾನಿಯ ಕಡೆಗೆ ಓಡಲಾರಂಭಿಸಿದನು.

ಕನ್ನಡ ಭಾರತದಲ್ಲಿ ಕುರುಸೇನೆಯು ದಾವಾಗ್ನಿಯಂತೆ ಉತ್ತರನ ಕಣ್ಣುಗಳಿಗೆ ಕಾಣಿಸಿತು. "ಈ ಬಲದ ಕಡೆಗೆ ಕಂಗಳು ಹಾಯವು; ಮನವೀ ಬಲಗಡಲವೀ ಸಾಧಿಸಲಾರದು. ಇದರೊಡನೆ ಕಾದುವನಾವನು? ಆತನೆ ಮೃಡನ. ಶಿವಶಿವ ಕಾದಿ ಗೆಲಿದೆವು ಬಳಿಕ ನಮೊ ಎಂದ" ಉತ್ತರನ ಪೌರುಷವನ್ನು ಯುದ್ಧದ ಮೊದಲೇ ಅರ್ಜುನನು ಒರೆಗಿಕ್ಕಿದನು.

"ಹಸಿದ ಮಾರಿಯ ಮುಂದೆಯಲಿ ಕುರಿ ನುಸುಳಿದಂತಾದೆನು....ಪ್ರಳಯ ಕಾಲದ ಮುಸುಕನುಗಿವವನಾರು? ಕೌರವನೆಲವು ಬಲನೈ. ರಥವ ಮರಳಿಚು' "ಕುಮಾರ", ಸಮರ ಭೀತಿಯು ಹಿಡಿದೈ? ಅಳುಕಲಾಗದ. ನಿಮ್ಮ ತಂದೆಯ ಕುಲಕೆ ಕುಂದನು ತಾರದಿರು. ಮನ ಗೆಲವಿನಲಿ ಕಾದು." ಉತ್ತರನ ವೀರಶ್ರೀ ಆತನ ಹೃದಯದಿಂದ ಕಾಲ್ಕಿತ್ತಿತು. "ಸಾರಥಿ, ರಥವ ಮುಂದಕೆ ಏಕೆ ನೂಕಿ ಗಂಟಲಕೊಯ್ವೆ? ನಾಳೆ ನಿಳಯಿರಿಗಂದ. ನಿನಗೆ ವಿವೇಕವೆಳ್ಳನಿತಿಲ್ಲ ಕೇಡಿಗಳ ತಿರುಹು" ಅರ್ಜುನನು ಉತ್ತರನ ಪ್ರಾರ್ಥನೆಯನ್ನು ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ.

ಉತ್ತರನು 'ರಥದ ಹಿಂಜಕೆ ಹಿಂದು ಧಿಮ್ಮಿಕ್ಕಿ, ಬದುಕಿದೆನೆಂದು ಬಿಟ್ಟ ಮಂಡೆಯಲಿ ಹಿಟ್ಟೋಟದಲಿ ಹಾಯ್ದನು.

ಇಲ್ಲಿಗೆ ಉತ್ತರನ ಪೌರುಷವು ಸಾರ್ಥಕವಾಯಿತು!

ಉತ್ತರನ ಸಾಹಸಕ್ಕೆ 'ಕೌರವನ ಸೇನೆ ನಗೆಯ ಕಡಲೊಳಗೆ ಕೆಡೆವುದು' ಕುಮಾರವ್ಯಾಸನೂ ತಾವು ಬರೆದ ಈ ಭಾಗವನ್ನು ಓದಿ ನಕ್ಕಿರಬಹುದು.

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

•: ಮಿತ ಸಂತತಿ :•

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಗಾಂಧೀಜಿ ಅಮೃತವಾಣಿ

ಭೌತ ವಿಜ್ಞಾನದ ಪ್ರಗತಿ ಅದ್ಭುತ. ಇದರಲ್ಲಿ ಯಾವ ಸಂದೇಹವೂ ಇಲ್ಲ. ಈ ಸಾಧನೆ ನಿಸರ್ಗದ ರಹಸ್ಯದ ಬಗ್ಗೆ ನಮಗೆ ಗೊತ್ತಿರುವುದು ತೀರ ಸ್ವಲ್ಪ ಎಂಬ ಸತ್ಯವನ್ನು ಬೆಳಕಿಗೆ ತಂದಿದೆ. ನಮ್ಮನ್ನು ಹೆಚ್ಚು ವಿನೀತರನ್ನಾಗಿ ಮಾಡುತ್ತದೆ.

o o o

ನಾವೆಲ್ಲರೂ ಸಮಾನರು. ಸಮಾನತೆಯೆಂದರೆ ದೈಹಿಕ ಸಮಾನತೆಯಲ್ಲ. ಆತ್ಮದ ಸಮಾನತೆ.

o o o

ನಾವು ಪರಿಶುದ್ಧರಾಗಬೇಕಾದರೆ, ಹಿಂದೂ ಧರ್ಮವನ್ನು ಉಳಿಸಬೇಕಾದರೆ, ವಿಧವಾ ಬಾಲಿಕೆಯರಿಗೆ ವಿಧವೆಯರಾಗಿಯೇ ಬಾಳಬೇಕೆಂದು ಒತ್ತಾಯ ತರುವ ಪ್ರವೃತ್ತಿಯನ್ನು ನಿವಾರಿಸಬೇಕು.

o o o

ಸುಧಾರಕರು ಸುಧಾರಣೆಗಳನ್ನು ಸಮಾಜದ ಮೇಲೆ ಹೇರಬಾರದು. ಅವರು ಸಮಾಜದ ತರ್ಕಶಕ್ತಿಗೆ ಹಾಗೂ ಹೃದಯಕ್ಕೆ ಮನವಿ ಮಾಡಿಕೊಳ್ಳಬೇಕು.

o o o

ನಾವು ಎಷ್ಟೇ ತೊಂದರೆಗಳನ್ನು ಎದುರಿಸಿದರೂ, ಎಷ್ಟೇ ಸೋಲನ್ನು ಅನುಭವಿಸಿದರೂ ಸತ್ಯ ಶೋಧನೆಯನ್ನು ಕೈಬಿಡಬಾರದು. ಏಕೆಂದರೆ ಸತ್ಯವೇ ದೇವರು.

o o o

ಪ್ರತಿಯೊಬ್ಬನೂ ತನಗೆ ಬೇಕಾದಷ್ಟನ್ನು ಮಾತ್ರ ಇಟ್ಟುಕೊಂಡಿದ್ದರೆ ಆದರೆ ಕೊರತೆ ಎಂಬುದೇ ಇರಲಾರದು. ಪ್ರತಿಯೊಬ್ಬರೂ ತೃಪ್ತಿಯಿಂದ ಬಾಳಬಲ್ಲರು.

o o o

ಲೋಕಹಿತ ಸಾಧನೆಯೇ ತ್ಯಾಗದ ಪ್ರಥಮ ಉದ್ದೇಶವಾಗಿರಬೇಕು.

ರಾಮಾಯಣದ ಕೆಲವು ವಿಚಾರಗಳು

(ಹನ್ನೆರಡನೇ ಪುಟದಿಂದ)

ಏಕಾಧಿಪತ್ಯದಲ್ಲಿ—ತನ್ನ ಕೆಲಸವೇ ಸೂಕ್ತವೆಂದು ಶ್ರೀರಾಮನು ಹೇಳುವಲ್ಲಿ ಅತಿಶಯೋಕ್ತಿಯಿಲ್ಲ. ಪರಂತು, ಈ ಮಾತನ್ನ ಶ್ರೀರಾಮನಲ್ಲದೆ ಇತರರು ಹೇಳುವಂತಿಲ್ಲ! ಆದುದರಿಂದ, ಶ್ರೀರಾಮನು ಮನುಜ ಲೋಕದಲ್ಲಿ ದೇವನಾಗಿ ಬಾಳಿ ರಾರಾಜಿಸಿದನೆಂದು ತಿಳಿಯಬಹುದು.

೮) ಶ್ರೀರಾಮನನ್ನು ಶರಣು ಹೊಂದಿದವರಿಗೆ ಸರ್ವತ್ರ ಅಭಯದಾತೃತ್ವ ಶಕ್ತಿಯಿದೆಯೆಂದು ವ್ಯಕ್ತವಾಗಿ ಹೇಳಲಾಗಿರುತ್ತದೆ; ವಿಭೀಷಣನು ಲಂಕೆಯನ್ನುಳಿದು, ಶ್ರೀರಾಮನಲ್ಲಿ ಬಂದಾಗ ಇಲ್ಲಿದ್ದವರೊಳಗೆ ತುಂಬಾ ಚರ್ಚೆಯಾಯ್ತು. ಆಗ ಶ್ರೀರಾಮನಾಡಿದ ಮಾತು ಸರ್ವಕಾಲಕ್ಕೂ ಉಲ್ಲೇಖ್ಯವಾಗಿದೆ! ದೇವನು ಮಾತ್ರ ಹೇಳತಕ್ಕುದಾಗಿದೆ:

"ಸಕೃದೇವ ಪ್ರಪನ್ನಾಯ
ತವಾಸ್ಮೀತಿ ಚ ಯಾಚತೇ |
ಅಭಯಂ ಸರ್ವಭೂತೇಭ್ಯೋ
ದದಾಮ್ಯೇತದ್ ವ್ರತಂ ಮಮ ||"

(ಯು. 18—33)

೯) ವಾ. ರಾಮಾಯಣವು ಶ್ರೀರಾಮನ ಕತೆಯನ್ನು ಹೇಳುವ ಪ್ರಾಮುಖ್ಯ ಪ್ರಾಮಾಣಿಕ ಗ್ರಂಥವೆಂದು ಬಹುಮಂದಿ ಒಪ್ಪವಾಗಿದೆ. ಆನಂದ ರಾಮಾಯಣ, ಅದ್ಭುತ ರಾಮಾಯಣ, ಮೊದಲಾದ ಹಲವು ಕೃತಿಗಳಲ್ಲಿ ಶ್ರೀರಾಮನ ಕತೆಯಿದ್ದರೂ; ಇದ್ದಯದು ಒಂದು ಪ್ರಾಂಗವಾಗಿರುತ್ತದೆಯೆಂಬುದು ಅತ್ಯಂತ ಗಮನೀಯವಿದೆ! ಪರಂತ, ವಾ. ರಾಮಾಯಣದಲ್ಲಿ ಹೇಳಿದ ಶ್ರೀರಾಮಾವತಾರದ ಕಾಲದ ವಿಚಾರದಲ್ಲಿ ತುಸ ಚರ್ಚೆಯಿದೆ.

"ತತೋ ಯಜ್ಞೇ ಸಮಾಪ್ತೇ ತು
ಋತೂನಾಂ ಷಟ್ ಸಮತ್ಯಯುಃ |
ತತಶ್ಚ ದ್ವಾದಶೇ ಮಾಸೇ ಚೈತ್ರೇ
ನಾವಮಿಕೇ ತಿಥೌ ||
ನಕ್ಷತ್ರೇಽದಿತಿ ದೈವತ್ಯೇ
ಸ್ವೋಚ್ಚ ಸಂಸ್ಥೇಷು ಪಂಚಸು
ಗ್ರಹೇಷು ಕರ್ಕಟೇ ಲಗ್ನೇ |
ವಾಕ್ಪತಾವಿಂದುನಾ ಸಹ ||
— ಕೌಸಲ್ಯಾಜನಯದ್ರಾಮಂ
ಸರ್ವಲಕ್ಷಣ ಸಂಯುತಂ ||"

(ಬಾ 18 8)

ಈ ವಿಚಾರದ ವಿವರಣದಂತೆ, ಭೋಜರಾಜನ ಕೃತಿಯಲ್ಲಿದೆ:

"ಉಚ್ಚಸ್ಥೇ ಗ್ರಹಪಂಚಕೇ
ಸುರಗುರೌ ಸೇಂದೌ ನವಮ್ಯಾಂ
ತಿಥೌ |
ಲಗ್ನೇ ಕರ್ಕಟಕೇ ಪುನರ್ವಸುಯುತೇ
ಮೇಷಂ ಗತೇ ಪೂಷಣಿ |
—ಅವಿರ್ಭೂತಮಭೂತಪೂರ್ವಮನುಪ
ಮಂ
ಯತ್ಕಿಂಚಿದೇಕಂ ಮಹಃ"||

ದರೆ, ಇತ್ತೀಚೆಗೆ ಮಂಗಳೂರಿನ ಶ್ರೀ ರಾಮಕೃಷ್ಣ ಜೋಯಿಸರು (ಗದಗಿನ ತ್ವವಾದದಲ್ಲಿ), ಮತ್ತು ಶ್ರೀ ಮಂರ ಕೇಶವ ಭಟ್ಟರು (ಬೆಂಗಳೂರಿನ ವನದಲ್ಲಿ) ಈ ಗ್ರಹಸ್ಥಿತಿಯು ಹಾಗೂ ನಮಾನವು ಅದೆಷ್ಟೋ ಹಿಂದೆ ಬೀಳುವುದಿಲ್ಲೆಂದು ವಿವರಿಸುತ್ತಾರೆ. ಅವರ ವಿವಾದದಲ್ಲಿ ಕೇವಲ ತಾರ್ಕಿಕ ಸರಣಿಯೊಂದೇ, ಆಧಾರಗಳೇನೂ ಹೇಳಿಲ್ಲ. ಆ

ವೊಂದು ಗ್ರಹದ ಸ್ಥಿತಿಯು ಪೂರ್ವರಾಶಿಯಲ್ಲಿ ಕೊನೆಗಿದ್ದರೆ, ಆ ರಾಶಿಯು ಮುಂದಿನ ರಾಶಿಯ ಫಲಗಳನ್ನೂ ನೋಡಬಹುದು. (ಇದಕ್ಕೆ ಭಾವಫಲವೆಂದು ಜ್ಯೋತಿಷ್ಯರಾದ ಶ್ರೀ ಎಚ್. ವೆಂಕಟರಮಣ ಭಟ್ಟರು ನನ್ನೊಡನೆ ಹೇಳಿದ್ದರು. ಅದು ಮಾತ್ರವಲ್ಲ, ಗಣಿತ ರೀತಿಯಲ್ಲಿ ಆಯನಭಾಗಕ್ಕಿಂತಲೂ ನಕ್ಷತ್ರ ದೃಗ್ವಿಚಾರವೇ ಚಂದ್ರಗ್ರಹಣಾದಿಗಳ ಸ್ಪಷ್ಟತೆಯನ್ನು ಸೂಚಿಸುವುದೆಂಬುದು ಇದೀಗ ಎಲ್ಲರಿಗೂ ಗೊತ್ತಿರುವ ಸಂಗತಿಯು. ಹಾಗಾದರೆ, ಶ್ರೀರಾಮನ ಜನನ ಕಾಲವು ಇಂದಿಗೆ ಅದೆಷ್ಟು ವರ್ಷಗಳ ಹಿಂದಣದಿರಬಹುದೆಂದು—ಅಗಣಿತ ಗ್ರಹಸ್ಥಿತಿ ಹೇಗಿರಬೇಕೆಂದು—ಗುಣಿಸದೆ, ಆ ತಾತ್ಪರ್ಯವಾಗಿ ಹೇಳಿದರೆ ಅದೇನೂ ದೊಡ್ಡ ಪಾಂಡಿತ್ಯ ಪ್ರದರ್ಶನವಾಗಿಲ್ಲ! (ಶ್ರೀಕೃಷ್ಣನು ಹುಟ್ಟಿರಬೇಕೆನ್ನುವ ದಿವಸದ ಗ್ರಹಸ್ಥಿತಿಯನ್ನು ಸೂಚಿಸುವಂತೆ, ಶ್ರೀರಾಮನ ಜನನ ಕಾಲದ ಬಗೆಗೆ ಸವಿವರವಾದ ಗಣಿತರೀತಿಯ ಗ್ರಹಸ್ಥಿತಿಯನ್ನು ಕಂಡ ಹಿಡಿಯುವುದೇ ಹಿಂದಿನ ಜೋಯಿಸರ ಹಾಗೂ ವಿಮರ್ಶಕರ ಕರ್ತವ್ಯವಾಗಿದೆ. ಕೇವಲ ಶಬ್ದಾಡಂಬರದಲ್ಲಿ—ಕೆಲವು ಅಂಕೆಗಳ ಗಣಿತದಲ್ಲಿ ಈ ವಿಚಾರ ಹೊಳೆಯುದಿದ್ದರೆ ತಪ್ಪಿಲ್ಲ. ಆದುದರಿಂದ ಶ್ರೀಯುತರಿಬ್ಬರ ವಿವಾದಗಳು ತೀರಾ ಜೊಳ್ಳಾಗಿವೆಯೆಂಬುದು ಇಲ್ಲಿ ನಾವು ತಿಳಿಯಬೇಕಾಗಿದೆ!)

೧೦) ಶ್ರೀರಾಮನು ದೇವನಾದರೆ, ರಾಮಾಯಣವು ಆತನ ಮಹಿಮೆಯನ್ನು ವರ್ಣಿಸುವ 'ವೇದ'ವೆನ್ನುವುದು ಸಾಧು! ಈ ಬಗೆಯಲ್ಲಿ ವಾಲ್ಮೀಕಿಯು 'ಕವಿಬ್ರಹ್ಮ'ನೆಂಬುದೂ ಯುಕ್ತ! ರಾಮಾಯಣದ ವಿಚಾರದಲ್ಲಿ ಹೇಳುವ ಕೆಲವು ಸೂಕ್ತಿಗಳಲ್ಲಿದು ಸುಸ್ಪಷ್ಟವಾಗಿದೆ; ಅಂತಹ ಸೂಕ್ತಿಯೊಂದು ಹೀಗಿದೆ:

"ವೇದವೇದ್ಯೇ ಪರೇ ಪುಂಸಿ
ಜಾತೇ ದಶರಥಾತ್ಮಜೇ |
ವೇದಃ ಪ್ರಾಚೇತಸಾದಾಸೀತ್
ಸಾಕ್ಷಾದ್ರಾಮಾಯಣಾತ್ಮನಾ ||"

ಶ್ರೀ ರಾಮಾಯಣವು ಭಾರತೀಯರ ಆದರ್ಶ ಗ್ರಂಥವೂ ಹೌದು; ವೇದದಂತೆ ಪೂಜ್ಯ ಕೃತಿಯೂ ತಕ್ಕವೆಂದು ಇದರಿಂದ ತಿಳಿಯಬಹುದು.

ಹುರಿಗಾಳು

ಸಂಗ್ರಹಿಸಿದವರು: ಶ್ರೀ ಶಿವಮೂಜೆ ಪರಾರಿ, ಮುಂಬಾಯಿ.

ಕೆಲವೊಂದು ಸಮಯಗಳಲ್ಲಿ ಹೆಚ್ಚುಕಡಿಮೆಯಾಗಿರಬಹುದಾದರೂ ಪೋಲೀಸು ವಿಭಾಗ ಲಂಚಗುಳಿತನಕ್ಕೆ ಬಹಳ ಹಳೆಯ ಕಾಲದಿಂದಲೇ ಪ್ರಸಿದ್ಧವಾಗಿರುವುದು. ಯಾವನಾದರೂ ಪ್ರಾಮಾಣಿಕ ವ್ಯಕ್ತಿ ಈ ವಿಭಾಗದಲ್ಲಿ ದುಡಿಯುತ್ತಿದ್ದರೆ ಅವನು ವೇಶ್ಯೆಯರ ಮೊಹಲ್ಲಾದಲ್ಲಿ ವಾಸಿಸುವ ಪತಿವ್ರತೆಯಂತಿರುತ್ತಾನೆ. ಉಂಗುರದ ಕಳ್ಳತನದ ಅಪರಾಧದ ಸಂಶಯದಲ್ಲಿ ಬೆಸ್ತರವನನ್ನು ಸೆರೆಹಿಡಿದಾಗ, ಅವನಿಂದ ಹಣವನ್ನು ಕಿತ್ತುಕೊಂಡು ಸಿಪಾಯಿಗಳು ಶರಾಬು ಕುಡಿದುದರ ಉಲ್ಲೇಖವನ್ನು ಮಹಾಕವಿ ಕಾಳಿದಾಸನ ಗ್ರಂಥದಲ್ಲಿ ಕಾಣಬಹುದು. ಪೋಲೀಸರ ಈ ಚಿತ್ರವನ್ನು ಕಾಳಿದಾಸನ ಕಾಲದಿಂದ ಇಂದಿನ ತನಕವೂ ಅದೇ ರೂಪದಲ್ಲಿ ಕಾಣಬಹುದಾಗಿದೆ.

ಒಬ್ಬನು ಬಹಳ ಬುದ್ಧಿವಂತನಿದ್ದನು. ಕೋರ್ಟಿನಲ್ಲಿ ತನ್ನ ಕೇಸು ಫೇಲವಾಗುತ್ತಿರುವುದನ್ನು ಕಂಡು ಅವನು ತನ್ನ ವಕೀಲರನ್ನು ಕರೆದು—ನೋಡಿ, ಏಕೋ ನಾವು ಈ ಕೇಸಿನಲ್ಲಿ ಸೋಲಬಹುದು ಅನಿಸುತ್ತಿದೆ. ಆದರೆ ಹಾಗೆ ಆಗ ಬಾರದು. ನಾನು ನ್ಯಾಯಾಧೀಶರಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಒಲಿಸಿಕೊಳ್ಳುವ ಆಲೋಚನೆ ಮಾಡುತ್ತಿದ್ದೇನೆ ಎಂದನು.

ಛೆ, ಛೆ, ಹಾಗೆಲ್ಲದರೂ ಮಾಡಿಯೂ ಮತ್ತೇ...ಎಂದರು ವಕೀಲರು. ನೀನೆಲ್ಲಾದರೂ ಹಾಗೆ ಮಾಡಿದರೆ ಖಂಡಿತ ಈ ಕೇಸಿನಲ್ಲಿ ನೀನು ಸೋಲುತ್ತಿ. ಜಡ್ಜ್ ಅವರಿಗೆ ಲಂಚದ ಮೇಲೆ ಬಹಳ ಸಿಟ್ಟು—ಯಾರಾದರೂ ಲಂಚ ಕೊಡಲು ಪ್ರಯತ್ನಿಸಿದರೆ ಹಿಂದು ಮುಂದು ಆಲೋಚಿಸದೇನೇ ಅವರಿಗೆ ಶಿಕ್ಷೆ ವಿಧಿಸುತ್ತಾರೆ. ಆದುದರಿಂದ ನನ್ನ ಸಲಹೆಯೆಂದರೆ ಅವರಿಗೆ ಲಂಚ ಕೊಡುವ ಪ್ರಯತ್ನ ಮಾಡಲೇ ಬಾರದು.

ಕೊನೆಗೊಂದು ದಿನ ಅವನು ಕೇಸಿನಲ್ಲಿ ವಿಜಯಿಯಾದಾಗ, ನಗು ನಗುತ್ತಾ ತನ್ನ ವಕೀಲರನ್ನು ಭೆಟ್ಟಿಯಾದನು. ನೀವೇನೋ ಅವರಿಗೆ ಲಂಚ ಕೊಡಬಾರದು ಎಂದಿದ್ದರೂ, ನಾನು ಮಾತ್ರ ಅವರಿಗೆ ಲಂಚ ಕೊಟ್ಟೇ ಬಿಟ್ಟೆ ಎಂದನು.

ಚಕಿತರಾದ ವಕೀಲರು — ಅಂದರೇಽಽ...ಎಂದು ಬಾಯಿ ಬಿಟ್ಟರು.

ನಾನು ಲಂಚವನ್ನು ನನ್ನ ವಿರೋಧಿಯ ಹೆಸರಲ್ಲಿ ಕಳುಹಿಸಿದ್ದೆ ಎಂದ ಆತ.

೦ ೦ ೦

ಇಬ್ಬರು ಹಳೆಯ ಪರಿಚಿತರು ಒಬ್ಬ ಮನೋವೈಜ್ಞಾನಿಕ ಡಾಕ್ಟರನಲ್ಲಿ ಭೆಟ್ಟಿಯಾದರು. ಅಂದ ಹಾಗೆ ನೀವು ಈಗ ಬರುತ್ತಿದ್ದೀರೋ ಅಥವಾ ಹೋಗುತ್ತಿದ್ದೀರೋ ಎಂದ ಒಬ್ಬ. ಅಷ್ಟು ಗೊತ್ತಿದ್ದರೆ ನಾವು ಇಲ್ಲಿ ಏಕೆ ಇರುತ್ತಿದ್ದೆ? ಎಂದು ಉತ್ತರಿಸಿದ ಎರಡನೆಯವ.

೦ ೦ ೦

ಒಮ್ಮೆ ವಿಶ್ವವಿಜೇತ ಸಿಕಂದರನೊಡನೆ ಒಬ್ಬನು ಒಂದು ನಾಣ್ಯವನ್ನು ಬೇಡಿದನು. ಕೂಡಲೇ ಅವನು—ಎಷ್ಟು ಸಣ್ಣ ವಿಷಯವನ್ನು ಬೇಡುತ್ತಿರುವೆ ನೀನು? ಅದು ನನ್ನ ಯೋಗ್ಯತೆಗೆ ತಕ್ಕುದಾದದಲ್ಲ ಎಂದನು. ಅದಕ್ಕೆ ಆ ತಿರುಕನು—ಸಮ್ರಾಟ, ಹಾಗಾದರೆ ನನಗೆ ಒಂದು ರಾಜ್ಯವನ್ನು ಕೊಟ್ಟುಬಿಡು ಎಂದನು. ಅದಕ್ಕೆ ತಕ್ಕ ಯೋಗ್ಯತೆ ನಿನ್ನಲ್ಲಿಲ್ಲ ಎಂದು ಉತ್ತರಿಸಿದ ಸಿಕಂದರ.

೦ ೦ ೦

ಒಂದು ಬಾರಿ ಹಿರಿಯರೊಬ್ಬರು M. O. ಕಳುಹಿಸಲಿಕ್ಕಾಗಿ ಅಂಚೆಕಚೇರಿಗೆ ಹೋಗಿದ್ದರು. ಅವರ ಹತ್ತಿರ ಪೆನ್ನು ಇರದ ಕಾರಣ ಕಚೇರಿಯ ಲೇಖನಿಯನ್ನು ಶಾಯಿಯಲ್ಲಿ ಅದ್ದಿ ಬರೆಯಲು ಪ್ರಯತ್ನಿಸಿದರು. ಒಂದು ಅಕ್ಷರವನ್ನೂ ಆ ಲೇಖನಿಯಿಂದ ಬರೆಯಲು ಸಾಧ್ಯವಾಗದುದರಿಂದ ಅವರಿಗೆ ತುಸು ಸಿಟ್ಟು ಬಂತು. ಕೂಡಲೇ ಅವರು—ಏನಪ್ಪಾ, ಈ ಲೇಖನಿ ಔರಂಗಜೇಬನ ಕಾಲದ್ದು ಅಂತ ಕಾಣಿಸುತ್ತದೆ ಎಂದು ವ್ಯಂಗವಾಗಿ ನುಡಿದರು.

ಕ್ಲಾರ್ಕ್ ಒಮ್ಮೆ ಮುಗುಳ್ನಕ್ಕು—ಕ್ಷಮಿಸಿ ಸಾರ್, Enquiry ಯ ಕಿಟಕಿ ಅಚೆ ಬದಿಗಿದೆ ಎಂದನು.

೦ ೦ ೦

ಒಂದು ಊರಿನಲ್ಲಿ ಒಬ್ಬ ಪಾದ್ರಿ ಮತ್ತು ಒಬ್ಬ ನಾಸ್ತಿಕ ವಾಸಿಸಿದ್ದರು. ಒಂದು ದಿನ ದಾರಿಯಲ್ಲಿ ಭೆಟ್ಟಿಯಾದಾಗ ಆ ನಾಸ್ತಿಕನು ಪಾದ್ರಿಯೊಡನೆ—ಅಂದ ಹಾಗೆ ಫಾದರ್, ಈಗ ಸೈತಾನನಿಗೆ ಎಷ್ಟು ವಯಸ್ಸಾಗಿರಬಹುದು? ಎಂದನು. ನಿನ್ನ ವಂಶದ ರೇಕಾರ್ಡೆಲ್ಲ ನಿನ್ನ ಹತ್ತಿರವೇ ಇರಬೇಕಲ್ಲಪ್ಪಾ! ಎಂದು ಶಾಂತವಾಗಿ ಉತ್ತರಿಸಿದ ಪಾದ್ರಿ.

೦ ೦ ೦

ಕೆಲಿಫೋರ್ನಿಯಾದ ರೈಲೊಂದರಲ್ಲಿ ಪ್ರಯಾಣ ಮಾಡುತ್ತಿದ್ದ ವ ಹಳೆಯೊಬ್ಬಳು, ತನ್ನ ಪಕ್ಕದಲ್ಲಿ ಕುಳಿತಿದ್ದ ಸಹಪ್ರಯಾಣಿಕನೊಡನೆ ಮಾತನಾಡುತ್ತ—ಇತ್ತೀಚೆಗಷ್ಟೇ ನಾನು [illegible] ಬಂದಿದ್ದೇನೆ ಎಂದಳು.

(ಇಲ್ಲಸ್ಟ್ರೇಟೆಡ್, [illegible])

ಮೈಸೂರು ಟೈಪ್ ಫೌಂಡ್ರಿ
ಎಸ್. ಸಿ. ರೋಡು, ಬಂಡಿ ಶೇಷಮ್ಮ ಛಾಲ್ಟ್ರಿ,
ಬೆಂಗಳೂರು—9.
ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಕೊಡುವುದರಿಂದ ವಿಶೇಷ ಉಳಿತಾಯವಾಗುತ್ತದೆ.
ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟ್ ಮಾಡಿಕೊಡುತ್ತಿದ್ದೇವೆ. ಇಂದೇ ವಿವರಗಳಿಗೆ ಬರೆಯಿರಿ.
THE MYSORE TYPE FOUNDRY
LETTERS FOUNDERS
S. C. Road, Bandi Seshamma Choultry
BANGALORE—9.

ಉತ್ಸವಗಳು

(ಹನ್ನೊಂದನೇ ಪುಟದಿಂದ)

ತಿನ್ನುವವನು ಕಳ್ಳನೆನಿಸುವನು" ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ್ದಾನೆ.

"ಥ್ಯಾಂಕ್ಸ್." ಅಂದ ಕೂಡಲೇ ಏನೂ ಹೋಗುವುದೂ ಇಲ್ಲ. ಅನಿಸಿಕೊಂಡವನಿಗೆ ಆಗುವುದೂ ಏನಿಲ್ಲ. ಆದರೂ ಅದು ಶಿಷ್ಟಾಚಾರ. ಅಂತಹ ಶಿಷ್ಟಾಚಾರವನ್ನು ದೇವರ ವಿಷಯದಲ್ಲಿಯೂ ರೂಢಿಗೊಳಿಸಲು, ಪ್ರಚಾರ ರೂಪದಲ್ಲಿಯೇ ಯಾಗಗಳೆಂದೂ ಹೋಮಗಳೆಂದೂ ಏರ್ಪಡಿಸಿದರು. ಪ್ರಚಾರ ರೂಪದಲ್ಲಿ ಹರಡುವಾಗ, ಶಕ್ತಿಯಿದ್ದವರ ಮೂಲಕ ದಾನಧರ್ಮ ಮುಂತಾದ ಖರ್ಚುಗಳೂ ಕೂಡಿಬಂದುವು. ಶಕ್ತಿಯುಳ್ಳವರು ಶಕ್ತಿಯಿಲ್ಲದ ಅಸಂಖ್ಯ ಜನರ ಕೃತಜ್ಞತೆಗಳೂ ದೇವರಿಗೆ ಸಲುವಂತೆ ಮಾಡಿದರು. ಹೋಮ ದಕ್ಷ ಮಾಡುವ ಆಹುತಿಗಳೇ ದೇವದೇವತೆಗಳಿಗೆ ಕೃತಜ್ಞತೆಯ ಸಮರ್ಪಣೆ; ನಾವು ನಮ್ಮ ಉದರಕ್ಕೆ ಮಾಡಿಕೊಳ್ಳುವ ಹೋಮಕ್ಕಾಗಿ ಕೃತಜ್ಞತಾರೂಪದ ಪ್ರತಿಹೋಮ ನಮಗೆ ನಾವೇ ಮಾಡಿಕೊಳ್ಳುವುದನ್ನೇ ದೇವರಿಗೂ ಮಾಡುತ್ತೇವೆ.

ಹಾಗೆ ನೋಡಿದರೆ, ಬರಿ ಆಹಾರ ಮಾತ್ರವೇ ಮನುಷ್ಯರ ಉನ್ನತಿಗೆ ಸಾಲದು. ಪ್ರಪಂಚದಲ್ಲಿರುವ ಪ್ರತಿ ವಸ್ತುಗಳೂ, ಪ್ರತಿ ಪ್ರಾಣಿಗಳೂ ಮನುಷ್ಯರ ಉಪಯೋಗಕ್ಕೆ ಬರುವಂತವು. ಮಣ್ಣು, ನೀರು, ಬೆಂಕಿ, ಗಾಳಿ, ಆಕಾಶಗಳೆಂಬ ಪಂಚ ಭೂತಗಳೂ ಪ್ರಾಣಿಗಳಿಗೆ ಸಹಕಾರಿ ಸತ್ವ. ಅವುಗಳಿಗೆಲ್ಲ ಕೃತಜ್ಞತೆ ಸಲ್ಲಿಸಲು ಪ್ರಾಣಿಶ್ರೇಷ್ಠನೆನಿಸಿದ ಮನುಷ್ಯನಿಗೆ ತಾನೇ ಸಾಧ್ಯ? ಶಿಷ್ಟಾಚಾರಗಳನ್ನು ಏರ್ಪಡಿಸಿದ ಮನುಷ್ಯರಿಂದಲೇ ಅದು ಸಾಧ್ಯ; ಅವನೇ ಅರ್ಹನು. ಅಂತಲೇ ಪಂಚ ಭೂತಗಳನ್ನು ತೃಪ್ತಿಪಡಿಸಲು, ದನ, ಕುರಿ, ಕುದುರೆ, ಕೋಣ, ಆನೆ ಮೊದಲಾದ ಮೂಕ ಪ್ರಾಣಿಗಳಿಂದಾಗುವ ಉಪಕಾರಗಳಿಗೆ ಕೃತಜ್ಞತೆ ಸೂಚಿಸಲು, ವನಸ್ಪತಿಗಳಿಂದಾಗುವ ಉಪಯೋಗದ ಋಣವನ್ನು ಸಲ್ಲಿಸಲು, ಮಾನವರಂತೆಯೇ ಬದುಕಿನ ಹಕ್ಕು ಪಡೆದಿರುವ ಕ್ರೂರ ಮೃಗಗಳಿಗೆ ಮಾನವರಿಂದಾಗುವ ತೊಂದರೆಗಳಿಗೆ ಅನುತಾಪ ಪ್ರದರ್ಶನ ಮಾಡಲು, ಬೇರೆ ಬೇರೆ ಹೋಮಗಳಿವೆ. ವೇದಗಳಲ್ಲಿ ಯಾಗಗಳ ಬಗೆ ಬಗೆಗಳನ್ನು ಅವುಗಳ ಕಾರಣ ವಿಧಿಗಳನ್ನೂ ಮನದಂದು ನೋಡಿದರೆ ನಮ್ಮ ಪ್ರಾಚೀನರು ಶಿಷ್ಟಾಚಾರ ಸಂಪ್ರದಾಯದಂತೆಯೇ ಯಾಗಗಳನ್ನೂ ಹೋಮಗಳನ್ನೂ ಏರ್ಪಡಿಸಿದ್ದಾರೆಂದು ಗೊತ್ತಾಗುತ್ತದೆ.

ಇವೆಲ್ಲ ಕೇವಲ ಮೂಢತನಗಳಿಂದ ಸೃಷ್ಟಿಸಲ್ಪಟ್ಟವೆಂದು ಹೇಳುವುದಾದರೆ, ಶಿಷ್ಟಾಚಾರ ಸಂಪ್ರದಾಯವನ್ನು ಮರೆಯಬೇಕೆಂದೇ ಹೇಳಿದಂತಾಯಿತು.

ಕಾಲ ವ್ಯತ್ಯಾಸವಾದ ಹಾಗೆ ರೀತಿ ನೀತಿ ನಡಾವಳಿಕೆಗಳಲ್ಲಿ ವ್ಯತ್ಯಾಸವಾಗುವುದು ಸಹಜ. ಮಾನವರುಗಳ ಆಚಾರಗಳಲ್ಲಿ ವ್ಯತ್ಯಾಸವಾಗುತ್ತದೆಯೇ ಹೊರತು ಮನೆಯೇ ಬೇಡವೆಂದಾಗುವುದಿಲ್ಲವಷ್ಟೆ? ಅದರಂತೆ ಕೃತಜ್ಞತಾ ಪ್ರದರ್ಶನಗಳಲ್ಲಿ ವ್ಯತ್ಯಾಸವಾದರೇ ಹೊರತು, ಕೃತಜ್ಞತೆ ಸೂಚಿಸುವುದು ಅನಾವಶ್ಯಕವೆಂಬ ನ್ಯಾಯ ಬರಲಾರದು. ಮಾನವತ್ವದ ಮರ್ಯಾದೆಗೆ ಶಿಷ್ಟಾಚಾರಗಳು ಅತ್ಯಗತ್ಯವೇ.

ಆದರೆ ಹಿಂದಿನ ಕಾಲದಂತಹ ಯಾಗ ಹೋಮಗಳು ಈಗ ಅಪೂರ್ವವಾದುವು. ಆಗಲಿ, ಮಾನವರು ಜ್ಞಾನದಿಂದ ವಿಜ್ಞಾನಕ್ಕೆ ಏರಿದುದರ ಪರಿಣಾಮವಿದು ಎನ್ನೋಣ. ಎಲ್ಲೋ ಅಪರೂಪಕ್ಕೆ ಯಾರಾದರೂ ಯಾಗವೋ ಹೋಮವೋ ಮಾಡಿದರೆ ಮಾಡಿದರು, ಬಿಟ್ಟರೆ ಬಿಟ್ಟರು. ಅದರಲ್ಲಿ ಶ್ರದ್ಧೆ ನಂಬುಗೆಗಳು ಇರಲಿ; ಬಿಡಲಿ; ಅದರಿಂದೇನೂ ಮುಳುಗಿ ಹೋಗುವುದಿಲ್ಲ. ಅದಕ್ಕಾಗಿ ಕೋಪಗೊಂಡು ಸೃಷ್ಟಿಕರ್ತನು ಮಾಡಿಟ್ಟ ನಿಯಮಗಳನ್ನು ಮೀರಿಸುವುದಿಲ್ಲ; ಕೋಪಿಸುವುದಿಲ್ಲ, ಹಗೆ ತೀರಿಸುವ ಮನೋಭಾವವೂ ದೇವರಿಗಿಲ್ಲ; ದೇವತೆಗಳಿಗೂ ಇಲ್ಲ; ಪಂಚಭೂತಗಳಿಗೂ ಇಲ್ಲ. ಎಂದೋ ತಿರುಗಿಸಿ ಬಿಡಲ್ಪಟ್ಟ ಸೃಷ್ಟಿ ಚಕ್ರವು ಒಂದೇ ರೀತಿಯಾಗಿ ತಿರುಗುತ್ತಾ ಇರುತ್ತದೆ. ನಮ್ಮ ಕೃಪಣತನದ ಕೃತಜ್ಞತೆಗಳಿಂದ ದೇವದೇವತೆಗಳಿಗೆ ಏನಾಗಬೇಕಾಗಿದೆ?

ಆದರೆ ಕೃತಜ್ಞತೆ ಇಲ್ಲದೆ, ಕೃತಘ್ನರಾಗುವುದು ಸರಿಯಲ್ಲವೆಂಬ ಪ್ರಜ್ಞೆ ಆಗಾಗ ಉತ್ಸವಗಳನ್ನು ನಡೆಯಿಸುವ ಮಾನವರಿಗಿದ್ದರೆ ಸಾಕು.

ಏಕೆಂದರೆ ಉತ್ಸವಗಳು ಮಿತಿಯಿಲ್ಲ. ಯಾವಾಗಲೂ ಏನೋ ಒಂದು ಉತ್ಸವವಿದ್ದೇ ಇರುತ್ತೆ. ತನ್ನ ಹುಟ್ಟಿದ ಹಬ್ಬದಿಂದ ಹಿಡಿದು ಪ್ರಜಾರಾಜ್ಯೋತ್ಸವದ ವರೆಗೂ ಅನೇಕ ಉತ್ಸವಗಳಿವೆ.

ಹಿಂದೆ ಪಾರತಂತ್ರ್ಯದಲ್ಲಿ ತೊಳಲಾಡಿದ ಭಾರತೀಯರಿಗೆ ಸ್ವಾತಂತ್ರ್ಯ ಸಿಕ್ಕಿತು. ಪ್ರಜಾರಾಜ್ಯವು ರೂಪಿತವಾಯಿತು. ಆ ದಿನವನ್ನು ಪವಿತ್ರವೆಂದು ಭಾವಿಸಿ ಪ್ರಜಾರಾಜ್ಯ ದಿನೋತ್ಸವವೆಂದು ಆಚರಿಸುತ್ತೇವೆ.

ಆಚರಿಸದಿದ್ದರೆ ಕೊಳ್ಳೇ ಹೋಗುವುದೇನೂ ಇಲ್ಲವಷ್ಟೆ?

ಆದುದರಿಂದ ಇದು ಕೂಡಾ, ದೈವೀ ಭಾವವು ತೇಲಾಡುವ ಕೃತಜ್ಞತಾ ಪ್ರದರ್ಶನದ ಒಂದು ಯೋಗದಿನವೆಂದೇ ಆಗುತ್ತದೆ. ಇದರಲ್ಲಿ ಪ್ರಜೆಗಳು ತಮ್ಮ ಕೃತಜ್ಞತೆಗಳನ್ನು ಹೋಮಿಸುತ್ತಾರೆ.

ಯಾರಿಗೆ ಕೃತಜ್ಞತೆ? ಏಕೆ ಕೃತಜ್ಞತೆ? —ಎಂದು ಕೇಳುವುದಾದರೆ, ಅದೊಂದು ಪುಣ್ಯಸ್ಮರಣೆ, ಮಾಡಿದುದನ್ನು ಮರೆಯದಿರುವುದು; ಸ್ಮರಿಸುವುದು. ಇತರರನ್ನು ಸ್ಮರಿಸ ಹಚ್ಚುವುದು. ಮಾಡಬೇಕಾದುದನ್ನು ಆಲೋಚಿಸುವುದು.

ಸ್ವಾತಂತ್ರ್ಯ ಬಂದು ಪ್ರಜಾರಾಜ್ಯವು ರೂಪುಗೊಳ್ಳಬೇಕಾದರೆ, ಯಾರು ಯಾರು, ಎಷ್ಟೆಷ್ಟು ಕಲಹ ಮಾಡಿದ್ದಾರೆ, ಕಷ್ಟಪಟ್ಟಿದ್ದಾರೆ, ಅದನ್ನು ಕಾಪಾಡಲು ಇದುವರೆಗೆ ಮಾಡಿದ್ದೇನು, ಇನ್ನು ಮುಂದೆ ಮಾಡಬೇಕಾದುದೇನು, ಎಂಬುದನ್ನೆಲ್ಲಾ ನೆನೆದುಕೊಳ್ಳುವ, ವಿಮರ್ಶಿಸಿಕೊಳ್ಳುವ ಆಲೋಚನೆಗಳನ್ನು ಚಾಲೂಗೊಳಿಸುವ, ಈ ವರ್ಷಕ್ಕೊಮ್ಮೆ ಬರುವ ಶುಭ ದಿನ. ಶುಭ ಎಂದ ಕೂಡಲೇ, ಅಲ್ಲಿ ದೈವೀ ಭಾವವಿದ್ದೇ ಇರುತ್ತೆ. ಭಾರತಮಾತೆಯನ್ನು ದೇವಿಯ ಸ್ವರೂಪದಲ್ಲಿ ಕಾಣುವವರು ಭಾರತೀಯರು. ಆದುದರಿಂದ ಪ್ರಜಾರಾಜ್ಯೋತ್ಸವವು ಕೇವಲ ರಾಜಕಾರಣಿಗಳು ಮಾತ್ರ ಸೇರಿ ನಡೆಸುವ ಉತ್ಸವವೆನಿಸುವುದಿಲ್ಲ. ದೇಶದ ಎಲ್ಲಾ ಪ್ರಜೆಗಳಿಗೂ ಸಂಬಂಧಿಸಿದೆ. ದೇಶಕ್ಕಾಗಿ ಮಾಡಿದವರಿಗೆ, ಮಡಿದವರಿಗೆ, ದುಡಿಯುವವರಿಗೆ ಕೃತಜ್ಞತೆ ಸಲ್ಲಿಸುವ ಸಂಸ್ಮರಣೆಯ ದಿನ; ಸ್ವಾತಂತ್ರ್ಯ ಜ್ಯೋತಿ ಉಜ್ವಲವಾಗಿ ಬೆಳಗುವಂತೆ ಹಚ್ಚಿನ ವಿಚಾರವೆಂಬ ಎಣ್ಣೆಯನ್ನು ಸುರಿಯಬೇಕೆಂದ ದಿನ; ಭಾರತದ ಪ್ರಜೆಗಳೆಲ್ಲರೂ ರಾಜಕಾರಣಗಳಲ್ಲಿ ಜ್ಞಾನ ಸಂಪಾದಿಸಬೇಕೆಂಬುದನ್ನು ಎಚ್ಚರಗೊಳಿಸುವ ಪರ್ವದಿನವಿದು.

ಒಂದು ನೋಡಿದರೆ ಇದೂ ಸಹ ಒಂದು ಯಾಗವೇ, ಹೋಮವೇ. ಪ್ರತಿಯೊಬ್ಬ ಪ್ರಾಣಿಯೂ ಪ್ರತಿಯೊಂದು ಯಂತ್ರವೂ ಶಕ್ತಿ ಬರಲು ಇಂಧನಗಳ ಹೋಮ ಬೇಕಾಗುವ ಹಾಗೆಯೇ, ಪ್ರಜಾರಾಜ್ಯವು ಸುಭದ್ರವಾಗಿ ಸಾಗಲಿಕ್ಕೂ ವರ್ಷೇ ವರ್ಷೇ ಪ್ರಜಾರಾಜ್ಯೋತ್ಸವವು ನಡೆಯಬೇಕು. ಇದರಲ್ಲಿ ಹಿಂದಿನ ಕಾಲದಂತೆ ಹೋಮಧೂಮಗಳು ಪ್ರತ್ಯಕ್ಷ ಕಾಣಿಸದಿದ್ದರೂ, ಉತ್ಸವ ಎನ್ನುವಾಗ ದೈವಿಕ ಭಾವನೆಗಳಿದ್ದು, ಪ್ರಾಚೀನರ ಎಂತಹವರ(?) ದಿವ್ಯ ಉದ್ದೇಶವನ್ನು ಸ್ಮರಿಸುತ್ತಾ ಈ ಪ್ರಜಾರಾಜ್ಯೋತ್ಸವದ ಸುಸಂದರ್ಭದಲ್ಲಿ ಭಾಗಿಗಳಾಗೋಣ.

ನಮ್ಮ ಪ್ರಜಾರಾಜ್ಯವು ಇದುವರೆಗೆ ಪರಿಣಮಿಸಿಕೊಂಡು ಬಂದ ಪರಿಯನ್ನು ನೋಡಿದಾಗ, ಮುಂದೆ ದೇವರೇ ಒಳ್ಳೆಯದಾಗಿ ನಡೆಸಬೇಕು, ಅನ್ನಿಸುವುದಿಲ್ಲವೆ?

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾರ್ಟಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸಂಗ್ರಾಹ್ಯ ಸಂಕಲನಗಳು

ವಿಕಾಂತ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ವಿಚಿತ್ರ ಕಳ್ಳಪೆಟ್ಟಿ	1—50
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	2—00

ನವಭಾರತ ಪುಸ್ತಕ ಭಂಡಾರ, ಉಡುಪಿ.

ವೀರವರ ರಾಮಸಿಂಹ!

(ಹತ್ತನೇ ಪುಟದಿಂದ)

—ಜಸವಂತಸಿಂಹನ ಏಕ ಮಾತ್ರ ಕುಮಾರನಾಗಿದ್ದನು. ಕುದುರೆಯನ್ನು ದೌಡಾಯಿಸಿಕೊಂಡು ಹೋದ ವೀರ ಕುಮಾರ ರಾಮಸಿಂಹನು ಅರಮನೆಯ ಕೋಟೆಯ ಬಳಿ ಸೇರುತ್ತಲೇ ತನ್ನ ಕುದುರೆಯ ವೇಗವನ್ನು ಕಡಿಮೆ ಮಾಡಿ ಮೆಲ್ಲನೆ ಕುದುರೆಯ ಮೇಲಿನಿಂದಿಳಿದು ಕೋಟೆಯ ಒಳ ಪ್ರವೇಶ ಮಾಡಿದನು.

ಅರ್ಧಂಬರ್ಧವಾಗಿ ಕೂಗಾಡುತ್ತಿರುವ ಅಮರಸಿಂಹನ ಹೆಣವನ್ನೂ ದೂರದಲ್ಲಿ ನಿಂತಿದ್ದ ಸೈನಿಕರನ್ನೂ ವೀರ ಕುಮಾರನು ಒಂದೇ ದೃಷ್ಟಿಯಿಂದ ನೋಡಿಕೊಂಡನು. ಕಣ್ಣಿನ ಮಿಂಚು ತೆರೆಯುವಷ್ಟರಲ್ಲಿಯೇ ಮೃತ ದೇಹವನ್ನು ಬಿಚ್ಚಿ ತನ್ನ ಕುದುರೆಯ ಮೇಲೆ ಹೇರಿ ಕಟ್ಟಿಕೊಂಡು ಹೊರಡಲನುವಾದನು; ವೀರ ಮಾರ್ತಾಂಡ ರಾಮಸಿಂಹ. ಇದೆಲ್ಲವೂ ಓರ್ವ ಸಮರ್ಥ ಜಾದೂಗಾರನ ಕುಶಲ ಕರ್ಮದಂತೆ ನಡೆದು ಹೋಯಿತು. ಇಷ್ಟರ ತನಕ ವೀರ ಮಾರ್ತಾಂಡನ ಈ ಕಾರ್ಯ ಸೈನಿಕರ ಗಮನಕ್ಕೇ ಬಂದಿರಲಿಲ್ಲ. ಆದರೆ ಈಗ ಇನ್ನೇನು ಕುದುರೆಯನ್ನು ದೌಡಾಯಿಸಬೇಕೆನ್ನುವಷ್ಟರಲ್ಲಿಯೇ ಸೈನಿಕರು ಕುಮಾರನ ಈ ಕಾರ್ಯವನ್ನು ಗಮನಿಸಿ ನಾಲ್ಕೂ ನಿಟ್ಟಿನಿಂದ "ಹಿಡಿಯಿರಿ! ಹಿಡಿಯಿರಿ! ಬಡಿಯಿರಿ!" ಎಂದು ಬೊಬ್ಬಿಡುತ್ತ ಓಡೋಡಿ ಬಂದರು. ರಾಮಸಿಂಹನ ಕುದುರೆ ಓಡುತ್ತಲೇ ಇತ್ತು. ಈ ಸ್ಥಿತಿಯಲ್ಲೇ ರಾಮಸಿಂಹನ ಮೈಯೆಲ್ಲ ಶಸ್ತ್ರಗಳ ಪೆಟ್ಟಿನಿಂದ ಗಾಯವಾಗಿ ರಕ್ತರಂಜಿತವಾಯಿತು. ಪೆಟ್ಟುಗಳನ್ನು ಸಾಧ್ಯವಿದ್ದಷ್ಟು ತಪ್ಪಿಸಿಕೊಳ್ಳುತ್ತ ಈ ವೀರವರನು ಕುದುರೆಯನ್ನು ವಾಯುವೇಗದಿಂದ ಓಡಿಸುತ್ತ ಪವಾಡಪುರುಷನಂತೆ ಶತ್ರುಸೈನಿಕರನ್ನು ಹಿಂದೆ ಹಾಕಿ ಕಣ್ಮರೆಯಾದನು!

ಸೈನಿಕರು ಬೆನ್ನಟ್ಟಿ ಬರುತ್ತಿದ್ದಂತೆಯೇ ರಾಮಸಿಂಹನು ಅಮರಸಿಂಹನ ಮೃತದೇಹದ ಸಹಿತವಾಗಿ ರಾಣಿಯ ಮಹಲಿನೊಳಗೆ ನುಗ್ಗಿದನು. ಅಷ್ಟರಲ್ಲಿ ಮಹಲಿನ ಮಹಾದ್ವಾರವು ಮುಚ್ಚಲ್ಪಟ್ಟಿತು. ಸಿದ್ಧಪಡಿಸಿಟ್ಟಿದ್ದ ಚಿತೆಯ ಮೇಲೆ ಅಮರಸಿಂಹನ ಮೃತದೇಹವನ್ನಿಟ್ಟು ರಾಮಸಿಂಹನು ರಾಣಿಯ ಪಾದಗಳಿಗೆರಗಿದನು.

ರಾಮಸಿಂಹನ ಮೈಕೈಗಳಿಂದ —ಸೋರುತ್ತಿದ್ದ ರಕ್ತ ಪ್ರವಾಹವು— ರಾಣಿಯ ಪಾದಗಳನ್ನು ತೊಳೆಯುತ್ತಿರಲು ಆನಂದದಿಂದ ಗದ್ಗದಿತಳಾದ ರಾಣಿ ರಾಮಸಿಂಹನನ್ನು ಮೇಲೆತ್ತಿ ಮೈದಡವುತ್ತ — "ರಾಮಾ! ನೀನು ನನ್ನ ಮಾನವನ್ನು ರಕ್ಷಿಸಿ ಈ ವಂಶವನ್ನು ಬೆಳಗಿಸಿದ ವೀರಮಾರ್ತಾಂಡನಾಗಿರುವೆ ಅಪ್ಪಾ! ದುರ್ಗಾದೇವಿಯು ನಿನ್ನ ಕೀರ್ತಿಯನ್ನು ಇದೇ ರೀತಿ ಬೆಳಗಿಸಲಿ! ನಾನು ಬರುತ್ತೇನೆ! ಕಂದ!" ಎಂದು ಹೇಳಿದ ರಾಣಿ, ಮತ್ತೊಮ್ಮೆ ರಾಮಸಿಂಹನನ್ನು ಅಪ್ಪಿ ಮುದ್ದಾಡಿ ಚಿತೆಯೇರಿದಳು! ರಾಮಸಿಂಹನು ಗದ್ಗದಿತನಾಗಿ ಬಂಡೆಕಲ್ಲಿನಂತೆ ಈ ದೃಶ್ಯವನ್ನು ನೋಡುತ್ತ ನಿಂತುಬಿಟ್ಟನು! ಚಿತೆಯೇರಿದ ರಾಣಿ, ಮತ್ತು ಅಮರಸಿಂಹನ ಕಪಾಲಮೋಕ್ಷದ ಶಬ್ದ ಕಿವಿಗೆ ಬೀಳುವುದರೊಡನೆಯೇ ಮಹಾದ್ವಾರವನ್ನು ಸೈನಿಕರು ಒಡೆದ ಶಬ್ದವೂ ರಾಮಸಿಂಹನ ಕಿವಿಗಳಿಗಪ್ಪಳಿಸಿತು! ಆದರೆ ಅಮರತ್ವವನ್ನು ಪಡೆದಿದ್ದ ವೀರ ಮಾರ್ತಾಂಡ ರಾಮಸಿಂಹನು ಇದಕ್ಕೆ ಹೆದರುವನೇ!

ಕಾಣದ ಅಮರನಾಗಿಯೇ ಕೀರ್ತಿಶಾಶ್ವತಿಯನ್ನು ವರಿಸಿದ ಕುಮಾರ ರಾಮಸಿಂಹನ ಧೈರ್ಯ-ಶೌರ್ಯದ ಉಲ್ಲೇಖ, ಭಾರತೀಯ ರಕ್ತರಂಜಿತ ಇತಿಹಾಸದಲ್ಲಿ ಅಮರವಾಗಿ ಶೋಭಿಸುತ್ತಿದೆ!

ಹುರಿಗಾಳು

(ಇಪ್ಪತ್ತೈದನೇ ಪುಟದಿಂದ)

ನಿಮ್ಮ ಉಚ್ಚಾರಣೆ ತಪ್ಪು. ಅದರ ಶುದ್ಧ ರೂಪ "ಸಾಟ್ ಹೋಸ್". ಕಲಿಫೋರ್ನಿಯಾದಲ್ಲಿ ಎಲ್ಲ 'ಜೆ' ಶಬ್ದಗಳನ್ನೂ 'ಹೆ' ಎಂದೇ ಉಚ್ಚರಿಸಲಾಗುತ್ತದೆ. ಅದು ಹಾಗಿರಲಿ, ಯಾವ ತಿಂಗಳಲ್ಲಿ ಹೋಗಿದ್ದಿರಿ ಅಲ್ಲಿಗೆ?

ಪಾಪ, ಹೆಂಗಸು ಒಂದು ಕ್ಷಣ ಆಲೋಚಿಸಿ—ಹೂನ್ ಮತ್ತು ಹುಲಾಯಿಯಲ್ಲಿ ಎಂದುಬಿಟ್ಟಳು.

○ ○ ○

ಒಬ್ಬ ವ್ಯಕ್ತಿ ಒಮ್ಮೆ ಪಾದ್ರಿಯೊಂದಿಗೆ—ಪ್ರಾರ್ಥನೆ ಮಾಡುವಾಗ ಸಿಗರೇಟು ಎಳೆದರೆ ತಪ್ಪಾಗುತ್ತದೆಯೇ? ಎಂದು ಜಿಜ್ಞಾಸೆಯಿಂದ ವಿಚಾರಿಸಿದನು. ಪಾದ್ರಿಗೆ ತುಂಬ ಸಿಟ್ಟು ಬಂತು. ಹಾಗೆ ಮಾಡಬಾರದು, ಮಾಡಿದರೆ ಅದು ದೇವರನ್ನು ಅವಮಾನಿಸಿದಂತೆ, ತಿರಸ್ಕರಿಸಿದಂತೆ ಎಂದನು. ಆದರೂ ಆ ವ್ಯಕ್ತಿಯ ಜಿಜ್ಞಾಸೆ ಕಡಿಮೆಯಾಗಲಿಲ್ಲ. ಕ್ಷಮಿಸಿ, ಒಂದು ವೇಳೆ ಸಿಗರೇಟು ಸೇದುತ್ತಿದ್ದಾಗ ಪ್ರಾರ್ಥನೆ ಮಾಡಿದರೆ ಹೇಗೆ? ಎಂದು ಎರಡನೆಯ ಪ್ರಶ್ನೆ ಕೇಳಿದನು. ಪಾದ್ರಿಯ ಮುಖ ಅರಳಿತು. ಪ್ರಾರ್ಥನೆಯನ್ನು ಯಾವ ರೀತಿಯಲ್ಲೂ, ಎಲ್ಲೂ, ಹೇಗೂ ಮಾಡಬಹುದು. ನಿಜವಾಗಿ ನೋಡಿದರೆ ಯಾವ ಕೆಲಸವನ್ನಾದರೂ ಸರಿಯೇ, ಪ್ರಾರ್ಥನಾ ಪೂರ್ವಕವಾಗಿಯೇ ಮಾಡಬೇಕು. ಎಂದು ಪಾದ್ರಿ ವಿವರಿಸಿದನು.

○ ○ ○

ಒಂದು ಮೊಕದ್ದಮೆಯ ವಿಚಾರಣೆ ನಡೆಯುತ್ತಿತ್ತು. ಆರೋಪಿಯ ಮಾತು ಕೇಳಿ ಬೇಸತ್ತ ನ್ಯಾಯಾಧೀಶರು — ನೋಡಪ್ಪಾ, ನೀನು ಬಹಳ ವಿಚಿತ್ರವಾಗಿ ಅಸ್ಪಷ್ಟ ಸತ್ಯವನ್ನು ಹೇಳುತ್ತಿರುವೆ. ನೀನೊಂದು ಕೆಲಸ ಮಾಡು. ಒಬ್ಬ ವಕೀಲನನ್ನು ಹಿಡಿ. ಅವನು ಇದೇ ಮಾತುಗಳನ್ನು ಸ್ಪಷ್ಟವಾಗಿ ಹೇಳಬಹುದು ಎಂದು ಸಲಹೆಯಿತ್ತರಂತೆ.

○ ○ ○

ಪತಿ:- ಲೇ ನೋಡಿಲ್ಲಿ, ನಿನ್ನ ಹುಟ್ಟಿದ ಹಬ್ಬಕ್ಕೆ ಇದು ನನ್ನ ಉಡುಗೊರೆ.

ಸತಿ:— ಎಷ್ಟು ಚೆನ್ನಾಗಿದೇರೀ ಈ ಮುತ್ತಿನ ಹಾರ ...ಆದರೆ ...ನೀವು ಒಂದು ಕಾರನ್ನು ಉಡುಗೊರೆಯಾಗಿ ಕೊಡುತ್ತೇನೆ ಎಂದು ಹೇಳಿದ್ದಿರಲ್ಲಾ?

ಪತಿ:— ಕಾರನ್ನೇ ಕೊಡೋಣ ಎಂದು ಮನಸ್ಸಿತ್ತು, ಆದರೆ ಏನು ಮಾಡೋದು? ಇಮಿಟೇಶನ್ ಕಾರು ಸಿಗೋದೇ ಇಲ್ಲ.

ಉಡುಪಿ ಕರ್ನಾಟಕ ಸಂಘದ
ಜನಪ್ರಿಯ ಪ್ರಕಟಣೆಗಳು

೧ ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)
ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು
(ಡಾ। ಕೆ. ಎಲ್. ಐತಾಳ, ಎಂ. ಬಿ., ಬಿ. ಎಸ್.)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ
(ಬಡೆಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಭದ್ರಾವತಿ)
ಸರ್ವರೂ ಓದಲೇ ಬೇಕಾದ ಭೌತಿಕದರ್ಶನದ ಸ್ಥೂಲ ಪರಿಚಯ. ಬೆಲೆ ರೂ. ಒಂದು

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ ೫೦ ಪೈಸೆ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,
ಪಾಲುಕೋಟೆ, ಉಡುಪಿ, ದ. ಕ.

❀ ಬೇಟೆಗಾರ್ತಿ ❀

ಜೋಡಿ ಹಕ್ಕಿಗಳ ಗುರಿಮಾಡಿ, ಮಸೆಗಣೆ ಹೂಡಿ
ನಿಂತಿರ್ಪ ಬೇಟೆಗಾರ್ತಿ!
ಎಡಗೈಲಿ ಬಿಲ್ಪಿಡಿದು, ಬಲಗೈಯಿಂ ಹೆದೆಯೆಳೆದು
ಕೂರಂಬನೆಸೆವ ಮೂರ್ತಿ!

○

ಬಿಲ್ಗೆ ಬಾಣವ ಜೋಡಿಸುತ್ತ ಕಿವಿವರೆಗೆಳೆದು
ಬಿಟ್ಟ ಬಲಗೈಯೆಸೆದಿರೆ
ಇವಳ ಕಿವಿಯೋಲೆ — ಕೇಶಾಭರಣ— ಸುಳಿಗುರುಳು
ಪೊಚ್ಚಪೊಸತರವೆ ನಿಸಿದೆ.

○

ಕೈಯ ಬಿಲ್ಲನು ನಾಚಿ ತಲಿಸುದು ಕುಡುಹುಬ್ಬ
ಅವಿಚಲಿತವಿವಳ ನೇತ್ರಂ
ಕುಚಗಳೆರಡಕೆ ಕಲಹವಾಗಿಸೊಲು ಮಧ್ಯಸ್ಥ—
ವಾಗಿಹುದು ಕಂಠಸೂತ್ರಂ!

○

ಸ್ತನ-ನಿತಂಬಗಳ ನಿರ್ಮಾಣಕೋಸುಗ ಕೆತ್ತಿ
ತೆಗೆದು ಕೃಶವಾದ ಮಧ್ಯ
ಬೇಲೂರ ಬೇಟೆಗಾತಿಯು ದಿವ್ಯ ಮೂರುತಿಯು
ಸೃಷ್ಟಿ ಸರ್ವಾಂಗ ಹೃದ್ಯ!

○

ನಿಂತ ರೀತಿಯು ನಿಲುವು ಹೊಳೆವ ಕೈಗಳ ಬಲವು
ವೀರ ರಸವನು ಚಿಮ್ಮಿದೆ
ಅಂಗಾಂಗಗಳು ಚಲಿಸುತ್ತ ತುಂಬಿ ಚೇತರಿಸಿತವು
ಚೈತನ್ಯ ಹೊರಹೊಮ್ಮಿದೆ.

○

ಹೊಡೆದ ಹಕ್ಕಿಗಳ ಜತೆ ಚೆನ್ನಿಗನ ಹೃದಯವಿದು
ಕೂರಂಬು ಸೆಳೆವ ನೋಟ.
ಚೆನ್ನಕೇಶವನ ಮನವನು ಸೂರೆ-ಗೊಂಡೊಂದು
ಸಂಕೇತ ಬೇಟೆಯಾಟ!

—ಕಾವ್ಯಾರಾಧಕ.

○○ ○ ○ ○○

ಮದುವೆಯಾದವನಿಗೆ ಹಲವು ತೊಂದರೆಗಳಿರಬಹುದು, ಆದರೆ ಮದುವೆಯಾಗದವನಿಗೆ ಒಂದು ಸುಖವೂ ಇಲ್ಲ.

○ ○ ○ ○

ಅತೃಪ್ತಿ ಇರುವ ಮನುಷ್ಯನಿಗೆ ಯಾವ ಕಾರ್ಯದಲ್ಲೂ ಸುಖ ಸಿಗದು.

○○ ○ ○ ○○

ತುಳುನಾಡ ಇತಿಹಾಸದ ಸಿಂಹಾವಲೋಕನ

(ಒಂಭತ್ತನೇ ಪುಟದಿಂದ)

ವು, ಬ್ರಾಹ್ಮಣೇತರರಲ್ಲಿ ಅಧಿಕಾರ ಪರಂಪರೆಯು ಹೆಣ್ಣಿನ ಮೂಲಕವಾಗಿತ್ತು. ಇದನ್ನು ಅಳಿಯ ಸಂತಾನ ಸಂಪ್ರದಾಯ ಕಟ್ಟು ಎಂದು ಕರೆಯುತ್ತಾರೆ. ಇದೊಂದು ಬಹು ಪ್ರಾಚೀನ ಕೌಟುಂಬಿಕ ವ್ಯವಸ್ಥೆ ಎನ್ನಬಹುದು. ಬೇರೆ ಬೇರೆ ಹಂತಗಳಲ್ಲಿ ಜನ ಪ್ರಭೇದಗಳ ಹೊಂದಾಣಿಕೆಯಿಂದ ಇಲ್ಲಿ ಬಂದು ನೆಲೆಸಿದ್ದ ಪರಿಣಾಮವಾಗಿ ಪರಸ್ಪರ ಜಾತಿ ಸಂಕೀರ್ಣಕ್ಕೆ ಕಾರಣವಾಯಿತೆನ್ನಬಹುದು.

ಮೊಗೇರರು ಬೆಸ್ತರ ಕೆಲಸದಲ್ಲಿ ನಿಷ್ಣಾತರಾಗಿದ್ದರೆ, ಬಿಲ್ಲವರು ಬೇಟೆಗಾರಿಕೆಯಲ್ಲಿ ನಿಪುಣರಾಗಿದ್ದರೆನ್ನಬಹುದು, ನಾಡವರು ಮೊದಲು ವ್ಯವಸಾಯ ಪ್ರಧಾನ ಉದ್ಯೋಗದಲ್ಲಿ ಜಾಗೃತರಾಗಿದ್ದು ಕಾಲಕ್ರಮೇಣ ಸಮಾಜದ ಪ್ರಮುಖ ವ್ಯಕ್ತಿಗಳಾದರು, ನಾಡಿನ ಮುಖಂಡರುಗಳಾದರು. ಬ್ರಾಹ್ಮಣ ಮತ್ತು ಜೈನವರ್ಗಗಳು ಎಂದಿನಿಂದ ನೆಲೆಯೂರಿದುವು ಎನ್ನುವುದು ಸುಲಭವಲ್ಲವಾದರೂ ಸುಮಾರು ಕ್ರಿ.ಶ. 7ನೇ ಶತಮಾನದಿಂದಲಾದರೂ ಆಗಿರಬಹುದೆನ್ನಬಹುದು. ಸು. ಕ್ರಿ. ಶ. 7ನೇ ಶತಮಾನಕ್ಕೆ ಅನ್ವಯಿಸುವ ವಡ್ಡರ್ಸೆಯ ಶಿಲಾಲೇಖನವೊಂದು "ಪಾರ್ವ" ಉಲ್ಲೇಖ ಮಾಡುತ್ತಿದೆ. ಪ್ರಾಚೀನ ದೇವಾಲಯಗಳ ಅಸ್ತಿತ್ವದಿಂದಲೂ ಇದು ವಿದಿತವಾಗುತ್ತದೆ. ಜೈನ ಧರ್ಮವು ಸು. 12ನೇ ಶತಮಾನಕ್ಕೆ ತುಳುನಾಡಿನಲ್ಲಿ ಸರಿಯಾಗಿ ಬೇರೂರಿತೆನ್ನಬಹುದು. ಮಧ್ಯಕಾಲೀನ ಇತಿಹಾಸದಲ್ಲಿ ಜೈನ ಧರ್ಮವು ಬಹು ಪ್ರಭಾವಶಾಲಿಯಾಯಿತು. ಸಾಧಾರಣ ಎಲ್ಲಾ ತುಂಡರಸು ಮನೆತನಗಳು ಜೈನಧರ್ಮವನ್ನು ಅಂಗೀಕರಿಸಿದ್ದುವು. ಅದರ ಮಹತ್ವಕ್ಕೆ ಎಣೆಯಿಲ್ಲ. ತುಳುವದಲ್ಲಿ 180 ಜೈನ ಬಸದಿಗಳಿದ್ದುವು. ಇವುಗಳಲ್ಲಿ ಹೆಚ್ಚಿನವು ಈಗಲೂ ಕಾಣಬರುತ್ತವೆ. ಸುಮಾರು ಕ್ರಿ.ಶ. 10ನೇ ಶತಕದ ತನಕ ಬೌದ್ಧಧರ್ಮವೂ ಪ್ರಚಾರದಲ್ಲಿದ್ದಂತೆ ತಿಳಿದುಬರುತ್ತದೆ.

ತುಳುನಾಡಿನ ಧಾರ್ಮಿಕ ಕೇಂದ್ರಗಳು ಈ ಕೆಳಗಿನಂತಿವೆ: ಉಡುಪಿ (ಶಿವಳ್ಳಿ), ಸುಬ್ರಹ್ಮಣ್ಯ (ಕುಕ್ಕೆ), ಕೋಟೇಶ್ವರ (ಧ್ವಜೇಶ್ವರ), ಕುಂಭಾಸಿ, ಶಂಕರನಾರಾಯಣ (ಕೊಡಗಿ), ಕೊಲ್ಲೂರು ಮತ್ತು ಗೋಕರ್ಣ. ಇವುಗಳನ್ನು ಸಪ್ತಕ್ಷೇತ್ರಗಳೆನ್ನುತ್ತಾರೆ. ಸುಮಾರು ಕ್ರಿ. ಶ. 7—8ನೇ ಶತಕದಿಂದ ಆದಿಯಾಗಿ ಕ್ರಿ. ಶ. 17ನೇ ಶತಕದ ತನಕ ದೇವಾಲಯಗಳು ನಿರ್ಮಾಣವಾದುವು. ಪ್ರಾಚೀನ ದೇಗುಲಗಳು ಗಜಪೃಷ್ಠಾಕಾರದಲ್ಲಿವೆ. ಹೆಚ್ಚಿನವುಗಳು ಚತುರಸ್ರವಾಗಿವೆ. ಶಿಲ್ಪಶಾಸ್ತ್ರ, ಆಗಮ ವಾಸ್ತುಶಿಲ್ಪವನ್ನು ಅಭ್ಯಾಸ ಮಾಡುವವರಿಗೆ ತುಳುನಾಡಿನ ಹಿಂದಿನ ದೇವಾಲಯಗಳು ಪ್ರೋತ್ಸಾಹವನ್ನೀಯುವಂತಿವೆ. ಅನೇಕ ಹಿಂದಿನ ಪ್ರಾಚೀನ ವೈಷ್ಣವ ವಿಗ್ರಹಗಳೂ (ಕೃಷ್ಣ, ಜನಾರ್ದನ, ಕೇಶವ, ಅನಂತಪದ್ಮನಾಭ, ವಾಸುದೇವ, ವಿಷ್ಣುಮೂರ್ತಿ, ಲಕ್ಷ್ಮೀನಾರಾಯಣ, ನರಸಿಂಹ ಪ್ರಭೇದಗಳು) ದೇವಿ ವಿಗ್ರಹಗಳೂ (ಸಪ್ತಮಾತೃಕೆಯರು, ರಾಜರಾಜೇಶ್ವರಿ, ಮಹಿಷಮರ್ದಿನಿ, ಮಹಿಷಾಸುರ ಮರ್ದಿನಿ, ನಾರಾಯಣೀ, ಸರಸ್ವತಿ, ಪರಮೇಶ್ವರಿ, ಚಂಡೇಶ್ವರೀ ಪ್ರಭೇದಗಳು) ಶೈವ ಸಂಬಂಧವಾದ ಮೂರ್ತಿಗಳೂ (ಉಮಾಮಹೇಶ್ವರ, ಲೋಕೇಶ್ವರ, ಸ್ಕಂದ, ಕ್ಷೇತ್ರಪಾಲ, ಗಣಪತಿ ಪ್ರಭೇದಗಳು) ಸೂರ್ಯ ವಿಗ್ರಹಗಳೂ ಬಹುಸಂಖ್ಯೆಯಲ್ಲಿ ಕಂಡುಬರುತ್ತವೆ. ಇವುಗಳ ಅಭ್ಯಾಸವನ್ನು ಮಾಡುವುದು ಬಹು ಅಗತ್ಯವಾಗಿದೆ. ಈ ಮೂರ್ತಿಗಳು ಕಡುಶರ್ಕರ ಪಾಕದಿಂದಲೂ, ಶಿಲೆಯಿಂದಲೂ, ಪಂಚಲೋಹದಿಂದಲೂ ಮರದಿಂದಲೂ ನಾನಾಕರವಾಗಿ ಕೆತ್ತಲ್ಪಟ್ಟಿವೆ.

ಬ್ರಹ್ಮ, ವಿಷ್ಣು, ಮಹೇಶ್ವರರ ಆರಾಧನೆಯು ಸಾಕಷ್ಟು ವೈಶಿಷ್ಟ್ಯವನ್ನು ಪಡೆದಿತ್ತು. ಒಂದೇ ಅಂಗಣದಲ್ಲಿ ಈ ಮೂವರು ಗುಡಿಗಳೂ ಇದ್ದ ದೃಷ್ಟಾಂತ ಉದ್ಯಾವರದಲ್ಲಿದೆ. ಶ್ರೀ ಶಂಕರಾಚಾರ್ಯರ ಪಂಚಾಯತನ ಆರಾಧನೆಯೂ ಶ್ರೀ ಮಧ್ವಾಚಾರ್ಯರ ವೈಷ್ಣವಾರಾಧನೆಯೂ ತುಳುನಾಡಿನಲ್ಲಿ ಹುಟ್ಟಿಕೊಂಡಿವೆ.

ಪ್ರಾಚೀನ ಆರಾಧನೆಯಾದ ಭೂತ ಯಾ ದೈವದ ಅರ್ಚನೆಯೂ ಸಾಕಷ್ಟಿದೆ ತುಳುನಾಡಿನಲ್ಲಿ. ಎಲ್ಲೆಲ್ಲೂ ದೈವಸ್ಥಾನಗಳಿವೆ. (ಭೂತಸ್ಥಾನಗಳು) ಭೂತಾಲಯಗಳಿವೆ, ಆಲಡೆಗಳಿವೆ, ಬ್ರಹ್ಮಸ್ಥಾನಗಳಿವೆ, ದೈವಗಳ ಸಂಖ್ಯೆಯನ್ನು ಎಣಿಸುವುದು ಕಷ್ಟ. ಪ್ರಾಮುಖ್ಯವಾದುವುಗಳು ಪಂಜುರ್ಲಿ, ರಕ್ತೇಶ್ವರಿ, ಕೋಟಿ-ಚನ್ನಯ, ಕಲ್ಲುರ್ಟಿ, ಜುಮಾದಿ, ನಂದಿಗೋಣ, ಕೊಡಮಂತಾಯ, ಬೊಬ್ಬರ್ಯ, ವೈದಿಕ ದೇವತೆಗಳೂ ದೈವಗಳಾಗಿ ಆರಾಧಿಸಲ್ಪಡುತ್ತವೆ—ಬ್ರಹ್ಮ, ನಾರಾಯಣ, ಶಿವ, ಆಲಡೆ ಅಥವಾ ಬ್ರಹ್ಮಸ್ಥಾನಗಳಲ್ಲಿ ಪಂಚದೈವಗಳ ಆರಾಧನೆ, ಮುಖ್ಯ—ರಕ್ತೇಶ್ವರಿ, ನಾಗ, ಬ್ರಹ್ಮ, ನಂದಿಗೋಣ ಮತ್ತು ಕ್ಷೇತ್ರಪಾಲ, ಇದೊಂದು ವಿಚಿತ್ರ ರೀತಿಯ ಸಂಪ್ರದಾಯ.

ತುಳುವದಲ್ಲಿ ಗರಡಿಗಳು ಬಹಳ. ಗರಡಿ ಎಂದರೆ ಕೋಟಿ-ಚನ್ನಯರಿಗೆ ನಿರ್ಮಿಸಲ್ಪಟ್ಟ ಭೂತಾಲಯ. ಇಲ್ಲಿ ಇತರ ದೈವಗಳೂ ಇವೆ—ಬ್ರಹ್ಮ, ಜೋಗಿಪುರುಷ, ಧೂಮಾವತಿ, ನಂದಿ, ತಿಗ್ಮಸಿರಿ (ರಕ್ತೇಶ್ವರಿ), ಪಿಲಿಚಾಮುಂಡಿ, ದೇಯಿ—ಬೈದ್ಯೆದಿ, ಬೀರಾಳ, ಕ್ಷೇತ್ರಪಾಲ ಇತ್ಯಾದಿ. ಗರಡಿಗಳಲ್ಲಿ ದೈಹಿಕ ವ್ಯಾಯಾಮ ನಡೆಯುತ್ತಿತ್ತು.

ವಿಜಯನಗರದ ಪತನದ ನಂತರ, ಕೆಳದಿ ನಾಯಕರ ಆಳ್ವಿಕೆಯೊಳಗೆ ತುಳುನಾಡು ಸೇರಿತು. ಕ್ರಿ. ಶ. 17ನೇ ಶತಕದ ಅಂತ್ಯದ ವರೆಗೆ ಕೆಳದಿ ನಾಯಕರ ಆಧಿಪತ್ಯವಾಯಿತು. ಅನಂತರ ಸ್ವಲ್ಪ ಅವಧಿಯ ಹೈದರಾಲಿ, ಟಿಪ್ಪು ಸುಲ್ತಾನರ ಆಡಳಿತೆಯಾಗಿ ಆಂಗ್ಲೇಯರ ಪ್ರಭುತ್ವಕ್ಕೆ ತುಳುನಾಡು ಕ್ರಿ. ಶ. 18ನೇ ಶತಕದ ಅಂತ್ಯಕ್ಕೆ ಸೇರಿತು. ಗೋವೆಯನ್ನು ಪೋರ್ತುಗೀಸರು ಹಿಡಿದ ನಂತರ ತುಳುವರಲ್ಲಿ ಕ್ರೈಸ್ತ ಧರ್ಮದ ಪ್ರಚಾರವೂ ಪ್ರಬಲವಾಯಿತು. ಇಸ್ಲಾಂ ಧರ್ಮವು ಸಾಧಾರಣ ಕ್ರಿ. ಶ. 12ನೇ ಶತಕದಲ್ಲೇ ಪ್ರಚಾರಕ್ಕೆ ಬಂದಂತೆ ತಿಳಿದುಬರುತ್ತದೆ.

○ ○ ○

ಅನುಬಂಧ :

1. ಉಡುಪಿ ತಾಲೂಕಿಗೆ ಸೇರಿದ ವಡ್ಡರ್ಸೆಯಲ್ಲಿ ದೊರಕಿದ ಶಿಲಾಲೇಖವು ಸುಮಾರು ಕ್ರಿ. ಶ. 7ನೇ ಶತಮಾನದ್ದಿದ್ದು ತುಳುನಾಡಿನಲ್ಲಿ ಇಷ್ಟರ ತನಕ ದೊರಕಿದ ಯಾವತ್ತೂ ದಾಖಲೆಗಳಲ್ಲಿ ಅತ್ಯಂತ ಪ್ರಾಚೀನವಾಗಿದೆ.

2. ಕಾರ್ಕಳ ತಾಲೂಕಿನ ವೇಣೂರಿನಲ್ಲಿ ದೊರಕಿದ ಕ್ರಿ. ಶ. 967ರ ಶಿಲಾಲೇಖವು ತೇದಿ ಇರುವ ದಾಖಲೆಗಳಲ್ಲಿ ಅತ್ಯಂತ ಪ್ರಾಚೀನವಾಗಿದೆ.

3. ಉಡುಪಿ ತಾಲೂಕಿನ ಉದ್ಯಾವರದಲ್ಲಿರುವ ಶಂಭುಕಲ್ಲಿನ ದೇವಾಲಯವು ನಮ್ಮ ನಾಡಿನ ಅತ್ಯಂತ ಪ್ರಾಚೀನ ದೇವಾಲಯವಾಗಿದೆ. (ಸುಮಾರು ಕ್ರಿ. ಶ. 7ನೇ ಶತಮಾನ.)

4. ಮಂಗಳೂರಿನ ಕದ್ರಿ ಮಂಜುನಾಥ ದೇವಾಲಯದಲ್ಲಿರುವ ನಾಥ ಪಂಥದ ಲೋಕೇಶ್ವರ ಎಂಬ ಪಂಚಲೋಹದ ವಿಗ್ರಹವು ಭಾರತದ ಪಂಚಲೋಹದ ಶ್ರೇಷ್ಠ ವಿಗ್ರಹಗಳಲ್ಲಿ ಒಂದಾಗಿದೆ.

5. ಮಂಗಳೂರು ತಾಲೂಕಿನ ಪೊಳಲಿ ಎಂಬಲ್ಲಿರುವ ರಾಜರಾಜೇಶ್ವರಿ ಎಂಬ ಶಕ್ತಿ ವಿಗ್ರಹವು ಮೃಣ್ಮಯವಾಗಿದ್ದು ಸುಮಾರು 10 ಅಡಿ ಎತ್ತರವಾಗಿದೆ. ಇದು ಕರ್ನಾಟಕದ ಮೃಣ್ಮಯ ಮೂರ್ತಿಗಳಲ್ಲಿ ಅತಿ ಪ್ರಾಚೀನವೂ ಅತ್ಯಂತ ವೈಶಿಷ್ಟ್ಯವುಳ್ಳದೂ ಎನ್ನಬಹುದು.

6. ಕಾರ್ಕಳದ ಅನಂತಶಯನದ ದೇವಾಲಯದಲ್ಲಿರುವ ಅನಂತಪದ್ಮನಾಭ ಮೂರ್ತಿಯು ಕರಿ ಶಿಲೆಯಿಂದ ಕೊರೆಯಲ್ಪಟ್ಟದ್ದು ಹೊಯ್ಸಳ ಕಾಲದ ಶಿಲ್ಪದ ಒಂದು ವಿಶಿಷ್ಟ ಮಾದರಿಯದ್ದಾಗಿದೆ. ಕರ್ನಾಟಕದ ಶ್ರೇಷ್ಠ ಶಿಲಾ ವಿಗ್ರಹಗಳಲ್ಲಿ ಒಂದಾಗಿದೆ.

7. ತುಳುನಾಡಿನ ವಿಗ್ರಹ ವೈಚಿತ್ರ್ಯ ಮತ್ತು ನೈಪುಣ್ಯವನ್ನು ಕುಂದಾಪುರದ ಬೈಂದೂರು ಸೇನೇಶ್ವರ ದೇವಾಲಯದಲ್ಲಿ ಕಾಣಬಹುದು.

8. ಲಿಂಗ ಆಕಾರದಲ್ಲಿ ಶಕ್ತಿಯ ಆರಾಧನೆಯು ತುಳುನಾಡಿನ ಅರ್ಚನಾ ಕ್ರಮದಲ್ಲಿ ಒಂದು ವೈಶಿಷ್ಟ್ಯವಾಗಿದೆ. ಕಾರ್ಕಳದ ಗೊಮ್ಮಟೇಶ್ವರ 41½ ಅಡಿ ಎತ್ತರವಿದ್ದು ಭಾರತದ ಎತ್ತರವಿರುವ ಶಿಲಾ ವಿಗ್ರಹಗಳಲ್ಲಿ 2ನೆಯ ಸ್ಥಾನ ಪಡೆದಿದೆ.

9. ಕಾರ್ಕಳ ತಾಲೂಕಿನ ವರಾಂಗ ಎಂಬ ಸ್ಥಳವು — ಕರ್ನಾಟಕದ ಅತಿ ಪ್ರಾಚೀನ ಜೈನ ಕೇಂದ್ರಗಳಲ್ಲಿ ಒಂದಾಗಿದೆ.

10. ಮೂಡಬಿದರೆಯ ಸಾವಿರ ಕಂಬದ ಬಸದಿಯು (ತ್ರಿಭುವನ ಚೂಡಾಮಣಿ) ಕರ್ನಾಟಕದ ಪ್ರಾಮುಖ್ಯ ಶಿಲಾ ಕಟ್ಟಡಗಳಲ್ಲಿ ಒಂದಾಗಿದೆಯೆನ್ನಬಹುದು. ಇದರಲ್ಲಿರುವ 7 ಅಡಿ ಎತ್ತರದ ಚಂದ್ರಪ್ರಭಸ್ವಾಮಿಯ ಪಂಚಲೋಹದ ಮೂರ್ತಿಯು ಪ್ರಾಯಃ ದಕ್ಷಿಣ ಭಾರತದಲ್ಲೇ ಪಂಚಲೋಹದ ದೊಡ್ಡ ಮೂರ್ತಿಯಾಗಿದೆ.

11) ತುಳುನಾಡಿನ ಇತಿಹಾಸವು ಬಹು ಪ್ರಾಚೀನ ಕಾಲದಿಂದಲೂ ವಿಶಾಲ ಕರ್ನಾಟಕದ ಇತಿಹಾಸದ ಒಂದು ಅಂಗವಾಗಿದೆ.

12) ಕ್ರಿ. ಶ. 7ನೇ ಶತಮಾನದ ತಮಿಳುನಾಡಿನ ತಾಮ್ರ ಶಾಸನದಲ್ಲಿ "ತುಳು"ವಿಗೆ ಪ್ರಥಮ ಉಲ್ಲೇಖ ಶಾಸನ ದಾಖಲೆಯಲ್ಲಿ ಸಿಗುತ್ತದೆ. (ಪಲ್ಲವ ಅರಸನಾದ ಎರಡನೇ ನಂದಿವರ್ಮ) ಕ್ರಿ. ಶ.ದ ಆದಿಯ ಶತಮಾನಗಳಿಗೆ ಅನ್ವಯಿಸುವ "ಸಂಗಮ" ಸಾಹಿತ್ಯದಲ್ಲಿ ತುಳುನಾಡಿನ ಉಲ್ಲೇಖವು ಕಂಡುಬರುತ್ತದೆ.

○ ○ ○ ○

ರಕ್ತ ಸುರಿಸಿ ಕಂಗೆಟ್ಟ ಜಗತ್ತು ಅದರಿಂದ ಪಾರಾಗುವ ಬಗೆ ಹೇಗೆ? ಎಂದು ಚಿಂತಾಮಗ್ನವಾಗಿದೆ. ಪುರಾತನ ಭೂಮಿಯಾದ ಭಾರತ ಮಾತ್ರ ವಿಶ್ವಕ್ಕೆ ದಾರಿ ತೋರುವುದೆಂದು ನನ್ನ ಅಂತರಾತ್ಮ ಹೇಳುತ್ತದೆ.

○ ○ ○ ○

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾದ ಸಮಾಚಾರ
ಜನವರಿ 1ರಿಂದ ಮಾರ್ಚ 30ನೇ ತಾರೀಖಿನ ವರೆಗೆ
300=00 ರೂ. ನಿವ್ವಳ ವ್ಯಾಪಾರ ಮಾಡಿದರೆ
ಒಂದು Steel Desk (ಬರೆಯುವ—ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ— ಭಾಗ 1— ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ— ಭಾಗ 2— "	2—50
ಉಂಡಾಡಿ ಗುಂಡ— ಪರ್ವತವಾಣಿ	2—00
ಧರ್ಮದೇವತೆ— ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ— ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು — ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—
ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿ ಅಧಿಕಾರಿಗಳು ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಪ್ರಜಾಪ್ರಭುತ್ವದ ಪರಿಹಾಸ್ಯ

(ಎಂಟನೇ ಪುಟದಿಂದ)

ನಡೆದಿರುವಲ್ಲಿ ಕಂಪ ದಬ್ಬಾಳು ಪಡೆಯಿತು, ಅಬ್ಬಾ! ಅದೆಷ್ಟು ಜನರು ಆಸ್ಪತ್ರೆ ಸೇರಿದರು! ಮತಬೇಟೆಗಾಗಿ ಅಲೆದಾಡುವವರು ಹಣ-ಹೆಂಡ-ಹೆಂಗಸರನ್ನು ಧಾರಾಳವಾಗಿ ಉಪಯೋಗಿಸಿಬಿಡುತ್ತಾರೆ. ಈ ರೀತಿ 'ಆರಿಸಿ'ಕೊಂಡು ಬಂದವರು ಪ್ರಜಾಪ್ರಭುತ್ವವನ್ನು ಅರ್ಥ ಮಾಡಿಕೊಂಡವರೇನ?

ಪ್ರಜಾಪ್ರಭುತ್ವ ನಡೆಸಲು ಹೋಗುತ್ತೇವೆಂದು ಚುನಾವಣಾ ಕಣದಲ್ಲಿಳಿಯುವಾಗಲೇ ಅವರು ಸಂವಿಧಾನಕ್ಕೆ ಒಪ್ಪಿಕೊಂಡು ಸ್ಪರ್ಧೆಗೆ ನಿಲ್ಲುತ್ತಾರೆ. ಗೆದ್ದವರು ದೇವರು ಸಂವಿಧಾನದ ಮೇಲೆ ಪ್ರಮಾಣ-ವಚನ ಸ್ವೀಕಾರ ಮಾಡುತ್ತಾರೆ. ಅಂದರೆ ಇವರು ಸಂವಿಧಾನದ ಸಂಗತಿಗಳಿಗೆ ಸರಿಯಾಗಿ ಆಡಳಿತ ನಡೆಸುತ್ತೇವೆಂದೂ, ಅದಕ್ಕಾಗಿ ಶ್ರಮಿಸುತ್ತೇವೆಂದೂ ಪ್ರತಿಜ್ಞೆ ಮಾಡಿದಂತಾಯಿತು. ಆದರೆ ಇದುವರೆಗೂ ಘಟನೆಯಾಗುವಂತೆ ಹಿಂದಿ ವ್ಯವಹಾರ ಭಾಷೆಯಾಗಿ ಬಂದಿರುವದೂ ಇಲ್ಲ, ಗೋಹತ್ಯೆಗೆ ಪ್ರತಿಬಂಧ ಬಂದದ್ದೂ ಇಲ್ಲ.

ಹಿಂದಿಯಿಂದೊಡನೆ ತಮಿಳ್ನಾಡಿನಲ್ಲಿ ಪ್ರತಿ ಡಿಸೆಂಬರ—ಜನವರಿ ಸಮಯದಲ್ಲಿ ಚಳಿಗಾಲ ಬರುವದಿದೆ 'ಕೇಂದ್ರ ಸರಕಾರದ ಸೊತ್ತು'ಗಳನ್ನು ಸುಟ್ಟು ಆ ಬಿಸಿಯಲ್ಲಿ ಅವರು ಮೈ ಕಾಯಿಸಿಕೊಳ್ಳುವದುಂಟು. ಗಲಾಟೆ ಅದಕ್ಕೆ ಅಪವಾದವೇನೂ ಇರುವದಿಲ್ಲ. ಅರ್ಧ ವಾರ್ಷಿಕ ಪರೀಕ್ಷೆಗಳನ್ನು ನಿಲ್ಲಿಸಿ ಬಿಟ್ಟು ವಿದ್ಯಾಲಯಗಳಿಗೆ ರಜೆ ಕೊಡಲಾಗಿರುತ್ತದೆ. ಕಲ ವರ್ಷಗಳ ಹಿಂದೆ ಈ ಚಳಿ ಜ್ವರ ಉಲ್ಬಣಾವಸ್ಥೆಗೆ ಹೋಗಿತ್ತು, ಆಗ ಮದರಾಸಿನಲ್ಲಿ ದ್ರಾವಿಡ ಮುನ್ನೇತ್ರ ಕಳಗದ ಆಳ್ವಿಕೆ ನಡೆಯುತ್ತಿರಲಿಲ್ಲ. ಅಂದು ಹಿಂದಿಯ ಮೇಲೆ ಬಳೆದಿರುವ ಕಪ್ಪನ್ನು ಇಂದೂ ಕಾಣಬಹುದು. ಕೇಂದ್ರ ಸರಕಾರದ ನಾಮ ಫಲಕಗಳಿಗೆ ಹಚ್ಚಿರುವ ಡಾಂಬರನ್ನು ಇಂದೂ ಕಾಣಬಹುದು, ಉಗಿ ಬಂಡಿಗಳ ಮೇಲೆ ಅಂದು ಬರೆದಿರುವದನ್ನು ಇಂದು ಓದಬಹುದು. ಇದನ್ನು ಸರಿಪಡಿಸಲು ಕೇಂದ್ರ ಸರಕಾರಕ್ಕೆ ಸಾಧ್ಯವಾಗಿಲ್ಲವೆಂದಲ್ಲಿ, ಇಷ್ಟು ಅಕ್ರಮವಾದ ಕಪ್ಪನ್ನು ಇದು ತೊಡೆದು ಹಾಕುವುದೆಂತು? ತಮಿಳ್ನಾಡಿನಲ್ಲಿರುವ ಮತದಾರರೆಲ್ಲರೂ ಹಿಂದಿಗೆ ಹಾಗೂ ಸಂವಿಧಾನಕ್ಕೆ ವಿರುದ್ಧವಾಗಿದ್ದಾರೇನು? ಕೆಲ ರಾಜಕೀಯ ಉದ್ಯಮಿಗಳು ಭೂ ತಂದುಬಿಟ್ಟರಾಯಿತು, ಇಂದಿರಾಗಾಂಧೀಜೀ ಡಗಡನ ಹಿಡಿಯಷ್ಟಾಗಿ ಬಿಡುತ್ತಾರೆ! ಇದು ಪ್ರಜಾಪ್ರಭುತ್ವವೇನು? ಸಂವಿಧಾನದಲ್ಲಿರುವಂತೆ ನಡೆದುಕೊಳ್ಳುತ್ತೇವೆಂದು ಪ್ರತಿಜ್ಞೆ ಮಾಡಿ, ಪ್ರಜೆಗಳ ಬಳಿ ನುಸುಗಿಟ್ಟಿಸಿಕೊಂಡು, ಗೆದ್ದು ಬಿಟ್ಟೊಡನೆ, ಪ್ರಜೆಗಳಿಗೂ ಸಂವಿಧಾನಕ್ಕೂ ಇವರು ದ್ರೋಹ ಬಗೆಯುತ್ತಿದ್ದಾರಲ್ಲವೇ? ಹಿಂದಿಗೆ ವಿರುದ್ಧವಾಗಿ, ಸಂವಿಧಾನಕ್ಕೆ ವಿರುದ್ಧವಾಗಿ ಹೋರಾಡುವುದಾಗಿ ಹೇಳಿ ಆ ಪ್ರಚಾರದ ಮೇಲೆ ಇವರು ಪ್ರಜೆಗಳ ಒಳಿಮತ ಯೋಜನೆ ಮಾಡಲಿ, ಆಗ ಗೆಲ್ಲುವುದುಂಟೆ? ಅದರಿಂದಲೇ ಶ್ರೀ ಸಾಮಾನ್ಯನು ಹೇಳುವದು ಇದು ಪ್ರಜಾಪ್ರಭುತ್ವವಲ್ಲ, ಗೂಂಡಾ ಪ್ರಭುತ್ವವೆಂದು.

ದೇಶದ ಭೂ ಭಾಗವನ್ನು ಅನ್ಯರಿಗೆ ಬಿಟ್ಟುಕೊಡಬೇಕಾದಲ್ಲಿ ಕೆಲವಾರು ನಿಯಮಗಳನ್ನು ಸಂವಿಧಾನ ಸೂಚಿಸುತ್ತದೆ. ಸಂವಿಧಾನದ ಮೇಲೆ ಪ್ರತಿಜ್ಞೆ ಮಾಡಿರುವವರೇ ಆಳ್ವಿಕೆಯ ಆಸನವನ್ನು ಮೆಟ್ಟಿ ನಿಂತೊಡನೆ ಗಡಿ ಪ್ರದೇಶಗಳನ್ನು ಪಾಕಿಸ್ತಾನ-ಚೈನಕ್ಕೆ ಭೂದಾನ ಮಾಡುತಿದ್ದಾರೆ ಈ ವಿಷಯ ಅತ್ಯುಚ್ಚ ನ್ಯಾಯಾಲಯಕ್ಕೂ ಹೋಗಿರುತ್ತದೆ. ಅಲ್ಲಿ ಕೈತೋರಿಸಿ ಅವಕಾಶ ಹೇಳಿಸಿಕೊಂಡ ಮಂತ್ರಿ ಮಹೋದಯರು, ಪ್ರಜೆಗಳ ಮೇಲೆ ಪ್ರಭುತ್ವ ನಡೆಸುತ್ತಿರುವವರು ಈಗ ಅತ್ಯುಚ್ಚ ನ್ಯಾಯಾಲಯದ ಅತ್ಯುಚ್ಚ ಸ್ಥಾನವನ್ನು ಕಳೆದು ಮುಂದಕ್ಕೆ ತರಲು ಪ್ರಯತ್ನಿಸುವುದರಲ್ಲೇನೂ ಆಶ್ಚರ್ಯವಿರುವುದಿಲ್ಲ. ನಮ್ಮ ದೇಶದ ಭೂಭಾಗಗಳನ್ನು ಆಕ್ರಮಣಗಾರರಿಗೆ ದಾನಮಾಡಿರೆಂದೇನು ಪ್ರಜೆಗಳು ತಮ್ಮ 'ಮೆಚ್ಚಿನ ಪ್ರತಿನಿಧಿ'ಗಳನ್ನು ಕಳುಹಿಸಿರುವದು? ಹಾಗಿರುವಾಗ ಇದನ್ನು ಪ್ರಜಾಪ್ರಭುತ್ವವೆನ್ನುವದೆಂತು? ಚುನಾವಣೆಯ ಸಮಯದಲ್ಲಿ ಮಾತ್ರ ಆಕ್ರಮಣಕ್ಕೊಳಗಾಗಿರುವ ಭೂಪ್ರದೇಶವನ್ನು ಬಿಡುಗಡೆಗೊಳಿಸುವದಾಗಿ ಜನತೆಗೆ ಆಶ್ವಾಸನೆ ಇತ್ತು ಪ್ರಭುತ್ವದ ಪಟ್ಟದ ಮೇಲೆ ಕುಳಿತುಕೊಂಡೊಡನೆ ಅದನ್ನು ಕೆಳಗೆ ಹಾಕಿಬಿಟ್ಟು, ಇನ್ನಷ್ಟು ಪ್ರದೇಶಗಳನ್ನು ಬಿಟ್ಟುಕೊಡುತ್ತಿರುವದು ಪ್ರಜಾಪ್ರಭುತ್ವವೇನು?

ಕಾಂಗ್ರೆಸ್ ಕಾರುಬಾರಿನಿಂದ ಶ್ರೀಸಾಮಾನ್ಯ ಬೇಸತ್ತು ಹೋಗಿರುವನಾದರೂ ಜೋಡೆತ್ತು ಗುರುತನ್ನು ಕಂಡೊಡನೆ ಅದಕ್ಕೇನೇ ಮುದ್ರೆಯೊತ್ತುತ್ತಾನಲ್ಲವೇ! ಅದಕ್ಕೇನು ಕಾರಣ? ಸಂವಿಧಾನದ ಪ್ರಕಾರ ಗೋವಧೆಗೆ ಪ್ರತಿಬಂಧ ತರುವರೆಂಬ ಆಶೆಯಿಂದ. ಅದು ಮರುಭೂಮಿಯಲ್ಲಿ ನೀರುಕೋಳಿಯನ್ನು ಕಂಡಂತೆಯೇ ಸರಿ. ಹಾಗಿದ್ದರೂ ನಂದಿಯನ್ನು ಕಂಡೊಡನೆ ಅವನೆಲ್ಲವನ್ನು ಮರೆತು ಬಸವಣ್ಣನ ಬಾಲ ಹಿಡಿಯುತ್ತಾನೆ. ಕೈಗೆಟುಕದ ದೂರದ ನಕ್ಷತ್ರಕ್ಕೋ, ಕೊರಳು ಕೊಯ್ಯುವ ಕತ್ತಿಗೋ, ತಲೆಯೊಡೆಯುವ ಸುತ್ತಿಗೆಗೋ ಅವನು ಆಕರ್ಷಿತನಾಗುವದಿಲ್ಲ. ಸೊಕ್ಕಿದ ಹೋರಿಗಳ ಮೂಗುದಾರವನ್ನು ಹಿಡಿಯಲಿಕ್ಕಾಗಿ ಬೆಳೆನ್ನುಪಯೋಗಿಸಿದರೂ, ಗೋವಧೆಗೆ ಪ್ರತಿಬಂಧದ ನಿರೀಕ್ಷೆಯಿಂದ ಪ್ರಜೆಗಳು ಬಲವಂತದ ಕಾಂಗ್ರೆಸ್ಸಿಗರನ್ನು ಆರಿಸಿ ಕಳಿಸುತ್ತಾರೆ. ಗೆದ್ದವರು ಒಡನೆ ಹೋರಿಗಳ ಕುತ್ತಿಗೆಗಳ ಮೇಲೆ ನೊಗವನ್ನಿಡುವಂತೆ ತಮಗೆ ಮತದಾನ ಮಾಡಿರುವವರ ಕುತ್ತಿಗೆಯ ಮೇಲೆನೇ ನೊಗವನ್ನಿಟ್ಟುಬಿಟ್ಟು, ಪ್ರಭುತ್ವ ನಡೆಸುತ್ತಿದ್ದಾರೆ.

ಇನ್ನೊಂದು ಉದಾಹರಣೆ ಇಲ್ಲಿದೆ. ಅತ್ಯುಚ್ಚ ನ್ಯಾಯಾಲಯಕ್ಕಿಂತಲೂ ಸಂಸದೇ ಬಲಶಾಲೀ ಅನ್ನುವವರೂ ಇತ್ತ ಗಮನ ಕೊಟ್ಟಲ್ಲಿ ಒಳ್ಳೇದು. ಮಸೀದಿಯೆದುರಿಗೆ ರಸ್ತೆಯಲ್ಲಿ (ಸಾರ್ವಜನಿಕ ರಸ್ತೆಯಲ್ಲಿ) ವಾದ್ಯಸಹಿತ ಮೆರವಣಿಗೆ ಹೋಗುವದು ತಪ್ಪೆಂದು ಕೆಲವರು ಅತ್ಯುಚ್ಚ ನ್ಯಾಯಾಲಯಕ್ಕೇನೇ ದೂರಿತ್ತರು. ಸಂವಿಧಾನದಲ್ಲಿರುವ "ಮೂಲಭೂತ ಹಕ್ಕು" ಶಬ್ದಗಳ ಮೇಲೆಯೇ ಕಟ್ಟು ಬಂದಿರುವದು. ಈ ಕುರಿತ ಪ್ರಜೆಗಳಿಂದ ಚುನಾಯಿಸಿಕೊಂಡು ಹೋಗಿ, ಪ್ರಜಾಪ್ರಭುತ್ವ ನಡೆಸುತ್ತಿದ್ದೇವೆನ್ನುವವರು ಈ ವಿಷಯದತ್ತ ಸರಿಯಾಗಿ ಗಮನಕೊಟ್ಟಿರಲಿಲ್ಲ. ಮೆರವಣಿಗೆ ಹೋಗುವ ದಾರಿಯಲ್ಲಿ (ಶವ ಕೊಂಡು ಹೋಗುವಾಗಲೂ ದಾರಿಯಲ್ಲಿ ಮಸೀದಿಯಿದ್ದಲ್ಲಿ ಶಂಖ ಊದುವದನ್ನು ನಿಲ್ಲಿಸಬೇಕು!) ಮಸೀದಿಯಿದ್ದಲ್ಲಿ ವಾದ್ಯ ಬಾರಿಸಬಾರದೆಂಬುದಕ್ಕೆ 'ಪ್ರಜಾಪ್ರಭುತ್ವ' ನಡೆಸುತ್ತಿರುವವರು ಒಂದು ರೀತಿಯಲ್ಲಿ ಒಪ್ಪಿಕೊಂಡಿದ್ದರು. ಅತ್ಯುಚ್ಚ ನ್ಯಾಯಾಲಯ ಅದಕ್ಕೀಗ ಅಡ್ಡಿ ಬಂದಿದೆ. ಸಾರ್ವಜನಿಕ ರಸ್ತೆಯಲ್ಲಿ (ಅನಿರ್ಬಂಧಿತ ರಸ್ತೆಯಲ್ಲಿ) ವಾದ್ಯ ಬಾರಿಸುವ ಮೂಲಭೂತ ಹಕ್ಕು ಎಲ್ಲರಿಗೂ ಇದೆಯೆನ್ನುವದು ನ್ಯಾಯಾಲಯದ ತೀರ್ಪು. ಅದು ಹಾಗೇ ಇರಲಿ. ಇದು ಮತಾತೀತ ಸೆಕ್ಯುಲರ್ ಶಾಸನವಿದೆ. ವಾದ್ಯ ಸಹಿತ ಮೆರವಣಿಗೆ ಹೋಗುವ ಹಕ್ಕು ಮಹಮ್ಮದೀಯರಿಗೂ, ಕ್ರಿಸ್ತೀಯರಿಗೂ, ಸಿಖ್ಖರಿಗೂ, ಬೌದ್ಧರಿಗೂ, ಶೈವರಿಗೂ, ಮಾಧ್ವರಿಗೂ, ಎಲ್ಲರಿಗೂ ಇದ್ದೇ ಇದೆ. ಅದಕ್ಕೆ ಅಡ್ಡ ಬರುವವರನ್ನು ದಂಡಿಸದೆ ಪ್ರಭುತ್ವ ನಡೆಸುತ್ತಿರುವವರು ನಿಜವಾಗಿ ಪ್ರಜಾಪ್ರಭುತ್ವ ನಡೆಸುತ್ತಿದ್ದಾರೇನು? ಅಥವಾ ಪ್ರಜೆಗಳನ್ನು ಪೀಡಿಸುತ್ತಿದ್ದಾರೇನು?

ಹೀಗೆಲ್ಲಾ ನಡೆಸುಬೇಕಾದಲ್ಲಿ ಈ ಪ್ರಜೆಗಳೆನ್ನುವವರಾದರೂ ಯಾರು? ಅಮೇರಿಕದ ಪ್ರಜೆ ಅಮೇರಿಕನನಿದ್ದಾನೆ, ರಷ್ಯದ ಪ್ರಜೆ ರಶ್ಯನ್, ಇಂಗ್ಲೆಂಡಿನ ಪ್ರಜೆ ಇಂಗ್ಲಿಷಿನವ, ಜಪಾನಿನ ಪ್ರಜೆ ಜಪಾನಿ, ಚೈನಾದ ಪ್ರಜೆ ಚೈನಿ, ಅರೇಬಿಯಾದ ಪ್ರಜೆ ಅರಬನಾದಲ್ಲಿ ಹಿಂದೂ ದೇಶದ, ಭಾರತ ದೇಶದ ಪ್ರಜೆ ಯಾರು? ಅವನು "ಹಿಂದೂ"ವಿರಲೇ ಬೇಕು, ಭಾರತೀಯನಿರಲೇ ಬೇಕು. ಈ ಹೆಸರನ್ನು ಕೇಳಿದೊಡನೆ ಕೆಲವರಿಂದು ಕೆರಳುವದುಂಟು? ಮಕ್ಕಾ-ಮದೀನಗಳತ್ತವೋ! ಜೆರೂಸಲೇಮ್-ಬೆತ್ಲೆಹೇಮಿನತ್ತವೋ, ರಶ್ಯಾ-ಚೈನಾದತ್ತವೋ ವಿಶಿಷ್ಟ ದೃಷ್ಟಿಯಿಂದ ಕಾಣುವವನು ಈ ದೇಶದ ಪ್ರಜೆಯಾಗಿರಲು ಸಾಧ್ಯವೇನು? ಆದುದರಿಂದ ಅವರಿಗೆ "ನೀವು ಈ ದೇಶದ ಪ್ರಜೆಗಳೆ"ಂದಲ್ಲಿ ಕೋಪ ಬರುವುದರಲ್ಲೇನೂ ಆಶ್ಚರ್ಯವಿಲ್ಲ. ಆದರಲ್ಲಿ ಆಶ್ಚರ್ಯ ಅಷ್ಟೇ ಅಲ್ಲ, ಅತ್ಯಾಶ್ಚರ್ಯವೆಂದರೆ ಹಿಂದೂಗಳಿಗೇನೇ ಕೋಪ ಬರುವದಿದೆ. ಮುಸಲ್ಮಾನರನ್ನು, ಕ್ರಿಸ್ತೀಯರನ್ನೂ, ಹಿಂದೂಗಳೆಂದು ಅಥವಾ ಭಾರತೀಯರೆಂದು ಕರೆಯುವುದನ್ನು ಅವರು ಆಕ್ಷೇಪಿಸುತ್ತಿದ್ದಾರೆ. ವಿಶ್ವದ ವಿಚಿತ್ರದಲ್ಲಿ ಇದೂ ಒಂದು. ತಮ್ಮ ಪ್ರಭುತ್ವ ನಡೆಸಲು ಕಳುಹಿಸುತ್ತಿರುವ ಪ್ರಜೆಗಳ ಲಕ್ಷಣ ಹೀಗಿರುವಾಗ ಪ್ರತಿನಿಧಿಗಳ ಸ್ವರೂಪವನ್ನು ಚಿತ್ರಿಸಬೇಕಾಗಿರುವದಿಲ್ಲ. ಹಾಗಲಕಾಯಿ ಬೀಜ ಹಾಕಿ ಪಡುವಲಕಾಯಿ ಆಗಬೇಕೆಂದಲ್ಲಿ ಹಾಗೆ ಆಗುತ್ತದೇನು? ಮಾಡಿದ್ದುಣ್ಣೋ ಮಹಾರಾಯ! ಆದರೆ, ಆದರಿಂದಾಗಿ ಹಾಗಲಕಾಯಿಯ ರುಚಿ ಕಾಣಬೇಕಾಗಿರುವವರು ಬಹಳ ಮಂದಿ. ಏನು ತಮಾಷೆ! ಅದೆಲ್ಲಿಯವರೆಗೆ ಈ ಪ್ರದೇಶದ ಪ್ರಜೆಗಳಲ್ಲಿ ರಾಷ್ಟ್ರೀಯತ್ವವು ರಕ್ತದಲ್ಲಿ ಒಂದಾಗುವುದಿಲ್ಲವೋ ಅಂದಿನವರೆಗೂ ಪ್ರಭುತ್ವ ಇದೇ ರೀತಿ ನಡೆದೀತು.

ಇಂದು ಅದ್ಯಾವ ಪಕ್ಷಕ್ಕು ಬಹುಮತ ಇರುವುದಿಲ್ಲ. ಹಾಗಿದ್ದೂ ಇತರರಿಗಿಂತ ಅಧಿಕ ಸ್ಥಾನಪಡೆದುಕೊಂಡಿರುವ ಪಕ್ಷ ಹಾಗೂ ದಳಗಳು ಅಧಿಕಾರದ ಆಸನವನ್ನೇರುತ್ತವೆ. ನಿಜವಾದ ಪ್ರಜಾಪ್ರಭುತ್ವವೆಂದಲ್ಲಿ ಶೇಕಡಾ ಐವತ್ತಕ್ಕಿಂತ ಅಧಿಕ ಮತ ಪಡೆದಿರುವ ಪಕ್ಷದ ಪ್ರಭುತ್ವವೇ ಪ್ರಜಾಪ್ರಭುತ್ವವಾದೀತು. ಹಾಗಲ್ಲವಾದಲ್ಲಿ ಎರಡೂ ಕಣ್ಣಿಲ್ಲದವರ ರಾಜ್ಯದಲ್ಲಿ ಮೆಳ್ಳೆಗಣ್ಣನವ ರಾಜನಾದಂತೆಯೇ ಸರಿ. ಆದುದರಿಂದ ಅಂತಹ ರಾಜ್ಯಗಳಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತೆ ನಡೆದರೂ ಅದನ್ನೇ ಪ್ರಜಾಪ್ರಭುತ್ವವೆನ್ನುವದು ಸರಿಯಾದೀತು. ಚುನಾವಣಾ ಸಮಿತಿ ಇತ್ತ ಗಮನ ಕೊಟ್ಟೀತೇ? ರಾಷ್ಟ್ರಾಧ್ಯಕ್ಷರ ಆಡಳಿತದ ಅವಧಿಯನ್ನು ವಿಸ್ತರಿಸುವಲ್ಲಿ ಆಕಾಶವೇನೂ ಕಳಚಿ ಬೀಳಲಾರದ.

ಈ ರೀತಿ ಆರಿಸಲ್ಪಟ್ಟವರು ಪ್ರಭುತ್ವ ನಡೆಸುವದಾದರೂ ಯಾರ ಮೇಲೆ? ಹಿಂದೂ ಕೋಡುಬಿಲ್ಲು, ಸಂತಾನ ನಿಯಂತ್ರಣ, ದೇವಸ್ಥಾನಗಳ ವರ್ಷಾಶನ ಗಣತಿ, ಗೋತ್ರಿಕರ ಕರ ಇವೆಲ್ಲಾ ಯಾರಿಗಾಗಿ ಇವೆ. 'ಹಿಂದೂ'ಗಳ ಮೇಲೆ ಪ್ರಭುತ್ವ ನಡೆಸಲಿಕ್ಕಾಗಿ ಇವೆಲ್ಲಾ ಇವೆ. ಇಲ್ಲಿರುವ ಜನರನ್ನು 'ಹಿಂದೂ'ಗಳೆಂದು ಕರೆದು ಅವರೆಲ್ಲರಿಗೆ ಅನ್ವಯಿಸುವ ಕಾನೂನು ಬಂದಲ್ಲಿ ಅದನ್ನು ಪ್ರಜಾಪ್ರಭುತ್ವವೆನ್ನಬಹುದು, ಇಲ್ಲವಾದರೆ, ಪ್ರಜಾಪ್ರಭುತ್ವದ ಪರಿಹಾಸ್ಯವಾಗುವುದು.

ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದ, ಪ್ರಜೆಗಳಿಗಾಗಿ ನಡೆಯುವ ಪ್ರಭುತ್ವ ಇರುತ್ತದೆ. ಪ್ರಜಾಪ್ರಭುತ್ವದ ಜವಾಬ್ದಾರಿಯನ್ನು ಹೊತ್ತಿರುವವರು ನಿಷ್ಪಕ್ಷವಾಗಿ ಪ್ರಭುತ್ವ ನಡೆಸುತ್ತಿರಬೇಕು. ಚುನಾಯಿಸಲ್ಪಟ್ಟವರು ಯಾವ ಪಕ್ಷದವರೇ ಇರಲಿ, ಅವರು ಚುನಾಯಿಸಲ್ಪಟ್ಟ ಕ್ಷಣವಲ್ಲವಾದರೂ, ಪ್ರತಿಜ್ಞೆ ಮಾಡಿದ ಮೇಲೆ ಪಕ್ಷ ರಾಜಕೀಯದಿಂದ ದೂರವಿದ್ದು ಪ್ರಜೆಗಳೆಲ್ಲರನ್ನು ಸಮಾನ ದೃಷ್ಟಿಯಿಂದ ಕಾಣಬೇಕು, ಇವರ ಕಾರ್ಯಕ್ರಮ—ಚಟುವಟಿಕೆಗಳ ಪ್ರಭಾವ ಮಾತ್ರ ಪಕ್ಷದ ಮೇಲೆ ಬೀಳಬೇಕು ವಿನಃ ಇವರು ಪಕ್ಷ ರಾಜಕೀಯದಲ್ಲಿ ಕೈ ಹಾಕಬಾರದು. ಇಂದು ಹಾಗೆ ನಡೆಯುತ್ತಿದೆ ಏನು? ಕೇವಲ ಯಾವದಾದರೊಂದು ಅಥವಾ ಹಲವಾರು ಪಕ್ಷಗಳ ಸಮೂಹದ ಪ್ರಭುತ್ವ ನಡೆಯುತ್ತಿರುವದು ಸ್ಪಷ್ಟವಿದೆ.

ಇಂದು ಶ್ರೀಸಾಮಾನ್ಯ ಪ್ರಜೆಯ ಬಾಳಿಗೆ ಪ್ರಜಾಪ್ರಭುತ್ವದ ಪರಿಹಾಸ್ಯ ನಡೆಯುತ್ತಿದೆ. ನೈಜ ಪ್ರಜಾಪ್ರಭುತ್ವ ಅಸ್ತವೆಂದರೂ ತಪ್ಪಾಗಲಿಕ್ಕಿಲ್ಲ.

ವೈವಿಧ್ಯತೆಯಲ್ಲಿ ಏಕತೆ ಬರಲಿ

(ಏಳನೇ ಪುಟದಿಂದ)

ಮಾರ್ಗವನ್ನು ಸುಗಮಗೊಳಿಸುವುದರಲ್ಲಿ ಸಹಕಾರವನ್ನು ತೋರಿ ಸರ್ವರಿಗೂ ಹಿತವಾದ ಶ್ರೇಷ್ಠ ಮಾರ್ಗದಲ್ಲಿ ನಡೆಯುವಂತೆ ಪ್ರಯತ್ನ ಶೀಲರಾಗಬೇಕು. ಏಕೆಂದರೆ ಭಾರತವು ಸ್ವಾತಂತ್ರ್ಯವನ್ನು ಪಡೆಯುವಾಗ, ಅದು ಎದುರಿಸಬೇಕಾದ ಸಮಸ್ಯೆಗಳು ಹಲವಾರು. ಎಲ್ಲಾ ಸಮಸ್ಯೆಗಳಿಗೂ ಏಕಕಾಲದಲ್ಲೇ ಕ್ಷಿಪ್ರ ಪರಿಹಾರವನ್ನು ಕಾಣುವುದು ಇಂತಹ ವಿಶಾಲ ರಾಷ್ಟ್ರದಲ್ಲಿ ಸುಲಭಸಾಧ್ಯವಲ್ಲ.

ಪಂಚವಾರ್ಷಿಕ ಯೋಜನೆಗಳಿಂದ ಭಾರತವು ಗಣನೀಯವಾದ ಅಭ್ಯುದಯವನ್ನು ಸಾಧಿಸಿದೆಯಾದರೂ, ಜನಸಂಖ್ಯೆಯ ಹೆಚ್ಚಳದಿಂದ ಆ ಪ್ರಗತಿಯು ಗೋಚರಿಸುವುದು ಅಸಾಧ್ಯವಾಗಿದೆ. ಇದು ಸಾಮಾನ್ಯ ಜನರಿಗೆ ಅರ್ಥವಾಗದೆ ಸ್ವಾತಂತ್ರ್ಯಾನಂತರ ನಾವು ಉನ್ನತಿಯತ್ತ ಮೇಲೇರದೆ ಅವನತಿಯತ್ತ ಧಾವಿಸುತ್ತಿದ್ದೇವೆಂಬ ಭ್ರಮೆಯನ್ನು ಕಟ್ಟಿಕೊಂಡಿರುವುದು ಸಹಜ. ಆದರೆ ವಿದ್ಯಾವಂತ ಜನರಲ್ಲೂ ಆ ರೀತಿ ಟೀಕೆ ಮಾಡುತ್ತಿರುವವರನ್ನು ಕಾಣುವುದು ಶೋಚನೀಯ ವಿಚಾರವೇ ಸರಿ. ರೋಗ, ನಿರುದ್ಯೋಗ, ದಾರಿದ್ರ್ಯದಂತಹ ದಾರುಣ ಸಮಸ್ಯೆಗಳನ್ನು ಎದುರಿಸಿ, ದೇಶವು ಮುನ್ನಡೆಯುತ್ತಿರುವುದನ್ನು ಗಮನಿಸಿ, ಆ ದಿಸೆಯಲ್ಲಿ ತಮ್ಮ ಪಾತ್ರವನ್ನು ಅರ್ಥಮಾಡಬೇಕಾದುದು ಮುಖ್ಯ ವಿಚಾರವಾಗಿದೆ.

ಹಾಗಲ್ಲದೆ ಕ್ಷುಲ್ಲಕ ಕಾರಣಗಳಿಂದ ಪ್ರಚೋದಿತರಾಗಿ ಚಳವಳಿ, ಮುಷ್ಕರಗಳ ಹೆಸರಲ್ಲಿ ಗೂಂಡಾಗಿರಿಯನ್ನೆಸಗಿ, ಕಟ್ಟಡಗಳು, ವಾಹನಗಳು, ಸೇತುವೆಗಳು— ಮುಂತಾದ ಅಪಾರವಾದ ರಾಷ್ಟ್ರದ ಸೊತ್ತನ್ನು ಧ್ವಂಸ ಮಾಡುವುದನ್ನು ಬುದ್ಧ, ಗಾಂಧಿ ಮುಂತಾದ ಅಹಿಂಸಾವಾದಿಗಳು ಹುಟ್ಟಿದ ನಾಡಿನಲ್ಲಿ— ಕಾಣುವುದೆಂದರೆ ಅದಕ್ಕಿಂತ ದೌರ್ಭಾಗ್ಯ ಬೇರೊಂದಿರಲಾರದು. ಅಂತಹ ಕಟ್ಟಡಗಳನ್ನು, ಸೇತುವೆಗಳನ್ನು ಪುನಃ ಕಟ್ಟಬೇಕಾದರೆ ಮತ್ತೆ ಎಷ್ಟೋ ಹಣ ವ್ಯಯಿಸಬೇಕಾಗುತ್ತದೆಯೆಂಬುದನ್ನು ಮರೆಯಬಾರದು. ಆ ಹಣವನ್ನು ಇತರ ಉತ್ತಮ ಪ್ರಯೋಜನಗಳಿಗಾಗಿ ವಿನಿಯೋಗಿಸಬಹುದಾದುದು ತಪ್ಪುತ್ತದೆ. ಸರಕಾರೀ ವಾಹನಗಳನ್ನೋ, ಕಚೇರಿಗಳನ್ನೋ ನಾಶಪಡಿಸಿದರೆ ತಮ್ಮದೇ ಸೊತ್ತನ್ನು ಹಾಳುಮಾಡಿಕೊಂಡಂತಾಗುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕಾಗಿದೆ.

ಭಾರತದ ಪ್ರಗತಿಗೆ ಇನ್ನೊಂದು ಕಂಟಕವೆಂದರೆ ನೆರೆಹೊರೆಯ ರಾಷ್ಟ್ರಗಳಾದ ಚೀನಾ, ಪಾಕಿಸ್ತಾನಗಳು ತಳೆದಿರುವ ನಂಜಿನ ಮನೋಭಾವ. ಒಂದು ಮನೆಯ ಸಳಿಗೆಯಲ್ಲಿ ನೆರೆಹೊರೆಯವರು ಶ್ರೇಯೋಕಾಂಕ್ಷಿಗಳಾಗಿರಬೇಕಾದುದು ಅಗತ್ಯ. ಬದಲಾಗಿ ಸದಾ ಅಸ್ತ್ರ ಮಸೆಯುತ್ತಿರುವ ಹಿತಶತ್ರುಗಳಂತಿದ್ದರೆ, ಪರಿಸ್ಥಿತಿಯು ಹದಗೆಡುವುದು ಸ್ವಾಭಾವಿಕ. ಹಾಗಿದ್ದರೂ ಭಾರತವು ಸದಾ ಜಾಗ್ರತವಾಗಿದ್ದು, ವೈರಿಗಳ ಕಾಟವನ್ನು ತಪ್ಪಿಸಿ, ಪ್ರಗತಿಯನ್ನು ಸಾಧಿಸುವ ಮಹಾ ಧ್ಯೇಯದೊಂದಿಗೆ ಮುಂದರಿಯುತ್ತಿದೆ.

ಭಾರತದ ಪ್ರಗತಿಗೆ ಅಡ್ಡ ಬರುತ್ತಿರುವ ಇನ್ನೊಂದು ಗಂಡಾಂತರವೆಂದರೆ ವಿವಿಧ ಜಾತಿ, ಮತ, ಪಂಥ, ಭಾಷೆಗಳ ಹೆಸರಲ್ಲಿ ಆಗುತ್ತಿರುವ ವಿಪ್ಲವಕಾರೀ ಘಟನೆಗಳು. ಹಾಗಾಗಿ, ವಿಶಾಲವಾದ ಈ ರಾಷ್ಟ್ರದಲ್ಲಿ ವೈವಿಧ್ಯತೆಯಲ್ಲೂ ಏಕತೆಯನ್ನು ಸಾಧಿಸಬೇಕಾಗಿರುವುದು ಗಮನೀಯ ವಿಚಾರ. ಹಿಂದೆ ಚಂದ್ರಗುಪ್ತ ಮೌರ್ಯ, ಅಶೋಕ, ಅಕ್ಬರ ಮೊದಲಾದ ದಕ್ಷ ಅರಸರ ಕಾಲದಲ್ಲಿ ಮಾತ್ರ ಈ ದೇಶ ಒಬ್ಬನೇ ಚಕ್ರವರ್ತಿಯ ಭರಣಕ್ಕೆ ಒಳಪಟ್ಟಿತ್ತಾದರೂ, ಅದು ಶಾಶ್ವತವಾಗಿ ಉಳಿಯಲಿಲ್ಲ.

ಆದರೂ, ಈ ದೇಶದಲ್ಲಿ ವೈವಿಧ್ಯತೆಯಲ್ಲೂ, ಏಕತೆಯ ಭಾವನೆ ಪ್ರಾಚೀನ ಕಾಲದಿಂದಲೇ ಇತ್ತು. 'ಭಾರತ ವರ್ಷ' ಎಂಬ ಹೆಸರಿನಿಂದಲೇ ಆ ಭಾವನೆ ಮೂಡಿ ಬಂದಿದೆ. ವಿಷ್ಣುಪುರಾಣದಲ್ಲಿ ಈ ರೀತಿ ಇದೆ—

ಉತ್ತರಂ ಯತ್ ಸಮುದ್ರಸ್ಯ
ಹಿಮಾದ್ರೇಶ್ಚೈವ ದಕ್ಷಿಣಂ
ವರ್ಷಂತದ್ ಭಾರತಂ ನಾಮ
ಭಾರತೀ ಯತ್ರ ಸಂತತಿ:

ಆಸೇತು ಹಿಮಾಚಲದ ವಿಸ್ತೃತ ರಾಷ್ಟ್ರ ಭಾರತ. ಅಲ್ಲಿಯ ನಿವಾಸಿಗಳು ಭರತ ಕುಲದವರು. ಈ ಭಾವನೆ ಇಲ್ಲಿಯ ಕವಿಗಳಲ್ಲಿ, ಪಂಡಿತರಲ್ಲಿ, ಯೋಗಿಗಳಲ್ಲಿ, ರಾಜಕಾರಣಿಗಳಲ್ಲಿ ಬೆಳೆದು ಬಂದಿದೆ. ಹಾಗಾಗಿ ವೈವಿಧ್ಯತೆಯಲ್ಲೂ ಏಕತೆಯನ್ನು ಸಾಧಿಸುವುದು ಒಂದು ಕೇಂದ್ರೀಯ ಸರಕಾರಕ್ಕೆ ಕಷ್ಟವಾದರೂ, ಸಾಧ್ಯವಾಗದಿರದು. ಕನ್ಯಾಕುಮಾರಿಯಿಂದ ಹಿಮಾಲಯದವರೆಗಿನ ಬೇರೆ ಬೇರೆ ಭಾಷೆಯ, ಲಿಪಿಯ, ಜಾತಿಯ, ಪಕ್ಷಗಳ ಜನರಲ್ಲೂ ತಾವು ಒಂದೇ ರಾಷ್ಟ್ರದ—ಭಾರತದ ಪೌರರು ಎಂಬ ಭಾವನೆ ಸತತವಾಗಿ ಉಳಿದು, ಬೆಳೆದು ಬಂದರೆ, ಸ್ವತಂತ್ರ ಭಾರತಕ್ಕೆ ಪ್ರಗತಿಯನ್ನು ಸಾಧಿಸುವುದು ಕಷ್ಟವಾಗಲಾರದು.

ಅಥರ್ವ ವೇದದ ಪೃಥಿವೀ ಸೂಕ್ತದಲ್ಲಿ ಹೇಳುವ ಒಂದು ಮಂತ್ರಾನುಸಾರ,

ಉದೀರಾಣಾ ಉತಾಸೀನಾಸ್ತಿಷ್ಠಂತಃ ಪ್ರಕ್ರಾಮಂತಃ
ಪದ್ಭ್ಯಾಂ ದಕ್ಷಿಣ ಸವ್ಯಾಭ್ಯಾಂ ಮಾವ್ಯಥಿಷ್ಮಹಿ ಭೂಮ್ಯಾಮ್,

ಚಲಿಸುತ್ತಿದ್ದರೂ, ಚಲಿಸದಿದ್ದರೂ, ಕುಳಿತಿದ್ದರೂ, ನಿಂತಿದ್ದರೂ ಎಡಗಾಲಿನಿಂದಾದರೂ ಬಲಗಾಲಿನಿಂದಾಗಲೀ ನಮ್ಮ ಮಾತೃಭೂಮಿಗೆ ಕಷ್ಟವನ್ನು ಕೊಡಲಾರೆವು ಎಂಬ ಸಂಕಲ್ಪವನ್ನು ಮಾಡಬೇಕು. ಜನವರಿ ಇಪ್ಪತ್ತಾರರಂದು ನಾವು ಮಾಡಬೇಕಾದ ಪ್ರತಿಜ್ಞೆಯಿದಾಗಬೇಕು. ಭಾರತ ಮಾತೆಯ ಸ್ನೇಹಪೂರ್ಣ ವಿಶಾಲ ಊರುಗಳಲ್ಲಿ ಕೋಟಿ ಕೋಟಿ ಮಕ್ಕಳು ಆಡುತ್ತಿದ್ದಾರೆ. ಅಂತಹ ಮಕ್ಕಳು ತಾಯಿಗೆ ಎರಡು ಬಗೆಯಬಾರದು.

ಭಾರತ ಮಾತೆಯು ಸಾರುತ್ತಿರುವ ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳ ಸಂದೇಶವನ್ನು ಸ್ಮರಣೆ ಎಲ್ಲರೂ, ಮಮತಾಮಯಿಯೂ, ಸಹಿಷ್ಣುವೂ, ಸುಫಲೆಯೂ, ಸಸ್ಯಶ್ಯಾಮಲೆಯೂ ಆದ ಪುಣ್ಯ ಜನನಿಗೆ, ಆಕೆಯ ನೈತಿಕ ಹಾಗೂ ಭೌತಿಕ ಅಭ್ಯುದಯಕ್ಕಾಗಿ ದುಡಿಯುವೆವೆಂಬ ಭೀಷಣ ಪ್ರತಿಜ್ಞೆಯೊಂದಿಗೆ, ಜನವರಿ ಇಪ್ಪತ್ತಾರರ ಈ ಶುಭ ದಿನದಲ್ಲಿ ಸರ್ವ ಭಾರತೀಯನೂ ಮಣಿಯುತ್ತಿರಲಿ. ಭಾರತ ಮಾತೆಯು ತನ್ನ ಮಕ್ಕಳೆಲ್ಲರೂ ವಿಶಾಲ ಭಾವನೆಯಿಂದ, ತನ್ನ ಭವ್ಯ ಪರಂಪರೆಯನ್ನುಳಿಸಿ, ಉಜ್ವಲ ಪ್ರಗತಿಯನ್ನು ಸಾಧಿಸಿ, ವಿಶ್ವದಲ್ಲಿ ಯಶೋದುಂದುಭಿಯನ್ನು ಮೊಳಗಿಸುವಂತೆ ಹರಸುತ್ತಿರಲಿ.

IN THE COURT
OF THE MUNSIF OF
MANGALORE, S. K.

S. C. No. 337 of 1968

Between:

H. Sridhara Rao.... ....*Plaintiff*

and

Trans-Trade Syndicate (Pvt.) Ltd., Bombay. ....*Defendant*.

To

The Defendant—Trans-Trade Syndicate (P) Ltd., its registered office at New Miranda Buildings, 1st Floor, N. C. Kalkar Road, Dadar, Bombay-28, represented by its Director Shridhar Vaikunta Nayak, residing at 76, Badagabettu, Kukkikatte, Udipi, South Kanara

Please take notice that the above suit is posted to 4th February, 1969 at 11 A. M. *If you fail to* appear on that day and time the matter will be decided in your absence

(By order of Court)

Sd/ C. S. SHASTRY,
Advocate for Plaintiff.

Mangalore,
Dated 13-1-1969.

ಬಡಿಗ

ಎಲ್ಲೆಲ್ಲಿಂದಲೋ ಎಂಥೆಂಥದೋ
ಮರ ಬಂದು ಬೀಳುತಿವೆ ಎದುರು
ಹಲಸು ಹೆಬ್ಬಲಸು ಭೋಗಿ ಕಿರಾಲ ಭೋಗಿ
ನಂದಿ ಮತ್ತಿ ತೇಗ ಮಾವು ಇನ್ನೂ ಏನೇನೋ!
ಬೇಡವೆನ್ನುವಧಿಕಾರವವನಿಗಿಲ್ಲ;
ಬೇಡವೆಂದರೆ ನೀನೇ ಬೇಡವೆಂದಾವು ಜನ
ನಲಿಕೆ ಬಾರದವಗೆ ರಂಗಸ್ಥಳವೋರೆ ಯಂತೆ!
ಎಲ್ಲರೂ ಹಾಡಬೇಕೆಂದನಂತೆ ಹುಚ್ಚು ದೂರೆ!
ಆ ಮರಗಳೋ!
ಕೆಲವಿನ್ನು ಎಳತು, ಕೆಲ ಭಾರಿ ಗಂಟು.
ಕೆಲವು ತೆಳ್ಳನಾದರೆ ಕೆಲವು ಭಾರಿ ದಪ್ಪ.
ಬಡಿದರೂ ಒಡೆಯದವು ಕೆಲವು
ಉಜ್ಜಿದರೆ ನೋಯುವುವು ಕೆಲವು
ಒಂದೊಂದು ಜಾತಿಯದು ಒಂದೊಂದು ಗುಣ
ಒಂದೊಂದರದು ಮತ್ತೆ ಬೇರೆಯೇ ಗುಣ,
ಗಟ್ಟಿವೇರಿದರೂ ಹುಟ್ಟುಗುಣ ಹೋಗದು;
ಇಳಿದರದು ಇಳಿಯುವುದುಂಟೆ?
ಉಳಿ ಉಜ್ಜು ಕೊರಡು ಗರಗಸ ಸುತ್ತಿಗಳ ಬಳಸಿ
ಕೆತ್ತುವನು, ಉಜ್ಜುವನು ಸಿಗಿಯುವನು
ಬಗ್ಗದ ಮರವನು ಜಗ್ಗಿ ಗುದ್ದಿ ಬಾಗಿಸನು—
ಅವನೆಂದಿಗೂ ಸೋಲನೊಪ್ಪನು.
ಬಡಿಗ—
ಮರವ ಬಡಿವವನು, ಬಡಬಡಿದು
ಮರದೊಂದು ಹೊಸ ರೂಪ ಕೊಡುವವನು,
ಕಾಡಿನಲಿ ತೆಕ್ಕೆಗೂಸಿದಂತೆ ಕೊಬ್ಬಿ ಬೆಳೆಬೆಳೆದ
ಹೆಮ್ಮರದ ಲೋಕೋಪಕಾರಿಯೊಡವ
ನೀತಿ ಹೇಳುವವನು.
ಬಡಿಗನಿಲ್ಲದಿರೆ-
ಮನೆಯಿಲ್ಲ, ಮೂರುಮೆಯಿಲ್ಲ ಬಂತು?
ಮನವೂ ಇಲ್ಲ, ಮಾನವತೆಯೆಲ್ಲಿ ಬಂತು?
ಬದುಕಿಲ್ಲ, ಕೆಡುಕಿಲ್ಲ
ಹಿಂಸ್ರ ಜಂತುಗಳ ಆವಾಸ ಭೂಮಿ
ತಮ್ಮ ಜೀವಕ್ಕೆ ದಕ್ಕೆ ತರುವ ರಕ್ಕಸರ ನಡುವೆ
ದೇವರೇತಕೆ ಬಂದು ನಿಂದಾನು?

—ಗೋರಾ

ಗಾಂಧೀಜಿ ಅಮೃತವಾಣಿ

ಮಹಿಳೆಯನ್ನು ಅಬಲೆಯೆಂದು ಕರೆಯುವದು ಒಂದು ಅಪಚಾರವೇ ಸರಿ. ಅದು ಪುರುಷನು ಸ್ತ್ರೀಗೆ ಮಾಡಿದ ಅನ್ಯಾಯ. ಬಲದ ಅರ್ಥ ಪಾಶವೀಬಲ ಎಂದೇ ಆದರೆ ಪುರುಷನಿಗಿಂತ ಮಹಿಳೆಯ ಬಲ ಕಡಿಮೆಯೆಂದು ಹೇಳಬಹುದು. ಬಲದ ಅರ್ಥ ನೈತಿಕ ಎಂದಾದರೆ ಪುರುಷನಿಗಿಂತಲೂ ಸ್ತ್ರೀಯು ಸಬಲೆ ಎಂಬುದು ನಿಸ್ಸಂದೇಹ.

o o o

ಸತ್ಯದ ಮಾರ್ಗದಲ್ಲಿ ಹಿಂಸೆಗೆ ಎಡೆಯಿಲ್ಲ. ತಪ್ಪಿತರಿಗೂ ಸಹಾನುಭೂತಿಯಿಂದ ಎರೋಧಿಗಳು ತಪ್ಪು ಮಾಡುವಂತೆ ಅವರ ಮನವೊಲಿಸಿಕೊಳ್ಳುವುದೇ ಮಹತ್ವಪೂರ್ಣ. ಇದು ಸತ್ಯಾಗ್ರಹದಿಂದ ನಾನು ಕಲಿತ ಪಾಠ.

o o o

ಇತರರು ಮಾಡುವ ತ್ಯಾಗಕ್ಕಿಂತ ಸ್ವಾರ್ಥ ತ್ಯಾಗವೇ ಸರ್ವಶ್ರೇಷ್ಠ ಎಂಬುದು ಎಲ್ಲರೂ ಒಪ್ಪಿರುವ ವಿಚಾರ.

o o o

ತಾನು ಸಂಪೂರ್ಣ ಸರಿ ಅಥವಾ ಯಾವುದೇ ಒಂದು ವಿಷಯ ತಪ್ಪು ಎಂದು ಯಾರೂ ಹೇಳಲಾಗದು. ಮನುಷ್ಯನು ಎಲ್ಲಿಯ ವರೆಗೆ ಬುದ್ಧಿಪೂರ್ವಕವಾಗಿ ಯಾವುದೇ ಒಂದು ವಿಷಯವನ್ನು ತಪ್ಪು ಎಂದು ತೀರ್ಮಾನಿಸುವನೋ ಅಲ್ಲಿಯ ವರೆಗೆ ಅದು ಅವನ ದೃಷ್ಟಿಯಲ್ಲಿ ತಪ್ಪಾಗಿಯೇ ಕಂಡುಬರುತ್ತದೆ.

o o o

❖ ಉನ್ಮುಖ ವಿಲಾಸಿ ❖

(28—12—68 ರಂದು ಉಡುಪಿಯ ಕಲಾವೃಂದದ ರಜತೋತ್ಸವದಲ್ಲಿ ಕವಿಗೋಷ್ಠಿಯ ಮುಂದೆ ಓದಿದ ಕವನ)

[ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ.ಎ.]

ಗಗನದೆತ್ತರಕೆ ನೆಗೆವ ಜೀವವೇ,
ಉನ್ಮುಖವಿಲಾಸಿ ಮನವೇ!
ನಮಿಪ ನಿನಗೆ ಕವಿ ನಮನ ನಿನಗೆ ಈ
ವಿಶ್ವ ವಿಜಯ ಸಾಹಸಕೆ.

— ೨ —

ಗೋಳ ಗೋಳಗಳ ದಾಂಟು ವಿಕ್ರಮದಿ
ನೀನಸೀಮ ಸಂಚಾರಿ;
ಏರು ಮೇರುಗಿರಿ ಸೇರು ಗರುಡಗುರಿ
ಹಾರು ನಿರ್ವಾಣಯ ಸೇರಿ.

— ೩ —

ಅಪ್ಪಳಿಸುವ ನೊರೆ ತೆರೆಯ ಮೇಲುಗಡೆ
ವಾತಶೀತಲಕೆ ಮೆಚ್ಚಿ
ಸುಡುವ ಸೂರ್ಯಬಿಂಬಕ್ಕೆ ಕೀಳುಗಡೆ
ಬೆಂಕಿಯಿಂದ ಬಿಸಿ ಹೆಚ್ಚಿ.

— ೪ —

ಬಿದ್ದೆಯೋ! ನೀನು ಘೋರ್ಗರೆವ ಕಡಲು
ಆಳವರಿಯದಾಳಕ್ಕೆ
ಇಲ್ಲಿ ತಿಮಿ ತಿಮಿಂಗಿಳದೊಡನೆ ಮುಳುಗು
ಶಾಂತಿಯೆ ನಿತೊ ಸಾವಿಂಗೆ!

— ೫ —

ಶತ್ರುರೂ ಬದುಕೆ! ವೀರ ಮರಣದಲಿ
ಅಪ್ಸರೆಯರ ವರಮಾಲೆ
ಹೇಡಿಗಳಿಗುಂಟೆ ಸುಖದ ತೊಟ್ಟಿಲಲಿ
ಸ್ವರ್ಗ ಸೇರುವಾ ಲೀಲೆ.

— ೬ —

ಎದ್ದೆಯ್ಯ ನೀನು! ಮೃತ್ಯುಮುಖದಿಂದ
ಅಂದ ನಚಿಕೇತನೆಂದೆ;
ನಿನ್ನ ನಿರತನಕೆ ಚಕಿತ ಯಮನಿಂದ
ನೀ ಚಿರಂಜೀವಿ ಮುಂದೆ.

— ೭ —

ಉಂಟೆಯಿಲ್ಲವೇ ಯಿಾ ಚಿರ ಪ್ರಶ್ನೆ
ಬಿಡಿಸಿ ಹೊಡೆದೆ ಜಯಭೇರಿ.
ಪಂಚಭೂತ ಪಂಚೇಂದ್ರಿಯಂಗಳನು
ಗೆದ್ದೆ ಖೇಚರ ವಿಹಾರಿ.

— ೮ —

ಚಂದ್ರ ಮಂಗಳರ ಸುತ್ತು ಧಾವಿಸಿದೆ
ಲಕ್ಷ ನಕ್ಷತ್ರ ಶೋಭೆ—
ಕಂಡು ರೋಮಾಂಚಗೊಂಡು ಪ್ರೈವ ರಡೆ
ಧನ್ಯ ಜೀವಿ ನೀನೆಂಬೆ.

— ೯ —

ನಾಕಲೋಕ ಸೋಪಾನ ಸಾಧಿಸಿದೆ
ಕೀರ್ತಿ ಧವಳ ಗಳಯಿಳಿಸೆ
ಭೂಮಿ ತಾಯಿ ನೋಂತಿರುವ ನೋಂಪಿಯಿಂದೆ
ನಿನ್ನ ವಿಜಯವನೆ ಮೆರಸೆ.

— ೧೦ —

ಹೊಸತು ಯುಗದ ಅವತಾರ ನೀನಲ್ತೆ
ವಿಜ್ಞಾನ ನಿನ್ನ ದೃಷ್ಟಿ
ಗಾಳಿ ಬೆಳಕು ನೆಲ ಜಲವು ಗಗನ ತಲ
ವಶ್ಯ ನಿನಗೆ ಸೃಷ್ಟಿ

— ೧೧ —

ನೀರಿನಾಳವನು ಕಡೆದ ಕಲಿತನಕೆ
ಅಮೃತಕುಂಭವೇ ಸಾಕ್ಷೆ
ವಾಯುಗರ್ಭ ಶೋಧಿಸಿದ ಸಾಹಸಕೆ
ಸೃಷ್ಟಿ ದಿವ್ಯತೆಯ ತೋರ್ಕೆ

— ೧೨ —

ನಿನ್ನ ಪ್ರೇಯಸಿಯು ಬಿಟ್ಟು ನೀ ನಡೆದೆ
ಜಗದ ಶ್ರೇಯಸಿನ ಕಡೆಗೆ
ಮೇಲು ಲೋಕವನು ಕೇಳಿ ಬಂದವನು
ಕವಿಯ ನಮನವಿದೊ ನಿನಗೆ.

— ೧೩ —

ಊರಿ ಬಂದಿರುವೆ ಹಸಿರು ಬಾವುಟವ
ತೂವ್ನ ಜಗವದಲಿ ಶೂರ!
ಲೋಕ ಬೆರಗಾಯ್ತು ವಿಶ್ವ ವಿಜಯಕೆ
ಶಾಂತಿ ಸಂದೇಶ ಸಾರ.

— ೧೪ —

ಬರುವ ದಿನದ ವಿಭು ಗಗನ ವಿಜ್ಞಾನಿ
ಅರಿವೆ ಹಿರಿಯ ಗುರುವು;
ಕಣ್ಣಿದ್ದು ಕುರುಡು, ಕಿವಿಯಿದ್ದು ಕಿವುಡ
ಅಜ್ಞಾನಿಗಿಲ್ಲ ದಿನವು.

— ೧೫ —

ನೀ ಪಾರದರ್ಶಿ ನೀನೆ ಪರಮರ್ಷಿ
ಇದೆ ತಪಶ್ಚರ್ಯ ನಿಜಕು;
ಪಂಚಾಗ್ನಿ ಮಧ್ಯೆ ನೀನುರಿದು ಯೆದ್ದೆ
ಎಡೆಯ ಬೆಂಕಿಯೋ ಬೆಳಕು.

— ೧೬ —

ಹಿಂದಿನ ಗಳಿಗೆ ಹೋರಾಟವೇಯುರಲಿ
ಬಾಳಿಗಾವ ಬುತ್ತಿ
ಆತ್ಮ ತಪಿಸಿ ಪರಮಾತ್ಮ ಸೇರಲಿ
ಪೂರ್ಣವಹುದು ಮುಕ್ತಿ.

— ೧೭ —

ಈ ವಸುಂಧರಾ ರತ್ನಗರ್ಭದಿಂ
ಪುಣ್ಯ ಪಿಂಡವಂ ಹೊತ್ತು
ಏರಿ ದಿನನೊಂದು ದಾರಿಯಲಿ ನಡೆದೆ
ಧೀರ ನೀನೆ ಯಿಾ ಹೊತ್ತು.

— ೧೮ —

ಆಕಾಶಬುಟ್ಟಿ ವ್ಯೋಮಕುರಿದು ಸುತ್ತಿ
ಗ್ರಹ ತಾರವೇಳ ಕೂಡಿ
ಧೀಶಕ್ತಿ ಕಾಂಬ ದೀಪಿಟಿಗೆ ಯೆತ್ತಿ
ಜಯಲಾಟ ಗೈದೆ ಕೂಡಿ.

— ೧೯ —

ಬಿದ್ದಲ್ಲಿ ಬಿದ್ದು ಕೊಳೆಸಾಗ ಬೇಡ
ಹಂದಿ ಹಿಂಡಿನಂತೆ
ವ್ಯಗ್ರಾಜನೆನಿಸಿ ವ್ಯೋಮವೇರಿದು ನೋಡ
ಹೋಗು ದೂರ ಮುಂತೆ.

— ೨೦ —

ಹುಚ್ಚಿ ಗಬ್ಬಚ್ಚಿ ಬೆಚ್ಚಿಬೀಳದಿರು
ಗರುಡ ಗಮನ ವದವೆ
ಮುಂದೆ ಮುಂದ ಮುಂದೊಂದು ದಿನ ಬರುದು
ಹಾರೈಸು ಮೇಗಿ ನೆಗೆವೆ!

— ೨೧ —

ಘೂಕ ಲೋಕವೆ! ಕಣ್ಣು ಮುಚ್ಚಿ ಕೊಳ್ಳಿ
ಬೆಳಕು ನೋಡೆ ಕಷ್ಟ
ಮಿಂಚಿನಲ್ಲಿ ಏಂದವರು ಹೋಗಲಿ
ನಿಶೆಯೆ ನಿಮಗೆ ಯಿಷ್ಟ!

— ೨೨ —

ಬಾವಿ ಕಪ್ಪೆಯೆ! ಕೊಳಕು ಹೊಂಡದೊಳೆ
ಕೆಸರ ಕುಡಿದು ಹಿಗ್ಗು
ಹೊರಗೆಯೇನು ಪಡೆದಿದ್ದರೇನಂತೆ?
ತರಗಿನಡಿಗೆ ಮುಗ್ಗು.

— ೨೩ —

ತಗ್ಗಿನವರು ಮೇಲಾಗಲಿಲ್ಲ ಮರು
ಬಗ್ಗಿದವಗೆ ಗುದ್ದೊಂದು
ತಲೆಯನೆತ್ತಿ ನಡೆ ನೀವು ಬೆಳಕಿನೆಡೆ
ಜಾಡ್ಯ ದೂಡಿ ಹಾಕೆಂದು.

— ೨೪ —

ಹರಕು ಮನೆಯೆಲ್ಲ ಮುರಿದು ಹೋಗಲಿ
ತೇಪೆ ಹಚ್ಚ ಬೇಡ
ಹೊಸತೆ ತಳಹದಿಯ ಕೆಲಸ ಸಾಗಲಿ
ನಿನ್ನ ಸೃಷ್ಟಿ ನೋತ.

— ೨೫ —

ಬ್ರಹ್ಮಾಂಡ ಭಾಂಡ ಬೇಗುದಿಯುತಿಹುದು
ಅದರ ಸಡಿಮೇಲು ತೊಳಕು
ದಾಸ್ಯ ದೀನತೆಯು ದಾರ್ಢ್ಯ ಹೀನತೆಯು
ದಗ್ಧ! ಹೊಸತು ರುಚಿ ಬೆಳಕು.

— ೨೬ —

ಅಗ್ನಿ ಕುಂಡವೋ ಅರಳು ಮಲ್ಲಿಗೆಯೊ
ಶಿರದ ಮೇಲೆ ಧರಿಸು
ಹಾವು ಮುತ್ತಿತೋ ಹಾರ ಸುತ್ತಿತೋ
ವರಣ ಮಾಲೆ ವರಿಸು.

— ೨೭ —

ದೂರ ದೂರದ ದಿಗಂತದಂತರವು
ಸಾರಿ ಸಾರಿ ಬಳಿ ಬಂತು;
ಏರುಯೇರು ಯತ್ನರ ನಿರಂತರವು
ಸೇರು ಸೇರು ಗುರಿಯಂತು!

೦ ೦ ೦

ಗಗನದೆತ್ತರಕೆ ನೆಗೆವ ಜೀವವೇ!
ಉನ್ಮುಖ ವಿಲಾಸಿ ಮಾನವೆ.
ನಮನ ನಿನಗೆ ಕವಿ ನಮನ ನಿನಗೆ ಯಿಾ
ವಿಶ್ವವಿಜಯ ಸಾಹಸಕೆ.

ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್‌ನಲ್ಲಿ, ಪುತ್ತೂರು, ದ. ಕ.

ಮಿಸ್ ಪಿಟಿಶನ್ ನಂಬ್ರ: 45|1968

ತನಿಖೆ ತಾರೀಖು: 4.2.1969.

ಗಣಪತಿ ಭಟ್ಟ .... ಅರ್ಜಿದಾರರು

Vs.

ರಾಮಪ್ಪ ಸೇರ್ವೆಗಾರ ಮತ್ತು ಇತರರು ....ಎದ್ರಿಯರು

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ತಾಲೂಕು ಬೆಳ್ಳಾರೆ ಕಸಬಾ ಗ್ರಾಮದಲ್ಲಿರುವ ವೆಂಕಪ್ಪ ಸೇರ್ವೆಗಾರರ ಮಗ ರಾಮಪ್ಪ ಸೇರ್ವೆಗಾರರಿಗೆ— ಅರ್ಜಿದಾರರು ನಿಮ್ಮ ಮೇಲೆ ಮತ್ತು ಇತರರ ಮೇಲೆ ಪುತ್ತೂರು ಲ್ಯಾಂಡ್ಸ್ ಟ್ರಿಬ್ಯುನಲ್‌ನಲ್ಲಿ ಮಿಸ್ ಪಿಟಿಶನ್ 45|1968 ಎಂಬ ಅರ್ಜಿಯನ್ನು ಆಸ್ತಿಯನ್ನು ಸ್ವಾಧೀನ ಪಡಿಸುವುದಕ್ಕಾಗಿ ದಾಖಲು ಮಾಡಿರುತ್ತಾರೆ. ಸದ್ರಿ ವ್ಯವಹಾರವು ತಾರೀಖು 4.2.1969 ರಂದು ನಿಮ್ಮ ಹಾಜರಾತಿ ಬಗ್ಗೆ ಇದೆ. ನೀವು ಆ ದಿನ ಸದ್ರಿ ಲ್ಯಾಂಡ್ಸ್ ಟ್ರಿಬ್ಯುನಲ್‌ನಲ್ಲಿ ಹಾಜರಾಗಿ ಆಕ್ಷೇಪಗಳೇನಾದರೂ ಇರುವುದಾದರೆ ದಾಖಲುಮಾಡಿ ತನಿಖೆಗೆ ತಯಾರಾಗಬೇಕೆಂದು ಈ ಮೂಲಕ ನಿಮಗೆ ತಿಳುಹಿಸಲಾಗಿದೆ. ತಾರೀಖು 4.2.1969ರಂದು ಬೆಳಿಗ್ಗೆ 11 ಗಂಟೆಗೆ ನೀವು ಟ್ರಿಬ್ಯುನಲ್‌ನಲ್ಲಿ ಹಾಜರಾಗಬೇಕಾದ್ದು. ಇದಕ್ಕೆ ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ವ್ಯವಹಾರವು ಮುಂದುವರಿಯುತ್ತದೆ. ತಿಳಿದಿರಲಿ.

ಎ. ಪಿ. ಗೌರೀಶಂಕರ
ಅರ್ಜಿದಾರರ ಎಡ್ವೊಕೇಟ್
(ಟ್ರಿಬ್ಯುನಲ್ಲಿನ ಹುಕ್ಕುಂ ಪ್ರಕಾರ)
ಪುತ್ತೂರು, ದ. ಕ.

ಅಭಿಮಾನದ ಆಟಂ

(ಆರನೇ ಪುಟದಿಂದ)

ರವಿ ಒಂದು ನಿಮಿಷ ಅಲ್ಲೇ ನಿಂತಿದ್ದ. ಪುನಃ ತಾಯಿಯನ್ನು ನೋಡಿದ. ಹರಿಯುವ ಕಣ್ಣೀರನ್ನು ಒರಸಿಕೊಳ್ಳುತ್ತ ಸದ್ದಿಲ್ಲದೆ ಹೆಜ್ಜೆ ಇಟ್ಟನು. ತನ್ನ ಬಹುಮಾನದ ಕಡೆ ಮೆಲ್ಲಗೆ ಕೈಯಿಕ್ಕುವಾಗಲೂ ಆತನ ಕೈಗಳು ನಡುಗುತ್ತಿದ್ದುವು! ತಾಯಿಯ ಮೊಗವನ್ನು ಮತ್ತೊಮ್ಮೆ ನೋಡಿದನು. ಅಲ್ಲೇ ನಿಂತಿರುವುದು ಸರಿಯಲ್ಲವೆಂದು ಅಲ್ಲಿಂದ ಪಕ್ಕದ ಕೋಣೆಗೆ ನಡೆದೇ ಬಿಟ್ಟನು!

ಅಲ್ಲೇ ಬಿದ್ದುಕೊಂಡು ದುಃಖಿಸುತ್ತಿದ್ದ ಮೋಹಿನಿ ಇದನ್ನು ನೋಡಿ ಮತ್ತೂ ದುಃಖಿಸತೊಡಗಿದಳು.

ಆಕೆಗೆ ತನ್ನ ಅಪರಾಧದ ಅರಿವು ಉಂಟಾಗಿ ಜ್ಞಾನೋದಯವಾಯಿತು! ಹಾಗು! ತನ್ನ ದೌರ್ಭಾಗ್ಯದ ಸಿಟ್ಟಿನಲ್ಲಿ ಕೋಮಲ ಹೃದಯದ ಮುದ್ದು ರವಿಯ ಮೃದು ಮನಸ್ಸನ್ನು ನೋಯಿಸಿದುದಕ್ಕಾಗಿ ಪಶ್ಚಾತ್ತಾಪ ಪಟ್ಟಳು. ವಿಧಿಯು ಅಂಥ ಪರಿಸ್ಥಿತಿಯನ್ನು ತಂದೊಡ್ಡಿದಾಗ ಯಾರನ್ನು ದೂರಿ ಏನು ಪ್ರಯೋಜನವೆ? ರವಿ ಈ ಮೊದಲು ತಂದ ಬಹುಮಾನವ ನೆನಪಾಯಿತು. ಕೊಂಚ ರವಿಯನ್ನು ಸಂತೈಸಲೆಂದು ಮೆಲ್ಲನೆ ಎದ್ದಳು. ಮುಂದೆಯೇ ತೂಗುತ್ತಿರುವ ತನ್ನ ಪತಿದೇವರ ಪಟಕ್ಕೆ ಕೈ ಮುಗಿದಳು. ತನ್ನ ದೌರ್ಭಾಗ್ಯ ಇನ್ನಾದರೂ ದೂರವಾಗಿ ಆಶಾರವಿ ಬೆಳಗಲೆಂದು ದೇವರನ್ನು ಪ್ರಾರ್ಥಿಸಿ ಮಗನನ್ನು ಸಂತೈಸಲು ಹೊರಟಳು.

ರವಿ ತನ್ನ ಕೋಣೆಯಲ್ಲಿ ಕಾಣಬರಲು ಮೋಹಿನಿ ಆ ಕೋಣೆಗೆ ಬಂದಳು.

ಆದರೆ ನೋಡುವುದೇನು?

ರವಿ ಒಲೆಯ ಮುಂದೆ ಕುಳಿತು ತನಗೆ ಬಹುಮಾನವಾಗಿ ದೊರೆತ ಪೆಕೇಟನ್ನು ಉರಿಸುತ್ತಿದ್ದ! ಆತನ ಮೊಗದಲ್ಲಿ ಒಂದು ಬಗೆಯ ತೃಪ್ತಿಯೂ ಸಂತೋಷವೂ ಮೂಡಿತ್ತು.

ಪುತ್ತೂರು ಮುನ್ಸೀಫ್ ಕೋರ್ಟಿನಲ್ಲಿ
ಪುತ್ತೂರು, ದ. ಕ.

O. S. No. 151 of 1961.
I. A. No. II

ಕೋಟಿ ಲಕ್ಷ್ಮೀನಾರಾಯಣ — ಅರ್ಜಿದಾರರು

ವಿ.

ಅಗ್ಗು ಹೆಂಗಸು ಮತ್ತು ಇತರರು—ಎದ್ರಿಯರು

ನೋಟೀಸು.

ಸುಳ್ಯ ತಾಲೂಕು ಕಳಂಜ ಗ್ರಾಮದ ಪಟ್ಟೆ ಎಂಬಲ್ಲಿರುವ ಅಗ್ಗು ಹೆಂಗಸಿನ ಮಗಂದಿರು 3ನೇ ಶೇಷಪ್ಪ ಪೂಜಾರಿ, 4ನೇ ಸೀತಾ ಯಾನೆ ಕೊರಗ ಪೂಜಾರಿ, ತಿಮ್ಮಕ್ಕ ಹೆಂಗಸಿನ ಮಗಂದಿರು 8ನೇ ಮಂಜಪ್ಪ ಪೂಜಾರಿ ಮತ್ತು ಹನುಮಂತನ ಆನಂದ ಪೂಜಾರಿ ಇವರಿಗೆ ಈ ಮೂಲಕ ತಿಳಿಸುವುದೇನಂದರೆ—

ಮೇಲೆ ಹೆಸರು ಕಾಣಿಸಿರುವ ಅರ್ಜಿದಾರರು ಲಕ್ಷ್ಮೀನಾರಾಯಣರವರು ಡಿಕ್ರಿ ಟ್ರಾನ್ಸ್‌ಫರ್ ಡಿಕ್ರಿ ಪಾಸುಮಾಡಬೇಕೆಂದು ಮೇಲಿನ ಕೋರ್ಟಿನಲ್ಲಿ ಅರ್ಜಿ ಹೂಡಿರುತ್ತಾರೆ. ಸದ್ರಿ ಅರ್ಜಿಯು ತಾರೀಖು 6-2-1969 ರಂದು ನಿಮ್ಮ ಹಾಜರಾತಿ ಬಗ್ಗೆ ಇದೆ. ಸದ್ರಿ ಅರ್ಜಿಯಲ್ಲಿ ನಿಮಗೇನಾದರೂ ಆಕ್ಷೇಪಣೆಗಳನ್ನು ಹೇಳುವುದಿದ್ದರೆ ಆ ದಿನ ಬೆಳಿಗ್ಗೆ 11 ಗಂಟೆಗೆ ಕೋರ್ಟಿನಲ್ಲಿ ಸ್ವತಃ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆಗಳನ್ನು ದಾಖಲು ಮಾಡಬೇಕು. ಇದಕ್ಕೆ ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಅಮಾಲ್ಜಾರಿಯು ಮುಂದುವರಿಯುವುದು, ತಿಳಿದಿರಲಿ.

(By order of Court)

A P Gowrishanker,
Advocate for Petition.

ಪುತ್ತೂರು, ದ. ಕ. ತಾರೀಖು 10-1-69.

ದೋಣಿಯ ಪ್ರಯಾಣ

(ಐದನೇ ಪುಟದಿಂದ)

……" ಎಂದು ಬರೆಸಿತು ಮನಸ್ಸು.

ನಾವು ಉಡುಪಿಯನ್ನು ಸೇರಿದಾಗ ಸಂಜೆಯಾಗಿತ್ತು. ಆ ರಾತ್ರಿ ಪೂರ್ತಿ ವಿಶ್ರಾಂತಿ. ಮಾರನೆಯ ದಿನ ದ್ವಾದಶಿ, ನಾವು ಬೆಳಗಾಗೆದ್ದು ಮಧ್ವಸರೋವರದಲ್ಲಿ ಮಿಂದು ಉಡುಪಿ ಕೃಷ್ಣನನ್ನು ಸಂದರ್ಶಿಸಿದೆವು. ಕನಕನ ಕಿಂಡಿಯನ್ನು ಕಂಡು ಕನಕದಾಸರನ್ನೂ ಸ್ಮರಿಸಿಕೊಂಡೆವು. ಆಗ ವೇಳೆ ಸುಮಾರು ಎಂಟು ಘಂಟೆ ಇದ್ದಿರಬೇಕು. ದ್ವಾದಶಿಯ ಪ್ರಯುಕ್ತ ಮಠದಲ್ಲಿ ಪಾರಣೆ ಆ ವೇಳೆಗಾಗಲೇ ಮುಗಿದಿತ್ತು. ಮಿತ್ರರೊಬ್ಬರು ದೊರಕಿ ನಮಗೂ ಮಠದಲ್ಲಿ ಊಟ ಸಿಗುವಂತಾಯ್ತು. ಬಗೆಬಗೆಯ ಭಕ್ಷ್ಯಭೋಜ್ಯಗಳ ಸವಿಯನ್ನು ಕಂಡೆವು ಆ ದಿನ ಉಡುಪಿಯಲ್ಲೇ ಉಳಿದದ್ದು ನೋಡಬೇಕಾದೆಡೆಗಳಿಗೆಲ್ಲ ಹೋಗಿ ಬಂದು ಮಾರನೆ ದಿನ ಬಂದ ದಾರಿಯಲ್ಲೇ ಮಂಗಳೂರಿಗೆ ವಾಪಸಾದೆವು—ದೋಣಿ ಪ್ರಯಾಣ ಹಾಗೂ ಪ್ರಕೃತಿ ಸೌಂದರ್ಯದ ಸವಿ ಮತ್ತೊಮ್ಮೆ ಲಭಿಸಲೆಂಬ ಉದ್ದೇಶದಿಂದ.

ಇನ್ನು ಮಂಗಳೂರಿನಿಂದ ಕಾಸರಗೋಡಿಗೆ ನಮ್ಮ ಪ್ರಯಾಣ. ಕಾಸರಗೋಡು ಇರುವುದು ಕಡಲ ತೀರದಲ್ಲಿಯೇ. ಅಂದರೆ ಮಂಗಳೂರಿನ ದಕ್ಷಿಣ ಭಾಗಕ್ಕೆ. ಮಂಗಳೂರು—ಕಲ್ಲಿಕೋಟೆಯ ರೈಲುಮಾರ್ಗದಲ್ಲಿ ನಾವು ರೈಲಿನಲ್ಲಿ ಹೊರಟು ಕಾಸರಗೋಡನ್ನು ಸೇರಿದೆವು. ನಾವು ತಲಪುವ ವೇಳೆಗಾಗಲೇ ಅಂದಿನ ಸಮ್ಮೇಳನದ ಅಧ್ಯಕ್ಷರಾಗಬೇಕಾಗಿದ್ದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರು ತಮ್ಮ ಕುಟುಂಬದೊಡನೆ ಆಗಮಿಸಿದ್ದರು. ಇತರ ಹಿರಿಯ ಸಾಹಿತಿಗಳೂ ಬಂದು ನೆರೆದಿದ್ದರು. ಸಮ್ಮೇಳನ ಮೂರು ದಿನಗಳ ಕಾಲ ಯಶಸ್ವಿಯಾಗಿ ಹಾಗೂ ವೈಭವದಿಂದ ನಡೆಯಿತು. ಅಲ್ಲಿ ಇದ್ದ ಮೂರು ದಿನಗಳಲ್ಲಿ ಹೇಗೋ ಬಿಡುವು ಮಾಡಿಕೊಂಡು ನಾವು ಪ್ರತಿದಿನವೂ ಸಮುದ್ರದ ಬಳಿಗೆ ಹೋಗಿ ಗಂಟೆಗಟ್ಟಳೆ ಕುಳಿತಿರುತ್ತಿದ್ದೆವು. ಆ ಕಡಲ ಸೊಬಗನ್ನು ಎಷ್ಟು ಕಂಡರೂ ತೃಪ್ತಿಯೆಂಬುದೇ ಇಲ್ಲ.

ಕಡಲ ದಡದಲ್ಲಿ ಬೆಸ್ತರ ದೋಣಿಗಳಿರುತ್ತಿದ್ದುವು. ಆ ಬೆಸ್ತರು ಬೆಳಿಗ್ಗೆ ದೋಣಿಯಲ್ಲಿ ಕುಳಿತು ಸಮುದ್ರದಲ್ಲಿ ಹೊರಟರೆ ಒಳಗಡಲಿನಲ್ಲಿ ಸುಮಾರು ಒಂದೆರಡು ಮೈಲಿಗಳ ದೂರ ಸಾಗಿ ಬಲೆ ಬೀಸಿ ಮೀನು ಹಿಡಿದು ತರುವರು. ಒಂದು ದಿನ ನಾವು ಕಡಲ ತೀರಕ್ಕೆ ಬಂದಾಗ ಒಂದೆರಡು ದೋಣಿಗಳು ಹೊರಡಲು ಸಿದ್ಧವಾಗಿ ನಿಂತಿದ್ದುವು. ಬೆಸ್ತರೂ ಸಹ ತಮ್ಮ ಬಲೆಗಳೊಡನೆ ಅಣಿಯಾಗಿದ್ದರು. ಈಗಲೋ ಆಗಲೋ ದೋಣಿ ಹೊರಡುವುದಿತ್ತು. ಆ ಬೆಸ್ತರಲ್ಲೊಬ್ಬ ಕುತೂಹಲದಿಂದ ನಮ್ಮ ಊರುಕೇರಿಗಳನ್ನು ವಿಚಾರಿಸಿದ. ಸಮುದ್ರ ದೋಣಿಗಳನ್ನು ಇಗೋ ಮೊದಲಾಗಿ ನಾವು ಕಾಣುತ್ತಿರುವುದೆಂಬ ವಿಚಾರ ತಿಳಿದು, "ಬೇಕಾದರೆ ನಮ್ಮ ದೋಣಿಯೊಳಗೆ ಕುಳಿತು ಬನ್ನಿ. ಕಡಲೊಳಗೆ ಹೋಗಿ ಬರುವ" ಎಂದು ಆಹ್ವಾನಿಸಿದ. ನಾವೂ ಒಪ್ಪಿ ದೋಣಿಯಲ್ಲಿ ಕುಳಿತೆವು. (ನಮ್ಮ ಜೊತೆಯಲ್ಲಿ ಶ್ರೀಮತಿ ವೆಂಕಟಸುಬ್ಬಮ್ಮ ಎಸ್. ಜಿ. ಶಾಸ್ತ್ರಿಯವರೂ ಇದ್ದರು)

ಈ ದೋಣಿ ಪಯಣ ಹದಿಯಂತಲ್ಲ. ಉಕ್ಕಿ ಬರುತ್ತಿದ್ದ ಅಲೆಗಳ ಮಧ್ಯೆ ದಾರಿ ಮಾಡಿಕೊಂಡು ದೋಣಿ ಸಮುದ್ರವನ್ನು ಪ್ರವೇಶಿಸಬೇಕು. ನಮಗೆ ಇದೊಂದು ರೋಮಾಂಚಕಾರಿಯಾದ ಅನುಭವವೇ ಆಗಿತ್ತು. ದಡದಲ್ಲಿ ಕೆಲವು ಗಜಗಳಷ್ಟು ದೂರ ಆ ಅಲೆಗಳೊಡನೆ ಸೆಣೆದಾಡುತ್ತ ಆ ಚಿಕ್ಕ ನಾಡದೋಣಿ ಏರುತ್ತ ಇಳಿಯುತ್ತ ಹೋಗುತ್ತಿದ್ದಾಗಲಂತೂ ನಾವು ಜೀವದ ಆಸೆಯನ್ನೇ ತೊರೆದು ಬಿಟ್ಟಿದ್ದೆವು. ನಮ್ಮ ಮನಸ್ಸು ಆ ಸಂಕಟದ ಸಮಯದಲ್ಲಿ ನಮಗೇ ಇಲ್ಲದಂತೆಯೇ ವೆಂಕಟರಮಣನನ್ನು ಧ್ಯಾನಿಸತೊಡಗಿತ್ತು.

ಸುಮಾರು ದೂರ ಬಂದಮೇಲೆ ಅಲೆಗಳ ಭಯ ಕಡಮೆಯಾಯಿತು. ಶಾಂತವಾಗಿ ನಿಂತ ನೀರಿನ ಮೇಲೆ ಎರಡು ಮೂರು ಮೈಲುಗಳಷ್ಟು ದೂರ ಸಮುದ್ರದ ಒಳಭಾಗಕ್ಕೆ ಬಂದಿದ್ದಿರಬೇಕು. ದಡ ನಮ್ಮ ಕಣ್ಣಿಗೆ ಸರಿಯಾಗಿ ಕಾಣುತ್ತಿರಲಿಲ್ಲ. ಇದೀಗ ದೋಣಿ ಸಾಗುತ್ತಿದ್ದಂತೆ ಬೆಸ್ತರೂ ತಮ್ಮ ಕರ್ತವ್ಯದಲ್ಲಿ ತೊಡಗಿದರು. ಬಲೆಯನ್ನು ಸಮುದ್ರದಲ್ಲಿ ತೇಲಿಬಿಟ್ಟು ಇಬ್ಬರು ಬೆಸ್ತರು ಅದರ ತುದಿಗಳನ್ನು ಹಿಡಿದು ಕುಳಿತರು. ಸ್ವಲ್ಪ ಹೊತ್ತಿನ ನಂತರ ಆ ಬಲೆಯನ್ನು ಮೇಲಕ್ಕೆ ಎಳೆದುಕೊಂಡಾಗ ಅದರಲ್ಲಿ ಬಗೆ ಬಗೆಯ ಮೀನುಗಳು ಸಿಕ್ಕಿ ಬಿದ್ದುವು. ಅವೆಲ್ಲವನ್ನೂ ದೋಣಿಯೊಳಕ್ಕೆ ಚೆಲ್ಲಿಕೊಂಡು ಪುನಃ ಬಲೆ ಬೀಸಿದರು. ಹೀಗೆ ಅನೇಕ ಬಾರಿ ಬಲೆಯನ್ನು ಬೀಸಿ ಮೀನುಗಳನ್ನು ಹಿಡಿದರು. ಒಂದು ಸಲವಂತೂ ಮೀನುಗಳ ಜೊತೆಯಲ್ಲಿ ಒಂದು ಸಣ್ಣ ಹಾವು ಸಹ ಬಂದಿತ್ತು. ಆ ಬೆಸ್ತ ಅದನ್ನು ಕೈಯಲ್ಲೇ ಎತ್ತಿ ಪುನಃ ಕಡಲೊಳಕ್ಕೆ ಎಸೆದ. ನಮಗಂತೂ ಇವೆಲ್ಲ ಆಶ್ಚರ್ಯವೇ. ಅವರ ಕೆಲಸಗಳನ್ನೇ ನೋಡುತ್ತ ಬೆಪ್ಪಾಗಿ, ಬೆರಗಾಗಿ, ಬೊಂಬೆಗಳಂತೆ ತೆಪ್ಪಗೆ ಕುಳಿತಿದ್ದೆವಷ್ಟೆ.

ಈಗ ದೋಣಿ ದಡದ ಕಡೆಗೆ ಹೊರಟಿತ್ತು. ದಡ ಸಮೀಪಿಸುತ್ತಿದ್ದಂತೆ ಪುನಃ ಅಲೆಗಳ ಆರ್ಭಟ. ಅಲೆಗಳು ಏರಿ ಇಳಿಯುತ್ತಿದ್ದಂತೆ ದೋಣಿಯೂ ಏರುತ್ತ, ಇಳಿಯುತ್ತ ನೀರಿನಲ್ಲಿ ಸಾಗುತ್ತಿತ್ತು. ಅಲೆಯ ಜೊತೆಯಲ್ಲಿ ಅದು ಇಳಿಯುವಾಗಲಂತೂ ಮುಗ್ಗರಿಸುವುದೆಂದೇ ನಮಗೆ ಭಾಸವಾಗುತ್ತಿತ್ತು. ಕೊನೆಕೊನೆಗೆ ದೊಡ್ಡ ದೊಡ್ಡ ಅಲೆಗಳನ್ನೇ ದೋಣಿ ದಾಟಬೇಕಾಯಿತು. ನಮ್ಮ ಎದೆ ಢವಗುಟ್ಟತೊಡಗಿತ್ತು. ನಮ್ಮ ಮನಸ್ಸು

WITH BEST COMPLIMENTS OF:-

B. S. NARASIMHAIAH SON & CO.,

GENERAL MERCHANTS & COMMISSION AGENTS,

MANDYA.

DISTRIBUTORS.- **THE IMPERIAL TOBACCO OF INDIA LTD.,**
CALTEX (INDIA) LTD.,
RAVI VEGETABLE OIL INDUSTRIES,
DAVANAGERE.

AGENTS **THE RAJU SOAP FACTORY, MYSORE.**
THE NUTRINE CONFECTIONERY CO. (P) LTD.,
CHITTOOR.

GRAMS: "VENKATESH" PHONE: 56

ಪುನಃ ವೆಂಕಟರಮಣನನ್ನು ಮೊರೆಹೊಕ್ಕಿದ್ದೆವು. ಏಕಾದರೂ ಈ ದೋಣಿಗಳಲ್ಲಿ ಬಂದೆವೋ—ಎಂದು ನಮ್ಮನ್ನು ನಾವೇ ಶಪಿಸಿಕೊಂಡದ್ದೂ ಆಯಿತು. ನಾವು ಹೇಗೆಯೋ ಕಳವಳಿಸುತ್ತಿದ್ದಂತೆಯೇ ಒಬ್ಬ ಬೆಸ್ತ ಕಡಲಿಗೆ ಹಾರಿದ. ಅವನ ಹಿಂದೆಯೇ ಇನ್ನೊಬ್ಬ ಹಾರಿದ. ಅವರಿಬ್ಬರನ್ನೂ ಅಲೆಯೊಂದು ಹೊತ್ತುಕೊಂಡು ಹೋಗಿ ದಡಕ್ಕೆ ಚೆಲ್ಲಿತು. ಅವರಿಬ್ಬರೂ ದಡದಲ್ಲಿ ನಿಂತು ಅಲೆಗಳ ಮಧ್ಯೆ ನುಗ್ಗಿ ಬರುತ್ತಿದ್ದ ದೋಣಿ ಮತ್ತು ಸಮಯ ನೋಡಿ ದಡಕ್ಕೆ ಎಳೆದುಕೊಂಡರು. ಅಬ್ಬ! ಅಂತೂ [illegible] ದಡಕ್ಕೆ ಬಂದು ನೆಲದ ಮೇಲೆ ಕಾಲಿಟ್ಟೆವು.

ಇನ್ನು ಸಾಕು ಎನ್ನುವಷ್ಟು ದೋಣಿ ಪಯಣದ ಸವಿ ನಮಗೆ ದೊರಕಿತ್ತು. ಆ ಬೆಸ್ತರ ಕೈಗೆ ಒಂದು ರೂಪಾಯಿ ಇಟ್ಟು ನಾವು ಹೊರಟುಬಂದೆವು. ಅಂದೇ ಕಾಸರಗೋಡಿನಿಂದ ಹೊರಡುವುದು ನಮ್ಮ ಕಾರ್ಯಕ್ರಮ. ಆ ಪ್ರಯಾಣದಲ್ಲಿ ಏನೂ ವ್ಯತ್ಯಾಸವಿಲ್ಲ. ಅಲ್ಲಿಂದ ರೈಲಿನಲ್ಲಿಯೇ ಮಂಗಳೂರಿಗೆ ಬಂದು ಅಲ್ಲಿಂದ ಮಡಿಕೇರಿ, ಮೈಸೂರುಗಳ ಮಾರ್ಗವಾಗಿ ಬೆಂಗಳೂರನ್ನು ಸೇರಿದೆವು.

ಬೆಂಗಳೂರು ರೈಲ್ವೆ ಸ್ಟೇಷನ್‌ನಲ್ಲಿ ಇಳಿದೊಡನೆ ಸದ್ದುಗದ್ದಲಗಳಿಂದ ನಮಗೆ ಸ್ವಾಗತ ದೊರೆಯಿತು. ಆ ಗದ್ದಲ ಗಲಾಟೆ ಕಿವಿಗಳಿಗೆ ಬಂದು ಅಪ್ಪಳಿಸುತ್ತಿತ್ತು. ಕಣ್ಣುಗಳೂ ಅದನ್ನು ಕಾಣುತ್ತಿದ್ದುವು. ಆದರೆ ಮನಸ್ಸು ಮಾತ್ರ ಆ ದೋಣಿ ಪಯಣಗಳನ್ನು ಮೆಲುಕು ಹಾಕುತ್ತಲೇ ಇತ್ತು. ಆ ಕಡಲು, ಆ ನದಿ, ಆ ದೋಣಿ ಪಯಣಗಳು ನಮ್ಮ ಜೀವನದ ಒಂದು ಸವಿ ನೆನಪಾಗಿಯೇ ಉಳಿದುವು.

(ಬೆಂಗಳೂರು ಮಲ್ಲೇಶ್ವರದ ವಾಗ್ದೇವಿ ಗೆಳೆಯರ ಬಳಗದವರು ಏರ್ಪಡಿಸಿದ್ದ ಅಖಿಲ ಕರ್ನಾಟಕ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಲೇಖನ.)

ದಿನಾಚರಣೆಗಳ ಕರ್ಮಕಥೆ

(ನಾಲ್ಕನೇ ಪುಟದಿಂದ)

ಇರಲಾರದೆನ್ನಿ! ಆದರೂ ಈ ಉತ್ಸವ ನಡೆಸಬೇಕು. ಕೆಲವು ಸಾರೆಯಂತೂ ಅದು ಸಂಬಂಧಪಟ್ಟವರಲ್ಲಿಯೇ ಆ ವಿಚಾರ ಇರುವದಿಲ್ಲ. ಸೌಜನ್ಯ ಸಪ್ತಾಹ ನಡೆದು, ಎಷ್ಟು ಜನ ಅಧಿಕಾರಿಗಳು ಸೌಜನ್ಯ ಶೀಲರಾಗಿ ದಿನಾಚರಣೆ ಪಡೆಯಿತು? ಅದೆಷ್ಟು ಅಧಿಕಾರಿಗಳು ಸೌಜನ್ಯ ಶೀಲರಾಗಿ ಜನಪ್ರಿಯರಾಗಿದ್ದಾರೆ? ಒಟ್ಟಿನಲ್ಲಿ ಕೊನೆಯಲ್ಲಿ "ಭಾಷಣಗಳಾದವು" ಎಂದು ವರದಿ ಓದುತ್ತೇವೆ. ಆದರೆ ಎಷ್ಟು ಜನರಲ್ಲಿ ಈ ಸಹಕಾರೀ ಮನೋವೃತ್ತಿ ಬೆಳೆಸಿದ್ದೇವೆ? ಸಂಬಂಧಪಟ್ಟವರಲ್ಲಿ ಸಹ ಅದು ಇಲ್ಲದೇ ಇದ್ದ ಸಂದರ್ಭಗಳೂ ಇವೆ. ಸಹಕಾರ ಪರಸ್ಪರವಾಗಿಯೇ ಇದ್ದದ್ದೂ ಇದೆ. ಅಂದಾಗ ಹಲವಾರು ಆಚರಣೆ, ಕ್ರಿಯೆ ಮಾತ್ರ ನಿಷ್ಕ್ರಿಯತೆಯೇ ಆಗಿದೆ.

ಹೀಗಾಗಬಾರದು

ಈ ದಿನಾಚರಣೆಗಳ ಕರುಣಾಜನಕ ಕಥೆ ಹೀಗೆಯೇ ಮುಂದುವರಿಯಬಾರದು. ದಿನವೂ ಆಯಾ ವಿಚಾರಗಳೂ ನಮ್ಮ ಅನುಷ್ಠಾನದಲ್ಲಿ ಬರಬೇಕೆಂಬುದೇ ಅದರ ಉದ್ದೇಶವಾಗಿದೆ. ಕೇವಲ ದಿನಮಾತ್ರ ಆಚರಿಸಿ ಅದರ ಉದ್ದೇಶಗಳನ್ನು ಉಳಿದ ದಿನಗಳಲ್ಲಿ ವಿಫಲಗೊಳಿಸುವ, ಅಪಚಾರವೆಸಗುವ ಹಾಗೆ ನಡೆದುಕೊಂಡರೆ ಏನು ಪ್ರಯೋಜನ? ಹಾಗಾಗಿ ದಿನಾಚರಣೆಗಳಿಂದ ಕಲಿತು ಬೇಕಾದ ಪಾಠ ದಿನವೂ ಇದೆ. ಅದನ್ನು ಕಲಿತರೆ ಮಾತ್ರ ಆಚರಣೆ ಸಾರ್ಥಕವಾಗುತ್ತದೆ. ಚೇತನ ತರುತ್ತದೆ.

---

೦೦ ೦೦ ೦೦ ೦೦

ಅನ್ಯಾಯದ ನಿವಾರಣೆಗೆ ಸ್ವಯಂ ಪ್ರೇರಣೆಯಿಂದ ವೇದನೆಯನ್ನು ಸಹಿಸಿಕೊಳ್ಳುವುದೇ ತೀವ್ರತರವಾದ ಹಾಗೂ ಅತ್ಯುತ್ತಮ ಪರಿಹಾರವಾಗಿದೆ.

೦೦ ೦೦ ೦೦ ೦೦

ತ್ಯಾಗ ಜೀವನವೇ ಕಲೆಗಳ ಪರಾಕಾಷ್ಠೆಯಾಗಿದ್ದು ನಿಜವಾದ ಸಂತೋಷ ದಾಯಕವಾಗಿದೆ.

೦೦ ೦೦ ೦೦ ೦೦

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. 386/1966; R. E. P. 580/1967

ಮನುವೆಲ್ ನೊರೋಹಾ — ಅರ್ಜಿದಾರ

ಮತ್ತು

ಗುಸ್ತಿನ್ ಡಿಸೋಜ ಕೂಡಾ — ಎದುರು 1ನೇ ಎದುರು: ಡೊಮಿಲ್ಲೊ ಡಿಸೋಜ, ಬಂಗೆಲ್ ಡಿಸೋಜರ ಮಗ, ಕಾರ್ಕಳ ತಾಲೂಕು ಸಾಣೂರು ಗ್ರಾಮದ ಮಳದ ಕೆರೆ ಎಂಬಲ್ಲಿರುವ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ— —

ಮೇಲ್ಕಂಡ ಅಮಲ್ಜಾರಿಯಲ್ಲಿ ನಿಮ್ಮ ವಗೈರೆರ ಹಕ್ಕಿನ ಸ್ಥಿರಾಸ್ತಿ ಏಲಂ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಏಲಂ ಆಸ್ತಿಯೂರಿನ ಶರ್ತ ವಗೈರೆ ನಿರ್ಣಯಿಸುವ ಬಗ್ಗೆ ತಾರೀಕು 1—2—1969ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮಗೆ ಆಕ್ಷೇಪವಿದ್ದಲ್ಲಿ ತಾರೀಕು 1—2—1969ರಲ್ಲು ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ಉಜ್ರಹೇಳತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಕೋರ್ಟ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat,

ವಕೀಲ್, ಕಾರ್ಕಳ.

ಕಾರ್ಕಳ

ತಾರೀಕು: 16—1—1969.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P and S. C. No. 1/1969.

ಸರಸ್ವತಿ ಬಾಯಿ, ಕೃಷ್ಣಾಚಾರ್ಯರ ಮಗನೆ ಕೃಷ್ಣಭಟ್ಟರ ವಿಧವೆ, ಉಡುಪಿ ತಾಲೂಕು ಕಿದಿಯೂರು ಗ್ರಾಮ— ಅರ್ಜಿದಾರಳು

ಮತ್ತು

ಪದ್ಮಾವತಿ ಅಮ್ಮ, ರಾಮ ಭಟ್ಟರ ವಿಧವೆ, ಉಡುಪಿ ತಾಲೂಕು ಕೊರಂಗ್ರಪಾಡಿ ಗ್ರಾಮ — — — ಎದುರು

ಎದುರಿಗೆ ಮತ್ತು ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಅರ್ಜಿದಾರಳ ಗಂಡ ವ ಎದುರಿನ ಮಗ, ಮೃತ ಕೃಷ್ಣಾಚಾರ್ಯರ ಮಗನೆ ಕೃಷ್ಣ ಭಟ್ಟರ ಬಾಬ್ತು ಅರ್ಜಿಯ A ಶೆಡ್ಯೂಲಿನಲ್ಲಿ ಕಾಣಿಸಿರುವ ಆಯಿವೇಜುಗಳನ್ನು ವಸೂಲುಪಡಿಯುವರೆ ತಾನು ಮತ್ತು ಎದುರು ಹಕ್ಕುದಾರರು ಮತ್ತು ವಾರೀಸುದಾರರು ಕಲಹ ಆ ಬಗ್ಗೆ ಎದುರಿನ ಪರವಾಗಿ ಸಹಾ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸುವಂತೆ ಅರ್ಜಿದಾರಳು ಅರ್ಜಿ ಮಾಡಿಕೊಂಡಿರುವುದರಿಂದ ಆ ಕುರಿತು ಎದುರಿಗಾಗಲೀ ಯಾರಿಗಾಗಲೀ ಆಕ್ಷೇಪಯಿದ್ದಲ್ಲಿ ಅವನ್ನು ತಾ. 17—2—1969ಕ್ಕೆ ಮೇಲ್ಕಂಡ ಕೋರ್ಟ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. N. Madhava Rao,

Vakil for Petitioner.

ಉಡುಪಿ, 17—1—1969.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 708/1962

ತನಿಯ ನಾಯ್ಕ — — — ವಾದಿ

ಮತ್ತು

ಪದ್ದಕ್ಕ ಯಾನೆ ಪದ್ಮಾವತಿ ಕೂಡಾ — — — ಪ್ರತಿವಾದಿರು

8ನೇ ಪ್ರತಿವಾದಿ: ಶೀನ ನಾಯ್ಕ, ಸೋಮಯ್ಯ ನಾಯ್ಕರ ಮಗ, ಕಾರ್ಕಳ ತಾಲೂಕು ಪಳ್ಳಿ ಗ್ರಾಮದ ಬಳಕ ಎಂಬಲ್ಲಿರುವ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಪ್ಲೇಂಟಿನಲ್ಲಿ ಕಾಣಿಸಿದ M. N. ಮತ್ತು L ನೇ ತೋಡುಗಳ ನೀರಿನ ಹಕ್ಕಿನ ಕುರಿತು ಡಿಕ್ಲರೇಶನ್ ಮತ್ತು ಶಾಶ್ವತ ಇಂಜಂಕ್ಷನ್ ಕೇಳಿಯೂ ಮತ್ತು ನೀವು ವಗೈರೆರ ಮೇಲೆ ಒಂದು ಮೆಂಡೆಟರಿ ಇಂಜಂಕ್ಷನ್ ಕೇಳಿಯೂ ಮತ್ತು ಸುಗಿ ಬೆಳೆಯ ನಷ್ಟ ಕೊಡಿಸಬೇಕಾಗಿಯೂ ವಗೈರೆ ಕೇಳಿ ನೀವು ವಗೈರೆರ ಮೇಲೆ ದಾಖಲುಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ಇದೇ ಬರುವ ತಾರೀಕು 18—2—1969ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕು 18—2—1969ರಲ್ಲು ಪೂರ್ವಾಹ್ನ ಗಂಟೆ 10ಕ್ಕೆ ನೀವು ಸದ್ರಿ ಕೋರ್ಟಿನಲ್ಲಿ ಖುದ್ದಾಗಲಿ, ವಕೀಲರ ಮೂಲಕವಾಗಲಿ ಹಾಜರಾಗಿ ಉಜ್ರಹೇಳತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಕೋರ್ಟ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat,

ವಕೀಲ್, ಕಾರ್ಕಳ.

ಕಾರ್ಕಳ

ತಾರೀಕು: 16—1—1969.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 351/1967

Ex. C. 337/1968.

ಡಾಕ್ಟರ್ ಕೆ. ವೆಂಕಟಕೃಷ್ಣ ಉಪಾಧ್ಯಾಯ —ಡಿಕ್ರಿದಾರ

ಮತ್ತು

ಪಿ. ಸದಾಶಿವ ರಾವ್ ಕೂಡಾ —ಎದುರು

6ನೇ ಎದುರು—P. ಸರೋಜಿನಿ B. ರಾವ್, P. ಭಾಸ್ಕರ್ ರಾವ್‌ರವರ ಹೆಂಡತಿ ವ, ಇನ್ನಾ ಬಾಬುರಾಯರ ಮಗಳು, residing at 64-A, Apparaswami Koil Street, Mylapore, Madras City, Madras ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ನಿಮ್ಮ ವಗೈರೆರ ಹಕ್ಕಿನ ಸ್ಥಿರಾಸ್ತಿ ಏಲಂ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಏಲಂ ಆಸ್ತಿಯೂರಿನ ಶರ್ತ ನಿರ್ಣಯಿಸುವ ಬಗ್ಗೆ ತಾರೀಕು 15—2—1969ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮಗೆ ಆಕ್ಷೇಪವಿದ್ದಲ್ಲಿ ನೀವು ಮೇಲ್ಕಂಡ ಕೋರ್ಟಿನಲ್ಲಿ ತಾ 15—2—1969ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ಉಜ್ರಹೇಳತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಕೋರ್ಟ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. VENKATESH BHAT,

ಕಾರ್ಕಳ, ವಕೀಲ್, ಕಾರ್ಕಳ.

ತಾರೀಕು 16—1—1969.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

S.C. No. 18/1968.

ತನಿಖೆ ತಾರೀಕು: 30—1—69

ಕುಂತೋಡಿ ರಾಮಪ್ಪ ಗೌಡ —ವಾದಿ

vs.

ಕೃಷ್ಣ ನಾಯ್ಕ —ಪ್ರತಿವಾದಿ

ನೋಟೀಸು

ಸಾಲ್ಮರ ಕಸಬಾ ಗ್ರಾಮದ "ಚನ್ನಪ್ಪ ಪೋಸ್ಟ್" ಆನುರೆ ಮುಡ್ಡೂರು ಎಂಬಲ್ಲಿರುವ ಚೋಮ ನಾಯ್ಕರ ಮಗ ಪ್ರತಿವಾದಿ ಕೃಷ್ಣ ನಾಯ್ಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಿನ ವ್ಯವಹಾರದಲ್ಲಿ ವಾದಿಯು ಹೂಡಿದ Small Cause 18/1968 ಎಂಬ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 30—1—1969ರಂದು ಇಡಲಾಗಿದೆ. ಸದ್ರಿ ವ್ಯವಹಾರದಲ್ಲಿ ಆ ಕುರಿತು ನಿಮ್ಮದೇನಾದರೂ ಆಕ್ಷೇಪ ಇದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 30—1—69ರಂದು ಪೂರ್ವಾಹ್ನ ಘಂಟೆ 10ಕ್ಕೆ ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜರಾಗಿ ಉಜ್ರಹೇಳತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಕೋರ್ಟ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

ಎ. ಪಿ. ಗೌರೀಶಂಕರ,

ವಾದಿಯ ಎಡ್ವೋಕೇಟ್,

ಪುತ್ತೂರು, ದ. ಕ.,

16—1—1969.

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,

ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ

ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ ಮೂಡಬಿದ್ರಿ — ಬಂಗಾಡಿ, ಕುದುರೆಮುಖ, ನಾವೂರು — ಚಾರ್ಮಾಡಿ ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

ಗತಕಾಲದ ತುಳುನಾಡಿನ ಪ್ರಜಾಸಾಮಾನ್ಯರು

(ಹನ್ನೊಂಭತ್ತನೇ ಪುಟದಿಂದ)

ಯುವಾದುವು. ವೈಷ್ಣವ ದೇವಾಲಯಗಳನ್ನೂ ಜೈನ ಬಸದಿಗಳನ್ನೂ ನಾಡಿನ ಹಲವು ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಹೊಸತಾಗಿ ನಿರ್ಮಿಸುವುದಕ್ಕಾಗಿಯೂ ಜೀರ್ಣೋದ್ಧಾರ ಮಾಡುವುದಕ್ಕಾಗಿಯೂ ಸಾಮ್ರಾಜ್ಯದ ಅಧಿಕಾರಿಗಳೂ ನಾಡಿನ ತುಂಡರಸುಗಳೂ ಪ್ರಾತಿನಿಧಿಕ ಸಂಘಗಳೂ ಸಹಸ್ರಾರು ಪ್ರಜೆಗಳೂ ಮೇಲಿಂದ ಮೇಲೆ ದಾನಗಳನ್ನು ಕೊಡಲು ಮುಂದೆ ಬರುತ್ತಿದ್ದರು. ಹೀಗೆ ಪ್ರಜೆಗಳೂ ತಾವು ಗಳಿಸಿದ ಸಂಪತ್ತನ್ನು ಧಾರ್ಮಿಕ ಚಟುವಟಿಕೆಗಳಿಗಾಗಿ ವ್ಯಯ ಮಾಡುತ್ತಿದ್ದದ್ದು ಅಂಧಶ್ರದ್ಧೆಯಿಂದಾಗಿ ಅಲ್ಲ. ಅಂದಿನ ದೇವಾಲಯಗಳೂ ಬಸದಿಗಳೂ ವಿದ್ಯಾ ಕೇಂದ್ರಗಳಾಗಿದ್ದವು; ಕಥಾ ಕಾಲಕ್ಷೇಪ, ನೃತ್ಯ ಮುಂತಾದ ವಿದ್ಯಾದಾಯಕ ಮನರಂಜನಾ ಕಾರ್ಯಕ್ರಮಗಳ ನೆಲೆವೀಡುಗಳಾಗಿದ್ದವು. ಒಟ್ಟಿನಲ್ಲಿ ಹೇಳುವುದಾದರೆ ಆ ಕಾಲದ ತೌಳವರು ದೇವಾಲಯಗಳಿಂದಲೂ ಬಸದಿಗಳಿಂದಲೂ ಪಡೆಯುತ್ತಿದ್ದ ಪ್ರಯೋಜನವು ಅವರು ಆ ದೇವಾಲಯಗಳಿಗೂ ಬಸದಿಗಳಿಗೂ ಕೊಡುತ್ತಿದ್ದ ದಾನಗಳಿಗಿಂತಲೂ ಹೆಚ್ಚಿನ ಮಹತ್ವದ್ದಾಗಿತ್ತು.

ಹೀಗೆ ಗತಕಾಲದ ತುಳುನಾಡಿನ ಜನಜೀವನದ ಬಗೆಗಿನ ಇನ್ನೆಷ್ಟೋ ವಿಷಯಗಳು ಶಾಸನಗಳ ಅಧ್ಯಯನದಿಂದ ತಿಳಿಯಬರುತ್ತವೆ. ಅವುಗಳನ್ನೆಲ್ಲ ಉದ್ಧರಿಸಿ ಚರ್ಚಿಸಲು ಇಲ್ಲಿ ಸ್ಥಳಾವಕಾಶವಿಲ್ಲವಷ್ಟೆ.

ಒಟ್ಟಿನಲ್ಲಿ, ಗತಕಾಲದ ತೌಳವರು ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತಮಗಿದ್ದ ಸ್ವಾತಂತ್ರ್ಯವನ್ನು [illegible] ಕಾಪಾಡಿಕೊಂಡು ಬಂದಿದ್ದರೆಂಬುದನ್ನು ನಮ್ಮ ನಾಡಿನ ಶಾಸನಗಳು ಸ್ಪಷ್ಟಪಡಿಸುತ್ತವೆ. ಆ ಸ್ವಾತಂತ್ರ್ಯವು ಪರಪಂಥ, ಪರಧರ್ಮಗಳ ಸಹಿಷ್ಣುತೆಯಿಂದ ಕೂಡಿತ್ತೆಂಬುದನ್ನು ಪ್ರಜಾರಾಜ್ಯದ ದಿನವಾದ ಇಂದು ನಾವೆಲ್ಲರೂ ಸ್ಮರಿಸಬೇಕು.

ನಮ್ಮ ರಾಷ್ಟ್ರದ ಜನಜೀವನದಲ್ಲಿ ಸಮಾನ ಪ್ರಭುಗಳಾದ ಪ್ರಜೆಗಳಿಗೆ ಅವರದ್ದೇ ಆದ ಪ್ರಭುತ್ವವನ್ನೂ ಅಧಿಕಾರಗಳನ್ನೂ ಸರಕಾರವೇ ಮುಂದೆ ನಿಂತು ಒದಗಿಸಿಕೊಡಬೇಕೆಂದೇನೂ ಇಲ್ಲ. ಆ ಪ್ರಭುತ್ವವನ್ನೂ ಅಧಿಕಾರಗಳನ್ನೂ ತಾವಾಗಿಯೇ ತಮ್ಮದಾಗಿಸಿಕೊಂಡು ಪ್ರಜಾಪ್ರಭುತ್ವದ ಸರ್ವತೋಮುಖ ಬೆಳವಣಿಗೆಗಾಗಿ ದುಡಿಯುವುದು ಪ್ರಜೆಗಳ, ಅಂದರೆ ನಮ್ಮೆಲ್ಲರ ಆದ್ಯ ಕರ್ತವ್ಯ. ಇದಕ್ಕೆ ಗತಕಾಲದ ತುಳುನಾಡು ಒಂದು ಮಹತ್ವಪೂರ್ಣ ಉದಾಹರಣೆ.

ಮದುವೆ, ಹಾಗೂ ವಿಶೇಷ ಸಮಾರಂಭಗಳ,
ವೈವಿಧ್ಯಪೂರ್ಣ ಬಟ್ಟೆಬರೆಗಳಿಗಾಗಿ

ಗಜಾನನ ಕ್ಲಾತ್ ಸ್ಟೋರ್ಸ್

ತೆಂಕಪೇಟೆ, ಉಡುಪಿ, ದ. ಕ.

ಸಂದರ್ಶಿಸಲೇ ಬೇಕಾದ ಅಚ್ಚುಮೆಚ್ಚಿನ ಜವುಳಿ ಅಂಗಡಿ

ಫೋನ್:
ಚಿಲ್ಲರೆ ಮಾರಾಟದ ಅಂಗಡಿ—431
ರಖಂ ಮಾರಾಟದ ಅಂಗಡಿ—481

ಫೋನ್: 184 & 158

ಎಂ. ವಿ. ನಾರಾಯಣಸ್ವಾಮಿ & ಬ್ರದರ್,

ಜನರಲ್ ಮರ್ಚೆಂಟ್ಸ್,
ಪೇಟೆಬೀದಿ : : ಮಂಡ್ಯ.

ನಮ್ಮಲ್ಲಿ ಉತ್ತಮವಾದ ವೆಲ್ಡಿಂಗ್ ರಾಡುಗಳು (Advani's Welding Electrodes), ಎಲ್ಲಾ ತರಹದ ಕಟಿಂಗ್ ಟೂಲ್‌ಸು (Addison's Cutting Tools)
ಮತ್ತು
ಪಂಪ್ ಸೆಟ್‌ಗೆ ಬೇಕಾದ ಎಲ್ಲಾ ಸೈಜಿನ ಜಿ. ಐ. ಪೈಪುಗಳು ಹಾಗೂ ಫಿಟಿಂಗ್‌ಗಳು ನಿಖರವಾದ ಬೆಲೆಗೆ ದೊರೆಯುತ್ತವೆ.
ನಿಮ್ಮ ಮನೆಗೆ ಬೇಕಾದ ಎಲ್ಲಾ ಸೈಜಿನ "ನಲ್ಲಿ ಪೈಪುಗಳು" ಹಾಗೂ ಫಿಟಿಂಗ್‌ಗಳು ದೊರೆಯುತ್ತವೆ.
ಉತ್ತಮವಾದ ಎಲೆಕ್ಟ್ರಿಕ್ ಮೋಟಾರುಗಳು ಹಾಗೂ ಪಂಪುಗಳಿಗೆ ನಮ್ಮಲ್ಲಿ ವಿಚಾರಿಸಿರಿ. ಒಮ್ಮೆ ಭೇಟಿ ಕೊಡಿ.

With Best Compliments of :-

H. B. DORESWAMAIAH, *B. A, LL. B.,*

Proprietor :

SURESH SERVICE STATION

AGENTS & DEALERS:

M/s. Esso Standard Eastern Inc. & Kerosine,

MANDYA. PHONE: 195

For Prompt & Courteous Service
Please visit our Service Station

Wishing all our Patrons
a happy and prosperous New Year

ಶ್ರೇಷ್ಠ ಸಮಾಜ ಸುಧಾರಕ - ಗಾಂಧೀಜಿ

(ಮೂರನೇ ಪುಟದಿಂದ)

ಹೇಳಿ ತಮ್ಮ ವಿಚಾರಧಾರೆಯನ್ನು ಮಾರ್ಪಡಿಸಿಕೊಂಡರು; ಬೆಳಗಿಸಿಕೊಂಡರು. ಅವರು ಸದಾ ಅಂತರಾತ್ಮನ ಪ್ರೇರಣೆಯಿಂದ ಕಾರ್ಯಪ್ರವೃತ್ತರಾಗುತ್ತಿದ್ದರು. ಮಾನವ ಪ್ರೇಮದ ಗರಿ ಅವರಿಗೆ ಅಭೂತಪೂರ್ವ ಚೈತನ್ಯ ನೀಡಿತು.

ಬಿಹಾರದಲ್ಲಿ ಸಂಭವಿಸಿದ ಭೂಕಂಪದ ಬಗ್ಗೆ ಪ್ರಸ್ತಾಪಿಸುತ್ತ ಒಮ್ಮೆ ಗಾಂಧೀಜಿ "ಬಿಹಾರಿನ ಭೂಕಂಪ ಅಸ್ಪೃಶ್ಯತೆಯ ಪಾಪಕ್ಕಾಗಿ ಪಡೆದ ಪ್ರಾಯಶ್ಚಿತ್ತ" ಎಂದು ಹೇಳಿದರು.

ಕವಿ ರವೀಂದ್ರರು ಗಾಂಧೀಜಿಯವರ ವಿಚಾರವನ್ನು ವಿರೋಧಿಸುತ್ತ "ದೈವೀ ಪ್ರಕೋಪದ ಈ ಘಟನೆಗೆ ವಿಜ್ಞಾನ ಸಮ್ಮತವಲ್ಲದ ಕಾರಣ ಹೇಳುವುದರಿಂದ ಅಸಹಜವಾದ ಭಾವನೆಗಳಿಗೆ ಬಲ ದೊರೆತಂತಾಗುವುದೆಂ"ದರು.

ಗಾಂಧೀಜಿಯವರು ನಿಶ್ಚಲ ಭಾವನೆಯಿಂದ ಉತ್ತರ ನೀಡುತ್ತ "ದೇವರ ಲೀಲೆ ಮನುಷ್ಯರಿಗೆ ತಿಳಿಯದು" ಎಂದು ನುಡಿದರು. ಗಾಂಧೀಜಿ ಸೌಜನ್ಯದ ಮೂರ್ತಿಯಾಗಿದ್ದರು. ಯಾರಾದರೂ ತಮ್ಮ ಪಾದಗಳನ್ನು ಮುಟ್ಟಿದರೆ ಗಾಂಧೀಜಿ ಕಂಪಿಸುತ್ತಿದ್ದರು.

ಒಮ್ಮೆ ಗಾಂಧೀಜಿ ಒಂದು ಹಳ್ಳಿಗೆ ಭೇಟಿ ನೀಡಿದರು. ಆಗ ಗ್ರಾಮಸ್ಥರು ಗಾಂಧೀಜಿಯವರ ಆಗಮನದಿಂದ ಗ್ರಾಮದಲ್ಲಿ ಪವಾಡವೊಂದು ನಡೆದಿದೆಯೆಂದೂ ಅದುವರೆಗೂ ನೀರೇ ಇರದಿದ್ದ ಬಾವಿಯಲ್ಲಿ ನೀರು ಬಂದಿದೆ ಎಂದು ಹೇಳಿದರು. ಗ್ರಾಮಸ್ಥರ ಮಾತನ್ನು ಕೇಳಿ ಗಾಂಧೀಜಿ ನಕ್ಕುಬಿಟ್ಟರು. "ನೀವು ಈ ರೀತಿ ವಿಚಾರಮಾಡಿದರೆ ಮೂರ್ಖರೇ ಸರಿ. ನಾನು ಬರುವುದಕ್ಕೂ ಬಾವಿಯಲ್ಲಿ ಜಲ ಬರುವುದಕ್ಕೂ ಸರಿಹೋಗಿದ್ದರೆ, ಅದು ಕೇವಲ ಕಾಕತಾಳೀಯ ನ್ಯಾಯ" ಎಂದರು.

ಹೊಸ ಸಮಾಜವ್ಯವಸ್ಥೆಯ ನಿರ್ಮಾಣವಾಗುವುದಕ್ಕಾಗಿ ಹಳೆಯ ವ್ಯವಸ್ಥೆಯನ್ನು ನಾಶಗೊಳಿಸುವುದು ಅಗತ್ಯವೆಂಬ ವಿಚಾರವನ್ನು ಅವರೆಂದೂ ಒಪ್ಪುತ್ತಿರಲಿಲ್ಲ. ಗಾಂಧೀಜಿಯವರು ಹಿಂಸೆಗಿಂತಲೂ ಅಹಿಂಸೆಯೇ ಹೆಚ್ಚು ಪ್ರಭಾವಶಾಲಿಯೆಂದು ಭಾವಿಸಿದ್ದರಿಂದಾಗಿ ಅಹಿಂಸೆಯ ಮಾರ್ಗವನ್ನು ಅನುಸರಿಸಿದರು.

SISTA S CB 46 KAN

ಈಗ ಹನ್ನೊಂದು ರಾಜ್ಯಗಳಲ್ಲಿ ಮತ್ತು ಕೇಂದ್ರ ಸರಕಾರದಿಂದ ಆಳಲ್ಪಡುವ ದೆಹಲಿ, ಪಾಂಡಿಚೇರಿ ಮತ್ತು ಗೋವಾ ಪ್ರದೇಶಗಳಲ್ಲಿ

ಬೆಳೆಯುತ್ತ ಬೆಳೆಯುತ್ತ ನಾವು ಸೇವೆ ನೀಡುತ್ತಿದ್ದೇವೆ

* ಗ್ರಾಮೀಣ ಹಾಗೂ ನಗರಗಳಿಗೆ ಹತ್ತಿರವಿರುವ ಪ್ರದೇಶಗಳಲ್ಲಿ ಸೇವೆ ನೀಡುವ 177 ಶಾಖೆಗಳಿವೆ, * ನಗರಗಳಲ್ಲಿ 125 ಶಾಖೆಗಳಿವೆ 1968 ರಲ್ಲಿ 55 ಹೊಸ ಶಾಖೆಗಳು ಉದ್ಘಾಟಿಸಲ್ಪಟ್ಟವು.

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
ರಿಜಿಸ್ಟರ್ಡ್ ಆಫೀಸು ಲೈಟ್‌ಹೌಸ್ ಹಿಲ್, ಮಂಗಳೂರು
ಆಡಳಿತ ಆಫೀಸು 112 ಶ್ರೀ ಜಯಚಾಮರಾಜೇಂದ್ರ ರೋಡ್ ಬೆಂಗಳೂರು

ನಿಮಗೆ ಉತ್ತಮತರ ಸೇವೆ ನೀಡಲು ಅಧಿಕಾಧಿಕ ಶಾಖೆಗಳು — ಜಗತ್ತಿನಾದ್ಯಂತ ಪ್ರತಿನಿಧಿಗಳು

ಲಕ್ಷಾಂತರ ವೈದ್ಯ-ಡಾಕ್ಟರುಗಳಿಂದ ಪ್ರಶಂಸೆ ಪಡೆದ

ಜಗತ್ಪ್ರಸಿದ್ಧ

ಆ್ಯಂಟಿ ಬಯೊಟಿಕ್ಸ್ ಪೇಟೆಂಟ್ ಔಷಧಿಗಳು

ಆ್ಯಂಟಿ ಬಯೊಟಿಕ್ಸ್ ಅಂದರೆ, ಜೀವಾಣು ನಾಶಕ ಔಷಧಿಗಳು ಇಂದಿನ ಅತ್ಯಾಧುನಿಕ ಸಫಲ ಚಿಕಿತ್ಸೆಯಲ್ಲಿ ಉಪಯುಕ್ತ ಔಷಧಿಗಳಾಗಿವೆ.

1. ಕೋನೋಮೈಸಿನ್ ಕ್ಯಾಪ್ಸುಲ್:

ಫಾರ್ಮುಲಾ:— ಪ್ರತಿ ಕೇಪ್ಸುಲಿನಲ್ಲಿ, ಕಲೋರಮ್ ಫೈನಿಕಾಲ್ 250 ಮಿ. ಗ್ರಾಂ.

ಗುಣ: ಮೂರು ದಿನಗಳಲ್ಲಿ ಟ್ಯಾಫಾಯಿಡ್ ಜ್ವರ, ಪ್ಯಾರಾ ಟ್ಯಾಫಾಯಿಡ್ ಜ್ವರವಿಳಿಸುವ ರಾಮಬಾಣ ಔಷಧಿಯಿದು. ಅತಿಸಾರ, ನಿಮೋನಿಯಾ, ಇನ್‌ಫ್ಲುಯೆಂಝಾ ಕಾಲೀಬಾಂಸಿ ಮತ್ತು ಮಸ್ತಿಷ್ಕಾವರಣ ಶೋಥಗಳಲ್ಲಿ ನಿಶ್ಚಿತ ಲಾಭಕಾರಕ. 12 ಕೇಪ್ಸುಲ್‌ಗಳಿಗೆ ರೂ. 3—50.

2. ಕೋನೋಕ್ಲೋರ್ ಕೇಪ್ಸುಲ್:

ಫಾರ್ಮುಲಾ:— ಪ್ರತಿ ಕೇಪ್ಸುಲಿನಲ್ಲಿ ಕಲೋರಮ್ ಫೈನಿಕಾಲ್ 125 ಮಿ. ಗ್ರಾಂ. ಟೈಟ್ರಾಸ್ಯಾಕ್ಲೀನ್ ಹ್ಯಾಡ್ರೋಕ್ಲೋರ್ಯಾಡ್ 125 ಮಿ. ಗ್ರಾಂ

ಗುಣ: ಗ್ರಾಮ್ ಪೊಜಿಟಿವ್ ಮತ್ತು ಗ್ರಾಮ್ ನೆಗೆಟಿವ್ ಜೀವಾಣುಗಳ ಮೇಲೆ ಮತ್ತು ಜೀವಾಣುಗಳಿಂದ ಉತ್ಪನ್ನವಾಗುವ ಎಲ್ಲ ರೋಗಗಳ ಮೇಲೆ ಕೋನೋಕ್ಲೋರ್‌ನಿಂದ ಬೇಗನೇ ಗುಣ ದೊರೆಯುತ್ತದೆ. ನಿಮೋನಿಯಾ, ಇನ್‌ಫ್ಲುಯೆಂಝಾ, ಟ್ಯಾಫಾಯಿಡ್ ಜ್ವರ, ಪ್ಯಾರಾ ಟ್ಯಾಫಾಯಿಡ್ ಜ್ವರ, ಭೇದಿ, ಕಾಲೀಬಾಂಸಿ, ಕಾರ್‌ಬಂಕಲ್ ಮೊದಲಾದವುಗಳಲ್ಲಿ ಗುಣ ಖಂಡಿತ. 4 ಕೇಪ್ಸುಲುಗಳಿಗೆ ರೂ. 4—80.

3. ಕೋನೋಸಿಂಥ್ ಕೇಪ್ಸುಲ್:

ಫಾರ್ಮುಲಾ:— ಪ್ರತ್ಯೇಕ ಕೇಪ್ಸುಲಿನಲ್ಲಿ ಕಲೋರಮ್ ಫೈನಿಕಾಲ್ 150 ಮಿ. ಗ್ರಾಂ; ಟೈಟ್ರಾಸ್ಯಾಕ್ಲೀನ್ 100 ಮಿ. ಗ್ರಾಂ; ವಿಟಮಿನ್ ಸಿ 70 ಮಿ. ಗ್ರಾಂ, ವಿಟಮಿನ್ ಬಿ$_1$ 3 ಮಿ. ಗ್ರಾಂ, ವಿಟಮಿನ್ ಬಿ$_2$ 2 ಮಿ. ಗ್ರಾಂ, ವಿಟಮಿನ್ ಬಿ$_6$ 1 ಮಿ. ಗ್ರಾಂ; ನಿಕೋಟಿನಾಮ್ಯಾಡ್ 25 ಮಿ. ಗ್ರಾಂ; ಫೋಲಿಕ್ ಎಸಿಡ್ 1 ಮಿ. ಗ್ರಾಂ; ಕ್ಯಾಲ್ಸಿಯಂ ಪೆಂಟೊಥೀನೆಟ್ 5 ಮಿ. ಗ್ರಾಂ.

ಗುಣ: ಎಲ್ಲ ಪ್ರಕಾರದ ಜ್ವರಗಳನ್ನು ಇಳಿಸುವಲ್ಲಿ ಇದು ಸಫಲ ಔಷಧಿ. ಸಾಮಾನ್ಯವಾಗಿ ಎಲ್ಲ ಬಗೆಯ ಜೀವಾಣುಗಳು ಇದರಿಂದ ಸಾಯುತ್ತವೆ. ಇದು ಜ್ವರ, ನಿಮೋನಿಯಾ, ಇನ್‌ಫ್ಲುಯೆಂಝಾ, ಕಾಲೀಬಾಂಸಿ, ಟ್ಯಾಫಾಯಿಡ್ ಜ್ವರ, (ಕರುಳಿನ ಜ್ವರ, ವಾಯುದೆ ಜ್ವರ) ಪ್ಯಾರಾ ಟ್ಯಾಫಾಯಿಡ್, ಭೇದಿ, ಕಾರಬಂಕಲ್, ಪಾರ್ಶ್ವಶೂಲ ಜ್ವರ, ಪೆನಿಸಿಲಿನ್ ಇತ್ಯಾದಿಗಳಿಂದ ಗುಣ ದೊರೆಯದಲ್ಲಿ ಇದು ಗುಣ ನೀಡುತ್ತದೆ. 4 ಕೇಪ್ಸೂಲ್‌ಗಳಿಗೆ ರೂ. 4—00.

4. ಕ್ಲೋರೋ ಕಾಲ್‌ಸ್ಟ್ರೆಪ್ಟ್ ಕೇಪ್ಸುಲ್:

ಫಾರ್ಮುಲಾ:— ಪ್ರತ್ಯೇಕ ಕೇಪ್ಸುಲಿನಲ್ಲಿ ಕಲೋರಮ್ ಫೈನಿಕಾಲ್ 125 ಮಿ. ಗ್ರಾಂ. ಸ್ಟ್ರೆಪ್ಟೋಮೈಸೀನ್ ಸಲ್ಫೇಟ್ 125 ಮಿ. ಗ್ರಾಂ.

ಗುಣ: ಟ್ಯಾಫಾಯಿಡ್ (ವಾಯುದೆ ಜ್ವರ) ಜ್ವರದೊಡನೆ ಭೇದಿಯಾದಾಗ, ಹೊಟ್ಟೆಯುಬ್ಬ ಬವಳಿ ಅಥವಾ ನೋವು ಉಂಟಾದಾಗ ಇದರಿಂದ ಜ್ವರವೂ ಭೇದಿಯೂ ಶೀಘ್ರವಾಗಿ ಇಳಿಯುತ್ತವೆ. ಭೇದಿ, ಅತಿಸಾರ, ಜೀವಾಣು ಜನಿತ ಅತಿಸಾರ, ಬಸ್ತಿಜನಿತ ಅತಿಸಾರ, ರಕ್ತಭೇದಿಗಳಿಗೆ ಇದು ರಾಮಬಾಣ. 12 ಕ್ಯಾಪ್ಸೂಲ್‌ಗಳಿಗೆ ರೂ. 4—50.

5. ಅಫ್ರಾ ಸ್ಪ್ಯಾರೀನ್ ಟೇಬ್ಲೆಟ್:

ಫಾರ್ಮುಲಾ:— ಪ್ರತ್ಯೇಕ ಟೇಬ್ಲಟ್‌ನಲ್ಲಿ ಫಿನಾಯಲ್ ಬ್ಯೂಟಾಜೋನ್ 125 ಮಿ. ಗ್ರಾಂ, ಎಮಿಡೋಪ್ಯಾರೀನ್ 125 ಮಿ. ಗ್ರಾಂ.

ಗುಣ: ಎಲ್ಲ ಬಗೆಯ ವಾತದ ಸಂಧಿಯ ನೋವುಗಳಿಗೆ ರಾಮಬಾಣ. 100 ಟೇಬ್ಲೆಟ್‌ಗಳಿಗೆ ರೂ. 5—00.

6. ಪೆರಾಮೋಲ್ ಟೇಬ್ಲೆಟ್:

ಫಾರ್ಮುಲಾ:— ಪ್ರತಿ ಟೇಬ್ಲಟ್‌ನಲ್ಲಿ ಪೆರಾಸಿಟಾಮೋಲ್ 500 ಮಿ. ಗ್ರಾಂ; ಫಿನಾಸಿಟೀನ್ 15 ಮಿ. ಗ್ರಾಂ. ಕೇಫಿನ್ 5 ಮಿ. ಗ್ರಾಂ.

ಗುಣ: ಪಾರ್ಶ್ವ ಶೂಲೆ, ತಲೆ ನೋವು, ಸೊಂಟ ನೋವು, ಹಲ್ಲು ನೋವು, ಮೂತ್ರ ಕೃಚ್ಛ್ರ, ರಜ ಕೃಚ್ಛ್ರ, ನರಗಳ ನೋವು, ಮಳೆ ಚಳಿಗಳಿಂದ ಉಂಟಾಗುವ ಜ್ವರವಿಳಿಸಲು ಇದು ಸುರಕ್ಷಿತ ಔಷಧಿ. 10 ಟೇಬ್ಲೆಟ್‌ಗಳಿಗೆ ರೂ. 1—50.

ಕೊಡುಗೆ:—ರೂ. 15 (ನೆಟ್) ಬೆಲೆಯ ಔಷಧಿ ಕೊಂಡುಕೊಳ್ಳುವವರಿಗೆ 3% ಕಮಿಶನ್ ಅಲ್ಲದೆ ಸಿಟ್ರಿನಾಲ್‌ನ ಒಂದು ಟ್ಯೂಬ್ ಅಥವಾ ಪೆರಾಮೋಲ್‌ನ ಒಂದು ಸ್ಟ್ರಿಪ್ ಪ್ಯಾಕಿಂಗ್ ಉಚಿತವಾಗಿ ದೊರೆಯುವುದು. ರೂ. 25 (ನೆಟ್) ಬೆಲೆಯ ಮಾಲು ಕೊಂಡುಕೊಳ್ಳುವವರಿಗೆ 6% ಕಮಿಶನ್ ಅಲ್ಲದೆ ಕೋನೋಸಿಂಥ್ ಕೇಪ್ಸೂಲ್‌ನ ಒಂದು ಸೀಸೆ ಅಥವಾ ಕೋನೋಕ್ಲೋರ್‌ನ ಸೀಸೆ ಅಥವಾ ಇಕ್ವಿಬ್ರಿಯಂನ ಒಂದು ಸ್ಟ್ರಿಪ್ ಪ್ಯಾಕಿಂಗ್ ಉಚಿತವಾಗಿ ದೊರೆಯುವುದು. ಸಚಿತ್ರ ಸೂಚೀಪತ್ರವನ್ನು ತರಿಸಿಕೊಂಡು ಓದಿರಿ.

ಮಾರ್ತಾಂಡ ಫಾರ್ಮಸ್ಯೂಟಿಕಲ್ಸ್, ಬಡೌತ್ (ದಿಲ್ಲಿಯ ಬಳಿ) ಉ. ಪ್ರ.

(ವಿಟಮಿನ್, ಹಾರ್ಮೋನ್ಸ್, ಆ್ಯಂಟಿ ಬಯೋಟಿಕ್ ಔಷಧಿಗಳ ನಿರ್ಮಾತರು)

MARTAND PHARMACEUTICALS, BARAUT [U. P.]

ರಾಷ್ಟ್ರೀಯೈಕತೆಯ ಮೂರ್ತಿ

ಗಾಂಧೀಜಿ ಸ್ವಯಂ ಭಾರತೀಯ ರಾಷ್ಟ್ರೀಯತೆಯ ಸಾಕಾರ ಮೂರ್ತಿಯೂ ಆಗಿದ್ದರು. ರಾಷ್ಟ್ರಭಾಷೆ, ಮತ್ತು ಭಾಷಾವಾರು ರಾಜ್ಯಗಳ ನಿರ್ಮಾಣ ಕೇವಲ ಉಪಯುಕ್ತ ಮಾತ್ರವಲ್ಲ ಅನಿವಾರ್ಯವೆಂದೂ ಅವರು ಭಾವಿಸಿದ್ದರು. ಅಸ್ಪೃಶ್ಯತಾ ನಿವಾರಣೆಯಿಂದ, ಚತುರ್ವರ್ಣ ವ್ಯವಸ್ಥೆಯನ್ನು ಅದರ ಮೂಲರೂಪದಲ್ಲಿಯೇ ಸಿದ್ಧಗೊಳಿಸಿ, ಸುದೃಢವಾದ ಏಕಮತ್ಯವನ್ನು ಸಾಧಿಸುವುದು ಅವರ ಅಪೇಕ್ಷೆಯಾಗಿದ್ದಿತು.

ಜನ್ಮತಃ ಎಲ್ಲರೂ ಸಮಾನರು. ವ್ಯಕ್ತಿಯ ಜ್ಞಾನ, ಸ್ವಭಾವ, ಆಚಾರ—ವ್ಯವಹಾರಗಳಲ್ಲಿ ಭಿನ್ನತೆ ಇರಬಹುದು. ವ್ಯಕ್ತಿಗಳ ಆಧ್ಯಾತ್ಮಿಕ ಸಾಧನೆಯಲ್ಲಿ ಅಂತರವಿರುತ್ತದೆ ಎಂದು ಗಾಂಧೀಜಿ ಹೇಳಿದರು. ಅಸ್ಪೃಶ್ಯತೆ ಒಂದು ಶಾಪ. ಅದನ್ನು ನಿವಾರಿಸದಿದ್ದರೆ ವಿಶ್ವದಲ್ಲಿ ನಮ್ಮ ಏಳಿಗೆ ಸಾಧ್ಯವಿಲ್ಲ. ಚತುರ್ವರ್ಣ ಪದ್ಧತಿ ಮೂಲಭೂತವಾಗಿದ್ದು, ಸಹಜವಾದ ಹಾಗೂ ಅನಿವಾರ್ಯ ವ್ಯವಸ್ಥೆಯೆಂದೂ ಅವರ ಅಭಿಪ್ರಾಯವಾಗಿತ್ತು. ಜಾತಿ—ಉಪಜಾತಿಗಳು ದೇಶದ ಪ್ರಗತಿಗೆ ಅಡಚಣೆ ಒಡ್ಡುವವೆಂದೂ ಭವ್ಯ ಭಾರತದ ನಿರ್ಮಾಣಕ್ಕೆ ಸಮಾನತೆ ಮತ್ತು ಏಕಮತ್ಯದಿಂದ ಸಾಧ್ಯವೆಂದೂ ಅವರು ಭಾವಿಸಿದ್ದರು.

ಕಿರಿಯರ ಹಿರಿಯ ಕಾಣಿಕೆ

(IVನೇ ಪುಟದಿಂದ)

ವಿಧಾನವನ್ನು ಅನುಸರಿಸುತ್ತಿದ್ದರು. ಇಲ್ಲಿಂದ ಮೂರು ಮೈಲಿ ಸಾಗಿದರೆ ಮುಳದಾ ಎಂಬಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವೂ, ಐದು ಮೈಲಿ ಸಾಗಿದರೆ ಅಲಿನಾ ಎಂಬಲ್ಲಿ ವೈದ್ಯಶಾಲೆಯೂ ಇದ್ದಿತು. ಗ್ರಾಮದ ಪುರುಷ-ಮಹಿಳೆಯರನ್ನು ಇವೆರಡು ಕೇಂದ್ರಗಳಿಗೆ ಕರೆದುಕೊಂಡು ಹೋಗಲು ಪಂಚಾಯಿತಿ ವ್ಯವಸ್ಥೆ ಮಾಡಿತು. ಹಿರಿಯರ ಗೈರುಹಾಜರಿಯಲ್ಲಿ ಮಕ್ಕಳ ಯೋಗಕ್ಷೇಮ ನೋಡಲು ಸರಪಂಚ ಏರ್ಪಾಟು ಮಾಡಿದ. ಒಮ್ಮೆ ಮಹಿಳೆ ಟುಬೆಕ್ಟಮಿ ಚಿಕಿತ್ಸೆಯ ನಂತರ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯಬೇಕಾದಾಗ, ಹಳ್ಳಿಯ ಇತರ ಮಹಿಳೆಯರು ಆಕೆಯ ಮನೆಯನ್ನು ನೋಡಿಕೊಳ್ಳುವಂತೆ ಚಿಮನಭಾಯಿ ವ್ಯವಸ್ಥೆ ಮಾಡಿದ.

ಜನನದ ಇಳಿಮುಖ

ಈ ರೀತಿ ೮೩ ದಂಪತಿಗಳಲ್ಲಿ ೪೩ ದಂಪತಿಗಳು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು; ೧೦ ಮಹಿಳೆಯರು ಮಂಕಿ ಧಾರಣೆ ಮಾಡಿಸಿಕೊಂಡರು, ೩೭ ಪುರುಷರು ನಿರೋಧಕಗಳನ್ನು ಬಳಸಲು ಆರಂಭಿಸಿದರು. ಮೋತಿಪುಡೋಲಿನ ಜನನ ಪ್ರಮಾಣ ಈಗಾಗಲೇ ಇಳಿಮುಖವಾಗಲು ಆರಂಭಿಸಿದೆ. ೧೯೬೫ರಲ್ಲಿ ಜನನ ಪ್ರಮಾಣ ೩೩ ಇದ್ದಿತ; ೧೯೬೬ರಲ್ಲಿ ಈ ಪ್ರಮಾಣ ೧೫ಕ್ಕೆ ಇಳಿದು ೧೯೬೭ರಲ್ಲಿ ೧೪ ಆಯಿತು, ಈ ಪ್ರಮಾಣ ೧೯೬೮ರಲ್ಲಿ ಮತ್ತಷ್ಟು ಇಳಿಮುಖವಾಗುವುದೆಂದು ನಿರೀಕ್ಷಿಸಲಾಗಿದೆ.

ಇಂದು ಶ್ರದ್ಧಾವಂತರು ದೇಶದಾದ್ಯಂತ ಕಾರ್ಯನಿರತರಾಗಿರುವಂತೆಯೇ ಮಲ್ವೆ ಮತ್ತು ಮೋತಿಪುಡೋಲಿನ ಇಬ್ಬರು ಸರಪಂಚರು ಸ್ಥಳೀಯ ಸಮಾಜದ ಕಲ್ಯಾಣ ಸಾಧನೆಗಾಗಿ ವ್ಯಕ್ತಿಯ ಸಂತಸ ವರ್ಧನೆಗಾಗಿ ದುಡಿದರು. ವೈಜ್ಞಾನಿಕ ಕುಟುಂಬಯೋಜನಾ ಕಾರ್ಯಕ್ರಮದಿಂದ ಸಂತಸಕಾರಿ ಚಿಕ್ಕ ಕುಟುಂಬಗಳ ಆರಂಭಕ್ಕಾಗಿ ಈ ಸರಪಂಚರಂತಹ ವ್ಯಕ್ತಿಗಳು ತಮ್ಮ ಅಲ್ಪ ಕಾಣಿಕೆಯನ್ನು ನೀಡುತ್ತಿದ್ದಾರೆ.

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

I A 2/68 in Ex C 197/68

ಮೋರಿಸ್ ಸೊರೇನಾ —ಅರ್ಜಿದಾರ.

vs.

ಬಿಯಾದ್ ಮಸ್ಕರೇನಿಯಸ್ ಕೂಡಾ —ಎದುರು.

೪ನೇ ಎದುರು ಸಿಸಿಲ್ ಲೋಬೋರವರಿಗೆ— ಎಲಿಯಾಸ್ ಮಸ್ಕರೇನಸ್‌ರವರ ಮಗ, ಪುತ್ತೂರು ತಾಲ್ಲೂಕು ಬಜಾಲು ಗ್ರಾಮದ ಬದಿಯಡ್ಕ ಎಂಬಲ್ಲಿರುವುದು

ಮೇಲ್ಕಂಡ ಅರ್ಜಿಯು ತಾ 18 2 1969 ನೇಗೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ನೀವು ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಿ ಯಾ ವಕೀಲರ ದ್ವಾರಾ ನಿಮ್ಮ ಉದಾಸ ಜೆಮ್ಸನ್ನು ದಾಖಲು ಮಾಡತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ಹುಕುಂ ಮಾಡಲಾಗುವುದು. ತಿಳಿದಿರಿ.

By order
PUNDARIK M A,
Advocate for Petitioner

ಪುತ್ತೂರು, 20.1.69.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S C 209/1968

ವಾದಿ— ವೆಂಕಟ್ರಮಣ ಹೊಳ್ಳರವರು, ಪ್ರತಿವಾದಿ— ರಕ್ಕು ಶೆಟ್ಟಿ ಪ್ರೀತಿ ಸಹಾಯ ವರೊಳಗೆ

2 ಮತ್ತು 5ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

2ನೇ ಪ್ರತಿವಾದಿ ನಾಗಯ್ಯ ಶೆಟ್ಟಿರವರ ಸತ್ತೀರಿ ಮಗ, 5ನೇ ಪ್ರತಿವಾದಿ ಸೂರ ಶೆಟ್ಟಿ, ಬಚ್ಚ ಸೆಟ್ಟೀರ ಮಗ, ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮದ ಒಬ್ಬಾಡ ಹಿತ್ಲು

ಸದ್ರಿ ವಾದಿಯು ಪ್ರತಿವಾದಿಯಿಂದ ಕಳೆದ ಕೈಗಡ ಸಾಲಕ್ಕೆ ಬಡ್ಡಿ ಮೂಲಗೇಣಿ, ಗೇಣಿಬಾಕಿ ಅನ್ನದೇ, ಬಡ್ಡಿ ಕೂಡಾ ರೂಪಾಯಿ 55-33ನ್ನು ಬರಮಾಡಿಕೊಳ್ಳುವರೆ ದಾಖಲು ಮಾಡಿದ ದಾವೆ ತಾ 17-1-1969ಕ್ಕೆ ಸನ್ನಿಗೆ ಇಟ್ಟಿದೆ. ಆ ಕಾರಣ ನೀವು ದಾವೆ ಮುಂದೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

[ಕೋರ್ಟಿನ ಹುಕ್ಕುಂ ಪ್ರಕಾರ]

A B Shetty,
Advocate for Pltf

ಮೊಕ್ಕಾಂ. ಕುಂದಾಪುರ
ತಾರೀಖು 17 1.1969.

With best compliments from

APPU NAIR & CO.

Decorative Painting Contractors

No. 10, East Road Near Minerva Circle

BANGALORE-4.

Branch — Phone : 699

APPU NAIR & CO.

Meenakshi Bhavan Building
Krishnamachari Road
BELLARY

Phone 4394

ಅತ್ಯುತ್ತಮ ಕೈಮಗ್ಗದ ಮಂಗಳೂರು ಸೀರೆಗಳಿಗೆ

ಪೂರ್ಣಿಮಾ ಸ್ಟೋರ್ಸ್

ರಖಂ ಮತ್ತು ಚಿಲ್ಲರೆ ಕೈಮಗ್ಗದ ಜವುಳಿ ಮಳಿಗೆ

ಪಾಪ್ಯುಲರ್ ಇನ್ಶೂರೆನ್ಸ್ ಕಟ್ಟಡ, ಮಂಗಳೂರು-1.

ಮೈಸೂರು ದಸರ ವಸ್ತು ಪ್ರದರ್ಶನದಲ್ಲಿ 1962, 1963, 1964ರಲ್ಲಿ ಬಂಗಾರದ ಪದಕ ಪಡೆದ ನಮ್ಮ ಪೂರ್ಣಿಮಾ ಮಂಗಳೂರು ಸೀರೆಗಳನ್ನೇ ಉಪಯೋಗಿಸಿರಿ.

ತಾ 23-1-1969ರಂದು ಪ್ರಾರಂಭವಾಗಿದೆ

ಹೈದರಾಬಾದ್ ನಗರ ಮಧ್ಯದಲ್ಲಿ

ಕಾಮತ್ ಹೋಟೆಲ್

ರುಚಿಕರ ಊಟ-ತಿಂಡಿಗಳಿಗೆ ಸುಖಾಸನ ಸಜ್ಜಿತವಾದ
ಉನ್ನತ ಮಟ್ಟದ ಶಾಕಾಹಾರಿ ಚಿಕ್ಕ ಹೋಟೆಲು

ಗ್ರಾಹಕರಿಗೆ ಪರಿಪೂರ್ಣ ತೃಪ್ತಿ ನೀಡುವ ನಗುಮೊಗದ ದಕ್ಷ ಸೇವೆ!
ಸೌಕರ್ಯ ಹಾಗೂ ಸುವ್ಯವಸ್ಥೆ!

ಕಾಮತ್ ಹೋಟೆಲ್

1ನೇ ಮಹಡಿ, ಸರ್ದಾರ್ ಪಟೇಲ್ ಭವನ,
ಕೋಟಿ ಸುಲ್ತಾನ್ ಬಜಾರ್,
ಹೈದರಾಬಾದ್-1

ಶ್ರೀ ಆರ್ ಪಿ ಕಾಮತ್ (ಬೆಂಗ್ರೆ)
ಶ್ರೀ ವಿ ಕೆ ಕಾಮತ್ (ಹುದ್ರಳ್ಳಿ)

KAMATH HOTEL

Koti Sultan Bazar HYDERABAD-1.

ಬಾಪೂವಾಣಿ

ಶ್ರಮದ ಹಿರಿಮೆ

ಗಾಂಧೀಜಿಯವರು ಶ್ರಮದ ಹಿರಿಮೆಯ ವಿಚಾರವಾಗಿ ಅಭಿವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಪ್ರತಿಯೊಂದು ಬಿಡಿ ಕಾಸನ್ನೂ ಪ್ರಾಮಾಣಿಕತೆಯಿಂದ ಗಳಿಸ ಬಯಸುವ ವ್ಯಕ್ತಿಗೆ ಯಾವ ಶ್ರಮವೇ ಆಗಲಿ ಅವಮಾನಕಾರಿಯಲ್ಲ. ಮುಖ್ಯ ವಿಷಯವೆಂದರೆ ದೇವರು ನಮಗೆ ನೀಡಿರುವ ಕೈಕಾಲುಗಳನ್ನು ಉಪಯೋಗಿಸಿಕೊಳ್ಳಲು ನಾವು ಸಿದ್ಧರಿರಬೇಕು. ಕಷ್ಟಪಟ್ಟು ತನ್ನ ಆಹಾರವನ್ನು ಪಡೆಯಲೆಂದೇ ದೇವರು ಮನುಷ್ಯನನ್ನು ಈ ಭೂಮಿಯಲ್ಲಿ ಹುಟ್ಟಿಸಿದ್ದಾನೆ. ಮನುಷ್ಯ ಬೆವರು ಸುರಿಸಿ ಆಹಾರವನ್ನು ಪಡೆಯಲೆಂಬುದೇ ಪ್ರಕೃತಿಯ ಬಯಕೆಯಾಗಿದೆ. ಆದ ಕಾರಣ ಒಂದು ನಿಮಿಷವನ್ನು ವ್ಯರ್ಥವಾಗಿ ಕಳೆಯುವ ವ್ಯಕ್ತಿ ತನ್ನ ನೆರೆಹೊರೆಯವರಿಗೆ ಅಷ್ಟು ಮಟ್ಟಿಗೆ ಹೊರೆಯಾಗುತ್ತಾನೆ. ಹೀಗೆ ಮಾಡುವುದು ಅಹಿಂಸೆಯ ಮೂಲ ಸಿದ್ಧಾಂತಕ್ಕೆ ಅಪಚಾರವೆಸಗಿದಂತೆ.

ವ್ಯಕ್ತಿ ತನ್ನ ನೆರೆಹೊರೆಯವರನ್ನು ಸಮಭಾವದಿಂದ ಕಾಣದಿದ್ದರೆ ಅಹಿಂಸೆಯ ಮಹತ್ವವೇನೂ ಉಳಿಯದು.

ನಮ್ಮ ಸಮಯದ ಬಹುಭಾಗ ಆಹಾರಕ್ಕಾಗಿ ಪರಿಶ್ರಮ ಮಾಡುತ್ತಲೇ ಕಳೆದು ಹೋಗುತ್ತದೆ. ನಮ್ಮ ಮಕ್ಕಳಿಗೆ ಬಾಲ್ಯದಿಂದಲೂ ಇಂತಹ ಶ್ರಮದ ಮಹತ್ವದ ಬಗ್ಗೆ ತಿಳಿವಳಿಕೆ ಮಾಡಿಕೊಡಬೇಕು.

ಶ್ರಮವನ್ನು ಗೌರವಿಸುವಂತ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕು.

In the Court of the Munsiff
Udipi

S C No 194/68.

Jalajaxiamma — — Plaintiff
Vs
Irwin Andrade, son of R. M Andrade Udipi Town —
— Defendant

Take notice that the suit filed by the plaintiff against you for recovering of rent stands posted to 21—2—1969 You are directed appear before the Court on that day at 11 a m and file your statement, if any Failing which the matter will be decided in your absence.

B. O.
K. L. Aithal,
Vakil for Plaintiff.
Udipi 21-1-69.

ಬಾಪೂ ವಾಣಿ

ಪಾಶವಿ ಬಲ ಅಥವಾ ಮದ್ದುಗುಂಡುಗಳ ಪ್ರಯೋಗ, ಪ್ರತಿಭಟನೆಯಿಲ್ಲದೆ ಸಹಿಸಿಕೊಂಡು ಹೋಗುವ ಮನೋಭಾವಕ್ಕೆ ವಿರುದ್ಧವಾಗಿದೆ. ಇಂತಹ ಶ್ರಮದ ಅರ್ಥ

ದಿನದಲ್ಲಿ ಒಂದು ಗಂಟೆಯಷ್ಟು ಕಾಲ ನಾವು ಶ್ರಮಿಕರಂತೆ ಕಳೆಯಬೇಕು. ಹೀಗೆ ಮಾಡುವುದರಿಂದ ಮಾತ್ರವೇ ನಮಗೆ ದರಿದ್ರನಾರಾಯಣನ ಜೊತೆ ಅದೇ ರೀತಿ ಸಂಪೂರ್ಣ ಮಾನವ ಜನಾಂಗದೊಂದಿಗೆ ಸಾಮರಸ್ಯ ಸಾಧಿಸಲು ಸಾಧ್ಯವಾಗುತ್ತದೆ. ಜನಸೇವೆಯೇ ಜನಾರ್ಧನನ ಸೇವೆಯಾಗಿರುವುದರಿಂದ ಈ ಸೇವೆಗಿಂತ ಶ್ರೇಷ್ಠ ಬೇರಾವುದೂ ಇಲ್ಲ.

ವ್ಯಕ್ತಿಯ ಪ್ರತಿಭೆಯನ್ನು ಜಾಗೃತಗೊಳಿಸಲು ಬುದ್ಧಿವಂತಿಕೆಯಿಂದ ಮಾಡುವ ಶ್ರಮವೇ ಅತ್ಯಂತ ಶ್ರೇಷ್ಠವಾದದ್ದು. ಪ್ರತಿಭೆಯು ಸಮತೋಲದಿಂದಲೇ ದೇಹ ಮನಸ್ಸು ಮತ್ತು ಆತ್ಮದ ಏಳಿಗೆ ಸಾಧ್ಯವಾಗಬಲ್ಲುದು. ಸಮಾಜಕ್ಕೆ ಪ್ರಯೋಜಕಾರಿಯಾದ ಶ್ರಮದ ಮೂಲಕ ರೂಪುಗೊಂಡ ಪ್ರತಿಭೆ, ಸಮಾಜ ಸೇವೆಯ ಸಾಧನವಾಗುವುದು.

ದೈಹಿಕ ಶ್ರಮದ ಬಗ್ಗೆ ನಾಚಿಕೆ ಪಟ್ಟುಕೊಳ್ಳುವ ಸ್ವಭಾವವನ್ನು ನಾವು ದೂರ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಎಲ್ಲರಿಗೂ ಸಾಕಷ್ಟು ಕೆಲಸ ಇದ್ದೇ ಇದೆ.

"ವಿರೋಧಿಗಳು ಬಲವನ್ನು ಪ್ರಯೋಗಿಸಲೆಂದು ನಾವು ಬಯಸುತ್ತೇವೆ. ಆದರೂ ಅವರು ಹಾಗೆ ಮಾಡುತ್ತಿಲ್ಲ" ಎಂದಾಗುತ್ತದೆ.

o o o

ಸತ್ಯನಿಷ್ಠೆಯೇ ನಮ್ಮ ಅಸ್ತಿತ್ವದ ಔಚಿತ್ಯವಾಗಿದೆ.

o o o

ಸ್ವಾರ್ಥತ್ಯಾಗ ಮನೋಭಾವವೇ ನಮ್ಮ ಜೀವನದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ನಿಯಂತ್ರಿಸಬೇಕು.

o o o

ಪ್ರತಿಭಟನೆಯಿಲ್ಲದೇ ವಿರೋಧವನ್ನು ಸಹಿಸಿಕೊಳ್ಳುವ ಗುಣ ಎಲ್ಲಾ ಕಡೆಗೂ ಹರಿತವಾಗಿರುವ ಖಡ್ಗವಿದ್ದಂತೆ. ಅದು ಖಡ್ಗಧಾರಿಯನ್ನೂ ಅದಕ್ಕೆ ಗುರಿಯಾದವನನ್ನೂ ಅನುಗ್ರಹಿಸುತ್ತದೆ.

o o o

ಪಾವಿತ್ರ್ಯ ಶ್ರೇಷ್ಠಗುಣಗಳಲ್ಲೊಂದು. ಅದಿಲ್ಲದೇ ಮನಸ್ಸಿಗೆ ದೃಢತೆ ಬರಲಾರದು.

o o o

ಕ್ರೋಧದಿಂದಲೇ ಅಶಿಸ್ತು ಉಂಟಾಗುತ್ತದೆ. ಜಾಣತನದಿಂದ ಕೂಡಿದ ವಿರೋಧದಿಂದ ಶಿಸ್ತು ಉಂಟಾಗುತ್ತದೆ.

o o o

ಹಿಂಸೆ ಪಶುಗಳ ಜೀವನದ ನಿಯಮ. ಅಹಿಂಸೆ ಮಾನವ ಜೀವನದ ನಿಯಮ.

o o o

ಪ್ರಜಾರಾಜ್ಯ ದಿನದ ಶುಭಾಶಯಗಳು!

ಅತ್ಯಾಧುನಿಕ ಸೌಕರ್ಯಗಳಿರುವ ಉತ್ಕೃಷ್ಟ ದರ್ಜೆಯ
ವಸತಿ, ಭೋಜನ ಹಾಗೂ ಉಪಾಹಾರ ಮಂದಿರ

ಹೋಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9 ಮಿಶನ್ ರೋಡು

ಬೆಂಗಳೂರು-27

ಕಾರ್ ಪಾರ್ಕಿಂಗ್ ವ್ಯವಸ್ಥೆ, ಬಾತ್ ರೂಂ ಅಗ್ರೀಕರಿಸಿದ ರೂಮುಗಳು
ಮತ್ತು ಫೆಮಿಲಿ ರೂಮುಗಳ ಸೌಕರ್ಯ,
ಶಾಂತ ವಾತಾವರಣ, ಅನುಭವಪೂರ್ಣ ಮೇಲ್ವಿಚಾರಣೆ,
ದಕ್ಷ ಸೇವಾ ಕಾರ್ಯ ನಿರ್ವಹಣೆ!

ಪ್ರೊ: ಟಿ. ಎಸ್. ಶೆಟ್ಟಿ.

I Phone 28337
II Phone 29887

HOTEL SATKAR
Boarding & Lodging
Near Corporation Office, 9, Mission Road
BANGALORE-27

ONCE YOU PAY A VISIT
WILL REMEMBER THE CITY S
POPULAR VEGETARIAN RESTAURANT

MADHU NIVAS
Boarding & Lodging
GANDHI SQUARE · · · MYSORE

For Quality Vegetarian Preparations and Comfortable Stay in Our Double and Single Rooms.

Try for a while and be satisfied.

Phone: 1593. Res: 1777.

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿ
ಜನಪ್ರಿಯವಾದ

ಮಧು ನಿವಾಸ

ಸಂದರ್ಶಿಸಲೇಬೇಕಾದ
ವಸತಿ, ಭೋಜನ ಹಾಗೂ ಉಪಾಹಾರ ಮಂದಿರ
ಗಾಂಧಿ ಚೌಕ - - - ಮೈಸೂರು

ಮಾಲೀಕರು:
ಬಿ. ರಾಮದಾಸ ಭಟ್ ಮತ್ತು ಸಹೋದರರು.

ಆಮದಿನ ಅಂತ್ಯ ಗೀತೆ

(IIನೇ ಪುಟದಿಂದ)

ಮೊದಲ ಒಂಭತ್ತು ತಿಂಗಳುಗಳಲ್ಲಿ ದೇಶವು ರಫ್ತು ವ್ಯಾಪಾರದಿಂದ 968.6 ಕೋಟಿ ರೂಪಾಯಿ ಸಂಪಾದಿಸಿತು. ಇದೊಂದು ಹೊಸ ದಾಖಲೆ. ರಫ್ತು ಏರಿಕೆಯ ಪ್ರಮಾಣ ಕಳೆದ ವರ್ಷದ ಅಕ್ಟೋಬರ್, ನವೆಂಬರ್ ಮಾಸಗಳಲ್ಲೂ ಮುಂದುವರಿಯಿತು. ಅಸಂಪ್ರದಾಯಿಕ ಸರಕುಗಳಾದ ಕಬ್ಬಿಣದ ಅದುರು, ತೊಗಲು, ತೊಗಲಿನ ವಸ್ತುಗಳು, ಇಂಜನಿಯರಿಂಗ್ ವಸ್ತುಗಳು, ಕೈಕುಶಲ ವಸ್ತುಗಳು, ಕಬ್ಬಿಣ, ಉಕ್ಕು, ರಾಸಾಯನಿಕಗಳ ರಫ್ತು ಪ್ರಮಾಣದ ಏರಿಕೆ ಆಶಾದಾಯಕವಾಗಿದೆ. 1969ನೇ ಇಸವಿಯ ಮೊದಲ ಎಂಟು ತಿಂಗಳುಗಳಲ್ಲಿ ದೇಶದಿಂದ ರಫ್ತು ಮಾಡಿದ ಸರಕುಗಳಲ್ಲಿ ಅವು ಶೇಕಡ 42 ಪ್ರಮಾಣದಲ್ಲಿತ್ತು. 15 ವರ್ಷದ ಹಿಂದೆ ಅಸಂಪ್ರದಾಯಿಕ ವಸ್ತುಗಳ ರಫ್ತು ಪ್ರಮಾಣ ಶೇಕಡ 21ರಷ್ಟು ಇದ್ದಿತು. ಅಧಿಕ ಉತ್ಪಾದನಾ ಶಕ್ತಿ ಹೊಂದಿರುವ ಕೆಲವು ಆಯ್ದ ಮಾಡಿದ ಕೈಗಾರಿಕೆಗಳಲ್ಲಿ, ದೇಶಿಯ ಬೇಡಿಕೆಯಲ್ಲಿ ಹಿಂಜರಿತವಾದುದರಿಂದ, ಯಾವೊಂದು ಕಷ್ಟಗಳು ಅಂಶಿಕ ಉತ್ಪಾದನಾ ಶಕ್ತಿಯನ್ನು ರಫ್ತು ಸಂವರ್ಧನೆಗೆ ಬಳಸಿಕೊಳ್ಳುವುದರಲ್ಲಿ ಅಡಚಣೆಯಾಗಿದೆಯೆಂಬುದನ್ನು ಅರಿತುಕೊಳ್ಳಲು ಅವುಗಳೊಂದಿಗೆ ಇತ್ತೀಚೆಗೆ ವಿಶೇಷ ಚರ್ಚೆ ನಡೆಸಲಾಯಿತು.

ಆದರೆ ವಿಶ್ವದ ಯಾವೊಂದು ದೇಶವೂ ಆಮದು ಮಾಡಿಕೊಳ್ಳದೆ ಅಸ್ತಿತ್ವದಲ್ಲಿರಲಾರದು. ವಿಶ್ವದ ಕೆಲವು ಭಾಗಗಳಲ್ಲಿ ಕೆಲವು ಕಚ್ಚಾ ವಸ್ತುಗಳು ಮತ್ತು ಲೋಹಗಳು ಸಾಕಷ್ಟು ಪ್ರಮಾಣದಲ್ಲಿ ದೊರಕುವುದಿಲ್ಲ. ಅಲ್ಯೂಮಿನಿಯಂ ಒಂದನ್ನುಳಿದು ಮುಖ್ಯ ಕಬ್ಬಿಣೇತರ ಲೋಹಗಳ ನೈಸರ್ಗಿಕ ಸಂಪನ್ಮೂಲದಲ್ಲಿ ನಮ್ಮ ದೇಶ ಸಮೃದ್ಧವಾಗಿಲ್ಲ. ಅಲ್ಯೂಮಿನಿಯಂ ಅಥವಾ ಪ್ಲಾಸ್ಟಿಕ್‌ಗಳ ಬಳಕೆ ಆರಂಭವಾಗುವ ವರೆಗೆ ತಾಮ್ರ, ಸೀಸ ಮತ್ತು ನಿಕ್ಕಲ್‌ಗಳ ಆಮದಿನ ಪ್ರಮಾಣವು ಏರುತ್ತಿರುತ್ತದೆ. 1967—68ನೇ ಸಾಲಿನಲ್ಲಿ, ಕಬ್ಬಿಣೇತರ ಲೋಹಗಳು, ರಾಸಾಯನಿಕಗಳ ಆಮದಿಗೆ 89 ಕೋಟಿ ರೂಪಾಯಿ ವಿದೇಶಿ ವಿನಿಮಯ ವೆಚ್ಚವಾಯಿತು.

ಆಮದು ತಪ್ಪಿಸಲು ಕ್ರಮ

ದೇಶದೊಳಗೆ ಉತ್ಪಾದಿಸುವ ಸರಕುಗಳ ಆಮದನ್ನು ನಿಷೇಧಿಸಲು ಸೂಚನೆಗಳನ್ನು ನೀಡಲಾಗಿದೆ. ದೇಶದೊಳಗೆ ವಸ್ತುವೊಂದನ್ನು ತಯಾರಿಸುವ ಸಾಧ್ಯಾಸಾಧ್ಯತೆಯನ್ನು ಮೊದಲು ಪರಿಗಣಿಸದೆ ಆಮದು ಮಾಡಿಕೊಳ್ಳಲು ಆಜ್ಞೆ ನೀಡಬಾರದೆಂದು ಇತ್ತೀಚೆಗೆ ಸರ್ಕಾರ ತಿಳಿಸಿದೆ. ವಸ್ತುಗಳನ್ನು ದೇಶದೊಳಗೆ ತಯಾರಿಸುವ ಸಾಧ್ಯತೆಯಿದ್ದರೆ ಅಂತಹ ಸರಕುಗಳ ಆಮದನ್ನು ಕೈಬಿಡುವ, ಆಮದು ಒಪ್ಪಂದಗಳನ್ನು ಪುನರ್ ವಿಮರ್ಶಿಸುವುದನ್ನು ಪರಿಶೀಲಿಸಬೇಕೆಂದು ಸರ್ಕಾರ ವಿವಿಧ ಸಚಿವ ಶಾಖೆಗಳನ್ನೂ ಇಲಾಖೆಗಳನ್ನೂ ಕೋರಿಕೊಂಡಿದೆ.

ಆಮದು ಬದಲಿಕೆಗಾಗಿ ಮಾಡಿರುವ ಪ್ರಯತ್ನಗಳಿಂದ 1966-67ನೇ ಸಾಲಿನಲ್ಲಿ 30.91 ಕೋಟಿ ರೂಪಾಯಿ ವಿದೇಶೀ ವಿನಿಮಯ ರಕ್ಷಿಸಲಾಯಿತು. ಇದೇ ರೀತಿ ಹೆಚ್ಚಿನ ಪ್ರಮಾಣದಲ್ಲಿ ವಿದೇಶೀ ವಿನಿಮಯವನ್ನುಳಿಸುವ ಪ್ರಯತ್ನ ನಡೆಯುತ್ತಿದೆ.

ಅಸ್ಪೃಶ್ಯತೆ ಹಿಂದೂ ಧರ್ಮದ ಪಾಪ.

○ ○ ○

ನನ್ನ—ನನ್ನ—ಕಲ್ಪನೆಯ ಸ್ವರಾಜ್ಯದಲ್ಲಿ ಕುಲ—ಜಾತಿ ಮುಂತಾದ ಭೇದಗಳಿಲ್ಲ.

○ ○ ○

ಬಹು ಸಂಖ್ಯಾತರ ಇಚ್ಛೆಗೆ ಅನುಗುಣವಾಗಿ ನಡೆದುಕೊಳ್ಳುವಂತೆ ಅಲ್ಪ ಸಂಖ್ಯಾತರ ಮೇಲೆ ಒತ್ತಾಯ ತರುವುದು, ಅಕ್ಷಮ್ಯವಾದ ಹಿಂಸೆಯ ಒಂದು ಮಾದರಿ

○ ○ ○

ಮಹತ್ವಪೂರ್ಣ ವಿಷಯಗಳಲ್ಲಿ, ಸಾರ್ವಜನಿಕ ಅಭಿಪ್ರಾಯವನ್ನು ಉಲ್ಲಂಘಿಸುವವನಿಗೆ ಯಾವುದೇ ಸಾಮಾಜಿಕ ಸೌಕರ್ಯಗಳೂ ಹಕ್ಕುಗಳೂ ದೊರಕಬಾರದು.

○ ○ ○

ಸೃಷ್ಟಿಕರ್ತನಾದ ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು.

○ ○ ○

ಸ್ವದೇಶಿ ಎಂದರೆ ಸಂಕುಚಿತವಾದ ಕೊಳದಲ್ಲೇ ಮುಳುಗುವುದು ಎಂದೂ ಅರ್ಥವಲ್ಲ. ಈ ಚಳುವಳಿ ದೇಶವೆಂಬ ಸಮುದ್ರವನ್ನು ಸೇರುವ ಪವಿತ್ರವಾಹಿನಿಯಾಗಬೇಕು.

○ ○ ○

ಬಯಸುವವರು ಅದರ ಧರ್ಮದರ್ಶಿಗಳಂತೆ ಕಾರ್ಯ ನಿರ್ವಹಿಸಬೇಕು. ಧರ್ಮದರ್ಶಿ ಎಷ್ಟೇ ಸಂಪತ್ತಿನ ಒಡೆಯನಾಗಿದ್ದರೂ, ಆದರೆ ಆಸ್ತಿಯನ್ನು ಒಂದು ಕ್ಷಣವೂ ತನ್ನದಲ್ಲವೆಂದು ಭಾವಿಸುತ್ತಾನೆ.

○ ○ ○

With best compliments
from

U. SADIYA

LICENSED
ELECTRICAL
CONTRACTORS

UDIPI

POWER LIGHT &
I. P. SETS
INSTALLATION.

For

Comfortable stay in Double & Single rooms
please pay a visit to the
most popular Lodging House
established in the heart of the Town

FIELDSIDE

LODGING Phone: 205

UDIPI. (S. K.)

Try for a while and be satisfied.

ಉಡುಪಿ ನಗರ ಮಧ್ಯದಲ್ಲಿ — ಶಾಂತ ವಾತಾವರಣದಲ್ಲಿ
ಉತ್ಕೃಷ್ಟ ದರ್ಜೆಯ ವಸತಿಗೃಹ

ಫೀಲ್ಡ್ ಸೈಡ್

ಉಡುಪಿ (ದ. ಕ.)

With best compliments from:

HOTEL MAYUR

Boarding Lodging & Restaurant

**Housed in a Newly constructed
multi storied palacious building**

'SHRI SHAKTI NILAYA'

COEN ROAD, HUBLI.

ವ್ಯಾಪಾರಿ ಮಧ್ಯವರ್ತಿ ಕೇಂದ್ರದಲ್ಲಿ
ಭವ್ಯ ಅತ್ಯಾಧುನಿಕ ನಾಲ್ಕು ಅಂತಸ್ತಿನ ನೂತನ ಕಟ್ಟಡದಲ್ಲಿ
ಸುಸಜ್ಜಿತ ವ್ಯವಸ್ಥೆಯೊಂದಿಗೆ ಸ್ವಾಗತಿಸುವ

ಹೋಟೆಲ್ ಮಯೂರ

ಊಟ, ವಸತಿ ಮತ್ತು ಉಪಾಹಾರ ಗೃಹ

"ಶ್ರೀ ಶಕ್ತಿ ನಿಲಯ"

ಕೊಯಿನ್ ರೋಡ್, ಹುಬ್ಬಳ್ಳಿ.

Letter Writing Made Easy

ಸುಲಭದಲ್ಲಿ ಪತ್ರಲೇಖನ

(75 Every day letters)

Second Revised Edition

ಆಂಗ್ಲ ಭಾಷೆಯಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ಪುಸ್ತಕ.
ಇದೀಗ ದ್ವಿತೀಯಾವೃತ್ತಿ ತಯಾರಾಗಿದೆ.

ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಸಾರ್ವಜನಿಕರಿಗೂ
ಪ್ರಯೋಜನಕಾರಿಯಾಗಿದೆ. ಬೆಲೆ: ರೂ. 1—50.

ವಿತರಕರು:

ನವಯುಗ ಪ್ರೆಸ್ || ನವಭಾರತ ಪುಸ್ತಕ ಭಂಡಾರ
ಉಡುಪಿ || ಉಡುಪಿ

Renewed pledge
on the
REPUBLIC DAY
to provide
ENTERTAINMENT
at its best

SRI RAMAKRISHNA THEATRE LIMITED

Registered Office: S. R. BUILDINGS,
UDIPI.

PROPRIETORS OF

ALANKAR AND **KALPANA**

Phone: 327 Phone: 437

THEATRES

ಪ್ರಜಾಪ್ರಭುತ್ವ ದಿನದ ಶುಭಾಶಯಗಳು !

ಮಲೆನಾಡ ಪ್ರದೇಶದಲ್ಲಿ
ಕಳೆದ ಕಾಲು ಶತಮಾನಕ್ಕಿಂತಲೂ ಹೆಚ್ಚಿನ ಕಾಲ
ಹೋಟೆಲು ಉದ್ಯಮದ ಮೂಲಕ ಸೇವೆಯನ್ನು ಕೈಕೊಂಡು ಬಂದಿರುವ

ಮನೋಹರ ಕೆಫೆ

(ನೆಲ್ಲಿ ಪ್ರಕಾಶ್ ಬಿಲ್ಡಿಂಗ್)
ಊಟ, ಉಪಾಹಾರ ಮತ್ತು ವಸತಿ ಗೃಹ
ನೆಹ್ರು ರೋಡ್ — ಶಿವಮೊಗ್ಗಾ
ಮೈಸೂರು ರಾಜ್ಯ.

ಪ್ರಜಾರಾಜ್ಯ ದಿನದ ಶುಭ ಸಂದರ್ಭದಲ್ಲಿ ನಮ್ಮ ಅಸಂಖ್ಯಾತ ಗ್ರಾಹಕರಿಗೂ ಹಿತೈಷಿಗಳಿಗೂ ಶುಭ ಹಾರೈಸಿ ಇನ್ನೂ ಮಿಗಿಲಾದ ಸೇವೆಯನ್ನು ನೀಡುವ ಆಶ್ವಾಸನೆಯನ್ನು ನೀಡುತ್ತದೆ.

ಪರಿಶುದ್ಧ, ಪ್ರಾಮಾಣಿಕ ಸೇವೆಯೇ ನಮ್ಮ ಧ್ಯೇಯ.

ಮ್ಯಾನೇಜರು; ಪಿ. ಕೆ. ಜನಾರ್ಧನ ನೆಲ್ಲಿ.

NELLI PRAKASH

MANOHAR CAFE

Restaurant, Boarding & Lodging
NEHRU ROAD — SHIMOGA
Prop: **P. K. Janardhana Nelli**

ವಿಶ್ವಾಸಾರ್ಹ ನೀರಾವರಿಯ ವ್ಯವಸ್ಥೆಗೆ............

ಹಿಂದುಸ್ಥಾನ್ ಬ್ರೌನ್ ಬೊವೆರಿ

ಮೋಟಾರು ಪಂಪುಸೆಟ್ಟುಗಳನ್ನೇ ಆರಿಸುತ್ತಾರೆ.

ಕಾರಣವೇನೆಂದರೆ.......................

- ಸ್ವಿಜರ್‌ಲ್ಯಾಂಡಿನ ತಜ್ಞರ 75 ವರ್ಷಗಳ ತಾಂತ್ರಿಕ ಜ್ಞಾನ ಮತ್ತು ಅನುಭವದ ಮೇರೆಗೆ ಮೋಟಾರು ತಯಾರಿಸಲ್ಪಟ್ಟಿದೆ.
- ಅದು ಅತ್ಯಂತ ವಿಶ್ವಾಸನೀಯವಾಗಿದೆ, ಗಟ್ಟಿಮುಟ್ಟಾಗಿದೆ, ನೋಡಲು ಚೆನ್ನಾಗಿದೆ.
- 'E' ಇನ್ಸುಲೇಶನಿಂದಾಗಿ ಕಡಿಮೆ ವೋಲ್ಟೇಜಿನಲ್ಲಿ ಕೂಡಾ ಸರಾಗವಾಗಿ ನಡೆಯುತ್ತದೆ. ಸುಟ್ಟು ಹೋಗುವುದಿಲ್ಲ.
- ಕಡಿಮೆ ವಿದ್ಯುತ್ ಖರ್ಚಿನಲ್ಲಿ ಅಧಿಕ ಕೆಲಸವನ್ನು ಕೊಡುತ್ತದೆ.
- ಒಂದು ವರುಷದ ಗ್ಯಾರಂಟಿಯನ್ನು ಪಡೆದಿದೆ.

ನಿಮಗೆ ಬೇಕಾದ ಪಂಪುಸೆಟ್ಟುಗಳನ್ನು ಕೆಳಗಿನವರಲ್ಲಿ ಸದಾ ದಾಸ್ತಾನದಿಂದ ಪಡೆಯಬಹುದು.

VICTOR TRADING CORPORATION
FALNIR ROAD - - - MANGALORE-1

GOPAL FARM ENGINEERS
FALNIR ROAD - - - MANGALORE-1

113

ಕೋಟಿ

ರೂಪಾಯಿ ಠೇವಣಿಯನ್ನು ಸಂಚಯಿಸಿದ ಸಿಂಡಿಕೇಟ್ ಬ್ಯಾಂಕಿನ ಅಪ್ರತಿಮ ಸಾಧನೆ ಈ ಬ್ಯಾಂಕಿನ ಇತಿಹಾಸದಲ್ಲೇ ಒಂದು ಪ್ರಮುಖ ಸ್ಮೃತಿಗಲ್ಲಾಗಿದೆ.

1967ರಲ್ಲಿ 80 ಕೋಟಿ ರೂಪಾಯಿ ಠೇವಣಿಯನ್ನು ಹೊಂದಿದ ಸಿಂಡಿಕೇಟ್ ಬ್ಯಾಂಕು 1968ರಲ್ಲಿ 113 ಕೋಟಿ ರೂಪಾಯಿಗೆ ತನ್ನ ಠೇವಣಿಯನ್ನು ಏರಿಸಿ 41 ಸೇಕಡಾ ಹೆಚ್ಚಳವನ್ನು ಸಾಧಿಸಿದೆ.

ಸಿಂಡಿಕೇಟ್ ಬ್ಯಾಂಕು ತನ್ನ ಅಸಂಖ್ಯಾತ ಮಂದಿ ಚಿಕ್ಕ, ದೊಡ್ಡ ಠೇವಣಿದಾರರಿಗೆ ಈ ಸಂದರ್ಭದಲ್ಲಿ ತನ್ನ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

FAITHFUL · FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರತಿಯೊಂದು ಬ್ಯಾಂಕಿಂಗ್ ಸೇವೆಗೆ ಪ್ರತಿಯೋರ್ವನ ಬ್ಯಾಂಕು

ರಿಜಿಸ್ಟರ್ಡ್ ಆಫೀಸು:
ಮಣಿಪಾಲ, ಮೈಸೂರು ರಾಜ್ಯ

ಟಿ. ಎ. ಪೈ
ಚೆಯರ್‌ಮನ್

Licenced to Post without Prepayment

ಪ್ರಜಾಪ್ರಭುತ್ವ ದಿನದ ಶುಭಾಶಯಗಳು!



ನಿಮ್ಮ
ವ್ಯವಹಾರವನ್ನು

ವಿಜಯ ಬ್ಯಾಂಕ್

ಅವರಲ್ಲಿ ಬೆಳೆಸಿ

"ವಿಜಯ ಬ್ಯಾಂಕ್" ನೊಡನೆ ಬ್ಯಾಂಕಿಂಗ್ ವ್ಯವಹಾರ ಹೊಂದುವುದು, ಬ್ಯಾಂಕ್ ಅಕೌಂಟ್ ಹೊಂದಿರುವುದಕ್ಕಿಂತ ಹೆಚ್ಚಿನ ದಾಮದು. "ವಿಜಯ ಬ್ಯಾಂಕ್" ಮಾಡುವ ಸೇವೆ, ನೀಡುವ ಸಸ್ನೇಹಯುತ ಔಪಯೋಗಿಕವಾದ ಸಲಹೆ, ತಿಳಿಸುವ ವಿಷಯಗಳು ವ್ಯಾಪಾರಿ ಕ್ಷೇತ್ರದ ಅನೇಕರನ್ನು ಆಕರ್ಷಿಸಿದೆ 31 ವರ್ಷದ ಅನುಭವದ ಉಪಯೋಗ ಸಣ್ಣ ಹಾಗು ಭಾರಿ ವ್ಯವಹಾರ ಉಳ್ಳ ಎಲ್ಲ ಗಿರಾಕಿಗಳಿಗೂ ಸಮಾನವಾಗಿ ದೊರೆಯುವುದು ನಿಮ್ಮ ವ್ಯಾಪಾರ ಹಾಗು ಅವರ ಸಮಸ್ಯೆಗಳ ಪರಿಹಾರಕ್ಕೆ "ವಿಜಯ ಬ್ಯಾಂಕ್" ಸರ್ವದಾ ಸಹಾಯ, ಸಹಕಾರ ನೀಡುವುದು

ಅನೇಕರು
ವ್ಯವಹರಿಸುತ್ತಿರುವ
ಹಾಗೆ

ನಿಮ್ಮ ಸೇವೆಗಾಗಿ
ನಮ್ಮ ಶಾಖೆಗಳು ಈಗ
ಮೈಸೂರು ರಾಜ್ಯದಲ್ಲಿ-**58,**
ಕೇರಳ ರಾಜ್ಯದಲ್ಲಿ— **25,**
ಮದ್ರಾಸು ರಾಜ್ಯದಲ್ಲಿ - **5,**
ಮತ್ತು
ಮಹಾರಾಷ್ಟ್ರ ರಾಜ್ಯದಲ್ಲಿ - **2**
ಇವೆ.

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್.
"ವಿಜಯ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು 3

ESTD — 1931.

PHONE Nos. | **5711 3 Lines**

ಸದ್ಯದಲ್ಲಿಯೇ ನಮ್ಮ ಹೊಸ ಶಾಖೆಗಳು ಬಿಜಾಪುರ, ತ್ರಿಕರಪುರ(ಕೇರಳ), ಬಿದಾರ್, ಹಾಸನ, ಹೈದರಾಬಾದು, ಮುಂಬಾಯಿ (3ನೇ ಶಾಖೆ) ಮೊದಲಾದ ಕಡೆಗಳಲ್ಲಿ ತೆರೆಯಲ್ಪಡುವುವು ಎಂದು ತಿಳಿಸಲು ಸಂತೋಷಿಸುತ್ತೇವೆ.

ಶ್ರೀ ಯಂ. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೇನ್.

ಶ್ರೀ ಪಿ. ಜಯರಾಮ ಶೆಟ್ಟಿ,
ಸೆಕ್ರೆಟರಿ.

ಶ್ರೀ ಯಸ್. ವಿಠಲ ಶೆಟ್ಟಿ,
ಡಿ. ಸೆಕ್ರೆಟರಿ.

ಶ್ರೀ ಪಿ. ಯಂ. ಹೆಗ್ಡೆ,
ಆಡಿಟರ್.

Edited, Printed & Published by K. H. Shetty. at the Navayuga Press. Udipi. S. India.

ನವಯುಗ

6—2—1969

NAVAYUGA

೨೦ ಪೈಸೆ

ಕಥಾಪ್ರಪಂಚ

ಮುರಳಿ ಮರಳಿ ಬಂದ

ಲೇಖಕರು : ಶ್ರೀ ಎಚ್. ಸುಧಾಕರ ಶೆಟ್ಟಿ.

ಹತ್ತು ಗಂಟೆಗೆ ಬರಬೇಕಿದ್ದ ರೈಲು, ಹನ್ನೊಂದು ದಾಟಿದರೂ ನಿಲ್ದಾಣಕ್ಕೆ ಬಂದಿರಲಿಲ್ಲ. ಮುಹೂರ್ತಕ್ಕಿನ್ನು ಒಂದೇ ಗಂಟೆ, ಮುರಳಿ ಯಾಕೆ ಬರಲಿಲ್ಲ? ಎಂದು ಕೃಷ್ಣರಾಯರು ತುಂಬಿದ ಜನರನ್ನು ಪ್ರಶ್ನಿಸಿದರು. ತಂಗಿಯ ಮದುವೆಯನ್ನು ವೈಭವದಿಂದ ಜರಗಿಸಬೇಕು, ನಾನು ಮೊದಲಿನ ದಿನ ತಪ್ಪಿದರೆ ಅಂದು ಬೆಳಿಗ್ಗೆ ಬರುವ ರೈಲಿನಲ್ಲಿ ಬರುವೆನೆಂದು ತಿಳಿಸಿದ್ದ. ಅಲ್ಲದೆ ನಿನ್ನೆ ಹೊರಟೆನೆಂದು ಟೆಲಿಗ್ರಾಂ ಕೂಡಾ ಕೊಟ್ಟಿದ್ದ. ಆದರೆ ಆ ದರಿದ್ರ ರೈಲೇ ನಿಲ್ದಾಣಕ್ಕೆ ಬಂದಿರಲಿಲ್ಲ. ಥೂ! ಈ ದಾಳು ಮಿಲ್ಟ್ರಿ ಕೆಲಸವೇ ಹಾಗೆ. ಯಾವ ಸಮಯದಲ್ಲಿ ರಜೆಯನ್ನು ಹಿಂತೆಗೆದುಕೊಳ್ಳುವರೋ ಹೇಳಲು ಬಾರದು, ಎಂದು ರಾಯರು ಮತ್ತೆ ಮತ್ತೆ ರಸ್ತೆಯತ್ತ ದಿಟ್ಟಿಸುತ್ತಿದ್ದರು.

ಬೇಡ ಬೇಡವೆಂದರೂ ಮಿಲಿಟರಿಗೆ ಮಗ ಸೇರಿದ್ದು, ರಾಯರ ಮನಸ್ಸು ಸ್ವಲ್ಪ ನೊಂದಿತ್ತು. ಆದರೆ ರಾಷ್ಟ್ರ ರಕ್ಷಣೆಯಲ್ಲಿ ತನ್ನ ಮಗ ಭಾಗವಹಿಸುವುದು ಅವರಿಗೆ ಆನಂದವಿತ್ತು. ಇಂದು ರಾಯರ ಮನಸ್ಸು ಹತೋಟಿ ತಪ್ಪಿ ಏನೇನೋ ಯೋಚಿಸುತ್ತಿತ್ತು. ಬರುತ್ತೇನೆ ಎಂದು ತಿಳಿಸಿದ ಮಗ ಬಾರದೆ, ರಾಯರ ಮನಸ್ಸು ಚಡಪಡಿಸಿತು. ಕ್ಷಣಕ್ಕೊಮ್ಮೆ ಎಲ್ಲರಲ್ಲೂ ವಿಚಾರಿಸಿ ಹತಾಶರಾಗುತ್ತಿದ್ದರು. ಮಗ ಮಿಲಿಟರಿಗೆ ಯಾಕಾಗಿ ಸೇರಿದನೋ? ಎಂದು ಚಿಂತಿಸಿದರು. ಆದರೆ ಮುರಳಿಗೆ ರಾಷ್ಟ್ರರಕ್ಷಣೆಯ ಕಾರ್ಯದಲ್ಲಿ ಅಪಾರ ಆನಂದ.

o o o

ಎಂಟು ದಿನಗಳಿಗೆ ರಜೆ ಬೇಕೆಂದು ಕೋರಿದ ಮುರಳಿಗೆ ರಜೆ ಮಂಜೂರಾಗಿತ್ತು. ಆದರೆ, ಪಾಕ್ ಆಕ್ರಮಣ, ಅತ್ತ ಚೀನದವರ ಕಿರುಕುಳ ಆಗಾಗ ನಡೆಯುತ್ತಿರುವುದರಿಂದ ಮುರಳಿಯಂತಹ ದೊಡ್ಡ ಅಧಿಕಾರಿಗಳಿಗೆ ರಜೆ ಬರೆದುಕೊಂಡರೆ ರಜೆಯೇ ಸಿಗುತ್ತಿದ್ದಿಲ್ಲ! ಮುರಳಿ ಅದೆಷ್ಟೋ ದಿನಗಳಿಂದ ರಜೆಬೇಕೆಂದು ಕೇಳಿಕೊಂಡಿದ್ದ. ಕೊನೆಗೆ, ತಂಗಿಯ ಮದುವೆಗೆ ಎರಡು ದಿನವಿರುವಾಗ ರಜೆ ಮಂಜೂರಾಗಿತ್ತು! ಅದೆಷ್ಟೋ "ಯೂನಿಟ್"ಗಳಿಗೆ ಕಮಾಂಡರನಾಗಿದ್ದ ಮುರಳಿ ರಜೆಗಾಗಿ ಪರದಾಡಿದ! ಆ ಸ್ನಾಂಗಡಿ ಪ್ರದೇಶದಿಂದ ಊರಿಗೆ ಹೋಗಬೇಕಾದರೆ ಎರಡು ದಿನ ಬೇಕು! ತಂಗಿಯ ಮದುವೆಯಲ್ಲಿ ಉತ್ಸಾಹದಿಂದ ಭಾಗಿಯಾಗಬೇಕೆಂದಿದ್ದ ಮುರಳಿಗೆ ನಿರಾಶೆಯಾದಂತಿತ್ತು.

ಅದೂ ಸಾಲದೆ, ಮನಬಂದಂತೆ ಹೋಗಬಾರದು, ಸೇನಾ ವಿಭಾಗ ಗೊತ್ತು ಮಾಡಿದ ರೀತಿಯಲ್ಲೇ ಆತ ಮನೆಗೆ ತಲಪಬೇಕು. ಹೊರಡುವ ಮೊದಲು ಮುರಳಿ ತಂಗಿಗೆಂದು ಕಾಶ್ಮೀರಿ ಸೀರೆಯೊಂದನ್ನು ಖರೀದಿಸಿದ. ಮುರಳಿಯೊಡನೆ ಇತರ ನಾಲ್ಕು ಮಂದಿ ಸಹಾಯಕರೂ ಹೊರಟಿದ್ದರು.

ದೇಶದೊಳಗೆ ಅನೇಕ ಪಾಕ್–ವಿದ್ರೋಹಿಗಳು ಗುಪ್ತವಾಗಿ ನೆಲೆಸಿದ್ದರು. ಸೈನ್ಯ ಸಾಗಾಟ, ಆಹಾರ ಸಾಗಾಟಕ್ಕೆ ತೊಂದರೆ ಕೊಡುತ್ತಿದ್ದರು. ಮುರಳಿಯಂತಹ ಅಧಿಕಾರಿ ರಜೆ ಪಡೆದು ಊರಿಗೆ ಮರಳುವನೆಂದು ತಿಳಿದರೆ ಕಿರುಕುಳ ಕೊಡುವ ಸಂಭವವಿತ್ತು. ಸೇನಾ ವಿಭಾಗ ಇಂತಹ ವಿಷಯಗಳನ್ನು ಗುಪ್ತವಾಗಿಡುತ್ತಿತ್ತು.

ಮುರಳಿ ಶನಿವಾರ ಬೆಳಿಗ್ಗೆ ಎಕ್ಸ್‌ಪ್ರೆಸ್‌ನಲ್ಲಿ ಸಹಾಯಕರೊಂದಿಗೆ ಹೊರಡುವುದನ್ನು ಮೊದಲೇ ತಿಳಿಸಲಾಗಿತ್ತು. ಮನೆಗೆ ಈ ವಿಷಯವಾಗಿ ಟೆಲಿಗ್ರಾಂ ಕೊಟ್ಟಿದ್ದ.

o o o

ಗಂಟೆ ಹನ್ನೊಂದುವರೆ ಆಗಿತ್ತು. ಮುರಳಿ ಬಂದನೋ? ಎಂದು ಮತ್ತೊಮ್ಮೆ ರಾಯರು ಹುಬ್ಬೇರಿಸಿ ಕೇಳಿದರು. ಆವರೆ ಅವರಿಗೆ ಕಿವಿ ಕಿವುಡಾಗಿಸುವ ಗುಡುಗು ಸಿಡಿಲಿನಂತೆ 'ಎಕ್ಸ್‌ಪ್ರೆಸ್'ನ ಧ್ವಂಸ ಸುದ್ದಿ ತಲಪಿತ್ತು. ರಾಯರು ಆಗಲೇ ಪ್ರಜ್ಞಾಶೂನ್ಯರಾಗಿ ಬಿದ್ದಿದ್ದರು. ಮದುವೆಗೆಂದು ನೆರೆದವರು ಗರಬಡಿದವರಂತೆ ಕುಳಿತಲ್ಲೇ ಬಿಟ್ಟಕಣ್ಣಿನಿಂದ ಒಬ್ಬರನ್ನೊಬ್ಬರು ನೋಡುತ್ತಿದ್ದರು. ಯಾರಿಗೂ ಮಾತನಾಡುವ ಉಸಿರೇ ಇದ್ದಿರಲಿಲ್ಲ.

ಮುರಳಿ ಮತ್ತು ಆತನೊಂದಿಗೆ ಸಣ್ಣ ಸೇನಾದಳ ಪ್ರಯಾಣಿಸುವರೆಂದು, ವಿದ್ರೋಹಿಗಳ ಕಿವಿಗೆ ಬಿದ್ದಿತ್ತು. ಸಮಯ ಕಾಯುತ್ತಿದ್ದ ದ್ರೋಹಿಗಳು 'ಎಕ್ಸ್‌ಪ್ರೆಸ್' ಬರುವಾಗ ರೈಲ್ವೇ ಹಳಿ ತಪ್ಪಿಸಿ, ನದಿಗುರುಳುವಂತೆ ಮಾಡಿದ್ದರು. ಫಿರಸಂರಾಥಿಗಳಾದ ನೂರಾರು ಜನರನ್ನು, ಮುರಳಿಗಾಗಿ ಕೊಂದರು. ವಿದ್ರೋಹಿಗಳು ತಮ್ಮ ಕೆಲಸವನ್ನು ಯಶಸ್ವಿಯಾಗಿ ಮುಗಿಸಿದ್ದರು. ನಾಗರಿಕರನ್ನೇ ಕೊಲ್ಲುವ ಕಾರ್ಯಕ್ಕೆ ಕೈಯಿಟ್ಟಿದ್ದರು.

ಮದುವೆ ಮನೆ ಸ್ತಬ್ಧವಾಗಿತ್ತು. ಯಾರಿಗೂ ಸ್ಪಷ್ಟವಾದ ಸುದ್ದಿ ತಿಳಿದಿರಲಿಲ್ಲ. ದಿನ ಪತ್ರಿಕೆಯೂ, ಸುದ್ದಿ ಸರಿಯಾಗಿ ತಿಳಿಯದೆ ಸಾವು—ನೋವಿನ ಸಂಖ್ಯೆ ಕೊಟ್ಟಿಲ್ಲ. ಮುರಳಿ ಏನಾದನೋ ಎಂಬ ವಿಚಾರವೇ ಬಂದಿಲ್ಲ. ಎಚ್ಚರಗೊಂಡ ರಾಯರು ಮುರಳಿ ಬಂದನೇ ಎಂದರು. ಯಾರೊಬ್ಬರೂ ಮಾತನಾಡದೆ ಕುಳಿತದ್ದನ್ನು ಕಂಡು ರಾಯರಿಗೆ ದುಃಖ ಉತ್ತರಿಸಿತು.

'ಮುರಳಿ ಬಂದ' ಎಂದು ಹೊರಗೆ ಯಾರೋ ಓಡಿ ಬಂದು ಹೇಳಿದರು. ಕುಳಿತಿದ್ದ ರಾಯರು ತಟ್ಟನೆ ಎದ್ದು ಹೊರಬಂದರು. ಮುರಳಿ ಏನೂ ತಿಳಿಯದವನಂತೆ ಬರುತ್ತಿದ್ದನ್ನು ಕಂಡು ರಾಯರಿಗೇ ಯೋಚನೆಯಾಯಿತು. ಮನೆ ಸೇರಿದ ಮುರಳಿಗೆ ಕುಳಿತುಕೊಳ್ಳಲೂ ಸಮಯ ಸಿಕ್ಕಲಿಲ್ಲ. ಮದುವೆಗೆಂದು ನೆರೆದಿದ್ದವರೆಲ್ಲಾ ಆತನನ್ನು ಮುತ್ತಿಕೊಂಡರು. ಮುರಳಿಗೆ ಮನೆಯವರ ನಡತೆ ವಿಚಿತ್ರವಾಗಿ ಕಂಡಿತು.

ಮಗನ ಮೈ ಕೈಯೆಲ್ಲಾ ರಾಯರು ಪರೀಕ್ಷಿಸುತ್ತಿದ್ದದ್ದನ್ನು ಕಂಡು; ಮುರಳಿ ತಡೆಯದೆ ವಿಷಯವೇನೆಂದು ಕೇಳಿದ. ಆಗ ರಾಯರು ಮೇಜಿನ ಮೇಲಿದ್ದ ಪತ್ರಿಕೆಯತ್ತ ಕೈತೋರಿಸಿದರು. ಮುರಳಿ ಐದು ನಿಮಿಷ ನಿಂತು ಬಿಟ್ಟ. ಮನೆಯಲ್ಲಿನ ವಾತಾವರಣದ ಅರಿವು ಆತನಿಗಾಯಿತು! ಮುರಳಿಯ ಕಣ್ಣಲ್ಲಿ ಅಶ್ರುಬಿಂದು ಯಾರಿಗೂ ತಿಳಿಯದಂತೆ ಹೊರಬಿತ್ತು.

o o o

ಶನಿವಾರ ದಿನ ಬೆಳಿಗ್ಗೆ 'ಎಕ್ಸ್‌ಪ್ರೆಸ್'ನಲ್ಲಿ ಹೊರಡಬೇಕೆಂದು ನಿಶ್ಚಯವಾಗಿರಲು ಮತ್ತೊಂದು ಮುರಳಿಗೆ ಗುಪ್ತ ಸಂದೇಶ ಬಂದಿತ್ತು. ರಕ್ಷಣಾದಳದಲ್ಲಿ ಮುಖ್ಯಸ್ಥರಾದವರು ಪ್ರಯಾಣಿಸುವಾಗ ಸರಿಯಾದ ಮಾರ್ಗ ಹೇಳುತ್ತಿದ್ದಿಲ್ಲ! ಈಗ ಮುರಳಿ ಬೇರೊಂದು ಮಾರ್ಗವಾಗಿ ಹೋಗಲು ರೈಲು ಸಿದ್ಧವಾಗಿತ್ತು. ಮುರಳಿ ಯಾವುದರ ಪರಿವೆಯಿಲ್ಲದೆ ರೈಲು ಹತ್ತಿ ಬಂದಿದ್ದ! ಆತ ಬಂದದ್ದು 'ಎಕ್ಸ್‌ಪ್ರೆಸ್' ಅಲ್ಲ! ಪಸೆಂಜರ್'ನಲ್ಲಿ; ಮುಂದಿನ ಬೋಗಿ ಆತನಿಗಾಗಿ ಮೀಸಲಾಗಿತ್ತು!

ಆದರೆ ವಿದ್ರೋಹಿಗಳು ಮುರಳಿಯನ್ನೂ ಆತನ ಜೊತೆಗಾರರನ್ನೂ ಕೊಲೆಗೊಳಿಸಬೇಕೆಂದು 'ಎಕ್ಸ್‌ಪ್ರೆಸ್' ಬರುವಾಗ ಹಳಿ ತಪ್ಪಿಸಿ ನದಿಗುರುಳುವಂತೆ ಕಾರ್ಯನಡೆಸಿದ್ದರು ಮುರಳಿ ನಡೆದುದೆಲ್ಲವನ್ನೂ ಯೋಚಿಸಿ ದೀರ್ಘ ನಿಟ್ಟುಸಿರಿಟ್ಟ!

ತಾನೊಂದು ಬಗೆದರೆ ದೈವ ಬೇರೊಂದು ಬಗೆಯಿತು ಎನ್ನುವಂತೆ ಮನುಷ್ಯ ಅನೇಕ ಸಲ ಭಾವಿಸುತ್ತಾನೆ. ಸತ್ಯದ ವಿಷಯದಲ್ಲಿ ಮಾತ್ರ ಮನುಷ್ಯನ ಯತ್ನ ಎಷ್ಟೇ ವಿಫಲಗೊಂಡರೂ ಅದರಿಂದ ಅವನ ಸಾಧನೆ ಮತ್ತಷ್ಟು ಶ್ರೇಷ್ಠತಮವಾಗುತ್ತದೆ.

o o o

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No 244/1968.

ಬೂನಪ್ಪ ಶೆಟ್ಟಿ — — ವಾದಿ

ಮತ್ತು

ದಾಸು ಮರಕಾಲ ಕೂಡಾ — ಪ್ರತಿವಾದಿಯರು

ಇವರಿಗೆ

ಒಂದನೇ ಪ್ರತಿವಾದಿ ದಾಸು ಮರಕಾಲ, ಅಣ್ಣಯ್ಯ ಮರಕಾಲನ ಅಳಿಯ, ೨ನೇ ಪ್ರತಿವಾದಿ ಕೂಸ ಮರಕಾಲ, ಸುಕ್ರ ಮರಕಾಲನ ಮಗ, ಉಡುಪಿ ತಾಲೂಕು ಪಡು ತೋನ್ಸೆ ಗ್ರಾಮದ ಅಳ್ವೆಬೆಂಗ್ರೆಯಲ್ಲಿ ವಾಸವಾಗಿರುವರು.

ವಾದಿಯು ಪ್ಲೈಂಟು ನಿವೃತ್ತಿಕೇಳಿ ದಾಖ್ಲು ಮಾಡಿದ ದೋಟಿನ ದಾವೆಯು ತಾ. 18-2-69ಕ್ಕೆ ನಿಮ್ಮ ಹಾಜರು ಬಗ್ಗೆ ಇಟ್ಟಿರುವುದರಿಂದ, ಸದ್ರಿ ದಾವೆಯಲ್ಲಿ ಉದಾಹರಿಸುವುದಿದ್ದರೆ, ಮೇಲಿನ ತಾರೀಖು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಹಾಜರು ಮಾಡಿಕೊಳ್ಳತಕ್ಕದ್ದು.

(ಕೋರ್ಟಿನ ಹುಕುಂ ಪ್ರಕಾರ)

P. Shivaji Shetty,
Adv. for the Plaintiff,

Udipi. S. K.
Dt. 20—1—69.

ಫೋನ್ : 526

ಸಂಪುಟ ೪೮
ಸಂಚಿಕೆ ೨೧
VOL. 48
No. 21

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೬—೨—೧೯೬೯

ನಮ್ಮ ನಡವಳಿಕೆ

ರಾಜ್ಯ ಪುನರ್ವಿಂಗಡಣೆಯಾದ ನಂತರ ನಾವು ಭಾಷೆಯ ತಳಹದಿಯಲ್ಲಿ ರಾಜ್ಯ ಕಟ್ಟುವ ಕಲ್ಪನೆಗೆ ತೀರ ಹುಚ್ಚು ಎಂದು ಹೇಳುತ್ತಲೇ ಬಂದೆವು. ಆದರೆ, ಈ ಹುಚ್ಚು ಯಾರಿಂದಲೂ ದೂರವಾಗಲಿಲ್ಲ. ಮಹಾರಾಷ್ಟ್ರ-ಗುಜರಾತಗಳು, ಪಂಜಾಬ-ಹರಿಯಾಣಗಳು ವಿಭಜನೆಗೊಂಡವು. ಅಸ್ಸಾಮದ ಬಳಿ ನಾಗಾರಾಜ್ಯವೂ ಆಯಿತು. ಈದೀಗ ಕೇಳಿಬರುತ್ತಿರುವುದು ವಿದರ್ಭ ಮತ್ತು ತೆಲಂಗಾಣಗಳ ಕೂಗು. ಇದೇ ಸ್ವರ ಮುಂದುವರಿದರೆ, ಆಗ ಒಂದೊಂದು ರಾಜ್ಯವೂ ಮೂರುನಾಲ್ಕು ಪಾಲಾದೀತು; ಭಾರತ ಒಂದೇ ರಾಷ್ಟ್ರವೆಂಬುದನ್ನು ಒಪ್ಪುವ ನಮಗೆ ರಾಜ್ಯಗಳ ಆಡಳಿತ ಪ್ರಶ್ನೆ ಆಡಳಿತ ಸೌಲಭ್ಯಕ್ಕಾಗಿ ಮಾತ್ರವೇ ಇರಬೇಕು. ಭಾಷಾವಾರು ರಾಜ್ಯ ರಚನೆಯಿಂದ ರಾಜ್ಯದ ಆಂತರಿಕ ಆಡಳಿತೆಯು ಸುಸೂತ್ರವಾಗುವುದು; ರಾಜ್ಯ ರಾಜ್ಯಗಳಲ್ಲಿ ಸ್ಪರ್ಧಾಮನೋಭಾವನೆ ಮೂಡಿ, ಅದು ಪ್ರಗತಿಗೆ ಪೋಷಕವಾದೀತು ಎಂಬ ಆಶಯಗಳೀಗ ನೀರ ಮೇಲಣ ಗುಳ್ಳೆಯಾಗಿದೆ. ಗಾಂಧೀಜಿ ಆರಂಭಿಸಿದ್ದ ಸತ್ಯಾಗ್ರಹವು ದುರಾಗ್ರಹದ ರೂಪವನ್ನು ತಳೆದಂತೆಯೇ ರಾಜ್ಯದ ಆಂತರಿಕ ಆಡಳಿತೆಯು ಜನತೆಯ ಭಾಷೆಯಲ್ಲೇ ನಡೆಯುವ ಪ್ರಯತ್ನ ಅಲ್ಲಲ್ಲಿ ನಡೆಯುತ್ತಿದೆಯೇನೋ ನಿಜ. ಆದರೆ, ರಾಜ್ಯ ರಾಜ್ಯಗಳ ನಡುವೆ ಎದ್ದಿರುವ ಸ್ಪರ್ಧಾ ಭಾವನೆ ಮತ್ತು ಹಲವು ಸಮಸ್ಯೆಗಳಿಗೆ ಕಾರಣವಾಗಿದೆ.

ಆಂಧ್ರದಲ್ಲಿ ಇತ್ತೀಚೆಗೆ ನಡೆದ ಗೊಂದಲ ತೆಲಂಗಾಣಕ್ಕೆ ಸಂಬಂಧಪಟ್ಟದ್ದು. ಆಂಧ್ರ ಪ್ರದೇಶ ಸರಕಾರವು ತೆಲಂಗಾಣವನ್ನು ನಿರ್ಲಕ್ಷ್ಯಿಸಿದೆಯೆಂದು [illegible] ಮುಂದಿನ ವಿದರ್ಭದ [illegible] ಗೊಂದಲ, ಇದೇ ಮಾದರಿಯಲ್ಲಿ ನಮ್ಮ ಕೇಳಿಕೆ—ಬೇಡಿಕೆಗಳು ಮುಂದುವರಿಯುತ್ತ ಹೋದರೆ ನಮ್ಮಲ್ಲಿ ಶಾಂತಿ ನೆಲಸುವುದೆಂತು? ಮಹಾರಾಷ್ಟ್ರ—ಕರ್ನಾಟಕಗಳ ಸೀಮಾ ವಿವಾದದ ಸಂಬಂಧದಲ್ಲಿ ಮಹಾಜನ ಆಯೋಗದ ವರದಿಯ ಬಗ್ಗೆ ಉಭಯ ರಾಜ್ಯಗಳ ನಿಲುವೆ ಭಿನ್ನವಿರುವುದು ಜಗಜ್ಜಾಹೀರ. ಎರಡೂ ರಾಜ್ಯ ಸರಕಾರಗಳೂ ಶಾಸನ ಸಭೆಗಳೂ ಜನಸಮುದಾಯವೂ ಕೇಂದ್ರದ ಮೇಲೆ ತಂತಮ್ಮ ವಾದವನ್ನೊಪ್ಪಬೇಕೆಂದು ಒತ್ತಾಯ ಹೇರುತ್ತಿವೆ. ಪರಿಣಾಮ! ಕೇಂದ್ರ ಗೃಹಮಂತ್ರಿ ಚವನರು ಬೊಂಬಾಯಿಗೆ ಆಗಮಿಸಿದಾಗ, ಶಿವಸೇನೆಯಿಂದ ಕಂಬಾವುಟವನ್ನು ಎದುರಿಸಬೇಕಾಯಿತು. ಇಷ್ಟು ಮಾತ್ರವಲ್ಲ, ಬೊಂಬಾಯಿಗೆ ಬರಲು ಅವರನ್ನು ಬಿಡುವುದಿಲ್ಲ ಎಂದೂ ಹೇಳಲಾಯಿತು. ಇದೇ ದಾರಿಯನ್ನು ಕನ್ನಡಿಗರೂ ತುಳಿದರೆ ಚವನರು ಬೆಂಗಳೂರಿಗೂ ಬರಬಾರದು. ಅಂತಾರಾಜ್ಯ ವಿವಾದಗಳು ಒಂದೆರಡಲ್ಲ; ಪ್ರತಿ ಪ್ರಶ್ನೆಯಲ್ಲೂ ತನಗೆ ತೃಪ್ತಿಕರವಾದ ಉತ್ತರವೇ ದೊರೆಯಬೇಕೆಂದು ರಾಜ್ಯ ಸರಕಾರಗಳು ಹಠ ತೊಟ್ಟರೆ, ಕೇಂದ್ರ ಸರಕಾರದ ಸ್ಥಿತಿ ಹಲವು ಹೆಂಡಂದಿರ ಗಂಡನದ್ದಾಗುತ್ತದೆ. ಕೇಂದ್ರದ ಶಕ್ತಿ ಕುಂಠಿತವಾಗುತ್ತದೆ, ರಾಜ್ಯ—ರಾಜ್ಯಗಳ ನಡುವೆ ಉತ್ತಮ ಹೊಂದಾಣಿಕೆಯ ಸಂಬಂಧವಿಲ್ಲದಾದರೆ, ನಮ್ಮ ಒಕ್ಕೂಟ ರಾಜ್ಯ ಪದ್ಧತಿಯು ಛಿನ್ನವಿಚ್ಛಿನ್ನತೆಗೆ ದಾರಿಯಾಗಬಹುದು. ತಮಿಳುನಾಡಿನ ಹಿಂದೀ ವಿರೋಧಿಗಳ ಒಂದು ಗುಂಪು ಅಧಿಕೃತ ಭಾಷಾ ಸಂಬಂಧದ ಅನುಚ್ಛೇದವನ್ನು ಸಂವಿಧಾನದಿಂದ ಅಳಿಸಲು ತಿಂಗಳುಗಳ ಕಾಲ ಹೋರಾಡಿದ್ದರೆ [illegible] ಇಂತಹ ಬೆದರಿಕೆಗಳು ಬರುವುದು ಇದ. ಪೂರ್ವ ಬಂಗಾಲ [illegible] ಇದು ನಡೆದ ತಮಿಳುನಾಡು—ಕೇರಳ ಮೊದಲಾದ ರಾಜ್ಯಗಳು ರಾಜ್ಯ ಸರಕಾರಗಳಿಗಿರುವ ಅಧಿಕಾರ ಅತ್ಯಲ್ಪವೆಂದೂ ಇದನ್ನು ಹೆಚ್ಚಿಸಬೇಕೆಂದೂ ಪದೇ ಪದೇ ಹೇಳುತ್ತಿವೆ. ತಮ್ಮ ಕೈಗಳಲ್ಲಿರುವ ಅಧಿಕಾರಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವಲ್ಲಿ ಅಶಕ್ತರಾದವರು ಹೆಚ್ಚು ಅಧಿಕಾರ ಬೇಡುವುದು ಎಂದರೆ, ಕೇಂದ್ರವನ್ನು ಪೂರ್ಣ ದುರ್ಬಲಗೊಳಿಸಿ, ಅದನ್ನು ನಾಮಮಾತ್ರಕ್ಕಿರಿಸುವುದು— ಪರಿಣಾಮ— ದೇಶದ ಛಿನ್ನತೆ ಮಾತ್ರ, ತೆಲಂಗಾಣದಲ್ಲಾದಲಿ, ವಿದರ್ಭದಲ್ಲಾದಲಿ ತಲೆದೋರಿದ ಪರಿಸ್ಥಿತಿ ದೇಶಕ್ಕೆ ಸಮೃದ್ಧಿ ತರುವುದಿಲ್ಲ; ತಮಿಳುನಾಡಿನ ನಡೆ ಸಂವಿಧಾನವನ್ನೇ ಉಲ್ಲಂಘಿಸುವಂಥದ್ದು. ಕೇರಳದ್ದು ಅರಾಜಕತೆಗೆ ದಾರಿ ತೆರೆಯುವಂಥದ್ದು— ಈ ಗಾಳಿಯನ್ನು ತಣ್ಣಗೆ ಗೊಳಿಸುವುದು ರಾಷ್ಟ್ರೀಯ ಹೊಣೆಗಾರಿಕೆ.

ನಾಗರಕೋಯಿಲ್ ಸಂಸದೀಯ ಮತದಾರ ಕ್ಷೇತ್ರದಂತೆಯೇ ಉತ್ತರ ಭಾರತದಲ್ಲಿನ ಧ್ವಂಸಕರ ಚುನಾವಣೆ ನಡೆಯುತ್ತಿರುವ ರಾಜ್ಯಗಳಲ್ಲಿ ಚುನಾವಣಾ ಘರ್ಷಣೆಗಳು ನಡೆದವು. ಲಾರಿ ಪ್ರಹಾರ, ಅಶ್ರುವಾಯು ಪ್ರಯೋಗ, ಗೋಲಿಬಾರುಗಳೂ ಕೆಲವೊಮ್ಮೆ ಅನಿವಾರ್ಯವಾಯಿತು. ರಾಜಕೀಯ ಹಿಂಸಾಚರಣೆ ನಮ್ಮ ರಾಜ್ಯಕೀಯ ಅನಭಿಜ್ಞತೆಯ ಕುರುಹು. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ನಿಷ್ಪಕ್ಷಪಾತವಾಗಿ ನಿರ್ಭೀತವಾಗಿ ನಡೆಯಬೇಕು. ಆದರೆ, ಚುನಾವಣಾ ಪ್ರಚಾರಕ್ಕೆಂದು ಸೊಂಟಕಟ್ಟಿದವರು ತಮ್ಮ ಧ್ಯೇಯ ಉದ್ದೇಶ ನಿರೂಪಣೆಯಿಂದ ಜನತೆಯನ್ನು ಆಕರ್ಷಿಸಲು ಅಸಮರ್ಥರಾಗಿ ತಮ್ಮ ವಿರೋಧಿಗಳನ್ನು ಹಿಂಸಿಸಲು ಆರಂಭಿಸುವುದು ಪ್ರಜಾಪ್ರಭುತ್ವದ ಗೌರವವನ್ನು ಇಳಿಸುತ್ತದೆ. ರಾಜ್ಯಕೀಯ ಪ್ರಜ್ಞೆಯನ್ನು ಜನನಾಯಕರು ಹುಟ್ಟಿಸುವುದನ್ನು ಬಿಟ್ಟು ಜನತೆಯನ್ನು ಅಡ್ಡದಾರಿಗೆಳೆಯುವ ಹಟ್ಟಾಟದಿಂದ ಇವರು ದೂರವಾಗದೆ ಹೋದರೆ ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿ.

ಮುಖಚಿತ್ರ

ಉಡುಪಿಯಲ್ಲಿ ಮಾಧ್ವ ಸಿದ್ಧಾಂತದ ಧಾರ್ಮಿಕ ಸಮ್ಮೇಳನವು ತಾ. ೩೦.೧.೬೯ರಂದು ರಾಜ್ಯಪಾಲ ಶ್ರೀ ಜಿ. ಎಸ್. ಪಾಠಕ್‌ರವರು ಉದ್ಘಾಟಿಸಿದರು. ಆ ಸಂಭ್ರಮದಲ್ಲಿ ಶ್ರೀ ಮಧ್ವಾಚಾರ್ಯರ ಭಾವಚಿತ್ರವನ್ನು ಪರ್ಯಾಯ ಪೀಠದ ಶ್ರೀ ಪೇಜಾವರ ಶ್ರೀಪಾದಂಗಳವರು ಉದ್ಘಾಟಿಸಿ ವಂದಿಸುತ್ತಿರುವುದನ್ನು ಮೇಲಿನ ಚಿತ್ರದಲ್ಲಿ ನೋಡಬಹುದು.

o oo o

ಶ್ರೀ ಗೋಕರ್ಣ ಮಠದ ದ್ವಾರಕಾನಾಥ್ ಸ್ವಾಮೀಜಿಯವರು ಸಿಂಡಿಕೇಟ್ ಬ್ಯಾಂಕಿನ ಪ್ರಧಾನ ಕಛೇರಿಗೆ ಕಳೆದ ತಾ| ೨೭ರಂದು ಸಂದರ್ಶಿಸಿದಾಗ ಅವರನ್ನು ಬ್ಯಾಂಕಿನ ಅಧ್ಯಕ್ಷ ಶ್ರೀ ಟಿ. ಎ. ಪೈಯವರೂ, ಜನರಲ್ ಮೆನೇಜರ್ ಶ್ರೀ ಕೆ. ಕೆ. ಪೈಯವರೂ ಹಾರ್ದಿಕವಾಗಿ ಸ್ವಾಗತಿಸುತ್ತಿರುವುದನ್ನು ಕೆಳಗಿನ ಚಿತ್ರದಲ್ಲಿ ಕಾಣಬಹುದು.

ಮಾಧ್ವ ಸಮ್ಮೇಳನ

ಉಡುಪಿ: ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಹಾಕಿದ ಜಯತೀರ್ಥ ಮಂಟಪ [illegible] ಕಳೆದ ತಾ. ೨೯ರಿಂದ ೩೧ರ ವರೆಗಿನ ಮೂರು ದಿನಗಳ ಕಾಲ ದೇಶದ [illegible] ಮೂಲೆಗಳಲ್ಲಿನ ಮಾಧ್ವರನ್ನೂ ಪಂಡಿತ-ವಿದ್ವಾಂಸರನ್ನೂ ಆಕರ್ಷಿಸಿತು. ಅಖಿಲ ಭಾರತ ಮಧ್ವತತ್ತ್ವಜ್ಞಾನ ([illegible]) ಸಮ್ಮೇಳನ, ಶ್ರೀ ಮನ್ಮಧ್ವಸಿದ್ಧಾಂತ ಸಂವರ್ಧಿನೀ ಸಭಾದ [illegible] ಮಹೋತ್ಸವ ಮತ್ತು ಶ್ರೀ ಜಯತೀರ್ಥರ ಆರನೆಯ ಶತಮಾನೋತ್ಸವಗಳು ಈ ಮೂರು ದಿನಗಳಲ್ಲಿ ನಡೆದವು. ಕರ್ನಾಟಕದ ರಾಜ್ಯಪಾಲ ಶ್ರೀ ಜಿ. ಎಸ್. ಪಾಠಕರಿಂದ ಉದ್ಘಾಟಿತವಾದ ಈ ಸಮ್ಮೇಳನ ಮತ್ತು ಉತ್ಸವದಲ್ಲಿ ತತ್ತ್ವಜ್ಞಾನ ಪಂಡಿತರೂ ಜಿಜ್ಞಾಸುಗಳೂ ಅನೇಕ ಪೀಠಾಧಿಪತಿಗಳೂ ಸಕ್ರಿಯವಾಗಿ ಭಾಗವಹಿಸಿದ್ದರು. ಜನಸಾಧಾರಣರಿಗೆ ಈ ತತ್ತ್ವಜಿಜ್ಞಾಸೆಯು ರುಚಿಸದೆ ಹೋಗಬಹುದಾದರೂ ಇದೇ ಸಂದರ್ಭದಲ್ಲಿ ಏರ್ಪಡಿಸಿದ್ದ ಕವಿಗೋಷ್ಠಿ, ಮಾಧ್ವ ಯುವಕ ಮೇಳ, ಮಾಧ್ವ ಮಹಿಳಾ ಗೋಷ್ಠಿಗಳೂ ರಾತ್ರಿ ಕಾಲದ ಮನರಂಜನೆಯ ಕಾರ್ಯಕ್ರಮಗಳೂ ಇವರನ್ನೂ ಆಕರ್ಷಿಸಿದುವೆನ್ನಬಹುದು. ದೇಶದ ಪಂಡಿತಲೋಕ [illegible] ಇವರನ್ನಾದರೂ ಕಣ್ಣಾರೆ ಕಂಡ, ಅವರ ವಿದ್ವತ್ತಿನ ಅಲ್ಪ ಪರಿಚಯವನ್ನಾದರೂ ಅಪೇಕ್ಷಿತರಿಗೆ ಮಾಡಿಕೊಟ್ಟ ಈ ಸಮ್ಮೇಳನ—ಉತ್ಸವಗಳು ಉತ್ತಮ ರೀತಿಯಲ್ಲೇ ನಡೆದಿವೆ. ಇದರಿಂದ ಮಾಧ್ವ ಜನಾಂಗದ ಮೇಲೂ ಇತರ ಮೇಲೂ [illegible] ವಾದರೂ ಪ್ರಭಾವ ಬೀರುವಂತಾದರೆ, ಜನ ಜೀವನದ ಹಲವು ಸಮಸ್ಯೆಗಳ ಪರಿಹಾರವಾಗಬಲ್ಲುದು. ತತ್ತ್ವಜ್ಞಾನದ ಆಚರಣೆಯಿಂದಲೇ ಜೀವನದಲ್ಲಿ ಶಾಂತಿ ಸಿಗಬಲ್ಲದು. ಈ ಸಮ್ಮೇಳನವನ್ನು ಯಶಸ್ವಿಯಾಗಿ ಜರಗಿಸುವಲ್ಲಿ ನೆರವಾದ ಎಲ್ಲರನ್ನೂ, ಮುಖ್ಯವಾಗಿ ಪರ್ಯಾಯ ಶ್ರೀ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶ ತೀರ್ಥರನ್ನೂ ಶ್ರೀ ಭಂಡಾರಕೇರಿ ಮಠದ ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥರನ್ನೂ ಅಭಿವಂದಿಸುತ್ತೇವೆ.

ಬೆಳ್ತಂಗಡಿ ತಾ| ಅ| ಮಂಡಳಿ ಅಧ್ಯಕ್ಷರ ಚುನಾವಣೆ

ಬೆಳ್ತಂಗಡಿ ತಾಲೂಕ್ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಶ್ರೀ ರಾಮನಾಯ್ಕ ಆಯ್ಕೆಗೊಂಡಿದ್ದಾರೆ. ಶ್ರೀ ಧರ್ಮರಾಜ್ ಇವರು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

I. A. 1/68 in O. S. 112/67.

Padmavathi .... *Petitioner.*

vs-

Leelavathi & others.... *Respondents.*

ಈ ಕೆಳಗೆ ತಾಲ್ಲೂಕು [illegible] ಗ್ರಾಮದ ಬೆಟ್ಟು ಎಂಬಲ್ಲಿನ ದೇವರಾಜ ಶೆಟ್ಟಿಯವರ ವಿಧವೆ ಲೀಲಾವತಿ ಅಮ್ಮನವರಿಗೆ, ಮತ್ತು ಅವರ ಮೈನರ್ ಮಕ್ಕಳ ಬಗ್ಗೆ [illegible]

ಮೇಲಿನ ಅರ್ಜಿಯಲ್ಲಿ [illegible] ಪ್ರಿಲಿಮಿನರಿ ಡಿಕ್ರಿ [illegible], ಫೈನಲ್ ಡಿಕ್ರಿ [illegible] ಯಾಗಬೇಕೆಂತಲೂ, ಇತರ ನಿವೃತ್ತಿಗಳಿಗೋಸ್ಕರವೂ, ಮತ್ತು ದಾವಾ ಆಸ್ತಿಯನ್ನು [illegible] ನೇಮಿಸಬೇಕು [illegible] ಫೈನಲ್ ಡಿಕ್ರಿ ಅರ್ಜಿಯನ್ನು ತಾ. 21-2-1969ಕ್ಕೆ ಇಟ್ಟಿರುತ್ತದೆ. ಆ ಬಗ್ಗೆ ನಿಮ್ಮದೇನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ವಕೀಲರ ದ್ವಾರಾ ಯಾ ಆ ದಿವಸ ಬೆಳಿಗ್ಗೆ ಕೋರ್ಟು ಸಮಯ 11 ಗಂಟೆಗೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಅರ್ಜಿಯನ್ನು ಮುಂದುವರಿಸಲಾಗುವುದು. ತಿಳಿದಿರಲಿ.

N. J. KADAMBA,
Advocate.
Belthangady.

ಬೆಳ್ತಂಗಡಿ, 31.1.1969.

ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ವಾರ್ಷಿಕ ಮಹಾಸಭೆ

ಶಿರ್ವ (ದ. ಕ.) 20-1-1969. ಮೆಡಿಕಲ್ ರಿಲೀಫ್ ಎಸೋಸಿಯೇಶನ್ (ರಿ) ಶಿರ್ವ, ಇದರ ವಾರ್ಷಿಕ ಮಹಾಸಭೆಯು ತಾ. 16-1-69ರಂದು ಡಾ| ವೈ. ಆರ್. ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಜತೆ ಕಾರ್ಯದರ್ಶಿ ಡಾ| ಕೆ. ಆರ್. ವೆಂಕಟಕೃಷ್ಣರವರು ವರದಿ ವಾಚಿಸಿದರು. ಆರ್ಥಿಕ ಕಾರ್ಯದರ್ಶಿ ಡಾ| ಎಸ್. ರಾಜಶೇಖರ ಹೆಗ್ಡೆಯವರು ಪರಿಶೋಧಿತ ಲೆಕ್ಕಪತ್ರಗಳನ್ನೊಪ್ಪಿಸಿದರು. ಅಧ್ಯಕ್ಷರ ಸಮಯೋಚಿತ ಭಾಷಣಾನಂತರ ಡಾ| ಕೆ. ಆರ್. ವೆಂಕಟಕೃಷ್ಣರವರು ಧನ್ಯವಾದವಿತ್ತರು.

ಈ ಕೆಳಗಿನ ಹೊಸ ಕಾರ್ಯಕಾರಿ ಮಂಡಲಿ ರಚಿಸಲ್ಪಟ್ಟಿತು.

ಡಾ| ವೈ. ಆರ್. ಶೆಟ್ಟಿ (ಅಧ್ಯಕ್ಷ), ಡಾ| ಯು. ಕೆ. ಆಚಾರ್ ಮತ್ತು ಡಾ| ಕೆ. ಆರ್. ವೆಂಕಟಕೃಷ್ಣ (ಉಪಾಧ್ಯಕ್ಷರು), ಡಾ| ಪಿ. ಆರ್. ಭಟ್ (ಕಾರ್ಯದರ್ಶಿ), ಶ್ರೀ ಕೆ. ಆರ್. ಹೆಗ್ಡೆ (ಜತೆ ಕಾರ್ಯದರ್ಶಿ), ಡಾ| ಎಸ್. ರಾಜಶೇಖರ ಹೆಗ್ಡೆ (ಆರ್ಥಿಕ ಕಾರ್ಯದರ್ಶಿ), ಶ್ರೀಯುತರುಗಳಾದ ಎಲ್. ಮೆಂಡೋನ್ಸ, ಬಿ. ಜಯರಾಮ ಶೆಟ್ಟಿ, ಕೆ. ವಾಸುದೇವ ಶೆಟ್ಟಿ, ಬಿ. ಶಂಭು ಶೆಟ್ಟಿ ಮತ್ತು ಕೆ. ಎಸ್. ಹೊಳ್ಳ (ಸದಸ್ಯರು)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. and S. C. No. 2/1969.

1. ಪದ್ಮ S. ಸಾಲಿಯಾನ್, 2. ಸದಾನಂದ, 3. ಸರೋಜಿನಿ, 4. ಶಾಂತಾ, ಪ್ರಾಪ್ತವಯಸ್ಕರಲ್ಲದವರು, ರಕ್ಷಕಳು ತಾಯಿ 1ನೇ ಅರ್ಜಿದಾರಳು. — ಅರ್ಜಿದಾರರು.

ಊ ಮೌಲ್ಯ ಯಾವತ್ತೂ ಜನರಿಗೆ ಊ ಮೌಲ್ಯ ತಿಳಿಯಪಡಿಸುವುದೇನೆಂದರೆ :—

1ನೇ ಅರ್ಜಿದಾರಳ ಗಂಡ ವ 2, 3, 4ನೇ ಅರ್ಜಿದಾರರ ತಂದೆ ತಾ. 27-6-67ರಲ್ಲಿ ಮೃತಪಟ್ಟಿರುವ ಸೂರು ಸಾಲಿಯಾನರಿಗೆ *Steam Ship Company Ltd.* ಯಿಂದ ಬರತಕ್ಕ ಪ್ರಾವಿಡೆಂಟ್ ಫಂಡಿನ ಬಾಬ್ತು ಲೈವೇಜ್ ಪ್ಸಲಿ ಬಗ್ಗೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ ಸರ್ಟಿಫಿಕೇಟ್ ಕೊಡಬೇಕಾಗಿ ಎಗ್ರರೆ ಕಾಟ್ಟ ಮೇಲಿನ ಅರ್ಜಿಯು ತಾರೀಕು 28-2-69ಕ್ಕೆ ತನ್ಖೆಗೆ ಇಟ್ಟಿರುವುದರಿಂದ ಆ ಬಗ್ಗೆ ಯಾರಾದರೂ ಆಕ್ಷೇಪ ಹೇಳತಕ್ಕವರು ಪುದ್ದಲ್ಲಿ ಸದ್ರಿ ದಿನ್ನ ಹಗಲು 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿಯನ್ನು ಸಮಸ್ತ ಜನರಿಗೆ ಈ ಮೌಲ್ಯ ತಿಳಿಸಲಾಗುತ್ತದೆ.

B. Krishna Bhat,
Advocate for Petitioner.

Udipi. 29-1-1969.

ಹಿಂದೂ ಹಾಯರ್ ಸೆಕೆಂಡರಿ ಶಾಲೆಯಲ್ಲಿ ಸತ್ಕಾರಕೂಟ

ಶಿರ್ವ (ದ. ಕ.) 11-1-1969, ಸ್ಥಳೀಯ ಹಿಂದೂ ಹಾಯರ್ ಸೆಕೆಂಡರಿ ಶಾಲೆಯಲ್ಲಿ, ಸದ್ರಿ ಶಾಲೆಯ ಹಳೆವಿದ್ಯಾರ್ಥಿ, ಪಶ್ಚಿಮ ಜರ್ಮನಿಯಲ್ಲಿ ಉನ್ನತ ತರಬೇತಿಯನ್ನು ಪಡೆದು ಹಿಂತಿರುಗಿದ ಶ್ರೀ ಎಸ್. ನಾರಾಯಣ ನ್ಯಾಕ್ B. E., ಇವರನ್ನು ಸತ್ಕರಿಸಿ, ಗೌರವಿಸುವ ಸಮಾರಂಭವನ್ನು ತಾ. 9-1-69ರಂದು ಏರ್ಪಡಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಡಾ| ಯು. ಕೆ. ಆಚಾರ್ಯರು ವಹಿಸಿದ್ದರು. ಕುಮಾರಿ ಸುಬ್ಬಮ್ಮಾಯವರಿಂದ ಪ್ರಾರ್ಥನೆಯಾದ ಬಳಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಜಯರಾಮ ಶೆಟ್ಟಿ ಸ್ವಾಗತಿಸಿದರು. ಶ್ರೀ ಕೆ. ಎಲ್. ಶರ್ಮರು ಪರಿಚಯ ಭಾಷಣಗೈದರು. ಶ್ರೀ ನಾಯ್ಕರು ಇಂಗ್ಲೆಂಡು ಮತ್ತು ಪಶ್ಚಿಮ ಜರ್ಮನಿಯಲ್ಲಿ ತಮ್ಮ ಅನುಭವಗಳನ್ನು ತಿಳಿಸಿದರು. ಅಧ್ಯಕ್ಷರ ಸಮಯೋಚಿತ ಭಾಷಣಾನಂತರ ಶ್ರೀ ಕೆ. ವಾಸುದೇವ ಶೆಟ್ಟಿ ಧನ್ಯವಾದವಿತ್ತರು.

ಕಟಪಾಡಿ-ಚಿತ್ರಾಪುರ ದೇವಸ್ಥಾನಕ್ಕೆ ಮಂತ್ರಿದ್ವಯರ ಸಂದರ್ಶನ

ಪಣಂಬೂರು-ಕಟಪಾಡಿ, ಕುಳಾಯಿ-ಚಿತ್ರಾಪುರದಲ್ಲಿ ನಿರ್ಮಿಸಲ್ಪಟ್ಟ ಶೀತಲೀಕರಣದ ಸಂಗ್ರಹಾಗಾರವನ್ನು ಉದ್ಘಾಟಿಸಲು ಆಗಮಿಸಿದ ಮೈಸೂರು ರಾಜ್ಯದ ಮುಖ್ಯ ಹಾಗೂ ಸಣ್ಣ ಬಂದರುಗಳ ಸಚಿವರಾದ ಶ್ರೀ ಲಿಂಗ ರೆಡ್ಡಿಯವರೂ ನಮ್ಮ ಜಿಲ್ಲೆಯ ಜನಪ್ರಿಯ ಕೇಬಿನೆಟ್ ಪ್ರತಿನಿಧಿಗಳೂ, ಆಹಾರ ಮಂತ್ರಿಗಳೂ ಆದ ಶ್ರೀ ವಿಠಲದಾಸ ಶೆಟ್ಟಿಯವರೂ ಸಮುದ್ರ ತೀರದಲ್ಲಿರುವ ಬಹಳ ಪ್ರಾಚೀನದಾದ ಸ್ವಯಂ ಭೂಕ್ಷೇತ್ರವೆನಿಸಿದ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೂ ಮತ್ತು ಚಿತ್ರಾಪುರ ಮಠಕ್ಕೂ ಸಂದರ್ಶನ ನೀಡಿದ್ದರು.

ದೇವಾಲಯದ ಮೊಕ್ತೇಸರರು ಆದ ಶ್ರೀ ಚಿತ್ರಾಪುರ ಮಠದ ಶ್ರೀ ಶ್ರೀಗಳವರು ಊರ ಗಣ್ಯರೊಡನೆ ಮಠದ ಮರ್ಯಾದೆಯೊಂದಿಗೆ ಸಚಿವದ್ವಯರಿಗೆ ಸ್ವಾಗತ ನೀಡಿದರು.

ದೇಶದ ಕ್ಷೇಮಾಭ್ಯುದಯ ಕೋರಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರಿಗೆ ವಿಶೇಷ ಪೂಜೆ, ಪ್ರಾರ್ಥನೆ ಜರಗಿದ ಬಳಿಕ ಶ್ರೀ ಶ್ರೀಗಳವರು ಮಂತ್ರಿದ್ವಯರಿಗೂ, ನೆರೆದ ಭಕ್ತಜನರಿಗೂ ಫಲಮಂತ್ರಾಕ್ಷತೆಗಳನ್ನಿತ್ತು ಅನುಗ್ರಹಿಸಿ ಬೀಳ್ಕೊಟ್ಟರು.

ಸುರತ್ಕಲ್, ಆಟ ಪಂದ್ಯಾಟಗಳ ವಾರ್ಷಿಕೋತ್ಸವ

ಸುರತ್ಕಲ್, ೨೬-೧-೬೯ ಜಾಗತಿಕ ಆಟಗಳ ಕೇಂದ್ರವಾದ ಓಲಂಪಿಕ್ ಆಟಗಳ ಸ್ಪರ್ಧೆಗಳಲ್ಲಿ ಜಪಾನು ಹಂಗೇರಿಯ ಮೊದಲಾದ ಚಿಕ್ಕ ಚಿಕ್ಕ ರಾಷ್ಟ್ರಗಳು ಯಶಸ್ಸನ್ನು ಪಡೆಯುತ್ತಿರುವಾಗ ಭಾರತವು ಇಷ್ಟು ದೊಡ್ಡದಾಗಿದ್ದರೂ ಸಾಕಷ್ಟು ಸ್ಥಾನಮಾನಗಳನ್ನು ಪಡೆಯದೇ ಇರುವುದು ದೊಡ್ಡ ಕೊರತೆಯಾಗಿದೆ. ಅದು ಕಾರಣ ಭಾರತದ ಇಂದಿನ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ಮಾತ್ರವಲ್ಲ ಓಲಂಪಿಕ್ ಸ್ಪರ್ಧೆಗಳಲ್ಲೂ ಹೆಚ್ಚಿನ ಕೀರ್ತಿಯನ್ನು ಪಡೆಯಬೇಕು ಎಂದು ಡಾ| ಟಿ ರಮಾನಾಥ ಶೆಟ್ಟರು ವಿದ್ಯಾದಾಯಿನಿಯ ಆಟ ಪಂದ್ಯಾಟಗಳ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನದ ದಿನಾಚರಣೆಯ ಅಧ್ಯಕ್ಷ ಸ್ಥಾನದಿಂದ ಹೇಳಿದರು.

ಆ ದಿನ ಬೆಳಗ್ಗೆ ಗೋವಿಂದದಾಸ ಕಾಲೇಜಿನ ಪ್ರಿನ್ಸಿಪಾಲ್ ಡಾ| ಟಿ. ನಾರಾಯಣರಾಯರು ರಾಷ್ಟ್ರಧ್ವಜವನ್ನು ಅರಳಿಸಿ ಪಂದ್ಯಾಟಗಳ ಸ್ಪರ್ಧೆ ವಾಚನವನ್ನು ಗೈಯಲು ವಿದ್ಯಾದಾಯಿನಿಯ ವಾರ್ಷಿಕ ಸ್ಪರ್ಧೆಯು ನಡೆಯಿತು. ಸಂಜೆ ಕಲಾಮಂದಿರದಲ್ಲಿ ವಿದ್ಯಾರ್ಥಿಗಳೂ, ಹೆತ್ತವರೂ ನೆರೆದಿರಲು ಶಾಲೆಯ ವಿದ್ಯಾರ್ಥಿ ನಾಯಕನು ಸ್ವಾಗತ ಭಾಷಣವನ್ನು ಗೈಯಲು ಶಾರೀರಿಕ ಶಿಕ್ಷಕರಾದ ಶ್ರೀ ಸೂರ್ಯನಾರಾಯಣರಾಯರು ವಾರ್ಷಿಕ ವರದಿಯನ್ನು ಓದಿದರು. ಅಧ್ಯಕ್ಷರು ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನವೀಯಲು ವಿದ್ಯಾದಾಯಿನಿ ಹಾಯರ್ ಎಲಿಮೆಂಟರಿ ಶಾಲೆಯ ಮಕ್ಕಳಿಂದ ನಾಟಕ, ಗೀತೆ ಮೊದಲಾದ ಮನರಂಜನಾ ಕಾರ್ಯಕ್ರಮಗಳು ಪ್ರೇಕ್ಷಣೀಯವಾಗಿ ನಡೆದವು. ಕೊನೆಯಲ್ಲಿ ವಿದ್ಯಾರ್ಥಿ ಉಪನಾಯಕನು ಧನ್ಯವಾದದೊಂದಿಗೆ ಅಂದಿನ ಕಾರ್ಯಕ್ರಮವು ಯಶಸ್ವಿಯಾಗಿ ಕೊನೆಗೊಂಡಿತು.

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. C. 133/68. O. S. 655/62.

ಈಶ್ವರ ಭಟ್ಟ — . — ಅರ್ಜಿದಾರ
ಶಂಕರನಾರಾಯಣ ಮಯ್ಯ ಸಹಾ — ಎದ್ರಿರು

4. ಪರಮೇಶ್ವರ ಮಯ್ಯ, ಲಿಂಗಯ್ಯ ಮಯ್ಯರ ಮಗ, ಬಜತ್ತೂರು ಗ್ರಾಮ.
5. ಶಿವರಾಮ ಮಯ್ಯ, ಸುಬ್ರಾಯ ಮಯ್ಯರ ಮಗ, ಮೃತ್ಯಪಾಡಿ ಹೌಸ, ಬಾರೂರು ಗ್ರಾಮ, ಕಾಸರಗೋಡು ತಾಲೂಕು.

ಸದ್ರಿ 4, 5ನೇ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಪ್ರಲಿಮಿನರಿ ಡಿಕ್ರಿಗೆ ಜವಾಬ್ದಾರಿಯಿರುವ ಸ್ಥಿರಾಸ್ತಿಗೆ ರಿಸೀವರ್ ನೇಮಕ ಮಾಡಬೇಕಾಗಿ ದಾಖಲು ಮಾಡಿದ ಈ ಅಮಲ್‌ಜ್ಯಾರಿಯಲ್ಲಿ ನಿಮ್ಮ ನೋಟೀಸಿಗೆ ತಾ. 12-2-69ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಮುಖ್ತಂಡಿತ ತೀರ್ಮಾನಿಸಲಾದೀತು.

Sd/- M. Sadashiva Rao,
Vakil for Petitioner.

Puttur, 26-1-69.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

Execution Case no. 262/1968

in

O. S. no. 363/1960.

Between :

ಪಿ. ಗುರುರಾಜ ಆಚಾರ್ಯ —ಅರ್ಜಿದಾರ

ಮತ್ತು

1. ಲಕ್ಷ್ಮಿ ಶೆಡ್ತಿ, ಸಾಟ್ಪುಶೆಡ್ತಿರ ಮಗಳು, 2. ರಘುರಾಮ ಶೆಟ್ಟಿ 3 ಪದ್ಮಾವತಿ ಶೆಡ್ತಿ, 4. ರಾಜೀವ ಶೆಟ್ಟಿ, 5. ಸಂಜೀವ ಶೆಟ್ಟಿ, 6. ಸದಾಶಿವ ಶೆಟ್ಟಿ, 7. ವಿಠಲ ಶೆಟ್ಟಿ — ಲಕ್ಷ್ಮಿ ಶೆಡ್ತಿರ ಮಕ್ಕಳು, —ಉಡುಪಿ ತಾಲೂಕು ಬೇಳೂರು ಗ್ರಾಮದಲ್ಲಿರುವವರು. ....ಎದ್ರಿರು

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :

ನಿಂಮ ಮೇಲೆ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅಮಲ್ಜ್ಯಾರಿಯನ. ನಿಂಮ್ಮ ಹಾಜರಾತಿಯ ಬಗ್ಗೆ ತಾ. 21-2-69ಕ್ಕೆ ಇಟ್ಟದ್ದಾರೆ ಸದ್ರಿ ಅಮಲ್ಜ್ಯಾರಿಗೆ ನಿಮ್ಮ ದೇನಾದರೂ ಆಕ್ಷೇಪಣೆಯಿದ್ದರೆ ಅದಿವಸ ಪೂರ್ವಾಹ್ನ ಘಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ,

K. Balachandra Rao,
Advocate for Petitioner

Udipi, Dt. 31—1—1969.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ
ಹೊಟೇಲ್ ಸತ್ಕಾರ್
ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27
ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.
Phone: 28837
29887
HOTEL SATKAR
Boarding & Lodging
Near Corporation Office, 9, Mission Road
Bangalore—27

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಭಾರತದಲ್ಲಿ ಪ್ರಜಾಪ್ರಭುತ್ವ ವಿಫಲವೆ ?

ಶ್ರೀ ಎಂ. ವಿ. ಪಡಿಯಾರ್, ಬಿ. ಎ., ಸಿ. ಎ. ಐ. ಐ. ಬಿ.

ಲೇಖಕರು

"ಪ್ರಜಾಪ್ರಭುತ್ವ"ವೆಂಬುದು "ಡೆಮಾಕ್ರಸಿ"ಯ ಕನ್ನಡ ರೂಪ. ಡೆಮಾಕ್ರಸಿ ಎಂಬ ಶಬ್ದವು ಗ್ರೀಕ್ ಭಾಷೆಯ "ಡೆಮಾಕ್ರಟಿಯಾ" ಎಂಬುದರಿಂದ ಹುಟ್ಟಿದ್ದು. "ಡೆಮೊಸ್" ಎಂದರೆ ಜನತೆ ಮತ್ತು "ಕ್ರಾಟೊಸ್" ಎಂದರೆ, ಪ್ರಭುತ್ವ. ಕ್ರಿ. ಪೂ. ೪ ಮತ್ತು ೫ನೆ ಶತಮಾನಗಳಲ್ಲಿ ಪ್ರಾಚೀನ ಗ್ರೀಸ್ ದೇಶದಲ್ಲಿ ಪ್ರಜಾಪ್ರಭುತ್ವವು ಮೆರೆದಾಡಿತ್ತು.

"ಪ್ರಜಾಪ್ರಭುತ್ವ"ವೆಂಬ ಪದವನ್ನು ಬೇರೆ ಬೇರೆ ಅರ್ಥಗಳಲ್ಲಿ ಬಳಸುತ್ತಾರೆ: (೧) ಇದರ ಮೂಲ ಅರ್ಥವು ನಾಗರಿಕರು ಸಾಮೂಹಿಕವಾಗಿ ಸೇರಿ ಬಹುಮತದ ನಿರ್ಧಾರಕ್ಕನುಸಾರವಾಗಿ ರಾಜ್ಯಕೀಯ ನಿರ್ಣಯಗಳನ್ನು ಕೈಕೊಳ್ಳುವ ಒಂದು ಬಗೆಯ ಸರಕಾರ. ಇದನ್ನು ನೇರ ಪ್ರಜಾಪ್ರಭುತ್ವವೆನುತ್ತಾರೆ. (೨) ನಾಗರಿಕರು ತಮ್ಮ ಅಧಿಕಾರವನ್ನು ನೇರವಾಗಿ ಪ್ರಯೋಗಿಸದೆ, ತಾವು ಆಯ್ದು, ತಮಗೆ ಹೊಣೆಗಾರರಾದ ಪ್ರತಿನಿಧಿಗಳ ಮೂಲಕ ಆಡಳಿತೆ ಉಪಯೋಗಿಸಲು ಅವಕಾಶವುಳ್ಳ ಒಂದು ಬಗೆಯ ಶಾಸನ ಪ್ರಣಾಳಿ. ಇದನ್ನು ಪ್ರಾತಿನಿಧಿಕ ಪ್ರಜಾಪ್ರಭುತ್ವವೆನ್ನುತ್ತಾರೆ. (೩) ವಾಕ್ ಸ್ವಾತಂತ್ರ್ಯ, ಮತ ಸ್ವಾತಂತ್ರ್ಯ ಮೊದಲಾದ ವೈಯಕ್ತಿಕ ಅಥವಾ ಸಾಮೂಹಿಕ ಅಧಿಕಾರಗಳನ್ನು ಅಲ್ಪಸಂಖ್ಯಾತರು ಅನುಭವಿಸಲು ಅವಕಾಶವಿರುವಂತೆ ಸಂವಿಧಾನದ ಚೌಕಟ್ಟಿನೊಳಗೆ ಬಹುಸಂಖ್ಯಾಕರ ಅಧಿಕಾರ ಚಲಾಯಿಸುವಂತಹ ಪ್ರಾತಿನಿಧಿಕ ಪ್ರಜಾಪ್ರಭುತ್ವ ಮಾದರಿಯ ಸರಕಾರ. ಇದನ್ನು ಉದಾರ ಅಥವಾ ಸಾಂವಿಧಾನಿಕ ಪ್ರಜಾಪ್ರಭುತ್ವವೆನ್ನುತ್ತಾರೆ. (೪) ಮುಖ್ಯವಾಗಿ ಖಾಸಗಿ ಸಂಪತ್ತಿನ ಅಸಮ ವಿತರಣೆಯಿಂದ ಉಂಟಾಗುವ ಸಾಮಾಜಿಕ ಮತ್ತು ಆರ್ಥಿಕ ವ್ಯತ್ಯಾಸಗಳನ್ನು ಕಡಿಮೆಗೊಳಿಸುವುದಕ್ಕಾಗಿ ಏರ್ಪಟ್ಟ ರಾಜ್ಯಕೀಯ ಅಥವಾ ಸಾಮಾಜಿಕ ವ್ಯವಸ್ಥೆ—ಮೊದಲಿನ ಮೂರು ಅರ್ಥಗಳಲ್ಲಿ ಅನ್ವಯಿಸದೆ ಇರುವ ಸರಕಾರವಿದು. ಇದನ್ನು ಸಾಮಾಜಿಕ ಅಥವಾ ಆರ್ಥಿಕ ಪ್ರಜಾಪ್ರಭುತ್ವವೆನ್ನುತ್ತಾರೆ. (ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ—ಸಂಪುಟ ೭)

ಪ್ರಸಿದ್ಧ ರಾಜ್ಯಕೀಯ ತತ್ವಜ್ಞಾನಿಗಳು "ಪ್ರಜಾಪ್ರಭುತ್ವ"ದ ಪರಿಭಾಷೆಯನ್ನು ತಮ್ಮದೇ ಆದ ರೀತಿಯಲ್ಲಿ ಹೇಳಲು ಪ್ರಯತ್ನಿಸಿದ್ದಾರೆ. ಪ್ರಜಾಪ್ರಭುತ್ವದ ಒಂದಲ್ಲ ಒಂದು ದೃಷ್ಟಿಕೋನಕ್ಕೆ ಪ್ರಾಧಾನ್ಯ ನೀಡಿದ್ದಾರೆ.

ಸಮಾನತೆ ಮತ್ತು ಸ್ವಾತಂತ್ರ್ಯಗಳಿರುವ ಬಹುಸಂಖ್ಯಾಕರ ನಿರ್ಧಾರವೇ ಶಾಸನವಾಗುವ ರಾಜ್ಯವು 'ಪ್ರಜಾಪ್ರಭುತ್ವ'ವೆಂದು ಅರಿಸ್ಟಾಟಲ್ ವಿವರಿಸಿದಾನೆ.

ಜಾನ್‌ಲಾಕ್‌ನು ತನ್ನ ಎರಡನೆಯ ಪ್ರಬಂಧ 'ಆಫ್ ಸಿವಿಲ್ ಗವರ್ನ್‌ಮೆಂಟ್' (೧೬೯೦) ಎಂಬುದರಲ್ಲಿ ಹೀಗೆ ಹೇಳುತ್ತಾನೆ: "ವಿಶ್ವ—ಜೀವಿತ, ಆ—

(ಎಂಟನೇ ಪುಟ ನೋಡಿರಿ)

ತಾರತಮ್ಯವಿಲ್ಲ

ಯಾರೊಬ್ಬರಿಗೂ ವಿಶೇಷ ಹಕ್ಕು ಅಥವಾ ಏಕಸ್ವಾಮ್ಯ ಇರಕೂಡದು. ಜನತೆಯೊಂದಿಗೆ ಹಂಚಿಕೊಳ್ಳಲಾಗದ ಯಾವುದೂ ನನಗೆ ಸಲ್ಲದು.



('ಹರಿಜನ', ನವೆಂಬರ 2, 1938)

ಮಹಾತ್ಮಾ ಗಾಂಧಿ



ಯಶೋಧರ ಚರಿತೆಯಲ್ಲಿನ ಸ್ತ್ರೀಪಾತ್ರಗಳು

ಕವಿರತ್ನತ್ರಯರಲ್ಲೊಬ್ಬನಾದ ಜನ್ನನ ಯಶೋಧರ ಚರಿತೆ ಮೇರುಕೃತಿಗಳ ಸಾಲಿನಲ್ಲೇನೋ ಸೇರುತ್ತದೆ. ಅಹಿಂಸೆಯನ್ನು ಪ್ರತಿಪಾದಿಸುವ ಕಾವ್ಯವೆಂಬುದರಿಂದ, ಜನ್ನನ ಶಕ್ತಿಪೂರ್ಣ ಲೇಖನಿಯಿಂದ ಮೂಡಿಬಂದ ಕೃತಿಯೆಂಬುದರಿಂದ ಇದು ಸತ್ಯವಿರಬಹುದು; ಆದರೆ, ಯಶೋಧರ ಚರಿತೆಯಲ್ಲಿ ಜನ್ನನು ಸ್ತ್ರೀವರ್ಗವನ್ನು ಹೀನಾಯವಾಗಿ ಮಾಡಿದ್ದಾನೆ, ಕುಲೀನವಂಶೋದ್ಭವೆ, ಯಶೋಧರ ಮಹಾರಾಜನ ಮನಮೆಚ್ಚಿನ ರಾಣಿಯಾಗಿದ್ದಾಕೆಯು [illegible] ಗಾನವೊಂದರಿಂದ ಪ್ರಭಾವಿತಳಾಗಿ ಬೀದಿರತಿಯಾಗಿ ಬಿಟ್ಟಳೆನ್ನುವುದು ಸಮಂಜಸವೆ? ಇದು ವಾಸ್ತವಿಕತೆಗೆ ದೂರ ಮಾತ್ರವಲ್ಲ, ಕವಿಯ ಅತೃಪ್ತ ಪ್ರೇಮದ ಪ್ರತೀಕಾರವೇ ಏಕಿರಬಾರದು?

ಶ್ರೀಮತಿ ವಸಂತಕುಮಾರಿ.

ಕನ್ನಡ ಸಾಹಿತ್ಯವನ್ನು ಬೆಳಗಿದ ಕನ್ನಡ ಕವಿಗಳಲ್ಲಿ ಮಹಾಕವಿ ಜನ್ನನೂ ಒಬ್ಬನೆನ್ನುವುದರಲ್ಲಿ ಸಂದೇಹವಿಲ್ಲ. ಈತನು ತನ್ನನ್ನು ಅಸಹಾಯ ಕವಿ, ನವ ವೈಯಾಕರಣಿ, ಕವಿ ಚಕ್ರವರ್ತಿ, ಕವಿರಾಜಶೇಖರ, ಚತುರ್ವಿಧ ಪಂಡಿತ, ತರ್ಕ ವಿನೋದ, ಭರತ ಸುರತ ಶಾಸ್ತ್ರವಿಳಾಸ, ಚದುರ ನಿಧಿ, ಚಲದ ನೆಲೆ, ಚಾಗದಾಗರ, ಪೆಂಪಿನ ಸಂಪದ, ಅಣ್ಣನಾಗರ, ಉಜ್ವಲ ಯಶ, ಸೌಭಾಗ್ಯ ಸಂಪನ್ನ ಜನಾರ್ದನ ದೇವನೆಂದು ಹಲವು ವಿಧಗಳಿಂದ ತನ್ನನ್ನು ಸಂಬೋಧಿಸಿ ಕೊಂಡದನ್ನು ಕಂಡರೆ, ಈತನಂತೆ ಆತ್ಮ ಪ್ರಶಂಸಾಪ್ರಿಯನಾದ ಕವಿಯು ಕನ್ನಡ ಸಾಹಿತ್ಯ ಪ್ರಪಂಚದಲ್ಲೇ ತುಂಬಾ ವಿರಳವೆನ್ನಬೇಕು. ಮೇಲಿನ ಬಿರುದುಗಳಲ್ಲಿ ಆತನಿಗೆ ಕೆಲವು ರಾಜನಿಂದ ಪ್ರಾಪ್ತವಾಗಿದ್ದರೂ ಹೆಚ್ಚಿನವುಗಳೆಲ್ಲಾ ಸ್ವಕಪೋಲ ಕಲ್ಪಿತವಾದ ಆತ್ಮ ಪ್ರಶಂಸೆಯ ಪ್ರದ್ಯೋತಕಗಳು. ಜನ್ನನು ಕವಿತಾ ಶಕ್ತಿಯಲ್ಲಿ ಚಕ್ರವರ್ತಿಯೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಅವನಿಗೆ ಭರತ ಸುರತ ಶಾಸ್ತ್ರ ವಿಳಾಸ, ಪೆಂಪಿನ ಸಂಪದ, ಚಲದ ನೆಲೆ, ಅಣ್ಣನಾಗರ ಮೊದಲಾದ ಹೆಸರುಗಳು ಅಪ್ರಸ್ತುತವಾದ ಪರ ಹಿನ್ನೆಲೆ ಯಾವುದು? ಇವು ಅವನ ಉಜ್ವಲ ಯಶಸ್ಸಿಗೆ ಪೋಷಕವಾಗಬಲ್ಲವೇ? ಅಥವಾ ಕವಿಯು ತನ್ನ ಸ್ಥಿರ ಕೀರ್ತಿಯಲ್ಲಿ ಅಪರಿತೃಪ್ತನಾಗಿ ಚಡಪಡಿಸುತ್ತಿದ್ದನೇ? ಇಲ್ಲದೇ ತನ್ನ ಹಿಂದಿನ ಯಾವನೋ ಮಹಾ ಕವಿಯ ವ್ಯಕ್ತಿತ್ವಕ್ಕೆ ಎಡೆಯಿಲ್ಲವೆಂಬ ಅಸಂತೃಪ್ತಿಯ ಗೊಂದಲದ ಪರಿಣಾಮವೇ ಈ ಬಿರುದು ಬಾವಲಿಗಳ ಹಾರಾಟವಿರಬಹುದೇ? ಹೇಗೂ ಇರಲಿ. ಪೂರ್ವ ಕವಿಗಳಲ್ಲಿ ಪ್ರಸಿದ್ಧನಾದ [illegible]ನು ಜನ್ನನ ಕವಿತ್ವದ ಹಿಂದಾಟವನ್ನು ಕಂಡು "ಕರ್ನಾಟಕ ಕೃತಿಗೆ ಸೀವಿನ ಪೂರಕಂ" ಎಂದು ಆತನ ಆತ್ಮತೃಪ್ತಿಗಾಗಿ ದೊಡ್ಡದೊಂದು ಉಡುಗೊರೆಯನ್ನಿತ್ತು, ಈತನೂ ಆ ಕವಿಯ ಪರಮ ಭಕ್ತನೆಂಬುದನ್ನು ಒಪ್ಪಿಕೊಂಡಿದ್ದಾನೆ. ಇಷ್ಟಿದೆ, ಕರ್ನಾಟಕ ಕವಿ ಪರಂಪರೆಯಲ್ಲಿ ಆ ಬಿರುದಿಗೆ ಯೋಗ್ಯನಾದ ಕವಿ ಯಾರು?—ಎಂದು ವಿವೇಚನೆ ನಡೆಸಿದಂತೆ ತೋರುವುದಿಲ್ಲ. ಈ ಮಹಾ ಕವಿ ಜನ್ನನ ಉಲ್ಲೇಖ ಉತ್ಪ್ರೇಕ್ಷಾದಿ ಅಲಂಕಾರಗಳು ಸಮಯೋಚಿತವಾಗಿರುವುದು. ಉದ್ದಾಮವಾದ ಅಭಿಪ್ರಾಯಗಳನ್ನು ಸಂಗ್ರಹಿಸಿ ಹೃದಯಂಗಮವಾಗಿ ಹೇಳುವ ಚಾತುರ್ಯವು ಈತನಲ್ಲಿ ವಿಶೇಷವಾಗಿರಬಹುದು. ಆದರೆ ಅಮೌಲ್ಯವಾದ ರತ್ನಕ್ಕೇ ತನ್ನ ಯೋಗ್ಯತೆಯಲ್ಲಿ ಪರಿಪೂರ್ಣ ತೃಪ್ತಿ ಇರದುದೊಂದು ಆ ರತ್ನದ ದೋಷವೆಂದೇ ಹೇಳಬೇಕಾಗುತ್ತದೆ. ಅದರ ಪ್ರಕಾಶ ಪ್ರಭಾವಗಳನ್ನು ಲೋಕವೇ ಬೆರಗುಗಣ್ಣಿನಿಂದ ನೋಡಬೇಕಾದಾಗ, ಅದು ಸ್ವತಃ ತನ್ನ ಯೋಗ್ಯತೆಯ ಪ್ರಚಾರಕ್ಕಾಗಿ ಅಂಥ ಘೋಷಣ ನಡೆಸುವುದೇತಕೆ? ಜನ್ನನಿಗೆ ಕವಿತಾ ಶಕ್ತಿಯೊಡನೆ ಖಡ್ಗದ ಶಕ್ತಿಯನ್ನೂ ವಿಧಾತನು ಪಾರಿತೋಷಕವಾಗಿ ಇತ್ತಿರುವಾಗ ಆತನಿಗೆ ಅಧಿಕ ಪ್ರಸಂಗವು ಬೇಕಿದ್ದಿಲ್ಲ. "ಅರೆಮುಲ್ ವೋಣ್ ಮಚ್ಚರದಿಂ ಕರೆಯಲ್ ವೇಣ್ ಕೈಗೆ ಪಲಗೆ ಸಿರೆ ಕಾವ್ಯಕಲಾ ಪರಿಣತಿಯೆಳ್ ಖಳ ಕಳಾ ಪರಿಣತಿಯೊಳ್ ಭಾಳನೇತ್ರನೆನಿಪನ್ ಜನ್ನನ್" ಇಂತಹ ಸವ್ಯಸಾಚಿತನವು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಸು. ನಾಲ್ಕೈದು ಮಂದಿಗೆ ಮಾತ್ರ ಸಾಧಿಸಿದೆಯಷ್ಟೆ. ಜನ್ನನು ಇವರೆಲ್ಲರನ್ನೂ ಮೀರುವ ಹಂಬಲದಿಂದ ಆತ್ಮ ಪ್ರಶಂಸೆಯ ಮಾರ್ಗವನ್ನು ಹಿಡಿದಿರಬಹುದೇ?

ಜನ್ನನಲ್ಲಿ ಕಾಣಿಸಿಕೊಂಡ ಈ ಹೆಗ್ಗಳಿಕೆಯ ದೌರ್ಬಲ್ಯವು ಪಂಪರನ್ನರಲ್ಲೂ ಕಾಣದಿಲ್ಲ. ಕವಿಯ ದಿವ್ಯಶಕ್ತಿಯ ಸೌರಭವು ಆತನ ಕಾವ್ಯ ಕುಸುಮದಿಂದ ಹೊರ ಹೊಮ್ಮಬೇಕಲ್ಲದೆ—ವಿಮರ್ಶಕರ ಪ್ರತಿಭೆಯಿಂದ ಬೆಲೆ ಕಟ್ಟಲ್ಪಡಬೇಕಲ್ಲದೆ—ಹೆಗ್ಗಳಿಕೆಯ ಹೊಣ್ಣಾಲೆಯಿಂದ ಬೆಲೆಯೇರಿಸಿಕೊಳ್ಳುವ ಹೊಣ್ಣುಟವು ಯಾವ ಕವಿಗೂ ಭೂಷಣವಲ್ಲ. ಮಿತಿ ಮೀರಿದ ಕಾವ್ಯದ ಕೆಚ್ಚು ಮಹಾ ಕವಿಗಳನ್ನೂ ಗಳಹರನ್ನಾಗಿ ಮಾಡುವ ಸಂಭವ ಉಂಟೆನ್ನುವ ಪಕ್ಷಾಂತರದಲ್ಲರೂ ಬಲ್ಲವರು ಅದನ್ನು ಕವಿಯ ದೌರ್ಬಲ್ಯವೆಂದೇ ಪರಿಭಾವಿಸುತ್ತಾರೆ. ವಸ್ತುಶಃ ಕುಸುಮಕ್ಕೂ ತನ್ನ ಪರಿಮಳ ಪ್ರಸಾರದಲ್ಲಿ ಉತ್ಸುಕತೆ ಏಕೆ?

ಮಹಾಕವಿ ಜನ್ನನ ಹೆಸರು ಕನ್ನಡ ಸಾಹಿತ್ಯದಲ್ಲಿ ಅಜರಾಮರವಾದದ್ದು. ಆತನ ಸರಳವಾದ, ತಿಳಿಯಾದ, ಮುದ್ದಾದ ಶೈಲಿಯನ್ನು ಕಂಡ ಕಾವ್ಯವೆನಿಸಿದ ಯಶೋಧರ ಚರಿತೆಯಿಂದ ಮಾತ್ರ 'ನರಸಿಂಹ ಚಾಳುಕ್ಯ ಕುಲೋದ್ಧರಣನ ಸರ್ವಜ್ಞ ಭೂಪನೋಲಗದೊಳ್ ಕಂದಿರೆ ದಂಡಾಧೀಶಂ, ಕುಲ್ಯದ ಮಂತ್ರಿ, ತೊಡರ್ಕವಿ ಜನಾರ್ದನ ದೇವಂ' ಎಂದು ಅನಂತನಾಥ ಪುರಾಣದಲ್ಲಿ ಹೇಳಿದಂತೆ ಈತನು ಕವಿಲೋಕದಲ್ಲಿ ಮಾತ್ರ ಗೌರವಾರ್ಹನಾಗಿದ್ದನು. ಮಂತ್ರಿ, ದಂಡಾಧೀಶತನವೂ ಅವನ ಖ್ಯಾತಿಯನ್ನು ಹೆಚ್ಚಿಸಿದ್ದುವು. ಈತನ 'ನಾಲ್ಪ್ರಭು' ಎಂಬ ಬಿರುದೂ, ಅದಕ್ಕೆ ತಕ್ಕ ಯೋಗ್ಯತೆಯೂ ಆತನ ವಿದ್ವತ್ ಶೋಭಿತವಾದ ವಂಶವೂ, ಅಂಡಯ್ಯ, ಕಮಲಭವ, ಮಲ್ಲಿಕಾರ್ಜುನ, ಕುಮುದೇಂದು, ಮಧುರ ಮೊದಲಾದ ಕವಿಶ್ರೇಷ್ಠರಿಂದ ಕೀರ್ತಿಸಲ್ಪಟ್ಟದ್ದೂ ಆತನ ಅಪಾರ ಯಶಸ್ಸಿನ ಕುರುಹಾಗಿರಬೇಕು. ಆತನ ವಂಶವೇ ಆ ಕಾಲದಲ್ಲಿ ವಿದ್ವಾಂಸರ ಸಮಾಲೋಚನೆಯ ಒಂದು ಸಮಸ್ಯೆಯಾಗಿತ್ತು.

....ಕವಿ ಸುಮನೋಬಾಣನೆಂದು ಬಿರುದಾಳ್ದ ಶಂಕರನು ಈತನ ತಂದೆ; ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದ ಎರಡನೇ ನಾಗವರ್ಮನು ಈತನ ಗುರು; ಶಬ್ದಮಣಿದರ್ಪಣವೆಂಬ ವ್ಯಾಕರಣವನ್ನು ಬರೆದ ಕೇಶಿರಾಜನು ಈತನ ಸೋದರಳಿಯನು. ಈತನ ಪತ್ನಿಯು ದಂಡಾಧೀಶನಾಗಿದ್ದ ರೇಚಾಂಕನ ಮಗಳು. ಇಂತಹ ಜನ್ಮದಿಂದಲೇ ಯಶೋಲಭ್ಯವಾಗುವ ಸುಯೋಗವಿದ್ದ ಜನ್ನನಿಗೆ ಆತ್ಮಪ್ರಶಂಸೆಯಿಂದಾಗಬೇಕಾದ್ದೇನೂ ಇಲ್ಲ.

ಜನ್ನ ಕವಿಯ ಲಲಿತವಾದ ಪದಬಂಧವು ಮೋಹಿಸಿದಂತಿದೆ. ಈತನ ಪದ ಪ್ರಯೋಗದಲ್ಲಿ ಸ್ವಲ್ಪವೂ ಶ್ರಮ ಕಾಣುವುದಿಲ್ಲ. ಚತುರ್ಭಾಷಾ ಚಕ್ರವರ್ತಿ ನೇಮಿಚಂದ್ರನ ಕಾವ್ಯಗಳಲ್ಲೂ ಈತನ ಕಾವ್ಯದ ಧಾಟಿಯನ್ನು ನಾವು ಕಾಣಲಾರೆವು. ಇವನು ಅಮರ ಕವಿಯೆಂದು ಇದೆಲ್ಲಾ ಸಾಧಿಸಬಲ್ಲವು. ಈತನ ಭವಿಷ್ಯವು ಪಂಪ, ರನ್ನರಂತೆ ಉಜ್ವಲವಾಗಲು ಯಾವ ತಡೆಯೂ ಇರಲಿಲ್ಲ.

ಜನ್ನನಿಗೆ ಯಶೋಧರ ಚರಿತೆಯನ್ನು ಬರೆಯುವಾಗ ಅಹಿಂಸಾ ತತ್ವವನ್ನು ಪ್ರಸಾರ ಮಾಡುವುದೇ ಮುಖ್ಯ ಉದ್ದೇಶವಿತ್ತು. 'ನಹಿಂಸ್ಯಾತ್ಸರ್ವ ಭೂತಾನಿ' 'ಅಹಿಂಸಾ ಪರಮೋ ಧರ್ಮಃ' ಎಂಬ ಸೂತ್ರಗಳ ವ್ಯಾಖ್ಯಾನವೇ ಯಶೋಧರ ಚರಿತೆಯಾಗಬೇಕೆಂಬುದಕ್ಕೂ, ಮಾನಸಿಕ ಪಾಪವು ಕೂಡ ಮನುಷ್ಯನನ್ನು ಜನ್ಮಾಂತರದಲ್ಲಿ ಕಾಡಿಸಿ ಅನರ್ಥಪಡಿಸುವುದಕ್ಕೆ ಸಾಧನವಾಗುವುದೆಂದು ನಿರೂಪಿಸುವುದಕ್ಕೂ ಈ ಕಾವ್ಯದ ಕಥಾ ಗರ್ಭವು ಸಹಾಯ ಮಾಡಬೇಕೆಂಬುದೂ ಕವಿಯ ಉದ್ದೇಶವಾಗಿದ್ದರೂ ಕವಿಯು ಕಥಾ ವಸ್ತುವಿನಲ್ಲಿ ಸ್ತ್ರೀ ಪ್ರಪಂಚಕ್ಕೆ ಮಾಡಿದ ಅನ್ಯಾಯ ಮಾಡಿದುದೆಂದು ಆತನ ಕಾವ್ಯದಲ್ಲಿ ಕಾಣಬರುವಂದಾಗಿತ್ತು. ಸಂಸ್ಕೃತ ಯಶೋಧರ ಚರಿತೆಯು ಕವಿ [illegible] ದಿರಾಜನ ಸೊಬಗಿನ ಲೇಖನಿಯನ್ನು ಈತನ ಕಲಾವಂತ ಕುಂಚವಾಗಿ ತಿದ್ದಬಹುದಿತ್ತು.

ಜನ್ನನ ಉತ್ತಮ ಕಾವ್ಯಗಳಲ್ಲೊಂದೆ ಪ್ರಸಿದ್ಧ ಯಶೋಧರ ಚರಿತೆಯು ಪರಿಶುದ್ಧ ಸುಸಂಪನ್ನವಾದ ಕಾವ್ಯವೆಂದು ಹೆಸರುಗಳಿಸಿದುದು ಎಷ್ಟು ಸತ್ಯವೋ, ಆತನಿಗೆ ಸ್ತ್ರೀ ಹೃದಯ ಪರಿಜ್ಞಾನದ ಅಭಾವದೊಡನೆ ಆತನ ಹೃದಯ ಕುಸಂಸ್ಕಾರದ ತೂಕವನ್ನು ಸಾರುವುದೂ ಅಷ್ಟೇ ಸತ್ಯ. 'ಭರತ ಸುರತ ಶಾಸ್ತ್ರ ವಿಳಾಸ'ನೆಂಬುದು ಈತನಿಗೆ ಸಾರ್ಥಕವಾದ ಹೆಸರಲ್ಲವೆಂಬುದನ್ನು ಯಶೋಧರ ಚರಿತೆಯ ಅಮೃತಮತಿಯ ಪಾತ್ರವು ಸ್ಪಷ್ಟಪಡಿಸುತ್ತದೆ. ಭಾರತ ಸಂಸ್ಕೃತಿಯಲ್ಲಿ 'ಮಾಧವನ ಭಕ್ತಿಗೆ ಮತ ಭೇದವುಂಟು. ಆದರೆ ಪತಿ ಭಕ್ತಿಯ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ" ಎಂಬುದು ಜನ್ನನಿಗೆ ತಿಳಿದಿದ್ದರೂ ಅಮೃತಮತಿಯ ಯಾವ ಗುಣ ವೈಭವಗಳನ್ನು ಎತ್ತಿ ಹಿಡಿಯುವುದಕ್ಕಾಗಿ ತನ್ನ ಕಾವ್ಯದಲ್ಲಿ ಆಕೆಯ ಜೀವನವನ್ನು ಚಿತ್ರಿಸಿದ್ದಾನೆಂಬುದನ್ನು ಯಾರೂ ಹೇಳುವಂತಿಲ್ಲ. ಶ್ರೀಮನ್ಮಹಾ ಭಾರತದ ವನ ಪರ್ವದ ದ್ರೌಪದೀ ಸತ್ಯಭಾಮಾ ಸಂವಾದ ಪರ್ವದಲ್ಲಿ (ಅಧ್ಯಾಯ ೨೩೩) ದ್ರೌಪದಿಯು ಹೇಳುವ ಪತಿವ್ರತಾ ಧರ್ಮವು ಕೇವಲ ಕವಿ ಕಲ್ಪನೆಯಲ್ಲ. ಅದು ಭಾರತದ ನಾರೀವೃಂದದ ಹೃದಯ ಧರ್ಮ! ಭಾರತದ ಸ್ತ್ರೀ ಸಂಸ್ಕೃತಿಯ ಪ್ರತೀಕ! ಇದನ್ನೂ ಜನ್ನನು ಮನನ ಮಾಡಿಕೊಳ್ಳಬೇಕಿತ್ತು. "ನಾಸ್ತಿ ಭಾರ್ಯಾ ಸಮಂ ಮಿತ್ರಂ ನರಸ್ಯಾರ್ತಸ್ಯ ಭೇಷಜಂ" ದೈನ್ಯ ಹೊಂದಿದ ಮನುಷ್ಯನಿಗೆ ಹೆಂಡತಿಗೆ ಸಮಾನವಾದ ಸ್ನೇಹಿತನಾಗಲಿ ಉಪಾಯವೂ ಬೇರೆ ಯಾವುದೂ ಇಲ್ಲ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂಬ ಮನುವಿನ ಸ್ತ್ರೀ ಚಿತ್ರವು ಜನ್ನನ ಬಣ್ಣದ ಕುಂಚದಿಂದ ರೇಖಿಸಲ್ಪಡದೇ ಹೋದುದಕ್ಕೆ ಕನ್ನಡಿತಿಯರು ಆತನ ವ್ಯರ್ಥ ಸಾಹಸಕ್ಕೆ ಅನುತಾಪ ಪಡಬೇಕಾಗಿದೆ.

ಜನ್ನ ಕವಿಯು ಭಾರತೀಯ ಸ್ತ್ರೀ ಸಂಸ್ಕೃತಿಯ ಧ್ವಜಪಟಗಳೆನ್ನಿಸಿದ ಸೀತಾ ಸಾವಿತ್ರಿ ಅರುಂಧತಿಯಂತಹ ಸ್ತ್ರೀ ಪಾತ್ರದಿಂದ ತನ್ನ ಕಾವ್ಯವನ್ನು ಗೌರೀ ಶಂಕರ ಶಿಖರಕ್ಕೇರಿಸುವ ಬದಲು 'ಚಿತ್ರಮಾತ್ರೇ ರಮತೀ ನಾರೀ' ಎಂಬ [illegible] ಕಾಮಣ್ಣರ ಸೂತ್ರವನ್ನೇ ನಂಬಿ ತನ್ನ ಯಶೋಧರ ಚರಿತೆಯ ಪ್ರಧಾನ ನಾಯಿಕೆಯಾದ ಅಮೃತಮತಿಯ ನರಕ ಜೀವನದ ಚಿತ್ರದಿಂದ "ಜನ್ನಿಗನ ಸಹಾಯ ಸುಕವಿ" ಎಂದು ಜಯಭೇರಿ ಹೊಡೆಸಿಕೊಂಡದಕ್ಕೂ, ನಾವು ನಾಗರಿಕ ಜಗತ್ತಿನಲ್ಲಿ ಕಾಣಲಾಗದ, ಪಶುಗಳೂ ಉಗುಳುವ ವ್ಯಭಿಚಾರೀ ಸ್ತ್ರೀಯ ಹೊಲಸು ಜೀವನ ಚಿತ್ರಕ್ಕೆ ತನ್ನ ಪ್ರತಿಭೆ ಮತ್ತು ಕಾವ್ಯದ ನಿಪುಣವಾದ ಶಕ್ತಿಯನ್ನು ಪೋಲು ಮಾಡಿದನೆಂದರೆ ಯಾವ ಧರ್ಮವನ್ನು ಸಾಹಿತಿಯು ಕಣ್ಣೀರು ಸುರಿಸದಿರನು? ಅಮೃತಮತಿಯು ವೇಶ್ಯಾ ಸಂಪ್ರದಾಯದವಳಾಗಿದ್ದರೂ ಆಕೆಯು ಜನ್ನನು ವರ್ಣಿಸಿದ್ದ ವಿಧವನ್ನೆಂದೂ ಮೆಚ್ಚಲಾರಳು. ಆಕೆಗೂ ಕಣ್ಣು ಮಿದುಳುಗಳವೆಯೆಂಬುದನ್ನು ಕವಿಯು ಯೋಚಿಸಬೇಕಿತ್ತು. ಆದರೆ ಕಾವ್ಯದ ಅಮೃತಮತಿಯು ಉತ್ತಮ ಕುಲಜಾತೆ, ಜನಮೋಹನ ಬಾಣನಾದ ಯಶೋಧರನ ಧರ್ಮಪತ್ನಿ; ಅಲ್ಲದೆ ಆತನ ಮನಃಪ್ರಿಯೆ; ಅವನ ಮಿಡಿತಗಳ ಒಲವಾಗಿದ್ದಳು!

ಯಶೋಧರನು ಸುಂದರನು; ಕೀರ್ತಿಶಾಲಿ; ನಿಜ ವಿಜಯ ತೇಜೋಬಲದಿಂದ ಪರನೃಪರ ಗಂಡುಗಾಳಿಕೆಯನ್ನು ಕಳೆದವನು, ಆತನು ನೋಡುವ ಕಂಗಳ ಸಿರಿ

[illegible]

ಗಾಂಧೀಜಿ
ಅಮರವಾಣಿ

ಜೀವನದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ವಿದ್ಯಾರ್ಥಿಗಳು ಸಮರ್ಥರಾಗಬೇಕು. ಇಂತಹ ಸಾಮರ್ಥ್ಯವನ್ನು ಬೆಳೆಸುವಂತಹ ಶಿಕ್ಷಣವೇ ಅವರಿಗೆ ಅವಶ್ಯ.

○ ○ ○

ಹಣದ ಒಪ್ಪಿಗೆ ಪಡೆದೇ ಹುಡುಗಿಗಾಗಿ ಅಥವಾ ಇತರ ಲಾಭಗಳಿಗಾಗಿ, ತಂದೆ-ತಾಯಿಗಳು ಅವಳ ಮದುವೆ ಮಾಡಿಕೊಟ್ಟರೆ, ಆ ಹುಡುಗಿಗೆ ಮದುವೆಯಾದವಳೆಂದು ನಾನು ಭಾವಿಸುವುದಿಲ್ಲ.

○ ○ ○

ಅನ್ಯಾಯಪೂರಿತ ಕಾನೂನುಗಳಿಗೆ ವಿಧೇಯತೆ ತೋರುವುದು ಹೇಡಿತನದ ಲಕ್ಷಣವಲ್ಲ. ಈ ತಿಳುವಳಿಕೆ ಪ್ರಾಪ್ತವಾದ ವ್ಯಕ್ತಿ ಎಂತಹ ಕ್ರೌರ್ಯಕ್ಕೂ ಮಣಿಯುವುದಿಲ್ಲ!

○ ○ ○

ಸತ್ಯವೇ ನಮ್ಮ ಬಾಳಿನ ಉಸಿರಾಗಬೇಕು.

○ ○ ○

ಇಂದಿನ ಗಳಿಗೆ ನಾಳೆಗಾಗಿ. ಸತ್ಯಶೋಧಕ, ಮತ್ತು ಪ್ರೇಮಶಾಪದ ಆಶ್ರಯಿ ನಾಳೆಗೆಂದು ಯಾವ ಕೆಲಸವನ್ನೂ ಮುಂದೆ ದಬ್ಬಾರದು.

○ ○ ○

ಹಿಂದೂಗಳು ಅಸ್ಪೃಶ್ಯತೆಯನ್ನು ತ್ಯಜಿಸಲೇ ಬೇಕು.

○ ○ ○

ಸತ್ಯಾಗ್ರಹಿ ಅಖಂಡ ಸಹನೆಗೆ ಮೂರ್ತಿ, ಅಗಾಧವಾದ ವಿಶ್ವಾಸವುಳ್ಳವ. ಅತ್ಯಂತ ಆಶಾವಾದಿ.

○ ○ ○

ಧರ್ಮಮಾರ್ಗದಲ್ಲಿ ನಡೆಯುವವರು ಕಷ್ಟಪಡಲೇ ಬೇಕಾಗುತ್ತದೆ.

○ ○ ○

ಜಗತ್ತನ್ನೇ ಗೆದ್ದು, ಆತ್ಮವನ್ನು ಕಳೆದುಕೊಂಡರೆ ಅದರಿಂದ ಏನು ಪ್ರಯೋಜನ?

○ ○ ○

ನಾವೆಲ್ಲರೂ ಒಬ್ಬನೇ ಸೃಷ್ಟಿಕರ್ತನ ಮಕ್ಕಳು. ಕಾರಣ ಎಲ್ಲರಲ್ಲೂ ದೈವಾಂಶವಿದೆ.

○ ○ ○

ಔದಾರ್ಯ ಮತ್ತು ವಿನಮ್ರತೆ ಇವೆರಡೂ ವಿಚಾರಪೂರಿತವಾಗಿರಬೇಕಲ್ಲದೇ, ತರ್ಕಬದ್ಧವಾಗಿರಬೇಕು.

○ ○ ○

ಸ್ವಸಹಾಯವೇ ಶ್ರೇಷ್ಠ ಸಹಾಯ.

○ ○ ○

ಆತ್ಮ ಸಂಯಮಕ್ಕಾಗಿ ಯತ್ನಿಸುವವರಿಗೆ ಆಹಾರ ನಿರ್ಬಂಧ ಮತ್ತು ಉಪವಾಸ ಹೆಚ್ಚು ಸಹಾಯಕಾರಿ: ಇದು ಅನುಭವದಿಂದ ನಾನು ಕಲಿತ ಪಾಠ

○ ○ ○

ಮಕ್ಕಳು ಕಣ್ಣಿನಿಂದ ನೋಡುವುದಕ್ಕಿಂತಲೂ, ಕಿವಿಯ ಮೂಲಕವೇ ಹೆಚ್ಚು ಸುಲಭವಾಗಿ ಗ್ರಹಿಸುತ್ತವೆ.

○ ○ ○

ಹೇಡಿಯಾದ ಶಿಕ್ಷಕನೆಂದೂ, ವಿದ್ಯಾರ್ಥಿಗಳಲ್ಲಿ ಶೌರ್ಯವನ್ನು ತುಂಬಲಾರ. ಅದೇ ರೀತಿ ಆತ್ಮಸಂಯಮವನ್ನೇ ಅರಿಯದ ವ್ಯಕ್ತಿ, ತನ್ನ ಅನುಯಾಯಿಗಳಿಗೆ ಅದರ ಮಹತ್ವವನ್ನು ಬೋಧಿಸಲಾರ.

○ ○ ○

ಮಕ್ಕಳನ್ನು ಸಾಧಾರಣ ಶಿಕ್ಷಕರ ವಶಕ್ಕೆ ಒಪ್ಪಿಸಬಾರದೆಂದೇ ನನ್ನ ಅಭಿಪ್ರಾಯ. ಶಿಕ್ಷಕರಾಗುವವರಿಗೆ ಶೈಕ್ಷಣಿಕ ಅರ್ಹತೆಗಿಂತಲೂ ನೈತಿಕ ಅರ್ಹತೆಯೇ ಹೆಚ್ಚು ಅವಶ್ಯ.

○ ○ ○

ಮಾನವೀಯ ಸಂಘ ಸಂಸ್ಥೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಮಾನವರ ಹೃದಯಕ್ಕೆ ಶಿಕ್ಷಣ ದೊರೆಯಬೇಕು,

○ ○ ○

ಅಸಮಾನತೆಗೆ ಕಲ್ಪನೆ, 'ಮೇಲು — ಕೀಳು' ಎಂಬ ಭಾವನೆ ಬರಕೂಡದು. ಬಯೋನೆಟ್ ಮೂಲಕವೇ ಈ ಕೆಡುಕು ನಿವಾರಣೆ ಆಗಬೇಕೆಂಬ ತತ್ವವನ್ನು ನಾನೆಂದೂ ಒಪ್ಪಲಾರೆ. ಮಾನವನ ಹೃದಯದಲ್ಲಿ ಇಂತಹ ಹಿಂಸೆಗೆ ಆಸ್ಪದ ನೀಡಬಾರದು.

○ ○ ○

ಮುಸಲ್ಮಾನರ ಸ್ನೇಹದಿಂದಲೇ ಗೋರಕ್ಷಣೆ ಮಾಡಬೇಕೆಂಬುದು, ಹಿಂದುಗಳ ಧಾರ್ಮಿಕ ನಿಯಮವಾಗಬೇಕು.

○ ○ ○

ಜೀವನದಲ್ಲಿ ಶಿಸ್ತು ಬರಬೇಕಾದರೆ ಉಪವಾಸ ಅತ್ಯವಶ್ಯವೆಂಬುದನ್ನು ಎಲ್ಲಾ ಧರ್ಮಗಳೂ ಒಪ್ಪಿಕೊಂಡಿವೆ

○ ○ ○

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O P. No. 263/67

N. M ಅಣ್ಣಯ್ಯ — ಅರ್ಜಿದಾರ.

ಮತ್ತು

ಉಗ್ಗಪ್ಪ ಶೆಟ್ಟಿ ಕೂಡಾ — ಎದುರು.

ಇವರೊಳಗೆ

37. Prema Shedthi d/o Paddu Shedthi Residing with Mahabala Shetty, 16, Satanam House, Station Road, Vile Parle, Bombay-5
46. Padmanabha Shetty s/o Channamma Shedthi Residing at Kamati Chawl, No. 6 Sunil Road, Lower Parel, Bombay-13.
42. Vinoda Shetty s/o Laxmi Shedthi, Residing at Naganthadi House of Nadugodu village, Mangalore Taluk.
64. Lalita Shedthi d/o Rathi Shedthi Residing with Babu Naik in Padumane House in Adypady village of Mangalore Taluk
66 Indira Shedthi d/o Rathi Shedthi Residing with Babu Naik in padumane House in Adypady village of Mangalore Taluk.
76. Sarojini Shedthi d/o Uggappa Shetty, Residing at Dota House in Hojabettu village, Mangalore Taluk.
75. Pushpa Shedthi d/o Uggappa Shetty, Residing at Kutyar Guttu House in Kutyar village, Udipi Taluk.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅರ್ಜಿದಾರರು ಆರ್ಬಿಟ್ರೇಟರ್ ಆಗಿ ತಾರೀಖು 20-12-'66ರಲ್ಲಿ ಕೊಟ್ಟ ಅವಾರ್ಡನ್ನು ಕೋರ್ಟಿನ ಡಿಕ್ರಿಯನ್ನಾಗಿ ಮಾಡಬೇಕಾಗಿ ಮೇಲಿನ ಅರ್ಜಿಯನ್ನು ಕೊಟ್ಟಿರುವುದರಿಂದ ಸದ್ರಿ ಅರ್ಜಿಯಲ್ಲಿ ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ತಾ. 24-2-1969ರಲ್ಲು ಹಗಲು 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ನೀವು ಹಾಜರಾಗಿ ಹಾಜರಾಗಿರುವುದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿ ತೀರ್ಮಾನ ಮಾಡಲಾಗುತ್ತದೆ ಎಂಬ ಸಂಗ್ತಿ ನಿಮಗೆ ಈ ಮೂಲಕ ತಿಳಿಸಲಾಗಿದೆ.

B. Ananda Shetty,
Advocate for Petitioner.

Udipi. Dated 31-1-1969.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex C. 635/1968, ಒ. ಎ. 318/1963.

ಕೆ. ಆರ್. ಆಚಾರ್ — ವಾದಿ, ಅರ್ಜಿದಾರ

ಕುಕ್ಕಪ್ಪ ಗೌಡ ಕೂಡಾ — ಎದುರು.

ಸದ್ರಿ ವ್ಯವಹಾರದ ೩ನೇ ಎದುರು ಪುತ್ತೂರು ತಾಲ್ಲೂಕು ಬಳ್ನ ನೇರಂಕಿ ಗ್ರಾಮದ ದ್ಧಿಕರ್ ಕುಞ ಗೌಡರ ದಂಡು, ಬಾಲಕೃಗೆ. ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ಅಮಲ್ದಾರಿಯಲ್ಲಿ ಮೃತ ಕುಂಬ ಗೌಡರ ವಾರಿಸ್ದಾರರೆಂದು ನಿಮ್ಮನ್ನು ಸಹಾ ಪಕ್ಷಿಯಲ್ಲಿ ಸೇರಿಸಿ, ಮೃತನ ಬಾಬ್ತು ಸ್ವತ್ತನ್ನು ಏಲಂ ಮಾಡುವರೆ ಸದ್ರಿ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ತಾ. 18-2-1969ನೇ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

(ಕೋರ್ಟಿನ ಹುಕುಂ ಪ್ರಕಾರ)

S. Soorappaya,
Vakil for Petitioner.

Camp. Puttur. 23-1-1969.

LEGAL NOTICE.

In the court of the II Addl. Munsiff, Puttur, S. Kanara.

O S. 416/1968

K. Kechappa Hegde ... Plaintiff

Vs

K. Dharmapala Hegde ... Defendant.

Notice to defendant K. Dharmapala Hegde, nephew of Poovan Hegde, residing in Kayarmajalu, Kabaka village, Puttur taluk, Post Kabaka S Kanara

Please take notice that the above suit against you for recovery of moneys claimed in the suit is posted to 19—2—1969 for your appearance If you fail to appear at 11-00 A. M on the said date in above court the suit will be decided in your absence.

(By order of court)

K. Raghunath Rai,
Advocate for Plaintiff.

Puttur, S. K. D. 28.1-1969.

Each one with a Specialty

SYNDICATE BANK

presents a variety of

SECURITY SAVINGS SCHEMES

Choose from the following:

and

secure your future

ONE
GIANT CASH CERTIFICATES
Maturity period 5 years

TWO
CHILDREN'S WELFARE SECURITY CERTIFICATES
Maturity period extends 13 years

THREE
RETIREMENT SECURITY CERTIFICATES
Maturity period extends 20 years

FOUR
AUTOMATIC EXTENSION DEPOSITS
Deposits renewed Automatically on Maturity

FIVE
ESTATE DUTY DEPOSIT
To make Provision for payment of Estate duty.

SIX
SOCIAL SECURITY DEPOSITS
Payment monthly—for people on the verge of retirement to deposit Provident Fund Gratuity on Maturity proceeds of their policies etc

For further details contact our nearest Branch Manager.

SYNDICATE BANK LIMITED

Regd Office: **MANIPAL,** Mysore State.

Total Resources Rs 140 Crores. Branches Over 254 T. A PAI, Chairman.

ಗಾಂಧೀಜಿಯವರ ಪುಣ್ಯ ದಿನಾಚರಣೆ

ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಗಾಂಧೀಜಿಯವರ ಪುಣ್ಯ ದಿನ ಮತ್ತು ಸರ್ವೋದಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ ಮಾಡಿದರು. ಮುಂದೆ ಸಭೆಯ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್. ಎಲ್. ಭಟ್ಟರು ವಹಿಸಿದ್ದರು. ಶಾಲಾ ಅಧ್ಯಾಪಕ ಶ್ರೀ ಯು. ರತ್ನಾಕರ ಅಡಿಗರು ಗೀತಾ ವಾಚನವನ್ನೂ, ಶ್ರೀ ಇಬ್ರಾಹಿಂರವರು ಕುರಾನ್ ವಾಚನವನ್ನೂ, ಶ್ರೀ ಎಡ್ವರ್ಡ್‌ರವರು ಬೈಬಲ್ ವಾಚನವನ್ನೂ ಮಾಡಿದರು. ವಿದ್ಯಾರ್ಥಿಗಳಾದ ಜಗದೀಶ, ಸುಧಾಕರ ಸೆಟ್ಟಿ, ದತ್ತಾತ್ರೇಯ, ಉದಯಕುಮಾರರವರು ಗಾಂಧೀಜಿಯವರ ಕುರಿತು ಭಾಷಣಗಳನ್ನಿತ್ತರು. ಅಧ್ಯಾಪಕ ಶ್ರೀ ರಮಾನಾಥರಾಯರು ಗಾಂಧೀಜಿಯವರ ಜೀವನಾದರ್ಶಗಳ ಕುರಿತು ಭಾಷಣ ಮಾಡಿದರು. ಸಾಂಸ್ಕೃತಿಕ ಮಂತ್ರಿ ಶ್ರೀ ಜಗದೀಶರವರು ಧನ್ಯವಾದ ಸಮರ್ಪಣೆ ಮಾಡಿದರು.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. Case 482/68

In O S. 390/66

ದೇವಮ್ಮ — ಅರ್ಜಿದಾರ

ಮತ್ತು

ಉಮ್ಮಕ್ಕೆ ಕೂಡಾ — ಎದುರಿಗಳು

8 ಮತ್ತು 9ನೇ ಎದುರಿಗಳಿಗೆ:

8ನೇ ಎದುರಿ ರಾಮಕ್ಕ, ದೈಯಕ್ಕ ಹೆಂಗಸು ಮಗಳು, ಪುತ್ತೂರು ತಾಲ್ಲೂಕು ಕುರಿಯ ಗ್ರಾಮದ ಮೂಪಲ ಎಂಬಲ್ಲಿ

9ನೇ ಎದುರಿ ಯಮುನ, ದೈಯಕ್ಕ ಹೆಂಗಸು ಮಗಳು, ಸುಳ್ಯ ತಾಲೂಕು ಎಡಮಂಗಲ ಗ್ರಾಮದಲ್ಲಿ.

ಮೇಲ್ಕಂಡ ಅರ್ಜಿದಾರಳು ಅವಳಿಗೆ ನಿಮ್ಮಿಂದ ಕೂಡಾ ಬರಬೇಕಾದ ಅಸಲಿನ ಬಡ್ಡಿ ಹಣಕ್ಕೆ ದಾವೆ ಮಾಡಿ ಅದು ಡಿಕ್ರಿಯೂ ಆಗುತ್ತಿದ್ದು ಡಿಕ್ರಿ ಹಣದ ವಸೂಲಿಗೆ ಮಾಡಿದ ಮೇಲಿನ ಅಮಲ್ಜಾರಿಯಲ್ಲಿ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ತಾರೀಕು 20-2-69ರಂದು ವಾಯಿದೆ ಇರುತ್ತದೆ ಆದುದರಿಂದ ಆ ದಿವಸ ಬೆಳಗ್ಗೆ 11 ಗಂಟೆಗೆ ನೀವು ಮೇಲ್ಕಂಡ ಕೋರ್ಟಿಗೆ ಹಾಜರಾಗಿ ಆಕ್ಷೇಪಗಳಿದ್ದಲ್ಲಿ ತಿಳಿಸಬೇಕಾಗಿಯೂ ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಅರ್ಜಿಯನ್ನು ಮುಂದುವರಿಸಲಾಗುವುದೆಂತಲೂ ಈ ಮೂಲಕ ಕೋರ್ಟು ಹುಕುಂ ಮೇರೆಗೆ ನಿಮಗೆ ತಿಳಿಯಪಡಿಸಲಾಗಿದೆ.

Sd/- N Subramanyam,
Advocate for Petr.

Puttur, S. K.
31-1-69.

ಮಿರ್ಜಾನದಲ್ಲಿ ಪಂಡಿತ್ ಹೃದಯನಾಥ ಕುಂಜ್ರೂರವರಿಗೆ ಸಂಭ್ರಮದ ಸ್ವಾಗತ

ಮಿರ್ಜಾನ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಅಧ್ಯಕ್ಷರಾದ ಪಂಡಿತ ಹೃದಯನಾಥ ಕುಂಜ್ರೂರವರನ್ನು ಕಳೆದ ತಾ. 12ರಂದು ಮಿರ್ಜಾನ ಕೋಟೆಕಣಿ ಜನತಾ ವಿದ್ಯಾಲಯದ 'ನೆಹರು ಕೆನಡಿ' ಸಭಾಭವನದಲ್ಲಿ ಅತಿ ಸಂಭ್ರಮದಿಂದ ಸತ್ಕರಿಸಲಾಯಿತು. ಕೆನರಾ ವೆಲ್‌ಫೇರ್ ಟ್ರಸ್ಟಿನ ಅಧ್ಯಕ್ಷರೂ ಹಾಗೂ ಸಂಸತ್ ಸದಸ್ಯರೂ ಆದ ಶ್ರೀ ದಿನಕರ ದೇಸಾಯಿಯವರೊಂದಿಗೆ ಮಾನ್ಯ ಪಂಡಿತಜೀಯವರು ಆಗಮಿಸುತ್ತಲೇ ವಾದ್ಯಘೋಷದೊಂದಿಗೆ ಕುಮಟಾ ತಾಲೂಕು ಬೋರ್ಡಿನ ಅಧ್ಯಕ್ಷ ಡಾ| ಬಿ. ಎಮ್. ಪೈ ಹಾಗೂ ಇತರ ಪ್ರಮುಖರು ಸ್ವಾಗತಿಸಿದರು. ಶಾಲಾ ವಿದ್ಯಾರ್ಥಿಗಳಿಂದ ಗೌರವ ರಕ್ಷೆಯಿತ್ತ ನಂತರ ಭವ್ಯವಾಗಿ ಅಲಂಕರಿಸಲ್ಪಟ್ಟ 'ನೆಹರು ಕೆನಡಿ' ಸಭಾಭವನದಲ್ಲಿ ಡಾ| ಬಿ. ಎಮ್. ಪೈಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀ ದಿನಕರ ದೇಸಾಯಿಯವರು ಸ್ವಾಗತ ಕೋರಿದರು. ನಂತರ ಕುಮಟಾ, ಹೊನ್ನಾವರ, ಕಾರವಾರ, ಗೋಕರ್ಣಗಳಿಂದಲೂ ಆಗಮಿಸಿದ ಸುಮಾರು ನಲ್ವತ್ತು ಸಂಘ ಸಂಸ್ಥೆಗಳವರು ಹಾರಗಳನ್ನು ಅರ್ಪಿಸಿದರು. ಮಿರ್ಜಾನ ಕೋಟೆಕಣಿ ಜನತಾ ವಿದ್ಯಾಲಯದ ಪರವಾಗಿ ಶಾಲಾ ಮುಖ್ಯೋಪಾಧ್ಯಾಯರು ಸುಂದರವಾದ ಶ್ರೀಗಂಧದ ಪೆಟ್ಟಿಗೆಯನ್ನು ಕಾಣಿಕೆಯಾಗಿ ಅರ್ಪಿಸಿದರು. ಮಾನ್ಯ ಗೋಪಾಲಕೃಷ್ಣ ಗೋಖಲೆಯವರ ಭಾವಚಿತ್ರದ ಅನಾವರಣವನ್ನು ಪಂಡಿತ ಕುಂಜ್ರೂರವರು ನೆರವೇರಿಸಿದರು. ಪಂಡಿತ ಕುಂಜ್ರೂರವರು ತಮ್ಮ ಭಾಷಣದಲ್ಲಿ ನಿಸ್ವಾರ್ಥ ಸೇವೆಗಾಗಿ ಜನತೆ ಮುಂದೆ ಬರಬೇಕೆಂದೂ ತಿಳಿಸಿದರಲ್ಲದೆ, ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಶಾಂತರೀತಿಯಿಂದ ಬಗೆಹರಿಸಿಕೊಳ್ಳಬೇಕೆಂದು ತಿಳಿಸಿದರಲ್ಲದೆ ಇಂದಿನ ಮಟ್ಟವನ್ನು ಉತ್ತಮಪಡಿಸುವರೆ ಎಲ್ಲರೂ ಪ್ರಯತ್ನಿಸಬೇಕೆಂದು ಮನವಿ ಮಾಡಿಕೊಂಡರು. ಶಾಲಾ ಮುಖ್ಯಾಧ್ಯಾಪಕರಾದ ಶ್ರೀ ಎನ್. ಬಿ. ಕಾಮತರು ಎಲ್ಲರ ಆಭಾರವನ್ನು ಮನ್ನಿಸಿದರು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

Ex. c. 279/1968, O S. 593/1966.

ಬಾಬು ಮೇಸ್ತ್ರಿ — Decree Holder.

ಕಿಟ್ಟಿ ಹೆಂಗಸು — J. D.

ಕಿಟ್ಟಿ ಹೆಂಗಸು ಮೂಣಗ ಹೆಂಗಸಿನ ಮಗಳು, ಮತ್ತು ಸಿನಿ ಮೇಸ್ತ್ರಿಗಳ ಹೆಂಡ್ತಿ, ಕಾರ್ಕಳ ತಾಲ್ಲೂಕು ಮುಂಡ್ಕೂರು ಗ್ರಾಮದ ಪೊಸರಾಲು ದರ್ಕಾಸ್ತು ಎಂಬಲ್ಲಿರುವವಳು—

ಸದ್ರಿ ಎದುರಿಯಾದ ನಿಮಗೆ ಈ ಮೂಲಕ ತಿಳಿಸುವುದೇನೆಂದ್ರೆ.

ಮೇಲಿನ ಅಮಲ್ಜಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ಏಲಂಗೆ ಅರ್ಜಿದಾರನು ದಾಖಲು ಮಾಡಿದ ಏಲಂ ಇಸ್ತಿಹಾರಿನ ಶರ್ತು ನಿರ್ಣಯಿಸುವ ಬಗ್ಗೆ ತಾರೀಕು 20-2-1969ಕ್ಕೆ ನಿಮಗೆ ನೋಟೀಸಿಗೆ ಇಟ್ಟಿದೆ. ಆ ಕುರಿತು ಆಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉಜಾಹಂತು ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಅಮಲ್ಜಾರಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Defendant.

Karkala. 31-1-1969.



ಆದರ್ಶ ಅಧ್ಯಾಪಕ, ಉನ್ನತ ವ್ಯಕ್ತಿತ್ವವುಳ್ಳ, ನಿಗರ್ವಿ, ಸಾಮಾಜಿಕ ಕಾರ್ಯಕರ್ತ ದಿ| ಪಾಂಗಾಳ ರಾಮದಾಸ ನಾಯಕ್, ಬಿ. ಎ. ಎಲ್. ಟಿ. ಅವರು.

ಸ್ಟಾಂಪು ಭದ್ರ!

"ಮಗೂ! ಬೇರೆ ಯಾರೂ ತೆಗೆಯಲು ಸಾಧ್ಯವಾಗದಂತೆ ಸ್ಟಾಂಪು ಅಂಟಿಸಿ ಟಪ್ಪಾಲಿಗೆ ಹಾಕಬೇಕು ..."

"ಹಾಗೆಯೇ ಮಾಡಿದ್ದೇನಪ್ಪಾ!........ ಸ್ಟಾಂಪನ್ನು ಲಕ್ಕೋಟೆಯೊಳಗಡೆಯೇ ಅಂಟಿಸಿದ್ದೇನೆ".

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No 421/1968.

Between.

Dr. ಜೆ. ಆರ್. ಪಿಂಟೊ — ವಾದಿ

ಮತ್ತು

ಅತ್ತಾವರ ಕೃಷ್ಣ, ಅತ್ತಾವರ ವೀರಭದ್ರನವರ ಮಗ, ಉಡುಪಿ ಮುನ್ಸಿಪಾಲಿಟಿ, ಬನ್ನಂಜೆ ವಾರ್ಡ್— ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ನಿಂಮ ಮೇಲೆ ವಾದಿಯು ನಿಂಮಿಂದ ಬರತಕ್ಕ ಗೇಣಿ ವಸೂಲು ಕೇಳಿ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಂಮ ಹಾಜರಾತಿಯ ಬಗ್ಗೆ ತಾ. 18-2-1969ಕ್ಕೆ ಇಟ್ಟದೆ. ನಿಂಮದೇನಾದರೂ ಆಕ್ಷೇಪಣೆಯುದ್ದರೆ ಆ ದಿನ ಪೂರ್ವಾಹ್ನ 11 ಘಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ

K. Balachandra Rao,
Advocate for Plaintiff.

Udipi. 30—1—69.

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,
ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ
ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ
ಮೂಡಬಿದ್ರಿ — ಬಂಗಾಡಿ, ಕುದುರೆಮುಖ, ಕಾವೂರು — ಚಾರ್ಮಾಡಿ
ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ
ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೋಟೆಲ್ ಸಂಗಂ

ಮೊತ್ತಮೊದಲ ಭಾಗ್ಯಕ್ಕೆ ರಸಾಯನವಾಗಿದ್ದನು. ಅಲ್ಲದೆ ಕವಿಯು ಆತನು ಏಕಪತ್ನೀವ್ರತಿಯಲ್ಲ ಎಂಬುದನ್ನೆಲ್ಲಿಯೂ ಹೇಳಿಲ್ಲ. ಆತನು ಕ್ಷತ್ರಿಯ ಕುಲಾವತಂಸನಾಗಿ ಅಮೃತಮತಿಯ ಯೌವನದ ದಾಹಗಳನ್ನೆಲ್ಲಾ ತೃಪ್ತಿಪಡಿಸಬಲ್ಲ ಅಮೃತ ಸಾಗರನಾಗಿದ್ದನು. ಅವನ ಅನುಕೂಲ ಸರಸ ದಾಂಪತ್ಯವು "ಯೌವನ ಭೂಷಾವಳಿಯೊಳ್ ನಿರ್ದೋಷವಿಭಾ ನೃಪಕುಲ ಶೇಖರನಮೃತಮತಿಯ ಮುಖದರ್ಪಣದೊಳ್" ಎಂದು ಕವಿಯೇ ಹೇಳುವಾಗ ಕಥಾನಾಯಕ ನಾಯಿಕೆಯರ ಪ್ರೇಮಸುಧಾಸಾಗರದಲ್ಲಿ ಅಷ್ಟಾವಂಕನಾದ ಬಡಗನೊಬ್ಬ ಹುಳಿ ಹಿಂಡಲು ಸಮರ್ಥನಾದನೆಂದು ಕವಿ ನಿಸ್ಸಂಕೋಚವಾಗಿ ಹೇಳಬೇಕಾದರೆ ಆತನಿಗೆ ಸ್ತ್ರೀಹೃದಯ ಜ್ಞಾನದ ಅಭಾವ ಅಪಾರವಿತ್ತೆಂದೇ ಹೇಳಬೇಕಾಗುತ್ತದೆ; ಅಥವಾ ಬೇರೆ ಕಾವ್ಯದ್ವಾರ ಕಾಮಶಾಸ್ತ್ರದ ವಾಚನದ ಪರಿಣಾಮದಿಂದ ಅಮೃತಮತಿಯ ಪಾತ್ರವು ಭೀಭತ್ಸವಾಯಿತೆನ್ನಬೇಕಾಗುವುದು!

ಜನ್ನ ಕವಿಯ ಯಶೋಧರ ಚರಿತೆಗೆ ಮೂಲ ಕೃತಿಯಾದ "ಜಸಹರಚರಿಉ" 'ಯಶಸ್ತಿಲಕ' ಮೊದಲಾದ ಗ್ರಂಥಗಳಲ್ಲಿ ಅಮೃತಮತಿಯು ಅಷ್ಟಾವಂಕನ ಗಾನದಿಂದ ಮರುಳಾದ ಪ್ರಸ್ತಾಪವಿಲ್ಲ. ಅವಳು ಮೊದಲಿನಿಂದಲೂ ಅಷ್ಟಾವಂಕನ ಜಾರ ಪ್ರೇಮದಲ್ಲಿದ್ದಳೆಂದು ಹೇಳಿದೆ. ವಾದಿರಾಜನ ಅಮೃತಮತಿಯು ಉತ್ತಮ ಕುಲ ಸಂಭೂತೆ ಅಲ್ಲ. ಸಾಂಪ್ರದಾಯಿಕ ವರ್ಗದ ಆಕೆಗೆ ಹೊಲಸು ತಿನ್ನುವುದರಲ್ಲೇ ಸ್ವರ್ಗಸುಖ ಪ್ರಾಪ್ತವಾಗುತ್ತಿತ್ತು; ಆದರೆ ಜನ್ನನು ತನ್ನ ಕಾವ್ಯದ ಅಮೃತಮತಿಯ ಅಸಹ್ಯ ಚಿತ್ರಣದಿಂದ ಆತನಿಗೆ ಯಾವ ಪುರುಷಾರ್ಥ ಲಭ್ಯವಾಯಿತೋ ತಿಳಿಯದು. ವಾಲ್ಮೀಕಿ ಮುನಿಯು ತನ್ನ ರಾಮಾಯಣದಲ್ಲಿ ಸೀತಾಮಾತೆಯ ದಿವ್ಯ ಚಿತ್ರಣದಿಂದಲೇ ಮಹಾಕವಿ ಮಾತ್ರವಲ್ಲ, ಮಹರ್ಷಿ ಎನ್ನಿಸಿಕೊಂಡನು. ಜನ್ನನು ಅಮೃತಮತಿಯ ಹೆಸರನ್ನು ಅನ್ವರ್ಥ ಪಡಿಸುವ ಕಾರ್ಯದಲ್ಲಿ ತನ್ನ ಕಂಠವನ್ನು ಬಳಸಿದ್ದರೆ ಆತನು 'ನ ಭೂತೋ ನ ಭವಿಷ್ಯತಿ'ಯ ಕವಿಯಾಗುತ್ತಿದ್ದನು. ಅದರ ಬದಲು ಜಗತ್ತಿನಲ್ಲಿ ಕಂಡು ಕೇಳದ, ಹೊಲಸು ಹೃದಯದ ಸ್ತ್ರೀಯೊಬ್ಬಳನ್ನು ತನ್ನ ಕಾವ್ಯದಲ್ಲಿ ಚಿತ್ರಿಸಿ ಸ್ತ್ರೀಪ್ರಪಂಚಕ್ಕೇ ಮಸಿ ಗರಿಯನ್ನಳೆದು ಅಪ್ರಶಂಸೆಯ ಕಹಳೆಯನ್ನೂದಿದರೆ ಯಾವ ವ್ಯಕ್ತಿಯು ಅದನ್ನು ಕಿವಿದೆರೆದು ಕೇಳಿಯಾನು?

ಸಮಾಜದಲ್ಲಿ ವ್ಯಭಿಚಾರವೆಂಬುದು ಸ್ತ್ರೀಯರಿಗೆ ಅಂಟಿದುದಕ್ಕಿಂತಲೂ ಹೆಚ್ಚಾಗಿ ಪುರುಷರನ್ನೇ ಕಾಡಿಸಿದೆಯೆಂಬುದನ್ನು ಇಂದಿನ ವ್ಯವಹಾರದ ಜಗತ್ತೇ ಸಾರುತ್ತಿದೆ. ವೇದದ ಕಾಲದಿಂದಲೂ ನಮ್ಮ ಸಮಾಜಕ್ಕೆ ಅಂಟಿದ್ದ ಈ ರೋಗದಲ್ಲಿ ಪುರುಷರೇ ಶತಾಂಶಾಧಿಗಳೆನಿಸಿದ್ದರಲ್ಲದೆ ಸ್ತ್ರೀಯು ಅಪರಾಧಿ ಪಂಜರವನ್ನೇರುವಷ್ಟು ತಪ್ಪು ಮಾಡಿದಂತೆ ಕಾಣುವುದಿಲ್ಲ. ಆದರೆ ಇಲ್ಲಿ ಅಮೃತಮತಿಯು ಜುಗುಪ್ಸೆಯೆನಿಸಿದ ವಿಷವು ಜಗತ್ತಿಗೇ ಕಲೆನೋವನ್ನು ತರುವಂತಿದ್ದನು.

ಅಷ್ಟಾವಂಕನಾದ ಬಡಗನ ಸೌಂದರ್ಯ ವರ್ಣನೆಯಲ್ಲಿ ಜನ್ನನಿಗೆ ಸಂಕೋಚವೂ ಆಗಲಿಲ್ಲ. ಅವನ ಜಡೆದಲೆ, ಕುಳಿ ನೊಸಲು, ಇಳಿಗಣ್ಣು, ಜೋರೆಬಾಯಿ, ಹಪ್ಪಳಿಕೆ ಮೂಗು, ಮುರುಟಿದ ಕಿವಿ, ಚಿಬ್ಬುರಿದ ಹಲ್ಲು, ಕುಸಿಗೊರಲು, ಇಳಿದ ಎದೆ, ಗೂನು ಬೆನ್ನು, ಬಾತ ಬಸಿರು, ಕಗ್ಗಿದ ಜಘನ, ಕಿರಿದೊಡೆವಲು, ಅಪೋಧ್ಯದ ಗುಂಡಿಯ ದುರ್ಗಂಧದ ಮೈ, ಕುರುಗಣ್ಣು, ಟೊಂಕ ಮುರಿದ ಕತ್ತೆಯ ಕಾಲು... ಈ ಸೊಬಗಿನ ಪುರುಷನನ್ನು ಕನಕದಾಸನ ನಳ ಚರಿತ್ರೆಯಲ್ಲೂ ಕಾಣಲಾರೆವು. ಅನುಭವ ಮುಕುರವೆಂಬ ಸ್ವರ ತಂತ್ರವನ್ನು ಬಲ್ಲ ಈ ಮಹಾ ಕವಿಯು ಅಮೃತಮತಿಯನ್ನು ತೃಪ್ತಿಪಡಿಸುವ ಪುರುಷನು ಈ ವ್ಯಕ್ತಿಯಲ್ಲದೆಂದು ಭಾವಿಸಿದ್ದರೆ ಅವನ ಅನುಭವ ಮುಕುರವು ಸತ್ಯದಿಂದ ಬಹು ದೂರವಾದ ಗ್ರಂಥವೆನ್ನಬೇಕಾಗಿದೆ. ಪುರುಷತ್ವವುಳ್ಳ ವ್ಯಕ್ತಿಗೆ ಸಿಂಹದಷ್ಟು ಶರೀರ ಬಂದೀತೇ ವಿನಹ ಈ ಮಂಡನ ಆಕಾಂಕ್ಷೆಯಿಂದೂ ಬರಲಾರದಾದುದರಿಂದ ಯಶೋಧರ ಚರಿತ್ರೆಯ ಸ್ತ್ರೀ ಪಾತ್ರಗಳು ತಾಳಮೇಳ ತಪ್ಪಿದ ಹರಿಕಥೆಯಂತಾಗಿದೆ.

ಸುರಸುಂದರನಾದ ಅಷ್ಟಾವಂಕನು ನಲ್ನಿಶೆಯ ನಿಶ್ಶಬ್ದತೆಯಲ್ಲಿ ಹಾಡಿದನು. ಆ ಮಾಧುರ್ಯದ ಇನಿಗೊರಲಿನಿಂದ ಹೊರಹೊಮ್ಮಿದ ದನಿಯು ಚಂದ್ರಶಾಲೆಯ ಮಹಡಿಯಲ್ಲಿ ಪತಿಯೊಡನೆ ಪರ್ಯಂಕದಲ್ಲಿ ಮಲಗಿದ್ದ ಅಮೃತಮತಿಯ ಕಿವಿಗೆ ಮಾತ್ರ ಕೇಳಬೇಕೆ? ಆ ಗಜಶಾಲೆಯು ಅಮೃತಮತಿಯ ಶಯ್ಯಾಗೃಹದ ಪಕ್ಕದಲ್ಲೇ ಇತ್ತೇ? ಆ ನಾದಕ್ಕೆ ಮರುಳಾಗುವ ತರುಣಿಯರು ಆ ನಗರದಲ್ಲಿ ಇನ್ನಾರೂ ಇರಲಿಲ್ಲವೇ? ಶ್ರೀ ಕೃಷ್ಣನ ಗಾನ ಮಾಧುರ್ಯಕ್ಕೆ ಗೋಕುಲದ ಸ್ತ್ರೀಯರೆಲ್ಲಾ ಎಚ್ಚೆತ್ತು ಆತನ ಬಳಿಗೋಡಿ ಬಂದು ಪರವಶರಾಗಿ ಕೇಳುತ್ತಿದ್ದರಂತೆ! 'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣೀ' ಎಂಬುದು ಸತ್ಯವಾದರೂ ಆ ರಾತ್ರಿ ಆ ಬಡಗನ ಗಾನವು ಅಮೃತಮತಿಯ ಹೃದಯದಲ್ಲಿ ಮಾತ್ರ ಹುಚ್ಚೆಬ್ಬಿಸಿದುದು ಪರಮಾಶ್ಚರ್ಯ! ಅಮೃತಮತಿಯ ಅಂತಃಪುರದಲ್ಲಿ ದಾಸಿಯರು ಸ್ತ್ರೀಯರೇ ಇರಲಿಲ್ಲವೇ? ರಾಣಿಯು ಅಂತಃಪುರದಲ್ಲಿದ್ದಾಗ ಆ ಗಾನಪಟುವು ಅಂದು ಎತ್ತ ಹಾಡಿದುದು? ದಿವ್ಯಸ್ವಪ್ನದ ಎದುರಿನಲ್ಲಿ ಕುಳಿತ ಸ್ತ್ರೀಯು ಅದನ್ನು ಕಾಲಿಂದೊದೆದು ಅವೇಧ್ಯದ ಹೊಂಡದ ಹುಳಗಳಿಗೆ ಆಶಿಸಿದುದು ಜಗತ್ತಿಗೆ ಒಂದು ಹೊಸ ವಿಚಾರ! ಆ ಸಂಗೀತಲಹರಿಯನ್ನು ಕೇಳಿದ ರಾಣಿಗೆ ಆತನ ಬೇಟಕಾಂಗಿಗಳ ವಿಚಾರ ವಿವೇಚನೆಗಳಿಗೆ ಅವಕಾಶವೇ ಇಲ್ಲದ ಧೈರ್ಯದಿಂದ ಆತನ ಬಳಿಯನ್ನು ಸೇರುವ ಸನ್ನಿವೇಶವು ಸಂಪೂರ್ಣ ಅಸಮರ್ಥನೀಯವಾದದ್ದು. ಆತನ ಸಂಗೀತ ಲಹರಿಯು ಅವಳ ಮನಸ್ಸಿನಲ್ಲಿ ನೆಲೆಗೊಂಡು, ಕಾಡುವ ಕಡಲಿನಂತಾಯಿತು! ಇದು ಕಾಣದುದನ್ನು ಕವಿ ಕಂಡ ಎನ್ನುವುದಕ್ಕೆ ಜನ್ನನ ಅಮೃತಮತಿಯ ಚಿತ್ರಣವೊಂದು ಉತ್ತಮ ದೃಷ್ಟಾಂತ!

ಜನ್ನನು ಅನುಭವ ಮುಕುರದಲ್ಲಿ "ಸೂತಿಂಗೆ ಕೆಲವು ಕಾಂತೆಯರೊಲಿವರ್ ನಿಕಂ ಗೀತಕ್ಕೆ ಕೆಲವು ಕೋವಿನೆಯರ್ಕಳ್ ಎಳಸರ್" ಎಂದ ತತ್ವವು ಕೆಲವು ಅಂಶಗಳಲ್ಲಾದರೂ ಸತ್ಯವಿರಬಹುದಾದರೂ "ಬೆಂದ ವಿಧಿಗೆ ಕಣ್ಣೆಲ್ಲಿಕ್ಕುಂ" "ಬೇವನ್ ಬೆಚ್ಚಿದ ಕಾಗೆಗೆ ಮಾವಿನಿಳದಪ್ಪಂತೆ" "ಒಲವಾದೊಡೆ ರೂಪಿನ ಕೋಟಲೆ ಯೇವುದೋ?" ಎಂದು ವಾಚಕರ ಸಮಾಧಾನಕ್ಕೆ ಕವಿ ಯತ್ನಿಸಿದರೂ ಇದನ್ನು ಕವಿಯು ಸ್ತ್ರೀಹೃದಯವನ್ನರಿಯದೆ ಮಾಡಿದ ಮತಿಹೀನತೆ ಕಾರ್ಯವೆನ್ನುವುದಕ್ಕಿಂತಲೂ ಏನೋ ಒಂದು ಕಾರಣಕ್ಕಾಗಿ ಕವಿಯು ಒಬ್ಬ ಪರಸತಿಯೊಡನೆ ಪ್ರೇಮಭಿಕ್ಷೆಯನ್ನು ಯಾಚಿಸಿ, ಆಕೆಯ ತಿರಸ್ಕಾರಕ್ಕೆ ಪಾತ್ರನಾಗಿ ತನ್ನ ಪ್ರಬಲ ಕವಿತಾಶಕ್ತಿಯಿಂದ ಸ್ತ್ರೀ ಪ್ರಪಂಚದ ಮೇಲೆಯೇ ಸೇಡು ತೀರಿಸಿಕೊಳ್ಳಲೆತ್ನಿಸಿದನೆನ್ನುವುದರಲ್ಲಿ ಅಧಿಕಾಂಶ ಸತ್ಯವಿದ್ದಂತೆ ತೋರುತ್ತದೆ.

ಕವಿಯು ತನ್ನ ಕಾವ್ಯದಲ್ಲಿ ನಡುನಡುವೆ ವಾಚಕರು ಸಿಡಿದೇಳದಂತೆ ಬೆನ್ನು ತಟ್ಟುವ ಅಭ್ಯಾಸವಿಟ್ಟುಕೊಂಡಿದ್ದಾನೆ. "ಅಮೃತಮತಿಯೆತ್ತ; ರೂಪಾಧಮ ಅಷ್ಟವಂಕನೆತ್ತ?" ಎಂದು ಈ ಅನ್ಯಾಯ ಘಾಟದ ಕಾರಣವು ಪುರಾ ವಿಧಿಯೇ ಎಂದು ಹೇಳಿ, ತನ್ನ ಕುಹಕತನವನ್ನು ಅಡಗಿಸಲು ಪ್ರಯತ್ನಿಸಿದರೂ, ಆತನೆಂದೂ ತನ್ನ ಹೃದಯವನ್ನು ಮುಚ್ಚಿಡಲಾರ! ತನ್ನ ಸಂಭಾವಿತತನವನ್ನು ಎತ್ತಿ ಹಿಡಿಯಲಾರ!

ಆ ವಿಕಟ ಪುರುಷನ ಒಡನಾಟದಿಂದ ಅಮೃತಮತಿಗೆ ರಾಜನಲ್ಲಿ ಒಲವು ಕಡಿಮೆಯಾಗುತ್ತಾ ಬಂತು. ಒಂದು ರಾತ್ರಿ ರಾಜನ "ತೋಳ್ಸೆರೆಯಿಂ ನುಸುಳ್ದಂತೆ" ಜಾರನಲ್ಲಿಗೆ ಹೋದಳು. ರಾಣಿಯು ಬಂದುದು ತಡವಾಯಿತೆಂದು ಮುಳಿದ ಅಷ್ಟವಂಕನು ಅವಳ "ಕುರುಳ್ಗಳನೆಳೆದು ಬೆನ್ನ ವಳಿಯಿಂ ಕಳಹಂಸೆಗೆ ಗಿಡಗನೆರಗಿದಂತೆ" ಬಡಿದನು.

ಕಂ|| ತೋರ ಮಡಿವಿಡಿದು ಕುಡಿಯುಂ
ನಾರಂ ಸದೆಮೆತ್ತೆ ತದೆದು ಬೀಟೆಯು ಕಾಲಿಂ||
ಬಾರೆಲೆ ಅದಿ ಮುನಿದೊದೆದೊಡೆ
ಕೇರು ಪೊರಳ್ವಂತೆ ಕಾಲ ಮೇಲೆ ಪೊರಳ್ದಳ್||
[ಯ. ಚ. ೦. ೨-೫೦]

ಒಬ್ಬ ಕೋಮಲೆಯಾದ ಸ್ತ್ರೀ ಇಂತಹ ಪೆಟ್ಟುಗಳನ್ನು ಸಹಿಸಬಲ್ಲಳೆ? ಹೃದಯದ ರಸ ಎಂದು ತಿಳಿದು ಪೂಜಿಸುವ ಒಲುಮೆಯ ಪತಿಯನ್ನು ಇಂತಹ ಸಂದರ್ಭದಲ್ಲಿ ವಂಚಿಸಿ ವಿಟನೊಡನೆ 'ಎಲೆ ಗಜನೆತಂಗಾ, ನಿನ್ನಾಳದೊಡೆಸಾಮವಳೆನಗ ಮೀಸ್ಟದಂಡರ್ ಸವಸೋದರರೆಂದು ತಿಳಿಪಿದೊಳ್ ಘಂಟುಗೆಯಿಂ' ಎಂದು ಅವಳ ಬಾಯಿಂದ ಜನ್ನನು ಹೇಳಿಸಿದುದು ಸ್ತ್ರೀ ಕುಲಕ್ಕೆ ಅವಮಾನವಲ್ಲವೇ? ಇಂತಹ ಕೊಳಕು ಪ್ರಪಂಚವು ಬ್ರಹ್ಮ ಸೃಷ್ಟಿಯಲ್ಲಿ ನಿಜವಾಗಿ ಕಾಣಲಾರದು. ಕವಿ ಸೃಷ್ಟಿಯಲ್ಲಿ ಕಾಣಿಸುವುದು ಒಂದು ಶೋಭೆಯೇ?

ವಿಟಕನ ಪೆಟ್ಟನ್ನೇ ಸಹಿಸಿದ ಅಮೃತಮತಿಯನ್ನು ದೊರೆಯು ನೈದಿಲೆ ಹೂವಿನಿಂದ ಹೊಡೆದಾಗ ಆಕೆಯು ಎಚ್ಚರ ತಪ್ಪುವ ಕೃತಕ ನಾಟಕದಿಂದ ಕಾವ್ಯಕ್ಕೆ ಸೊಬಗು ಬಂತೇ?

ಪತಿ ಮಾತ್ರ ಅತ್ತೆಯನ್ನು ವಿಷವೂಡಿ ಕೊಲ್ಲಲೆತ್ನಿಸಿದ ಅಮೃತಮತಿ "ದೇವರ ಬಳಿಯೊಳ್ ಬರ್ಪೆಂ ಜೀವಿತ ನೀರಭದ ಮೊಳ್ಕೆಯಿಂ" ಎನ್ನುತ್ತಾಳೆ. ಇದನ್ನು ಹೇಳಿದ ರಾಣಿಗೆ ಅಗ್ನಿ ಸಾಕ್ಷಿಯಾಗಿ ಕೈಹಿಡಿದ ಪತಿಗೆ ವಿಷ ಕೊಡುವಾಗ ಅವಳು ಅವನೊಂದಿಗೆ ಕಳೆದ ಮಧುರವಾದ ದಿನಗಳ ನೆನಪು ಒಮ್ಮೆಯೂ ಆಗದಿರಲು ಸಾಧ್ಯವೇ? ಅವಳಲ್ಲಿ ಮನುಷ್ಯತ್ವವಿದ್ದಿದ್ದರೆ ತಾಯಿಗೆ ಸಮಾನಳಾದ ಅತ್ತೆಗೆ ವಿಷವೂಡಿಸಲು ಮನ ಹಿಂಜರಿಯುತ್ತಿತ್ತು. ಅವಳು ವಿಷವೂಡಿದ ಮೇಲೆಯೂ ಅರಮನೆಯಲ್ಲಿ ರಾಜನ ಮರಣದ ಕಾರಣದ ಸಂಶೋಧನೆ ನಡೆಯದುದು ಆಶ್ಚರ್ಯ! ಮುಂದೆ ಅಮೃತಮತಿಯ ಮಗನಿಗೆ ತನ್ನ ತಾಯಿಯ ಈ ದುರ್ನಡತೆಯು ಅರಿವಾದಂತೆ, ಅದರ ಸುಳಿವು ತಿಳಿದಂತೆ ಕಂಡುಬಾರದಿರುವುದು ಅಮೃತಮತಿಯ ಜಾಣ್ಮೆ ಎನಬೇಕೇ?

ಧರ್ಮಪರಾಯಣನೂ, ಗುಣವಂತನೂ, ಸುಂದರನೂ ಆದ ಪತಿಯನ್ನೂ ಅವನ ತಾಯಿಯಾದ ಅತ್ತೆಯನ್ನೂ ಕೊಂದು, ಕೊನ್ನ ಹಿಡಿದ ಅಷ್ಟಾವಂಕನ ಕೂಟದಲ್ಲಿರುವ ಅಮೃತಮತಿಯು, ದಾಸೀಜನದಿಂದ "ಈಕೆಯು ಬಳಿಯನ್ ಜನಮುಯ್ಯಾಲೇನ್ ಮೇಸಿದನೋ; ಪಾಪಂ ತಿನ್ನದು ಪಾತಕಿ ಪೋಕದಲ್ಲಣೆನ್ ಸತ್ತಪಳೇ?" "ಇದೇನ್ ನ್ಯಾಯ, ಅರಸರ ಬಾಳ್ಕೆ ಗೊಚ್ಚತಮಾಯ್ತು?" ಎಂದು ಹೇಳಿಸಿಕೊಳ್ಳುವಷ್ಟು ಹಗುರವಾಗುತ್ತಾಳೆ. ಆದರೂ ಆಕೆಗೆ ಧರ್ಮ ಪಕ್ಷಪಾತಿಯಾದ ರಾಜನು ಯಾವ ಶಿಕ್ಷೆಯನ್ನೂ ವಿಧಿಸುವುದಿಲ್ಲ.

ಅಮೃತಮತಿಯ ಕೊನೆಗಾಲವನ್ನು ಓದುವಾಗಲಂತೂ ಇದು ಜನ್ನನ ಸಂಪೂರ್ಣ ಕೃತಕ ಸೃಷ್ಟಿಯೆಂದು ಭಾರತೀಯ ಸ್ತ್ರೀಗೆ ಅನ್ನಿಸದಿರದು. ಸಾರಾಂಶ— ಅಮೃತಮತಿಯ ಪಾತ್ರಚಿತ್ರಣವು ಜನ್ನನ ಹೃದಯದ ಪರಿಶುದ್ಧತೆಗೆ ಕನ್ನಡಿ.

ಜನ್ನನ ಯಶೋಧರ ಚರಿತೆಯಲ್ಲಿರುವ ಇನ್ನೆರಡು ಸ್ತ್ರೀ ಪಾತ್ರಗಳೆಂದರೆ ಯಶೋಧರನ ತಾಯಿಯಾದ ಚಂದ್ರಮತಿ ಮತ್ತು ಸೊಸೆಯಾದ ಕುಸುಮಾವಳಿಯು. 'ಅಹಿಂಸಾ ಪರಮೋ ಧರ್ಮಃ' ಎಂಬುದನ್ನು ತಿಳಿದ ಜೈನ ಸ್ತ್ರೀ ಚಂದ್ರಮತಿ. ಇವಳು ಕೆಟ್ಟ ಕನಸಿನ ಪಾಪ ನಾಶಕ್ಕಾಗಿ ಪ್ರಾಣಿವಧೆಯಿಂದನ್ನ ಬಲಿ ಕೊಡುವ ಮಾತನ್ನಾಡುತ್ತಾಳೆ. ಇದು ವಿಫಲ ಪ್ರಯತ್ನವೆಂದು ಆಕೆ ತಿಳಿದ ಮೇಲೆ ಹಿಟ್ಟಿನ ಕೋಳಿಯನ್ನಾದರೂ ಬಲಿ ಕೊಡಬೇಕೆಂದು ಹಟಹಿಡಿಯುತ್ತಾಳೆ. ಈಕೆಯು ಚಿಕ್ಕ ತಪ್ಪನ್ನು ಮುಚ್ಚಲು ದೊಡ್ಡ ತಪ್ಪನ್ನು ಮಾಡುವಂತೆ ಎಷ್ಟು ಪಾಪ ನಾಶಕ್ಕಾಗಿ ಎಲ್ಲ ಜನ್ಮಗಳಲ್ಲಿ ಅನುಭವಿಸಬೇಕಾದಂತಹ ಪಾಪಕರ್ಮ ಮಾಡಲು ಪ್ರಚೋದಿಸುತ್ತಾಳೆ. ಇದೂ ಮೆಚ್ಚುವ ವಿಷಯವಲ್ಲ ಮತ್ತು ವಿವೇಕಯುತವಲ್ಲ. ಜನನ, ಜೀರ್ಣ ಶಕ್ತಿ ಹೆಚ್ಚುವದೆಂದು ಕೊಸುಕಸುವಿನ ಹುಲ್ಲನ್ನು ತಿನ್ನುವ ವಿಷಯವನ್ನು ರಾಜನೊಡನೆ ಮಾಡಿ ಹೇಳಿದುದರಿಂದ ಕವಿಗೆ ಕಾವ್ಯ ವಸ್ತುವಿನ ಘನತೆಯ ಔಚಿತ್ಯದ ಅರಿವಿಲ್ಲವೆಂಬುದೂ, ಲೋಕ ವ್ಯವಹಾರ ಜ್ಞಾನ ಅಸಮರ್ಪಕವೆಂಬುದೂ ಸ್ಪಷ್ಟವಾಗುತ್ತದಲ್ಲದೆ, ಆತನ ಸೇಡು ತೀರಿಸಿಕೊಳ್ಳುವ ಪ್ರಯಾಸವೆಂದೂ ಸಂಶಯವಾಗುವುದು ಶೋಚನೀಯ.

[ವಿಶೇಷ ಸಂಚಿಕೆಗಾಗಿ ಬರೆದುದು]

ಭಾರತದಲ್ಲಿ ಪ್ರಜಾಪ್ರಭುತ್ವ ವಿಫಲವೇ?

(ಐದನೇ ಪುಟದಿಂದ)

ವ್ಯಕ್ತಿಗಳ ಸ್ವಾತಂತ್ರ್ಯವು ಮಾನವನ ನೈಸರ್ಗಿಕ ಹಕ್ಕು. ಈ ಹಕ್ಕುಗಳ ರಕ್ಷಣೆಗಾಗಿ ಸಾಮಾಜಿಕ ಒಡಂಬಡಿಕೆಗಳ ಮೂಲಕ ರೂಪಿಸಿಕೊಂಡ ಸರಕಾರ, ಪ್ರಭುಗಳು ಈ ಒಡಂಬಡಿಕೆಯ ಶರ್ತಗಳನ್ನು ಉಲ್ಲಂಘಿಸಿದಾಗ ಅದನ್ನು ಕಿತ್ತು ಹಾಕಿ ಬೇರೆಯದನ್ನು ಸ್ಥಾಪಿಸಲು ಸಮಾಜಕ್ಕೆ ಅಧಿಕಾರವಿದೆ'. ಸರಕಾರಗಳು ತಮ್ಮ ಅಧಿಕಾರವನ್ನು ದುರುಪಯೋಗಗೊಳಿಸದಂತೆ ತಡೆಯುವಲ್ಲಿ ಕಾರ್ಯಾಂಗ ಮತ್ತು ಶಾಸನಾಂಗಗಳು ಒಂದಾಗದಂತೆ ನೋಡಿಕೊಳ್ಳುವುದೇ ಉತ್ತಮೋಪಾಯ.

ಮೋಂಟೇನನು ನ್ಯಾಯಾಂಗ ಮತ್ತು ಕಾರ್ಯಾಂಗಗಳನ್ನು ವಿಭಜಿಸಿ ಈ ಬಗೆಯ ಅಧಿಕಾರ ವಿಭಜನೆಯ ತತ್ವವನ್ನು ಸಮರ್ಥಿಸಿದ್ದಾನೆ.

ಜೀನ್ ಜಾಕ್ಸ್ ರುಸ್ಸೋವು ತನ್ನ 'ದಿ ಸಕೆಂಡ್ ಕಾನ್‌ಟ್ರ್ಯಾಕ್ಟ್' (೧೭೬೨) ರಲ್ಲಿ ಹೀಗೆ ವರ್ಣಿಸಿದ್ದಾನೆ: ಸಂಪೂರ್ಣ ಪ್ರಜೆಗಳ ಸಾಮಾನ್ಯ ಅಭಿಪ್ರಾಯ ಮತ್ತು ಒಪ್ಪಿಗೆಯನ್ನು ವ್ಯಕ್ತಪಡಿಸದ ಯಾವ ಶಾಸನವೂ ನ್ಯಾಯಬದ್ಧವಾಗದು; ಶಾಸನ ನಿರ್ಮಾಣದಲ್ಲಿ ಭಾಗಿಯಾದರ ಮಾತ್ರವೇ ಪ್ರಜೆಯು ನೈತಿಕ ಹೊಣೆಯನ್ನು ಹೊರುತ್ತಾನೆ. ಶಾಸನಗಳನ್ನು ಪಾಲಿಸುವ ಸರಕಾರಕ್ಕೆ ಮತದಾನ ಮಾಡುವ ಅಧಿಕಾರವೂ ಆತನಿಗಿದೆ. ಹೀಗೆ ಸ್ಥಾಪನೆಗೊಂಡ ಸರಕಾರವು ಆತನ ಪ್ರಿಯ ಶಾಸನಾಂಗದಲ್ಲಿ ವ್ಯಕ್ತವಾದ ಸಾಮಾನ್ಯ ಅಭಿಪ್ರಾಯಗಳಿಗೆ ಹೊಣೆಗಾರವಾಗಿರಬೇಕು.

ಅಮೆರಿಕದ ಉಲ್ಲೇಖನೀಯ ಅಧ್ಯಕ್ಷನಾಗಿದ್ದ ಅಬ್ರಹಾಂ ಲಿಂಕನ್ ಪ್ರಜಾಪ್ರಭುತ್ವವನ್ನು ಸರಳವಾಗಿ ವರ್ಣಿಸಿದ್ದಾನೆ: "ಜನತೆಗಾಗಿ, ಜನತೆಯಿಂದ ಜನತೆಯ ಸರಕಾರ."

ಫಿರಂಗಿಯ ಅರಸೊತ್ತಿಗೆಗಳು, ಸರ್ವಾಧಿಕಾರಿಗಳಿಂದ ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮ, ಫ್ರಾನ್ಸಿನ ಕ್ರಾಂತಿ, ಬ್ರಿಟನಿನ ರಾಜ್ಯಕೀಯ ಸ್ಥಿತ್ಯಂತರಗಳು, ಪಶ್ಚಿಮದಲ್ಲಿ ಔದ್ಯೋಗಿಕ ವಿಪ್ಲವ, ಜಗತ್ತಿನ ಒಡಲಾದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಗತಿಗಳು ತಿಳಿದಿರುವ ಪ್ರಜಾಪ್ರಭುತ್ವದ ಅರ್ಥವನ್ನು, ಅವಕಾಶವನ್ನು, ಪ್ರಮಾಣವನ್ನು ಮೌಲ್ಯಗಳನ್ನು ಬೆಳೆಸಿದವು. ಇಂದು ಇದನ್ನೇ ಅಪೇಕ್ಷಣೀಯ ಸರಕಾರ ಪದ್ಧತಿಯೆಂದು ಪ್ರಶಂಸಿಸುತ್ತಾರೆ.

ಜಗತ್ತಿನ ಹಿರಿಯ ರಾಷ್ಟ್ರಗಳಲ್ಲಿ ಒಂದಾದ ಭಾರತವು ಆಗಸ್ಟ್ ೧೫, ೧೯೪೭ರಲ್ಲಿ ಒಂದು ಶತಮಾನದ ಸ್ವಾತಂತ್ರ್ಯ ಹೋರಾಟದ ಬಳಿಕ ಸ್ವತಂತ್ರವಾಯಿತು. ಮುಂದೆ ಭಾರತದ ಬೆಂಬಲ ಮತ್ತು ಶಕ್ತಿಯುತ ಪ್ರೋತ್ಸಾಹ ಕಾರಿಯಾದ ಅದರ ಹೋರಾಟದ ಫಲವಾಗಿ ಸಿಂಹಳ, ಬ್ರಹ್ಮ ಮತ್ತು ಆಫ್ರಿಕ ಹಾಗೂ ಆಗ್ನೇಯ ಏಶ್ಯದ ಹಲವಾರು ರಾಷ್ಟ್ರಗಳು ಸ್ವತಂತ್ರವಾದುವು. ಜನವರಿ ೨೬, ೧೯೫೦ರಂದು ನಮ್ಮ ದೇಶವು ಸಾರ್ವಭೌಮ ಪ್ರಜಾಪ್ರಭುತ್ವ ರಾಷ್ಟ್ರವೆಂದೂ ಘೋಷಿತವಾಯಿತು. ಇಲ್ಲಿ ಪ್ರಜೆಗಳಿಗೆ ಸಾರ್ವತ್ರಿಕವಾಗಿ ನೀಡಿದ ಮತಾಧಿಕಾರದಿಂದಾಗಿ ಜನತೆಯು ಸಂಸತ್ತಿನ ಪದ್ಧತಿಯ ಸರಕಾರದ ರಚನೆಯಲ್ಲಿ ನಿಕಟ ಸಂಪರ್ಕವಿಟ್ಟುಕೊಳ್ಳಬಹುದು; ದೇಶದ ಆಡಳಿತೆಯಲ್ಲಿ ಪರೋಕ್ಷವಾಗಿ ಭಾಗವಹಿಸಬಹುದು.

ಆದರೆ, ದುರ್ದೈವದಿಂದ ನಮ್ಮ ಪ್ರಜಾಪ್ರಭುತ್ವವು ಜನತೆಗೆ ದೇಹ ಮತ್ತು ಆತ್ಮಗಳನ್ನು ಒಂದಾಗಿಸುವ ಮೂಲ ಆವಶ್ಯಕತೆಗಳನ್ನು ಪೂರೈಸಿ ಅದರ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಅಸಫಲವಾಗಿದೆ. ಎರಡು ದಶಕಗಳ ಸ್ವಾತಂತ್ರ್ಯದ ಬಳಿಕವೂ ರಾಷ್ಟ್ರದ ಐಕ್ಯಕ್ಕೆ ಅತ್ಯಂತ ಅನಿವಾರ್ಯವಾದ ಭ್ರಾತೃತ್ವ ಮತ್ತು ರಾಷ್ಟ್ರೀಯ ಭಾವನೆಗಳನ್ನು ಜನತೆಯಲ್ಲಿ ಹುಟ್ಟಿಸುವಲ್ಲಿ ನಾವು ಅಸಮರ್ಥರಾಗಿದ್ದೇವೆ.

ನಮ್ಮ ಜನತೆಯಲ್ಲಿ ಶೇ. ೮೦ರಷ್ಟು ಅನಕ್ಷರಸ್ಥರು. ವಯಸ್ಕ ಮತದಾನ ಪದ್ಧತಿಯು ಶಾಸನ ಸಭೆ ಮತ್ತು ಲೋಕಸಭೆಗಳಿಗೆ ಮತ ಚಲಾಯಿಸಿ ಪ್ರತಿನಿಧಿಗಳನ್ನು ಆರಿಸುವ ಅಧಿಕಾರ ಅವರಿಗೆ ನೀಡಿದೆ. ದೇಶದ ನಾಗರಿಕರಾಗಿ ಅವರು ಹೊಣೆಗಾರಿಕೆಯನ್ನು ಅರಿತುಕೊಂಡಿಲ್ಲದ ಕಾರಣ ಮತದ ಬೆಲೆಯನ್ನು ಅರಿತಿರುವುದಿಲ್ಲ. ತಮ್ಮಲ್ಲಿಯೇ ಸಾರ್ವಭೌಮಾಧಿಕಾರವಿದೆಯೆಂಬುದನ್ನೂ ತಾವೇ ಸಂಸದೀಯ ಪದ್ಧತಿಯ ಸರಕಾರ ರಚನೆಗೆ ಹೊಣೆಗಾರರು ಎಂಬುದನ್ನೂ ಅವರು ತಿಳಿದಿರುವುದಿಲ್ಲ; ಜನತೆಯು ಅನಕ್ಷರಸ್ಥವಾದುದರಿಂದ ಅದಕ್ಕೆ ದೇಶದಲ್ಲಿ ಏನು ನಡೆಯುತ್ತಿದೆ, ಆಡಳಿತೆಯು ಹೇಗೆ ನಿರ್ವಹಿಸಲ್ಪಡುತ್ತಿದೆ, ಶಾಸನ ಸಭೆಗಳೂ ಸಂಸತ್ತೂ ಹೇಗೆ ಕಾರ್ಯಮಾಡುತ್ತಿವೆ, ಸ್ವೀಕೃತವಾದ ಕಾನೂನುಗಳು, ಮಂಡಿತವಾದ ವಿಧೇಯಕಗಳು ಜನಹಿತ ಕಾಮನೆಯಿಂದ ಕೂಡಿರುತ್ತವೆಯೇ—ಎಂದು ಮುಂತಾದುವನ್ನು ಅರಿತುಕೊಳ್ಳಲಾರದು. ಅನಕ್ಷರಸ್ಥರಲ್ಲಿ ಹೆಚ್ಚಿನವರು ರೈತರಾದುದರಿಂದ ಅವರು ತಮ್ಮ ಮತಾಧಿಕಾರವನ್ನು ಸ್ವೇಚ್ಛೆಯಿಂದ ಬಳಸಿಕೊಳ್ಳಲಾರರು. ಏಕೆಂದರೆ, ಇವರು ನೆಲಮಾಲೀಕರು, ಸಾಹುಕಾರರ ಹಂಗಿಗೆ ಒಳಗಾಗಿರುತ್ತಾರೆ. ಎರಡು ದಶಕಗಳ ಬಳಿಕವೂ ನಮ್ಮ ದೇಶದಲ್ಲಿ ಪರಿಸ್ಥಿತಿ ಹೀಗಿರುವಾಗ, ಪ್ರಜಾಪ್ರಭುತ್ವವನ್ನು ತಾವು ಅದರ ನಿಜ ಅರ್ಥದಲ್ಲಿ ಅಪೇಕ್ಷಿಸುವುದು ಹೇಗೆ ಸಾಧ್ಯ?

(ಮುಂದುವರಿಯುವುದು)

ಪುಸ್ತಕ ವ್ಯಾಪಾರಿಗಳಿಗೆ
ಪ್ರಿಯವಾದ ಸಮಾಚಾರ

ಜನವರಿ ೧೯ರಿಂದ
ಮಾರ್ಚ ೩೧ನೇ ತಾರೀಖಿನ ವರೆಗೆ

೩೦೦=೦೦ ರೂ. ನಿವ್ವಳ ವ್ಯಾಪಾರ ಮಾಡಿದರೆ
ಒಂದು **Steel Desk** (ಬರೆಯುವ—ಮಾಟ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ—	ಭಾಗ 1— ಸಾವಿತ್ರಿ ದೇವಿ ನಾಯ್ಡು	2—50
ಕಸರಿನ ಕಮಲ—	ಭಾಗ 2— "	2—50
ಉಂಡಾಡಿ ಗುಂಡ—	ಪರ್ವತವಾಣಿ	2—00
ಧರ್ಮದೇವತೆ—	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು —	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—
ವ್ಯಾಪಾರಿಗಳು, ಶಾಲೆ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು
ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ತಿರುವಳ್ಳುವರ್

ತಮಿಳು ಸಾಹಿತ್ಯದಲ್ಲಿ ನೇರವಾಗಿ ಸಿಗುವ ಮೂಲಭೂತ ವಿಷಯಗಳನ್ನೊಳಗೊಂಡ ದಕ್ಷಿಣ ಭಾರತದ ಇತಿಹಾಸವನ್ನು ಸಮರ್ಪಕವಾಗಿ ಬಳಸಿಕೊಳ್ಳದೆ ಭಾರತದ ಇತಿಹಾಸ ಸಂಪೂರ್ಣವಾಗಲಾರದು. ತಮಿಳು ಸಾಹಿತ್ಯದಲ್ಲಿ ಇಯಲ್ (ಕಾವ್ಯ), ಇಸೈ (ಸಂಗೀತ) ಮತ್ತು ನಾಟಕಮ್ (ನಾಟಕ) ಎಂಬ ಮೂರು ಮುಖ್ಯ ಪ್ರಕಾರಗಳಿವೆ. ಇಯಲ್‌ನಲ್ಲಿ ಇಲಕ್ಕಣಮ್ ಅಥವಾ ವ್ಯಾಕರಣ ಹಾಗೂ ಇಲಕ್ಕಿಯಮ್ ಅಥವಾ ಮೂಲ ಇಲ್ಲವೆ ಅನುವಾದಿತ ಕಾವ್ಯಗಳೆಂಬ ಎರಡು ವಿಧಗಳು. ಪ್ರಖ್ಯಾತ ಕಾವ್ಯವಾದ ತಿರುಕ್ಕುರಳ್, ತಿರುವಳ್ಳುವರ್ ಬರೆದ ತಮಿಳಿನ ಮೇರು ಕೃತಿ.

ಏನಿದು ಈ ತಿರುಕ್ಕುರಳ್?

ಏಳು ಗಣಗಳ ವೆಂಬಾ ಛಂದಸ್ಸಿನಲ್ಲಿ ರಚಿತವಾಗಿರುವ ತಿರುಕ್ಕುರಳ್ ಕಾವ್ಯದಲ್ಲಿ ಒಟ್ಟು ೧೩೩೦ ದ್ವಿಪದಿ ವಚನಗಳಿವೆ. ಇಡೀ ಕಾವ್ಯವು ಅಧ್ಯಾಯಕ್ಕೆ ೧೦ ವಚನಗಳಂತೆ ೧೩೩ ಅಧ್ಯಾಯಗಳಾಗಿ ವಿಂಗಡಿಸಲ್ಪಟ್ಟಿದೆ. ಧರ್ಮ (ಅರಮ್), ಅರ್ಥ (ಪೊರುಳ್), ಕಾಮ (ಇನ್ಬಮ್) ಎಂಬ ಮೂರು ಪ್ರಮುಖ ವಿಭಾಗಗಳಿವೆ. ಮೇಲು ನೋಟಕ್ಕೆ ನಾಲ್ಕು ಪುರುಷಾರ್ಥಗಳಲ್ಲಿ ಮೂರನ್ನು ಮಾತ್ರ ಈ ಕಾವ್ಯ ಎತ್ತಿಕೊಂಡಿರುವಂತೆ ಕಂಡು ಬಂದರೂ ನಾಲ್ಕನೆಯ ಮೋಕ್ಷ ಅಥವಾ ವೀಡುವಿನ ಪರೋಕ್ಷ ಪ್ರತಿಪಾದನೆ ಉದ್ದಕ್ಕೂ ಸ್ಪಷ್ಟಗೋಚರ. ಧರ್ಮ-ಶಾಸ್ತ್ರಗಳಿಗೆ ಅನುಸಾರವಾಗಿ ಸಾಗಿರುವ ತಿರುಕ್ಕುರಳ್ ದೇವತಾ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ.

ಇಂಗ್ಲಿಷ್, ಫ್ರೆಂಚ್, ಜರ್ಮನ್, ಲ್ಯಾಟಿನ್‌ನಂತಹ ಯುರೋಪಿನ ಬಹುತೇಕ ಪ್ರಮುಖ ಭಾಷೆಗಳಲ್ಲದೆ ಭಾರತದ ಬಹುಪಾಲು ಭಾಷೆಗಳಿಗೆ ಅನುವಾದವಾಗಿರುವ ಕುರಳ್ (ತಿರುಕ್ಕುರಳ್‌ನ ಸಂಕ್ಷಿಪ್ತ ರೂಪ), ಪ್ಲೇಟೋವಿನ 'ರಿಪಬ್ಲಿಕ್' ಮತ್ತು ಹ್ಯಾರಿಂಗ್‌ಟನ್‌ನ 'ಓಷಿಯಾನ'ಗಳನ್ನು ಮೀರಿಸುವಂತಹ, ವಿಶ್ವ ಪ್ರಜೆಯ ಮಾದರಿಯ ಪ್ರಭುತ್ವವನ್ನು ಚಿತ್ರಿಸುತ್ತದೆ. ತಮಿಳು ನಾಡಿನ ಶ್ರೀಸಂಸ್ಕೃತಿ ಮತ್ತು ಸಾಮರ್ಥ್ಯದ ಜೀವಂತ ಸಂಕೇತ ಈ ಕುರಳ್.

ಭಾರತೀಯ ವಿಚಾರ ಪ್ರಣಾಲಿ, ಜೀವನ ರೀತಿಯ ಸಾರಸರ್ವಸ್ವ ಈ ಮಹಾಕೃತಿ ತಿರುಕ್ಕುರಳ್. ಸ್ವರ್ಗದ ಬಗೆಗಿನ ಕುರಳ್ ವಚನಗಳು ಭಾರತೀಯ ಸಂಪ್ರದಾಯಗಳ ಅನುಷ್ಠಾನತೆಯ ಸ್ಪಷ್ಟ ದ್ಯೋತಕ.

ಮಾನವ ತನ್ನ ವಿಧಿಗೆ ತಾನೇ ಕಾರಣ :

ಕುರಳ್‌ನಲ್ಲಿ ವಿಧಿಗೆ ಸಂಬಂಧಿಸಿದಂತೆ ಬಂದಿರುವ ಅಧ್ಯಾಯ, ದೇಶದ ಇತರ ಭಾಗಗಳಲ್ಲಿನ ಭಾವನೆಗಳನ್ನೇ ವ್ಯಕ್ತಪಡಿಸುತ್ತದೆ. ಕರ್ಮದ ಸರ್ವಶಕ್ತತೆ ಮತ್ತು ದೇವನ ಆಟಗಳನ್ನು ಕವಿ ಬೋಧಿಸುತ್ತಾನೆ. ಅಲ್ಲದೆ ಭೂಲೋಕದಲ್ಲಿನ ಈ ಯಾತ್ರೆಯಲ್ಲಿ ಉಚ್ಚ—ನೀಚ ಮಾರ್ಗಗಳನ್ನು ಆಯ್ದುಕೊಳ್ಳುವುದರಲ್ಲಿನ ವ್ಯಕ್ತಿಗತ ಜವಾಬ್ದಾರಿಕೆಯನ್ನು ಒತ್ತಿಹೇಳುತ್ತಾ ತನ್ನ ವಚನದಲ್ಲಿ :

ವಿಧಿ ನಮ್ಮ ಎಸಕಗಳ
ವಿಫಲಗೊಳಿಸುತಲಿರಲು
ಸತತ ಯತ್ನವೆ ಶುಭದ ಫಲವ
ನೀಡುವುದು
೬೧೯
ದಿಟ್ಟತನದಲಿ ಬಿಡದೆ ಹೋರಾಟ
ನಡೆಸುವನು
ವಿಧಿಯ ಹಿಂದೊತ್ತಿ ತಾ ಮುಂದೆ
ಸಾಗುವನು
೬೨೦

ಎಂದು ಹೇಳಿ, ಮಾನವನೇ ತನ್ನ ಭವಿಷ್ಯದ ಶಿಲ್ಪಿ, ಅದೃಷ್ಟದ ಗುರು ಎಂದು ಸಾರಿ ಹೇಳಿದ್ದಾನೆ.

ತಿರುಕ್ಕುರಳ್ ಕರ್ತೃ ತಿರುವಳ್ಳುವರ್

ತಮಿಳು ನಾಡಿನ ಸಂಪ್ರದಾಯಗಳ ಪ್ರಕಾರ ತಿರುವಳ್ಳುವರ್ ಜನ್ಮ ತಾಳಿದ್ದು ಈಗ್ಗೆ ೨೦೦೦ ವರ್ಷಗಳ ಹಿಂದೆ ಪ್ರಾಯಶಃ ಪೂರ್ಣಿಮೆಯಂದು. ಕ್ರಿಸ್ತ ಶಕ, ರಾಷ್ಟ್ರೀಯ ಪಂಚಾಂಗಗಳಂತೆ ತಿರುವಳ್ಳುವರ್ ಶಕೆಯೂ—ಅಷ್ಟೇನೂ ದೊಡ್ಡ ಪ್ರಮಾಣದಲ್ಲಿ ಅಲ್ಲವಾದರೂ— ಇಂದಿಗೂ ಜನಬಳಕೆಯಲ್ಲಿದೆ.

ಈ ಮಹಾ ಕೃತಿಕಾರನ ಬಗೆಗೆ ಹಲವಾರು ದಂತಕತೆಗಳು ಪ್ರಚಲಿತವಾಗಿವೆ. ಒಂದರ ಪ್ರಕಾರ ಭಗವನ್ ಎಂಬ ಬ್ರಾಹ್ಮಣ ಮತ್ತು ಆದಿ ಎಂಬ ಹೀನಕುಲಸ್ತ್ರೀಯ ಸಮಾಗಮದಿಂದ ಜನ್ಮತಾಳಿದವನು ಈತ. ಭಗವನ್ ಎಂಬಾತ ತನ್ನ

ಸಂದೆಯನ್ನು ಹುಡುಕುತ್ತಾ ಅಲೆದಾಡುತ್ತಿರುವಾಗ ಆದಿ ಎಂಬ ಸ್ತ್ರೀಯನ್ನು ಒಂದು ಧರ್ಮಶಾಲೆಯಲ್ಲಿ ಕಂಡು ಅನುರಕ್ತನಾಗಿ ತನ್ನವಳನ್ನಾಗಿ ಮಾಡಿಕೊಂಡ. ಅವಳಲ್ಲಿ ಮೂವರು ಗಂಡು ಮಕ್ಕಳು, ನಾಲ್ವರು ಹೆಣ್ಣು ಮಕ್ಕಳನ್ನು ಪಡೆದ. ಅವರಿಬ್ಬರ ನಡುವಣ ವೈವಾಹಿಕ ಕರಾರು ಬಹು ವಿಚಿತ್ರವಾಗಿತ್ತು. ಪ್ರಸವಿಸಿದ ಪ್ರತಿ ಮಗುವನ್ನೂ ಆಕೆ ತೊರೆದು ಬಿಡಬೇಕಾಗಿತ್ತು. ಕರ್ತವ್ಯ ಪರಾಯಣೆಯಾದ ಆದಿ ಆಜೀವ ಪರ್ಯಂತ ಈ ವ್ರತವನ್ನು ಪಾಲಿಸಿಕೊಂಡು ಬಂದಳು.

ಇನ್ನೊಂದು ಕಥೆಯ ಪ್ರಕಾರ ತಿರುವಳ್ಳುವರ್ ಮತ್ತು ಆತನ ಸೋದರ ಸೋದರಿಯರು ಯಾಳಿದತ್ತನ್ ಮತ್ತು ಪುಲ್ಲೈಚ್ಚಿ (ಹೀನಕುಲ ಸ್ತ್ರೀ)ಯರ ಮಕ್ಕಳು.

ವಳ್ಳುವನ್—ಲೌಕಿಕ ಪಾರಮಾರ್ಥಿಕ ಪ್ರಭು

ವಳ್ಳುವನ್ ಎಂಬುದು ಆಗ ಒಂದು ಜಾತಿಯ ಹೆಸರಾಗಿರಲಿಲ್ಲ. ಈ ಕವಿ ಹೀನ ಕುಲದ ಪುರೋಹಿತನೂ ಆಗಿರಲಿಲ್ಲ. ನಿಘಂಟುಕಾರ ದಿವಾಕರನ ಅಭಿಮತದಂತೆ ವಳ್ಳುವನ್ ಎಂದರೆ "ಲೌಕಿಕಪ್ರಭು" ವೆನಿಸಿಕೊಳ್ಳಬಲ್ಲ ದೊರೆಯ ಅಧಿಕಾರಿ ಎಂದರ್ಥ. ಕವಿ ತನ್ನಲ್ಲಿ ಲೌಕಿಕ, ಪಾರಮಾರ್ಥಿಕ ಪ್ರಭುತ್ವಗಳೆರಡನ್ನೂ ಒಗ್ಗೂಡಿಸಿಕೊಂಡಿರುವುದು ಆತನ ಅಮರ ಕಾವ್ಯದಿಂದ ವ್ಯಕ್ತ. ದೈವಿಕ, ಕೌಟುಂಬಿಕ, ಸಾಮಾಜಿಕ ಮತ್ತು ರಾಜಕೀಯ ಒಲವು ನಿಲುವುಗಳ ಬಗೆಗೆ ಕವಿಗಿದ್ದ ಜ್ಞಾನ ಪ್ರಬುದ್ಧವಾದುದು. ಈ ಲಕ್ಷಣ ವಳ್ಳುವನ್ ಎಂದರೆ ರಾಜಾಜ್ಞೆಗಳನ್ನು, ಹಬ್ಬ ಹರಿದಿನಗಳ ಸಮಾಚಾರವನ್ನು ಸಾರುವ ಡಂಗುರದವನು ಎಂಬ ಅರ್ಥ ಬಂದುಬಿಟ್ಟಿತು. ಎಂತಲೇ ಮುಂದಿನ ಅವಧಿಯಲ್ಲಿ ಈ ಪದಕ್ಕೆ ನಿಮ್ನ ವರ್ಗದವನೆಂಬ ಅರ್ಥ ತಪ್ಪಾಗಿ ಭಾವಿಸಲ್ಪಟ್ಟಿತು.

ತಿರುವಳ್ಳುವರ್ ಮದ್ರಾಸಿನ ಮೈಲಾಪುರದಲ್ಲಿ ನೇಯ್ಗೆಯವನಾಗಿದ್ದನೆಂದೂ ಏಲೇಲ ಸಿಂಗನ್ ಎಂಬಾತ ನೇಯ್ಗೆಯ ಗುರುವಾಗಿದ್ದು ಹತ್ತಿ ಹಾಗೂ ನೂಲಿನ ಕಟ್ಟುಗಳನ್ನು ಉಚಿತವಾಗಿ ಒದಗಿಸುತ್ತಿದ್ದನೆಂದೂ ಹೇಳುತ್ತಾರೆ. ಆದರೆ ಈತನ ಉದ್ಯೋಗ ನೇಯ್ಗೆಯಾಗಿತ್ತೆಂದು ಸಾರಲು ಯಾವ ಪುರಾವೆಗಳೂ ಇಲ್ಲದಿರುವುದು ಹಾಗೂ ಕುರಳ್‌ನಲ್ಲಿ ಒಂದು ವಚನವೂ ನೇಯ್ಗೆಯನ್ನು ಕುರಿತು ಇಲ್ಲದಿರುವುದು ಸಂದಿಗ್ಧದ ವಿಷಯ. ಇದು ಹೇಗಾದರಿರಲಿ, ಮೈಲಾಪುರದಲ್ಲಿರುವ ತಿರುವಳ್ಳುವರ್ ದೇವಾಲಯವನ್ನು ಇಂದಿಗೂ ಕಾಣಬಹುದಾಗಿದೆ. ಮದ್ರಾಸಿನ ನಗರ ಸಭೆಯವರು ಈ ಮಹಾ ಸಂತನ ಮೂರ್ತಿಯೊಂದನ್ನು ಮೈಲಾಪುರದಲ್ಲಿರುವ ಸಂಸ್ಕೃತ ಕಾಲೇಜಿನ ಸಮೀಪದಲ್ಲಿ ಇತ್ತೀಚೆ ಸ್ಥಾಪಿಸಿದ್ದಾರೆ.

ಕವಿಯ ಏಕಮೇವ ಕೃತಿ—ಕುರಳ್

ತಮಿಳು ನಾಡಿನ ಒಂದು ಜನಾಂಗವಾದ ವೆಳ್ಳಾಳರಲ್ಲಿ ಈತ ಬೆಳೆದು ಬಂದನೆಂದು ಹೇಳುತ್ತಾರೆ. ವೆಳ್ಳಾಳರ ಪಂಕ್ತಿಯಲ್ಲಿ ಬೆಳೆದ ಈತ ಕಾವೇರಿಪೂಮ್ ಪಟ್ಟಣದ ಶ್ರೀಮಂತ ಜಮೀನುದಾರ ಮಾರ್ಗ—ಸಹಾಯರ ಮಗಳು ವಾಸುಕಿಯನ್ನು ಮದುವೆಯಾದ. ಜಾತಿಮತಗಳನ್ನು ಗಣನೆಗೆ ತಾರದೆ ವಾಸುಕಿಯನ್ನು ಈ ಅಮರ ಕವಿಗೆ ಕೊಟ್ಟು ವಿವಾಹ ಮಾಡಿದರು. ಕಥೆಯ ಪ್ರಕಾರ ಅವರ ದಾಂಪತ್ಯ ಜೀವನ ಅತ್ಯಂತ ಸುಮಧುರ ಹರ್ಷಪೂರ್ಣವಾಗಿತ್ತು. ಅವರಿಗೆ ಮಕ್ಕಳೇನೂ ಆಗಲಿಲ್ಲ. ಆದರೂ ತನ್ನ ವಿಶೇಷ ಆಂತರಿಕ ಶುದ್ಧಿಯಿಂದ ಕವಿ ಸಂತೃಪ್ತನಾದ.

ದೇವರ ಐಕ್ಯ—ಕುರಳ್

ಮಧುರೆಯ ಸಾಹಿತ್ಯ ಸಂಘ ತಿರುಕ್ಕುರಳಿನ ಮಹಾನತೆಯನ್ನು ಒಪ್ಪಿಸಲ್ಪಟ್ಟಿದ್ದು ಒಂದು ಸ್ವಾರಸ್ಯ ಪ್ರಸಂಗ. ತಿರುವಳ್ಳುವರ್ ತನ್ನ ಮಿತ್ರ ಏಲೇಲ ಸಿಂಗನ್ ಕೋರಿಕೆಯಂತೆ ಕುರಳ್ ಅನ್ನು ರಚಿಸಿದ್ದ. ಅನಂತರ, ಅದರ ಹಸ್ತಪ್ರತಿಯನ್ನು ಮಧುರೆಗೆ ಒಯ್ದು, ಅಲ್ಲಿನ ಪವಿತ್ರ ಸಮಿತಿಯ ಅವಗಾಹನೆಗೆ ಅದನ್ನು ಮಂಡಿಸಿದ. ಸಂಘದ ಉದ್ಭಟ ಸದಸ್ಯರು ಆತನ ಹಿನ್ನೆಲೆಗಳನ್ನು ಕುರಿತು ವ್ಯಂಗ್ಯವಾಗಿ ಪ್ರಶ್ನಿಸಿದರು. ಕವಿ ಅದಕ್ಕೆ ಸೂಕ್ತ ಉತ್ತರವಿತ್ತ. ಅನಂತರ ಕಮಲ ಪುಷ್ಕರಣಿಯಲ್ಲಿ ತೇಲುವ ಸಂಘದ ಹಲಗೆ ಈ ಕೃತಿಯನ್ನು ಹೊರಬಲ್ಲುದಾದರೆ ಚಾಚೂ ನಡಿಸದೆ ಇದರ ಮಹಾನತೆಯನ್ನು ಒಪ್ಪಿಕೊಳ್ಳುವುದಾಗಿ ಸದಸ್ಯರು ಹೇಳಿದರು. ವಳ್ಳುವರ್ ತನ್ನ ಭಾರವಾದ ಕೃತಿಯನ್ನು ಆ ಹಲಗೆಯ ಮೇಲಿಡುತ್ತಿದ್ದಂತೆಯೇ ಪ್ರೇಕ್ಷಕರೆಲ್ಲಾ ಆಶ್ಚರ್ಯಚಕಿತರಾಗುವಂತೆ ಆ ಹಲಗೆ ಉಳಿದ ಪಂಡಿತರ ಕೃತಿಗಳನ್ನೆಲ್ಲಾ ನೀರಿಗೆ ಚೆಲ್ಲಿ ಇದೊಂದನ್ನು ಮಾತ್ರ ಹೊತ್ತು ತೇಲುತ್ತಾ ನಿಂತಿತು. ಆಗ ಆ ಸಂಘದ ನೇತಾರರಲ್ಲಿ ಈ ಹಸ್ತಪ್ರತಿಯ ದೈವಿಕತೆಯ ಅರಿವು ಮೂಡಿ ಮನ್ನಣೆ ನೀಡಿದರು. ಮಧುರೆಯ ದೇವಾಲಯದ ಪುಷ್ಕರಣಿಯ ಗೂಡಿನಲ್ಲಿ ಇಂದಿಗೂ ಆ ಸಂಘದ ಹಲಗೆಯನ್ನು ನಾವು ಕಾಣಬಹುದು.

ವ್ಯಾವಹಾರಿಕ ನೈತಿಕವಾದಿ

ಒಟ್ಟಿನಲ್ಲಿ ಹೇಳುವುದಾದರೆ, ಪಂಥದ ವಿದಗ್ಧ ಹೋರಾಡುವುದು ಹೇಗೆಂದು ವ್ಯಾವಹಾರಿಕ ಸೂಚನೆಗಳಿಂದ ಜನಸಾಮಾನ್ಯರಿಗೆ ತಿಳಿಸಬಯಸಿದ ಮಹಾ ಮಾನವತಾ ಮನಃಶಾಸ್ತ್ರಜ್ಞ ತಿರುವಳ್ಳುವರ್. ಆತನ ವಚನಗಳೆಲ್ಲ ಆತನ ವ್ಯಾವಹಾರಿಕತೆಯನ್ನು ಎತ್ತಿ ಸಾರುತ್ತವೆ. ಎಲ್ಲ ಜಾತಿ ಮತಗಳಿಂದ ಅತೀತನಾಗಿ ನಿಲ್ಲುವ ಈ ವಿಧವಾದ ಹಿಂದೂ ಸಂತ ನೈತಿಕತೆ ಮತ್ತು ಸುಜ್ಞಾನವನ್ನು ಜನತೆಗೆ ಬೋಧಿಸಿದ ಮಹಾ ಗುರು.

"ಸಾಮಾನ್ಯವಾಗಿ ಎಲ್ಲ ಹಿಂದೂ ಕವಿಗಳಂತೆ ತಮಿಳು ಕವಿಗಳೂ ತಮ್ಮ ಕೃತಿಗಳ ಮರೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ಗೌಣವಾಗಿಡುವವರೇ. ವ್ಯಕ್ತಿತ್ವದ ಅಸ್ತಿತ್ವವನ್ನು ಕ್ಷುಲ್ಲಕವೆಂದು ಭಾವಿಸಿ, ಸದ್ವಿಶದ ಚಿರಂತನ ಸಾಹಿತ್ಯದ ವಿಶ್ವವ್ಯಾಪ್ತ ಶಕ್ತಿಯಲ್ಲಿ ವಿಲೀನಗೊಳ್ಳುವುದರಲ್ಲೇ ಸಾರ್ಥಕತೆಯನ್ನು ಕಾಣುತ್ತಾ ತಮ್ಮ ಕೃತಿಗಳನ್ನು ರಚಿಸುತ್ತಾರೆ...ಎಂಬ ಡಾ| ಕಾಲ್ಡ್‌ವೆಲ್‌ರ ಮಹಾವಾಕ್ಯ ತಿರುಕ್ಕುರಳ್ ಕರ್ತೃ ತಿರುವಳ್ಳುವರ್ ವಿಷಯದಲ್ಲಿ ಸ್ಪಷ್ಟ ಸತ್ಯ.

— ಲೇಖಕ

ನಿಮ್ಮ ನೆಚ್ಚಿನ ಮೈಸೂರು ಗಂಧದ ಸಾಬೂನು
ಈಗ ಹೊಸ ರೂಪದಲ್ಲಿ ಬಂದಿದೆ.

ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕ್ಯೂಮ್ ಸೋಪ್ ಪ್ಲಾಂಟ್
ಈ ಸಾಬೂನಿಗೆ ಮೊದಲಿನ ಗೋಲಾಕಾರದ ಬದಲು
ಚೌಕಾಕಾರದ ರೂಪವನ್ನು ನೀಡಿದೆ.

ಆಕಾರದಲ್ಲಿಯ ಬದಲಾವಣೆಯಿಂದ ಅಳತೆ ಕುಗ್ಗಿಲ್ಲ
ಮತ್ತು ಸುವಾಸನೆ ಬದಲಾಗಿಲ್ಲ.

ಮೈಸೂರು ಸರಕಾರ ಸಾಬೂನು ಕಾರ್ಖಾನೆ, ಬೆಂಗಳೂರು.

ಗೇಹ ರಾಜ್ಯದಲ್ಲಿ

ಶಿಷ್ಯಾದಿಚ್ಛೇತ್ ಪರಾಜಯಂ

"ಅಲ್ರಿ, ಪಾಕಿಸ್ಥಾನದಲ್ಲಿ ಭಾರೀ ಕ್ರಾಂತಿ ನಡೆಯುತ್ತಿದೆಯಂತಲ್ಲ..."

"ಕ್ರಾಂತಿಯೆಲ್ಲಿಯದು? ಬರಿಯ ಶಾಂತಿ ಮಾತ್ರ ಇಲ್ಲವಾಗಿದೆ..."

"ಅದೇ, ಮತ್ತಿನ್ನೆಂಥದು? ಅಂತೂ ಭುಟ್ಟೋರನ್ನು ಸಚಿವ ಪದದಿಂದ ಹೊರದಬ್ಬಿದ್ದೇ ದಬ್ಬಿದ್ದು, ಪಾಪ, ಅಯ್ಯೂಬರ ಭಾಗ್ಯರೇಖೆ ಅರ್ಧವಾಗಿ ಹರಿಯಿತು..."

"ಅಂದಿದ್ದಾರ ನೋಡು, ಹಾಗಿಗೆ ಹಾಲೆರೆದೇನು ಫಲಾಂತ...."

"ಹೂಂ, ಅಲ್ರಿ ಭುಟ್ಟೋರಿಗೆ ಇಷ್ಟೊಂದು ಬೆಂಬಲವಿದೇಂತ...."

"ಜಂಬುವಲ್ಲಿ ಬಂತೆ?"

"ಮತ್ತೆ...?"

"ನಿಜ ಹೇಳುವುದಾದರೆ, ಪಾಕಿಸ್ತಾನದ ಆಂತರಿಕ ಸ್ಥಿತಿಗತಿಗಳು ಅಸಹನೀಯವಾಗಿವೆ. ವಿದೇಶೀ ಸಹಾಯ ಪಡೆದರು; ಸೇನೆ ಕಟ್ಟಿದರು. ಮೊನ್ನೆ ನಡೆದ ಯುದ್ಧದಲ್ಲಿ ಸೇನೆ ಶಿಥಿಲವಾಯಿತು. ದೇಶದಲ್ಲಿ ಜನಜೀವನವನ್ನು ಎತ್ತರಿಸುವ ವಿಶೇಷ ಪ್ರಯತ್ನ ಯಾರೂ ಮಾಡಲಿಲ್ಲ..."

"ಮತ್ತೆ ಜನ ಸುಮ್ಮನಿದ್ದಾರೆಯೆ?"

"ಜನ ಮಾತೆತ್ತಿದ ಕೂಡಲೇ ಅಧಿಕಾರಿಗಳು ಭಾರತದತ್ತ ಬೊಟ್ಟು ಮಾಡುತ್ತಾರೆ; ಕಾಶ್ಮೀರ ನಮ್ಮದು, ಅದನ್ನು ಭಾರತದಿಂದ ಮುಕ್ತಗೊಳಿಸಬೇಕೆಂದು ಚಾಳಿಯುತ್ತ, ಆಕ್ರಮಣದತ್ತ, ಭಾರತ ದ್ವೇಷದತ್ತ ಅವರ ಗಮನ ಹರಿಯುವಂತೆ ಮಾಡುತ್ತಾರೆ..."

"ಮತ್ತೆ ಈಗ...."

"ಈಗಿನ ಕತೆ ಬೇರೆ. ಈಗ ನಡೆವುದು ಗುರು-ಶಿಷ್ಯರ ಕಾಳಗ. ಭುಟ್ಟೋ ಅಯ್ಯೂಬರ ನಾಗರಿಕ ಶಿಷ್ಯರಾದರೆ, ಅಸ್ಗರ್ ಖಾನ್ ಮಿಲಿಟರಿ ಶಿಷ್ಯ. ನಡೆಯುವುದು ಗುರುವಿಗೆ ತಿರುಮಂತ್ರ ನಾಟಕ...."

"ಅಂದರೆ?"

"ಎಂಥದು? ಶಿಷ್ಯ ತಪ್ಪು ಮಾಡಿದಾಗ ಗುರು ಏನು ಮಾಡುತ್ತಾನೆ?"

"ಶಿಕ್ಷೆ ನೀಡುತ್ತಾನೆ; ಅಂಗುಷ್ಠ ಅಥವಾ ಬೆಟ್ಟು ಕೂಡುವುದೂ ಇದೆ...."

"ಸರಿ. ಮುಂದೆ ಆ ಶಿಷ್ಯ ಸುಮ್ಮನಿರುತ್ತಾನೆಯೆ? ಗುರುವನ್ನು ನಿಂದಿಸುತ್ತಾನೆ; ಸಂದರ್ಭ ಬಂದಾಗ ಸೇಡು ತೀರಿಸಿಕೊಳ್ಳುವ ಹಂಬಲ ಹೊಂದುತ್ತಾನೆ..."

"ಅದು ಸರಿ. ಆದರೆ, ಅಂಥ ಸಂದರ್ಭ ಬರೋದಕ್ಕೆ ಮೊದಲೇ ಬುದ್ಧಿ ಬೆಳೆದುಬಿಟ್ರೆ ಅದನ್ನ ಕೈ ಬಿಡುತ್ತಾನೆ..."

"ಅದು ಸರಿ. ಏಕೆಂದರೆ, ಸಾಮಾನ್ಯ ಶಿಷ್ಯರ ಬುದ್ಧಿ ಬೆಳೆಯುತ್ತ ಬರುವಂಥದ್ದು. ಆದರೆ, ರಾಜಕೀಯ ಶಿಷ್ಯರದ್ದು ಹಾಗಲ್ಲ."

"ಗುರು-ಶಿಷ್ಯರ ಹೋರಾಟವೇನೂ ಹೊಸತಲ್ಲಬಿಡ್ರಿ. ಪರಶುರಾಮ-ಭೀಷ್ಮರು ಹೋರಾಡಿ ಇದಕ್ಕೆ ನಾಂದಿಯಿಟ್ಟಿದ್ದಾರೆ."

"ಹ್ಞೂಂ, ಮತ್ತೆ ನೋಡು; ಫಮ್ಮಾಲ್ಲಿ 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬ ಮಾತು ಬಳಕೆಯಲ್ಲಿದೆ. ಇದಕ್ಕೆ ಯಾವ ಗುರುಗಳೂ ಹೊರತಾಗಿಲ್ಲ. ಶಿಷ್ಯರ ಮುಂದೆ ಸೋಲುವುದೇ ಗುರುಗಳಿಗೊಂದು ಹೆಮ್ಮೆ...."

"ಸರಿ. ಅದು ನಿಸ್ವಾರ್ಥ ಭಾವನೆಯಿರುವಲ್ಲಿ ತನಗಿಂತ ಬುದ್ಧಿವಂತನಾದ ಶಿಷ್ಯನಿಂದಲೇ ತನ್ನ ಗೌರವ ಹೆಚ್ಚುವುದೆಂದು ತಿಳಿಯುತ್ತಿದ್ದ ಕ್ಷೇತ್ರಗಳಲ್ಲಿ. ಆದರೆ, ಇಂದು ಕಾಲಕ್ಷೇತ್ರ ಬದಲಾಗಿದೆ."

"ಹ್ಞಾಂ.... ಮುಖ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಈ ಪರಿಸ್ಥಿತಿಯಿಲ್ಲವೇ ಇಲ್ಲ...."

"ಅಲ್ಲಿ ಗುರು ಸ್ವಾರ್ಥಿಯಾಗಿರುತ್ತಾನೆ. ತನ್ನನ್ನು ಬಿಟ್ಟರೆ ಉಳಿದವರೆಲ್ಲ ಮೂರ್ಖರೆಂದು ತಿಳಿಯುತ್ತಾನೆ...."

"ಹೌದೂನ್ನು. ಹಾಗೇನೇ ಅಯ್ಯೂಬರು ತನ್ನ ಸ್ಥಾನವನ್ನು ಭದ್ರಪಡಿಸಲು ಶಿಷ್ಯರನ್ನು ಹೊರಗಟ್ಟಿದರೆ, ಅವರು ಸುಮ್ಮನಿದ್ದಾರೆ?"

"ಅದೇ ನೋಡಿ, ಪೂರ್ವ—ಪಶ್ಚಿಮ ಪಾಕಿಸ್ತಾನದಲ್ಲಿ ಎಲ್ಲೆಂದರಲ್ಲಿ ಅಯ್ಯೂಬರ ವಿರುದ್ಧ ದೊಂಬಿಯೇಳುವಷ್ಟು ಪರಿಸ್ಥಿತಿ ಉಲ್ಬಣಗೊಂಡಿದೆ. ತಮ್ಮ ವಿರೋಧಿಗಳೊಂದಿಗೆ ಯಾವುದೇ ಒಡಂಬಡಿಕೆಗೆ ಬರಲು ಅಯ್ಯೂಬರು ಸಿದ್ಧರಂತೆ...."

"ಅಲ್ಲವೆ, ಇಂಡೋನೇಶ್ಯದಲ್ಲಿನ ವಿದ್ಯಾರ್ಥಿಗಳೇ ಪಾಕಿಸ್ಥಾನದ ವಿದ್ಯಾರ್ಥಿಗಳಿಗೆ ಪ್ರೇರಕಶಕ್ತಿಯಾದರು...."

"ಹೋ, ಅಂದು ಇದೇ ವಿದ್ಯಾರ್ಥಿಯ ಕ್ರಾಂತಿಯು ಸುಕರ್ಣರನ್ನು ಅಧಿಕಾರದಿಂದ ಕಿತ್ತುಹಾಕುವಲ್ಲಿ, ನಾಮ ಮಾತ್ರ ಅಧ್ಯಕ್ಷರಾಗಿ ಉಳಿಸುವಲ್ಲಿ ಪರ್ಯವಸಾನಗೊಂಡಿತು."

'ಹ್ಞಾಂ, ಇನ್ನು ಪಾಕಿಸ್ತಾನದಲ್ಲಿಯೂ ಅಯ್ಯೂಬರ ಕತೆಯೂ ಹಾಗೇ ಅಷ್ಟು. ಅದರಲ್ಲೂ ಇಡೀ ದೇಶದಲ್ಲಿ ವಿದ್ಯಾರ್ಥಿ ಕ್ಷೋಭೆ ಮಿತಿಮೀರಿದೆ; ಅಲ್ಲಲ್ಲಿ ಶಾಂತಿ-ಸುವ್ಯವಸ್ಥೆಗಳನ್ನು ಕಾಪಾಡಲು ಸೇನೆಯನ್ನೂ ಕರೆದಿದ್ದಾರೆ. ಹಾಗಿರುವಾಗ, ಅಯ್ಯೂಬರ ಸಿಂಹಾಸನ ಉರುಳಿ ಬೀಳುವುದರಲ್ಲಿ ಸಂದೇಹವಿಲ್ಲ. ಇಲ್ಲವಾದರೆ, ಅವರ ಜೀವಕ್ಕೂ ಅಪಾಯ ತಪ್ಪಿದ್ದಲ್ಲ.'

'ಅಲ್ರಿ, ರಾಜಕೀಯ ಕೊಲೆಗಳಿಗೆ ಪಾಕಿಸ್ತಾನವೇನೂ ಹಿಂದುಳಿದಿಲ್ಲ... ಅಲ್ರಿ, ನಮ್ಮ ಆಂಧ್ರದ ತೆಲಂಗಾಣ?"

"ಅಲ್ಲಿ ಮತ್ತೆ ಹೋರಾಟ, ವಿದ್ಯಾರ್ಥಿ ಕೇರಳದ ನಕ್ಸಲೀಯರ ನ್ನು ಅತ್ತ ರವಾನಿಸಬಹುದು... ಮತ್ತೆ ಅಸ್ಸಾಂ ಗಲಭೆಯೆಬ್ಬಿಸಲು ಲಂಗುಲಗಾಮಿಲ್ಲದ ಅಸಂಖ್ಯಾತ ವಿದ್ಯಾರ್ಥಿ ಸಂದೇಹ ಎಲ್ಲೆಲ್ಲೂ ಇದೇನ್ನು..."

"ಅಂತೂ ಹೆತ್ತವರು ತ್ರಿಶಂಕುವಿಗೆ ಬಿದ್ರು. ಅಲ್ರಿ, ಮಕ್ಕಳು ತಮ್ಮ ಮಾತನ್ನು ಕೇಳದೆ ಹೆರವರ ಆಶೆ-ಆಮಿಷಗಳಿಗೆ ಬಲಿಯಾಗುವುದೆಂದರೆ...."

'ಹೆತ್ತವರ ಪ್ರಭಾವಕ್ಕಿಂತ ಹೆರವರ ಪ್ರಭಾವವೇ ಹೆಚ್ಚೆಂತಾಯ್ತು. ಅಥವಾ ಹೆತ್ತವರು ಬೇಕಾದುದಕ್ಕಿಂತ ಹೆಚ್ಚು ಮೋಹ ಮಾಡುತ್ತಾರೇಂತಾ ಮ್ಮ.'

"ಅದು ಸರೀನ್ನಿ. ಹೀಗೇ ನಡೆದರೆ?'

"ನಡೆಯಲಿ ನಮಗೇನು? ಜೀವನ ಸಾಗರದಲ್ಲಿ ನಮ್ಮದೂ ಒಂದು ದೋಣಿ ಮಾತ್ರ.'

"ಹ್ಞೂಂ... ಸದ್ಯ ಅಷ್ಟೇ ಸಮಾಧಾನ...."

—ಗೋರಾ.

ಶ್ರೀ ಮೂಡಬಿದ್ರೆ, ಅವರಿಗೆ ನಿಧಿಸಮರ್ಪಣೆ

ಫೆಬ್ರವರಿ 16ರಂದು ಬೊಂಬಾಯಿಯ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಎಸ್. ಎನ್. ಮೂಡಬಿದ್ರೆಯವರಿಗೆ ಮೂಡಬಿದ್ರೆಯ ಸನ್ಮಾನ ಸಮಿತಿಯ ಸಭೆಯು ರೂ. 61 ಸಾವಿರದ ನಿಧಿಯನ್ನು ಅರ್ಪಿಸುವುದು. ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಮಾರಂಭದಲ್ಲಿ ಡಾ| ಕೆ. ಶಿವರಾಮ ಕಾರಂತರು ಸ್ಮರಣ ಸಂಚಿಕೆಯೊಂದನ್ನು ಉದ್ಘಾಟಿಸುವರು.

ಶ್ರೀ ಮೂಡಬಿದ್ರೆಯವರಿಗೆ ನೀಡುವ ನಿಧಿಗೆ ಕೊಡಿಸುವಲ್ಲಿ ಸಾರ್ವಜನಿಕರ ಸಹಕಾರವನ್ನು ಅಪೇಕ್ಷಿಸಲಾಗಿದೆ. ತಮ್ಮ ಸಹಾಯಧನವನ್ನು ಮೂಡಬಿದ್ರೆಯ ಸನ್ಮಾನ ಸಮಿತಿಯ ಸಭೆಯ ಕಾರ್ಯದರ್ಶಿಯವರಿಗೆ ಕಳುಹಿಸಬಹುದು.

ಎರಡು ಅಥವಾ ಮೂರು ಮಕ್ಕಳು... ಸಾಕು !



ಕೆಂಪು ತ್ರಿಕೋಣವು ಕುಟುಂಬ ಯೋಜನಾ ಕೇಂದ್ರದ ಚಿನ್ಹೆ

davp 68/278

ವಿಜ್ಞಾನ ಕೋಟಿ

ಕಾಲಗರ್ಭದ ಸೂರ್ಯ ತೇಜಸ್ಸಿನಾ ಕಾರ್ಯ
ಸಹಿಸಾಗ ಬಾನಿನಲಿ ಆಕಾಶ ಗಂಗೆಯು ತೆರದಿ
ಕೀರ್ತಿಸ್ತ್ರೀ! ಕಲೆಯಸ್ತ್ರೀ, ನಿಂತಿಸ್ತೈ! ಸಾಮ್ರಾಜ್ಯ ಮುಕುಟ
ಜನತೆಯು ಸುಖಶಾಂತಿ ಸಂಗದದ ಪ್ರತೀಕ
ಮೆರೆಯುತು ಕ್ಷಾತ್ರ ಸಿಂಧು!
ವೀರ ಮಹಾ ಪ್ರಚಂಡ! ॥ ೧ ॥

ತೋಪು ಗುಂಡುಗಳೊಡನೆ ಮತ್ತೆ ಸೆಣಸಾಟ
ರಕ್ತಪಿಪಾಸುಗಳಿಂದ ಮತ್ತೆ ಹರಸಾಟ
ಅಘನಾಶಿನಿಯು ಮತ್ತೆ ಕೆಂಪೇರಿ ತಾವರಿಯೆ
ಬಾನ ಮುಟ್ಟಿತು ಕೀರ್ತಿ ಜನತೆ ಸುಖದಲಿ ನಲಿಯೆ
ಧನ್ಯ ಹೇ ಕ್ಷಾತ್ರ ವೀರ
ನಿನ್ನ ಇತಿಹಾಸ ಅಮರ! ॥ ೨ ॥

ಬೆಳಕು ಕತ್ತಲೆ ತೆರದಿ ಹಿಗ್ಗು ಕುಗ್ಗಿನ ಜೋಡಿ
ಸಗು ಅಳುಗಳೆರಡೂ ಜೀವನದ ನಂಟಾಡಿ
ವಿಧಿ ಲೀಲೆ! ಹಾ! ವಿಜಯ ಧ್ವಜವು ಧರೆಗುರುಳೆ
ಕೀರ್ತಿ ಕಲಶವು ನುಚ್ಚುನೂರಾಗೆ! ಹೇ ಮರುಳೆ!
ಇದ ಬ್ರಹ್ಮ ಶಾಪ!
ಇತಿಹಾಸಕ್ಕೊಂದು ವೃದ್ಧಾಪ್ಯ! ॥ ೩ ॥

ಕಾಲ! ನಿನ್ನಾಟವಿಯಂತೆ ಕಣಿಯುದವರುಂಟೆ?
ಬಿಸಿ ರಕ್ತ ತಂಪಾಗೆ! ಸರನಾಡಿ ಸಡಿಲಾಗೆ!
ದೀಪವೇ ನಡು ಪಡಗ—ಬೆಪ್ಪು ಬಲ ಬಾಗೆ!
ಜೀವನದ ಸಂಜೆಯಲಿ ಜ್ಞಾನೋದಯವಾಗೆ
ತಾಳ್ದನದೋ ವೈರಾಗ್ಯ!
ತೊರೆದನೈ ಸೌಭಾಗ್ಯ! ॥ ೪ ॥

ಶೋಕದಿಂ ಬೆಂದ ಅಶೋಕನೋ ವೈರಾಗ್ಯ ಮೂರ್ತಿ
ಬುದ್ಧನೋ
ಇಂದು ಅಂತಿಮದು—ಅದಕೂ ಇದು ಮೇಲ್ ಕಣೋ!
ಸ ಳೆಗಾಳಿ ಸುಡು ಬಿಸಿಲುಗಳನುಂಡು ಧ್ಯಾನ!
"ವಿಶ್ವ ಮಿತ್ರನ" ತೆರದಿ ಶತಮಾನ ಮೌನ!
ಎಂಥ ತಪ ಯಜ್ಞ!
ಮಹಾ ಸ್ಥಿತಪ್ರಜ್ಞ! ॥ ೫ ॥

"ಉತ್ತರಕೆ ಕಣ್ ನೆಡಲು ಕಾಂಬೆ ಧ್ರುವ ತಾರೆಯನು"

[ದಿ। ಶ್ರೀ ವಿ ನರಸಿಂಹವರ್ಮ, ಬಿ.ಎ.ಎಲ್ ಎಲ್.,ಬಿ. ವಿಠಲ ಅರಮನೆ.]

ಉತ್ತರಕೆ ಕಣ್ ನಡಲು, ಕಾಂಬೆ ಧ್ರುವ ತಾರೆಯನು।
ಪಥಿಕ ನಿನ್ನಯ ಪಥದಲಿ ॥
ಸಾಗಿ ಮುಂದಕೆ ಬಂದು ನೀಗಿ ಮರ್ತ್ಯತೆಯನ್ನು।
ಉತ್ತರೋತ್ತರ ದಿಶೆಯಲಿ ॥ ೧ ॥ ॥ಹೇಪಥಿಕ ॥

ನಡೆದಂತೆ ಕೆಚ್ಚು ನೂರ್ಮಡಿಸುವುದು ಮತ್ತೆ ಬೆಂ-।
ಬಿಡಕೊಂದು ದಿವ್ಯ ಶಕ್ತಿ ॥
ಕಡಲ ಗಾಂಭೀರ್ಯ ಬಾನೊಡಲ ಭೂಮತೆಯ ಲ್ಲಿ।
ನಡೆಸುವುವು ನಿನ್ನ ಮುಕ್ತಿ ॥ ೨ ॥ ॥ಹೇಪಥಿಕ ॥

ಪಥವು ದುರ್ಗಮವೆಂಬ ಮಾತಿಲಿ ಬಿಡು ನಿನ್ನ।
ಗುರಿಯು ನಿಶ್ಚಲವಿರುವುದು।
ಸಾಗಿ ಬಂದಿಹ ದಾರಿಯಲಿ ಮುನ್ನಡೆವ ನಿನಗೆ।
ಬರಿಯ ಭ್ರಾಂತಿಯು ಸಲ್ಲದು. ॥ ೩ ॥

ಮುಂದೆ ಸಾಗಿದರವರು ಜಾನ ಳದೆ ನೆನದೆ ನೀ—
ನಿಂದು ತಳುವದಿರು ಭಯದಿ ॥
ಬಂದು ಕೈ ಹಿಡಿದೊಲವಿನಲಿ ತಾನೆ ವಿಶ್ವಾಸ
ಮುಂದೆ ಗಾಣಿಸನು ದಿಟವು ॥ ೪ ॥ ॥ ಹೇಪಥಿಕ ॥
ಸಂಕಲ್ಪವೊಂದಿರಲಿಹುದೆ ನಿನಗೆ ದುಂಯಿಲಲಿ।
ಖ ತವು ಬೇಗಲಿ ಪಥವನು ॥

ಜರ್ಜರಿತ ದೇಹದಲಿ ಹಿಂದಿನ ರಕುತ
ಹೃದಯ ತಾ ತಗ್ಗಿಲ್ಲ—ಮನವು ತಾ ಕುಗ್ಗಿಲ್ಲ
ಗತ ಕಾಲದಾ ಕೀರ್ತಿ ಇಂದಿಗೂ ಹೊಸ ಸ್ಫೂರ್ತಿ
ಎಂದಿಂತು ಸಾರುತ್ತ, ತಪಿಸುತ್ತ ಜಪಿಸುತ್ತ
ನಿಂದಿಹನು ಧೀರ!
ವಿರಾಂಗ ವೀರ!

—"ದೇವಕಿನಂದ",
ವಿಜ್ಞಾನ, ಉ. ಕ.

ಕರ್ಣಾಟಕ ಮಾತೆ

ದಿ। ವಿ. ನರಸಿಂಹವರ್ಮ, ವಿಟ್ಲ ಅರಮನೆ.

ಜಯ ಜಯ ಜಯ ಕರ್ಣಾಟಕ ಮಾತೆ।
ಜಯ ಜಯ ಪರಮ ಪುನೀತೆ ॥
ಸಂಪೂಜ್ಯ ಪುರುಷ ಸಂಪೂಜಿತ ಮಾತೆ।
ಸುಖಿಜನ ಜನ್ಮದಾತೆ ॥
ಸದ್ಧರ್ಮ ಕರ್ಮ ಪ್ರವಾಹ ಸಮನ್ವಿತೆ।
ಮೇದಿನಿಯೊಳು ವಿಖ್ಯಾತೆ ॥
ತವ ಶುಭಗಾನವ ನಾದೆ। ತವ ಶುಭ ಚರಿತೆಯ ಹಾಡೆ।
ಎನ್ನೀ ಜನ್ಮಕೆಗೆ ಪಾಡೇ ॥
ಜಯ ಜಯ ಜಯ ಕರ್ಣಾಟಕ ಜನನಿ ಕ।-
ರ್ಣಾಟಕ ಭಾಷಾ ರಮಣೀ॥ ಜನನೀ ಜನನೀ ಜನನೀ।
ಜಯ ಜಯ ಮಮ ಜನನಿ ॥

(ಸಂಗ್ರಾಹಕ:- ಕೆ. ಪದ್ಮನಾಭಯ್ಯ ಬಲ್ಲಾಳ)

ಧೈರ್ಯ ಮೇರುವಿನಂತೆ ಪೂರೈಸು ಯಾತ್ರೆಯನು
ದೇವನೆಲ್ಲವರಿವನು ॥ ೫ ॥

ಉತ್ತರದ ತಾರೆಯನು ಕಂಡಂದೆಂದು ನೀ—
ನೆಡೆಗುಂದಿ ಮಡಿಯಬಹುದು ॥
ನಿನ್ನ ಮನದಂತೆ ಚಂಚಲವಲ್ಲ ಧ್ರುವತಾರೆ।
ನಿಂತಲ್ಲೆ ಮಿನುಗುತಿಹದು ॥ ೬ ॥

ಕೋಟಿ ಜನ್ಮಾಂತರಕು ಗೂಢವಾಗಿದೆ ನಿನಗೆ।
ಪಂಥಕಾಧ್ಯಾನವಿತ್ತು ॥
ಕೈಬೀಸಿ ಕರೆಯುತಿಹೆ ನಿನ್ನ ಬಾರೈಸುತಿದೆ।
ನಿಗಿಲ್ಲವದರ ಗೊತ್ತು ॥ ೭ ॥

ನೀ ಕಂಡದಿಲ್ಲೆಂದು ಕಾಣದೆನ ಬೇಡವದು।
ದೂರದ ರಹಸ್ಯವೆನ್ನು ॥ ಹೇಪಥಿಕ ॥
ಮುಂದೆ ನಡೆ ಪಥದೊಳುದ್ದಕು ತಡೆಯದೆಯೆ ಕಡೆಗೆ।
ಕಾಂಬೆ ಧ್ರುವ ತಾರೆಯನ್ನು ॥ ೮ ॥

[ಸಂಗ್ರಾಹಕ:- ಕೆ. ಪದ್ಮನಾಭಯ್ಯ ಬಲ್ಲಾಳ, ಅಧ್ಯಾಪಕ, ವಿಠಲ ಅರಮನೆ.]

ಪುಂಡು ಕತೆ—೬

ಹೇಗೆ ಸರಿಯಾಯಿತು?

ರಾಜಾರವಿವರ್ಮ ದೊಡ್ಡ ಚಿತ್ರಗಾರ ಅಂತ ಯಾರಿಗೆ ಗೊತ್ತಿಲ್ಲ?

ಆದರೆ ಅವನೂ ಮನುಷ್ಯ ತಾನೆ?

ಮಾಡಿದ್ದೆಲ್ಲಾ ಅವನ ಮನಸ್ಸಿಗೆ ತೃಪ್ತಿಯಾಗುವ ಹಾಗೆ ಬರಲಿಲ್ಲ.

ಒಮ್ಮೆ ರಾಜನೊಬ್ಬ ಕುದುರೇ ಮೇಲೆ ಕುಳಿತುಕೊಂಡು ಪ್ರಯಾಣ ಮಾಡುವ ಚಿತ್ರ ಬರೆದ, ಬಹುದೂರ ಪ್ರಯಾಣ ಮಾಡಿದುದರಿಂದ ಕುದುರೆ ತುಂಬಾ ಆಯಾಸಪಟ್ಟು ಅದರ ಬಾಯಿಯಲ್ಲಿ ನೊರೆ ಬರುತ್ತಿರುವ ಹಾಗೆ ಚಿತ್ರಿಸಬೇಕಿತ್ತು. ಉಳಿದೆಲ್ಲ ಭಾಗದಲ್ಲಿ ಚಿತ್ರ ಚೆನ್ನಾಗಿ ಸ್ಪಷ್ಟವಾಗಿ ಬಂದರೂ, ನೊರೆ ಬರುವ ಹಾಗೆ ತೋರಿಸಲು ಎಷ್ಟು ಬಾರಿ ಬಣ್ಣ ಗಳೊಂದಿಗೆ ಹೋರಾಡಿದರೂ ಅವನ ಮನಸ್ಸಿಗೆ ತೃಪ್ತಿಯಾಗಲಿಲ್ಲ. ಕಟ್ಟಕಡೆಗೆ ಸಿಟ್ಟು—ಸಿಟ್ಟು ಬಂತು. ತಾಳ್ಮೆ ತಪ್ಪಿತು. "ಹಾಳಾಗಲಿ" ಎನ್ನುತ್ತ ಬಣ್ಣ ಒರಸುವ ಕೊಳೆ ವಸ್ತ್ರವನ್ನು ಆ ಚಿತ್ರದ ಮೇಲೆ ಒಯ್ದು ಬೀಸಿ, ಮನಃಶಾಂತಿಗಾಗಿ ತಿರುಗಾಡಲು ಹೋಗಿಬಿಟ್ಟ.

ಅದು ಎಣ್ಣೆ ಬಣ್ಣದ ಚಿತ್ರ. ಆ ಒರೆಸುವ ಚಿತ್ರದ ಕುದುರೆಯ ಮೇಲೆ ಅಂಟಿಕೊಂಡಿತ್ತು. ಸಂಜೆಯಲ್ಲಿ ಕಸ ಬಳಿಯಲು ಬಂದ ಕೆಲಸದವನು ಅದನ್ನು ನೋಡಿದ.

"ಇದು ಯಾರೋ ಹುಡುಗರ ಕೆಲಸ. ತನ್ನ ಮೇಲೆ ಬಂದೀತು." ಎಂದುಕೊಂಡು ಮೆಲ್ಲನೆ ಆ ವಸ್ತ್ರವನ್ನು ಕಿತ್ತು ಒಂದು ಬದಿಯಲ್ಲಿಟ್ಟ.

ಸ್ವಲ್ಪ ಹೊತ್ತಿನ ಮೇಲೆ ರವಿವರ್ಮ ಬಂದು ಆ ಚಿತ್ರವನ್ನು ನೋಡಿ ಬೆರಗಾಗಿ ನಿಂತ.

ಅದನ್ನು ನೋಡಿ ಸೇವಕ ಹೆದರುತ್ತ ಅವನ ಹತ್ತಿರ ಬಂದು "ಸ್ವಾಮಿ, ಯಾರೋ ತುಂಟ ಹುಡುಗರು ಈ ವಸ್ತ್ರ ಚಿತ್ರದ ಮೇಲೆ ಬಿಸುಟಿದ್ದರು. ನಾನಲ್ಲ. ನಾನು ಮೆಲ್ಲಗೆ ತೆಗೆದಿಟ್ಟೆ ಸ್ವಾಮಿ, ಕ್ಷಮಿಸಿ" ಎಂದ.

"ಆ ತುಂಟ ನಾನೇ. ನೀನು ಒಳ್ಳೇ ಕೆಲಸ ಮಾಡಿದೆ!" ಎನ್ನುತ್ತ ಸೇವಕನ ಬೆನ್ನು ತಟ್ಟಿದ ರವಿವರ್ಮ.

ಏಕೆ ಗೊತ್ತೆ? ಯಾವುದನ್ನು ಚಿತ್ರಿಸಲು ಸಾಧ್ಯವಾಗದೆ ತಾಳ್ಮೆಗೆಟ್ಟಿದ್ದನೋ ಆ ಭಾಗವನ್ನು ಒರೆಸುವ ವಸ್ತ್ರ ಸ್ವಾಭಾವಿಕವಾಗಿ ಚಿತ್ರಿಸಿತ್ತು!

—"ನಗಗಿರಿನಂದ"

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
90 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೩.

Phone— 5711, 5712, 5713 } 3 Lines.

ಎರಡು ಹೃದಯಗಳು

ಕಣ್ಣಿನ ಮೊನೆಯಲಿ ಲಕ್ಷ ಪತ್ರಿಕೆಯ
ಬರೆಯುವ ಆ ಸಮಯ;
ಮರೆಯದಿರು.... ಮರೆಯದಿರು
ಮೇಲ್ ವಿಳಾಸ —
ಎನ್ನ — ಮೇಲ್ ವಿಳಾಸ!
ಒಪ್ಪಿಗೆ ಕೇಳುವ ಮುನ್ನವೆ ಸಮ್ಮತ
ನೀಡಿದ ನಲ್ಮೆಯ ಪ್ರೇಮಮಯ;
ಸ್ಮರಿಸುವೆನು.... ಸ್ಮರಿಸುವೆನು
ವಿಧಿ ವಿಲಾಸ —
ಎಲ್ಲ — ವಿಧಿ ವಿಲಾಸ!
ಗಿಡಗಳ ಮರೆಯಲಿ,
ಕೊಂಬೆಗಳಡಿಯಲಿ
ಕೂಡಿದ ಸವಿ ಸಮಯ;
ನೆನವರಿಕೆ .... ನೆನವರಿಕೆ ...
ಮಧುರ ಮಾತು —
ನಮ್ಮ — ಮಧುರ ಮಾತು!
ಎಚ್. ಎಂ. ನಾರಾಯಣ ಭಟ್.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 16—4—1966.

NAVAYUGA 6—2—1969

Registered with the Registrar of News Papers for India under No. R. N. 3546/'57

REGD: No: B. G: 176
LICENCE No. 33
Licensed to Post without Prepayment

ಗೋದಾವರಿಯ ಮಡಿಲಿನಿಂದ ತುಂಗಭದ್ರೆಯ ದಂಡೆಗೆ

ಗೋದಾವರಿ ನದಿಯ ಅಪಾರ ಕರುಣೆಯಿಂದ ಆಂಧ್ರ ಪ್ರದೇಶದ ಎರಡು ಜಿಲ್ಲೆಗಳು ವಿಶೇಷವಾಗಿ ಪ್ರಯೋಜನ ಹೊಂದಿವೆ, ಆದರೆ ಎಲ್ಲ ಮಹತ್ವಾಕಾಂಕ್ಷಿ ಯುವಕ ರೈತರ ಆಕಾಂಕ್ಷೆಗಳನ್ನು ಪಶ್ಚಿಮ ತೀರದ ಜಿಲ್ಲೆಗಳು ಪೂರೈಸಲಾರದ ಹೋದ ವೇಳೆಯಲ್ಲಿ ದೂರದ ತುಂಗಭದ್ರೆಯ ಕಾಲುವೆ ಯೋಜನೆ ಪೂರ್ಣಗೊಂಡು ಇವರನ್ನು ಕೈ ಮಾಡಿ ಕರೆಯಿತು. ಈ ರೀತಿ ತುಂಗಭದ್ರೆಯ ದಂಡೆಗೆ ನೆಲೆಯೂರಿ ನಿಲ್ಲಲು ಬಂದವರಲ್ಲಿ ಆದಿನಾರಾಯಣ ಒಬ್ಬ ರೈತ. ಪೂರ್ವ ಗೋದಾವರಿ ಜಿಲ್ಲೆಯ ರಾಮಚಂದ್ರಪುರ ತಾಲೂಕಿಗೆ ಸೇರಿದವರು. ಬಸವ, ಪುನ್ನಯ್ಯ, ಗೋಪಾಲಕೃಷ್ಣ, ಕೋಟೇಶ್ವರ ರಾವ್ ಮೊದಲಾದವರೂ ಆದಿನಾರಾಯಣನಂತೆ ಜೀವನದ ಹೊಸ ದಿಗಂತಗಳನ್ನು ಹುಡುಕಲು ತುಂಗಭದ್ರಾ ಕಾಲುವೆ ಪ್ರದೇಶಕ್ಕೆ ಬಂದರು. ಇಲ್ಲಿ ಭೂಮಿಯನ್ನು ಕೊಂಡು ಬೇಸಾಯಕ್ಕೆ ನಿಂತರು; ಬಂದ ರೈತರೇ ಹೊಸ ವಸಾಹತುವೊಂದನ್ನು ನಿರ್ಮಿಸಿಕೊಂಡರು. 'ಶಾಂತಿನಗರ' ಎಂಬುದು ಅದಕ್ಕೆ ಹೆಸರು. ಹೆಸರು ಸಾರ್ಥಕ್ಯ ಹೊಂದಲು ಹೆಚ್ಚು ವರುಷಗಳೂ ಹಿಡಿಯಲಿಲ್ಲ. ಶಾಂತಿ ಸಮೃದ್ಧಿಯಿಂದ ಸುಖಸಂತೋಷದಿಂದ ವಸಾಹತು ವಿಜೃಂಭಿಸತೊಡಗಿತು.

ಎರಡು ಮಾರ್ಗಗಳು

ಇಲ್ಲಿ ನೆಲೆಸಿದ ರೈತರು ಕಷ್ಟಪಟ್ಟು ದುಡಿಯುವವರು. ಪೀಳಾವಳೀ ಬೇಸಾಯದಲ್ಲಿ ಪಳಗಿದವರು. ಶಾಸ್ತ್ರೀಯ ಪದ್ಧತಿಯಿಂದ ಕೃಷಿಯನ್ನು ಕೈಕೊಂಡರು. ಮಾನವ ಶ್ರಮ, ತುಂಗಭದ್ರೆಯ ನಿರಂತರ ಕರುಣೆ ಇವುಗಳಿಂದಾಗಿ ಆ ಪ್ರದೇಶದಲ್ಲಿ ಕೃಷಿ ಕ್ರಾಂತಿ ಸದ್ದಿಲ್ಲದೆ ಸಾಧಿಸುವಂತಾಯಿತು. ಈ ಉತ್ಸಾಹಿ ರೈತರು ಯೋಜನಾಬದ್ಧ ಸಂಸಾರ ಹೊಂದಿ ತಮ್ಮ ತಮ್ಮ ಕುಟುಂಬಗಳ ಗಾತ್ರವನ್ನು ನಿಯಂತ್ರಿಸಿದರು. ಸಂಸಾರದ ಗಾತ್ರದಲ್ಲಿ ಆಕುಂಚನ—ಕೃಷಿ ಉತ್ಪತ್ತಿಯಲ್ಲಿ ಪ್ರಸಾರ. ಇಂತಹ ತಂತ್ರದಿಂದಾಗಿ ಸಂಪದಭಿವೃದ್ಧಿ ಉಕ್ಕಿ ಹರಿದು ಬಂದಿತು. ಅವರು ಹೊಲಗಳಲ್ಲಿ ಪಡುವ ಶ್ರಮ, ಅವರ ಮಡದಿಯರು ಮನೆಯನ್ನು ತೂಗಿಸಿಕೊಂಡು ಹೋದ ರೀತಿನೀತಿಗಳು ಸುತ್ತಮುತ್ತಲಿನ ಹಳ್ಳಿಯ ಜನರಿಗೆ ಆದರ್ಶಪ್ರಾಯವೆನಿಸಿದ್ದಲ್ಲಿ ಆಶ್ಚರ್ಯವೇನು?

ಶಾಂತಿನಗರ ಚಿಕ್ಕ ವಸಾಹತು. ಅಲ್ಲಿ ಕೇವಲ ನೂರು ಕುಟುಂಬಗಳು. ಜನಸಂಖ್ಯೆ ಐದ ನೂರ ಸಂಖ್ಯೆಗೂ ಕಡಿಮೆ. ಬಹುಶಃ ಪ್ರತಿ ಮನೆಯ ದಂಪತಿಗಳು ಮಕ್ಕಳನ್ನು ಪಡೆಯಬಲ್ಲ ವಯೋಮಿತಿಗೆ ಸೇರಿದ್ದರೂ, ಅವರೆಲ್ಲ ಮಿತಸಂತಾನ ಕ್ರಮಗಳನ್ನು ಕೈಕೊಂಡಿದ್ದಾರೆ. ಅಂತೆಯೇ ಈಗ ಇಲ್ಲಿ ಹೊಸ ಕೂಸಿನ ಕ್ರಂದನ ಕೇಳಿ ಬರುವುದು ಬಲು ಅಪರೂಪ. ಬಹುಶಃ ಯಾವುದೇ ಒಂದು ಮನೆಯಲ್ಲಿ ನಾಲ್ಕಕ್ಕಿಂತ ಹೆಚ್ಚು ಮಕ್ಕಳು ಇಲ್ಲ. ಆದಿನಾರಾಯಣರ ವಿಷಯವನ್ನೇ ತೆಗೆದುಕೊಳ್ಳೋಣ. ಅವರಿಗೆ ಇನ್ನೂ ಮೂವತ್ತು ವರ್ಷ ತುಂಬಿಲ್ಲ. ಒಂದೂವರೆ ವರ್ಷದ ಹಿಂದೆಯೇ ಅವರ ಧರ್ಮಪತ್ನಿ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಲು ಮುಂದೆ ಬಂದರು. ಅನುರಾಧ ಎಂಬ ಹುಡುಗಿ, ಗೋಪಾಲನೆಂಬ ಹುಡುಗ ಈ ದಂಪತಿಗಳಿಗೆ [illegible] ನೀಡದ ಕೆಲೆಗಳು. ಒಂದೂವರೆ ವರ್ಷದ ಹಿಂದೆ ಆದಿನಾರಾಯಣ ದಂಪತಿಗಳಿಗೆ ಮೂರನೇ ಮಗು ಆಯಿತು. ಕೂಡಲೇ ಕುಟುಂಬ ಯೋಜನೆಯ ಆಶ್ರಯ ಪಡೆದದ್ದು.

ಹೊಸ ತೊಟ್ಟಿಲು ತೂಗುತ್ತಿಲ್ಲ

ನಿಯೋಜಿತ ಸಂಸಾರ ಆದಿನಾರಾಯಣರಿಗೆ ಸುಖ ಸಂತೋಷವನ್ನು ತಂದಿದೆ. 1959ರಲ್ಲಿ ಶಾಂತಿನಗರಕ್ಕೆ ಬಂದು 26 ಎಕರೆ ಭೂಮಿ ಕೊಂಡಿದ್ದರು. ಈಗ 40 ಎಕರೆ ಭೂಮಿಯ ಮಾಲೀಕರಾಗಿದ್ದಾರೆ. ಮಿಶ್ರ ಜಾತಿಯ ಸಜ್ಜೆ, [illegible] ಮತ್ತು ಐ. ಆರ್-8 ಭತ್ತಗಳನ್ನು ವಿಪುಲವಾಗಿ ಬೆಳೆದು ಪ್ರಗತಿಶೀಲ ರೈತರೆನಿಸಿಕೊಂಡಿದ್ದಾರೆ.

ಆದಿನಾರಾಯಣರಿಗೆ ಮೂವರು ಜನ ಸಹೋದರರು. ಎಲ್ಲರೂ ಕುಟುಂಬ ಯೋಜನೆಯ ಸೌಕರ್ಯವನ್ನು ಪಡೆದವರೆ. ಕರ್ನೂಲಿನ ಜನರಲ್ ಆಸ್ಪತ್ರೆಯಲ್ಲಿ ನಿಯೋಜಿತ ಪರಿವಾರದ ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದಾರೆ. ಹೊಸ ಹುಮ್ಮಸ್ಸು ಶಾಂತಿನಗರ ವಸಾಹತುವಿನ ತುಂಬಾ ಹಾಸುಹೊಕ್ಕಾಗಿದೆ. ಸದ್ಯಕ್ಕೆ ಇಲ್ಲಿ ಹೊಸ ತೊಟ್ಟಿಲು ತೂಗುತ್ತಿಲ್ಲ. ಸಮೃದ್ಧಿಯ ಗೀತೆ ಸ್ಪಷ್ಟವಾಗಿ ಕೇಳಬರುತ್ತಿದೆ.

ಅಹಿಂಸೆ ಆಧಾರವಾಗಿರದ ಶೋಧನೆ ಎಲ್ಲ ವ್ಯರ್ಥವೆಂದೇ ನನ್ನ ಭಾವನೆ.

o o o

ನಾವೆಲ್ಲರೂ ಒಬ್ಬನೇ ದೇವರ ಭಕ್ತರು. ವಿವಿಧ ಹೆಸರುಗಳಿಂದ ನಾವು ಅವನನ್ನು ಆರಾಧಿಸುತ್ತಿದ್ದೇವೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 548/1960 R. E. P. 327/1967

I. A. II

ಜಯಲಕ್ಷ್ಮಿ, ಯಿವರ ಜನರಲ್ ಪವರ್ of ಅಟೋರ್ನಿ ಹೋಲ್ಡರ್ ಚಂದ್ರರಾಜ ಕದಂಬ — — — ಅರ್ಜಿದಾರರು

ಮತ್ತು

ಬಾಬು ಶೆಟ್ಟಿ ಇತ್ಯಾ — — ಎದುರ್ರು

ಇವರೊಳಗೆ

6ನೇ ಎದುರ್ರು ಶ್ರೀಮತಿ, ಲಕ್ಷ್ಮಿಅಪ್ಪ ಶೆಟ್ಟಿ [illegible] ಮತ್ತು ಶೀನ ಶೆಟ್ಟಿ ಹೆಂಡ್ತಿ, ಕಾರ್ಕಳ ತಾಲೂಕು [illegible] ಗ್ರಾಮದ [illegible] ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ಅಮಲ್ಜಾರಿಯಲ್ಲಿ ಮೂಲ ಮೊದಲು ಅರ್ಜಿದಾರರಾಗಿದ್ದ ರಾಜೇಂದ್ರ ಚಂದ್ರರಾಜ ಕದಂಬರ ರಿಸೀವರ್ship ಕೊನೆಗೊಂಡ ಕಾರಣದಿಂದ ಸದ್ರಿ ಅಮಲ್ಜಾರಿಯನ್ನು ಮುಂದುವರಿಸುವರೆ ಹಕ್ಕುದಾರಳಾದ ಸದ್ರಿ ಜಯಲಕ್ಷ್ಮಿಯನ್ನು ಸಪ್ಲಿಮೆಂಟ್ ಅರ್ಜಿದಾರರನ್ನಾಗಿ ಕಕ್ಷಿಯಲ್ಲಿ ಸೇರ್ಪಡಿಸಿಕೊಳ್ಳಬೇಕಾಗಿ ವಗ್ಯರೆ ಸದ್ರಿ ಜಯಲಕ್ಷ್ಮಿಯು ಕೊಟ್ಟ ಸದ್ರಿ *I. A. II* ನೇ ಅರ್ಜಿಯು ಸದ್ರಿ 6ನೇ ಎದುರ್ರಿನ ಹಾಜರಿ ಬಗ್ಗೆ ತಾರೀಕು 26.2.1969ಕ್ಕೆ ಇಟ್ಟಿರುವುದರಿಂದ ಆಕ್ಷೇಪವಿದ್ದಲ್ಲಿ ಸದ್ರಿ 6ನೇ ಎದುರ್ರು ಸದ್ರಿ ದಿವಸ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ 6ನೇ ಎದುರ್ರನ್ನು ತಿವಾಲ್ ಮಾಡಿ ಸದ್ರಿ ಅರ್ಜಿಯು ಸದ್ರಿ 6ನೇ ಎದುರ್ರಿನ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವುದು.

By order of the Court.

H. P. A. Jain,
Pleader for Petitioner.

ಕಾರ್ಕಳ,
ತಾ. 27—1—1969.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ : ರೂ. 2—00

●

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

●

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ : ರೂ. 1—50

●

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ, ಹಂಗಿ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಉಡುಪಿ ಸಿವಿಲ್ ಜಡ್ಜ್ ಕೋರ್ಟಿನಲ್ಲಿ

Ex. Case no. 104/1968
in S. C. no. 11/1964.

Between :

ಕೆ. ಅನಂತ ಶೆಟ್ಟಿ — — ಅರ್ಜಿದಾರ

ಮತ್ತು

ಬಿ. ಪದ್ದ ಪೂಜಾರಿ ಕೂಡಾ — ಎದುರ್ರು

ಎರಡನೇ ಎದುರ್ರು ಅಂಣಯ್ಯ ಪೂಜಾರಿ, ಅಬ್ಬು ಪೂಜಾರಿ ಮಗ, ಉಡುಪಿ ತಾಲೂಕು ಚಾಂತಾರು ಗ್ರಾಮದ ಬ್ರಹ್ಮಾವರ ಪೇಟೆಯಲ್ಲಿರುವವರು. —ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :

ನೀವು ಕೂಡಾ ಇತರರ ಮೇಲೆ ಅರ್ಜಿದಾರನು ದಾಖಲು ಮಾಡಿದ ಅಮಲ್ಜಾರಿಯನ್ನು ನಿಂಮ ಹಾಜರಾತಿಯ ಬಗ್ಗೆ ತಾ. 11.2.69ಕ್ಕೆ ಇಟ್ಟಿದ್ದಾರೆ. ನಿಂಮದೇನಾದರೂ ಆಕ್ಷೇಪಣೆಯಿದ್ದರೆ ಆ ದಿನ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟಿನ ಹುಕುಂ ಪ್ರಕಾರ,

K. Balachandra Rao,
Advocate for Petitioner.
Udipi.
ತಾ. 19—1—69.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

13—2—1969

೨೦
ಪೈಸೆ

ಕಥಾ ಪ್ರಪಂಚ

ಕೋಲ್ಮಿಂಚು

ಕತೆಗಾರ್ತಿ : ಬಿ. ಎಸ್. ಶೀಲಾವತಿ.

"ಯಾವ ಜನ್ಮದ ಮೈತ್ರಿ ಈ ಜನ್ಮದಲಿ ಬಂದು .... ನಮ್ಮಿಬ್ಬರನು ಮತ್ತೆ ಬಂಧಿಸಿಹುದೊ .... ಕಾಣೆ .... ಯಾವ ಜನ್ಮದ ಮೈತ್ರಿ ..."

ಹಾಡು ಅಲೆಅಲೆಯಾಗಿ ಕೇಳಿಬರುತ್ತಿತ್ತು. ವೀಣಾ ತನ್ಮಯಳಾಗಿ ಕೇಳುತ್ತಲಿದ್ದಳು, ಕಂಗಳಿಂದ ಹನಿಹನಿಯಾಗಿ ಕೆಳಗುರುಳ ತೊಡಗಿತ್ತು, ದುಃಖಾಶ್ರು...

ಆ ಹಾಡನ್ನು ಹಾಡಿದ ದನಿ ಎಷ್ಟು ಇಂಪಾಗಿದೆ! ವಸಂತಳೇ ಆ ಹಾಡನ್ನು ಹಾಡುತ್ತಿರುವಳೋ ಎಂಬಂತಿದೆ!

...... ಮನಸ್ಸು ಈ ಹಳೆಯ ಕತೆಯನ್ನೆಲ್ಲಾ ಕೆದಕಿತು........ ನೆನಪಿನ ಚಕ್ರ ಹಿಂದು ಹಿಂದಕ್ಕೆ ಓಡಿತು........

ಆಗಿನ್ನೂ ವೀಣಾ ವಿದ್ಯಾರ್ಥಿನಿ. ಆಹ್! ಎಂತಹ ಮಧುರ ನೆನಪುಗಳು. ಸಂಚಲನ ಚನ್ನಿಕೆಯಿಂದ ಕಾಲೇಜಿನಲ್ಲೆಲ್ಲಾ ಪ್ರಸಿದ್ಧರಾಗಿದ್ದ ಐವರು ಗೆಳತಿಯರ ಗುಂಪಿನಲ್ಲಿ ವೀಣೆಯು ಒಬ್ಬಳು. ವಸಂತ, ಮಾಲತಿ, ಜಯಂತಿ, ರತ್ನ—ಇವರೇ ಉಳಿದ ನಾಲ್ವರು. ಐವರೂ ಕೂಡಿ ಸಂಗೀತವನ್ನೇ ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಬಿ. ಎ. ಓದುತ್ತಿದ್ದರು. ಮಾಲತಿ, ವೀಣಾ—'ಸಂಗೀತ ಎನಗೆ ಮಹಾ!' ಎಂಬ ಭಾವನೆಯಿಂದ ಸಂಗೀತವನ್ನು ತೆಗೆದುಕೊಂಡಿದ್ದರೆ, ಸಂಗೀತ ತೆಗೆದುಕೊಂಡರೆ ನಾಲ್ಕು ಥಿಯರಿ ಪೇಪರ್ ಉತ್ತರಿಸುವ ಗೋಜಿಲ್ಲವೆಂದು ಅವರ ಲೆಕ್ಕಾಚಾರ. ರತ್ನ, ಜಯಂತಿ—ಇವರಿಬ್ಬರೂ ತಾಯಿಯವರ ಬಲವಂತದಿಂದ ಸಂಗೀತ ತೆಗೆದುಕೊಂಡಿದ್ದರು. ಅವರಿಗೆ ಅಂತ ಅಭಿರುಚಿಯೂ ಇಲ್ಲ; ಸಂಗೀತದಲ್ಲಿ ಜ್ಞಾನವೂ ಇರಲಿಲ್ಲ. ಡಿಗ್ರಿ ಎಂಬೊಂದು ಪದವಿ ಮಾತ್ರ ಅವರಿಗೆ ಬೇಕಾಗಿತ್ತು. ಮನೆಯಲ್ಲಿ ತಾಯ್ತಂದೆ [illegible] ಮಗಳು [illegible] ಬಿ.ಎ.ಓದಿ [illegible] ಬೇಕಾಗಿರಲಿಲ್ಲ. ಅಲ್ಲದೆ ಸಂಗೀತವನ್ನು ಕಾಲೇಜಿನಲ್ಲೇ ಕಲಿಸಿದರೆ ಪ್ರೈವೇಟ್ ಟ್ಯೂಷನ್ ಇಡಿಸುವುದು ತಪ್ಪುತ್ತದೆ—ಎಂಬ ಅವರೀರ್ವರ ತಂದೆ ತಾಯಿಯರ ಭಾವನೆ. ಹೀಗಾಗಿ ಇವರ [illegible] ದಾಕ್ಷಿಣ್ಯಕ್ಕಾಗಿ ಸಂಗೀತ ಕಲಿಯುತ್ತ ಎಂಬುದು ಅವರೀರ್ವರ ಧೋರಣೆಯಾಗಿತ್ತು. ಆದರೆ ಈ ಎರಡು ಗುಂಪಿಗೂ ಸೇರದೇ ಇದ್ದವಳೆಂದರೆ—ವಸಂತ, ಸ್ವತಃ ಸಂಗೀತ ಕಲಿಯಬೇಕೆಂಬ ಉತ್ಕಟೇಚ್ಛೆಯಿಂದ ಸಂಗೀತವನ್ನಾರಿಸಿಕೊಂಡಿದ್ದವಳು, ಜೊತೆಗೆ ಕಂಠಮಾಧುರ್ಯವೂ ಇದ್ದುದರಿಂದ ಸಂಗೀತ ಕಲಿಯಬೇಕೆಂಬ ಆಸೆ ಅವಳಲ್ಲಿ ಸಹಜವಾಗಿ ಮೂಡಿ ಬಂದಿತ್ತು. ತಾನು ಹಾಡಲು ಮತ್ತು ಇತರರು ಹಾಡಿದ್ದನ್ನು ಕೇಳಲು ಅವಳು ಸದಾ ಹಾತೊರೆಯುತ್ತಿದ್ದಳು. ಕೇವಲ ಶಾಸ್ತ್ರೀಯ ಸಂಗೀತವೊಂದೇ ಅಲ್ಲದೆ ಲಘು ಸಂಗೀತದಲ್ಲಿಯೂ ಆಸಕ್ತಿವಹಿಸಿ ಕಾಲೇಜಿನ ಪ್ರತಿ ಸಂಗೀತ ಸ್ಪರ್ಧೆಯಲ್ಲಿಯೂ ಪ್ರಥಮ ಬಹುಮಾನವನ್ನೇ ಗಿಟ್ಟಿಸುತ್ತಿದ್ದಳು.

ಅಂತಹ ಗಾನ ಸರಸ್ವತಿಯ ಮಧುರ ಕಂಠದಿಂದ ಈ ಹಾಡು ಹೊರ ಹೊಮ್ಮಿದ್ದಿದ್ದರೆ ಹೇಗಿರಬಹುದಾಗಿತ್ತು?

ವೀಣೆಯ ಕಣ್ಣೀರು ಹರಿಯುತ್ತಲೇ ಇತ್ತು. ಹಾಡು ಮುಗಿದಿದ್ದರೂ ಸಮಯ ಕಳೆದುದರ ಪರಿವೆಯೇ ಅವಳಿಗಿಲ್ಲವಾಗಿತ್ತು.

"ಓ....ವೀಣಾ....ಕ್ರೈಯಿಂಗ್....ಐ ಥಾಟ್ ಯು ವುಡ್ ಬಿ ರೆಡಿ ಬೈ ದಿಸ್ ಟೈಂ...."

ಹಠಾತ್ತನೆ ಪತಿಯ ಮಾತುಗಳನ್ನು ಕೇಳಿ ವೀಣಾ ಬೆಚ್ಚಿ ಎದ್ದು ನಿಂತಳು. ಛೆ! ಗಡಿಯಾರ ಆರೂವರೆ ತೋರಿಸುತ್ತಿದೆ! ತಾನು ಎಷ್ಟು ಹೊತ್ತಿನಿಂದ ಹೀಗೆ ಕುಳಿತಿದ್ದೆ?

"ವೀಣಾ ಖಂಡಿತ ಮರೆಯಬಾರದು. ನಿನ್ನೆ ಹಾಗೆ ಮಾಡಿದರೆ ಶೋ ಆರು ಘಂಟೆಗಲ್ಲ ರೆಡಿಯಾಗಬೇಕು. ಕಾರು ತಗೊಂಡು ಸೀದಾ ಆಫೀಸಿನಿಂದ ಮನೆಗೇ ಬಂದುಬಿಡ್ತೀನಿ, ಮರೆತೀಯ, ಜೋಕೆ...."

ಹಿಂದಿನ ರಾತ್ರಿಯೆಂದ ಕೇಶವ ಹಾಡತೊಡಗಿದ್ದ ಸೊಲ್ಲು ಅವಳ ಕಿವಿಗಳಲ್ಲಿ ಮಾರ್ದನಿಗೊಂಡಿತು... "ಐ ಆ್ಯಮ್ ಸೋ ಸಾರಿ.... ಇನ್ನೈದೇ ನಿಮಿಷ..." ವೀಣಾ ಕಣ್ಣೊರೆಸಿಕೊಳ್ಳುತ್ತಾ ಒಳಗೆ ಹೋದಳು.

"ಥತ್" ....ಎಂದ ಕೈಯಲ್ಲಿದ್ದ ಕಾರಿನ ಬೀಗದ ಕೈಯನ್ನು ಟೀಪಾಯಿಯ ಮೇಲೆಸೆದ. ಕೇಶವ ಮೆತ್ತನೆಯ ಸೋಫಾ ಮೇಲೊರಗಿದ.

ಐದೇ ನಿಮಿಷಗಳಲ್ಲಿ ವೀಣಾ ಸಿದ್ಧಳಾಗಿ ಬಂದುಬಿಟ್ಟಳು. ಕೇಶವ ಅವಳೆಡೆಗೆ ತಿರುಗಿಯೂ ನೋಡಲಿಲ್ಲ.

"ನಡೆಯಿರಿ ಹೋಗೋಣ" ಎಂದಳು ವೀಣಾ ಮೆಲುವಾಗಿ.

"ನಡೆಯೋದೂ ಇಲ್ಲ, ಹೋಗೋದೂ ಇಲ್ಲ... ಎಲ್ಲಾ ಹಳೇ ಕತೇನೇ...ಯಾವುದರಲ್ಲಿ ಕಡಮೆ ಮಾಡದೇ ಹೋದರೂ ಆ ಕೊರಗು ಮಾತ್ರ ತಪ್ಪಲಿಲ್ಲ" ಸಿಟ್ಟಿನಿಂದ ಹೇಳಿದ ಕೇಶವ.

"ಇನ್ನೊಂದು ಸಲ ಹೀಗೆ ಮಾಡೋಲ್ಲ. ಈ ಸಲಕ್ಕೆ ಕ್ಷಮಿಸಿ ಬಿಡಿ"—ವೀಣಾ ಅಪರಾಧಿಯಂತೆ ತಲೆತಗ್ಗಿಸಿ ನುಡಿದಳು. ಆಗಲೇ ಅವಳ ಕಂಠ ಗದ್ಗದವಾಗತೊಡಗಿತ್ತು. ಕಣ್ಣುಗಳಲ್ಲಿ ನೀರು ತುಂಬಿತ್ತು. "ನನ್ನ ಮನದಳಲನ್ನು ಇವರೇಕೆ ಅರಿಯರು?" ಎಂದು ಕೇಳುವಂತಿತ್ತು ಅವಳ ನೋಟ.

ಕೇಶವ ಮುಂದೆ ಮಾತಾಡಲಿಲ್ಲ. ಷೂಗಳನ್ನು ಬಿಚ್ಚಿಟ್ಟು ಡ್ರೈವರನಿಗೆ "ಕಾರನ್ನು ಷೆಡ್ಡಿಗೆ ತೆಗೆದುಕೊಂಡು ಹೋಗು" ಎಂದು ಕಾರಿನ ಬೀಗದಕೈ ಕೊಟ್ಟ.

"ನಾನೂ ನಿಮ್ಮ ಜೊತೆ ಹೊರಟಿದೀನಿ—ನಡೆಯಿರಿ ಹೋಗೋಣ...." ಕಕ್ಕಾಬಿಕ್ಕಿಯಾಗಿ ವೀಣಾ ನುಡಿದಳು.

"ನನ್ನ ಜೊತೆ ಯಾಕೆ? ಇನ್ನು ಯಾರ ಜೊತೇಲಿ ಬೇಕಾದರೂ ಹೋಗಬಹುದು" —ಎಂದವನೇ ಕೇಶವ ಮನೆಬಿಟ್ಟು ಹೊರಟು ಹೋದ.

ಪತಿಯ ಬಿರುನುಡಿಗಳನ್ನು ಕೇಳಲಾರದೆ ವೀಣಾ ಅಲ್ಲಿಯೇ ಸೋಫಾದ ಮೇಲೆ ಕುಸಿದು ಕುಳಿತಳು. ಕಣ್ಣುಗಳು ಕಣ್ಣೀರಿನ ಕಾರಂಜಿಗಳಾದವು.

ನಿಮಿಷ ನಿಮಿಷಗಳುರುಳಿ ಹೋದವು ...ಭಾರವಾದ ಹೃದಯದಿಂದ ವೀಣಾ ತನ್ನ ರೂಮಿಗೆ ಹೋಗಿ ಮಂಚದ ಮೇಲುರುಳಿಕೊಂಡಳು.

ನಾನು ಮಾಡಿದ್ದು ತಪ್ಪೇ? ಅದು ನನಗೇನೂ ತಪ್ಪೆನಿಸುವುದಿಲ್ಲ. ಏಕೆಂದರೆ ನನ್ನ ಸ್ಥಿತಿಯಲ್ಲಿ ಅವರೇ ಇದ್ದಿದ್ದರೆ, ಅವರೂ ಹೀಗೆಯೇ ಮಾಡುತ್ತಿದ್ದರು....

ಪತಿಯ ಆ ವರ್ತನೆಯನ್ನು ನೆನೆದು ಅವಳಿಗೆನಿಸಿತು....ಈ ವೈಭೋಗ ಯಾವ ಸುಖಕ್ಕಾಗಿ?....ಈ ಕಾರು, ಈ ಬಂಗಲೆ ಈ ಒಡವೆ ವಸ್ತ್ರ—ಎಲ್ಲವೂ ಏತಕ್ಕಾಗಿ? ಹಾಯಾಗಿ ಮಾತಾಡುವಷ್ಟೇ ಪ್ರಾಣ ಅನುಸರಿಸಿದ್ದರೆ....

○ ○ ○

'ಸ್ವಾಮೀ—ಪೋಸ್ಟ್ ಬಂದಿದೆ...' ಆಳು ಮಾದ ಕೇಶವನ ಕೈಗೆ ಕೆಲವು ಕಾಗದ ಪತ್ರಗಳನ್ನು ಕೊಡುತ್ತಿದ್ದಂತೆಯೇ ವೀಣಾ ಸರಸರನೆ ತನ್ನ ರೂಮಿಗೆ ನಡೆದಳು. ಎಂತಹ ಸ್ವಾರಸ್ಯದ ಸುದ್ದಿ ಇರಲಿ, ವೀಣಾ ಆಯಾ ದಿನದ ಅಂಚೆಯೆಂದರೆ ಅಲಕ್ಷಿಸುತ್ತಿದ್ದಳು. ಕೇಶವನ ದನಿ ಕೇಳಿಸಿತೆಂದರೆ ಅವಳ ಕಣ್ಣುಗಳಿಂದ ಗಂಗೆ ಯಮುನೆಯರೇ ಹರಿದು ಬರುತ್ತಿದ್ದರು. ಪೋಸ್ಟ್ ಎಂದ ಕೂಡಲೆ ವೀಣಾ ತನ್ನ ರೂಮಿಗೆ ಹೋಗಿ ಮತ್ತೇನನ್ನೋ ಓದತೊಡಗುತ್ತಿದ್ದುದನ್ನು ಕೇಶವನು ಗಮನಿಸಿದ್ದ. ಆದರೆ ಅದೇನೆಂದು ವಿವರವಾಗಿ ಮಾತ್ರ ತಿಳಿದಿರಲಿಲ್ಲ. ಈ ಗುಟ್ಟನ್ನು ರಟ್ಟು ಮಾಡಿಯೇ ಬಿಡುತ್ತೇನೆಂದು ಕೇಶವ ಸದ್ದು ಮಾಡದೆ ಬೆಕ್ಕಿನಂತೆ ಹೆಜ್ಜೆ ಇಟ್ಟುಕೊಂಡು ವೀಣಾಳ ಕೋಣೆಯನ್ನು ಪ್ರವೇಶಿಸಿದ. ವೀಣಾ ಹಾಸಿಗೆಗೊರಗಿ ಅದಾವುದೋ ಪತ್ರವನ್ನೋದುತ್ತಿದ್ದಳು. ಪಕ್ಕದಲ್ಲಿಯೇ ಕವರೊಂದು ಬಿದ್ದಿತ್ತು. ಮೊದಲು ತನಗೆ ಪೋಸ್ಟ್ ಎಲ್ಲವನ್ನೂ ಕೊಡುವ ಮುಂಚೆಯೇ ವೀಣಾ ತನಗೆ ಬಂದ ಪೋಸ್ಟನ್ನು ಅವನಿಂದಲೇ ತೆಗೆದುಕೊಂಡು ಬಿಡುತ್ತಿದ್ದಳೆಂದೆನಿಸಿತು—ಅವನಿಗೆ. ತನಗೆ ತೋರಿಸದೆ ಓದಬೇಕಾದರೆ ಅದೇನೋ ಗುಟ್ಟಿನ ಸಂಗತಿಯಿರಬೇಕು. ಯಾರು ಬರೆದ ಪತ್ರಗಳೋ... ದಿನವೂ ಓದುತ್ತಾಳೆ.... ಅವಳನ್ನೇ ಕೇಳಿದರೆ ಬಹುಶಃ ಹೇಳಲಾರಳು... ಎಲ್ಲಿಯಾದರೂ ಮುಚ್ಚಿಟ್ಟು ಬಿಡಬಹುದು... ಎಂತೆಲ್ಲಾ ಎಣಿಸುತ್ತಾ ಕೇಶವ ಸದ್ದಾಗದಂತೆ ಮಂಚದ ಬಳಿ ಬಂದ. ವೀಣಾ ಅವನನ್ನು ಗಮನಿಸಲೇ ಇಲ್ಲ. ಅವಳ ಗಮನವೆಲ್ಲಾ ಕೈಯಲ್ಲಿದ್ದ ಕಾಗದದ ಮೇಲೇ ಕೇಂದ್ರೀಕೃತವಾಗಿತ್ತು. ಕ್ಷಣಮಾತ್ರದಲ್ಲಿ ಆ ಪತ್ರ ಕೇಶವನ ಕೈಯಲ್ಲಿ ಬಂದು ಕುಳಿತಿತ್ತು.

"ಅಯ್ಯೋ' ಎಂದು ಗಾಬರಿಯಿಂದ ಹಿಂತಿರುಗಿ ನೋಡಿದಳು ವೀಣಾ. ಕೇಶವ ಆಗಲೇ ಕಾಗದವನ್ನೋದಲಾರಂಭಿಸಿದ್ದ;

"ಅಯ್ಯೋ ಅದು ನನ್ನ ಕಾಗದ, ಕೊಟ್ಟು ಬಿಡಿ.... ಅದು ತಮಗೆ ಬೇಕಿರೋದು_' ಅಂಗಲಾಚತೊಡಗಿದಳು ವೀಣಾ,

ಅವಳ ಬೇಡಿಕೆಯನ್ನು ಕಿವಿಯ ಮೇಲೇ ಹಾಕಿಕೊಳ್ಳದೆ ಕಾಗದ ಓದಿ ಮುಗಿಸಿದ ಕೇಶವ ಸಿಟ್ಟಿನಿಂದ ಅಂದ—"ಯಾರೀ ಈ ವಸಂತ"

"ಕಾಗದ ಕೊಡಿ ಮೊದಲ, ಹೇಳ್ತೀನಿ..." ವೀಣಾ ಕೇಶವನ ಕೈಯಿಂದ ಕಾಗದವನ್ನು ಕಿತ್ತುಕೊಳ್ಳುತ್ತ ಅಂದಳು.

ಕೇಶವ ಅದನ್ನು ಕೋಟಿನ ಒಳಜೇಬಿನಲ್ಲಿ ಭದ್ರಪಡಿಸಿ ಹೇಳಿದ—'ವೀಣಾ, ಇಷ್ಟು ದಿನವೇನೋ ನನ್ನಿಂದ ಮುಚ್ಚಿಡೋಕಾಯ್ತು, ಇನ್ನಾಗಲ್ಲ, ಹೇಳಿಬಿಡು ನಿನ್ನ ಕಥೇನೆಲ್ಲಾ ...."

'ವಸಂತಾ....' ಎಂದು ಕಿರುಚಿ ಅಲ್ಲಿಯೇ ಕುಸಿದು ಕುಳಿತಳು, ವೀಣಾ. ಅವಳ ಕಂಗಳಿಂದ ನೀರು ಧಾರಾಕಾರವಾಗಿ ಹರಿಯಲಾರಂಭಿಸಿತ್ತು.

"ಹೂಂ.... ಹೇಳು ನಿನ್ನ ಪೂರ್ವ ಕಥೇನ— ಅದಕ್ಕೇ ನಿನ್ನಪ್ಪ ನಾಕು ಲಕ್ಷಕ್ಕಿಂತ ಜಾಸ್ತಿ ವರದಕ್ಷಿಣೆ ಕೊಟ್ಟು ನಿನ್ನ ಮನೆಯಿಂದ ಸಾಗಹಾಕಿರೋದು.'

ವೀಣಾ ಬಹಳ ಹೊತ್ತು ಬಿಕ್ಕಿ ಬಿಕ್ಕಿ ಅಳುತ್ತಲೇ ಇದ್ದಳು. ಆದರೆ ಕೇಶವನ

(ಮುನ್ನೊಂದನೇ ಪುಟ ನೋಡಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
90 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೧.

Phone— 5711, 5712, 5713 } 3 Lines.

ಫೋನ್ : 526 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೨೨
VOL. 48
No. 22

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೩—೨—೧೯೬೯

ಸ್ಥಾಪಕರು: ದಿ। ಎ. ಬಿ. ಶೆಟ್ಟರು
ಸಂಪಾದಕರು: ಕೆ. ಹೊನ್ನಯ್ಯ ಶೆಟ್ಟಿ

ಅಣ್ಣಾದೊರೈ ನಾಯಕತ್ವ

ಅಂತಕನ ದೂತರಿಗೆ ಕಿಂಚಿತ್ತೂ ದಯೆಯಿಲ್ಲವೆಂಬುದು ನಿಜ. ಹಾಗಾಗಿ ತಮಿಳುನಾಡಿನ ಮುಖ್ಯ ಮಂತ್ರಿಯಾಗಿದ್ದ ಶ್ರೀ ಅಣ್ಣಾದೊರೈಯವರು ಕಾಲನ ಕರೆಗೆ ಓಗೊಡಬೇಕಾಗಿ ಬಂದುದು ಸಹಜವಾದರೂ ಅದು ತೀರ ಅಕಾಲಿಕವೆನ್ನಲೇಬೇಕು. ರಾಜ್ಯಕೀಯ ಕಾರಣಕ್ಕಾಗಿ ಮಿತ್ರರಿಂದಲೂ ಶತ್ರುಗಳಿಂದಲೂ ಸಮಾನವಾಗಿ ಪ್ರೀತಿಸಲ್ಪಟ್ಟ ಈ ನಾಯಕನ ವ್ಯಕ್ತಿತ್ವವು ವಿಶಿಷ್ಟವಾದುದು. ಇಂದ್ರಜಾಲದಂತೆ ಸಾಧನೆಯಾದ ಅಣ್ಣಾರ ಮಹತ್ವ, ಉದಾರಾಂತಃಕರಣಗಳು ಸದಾ ಸ್ಮರಿಸಲ್ಪಡಬೇಕಾದುವು. ಅಣ್ಣಾ ರಾಜ್ಯಕೀಯವನ್ನು ಬಯಸಿರಲಿಲ್ಲ; ಅವರು ಸುಸಂಸ್ಕೃತ ಸುಶಿಕ್ಷಿತ ವ್ಯಕ್ತಿಯಾಗಿದ್ದು ಅನಿರೀಕ್ಷಿತವಾಗಿ ರಾಜ್ಯಕೀಯ ಬಿರುಗಾಳಿಗೆ ಸಿಕ್ಕಿ, ಅದರಲ್ಲೇ ಬಹುದೂರ ಹಾರಿಬಿಟ್ಟರು. ಅದು ನಡೆದದ್ದು ಇ. ವಿ. ರಾಮಸ್ವಾಮಿ ನಾಯ್ಕರಿಂದ. ಪ್ರತ್ಯೇಕ ದ್ರಾವಿಡನಾಡಿನ ಕನಸು ಕಾಣುತಿದ್ದ ನಾಯ್ಕರು ಹಲವಾರು ತರುಣರನ್ನು ತಮ್ಮತ್ತ ಆಕರ್ಷಿಸಿದರು—ಈ ತರುಣರಲ್ಲಿ ಹೆಚ್ಚಿನವರು ಏನನ್ನೂ ಬಗೆಯದವರು; ಉತ್ಸಾಹಿಗಳು, ಧೀರ ಕಾರ್ಯಕರ್ತರು. ಈ ಯುವಕರು ಅವಶ್ಯವೆನಿಸಿದರೆ, ತಮ್ಮ ಪ್ರಾಣವನ್ನೂ ಪಣವಿಟ್ಟು ದುಡಿಯಬಲ್ಲ ಸೇವಾವ್ರತರಾಗಿದ್ದರು. ಈ ಎಂಟೆದೆಯವರಲ್ಲಿ ಸುಸಂಸ್ಕೃತ—ಸುಶಿಕ್ಷಿತ ಅಣ್ಣಾದೊರೈ ಒಬ್ಬರು.

ಕಾಂಜೀವರಂ ಪಟ್ಟಣದ ಅಣ್ಣಾದೊರೈ ತನ್ನ ವ್ಯಕ್ತಿತ್ವದ ಪ್ರಭಾವದಿಂದ ಅಲ್ಪಾವಧಿಯಲ್ಲಿಯೇ ನಾಯ್ಕರ್ ಅವರ ಅಗ್ರದೂತರೆನಿಸಿದರು. ಆದರೆ, ಕೆಲ ಸಮಯದಲ್ಲೇ ನಾಯ್ಕರ ಮತ್ತು ಅವರ ನಡುವೆ ಭಿನ್ನಾಭಿಪ್ರಾಯ ತಲೆದೋರಿ ಇವರು ದ್ರಾವಿಡ ಮುನ್ನೇತ್ರ ಕಳಗಂ ಅನ್ನು ಸ್ಥಾಪಿಸಿದರು. ತಮಿಳುನಾಡನ್ನು ಭಾರತೀಯ ಒಕ್ಕೂಟದಿಂದ ಬೇರೆ ಮಾಡಬೇಕೆಂಬ ಮಾತು ಆಗ ಭಾರೀ ಪ್ರಚಾರದಲ್ಲಿತ್ತು. ಈಗಲೂ ಇದೆ ಎನ್ನೋಣ. ಇದರ ಬಿಸಿ ಕೇಂದ್ರ ಸರಕಾರಕ್ಕೂ ತಾಗಿತು. ಇದೇ ಸಮಯದಲ್ಲಿ ಕೇಂದ್ರವು ರಾಜ್ಯಕೀಯ ಪ್ರತ್ಯೇಕತಾ ವಿರೋಧಿ ಶಾಸನವನ್ನು ಸ್ವೀಕರಿಸಿತು. ಅಣ್ಣಾದೊರೈ ತಮ್ಮ ಪಕ್ಷಕ್ಕೆ ಮತ್ತೊಂದು ದಾರಿಯನ್ನು ತೋರಿಸಿದರು. ಪ್ರತ್ಯೇಕತೆಯ ಬಗ್ಗೆ ಅವರಿಗೆ ಒಲವಿರಲಿಲ್ಲ. ಆದರೆ, ಅವರ ಕಾಂಗ್ರೆಸ್ ವಿರೋಧ ಮಾತ್ರ ತೀಕ್ಷ್ಣವಾದುದು; ಅತ್ಯಂತ ಕಠೋರವಾದದ್ದು. ಅವರ ರಾಜ್ಯಕೀಯ ಧೋರಣೆ ಬಹಳ ಸ್ಪಷ್ಟ. ತನ್ನ ಉಳಿವು—ಅಳಿವುಗಳೆರಡೂ ಪ್ರಜಾಪ್ರಭುತ್ವದಿಂದ ಎಂಬವರು ತಿಳಿದಿದ್ದರು, ೧೯೫೭ರ ಸಾರ್ವತ್ರಿಕ ಚುನಾವಣೆಗಳಲ್ಲಿ ಅಣ್ಣಾದೊರೈಯವರ ಪಕ್ಷ ಸಾರ್ವತ್ರಿಕ ಚುನಾವಣಾರಂಗಕ್ಕಿಳಿಯಿತು. ಪ್ರಬಲ ಪರಾಜಯವನ್ನು ಉಂಡಿತು. ಇದರಿಂದ ಅಣ್ಣಾ ಕಂಗೆಡಲಿಲ್ಲ; ಎದೆಗುಂದಲಿಲ್ಲ. ಅವರು ತನಗನುಕೂಲ ವೇದಿಕೆಯ ನಿರ್ಮಾಣ ಮಾಡತೊಡಗಿದರು. ೧೯೬೭ರಲ್ಲಿ ಡಿಎಂಕೆ ಗಳಿಸಿದ ಅದ್ಭುತ ವಿಜಯ ಆ ಪಕ್ಷದ ನಾಯಕರನ್ನು ದಂಗುಬಡಿಸಿತ್ತು. ಏಕೆಂದರೆ ಅದವರಿಗೆ ಅನಿರೀಕ್ಷಿತವಿತ್ತು. ಅದುವರೆಗೆ ಪಾರ್ಲಿಮೆಂಟಿನಲ್ಲಿದ್ದ ಅಣ್ಣಾ ಮದ್ರಾಸದ ಮುಖ್ಯಮಂತ್ರಿಯಾಗಿ ರಾಜ್ಯದಲ್ಲಿ ನೆಲಸತೊಡಗಿದರು. ಇಲ್ಲಿ ಸುಮಾರು ಎರಡು ವರ್ಷಗಳ ಕಾಲದ ಆಡಳಿತಾವಧಿಯಲ್ಲಿಯೇ ಅವರು ತಮ್ಮ ಆಡಳಿತ ಸಾಮರ್ಥ್ಯ, ನಾಯಕತ್ವ ಮತ್ತು ರಾಜ್ಯಕೀಯ ಧುರಂಧರತೆಗಳನ್ನು ಲೋಕಕ್ಕೆ ತೋರಿಸಿಕೊಟ್ಟರು. ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ನಂತರ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ರಚಿತವಾದರೂ ಅವುಗಳೆಲ್ಲ ಕಾಮನಬಿಲ್ಲಿನಂತಿದ್ದುವು; ಇವೆ. ಇದಕ್ಕೆ ತಮಿಳುನಾಡು ಸರಕಾರ ಅಪವಾದ. ಅಲ್ಲಿನ ಡಿಎಂಕೆ ಸರಕಾರ ನಿಚ್ಚಳ ಬಹುಮತವನ್ನು ಪಡೆದುದರಿಂದ ಅದು ಸುಸ್ಥಿರವಾಗಿಯೇ ಉಳಿಯಿತು; ಮಾತ್ರವಲ್ಲ, ರಾಜ್ಯಕೀಯ ಮುತ್ಸದ್ದಿತನವನ್ನೂ ಉಳಿಸಿಕೊಂಡಿತು. ರಾಜ್ಯ—ಕೇಂದ್ರಗಳ ಸಂಬಂಧದಲ್ಲಿ ಹೊಡೆದಾಟ ಆರಂಭವಾದರೂ ಅಣ್ಣಾ ಇಂತಹ ವಿರಸಕ್ಕೆ ಅವಕಾಶ ಕೊಡದೆ ಮಧುರ ಸಂಬಂಧವನ್ನು ಉಳಿಸಲು ಪ್ರಯತ್ನಿಸಿದರು; ಮತ್ತು ಅದರಲ್ಲಿ ಯಶವನ್ನೂ ಗಳಿಸಿದರು. ಮೊನ್ನೆ ಮೊನ್ನೆ ಮದ್ರಾಸದಲ್ಲಿ ನಡೆದ ಅಣ್ಣಾ ಶೋಕ ಅಭಿವ್ಯಕ್ತಿ ಸಭೆಯೊಂದರಲ್ಲಿ ಪ್ರಧಾನಿ ಇಂದಿರಾಗಾಂಧಿ ರವರು ಭಾಷಣ ಮಾಡುತ್ತ ಅಣ್ಣಾರ ಉನ್ನತ ವ್ಯಕ್ತಿತ್ವ ಮತ್ತು ನೀತಿಯನ್ನು ಪ್ರಶಂಸಿಸಿದ್ದನ್ನು ನೆನಪಿಸಬಹುದು. ಅಣ್ಣಾರ ರಾಜ್ಯಕೀಯ ನಿಲುವಿಗಿದೊಂದು ಜ್ವಲಂತ ನಿದರ್ಶನ. ಭಾಷಾ ವಿಷಯದಲ್ಲಿ ಕೇಂದ್ರ—ರಾಜ್ಯಗಳ ನಡುವೆ ಭಿನ್ನಮತವಿದ್ದರೂ ಮಿಕ್ಕೆಲ್ಲವುಗಳಲ್ಲಿನ ಮಧುರ ಸಂಬಂಧ ವಿಶ್ವಾಸ ರಾಜ್ಯಕ್ಕೂ ಕೇಂದ್ರಕ್ಕೂ ಇದ್ದುದೆಂದು ಹೇಳಬಹುದು. ಅಣ್ಣಾದೊರೈ ತಮಿಳುನಾಡಿನಲ್ಲಿಯೂ ಹೊರಗೂ 'ಅಣ್ಣಾ' ಎಂದು ಕರೆಯಲ್ಪಟ್ಟರು.

ಕ್ಯಾನ್ಸರ್ ಚಿಕಿತ್ಸೆಗೆಂದು ಅಮೇರಿಕಕ್ಕೆ ಅಣ್ಣಾ ಹೋದರು. ಯಶಸ್ವೀ ಶಸ್ತ್ರಚಿಕಿತ್ಸೆ ನಡೆಸಿ ಮರಳಿದರು; ಮತ್ತೆ ಇದು ಮರುಕೊಳಿಸಿತು. ಅಣ್ಣಾರ ಆರೋಗ್ಯ ಹದಗೆಟ್ಟಿತು. ಐದು ದಿನಗಳ ಜೀವನ-ಮರಣಗಳೊಡನೆ ಭಯಾನಕ ಹೋರಾಟ ನಡೆಸಿ ಕೊನೆಗೂ ಅಣ್ಣಾ ಇನ್ನಿಲ್ಲವಾದರು. ಅಣ್ಣ—ತಮ್ಮ—ತಂಗಿಯರನ್ನು ಅನಾಥರನ್ನಾಗಿಸಿ ದೀರ್ಘ ಪ್ರಯಾಣ ಮಾಡಿದರು. ಅವರನ್ನುಳಿಸಿಕೊಳ್ಳಲು ಮಾಡಿದ ಭಗೀರಥ ಪ್ರಯತ್ನ, ವೈದ್ಯವೃಂದವು ಮಾಡಿದ ಸೆಣಸಾಟ ನಿಷ್ಫಲವಾಯಿತು. ಅಣ್ಣಾರ ಪಾರ್ಥಿವ ಶರೀರದ ದರ್ಶನ ಮತ್ತು ಅಂತ್ಯ ಸಂಸ್ಕಾರಗಳ ವೇಳೆ ಸೇರಿದ ಜನಸಂದಣಿ, ಅಂದು ನಡೆದ ದುರ್ಘಟನೆಗಳು ಅಣ್ಣಾರ ಜನಪ್ರಿಯತೆಯನ್ನು ಸಾರಿ ಹೇಳುತ್ತವೆ. ರಾಜ್ಯದಲ್ಲಿ, ನೆರೆಹೊರೆಯ ರಾಜ್ಯಗಳಲ್ಲಿ, ದೇಶದಲ್ಲಿ ಅತ್ಯಲ್ಪ ಕಾಲಾವಧಿಯಲ್ಲೇ ತೇಜಸ್ವಿ ನೇತಾರರಾಗಿ ಮೆರೆದ ಅಣ್ಣಾರನ್ನು ಯಾರೂ ಮರೆಯಲಾರರು. ಭಾರತದಂತಹ ಒಕ್ಕೂಟ ರಾಷ್ಟ್ರದಲ್ಲಿ ರಾಜ್ಯ—ಕೇಂದ್ರಗಳಲ್ಲಿ ವಿಭಿನ್ನ ಪಕ್ಷಗಳು ಅಧಿಕಾರಾರೂಢವಾಗಿದ್ದರೂ ಹೊಡೆದಾಟ ಅನವಶ್ಯ; ಮಧುರಬಾಂಧವ್ಯ ಸಾಧ್ಯವೆಂಬುದೇ ಅಣ್ಣಾರು ನಮಗೆ ಬಿಟ್ಟು ಹೋದ ತನ್ನ ಸಂದೇಶ. ಇದನ್ನು ಎಲ್ಲ ಪಕ್ಷಗಳ ರಾಜ್ಯಕೀಯ ಧುರೀಣರು ಗಮನಿಸುವುದನ್ನು ಕಲಿಯಬೇಕು. ಅಣ್ಣಾರಿಗೆ ಇದಕ್ಕಿಂತ ಬೇರೆ ಶ್ರದ್ಧಾಂಜಲಿ ಅನಗತ್ಯ. ಈಗ ತಮಿಳುನಾಡಿನ ಮುಖ್ಯ ಮಂತ್ರಿಯಾಗಿ ಬಂದ ಕರುಣಾನಿಧಿಯವರು ಅಣ್ಣಾರ ಮಾರ್ಗವನ್ನು ಮೆಟ್ಟದೆ ಹೋದರೆ ಡಿಎಂಕೆಯೂ ರಾಜ್ಯಕೀಯವಾಗಿ ದುರಂತಕ್ಕೆ ಗುರಿಯಾಗಬೇಕಾದೀತು.

ಜಾನಪದ ಸಮ್ಮೇಳನ

ಇದೇ ತಿಂಗಳ ಮೂರು, ನಾಲ್ಕು ಮತ್ತು ಐದನೇ ತಾರೀಕುಗಳಲ್ಲಿ ಮಂಗಳೂರಿನಲ್ಲಿ ಜಾನಪದ ಸಮ್ಮೇಳನ ನಡೆಯಿತು. ಇದರಲ್ಲಿ ಜಾನಪದ ಕಲಾ ಪ್ರದರ್ಶನ ಮತ್ತು ಸಾಹಿತ್ಯ ಗೋಷ್ಠಿಗಳು ನಿರಾತಂಕವಾಗಿ ಸಾಗಿದುವು. ದೇಶಕ್ಕೆ ಸ್ವಾತಂತ್ರ್ಯ ಬಂದ ವೇಳೆ, ಸ್ವಾತಂತ್ರ್ಯ ಜನತೆಗೆ ಲಭ್ಯವಾದ ವೇಳೆ ಹಲವಾರು ಉತ್ಸವಗಳು ನಡೆದುವು. ಇವುಗಳಲ್ಲಿ ಗೋಷ್ಠಿಗಳು, ಮೇಳಗಳು ನ ಸೇರಿದರ ಪ್ರದರ್ಶನ ಸಾಧ್ಯವಿಲ್ಲ. ಆದರೆ ಜಾನಪದ ಸಮ್ಮೇಳನವು ಪ್ರಾಯಃ ಇಂತಹ ಸಾಮಾನ್ಯಾಭಿಪ್ರಾಯಕ್ಕೆ ಅಪವಾದವಾಗಿತ್ತು. ಚರ್ಚಾಗೋಷ್ಠಿಗಳು ಉನ್ನತ ಮಟ್ಟದ್ದಾದರೂ ಅವುಗಳಿಂದ ಬುದ್ಧಿಜೀವಿಗಳ ಕಲಾಭಿರುಚಿ ಮಾತ್ರ ಘಟಿಸುವುದನ್ನು ಎಲ್ಲೆಲ್ಲಿಯೂ ನೋಡುತ್ತೇವೆ. ಮಂಗಳೂರಿನ ಸಮ್ಮೇಳನದಲ್ಲಿ "ಕಲಾಪ್ರದರ್ಶನ" ದತ್ತ ವಿಶೇಷ ಗಮನ ನೀಡಲಾಗಿದ್ದು ಇದು ಶ್ರೀಸಾಮಾನ್ಯನಿಗೂ ಜಾನಪದ ಸಮ್ಮೇಳನವೆಂದು ತೋರಿಸಿಕೊಟ್ಟಿತು. ದಕ್ಷಿಣ ಕನ್ನಡದ ಸಾಮಾನ್ಯವಾಗಿ ಎಲ್ಲ ಬಗೆಯ ಜಾನಪದ ಪ್ರಕಾರಗಳು, ಇವು ಒಂದಕ್ಕೆ ಹತ್ತಿರ, ಮಾತ್ರವಲ್ಲದೆ, ಕನ್ನಡನಾಡಿನ ಪ್ರಸಿದ್ಧ ಜಾನಪದ ಕಲೆಗಳನ್ನೂ ಯಾರಾದರೂ ನೋಡಿ ಮೆಚ್ಚಬಹುದಿತ್ತು. ತನ್ನ ಮರೆಯ ಕಂಪನ್ನು ಅರಿಯದೆ ಹೊರಗೆ ಹುಡುಕುವ ನಮ್ಮ ಕಲಾವಿದರ, ಕಲಾಪ್ರೇಮಿಗಳ ಕಣ್ಣುಗಳು ತೆರೆದುವೆಂದರೆ ಈ ಸಮ್ಮೇಳನ ಸಾರ್ಥಕ. ಇಂತಹ ಅವಕಾಶವೊದಗಿಸಿಕೊಟ್ಟ ಜಿಲ್ಲೆಯ ಹಿಂದಿನ ಅಧಿಕಾರಿ ಶ್ರೀ ನಾಗೇಗೌಡ, ಎ. ನಾರಾಯಣ ನಾಯಕ್, ಪಿ. ಕೆ. ಲಕ್ಷ್ಮೀನಾರಾಯಣ ಆಳ್ವ, ವೆಂಕಟಾಚಲದಾಸ ನಾಯಕ ಇವರ ಪರಿಶ್ರಮ ನಿಜಕ್ಕೂ ಪ್ರಶಂಸನೀಯ.

ಉಡ್ಪಿ ಮುನ್ಸಿಫ್ ಕೋರ್ಟಿನ

O. S. No. 456/68

A. P. ಅಂತೋನಿ — ವಾದಿ

ಮತ್ತು

U. ಶಣ್ಮುಗದಾಸನ್, ಸಿಮ್ಯನ್ಸ ದಾಗ, ಉಡ್ಪಿ ಕಸಬಾ ಕಾಡಬೆಟ್ಟು —ಪ್ರತಿವಾದಿ.

ವಾದಿಗೆ ಪ್ರತಿವಾದಿಯು ರೂ. 3000/-ಕ್ಕೆ ತಾ. 7-7-68ರಲ್ಲು ಬರೆಕೊಟ್ಟ ಡಿಮಾಂಡ ನೋಟು ಪ್ರಕಾರ ಬರಬೇಕಾದ ಅಸಲು ಬಡ್ಡಿ ಸಹಿತ ರೂ. 3050-37ಕ್ಕೆ ದಾಖಲು ಮಾಡಿದ ಮೇಲಿನ ವ್ಯಾಜ್ಯವು ತಾ. 19-2-69ಕ್ಕೆ ಇಟ್ಟಿದೆ. ಪ್ರತಿವಾದಿಯು ಸದ್ರಿ ತಾ. 19-2-69ನೇ ಪೂರ್ವಾಹ್ನ ಘಂಟೆ 11ಕ್ಕೆ ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಲಿಕ್ಕೆ ತಪ್ಪಿದರೆ ಪ್ರತಿವಾದಿಯ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(Sd.) GRATIAN C. REGO,
Vakil for Plaintiff.

ಉಡ್ಪಿ, ತಾರೀಕು 8-2-69.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 655/66. I.A. No. I

ವೆಂಕಪ್ಪ ಶೆಟ್ಟಿ ಸಹಾ —ವಾದಿ

ಕಮಲ ಶೆಟ್ಟಿ ಸಹಾ —ಪ್ರತಿವಾದಿ

ಮಂಗಳೂರು ತಾಲ್ಲೂ ಎಳಿಂಜೆ ಗ್ರಾಮದ ಕನ್ನಡಿಮನೆಯಲ್ಲಿರುವ ಪುಟ್ಟು ಶೆಟ್ಟಿ ... ಗಂಗು ಶೆಟ್ಟಿ 1, ದಾಮು ಶೆಟ್ಟಿ ... ಮುದ್ದು ಶೆಟ್ಟಿ 1, ಬಿಜಿಲು ಶೆಟ್ಟಿ ... ವಸಂತ ಶೆಟ್ಟಿ 1, ಸರಸು ಶೆಟ್ಟಿ ... ಬ ... ಶೆಟ್ಟಿ 1, ಇವರು (D 18, 22, 25, 61)ರಿಗೆ—

ಮೇಲಿನ ದಾವೆಯಲ್ಲಿ ಸ್ಥಾನಪಲ ಗತಿ ಕುರಿತು ದಾಖಲಾದ ಮೇಲ್ಕಂಡ ಸ್ಥಾನಪಲ ಬರ್ತಿ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 20-2-69ಕ್ಕೆ ಇಟ್ಟಿದ್ದು ನೀವು ಸದ್ರಿ ದಿನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

K. S. HEGDE,
Advocate for Plffs.

Karkala, 7-2-69.

ಉತ್ತರರಾಜ್ಯಗಳಲ್ಲಿ

ರಾಜಕೀಯ ಸ್ಥಿರಗೊಳ್ಳದು

ಉತ್ತರ ಭಾರತದಲ್ಲಿನ ಪಂಜಾಬು; ಉತ್ತರ ಪ್ರದೇಶ, ಬಿಹಾರ ಮತ್ತು ಬಂಗಾಳಗಳಲ್ಲಿ ಈಗತಾನೇ ಮಧ್ಯಾವಧಿ ಚುನಾವಣೆಗಳು ಆರಂಭವಾಗಿವೆ. ಇದಕ್ಕೂ ಹಿಂದಿನ ಚುನಾವಣೆಗಳಿಗೂ ಇರುವ ಅಂತರವೆಂದರೆ, ಅಂದು ಅಧಿಕಾರ ಕಾಂಗ್ರೆಸ್ಸಿನ ಕೈಯಲ್ಲಿತ್ತು; ಇಂದು ಕಾಂಗ್ರೆಸ್ ಅಧಿಕಾರದಿಂದ ದೂರವಿದ್ದು ಸ್ಪರ್ಧೆಗಿಳಿದಿದೆ. ೧೯೬೭ರ ತನಕ ಕಾಂಗ್ರೆಸಿನ ನ್ಯೂನಾತಿರೇಕಗಳ ವರ್ಣನೆಯಿಂದಲೇ ಮತದಾರರನ್ನು ಮೆಚ್ಚಿಸಬೇಕಾಗಿದ್ದ ವಿರೋಧಿ ದಳಗಳಿಗೆ ಈಗ ಜನತೆ ತಮ್ಮ ಮೇಲಿಟ್ಟ ವಿಶ್ವಾಸವನ್ನು ತಾವು ೧೯೬೭ರ ನಂತರ ಹೇಗೆ ಬಳಸಿಕೊಂಡೆವು ಎಂಬುದನ್ನೂ ವಿವರಿಸಬೇಕಾಗಿದೆ. ಮತದಾರರು ತಮಗೆ ನೀಡಿದ ಮತವನ್ನು ಅಧಿಕಾರ ಗಳಿಸಿಕೊಳ್ಳುವುದಕ್ಕಾಗಿಯೇ ಉಪಯೋಗಿಸಿಕೊಂಡು ಜನಹಿತವನ್ನು ಸಾಧಿಸಲಾರರು ಎಂಬ ಸಂದೇಹವನ್ನೂ ಇವರು ಕಿತ್ತು, ವಿಶ್ವಾಸ ಮೂಡಿಸಬೇಕಾಗಿದೆ. ಇದುವರೆಗೂ ತಮ್ಮನ್ನೇ ಸಮರ್ಥಿಸಿಕೊಂಡು ರಂಗದಲ್ಲಿಳಿದಿದ್ದ ಕಾಂಗ್ರೆಸ್ಸು ಈ ಬಾರಿ ಮೊತ್ತಮೊದಲಿಗೆ ವಿರೋಧಿ ಪಕ್ಷಗಳ ಮೇಲೆ ಆಕ್ರಮಣ ಮಾಡಬೇಕಾಗಿದೆ.

ಇದಕ್ಕೆ ಅಪವಾದವಿದ್ದರೆ, ಅದು ಪಂಜಾಬದಲ್ಲಿ ಮಾತ್ರ. ಅಲ್ಲಿ ಕಾಂಗ್ರೆಸ್ ವಿರೋಧಿ ಪಕ್ಷಗಳು ಒಂದಾಗಿ, ಅಲ್ಪ ಕಾಲವಾದರೂ ಒಂದು ಬಗೆಯ ಉತ್ತಮ ಆಡಳಿತವನ್ನು ಜನತೆಗೆ ನೀಡಿದವು. ಗುರ್ನಾಮ ಸಿಂಗರ ಸಚಿವ ಸಂಪುಟವನ್ನು ಒಡೆದು ಬೀಳಿಸಿ, ಲಚ್ಮಣ ಸಿಂಗ ಗಿಲ್‌ರೊಡನೆ ತಾವು ಸೇರಿ ಹೊಸ ಸರಕಾರ ರಚಿಸಿಕೊಂಡದ್ದನ್ನು, ಅದು ಏಕೆ ಪತನವಾಯಿತೆಂಬುದನ್ನೂ ಇಲ್ಲಿ ಕಾಂಗ್ರೆಸ್ಸು ವಿವರಿಸಬೇಕು.

ಪಂಜಾಬದಲ್ಲಿ ಇಂದು ಸಂಯುಕ್ತ ರಂಗದ ನಾವೆ ಸ್ಥಿರ-ತಂಳವಾಗಿ ಸಾಗಲಾರದು. ೧೯೬೭ರಲ್ಲಿ ಅಕಾಲಿದಳ ಮತ್ತು ಜನಸಂಘಗಳು ಸ್ವತಂತ್ರವಾಗಿಯೇ ಸ್ಪರ್ಧಿಸಿದ್ದುವು; ಕಾಂಗ್ರೆಸ್ಸಿನೊಂದಿಗೆ ಎಷ್ಟು ಹೋರಾಡಿದಂತೆಯೇ ಇವೂ ಪರಸ್ಪರ ಹೋರಾಡಿದ್ದುವು. ಅಕಾಲಿಗಳೂ ಸಂತರ ಪಂಗಡ ಮತ್ತು ಮಾಸ್ಟರ್ ಪಂಗಡವೆಂದು ಇಬ್ಭಾಗವಾಗಿದ್ದರು. ಈಗ ಅಕಾಲಿದಳ ಒಂದಾಗಿದ್ದಾರೆ; ಜನಸಂಘದೊಡನೆ ಮೈತ್ರಿ ಸಾಧಿಸಿದ್ದಾರೆ. ಹಾಗಾಗಿ ಹಿಂದೂ ಮತ್ತು ಸಿಕ್ಖರ ಮತ ಪಡೆದು ನಿಚ್ಚಳ ಬಹುಮತ ಗಳಿಸುವಲ್ಲಿ ಸಂಯುಕ್ತ ವಿಧಾಯಕ ದಳವು ಶಕ್ತವಾಗಬಹುದು. ಆದರೆ ಪಂಜಾಬದಲ್ಲಿ ಸಿಕ್ಖರು ಮತ್ತು ಹಿಂದುಗಳು ಮಾತ್ರವಿರುವುದಲ್ಲ. ಕಮ್ಯುನಿಸ್ಟ್ ಪಕ್ಷದ ಪ್ರೇರಣೆ ಪಡೆದ ಎಡಪಂಥೀಯರಿದ್ದಾರೆ. ಹಿಂದುಳಿದವರ ಹರಿಜನರ ಪಂಗಡವೂ ಇದೆ. ಇವರ ಒಲವೆತ್ತ? ಇವರ ನಡುವೆ ಸರ್ವತಂತ್ರ ಸ್ವತಂತ್ರ ಅಭ್ಯರ್ಥಿಗಳೂ ಸಾಕಷ್ಟು ಸಂಖ್ಯೆಯಲ್ಲಿ ಸ್ಪರ್ಧೆಗಿಳಿದಿದ್ದಾರೆ.

ಎಡಪಕ್ಷೀಯರಿಂದ ಅಕಾಲಿದಳ ದೂರವುಳಿದುದು ಆಗಲಿಲ್ಲವೆನ್ನುವವರಿದ್ದಾರೆ. ಸಂಯುಕ್ತರಂಗದಿಂದ ಸಿ ಪಿ ಐ ಹೊರ ನಿಲ್ಲುವಂತಾದ ಸನ್ನಿವೇಶವೂ ವಿಲಕ್ಷಣವೇ. ಅಕಾಲಿದಳ ಎಡಪಂಥೀಯರ ಬೆಂಬಲಕ್ಕಿಂತ ಬಲಪಂಥೀಯರ ಸಹಾಯವನ್ನೇ ಅಪ್ಪಿಕೊಂಡರು. ಆದೇನಿದ್ದರೂ ಇಂದಿಗೂ ಅಕಾಲಿಗಳ ಗುರಿ ಕಾಂಗ್ರೆಸ್ ವಿರೋಧ. ಕಾಂಗ್ರೆಸ್ಸ ಅಧಿಕಾರಕ್ಕೆ ಬಾರದಂತೆ ಮಾಡಲು ಅವು ಎಡ—ಬಲ ಯಾವ ಪಂಥದೊಡನೆಯೂ ಮೈತ್ರಿ ಸಾಧಿಸಲು ಸಿದ್ಧವಿದೆ.

ಆದರೆ ಕಮ್ಯುನಿಸ್ಟರೊಡನೆಯೂ ಅಕಾಲಿಗಳು ಒಪ್ಪಂದಕ್ಕೆ ಬರಲಿಲ್ಲ. ಹಾಗಾಗಿ ಜನಸಂಘವನ್ನು ಎದುರಿಸಲು ಕಮ್ಯುನಿಸ್ಟರು ಸಾಧ್ಯವಿದ್ದಲ್ಲೆಲ್ಲ ಪ್ರಯತ್ನಿಸಿದ್ದಾರೆ. ಕೆಲವೆಡೆ ಜನಸಂಘ ಮತ್ತು ಅಕಾಲಿದಳಗಳೂ ಒಬ್ಬರನ್ನೊಬ್ಬರು ಎದುರಿಸುವುದು ಅನಿವಾರ್ಯವಾಗಿದೆ. ಇದು ಕಾಂಗ್ರೆಸಿಗೆ ಶುಭಲಕ್ಷಣ. ಪ್ರಧಾನಿ ಗಾಂಧಿಯವರ ಚುನಾವಣಾ ಪ್ರಚಾರ ಸಭೆಯಲ್ಲಿ ಜನಸಂದಣಿ ಜನತೆಯೊಲವು ಕಾಂಗ್ರೆಸಿನತ್ತಲೂ ಇದೆಯೆಂದು ತೋರಿಸುತ್ತದೆ. ಆದರೂ ಕಾಂಗ್ರೆಸ್ಸು ಮತ್ತೆ ಅಧಿಕಾರಕ್ಕೆ ಬರುವುದು ಮಾತ್ರ ಆಶ್ಚರ್ಯವೆಂದೇ ಹೇಳಬೇಕು. ಪಂಜಾಬಿನ ಪರಿಸ್ಥಿತಿ ೧೯೬೭ರ ಚುನಾವಣಾ ನಂತರದಂತೆಯೇ ಅನಿಶ್ಚಿತವಾಗಿಯೇ ಉಳಿಯುವ ಸಂಭವವೇ ಹೆಚ್ಚು.

ಪಶ್ಚಿಮ ಬಂಗಾಳದಲ್ಲಿ ಸಂಯುಕ್ತರಂಗ ಸರಕಾರದ ಆಡಳಿತಾವಧಿಯೇ ಚರ್ಚೆಯ ವಿಷಯ. "ಕಾಂಗ್ರೆಸ್ಸಿನ ದುಷ್ಕೃತ್ಯ"ವೆಂದು ಚಾರಿತ್ರಿಕ ಪರ್ವಣಿಯ ವಿಷಯ. ಆದರೆ, ಕಾಂಗ್ರೆಸ್ಸು ಆಡಳಿತದಲ್ಲಿ ಸ್ಥಿರತೆಯನ್ನು ತರುವ ಉದ್ದೇಶದಿಂದ ಎಲ್ಲ ಆರೋಪಗಳನ್ನು ಸಂಯುಕ್ತರಂಗದ ತಲೆಯ ಮೇಲೆ ಹೇರುತ್ತದೆ. ಅಧಿಕಾರದಾಹ, ದುರಾಡಳಿತ ಮೊದಲಾದ ದೋಷಗಳಿಂದ ಕಾಂಗ್ರೆಸ್ಸು ಕ್ಷೀಣಿಸುವಾಗಿದ್ದರೆ, ಈಗ ಘೇರಾವೊ ಅಜಯ ಮುಖರ್ಜಿಯವರನ್ನು [illegible] ಕಳಿಸಿದ 'ಘೇರಾವ್' [illegible] ಹಾಕಿದವು ಇದಕ್ಕೆ ಸವಾಲು ಗರಿಯಿಂಬಿದೆ. ಆದೇನಿದ್ದರೂ ಈಗ ಪರಿಸ್ಥಿತಿ ಸುಗಮವಾಗುತ್ತ ಬಂದಿದೆ.

ಮಧ್ಯಾವಧಿ ಚುನಾವಣೆಗಳ, ಬಂಗಾಳದಲ್ಲಿ ಕಾಂಗ್ರೆಸ್ಸಿಗೆ ವಿರುದ್ಧವಾಗಿ ಒಂದೇ ಸಂಯುಕ್ತರಂಗ ಸ್ಪರ್ಧಿಸಿದೆ. ೧೯೬೭ ಸಿ ಪಿ ಐ ನ ಎಡ—ಬಲ ಗುಂಪುಗಳು ತಮ್ಮ ತಮ್ಮಲ್ಲೇ ಹೋರಾಡಿದ್ದುವು. ಅಜಯ ಮುಖರ್ಜಿಯವರ ಬಂಗಾಳ ಕಾಂಗ್ರೆಸ್ಸು ಬೇರೆಯಿತ್ತು. ಹಾಗಾಗಿ ಕಾಂಗ್ರೆಸ್ಸಿಗೆ ಚುನಾವಣೆಗಳು ಸುಲಭವಾಗಿಲ್ಲ. ಆದರೂ ಸಂಯುಕ್ತರಂಗಕ್ಕೆ ಹೋಗಬಹುದಾದ ಮತಗಳನ್ನು ಒಡೆಯುವ ಕೆಲವು ಪಕ್ಷಗಳೂ ಇವೆ. ಬಂಗಾಳ ನ್ಯಾಶನಲ್ ಪಾರ್ಟಿ, ಲೋಕ ಬಂಗಾಳೀ ಗುರು, ಪ್ರೋಗ್ರೆಸಿವ್ ಮುಸ್ಲಿಂ ಲೀಗ್ ಮತ್ತು ಹುಮಾಯೂನ ಕಬೀರರ ಲೋಕ ದಳಗಳು ಸ್ಪರ್ಧೆಗಿಳಿದಿವೆ. ಇಲ್ಲಿಯೂ ಪರಿಸ್ಥಿತಿ ಅನಿಶ್ಚಿತ—ಸಂಪೂರ್ಣ ಅನಿಶ್ಚಿತ.

ಆದರೆ, ಉತ್ತರ ಪ್ರದೇಶದ ರಾಜಕೀಯ ಸ್ಥಿತಿಯಿಂದು ಬದಲಾಗಿದೆ. ಕಾಂಗ್ರೆಸ್ಸಿಗೆ ಅನುಕೂಲ ಗಾಳಿ ಬೀಸುವ ಲಕ್ಷಣಗಳು ದೃಗ್ಗೋಚರವಾಗುತ್ತಿವೆ. ಸಂಯುಕ್ತ ವಿಧಾಯಕ ದಳ ಹಲವು ಬಾರಿ ಪ್ರತಿಸ್ಪರ್ಧಿಸಿಕೊಂಡರೂ ಚರಣಸಿಂಗರು ಮುಖ್ಯಮಂತ್ರಿ ಪದವನ್ನು ತ್ಯಜಿಸಿದ್ದ ಅಲ್ಲಿನ ರಾಜಕೀಯದ ತಿರುಳು. ಚರಣಸಿಂಗ ಭಾರತೀಯ ಕ್ರಾಂತಿ ದಳಕ್ಕೆ ಸ್ಪಷ್ಟ ರಾಜಕೀಯ ಸ್ವರೂಪ ನೀಡಲು ಯತ್ನಿಸಿದ್ದಾರೆ. ಕಾಂಗ್ರೆಸ್ಸಿನ ಅನೇಕ ಬ[illegible]ಜೀವಿಗಳನ್ನು ಅವರು ತನ್ನತ್ತ ಸೆಳೆದುಕೊಳ್ಳುವಲ್ಲಿ ಸಮರ್ಥರಾಗಿದ್ದಾರೆ. ಹಿಂದುಳಿದ ವರ್ಗದವರು, ಗುಡ್ಡಗಾಡ ಜನಾಂಗದವರು, ಬಡವರು ಇವರಿಂದ ಆಕರ್ಷಿತರಾಗಿದ್ದಾರೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗಲೂ ಸಿಂಗರು ಈ ವರ್ಗಗಳಿಗೆ ಪ್ರಾಧಾನ್ಯ ಕೊ

(ಒಂಭತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕು

ಗೋವಾದಲ್ಲಿ

ತಾ. 12—2—1969ರಂದು ಈ ಕೆಳಗಿನ ಸ್ಥಳಗಳಲ್ಲಿ ಇನ್ನೆರಡು ಶಾಖೆಗಳನ್ನು ತೆರೆದಿದೆ ಎಂದು ತಿಳಿಸಲು ಸಂತೋಷಪಡುತ್ತದೆ.

(೧) ಅಗೇಸಿಯಂ, ಇಲಾಸ್, ಗೋವಾ (೨) ಕರಂಜಾಲೆಂ, ಇಲಾಸ್, ಗೋವಾ

ಈ ಶಾಖೆಗಳ ಕೂಡುವಿಕೆಯಿಂದ ಸಿಂಡಿಕೇಟಿಗೆ ಗೋವಾದಲ್ಲಿ 9 ಶಾಖೆಗಳಂತಾಯಿತು.

ಗೋವಾದಲ್ಲಿಯ ಇತರ ಶಾಖೆಗಳು:

ಬೇತಿಂ, ಕುಚೋರೆಂ, ಮಾಪುಸ, ನಿವೆಲಿಂ, ಪಣಜಿ, ಪಾಲೆ, ಸಾಂಕಳಿಂ.

ಈ ಕೆಳಗಿನ ಸ್ಥಳಗಳಲ್ಲಿಯೂ ಬೇಗನೆ ತೆರೆಯಲ್ಪಡುವವು:

೧) ಕ್ವೆಲ್ಲ (ಕವಲೆಂ) ೨) ವಾಸ್ಕೊ-ಡ-ಗಾಮಾ (ಬಿಯಾನ) ೩) ಮಾರ್ಗೋವ ೪) ರೈಬಂದರ್

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

"ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗಾಗಿ ಪ್ರತಿಯೊಬ್ಬರ ಬ್ಯಾಂಕು"

ರಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

ಶಾಖೆಗಳು: 255ಕ್ಕೂ ಮಿಕ್ಕಿ. ಸಾಧನ ಸಂಪತ್ತು: ರೂ. 140 ಕೋಟಿಗಳು. ಶ್ರೀ ಟಿ. ಎ. ಪೈ, ಅಧ್ಯಕ್ಷ

ಪುತ್ತೂರು ಸೆಕೆಂಡ್ ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O.S. 390/1968.

N. ನಾರಾಯಣ, ಕೀರ್ತಿ ಕೃಷ್ಣ ಭಟ್ಟರ ಮಗ, ಬಂಟ್ವಾಳ ತಾಲೂಕು [illegible] ಗ್ರಾಮದ ದಿವಾನದಲ್ಲಿರುವವರು —ವಾದಿ

ಮತ್ತು

ಕಂಚಿರ್ಪಕ ವೆಂಕಟ್ರಮಣಯ್ಯ, ಕಂಚಿ [illegible] ವೆಂಕಟ್ರಮಣಯ್ಯನ ಮಗ, ಸುಳ್ಯ ತಾಲೂಕು ಅಮರಮೂಡ್ನೂರು ಗ್ರಾಮದ [illegible]ವರು —ಪ್ರತಿವಾದಿ

ಸದ್ರಿ ಪ್ರತಿವಾದಿಯು ವಾದಿಯಿಂದ ರೂಪಾಯಿ 3,000/- ಪಡೆದುಕೊಂಡು ವಾದಿಗೆ 15.10.1967ರಲ್ಲಿ ಬರೆದುಕೊಟ್ಟ ಪ್ರೋನೋಟಿನ ಅಸಲು ಬಡ್ಡಿ ಸಹಿತ ರೂಪಾಯಿ 3186—10 ಮತ್ತು ಕೋರ್ಟು ಖರ್ಚು ವಗೈರೆ ವಸೂಲಿ ಕುರಿತು ವಾದಿಯು ದಾಖಲು ಮಾಡಿದ ಮೇಲಿನ ದಾವೆಯಲ್ಲಿ ನಿಮಗೆ ನೋಟೀಸು ಬಗ್ಗೆ ತಾ.27-2-1969ಕ್ಕೆ ಇಟ್ಟಿರುವುದರಿಂದ ಆ ಬಾಬ್ತು ಆಕ್ಷೇಪವಿದ್ದಲ್ಲಿ ಸದ್ರಿ ದಿವಸ 11 ಗಂಟೆಗೆ ಕೋರ್ಟಿಗೆ ಹಾಜರಾಗತಕ್ಕದ್ದೆಂದು ಕೋರ್ಟು ಹುಕ್ಕುಂ ಪ್ರಕಾರ ಈ ಮೂಲಕ ತಿಳಿಸಲಾಗಿದೆ.

(Sd) N. R. Bhat,
Advocate for Plaintiff.

ಪುತ್ತೂರು, ತಾ. 3-2-1969.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 381/68

ಪದ್ಮಾವತಿ ಅಂಮ — — — ವಾದಿ
ಕಲ್ಯಾಣಿ ಅಂಮ ಕೂಡಾ—ಪ್ರತಿವಾದಿಗಳು

8ನೇ ಪ್ರತಿವಾದಿ ಭಾಸ್ಕರ, 10ನೇ ಪ್ರತಿವಾದಿ ಸುರೇಶ—ರಾಮಕೃಷ್ಣ ಕೋರ್ನಾಯರ ಮಕ್ಕಳು, ಬೆಳ್ತಂಗಡಿ ತಾಲೂಕು ಕುರುವಾಲು ಗ್ರಾಮದಲ್ಲಿರುವವರು

ಸದ್ರಿ 8 ಮತ್ತು 10ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ :

ವಾದಿಗೆ ಬರತಕ್ಕ ಜೀವನಾಂಶ ವಸೂಲಿ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು ತಾ. 20-3-69ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಉತ್ತರವನ್ನು ದಾಖಲು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯನ್ನು ಕೋರ್ಟಿನವರಿಗೆ ಯುಕ್ತವೆಂದು ತೋರಿದಂತೆ ತೀರ್ಮಾನಿಸಲ್ಪಡುವುದು.

॥ ಕೋರ್ಟು ಹುಕ್ಕುಂ ಪ್ರಕಾರ ॥

S. Soorappaya,
Vakil for Plaintiff.

ಪುತ್ತೂರು, 4.2.1969.

ಭಾರತದಲ್ಲಿ ಪ್ರಜಾಪ್ರಭುತ್ವ ವಿಫಲವೇ?

ಶ್ರೀ ಎಂ. ವಿ. ಪಡಿಯಾರ, ಬಿ. ಎ., ಸಿ. ಎ. ಐ. ಐ. ಬಿ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಲೇಖಕರು

ಜಾತೀಯತೆ ಮತ್ತು ಮತೀಯತೆಗಳು ದೇಶವನ್ನು ವಿಭಜಿಸಿ ಜಾತೀಯ ದ್ವೇಷವನ್ನು ಹುಟ್ಟಿಸಿವೆ. 'ವಿಭಿನ್ನತೆಯಲ್ಲಿ ಏಕತೆ'ಯ ಆದರ್ಶಕ್ಕೆ ಆಹ್ವಾನ ನೀಡುತ್ತಿವೆ. ಚುನಾವಣೆಗಳ ವೇಳೆ ರಾಷ್ಟ್ರೀಯ ಉಪದೇಶಕ ಪಕ್ಷಗಳೇ ಜಾತೀಯತೆಯನ್ನು ಕೆದಕುತ್ತವೆ. ಜಾತೀಯತೆ ಹರಡುವ ಮೇಲೆಯೇ ಅವು ಚುನಾವಣೆಗಳಿಗೆ ಅಭ್ಯರ್ಥಿಗಳನ್ನು ಆರಿಸುತ್ತವೆ. ಸಮಾಜದಲ್ಲಿ ಸ್ವೇಷಾದಿಗಳನ್ನು ಹುಟ್ಟಿಸಬಹುದಾದ ಈ ಉಪಕ್ರಮವೇ ಅವಕ್ಕೆ ಪ್ರಿಯವಾದುದು, ಏಕೆಂದರೆ ಅಭ್ಯರ್ಥಿಯ ವಿಜಯಕ್ಕೆ ಇದು ಸಹಾಯಕವಾಗುತ್ತದೆ.

ಭಾಷೆಯ ತಳಹದಿಯಲ್ಲಿ ದೇಶದ ರಾಜ್ಯಕೀಯ ವಿಭಜನೆಯು ಬೇರೆ ಬೇರೆ ಭಾಷೆಯಾಡುವ ಜನತೆಯಲ್ಲಿ ದ್ವೇಷ ಮತ್ತು ಮತ್ಸರವನ್ನು ಹುಟ್ಟಿಸಿದೆ. ಜಾತೀಯತೆ ಮತ್ತು ಭಾಷೀಯತೆಗಳು ನವ್ಯ ರಾಜ್ಯಕೀಯದ ಬೇರಾಗಿದ್ದು, ಇದರಿಂದ ಜಾತಿ-ಜಾತಿಗಳಲ್ಲಿ, ಮತ-ಮತಗಳಲ್ಲಿ, ರಾಜ್ಯ-ರಾಜ್ಯಗಳಲ್ಲಿ ಪ್ರತ್ಯೇಕತಾ ಮನೋವೃತ್ತಿಯನ್ನು ಬೆಳೆಸಿವೆ. ಇದರಿಂದ ರಾಷ್ಟ್ರೀಯ ಐಕ್ಯವೂ ರಾಜಕೀಯ ಸ್ಥಿರತೆಯೂ ಶಿಥಿಲಗೊಂಡಿವೆ. ಭಾರತದ ಎಲ್ಲ ಜಾತಿಗಳವರೂ ತಮ್ಮ ಜಾತೀಯ ಮತ್ತು ಭಾಷೀಯ ಪೂರ್ವಗ್ರಹಗಳನ್ನು ಬದಿಗಿಟ್ಟು ಬಲಿಷ್ಠ ಭಾರತವನ್ನು ಕಟ್ಟುವಲ್ಲಿ ರಾಷ್ಟ್ರೀಯ ಮನೋಧರ್ಮದಿಂದ ದುಡಿಯುವ ವರೆಗೆ ನಾವು ಪರಿಶ್ರಮದಿಂದ ಗಳಿಸಿದ ಸ್ವಾತಂತ್ರ್ಯವನ್ನುಳಿಸಿಕೊಳ್ಳುವ ನಂಬಿಗೆಯಿಲ್ಲ. ಪ್ರಜಾಪ್ರಭುತ್ವವು ಗರಿಗೆದರಿ ಜೀವನವನ್ನು ನಡೆಸುವಲ್ಲಿ ಅಂತ ವೈಫಲ್ಯಕ್ಕೆ ಈ ಬಗೆಯ ಸಮಾಜಘಾತುಕ ಶಕ್ತಿಗಳನ್ನು ಹತೋಟಿಗೆ ತರುವಲ್ಲಿ ನಮ್ಮ ಸರಕಾರ ವಿಫಲವಾಗಿದೆ.

ಒಮ್ಮೆ ಘೋಷಿತ ರೂಪಧಾರಣೆ ಮಾಡಿದ ನಮ್ಮ ಭಾಷಾಪ್ರಶ್ನೆಗೆ ಇನ್ನೂ ಉತ್ತರ ದೊರೆತಿಲ್ಲ. ನಮ್ಮ ನಾಯಕರು ಮಂಡಿಸಿದ ತ್ರಿಭಾಷಾ ಅಥವಾ ದ್ವಿಭಾಷಾ ಸೂತ್ರಗಳಿಗೆ ಸಾರ್ವತ್ರಿಕ ಬೆಂಬಲ ಲಭ್ಯವಿಲ್ಲ. ಈ ಪ್ರಸಂಗ ರಾಷ್ಟ್ರೀಯ ಐಕ್ಯಕ್ಕೆ ಮಾರಕವಾಗಿದೆ. ಸಂವಿಧಾನದಲ್ಲಿ ಹಿಂದಿಯು ರಾಷ್ಟ್ರೀಯ ಭಾಷೆಯೆಂದು ಸ್ವೀಕೃತವಾದುದನ್ನು ದಕ್ಷಿಣದ ರಾಜ್ಯಗಳು ವಿರೋಧಿಸುತ್ತವೆ, ಅಂದರೆ ಅಪ್ರತ್ಯಕ್ಷವಾಗಿ ಸಂವಿಧಾನದ ಗೌರವ ಮತ್ತು ಪಾವಿತ್ರ್ಯಗಳಿಗೆ ಅಗೌರವ ತೋರಿಸುತ್ತವೆ.

ರಾಜ್ಯಕಾರಣಿಗಳು:—ಶಿಕ್ಷಣ ತಜ್ಞರು ಅಲ್ಲ—ಪ್ರಾದೇಶಿಕ ಭಾಷೆಗಳನ್ನು ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮಾಧ್ಯಮ ಮಾಡಲು ಆಸಕ್ತರಾಗಿದ್ದಾರೆ. ನಮ್ಮ ಗೋರಿಯನ್ನು ನಾವೇ ಕಟ್ಟಿಕೊಳ್ಳುತ್ತೇವೆ ಎಂದೇ ಇದರ ಅರ್ಥ. ಅನ್ಯ ಜಗತ್ತಿನಿಂದ ನಾವು ಪ್ರತ್ಯೇಕವಾಗುತ್ತೇವೆ. ಪಾಶ್ಚಾತ್ಯ ದೇಶಗಳಲ್ಲಿ ನಡೆಯುತ್ತಿರುವ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಗಳಿಂದ ನಾವು ವಂಚಿತರಾಗುತ್ತೇವೆ. ಪ್ರಜಾಪ್ರಭುತ್ವವು ಪ್ರತ್ಯೇಕತೆ ಮತ್ತು ಒಡಕುಗಳನ್ನು ಬಯಸುತ್ತದೆಯೇ?

ಸೀಮಾ ವಿವಾದ ಮತ್ತು ನದೀ ನೀರಿನ ವಿವಾದಗಳು ಪರಿಹಾರ ಕಾಣದುಳಿದಿವೆ, ರಾಜ್ಯಕೀಯ ಸ್ಥಿರತೆ ಮತ್ತು ಆರ್ಥಿಕ ಪ್ರಗತಿಗಳ ಮೇಲೆ ಇವು ಆತಂಕಕಾರಿಯಾಗಿವೆ. ಆಡಳಿತ ಪಕ್ಷದ ಒಳಗಿನ ಮತ್ತು ಹೊರಗಿನ ದುಂಡಾಗಳ ಒತ್ತಡಗಳಿಗೆ ಕಿವಿಗೊಡದೆ ನಿಶ್ಚಿತ ನಿರ್ಧಾರಕ್ಕೆ ಬರುವ, ನಿರ್ಧಾರವನ್ನು ಕಾರ್ಯರೂಪಕ್ಕಿಳಿಸುವ ಎದೆಗಾರಿಕೆ ನಮ್ಮ ನಾಯಕರಿಗಿಲ್ಲವೆಂಬುದು ನಾಯಕತನದ ದಿವಾಳಿತನವಲ್ಲದೆ ಮತ್ತೇನು?

ದೇಶದ ಸಾಧನ ಸಂಪತ್ತಿಗಳನ್ನೂ ಆವಶ್ಯಕತೆಗಳನ್ನೂ ಸರಿಯಾಗಿ ಗಣನೆಗೆ ತಾರದೆ ಯೋಜನೆಯನ್ನು ರೂಪಿಸುವುದು ಪರಿಣಾಮ ರಮಣೀಯವಲ್ಲದ ಅಸಮ ಬೆಳವಣಿಗೆಗೆ ಕಾರಣವಾಗಿದೆ. ಆರ್ಥಿಕ ಹಾಹಾಕಾರ ಮತ್ತು ಹಣದುಬ್ಬರಗಳಿಗೆ ಇದು ಪ್ರೇರಕವೆನಿಸಿದೆ. "ವಾರ್ಷಿಕ ಯೋಜನೆ ರೂಪಿಸುವುದಾದರೆ ಕಾಸು ಬಿತ್ತು; ದಶವಾರ್ಷಿಕ ಯೋಜನೆಯಾದರೆ ಮರ ನಾಟು, ಶತವಾರ್ಷಿಕ ಯೋಜನೆಯಾದರೆ, ಮಾನವನನ್ನು ನಾಟು" ಎಂಬ ಚೀನೀ ಗಾದೆಯ ಯಥಾರ್ಥವಾದುದು. ಸಮೃದ್ಧಿಗಾಗಿ ಯೋಜನೆ ರೂಪಿಸುವವರಿಗೆ ಇದೊಂದು ದಿಗ್ದರ್ಶಿಯಾಗಬೇಕು. ಬೇರೆ ಬೇರೆ ಯೋಜನೆಗಳ ಹೆಸರಲ್ಲಿ ಹಣವನ್ನು ನೀರಿನಂತೆ ಸುರಿದದ್ದರಿಂದಲೇ ಹಣದುಬ್ಬರವು ದೇಶದಲ್ಲಿ ತಲೆದೋರಿದೆ. ಇದರಿಂದ ಶ್ರೀ ಸಾಮಾನ್ಯನ ಬೆಲೆಯೇರಿಕೆಯನ್ನು ಎದುರಿಸಬೇಕಾಗಿದೆ. ಆವಶ್ಯಕ ವಸ್ತುಗಳ ಅಭಾವವು ಮಾಡಿ ಜನತೆ ಉಪವಾಸವಿರಬೇಕಾಗಿದೆ

"ಸಾಮಾಜಿಕ ಪುನರ್ನಿರ್ಮಾಣದ ತತ್ವಗಳು" ಎಂಬ ಪುಸ್ತಕದಲ್ಲಿ ಬರ್ಟ್ರಂಡ್ ರಸ್ಸೆಲ್ ಆರ್ಥಿಕದೃಷ್ಟಿಯ ಸಾಮಾಜಿಕ ಬುನಾದಿಗೆ ನಾಲ್ಕು ಮೂಲ ತತ್ವಗಳನ್ನು ಮುಂದಿಟ್ಟಿದ್ದಾನೆ: (1) ಅತ್ಯಧಿಕ ಉತ್ಪಾದನೆ, (2) ನ್ಯಾಯಬದ್ಧ ವಿತರಣೆ (3) ಉತ್ಪಾದಕರಿಗೆ ಸಂರಕ್ಷಣೆ ಮತ್ತು (4) ಅಭಿವೃದ್ಧಿಗೆ ಸಾಧ್ಯವಿರುವಷ್ಟು ಸ್ವಾತಂತ್ರ್ಯ ಮತ್ತು ಪ್ರೋತ್ಸಾಹ. ಜಗತ್ತಿನಲ್ಲೇ ಅತುಲ ವೈಸರ್ಗಿಕ ಸಂಪನ್ಮೂಲ ಮತ್ತು ಮಾನವ ಶಕ್ತಿ ಹೊಂದಿರುವ ನಾವು ಈ ಪದ್ಧತಿಯ ಸಮೀಪ ಸರಿಯುತ್ತಿದ್ದೇವೆಯೆ?

ನಿರುದ್ಯೋಗವು ರಾಷ್ಟ್ರಪ್ರಗತಿಗೆ ಅಂಟಿದ ಭಯಾನಕ ರೋಗ. ನಿರುದ್ಯೋಗಿಯಲ್ಲಿ ತನ್ನ ದೇಶದ ಭಾವೈಕ್ಯದ ಭಾವನೆಯು ಮೂಡಲಾರದು. ಐಸನ್‌ಸ್ಟೈನ್ ತನ್ನ "ಕಾಸ್ಮಿಕ್ ರಿಲಿಜನ್"ನಲ್ಲಿ ಹೇಳುತ್ತಾನೆ: ಅಂಹೊಟ್ಟೆಯ ಉತ್ಸಾಹ ರಾಜ್ಯಕೀಯ ಸಲಹೆನೀಡದು. ಡಬ್ಲ್ಯು. ಸಿ. ಬ್ರೌನ್ ಹೇಳುತ್ತಾನೆ: ಹಸಿದ ಹೊಟ್ಟೆಯವನು ದೇಶಭಕ್ತನಾಗನು.

ಸರಕಾರವು ತನ್ನೆಲ್ಲ ನಾಗರಿಕರಿಗೆ—ಪುರುಷರು, ಸ್ತ್ರೀಯರು ಎಲ್ಲರಿಗೂ—ಸಮುಚಿತ ರೀತಿಯಲ್ಲಿ ಬದುಕು ಸಾಗಿಸಲು ಅವಕಾಶ ನೀಡಬೇಕೆಂದು ಸಂವಿಧಾನದ 39ನೆಯ ಅನುಚ್ಛೇದವು ವಿಧೇಯಿಸಿದೆ. ಅನುಚ್ಛೇದ 43 ಶಾಸನ ಅಥವಾ ಆರ್ಥಿಕ ಸಂಸ್ಥೆ ಅಥವಾ ಇನ್ನಾವುದೇ ಮಾರ್ಗದಿಂದ ಕೃಷಿ, ಉದ್ಯಮಾದಿಗಳಲ್ಲಿನ ಎಲ್ಲ ಕೆಲಸಗಾರರಿಗೂ ಬದುಕಲು ತಕ್ಕ ವೇತನ, ಉತ್ತಮ ಜೀವನಕ್ಕೆ ಅನುಕೂಲವಾದ ಸೇವಾ ನಿಯಮಗಳು, ವಿಶ್ರಾಂತಿಯ ಪೂರ್ಣ ಲಾಭ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಕಾಶಗಳನ್ನು ನೀಡಲು ಸರಕಾರಕ್ಕೆ ನಿರ್ದೇಶನೀಡುತ್ತದೆ. ಇಂದು ಅರುವಿಲಿಯ ಸುಶಿಕ್ಷಿತ ನಿರುದ್ಯೋಗಿಗಳಿದ್ದಾರೆ; ಮೂವತ್ತು ಸಾವಿರ ಇಂಜಿನಿಯರರು ಉದ್ಯೋಗದ ಬೇಟೆಯಲ್ಲಿದ್ದಾರೆಂದು ಓದುತ್ತೇವೆ. ನಿರುದ್ಯೋಗವು ಆಂತಕಕಾರಿ ಶಕ್ತಿಯಾಗಿದ್ದು ಇದನ್ನು ತಡೆಯದೆ ಹೋದರೆ, ಸರಕಾರಕ್ಕೇನೇ ಅಪಾಯ ತಾರಿಬಹುದು. ಜರ್ಮನಿಯಲ್ಲಿ ವೀಮರ್ ಪ್ರಜಾಪ್ರಭುತ್ವ ಉರುಳಿ ಬಿದ್ದುದಕ್ಕೆ ನಿರುದ್ಯೋಗ ಸಮಸ್ಯೆಯೇ ಕಾರಣವಾಗಿತ್ತು. ನಮ್ಮ ಸರಕಾರವು ಈ ಪ್ರಶ್ನೆಯ ಬಗ್ಗೆ ಲಕ್ಷ್ಯ ಕೊಡುವುದಿಲ್ಲ. ಪ್ರಸಿದ್ಧ ಗಾಂಧಿ ಅರ್ಥಶಾಸ್ತ್ರಜ್ಞ ವೈಕುಂಠ ಎಲ್. ಮೆಹತಾ ಒಂದು ಮಾತು ಅಂದಿದ್ದ—ಸುಸಂಬದ್ಧ ವಿಶಾಲ ರಾಷ್ಟ್ರೀಯ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಚಿಕ್ಕ ಸಮುದಾಯ ಉದ್ಯೋಗಗಳನ್ನು ಪೂರ್ಣಾವಧಿಯ ಉದ್ಯೋಗವನ್ನು ಒದಗಿಸುವ ಕ್ರಮವನ್ನು ನಾವು ಕಲ್ಪಿಸಬಲ್ಲೆವೆಂಬುದು ಊಹಾತೀತ.

ಗ್ರಾಮೀಣ ಜನತೆಯ ಕಲಾದಾಯವನ್ನು ಕೃಷ್ಯುತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸದೆ ಬಿಡುಗಾಲಗಳಲ್ಲಿ ಗುಡಿಕೈಗಾರಿಕೆ, ಚಿಕ್ಕ ಪ್ರಮಾಣದ ಉದ್ಯಮಗಳನ್ನು ಕಲ್ಪಿಸಿ ಉದ್ಯೋಗಾವಕಾಶವನ್ನು ಒದಗಿಸದೆ ಏರಿಸುವುದು ಎಂದಿಗೂ ಸಾಧ್ಯವಿಲ್ಲ. ಇದನ್ನು ಸಾಧಿಸದ ವರೆಗೆ ನಮ್ಮ ಕಲ್ಯಾಣ ರಾಜ್ಯವು ದೂರದ ಕನಸಾಗಿಯೇ ಉಳಿಯುವುದು.

(ಎಂಟನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಶಿವಾಲಯವೋ ಶವಾಲಯವೋ?

ಬರೆದವರು : ಶ್ರೀ ಶಿವಶಂಕರ

ಕಳೆದ ಶತಮಾನ.

ಅದೊಂದು ಶಿವರಾತ್ರಿ. ಅಂದು ಮಚ್ಛಾ ಮಹಾನದಿ ದಡದಲ್ಲಿರುವ ಟಂಗ್ರಾ ಹಳ್ಳಿಯ ಶಿವಾಲಯದಲ್ಲಿ ಜನರು ಕಲೆತಿದ್ದರು. ಶಿವರಾತ್ರಿಯಂದು ವ್ರತವನ್ನಾಚರಿಸುವವರು ನಿದ್ದೆ ಮಾಡದೆ ಭಜನೆಯಲ್ಲಿ ಮೈಮರೆಯುವದುಂಟು. ಅವರು ಈ ವಿಶ್ವವನ್ನು ಮರೆತು, ಎದುರಿಗಿರುವ ವಿಶ್ವನಾಥನ ಲಿಂಗವನ್ನು ನೋಡುತ್ತ ಮೋಕ್ಷದ ಮಾರ್ಗವನ್ನು ಕಂಡುಹಿಡಿಯುತ್ತಾರೆ. ಅಂತೆಯೇ ಆ ಜನರ ಮಧ್ಯದಲ್ಲಿ ಬಾಲಕ ದಯಾರಾಮನೆಂಬವನು ಇದ್ದನು. ಆಗ ಆವನಿಗೆ ವಯಸ್ಸು ಹದಿನಾಲ್ಕು ವರ್ಷ. ಒಳಿಯಲ್ಲೇ ಅವನ ತಂದೆ ಕೃಷ್ಣಜೀ ಲಾಲಜೀ ಇದ್ದರು. ಅವರು ಅಪ್ಪಟ ಧರ್ಮಾಭಿಮಾನಿ ಬ್ರಾಹ್ಮಣರು. ಮಧ್ಯರಾತ್ರಿ ಕಳೆದಿತ್ತು. ಇನ್ನೇನು ಬೆಳಕು ಹರಿಯಬೇಕು, ಅಷ್ಟೇ. ಅಷ್ಟರಲ್ಲಿ, ಅದೆಲ್ಲಿಂದಲೋ ಒಂದು ಇಲಿ ಓಡೋಡಿ ಬಂದು ಭಗವಾನ್ ಶಂಕರನ ಭಕ್ತರು ಭಜನೆ ಮಾಡುತ್ತಿರುವದನ್ನೂ ಅದು ಮನಸ್ಸಿಗೆ ತೆಗೆದುಕೊಳ್ಳಲಿಲ್ಲ. ಅದು ಲಿಂಗದ ಮೇಲೆ ಹೋಗಿ ಕುಳಿತುಕೊಂಡಿತು. ಬಾಲಕ ದಯಾರಾಮನ ದೃಷ್ಟಿ ಅತ್ತ ಹರಿಯಿತು. ಲಿಂಗದ ಮೇಲೆ ಇಲಿ! ಅಂತಹ "ವಸ್ತು"ವನ್ನು ಪೂಜಿಸುವದೇ? ಥೂ! ಅಲ್ಲಿಂದ ಬಾಲಕ ದಯಾರಾಮ ಒಂದೇ ಓಟ ಬಿಟ್ಟ—ನೇರ ಮನೆಗೆ. ಮರುದಿನ ಮಾತೆಯ ಬಳಿ ಆತ ತನ್ನ ಅಭಿಪ್ರಾಯವನ್ನು ತಿಳಿಸಿದ. ಹೆತ್ತವರು ಸಿಡಿಮಿಡಿಗೊಳ್ಳಲಿಲ್ಲ. ಸಂಪ್ರದಾಯಸ್ಥ ಬ್ರಾಹ್ಮಣ ಕೃಷ್ಣಜೀ ಅದನ್ನು ಸಹಿಸದಾದರು. ಏನೇ ಆಗಲಿ, ಧೀರ ದಯಾರಾಮನು ದೇವಸ್ಥಾನಕ್ಕೆ ಹೋಗುವದನ್ನು ನಿಲ್ಲಿಸಿಬಿಟ್ಟ. ದಯಾರಾಮನನ್ನು ಅವನ ತಾಯಿ-ತಂದೆಯವರು ಪ್ರೀತಿಯಿಂದ ಮೂಲಾಜೀಯೆಂದು ಕರೆಯುತ್ತಿದ್ದರು; ಇತರರು ಮೂಲಶಂಕರನೆಂದು ಕರೆಯುತ್ತಿದ್ದರು.

ಈಶ್ವರ ದೇವಸ್ಥಾನ ಅಥವಾ ಶಿವಾಲಯ—ಅಂದರೆ ಅಲ್ಲಿ ವಿಶ್ವನಾಥನ ವಿಗ್ರಹ; ಲಿಂಗ ಇರುತ್ತದೆ. ಅದಕ್ಕೆ ಪೂಜೆ ಪುನಸ್ಕಾರಾದಿಗಳು ನಡೆಯುತ್ತವೆ. ಅದು ಹಿಂದೂಗಳಿಗೆ, ಅದರಲ್ಲೂ ಶೈವರಿಗೆ, ಪೂಜಾಸ್ಥಾನ, ಪವಿತ್ರ ಸ್ಥಾನ ಇದೆ. ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀ ರಾಮಚಂದ್ರನು ಮಸ್ಸರನಾಶಕ್ಕಾಗಿ ಶ್ರೀಲಂಕೆಗೆ ಹೋಗುವಾಗ ರಾಮೇಶ್ವರದಲ್ಲಿ ಲಿಂಗವನ್ನು ಪೂಜಿಸಿ ಪ್ರಯಾಣವನ್ನು ಮುಂದರಿಸಿದ್ದನು. ಕಾಶಿಯಲ್ಲಿರುವ ವಿಶ್ವನಾಥನ ವಿಗ್ರಹವನ್ನು ಕಂಡಲ್ಲಿ ಜನ್ಮ ಸಾರ್ಥಕವೆಂದು ಕೊಳ್ಳುತ್ತಾರೆ ಹಿಂದೂಗಳು. ಮೊಟ್ಟಮೊದಲು ವಿಗ್ರಹವಿದ್ದಲ್ಲಿ ಇಂದೇನಿದೆಂಬುದನ್ನು ಅವರಿಂದು ಅರಿತುಕೊಂಡಿರುವದಿಲ್ಲ. ಇಲ್ಲಿ, ಭಾರತದಲ್ಲಿ ಮಾತ್ರವಲ್ಲ, ಮುಹಮ್ಮದೀಯರು ಅತ್ಯಂತ ಪವಿತ್ರ ಸ್ಥಳವೆಂದು ಹಾಜಿಗೆ ಹೋಗುವ ಕಾಬಾ ಮಸೀದಿಯಲ್ಲಿ ಒಂದು ಕಪ್ಪು ಕಲ್ಲಿದ್ದು ಅದನ್ನು ಮುಟ್ಟಿದಲ್ಲಿ ಜನ್ಮ ಸಾರ್ಥಕವೆಂದು ತಿಳಿದುಕೊಳ್ಳುತ್ತಿದ್ದಾರೆ. ಆ ಕಪ್ಪು ಕಲ್ಲಾದರೂ ಏನಿದೆ? ಅದು ಮಹೇಶ್ವರನ ಮೂರ್ತಿ—ಲಿಂಗ— ಅಲ್ಲದೆ ಬೇರಿನ್ನೇನು? ವಿಗ್ರಹಭೇದಕ, ವಿಗ್ರಹಾರಾಧನಾ ವಿರೋಧಿ ಮುಸ್ಲಿಮರು ಇದಕ್ಕೇನೆನ್ನುವರು? ಹಿಂದೂಗಳ ಮನ ನೋಯಿಸಲಿಕ್ಕಾಗಿ ಐರೋಪ್ಯರು ಲಿಂಗದ ವಿಷಯ ಅದೇನೇನೋ ಅವಾಚ್ಯ ಶಬ್ದಗಳನ್ನುಪಯೋಗಿಸಿದರೂ ಹಿಂದೂ ಈಶ್ವರಪೂಜೆಯನ್ನು ಇಂದೂ ಬಿಟ್ಟಿರುವದಿಲ್ಲ. ಸೋಮನಾಥನನ್ನು ಮರೆತು ಬಿಡಲು ಸಾಧ್ಯವೇನು? ಧರ್ಮಸ್ಥಳಕ್ಕೆ ಹೋಗದಿರಲು ಸಾಧ್ಯವೇನು?

ಶಿವಲಿಂಗವಿರುವ ದೇವಸ್ಥಾನವನ್ನು ಶಿವಾಲಯವೆನ್ನುವದು ಸ್ವಾಭಾವಿಕವಾಗಿ ಬಿಟ್ಟಿರುತ್ತದೆ. ಹಿಮಾಲಯವನ್ನು ಭಾರತದ ಶಿವಾಲಯವೆನ್ನುವದುಂಟು. ಅದಕ್ಕೆ ಕಾರಣವೂ ಇದೆ. ಹಿಮಾಲಯವು ಶಿವನ ಮನೆ ಇದೆ. ಅದು ಅವನ ಮನೆ ಮಾತ್ರವಲ್ಲ, ದಾಕ್ಷಾಯಿಣಿಯ ತವರೂರು ಅಲ್ಲೇ ಇದೆ. ಹಿಮಗಿರಿಯ ಗಿರಿಜೆಯು ಊರು. ಪುನರ್ ಶಂಕರನನ್ನು ಪಡೆಯಲಿಕ್ಕಾಗಿ ಅವಳಲ್ಲಿ ಪತಿಯಾಗಿರುತ್ತಾಳೆ. ಅಕೆ ಕನ್ಯಾಕುಮಾರಿಯಲ್ಲಿ ಅವನನ್ನು ಪಡೆಯಲು ಘೋರ ತಪಸ್ಸನ್ನು ಮಾಡುತ್ತಿದ್ದಾಳೆ. ಅದೇನೇ ಇರಲಿ. ಕನ್ಯಾಕುಮಾರಿಯಿಂದ ಹಿಮಾಲಯದ ವರೆಗಿರುವ ಈ ಅಖಂಡ ಭೂಪ್ರದೇಶ ನಮ್ಮ ವಾತ್ಸಲ್ಯಮಯಿ ಮಾತೃಭೂಮಿ ಇದೆ. ಅದರ ಕುರಿತು ಲಘುವಾಗಿ ಮಾತಾಡುವವನನ್ನು ದೇಶಕ್ಕೆರಡು ಬಗೆಯುವವನು, ಉಪಕಾರದ ಗುಣವಿಲ್ಲದವನೆಂದು ಹೇಳದಿರಲು ಸಾಧ್ಯವಿರುವದಿಲ್ಲ. ಅದರ ಒಡಲು ಜೀವನದ ಮೋಹವನ್ನು ತ್ಯಜಿಸಿ ಅಮರನಾಥನನ್ನು ಕಂಡು ಅಮರರಾಗಲು ಹಿಂದೂಗಳತ್ತ ಹೋಗದಿರುವದಿಲ್ಲ. ಅದನ್ನು ಪಡೆಯಲು ಅದ್ಯಾರಿಗೂ ಸಾಧ್ಯವಾಗಿರುವದಿಲ್ಲ. ಕೈಲಾಸಕ್ಕೆ ಹೋಗುವವರನ್ನು ತಡೆಯುವವರ್‍ಯಾರು?

ಹಾಗಿದ್ದೂ ಭಾರತ ಮಾತೆಯು ವಿಚ್ಛೇದನದ ಪಾತಕಕ್ಕೆ ನಮ್ಮ ನೇತಾರರು ಮುಂದಕ್ಕೆ ಬಂದರು. ಬ್ರಿಟಿಷರ ಬದಿಯಲ್ಲಿ ನೇತಾಡುತ್ತಿದ್ದ ಈ "ನೇತಾ"ಗಳಿಗೆ ಕುಳಿತುಕೊಳ್ಳಲು ಆಸನ ಸಿಕ್ಕಿತು:- ದೇಶದ ವಿಭಜನೆ ನಡೆದು ಹೋಯಿತು. ಒಮ್ಮೆ ಪೆಟ್ಟು ಬಿದ್ದ ಬೆರಳಿಗೆ ಪದೇ ಪದೇ ಪೆಟ್ಟು ಬೀಳುತ್ತಾ ಇರುತ್ತದಂತೆ. ಅಂತೆಯೇ ಮಾತೆಯ ವಿಚ್ಛೇದಕ್ಕೆ ಪಾಪಿಗಳ ಪಟ್ಟು ಸಿಕ್ಕಿದ ಮೇಲೆ, ಅನಂತರ ಅದೆಲ್ಲಿಯ ಲಜ್ಜೆ? ಬಂಗಾಲವನ್ನು ಭಾಗ ಮಾಡಲೂ ಅವನು ಅಂಜಲಾರ; ಪಂಜಾಬವನ್ನು ಪಾಲು ಮಾಡಿಕೊಳ್ಳುವದಕ್ಕೆ ಪಶ್ಚಾತ್ತಾಪ ಪಡಲಾರ; ಸಿಂಧವನ್ನು ಸೀಳಿ ಸಿಂಹಾಸನದತ್ತ ಸಾಗದಿರಲು ಅವನಿಂದ ಅದೆಂದೂ ಸಾಧ್ಯವಿಲ್ಲ. ಹೆಂಡದ ಹುಚ್ಚಾಟಕ್ಕೆ ಬಲಿಯಾದವ ಹೆಂಡತಿಯನ್ನಾದರೂ ಬಿಟ್ಟಿರಬಹುದಂತೆ, ಆದರೆ, ಹೆಂಡವನ್ನು ಬಿಟ್ಟಿರಲಾರನಂತೆ. ಅದರಿಂದಲೋ ಏನೋ, ಪಾನಪ್ರತಿಬಂಧಕಾಜ್ಞೆ ಗಾಂಧಿ ಶತಮಾನೋತ್ಸವದ ಸಮಯ ಕಾಂಗ್ರೆಸ್ಸಿಗರಿಂದಲೇ ಕಂದ ಬುಟ್ಟಿಗೆ ಹೋಗುತ್ತಿದೆ.

ಇಂತಹ ಪ್ರಗತಿಶೀಲ ಪಂಥಕ್ಕೆ ಪರಮ ಪ್ರಮುಖರಾಗಿದ್ದವರು ದಿವಂಗತ ಪಂಡಿತ ಜವಾಹರಲಾಲ ನೆಹರೂಜೀಯವರು. ದೇಶ ವಿಭಜನೆ, ಪಾಕಿಸ್ತಾನ ನಿರ್ಮಾಣ, ಹುಚ್ಚುತನ—ಭ್ರಮೆ—ಹಗಲುಗನಸು ಇನ್ನೇನೋ ಅನ್ನುತ್ತಿದ್ದರು ಪಂಡಿತಜೀಯವರು. ಅವರು ಪಟ್ಟವನ್ನೇರಬೇಕಾದಲ್ಲಿ ಪಾಕಿಸ್ತಾನ ರೂಪುಗೊಳ್ಳಲೇಬೇಕಾಯಿತ, ದೇಶ ವಿಭಜನೆ—ಅದು ತಾತ್ಕಾಲಿಕವೆಂದರು ಚಾ ಚಾ, ಆ ನೆಹರೂಜಿ ನಮ್ಮನ್ನು ಬಿಟ್ಟು ಅಗಲಿದರು; ಪಾಕಿಸ್ತಾನ ಮಾತ್ರ ಹಾಗೇನೇ ಇದೆ. ಇನ್ನೊಂದು ಬದಿಯಲ್ಲಿ ಚೈನಿ ಕಮ್ಯೂನಿಸ್ಟರು ನಮ್ಮ ಖಂಡಿತ ದೇಶದ ಮೇಲೆ, ಬೊಕ್ಕೆಯ ಮೇಲೆ ಬರೆ ಎಳೆಯಲು, ಆಕ್ರಮಣ ನಡೆಸುತ್ತಾರೆಂದು ರಾಷ್ಟ್ರೀಯ ದೃಷ್ಟಿಯುಳ್ಳವರು ಹೇಳಿದಾಗ ಅವರ ಅವಹೇಳನೆ ಮಾಡಿರುವರು ಮಾತ್ರವಲ್ಲ, ಒಂದು ಸೋಷ್ಯಲಿಸ್ಟ್ ದೇಶ ಇನ್ನೊಂದು ಸೋಷ್ಯಲಿಸ್ಟ್ ದೇಶದ ಮೇಲೆ ಆಕ್ರಮಣ ನಡೆಸುತ್ತಿಲ್ಲ. ಹಿಂದೀ—ಚೀನಿ—ಭಾಯಿ ಭಾಯಿ ಎಂದು ಜವಾಹರಲಾಲಜೀಯವರು ಜೋರಾಗಿ ಹೇಳುತ್ತಿದ್ದರು ಅಷ್ಟರಲ್ಲೇ ಆಕ್ರಮಣ ನಡೆದೇ ಹೋಯಿತು, ಚೈನಿ ಕಮ್ಯೂನಿಸ್ಟರು ಲಡಾಖ್- ಊರ್ವಶೀಯ ಭಾಗದ ಮೇಲೆ ಕಾಲಿಟ್ಟರು. ಒಡನೆ ನಮ್ಮ ಪಂಡಿತ ಜವಾಹರಲಾಲ ನೆಹರೂಜೀಯವರು ಆ ಪ್ರದೇಶ ಹುಲ್ಲೂ ವ ಎಳ್ಳೂ ಬೆಳೆಯದ ಕಲ್ಲು-ಮಣ್ಣೆಂದು ತನ್ನ ದೇಶಭಕ್ತಿಯ ಪರಿಚಯವನ್ನು ಪ್ರಜೆಗಳಿಗೆ ಮಾಡಿಕೊಟ್ಟರು. ಶ್ರೀ ಮಹಾವೀರ ತ್ಯಾಗಿಯಂತಹವರಿಂದಲೂ ಸುಮ್ಮನೆ ಇರಲು ಸಾಧ್ಯವಾಗಲಿಲ್ಲ; ನನ್ನ ತಲೆಯ ಮೇಲೆ ಕೂದಲಿಲ್ಲವೆಂದಾಕ್ಷಣ ತಲೆ ಕಡಿದು ಬಿಡಬೇಕೆನ್ನುತ್ತೀರೇನೆಂದು ಶ್ರೀ ಜವಾಹರಲಾಲಜೀಯವರ ತಲೆ ನೋಡುತ್ತಿದ್ದಂತೆಯೇ ಕೇಳಿಬಿಟ್ಟರು. ಇಂದಿನ ಇಪ್ಪತ್ತನೇ ಶತಮಾನದ ವಿಷಯವಿದು.

ಶಿವಾಲಯದಲ್ಲಿ ಶಿವಲಿಂಗದ ಮೇಲೆ ಇಲಿ ನಡೆಸಿದ ಆಕ್ರಮಣ ಮೂಲಾಜೀಯವರ ಮನಸ್ಸಿನ ಮೇಲೆ ಅಂತಿ - ಪರಿಣಾಮವನ್ನುಂಟು ಮಾಡಿತು. ಆಕ್ರಮಣದಿಂದ ತಪ್ಪಿಸಿಕೊಳ್ಳಲಾಗದಿರುವ ಶಿಲೆ ಪೂಜೆ ಹರ್ಮೇನ ? ಅದನ್ನು ನಾವು ಭಯ-ಭಕ್ತಿಯಿಂದ ಕಾಣಬೇಕೇನು? ಅದು ನಮ್ಮ ಗೌರವ ಬಿಂದು ಆಗಿರಲು ಸಾಧ್ಯವೇನು? ಹಿಮಾಲಯದ ಮೇಲೆ ಶತ್ರುಗಳು ನಡೆಸಿದ ಆಕ್ರಮಣ ನೆಹರೂಜೀಯವರ ಮನಸ್ಸಿನ ಮೇಲೆ ಅತೀವ ಪರಿಣಾಮವನ್ನುಂಟು ಮಾಡಿತು. ಅವರ ದೇಶಭಕ್ತಿಯ ಕೋಟೆ ಒಡೆದು ಹೋಯಿತು.

ವಿಶ್ವೇಶ್ವರನು ವಿಗ್ರಹದೊಳಗಿಲ್ಲವೆಂದು ಅವನನ್ನು ಹುಡುಕಿಕೊಂಡು ಮೂಲಶಂಕರರು ಹಿಮಾಲಯಕ್ಕೆ ಹೋದರು; ನಂತರ ಆರ್ಯಸಮಾಜವನ್ನು ಸ್ಥಾಪಿಸಿದರು.

ಪ್ರಗತಿಶೀಲ ಪಂಡಿತ ಜವಾಹರಲಾಲರು ಅಲ್ಲಿಗೆ ನಿಲ್ಲಲಿಲ್ಲ. ಹಿಮಾಲಯವನ್ನು ಹೀಗಳೆಯುವದಾಲ್ಲೇ ಸುಮ್ಮಗಾಗಲಿಲ್ಲ. ಇನ್ನಷ್ಟು ಮುಂದರಿದರು—ಒಂದು ಶತಮಾನದಷ್ಟು ಮುಂದರಿದರು! ಬ್ರಿಟಿಷರ ಬಂಧನದಿಂದ ಬಿಗಿದಿದ್ದ ಬಂಕಿಮ ಚಂದ್ರರವರು ವಂದೇ ಮಾತರಂ ಹಾಡುತ್ತ ಈ ದೇಶವನ್ನು, ನೆಹರೂಜೀಯವರ ಕಲ್ಲು-ಮುಳ್ಳು-ಮಣ್ಣನ್ನು ಮಾತೆಯೆಂದು ಸಂಬೋಧಿಸಿ ಆಕೆಯನ್ನು—

> ಕೋಟಿ ಕೋಟಿ ಕಂಠ ಕಲಕಲ
> ನಿನಾದಕರಾಲೇ
> ಕೋಟಿ ಕೋಟಿ ಭುಜೈರ್ಧೃತ
> ಖರಕರವಾಲೇ
> ಕೇ ಬಲೇ ಮಾ ತುಮಿ ಅಬಲೇ
> ಬಹುಬಲ ಧಾರಿಣೀಂ
> ನಮಾಮಿ ತಾರಿಣೀಂ
> ರಿಪುದಲ ವಾರಿಣೀಂ
> ಮಾತರಂ!......

ಇದರಿಂದಲೂ ಅವರಿಗೆ ತೃಪ್ತಿಯಾಗಲಿಲ್ಲ. ಅವರು ಆ ವಾತ್ಸಲ್ಯಮಯಿ ಭಾರತ ಮಾತೆಯನ್ನು—

> ತ್ವಂ ಹಿ ದುರ್ಗಾ ದಶಪ್ರಹರಣ
> ಧಾರಿಣೀ
> ಕಮಲಾ ಕಮಲದಲ ವಿಹಾರಿಣೀ
> ವಾಣೀ ವಿದ್ಯಾದಾಯಿನೀ
> ನಮಾಮಿ ತ್ವಾಂ......

ನಮಿಸುತ್ತ ಮುಂದಕ್ಕೆ ಹಾಡಿದರು, ಹಾ

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,

ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ

ಸಿದ್ಧವಾಗಿರುವ

ಹೊಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ

ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ— ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ ಮೂಡಬಿದ್ರಿ — ಬಂಗಾಡಿ, ಕುದುರೆಮುಖ, ನಾವೂರು — ಚಾರ್ಮಾಡಿ ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೊಟೆಲ್ ಸಂಗಂ

ಧಿಸಿದರು; ಭಾವಪರವಶರಾದರು, ಅಲ್ಲೇ ನಿಂತುಬಿಟ್ಟರು.

ಪಂಡಿತ ಜವಾಹರಲಾಲ ನೆಹ್ರೂಜೀ ಇನ್ನೂ ಮುಂದರಿದರು- ಹಿಮಾಲಯದಲ್ಲಿ ಶಿವ-ಪಾರ್ವತಿಯರಿರುವರಾದಲ್ಲಿ, ಕನ್ಯಾಕುಮಾರಿಯಿಂದ ಹಿಮಾಚಲ ತನಕ ಇರುವ ಈ ಕಲ್ಲು-ಮಣ್ಣು ಬಹುಬಲ ಧಾರಿಣೀಂ, ರಿಪುದಲ ತಾರಿಣೀಂ, ದುರ್ಗೆ, ಕಮಲೆ, ವಾಣಿ ಆಗಿದ್ದಲ್ಲಿ ಅದೇತಕ್ಕೆ ಚೈನೀಯರ ಆಕ್ರಮಣವನ್ನು ಸಹಿಸಿಕೊಂಡಳು? ಆಕ್ರಮಣವನ್ನು ಸಹಿಸಿಕೊಂಡಿರುವ ದುರ್ಗೆಯನ್ನು ಪೂಜಿಸಬೇಕೇನು? ಇದು ದುರ್ಗೆಯಲ್ಲ—ಧೂಳು, ಕಸ, ಕಲ್ಲು, ಮಣ್ಣು, ಮರಳು........ಜವಾಹರಲಾಲರ ವಾಗ್ಝರಿ!

ಸ್ವಾಮಿ ದಯಾನಂದರೇಯವರು ಆರ್ಯ ಸಮಾಜವನ್ನು ಸ್ಥಾಪಿಸಿ ಪ್ರಚಾರ ಮಾಡಿದರು. ಪಂಡಿತ ಜವಾಹರಲಾಲ ನೆಹ್ರೂಜೀಯವರು ಕಾಂಗ್ರೆಸ್ಸಿನೊಳಗೆ ಸಮಾಜವಾದವನ್ನು ತಂದು ಅದರ ಪ್ರಚಾರ ನಡೆಸಿದರು.

ದೇವುಲದೊಳಗಿರುವ ಶಿವಾಲಯದೊಳಗೆ ಇಲಿ ಹೇಗೆ ಬಂತ? ಅದೆಂತು ಶಿವಲಿಂಗದ ಮೇಲೆ ಹೋಯಿತು? ಹಿಮಾಲಯದ ಮೇಲೆ ಚೈನಾ ಕಮ್ಯೂನಿಸ್ಟರು ಆಕ್ರಮಣ ನಡೆಸಲು ಕಾರಣವೇನು? ಅವರೆಂತು ಬಂದರು? ಶಿವಾಲಯ ಮಾಡಿಸಿ ಕಾಲಯವೇನು? ಇಲಿಗಳೇ ಏನು, ದೊಡ್ಡ ದೊಡ್ಡ ಹೆಗ್ಗಣಗಳೇ ಇರುವಾಗ ಇದೆಲ್ಲಾ ಏನು ಮಹಾ? ಇಲಿಗಳಿಗೆ ಆಶ್ರಯ ಕೊಟ್ಟವರ್ಯಾರು? ಇಲಿಗಳರದಂತೆ ಮಾಡಲು ಏನು ಮಾಡಬೇಕು? ಇಲಿಗಳನ್ನೆಂತು ಓಡಿಸುವದು?....ಯಾರು ಯೋಚನೆ ಮಾಡುವದು?

ಹಲವಾರು ಕಾರಣಗಳಿಂದ ವಿಗ್ರಹವನ್ನೇ [illegible], ಕಲ್ಲು ಮಣ್ಣನ್ನೇ ಪ್ರೀತಿಯ ಭಾರತ ಮಾತೆಯೆನ್ನುತ್ತೇವೆ. ಏಕಲವ್ಯನು ದ್ರೋಣರ ವಿಗ್ರಹವನ್ನಿಟ್ಟು ಧನುರ್ವಿದ್ಯೆಯನ್ನು ಕಲಿತುಕೊಂಡಿರುವಾಗ ನಾವು ಮೋಕ್ಷಸಾಧನೆ, ದೇಶದ ಐಕ್ಯಸಾಧನೆಗಾಗಿ ಆ ರೀತಿ ಮಾಡಿಕೊಂಡರಲ್ಲಿ ತಪ್ಪೇನು? ವಿಗ್ರಹಾರಾಧನೆಯಿಂದ ಭಗವಾನ್ ರಾಮಕೃಷ್ಣ ಪರಮಹಂಸರಂತಾದವರು ಮೋಕ್ಷಮಾರ್ಗದಲ್ಲಿ ಮುನ್ನಡೆಯಲಿಲ್ಲವೇನು? ಈ ದೇಶವನ್ನು ಮಮತಾಮಯಿ ಮಾತೆಯೆಂದು ಕರೆಯುತ್ತ ಭಗತ್‌ಸಿಂಹ, ಚಂದ್ರಶೇಖರ ಆಝಾದ್, ಸುಭಾಸ್ ಬಾಬು, ವೀರ ವಿನಾಯಕ ಸಾವರ್ಕರ್ ಮುಂತಾದವರು ಆಕೆಯ ಬಂಧವಿಮೋಚನೆಗೆಂದು ನಗನಗುತ್ತ ತನು—ಮನ—ಧನ ಸಾರಸರ್ವಸ್ವವನ್ನು ಅರ್ಪಿಸಿಲ್ಲವೇನು? ಈ ದೇಶವನ್ನು ಮಾತೆಯೆಂದು ಕರೆದವರು ಅದರ ವಿಭಜನೆಯನ್ನೊಪ್ಪಲು ಸಿದ್ಧರಿಲ್ಲ. ವಿಭಜನೆಯನ್ನೊಪ್ಪುವರು ಆಕೆಯನ್ನು ಮಾತೆಯೆಂದು ಅರಿಯದವರು.... ಅದೆಂತು ಕರೆಯುವರೋ! ಬಹಳ ಆಶ್ಚರ್ಯ.

ಹದಿನಾಲ್ಕು ವರ್ಷದ ದಯಾರಾಮ ಶಿವಲಿಂಗದ ಮೇಲೆ ಇಲಿ ಕುಳಿತುಕೊಂಡಿರುವದನ್ನು ಕಂಡು ಹೇಸಿ-ರೋಸಿ ಅಲ್ಲಿಂದೆದ್ದು ಹೋಗುವದರಲ್ಲಿ ಅಷ್ಟೇನೂ ಆಶ್ಚರ್ಯವಿಲ್ಲ. ಆದರೆ ಏಷ್ಯಾಜ್ಯೋತಿ ಜವಾಹರಲಾಲರು ಹಿಮಾಲಯದ ಮೇಲಿನ ಆಕ್ರಮಣವನ್ನು ಕಂಡು ಈ ದೇಶವನ್ನು ಜರಿದುದ ಆಶ್ಚರ್ಯದ ವಿಷಯವೇ ಸರಿ. ದಯಾರಾಮರು ಅಲ್ಲಿಂದ ಹೋದರೂ ಶಂಕರನನ್ನು ಹುಡುಕಿಕೊಂಡೇ ಹೋದರು. ಆದರೆ ಜವಾಹರಲಾಲ್‌ಜೀ ಹಾಗಲ್ಲ. ಭಾರತ ಮಾತೆಯನ್ನು ವಿಭಜಿಸಿದ್ದು ಮಾತ್ರವಲ್ಲ, ನಂತರ ಹೋಳು-ಹೋಳುಗಳನ್ನಾಗಿ ಖಂಡಿಸಿ, ಮನಸೇಚ್ಛೆ ಹೀಯಾಳಿಸಿಬಿಟ್ಟರು. ವಿಗ್ರಹಾರಾಧನೆಯಿಂದ ದೂರ ಓಡಿದ ದಯಾರಾಮರು ವಿಗ್ರಹಾರಾಧಕ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ಪಾದಸ್ಪರ್ಶಗೈದು ಪಾದಧೂಳಿಯನ್ನು ಹಣೆಯಲ್ಲಿಟ್ಟುಕೊಂಡರು. ಅವರೇ ದಯಾನಂದ ಸರಸ್ವತಿ. ಜವಾಹರಲಾಲರು ಮಾಡಿದ್ದಾದರೂ ಏನ? ತಮ್ಮ ಕಾಲದಲ್ಲಿದ್ದ ಅಂತಹ ಮಹಾಪುರುಷರ ದರ್ಶನಕ್ಕಾಗಿ ಹಾತೊರೆದರೇನ? ಇಲ್ಲ, ಅದರ ಬದಲು ಅಂತಹವರನ್ನು ಗೊಡ್ಡು ಸಂಪ್ರದಾಯದ ಆರಾಧಕರು, ಕಂದಾಚಾರಿಗಳು, ಮತೀಯವಾದಿಗಳು...... ಹೀಳೆಯುವದರಲ್ಲಿ ಆನಂದ ಪಡೆದರು.

ಶಿವಲಿಂಗದಲ್ಲಿ ಶಂಕರನು ಇದ್ದಾನೋ, ಇಲ್ಲವೋ; ಕನ್ಯಾಕುಮಾರಿಯಿಂದ ಹಿಮಾಲಯದ ವರೆಗಿನ ಕಲ್ಲು-ಮಣ್ಣಿನಲ್ಲಿ ಭಾರತ ಮಾತೆ ಇದ್ದಾಳೋ, ಇಲ್ಲವೋ—ಆದರೆ ಅವರಿಬ್ಬರೂ ನಮ್ಮ ಹೃದಯ ದೇಗುಲದಲ್ಲಿರುವದಂತೂ ನಿಜ. ಅದಕ್ಕೆ ಸೋಮನಾಥ ಮಂದಿರವೇ ಸಾಕ್ಷಿ. ಅದರ ಅನುಭವ ಪಡೆದಿರುವವರು ವಾತ್ಸಲ್ಯಮಯಿ ಭಾರತಮಾತೆಗಾಗಿ ತನ-ಮನ-ಧನ ಸಾರ ಸರ್ವಸ್ವವನ್ನೂ ಅರ್ಪಿಸಲು ಸಿದ್ಧರಿದ್ದಾರೆ. ಆ ಅರ್ಪಣೆಗಾಗಿ ಶಕ್ತಿ, ಬುದ್ಧಿ, ಸುಶೀಲವನ್ನು ಸರ್ವಶಕ್ತಿಸಂಪನ್ನನಾದ ಈಶ್ವರನ ಬಳಿ ದಿನಂಪ್ರತಿ 'ದೇಹಿ' ಯೆಂದು ಪ್ರಾರ್ಥಿಸಿಕೊಳ್ಳುತ್ತಿದ್ದಾರೆ.

ಹಿಮಾಲಯವು ಭಾರತದ ಶಿವಾಲಯವೇ [illegible] ನಮ್ಮ [illegible] ಶಿವಾಲಯ ಇರುವದಿಲ್ಲ. ಈ ದೃಢ ನಂಬಿಕೆಯಿಂದಲೇ ನಮ್ಮ ವೀರರು ಹಾಗೂ ಅವರಿಗೆ ಬೆನ್ನೆಲುಬಾಗಿದ್ದ ಜನತೆ ಚೈನೀಯರ ದಾಳಿ ಹಾಗೂ ಪಾಕಿಸ್ಥಾನಿಗಳ ಆಕ್ರಮಣವನ್ನು ಎದುರಿಸಿ ವಿಜಯಿಗಳಾದರು. ಭಾರತೀಯರೆಲ್ಲರ ಹೃದಯದಲ್ಲಿ ಈ ದೃಢ ನಂಬಿಕೆಯ ದಿವ್ಯದೀಪ ಬೆಳಗಿದಲ್ಲಿ ಅಖಂಡ ಭಾರತವನ್ನು ನಮ್ಮ ಕಣ್ಮುಂದೆಯೇ ನಾವು ಕಾಣಬಹುದು. ಆಗ ಅದ್ಯಾವ ಆಕ್ರಮಣಕಾಂಕ್ಷಿಗೂ ಇತ್ತ ಗೃಧ್ರ ದೃಷ್ಟಿ ಹಾಕಲು ಧೈರ್ಯ ಬರುವಂತಿಲ್ಲ. ಆ ಶುಭದಿನ—ಶಿವರಾತ್ರಿ ಅದೆಂದು ಬರುತ್ತದೋ!

ತುಂಡು ಕತೆ—೧೦

ನಾಯಿಯ ಸುತ್ತು

'ಅಜ್ಜೀ, ನಿಂಗೆ ಗೊತ್ತಿಲ್ಲದ ಕತೇನೇ ಇಲ್ಲಲ್ಲಾ? ಈ ವಿಷಯ ಗೊತ್ತಾ ಅಜ್ಜೀ ನಿಂಗೆ?'

"ಯಾವ ವಿಷಯಾನೋ ಅದ?"

"ನಾಯಿ ಮಲಗುವಾಗ ಮುಂದಿನ ಕಾಲಿಂದ ಬರ ಬರ ಅಂತ ಸ್ವಲ್ಪ ಮಣ್ಣು ಕೆರೆಯುತ್ತೆ. ಮತ್ತೆ ಗಿರಿ ಗಿರಿ ಅಂತ ಮೂರು ನಾಲ್ಕು ಬಾರಿ ಸುತ್ತು ಹಾಕಿ ಆ ಹೊಂಡದಲ್ಲಿ ಮಲಗುತ್ತೆ. ಏಕೆ ಹೀಗೆ ಗೊತ್ತಾ ನಿಂಗೆ?"

'ಅದಾ? ಏನೋ ಅಂದುಕೊಂಡೆ. ಅದಕ್ಕೊಂದು ಕತೆ ಉಂಟು—" ಎಂದು ಅಜ್ಜಿ ಹೀಗೆ ಕತೆ ಹೇಳಿದಳ:

'ಸಾವಿರಾರು ವರುಷಗಳ ಹಿಂದೆ ಬ್ರಹ್ಮದೇವ ಮನುಷ್ಯನ ಸೃಷ್ಟಿ ಮಾಡಿದ. ಮನುಷ್ಯ, ತನಗೆ ಉದಾಸೀನವಾಗುತ್ತೆ, ಹೊತ್ತೇ ಹೋಗೋಲ್ಲ, ಭಯವಾಗುತ್ತೆ, ಅಂತ [illegible] ರಾಗ ತೆಗೆದ. ಸರಿ ನಿನಗೊಬ್ಬ ಜತೆಗಾರನ ಕೊಡ್ತೇನೆ ಅಂತ ನಾಯಿಯನ್ನು ಸೃಷ್ಟಿ ಮಾಡಿ ಮನುಷ್ಯನಿಗೆ ಕೊಟ್ಟ ಬ್ರಹ್ಮ. ಓ ನಾಯಿಯೇ, ನೀನು ಮನುಷ್ಯನ ಜತೇಲೇ ಇದ್ದು, ಅವ ಹೇಳಿದ ಹಾಗೆ ಕೇಳುತ್ತ, ಅವನನ್ನು ಕಾಪಾಡುತ್ತ ಇರ ಅಂತ ಬ್ರಹ್ಮ ನಾಯಿಗೆ ಅಪ್ಪಣೆ ಕೊಟ್ಟ. ನಾಯಿ ಹಾಗೇ ಮನುಷ್ಯನ ಹತ್ತಿರ ಇತ್ತು.

ಆ ಕಾಲದಲ್ಲಿ ಮನುಷ್ಯನಿಗೆ ಮನೆಯೇ ಇರಲಿಲ್ಲ ಪಾಪ. ಇದ್ದ ಬಿದ್ದ ಗುಹೆಗಳಲ್ಲಿ ವಾಸ ಮಾಡುತ್ತಿದ್ದ. ರಾತ್ರಿಯಲ್ಲಿ ನಾಯಿ ಮನುಷ್ಯನ ಸುತ್ತಲೂ ತಿರುಗುತ್ತ ಕಾವಲು ಕಾಯುತ್ತಿತ್ತು. ಹಗಲಿನಲ್ಲಿ ಮನುಷ್ಯ ಎದ್ದ ಮೇಲೆ, ನಾಯಿಯನ್ನು ತನ್ನ ಗುಹೆಯಲ್ಲಿ ಮಲಗಿಸುತ್ತಿದ್ದ.

ನಾಯಿಗೆ ಕಾವಲು ಕಾಯೋದು ಯಾರು? ಮನುಷ್ಯ ಕೆಲಸಕ್ಕೆ ಹೋಗುತ್ತಾನೆ. "ನನ್ನನ್ನು ಕಾಯೋದು ಯಾರು?" ಅಂತ ನಾಯಿ ಕೇಳಿದ್ದಕ್ಕೆ ಮನುಷ್ಯ "ಅದೆಲ್ಲಾ ನಂಗೊತ್ತಿಲ್ಲ. ಕಾವಲು ಕಾಯೋ ಕೆಲಸ ನಿಂಗೇ. ನೀನೇ ನಿನ್ನ ಕಾದುಕೋ' ಅಂದ.

ಅಂದಿನಿಂದ ನಾಯಿ ತನಗೆ ತಾನೇ ಸುತ್ತ ಬಂದು, ಕಾವಲು ಕಾದು ಆ ಮೇಲೆ ಮಲಗುತ್ತೆ. ಆಗ ಅದಕ್ಕೆ ತೃಪ್ತಿ. ನಿದ್ದೆಯೂ ಬರುತ್ತೆ. ಮಲಗುವಾಗ ನನಗೆ ಕಾವಲಿದೆ ಅಂತ ನಂಬಿದರೆ ಸುಖನಿದ್ದೆ ಬರುತ್ತೋ, ಇಲ್ಲವೋ? ಹಾಗೆಯೇ ಸುಖನಿದ್ದೆ ಮಾಡುತ್ತೆ ನಾಯಿ.

ಆ ಮೇಲೆ ಮನುಷ್ಯ ಮನೆಕಟ್ಟಿಕೊಂಡ, ನಾಯಿ ಅವನ ಮನೆ ಕಾಯುತ್ತ ಅಂಗಳದಲ್ಲೇ ಇರಬೇಕಾಯಿತು. ಆದು ಹಳೆಯ ಪಾಠ ಮರೆಯದೆ ತನಗೆ ತಾನೇ ಸುತ್ತಿಕೊಂಡು ಮಲಗುತ್ತೆ. ಗುಹೆಯ ಹಾಗೆ ಹೊಂಡದ ಶಾಸ್ತ್ರವನ್ನೂ ಮಾಡಿಕೊಳ್ಳುತ್ತೆ.

ನಾವು ಮಾತ್ರ ಯಾವುದನ್ನು ನಂಬಿಕೊಂಡೂ ಮಲಗುವುದಿಲ್ಲ. ಯಾವುದನ್ನು ಯಾಕೆ ನಂಬಬೇಕು? ಒಳ್ಳೆಯ ಯೋಚನೆಯಿಂದ ದೇವರನ್ನು ನಂಬಿಕೊಂಡು ಮಲಗಬೇಕು ಅಂತ ನಾಯಿ ನಮಗೆ ನೆನಪು ಮಾಡುತ್ತೆ ತಿಳೀತಾ?" ಅಜ್ಜಿ ಕತೆ ಮುಗಿಸಿದಳು

'ಅಲ್ಲಜ್ಜಿ, ನೀ ಹೇಳಿದ್ದು ಸರಿ. ನಾಯಿ ಹಾಗೆ ಸುತ್ತು ಬರುವುದು ಯಾಕೆ ಅಂತ ಇವತ್ತು ಮೇಷ್ಟ್ರು ಹೇಳಿದರು. ಗಾಳಿ ಯಾವ ದಿಕ್ಕಿಗೆ ಬೀಸುತ್ತೆ ಅಂತ ಹಾಗೆ ಸುತ್ತಿಕೊಂಡು ಪರೀಕ್ಷೆ ಮಾಡಿ, ಗಾಳಿ ಬೀಸುವ ದಿಕ್ಕಿಗೆ ಮುಖ ವಿಟ್ಟುಕೊಂಡು ಮಲಗಿದರೆ ಆ ದಿಕ್ಕಿಂದ ಕಳ್ಳರು ಬಂದರೆ ತನಗೆ ತಿಳಿಯುತ್ತೆ ಅಂತ ಅದರ ನಂಬುಗೆ."

"ಸರಿ ಮತ್ತೆ! ಬ್ರಹ್ಮ ಹೇಳಿದ ಹಾಗೆ ಕಾವಲು ಕಾಯಬೇಕು ಅಂತ ನಾಯಿ ನಿದ್ರೆಯಲ್ಲಿಯೂ ಎಚ್ಚರಿಕೆ ತೆಗೆದುಕೊಳ್ಳುತ್ತೆ ಅಂತಲೇ ಆಯಿತಲ್ಲಾ! ನಾನು ಹೇಳಿದ ಕತೇನೇ ನಿನ್ನ ಮೇಷ್ಟ್ರು ಗಟ್ಟಿ ಮಾಡಿದರು. ಎಂದ ನಕ್ಕಳು ಅಜ್ಜಿ.

— "ನವಗಿರಿನಂದ"

ನಗೆ ಬಿಂದು

ಕವಿತೆ—ಜಾಹೀರಾತು?

"ಕಾಣೆಯಾಗಿದೆ" ಎಂಬ ನನ್ನ ಕವಿತೆಯನ್ನು ಪತ್ರಿಕಾ ಸಂಪಾದಕರಿಗೆ ಪ್ರಕಟಣೆಗಾಗಿ ಕಳುಹಿಸಿದ್ದೆ..."

'ಪ್ರಕಟವಾಯ್ತೆ?..."

"ಇಲ್ಲ; ಆ ಶಿರೋನಾಮೆ ನೋಡಿ ಪ್ರಕಟಿಸಲು ರೂಪಾಯಿ ಮೂವತ್ತು ಜಾಹೀರಾತು ದರವಾಗಿ ಮುಂಗಡವಾಗಿ [illegible] ಹಣ ತೆರಬೇಕಾಯ್ತು [illegible] ಬಂತು..."

"ಕತೆಗಾರ" ನಾದಾಗ

"ನಿನ್ನ ಗಂಡನೀಗ ಪತ್ರಿಕಾ ಏಜೆನ್ಸಿ ಹೊಂದಿರುವನೆ? ಬಸ್ ನಿಲ್ದಾಣದ ಪತ್ರಿಕೆ ಮಾರಾಟ ಮಾಡುವ ಹಾಗೆ ಕಂಡೆ..."

"ಹಾಗೇನಿಲ್ಲ; ಇಂದಿನ ಪತ್ರಿಕೆ ಅವರ ಕತೆಯಿತ್ತು. ಅವರು ಆಗಾಗ ಕತೆ ಬರೆಯುತ್ತಾರೆ...."

—ಎಚ್. ಎಂ. ಶ್ರೀಕೃಷ್ಣ,
ನವಜೀವನ ಹೈಸ್ಕೂಲು, [illegible]

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ
ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ, 0—90 ಸ್ಟ್ಯಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಭಾರತದಲ್ಲಿ ಪ್ರಜಾಪ್ರಭುತ್ವ ವಿಫಲವೆ?

(ಐದನೇ ಪುಟದಿಂದ)

ಸಮಾಜದ ಬಡವರಿಗೆ ಜೀವನಾವಶ್ಯಕ ಪದಾರ್ಥಗಳನ್ನು ಪೂರೈಸುವ ಹೆಸರಿನಲ್ಲಿ ಸರಕಾರವು ನಿಯಂತ್ರಣವನ್ನು ಜಾರಿಗೆ ತಂದಿದೆ. ವ್ಯಾವಹಾರಿಕವಾಗಿ ನೋಡಿದರೆ, ಈ ನಿಯಂತ್ರಣದಿಂದ ಸಂಕಟಕ್ಕೆ ಗುರಿಯಾಗುವವರು ಅದೇ ಬಡವರು. ಕಲ್ಯಾಣ ರಾಜ್ಯದ ಹೆಸರಿನಿಂದ ಸರಕಾರವು ವಾಣಿಜ್ಯ—ವ್ಯಾಪಾರಗಳ ರಂಗವನ್ನು ಪ್ರವೇಶಿಸಿ ಸ್ವತಃ ಅಧಿಕಾರವನ್ನು ನಿರ್ಮಿಸುತ್ತದೆ; ಪರಿಣಾಮ ಬೆಲೆಯೇರುತ್ತದೆ. ಹಾಗೆಯೆ, ವಿಮೆಗಳ ರಾಷ್ಟ್ರೀಕರಣ, ಸಾರ್ವಜನಿಕ ಕ್ಷೇತ್ರದಲ್ಲಿ ಮುಖ್ಯ ಉದ್ಯಮಗಳ ಸ್ಥಾಪನೆ—ಎಲ್ಲವೂ ದೇಶದ ಅರ್ಥವ್ಯವಸ್ಥೆಯನ್ನು ಕೆಳಗೆ ಮಾಡಿವೆ; ಸ್ವಾತಂತ್ರ್ಯವೇ ಸರ್ವೋತ್ಕೃಷ್ಟವಾಗಬೇಕಾದ ಪ್ರಜಾಪ್ರಭುತ್ವದಲ್ಲಿ ಉತ್ಸಾಹಕ್ಕೆ ನಿರೋಧವಾಗಿದೆ. ಬ್ಯಾಂಕುಗಳ ರಾಷ್ಟ್ರೀಕರಣದ ಮಾತೂ ಕೇಳಬರುತ್ತಿದೆ. ಇದೂ ಆ ದೇಶದ ಆರ್ಥಿಕ ಮತ್ತು ರಾಜ್ಯ [illegible] ಸ್ಥಿರತೆಗೆ ಪೆಟ್ಟನ್ನೇ ನೀಡುತ್ತದೆ.

ಜೀವನದ ಪರಿಸ್ಥಿತಿಯನ್ನೆದುರಿಸುವ ಶಕ್ತಿಯೇ ಶಿಕ್ಷಣವೆಂದು ಡಾ| ಹಿಬ್ಬೆನ್ ಹೇಳುತ್ತಾನೆ. "ಒಂದು ದೇಶದ ಅದೃಷ್ಟವು ಆ ದೇಶದ ಜನತೆಯ ಶಿಕ್ಷಣವನ್ನು ಅವಲಂಬಿಸಿದೆ. ದೇಶದ ಆಡಳಿತವು ಪ್ರಬುದ್ಧವಿರಬೇಕು; ಸಂದಿಗ್ಧ ವಾತಾವರಣದಲ್ಲಿ ಪ್ರಜಾಸತ್ತೆ ಬೆಳೆಯುವುದಿಲ್ಲ" ಎಂದ, ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಅಟ್ಲೀ ಹೇಳಿದ್ದ. ಆದುದರಿಂದ ಜನತೆಯ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಬದಲಿಸುವುದಕ್ಕಾಗಿ ಸರಕಾರಿ ಯಂತ್ರದ ಶಕ್ತಿಯನ್ನೂ ಉತ್ಸಾಹವನ್ನೂ ಹುಟ್ಟಿಸಲು ಪ್ರಾಮಾಣಿಕ ಮತ್ತು ಯೋಗ್ಯ ಜನರು ಅಗತ್ಯ.

ನಮ್ಮ ದೇಶದಲ್ಲೀಗ ಏಕಪಕ್ಷೀಯ ಪ್ರಣಾಳಿಕೆಯು ವ್ಯವಹಾರದಲ್ಲಿದೆ. ಈಗ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವಲ್ಲದೆ ಬೇರೆ, ಅಧಿಕಾರವನ್ನು ನಿರ್ವಹಿಸಬಲ್ಲ ಮತ್ತೊಂದು ಪ್ರಬಲ ವಿರೋಧಿ ಪಕ್ಷವಿಲ್ಲ. ಒಂದು ಸರ್ವಮಾನ್ಯ ಕಾರ್ಯಕ್ರಮವನ್ನಿಟ್ಟುಕೊಂಡು ವಿಭಿನ್ನ ತತ್ತ್ವ ಪ್ರಣಾಳಿಕೆಯ ಬೇರೆ ಬೇರೆ ಪಕ್ಷಗಳು ಒಂದುಗೂಡಿದರೂ ಪಶ್ಚಿಮ ಬಂಗಾಳ, ಪಂಜಾಬ ಮತ್ತು ಉತ್ತರ ಪ್ರದೇಶಗಳಲ್ಲಿ ನಡೆದಂತೆ ಸಂಯುಕ್ತ ವಿಧಾಯಕ ದಳಗಳು ಮುರಿದು ಬೀಳುತ್ತವೆ. ಪ್ರಜಾಪ್ರಭುತ್ವದ ಸಮರ್ಪಕ ಮುನ್ನಡೆಗೆ ಮತ್ತು ದೇಶದ ರಾಜಕೀಯ ಜೀವನದ ಸ್ಥಿರತೆಗೆ ಅಮೆರಿಕ ಮತ್ತು ಬ್ರಿಟನ್ನುಗಳಲ್ಲಿರುವ ದ್ವಿಪಕ್ಷೀಯ ಪ್ರಣಾಳಿಕೆಯು ಅನಿವಾರ್ಯ. ಇಲ್ಲವಾದರೆ, ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವು ಆಪತ್ತಿಗೆ ಗುರಿಯಾಗುವುದು, ವಿಫಲವಾಗುವುದು.

ಪ್ರಜಾಪ್ರಭುತ್ವದ ಬದಲು ಇಂದು ನಾವು 'ಗೂಂಡಾಗಿರಿ'ಯನ್ನು ಕಾಣುತ್ತೇವೆ. ಮುಷ್ಕರಗಳು 'ಲಾಕ್ ಅವುಟ್'ಗಳು, ಸಾರ್ವಜನಿಕ ಮತ್ತು ಖಾಸಗಿ ಸೊತ್ತುಗಳು ಮತ್ತು ಪ್ರಜಾಪ್ರಭುತ್ವದ ತತ್ತ್ವಗಳ ವಿನಾಶಕ್ಕೆ ಕಾರಣವಾಗುತ್ತಿರುವುದನ್ನು ವಿಶ್ವ ಜೀವಿತಗಳು ಸಂಕಟಕ್ಕೆ ಗುರಿಯಾಗುತ್ತಿರುವುದನ್ನು ನಾವು ನೋಡುತ್ತೇವೆ.

ಶಾಸನ ಸಭೆಗಳ ವಿವಿಧ ಪಕ್ಷಗಳಿಗೆ ಸೇರಿದ ಸದಸ್ಯರು ಪಕ್ಷಾಂತರ ಪ್ರವೃತ್ತಿಯನ್ನು ನಾವು ಕಾಣುತ್ತೇವೆ. ಇದು ಸರಕಾರಗಳ ಪತನಕ್ಕೂ ಕಾರಣವಾದದ್ದುಂಟು. ಕಾಂಗ್ರೆಸ್ ಬಹುಮತ ಪಡೆಯದ ರಾಜ್ಯಗಳಲ್ಲಿ ಇಂತಹ ಪ್ರವೃತ್ತಿಯು ರಾಜಕೀಯ ಅಸ್ಥಿರತೆಗೆ ಪೋಷಕವಾಗಿದೆ; ಪ್ರಜಾಪ್ರಭುತ್ವದ ಮೂಲಕ್ಕೇ ಅಪಾಯ ತಂದೊಡ್ಡಿದೆ. ದೈವವಶದಿಂದ ಗೃಹ ಮಂತ್ರಿ ವೈ. ಬಿ. ಚವನರು ಈ ಪ್ರಸಂಗವನ್ನು ಪರಿಶೀಲಿಸಲು ಮತ್ತು ಇಂತಹ ಪ್ರವೃತ್ತಿಯನ್ನು ತಡೆಗಟ್ಟಲು ತಕ್ಕ ಸಿಫಾರಸುಗಳನ್ನು ಮಾಡಲು ಸಮಿತಿಯೊಂದನ್ನು ನೇಮಿಸುವ ವಿಚಾರದಿಂದ ವಿರೋಧ ಪಕ್ಷಗಳ ನಾಯಕರೊಡನೆ ಸಮಾಲೋಚನೆ ಮಾಡುತ್ತಿದ್ದಾರೆ.

ಶಾಸನ ಸಭೆಗಳಲ್ಲಿ ಮತ್ತು ಸಂಸತ್ತುಗಳಲ್ಲಿ ಗೌರವದ ಚರ್ಚೆ ಮತ್ತು ವಿಚಾರ ವಿನಿಮಯದ ಬದಲು ಸಭಾತ್ಯಾಗ, ಕಾಲಾ ಮಸ್ಸಿಗಳಂತಹ ಬೇಜವಾಬ್ದಾರಿ ಮತ್ತು ಅನರ್ಥಕಾರಿ ಹೆಜ್ಜೆಗಳಲ್ಲಿ ಸದಸ್ಯರು ತೊಡಗುವುದು ಶೋಚನೀಯ. ಮತದಾರರು ತಮ್ಮಲ್ಲಿರಿಸಿದ ವಿಶ್ವಾಸದ ಬೆಲೆಯನ್ನು ಅರಿತುಕೊಳ್ಳುವಷ್ಟು ವಿವೇಕವೂ ಸತ್ತ್ವವೂ ನಮ್ಮ ಪ್ರತಿನಿಧಿಗಳಲ್ಲಿಲ್ಲ.

ಸರಕಾರ ಹಾಗೂ ರಾಜಕೀಯ ಪಕ್ಷಗಳು ಜನತೆಯಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ತುಂಬುವಲ್ಲಿ ಅಶಕ್ತವಾಗಿವೆ. ಇಂದೂ ಮುಂದೂ ಎಂದೆಂದಿಗೂ ನಾನು ಭಾರತೀಯನೆಂದು ಜನ ತಿಳಿಯಬೇಕು. ಕಮ್ಯೂನಿಜಂ, ಜಾತೀಯತೆ, ಮತೀಯತೆ, ಪ್ರಾಂತೀಯತೆ ಮತ್ತು ಭಾಷೀಯತೆ ಮೊದಲಾದ ಪ್ರತ್ಯೇಕತಾ ಭಾವನೆಗಳನ್ನು ದೂರ ಮಾಡಿದಾಗ, ಐಕ್ಯ ಭಾವನೆ ಮೂಡಬಲ್ಲುದು. ಎಲ್ಲ ಪಕ್ಷಗಳ ರಾಜಕೀಯ ನೇತಾರರು ದೇಶದಲ್ಲಿ ಐಕ್ಯ ಭಾವನೆಯನ್ನು ಹುಟ್ಟಿಸುವಲ್ಲಿ ರಾಷ್ಟ್ರೀಯ ಸ್ವಾರ್ಥಯಂದ ದುಡಿಯಬೇಕು. ಆದರೆ, ಇಂದಿದು ತೋರುತಿಯದೆ.

"ಸಮಾಜ ಮತ್ತು ಪ್ರತ್ಯೇಕತೆ" ಎಂಬ

ಬಾಪೂವಾಣಿ

ವಿದ್ಯಾರ್ಥಿ ಶೀಲ: ನಮ್ರತೆ

ನೈಜ ಶಿಕ್ಷಣ ಸ್ವಾವಲಂಬಿಯಾಗಿರಬೇಕು. ಶಿಕ್ಷಣದ ಕೊನೆಯಲ್ಲಿ ಹೆಚ್ಚು ಕಾಂಬಿ ಕೊಡುತ್ತದೆ ಶಿಕ್ಷಣದ ಬಂಡವಾಳ ಯಾವಾಗಲೂ ತುಂಬಿರುತ್ತದೆ. ಶಿಕ್ಷಣದ ಆರಂಭ ಘಟ್ಟದಿಂದ ಪೂರ್ಣಾವಸ್ಥೆಯವರೆಗೆ ವಿದ್ಯಾರ್ಥಿಯ ಕೈಗಳು ಕಾರ್ಯಶೀಲವಾಗಿರುತ್ತವೆ; ಯಾವುದಾದರೊಂದು ಹಸ್ತಕಲಾ ಕಾರ್ಯದಲ್ಲಿ ತನ್ಮಯವಾಗಿರುತ್ತವೆ.

ಎಲ್ಲ ವಿಧದ ಶಿಕ್ಷಣವನ್ನೂ ಪ್ರಾದೇಶಿಕ ಭಾಷಾ ಮಾಧ್ಯಮದ ಮೂಲಕ ಕಲಿಸಬೇಕು. ಶಿಕ್ಷಣದಲ್ಲಿ ಜಾತಿಬೇಧ ನೀತಿಯನ್ನು ಧಾರ್ಮಿಕ ತಂಟೆಗೆ ಅವಕಾಶವಿಲ್ಲ. ಆದರೆ ವಿಶ್ವದ ಮಾನವೀಯ ನೀತಿ, ತತ್ತ್ವಗಳ ಕಲಿಕೆಗೆ ಪೂರ್ಣ ಅವಕಾಶವಿದೆ. ಈ ಶಿಕ್ಷಣ ವಯಸ್ಕರು, ಮಕ್ಕಳು, ಸ್ತ್ರೀ-ಪುರುಷರಲ್ಲಿ ಯಾರಿಗೆ ಸೀಮಿತವಾಗಿದ್ದರೂ ವಿದ್ಯಾರ್ಥಿಗಳ ಮುಖಗಳಲ್ಲಿ ವಿಕಾಸ ಹೊಂದಲು ಅವಕಾಶ ದೊರಕುತ್ತದೆ

ಶಿಕ್ಷಣ ಪಡೆಯುವ ಲಕ್ಷಾಂತರ ಮಕ್ಕಳು ಭಾರತದ ಅಖಂಡತೆಯ ಪ್ರತಿನಿಧಿಗಳಾಗಿರುವುದರಿಂದ ಅವರು ಅಂತರ ಪ್ರಾಂತೀಯ ಭಾಷೆಯೊಂದನ್ನು ಕಲಿಯಬೇಕು. ನಾಗರಿ ಅಥವಾ ಉರ್ದು ಲಿಪಿಯಲ್ಲಿ ಬರೆದಿರುವ ಹಿಂದೂಸ್ಥಾನಿ ಮಾತ್ರವೇ ಅಂತರ—ಪ್ರಾಂತೀಯ ಭಾಷೆಯಾಗಬಲ್ಲದು.

ವಿಶ್ವ ವಿದ್ಯಾಲಯ ಶಿಕ್ಷಣ

ದೇಶ ಸ್ವಾತಂತ್ರ್ಯಕ್ಕಾಗಿ ಬದುಕಿ ಜೀವ ಅರ್ಪಿಸಲು ಸಿದ್ಧವಾಗಿ, ಜನತೆಯ ನೈಜ ಸೇವಕರಾಗಿರುವಂತೆ ನಡೆಯುವ [illegible] ವಿಶ್ವವಿದ್ಯಾಲಯ ಶಿಕ್ಷಣದ ಗುರಿಯಾಗಬೇಕು. ಆದ್ದರಿಂದ ವಿಶ್ವವಿದ್ಯಾಲಯ ಶಿಕ್ಷಣವನ್ನು ಮೂಲಶಿಕ್ಷಣದೊಂದಿಗೆ ಸಮನ್ವಯಗೊಳಿಸಿ ಸಮಾನ ಮಟ್ಟಕ್ಕೇರಿಸಬೇಕೆಂಬುದು ನನ್ನ ಅಭಿಪ್ರಾಯ.

ಮಹಿಳಾ ಶಿಕ್ಷಣ ಪುರುಷರ ಶಿಕ್ಷಣಕ್ಕಿಂತ ಭಿನ್ನವಾಗಿರಬೇಕೇ ಅಥವಾ ಯಾವಾಗ ಆರಂಭವಾಗಬೇಕೆಂಬುದರ ಬಗ್ಗೆ ನಾನ ಖಚಿತ ಅಭಿಪ್ರಾಯ ಹೊಂದಿಲ್ಲ. ಆದರೆ ಮಹಿಳೆಯರಿಗೆ ಪುರುಷರಂತೆಯೆ ಸಮಾನ ಸೌಲಭ್ಯಗಳಿರಬೇಕೆಂಬುದು, ಅಗತ್ಯವಾದೆಡೆಯಲ್ಲಿ ವಿಶೇಷ ಸೌಲಭ್ಯ ನೀಡಬೇಕೆಂಬ ಖಚಿತ ಅಭಿಪ್ರಾಯ ಹೊಂದಿರುವೆ.

ಅಧ್ಯಯನ ಪೂರ್ಣಗೊಳಿಸುವವರೆಗೆ ಮಾತ್ರ ಆಂದೋಲನ, ಚಳುವಳಿಗಳಿಗೆ ಕೈಹಾಕಬಹುದು. ಆದರೆ ಭವ್ಯ ಭಾರತ ರಾಗುವಾಗ ಜ್ಞಾನ ಸಂಚಯ ನಮ್ಮ ವಿದ್ಯಾರ್ಥಿಗಳ ಏಕಮೇವ ಉದ್ಯೋಗ. ದೇಶದಲ್ಲಿ ನೀಡುವ ಶಿಕ್ಷಣ ದೇಶಾಭ್ಯುದಯದ ಸಂವರ್ಧನೆಗೆ ಅನುಕೂಲವಾಗಿರಬೇಕು.

ಇವೆಲ್ಲವುಗಳಿಗಿಂತ ಮಿಗಿಲಾಗಿ ವಿದ್ಯಾರ್ಥಿಗಳು ವಿನಮ್ರರಾಗಿರಬೇಕು; ಸಜ್ಜನರಾಗಿರಬೇಕು. ಪ್ರಸಿದ್ಧಿಯ ಶಿಖರದಲ್ಲಿರುವವರು ದೈನ್ಯತೆಯ ಸಜೀವ ಸಂಕೇತವಾಗಿರಬೇಕು.

ಪುಸ್ತಕದಲ್ಲಿ ಎವರ್ಟನ್ ನಾಗರಿಕತೆಯ ಸತ್ಯ ಪರೀಕ್ಷೆ ಜನಗಣತಿಯಲ್ಲ, ನಗರಗಳ ಗಾತ್ರವೂ ಅಲ್ಲ, ಬೆಳೆಯೂ ಅಲ್ಲ. ದೇಶವು ಹುಟ್ಟುಹಾಕುವ ಜನರ ಮನೋಧರ್ಮವೇ ನಾಗರಿಕತೆಯ ಸತ್ಯ ಪರೀಕ್ಷೆ ಎಂದಿದ್ದಾನೆ.

ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ—ಹೀಗೆ ಎಲ್ಲ ರಂಗಗಳಲ್ಲೂ ನಮ್ಮ ಸರಕಾರವು ಸೋತು ಹೋಗಿದೆ; ಹಾಗಾಗಿ ನಮ್ಮ ಪ್ರಜಾಪ್ರಭುತ್ವವು ಸಂಪೂರ್ಣ ಅಯಶಸ್ವಿಯಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

(ಮುಗಿದುದು)

ನೆನಪಿಗೆ ಸಾಮರ್ಥ್ಯ

ಒಬ್ಬ ಪ್ರಿನ್ಸಿಪಾಲ್‌ಗೆ ನೆನಪು ಕಡಿಮೆ. ಹಿಂತಿರುಗುವಾಗ ಗಂಟೆಗೆ ಮೊದಲೇ ತರಗತಿಯಿಂದಾಗಿ ಬಾಗಿಲ ಮೇಲೆ ಬರೆದಿಟ್ಟಿದ್ದ ಪ್ರಿನ್ಸಿಪಾಲ್ ಸ್ವಲ್ಪ ಹೊತ್ತಿನಲ್ಲಿಯೇ ಮರಳಿ ಬಂದರು. ಗಂಟೆ ಬಂದು ಮತ್ತೆ ಅಗತ್ಯ ಮಾರುಗ [illegible] ತವೂ ಅವರ ಬಾಗಿಲ ಹೊರಗಡೆ [illegible] ಕಳೆದರೆ [illegible] ಪ್ರವೇಶಿಸಿದ್ದ.

ಪುಸ್ತಕ ವ್ಯಾಪಾರಿಗಳಿಗೆ ಜನವರಿ ೬೯ರಿಂದ
ಪ್ರಿಯವಾದ ಸಮಾಚಾರ ಮಾರ್ಚಿ 30ನೇ ತಾರೀಖಿನ ವರೆಗೆ
300=00 ರೂ. ನಿವ್ವಳ ವ್ಯಾಪಾರ ಮಾಡಿದರೆ
ಒಂದು Steel Desk (ಬರೆಯುವ—ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ— ಭಾಗ 1—	ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ— ಭಾಗ 2—	"	2—50
ಉಂಡಾಡಿ ಗುಂಡ—	ಪರ್ವತವಾಣಿ	2—00
ಧರ್ಮದೇವತೆ—	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎಚ್. ನರಸಿಂಹಯ್ಯ	3—00
ಎರಡು ತಲೆ ಹಾವು —	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—
ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು
ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕಗಳಿವೆ.

ಸುದರ್ಶನ ಪ್ರಕಾಶನ : ತಾತಾನಿವಾಸ : ತಿಪಟೂರು

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 373/1968

ನಾರಾಯಣ ಆಚಾರ್ಯ, ಪದ್ಮನಾಭ ಆಚಾರ್ಯರ ಮಗ, ಕಾರ್ಕಳ ಕಸಬಾ ಕಾಬೆಟ್ಟುನಲ್ಲಿರುವವ ... ... ವಾದಿ

ಮತ್ತು

ರಾಜ ಹೆಗ್ಡೆ ವಗೈರೆಯು... ...ಪ್ರತಿವಾದಿರು

17ನೇ ಪ್ರತಿವಾದಿ ಮಹಾಬಲ ಹೆಗ್ಡೆ, ತುಂಗಮ್ಮ ಹೆಗಡ್ತಿರ ಮಗ, ಕಾರ್ಕಳ ಕಸಬಾ ಸಂತೆಕಟ್ಟೆಯಂಬಲ್ಲಿರುವವರಿಗೆ—

ವಾದಿಯು ತನಗೆ ಬರಾ ಸಂಬಳ, ಹಮಂಗ, ಈ ಎರಡು ವರುಷಗಳ ಸಲ ವರ್ಷ (Annuity) ವಸೂಲಿ ಬಗ್ಗೆ ರೂಪಾಯಿ 1890—48ಕ್ಕೆ ನಿಮ್ಮ ಮೇಲೆ ಕೊಡಾ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಖು 8—3—69ನೇ ಬೆಳಿಗ್ಗೆ 11 ಗಂಟೆಗ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವುದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯಿರುವಲ್ಲಿ ನೀವು ಸದರಿ ತಾರೀಕಿನಲ್ಲು ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಜಾಹೀರುಮಾಡಿಕೊಳ್ಳಬಹುದಾಗಿಯೂ ತಪ್ಪಿದ್ದಲ್ಲಿ ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬದಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

S. Rajagopal Achar,
Advocate for Plaintiff.

Karkala, 3—2—1969.

ರಾಜ್ಯಕೀಯ ಸ್ಥಿರಗೊಳ್ಳದು

(ನಾಲ್ಕನೇ ಪುಟದಿಂದ)

ಬಿದ್ದರೆ. ಶೇಕಡ ೮೦ರ ಸ್ಥಾನಗಳಲ್ಲಿ ಸೇ. ರಿಂಗಸ್ಟು ಈ ವರ್ಗದ ಅಭ್ಯರ್ಥಿಗಳು. ಹಾಗಾಗಿ ಅವರ ಮೇಲೆ ಅಧಿಕ ಜನ ಸಹಾನುಭೂತಿಯಿದೆ. ಈ ಸಹಾನುಭೂತಿ ಮತಗಳ ರೂಪದಲ್ಲಿಯೂ ಪ್ರಕಟವಾಗುವುದೇ ಎಂದು ಚುನಾವಣಾ ನಂತರವೇ ಹೇಳಬೇಕು.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No. 40/67.

ಕಮಲ ಸೆಡ್ತಿ ಕೂಡಾ - ವಾದಿಯು,

ಮತ್ತು

ಶಾಂತು ಸೆಡ್ತಿ ಕೂಡಾ —ಪ್ರತಿವಾದಿಯು,

ಇವರೊಳಗೆ

ಕಾರ್ಕಳ ತಾಲ್ಲೂಕು ಶಿರ್ಲಾಲು ಗ್ರಾಮದ ಬೇಲಾಡಿ ಪ್ಪೆಬೆಟ್ಟು ಎಂಬಲ್ಲಿರುವ ಕಡೆಕಾರು ಶಾಂತು ಸೆಡ್ತಿರ ಮಗಳು ವ, ಸೀತಾರಾಮ ಪೂಜಾರಿ ಹೆಂಡ್ತಿ 2ನೆ ಪ್ರತಿವಾದಿಳು ಗುಲಾಬಿ ಸೆಡ್ತಿ 1, ಮತ್ತು ಸಡ್ತ್ರಿಯವಳ ಮಗ 9ನೆ ಪ್ರತಿವಾದಿ ಸುರೇಂದ್ರನಾಥ ಹೆಗ್ಡೆ ಕೂಡಾ ಇವರಿಗೆ ತಿಳಿಯಪಡಿಸುವದು,

ವಾದಿಯು ಪಾಲಿನ ಬಗ್ಗೆ ಮಾಡಿದ ಮೇಲಿನ ದಾವೆಯಲ್ಲಿ 2-9ನೆ ಪ್ರತಿವಾದಿರಿಗೂ ಮತ್ತು ಸಡ್ತ್ರಿ 2ನೆಯವಳ ಪ್ರಾಯಸರ ಮಕ್ಕಳು 11 ರಿಂದ 16ನೆ ವರೇಗಿನವರಿಗೂ ಮಾಡಿದ ನೋಟೀಸನ್ನು ಪಡೆಯದೆ ತಪ್ಪಿಸುವದರಿಂದ ಯಿದು ಮೂಲಕ ಪ್ರಕಟಗೊಳಿಸಿ ಜಾರಿ ಮಾಡುವರೆ ಕೋರ್ಟು ಹುಕುಂ ಆಗಿದೆ. ಅದ್ರಿಂದ ಅವರು ಆಕ್ಷೇಪವಿದ್ರೆ ತಾ. 17-3-69ಕ್ಕೆ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಮಾಡಿಕೊಳ್ಳಬೇಕು. ಯಿಲ್ಲವಾದ್ರೆ ಏಕಪಕ್ಷವಾಗಿ ನಂಬ್ರ ತೀರ್ಮಾನಿಸಲ್ಪಡುವದು,

(ಕೋರ್ಟು ಹುಕುಂ ಪ್ರಕಾರ)

B. Yogishwara Holla.
Advocate for Plaintiffs.

Udipi, 7-2-69.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No. 40/1968

ಕೆ. ಪಾಂಡುರಂಗ ನಾಯಕ್........ವಾದಿ

ಮತ್ತು

ಕೆ. ಮಂಜುನಾಥ ನಾಯಕ್ ಕೂಡಾ...
...ಪ್ರತಿವಾದಿಗಳು

ಇವರೊಳಗೆ

ನೋಟೀಸು

ಉಡುಪಿ ತಾಲೂಕು ಉಳಿಯಾರಗೋಳಿ ಗ್ರಾಮದ ಕಾಪುವಲ್ಲಿರುವ ಮರ್ಚೆಂಟ್ ಮರ್ತಪ್ಪ ನಾಯ್ಕರ ಮಗ, ಮೇಲಿನ ವ್ಯಾಜ್ಯದ 1ನೇ ಪ್ರತಿವಾದಿ ಕೆ ಮಂಜುನಾಥ ನಾಯಕ್ ಮತ್ತು "Ram Bhag", II Floor, Dawood Bhag Road, Anderi, West-Bombay—58 ಎಂಬಲ್ಲಿರ ವ ಗೋಪಿಂದ ಮಂಜುನಾಥ ಕಾಮತ್ ಇವರ ಹೆಂಡ್ತಿ 3ನೇ ಪ್ರತಿವಾದಿ ಪುತ್ರಿ ಯಾನೆ ಶಾಂಭವಿ ಬಾಯಿ, ಇವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ :—

ಮೇಲಿನ ವಾದಿಯು ನಿಮ್ಮ ಮೇಲೆ ಕ್ಯೆಪೇಟು ಪ್ರವೃತ್ತಿ ಕೇಳಿ ದಾಖಲು ಮಾಡಿದ ಮೇಲಿನ ವ್ಯಾಜ್ಯವು ನಿಮ್ಮ ಹಾಜರಿ ಬಗ್ಗೆ ತಾರೀಕು 27-2-1969ಕ್ಕೆ ಇಟ್ಟಿರುತ್ತದೆ. ನಿಮ್ಮದೇನಾದ್ರು ಉದಾಹರಣೆ ಯಾ ಆಕ್ಷೇಪವಿದ್ದಲ್ಲಿ ಸದ್ರಿ ಕೋರ್ಟಿನ ಮುಂದೆ ತಾ 27-3-1969 ರಂದು ಬೆಳಿಗ್ಗೆ 11-00 ಗಂಟೆಗೆ ಹಾಜರಾಗಿ ಪ್ಯಾಪೀಲು ಮಾಡಿಕೊಳ್ಳತಕ್ಕದು.

ಕೋರ್ಟು ಹುಕುಂ ಪ್ರಕಾರ.

P. N. Krishnamoorthy Rao,
B. A. LL. B.,
Advocate for Plaintiff.

ಉಡುಪಿ, ದ. ಕ.,
ತಾ: 6-2-69.

ಚರಣಸಿಂಗರ ಪ್ರತಿಸ್ಪರ್ಧಿ ಜನಸಂಘ, ಸಂಯುಕ್ತರಂಗ ಸರಕಾರದಲ್ಲಿ ತನ್ನ ಕೈಯಲ್ಲನ್ನು ಚೆಲ್ಲಿ ಅಪ್ರಿಯವಾಗಿದೆ. ಬ್ರಾಹ್ಮಣರ ವರ್ಗದ ಮತಗಳಲ್ಲದು ಗಳಿಸಬಹುದು; ಎಸ್ಸೆಸ್ಪಿಯೂ ಗಣನೀಯ ಜಯಗಳಿಸುವಂತಿಲ್ಲ. ಇಲ್ಲಿನ ಬಹುಸ್ಥಾನಗಳಲ್ಲಿ ಕಾಂಗ್ರೆಸ್ಸ ಅಲ್ಪ ಬಹುಮತವನ್ನು ಪಡೆದರೂ ಪಡೆಸಬಹುದು. ಉಳಿದ ಯಾವ ಪಕ್ಷವೂ ಬಹುಮತಗಳಿಸುವುದು ಅಶಕ್ಯ.

ಬಿಹಾರದ ಸಮಸ್ಯೆ ಬಹಳ ದಿಗ್ಭ್ರಮೆಗೆ ಕಾರಣವಾಗಿವೆ. ಕಾಂಗ್ರೆಸ್ಸಿಗೆ ಜನಬೆಂಬಲವು ಪತ್ತೆ ಲಭಿಸದಂತಿಲ್ಲ; ಇದರ ಬದಲು ಜನಪ್ರಿಯತೆ ಗಳಿಸಬಲ್ಲ ಮತ್ತೊಂದು ಪಕ್ಷವೂ ಇಲ್ಲ. ೧೯೬೭ರಲ್ಲಿ ಮಹಾಮಾಯಾಪ್ರಸಾದ ಸಿಂಹರು ರಾಮಘರ್ ರಾಜರ ಸಹಾಯದಿಂದ ಪ್ರತಿಪಕ್ಷ ಕೂಟ್ಟದ ಸಹಾಯ ಮಾಡಿದರು. ಹಿಂದುಳಿದವರ ಮತ್ತು ಹರಿಜನರ ಬೆಂಬಲಪಡೆದ ಎಸ್ಸೆಸ್ಪಿಯೂ ಇತ್ತು.

ಇಂದು ಎಲ್ಲ ದೊಡ್ಡ ಪಕ್ಷಗಳಲ್ಲೂ ಒಡಕು ಮೂಡಿದೆ. ಮಹಾಮಾಯಾ ಪ್ರಸಾದ ಸಿಂಹ ಮತ್ತು ರಾಮಘರ್ ರಾಜರ ಘಟುವ ಏರಿಸ ಮಾಡಿದೆ. ಹಾಗಾಗಿ ಬಿಕೆಡಿ ಮತ್ತು ಜನತಾ ಪಕ್ಷಗಳು ದುರ್ಬಲ ಪಕ್ಷಗಳಾದವು ಬಿ. ಪಿ. ಮಂಡಲರು ಎಸ್ಸೆಸ್ಪಿಯಿಂದ ಹೊರಬಂದು ಶೋಷಿತ ದಳವನ್ನು ಕಟ್ಟಿದರು.

ಜನಸಂಘದಲ್ಲೂ ಒಡಕು ಮೂಡಿದೆ. ಕಾಂಗ್ರೆಸ್ಸಿನ ಒಡಕಿನಿಂದಾಗಿ, ಭೋಲಾ ಪಾಸ್ವಾನ್ ಶಾಸ್ತ್ರಿ ಮತ್ತು ಮಹಾಮಾಯಾ ಪ್ರಸಾದರಿಂದ ತಾಂತ್ರಿಕ ಕಾಂಗ್ರೆಸ್ ದಳ ನಿರ್ಮಾಣವಾಗಿದೆ. ಹೀಗಾಗಿ ಸ್ವತಂತ್ರ ಮಹದಾಂರಿ ಬಿಡಿಂಲಾರದಷ್ಟು ಸಿಕ್ಕು ಬಿಹಾರದ ರಾಜ್ಯಕೀಯದಲ್ಲಿದೆ ಇಷ್ಟೂ ಪರಿಸ್ಥಿತಿ ಸುಧಾರಿಸುವ ಆಶಯ ಕಡಿಮೆಯೇ.

ಅಂತು ಉತ್ತರ ಭಾರತದ ವಿಶಾಲ ಭಾಗದಲ್ಲಿ ನಡೆಯುವ ಮಧ್ಯಾವಧಿ ಚುನಾವಣೆಗಳು ಅಲ್ಲಿ ರಾಜ್ಯಕೀಯ ಸ್ಥಿರತೆ ಮಂಡಳ ಲಕ್ಷಣಗಳ ಸ್ಪಷ್ಟವಾಗಿ ಕಾಣವು. ಹಾಗಾಗಿ ರಾಜ್ಯಕೀಯ ಅಸ್ಥಿರತೆಯ ಪುನರಾವೃತ್ತಿಯೇ ಆಗಬಹುದು.

ಗೇಹರಾಜ್ಯದಲ್ಲಿ

ಪ್ರಗತಿ ಪಥದ ಮೈಲುಗಲ್ಲು

"ನೋಡಿ, ಅಲ್ರಿ, ಮುಂದಿನ ತಿಂಗಳಿಂದ ಪ್ರಯಾಣಿಕರು ತಮ್ಮ ಹಾಸಿಗೆಗೂ ಲಗ್ಗೇಜು ಕೊಡಬೇಕಂತೆ...'

"ಎಂಥದ? ಎಲ್ಲಿ?'

"ರೈಲಿನಲ್ಲಿ...'

"ಓ, ರೈಲು ಯಾತ್ರಿಕರು ಕೊಡಬೇಕು ತಾನೆ? ನಮಗೇನಂತೆ? ನಮ್ಮೂರ ರೈಲು ಕಂಬಿಗಳಿಲ್ಲದೆಯೇ ಓಡಾಡುತ್ತವೆ ....'

ಅದಕ್ಕೆ ಶುಲ್ಕವೇ ಇಲ್ಲ...."

"ನಿವ ಗೆಲ್ಲಾ ತಮಾಶೆಯಾಯ್ತು..."

"ಅಲ್ವೆ, ಇಲ್ಲದ ಕೈಗೆ ಬೋನವ ಬಿಡಿ ಅಂತ ಹೇಳಿದರೆ..."

"ಗಸ್ತು ಭಮಾಯ್ರಿಗೆ ರೈಲು ಬಂದಿಲ್ಲ; ಮುಂದೊಂದ ದಿನ ಯಾಕೆ ಬರಬಾರದ?'

'ಬಂದೀತು ಬಿಡಿ; ಆದರೆ, ಆಗಿನ ರೈಲು ರೇಟೂ ಬದಲಾಗುತ್ತೆ...."

"ಹೋಗ್ಲಿ ಬಿಡಿ, ಸಧ್ಯ ನಮಗೆನೇ ಎಲ್ಲಾದ್ರೂ ಹೋಗಬೇಕಾಯಿತೂನ್ನಿ. ಆಗ...."

"ಆಗ, ಹಾಸಿಗೆ ತೆಗೆದುಕೊಂಡು ಹೋಗದಿದ್ದರೆ ಸರಿ...."

"ಅಲ್ರಿ, ಇನ್ನು ಮುಂದೆ ಮೂರನೆಯ ದರ್ಜೆಯವ್ರು ಟಿಕೆಟಿಗಿಂದಕ್ಕೆ ಮೂರನೆ ತ್ರೈದು ಕಡಿ ಭಾಗವನ್ನು ಉಚಿತವಾಗಿ ಒಯ್ಯಬಹುದಂತೆ..

"ಒಂದು ವಿಷ್ಯ ನೋಡಿ ಆಗ, ...

"ಯಾಕೆ?

"ಅಲ್ವೇ, ನಮ್ಮ ಪ್ಯಾಸೆಂಜರ್ ಎಕ್ಸ್ಪ್ರೆಸ್ ಗಾಡಿಗಳ ನಡುವೆ ... ವ್ಯತ್ಯಾಸವೂ ಇಲ್ಲ ಆಗ...

ಅಂತ್ರೇ....?"

'ಒಬ್ಬ ಯಾತ್ರಿಕ ಒಂದೊಂದು ಡಬ್ಬಿ ಸಾಮಾನುಗಳಷ್ಟು ತರ ಬಹುದು; ಅದ್ರ ಮೇಲೆ ಏನಾದರು ಇದ್ರೆ ಮಾಮೂಲು ಸೆ ಮಾಡ್ತಾರೆ; ಇವುಗಳಿಗೆ ಹೆಚ್ಚು ಲಗ್ಗೇಜು ತುಂಬಿರುತ್ತವೆ. ಹಾಗಾಗಿ ನೂಕು ನುಗ್ಗಲು...."

"ಹಹ್ಹಾ...ಆದ್ರೂ...'

'ಏನು?'

"ಕಡಮೆ ಲಗ್ಗೇಜು, ಸುಖ ಪ್ರಯಾಣ ಅಂತ ಬೋರ್ಡು ಹಾಕ್ತಿದ್ದಾರಲ್ಲ..."

"ಅಯ್ಯೋ, ಇಂಥ ಬೆಲೆಯಿಲ್ಲದ ಬರಹ ನಮ್ಮಲ್ಲಿ ಎಷ್ಟಿಲ್ಲ....?"

"ಇದೇನ್ರಿ...ಸರಕಾರದ ಆಜ್ಞೆ ಧಿಕ್ಕರಿಸಿ ಟೆಂಡರುಗಳಿಗೆ ಬೇಡಿ ಸಿಗರೇಟು ಸ್ಸೆದ ಬರಹ, ನೋಟೀಸು ಹಚ್ಚ ಬಾರದು, ಇಲ್ಲಿ ಮಲಗೊಳ್ಳಬಾರದು...."

'ಹ್ಹ...ಹ್ಹ...ಆದಿರ್ಲಿ, ನಮಗ್ಯಾಕಂತೆ, ಮತ್ತೊಂದು ತಮಾಷೆ ಕೇಳಿದ್ಯೇನೆ?'

'ಏನಂತೆ?'

"ಪಾಕಿಸ್ತಾನದ ಮಾಜಿ ವಿದೇಶ ಮಂತ್ರಿ ಭುಟ್ಟೋ ಜೈಲಿನಲ್ಲಿಯೇ ಉಪವಾಸ ಆರಂಭಿಸುತ್ತಾರಂತೆ...."

"ಗಾಂಧಿ ಶತಮಾನೋತ್ಸವ ಸಾರ್ಥಕವಾಯ್ತು."

"ಯಾಕೆ?"

"ಅಲ್ರಿ, ರಕ್ತಪಿಪಾಸು ಎನಿಸಿದವ್ರು ಗಾಂಧೀ ಮಾರ್ಗವನ್ನು ಅನುಸರಿಸುತ್ತಾರೆಂಬುದಕ್ಕಿಂತ ಒಳ್ಳೆಯ ವಿಷ್ಯ ಬೇರಾವುದಿದೆ?"

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

Ex. Case No. 90/68.

ದೇವಪ್ಪ ಕೊಡಂಚ ...ಅರ್ಜಿದಾರ,

ಮತ್ತು

1. ಜಿ. ಕುಶಲ ಹೆಗ್ಡೆ, ಎಡ್ವಕೇಟ್ (ರಿಸೀವರ್ 2 to 7ನೆ ಎದ್ರಿರ ಕುಟುಂಬದ ಪೈಕಿ ಗೆ O. S. 4/61ನೆ ದಾವೆಯಲ್ಲಿ ನೇಮಿಸಲ್ಪಟ್ಟವರು.)

2. ಮಾದಪ್ಪ ಕೊಡಂಚ, ತಮ್ಮಯ್ಯ ಕೊಡಂಚರ ಮಗ; 3. ವೆಂಕಟನ ಕೊಡಂಚ; 4. ಪ್ರಭಾಕರ ಯಾನೆ ಅಚ್ಯುತ ಕೊಡಂಚ; 5. ಆನಂದ ಕೊಡಂಚ (ಸದಾನಂದ ಕೊಡಂಚ (ಸ್ವಾಮಿ) ;6. ಸುಶೀಲ ಬಾಯಿ, ಮಾದಪ್ಪ ಕೊಡಂಚರ ಹೆಂಡ್ತಿ 3, 4, 5ನೆಯವರು ಮಾದಪ್ಪ ಕೊಡಂಚರ ಮಕ್ಕಳು —ಎದ್ರಿರು.

2, 6ನೆಯವರು ಕುಂದಾಪುರ ತಾಲ್ಲೂಕು ಗುಜ್ಜಾಡಿಯಲ್ಲಿಯೂ 3, 4ನೆಯವರು c/o B. N. ಪ್ರೋಫೆಸ್ಸರ್. ರಾವ್, 48/B, ಗಂಗರೆಡ್ಡಿ ಸ್ಟ್ರೀಟ್, ಎಗ್ಮೋರು, ಮದ್ರಾಸಿನಲ್ಲಿಯೂ 5ನೆಯವ ಕಾಂಪ್ಟನಲ್ಲಿ ಕಾರ್ಪೋರೇಶನ್ ಬ್ಯಾಂಕಿನ ಕ್ಲಾರ್ಕನಾಗಿಯೂ ಯಿರುತ್ತಿದ್ದವರು,

ಅರ್ಜಿದಾರನು ಅಸಲಿಗೆ ಬಗ್ಗೆ O. S. 34/63ನೆ ಡಿಕ್ರಿಯ ಹಣ ವಸೂಲಿ ಬಗ್ಗೆ ಮಾಡಿದ ಮೇಲಿನ ಅಮಲ್ದಾರಿಯಲ್ಲಿ 3 to 6ನೆ ವರೆಗಿನ ಎದ್ರಿಗೆ ನೋಟೀಸು ಜಾರಿ ಆಗದಿರುವದ್ರಿಂದ ಯಿದು ಮೂಲಕ ಪ್ರಕಟಗೊಳಿಸಿಯದೆ. ಅವರು ಆಕ್ಷೇಪ ಹೇಳುವ ಸಂಗ್ತಿಯಲ್ಲಿ ತಾ. 26-3-1969ನೆ ಬೆಳಿಗ್ಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಹಾಜಿರಿ ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ಅವರನ್ನು ಬಿಟ್ಟು ತೀರ್ಮಾನ ಮಾಡಲಾಗುವುದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla,
Advocate for Petitioner.

Udipi, 7-2-69.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೋಟೆಲ್ ಸತ್ಕಾರ್

ಕಾರ್ಪೋರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ಮನೆ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—27

"ಹ್ಞಾಂ, ಅದೂ ಇನ್ನೆ ನಿನ್ನೆ ಯುವರಿಗೂ ಪ್ರಾಯಃ ಇಂದೂ ರಕ್ತ ಹೀರುವ ಜಿಗಳೆ ನಾಳೆ ಹಾಲು ಹೀರುತ್ತೇಂತಂದ್ರೆ ಏನನ್ನಬೇಕೋ....'

'ಅಂದ್ರೆ, ಅದು ಸುಳ್ಳೂಂತಂತೀರಾ?'

"ನಾನ್ಯಾಕೆ ಅನ್ನಬೇಕು? ಅದ್ರೆ ಪೂರ್ಣ ಸುಳ್ಳಲ್ಲದು. ತಾವೇ ಹೊತ್ತಿಸಿದ ಪ್ರತಿ ಹಿಂಸೆಯ ಬೆಂಕಿ ಆಯ್ಯೂಬರನ್ನು ಸುಟ್ಟರೂ ಬೇಕಾದರೆ ತನ್ನ ಜೀವವನ್ನು ಅಪಾಯಕ್ಕೊಡ್ಡುವ ಸನ್ಮಾರ್ಗವೊಂದು ಭುಟ್ಟೋಗೆ ಬೇಕು, ಅದು 'ಗಾಂಧಿ ಮಾರ್ಗ'ವಾಯಿತ್ತು...."

'ಅಂದ್ರೆ, ಗಾಂಧಿ ಮಾರ್ಗದ ಹೆಸರಿನ ಕ್ಷಿ ದೇಶದಲ್ಲಿ ಜ್ವಾಲೆ...'

"ಮತ್ತೆ ಗಾಂಧಿ ಮಾಡಿದ್ದು ಏನು. ಗಾಂಧಿ ಬ್ರಿಟಿಷರ ಕಪಿ ಮುಷ್ಟಿಯಿಂದ ದೇಶವನ್ನೇ ಬಿಡಿ ಹೋರಾಡಿದರೆ, ಭುಟ್ಟೋ ಆಯ್ಯೂಬರ ಸರ್ವಾಧಿಕಾರದಿಂದ ಪಾಕ್ ವಿಮೋಚನೆ ಮಾಡ ಹವಣಿಸಿದ್ದಾರೆ...."

"ಅದೇನಿದ್ದರೂ ಗಾಂಧಿಯವರದು ಸಾತ್ವಿಕ ಪ್ರೇರಿಕ, ಭುಟ್ಟೋರದ್ದು ತಾಮಸ ಪ್ರೇರಿತ'

'ಅದೆಲ್ಲ ಯಾರು ಕೇಳುತ್ತಾರೆ? ಏನಾದರೂ ಮಾಡಿ ಹೇಗಾದರೂ ಹೆಸ್ರು ಪಡೀಬೇಕು...."

"ಅಲ್ರೀ, ನಮ್ಮ ನ್ಯೆಸೂರು ವಿಶ್ವವಿದ್ಯಾಲಯದಲ್ಲಿ ಇನ್ನು ಮುಂದೆ ಪಿಯುಸಿ ಮತ್ತು ಮೊದಲ ಪದವಿ ಪರೀಕ್ಷೆಗಳಲ್ಲಿ ಇಂಗ್ಲಿಷನ್ನು ಅನಿವಾರ್ಯವಾಗಿ ಕಲಿಯಬೇಕಾಗಿಲ್ಲವಂತೆ....'

'ಹ್ಞಾಂ, ಇಂಗ್ಲಿಷೂ ವಿಶ್ವದ ಸಾವಿರಾರು ಭಾಷೆಗಳಲ್ಲಿ ಒಂದು. ಅದಕ್ಕೆ ಇಲ್ಲದ ಪ್ರಾಶಸ್ತ್ಯ ಏಕೆ?"

"ಅಂದ್ರೆ..."

"ಕನ್ನಡವನ್ನೂ ಮಾಧ್ಯಮವಾಗಿ ಸ್ವೀಕರಿಸಿದಾಗ, ಈ ಮಾಧ್ಯಮವೇ ಜನಪ್ರಿಯವಾಗುತ್ತ ಬರುತ್ತಿರುವಾಗ ಇಂಗ್ಲಿಷ್ ಭೂತವೇಕೆ ಅಡ್ಡ ಬರಬೇಕು? ಇಂದಿನ ಅನುತ್ತೀರ್ಣತೆಗೆ ಇಂಗ್ಲಿಷ್ ಮಾಧ್ಯಮದೊಡನೆಯೇ ಇಂಗ್ಲಿಷ್ ವಿಷಯವೂ ಕಾರಣ...."

"ಸರಿಯಾಯ್ತು ಬಿಡಿ, ಉತ್ತೀರ್ಣತೆಯ ಪ್ರತಿಶತ ಹೆಚ್ಚಬೇಕೆಂದು ಹೀಗೆ ಮಾಡುವುದರಿಂದ ಪ್ರಯೋಜನ– ದೇಶ ಕಂಟಕ ಪದವೀಧರರ ನಿರ್ಮಾಣ ಮಾತ್ರ..." —ಗೋರಾ.

ಮಿಲಾಗ್ರಿಸ್ ಕಾಲೇಜ್ ವಾರ್ಷಿಕೋತ್ಸವ

ಕಲ್ಯಾಣಪುರ, ಫೆ. ೧ — ಸ್ಥಳೀಯ ಮಿಲಾಗ್ರಿಸ್ ಕಾಲೇಜ್‌ನಲ್ಲಿ ಬೆಳಿಗ್ಗೆ ಧ್ವಜಾರೋಹಣ ಕಾರ್ಯಕ್ರಮವು, ಕಾಲೇಜಿನ ಪ್ರಿನ್ಸಿಪಾಲರಾದ ಡಾ| ಪಿ. ಗುರುರಾಜ ಭಟ್ಟರ ವಂದನಾ ಸ್ವೀಕಾರದೊಂದಿಗೆ ನೆರವೇರಿತು. ಬಳಿಕ ಕಾಲೇಜ್ ವಿದ್ಯಾರ್ಥಿಗಳಿಗೆ ಲಘೂಪಹಾರವನ್ನು ಹಂಚಲಾಯಿತು, ಅನಂತರ ಛದ್ಮವೇಶ ಸ್ಪರ್ಧೆ ನಡೆಯಿತು.

ಅಪರಾಹ್ನ ಕಾಲೇಜಿನ ಎರಡನೇ ವಾರ್ಷಿಕೋತ್ಸವವು ಕನ್ನಡದ ಸುಪ್ರಸಿದ್ಧ ಲೇಖಕರೂ, ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯ ಅಧಿಕಾರಿಗಳೂ, ಕನ್ನಡದ ಕಟ್ಟಾಭಿಮಾನಿಗಳೂ ಆಗಿರುವ ಶ್ರೀ ದೇ. ಜವರೇಗೌಡರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೇರವೇರಿತು.

ಪ್ರಾರ್ಥನೆ, ಸ್ವಾಗತಗೀತೆಗಳಾದ ನಂತರ ರೆ| ಫಾ| ಗೊನ್ಸಾಲ್ವಿಸ್ ಅವರು ಸ್ವಾಗತ ಭಾಷಣವಿತ್ತರು. ಶ್ರೀ ಎ. ಎಸ್. ನಾಯಕರು ಸಂದೇಶಗಳನ್ನು ಓದಿದರು. ಪ್ರಿನ್ಸಿಪಾಲ್ ಡಾ| ಪಿ. ಗುರುರಾಜ ಭಟ್ಟರು ಕಾಲೇಜಿನ ವರದಿಯನ್ನು ಓದಿದರು. ಶ್ರೀ ಪಿ. ಕೆ. ರಾಮಯ್ಯ, ಐ.ಪಿ.ಎಸ್., ಎ.ಎಸ್.ಪಿ., ಉಡುಪಿ ಇವರು ಆಟೋಟಗಳಲ್ಲಿ ವಿಜಯಿಗಳಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡುತ್ತಾ ಶಿಸ್ತಿನ ವಿಚಾರವಾಗಿ ಒಂದೆರಡು ಹಿತನುಡಿಗಳನ್ನು ಹೇಳಿದರು.

ಬಳಿಕ ಹಸ್ತಪತ್ರಿಕೆ "ಕುಸುಮ ಮಂಜರಿ" ಯನ್ನು ಅಧ್ಯಕ್ಷರು ಉದ್ಘಾಟಿಸಿ ಮಾತನಾಡುತ್ತಾ ಬಯಸಿದ ವಿಷಯಗಳನ್ನೇ ಅಭ್ಯಸಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಬೇಕೆಂದೂ ಮತ್ತು ವಿದ್ಯಾರ್ಥಿಗಳಿಗೆ ಶಿಸ್ತು ಸಂಯಮ ಮುಖ್ಯವೆಂದೂ ತಿಳಿಯಪಡಿಸಿದರು. ಇಂಗ್ಲಿಷ್ ಮಾಧ್ಯಮವನ್ನು ಕಡ್ಡಾಯವಾಗಿರಿಸದೇ ಕನ್ನಡ ಮಾಧ್ಯಮದಿಂದಲೂ ವಿದ್ಯಾರ್ಥಿಯು ತನ್ನ ಗುರಿಯನ್ನು ತಲುಪಬಹುದೆಂದು ಒತ್ತಿ ಹೇಳಿದರು. ಶ್ರೀ ಪಿ. ಲಕ್ಷ್ಮಣ ಶೆಟ್ಟಿ, ಎಂ. ಎ.ಯವರು ಧನ್ಯವಾದಗಳನ್ನರ್ಪಿಸಿದರು.

ಅನಂತರ ಮನರಂಜನಾ ಕಾರ್ಯಕ್ರಮದ ಅಂಗವಾಗಿ, ಹಲವಾರು ಚಟುವಟಿಕೆಗಳು ನಡೆದುವು. ಅಲ್ಲದೆ 'The Happy Pedler' ಎಂಬ ಇಂಗ್ಲಿಷ್ ನಾಟಕವು ಕಾಲೇಜಿನ ವಿದ್ಯಾರ್ಥಿನಿಯರಿಂದಲೂ "ಅಜ್ಜಿಯ ಅಸ್ತ್ರ" ಎಂಬ ಸಾಮಾಜಿಕ ನಗೆ ನಾಟಕವು ಕಾಲೇಜಿನ ವಿದ್ಯಾರ್ಥಿಗಳಿಂದಲೂ ಮನಮೋಹಕವಾಗಿ ಅಭಿನಯಿಸಲ್ಪಟ್ಟಿತು.

ಫಲಿಮಾರು ಶ್ರೀಗಳಿಂದ ಭಂಡಾರಕೇರಿ ಶ್ರೀಗಳಿಗೆ ಪಟ್ಟಾಧಿಕಾರ ಸಮರ್ಪಣೆ

ಉಡುಪಿ, ಫೆ. 8—ಉಡುಪಿಯ ಅಷ್ಟ ಮಠಗಳಲ್ಲೊಂದಾದ ಫಲಿಮಾರು ಮಠದ ಶ್ರೀ ರಘುವಲ್ಲಭತೀರ್ಥ ಶ್ರೀ ಪಾದಂಗಳವರು ತನ್ನ ಸನ್ಯಾಸಪಟ್ಟವನ್ನು ತೊರೆದು, ಉಡುಪಿ ಅಷ್ಟಮಠಗಳಿಗೆ ಸೇರದ, ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರಿಗೆ ತನ್ನ ಮಠದ ಪಟ್ಟವನ್ನು, ಶ್ರೀ ಪೇಜಾವರ ಮತ್ತು ಅದಮಾರು ಮಠಗಳ ಶ್ರೀಗಳವರ ನೇತೃತ್ವದಲ್ಲಿ ಯಥಾವಿಧಿಯಾಗಿ ಒಪ್ಪಿಸಿದರು.

ಇದನ್ನು ಪ್ರತಿಭಟಿಸಿ ಪುತ್ತಿಗೆ, ಕೃಷ್ಣಾಪುರ, ಕಾಣಿಯೂರು, ಸೋದೆ ಮತ್ತು ಶೀರೂರು ಮಠಾಧಿಪತಿಗಳು ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ ತಡೆಯಾಜ್ಞೆ ಕೋರಿ ದಾವೆ ಹೂಡಿರುವರು. ವಾದಿಗಳ ಪರವಾಗಿ ಶ್ರೀ ಪಿ. ವಿ. ಆಚಾರ್ಯರೂ, ಪ್ರತಿವಾದಿಗಳ ಪರವಾಗಿ ಶ್ರೀ ಕೆ. ಬಾಲಚಂದ್ರರಾಯರೂ ವಾದಿಸಿದ್ದರು. ದಾವೆಯನ್ನು ಮುನ್ಸಿಫರಾದ ಶ್ರೀ ಕೃಷ್ಣಪ್ಪ ಶೆಟ್ಟರು ಮುಂದುವರಿಸಿಟ್ಟಿರುವರು

ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವ

ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವ ಕಳೆದ ತಾ. 31ರಂದು ನೆರವೇರಿತು. ಜನರಲ್ ಕೆ. ಎಂ ಕಾರ್ಯಪ್ಪನವರು ಮುಖ್ಯ ಅತಿಥಿ ಆಗಿದ್ದು ರಾಷ್ಟ್ರೀಯತೆ, ಶಿಸ್ತು ನಿಯಮಗಳ ಕುರಿತು ಮಾತನಾಡಿದರು.

ಮರುದಿನ ಕಾಲೇಜಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನೆರವೇರಿತು. ಡಾ| ಯು. ಆರ್. ಅನಂತಮೂರ್ತಿಯವರು ಈ ಸಂದರ್ಭದಲ್ಲಿ ಬೋಧಪ್ರದವಾಗಿ ಮಾತನಾಡಿದರು. ಎರಡು ದಿನವೂ ಕಾಲೇಜಿನ ವಿದ್ಯಾರ್ಥಿಗಳಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದುವು.

ಅಭಿಪ್ರಾಯ

ಕೃಷಿಕರಿಗೆ (ಕೃಷಿ ಅಭಿವೃದ್ಧಿ ನೆಪದಲ್ಲಿ) ಸರಕಾರೀ ಅಧಿಕಾರಿಗಳು ಕೊಡುವ ಪೀಡೆ:—

ನಮ್ಮ ಬೆಳ್ತಂಗಡಿ ಬ್ಲೋಕು ಆಫೀಸಿನಲ್ಲಿ ಇದೇ ಕಳೆದ 1968ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಒಂದು ಇಂಜಿನ್ ಪಂಪುಸೆಟ್ಟು ಹಣ ಜಮಾಮಾಡಲಾಗಿತ್ತು. ಅಸ್ಟೆರಿ ದರ್ಖಾಸ್ತು ದಾರನಿಂದ ತೀಕಡಾ 50% ರ ಹಣವನ್ನು ಪುತ್ತೂರು ಅಸಿಸ್ಟೆಂಟ್ ಕೃಷಿ ಡೈರೆಕ್ಟರರು ಆಗಲೇ ಪಡೆದು ರಶೀದಿ ನೀಡಿದರು. ಅನಂತರ ಕಳೆದ ನವಂಬರ ತಿಂಗಳಲ್ಲಿ ಏಲಂ ರದ್ದುಪಡಿಸಲಾಗಿದೆ ಎಂತಲೂ ಡಿಪೋಜಿಟ್ ಹಣ ವಾಪಾಸುಕೊಡುವ ವ್ಯವಸ್ಥೆ ಮಾಡಲಾಗುವುದೆಂತಲೂ ತಿಳಿಸಿದ್ದಲ್ಲದೆ, ಈ ವರೇಗೆ ಹಣ ವಾಪತಿ ಮಾಡದೆ ಇರುವುದನ್ನು ನೋಡುವಾಗ ನಮ್ಮ ಸರಕಾರದ ವ್ಯವಸ್ಥೆಗಳನ್ನು ಹೊಗಳಬೇಕೋ ತೆಗಳಬೇಕೋ ಗೊತ್ತಿಲ್ಲ.

ಪ್ರಜೆಯೊಬ್ಬನ ಖಾಸಗಿ ಹಣವನ್ನು ಸರಕಾರ ಈ ರೀತಿ ನೀತಿ ನಿಯಮಗಳಿಗೆ ವಿರೋಧವಾಗಿ ಇಷ್ಟು ದೀರ್ಘಕಾಲ ಇಟ್ಟುಕೊಳ್ಳಬಹುದೆ? ಏಲಂ ಪಡಿಸಿದ ಕೃಷಿಯಂತ್ರ ಮತ್ತು ಪಂಪುಸೆಟ್ಟು ವರ್ಷಗಟ್ಟಲೆ ಸರಕಾರೀ ಆಫೀಸಗಳಲ್ಲಿ ಮೂಲೆ ಪಾಲಾಗಿ ಗತಿಗೋತ್ರವಿಲ್ಲದೆ ಬಟ್ಟಿದುವುದರಿಂದ ಕೃಷಿ ಅಭಿವೃದ್ಧಿ ಆದೀತೆ? ಜಿಲ್ಲೆಯೊಳಗೆ ಮುಗಿಯುವ ಇಂಥಾ ಚಿಕ್ಕ ಪುಟ್ಟ ವ್ಯವಹಾರಕ್ಕೆ ವರ್ಷಗಟ್ಟಲೆ ಸಮಯ ಬೇಕಾಗುವುದಿದ್ದರೆ ರಾಜ್ಯಮಟ್ಟದ ಕರ್ತವ್ಯಗಳಿಗೆ ಇನ್ನೆಷ್ಟು ಸಮಯ ಬೇಕಾದೀತೋ ದೇವರೇ ಬಲ್ಲ. ಸನ್ಮಾನ್ಯ ಜಿಲ್ಲಾ ಶಾಸಕರೂ ಪೂಜ್ಯ ಮಂತ್ರಿವರೇಣ್ಯರೂ ನಮ್ಮ ಜಿಲ್ಲೆಯಲ್ಲಿ ಈ ರೀತಿಯ ಸರಕಾರೀ ಅಧಿಕಾರಿಗಳ ವಿಳಂಬ ಧೋರಣೆಗಳನ್ನು ದಯಮಾಡಿ ಶೋಧಿಸಿ ತಕ್ಕ ಕಾರ್ಯಕ್ರಮ ಕೈಕೊಳ್ಳಲು ಮುಂದೆಬರುವ ಸಾಹಸ, ಎದೆಗಾರಿಕೆ ವಹಿಸಿಯಾರೇ?

ನೊಂದ ಕೃಷಿಕ

(ಬಿ. ಕೆ. ವೆಂಕಟಸುಬ್ಬರಾವ್.)

ಮಿತ್ತಬಾಗಿಲು,

ತಾ. 31—1—69

ಎಡನೀರು ಮಠದ ವಾರ್ಷಿಕೋತ್ಸವ

ಎಡನೀರು ಶ್ರೀ ವಿಷ್ಣುಮಂಗಲ ದೇವಸ್ಥಾನದಲ್ಲೂ ಶ್ರೀ ಮಠದಲ್ಲೂ ತಾ. 12-2-1969ರಿಂದ 16-2-1969ರ ವರೆಗೆ ಉಡುಪಿಯ ಶ್ರೀ ಕೃಷ್ಣಾಪುರ ಮಠಾಧೀಶರಾದ ಶ್ರೀಮದ್ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ವಾರ್ಷಿಕೋತ್ಸವವು ಜರಗಲಿರುವುದೆಂದೂ ಸರ್ವರೂ ಬಂದು ಪ್ರಸಾದ ಮಂತ್ರಾಕ್ಷತೆಗಳನ್ನು ಸ್ವೀಕರಿಸಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದೂ ಶ್ರೀಮದ್ ಎಡನೀರು ಮಠಾಧೀಶರಾದ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರು ಹಾರೈಸುತ್ತಾರೆ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಪುತ್ತೂರು ಲ್ಯಾಂಡ್ಸ್ ಟ್ರಿಬ್ಯುನಲ್‌ನಲ್ಲಿ, ಪುತ್ತೂರು, ದ. ಕ.

ಮಿಸ್. ಪಿಟಿಶನ್ ನಂ. 45/1968.

ಗಣಪತಿ ಭಟ್ಟ —ಅರ್ಜಿದಾರ.

vs.

ರಾಮಪ್ಪ ಸೇರ್ಿಗಾರ ಮತ್ತು ಇತರರು —ಎದ್ರಿಯರು.

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ತಾಲೂಕು ಬೆಳ್ಳಾರೆ ಕಸಬಾ ಗ್ರಾಮದಲ್ಲಿರುವ ರಾಮಪ್ಪ ಸೇರ್ವೆಗಾರರ ಮಗ (ಮ್ಯಾನರ್) ಚಂದ್ರಶೇಖರ ಸೇರ್ವೆಗಾರರ ಬಗ್ಗೆ ಅವರ ಗಾರ್ಡಿಯನ್ ರಾಮಪ್ಪ ಸೇರ್ವೆಗಾರರಿಗೆ-

ಅರ್ಜಿದಾರರು ಸದ್ರಿ ಚಂದ್ರಶೇಖರ ಸೇರ್ವೆಗಾರರ ಮತ್ತು ಇತರರ ಮೇಲೆ ಪುತ್ತೂರು ಲ್ಯಾಂಡ್ಸ್ ಟ್ರಿಬ್ಯುನಲ್‌ನಲ್ಲಿ ಮಿಸ್. ಪಿಟಿಶನ್ 45/1968 ಎಂಬ ಅರ್ಜಿಯನ್ನು ಆಸ್ತಿ ಸ್ವಾಧೀನತೆಗಾಗಿ ಹೂಡಿರುತ್ತಾರೆ. ಮತ್ತು ಸದ್ರಿ 8ನೇ ಎದ್ರಿ ಚಂದ್ರಶೇಖರರ ಗಾರ್ಡಿಯನ್ ಆಗಿ ನಿಮ್ಮನ್ನು ನೇಮಿಸಿರುತ್ತಾರೆ. ಸದ್ರಿ ವ್ಯವಹಾರವು ನಿಮ್ಮ ಹಾಜರಾತಿ ಬಗ್ಗೆ 6ನೇ ಜನವರಿ 69ರಂದು ಇರುತ್ತದೆ. ನೀವು ಆ ದಿನ ಸದ್ರಿ ಲ್ಯಾಂಡ್ಸ್ ಟ್ರಿಬ್ಯುನಲ್‌ನಲ್ಲಿ ಹಾಜರಾಗಿ ಗಾರ್ಡಿಯನ್ ಆಗುವ ಬಗ್ಗೆ ಏನಾದರೂ ಆಕ್ಷೇಪಗಳು ಇರುವುದಾದರೆ ದಾಖಲು ಮಾಡಿ ತಕ್ಷಣೆಗೆ ತಯಾರಾಗಬೇಕೆಂದು ಈ ಮೂಲಕ ನಿಮಗೆ ತಿಳಿಸಲಾಗಿದೆ.

ತಾರೀಕು 6-3-1969ರಂದು 11 ಗಂಟೆಗೆ ನೀವು ಸದ್ರಿ ಲ್ಯಾಂಡ್ಸ್ ಟ್ರಿಬ್ಯುನಲ್‌ನಲ್ಲಿ ಹಾಜರಾಗಬೇಕಾದ್ದು. ಇದಕ್ಕೆ ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ವ್ಯವಹಾರವು ನಿರ್ಣಯವಾಗುತ್ತದೆ. ತಿಳಿದಿರಲಿ.

ಅರ್ಜಿದಾರರ ಎಡ್ವಕೇಟ್

ಎ. ಪಿ. ಗೌರೀಶಂಕರ.

(ಟ್ರಿಬ್ಯುನಲ್‌ನ ಹುಕ್ಕುಂ ಪ್ರಕಾರ)

ಪುತ್ತೂರು, ದ. ಕ,
6-2-1969.

Prakash Match & Plywood Factory Limited

ಪ್ರಕಾಶ ಮ್ಯಾಚ್ & ಪ್ಲೈವುಡ್ ಫ್ಯಾಕ್ಟರಿ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಕುಂದಾಪುರ, ದ. ಕ.

ನೋಟೀಸು

ಪ್ರಕಾಶ ಮ್ಯಾಚ್ & ಪ್ಲೈವುಡ್ ಫ್ಯಾಕ್ಟರಿಯ ಪಾಲುದಾರರಿಗೆ—

1956ನೇ ಕಂಪೆನಿಗಳ ಕಾನೂನಿನ ಸೆಕ್ಷನ್ 640-B ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ — ಶ್ರೀ ಸೊಲೊಮನ್ ಸಾಮುವೆಲ್ ಸೋನ್ಸರನ್ನು ಶ್ರೀ ತೀಯೊದೋರ್ ಸೋನ್ಸರ ಸ್ಥಾನಕ್ಕೆ ತಾ. 29-1-1969ರಿಂದ ತಾ. 31-3-1971ರ ವರೆಗೆ (ಶ್ರೀ ತೀಯೊದೋರ್ ಸೋನ್ಸರ ಜೊಯಿಂಟ್ ಮೆನೇಜಿಂಗ್ ಡೈರೆಕ್ಟರ್ ಅಧಿಕಾರದ ಉಳಿದ ಅವಧಿ) ಶ್ರೀ ತೀಯೊದೋರ್ ಸೋನ್ಸರು ಆಫೀಸಿನಲ್ಲಿ ಹೊಂದಿದ್ದ ಶರ್ತ ಮತ್ತು ನಿಬಂಧನೆಗಳ ಅನುಸಾರವಾಗಿಯೇ, ತಾ. 21-1-1969ರಂದು ನಡೆದ ಬೋರ್ಡ್ ಮೀಟಿಂಗಿನಲ್ಲಿ ನಿರ್ಣಯಿಸಿದಂತೆ ಒಬ್ಬ ಜೊಯಿಂಟ್ ಮೆನೇಜಿಂಗ್ ಡೈರೆಕ್ಟರರನ್ನಾಗಿ ನೇಮಕ ಮಾಡಿದುದನ್ನು ಸಮ್ಮತಿಸುವಂತೆ ಮೇಲಿನ ಕಾನೂನಿನ ಸೆಕ್ಷನ್ 269ರ ಪ್ರೊವಿಸನ್‌ನಂತೆ ಕೇಂದ್ರ ಸರಕಾರಕ್ಕೆ ಕಂಪೆನಿಯು ಅರ್ಜಿ ಮಾಡಲಿದೆ.

ಶನಿವಾರದ ಹೊರತು ಉಳಿದ ಯಾವುದೇ ಕೆಲಸದ ದಿನಗಳಲ್ಲಿ ಬೆಳಿಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯ ತನಕ ಸದರಿ ನಿರ್ಣಯವು ಪರಿಶೀಲನೆ ಬಗ್ಗೆ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ದೊರೆಯುತ್ತದೆ.

(ಬೋರ್ಡಿನ ಆಜ್ಞೆಯ ಮೇರೆಗೆ)

ಎಸ್. ಪಿ. ಕೋಳಾರ್

ತಾ. 29ನೇ ಜನವರಿ, 1969.

ಜೊಯಿಂಟ್ ಮೆನೇಜಿಂಗ್ ಡೈರೆಕ್ಟರ್.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಕೋಲ್ಮಿಂಚು

(ಎರಡನೇ ಪುಟದಿಂದ)

ಮಾತುಗಳಲ್ಲಿ ಕೆಲವು ಜಾಸ್ತಿಯಾಗುತ್ತಿದ್ದಂತೆ ತಡೆಯಲಾರದೇ ಹೇಳತೊಡಗಿದಳು—

"ವಸಂತ ನನ್ನ ಜೀವಗೆಳತಿ...."

"ಸಾಕು ಮಾಡು- ಈ ಕಟ್ಟುಕತೇನ-"

"ಇದ್ದದ್ದು ಇದ್ದ ಹಾಗೆ ಹೇಳದರೆ ಎದ್ದು ಬಂದು ಒದ್ದರಂತೆ—ಎಲ್ಲ ನನ್ನ ಹಣೇಬರಹ__" ವೀಣಾ ಮುಂದೆ ಹೇಳಲಿಚ್ಛಿಸದೆ ಅಲ್ಲಿಂದೆದ್ದು ಹೊರಟು ಹೋಗಲೆತ್ನಿಸಿದಳು. ಆದರೆ ಕೇಶವ ಬಿಡಬೇಕಲ್ಲ! 'ಈ ಕಾಗದದ ಹಿಂದಿನ ಕಥೆ-ನೀನು ಹೇಳಲೇ ಬೇಕು—" ಎಂದು ಒತ್ತಾಯಪಡಿಸಿ ಅಲ್ಲಿಯೇ ಅವಳನ್ನು ಕೂಡಿಸಿಕೊಂಡ.

"ಮತ್ತೆ...ಹೇಳೋಕೆ ಹೊರಟರೆ ಕಟ್ಟು 'ಕಥೇ'ನೀರಲ್ಲ...' ಆಗಲೇ ಅವಳ ದನಿ ದುಃಖದಿಂದ ಭಾರವಾಗಿ ಈಚೆಗೆ ಬರಲೊಲ್ಲೆ ಎಂದು ಪಟ್ಟು ಹಿಡಿದು ಕುಳಿತುಕೊಳ್ಳಲಾರಂಭಿಸಿತ್ತು.

'ಸರಿ-ಅದೇನು ಹೇಳ್ತೀಯೋ ಹೇಳು-"

ವೀಣಾ ಪುನಃ ಪ್ರಾರಂಭಿಸಿದಳು.

'ವಸಂತ ನನ್ನ ಜೀವ ಗೆಳತಿ...ನಮ್ಮೀರ್ವರ ಸ್ನೇಹ ಕೇವಲ ಐದು ವರ್ಷಗಳ ಹಿಂದಿನದು. ನಾವಿಬ್ಬರೂ ಕಾಲೇಜಿನಲ್ಲಿ ಗೆಳತಿಯರಾದೆವು....ವಸಂತಳ ಕಂಠ ತುಂಬಾ ಮಧುರವಾಗಿತ್ತು. ಅವಳು ತುಂಬಾ ಚೆನ್ನಾಗಿ ಹಾಡುತ್ತಿದ್ದಳು. ನಾನೂ ಸಹ ಮ್ಯೂಸಿಕ್ ಸ್ಟೂಡೆಂಟ್"—ಎಂದು ಅವಳ ಬಳಿ ಹೇಳಿಕೊಳ್ಳಲು ನನಗೇ ನಾಚಿಕೆಯಾಗುತ್ತಿತ್ತು. ಅಂತಹ ಗಾಯನ ಚಕ್ರವರ್ತಿನಿಯಾಗಿ ಕಾಲೇಜಿನಲ್ಲಿ ಮೆರೆದು ಹೋದಳವಳು. ಬರಿಯ ಇದೊಂದೇ ಅಲ್ಲ—ಸೂಕ್ತವಾಗಿ ಕಾಗದ ಬರೆಯುವ ಕಲೆ ಅವಳಿಗೆ ಚೆನ್ನಾಗಿ ಸಿದ್ಧಿಸಿತ್ತು. ನಾವು ಪ್ರತಿದಿನ ಭೇಟಿಯಾಗುತ್ತಿದ್ದುದರಿಂದ ಅವಳು ನನಗೆ ಕಾಗದ ಬರೆಯಲು ಅವಕಾಶವೇ ಇರುತ್ತಿರಲಿಲ್ಲ. "ಆದರೂ ಚಿಂತೆಯಿಲ್ಲ—ಒಂದು ಕಾಗದ ಬರಿ— ಎಂದು ನಾನು ಒತ್ತಾಯ ಪಡಿಸುತ್ತಿದ್ದೆ. ಆಗ ಅವಳು ಇನ್ನೊಂದು ಸರತಿ [illegible] ಕಾಗದ [illegible]—"ನೀನು ಅತ್ತೆಯ ಮನೆಗೆ ಹೋದಾಗ ನಿನಗೆ ಖಂಡಿತ ಕಾಗದ ಬರೆಯುತ್ತೇನೆ. ಅದೇ ವೇಳೆ ನೀನೂ ನನ್ನನ್ನು ನೋಡಿಕೊಂಡು. [illegible]

ನಾನು ನಿಮ್ಮ ಮನೆಯೊಳಗೆ ಕಾಲಿಟ್ಟೆ. ಮರುದಿನವೇ ಈ ಕಾಗದ— ಈಗ ನಿಮ್ಮ ಕೈಯಲ್ಲಿರುವ ಕಾಗದ— ನನಗೆ ಬಂದಿತು. ಆದರೆ ಅದೇ ದಿನ ವಸಂತ ತೀರಿಕೊಂಡಳೆಂದು ನನಗೆ ನನ್ನ ಮತ್ತೊಬ್ಬ ಗೆಳತಿ ಫೋನಿನಲ್ಲಿ ತಿಳಿಸಿದಳು. ಒಮ್ಮೆಯಾದರೂ ಸಾಯುವ ಮುನ್ನ ಅವಳ ಮುಖ ನೋಡುವ ಭಾಗ್ಯ ಕೂಡ ನನಗಿರಲಿಲ್ಲವಲ್ಲಾ—ಎಂದು ನಾನು ಬಹಳ ದುಃಖಿಸಿದೆ. ಅಲ್ಲದೆ ಅವಳದು ಅಸ್ವಾಭಾವಿಕ ಸಾವೆಂದೂ, ಹೃದಯಾಘಾತವೆಂದೂ ನನ್ನ ಮತ್ತೊಬ್ಬ ಗೆಳತಿ ತಿಳಿಸಿದಳು. ಕೊನೆಗೆ ಅಂತಹ ಅಪೂರ್ವ ಗೆಳತಿಯ ನೆನಪಿಗಾಗಿ ಈ ಒಂದು ಪತ್ರವಾದರೂ ಇದೆಯಲ್ಲ— ಎಂದು ಅಂದಿನಿಂದ ಇಂದಿನ ವರೆಗೆ__ನಿಮ್ಮ ಕೈಗೆ ಸಿಕ್ಕಿ ಅದು ನಲುಗುವ ವರೆಗೆ, ಮುದುಡುವ ವರೆಗೆ, ಒಂದು ವರ್ಷದಿಂದ ಆ ಪತ್ರವನ್ನು ನಾನು ಕಾಪಾಡಿಕೊಂಡು ಬಂದೆ. ಪುನಃ ನನಗೆ ಹಾಗೆ ಕಾಗದ ಬರೆಯುವರಾರೂ ಇಲ್ಲ. ನಾನೀಗ ಮಿಸೆಸ್ ಕೇಶವ್— ಇಂಜಿನಿಯರರ ಹೆಂಡತಿ— ಸಾಮಾನ್ಯ ವಿದ್ಯಾರ್ಥಿನಿ ವೀಣಾ ಅಲ್ಲ. ಆದ್ದರಿಂದ ಇದೇ ನನಗೆ ಬಂದ ಇಂತಹ ಮೊದಲನೆಯ ಮತ್ತು ಕಡೆಯ ಪತ್ರ.... ಇನ್ನೂ ಸಂಶಯ...

ವೀಣಾಳನ್ನು ಅರ್ಧಕ್ಕೇ ತಡೆದ— 'ಸಾಕು, ತಗೋ'—ಎಂದು ಮುದುಡಿದ ಕಾಗದದ ಉಂಡೆಯನ್ನು ವೀಣಾ ಕೈಗಿತ್ತ ಕೇಶವ. ಅಷ್ಟು ದಿನಗಳಿಂದ ಕಾಪಾಡಿಕೊಂಡು ಬಂದ, ತನ್ನ ಜೀವನದಲ್ಲಿ ಅಂತಹ ಪ್ರಮುಖ ಪಾತ್ರ ವಹಿಸಿದ್ದ ಕಾಗದ ಈಗ ಪತಿಯ ಕೈಯಲ್ಲಿ ಯಃಕಶ್ಚಿತ್ ಕಸದ ಅರ್ಜಿಯಂತೆ ಮುದುಡಿಹೋದುದನ್ನು ನೋಡಿ, ಅವಳ ಮನಸ್ಸು ಮತ್ತಷ್ಟು ವ್ಯಗ್ರವಾಯಿತು. ಕಾಗದ ಅವಳ ಕೈಮೇಲೇ ನಿಲ್ಲದೆ ನೆಲದ ಮೇಲೆ ಬಿತ್ತು. ಇದುವರೆಗೂ ಸ್ವಲ್ಪ ನಿಂತಿದ್ದ ಅಶ್ರುಬಿಂದುಗಳು ಮತ್ತೆ ಧಾರೆಧಾರೆಯಾಗಿ ಅವಳ ಮುದ್ದು ಕೆನ್ನೆಗಳ ಮೇಲುರುಳಿತು. ನಿಲ್ಲಲು ತ್ರಾಣವಿಲ್ಲದೆ ವೀಣಾ ಅಲ್ಲಿಯೇ ಮಂಚದ ಮೇಲುರುಳಿದಳು.

"ಯಾಕೆ....ಮೈ ಸರಿಯಿಲ್ಲ..." ಕೇಶವ ಫ್ಯಾನ್ ತಿರುಗಿಸಿದ.

ಗಾಳಿಯ ಸುಳಿಗೆ ಸಿಲುಕಿ ಆ ಕಾಗದದ ಉಂಡೆ ಬಾಗಿಲಿನೆಡೆಗೆ ಓಡಿತು.

"ಓ, ವಸಂತಾ ನಾನಿಂದು ಸಂಪೂರ್ಣವಾಗಿ ಅನಾಥೆಯಾದೆ, ಇನ್ನು ನಿಮ್ಮಲ್ಲಿನ ಸ್ನೇಹದ ಮಧುರ ಸೌಖ್ಯ ನನಗೆಲ್ಲಿ? ಪ್ರಪಂಚದಲ್ಲಿ ಇಷ್ಟೆಲ್ಲ ನನಗಿದ್ದರೂ—ಈ ಅಮೂಲ್ಯ ವಸ್ತುವನ್ನು—ನಾನು ಕಳೆದುಕೊಂಡೆ. ಹಾ! ನನ್ನನ್ನೂ ನಿನ್ನೆಡೆಗೇ ಕರೆದುಕೋ ವಸಂತ...' ವೀಣಾಳ ಅಂತರಾತ್ಮ ದೈನ್ಯದಿಂದ ಪ್ರಾರ್ಥಿಸಿತು.

'ತಗೋ ವೀಣಾ....ಸಾರಿ, ಇದನ್ನ ಮುದುರಿ ಹಾಳು ಮಾಡಿಬಿಟ್ಟೆ."—ಪತಿ ಏನನ್ನೋ ತನ್ನೆಡೆಗೆ ಚಾಚುತ್ತಿರುವರೆಂದು ವೀಣಾಳಿಗೆ ಸ್ಪಷ್ಟವಾಯಿತು. ಥೂ ಎಂದ ಮುಖ ತಿರುಗಿಸಿ ಬಿಡಬೇಕೆನಿಸಿದರೂ ಸಹ ಯಾವುದೋ ಶಕ್ತಿಗೊಳಗಾದವಳಂತೆ ವೀಣಾ ಪತಿಯೆಡೆಗೆ ತಿರುಗಿದಳು... ಅದೇ ಕಾಗದ!

ತೃಪ್ತಿಯಿಂದ ಅದನ್ನು ಕೈಗೆ ತೆಗೆದುಕೊಂಡು ಪತ್ರವನ್ನು ಓದಿದಳು, ವೀಣಾ ....

"ಒಲವಿನ ಹೊನಲೆ,

ಇಂದಿನಿಂದ ನವಜೀವನದಲ್ಲಿ ಕಾಲಿರಿಸುವ ನೀನು ನಮ್ಮ ಹಳೆಯ ಕತೆಯನ್ನೆಲ್ಲ ಮರೆಯುವುದು ಸಹಜವಷ್ಟೆ. ಆದರ್ಶಾಗಿಯೇ, ಹಿಂದೆ ನೀನು ವ್ಯಕ್ತಪಡಿಸಿದ್ದ ಆಸೆಗನುಗುಣವಾಗಿಯೇ, ಈ ಕಾಗದ— ಯುಗಾದಿಯ ಸಿಹಿ ಬೆಲ್ಲದ ನಡುವೆ ಕೊಂಚ ಬೇವೂ ಸೇರುವಂತೆ. ಇನ್ನು ಮುಂದೆ ನೀನೂ ಹೊಸ ಬಾಳನ್ನು ಆರಂಭಿಸುವುದರಿಂದ ನನ್ನಂತಹವರನ್ನು ಮರೆತು ಬಿಡುವುದೇ ಕ್ಷೇಮಕರ. ಇನ್ನು ನಾವೆಲ್ಲೋ ನೀನೆಲ್ಲೋ?

ನಿನ್ನ ಪತಿಯ ಆಸೆ ಆಕಾಂಕ್ಷೆಗಳೆಡೆಗೆ ಸುಖಶಾಂತಿಗಳ ಕಡೆಗೆ ಇನ್ನು ಗಮನ ಕೊಡು. ನಿನ್ನ ಪತಿಯ ಸುಖಶಾಂತಿಯಲ್ಲೇ ನಿನ್ನ ಆನಂದವೂ ಇರುವುದೆಂದು ತಿಳಿ. ಆ ರಂಭಭಂತ ಜೀವನದಲ್ಲಿ ..ನನ್ನೊಡನೆ ನೀನು ಕಳೆದ ಘಳಿಗೆಗಳ ಅತ್ಯಂತ ಸ್ವಾಭಾವಿಕವಾಗಿ ಕಾಣುತ್ತವೆ. ದೇವರು ನಿನಗೆ ಒಳ್ಳೆಯದನ್ನು ಮಾಡಲೆಂದು ಹಾರೈಸುತ್ತೇನೆ.

ನನ್ನನ್ನು ನೆನೆಯುತ್ತ ನಿನ್ನ ಹೊಸ ಬಾಳಿನಲ್ಲಾದರೂ ದ್ರೋಹವೆ ಗದಿರು. ನನ್ನ ಜೀವನವೇ ನಿರರ್ಥಕ [illegible] ಅಂತಹದರಲ್ಲಿ ನಾನು ಇನ್ನೊಬ್ಬರಿಗೆ ತೊಂದರೆಯನ್ನು ಏಕೆ ಉಂಟುಮಾಡಲಿ?

ಸದಾ ನಿನ್ನ ಹಿತವನ್ನೇ ಕೋರುವ,

ದೂರದ ಹುಡುಗಿ,

ವಸಂತ.

"ಹೌದ, ಪತಿಯ ಸುಖಶಾಂತಿಯಲ್ಲೇ ನನ್ನ ಆನಂದವೂ ಇದೆಯೆಂದ ಸ್ಪಷ್ಟವಾದ ಮೇಲೂ ನಾನೇಕೆ ಹೀಗೆ ವರ್ತಿಸಬೇಕು? ಆತನ ಮಾತಿಗೆ ಗೌರವ ಕೊಡ. ವೃಥಾ [illegible] ಹೋದರೂ ಇನ್ನು ಮುಂದೆ ಸರಿಯಾಗಿರಬೇಕು —" ಮನಸ್ಸಿನಲ್ಲೇ ಎಂದುಕೊಂಡಳು—ವೀಣಾ— ಸನಿಹದಲ್ಲೇ ನಿಂತಿದ್ದ ಪತಿಯೆಡೆಗೆ ತಿರುಗಿದಳು.

ಕೇಶವ ಒಮ್ಮೆ ಮುಗುಳ್ನಕ್ಕ.

ವೀಣೆಯೂ ಪ್ರತಿಯಾಗಿ ಮುಗುಳ್ನಗೆ ಬೀರಿದಳು. ನೀಲ ಮೇಘಗಳನ್ನೂ ಸೀಳಿಕೊಂಡು ಹೊರಬಂದ ಕೋಲ್ಮಿಂಚಾಗಿತ್ತದು.

ದೂರದಲ್ಲೆಲ್ಲೋ ಅಲೆ ಅಲೆಯಾಗಿ ತೇಲಿ ಬರುತ್ತಿತ್ತು ಹಾಡು—

"ಯಾವ ಜನ್ಮದ ಮೈತ್ರಿ ಈ ಜನ್ಮದಲಿ ಬಂದು.
ನಮ್ಮಿಬ್ಬರನು ಮತ್ತೆ ಬಂಧಿಸಿಹ [illegible] ಇಂದು."

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಫೋನ್ : 77

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ಪಾಂಗಾಳ ರಾಮದಾಸ ನಾಯಕ ನಿಧನ

ಕಟಪಾಡಿಯ ಸುಪ್ರಸಿದ್ಧ ಪಾಂಗಾಳ ಮನೆತನಕ್ಕೆ ಸೇರಿದ ಶ್ರೀ ಪಾಂಗಾಳ ರಾಮದಾಸ ನಾಯಕರು ಜನವರಿ 10 ರಂದು [illegible] ಕಾಲದ ಅಸ್ವಸ್ಥತೆಯಿಂದ [illegible] ನಿಧನ ಹೊಂದಿದರು. [illegible] ರಾಗಿ ಶಿಕ್ಷಣ ಕ್ಷೇತ್ರದಲ್ಲಿ [illegible] ಗಳಲ್ಲಿ ಶ್ರೇಷ್ಠ [illegible] ಸಲ್ಲಿಸಿದ್ದಾರೆ.

ದಿವಂಗತ ನಾಯಕರು 1918 ರಲ್ಲಿ [illegible] ಸಿನಲ್ಲಿ ಬಿ. ಎ., ಎಲ್. ಟಿ. ಪದವಿ ಪಡೆದು ಅದೇ ವರ್ಷ ಕಟಪಾಡಿ ಎಸ್. ವಿ. ಎಸ್. ಹಯರ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. 1945ರಲ್ಲಿ ಕಟಪಾಡಿ ಎಸ್. ವಿ. ಎಸ್. ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ 1958ರಲ್ಲಿ ನಿವೃತ್ತಿಗೊಂಡರು.

ದಿವಂಗತ ನಾಯಕರು ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನ, ಲೋಕಲ್ ಲೈಬ್ರರಿ ಅಥಾರಿಟಿಯ, ತಾಲೂಕು ಬೋರ್ಡಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ಅಧ್ಯಾಪಕನಲ್ಲಿರಬೇಕಾದ ಉತ್ಕೃಷ್ಟ ದರ್ಜೆಯ, ಉನ್ನತವಾದ ವ್ಯಕ್ತಿತ್ವವನ್ನು ಅವರು ಕೊನೆತನಕವೂ ಉಳಿಸಿಕೊಂಡಿದ್ದರು.

NAVAYUGA 13—2—1969

Registered with the Registrar of News Papers for India under No. R. N. 3546/'57

REGD. No: B. G: 176
LICENCE No. 33
Licensed to Post without Prepayment

ಶುಕ ಮತ್ತು ಸಾರಿಕೆ

ಶ್ರೀ ಸ. ನಾರಾಯಣ

ಪ್ರಾಚೀನ ಭಾರತದಲ್ಲಿ ಶುಕ ಸಾರಿಕೆಗಳು ಕೇವಲ ವಿಲಾಸಿ ನಾಗರಿಕರ ಮನೆಗಳಲ್ಲಿ ಮಾತ್ರವೇ ಇರುತ್ತಿರಲಿಲ್ಲ. ಪ್ರತಿಭಾವಂತ ಪ್ರಸಿದ್ಧ ಪಂಡಿತರ ಮನೆಗಳಲ್ಲಿಯೂ ಇರುತ್ತಿದ್ದುವು. ಶಂಕರಾಚಾರ್ಯರಿಗೆ ಮಂಡನ ಮಿಶ್ರರ ನಿವಾಸದ ಗುರುತನ್ನು ತಿಳಿಸುತ್ತಾ—"ಎಲ್ಲಿ ಶುಕ ಸಾರಿಕೆಗಳು ಸ್ವತಃ ಪ್ರಮಾಣಂ, ಪರತಃ ಪ್ರಮಾಣಂ" ಶಾಸ್ತ್ರಾರ್ಥ ಮಾಡುತ್ತಿರುತ್ತವೆಯೋ ಅದೇ ಮಂಡನ ಮಿಶ್ರರ ಗೃಹ ಎಂದು ತಿಳಿಸಿದ್ದನು. (ಸ್ವತಃ ಪ್ರಮಾಣಂ ಪರತಃ ಪ್ರಮಾಣಂ ಕೀರಾಂಗನಾ ಯತ್ರಗಿರೋಗಿರಂತಿ).

ಪ್ರಸಿದ್ಧ ಕವಿ ಬಾಣಭಟ್ಟ ತನ್ನ ಪೂರ್ವಜ ಕುಬೇರ ಭಟ್ಟರ ಪರಿಚಯ ಮಾಡಿ ಕೊಡುತ್ತಾ 'ಅವರ ಮನೆಯ ಶುಕ ಸಾರಿಕೆಗಳು ಸಮಸ್ತ ವಾಙ್ಮಯದ ಅಭ್ಯಾಸ ಮಾಡಿದ್ದುವು. ಯಜುರ್ವೇದ ಮತ್ತು ಸಾಮವೇದ ಪಾಠ ಮಾಡುತ್ತಾ ಪದ ಪದದಲ್ಲೂ ಈ ಪಕ್ಷಿಗಳು ವಿದ್ಯಾರ್ಥಿಗಳ ತಪ್ಪುಗಳನ್ನು ಕಂಡುಹಿಡಿಯುತ್ತಿದ್ದುವು.

ಋಷಿಗಳ ಆಶ್ರಮಗಳಲ್ಲಿಯೂ ಶುಕ ಸಾರಿಕೆಗಳು ಇರುತ್ತಿದ್ದುವು. ಯಾವುದೋ ಮರಗಳ ಕೆಳಗೆ ಶುಕ ಸಾರಿಕೆಗಳ ಬಾಯಿಂದ ಬಿದ್ದಿದ್ದ ನೀವಾರ (ವನ್ಯ ಧಾನ್ಯ) ವನ್ನು ಕಂಡು ದುಷ್ಯಂತನಿಗೆ ಸಮೀಪದಲ್ಲೆಲ್ಲೋ ಋಷ್ಯಾಶ್ರಮವಿದೆ ಎಂದು ತಿಳಿಯಲು ಹೊತ್ತಾಗಲಿಲ್ಲ.

ಪ್ರಾಚೀನ ಕಾಲದಲ್ಲಿ ಶುಕಸಾರಿಕೆಗಳು ಅಂತಃಪುರದಿಂದ ಹಿಡಿದು ತಪೋವನದ ವರೆಗೆ ಎಲ್ಲೆಡೆಯಲ್ಲಿಯೂ ಸನ್ಮಾನಿತವಾಗುತ್ತಿದ್ದುವು. ಮಾನವನ ಸುಖ-ದುಃಖಗಳೊಂದಿಗೆ ಅವುಗಳ ಸುಖ-ದುಃಖಗಳು ಹಾಸುಹೊಕ್ಕಾಗಿ ಹೊಂದಿಕೊಂಡಿರುತ್ತಿದ್ದುವು. ಅಮರುಕ ಶತಕದಲ್ಲಿ ಒಂದು ಹೃದಯ ಸ್ಪರ್ಶಿ ದೃಶ್ಯವಿದೆ—ಗೃಹದೇವಿಯು ದುಃಖದಿಂದ ದುಃಖಿತಳಾಗಿ ಮಾನವತಿಯು ಕಾಲ್ಬೆರಳಿನಿಂದ ನೆಲವನ್ನು ಕೆರೆಯುತ್ತಿದ್ದಾಳೆ. ಸಖಿಯರು ತಿನ್ನುವುದನ್ನು ನಿಲ್ಲಿಸಿದ್ದಾರೆ. ಅತ್ತು ಅತ್ತು ಅವರ ಕಣ್ಣುಗಳು ಕೆಂಪಾಗಿವೆ ಮತ್ತು ಪಂಜರದ ಗಿಣಿಗಳು ಅಜ್ಞಾತ ವೇದನೆಯಿಂದ ನಗುವುದನ್ನು, ಓದುವುದನ್ನು ನಿಲ್ಲಿಸಿ ಎಲ್ಲ ಸಮಾಚಾರವನ್ನು ತಿಳಿಯುವ ಪ್ರಯತ್ನ ಮಾಡುತ್ತಿವೆ.

ಹಿಂದಿನ ಕಾಲದಲ್ಲಿ ಶುಭಾಶುಭಗಳನ್ನು ತಿಳಿಯಲು ಅನೇಕ ಪಕ್ಷಿಗಳ ಗತ ವಿಧಿಯ ಮೇಲೆ ವಿಶೇಷ ಗಮನ ಕೊಡುತ್ತಿದ್ದರು. ವಸ್ತುತಃ ಶಕುನ ಶಬ್ದದ ಅರ್ಥವೇ ಪಕ್ಷಿ. ಶಕುನ ನಿರ್ದೇಶಕ ಪಕ್ಷಿಗಳಿಂದಲೇ ಸಂಸ್ಕೃತ ಸಾಹಿತ್ಯದಲ್ಲಿ ವೈಶಿಷ್ಟ್ಯಪೂರ್ಣ ಸುಕುಮಾರ ಭಾವ ಕಂಡು ಬರುತ್ತದೆ. ಬೃಹತ್ ಸಂಹಿತೆಯಲ್ಲಿ ವರಾಹ ಮಿಹಿರ ಈ ಕೆಳಗಿನ ಪಕ್ಷಿಗಳನ್ನು ಶಕುನ ಸೂಚಕ ಪಕ್ಷಿಗಳೆಂದು ಹೇಳಿದ್ದಾನೆ— ಶ್ಯಾಮಾ, ಶ್ಯೇನ (ಗಿಡಗ) ಶಶಘ್ನ, ವಂಜುಲ, ನವಿಲು, ಶ್ರೀಕರ್ಣ, ಚಕ್ರವಾಕ, ಚಾಷ, ಭಾಂಡಾರಿಕ, ಖಂಜನ, ಶುಕ, ಕಾಗೆ, ಕಪೋತ, ಭಾರದ್ವಾಜ, ಕುಲಾಲ, ಕೋಳಿ, ಖರ, ಹಾರೀತ, ಗೃಧ್ರ, ಪೂರ್ಣಕೂಟ ಮತ್ತು ಚಟಕ (ಗುಬ್ಬಚ್ಚಿ).

ಸಂಸ್ಕೃತ ಸಾಹಿತ್ಯದಲ್ಲಿ ಈ ಪಕ್ಷಿಗಳ ಶಕುನದ ಕಾರಣದಿಂದ ದೊಡ್ಡ ದೊಡ್ಡ ಘಟನೆಗಳು ಸಂಭವಿಸಿದ ಉದಾಹರಣೆಗಳಿವೆ. ಕೆಲಭಾರಿ ಶಕುನ ಮಾತ್ರದಿಂದ ಭಾವೀ ರಾಜ್ಯಕ್ರಾಂತಿಯನ್ನು ಊಹಿಸಲಾಗಿದೆ. ಮತ್ತು ಆದರಿಂದ ಎಲ್ಲ ಪಿತೂರಿಯ ವ್ಯವಸ್ಥೆ ನಡೆದಿದೆ. ಶಕುನ ಸೂಚಕ ಪಕ್ಷಿಗಳಿಂದಲೇ ಅನೇಕ ಸೂಕ್ತಿಗಳು ಹೇಳಲ್ಪಟ್ಟಿವೆ.

ವಿಶೇಷ ಋತುಗಳಲ್ಲಿ ವಿಶಿಷ್ಟ ಪಕ್ಷಿಗಳ ಪ್ರಾದುರ್ಭಾವ ಮತ್ತು ಅವುಗಳ [illegible]ಯಂಗಮ ವರ್ಣನೆಯು ಸಂಸ್ಕೃತ ಸಾಹಿತ್ಯದ ಅಮೂಲ್ಯ ಸಂಪತ್ತು. ಭರತವರ್ಷದಲ್ಲಿ ಒಂದೇ ಕಾಲದಲ್ಲಿ ನಾನಾ ಪ್ರದೇಶಗಳಲ್ಲಿ ಋತುವಿನ ವಿಭೇದವಿರುತ್ತದೆ. ಶಖೆ ಮತ್ತು ಚಳಿಗಳ ಏರಿಳಿತವಾಗುತ್ತಿರುವುದರಿಂದ ಒಂದೇ ವರ್ಷದಲ್ಲಿ ಅನೇಕ ವೇಳೆ ಋತು ಪರಿವರ್ತನೆಯಾಗುತ್ತದೆ. ಭಿನ್ನ ಭಿನ್ನ ಋತುಗಳಲ್ಲಿ ನಾನಾ ಪಕ್ಷಿಗಳು ಈ ದೇಶದಾದ್ಯಂತ ಹರಡಿಕೊಳ್ಳುತ್ತವೆ. ಸಂಸ್ಕೃತ ಕವಿಗಳು ಈ ಅತಿಥಿಗಳ ಹೃತ್ಪೂರ್ವಕವಾದ ಸ್ವಾಗತ ನೀಡಿದ್ದಾರೆ. ಈ ವರ್ಣನೆ ಮನೋಹರವಾಗಿದೆ. [illegible] ಬಕವನ್ನು ಉತ್ಸುಕಗೊಳಿಸುವ, ನವಿಲನ್ನು ಮದಮತ್ತ ಮಾಡುವ, ಚಾತಕವನ್ನು ಚಂಚಲಗೊಳಿಸುವ ಮತ್ತು ಚಕೋರವನ್ನು ಹರ್ಷ ವರ್ಷದಿಂದ ಸೇಚನ ಮಾಡುವ ವರ್ಷ ಋತು ಕಳೆಯುತ್ತಲೇ ಖಂಡರೀಟ, ಕಾದಂಬ, ಕಾರಂಡವ, ಚಕ್ರವಾಕ, ಸಾರಸ ಅಂಚೆಯೇ ಕ್ರೌಂಚಗಳ ಸೇನೆಯೊಡನೆ ಶರತ್ತು ಪ್ರವೇಶಿಸಿತು.

ಶುಕ ಸಾರಿಕೆಗಳೊಡನೆ ಹಾರೀತ, ದಾತ್ಯೂಹ, ಭ್ರಮರ ಶ್ರೇಣಿಯು ಮದವನ್ನು ವರ್ಧಿಸುವ ಪುಂಸ್ಕೋಕಿಲದ ಮಧುರ ಕೂಜನದಿಂದ ಚಿತ್ತ ಚಂಚಲಗೊಳಿಸುತ್ತದೆ. ವಸಂತ ಋತು [illegible] ಪ್ರಸಂಗದಲ್ಲಿ ಕವಿಗಳು ಅಧಿಕ ಉತ್ಸಾಹದೊಡನೆ ಅನೇಕ ಪಕ್ಷಿಗಳ ವಿಸ್ತಾರವಾದ ವರ್ಣನೆಯನ್ನು ಮಾಡಿದ್ದಾರೆ.

ಪೂರ್ವಿಕರು ಕೆಲ ಪಕ್ಷಿಗಳು ಪ್ರೇಮ ಸಂದೇಶ ವಾಹಕಗಳೆಂದು ತಿಳಿದಿದ್ದರು. ಹಂಸ ಪಕ್ಷಿಯಿಂದ ಈ ಕೆಲಸವನ್ನು ಮಾಡಿಸುತ್ತಿದ್ದರು (ನಳ ದಮಯಂತಿಯರ ಪ್ರೇಮ ದೂತನಾಗಿ ಬರುವ ಹಂಸ ಪಕ್ಷಿ ಉದಾಹರಣೆ) ಪಾರಿವಾಳ ಪಕ್ಷಿಗಳು ಸಂದೇಶವಾಹಕಗಳಾಗಿದ್ದ ಉದಾಹರಣೆಗಳು ಹೇರಳವಾಗಿವೆ. ಅಂಚೆಯ ವ್ಯವಸ್ಥೆ ಬಳಕೆಯಲ್ಲಿ ಇಲ್ಲದಿದ್ದ ಕಾಲದಲ್ಲಿ ವಿಷಯಗಳನ್ನು ತಿಳಿಸಲು ಪಾರಿವಾಳ ಪಕ್ಷಿಗಳನ್ನು ಸಂದೇಶವಾಹಕ ಪಕ್ಷಿಗಳನ್ನಾಗಿ ಬಳಸುತ್ತಿದ್ದರು. ಪಾರಿವಾಳ ಪಕ್ಷಿಗಳು ವಹಿಸಿದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದ, ಸೂಚಿತ ನೆಲೆಗೆ ಜನರಿಂದ ಪತ್ರವನ್ನು (ಪಕ್ಷಿಯ ಕಾಲಿನಲ್ಲಿ ಪತ್ರವನ್ನು ಕಟ್ಟಿ ಹಾರಿ ಬಿಡುತ್ತಿದ್ದರು.) ತಲುಪಿಸುತ್ತಿದ್ದ ಅನೇಕ ಉದಾಹರಣೆಗಳಿವೆ.

ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್
ಪುತ್ತೂರು, ದ. ಕ.

ಟೆನೆಂಟ್ ಅರ್ಜಿ ನಂಬ್ರ 118/1966,
[illegible] ತಾರೀಕು 1-3-1969
ಕುಂಜ ವೆಂಕಟೇಶ್ವರ ಭಟ್ಟ — ಅರ್ಜಿದಾರ
Vs.
ಎಮ್. ಶಂಕರನಾರಾಯಣ ಮಯ್ಯ ಮತ್ತು ಇತರರು — — ಎದುರಿದಾರರು

ನೋಟೀಸು

ಕೇರಳದ ಕಾಸರಗೋಡು ತಾಲೂಕಿನ ಬಾಡೂರು ಗ್ರಾಮದ [illegible] ಎಂಬಲ್ಲಿ ವಾಸವಾಗಿರುವ ಸುಬ್ರಾಯ ಮಯ್ಯರ ಮಗ, ಶಿವರಾಮ ಮಯ್ಯರಿಗೆ—

ಅರ್ಜಿದಾರರು ನಿಂಮ ಮೇಲೆ ಮತ್ತು ಇತರರ ಮೇಲೆ ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್‌ನಲ್ಲಿ ಟೆನೆಂಟ್ ಅರ್ಜಿ ನಂಬ್ರ 118/1966 ಎಂಬ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಸದ್ರಿ ವ್ಯವಹಾರವು ತಾ. 1-3-1969 ರಂದು ವಿಚಾರಣೆ ಬಗ್ಗೆ ಇದೆ. ನೀವು ಆ ದಿನ ಸದ್ರಿ ಟ್ರಿಬ್ಯೂನಲ್‌ನಲ್ಲಿ ಹಾಜರಾಗಿ ಆಕ್ಷೇಪಗಳೇನಾದರೂ ಇರುವುದಾದರೆ ದಾಖಲು ಮಾಡಿ, [illegible] ಈ ಮೂಲಕ ನಿಮಗೆ ತಿಳಿಸಲಾಗಿದೆ. ತಾ. 1-3-1969ರಂದು ಬೆಳಗ್ಗೆ 11 ಗಂಟೆಗೆ ನೀವು ಟ್ರಿಬ್ಯೂನಲ್‌ನಲ್ಲಿ ಹಾಜರಾಗಬೇಕಾದ್ದು. ಇದಕ್ಕೆ ತಪ್ಪಿದರೆ ನಿಂಮ ಗೈರುಹಾಜರಿಯಲ್ಲಿ ವ್ಯವಹಾರವು ಮುಂದುವರಿಯುತ್ತದೆ. ತಿಳಿದಿರಿ.

ಎ. ಪಿ. ಗೌರೀಶಂಕರ,
ಅರ್ಜಿದಾರ ಎಡ್ವೋಕೇಟ್.
(ಟ್ರಿಬ್ಯೂನಲ್ಲಿನ ಹುಕ್ಕುಂ ಪ್ರಕಾರ)

ಪುತ್ತೂರು, ದ. ಕ.,
31-1-1969.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**
ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy — ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು — **Home Remedies**
ಡಾ। ಪಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

20—2—1969

೨೦
ಪೈಸೆ

ಕಥಾ ಪ್ರಪಂಚ

ಇಬ್ಬರೊಳಗಿನ ಭೇದ

ಬರೆದವರು :
ಶ್ರೀ ಐ. ಎಚ್. ಶಾಂತಾರಾಮ ಶೆಟ್ಟಿ, ಬ್ರಹ್ಮಾವರ.

ಜೋಧಪುರದ ದುಷ್ಯಂತರಾಯರನ್ನು ಅರಿಯದವರೆ ಅತಿ ವಿರಳ. ದುಷ್ಯಂತ ರಾಯರು ಶ್ರೀಮಂತರ ಪಂಕ್ತಿಯಲ್ಲೆ ಅಗ್ರಗಣ್ಯರು. ರಾಯರಿಗೆ ಇಬ್ಬರು ಪತ್ನಿಯರು, ವೀಣಾ, ಲತಾ. ಕಿರಿಯ ಹೆಂಡತಿ ಲತಾಳಲ್ಲಿ ಒಬ್ಬ ಮಗ ದಿನಕರ. ಅವರ ದಾಂಪತ್ಯ ಜೀವನ ಅನ್ಯೋನ್ಯವಾಗಿತ್ತು.

ಸೃಷ್ಟಿಕರ್ತ ಬ್ರಹ್ಮನಿಗೆ ಈ ಸಂಸಾರದ ಅನ್ಯೋನ್ಯತೆಯು ಸಹನವಾಗದೆ ಸಂಸಾರದಲ್ಲಿ ಒಡಕುಂಟು ಮಾಡಲು ದುಷ್ಯಂತರಾಯರ ಹಿರಿಯ ಪತ್ನಿ ವೀಣೆಳಲ್ಲಿ ಒಂದು ಶಿಶುವನ್ನು ಕೊಟ್ಟನು.

ಅದುವರೆಗೆ ಸುಮುಖವಾಗಿ ಸಾಗಿದ್ದ ಅವರ ದಾಂಪತ್ಯ ಜೀವನ ವಿಮುಖವಾಯಿತು. ಕಿರಿಯ ಪತ್ನಿ ಲತಾಳಿಗೆ ಪತಿಯ ಅಪಾರ ಸಂಪತ್ತಿಗೆ ಇನ್ನೊಬ್ಬ ಪಾಲುದಾರನಾದನೆಂದು ಮನಸ್ಸು ಹಳವಂಡವಾಯಿತು. ಮಕ್ಕಳಿಬ್ಬರೂ ಪ್ರಾಯಪ್ರಬುದ್ಧರಾಗುವ ವರೆಗೆ ಹೊದಿ ಮುಚ್ಚಿದ ಕೆಂಡದಂತೆ ಇದ್ದುದರಲ್ಲಿ ಸುಮ್ಮನಿದ್ದಾಗಿದ್ದಿತು ಅವರ ಮನೆ. ಮಕ್ಕಳು ಪ್ರಾಯ ಪ್ರಬುದ್ಧರಾದಾಗ ಉರಿ ಕೆಂಡವಾಯಿತು. ಲತಾ ಈ ತೊಡಕನ್ನು ಹೇಗಾದರೂ ನಿವಾರಿಸಬೇಕೆಂದು ಸಂಕಲ್ಪತೊಟ್ಟಳು.

ದುಷ್ಯಂತರಾಯರ ಇಷ್ಟಪತ್ನಿ ಲತಾ ತವರೂರಿಗೆ ಹೋಗಿ ತನ್ನ ತಂದೆ ಪುಟ್ಟಪ್ಪನೊಡನೆ ಕೊರಗನ್ನು ತೋಡಿಕೊಂಡಳು. ಕುತ್ಸಿತ ಬುದ್ಧಿಯ ಪುಟ್ಟಪ್ಪನವರು ಮಗಳಿಗೆ ದುರಾಲೋಚನೆಯನ್ನು ಹೇಳಿಕೊಟ್ಟರು.

"ಒಂದು ದಿನ ಅಮಾವಾಸ್ಯೆ ಮುನ್ನಾದಿನ ಹೊಟ್ಟೆ ನೋವು ಎಂತ ಮಲಗಿಕೊ! ವೈದ್ಯರು ಔಷಧ ಕೊಟ್ಟರೂ ಗುಣವಾಗದಂತೆ ಆಯಿತು. ನನಗೆ ತವರು ಮನೆಯಲ್ಲಿರುವಾಗಲೂ ಇದೇ ರೀತಿ ಹೊಟ್ಟೆ ನೋವು ಬರುತ್ತಿತ್ತು. ಆಗ ಜೋಧಪುರದ ಉತ್ತರ ದಿಕ್ಕಿನ ನಾಗನ ಗುಡಿಯ ಹಿಂದಿನ ಒಂದು ರೀತಿಯ ಮೂಲಿಕೆ ಸಿಕ್ಕುತ್ತಿತ್ತು. ಅದನ್ನು ಕಷಾಯ ಮಾಡಿ ಕುಡಿದರೆ ಗುಣವಾಗುತ್ತಿತ್ತು ಎಂತ ಹೇಳು, ಮತ್ತು ಜ್ಞಾಪಕ ಮಾಡಿ ನಿನ್ನ ಸವತಿಯ ಮಗ ಪ್ರಾಣೇಶನನ್ನು ಗುಡಿಯ ಹಿಂದೆ ಕಳುಹಿಸಿದಂತೆ ಮಾಡು. ಅಲ್ಲಿಂದ ನಾನೇ ಅವನನ್ನು ಹಿಂದಕ್ಕೆ ಹೋಗದಂತೆ ಮಾಡುತ್ತೇನೆ" ಎಂದನು ಪುಟ್ಟಪ್ಪನವನು.

ತಂದೆಯ ಹಂಚಿಕೆ ತನ್ನ ಮನೋರಥ ಈಡೇರಿಸುತ್ತದೆ ಎಂಬ ಸಂತೋಷದಿಂದ ಲತಾ ಪತಿಯ ಮನೆಗೆ ಹಿಂತಿರುಗಿದಳು.

ಅಮಾವಾಸ್ಯೆ ಮುನ್ನಾದಿನ ಲತಾ ಹೊಟ್ಟೆ ನೋವು ಎಂದು ಮಲಗಿದಳು. ವೈದ್ಯರು ಬಂದು ಔಷಧೋಪಚಾರ ಮಾಡಿದರೂ ಹೊಟ್ಟೆ ನೋವು ಗುಣವಾಗಲಿಲ್ಲ.

ಮಾರನೆಯ ದಿನ (ಅಮಾವಾಸ್ಯೆ ದಿನ) ಲತಾ ಪತಿಯೊಡನೆ ಅಂದ ಹಾಗೆ ನೀವು ಇದಕ್ಕೆ ವೈದ್ಯರ ಔಷಧ ಮಾಡಿಸಿದರೆ ಗುಣವಾಗಲಿಕ್ಕಿಲ್ಲ. ನನಗೆ ತಾಯಿಮನೆಯಲ್ಲಿರುವಾಗಲೂ ಇದೇ ರೀತಿ ಹೊಟ್ಟೆನೋವು ಬರುತ್ತಿತ್ತು. ಆಗ ನಾಗನ ಗುಡಿಯ ಪಕ್ಕದಲ್ಲಿರುವ ಮೂಲಿಕೆಯಿಂದ ಕಷಾಯ ಮಾಡಿ ಕುಡಿದರೆ ಗುಣವಾಗುತ್ತಿತ್ತು ಎಂದಳು.

ಆದರೆ ಸೇವಕರನ್ನು ಕಳುಹಿಸಿ ಮೂಲಿಕೆಯನ್ನು ತರಿಸುತ್ತೇನೆ, ಗುರುತು ಹಾಕಿ ಕೊಡು.

"ಸೇವಕರು ಬೇಡ. ನಮ್ಮ ದಿನಕರನಿಗೆ ಅದರ ಗುರುತುಂಟು. ಅವನು ಮತ್ತು ಪ್ರಾಣೇಶರೂ ಹೋಗಿ ತರುತ್ತಾರೆ' ಎಂದಳು ಲತಾ.

ದಿನಕರ ಮತ್ತು ಪ್ರಾಣೇಶರನ್ನು ಕಳುಹಿಸುವುದೆಂತ ನಿಶ್ಚಯಿಸಿದರು ಪತಿ-ಪತ್ನಿಯರು.

ಲತಾ ತನ್ನ ಮಗ ದಿನಕರನನ್ನು ಅಂತರಂಗಕ್ಕೆ ಕರೆದು "ಮಗು ದಿನು, ನೀನು ಪ್ರಾಣೇಶನ ಸಂಗಡ ಅರ್ಧ ದಾರಿ ತನಕ ಹೋಗಿ ನನಗೆ ತಲೆ ಸುತ್ತುತ್ತದೆ ಎಂತ ವಾಪಾಸು ಬಾ. ನನಗೆ ನಿಜವಾಗಿ ಉದರ ಬೇನೆ ಇಲ್ಲ ನಿನ್ನ ಶ್ರೇಯಸ್ಸಿಗೋಸ್ಕರ ಹೂಡಿದ ಹಂಚಿಕೆ ಇದು," ಎಂದಳು ಲತಾ.

ದಿನಕರನಿಗೆ ಇದೊಂದು ಅರ್ಥವಾಗಲಿಲ್ಲ.

'ಏನಮ್ಮ ಹಾಗೆಂದರೆ, ಇದರಲ್ಲಿ ನನ್ನ ಶ್ರೇಯಸ್ಸೆಂದರೇನು, ನೀವು ಹೂಡಿದ ಹಂಚಿಕೆ ಯಾವುದು?"

'ದಿನು, ಈಗ ನಿನ್ನ ತಂದೆಯ ಅಪಾರ ಸಂಪತ್ತಿಗೆ ಇನ್ನೊಬ್ಬ ಪಾಲುದಾರನಿರುವನು. ಮುಂದೆ ಅವನು ಇಲ್ಲದಂತೆ ಮಾಡುವುದೆ ನಮ್ಮ ಹಂಚಿಕೆ."

ಇದನ್ನು ಕೇಳಿದ ದಿನಕರನಿಗೆ ಜಂಘಾಬಲವೆ ಉಡುಗಿದಂತಾಗಿ 'ಏನಮ್ಮ ನಿನ್ನ ದುರಾಲೋಚನೆ? ಅವನು ನನ್ನಂತೆ ಅಪ್ಪನ ಮಗನಲ್ಲವೇ? ಮನುಷ್ಯನ ಆಸೆಗೆ ಮಿತಿಯಿರಬೇಡವೇ? ಸಂಪತ್ತಿಗಾಗಿ ಒಡಹುಟ್ಟಿದವನನ್ನು ಕೊಲೆಯುವುದೆಂದರೆ ಹೇಯ ಕಾರ್ಯವಲ್ಲವೆ? ಇಂಥ ಆತ್ಮದ್ರೋಹ ಕೆಲಸವನ್ನು ನಾನು ಮಾಡಲಾರೆ.

"ಮಗು ನಿನಗೆ ವ್ಯವಹಾರ ಜ್ಞಾನ ತಿಳಿಯದು. ಈ ಆರ್ಥಿಕ ಪ್ರಪಂಚದಲ್ಲಿ ಗುಣಕ್ಕಿಂತ ಹಣವೆ ಪ್ರಧಾನವಾದುದು. ಆದಕ್ಕಾಗಿ ನನ್ನ ಮಾತನ್ನು ಅಲ್ಲಗಳೆಯಬಾರದು."

"ಅಮ್ಮಾ ಐಶ್ವರ್ಯವನ್ನಾದರೂ ತೊರೆದೇನು, ಮನೆಯನ್ನಾದರೂ ತೊರೆದೇನು ತಮ್ಮನನ್ನು ತೊರೆಯಲು ಸರ್ವಥಾ ಸಾಧ್ಯವಿಲ್ಲ.'

"ಮಗು, ಹೀಗೆ ಹಟ ಹೂಡಬಾರದು. ತಾಯಿಯಾದವಳು ಮಕ್ಕಳ ಭವಿಷ್ಯದ ಕಡೆಗೆ ದೃಷ್ಟಿಹರಿಸಬೇಕಾದುದು ಅವಶ್ಯ. ಅದು ಅಲ್ಲದೆ ನಾನು ಯುಕ್ತಾಯುಕ್ತ ವಿಚಾರ ಮಾಡಿಯೇ ಈ ತೀರ್ಮಾನಕ್ಕೆ ಬಂದಿದ್ದೇನೆ."

"ಅಮ್ಮಾ ನೀನು ಏನು ಹೇಳಿದರೂ ಕೇಳಲಿಕ್ಕೆ ಸಿದ್ಧ. ಇದೊಂದು ವಿಚಾರದಲ್ಲಿ ಒಪ್ಪಲಿಕ್ಕಿಲ್ಲ."

"ದಿನು, ಈ ವಿಚಾರವನ್ನು ನೀನು ಅಲ್ಲಗೆಳೆದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ".

ತಾಯಿಯ ಮಾತಿಗೆ ದಿನು ಹತಾಶನಾಗಿ ಒಪ್ಪಿಕೊಂಡನು.

ದಿನಕರ ಮತ್ತು ಪ್ರಾಣೇಶರು ಮೂಲಿಕೆ ತರಲು ಹೊರಟರು. ಅರ್ಧ ದಾರಿಯಲ್ಲಿ ದಿನಕರನು ಪ್ರಾಣೇಶನಿಗೆ 'ಪ್ರಾಣೇಶ್ ನನಗೆ ಇಂದು ಏಕೋ ಬಹಳ ತಲೆಸುತ್ತುತ್ತದೆ, ಬಹಳ ಆಯಾಸ" ಎಂದನು.

"ಅದೇನಣ್ಣಾ ಆಯಾಸ? ಬಹುಶಃ ಬಿಸಿಲಿನ ತಾಪಕ್ಕೆ ಇರಬಹುದು. ನೀನು ಮನೆಗೆ ಹೋಗಿ ಮಲಗಿಕೋ, ನಾನು ರುಮ್ಮನೆ ಹೋಗಿ ತರುತ್ತೇನೆ'.

"ನಿನಗೆ ಇದರಿಂದ ತೊಂದರೆಯಾಗುವುದಿಲ್ಲವೆ ಪ್ರಾಣೇಶ್?"

"ನನ್ನ ತೊಂದರೆ ಹೆಚ್ಚೋ, ನಿನ್ನ ಆರೋಗ್ಯ ಹೆಚ್ಚೋ ನೀನು ಮನೆಗೆ ಹೋಗಿ ಮಲಗಿಕೊ. ನಾನು ನಾಗನ ವನಕ್ಕೆ ಹೋಗಿ ಬರುತ್ತೇನೆ" ಎಂದು ಹೊರಟನು ಪ್ರಾಣೇಶ್.

ಮಾರ್ಗದಲ್ಲಿ ಒಬ್ಬ ವೃದ್ಧ ಗೃಹಸ್ಥನು ಪ್ರಾಣೇಶನಿಗೆ ಎದುರಾದನು. ಆ ಗೃಹಸ್ಥನು ಪ್ರಾಣೇಶನನ್ನು ನೋಡಿ, "ತಮ್ಮಾ ನೀನಾರು ಎತ್ತ ಕಡೆ ಹೊರಟೆ?" ಎಂದು ಕೇಳಿದರು. 'ಏಕೆ ನಾನು ನಾಗನ ಗುಡಿಗೆ ಹೋಗುವವನು, ಏನಾದರೂ ಕೆಲಸವುಂಟೆ?"

'ಕೆಲಸದ ಬಗ್ಗೆ ಅಲ್ಲ, ಒಂದು ವಿಚಾರ ತಿಳಿಸಲು ಕೇಳಿದ್ದು."

"ಏನು ಅಂಥ ವಿಷಯು?"

"ವಿಷಯ ಏನೆಂದು ಹೇಳಲಿ? ಅದನ್ನು ನೀನು ನಂಬುತ್ತೀಯೋ ಇಲ್ಲವೊ, ನಂಬಿದರೆ ತಾಯಿಗೆ ಮಗನಾಗಿ ಉಳಿಯುತ್ತಿ, ಇಲ್ಲದಿದ್ದರೆ ನಿನ್ನ ಕೊನೆ ಇಂದೆ.'

"ಗೂಢಾರ್ಥ ನನಗೆ ಅರ್ಥವಾಗುತ್ತಿದಿಲ್ಲ. ಸ್ವಲ್ಪ ಬಿಡಿಸಿ ಹೇಳಿ."

"ಗೂಢಾರ್ಥ ಇಷ್ಟೆ: ನಾನು ನಾಗನ ಗುಡಿಯ ಹಿಂದಿನಿಂದ ಬರುವಾಗ ಅವರು ಗುಡಿಗೆ ಬರುವ ನಿನ್ನ ವಿಷಯದಲ್ಲಿ ಈ ರೀತಿ ಮಾತಾಡುತ್ತಿದ್ದರು:

"ಏನು ರುಸ್ತುಂ ಸಾಹೇಬರೆ, ಇಷ್ಟು ಹೊತ್ತಾದರೂ ಬರಲಿಲ್ಲ?'

"ಇನ್ನೇನು ಬರುವ ಹೊತ್ತಾಯಿತು ಕೈತಾನರೆ.

'ಅದಿರ್ಲಿ, ಲತಾಮ್ಮನವರ ತಂದೆಯವರು ಈ ಹುಡುಗನನ್ನು ಹತ ಮಾಡಲು ಏಕೆ ಹೇಳಿದರೊ?'

'ಅಷ್ಟೂ ತಿಳಿಯುವುದಿಲ್ಲವೊ ನಿನಗೆ? ಸಂಪತ್ತಿನ ಪ್ರೇಮ."

'ಅಲ್ಲ ಸಂಪತ್ತಿಗಾಗಿ ಕೈಹಿಡಿದ ಗಂಡನಿಗೆ ದ್ರೋಹ ಮಾಡುವುದೇ?"

'ಹಣದ ದಾಹ ಏನನ್ನು ಮಾಡಿಸುತ್ತದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಅದೆಲ್ಲ ನಮಗೇಕೆ? ಅವನನ್ನು ಇಹಲೋಕದಿಂದ ತೊಲಗಿಸಿದರೆ ಸರಿಯಲ್ಲ, ಬರುವ ಹೊತ್ತಾಯಿತು ನಾವು ಹೀಗೆ ಮಾತಾಡುತ್ತ ಕೂರುವುದು ಸರಿಯಲ್ಲ.'

ಇದನ್ನೆಲ್ಲಾ ಕೇಳಿ ಆ ನರರಾಕ್ಷಸರಾರಪ್ಪ ಎಂದು ಯೋಚಿಸಿಕೊಂಡ ಬರುತ್ತಾ ಇದ್ದೆ. ನಿನ್ನನ್ನು ನೋಡಿ ಸಂಶಯ ಎಲ್ಲಿಗೆ ಹೋಗುವವನೆಂದು ಕೇಳಿದ್ದು. ತಮ್ಮಾ ನೀನಾರೋ ನಾನಾರೊ? ಆದರೂ ನಾವು ಮನುಷ್ಯ ಧರ್ಮದಂತೆ ನಡೆಯಬೇಕಲ್ಲ. ನೀನು ಆ ಕಡೆ ಹೋಗ ಬೇಡ.

(ಐವತ್ತೊಂದನೇ ಪುಟ ನೋಡಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೨೩
VOL. 48
No. 23

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೦—೨—೧೯೬೯

ಸ್ಥಾಪಕರು:
ಡಾ। ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಚುನಾವಣೆಗಳ ನಂತರ

ಉತ್ತರ ಭಾರತದ ನಾಲ್ಕು ರಾಜ್ಯಗಳಲ್ಲಾದ ಮಧ್ಯಾವಧಿ ಚುನಾವಣೆಗಳ ಪರಿಣಾಮ ಘೋಷಿತವಾಗಿದ್ದು, ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಂಗವು ಅತ್ಯಧಿಕ ಬಹುಮತವನ್ನು ಗಳಿಸಿ ಕಾಂಗ್ರೆಸ್ಸನ್ನು ನೆಲಸಮ ಮಾಡಿತು. ಉಳಿದ ಮೂರು ರಾಜ್ಯಗಳಲ್ಲಿ ಯಾರೂ ಬಹುಮತ ಪಡೆಯಲಿಲ್ಲ. ಪಂಜಾಬದಲ್ಲಿ ಅಕಾಲಿಗಳು ಹೆಚ್ಚು ಸ್ಥಾನ ಪಡೆದು ಜನಸಂಘ— ಮಿತ್ರರೊಡನೆ ಕೂಡಿ ಸಂಯುಕ್ತ ದಳೀಯ ಸರಕಾರ ರಚಿಸಿಕೊಂಡರು— ಮಾಜಿ ಮುಖ್ಯಮಂತ್ರಿ ಗರ್ನಾಮ ಸಿಂಗರು ಮತ್ತೊಮ್ಮೆ ಮುಖ್ಯಮಂತ್ರಿಯಾದರು. ಪಶ್ಚಿಮ ಬಂಗಾಳದಲ್ಲಿ ಕಮ್ಯೂನಿಸ್ಟ್ ಪಕ್ಷವು ಅತಿ ಹೆಚ್ಚು ಸ್ಥಾನ ಪಡೆದುದರಿಂದ, ಸಂಯುಕ್ತ ರಂಗೀಯ ಸರಕಾರದಲ್ಲಿ ಮುಖ್ಯಮಂತ್ರಿ ಪದ ತನಗೇ ಸಿಗಬೇಕೆಂದು ವಾದಕ್ಕಿಳಿಯಿತು. ಕಮ್ಯೂನಿಸ್ಟರೊಂದಿಗೆ ನೆಂಟುತನ ಮಾಡಿದ ಪಕ್ಷಗಳು ಅವರ ಹೃದಯಾಂತರಾಳವನ್ನು ಈ ವಾದದಿಂದಲೇ ಅರಿತುಕೊಳ್ಳಬಹುದು. 'ಬರಿಯ ಕಾಂಗ್ರೆಸ್ ವಿರೋಧ'ವೆಂಬ ಸೂತ್ರವೊಂದರಿಂದ ಬಂಧಿತವಾಗಿ ಆಂತರಿಕ-ಬಾಹ್ಯ ನೀತಿ-ನಡಾವಳಿಯೊಂದೂ ಇರದ ಕಾಮನಬಿಲ್ಲಿನ ಪಕ್ಷಗಳಲ್ಲಿ ಭಾರಿ ದಿಗ್ವಿಜಯಾನಂತರ ಬಂಧನ ಶಿಥಿಲವಾಗುತ್ತಲೇ ಬರುತ್ತಿದೆ. ಒಮ್ಮೆಗೇ ಇದರಿಂದ ಅನಾಹುತ ನಡೆಯದೆ ಹೋದರೂ ಅಧಿಕಾರದಾಹವೆಂಬುದು ಕಾಂಗ್ರೆಸ್ಸಿಗೆ ಮಾತ್ರ ಮೀಸಲಲ್ಲವಾದ್ದರಿಂದ ಅಲ್ಲಿಯೂ ಛಿದ್ರಗಳು ಮೂಡುವ ಸಂಭವವೇ ಹೆಚ್ಚು.

ಬಿಹಾರ ಮತ್ತು ಉತ್ತರ ಪ್ರದೇಶಗಳ ಸ್ಥಿತಿ ವಾತಾವರಣ ಬೇರೆಯೇ. ಇವೆರಡರಲ್ಲಿಯೂ ಕಾಂಗ್ರೆಸ್ಸು ತನ್ನ ಸ್ಥಿತಿಯನ್ನು ಒಟ್ಟಿನಲ್ಲಿ ಸುಧಾರಿಸಿಕೊಂಡಂತೆ ಭಾಸವಾದರೂ ಅದು ಅಧಿಕ ಸ್ಥಾನಗಳಿಸಿದ ಪಕ್ಷವಾಗಿ ಮಾತ್ರ ಆಯ್ಕೆಯಾಯ್ತು. ಬಿಹಾರದಲ್ಲಿ ಸಮಾನ ಧ್ಯೇಯವುಳ್ಳ ಇತರ ಪಕ್ಷಗಳೊಂದಿಗೆ ಕೂಡಿ ಸಂಮಿಶ್ರ ಸರಕಾರ ರಚಿಸುವ ಸಾಧ್ಯಾಸಾಧ್ಯತೆಗಳು ಅಧಿಕವಾಗ ತೊಡಗಿವೆ. ಜನಸಂಘ, ಎಸ್ಸೆಸ್ಪಿಗಳು ಬೆಂಬಲ ನೀಡುವುವೆಂದು ಕೇಳಿಬರುತ್ತಿದೆ. ಆದರೆ, ಈ ಸಮ್ಮಿಶ್ರ ಸರಕಾರವು ಹೇಗೆ ಕಾರ್ಯವೆಸಗೀತು ಎಂಬುದರ ಬಗ್ಗೆ ಸಂದೇಹವಿದೆ. ಏಕೆಂದರೆ, ಕಾಂಗ್ರೆಸಿಗೂ ಜನಸಂಘಕ್ಕೂ, ಕಾಂಗ್ರೆಸಿಗೂ ಎಸ್ಸೆಸ್ಪಿಗೂ ಕೆಲವು ಮೂಲಭೂತ ಭಿನ್ನಮತಗಳಿವೆ. ಉತ್ತರ ಪ್ರದೇಶದಲ್ಲಿ ಬಹುಮತಗಳಿಸಲು ೫ ಸ್ಥಾನಗಳು ಕಾಂಗ್ರೆಸ್ಸಿಗೆ ಬೇಕು. ಗುಡ್ಡ ಪ್ರದೇಶದ ೫ ಸ್ಥಾನಗಳಿಗೆ ಇಷ್ಟರಲ್ಲಿಯೇ ಚುನಾವಣೆಗಳು ನಡೆಯಲಿದ್ದು ಒಂದೆರಡು ದಿನಗಳಲ್ಲಿ ಇವು ಯಾರ ಪಾಲಿಗೆಂದು ಗೊತ್ತಾಗುತ್ತದೆ. ಈ ಐದೂ ಸ್ಥಾನಗಳನ್ನು ಹಿಂದಿನ ಸಲದಂತೆ ಕಾಂಗ್ರೆಸ್ಸೇ ಪಡೆದರೂ ಭದ್ರ ಬಹುಮತಕ್ಕಾಗಿ ಮತ್ತೊಂದೆರಡರ ಬಲ ಬೇಕಾಗಬಹುದು. ಈ ಬಾರಿ ಪ್ರಜಾತಾಂತ್ರಿಕ ಪಕ್ಷಗಳೊಡನೆ ಕೂಡಿ ಸರಕಾರ ರಚಿಸಲು ಕಾಂಗ್ರೆಸ್ಸು ಮುಂದೆ ಬಂದದ್ದು ಸ್ವಾಗತಾರ್ಹವೇ. ಇದೇ ರೀತಿಯನ್ನು ಎರಡು ವರ್ಷಗಳಿಗೆ ಮೊದಲೂ ಕಾಂಗ್ರೆಸ್ಸು ಅನುಸರಿಸಿದ್ದರೆ? ಪ್ರಾಯಶಃ ಆಗ ಇತರ ಪಕ್ಷಗಳು ಕಾಂಗ್ರೆಸ್ಸಿಗೆ ಬೆಂಬಲ ನೀಡುವುದಕ್ಕೆ ಸಿದ್ಧರಿರಲಿಲ್ಲ.

ಮಧ್ಯಾವಧಿ ಚುನಾವಣೆಗಳಲ್ಲಿ ಎಲ್ಲರ ಲೆಕ್ಕಾಚಾರ ತಲೆಕೆಳಗಾಯ್ತು. ಕಾಂಗ್ರೆಸ್ಸು ತಾನು ನಿರೀಕ್ಷಿಸಿದ ಜಯ ಗಳಿಸಲಿಲ್ಲ. ಬಿಕೆಡಿ, ಜನಸಂಘ ಎಸ್ಸೆಸ್ಪಿಗಳೂ ಪಡೆಯಲಿಲ್ಲ, ಉಳಿದ ಪಕ್ಷಗಳೂ ಇದಕ್ಕೆ ಹೊರತಲ್ಲ. ಅಂದರೆ ಎಲ್ಲರೂ ಕನಸಿನಲ್ಲಿಯೇ ಮಂಡಿಗೆ ತಿನ್ನುತಿದ್ದರು. ಆದರೆ, ಬಂಗಾಳದಲ್ಲಿ ಮಾತ್ರ ಹೀಗಾಗಲಿಲ್ಲ. ಅಲ್ಲಿ ಕಾಂಗ್ರೆಸ್ಸು ತಿಂದ ಪೆಟ್ಟಿನಿಂದ ಮತ್ತೆ ಚೇತರಿಸಬೇಕಾದರೆ, ಕಾಯಕಲ್ಪ ಚಿಕಿತ್ಸೆಯಾಗಲೇ ಬೇಕು. ಕಾಂಗ್ರೆಸ್ ಚುನಾವಣಾ ಸಭೆಗಳಲ್ಲಿ ವರಿಷ್ಠರೆಲ್ಲರೂ ಭಾಗವಹಿಸಿದ್ದರು. ಕಾಂಗ್ರೆಸ್ಸಿನ ಗತ ವೈಭವವನ್ನೂ ೨೧ ವರ್ಷಗಳ ಅನೋಘ ರಾಜ್ಯಭಾರದ ಇತಿಹಾಸವನ್ನೂ 'ಕಾವ್ಯಕತೆ' ರೂಪವಾಗಿ ಬಣ್ಣಿಸಿದರು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟುದು ಕಾಂಗ್ರೆಸ್ಸೆಂದು ತಿಳಿಯದವರಿಗೆ ತಿಳಿಸಿಕೊಟ್ಟರು. ಗಾಂಧಿಯವರ ಹೆಸರೆತ್ತಿದರು; ಯಾರು ಏನೇ ಹೇಳಿದರೂ ಜನ ಮರುಳಾಗಲಿಲ್ಲ. ಕಾಂಗ್ರೆಸ್ಸು ಸ್ವಾತಂತ್ರ್ಯಕ್ಕಾಗಿ ಹೋರಾಡಿತೆಂದ. ಭಾರತೀಯರೆಲ್ಲರೂ ಕಾಂಗ್ರೆಸ್ಸಾಗುವುದು ಹೇಗೆ ಸಾಧ್ಯ? ೨೧ ವರ್ಷಗಳ ಕಾಲ ಕಾಂಗ್ರೆಸಿಗೆ ಜನತೆ ಅವಕಾಶ ನೀಡಿತು; ನಾಲ್ಕನೆಯ ಚುನಾವಣೆಗಳಲ್ಲಿ ಅದನ್ನು ತಿರಸ್ಕರಿಸಿತು; ಸಂಯುಕ್ತದಳೀಯ ಸರಕಾರಗಳು ಉತ್ತಮ ಕೆಲಸ ಮಾಡಿವೆಯೆಂದಲ್ಲ; ಬೆಕ್ಕಿನ ತಲೆಯ ದೀಪದಂತೆ ಇರದೆ ಬಲವಾಗಿ ಉಳಿಯುವ ಅವಕಾಶ ನೀಡಿ ನೋಡುವ ಬಯಕೆ ಜನತೆಗಾಯಿತು. ಈ ಬಾರಿ ಸಂಯುಕ್ತರಂಗಗಳು ಆಳುವುದಾದರೆ, ಅಲ್ಪ ಮತಕ್ಕಾಗಿಯಲ್ಲ; ತಮ್ಮ ಭಿನ್ನ ಮತಕ್ಕಾಗಿ. ಆದುದರಿಂದ ಅವಕ್ಕೆ ಉತ್ತಮ ಆಡಳಿತೆ ನಡೆಸಲು ಒಂದು ಸುವರ್ಣಾವಕಾಶ ದೊರೆಯಿತು. ಇವನ್ನು ಅಂತಃಕಲಹದಿಂದ, ಸ್ವಪಕ್ಷ ಹಿತ ಸಾಧನೆಯಿಂದ ದುರುಪಯೋಗ ಪಡಿಸಿದರೆ, ಜನ ಮುಂದಿನ ಬಾರಿ ಸುಮ್ಮನುಳಿಯದು.

ಹಿಂದೆ ಕಾಂಗ್ರೆಸಿಗರಿಗೆ ಮಾತ್ರ ಮೀಸಲಾಗಿದ್ದ ಅಧಿಕಾರ ಮೋಹ—ದಾಹವೀಗ ಇತರರಿಗೂ ಅಂಟಿಕೊಂಡಿದೆ. ಮಧ್ಯ ಪ್ರದೇಶದ ನಾಟಕೀಯ ರಾಜ್ಯಭಾರವೇ ಇದಕ್ಕೊಂದು ಒಳ್ಳೆಯ ಉದಾಹರಣೆ. ಸೇವೆಯ ಹೆಸರಿನಲ್ಲಿ ಸ್ವಾರ್ಥಸಾಧನೆ ಮಾಡುವ ಕುತಂತ್ರಿಗಳಿಂದಲೇ ರಾಜ್ಯಕೀಯ ಪಕ್ಷಗಳು ತುಂಬಿವೆಯೆಂಬುದು ಜಗಜ್ಜಾಹಿರ. ಯಾವ ಪಕ್ಷವೂ ತನ್ನ ಚರಿತ್ರೆ ಪರಿಶುದ್ಧವಾಗಿದೆಯೆಂದು ಎದೆತಟ್ಟಿ ಹೇಳುವಂತಹ ಸ್ಥಿತಿ ಇಂದಿಲ್ಲ. ಎಲ್ಲೆಲ್ಲೂ ಭ್ರಷ್ಟಾಚಾರದ ತಾಂಡವ ನೃತ್ಯ ನಡೆದಿರುವಾಗ ಇದೇನೂ ವಿಸ್ಮಯಕಾರಕವಲ್ಲ; ಆದರೆ, ಇದು ಹೀಗೇ ನಡೆದರೆ ನಾವು ನಾಗರಿಕತೆಯಿಂದ ದೂರ ಸರಿಯುತ್ತಿದ್ದೇವೆಯೆಂದೇ ಅರ್ಥ. ಜನ ಜಾಗ್ರತವಾಗಬೇಕು; ಶಾಸಕರನ್ನೂ ಪ್ರಶಾಸನವನ್ನೂ ಸರಿ ದಾರಿಗೆ ತರಬೇಕು.

ತ್ರಿಶಂಕು ಸ್ವರ್ಗ

ಮೈಸೂರು ವಿದ್ಯಾಲಯವು ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಂಡು ಪಿಯುಸಿ ಮತ್ತು ಪದವಿಯ ಮೊದಲ ವರ್ಷದಲ್ಲಿ ಅಧ್ಯಯನ ಮಾಡುವ ಅವಕಾಶವನ್ನು ಮಾಡಿ ಕೊಟ್ಟಿದೆ; ಇದುವರೆಗೆ ಅನಿವಾರ್ಯ ವಿಷಯವಾಗಿದ್ದ ಇಂಗ್ಲಿಷ್ ಇನ್ನು ಮುಂದೆ ಐಚ್ಛಿಕವಾಗುವುದು. ವಿದೇಶೀ ಭಾಷೆಗಳ ಸಾಲಿನಲ್ಲಿ ಇದು ನಿಲ್ಲುವುದು. ಇಂಗ್ಲಿಷ್ ಭಾಷೆಯನ್ನು ಸಂಪೂರ್ಣವಾಗಿ ತ್ಯಜಿಸಬಾರದು; ಅಂತಾರಾಷ್ಟ್ರೀಯ ಸಂಪರ್ಕ ಭಾಷೆಯಾದ ಇದರ ಅಧ್ಯಯನ ಬೇಕೇಬೇಕು; ಅದಕ್ಕೆ ನೀಡುತ್ತಿದ್ದ ಅಗ್ರ ಪ್ರಾಶಸ್ತ್ಯ ಮಾತ್ರ ಪ್ರಾದೇಶಿಕ ಭಾಷೆಗಳಿಗೆ ನೀಡಬೇಕು ಎಂಬ ಅಭಿಪ್ರಾಯಕ್ಕೆ ಇಲ್ಲಿ ಮನ್ನಣೆಯಿಲ್ಲ. ಜತೆಗೆ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ಪಡೆಯ ಬಯಸುವವರೂ ಸ್ನಾತಕೋತ್ತರ ಶಿಕ್ಷಣಾಕಾಂಕ್ಷಿಗಳೂ ಇಂಗ್ಲಿಷ್ ಭಾಷೆಯನ್ನು ಪಿ.ಯು.ಸಿ. ಯಲ್ಲಿ ಅಧ್ಯಯನ ಮಾಡಲೇ ಬೇಕು. ಅಥವಾ ಇಂಗ್ಲಿಷಿನಲ್ಲಿ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕು ಎಂದು ನಿಯಮ ಮಾಡಿದೆ. ಅಂದರೆ, ಇವುಗಳಲ್ಲಿ ಶಿಕ್ಷಣ ಮಾಧ್ಯಮವನ್ನು ಪ್ರಾದೇಶಿಕ ಭಾಷೆಗೆ ಪರಿವರ್ತಿಸಲು ಇನ್ನೂ ಹಲ ಕಾಲ ಬೇಕೆಂದಾಯಿತು. ಆಗ ವಿದ್ಯಾರ್ಥಿಯು ತನ್ನ ಭವಿಷ್ಯವನ್ನು ಪಿಯುಸಿ ತರಗತಿ ಸೇರುವಾಗಲೇ ಪೂರ್ಣವಾಗಿ ನಿರ್ಧರಿಸಬೇಕಾಗುತ್ತದೆ. ಏಕೆಂದರೆ, ಡಿಪ್ಲೊಮಾ ಪಡೆಯುವ ಅವಕಾಶ ಎಲ್ಲ ವಿದ್ಯಾರ್ಥಿಗಳಿಗೂ ಸಿಗುವುದಿಲ್ಲ. ಇದರಿಂದ ಪ್ರಾದೇಶಿಕ ಭಾಷೆಗೆ ಸಾರ್ವತ್ರಿಕ ಪ್ರಾಶಸ್ತ್ಯವೂ ದೊರೆತಂತಾಗಲಿಲ್ಲ; ಇಂಗ್ಲಿಷ್ ಭಾಷೆಯ ಸ್ಥಾನ—ಮಾನವೂ ಉಳಿದಂತಾಗಲಿಲ್ಲ. ಇಂದಿನ ಸರಕಾರದ ನಿಯಮಗಳನ್ನೇ ಹೋಲುವ ಇನ್ನೊಂದು ಬದಲಾವಣೆಯಿದು.

ಲೋಕಸೇವಾ ಬಾಲವಾಡಿಯ ಉದ್ಘಾಟನೆ

ಅಳಿ. ಫೆ. ೭— ಅಳಿಕೆಯ ಲೋಕಸೇವಾ ಹೈಯರ್ ಪ್ರೈಮರಿ ಶಾಲೆಯಲ್ಲಿ ಮಹಿಳಾ ಮಂಡಲದ ವತಿಯಿಂದ "ಲೋಕಸೇವಾ ಬಾಲವಾಡಿ"ಯು ಶ್ರೀ ಯಂ. ಆರ್. ಮುದ್ರುಂದಾರ್, ಪ್ರಿನ್ಸಿಪಲ್ ಮುನ್ಸಿಫ್, ಪುತ್ತೂರು, ಇವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ವಿ. ನೇಜಪ್ಪ ನಾಯಕರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಮಹಿಳಾ ಮಂಡಲದ ಅಧ್ಯಕ್ಷೆಯವರು ಸ್ವಾಗತ ಭಾಷಣ ಮಾಡಿದರು. ನಂತರ ಪರಿಚಯ ಭಾಷಣ, ವರದಿ ವಾಚನ, ಸಂದೇಶ ವಾಚನಗಳಾದವು. ಉದ್ಘಾಟಕರು ತಮ್ಮ ಭಾಷಣದಲ್ಲಿ ಶಿಕ್ಷಣದಲ್ಲಿ ಬಾಲವಾಡಿಯ ಮಹತ್ವವನ್ನು ವಿವರಿಸಿದರು. ಲೋಕಸೇವಾ ವೃಂದದ ಅಧ್ಯಕ್ಷರಿಂದ ಉಪನ್ಯಾಸವಾದ ಬಳಿಕ ಹಿತಚಿಂತಕರ ನೆಲೆಯಲ್ಲಿ ಮುಖ್ಯ ಸೇವಿಕೆಯರಾದ ಶ್ರೀಮತಿ ಪದ್ಮಾವತಿ, ಗ್ರಾಮಸೇವಿಕೆ ಶ್ರೀಮತಿ ದೇವಮ್ಮ ಮತ್ತು ಶ್ರೀ ವೆಂಕಟ್ರಮಣ ಆಚಾರ್ ಇವರೂ ಮಹಿಳಾ ಮಂಡಲದ ವತಿಯಿಂದ ಶ್ರೀಮತಿ ಯು. ಸರಸ್ವತಿಯವರೂ ಭಾಷಣಗೈದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜಸೇವೆಯ ವಿಷಯವಾಗಿ ಮಾತನಾಡುತ್ತಾ ಬಾಲವಾಡಿಗೆ ಶುಭವನ್ನು ಕೋರಿದರು.

ಚಂದಾದಾರರಲ್ಲಿ ವಿನಂತಿ

"ನವಯುಗ"ದ ಚಂದಾ ಬಾಕಿ ಇರುವವರು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇನೆ. ಅಂತೂ ಈ ತಿಂಗಳಾಂತ್ಯದೊಳಗೆ ಹಣ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಅದನ್ನಾದರೂ ದಯಮಾಡಿ ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್

ನರಸಣ್ಣನ ಸರಸ



"ಪಶ್ಚಿಮ ಬಂಗಾಳದ ರಾಜ್ಯಪಾಲ ಧರ್ಮವೀರರು ಮುಕ್ತಿ ಶಾಂತಿಗಳಿಗಾಗಿ ಕೇಂದ್ರವನ್ನು ಪ್ರಾರ್ಥಿಸಿದ್ದಾರಂತೆ!"

ಮಿಶ್ರಪದ್ಧತಿಯಿಂದ ಆಯುರ್ವೇದ ನಾಶವಾಗುವುದು

(ಆಯುರ್ವೇದ ವಿದ್ವಾನ್ ಶ್ರೀ ಬಿ.ವಿ ನಂಜುಂಡಸ್ವಾಮಿ, ಬಿ.ಎಸ್.ಸಿ., ಎಲ್ ಎ.ಎಂ.ಎಸ್. ಇವರು ೨೬ನೆಯ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣದಿಂದ)

ಆಯುರ್ವೇದ ವಿದ್ವನ್ಮಣಿಗಳಿಂದ ವಿರಾಜಿತವಾದ ಈ ಮಹಾ ಸಭೆಯಲ್ಲಿ ನಾನು ಆಯುಶ್ಶಾಸ್ತ್ರದ ಮಹತ್ವವನ್ನುದ್ದೇಶಿಸಿ ಭಾಷಣ ಮಾಡಬೇಕಾದ ಅಗತ್ಯವಿರುವುದಿಲ್ಲ. ಈಗಲೂ, ಅಧಿಕ ಸಂಖ್ಯಾಕ ಭಾರತೀಯರು ಆಯುರ್ವೇದವನ್ನೇ ನಂಬಿಕೊಂಡು, ಅದಕ್ಕೆ ಸಂಬಂಧಪಟ್ಟ ಔಷಧಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಿರುವುದರಿಂದ ಅವರಿಗೂ ಈ ಶಾಸ್ತ್ರದ ಉಪಯುಕ್ತತೆಯು ವಿಚಾರವಾಗಿ ಹೊಸದಾಗಿ ತಿಳಿಸಿಕೊಡಬೇಕಾಗಿಲ್ಲ. ಆದರೂ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಭಾರತೀಯರ ಮೇಲೆ ಬಿದ್ದಂತೆಲ್ಲ, ಅಭಿವೃದ್ಧಿಯ ಲಕ್ಷಣಗಳನ್ನು ತೋರದೆ, ಆಯುರ್ವೇದವು ತನ್ನ ವ್ಯಕ್ತಿತ್ವವನ್ನು ದಿನೇ ದಿನೇ ನಾಶ ಮಾಡಿಕೊಂಡು, ಸ್ವಲ್ಪ ಕಾಲದಲ್ಲೇ ಹೇಗೆ ನಿರ್ನಾಮವಾಗುವಂಥ ಉತ್ಕಟ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂಬ ವಿಚಾರವಾಗಿ ಈ ಸಂದರ್ಭದಲ್ಲಿ ತಕ್ಕಮಟ್ಟಿಗೆ ಪ್ರಸ್ತಾಪಿಸಬೇಕಾಗಿದೆ.

ಆಯುರ್ವೇದಾಭಿವೃದ್ಧಿಯ ವಿಚಾರದಲ್ಲಿ ಈ ವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಿಯೋಜಿತವಾದ ಎಷ್ಟೋ ಸಮಿತಿಗಳು ತಮ್ಮ ಸಲಹೆಗಳನ್ನು ಮಂಡಿಸಿವೆ. ಈ ಸಲಹೆಗಳಲ್ಲಿನ ಮುಖ್ಯಾಂಶಗಳೆಂದರೆ: 1. ಆಯುರ್ವೇದೀಯ ಔಷಧಗಳನ್ನು ವೈಜ್ಞಾನಿಕ ಪದ್ಧತಿಯನ್ನನುಸರಿಸಿ ಚೆನ್ನಾಗಿ ಸಂಶೋಧನೆ ಮಾಡಿ, ಉಪಯುಕ್ತವಾದವುಗಳನ್ನು ಮಾತ್ರ ಚಿಕಿತ್ಸಾ ಕರ್ಮದಲ್ಲಿ ಅಳವಡಿಸಿಕೊಳ್ಳುವುದು. 2. ಭಾರತೀಯ ವೈದ್ಯ ತಂತ್ರವನ್ನು ಆಧುನಿಕ ವೈಜ್ಞಾನಿಕ ದೃಷ್ಟಿಯಿಂದಲೇ ವಿವರಿಸಿ, ಅಗತ್ಯವಿರುವ ಎಡೆಗಳಲ್ಲೆಲ್ಲ, ಪಾಶ್ಚಾತ್ಯ ವೈದ್ಯ ಗ್ರಂಥಗಳ ಸಹಾಯದಿಂದ ಲೋಪದೋಷಗಳನ್ನೆಲ್ಲ ಸರಿಪಡಿಸಿ, ಪೂರ್ಣಗೊಳಿಸುವುದು. 3. ಆಯುರ್ವೇದೀಯ ಶಿಕ್ಷಣ ಸಂಸ್ಥೆಗಳಲ್ಲಿ ಆಯುರ್ವೇದ—ಅಲೋಪತಿ ಈ ಎರಡು ಶಾಸ್ತ್ರಗಳನ್ನೂ ಹೇಳಿಕೊಟ್ಟು, ಮುಂದೆ ರಾಷ್ಟ್ರೀಯ ಸಂಯೋಜಿತ ವೈದ್ಯ ಪದ್ಧತಿಯ ಸ್ಥಾಪನೆಗೆ ಅಡಿಪಾಯ ಹಾಕುವುದು.

ಆಯುರ್ವೇದ, ವೇದಗಳಂತೆಯೇ ಭೂತದಯಾಪ್ರೇರಿತರಾದ ಮಹರ್ಷಿಗಳ, ಅನುಭವದ ಮೂಲಕ ಪ್ರಾಪ್ತವಾದದ್ದು. ಆಧುನಿಕ ವೈದ್ಯಶಾಸ್ತ್ರದಂತೆ, ಅದು ಜಗತ್ತಿನ ನಾನಾ ಭಾಗಗಳಲ್ಲಿ ಸತತವಾಗಿ ನಡೆಸಲ್ಪಡುತ್ತಿರುವ ಪ್ರಯೋಗ ಸಂಶೋಧನೆಗಳ ಫಲರೂಪವಾಗಿ ಬೆಳೆಯುತ್ತಿರುವ ಶಾಸ್ತ್ರವಲ್ಲ. ಜನತೆಯ ಆರೋಗ್ಯವನ್ನು ಸಂರಕ್ಷಿಸಿ, ರೋಗವನ್ನು ನಾಶಗೊಳಿಸುವುದು ಈ ಉಭಯ ವೈದ್ಯ ಪದ್ಧತಿಗಳಿಗೂ ಸಮಾನ ಧ್ಯೇಯವಾದರೂ, ಆಧುನಿಕ ವೈದ್ಯತಂತ್ರ ಐಹಿಕ ಸುಖಾನುಭವಕ್ಕೆ ಮಾತ್ರ ಯೋಗ್ಯವಾಗುವಂತೆ ದೇಹೇಂದ್ರಿಯ ಸಂಘಾತವನ್ನು ಸಂರಕ್ಷಿಸಲು ಹೊರಟಿಲ್ಲ. ಅದು ಪ್ರಸನ್ನವಾದ ಆತ್ಮೇಂದ್ರಿಯ ಮನಸ್ಸುಗಳಿಂದ ಅಭಿಲಕ್ಷಿತವಾದ ಲೋಕೋತ್ತರ ಸುಖಕ್ಕೆ ಕಾರಣವೂ, ಪರಮ ಪುರುಷಾರ್ಥ ಸಾಧನೆಗೆ ಅತ್ಯಂತ ಆವಶ್ಯವೂ ಆದ ಹಿತವಾದ ಆಯುಸ್ಸನ್ನು ಹೇಗೆ ಸಂಪಾದಿಸಿಕೊಳ್ಳಬಹುದೆಂಬುದನ್ನು ಚೆನ್ನಾಗಿ ತೋರಿಸಿ ಕೊಡುತ್ತದೆ. ಆಯುರ್ವೇದದ ಬೃಹತ್ಸೌಧ ತ್ರಿದೋಷ, ತ್ರಿಗುಣ, ಪಂಚಭೂತ, ಷಡ್ರಸ, ಸಾಮಾನ್ಯ-ವಿಶೇಷಭಾವ ಈ ವ್ಯಾಪಕ ಸಿದ್ಧಾಂತಗಳ ಆಧಾರದ ಮೇಲೆ ನಿಂತಿದ್ದರೆ, ತ್ರಿಕಾಲಾಬಾಧಿತ ನಿರ್ಣಯಗಳೊಂದೂ ಈ ಅಲೋಪತಿಜ್ಞರ ಮನ್ನಣೆಯನ್ನು ಪಡೆಯದೆ, ಅವರ ತಿರಸ್ಕಾರಕ್ಕೆ ಮಾತ್ರ ಗುರಿಯಾಗಿರುತ್ತವೆ. ದೀರ್ಘಕಾಲಿಕ ರೋಗಗಳಲ್ಲಿ 'ಪಂಚಕರ್ಮ' ರೂಪವಾದ ಶೋಧನೆಯಿಂದ ಅವುಗಳ ಮೂಲೋಚ್ಛೇದನಕ್ಕಾಗಿ ಪ್ರಯತ್ನಪಡುವ ಆಯುರ್ವೇದಿಗಳಿಗೂ, ರೋಗಲಕ್ಷಣಗಳು ತಾತ್ಕಾಲಿಕವಾಗಿ ತತ್‌ಕ್ಷಣ ತಿರೋಭೂತವಾಗುವಂತೆ ಮಾಡುವುದರಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುವ ಪಾಶ್ಚಾತ್ಯ ವೈದ್ಯಧುರಂಧರರಿಗೂ ಚಿಕಿತ್ಸಾ ಪದ್ಧತಿಯಲ್ಲಿ ಸಹ ವೈಲಕ್ಷಣ್ಯಗಳನ್ನು ನೋಡಬಹುದು. ಹೀಗೆ ಪ್ರಾಚೀನ ಮತ್ತು ನವೀನ ವೈದ್ಯಶಾಸ್ತ್ರಗಳಿಗೆ ಎಷ್ಟೋ ವ್ಯತ್ಯಾಸಗಳಿದ್ದರೂ, ಅವುಗಳಲ್ಲಿ ಪಾಶ್ಚಾತ್ಯ ವೈಜ್ಞಾನಿಕರ, ದೃಷ್ಟಿಗೆ, ಯಾವ ಅಂಶಗಳು ಸರಿಬೀಳುತ್ತವೋ, ಅಂಥವನ್ನು ಮಾತ್ರ ಉಳಿಸಿಕೊಂಡು, ಉಳಿದವನ್ನೆಲ್ಲ ಅಪ್ರಮಾಣಿಕವೆಂದು ತಳ್ಳಿಹಾಕಿಬಿಡುವುದು ವಿವೇಚನಾಯುಕ್ತವಾದ ಕಾರ್ಯವೇ?

ಪ್ರಾಚೀನ ವೈದ್ಯಶಾಸ್ತ್ರ ಎಲ್ಲ ರೋಗಗಳಿಗೂ ವಾತಪಿತ್ತಶ್ಲೇಷ್ಮಗಳೇ ಮೂಲಕಾರಣವೆಂದು ತಿಳಿಸುತ್ತದೆ. ಆಗಂತುಕ ವ್ಯಾಧಿಗಳೂ, ಅಲೋಪತೀಯ ಕೃಮಿಜನ್ಯವೆಂದು ಪ್ರಸಿದ್ಧವಾದವುಗಳೂ ಸಹ ಈ ತ್ರಿದೋಷಗಳ ಸಾಮಾನ್ಯವನ್ನು ಭಂಗಮಾಡದೆ, ತಮ್ಮ ಸ್ವರೂಪವನ್ನು ಹೊಂದಲಾರವು. ಆದರೆ, ಆಯುಶ್ಶಾಸ್ತ್ರಜ್ಞನ ಚಿಕಿತ್ಸಾ ಕರ್ಮವೆಲ್ಲ ಈ ದೋಷಗಳ ಸಾಮ್ಯವನ್ನುಂಟು ಮಾಡುವುದರಲ್ಲಿಯೇ ಪರ್ಯವಸಾನಗೊಳ್ಳುತ್ತದೆ; ಅದರಿಂದ ಮತ್ತೇನನ್ನೂ ಅಪೇಕ್ಷಿಸುವುದಿಲ್ಲ. ಈ ಕಾರ್ಯ ಸಾಧಿತವಾದರೆ, ಅಂಥ ದೇಹಭೂಮಿಯಲ್ಲಿ ಯಾವ ರೋಗವೂ ಉದ್ಭವಿಸಲಾರದು. ಪ್ರತ್ಯಕ್ಷಾದಿ ಪ್ರಮಾಣಗಳಿಂದ ರೋಗಕ್ಕೆ ಕಾರಣವಾದ ದೋಷವೈಷಮ್ಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಆದರೆ, ರೋಗ ಎಂಥದೆಂಬ ಜ್ಞಾನ ತಂತ್ರೋಕ್ತವಾದ ವ್ಯಾಧಿಪ್ರತ್ಯನೀಕ ಚಿಕಿತ್ಸೆಗೆ ಉಪಯುಕ್ತವಾಗಿದ್ದರೂ, ಅಸಂಖ್ಯಾತವಾದ ಮತ್ತು ಹೊಸ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿರುವ ರೋಗಗಳಲ್ಲಿ ಯಾವುದಾದರೊಂದರ ಹೆಸರು ಗೊತ್ತಾಗದಿದ್ದರೂ, ಅದಕ್ಕಾಗಿ ವೈದ್ಯರು ವ್ಯಥೆಪಡಬೇಕಾಗಿಲ್ಲ. ಅಂಥ ಸಂದರ್ಭದಲ್ಲಿ ದೋಷ ವೈಷಮ್ಯವನ್ನು ಯಥಾವತ್ತಾಗಿ ಪತ್ತೆಮಾಡಿಕೊಂಡು ತದ್ವಿರುದ್ಧ ಚಿಕಿತ್ಸೆಯನ್ನು ನಡೆಸಿದರೆ ಸಾಕು; ಸಾಧ್ಯವಾದ ರೋಗಗಳಲ್ಲಿ ಖಂಡಿತ ಗುಣ ಹೊಂದುವವು. ಪಾಶ್ಚಾತ್ಯ ವೈದ್ಯಕ ಗ್ರಂಥಗಳಲ್ಲಿ ಮಾತ್ರ ಹೇಳಲ್ಪಟ್ಟ ಮತ್ತು ವೈಜ್ಞಾನಿಕ ಸಂಶೋಧಕರಿಂದ ಹೊಸ ಹೊಸ ರೋಗಗಳೆಂದು ಪ್ರಸಿದ್ಧಿಯನ್ನೈದುತ್ತಿರುವ ವ್ಯಾಧಿಗಳಿಗೂ ಆಯುರ್ವೇದಜ್ಞ ಈ ಕ್ರಮದಲ್ಲೇ ಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಬಹುದು.

ಆಧುನಿಕ ವೈದ್ಯರು ರೋಗ ನಿರ್ಣಯಾರ್ಥವಾಗಿ ಎಷ್ಟೋ ಸಾಧನ ಸಂಪತ್ತಿಯನ್ನು ಬಳಕೆಯಲ್ಲಿಟ್ಟುಕೊಂಡಿರುವುದು ಜನಜನಿತವಾಗಿದೆ. ದೋಷದೂಷ್ಯ ವಿಕೃತಿಗಳ ನಿಸ್ಸಂದಿಗ್ಧ ನಿಶ್ಚಯಕ್ಕಾಗಿ ಮತ್ತು ರೋಗ್ಯಲಕ್ಷಣಗಳನ್ನು ಸರಿಯಾಗಿ ಗ್ರಹಿಸಲು ಈ ಸಾಧನೆಗಳು ಸಹಾಯವಾಗುವಂತಿದ್ದರೆ, ಆಯುರ್ವೇದಜ್ಞರೂ ಅವುಗಳ ಪ್ರಯೋಜನವನ್ನು ಪಡೆಯಲು ಯತ್ನಿಸಬಹುದು. ಅವುಗಳಿಂದ ದೋಷ ವೈಷಮ್ಯದ ಅಂಶಾಂಶ ಕಲ್ಪನೆಗಾಗಲೀ, ರೋಗಸ್ಥಾನ ನಿರ್ಣಯಕ್ಕಾಗಲೀ, ವ್ಯಾಧಿ ನಿರ್ದೇಶಕ್ಕಾಗಲೀ ಸಹಾಯವಾಗುತ್ತಿದ್ದರೆ, ಅವರಿಗೆ ಬಹಳ ಲಾಭವಾಗುತ್ತದೆ.

ಈ ರೋಗ ನಿಶ್ಚಯಾತ್ಮಕ ಸಾಮಗ್ರಿಗಳು ಸಲಕರಣೆಗಳ ಪ್ರಯೋಜನ ಭಾರತದಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲೂ ಜನಸಾಮಾನ್ಯಕ್ಕೆ ಆಗುತ್ತಿಲ್ಲ. ಆದ್ದರಿಂದ ಆಯುರ್ವೇದಿಗಳು ಯಾವ ಸಾಧನವನ್ನು, ಎಷ್ಟರಮಟ್ಟಿಗೆ, ಹೇಗೆ ಪ್ರತ್ಯಕ್ಷ ಪ್ರಮಾಣಕ್ಕೆ ಪುಷ್ಟಿಕೊಡುವಂತೆ, ಮತ್ತು ಶಾಸ್ತ್ರೀಯ ಕ್ರಮಕ್ಕೆ ಉಪೋದ್ಬಲಕವಾಗಿ ರೋಗ ನಿದಾನದಲ್ಲಿ ಉಪಯೋಗಿಸಿಕೊಳ್ಳಬಹುದೆಂಬುದನ್ನೂ ಅನುಭವದಿಂದ ಗೊತ್ತುಮಾಡಿಕೊಳ್ಳಬೇಕಾಗುತ್ತದೆ.

ಆಯುರ್ವೇದೀಯ ಔಷಧಗಳನ್ನು ಪಾಶ್ಚಾತ್ಯ ವೈಜ್ಞಾನಿಕ ಪರಿಶೋಧನೆಗೊಳಪಡಿಸಿ, ತತ್ಫಲವಾಗಿ, ರೋಗ ನಾಶಕ ಶಕ್ತಿಯುಳ್ಳವೆಂದು ನಿರ್ದೇಶವಾದವನ್ನು ಮಾತ್ರ ಚಿಕಿತ್ಸೆಗೆ ಬಳಸಬೇಕೆಂಬ ವಾದ ಯುಕ್ತಿಶೂನ್ಯ ಆಯುರ್ವೇದ ಘಾತಕ. ಪ್ರಪಂಚದಲ್ಲಿ ಔಷಧಕ್ಕೆ ಬಾರದ ಪದಾರ್ಥವೇ ಇಲ್ಲವೆಂದು ಆಯುರ್ವೇದಸಿದ್ಧಾಂತ. ಅದರ ಪ್ರಕಾರ, ಪ್ರತಿಯೊಂದು ವಸ್ತುವಿನಲ್ಲೂ, ರೋಗ ನಿವರ್ಹಣ ಶಕ್ತಿಯಿರುತ್ತದೆ. ಆದರೆ, ಬುದ್ಧಿವಂತನಾದ ವೈದ್ಯನು ಅದನ್ನು ಆಯುಸ್ತಂತ್ರದ ತತ್ವಗಳಿಗನುಗುಣವಾಗಿ ಪ್ರಯೋಗಿಸುವುದನ್ನು ಚೆನ್ನಾಗಿ ಅಭ್ಯಾಸಮಾಡಬೇಕು. ಈಗ ಉಪಲಬ್ಧವಿರುವ ಚರಕ, ಸುಶ್ರುತ, ವಾಗ್ಭಟಾದಿ ಗ್ರಂಥಗಳಲ್ಲಿ ಉಕ್ತವಾದ ಸ್ಥಾವರ, ಜಂಗಮ ಮತ್ತು ರಾಸಾಯನಿಕ ಔಷಧಗಳು ಮಾತ್ರ ಆಯುರ್ವೇದಜ್ಞನ ಅಧಿಕಾರಕ್ಕೊಳಪಟ್ಟಿರುತ್ತವೆಂದು ತಿಳಿದರೆ, ಅದು ಆಯುರ್ವೇದದ ಅನಭಿಜ್ಞತೆಯನ್ನು ವ್ಯಕ್ತಪಡಿಸುತ್ತದೆ. ಈಗ ಪ್ರಚಲಿತವಾಗಿರುವ ಅಲೋಪತಿ, ಹೋಮಿಯೋಪತಿ, ನ್ಯಾಚುರೋಪತಿ ಮುಂತಾದ ಭಿನ್ನ ತಂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟ ಯಾವುದೇ ಔಷಧವಾಗಲೀ, ಅದು ಆಯುರ್ವೇದದ 'ದ್ರವ್ಯ'ಲಕ್ಷಣದಲ್ಲಿ ಅಡಕವಾಗುವುದರಿಂದ ಅದರ ಗುಣ, ರಸ, ವೀರ್ಯ, ವಿಪಾಕ, ಪ್ರಭಾವಗಳನ್ನು ಅರಿತುಕೊಂಡು, ಈ ಶಾಸ್ತ್ರ ಕ್ರಮದಲ್ಲೇ, ರೋಗವನ್ನು ನಿಶ್ಚಯಿಸಿ, ದೋಷದೂಷ್ಯಗಳ ಬಲಾಬಲಗಳನ್ನನುಸರಿಸಿ, ಚಿಕಿತ್ಸೆಯಲ್ಲಿ ತೊಡಗುವುದು ಆಯುಶ್ಶಾಸ್ತ್ರಜ್ಞನಿಗೆ ಯೋಗ್ಯದೇ ಆಗಿರುತ್ತದೆ. ಭಾರತೀಯ ಚಿಕಿತ್ಸಾ ಶಾಸ್ತ್ರದಲ್ಲಿ ನಿಷ್ಣಾತನಾದವನು ಲೋಕದ ಯಾವುದೇ ಭಾಗದಲ್ಲಿ ನೆಲಸಿರಲಿ, ಅ

(ಒಂಭತ್ತನೇ ಪುಟ ನೋಡಿರಿ)

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯ ವಾಚಕ ಸಮಾಚಾರ

ಜನವರಿ ೧೯೬೯ರಿಂದ ಮಾರ್ಚಿ 30ನೇ ತಾರೀಖಿನ ವರೆಗೆ

300=00 ರೂ. ನಿಮ್ಮಳ ವ್ಯಾಪಾರ ಮಾಡಿದರೆ

ಒಂದು **Steel Desk** (ಬರೆಯುವ—ವಾಟಿ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ— ಭಾಗ 1—	ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ— ಭಾಗ 2—	”	2—50
ಉಂಡಾಡಿ ಗುಂಡ—	ಪರ್ವತವಾಣಿ	2—00
ಧರ್ಮದೇವತೆ—	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು —	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—
ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು
ಬೇಕಾದ ಪಟ್ಟಿಗೆ ಬರಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಜಗದ್ರಕ್ಷಣೆಗಾಗಿ ಕಾಲಕೂಟ ಕುಡಿದ ಮಹಾದೇವನ ಪ್ರಾರ್ಥನೆಯ ದಿನ

ಮಹಾಶಿವರಾತ್ರಿ

ಶಿವನ ಪ್ರೀತ್ಯರ್ಥ ಆಚರಿಸುವ ಅಸಂಖ್ಯಾತ ಹಬ್ಬ ಹರಿದಿನಗಳಲ್ಲಿ 'ಮಹಾಶಿವರಾತ್ರಿ' ಅತ್ಯಂತ ಪ್ರಮುಖವಾದುದು. ಸಾಮಾನ್ಯವಾಗಿ ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಬೀಳುವ ಈ ಹಬ್ಬ ಈ ವರ್ಷ ಫೆ. ೧೫ರಂದು ಆಚರಿಸಲ್ಪಡುತ್ತದೆ. ಜಾತಿಮತ ಭೇದಗಳಿಂದ ದೂರವಾಗಿ ಸಂಪೂರ್ಣವಾಗಿ ಧಾರ್ಮಿಕ ಹಿನ್ನೆಲೆಯುಳ್ಳ ಈ ಉತ್ಸವ ಸಾರ್ವತ್ರಿಕವಾಗಿ ಎಲ್ಲಾ ಹಿಂದೂಗಳಿಂದ ಅತ್ಯಂತ ಭಕ್ತಿಪೂರ್ವಕವಾಗಿ ಆಚರಿಸಲ್ಪಡುತ್ತದೆ.

ಸರ್ವಮಾನ್ಯ ಉತ್ಸವ

ಭಾಷಾ ಗೊಂದಲದ ಅಡ್ಡಗೋಡೆಗಳಿಂದ ಮುಕ್ತವಾದ ಈ ಹಬ್ಬದ ದಿನದಂದು, ತಮಿಳರು, ಆಂಧ್ರರು, ಕನ್ನಡಿಗರು, ಮಲೆಯಾಳಿಗಳು, ಮರಾಠಿಗರು ಮುಂತಾದ ವಿಭಿನ್ನ ಭಾಷೆಗಳಿಗೆ ಸೇರಿದ ಎಲ್ಲಾ ಜನರೂ ಪರಮೇಶ್ವರನಿಗೆ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಸರಳ ಹಾಗೂ ಮುಗ್ಧ ಸಡಗರದಿಂದೊಪ್ಪುವ ಈ ಹಬ್ಬದಂದು ಆಡಂಬರಕ್ಕೆ, ಐಶಾರಾಮಕ್ಕೆ ಅಥವಾ ಭೂರಿ ಭೋಜನಗಳಿಗೆ ಅವಕಾಶವಿಲ್ಲ. ಬೀದಿಯಲ್ಲಿ ಬದುಕುವ ಅತ್ಯಂತ ದೀನಸ್ಥಿತಿಯ ಭಿಕ್ಷುಕನಿಂದ ಮೊದಲ್ಗೊಂಡು ಭವ್ಯ ಅರಮನೆಯ ನಿವಾಸಿ ಸಿರಿವಂತ ರಾಜನವರೆಗೆ, ಪ್ರತಿಯೊಬ್ಬರೂ ಪರಮೇಶ್ವರನನ್ನು ಅಂದು ಪೂಜಿಸುತ್ತಾರೆ. ಇದರಿಂದ ಭಕ್ತರಲ್ಲಿ ಭಗವಂತನನ್ನು ಕುರಿತಾದ ಸಹಜ ಭಕ್ತಿಯ ಜ್ಞಾನ ಸ್ಫುರಣಗೊಳ್ಳುತ್ತದೆ ಮತ್ತು ವ್ಯಕ್ತಿಗಳ ಅನ್ಯೋನ್ಯತೆಯು ಮಾರ್ಗದಲ್ಲಿ ಕುಗ್ಗದ ಭರವಸೆ ಮೂಡುತ್ತದೆ.

'ಶಿವರಾತ್ರಿ'ಯ ಮೂಲ

ಶಿವರಾತ್ರಿಯ ಮೂಲ ಈ ರೀತಿಯಾಗಿಟ್ಟು. ಪುರಾಣದಂತೆ ದೇವಾಸುರರು ಅಮೃತವನ್ನು ಪಡೆಯಲೋಸುಗ ಕ್ಷೀರಸಾಗರ ಮಂಥನದಲ್ಲಿ ತೊಡಗಿದರು. ಮಂದರ ಪರ್ವತವೇ ಕಡೆಗೋಲಾಯಿತು. ಸ್ವತಃ ನಾಗರಾಜ ವಾಸುಕಿಯೇ ಹಗ್ಗವಾದ. ದ್ವಿಪಕ್ಷದವರೂ ಸಮಬಲದಿಂದ ಮಂಥನ ಕಾರ್ಯದಲ್ಲಿ ಮುಂದುವರಿದರು. ಆಗ ಅತ್ಯುಗ್ರ ಗುಣವಿಶೇಷಗಳ ವಿವಿಧ ವಸ್ತುಗಳು ಉತ್ಪನ್ನವಾದುವು. ಅವುಗಳ ರಾಶಿಯೊಳಗಿನದಿಯೊಳ್ಳಿದ್ದ ಕ್ರೂರ ಕಾರ್ಕೋಟಕ ವಿಷವೂ ಇದರಲ್ಲಿ ಒಂದು. ಭೂಲೋಕ ಭುವರ್ಲೋಕಗಳಲ್ಲಿ ಇದರ ಸಮ ತೀವ್ರತೆಯ ಮತ್ತೊಂದು ವಿಷವಿರಲಿಲ್ಲ. ಇದರಿಂದ ಉಗ್ರವಾದ ಉರಿಯ ಭೀಕರ ಕೆನ್ನಾಲಗೆಗಳು ಹೊರಹೊಮ್ಮಿದುವು, ಮತ್ತು ಅದರ ತೀಕ್ಷ್ಣ ವಾಸನೆ ದೇವಾಸುರರನ್ನೂ ಉಸಿರುಗಟ್ಟಿಸಿತು. ವಿಷದ ಅತ್ಯುಗ್ರ ತಾಪ ಸ್ವರ್ಗವಾಸಿಗಳಿಗೂ ತಡೆಯಲಸಾಧ್ಯವಾಯಿತು ಮತ್ತು ಅವರು ಗಟ್ಟಿ ಭಯಾನಕ ಪರಿಸ್ಥಿತಿಯೊದಗಿತು. ಆ ವಿಷ ತನ್ನ ಕಕ್ಷೆಯೊಳಗಿನ ಪ್ರತಿಯೊಂದರ ಮೇಲೂ ಕರಾಳ ನೆರಳನ್ನು ಪಸರಿಸತೊಡಗಿತು. ಇಡೀ ಬ್ರಹ್ಮಾಂಡ ಅಂಧಕಾರದೊಳಗೆ ಮುಳುಗಿಯಿತು. ಸುರರು ತಮ್ಮ ಸಂರಕ್ಷಣೆಗಾಗಿ ವಿಷ್ಣು, ಬ್ರಹ್ಮ, ಇಂದ್ರ, ವರುಣ, ಯಮ, ಸೂರ್ಯ, ಚಂದ್ರ ಮುಂತಾದ ದೇವಾನುದೇವತೆಗಳನ್ನೆಲ್ಲಾ ಪ್ರಾರ್ಥಿಸಲು ತೊಡಗಿದರು. ಯಾರಿಂದಲೂ ಅವರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ಕೊನೆಯಲ್ಲಿ ಅವರು ಶಿವನನ್ನು ಮರೆಹೊಕ್ಕರು.

ಜಗದ್ರಕ್ಷಕ ವಿಷಕಂಠ

ಪರಮೇಶ್ವರ ಪ್ರತ್ಯಕ್ಷನಾಗಿ, ಜಗತ್ತನ್ನು ನಡೆಸುವ ತನ್ನ ತ್ರಿಶೂಲವನ್ನು ಊರ್ಧ್ವಾಭಿಮುಖವಾಗಿ ಎತ್ತಿ ಹಿಡಿದ. ಆ ಘೋರ ವಿಷವು ಪ್ರಶಾಂತವಾಯಿತು. ತನ್ನ ತುಟಿಗಳಿಂದ ಒಂದು ಗುಟುಕು ಹೀರುವಂತೆ ಭಗವಂತ ಆ ಭೀಕರ ವಿಷವನ್ನು ಸಂಪೂರ್ಣವಾಗಿ ಪಾನಗೈದ. ದೇವಾಧಿದೇವ ಜಗದ್ರಕ್ಷಕನಾದ ಆತನಿಗೂ ಆ ಘೋರ ವಿಷದ ಅತೀವ ತಾಪ ಸಹಿಸಲಸಾಧ್ಯವಾಯಿತು. ಅದರ ಪ್ರತಿಕ್ರಿಯೆಯಿಂದ ಗಂಟಲು ಉರಿಯತೊಡಗಿತು. ಆತನ ಸುಂದರ ಕಂಠ ಕಪ್ಪು ಬಣ್ಣಕ್ಕೆ ತಿರುಗಿತು. ತಕ್ಷಣವೇ ಪಾರ್ವತಿ ದೇವಿ ಓಡಿಬಂದು ಪತಿಯ ಕೊರಳನ್ನು ತನ್ನ ಕೈಗಳಿಂದ ಅದುಮಿ ಹಿಡಿದುಕೊಂಡಳು. ಪಾರ್ವತಿಯ ಸಮಯೋಚಿತ ಸಹಾಯದಿಂದ ವಿಷದ ಕೆಳಮುಖ ಧಾರೆ ಕಡೆಯ ಕೊರಳಲ್ಲೇ ನಿಂತಿತು. ಯಾರಿಗಾಗಿ ಭಗವಂತನಾದ ಪರಮೇಶ್ವರ ತೀವ್ರ ಯಾತನೆ ಸಹಿಸಲು ಸಿದ್ಧನಾದನೋ ಅಂಥ ಸುರರು, ಆತನಿಗೆ ತಮ್ಮ ಅತ್ಯಂತ ಶ್ರದ್ಧಾಪೂರ್ಣ ಪ್ರಾರ್ಥನೆ ಸಲ್ಲಿಸಲು ತೊಡಗಿದರು. ವಿಶ್ವದ ಮೂಲೆಮೂಲೆಗಳಲ್ಲಿ ಅವರ ಗಂಭೀರ ಪ್ರಾರ್ಥನೆಯ ನಿನಾದ ಮೊಳಗತೊಡಗಿತು; ಇದರ ಪ್ರತಿಧ್ವನಿ ಭೂಲೋಕದ ಭಕ್ತರ ಕಿವಿಗಳಲ್ಲೂ ಶುಭ ಸೂಚಕವೆಂಬಂತೆ ಮೊರೆಯತೊಡಗಿತು. ಅಂದಿನ ರಾತ್ರಿ, ಯಾರಿಗೂ ಎಳ್ಳಷ್ಟೂ ನಿದ್ರೆ ಬರಲಿಲ್ಲ. ಶ್ರದ್ಧೆ ಮತ್ತು ನಿಷ್ಠೆಯಿಂದೊಡಗೂಡಿದ ಭಕ್ತಿಯಲ್ಲಿ ಎಲ್ಲರೂ ನಿದ್ರೆ ಎಂಬುದನ್ನು ಮರೆತರು. ಆ ದಿನವೇ ಮಾಘ ಮಾಸದ ಕೃಷ್ಣಪಕ್ಷದ ಚತುರ್ದಶಿ ದಿನ—ಮಹಾ ಶಿವರಾತ್ರಿ.

ಆಚರಣೆಯ ವೈಶಿಷ್ಟ್ಯ

ಅಂದು ಮೊದಲ್ಗೊಂಡು ಇಂದಿನ ವರೆಗೆ ಹಿಂದೂಗಳು ಪರಮೇಶ್ವರನ ಪ್ರೀತ್ಯರ್ಥವಾಗಿ 'ಈ ಮಹಾ ಶಿವರಾತ್ರಿ'ಯನ್ನು ಧಾರ್ಮಿಕ ಹಬ್ಬವಾಗಿ ಅತ್ಯಂತ ಭಕ್ತಿಯಿಂದ ಆಚರಿಸುತ್ತಾ ಬಂದಿದ್ದಾರೆ. ಅಂದು ಭಕ್ತವೃಂದ ಉಷಃಕಾಲದಲ್ಲಿ ಎದ್ದು ಮಿಂದು ಮಡಿಯುಡುತ್ತಾರೆ. ಅಪರಾಹ್ನದಲ್ಲಿ ಜಗತ್ಪಾಲಕ ಪರಮೇಶ್ವರನಿಗೆ ರುದ್ರನಮಸ್ಕಾರದಿಂದೊಡಗೂಡಿದ ಅನೇಕ ಸೇವೆ ನಡೆಸುತ್ತಾರೆ. ಯಾವ ಆಹಾರವನ್ನೂ ಸೇವಿಸದ ಇಡೀ ದಿನ ಉಪವಾಸಗೈಯುತ್ತಾರೆ. ಒಂದು ತೊಟ್ಟು ನೀರನ್ನೂ ಸಹ ಸೇವಿಸುವುದಿಲ್ಲ. ಸಂಧ್ಯಾಕಾಲದ ಹೊತ್ತಿಗೆ ಸಂಪ್ರದಾಯಬದ್ಧವಾಗಿ ಇಷ್ಟದೇವತಾ ಪ್ರಾರ್ಥನೆ ಸಲ್ಲಿಸುತ್ತಾರೆ. ವೇದ ಮಂತ್ರಗಳನ್ನು ಪಠಿಸುತ್ತಾರೆ ಅಲ್ಲದೆ, ಶಿವಪಂಚಾಕ್ಷರಿ ಮುಂತಾದ ಪವಿತ್ರ ಗ್ರಂಥಗಳನ್ನೂ ಪಾರಾಯಣ ಮಾಡುತ್ತಾರೆ. ಅನಂತರ ಹತ್ತಿರದ ಶಿವದೇವಾಲಯವನ್ನು ಸಂದರ್ಶಿಸಿ ಭಗವಂತನಿಗೆ ಫಲಪುಷ್ಪಗಳ ಸಮರ್ಪಣೆಗೈದು ಪರಮೇಶ್ವರ ತಮಗೆ ಶಾಶ್ವತ ವರವನ್ನು ನೀಡಿದನೆಂಬ ವಿಶ್ವಾಸದೊಂದಿಗೆ ಮರಳುತ್ತಾರೆ. ಇಡೀ ರಾತ್ರಿ ಭಕ್ತವೃಂದ ಶಿವಸ್ತೋತ್ರಗಳನ್ನು ಉಚ್ಚರಿಸುತ್ತಾ ಜಾಗರಣೆ ನಡೆಸುತ್ತಾರೆ. ಸಂಕೀರ್ತನೆ, ಹರಿಕಥೆಗಳಲ್ಲಿ ಕೆಲವರು ಮಗ್ನರಾದರೆ ಮತ್ತೆ ಕೆಲವರು ಭಾಗವತರ ಬಾಯಿಂದ ಪುರಾತನ ಶಿವನ ಸಾಹಸ ಕಥೆಗಳನ್ನು ಆಲಿಸುತ್ತಾ ಕಾಲಕ್ಷೇಪ ಮಾಡುತ್ತಾರೆ. ಗ್ರಾಮಾಂತರಗಳಲ್ಲಿನ ವಿಶ್ವನಾಥ ಮಂದಿರಗಳು ಇಕ್ಕೆಲಗಳಲ್ಲಿ ನಾಟಕ ಪ್ರದರ್ಶನಗಳನ್ನು ಏರ್ಪಡಿಸುತ್ತಾರೆ. ಆ ದಿನ ನಗರಗಳಲ್ಲಿ ಶಿವರಾತ್ರಿಯ ಅಂಗವಾಗಿ ಹೊಸ ನಾಟಕ ಪ್ರದರ್ಶನಗಳ ಘೋಷಣೆಗಳಾಗುತ್ತವೆ. ಅಂದು ಅಭಿನಯಿಸಲ್ಪಡುವ ಪ್ರಮುಖ ನಾಟಕಗಳೆಂದರೆ ಸತ್ಯ ಹರಿಶ್ಚಂದ್ರನ ಕಥೆ ಮತ್ತು ಬೇಡರ ಕಣ್ಣಪ್ಪ ಎಂಬ ಭಕ್ತಾಗ್ರಣಿಯ ಕಥೆ.

ಭಕ್ತಾಗ್ರಣಿ ಕಣ್ಣಪ್ಪ

ಕಣ್ಣಪ್ಪನ ಮಾರ್ಗಭಕ್ತಿಯ ಕಥೆಯು ಸರಳ ಸಾಮಾನ್ಯ ಜನರಿಗೆ ಕೂಡ

(ಎರಡನೇ ಪುಟ ನೋಡಿರಿ)

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯ ಬಹುದಾದ ಅಂಗ್ಲ ಸ್ವಯಂ ಬೋಧಿನಿ.
ಬೆಲೆ : ರೂ. 2—00

●

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

●

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

●

ಮನೆ-ಮದ್ದು Home Remedies

ಡಾ|| ವಿ. ಆರ್. ಕೊಂಡಜ್ಜಿಯವರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2 –00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಉಡುಪಿ ಲೇಂಡ್ ಟ್ರಿಬ್ಯೂನಲ್‌ನಲ್ಲಿ

L.T.O.P. 435/67.

ಯು. ಬಾಲಕೃಷ್ಣ ಆಚಾರ್ಯ — ಅರ್ಜಿದಾರ.

ಮತ್ತು

ಕರಿಘಾಟಿ ಕೂಡಾ — ಎದುರಿಯರು

೪ನೇ ಎದುರಿ ಐಸಾಬಿ, ಜಾಫರ್ ಸಾಹೇಬರ ಮಗಳು ವ, ಸಯ್ಯದ ಅಲಿ ಸಾಹೇಬರ ಹೆಂಡತಿ, ಕ. ಬೊಕ್ಕಪಟ್ನ, ಮಂಗಳೂರು ಇವರಿಗೆ.

ಎದುರಿಯರಿಂದ ಬರತಕ್ಕ ಕಳೆದ ವಿಶ್ವಾವಸು (1965-66) ಮತ್ತು ಪರಾಭವ (1966-67) ಸಂವತ್ಸರಗಳ ಗೇಣಿ ಬಾಕಿವಸೂಲಿ ಬಗ್ಗೆ ಅರ್ಜಿದಾರನು ಹಾಕಿದ ಮೇಲ್ಕಂಡ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ಮುಂದಿನ ತಾರೀಕು 17-8-1969ಕ್ಕೆ ಇಟ್ಟಿರುವುದರಿಂದ ಸದ್ರಿ ತಾ. 17-3-1969ರಂದು ಬೆಳಿಗ್ಗೆ ಘಂಟೆ 11.00ಕ್ಕೆ ನೀವು ಸ್ವತಹಾ ಅಥವಾ ವಕೀಲರ ಮುಖಾಂತರ ಈ ಟ್ರಿಬ್ಯುನಲ್‌ನಲ್ಲಿ ಹಾಜರಾಗಿ ಉದಾಹರಣೆಗಳೇನಾದರೂ ಇದ್ದಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ (Exparte) ಮಾಡಿ ಅರ್ಜಿಯ ಮುಂದಿನ ಕಲಾಪ ನಡೆಸಲಾಗುವುದು, ತಿಳಿದಿರಲಿ.

— ಟ್ರಿಬ್ಯುನಲ್ ಹುಕುಂ ಪ್ರಕಾರ —

P.B.R. Shenoy,
ಅರ್ಜಿದಾರನ ಪರ ಎಡ್ವೊಕೇಟು
ಉಡುಪಿ, ದ. ಕ., 30-12-1968.

ಕಥಾ ಪ್ರಪಂಚ

ಇಬ್ಬರೊಳಗಿನ ಭೇದ

ಬರೆದವರು :
ಶ್ರೀ ಐ. ಎಚ್. ಶಾಂತಾರಾಮ ಶೆಟ್ಟಿ, ಬ್ರಹ್ಮಾವರ.

ಜೋಗಪುರದ ದುಷ್ಯಂತರಾಯರನ್ನು ಅರಿಯದವರೆ ಅತಿ ವಿರಳ. ದುಷ್ಯಂತ ರಾಯರು ಶ್ರೀಮಂತರ ಪಂಕ್ತಿಯಲ್ಲಿ ಅಗ್ರಗಣ್ಯರು. ರಾಯರಿಗೆ ಇಬ್ಬರು ಪತ್ನಿಯರು. ಮೀರಾ, ಲತಾ. ಕಿರಿಯ ಹೆಂಡತಿ ಲತಾಳಲ್ಲಿ ಒಬ್ಬ ಮಗ ದಿನಕರ. ಅವರ ದಾಂಪತ್ಯ ಜೀವನ ಅನ್ಯೋನ್ಯವಾಗಿತ್ತು.

ಸೃಷ್ಟಿಕರ್ತ ಬ್ರಹ್ಮನಿಗೆ ಈ ಸಂಸಾರದ ಅನ್ಯೋನ್ಯತೆಯು ಸಹಜವಾಗದೆ ಸಂಸಾರದಲ್ಲಿ ಒಡಕುಂಟು ಮಾಡಲು ದುಷ್ಯಂತ ರಾಯರ ಹಿರಿಯ ಪತ್ನಿ ಮೀರಾಳಲ್ಲಿ ಒಂದು ಶಿಶುವನ್ನು ಕೊಟ್ಟನು.

ಅದುವರೆಗೆ ಸುಮುಖವಾಗಿ ಸಾಗಿದ್ದ ಅವರ ದಾಂಪತ್ಯ ಜೀವನ ವಿಮುಖವಾಯಿತು. ಕಿರಿಯ ಪತ್ನಿ ಲತಾಳಿಗೆ ಪತಿಯ ಅಪಾರ ಸಂಪತ್ತಿಗೆ ಇನ್ನೊಬ್ಬ ಪಾಲುದಾರನಾದನೆಂದು ಮನಸ್ಸು ಕಳವಳವಾಯಿತು. ಮಕ್ಕಳಿಬ್ಬರೂ ಪ್ರಾಯಪ್ರಬುದ್ಧರಾಗುವ ವರೆಗೆ ಬೂದಿ ಮುಚ್ಚಿದ ಕೆಂಡದಂತೆ ಇದ್ದುದರಲ್ಲಿ ಸುಮ್ಮನಿದ್ದಿತು ಅವರ ಮನೆ. ಮಕ್ಕಳು ಪ್ರಾಯ ಪ್ರಬುದ್ಧರಾದಾಗ ಉರಿ ಕೆಂಡವಾಯಿತು. ಲತಾ ಈ ತೊಡಕನ್ನು ಹೇಗಾದರೂ ಪರಿಹರಿಸಬೇಕೆಂದು ಸಂಕಲ್ಪತೊಟ್ಟಳು.

ದುಷ್ಯಂತ ರಾಯರ ಇಷ್ಟಪತ್ನಿ ಲತಾ ತವರೂರಿಗೆ ಹೋಗಿ ತನ್ನ ತಂದೆ ಪುಟ್ಟಪ್ಪನೊಡನೆ ಕೊರಗನ್ನು ತೋಡಿಕೊಂಡಳು. ಕುತ್ಸಿತ ಬದ್ಧಿಯ ಪುಟ್ಟಪ್ಪನವರು ಮಗಳಿಗೆ ದುರಾಲೋಚನೆಯನ್ನು ಹೇಳಿಕೊಟ್ಟರು.

"ಲತಾ, ನೀನು ಅಮಾವಾಸ್ಯೆ ಮುನ್ನಾದಿನ ಹೊಟ್ಟೆ ನೋವು ಎಂತ ಮಲಗಿಕೊ. ವೈದ್ಯರು ಔಷಧ ಕೊಟ್ಟರೂ ಗುಣವಾಗದಂತೆ ನಟಿಸು. ನನಗೆ ತವರು ಮನೆಯಲ್ಲಿರುವಾಗಲೂ ಇದೇ ರೀತಿ ಹೊಟ್ಟೆ ನೋವು ಬರುತ್ತಿತ್ತು. ಆಗ ಜೋಗಪುರದ ಉತ್ತರ ದಿಕ್ಕಿನ ನಾಗನ ಗುಡಿಯ ಹಿಂದೆ ಒಂದು ರೀತಿಯ ಮೂಲಿಕೆ ಸಿಕ್ಕುತ್ತಿತ್ತು. ಅದನ್ನು ಕಷಾಯ ಮಾಡಿ ಕುಡಿದರೆ ಗುಣವಾಗುತ್ತಿತ್ತು ಎಂತ ಹೇಳು. ಮತ್ತು ಹಾಗೇ ದಯಮಾಡಿ ನಿನ್ನ ಸವತಿಯ ಮಗ ಪ್ರಾಣೇಶನನ್ನು ಗುಡಿಯ ಹಿಂದೆ ಕಳುಹಿಸುವಂತೆ ಮಾಡು. ಅಲ್ಲಿಂದ ನಾನು ಅವನನ್ನು ಹಿಂದಕ್ಕೆ ಹೋಗದಂತೆ ಮಾಡುತ್ತೇನೆ" ಎಂದರು ಪುಟ್ಟಪ್ಪನವರು.

ತಂದೆಯ ಹಂಚಿಕೆ ತನ್ನ ಮನೋರಥ ಈಡೇರಿಸುತ್ತದೆ ಎಂಬ ಸಂತೋಷದಿಂದ ಲತಾ ಪತಿಯ ಮನೆಗೆ ಹಿಂತಿರುಗಿದಳು.

ಅಮಾವಾಸ್ಯೆ ಮುನ್ನಾದಿನ ಲತಾ ಹೊಟ್ಟೆ ನೋವು ಎಂದು ಮಲಗಿದಳು. ವೈದ್ಯರು ಬಂದು ಔಷಧೋಪಚಾರ ಮಾಡಿದರೂ ಹೊಟ್ಟೆ ನೋವು ಗುಣವಾಗಲಿಲ್ಲ.

ಮರುದಿನ (ಅಮಾವಾಸ್ಯೆ ದಿನ) ಲತಾ ಪತಿಯೊಡನೆ ಅಂದ ಹಾಗೆ ನೀವು ಇದಕ್ಕೆ ವೈದ್ಯರ ಔಷಧ ಮಾಡಿಸಿದರೆ ಗುಣವಾಗಲಿಕ್ಕಿಲ್ಲ. ನನಗೆ ತಾಯಿಮನೆಯಲ್ಲಿರುವಾಗಲೂ ಇದೇ ರೀತಿ ಹೊಟ್ಟೆನೋವು ಬರುತ್ತಿತ್ತು. ಆಗ ನಾಗನ ಗುಡಿಯ ಪರಿಸರದಲ್ಲಿರುವ ಮೂಲಿಕೆಯಿಂದ ಕಷಾಯ ಮಾಡಿ ಕುಡಿದರೆ ಗುಣವಾಗುತ್ತಿತ್ತು ಎಂದಳು.

ಆದೊ ಸೇವಕರನ್ನು ಕಳುಹಿಸಿ ಮೂಲಿಕೆಯನ್ನು ತರಿಸುತ್ತೇನೆ. ಗುರುತು ಹಾಕಿ ಕೊಡು.

"ಸೇವಕರು ಬೇಡ. ನಮ್ಮ ದಿನಕರನಿಗೆ ಅದರ ಗುರುತುಂಟು. ಅವನು ಮತ್ತು ಪ್ರಾಣೇಶರೂ ಹೋಗಿ ತರುತ್ತಾರೆ' ಎಂದಳು ಲತಾ.

ದಿನಕರ ಮತ್ತು ಪ್ರಾಣೇಶರನ್ನು ಕಳುಹಿಸುವುದೆಂತ ನಿಶ್ಚಯಿಸಿದರು ಪತಿ-ಪತ್ನಿಯರು.

ಲತಾ ತನ್ನ ಮಗ ದಿನಕರನನ್ನು ಅಂತರಂಗಕ್ಕೆ ಕರೆದು "ಮಗು ದಿನು, ನೀನು ಪ್ರಾಣೇಶನ ಸಂಗಡ ಅರ್ಧ ದಾರಿ ತನಕ ಹೋಗಿ ನನಗೆ ತಲೆ ಸುತ್ತುತ್ತದೆ ಎಂತ ವಾಪಾಸು ಬಾ. ನನಗೆ ನಿಜವಾಗಿ ಉದರ ಬೇನೆ ಇಲ್ಲ. ನಿನ್ನ ಶ್ರೇಯಸ್ಸಿಗೋಸ್ಕರ ಹೂಡಿದ ಹಂಚಿಕೆ ಇದು," ಎಂದಳು ಲತಾ.

ದಿನಕರನಿಗೆ ಇದೊಂದು ಅರ್ಥವಾಗಲಿಲ್ಲ.

'ಏನಮ್ಮ ಹಾಗೆಂದರೆ, ಇದರಲ್ಲಿ ನನ್ನ ಶ್ರೇಯಸ್ಸೆಂದರೇನು, ನೀನು ಹೂಡಿದ ಹಂಚಿಕೆ ಯಾವುದು?"

'ದಿನು, ಈಗ ನಿನ್ನ ತಂದೆಯ ಅಪಾರ ಸಂಪತ್ತಿಗೆ ಇನ್ನೊಬ್ಬ ಪಾಲುದಾರನಿರುವನು. ಮುಂದೆ ಅವನು ಇಲ್ಲದಂತೆ ಮಾಡುವುದೆ ನಮ್ಮ ಹಂಚಿಕೆ."

ಇದನ್ನು ಕೇಳಿದ ದಿನಕರನಿಗೆ ಸಿಡಿಲು ಬಡಿದಂತಾಗಿ 'ಏನಮ್ಮ ನಿನ್ನ ದುರಾಲೋಚನೆ? ಅವನು ನನ್ನಂತೆ ಅಪ್ಪನ ಮಗನಲ್ಲವೇ? ಮನುಷ್ಯನ ಆಸೆಗೆ ಮಿತಿಯಿರಬೇಡವೇ? ಸಂಪತ್ತಿಗಾಗಿ ಒಡಹುಟ್ಟಿದವನನ್ನು ಕೊಲೆಯುವುದೆಂದರೆ ಹೇಯ ಕಾರ್ಯವಲ್ಲವೆ? ಇಂಥ ಆತ್ಮದ್ರೋಹ ಕೆಲಸವನ್ನು ನಾನು ಮಾಡಲಾರೆ.

"ಮಗು ನಿನಗೆ ವ್ಯವಹಾರ ಜ್ಞಾನ ತಿಳಿಯದು. ಈ ಆರ್ಥಿಕ ಪ್ರಪಂಚದಲ್ಲಿ ಗುಣಕ್ಕಿಂತ ಹಣವೆ ಪ್ರಧಾನವಾದುದು. ಅದಕ್ಕಾಗಿ ನನ್ನ ಮಾತನ್ನು ಅಲ್ಲಗಳೆಯಬಾರದು."

"ಅಮ್ಮ, ಐಶ್ವರ್ಯವನ್ನಾದರೂ ತೊರೆದೇನು, ಮನೆಯನ್ನಾದರೂ ತೊರೆದೇನು ತಮ್ಮನನ್ನು ತೊರೆಯಲು ಸರ್ವಥಾ ಸಾಧ್ಯವಿಲ್ಲ.'

"ಮಗು, ಹೀಗೆ ಹಟ ಹೂಡಬಾರದು. ತಾಯಿಯಾದವಳು ಮಕ್ಕಳ ಭವಿಷ್ಯದ ಕಡೆಗೆ ದೃಷ್ಟಿಹರಿಸಬೇಕಾದುದು ಅವಶ್ಯ. ಅದು ಅಲ್ಲದೆ ನಾನು ಯುಕ್ತಾಯುಕ್ತ ವಿಚಾರ ಮಾಡಿಯೇ ಈ ತೀರ್ಮಾನಕ್ಕೆ ಬಂದಿದ್ದೇನೆ."

"ಅಮ್ಮ, ನೀನು ಏನು ಹೇಳಿದರೂ ಕೇಳಲಿಕ್ಕೆ ಸಿದ್ಧ. ಇದೊಂದು ವಿಚಾರದಲ್ಲಿ ಒಪ್ಪಲಿಕ್ಕಿಲ್ಲ."

"ದಿನ, ಈ ವಿಚಾರವನ್ನು ನೀನು ಅಲ್ಲಗೆಳೆದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ".

ತಾಯಿಯ ಮಾತಿಗೆ ದಿನು ಕೊನೆಗೆ ನಾಗಿ ಒಪ್ಪಿಕೊಂಡನು.

ದಿನಕರ ಮತ್ತು ಪ್ರಾಣೇಶರು ಮೂಲಿಕೆ ತರಲು ಹೊರಟರು. ಅರ್ಧ ದಾರಿಯಲ್ಲಿ ದಿನಕರನು ಪ್ರಾಣೇಶನಿಗೆ 'ಪ್ರಾಣೇಶ್ ನನಗೆ ಇಂದು ಏಕೋ ಬಹಳ ತಲೆಸುತ್ತುತ್ತದೆ, ಬಹಳ ಆಯಾಸ" ಎಂದನು.

"ಅದೇನಣ್ಣ ಆಯಾಸ? ಬಹುಶಃ ಬಿಸಿಲಿನ ತಾಪಕ್ಕೆ ಇರಬಹುದು. ನೀನು ಮನೆಗೆ ಹೋಗಿ ಮಲಗಿಕೊ. ನಾನು ರುಮ್ಮನೆ ಹೋಗಿ ತರುತ್ತೇನೆ'.

"ನಿನಗೆ ಇದರಿಂದ ತೊಂದರೆಯಾಗುವುದಿಲ್ಲವೆ ಪ್ರಾಣೇಶ್?"

"ನನ್ನ ತೊಂದರೆ ಹೆಚ್ಚೋ, ನಿನ್ನ ಆರೋಗ್ಯ ಹೆಚ್ಚೋ ನೀನು ಮನೆಗೆ ಹೋಗಿ ಮಲಗಿಕೊ. ನಾನು ನಾಗನ ವನಕ್ಕೆ ಹೋಗಿ ಬರುತ್ತೇನೆ" ಎಂದು ಹೊರಟನು ಪ್ರಾಣೇಶ್.

ಮಾರ್ಗದಲ್ಲಿ ಒಬ್ಬ ವೃದ್ಧ ಗೃಹಸ್ಥನು ಪ್ರಾಣೇಶನಿಗೆ ಎದುರಾದನು. ಆ ಗೃಹಸ್ಥನು ಪ್ರಾಣೇಶನನ್ನು ನೋಡಿ, "ತಮ್ಮಾ ನೀನಾರು ಎತ್ತ ಕಡೆ ಹೊರಟೆ?" ಎಂದು ಕೇಳಿದರು. 'ಏಕೆ ನಾನು ನಾಗನ ಗುಡಿಗೆ ಹೋಗುವವನು. ಏನಾದರೂ ಕೆಲಸವುಂಟೆ?"

'ಕೆಲಸದ ಬಗ್ಗೆ ಅಲ್ಲ, ಒಂದು ವಿಚಾರ ತಿಳಿಸಲು ಕೇಳಿದ್ದು."

"ಏನು ಅಂಥ ವಿಷಯ?"

"ವಿಷಯ ಏನೆಂದು ಹೇಳಲಿ? ಅದನ್ನು ನೀನು ನಂಬುತ್ತೀಯೋ ಇಲ್ಲವೊ, ನಂಬಿದರೆ ತಾಯಿಗೆ ಮಗನಾಗಿ ಉಳಿಯುತ್ತಿ. ಇಲ್ಲದಿದ್ದರೆ ನಿನ್ನ ಕೊನೆ ಇಂದೆ.'

"ಗೂಢಾರ್ಥ ನನಗೆ ಅರ್ಥವಾಗುತ್ತಿಲ್ಲ. ಸ್ವಲ್ಪ ಬಿಡಿಸಿ ಹೇಳಿ."

"ಗೂಢಾರ್ಥ ಇಷ್ಟೆ: ನಾನು ನಾಗನ ಗುಡಿಯ ಹಿಂದಿನಿಂದ ಬರುವಾಗ ಅವರು ಗುಡಿಗೆ ಬರುವ ನಿನ್ನ ವಿಷಯದಲ್ಲಿ ಈ ರೀತಿ ಮಾತಾಡುತ್ತಿದ್ದರು:

"ಏನು ರುಸ್ತುಂ ಸಾಹೇಬರೆ, ಇಷ್ಟು ಹೊತ್ತಾದರೂ ಬರಲಿಲ್ಲ?'

"ಇನ್ನೇನು ಬರುವ ಹೊತ್ತಾಯಿತು ಕೈಕಾನರೆ.

'ಆದಿರ್ಲಿ, ಲತಾಮ್ಮನವರ ತಂದೆಯವರು ಈ ಹುಡುಗನನ್ನು ಹತ ಮಾಡಲು ಏಕೆ ಹೇಳಿದರೊ?"

'ಅಷ್ಟೂ ತಿಳಿಯುವುದಿಲ್ಲವೊ ನಿನಗೆ? ಸಂಪತ್ತಿನ ಪ್ರೇಮ."

'ಅಲ್ಲ ಸಂಪತ್ತಿಗಾಗಿ ಕೈಹಿಡಿದ ಗಂಡನಿಗೆ ದ್ರೋಹ ಮಾಡುವುದೇ?"

'ಹಣದ ದಾಹ ಏನನ್ನು ಮಾಡಿಸುತ್ತದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಅದೆಲ್ಲ ನಮಗೇಕೆ? ಅವನನ್ನು ಇಹಲೋಕದಿಂದ ತೊಲಗಿಸಿದರೆ ಸರಿಯಲ್ಲ. ಬರುವ ಹೊತ್ತಾಯಿತು ನಾವು ಹೀಗೆ ಮಾತಾಡುತ್ತ ಕೂರುವುದು ಸರಿಯಲ್ಲ.'

ಇದನ್ನೆಲ್ಲಾ ಕೇಳಿ ಆ ನಿರ್ಭಾಗ್ಯನಾರಪ್ಪ ಎಂದು ಯೋಚಿಸಿಕೊಂಡು ಬರುತ್ತಾ ಇದ್ದೆ. ನಿನ್ನನ್ನು ನೋಡಿ ಸಂಶಯದಿಂದ ಎಲ್ಲಿಗೆ ಹೋಗುವವನೆಂದು ಕೇಳಿದ್ದು. ನಿಮ್ಮ ನೀನಾರೋ ನಾನಾರೊ? ಆದರೂ ನಾವು ಮನುಷ್ಯ ಧರ್ಮದಂತೆ ನಡೆಯಬೇಕಲ್ಲ? ನೀನು ಅರ್ಧಕ್ಕೆ ಹೋಗಬೇಡ.

(ಮುನ್ನೊಂದನೇ ಪುಟ ನೋಡಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526
1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೨೩
VOL. 48
No. 23

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೦—೨—೧೯೬೯

ಚುನಾವಣೆಗಳ ನಂತರ

ಉತ್ತರ ಭಾರತದ ನಾಲ್ಕು ರಾಜ್ಯಗಳಲ್ಲಾದ ಮಧ್ಯಾವಧಿ ಚುನಾವಣೆಗಳ ಪರಿಣಾಮ ಘೋಷಿತವಾಗಿದ್ದು, ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಂಗವು ಅತ್ಯಧಿಕ ಬಹುಮತವನ್ನು ಗಳಿಸಿ ಕಾಂಗ್ರೆಸ್ಸನ್ನು ನೆಲಸಮ ಮಾಡಿತು. ಉಳಿದ ಮೂರು ರಾಜ್ಯಗಳಲ್ಲಿ ಯಾರೂ ಬಹುಮತ ಪಡೆಯಲಿಲ್ಲ. ಪಂಜಾಬದಲ್ಲಿ ಅಕಾಲಿಗಳು ಹೆಚ್ಚು ಸ್ಥಾನ ಪಡೆದು ಜನಸಂಘ — ಮತ್ತಿತರರೊಡನೆ ಕೂಡಿ ಸಂಯುಕ್ತ ದಳೀಯ ಸರಕಾರ ರಚಿಸಿಕೊಂಡರು—ಮಾಜಿ ಮುಖ್ಯಮಂತ್ರಿ ಗುರ್ನಾಮ ಸಿಂಗರು ಮತ್ತೊಮ್ಮೆ ಮುಖ್ಯಮಂತ್ರಿಯಾದರು. ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಪಕ್ಷವು ಅತಿ ಹೆಚ್ಚು ಸ್ಥಾನ ಪಡೆದುದರಿಂದ, ಸಂಯುಕ್ತ ರಂಗೀಯ ಸರಕಾರದಲ್ಲಿ ಮುಖ್ಯಮಂತ್ರಿ ಪದ ತನಗೇ ಸಿಗಬೇಕೆಂದು ವಾದಕ್ಕಿಳಿಯಿತು. ಕಮ್ಯುನಿಸ್ಟರೊಂದಿಗೆ ಗಂಟುತನ ಮಾಡಿದ ಪಕ್ಷಗಳು ಅವರ ಹೃದಯಾಂತರಾಳವನ್ನು ಈ ವಾದದಿಂದಲೇ ಅರಿತುಕೊಳ್ಳಬಹುದು. 'ಬರಿಯ ಕಾಂಗ್ರೆಸ್ ವಿರೋಧ'ವೆಂಬ ಸೂತ್ರವೊಂದರಿಂದ ಬಂಧಿತವಾಗಿ ಆಂತರಿಕ-ಬಾಹ್ಯ ನೀತಿ-ನಡಾವಳಿಯೊಂದೂ ಇರದ ಕಾಮನಬಿಲ್ಲಿನ ಪಕ್ಷಗಳಲ್ಲಿ ಭಾರಿ ದಿಗ್ವಿಜಯಾನಂತರ ಬಂಧನ ಶಿಥಿಲವಾಗುತ್ತಲೇ ಬರುತ್ತಿದೆ. ಒಮ್ಮೆಗೇ ಇದರಿಂದ ಅನಾಹುತ ನಡೆಯದೆ ಹೋದರೂ ಅಧಿಕಾರದಾಹವೆಂಬುದು ಕಾಂಗ್ರೆಸ್ಸಿಗೆ ಮಾತ್ರ ಮೀಸಲಲ್ಲವಾದ್ದರಿಂದ ಅಲ್ಲಿಯೂ ಭಿನ್ನಗಳು ಮೂಡುವ ಸಂಭವವೇ ಹೆಚ್ಚು.

ಬಿಹಾರ ಮತ್ತು ಉತ್ತರ ಪ್ರದೇಶಗಳ ಸ್ಥಿತಿ ವಾತಾವರಣ ಬೇರೆಯೇ. ಇವೆರಡರಲ್ಲಿಯೂ ಕಾಂಗ್ರೆಸ್ಸು ತನ್ನ ಸ್ಥಿತಿಯನ್ನು ಒಟ್ಟಿನಲ್ಲಿ ಸುಧಾರಿಸಿಕೊಂಡಂತೆ ಭಾಸವಾದರೂ ಅದು ಅಧಿಕ ಸ್ಥಾನಗಳಿಸಿದ ಪಕ್ಷವಾಗಿ ಮಾತ್ರ ಆಯ್ಕೆಯಾಯ್ತು. ಬಿಹಾರದಲ್ಲಿ ಸಮಾನ ಧ್ಯೇಯವುಳ್ಳ ಇತರ ಪಕ್ಷಗಳೊಂದಿಗೆ ಕೂಡಿ ಸಂಮಿಶ್ರ ಸರಕಾರ ರಚಿಸುವ ಸಾಧ್ಯಾಸಾಧ್ಯತೆಗಳು ಮಥಿತವಾಗ ತೊಡಗಿವೆ. ಜನಸಂಘ, ಎಸ್ಸೆಸ್ಪಿಗಳು ಬೆಂಬಲ ನೀಡುವುದೆಂದೂ ಕೇಳಿಬರುತ್ತಿದೆ. ಆದರೆ, ಈ ಸಮ್ಮಿಶ್ರ ಸರಕಾರವು ಹೇಗೆ ಕಾರ್ಯವೆಸಗೀತು ಎಂಬುದರ ಬಗ್ಗೆ ಸಂದೇಹವೇ. ಏಕೆಂದರೆ, ಕಾಂಗ್ರೆಸಿಗೂ ಜನಸಂಘಕ್ಕೂ, ಕಾಂಗ್ರೆಸಿಗೂ ಎಸ್ಸೆಸ್ಪಿಗೂ ಕೆಲವು ಮೂಲಭೂತ ಭಿನ್ನಮತಗಳಿವೆ. ಉತ್ತರ ಪ್ರದೇಶದಲ್ಲಿ ಬಹುಮತಗಳಿಸಲು ೫ ಸ್ಥಾನಗಳು ಕಾಂಗ್ರೆಸ್ಸಿಗೆ ಬೇಕು. ಮಧ್ಯಪ್ರದೇಶದ ೫ ಸ್ಥಾನಗಳಿಗೆ ಇಷ್ಟರಲ್ಲಿಯೇ ಚುನಾವಣೆಗಳು ನಡೆಯಲಿದ್ದು ಒಂದೆರಡು ದಿನಗಳಲ್ಲಿ ಇವು ಯಾರ ಪಾಲಿಗೆಂದು ಗೊತ್ತಾಗುತ್ತದೆ. ಈ ಐದೂ ಸ್ಥಾನಗಳನ್ನು ಹಿಂದಿನ ಸಲದಂತೆ ಕಾಂಗ್ರೆಸ್ಸೇ ಪಡೆದರೂ ಭದ್ರ ಬಹುಮತಕ್ಕಾಗಿ ಮತ್ತೊಂದೆರಡರ ಬಲ ಬೇಕಾಗಬಹುದು. ಈ ಬಾರಿ ಪ್ರಜಾ ತಾಂತ್ರಿಕ ಪಕ್ಷಗಳೊಡನೆ ಕೂಡಿ ಸರಕಾರ ರಚಿಸಲು ಕಾಂಗ್ರೆಸ್ಸು ಮುಂದೆ ಬಂದದ್ದು ಸ್ವಾಗತಾರ್ಹವೇ. ಇದೇ ನೀತಿಯನ್ನು ಎರಡು ವರ್ಷಗಳಿಗೆ ಮೊದಲೂ ಕಾಂಗ್ರೆಸ್ಸು ಅನುಸರಿಸಿದ್ದರೆ? ಪ್ರಾಯಃ ಆಗ ಇತರ ಪಕ್ಷಗಳು ಕಾಂಗ್ರೆಸ್ಸಿಗೆ ಬೆಂಬಲ ನೀಡುವುದಕ್ಕೆ ಸಿದ್ಧರಿರಲಿಲ್ಲ.

ಮಧ್ಯಾವಧಿ ಚುನಾವಣೆಗಳಲ್ಲಿ ಎಲ್ಲರ ಲೆಕ್ಕಾಚಾರ ತಲೆಕೆಳಗಾಯ್ತು. ಕಾಂಗ್ರೆಸ್ಸು ತಾನು ನಿರೀಕ್ಷಿಸಿದ ಜಯ ಗಳಿಸಲಿಲ್ಲ. ಬಿಕೆಡಿ, ಜನಸಂಘ ಎಸ್ಸೆಸ್ಪಿಗಳೂ ಪಡೆಯಲಿಲ್ಲ ಉಳಿದ ಪಕ್ಷಗಳೂ ಇದಕ್ಕೆ ಹೊರತಲ್ಲ. ಅಂದರೆ ಎಲ್ಲರೂ ಕನಸಿನಲ್ಲಿಯೇ ಮಂಡಿಗೆ ತಿನ್ನುತಿದ್ದರು. ಆದರೆ, ಬಂಗಾಳದಲ್ಲಿ ಮಾತ್ರ ಹೀಗಾಗಲಿಲ್ಲ. ಅಲ್ಲಿ ಕಾಂಗ್ರೆಸ್ಸು ತಿಂದ ಪೆಟ್ಟಿನಿಂದ ಮತ್ತೆ ಚೇತರಿಸಬೇಕಾದರೆ, ಕಾಯಕಲ್ಪ ಚಿಕಿತ್ಸೆಯಾಗಲೇ ಬೇಕು. ಕಾಂಗ್ರೆಸ್ ಚುನಾವಣಾ ಸಭೆಗಳಲ್ಲಿ ವರಿಷ್ಠರೆಲ್ಲರೂ ಭಾಗ ವಹಿಸಿದ್ದರು. ಕಾಂಗ್ರೆಸ್ಸಿನ ಗತ ವೈಭವವನ್ನೂ ೨೧ ವರ್ಷಗಳ ಅಮೋಘ ರಾಜ್ಯಭಾರದ ಇತಿಹಾಸವನ್ನೂ 'ಕಾವ್ಯಕತೆ' ರೂಪವಾಗಿ ಬಣ್ಣಿಸಿದರು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟುದು ಕಾಂಗ್ರೆಸ್ಸೆಂದು ತಿಳಿಯದವರಿಗೆ ತಿಳಿಸಿಕೊಟ್ಟರು. ಗಾಂಧಿಯವರ ಹೆಸರೆತ್ತಿದರು; ಯಾರು ಏನೇ ಹೇಳಿದರೂ ಜನ ಮರುಳಾಗಲಿಲ್ಲ. ಕಾಂಗ್ರೆಸ್ಸು ಸ್ವಾತಂತ್ರ್ಯಕ್ಕಾಗಿ ಹೋರಾಡಿತೆಂದು ಭಾರತೀಯರೆಲ್ಲರೂ ಕಾಂಗ್ರೆಸ್ಸಿಗರಾಗುವುದು ಹೇಗೆ ಸಾಧ್ಯ? ೨೧ ವರ್ಷಗಳ ಕಾಲ ಕಾಂಗ್ರೆಸಿಗೆ ಜನತೆ ಅವಕಾಶ ನೀಡಿತು; ನಾಲ್ಕನೆಯ ಚುನಾವಣೆಗಳಲ್ಲಿ ಅದನ್ನು ತಿರಸ್ಕರಿಸಿತು; ಸಂಯುಕ್ತದಳೀಯ ಸರಕಾರಗಳು ಉತ್ತಮ ಕೆಲಸ ಮಾಡಿವೆಯೆಂದಲ್ಲ, ಬೆಕ್ಕಿನ ತಲೆಯ ದೀಪದಂತೆ ಇರದೆ ಬಲವಾಗಿ ಉಳಿಯುವ ಅವಕಾಶ ನೀಡಿ ನೋಡುವ ಬಯಕೆ ಜನತೆಗಾಯಿತು. ಈ ಬಾರಿ ಸಂಯುಕ್ತರಂಗಗಳು ಆಳುವುದಾದರೆ, ಅಲ್ಪ ಮತಕ್ಕಾಗಿಯಲ್ಲ; ತಮ್ಮ ಭಿನ್ನ ಮತಕ್ಕಾಗಿ. ಆದುದರಿಂದ ಅವಕ್ಕೆ ಉತ್ತಮ ಆಡಳಿತೆ ನಡೆಸಲು ಒಂದು ಸುವರ್ಣಾವಕಾಶ ದೊರೆಯಿತು. ಇದನ್ನು ಅಂತಃಕಲಹದಿಂದ, ಸ್ವಪಕ್ಷ ಹಿತ ಸಾಧನೆಯಿಂದ ದುರುಪಯೋಗ ಪಡಿಸಿದರೆ, ಜನ ಮುಂದಿನ ಬಾರಿ ಸುಮ್ಮನುಳಿಯದು.

ಹಿಂದೆ ಕಾಂಗ್ರೆಸಿನವರಿಗೆ ಮಾತ್ರ ಮೀಸಲಾಗಿದ್ದ ಅಧಿಕಾರ ಮೋಹ—ದಾಹವೀಗ ಇತರರಿಗೂ ಅಂಟಿಕೊಂಡಿದೆ. ಮಧ್ಯ ಪ್ರದೇಶದ ನಾಟಕೀಯ ರಾಜ್ಯಭಾರವೇ ಇದಕ್ಕೊಂದು ಒಳ್ಳೆಯ ಉದಾಹರಣೆ. ಸೇವೆಯ ಹೆಸರಿನಲ್ಲಿ ಸ್ವಾರ್ಥಸಾಧನೆ ಮಾಡುವ ಕುತಂತ್ರಿಗಳಿಂದಲೇ ರಾಜಕೀಯ ಪಕ್ಷಗಳು ತುಂಬಿವೆಯೆಂಬುದು ಜಗಜ್ಜಾಹಿತ. ಯಾವ ಪಕ್ಷವೂ ತನ್ನ ಚರಿತ್ರ ಪರಿಶುದ್ಧವಾಗಿದೆಯೆಂದು ಎದೆತಟ್ಟಿ ಹೇಳುವಂತಹ ಸ್ಥಿತಿ ಇಂದಿಲ್ಲ. ಎಲ್ಲೆಲ್ಲೂ ಭ್ರಷ್ಟಾಚಾರದ ತಾಂಡವ ನೃತ್ಯ ನಡೆದಿರುವಾಗ ಇದೇನೂ ವಿಸ್ಮಯಕಾರಕವಲ್ಲ; ಆದರೆ, ಇದು ಹೀಗೇ ನಡೆದರೆ ನಾವು ನಾಗರಿಕತೆಯಿಂದ ದೂರ ಸರಿಯುತ್ತಿದ್ದೇವೆಯೆಂದೇ ಅರ್ಥ. ಜನ ಜಾಗ್ರತವಾಗಬೇಕು; ಶಾಸಕರನ್ನೂ ಪ್ರಶಾಸನವನ್ನೂ ಸರಿ ದಾರಿಗೆ ತರಬೇಕು.

ತ್ರಿಶಂಕು ಸ್ವರ್ಗ

ಮೈಸೂರು ವಿದ್ಯಾಲಯವು ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಂಡು ಪಿಯುಸಿ ಮತ್ತು ಪದವಿಯ ಮೊದಲ ವರ್ಷದಲ್ಲಿ ಅಧ್ಯಯನ ಮಾಡುವ ಅವಕಾಶವನ್ನು ಮಾಡಿ ಕೊಟ್ಟಿದೆ; ಇದುವರೆಗೆ ಅನಿವಾರ್ಯ ವಿಷಯವಾಗಿದ್ದ ಇಂಗ್ಲಿಷ್ ಇನ್ನು ಮುಂದೆ ಐಚ್ಛಿಕವಾಗುವುದು. ವಿದೇಶೀ ಭಾಷೆಗಳ ಸಾಲಿನಲ್ಲಿ ಇದು ನಿಲ್ಲುವುದು. ಇಂಗ್ಲಿಷ್ ಭಾಷೆಯನ್ನು ಸಂಪೂರ್ಣವಾಗಿ ತ್ಯಜಿಸಬಾರದು; ಅಂತಾರಾಷ್ಟ್ರೀಯ ಸಂಪರ್ಕ ಭಾಷೆಯಾದ ಇದರ ಅಧ್ಯಯನ ಬೇಕೇಬೇಕು; ಆದರೆ ಇದಕ್ಕೆ ನೀಡುತಿದ್ದ ಅಗ್ರ ಪ್ರಾಶಸ್ತ್ಯ ಮಾತ್ರ ಪ್ರಾದೇಶಿಕ ಭಾಷೆಗಳಿಗೆ ನೀಡಬೇಕು ಎಂಬ ಅಭಿಪ್ರಾಯಕ್ಕೆ ಇಲ್ಲಿ ಮನ್ನಣೆಯಿಲ್ಲ. ಜತೆಗೆ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ಪಡೆಯ ಬಯಸುವವರೂ ಸ್ನಾತಕೋತ್ತರ ಶಿಕ್ಷಣಾಕಾಂಕ್ಷಿಗಳೂ ಇಂಗ್ಲಿಷ್ ಭಾಷೆಯನ್ನು ಪಿ.ಯು.ಸಿ. ಯಲ್ಲಿ ಅಧ್ಯಯನ ಮಾಡಲೇ ಬೇಕು. ಅಥವಾ ಇಂಗ್ಲಿಷಿನಲ್ಲಿ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕು ಎಂದು ನಿಯಮ ಮಾಡಿದೆ. ಅಂದರೆ, ಇವುಗಳಲ್ಲಿ ಶಿಕ್ಷಣ ಮಾಧ್ಯಮವನ್ನು ಪ್ರಾದೇಶಿಕ ಭಾಷೆಗೆ ಪರಿವರ್ತಿಸಲು ಇನ್ನೂ ಹಲ ಕಾಲ ಬೇಕೆಂದಾಯಿತು. ಆಗ ವಿದ್ಯಾರ್ಥಿಯು ತನ್ನ ಭವಿಷ್ಯವನ್ನು ಪಿಯುಸಿ ತರಗತಿ ಸೇರುವಾಗಲೇ ಪೂರ್ಣವಾಗಿ ನಿರ್ಧರಿಸಬೇಕಾಗುತ್ತದೆ. ಏಕೆಂದರೆ, [illegible] ಪಡೆಯುವ ಅವಕಾಶ ಎಲ್ಲ ವಿದ್ಯಾರ್ಥಿಗಳಿಗೂ ಸಿಗುವುದಿಲ್ಲ. ಇದರಿಂದ ಪ್ರಾದೇಶಿಕ ಭಾಷೆಗೆ ಸಾರ್ವತ್ರಿಕ ಪ್ರಾಶಸ್ತ್ಯವೂ ದೊರೆದಂತಾಗಲಿಲ್ಲ; ಇಂಗ್ಲಿಷ್ ಭಾಷೆಯ ಸ್ಥಾನಮಾನವೂ ಉಳಿದಂತಾಗಲಿಲ್ಲ. ಇಂದಿನ ಸರಕಾರದ ನಿಯಮಗಳನ್ನೇ ಹೋಲುವ ಇನ್ನೊಂದು ಬದಲಾವಣೆಯಿದು.

ಲೋಕಸೇವಾ ಬಾಲವಾಡಿಯ ಉದ್ಘಾಟನೆ

ಅಳಿಕೆ, ಫೆ. 7—ಅಳಿಕೆಯ ಲೋಕಸೇವಾ ಹೈಯರ್ ಪ್ರೈಮರಿ ಶಾಲೆಯಲ್ಲಿ ಮಹಿಳಾ ಮಂಡಲದ ವತಿಯಿಂದ "ಲೋಕಸೇವಾ ಬಾಲವಾಡಿ"ಯು ಶ್ರೀ ಯಂ. ಆರ್. ಮಜುಂದಾರ್, ಪ್ರಿನ್ಸಿಪಲ್ ಮುನ್ಸಿಫ್, ಪುತ್ತೂರು, ಇವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ವಿ. ದೇಜಪ್ಪ ನಾಯಕರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಮಹಿಳಾ ಮಂಡಲದ ಅಧ್ಯಕ್ಷೆಯವರು ಸ್ವಾಗತ ಭಾಷಣ ಮಾಡಿದರು. ನಂತರ ಪರಿಚಯ ಭಾಷಣ, ವರದಿ ವಾಚನ, ಸಂದೇಶ ವಾಚನಗಳಾದವು. ಉದ್ಘಾಟಕರು ತಮ್ಮ ಭಾಷಣದಲ್ಲಿ ಶಿಕ್ಷಣದಲ್ಲಿ ಬಾಲವಾಡಿಯ ಮಹತ್ವವನ್ನು ವಿವರಿಸಿದರು. ಲೋಕಸೇವಾ ವೃಂದದ ಅಧ್ಯಕ್ಷರಿಂದ ಉಪನ್ಯಾಸವಾದ ಬಳಿಕ ಹಿತಚಿಂತಕರ ನೆಲೆಯಲ್ಲಿ ಮುಖ್ಯ ಸೇವಿಕೆಯರಾದ ಶ್ರೀಮತಿ ಪದ್ಮಾವತಿ ಗ್ರಾಮಸೇವಿಕೆ ಶ್ರೀಮತಿ ದೇವಮ್ಮ ಮತ್ತು ಶ್ರೀ ವೆಂಕಟ್ರಮಣ ಆಚಾರ್ ಇವರೂ ಮಹಿಳಾ ಮಂಡಲದ ವತಿಯಿಂದ ಶ್ರೀಮತಿ ಯು. ಸರಸ್ವತಿಯವರೂ ಭಾಷಣಗೈದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜಸೇವೆಯ ವಿಷಯವಾಗಿ ಮಾತನಾಡುತ್ತಾ ಬಾಲವಾಡಿಗೆ ಶುಭವನ್ನು ಕೋರಿದರು.

ಚಂದಾದಾರರಲ್ಲಿ ವಿನಂತಿ

"ನವಯುಗ"ದ ಚಂದಾ ಬಾಕಿ ಇರುವವರು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಅಂತೂ ಈ ತಿಂಗಳಾಂತ್ಯದೊಳಗೆ ಹಣ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಅದನ್ನಾದರೂ ದಯಮಾಡಿ ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್

ನರಸಣ್ಣನ ಸರಸ



"ಪಶ್ಚಿಮ ಬಂಗಾಳದ ರಾಜ್ಯಪಾಲ ಧರ್ಮವೀರರು ಮುಖ್ಯಮಂತ್ರಿಗಳಾಗಿ ಕೇಂದ್ರವನ್ನು ಪ್ರಾರ್ಥಿಸಿದ್ದಾರಂತೆ!"

ಮಾನವ ಜೀವನದ ಸ್ವಾರಸ್ಯಗಳು

ಹೇಗೆ ಬದುಕ ಬೇಕು?

ಲೇಖಕರು: ಶ್ರೀ ವಂಜಿಬೈಲು ಭಾಸ್ಕರ ಭಂಡಾರಿ

ಬದುಕು ಅಥವಾ ಬಾಳು ಇಲ್ಲವೇ ಜೀವನ—ಜಗತ್ತಿನ ಜೀವರಾಶಿಗಳೆಲ್ಲವುಗಳ ಗುರಿ! ಡಾರ್ವಿನನ ವಿಕಾಸವಾದವನ್ನು ಎತ್ತಿ ನೋಡಿದರೂ ಜೀವನದ ಹೋರಾಟ ಇತಿಹಾಸ ಪುರಾಣಗಳಲ್ಲಿಯೂ ಅದರ ಜಂಜಾಟ, ಇರುವುದನ್ನು ನಾವು ಕಾಣುತ್ತೇವೆ. ಪ್ರತಿಯೊಂದು ಜೀವಿಯೂ ತಾನು ಸುಖವಾಗಿ ಸ್ವತಂತ್ರವಾಗಿ ಜೀವಿಸಲು ಬಯಸುತ್ತದೆ. ಈ ಜೀವನಾಕಾಂಕ್ಷೆಯೇ ಬದುಕಿನ ಹೋರಾಟಕ್ಕೆ ಕಾರಣವಾಗುತ್ತದೆ. ಬುದ್ಧಿ ಜೀವಿಯಾದ ಮಾನವನ ಮಟ್ಟಿಗಂತೂ ಈ ಹೋರಾಟ ಅತ್ಯಂತ ಸ್ವಾರ್ಥಾತ್ಮಕವಾಗಿರುತ್ತದೆ. ಸಮಾಜದಲ್ಲಿ ತಾನು ತನ್ನ ಸುತ್ತಲಿರುವ ಇತರ ವ್ಯಕ್ತಿಗಳಿಂದ ಉನ್ನತ ಮಟ್ಟದಲ್ಲಿ ಜೀವನ ಸಾಗಿಸಬೇಕು ಎಂಬ ಅವನ ಆಕಾಂಕ್ಷೆಯು ಕೆಲವೊಮ್ಮೆ ಅತನಲ್ಲಿ ಹುಟ್ಟಿನ ಕ್ರಿಯಾಶಕ್ತಿಗೂ ಕಾರ್ಯ ಸಾಧನೆಯ ಫಲಕ್ಕೂ ಕಾರಣ. ಒಮ್ಮೊಮ್ಮೆ ಅದು ಅತೀವಾಗಿ ಸ್ವಾರ್ಥದ ಸ್ವರೂಪ ತಾಳುವುದಿದೆ. ಆದ ಬಗನಲ್ಲಿ—"ತನ್ನಂತೆಯೇ ಇತರರೂ ಜೀವನದ ಹೋರಾಟದಲ್ಲಿ ತೊಡಗಿದ್ದಾರೆ, ಅವರಲ್ಲಿಯೂ ಮಾನವ ಸಹಜವಾದ ಆಶೆ ಆಕಾಂಕ್ಷೆಗಳೋ, ಚೈತನ್ಯ ಸ್ಫೂರ್ತಿಗಳೋ, ದೌರ್ಬಲ್ಯ ಪ್ರವೃತ್ತಿಗಳೋ ಇರುವುದು ಸಹಜ; ಅವರಿಗೂ ತನ್ನಂತೆಯೇ ಸುಖವಾಗಿ ಸ್ವತಂತ್ರವಾಗಿ ಜೀವಿಸಲು ಎಡೆ ಕೊಡಬೇಕು!" ಎಂಬ ಭಾವನೆ ಹುಟ್ಟುವುದಿಲ್ಲ. ಹುಟ್ಟಿದರೂ 'ತಾನು' 'ತನ್ನದು' ಎಂಬ ಸ್ವಾರ್ಥ ಪ್ರಪಂಚದಲ್ಲಿ ಅದು ಲೀನವಾಗಿ ಹೋಗಿ, ಕಡೆಗೆ ಇನ್ನೊಬ್ಬನ ಜೀವನದ ಸುಗಮತೆಗೆ ಹೇರಿ ಅಡ್ಡಗಾಲು ಹಾಕುವಾ ಎಂಬ ಚಿಂತನೆಗೂ ಒಮ್ಮೊಮ್ಮೆ ಅಂತಹ ವ್ಯಕ್ತಿಗಳ ಮನಸ್ಸು ಅಣಿಯಾಗುತ್ತದೆ. ಇಂತಹ ಜನರು ತಮ್ಮನ್ನು ತಾವು ತಿದ್ದಿಕೊಂಡು ಮುನ್ನಡೆಯುವುದಕ್ಕಂತಲೂ ಹೆಚ್ಚಾಗಿ ಪರರ ಜೀವನದ ಕಡೆಗೆ ಬೆರಳೆತ್ತಿ ತೋರಿಸಿ ಅವರ ಹುಳುಕುಗಳನ್ನೋ ಕೊರತೆಗಳನ್ನೋ ದುರ್ಬಲತೆಗಳನ್ನೋ ಬಣ್ಣಹಚ್ಚಿ ಹೇಳುವುದರಲ್ಲೇ ಆನಂದಪಡುತ್ತಾರೆ. ಸಾಧಕರಾಗಿ ಸಾರ್ಥಕ ಜೀವನ ನಡೆಸುವ ಬದಲು ಬಾಧಕರಾಗಿ ಪೈಶಾಚಿಕ ಸ್ವಾದವನ್ನು ಪಡೆಯಲು ಹಾತೊರೆಯುತ್ತಾರೆ ಇಲ್ಲಿ. ಅವರ ದೋಷವೆ ಹಾಗಿದ್ದರೂ ಪ್ರಯೋಜನಕಾರಿಯಾಗಿದ್ದು ಕೇಳುವವರಲ್ಲಿ ಅನೇಕರು ತಮ್ಮನ್ನು ತಿದ್ದಿಕೊಳ್ಳಲು ಎಡೆಯಾಗಬಹುದು. ಬದಲಾಗಿ ಅನರ್ಥಕಾರಿಯಾಗಿದ್ದು ಬುದ್ಧಿ ಜೀವಿಗಳಿಗೆ ತಲೆಬಿಸಿ ತಂದೊಡ್ಡದರೆ?

ಇಂದಿನ ಕಾಲದಲ್ಲಿ ವಿಚಾರಶೀಲನಾಗಿ ಹುಟ್ಟಿದರಂತೂ ಅವನ ಧರ್ಮಸಂಕಟ ಹೇಳ ಬೇಡಿ. ಯಾವ ಕ್ಷೇತ್ರದಲ್ಲಿ ಕಾಲಿಟ್ಟರೂ ಈ ಬೋಧನ ಮಹಾಶಯರ ದೆಸೆಯಿಂದ ಉಭಯ ಸಂಕಟಕ್ಕೀಡಾಗಬೇಕಾಗುತ್ತದೆ. ರಾಜಕೀಯ, ಸಾಮಾಜಿಕ, ಸಾಹಿತ್ಯ, ಧಾರ್ಮಿಕ, ವೈಜ್ಞಾನಿಕ ಅಥವಾ ವೈಯಕ್ತಿಕ ಯಾವ ವಿಚಾರಗಳಿದ್ದರೂ ಅದಕ್ಕೆ ಅವರ ವಿಮರ್ಶೆ ಟೀಕೆ ಟಿಪ್ಪಣಿಗಳು ಇದ್ದೇ ಇರುತ್ತದೆ. ನೀವು ಯಾವ ರೀತಿಯಲ್ಲೇ ನಡೆಯಿರಿ—ಅದರಲ್ಲಿ ಅವರೊಂದು ತಪ್ಪು ಹುಡುಕಿಯೇ ಹುಡುಕುತ್ತಾರೆ! ಉದಾಹರಣೆಗಾಗಿ ನಿಮ್ಮ ಮನೆಯ ಮುಂದೆ ಕುಡುಕನೊಬ್ಬನು ಅನರ್ಥ ಪ್ರಸಂಗಗಳನ್ನು ನಡೆಸುತ್ತಿರುತ್ತಾನೆ ಎಂದಿಟ್ಟುಕೊಳ್ಳೋಣ! ಆಗ ವಿಚಾರಶೀಲರಾದ ನೀವು "ಅವನಂತೂ ಕುಡುಕ; ಅವನಲ್ಲಿ ವಾದವೇನು?" ಎಂದು ಸುಮ್ಮನಿದ್ದಾಗ ನಿಮ್ಮ ಗೆಳೆಯರಲ್ಲಿ ಸದ್ಗೃಹಸ್ಥ ಮಹಾಶಯನ ಅವತಾರವೆನಿಸಿಕೊಂಡವನೊಬ್ಬ ಮುಂದೆ ಬಂದು—

"ಏನು ಸ್ವಾಮೀ! ನಿಮ್ಮ ಮನೆಯಲ್ಲಿ ಯಾರೂ ಜೀವದಿಂದಿಲ್ಲವೇ?" ಎಂದು ನೇರಾಗಿ ಪ್ರಶ್ನಿಸಿಯೇ ಬಿಡುತ್ತಾನೆ.

"ಏಕಪ್ಪಾ? ಏನಾಯ್ತು!"

ಎಂದು ನೀವು ಪ್ರಶ್ನಿಸಿದರೆ—"ಅಲ್ಲ.... ಹೀಗೆ ಮಿತಿಯಿಲ್ಲದೆ ಕುಡಿದು ಮನೆಯ ಮುಂದೆ ಹಾವಳಿಯೆಬ್ಬಿಸುವಾಗಲೂ ನೀವು ಸುಮ್ಮನಿರುವುದೇ?" ಎಂದು ಹುಬ್ಬು ಗಂಟಿಕ್ಕುವನಾತ. ಹಾಗೆಂದು ನೀವು ಆ ಕುಡುಕನಿಗೆ ಎರಡು ಬಾರಿಸಿದಾಗ ಅವನು ಗದ್ದಲವೆಬ್ಬಿಸಿದ್ದರೆ—ಅಥವಾ ಪೋಲೀಸರಿಗೊಪ್ಪಿಸಿ ಅವರಿಂದ ಎರಡು ಛಡಿ ಕೊಡಿಸಿದಾಗ—ಮರುದಿನ ಅವನು ಬಂದು ಈ ಮಹಾಶಯನ ಮುಂದೆ ದೈನ್ಯತೆಯನ್ನು ಪ್ರಕಟಿಸಿದ್ದರೆ— ಅದೇ ಸದ್ಗೃಹಸ್ಥನು—

"ಅಲ್ಲ ರಾಯರೇ...."

"ಏನ್ರಿ ರಾಯರೇ?"

"ಅತನಿಗೆ ಕುಡಿದು ಹುಚ್ಚಿದ್ದರೆ ನಿಮಗೆ ಕುಡಿಯದೆಯೇ ತಲೆ ಕೆಟ್ಟಿದೆಯೋ?"

"ಏಕೆ?"

"ಅಲ್ಲ, ಕುಡಿಕರೊಡನೆ ಜಗಳಾಡುವವರೆಂದೇ ಬೇರೆ ಏನು ಹೆಸರು ಕೊಡಬೇಕು ಹೇಳಿ!" ಎಂದು ನಿಮ್ಮನ್ನು ಟೀಕಿಸಿ ಬಿಡುತ್ತಾನೆ. ಆಗ ನೀವು ಸ್ವಲ್ಪ ವಿಚಾರವಂತರಾದರೆ ನಿಮಗೆ ಉಭಯಸಂಕಟಕ್ಕಿಟ್ಟುಕೊಳ್ಳುವುದು ಸ್ವಾಭಾವಿಕ.

"ಛೆ! ಹಾಗೆ ಮಾಡಿದರೂ ತಪ್ಪು, ಹೀಗೆ ಮಾಡಿದರು ತಪ್ಪು ಮತ್ತೆ ಹೇಗೆ ಮಾಡಬೇಕು?"

ನಿಮ್ಮನ್ನು ಇಂತಹ ಮಾನಸಿಕ ತುಮುಲಕ್ಕೀಡು ಮಾಡುವ ಸಂದರ್ಭಗಳು ಜೀವನದಲ್ಲಿ ಸಾವಿರಾರು! ಇದೊಂದು ಉದಾಹರಣೆ ಮಾತ್ರ. ಬಾಲ್ಯದಿಂದ ಹಿಡಿದು ಕೊನೆಯುಸಿರಿನ ತನಕ ಈ ರೀತಿಯ ಘಟನೆಗಳು ನಡೆಯುತ್ತಿರುತ್ತವೆ. ಬಾಲ್ಯದ ತುಂಟತನಗಳು, ವಿದ್ಯಾರ್ಥಿ ಜೀವನದ ಆಟಪಾಠಗಳು ಮತ್ತು ಆಪ್ತರೊಳ ಸಮವ್ಯಯ, ತರುಣ ತರುಣಿಯರಾದಾಗ ಪ್ರೇಮ ಮತ್ತು ಸ್ನೇಹಗಳ ಅಂತರ, ಗೆಳೆಯರೊಡನೆ ಅಥವಾ, ತನ್ನ ಇತರ ಸಹಜೀವಿಗಳೊಡನೆ ಬಾಳ್ವೆ ಯಾವುದೋ ಸಂಘ ಸಂಸ್ಥೆಯಲ್ಲಿ ಅಥವಾ ರಾಜಕೀಯದಲ್ಲಿ ಒಂದು ಸ್ಥಾನ ಅಥವಾ ಪದವಿಯ ಸ್ವೀಕಾರ, ಮಕ್ಕಳ ವಿದ್ಯಾಭ್ಯಾಸ, ಮದುವೆ ಮುಂತಾದ ಒಂದಲ್ಲ ಹಲವಾರು ವಿಚಾರಗಳಲ್ಲಿ ಈ ಜನರು ನೀವು ತಪ್ಪುವುದನ್ನು ಕಾಯುತ್ತಿರುತ್ತಾರೆ. ಇವುಗಳಲ್ಲಿ ಹಣದ ಲೇವಾದೇವಿ ಮತ್ತು ಸ್ನೇಹ ಅಥವಾ ಸಂಘ ಜೀವನದಲ್ಲಿ ನಿಮಗೆ ಈ ಬಗ್ಗೆ ಆಗಬಹುದಾದ ಅನುಭವ ಬೇರೆಲ್ಲೂ ಆಗದು!

ಗ್ರೀಕ್ ತತ್ವಜ್ಞನಾದ ಪೋಳೋನಿಯಸನೇನೋ "ಸಾಲ ಕೊಡಲೂ ಬೇಡ; ಪಡೆಯಲೂ ಬೇಡ" ಎಂದಿದ್ದರೂ ಈ ಸೂತ್ರವನ್ನು ಈಗಿನ ಕಾಲದಲ್ಲಿ ನಮ್ಮ ಜೀವನದಲ್ಲಿ ಎಷ್ಟರಮಟ್ಟಿಗೆ ಅಳವಡಿಸಿಕೊಳ್ಳಬಹುದು ಹೇಳಿ? ದೇಶದೇಶಗಳೇ ಸಂಸ್ಥೆ ಸಂಸ್ಥೆಗಳೇ ಸಾಲದ ಕೊಳು—ಕೊಡುಗೆಯ ಮೇಲೆ ಅವಲಂಬಿಸಿರುವಾಗ ವ್ಯಕ್ತಿಗತ ವಿಚಾರ ಕೇಳಬೇಕೆ? ಹಾಗೆಂದು ನಿಮ್ಮ ಆಪ್ತಗೆಳೆಯನಾದರೂ ಅವನಿಗೆ ಸಾಲಕೊಟ್ಟು ನೋಡಿ! ಕೇಳದ ಅವಧಿಗೆ ಹಿಂತಿ ಬರುವುದಂತೂ ಇರಲಿ; ಒಮ್ಮೆ ಇಮ್ಮೆ ಕೇಳಿದಾಗ—

"ಕೊಡುತ್ತೇನೆ....ನಾಳೆ ಸಂಜೆ ಕೊಟ್ಟು ಬಿಡುತ್ತೇನೆ!" ನಾಳೆ ಕೇಳಿದಾಗ ನಾಡಿದ್ದು. ನಾಡಿದ್ದು ಕೇಳಿದಾಗ ಇನ್ನೊಂದು ದಿನ...ಆ ದಿನವೂ ಕೇಳಿದರೆ—

"ಕೊಡ ತ್ತೇನೆ, ಮಹಾರಾಯ....ನಾನೇನು ತಿನ್ನುತ್ತೇನೆಯೇ?" ಈ ಮಾತಿನಿಂದ ಆ ದಿನದವರೆಗೆ ಕಾದುಕುಳಿತು ಬರದೆ ಕಡೆಗೆ ನೀವು ಕೇಳಿದರೆ—ಆಯಿತು.

"ಕೊಡುವುದಿಲ್ಲ ಏನು ಮಾಡುತ್ತೀ?"

ನಮ್ಮ ಗೆಳೆಯ ರವಿಶಂಕರ್ ಬಹಳ ಸರಳ ಸ್ವಭಾವದ, ಬಿಚ್ಚು ಮನಸ್ಸಿನ ಸ್ನೇಹ ಜೀವಿ. ಆದರೂ ಹೊರನೋಟಕ್ಕೆ ಬಹಳ ಗಂಭೀರ ಸ್ವಭಾವದವನಂತೆ ತೋರಿಸಿಕೊಂಡು ಕೆಲವರ ಅಸಮಾಧಾನಕ್ಕೆ ತುತ್ತಾಗಿದ್ದ. ಒಂದು ದಿನ ಸಮಯನೋಡಿ ನಾನಾತನನ್ನು ಕೇಳಿಯೇ ಬಿಟ್ಟೆ.

"ಏನಪ್ಪಾ...... ನಿನ್ನ ಮನಸ್ಸೆಂದರೆ ಬೆಣ್ಣೆಯೆಂದು ನಿನ್ನೊಡನೆ ಬಹಳ ಕಾಲದಿಂದ ಬೆರೆತು ಕಲೆತು ನನಗೆ ಚೆನ್ನಾಗಿ ತಿಳಿದಿದೆ. ಆದರೂ ಸಂಘಜೀವನವನ್ನು ಬಯಸದ ತ್ಯಾಗಿಗಳಂತೆ ಏಕೆ ತೋರಿಸಿಕೊಂಡು ಮುಖಗಂಟಿಕ್ಕಿಕೊಂಡಿರುವೆ?"

ಅದಕ್ಕೆ ಅವ ನೀಡಿದ ಉತ್ತರ ಇದು—

"ಹೌದು ರವಿ, ಹೀಗಿದ್ದರೆ ಕೆಲವರು ನಾನು 'ರಿಸರ್ವ್ಡ್' ಎಂತಲೋ 'ಅನ್‌ಸೋಶಿಯಲ್' ಎಂದೋ ಕರೆದರೆ, ಸ್ವಲ್ಪ ಜಾಸ್ತಿ ಮಾತಾಡಿದರೆ ಕೆಲವರು 'ಟಾಕೆಟಿವ್' ಎನ್ನುತ್ತಾರೆ ಅಥವಾ ವಿಪರೀತ ಸಲಿಗೆ ತೋರಿದ ಕೊಂಡು ತಲೆ ಮೇಲೆಯೇ ಕೂತು ಬಿಡುತ್ತಾರೆ. ಅದಕ್ಕಾಗಿ ಈ ವೇಷ ನೋಡು!" ಅವನ ಮಾತು ಕೇಳಿ ನಾನು ನಿರುತ್ತರನಾಗ ಬೇಕಾಯಿತು.

ಇಂದಿನದು ಪ್ರಜಾಪ್ರಭುತ್ವದ ಯುಗ! ಹತ್ತು ಮಂದಿಯಲ್ಲಿ ಒಂಭತ್ತು ಜನರು ಹೇಳಿದುದು ಸರಿಯಿರಲಿ ತಪ್ಪಿರಲಿ! ನೀವು ಹೂಂ! ಎನ್ನಲೇ ಬೇಕು! ಇಲ್ಲವಾದರೆ ನಿಮ್ಮನ್ನು ಕ್ರಾಂತಿಕಾರಿಯೆಂದು ಲೇಬಲ್ ಹಚ್ಚಿ ಬಿಡುತ್ತಾರೆ. ಅವರು ತಮ್ಮ ಕುದುರೆಗೆ ಮೂರು ಕಾಲೆನ್ನಲೀ ಅಥವಾ ಅದು ಆಕಾಶದಲ್ಲಿ ಹಾರುತ್ತದೆ ಎನ್ನಲಿ! "ಹೌ ಹೌದು! ಹಾರುವುದನ್ನು ನಾನೂ ನೋಡಿದ್ದೇನೆ" ಎಂದು ಒಮ್ಮೊಮ್ಮೆ ನಮ್ಮ ಆತ್ಮಕ್ಕೆ ವಿರುದ್ಧವಾಗಿ ಸರ್ವಜ್ಞನ—

'ಮೂರು ಬೆಟ್ಟವನೊಬ್ಬ ಹಾರಬಲ್ಲೆಂದೆನಲು' ಎಂಬ ತ್ರಿಪದಿಯನ್ನು ಮೆಲುಕು ಹಾಕುತ್ತ ಹೇಳ ಬೇಕಾಗುತ್ತದೆ! ಆದರೆ ನಿಜವಾದ ವಿಚಾರವಂತನಿಗೆ ಹಾಗೆ ಹೇಳಿದರೂ ಮನಶ್ಶಾಂತಿಯಿದೆಯೇ? ಆಗ ಅವನ ಹೃದಯದಲ್ಲಿ ಪ್ರಾಯಶಃ ಹುಟ್ಟಬಹುದಾದ ಪ್ರಶ್ನೆಯೆಂದರೆ—ಯುಗ ವಿಪರೀತದ ಕಾಲಧರ್ಮವಿದು ವ ಈ ಸಂಕ್ರಾಂತಿ ಸಂದಿಗ್ಧ ಕಾಲದಲ್ಲಿ ರಕ್ಯ ಸೋಗು ಬಾಹ್ಯಾಡಂಬರ; ಮಾತೊಂದು ಕಾರ್ಯವೊಂದು ಇಲ್ಲದೆ ಹೇಗೆ ಬದುಕಬೇಕು?

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
90 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ—ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೧.

Phone— 5711, 5712, 5713 } 3 Lines.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಪರಿಚಯ

ಶ್ರೀ ಎಂ. ವಾಸುದೇವರಾಯರು

ಲೇಖಕರು: ಶ್ರೀ ಕೆ. ವೆಂಕಟರ್‍ಯಾಚಾರ್ಯ

ಸುರತ್ಕಲ್ಲು ವಿದ್ಯಾದಾಯಿನಿ ಹೈಸ್ಕೂಲ್ ಪ್ರಾರಂಭವಾಗುವ ಹಿಂದೊಮ್ಮೆ ಶ್ರೀ ಎಂ. ವಾಸುದೇವರಾಯರು ಮಂಗಳೂರಲ್ಲಿ ಗಣಪತಿ ಹೈಸ್ಕೂಲ್, ಮಿಶನ್ ಹೈಸ್ಕೂಲ್‌ಗಳಲ್ಲಿ ಅಧ್ಯಾಪಕರಾಗಿದ್ದರು. (1912) ಆಗೊಮ್ಮೆ ನನ್ನನ್ನು ಕುರಿತು ಮಾತಾಡುತ್ತಾ, 'ಉದ್ದೇಶ ಪೂರ್ವಕ ಪರೀಕ್ಷೆಗೆಂದು ನಿಯಮಿತವಾಗಿ ಓದಿದ ರೀತೀ ಪಾರವೆ ಸಾಂಗವಾಗಿರಬಲ್ಲು"ದೆಂದು ಹುರಿದುಂಬಿಸಿದರು. ಆ ಮೇರೆಗೆ, ಸಂಸ್ಕೃತ ಎಂಟ್ರನ್ಸ್ ಪರೀಕ್ಷೆಗೆ ಓದಿ ಉತ್ತೀರ್ಣನಾದೆನು. ಆತ್ಮೀಯ ಭಾವನೆಯವರಾಗಿ ನನ್ನ ವಿದ್ಯಾಭ್ಯಾಸಕ್ಕೆ ದಾರಿತೋರಿದ ಶ್ರೀಯುತರು ಇದೀಗ 60ನೆಯ ಹರಯದಲ್ಲಿರುವುದರಿಂದ ಅವರ ಬಗೆಗೆ ನಾಲ್ಕು ಪ್ರಶಂಸೆಗಳನ್ನು ನಾನು ಬರೆಯುವುದು ಶಕ್ಯವಾಗಿದೆ.

ಅದೊಮ್ಮೆ ಶ್ರೀಯುತರು ಮಂಗಳೂರಲ್ಲಿ ಅಧ್ಯಾಪಕರಾಗಿದ್ದಾಗ, ಇವರ ಸೋದರ ಸ್ಥಾನೀಯರೊಬ್ಬರು ಊರಲ್ಲಿ ತೀರಿದರು. ಅದಕ್ಕಾಗಿ ಶ್ರೀಯುತರನ್ನು ಕರೆತರಲು ನೆರೆಯ ಜಾತ್ರೆಯಿಂದ ಬಂದು ತುಸ ಒರಗಿದರೂ ನಾವು ಗೊತ್ತಾದೊಡನೆ ಗೆಳೆಯರೊಬ್ಬರೊಡನೆ ರಾತ್ರಿಗೇನೇ ಮಂಗಳೂರಿಗೆ ನಡೆದುಹೋದೆವು. ದ್ರಾ. ಬ್ರಾ. ಹೋಸ್ಟೆಲಿನಲ್ಲಿ ಇದ್ದ ಶ್ರೀಯುತರಿಗೆ ಆ ರಾತ್ರಿ 3 ಗಂಟೆಗೆ ಎಚ್ಚರಾಗಿ, ಅದೇನೋ ತರ ತರದ ಯೋಚನೆಗಳು ತುಮುಲವಾಗಿ ನಿದ್ದೆಯೇ ಬಂದಿದ್ದಿಲ್ಲ! ಆತ್ಮೀಯನ—ಸೋದರನ ಮೃತಿ ಆಕಸ್ಮಿಕವಾಗಿದ್ದು, ದೈವಪ್ರೇರಿತವಾಗಿ ಹೀಗೆ ಶ್ರೀಯುತರನ್ನು ಎಚ್ಚರಿಸಿತ್ತು! ನಾವು 5 ಗಂಟೆಗೆ ಅವರನ್ನು ಕಂಡು ನಿಜ ಸಂಗತಿ ಹೇಳಿದಾಗ, ಅವರಿಗೆ ವಿಶೇಷ ದುಃಖವೇನೂ ಆಗಲಿಲ್ಲ! "ಎಲ್ಲವೂ ದೈವವಿಲಾಸದಂತಾಗುತ್ತದೆಯೆಂಬುದು" ಅಂದಿನಿಂದಲೂ ಅವರ ಆಶಯವಾಗಿತ್ತು.

ಈಗ ಕೆಲವು ವರ್ಷಗಳ ಹಿಂದೆ, ಮದ್ರಾಸ್ ಸರಕಾರದಿಂದ ಶ್ರೀಯುತರ ಪುಸ್ತಕಕ್ಕೆ ಬಹುಮಾನ ಬಂದಿತ್ತು. ಆ ಬಗ್ಗೆ ವಿದ್ಯಾದಾಯಿನೀ ಹೈಸ್ಕೂಲಲ್ಲಿ ಶ್ರೀಯುತರ ಸತ್ಕಾರಕೂಟವು ಜರಗಿತ್ತು. ಆ ಸಭೆಯಲ್ಲಿ ಇವರ ಪ್ರಶಂಸೆಗಳು ನಡೆದುವು.

"ಮನೆಯಲ್ಲಿ, ಊರಲ್ಲಿ ಶ್ರೀಯುತರನ್ನು ಕುರಿತು ನನ್ನಂತಹ ಎಳೆಯರು 'ಅಣ್ಣ'ನೆಂದೆ ಕರೆಯುವ ಹಾಗೂ ಆದರ್ಶವಾಗಿ ನಡೆಯುವ ರೀತಿಯಿದೆ'ಯೆಂದು ನಾನು ಹೇಳಿದ್ದೆನು. ಅರ್ಥಾತ್, ಜೀವನ ರಂಗದಲ್ಲಿಯಾಗಲೀ, ವಿದ್ಯಾಕ್ಷೇತ್ರದಲ್ಲಾಗಲೀ, ಸಾಹಿತ್ಯ ಸಂಶೋಧನ ವಿಚಾರದಲ್ಲಾಗಲೀ ಶ್ರೀಯುತರು ನನ್ನಂತಹ ಅನೇಕ ಸಂಖ್ಯೆಯ ಮಿತ್ರರಿಗೆ—ತರುಣರಿಗೆ ಸನ್ಮಾರ್ಗದರ್ಶಿಯಾದ "ಅಣ್ಣ"ನಾಗಿದ್ದುದು ಅದೆಷ್ಟಕ್ಕೂ ಸುಳ್ಳಲ್ಲ!

1956ರ ಸಾಲಿನಲ್ಲಿ ಮದ್ರಾಸ್ ಸರ್ಕಾರದಿಂದ 'ಸಂಶೋಧನಾತ್ಮಕ ಲೇಖನಗಳು (ಸಾಹಿತ್ಯದ ಹಿನ್ನೆಲೆ)' ಎಂಬ ನನ್ನ ಸಂಕಲನ ಗ್ರಂಥಕ್ಕೆ ಬಹುಮಾನದೊರೆತಾಗ, ಸ್ವಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ನೆರೆದ ಸತ್ಕಾರ ಕೂಟದ ಅಧ್ಯಕ್ಷರಾದ ಶ್ರೀ ವಾಸುದೇವರಾಯರು ಹಲವಾರು ಹಿತಬೋಧೆಗಳನ್ನು ನೀಡಿದ್ದರು. ಕಿರಿಯನಾದರೂ ಪ್ರೋತ್ಸಾಹಿತನಾಗಿ ಮುನ್ನಡೆಗಾಲೆಂಬುದೇ ಶ್ರೀಯುತರು ವಿದ್ಯಾರ್ಥಿಗಳಿಗೂ ತರುಣ ಮಿತ್ರರಿಗೂ ಹೇಳುವ ಮಾತಾಗಿದೆ! ಶ್ರೀಯುತರು ತರುಣರಲ್ಲಿದ್ದ ಚಿತ್ರಕಲಾ ಸಾಹಿತ್ಯ ಮೊದಲಾದ ವಿಷಯಾಭಿರುಚಿಯು ಹೆಚ್ಚಾಗಲೆಂಬ ಸದುದ್ದೇಶದಿಂದ ಸ್ವಗ್ರಾಮದ ಶಾಲೆಯಲ್ಲಿ "ಭಾರತೀ ವಾಚನಾಲಯ"ವೊಂದನ್ನು ಪ್ರಾರಂಭಿಸಿ, ತನ್ನಲ್ಲಿದ್ದ ಹಲವಾರು ಉತ್ತಮ ಗ್ರಂಥ—ಪತ್ರಿಕೆಗಳನ್ನು ಅದಕ್ಕೆ ಉಚಿತ—ಎರವಲು ನೀಡಿದರು. ಅದು ಮಾತ್ರವಲ್ಲ; ಪ್ರತಿ ಆದಿತ್ಯವಾರ ಸಂಜೆ 5ರಿಂದ ಒಂದೆರಡು ಗಂಟೆಕಾಲ ಅಲ್ಲಿ ಎಲ್ಲರೂ ನೆರೆಯುತ್ತಾ, ತಮ್ಮ ಕವಿತೆ, ಬರೆಹಗಳನ್ನು ವಾಚಿಸುವ ಸದವಕಾಶವನ್ನೂ ಮಾಡಿಸಿದ್ದರು. ಊರವರ ಸಹಾಯವಾಗಿ ವಾರ್ಷಿಕ ಮಾಸಗಳಲ್ಲಿ ಕನ್ನಡದ ಕೃತಿ ರತ್ನಗಳಾದ ತೊರವೆ ರಾಮಾಯಣ, ಗದುಗಿನ ಭಾರತ, ಕನ್ನಡ ಭಾಗವತ, ಜೈಮಿನಿ ಭಾರತಗಳ ವಾಚನ—ಅರ್ಥ ವಿವರಣಗಳೂ ಅಲ್ಲಿ ಏರ್ಪಡಿಸಲಾಗಿದ್ದುವು. ತಾನೇ ಹಲವಾರು ಪುಸ್ತಕ ತರಿಸಿ ಓದುವುದು ಮಾತ್ರವಲ್ಲ, ಹಳ್ಳಿಗರಾದ ಗಂಡಸರೂ ಹೆಂಗಸರೂ ಕನ್ನಡ ಸಾಹಿತ್ಯ ಕೃತಿಗಳಿಂದ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರ ತಿಳಿಯಲೆಂಬುದೇ ಶ್ರೀಯುತರ ಆಶಯವಾಗಿದೆ.

1960ರ ಹೊತ್ತಿನಲ್ಲಿ ಚಿಕ್ಕ ಗ್ರಂಥಮಾಲೆ ತೊಡಗಲು ನನ್ನ ಗೆಳೆಯರೊಡನೆ ಹಲವರನ್ನು ಚಂದಾದಾರರನ್ನಾಗಿ—ಸಹಾಯಕರನ್ನಾಗಿ ಬೆಂಬಲಿಸಲು ಕೇಳಿಕೊಂಡೆನು. 'ಬೇಕಷ್ಟು ಹಣಗಳಿಸಿ ಈ ಕೆಲಸಕ್ಕೆ ತೊಡಗಬೇಕೆಂದು' ಬೇರೊಬ್ಬರು ನಮಗೆಂದರು! "ಮದುವೆಯಾಗದೆ ಹುಚ್ಚು ಬಿಡದು, ಹುಚ್ಚು ಬಿಡದೆ ಮದುವೆಯಾಗದು' ಎಂಬ ನುಡಿ ಇಲ್ಲಿ ಸ್ಮರಣೆಗೆ ಬಂತು. ಚಿಕ್ಕ ಸಹಾಯಕ್ಕೆ ಹಿಮ್ಮೊಗರಾದವರು ನಮಗೆ ಹೀಗೆಲ್ಲಾ ಉಪದೇಶಾಮೃತ ಎರೆದರೆಂಬುದು ಆಶ್ಚರ್ಯವಲ್ಲ! ಶ್ರೀ ವಾಸುದೇವರಾಯರನ್ನು ಸಹಾಯಕ್ಕೆ ಕೇಳಿದಾಗ (ಮುದ್ರಿತ ಕರಪತ್ರ ನೀಡಿದಾಗ) "ಇದೆಲ್ಲಾ ನಿಶ್ಚಯವಾಗಿದೆಯೋ? ಹಾಗಾದರೆ ಮುನ್ನಡೆಸಿರಿ" ಎಂದು ಸಹಕಾರ ನೀಡಿದ್ದರು. ಆ ಮೇರೆಗೆ ತೊಡಗಿದ ವಿಜಯ ಸಾಹಿತ್ಯ ಮಾಲೆ ಹಲವಾರು ಹಿರಿಯರ ಉದಾರ ಸಹಾನುಭೂತಿಯಿಂದ ಕೆಲವು ಚಿಕ್ಕ-ದೊಡ್ಡ ಕನ್ನಡದ ಕೃತಿಗಳನ್ನು ಪ್ರಕಟಿಸುತ್ತಿರುವುದು ಉಲ್ಲೇಖ್ಯವಾಗಿದೆ! ಕೇವಲ ಬಾಯ್ದೆರೆಯ ಒಣ ನುಡಿಗಳಿಗಿಂತಲೂ, ಕೈಯೆತ್ತಿ ಕೊಟ್ಟ ಸಹಾಯವೇ ಮೂಲಾಧಾರವಾಗಿ, ಇಂತಹ ಸತ್ಕಾರ್ಯ ಸಾಗಲು ಸಾಧ್ಯವಿದೆ. ಅದಕ್ಕೆ ಉದಾರಿಗಳು ಮತ್ತೆ ಮತ್ತೆ ಸಹಕರಿಸುವರೆಂಬುದೂ ಸಹಜವಾಗಿದೆ!

ಸುರತ್ಕಲ್ಲ ವಿದ್ಯಾದಾಯಿನೀ ಹೈಸ್ಕೂಲ್ 1944ರಿಂದ ತೊಡಗಿತ್ತು. ಶ್ರೀ ವಾಸುದೇವರಾಯರು ಮಂಗಳೂರು ಹೈಸ್ಕೂಲನ್ನು ಬಿಟ್ಟು ಇಲ್ಲಿಗೆ ಮುಖ್ಯಾಧ್ಯಾಪಕರಾಗಿ ಸೇರಿದರು. ಶ್ರೀಯುತರ ಅಣ್ಣಂದಿರಾದ ದಿ. ವೆಂಕಟರಮಣಯ್ಯ ಮತ್ತು ಇತರರು 1916ರಲ್ಲಿ ತೊಡಗಿದ ಈ ವಿದ್ಯಾಸಂಸ್ಥೆಯಲ್ಲಿಯೇ ಕಲಿತ ತಾನು ಇಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕನಾಗಿದ್ದಂತೆ ಹೈಸ್ಕೂಲ್ ತೊಡಗಿದಂದಿನಿಂದಲೂ ಇದು ವರೆಗೆ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದಾರೆ. 'ರಾಷ್ಟ್ರಪ್ರಶಸ್ತಿ ವಿಜೇತ'ರಾದ ಶಿಕ್ಷಕರಲ್ಲಿ ಶ್ರೀಯುತರೊಬ್ಬರು. ಇವರಿಗೆ ಈಗ 60ನೆಯ ವರ್ಷ ತೊಡಗಿದೆ. ತನ್ನ ಬಾಲ್ಯಮಿತ್ರರಾದ ಕಡೂರಿನ ಡಾ। ಎಚ್ ಜನಾರ್ಧನಾಚಾರ್ಯ, ಶ್ರೀ ಕೆಮ್ಮಣ್ಣು ಗೋವಿಂದರಾವ್ ಮೊದಲಾದವರಲ್ಲಿ ವರ್ಷಕ್ಕೊಂದೆರಡು ಬಾರಿಯಾದರೂ ಕಲೆತು ಒಂದೆರಡು ದಿನ ಸಲ್ಲಾಪಿಸುವ ಪದ್ಧತಿ ಶ್ರೀಯುತರು ಬಿಟ್ಟಿಲ್ಲ.

ವಿದ್ಯಾದಾಯಿನೀ ಶಾಲೆಯಲ್ಲಿ ಕಲಿತ ಸುತ್ತಲ ಹತ್ತಾರು ಗ್ರಾಮಗಳ ತರುಣರು ಇದೀಗ ಬೇರೆ ಬೇರೆ ಕ್ಷೇತ್ರಗಳಲ್ಲಿದ್ದರೂ ಶ್ರೀ ವಾಸುದೇವರಾಯರ ಮೇಲೆ ಗೌರವಾದರವಿರಿಸಿದ್ದಾರೆ. ಅಂತೆ, ಮೈಸೂರು, ಬೆಂಗಳೂರುಗಳಲ್ಲಿರುವ ಹಲವಾರು ಹಿರಿಯರ ಪರಿಚಯವೂ ಶ್ರೀಯುತರ ಜೀವನದ ಮೇಲೆ ಸತ್ಪ್ರಭಾವ ಬೀರಿದೆಯೆಂದರೆ ಸುಳ್ಳಲ್ಲ!

ಕನ್ನಡದ ವಿದ್ಯಾರ್ಥಿಗಳಿಗೆ 4 ಭೂಗೋಳಿಕ ಹಾಗೂ ಸಾಮಾಜಿಕ ಗ್ರಂಥರತ್ನಗಳನ್ನು ಶ್ರೀಯುತರು ಬರೆದು, ಮದ್ರಾಸ್ ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳಿಂದ ಪುರಸ್ಕೃತರಾಗಿದ್ದಾರೆ. ಈ ನಾಲ್ಕು ಕೃತಿಗಳೇ ಇವರ ಕೀರ್ತಿಯನ್ನು ಚಿರಂದ್ರಾರ್ಕಸ್ಥಾಯಿಯಾಗಿ ಮಾಡಬಲ್ಲುವೆಂಬುದಕ್ಕೆ ಸಂದೇಹವಿಲ್ಲ! "ವಿದ್ಯಾಧನಂ ಸರ್ವಧನ ಪ್ರಧಾನಂ' ಎಂಬ ಸೂಕ್ತಿಯಿದೆ ತಾನೆ! ಶ್ರೀಯುತರ ಜೀವನವು ಸುಖಮಯವಾಗಿದೆ. ಸಾಧಬಲ್ಲವೆಂಬುದು ಇವರ ಆತ್ಮಿಕ ಸಂಯಮ ಹಾಗೂ ಧಾರ್ಮಿಕ ಪ್ರೇಮ ಮತ್ತು ದೈವಿಕ ಭಕ್ತಿಗಳಿಂದ ಸುವ್ಯಕ್ತವಾಗುತ್ತದೆ!

ಕವಿ ಮುದ್ದಣ್ಣ

ಕನ್ನಡ ವರ ಕವಿ ಮುದ್ದಣ್ಣ
ಅವನಂ ಅರಿಯನು ನೆಸ್ಸಣ್ಣ
ಕನ್ನಡ ನುಡಿ ಅದು ಬಲು ಚಂದ
ಕನ್ನಡ ನಾಡದ. ನೋಡಲು ಅಂದ
ಅವನಂ ಅರಿಯದ ಜನವೇಕೆ?
ನಿಜವಂ ಬಲ್ಲದ ಜನವೇಕೆ?
ಕನ್ನಡ ರಸಿಕರ ಮನದಲ್ಲಿ
ಕವಿ ಮುದ್ದಣ್ಣನ ನೆನದಲ್ಲಿ
ಬರುತದೆ ನೀರದು ಕಣ್ಣಿನಲಿ
ನಿಜವಿದು ಮಾತ್ರ ಸರ್ವರಲಿ
ಕನ್ನಡ ಕವಿ ಅವ ಮುದ್ದಣ್ಣ
ಅವನೆಲ್ಲರಿಗೂ ಬಲು ಮುದ್ದಣ್ಣ
ಕನ್ನಡ ಕವಿಗಳ ಮಾಲೆಯಲಿ
ಕನ್ನಡ ಕೃತಿಗಳ ರಾಶಿಯಲಿ
ಮುದ್ದಣ್ಣನ ಕೃತಿ ಅದ್ಭುತ ಶಕ್ತಿಯು
ಇರುವೆ ರಾಮಾಯಣ ಕೃತಿಯು
ಅವನ ಹೆಸರಿಂ ಬಲ್ಲಿಂ ಅಯ್ಯಾ
ನಂದಳಿಕೆ ನಾರಾಯಣಪ್ಪಯ್ಯ

— ಡಾ। ಯು. ಪಿ. ಆರ್. ಭಟ್ಟ

ಸಿಂಡಿಕೇಟ್ ಬ್ಯಾಂಕ್

ಬೆಂಗಳೂರು ಮತ್ತು ತಿರುವನಂತಪುರದಲ್ಲಿ
ಫೇರ್ ಮತ್ತು ಪ್ರದರ್ಶನಗಳಲ್ಲಿ
ಭಾಗವಹಿಸುತ್ತದೆ.

ಸಿಂಡಿಕೇಟ್, ಪ್ರದರ್ಶನ ಸ್ಟಾಲುಗಳ ಜತೆಗೆ
ಬೆಂಗಳೂರು ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಪೆರೇಡ್ ಗ್ರಾಂಡ್ಸ್‌ನಲ್ಲಿರುವ
ನ್ಯಾಶನಲ್ ಫೇರ್‌ನಲ್ಲಿ
ಒಂದು ಹಂಗಾಮಿ ಶಾಖಾ ಕಚೇರಿಯನ್ನೂ
ತಿರುವನಂತಪುರದ ಪುತ್ತರಿಕಂಡಂ ಮೈದಾನದಲ್ಲಿರುವ
ಅಖಿಲ ಭಾರತ ಆರೋಗ್ಯ, ಶೈಕ್ಷಣಿಕ ಮತ್ತು
ಕೈಗಾರಿಕಾ ವಸ್ತುಪ್ರದರ್ಶನದಲ್ಲಿ
ಒಂದು ಪೇ ಆಫೀಸನ್ನೂ ತೆರೆದಿದೆ.

ಈ ಕಚೇರಿಗಳು ಡಿಮಾಂಡ್ ಡ್ರಾಫ್ಟುಗಳು ಮತ್ತು ಎಂ. ಟಿ ಗಳನ್ನು ನೀಡುವುದು ಮತ್ತು ಪಾವತಿ ಮಾಡುವುದಲ್ಲದೆ ಇತರ ಬ್ಯಾಂಕಿಂಗ್ ವ್ಯವಹಾರಗಳನ್ನೂ ನಿರ್ವಹಿಸುತ್ತವೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
"ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಗಾಗಿ
ಪ್ರತಿಯೊಬ್ಬರ ಬ್ಯಾಂಕು"

ಒಟ್ಟು ಸಂಪನ್ಮೂಲಗಳು: ರೂ. 140 ಕೋಟಿಗಳು. | 3?? ಕ್ಕೂ ಮಿಕ್ಕಿ ಶಾಖೆಗಳು. | ಶ್ರೀ ಟಿ. ಎ. ಪೈ ಅಧ್ಯಕ್ಷ

ಮಹಾ ಶಿವರಾತ್ರಿ

(ಐದನೇ ಪುಟದಿಂದ)

ಹಿಡಿಯುವಂತಹುದು. ಆತ ಭಿಲ್ಲರ ಜಾತಿಗೆ ಸೇರಿದವ, ಕಾಳಹಸ್ತಿಯ ಬೆಟ್ಟದ ತಪ್ಪಲಿನಲ್ಲಿ ವಾಸಿಸುತ್ತಿದ್ದ. ದಿನದ ಬೇಟೆಯ ನಂತರ ಕಾಡಿನಲ್ಲಿದ್ದ ಶಿವನ ವಿಗ್ರಹವನ್ನು ತನ್ನದೇ ಆದ ಮುಗ್ಧ ರೀತಿಯಲ್ಲಿ ಪೂಜಿಸುತ್ತಿದ್ದ. ಬಾಯಿಯಲ್ಲಿ ತುಂಬಿಕೊಂಡು ಬಂದ ನೀರಿನಿಂದ ಶಿವಲಿಂಗಕ್ಕೆ ಅಭಿಷೇಕ, ಕಾಡುಮಲ್ಲಿಗೆ, ಕಕ್ಕೆ ಹೂಗಳ ಅರ್ಚನೆ, ಜಿಂಕೆ ಮಾಂಸದ ನೈವೇದ್ಯ, ಕಣ್ಣಪ್ಪನ ಈ ಅಕಳಂಕ ನಿಸ್ವಾರ್ಥ ಭಕ್ತಿ ಭಗವಂತನಾದ ಪರಶಿವನಿಗೆ ಅತ್ಯಂತ ಪ್ರಿಯ. ಆದರೆ ಸಾಮಾನ್ಯ ಮಾನವನಿಗೆ ಈ ಅಸೀಮ ಭಕ್ತಿಯು ಅರ್ಥವಾಗುವುದಾದರೂ ಹೇಗೆ? ಶಿವಾಲಯದಲ್ಲಿ ಮಾಂಸ ಮೂಳೆಗಳನ್ನು ಕಂಡ ಪೂಜಾರಿ ಬೆರಗಾಗುತ್ತಾನೆ. ಇದಕ್ಕೆ ಕಾರಣನಾದ ಕಿರಾತನನ್ನು ಕಂಡುಹಿಡಿಯಲು ಶಿವಲಿಂಗದ ಹಿಂದೆ ಅಡಗಿಕೊಂಡು ಹೊಂಚುಹಾಕುತ್ತಾನೆ. ತಪ್ಪು ಮಾಡಿದವನ ಶಿರಕತ್ತರಿಸಲೆಂದು, ಕೈಯಲ್ಲಿ ಕತ್ತಿ ಸೇರಿ ಇರುತ್ತದೆ.

ತನ್ನ ನೆಚ್ಚಿನ ಭಕ್ತನ ನಿಷ್ಠೆಯನ್ನು ಪೂಜಾರಿಗೂ ಮತ್ತು ಅವನ ಮೂಲಕ ಲೋಕಕ್ಕೂ ತಿಳಿಸುವ ಸದವಕಾಶ ಶಿವನಿಗೆ ದೊರಕುತ್ತದೆ. ಅಂದು ಕಣ್ಣಪ್ಪ ಎಂದಿನಂತೆ ಪೂಜೆಗಾಗಿ ಬಂದಾಗ ಶಿವಲಿಂಗದಲ್ಲಿ ಎರಡು ಕಣ್ಣುಗಳು ಮೂಡಿರುತ್ತವೆ ಮತ್ತು ಒಂದು ಕಣ್ಣು ಕೆಂಪಡರಿ ಕಣ್ಣೀರು ಧಾರೆಯಾಗಿ ಧರೆಗೆ ಬೀಳುತ್ತಿರುತ್ತದೆ. ಶಿವನ ಕಣ್ಣಲ್ಲಿ ನೀರು! ಕಣ್ಣಪ್ಪನ ಕಾತರತೆಯು ಮೀರಿ ಮೀರಿ ಅತಿ ಪರಿಪರಿಯಿಂದ ಶಿವನನ್ನು ಸಂತೈಸಲು ಯತ್ನಿಸುತ್ತಾನೆ. ತನ್ನ ಸೆರಗಿನಿಂದ ಸೋರುವ ಕಣ್ಣನ್ನು ಒರಸುತ್ತಾನೆ. ಧೂಳು ಬಿದ್ದಿರಬಹುದೆಂದು ಬಾಯಿಯಿಂದ ಊದುತ್ತಾನೆ. ಯಾವುದರಿಂದಲೂ ಭಗವಂತನ ಅಶ್ರುಧಾರೆ ನಿಲ್ಲುವುದಿಲ್ಲ. ಇದು ಅಕ್ಷಿರೋಗ. ಆದ್ದರಿಂದ ಕಣ್ಣಿಗೆ ಕಣ್ಣು ಅರ್ಪಿಸುವುದೇ ಸರಿಯಾದ ಮದ್ದು ಎಂದು ಆಲೋಚಿಸಿ ಕಣ್ಣಪ್ಪ ಬಾಣದಿಂದ ತನ್ನ ಒಂದು ಕಣ್ಣನ್ನು ಕಿತ್ತು ಶಿವನ ರೋಗದ ಕಣ್ಣಿಗೆ ಅಂಟಿಸುತ್ತಾನೆ. ತಕ್ಷಣವೇ ಲಿಂಗದ ಮತ್ತೊಂದು ಕಣ್ಣು ಸೋರಲು ತೊಡಗುತ್ತದೆ. ಆದರೆ ಕಣ್ಣಪ್ಪ ಹೆದರಲಿಲ್ಲ. ತನ್ನ ಮತ್ತೊಂದು ಕಣ್ಣಿಲ್ಲವೇ? ಅದನ್ನೂ ಕಿತ್ತು ಅಂಟಿಸಲು ಸಿದ್ಧನಾಗುತ್ತಾನೆ. ತನ್ನ ಕಾಲಿನ ಉಂಗುಷ್ಠವನ್ನು ಶಿವನ ಮತ್ತೊಂದು ಕಣ್ಣಿನ ಬಳಿ ಗುರುತಿಗಾಗಿ ಇಟ್ಟುಕೊಂಡು ತನ್ನ ಇನ್ನೊಂದು ಕಣ್ಣನ್ನು ಕೀಳಲು ಉದ್ಯುಕ್ತನಾಗುತ್ತಾನೆ. ಮುಗ್ಧ ಭಕ್ತನ ಈ ಅದ್ವಿತೀಯ ಸಾಹಸಕ್ಕೆ ಮೆಚ್ಚಿ ಪರಮೇಶ್ವರ ಪ್ರತ್ಯಕ್ಷನಾದನು. ಭಕ್ತಾಗ್ರಣಿ ಕಣ್ಣಪ್ಪನ ಕಣ್ಣುಗಳು ಮತ್ತೂ ಬೆಳಗಲು ಪ್ರಾರಂಭಿಸುತ್ತವೆ. ಎಲ್ಲವನ್ನೂ ಪ್ರತ್ಯಕ್ಷದರ್ಶಿಸಿದ ಪೂಜಾರಿ ಲೋಕಕ್ಕೆ ಕಣ್ಣಪ್ಪನ ಭಕ್ತಿಯನ್ನು ಸಾರುತ್ತಾನೆ.

ಪಾಪವಿನಾಶಿನೀ ಉತ್ಸವ ಪ್ರವಾಹ

ಭಾರತದ ಧಾರ್ಮಿಕ ಅಥವಾ ಸಾಮಾಜಿಕ ಉತ್ಸವ ಯಾವುದೇ ಇರಲಿ, ಅದರೊಡನೆ ಪರಂಪರೆಯ ಸಂಬಂಧ ಹಾಸುಹೊಕ್ಕಾಗಿರುವುದನ್ನು ನಾವು ಕಾಣಬಹುದು. ಇವುಗಳು ಬಹಳಷ್ಟು ಪೌರಾಣಿಕ ಕಥಾಮೂಲಗಳನ್ನು ಪಡೆದಿರುತ್ತವೆ. ನಮ್ಮ ರಾಷ್ಟ್ರೀಯ ಹಬ್ಬಗಳೊಡನೆ ಈ ಪೌರಾಣಿಕ ಸಂಬಂಧವನ್ನು ಒಂದು ವಿಶೇಷ ದೃಷ್ಟಿಯಿಂದ ಹೆಣೆಯಲಾಗಿದೆ. ಇದರಲ್ಲಿ ನಮ್ಮ ಪೂರ್ವಿಕರಿಗಿದ್ದ ಉದ್ದೇಶವೆಂದರೆ, ಅನಕ್ಷರಸ್ಥ ಜನರಿಗೆ ಈ ಹಬ್ಬಗಳನ್ನು ಕುರಿತು ತಿಳುವಳಿಕೆ ನೀಡುವುದು. ಇವುಗಳನ್ನು ಅನನ್ಯ ಭಕ್ತಿಯಿಂದ ಕೇಳಿದ ಜನತೆ, ರಾಷ್ಟ್ರ ಕಲ್ಯಾಣದ ಮತ್ತು ಪುರೋಭಿವೃದ್ಧಿಯ ದೃಷ್ಟಿಯಿಂದ ಮತ್ತು ಹಿಂದೂಸ್ಥಾನದ ಧಾರ್ಮಿಕ ಒಳಿತಿಗಾಗಿ ಈ ಹಬ್ಬಗಳನ್ನು ಅತ್ಯಂತ ಶ್ರದ್ಧೆಯಿಂದ ಆಚರಿಸುತ್ತಾರೆ. ಈ ಪೌರಾಣಿಕ ಕಥಾಭಾಗದ ಜೊತೆಗೆ ಧರ್ಮ ಅಂತರ್ಗತವಾಗಿರುವುದಲ್ಲಿ, ಪರಮೋತ್ಸವ ಇದು ವಿಶೇಷ ಸಾಕ್ಷಾತ್ಕಾರವಾಗುತ್ತದೆ. ಈ ಪೌರಾಣಿಕತೆಯ ಹೊರಪದರದ ಒಳಗಡೆ ಧಾರ್ಮಿಕ ಭಾವನೆ ಸಲಿಲಧಾರೆ ಪ್ರವಹಿಸುತ್ತದೆ. ಈ ಧಾರೆ ಭವಿಷ್ಯದಲ್ಲಿ ಪ್ರಬಲ ವಾಹಿನಿಯಾಗಿ ನಮ್ಮ ಯುವಜನಾಂಗದಲ್ಲಿರುವ ಅನಾವಶ್ಯಕ ಪ್ರವೃತ್ತಿಗಳ ಕೊಳೆಯನ್ನು ಕೊಚ್ಚಿಕೊಂಡು ಹೋಗಿ ಈ ಹಿಂದೂ ಸಾಂಸ್ಕೃತಿಕ ನಾಡಿಗೆ ನವಚೈತನ್ಯ ನವ ಚೇತನೋತ್ಸಾಹಗಳನ್ನು ತರುವುದೆಂದು ಆಶಿಸೋಣ.

— (ಲೀಲಾ)

ಉಡುಪಿ ಮುನ್ಸಿಫರ ಕೋರ್ಟಿನಲ್ಲಿ

Ex Case 273/1968
in O.S. No. 16/1963

ಕೆ. ಜನಾರ್ದನ ಪೈ — ಡಿಕ್ರಿ ಹೋಲ್ಡರ

ಮತ್ತು

ಪಿ. ಗುರುರಾಜ ಭಟ್ಟ ಕೂಡಾ — ಜ. ಡೆಟರು,

೧ನೇ ಜೆ. ಡಿ.: ಪಿ. ಶಿವ ಎಸ್. ಪಿ. ರಾವ್, ಎಸ್. ಪ್ರಭಾಕರ ರಾಯರ ಹೆಂಡತಿ, [illegible] ಕಡೆ ರಾವ ಭಟ್ಟರ ಮಗಳು, ಕುಂಜಿಬೆಟ್ಟು, ಉಡುಪಿ ಕಸಬ, ಉಡುಪಿ ತಾಲೂಕು, ಪೋಸ್ಟ್ ಉಡುಪಿ—ಇವರಿಗೆ—

ಮೇಲೆ ಹೇಳಲಾದ ವ್ಯಾಜ್ಯದಲ್ಲಿ ಟ್ರಾನ್ಸಫರ ಡಿಕ್ರಿ ಹೋಲ್ಡರನು ಅರ್ಜಿಯಲ್ಲಿ ಹೇಳಿದ ಸ್ಥಿರಸೊತ್ತಿನ [illegible] ಬಗ್ಗೆ ಅರ್ಜಿ ಹಾಕಿದ್ದಾನೆ. ಈ ಬಗ್ಗೆ ನಿಮ್ಮದೇನೂ ಆಕ್ಷೇಪವಿದ್ದಲ್ಲಿ, ತಾರೀಖು [illegible]-3-1969ರಂದು ಬೆಳಗ್ಗೆ ಘಂಟೆ 11-00ಕ್ಕೆ ನೀವು ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಅರ್ಜಿಯು ಮುಂದಿನ ತನಿಖೆ ನಡೆಸಲಾಗುವುದು ಎಂಬ ಸಂಗತಿ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟು ಹುಕ್ಕುಂ ಪ್ರಕಾರ

P.B.R. Shenoy,
Advocate for Decree Holder.

ಉಡುಪಿ, ದ. ಕ., 10-2-1969.

ನಂದೀ ಬೆಟ್ಟದ ಔನ್ನತ್ಯ ಹೆಚ್ಚಿದೆ

ನಂದೀ ಬೆಟ್ಟದ ನಿಸರ್ಗ ರಮಣೀಯತೆಗೆ ಮಾರುಹೋಗದ ರಸಿಕರಿಲ್ಲ. ಇದು ಬೇಸಿಗೆಯ ವಿಶ್ರಾಂತಿ ಧಾಮ. ಇದಕ್ಕೆ ಮೈಸೂರಿನ ರೋಮಾಂಚಕಾರಿ ಇತಿಹಾಸದಲ್ಲಿ ಅಗ್ರಸ್ಥಾನವಿದೆ. ಇಂತಹ ಚೆಲುವಿನ ಬೆಟ್ಟಕ್ಕೆ ವಿಜ್ಞಾನ ತನ್ನ ಕೊಡುಗೆಯನ್ನು ತೊಡಿಸಲು ಇದೀಗ ಉಪಕ್ರಮಿಸಿದೆ. ಇದರ ಮೇಲೆ ಇತ್ತೀಚೆಗೆ ನಿರ್ಮಿಸಲಾದ 105 ಅಡಿ ಎತ್ತರದ ಗೋಪುರ ಇದರ ಔನ್ನತ್ಯವನ್ನು ಇನ್ನಷ್ಟು ಹೆಚ್ಚಿಸಿದೆ.

ಏಶಿಯದಲ್ಲಿಯೇ ದೊಡ್ಡದು

ರೈಲ್ವೆಗಳ ಸಂಪರ್ಕ ಸಾಮರ್ಥ್ಯವನ್ನು ಖಚಿತವಾಗಿ ಹೆಚ್ಚಿಸಲೆಂದು ಮೈಕ್ರೋವೇವ್ ಸಂಪರ್ಕ ಜಾಲವನ್ನು ದಕ್ಷಿಣ ರೈಲ್ವೆ ಇಲಾಖೆ ನಿರ್ಮಿಸುತ್ತಿದೆ. ಅಲ್ಲದೆ ಬರುವ ಮಾರ್ಚ್ ತಿಂಗಳ ಅಖೈರಿನ ಒಳಗೆ 26 ಸ್ಥಳಗಳಲ್ಲಿ ಮೈಕ್ರೋವೇವ್ ಪುನಾರಾವೃತ್ತಿ ಕೇಂದ್ರಗಳನ್ನು ಪೂರ್ಣಗೊಳಿಸುವ ಕೆಲಸದಲ್ಲಿದೆ. ಮದ್ರಾಸ್—ವಿಜಯವಾಡಗಳ ನಡುವೆ ಮೈಕ್ರೋವೇವ್ ಸಂಪರ್ಕ ಈಗಾಗಲೇ ಪ್ರಾರಂಭವಾಗಿದೆ. ಮದ್ರಾಸ್ ಮತ್ತು ಬೆಂಗಳೂರು ನಗರಗಳ ನಡುವೆ ಇದೇ ಜನವರಿ 28ರಂದು ಮೈಕ್ರೋವೇವ್ ಸಂಪರ್ಕ ಪ್ರಾರಂಭವಾಯಿತು. ದಕ್ಷಿಣ ರೈಲ್ವೆಯವರು 2000 ಕಿಲೋ ಮೀಟರ್ ಮಾರ್ಗದಲ್ಲಿ ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ಏಕ ಕಾಲದ ಟೆಲಿಫೋನ್—ಟೆಲಿಪ್ರಿಂಟರ್ ಸಂಪರ್ಕವನ್ನು ಕಲ್ಪಿಸಲಿರುವ ಈ ಬೃಹತ್ ಯೋಜನೆಯನ್ನು ಕೈಕೊಂಡಿದ್ದಾರೆ. ಇದು ಏಶಿಯದಲ್ಲಿಯೇ ಅತಿ ದೊಡ್ಡ ಯೋಜನೆ ಎಂದು ಭಾವಿಸಲಾಗಿದೆ. ಸದ್ಯದ ಟ್ರಂಕ್ ಕಮ್ಯೂನಿಕೇಶನ್ ವ್ಯವಸ್ಥೆಯ ಸ್ಥಾನದಲ್ಲಿ ಮೈಕ್ರೋವೇವ್ ಜಾಲವನ್ನು ತರಲು ಉದ್ದೇಶಿಸಲಾಗಿದೆ. ನಿಸರ್ಗದ ಪ್ರಕೋಪಕ್ಕೆ ಒಳಗಾಗಿ ತಂತಿ ಕಡಿದು ಹೋಗುವ ಭೀತಿ, ತಾಮ್ರದ ತಂತಿಯು ಕಳುವಿನ ಸಂದರ್ಭ ಇವುಗಳಿಗೆ ಅವಕಾಶವಿಲ್ಲದ ಕಾರ್ಯಸಾಮರ್ಥ್ಯವನ್ನು ಇದರಲ್ಲಿ ನಿರೀಕ್ಷಿಸಬಹುದಾಗಿದೆ. ಮೈಕ್ರೋವೇವ್ ಸಂಪರ್ಕ ವ್ಯವಸ್ಥೆಗೆಂದು ಬಳಸಲಾದ ಸಾಧನ ಸಲಕರಣೆಗಳು ಸೂಕ್ಷ್ಮವಾಗಿ ಅತ್ಯಾಧುನಿಕವಾಗಿವೆ. ಏಕ ಕಾಲದಲ್ಲಿ 120 ಟೆಲಿಫೋನ್ ಚ್ಯಾನೆಲ್‌ಗಳನ್ನು ಈ ಉಪಕರಣವು ಭವಿಷ್ಯದ ಬೇಡಿಕೆಯನ್ನು ಸಹ ಪೂರೈಸಬಹುದಾಗಿದೆ. ಪ್ರಾರಂಭದ ಹಂತದಲ್ಲಿ ಜಪಾನಿ ಇಂಜನಿಯರುಗಳ ಬೆಂಬಲವನ್ನು ಕೈಕೊಂಡಿದ್ದರೂ, ಭಾರತೀಯ ಇಂಜನೀಯರುಗಳೇ ಈ ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆ.

ಬೆಟ್ಟದ ಸಾಲು

ಮೈಕ್ರೋವೇವ್ ಅಥವಾ ಸೂಕ್ಷ್ಮ ತರಂಗಗಳು ಬೆಳಕಿನ ತರಂಗಗಳಂತೇ ಶುದ್ಧ ಸರಳ ರೇಖೆಯಲ್ಲಿ ಸಾಗುವುವು. ಆದುದರಿಂದ ದಕ್ಷಿಣ ರೈಲ್ವೆಯವರು ಗುಡ್ಡ ಬೆಟ್ಟಗಳ ಉನ್ನತ ಪ್ರದೇಶಗಳಲ್ಲಿ ಪುನರಾವರ್ತನ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಮದ್ರಾಸ್—ಬೆಂಗಳೂರು ಮಾರ್ಗ ಪಲ್ಲಾವರಂ ಬೆಟ್ಟ, ತಿರುಪತಿಬೆಟ್ಟ, ಹಾರ್ಸ್ಲೀ ಬೆಟ್ಟ ಮತ್ತು ನಂದೀ ಬೆಟ್ಟಗಳ ಮೇಲಿನ ಪುನರಾವರ್ತನ ಕೇಂದ್ರಗಳ ಮೂಲಕ ಸಾಗಿದೆ. ಈ ಬೆಟ್ಟಗಳ ಮೇಲೆ ಗೋಪುರಗಳನ್ನು ನಿರ್ಮಿಸಿ ಮೈಕ್ರೋವೇವ್ ಯಂತ್ರ ಜಾಲವನ್ನು ಸ್ಥಾಪಿಸಿದ್ದಾರೆ.

ಮೈಕ್ರೋವೇವ್ ವ್ಯವಸ್ಥೆಯಲ್ಲಿ ಟೆಲಿಫೋನ್ ಮಾತುಕತೆ ಅತಿ ಸ್ಪಷ್ಟವಾಗಿರುತ್ತದೆ. ಪುನರಾವರ್ತನ ಕೇಂದ್ರಗಳನ್ನು ನೋಡಿಕೊಳ್ಳಲು ತಗಲುವ ವೆಚ್ಚ ಅತಿ ಕಡಿಮೆ. ಈ ಕೇಂದ್ರಗಳು ಅಪಘಾತಗಳ ಸುದ್ದಿಯನ್ನು ಶೀಘ್ರದಲ್ಲಿಯೇ ತಲುಪಿಸುವವು. ಸಾರಿಗೆಯ ಸಾಮರ್ಥ್ಯವನ್ನು ಹೆಚ್ಚಿಸಲು ಯೋಗ್ಯ ಸಂಪರ್ಕಜಾಲ ಬೇಕು. ನಂದೀ ಬೆಟ್ಟದ ಈ ಗೋಪುರ ಇಂತಹ ಸಂಪರ್ಕಜಾಲದ ಒಂದು ದ್ಯೋತಕ.

ಮಿಶ್ರಪದ್ಧತಿಯಿಂದ ಆಯುರ್ವೇದ ನಾಶವಾಗುವುದು

(ನಾಲ್ಕನೇ ಪುಟದಿಂದ)

ಲ್ಲಿ ಲಭ್ಯವಾಗಬಹುದಾದ ಮೂಲಿಕೆಗಳು, ಸಿದ್ಧೌಷಧಗಳು ಮುಂತಾದವನ್ನು ತನ್ನ ಶಾಸ್ತ್ರೀಯ ದೃಷ್ಟಿಯಿಂದ ವಿಚಾರಮಾಡಿ, ಅವುಗಳ ಗುಣ-ದೋಷಗಳನ್ನರಿತು, ದೋಷ ನಾಶಕ್ಕಾಗಿ ಅವಕ್ಕೆ ಯಾವ ತರಹ ಸಂಸ್ಕಾರ ಮಾಡಬಹುದೆಂಬುದನ್ನು ಪರ್ಯಾಲೋಚಿಸಿ, ತನ್ನ ಭೈಷಜ್ಯವರ್ಗದಲ್ಲಿ ಅವನ್ನು ಅಳವಡಿಸಿಕೊಳ್ಳಬಹುದು.

ಆಧುನಿಕ ವೈಜ್ಞಾನಿಕ ಕ್ರಮದಲ್ಲಿ ಆಯುರ್ವೇದೀಯ ಔಷಧಗಳನ್ನು ಪರಿಶೋಧನೆ ಮಾಡುವುದರಿಂದ ಅದರ ಪ್ರಯೋಜನ ಆಲೋಪತಿಜ್ಞರಿಗೆ ಆಗುತ್ತದೆಯೇ ಹೊರತು, ಅದರಿಂದ ಆರ್ಷ ವೈದ್ಯಸಂಪ್ರದಾಯದವರಿಗೆ ಅನುಕೂಲವಾಗುವುದಿಲ್ಲ. ಉತ್ತಮ ಔಷಧಗಳೆಂದು ಪ್ರಸಿದ್ಧವಾದ ಎಷ್ಟೋ ಯೌಗಿಕ ದ್ರವ್ಯಗಳನ್ನೂ ಮೂಲಿಕೆಗಳನ್ನೂ ಅನುಪಯುಕ್ತಗಳೆಂದು ಸಾರಲು ಬಹಳ ಸಹಾಯವಾಗುತ್ತವೆ. ಪ್ರತಿಯೊಂದು ದ್ರವ್ಯದ ಉಪಯುಕ್ತತೆ ಅದನ್ನು ಚಿಕಿತ್ಸಾ ಕ್ರಿಯೆಯಲ್ಲಿ ಯೋಜಿಸತಕ್ಕವನ ಶಾಸ್ತ್ರೀಯ ಜ್ಞಾನ, ಬುದ್ಧಿಕೌಶಲ್ಯಗಳನ್ನವಲಂಬಿಸಿರುತ್ತದೆ.

ಆಯುರ್ವೇದಕ್ಕೆ ಸಂಬಂಧಪಟ್ಟ ಶಾಸ್ತ್ರ ಸಾಹಿತ್ಯ ಅಪಾರವಾಗಿ ನಷ್ಟವಾಗಿರುವಾಗ, ಅದರ ಯಾವ ಯಾವ ಭಾಗಗಳಲ್ಲಿ ನ್ಯೂನತೆ ಕಂಡು ಬಂದಿರುವುದೋ, ಅದನ್ನು ಪಾಶ್ಚಾತ್ಯ ವೈದ್ಯ ಗ್ರಂಥಗಳ ಸಹಾಯ ಪಡೆದು, ಪೂರ್ಣ ಮಾಡಿಕೊಳ್ಳುವುದು ನ್ಯಾಯವಲ್ಲವೇ? ಎಂಬುದನ್ನು ನಾವು ಸ್ವಲ್ಪ ವಿಮರ್ಶಿಸಬೇಕು. ಉದಾಹರಣೆಗೆ, ಆಯುರ್ವೇದದ ಶಾರೀರ ಸ್ಥಾನವನ್ನು ತೆಗೆದುಕೊಳ್ಳಬಹುದು. ಈ ಭಾಗದಲ್ಲಿನ ಎಷ್ಟೋ ವಿಷಯಗಳು, ಸಂಶಯಗ್ರಸ್ತವೂ, ಅರ್ವಾಚೀನಶಾಸ್ತ್ರ ಪ್ರಮಾಣದಿಂದ ಬಾಧಿತವಾಗುವಂತೆ ತೋರುತ್ತವೂ, ಅಪೂರ್ಣವೂ ಆಗಿರುತ್ತದೆಂಬುದನ್ನು ಎಲ್ಲ ವೈದ್ಯರೂ ಅಂಗೀಕರಿಸಬೇಕಾಗುತ್ತದೆ. ಸಿರಾ, ಧಮನೀ, ನಾಡೀ ಈ ಶಬ್ದಗಳು ಎಲ್ಲಿ, ಯಾವ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿವೆ ಎಂಬುದನ್ನು ನಿರ್ಧರಿಸುವುದು ಕಷ್ಟವಾಗುತ್ತದೆ. ಅಂಗ, ಪ್ರತ್ಯಂಗಗಳ ವರ್ಣನೆ ಬಹಳ ಸ್ಥೂಲವಾಗಿದ್ದು, ಶಲ್ಯತಂತ್ರಜ್ಞನಿಗೆ ಅಗತ್ಯವಿರುವಷ್ಟು ಸೂಕ್ಷ್ಮಾತಿಸೂಕ್ಷ್ಮ ವಿವೇಚನೆಯಿಂದ ಕೂಡಿರುವುದಿಲ್ಲ. ಮಸ್ತಿಷ್ಕ, ನಾಡೀ ಸಂಸ್ಥಾನಗಳಿಗೆ ಸಂಬಂಧಪಟ್ಟ ವಿವರಣೆಯಿಲ್ಲದಿರುವುದು ಎಂಥವರಿಗೂ ಆಶ್ಚರ್ಯವನ್ನುಂಟು ಮಾಡುತ್ತದೆ. ಈ ಅಂಶಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಡಾ|| ಗಣನಾಥ ಸೇನರು ಸಂಸ್ಕೃತೇ ಶಾರೀರೋ ನಷ್ಟಃ ಎಂಬ ಉದ್ಗಾರವನ್ನು ತೆಗೆದು, ಈ ಲೋಪದೋಷಗಳನ್ನು ಸರಿಪಡಿಸುವ ಉದ್ದೇಶದಿಂದ, ತಮ್ಮ ಪ್ರತ್ಯಕ್ಷ ಶಾರೀರವನ್ನು ಬರೆದು, ಅದರಲ್ಲಿ ಪಾಶ್ಚಾತ್ಯ ಶಾರೀರ ಶಾಸ್ತ್ರದಲ್ಲಿ ದೊರಕುವ ವಿಸ್ತಾರವಾದ ವರ್ಣನೆಗಳನ್ನೂ, ಆವಶ್ಯವಿರುವ ಮತ್ತು ಎಷ್ಟೋ ಇತರ ವಿಷಯಗಳನ್ನೂ ಉಪಯೋಗಿಸಿಕೊಂಡಿದ್ದಾರೆ. ಆದರೆ, ಈ ಕ್ರಮದಲ್ಲಿ ನಾವು ಹಲವು ದೋಷಗಳನ್ನು ಗಮನಿಸಬಹುದು. ಸಂಸ್ಕೃತಶಾರೀರದಲ್ಲಿ, ಅಂಗ ಪ್ರತ್ಯಂಗಗಳ ಸ್ಥಾನ, ಲಕ್ಷಣ, ಆಕೃತಿಗಳಷ್ಟೇ ಅಲ್ಲದೆ ದರ್ಶನ, ಧರ್ಮಶಾಸ್ತ್ರ, ಕಾಮತಂತ್ರ, ಪ್ರಸೂತಿತಂತ್ರಗಳಿಗೆ ಸಂಬಂಧಪಟ್ಟ ವಿಚಾರಗಳೂ ಅಡಕವಾಗಿರುತ್ತವೆ. ಅಲ್ಲದೆ, ಶಾರೀರ ಭಾಗವನ್ನೇ ಪ್ರತ್ಯೇಕವಾಗಿ ಗಣನೆಗೆ ತೆಗೆದುಕೊಂಡರೂ, ಪ್ರಾಚ್ಯ, ಪ್ರತೀಚ್ಯ ವೈದ್ಯತಂತ್ರಗಳಿಗೆ ವ್ಯತ್ಯಾಸ ಕಂಡುಬರುತ್ತದೆ. ಇವುಗಳಲ್ಲಿ ಆಧುನಿಕ ಶಾರೀರ ಶಾಸ್ತ್ರಕ್ಕೆ ಅಧಿಕ ಪ್ರಾಮಾಣ್ಯವನ್ನು ಮೊದಲೇ ನಿರ್ಧರಿಸಿಕೊಂಡು ಅದಕ್ಕೆ ಹೊಂದುವುದಿಲ್ಲವೆಂದು ಆಯುರ್ವೇದ ಶಾರೀರದ ಬಹು ಭಾಗವನ್ನು ಅದಕ್ಕೆ ಸರಿಹೊಂದುವಂತೆ ಬದಲಾಯಿಸುತ್ತ ಹೋಗುವುದು ಯುಕ್ತಿಯುಕ್ತ ಮಾರ್ಗವೆಂದು ಹೇಳಲಾಗುವುದಿಲ್ಲ. ಪ್ರತ್ಯಕ್ಷಪ್ರಮಾಣಕ್ಕೆ ಗೋಚರವಾದ ಮತ್ತು ಚೆನ್ನಾಗಿ ಪರೀಕ್ಷಿಸಲ್ಪಟ್ಟ ವಿಷಯಗಳನ್ನು ಆಯುರ್ವೇದ ಶಾರೀರದೊಳಕ್ಕೆ ಸೇರಿಸಿಕೊಳ್ಳುವುದು ತಪ್ಪಾಗಿ ತೋರುವುದಿಲ್ಲ. ಆದರೆ ಆಧುನಿಕರು ಎಷ್ಟೇ ಹೊಸ ಉಪಕರಣಗಳನ್ನು ಸೃಷ್ಟಿ ಮಾಡಿಕೊಂಡು, ತನ್ಮೂಲಕ ದೇಹದ ಸೂಕ್ಷ್ಮಾತಿಸೂಕ್ಷ್ಮ ರಚನಾವೈವಿಧ್ಯವನ್ನು ಬೆಳಕಿಗೆ ತಂದರೂ ಅತೀಂದ್ರಿಯ ವಿಷಯಗಳಲ್ಲಿ ಅವರ ಮತು ಪ್ರಮಾಣವಾಗಲಾರದು. ದೃಷ್ಟಾಂತಕ್ಕೆ ನಾಡೀವರ್ಣನೆಯನ್ನು ತೆಗೆದುಕೊಳ್ಳಬಹುದು; ನಾಡಿಗಳ ಸಂಬಂಧವಾದ ಸರಿಯಾದ ತಿಳುವಳಿಕೆಗೆ ಆಯುರ್ವೇದದ ಜೊತೆಗೆ ನಾವು ಯೋಗಶಾಸ್ತ್ರ, ಉಪನಿಷತ್ತು ಇವುಗಳಲ್ಲಿರುವ ವಿಚಾರಗಳನ್ನು ಸೇರಿಸಿಕೊಳ್ಳಬೇಕು.

ಹೃದಯ ಸಂಬಂಧವಾಗಿ ಬರುವ ಸ್ಥೂಲವರ್ಣನೆಯ ಜೊತೆಗೆ, ಅದನ್ನು ಆಶ್ರಯಿಸಿಕೊಂಡಿರುವ ದಶಪ್ರಾಣಾಯತನಗಳ ವಿಚಾರವಾಗಿ ಆಧುನಿಕ ಶಾರೀರ ಗ್ರಂಥಗಳಲ್ಲಿ ಏನೂ ಹೇಳಿಲ್ಲವೆಂದ ಮಾತ್ರಕ್ಕೆ ಚರಕೀಯ ವಚನವನ್ನು ಅಪ್ರಮಾಣಿಕವೆಂದು ನಿರ್ಧರಿಸುವುದಕ್ಕಾಗುತ್ತದೆಯೆ? ಸಿರಾ, ಧಮನಿ, ರಸಾಯನಿ ಈ ಸ್ರೋತಸ್ಸುಗಳನ್ನು ಎಲ್ಲೆಲ್ಲಿ ಯಾವ ಅರ್ಥದಲ್ಲಿ ಉಪಯೋಗಿಸುತ್ತಾರೆಂಬುದನ್ನು ವಿಮರ್ಶಿಸದೆ, ಅವನ್ನು ತಮ್ಮದೇ ಆದ ಪರಿಭಾಷೆಯಲ್ಲಿ ವ್ಯವಹರಿಸುತ್ತ ಬಂದರೆ, ಅದು ಶಾಸ್ತ್ರಪ್ರಕ್ರಿಯೆಗಳನ್ನು ಅಲ್ಲಗಳೆದಂತಾಗುವುದಿಲ್ಲವೆ? ಅಷ್ಟಾಂಗ ಯೋಗವನ್ನು ಸ್ವಾಧೀನಪಡಿಸಿಕೊಂಡಿರುವ ಯೋಗಿಯು ಯಾವ ವಸ್ತುವಿನ ಮೇಲೆ ತನ್ನ ಮನಸ್ಸನ್ನು ಸಂಯಮ ಮಾಡುತ್ತಾನೋ, ಅದರ ಸಂಪೂರ್ಣ ಪರಿಚಯವನ್ನು ಅವನು ಪಡೆಯುತ್ತಾನೆಂದು ಯೋಗ ಶಾಸ್ತ್ರದಲ್ಲಿ ಹೇಳಿದೆ. ಆಯುರ್ವೇದ ಸಾಹಿತ್ಯ ಬಹಳವಾಗಿ ನಷ್ಟ ಹೊಂದಿರುವುದರಿಂದ, ದೇಶವಿದೇಶಗಳಲ್ಲಿ ಹುಡುಕಿ ಅಗ್ನಿವೇಶಾದಿ ಕಾಯ ಚಿಕಿತ್ಸಾತಂತ್ರಗಳು, ಆರ್ಷ ಶಲ್ಯ—ಶಾಲಾಕ್ಯತಂತ್ರಗಳು ಎಲ್ಲಾದರೂ ದೊರಕುತ್ತವೆಯೆ? ಪತ್ತೆಹಚ್ಚಬೇಕು. ಈಚೆಗೆ ಬೆಳಕಿಗೆ ಬಂದಿರುವ ಭೇಳ, ಕಾಶ್ಯಪ ಸಂಹಿತೆಗಳಿಂದ ಎಷ್ಟೋ ಹೊಸ ವಿಷಯಗಳು ವೈದ್ಯರ ಗಮನಕ್ಕೆ ಬಂದಿವೆ. ಶಲ್ಯ ಪ್ರಧಾನ ಸಂಹಿತೆಗಳು ಸಿಕ್ಕಿದರೆ, ಶಾರೀರ ಭಾಗದಲ್ಲಿನ ಸಂದಿಗ್ಧಾಂಶಗಳನ್ನು ಬಗೆಹರಿಯಲು ಬಹಳ ಮಟ್ಟಿಗೆ ಸಹಾಯವಾಗುವುದು. ಪರೀಕ್ಷಿತಪ್ರತ್ಯಕ್ಷಕ್ಕೆ ಗೋಚರವಾದ ವಿಷಯಗಳನ್ನು, ವೈದ್ಯ ತನ್ನ ಶಾಸ್ತ್ರ ಮರ್ಯಾದೆಗೆ ಧಕ್ಕೆ ಬರದಂತೆ, ಉಪಯೋಗಕ್ಕೆ ತೆಗೆದುಕೊಳ್ಳುವುದರಲ್ಲಿ ಯಾವ ಬಾಧಕವೂ ಕಾಣಲಾರದು.

ಮಾನವನಿಗೆ ಉದ್ಭವಿಸುವ ರೋಗಗಳಲ್ಲಿ ಮಾನಸಿಕ ವ್ಯಾಧಿಗಳು ಹೆಚ್ಚಿನ ಸಂಖ್ಯೆ ಪಡೆಯುತ್ತವೆ—ಎಂದು ನೋಬೆಲ್ ಪಾರಿತೋಷಕ ವಿಜೇತ ಅಲೆಕ್ಸಿಸ್ ಕ್ಯಾರೆಲ್ ಹೇಳಿದ್ದಾನೆ. ಮನಸ್ತತ್ತ್ವ, ಅದರ ದೋಷಗಳು, ಆ ದೋಷಗಳ ಪರಿಹಾರೋಪಾಯಗಳು ಈ ವಿಚಾರದಲ್ಲಿ ಆಯುರ್ವೇದ, ಸಾಂಖ್ಯ, ಯೋಗ ಸಿದ್ಧಾಂತಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಅವನ್ನು ಬಹಳ ವಿಸ್ತಾರವಾಗಿ ವಿವೇಚನೆ ಮಾಡಿರುತ್ತದೆ. ಮಾನಸಿಕ ದೋಷಗಳು ದೇಹದ ಮೇಲೆ ಹೇಗೆ ಪ್ರತಿಕ್ಷಣದಲ್ಲೂ ಪರಿಣಾಮವನ್ನುಂಟು ಮಾಡುತ್ತ, ಅದರ ವಿಕಾರಗಳಿಗೆ ಕಾರಣವಾಗುತ್ತದೆಂಬುದನ್ನು ಬೋಧಿಸುತ್ತದೆ.

ದೈವವ್ಯಪಾಶ್ರಯದ ಉಪಯುಕ್ತತೆಯನ್ನು ಆಲೋಪತಿಜ್ಞರು ಅಲ್ಲಗಳೆದರೂ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಅದರ ಪ್ರಯೋಜನ ಎಷ್ಟೋ ಜನರ ಅನುಭವಕ್ಕೆ ಬಂದಿರುತ್ತದೆ.

(ಮುಂದುವರಿಯುವುದು)

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೋಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ,

ಏಕೆಂದರೆ ಇಲ್ಲಿ ಪ್ರತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—27

ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಕಡಿಯಾಳಿ—ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ. 9-2-69 ರಂದು ಶ್ರೀ ಎಂ. ಗೋಪಾಲಕೃಷ್ಣ ಅಡಿಗ, ಪ್ರಿನ್ಸಿಪಾಲ್, ಶ್ರೀ ಪೂರ್ಣಪ್ರಜ್ಞ ಕಾಲೇಜ್, ಉಡುಪಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಪ್ರಿನ್ಸಿಪಾಲ್ ಯು. ಕೆ. ಹರಿದಾಸ ಭಟ್ಟರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಯಸ್. ಸದಾಶಿವರಾಯರು ವರದಿ ವಾಚನ ಮಾಡಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಸಂಘದ ಸಾಧನೆಗಳ ಕುರಿತು ತೃಪ್ತಿ ವ್ಯಕ್ತಪಡಿಸಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸಂಘವು ದುಡಿಯಬೇಕೆಂದರು. ಶ್ರೀಮತಿ ಲೀಲಾ ಜಿ. ರಾಯರು ಬಹುಮಾನ ವಿತರಣೆ ಮಾಡಿದರು. ಮನರಂಜನೆಯ ಕಾರ್ಯಕ್ರಮದ ಅಂಗವಾಗಿ ಶ್ರೀ ಕೆ. ಮೋಹನ ಪೈ ಇವರಿಂದ 'ಮಿಮಿಕ್ರಿ' ಕಾರ್ಯಕ್ರಮ, ಹಳೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಸಂಗೀತ ಕಚೇರಿ ಹಾಗೂ ಕನ್ನಡ ನಾಟಕಗಳು ಅಭಿನಯಿಸಲ್ಪಟ್ಟವು. ಕೊನೆಯಲ್ಲಿ ಕಾರ್ಯದರ್ಶಿ ಯಸ್. ಸದಾಶಿವರಾಯರು ಧನ್ಯವಾದವಿತ್ತರು.

ಅಂದು ಮಧ್ಯಾಹ್ನ ಸಂಘದ ಮಹಾಧಿವೇಶನವು ಜರಗಿ 15 ಜನ ಸದಸ್ಯರ ಕಾರ್ಯಕಾರೀ ಸಮಿತಿಯನ್ನೂ ಸ್ಪೋರ್ಟ್ಸ್ ಮತ್ತು ರಿಕ್ರಿಯೇಶನ್ ಕ್ಲಬ್ಬಿನ ಸದಸ್ಯರನ್ನೂ, ಲೆಕ್ಕ ಪರಿಶೋಧಕರನ್ನೂ ಆರಿಸಿತು. ಉಪಾಧ್ಯಕ್ಷರಾದ ಶ್ರೀ ಕೆ. ಶ್ರೀಪತಿ ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು.

ಶಾಲಾ ವರ್ಧಂತ್ಯುತ್ಸವ

ಕಡಿಯಾಳಿ ಹಾ.ಎ. ಶಾಲಾ ವರ್ಧಂತ್ಯುತ್ಸವವು ತಾ. 9ರಂದು ಶ್ರೀ ಶ್ರೀಪತಿರಾವ್ ಪಣಾರ್‌ಕಾರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಪಿ. ಗುರುರಾಜ ಭಟ್ಟರು ವರದಿವಾಚನ ಮಾಡಿದರು. ಶ್ರೀ ಜೇಮ್ಸ್ ಡಿಸೋಜರು ಸಂದೇಶ ವಾಚನ ಮಾಡಿದರು. ಶ್ರೀ ಕೆ. ಪದ್ಮನಾಭ ಭಟ್ಟರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಉಡುಪಿ ತಾಲೂಕಿನ ಶಾಲೆಗಳ ಪೈಕಿ ಈ ಶಾಲೆಯು ಪ್ರಥಮ ಶ್ರೇಣಿಯದೆಂದು ಹೇಳಿ, ಈ ಶಾಲೆಯ ಅಭಿವೃದ್ಧಿಗೆ ಹಳೆ ವಿದ್ಯಾರ್ಥಿ ಸಂಘದ ಕೊಡುಗೆಗಳು ಉಲ್ಲೇಖನೀಯ ಎಂದರು. ಶಾಲೆಯು ಇನ್ನಷ್ಟು ಅಭಿವೃದ್ಧಿ ಹೊಂದಿ ಸರ್ವಾಂಗೀಣ ಅಭಿವೃದ್ಧಿ ಹೊಂದಲಿ ಎಂದು ಹಾರೈಸಿದರು.

ಮನರಂಜನೆಯ ಅಂಗವಾಗಿ ನೃತ್ಯ, ಜನಪದ ನೃತ್ಯ, ಹಾಡುಗಳು, "ಜಲಂಧರ" ಎಂಬ ಪೌರಾಣಿಕ ಸಂಗೀತ ನಾಟಕವೂ ಅಭಿನಯಿಸಲ್ಪಟ್ಟಿತು.

ಅಂದು ಪೂರ್ವಾಹ್ನ ಶ್ರೀ ಟಿ. ದೇವದಾಸ ಪೈಗಳು ಧ್ವಜಾರೋಹಣ ಮಾಡಿದರು. ಶ್ರೀ ಇಂದ್ರಾಳಿ ರಾಮಚಂದ್ರ ಭಟ್ಟರು ಶಾಲಾ ಮಕ್ಕಳಿಗೆ ಸಿಹಿತಿಂಡಿ ವಿತರಣೆ ಮಾಡಿದರು.

ಶ್ರೀ ಎಸ್. ಎಲ್. ಶೇಟರ ನಿಧನ

ಮಂಗಳೂರು ನಗರದ ಎಸ್. ಎಲ್. ಶೇಟ್ ಡೈಮಂಡ್ ಹೌಸ್, ಐಡಿಯಲ್ ಫೋಟೋ ಹೌಸ್ ಮತ್ತು ಆಕೋ ಕಾಸ್ಟಲೈನ್ ಸ್ಟೀಲ್ ಸಂಸ್ಥೆಗಳ ಮಾಲೀಕರಾಗಿದ್ದ ಶ್ರೀ ಎಸ್. ಎಲ್. ಶೇಟರು ತಾ. 11ನೇ ಬೆಳಗ್ಗೆ ತಮ್ಮ ಸ್ವಗೃಹದಲ್ಲಿ ತಮ್ಮ 49ನೇ ವಯಸ್ಸಿನಲ್ಲಿ ನಿಧನರಾದರು. ದಿವಂಗತರು ಸಮಾಜ ಸೇವಕರೂ, ಉದ್ಯಮಿಗಳೂ, ಪರೋಪಕಾರಿಗಳೂ, ಅನಾಥಾನಾಥ ಬಂಧುಗಳೂ ಆಗಿದ್ದರು. ಸಮಾಜಕ್ಕೆ ಹಲವಾರು ವಿಧದಲ್ಲಿ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು.

ಶ್ರೀ ಪಿ. ರಮೇಶ ಪೈ

ಮಣಿಪಾಲದ ಪೈ ಪರಿವಾರಕ್ಕೆ ಸೇರಿದ ಶ್ರೀ ಪಿ. ರಮೇಶ ಯು. ಪೈಯವರು ೧೯೬೯—೭೦ನೇ ವರ್ಷಕ್ಕೆ ರೋಟರಿ ಜಿಲ್ಲೆ ೩೧೮ರ ಗವರ್ನರರೆಂದು ನಾಮಕರಣಗೊಂಡಿದ್ದಾರೆ. ಇನ್ನೂ ೪೫ರ ಹಂತದಲ್ಲಿರುವ ಇವರದು ಬಹುಮುಖ ಅಭಿರುಚಿ, ತುಂಬಿದ ಅನುಭವ, ಇವರು ಮಾನವ ಕಲ್ಯಾಣಕ್ಕೆ ಸಲ್ಲಿಸಿದ ಸೇವೆ ಅನುಪಮ. ಸಮಸ್ಯೆಗಳನ್ನು ತ್ವರಿತ ಗ್ರಹಣ, ಶಾಂತ ಚಿಂತನ ಮತ್ತು ನೇರವಾದ ಗಮನದಿಂದ ಎದುರಿಸುವ ಅದ್ವಿತೀಯ ಚಿತ್ತಶಕ್ತಿಯಿಂದಲೇ ಇದು ಸಾಧ್ಯವಾಯಿತು.

ಶ್ರೀ ಪೈಗಳಿಗೆ ಈ ಬಗೆಯ ಕುಶಾಗ್ರಮತಿಯನ್ನು ಬಳಸಿಕೊಳ್ಳುವ ನೂರಾರು ಅವಕಾಶವು ಅವರ ಹಿರಿಯರು ಆರಂಭಿಸಿದ್ದ ಹಲವಾರು ಸಾಮಾಜಿಕ-ಆರ್ಥಿಕ ರಂಗಗಳಲ್ಲಿ ದೊರಕಿತು. ೧೯೪೮ರಲ್ಲಿ ಉಡುಪಿ ರೋಟರಿ ಕ್ಲಬ್ಬ ಸ್ಥಾಪನೆಗೊಂಡುದು ಇವರ ಪ್ರತಿಭೆಗೊಂದು ಸದವಕಾಶವನ್ನಿತ್ತಿತು.

ಶ್ರೀ ಪೈಯವರು ಹಲವು ವಾಣಿಜ್ಯ ಮತ್ತು ವ್ಯಾಪಾರಿಕ ಸಂಸ್ಥೆಗಳೊಡನೆ ಸಂಬಂಧವಿರಿಸಿದ್ದಾರೆ. ಇವುಗಳಲ್ಲಿ ನೈತಿಕತೆ ಮತ್ತು ಸಾಮರ್ಥ್ಯ ಒರುವಂತೆ ಉತ್ತೇಜಿಸಿದ್ದಾರೆ. ಎ.ಪಿ.ಎಂ.ಓ.ವಿ.ನ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ, ಉಡುಪಿ ಛಾಂಬರ್ ಆಫ್ ಕಾಮರ್ಸ್, ಇಂಡಸ್ಟ್ರಿ ಎಂಡ್ ಅಗ್ರಿಕಲ್ಚರ್‌ನ ಸ್ಥಾಪಕ—ಅಧ್ಯಕ್ಷರಾಗಿ, ಎಲ್ಲೈಸಿಯ ಪಾಲಿಸಿದಾರರ ಸಮಿತಿಯ ಸದಸ್ಯರಾಗಿ, ಇಂಡಿಯನ್ ಕಾಯ್ರ್ ಬೋರ್ಡಿನ ಸದಸ್ಯರಾಗಿ, ಭಾರತ ಸರಕಾರ, ರಾಜ್ಯ ಸರಕಾರದ ಹಲವು ಸಮಿತಿಗಳ ಸದಸ್ಯರಾಗಿ ದುಡಿಯುತ್ತಿದ್ದಾರೆ ಶ್ರೀ ಪೈ.

ಭಾರತೀಯ ವೈದ್ಯಕೀಯ ರಂಗದಲ್ಲಿ ಕ್ರಾಂತಿಯನ್ನಿತ್ತ ಈ ಭಾಗದಲ್ಲಿ ಶಿಕ್ಷಣ ಪ್ರಸಾರ ಮಾಡಿದ ಎಕಡಮಿ ಆಫ್ ಜನರಲ್ ಎಜ್ಯುಕೇಶನ್‌ನ ಕಾರ್ಯದರ್ಶಿಯಾಗಿ ಇವರು ಸಲ್ಲಿಸಿದ ಸೇವೆ ಪ್ರಶಂಸಾರ್ಹ. ಮಣಿಪಾಲದಲ್ಲಿ ಸುಸಜ್ಜಿತ ವೈದ್ಯಕೀಯ ಚಿಕಿತ್ಸಾಲಯ, ಉಡುಪಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಪ್ರಸೂತಿಶಾಲೆಗಳು ಇವರ ನೇತೃತ್ವದಲ್ಲೇ ಸೇವೆ ಸಲ್ಲಿಸುತ್ತಿವೆ.

ಶ್ರೀ ಪೈ ವಿಶಾಲ ಜಗತ್ತಿನಲ್ಲಿ ಯಾತ್ರೆಯನ್ನೂ ಮಾಡಿದ್ದಾರೆ. ಅಮೇರಿಕೆ, ಬ್ರಿಟನ್, ಜಪಾನ್, ಪೂರ್ವ ಆಫ್ರಿಕಾ, ಇಥಿಯೋಪಿಯಾ, ಸುಡಾನ್, ಯುರೋಪ್, ರಷ್ಯ, ಸಿಲೋನ್, ಸಿಂಗಾಪುರ, ಮಲೇಶ್ಯಾ, ಥಾಯ್‌ಲ್ಯಾಂಡ್ ಇತ್ಯಾದಿಗಳಲ್ಲಿ ಸಂಚರಿಸಿದ ಇವರು ಹಲವಾರು ಮಿತ್ರರನ್ನೂ ಪ್ರಶಂಸಕರನ್ನೂ ಪಡೆದಿದ್ದಾರೆ. ಅಂತಾರಾಷ್ಟ್ರೀಯ ಸಂಪರ್ಕ, ತಿಳುವಳಿಕೆ ಮತ್ತು ಮಾನವ ಕಲ್ಯಾಣದ ಹಲವು ರಂಗಗಳಲ್ಲಿ ಸಹಕಾರಗಳಿಗೆ ಇದು ಕಾರಣೀಭೂತವಾಗಿದೆ.

ಶ್ರೀ ರಮೇಶ ಪೈಯವರಿಗೆ ದೊರೆತ ಈ ಗೌರವಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ.

ಮದ್ರಾಸು ದಾಸಪ್ರಸಾದದಲ್ಲಿ ಮಧ್ವನವಮೀ ಉತ್ಸವ

ದಿವಂಗತ ಭಕ್ತ ಶ್ರೀ ಸೀತಾರಾಮರಾಯರ ಸ್ವಗೃಹವಾದ ಮದ್ರಾಸಿನಲ್ಲಿರುವ ದಾಸಪ್ರಸಾದದಲ್ಲಿ ಫೆಬ್ರವರಿ ತಾ. ೩, ೪ ದಿನಗಳಲ್ಲಿ ಮದ್ರಾಸಿನ ಮಾಧ್ವ ಸಂಘದ ಮಧ್ವನವಮೀ ಮಹೋತ್ಸವದ 29ನೇ ಅಧಿವೇಶನವು ವಿಜೃಂಭಣೆಯಿಂದ ನಡೆಯಿತು. ಎರಡು ದಿನಗಳಲ್ಲಿಯೂ ಸಚ್ಛಾಸ್ತ್ರಪಾರಾಯಣ ಬ್ರಾಹ್ಮಣ ಸುವಾಸಿನಿಯರ ಸಂತರ್ಪಣೆ, ಭಕ್ತ ಶ್ರೀ ಸೀತಾರಾಮರಾಯರ ಸಹೋದರರು ಮಕ್ಕಳು ಮೊಮ್ಮಕ್ಕಳ ಭಜನಸೇವೆ ವಿದ್ವತ್ಸಭೆ ಮುಂತಾದ ಕಾರ್ಯಕ್ರಮಗಳು ನಡೆದುವು. ತಾ. ೩ರಂದು ಶ್ರೀ ಕೆ. ಟಿ. ಪಾಂಡುರಂಗಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಪಿ.ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು ಶ್ರೀ ಮಧ್ವಾಚಾರ್ಯರಿಗೂ ಶ್ರೀ ವೇದವ್ಯಾಸರಿಗೂ ಇರುವ ಐಕಮತ್ಯವನ್ನು ಕುರಿತು ಭಾಷಣ ಮಾಡಿದರು. ಶ್ರೀ ಕೆ. ಟಿ. ಪಾಂಡುರಂಗಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ವೇದವ್ಯಾಸರು ಶ್ರೀ ಮಧ್ವಾಚಾರ್ಯರ ಮೂಲಕವಾಗಿ ಜನತೆಗರ್ಪಿಸಿದ ಜ್ಞಾನನಿಧಿಯನ್ನು ಪ್ರಶಂಸಿಸಿದರು.

ತಾ ೪ರಂದು ಶ್ರೀ ಪಿ.ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಶ್ರೀ ಕೆ.ಟಿ. ಪಾಂಡುರಂಗಿಯವರು ಪೂರ್ಣಪ್ರಜ್ಞ ದರ್ಶನವನ್ನು ಕುರಿತು ಉಪನ್ಯಾಸವನ್ನು ಮಾಡಿದರು. ಈ ಎರಡು ದಿನಗಳಲ್ಲಿಯೂ ಬೊಂಬಾಯಿಯಿಂದ ವಿಶೇಷಾತಿಥಿಗಳಾಗಿ ಬಂದಿದ್ದ ಶ್ರೀ ಮಾಹುಲಿ ಗೋಪಾಲಾಚಾರ್ಯರು ತಮ್ಮ ಭಾಷಣದಲ್ಲಿ ದೇಹಾತಿರಿಕ್ತನಾದ ಜೀವನನ್ನು ಸಮರ್ಥಿಸಿದರು.

ತಾ. ೪ರಂದು ಶ್ರೀ ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು, ತಮ್ಮ ಅಧ್ಯಕ್ಷ ಭಾಷಣದಲ್ಲಿ ದೇಹಾತಿರಿಕ್ತನಾದ ಜೀವನನ್ನು ಅಂಗೀಕರಿಸಲೇ ಬೇಕೆಂದರು.

ವಿದ್ವತ್ಸಂಭಾವನೆ, ಶ್ರೀ ಗಲಗಲಿ ಪಂಢರಿನಾಥಾಚಾರ್ಯರ ಧನ್ಯವಾದ ಸಮರ್ಪಣೆ, ಭಜನೆ, ರಾತ್ರಿ ಪೂಜೆ, ಪ್ರಸಾದವಿನಿಯೋಗದೊಡನೆ ಉತ್ಸವವು ಮುಕ್ತಾಯವಾಯಿತು. ತಾ ೩ರಂದು ಶ್ರೀ ಮಧ್ವಾಚಾರ್ಯರ ಮತ್ತು ತಾ. ೪ರಂದು ದಿವಂಗತ ಭಕ್ತ ಶ್ರೀ ಗೋವಿಂದದಾಸರ ಮತ್ತು ೬ರಂದು ಮಾತೃಶ್ರೀ ಗಂಗಾಬಾಯಿಯವರ ಸ್ಮಾರಕೋತ್ಸವಗಳು ನಡೆದಾಗ ತಾ. ೭ರಂದು ದಿವಂಗತ ಭಕ್ತ ಶ್ರೀ ಸೀತಾರಾಮರಾಯರ ಪ್ರಥಮ ವಾರ್ಷಿಕ ದಿನವು ಸೇರಿದ್ದರಿಂದ ಶ್ರೀ ರಾಯರ ಗುರು, ಪಿತೃ, ಮಾತೃ ಭಕ್ತಿಪರಾಯಣತೆಯು ವ್ಯಕ್ತವಾಯಿತು. ಉತ್ಸವವೂ ವಿಶೇಷವಾಗಿ ಕಳೆಗೊಂಡಿತು.

ಮಿಲಾಗ್ರಿಸ್ ಕಾಲೇಜಿಗೆ ಪ್ರಧಾನ ಶಾಸನಾಧಿಕಾರಿಗಳ ಸಂದರ್ಶನ

ದಿನಾಂಕ ೬.೨.೬೯ರಲ್ಲಿ ಭಾರತ ಸರಕಾರದ ಪ್ರಧಾನ ಶಾಸನಾಧಿಕಾರಿ (Chief Epigraphist for the Govt of India) Dr. G S Gai ಅವರು ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿಗೆ ಸಂದರ್ಶನವಿತ್ತರು. ಕಾಲೇಜಿನ ವಿದ್ಯಾರ್ಥಿಗಳಿಗೆ ಶಾಸನಗಳು ಮತ್ತು ಅವುಗಳ ಪ್ರಾಮುಖ್ಯತೆಯ ವಿಷಯ ಬೋಧಪ್ರದವಾದ ಉಪನ್ಯಾಸವನಿತ್ತರು. ಕಾಲೇಜಿನ ಬೆಳವಣಿಗೆಯನ್ನು ಕಂಡು ಸಂತೋಷಪಟ್ಟು ಈ ಸಂಸ್ಥೆಯು ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹಾರೈಸಿದರು.

"ಶಿವಪಂಚಾಕ್ಷರೀ ಮಹಿಮೆ"

ಬೇಲಂಪಾಡಿ, ಬಂದ್ಯಡ್ಕ ಶ್ರೀ ಚಿನ್ನಪ್ಪಗೌಡರ ನೂತನ ಅಂಗಡಿಯ ಪ್ರಾರಂಭೋತ್ಸವ (೩೧ರಂದು) ಸಮಾರಂಭದ ಅಂಗವಾಗಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರಿಂದ ರಚಿಸಲ್ಪಟ್ಟ—"ಶಿವಪಂಚಾಕ್ಷರೀ ಮಹಿಮೆ" ಎಂಬ ಕಥಾಭಾಗದ ಯಕ್ಷಗಾನಕೂಟವು ನೆರವೇರಿತು.

ಶ್ರೀ ಯು. ಬಿ. ಗೋವಿಂದ ಭಟ್, ಸಾಹಿತ್ಯ ಸೇವಕ ಜಾಲ್ಸೂರು—ಅವರು ಆರಂಭದಲ್ಲಿ ಎಲ್ಲವರಿಗೂ ಸ್ವಾಗತಬಯಸಿ, ಶುಭಕೋರಿದರು. ಶ್ರೀ ಕೆ. ಪಕೀರ ಆಳ್ವರು ಕೊನೆಯಲ್ಲಿ ಅಭಿನಂದಿಸಿದರು.

ಶ್ರೀ ಸೀತಾನದಿ ಗಣಪಯ್ಯ ಶೆಟ್ರಿಗೆ ಸನ್ಮಾನ

ಹಿರಿಯಡ್ಕ, ತಾ. ೮-೨-೧೯೬೯ರಲ್ಲಿ ನಡೆದ ಹಿರಿಯಡ್ಕ ಹೈಯರ್ ಸೆಕೆಂಡರಿ ಶಾಲಾ ವಾರ್ಷಿಕೋತ್ಸವ ಸಮಾರಂಭದ ಮಹಾಸಭೆಯಲ್ಲಿ ಶ್ರೀ ಕೆ. ಆರ್. ಹಂದೆ, ಪ್ರಿನ್ಸಿಪಾಲ್ ಮಣಿಪಾಲ ಮಹಾ ಶಿಕ್ಷಣ ವಿದ್ಯಾಲಯ, ಇವರ ಅಧ್ಯಕ್ಷತೆಯಲ್ಲಿ ಕವಿ, ಸಾಹಿತಿ ಮತ್ತು ನಿವೃತ್ತ ಅಧ್ಯಾಪಕ ಶ್ರೀ ಸೀತಾನದಿ ಗಣಪಯ್ಯ ಶೆಟ್ರನ್ನು ಸನ್ಮಾನಿಸಲಾಯಿತು. ಶ್ರೀ ಕೆ. ವಿಶ್ವನಾಥ ರೈ, ಸಹಾಯಕ ಅಧ್ಯಾಪಕ ಹಿರಿಯಡ್ಕ ಬೋರ್ಡ್ ಹೈಯರ್ ಸೆಕೆಂಡರಿ ಶಾಲೆ, ಇವರು ಪರಿಚಯಾತ್ಮಕ ಭಾಷಣ ಮಾಡಿ, ಅವರ ಸಾಹಿತ್ಯಸೇವೆಯನ್ನೂ ಕಾರ್ಯಶ್ರದ್ಧೆಯನ್ನೂ ಪ್ರಶಂಸಿಸಿ ಶುಭಕೋರಿದರು. ಡಾ. ಬಿ. ಚಂದ್ರಯ್ಯ ಹೆಗ್ಡೆ ಇವರು ಮಾನಪತ್ರ ಓದಿ, ಗುಣಗಾನ ಮಾಡಿದರು. ಅಧ್ಯಕ್ಷರು ಮಾನಪತ್ರ ಮತ್ತು ರೂ. ೬೦೦ರ ನಿಧಿಯನ್ನೊಪ್ಪಿಸಿ, ಅಧ್ಯಾಪಕರೊಬ್ಬರು ಈ ರೀತಿ ಗೌರವಿಸಲ್ಪಡುವುದು ತನಗೆ ತುಂಬಾ ಸಂತೋಷವನ್ನುಂಟುಮಾಡಿದೆ, ಶ್ರೀ ಶೆಟ್ರರ ಸಾಹಿತ್ಯಸೇವೆ ಪ್ರಶಂಸಾರ್ಹ. ಈ ರೀತಿ ಸನ್ಮಾನ ಅಗತ್ಯ. ಅಂತಹ ಸತ್ಕಾರ್ಯವನ್ನು ಹಿರಿಯಡ್ಕ ಮಹಾಜನರು ನೆರವೇರಿಸಿ ಒಂದು ಆದರ್ಶ ಹಾಕಿಕೊಟ್ಟುದು ತುಂಬಾ ಸಂತೋಷ. ಇಂತಹ ಕಾರ್ಯಗಳು ಮುಂದೆ ಆಗಾಗ ನೆರವೇರಲೆಂದು ಹಾರೈಸಿದರು. ಶ್ರೀ ಗಣಪಯ್ಯ ಶೆಟ್ಟರು ತನ್ನನ್ನೀ ರೀತಿ ಗೌರವಿಸಿದುದಕ್ಕಾಗಿ ಕೃತಜ್ಞತೆಯನ್ನರ್ಪಿಸುತ್ತಾ, ಹಿರಿಯಡ್ಕದ ಮಹಾಜನರ ಹೃದಯವೈಶಾಲ್ಯ, ಗುಣಗ್ರಾಹಕತ್ವವನ್ನು ಕೊಂಡಾಡಿ ಇದರಲ್ಲಿಯೂ ದೈವಕೃಪೆ, ಇದರಿಂದ ತಾನು ಉತ್ಸಾಹಗೊಂಡಿರುವನಲ್ಲದೆ ಇನ್ನೂ ಕೈಲಾದಷ್ಟು ದುಡಿವೆನೆಂದು ಆಶ್ವಾಸನವಿತ್ತರು. ಇನ್ನಿತರ ಕಾರ್ಯಕ್ರಮಗಳೊಂದಿಗೆ ಧನ್ಯವಾದ ಸಮರ್ಪಣೆ ನಡೆಯಿತು.

ಒಂದು ಸಮಸ್ಯೆ

"ಮಕ್ಕಳ ಮೂರಾವರಿ ನಿಲ್ಲಿಸಬೇಕು" ಎಂದು ಸರಕಾರೀ ಆಸ್ಪತ್ರೆಯಲ್ಲಿ ಬರೆದಿರಿಸಲಾಗಿದೆ.

"ನಾಲ್ಕು ಎರಡು, ವರ್ಷ ಪ್ರಾಯದವರನ್ನು ನಿಲ್ಲಿಸಬಹುದು; ಆದರೆ ಮೂರು ತಿಂಗಳ ಮಗುವನ್ನು ನಿಲ್ಲಿಸುವುದು ಹೇಗೆ? ...."—ಓರ್ವ ಸ್ತ್ರೀ ತನ್ನ ನೆರೆಮನೆಯವಳ ಕೂಡೆ ವಿಚಾರಿಸಿದಳು.

— ಎಚ್. ಎಂ. ಶ್ರೀಕೃಷ್ಣ

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾರ್ಟಿಯವರ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

READ & ADVERTISE IN NAVAYUGA WEEKLY

ಇಬ್ಬರೊಳಗಿನ ಭೇದ

(ಎರಡನೇ ಪುಟದಿಂದ)

ನಿನ್ನನ್ನು ಅವರು ಜೀವಂತ ಇಡಲಿಕ್ಕಿಲ್ಲ. ನೀನು ನನ್ನೊಡನೆ ಬಾ. ಹಂಚಿಕೆಯನ್ನು ಹೇಳಿ ಕೊಡುತ್ತೇನೆ' ಎಂದು ಕರೆದುಕೊಂಡು ಹೋದರು.

ದೇಸಾಯಿಯವರು ಪ್ರಾಣೇಶನನ್ನು ಕರೆದುಕೊಂಡು ಹೋಗಿ ಚಿಕ್ಕವನೊಡನೆ ಹೀಗೆ ಹೇಳಿದರು.

"ನಾವು ವನದಲ್ಲಿ ಮೂಲಿಕೆ ಕೀಳುತ್ತಾ ಇದ್ದಾಗ ಸಾಲ್ಕರು ಬಂದು ಮುತ್ತಿಗೆ ಹಾಕುತ್ತಿದ್ದರು. ಆಗ ಹಿರಿಯ ಮುದುಕರೊಬ್ಬರು ಬಂದು ಈಗ ನಾವು ಹೀಗೆ ಮಾಡಿದರೆ ಕೆಲಸ ಕೆಡುತ್ತದೆ. ಅದಕ್ಕೆ ಬೇರೆ ಉಪಾಯ ಕೆಲ ಸಮಯದಲ್ಲಿ ಹೇಳುತ್ತೇನೆಂದರು. ಆಗ ಅವರು ನನ್ನನ್ನು ಬಿಟ್ಟರು ಎಂತ ಹೇಳಿ ಮೂಲಿಕೆಯನ್ನು ಕೊಟ್ಟು' ಎಂದರು.

ದೇಸಾಯಿಯವರು ಪ್ರಸಿದ್ಧ ವ್ಯಾಪಾರಿಗಳು. ಅಂದು ಅವರು ವ್ಯಾಪಾರವನ್ನು ಮುಗಿಸಿಕೊಂಡು ಬರುವಾಗ ಕೇಳಿಸಿಕೊಂಡ ಮಾತನ್ನು ಪ್ರಾಣೇಶನಿಗೆ ಹೇಳಿದ್ದರೂ ಅವನು ಯಾರೆಂದು ಇವರಿಗೆ ಗೊತ್ತಿರಲಿಲ್ಲ. ಪ್ರಾಣೇಶನು ತನ್ನ ಪರಿಚಯ ಹೇಳಿದಾಗ ತನ್ನ ಮಿತ್ರ ದುಷ್ಯಂತನ ಮಗನೆಂದು ತಿಳಿಯಿತು. ಇನ್ನೂ ತಾನು ಉದಾಸೀನ ಮಾಡಿದರೆ ಮಿತ್ರ ಮಗನನ್ನು ಉಳಿಸಿಕೊಳ್ಳಬೇಕಾದೀತೆಂದು, ಕೂಡಲೆ ಲಕ್ಷ್ಮೀಪಂಚೆ ಕೊಟ್ಟುಕೊಂಡು ದುಷ್ಯಂತರಾಯರಲ್ಲಿಗೆ ಹೊರಟರು ದೇಸಾಯಿಯವರು.

ಲೋಕಾಭಿರಾಮದ ಮಾತಾಡಿದ ನಂತರ ದೇಸಾಯಿಯವರು ದುಷ್ಯಂತರಾಯರನ್ನು ಏಕಾಂತಕ್ಕೆ ಕರೆದುಕೊಂಡು ಹೋಗಿ ಅಂದು ಘಟಿಸಿದುದೆಲ್ಲ ಹೇಳಿ ಇಂದು ನಾಳೆಯೊಳಗೆ ಇರಬಹುದಾದ ಅಪಾಯವನ್ನು ಸೂಚಿಸಿ ಲತಾಳಿಗೆ ಈ ವಿಷಯ ತಿಳಿಯದಂತೆ ಇರಬೇಕೆಂದರು.

ದುಷ್ಯಂತರಾಯರು ಮಗನನ್ನು ಕರೆದು ವಿಷಯವನ್ನೆಲ್ಲಾ ಕೇಳಿದ ನಂತರ ರಾತ್ರಿ ಊಟ ಮಾಡದಂತೆ ತಿಳಿಸಿದರು.

ಲತಾಳಿಗೆ ಪ್ರಾಣೇಶ ಮರಳಿ ಬಂದಾಗ ಇದರಲ್ಲಿ ಏನೋ ನಡೆಯಬಾರದ್ದು ನಡೆದಿದೆ ಎಂದು ತೋರಿತು. ಇನ್ನೂ ತಾನು ಉದಾಸೀನ ಮಾಡಿದರೆ ತನ್ನ ಬಾಳಿಗೆ ಬರುತ್ತದೆ ಎಂದು ಅಂದೆ ತನ್ನ ಮೈದುನನ ಅಡಿಗೆಯವಳಿಗೆ ಪ್ರಾಣೇಶನ ಅನ್ನಕ್ಕೆ ವಿಷವಿಕ್ಕುವಂತೆ ಮಾಡಿದಳು. ಅದರಂತೆ ರಾತ್ರಿ ಅಡಿಗೆಯವಳು ವಿಷದ ಅನ್ನವನ್ನು ಪ್ರಾಣೇಶನ ಬಟ್ಟಲಿನಲ್ಲಿ ಇಟ್ಟು ಪ್ರಾಣೇಶನನ್ನು ಊಟಕ್ಕೆ ಕರೆಯಲು ಹೋದಾಗ ದುಷ್ಯಂತರಾಯರು ಪ್ರಾಣೇಶನ ಬಟ್ಟಲಿನಿಂದ ಒಂದು ಮುದ್ದೆ ಅನ್ನವನ್ನು ಗಂಡು ನಾಯಿಗೆ ಹಾಕಿದರು.

ಪ್ರಾಣೇಶನು ಹಸಿವಿಲ್ಲವೆಂದು ಹೇಳಿ ಮಲಗಿದನು. ಅನ್ನವನ್ನು ತಿಂದ ನಾಯಿ ಬೆಳಗಿನ ಜಾವಕ್ಕೆ ಪ್ರಾಣ ಬಿಟ್ಟಿತು.

ಹೆಂಡತಿಯ ಕಪಟಕ್ಕೆ ತಕ್ಕ ಶಾಸ್ತಿ ಮಾಡಲು ಸಂಕಲ್ಪಿಸಿದ ದುಷ್ಯಂತರಾಯರು ಪತ್ನಿಯರಿಬ್ಬರನ್ನು ಕರೆದು,

"ಲತಾ, ನಿನ್ನ ಕಪಟ ವಾತ್ಸಲ್ಯದ ಪುತ್ರದ್ರೋಹ ನಾನು ಅರಿತಿದ್ದೇನೆ. ನೀನು ಮತ್ತು ನಿನ್ನ ಮಗ ಉಟ್ಟಬಟ್ಟೆಯಲ್ಲೇ ಹೊರಟುಹೋಗಬೇಕು. ನನಗೆ ನಿನಗೆ ಇಲ್ಲಿಗೆ ಸಂಬಂಧ ಕಡಿಯಿತು. ನನ್ನದ್ದು ಏನಿದ್ದರೂ ಮೀರಾ ಮತ್ತು ಪ್ರಾಣೇಶರಿಗೆ ವಿನಾ ನಿನಗೆ ಚಿಕ್ಕಾಸು ಇಲ್ಲ. ಗಾಡಿ ತಯಾರು ಆಗಿ ಹೋಗಿದ್ದಾನೆ, ಅಣಿಯಾಗು."

ಎಂದರು. ಅಂತರಂಗ ಕೋಪದ ದುಷ್ಯಂತ ರಾಯರು ಇಷ್ಟರ ವರೆಗೆ ಯಾವ ಸುದ್ದಿಗೂ ಇಲ್ಲದ ಮೀರಾ ಪತಿಯ ಕಾಲನ್ನು ಹಿಡಿದು—

"ಪ್ರಾಣಪ್ರಿಯಾ ನನ್ನ ಒಂದೇ ಒಂದು ಬೇಡಿಕೆ ಎನ್ನ, ನೀವು ನೆರವೇರಿಸಿ ಕೊಡಬೇಕು. ನನಗಾಗಿ ನನ್ನ ತಂಗಿಯ ಅವಿವೇಕವನ್ನು ಮನ್ನಿಸಬೇಕು. ತಂಗಿಯನ್ನು ಬಿಟ್ಟು ನಾನು ಬದುಕಲಾರೆ" ಎಂದು ತಂಗಿಯೊಡನೆ ಇನ್ನೊಂದ ಕಾಲ ಹಿಡಿಯಲು ಹೇಳಿದಳು.

ಮೀರಾ, ಇವು ಎಂತಿದ್ದರೂ ಹುಳು ರಹಿಸಿನ ಸರ್ಪ, ಇದನ್ನು ನೀನು ಸಾಕಿದರೆ ಇವರಿಂದಲೆ ನಿನಗೆ ಅಂತ್ಯ."

ನೀವು ಅವಳನ್ನು ಶಂಕಿಸಿದರೆ ನನ್ನನ್ನು ಶಂಕಿಸಿದಂತೆ. ನೀವು ನನ್ನನ್ನು ಶಂಕಿಸುವುದಿಲ್ಲವಾದರೆ ಅವಳನ್ನು ಶಂಕಿಸಬಾರದು, ನಾನು ಇದ ವರೆಗೆ ಕೇಳದ್ದು ಒಂದೇ ಒಂದು ಬೇಡಿಕೆ. ಇದು ಮುಂದು ನಾನು ಬೇರೆ ಏನೂ ಕೇಳುತ್ತಿದ್ದಿಲ್ಲ, ಈ ಬೇಡಿಕೆಯನ್ನು ನೀವು ಮನ್ನಿಸಲೇಬೇಕು." ಎಂದು ಕಣ್ಣೀರ್ಗರೆದು ಕೇಳಿಕೊಂಡಳು ಮೀರಾ.

"ಇತರ ಸೊಸೆಯರಿಗೂ ಖಂಡಿತ ಹೇಳುತ್ತೇನೆ"

ಕಾಚಿಗುಡ ರೈಲ್ವೆ ಸ್ಟೇಷನ್, ಇದು ಹೈದರಾಬಾದಿನಲ್ಲಿದೆ. ಇದರ ಸಮೀಪದಲ್ಲಿದೆ ಸುಂದರ ನಗರ. ಇದು ಹೆಸರಿಗೆ ಮಾತ್ರ ಸುಂದರ. ಮುಂದೆ ಸುಂದರವಾಗಲಿರುವ ನಗರ ಎನ್ನುತ್ತಾರೆ ಇದನ್ನು ನೋಡಿದವರು. ಸುಂದರ ನಗರದ ಒಂದು ಎಲ್ಲೆಯ ಕ್ವಿಡೆ ರೇಲ್ವೆ ನೌಕರರ ಸಾಲುಮನೆ. ಇಲ್ಲಿದೆ ಗೋವಿಂದಯ್ಯನವರ ವಸತಿ. ಗೋವಿಂದಯ್ಯ ಟ್ರೇಲಿಂಗ್ ಟಿಕೇಟ್ ಇನ್ಸ್‌ಪೆಕ್ಟರ್‌ರು. ಇವರಿಗೆ ನಾಲ್ಕು ಮಕ್ಕಳು. ಮೊದಲನೆಯವ ಬ್ರಹ್ಮಾನಂದ ರಾವ್, ಎರಡನೆಯವಳು ಜಯಲಕ್ಷ್ಮಿ. ಇದ್ದು ಈಗಾಗಲೇ ಶಾಲೆಗೆ ಸೇರಿದ್ದಾರೆ. ಶ್ರೀಧರ ಕೊನೆಯ ಮಗು. ಇನ್ನೂ ಒಂದು ವರುಷ. ಮಕ್ಕಳನ್ನು ಹೆತ್ತು ಹೆತ್ತು ಸಾಕಿ ಸಲಹಿದ ಶ್ರೀಮತಿ ಸುಬ್ಬಲಕ್ಷ್ಮಿಯವರಿಗೆ ಮಕ್ಕಳ ಭವಿಷ್ಯದ ಬಗ್ಗೆ ಸದಾ ಚಿಂತೆ.

ಹೀಗೆಯೇ ವರ್ಷ ಬಿಟ್ಟು ವರ್ಷ ಹೆರಿಗೆಯಾಗುತ್ತಾ ಬಂದರೆ ಹೇಗೆ ಜೀವಿಸಲಿ ಎಂಬುದು ಗೋವಿಂದಯ್ಯನವರ ತಲೆಯನ್ನೂ ಕೊರೆಯುತ್ತಿತ್ತು. ಆದರೆ ರೈಲು ಹತ್ತಿ ಟಿಕೇಟ್ ಚೆಕ್ಕಿಂಗ್ ಶುರುಮಾಡಿದರೆಂದರೆ ಅವರಿಗೆ ಮನೆಯ ಚಿಂತೆ ಕಾಡುತ್ತಿದ್ದಿಲ್ಲ. ಆದರೂ ಸುಬ್ಬಲಕ್ಷ್ಮಿಗೆ ಅಲ್ಲಿ ಇಲ್ಲಿ ಹೋಗುವಾಗ ಎದ್ದು ಕಾಣುತ್ತಿದ್ದ "ಮಿತ ಸಂತಾನ ಸುಖದ ಸೋಪಾನ—ಒಂದೋ ಎರಡೋ ಬೇಕು ಮೂರಾದರೆ ಸಾಕು" ಇತ್ಯಾದಿ ಫಲಕಗಳನ್ನು ಓದಿದಾಗ ತನಗೂ ಎರಡೇ ಮಕ್ಕಳಾಗಿದ್ದರೆ ಚೆನ್ನಾಗಿತ್ತು ಅನಿಸುತ್ತಿತ್ತು. ಅದರಲ್ಲೂ ರೇಡಿಯೋದಲ್ಲಿ ಬರುತ್ತಿದ್ದ ಸಹಿತವಾಣಿ—ಮಹಿಳೆಯರ ಕಾರ್ಯಕ್ರಮದಲ್ಲಿ ಕೇಳಿದಾಗ ಚಿಕ್ಕ ಸಂಸಾರವೇ ಚೊಕ್ಕ ಸಂಸಾರವೆಂದು ಮನಗಾಣುತ್ತಿತ್ತು. ಸುಬ್ಬಲಕ್ಷ್ಮಿ ತನ್ನ ತಂದೆ ತಾಯಿಗಳಿಗೆ ಒಬ್ಬಳೇ ಮಗಳು. ಆದರೆ ಅವರಿಗೆ ಮೂವರು ಸೋದರರಿದ್ದಾರೆ. ಇವರಿಗೂ ಮೂರು ನಾಲ್ಕು ಮಕ್ಕಳು. ಜೀವನಕ್ಕೆ ಕಷ್ಟ. ಎಷ್ಟೇ ದುಡಿದರೂ ಹೊಟ್ಟೆ ಬಟ್ಟೆಗೆ ಸಾಕಾಗುವುದು ಕಷ್ಟ. ದವಸಧಾನ್ಯಗಳ ಬೆಲೆ ಏರುತ್ತಾ ಬರುತ್ತಿದೆ. ಆದಾಯಕ್ಕಿಂತ ವೆಚ್ಚವೇ ಹೆಚ್ಚು.

ಗೋವಿಂದಯ್ಯನವರಿಗೆ ಕುಟುಂಬ ಯೋಜನೆಯ ವಿಚಾರ ಓದಿ ಕೇಳಿ ಗೊತ್ತಿದೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದ ಇವರಿಗೆ ತುಂಬ ಆಶೆ. ಆದರೆ ಡಾಕ್ಟರರು ಪರೀಕ್ಷಿಸಿದಾಗ ಪೆನ್ಸಿಲಿಯನ್ ಇಂಜಕ್ಷನ್ ಇವರಿಗೆ ಹಿಡಿಸುವುದಿಲ್ಲ ಎಂದರು.

ಸುಬ್ಬಲಕ್ಷ್ಮಿಯವರಿಗೆ ಈ ಸುದ್ದಿ ತಿಳಿದುಹೋಯಿತು. ತಾನೇ ಆಪರೇಶನ್ ಮಾಡಿಸಿಕೊಳ್ಳುತ್ತೇನೆ ಎಂದು ನಿಶ್ಚಯ ಮಾಡಿಕೊಂಡರು.

ಡಿಸೆಂಬರ್ 17 ಇಂದೇ ಸುಬ್ಬಲಕ್ಷ್ಮಿಯವರಿಗೆ ಆಪರೇಷನ್ ನಡೆಯಿತು. ಮುಂದೆ ಮಕ್ಕಳಾದರೆ ಹೇಗೆ ಅವನ್ನು ಕಾಪಾಡಲಿ ಎಂಬ ಚಿಂತೆ ದೂರವಾಯಿತು. ಈಗ ಚೆನ್ನಾಗಿದ್ದಾರೆ.

"ಮಕ್ಕಳು ಹೆಚ್ಚಿದ್ದರೆ ತುಂಬ ಕಷ್ಟ. ಡಾಕ್ಟರರ ಸಲಹೆಯಂತೆ ನಾನೇ ಆಪರೇಶನ್ ಮಾಡಿಸಿಕೊಂಡೆ." ಎಂದರು ಸುಬ್ಬಲಕ್ಷ್ಮಿ.

"ಬಹಳ ಒಳ್ಳೆಯದು. ನನ್ನ ಇತರ ಸೊಸೆಯಂದಿರಿಗೂ ಆಪರೇಶನ್ ಮಾಡಿಸಿಕೊಳ್ಳುವಂತೆ ಖಂಡಿತ ಹೇಳುತ್ತೇನೆ"— ಎಂದರು ಸುಬ್ಬಲಕ್ಷ್ಮಿಯವರ ಅತ್ತೆ ಮಲ್ಲಮ್ಮನವರು, 'ಈ ನಾಲ್ಕು ಮಕ್ಕಳನ್ನು ಚೆನ್ನಾಗಿ ಸಾಕಿಕೊಂಡರೆ ಸಾಕು. ಇವರನ್ನು ದೇವರು ನಡೆಸಿಕೊಂಡು ಬಂದರೆ ನಾನು ಧನ್ಯ" ಎಂದು ಗಂಭೀರವಾಗಿ ಸುಬ್ಬಲಕ್ಷ್ಮಿ ನುಡಿದಾಗ ಮಕ್ಕಳು ಎವೆ ಇಕ್ಕಿ ಬಂದರು. ಒಬ್ಬೊಬ್ಬನೇ ಅಪ್ಪಿಕೊಂಡು ಚಿತ್ರಕ್ಕೆ ನಿಂತರು. ಕೊನೆಯ ಮಗುವನ್ನು ತೊಡೆಯಲ್ಲಿರಿಸಿಕೊಂಡಾಗ ಸುಬ್ಬಲಕ್ಷ್ಮಿಯವರ ಕಣ್ಣುಗಳಲ್ಲಿ ನೀರು ತುಂಬಿತ್ತು.

ಗೋವಿಂದಯ್ಯನವರು ಟಿಕೆಟ್ ಚೆಕ್ ಮಾಡುತ್ತಿದ್ದ ರೈಲು ನಿಲ್ದಾಣದಿಂದ ಸಿಳ್ಳು ಹಾಕುತ್ತಾ ಸಾಗುತ್ತಿತ್ತು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

P. & S. C. 2/1969.

ಸುಂದರಿ ಭಂಡಾರಿ — ಅರ್ಜಿದಾರೆ.

1. ತ್ಯಾಂಪು ಹೆಂಗ್ಸು; 2. ಅಪ್ಪಿ ಹೆಂಗ್ಸು; 3. ಕೃಷ್ಣ ಭಂಡಾರಿ; 4. ಪದ್ಮಾವತಿ ಹೆಂಗ್ಸು; 5. ಲೀಲಮ್ಮ ಹೆಂಗ್ಸು — ಎದುರಿ.

ಎದುರಿಗಳ ಇತರ ಸಮಸ್ತರಿಗೆ ಈ ಮೂಲಕ ತಿಳಿಸುವದೇನೆಂದರೆ—

1ನೇ ಎದುರಿಯ ಗಂಡ, ಅರ್ಜಿದಾರೆ ಮತ್ತು 2ರಿಂದ 5ನೇ ವರೇಗಿನ ಎದುರಿಯ ತಂದೆ ದಿ॥ ಲಿಂಗಪ್ಪ ಭಂಡಾರಿ ಯವರಿಗೆ ಬರತಕ್ಕ ಅರ್ಜಿಯಲ್ಲಿ ಕಾಣಿಸಿದ ರೂ. 1500-00 ನ್ನು ವಸೂಲು ಮಾಡುವರೆ ತನಗೆ Succession Certificate ಕೊಡಿಸಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 21-2-1969ಕ್ಕೆ ಇಟ್ಟಿದೆ. ಆಕ್ಷೇಪ ಇದ್ದವರು ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸ ಕೊಡತಕ್ಕದ್ದು. ತಪ್ಪಿದ್ರೆ ಸದ್ರಿಯವರ ಗೈರುಹಾಜರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಿಯದೆ.

K. S. KAMATH,
Advocate for Petitioner.

Karkala, 8-2-69.

ದಕ್ಷಿಣ ಕನ್ನಡದ ಮೂಡಣ ಮಲೆನಾಡ ಪ್ರದೇಶ—ಬೆಳ್ತಂಗಡಿಯಲ್ಲಿ,

ನಿಮ್ಮ ಸ್ವಾಗತಕ್ಕೆ ಸರ್ವ ಸೌಕರ್ಯಗಳಿಂದ ನವೀನ ಆಕರ್ಷಣೆಗಳಿಂದ ಸಿದ್ಧವಾಗಿರುವ

ಹೋಟೆಲ್ ಸಂಗಂ

ಬಸ್ ಸ್ಟ್ಯಾಂಡು, ಬೆಳ್ತಂಗಡಿ

ಅತ್ಯುತ್ತಮ ಊಟ, ಉಪಾಹಾರ ಹಾಗೂ ವಸತಿ ಗೃಹ
ಗಾಳಿ ಬೆಳಕುಗಳಿಂದೊಡಗೂಡಿದ ಪ್ರಶಾಂತ ವಾತಾವರಣ.

ಮಂಗಳೂರು, ಬಂಟವಾಳ — ಪುತ್ತೂರು, ಉಪ್ಪಿನಂಗಡಿ — ಉಡುಪಿ, ಕಾರ್ಕಳ ಮೂಡಬಿದ್ರಿ — ಬಂಗಾಡಿ, ಕುದುರೆಮುಖ, ನಾವೂರು — ಚಾರ್ಮಾಡಿ ಮುಂಡಾಜೆ — ಉಜಿರೆ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಹೋಗುವಾಗಲೂ ಅಲ್ಲಿಂದ ಬರುವಾಗಲೂ ಬರಲೇಬೇಕಾದ ಸಂಗಮ ಕೇಂದ್ರ

ಹೊಟೆಲ್ ಸಂಗಂ

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

A. S. 30/65.

ಚಂದ್ರಶೇಖರಾಚಾರ್ಯ — ಅಪ್ಪೆಲಾಂಟ ಮತ್ತು

ಸುಬ್ರಾಯಾಚಾರ್ಯ — — ಎದುರು ಯವರೆಗಳಿಗೆ

4ನೇ ಎದುರಿ—ಅನಂತಕೃಷ್ಣ, ಸುಬ್ರಾಯಾಚಾರ್ಯರ ಮಗ, ಕುಂದಾಪುರ ತಾಲ್ಲೂಕು ಹಾಲಾಡಿ ಗ್ರಾಮ, ಹಾಲಾಡಿ ಪೋಸ್ಟು. ಇವರಿಗೆ—

ಮೇಲಿನ ಅಪ್ಪೆಲಾಂಟು ಕುಂದಾಪುರ O. S. 361/59 ನೆ ತಾ. 31-12-64ರ ತೀರ್ಪಿನ ಮೇಲೆ ಮಾಡಿದ ಅಪೀಲಿನಲ್ಲಿ ನಿಮ್ಮ ವಿಳಾಸ ಹಿಡಿದು ನೋಟೀಸು ಜ್ಯಾರಿಯಾಗದ ಕಾರಣ ನಿಮಗೆ ಈ ಮೂಲಕ ಪತ್ರಿಕಾ ಮಾಡಿಯದೆ. ಆದ್ದರಿಂದ ನಂತರ ಆಕ್ಷೇಪಣೆ ಇರುವುದಾದರೆ ನೀವು ತಾ. 17-3-69ಕ್ಕೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬೇಕು. ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಎಂದು ಪರಿಗಣಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla,
Advocate for Appellant,

Udipi, 10/2/69.

NAVAYUGA 20—2—1969
Registered with the Registrar of News Papers for India under No. R. N. 3546/'57

REGD: No: B. G: 176
LICENCE No. 33
Licensed to Post without Prepayme

ಸೋಂಕು ರೋಗಗಳ ವಿರುದ್ಧ ಸತತ ಸಮರ

ಬರೆದವರು : ಶ್ರೀ ಪಿ. ಕೆ. ದೊರೈಸ್ವಾಮಿ

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಾವು ಎದುರಿಸಬೇಕಾಗಿದ್ದ ಆರೋಗ್ಯ ವಿಷಯದ ಸಮಸ್ಯೆಗಳು ಹಲವಾರು. ಜನಸಂಖ್ಯಾ ಪ್ರಮಾಣದಿಂದ ನೋಡಲಾಗಿ ಸರಕಾರೀ ಆಸ್ಪತ್ರೆಗಳ ಸೇವೆ ಅತ್ಯಲ್ಪ. ಸಾರ್ವಜನಿಕ ಆರೋಗ್ಯ ಅಧಿಕಾರಿಗಳ ಕಾರ್ಯಕ್ಷೇತ್ರವೂ ಪರಿಮಿತ. ಹೆಚ್ಚಾಗಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ ವಿಷಯದ ಬಗೆಗೆ ಮಾತ್ರ ಅವರು ಕ್ರಮ ಕೈಕೊಳ್ಳುತ್ತಿದ್ದರು. ಇಂದು [illegible] ಬದಲಾಗಿದೆ.

ನೂತನ ದಿಗಂತ

ಸ್ವಾತಂತ್ರ್ಯ ಬಂದ ಮೇಲೆ ಕಲ್ಯಾಣ ರಾಜ್ಯ ಕಟ್ಟಲು ನಾವು ಬದ್ಧಕಂಕಣರಾದೆವು. ಪಂಚವಾರ್ಷಿಕ ಯೋಜನೆಗಳು ಕಲ್ಯಾಣ ರಾಜ್ಯ ರೂಪಿಸಲೆಂದೇ ರೂಪಗೊಂಡವು. ನಾವು ದೇಶದ ಸಮಗ್ರ ಕಲ್ಯಾಣ ದೃಷ್ಟಿಯನ್ನೇ ಗುರಿಯನ್ನಾಗಿ ಇಟ್ಟುಕೊಂಡಿರುವೆವು.

ಮಲೇರಿಯಾ, ಸಿಡುಬು, ಕಾಲರಾ, ಮತ್ತು ಕ್ಷಯ ಮುಂತಾದ ಸೋಂಕು ರೋಗಗಳ ಹತೋಟಿ ಅಥವಾ ನಿರ್ಮೂಲನಕ್ಕೆಂದು ಪಂಚವಾರ್ಷಿಕ ಯೋಜನೆಗಳಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಲಾಯಿತು. ವೈದ್ಯಕೀಯ ಶುಶ್ರೂಷೆಗೆ ಹೆಚ್ಚು ಅನುಕೂಲತೆಗಳನ್ನು ಒದಗಿಸಲೂ, ವೈದ್ಯಕೀಯ ಮತ್ತು ದಾದಿ ವರ್ಗದ ಸಿಬ್ಬಂದಿಯ ತರಬೇತಿಗಾಗಿಯೂ ಕ್ರಮಕೈಕೊಳ್ಳಲಾಯಿತು. ರಾಷ್ಟ್ರೀಯ ಜಲ ಸರಬರಾಜು ಮತ್ತು ನೈರ್ಮಲ್ಯ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಮಲೇರಿಯಾ

ಮಲೇರಿಯಾ ದೇಶದ ಪ್ರಥಮ ಆರೋಗ್ಯ ಸಮಸ್ಯೆಯಾಗಿತ್ತು. ಇದರ ಹಾವಳಿಯಿಂದ ದೇಶ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿತ್ತು. ಪ್ರತಿ ವರುಷವೂ ಹತ್ತು ಲಕ್ಷ ಜನರು ಈ ಭಯಂಕರ ರೋಗಕ್ಕೆ ಬಲಿಯಾಗುತ್ತಿದ್ದರು. ಕಾರಣ ರಾಷ್ಟ್ರೀಯ ಸರಕಾರ ಮಲೇರಿಯಾ ಹತೋಟಿಗೆ ಸ್ವಾಭಾವಿಕವಾಗಿಯೇ ಹೆಚ್ಚಿನ ಆದ್ಯತೆ ನೀಡಿತು. ಮಲೇರಿಯಾ ನಿರ್ಮೂಲನಕ್ಕೆಂದು ಕೈಕೊಂಡ ಉಪಾಯಗಳು ಈ ರೋಗದ ಉಚ್ಚಾಟನೆಗೆ ತುಂಬಾ ಸಹಾಯವಾಗಿವೆ. 1953—54ರಲ್ಲಿ ಈ ರೋಗ ಜನಸಂಖ್ಯೆಯ ಶೇಕಡ 10.8ರಷ್ಟು ಜನರಿಗೆ ತಗುಲಿದ್ದರೆ, 1967ರಲ್ಲಿ ಶೇಕಡ 0.04 ಜನರಿಗೆ ಮಾತ್ರ ಈ ರೋಗ ಬಂದಿದೆ. ಈ ಸಾಧನೆಯಿಂದಾಗಿ, ದೇಶದ ಬೇಸಾಯಗಾರರ ಆರ್ಥಿಕ ಸ್ಥಿತಿಗತಿ ಸುಧಾರಿಸಲು ಶಕ್ಯವಾಗಿದ್ದು, ಕಳೆದ ಸಮೀಕ್ಷೆ ನಡೆಸಿದಾಗ ಮಲೇರಿಯಾ ಹತೋಟಿಗೆಂದು ಖರ್ಚಾದ ಪ್ರತಿ ಒಂದು ರೂಪಾಯಿಯು ಒಬ್ಬ ಗ್ರಾಮಸ್ಥನ ೯೭ ಪೈಸೆ ಗಳಿಸಲು ಸಹಾಯಕವಾಗಿದೆ ಎಂದು ತಿಳಿದು ಬಂದಿದೆ.

೧೯೭೫-೭೬ರ ಹೊತ್ತಿನಲ್ಲಿ ಮಲೇರಿಯಾ ಸಂಪೂರ್ಣ ನಾಶವಾಗುವ ನಿರೀಕ್ಷೆಯಿದೆ.

ಸಿಡುಬು ರೋಗ

ಮಲೇರಿಯಾವನ್ನು ಬಿಟ್ಟರೆ ದೇಶದ ಎರಡನೇ ದೊಡ್ಡ ರೋಗ ಸಿಡುಬು. ಸಿಡುಬು ಪ್ರತಿಬಂಧಕ ಮದ್ದು ಅತ್ಯಂತ ಪ್ರಭಾವಶಾಲಿ. ಹೀಗಿದ್ದೂ ಈ ರೋಗ ತನ್ನ ಹಿಡಿಯನ್ನು ಎತ್ತುತ್ತಲೇ ಇದೆ. 1962ರಲ್ಲಿ ಸಿಡುಬು ನಿರ್ಮೂಲನ ಕಾರ್ಯಕ್ರಮವನ್ನು ಶುರು ಮಾಡಲಾಯಿತು. 1968 ಅಕ್ಟೋಬರ 5ರ ವರೆಗೆ 95.20 ದಶಲಕ್ಷ ಮಕ್ಕಳಿಗೆ ಪ್ರಥಮ ವೈಲಿ-ಚುಚ್ಚನ್ನು, 529.16 ದಶಲಕ್ಷ ಜನರಿಗೆ ಎರಡನೇ ಬಾರಿಯ ಚುಚ್ಚನ್ನು ಕೊಡಲಾಗಿದೆ. ಇಷ್ಟು ಜನರಿಗೆ ಪ್ರತಿಬಂಧಕ ವೈಲಿ ಚುಚ್ಚುಮದ್ದನ್ನು ಕೊಡಲಾಗಿದ್ದರೂ, ಈ ಮಹಾ ರೋಗ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಲೇ ಇದೆ. ಜನತೆಯ ಒಂದು ಗಣನೀಯ ಭಾಗವು ಇನ್ನೂ ವೈಲಿ ಚುಚ್ಚನ್ನು ಹಾಕಿಸಿಕೊಂಡಿಲ್ಲವೆಂದೇ ಇದರ ಅರ್ಥ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಭಾರತ ಸರಕಾರವು ಸಂಯುಕ್ತವಾಗಿ ನೇಮಿಸಿದ್ದ ತಂಡದ ವರದಿಯ ಶಿಫಾರಸಿನ ಮೇರೆಗೆ ಈ ಕಾರ್ಯಕ್ರಮವನ್ನು 1969-70ರಲ್ಲಿ ಪುನರ್ಘಟಿಸಲಾಗುವದು. ಎಲ್ಲ ಹದಿನಾಲ್ಕು ವರುಷದ ಕೆಳಗಿನವರಿಗೆ ವೈಲಿ ಹಾಕುವದರ ಬಗ್ಗೆ ಎಲ್ಲ ಕ್ರಮ ಕೈಕೊಳ್ಳಬೇಕೆಂದು ಉದ್ದೇಶಿಸಲಾಗಿದೆ. ಯುನಿಸೆಫ್‌ದವರು ನೀಡಲಿರುವ ಉಪಕರಣಗಳ ಸಹಾಯದೊಂದಿಗೆ ಚತುರ್ಥ ಯೋಜನೆ ಮುಗಿಯುವ ಮುಂಚೆ ವೈಲಿ ಮದ್ದನ್ನು ತಯಾರಿಸಲು ದೇಶ ಸ್ವಯಂಪೂರ್ಣತೆ ಹೊಂದಲು ಕ್ರಮ ಕೈಕೊಳ್ಳಲಾಗುತ್ತಿದೆ.

ಕಾಲರಾದ ಹಾವಳಿ

ಐತಿಹಾಸಿಕ ಕಾಲದಿಂದಲೂ ಕಾಲರಾ ಬೇನೆ ಭಾರತ ಉಪಖಂಡವನ್ನು ಘಾಸಿಗೊಳಿಸುತ್ತಲೇ ಇದೆ. ಪಶ್ಚಿಮ ಬಂಗಾಲ, ಬಿಹಾರ, ಒರಿಸ್ಸಾ, ಮದ್ರಾಸ, ಮೈಸೂರು, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ವರುವರುಷವೂ ಕಾಲರಾ ಕಾಣಿಸಿಕೊಳ್ಳುತ್ತಿದೆ. ಅಲ್ಲದೆ ಇತರತ್ರವೂ ಈ ರೋಗ ಹಬ್ಬುತ್ತಿರುವದು ಕಳವಳಕ್ಕೆ ಎಡೆ ಮಾಡಿದೆ. ಉತ್ತಮ ಗಟಾರ ವ್ಯವಸ್ಥೆ, ಸುರಕ್ಷಿತ ಶುದ್ಧ ಕುಡಿಯುವ ನೀರಿನ ಪೂರೈಕೆ, ಮತ್ತು ವಾಸಸ್ಥಳದ ನೈರ್ಮಲ್ಯ ಈ ವಿಷಯಗಳಲ್ಲಿ ಸುಧಾರಣೆ ಮಾಡದ ಹೊರತು ಕಾಲರಾ ರೋಗವನ್ನು ಖಾಯಂ ಆಗಿ ನಿರ್ನಾಮ ಮಾಡಲು ಸಾಧ್ಯವಿಲ್ಲ. ಕಾರಣ ಮೇಲಿನ ಮೂರು ವಿಷಯಗಳಲ್ಲಿ ಸಮಗ್ರ ಸುಧಾರಣೆ ಕೈಕೊಳ್ಳಬೇಕು. ಚತುರ್ಥ ಯೋಜನೆಯಲ್ಲಿ ಕಾಲರಾ ನಿರ್ಮೂಲನಕ್ಕೆ ಸಂಯೋಜಿತ ಕಾರ್ಯಕ್ರಮವನ್ನು ಸೂಚಿಸಲಾಗಿದೆ. ಬೇಕಾದಷ್ಟು ಪ್ರಮಾಣದಲ್ಲಿ ಕಾಲರಾ ವ್ಯಾಕ್ಸೀನನ್ನು ದೇಶದಲ್ಲಿಯೇ ಸಿದ್ಧಪಡಿಸಲಾಗಿದೆ.

ಇತರ ರೋಗಗಳು

ಪ್ರತಿ ವರುಷವೂ ಐದು ಲಕ್ಷ ಜನರು ಕ್ಷಯ ರೋಗದಿಂದ ಸಾಯುವರೆಂದೂ ಇಪ್ಪತ್ತೈದು ಲಕ್ಷ ಜನರು ಈ ರೋಗಕ್ಕೆ ಈಡಾಗುವರೆಂದೂ ಅಂದಾಜು ಮಾಡಲಾಗಿದೆ. 1949ರಲ್ಲಿಯೇ ಕ್ಷಯ ರೋಗ ಹತೋಟಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗಿದೆ. ಬಿ.ಸಿ.ಜಿ. ಚುಚ್ಚುಮದ್ದು ಮತ್ತು ಕ್ಷಯರೋಗ ಶುಶ್ರೂಷ ಕೇಂದ್ರಗಳ ವಿಸ್ತರಣೆ ಮೊದಲಾದ ಉಪಾಯಗಳನ್ನು ಅಧಿಕ ಪ್ರಮಾಣದಲ್ಲಿ ಕೈಕೊಳ್ಳಲಾಗಿದೆ. ಬಿಸಿಜಿ ಮದ್ದನ್ನು ದೇಶದಲ್ಲಿಯೇ ಈಗ ತಯಾರು ಮಾಡಲಾಗುತ್ತಿದೆ. ಸದ್ಯಕ್ಕೆ ದೇಶದಲ್ಲಿ 302 ಕ್ಷಯ ರೋಗ ಉಪಚಾರ ಕೇಂದ್ರಗಳು ಕೆಲಸ ಮಾಡುತ್ತಿವೆ. ಚತುರ್ಥ ಯೋಜನಾವಧಿಯಲ್ಲಿ ಈಗಿನ ಕೆಲವು ಕ್ಷಯರೋಗ ಉಪಚಾರ ಕೇಂದ್ರಗಳನ್ನು ವಿಸ್ತರಿಸಿ ಬಲಪಡಿಸಲು, ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು, ಐದು ಸಾವಿರ ಹೆಚ್ಚಿನ ಹಾಸಿಗೆಗಳನ್ನು ಆಸ್ಪತ್ರೆಗಳಲ್ಲಿ ಒದಗಿಸಲೂ ಸೂಚಿಸಲಾಗಿದೆ.

ಸಲ್ಫೋನ್‌ಗಳ ಸಹಾಯದಿಂದ ಕುಷ್ಠ ರೋಗವನ್ನು ಹತೋಟಿಗೆ ತರಲು ಸಾಧ್ಯವೆಂದು ಈಗ ಕಂಡು ಬಂದಿದ್ದರಿಂದ, ರೋಗಿಗಳಿಗೆ ಮನೆಯಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿದೆ. [illegible] ಕುಷ್ಠ ರೋಗ ಹತೋಟಿ ಕೇಂದ್ರಗಳನ್ನು ಸ್ಥಾಪಿಸಲು ಮತ್ತು 130 ಸಮೀಕ್ಷಾ ಶಿಕ್ಷಣ ಮತ್ತು ಉಪಚಾರ ಕೇಂದ್ರಗಳನ್ನೂ ಚತುರ್ಥ ಯೋಜನೆಯಲ್ಲಿ ಪ್ರಾರಂಭಿಸಲು ಸೂಚಿಸಲಾಗಿದೆ.

ಫೈಲೇರಿಯಾ ರೋಗವೂ ಹೊಸ ಹೊಸ ಕ್ಷೇತ್ರಗಳಲ್ಲಿಯೂ, ಪಟ್ಟಣ ಮತ್ತು ರಾಜಧಾನಿಗಳಲ್ಲಿಯೂ [illegible] ಕಾಣಿಸಿಕೊಳ್ಳುತ್ತಿದೆ. ಬೆಳೆಯುತ್ತಿರುವ ಔದ್ಯೋಗೀಕರಣ, ಅನುಚಿತ ರೀತಿಯ ನಗರ ಬೆಳವಣಿಗೆ, ಪರಿಸರ ನೈರ್ಮಲ್ಯದ ಅಭಾವ ಇವುಗಳಿಂದಾಗಿ ಈ ರೋಗ ಹೆಚ್ಚು ಹಬ್ಬತೊಡಗಿದೆ. ಇಂದು 73 ಫೈಲೇರಿಯಾ ಹತೋಟಿ ಕೇಂದ್ರಗಳು ಈ ರೋಗದ ವಿರುದ್ಧ ಕಾರ್ಯಾಚರಣೆ ಮಾಡುತ್ತಿವೆ. ಫೈಲೇರಿಯಾ ಹತೋಟಿ ಕಾರ್ಯಕ್ರಮದ ಅಂಗವಾಗಿ ಇದುವರೆಗೂ 63 ಲಕ್ಷ ಜನರು ಔಷಧೋಪಚಾರ ಹೊಂದಿದ್ದಾರೆ. ಈ ರೋಗ ತೀವ್ರವಾಗಿ ಕಾಣಿಸಿಕೊಂಡಿರುವ ಐವತ್ತು ನಗರಗಳಲ್ಲಿ, ಒಳಚರಂಡಿಯೇ ಮೊದಲಾದ ನೈರ್ಮಲ್ಯದ ಕಾರ್ಯಕ್ರಮಗಳನ್ನು ತೀವ್ರವಾಗಿ ಕೈಗೆತ್ತಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಗುಹ್ಯ ರೋಗದ ಹಾವಳಿಯೂ ದೇಶದಲ್ಲಿ ಗಣನೀಯ ಪ್ರಮಾಣದಲ್ಲಿಯೇ ಇದೆ. ತೃತೀಯ ಪಂಚವಾರ್ಷಿಕ ಯೋಜನೆ ಮುಗಿದ ಸಂದರ್ಭದಲ್ಲಿ ವಿವಿಧ ರಾಜ್ಯಗಳಲ್ಲಿ ಸುಮಾರು 262 ಗುಹ್ಯರೋಗ ಉಪಚಾರ ಕೇಂದ್ರಗಳು ಕೆಲಸ ಮಾಡುತ್ತಿದ್ದವು. ಚತುರ್ಥ ಯೋಜನೆಯಲ್ಲಿ ಮತ್ತೆ 110 ಇಂತಹ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಆರೋಗ್ಯದಲ್ಲಿ ಸುಧಾರಣೆ

ಜನರ ಆರೋಗ್ಯ ಮಟ್ಟವು ಗಣನೀಯವಾಗಿ ಸುಧಾರಿಸಿದೆ. 1951ರಲ್ಲಿ ಪ್ರತಿ ಸಾವಿರ ಜನರಲ್ಲಿ ಮರಣ ಪ್ರಮಾಣವು 27.4 ಇದ್ದರೆ, 1967ರಲ್ಲಿ ಈ ಪ್ರಮಾಣವು 16ಕ್ಕೆ ಇಳಿದಿದೆ. ಶಿಶುಗಳ ಮರಣ ಸಂಖ್ಯೆಯೂ ಅರ್ಧದಷ್ಟು ಇಳಿದಿದೆ. 1951ರಲ್ಲಿ ಜನರ ಆಯುಃ ಪ್ರಮಾಣವು 32 ವರುಷವಿದ್ದರೆ ಇಂದು ಈ ಪ್ರಮಾಣ 52 ವರುಷದಷ್ಟಾಗಿದೆ.

ರೋಗಗಳ ಹಾವಳಿಯನ್ನು ನಿರಂತರ ಪ್ರತಿಭಟಿಸುವ ಮತ್ತು ಜನರ ಆಯುರಾರೋಗ್ಯವನ್ನು ವರ್ಧಿಸುವ ಕ್ರಮಗಳನ್ನು ಇನ್ನೂ ಬಲಪಡಿಸಲಾಗುವದೆಂದು ಆಶಿಸಲಾಗಿದೆ.

ಸಣ್ಣ ಸಂಸಾರ — ಸುಖದ ಆಗರ
ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ
— ಇದೀಗ ಪ್ರಕಟವಾಗಿದೆ —
ಮಿತ ಸಂತತಿ
ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.
ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

27—2—1969

೨೦
ಪೈಸೆ

ಒಂದು ದೃಶ್ಯರೂಪಕ

ಯಮಧರ್ಮನ ಎದುರಿನಲ್ಲಿ

— ಶ್ರೀ ರಾಧಾಕೃಷ್ಣ ಪುತ್ತೂರು.

[ಸ್ಟೇಜಿನ ಹಿಂದುಗಡೆ ಯಮಧರ್ಮನ ಓಲಗದ ದೃಶ್ಯ. ಎತ್ತರವಾದ ಆಸನ ಒಂದರಲ್ಲಿ ಸಾಮಾನ್ಯ ವೇಷದ ಯಮಧರ್ಮ. ಮತ್ತೊಂದು ಬದಿಗೆ ಸ್ವಲ್ಪ ತಗ್ಗಾದ ಆಸನದಲ್ಲಿ ಚಿತ್ರಗುಪ್ತ. ನಮ್ಮ ಈಗಿನ ನ್ಯಾಯಾಲಯದಂತೆ. ಮಂದವಾದ ಬೆಳಕು ಅವರ ಮೇಲೆ ಬೀಳುತ್ತಿದೆ. ಅವರಿಬ್ಬರ ನಡುವಿನ ಸಂಭಾಷಣೆ ಮುಗಿಯುತ್ತಾ ಬಂದಂತಿದೆ.]

ಯಮಧರ್ಮ— ಚಿತ್ರಗುಪ್ತರೇ ಮಾನವ ಜೀವಿಗಳ ಧರ್ಮಾಧರ್ಮವನ್ನು ಪರಿಶೀಲಿಸಿ ಅವರವರ ಕರ್ಮಾನುಸಾರ ಶಿಕ್ಷೆ ರಕ್ಷೆಗಳನ್ನೀಯುವುದಕ್ಕಾಗಿಯೇ ನಿಯಮಿಸಲ್ಪಟ್ಟವರು ನಾವು. ಲೀಲಾ ನಾಟಕ ಸೂತ್ರಧಾರಿಯಾದ ಭಗವಂತನ ಆಜ್ಞಾನುವರ್ತಿಗಳು. ಯುಗಗಳುರುಳಿ ಯುಗಗಳಾರಂಭವಾಗುತ್ತಿದೆ. ಇದೀಗ ಕಲಿಕಾಲ. ಇದರಲ್ಲೂ ಎಷ್ಟೋ ವರ್ಷಗಳು ಸಂದು ಹೋಗಿವೆ. ಜನರಲ್ಲಿ ಸದ್ಭಾವನೆ ಮಾಸುವಾಗಿದೆ. ಎಲ್ಲೆಲ್ಲೂ ಅಸತ್ಯ, ವಂಚನೆ, ಕಳ್ಳತನಗಳೇ ತಾಂಡವ ತೊಡಗಿದೆ. ಕಲಿಕಾಲವೆಂದರೆ ಅಧರ್ಮವು ಉಚ್ಚಮಟ್ಟಕ್ಕೇರುವ ಕಾಲವೆಂಬ ಭಾವನೆ ಜನಸಾಮಾನ್ಯರಲ್ಲಿ ಧಾರ್ಮಿಕ ವರ್ಗದಲ್ಲೂ ಉಂಟಾಗಿದೆ.

ಚಿತ್ರಗುಪ್ತ — ಹೌದು ಮಹಾಪ್ರಭೋ.

ಯಮಧರ್ಮ— ಆದ್ದರಿಂದಲೇ ನಮ್ಮ ಕೆಲಸ ಮೊದಲಿಗಿಂತ ಕಷ್ಟಕರವಾಗಿದೆ. ಆದರೂ ಪರಮಾತ್ಮನ ಆಜ್ಞೆಯಂತೆ ನಮ್ಮ ಕೆಲಸಗಳಾಗಲೇ ಬೇಕು. ಭೂಲೋಕದ ಮಾನವರಂತೆ ನಾವೂ ಹರಟುತ್ತಾ ಕರ್ತವ್ಯವನ್ನು ಮರೆಯುವಂತಿಲ್ಲ. ಆದ್ದರಿಂದ....ಈಗ ಯಾವಾತನ ವಿಚಾರಣೆ ನಡೆಯಬೇಕಾಗಿದೆ? ಅವನ ಧರ್ಮ ಕರ್ಮಗಳೇನು? ಎಂದು ವಿವರಿಸಿರಿ. ಅವನನ್ನೀಗ ಕರೆಸಿರಿ.

[ಚಿತ್ರಗುಪ್ತರನ್ನು ಯಮಧರ್ಮನೂ ಚಿತ್ರಗುಪ್ತರು ಬಾಗಿಲ ಕಡೆಯೂ ನೋಡುವರು. ಅನಂತರ ಇಬ್ಬರು ಸಾಮಾನ್ಯ ವೇಷ ಭೂಷಣದ ಯಮದೂತರು, ಸುಮಾರು ಎಪ್ಪತ್ತೈದು ವಯಸ್ಸಾಗಿರಬಹುದಾದ, ಸಾಧಾರಣ ಶರೀರಿಯಾಗಿದ್ದು, ಮುಖದಲ್ಲಿ ಭಸ್ಮ ಇತ್ಯಾದಿಗಳಿಂದಲಂಕೃತನಾಗಿದ್ದು, ನಿಷ್ಠಾವಂತ ಬ್ರಾಹ್ಮಣನಂತೆ ಕಾಣುವ, ಸಾಮಾನ್ಯ ಶ್ರೀಮಂತರು ಧರಿಸುವಂತಹ ಬಟ್ಟೆಬರೆಗಳನ್ನು ಧರಿಸಿರುವವನೊಬ್ಬನನ್ನು ಕರೆತರುವರು. ಯಮದೂತರು ಅವನನ್ನು ಯಮಧರ್ಮನೆದುರು ನಿಲ್ಲಿಸಿ ಎರಡು ಬದಿಗೂ ಸರಿದು ನಿಲ್ಲುವರು. ಆ ವ್ಯಕ್ತಿಯಿರುವ ಕಡೆ ಸ್ವಲ್ಪ ಹೆಚ್ಚು ಬೆಳಕು ಇರಬೇಕು.]

ಚಿತ್ರಗುಪ್ತ— ಇವನೊಬ್ಬ ಬ್ರಾಹ್ಮಣ ಮಹಾಸ್ವಾಮಿ. ಆದರೆ ಬ್ರಾಹ್ಮಣಕಳೆ ಲವಲೇಶವೂ ಇವನಲ್ಲಿಲ್ಲ.

ವ್ಯಕ್ತಿ— (ವ್ಯಕ್ತಿಯ ಮಾತುಗಳು ಸ್ಪಷ್ಟ. ಸಿಟ್ಟುಗಾಬರಿ ಜೊತೆಗೂಡಿದ ನಡುಗುವ ಧ್ವನಿಯಲ್ಲಿ) ಏನು? ದಿನಕ್ಕೆ ಮೂರು ಸರ್ತಿ ಜಪತಪ ಮಾಡುತ್ತಿದ್ದವನು ನಾನು. ನನಗೇ ಬ್ರಾಹ್ಮಣಿಕೆ ಇಲ್ಲವೆಂದರೆ?

ಚಿತ್ರಗುಪ್ತ— ಚಿಕ್ಕಂದಿನಲ್ಲಿಯೇ ಮಹಾ ತುಂಟನಾಗಿದ್ದ. ಪ್ರಾಯಕ್ಕೆ ಬರುವ ಮೊದಲೇ ಆಸ್ತಿಯಲ್ಲಿ ತನ್ನ ಭಾಗವನ್ನು ಕೇಳಿ, ಕೊಡದಾಗ ತನ್ನ ತಂದೆಗೇ ಕೋವಿಯೆತ್ತಿದವನು.

ವ್ಯಕ್ತಿ— ಆಸ್ತಿಯಲ್ಲಿ ನನ್ನ ಪಾಲು ಕೇಳಿದ್ದು ತಪ್ಪೇ? ಅದೇನು ಅವನ ಸ್ವಂತ ಆಸ್ತಿಯಲ್ಲ. ಅಜ್ಜನ ಕಾಲದ್ದು. ಪಾಲು ಕೊಡುವುದಿಲ್ಲವೆಂದಾಗ ಕೋವಿಯೆತ್ತಿದ್ದು ಹೌದು. ಅದು ಹೇಗೆ ತಪ್ಪಾಗುತ್ತದೆ?

ಚಿತ್ರಗುಪ್ತ— ಬ್ರಹ್ಮಚರ್ಯ ವ್ರತದಲ್ಲಿರುವಾಗಲೇ ಸ್ತ್ರೀಸಂಗ ಮಾಡಿದವನು ಅಲ್ಲದೆ........

ವ್ಯಕ್ತಿ— ಇಪ್ಪತ್ತು ವರ್ಷ ಪ್ರಾಯವಾದರೂ ಮದುವೆ ಮಾಡದೆ ಇದ್ದ ತಪ್ಪು ಅಪ್ಪನದು.

ಚಿತ್ರಗುಪ್ತ— ಗೃಹಸ್ಥಾಶ್ರಮಕ್ಕೆ ಬಂದ ವೇಳೆಯೂ ಪರಸ್ತ್ರೀಸಂಗ ಮಾಡಿದ್ದಾನೆ. ಸ್ತ್ರೀಹತ್ಯೆ, ಗೋಹತ್ಯೆ, ಶಿಶುಹತ್ಯೆ, ಬ್ರಹ್ಮಹತ್ಯೆಯೇ ಮೊದಲಾದ ಅನೇಕ ಅಪರಾಧಗಳನ್ನು ಮಾಡಿದ್ದಾನೆ. ಧನಕ್ಕಾಗಿ ಜನಕ್ಕೆ ಮಾಡಿದ ಮೋಸಕ್ಕೆ ಲೆಕ್ಕವಿಲ್ಲ. ಸಾರ್ವಜನಿಕ ದಾರಿಯನ್ನು ಮುಚ್ಚಿಸಿದ್ದಾನೆ. ಗೆಳೆಯರ ನಡುವೆ ಜಗಳ ಹುಟ್ಟಿಸಿ ಲಾಭ ಮಾಡಿಕೊಂಡಿದ್ದಾನೆ. ಹೀಗೆ ಇನ್ನೆಷ್ಟೋ. ಆದ್ದರಿಂದ ಇವನಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಧರ್ಮವನ್ನು ರಕ್ಷಿಸಬೇಕು ಮಹಾಪ್ರಭೋ.

[ಯಮಧರ್ಮರಾಯನು ಸಿಟ್ಟಿನಿಂದ ಹೂಂಕರಿಸುತ್ತಾನೆ. ವ್ಯಕ್ತಿಯ ಮುಖದಲ್ಲಿ ಭಯ ತಲೆದೋರಿ ಮೈ ನಡುಗುತ್ತದೆ. ಸ್ಟೇಜಿನ ಮೇಲೆ ಮೆಲ್ಲನೆ ಕತ್ತಲಾಗುವುದು. ಸ್ಟೇಜಿನ ಮುಂದಿನ ಭಾಗದಲ್ಲಿ ಮಾತ್ರ ಬೆಳಕು. ಆಗ ವ್ಯಕ್ತಿಯು ಸ್ಟೇಜಿನ ಎದುರಿಗೆ ಬಲಬದಿಗೆ ನಿಂತಿರಬೇಕು. ಪ್ರತಿಯೊಂದು ಪಾತ್ರಗಳೂ ಬಂದುಹೋಗುವಾಗ ಕತ್ತಲು ಬೆಳಕಿನ ವ್ಯವಸ್ಥೆಯಿರಬೇಕು. ಪ್ರತಿಯೊಂದು ಪಾತ್ರಗಳೂ ಸ್ವಗತವಾಡುತ್ತಿರುವಾಗ ವ್ಯಕ್ತಿಯ ಮುಖದಲ್ಲಿ ಸಂದರ್ಭಕ್ಕನುಗುಣವಾಗಿ ಭಾವನೆಗಳು ಬದಲಾಗುತ್ತಿರಬೇಕು. ಆಯಾ ಪಾತ್ರಗಳ ಮಾತು ಮುಗಿದನಂತರ ವ್ಯಕ್ತಿ ತನ್ನನ್ನು ಸಮರ್ಥಿಸಿಕೊಳ್ಳುವಂತೆ ಮಾತನಾಡಬೇಕು. ಪ್ರತಿಯೊಂದು ಪಾತ್ರ ಬಂದಾಗಲೂ ಅವುಗಳ ಮೇಲೆ ಬೆಳಕು ವ್ಯಕ್ತಿಯ ಮೇಲೆ ನಸುಗತ್ತಲೆ ಅನಂತರ ವ್ಯಕ್ತಿಯ ಮೇಲೆ ಬೆಳಕು ಆಗುವಂತೆ ವ್ಯವಸ್ಥೆಯಿರಬೇಕು.)

ತರುಣಿ—(ತರುಣಿ ಪ್ರವೇಶಿಸಿ ಗಾಬರಿ ಮತ್ತು ಸಿಟ್ಟಿನಿಂದ) ಹೇ ದೇವರೆ, ಹೀಗಾದರೆ ಈ ಗಂಡಸರನ್ನು ನಂಬುವುದೆಂತು? ಏನೆಲ್ಲಾ ಆಶೆ ತೋರಿಸಿದರು? ಈಗ ಲೋಕಾಪವಾದಕ್ಕೆ ಹೆದರಿ ಯಾರಿಗೋ ಹಣ ಕೊಟ್ಟು ನನ್ನ ಗಂಡನನ್ನಾಗಿ ಮಾಡುವ ಯೋಚನೆ. ಖಂಡಿತವಾಗಿಯೂ ನಾನು ಒಪ್ಪುವುದಿಲ್ಲ. ಮರ್ಯಾದೆ ಹೋದರೂ ತೊಂದರೆಯಿಲ್ಲ. ಅವರ ತಂದೆಯವರಲ್ಲೂ ಊರ ಪಟೇಲರಲ್ಲಿಯೂ ತಿಳಿಸಿಬಿಡುತ್ತೇನೆ. (ಜೋರಾಗಿ ನಿರ್ಗಮಿಸುವಳು)

ವ್ಯಕ್ತಿ— (ಉಬ್ಬಿದ ನಗೆಯಿಂದ) ಆ ಹೆಂಗಸು ನನ್ನ ಮರ್ಯಾದೆ ತೆಗೆಯಬೇಕೆಂದಿದ್ದಳು. ಅವಳಿಂದ ಸಾಧ್ಯವೇ? ಹ್ಹ ಹ್ಹ ಹ್ಹಾ! ಯಾರನ್ನು ಅವಳ ಹೊಟ್ಟೆಯಲ್ಲಿದ್ದ ಮಗುವಿಗೆ ತಂದೆಯೆಂದು ಜನರಿಗೆ ತೋರಿಸಲು ಅವಳ ಗಂಡನಾಗಿಸಬೇಕೆಂದಿದ್ದೆನೋ ಅವನಿಂದಲೇ ಅವಳಿಗೆ ವಿಷಕೊಡಿಸಿ ಕೊಲ್ಲಿಸಿಬಿಟ್ಟೆ. ಒಂದು ಸಾವಿರ ರೂಪಾಯಿಗಳಲ್ಲಿ ಪೀಡೆ ಕಳೆದು ಹೋಯಿತು. ಹ್ಹ ಹ್ಹ ಹ್ಹಾ! (ರಂಗದ ಮೇಲೆ ಕತ್ತಲು ಎಡದ ಬದಿಯಿಂದ ಸುಮಾರು ಇಪ್ಪತ್ತೈದು ವಯಸ್ಸಿನ ಗಂಡಸೊಬ್ಬನ ಪ್ರವೇಶ ಅವನ ಮೇಲೆ ಬೆಳಕು.

ಗಂಡಸು— ಇದೊಳ್ಳೆ ಸಂಗತಿಯಾಯಿತಲ್ಲಾ? ಪಾಪಿಗಳು ಬಹಳ ಒಳ್ಳೆಯವರೆಂದು ಗ್ರಹಿಸಿದ್ದಳ್ಳೆ, ನನಗೆ ಪ್ರಾಯಶ್ಚಿತ್ತವಾದಂತಾಯಿತು. ನಾನು ಅವರ ಬುದ್ಧಿ ಹೀಗಿರಬಹುದೆಂದು ಯೋಚಿಸಿರಲಿಲ್ಲ. ಮೊನ್ನೆ ಮೊನ್ನೆ ಮದುವೆಯಾದ ನನ್ನ ಹೆಂಡತಿಯ ಮೇಲೆ ಆ ಮಹಾರಾಯನಿಗೆ ಮನಸ್ಸಾಯಿತಲ್ಲಾ! ಎಂತಹ ಪಾಪಿ. ನಾನು ಮನೆಯಲ್ಲಿಲ್ಲದಾಗ ಅವಳು ವಿರೋಧಿಸಿದರೂ ಬಲಾತ್ಕಾರವಾಗಿ! (ನಿಟ್ಟುಸಿರಿಟ್ಟು) ಹೀಗೂ ಉಂಟೇ, ಬ್ರಾಹ್ಮಣ ಜನ್ಮದಲ್ಲಿ ಯಾಕಾಗಿ ಹುಟ್ಟಿದನೋ ಇವನು? ಹೊಲೆಯನಾಗಬೇಕಿತ್ತು. ದೇವರೆಂಬವನೊಬ್ಬನಿದ್ದನಾದರೆ ಇದರ ಫಲವನ್ನವನು ಅನುಭವಿಸಲೇಬೇಕು. ಅವರಿಗೆ ಯಾಕೆ ಕಾಯಬೇಕು? (ರೋಷದಿಂದ) ಅದಕ್ಕೆ ಮೊದಲು ನಾನೇ ಅವನಿಗೆ ಶಿಕ್ಷೆ ವಿಧಿಸಿದರೆ— (ಸೊಂಟದಿಂದ ಚೂರಿಯೊಂದನ್ನು ತೆಗೆದು ಬೀಸುವನು. ಅದು ಹರಿತವಾಗಿದೆಯೋ ಎಂದು ಒಮ್ಮೆ ಕೈಯಿಂದ ಸವರಿ ನೋಡುವನು. ಕ್ರೂರ ದೃಷ್ಟಿಯನ್ನು ಬೀರುತ್ತಾ ಒಳಗೆ ನಡೆಯುವನು.)

ವ್ಯಕ್ತಿ— ಹೆಣ್ಣೆಂದರೆ ಅವಳು ಅಹಾ! ಅವಳಂತಹ ಸುಂದರಿ ನನಗೆ ಸಿಗದೆ, ತನ್ನಲ್ಲಿ ಅಡಿಕೆ ಹೆಕ್ಕುವ ಅವನಿಗೆ ದಕ್ಕುವುದೆಂದರೆ? ಅವಳನ್ನು ನಾನು ಬಯಸಿದ್ದು ತಪ್ಪೇ? ನನ್ನನ್ನು ಕೂಡೆಂದು ಅವಳನ್ನು ಬೇಡಿದಾಗ ಒಪ್ಪಿದ್ದರೆ ನಾನು ಬಲಾತ್ಕರಿಸುತ್ತಿದ್ದೆನೇ? ಹೋಗಲಿ ನಾನು ಮಾಡಿದ್ದು ತಪ್ಪೆಂದೇ ಒಪ್ಪಿಕೊಳ್ಳುತ್ತೇನೆ. ಆ ತಪ್ಪಿಗೆ ಪರಿಹಾರವಾಗಿ ಅವನು ಕೇಳಿದಷ್ಟು ಹಣ ಕೊಡುತ್ತೇನೆಂದು ಹೇಳಿದೆ. ಹಣ ತೆಗೆದುಕೊಂಡು ಸುಮ್ಮನಿರಬಹುದಾಗಿತ್ತು ಅವನಿಗೆ. ಅದರ ಬದಲು, ಮಾನ ಮಾನ ಎಂದು ಗುಲ್ಲೆಬ್ಬಿಸುತ್ತಾ ನನ್ನ ಪ್ರಾಣ ತೆಗೆಯಲಿಕ್ಕೆಂದು ಬಂದ. ನನಗಾದರೂ ಸಿಟ್ಟು ಬಾರದಿರುತ್ತದೆಯೇ? ಹೂಂ ....(ಸಿಟ್ಟಿನಿಂದ ಕಣ್ಣು ಕೆಂಪೇರುತ್ತದೆ) ಅವನು ನನ್ನ ಮೇಲೇರಿ ಬರಲೆತ್ನಿಸಿದಾಗ ಡ್ರಾವರಿನಲ್ಲಿದ್ದ ಪಿಸ್ತೂಲನ್ನೆತ್ತಿಕೊಂಡು, ನನ್ನಾತ್ಮರಕ್ಷಣೆಯ ಸಲುವಾಗಿ ಗುಂಡು ಹಾರಿಸಿಬಿಟ್ಟೆ. ಸತ್ತೇ ಹೋದ. ಆದರೆ ಅವನು ಸತ್ತುದು ಹಾಗೆಂದು ಎಷ್ಟು ಮಂದಿಗೆ ತಿಳಿದಿದೆ? ಅವನ ಶರೀರವನ್ನು ನಮ್ಮ ತೋಟದ ಬದಿಯ ಹಳ್ಳದ ಅಡಿಕೆ ಮರದ ಸೇತುವೆಯ ಕೆಳಗೆ ಕಲ್ಲುಗಳಿಗೆಸೆದು ಕಾಲುಜಾರಿ ಹಳ್ಳಕ್ಕೆ ಬಿದ್ದು ಸತ್ತನೆಂದು ಪೋಲೀಸರಿಂದ ರಿಪೋರ್ಟ್ ಮಾಡಿಸಲಿಲ್ಲವೇ? ಡಾಕ್ಟರರು ಕೂಡಾ ಹಾಗೇ ಸರ್ಟಿಫಿಕೇಟು ಕೊಟ್ಟಿದ್ದರು. ದುಡ್ಡು ಮುಗಿಸಿದೇನಾಯಿತು? ಹ ಹ್ಹ ಹ್ಹ!

(ಹೆಮ್ಮೆಯ ನಗು ಮುಖದಲ್ಲಿ ಮಿಂಚುತ್ತಿದ್ದಂತೆಯೇ ಕತ್ತಲು, ಬೆಳಕಾದಾಗ ಭಿಕ್ಷುಕಿಯೊಬ್ಬಳು ಒಂದೂವರೆ ಎರಡು ವರ್ಷದ ಮಗುವಿನ ಕಳೇಬರವನ್ನೆತ್ತಿಕೊಂಡು ಅಳುತ್ತಿದ್ದಾಳೆ.)

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
91 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
Phone— 5711, 5712, 5713 } 3 Lines.

ಫೋನ್ : 526 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೨೪
VOL. 48
No. 24

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೭—೨—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಶ್ರೀ ರಾಜೀವ ಭಂಡಾರಿ ಇನ್ನಿಲ್ಲ

ದಕ್ಷಿಣ ಕನ್ನಡದ ಮಂಗಳೂರು ಜಿಲ್ಲೆಯ ತಾಲೂಕುಗಳಲ್ಲಿ ಕಿರಿದಾದರೂ ರಾಜಧಾನಿಯಾದ ಕಾರಣದಿಂದ ಅದರ ಮಹತ್ವ ಹಿರಿದು. ಈ ತಾಲೂಕಿನಲ್ಲಿ ತಾಲೂಕು ಬೋರ್ಡ್ ಅಸ್ತಿತ್ವಕ್ಕೆ ಬಂದಂದಿನಿಂದಲೂ ಅದರ ಅಧ್ಯಕ್ಷರಾಗಿ ತಾಲೂಕಿನ ಸರ್ವತೋಮುಖ ಉನ್ನತಿಗಾಗಿ ಶ್ರಮಿಸಿದ ವ್ಯಕ್ತಿ ಶ್ರೀ ರಾಜೀವ ಭಂಡಾರಿ. ಜನಪ್ರಿಯತೆಯಿಂದ, ನಿಷ್ಠಾಪೂರ್ಣ ಸೇವೆಯಿಂದ ಅವರು ಕಳೆದ ವರ್ಷಾಂತ್ಯದಲ್ಲಿ ನಡೆದ ತಾಲೂಕು ಬೋರ್ಡ್ ಚುನಾವಣೆಯಲ್ಲಿ ಗೆದ್ದು ಬಂದುದು ಮಾತ್ರವಲ್ಲದೆ ಎರಡನೆಯ ಬಾರಿಯೂ ತಾಲೂಕು ಬೋರ್ಡಿನ ಅಧ್ಯಕ್ಷರಾಗಿ ಆಯ್ಕೆಯಾದರು. ಇಂತಹ ಭಾಗ್ಯ ಎಲ್ಲರಿಗೂ ಲಭಿಸುವುದಿಲ್ಲ. ಆದರೆ ಅದೃಷ್ಟದ ದಾರಿಯನ್ನು ತಡೆಯುವುದು ಯಾರಿಗೂ ಸಾಧ್ಯವಿಲ್ಲ. ಈ ಜನಪ್ರಿಯ ನಾಯಕನ ನೇತೃತ್ವದಲ್ಲಿ ತಾಲೂಕು ಬೋರ್ಡ್ ಮತ್ತಷ್ಟು ಜನಹಿತ ಕಾರ್ಯಗಳನ್ನು ಸಾಧಿಸುತ್ತದೆಯೆಂದು ಜನ ನಂಬಿದ್ದಾಗ ಕ್ರೂರ ವಿಧಿಯು ಶ್ರೀ ಭಂಡಾರಿಯವರನ್ನು ತನ್ನ ತೋಳತೆಕ್ಕೆಯಲ್ಲಿ ಅಪ್ಪಿಕೊಂಡಿತು.

ದಕ್ಷಿಣ ಕನ್ನಡ ಜಿಲ್ಲೆಯ ನಿಷ್ಠಾವಂತ ಕಾಂಗ್ರೆಸಿಗರಲ್ಲಿ ಶ್ರೀ ಭಂಡಾರಿಯವರೊಬ್ಬರು. ಶ್ರೀಯುತರು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಮತ್ತು ಅದಕ್ಕೆ ಮೊದಲು ಮೈಸೂರು ಪ್ರಾದೇಶಿಕ ಕಾಂಗ್ರೆಸ್‌ನ ಸದಸ್ಯರಾಗಿದ್ದರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಕೋಶಾಧಿಕಾರಿಯೂ ಆಗಿದ್ದರು. ಶ್ರೀಮಂತ ಮನೆತನದಲ್ಲಿ ಹುಟ್ಟಿ ಬೆಳೆದರೂ ಶ್ರೀಯುತರಲ್ಲಿ ಶ್ರೀಮಂತಿಕೆಯ ಅಹಂಭಾವವು ಇಣಿಕಿಯೂ ನೋಡುತ್ತಿರಲಿಲ್ಲ. ಸರಳ ಜೀವನವನ್ನು ನಡೆಸಿ ಬಾಳಿದ ಶ್ರೀ ಭಂಡಾರಿಯವರು ಆರಂಭದಿಂದಲೂ ಜನಸಾಮಾನ್ಯರ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಸರಳ ಸ್ವಭಾವ, ಸೇವಾ ಮನೋಭಾವನೆ ಮತ್ತು ಉತ್ತಮ ಚಾರಿತ್ರ್ಯಗಳಿಗೆ ಶ್ರೀ ಭಂಡಾರಿಯವರು ಹೆಸರಾದವರು. ಶ್ರೀಯುತರನ್ನು ಬಲ್ಲವರೆಲ್ಲರೂ ಅವರ ಈ ಹಿರಿಯ ಗುಣಗಳನ್ನು ಅರಿತುಕೊಂಡಿದ್ದಾರೆ, ಮೆಚ್ಚಿಕೊಂಡಿದ್ದಾರೆ. ಜನಸಾಮಾನ್ಯರಲ್ಲಿಯೂ ಅವರಿಗೆ ತುಂಬಾ ವಿಶ್ವಾಸ; ಅಪಾರ ಗೌರವ. ಇದರಿಂದಾಗಿ ಅವರು ಎಲ್ಲ ವರ್ಗದ ಜನರ ಮನ್ನಣೆಯನ್ನು ಗಳಿಸಿಕೊಂಡಿದ್ದಾರೆ. ಶ್ರೀ ಭಂಡಾರಿಯವರು ಜಿಲ್ಲೆಯ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾದ ಕಟೀಲಿನ ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಆಡಳಿತಾಧಿಕಾರಿಗಳೂ ಆಗಿದ್ದು ತನ್ನ ಆಡಳಿತಾವಧಿಯಲ್ಲಿ ಶ್ರೀ ಕ್ಷೇತ್ರದ ಉನ್ನತಿಗಾಗಿ ಬಹಳಷ್ಟು ದುಡಿದಿದ್ದರು. ಇದಲ್ಲದೆ ಜಿಲ್ಲೆಯ ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ, ಪೋಷಕರಾಗಿ ನಾನಾ ಮುಖಗಳಿಂದ ಸಮಾಜ ಸೇವಾನಿರತರಾಗಿದ್ದರು. ಕೃಷಿ ಪ್ರಧಾನವಾದ ದಕ್ಷಿಣ ಕನ್ನಡ ಜಿಲ್ಲೆಯ ಕೃಷಿರಂಗಕ್ಕೂ ಶ್ರೀ ಭಂಡಾರಿಯವರು ಸಲ್ಲಿಸಿದ ಸೇವೆ ಚಿರಸ್ಮರಣೀಯ. ಜಿಲ್ಲೆಯ ಕೃಷಿಕರ ಸಮಸ್ಯೆಗಳನ್ನು ಅರಿತುಕೊಂಡು ಅವನ್ನು ನಿವಾರಿಸುವಲ್ಲಿ ಅವರು ತುಂಬ ಉತ್ಸಾಹದಿಂದ ದುಡಿಯುತ್ತಿದ್ದರು. ತಾಲೂಕು ಬೋರ್ಡಿನ ಅಧ್ಯಕ್ಷರಾಗಿ, ಬೋರ್ಡಿನ ಪೌರರ, ಸದಸ್ಯರ, ನಿಕಟ ಸಹಕಾರವನ್ನು ಅವರು ಗಳಿಸಿದ್ದರು. ಶ್ರೀಯುತರ ಜನಾನುರಾಗಕ್ಕೆ ಪಕ್ಷ-ಪಂಗಡಗಳ ಎಲ್ಲೆಯ ಅಡ್ಡಿ ಬರುತ್ತಿಲ್ಲ. ಅವರ ನಿಧನದ ವಾರ್ತೆಯನ್ನು ಕೇಳಿದ ಎಲ್ಲ ಪಕ್ಷಗಳವರೂ ತಮ್ಮ ಸಂತಾಪವನ್ನು ದುಃಖತಪ್ತ ಹೃದಯದಿಂದ ವ್ಯಕ್ತಪಡಿಸಿರುವುದೇ ಇದಕ್ಕೆ ಸಾಕ್ಷಿ.

ಶ್ರೀ ರಾಜೀವ ಭಂಡಾರಿಯವರು ನಿಧನರಾಗುವಾಗ ಅವರಿಗೆ ೫೫ ವರ್ಷ ವಯಸ್ಸು. ಇದೇನೂ ಹೆಚ್ಚಲ್ಲ; ಇನ್ನೂ ಹಲವು ಕಾಲ ಅವರು ನಮ್ಮ ಮುಂದಿರಬೇಕಿತ್ತು; ಅವರಿಂದ ಮಂಗಳೂರು ತಾಲೂಕಿಗೂ ಜಿಲ್ಲೆಗೂ ರಾಜ್ಯಕ್ಕೂ ಸಲ್ಲಬೇಕಾದ ಸೇವೆ ಬಹಳವಿತ್ತು. ಆದರೆ ದೈವೇಚ್ಛೆಯನ್ನು ಮೀರುವುದು ಯಾರಿಂದಲೂ ಸಾಧ್ಯವಿಲ್ಲ. ಕೆಲಸಮಯದಿಂದ ತುಸು ಅಸ್ವಸ್ಥತೆಗೆ ಗುರಿಯಾಗಿದ್ದರೂ ಅವರು ಚೇತರಿಸಿಕೊಳ್ಳುತ್ತಲೇ ಇದ್ದರು. ಹಾಗಾಗಿ ಇಷ್ಟು ಬೇಗನೇ ನಮ್ಮನ್ನಗಲಿ ಹೋಗುವರೆಂಬ ಕಲ್ಪನೆಯೂ ಯಾರಿಗೂ ಇರಲಿಲ್ಲ. ಹೃದಯಾಘಾತಕ್ಕೆ ಗುರಿಯಾದ ಅವರು ತಾ. ೨೦ರಂದು ನಮ್ಮನ್ನು ಎಂದೆಂದಿಗೂ ಅಗಲಿ ಹೋದರು. ಮರುದಿನ ನಡೆದ ಅವರ ಕಳೇವರದ ಸ್ಮಶಾನಯಾತ್ರೆ ಮತ್ತು ಅಂತ್ಯಸಂಸ್ಕಾರದಲ್ಲಿ ನೆರೆದ ಅಭಿಮಾನಿಗಳ ಸಂದೋಹವೇ ಅವರ ಜನಪ್ರಿಯತೆಗೊಂದು ಅಚ್ಚಳಿಯದ ಕುರುಹು. ಶ್ರೀ ಭಂಡಾರಿಯವರ ನಿಧನ ಅಕಾಲಿಕ ಮತ್ತು ಅನಿರೀಕ್ಷಿತವಾದುದು. ಅವರ ಬಂಧುಮಿತ್ರರಿಗೆ ಸಿಡಿಲೆರಗಿದಂತಾಯಿತು. ಕಾಲಾಯ ತಸ್ಮೈ ನಮಃ.

ದಿವಂಗತರು ಜನಸಮುದಾಯಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ, ಅವರ ನಿಧನದಿಂದ ಕುಟುಂಬದವರಿಗೂ ಜನತೆಗೂ ಆದ ಅತಿಶಯ ದುಃಖದಲ್ಲಿ ನಾವೂ ಪಾಲುಗೊಳ್ಳುತ್ತೇವೆ; ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಅನುಭವಿಸಲೆಂದು ಸರ್ವಶಕ್ತ ಭಗವಂತನಲ್ಲಿ ಅನನ್ಯ ಮನಸ್ಸಿನಿಂದ ಪ್ರಾರ್ಥಿಸುತ್ತೇವೆ.

ಶಿವಸೇನೆ ಧ್ವಂಸವಾಗಲಿ

ಬೊಂಬಾಯಿ ನಗರದಲ್ಲಿ ಶಿವಸೇನೆಯು ನಡೆಸಿದ ಕಾರಸ್ಥಾನ ಅದಕ್ಕಾಗಲೀ ಭಾರತಕ್ಕಾಗಲೀ ಶೋಭಿಸುವುದಲ್ಲ. ಐಕ್ಯಗಾನವನ್ನು ಹಾಡಬೇಕಾದ ಈ ಕಾಲದಲ್ಲಿ, ಜಗತ್ತೇ ಮಾನವನ ಮುಷ್ಟಿಯೊಳಡಗಿರುವ ಆಧುನಿಕ ವಿಜ್ಞಾನ ಯುಗದಲ್ಲಿ ಭಾರತೀಯರಿಗೆ ಭಾರತದ ಇನ್ನೊಂದು ನಗರದಲ್ಲಿ ಭದ್ರತೆಯಿಲ್ಲವೆಂದರೆ, ಇದಕ್ಕಿಂತ ಶೋಚನೀಯ ಸಂಗತಿ ಬೇರಿಲ್ಲ. ಸಂವಿಧಾನವು ಕೊಡಮಾಡಿದ ಮೂಲಭೂತ ಅಧಿಕಾರಗಳನ್ನು ಸ್ವೇಚ್ಛೆಯಿಂದ ಅನುಭವಿಸುವುದು ಅಸಾಧ್ಯವಾದರೆ, ನ್ಯಾಯಾಲಯದ ಮೆಟ್ಟಿಲಲ್ಲೇ ನ್ಯಾಯವಂತಹ ಪರಿಸ್ಥಿತಿ ತಲೆದೋರುವುದಾದರೆ, ಅದು ಸಂವಿಧಾನದ ಅಭ್ಯಾಸ ಮಾತ್ರವಾಗುವುದು. ದಕ್ಷಿಣ ಭಾರತೀಯರ ಆಸ್ತಿ-ಪಾಸ್ತಿಗಳಿಗೆ, ಜೀವಿತಗಳಿಗೆ ಶಿವಸೇನೆಯು ತಂದೊಡ್ಡಿದ ಆತಂಕ ತೀವ್ರ ಕಳವಳಕಾರಿಯಾದುದು. ಕೇಂದ್ರದ ಗೃಹಸಚಿವ ಚವಾಣರೇ ಈ ಸೇನೆಯು ಫ್ಯಾಸಿಸಂ ಮಾದರಿಯದೆಂದು ಅನಿವಾರ್ಯವಾಗಿ ಒಪ್ಪಿಕೊಂಡರು; ಮುಖ್ಯಮಂತ್ರಿ ವಿ.ಪಿ. ನಾಯಕರೂ ಅದರ ಕೃತ್ಯಗಳನ್ನು ಖಂಡಿಸಿದರು. ಆದರೆ, ಒರಿಯ ಒಪ್ಪಿಕೊಳ್ಳುವಿಕೆಯಿಂದ, ಖಂಡನೆಯಿಂದ ಅದರ ಕುಕೃತ್ಯಗಳನ್ನು ನಿಲ್ಲಿಸುವುದು ಸಾಧ್ಯವಿಲ್ಲ. ಆರಂಭದಿಂದಲೂ ಶಿವಸೇನೆಯ ಕಣ್ಣು ದಕ್ಷಿಣ ಭಾರತೀಯರ ಮೇಲೆಯೇ. ಅದು ಅಂದಿನಿಂದಲೂ ದಾಕ್ಷಿಣಾತ್ಯರ ಮೇಲೆ ಹಲವು ರೀತಿ ದ್ವೇಷ ಸಾಧಿಸಿದೆ. ಇದೀಗ ಸೀಮಾ ವಿವಾದವನ್ನು ನಿಮಿತ್ತವನ್ನಾಗಿ ಮಾಡಿ, ನಿರಪರಾಧಿಗಳಿಗೆ ಆತಂಕ ಹಾಕಿತು. ಇದು ಸರ್ವಥಾ ನ್ಯಾಯೋಚಿತವಲ್ಲ. ಶಿವಸೇನೆಯು ಕಠೋರ ಕರ್ಮಕಾಂಡದಲ್ಲಿ ನಿರತವಾಗಿದ್ದಾಗ ಪೋಲೀಸು ವಿಭಾಗವು ಅಸಹಾಯಕನಂತೆ ಪರದಾಡಿತ್ತೆಂದು ಕೇಳುತ್ತೇವೆ. ಅಂತಲ್ಲ, ಮದ್ರಾಸಿನ ಹಿಂದಿ ವಿರೋಧಿ ಚಳವಳಿಕ್ಕೆ, ಕೇರಳದಲ್ಲಿ ಕೇಂದ್ರ ಸರಕಾರಿ ನೌಕರರ ಚಳವಳಿಕ್ಕೆ ಸರಕಾರದ ಬೆಂಬಲವಿದ್ದಂತೆಯೇ ಶಿವಸೇನೆಯ ಹಿಂಸಾಕೃತ್ಯಗಳಿಗೆ ಮಹಾರಾಷ್ಟ್ರ ಸರಕಾರದ ಅವ್ಯಕ್ತ ಬೆಂಬಲವಿದೆಯೆನ್ನಬೇಕು. ಏಕೆಂದರೆ, ಮಹಾಜನ ಆಯೋಗದ ವರದಿಯ ಬಗ್ಗೆ ಮಹಾರಾಷ್ಟ್ರ ಸರಕಾರ-ಶಿವಸೇನೆಗಳ ನಡುವೆ ಸಂಪೂರ್ಣ ಒಮ್ಮತವಿದೆ; ಈ ಹಿಂಸಾಕಾಂಡದ ಮೂಲವಾದರೂ ಅದುವೇ.

ದಕ್ಷಿಣ ಭಾರತೀಯರು ಶಿವಸೇನೆಯ ದೌರ್ಜನ್ಯದಿಂದ ತೀವ್ರ ಅಸಮಾಧಾನಗೊಂಡಿದ್ದಾರೆ ತಮ್ಮವರಿಗೆ ಬಂದೊದಗಿದ ಸಂದಿಗ್ಧತೆಗಾಗಿ ಮರುಗುತ್ತಾರೆ. ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲ್ ಮತ್ತು ಕರುಣಾನಿಧಿಯವರು ಬೊಂಬಾಯಿಯಲ್ಲಿರುವ ದಕ್ಷಿಣ ಭಾರತೀಯರಿಗೆ ಸೂಕ್ತ ಭದ್ರತೆಯ ಆಶ್ವಾಸನೆ ಬೇಕೆಂದಿದ್ದಾರೆ. ಶಿವಸೇನೆಯು ಬಹಿರಂಗವೇ ಅಹಿತವಾಗಿದ್ದು ಅಂತಹ ಸೇನೆಗಳನ್ನು ಪ್ರತಿಬಂಧಿಸಲು ಮತ್ತು ನಿರ್ನಾಮ ಮಾಡಲು ಕರೆ ಕೊಟ್ಟಿದ್ದಾರೆ. ಅಂತಾರಾಷ್ಟ್ರೀಯ ನಗರಗಳ ಸಾಲಿಗೆ ಸೇರಿದ ಬೊಂಬಾಯಿಯಲ್ಲಿ ನಡೆದ ಶಿವಸೇನೆಯ ಹಿಂಸಾತ್ಮಕ ಚಟುವಟಿಕೆಗಳು ದೇಶದ ಗೌರವಕ್ಕೆ ಕುಂದು. ತಾನು ನೆಟ್ಟು ಸಾಕಿದ ವಿಷವೃಕ್ಷವನ್ನು ಮಹಾರಾಷ್ಟ್ರ ಸರಕಾರ ಅಂಕೆಗೆ ತಾರದುಳಿದರೆ, ಪರಿಣಾಮ ರಮಣೀಯವಾಗದು. ಕೇಂದ್ರ ಗೃಹ ಶಾಖೆಯೂ ಈ ಸಂಬಂಧ ತೀವ್ರ ಎಚ್ಚರಿಕೆ ವಹಿಸಿ, ವಿಚ್ಛಿದ್ರಕಾರಕ ಹಿಂಸಾತ್ಮಕ ಶಕ್ತಿಗಳನ್ನು ಧ್ವಂಸ ಮಾಡಬೇಕು.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.
ತಯಾರಕರು:
ಅಮೃತಾಂಜನ ಲಿಮಿಟೆಡ್, ಮದ್ರಾಸು-4

ನರಸಣ್ಣನ ಸರಸ

“ಕಾಂಗ್ರೆಸ್‌ಗೆ ಗುಲ್ಜಾರಿಲಾಲ ನಂದಾರು ತನ್ನ ಕಾಯಕಲ್ಪ ಚಿಕಿತ್ಸೆ ಆರಂಭಿಸಲು ಬಯಸಿದ್ದಾರೆ……”

ಉಜ್ವಲ ಭವಿಷ್ಯವಿರುವ
ಉಡುಪಿ ತಾಲೂಕು ಬೋರ್ಡ್ ಅಧ್ಯಕ್ಷ
ಶ್ರೀ ಎಂ. ಮಧ್ವರಾಜ್

ಗಾಂಧೀ ಶತಮಾನೋತ್ಸವವನ್ನು ಆಚರಿಸಬೇಕು; ಹೇಗೆ? ಭವ್ಯ ಮಂಟಪಗಳನ್ನು ಕಟ್ಟಿ, ಮಂತ್ರಿಮಾಗಧರಿಂದ ಶಿವಿಕೆಗೆ ಹೆಗಲು ಕೊಡುವ ಕವಿತೆಯ ಗೋಷ್ಠಿ..?' ಕೆಲವರು ಹಾಗೆ ಮಾಡಿರುವುದೂ ಉಂಟು. ಅದನ್ನು ಕನಕ, ಪುರಂದರ, ಬಸವೇಶ್ವರರ (ಹಲ) ಶತಮಾನೋತ್ಸವದಲ್ಲಿ ಕಂಡಿದ್ದೇನೆ. ಇದಕ್ಕೆ ತೀರ ಭಿನ್ನವಾಗಿ ಉಡುಪಿ ತಾಲೂಕು ಬೋರ್ಡ್ ಗಾಂಧೀ ಶತಮಾನೋತ್ಸವವನ್ನು ಮಾನ್ಯ ಉಚಿತ ರೀತಿಯಲ್ಲಿ ಆಚರಿಸಲು ನಿರ್ಧರಿಸಿ ಉಳಿದವರಿಗೆ ಮಾರ್ಗದರ್ಶಕವಾಗಿದೆ ಎನ್ನಲು ಸಂತೋಷವೆನಿಸುತ್ತದೆ. ಗಾಂಧೀಯವರ ರಚನಾತ್ಮಕ ಕಾರ್ಯಗಳಲ್ಲಿ ಒಂದಾದ ಅಜ್ಞಾನ ದೂರ ಮಾಡುವ ದೇಗುಲ—ಪಾಠ ಶಾಲೆಗಳಿಗೆ ಹೊಸ ಕಟ್ಟಡಗಳನ್ನು ಕಟ್ಟುವ, ಕೂಡಿಸುವ, ಮಾರಿ ಶಾಲೆಗಳನ್ನು ತೆರೆಯುವ ಯೋಜನೆ ಅದರದ್ದು. ತಾಲೂಕಿನ ಪ್ರಾಥಮಿಕ ಶಾಲೆಗಳ ಹೆಚ್ಚಿನ ಕಟ್ಟಡಗಳು ಜೀರ್ಣಾವಸ್ಥೆಯಲ್ಲಿವೆ; ಅವುಗಳಲ್ಲಿ ಸ್ಥಳಾಭಾವವಿದೆ—ಇದನ್ನು ಮನಗಂಡು ಈ ಅಭಾವ ಮತ್ತು ದುಸ್ಥಿತಿಯನ್ನು ದೂರ ಮಾಡಲು ನಿರ್ಧರಿಸಿದ ಸಂಗತಿ ಪ್ರಶಂಸಾರ್ಹ.

ಉಡುಪಿ ತಾಲೂಕು ಬೋರ್ಡ್ ಆರಂಭವಾದಂದಿನಿಂದಲೂ ಹೊಸ ರಕ್ತದ ತರುಣ ಶ್ರೀ ಎಂ. ಮಧ್ವರಾಜರು ಅಧ್ಯಕ್ಷರಾಗಿ ದೊರೆತದ್ದು ಅದರ ಭಾಗ್ಯದ ಮಾತು. ಉತ್ತಮ ಆದರ್ಶ ಮತ್ತು ರಚನಾತ್ಮಕ ಕಾರ್ಯಕ್ರಮಗಳಿಗೆ ಉಡುಪಿ ತಾಲೂಕು ಬೋರ್ಡ್ ಹೆಸರಾದುದು. ಶ್ರೀ ಮಧ್ವರಾಜರು ವೈಯಕ್ತಿಕವಾಗಿಯೂ ಸಾರ್ವಜನಿಕವಾಗಿಯೂ ಕಾರ್ಯಶೀಲರು; ನಿಸ್ಪೃಹರಾಗಿ ಎಂದೂ ತೂಕುಕೊಳ್ಳದವರು. ಮಲ್ಪೆಯಲ್ಲಿನ ಮತ್ಸ್ಯೋದ್ಯಮ, ಜಿಲ್ಲೆಯ ಇನ್ನೂ ಕೆಲವೆಡೆ ಮತ್ಸ್ಯೋದ್ಯಮದ ಅಭಿವೃದ್ಧಿ, ಇದೀಗ ತಾವೇ ಆರಂಭವಾಗುವ ಮತ್ಸ್ಯೋದ್ಯಮ ಕಾಲೇಜು...ಇತ್ಯಾದಿ ಇತ್ಯಾದಿ ಶ್ರೀ ಮಧ್ವರಾಜರ ಕಾರ್ಯಪಟುತ್ವಕ್ಕೆ ಜ್ವಲಂತ ನಿದರ್ಶನ.

ಆರಂಭದಿಂದಲೂ ಕಾಂಗ್ರೆಸ್ ಮನೋವೃತ್ತಿಯ ಶ್ರೀ ಮಧ್ವರಾಜರು ೧೯೬೨ರಲ್ಲಿ ಎಂ. ಎಲ್. ಎ. ಕೂಡ ಆದರು. ೧೯೬೭ರ ಸಾರ್ವತ್ರಿಕ ಚುನಾವಣೆಗಳ ವೇಳೆ ಪ್ರತಿಕೂಲ ವಾತಾವರಣವಿದ್ದರೂ ಉಡುಪಿ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸ್ಸು ಅಗ್ಗಳ ಬಲ ಗಳಿಸುವಲ್ಲಿ ಇವರ ಪಾತ್ರ ಹಿರಿದಾದುದು. ಇದೇ ಪಾತ್ರ ತಾಲೂಕು ಬೋರ್ಡ್ ಚುನಾವಣೆಗಳಲ್ಲಿಯೂ ಕಂಡು ಬಂತು. ಜಿಲ್ಲೆಯ ಎಲ್ಲ ತಾಲೂಕು ಬೋರ್ಡುಗಳ ಅಧಿಕಾರವೂ ಈಗ ಕಾಂಗ್ರೆಸ್ ಕೈಯಲ್ಲಿದೆ.

ವಿದೇಶ ಸಂಚಾರ ಮಾಡಿ ಬಂದಿರುವ ಶ್ರೀ ಮಧ್ವರಾಜ ದಂಪತಿಗಳು ಗಳಿಸಿದ ಅನುಭವದಿಂದ ತಮ್ಮ ಜಿಲ್ಲೆಯ ಆರ್ಥಿಕಾಭಿವೃದ್ಧಿಗಾಗಿ ಯೋಜಿಸಿ, ಯೋಜನೆಯನ್ನು ಕಾರ್ಯಕೃತಗೊಳಿಸುತ್ತಾರೆ. ಸತಿ-ಪತಿಯರಿಬ್ಬರೂ ತಾಲೂಕು ಬೋರ್ಡಿನಲ್ಲಿರುವುದರಿಂದ, ಇನ್ನೇ ಬಗೆಯ ಸಾರ್ಥಕ ಯೋಜನೆಗಳು ಕಾರ್ಯರೂಪಕ್ಕೆ ಬರುವಷ್ಟು ಹೆಚ್ಚಿನ ಬಲವೂ ಬಂದದೆ. ರಾಷ್ಟ್ರಪಿತ ಗಾಂಧೀ ಮಹಾತ್ಮರ ಶತಮಾನೋತ್ಸವದ ಸುಸಂದರ್ಭದಲ್ಲಿ ರಾಷ್ಟ್ರೋನ್ನತಿಯ ಪ್ರಧಾನ ಸೋಪಾನವಾದ ಶಿಕ್ಷಣರಂಗದಲ್ಲಿ ಆದ ಬೇಕಾದ ಮಹತ್ಕಾರ್ಯಗಳತ್ತ ಇವರ ದೃಷ್ಟಿ ಹರಿದುದು ಸಹಜ; ಇದಕ್ಕೆ ಪ್ರೇರಕರಾದ ಅವರನ್ನೂ ಪೋಷಕರಾದ ಬೋರ್ಡಿನ ಎಲ್ಲ ಸದಸ್ಯರನ್ನೂ ಮನಸಾರೆ ಅಭಿನಂದಿಸಲೇ ಬೇಕು.

ಶ್ರೀ ಮಧ್ವರಾಜ ಮತ್ತವರ ಸಹಸದಸ್ಯರ ಮೂಲಕ ಉಡುಪಿ ತಾಲೂಕು ಬೋರ್ಡ್ ಉನ್ನತಾದರ್ಶ ಸಾಧನೆಯಲ್ಲಿ ಗತಿಶೀಲವಾಗಲಿ; ಯಶಶೀಲವೆನಿಸಲಿ.

ಗೇಹರಾಜ್ಯದಲ್ಲಿ
ಸದ್ಯ ನಾವು ಮಾತ್ರ ಕಾಂಗ್ರೆಸ್

"ಕೇಳಿದ್ದೀಯಲ್ಲಾ...."

"ಏನು?"

"ಬೊಂಬಾಯಿ ಸುದ್ದಿ...'

"ಹೌದ್ರಿ, ಅಲ್ಲೇನೋ ಗಲಾಟೆ ಆಯ್ತಂತಲ್ಲಾ...."

"ಏನೋ ಏನು, ಭಾರಿ ಗಲಾಟೆ ಹೋಯ್ತು...."

"ಅಂದ್ರೆ?'

"ಅಲ್ರೀ, ಸುಮಾರು ಅರ್ವತ್ತು ಜನರು ಸಾಯ ಬೇಕಾದ್ರೆ ಗಲಾಟೆ ಭಾರಿ ದೊಡ್ಡದೇ ಆಗಿರ್ಬೇಕು. ಅದ್ರ ಮೇಲೆ ಸುಮಾರು ೧೫—೨೦ ಕೋಟಿ ರೂಪಾಯಿಯ ಸಂಪತ್ತೂ ನಷ್ಟವಾಯ್ತಂತೆ ...'

"ಅಲ್ರಿ, ಇದೆಲ್ಲಾ ಏನು ಹೀಗೇಂತ?"

"ಏನೂಂತನ್ನೋದು? ಎಲ್ಲಾ ಶಿವಸೇನೆಯ ಕಾರ್ಬಾರು?'

"ಅಂದ್ರೆ?"

'ಮತ್ತಿನ್ನೆಂಥದು? ಮಹಾರಾಷ್ಟ್ರ ಕರ್ನಾಟಕ ಸೀಮಾವಿವಾದವನ್ನು ತೀವ್ರವಾಗಿ ಕೇಂದ್ರ ಸರ್ಕಾರ ಬಗೆಹರಿಸಿಲ್ಲಾಂತ ಗೃಹ ಮಂತ್ರಿ ಚವನ್‌ಗೆ ಅದು ಬೈಕಾಟ್ ಮಾಡಿತು...'

"ಅಲ್ರಿ, ಇದೆಂಥದ್ದೂಂತ? ಕೇಂದ್ರ ಸರ್ಕಾರ ಮರಾಠಿಗಳ ಒತ್ತಾಯದಿಂದ್ಲೆ ಮಹಾಜನ ಆಯೋಗ ನೇಮಿಸಿತ್ತು; ಆದರೆ ವರದಿಯನ್ನು ತಿರಸ್ಕರಿಸಿದವ್ರು ಅವ್ರೇ ಅಲ್ವೇ?

"ಹ್ಞಾ....ಏಕೆ ತಿರಸ್ಕರಿಸಿದರು?"

"ತಮ್ಮ ಈ ವಾದವನ್ನು ಮಹಾಜನ್ರು ಒಪ್ಪಲಿಲ್ಲಾಂತ..."

"ಹಾಗಲ್ಲ, ತಮ್ಮ ಬೇಡಿಕೆಗಳಿಗೆ, ನ್ಯಾಯಕ್ಕೆ ನ್ಯಾಯವಾದ ಮನ್ನಣೆ ದೊರೀಲಿಲ್ಲಾಂತ..."

"ನ್ಯಾಯವಾದ ಮನ್ನಣೆ ಅಂದ್ರೆ?"

"ಬೆರಳು ಕೇಳಿದರೆ, ಕೈಯನ್ನೇ ಕೊಟ್ಟುಬಿಡುವುದು ..."

"ಅಂದ್ರೆ?"

"ಕಾರವಾರ ಕೇಳಿದವರಿಗೆ ಕುಮಟೆಯನ್ನೂ ಒಪ್ಪಿಸಿಬಿಡಬೇಕ; ಬೆಳಗಾಂವಿ ಕೇಳಿದವರಿಗೆ ಧಾರವಾಡವನ್ನೂ ಕೊಡಮಾಡಬೇಕು. ಆಗ ಮಹಾಜನ ವರದಿ ನಿಷ್ಪಕ್ಷಪಾತವಾಗುತಿತ್ತು...."

"ಅಲ್ರಿ, ಕಾರವಾರ—ಬೆಳಗಾಂವಿ ಪ್ರಶ್ನೆಗೂ ಬೊಂಬಾಯಿಯ ದುರಂತಕ್ಕೂ ಸಂಬಂಧ?"

"ಶಿವರಾತ್ರಿಗೂ ದ್ವೇಷ ಸಾಧನೆಗೂ ಇರುವ ಸಂಬಂಧ...."

"ಅಂದ್ರೆ?"

"ಅಂದ್ರೇನು? ಆರಂಭದಿಂದಲೂ ಶಿವಸೇನೆ ಹಿಂಸಾಕೃತ್ಯಗಳನ್ನು ಉತ್ತೇಜಿಸುತ್ತ ಬಂದಿದೆ. ಮದ್ರಾಸದಲ್ಲಿ ದ್ರಾವಿಡ ಮುನ್ನೇತ್ರ ಕಳಗಂ ಅಲ್ಲಿನ ಪ್ರಾದೇಶಿಕ ಕಾಂಗ್ರೆಸ್ಸು ಬೆಳೆಸಿಕೊಂಡು ಬಂದುದರಿಂದಲೇ ಅದು ಕಾಂಗ್ರೆಸಿಗೇ ಮಾರಕವಾಯ್ತು. ಈಗ, ಮಹಾರಾಷ್ಟ್ರದ ಕಾಂಗ್ರೆಸ್ಸು ಸರಕಾರ ಶಿವಸೇನೆಯನ್ನೂ ಹಾಲೆರೆದು ಸಾಕುತ್ತಿದೆ; ಅಂದರೆ, ಅದನ್ನು ಎದುರಿಸುವ ಎದೆಗಾರಿಕೆ ಅದಕ್ಕಿಲ್ಲ. ಅಂತಲೇ ರಾಜಕೀಯ ನಿರ್ಧಾರದಿಂದಲೇ ಸಾಧ್ಯವಾದ ಸೀಮಾ ವಿವಾದವನ್ನು ಅವರು ಪರಿಹರಿಸಲು ಸಿದ್ಧರಿಲ್ಲ; ಮಹಾಜನ ವರದಿಯನ್ನು ತಿರಸ್ಕರಿಸಲು ಇದೊಂದೇ ಕಾರಣ."

"ಅಲ್ರಿ, ರಾಜಕೀಯ ನಿರ್ಧಾರ ಅಂದ್ರೆ?"

'ಪಂಚಾಯಿತಿಕೆ ಅಸಾಧ್ಯವೆಂದಾದ ಮೇಲೆ ದಿಟ್ಟ ಹೆಜ್ಜೆಯೊಂದನ್ನು ಇಡಲೇ ಬೇಕಾಗುತ್ತದೆ ತಾನೆ?'

'ಓ, ಅಂತಹ ಗಂಡಸ್ತನ ಚವನರಿಗೆ ಇಲ್ಲಾಂತ ಶಿವಸೇನೆ ಹೇಳುವುದು ಅಲ್ಲ?'

'ಹಾಗಲ್ಲ ಚವನರು ತಮ್ಮವರಿದ್ದೂ ತಮ್ಮ ಬೇಡಿಕೆಯನ್ನು ಪೂರೈಸಲು ಅಸಮರ್ಥರಾಗಿದ್ದಾರೆ—ಅದ್ದರಿಂದ ಅವರಿಗೆ ಧಿಕ್ಕಾರ....'

'ಅಲ್ರಿ,ಹಾಗೆಯೇ ಬೆಂಗಳೂರಿಗೂ ಚವನರು ಬರಬಾರದೂಂತ ನಮ್ಮ ಸೇನೆ ಹೇಳಿದರೆ?'

"ಚವನರು ಹಿಮಾಲಯಕ್ಕೆ ಹೊರಟರೆ ಸರಿ...."

"ಹ್ಞಾ, ಅದೂ ನೋಡಿ, ದಕ್ಷಿಣ ಭಾರತೀಯರನ್ನು ಮೊದಲಿಂದಲೂ ವಕ್ರದೃಷ್ಟಿಯಿಂದ ನೋಡುತ್ತಿರುವ ಶಿವಸೇನೆಯಿಂದಾಗಿ ದಕ್ಷಿಣ ಭಾರತೀಯರ ಪಿತ್ತ ಜೀವಿತಗಳಿಗೆ ಹಾನಿ ತಟ್ಟಿತಲ್ಲಾ ...'

"ಹ್ಞಾಂ...."

'ಒಂದು ದೇಶದ ಪ್ರಜೆಗಳಾದ ನಾವು ಈ ರೀತಿ ಮಾಡ ತೊಡಗಿದರೆ ಹೇಗೆಂತ ....'

'ಇದನ್ನು ಬಾಳಠಾಕ್ರೆಯೇ ಹೇಳಬೇಕು."

"ಅಲ್ರಿ, ಅವ್ರನ್ನ ಸೆರೆ ಹಿಡಿದಿದ್ದಾರಂತಲ್ಲಾ?"

"ಹ್ಞಾಂ....ಅವ್ರನ್ನು ಬಿಟ್ಟು ಬಿಡಬೇಕೂಂತ ಎಸ್ಸೆಸ್ಪಿ ಮೊದಲಾದ ರಾಜಕೀಯ ಪಕ್ಷಗಳ ಪುಢಾರಿಗಳು ಹೇಳಿಕೆ ಕೊಟ್ಟರು...."

"ಅಲ್ರಿ, ನಾಚ್ಯಾಕೆ ಸರ್ಕಾರ ಶಿವಸೇನೆಯ ಬೆಂಗಾವಲಿಗೆ ಇದೇಂತ ಕೆಲವರನ್ನುತ್ತಾರೆ. ಶಿವಸೇನೆ ಫ್ಯಾಸಿಸಂ ಅಂತ ಚವನರೂ ಒಪ್ಪಿಕೊಂಡ್ರು...."

"ಅದು ಆಗ್ಲೇ ಅಂದೆನಲ್ಲಾ? ಬ್ರಾಹ್ಮಣ ವಿರೋಧ ಚಳವಳಿಯಿಂದ ಮದ್ರಾಸದಲ್ಲಿ ಕಾಂಗ್ರೆಸ್ಸು ಮಣ್ಣುಗೂಡಿತು, ದಕ್ಷಿಣ ಭಾರತೀಯ ವಿರೋಧದಿಂದ ಮಹಾರಾಷ್ಟ್ರದಲ್ಲಿ ಅದರ ಗೋರಿ ಕಟ್ಟುತ್ತಿದ್ದಾರೆ...."

"ಮತ್ತೆ ಉತ್ತರಭಾರತದಲ್ಲಿ ಅದೀಗಲೇ ಸಮಾಧಿಮಗ್ನವಾಗಿದೆ. ಉಳಿದುದು ಆಂಧ್ರ ಮತ್ತು ಕರ್ನಾಟಕದಲ್ಲಿ..."

"ಆಂಧ್ರದ್ದೂ ಹೇಳಬಾರದು...."

"ಯಾಕೆ?...'

"ಆರಂಭವಾಗಿದೆಯಲ್ಲಾ? ತೆಲಂಗಾಣದ ಹಿಂಸಾ ಕಾಂಡ..."

'ಓ, ಅದೂ ಹೌದೂನ್ನಿ. ಏನೇ ಇದ್ದ

(ಒಂಭತ್ತನೇ ಪುಟ ನೋಡಿರಿ)

ಪ್ರಾಣಿ ವಿಜ್ಞಾನದಲ್ಲೂ ಸಂಶೋಧನೆ

ಇಂದು ನಮ್ಮ ದೇಶದಲ್ಲಿ ಹೆಚ್ಚು ಪ್ರೋಟೀನಿರುವ ಆಹಾರವನ್ನು ಅದರಲ್ಲೂ ಹಾಲು, ಮೊಟ್ಟೆ, ಮಾಂಸ ಉಪಯೋಗಿಸುವ ಬಗ್ಗೆ ಜನ ಹೆಚ್ಚು ಜಾಗ್ರತರಾಗುತ್ತಿದ್ದಾರೆ. ಇದು ಒಂದು ದೇಶದಲ್ಲಿ ಪ್ರಾಣಿ ಉತ್ಪಾದನಾ ಯೋಜನೆಯಲ್ಲಿ ಪ್ರವೃತ್ತರಾಗಿರುವವರಿಗೆ ಒಂದು ಸವಾಲು ಹಾಕಿದಂತಿದೆ. ಆದರೆ ಅದೃಷ್ಟವಶಾತ್ ವೈಜ್ಞಾನಿಕ ಜ್ಞಾನದಿಂದ ಪ್ರಾಣಿಗಳ ಉತ್ಪಾದನೆ ಹೆಚ್ಚಿಸಿ ಅವುಗಳನ್ನು ಆರ್ಥಿಕವಾಗಿ ಬೆಳೆಸಿ ಈ ಸ್ಥಿತಿ ಸವಾಲನ್ನು ಎದುರಿಸ ಬಲ್ಲವರಾಗಿದ್ದೇವೆ. ಭಾರತ ತನ್ನಲ್ಲಿರುವ ದನಕರು, ಎಮ್ಮೆ, ಕುರಿ-ಮೇಕೆ, ಹಂದಿ, ಕೋಳಿಗಳನ್ನು ಉಪಯೋಗಿಸಿಕೊಳ್ಳುವಂತೆ ಸರಿಯಾದ ಯೋಜನೆ ಹಾಕಿ ದನಕರುಗಳ ಉತ್ಪಾದನೆ ಹೆಚ್ಚುವಂತೆ ಮಾಡಿದರೆ ಹೆಚ್ಚು ಪ್ರೋಟೀನ್ ಹಾಗೂ ಪೋಷಕ ಪದಾರ್ಥಗಳನ್ನು ಒದಗಿಸಲು ಸಾಧ್ಯವಾಗುವುದು.

ಇತರ ದೇಶಗಳಿಗೆ ಹೋಲಿಸಿ ನೋಡಿದರೆ ನಮ್ಮ ದೇಶದಲ್ಲಿ ದನಕರುಗಳಿಂದ ದೊರೆಯುವ ಉತ್ಪಾದನೆ ಬಹಳ ಕಡಿಮೆ. ಅನೇಕ ಫಾರಂಗಳಲ್ಲಿ ವೈಜ್ಞಾನಿಕ ವಿಧವನ್ನನುಸರಿಸಿ ತಳಿ ಕೂಡಿಸುವುದು ಹಾಗೂ ಆಹಾರ ಮತ್ತು ಇತರ ವ್ಯವಸ್ಥಾಪಕ ಪದ್ಧತಿಯಿದ್ದರೂ ಅಲ್ಲಿನ ಉತ್ಪಾದನೆಯನ್ನು ಬೇರೆಡೆಗಿಂತ ಹೆಚ್ಚಿಸಲು ಸಾಧ್ಯವಾಗಿಲ್ಲ. ದನಕರು ಸಾಕುವುದು ಜೀವನೋಪಾಯಕ್ಕೆ ಮಾತ್ರವಲ್ಲ, ಅದನ್ನು ಕೈಗಾರಿಕೆಗಾಗಿ ಪ್ರಗತಿಗೊಳಿಸುವುದು ಆವಶ್ಯಕ. ಪ್ರತಿಯೊಂದು ಯೂನಿಟ್ಟಿನ ಉತ್ಪಾದನೆ ಮತ್ತು ಪ್ರತಿಯೊಂದು ಎಕ್ಕರೆಯ ಉತ್ಪಾದನೆಯು ಆರ್ಥಿಕವಾಗಿ ಹೆಚ್ಚಿಸುವ ಸಲುವಾಗಿ ಪ್ರಾಧಾನ್ಯತೆ ಕೊಡಬೇಕು. ಇದನ್ನು ಸಾಧಿಸಬೇಕಾದರೆ ಬೇಗನೆ ಪ್ರಾಯಕ್ಕೆ ಬರಬಲ್ಲ ಹಾಗೂ ಹೆಚ್ಚು ಉತ್ಪಾದನೆ ನೀಡಬಲ್ಲ—ಹಾಲು, ಮಾಂಸ, ಮೊಟ್ಟೆ ಅಥವಾ ಉಣ್ಣೆ, ತುಪ್ಪಟ—ಪ್ರಾಣಿಗಳನ್ನು ಆಯ್ದುಕೊಳ್ಳಬೇಕು. ಅಲ್ಲದೆ ಅವುಗಳನ್ನು ಆರೋಗ್ಯಕರವಾಗಿರುವಂತೆ, ರೋಗ ರುಜಿನ ಹತ್ತದಂತೆ ಹಾಗೂ ಸಾಕಷ್ಟು ಉತ್ತಮ ಆಹಾರ, ರಕ್ಷಣೆ ಕೊಟ್ಟು ಬೆಳೆಸಿದರೆ ನಮ್ಮ ರೈತರಿಗೆ ಒಳ್ಳೆಯ ಆದಾಯವೂ ದೊರೆಯುವುದು.

ಕಳೆದ ಕೆಲವು ವರ್ಷಗಳಲ್ಲಿ, ಪ್ರಾಣಿ ಜ್ಞಾನ ಸಂಶೋಧನಾ ಕೇಂದ್ರದಲ್ಲಿ ಉತ್ಪನ್ನಕಾರಕ ಪ್ರಾಣಿಗಳನ್ನು ಸಾಕಿ ಬೆಳೆಸುವ ಯೋಜನೆ ಬಗ್ಗೆ ಸಾಕಷ್ಟು ಪ್ರಗತಿಯಾಗಿದೆ. ಪ್ರಾಣಿಗಳನ್ನು ಬೆಳೆಸುವ ವಿಧಾನ ಪ್ರಾಣಿಗಳಿಂದ ನ್ಯೂಟ್ರಿಶನ್ ದೊರೆಯಬಲ್ಲ ಬಗ್ಗೆ ಅಂದಾಜು, ಅತ್ಯುತ್ತಮ ಉತ್ಪಾದನೆ ಪಡೆಯಲು ಅವುಗಳಿಗೆ ಬೇಕಾಗುವ ನ್ಯೂಟ್ರಿಶನ್ನಿನ ಆವಶ್ಯಕತೆಗಳು, ರೋಗ ತಡೆಗಟ್ಟುವ ವಿಧಾನದ ಬಗ್ಗೆ ಸಂಶೋಧನಾ ಕಾರ್ಯ ನಡೆದು ಸಾಕಷ್ಟು ಪ್ರಗತಿ ಸಾಧಿಸಿದೆ. ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ದೇಶದಲ್ಲಿನ ಪ್ರಾಣಿ ವಿಜ್ಞಾನ ಸಂಶೋಧನಾ ಅಭಿವೃದ್ಧಿಯಲ್ಲಿ ಬಹು ಮುಖ್ಯ ಪಾತ್ರ ವಹಿಸಿದೆ. ಅನೇಕ ಕೇಂದ್ರ ಹಾಗೂ ರಾಜ್ಯದ ಸಂಶೋಧನಾ ಕೇಂದ್ರಗಳು ಉದಾಹರಣೆಗೆ ಭಾರತೀಯ ಪಶು ವೈದ್ಯ ಸಂಶೋಧನಾ ಕೇಂದ್ರ, ರಾಷ್ಟ್ರೀಯ ಗೋಶಾಲಾ ಸಂಶೋಧನಾ ಕೇಂದ್ರ, ಕೇಂದ್ರ ಕುರಿ ಮತ್ತು ಉಣ್ಣೆ ಸಂಶೋಧನಾ ಕೇಂದ್ರ, ರಾಜ್ಯಗಳಲ್ಲಿರುವ ಕೃಷಿ ಮತ್ತು ಗೋಶಾಲಾ ವಿಶ್ವವಿದ್ಯಾಲಯಗಳಲ್ಲಿನ ಪ್ರಾಣಿ ವಿಜ್ಞಾನ ವಿಭಾಗದವರು ಪರಿಷತ್ತಿನ ಸಮಾಧಾನಾಧಿಕರಣದಲ್ಲಿ ಸಂಶೋಧನಾ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದಾರೆ. ಪರಿಣಾಮವಾಗಿ ಉತ್ತಮ ಹಾಗೂ ಹೆಚ್ಚು ಉತ್ಪನ್ನಕಾರಕ ಜಾನುವಾರುಗಳನ್ನು ಬೆಳೆಸುವಂತಾಗಿದೆ. ಉದಾಹರಣೆಗೆ ಕೋಳಿಗಳನ್ನು ಸಾಕಿದರೆ ಅತಿ ಶೀಘ್ರವಾಗಿ ಮೊಟ್ಟೆ ಮಾಂಸ ದೊರೆಯುವುದು. ಕಳೆದ ಕೆಲವು ವರ್ಷಗಳಿಂದ ಅನೇಕ ಕೇಂದ್ರಗಳಲ್ಲಿ ಸಾಕಷ್ಟು ಸಂಶೋಧನೆಗಳನ್ನು ನಡೆಸಿ ದೇಶದ ಅನೇಕ ಭಾಗಗಳಲ್ಲಿ ವೈಟ್‌ಲೆಗ್ ಹಾರನ್, ರೋಟ್ ಐಲೇಂಡ್ ರೆಡ್ ಕೋಳಿ ತಳಿಗಳನ್ನು ಸಾಕಬಹುದೆಂದು ತೋರಿಸಿಕೊಟ್ಟಿದೆ. ಈಗ ವಾಣಿಜ್ಯೋದ್ದೇಶದಿಂದ ವರ್ಷಕ್ಕೆ 180-220 ಮೊಟ್ಟೆ ಕೊಡಬಲ್ಲ ಕೋಳಿಗಳನ್ನು ಸಾಕುವುದು ಸಾಧ್ಯ. ಭಾರತೀಯ ಪಶು ವೈದ್ಯ ಸಂಶೋಧನಾ ಕೇಂದ್ರದಲ್ಲಿನ ಕೋಳಿ ಸಂಶೋಧನಾ ವಿಭಾಗದಲ್ಲಿ ಮೊಟ್ಟೆಯ ಉತ್ಪಾದನೆ ಹೆಚ್ಚಿಸಲು, ಉತ್ತಮ ದರ್ಜೆಯ ಮಾಂಸ ದೊರಕಿಸಲು ಮತ್ತು ಅವುಗಳ ಆಹಾರದ ಬಗ್ಗೆ ಸಂಶೋಧನೆ ಮುಂದುವರಿದೇ ಇದೆ. ದೇಶೀ ತಳಿಗಳ ಜೊತೆಗೆ ಹೆಚ್ಚು ಮೊಟ್ಟೆ ದೊರಕಿಸಿಕೊಳ್ಳುವ ಸಲುವಾಗಿ ಬೇರೆಬೇರೆ ಜಾತಿಯ ತಳಿಗಳೊಂದಿಗೆ ಸಂಕರ ಮಾಡುವುದನ್ನು ಕಂಡುಹಿಡಿಯಲಾಗಿದೆ. ಕೋಳಿ ಸಾಕಣೆಕೆಯಿಂದ ಮತ್ತೊಂದು ಲಾಭವುಂಟು. ಅವುಗಳ ಸಂಖ್ಯೆಯನ್ನು ಬಹು ಬೇಗ ದ್ವಿಗುಣಗೊಳಿಸಬಹುದು. ಕೋಳಿ ಸಾಕುವ ರೈತರಿಗೂ ಉತ್ತಮ ತಳಿಗಳನ್ನು ಆಗಾಗ್ಗೆ ಒದಗಿಸಬಹುದು.

ಕೋಳಿಗಳಿಗೆ ಧಾನ್ಯವನ್ನು ಮನುಷ್ಯನಷ್ಟೇ ಬಳಸ ಬೇಕಾಗಿರುವುದರಿಂದ ಈ ಕೈಗಾರಿಕೆಗೆ ಇದೊಂದು ದೊಡ್ಡ ಪ್ರತಿಬಂಧಕವಾಗಿದೆ. ಭಾರತ ತನ್ನ ಜನರಿಗೆ ಸಾಕಷ್ಟು ಒದಗಿಸಲು ಸಾಧ್ಯವಿಲ್ಲದಿರುವಾಗ ಕೋಳಿಗಳಿಗೆ ಬೇಕೆಂದಷ್ಟು ಒದಗಿಸಲು ಸಾಧ್ಯವೆಲ್ಲಿ? ಅದೃಷ್ಟವಶಾತ್ ಸಂಶೋಧನೆಯು ಬತ್ತದ ತೌಡು, ಎಣ್ಣೆ ಹಿಂಡಿ, ಸಾಲ ವೃಕ್ಷದ ಹಣ್ಣು, ಕಂಬಳಿ ಹುಳು, ಸಣ್ಣ ಹುಳುವಿನ ಮರಿಗಳು, ಶೇಂಗಾ ಮುಂತಾದ ಮೀನಿನ ಪುಡಿ, ಮಾಂಸದ ಪುಡಿ ಮುಂತಾದುವುಗಳು ಕೋಳಿಗೆ ಹಾಕಬಹುದಾದ್ದರಿಂದ ದ್ವಿದಳ ಧಾನ್ಯಗಳ ಸಾಕಷ್ಟು ಪಾಲನ್ನು ಕಡಿಮೆ ಮಾಡುವುದೆಂದು ತೋರಿಸಿಕೊಟ್ಟಿದೆ.

ಒಂದಾನೊಂದು ಸಮಯದಲ್ಲಿ ಕೋಳಿಗಳಿಗೆ ರೋಗ ಹತ್ತಿತೆಂದರೆ ಒಂದೂ ಉಳಿಯುವಂತಿರಲಿಲ್ಲ. ಸಂಶೋಧನಾ ಕಾರ್ಯದ ಫಲವಾಗಿ ಕೋಳಿಗೆ ಹತ್ತದಂತೆ ತಡೆಗಟ್ಟಲು ಅನೇಕ ಮದ್ದುಗಳು ಇಂದು ದೊರೆಯುತ್ತವೆ.

ಇದೇ ರೀತಿ ಕುರಿ-ಮೇಕೆ ಸಾಕುವುದೂ ರೈತರಿಗೆ ಒಂದು ಮುಖ್ಯ ಉದ್ದೇಶವಾಗಿದೆ. ಆದರೆ ಇವುಗಳಲ್ಲಿ ದೊರೆಯುವ ಮಾಂಸ ಬಹಳ ಕಮ್ಮಿಯಾದ್ದರಿಂದ, ರೈತರಿಗೆ ಶ್ರಮಕ್ಕೆ ತಕ್ಕಂತೆ ಫಲ ದೊರೆಯದು. ಒಳ್ಳೆಯ ಮಾಂಸ ದೊರೆಯುವಂತೆ ಮಾಡಲು ಆಡ್ಡ ತಳಿ ಮಾಡಿದ ಮೇಕೆ ಕುರಿ ಸಾಕುವುದೂ ಅಲ್ಲದೆ ಅವುಗಳಿಗೆ ಪುಷ್ಟಿಕರವಾದ ಆಹಾರ ನೀಡುವುದೂ ಉತ್ತಮ. ನೆಲ್ಲೂರು ಮತ್ತು ಮಂಡ್ಯ ತಳಿಯ ಕುರಿಗಳ ಬಗ್ಗೆ ಸಂಶೋಧನೆ ನಡೆಯುತ್ತಿದೆ.

ನಮ್ಮ ದೇಶದಲ್ಲಿ ಹೆಚ್ಚಾಗಿ ಕುರಿ ಸಾಕುವುದು ಉಣ್ಣೆಗಾಗಿ. ಅತ್ಯಂತ ಉತ್ತಮ ದರ್ಜೆಯ ರತ್ನ ಕಂಬಳಿ ಉಣ್ಣೆಯು ನಮ್ಮಲ್ಲಿ ದೊರೆಯುತ್ತದೆ. ಬೆಟ್ಟ ಪ್ರದೇಶಗಳಲ್ಲಿ ಸಾಕಿದ ಕುರಿಗಳಿಂದಲೂ ಉತ್ತಮ ದರ್ಜೆಯ ಉಣ್ಣೆ ದೊರೆಯುವುದು. ಆದರೂ ಉತ್ತಮ ಉಣ್ಣೆಗಾಗಿ ಸಾಧಾರಣ ತಳಿಗಳನ್ನು ಸಾಕ ಬೇಕಾಗಿದೆ. ಸ್ಥಳೀಯ ಕುರಿಗಳಿಗೆ ಜಮ್ಮು—ಕಾಶ್ಮೀರ, ಹಿಮಾಲಯ ಪ್ರದೇಶ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ಟಗರನ್ನು ಕೂಡಿಸಿದ ಪರಿಣಾಮವಾಗಿ ಉಣ್ಣೆಯ ಇಳುವರಿ ಮತ್ತು ಅದರ ದರ್ಜೆಯೂ ಹೆಚ್ಚಿದೆ. ಒಂದು ಉಣ್ಣೆಯ ಇಳುವರಿಯು ಶೇಕಡ ೫೦ ಭಾಗದಷ್ಟು ಹೆಚ್ಚಿದೆ. ಈ ಅಡ್ಡ ತಳಿ ಪ್ರಯೋಗಗಳ ಫಲವಾಗಿ ಈ ಕಾರ್ಯಕ್ರಮವನ್ನು ರಾಜ್ಯಗಳಲ್ಲಿರುವ ಕುರಿ ಫಾರಂಗಳಲ್ಲಿ ಇನ್ನೂ ಹೆಚ್ಚಿಸಲಾಗಿದ್ದು, ಇನ್ನು ಕೆಲ ಕಾಲದಲ್ಲೇ ಎಲ್ಲಾ ಪ್ರದೇಶದಲ್ಲೂ ಉತ್ತಮ ತಳಿಯ ಕುರಿ ರೈತರಿಗೆ ದೊರೆತು ಒಳ್ಳೆಯ ಆದಾಯ ದೊರೆಯುವುದೆಂದು ಆಶಿಸಲಾಗಿದೆ. ಮೈದಾನಗಳಲ್ಲಿ ಸಾಕುವ ಕುರಿಗಳಲ್ಲಿ ಅವುಗಳ ಸಂತತಿ ಉತ್ತಮಗೊಂಡಿದ್ದು ಅವುಗಳಲ್ಲಿನ ಉಣ್ಣೆಯ ದರ್ಜೆಯೂ ಉತ್ತಮಗೊಂಡಿದೆಯಲ್ಲದೆ ಮೂರುಪಟ್ಟು ಹೆಚ್ಚಾಗೇ ದೊರೆಯುತ್ತಿದೆ. ತುಪ್ಪಟದಲ್ಲಿ ಕೂದಲೂ ಕಮ್ಮಿಯಿರುತ್ತದೆ.

ದನಕರುಗಳಿಗೆ ಕೃತಕ ಬೀಜದಾನ:— ಕೃತಕ ಬೀಜದಾನವು ಜನಪ್ರಿಯವಾದುದರಿಂದ ಹಸು ಎಮ್ಮೆಗಳಲ್ಲಿ ಹೆಚ್ಚು ಹಾಲು ದೊರೆಯುವುದು. ಅವುಗಳು ಬೇಗನೆ ಪ್ರಾಯಕ್ಕೆ ಬರುವುವು. ಅಲ್ಲದೆ ಅವುಗಳು ಕರುಗಳನ್ನು ಈಯುವ ಅಂತರವೂ ಕಮ್ಮಿಯಾಗುವುದು. ಸಾಧಾರಣ ತಳಿಗಳು ಬಹಳ ಕಾಲದ ವರೆಗೆ ಹಾಲು ಕೊಡಬಲ್ಲವು. ಸ್ಥಳೀಯ ತಳಿಗಳಿಗಿಂತ ಸಾಧಾರಣ ತಳಿಗಳು ಹೆಚ್ಚು ಕರುಗಳನ್ನು ಈಯುವುವು. ಕೃತಕ ಬೀಜದಾನದ ಬಗ್ಗೆ ಸಂಶೋಧನೆಯು ಅದರಲ್ಲೂ ರೇತಸ್ಸು ಸಂಗ್ರಹಿಸಿಟ್ಟು ಹೆಚ್ಚು ಬಾರಿ ಗರ್ಭಧಾರಣೆ ಮಾಡಿಸಿ ಹೆಚ್ಚು ಕರುಗಳನ್ನು ಪಡೆಯುವ ಬಗ್ಗೆ ಇನ್ನೂ ನಡೆಯುತ್ತಲೇ ಇದೆ. ರೇತಸ್ಸನ್ನು ಶೀತಕರಣದಲ್ಲಿರಿಸಿ ಹೋರಿ ಸತ್ತು ಹೋದ ಅನೇಕ ವರ್ಷಗಳ ನಂತರವೂ ಅದರ ರೇತ

(ಎಂಟನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮಿಶ್ರಪದ್ಧತಿಯಿಂದ ಆಯುರ್ವೇದ ನಾಶವಾಗುವುದು

[ಕಳೆದ ಸಂಚಿಕೆಯಿಂದ ಮುಂದುವರಿದುದು]

(ಆಯುರ್ವೇದ ವಿದ್ವಾನ್ ಶ್ರೀ ಬಿ.ವಿ. ನಂಜುಂಡಸ್ವಾಮಿ, ಬಿ.ಎಸ್‌.ಸಿ., ಎಲ್.ಎ.ಎಂ.ಎಸ್. ಇವರು 26ನೆಯ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣದಿಂದ)

ಅಲೋಪತಿಜ್ಞರು ತಮ್ಮ ವೈದ್ಯವೃತ್ತಿಯಲ್ಲಿ ಅಧಿಭೌತಿಕ ಶಕ್ತಿಯನ್ನು ಮಾತ್ರ ಅವಲಂಬಿಸಿಕೊಂಡಿದ್ದರೆ, ಆಯುರ್ವೇದಿಗಳು ಆಧ್ಯಾತ್ಮಿಕ, ಭೌತಿಕ ಮತ್ತು ಅಧಿದೈವಿಕ—ಈ ಮೂರು ಶಕ್ತಿಗಳನ್ನೂ ಸಂದರ್ಭೋಚಿತವಾಗಿ ಉಪಯೋಗಿಸಿಕೊಳ್ಳುವರು.

ಆಯುರ್ವೇದಕ್ಕೂ ನವೀನ ವೈದ್ಯಶಾಸ್ತ್ರಕ್ಕೂ ಹೀಗೆಲ್ಲ ಭೇದ ಸ್ಫುಟವಾಗಿ ತೋರುತ್ತಿರುವಾಗ, ಈ ಎರಡು ಶಾಸ್ತ್ರಗಳನ್ನೂ ಆಯುರ್ವೇದಿಕ ಶಿಕ್ಷಣ ಸಂಸ್ಥೆಗಳಲ್ಲಿ ಸಮ್ಮಿಶ್ರಮಾಡಿ ಬೋಧಿಸುತ್ತ ಬಂದರೆ, ಪರಿಣಾಮವೇನಾಗಬಹುದೆಂಬುದನ್ನು ಎಲ್ಲರೂ ಊಹಿಸಬಹುದು. ಸುಮಾರು, ಎರಡು-ಮೂರು ದಶಕಗಳಿಂದ ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಆಯುರ್ವೇದಾಧ್ಯಾಪನಕ್ಕೆಂದೇ ಸ್ಥಾಪಿತವಾದ ಶಿಕ್ಷಣ ಸಂಸ್ಥೆಗಳಲ್ಲಿ ಈ ಸಮ್ಮಿಶ್ರಬೋಧನೆಯನ್ನು ಪಡೆದ ವೈದ್ಯ ಪದವೀಧರರು ತಮ್ಮ ವ್ಯವಸಾಯದಲ್ಲಿ ಹೆಚ್ಚು ಹೆಚ್ಚಾಗಿ ಪಾಶ್ಚಾತ್ಯೌಷಧಗಳನ್ನೇ ಉಪಯೋಗಿಸಲು ಆರಂಭಿಸಿ, ಈಚೆಗೆ ಅವರಲ್ಲಿ ಬಹುಜನ ಆಯುರ್ವೇದೀಯ ಔಷಧಗಳ ಪ್ರಯೋಗವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದಾರೆಂದು ಹೇಳಿದರೆ ಅದು ಆಶ್ಚರ್ಯವಾಗಲಾರದು. ಔಷಧಗಳಲ್ಲಿ ಪಾಶ್ಚಾತ್ಯ-ಪೌರ್ವಾತ್ಯ ಎಂಬ ಭೇದ ಆಯುಶ್ಶಾಸ್ತ್ರಕ್ಕೆ ಸಮ್ಮತವಲ್ಲದಿದ್ದರೂ, ಅವುಗಳನ್ನು ಪ್ರಯೋಗಿಸುವ ಕ್ರಮದಲ್ಲಿ ಬಹಳ ವ್ಯತ್ಯಾಸವಿರುವುದರಿಂದ, ಈ ವೈದ್ಯರು ಮಾಡುತ್ತಿರುವುದು ಆಯುರ್ವೇದೀಯ ಚಿಕಿತ್ಸೆಯಾಗಲಾರದು. ಪಾಶ್ಚಾತ್ಯ ವೈದ್ಯ ಶಾಸ್ತ್ರವನ್ನೇ ಪ್ರತ್ಯೇಕವಾಗಿ ಐದು, ಆರು ವರ್ಷಗಳ ಕಾಲ ಸಂತತವಾಗಿ ಅಭ್ಯಾಸಮಾಡಿ, ಅದರ ಸಿದ್ಧಾಂತಗಳಿಗನುಗುಣವಾಗಿ ಪ್ರಯೋಗ ಕೌಶಲವನ್ನು ಸಂಪಾದಿಸಿರುವ ವೈದ್ಯರೂ ಈಗ ಬಳಕೆಯಲ್ಲಿರುವ ಅತ್ಯಂತ ಪ್ರಭಾವಶಾಲಿ ಔಷಧಗಳನ್ನು ಬಹಳ ಎಚ್ಚರಿಕೆಯಿಂದ ಉಪಯೋಗಿಸಬೇಕಲ್ಲದೆ, ಅವುಗಳಿಂದುದ್ಭವಿಸಬಹುದಾದ ಹಾನಿಕರ ಪ್ರತಿಕ್ರಿಯೆಗಳನ್ನು ಬಹಳ ಬುದ್ಧಿವಂತಿಕೆಯಿಂದ ಎದುರಿಸಬೇಕಾಗುವುದು. ಹೀಗಿರುವಾಗ, ಅಲ್ಪಕಾಲದಲ್ಲಿ, ಉಭಯ ಶಾಸ್ತ್ರಗಳಲ್ಲಿಯೂ ಪ್ರಾವೀಣ್ಯ ಪಡೆಯುವುದಾದರೂ ಹೇಗೆ? ಈ ತರಹ ಸಮ್ಮಿಶ್ರ ಶಿಕ್ಷಣ ಪಡೆದಂಥವರು ಈ ಕಡೆ ಆಯುರ್ವೇದ ವೈದ್ಯರೆಂದು ಹೇಳಿಕೊಳ್ಳುವುದು ತಮ್ಮ ಗೌರವಕ್ಕೆ ಕಡಿಮೆಯೆಂದು ಭಾವಿಸುತ್ತ, ಆ ಕಡೆ ಪಾಶ್ಚಾತ್ಯ ವೈದ್ಯ ಸಂಘಸಂಸ್ಥೆಗಳಲ್ಲಿಯೂ ಸರಿಯಾದ ಸ್ಥಾನಮಾನಗಳನ್ನು ದೊರಕಿಸಿಕೊಳ್ಳದೆ, ತಮ್ಮದೇ ಆದ ಪ್ರತ್ಯೇಕ ಮಾರ್ಗವನ್ನು ಅನುಸರಿಸುತ್ತಿರುವರು. ಆಯುರ್ವೇದಜ್ಞರಲ್ಲಿ ಎರಡು ವರ್ಗಗಳನ್ನು ಕಲ್ಪಿಸಿ, ಇವರು ಪರಸ್ಪರ ವಾದವಿವಾದಗಳಲ್ಲಿ ನಿರತರಾಗುವಂತೆ ಮಾಡಿ, ಮುಖ್ಯಧ್ಯೇಯವಾದ ಆಯುರ್ವೇದದ ಪುನರುಜ್ಜೀವನವನ್ನು ಅವರು ಮರೆಯುವಂತೆ ಮಾಡುವುದು, ಸಮಂಜಸವಾದ ಮಾರ್ಗವಲ್ಲ.

ಈಚೆಗೆ ಮೈಸೂರು ಸಂಸ್ಥಾನದ ಆಯುರ್ವೇದೀಯ ಶಿಕ್ಷಣ ಸಂಸ್ಥೆಗಳಲ್ಲಿ "ಶುದ್ಧಾಯುರ್ವೇದ" ಶಿಕ್ಷಣವನ್ನು ಜಾರಿಗೆ ತಂದು, ಅದಕ್ಕೆ ವಿಶ್ವ ವಿದ್ಯಾನಿಲಯಗಳ ಮಾನ್ಯತೆಯನ್ನು ದೊರಕಿಸುತ್ತಿರುವುದು ಅಭಿನಂದನೀಯ. ಆದರೆ ಈ ವಿದ್ಯಾಸಂಸ್ಥೆಗಳ ಪ್ರವೇಶಕ್ಕೆ ಈಗಿನ P. U. C. ಪರೀಕ್ಷೆಯ ಅರ್ಹತೆಯ ಜೊತೆಗೆ ನ್ಯಾಯ, ವೈಶೇಷಿಕ, ಸಾಂಖ್ಯಾದಿ ದರ್ಶನಗಳ ಜ್ಞಾನವಿರುವ, ಸಂಸ್ಕೃತದಲ್ಲಿ ಉಚ್ಚತರದ ಪಾಂಡಿತ್ಯವುಳ್ಳ ವಿದ್ವಾಂಸರಿಗೂ ಪ್ರವೇಶಾವಕಾಶ ಮಾಡಿಕೊಟ್ಟರೆ, ಈ ಶಾಸ್ತ್ರಜ್ಞರು ಆಯುರ್ವೇದದ ಮೂಲಭೂತ ತತ್ತ್ವಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು, ಅದರ ಸಾರವನ್ನೆಲ್ಲ ಯಥಾವತ್ತಾಗಿ ಗ್ರಹಿಸಲು ಶಕ್ತರಾಗುವರು. ಮುಂದೆ, ಅಂಥವರು, ಉತ್ತಮ ಅಧ್ಯಾಪಕರಾಗಿ, ತಮ್ಮ ಶಿಷ್ಯರಿಗೆ ಆಯುರ್ವೇದವನ್ನು ಶಾಸ್ತ್ರೀಯ ಕ್ರಮದಲ್ಲಿ ಪಾಠ ಹೇಳಿಕೊಡಲು ಸಹ ಸಮರ್ಥರಾಗುವರು.

ಸಮ್ಮಿಶ್ರಾಯುರ್ವೇದ ಶಿಕ್ಷಣವನ್ನು ವಿರೋಧಿಸುತ್ತಿರುವುದು, ಆಯುರ್ವೇದ ಶಾಸ್ತ್ರವನ್ನು ಈಗ ಉಪಲಬ್ಧವಿರುವ ಗ್ರಂಥಗಳಿಗೆ ಮಾತ್ರ ಸಂಕುಚಿತಗೊಳಿಸಿ, ಅದಕ್ಕೆ ಮತ್ತೇನನ್ನೂ ಸೇರಿಸಕೂಡದೆಂಬ ಉದ್ದೇಶದಿಂದಲ್ಲ. ಆಯುರ್ವೇದವನ್ನು ಸಂಪೂರ್ಣ ಶಾಸ್ತ್ರವೆಂದು ಕರೆಯುವುದು ಅದರ ವ್ಯಾಪಕ, ತ್ರಿಕಾಲಾಬಾಧಿತ, ಸಿದ್ಧಾಂತಗಳ ದೃಷ್ಟಿಯಿಂದ; ಮತ್ತು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಗ್ರಹಿಸಲು ಅಸಾಧ್ಯವಾದ ಎಷ್ಟೋ ವಿಷಯಗಳಿಗೆ ಅದು ಪ್ರಾಮಾಣ್ಯವನ್ನುಂಟು ಮಾಡಿಕೊಡುವುದರಿಂದ. ಆದರೆ, ಈ ಸಾರ್ವಕಾಲಿಕ, ಸಾರ್ವದೇಶಿಕ ತತ್ತ್ವಗಳಿಗೆ ಚ್ಯುತಿಬರದಂತೆ, ಜನತೆಯ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಂರಕ್ಷಣೆಗೆ ಮತ್ತು ರೋಗ ನಾಶನಕ್ಕೆ ಅನುಕೂಲವಾದ ವಿಷಯಗಳನ್ನು ಎಲ್ಲಿಂದಲಾದರೂ ಗ್ರಹಿಸಬಹುದು.

ಆಯುರ್ವೇದ ಅಪಾರವೂ ಅಗಾಧವೂ ಆದ ಸಮುದ್ರ. ಭಿನ್ನಭಿನ್ನ ಪರ್ವತ ಶ್ರೇಣಿಗಳಲ್ಲಿ ಹುಟ್ಟಿ, ಬೆಳೆದು, ದೊಡ್ಡವಾದ ನದಿಗಳು ಬೇರೆ ಬೇರೆ ದೇಶಗಳಲ್ಲಿ ಪ್ರವಹಿಸುವಾಗ ಪ್ರತ್ಯೇಕ ನಾಮರೂಪಗಳನ್ನು ಹೊಂದಿದ್ದರೂ, ಸಮುದ್ರವನ್ನು ಸೇರಿದಾಗ ಹೇಗೆ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡು ಸಮುದ್ರ ಸ್ವರೂಪವೇ ಆಗಿ ಬಿಡುವವೋ ಹಾಗೆಯೇ ಅಲೋಪತಿ, ಹೋಮಿಯೋಪತಿ, ನೇಚುರೋಪತಿ ಮುಂತಾದ ಈಚಿನ ವೈದ್ಯಶಾಸ್ತ್ರಗಳಲ್ಲಿನ ಉಪಾದೇಯಾಂಶಗಳೆಲ್ಲ ಆಯುಶ್ಶಾಸ್ತ್ರದ ಬೃಹದ್ಗರ್ಭದಲ್ಲಿ ಐಕ್ಯ ಹೊಂದಿ ಅದರ ಸ್ವರೂಪ ಅಚ್ಚಳಿಯದಂತೆ ಉಳಿದುಕೊಂಡರೆ ಆಗ ಯಾವ ದೋಷವೂ ಉಂಟಾಗುವುದಿಲ್ಲ.

ಭಾರತೀಯ ಪ್ರಾಚೀನ ವೈದ್ಯತಂತ್ರವನ್ನು ಬೋಧಿಸುವ ಸಂಸ್ಥೆಗಳಿಗೆ College of Indian Medicine ಎಂದು ಹೆಸರಿಸದೆ "ಆಯುರ್ವೇದ ಮಹಾ ವಿದ್ಯಾಲಯ" ಎಂದು ಹೆಸರಿಡುವುದು ಉಚಿತವೂ, ಸುಂದರವೂ ಆಗಿರುತ್ತದೆ. ವಿಶ್ವ ವೈದ್ಯಕವಾದ ಆಯುರ್ವೇದಕ್ಕೆ ದೇಶ-ಕಾಲಗಳ ಎಲ್ಲೆಯನ್ನು ಕಟ್ಟಿ, ತೋರಿಸುವುದು ಸಂಕುಚಿತ ಭಾವನೆಯಲ್ಲವೆ?

"ಆಯುರ್ವೇದ ಸುಂದರವಾದ ಹೆಸರುಳ್ಳದ್ದು. ಅದು ಆಯುಸ್ಸಿಗೆ ಸಂಬಂಧಪಟ್ಟ ಜ್ಞಾನವನ್ನು ಉಪದೇಶಿಸುತ್ತದೆ. ಅದು ಸಂಪೂರ್ಣ ಶಾಸ್ತ್ರ. ಅದು ಆಧುನಿಕ ಪ್ರಯೋಗ ಜನ್ಯವಲ್ಲ; ಋಷಿ ಮುನಿಗಳಿಂದ ಪ್ರವೃತ್ತವಾದದ್ದು. ಈಗ ಅದರ ಸಂಶೋಧನೆ ನಡೆಯಬೇಕಾದ್ದು ಫಿಜಿ. ವೈಜ್ಞಾನಿಕ ದೃಷ್ಟಿಯಿಂದಲ್ಲ; ತನ್ನ ಸಿದ್ಧಾಂತಗಳಿಗನುಗುಣವಾಗಿ". ಮೊರಾರ್ಜಿಯವರ ಈ ಬಹ್ವರ್ಥ ಗರ್ಭಿತ ಮಾತುಗಳ ಸ್ವಾರಸ್ಯವನ್ನು ಪ್ರತಿಯೊಬ್ಬ ವೈದ್ಯನೂ ಗ್ರಹಿಸಬೇಕಾದ್ದು ಈಗಿನ ಸಂದರ್ಭದಲ್ಲಿ ಅತ್ಯವಶ್ಯಕ.

ಭಾರತದ ಲಕ್ಷಾಂತರ ಗ್ರಾಮಗಳಲ್ಲಿ ವಾಸಿಸುವ ಜನತೆ ಈಗಲೂ ಸರಿಯಾದ ವೈದ್ಯಕೀಯ ಸೌಲಭ್ಯಗಳಿಲ್ಲದೆ ಬದುಕುತ್ತಿದೆ. ಅಲೋಪತಿ ಡಾಕ್ಟರುಗಳು ಗ್ರಾಮಗಳಲ್ಲಿ ತಮ್ಮ ವೃತ್ತಿಯನ್ನು ನಡೆಸಲು ಇಷ್ಟಪಡುವುದಿಲ್ಲ. ಹೀಗಿರುವಾಗ ಸರ್ಕಾರು ಗ್ರಾಮಗಳಿಗೆ ಉಪಯುಕ್ತವಾಗುವಂತೆ ಅಲ್ಲಲ್ಲಿ ಸ್ವಾಸ್ಥ್ಯ ಕೇಂದ್ರ, ಆತುರಾಲಯಗಳನ್ನು ಸ್ಥಾಪಿಸಿ, ಅಲೋಪತಿಜ್ಞರ ಸಹಾಯದಿಂದ ಹಳ್ಳಿಯ ಜನರ ಆರೋಗ್ಯ ಭಾಗ್ಯವನ್ನು ಪಾಲಿಸುವ ಉದ್ದೇಶದಿಂದ ತಯಾರಾದ ಯೋಜನೆಗಳು ಅಧಿಕ ವ್ಯಯಸಾಧ್ಯವೂ ಕಲ್ಪನಾ ಮಾತ್ರ ರಮ್ಯವೂ, ಅವ್ಯಾವಹಾರಿಕವೂ ಆಗುವುದರಲ್ಲಿ ಆಶ್ಚರ್ಯವೇನಿದೆ? ಹೀಗೆ ಮಾಡುವುದರ ಬದಲು, ಗ್ರಾಮವಾಸಿಗಳ ಸೇವೆ ಸಲ್ಲಿಸಲು ಸದಾ ಸಿದ್ಧವಾಗಿರುವ, ಲಕ್ಷಾಂತರ ಮಂದಿ ಆಯುರ್ವೇದಜ್ಞರ ಸಹಾಯವನ್ನು ಏಕೆ ತೆಗೆದು ಕೊಳ್ಳಬಾರದು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಈ ಅವಕಾಶ ಮಾಡಿಕೊಡುವರೇ ನೋಡಬೇಕು.

ಭಾರತ ರಾಷ್ಟ್ರೀಯ ಕಾಂಗ್ರೆಸ್ ತನ್ನ ನಾಗಪುರ ಅಧಿವೇಶನ (1920)ದಲ್ಲಿಯೇ ದೇಶಾದ್ಯಂತ ಜನತೆಯ ವಿಶ್ವಾಸ ಗಳಿಸಿರುವ ಆಯುರ್ವೇದದ ಅಭಿವೃದ್ಧಿಗಾಗಿ ವಿದ್ಯಾಲಯ, ಮಹಾವಿದ್ಯಾಲಯ, ಆತುರಾಲಯಗಳನ್ನು ಸ್ಥಾಪಿಸಿ ಈ ದೇಶೀಯ ವೈದ್ಯಕದ ಪ್ರಯೋಜನ ಹೆಚ್ಚು ಹೆಚ್ಚಾಗಿ ಪ್ರಜಾವರ್ಗಕ್ಕೆ ಲಭಿಸುವಂತೆ ಮಾಡಬೇಕೆಂಬ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿತ್ತು.

ಆದರೆ ಭಾರತ ತನ್ನ ಬಂಧನವನ್ನು ನೀಗಿಕೊಂಡ ಮೇಲೂ ಆಯುರ್ವೇದ ಸ್ವಾಸ್ಥ್ಯ ಮಂತ್ರಿಗಳ ಅನಾದರಣೆಗೆ ಗುರಿಯಾಗಿ, ಅದರ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಪ್ರೋತ್ಸಾಹ, ಉತ್ತೇಜನಗಳು ದೊರಕದಿರುವುದು ಸಂತೋಷದ ಸಂಗತಿಯಲ್ಲ. ಈ ಶಾಸ್ತ್ರ ಪುನರುಜ್ಜೀವಿತವಾಗಬೇಕಾದರೆ, ಭಾರತ ಜನತೆಗೆ ಅದು ತನ್ನ ಸೇವೆಯನ್ನು ಅತ್ಯುತ್ಕೃಷ್ಟ ರೀತಿಯಲ್ಲಿ ಸಲ್ಲಿಸಬೇಕಾದರೆ ಈಗ ಆಗಬೇಕಾದ್ದೇನು?

ಪಂಚವಾರ್ಷಿಕ ಯೋಜನೆಗಳಲ್ಲಿ ಆಯುರ್ವೇದಾಭಿವೃದ್ಧಿಗೆ ದೊರಕುತ್ತಿರುವ ಆರ್ಥಿಕ ಸೌಲಭ್ಯ ಸಮರ್ಪಕವಾಗಿಲ್ಲ. ಅಲೋಪತಿಯ ಉದ್ಧಾರವಾಗಲು ನೂರಾರು ಕೋಟಿಗಟ್ಟಲೆ ದ್ರವ್ಯ ವ್ಯಯವಾದರೂ ಅದರ ಶತಾಂಶದಷ್ಟು ಇದರ ಪ್ರಗತಿಗಾಗಿ ದೊರೆಯುತ್ತಿಲ್ಲ. ಕಳೆದ ಮೂರು ಯೋಜನೆಗಳಲ್ಲಿ 37 ಲಕ್ಷ, ಆರು

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ,

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—27

ಕೋಟಿ 'ಮತ್ತು 10 ಕೋಟಿ ರೂ.ಗಳನ್ನು ಮಾತ್ರ ಆಯುರ್ವೇದ, ಹೋಮಿಯೋಪತಿ, ಯುನಾನಿ ಈ ಮೂರು ವೈದ್ಯಪದ್ಧತಿಗಳನ್ನು ಒಟ್ಟುಗೂಡಿಸಿ ವಿನಿಯೋಜಿಸಲಾಗಿದೆ. ಮುಂದಿನ ಯೋಜನೆಯಲ್ಲಾದರೂ, ಸಮಗ್ರ ಭಾರತದ ಸ್ವಾಸ್ಥ್ಯ ಸಂರಕ್ಷಣೆಗಾಗಿ ವಿನಿಯುಕ್ತವಾಗುವುದರಲ್ಲಿ ಅರ್ಧದಷ್ಟಾದರೂ ದೇಶೀಯ ವೈದ್ಯಾಭಿವೃದ್ಧಿಗೆ ಸಂದಾಯವಾಗುವುದು ನ್ಯಾಯವಾಗಿರುತ್ತದೆ; ಮತ್ತು ಇದಕ್ಕೆ ಕೊಡಲ್ಪಟ್ಟ ಹಣ ಇದಕ್ಕಾಗಿಯೇ ವಿನಿಯೋಗವಾಗಬೇಕು.

ಆಯುರ್ವೇದದ ಭವಿಷ್ಯವನ್ನು ರೂಪಿಸುವ ಮಹತ್ತರವಾದ ಕಾರ್ಯವನ್ನು ಪಾಶ್ಚಾತ್ಯ ವೈದ್ಯ ವಿದ್ವಾಂಸರಿಗೆ ವಹಿಸುತ್ತಿರುವ ಈಗಿನ ಪದ್ಧತಿಯನ್ನು ತಿಳಿಸಿ, ಅದನ್ನು ಶ್ರದ್ಧಾಳುಗಳಾದ ಆಯುರ್ವೇದ ಪಾರಂಗತರಿಗೆ ಮಾತ್ರ ಒಪ್ಪಿಸಬೇಕು.

ಆಯುರ್ವೇದೀಯ ಔಷಧ ಪರಿಶೋಧನಾಲಯಗಳಲ್ಲಿ ನಡೆಸಲ್ಪಡುವ ಎಲ್ಲ ಬಗೆಯ ಪರೀಕ್ಷೆಗಳೂ ಆಯುಶ್ಶಾಸ್ತ್ರದ ತತ್ತ್ವ ಸಿದ್ಧಾಂತಗಳನ್ನಾಧರಿಸಿಕೊಂಡಿದ್ದು, ಅವಕ್ಕೆ ಸಂಬಂಧಪಟ್ಟ ವಿಮರ್ಶಾತ್ಮಕ ಲೇಖನಗಳೂ, ಪ್ರಕಟಣೆಗಳೂ ಶಾಸ್ತ್ರೀಯ ಪರಿಭಾಷೆಯಲ್ಲಿಯೇ ಬರೆಯಲ್ಪಡಬೇಕು.

ಆಯುರ್ವೇದಿಕ ಪರಿಶೋಧನಾ ಸಂಸ್ಥೆಗಳಲ್ಲಿ ಕೆಲಸಮಾಡುವ ವೈದ್ಯರು ಈಗ ಅಲೋಪತಿಜ್ಞರಿಂದ ಅತ್ಯಧಿಕವಾಗಿ ಉಪಯೋಗಿಸಲ್ಪಡುತ್ತಿರುವ ಸಲ್ಫೋಡ್ರಗ್ಸ್, ಆಂಟಿ ಬಯೋಟಿಕ್ಸ್ ಮೊದಲಾದ ಪ್ರಭಾವಶಾಲಿ ಔಷಧಗಳ ಗುಣಾವಗುಣಗಳನ್ನು ತಮ್ಮ ಶಾಸ್ತ್ರೀಯ ದೃಷ್ಟಿಯಿಂದ ವಿಚಾರಮಾಡಿ, ತ್ರಿದೋಷ, ತ್ರಿಗುಣ, ಪಂಚಭೂತ, ಷಡ್ರಸ ಈ ಸಿದ್ಧಾಂತಗಳ ಚೌಕಟ್ಟಿನಲ್ಲಿ ಅವುಗಳನ್ನಳವಡಿಸುವ ಪ್ರಯತ್ನ ಮಾಡಬೇಕು.

ಆಯುರ್ವೇದೀಯ ಔಷಧ ನಿರ್ಮಾಣ ಕಾರ್ಖಾನೆಗಳಲ್ಲಿ ಸುಸಜ್ಜಿತ, ಸರ್ವಸಾಧನಸಂಪನ್ನ, ಪರಿಶೋಧನ ಸಂಸ್ಥೆಗಳೇರ್ಪಟ್ಟು, ಅತ್ಯುತ್ತಮ ಕಾಷ್ಠೌಷಧಗಳ ಜೊತೆಗೆ ರಸ ತಂತ್ರೋಕ್ತ ರಸೌಷಧಗಳು ಪರಿಶೋಧಿತವಾಗಿ, ಅವುಗಳಲ್ಲಿ ಅತ್ಯಂತ ಉಪಯುಕ್ತವಾದವುಗಳನ್ನು ಹೆಚ್ಚು ಪ್ರಮಾಣದಲ್ಲಿ ತಯಾರಿಸಿದರೆ, ವೈದ್ಯರಿಗೆ ಬಹಳ ಸಹಾಯವಾಗುವುದು.

ಆಯುರ್ವೇದ ಶಾಸ್ತ್ರೋಕ್ತ ಋತುಚರ್ಯೆ, ದಿನಚರ್ಯೆ, ಸದ್ವೃತ್ತಿ, ಸದಾಚಾರಗಳನ್ನು ಸುಲಭವೂ, ಸರಳವೂ ಆದ ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಈಗಿನ ಎಲ್ಲ ತರಹ ಪ್ರಚಾರ ಸಾಧನಗಳನ್ನು ಉಪಯೋಗಿಸಿಕೊಂಡು, ಆಬಾಲವೃದ್ಧರಿಗೂ ಬೋಧವಾಗುವಂತೆ ಪ್ರಚಾರ ಮಾಡುತ್ತ ಬಂದರೆ, ಅದು ನಿಜವಾಗಿಯೂ, ಜನತೆಯ ದೈಹಿಕ ಮತ್ತು ಮಾನಸಿಕ ಆರೋಗ್ಯ ಪಾಲನೆಗೆ ಅತ್ಯಂತ ಸಹಾಯವಾಗುವುದು.

ಆಯುರ್ವೇದಿಕ್ ಸ್ನಾತಕೋತ್ತರ ಶಿಕ್ಷಣ ಸಂಸ್ಥೆಗಳಲ್ಲಿ ಆರ್ಷ ಭಿಷಕ್–ತಂತ್ರದ ಅಷ್ಟಾಂಗಗಳೂ ಅಭಿವೃದ್ಧಿಯಾಗುವುದಕ್ಕೆ ಬೇಕಾದ ಸೌಕರ್ಯ-ಸೌಲಭ್ಯಗಳಿದ್ದು, ಆಯುರ್ವೇದ ಸ್ವರೂಪಕ್ಕೆ ಧಕ್ಕೆ ಬರದಂತೆ ಆಯಾ ಅಂಗಗಳ ನ್ಯೂನತೆಯನ್ನು ಪರಿಹರಿಸಲು ಪ್ರಯತ್ನ ನಡೆಸಬೇಕು. ಈ ಸಂಬಂಧದಲ್ಲಿ, ಪ್ರಚಲಿತ ವೈದ್ಯಶಾಸ್ತ್ರಗಳಲ್ಲಿನ ಉಪಾದೇಯಾಂಶಗಳನ್ನೊಳಗೊಂಡ ವಿಸ್ತಾರವಾದ ಶಾಸ್ತ್ರೀಯ ಸಾಹಿತ್ಯ ಪ್ರಾದೇಶಿಕ ಭಾಷೆಗಳಲ್ಲಿ ಸೃಷ್ಟವಾಗಬೇಕಾದ್ದು ಅತ್ಯಗತ್ಯ.

ಭಾರತದ ರಾಜಧಾನಿಯಲ್ಲಿ ಕೇಂದ್ರ ಆಯುರ್ವೇದಿಕ್ ಮೆಡಿಕಲ್ ಕೌನ್ಸಿಲ್ ಜಾಗ್ರತೆ ಸ್ಥಾಪಿತವಾಗಿ, ಆಯುರ್ವೇದ ಪುರೋಭಿವೃದ್ಧಿಗೆ ಸಂಬಂಧಪಟ್ಟ ಕಾರ್ಯವೆಲ್ಲ ಅದರ ಆಡಳಿತಕ್ಕೊಳಪಡಬೇಕೆಂಬುದು ಎಲ್ಲ ವೈದ್ಯರ ಆಶೆಯಾಗಿದೆ.

ಆಯುರ್ವೇದ ಭಿಷಕ್, ವಿಶಾರದ, ಆಚಾರ್ಯ ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸಹಸ್ರಾರು ಮಂದಿ ಭಾರತೀಯ ಆಯುರ್ವೇದ ವಿದ್ಯಾಪೀಠ ಶಿಕ್ಷಿತರು, ಭರತಖಂಡದ ಬೇರೆಬೇರೆ ಭಾಗಗಳಲ್ಲಿ ನೆಲೆಸಿ, ಜನತಾ ಸೇವೆಯಲ್ಲಿ ತೊಡಗಿದ್ದಾರೆ. ಇವರಿಗೆ ಆಯಾ ಪ್ರಾದೇಶಿಕ ಬೋರ್ಡುಗಳಿಂದ, ರಿಜಿಸ್ಟ್ರೇಶನ್ ಮಾನ್ಯತೆ ಕೊಡಲ್ಪಟ್ಟು. ಅವರಿಗೆ ಯೋಗ್ಯ ಸ್ಥಾನ, ಮಾನ, ವೇತನಾದಿಗಳು ದೊರಕಬೇಕು.

ಶಾಸ್ತ್ರಜ್ಞರೂ, ಸಮರ್ಥರೂ, ಕರ್ಮಕುಶಲರೂ ಆದ ಆರ್ಷವೈದ್ಯ ಪ್ರವೀಣರನ್ನು ದೇಶಾದ್ಯಂತ ಸಿದ್ಧಗೊಳಿಸಬೇಕಾದರೆ, ಅದಕ್ಕೆ ಸಾಧಕವಾಗಿ ಆಯುರ್ವೇದ ವಿಶ್ವವಿದ್ಯಾನಿಲಯ ಆದಷ್ಟು ಬೇಗ ಭಾರತದ ರಾಜಧಾನಿಯಲ್ಲಿ ಸ್ಥಾಪಿತವಾಗಬೇಕು. ಆಯುರ್ವೇದ ವಿಶ್ವವಿದ್ಯಾನಿಲಯ ಆರಂಭಿಕ ಆಯುರ್ವೇದಕ್ಕೆ ಸಂಬಂಧಪಟ್ಟ ಶಿಕ್ಷಣ, ಪ್ರಶಿಕ್ಷಣ, ಸ್ನಾತಕೋತ್ತರ ಶಿಕ್ಷಣ ಮತ್ತು ಪರಿಶೋಧನಾ ಕಾರ್ಯಗಳನ್ನು ಅದರ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ ಸರಕಾರ ಬಹಳ ಹಿಂದಿನಿಂದಲೂ ಆಯುರ್ವೇದಾಭಿವೃದ್ಧಿಯಲ್ಲಿ ಆಸಕ್ತವಾಗಿದೆ. ಈಚೆಗೆ, ಆಯುರ್ವೇದ ಶಿಕ್ಷಣದ ದುಷ್ಪರಿಣಾಮವನ್ನು ಗಮನಿಸಿ, ಮೈಸೂರು ಆಯುರ್ವೇದ ವಿದ್ಯಾಲಯದಲ್ಲಿ ಶುದ್ಧಾಯುರ್ವೇದಶಿಕ್ಷಣವನ್ನು ಜಾರಿಗೆ ತಂದು, ಅದಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ಕೊಡಿಸಿ, ಆಯುರ್ವೇದಜ್ಞರ ಸ್ಥಾನಮಾನಗಳು ಉತ್ತಮಗೊಳ್ಳುವಂತೆ ಮಾಡಿರುವುದು ಶ್ಲಾಘನೀಯ. ಈ ರಾಜ್ಯದ ಬೇರೆ ಕಡೆಗಳಲ್ಲಿ ಸ್ಥಾಪಿತವಾಗಿರುವ ಅಥವಾ ಮುಂದೆ ಸ್ಥಾಪಿತವಾಗುವ ಶಿಕ್ಷಣ ಸಂಸ್ಥೆಗಳಿಗೂ ಆಯಾ ವಿಶ್ವವಿದ್ಯಾನಿಲಯಗಳ ಮಾನ್ಯತೆ ಶೀಘ್ರದಲ್ಲೇ ದೊರಕುವ ಶುಭಸೂಚನೆಗಳೂ ಕಾಣುತ್ತಿವೆ. ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಆಸ್ಪತ್ರೆ ಆದರ್ಶ ಆಯುರ್ವೇದ ಸಂಸ್ಥೆಯಾಗಿ ಅಭಿವೃದ್ಧಿ ಹೊಂದುತ್ತ, ಜನತಾ ಸೇವೆಯನ್ನು ಅತ್ಯುತ್ತಮವಾಗಿ ಮಾಡುತ್ತಲಿದೆ. ಭಾರತೀಯ ಆಯುರ್ವೇದ ವಿದ್ಯಾಪೀಠದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಬಹುಮಂದಿ ವೈದ್ಯರು, ಮೈಸೂರಿನ ಹಳ್ಳಿಗಳಲ್ಲಿ ವಾಸಮಾಡುತ್ತ, ಚಿಕಿತ್ಸಾ ಕರ್ಮದಲ್ಲಿ ತೊಡಗಿದ್ದಾರೆ. ಆದರೆ, ನಮ್ಮ ಸಂಸ್ಥಾನದಲ್ಲಿ, ಈ ಎಲ್ಲ ವೈದ್ಯರ ಭವಿಷ್ಯವನ್ನು ಯೋಗ್ಯ ರೀತಿಯಲ್ಲಿ ರೂಪಿಸುವ, ಅವರ ಕುಂದು-ಕೊರತೆಗಳನ್ನು ನಿವಾರಿಸುವ, ಅವರು ಉತ್ಸಾಹದಿಂದ ತಮ್ಮ ವೃತ್ತಿಯಲ್ಲಿ ನಿರತರಾಗುವಂತೆ ಅವರ ಸ್ಥಾನ, ಮಾನ, ಸಂಬಳ ಸಾರಿಗೆಗಳಿಗೆ ಲಕ್ಷ್ಯವನ್ನು ಕೊಡುವ ಆಯುರ್ವೇದಿಕ ಪ್ರಾದೇಶಿಕ ಮೆಡಿಕಲ್ ಕೌನ್ಸಿಲ್ ಇನ್ನೂ ಜನ್ಮ ತಾಳದಿರುವುದು ಎಲ್ಲರಿಗೂ ನಿರಾಶೆಯನ್ನುಂಟುಮಾಡಿದೆ.

[ಸಮಾಪ್ತ]

ಲ್ಯಾಂಡ್ ಟ್ರಿಬ್ಯೂನಲ್,
ಉಡುಪಿ, ದ. ಕ.

R-L.C. No. 177/1968.

ಉಮಾಶಂಕರ ಶೆಟ್ಟಿ —ಅರ್ಜಿದಾರ,

ಮತ್ತು

ಬಚ್ಚ ಪೂಜಾರಿ ಕಡಾ —ಎದುರು.

ನೋಟೀಸು

ಉಡುಪಿ ತಾಲೂಕು ವಾರಂಬಳ್ಳಿ ಗ್ರಾಮದ ದೇವರ ಹಿತ್ತಲುನಲ್ಲಿರುವ ದೇವ ಪೂಜಾರಿಯ ಅಳಿಯ 2ನೇ ಎದುರು ಮತ್ತು ಪೂಜಾರಿಗೆ—

ಸದ್ರಿ ನಂಬರಿನಲ್ಲಿ ನಿಮ್ಮ ವಶವಿರುವ ಆಸ್ತಿಗಳ ಸ್ವಾಧೀನತೆ ಪಡೆಯುವರೆ, ಮೈಸೂರು ಭೂಸುಧಾರಣಾ ಕಾನೂನಿನ ಸೆಕ್ಷನ್ 140 ಪ್ರಕಾರ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ಅದರ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು ಈ 1969ನೇ ಮಾರ್ಚ ತಿಂಗಳು 12ನೇ ತಾರೀಕು ಹಗಲು 11 ಘಂಟೆಗೆ ಈ ಟ್ರಿಬ್ಯೂನಲ್‌ನಲ್ಲಿ ನೀವು ಖುದ್ದಿನಿಂದಾಗಲೀ ವಕೀಲರ ದ್ವಾರಾನಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದರಿ ವಿಷಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲ್ಪಡುವುದು.

ಟ್ರಿಬ್ಯೂನಲ್ ಹುಕುಂ ಪ್ರಕಾರ

ಜೆ. ಪಿ. ಎಸ್. ಕೊಳ್ಕೆಬೈಲು,
B.Sc., B.L.,
Advocate for Applicant.

Udipi. 10-2-1969.

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—70 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಸಂಪಾದಕರಿಗೆ ಪತ್ರ:

ಶ್ರೀ ಮಧ್ವಾಚಾರ್ಯರ ಅವತಾರ ಕಾಲ?

ಅಖಿಲಭಾರತದಲ್ಲಿ ಸುಪ್ರಸಿದ್ಧರಾದ ಶ್ರೀ ಮಧ್ವಾಚಾರ್ಯರು ಅವತರಿಸಿದ ಕಾಲಮಾನದ ಬಗೆಗೆ ಹಲವರು ಹಲವಾರು ಬಗೆಯಲ್ಲಿ ಬರೆಯುತ್ತಾರೆ. ಅವರಲ್ಲಿ ಕೆಲವರು 'ನೂಲೇಕುರಾರ ನ್ಯಾಯ'ದಿಂದ ಪ್ರವರ್ತಿಸುವುದು ವಿಚಿತ್ರವು. ಶ್ರೀ ಮಧ್ವಾಚಾರ್ಯರೇ ಬರೆದ 'ಮಹಾಭಾರತ ತಾತ್ಪರ್ಯನಿರ್ಣಯ'ವೆಂಬುದರಲ್ಲಿ 'ಕಲಿಯುಗದಲ್ಲಿ 4300 ವರ್ಷ ಸಲುತ್ತಿರಲು' (ಇಸ್ವಿ ಸು. 1200ಕ್ಕೆ) ಶ್ರೀ ಮಧ್ವಾಚಾರ್ಯರ ಅವತಾರವೆಂದಿದೆ. ಇದಕ್ಕೆ ಶ್ರೀ ವಾದಿರಾಜ ಸ್ವಾಮಿಗಳು ಬರೆದ ಟೀಕೆಯಲ್ಲೂ ಇದರ ವಿವರಣವಿದೆ. ಅದು ಮಾತ್ರವಲ್ಲ, ಉಡುಪಿಯ ಶ್ರೀ ಪೇಜಾವರ ಮಠ, ಶ್ರೀ ಅದಮಾರು ಮಠ, ಶ್ರೀ ಪಲಿಮಾರು ಮಠಗಳ ಗುರುಪೀಠಿಗೆ (ಕೈಫಿಯತ್) ಗಳಲ್ಲೂ ಶ್ರೀ ಮಧ್ವಾಚಾರ್ಯರ ವ್ಯಾಖ್ಯಾನುಸಾರವಾಗಿ ಅವರು ಅವತರಿಸಿದ ಹಾಗೂ ನಿರ್ಯಾಣವಾದ ವರ್ಷ, ಮಾಸ, ತಿಥಿಗಳೂ ಹೇಳಿವೆ. ಇವಿಷ್ಟು ಪ್ರಬಲಾಧಾರಗಳಿದ್ದರೂ ಕೆಲವರು ಇವನ್ನು ಗಮನಿಸುವುದಿಲ್ಲ. ಕೆಲವರು ಶ್ರೀ ಮಧ್ವರ ವಚನವೆತ್ತಿ, ಇತರ ಕೃತಿಗಳ ಆಧಾರವೇ ಪ್ರಮಾಣವೆಂದು ತೀರ್ಪುಕೊಡುತ್ತಾರೆ. ಶ್ರೀ ವಾದಿರಾಜರ ಕೃತಿಗಳನ್ನಾಗಲೀ, ಉಡುಪಿಯ ಮಠಗಳ ದಾಖಲೆಗಳನ್ನಾಗಲೀ ಕೆಲವರು ಪರಿಗಣಿಸುವುದೇ ಇಲ್ಲ. ಶ್ರೀ ಮಧ್ವಾಚಾರ್ಯರು 1238ನೆಯ ಇಸ್ವಿಗೆ ಅವತರಿಸಿದರೆನ್ನುವಲ್ಲಿ, ಶ್ರೀ ಮಧ್ವಾಚಾರ್ಯರು ತಮ್ಮ ವಾಕ್ಯದಲ್ಲಿ 38 ಅಂಕಿ (ಶಬ್ದ) ಕೂಡಿಸಲು ಸಮರ್ಥರಿದ್ದಿಲ್ಲವೇ? ಉಡುಪಿಯ ಬಗೆಗೆ ಶ್ರೀ ವಾದಿರಾಜರ ಹಾಗೂ ಉಡುಪಿಯ ಮಠಗಳ ಉಲ್ಲೇಖಗಳು ಪ್ರಬಲಾಧಾರಗಳಾಗವೇ? ಇವನ್ನೆಲ್ಲ ಪರಿಶೀಲಿಸದೆ ಬರೆಯುವುದು ಕೆಲವರ ಚಟವೇ ಆಗಿದೆ. ಈ ಬಾರಿ ಉಡುಪಿ ಮಾಧ್ವ ಸಮ್ಮೇಳನದ ಉತ್ಸವ ಸಮಿತಿಯು ಪ್ರಕಟಿಸಿದ 'ಆರಾಧನಾ'ದಲ್ಲಿ ಶ್ರೀ ಕಡಬಂದೂರ ಕೃಷ್ಣರಾಯರು ಇಂತಹ ಪ್ರಮಾದವನ್ನು ಕೈಗೊಂಡಿದ್ದಾರೆ. ಶ್ರೀ ಮಧ್ವಾಚಾರ್ಯರ ವಾಕ್ಯ, ಶ್ರೀ ವಾದಿರಾಜರ ಟೀಕೆ, ಉಡುಪಿ ಮಠಗಳ ಕೈಫಿಯತ್‌ಗಳು ಹಾಗೂ ಗಂಜಾಂ ಜಿಲ್ಲೆಯಲ್ಲಿರುವ ಶ್ರೀ ನರಹರಿ ತೀರ್ಥರ ಶಿಲಾಶಾಸನಗಳ ಹಿನ್ನಲೆಯಲ್ಲಿ ಶ್ರೀ ಮಧ್ವಾಚಾರ್ಯರು ಇ. 1200ಕ್ಕೆ ಅವತರಿಸಿದರು; ಇ. 1278ಕ್ಕೆ ನಿರ್ಯಾಣರಾದರೆಂದು ಹೇಳಬರುತ್ತದೆ. (ಸಾಹಿತ್ಯದ ಹಿನ್ನಲೆ ಮತ್ತು ಪ್ರಕಟಿತ ಡಾ. ಬಿ. ಕೆ. ಗೋಡೆಯವರ ಸಂಶೋಧನಗ್ರಂಥಗಳಲ್ಲಿ ಈ ಬಗೆಗೆ ನನ್ನ ಬರೆಹವಿದೆ.) ಈ ಕಾರಣ, ಈ ವಿಚಾರಕ್ಕೆ ಮಾಧ್ವ ಸಿದ್ಧಾಂತಿಗಳಾಗಲೀ ಇತರ ಸಿದ್ಧಾಂತಿಗಳಾಗಲೀ, ತಕ್ಕ ಗಮನವಿರಿಸಿ, ವಿವೇಚಿಸಿ ಸುನಿರ್ಧಾರ ಕೈಗೊಳ್ಳಬೇಕಾಗಿ ಕಳಕಳಿಯಿಂದ ಅರಿಕೆಮಾಡುವೆನು.

ಕೆ. ವೆಂಕಟರಾಯಾಚಾರ್ಯ
ಸುರತ್ಕಲ್ಲು

READ & ADVERTISE IN NAVAYUGA WEEKLY

ಪ್ರಾಣಿ ವಿಜ್ಞಾನದಲ್ಲೂ ಸಂಶೋಧನೆ

(ಐದನೇ ಪುಟದಿಂದ)

ಸ್ಸನ್ನು ಬಳಸಿಕೊಳ್ಳುವ ಬಗೆಯೂ ಈಚೆ ಸಲಹೆ ಮಾಡಲಾಗಿದೆ. ಕೆಲವು ವರ್ಷಗಳ ಹಿಂದೆ, ಸ್ಥಳೀಯ ಹಸುಗಳಿಗೆ ಹೊರಗಿನಿಂದ ತಂದ ಹೋರಿಯನ್ನು ಕೂಡಿಸುವುದೆಂದರೆ ಪ್ರತಿಕೂಲ ಅಭಿಪ್ರಾಯವೇ ಎದ್ದಿತು. ರಾಜ್ಯ ಮತ್ತು ಕೇಂದ್ರ ಸಂಶೋಧನಾ ಕೇಂದ್ರಗಳಲ್ಲಿ ನಡೆಸಿದ ಸಂಶೋಧನೆಗಳಿಂದ ಮತ್ತು ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಸಂಶೋಧನಾ ಯೋಜನೆಯ ಅಂಗವಾಗಿ ಹಳ್ಳಿಗಳಲ್ಲಿ ನಡೆಸಿದ ಪ್ರಯೋಗಗಳಿಂದಾಗಿ ಭಾರತದ ಹಸುಗಳಿಗೆ ವಿದೇಶದಿಂದ ತಂದ ಹೋರಿಗಳಿಂದ ಅಡ್ಡ ತಳಿ ಕೂಡಿಸಿದರೆ ಆಗುವ ಪ್ರಯೋಜನವನ್ನು ರೈತರಿಗೆ ಮನದಟ್ಟು ಮಾಡಿಕೊಟ್ಟಿತು. ಹಸುಗಳಿಗೆ ಅಡ್ಡ ತಳಿ ಕೂಡಿಸುವ ಯೋಜನೆಯು ದೇಶದಾದ್ಯಂತ ಕಾರ್ಯ ರೂಪಕ್ಕೆ ಬಂದಿದೆ. ಅನೇಕ ಪ್ರದೇಶಗಳಲ್ಲಿ ತೀವ್ರ ಜಾನುವಾರು ಅಭಿವೃದ್ಧಿ ಮತ್ತು ಪಶುಪಾಲನ ಅಭಿವೃದ್ಧಿ ಕಾರ್ಯಕ್ರಮಗಳು ಪ್ರಾರಂಭವಾಗಿವೆ.

ದೇಶದ ಅನೇಕ ಭಾಗಗಳಲ್ಲಿ ಬೇಸಿಗೆ ಸಮಯದಲ್ಲಿ ಮಾತ್ರ ಹಾಲಿನ ಅಭಾವವಿರುತ್ತದೆ. ಎಮ್ಮೆಗಳು ಕಾಲಿಕತಳಿಯಾದ್ದರಿಂದ ಮತ್ತು ಎಮ್ಮೆಯ ಹಾಲೇ ಹೆಚ್ಚಾಗಿ ದೇಶದ ಅನೇಕ ಭಾಗಗಳಲ್ಲಿ ದೊರೆಯುವುದರಿಂದ ಈ ಅಭಾವವು ತಲೆದೋರುತ್ತದೆ. ಉತ್ತರ ಪ್ರದೇಶದ ಪಶುವೈದ್ಯ ವಿಜ್ಞಾನ ಕಾಲೇಜಿನವರು ನಡೆಸಿದ ಪ್ರಯೋಗಗಳಿಂದ ಎಮ್ಮೆಗಳು ವರ್ಷದ ಯಾವ ಋತುವಿನಲ್ಲಿ ಬೇಕಾದರೂ ಮರಿ ಈಯುವಂತೆ ಮಾಡಬಹುದೆಂದು ತಿಳಿದುಬಂದಿದೆ.

ಹಂದಿ ಸಾಕಾಣಿಕೆಯ ಬಗ್ಗೆಯೂ ಸಂಶೋಧನೆ ನಡೆಸಲಾಗುತ್ತಿದೆ. ದೇಶೀ ಹಂದಿಗಳು ಬಹಳ ಚಿಕ್ಕದಾಗಿರುವುದರಿಂದ ಒಳ್ಳೆಯ ದರ್ಜೆಯ ಮಾಂಸ ದೊರೆಯದು. ಅಡ್ಡ ತಳಿ ಯೋಜನೆಯ ಅಂಗವಾಗಿ ಅನೇಕ ಸುಧಾರಿತ ತಳಿಯ ಹಂದಿಗಳನ್ನು ವಿದೇಶದಿಂದ ತರಿಸಿಕೊಳ್ಳಲಾಗಿದೆ. ದೇಶದ ಅನೇಕ ಸಂಶೋಧನಾ ಕೇಂದ್ರಗಳಲ್ಲಿ ಅಡ್ಡ ತಳಿ ಆಹಾರ ಉಪಯೋಗಿಸುವಿಕೆ, ರೋಗ ನಿರೋಧ ಶಕ್ತಿ ಮುಂತಾದುವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕಂಡು ಹಿಡಿಯಲಾಗಿದೆ. ಹಂದಿ ಮಾಂಸವು ಮನುಷ್ಯನಿಗೆ ಬೇಕಾದ ಪ್ರೋಟೀನನ್ನು ಸಾಕಷ್ಟು ಒದಗಿಸಬಲ್ಲದೆಂದು ಆಶಿಸಲಾಗಿದೆ.

ಸುಧಾರಿತ ದನಕರುಗಳಿಗೆ ರೋಗರುಜಿನಗಳು ಹತ್ತದಂತೆ ನೋಡಿಕೊಂಡರೆ ಮಾತ್ರ ಉತ್ತಮ ಪ್ರತಿಫಲ ದೊರೆಯುವುದು. ಕಾಲು ಮತ್ತು ಬಾಯಿ ಹುಣ್ಣು ರೋಗ, ದೊಡ್ಡ ರೋಗ, ಜಂತುಹುಳು ಬೀಳುವುದು ಮುಂತಾದುವುಗಳು ದನಕರುಗಳಿಗೆ ಬಹಳ ಹಾನಿಕರ ಮಾಡುತ್ತವೆ. ಆದರೆ ಭಾರತೀಯ ಪಶುವೈದ್ಯ ಸಂಶೋಧನಾ ಕೇಂದ್ರ ಹಾಗೂ ರಾಜ್ಯ ಸಂಶೋಧನಾ ಕೇಂದ್ರಗಳಲ್ಲಿ ವರ್ಷಾನಂತರ

ಇಲಿಗಳಿಗೂ ವಿವೇಕಶಕ್ತಿಯಿದೆ!

ಸಂಗ್ರಹಕಾರರು:
ಶ್ರೀ ಎಚ್. ಎಂ. ನಾರಾಯಣ ಭಟ್

ಭಾರತದಲ್ಲಿ ಕೃಷಿಕರ ಪ್ರಧಾನ ಶತ್ರು ಇಲಿ. ಪ್ರತಿವರ್ಷವೂ ಉತ್ಪಾದಿಸಲ್ಪಡುವ ಬೆಳೆಯ ಗಣ್ಯ ಭಾಗವನ್ನು ಇಲಿಗಳು ನಾಶಮಾಡುವುವು.

ಆದರೂ ಇಲಿಗಳು ಶಾಸ್ತ್ರಜ್ಞರ ಬಂಧುಗಳು. ಯಾವ ಸಂಶೋಧನೆಗಾದರೂ ಇಲಿ ಬೇಕು. ಕೆಲವು ಸಂಶೋಧನಾಲಯಗಳಂತೂ "ಇಲಿಗಳ ಶಾಲೆ" ಹಾಗೆಯೇ ಕಾಣುದಿರವು. ಸಾವಿರಾರು ಇಲಿಗಳನ್ನು ಸಾಕಿ ಸಂರಕ್ಷಿಸುವ—ಅವುಗಳ ಬುದ್ಧಿ ಶಕ್ತಿ, ಜೀವನ ರೀತಿ ಇತ್ಯಾದಿ ಪರೀಕ್ಷಣಗಳು ಸಾಗುತ್ತಿರುತ್ತವೆ.

ಸಾಲದುದಕ್ಕೆ ಹೊಸದಾಗಿ ಕಂಡು ಹಿಡಿಯಲ್ಪಡುವ ಔಷಧ, ರಾಸಾಯನಿಕ ವಸ್ತು, ಮಂತಾದವುಗಳ ಪ್ರಯೋಗವೂ ಇಲಿಗಳ ಮೇಲೆ!

ಕಾಲ ನಡೆಸಿದ ಪ್ರಯೋಗಗಳ ಫಲವಾಗಿ, ಇಂದು ದನಕರುಗಳಿಗೆ ದೇವಿ ಹಾಕಿಸಿ ಅಥವಾ ಸೀರಾ ಚುಚ್ಚಿ ರೋಗದಿಂದ ಕಾಪಾಡಬಹುದು.

ಜಾನುವಾರು ಉತ್ಪಾದನೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಉದಾಹರಣೆಗೆ—ತಳಿಗಳು, ಆಹಾರ, ಆಡಳಿತ ವ್ಯವಸ್ಥೆ, ರೋಗ ತಡೆಗಟ್ಟುವುದು ಮುಂತಾದುವುಗಳನ್ನು ಏಕ ಕಾಲದಲ್ಲಿ ತೀವ್ರ ಹಾಗೂ ಗ್ರಾಹಕ ರೂಪದಲ್ಲಿ ಎದುರಿಸಿದಾಗ ಮಾತ್ರ ಉತ್ಪಾದನೆಯು ಹೆಚ್ಚುವುದು. ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಈ ಎಲ್ಲಾ ಸಮಸ್ಯೆಗಳ ಬಗ್ಗೆ, ಸುಸಂಘಟಿತ ಸಂಶೋಧನಾ ಯೋಜನೆಗಳ ಮೂಲಕ ಅಧ್ಯಯನ ನಡೆಸುವುದಾಗಿ ಸಲಹೆ ನೀಡಿದೆ. ಕೃಷಿಗಾಗಿ ಸಾಕಿದ ದನಕರುಗಳು ಹಾಲಿಗಾಗಿ ಬೆಳೆಸಿದ ಹಸು ಎಮ್ಮೆಗಳು ಮಾಂಸ ಮತ್ತು ಉಣ್ಣೆಗಾಗಿ ಬೆಳೆಸಿದ ಕುರಿಗಳು, ಹಾಲು ಮಾಂಸಕ್ಕಾಗಿ ಬೆಳೆಸಿದ ಮೇಕೆಗಳು, ಮಾಂಸ ಮತ್ತು ಮೊಟ್ಟೆಗಾಗಿ ಬೆಳೆಸಿದ ಕೋಳಿಗಳು ಈ ಯೋಜನೆಯಲ್ಲೊಳಗೊಂಡಿರುವುವು.

ಎರೆಹುಳದಿಂದ ಮಂಗನ ವರೆಗಿನ ನೂರಾರು ಜಾತಿಯ ಜೀವ ಜಂತುಗಳನ್ನು ಶಾಸ್ತ್ರಜ್ಞರು ತಮ್ಮ ಸಂಶೋಧನೆಗಳಿಗೆ ಉಪಯೋಗಿಸುವರಾದರೂ ಸಾಕಲು ಸುಲಭವಾದ ಇಲಿಗಳಿಗೇ ಪ್ರಥಮ ಪ್ರಾಶಸ್ತ್ಯ. ಬುದ್ಧಿ ಶಕ್ತಿಗೆ ಸಂಬಂಧಿಸಿದ ಸಂಶೋಧನೆಗೆ ನಿರ್ದಿಷ್ಟ ತರಬೇತಿಗೊಂಡ ಇಲಿಗಳನ್ನೇ ಉಪಯೋಗಿಸಲಾಗುತ್ತಿದೆ.

ಹೊಸ ಔಷಧಗಳನ್ನು ಚುಚ್ಚಿದ ಇಲಿಗಳ ಚಲನೆಯನ್ನು ಪರೀಕ್ಷಿಸಲಾಗುವುದು, ಅವುಗಳ ನಡತೆಯಲ್ಲುಂಟಾಗುವ ಬದಲಾವಣೆಗಳು ಔಷಧದ ಪರಿಣಾಮಗಳು, ಔಷಧದ ಗುಣ—ದೋಷಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ವಿಧಾನವಿದು.

"ಸ್ಕಿನ್ನರ್"ನ ಪೆಟ್ಟಿಗೆ

ಇಲಿಯ ಅನ್ನನಾಳ ಸಪೂರ. ಆಹಾರವನ್ನು ಚೆನ್ನಾಗಿ ಜಗಿದೇ ನುಂಗಲು ಸಾಧ್ಯ. ದಿನಾಲೂ ಆಹಾರ ಸೇವನೆಗೆ ಹೆಚ್ಚು ಸಮಯವೂ ಪರಿಶ್ರಮವೂ ಅಗತ್ಯ. ಆಹಾರ ಸಾಧನಗಳನ್ನು ಸಂಗ್ರಹಿಸಿ ಇಡುವ ಅಭ್ಯಾಸವೂ ಈ ಸಣ್ಣ ಪ್ರಾಣಿಗಳಿಗಿದೆ. ಆದರೆ ಇತರ ಅನೇಕ ಜಂತುಗಳಂತೆ ಮರಿಗಳಿಗೆ ಆಹಾರ ಉಣ್ಣಿಸುವ ಅಭ್ಯಾಸವಿಲ್ಲ. ಮೊಲೆ ಹಾಲನ್ನುಣ್ಣಿಸುವುದನ್ನು ನಿಲ್ಲಿಸಿದ ಮರಿಗಳು ಮತ್ತೆ ತಾವಾಗಿಯೇ ಆಹಾರ ಸಂಗ್ರಹಿಸಿ ತಿನ್ನಬೇಕು. ಬೆಳೆಯುವ ಇಲಿಗಳ ಆಹಾರವನ್ನು ನಿಯಂತ್ರಿಸಿದರೆ ಶರೀರದ ಭಾರವನ್ನು ಸ್ಥಿರವನ್ನಾಗಿ ಕಡಿಮೆಮಾಡಬಹುದೆಂದು ಶಾಸ್ತ್ರಜ್ಞರ ಅಭಿಪ್ರಾಯ. ಹೀಗೆ ಶೋಷಣೆಗೊಳಗಾಗುವ ಇಲಿಗೆ ಸದಾ ಹಸಿವಾಗಿರುವುದು. ಇಂತಹ ಇಲಿಗಳನ್ನೇ ಸ್ಕಿನ್ನರ್ ಎಂಬ ಶಾಸ್ತ್ರಜ್ಞನು ಸಂಶೋಧನೆಗಳಿಗಾಗಿ ಉಪಯೋಗಿಸಿದ್ದನು. ಸ್ಕಿನ್ನರ್ ತಯಾರಿಸಿದ್ದ ಪೆಟ್ಟಿಗೆಯೊಳಕ್ಕೆ ಒಂದು ಉದ್ದವಾದ ಕೋಲು ಇರಿಸಲ್ಪಟ್ಟಿದ್ದು ಅದನ್ನು ಒತ್ತಿದರೆ ಆಹಾರದ ಒಂದು ಗುಳಿಗೆ ಕೆಳಕ್ಕೆ ಬೀಳುವುದು. ಹಸಿವೆಯಿಂದ ಬಳಲಿದ ಇಲಿಯನ್ನು ಈ ಗೂಡಿನೊಳಕ್ಕೆ ದೂಡಿಸಲಾಗುವುದು. ಪೆಟ್ಟಿಗೆಯೊಳಗೇ ಓಡಾಡುವ ಇಲಿಗೆ ಹಾರಾಟದ ವೇಳೆ ಅಕಸ್ಮಾತ್ ಕೋಲು ಒತ್ತಲ್ಪಟ್ಟು ಗುಳಿಗೆಗಳು ಒಂದೊಂದಾಗಿ ಬೀಳುವಾಗ ಇಲಿಗೆ ಆಹಾರ ಸಿಗುತ್ತದೆ.

ಹಸಿವು ನೀಗಲು ಒಬ್ಬೊಬ್ಬಯೇ ಸಿಗುವ ಸಂಭವವಿಲ್ಲ. ಒಂದು ಬಲ್ಬ್ ಉರಿಯುವಾಗ ಮಾತ್ರವೇ ತನಗೆ ಆಹಾರ ಸಿಗುವುದಾದರೆ ಹಾಗೆ ಪದೇ ಪದೇ ಬಲ್ಬ್ ಉರಿಯುವಂತೆ ಒತ್ತಲೂ ಇಲಿಗೆ ಅಭ್ಯಾಸವಾಗುವುದು. ಅಂತೆಯೇ ಒತ್ತದಿರಬೇಕಾದರೆ ಹಾಗೆಯೂ ಇಲಿಗೆ ಅಭ್ಯಾಸವಾಗುತ್ತದೆ. ವಿವಿಧ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲಿರುವ ಶಕ್ತಿಯನ್ನು ಇಲಿಗಳಲ್ಲಿ ಕಾಣಬಹುದೆನ್ನಲಾಗಿದೆ. ಪ್ರಚೋದನೆಗಳ ಸಂಕೇತಗಳು ಪರಿಸ್ಥಿತಿಗೆ ಅನುಕೂಲವಾಗಿ ಜಂತುಗಳ ನಡತೆಯನ್ನೂ ಅಭ್ಯಾಸ ಬಲವನ್ನೂ ಬದಲಾಯಿಸುವ ಬಗೆ ಹೇಗೆಂದು ಸ್ಕಿನ್ನರ್ ಕೈಗೊಂಡ ಸಂಶೋಧನೆಗಳಿಂದ ಸ್ಪಷ್ಟವಾಯಿತು.

ಕಲಹ ರಂಗ

ಗಿನ್ಸ್ ಬರ್ಗ್ ಮತ್ತಿತರ ಶಾಸ್ತ್ರಜ್ಞರು ಇಲಿಗಳ ಹಟಮಾರಿತನದ ಬಗ್ಗೆ ಸಂಶೋಧನೆ ಮಾಡಿದ್ದರು. ಜಗಳ ಗಂಟಿಯಾಗ ವುದು ಹೆಚ್ಚಾಗಿ ಗಂಡು ಇಲಿ. ಒಮ್ಮೆ ಜಗಳದಲ್ಲಿ ಜಯಿಸಿದ ಇಲಿ ಮತ್ತೆ ಜಗಳ ಮಾಡುವ ಅಭ್ಯಾಸವನ್ನು ಬೆಳೆಸುತ್ತದೆ. ಆಗಾಗ ಜಗಳ ಮಾಡುತ್ತಿರುತ್ತದೆ. ಅಂತೆಯೇ ಸೋತ ಇಲಿಗೆ ಓಡಿ ಜೀವ ಉಳಿಸಿಕೊಳ್ಳಲಿರುವ ಸಾಮರ್ಥ್ಯ ಹೆಚ್ಚುತ್ತದೆ. ಹಲವು ಬಾರಿಯೂ ಜಯಿಸಿದ ಇಲಿಯ ಶೌರ್ಯ ಹಿಗ್ಗುತ್ತದೆ. ಸೋತ ಇಲಿ ಇದಿರಿಸುವುದಿಲ್ಲವೆಂದು ಮನಗಂಡಾಗ ಆಕ್ರಮಣಕ್ಕಿರುವ ಉತ್ಸಾಹ ಕುಗ್ಗುತ್ತದೆ. ಮತ್ತೆ ಇವು ಪರಸ್ಪರ ಕಂಡಾಗ ಜಗಳವಿಲ್ಲ. ಸೋತ ಇಲಿ ಓಡಿರುತ್ತದೆ.

ಬೇಕಾದ ಅಥವಾ ಬೇಡದ ಕೃತ್ಯವನ್ನು ತಿಳಿಯಲು ಇಲಿಗೆ ಶಕ್ತಿಯಿದೆ. ಚಿಕ್ಕಂದಿನಿಂದಲೇ ಸಾಕಲ್ಪಟ್ಟ ಇಲಿಗಳು ಪರಸ್ಪರ ಕಾದಾಡುವುದಿಲ್ಲವೆಂದೂ ಹೇಳಲಾಗಿದೆ. ಅಷ್ಟೊಂದು ವಿವೇಕ ಬೆಳೆಯುವುದು ಆಶ್ಚರ್ಯಕರ.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯ.ವಾಂಛ ಸಮಾಚಾರ
ಜನವರಿ ೧೯ರಿಂದ ಮಾರ್ಚ 31ನೇ ತಾರೀಖಿನ ಒಳಗೆ
300=00 ರೂ. ನಮ್ಮಲ್ಲಿ ವ್ಯಾಪಾರ ಮಾಡಿದರೆ
ಒಂದು Steel Desk (ಬರೆಯುವ–ಮೇಟಿ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ–	ಭಾಗ 1— ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ–	ಭಾಗ 2— ”	2—50
ಉಂಡಾಡಿ ಗುಂಡ–	ಪರ್ವತವಾಣಿ	2—00
ಧರ್ಮದೇವತೆ–	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು —	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—
ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು
ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No 376/1968

ಕೊತ್ವಾರು ಮಹಾಬಲ ಶೆಟ್ಟಿ — ವಾದಿ

ಮತ್ತು

ಬೋಜ ಶೆಟ್ಟಿ ಕೂಡಾ — ಪ್ರತಿವಾದಿಯವರೊಳಗೆ

1. ಬೋಜ ಶೆಟ್ಟಿ, ಮುದರಾಡಿ ಹಿರಿಯಣ್ಣ ಶೆಟ್ಟಿ ಅಳಿಯ; 2. ಬಚ್ಚು ಶೆಡ್ತಿ, ಬೋಜ ಶೆಟ್ಟಿ ಯೆಂಡ್ತಿ.

—ಉಡುಪಿ ತಾಲ್ಲೂಕು ಪೆರ್ಡೂರು ಗ್ರಾಮದ ಹೊಸಾಳಿಗೆಯಲ್ಲಿರುವವರು.

ಈ ಮೂಲ್ಕ ಪ್ರತಿವಾದಿರಿಗೆ ತಿಳಿಸುದೇನೆಂದ್ರೆ, ವಾದಿಯು ಪ್ಲೆಂಟ ನಿವೃತ್ತಿ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 12-3-1969ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುವುದರಿಂದ ಅದರಲ್ಲಿ ಉತ್ತರಿಸುವುದಿದ್ದರೆ, ಸದ್ರಿ ತಾರೀಕು ಹಗಲು 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Y. C. S. Hegde
Advocate for Plaintiff

ತಾ. 18-2-1969, ಉಡುಪಿ.

ಸದ್ಯ ನಾವು ಮಾತ್ರ ಕಾಂಗ್ರೆಸ್

(ನಾಲ್ಕನೇ ಪುಟದಿಂದ)

ರೂ ನಾವು ಮಾತ್ರ ಕಾಂಗ್ರೆಸ್ಸು.'

"ಹ್ಞಾಂ, ಇನ್ನೊಂದು ಸಂಗ್ತಿ ಕೇಳಿದ್ಯೇನೆ?"

"ಏನ?"

"ನಮ್ಮ ಶ್ರೀನಿವಾಸರಿಗೆ ಸಾಹಿತ್ಯ ಅಕ್ಯಾಡೆಮಿಯ ಪುರಸ್ಕಾರ ಸಿಕ್ಕಿತು..."

"ಯಾವ ಶ್ರೀನಿವಾಸರು?"

"ಅಯ್ಯೋ, ಹಾಗೆ ಎಷ್ಟು ಜನ ಶ್ರೀನಿವಾಸರಿದ್ದಾರೆಯೇ?"

"ಅಲ್ರಿ, ಶ್ರೀನಿವಾಸ ಅನ್ನೋ ಹೆಸ್ರಿನವ್ರು ನೂರು ಜನ..."

'ಅಯ್ಯೋ, ಮಾರಾಯ್ತಿ, ಸಣ್ಣ ಕತೆಗಳ ಶ್ರೀನಿವಾಸರು....'

'ಓ, ಅವ್ರು.. ಮಾಸ್ತಿ ವೆಂಕಟೇಶ ಐಯ್ಯಂಗಾರರು...."

"ಹ್ಞಾಂ...ಅವ್ರೇ....'

"ಅಲ್ರಿ, ಹಿಂದೊಮ್ಮೆ ಅವ್ರ ವಿಚಾರದಲ್ಲಿ ಏನೋ ರಂಪಾಟ ನಡೆದಿತ್ತಲ್ಲಾ?'

"ಅದು ಅವ್ರ ವಿಚಾರದಲ್ಲಿ ಅಲ್ಲ; ಅವ್ರು ಬರೆದ ಚೆನ್ನಬಸವನಾಯಕ ಕಾದಂಬರಿಯ ಮೇಲೆ...."

"ನೋಡಿ, ಇದಕ್ಕೇ ಹೇಳುವುದು ಹಣೆಯಲ್ಲಿದ್ದದ್ದು ಲಭಿಸಿಯೇ ಲಭಿಸುತ್ತದೆಂತ...."

'ಹ್ಞಾಂ, ಏನೋ..ಇಂಥ ಮನ್ನಣೆ ಎಲ್ಲರಿಗೂ ಎಲ್ಲಿ ಲಭ್ಯವಾಗುತ್ತೆ!"

'ಅಲ್ರಿ, ಇದೇನು ಭಾರಿ ಪುರಸ್ಕಾರವೇ?'

'ಅದ್ರ ಕಥೇನೆಲ್ಲಾ ಕೇಳಬಾರದು; ಅದ್ರ ರೀತಿಯನ್ನೂ ಕೇಳಬಾರದು...."

'ಅಂದ್ರೆ...."

'ಐದು ಸಾವಿರ ರೂಪಾಯಿಗಳ ಚೆಕ್ಕು ಮತ್ತು ತಾಮ್ರ ಫಲಕದಲ್ಲಿ ಪ್ರಶಸ್ತಿ....'

'ಓ, ಭಾರಿ ಆಯ್ತು...."

'ಅಲ್ರಿ, ಮಾಸ್ತಿಯವರು ಇತ್ತೀಚೆಗೆಲ್ಲಿ ಕಥೆ ಬರೆದಿದ್ದಾರೆ?'

"ಗಳಿಸಿದ ಪ್ರಶಸ್ತಿಗೆ ಗತಕಾಲದಿಂದ ಒಂದು ಅವಧಿಯಲ್ಲಿ ಪ್ರಕಟವಾದ ಪುಸ್ತಕಗಳಲ್ಲೇ ಆಯ್ಕೆ ನಡೆಯುತು....'

"ಓ, ಅಂದ್ರೆ ಪುಸ್ತಕ ಮುದ್ರಣವಿರಬಹುದು...."

"ಯಾರಿಗೆ ಗೊತ್ತು? ಮಾಸ್ತಿಯವರು ಸಣ್ಣ ಕತೆಗಳ ಪುಸ್ತಕ ಬೇರೆ ಬೇರೆ ಭಾಗ ಆಚ್ಚಾಗಿತ್ತು. ಈಗ ಮತ್ತೊಂದು ಭಾಗ ಪ್ರಕಟವಾಯ್ತೋ ಅಥವಾ ಎಲ್ಲಾ ಭಾಗಗಳು ಒಂದಾಗಿ ಬೇರು ಕಂಡವೋ...."

"ಹೂಂ, ಅದೆಂಥದೇ ಇರಲಿ, ಮಾಸ್ತಿ ಕನ್ನಡಕ್ಕಾಗಿ ತುಂಬ ಕೆಲಸ ಮಾಡಿದ್ದಾರೆ...."

"ಅಲ್ಲವೇ ಮತ್ತೆ? ಆಧುನಿಕ ಗದ್ಯ ಸಾಹಿತ್ಯಾಚಾರ್ಯರೆಂದರೂ ಸಲ್ಲುತ್ತದೆ.. ಗದ್ಯಕ್ಕೊಂದು ಮಾಧುರಿ ಸಶಕ್ತರೂಪ ನೀಡಿದವರೂ ಇವರೇ."

"ಹೂಂ...ಅದು ಸರೀನ್ನಿ..."

"ಮಾತ್ನಾಡ್ಪುದು ತಪ್ಪು...."

"ಎಲ್ಲವೂ ಸರಿ..."

"ಹ್ಞಾಂ..."

—ಗೋರಾ.

CANARA BANKS SATISFACTORY PROGRESS DURING 1968

Canara Bank has shown satisfactory working results for the year 1968 Net profits of the Bank amounted to Rs 44 48 lakhs after making provision for taxation and other usual and necessary provisions, as against Rs. 39·64 lakhs for the previous year.

After taking into account Rs. 3,073·63 carried forward from the previous year, a sum of Rs. 44 67 lakhs is available out of which a sum of Rs 9 lakhs has been transferred to Statutory Reserve Fund as against Rs. 8 lakhs last year

Directors have recommended a dividend on Equity Capital at 10 per cent and on Preference Capital at 6 per cent (both subject to tax). The balance of Rs. 10 76 lakhs is carried forword subject to payment of bonus to staff.

The Deposits of the Bank increased to Rs. 146·44 Crores at the end of 1968 from a level of Rs. 126·66 crores at the end of 1967. Advances increased to Rs 96·72 crores from Rs. 80 35 crores

There was an addition of 55 branches during the year, taking the total number of branches to 302.

ಒಮ್ಮತದ ಆಯ್ಕೆ

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಗಂಗಾಧರದಾಸರು

ಮಂಗಳೂರು, ಫೆಬ್ರವರಿ 16ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಭಿಲ್ಲವ ಸಮಾಜದ ಮಂಗಳೂರಿನ ಪ್ರಮುಖ ವಕೀಲರಾದ ಶ್ರೀ ಗಂಗಾಧರದಾಸ್‌ರವರು ಒಮ್ಮತದಿಂದ ಆರಿಸಿಬಂದಿರುವರು ಶ್ರೀ ಗಂಗಾಧರದಾಸರು ಮಾತನಾಡಿ ತಾನು ಹೆಚ್ಚಿನ ಸೇವೆ ಸಲ್ಲಿಸುವರೆ ಈ ಸ್ಥಾನವನ್ನು ಸ್ವೀಕರಿಸಿದುದಾಗಿ ಹೇಳಿದರು, ಶ್ರೀಗಳಾದ ಮಂಜೇಶ್ವರ ಶ್ರೀನಿವಾಸನಾಯಕ್, ಎಸ್. ಎಲ್. ಕೆಮ್ಮಣ್ಣುಬೈಲು, ಬಿ. ನಾರಾಯಣ ರಾವ್ ಮೊದಲಾದವರು ಮಾತನಾಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅಧ್ಯಕ್ಷತೆವಹಿಸಿದ್ದ ಚಿ. ನಾವಡಾಧಿಕಾರಿ ಶ್ರೀ ಎಂ. ಜಯರಾಮ ಶೆಟ್ಟರು ಸದಸ್ಯರನ್ನು ವಂದಿಸಿದರು.

ಸಂಭ್ರಮದ ವಿವಾಹ ಸಮಾರಂಭ

ಶ್ರೀ ರಮಾನಂದ ಕೇಶವಾಯನ್—ಕುಮಾರಿ ಗೀತಾ ನಾಯಕ್

ಸಾಂಗಾಳ ನಾಯಕರ ಕುಟುಂಬದಿಂದ ಸ್ವಾತಂತ್ರ್ಯ ಸಂಗ್ರಾಮಕ್ಕೆ ದೊರೆತ ಕಾಣಿಕೆ, ಸಮಾಜಕ್ಕೆ ಸಿಕ್ಕಿದ ಸೇವೆ ಅಪಾರವಾದದ್ದು. ಇಂತಹ ಮನೆತನಕ್ಕೆ ಸೇರಿದ ಮೃದು ಹಠಿಳ ಸ್ವಭಾವದ, ಹಿರಿಯರಲ್ಲೊಬ್ಬರಾದ ಶ್ರೀ ಸಾಂಗಾಳ ವೆಂಕಟೇಶ ನಾಯಕರ ಸುಪುತ್ರಿಯೇ ಈ ವಧು—ಕುಮಾರಿ ಗೀತಾ ನಾಯಕ್.

ಮೈಸೂರು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿ ಪ್ರಸಿದ್ಧರಾದ ಶ್ರೀ ಜಿ. ಎಸ್. ಕೇಶವಾಯನ್‌ರು ಉತ್ತರ ಕನ್ನಡದ ರಾಷ್ಟ್ರೀಯ ಜನ ಸೇವಕರೂ, ರಾಜಕೀಯ ಧುರೀಣರೂ ಆಗಿದ್ದ ಶ್ರೀ ಎಸ್. ಎನ್. ಕೇಶವಾಯನ್‌ರ ಸುಪುತ್ರರು. ಉಚ್ಚ ಮನೆತನಕ್ಕೆ ಸೇರಿದ ಶ್ರೀ ಜಿ. ಎಸ್. ಕೇಶವಾಯನರ ಪುತ್ರನೇ ಈ ವರ—ಶ್ರೀ ರಮಾನಂದ ಕೇಶವಾಯನ್.

ವಧೂವರರಿಬ್ಬರೂ ವಿಶ್ವವಿದ್ಯಾಲಯದ ಪದವೀಧರರಾಗಿದ್ದು ಅನುರೂಪ ದಂಪತಿಗಳು. ಶ್ರೀ ರಮಾನಂದರು ಈಗ ರಿಜರ್ವ್ ಬೇಂಕಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ಉಡುಪಿಯಲ್ಲಿ ತಾ. 6-2-69ರಂದು ಜರಗಿದ ಈ ವಿವಾಹವು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹೇರಾಂತ ಎರಡು ಕುಟುಂಬಗಳ ಸಂಯೋಜನೆಯನ್ನು ಸಿದ್ಧಿಸಿದಂತಾಯಿತು.

ಶ್ರೀ ಎಂ. ವಾಸುದೇವರಾಯರಿಗೆ ಸತ್ಕಾರ

ಸುರತ್ಕಲ್ ವಿದ್ಯಾದಾಯಿನೀ ಹೈ. ಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಎಂ. ವಾಸುದೇವರಾಯರು 60ನೇ ವರ್ಷದಲ್ಲಿ ಅವಿಚ್ಛಿನ್ನರಾಗಿ ನಿವೃತ್ತರಾಗಿ ವಿಜಯ ಸಹಿತ್ಯವಾರಿಯ ವತಿಯಿಂದ ಸತ್ಕಾರ ಕೂಟವು ನಡೆಯಿತು. ಶ್ರೀ ನಾರಾಯಣರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಮೂಲಿಕೆ ಮುಟ್ಟಿ ವಾಸುದೇವಪ್ರಭುರವರ ಚಿಕ್ಕಂದಿನ ಸಹಪಾಠಿಯನ್ನು ವಂದಿಸಿ, ಡಾ. ಎಚ್. ಜನಾರ್ಧನಾಚಾರ್ಯರ ಹಸ್ತಾಂತರ ಶ್ರೀಯುತರಿಗೆ ಸಮರ್ಪಿಸಲಾಯಿತು. ಶ್ರೀ ಸೋಮಯಾಜಿ, ಪಂಡಿತರವರಿ, ಶ್ರೀ ಸೀತಾರಾಮಾಚಾರ್ಯರು ಸತ್ಕೃತರ ಗುಣಗಾನಮಾಡಿದರು. ಶ್ರೀ ಕೆ. ವೆಂಕಟರಾಯಾಚಾರ್ಯರು ಧನ್ಯವಾದ ಸಮರ್ಪಿಸಿದರು.

Phone 60 Residence 120

ಜಿ. ಎಲ್. ಆಚಾರ್ಯ

ಜುವೆಲ್ಲರ್

ಕೋರ್ಟ್ ರೋಡು, ಪುತ್ತೂರು, ದ. ಕ.

ಉತ್ತಮ ಬವನು ಚಿನ್ನದ ಆಭರಣಗಳನ್ನೂ ಮತ್ತು ಬೆಳ್ಳಿಯ ಒಡವೆಗಳನ್ನೂ ಕೃಷ್ಟಿಕರ ಬೆಲೆಗೆ ಕಲಾಪೂರ್ಣವಾಗಿ ಮಾಡಿಕೊಡಲಾಗುವುದು.

ಪ್ರಾಮಾಣಿಕ ವ್ಯವಹಾರ, ಗ್ರಾಹಕರ ಸಂತೃಪ್ತಿಯೇ ನಮ್ಮ ಧ್ಯೇಯ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex C No 130/68 in SC 60/65

M S ಚಂದ್ರನಾ ಪ್ರಭು — —

—ಅರ್ಜಿದಾರ

Vs

M ರವೀಂದ್ರ ಪೂಜಾರಿ ಸಹಾ—ಎದುರು ಬೆಳ್ತಂಗಡಿ ತಾಲ್ಲೂಕು ಕಾಶ್ಯಳ ಗ್ರಾಮದಲ್ಲಿರುವ ವೆಂಕಪ್ಪ ಪೂಜಾರಿಯವರ ಮಕ್ಕಳು 1. M. ರವೀಂದ್ರ ಪೂಜಾರಿ, 2. ದರ್ಣಪ್ಪ ಬಂಗೇರ, ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ.—

ಸದ್ರಿ ಡಿಕ್ರಿ ಬಾಬ್ತು ನಿಮ್ಮಿಂದ ಬರತಕ್ಕ ಐವೇಜಿಗೆ ಅರ್ಜಿದಾರನು ಅಮಲ್ಜಾರಿಯಲ್ಲಿ ನಿಮ್ಮನ್ನು ಕೈದಿ ವಾರಂಟಿನಲ್ಲಿ ಹಿಡಿಸಿ ಸಿವಿಲ್ ಜೈಲಿಗೆ ರವಾನಿಸುವರೇ ಮಾಡಿದ ಅಮಲ್ಜಾರಿಯು ತಾ. 17-3-1969ಕ್ಕೆ ಇಟ್ಟಿರುತ್ತದೆ. ಆ ದಿವಸ ನೀವು ಸ್ವತಃ ಯಾ ವಕೀಲರ ದ್ವಾರಾ ಯಾ ಸದ್ರಿ ಕೋರ್ಟಿನ ಮುಂದೆ ಬೆಳಿಗ್ಗೆ 11.00 ಗಂಟೆಗೆ ನೀವು ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಅರ್ಜಿಯನ್ನು ಮುಂದುವರಿಸಲಾಗುವುದು. ತಿಳಿದಿರಲಿ.

N. J. KADAMBA,

Advocate, Belthangady.

ಬೆಳ್ತಂಗಡಿ, 20-2-1969.

ಶ್ರೀ ಕೆ. ಗುರುರಾಜಾಚಾರ್

ಕರ್ನಾಟಕದ ರಾಜಧಾನಿ ಬೆಂಗಳೂರು ಮಹಾನಗರದಲ್ಲಿ ಕೇಂದ್ರ ಸ್ಥಳ ಆನಂದರಾವ್ ಸರ್ಕಲ್. ಇಲ್ಲಿನ ಸುಪ್ರಸಿದ್ಧ "ಹೋಟೆಲ್ ಟೂರಿಸ್ಟ್"ನ ಹೆಸರು ಕೇಳದಿರುವವರು ಬಹಳ ಅಪರೂಪವೆಂದರೂ ಸರಿಯೇ. ಹೋಟೆಲ್ ಟೂರಿಸ್ಟ್ ಅತ್ಯಾಧುನಿಕ ಮಾದರಿಯ ವಸತಿ, ಶಾಖಾಹಾರಿ ಭೋಜನ ಮತ್ತು ಉಪಾಹಾರ ಮಂದಿರ. ಇದರ ವ್ಯವಸ್ಥಾಪಕರಾಗಿದ್ದ ಶ್ರೀ ಕೆ. ಗುರುರಾಜಾಚಾರ್ಯರು ಗ್ರಾಹಕರ ತೃಪ್ತಿಯನ್ನೇ ತನ್ನ ಗುರಿಯಾಗಿಟ್ಟುಕೊಂಡು ಸುವ್ಯವಸ್ಥಿತವಾಗಿ ಹೋಟೆಲಿನ ಆಡಳಿತೆಯನ್ನು ನಡೆಸುತ್ತ ಕೀರ್ತಿಗಳಿಸಿದರು.

ಹೋಟೇಲು ಉದ್ಯಮದಲ್ಲಿ ಅಚ್ಚಳಿಯದ ಹೆಸರು ಪಡೆದ ಶ್ರೀ ಗುರುರಾಜಾಚಾರ್ ಅವರು ಇತ್ತೀಚೆಗೆ ನಮ್ಮನ್ನು ಅಗಲಿಹೋದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಉದಾರಿಗಳೂ ಸರಳ ಸ್ವಭಾವಿಗಳೂ ಮೃದುಮಧುರ ಮಿತಭಾಷಿಗಳೂ ಆಗಿದ್ದರು. ಶ್ರೀ ಆಚಾರ್ ಅವರ ನಿಧನದಿಂದ ಹೋಟೆಲ್ ಉದ್ಯಮಕ್ಕೂ ತುಂಬ ದಕ್ಕೆ ತಟ್ಟಿತೆಂದು ಹೇಳಬಹುದು. ದಿವಂಗತರ ಅಪಾರ ಬಂಧುಮಿತ್ರರ ದುಃಖದಲ್ಲಿ "ನವಯುಗ"ವೂ ಭಾಗಿಯಾಗಿ ತನ್ನ ಅಭಿಮಾನಿಯಾಗಿದ್ದ ದಿವಂಗತರಿಗೆ ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಬಂಟರ ಯಾನೆ ನಾಡವರ ಸಂಘ, ಮುಂಬಯಿ

ತಾ. 8 ಮತ್ತು 12ರ ವರೆಗೆ ಬೊಂಬಾಯಿ ನಗರದಲ್ಲಿ ಕಾನೂನು ನಿಯಮಗಳು ಸಂಪೂರ್ಣವಾಗಿ ಉಲ್ಲಂಘಿಸಲ್ಪಟ್ಟವೆ. ಪೋಲೀಸರು ಸಂಪೂರ್ಣವಾಗಿ ಅಲಕ್ಷ್ಯದಿಂದಿದ್ದರು. ಮಿಲಿಯಾಂತರ ಬೆಲೆಬಾಳುವ ಸ್ವತ್ತುಗಳ ಅಪಹಾರ ಮತ್ತು ನಾಶವಾಗಿದೆ. ಸಾವಿರಾರು ಜನರು ದಿಕ್ಕಿಲ್ಲದವರಾಗಿದ್ದಾರೆ. ಜೀವ ಮತ್ತು ಆಸ್ತಿಪಾಸ್ತಿಗಳಿಗೆ ಭದ್ರತೆಯಿಲ್ಲವಾಗಿದೆ. ಶೀಘ್ರ ಪರಿಹಾರ ಕಾರ್ಯಕ್ರಮ ಕೈಗೊಳ್ಳುವಂತೆ ಕೇಳಿಕೊಳ್ಳುತ್ತೇವೆ" ಎಂಬ ಈ ತಂತಿಯನ್ನು ರಾಷ್ಟ್ರಾಧ್ಯಕ್ಷ, ಉಪರಾಷ್ಟ್ರಾಧ್ಯಕ್ಷ, ಪ್ರಧಾನಮಂತ್ರಿ, ಉಪಪ್ರಧಾನಮಂತ್ರಿ, ಶ್ರೀ ವಿ. ಬಿ. ಚವ್ಹಾಣ, ನಿಜಲಿಂಗಪ್ಪ, ನಾಗಪ್ಪ ಆಳ್ವ ಇವರೇ ಮೊದಲಾದವರಿಗೆ ಬಂಟರ ಯಾನೆ ನಾಡವರ ಸಂಘದ ಅಧ್ಯಕ್ಷ ಡಾ| ಪಡುಬಿದ್ರಿ ಜಗನ್ನಾಥ ಶೆಟ್ರು ಕಳಿಸಿಕೊಟ್ಟಿರುವರು.

ಸಿಂಡಿಕೇಟ್ ಬ್ಯಾಂಕಿನ ಮೂರು ಶಾಖೆಗಳು

ತಮಿಳುನಾಡಿನ ತಿರುವಲ್ಲೂರು ಮತ್ತು ಕಾಂಚೀಪುರಂ ಎಂಬಲ್ಲಿ ಇದೇ ಫೆಬ್ರವರಿ ತಾ 20 ಮತ್ತು 22ರಂದು ಎರಡು ಶಾಖೆಗಳು ಅನುಕ್ರಮವಾಗಿ ತೆರೆಯಲ್ಪಟ್ಟವೆ. ಮತ್ತೊಂದು ಶಾಖೆಯು ಸೂರತ್‌ನಲ್ಲಿ ತಾ. 3-3-69ರಂದು ಪ್ರಾರಂಭವಾಗುವುದು.

ಈ ಮೂರು ಶಾಖೆಗಳ ತೆರೆಯುವಿಕೆಯಿಂದಾಗಿ ಸಿಂಡಿಕೇಟ್ ಬ್ಯಾಂಕಿಗೆ ಒಟ್ಟು 260 ಶಾಖೆಗಳಾಗುವುದು.

ಬ್ಯಾಂಕು ಶಾಖೆಗಳನ್ನು ವಿಸ್ತರಿಸುವ ಹಾಗೂ ಸರ್ವ ವಿಧದ ಜನರಿಗೆ ಅನುಕೂಲ ಮತ್ತು ಅವಶ್ಯವಾದ ಹಲವು ಹೊಸ ರೀತಿಯ ಯೋಜನೆಗಳನ್ನು ಕಾರ್ಯಗತಗೊಳಿಸುವ ಯೋಜನೆಯನ್ನಿರಿಸಿಕೊಂಡಿದೆ. ವರ್ಷಾಂತ್ಯದೊಳಗೆ ಹಲವು ಶಾಖೆಗಳನ್ನು ಗ್ರಾಮ, ಪೇಟೆ, ಪಟ್ಟಣಗಳಲ್ಲಿ ತೆರೆಯಲಿದೆ.

ಶ್ರೀ ಗೋವಿಂದ ಪೈ ಜಯಂತಿ

ಸುರತ್ಕಲ್ಲು ಗೋವಿಂದದಾಸ ಕಾಲೇಜಿನ ವರಾಂಗಣದಲ್ಲಿ ತಾ. 4-3-69ರಲ್ಲಿ ಈ ಸಭೆ ಜರಗಲಿದೆ, ವಿದ್ವಾಂಸರಿಂದ ಭಾಷಣ ವಾಚನ, ಪ್ರದರ್ಶನಾದಿ ನಡೆಯಲಿವೆಯೆಂದು ಶ್ರೀ ಕೆ. ವೆಂಕಟರಾಯಾಚಾರ್ಯರು (ಸಂಚಾಲಕರು) ತಿಳಿಸುತ್ತಾರೆ.

ಶ್ರೀ ಮೂಡಬಿದ್ರಿ ಅವರಿಗೆ ಸನ್ಮಾನ

ದಕ್ಷಿಣ ಕನ್ನಡದ ಮೂಡಬಿದ್ರೆಯವರಾಗಿದ್ದು ಬೊಂಬಾಯಿಯಲ್ಲಿ ನೆಲಸಿಕೊಂಡಿರುವ ಶ್ರೀ ಎಸ್. ಎನ್. ಮೂಡಬಿದ್ರಿ, ಅವರು ಉದಾರ ದಾನಿಗಳು, ನಿಷ್ಠ ಸಾಮಾಜಿಕ ಕಾರ್ಯಕರ್ತರು, ಶ್ರೀಯುತರ ಷಷ್ಟ್ಯಬ್ದಿ ಸಮಾರಂಭದ ವೇಳೆ ಅವರನ್ನು ಮೂಡಬಿದ್ರೆಯಲ್ಲಿ ತಾ. 16ರಂದು ಸತ್ಕರಿಸಲಾಯಿತು. ಇದರ ಅಂಗವಾಗಿ ಮೂಡಬಿದ್ರೆಯಲ್ಲಿ ಬಾಬು ರಾಜೇಂದ್ರ ಪ್ರಸಾದ್ ಹೈಸ್ಕೂಲ್ ಕಟ್ಟಡವನ್ನು ಪದ್ಮಶ್ರೀ ಡಾ| ಟಿ. ಮಾಧವ ಪೈಯವರು ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಮಹಾತ್ಮಾ ಗಾಂಧಿ ಶತಮಾನೋತ್ಸವದ ಸ್ಮಾರಕ ಉದ್ಯಾನಕ್ಕೆ ಶ್ರೀ ಎಸ್. ಯು. ರಾಮಚಂದ್ರ ರಾವ್ ಅವರು ಶಂಕುಸ್ಥಾಪನೆ ಮಾಡಿದರು.

ಮಧ್ಯಾಹ್ನ ಶ್ರೀ ಮೂಡಬಿದ್ರಿಯವರನ್ನು ಮಹಾವೀರ ಕಾಲೇಜಿನ ಪರವಾಗಿ ಮಾನಪತ್ರವಿತ್ತು ಗೌರವಿಸಲಾಯಿತು. ಶ್ರೀ ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಪ್ರಿನ್ಸಿಪಾಲ್ ಯು. ಎಸ್. ಉಪಾಧ್ಯಾಯರು ಸನ್ಮಾನಪತ್ರವೋದಿ ಅರ್ಪಿಸಿದರು.

ಸಂಜೆ ಶ್ರೀ ಮೂಡಬಿದ್ರಿಯವರನ್ನು ಮೆರವಣಿಗೆಯಲ್ಲಿ ಸಭಾಂಗಣಕ್ಕೆ ಕರೆತರಲಾಯಿತು. ಶ್ರೀ ಟಿ. ಎ. ಪೈ ಅವರ ಅಧ್ಯಕ್ಷತೆಯಲ್ಲಿ ನಡೆದ ಬೃಹತ್ ಸಭೆಯಲ್ಲಿ ಶ್ರೀ ಮೂಡಬಿದ್ರಿ ಅವರ ಸೇವಾವ್ರತ, ದಾನ ಶೀಲತೆಗಳನ್ನು ಮುಕ್ತ ಕಂಠದಿಂದ ಪ್ರಶಂಸಿಸಲಾಯಿತು.

ಡಾ| ಶಿವರಾಮ ಕಾರಂತರು ಸಂಸ್ಮರಣಾ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಸೇಟ್ ಮನ್ಸುಖಲಾಲ್ ತಾರಾಚಾಂದ್ ಶಾಮ್ದಾರ್ ಅವರು ಬಿ. ರಮೇಶರಾವ್ ಸ್ಮಾರಕ ಗ್ರಂಥ ಭಂಡಾರದ ಶಿಲಾನ್ಯಾಸಗೈದರು.

ಮೂಡಬಿದ್ರಿಯ ಬಾಬು ರಾಜೇಂದ್ರ ಪ್ರಸಾದ ಹೈಸ್ಕೂಲಿನ ಹೊಸ ಕಟ್ಟಡವನ್ನು ಕಟ್ಟುವುದಕ್ಕಾಗಿ ಶ್ರೀ ಮೂಡಬಿದ್ರಿಯವರು ಸು ೬೦ ಸಾವಿರವನ್ನು ಸಂಗ್ರಹಿಸಿಕೊಟ್ಟಿದ್ದರು. ಗಾಂಧೀ ಸ್ಮಾರಕ ಉದ್ಯಾನಕ್ಕಾಗಿ ರೂ. ೨೦,೦೦೦ವನ್ನು ದಾನಮಾಡಿದ್ದರು. ತನ್ನ ಸನ್ಮಾನ ಸಮಾರಂಭದಲ್ಲಿ ಮೂಡಬಿದ್ರೆಯ ಆಸುಪಾಸಿನ ಶಾಲೆಗಳ ಪುಸ್ತಕ ಭಂಡಾರಕ್ಕೆ ಗಾಂಧೀ ಸಾಹಿತ್ಯವನ್ನು ಕೊಂಡುಕೊಳ್ಳಲು ರೂ. ೫೦೦ನ್ನು ನೀಡುವುದಾಗಿ ಘೋಷಿಸಿದರು.

ಬೀಳ್ಕೊಡುವ ಸಮಾರಂಭ

ಬಜಪೆ ಸಿಂಡಿಕೇಟ್ ಬ್ಯಾಂಕ್ ಮೆನೇಜರ್ ಶ್ರೀ ಜೆರೋಮ್ ಪಿಂಟೋರವರನ್ನು ಸತ್ಕರಿಸುವ ಸಮಾರಂಭವು ಬಜಪೆ ಹಾ. ಪ್ರಾ. ಶಾಲೆಯಲ್ಲಿ ಶ್ರೀ ಶ್ರೀನಾಥ ಹೆಗ್ಡೆ, ಎಲ್. ಐ. ಸಿ. ಡೆವಲಪ್‌ಮೆಂಟ್ ಆಫೀಸರ್‌ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಪ್ರಾರಂಭದಲ್ಲಿ ಪಂಚಾಯತ್ ಕಾರ್ಯದರ್ಶಿ ಶ್ರೀ ಬಿ. ಕೇಶವ ನ್ಯಾಕ್‌ರು ಸ್ವಾಗತಿಸಿದರು. ಶ್ರೀ ವಿಠಲ ಶೆಟ್ಟಿ, ಶ್ರೀ ಆಲ್ಫ್ರೆಡ್ ಕುಂಜ್ಞ, ರೆ. ಫಾ. ಮೊರಾಸ್‌ರವರು ಶ್ರೀ ಪಿಂಟೋರವರ ನಿಸ್ವಾರ್ಥ ಸೇವೆ, ಕಾರ್ಯದಕ್ಷತೆಯನ್ನು ಕೊಂಡಾಡಿದರು. ಶ್ರೀ ಹೆನ್ರಿಯಲ್ ಸಿಮ್ಸನ್‌ರವರು ಶ್ರೀ ಪಿಂಟೋರವರಿಗೆ ಮತ್ತು ನೂತನ ಮೆನೇಜರ್ ಶ್ರೀ ವಾಮನ ಶೆಣೈಯವರಿಗೆ ಹಾರಾರ್ಪಣೆಗೈದರು.

ಶ್ರೀ ಪಿಂಟೋರವರು ಜನರ ಬೆಂಬಲವೇ ನಮ್ಮ ಬ್ಯಾಂಕಿನ ಏಳಿಗೆಯ ಕಾರಣವೆಂದರು. ನೂತನ ಮೆನೇಜರ್ ಶ್ರೀ ಶೆಣೈಯವರು ತನಗೂ ಬೆಂಬಲವೀಯಬೇಕೆಂದು ಕೇಳಿಕೊಂಡರು. ಸಭಾಧ್ಯಕ್ಷ ಶ್ರೀ ಶ್ರೀನಾಥ ಹೆಗ್ಡೆಯವರು ಶ್ರೀ ಪಿಂಟೋರವರ ನಿಸ್ವಾರ್ಥ ಸೇವೆಯನ್ನು ಶ್ಲಾಘಿಸಿ ಶುಭಕೋರಿದರು. ಕೊನೆಯಲ್ಲಿ ಪಂಚಾಯತ್ ಕಾರ್ಯದರ್ಶಿ ಶ್ರೀ ಕೇಶವ ನ್ಯಾಕ್‌ರು ಧನ್ಯವಾದಾರ್ಪಣೆಗೈದರು.

ಪುಸ್ತಕದ ಬಿಡುಗಡೆ

ಮೂಲ್ಕಿ 14-2-1969ರಂದು "ರಾಮದಾಸರ ಕವನಗಳು" ಎಂಬ ಕವನಸಂಕಲನವನ್ನು ಮೂಲ್ಕಿಯ ವಿಜಯಾ ಕಾಲೇಜಿನಲ್ಲಿ ಶ್ರೀ ಕುರಾಡಿ ಸೀತಾರಾಮ ಅಡಿಗರು ಬಿಡುಗಡೆಗೊಳಿಸಿದರು.

ಕೃತಿ ವಿಮರ್ಶೆಮಾಡಿದ ಬನ್ನಂಜೆ ಗೋವಿಂದಾಚಾರ್ಯರು, ಶ್ರೀ ರಾಮದಾಸರು ಕನ್ನಡ ನಾಡಿನ ಭವಿಷ್ಯದ ದೃಷ್ಟಿಯಿಂದಲೂ ತುಂಬ ಭರವಸೆ ಹುಟ್ಟಿಸುವಂತಹ ಕವಿ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ವಿಜಯಾ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಿ. ರಘುನಾಥರಾಯರು "ಇನ್ನೂ ವಿದ್ಯಾರ್ಥಿಗಳಾದ ಶ್ರೀಪತಿ ಚಂದಾ ಮತ್ತು ಗೋಪಾಲಕೃಷ್ಣ ಪೈಯವರಿಂದ ಪ್ರಕಟವಾದ ಈ ಪುಸ್ತಕ ನನಗೆ ಮಾತ್ರವಲ್ಲ ಇಡೀ ಕನ್ನಡ ನಾಡಿಗೆ ಹೆಮ್ಮೆಯ ಸಂಗತಿ" ಎಂದರು.

ಆರಂಭದಲ್ಲಿ 'ಸೀತಾ ಪ್ರಕಾಶನ ಹೆಜಮಾಡಿ' ಇದರ ಅಧ್ಯಕ್ಷ ಶ್ರೀಪತಿ ಚಂದಾರವರು ಸ್ವಾಗತಿಸಿದರು. ಗೋಪಾಲಕೃಷ್ಣ ಪೈಯವರು ಪ್ರಕಾಶನದ ಪರವಾಗಿ ಮತ್ತು ಕವಿ ರಾಮದಾಸ್‌ರು ಭಾಷಣಮಾಡಿದರು.

❖ ನಾಳೆಗೆಂತೊ! ❖

ಹೊಲದ ಮರದ ಗಿಡದ ಮೇಲೆ
ಹೊಲದ ವನದ ನಗದ ಮೇಲೆ
ನೊರೆಯ ಹಾಲ ಚೆಲ್ಲಿದಂತೆ
ಅರಳಿದಲರ ಹಾಸಿದಂತೆ
ಬಿಳಿಯ ಬಾನ ಬಯಲಿನೆಡೆಯು
ಕಳೆಯುಕ್ಕಾಂತ ಚಂದ್ರನುದಯ
ಜೊನ್ನವನ್ನು ಸುರಿಸುತಿಹುದು,
ತಣ್ಣ ಚೆಲುವ ಸೂಸುತಿಹುದು.
ತೆಂಕುಗಾಳಿ ಬೀಸುತಿಹುದು
ಬಿಂಕ ಕೊಂಕು ಬೀರುತಿಹುದು
ಎಡೆಯೆಡವಿ ಸಾಗುತಿಹುದು
ಜಡದಿ ಕಿಡಿಯ ತುಂಬುತಿಹುದು
ಹಿಡಿ ಮೆಯ್ಗೆ ಕೊಳದ ತಂಪ
ಈಡು ಮಾಡಿ ಬಗೆಗೆ ಸೊಂಪ
ನೀಡುತಿಹುದು ಕುಮುದ ತಂಪ
ಹಾಡುತಿಹುದು ಕರ್ಣಕಿಂಪ
ಜೊನ್ನ ಸೊಂಪು, ಗಾಳಿತಂಪು
ಎನ್ನನೆಲ್ಲ ದಾಳಿ ಪೆಂಪು.
ಇಂದು—ಬವಣೆರಿಬ್ಬರೊಂದು
ಹಿಂದು ಬಗೆಸು ಸುಡುವರಿಂದು.
ಜವದಿ ಬರುವುದನ್ನು ಬಲ್ಲೆ
ತವರಿನಿಂದ ನಾಳೆ ನಲ್ಲೆ;
ಅದರಿಂದ ಕಳೆವುದೆಂತೊ !
ಕಾದ ಜೀವದಳಿವದೆಂತೊ !

—ಎನ್. ತಿಮ್ಮಣ್ಣ ಭಟ್.

ಚಂದಾದಾರರಲ್ಲಿ ವಿನಂತಿ

"ನವಯುಗ"ದ ಚಂದಾ ಬಾಕಿ ಇರುವವರು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಅಂತೂ ಈ ತಿಂಗಳಾಂತ್ಯದೊಳಗೆ ಹಣ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಆದನ್ನಾದರೂ ದಯಮಾಡಿ ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್

ಭಾರತದಾದ್ಯಂತ ವ್ಯಾಪಕ ಸೇವೆಯಲ್ಲಿ

ಸಿಂಡಿಕೇಟ್ ಬ್ಯಾಂಕ್

ಉತ್ತರ—ದಕ್ಷಿಣ ಭಾರತಗಳಲ್ಲಿ ಬ್ಯಾಂಕು ತನ್ನ ಮೂರು ಶಾಖೆಗಳನ್ನು ತೆರೆಯಲಿರುವುದೆಂದು ತಿಳಿಸಲು ಹರ್ಷಪಡುತ್ತದೆ.

ತಮಿಳು ನಾಡಿನಲ್ಲಿ ತೆರೆಯಲಾದ ಎರಡು ಶಾಖೆಗಳು:—

1) 76, ಚೆಟ್ಟಿ ಸ್ಟ್ರೀಟ್, ಹಳೆ ಮುನಿಸಿಪಲ್ ಆಫೀಸು ಕಟ್ಟಡ, — ಪ್ರಾರಂಭ ತಾ. 20-2-1969ರಲ್ಲಿ
ತಿರುವಲ್ಲೂರು
(ಚಿಂಗಲ್‌ಪೇಟೆ ಜಿಲ್ಲೆ)

2) 206, ಗಾಂಧೀ ರಸ್ತೆ, ಡಾ. ರಾಜಗೋಪಾಲರ ಡಿಸ್ಪೆನ್ಸರಿ, — ಪ್ರಾರಂಭ ತಾ. 22-2-1969ರಲ್ಲಿ
ಕಾಂಚೀಪುರಂ.
(ಚಿಂಗಲ್‌ಪೇಟೆ ಜಿಲ್ಲೆ)

ಬ್ಯಾಂಕಿನ ಮತ್ತೊಂದು ಶಾಖೆಯು ಗುಜರಾತ ರಾಜ್ಯದ ಸೂರತ್‌ನಲ್ಲಿ ಮಾರ್ಚ 3, 1969ರಂದು ಈ ಕೆಳಗಿನ ವಿಳಾಸದಲ್ಲಿ ತೆರೆಯಲ್ಪಡುವುದು.

ಸಲಬತ್‌ಪುರ, ಮೈನ್ ರೋಡ್,
ಸೂರತ್-2.

ಗುಜರಾತ್ ರಾಜ್ಯದಲ್ಲಿ ಒಟ್ಟು ಶಾಖೆಗಳು : 3
ತಮಿಳುನಾಡಿನಲ್ಲಿ ಒಟ್ಟು ಶಾಖೆಗಳು : 27

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

"ಪ್ರತಿಯೊಂದು ಬ್ಯಾಂಕಿಂಗ್ ಸೇವೆಗೆ ಪ್ರತಿಯೋರ್ವನ ಬ್ಯಾಂಕು"

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಒಟ್ಟು ಶಾಖೆಗಳು: 260 — ಸಂಪನ್ಮೂಲಗಳು: 140 ಕೋಟಿ ಮಿಕ್ಕಿದೆ. — ಶ್ರೀ ಟಿ. ಎ. ಪೈ ಚೇಯರ್‌ಮೆನ್.

ಯಮಧರ್ಮರಾಯನ ಎದುರಿನಲ್ಲಿ

(ಎರಡನೇ ಪುಟದಿಂದ)

ಹೆಣ್ಣಿಕೆ— ಅಯ್ಯೋ, ನಾನು ಬೇಡಿದರೂ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆ. (ಬಿಕ್ಕುತ್ತಾ) ನನ್ನ ಮಗುಗೆ ಹೆಚ್ಚಾಗಿರಲಿಲ್ಲ. ಯಾಕಾಗಿ ಆ ರಾ...ನ ಮನೆಗೆ ಹೋದೆನೋ. ದೇವರೇ ಬ್ರಾಹ್ಮಣರ ಮನೆಯಲ್ಲೇನಾದರೂ ಭಿಕ್ಷೆ ದೊರೆಕೀತೆಂದು ಹೋದರೆ...ಆ ಮನೆಯವರು ಬ್ರಾಹ್ಮಣರೇ ಅಲ್ಲ ರಾಕ್ಷಸರು ರಾಕ್ಷಸರು. (ಮಗುವಿನ ಹೆಣವನ್ನು ಅಪ್ಪಿ ಅಳುತ್ತಾ) ಅಯ್ಯೋ ನನ್ನ ಕಂದ, ನಾನೆಂತಹ ಪಾಪಿ. ನಿನ್ನ ಹೆಣವ ಕಾಣುವ ಮೊದಲು ನಾನಾದರೂ ಸತ್ತಿದ್ದರೆ? ಆ ಮನೆ ದೊಡ್ಡದಾಗಿದೆ. ಭಿಕ್ಷೆ ದೊರೆಕೀತು ಎಂದುಕೊಂಡು ಹೋದೆ. ಅಮ್ಮಾ ಏನಾದರೂ ಕೊಡಿ ತಾಯೀ, ಎಂದು ಕೂಗಿದೆ. ಹಸಿವಾಗಿತ್ತು ಮಗು ಅತ್ತಿತ್ತು. ಆದರೂ ಕನಿಕರವೇ ಇಲ್ಲ. ಭಿಕ್ಷೆ ಕೊಡುವುದಿಲ್ಲ ಹೋಗು ಎಂದ. ಇನ್ನೊಂದು ಮನೆಗೆ ಎಷ್ಟು ದೂರವೋ!? ಏನೂ ಕೊಡದಿದ್ದರೆ ಎಂದೆನ್ನಿಸಿದ್ದ...ದ ಮಗುವಿಗಾದರೂ ಒಂದಿಷ್ಟು ಗಂಜಿ ಕೊಡಿ ತಾಯಿ. ಬೆಳಗಿನಿಂದ ಹಸಿದಿದೆ. ...ದು ದೈನ್ಯದಿಂದ ಕೇಳಿದರೆ, ಅಯ್ಯೋ ಗಂಡಸು ಅಳುತ್ತಿದ್ದ ಮಗುವನ್ನು ಕೆ...ಸಿ ನೋಡುತ್ತಾ, ಮಗುವನ್ನು ಸಾಕ...ರದ ನೀನು ತಿಂಡಿ ತೀರಿಸಿಕೊಳ್ಳಲು ಹೆ...ದ್ದೀಯೇ ಎಂದವನೇ ಎದ್ದು ಬಂದು ಅಳುತ್ತಿದ್ದ ಮಗುವಿಗೆ ರಾಚಿ ಹೊಡೆದುಬಿಟ್ಟ. (ಅಳು) ಪಾಪಿ ಅಯ್ಯೋ ನನ್ನ ಮುದ್ದು ...ಯಿಂದ ಜಾರಿ ನೆಲಕ್ಕೆ ಬಿದ್ದು ಸತ್ತೇ ಹೋಯಿತು. ನನ್ನ ಜೀವದ ಜೀವ ಹೋ...ಯಿತು. ಶಿವನೇ ಎಂತಹ ಕಟುಕನವನು? ನನ್ನ ಬಾಳ ಬಳ್ಳಿಯ ಕುಡಿಯನ್ನು ಕಡಿದುಹಾಕಿದ ನಂಬಿಧನು. ...ದ ಹಾಳಾಗಿ ಹೋಗಲಿ. (ಕಣ್ಣೀರನ್ನೊರೆಸಿಕೊಳ್ಳುತ್ತಾ ಅವಳು ಒಳಗೆ ಸರಿ...ಗ ವ್ಯಕ್ತಿಯ ಮೇಲೆ ಬೆಳಕು),

ವ್ಯಕ್ತಿ— (ಹುಚ್ಚು ನಗೆ ನಗುತ್ತಾ) ...ಳ ಮಗು ಸತ್ತುಹೋಯಿತು. ಹೋ...ಲಿ. ಹಾಳಾದವರು ಯಾಕೆ ಬೇಕು? ದುಡಿದು ತಿನ್ನಬಾರದೇ? ಇಂ...ವರಿಂದಲೇ ನಮ್ಮ ದೇಶ ಹಾಳಾಗುತ್ತಿ...ರುವುದು. ಇಲ್ಲಿ ಭಿಕ್ಷೆ ಕೊಡುವುದಿಲ್ಲ ಹೋಗು ಎಂದು ಹೇಳಿದರೆ ಹೋಗುವು...ದನ್ನು ಬಿಟ್ಟು ಭಿಕ್ಷೆ ಕೊಡಿ ತಾಯಿ ಎಂ...ದು ಕಿರುಚಿದಳು. ನನ್ನ ಇಪ್ಪತ್ತೈದು ...ಯೋಚನೆಗಳ ನಡುವೆ ಇವರದೊಂದು ...ಗೋಳು. ಕೇಳಲು ಬಿಡುವಾದರೂ ಎ...ಲ್ಲಿದೆ? ಒಂದೇ ಸಮನೆ ಅರಚುತ್ತಿದ್ದ ಮಗುವನ್ನು ನೋಡಿ ಸಿಟ್ಟು ಬಂತು. ರಾ...ಚಿ ಹೊಡೆದುಬಿಟ್ಟೆ. ಪಾಪ ಅದು ಅವಳ ಕೈಯಿಂದ ಜಾರಿ ಕೆಳಗೆ ಬಿದ್ದು ಸತ್ತೇ ಹೋಯಿತು. ಮಾರಿ ಹೋದಂತಾಯಿತು. ಅದರಿಂದೇನಾದೀತು? ಅವ...ಳೇನು ನನ್ನ ಮೇಲೆ ಫಿರ್ಯಾದಿ ಕೊಡಲಿಕ್ಕಿದೆಯೇ? ಕೊಟ್ಟರೂ ಅದನ್ನು ನಡೆಸುವವರಾರು? ಹ್ಹ ಹ್ಹ ಹ್ಹಾ!

(ಕೋರಾದಮಗುವಿನೊಂದಿಗೆ ಕತ್ತಲು, ಬೆಳಗಾಗುವಾಗ ಸ್ಟೇಜಿನಲ್ಲಿ ಹಸುವೊಂದು ಬಿದ್ದಿದೆ. ಏಳಲೆತ್ನಿಸಿ ಸಾಧ್ಯವಾಗದೆ ಉರುಳಿ ಬೀಳುತ್ತದೆ. ಕಣ್ಣೀರಿಡುತ್ತದೆ. ಒಬ್ಬ ಹುಡುಗನೊಂದಿಗೆ ಕಾತರತೆ ತುಂಬಿದ ಮುಖದಲ್ಲಿ ಆ ಹಸುವಿನ ಒಡೆಯ ಅಲ್ಲಿಗೆ ಬರುತ್ತಾನೆ.)

ಹುಡುಗ— ಇಲ್ಲಿದೆ ನೋಡಿ ಸ್ವಾಮಿ. ನಾನು ಬೆಳಗ್ಗೆ ಈ ಒಳದಾರಿಯಲ್ಲಿ ಹೋಗ ಬೇಕೆಂದಿತ್ತು. ಎಲ್ಲೋ ನೋಡಿದ ಹಾಗಿದೆಯಲ್ಲಾ ಎನ್ನಿಸಿ ಎಲ್ಲಿಂದು ಯೋಚಿಸಿದಾಗ ನಿಮ್ಮದಿರಬಹುದೇ ಅನ್ನಿಸಿತು. ಅದ್ದರಿಂದ ಬಂದು ಹೇಳಿದೆ. ನೋಡಿ. ಅದರ ಎಡಕಾಲಿನಲ್ಲಿರುವ ಕತ್ತಿಯ ಗಾಯ, ತುಂಡಾಗಲು ಸ್ವಲ್ಪವೇ ಬಾಕಿ ಅಷ್ಟೆ. ನಿನ್ನೆಯೇ ಆಗಿರಬೇಕದು..... ಅವರ ಕೆಲಸದವರೇ ಕಡಿದಿರಬೇಕು. ಇದು ಜಾಗ ಅವರದ್ದು. ಇದಕ್ಕೆ ಬೇಲಿಯೂ ಸರಿಯಿಲ್ಲ. ಆದರೂ ದನಗಳು ಬಂದರೆ ಹೊಡೆಯುತ್ತಾರೆ. ಕಡಿಯಲೂ ತಯಾರೇ..... ಕಟ್ಟಿಹಾಕಿ ಉಪವಾಸ ಬಿಡುವುದೂ ಉಂಟು. ನನ್ನ ಧನಿಗಳು ನಾವು ಹೇಳಬಾರದು, ಕಾಣಲು ಅವರು ಬಹಳ ಒಳ್ಳೆಯವರು. ಆದರೆ.......ನಾವು ಹೇಳಿದ್ದೆಂದು ಗೊತ್ತಾದರೆ ನನಗೇ ಹೊಡೆದಾರು. ನಾನು ಬರುತ್ತೇನೆ ಸ್ವಾಮಿ.... (ಹುಡುಗ ಹೋಗುವನು.)

ಹಸುವಿನ ಒಡೆಯ— (ಹಸುವನ್ನೇ ನೋಡುತ್ತಿದ್ದಾನೆ. ಮುಖದಲ್ಲಿ ದುಃಖದ ಮೋಡದೊಡನೆ ಸಿಟ್ಟೂ ಬೆರೆತಿದೆ.) ಎಂತಹ ಕಟುಕನವನು, ದನದ ಕಾಲು ಕಡಿಸಿಬಿಟ್ಟನಲ್ಲಾ? ಅವನ ಹಿತ್ತಲಿಗೆ ಬಂದು ದಕ್ಕ ಹೊಡದಟ್ಟಬಹುದಾಗಿತ್ತು. ಕಟ್ಟಿ ದೊಡ್ಡಿಗೆ ಕಳಿಸಬಹುದಿತ್ತು. ಎಲ್ಲಾ ಬಿಟ್ಟು ಈ ಬಾಯಿಬಾರದ ಮೂಕ ಜೀವಿಯ ಕಾಲು ಕಡಿಸುವುದೆಂದರೆ? ಇದರ ಬದಲು ನನಗೇ ಜೂರಿ ಹಾಕಬಹುದಿತ್ತು ಅವನಿಗೆ. (ಹಸುವಿನ ಬಳಿ ಕುಳಿತು ಅದರ ಕೊರಳು ಸವರುತ್ತಾ) ಅಯ್ಯೋ ಎಂತಹ ಹಸು. ಕಾಮಧೇನುವಿನ ಹಾಗಿತ್ತು. ಅದರಲ್ಲೂ ಬಬ್ಬದ್ದು. ಕರುಹಾಕಿದರೆ ಹೊತ್ತಿಗೆ ಹತ್ತು ಕುಡುತೆ ಹಾಲು ಕೊಡುತ್ತಿತ್ತು. ಒಬ್ಬರೆ ನನಗೆ ಯೋಗವಿಲ್ಲ. ಮಕ್ಕಳ ಹೊಟ್ಟೆ ತಣ್ಣಗಾಗುತ್ತಿತ್ತು. ಹೋಯಿತು. ಅಯ್ಯೋ.......... ಇವನೊಬ್ಬ ಬ್ರಾಹ್ಮಣ, ಗೋ ಪೂಜೆ ಮಾಡಬೇಕಾದವನು. ಅವನೇ ಬೇರೆ ಮಾಡಿಸಿದನೆಂದಾದಮೇಲೆ ಕಟುಕರು ಗೋ ಹತ್ಯೆ ಮಾಡುವುದು ತಪ್ಪೇ? ಅವರು ಹೊಟ್ಟೆಗೆ ತಿನ್ನುವದಕ್ಕಾಗಿ ಕೊಲ್ಲುತ್ತಾರೆ. ಇವನೂ ತಿಂದುಕೊಳ್ಳಲಿ ನಾಯಿ. ನನಗೆ ಬೇಡ. (ಕಾಲಿನ ಗಾಯವನ್ನು ನೋಡುತ್ತಾ ಕಣ್ಣು ಮುಚ್ಚಿಕೊಂಡು) ಎಷ್ಟು ನೋವಾಗುತ್ತದೋ? ಪಾಪ ಹೊಟ್ಟೆಗೆ ಹುಲ್ಲು ನೀರು ಏನೂ ಇಲ್ಲ. ಮನೆಗೆ ಬಂದೆ ನಾಲ್ಕು ದಿನವಾಯಿತು. ಕಾಲು ತುಂಡಾಗಿ ಎರಡು ಮೂರು ದಿನವಾಯಿತೇನೋ. ನೊಣ ಕುಳಿತು ಕೀವಾಗಿದೆ. ಹುಳವೂ ಆಗಿದೆಯೆಂದು ಕಾಣುತ್ತದೆ. (ಎಷ್ಟು ಇನ್ನಿದನ್ನು ಸಾಗಿಸಿದರೂ ಮದ್ದು ಮಾಡಿ ಈ ಹುಣ್ಣು ಗುಣವಾಗಲಿಕ್ಕಿದೆಯೇ? ಇಲ್ಲೇ ಇರಲಿ. ಅವನು ಮಾಡಿದ ಪಾಪಕ್ಕೆ ಶಿಕ್ಷೆ ಅನುಭವಿಸಲಿ. (ಸಿಟ್ಟಿನಿಂದ) ಅವನಿಗೂ ಇದೇ ರೀತಿಯ ಮರಣ ಉಂಟಾಗಲಿ. ಅವನ ವಂಶ ನಿರ್ವಂಶವಾಗಲಿ.... (ಹೋಗುವನು....) (ಕತ್ತಲಾಗಿ ಬೆಳಕಾಗುವಾಗ ವ್ಯಕ್ತಿಯು ಒಂದು ಕೈಯಲ್ಲಿ ಗ್ಲಾಸು ಮತ್ತೊಂದರಲ್ಲಿ ಬ್ರಾಂಡಿಯ ಬಾಟಲು ಹಿಡಿದು ಕುಡಿಯುತ್ತಾನೆ.)

ವ್ಯಕ್ತಿ— ಕುಡಿಯಬಾರದಂತೆ... ಕುಡಿದರೇನಂತೆ? ದನದ ಕಾಲು ಕಡಿಯಬಾರದಂತೆ. ಕಡಿದರೇನಂತೆ? ಅದು ಗದ್ದೆಗೆ ಬಂದು ಮೇಯಬಹುದೋ? ಅದರ ಯಜಮಾನ ಕಟ್ಟಿಹಾಕ ಬೇಡವೇ? ನನ್ನ ಜಾಗಕ್ಕೆ ಬೇಲಿ ಹಾಕಿಸಿಲ್ಲ ಎನ್ನುತ್ತಾರೆ ಊರವರು. ನಾನು ಬೇಲಿ ಹಾಕಿಸುವುದಿಲ್ಲ. ಅವರವರ ದನಗಳ ಜಾಗ್ರತೆ ಅವರೇ ನೋಡಿಕೊಳ್ಳಬೇಕು. (ಗ್ಲಾಸಿಗೆ ಮತ್ತಷ್ಟು ಬಗ್ಗಿಸಿ ಕುಡಿದು) ನನ್ನ ಗದ್ದೆಗೇ ಯಾಕೆ ದುಡ್ಡಿಕ್ಕು ದನಗಳು ಬರಬಾರದು. ಬಂದರೆ ಕಾಲು ಕಡಿಸಿಯೇನು, ದೊಡ್ಡಿಗೆ ಕಟ್ಟಿಯೇನು ....ಏನೂ ಮಾಡಿಯೇನು. ಕೇಳುವವರು ಯಾರು....ಪೋಲೀಸರು, ಅವರು ನನ್ನ ಕೈಗೊಂಬೆಗಳು. ಅವರ ಕೈ ಬಿಸಿಮಾಡಿದರಾಯಿತು, ಅವರಿಗೆ ಬೇಕಾಗಿರುವುದೂ ನ್ಯಾಯವೇ ಅಲ್ಲ, ಹಣ. ನಾವು ಕೊಡುವುದಿಲ್ಲವೇ ಹ್ಹ ಹ್ಹ ಹ್ಹಾ! ಈ ಭಟ್ಟ ಏನು ಮಾಡಿದರೆ ಏನೂ ಮಾಡಿಯಾನು. ಏನೂ...(ಬಾಟಲಿಯಲ್ಲಿ ಬ್ರಾಂದಿ ಮುಗಿದು ಹೋದ್ದರಿಂದ ಅದನ್ನೆತ್ತಿ ಎಸೆದು ಗ್ಲಾಸನ್ನು ಕುಕ್ಕಿ ಉಳಿಸಿಕೊಳ್ಳುವನು. ನಶೆ ಏರಿದೆ. ಮೆತ್ತ ಅವನ ಮೇಲೆ ಸ್ಟೇಜಿನ ಕತ್ತಲಾಗಿ ಎಲ್ಲಿಂದಲೋ ಧ್ವನಿ ಕೇಳಿ ಬರುತ್ತದೆ.)

ಧ್ವನಿ— (ಪೋಲೀಸ್ ಬೂಟುಗಳ ಸದ್ದು ನಂತರ ಮಾತು ಕೇಳಿಸುವುದು.) ಅವನ ಹಣವೂ ಬೇಡ. ಅವನು ತರುವ ಕೇಸುಗಳೂ ಬೇಡ. ಎಷ್ಟು ಮೋಸ, ಎಷ್ಟು ಸುಲಿಗೆ? ತಪ್ಪುಕಾರ ಅವನಾದರೂ ಕೂಡಾ, ಅವನಿಗೆ ಸಹಾಯ ಮಾಡಿದ ನನಗೂ ಪಾಪದ ಪಾಲು ಬಾರದಿರುತ್ತದೆಯೇ. ಅನ್ಯಾಯವಾದ ಎಷ್ಟು ಕೇಸುಗಳನ್ನು ನಾನವನಿಗೆ ಜಯಿಸಿ ಕೊಟ್ಟಿಲ್ಲ. ಇನ್ನು ಬೇಡ. ವಕೀಲನಾದ ನನಗೇ ಅನುಭವ ಹೇಳ ಬಂದವನು. ಸಾಲ ಕೊಡದೆ, ಸ್ವಲ್ಪ ಕೊಟ್ಟು ಹೆಚ್ಚು ಹಣಕ್ಕೆ ನೋಟು ಬರೆಸಿಕೊಂಡು ಕೇಸು ಹಾಕಿ, ಎಷ್ಟು ಮಂದಿಯ ಮನೆಮಾರಿಗೆ ಧಕ್ಕೆ ತಂದಿಲ್ಲ. ಯಾರ್ಯಾರಿಗೋ ಹೋಗ ಬೇಕಾದ ಪೀರಸ್ತಿ, ಊರವರಿಗೆ ಹೋಗಲಿದ್ದ ದಾರಿಯನ್ನು ತನ್ನದೆಂದು ಮಾಡಿದ ಕೇಸುಗಳೆಷ್ಟು? ಎಲ್ಲಾ ಅನ್ಯಾಯ. ನ್ಯಾಯಾಲಯದಲ್ಲಿ ಅನ್ಯಾಯವೇ ಜಯಗಳಿಸುತ್ತದೆಂದಾಯಿತಲ್ಲವೇ? ಅಂತಹ ಕೇಸುಗಳನ್ನು ತೆಗೆದುಕೊಂಡುದು ನಾನು ಮಾಡಿದ ತಪ್ಪು. ಆದರದು ಬರಿಯ ಹಣಕ್ಕಾಗಿ ಹಣ ಎಂತಹವನನ್ನೂ ಆಕರ್ಷಿಸುತ್ತದೆ. ಇನ್ನು ಅವನ ಗೊಡವೆಯೇ ಬೇಡ ನನಗೆ. ಹೂಂ ....ಈ ಸಲ ಅವನ ಮೇಲಿರುವುದು ಕೊಲೆಯ ಅಪವಾದ, ನಾನು ಅವನ ಪರವಾಗಿ ವಾದಿಸಿದರೆ ನಿಜವಾದ ಅಪರಾಧಿಯೇ ಶಿಕ್ಷೆ ಹೊಂದದೆ ಉಳಿಯುತ್ತಾನೆ. ಹಾಗಾಗಬಾರದು...ನಾನು ಖಂಡಿತ ಈ ಕೇಸನ್ನು ತೆಗೆದುಕೊಳ್ಳುವುದಿಲ್ಲ. (ಫೋನಿನ ಕರೆಗಂಟೆಯ ಸದ್ದು. ಮಾತಾಡಿದಂತೆ ಕೆಲವು ನಿಮಿಷಗಳ ನಂತರ) ಹೋ ಅವನು ಸತ್ತುಹೋದನಂತೆ. ಬಹಳ ಒಳ್ಳೆಯದಾಯಿತು. ಊರಿಗೆ ಮಾರಿ ಹೋದ ಹಾಗಾಯಿತು. ಅಂತಹರು ಸಾಯುವುದೇ ಒಳ್ಳೆಯದು....ಬದುಕಿದ್ದರೇ ಲೋಕಕ್ಕೆ ಕೇಡು...ಹೂಂ ಇಷ್ಟು ತಪ್ಪು ಮಾಡಿದವನಿಗೆ ಬರುವ ಮರಣ ಹೀಗೇ ಸರಿ. ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಆತ್ಮಹತ್ಯೆ....ಹೋಗಲಿ ಆ ಲೋಕದಲ್ಲಾದರೂ ಶಿಕ್ಷೆ ತಪ್ಪೀತೇ?....

(ಒಮ್ಮೆ ಇಡೀ ಸ್ಟೇಜು ಕತ್ತಲಾಗಿ ಹಿಂದಿನ ಭಾಗದಲ್ಲಿ ಬೆಳಕಾಗುತ್ತದೆ—ಪ್ರಾರಂಭದಲ್ಲಿದ್ದಂತೇ ಯಮಧರ್ಮ, ಚಿತ್ರಗುಪ್ತ ಮೊದಲಾದವರಿದ್ದಾರೆ. ವ್ಯಕ್ತಿಯು ಅಲ್ಲೇ ಮೊದಲಿದ್ದುದಕ್ಕಿಂತ ಕುಗ್ಗಿಹೋಗಿದ್ದಾನೆ. ಮುಖ ಬಾಡಿದೆ.)

ಚಿತ್ರಗುಪ್ತ— (ಕೈಯಲ್ಲಿದ್ದ ಪುಸ್ತಕವನ್ನು ಮಡಿಸುತ್ತಾ) ಧರ್ಮಾವತಾರರಿಗೆ ಈ ವ್ಯಕ್ತಿ ನಡತೆಯ ಬಗ್ಗೆ ನಮ್ಮಲ್ಲಿಯ ಕಲಾವಿದರಿಂದ ಪ್ರತ್ಯಕ್ಷ ಪ್ರದರ್ಶಿಸಿ ತೋರಿಸಿದ್ದೇನೆ. ಇನ್ನು ಇವನ ಮರಣವೂ ಕೂಡಾ ವಿಧಿ ನಿಯಮಕ್ಕೆ ವಿರೋಧವಾಗಿದ್ದು ಆತ್ಮಹತ್ಯೆಯ ಮೂಲಕ ಇವನು ಭೂಮಿಯನ್ನು ಬಿಟ್ಟಿದ್ದಾನೆ. ಇವನಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಧರ್ಮವನ್ನು ಕಾಪಾಡಬೇಕು; ಮಹಾಪ್ರಭೋ.

(ಯಮಧರ್ಮನು ತಲೆದೂಗುತ್ತಾ, ಚಿತ್ರಗುಪ್ತನನ್ನು ನೋಡಿ ಮುಗುಳ್ನಕ್ಕು, ವ್ಯಕ್ತಿಯನ್ನು ಕಠೋರವಾಗಿ ದೃಷ್ಟಿಸುತ್ತಾನೆ. ವ್ಯಕ್ತಿಯು ಮುಖ ಕೆಳಗಾಗಿ ಶರೀರ ಕುಗ್ಗತೊಡಗುತ್ತದೆ.)

ಯಮಧರ್ಮ— ಭೂಮಿಯಲ್ಲಿ ಶ್ರೇಷ್ಠನಾದ ಬ್ರಾಹ್ಮಣನಾಗಿ ಹುಟ್ಟಿದ್ದರೂ, ಇವನು ಮಾಡಿದ ಕರ್ಮಗಳು ಚಾಂಡಾಲನಿಗಿಂತಲೂ ಕೀಳುಮಟ್ಟದ್ದಾಗಿರುತ್ತದೆ, ಇವನ ತಪ್ಪುಗಳಿಗನುಸಾರವಾಗಿ ಇವನು ಮುಂದೆ ಭೂಮಿಯಲ್ಲಿ ಕಪಿಯಾಗಿಯೂ, ನಾಯಿಯಾಗಿಯೂ, ಬೆಕ್ಕಾಗಿಯೂ, ಹಲ್ಲಿಯಾಗಿಯೂ ಜನ್ಮವೆತ್ತಬೇಕು. ಸ್ವಲ್ಪ ಜನ್ಮಗಳು ಮುಗಿದ ನಂತರ ಪುನಃ ಮಾನವಜನ್ಮ ಲಭಿಸುವುದು, ಆಗಲಾದರೂ ತನ್ನ ಧರ್ಮವನ್ನನುಸರಿಸಿ, ದೇವರನ್ನು ನಂಬಿ ಬದುಕಿದನಾದರೆ ಮುಂದೆ ಸದ್ಗತಿ ಲಭಿಸುವುದು....

(ವ್ಯಕ್ತಿಯು ದೇಹ ಕುಗ್ಗುತ್ತಾ ಹೋಗುತ್ತದೆ.)

ಚಿತ್ರಗುಪ್ತ— (ಬರೆಯುತ್ತ) ಅಪ್ಪಣೆ. ಹಾಗೇ ಆಗಲಿ ಪ್ರಭು.......

ಕತ್ತಲು ಆವರಿಸಿಕೊಳ್ಳುತ್ತಿರುವಂತೆಯೇ ಪರದೆ.)

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ ೧೦.

NAVAYUGA, 27—2—1969
Registered with the Registrar
of News Papers for India
under No. R. N. 3646/'57

REGD: No: B. G. 176
LICENCE No. 33
Licensed to Post without Prepayment

ಬಾಪೂವಾಣಿ

ಸಾ ವಿದ್ಯಾ ಯಾ ವಿಮುಕ್ತಯೇ

ಶಿಕ್ಷಣದ ಬಗ್ಗೆ ಪೂಜ್ಯ ಗಾಂಧೀಜಿ ಯವರ ವಿಚಾರಗಳೇನು ಎಂಬು ದನ್ನು ಈ ಲೇಖನದಲ್ಲಿ ಸಂಗ್ರಹಿಸಿ ಕೊಡಲಾಗಿದೆ.

'ಸಾ ವಿದ್ಯಾ ಯಾ ವಿಮುಕ್ತಯೇ' ಎಂಬ ಆರ್ಷೇಯ ನುಡಿ ಅಂದಿಗೂ, ಇಂದಿಗೂ ಎಂದೆಂದಿಗೂ ಸತ್ಯ. ಇಲ್ಲಿ ವಿದ್ಯೆ ಎಂದರೆ ಕೇವಲ ಪಾರಮಾರ್ಥಿಕ ಜ್ಞಾನ ಎಂದು ಅರ್ಥವಲ್ಲ. ಜನತೆಯ ಸೇವೆಗೆ ಉಪಯೋಗ ಬೀಳುವ ಎಲ್ಲ ತರಬೇತಿಯೂ ಜ್ಞಾನವೆಂದೆನಿಸಿಕೊಳ್ಳುತ್ತದೆ. ವಿಮುಕ್ತಿ ಎಂದರೆ ಎಲ್ಲ ತರಹದ ದಾಸ್ಯ ಅಥವಾ ಪರಾಧೀನತೆಯಿಂದ ಬಿಡುಗಡೆ ಹೊಂದುವ ಸ್ಥಿತಿಯೇ ಆಗಿದೆ.

ದಾಸ್ಯ ವೃತ್ತಿ ಎರಡು ತೆರ. ಹೊರಗಿನಿಂದ ಹೇರಲ್ಪಟ್ಟ ದಾಸ್ಯ ಒಂದು ಬಗೆಯದಾದರೆ, ತನ್ನ ಸ್ವಂತದ ಕೃತ್ರಿಮ ಆಶೆಗಳಿಗೆ ದಾಸನಾಗಿರುವುದು ಮತ್ತೊಂದು ಬಗೆ. ಈ ದಾಸ್ಯ ವಿಮೋಚನೆಗೆಂದು ಗಳಿಸಿದ ವಿದ್ಯೆಯೇ ನಿಜವಾದ ಶಿಕ್ಷಣವೆಂದೆನಿಸಿಕೊಳ್ಳುತ್ತದೆ. ಅವಿರತವಾಗಿ ಪ್ರಶ್ನಿಸುವದು ಮತ್ತು ಕುತೂಹಲತೆಯನ್ನು ಬೆಳೆಸಿಕೊಳ್ಳುವ ಗುಣಗಳಿಂದ ಯಾವದೇ ಜ್ಞಾನವನ್ನು ಗಳಿಸಬಹುದು. ನಿಮ್ಮ ಪ್ರಶ್ನಾತುರತೆ ವಿನಯದಿಂದ ಕೂಡಿರಲಿ. ಗುರುಗಳನ್ನು ಗೌರವದಿಂದ ಕಂಡು ನಿಮ್ಮ ಸಂಶಯಗಳನ್ನು ಕೇಳಿಕೊಳ್ಳಿ. ಧಾರ್ಷ್ಟ್ಯತನದ ಮಾತುಬೇಡ. ಧಾರ್ಷ್ಟ್ಯತನದ ದುಃಸಹವಾಸದಿಂದ ಮನಸ್ಸಿನ ಏಕಾಗ್ರತೆ ಹಾಳಾಗುವದು. ವಿನಯವಿಲ್ಲದೆ ವಿದ್ಯೆ ಬರಲಾರದು. ಮನಸ್ಸಿಲ್ಲದೆ ಹೇವು ಕಲಿಯಲಾರಿರಿ. ಹೊಸ ಜಗತ್ತಿನ ನಿರ್ಮಾಣಕ್ಕೆ ಹೊಸಬಗೆಯ ಶಿಕ್ಷಣಬೇಕು. ಸಾಕ್ಷರತೆ ಅಥವಾ ಕಲಿಕೆ ಮನುಷ್ಯನನ್ನು ಮನುಷ್ಯನನ್ನಾಗಿ ಮಾಡದು. ರಾಷ್ಟ್ರೀಯ ಶಿಕ್ಷಣವು ನಿಜವಾಗಿಯೂ ರಾಷ್ಟ್ರೀಯ ಸ್ವರೂಪದ್ದೆನಿಸಿಕೊಳ್ಳಲು ಆ ಆ ಕಾಲದ ರಾಷ್ಟ್ರೀಯ ಪರಿಸ್ಥಿತಿಯನ್ನು ಪ್ರತಿಬಿಂಬಿಸುವಂತಿರಬೇಕು.

ದೇಹ ಬುದ್ಧಿಗಳ ವಿಕಾಸ

ಸಾಕ್ಷರತೆಯು ಶಿಕ್ಷಣ ಕೈಕಸಬಿನ ಶಿಕ್ಷಣವನ್ನು ಹಿಂಬಾಲಿಸಿ ಹೋಗಬೇಕು. ಓದು ಬರಹವಿಲ್ಲದೆ ಮನುಷ್ಯನ ಪೂರ್ಣ ವಿಕಾಸ ಸಾಧ್ಯವಿಲ್ಲವೆಂಬ ಮಾತು ಮೂಢ ನಂಬಿಕೆಯ ಅತಿರೇಕ. ಅಕ್ಷರ ಜ್ಞಾನ ಬದುಕಿನ ಮೌಲ್ಯವನ್ನು ಹೆಚ್ಚಿಸುವದು, ನಿಜ. ಆದರೆ ಮನುಷ್ಯನ ನೈತಿಕ, ದೈಹಿಕ ಅಥವಾ ಐಹಿಕ ವಿಕಾಸಕ್ಕೆ ಸಾಕ್ಷರತೆ ಅತ್ಯವಶ್ಯ ಎಂಬ ಮಾತಿನಲ್ಲಿ ಹುರುಳಿಲ್ಲ. ಕೈಕಾಲು, ಕಣ್ಣು, ಮೂಗು ಮೊದಲಾದ ಅಂಗಾಂಗಗಳೆಲ್ಲವುಗಳ ತರಬೇತಿಯಿಂದ, ಅವುಗಳ ಕೆಲಸಗಳಿಂದ ಬುದ್ಧಿವಂತನು ಸ್ವೈಜವಾದ ಶಿಕ್ಷಣವನ್ನು ಪಡೆದುಕೊಳ್ಳುತ್ತಾನೆ. ಅರ್ಥಾತ್, ದೇಹದ ಅಂಗಾಂಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಂಡು ಮನುಷ್ಯ ತನ್ನ ಪ್ರತಿಭೆಯನ್ನು ಶೀಘ್ರವಾಗಿ ಮತ್ತು ಪೂರ್ಣವಾಗಿ ಬೆಳಗಿಸಿಕೊಳ್ಳಬಲ್ಲನು.

ಆತ್ಮದ ಅರಿವಿನೊಡನೆ ದೇಹ-ಮನಸ್ಸುಗಳ ವಿಕಾಸವಾಗಬೇಕು. ದೇಹ—ಮನಸ್ಸುಗಳು ಮಾತ್ರ ವಿಕಾಸ ಹೊಂದಿದರೆ ಅದು ಅಪೂರ್ಣ ಅಪರಿಪಕ್ವ ವಿಕಾಸವೆನಿಸುವದು. ಹೃದಯದ ಶಿಕ್ಷಣವನ್ನೇ ನಾನು ಪಾರಮಾರ್ಥಿಕ ತರಬೇತಿ ಎಂಬ ಹೆಸರಿನಿಂದ ಕರೆಯುವದು. ದೈಹಿಕ ಮತ್ತು ಪಾರಮಾರ್ಥಿಕ ಶಿಕ್ಷಣ ದೊರಲು, ಅಂದರೇನೆ ಮನುಷ್ಯನ ಮನಸ್ಸು ವಿಕಾಸವಾಗಬಲ್ಲದು. ಈ ಮೂರು ಬಗೆಯ ಶಿಕ್ಷಣಗಳು ಅಭಿನ್ನ ಸ್ವರೂಪದವು. ಅಂತೆಯೇ ಅವುಗಳ ಬೆಳವಣಿಗೆ ಏಕ ಕಾಲಕ್ಕೆ ಆಗಬೇಕು.

ದೇಹ, ಮನಸ್ಸು ಮತ್ತು ಚೈತನ್ಯಗಳ ಪೂರ್ಣ ಬೆಳವಣಿಗೆಯ ಕ್ರಮವನ್ನೇ ನಾನು ಶಿಕ್ಷಣ ಎಂದು ಕರೆಯುವದು. ಸಾಕ್ಷರತೆ ಶಿಕ್ಷಣದ ಆರಂಭವೂ ಅಲ್ಲ ಅಥವಾ ಗುರಿಯೂ ಅಲ್ಲ. ಸ್ತ್ರೀ-ಪುರುಷರು ಶಿಕ್ಷಣ ಪಡೆಯಲು ಸಾಕ್ಷರತೆ ಒಂದು ಸಾಧನೆ ಮಾತ್ರ. ಸಾಕ್ಷರತೆಯಲ್ಲಿ ಶಿಕ್ಷಣ ಮುಗಿಯದು. ಮಗುವಿಗೆ ಕೈಕಸುಬಿನ ತರಬೇತಿಯಿಂದ ಶಿಕ್ಷಣ ಪ್ರಾರಂಭವಾಗಬೇಕು. ಕೈಕಸುಬನ್ನು ಕೇವಲ ಯಾಂತ್ರೀಕೃತ ರೀತಿಯಲ್ಲಿ ಕಲಿಸದೆ, ಶಾಸ್ತ್ರೀಯ ರೀತಿಯಿಂದ ಅಂದರೆ—ತಾನು ಮಾಡುವ ಕೆಲಸದ ಪ್ರತಿಯೊಂದು ಕ್ರಮದ ಮೂಲ, ಅದು ಏಕೆ, ಹೇಗೆ ಎಂಬುದರ ಜ್ಞಾನವು ಬರುವಂತೆ — ತರಬೇತಿ ಕೊಡಬೇಕು. ಸಾರ್ವತ್ರಿಕ ಸಮ್ಮತಿಯನ್ನು ಪಡೆಯಬಲ್ಲ ಕಸಬನ್ನೆ ಶಿಕ್ಷಣ ಮಾಧ್ಯಮವನ್ನಾಗಿ ಸ್ವೀಕರಿಸಬೇಕು.

ನಯೀ ತಾಲಿಮ್

ನಯೀ ತಾಲೀಂ ಸುಂದರ ಶಿಕ್ಷಣ ಪದ್ಧತಿ. ಹುಟ್ಟಿದಂದಿನಿಂದ ಕೊನೆಯವರೆಗೆ ಮನುಷ್ಯನಿಗೆ ಬೇಕಾದ ಎಲ್ಲ ಶಿಕ್ಷಣವನ್ನೂ ಇದು ನೀಡಬಲ್ಲುದು. ಕೈಕಸಬೇ ಶಿಕ್ಷಣದ ಮಾಧ್ಯಮ ಎಂದು ನಾನು ಭಾವಿಸಲಿಚ್ಛಿಸುತ್ತೇನೆ.

ನಯೀ ತಾಲೀಂ ಶಿಕ್ಷಣವು ಹಣವನ್ನ ಅವಲಂಬಿಸಿರುವುದಿಲ್ಲ. ಇಲ್ಲಿ ಶಿಕ್ಷಣ ಸಾಗುತ್ತಿರುವ ರೀತಿಯಲ್ಲಿಯೇ ಶಿಕ್ಷಣಕ್ಕೆ ಬೇಕಾದ ಹಣ ಸಿಗುತ್ತದೆ. ಟೀಕೆಗಳು ಏನಿದ್ದರೂ ತನ್ನ ಕಾಲಮೇಲೆ ನಿಂತುಕೊಳ್ಳಲು ಯಾವ ವಿದ್ಯೆಯು ಸಹಾಯ ಮಾಡಬಲ್ಲದೋ ಅದೇ ನಿಜವಾದ ಶಿಕ್ಷಣ ಎಂದು ನಾವು ತಿಳಿದು ಕೊಳ್ಳುತ್ತೇನೆ.

ಇದು ಶಿಕ್ಷಣದ ನವೀನ ಪದ್ಧತಿ ಹೊರಗಿನಿಂದ ಬಂದುದಲ್ಲ. ಭಾರತೀಯ ವಾತಾವರಣಕ್ಕೆ ಹೊಂದುವಂತಹದು. ನಮ್ಮ ದೇಹ, ಮನಸ್ಸು ಮತ್ತು ಚೈತನ್ಯಗಳ ಬಡುವೆ ಸಮತೋಲವನ್ನು ಇಂತಹ ಶಿಕ್ಷಣ ಸಾಧಿಸಬಲ್ಲುದು. ಪಶ್ಚಿಮ ದೇಶಗಳ ಶಿಕ್ಷಣವು ದೇಹ ಮನಸ್ಸುಗಳ ಬೆಳವಣಿಗೆಗೆ ಮಾತ್ರ ಪ್ರಾಧಾನ್ಯತೆ ಯೀಯುತ್ತಿದೆಯೇ ಹೊರತು ಆತ್ಮದ ವಿಕಾಸಕ್ಕೆ ಸಹಾಯಕವಾಗುತ್ತಿಲ್ಲ. ಕಸಬುಗಳನ್ನು ಕಲಿಸಿ ಶಿಕ್ಷಣ ಕೊಟ್ಟರೆ ಶಿಕ್ಷಣದ ಸಂಪೂರ್ಣತೆಯನ್ನು ಸಾಧಿಸಬಹುದು. ಸ್ವಂತ ಜೀವನಕ್ಕೆ ಇಂತಹ ಶಿಕ್ಷಣ ಮಾರ್ಗ ಕಲ್ಪಿಸಿಕೊಡುತ್ತದೆ. ಇಲ್ಲದೆ ಇಂತಹ ಶಿಕ್ಷಣ ಕೊಡಲು ಲಕ್ಷೋಪ ಲಕ್ಷ ರೂಪಾಯಿಗಳ ಬಂಡವಾಳವನ್ನು ಹೂಡಬೇಕಾದುದಿಲ್ಲ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಸ್ವಯಂಬೋಧಿನಿ.
ಬೆಲೆ : ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ,
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲಿ ಮದ್ದು ಮಾಡುವ ವಿಧಾನಗಳಿವೆ. ಹಾಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮುನ್ನೋಟ

ಮೊದಲ ನುಡಿ ಮಾಫಿಯಿಂದ
ಮೊಳಗಿದತ್ತು
'ಅಗ್ನಿ ಮೀಳೇ ಪುರೋಹಿತಂ.'
ಇದರಂತೆ ನಮಗೊಬ್ಬ
ಮುಂದಾಳುಬೇಕೆನುತ
ಅರಸನನು ಎಲ್ಲೆಡೆಗು
ಗೊತ್ತುಪಡಿಸಿತ್ತು,
ಮೊದಲಾಳು ನಡೆದಂತೆ
ಅನುಸರಿಸೆ ಮಂದಿ,
'ಯಥಾ ರಾಜಾ ತಥಾ ಪ್ರಜಾ'
ಇದ ನುಡಿದು ತನ್ನೊಳಗೆ
ಆದರ್ಶಕೆಂದು,
ಅರಸಗೊಬ್ಬನು ಮಂತ್ರಿ
ಯಿರಲೆಂದುದು!
ಜತಿಯೊಳೇ ಮುನ್ನೋಟ
ವಿರಲು ಬೇಕೆಂದು,
'ತರಕ್ಷಮಾಂ ದೀಧಾವತಿ',
ಹಿತವಚನವಿದಕೆಂತು
ಸಮನಿಸಿಕೆಯದೆಂದು,
ಮತಿ ಸೂಕ್ತಿಗಳನೆಂತು
ಸಮತೊಳಸಿತು.
ಸಮ್ಮಿಕ್ತ್ಯವಾದದಿಂದಲೆ
ನಡೆಯಬೇಕೆಂದೆ,
'ಸಂಗಚ್ಛಧ್ವಂ ಸಂವದಧ್ವಂ' ಎಂಬ
ಸಂತತಿಯ ಅದ್ದತಿಯ
ಮುನ್ನೋಟದಿಂದೆ,
ಸಂತತಂ ಸಂಸೃಷ್ಟಿ
ಸಾಗುತಲಿದೆ!

—ವೆಂಕಟರಾಯಾಚಾರ್ಯ
ಸುರತ್ಕಲ್.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

6—3—1969

೨೦
ಪೈಸೆ

ಕಥಾಪ್ರಪಂಚ

ಮೂಕ ವೇದನೆ

ಲೇಖಿಕಾ— ಕು. ಸುಮಿತ್ರಾ

ಒಂದು ಮಾಂಸಾಹಾರಿ ಪರಿವಾರದಲ್ಲಿ ಬಹಳ ಹೆಚ್ಚಿನ ಸ್ನೇಹಿತರಾದ ಎರಡು ಮೂಕ ಪ್ರಾಣಿಗಳು ಪಾಲಗೊಂಡಿದ್ದವು. ಒಂದು ನಾಯಿ, ಇನ್ನೊಂದು ಹಂದಿ. ಇವುಗಳ ಸ್ನೇಹವೆಂತಹದು ಬರಿ ಮಾತಿನಲ್ಲಿ ಮಾತ್ರವಲ್ಲ, ಕೃತಿಯಲ್ಲಿಯೂ ತೋರಿಸುತ್ತಿದ್ದವು. ಹಂದಿಯನ್ನೂ ನಾಯಿಯನ್ನೂ ಆ ಮನೆಯೊಡತಿಯು ಬಹಳ ಪ್ರೀತಿಯಿಂದ ಸಾಕಿ ಸಲಹಿ ಬಹಳ ಮುದ್ದಾದ ಹೆಸರನ್ನಿಟ್ಟಿದ್ದಳು. ಹಂದಿಯ ಹೆಸರು ಗುಬ್ಬಿ! ಎಂದೂ ನಾಯಿಯ ಹೆಸರು ಟೈಗರ್! ಎಂದೂ ಆಗಿತ್ತು. ಆತ್ಮೀಯ ಸ್ನೇಹಿತರಾದ ಮೂಕ ಪ್ರಾಣಿಗಳೊಳಗೆ ನಡೆದಂತಹ ಸಂಭಾಷಣೆಯೇ ಈ ಚಿಕ್ಕ ಕೃತಿಯ ಕಥಾವಸ್ತುವಾಗಿದೆ. ಮಾನವನು ಈ ಭೂಲೋಕದಲ್ಲಿ ಇರುವ ಎಲ್ಲಾ ಜೀವರಾಶಿಗಳಿಗಿಂತ ಮೇಲಲ್ಲವೆ? ಆದರೆ ಅವನಷ್ಟು ಸ್ವಾರ್ಥಿಗಳೂ ಕಠೋರರೂ ಬೇರೆ ಯಾರೂ ಇರಲಾರರು. ಈ ವಿಸ್ತಾರವಾದ ಪ್ರಪಂಚದಲ್ಲಿ ಮನುಷ್ಯನಿಗೆ ಇತರ ಎಲ್ಲಾ ಪ್ರಾಣಿಗಳಿಗಿಂತಲೂ ಹೆಚ್ಚು ಬುದ್ಧಿಶಕ್ತಿ ಇದೆ. ಆದುದರಿಂದ ಅವನು ಈ ಭೂಲೋಕದಲ್ಲಿರುವ ಜೀವರಾಶಿಗಳನ್ನು ತನ್ನ ಕೈ ಮುಷ್ಟಿಯೊಳಗೆ ಇಟ್ಟುಕೊಂಡು ಕುಣಿಸಬಲ್ಲನು.

ಒಂದು ದಿನ ಎಂದಿನ ರೂಢಿಯಂತೆ ಹಂದಿಯು ತನ್ನ ಬೇಸರವನ್ನು ಕಳೆಯುದಕ್ಕಾಗಿ ತನ್ನ ಮುದ್ದಾದ ಕಂದನ್ನುಗಳೊಡನೆ ಆಟವಾಡಲೆಂದು ಮನೆ ಬಿಟ್ಟು ಹೊರಟಿತು. ನಾಯಿಗೆ ಹಂದಿ ಎಂದರೆ ಬಹಳ ಪ್ರೀತಿಯಲ್ಲವೆ? ಹಂದಿಗೆ ಅಪಾಯವನ್ನು ಕೊಡುವರೆಂದು ತಿಳಿದೊಡನೆಯೇ ಎಷ್ಟು ಹಂದಾರಿ ದೂರದಲ್ಲಿದ್ದರೂ ನಾಯಿಯು ಓಡೋಡಿ ಬಂದ. ಹಂದಿಯು ತಿಂದುಳಿದ ಚೂರುಚೂರು ಎಂಜಲು ಕೂಳನ್ನು ತಿಂದು ಬಹಳ ಮಮತೆಯಿಂದ ಅದರ ಮುಖವನ್ನು ತನ್ನ ಒರಗಾದ ನಾಲಗೆಯಿಂದ ನೆಕ್ಕಿ ಬಹಳ ಪ್ರೀತಿ ತೋರಿಸುತ್ತಿತ್ತು. ಅದೇ ರೀತಿ ಹಂದಿಯೂ ತನಗೆ ಕೊಟ್ಟ ಪೂರ್ಣ ಆಹಾರವನ್ನು ತಿನ್ನದೆ ಅದರಲ್ಲಿ ಅಲ್ಪ ಸ್ವಲ್ಪ ಉಳಿಸಿ ನಾಯಿಗೆ ಕೊಡುತ್ತಿತ್ತು. ಈಗ ಹಂದಿಯು ಹೊರಟಿದ್ದನ್ನು ನೋಡಿ ಟೈಗರ್ ಕೂಡಾ ಅದರ ಹಿಂದೆಯೇ ಬಹಳ ಪ್ರೀತಿಯಿಂದಲೂ ಸಂತೋಷದಿಂದಲೂ ಹಿಂಬಾಲಿಸಿ ಬಂದಿತು. ಹಂದಿಯು ತನ್ನ ಮಕ್ಕಳೊಡನೆ ಸಂತೋಷದಿಂದ ನೃತ್ಯಮಾಡುತ್ತಿರುವಾಗ ಎದುರಿನಿಂದ ಮೋಟಾರು ಬಂದುದನ್ನು ಕೂಡಾ ಅರಿಯದೆ ಸಾಗುತ್ತಿರುವಲ್ಲಿ ದೌರ್ಭಾಗ್ಯದಿಂದ ಅಲ್ಲಿ ಒಂದು ಚಿಕ್ಕ ಘಟನೆ ನಡೆದು ಹೋಯಿತು. ಮೋಟಾರು ಡ್ರೈವರನು ಆ ಮೂಕ ಪ್ರಾಣಿಗಳನ್ನು ಕ್ಷಣಿಕವಾಗಿ ಕಂಡು ಮೋಟಾರಿನ ಅಡಿಗೆ ಹಾಕಿಯೇ ಬಿಟ್ಟನು. ಅದೃಷ್ಟವಶಾತ್ ಪ್ರಾಣಕ್ಕೇನೂ ಹಾನಿಯಾಗಲಿಲ್ಲ. ತಾಯಿ ಹಂದಿಯೂ ಮರಿಗಳೂ ಅರೆಪ್ರಜ್ಞೆ ಮೂರ್ಛೆ ಹೋದವು. ನಾಯಿಗೆ ಒಂದು ಚಿಕ್ಕ ಜಖಂ ಆಗಿತ್ತು. ರಕ್ತ ಸೋರುತ್ತಿದ್ದಂತಹ ಹಂದಿಯ ಮರಿಗಳನ್ನು ಕಂಡು ನಾಯಿಯು ತುಂಬಾ ದುಃಖಪಟ್ಟಿತು. ಮೂರ್ಛೆ ತಿಳಿದ ಬಳಿಕ ಹಂದಿಯು ನೋಡುವುದೇನು! ಹಂದಿಯ ಮರಿಗಳ ಕೈಗಳು, ಕಾಲುಗಳು, ಇಡೀ ಶರೀರವೇ ರಕ್ತದಿಂದ ತೊಯ್ದುಹೋಗಿತ್ತು. ಇದನ್ನು ಕಂಡು ಗುಬ್ಬಿಗೆ ಕರುಳು ಹಿಚುಕಿದಷ್ಟು ವೇದನೆಯಾಯಿತು. ಆದರೆ, ಈ ಸಂಕಟವನ್ನು ಬಗೆಹರಿಸುವವರಾರು? ಆ ಕರುಣಾಳು ಭಗವಂತನೊಬ್ಬನೇ! ಎಂದು ಭಾವಿಸಿ ಹಂದಿಯು ಗಾಯಗೊಂಡ ಮರಿಗಳನ್ನು ಕೂಡಿಕೊಂಡು ಬಹಳ ಪ್ರಯಾಸದಿಂದ ಮನೆಯನ್ನು ಸೇರಿಬಿಟ್ಟಿತು. ರಕ್ತದ ಓಕುಳಿಯನ್ನು ಕಂಡು ಇದೇನು ರಕ್ತ ಬಿದ್ದಿದೆ ಎಂದು ಮನೆಯೊಡತಿಯು ಹಂದಿಗಳ ಸಮೀಪಕ್ಕೆ ಬಂದು ನೋಡಲು ಕೈ ಮುರಿದಿದೆ, ಮಗದೊಂದರ ಕಾಲು ಜಜ್ಜಿದೆ, ಇನ್ನೊಂದರ ಸೊಂಟ ಮುರಿದಿದೆ. ಇದನ್ನು ಕಂಡು ಆ ಮನೆಯ ತಾಯಿಗೇನೂ ಬೇಸರಬಾರಲಿಲ್ಲ! ಸಂಜೆಯಾಗುತ್ತಲೆ ಮನೆಯೊಡತಿಯು ತನ್ನ ಪತಿಯು ಮನೆಗೆ ಬರುವುದನ್ನು ನಿರೀಕ್ಷಿಸಿ ಮನೆಯೊಳಗೆ ಕಾಲು ಇಡಲೂ ಪುರಸೊತ್ತಿಲ್ಲ. ನಡೆದಂತಹ ಘಟನೆಯನ್ನು ಸವಿವರವಾಗಿ ತಿಳಿಸಿದಳು. ಆಗ ಪತಿಯು ಏನಾದರೂ ಮುದ್ದಾಗಿದ್ದು ಮಾಡಿ ಆ ಮೂಕ ಪ್ರಾಣಿಗಳನ್ನು ಉಳಿಸು ಎಂದನು. ಅಷ್ಟು ಹೊತ್ತಿಗೆ ಹೆಂಡತಿ ಎಂದಳು, "ಥೂ ನಿಮಗೇನು ಬೇರೆ ಕೆಲಸವಿಲ್ಲವೇ? ಹೇಗೂ ನಾಳೆನಾಡಿದ್ದಿನಲ್ಲಿಯೇ ಹಬ್ಬವೂ ಬರಲಿದೆ. ಆಗ ಅವುಗಳನ್ನು ಕೊಂದು ರುಚಿಯಾದ ಆಹಾರ ತಯಾರಿಸಿದರಾಯಿತು. ಬೇಕಾದರೆ ನಾಯಿಗೆ ಏನಾದರೂ ಮದ್ದು ಮಾಡಿ ಉಳಿಸುವ."

ಆ ಮಾತನ್ನು ಮನೆಯ ಬಾಗಿಲಲ್ಲಿಯೇ ವೇದನೆಯನ್ನು ತಾಳಲಾರದೆ ಬಿದ್ದಿದ್ದ ಹಂದಿಯು ಕೇಳಿ ಬಿಟ್ಟಿತು. ಮೊದಲೇ ನೋವಿನಿಂದ ನರಳುತ್ತಿದ್ದ ಹಂದಿಗೆ ತನ್ನ ಅರ್ಧ ಪ್ರಾಣವೇ ಹೋಯಿತೆನ್ನುವಷ್ಟು ಸಂಕಟವಾಯಿತು. ಹುಣ್ಣಿನ ಮೇಲೆ ಬರೆ ಎಳೆದಂತಾಯಿತು. ಪಾಪ! ಅನಾಥೆಯಾದ ಹಂದಿಯ ಸ್ಥಿತಿ. ಆಗ ತನ್ನ ಗೆಳೆಯನಾದ ನಾಯಿಯನ್ನು ಹತ್ತಿರ ಕರೆದು ಹಂದಿಯು ಮೂಕ ವೇದನೆಯೊಡನೆ ಈ ರೀತಿ ಹೇಳಿತು:— "ಅಣ್ಣಾ ನನಗಾರು ಗತಿಯಣ್ಣಾ? ನನ್ನ ಜೀವನವೆಷ್ಟು ಹಾಳು! ಇಂತಹ ಪಾಪಿಗಳು ಈ ಭೂಲೋಕದಲ್ಲಿ ಇನ್ನು ಜನಿಸಲಿಕ್ಕೂ ಇಲ್ಲ. ದಹಿಸಲೂ ಇಲ್ಲ. ನನ್ನ ಕಥೆಯನ್ನು ನೀನಾದರೂ ಕೇಳಿ ನನ್ನ ಕಷ್ಟವನ್ನು ಪರಿಹರಿಸಬಾರದೆ! ಅಣ್ಣಾ! ಯಾವ ಜನ್ಮ ಬಂದರೂ ಈ ಹಂದಿಯ ಜನ್ಮ ಯಾರಿಗೂ ಎಂದೆಂದಿಗೂ ಬರಬಾರದಣ್ಣಾ. ಈ ಮನೆಯವರ ಸೇವೆಯನ್ನು ನಾನು ಇವರೆಲ್ಲರ ಪಾಯಿಖಾನೆಯನ್ನು ಸ್ವಚ್ಛಗೊಳಿಸುವುದರ ಮೂಲಕವೂ ಮಾಡಿದ್ದೇನೆ! ಆದರೆ ಇವರಿಗೆ ಅದರ ನೆನಪೇ ಇಲ್ಲವಲ್ಲಣ್ಣಾ! ಹಾಯ್ ದೇವಾ, ಹಾಯ್ ಭಗವಂತಾ!" ಎಂದು ಕಣ್ಣು ತುಂಬಾ ನೀರು ತಂದುಕೊಂಡಿತು.

ಪಾಪ, ನಾಯಿಗಾದರೂ ಏನು ಮಾಡಬಲ್ಲದು? ಆದರಿಂದೇನು ಮಾಡಲು ಸಾಧ್ಯ! "ಅಕ್ಕಾ ನೀನು ಯಾಕೆ ಅಳುತ್ತಿ? ನಿನಗೇನಾಯಿತಕ್ಕಾ! ನಿನಗಾರು ಬೈಯ್ದರು ಹೇಳಕ್ಕಾ? ನಿನಗೆ ಬಂದಿರುವ ವಿಪತ್ತೇನಕ್ಕಾ" ಎಂದು ಮುಂದೆ ಮಾತನಾಡಲು ಸಾಧ್ಯವಾಗದೆ ಅದೂ ಸುಮ್ಮನೆ ಅಳಲಾರಂಭಿಸಿತು. ಆಗ ಹಂದಿಯು ತನ್ನ ಮನಸ್ಸಿನಲ್ಲಿ ಬರುತ್ತಿದ್ದ ದುಃಖವನ್ನು ತಡೆಹಿಡಿದು ಮಾತನಾಡಲಾರಂಭಿಸಿತು. "ಅಣ್ಣಾ; ಇಂದಿಗೆ ನನ್ನ ಭವಿಷ್ಯ ಕೊನೆಗೊಂಡಿತು. ಇದೇ ನಮ್ಮಿಬ್ಬರ ಕಡೆಯ ಮಾತು. ನಿನ್ನ ಉಪಕಾರವನ್ನು ನಾನು ಎಂದೆಂದಿಗೂ ಮರೆಯಲಾರೆ." ಎಂದು ಹೇಳಿ ಮನೆಯೊಡತಿಯು ಹೇಳಿದ ಎಲ್ಲಾ ವಿಚಾರಗಳನ್ನು ತಿಳಿಸಿತು. ಇದನ್ನು ಕೇಳಿ ನಾಯಿಗೆ ಬರಸಿಡಿಲೆರಗಿದಂತಾಯಿತು. ಆ ದಿನ ನಾಯಿಯಾಗಲೀ ಹಂದಿಯಾಗಲೀ ಆಹಾರವನ್ನು ಸೇವಿಸಲೇ ಇಲ್ಲ. ಎರಡೂ ಪ್ರಾಣಿಗಳೂ ದುಃಖದಲ್ಲಿಯೇ ಮುಳುಗಿ ಹೋದವು.

ದಿನಗಳು ಕ್ಷಣಗಳಂತೆ ಕಳೆದವು. ಮನೆಯೊಡತಿಯು ಹೇಳಿದಂತೆ ಹಬ್ಬದ ದಿನ ಬಂತು. ನೆಂಟರು ಮನೆ ತುಂಬಾ ಸೇರಿದರು. ಆ ದಿನ ಎಲ್ಲರಿಗೂ ಆನಂದವೋ ಆನಂದ. ಮನೆಯವರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿ ತೇಲುತ್ತಿದ್ದರು. ಆದರೆ ಹಂದಿ ನಾಯಿಗಳೆರಡೂ ದುಃಖ ಸಾಗರದಲ್ಲಿ ಮುಳುಗಿ ವೇದನೆ ಪಡುತ್ತಿದ್ದವು. ಬೆಳಗಾಯಿತು! ಹಲವಾರು ಮಂದಿ ಬಂದು ಹಂದಿಯ ಮರಿಗಳನ್ನು ತಾಯ ಮಡಿಲಿನಿಂದ ದರದರನೆ ಎಳೆದುಕೊಂಡು ಹೋಗಿ ಬಚ್ಚಲಿನ ಕತ್ತಿಗೆಯನ್ನು ಇರಿದೇ ಬಿಟ್ಟರು. ತನ್ನ ಮಕ್ಕಳನ್ನು ಕಣ್ಣ ಮುಂದೆಯೇ ಕೊಲ್ಲುವಾಗ ತಾಯಿಯ ಸ್ಥಿತಿ ಏನಾಗಬಹುದು! ಆ ದೃಶ್ಯವನ್ನು ಕಣ್ಣಾರೆ ಕಾಣಲು ಸಾಧ್ಯವಿಲ್ಲದೆ ಹಂದಿಯು ತನ್ನ ಮುಖವನ್ನು ತೂಡೆಯ ಸಂಧಿಯಲ್ಲಿರಿಸಿ ಭಗವಂತನನ್ನು ಪ್ರಾರ್ಥಿಸ ತೊಡಗಿತು. ಆ ದಿನ ಬಗೆಬಗೆಯ ಆಹಾರ ಪದಾರ್ಥಗಳನ್ನು ಮಾಡಿದ್ದರು. ಮಕ್ಕಳು ಎಲ್ಲಾ ತಂದು ಹಂದಿಗೆ ಕೊಟ್ಟರು. ಆ ದಿನ ಒಂದು ಚೂರು ಆಹಾರವನ್ನೂ ಹಂದಿಯು ತಿನ್ನಲಿಲ್ಲ.

ಈ ಘಟನೆಯು ನಡೆದು 8–10 ದಿನಗಳು ಕಳೆದವು. ಆ ದಿನ ಅವರಿಗೆ ಬಹು ದೊಡ್ಡ ಹಬ್ಬ, ಆದಕ್ಕಾಗಿ ಅವರು ಗುಬ್ಬಿಯನ್ನು ಕೊಲ್ಲಬೇಕೆಂದಿದ್ದರು. ಕಾಲುಗಳನ್ನು ಹಗ್ಗದಿಂದ ಬಿಗಿದು ಕ

(ಮನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ,
ಶೀಘ್ರವಾಗಿ, ನಿಜವಾಗಿಯೂ
ಗುಣಪಡಿಸುತ್ತದೆ.
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಫೋನ್ : 526 | 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೨೫
VOL. 48
No. 25

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೬—೩—೧೯೬೯

ಮಧ್ಯಮ ವರ್ಗಕ್ಕೆ ಭಾರೀ ಪೆಟ್ಟು

ರಾಜ್ಯ ಮತ್ತು ಕೇಂದ್ರ ಸರಕಾರಗಳು ಮುಂಗಡ ಪತ್ರವನ್ನು ಮಂಡಿಸಲು ಆರಂಭಿಸಿವೆ. ಇದುವರೆಗೆ ಮುಂಗಡ ಪತ್ರವನ್ನು ಸಭೆಗಳ ಮುಂದೆ ಇಟ್ಟ ರಾಜ್ಯಗಳು ಕೋಟಿಗಟ್ಟಲೆಯ ಕೊರತೆಯನ್ನು ತೋರಿಸಿವೆ; ಯಾವ ತೆರಿಗೆಯನ್ನೂ ಹೊರಿಸದೆ ಇದನ್ನು ತುಂಬಿಕೊಳ್ಳಲು ಕೇಂದ್ರದ ಹೆಚ್ಚಿನ ಸಹಾಯವನ್ನು ನಿರೀಕ್ಷಿಸಿವೆ. ಸ್ವಾಭಾವಿಕವಾಗಿ ಇದೇ ದಾಟಿಯನ್ನು ಇನ್ನು ಉಳಿದ ರಾಜ್ಯಗಳು ಅನುಸರಿಸುವ ಸಂಭವವೇ ಹೆಚ್ಚು. ಹಾಗಾಗಿ ಕೇಂದ್ರದ ಉಪ ಪ್ರಧಾನಿ ಹಾಗೂ ವಿತ್ತ ಮಂತ್ರಿಯೂ ಆದ ಮುರಾರ್ಜಿಭಾಯಿಯವರ ಹೊಣೆಗಾರಿಕೆ ಹೆಚ್ಚುತ್ತಿತ್ತು. ಎಂತಲೇ ಅವರು ಬಹಳಷ್ಟು ಯೋಚಿಸಿ ತೂಗಿ ನೋಡಿ ಲಾಭ ಹಾನಿಗಳನ್ನು ಗಮನದಲ್ಲಿಟ್ಟುಕೊಂಡು ಸುಮಾರು ನೂರು ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಆದಾಯ ಬರುವಂತೆ ಹೊಸ ತೆರಿಗೆಗಳನ್ನು ಸೂಚಿಸಿ ದೇಸಾಯಿಯವರ ಈ ಮುಂಗಡ ಪತ್ರವನ್ನು ನಿರ್ದಾಕ್ಷಿಣ್ಯ ಮುಂಗಡ ಪತ್ರವೆಂದರೂ ಎನ್ನಬಹುದು. ದೇಶದ ಅಭಿವೃದ್ಧಿಯೋಜನೆಗಳನ್ನು ಮುಂದುವರಿಸುತ್ತ ಹೋಗಲು, ವಿದೇಶೀ ಬಂಡವಾಳವನ್ನೇ ನಂಬಿಕೊಂಡಿರುವ ಪರಿಸ್ಥಿತಿಯನ್ನು ದೂರ ಮಾಡಿ ಸ್ವಾವಲಂಬನೆಯತ್ತ ದೇಶವನ್ನು ಕೊಂಡೊಯ್ಯಲು ದೇಸಾಯಿಯವರು ಕಠೋರರಾಗಿಯೇ ವರ್ತಿಸಬೇಕಾಯಿತು ಎನ್ನಬಹುದು. ಹೊರತಾಗಿ ಪೇಲವ ಆರಂಭವು ರಾಜಕೀಯದ ಲಿಂಗನವರಗಾಗಿ ಚಂಚಿ ಹೋಗಿ" ಎಂಬುದು ದಿವಂಗತ ಯಾವ ವರ್ಗದ ಜನರನ್ನೂ ಈ ಹೊಸ ಕರಭಾರದಿಂದ ಮುಕ್ತಗೊಳಿಸದ ದೇಸಾಯಿಯವರು ತಮ್ಮ ಮುಂಗಡ ಪತ್ರವನ್ನು 'ಸಮಾಜವಾದಿ ಹಾದಿಯ ಪ್ರಜಾಪ್ರಭುತ್ವ' ದತ್ತ ನಡೆಯುವ ದಾರಿಯಲ್ಲಿ ಒಂದು ಮೈಲಿಗಲ್ಲು ಎಂದು ಕರೆಯಬಹುದು. ಮಾರು ಅಡಿ ಫಲ ಬೇಡಿದ ವಾಮನ ಮೂರು ಲೋಕವಳೆದಂತೆ, ಅಂತೆಯೇ ನೂರು ಕೋಟಿ ರೂಪಾಯಿಗಳ ಸಂಗ್ರಹ ಕಾರ್ಯದಲ್ಲಿ ತೊಡಗಿದ ಮುರಾರ್ಜಿಯವರು ಶ್ರೀಮಂತ ವರ್ಗದವರನ್ನು ಹೊಡೆದರು, ಬಡವರ್ಗದವರನ್ನು ಅಡಿಗೆ ಹಾಕಿದರು; ಮಧ್ಯಮ ವರ್ಗದವರ ತಲೆ ಮೆಟ್ಟಿಬಿಟ್ಟರು. ಇದು ತ್ರಿವಿಕ್ರಮಾವತಾರದ ಇನ್ನೊಂದು ರೂಪವಾಗದೆ?

ಅಧಿಕಾರಿಗಳು ಚಪ್ರಾಸಿಗೆ ವಾಹನ ಪ್ರಯಾಣದ ಕನಸು ಏಕೆ? ಅವನ ಹೆಂಡತಿಗೆ ಬಂಗಾರ ಗಾದ್ದಿಸುವ ಆಸೆ ಯಾಕೆ? —ಇದು ವಿಲಾಸಿ ಜೀವನ—ಇದು ಅವನಿಗೆ ತಕ್ಕುದಲ್ಲ ಎಂಬುದು ರಾಜ ಪ್ರಭುತ್ವದ ಮಾತು. ಆದರೆ ಇಂದಿನ ಸಮಾಜವಾದೀ ಯುಗದಲ್ಲಿ, ಸಮಾನತೆಯ ಯುಗದಲ್ಲಿ ಚಪರಾಸಿಯೂ ಕಾರು ಕೊಳ್ಳುವಂತಾಗಬೇಕು. ಇದು ದೊಡ್ಡ ಮಾತೆನಿಸಬಹುದು. ದೀಪವುರಿಸುವುದಾದರೂ ಎಲ್ಲರಿಗೂ ಬೇಕಾದುದೇ ತಾನೆ! ವಿದ್ಯುತ್ತಿನ ದೀಪ ಇಂದು ವಿಲಾಸೀ ಜೀವನದ ಪ್ರತೀಕವಾಗಿ ಉಳಿದಿಲ್ಲ; ಉಳಿದಿದ್ದರೆ, ಕರ್ನಾಟಕದ ಭಾಗ್ಯವೇ ಭಾಗ್ಯ! ಮುರಾರ್ಜಿಯವರವಕ್ರದೃಷ್ಟಿ ವಿಲಾಸಿ ಜೀವನೋಪಯೋಗಿ ವಸ್ತುಗಳ ಮೇಲೆಯೇ ಸಾಮಾನ್ಯವಾಗಿರುತ್ತಿತ್ತು, ಈಗ ಅವರಿಗೂ ಅನಿಸಿಂಬೇಕು—ಬದಲಾಗುತ್ತಿರುವ ಯುಗದಲ್ಲಿ ಎಲ್ಲವೂ ಅವಶ್ಯಕ ವಸ್ತುಗಳೇ ಎಂದು. ಆದುದರಿಂದ ಅವರು ಉತ್ತಮ ಮಟ್ಟದ ಚಿಮಿಣಿ ಎಣ್ಣೆಗೂ ಕರ ಹೆಚ್ಚಿಸಿದರು; ವಿದ್ಯುತ್ ಶಕ್ತಿ, ವಿದ್ಯುತ್ ವ್ಯಜನ, ವಿದ್ಯುತ್ ಬಲ್ಬುಗಳನ್ನೂ ಬಿಡಲಿಲ್ಲ. ಕೂಲಿ ತೊಳೆಯುವ ಸಾಬೂನಿನ ಬೆಲೆ ಬಸ್ಸುಗಳ ಪ್ರಯಾಣದರಗಳೂ ಹೆಚ್ಚಲಿವೆ. ಮುಕ್ತ ಮಾರುಕಟ್ಟೆಯ ಸಕ್ಕರೆ, ಸಿಮೆಂಟ, ಸಿಗರೇಟು, ತಾಮ್ರದ ಬಟ್ಟಿಗಳು ಮೊದಲಾದುವುಗಳೂ ಹೆಚ್ಚಿನ ತೆರಿಗೆಗೆ ಒಳಗಾಗಿವೆ. ಅವುಗಳಲ್ಲಿ ಭೋಗ ವಿಲಾಸೀ ವಸ್ತುಗಳೆಂದು ಇಂದು ಕರೆಯಲ್ಪಡುವಂಥವು ಯಾವುವೂ ಇಲ್ಲ. ಎಂದರೆ ಎಲ್ಲರಿಗೂ ಅಗತ್ಯವಾದ ವಸ್ತುಗಳ ಮೇಲೆಯೇ ಮುರಾರ್ಜಿ ಭಾಯಿಯವರು ಕಣ್ಣು ಹಾಕಿದ್ದಾರೆ. ಆದಾಯ ಕರದಲ್ಲೂ ಏರಿಕೆ ತೋರಿಸಿದ್ದಾರೆ.

ಮುರಾರ್ಜಿಯವರು ನಿರ್ಯಾತವನ್ನು ಉತ್ತೇಜಿಸುವ ಅಂಶವಾಗಿ ಉದ್ಯಮಗಳನ್ನು ಬೆಳೆಸಲು ಕೆಲವೊಂದು ಕ್ರಮಗಳನ್ನು ಸೂಚಿಸಿದ್ದಾರೆ, ನಿರ್ಯಾತ ಸುಂಕವನ್ನು ಇಳಿಸಿದ್ದಾರೆ, ಕೆಲವು ಉದ್ಯಮಗಳಿಗೆ ಕರ ವಿನಾಯಿತಿಯ ಅವಧಿಯನ್ನು ಹೆಚ್ಚಿಸಿದ್ದಾರೆ. ಜತೆಗೆ ಇದುವರೆಗೆ ದೇಶದಲ್ಲಿ ಕಾಣದಂತಹ ಆಘಾತವನ್ನು ಅವರು ರೈತಜನರಿಗೂ ನೀಡಿದ್ದಾರೆಂದರೆ ಅತಿಶಯೋಕ್ತಿಯಲ್ಲ, ರಾಸಾಯನಿಕ ಗೊಬ್ಬರ ವಿದ್ಯುತ್ ಪಂಪುಸೆಟ್ಟುಗಳ ಮೇಲೂ ನಿರ್ದಾಕ್ಷಿಣ್ಯ ಪ್ರವೃತ್ತಿ ತೋರಿಸಿ ಕರಾಘಾತ ಮಾಡಿದ್ದಾರೆ. ಇವೀಗ ಸಾಕಷ್ಟು ಪ್ರೋತ್ಸಾಹ, ಸಹಾಯ ಪ್ರಚಾರಾದಿ ಸಾಧನಗಳಿಂದ ನಮ್ಮ ರೈತರು ರಾಸಾಯನಿಕ ಗೊಬ್ಬರಗಳನ್ನೂ ಪಂಪುಸೆಟ್ಟುಗಳನ್ನೂ ಬಳಸಲು ಆರಂಭಿಸುತ್ತಿದ್ದಾರೆ, ಅದೀಗ ರೂಢಿಗತವಾಗುತ್ತ ಬರುತ್ತಿದೆ. ಕೃಷ್ಯುತ್ಪನ್ನಗಳಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ಸಾಧನೆ ನಡೆಸುವುದಕ್ಕೆ ಇವುಗಳೂ ನೆರವಾಗಿವೆ. ಮುಂದಿನ ಕೆಲವು ವರ್ಷಗಳಲ್ಲಿ ಆಹಾರ ಸ್ವಾವಲಂಬನೆಯನ್ನು ಸಾಧಿಸುತ್ತೇವೆ ಎಂಬ ಮುರಾರ್ಜಿಯವರ ವಿಶ್ವಾಸ ನಿಜವಾಗಬೇಕಾದರೆ, ಕೃಷಿಕರಿಗೆ ಉದಾರವಾಗಿ ಸಹಾಯ ಮಾಡಬೇಕಾಗುತ್ತದೆ. ಕೃಷಿಯು ಇಂದು ದೇಶದಲ್ಲಿ ಒಂದು ಸಂಪ್ರದಾಯದಂತೆ ನಡೆದು ಬರುತ್ತಿದೆಯಷ್ಟೆ. ಇದನ್ನು ಉದ್ಯಮದಂತೆ ಬೆಳೆಸಿಕೊಂಡು ಬರಬೇಕು ಎನ್ನುವ ಮಾತು ಈಗ ಕೇಳಿಬರುತ್ತಿದೆ. ಇಂತಹ ವೇಳೆಯಲ್ಲೇ ಕೃಷಿಕರ ಪಾಗಿದ ಬೆನ್ನಿಗೆಂದ ಗುದ್ದು ನೀಡುವುದು ನಿಜವಾಗಿಯೂ ಅಸಾಧುವಾದ ಮಾತು. ಆದುದರಿಂದ ಮುರಾರ್ಜಿಯವರೂ ಇತರರೂ ಈ ಸಂಬಂಧದಲ್ಲಿ ಎರಡನೆಯ ಆಲೋಚನೆ ಮಾಡಬೇಕಾದುದು ಅತ್ಯವಶ್ಯ. ಇಲ್ಲವಾದರೆ, ಆಹಾರಾಭಾವದಿಂದ ಚೇತರಿಸಿ ಸ್ವಾವಲಂಬನೆಯತ್ತ ಸಾಗುತ್ತಿರುವ ಕೃಷಿಕರಂಗ ಮುಗ್ಗರಿಸುವುದು ಅಸಾಧ್ಯವೇನಲ್ಲ.

ಮೂರೂ ವರ್ಗದ ಮೇಲೆಯೂ ಅಧಿಕ ಭಾರ ಹೇರುವ ಈ ಮುಂಗಡಪತ್ರದ ಭಾರಿ ಭಾರವು ಎಲ್ಲಿಯೂ ನಿಲ್ಲುಗಡೆಗೊಳ್ಳಲಾಗದ ಮಧ್ಯಮ ವರ್ಗದ ಮೇಲೆಯೇ ಬಿದ್ದಿದೆ. ಪ್ರಾಯಃ ಈ ವರ್ಗದ ಜನರೇ ಹೆಚ್ಚಾದುದರಿಂದ ಇದು ಅನಿವಾರ್ಯವೆನಿಸಬಹುದು. ಆದರೆ, ತನ್ನ ಜೀವನದ ಪೂರ್ವ-ಪಶ್ಚಿಮಗಳನ್ನು ಹೇಗೆ ಹೇಗೋ ಒಂದುಗೂಡಿಸಿ ಬೇಕಾಗಿಯೋ ಬೇಡವಾಗಿಯೋ ಮುಂದುವರಿಯುತ್ತಿರುವ ಈ ಜನತೆಯ ಕಷ್ಟಕಾರ್ಪಣ್ಯಗಳಿಗೆ ಪ್ರಜಾಪ್ರಭುತ್ವದಲ್ಲಿಯೂ ಕೊನೆಯಿಲ್ಲವೆಂಬುದು ಸ್ವಯಂಸಿದ್ಧ. ಶ್ರೀಮಂತ ವರ್ಗದಿಂದ ಬರಬೇಕಾದ ಆದಾಯದಿ ಕರವಸೂಲಿ ಕಾರ್ಯದಲ್ಲಿ ಹೆಚ್ಚಿನ ಮುತುವರ್ಜಿಯನ್ನು ತೋರಿಸುವಂತಾದರೆ, ದೇಶದ ಆವಶ್ಯಕತೆಯ ಬಹುಭಾಗ ತುಂಬಿಕೊಳ್ಳದ ಎಂದೂ ಪ್ರಶ್ನಿಸುವವರು ಇದ್ದೇ ಇದ್ದಾರೆ. 'ವಿತ್ತಮಂತ್ರಿ ಪಾಠವೆಂದಲೂ ಕಲಾಂತರಿಯನ್ನು ಕಡಿಮೆ ಮಾಡಬಹುದು' ಎನ್ನುವುದರಲ್ಲೂ ಅರ್ಥವಿದೆ.

ಕೋರಂ ಗಂಟೆ

ಲೋಕಸಭೆಯಲ್ಲಿ ಅಧ್ಯಕ್ಷ ನೀಲಂ ಸಂಜೀವ ರೆಡ್ಡಿಯವರು ಸದಸ್ಯರಿಗೊಂದು ಎಚ್ಚರಿಕೆ ನೀಡಿದರು. "ಕೋರಂಗಾಗಿ ಒಂದು ಬಾರಿ ಮಾತ್ರ ಗಂಟೆ ಬಾರಿಸಲಾಗುವುದು. ಈಗಿನಂತೆ ಹಲವಾರು ಬಾರಿಯಲ್ಲ. ಸಭೆಯಲ್ಲಿ 'ಕೋರಂ' ಇರುವಂತೆ ನೋಡಿಕೊಳ್ಳುವುದು ಅಧ್ಯಕ್ಷರ ಹೊಣೆಗಾರಿಕೆಯಲ್ಲ" ಎಂದು ಶ್ರೀ ರೆಡ್ಡಿಯವರು ಇಂತಹ ಕ್ರಮವನ್ನು ಕೈಕೊಳ್ಳಬೇಕಾಗಿ ಬಂದ ಪರಿಸ್ಥಿತಿ ಶೋಚನೀಯವಲ್ಲದೆ ಮತ್ತೇನು? ತಮ್ಮ ವೇತನ—ಭತ್ತೆಗಳು ಸಾಲವು, ಅವು ಹೆಚ್ಚಾಗಬೇಕು ಎಂದು ನಿರ್ಣಯ ಮಂಡಿಸಲು ತಯಾರಾಗುತ್ತಿರುವ ನಮ್ಮ ಸದಸ್ಯರು ದೆಹಲಿಯಲ್ಲಿ "ಪ್ರತಿನಿಧಿಯ ಕರ್ತವ್ಯ"ಪಾಲನೆಗಿಂತ ವೈಯಕ್ತಿಕ ಹಿತಾಸಕ್ತಿಯ ಕೆಲಸಗಳಲ್ಲಿಯೇ ವ್ಯಸ್ತರಾಗಿ ತ್ತಾರೆನ್ನಬೇಕೆ? ಸಭಾಭವನದ ಹೊರಾಂಗಣದಲ್ಲಿ ತನ್ನ ಹಳೆಯ-ಹೊಸ ಮಿತ್ರ,ಮಿತ್ರರೊಡನೆ ಕುಶಲ ಸಂಭಾಷಣೆಯಲ್ಲಿ ಕರ್ತವ್ಯ ಮರೆತರೆಂದು ನಂಬೋಣವೇ? ನಮ್ಮ ಪ್ರತಿನಿಧಿಗಳ ಈ ಬಗೆಯ ವರ್ತನೆಯನ್ನು ಕಾಣುವಾಗ ಸರಕಾರಿ ಕಛೇರಿಗಳಲ್ಲಿನ ನೌಕರರ ವರ್ತನೆಯಲ್ಲಿ ವಿಶೇಷವೇನೂ ಇಲ್ಲವೆನ್ನಬಹುದು. ಈ ನೌಕರರನ್ನು ಮಾನ್ಯ ಸದಸ್ಯರು ಅನುಕರಿಸಿದರೇ ಅಥವಾ ಸದಸ್ಯರನ್ನು ನೌಕರರು ಅನುಕರಣೆ ಮಾಡಿದರೇ—ಇದು ಉತ್ತರಿಸಲು ಸುಲಭದ ಪ್ರಶ್ನೆಯಲ್ಲ. ಸಾಮ್ರಾಜ್ಯಶಾಹಿಯಲ್ಲಿ ಸರಿಯಾಗಿ ಕರ್ತವ್ಯಪಾಲನೆ ಮಾಡುತ್ತಿದ್ದ ನೌಕರವರ್ಗ ಈಗ ಕರ್ತವ್ಯಭ್ರಷ್ಟವಾಗಿದೆಯೆಂಬ ಮುದಿ ಹಲಿಗಳ ಆರೋಪವನ್ನು ನಂಬುವುದಾದರೆ ಎರಡನೆಯದೇ ಸಂಭಾವ್ಯ ಕ್ರಮ.

ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನ

ತಾ. 9.2.69ರಂದು ಶಿಮಂತೂರು, ಎಳತ್ತೂರು, ಕಿಲ್ಪಾಡಿ, ಮಾನಂಪಾಡಿ ಮತ್ತು ಪುನರೂರು ಗ್ರಾಮಸ್ಥರ ಮಹಾಸಭೆಯು ಜರಗಿದಾಗ ಶ್ರೀಕ್ಷೇತ್ರದಲ್ಲಿ ಅಷ್ಟಮಂಗಲ ಪ್ರಶ್ನೆಯನ್ನು ಹೇಳಿದ ಪ್ರಸಿದ್ಧ ಜ್ಯೋತಿಷ್ಯ ಪಯ್ಯನೂರು ಕೆ.ಎ. ನಾರಾಯಣ ಪೊದುವಾಳರು ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಜೀರ್ಣೋದ್ಧಾರಕ್ಕೆ ಗ್ರಾಮಸ್ಥರೆಲ್ಲರೂ ದಿನನಿತ್ಯ ತಮ್ಮಲ್ಲಿ ಮುಷ್ಟಿ ಅಕ್ಕಿ ಕ್ರಮವನ್ನೂ ತಿಂಗಳೊಂದರ ಪೈಸೆ ೨೫ನ್ನು ಕ್ರಮಪ್ರಕಾರ ಕೊಡುತ್ತಾ ಬಂದು ಜೀರ್ಣೋದ್ಧಾರವಾಗಿ ಬ್ರಹ್ಮಕಲಶದ ಪರ್ಯಂತ ಪ್ರತೀ ತಿಂಗಳು ಕೊಡುತ್ತಾ ಬರಬೇಕೆಂದೂ ತನ್ಮೂಲಕ ಶ್ರೀ ಆದಿಜನಾರ್ದನ ದೇವರ ಕೃಪೆಗೆ ಪಾತ್ರರಾಗಿ ಜೀವನದಲ್ಲಿ ಸಂತಸವನ್ನು ಪಡೆಯಲು ಪ್ರಯತ್ನಿಸುವುದು ಅತೀ ಅಗತ್ಯವೆಂದೂ ಹೇಳಿದರು. ಸಭೆಯಲ್ಲಿ ಸಾಮಾನ್ಯ 26 ಫಲ ಬರುವ ಮರಗಳನ್ನು ಭಕ್ತಾದಿಗಳು ಶ್ರೀ ಕ್ಷೇತ್ರದ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶದ ವರೆಗೆ ಅವುಗಳಿಂದ ಸಿಗುವ ಫಲಗಳನ್ನೆಲ್ಲಾ ಶ್ರೀಸನ್ನಿಧಿಗಾಗಿ ಒಪ್ಪಿಸುವೆವೆಂದು ಸಂತೋಷದಿಂದ ವಾಗ್ದಾನ ಮಾಡಿರುವರು. ಮುಂದಿನ ಕಾರ್ಯಭಾಗಗಳನ್ನು ಸುಸೂತ್ರವಾಗಿ ಮುಂದುವರಿಸಲು "ಶ್ರೀ ಆದಿಜನಾರ್ದನ ದೇವಸ್ಥಾನ ಜೀರ್ಣೋದ್ಧಾರ ಸಮಿತಿ" ಒಂದನ್ನು ಸರ್ವಾನುಮತದಿಂದ ಚುನಾಯಿಸಲಾಯಿತು. ಈ ಸಮಿತಿಗೆ ಡಾ| ಬಿ. ಸೀತಾರಾಮ ಸೆಟ್ರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ತೆಂಗಾಳಿ ಬಾಲಕೃಷ್ಣ ಸೆಟ್ರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಶಿಮಂತೂರು ಭಾವ ದೊಡ್ಡಯ್ಯ ಸೆಟ್ರನ್ನು ಜತೆ ಕಾರ್ಯದರ್ಶಿಯನ್ನಾಗಿಯೂ ಮತ್ತು ಶ್ರೀ ಶಿಮಂತೂರು ಭಾವ ಭೋಜ ಸೆಟ್ರನ್ನು ಕೋಶಾಧಿಕಾರಿಯನ್ನಾಗಿಯೂ, ಇನ್ನು ಕೆಲವರನ್ನು ಸದಸ್ಯರನ್ನಾಗಿಯೂ ಆರಿಸಲಾಯಿತು.

ಜೋಡಣೆ

ಗೇಹರಾಜ್ಯದಲ್ಲಿ

ಗ್ರೀಷ್ಮವೇನು ಶಾಶ್ವತವೆ?

"ಏನಿದು? ಭಾರೀ ಗಾಢವಾದ ಆಲೋಚನಾ ಸಾಗರದಲ್ಲಿ...."

"ಓ, ಏನೂ ಇಲ್ಲಾನ್ರಿ. ಹೀಗೆ ಸುಮ್ನೆ ಕೂತಿದ್ದಾಗ ಅಲ್ಲೇ ಏನೇನೋ ನೆನಪಿಗೆ ಬಂದು ಬಿಟ್ತು...."

'ಏನೇನೋ ಅಂದ್ರೆ?'

"ಅಲ್ರಿ ನಮ್ಮ ವಿರೋಧ ಪಕ್ಷಗಳಿಗೆ ಅವಿಶ್ವಾಸ ನಿರ್ಣಯ ಮಂಡಿಸುವುದೊಂದೇ ಉದ್ಯೋಗವೆ?"

"ಏಕೆ? ಏನು?"

"ಅಲ್ರಿ, ಕೇಂದ್ರದಲ್ಲಿ ಇಂದಿರಾ ಸರಕಾರದ ಮೇಲೆ, ಅವಿಶ್ವಾಸ ನಿರ್ಣಯ ಮಂಡಿತವಾಗಿ...."

'ಅದು ಖಂಡಿತವೂ ಆಯ್ತು ಎನ್ನಿ..'

"ಅದು ಏನೇ ಇರಲಿ; ವೇತನ, ಭತ್ತೆಯನ್ನು ಪಡೆಯುವ ಸದಸ್ಯರು ಬಿದ್ದು ಹೋಗುವಂತಹ ಗೊತ್ತುವಳಿಯನ್ನು ಮಂಡಿಸಲು ಯಾಕೆ ಹೊತ್ತು ಹಾಳು ಮಾಡಬೇಕೂಂತ?"

"ಮತ್ತೇನು? ಸರಕಾರೀ ಪಕ್ಷ ಹೇಳಿದ್ದಕ್ಕೆಲ್ಲಾ ಬಸವಣ್ಣನಂತೆ ತಲೆಯಾಡಿಸ್ತಾ ಇರಬೇಕೇನು?"

"ಹಾಗಲ್ಲರೀ...."

"ಮತ್ತೆ ಹೇಗಂತೆ?"

"ನೋಡಿ, ಸರಕಾರವು ಮಾಡುವ ತಪ್ಪುಗಳನ್ನು ಎತ್ತಿ ತೋರಿಸಬೇಕು; ಅದರ ನೀತಿಯು ಜನಾಭಿಪ್ರಾಯವನ್ನು ಹೊಂದಿಕೊಂಡು ಹೋಗುವಂತೆ ಆಗ್ರಹಪಡಿಸಬೇಕು....'

"ಅವಿಶ್ವಾಸ ಗೊತ್ತುವಳಿ ಇರುವುದೇ ತಪ್ಪು ಸ್ಥಾಪಿಸುವುದಕ್ಕೆ...."

"ಹೌದು, ನೀವು ಗೊತ್ತುವಳಿ ಮಂಡಿಸಿದಿರಿ; ಅರ್ಭಟೆ ಕೊಟ್ಟಿರಿ; ಮೇಜು ಗುದ್ದಿದಿರಿ; ಕಿಪಿಯಿಂದ ಕೆಟ್ಟದಾಗಿ ಸಭಾತ್ಯಾಗ ಮಾಡಿದಿರಿ; ಕಡೆ ಅವಿಶ್ವಾಸ ನಿರ್ಣಯ ಬಿದ್ದುಹೋಯ್ತು....ಏನ ಪ್ರಯೋಜನ? ವ್ಯರ್ಥ ಪ್ರೋಲು...."

"ಅಲ್ವೇ, ತಮ್ಮ ನಿರ್ಣಯ ತಮ್ಮ ಕಣ್ಣೆದುರಲ್ಲೇ ಬಿದ್ದುಹೋಗುವುದನ್ನು ಕಾಣಲಾರದ ಸಭಾತ್ಯಾಗ ಮಾಡಿದರೆ...."

"ಸಭಾತ್ಯಾಗಮಾಡಿದ್ರೆ ತಮ್ಮ ಸೋಲೊಪ್ಪುಗೆಯ ಹಸುರು ದೀಪಾಂತ ತೋರುತ್ತೆ..."

"ಆ ವಿಷಯ ಬಿಟ್ಬಿಡು...."

"ಅದೇ ಅಂದದ್ದು..ಅದು ಬಿಟ್ಬಿಡಿ, ಇದು ಬಿಟ್ಬಿಡೀಂತ ಹೇಳಿದ್ದನ್ನು ಕೇಳಿ ಜನವೆಲ್ಲ ಬಿಟ್ಟುಬಿಟ್ರು. ಹಾಗಾಗಿ ನಮ್ಮ ರಾಜ್ಯಕೀಯ ಲಂಗು ಲಗಾಮಿಲ್ಲದ ಕುದುರೆಯಂತೆ ಓಡುತ್ತಿದೆ...."

"ಬಂದಾತನೊಬ್ಬ ಅಲೆಗ್ಸಾಂಡರ್ ಅದನ್ನು ಅದುಮಿ ಪಳಗಿಸುವುದಕ್ಕೆ..."

"ಸರಿಯಾಯ್ತು ಬಿಡಿ, ಅಲ್ಲಿಗೆ ಪ್ರಜಾಪ್ರಭುತ್ವ ಗೋರಿ ಸೇರಿದಂತೆ..."

"ಯಾಕೆ?"

"ನೋಡಿ ಪಾಕಿಸ್ಥಾನದಲ್ಲಿ ಅಯ್ಯೂಬ ಖಾನರು ಶರಣಾಗತರಾದರಂತೆ...."

"ಹೂ...ಸಾಯುವ ಕಾಲಕ್ಕೆ ಬದುಕಲು ಭಾರಿ ಪ್ರಯತ್ನ ಮಾಡಿದರು. ಆದರೂ ಆ ಪ್ರಯತ್ನ ಅಸಫಲವೆಂದಾದಾಗ ಮತ್ತೆ ಮಾಡುವುದಾದರೂ ಏನು? ಇನ್ನು ಚಳುವಳಿ ಮಾಡಿಸುವುದು ಅಯ್ಯೂಬರ ಪಾಲಿಗೆ......"

ಸ್ವಾಭಾ,

'ಏಕೆ'

'ಅಯ್ಯೂಬರೇ ಅಧ್ಯಕ್ಷರಾಗಬೇಕೂಂತ ಮೆರೆವವರಿಗೆ ತಿಳಿಸಬೇಕಲ್ಲಾ.....'

"ಅಯ್ಯೋ, ಅವ್ರು ಸ್ಪರ್ಧಿಸುವುದಿಲ್ಲಾಂತ ಡಂಗುರ ಮಾಡಿದ್ದಾರೆ..."

"ಸರಿಯೇ, ಅವರ ಬೆಂಬಲಿಗರು ಬೇಕೂಂತ ರಂಪಾಟ ಮಾಡತೊಡಗಿದರೆ..."

"ಇದೊಳ್ಳೆ ರಾಜ್ಯಕೀಯ...."

"ಮತ್ತೆನ್ನೆಂಥದು! ನಮ್ಮದೂ ರಾಜ್ಯಕೀಯವೇ....."

"ಯಾಕೆ?"

"ಉತ್ತರಭಾರತದ ಮರಿ ಮಹಾಚುನಾವಣೆಗಳಲ್ಲಿ ಯಾವ ರಾಜ್ಯದಲ್ಲೂ ಕಾಂಗ್ರೆಸ್ಸು ಬಹುಮತಗಳಿಸಲಿಲ್ಲ. ಉತ್ತರಪ್ರದೇಶದಲ್ಲಿ ಬೆರಳೆಣಿಕೆಯಷ್ಟು ಅಭಾವ. ಆದರೂ ಚಂದ್ರಭಾನು ಗುಪ್ತರು ಸರಕಾರ ರಚಿಸುವ ಎದೆಗಾರಿಕೆ ತೋರಿಸಿದರು."

'ಹ್ಞಾ....ಯಾರಾದರೂ ಸ್ವತಂತ್ರರ ಬೆಂಬಲ ಪಡೆಯಬಹುದು....'

"ಇರಬಹುದೂನ್ನಿ. ಇನ್ನು ಬಿಹಾರದಲ್ಲಿ ಕಾಂಗ್ರೆಸ್ಸೇ ಹಲವು ಪಕ್ಷೀಯ ಸರಕಾರ ರಚನೆಗೆ ಮುಂದಾಯ್ತು- ಇದು ಎಲ್ಲಿತನಕ ಮುಂದುವರಿಯುತ್ತೆ ಕಾದು ನೋಡಬೇಕು...."

"ಸರಿಯಪ್ಪ...."

"ಪಂಜಾಬದ್ದು ಗೊತ್ತಿಲ್ಲ? ಜನಸಂಘವು ಅಕಾಲಿ ದಳವನ್ನು ತಲೇ ಮೇಲೆ ಹೊತ್ತಿದೆ. ಗುರ್ನಾಮ್ ಸಿಂಗರು ಮತ್ತೆ ಸರಕಾರ ರಚಿಸಿದರು."

"ಹೌದು..."

"ಇನ್ನು ಪಶ್ಚಿಮ ಬಂಗಾಳದ್ದು ಸರಕಾರ ಅಲ್ಲ ..."

'ಮತ್ತೆ?'

"೧೪ ಪಕ್ಷೀಯರನ್ನು ತೃಪ್ತಿಪಡಿಸುವ ಒಂದು ವ್ಯವಸ್ಥೆ ಮಾತ್ರ..."

"ಹ್ಞಂ....ಅದೂ ಹೌದು...."

"ಅಂತೂ ಈ ಮರಿಚುನಾವಣೆಗಳಲ್ಲಿ ಕಾಂಗ್ರೆಸ್ಸು ಗೆಲ್ಲಲಿಲ್ಲ; ಬಂಗಾಳದಲ್ಲಂತೂ ಪ್ರಪಾತಕ್ಕೇ ಬಿದ್ದುಬಿಟ್ತು..."

"ಹ್ಞಾಂ..."

"ಇದಕ್ಕೆ ಕಾಂಗ್ರೆಸ್ಸ್ ನಾಯಕತ್ವವೇ ಕಾರಣವೆಂದೂ, ನಾಯಕತ್ವದಲ್ಲಿ ಬದಲಾವಣೆಯಾಗಬೇಕೆಂದೂ ಕೆಲ ಕಾಂಗ್ರೆಸ್ಸಿಗರು ಒತ್ತಾಯಿಸ ತೊಡಗಿದ್ದಾರೆ...."

"ಅದು ಇದ್ದದ್ದೇ ಅನ್ನಿ. ಅಧಿಕಾರಿಗಳನ್ನು ಅನಧಿಕಾರಿಗಳು ಬಯ್ಯುವುದು ಮಾಮೂಲು ಕ್ರಮ...."

"ಅಧಿಕಾರಿಗಳಿಗೆ ಅನಧಿಕಾರಿಗಳನ್ನು ನಿಂದಿಸುವುದೂ ಮಾಮೂಲೇ ಅಲ್ಲವೆ?"

"ಹ್ಞಂ...."

"ಆದ್ದರಿಂದ ಇಂದಿರಾಗಾಂಧಿ ಗಾದಿ ಬಿಟ್ಟು ಇಳಿಯುವ ಪ್ರಸಂಗ ಬಂದರೂ ಬರಬಹುದು...."

"ಅಲ್ರಿ, ಇದೆಂಥದೂಂತ...?"

'ಯಾವುದು?'

"ಅದೇ ನೀವನ್ನುತ್ತಿರುವುದು.. ಮೊನ್ನೆ ತಾನೇ ತನ್ನ ಮಂತ್ರಿಗಳ ಖಾತೆಗಳನ್ನು ಬದಲಾಯಿಸಿ ಭದ್ರಗೊಳಿಸಿದ್ದಾರೆ......"

"ನೋಡು, ರಾಜ್ಯಕೀಯದಲ್ಲಿ ಎಲ್ಲವೂ ಸಾಧ್ಯ. ಇಂದಿರಾ ಗಾಂಧಿಯವರು ದೊಡ್ಡ ತಂದೆಯ ಮಗಳು. ಅಂದ ಮಾತ್ರಕ್ಕೆ ಆಕೆಯಲ್ಲಿ ತಂದೆಯ ಗುಣಗಳೆಲ್ಲ ಇರಬೇಕೇನು?' ಏನೋ ಒಂದು ಅವಕಾಶ ಬಂತು. ಪ್ರಧಾನಿ ಪಟ್ಟ ದಕ್ಕಿತು. ಅದೇನು ಯಾರಿಗಾದ್ರೂ ಶಾಶ್ವತವೆ?"

'ಅಲ್ರಿ, ಈಗ ರಾಜ್ಯಸಭೆಗೆ ಚುನಾವಣೆ ನಡೆಯಲಿದೆಯಂತಲ್ಲ....'

"ಹ್ಞಾಂ....ಅದರಲ್ಲಿ ಕಾಂಗ್ರೆಸ್ಸಿನ ಶಕ್ತಿ ಮತ್ತಷ್ಟು ಕಡಿಮೆಯಾಗುವುದು...."

"ಮುಂದಿನ ಚುನಾವಣೆಯ ವೇಳೆಗೆ ಕಾಂಗ್ರೆಸ್ಸು ಸಚೇತವಾಗದೆ ಹೋದರೆ, ಕೇಂದ್ರದಲ್ಲೂ ಅದರ ಅಧಿಕಾರಕ್ಕೆ ಚ್ಯುತಿ ಬಂದೀತು...."

"ಆದ್ದರಿಂದ ಪರಿಣಾಮ—ಮಹಾರಾಷ್ಟ್ರೀಯರು ಒಪ್ಪಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಮಹಾಜನ ಆಯೋಗದ ವರದಿಯನ್ನು ತಿದ್ದಿ, ಮುಂದಿನ ಚುನಾವಣೆಗೆ ಮೊದಲು ಮಹಾರಾಷ್ಟ್ರ-ಕರ್ನಾಟಕ ಗಡಿವಿವಾದಕ್ಕೆ ಪೂರ್ಣವಿರಾಮ ಹಾಕಲಾಗುತ್ತದೆ."

"ಹೌದೇ? ಕಾಸರಗೋಡು?"

"ಅದು ಕೇರಳದಲ್ಲೇ ಮುಂದುವರಿಯುತ್ತೆ."

"ಸರಿಯಾಯ್ತು, ಬಿಡಿ...."

"ಏನು?"

"ಅಪ್ಪ ಮತಗಟ್ಟಲು ಬೊಂಬಾಯಿಯನ್ನು ವಿಭಜಿಸಿದರೆ, ಮಗಳು ಬೆಳಗಾಂವಿಯನ್ನು ವಿಭಜಿಸುತ್ತಾಳೆ..."

"ಹ್ಞಾಂ....ಒಂದು ರೀತಿಯಿಂದ..."

"ಅಲ್ರಿ, ಒಂದು ವೇಳೆ, ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸು ಲೋಕಸಭೆಯಲ್ಲಿ ಬಹುಮತ ಗಳಿಸದಿದ್ದರೆ...."

"ಝಾಕೀರ್ ಹುಸೇನರು ಮತ್ತೊಂದು ಅವಧಿಗೆ ಅಧ್ಯಕ್ಷರಾಗುವುದಿಲ್ಲ..."

"ಅದು ಹಾಗಿರ್ಲಿ...ಕೇಂದ್ರ ಸರಕಾರ ......"

"ಅಯ್ಯೋ, ಅದಕ್ಕೇನಂತೆ? ಸಂಮಿಶ್ರ ಸರಕಾರ ಬರುತ್ತದೆ—ಈಗ ಬಿಹಾರಕ್ಕಿಲ್ಲವೆ? ಬಂಗಾಳಕ್ಕಿಲ್ಲವೆ? ಪಂಜಾಬ, ಉತ್ತರಪ್ರದೇಶ, ಒರಿಸ್ಸಾ ಕೇರಳಗಳಕ್ಕಿಲ್ಲವೆ?"

"ಹ್ಞಾಂ... ಅಂತೂ ನಮ್ಮದು ವಿಚಿತ್ರ'

"ವಿಚಿತ್ರ ಅಲ್ಲವೇ... ನಮ್ಮ ಸಂವಿಧಾನದಲ್ಲಿ ಎಲ್ಲೂ ಪಕ್ಷೀಯ ಪದ್ಧತಿಯ ಆಡಳಿತೆಯ ಉಲ್ಲೇಖವಿಲ್ಲ, ಬಹುಮತ ಪಡೆದ ನಾಯಕನು ಸರಕಾರದ ನೇತಾರ..."

"ಹ್ಞಾಂ.... ಅದು ಹೌದು..."

"ನೋಡು, ಒಂದು ಮಾತು ನೆನಪಿಗೆ ಬರುತ್ತೆ...."

'ಏನದು?'

"ಒಂದೆಡೆಯಲ್ಲಿಯೆ [illegible] ಅದೆ ಕುಯೂರ ಮೃಗ ವ್ಯಾಘ್ರ | ಜಗವತಿಪೋಷಣಗೆಯ್ವುದು ಗ್ರೀಷ್ಮದ ಉರಿಬಿಂತಾಪ||"

"ಅಂದರೇನು?"

"ಅಂದ್ರೆ, ಬಿಸಿಬೇಗೆಯಿಂದ ಹುಲಿ[...] ನವಿಲು-ಸರ್ಪ, ಜಿಂಕೆ-ಹುಲಿಯೆಲ್ಲವು ಒಂದೆಡೆ ಆರಾಮವಾಗಿವೆ ಬಿಸಿಲಿನ ಪ್ರಭಾವದಿಂದ ಈ ಲೋಕವು ತಪೋವನವಾಗಿಬಿಟ್ಟಿದೇಂತ...."

"ಕಾಂಗ್ರೆಸ್ಸು ವಿರೋಧವೆಂಬ ಬಿಸಿಲು ಬಂಗಾಳ-ಕೇರಳಗಳಲ್ಲಿ ಹಾಗೆಯೇ ಮಾಡಿದೇನ್ರಿ....ಆದರೂ ಈ ಬಿಸಿಲೇನು ಶಾಶ್ವತವೆ?"

"ಮುಂದಿನ ಮೂರು ವರ್ಷಗಳಲ್ಲಿ ವರ್ಷಕಾಲವಾರಂಭವಾಗದೆ ಹೋದ್ರೆ, ಒಂದು ಬಗೆಯ ಬರಗಾಲ ಗ್ಯಾರಂಟಿ."

"ಹ್ಞಂ...ನಾವಂತೂ ಆಶಾವಾದಿಗಳು....ಆದ್ದರಿಂದ ಪರಿಸ್ಥಿತಿ ಸುಧಾರಿಸೀತೂಂತ ಹಾರೈಸಿ..."

'ಮುಂದಿನ ಕಾರ್ಯಕ್ರಮಕ್ಕೆ ಹೊರಳುವ'

"ಓಹೋ, ಅದಕ್ಕೇನಡ್ಡಿ?"

—ಗೇರಾ.

ಭಾವ - ಜೀವ

ಭಾವ ಜೀವ ಕೊಗ್ಗ ತಂದು
ಚೆಂದ ಛಂದ ಬಂದಿದೆ
ಛಂದ ಶಕ್ತಿ ಕಾವ್ಯರೆಂದು
ಹೊಂದಿಕೊಂಡು ನಿಂತಿದೆ
    ಸಾವು ನೋವು ದಾಡೆಯಲ್ಲಿ
    ಜೀವ ತಂತಿ ಮಿಡಿತವು
    ಕಣ್ಣ ಪಾಪೆಯ ಬುಗ್ಗೆಯಂತೆ
    ಚಿಮ್ಮು ಭಾವ ಸ್ಫುರಣವು
ಗಾಢ ನೋಡಿ ಕಾವ್ಯ ಸಲಿಲ
ಸ್ಫುರಿಸಿ ಹೊಮ್ಮು ಮೋದವು
ಎದೆಯ ತುಂಬಿ ಹೊಕ್ಕು ಹರಿಯೆ
ಸರಳ ಆಹ್ಲಾದವು
    ಗಾನರಾಜ್ಯಕರಣನಂತೆ
    ಮಾತು ಕೊನರ ಕುಣಿವುದು
    ಕುಣಿದು ರಾಗ ವೇಣಿ ವೀಣೆ
    ಯಾಗಿ ಜೀವ ಕಡೆವುದು

ಎಂ. ವಿ. ಶರ್ಮಾ, ತದ್ದಲಸೆ

ಕಾರ್ಕಳ ಮುನ್ಸಿಫ ಕೋರ್ಟಿನಲ್ಲಿ

O. S. 338/19[illegible]

Dr. ಕೆ. ಸಿ. ಭಟ್ —ವಾದಿ

ವಾಸುದೇವ ಯಾನೆ ಸುಬ್ಬಂಣ ಭಟ್ಟ ಸಾಗ[illegible]

—ಪ್ರತಿವಾದಿ

1ನೇ ಪ್ರತಿವಾದಿ ವಾಸುದೇವ ಸುಬ್ಬ[illegible] ಭಟ್ಟ, ಹಾಲಿ Shivaji Darbar Hote[l] Jawhar, Thana District ಎಂಬಲ್ಲಿ ವಾಸ—

ಸದ್ರಿ 1ನೆ ಪ್ರತಿವಾದಿ ಆದ ನಿಮಗೆ [illegible] ಮೂಲಕ ತಿಳಿಸುವದೇನಂದ್ರೆ—

ದಾಮೋದರ ಭಟ್ಟ ಎಂಬವರು 1ನೆ [illegible] ಪೂರ್ವಾಧಿಕಾರಿ ಉಪೇಂದ್ರ ಭಟ್ರಿಗೆ ತಾ 28-8-1879ರಲ್ಲಿ ರಿಜಿಸ್ಟ್ರಿ [illegible] ಕೊಟ್ಟ ವ್ಯವಸ್ಥಾಪತ್ರದ ವಿಧಿ ಪ್ರಕಾರ ವಾದಿ [illegible] ನಿಂಮಿಂದ ವರುಷ 10 ಬಂತಕ್ಕ [illegible] ಮೋಲ್ಕಿಯ ಬೆಳ್ಗೆಗೆ ಅಕ್ಕಿ ಮುಡಿ 2[illegible] ಕಾರ ಆಳದಪರಿಭವ [illegible] ರಿಗಿನ 6 ವರುಷಗಳ ಸಲುವಳಿಕೆ ಬದ್ದಿ ಕೂಡಿ ರೂಪಾಯಿ 468.78ಕ್ಕೆ ವಾದಿಯು ನಂಬ್ರ [illegible] ದ ಸದ್ರಿ ದಾವೆಯು ತಾ. 11-3-19[illegible] ನಿಮಗೆ ಅಕ್ಕಿಂ ನೋಟೀಸಿನ ಬಗ್ಗೆ ಇಟ್ಟ [illegible] ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 [illegible] ಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉಜ್ರೆಹಾರೆ ಕೊಡತಕ್ಕದ್ದು. ತಪ್ಪಿದಲ್ಲಿ ಗೈರುಹಾಜ್ರಿಯಲ್ಲಿ ದಾವೆ ತೀರ್ಮಾನವಾಗುವುದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. S. Kamat[h]
Advocate for Plai[ntiff]

Karkala, 27-2-69.

ರಜತಮಹೋತ್ಸವದ ಉತ್ಸಾಹಭರಿತ

ನವಜೀವನ ಹೈಸ್ಕೂಲು

ಬರೆದವರು: ಶ್ರೀ ಎಚ್. ಎಂ. ನಾರಾಯಣ ಭಟ್.

ಪ್ರಶಾಂತ ವಾತಾವರಣ, ವಿಶಾಲ ಕ್ರೀಡಾಂಗಣ, ನಿಸರ್ಗ ರಮಣೀಯ ಪ್ರದೇಶದಲ್ಲೂ ಇದ್ದು ನಾಡಿನ ಜನತೆಯ ಪ್ರಾಚೀನ ಸಾಂಸ್ಕೃತಿಕ ಪರಂಪರೆ, ಕ್ರಿಯಾಶೀಲತೆ, ಸಂಪತ್ತು ಮತ್ತು ಕೀರ್ತಿ ಧ್ವಜವನ್ನು ಎತ್ತಿ ಹಿಡಿದು ಕಾಲದಿಂದ ಕಾಲಕ್ಕಾಗಿ ಬಂದ ಎಡರು ತೊಡರುಗಳನ್ನು ಎದುರಿಸಿದೆ ತಾನು ಸಲ್ಲಿಸಿದ ಹಾರ್ದಿಕ— ಶೈಕ್ಷಣಿಕ ಸೇವೆಯ ಬಗ್ಗೆ ಸಾಫಲ್ಯದ ಕೃತಾರ್ಥತೆಯನ್ನು ಪ್ರದರ್ಶಿಸುತ್ತಾ ಹಿತೈಷಿಗಳನ್ನೂ ವಿದ್ಯಾಭಿಮಾನಿಗಳನ್ನೂ ರಜತಮಹೋತ್ಸವ ಆಚರಣೆಯ ಸಂಭ್ರಮ ಸಮಾರಂಭಕ್ಕೆ ಪೆರಡಾಲ ನವಜೀವನ ಹೈಸ್ಕೂಲು ಸ್ವಾಗತಿಸುತ್ತಿದೆ.

ಒಂದು ಸಂಸ್ಥೆಯ ಜೀವಮಾನದಲ್ಲಿ ೨೫ ವರ್ಷಗಳು ಪ್ರಧಾನವಲ್ಲ. ಅದಕ್ಕಿಂತ ಅದು ಸಾಧಿಸಿದ ಪ್ರಗತಿ ಪ್ರಧಾನವಾದದ್ದು. ನವಜೀವನ ಹೈಸ್ಕೂಲು ಹೆಮ್ಮೆಪಡುವಂತೆ ಬೆಳೆದು ನಿಂತಿದೆ. ವಿದ್ಯಾಸಕ್ತ ಯುವ ಜನಾಂಗದ ಭವ್ಯ ಭವಿಷ್ಯ ಸಾಧನೆಗೆ— ಸಂಸ್ಥೆಯು ಹೆಸರ ಹಿಂದಿನ ಸ್ಫೂರ್ತಿಗೂ ಸೃಷ್ಟಿ ಉನ್ನತ ವ್ಯಾಸಂಗ ಸೌಕರ್ಯ ಕಲ್ಪಿಸುವ ಮುಂದಿನ ಹೆಜ್ಜೆಗಳ ಬಗ್ಗೆ ಸಂಕಲ್ಪವನ್ನು ಕೈಗೊಳ್ಳಬಹುದಾಗಿದೆ.

ಬೆಳೆಯುತ್ತಿರುವ ಕೇಂದ್ರ

ಕೃಷಿ ಪ್ರಧಾನವಾಗಿ ಸಹಕಾರ, ವ್ಯಾಪಾರ ವಾಣಿಜ್ಯ, ವ್ಯವಹಾರ ಮತ್ತಿತರ ಕ್ಷೇತ್ರಗಳಲ್ಲೂ ಹಿಂದುಳಿಯದೆ ಬೆಳೆಯುತ್ತಿರುವ ಬದಿಯಡ್ಕವು ಪೆರಡಾಲ ಗ್ರಾಮದ ಒಂದು ಭಾಗ ಮಾತ್ರ.

ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧಿಸಿದ ಬೆಳವಣಿಗೆ ಎತ್ತು ಭೌಗೋಳಿಕ ಪರಿಸ್ಥಿತಿಗಳಿಂದಾಗಿ ಇಲ್ಲಿ ಸರಕಾರದ ವಿವಿಧ ಇಲಾಖೆಗಳ ಕಾರ್ಯಾಲಯಗಳಿವೆ.

ಪೆರಡಾಲ ಮತ್ತು ಬೇಳ ಗ್ರಾಮಗಳ ಲ್ಲಿ ಆಸ್ಪತ್ರೆ ವ್ಯಾಪ್ತಿವುಳ್ಳದ್ದು ಬದಿಯಡ್ಕ ಪಂಚಾಯತ್.

ಬದಿಯಡ್ಕವು ಕಾಸರಗೋಡು ತಾಲೂಕಿನ ಗ್ರಾಮಾಂತರ ಪ್ರದೇಶದ ಒಂದು ಪ್ರಧಾನ ಕೇಂದ್ರ. ಇಲ್ಲಿಗೆ ಎಲ್ಲಾ ದಿಕ್ಕಿನಿಂದಲೂ ರಸ್ತೆ ಮತ್ತು ವಾಹನ ಸೌಕರ್ಯಗಳಿವೆ.

ನವಜೀವನ ಹೈಸ್ಕೂಲು

ಈ ಕೇಂದ್ರದ ಅಭಿವೃದ್ಧಿಗೆ ಹಲವು ಬಗೆಗಳಲ್ಲೂ ಕಾರಣ ನವಜೀವನ ಹೈಸ್ಕೂಲು. ಪ್ರೌಢ ಶಿಕ್ಷಣ ಸೌಕರ್ಯಗಳು ಕೇವಲ ಪರಿಮಿತವಾಗಿದ್ದ ದ್ವಿತೀಯ ಜಾಗತಿಕ ಮಹಾಯುದ್ಧ ಕಾಲದಲ್ಲಿ ಈ ಪ್ರದೇಶದ ಮಕ್ಕಳಿಗೆ ವಿದ್ಯಾ ಸೌಕರ್ಯ ಕಲ್ಪಿಸುವ ಕುರಿತು ತಾ. 24-9-1943 ರಂದು ಗ್ರಾಮಸ್ಥರು ಸಭೆ ಸೇರಿ, ಬದಿಯಡ್ಕದಲ್ಲಿ ಒಂದು ಹೈಸ್ಕೂಲು ಸ್ಥಾಪಿಸುವ ನಿರ್ಧಾರ ಕೈಗೊಂಡರು. ಹಾಗೆ ವಿದ್ಯಾಭಿಮಾನಿಗಳ ಉತ್ಸಾಹ-ಪ್ರೋತ್ಸಾಹ-ಸಹಾಯ-ಸಹಕಾರ-ಸಂಪ್ರ

ಸಂಯುತ . . . . .

ಹ-ಪಂತ್ರಮಗಳ ಪರಿಣಾಮವಾಗಿ ತಾ. 10-5-44ರಂದು ರೂಪಿಸಲ್ಪಟ್ಟ ವಿದ್ಯಾಸಂಘದ ಮೂಲಕ ತಾ 1-6-1944 ರಂದು ನವಜೀವನ ಹೈಸ್ಕೂಲು ಪ್ರಾರಂಭವಾಯಿತು.

ಆ ಕಾಲದಲ್ಲಿ ಈ ಪ್ರದೇಶದ ವಿದ್ಯಾರ್ಥಿಗಳು ಕಾಸರಗೋಡು, ನೀಲೇಶ್ವರ ಅಥವಾ ಮಂಗಳೂರಿಗೆ ಹೋಗದೆ ಹೈಸ್ಕೂಲು ಶಿಕ್ಷಣ ಸಾಧ್ಯವಿರಲಿಲ್ಲ. ವಿದ್ಯಾರ್ಥಿಗೆ ಅಂದಿದ್ದ ಅನಾನುಕೂಲ ಹಾಗೂ ವೆಚ್ಚಗಳ ಬಗ್ಗೆ ವಿವರಿಸುವುದಕ್ಕಿಂತಲೂ ಊಹಿಸುವುದೇ ಸುಲಭ. ಕೇವಲ 9 ಮಂದಿ ಅಧ್ಯಾಪಕರಿದ್ದ ಪ್ರಾರಂಭದ ದಿನಗಳಲ್ಲಿ ಇಂದಿನ ಟಿ.ಡಾ.ದಿ ಹಿರಿಯ ಶಾಲೆಯಲ್ಲಿಯೇ ಹೈಸ್ಕೂಲು ತರಗತಿಗಳಿದ್ದವು.

ಯುವ ಸಹಸ್ರರಲ್ಲಿ ನವಚೇತನ ತುಂಬಿ ನವಜೀವನ ಸಾಧಿಸಲು ಸಹಾಯಕವಾದ ಈ ಹೈಸ್ಕೂಲು ಮತ್ತೆ ಈಗಿನ ಭವ್ಯ ಕಟ್ಟಡವನ್ನು ಸುಮಾರು ಒಂದು ಲಕ್ಷ ವೆಚ್ಚದಲ್ಲಿ— ಊರ, ಪರಊರ ಸಹೃದಯ ವಿದ್ಯಾಭಿಮಾನಿಗಳ ಸಹಾಯ ಸಹಕಾರಗಳಿಂದಾಗಿ ಒಳಗಿಸಿತು.

ಕಟ್ಟಡ ನಿರ್ಮಾಣ ಕಾರ್ಯದಲ್ಲಿ ನೆರವಾದವರ ಪೈಕಿ ಪಂಜಿರ್ಕೆ ಅನಂತಭಟ್ಟರೂ ಮಿಂಚಿನಡ್ಕ ಮಹಾಬಲೇಶ್ವರ ಭಟ್ಟರೂ ಸ್ವರ್ಗಸ್ಥರಾಗಿರುವರು. ಅವರಿಗೂ, ಅಧ್ಯಾಪಕ ವರ್ಗದಲ್ಲಿದ್ದು ನಮ್ಮನ್ನಗಲಿದ ಕೆ. ರಾಮಕೃಷ್ಣ ಭಟ್, ವೈ. ವಿ. ಸುಬ್ರಾಯ ಭಟ್, ಕೆ. ಕೃಷ್ಣರಾವ್ ಮತ್ತು ಎಸ್. ಶಂಭಟ್ಟರಿಗೂ ಈ ಸಂದರ್ಭದಲ್ಲಿ ಶ್ರದ್ಧಾಂಜಲಿಗಳು।

ಆಡಳಿತ ಸಮಿತಿ

ಪೆರಡಾಲ ಎಡ್ಯುಕೇಶನ್ ಸೊಸೈಟಿಯ ಅಧ್ಯಕ್ಷರಾಗಿ ವ್ಯಾಪಾರಿಯ ಶ್ರೀ ಎಂ.ವಿ. ರಾಮವರ್ಮ ರಾಜರು ಸುಮಾರು ಎಳು ವರ್ಷ ಸೇವೆ ಸಲ್ಲಿಸಿದವರು.

ತ್ರೀಗಳಾದ ಎಡ್ವೊಕೇಟ್ ಕೆ. ಶಂಕರ ರಾವ್ ಈಗಿನ ಅಧ್ಯಕ್ಷರು. ಡಾ। ಕೆ ಸಿ. ಆಳ್ವ (ಉಪಾಧ್ಯಕ್ಷ); ಡಾ। ಪಿ. ಎಸ್. ಶಾಸ್ತ್ರಿ (ಕಾರ್ಯದರ್ಶಿ) ಮತ್ತು ಪಟ್ಟಾಜೆ ಕೃಷ್ಣಭಟ್ (ಕೋಶಾಧಿಕಾರಿ) ಆಗಿರುವರು.

ಜನಪ್ರಿಯರೂ ಸಮಾಜ ಸೇವಕರೂ ಆದ ಡಾ। ಶಾಸ್ತ್ರಿಯವರ ಸಂಘಟನಾ ಸಾಮರ್ಥ್ಯ ಮತ್ತು ಅವಿಶ್ರಾಂತ ಪರಿಶ್ರಮಗಳು ಸ್ಥಾಪಕವ್ಯವಸ್ಥಾಪಕರೆಂಬ ನೆಲೆಯ ದುಡಿಮೆಯೂ ಅಸಾಧಾರಣವೆನ್ನಬೇಕು.

ಹೈಸ್ಕೂಲು ಸ್ಥಾಪನಾ ಕಾರ್ಯದಲ್ಲಿ ನೆರವಾದ ಕೆಲವು ವರ್ಷಗಳ ಕಾಲ ಸಂಘದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶೀ ಈಳಂತೋಡಿ ಕೃಷ್ಣಭಟ್ಟರನ್ನು ಮರೆಯುವಂತಿಲ್ಲ.

ಸ್ವಾಗತ ಸಮಿತಿ

ರಜತೋತ್ಸವ ಸ್ವಾಗತ ಸಮಿತಿಯಲ್ಲಿ ಸರ್ವಶ್ರೀ ಡಾ। ಪಿ. ಎಸ್. ಶಾಸ್ತ್ರಿ (ಅಧ್ಯಕ್ಷ); ಕಳ್ಳಿಗೆ ಮಹಾಬಲ ಭಂಡಾರಿ, ಎಂ. ಎಲ್. ಎ., ವೈ. ಪಿ ಕುಡಕುಳ್ಳಾಯ, ಎಂ. ಎಲ್. ಎ, ಮದ್ರಾಸು ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಖಂಡಿಗೆ ಶಾಮ ಭಟ್ (ಉಪಾಧ್ಯಕ್ಷರು); ಮುಖ್ಯೋಪಾಧ್ಯಾಯ ಪಟ್ಟಾಜೆ ಸುಬ್ರಾಯ ಭಟ್ (ಕಾರ್ಯದರ್ಶಿ); ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಸ್. ವಿ. ಎಲ್. ಎನ್. ಶರ್ಮ ಮತ್ತು ಇತರರಿದ್ದಾರೆ.

ಪ್ರಖ್ಯಾತ ಕನ್ನಡ ಕವಿ ಕಯ್ಯಾರ ಕಿಞ್ಞಣ್ಣ ರೈಗಳವರು ಇಲ್ಲಿ ಕಳೆದ 25 ವರ್ಷಗಳಿಂದಲೂ ಕನ್ನಡ ಅಧ್ಯಾಪಕರು. ಬದಿಯಡ್ಕ ಪಂಚಾಯತ್ ಅಧ್ಯಕ್ಷ ಮತ್ತು ಮಂಜೇಶ್ವರ ಬ್ಲೋಕು ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆಗಿರುವ ಶ್ರೀ ಕಯ್ಯಾರರು ನವಜೀವನ ಹೈಸ್ಕೂಲಿನ—ಪೆರಡಾಲದ ಕೀರ್ತಿಧ್ವಜವನ್ನು ಬಹಳಷ್ಟು ಎತ್ತಿ ಹಿಡಿದಿದ್ದಾರೆ.

ಈಗ ಹೈಸ್ಕೂಲಿನಲ್ಲಿ 22 ಮಂದಿ ಅಧ್ಯಾಪಕರ ಸಹಿತ ಸಿಬ್ಬಂದಿಯ ಸಂಖ್ಯೆ 26ರಷ್ಟು ಇರುವದು. ಒಟ್ಟು 416 ಮಂದಿ (288 + 128) ವಿದ್ಯಾರ್ಥಿಯರಿದ್ದಾರೆ.

ಪುಸ್ತಕ ಭಂಡಾರವೂ ಪ್ರಯೋಗ ಶಾಲೆಯೂ ಸುಸಜ್ಜಿತವಾಗಿವೆ.

ಶಿಕ್ಷಣ ಸೇವೆಯ ರಜತೋತ್ಸವವೂ!

ಶಿಸ್ತು ಪರಿಪಾಲನೆಗೆ ಹೆಸರಾಂತ ಮತ್ತು ಪ್ರಗತಿಯ ಪ್ರತೀಕವಾದ ನವಜೀವನ ಹೈಸ್ಕೂಲಿನ ರಜತೋತ್ಸವದೊಂದಿಗೆ ಇಲ್ಲಿ ಪ್ರಾರಂಭದಿಂದಲೂ ಉತ್ಸಾಹದಿಂದ ಅಧ್ಯಾಪಕರಾಗಿ ದುಡಿಯುತ್ತಿರುವ ಸರ್ವಶ್ರೀ ಪಟ್ಟಾಜೆ ಸುಬ್ರಾಯ ಭಟ್ (ಮುಖ್ಯೋಪಾಧ್ಯಾಯ); ಕಯ್ಯಾರ ಕಿಞ್ಞಣ್ಣ ರೈ, ಚಿತ್ರ ಕಲಾವಿದ ಕೆ. ಶಾಮ ಭಟ್ ಮತ್ತು ವ್ಯಾಯಾಮ ಶಿಕ್ಷಕ ಪಿ. ಲಕ್ಷ್ಮೀನಾರಾಯಣ ರಾವ್ ಇವರ ಶಿಕ್ಷಣ ಸೇವೆಯ ರಜತೋತ್ಸವವೂ ಒಳಗೊಂಡಿದೆ.

ಅಧ್ಯಾಪಕ ವೃಂದದ ಅಮೂಲ್ಯ ಪರಿಶ್ರಮಗಳು ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳ ಮೇಲೆ ಉತ್ತಮ ಪ್ರಭಾವ ಬೀರಿವೆ.

ಹಳೆ ವಿದ್ಯಾರ್ಥಿಗಳು

ನವಜೀವನ ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳು ರಾಷ್ಟ್ರದ ವಿವಿಧ ಭಾಗಗಳಲ್ಲಿ ಪ್ರತಿಭಾಶಾಲಿಗಳಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವಾನಿಷ್ಠರಾಗಿದ್ದಾರೆ.

ಮುಂಬಯಿ ಮತ್ತು ಬೆಂಗಳೂರು ಮುಂತಾದೆಡೆಗಳಲ್ಲಿನ ಈ ಶಾಲೆಯ ಹಳೆ ವಿದ್ಯಾರ್ಥಿಗಳು ರಜತೋತ್ಸವ ನಿಧಿ ಸಂಗ್ರಹ ಕಾರ್ಯದಲ್ಲಿ ನೆರವಾದುದು ಸ್ತುತ್ಯಾರ್ಹ.

ವಿದ್ಯಾಧಿಕಾರಿಗಳೂ, ಗಣ್ಯ ಸಂದರ್ಶಕರೂ ಹೈಸ್ಕೂಲಿನ ಸರ್ವತೋಮುಖ ಪ್ರಗತಿಯನ್ನು ಶ್ಲಾಘಿಸಿ ಶುಭಾಶಂಸನೆ ನೀಡಿದ್ದಾರೆ.

ಪ್ರಧಾನ ಕಾರ್ಯಕ್ರಮಗಳು

ಮಾರ್ಚಿ ಒಂದರಂದು ಉದ್ಘಾಟನಾ ಸಮಾರಂಭ. ಮೂರು ದಿನಗಳ ಉತ್ಸವಾಚರಣೆಯ ವೇಳೆ ಸಂಸ್ಮರಣ ಸಂಚಿಕೆಯ ಉದ್ಘಾಟನೆ, ಶೈಕ್ಷಣಿಕ ಪ್ರದರ್ಶನ, ವಿಚಾರಗೋಷ್ಠಿ, ಧಾರ್ಮಿಕ ಸಮ್ಮೇಳನ, ಕವಿ ಸಮ್ಮೇಳನ, ಸಂಗೀತ ಕಚೇರಿ, ಲಘು ಸಂಗೀತ, ವಿವಿಧ ಮನರಂಜನಾ ಕಾರ್ಯಕ್ರಮಗಳೂ ಅಳವಡಿಸಲ್ಪಟ್ಟಿವೆ.

ರಜತೋತ್ಸವ ಕ್ರೀಡೋತ್ಸವವನ್ನೂ ಜರಗಿಸಲಾಗಿದ್ದು ವಿಜಯಿಗಳಿಗೆ ಬಹುಮಾನ ವಿತರಣಾ ಕಾರ್ಯಕ್ರಮವೂ ಇದೆ.

ವಿವಿಧ ಕ್ಷೇತ್ರಗಳಲ್ಲಿ ಹೆಸರಾಂತ ವ್ಯಕ್ತಿಗಳು ಸಮಾರಂಭಗಳಲ್ಲಿ ಭಾಗವಹಿಸಲಿದ್ದಾರೆ.

ಜೈಹಿಂದ್!

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೋಟೆಲ್ ಸತ್ಕಾರ್

ಕಾರ್ಪೋರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR
Boarding & Lodging
Near Corporation Office, 9, Mission Road
Bangalore—27

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0-75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಪಾಲುಕೋಟಿ, ಉಡುಪಿ, ದ. ಕ.

ಇದು

ಜವಾಬ್ದಾರಿಯ ಜತನ-ನೇತಾಗಳ ನಡತೆ

೧

ಬರೆದವರು: ಶ್ರೀ ಶಿವಶಂಕರ.

ಇತ್ತೀಚೆಗೆ ಬೀಸಿದ ಚುನಾವಣಾ ಚಂಡಮಾರುತವು ಬೋಳೇ ಸ್ವಭಾವದ ರೈತರ ಹೋರಿಗಳನ್ನು ಎಷ್ಟೋ ಹಾರಿಸಿಬಿಟ್ಟಿದೆ, ಭಾರತೀಯರ ಆಸೆಯ ದೀಪ ಜ್ಯೋತಿಯನ್ನು ಮಿಣಿ ಮಿಣಿಗೊಳಿಸಿರುತ್ತದೆ, ಧರಾಶಾಯಿಯಾಗಲು ಗಳಿಗೆ ನೋಡುತ್ತಿರುವ ಮನೆಯ ಮಾಡನ್ನು ಹಾರಿಸಿಬಿಟ್ಟಿದೆ, ಒಣಗಿ ಬೀಳಲು ಸಿದ್ಧವಾಗಿರುವ ಮರದಲ್ಲಿ ಉಳಿದಿದ್ದ ಗೆಲ್ಲುಗಳನ್ನು ಮುರಿದು ಹಾಕಿಬಿಟ್ಟು, ಒಂದಷ್ಟು ಕೆಂಧೂಳಿಯನ್ನೆಬ್ಬಿಸಿರುತ್ತದೆ. ಪ್ರಚಂಡ ಪರಿಸ್ಥಿತಿಯ ಮಾರುತ ಬೀಸುತ್ತಿರುವಾಗ ನೇತಾಗಳ ನಡತೆಯನ್ನು ಜನಸಾಮಾನ್ಯರು ನೆಟ್ಟನೋಟದಿಂದ ನೋಡುತ್ತಿರುತ್ತಾರೆ. ಆ ನೇತಾಗಳು ತಮ್ಮ ಜವಾಬ್ದಾರಿಯನ್ನು ಜತನದಿಂದ ಕಾಪಾಡಿಕೊಂಡರೆಂದರೆ ಜನಸಾಮಾನ್ಯರ ಮೇಲೆ ಪರಿಸ್ಥಿತಿಯ ಪರಿಣಾಮ ಘೋರವಾಗುವುದಿಲ್ಲ. ಅದರ ಬದಲು ಅಧಿಕಾರದ ಅಂತಸ್ತಿನಲ್ಲಿ ಆಸೀನರಾಗಿರುವವರು ಅಳಿಸಲಾರಂಭಿಸಿದಲ್ಲಿ ಜನತೆ ಬಿಕ್ಕಳಿಸಲಾರಂಭಿಸುವುದರಲ್ಲೇನೂ ಆಶ್ಚರ್ಯವಿಲ್ಲ. ಈ ಸಲ ನಡೆದದ್ದಾದರೂ ಏನು?

ಸರಕಾರದ ಬೊಕ್ಕಸದಿಂದ ಅಂದರೆ ಜನತೆಯ ಜೇಬಿನಿಂದ ಹಣ ಪಡೆಯುತ್ತಿರುವವರು ಯಾವುದಾದರೊಂದು ವಿಶಿಷ್ಟ ಅಥವಾ ನಿರ್ದಿಷ್ಟ ಪಕ್ಷದ ಪ್ರಚಾರಕ್ಕೆ ಹೋಗಬಾರದು. ಅವರು ಚುನಾವಣೆ ಸ್ಪರ್ಧೆಯಲ್ಲಿ ನಿಷ್ಪಕ್ಷಪಾತ ಸ್ಥಾನದಲ್ಲಿರಬೇಕು. ಯಾಕೆಂದರೆ ಅವರಿಗೆ ಧನಪ್ರಸಾದವನ್ನೀಯುವ ಸರಕಾರೀ ಖಜಾನೆ ಅವರ ಪಕ್ಷಕ್ಕೆ ಸೇರಿದ್ದಾಗಿರುವಂತಹದ್ದಲ್ಲ. ಅದು ಜನತಾ ಜನಾರ್ದನನಿಗೆ ಸೇರಿದ್ದು. ಆದುದರಿಂದ ಆ ಜನತಾ ಜನಾರ್ದನನ ದೃಷ್ಟಿಯಿಂದ ಮೇಲೆ ಎರಡು ಬಗೆಯುವುದು ನ್ಯಾಯವೇನು? ಇದನ್ನು ಅರಿತುಕೊಳ್ಳದಿರುವವರು ಜವಾಬ್ದಾರಿಯನ್ನು [illegible] ಅರಿತುಕೊಳ್ಳದಿರುವವರು ಜವಾಬ್ದಾರಿಯುತವಾಗಿ ನಡೆಯುವುದರಲ್ಲಿ ಅರ್ಥವಿಲ್ಲ. ಇವರಲ್ಲಿ ಹಲವಾದಿಗಳೂ ಇದ್ದಾರೆ. ಅವರು ಜನತಾ ರಾಮ [illegible] ತಮ್ಮ ಪಕ್ಷದ [illegible] ಕರ್ತವ್ಯಗಳಿಗಾಗಿ [illegible] ಫಲದಂ ಕರಾಗಿರುತ್ತಾರೆ. ಅವರಿಗೆ ಜನತಾ ಜನಾರ್ದನನ, ದುರ್ಯೋಧನನ ಸ್ಥಾನವನ್ನೇ ಕೊಡುತ್ತಾನೆ. ಇನ್ನು ಕೆಲವರು ತಾವೊಂದು ಪಕ್ಷದ ಪ್ರಭಾವದಿಂದಾಗಿ ಸರಕಾರೀ ಪ್ರಸಾದವನ್ನು ಸ್ವೀಕರಿಸುತ್ತಿರುವ ಕಾರಣ ಪಕ್ಷಕ್ಕೇ ಪ್ರಮುಖ ಸ್ಥಾನವನ್ನೀಯುವುದುಂಟು. ಇಂತಹವರು ಅಧಿಕಾರದ ಆಸನದಲ್ಲಿ ಕುಳಿತುಕೊಂಡಿರುವುದಿಲ್ಲ. ಅಧಿಕಾರದ ಲಗಾಮನ್ನು ಹಿಡಿದುಕೊಂಡಿರುವ ಪಕ್ಷಕ್ಕೆ ಸೇರಿದವರಿರುವುದು. ಇಂತಹ ಆದ್ಯಾವ ಕುಂಟು ನೆವ ಹೇಳಿದರೂ ಸಚಿವ ಸ್ಥಾನದಲ್ಲಿರುವವರು, ಸಭೆಗಳ ಅಧ್ಯಕ್ಷ ಸ್ಥಾನದಲ್ಲಿ ಆಸೀನರಾಗಿರುವವರು, ರಾಷ್ಟ್ರಾಧ್ಯಕ್ಷರ ಸಿಂಹಾಸನದಲ್ಲಿ ರಾರಾಜಿಸುವವರಂತೂ ಖಂಡಿತವಾಗಿ ಪ್ರಚಾರ ಕಣಕ್ಕಿಳಿಯುವುದೆಂದರೆ ಜನತೆಯಿಂದ ಹಣವನ್ನು ಗಿಟ್ಟಿಸಿಕೊಂಡು ಅವರಿಂದ ದ್ರೋಹ ಬಗೆದಂತೆಯೇ ಸರಿ. ಅವರಿಗೆ ಪಕ್ಷವೇ ಪ್ರಮುಖವಾದಲ್ಲಿ, ಮತಗಳೇ ಮುಖ್ಯವಾದಲ್ಲಿ ಜನತೆಯ ಹೃದಯ ಸಿಂಹಾಸನದಿಂದ ಕೆಳಗಿಳಿದು ಅವರ ಕಾಲೊತ್ತುವ ಅಥವಾ ಕಾಲೆಳೆಯುವ ಕಾರುಬಾರಿನಲ್ಲಿ ಭಾಗವಹಿಸುವುದು ಸರಿಯೆನ್ನುವುದು ಶ್ರೀಸಾಮಾನ್ಯನ ನಿಷ್ಪಾಕ್ಷಿಕ ಅಭಿಪ್ರಾಯ. ಆದರೆ ಇಂದು ಹಾಗೆ ನಡೆಯುತ್ತಿದೆ ಏನು? ಪ್ರಧಾನಿಯವರಿಂದ ಹಿಡಿದು ಪಂಚಾಯತರ ವರೆಗೆ ಚುನಾವಣಾ ಚಂಡಮಾರುತಕ್ಕೆ ಬಲಿಯಾಗದಿರುವವರು ಬಹಳ ವಿರಳ.

ಈ ಸಲದ ಚುನಾವಣೆಯಲ್ಲಿ ನಮ್ಮ ಪ್ರಧಾನಿಯವರು ವಹಿಸಿದ ಪಾತ್ರ ಬಹಳ ಪ್ರಾಮುಖ್ಯವಾದುದು. ಅವರು ತನ್ನ ವೈಯಕ್ತಿಕ ಸಂಬಂಧವನ್ನು ಮರೆತುಬಿಟ್ಟು ಕಳಚಿಕೊಂಡುಬಿಟ್ಟರು. ಕಾಂಗ್ರೆಸಿನ ಲಾಂಛನ ಜೋಡೆತ್ತಿನಲ್ಲಿ, ಒಂದು ಹೋರಿ ಅದರ ಅಧ್ಯಕ್ಷರಾದಲ್ಲಿ ಇನ್ನೊಂದು ಪ್ರಧಾನಿಯವರು. ಆ ರೀತಿ ಅವರಿಬ್ಬರೂ ಅನ್ಯೋನ್ಯವಾಗಿ ಪಕ್ಷದ ವಿಜಯವೆಂಬ ನೊಗವನ್ನು ಹೊತ್ತುಕೊಂಡು ಮುಂದರಿದರು. ಅಧಜಯದ ಅನುಭವವಾದಂತೆ ಪ್ರಧಾನಿಯವರ ಪರಾಕ್ರಮ ಅಧಿಕವಾಯಿತು. ಅವರು ಬಿರುಗಾಳಿಯ ಪ್ರವಾಸ, ಕೆಂಡವನ್ನುಗುಳುವ ಭಾಷಣ, ಹೀಗೆ ಮುಂದರಿದರು. ಕಾಂಗ್ರೆಸ್ಸೆಂದರೆ ತಾನೇ, ತಾನೆಂದರೆ ಕಾಂಗ್ರೆಸ್ಸೆಂಬ ಅದ್ವೈತಿಯಾಗಿ ಅಡಿಯಿಟ್ಟರು. ಕಾಂಗ್ರೆಸಿನ ಸೋಲು, ತನ್ನ ಸೋಲೆಂದೇ ಅವರು ತಿಳಿದುಕೊಂಡರು. ಒಂದು ರೀತಿಯಲ್ಲಿ ಅದು ನಿಜವೇ ಹೌದು. ಯಾಕೆಂದರೆ ನಾಲ್ಕು ಪ್ರಾಂತ್ಯಗಳೂ ಬಹಳ ಮುಖ್ಯ ಪ್ರಾಂತ್ಯಗಳೇ ಇವೆ. ಅಲ್ಲಿ ಕಾಂಗ್ರೆಸ್ಸೇತರ ವಿಧಾನಸಭಾ ಸದಸ್ಯರ, ಅದರಲ್ಲೂ ಒಂದು ನಿರ್ದಿಷ್ಟ ಪಕ್ಷಕ್ಕೆ ಸೇರಿದ ಸದಸ್ಯರ, ಸಂಖ್ಯೆ ಹೆಚ್ಚಾಯಿತೆಂದಲ್ಲ. ಕೆಲವೇ ತಿಂಗಳಲ್ಲಿ ನಡೆಯಲಿರುವ ರಾಜ್ಯ ಸಭಾ ಚುನಾವಣೆಯ ಮೇಲೆ ಅದು ಪ್ರಭಾವಬೀರುತ್ತದೆ. ರಾಜ್ಯಸಭೆಯಲ್ಲಿ ಕಾಂಗ್ರೆಸಿಗರ ಸಂಖ್ಯೆ ಇತರರಿಗಿಂತ ಕಮ್ಮಿಯಾದಲ್ಲಿ ಪ್ರಧಾನಿಯವರು ಪಡಬೇಕಾಗಿರುವ ಪಾಡು ಅವರಿಗೆ ಗೊತ್ತು. ಆದುದರಿಂದಲೇ ಅವರು, ಹೋದೆಡೆಗಳಲ್ಲೆಲ್ಲಾ ರಾಜಕೀಯ ಜ್ವಾಲಾಮುಖಿಯನ್ನೆಬ್ಬಿಸಿ ಬಿಟ್ಟರು. ಅದೇ ಸಮಯದಲ್ಲಿ ತಾನು ಪ್ರಧಾನಿಯೆಂಬುದನ್ನು ಮರೆತೇಬಿಟ್ಟಿರುವಂತೆ ವರ್ತಿಸಿರುವರು.

ಪಂಜಾಬ, ಉತ್ತರಪ್ರದೇಶ, ಬಂಗಾಲ, ಬಿಹಾರ ಮತ್ತು ನಾಗಾಲೇಂಡಿನಲ್ಲಿ ಚುನಾವಣೆ ನಡೆಯಿತಾದರೂ ಪ್ರಧಾನಿಯವರು ಪ್ರಚಾರಕ್ಕಲ್ಲವಾದರೂ, ಚುನಾವಣೆ ಹೇಗೆ ನಡೆಯುತ್ತದೆಂಬುದನ್ನು ನೋಡಲಿಕ್ಕೆ ಕೂಡಾ ನಾಗಾಲೇಂಡಿಗೆ ಹೋಗಿರುವುದಿಲ್ಲ. ನಾಗಾಲೇಂಡಿನಲ್ಲಿ ಕಾಂಗ್ರೆಸ್ಸೇತರರು ಸ್ಪರ್ಧಿಸುತ್ತಿರುವ ಏಕಮೇವ ಕಾರಣದಿಂದಾಗಿ ಇಂದಿರಾಜೀ ಅತ್ತ ಹೋಗದೆ ಶ್ರೀ ಸಾಮಾನ್ಯನ ಪ್ರಸಾದವನ್ನು ಮೆಲ್ಲುತ್ತ ಅವನಿಗೆದುರಾಗಿ ನಿಂತುಬಿಟ್ಟರು. ನಾಗಾಲೇಂಡಿನಲ್ಲಿ ಕಾಂಗ್ರೆಸ್ಸೇತರ ಸರಕಾರ ಇರಬಹುದಾದಲ್ಲಿ ಉಳಿದೆಡೆ ಯಾಕಿರಬಾರದು? ಅದನ್ನು ಆಲೋಚಿಸುವ ಗೋಜಿಗೆ ಶ್ರೀಮತಿ ಇಂದಿರಾಗಾಂಧೀಜಿ ಹೋಗಲಿಲ್ಲ. ಅವರದಾಗಿದ್ದ ವಿಷಯಗಳು—ನಾಗಾಲೇಂಡಿನಿಂದ ರಾಜ್ಯ ಸಭೆಗೆ ಆರಿಸಲ್ಪಡುವವರ ಸಂಖ್ಯೆ ಬಹಳ ಕಮ್ಮಿ, ಅದರಲ್ಲೂ ನಮ್ಮ ಪಕ್ಷದಂತೂ ಅಲ್ಲಿ ಸ್ಪರ್ಧಿಸುವುದಿಲ್ಲ. ಇದೆಲ್ಲದಕ್ಕಿಂತಲೂ ಮುಖ್ಯವಾಗಿ ಅಲ್ಲಿ ಭಾರತೀಯ ಜನಸಂಘಕ್ಕೂ ಶ್ರೀಮತಿ ಇಂದಿರಾಗಾಂಧೀಜಿಯವರಿಗೂ ಎಣ್ಣೆ-ಸೀಗೆ ಸ್ನೇಹ ಅದಕ್ಕೇನು ಕಾರಣವೋ? ಅದು ಆಯಾ ಪಕ್ಷದ ಒಳ—ಹೊರಗು ಗೊತ್ತಿರುವ ಪಕ್ಷದ ಪ್ರಮುಖರಿಗೆ ಮಾತ್ರಗೊತ್ತು. ಶ್ರೀ ಸಾಮಾನ್ಯನಿಗೆ ಒಳಗಿನ ಗುಟ್ಟು ಗೊತ್ತಿರುವದಿಲ್ಲ. ಅವನಿಗೆ ಕಂಡದ್ದು, ಕೇಳಿದ್ದು ಗೊತ್ತು.

ಈ ಸಲದ ಚುನಾವಣೆಯಲ್ಲಿ ಇಂದಿರಾಜೀ ಹೇಗೆ ನಡೆದುಕೊಂಡಿರುವರೆಂಬುದು ಶ್ರೀ ಸಾಮಾನ್ಯನಿಗೆ ಗೊತ್ತು. ಶ್ರೀಮತಿಜೀಯವರು ತಮ್ಮ ಲಂಡನ್‌ಗಿರಿಯನ್ನು ತೋರಿಸಿಬಿಟ್ಟರು. ಅವರು ಹೋದೆಡೆಗಳಲ್ಲೆಲ್ಲಾ ತೆಗಳಿದ್ದು, ಹೀನಾಯವಾಗಿ ಮಾತಾಡಿರುವದು ಭಾರತೀಯ ಜನಸಂಘದ ಕುರಿತು. ಅವರು ಅಲ್ಲಿ ಭಾರತೀಯ ಜನಸಂಘವನ್ನು ಸಿಕ್ಕಾಬಟ್ಟೆ ಜರೆದು ತುಚ್ಛ ಬಡಿಸಿದ್ದಾದರೂ ಏನನ್ನು? ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರತೀಯ ಜನಸಂಘ ಭಾಗವಹಿಸಲಿಲ್ಲ, ಅದು ಬ್ರಿಟಿಷರ ಬೂಟನ್ನು ತಿಕ್ಕುತ್ತಿತ್ತು. ಜನಸಂಘದ ಲಾಂಛನ ದೀಪ (ಹಣತೆ) ವು ವಿದ್ಯುತ್ ಯುಗಕ್ಕೆ ಹೊಳೆಸಿದ್ದಲ್ಲ......

೧೯೪೭ರ ವಿಭಜನಾ ಚಳುವಳಿಯಲ್ಲಿ, ಭಾರತಮಾತೆಯ ಅಂಗವಿಚ್ಛೇದನ ಪಾಪಕೃತ್ಯದಲ್ಲಿ ಭಾರತೀಯ ಜನಸಂಘ ಭಾಗವಹಿಸಿಲ್ಲವೆಂಬುದು ನೂರರಲ್ಲಿ ನೂರು ನಿಜ. ಇದು ಶ್ರೀ ರಾಜಾಜಿಯವರಿಗೆ ಸ್ಪಷ್ಟವಾಗಿ ನೆನಪಿರಬಹುದು. ಈ ಮಾತಿನ ಸತ್ಯಾಸತ್ಯತೆಗಾಗಿ ದಿವಂಗತ ಜವಾಹರಲಾಲ ಹಾಗೂ ಜಿನ್ನಾರನ್ನು ಕರೆಯುವ ಅವಶ್ಯಕತೆ ಇರುವದಿಲ್ಲ. ಇದ್ದರೂ ೧೯೪೭ರ ಕ್ರಾಂತಿವೀರರು, ಅಖಂಡ ಭಾರತದ ಬಿಡುಗಡೆ—ಸ್ವಾತಂತ್ರ್ಯ—ಸ್ವರಾಜ್ಯಕ್ಕಾಗಿ ತನು-ಮನ-ಧನ ಸಾರಸರ್ವಸ್ವವನ್ನೂ ಅಂಜದೆ, ಅಳುಕದೆ ಅರ್ಪಿಸಿರುವವರು ೧೯೪೭ ವಿಭಜನಾ ಇಂದ್ರ-ಚಂದ್ರರನ್ನು, ಆತಂಕ-ವಾದರನ್ನು ಕಂಡಾಗ ಅದೇನು ಹೇಳಿಯಾರು? ಇಂದಿರಾಜೀ ಇಷ್ಟಾದರೂ ಯೋಚಿಸುವರೇ? ಇಂದಿರಾಜಿಗಿಂತಲೂ ಉತ್ತಮರೀತಿಯಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರ್‍ಯಾರೂ ಇಂದು ಇಲ್ಲವೇನು?

ಬ್ರಿಟಿಷರಿಂದ ಕಾಲ್ತೆಗೆದ ಮೇಲೆ ಭಾರತೀಯ ಜನಸಂಘ ಕಂಡುಬಂದದ್ದು. ಲೋಕಮಾನ್ಯ ಬಾಲಗಂಗಾಧರ ತಿಲಕರು "ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ"ನೆಂದು ಗರ್ಜಿಸಿದ ನಂತರ ತಾನೇ ಇಂಡಿಯನ್ ನೇಶನಲ್ ಕಾಂಗ್ರೆಸ್ಸ್ ಸ್ವಾತಂತ್ರ್ಯದ ಕುರಿತು ಸ್ವರ ತೆಗೆಯಲಾರಂಭಿಸಿದ್ದು? ಅದುವರೆಗೂ ಕಾಂಗ್ರೆಸ್ಸ್ ಬ್ರಿಟಿಷರ ಬೂಟುಗಳನ್ನು ನೆಕ್ಕುತ್ತ ದಯಾಯಾತ, ಅನುಗ್ರಹ, ಕೃಪೆಗಾಗಿ ಬೇಡುತ್ತಿತ್ತೆಂಬುದನ್ನು ರಾಜಕೀಯ ಪಕ್ಷಗಳ ಅ, ಆ, ಇ, ಈ ಗೊತ್ತಿರುವವನು ಮರೆಯಲಾರ. ೧೯೪೭ರ ನಂತರ ಅವನು ಹುಟ್ಟಿದ್ದರೂ ಕೂಡಾ ಆ ಪುಸ್ತಕಗಳನ್ನು

ಕಡೆಯುಗೆ [illegible]

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಫೋನ್: 7?

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ನಾಶಮಾಡಲು ಕಾಂಗ್ರೆಸ್ಸಿಗೆ ಸಾಧ್ಯವಾಗಿರುವುದಿಲ್ಲ.

ಏನೇ ಇರಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನವರೂ ಭಾರತೀಯ ಜನಸಂಘದವರೂ ಇಂಡಿಯನ್ನರೇ ಇದ್ದಾರೆ. ಭಾರತೀಯರೇ ಇದ್ದಾರೆ, ಹಿಂದೂಗಳೇ ಇದ್ದಾರೆ, ಈ ದೇಶದ ಪ್ರಜೆಗಳೇ ಇದ್ದಾರೆ, ಈ ರಾಷ್ಟ್ರದ ಅಂಗಗಳೇ ಇದ್ದಾರೆಂಬುದನ್ನು ಶ್ರೀ ಚವ್ಹಾಣನಿಂದ ಅಲ್ಲಗಳೆಯಲು ಸಾಧ್ಯವಿರುವುದಿಲ್ಲ. ಅವರೆಲ್ಲರೂ ನಮ್ಮ ಸ್ವದೇಶ ಬಾಂಧವರಿದ್ದಾರೆ. ಹಾಗಿರುವಾಗ ಕಾಂಗ್ರೆಸಿನವರನ್ನು ಆಂಗ್ಲರ ಮಾನಸಪುತ್ರರೆನ್ನುವದಾಗಲೀ, ಭಾರತೀಯ ಜನಸಂಘದವರನ್ನು ಬ್ರಿಟಿಷರ ಬೂಟನ್ನು ನೆಕ್ಕುತ್ತಿದ್ದವರೆಂದು ಹೇಳುವದಾಗಲೀ ಭಾರತೀಯರೆಲ್ಲರಿಗೂ ಮಾಡಿದ ಅಪಮಾನವೇ ಇದೆ. ಇಂದಿರಾಜಿಯವರು, ಭಾರತದ ಪ್ರಧಾನಿಯವರ ಸ್ಥಾನದಿಂದ ಉಚಿತ ಹಾಗೂ ಜವಾಬ್ದಾರಿಯುತ ಮಾತುಗಳನ್ನಾಡದೆ ಬೇಜವಾಬ್ದಾರಿ ಹಾಗೂ ಅಗ್ಗದ ರಾಜಕೀಯ ಪಕ್ಷದ ಪ್ರಮುಖರಂತೆ ಭಾಷಣಬಿಗಿದಿದ್ದಾರೆ.

ಜನಸಂಘದವರು ಹಣತೆಯನ್ನು ಆ ದೇಶಕ್ಕೆ ಚಿಹ್ನೆಯನ್ನಾಗಿ ಇಟ್ಟುಕೊಂಡಿರುವರೋ, ಅದು ಆ ಪಕ್ಷದವರಿಗೇನೇ ಗೊತ್ತು. ಜನಸಂಘದ ಚಿಹ್ನೆ ಹಣತೆಗೂ, ಭಾರತೀಯರ ಹೃದಯ ಹಣತೆಗೂ, ಅವರ ಜೀವನಕ್ಕೂ, ಭಾರತದ ಭವ್ಯ ಭವಿಷ್ಯತ್ತಿಗೂ ಏನಾದರೂ ಸಂಬಂಧವಿದೆಯೇ? ಇದೆಯೋ, ಇಲ್ಲವೋ ಅಂತೂ ಭಾರತೀಯರಿಗೆ ವಿದ್ಯುತ್ ಯುಗದಲ್ಲಿ ಹಣತೆಯತ್ತ ಗೌರವ ಇದೆ. ವಿದ್ಯುತ್ ಯುಗದಲ್ಲಿ ನಗರದ ಜನಸಂಘದವರು ತಮ್ಮ ಚಿಹ್ನೆಯನ್ನು ಸೂಚಿಸುವಂತೆ ವಿದ್ಯುತ್ ದೀಪವನ್ನು ಹಾಕಬಹುದು. ದೇಗುಲವನ್ನು ವಿದ್ಯುತ್ ದೀಪದಿಂದ ಅಲಂಕರಿಸಿದರೂ ದೇವರ ಮೂರ್ತಿಯ ಬಳಿ ನಂದಾದೀಪವನ್ನು ಇಡದಿರಲು ಸಾಧ್ಯವೇ ಇರುವದಿಲ್ಲ. ಮತೀಯ ಅಥವಾ ಧಾರ್ಮಿಕ ದೃಷ್ಟಿಯಿಂದ ಅದಕ್ಕೆ ಮುಖ್ಯತ್ವ ಇದೆ. ಕಾಂಗ್ರೆಸ್ಸಿನ ನಂದಿಗೂ ಹಾಗೇ ತಾನೇ? ಈ ಟ್ರ್ಯಾಕ್ಟರ್, ಬುಲ್‌ಡೋಜರು ಇತ್ಯಾದಿ ಯಾಂತ್ರಿಕ ಯುಗದಲ್ಲಿ ಎತ್ತುಗಳ ಆವಶ್ಯಕತೆ ಎಷ್ಟಿದೆ? ಶಿವನ ನಂದಿಗೆ ಈ ದೇಶದಲ್ಲಿಂದೂ ಗೌರವ ಇಲ್ಲವೇನು?

ಇದೆಲ್ಲಾ ಇಂದಿರಾಜಿಯವರ ಇಷ್ಟ-ಸ್ತ್ರೀಬುದ್ಧಿಯೆಂದು ಗಂಗೆಗೆ ಬಿಟ್ಟಲ್ಲಿ ಗೃಹಮಂತ್ರಿ ಗದ್ದುಗೆಯಲ್ಲಿರುವ ಶ್ರೀಮಾನ್ ಯಶವಂತ ಚವ್ಹಾಣರಿಗೆ ಮನಸ್ಸಿಗೆ ಕಷ್ಟವಾಗಬಹುದು. ಶ್ರೀಯುತರು ಚುನಾವಣಾ ಪ್ರಚಾರಕ್ಕಾಗಿ ಪಂಜಾಬಿಗೆ ಹೋಗಿದ್ದರು. ಅಲ್ಲಿ ಲುಧಿಯಾನದಲ್ಲಿ ಪಕ್ಷದವರಿಗಾಗಿ ಭಾಷಣ ಮಾಡುತ್ತ ಕಾಂಗ್ರೆಸ್ಸ ಗೆಲ್ಲುತ್ತದೆಂದು ಘೋಷಿಸುತ್ತ ಭವಿಷ್ಯದ ಮಾತುಗಳನ್ನಾಡಿರುವರು. ನಿಜವಾಗಿ ನಡೆದದ್ದಾದರೂ ಏನು? ಪಂಜಾಬ, ಉತ್ತರ ಪ್ರದೇಶ, ಬಿಹಾರ, ಬಂಗಾಲ ಮತ್ತು ನಾಗಾಲೇಂಡಿನಲ್ಲಿ ಚುನಾವಣೆ ನಡೆದದ್ದರಲ್ಲಿ ಒಂದೇ ಒಂದು ಪ್ರಾಂತ್ಯದಲ್ಲಿ ಕೂಡಾ ಕಾಂಗ್ರೆಸ್ಸಿಗೆ ತಲೆಯೆತ್ತಲು ಸಾಧ್ಯವಾಗಿರುವುದಿಲ್ಲ. ಫಲಿತಾಂಶ ಪ್ರಕಟವಾಗುವ ಮೊದಲು ಪಕ್ಷ ಪ್ರಮುಖರೆಲ್ಲರೂ ತಮ್ಮ ಪಕ್ಷವೇ ಗೆಲ್ಲುತ್ತದೆಂದು ಹೇಳುವುದುಂಟು. ಕುದುರೆ ಪಂದ್ಯಾಟದಲ್ಲಿ ಹಣ ಕಟ್ಟಿದವನು ತಾನೆಣಿಸಿರುವ ಕುದುರೆಯೇ ಪ್ರಥಮವಾಗಿ ಬರುತ್ತದೆಂದು ಭಾವಿಸಿಕೊಳ್ಳುವಂತೆ, ಲಾಟರಿ ಟಿಕೇಟು ತೆಗೆದುಕೊಂಡವರು ತಮಗೇನೇ ಪ್ರಥಮ ಬಹುಮಾನ ಬರುವುದಾಗಿ ಭರವಸೆ ಇಟ್ಟುಕೊಳ್ಳುವಂತೆ ಪಕ್ಷದ ಪ್ರಮುಖರು ಹೇಳುವದರಲ್ಲೇನೂ ಆಶ್ಚರ್ಯವಿಲ್ಲ. ಆದರೆ ಗೃಹಮಂತ್ರಿಯವರ ವಿಷಯ ಹಾಗಲ್ಲ. ಅವರು ಪಕ್ಷದ ಓರ್ವ ಪ್ರಮುಖರೆನ್ನುವದಕ್ಕಿಂತಲೂ ನಮ್ಮನ್ನು ರಕ್ಷಿಸುವ ಅಥವಾ ಕಾಪಾಡುವ ಹೊಣೆ ಹೊತ್ತುಕೊಂಡವರೆನ್ನುವ ಸ್ಥಾನದಲ್ಲಿದ್ದಾರೆ. ಈ ಪುಟ್ಟ ಚುನಾವಣೆಯ ಫಲಿತಾಂಶ ಭೀಕರ ಚಿತ್ರವನ್ನು ನಮ್ಮ ಮುಂದಿಕ್ಕಿಟ್ಟಿರುತ್ತದೆ. ಭಾರತದ ಭವಿಷ್ಯ ಕತ್ತಲೆಯಲ್ಲಿ ಸಿಲುಕಿಕೊಂಡಿತೆ. ಕತ್ತಲೆಯ ಒಂದು ಕೈಯ ತುದಿ ಬಂಗಾಲದಲ್ಲಿ ಕಮ್ಯುನಿಸ್ಟರ ಮಂಡಲದಲ್ಲಿ ಇನ್ನೊಂದು ತುದಿ ಕೇರಳದಲ್ಲೂ ಕಮ್ಯುನಿಸ್ಟರಿದ್ದಾರೆ. ಬಂಗಾಲ ಹಾಗೂ ಕೇರಳ ನಮ್ಮ ದೇಶದ ರಕ್ಷಣಾ ದೃಷ್ಟಿಯಲ್ಲಿಯೂ ಮಹತ್ವದ ಸ್ಥಾನವಿದ್ದದೆಂಬುದು ಶ್ರೀ ಚವ್ಹಾಣರಿಗೆ ಚೆನ್ನಾಗಿ ಗೊತ್ತು. ಅದೇ ರೀತಿ ಕತ್ತಲೆಯ ಇನ್ನೊಂದು ಕೈಯ ಒಂದು ತುದಿ ಪಂಜಾಬದಲ್ಲಿ ಅಕಾಲಿದಳದವರಿದ್ದರಾದರೆ ಇನ್ನೊಂದು ತುದಿಯಲ್ಲಿ ದ್ರಾವಿಡ ಮುನ್ನೇತ್ರ ಕಳಗಮದವರಿದ್ದಾರೆ. ಈ ಎರಡೂ ವಿಷಸರ್ಪಗಳು ಪ್ರತ್ಯೇಕತೆಯೆಂಬ ತಮ್ಮ ವಿಷದ ಹಲ್ಲುಗಳನ್ನು ಕಳೆದುಕೊಂಡಿರುವದಾಗಿ ಹೇಳುತ್ತಿವೆಯಾದರೂ ಅದನ್ನು ಸಂಪೂರ್ಣ ನಂಬುವಂತಿಲ್ಲ. ಹಾಗಿರುವಾಗ ನಾಳೆ ಈ ನಾಲ್ಕು ದುಷ್ಟ ಶಕ್ತಿಗಳು ಮುಸ್ಲಿಂಲೀಗ್, ಬಂಡುನಾಗಾ ಹಾಗೂ ಇತರ ದೇಶದ್ರೋಹಿಗಳೊಂದಿಗೆ ಸೇರಿ ಕ್ರಾಂತಿಯ ಹೆಸರಿನಲ್ಲಿ, ರಾಜ್ಯಕ್ಕೆ ಹೆಚ್ಚಿನ ಅಧಿಕಾರವೆಂಬ ಶಿರೋನಾಮೆಯಡಿಯಲ್ಲಿ ಗಲಾಟೆಯೆಬ್ಬಿಸಿಬಿಟ್ಟರೆ ಈ ಗೃಹಮಂತ್ರಿ ಮಹಾಶಯರು ಏನು ಹೇಳಬಹುದು? ಶ್ರೀ ಚವ್ಹಾಣರು ಕಣ್ಣಿಗೆ ಕಟ್ಟಿತು ಗಂಭೀರವಾಗಿ ಆಲೋಚಿಸುವ ಕಾಲ ಬಂದಿರುತ್ತದೆ. ನಮ್ಮ ಭವಿಷ್ಯವೇನು? ಕತ್ತರಿಯಲುಗಿನಲ್ಲಿ ನಮ್ಮ ಭವಿಷ್ಯವಿದೆಯಲ್ಲವೇ? ಆದರಿಂದ ನಾವು ತಪ್ಪಿಸಿಕೊಳ್ಳುವದೆಂತು? ಪುನಃ ಪುನಃ ಚುನಾವಣೆ ನಡೆಸುತ್ತ ಹೋಗಲು ಹಣ-ಸಮಯ ಸಾಕೇ? ಶ್ರೀ ಚವ್ಹಾಣ ಕೇಳುತ್ತಿದ್ದಾನೆ. ಆದರೆ ಕೇಳುವವರ್ಯಾರು?

ಶಿವಸೇನೆಯಿಂದಾಗಿ ಆದಾಗಲೇ ಕೆಟ್ಟ ಹೆಸರು ಪಡೆದುಕೊಂಡಿರುವ ಶ್ರೀಮಾನ್ ಚವ್ಹಾಣರು ಆಡಿರುವ ಭವಿಷ್ಯಕ್ಕೆ ವಿಶೇಷ ಬೆಲೆ ಕೊಡುವದು ಸರಿಯಲ್ಲ; ಆದುದರಿಂದ ನೇತಾಗಳ ನಡತೆ ಜವಾಬ್ದಾರಿಯುತನಕ್ಕೆ ಭಂಗ ತಂದಿದೆಯೆನ್ನುವದು ಸರಿಯಲ್ಲವೆಂದು ಹೇಳಿದಲ್ಲಿ ಕಾಂಗ್ರೆಸ್ಸಿನಲ್ಲಿ ರಾಮಸುಭಾಗಸಿಂಘರಿಗಿಂತ ಸುಭಗರು ಬೇರೆ ಯಾರಾದರೂ ಇದ್ದಾರೆಯೆ, ಅವರ ಉದಾಹರಣೆಯನ್ನೇ ತೆಗೆದುಕೊಳ್ಳೋಣ.

ಗೃಹಮಂತ್ರಿಯವರ ಸಂಪೂರ್ಣ ಸೋತ ವೇಳೆ ಒಕ್ಕೂಟದ ಮಾತು ಕೇಳಿ ಬರುತ್ತಿದೆ. ಪಂಜಾಬದಲ್ಲಿಯೂ ಒಕ್ಕೂಟ ಸರಕಾರ ಆಸನವನ್ನು ಅಲಂಕರಿಸಿರುತ್ತದೆ. ಬಂಗಾಲದಲ್ಲಿ ಒಕ್ಕೂಟ ಸರಕಾರ ಬಂದಿದೆ. ಆದರೆ ಉತ್ತರ ಪ್ರದೇಶ ಹಾಗೂ ಬಿಹಾರದ ಪರಿಸ್ಥಿತಿ ಏನು? ಶ್ರೀ ರಾಮಸುಭಾಗಸಿಂಘರ ಬಳಿ ಈ ಪ್ರಶ್ನೆ ಕೇಳಿದಾಗ ಅವರು ಕೊಟ್ಟಿರುವ ಉತ್ತರ ಶ್ರೀ ಚವ್ಹಾಣರನ್ನು ಯೋಚನೆಗೀಡುಮಾಡಿರುತ್ತದೆ. ಅವರ ಬಳಿ ಮಿಶ್ರ ಸರಕಾರದ ಕುರಿತು ಕೇಳಿದಾಗ ಅವರು ಒಕ್ಕೂಟವು ಪಕ್ಷಕ್ಕೆ ಲಾಭ ತರುವ ರೀತಿಯಲ್ಲಿದ್ದಲ್ಲಿ ತನ್ನದೇನೂ ಅಡ್ಡಿ ಇಲ್ಲವೆಂದು ಹೇಳಿರುವರು. ಶ್ರೀ ರಾಮಸುಭಗಸಿಂಘರು ಬಿಹಾರದಿಂದ ಬಂದಿರುವ ಮೇಲ್ಪಟ್ಟದ ಕಾಂಗ್ರೆಸ್ ಧುರೀಣರು, ಕಾರ್ಯಕಾರಿ ಸಮಿತಿಯ ಸದಸ್ಯರು. ಇದೆಲ್ಲಕ್ಕಿಂತಲೂ ಅವರು ಈಗ ರೈಲ್ವೆ ಮಂತ್ರಿಗಳಿದ್ದಾರೆ. ಅವರು ಬಯಸುವದು ತಮ್ಮ ಪಕ್ಷಕ್ಕೆ ಲಾಭವಾದೀತೇ ಅನ್ನುವದನ್ನು ಎಂಟಾಣೆ ಅಥವಾ ಎಷ್ಟು ಪೈಸಾ ಕಾಂಗ್ರೆಸ್ಸಿಗನು ಅದೆಂತು ಅಭಿಪ್ರಾಯ ಹೊಂದಿರಲಾರನು? ಮೇಲ್ಪಟ್ಟದವರೆದುರಿನಲ್ಲಿ ಇರುವದು ಕೇವಲ ಪಕ್ಷ ಅರ್ಥಾತ್ ಸಿಂಹಾಸನ, ಅದನ್ನು ಬಿಟ್ಟು, ದೇಶದ ಚಿತ್ರವೇ ಅವರ ಕಣ್ಮುಂದೆ ಬರುವದಿಲ್ಲ. ಬಲಶಾಲಿ ಒಕ್ಕೂಟ ಸರಕಾರ ಬಂದು ದೇಶಕ್ಕೆ ಒಳ್ಳೆಯದಾಗುವದಾದಲ್ಲಿ ಒಕ್ಕೂಟ ಸರಕಾರ ನಡೆಸಬಹುದೆಂದೂ ಶ್ರೀ ಚವ್ಹಾಣನು ಪಟ್ಟನೆ ಹೇಳಿಹೋದ - ಆದರದು ಮೇಲ್ಪಟ್ಟದ ಕಾಂಗ್ರೆಸ್ಸಿಗರಿಗೆ ಗೊತ್ತಾಗುವಂತಿಲ್ಲ. ಇಂತಹ ಮಂತ್ರಿಗಳು ಹೇಗೆ ರೈಲು ಬಿಟ್ಟಾರು? ರೈಲು ಬಿಡುವದರಿಂದ ಕಾಂಗ್ರೆಸ್ಸಿಗೆ ಪ್ರಯೋಜನವಾಗುತ್ತದಾದಲ್ಲಿ ಮಾತ್ರ ಅವರು ಬಿಟ್ಟಾರು. ಇಲ್ಲವಿದ್ದಲ್ಲಿ? ಕಾಂಗ್ರೆಸ್ಸೇತರ ಸರಕಾರ ಇರುವ ರಾಜ್ಯಗಳು ಈಗ ಯೋಚಿಸಬೇಕಾಗಿರುತ್ತದೆ.

ಇದು ನಮ್ಮ ಕಣ್ಮುಂದೆ ಇರುವ ಸ್ಪಷ್ಟ ಚಿತ್ರ. ಕಾಂಗ್ರೆಸ್ಸಿನ ಭಾರೀ ಧುರೀಣರು ಅಧಿಕಾರದ ಅಂಕುಶವನ್ನು ಹಿಡಿದುಕೊಂಡಿರುವವರು ಪ್ರಧಾನಿ ಪಟ್ಟದಲ್ಲಿರುವವರು, ಸಚಿವರ ಸ್ಥಾನದಲ್ಲಿರುವವರು ಚುನಾವಣೆಯ ಚಂಡಮಾರುತದಲ್ಲಿ ಆದಂತು ಕೆಂಡಕಾರುತ್ತಿದ್ದಾರೆನ್ನುವದಕ್ಕೆ ಇದೊಂದು ಸ್ಪಷ್ಟ ನಿದರ್ಶನ. ಇದು ನಮ್ಮ ನೇತಾಗಳ ನಡತೆ ಇದೆ. ಈ ನೇತಾಗಳು ಒಬ್ಬರಿಗಿಂತ ಇನ್ನೊಬ್ಬರು ಅತಿರಥ-ಮಹಾರಥರಿದ್ದಾರೆ. ಆದುದರಿಂದಲೇ ಶ್ರೀ ಚವ್ಹಾಣ ಈಗ ಗಂಭೀರವಾಗಿ ಯೋಚಿಸುತ್ತಿದ್ದಾನೆ.

ಉಡುಪಿ ಮುನ್ಸಿಫರ ಕೋರ್ಟಿನಲ್ಲಿ

S.C. No. 274/1968.

ಡಿ ಕೆನರಾ ಫಿನೆನ್ಸ್ ಯುನಿಟ್ (ರಿ) ಬೈ ಪಾರ್ಟನರ್ ಎಂ. ಗೋವಿಂದ —ವಾದಿ

ಮತ್ತು

ಲೀನಾ ಅಮ್ಮಣ್ಣ ಕೂಡಾ—ಪ್ರತಿವಾದಿಯರು

ಇವರೊಳಗೆ

೨ನೇ ಪ್ರತಿವಾದಿ:—ಹ್ಯೂಬರ್ಟ ಎಡ್ವಿನ್ ಪುರ್ತ್ರಸ್, ಜೇಮ್ಸ ಪುರ್ತ್ರಸರ ಮಗ, ಉಳಿಯಾರು, ಮಜೂರು ಗ್ರಾಮ, ಉಡುಪಿ ತಾಲೂಕು, ಪೋಸ್ಟು ಕಾಪು.

ಪ್ರತಿವಾದಿಯರು ವಾದಿ ಫರ್ಮಿನೊಂದಿಗೆ ಚಿಟ್ ಫಂಡ್ ವ್ಯವಹಾರ ನಡೆಸಿ ಆ ಬಾಬ್ತು ತಾರೀಕು 8-6-1967ರಲ್ಲಿ ವಾದಿ-ಫರ್ಮಿಗೆ ಬರೆಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಬಾಬ್ತು ಅಸಲು ಬಡ್ಡಿ ಖರ್ಚು ವಸೂಲಿ ಬಗ್ಗೆ ಮಾಡಿದ ಮೋಕದ್ದಮೆ ದಾವೆಯು, ತಮ್ಮ ಹಾಜರಾತಿ ಬಗ್ಗೆ ಅವಧಿ ಬಾರಿಗೆ ತಾರೀಕು 20.3.1969ಕ್ಕೆ ಇಟ್ಟಿರುತ್ತದೆ. ಆದುದರಿಂದ ನೀವು ಸದ್ರಿ ತಾರೀಕು 20-3-1969ರಂದು ಬೆಳಿಗ್ಗೆ ಘಂಟೆ 11.00ಕ್ಕೆ ಸ್ವತಃ ಅಥವಾ ವಕೀಲರ ಮುಖಾಂತರ ಈ ಕೋರ್ಟಿನಲ್ಲಿ ಹಾಜರಾಗಿ ಉದ್ದೇಶಗಳೇನಾದರೂ ಇದ್ದಲ್ಲಿ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷೀಯ (Exparte) ಮಾಡಿ ದಾವೆಯ ಮುಂದಿನ ತನಿಖೆ ನಡೆಸಲಾಗುತ್ತದೆ ಎಂಬ ಸಂಗತಿ ಈ ಮೂಲಕ ನಿಮಗೆ ತಿಳಿಸಿರುತ್ತದೆ.

—ಕೋರ್ಟ ಹುಕುಂ ಪ್ರಕಾರ—

ಪಿ. ಬಾಲಕೃಷ್ಣ ಆರ್. ಶೆಣೈ

ವಾದಿ-ಫರ್ಮಿನ ಕಡೆ ಎಡ್ವೋಕೇಟು.

ಉಡುಪಿ, ತಾ. 26-2-69.

ಬಲಿದಾನದ ಹಬ್ಬ ಬಕ್ರೀದ್

ಲೇಖಕರು: ಶ್ರೀ ಕುಂಜಾಲು ಲಕ್ಷ್ಮಣ ಶೇಟ್

ಭಾರತದಲ್ಲಿ ಬಕ್ರೀದ್ ಎಂದು ಸರ್ವಸಾಮಾನ್ಯವಾಗಿ ತಿಳಿಯಲ್ಪಟ್ಟಿರುವ ಈದ್-ಉಲ್-ಜುಹಾ ಅಥವಾ ಬಲಿದಾನದ ಹಬ್ಬವು ಈ ವರ್ಷ ಫೆಬ್ರವರಿ ೨೭ರಂದು ಆಚರಿಸಲ್ಪಟ್ಟಿತು. ಈ ಹಬ್ಬವು ಇಸ್ಲಾಮಿನ ಸ್ತಂಭಗಳೆಂದು ಕರೆಯಲ್ಪಡುವ ಐದು ತತ್ವಗಳಲ್ಲಿ ಕೊನೆಯದಾದ ಹಾಜ್ ಅಥವಾ ಮಕ್ಕಾ ಯಾತ್ರೆಗೆ ಸಂಬಂಧಪಟ್ಟಿದೆ. ಇತರ ನಾಲ್ಕು ಯಾವುವೆಂದರೆ (1) ದೇವರು ಒಬ್ಬನೇ ಮತ್ತು ಮುಹಮ್ಮದ್ ಪೈಗಂಬರ್ ದೇವದೂತನು ಎಂಬ ನಂಬಿಕೆ (2) ದಿನಕ್ಕೆ ಐದು ಸಾರಿ ಪ್ರಾರ್ಥನೆ. (3) ದಾನಧರ್ಮ ಮತ್ತು (4) ರಮ್‌ಝಾನ್ ತಿಂಗಳಲ್ಲಿ ಉಪವಾಸ ವ್ರತ.

ಸಾಮರ್ಥ್ಯವಿರುವ ಪ್ರತಿಯೊಬ್ಬ ಮುಸಲ್ಮಾನನೂ ಆ ದಿನ ಒಂದು ಆಡನ್ನಾಗಲೀ ಕುರಿಯನ್ನಾಗಲೀ ಆಹುತಿ ಕೊಡುತ್ತಾನೆ. ಒಂಟೆಯು ಸುಲಭವಾಗಿ ಸಿಗುವ ದೇಶಗಳಲ್ಲಿ ಏಳು ಮಂದಿ ಒಟ್ಟಾಗಿ ಬಲಿಯನ್ನು ಅರ್ಪಿಸುವರು. ಈ ಬಲಿದಾನವು ಕೊನೆಯ ಸಂಸ್ಕಾರವಾಗಿದೆ. ಇದರೊಂದಿಗೆ ಹಾಜ್ ಸಾಂಪ್ರದಾಯಿಕವಾಗಿ ಕೊನೆಗೊಳ್ಳುವುದು.

ಹಾಜ್ ಎಂಬುದರ ಅರ್ಥವು ಲಾಕ್ಷಣಿಕವಾಗಿ ಒಂದು ಸಂಕಲ್ಪ ಮಾಡುವುದು. ಮಕ್ಕಾದಲ್ಲಿರುವ ದೇವರ ಮನೆಗೆ ಯಾತ್ರೆಯನ್ನು ಕೈಗೊಳ್ಳುವುದು. ಅದು ಮಸ್ಜಿದ್-ಅಲ್-ಹರಾಮ್ ಎಂಬುದರ ಕೇಂದ್ರದಲ್ಲಿ ಅಥವಾ ಪವಿತ್ರವಾದ ಮಸೀದಿಯಲ್ಲಿದೆ ಮತ್ತು ಅದು ಕಾಬಾ ಎಂದು ಕರೆಯಲ್ಪಡುತ್ತದೆ. ಮುಸ್ಲಿಮರು ಪ್ರಾರ್ಥನೆ ಮಾಡುವಾಗ ಮುಖ ಮಾಡಿರುವ ದಿಕ್ಕು ಕಾಬಾ ಆಗಿದೆ.

ಅರಬ ಪರಂಪರೆಯ ಪ್ರಕಾರ ಧರ್ಮೋಪದೇಶಕರ ಜನ್ಮಸಂಬಂಧಿ ಮುಸಲ್ಮಾನರಿಂದ ಗೌರವಿಸಲ್ಪಡುತ್ತಿದ್ದ ಇಬ್ರಾಹಿಮನಿಂದ ಕಾಬಾ ರಚಿಸಲ್ಪಟ್ಟಿತು. ಕಟ್ಟಡವು ಶಿಥಿಲಗೊಂಡರೂ ಅದು ನೆಲೆನಿಂತಿದ್ದ ಸ್ಥಳವು ಒಂದು ಕರಿದಾದ ಕಲ್ಲಿನಿಂದ ಯಾವಾಗಲೂ ಸೂಚಿಸಲ್ಪಡುತ್ತದೆ. ಆ ಕಪ್ಪು ಶಿಲೆಯು ಇಬ್ರಾಹಿಮನು ಕಟ್ಟಿಸಿದ ಆ ಸೌಧದ ಅಡಿಗಲ್ಲು ಎಂದು ಹೇಳಲಾಗುತ್ತದೆ. ಅದೇ ಕೇಂದ್ರದಲ್ಲಿ 50 ಅಡಿ ಎತ್ತರ, 40 ಅಡಿ ಉದ್ದ ಮತ್ತು 35 ಅಡಿ ಅಗಲವುಳ್ಳ ಆಯತಾಕಾರದ 12 ಶತಮಾನಗಳಿಗಿಂತಲೂ ಹಿಂದೆ ಪುನರಚಿಸಲ್ಪಟ್ಟ ಈಗಿನ ಕಾಬವು ತಲೆಯೆತ್ತಿ ನಿಂತಿದೆ. ಇಬ್ರಾಹಿಮನ ಸ್ಮರಣೆಗಾಗಿ ಈ ಕಾರ್ಗಲ್ಲನ್ನು ಕಾಬದಲ್ಲಿ ಕಾದಿಡಲಾಗಿದೆ.

ಹಾಜ್ ಪ್ರಯಾಣದ ಕಾಲವು ರಮ್‌ಝಾನ್ ತಿಂಗಳ ಮರು ತಿಂಗಳಿನಿಂದ (ಶವ್ವಾಲ್) ಆರಂಭವಾಗಿ ಜುಲ್‌ಹಾಜಿನ 13ನೇ ದಿನ ಕೊನೆಗೊಳ್ಳುತ್ತದೆ. ಅದು ಯಾತ್ರೆಯ ಮಾಸವು ಇಸ್ಲಾಮಿಕ್ ಕೆಲೆಂಡರಿನ ತಿಂಗಳೂ ಆಗಿದೆ. ಆದರೆ ಹಾಜಿನ ಮುಖ್ಯ ಕಟ್ಟಳೆಗಳು ಜುಲ್ ಹಾಜ್ ತಿಂಗಳ ಪ್ರಥಮ 10 ದಿನಗಳಲ್ಲಿಯೇ ಆಚರಿಸಲ್ಪಡುತ್ತದೆ. ಉಮ್ರಾ ಎಂಬುದು ಅಷ್ಟು ವಿಶೇಷವಾದ ಯಾತ್ರೆಯಲ್ಲವಾದ ಪ್ರಯುಕ್ತ ಅದನ್ನು ವರ್ಷದ ಯಾವ ಸಮಯದಲ್ಲಿಯೂ ಮಾಡಬಹುದು. ಎರಡು ಸಂದರ್ಭಗಳಲ್ಲಿಯೂ ಮಕ್ಕಾದ ಸಮೀಪದ ಕೆಲವು ನಿರ್ದಿಷ್ಟ ಸ್ಥಾನಗಳಿಂದಲೇ ಯಾತ್ರೆಯ ಪೋಷಾಕುಗಳನ್ನು ಧರಿಸಿಕೊಳ್ಳಬೇಕು. ಸ್ಥಾನಮಾನದ ಭೇದಭಾವವನ್ನು ಕಿತ್ತೊಗೆದು, ಎಲ್ಲಾ ಒಂದು ಎಂಬ ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳುವುದೇ ಸಮವಸ್ತ್ರವನ್ನು ಧರಿಸುವುದರ ಧ್ಯೇಯವಾಗಿದೆ. ಅಲ್ಲಿ ಯಾವ ಬಿಗುಮಾನ, ಅವಮಾನ, ಅನುಮಾನಗಳಿಗೂ ಆಸ್ಪದವಿಲ್ಲ.

ಯಾತ್ರೆಯ ಪೋಷಾಕನ್ನು ಧರಿಸುವುದು ಇಹ್ರಾಮ್ ಎಂದು ಕರೆಯಲ್ಪಡುತ್ತದೆ. ಇಹ್ರಾಮ್ ಎಂದರೆ ಯಥಾಸ್ಥಿತಿಯ ಕಾಲದಲ್ಲಿ ನ್ಯಾಯಬದ್ಧವಾದ ಕೆಲವು ಆಚಾರಗಳು ಪ್ರತಿಬಂಧಿಸಲ್ಪಟ್ಟು ಹೊಸ ಅವಸ್ಥೆಯನ್ನು ಹೊಂದುವುದು. ಅದರಿಂದ ಇಹ್ರಾಮನ್ನು ಹೊದೆದುಕೊಳ್ಳುವುದು ಪ್ರಾಪಂಚಿಕ ವ್ಯಾಮೋಹವನ್ನು ತ್ಯಜಿಸುವುದರ ಸಂಕೇತವಾಗಿದೆ.

ಅನಂತರದ ಕಟ್ಟಳೆಯು ದೇವರ ಮೇಲಿನ ಭಕ್ತಿಯ ಕೇಂದ್ರೀಕರಣದ ಸಂಕೇತವಾಗಿ ಕರಿಯಕಲ್ಲಿಗೆ ಚುಂಬಿಸುವುದರೊಂದಿಗೆ ಸೂಚಿತ ಚಟುವಟಿಕೆಯಾಗಿರುವ ಕಾಬಾದ ಏಳು ಪ್ರದಕ್ಷಿಣೆ ಸುತ್ತು ಹಾಕುವುದಾಗಿದೆ.

ಕೊನೆಯ ಮುಖ್ಯ ನಡಾವಳಿಯೇ ಬಲಿದಾನ. ಅದನ್ನು ಮಕ್ಕಾದಿಂದ ಆರು ಮೈಲು ಉತ್ತರಕ್ಕಿರುವ ಮಿನಾ ಕಣಿವೆಯಲ್ಲಿ ಅರ್ಪಿಸಲಾಗುವುದು. ಈ ಆಹುತಿಯು ಜುಲ್ ಹಾಜಿನ (ಜಲ್ಹಜ್ ತಿಂಗಳಿನ) 10ನೇ ದಿನ ಸಮರ್ಪಿಸಲ್ಪಡುವುದು. ಆ ದಿನವೇ ಈದ್—ಉಲ್—ಜುಹಾ ಆಚರಿಸಲ್ಪಡುವುದು. ಬಲಿದಾನದ ಬಳಿಕ ಸಂಪೂರ್ಣತೆಯ ಸಂಸ್ಕಾರ, ಗಂಡಸರ ತಲೆಯ ಕೂದಲಿನ ವಪನ, ಹೆಂಗಸರ ಕೆಲವು ಕೇಶಗುಚ್ಛಗಳನ್ನು (ಕುರುಳನ್ನು) ಕತ್ತರಿಸುವುದು —ಮೊದಲಾದ ವಿಧಿಗಳು ನಡೆಸಲ್ಪಡುತ್ತವೆ. ಅನಂತರ "ಇಹ್ರಾಮ್" ತೆಗೆಯಲ್ಪಡುವುದು. ಯಾತ್ರೆಯು ಕೊನೆಗೊಂಡರೂ ಹಾಜಿಗಳೂ ಮಿನಾದಲ್ಲಿ ಎರಡು ಅಥವಾ ಮೂರು ದಿನ ತಂಗಿರಬೇಕು. ಹಾಜಿ ಅಥವಾ ಅಲ್—ಹಾಜ್ ಎಂದರೆ ಯಾತ್ರೆಯನ್ನು ಮುಗಿಸಿದವ ಎಂದರ್ಥ.

ಬಲಿದಾನದ ಪೂರ್ವೇತಿಹಾಸವು ಕುತೂಹಲಕಾರಿಯೂ ಕಳವಳಕಾರಿಯಾಗಿಯೂ ಆಗಿದೆ. ಬಲಿದಾನವು ಹಾಜಿನ ಮುಖ್ಯ ತತ್ವಸಾರವಾಗಿದೆ. ಅದು ಇಬ್ರಾಹಿಂ ಮತ್ತು ಅವನ ಮಗ ಇಸ್ಮಾಯಿಲ್ ಎಂಬುವರು ಪರೀಕ್ಷೆಗೊಳಗಾದಾಗ ಕಠಿಣ ರೀತಿಯ ಆತ್ಮಬಲಿದಾನಕ್ಕೆ ಒಪ್ಪಿ ಅದಕ್ಕೆ ಸಜ್ಜಾದುದರ ಸ್ಮಾರಕೋತ್ಸವವಾಗಿದೆ. ಇಬ್ರಾಹಿಮನು ಒಬ್ಬನೇ ಮಗನಾದ ಇಸ್ಮಾಯಿಲನು ಬೆಳೆದಾಗ ತಂದೆಯು ದಿವ್ಯ ದೈವಿಕ ದರ್ಶನದಲ್ಲಿ ತನ್ನ ಮಗನನ್ನು ಬಲಿಕೊಡುವಂತೆ ಪವಿತ್ರವಾದ ಆಜ್ಞೆಯನ್ನು ಪಡೆದನು. ವಿಧಿಯೊಡ್ಡಿದ ಸವಾಲಿಗೆ ಕುಗ್ಗದೆ, ಹೃದಯದ ಅಗೋಚರ ಅಗ್ನಿಯನ್ನು ಅಲಕ್ಷಿಸಿ, ಪುತ್ರ ವಾತ್ಸಲ್ಯವನ್ನ ಚಿತ್ತಭಿತ್ತಿಯಿಂದ ಕಿತ್ತೊಗೆದು, ತನ್ನ ವಂಶದ ಕುಡಿಯನ್ನು ಕತ್ತರಿಸಲು ಮುಂದಾಗುತ್ತಾನೆ. ಇಬ್ರಾಹಿಮ್. ಅಷ್ಟರಲ್ಲಿಯೇ ಒಂದು ದಿವ್ಯವಾಣಿಯು "ಓ ಇಬ್ರಾಹಿಮ್, ನೀನು ಇಷ್ಟರಲ್ಲಿಯೇ ದೈವೀದರ್ಶನದ ಉದ್ದೇಶವನ್ನು ಈಡೇರಿಸಿರುವೆ" ಎಂದು ನುಡಿದು ಬದಲಿಗೆ ಒಂದು ಟಗರನ್ನು ಬಲಿಯೂಡುವಂತೆ ಆಜ್ಞಾಪಿಸಿತು ಎಂಬುದಾಗಿ ಖುರಾನು ತಿಳಿಸುತ್ತದೆ. ಸ್ವಾರ್ಥತ್ಯಾಗದ ಪ್ರಭಾವವನ್ನು ಪ್ರಕಾಶಪಡಿಸುವುದೇ ಬಲಿದಾನದ ಹಬ್ಬ ಬಕ್ರೀದ್‌ನ ಆಚರಣೆಯ ಮುಖ್ಯ ಉದ್ದೇಶ.

ಕಾಲಾಂತರದಿಂದಲೂ ಹಾಜ್ ಎಂಬುದು ಇಸ್ಲಾಮಿನ ಮುಖ್ಯವಾದ ಏಕೀಕರಣ ಶಕ್ತಿಯೂ, ಮುಸ್ಲಿಮರೊಳಗೆ ಪರಿಣಾಮಕಾರಿಯಾದ ಬಂಧಪಾಶವೂ ಆಗಿದೆ. ಅದಕ್ಕೆ ಸೌಲಭ್ಯವಿರುವ ಪ್ರತಿಯೊಬ್ಬ ಮುಸ್ಲಿಮನನ್ನು ಜೀವಮಾನದಲ್ಲಿ ಒಮ್ಮೆಯಾದರೂ ಯಾತ್ರಿಕನನ್ನಾಗಿ ಮಾಡುತ್ತದೆ. ಒಂದು ಮತದ ಒಂದೇ ಬಗೆಯ ಪೋಷಾಕಿನ, ವಿಸ್ತಾರವಾದ ಜನಸಂದಣಿಯ ಸಾಮಾಜಿಕ ಪ್ರಭಾವವನ್ನು ವರ್ಣಿಸುವುದು ಅಸಾಧ್ಯ. ಅದು ವಿವಿಧ ಜನಾಂಗಗಳ ಮತ್ತು ರಾಷ್ಟ್ರಗಳ ಜನತೆಗೆ ಬಡವ ಬಲ್ಲಿದ, ಉಚ್ಚ ನೀಚ ಭೇದಭಾವವಿಲ್ಲದೆ ಧರ್ಮಶ್ರದ್ಧೆಯ ಪಾವನವಾದ ಕ್ಷೇತ್ರದಲ್ಲಿ ಕಲೆತು ಬಂಧುಭಾವನೆ, ಭ್ರಾತೃತ್ವವನ್ನುಂಟುಮಾಡಲು ಸುಸಂದರ್ಭವನ್ನೊದಗಿಸುತ್ತದೆ.

---

o o o

ಸಂಪನ್ನ ಮೂರ್ಖನಿಗಿಂತ ಅಸಹ್ಯವಾದುದಿನ್ನೊಂದಿಲ್ಲ.

o o o

ಗುಣವುಳ್ಳವನಿಗೆ ವಿದೇಶವಿಲ್ಲ, ಸಂತುಷ್ಟನಾದವನಿಗೆ ದುಃಖವಿಲ್ಲ, ಧೀರನಿಗೆ ವಿಪತ್ತೆಂಬುದಿಲ್ಲ, ಪ್ರಯತ್ನಶೀಲಗೆ ಅಸಾಧ್ಯವೆಂದುದಿಲ್ಲ.

o o o

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
91 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಹೆಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೧.

Phone— 5711, 5712, 5713 } 3 Lines.

Statement about ownership and other particulars about Newspaper: NAVAYUGA

FORM IV (Rule 8)

1. *Place of Publication*	...	UDIPI
2. *Periodicity of its Publication*	..	WEEKLY
3. *Printer's Name*	...	K. H. SHETTY
Nationality	...	INDIAN
Address	...	Palukote, Udipi (S. K.)
4. *Publisher's Name*	...	K. H. SHETTY
Nationality	...	INDIAN
Address	...	Palukote, Udipi (S. K.)
5. *Editor's Name*	...	K. H. SHETTY
Nationality	...	INDIAN
Address	...	Palukote, Udipi (S. K.)
6. *Names and addresses of individuals who own the Newspaper and partners or shareholders holding more than one percent of the total capital.*		K. H. SHETTY, Palukote, Udipi (S. K.) (Prop.)

I, K. H. Shetty, hereby declare that the particulars given above are true to the best of my knowledge and belief.

(*Sd*) K. H. SHETTY
Signature of Publisher.

Date 2—3—1969.

ಗಾಂಧೀಜೀಗೆ ವಿಶ್ವಸಂಸ್ಥೆಯ ಶ್ರದ್ಧಾಂಜಲಿ

30 ಜನವರಿ 1948. ಲೇಕಸಕ್ಸೆಸ್ಸಿನಲ್ಲಿನ ವಿಶ್ವಸಂಸ್ಥೆಯ ಕಚೇರಿಯಲ್ಲಿ ಭದ್ರತಾ ಮಂಡಳಿಯ 238ನೇ ಅಧಿವೇಶನ ಸಮಾವೇಶಗೊಂಡ ಸಮಯ. ಎಲ್ಲೆಲ್ಲೂ ದುಃಖಪೂರ್ಣ ವಾತಾವರಣ. ಹೊರಗಡೆ ಅಂದಿನ ಎಲ್ಲ 58 ಸದಸ್ಯ ರಾಷ್ಟ್ರಗಳ ಧ್ವಜಗಳನ್ನು ಅರ್ಧಕ್ಕೆ ಇಳಿಸಲಾಗಿತ್ತು.

ಗಾಂಧೀ ಎಂಬ ಮನುಷ್ಯನೊಬ್ಬನು ಸಶರೀರಿಯಾಗಿ ನಮ್ಮ ಈ ಭೂಮಿಯ ಮೇಲೆ ನಿಶ್ಚಯವಾಗಿ ಓಡಾಡಿದ್ದಾನೆ ಎಂದು ಮುಂದಿನ ಪೀಳಿಗೆಯ ಜನ ಬಹುಶಃ ನಂಬಲಿಕ್ಕಿಲ್ಲ—ಎಂದು ಡಾ। ಐನ್‌ಸ್ಟೀನ್‌ರವರ ಬಗ್ಗೆ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರೋ, ಯಾರನ್ನು ಕೃತಜ್ಞಭಾವನೆಯಿಂದ ಮಹಾತ್ಮಾಜಿ ಎಂದೂ, ಪ್ರೀತಿ ಆದರಗಳಿಂದ ಬಾಪು ಎಂದೂ ಕೋಟ್ಯಂತರ ಜನ ಕೂಗುತ್ತಿದ್ದರೋ, ಅಂತಹ ಗಾಂಧೀಜಿಯವರಿಗೆ ಗೌರವಾರ್ಪಣ ಮಾಡಲೆಂದು ರಾಷ್ಟ್ರ ರಾಷ್ಟ್ರಗಳ ನಿಯೋಗದ ನಾಯಕರು ಇಲ್ಲಿ ನೆರೆದಿದ್ದರು.

ಆ ತಿಂಗಳ ಭದ್ರತಾ ಮಂಡಲಿಯ ಅಧ್ಯಕ್ಷರಾಗಿದ್ದ ಬೆಲ್ಜಿಯಂ ದೇಶದ ಶ್ರೀ ಫರ್ಡಿನಾಂಡ ವ್ಯಾನ್ ಲ್ಯಾಂಗೇನ ಹವ್ ಈ ರೀತಿ ನುಡಿದರು, 'ಮಹಾ ದುರಂತ ಸಂಭವಿಸಿದೆ. ಅದರಿಂದಾಗಿ ನಮ್ಮ ಹೃದಯ ದುಃಖದಿಂದ ತುಂಬಿ ಹೋಗಿದೆ. ಗಾಂಧೀಜಿಯವರ ಮರಣ ವಾರ್ತೆ ಜಗತ್ತಿನ ತುಂಬ ಹಬ್ಬಿದೆ. ದುಃಖದ ಭಾವನೆ ತುಂಬಿದೆ. ಗಾಂಧೀಜಿಯವರ ಮರಣ ಘಟನೆಯ ಅರ್ಥವೇನು ಎಂಬುದನ್ನು ನಾವು ಬಲ್ಲೆವು. ಗಾಂಧೀಜಿ ಪ್ರಪಂಚಕ್ಕೆ ದೊಡ್ಡ ಪಾಠವನ್ನು ಕಲಿಸಿದ್ದಾರೆ. ಉನ್ನತ ವಿಚಾರಗಳಿಗೆ ಗಾಂಧೀಜಿ ತೋರಿಸಿದಂತ ನಿಷ್ಠೆಯನ್ನು ಜಗತ್ತಿನಲ್ಲಿ ಬೆರಳಿನಿಂದ ಎಣಿಸುವಷ್ಟು ಜನ ಮಾತ್ರ ತೋರಿಸಿದ್ದಾರೆ. ತಮ್ಮ ಉನ್ನತ ವಿಚಾರಗಳ ಯಶಸ್ಸಿಗೆ ತಮ್ಮ ಬಲಿದಾನವನ್ನೇ ಗಾಂಧೀಜಿ ಮಾಡಿದ್ದಾರೆ. ದೂರದಿಂದ ನೋಡುತ್ತಿರುವ ನಮಗೆ ಗಾಂಧೀಜಿ ಈ ಪ್ರಪಂಚದ ಜೀವಿಯಲ್ಲ ಎಂಬ ಹಾಗೆ ಕಾಣುತ್ತಿದ್ದಾರೆ. ಭಾರತೀಯರ ಸ್ವಾತಂತ್ರ್ಯ ಸಂಗ್ರಾಮದ ಸೂತ್ರಧಾರ ಮೂರ್ತಿ ಗಾಂಧೀಜಿ. ಗಾಂಧೀಜಿಯವರ ವ್ಯಕ್ತಿತ್ವ ಅಸದೃಶ. ಅಹಿಂಸೆಯ ಮಹಾಪ್ರವಾದಿ. ಅಹಿಂಸೆಯ ತತ್ವದಿಂದ ವಿಶ್ವಸಂಸ್ಥೆ ಸ್ಫೂರ್ತಿ ಪಡೆದಿದೆ. ಒಗ್ಗಟ್ಟು, ತಿಳುವಳಿಕೆ ಮತ್ತು ಸೋದರ ಭಾವಗಳು ಮಾನವರಿಗೊದಗಿದ್ದವು ಗಾಂಧೀಜಿಯವರಲ್ಲಿ. ನಮ್ಮ ಶಾಂತಿ ಮತ್ತು ಸದ್ಭಾವನೆಯ ಅನ್ವೇಷಣೆಯಲ್ಲಿ ಗಾಂಧೀಜಿ ನಮ್ಮ ನೆಚ್ಚಿನ ಮಿತ್ರರಾಗಿದ್ದರು. ತಮ್ಮ ಜೀವಿತಕಾಲದಲ್ಲಿ ಹೇಗೋ ತಮ್ಮ ಮರಣಾನಂತರದ ಕಾಲದಲ್ಲಿಯೂ ಗಾಂಧೀಜಿ ಆದರ್ಶದ ಜ್ಯೋತಿರವಾಗಿ ಬೆಳಗುವರು..."

ತಾತ್ಕಾಲಿಕವಾಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ ಶ್ರೀ ಬೈರಸ್‌ಪ್ರಿನ್ಸ ಭದ್ರತಾ ಮಂಡಳಿಯು ತನ್ನ ಕಾರ್ಯ ಕಲಾಪ ನಿಲ್ಲಿಸಿ ಶಾಂತಿಯ ಮಹಾಪೂಜಾರಿಯಾಗಿದ್ದ ಗಾಂಧೀಜಿಯವರಿಗೆ ಶ್ರದ್ಧಾಂಜಲಿಯನ್ನು ನೀಡುವದು ಬಹು ಉಚಿತ ಕಾರ್ಯವಾಗಿದೆ ಎಂದು ಹೇಳಿದರು. ಆಮೇಲೆ ಇಂಗ್ಲಂಡಿನ ಪ್ರತಿನಿಧಿ ಶ್ರೀಮಾನ ಫಿಲಿಪ್ ನೋಯಲ್ ಬೇಕರ್ ಮಾತನಾಡಿ, ಇತಿಹಾಸದ ಅನೇಕ ಮಹಾನ್ ಪುರುಷರು ಕೊಲೆಗಡುಕರಿಗೆ ಆಹುತಿಯಾಗಿದ್ದಾರೆ. ಆದರೆ ಗಾಂಧೀಜಿಯವರು ಇಂತಹ ಅಪಾಯದ ಮುನ್ಸೂಚನೆ ಹೊಂದಿದ್ದರೂ ನಿಃಸ್ವಾರ್ಥದ ಬುದ್ಧಿಯಿಂದ ಅದನ್ನು ಕಡೆಗಣಿಸಿದರು. ಕೊಲೆಗಡುಕರ ಕೃತಿ ಎಷ್ಟು ವಿಚಾರಹೀನವಿತ್ತು ಬರಿದು ಆಗಿದೆಂಬುದನ್ನು ಗಾಂಧೀಜಿಯವರ ಮರಣ ಮಾತ್ರ ಹೆಚ್ಚು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

ಫಾರ್ಮೋಸಾದ ಶ್ರೀ ಸಿಯೂಂಗ್ ಅವರು ಹೀಗೆ ಹೇಳಿದರು "ಗಾಂಧೀಜಿಯವರ ವ್ಯಕ್ತಿತ್ವವನ್ನು ನಾವು ಗೌರವಿಸುವುದಾದರೆ ಮತ್ತು ನಮ್ಮ ಕಾಲದ ಅಪಾಯಗಳ ಅರಿವು ನಮಗೆ ಇದ್ದುದಾದರೆ, ಗಾಂಧೀಜಿ ತೋರಿಸಿದ ತತ್ವಜ್ಞಾನವನ್ನು ನಾವು ಅನುಸರಿಸಬೇಕು. ಅನ್ಯಥಾ ಮಾರ್ಗವನ್ನು ನಾನಂತೂ ಕಾಣೆ.

ಅರ್ಜೆಂಟಿನಾ ದೇಶದ ಶ್ರೀ ಆರ್ಸ ಅವರ ಮಾತಾಡಿ 'ಗಾಂಧೀಜಿ ತಮ್ಮ ಆನತೆಯ ಬಂಧ ವಿಮೋಚನೆಗೆ ಅವಿರತವಾಗಿ ಹೋರಾಡಿದರು. ಅಹಿಂಸೆಯ ತತ್ವದಿಂದ ವಿದೇಶೀ ಆಡಳಿತದ ವಿರುದ್ಧ ಹೋರಾಡಿದರು. ಇಂತಹ ಘಟನೆ ಸಮಕಾಲೀನ ಇತಿಹಾಸದಲ್ಲಿ ಮತ್ತೆಲ್ಲಿಯೂ ನೋಡಲು ಸಿಕ್ಕುವದಿಲ್ಲ.... ಅವರ ಮರಣದಿಂದಲಾದರೂ ಎಲ್ಲ ಶಾಂತಿಪ್ರಿಯ ರಾಷ್ಟ್ರಗಳು ಉತ್ತಮ ಪ್ರಪಂಚ ಕಟ್ಟಲು ಒಂದಾಗಲಿ.

ಸಿರಿಯಾ ದೇಶದ ಎಲ್‌ಖೂರಿ ಅವರು ಮಹಾತ್ಮಾಜಿಯವರ ಬಲಿದಾನವನ್ನು ಕ್ರಿಸ್ತನ ಬಲಿದಾನಕ್ಕೆ ಹೋಲಿಸಿದರು.

ಫ್ರಾನ್ಸಿನ ಡಿ ಲಾ ಟೋರ್ನೆಲ್ ಅವರು ಹೀಗೆ ಹೇಳಿದರು. "ಶೀಲ ನಾವೂ ನ್ನ ಫ್ರೆಂಚನಾಗರಿಕನಿಗೂ—ಅವನ ಅಂತರ್‌ರಾಷ್ಟ್ರೀಯ ಜ್ಞಾನ ಎಷ್ಟೇ ಕ್ಲಿಷ್ಟವಾಗಿರಲಿ— ಗಾಂಧೀಜಿಯವರ ಹೆಸರು ತಿಳಿದಿತ್ತು ಮತ್ತು ಅವನು ಅವರ ಹೆಸರನ್ನು ಗೌರವದಿಂದ ಸ್ಮರಿಸುತ್ತಿದ್ದ. ಏಕೆಂದರೆ ಶಾಂತಿ ನ್ಯಾಯ ಮತ್ತು ಸೋದರ ಭಾವದ ಮೂರ್ತಿಮಂತ ಸ್ವರೂಪವೇ ಗಾಂಧೀಜಿ ಆಗಿದ್ದರು ..."

ರಶಿಯಾ ಒಕ್ಕೂಟದ ನಾಯಕರು ಗಾಂಧೀಜಿಯವರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಹಿಸಿದ್ದ ಪಾತ್ರವನ್ನು ಪ್ರಶಂಸಿಸಿದರು. ಕೊನೆಯಲ್ಲಿ ಕೊಲಂಬಿಯಾದ ಶ್ರೀ ಲೋಪೇಝ್ ಅವರು ಮಾತನಾಡುತ್ತ, ಗಾಂಧೀಜಿಯವರು ಕೇವಲ ಶುದ್ಧ ಆಧ್ಯಾತ್ಮಿಕ ತತ್ವದ ಬಲದಿಂದ ತಮ್ಮ ಸಂಗ್ರಾಮವನ್ನು ಹೇಗೆ ಯಶಸ್ಸಿನಿಂದ ಪೂರ್ಣಗೊಳಿಸಿದರು ಎಂಬುದು ಕೌತುಕದ ವಿಷಯವಾಗಿದೆ ಎಂದು ನುಡಿದರು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 16-4-1966.



ಸೇಬು ಹಣ್ಣು ಕಾಶ್ಮೀರದ ಕೊಡುಗೆ. ರಸ ರುಚಿಗಳ ಸಂಗಮ. ಟ್ರಕ್ಕುಗಳಲ್ಲಿ ಮತ್ತು ವಿಮಾನಗಳಲ್ಲಿ ಸಾವಿರಗಟ್ಟಲೆ ಹಣ್ಣುಗಳು ದೇಶದ ಮೂಲೆ ಮೂಲೆಗೆ ಹೋಗುತ್ತಿವೆ.

ಸೇಬು ಹಣ್ಣು ಕಾಶ್ಮೀರದ ಸ್ನೇಹ ಸಂಕೇತ. ಬಾರಮೂಲ, ಬಂಡೀಪುರ, ಅನಂತನಾಗ ಮುಂತಾದ ಅನೇಕ ಊರುಗಳಲ್ಲಿ ಬೆಳೆಯುವ ಈ ಹಣ್ಣು ಅಲ್ಲಿನ ರೈತರ ಸೌಹಾರ್ದ ಸ್ನೇಹದ ಪ್ರತೀಕವಾಗಿ ನಿಮಗೆ ದೊರೆಯುತ್ತಿದೆ.

ಹತ್ತು ಪಾಲು ಹೆಚ್ಚು ಹಣ್ಣು

ದುಂಡಗಿನ, ಕೆಂಪಗಿನ ಸೇಬುಹಣ್ಣು ಕಾಶ್ಮೀರಿ ರೈತರ ಪಾಲಿಗೆ ಸಮೃದ್ಧಿಯ ಸಂಕೇತವೂ ಹೌದು. 1947ರಿಂದೀಚೆಗೆ ಅಲ್ಲಿನ ಸೇಬುಹಣ್ಣು ಉತ್ಪಾದನೆ ಹತ್ತು ಪಾಲು ಹೆಚ್ಚಾಗಿದೆ. ಕಾಶ್ಮೀರದ ತಪ್ಪಲುಗಳಿಂದ ಹೊರಟು ನಿಮ್ಮ ಊರಿಗೆ ಬರುವ ಸೇಬು ಹಣ್ಣಿನ ಜೊತೆ ಅಲ್ಲಿನ ರೈತರಿಗೆ ಸುಖ ಸಮೃದ್ಧಿಯನ್ನು ಹೊರೆಯಾಗಿ ಹೊತ್ತುತರುತ್ತಿದೆ.

ಮುನ್ನಡೆಯುತ್ತಿರುವ ಕಾಶ್ಮೀರ

davp 68/562

ಪ್ರಖ್ಯಾತ ಪುರುಷನಾರು ?

[ಶ್ರೀ ಎಮ್. ಬಿ. ಶಂಕರರಾವ್]

ಸದಾ ಸಂಚಾರಿಗಳಾದ ದೇವಮುನಿ ನಾರದರು ಮೂಜಗಗಳಲ್ಲಿ ಅತ್ಯಂತ ಪ್ರಖ್ಯಾತ ಪುರುಷನು ಯಾರೆಂದು ತಿಳಿಯಲು ಆಶಿಸಿದರು. ಹಲವು ಪ್ರದೇಶಗಳಲ್ಲಿ ಸಂಚರಿಸಿ ವಿಚಾರಿಸಿದಾಗ ಪ್ರತಿದೇಶದ ಮುಂದಾಳುಗಳು ತಂತಮ್ಮ ದೇಶವನ್ನಾಳುವ ಅರಸರೇ ಅತ್ಯಂತ ಪ್ರಖ್ಯಾತರೆಂದು ತಿಳಿಸಿದರು. ಹರಿ, ಹರ, ಬ್ರಹ್ಮಾದಿಗಳಲ್ಲಿ ಯಾರು ಅತ್ಯಂತ ಪ್ರಖ್ಯಾತರೆಂಬುದೆಂದು ಎಲ್ಲಾ ಪುರಾಣಗಳನ್ನು ಜಾಗ್ರತೆಯಿಂದ ಓದಿ ತಿಳಿದು ಒಂದೊಂದು ಪುರಾಣವು ಒಬ್ಬೊಬ್ಬ ದೇವರನ್ನು ಹೊಗಳಿ ಹಾಡಿದ ಕಥನಗಳಿಂದ ನಾರದರಿಗೆ ಸಂಶಯಗಳು ಇನ್ನಿನ್ನೂ ಅಧಿಕವಾದುವು.

ಆದಿನಾರಾಯಣನ ನಿಗ್ಗ ಭಕ್ತರಾದ ನಾರದರು ತಮ್ಮ ಸಂಶಯವನ್ನು ನಿವಾರಿಸುವ ಗೋಸುಗ ಆ ದಿವ್ಯ ಪರಮಾತ್ಮನಲ್ಲಿ ಬಂದರು. ನಾರದರ ಪ್ರಭಾವ ಲೋಕನವಾದಾಗ ಆದಿನಾರಾಯಣನಿಗೆ ಆ ಮುನಿಯ ಉದ್ದೇಶವು ಅರಿವಾಯಿತು. ನಾರದರು ಬಾಯಿ ತೆರೆಯುವ ಮೊದಲೇ ನಾರಾಯಣನು ಮಾತನಾಡಲಾರಂಭಿಸಿದನು.

ನಾರಾಯಣ:— "ನಾರದನೇ! ನೀನು ಈ ದಿನ ಇಲ್ಲಿ ಆಗಮಿಸಿದ ಉದ್ದೇಶವು ನನಗೆ ಅರಿವಾಯಿತು. ನಿನ್ನ ಸಂಶಯಗಳನ್ನು ನಾನು ಶೀಘ್ರ ನಿವಾರಿಸುವೆನು. ಭೂಮಿಯಲ್ಲಿ ಅನೇಕಾನೇಕ ಕೋಟಿ ಮಾನವರೂ, ಜಂತುಗಳೂ, ವೃಕ್ಷಗಳೂ ಇರುವ ಸಂಗತಿ ನಿನಗೆ ತಿಳಿದಿದೆ. ಎಲ್ಲಾ ಲೋಕಗಳಿಗೂ ಮಿಗಿಲಾದ ಲೋಕವು ಭೂಲೋಕವೆಂದು ಮುಂದಾಗಿ ತಿಳಿಯುವವನಾಗು. ಭೂಲೋಕದ ಸೌಂದರ್ಯ ಇತರ ಯಾವ ಲೋಕಗಳಲ್ಲೂ ತೋರದು. ಮಹಾ ಸಾಗರಗಳು ಭೂಲೋಕವನ್ನು ಹೊತ್ತಿರುವವು. ಈ ಸಾಗರಗಳನ್ನು ಅಗಸ್ತ್ಯ ಋಷಿಯು ಒಂದೇ ಒಂದು ಗುಟುಕಿನಲ್ಲಿ ಕುಡಿದ ವಿಚಾರ ನಿನಗೆ ತಿಳಿದಿರಬಹುದು. ಆದ ಕಾರಣ, ಅಗಸ್ತ್ಯ ಮುನಿಯು ಸಪ್ತಸಾಗರಗಳಿಗಿಂತಲೂ ಮಿಗಿಲಾದವನೆಂದು ನಿರ್ಧರಿಸು. ಇಂತಹ ಶಕ್ತಿವಂತ ಮುನಿಯು ಆಕಾಶದಲ್ಲಿ ಲಕ್ಷೋಪಲಕ್ಷ ತಾರೆಗಳ ಕೂಟದಲ್ಲಿ ಏಕಮಾತ್ರ ನಕ್ಷತ್ರನಾಗಿ ನಿಂತಿರುವನು. ಅದು ಕಾರಣ, ಈ ವಿಶಾಲವಾದ ಆಕಾಶವು ಅಗಸ್ತ್ಯನಿಂದಲೂ ಹಿರಿದಾದುದು ಎಂಬುದನ್ನು ನಿರ್ಣಯಿಸು. ಆದರೆ ಅತಿ ಕುಳ್ಳನಾದ ವಾಮನನು ಮಹಾಬಲಿಯನ್ನು ಪಾತಾಳಲೋಕಕ್ಕೆ ಇಳಿಸುವಾಗ ತನ್ನ ಒಂದು ಹೆಜ್ಜೆಯಲ್ಲಿ ಇಡೀ ಆಕಾಶವನ್ನು ಮುಳುಗಿಸಿಬಿಟ್ಟನು. ಈ ಸಂಗತಿಯೂ ನಿನಗೆ ಶ್ರುತವಿರಬಹುದು."

ನಾರದ:— ಮಹಾಸ್ವಾಮಿ, ಈಗ ನನಗೆ ತಮ್ಮ ಶ್ರೇಷ್ಠತೆಯು ಅರಿವುಂಟಾಯಿತು. ತಾವಲ್ಲವೇ ಆ ಕುಳ್ಳ ವಾಮನ ಮೂರ್ತಿಯು?"

ನಾರಾಯಣ:— "ನಾರದನೇ! ನನ್ನನ್ನು ವೃಥಾ ಹೊಗಳಬೇಡ. ಹೊಗಳಿಕೆಯು ಪಾತಕವೆಂದು ತಿಳಿ. ನಾನು ಇದ್ದುದನ್ನೆ ನಿನಗೆ ತಿಳಿಸಿದೆನು. ನನ್ನಲ್ಲಿ ಅಹಂಭಾವವಿಲ್ಲ."

ನಾರದ:— "ಮಹಾಸ್ವಾಮಿ, ತಮಗಿಂದಲೂ ಹೆಚ್ಚಿನ ಪ್ರಖ್ಯಾತರು ಇರುವರೆ?"

"ಇದ್ದಾರೆ; ನನ್ನಿಂದ ಹೆಚ್ಚಿನ ಪ್ರಖ್ಯಾತಿ ಪಟ್ಟು ಬಾಳುವವರೂ ಇದ್ದಾರೆ. ಅವರನ್ನು ನನ್ನ 'ಭಕ್ತ'ರೆಂದು ಕರೆಯುವರು. ಅವರ ಹೃದಯವೇ ವಾಸಸ್ಥಳವು. ಅವರಲ್ಲವಿದ್ದರೆ ನನಗೆ ವಾಸಿಸಲಿಕ್ಕೆ ಎಡೆಯಿಲ್ಲ. ಆ ಭಕ್ತರ ಸೇವೆಯೇ ನನ್ನ ದಿನ ನಿತ್ಯದ ಕರ್ಮವು. ನಾನು ಸದಾ ಅವರ ವಿಧೇಯನು. ಅದು ಕಾರಣ, ನನ್ನ ಭಕ್ತರು ನನ್ನಿಂದಲೂ ಹೆಚ್ಚಿನ ಶ್ರೇಷ್ಠರೆಂದು ಗೊತ್ತು ಮಾಡಿಕೋ."

ನಾರದರು ಮರು ಮಾತನಾಡಲಿಲ್ಲ. ಪರಮಾತ್ಮನ ಭಕ್ತರಲ್ಲಿ ನಾರದ ಮಹರ್ಷಿ ಮರುತಿ— ಈ ಇಬ್ಬರಿಗೆ ಪ್ರಥಮ ಸ್ಥಾನವಿದೆ— ಪರಮಾತ್ಮನ ಇವರ ನಿತ್ಯ ಸೇವಕನು.

ಮಲ್ಪೆಯಲ್ಲಿ ಮೀನು ಗಾರಿಕಾ ಬಂದರಿನ ಬೃಹತ್ ಯೋಜನೆಯ ಉದ್ಘಾಟನೆ

ಮಾರ್ಚ್ 1ರಂದು ಶ್ರೀ ಎಸ್. ನಿಜಲಿಂಗಪ್ಪನವರು ಮಲ್ಪೆಯಲ್ಲಿ 9.66 ಕೋಟಿ ರೂ. ವೆಚ್ಚದ ಮೀನುಗಾರಿಕಾ ಬಂದರಿನ ಶಂಕುಸ್ಥಾಪನೆಗೈದರು. ಇದೇ ಸಂದರ್ಭದಲ್ಲಿ ಶ್ರೀ ನಿಜಲಿಂಗಪ್ಪನವರು ಮಲ್ಪೆ ಫಿಶರ್‌ಮೆನ್ಸ್ ಎಂಟರ್‌ಪ್ರೈಸಸ್ ಸಂಸ್ಥೆಯ ನಿಯೋಜಿತ ಐಸ್ ಫ್ಯಾಕ್ಟರಿಯ ಶಂಕುಸ್ಥಾಪನಾ ಕಾರ್ಯವನ್ನು, ಕರ್ನಾಟಕ ಫಿಶರೀಸ್ ಸಂಸ್ಥೆಯ ಕೆಲ್ವಿನ್ ಯಂತ್ರಗಳ ಜೋಡಣೆಯ, ಮೀನುಗಾರಿಕಾ ದೋಣಿಯನ್ನು ನೀರಿಗಿಳಿಸುವ ಕಾರ್ಯವನ್ನು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು ವಹಿಸಿದ್ದರು. ಶ್ರೀ ಜಿ. ಎಸ್. ರಾಯರು ಸ್ವಾಗತಿಸಿ ಶ್ರೀ ನಿಜಲಿಂಗಪ್ಪನವರು ಕಾರ್ಯಗಳನ್ನ ಪ್ರಶಂಸಿಸಿದರು. ಶ್ರೀ ಎಂ. ಮಧ್ವರಾಜರು ಮಾತನಾಡುತ್ತಾ ಮಲ್ಪೆ ನಮ್ಮ ಭಾಗ್ಯದ ಬಾಗಿಲು, ಈ ಮಲ್ಪೆ ಬಂದರಿನಿಂದ ನಮ್ಮ ಭಾಗ್ಯದ ಬಾಗಿಲು ತೆರೆಯುತ್ತದೆ ಎಂದರು. ಶ್ರೀ ನಿಜಲಿಂಗಪ್ಪನವರು 'ವಿಶಾಲ ಭಾಷನೆ ಬೆಳೆದಂತೆ ಉನ್ನತ ಯೋಜನೆಗಳ ಕನಸು ಸ್ಫುರಿಸುತ್ತಾ ಹೋಗುತ್ತದೆ' ಎಂದರು.

ಶ್ರೀ ಎಸ್ಕಿನ್‌ರವರು ಮಾತನಾಡುತ್ತಾ ಕರಾವಳಿ ಪ್ರದೇಶಕ್ಕೆ ತಕ್ಕ ಪ್ರಾಶಸ್ತ್ಯ ಸಿಕ್ಕಿಲ್ಲವಾದರೂ ಶ್ರೀ ಎಂ. ಮಧ್ವರಾಜರು ಮಾಡುತ್ತಿರುವ ಕೆಲಸದಿಂದ ಈಗ ಅಪೂರ್ವ ಸಿದ್ಧಿಯನ್ನು ಪಡೆಯುವಂತಾಗಿದೆ ಎಂದರು. ಮೈಸೂರು ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಡಾ|| ನಾಗಪ್ಪ ಆಳ್ವರು ಮಾತನಾಡುತ್ತಾ ಕಡಲ ತೀರದ ಸೊಬಗು ಸಂಪತ್ತು ಬೆಳೆಯುತ್ತಾ ಹೋದಂತೆ ಮತ್ಸ್ಯೋದ್ಯಮವೂ ಬೆಳೆದು ಪ್ರತಿಯೊಬ್ಬರಲ್ಲೂ ಶ್ರೀ ಮಧ್ವರಾಜರಂಥ ಮುಖಂಡತ್ವ ಬೆಳೆಯಬೇಕೆಂದರು.

ದಯಮಾಡಿ

ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

IN THE COURT OF CIVIL JUDGE, UDIPI.

L A C. No. 330/1968.

Between:—

Special Land Acquisition Officer, West Coast Roads, Mangalore..............*Referring Officer.*

AND

S. Ananthayya & others —*Claimants.*

To

Sri S. Ananthayya, c/o K G. Kamath Sahkar, 314, Vithalbhai Patel Road, Girgaum, Bombay-4

—permanent resident of No. 1 Shiroor Village, Coondapoor Taluk, Shiroor Post.

As there is no agreement between the claimants for receipt of the compensation amount in Final Award No 62/66 (Ref No A 101/1961 and L.A.C No 21/1961) dated 15-10-1966, the Special Land Acquisition Officer has referred the matter to this Court under Sections 30 & 31 of the Land Acquisition Act, and the said Reference (L.A.C No. 330/68) stands posted finally to 27-3-1969 for your appearance.

You are therefore hereby directed to appear in person or through a pleader before this Court on 27-3 1969 at 11-00 A.M, failing which the matter will be decided Exparte.

—*By order of the Court*—

P. B. R. SHENOY,

Advocate for 5th Claimant.

Udipi, S.K., 3-3-1969.

ಸಿಂಡಿಕೇಟ್ ಬ್ಯಾಂಕ್

ತನ್ನ ಇನ್ನೊಂದು ಶಾಖೆಯನ್ನು ಗುಜರಾಥ ರಾಜ್ಯದ

ಸೂರತ್‌ನಲ್ಲಿ

ತಾ. 3—3—1969ರಂದು ಈ ಕೆಳಗಿನ ವಿಳಾಸದಲ್ಲಿ ತೆರೆದಿದೆಯೆಂದು ತಿಳಿಸಲು ಸಂತೋಷಪಡುತ್ತದೆ

ಸಲಬತ್‌ಪುರ, ನ್ಯೂ ರೋಡ್

ಸೂರತ್-2. (ಗುಜರಾಥ್ ರಾಜ್ಯ)

ಗುಜರಾಥ್ ರಾಜ್ಯದ ಅರ್ಥ ಸಚಿವರಾದ ಮಾನ್ಯ ಶ್ರೀ ಜಸವಂತ ಮೆಹತಾರವರು ನಮ್ಮ ಹೊಸ ಶಾಖೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಈ ಶಾಖೆಯ ಕೂಡುವಿಕೆಯಿಂದ ಸಿಂಡಿಕೇಟ್ ಬ್ಯಾಂಕ್ ಗುಜರಾಥ್ ರಾಜ್ಯದಲ್ಲಿ ಈ ಕೆಳಗಿನ ಮೂರು ಶಾಖೆಗಳನ್ನು ಹೊಂದಿದಂತಾಯಿತು.

1. ಬರೋಡಾ 2. ಅಹಮದಾಬಾದ 3 ಸೂರತ್

ಹಾಲ್ಮೀ ವರ್ಷದಲ್ಲಿ ಈ ಕೆಳಗಿನ ಹೊಸ ಶಾಖೆಗಳು ತೆರೆಯಲ್ಪಟ್ಟವೆ:

ತಮಿಳ್ನಾಡು	ಗೋವಾ
1. ತಿರುವಳ್ಳೂರು	1. ಅಗೇಸಿಯಂ
2. ಕಾಂಚೀಪುರಂ	2. ಕರಂಜಾಲೆಂ

ಕಲ್ಕತ್ತಾ

ದಕ್ಷಿಣ ಕಲ್ಕತ್ತಾ

ತಾ. 24—2—1969ರಂದು ಬೋಬ್ಯಾಜಾರ್ ಶಾಖೆಯು ತೆರೆಯಲಿದ್ದುದನ್ನು ಮುಂದುವರಿಸಲಾಗಿದ್ದ ಆ ಶಾಖೆಯು ಸದ್ಯದಲ್ಲಿ ತೆರೆಯಲ್ಪಡುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

"ಪ್ರತಿಯೊಂದು ಬ್ಯಾಂಕಿಂಗ್ ಸೇವೆಗೆ ಪ್ರತಿಯೋರ್ವನ ಬ್ಯಾಂಕು"

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

ಒಟ್ಟು ಶಾಖೆಗಳು:	ಠೇವಣಿಗಳು:	ಶ್ರೀ ಟಿ. ಎ. ಪೈ
260ಕ್ಕೂ ಮಿಕ್ಕಿ	ರೂ. 140 ಕೋಟಿಗಳು.	ಚೇಯರ್‌ಮೇನ್.

In the Court of Civil Judge, Udipi.

L. A. C. No. 329/1968.

Between :—

Special Land Acquisition Officer, West Coast Roads Mangalore

—Referring Officer.

AND

S. Ananthayya & others

—Claimants

To

Sri S. Ananthayya, C/o K. G. Kamath, Sahakar, 314 Vithalbhai Patel Road, Girgaum, Bombay—4.

—Permanent resident of No. 1 Shiroor Village, Coondapoor Taluk, Shiroor Post.

As there is no agreement between the claimants for receipt of the compensation amount in Final Award No. 62/66 (Ref. No. A. 101/1961 and L. A. C. No. 21/1961) dated 15—10—1966, the Special Land Acquisition Officer has referred the matter to this Court under Sections 30 & 31 of the Land Acquisition Act, and the said Reference (No. L. A. C. 329/1968) stands posted finally to 27—3—1969 for your appearance. You are therefore hereby directed to appear in person or through a pleader before this Court on 27—3—1969 at 11-00 A. M. failing which the matter will be decided Exparte.

...By order of the Court...

P. B. R. Shenoy,

Advocate for 6th claimant.

Udipi. S. K. 3-3-1969.

ಕೀಟ ನಿಯಂತ್ರಣಕ್ಕೆ ಸಂಘಟಿತ ಸಮರ

ಇತ್ತೀಚಿಗೆ ದೆಹಲಿಯಲ್ಲಿ ನಡೆದ ಐದು ದಿನಗಳ ಕೀಟ ನಿಯಂತ್ರಣ ವಿಶ್ವವಿಚಾರ ಗೋಷ್ಠಿ ಪ್ರವರ್ಧಮಾನ ರಾಷ್ಟ್ರಗಳಿಗೆ ವಿಶೇಷ ಕಾಣಿಕೆ ಸಲ್ಲಿಸಿದೆ. ಇತ್ತೀಚಿನ ವರ್ಷಗಳಲ್ಲಿ ಯಶಸ್ವಿ ಕೃಷಿ ಕ್ರಾಂತಿಯ ಹರಿಕಾರವಾಗಿರುವ ಭಾರತಕ್ಕೆ ಮಹತ್ವದ ಕಾಣಿಕೆ ಸಲ್ಲಬಹುದಾಗಿದೆ.

ಬೇಸಾಯಗಾರರ ಸಸ್ಯಕೀಟಗಳ ವಿರುದ್ಧ ನಿರಂತರ ಸಮರ ಹೂಡಬೇಕಾಗಿದೆ. ಇತ್ತೀಚಿನ ವಾರಗಳಲ್ಲಿ ಕೆಲವು ಉತ್ತರ ಭಾರತ ರಾಜ್ಯಗಳಲ್ಲಿ ಕಬ್ಬಿನ ಬೆಳೆಯ ಮೇಲೆ ದಾಳಿ ಮಾಡಿದ "ಪಿರಿಲ್ಲ" ಕೀಟಗಳ ವಿರುದ್ಧ ತೀವ್ರತಮ ವಿರೋಧ ಚಳುವಳಿ ಕೈಗೊಳ್ಳಬೇಕಾಯಿತು. ಉತ್ತರ ಪ್ರದೇಶದ ಒಂಬತ್ತು ಜಿಲ್ಲೆಗಳಲ್ಲಿ ಖಾರೀಫ್ ಮತ್ತು ರಾಬಿ ಬೆಳೆಯ ಮೇಲೆ ದಾಳಿ ಮಾಡಿದ ಕಂಬಳಿಹುಳು ವಿರುದ್ಧ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕಾಯಿತು. ಇಂತಹ ಸಮರ ಇತಿಹಾಸದುದ್ದಕ್ಕೂ ಸಂಭವಿಸುತ್ತಿದೆ. ಕೃಷಿಗೆ ಅಪಾಯಕಾರಿಯಾಗಿರುವ ಜೀವಾಣುಗಳಲ್ಲಿ ಕೀಟಗಳ ಹಾವಳಿ ಅಸಹನೀಯ, ದುರ್ದಮ್ಯ. ಮಾನವ ಭೂಗ್ರಹದ ಮೇಲೆ ಕೇವಲ ಹತ್ತು ಲಕ್ಷ ವರ್ಷಗಳಿಂದ ಜೀವಿಸುತ್ತಿದ್ದರೆ ಈ ಕೀಟಗಳು ಭೂಮಿಯ ಮೇಲೆ ೫೦ ಕೋಟಿ ವರ್ಷಗಳಿಂದ ಒದ್ದಾಡುತ್ತಿವೆ. ಭೂಸಸ್ಯಗಳ ಉಗಮದೊಂದಿಗೆ ಕೀಟಗಳ ವಿಕಾಸವಾಗಿದೆ. ಕೃಷಿಯ ವಿಕಾಸದೊಂದಿಗೆ ಕೀಟಗಳ ಹಾವಳಿ ವೃದ್ಧಿಯಾಗಿದೆ, ಅಂದಿನಿಂದ ಉತ್ಪಾದನೆ ಏರಿಕೆಯ ದಿಸೆಯಲ್ಲಿ ಕೈಗೊಂಡಿರುವ ಮಹತ್ವದ ಕ್ರಮಗಳೊಂದಿಗೆ ಕೀಟಗಳ ಹೊಸ ಹಾವಳಿ ಹೆಚ್ಚುತ್ತಿದೆ.

ಭಾರತದ ಕೃಷಿಯು ಹೊಸ ತಂತ್ರ, ಅಧಿಕ ಬೆಳೆ ನೀಡುವ ತಳಿಗಳ ತೀವ್ರತಮ ವ್ಯವಸಾಯ, ಬೆಳೆ ನಮೂನೆಯಲ್ಲಿ ಆಮೂಲಾಗ್ರ ಬದಲಾವಣೆ, ಬೆಳೆಯ ತೀವ್ರತೆಯಲ್ಲಿ ಶೇಕಡ 200—400 ಏರಿಕೆ, ನವೀನ ಕೃಷಿ ವಿಧಾನಗಳ ಆರಂಭ ಹಾಗೂ ಅನಿರೀಕ್ಷಿತವಾಗಿ ಅಧಿಕ ಪ್ರಮಾಣದಲ್ಲಿ ಫಲ ನೀಡಿಕೆ ಉತ್ಪಾದನೆಯ ಏರಿಕೆಗೆ ಕಾರಣಕರ್ತವಾಗಿದೆ. ಆದರೆ ಜೊತೆಯಲ್ಲಿ ಹೊಸ ಅಪಾಯಗಳು ಹೆಡೆಯೆತ್ತಿವೆ.

ಸಸ್ಯ ರಕ್ಷಣೆಗೆ ಆದ್ಯತೆ

ಮೂರನೇ ಯೋಜನೆಯ ಕೊನೆಯವರೆಗೆ ತೀವ್ರತಮ ಕೃಷಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಸ್ಯರಕ್ಷಣೆಯನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ. ಸಸ್ಯರಕ್ಷಣೆಯ ಅಗತ್ಯವನ್ನು ಮನಗಂಡರೂ ಕೀಟನಾಶಕ ಹಾಗೂ ಸಿಂಪಡಿಸುವ ಸಾಧನಗಳ ಹಂಚಿಕೆಗೆ ಸೂಕ್ತ ವ್ಯವಸ್ಥೆಯಿರಲಿಲ್ಲ. ತಪ್ಪಲವಾಗಿ ಕೀಟಗಳ ಹಾವಳಿ ಅಥವಾ ಭೂಸ್ಪನ ಅಪಾಯದಿಂದ ಅನೇಕ ಪ್ರದರ್ಶನ ಕಾರ್ಯಕ್ರಮಗಳು ಕುಂಠಿತಗೊಂಡವು. ಸಸ್ಯರಕ್ಷಣೆ "ಪ್ಯಾಕೇಜ್" ಕಾರ್ಯಕ್ರಮದ ಪ್ರಮುಖ ಅಂಗವೆಂಬುದನ್ನು ಈಗ ಗಣನೆಗೆ ತೆಗೆದುಕೊಳ್ಳಲಾಗಿದೆ.

ಇಂದು ರಾಸಾಯನಿಕ ಕೀಟನಾಶಕಗಳ ಬಳಕೆಗೆ ಪ್ರಾಧಾನ್ಯತೆ ನೀಡಿದ್ದರೂ, ತೆಂಗಿನ ಗಿಡಕ್ಕೆ ದಾಳಿಯಿಡುವ ಕೀಟವೊಂದರ ಜನನ ಪ್ರಮಾಣವನ್ನು ನಿಯಂತ್ರಿಸುವ ನೊಣವನ್ನು ವೃದ್ಧಿಪಡಿಸುವ ವಿಧಾನ ಅಳವಡಿಸಲಾಗಿದೆ. ಈಗ ಅಧಿಕ ಪ್ರಮಾಣದಲ್ಲಿ ವಿಶೇಷ ವಿಷಮಯ ವೆಚ್ಚಕ್ಕೆ ಕಾರಣವಾಗಿರುವ ರಾಸಾಯನಿಕ ಕೀಟನಾಶಕಗಳ ಅವಲಂಬನೆಯನ್ನು ಪ್ರಚಲಿತ ಸಂಘಟಿತ ಕೀಟನಾಶಕ ನಿಯಂತ್ರಣ ಉಪಕ್ರಮಿಸುವಂತೆ ಮಾಡಲಾಗುತ್ತಿದೆ. ಸೂಕ್ತ ಪ್ರಮಾಣದ ಕೀಟನಾಶಕದ ಬಳಕೆಯೊಂದಿಗೆ ಇತರ ಕೀಟನಾಶಕ ವಿಧಾನಗಳನ್ನೂ ಪ್ರಯೋಗಿಸುವುದೇ ನಿಯೋಜಿತ ಸಂಘಟನಾ ಕಾರ್ಯಕ್ರಮದ ಉದ್ದೇಶವಾಗಿದೆ. ಉತ್ತಮ ವಿಧಾನದಿಂದ, ವ್ಯಾಪಕವಾಗಿ ಕೀಟನಾಶಕ ಬಳಸುವುದೇ ಮುಖ್ಯೋದ್ದೇಶವಾಗಿದೆ. ಅವುಗಳ ಬಳಕೆಯನ್ನು ಸಂಪೂರ್ಣವಾಗಿ ಕೈಬಿಡುವುದಿಲ್ಲ.

ಇದುವರೆಗೆ ಕೈಗೊಂಡಿರುವ ಅಧ್ಯಯನದಿಂದ ತಿಳಿದು ಬಂದಿರುವಂತೆ ಅನೇಕ ಪ್ರಮುಖ ಪ್ರದೇಶಗಳಲ್ಲಿ ಸಂಘಟಿತ ಕೀಟ ನಿಯಂತ್ರಣ ಅತ್ಯಂತ ಪ್ರಯೋಜನಕಾರಿಯಾಗುವುದೆಂಬ, ಇನ್ನೂ ಅನೇಕ ಪ್ರದೇಶಗಳಲ್ಲಿ ಕೈಗೊಂಡಿರುವ ಕೀಟ ನಿಯಂತ್ರಣ ಕಾರ್ಯದಲ್ಲಿ ಸಂಘಟಿತ ಪ್ರಯತ್ನ ರೂಢಿಸಬಹುದೆಂಬ ಖಚಿತ ಸೂಚನೆ ಗೋಚರವಾಗಿದೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 68 of 1968

ಪುಟ್ಟಮಾರಿ ಮಂಜ — — ವಾದಿ

ಮತ್ತು

ಪುಟ್ಟಮಾರಿ ಮಂಜ ಶೆಡ್ತಿ —

—ಪ್ರತಿವಾದಿರು

ಯವರೊಳಗೆ

ನೋಟೀಸು

ಉಡುಪಿ ತಾಲ್ಲೂಕು ಬೇಲಾಡಿ ಗ್ರಾಮದ ಮೂಡೂರು ಅಣ್ಣಯ್ಯ ಶೆಟ್ಟಿ ಅಳಿಯ ಮಂಜಯ್ಯ ಶೆಟ್ಟಿ ಮತ್ತು ನಾಗಮ್ಮ ಶೆಡ್ತಿರ ಮಗಳು ೫ನೇ ಪ್ರತಿವಾದಿಳು ಚಂದಮ್ಮ ಶೆಡ್ತಿ ಇವರುಗಳಿಗೆ ತಿಳಿಯಪಡಿಸುವುದೇನೆಂದರೆ :—

ಮೇಲಿನ ವಾದಿಯು ನಿಮ್ಮ ಮತ್ತು ಇತರರ ಮೇಲೆ ಕೃಸ್ತಿ ನಿವೃತ್ತಿ ಕೇಳಿ ದಾಖಲು ಮಾಡಿದ ವ್ಯಾಜ್ಯವು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 20-3-69ಕ್ಕೆ ಇಡಲ್ಪಟ್ಟಿದೆ. ನಿಮ್ಮದೇನಾದರೂ ಅದರಲ್ಲಿ ಆಕ್ಷೇಪಣೆಯಿದ್ದಲ್ಲಿ ಸದ್ರಿ ಕೋರ್ಟು ಮುಂದೆ ತಾ. 20-3-69ನೇ ದಿನ ಬೆಳಗ್ಗೆ 11.00 ಗಂಟೆಗೆ ಹಾಜರಾಗಿ ಸ್ಟೇಟ್ಮೆಂಟು ಮಾಡಿಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ.)

P. N. Krishnamoorthy Rao,
B.A., LL. B.
Advocate for Plaintiff.

ಉಡುಪಿ, ದ. ಕ.,
ತಾರೀಕು : 22.2.69.

ಮೂಕ ವೇದನೆ

(ಎರಡನೇ ಪುಟದಿಂದ)

ಬರ್ಚಿಯಿಂದ ಕತ್ತಿಗೆಯನ್ನು ಇರಿಯುತ್ತಾ ಒನಕೆಯಿಂದ ಬಡಬಡನೆ ಹೊಯುತ್ತಾ ಚಿತ್ರಹಿಂಸೆ ಕೊಟ್ಟು ಆ ಗುಬ್ಬಿಯನ್ನು ಕೊಂದುಬಿಟ್ಟರು. ಇದನ್ನು ನಾಯಿ ಹತ್ತಿರವೇ ನಿಂತು ನೋಡಿ ಬಹಳ ಮರುಕಪಟ್ಟಿತು. ಆ ದಿನ ನಾಯಿಯೂ ಆಹಾರವನ್ನು ಸೇವಿಸಲಿಲ್ಲ. ಉಪವಾಸದಿಂದಲೂ ತನ್ನ ಆತ್ಮೀಯ ಸ್ನೇಹಿತೆಯಾದ ಗುಬ್ಬಿಯ ಅಗಲುವಿಕೆಯಿಂದಲೂ ನಾಯಿಯ ಆರೋಗ್ಯ ಕೆಟ್ಟಿತು. ಉಪವಾಸವಾಗಿ ಶರೀರವು ಕ್ಷೀಣವಾಗಿ ಹಿಂದಿಯ ನಂತರ ಕೆಲವು ದಿನಗಳು ಕಳೆಯಲು ನಾಯಿಯೂ ಅಸುನೀಗಿತು— ಮೂಕ ವೇದನೆಯನ್ನು ಅರಿವವರಾರು?

ಮೂಕ ಪ್ರಾಣಿಗಳಿಗೂ ಎಷ್ಟೊಂದು ಮಮತೆ! ಯಾರಿಗಾಗಿ ಯಾರ ತ್ಯಾಗ? ಆದರೆ ಇಂದಿನ ಯುಗದಲ್ಲಿ ಪ್ರಾಣ ಕೊಡುವುದು ಹಾಗಿರಲಿ! ಸತ್ತರೆ ಅಳುವವರಾರು ಎಂಬುದು ಬೇಕಲ್ಲ? ನಾವು ಶ್ರೇಷ್ಠರೇ? ಮೂಕ ಪ್ರಾಣಿಗಳು ಶ್ರೇಷ್ಠರೇ? ಕಲವು ಮನುಷ್ಯರು ಭೂಲೋಕವೇ ಸ್ವರ್ಗವೆಂದು ಭಾವಿಸಿ ಸುಳ್ಳು ಹೇಳಿ ಹಿಂಸೆ ಮಾಡಿ ಘೋರ ಕರ್ಮಗಳಿಗೀಡಾಗುವರು. ಆದರೆ ಪ್ರಾಣಿಗಳು ಇನ್ನೊಬ್ಬರಿಗಾಗಿಯೇ ತಮ್ಮ ಜೀವ ಮುಡಿಪಾಗಿಟ್ಟು ದುಡಿಯುತ್ತವೆ. ಅದು ಮಾನವನಿಂದ ಏನಾದರೂ ಪ್ರಯೋಜನ ಪಡೆಯುವುದಿಲ್ಲ. ಹಾಗಾದರೆ ಮಾನವನೆಷ್ಟು ಸ್ವಾರ್ಥಿ! ಎಷ್ಟು ಕ್ರೂರಿ! ಎಷ್ಟು ನಿರ್ದಯಿ!

ಲೀಲಾ ಶುಕ ಕಿಶೋರಿ ನುಡಿಸು; ನುಡಿಸು :

ಲೇಖಕರು :
[ದಿ। ಶ್ರೀ ವಿ. ನರಸಿಂಹವರ್ಮ,
ಬಿ. ಎ. ಎಲ್‌ಎಲ್. ಬಿ.,
ವಿಟ್ಲ ಅರಮನೆ]

ಪ್ರೇಮ ಪಂಜರದಲ್ಲಿ
ಮನವಾರೆ ವಿಹರಿಸುತ।
ಲೀಲಾ ಶುಕ ಕಿಶೋರಿ ನುಡಿಸು ನುಡಿಸು॥
ಕೊರಳ ಕೊಂಕಿಸಿ ಮಧುರ
ವಾಗಿ ನೀ ಭಾಷಿಸಲು।
ಮುಗುಧೆಗೊಪ್ಪುವ ನಿನ್ನ
ಮಾತು ಸೊಗಸು ॥೧॥

ನಿನ್ನ ಮಧುರಾಕ್ಷರದ
ಕಲಕೃತಿಯ ನಾಲಿಸುತ।
ವ್ಯಮರವೆ ನಾನೆನಿತು
ಸಂಮೋಹನ॥
ನಿನ್ನ ಲೀಲಾ ವಿಲಾಸವೆ ಜಗದ
ಜಂಜಡವ
ಮರೆಸಿ ಮನವನು ತಣಿಪ
ಸಂಜೀವನ ॥೨॥

ಪುಷ್ಪಬಾಣನ ಕೈಯ
ಗಿಣಿಯೆ ಬಾ! ಬಾ! ನಲಿದು
ಅರಳಿಸೆನ್ನೆದೆಯಲರ
ನೊಲವಿನಿಂದ॥
ಬಳ್ಳಿ ಮಿಂಚಿನ ತುಣುಕೆ
ನಿನ್ನ ಸೃಜಿಸಿ ವಿಧಾತ
ಸೃಷ್ಟಿ ಕಲೆಯನು ಕಲಿತ
ಗೆಲವಿನಿಂದ ॥೩॥

ಎರಳೆಗಣ್ಣನ ತರಳೆ!
ಮುಂದುಂಬಿಗುರುಳೇ ನೀ
ದೇವನೆನಗಿತ್ತೊಂದು
ಕೊಡುಗೆಯಲ್ಲೇ?
ಭಾವಲೋಕದೊಳೆನ್ನ
ಭಾವರೆಯ ಬಾಷ್ಪಸ್ನ-
-ಧಾಮದಧಿದೇವತೆಯೆ
ಬಾರೆ ನಲ್ಲೇ ॥೪॥

[ಸಂಗ್ರಾಹಕ- ಕೆ. ಪದ್ಮನಾಭಯ್ಯ ಬಲ್ಲಾಳ,
ವಿಟ್ಲ ಅರಮನೆ.]

ಸಾಧಾರಣ ಜಾಡ್ಯ

"102 ವಯಸ್ಸಿನ ಓರ್ವ ಸಾಹುಕಾರರು ಶನಿವಾರ ಬೆಳಗ್ಗೆ; ಅವರ ಸಂಬಂಧಿಕರೊಬ್ಬರು ಅದೇ ದಿನ 100 ವಯಸ್ಸಿನಲ್ಲಿ ಮಧ್ಯಾಹ್ನ; ಅದೇ ಹಳ್ಳಿಯ ಬೇರೊಬ್ಬರು ಅಂದು ಸಂಜೆ ೨೮ ವಯಸ್ಸಿನಲ್ಲಿ ಸತ್ತರು..."

"ಖಾಯಿಲೆ ಏನಾಗಿತ್ತು?"

"ವೃಾರ್ಧಕ್ಯ..."

"ಈ ಖಾಯಿಲೆಯೀಗ ಸಾಮಾನ್ಯವಾಗಿದೆ. ದೆಹಲಿ ಪಕ್ಕದ ಮನೆಯಲ್ಲಿ ಇಬ್ಬರು ಮಕ್ಕಳೂ ಇದೇ ಜಾಡ್ಯದಿಂದ ಸತ್ತರಂತೆ...."

ಸರಿಯಾದ ಕಾರಣ

"ಸರಕಾರಕ್ಕೆ ಇಷ್ಟಬಂದಂತೆ ನೋಟು ಮುದ್ರಿಸಲು ಸಾಧ್ಯವಿಲ್ಲ... ಕೆಲವು ನಿಯಮಗಳನ್ನು ಅನುಸರಿಸಲೇ ಬೇಕಾಗುತ್ತದೆ..."

"ಅದ್ದರಿಂದಲೇ ಜನರ ಈ ಕಾರ್ಯದಲ್ಲಿ ತೊಡಗಿರುವುದು..."

—ಎಚ್. ಎಂ. ಶ್ರೀಕೃಷ್ಣ.

ಪುಸ್ತಕ ವ್ಯಾಪಾರಿಗಳಿಗೆ
ಪ್ರಿಯವಾದ ಸಮಾಚಾರ

ಜನವರಿ 69ರಿಂದ
ಮಾರ್ಚಿ 30ನೇ ತಾರೀಖಿನ ವರೆಗೆ

300=00 ರೂ. ನಿಮ್ಮಳ ವ್ಯಾಪಾರ ಮಾಡಿದರೆ
ಒಂದು Steel Desk (ಬರೆಯುವ—ಮಟೆ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ— ಭಾಗ 1—	ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ— ಭಾಗ 2—	"	2—50
ಉಂಡಾಡಿ ಗುಂಡ—	ಪದ್ಮಶಿವಾಣಿ	2—00
ಧರ್ಮದೇವತೆ—	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು —	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—
ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು
ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

READ &
ADVERTISE IN
NAVAYUGA WEEKLY

NAVAYUGA 6—3—1969
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 33
Licensed to Post without Prepayment

ಗಾಂಧಿ ಜನ್ಮಶತಾಬ್ಧಿ

ಗಾಂಧೀಜಿ ನೂರು ವರ್ಷಗಳು

ಲೇ: ಕಾರ್ಲ್ ಜೆಸ್ಪರ್ಸ್.

ಗಾಂಧೀಜಿ ಭಾರತದ ಸ್ವಾತಂತ್ರ್ಯ ಶಿಲ್ಪಿ. ಸ್ವಾತಂತ್ರ್ಯ ಗಳಿಸಲು ಅವರೆಂದೂ ಸೈನ್ಯಬಲವನ್ನು ಉಪಯೋಗಿಸಲಿಲ್ಲ. ಅಹಿಂಸೆಯ ಬಲದಿಂದಲೇ ಅದನ್ನು ಗಳಿಸಿಕೊಟ್ಟರು. ಗಾಂಧೀಜಿ ರಾಜಕೀಯವನ್ನು ರೂಪಿಸಿದರು. ಹಿಂಸೆಯ ಮಧ್ಯದಲ್ಲೇ ಬೆಳೆದರೂ ಅದರಿಂದ ಬಹುದೂರವಿದ್ದರು.

ಗಾಂಧೀಜಿ, ಧರ್ಮ ಹಾಗೂ ಸಂಪ್ರದಾಯದ ಆಡಂಬರವನ್ನು ನಿವಾರಿಸಿದರು. ತಮ್ಮ ಎಲ್ಲಾ ಕಾರ್ಯಚಟುವಟಿಕೆಗಳಿಗಾಗಿ ಬ್ರಿಟಿಷ್ ಆಳರಸರು ಕೈಗೊಳ್ಳಬಹುದಾದ ಪ್ರತೀಕಾರ ಕ್ರಮಗಳನ್ನು ಅನುಭವಿಸಲೂ ಅವರು ಸಿದ್ಧರಿದ್ದರು. ಭಾರತೀಯರೂ ಅನುಭವಿಸಲು ಸಿದ್ಧರಿರಬೇಕೆಂದು ಗಾಂಧೀಜಿ ಕರೆನೀಡಿದರು. ಗಾಂಧೀಜಿಯವರ ನಿರ್ಣಾಯಕ ಬಲದ ರಹಸ್ಯವಾದರೂ ಇದೇ ಆಗಿದ್ದಿತು.

ಗಾಂಧೀಜಿಯವರಲ್ಲಿ ಅಸಾಧ್ಯವಾದುದನ್ನು ಸಾಧಿಸುವ ದೃಢ ನಿರ್ಧಾರವಿತ್ತು. ಅಹಿಂಸೆಯಿಂದಲೇ ರಾಜಕೀಯ ಧ್ಯೇಯವನ್ನು ಸಾಧಿಸುವ ಮಹತ್ವಾಕಾಂಕ್ಷೆ ಅವರದು. ಈ ದಿಸೆಯಲ್ಲಿ ಅವರು ಬಹುಮಟ್ಟಿಗೆ ಯಶಸ್ವಿಯಾದರು.

ಅಹಿಂಸಾ ಪ್ರವಾದಿ

ಗಾಂಧೀಜಿ ದೈಹಿಕ ಹಿಂಸೆಯನ್ನು ಸಹಿಸುತ್ತಿರಲಿಲ್ಲ. ಸ್ವಯಂ ಅನೇಕ ವರ್ಷಗಳಲ್ಲಿ ಸೆರೆಮನೆಗಳಿಂದಾಗಿ ಅವರು ಈ ದೈಹಿಕ ಯಾತನೆಯನ್ನು ಅನುಭವಿಸಿದ್ದರು. ಅವರ ಪ್ರಾಣಕ್ಕೆ—ಅನೇಕ ಬಾರಿ ಅಪಾಯವೊದಗಿದ್ದಿತು. ಕೊನೆಗೆ ಅವರು ಹಂತಕನ ಗುಂಡಿಗೆ ಆಹುತಿಯಾದರು. ಅಂದರೆ ಗಾಂಧೀಜಿ ಸರ್ವತ್ರ ಅಹಿಂಸೆಯೇ ಇರಬೇಕೆಂದು ಬಯಸಿದ್ದರೆ? ಇದೇ ಸಮಸ್ಯೆಯ ತಿರುಳು. ತಾವು ವಿರೋಧಿಗಳ ಮನಪರಿವರ್ತನೆಗೆ ಪ್ರಯತ್ನಿಸುತ್ತಿರುವುದಾಗಿಯೂ, ಅದಕ್ಕಾಗಿ ಅವರೊಂದಿಗೆ ರಾಜಿ ಮಾಡಿಕೊಳ್ಳಲು ಸಿದ್ಧ ಎಂಬುದನ್ನು ಅವರು ಸ್ಪಷ್ಟವಾಗಿ ಪ್ರಾಮಾಣಿಕವಾಗಿ ತೋರಿಸಿಕೊಟ್ಟರು.

ಗಾಂಧೀಜಿಯವರಿಗೆ ನೈತಿಕ ಬಲದಲ್ಲಿ ಅಪಾರವಾದ ನಂಬಿಗೆ. ಸ್ವಯಂ ಅವರು ಈ ನೈತಿಕ ಬಲವನ್ನು ಸಾಧಿಸಿಕೊಂಡರಲ್ಲದೇ, ಇತರರೂ ಅದನ್ನು ಅಳವಡಿಸಿಕೊಳ್ಳಬೇಕೆಂದು ಅಪೇಕ್ಷಿಸಿದರು.

ಯಾತನೆಯನ್ನು ಸಹಿಸಿಕೊಳ್ಳುವ ಅವರ ಶಕ್ತಿ ಅಸಾಧಾರಣವಾಗಿತ್ತು. ಈ ಶಕ್ತಿಯೇ ಭಾರತದ ಜನಮನದಲ್ಲಿ ಕಂಡುಬಂದಿತು. ಈ ಪ್ರಬಲ ಅಹಿಂಸಾ ಶಕ್ತಿಯೇ ಬ್ರಿಟಿಷರು ಭಾರತ ತ್ಯಜಿಸುವಂತೆ ಪ್ರಬಲವಾದ ಒತ್ತಾಯವನ್ನು ತಂದಿತು. ಬ್ರಿಟಿಷರ ಮಟ್ಟಿಗೆ 'ಹಿಂಸೆ'ಯಾಗಿ ಪರಿಣಮಿಸಿತು.

ಬ್ರಿಟಿಷರಿಗೂ ಭಾರತವನ್ನು ತ್ಯಜಿಸುವ ವಿಷಯ ಒಂದು ಸಮಸ್ಯೆಯಾಗಿ ಕಾಡಿತು. ಕೊನೆಗೆ ಒಂದು ನಿರ್ಧಾರಕ್ಕೆ ಬಂದರು. ದೇಶದಲ್ಲಿ ಭಯಾನಕ ವಾತಾವರಣ ನಿರ್ಮಿಸುವುದಕ್ಕಿಂತ ಅಧಿಕಾರ ತ್ಯಜಿಸುವದೇ ಲೇಸೆಂದು ನಿರ್ಧರಿಸಿದರು.

ಗಾಂಧೀಜಿಯವರು ಸಾರ್ವಜನಿಕವಾಗಿ ಮಾತನಾಡುತ್ತಿದ್ದರು. ಸೆರೆಮನೆಯಲ್ಲಿದ್ದಾಗಲೂ ಅವರಿಗೆ ಕ್ರಿಯಾ ಸ್ವಾತಂತ್ರ್ಯವಿದ್ದಿತು. ಆಂಗ್ಲ ಜನಾಂಗದ ಉದಾರ ದೃಷ್ಟಿಕೋನ ಹಾಗೂ ಕಾನೂನಿನ ನಿಲುವು ಗಾಂಧೀಜಿ ಅವರ ಕ್ರಿಯಾ ಸ್ವಾತಂತ್ರ್ಯಕ್ಕೆ ಆಸ್ಪದವೀಡಿತು.

ಅಪೂರ್ವ ಗುಣ

ಗಾಂಧೀಜಿಯವರ ಒಂದು ಅಪೂರ್ವ ಗುಣವೆಂದರೆ, ಅವರ ವಿಚಾರ ಸ್ಪಷ್ಟತೆ. ಅವರ ಜೀವನವೇ ಇತರರಿಗೆ ಆದರ್ಶವಾಗಿತ್ತು. ಎಲ್ಲಾ ರಾಜಕೀಯವನ್ನು ಮೀರಿದ ಅಸಾಧಾರಣವಾದ ಶಕ್ತಿಯಿಂದ ಅವರು ರಾಜಕೀಯವನ್ನು ನಿರ್ಮಿಸಿದರು.

ಗಾಂಧೀಜಿ ತಾವು ನಿರ್ವಹಿಸಬೇಕಾದ ಕರ್ತವ್ಯವನ್ನು ಕುರಿತು ಸ್ವಯಂ ಒಂದು ಸಿದ್ಧಾಂತವನ್ನೇ ರೂಪಿಸಿದರು. ಗಾಂಧೀಜಿಯವರ ರಾಜಕೀಯಕ್ಕೆ ಧರ್ಮವೇ ಆಧಾರವಿದ್ದಿತು. ಈ ಆಧಾರ ಅಂತಃಪ್ರೇರಣೆಯ ಮೂರ್ತರೂಪ. ಇದೇ ಸತ್ಯಾಗ್ರಹ ಹಾಗೂ ಸತ್ಯಾನ್ವೇಷಣೆಯ ಮಾರ್ಗದರ್ಶಕ. ಗಾಂಧೀಜಿಗೆ ಎಲ್ಲವೂ ಆತ್ಮದಿಂದಲೇ ಆರಂಭ. ಅವರು ಹೊರಗೆ ಪ್ರಕಟಿಸುತ್ತಿದ್ದ ವಿರೋಧವು, ಪ್ರೇಮದ ಅದ್ಭುತ ಕ್ರಿಯಾ ಶಕ್ತಿಯ ಹಾಗೂ ತ್ಯಾಗ ನಿಷ್ಠೆಗಳ ಫಲ.

"ಸತ್ಯಾಗ್ರಹಿ ಯಾವಾಗಲೂ ಸತ್ಯನಿಷ್ಠನಾಗಿರಬೇಕು; ಪವಿತ್ರನಾಗಿರಬೇಕು, ತ್ಯಾಗಶೀಲನಾಗಿರಬೇಕು" ಎಂದು ಗಾಂಧೀಜಿ ಹೇಳುತ್ತಿದ್ದರು. ಸತ್ಯಾಗ್ರಹಿ ಎಂದೂ ಅನಾಸಕ್ತನಲ್ಲ. ಸತ್ಯಾಗ್ರಹಿಗಳಿಗೆ ಮುಖ್ಯವಾಗಿ ಮಾನಸಿಕ ಹಾಗೂ ಆಧ್ಯಾತ್ಮಿಕ ಶಿಸ್ತು ಇರಬೇಕು. ಆತ್ಮಶುದ್ಧಿಯೇ ಅವನ ಜೀವನದ ಉಸಿರಾಗಬೇಕು.

ಗಾಂಧೀಜಿ ಎಂದರೆ ಭಾರತದ ಸಹಸ್ರಾರು ವರ್ಷಗಳ ಹಿಂದಿನ ಋಷಿಮುನಿಗಳ ನೆನಪು ಬರುತ್ತದೆ. ಗಾಂಧೀಜಿಗೂ ಆ ಋಷಿಮುನಿಗಳಿಗೂ ಒಂದು ವ್ಯತ್ಯಾಸವಿದೆ. ಗಾಂಧೀಜಿ ಈ ಲೋಕದಲ್ಲೇ ಇದ್ದುಕೊಂಡು ಘನತರವಾದ ಹೊಣೆಯನ್ನು ಹೊತ್ತರು. ಎರಡನೆಯ ಅಂಶವೆಂದರೆ ಗಾಂಧೀಜಿ ಜೀವನದುದ್ದಕ್ಕೂ ಅನ್ವೇಷಕರಾಗಿಯೇ ಬಾಳಿದರು. ಆತ್ಮಶುದ್ಧಿಗಾಗಿ ಶ್ರಮಿಸಿದರು. ತಮ್ಮ ತಪ್ಪುಗಳೇನು? ಎಂಬುದನ್ನು ಅರಿತುಕೊಂಡರು. ಗಾಂಧೀಜಿ ತಮ್ಮನ್ನು ಸಂತ ಎಂದು ಕರೆಯಲು ಎಂದೂ ಒಪ್ಪಲಿಲ್ಲ. ಜನರು ತಮ್ಮ "ವ್ಯಕ್ತಿ ಸೂತ್ರ" ಮಾಡದಂತೆ ಗಾಂಧೀಜಿ ವಿಶೇಷ ಗಮನ ನೀಡಿದರು.

ಗಾಂಧೀಜಿಯ ಘನತೆ

ಗಾಂಧೀಜಿಯವರು ಸ್ವಾರ್ಥ ತ್ಯಾಗದ ಮೂಲಕ ನವ್ಯಕಾಲದಲ್ಲಿ ರಾಜಕೀಯಕ್ಕೆ ಸಂಬಂಧ ಪಡದ ವಿಷಯವನ್ನು ಸಹ ಯಾವ ರೀತಿ ರಾಜಕೀಯ ಶಕ್ತಿಯಾಗಿ ಮಾರ್ಪಡಿಸಬಹುದೆಂಬುದನ್ನು ತೋರಿಸಿಕೊಟ್ಟರು. ಈ ಮಹೋನ್ನತ ಸಾಧನೆ ಗಾಂಧೀಜಿಯವರ ಘನತೆ.

ರಾಜಕೀಯವು ಧರ್ಮ ಹಾಗೂ ನೀತಿಗಳಿಂದ ಬೇರೆಯಲ್ಲವೆಂದು ಅವರು ಭಾವಿಸಿದ್ದರು. ಆತ್ಮದ ಪಾವಿತ್ರ್ಯವನ್ನು ಕಳೆದುಕೊಳ್ಳುವುದಕ್ಕಿಂತಲೂ ಇಡೀ ಸಾಯುವುದೇ ಲೇಸು ಎಂದು ಗಾಂಧೀಜಿ ಹೇಳುತ್ತಿದ್ದರು.

ಇಂದು ನಮ್ಮೆಲ್ಲರ ಮುಂದೆ ಒಂದೆರಡು ಸಮಸ್ಯೆ ಇದೆ. ಅಣುಬಾಂಬುಗಳಿಂದ ಸರ್ವನಾಶವಾಗುತ್ತದೆ. ಈ ವಿನಾಶದಿಂದ ಪಾರಾಗಲು ನಾವು ಯಾವ ರೀತಿ ಯುದ್ಧಗಳನ್ನು ನಿವಾರಿಸಬೇಕು? ಇದರಿಂದ ಹೇಗೆ ಪಾರಾಗಬೇಕು? ಎಂಬುದೇ ಈ ಸಮಸ್ಯೆ. ಗಾಂಧೀಜಿ ತಮ್ಮ ಮಹತ್ಕೃತಿಗಳ ಮೂಲಕ ಈ ಸಮಸ್ಯೆಗೆ ಉತ್ತರ ನೀಡಿದ್ದಾರೆ, 'ಶ್ರೇಷ್ಠ ಮಟ್ಟದ ರಾಜಕೀಯದಿಂದ ಮಾತ್ರ ರಾಜಕೀಯ ವಿಪತ್ತುಗಳನ್ನು ಎದುರಿಸುವ ಸಾಮರ್ಥ್ಯ ಬರುತ್ತದೆ' ಇದೇ ಅವರು ನೀಡಿದ ಉತ್ತರ. ವಿಶ್ವ ವಿನಾಶವನ್ನು ತಪ್ಪಿಸಬಲ್ಲ ಏಕೈಕ ಮಾರ್ಗ.

(ಡಾ| ಎಸ್. ರಾಧಾಕೃಷ್ಣನ್ ಅವರಿಂದ ಸಂಪಾದಿತ 'ಗಾಂಧೀಜಿ—ನೂರು ವರ್ಷಗಳು' ಎಂಬ ಗ್ರಂಥದಿಂದ)

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — English Made Easy
ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy — ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರ, ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ, 400 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು — Home Remedies
ಡಾ| ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ, ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹಾಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಹೈಸ್ಕೂಲುಗಳಿಗೆ
ನವಯುಗ

ರಾಜ್ಯದ ಡಿ. ಪಿ. ಐ. ಯವರು, ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4, 17-4/66—65ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

13—3—1969

೨೦
ಪೈಸೆ

ಕಥಾ ಪ್ರಪಂಚ

ಅವಳೇಕೆ ಹುಚ್ಚಿಯಾದಳು?

ಬರೆದವರು: ಶ್ರೀ ಎಚ್. ಸುಧಾಕರ ಶೆಟ್ಟಿ.

ಸಂಜೆ ಐದರ ಸಮಯಕ್ಕೆ ನಾನು, ಮೂರ್ತಿಯೊಂದಿಗೆ ವಾಕಿಂಗ್ ಹೊರಟಿದ್ದೆ. ಬೇಗ್ಗ ತಾನೇ ನಾವು ಆ ನಗರಕ್ಕೆ ಆಗಮಿಸಿದ್ದರಿಂದ, ಮೂರ್ತಿ ನನಗೆ ಪಟ್ಟಣದ ಪರಿಚಯ ಮಾಡಿಸಿಕೊಡಲು ಹಾಗೇ ಬೀದಿಯಲ್ಲಿ ಹೊರಟಿದ್ದೆವು. ಅದೆಲ್ಲೋ ಮೂಲೆಯಲ್ಲಿ "ಗಾಂಧೀ ಪಾರ್ಕ್" ಇದೆಯೆಂದು ಮೂರ್ತಿ ನನ್ನನ್ನು ಕರೆದೊಯ್ದ. ನಾನು ಮೂರ್ತಿಯೊಂದಿಗೆ ಮಾತಾಡುತ್ತಾ ಸಾಗಿದೆ. ಸುಮಾರು ಎರಡು ಫರ್ಲಾಂಗು ದೂರ ಬಂದರೂ "ಗಾರ್ಡನ್" ನನಗೆ ಕಾಣಿಸಲಿಲ್ಲ. ಗಾರ್ಡನ್ನಿನತ್ತ ಸಾಗುತ್ತಿದ್ದ ನನಗೆ, ರಸ್ತೆಯ ಪಕ್ಕದಲ್ಲಿ ನನ್ನ ಹೆಸರಿಡಿದು ಯಾರೋ ಕರೆದಂತಾಯ್ತು. ನಾನೊಮ್ಮೆ ಸುತ್ತಲೂ ದಿಟ್ಟಿಸಿದೆ. ರಸ್ತೆಯಲ್ಲಿ ಅರ್ಧ ಫರ್ಲಾಂಗು ದೂರದ ವರೆಗೆ ನಮ್ಮಿಬ್ಬರ ಹೊರತು ಬೇರೆ ಯಾರೂ ಇದ್ದಂತಿಲ್ಲ. ಮತ್ತೊಮ್ಮೆ ರಸ್ತೆಯ ಅಕ್ಕಪಕ್ಕದತ್ತ ದೃಷ್ಟಿ ಹಾಯಿಸಿದೆ. ರಸ್ತೆಯ ಬಲಬದಿಗಿದ್ದ ದೊಡ್ಡ ತಾರಸಿಮನೆಯ ಮುಂಭಾಗದ ಗೇಟಿನಲ್ಲಿ ಯುವತಿಯೊಬ್ಬಳು ನಿಂತು ಬೀದಿಯತ್ತ ನೋಡುತ್ತಿದ್ದಳು. ಅವಳೇ ಕರೆದಿರಬೇಕು ಎಂದು ನಾನು ಯೋಚಿಸಿ ಮೂರ್ತಿಯನ್ನು ವಿಚಾರಿಸುವುದೆಂದೆಣಿಸಿದೆ. ಛೆ! ಅವಳ್ಯಾಕೆ ಕರೆಯುತ್ತಾಳೆ? ಎಲ್ಲೋ ನನಗೆ ಭ್ರಮೆಯಿರಬೇಕು ಎಂದು ಆಗಲೇ ಹತ್ತಾರು ಹೆಜ್ಜೆಯಷ್ಟು ದೂರ ಸಾಗಿದ್ದ ಮೂರ್ತಿಯತ್ತ ಬೇಗಬೇಗನೇ ನಡೆದೆ. ಮತ್ತೆ ಅಲ್ಲಿಂದಲೋ ಅದೇ ಧ್ವನಿಯ ಕರೆ! ಭ್ರಮೆಯಲ್ಲ; ಯಾರೋ ಕರೆಯುತ್ತಿರಬೇಕೆಂದು ಧ್ವನಿ ಬಂದತ್ತ ತಿರುಗಿದೆ. ಹೌದು....ಅದೇ ತಾರಸಿಮನೆಯ ಮುಂಭಾಗದ ಗೇಟಿನಲ್ಲಿ ನಿಂತ ಯುವತಿ, ನನ್ನತ್ತ ಕೈಬೀಸಿ ಕರೆಯುತ್ತಿದ್ದಳು! ನಾನೊಮ್ಮೆ ಬೆಚ್ಚಿಬಿದ್ದೆ.

"ಬನ್ನಿ...ಬನ್ನಿ....ಬನ್ನಿ....ಬನ್ನಿ ಶೇಖರ್.... ನಾಚಿಕೆ ಬೇಡ.... ಬನ್ನಿ...ಒಳಬನ್ನಿ ಶೇಖರ್,...ಈಗತಾನೇ ಬಂದಿರೇನು? ....ಹ್ಹಿ ಹ್ಹಿ....! !.... ಹ್ಹಿ ಹ್ಹಿ ಹ್ಹಿ ..." ಯುವತಿ ನನ್ನತ್ತ ನೋಡಿ ಕಿಲಕಿಲನೆ ನಕ್ಕು ಒಳಗೋಡಿದಳು! ಯಾರದೋ ಬರುವಿಕೆಯಿಂದ ಸಂತೋಷಗೊಂಡು ಒಳಗೆ ತಿಳಿಸಿ ಬರಲು ಹೋಗಿರಬೇಕೆಂದು, ರಸ್ತೆಯಲ್ಲಿ ಮತ್ತೊಮ್ಮೆ ಕಣ್ಣಾಡಿಸಿದೆ, ಉಹೂಂ! ರಸ್ತೆಯಲ್ಲಿ ನಮ್ಮಿಬ್ಬರ ಹೊರತು ಇನ್ಯಾರೂ ಇಲ್ಲ. ಅಲ್ಲದೆ ನನ್ನ ಹೆಸರನ್ನೇ ಕರೆಯುತ್ತಾಳೆ. ನನ್ನನ್ನೇ ಕರೆದಿರಬೇಕು. ಎಲ್ಲೋ ನನ್ನ ಪರಿಚಯದವಳಾಗಿರಬೇಕು; ನನಗೇ ಮರೆತು ಹೋಗಿತ್ತು. ಆಗ ನನಗೆ ಕಳೆದ ವರ್ಷ "ಟೈಫೈಡ್" ಆಗಿ ಆಸ್ಪತ್ರೆಗೆ ಬಂದು ಗುಣವಾಗಿ ಹೋಗಿದ್ದ ಇಂದುಮತಿಯ ನೆನಪಾಯಿತು. ಅವಳು ಇದೇ ಊರಿನವಳಾಗಿದ್ದಳೆಂದು ನನಗೆ ಮೊದಲೇ ಗೊತ್ತಿದ್ದಿತು. ಆದರೆ ಗುರುತು ತಪ್ಪಿಬಿಟ್ಟಿತು.

"ಏ ಮೂರ್ತಿ...ಅಲ್ಲಿ ನೋಡು....ಕರೆಯುತ್ತಾರಲ್ಲ.... ಹೋಗಿಬರುವ. ಬರುವಿಯೋನು? ಒಳಗೆ ಹೋಗಿ ತಿಳಿಸಿಬಂದಂತಿದೆ." ಎಂದು ಯಥಾ ಸ್ಥಾನದಲ್ಲಿ ನಗುತ್ತಾ ನಿಂತಿದ್ದ ಯುವತಿಯನ್ನು ಕಂಡು ನಾನು ಹೇಳಿದೆ. ಬರುವಾಗ ಹೋದಂತಾಯಿತು, ಎಂದು ಮೂರ್ತಿ ಅದೇನನ್ನೋ ಬಚ್ಚಿಟ್ಟುಕೊಂಡು ಹೇಳಿದಂತಾಯಿತು. ಮೂರ್ತಿ ಮತ್ತೆ ಹಿಂದೆ ನೋಡದೆ ಮುಂದೆ ಸಾಗಿಯೇ ಬಿಟ್ಟ! ನಾನು ಯುವತಿಯನ್ನೊಮ್ಮೆ ನೋಡಿ ಮೂರ್ತಿಯನ್ನು ಕೂಡಿಕೊಂಡೆ. "ಅದೇಕೆ ಮೂರ್ತಿ ಹಾಗೆ ಮಾಡಿದೆ?" ನನ್ನ ಪ್ರಶ್ನೆಗೆ ಮೂರ್ತಿ ವಿಷಣ್ಣವದನನಾಗಿ ನಕ್ಕು, "ನಿನಗೆ ಗೊತ್ತಿಲ್ಲ ಶೇಖರ...ಅವಳ ವಿಷಯ. ಅವಳು ಹುಚ್ಚಿ! ಅವಳ ದಿನನಿತ್ಯದ ಕೆಲಸವೇ ಆ ರೀತಿ!" "ಹಾಂ? (!) ಹುಚ್ಚೀ?...." ನಂಬಲಾರದವನಂತೆ ನಾನು ಮತ್ತೊಮ್ಮೆ ತಿರುಗಿ ನೋಡಿದೆ. ಗೇಟಿನಲ್ಲಿ ಮತ್ತೆ ನಗುತ್ತಾ ಆಕೆ ನಿಂತಿದ್ದಳು. ಉಟ್ಟ ಬಿಳೀ ವಾಯಿಲ್ ಸೀರೆ, ಅದಕ್ಕೊಪ್ಪುವ ಕುಪ್ಪಸ ಕುತ್ತಿಗೆಯಲ್ಲಿ ಒಂದೆಳೆಯ ಸರ. ನೀಳವಾಗಿ ಇಳಿದು ಬಂದಿದ್ದ ಕೇಶರಾಶಿ. ತುಂಬಿದ ಕೆನ್ನೆ, ನಕ್ಕಾಗ....ಗುಳಿಬಿದ್ದು....ಛೆ! ಇರಲಾರದು! ಮೂರ್ತಿಗೇ ಹುಚ್ಚು ಹಿಡಿದಿರಬೇಕು! "ಮತ್ತೆ ನನ್ನನ್ನೇ ಕರೆದಳಲ್ಲಾ?" ನಂಬದೆ ಮೂರ್ತಿಯನ್ನು ಕೇಳಿದೆ. "ಜಗತ್ತಿನಲ್ಲಿ ನೀನೊಬ್ಬ ಶೇಖರನೇನು? ಅವಳು ಕರೆದ ಶೇಖರ ನೀನಲ್ಲ. ಅವಳು ರಸ್ತೆಯಲ್ಲಿ ಯಾರು ಹೋದರೂ ಶೇಖರ ಎಂದು ಕರೆಯುತ್ತಾಳೆ. ಪಾಪ! ಸಣ್ಣ ವಯಸ್ಸಿಗೇ ಹುಚ್ಚು ಹಿಡಿಯಿತು." ಎಂದು ಮೂರ್ತಿ ಅನುಕಂಪ ಬೀರಿದ. ಅಷ್ಟು ಸುಂದರಿಯಾದ ಯುವತಿ, ಹುಚ್ಚಿಯೆಂದಾಗ ನನಗೆ ತುಂಬ ಮರುಕವುಂಟಾಯಿತು. ಅವಳ 'ಹುಚ್ಚಿ'ಗೆ ಯಾವುದೋ ಮಹತ್ತರವಾದ 'ಮಾನಸಿಕ ಆಘಾತ'ವುಂಟುಮಾಡಿದ ಕಾರಣವಿರಬೇಕೆಂದು ನಾನು ಊಹಿಸಿದೆ. ಮೂರ್ತಿಗೆ ಎಲ್ಲಾ ವಿಷಯ ತಿಳಿದಿರುವುದರಿಂದ ಮೂರ್ತಿಯನ್ನು ಹೇಳಲು ಒತ್ತಾಯಿಸಿದೆ. "ನಿನಗೆ ಕೇಳಲೇಬೇಕೆಂಬ ತವಕವಿದ್ದರೆ, 'ಗಾರ್ಡನ್'ನಲ್ಲಿ ಕೇಳುವಿಯಂತೆ" ಎಂದು ಮೂರ್ತಿ ಮುಂದೆ ನಡೆದ. ನನ್ನ ಹೃದಯ ಅದೇಕೋ ಭಾರವಾದಂತನ್ನಿಸಿತು. ಮನಸ್ಸಿನಲ್ಲಿ ಅದೇ ಯೋಚನೆ ಮಾಡುತ್ತಾ ಮುಂದುವರಿದೆ. ಮತ್ತೆ ಹಿಂದಿನಿಂದ ಅದೇ ಧ್ವನಿ! ಹಿಂತಿರುಗಿ ನೋಡಿದೆ, ಯುವತಿ ಕಿಲಕಿಲನೆ ನಕ್ಕು ಗೇಟಿನಿಂದ ಒಳಗೋಡಿದ್ದು ಕಂಡಿತು. ಪಾಪ! ಮನಸ್ಸು ಎಷ್ಟೊಂದು ನೊಂದಿರಬೇಕು, ಎಂದು ನನ್ನ ಸಹಾನುಭೂತಿ ವ್ಯಕ್ತಪಡಿಸಿದೆ.

o o o

"ಅವಳದ್ದೊಂದು ದೊಡ್ಡ ಕಥೆ ಶೇಖರ್," ಎಂದು ಮೂರ್ತಿ ಕಲ್ಲುಬೆಂಚಿನ ಮೇಲೆ ಕುಳಿತುಕೊಳ್ಳುತ್ತಾ ಹೇಳಿದ. "ಆಗಲಿ, ಹೇಳು ಮೂರ್ತಿ...ನನಗೆ ಕೇಳಬೇಕೆನಿಸುತ್ತೆ" ಎಂದೆ. ಮೂರ್ತಿ ವಿಷಾದ ನಗೆಯೊಂದನ್ನು ತೇಲಿಸಿದ. "ಅವಳದ್ದು ಚಿಂತಾಜನಕ ಕಥೆ. ಬೀದಿಯಲ್ಲಿ ದಿನವಿಡೀ ಶೇಖರ, ಶೇಖರ ಎನ್ನುವುದೇ ಆಕೆಗೆ ಸಾಕಾಗುತ್ತದೆ. ಶೇಖರ ಎಂದರೆ ಅವಳು ಪ್ರೀತಿಸಿದ ಒಬ್ಬ ಯುವಕನ ಹೆಸರು....ಚಂದ್ರಶೇಖರ ಎಂದು ಪೂರ್ಣ ಹೆಸರು." "ಅಂದರೆ....ಚಂದ್ರಶೇಖರ ಅವಳನ್ನಗಲಿ....ಬೇಕು?" ನಾನು ಕುತೂಹಲ ತಡೆಯದೆ ಮೂರ್ತಿಯನ್ನು ಕೇಳಿದೆ. ಮೂರ್ತಿ ಅದೇನೋ ಯೋಚಿಸಿದ. ಆತ ನನ್ನ ಪ್ರಶ್ನೆಗೆ ಉತ್ತರಿಸದೆ ಅದೇ ಧಾಟಿಯಲ್ಲಿ ಮುಂದರಿಸಿದ.

"ಅವಳನ್ನು ಈ ಸ್ಥಿತಿಗೆ ತರಲು ಆ ಚಂದ್ರಶೇಖರನೇ ಕಾರಣ ಶೇಖರ. ಚಂದ್ರಶೇಖರ ಒಬ್ಬ ಬಡವನ ಮಗ. ಹೇಗೆ ಹೇಗೋ ಓ. ಯಸ್. ಸಿ. ಕಲಿತು ಪ್ರಥಮ ದರ್ಜೆಯಲ್ಲಿ ಪಾಸಾದ. ಆದರೆ ಮುಂದೆ ಓದಲು ಬಡತನದಿಂದ ಅಸಾಧ್ಯವಾಯಿತು. ಚಂದ್ರಶೇಖರನಿಗೆ ದೊಡ್ಡ ಡಾಕ್ಟರ್ ಆಗಬೇಕೆಂಬ ಆಸೆಯಿದ್ದಿತು. ಆದರೆ ಬಡತನದ ಬವಣೆಯಿಂದ ಆತನ ಆಸೆ ಗರಿ ಕಳೆದುಕೊಂಡಿತ್ತು. ಚಂದ್ರಶೇಖರನ ತಂದೆ ಮಗನ ಒತ್ತಾಯದಿಂದ ಯಾರ್ಯಾರದೋ ಪರಿಚಯದಿಂದ ಗೋಪಾಲರಾಯರ ಸಹಾಯ ಕೇಳಿದರು." "ಗೋಪಾಲರಾಯರೆಂದರೆ...." ತಟ್ಟನೆ ಕಥೆಗೆ ಅರ್ಧವಿರಾಮವಿತ್ತು ನಾನು ಪ್ರಶ್ನಿಸಿದೆ. "ಅದೇ, ನಾವು ಬರುವಾಗ, ಯುವತಿ ನಿಂತಿದ್ದ ದೊಡ್ಡ ಮನೆಯಲ್ಲಿ ನೋಡಿದೆಯಲ್ಲಾ! ಅದೇ ಗೋಪಾಲರಾಯರ ಮನೆ ಅಲ್ಲಿ ನಿಂತಿದ್ದಳಲ್ಲಾ ಆ ಹುಚ್ಚು ಹುಡುಗಿಯ ತಂದೆ!" ಎಂದು ಮುಂದರಿಸಿದ." ಅವಳ ಹೆಸರು ಮಾಲತಿ ಎಂದ. ಅದೇನೋ ಪೂರ್ವಜನ್ಮದ ಕರ್ಮ ಎನ್ನುತ್ತಾರಲ್ಲಾ... ಹಾಗಿದ್ದಿರಬೇಕು, ಗೋಪಾಲರಾಯರು ಚಂದ್ರಶೇಖರನನ್ನು ತಮ್ಮ ಮನೆಗೆ ಕರೆತಂದು ಓದಲು ಸಹಾಯವಿತ್ತರು. ಚಂದ್ರಶೇಖರ ಇದೇ ಊರಿನಲ್ಲಿ ಮೆಡಿಕಲ್ಗೆ ಸೇರಿದ. ಗೋಪಾಲರಾಯರ ಮನೆ ಆತನಿಗೂ ಮನೆಯಾಯಿತು.

"ಚಂದ್ರಶೇಖರನಿಗೆ ಕಲಿಯುವುದರಲ್ಲಿ ಉತ್ಸಾಹವಿದ್ದುದರಿಂದ ಆತ ಪ್ರತಿ ತರಗತಿಯಲ್ಲೂ ಪ್ರಥಮ ಶ್ರೇಣಿ ದೊರಕಿಸಿಕೊಂಡ. ತಮ್ಮ ಸಹಾಯ ವ್ಯರ್ಥವಾಗದೆ, ಸಫಲವಾದದ್ದನ್ನು ಕಂಡು ಗೋಪಾಲರಾಯರಿಗೆ ಆನಂದವಾಯಿತು. ಅವರ ಮಗಳು ಮಾಲತಿಯೂ ಆಗ ಹೈಸ್ಕೂಲಿಗೆ ಹೋಗುತ್ತಿದ್ದಳು. ಅವರಿಬ್ಬರೂ ಒಟ್ಟಿಗೆ ಒಂದೇ ಕಾರಿನಲ್ಲಿ ಹೋಗಿಬರುತ್ತಿದ್ದರು. ಮೊದಲು, ಚಂದ್ರಶೇಖರ ಹುಡುಗಿಯರೆಂದರೆ ತುಂಬಾ ಹೆದರುತ್ತಿದ್ದ ಜೊತೆಗೆ ನಾಚಿಕೆಯೂ ಇತ್ತು. ಆದರೆ ಮಾಲತಿಯೊಂದಿಗೆ ಬೆರೆತಾಗ ಆತನಲ್ಲಿದ್ದ ಸಂಕೋಚ ದೂರವಾಯಿತು. ಮಾಲತಿ ಮತ್ತು ಚಂದ್ರಶೇಖರರು ಒಬ್ಬರಿಗೊಬ್ಬರು ಆಕರ್ಷಿತರಾದರು. ಅವರಿಬ್ಬರಲ್ಲಿ ಅದೇನೋ ಗಾಢ ಬಂಧನ ಬೆಳೆದು ಬಂದಿತ್ತು.

"ಜೊತೆ, ಜೊತೆಯಾಗಿ ತಿರುಗುವ ಮಾಲತಿ-ಚಂದ್ರಶೇಖರನನ್ನು ಕಂಡು ರಾಯರೂ, ಅವರ ಹೆಂಡತಿಯೂ; ಅವರಿಬ್ಬ

(ಐವತ್ತೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೨೩
VOL. 48
No. 23

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೩—೩—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಕಳೆಯ ಹೊಲಬೇಕೆ?

ಇತ್ತೀಚಿಗೆ ಮುಂಬಯಿ ಮಹಾನಗರದಲ್ಲಿ ಶಿವಸೇನೆಯು ದಕ್ಷಿಣ ಭಾರತೀಯರ ಮೇಲೆ ನಡೆಸಿದ ನಗ್ನ ಆಕ್ರಮಣ, ಮಾಡಿದ ಹಿಂಸೆ ಇತ್ಯಾದಿಗಳನ್ನು ಕೇಂದ್ರ ಗೃಹಮಂತ್ರಿ ಯಶವಂತರಾವ್ ಬಲವಂತರಾವ್ ಚವನರಾದಿಯಾಗಿ ಮಹಾರಾಷ್ಟ್ರೀಯರೂ ಸೇರಿ ಎಲ್ಲರೂ ಖಂಡಿಸಿದರು. ಶಿವಸೇನೆಯು ಈ ಸಂಕುಚಿತ ಭಾವನೆ ಇನ್ನೂ ಮುಂದುವರಿದು ಮಹಾರಾಷ್ಟ್ರೇತರರ ಮೇಲೆಲ್ಲಾ ಪರಿಣಾಮ ಬೀರುವ ಹೆದರಿಕೆ ಎಲ್ಲರಿಗೂ ಇದ್ದಿರಬಹುದು. ಈ ಹಿಂಸಾಕೃತ್ಯಗಳು ನಡೆದ ಬಳಿಕ ನವದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಸೇರಿತ್ತು. ಶಿವಸೇನೆಯ ಹಿಂಸಾಕೃತ್ಯಗಳ ಖಂಡನೆಗಲ್ಲ; ಅಥವಾ ಮಹಾಜನವರದಿಯ ಪರಿಶೀಲನೆಗೆಂದೇ ಅಲ್ಲ. ಚಿತ್ತರಂಜನ ಹನ್ನೊಂದೆಂಬಂತೆ ಮಹಾಜನ ವರದಿಯು ಪೂರ್ಣ ಮೂಲೆ ಸೇರಿಲ್ಲ; ಅದರಬಗ್ಗೆ ಯೂ ಚರ್ಚೆ ನಡೆಯುವುದು ಎಂದು ಹೇಳಲಾಯ್ತು. ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ತಂತಮ್ಮ ಖಡ್ಗಧಾರೆಯನ್ನು ಮಸೆದು ಜನತೆಯ ಮುಂದೆ ಜಳಪಿಸಿ ತೋರಿಸಿ ನವದೆಹಲಿ ಯಾತ್ರೆಗೆ ಸಿದ್ಧರಾದರು; ತಂತಮ್ಮ ರಾಜ್ಯದ ಜನತೆಯನ್ನು ಮಾತು-ಭರವಸೆಗಳಿಂದ ನಂಬಿಸಿದರು—ವಿವಾದ ಹತ್ತಿಸಿದರು. ಇಷ್ಟರ ವಾದವೇನೆಂಬುದನ್ನು ಬೇರೆ ಹೇಳಬೇಕಾಗಿಲ್ಲ; ಒಬ್ಬರದು ಮಹಾಜನ ವರದಿಯ ಸಂಪೂರ್ಣ ಪುರಸ್ಕಾರ; ಇನ್ನೊಬ್ಬರದು ಸಂಪೂರ್ಣ ತಿರಸ್ಕಾರ. ಆದರೆ, ನವದೆಹಲಿಯಲ್ಲಿ ನಡೆದದ್ದು ಏನು? ಎರಡೂ ರಾಜ್ಯಗಳ ಪ್ರತಿನಿಧಿಗಳು ಪ್ರತ್ಯಪ್ರತ್ಯೇಕವಾಗಿ, ಅಸ್ವಸ್ಥದಲ್ಲಿದ್ದ ಪ್ರಧಾನಿಯನ್ನು ಕಂಡರು; ತಂತಮ್ಮ ವಾದವನ್ನು ಸಮರ್ಥಿಸಿದರು.

ಒಂದು ಸೋಜಿಗವೂ ನಡೆಯಿತು: ಮಹಾಜನ ವರದಿಯನ್ನು ಚರ್ಚೆಗೆ ಎತ್ತಿಕೊಳ್ಳುವ ಕಾಲಕ್ಕೆ ಕರ್ನಾಟಕದ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಸಭೆಯಲ್ಲಿರಲಿಲ್ಲ; ಮುಂದೆ ಅವರು ಸಭೆಗೆ ಆಗಮಿಸಿದಾಗ ವೇಳೆ ಬಹಳವಿರಲಿಲ್ಲ. ಹಾಗಾಗಿ ಕೆಲವು ಪತ್ರಿಕೆಗಳು ವರದಿಮಾಡಿದಂತೆ ಮಹಾಜನ ವರದಿಯ ಪರಿಶೀಲನೆ ಅನಿರ್ದಿಷ್ಟ ಕಾಲ ಮುಂದಕ್ಕೆ ಹೋಯಿತು; ಅಥವಾ ವೀರೇಂದ್ರರು ಹೇಳುವಂತೆ ಅಷ್ಟು ಮುಂದೆ ಹೋಗಲಿಲ್ಲ—ಅಂತೂ ಈ ಬಾರಿಯ ಕಾರ್ಯಕಾರಿ ಸಭೆಯಲ್ಲಿ ನಡೆಯಲಿಲ್ಲ; ನಿಕಟ ಭವಿಷ್ಯದಲ್ಲಿ ಗಡಿ ಪ್ರಶ್ನೆ ಬಗೆಹರಿಯುವ ಲಕ್ಷಣ ಗೋಚರವಿಲ್ಲ. ಕರ್ನಾಟಕದ ಹಿತಚಿಂತನೆಗೆ ಬದ್ಧಕಂಕಣರಾದ, ರಾಜ್ಯದ ಹಿತವನ್ನೆಂದೂ ಅಲಕ್ಷಿಸದ ಮುಖ್ಯಮಂತ್ರಿಗಳು ಚರ್ಚೆಯ ಕಾಲಕ್ಕೆ ಸಭೆಯಲ್ಲಿ ಹಾಜರಾಗದಿದ್ದುದು ಶೋಚನೀಯ. ಇವರ ಅನುಪಸ್ಥಿತಿಯಿಂದಾಗಿ ಪ್ರಶ್ನೆ ಮುಂದುವರಿಯಲು ಮತ್ತೊಂದು ಸದವಕಾಶವೊದಗಿತು.

ಗೃಹಮಂತ್ರಿ ಚವನರೂ ಮುಖ್ಯಮಂತ್ರಿ ನಾಯಕರೂ ಪದೇಪದೇ ಸಂಕುಚಿತ ಪ್ರವೃತ್ತಿಯ ಶಿವಸೇನೆಗೆ ಎಚ್ಚರಿಕೆ ಕೊಡುತ್ತಿದ್ದಾರೆ. ಇದನ್ನು ಸಹಿಸಲಾಗದೆನ್ನುತ್ತಾರೆ. ಇದನ್ನು ತಡೆಯುವ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತದೆ ಎಂದು ಹೆದರಿಸುತ್ತಾರೆ ಅಂದರೆ, ಇವರು ಭಾಷಣಗಳ ಮೂಲಕವೇ ಈ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ. ಮುಂಬಯಿಯು ಬರಿಯ ಮಹಾರಾಷ್ಟ್ರೀಯರದ್ದಾಗಿ ಉಳಿದಿಲ್ಲ. ಅದೊಂದು ಅಂತರಾಷ್ಟ್ರೀಯ ನಗರ; ಹಾಗಿರುವಾಗ ಶಿವಸೇನೆಯ ಹಿಂಸಾಕೃತ್ಯಗಳು ದೇಶದ ಗೌರವಕ್ಕೆ ಕಳಂಕ ಹಚ್ಚುವಂತಹವು. ಮಹಾರಾಷ್ಟ್ರೇತರರಿಗೆ ಭದ್ರತೆ ಅಲ್ಲಿ ದೊರೆಯದೆ ಹೋದರೆ, ದೇಶದ ಜನತೆಗೆ ಅಲ್ಲಿ ಸ್ವಾತಂತ್ರ್ಯವಿಲ್ಲವಾದರೆ, ನಮ್ಮದೊಂದು ದೇಶವಾಗಿ ಏನು ಪ್ರಯೋಜನ? ಮಾತಿನಿಂದ ಕೃತಿ ಸಾಗದು; ಕೃತಿಯಿಂದ ಕಾರ್ಯ ಸಾಧಿಸಬೇಕು. ಇದಕ್ಕಾಗಿ ಶಿವಸೇನೆಯಂತಹ ದೇಶದ ಐಕ್ಯಘಾತಕ ಶಕ್ತಿಗಳನ್ನು ಬಹಿಷ್ಕರಿಸಬೇಕಾಗಿ ಬಂದರೂ ಉಗ್ರೋಪಾಯದಿಂದ ದಂಡಿಸಬೇಕಾಗಿ ಬಂದರೂ ಅದಕ್ಕೆ ಅಧಿನಾಯಕರು ವಿಚಾರ ಮಾಡಬಾರದು.

ಆದರೆ, ಕೇಂದ್ರ ನಾಯಕರದು ಪ್ರತಿಯೊಂದನ್ನೂ ಹಿಂದೆ ಹಾಕುವ ಪ್ರವೃತ್ತಿ. ಮಹಾಜನ ವರದಿಯು ಕೈಸೇರಿ ವರುಷ ದಾಟಿದರೂ ಅದರ ಬಗ್ಗೆ ಪರ್ಯಾಲೋಚನೆ ನಡೆಯಲಿಲ್ಲ. ಜಲವಿವಾದಕ್ಕೆ ಪರಿಹಾರವೂ ದೊರಕುವುದಿನ್ನೂ ಸಾಧ್ಯವಾಗಿಲ್ಲ. ಕರ್ನಾಟಕ-ಮಹಾರಾಷ್ಟ್ರ, ಕರ್ನಾಟಕ-ಕೇರಳ ಗಡಿಯಲ್ಲಿರುವ ಕನ್ನಡಿಗರ ಜೀವನ ದುರದೃಷ್ಟಕರವಾಗಿಯೇ ಇದೆ. "ಶಿವಕಟ್ಟೆ ಕಟ್ಟಕ್ಕೆ ಹೋಗುವವರು" ಎಂಬ ಚಚ್ಚನ ಡಿಯಂತೆ ನೊಂದವರು. ಅವರ ದಾರುಣ ಕತೆ ಕಲ್ಲಿನೆದೆಯ ಹುಟ್ಟಿಸುವಂತಹದು. ಮಹಾಜನ ವರದಿಯು ಪ್ರಕಟವಾದ ಬಳಿಕ ಈ ಬಗೆಯ ಕಠೋರತೆ ಮಿತಿಮೀರಿದೆ. ಆದುದರಿಂದ ಜನಹಿತದ ದೃಷ್ಟಿಯಿಂದಲಾದರೂ ಪ್ರಶ್ನೆಗೊಂದು ಉತ್ತರವನ್ನು ಬೇಗನೇ ಅರಸಬೇಕಾದುದು ಮುಖ್ಯ. ಮಹಾಜನ ವರದಿಯ ಬಗ್ಗೆ ಮೂರು ರಾಜ್ಯಗಳ ನಿಲುವು ಮೂರು ಬಗೆ. ಹಾಗಾಗಿ ಆ ವರದಿಯನ್ನು ಕೇಂದ್ರವು ಪುರಸ್ಕರಿಸುವುದು ಸಾಧ್ಯವೇ ಇಲ್ಲ. ಈಗ ಮತ್ತೊಮ್ಮೆ ಮಾತುಕತೆಗಳ ಮೂಲಕ ಪರಿಹಾರವರಸಬೇಕೆಂಬ ವಾದ ಮುಂದೆ ಬಂದಿದೆ. ಅಂದು ಸಂಧಾನ ಮೂಲಕ ನಿರ್ಧಾರಕ್ಕೆ ಬರಲು ಅಸಮರ್ಥರಾದ ನಾಯಕರು, ಮಹಾಜನ ಆಯೋಗಕ್ಕೆ ಪ್ರೇರಕ ಶಕ್ತಿಯೆನಿಸಿದ ನಾಯಕರು ಇಂದು ಮತ್ತೆ ಮಾತುಕತೆಗಳತ್ತ ವಾಲಿಸುವುದೆಂದರೆ, ಅವರ ದಯನೀಯ ಸ್ಥಿತಿಯನ್ನು ಬಹಿರಂಗ ಪಡಿಸುತ್ತದೆ. ಅವರ ಗಾಳಿಬಂದತ್ತ ತೂರಿಕೊಳ್ಳುವ ಪ್ರವೃತ್ತಿಯನ್ನು ಹೊರಗೆಡಹುತ್ತದೆ. ಅಂದು ಸಂಧಾನ ಮೂಲಕ ನಿಂಹಬಾಲು ತಮಗೆ ಬರುವುದಿಲ್ಲವಾದ್ದರಿಂದ ಆಯೋಗ ರಚಿಸಲು ಕೇಳಿಕೊಳ್ಳಿರೆಂದು ನಾಯಕರನ್ನು ನಿರ್ಬಂಧಿಸಲಾಯಿತೆ? ಈಗ, ಮಹಾಜನ ಆಯೋಗದಿಂದ ಸರ್ವನಾಶ; ಅದನ್ನು ತಿರಸ್ಕರಿಸಿರಿ ಎಂಬ ನಿರ್ಬಂಧವೆ? ಅಂತೆಯೇ ನಾಯಕರು ನಡೆದರೆ? ಅಂದರೆ ಸಿಂಹಪಾಲು ಮಾತ್ರ ಮುಂದಿಗಳಿಗೆ ನ್ಯಾಯ ನೀಡುವುದು. ಪ್ರಾಯಃ ಈ ಬಗೆಯ ಉದಾರನೀತಿಯ ಬಲದಿಂದಲೇ ನಾಯಕರು ಅಧಿಕಾರ ಪೀಠದಲ್ಲಿದ್ದಾರೆನ್ನಬಹುದೋ ಏನೋ!

ಇತ್ತೀಚೆಗೆ ಇನ್ನೊಂದು ವಾದ ಮೂಡಿದೆ. "ಕೇಂದ್ರದಲ್ಲಿ ಗೃಹಮಂತ್ರಿಯಾಗಿ ಚವನರಿರುವವರೆಗೆ ಕರ್ನಾಟಕಕ್ಕೆ ಸೀಮಾ ವಿವಾದದಲ್ಲಿ ನ್ಯಾಯ ದೊರೆಯದು. ಡಾ| ಕೆ. ಎಲ್. ರಾಯರು ನೀರಾವರಿ ಸಚಿವರಾಗಿರುವ ವರೆಗೆ ಕೃಷ್ಣಾ ನದೀ ವಿವಾದದಲ್ಲಿ ಕರ್ನಾಟಕಕ್ಕೆ ಹಿತವಾಗದು......" ಎಂದು ಮುಂತಾಗಿ. ಇದೇ ವಾದ ಮುಂದುವರಿದರೆ, ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿರುವವರೆಗೆ ಕರ್ನಾಟಕನನ್ನೇ ಎತ್ತಿ ಕಟ್ಟುವರೆಂದು ಉಳಿದವರೂ ಹೇಳಬಹುದು. ಅಖಿಲ ಭಾರತ ಪದವಿಯಲ್ಲಿರುವವರು ನಿಷ್ಪಕ್ಷಪಾತಿಗಳಾಗಬೇಕಾದುದ ಧರ್ಮ. ಅವರು ತಮ್ಮ ರಾಜ್ಯದವರು ಎಂದು ಅವರಿಂದ ಹೆಚ್ಚಿನದನ್ನು ಬಯಸಿ ಅವರನ್ನು ಧರ್ಮಸಂಕಟಕ್ಕೋ ಅನ್ಯಾಯ ಮಾರ್ಗಕ್ಕೋ ಇಳಿಸುವುದು ಅಧರ್ಮ. ಆದುದರಿಂದ ಕನ್ನಡಿಗರೇ ಇರಲಿ, ಮರಾಠಿಗರೇ ಇರಲಿ, ಅಧರ್ಮವನ್ನು ಪುರಸ್ಕರಿಸದೆ ಧರ್ಮಪಥದಲ್ಲಿ ಮುನ್ನಡೆಯಬೇಕು. ಆಗ ಮಾತ್ರ ನಮ್ಮಲ್ಲಿ ಸಮಸ್ಯೆಗಳಿಗೂ ಒಂದು ಬಗೆಯ ಸಮಾಧಾನಕರ ಪರಿಹಾರ ಹುಡುಕುವುದು ಸಾಧ್ಯ. ಇಲ್ಲವಾದರೆ ನಮ್ಮ ಸಮಸ್ಯೆಗಳು—ವಿವಾದಗಳು, ಭಿನ್ನಮತಗಳು ಹೆಚ್ಚಾಗಿ ದೇಶ ಕಳೆಯ ಹೊಲವೇ ಆಗುತ್ತದೆ. ಹೀಗಾಗದಂತೆ ನೋಡಿಕೊಳ್ಳುವುದು ಪ್ರತಿ ನಾಗರಿಕನ ಆದ್ಯ ಕರ್ತವ್ಯ.

ಬಿಕ್ಕಟ್ಟಿನ ಹೆಬ್ಬಾಗಿಲು

ಬಿಹಾರದ ಸಂಮಿಶ್ರ ಸರಕಾರದ ಕಾಂಗ್ರೆಸ್ ಮುಖ್ಯಮಂತ್ರಿ ಸರ್ದಾರ ಹರಿಹರ ಸಿಂಗರು ಪ್ರಥಮ ಚುಂಬನದಲ್ಲೇ ಹಿಂಜರಿದುದೇಕೆಂದು ಈಗ ಗೊತ್ತಾಗಿದೆ. ಜನತಾ ಪಕ್ಷದ ನಾಯಕ ರಾಮಘಡದ ಅರಸ ಕಾಮಾಕ್ಷ ನಾರಾಯಣ ಸಿಂಹರನ್ನು ಹರಿಹರ ಸಿಂಗರು ಸಚಿವ ಸಂಪುಟದಲ್ಲಿ ಸೇರಿಸಲಿದ್ದಾರೆಂಬ ಸುದ್ದಿ ಕೇಳಿದೊಡನೆಯೇ ದಿಲ್ಲಿ ನಾಯಕರು ಅವರಿಗೆ ಕರೆ ಕಳಿಸಿದರು. ಅರಸರನ್ನು ಕೈಬಿಡುವಂತೆ ಸರ್ದಾರರನ್ನು ಕೇಳಿಕೊಂಡರು. ಹಾಗೆ ಕೈಬಿಟ್ಟರೆ, ಬಿಹಾರದಲ್ಲಿ ಸಂಪುಟ ರಚನೆ ಅಸಾಧ್ಯವೆಂಬ ಸರ್ದಾರರ ವಾದವನ್ನು ಹೈಕಮಾಂಡು ಕೊನೆಗೂ ಒಪ್ಪಿಕೊಂಡಿತು; ಹಾಗಾಗಿ ಒಂದು ದಿನ ತಡವಾಗಿ ಒಂದು ಡಜನು ಮಂತ್ರಿಗಳು ಪ್ರಮಾಣ ವಚನ ಸ್ವೀಕರಿಸಿದರು. ಅರಸರ ಜನತಾ ಪಕ್ಷದೊಡನೆ ಕೂಡಿಕೊಂಡದ್ದು ಮಾತ್ರವಲ್ಲದೆ ವಿವಾದಾಸ್ಪದ ವ್ಯಕ್ತಿಯಾದ ರಾಜರನ್ನೂ ಮಂತ್ರಿಯಾಗಿ ಸೇರಿಸಿಕೊಂಡದ್ದನ್ನು ಪ್ರತಿಭಟಿಸಿ ಮದ್ರಾಸಿನ ಶ್ರೀ ಸಿ. ಸುಬ್ರಹ್ಮಣ್ಯಂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ರಾಜಿನಾಮೆ ನೀಡಿದರು. ಅವರು ರಾಜಿನಾಮೆಯನ್ನು ಹಿಂತೆಗೆಯಲೊನೇ ಒಪ್ಪಿದ್ದಾರೆ—ಆದರೆ ಶರ್ತವೊಂದ — ರಾಜಕಾಮಾಕ್ಷನಾರಾಯಣ ಸಿಂಗರನ್ನುಳಿದು ಬಿಹಾರದಲ್ಲಿ ಮಂತ್ರಿಮಂಡಳ ರಚಿಸಬೇಕು. ಆದರೆ, ಇದು ಸಾಧ್ಯವಾಗುವ ಮಾತಲ್ಲ. ಬಿಹಾರ ವಿಧಾನ ಸಭೆಯಲ್ಲಿ ೧೧೮ ಸ್ಥಾನ ಗಳಿಸಿದ ಕಾಂಗ್ರೆಸ್ಸೇ ಹಿರಿಯ ಸಂಖ್ಯಾಕ ಪಕ್ಷವಾಗಿ ಅವರ ಇವರ ನೆರವಿನಿಂದ ಸರಕಾರ ರಚಿಸಲು ಮುಂದೆ ಬಂತು. ಅಲ್ಲಿನ ಸಂಪುಟದ ಉಳಿವು ಅಳಿವುಗಳು ಈ 'ವಿವಾದಾಸ್ಪದ ರಾಜ'ರನ್ನೇ ಹೊಂದಿಕೊಂಡಿದೆಯೆಂಬುದು ನಿಜವೇ. ಆಗ, ಅಧಿಕಾರದ ಆಶೆಯನ್ನು ತೊರೆದು

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ



"ಧರ್ಮಕ್ಕೆ ಜಯವೆಂಬುದಕ್ಕೆ ರಾಜ್ಯಪಾಲ ಧರ್ಮವೀರರೇ ಸಾಕ್ಷಿ."

ಮೋಹನ

ಗ್ರೀಕ ರಾಜ್ಯದಲ್ಲಿ

ಪಿತೃಪಕ್ಷದಲ್ಲಿ ಕಾಗೆಗಳಿಗೇ ಸನ್ಮಾನ

"ನೋಡಿದ್ದೀಯ? ಈಗಿನ ಮಕ್ಕಳ ಕೆಲಸವನ್ನ?"

"ಏನು?"

"ಏನು ಅನ್ನೋದು? ಈ 'ಹದಿ'ಯ ಮಕ್ಕಳು ಎಷ್ಟೆಲ್ಲಾ ರಂಪಾಟ ಮಾಡ್ತಾರೆ ನೋಡು."

"ಹಾಗೆಂದರೆ ..."

"ಓ 'ಹದಿ'ಯ ಮಕ್ಕಳು ಅಂತಂದ್ರೆ ಹದಿನೆರಡರಿಂದ ಹದಿನೆಂಟರ ವರೆಗಿನ ಪ್ರಾಂತ ಅರ್ಥ..."

"ಓಹೋ, ಹಾಗೋ, ನಾನು ಏನೋ ಏನೋ ಅಂತಿದ್ದೆ. ಆಯ್ತು. ಏನು ಮಾಡಿದ್ರು?"

"ಏನು ಮಾಡಿದ್ರು ಅಂತ ಕೇಳೋದಕ್ಕಿಂತ ಏನ ಮಾಡ್ಲಿಲ್ಲಾಂತ ಕೇಳೋದೇ ಕ್ಷೇಮ..."

"ಸರಿ, ಹಾಗೆಯೇ ಕೆಳ್ತೀಂತ ಇಟ್ಕೊಳ್ಳಿ..."

"ಎಲ್ಲಾನೂ ಮಾಡ್ತಾರೆ...."

"ಅಂದ್ರೆ?"

"ಈ 'ದೊಡ್ಡ ಮಕ್ಕಳು' ಹ.ಡ.ಗಾಟಿಕೆಯಿಂದ ದೂರವಾಗಿರೋದಿಲ್ಲ. ಹಾಗಾಗಿ ಒಂದಲ್ಲ ಒಂದು ಕೀಟಲೆಯಲ್ಲೇ ತಮ್ಮನ್ನ ತಾವೇ ಮರೆತುಬಿಡ್ತಾರೆ..."

"ಇದು ಸಾಮಾನ್ಯವಾಯ್ತು. ಈಗ ನಡೆದದ್ದಾದರೂ ಏನು?"

"ಅಲ್ವೆ, ಮೊನ್ನೆ ಬೊಂಬಾಯಿಯ ಬಾಹ್ಯವಲಯದಲ್ಲಿ ರೈಲುದಾರಿಯ ಫಿಶ್ ಪ್ಲೇಟ್ ಬೋಲ್ಟುಗಳನ್ನು ಯಾರೋ ಕಿಡಿಗೇಡಿಗಳು ತಪ್ಪಿಸಿದ್ದರೆಂದು ವರದಿಯಾಗಿತ್ತಲ್ಲಾ?"

"ಹೌದು. ಅದೇನೋ ಕೂತವರ ಪುಣ್ಯದಿಂದ ಅಪಘಾತ ನಡೆಯಲಿಲ್ಲ."

"ಅದ್ಯಾಕೆ ಕೂತವರ ಪುಣ್ಯಾಂತೀಯ? ಡ್ರೈವರನ ಜಾಣ್ಮೆಯಿಂದ, ಸಮಯ ಸ್ಫೂರ್ತಿಯಿಂದ...."

'ಇದೊಳ್ಳೇ ಭೇಷಾಯ್ತು...'

'ಏನು?'

'ಅಲ್ರಿ, ಡ್ರೈವರನೇನು ರೈಲಿನಿಂದ ಹೊರಗಿದ್ದನೇನು?'

'ಓ... ಹ್ಞಾಂ... ನೋಡು ಇದೀಗ ಅದು ಕಿಡಿಗೇಡಿಗಳ ಕೆಲಸವಲ್ಲ; ಈ ಹದಿ, ಮಕ್ಕಳ ಕೆಲಸ ಅಂತ ಗೊತ್ತಾಗಿದೆ....'

'ಹೌದೇ?'

'ಒಬ್ಬನ ವಯಸ್ಸು ೧೦, ಇನ್ನೊಬ್ಬ ೧೨ರವ, ಮೂರನೆಯವ ೧೩ರವ. ಈ ತ್ರಿಮೂರ್ತಿಗಳೇ ಇದರ ಕಾರ್ಯಕರ್ತರು ಎಂಬುದಕ್ಕೆ ಸಾಕ್ಷಿ ಪುರಾವೆ ಎಲ್ಲ ದೊರೆತಿದೆ."

'ಯಾವ ಸ್ಕೂಲಿನವ್ರು?'

'ಅಯ್ಯೋ, ಅವ್ರು ಯಾವ ಸ್ಕೂಲಿಗೂ ಅಟೆಂಡ್ ಆಗೋಲ್ಲಾಂತೆ ಏನೋ ಲೇಬರ್ ಕ್ಯಾಂಪಿ ಬಳಿಯ ಮಕ್ಕಳಂತೆ. ಫಿಶ್‌ಪ್ಲೇಟ್ ಬೋಲ್ಟನ್ನು ತಾವು ಹೇಗೆ ತೆಗೆದೆವು ಎಂಬುದನ್ನವರು ಪ್ರತ್ಯಕ್ಷವಾಗಿ ತೆಗೆದು ತೋರಿಸಿದರಂತೆ..."

"ಅಲ್ರಿ, ಈ ಮಕ್ಕಳಿಗೆ ಅವು ಯಾಕೆ?"

"ಅದ್ರಲ್ಲೇ ತಮಾಷೆ ಇರೋದು..."

"ಏನು?"

"ಆ ಮಕ್ಳು ಫಿಶ್‌ಪ್ಲೇಟ್ ಬೋಲ್ಟನ್ನು ಪ್ರತಿಯೊಂದಕ್ಕೆ ಹತ್ತು ಪೈಸೆಯಂತೆ ವ್ಯಾಪಾರಿಯೊಬ್ಬನಿಗೆ ಮಾರಿ, ಬಂದ ಹಣದಿಂದ ಸಿನೆಮಾ ನೋಡಿದರಂತೆ..."

"ಓ, ಸಿನೆಮಾದ ಹುಚ್ಚು ಈ 'ಹದಿ ಮಕ್ಕಳನ್ನು' ಈ ರೀತಿ ಮಾಡಲು ಪ್ರೇರೇಪಿಸಿತೂಂತಾಯ್ತು."

"ಹ್ಞಾ, ಪೋಲೀಸರು ಸದ್ಯ ಅವರ ಮೇಲೆ ಅಪಘಾತದ ಸಂಚು ಹೂಡಿದ ಅಪರಾಧ ಹೇರಿದ್ದರೂ, ಇದರಲ್ಲಿ ಅಂತಹ ಸಂಚೇನೂ ಕಾಣಿಸುವುದಿಲ್ಲ. ಸಿನೆಮಾ ನೋಡಬೇಕೆಂಬ ತಮ್ಮ ಆಶೆಯನ್ನು ಅವರು ಯಾವ ರೀತಿಯಲ್ಲೂ ತಡೆಯಲಾರದಾದಾಗ ಈ ಉಪಾಯದಿಂದ ಹಣಗಳಿಸಿ ಆಶೆಯನ್ನು ಪೂರೈಸಿದರು.

"ಹ್ಞಾ.... ಅಲ್ರಿ, ಇದಕ್ಕೆ ಪುರಾವೆ?"

"ಅಯ್ಯೋ, ಏನು ಹೇಳ್ತೀಯ? ವ್ಯಾಪಾರಿಯಿಂದ ಗೂಲಸ್ತೂ ಮಕ್ಕಳಿಂದ ಸಿನೆಮಾ ಟಿಕೇಟಿನ ತುಂಡನ್ನೂ ವಶಪಡಿಸಿಕೊಂಡಿದ್ದಾರೆ....'

"ಅಲ್ರಿ, ಅಂತಹ ಸಿನೆಮಾವಾದ್ರೂ ಯಾವುದು?"

"ಸಿನೆಮಾದ ಹೆಸ್ರು ಗೊತ್ತಿಲ್ಲ. ಆದ್ರೆ ಅದು ಬಾಲಾಪರಾಧಿಗೆ ಸಂಬಂಧಿಸಿದ್ದೂಂತ ಹೇಳಿದ್ದಾರೆ....

'ಇದೀಗ ಭಾರೀ ತಮಾಷೆ...'

"ಏನು? ಬಾಲಾಪರಾಧಿಯ ಸಿನೆಮಾ ನೋಡೋದಕ್ಕಾಗಿ ಈ ಬಾಲರು ಅಪರಾಧಮಾಡಿದರು..."

"ಹ್ಞಾಂ..."

"ಅಲ್ರಿ, ನನ್ಗೆ ಈ ಬಾಲಕರದ್ದೇನೂ ತಪ್ಪೂಂತ ಅನಿಸೋಲ್ಲ...'

"ಮತ್ತೆ?"

"ಅವಕ್ಕೆ ಸಿನೇಮಾ ನೋಡಬೇಕೂಂತಾಯ್ತು; ಬೇರೆ ದಾರಿ ಕಾಣದೆ ಹಾಗೆ ಮಾಡಿದ್ರುವ್ರು ನೋಡಿ, ವಿಶ್ವಾಮಿತ್ರನೂ ವಿವಶನಾಗಿ ನಾಯಿ ಮಾಂಸ ತಿಂದನಂತೆ... ಋಷಿಮುನಿಗಳೂ ಕಾಮುವಶರಾದರಂತೆ..."

"ಇದೆಲ್ಲಾ ಭಾರಿ ದೊಡ್ಡತನಕ್ಕೆ ಹೋಯ್ತು."

"ಅಲ್ರಿ, ಈ ವ್ಯಾಪಾರಿ ಈ ಮಕ್ಕಳಿಂದ ಕಳ್ಳ ಮಾಲುಗಳನ್ನು ಕೊಂಡುಕೊಂಡದ್ದು ಯಾಕೆ? ಇದು ರೈಲುದಾರಿದ್ದೆಂತ ಅವನಿಗೆ ಗೊತ್ತಾಗಲಿಲ್ವೆ ಬೇಡ, ಈ ಮಕ್ಕಳಿಗೆ ಅವೆಲ್ಲಿಂದ ದೊರೆತವೆಂದಾದ್ರೂ ಕೇಳಬೇಡ್ವೆ?"

"ಅದು ವ್ಯಾಪಾರ— ಲಾಭ ಮುಖ್ಯ."

"ಲಾಭ ಬೇಕೂಂತ ಪ್ರಾಮಾಣಿಕತೆಯನ್ನು ಹಾರಿಬಿಟ್ರೆ ಮತ್ತೆ ಅತ ವ್ಯಾಪಾರಿ ಆಗ್ತಾನೇನು?'

'ಅಲ್ವೆ, ಕುಳಿತಲ್ಲೇ ಒಂದಕ್ಕೆ ಮೂರು —ನಾಲ್ಕು ಲಾಭ ಬರುವುದಾದರೆ ಯಾರಿಗೆ ಕಹಿಯಾಗುತ್ತೆ?'

'ಕಹಿಯಾಗೋದು ಯಾರಿಗೆ? ಅಂತಲೇ ಹಾವಿನ್ನೂ ಹೀಗೇ ಇದ್ದೇವೆ. ನಮ್ಮ ದೇಶದಲ್ಲಿ ಪ್ರಾಮಾಣಿಕತೆ ನಲಿದಾಡಿದ್ದ ಕಾಲವೊಂದಿತ್ತು. ಇಂದದು ಎಲ್ಲಿ ಮೂಲೆಗುಂಪಾಗಿದೆಯೋ. ದೇವರೇ ದ್ಯಯಾಳು!"

"ಅದು ಸರೀನ್ನು. ನಮ್ಮ ಎಳೆಯರನ್ನು ತಪ್ಪುದಾರಿಗೆ ಎಳೆಯುವುದರಲ್ಲಿ ಹಿರಿಯರದ್ದು ಪಾತ್ರ ಇದ್ದೇ ಇದೆ..."

"ಏನೋಪ್ಪ, ಹೀಗೆಲ್ಲಾ ನಡೆದ್ರೆ, ದೇಶ ಮುಂದೆ ಎಲ್ಲಿ ಮುಟ್ಟುತ್ತೇಂತ...."

"ಮುಟ್ಟೋದೆಲ್ಲಿಗೆ......ಮುಟ್ಟುವಲ್ಲಿ

(ಒಂಭತ್ತನೇ ಪುಟ ನೋಡಿರಿ)

In the Court of the Munsif of Udipi

O S No 461/68

Between

Seethamma ... Plaintiff

and

1, Laxminarayana Karaba, S/o Maroli Ramanna Karaba, Nalkur village, Udipi Taluk

2, Radamma Shedthi, D/o Anthamma Shedthi, Upparigemane, Kenjur village, Udipi Taluk

—Defendants.

Notice is hereby given to the Defendants noted above that the above suit filed by the Plaintiff for the plaint claimed reliefs stands posted to 24—3—1969, and if the Defendants fail to appear before the above Court at 11 A M. on the said date either personally or through their counsels and defend themselves, they would be set exparte and the suit decided on merits

By Order.

N. Ramachandra Bhat,
Advocate for plaintiff.

Udipi, 6-3-1969.

ನಾಡಿನ ಸೇವೆಯೊಂದಿಗೆ ಸರ್ವತೋಮುಖವಾಗಿ ಬೆಳೆಯುತ್ತಿರುವ ಸಂಸ್ಥೆ

ಸಿಂಡಿಕೇಟ್ ಬ್ಯಾಂಕು

ಪ್ರಗತಿಯ ಸಂಕೇತಗಳು.

		1966	1967	1968
ತೆತ್ತ ಭಂಡವಾಳ	ರೂ.	1,00,54,817	1,22,03,772	1,36,32,679
ಕಾದಿಟ್ಟ ನಿಧಿ	ರೂ.	1,33,84,724	1,44,91,025	1,57,75,724
ಠೇವಣಿಗಳು	ರೂ.	74,02,51,654	80,15,23,092	112,19,26,162
ಸಾಲಗಳು ಮತ್ತು ವಟಾಯಿಸಿದ ಬಿಲ್ಲುಗಳು	ರೂ.	47,91,15,620	46,43,01,112	70,60,97,585
ಠೇವಣಾತಿಗಳ ಸಂಖ್ಯೆ		9,55,079	10,29,527	11,79 929
ಸಾಲದ ಖಾತೆಗಳ ಸಂಖ್ಯೆ		1,60,359	1,73,000	2,23,264
ಡಿವಿಡೆಂಡು		16,77,164	18,83,013	21,03.618
ಶಾಖೆಗಳು		217	218	254
ಸಿಬ್ಬಂದಿ		3,544	3,846	4,286
ಶೇರುದಾರರು		5,307	7,624	7,806

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

"ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಯನ್ನು ಪೂರೈಸುವ ಪ್ರಗತಿಯೋನ್ಮುಖ ಬ್ಯಾಂಕು"

ರಿಜಿಸ್ಟರ್ಡ್ ಆಫೀಸು:
ಮಣಿಪಾಲ, ಮೈಸೂರು ರಾಜ್ಯ

ಟಿ. ಎ. ಪೈ
ಚೆಯರ್‌ಮೆನ್

ಮಹಾಕವಿ ಗಾಲಿಬ್ - ಜೀವನ ದರ್ಶನ

ಇದೇ ಫೆಬ್ರುವರಿ ೧೫ರಂದು ಇಡೀ ವಿಶ್ವದಾದ್ಯಂತ ಭಾರತದ ಮಹಾಕವಿ ಗಾಲಿಬ್ ಅವರ ೧೦೦ನೆಯ ಪುಣ್ಯತಿಥಿಯನ್ನು ಆಚರಿಸಲಾಯಿತು. ಪ್ರಸ್ತುತ ಲೇಖನದಲ್ಲಿ ಗಾಲಿಬ್ ಅವರ ಸಾಹಿತ್ಯ ಪರಿಚಯ ಮಾಡಿಕೊಡಲಾಗಿದೆ.

ಲೇಖಕರು: ಮಲಿಕ್ ರಾವತ್

ಪರ್ಷಿಯನ್, ಸುಸಂಸ್ಕೃತರ ಹಾಗೂ ಬುದ್ಧಿಜೀವಿಗಳ ಭಾಷೆ ಆಗಿದ್ದ ಕಾಲದಲ್ಲಿ, ಗಾಲಿಬ್ ಅವರ ಜನನವಾಯಿತು. ಪರ್ಷಿಯನ್ ಭಾಷೆ ದೊರೆಗಳ ಆಸ್ಥಾನದ ಭಾಷೆಯೂ ಆಗಿದ್ದಿತು. ಇಂತಹ ಒಂದು ಹಿನ್ನೆಲೆಯಲ್ಲಿ ಗಾಲಿಬ್ ಅವರು ಪರ್ಷಿಯನ್ ಭಾಷೆಯ ಮೂಲಕವೇ ಶಿಕ್ಷಣ ಪಡೆಯಬೇಕಾಯಿತು. ಇತಿಹಾಸದ ಈ ಸಂದರ್ಭದಲ್ಲಿ, ಉರ್ದು ಭಾಷೆಯು ಮಾಧ್ಯಮದ ಶಿಕ್ಷಣ ನೀಡುವ ಪದ್ಧತಿ ಇಲ್ಲಿಲ್ಲ ಕೆಲವೇ ಕವನ ಸಂಗ್ರಹಗಳನ್ನು (ದಿವಾನಗಳ) ಬಿಟ್ಟರೆ ಪಠ್ಯಪುಸ್ತಕಗಳ ಮಟ್ಟಕ್ಕೆ ಅರ್ಹವಾದಂತಹ ಉರ್ದು ಗದ್ಯವಾಗಲಿ ಅಥವಾ ಪದ್ಯ ಸಂಗ್ರಹಗಳಾಗಲಿ ಆಗ ಪ್ರಚಲಿತವಿರಲಿಲ್ಲ.

ಗಾಲಿಬ್ ಅವರು ಅನೇಕ ವರ್ಷಗಳ ಕಾಲ ತಮ್ಮ ಪೂರ್ವಜರು ಹಾಗೂ ಸಮಕಾಲೀನ ಕವಿಗಳ ಮಾರ್ಗವನ್ನು ಅನುಸರಿಸಿದರು. ಮಿತ್ರರೊಂದಿಗೆ ಪರ್ಷಿಯನ್ ಭಾಷೆಯಲ್ಲೇ ವ್ಯವಹರಿಸಿದರು. ಪರ್ಷಿಯನ್ ಭಾಷೆಯಲ್ಲಿ ಕಾವ್ಯರಚನೆಯನ್ನು ಆರಂಭಿಸಿದರು. ಶ್ರೇಷ್ಠ ಪರ್ಷಿಯನ್ ಕವಿಗಳ ಶೈಲಿಯನ್ನೂ, ಸಂಪ್ರದಾಯವನ್ನೂ ಅಳವಡಿಸಿಕೊಂಡರು. ಗಾಲಿಬ್ ಅವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ತರುಣದಲ್ಲಿ ಉರ್ದು ಭಾಷೆಯಲ್ಲಿ ಕೃತಿರಚನೆ ಮಾಡಿದರಾದರೂ ಆನಂತರ ಜೀವನದ ಬಹುತೇಕ ಅವಧಿಯನ್ನು ಪರ್ಷಿಯನ್ ಭಾಷೆಯ ಕೃತಿರಚನೆಯಲ್ಲಿ ವಿಶೇಷ ಒಲವು ತೋರಿಸಿದರು.

ಮುಂದೆ ಅವರು ತಮ್ಮ ಪರ್ಷಿಯನ್ ಮತ್ತು ಉರ್ದು ಕೃತಿಗಳನ್ನು ಸಂಪಾದಿಸಿ ಅವುಗಳನ್ನು ಪ್ರಕಟಿಸಿದರು. ಅವರ ಪರ್ಷಿಯನ್ ಕಾವ್ಯಗಳಲ್ಲಿ ೨೫ ಸಹಸ್ರ ಪಂಕ್ತಿಗಳು ಅಂದರೆ ೧೨೦೦೦ ದ್ವಿಪದಿಗಳಿವೆ. ಅವರ ಪರ್ಷಿಯನ್ "ದಿವಾನ್" ಮೊತ್ತಮೊದಲು ಕ್ರಿಸ್ತಶಕ ೧೮೪೫ರಲ್ಲಿ ಪ್ರಕಟವಾಯಿತು. ೧೮೬೩-೬೪ರಲ್ಲಿ ಅದು ಪುನರ್ಮುದ್ರಣಗೊಂಡಿತು. ಗಾಲಿಬ್ ಅವರ ನಿಧನಾನಂತರ ಅದು ಅನೇಕ ಮುದ್ರಣಗಳನ್ನು ಕಂಡಿದೆ. "ದಿವಾನ್" ಪ್ರಕಟವಾದ ಬಳಿಕ ಈ ಮೇರು ಕೃತಿಯಲ್ಲಿ ಸೇರದೇ ಕೈತಪ್ಪಿ ಉಳಿದುಕೊಂಡಿದ್ದ ತಮ್ಮ ಅನೇಕ ಪದ್ಯಗಳನ್ನೆಲ್ಲ ಸಂಗ್ರಹಿಸಿ—ಮಹಾಕವಿ ಗಾಲಿಬ್ ಅವರು "ಸಬದ ಚೀನ್" ಎಂಬ ಕಾವ್ಯಸಂಗ್ರಹವನ್ನು ರೂಪಿಸಿದರು. ಈ ಕಾವ್ಯ ಸಂಗ್ರಹ ೧೮೬೭ರಲ್ಲಿ ಪ್ರಕಟಗೊಂಡಿತು. ಮಹಾಕವಿ ಗಾಲಿಬ್ ಅವರು ಪರ್ಷಿಯನ್ ಭಾಷೆಯ ಸಂಪ್ರದಾಯಕ್ಕೆ ತಿಕ್ಕರಾಗಿದ್ದರು. ಇರಾಣಿನ ಮಹಾಕವಿಗಳ ಸಂಪರ್ಕಕ್ಕೆ ತಕ್ಕಂತೆ ಬಾಳಿದರು.

ಗಾಲಿಬ್ ಅವರು ಪರ್ಷಿಯನ್ ಕಾವ್ಯಧಾರೆಗೆ ಹೊಸ ಚೇತನ ನೀಡಿದರು. ದುರ್ದೈವವಶಾತ್, ಅವರ ಮೇರುಕೃತಿ "ದಿವಾನ್"ಗೆ ದೊರೆಯಬೇಕಾದಷ್ಟು ಗಮನ ದೊರೆಯಲಿಲ್ಲ. ಭಾರತದಲ್ಲಿ ಪರ್ಷಿಯನ್ ಭಾಷೆಗೆ ಮೊದಲು ಇದ್ದ ಪ್ರಾಧಾನ್ಯ ಕಾಲಕ್ರಮದಲ್ಲಿ ಕಡಿಮೆಯಾಗುತ್ತ ಬಂದಿತು. ಗಾಲಿಬ್ ಅವರ ನಿಧನಾನಂತರ ಪರ್ಷಿಯನ್ ಭಾಷಾ ಅಧ್ಯಯನದ ಆಸಕ್ತಿಯೂ ಕಡಿಮೆಯಾಗುತ್ತ ಬಂದಿತು.

ಪರ್ಷಿಯನ್ ಗದ್ಯ ಸಾಹಿತ್ಯದಲ್ಲೂ ಗಾಲಿಬ್ ಅವರದೇ ಪ್ರಭಾವಶೈಲಿ. ಪತ್ರಲೇಖನ ಕಲೆಯಲ್ಲೂ ಅವರ ಪ್ರತಿಭೆ ಅಸಾಧಾರಣವಾಗಿತ್ತು. ಪತ್ರಲೇಖನ ಶೈಲಿ ಯಾವ ಸುತ್ತು—ಬಳಸೂ ಇಲ್ಲದೆ, ನೇರವಾಗಿ ಸುಲಲಿತವಾಗಿ ಮುಂದೆ ಸಾಗುತ್ತದೆ. ಪತ್ರಲೇಖಕ ಹಾಗೂ ಪತ್ರದ ಓದುಗನ ನಡುವೇ ನೇರ ಸಂಬಂಧ ಕಲ್ಪಿಸುತ್ತದೆ. "ಪಂಜ್ ಆಹಂಗ್" ಗ್ರಂಥದಲ್ಲಿ ಅವರ ಪರ್ಷಿಯನ ಓಲೆಗಳಿವೆ. ಅವರ ಜೀವಿತಾವಧಿಯಲ್ಲಿ ಈ ಸಂಕಲನವು ಎರಡು ಬಾರಿ ಪ್ರಕಟಗೊಂಡಿತು. ಬಾಗ್-ಇ-ದೊದಾರ ಸಂಕಲನದಲ್ಲೂ ಅವರ ಇತರ ಕೆಲವು ಓಲೆಗಳನ್ನು ಸೇರಿಸಲಾಗಿದೆ. ಅವರ ಮರಣಾನಂತರ ದೊರೆತ ಓಲೆಗಳೆಲ್ಲವನ್ನು ಸಂಗ್ರಹಿಸಿ ಮುಕಾತಿಬತ್-ಇ-ಗಾಲಿಬ್ ಸಂಕಲನವನ್ನು ಪ್ರಕಟಿಸಲಾಯಿತು. ಗಾಲಿಬ್ ಅವರ ಈ ಪತ್ರಗಳು ಅವರ ಜೀವನಕ್ಕೆ ಆಗಿನ ಕಾಲದಲ್ಲಿದ್ದ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿ ಇವೇ ಮಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ.

ಗಾಲಿಬ್ ಆಗಿನ್ನೂ ಯುವಕರು. ಅಬ್ದುಲ್ ಸಮದ ಇರಾಣಿನ ವಿದ್ವಾಂಸರು ಭಾರತದಲ್ಲಿ ಪ್ರವಾಸ ಮಾಡುತ್ತ ಬಂದು ಆಗ್ರಾಕ್ಕೆ ಭೇಟಿ ಕೊಟ್ಟರು. ಮುಂದೆ ಗಾಲಿಬ್ ಅವರ ಮನೆಯಲ್ಲೇ ಎರಡು ವರ್ಷಗಳ ವರೆಗೆ ಇದ್ದರು. ಇರಾಣಿನ ವಿದ್ವಾಂಸರು ಪರ್ಷಿಯನ್ ಭಾಷೆ ಹಾಗೂ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ್ದರು. ಅವರ ಸಂಪರ್ಕದಿಂದಾಗಿ ಗಾಲಿಬ್ ಅವರಿಗೆ ಅಮೂಲ್ಯ ಪ್ರಯೋಜನವಾಯಿತು. ಗಾಲಿಬ್ ಅವರು ಪರ್ಷಿಯನ್ ಭಾಷೆಯ ಪದಸಂಪತ್ತು ಹಾಗೂ ಮಾಧುರ್ಯಗಳ ಬಗ್ಗೆ ಪಡೆದ ಜ್ಞಾನ ನಿಜಕ್ಕೂ ಅದ್ಭುತವಾಗಿತ್ತು. ಗಾಲಿಬ್ ಅವರು ತಮ್ಮ ಪರ್ಷಿಯನ್ ಭಾಷೆಯ ಗದ್ಯದಲ್ಲಿ, ಅಪ್ಪಟ ಪರ್ಷಿಯನ್ ಶಬ್ದಗಳ ಬಳಕೆಗೆ ಮಹತ್ವ ನೀಡಿದರು. ತಮ್ಮ ಗದ್ಯ ಹಾಗೂ ಪದ್ಯಗಳಲ್ಲಿ ಪರಕೀಯ ಭಾಷೆಗಳ ನುಡಿಗಳು ನುಸುಳಬಾರದೆಂತೆ ಎಚ್ಚರವಹಿಸಿದರು. ಅವರು ಈ ದಿಶೆಯಲ್ಲಿ ಸಾಧಿಸಿದ ಯಶಸ್ಸು ವಿಸ್ಮಯಕಾರಿಯಾಗಿದೆ.

"ದಸ್ತಾಂಬೋ" ಸಂಕಲನದಲ್ಲಿ ಈ ವಿವರಗಳಿವೆ. ಇದು ಅತ್ಯಂತ ಆಕರ್ಷಕ ಸಂಕಲನವಾಗಿದ್ದು ಗಾಲಿಬ್ ಅವರ ಮೂಲ ವಿಚಾರಸರಣಿ ಹಾಗೂ ಪ್ರತಿಭೆಯ ಪರಿಚಯ ಮಾಡಿಕೊಡುತ್ತದೆ.

ಮೊಗಲ ವಂಶದ ಕೊನೆಯ ಸಾಮ್ರಾಟ ಎರಡನೆಯ ಬಹಾದ್ದೂರ್ ಶಾ ಅವರು ಗಾಲಿಬ್ ಅವರಿಗೆ ರಾಜವಂಶದ ಇತಿಹಾಸವನ್ನು ಬರೆಯುವ ಕಾರ್ಯವನ್ನು ವಹಿಸಿಕೊಟ್ಟರು. ಮಹಾಕವಿ ಗಾಲಿಬ್ ಅವರು ಎರಡು ಸಂಪುಟಗಳಲ್ಲಿ ಈ ಗ್ರಂಥವನ್ನು ಪೂರ್ಣಗೊಳಿಸಲು ಉದ್ದೇಶಿಸಿದ್ದರು. ಮೊದಲ ಸಂಪುಟದಲ್ಲಿ ಮೊಗಲರ ಆಳ್ವಿಕೆಯ ಆರಂಭದ ಅವಧಿಯಿಂದ ಹುಮಾಯೂನ್ ಅವರ ಆಳ್ವಿಕೆಯ ಎಲ್ಲಾ ಘಟನೆಗಳನ್ನೂ, ಎರಡನೆಯ ಸಂಪುಟದಲ್ಲಿ ಘನವಂತನಾದ ಅಕ್ಬರನ ಆಳಿಕೆಯಿಂದ ಮೊಗಲವಂಶಜರ ಕೊನೆಯ ಸಾಮ್ರಾಟ ಎರಡನೆಯ ಬಹಾದ್ದೂರ್ ಶಹಾ ಅವರ ಆಳಿಕೆಯ ವರೆಗಿನ ಎಲ್ಲಾ ವಿವರಗಳನ್ನು ಸಂಗ್ರಹಿಸಿ ಇತಿಹಾಸ ಬರೆಯಲು ಅವರು ನಿರ್ಧರಿಸಿದ್ದರು. ಆದರೆ ಅನೇಕ ಕಾರಣಗಳಿಂದಾಗಿ ಎರಡನೆಯ ಸಂಪುಟ ರಚನೆಯ ಕಾರ್ಯ ಆರಂಭ ಆಗಲಿಲ್ಲ. ಮೊದಲ ಸಂಪುಟ ಮಾತ್ರ ಐತಿಹಾಸಿಕ ಸಿಪಾಯಿ ದಂಗೆ ಕ್ರಾಂತಿಗೆ ಎರಡು ವರ್ಷಗಳ ಮುಂಚೆ ಪ್ರಕಟವಾಯಿತು. ಈ ಪ್ರಥಮ ಸಂಕಲನದ ಹೆಸರು ಮಹರ್-ಇ-ನಿಮ್ರುಜ್.

ಪರ್ಷಿಯನ್ ಭಾಷೆ ಭಾರತೀಯ ಸಾಹಿತ್ಯಕ್ಕೆ ಮಹತ್ತರ ಕೊಡುಗೆಯನ್ನು ಸಲ್ಲಿಸಿದೆ. ಉರ್ದು ಗದ್ಯ ಹಾಗೂ ಪದ್ಯ ಸಾಹಿತ್ಯದಲ್ಲಿ ಈ ಅಂಶವು ಕಂಡುಬರುತ್ತದೆ. ಗಾಲಿಬ್ ಅವರು ಉರ್ದು ಸಾಹಿತ್ಯದ ಬೆಳವಣಿಗೆಗೂ ವಿಶೇಷ ಶ್ರಮಿಸಿದ್ದಾರೆ. ಮೊದಲು ಅವರು ಅನೇಕ ವರ್ಷಗಳ ಕಾಲ ಪರ್ಷಿಯನ್ ಭಾಷೆಯಲ್ಲೇ ಪತ್ರ ವ್ಯವಹಾರ ಮಾಡುತ್ತಿದ್ದರು. ಮುಂದೆ ಕಳೆದ ಶತಮಾನದ ನಾಲ್ಕನೆಯ ದಶಕದಲ್ಲಿ ಅವರು ಉರ್ದು ಭಾಷೆಯತ್ತ ಗಮನ ಹರಿಸಿದರು. ಗಾಲಿಬ್ ಅವರು ಯಾವುದೇ ಮಾದರಿಯನ್ನು ಅನುಸರಿಸದೇ ತಮ್ಮದೇ ಆದ ಶೈಲಿಯನ್ನು ರೂಪಿಸಿ ಅದನ್ನು ಬೆಳೆಸಿದರು. ಮಹಾಕವಿ ಗಾಲಿಬರು ಸುಮಾರು ೮೦೦ಕ್ಕೂ ಹೆಚ್ಚು ಓಲೆಗಳನ್ನು ಬರೆದಿದ್ದಾರೆ. ಇವೆಲ್ಲವುಗಳನ್ನು "ಉರ್ದು-ಇ-ಹಿಂದಿ" ಮತ್ತು "ಉರ್ದು-ಇ-ಮುಅಲ್ಲಾ" ಎಂಬ ಎರಡು ಸಂಕಲನಗಳಲ್ಲಿ ಪ್ರಕಟಿಸಲಾಗಿದೆ. ಮೊಹಮ್ಮದ್ ಹುಸೇನ್ ತಬ್ರೀಜ್ ಅವರು ಸಿದ್ಧಗೊಳಿಸಿದ ಶ್ರೇಷ್ಠ ಶಬ್ದಕೋಶ "ಬುರ್ಹಾನ್-ಇ-ಖಾತಿ" ಮೇಲೆ ಗಾಲಿಬ್ ಅವರು ಟಿಪ್ಪಣಿಗಳನ್ನು ಬರೆದರು.

ಗಾಲಿಬ್ ಅವರ ಮೊದಲ ಉರ್ದು "ದಿವಾನ್" ೧೮೪೧ರಲ್ಲಿ ಪ್ರಕಟವಾಯಿತು. ಅವರು ಬದುಕಿದ್ದ ಕಾಲದಲ್ಲಿ ನಾಲ್ಕು ಬಾರಿ ಪುನರ್ ಮುದ್ರಣಗೊಂಡಿತು. ೧೮೬೩ರಲ್ಲಿ ಪ್ರಕಟವಾದ ಕೊನೆಯ ಆವೃತ್ತಿಯಲ್ಲಿ ೧೮೦೦ ದ್ವಿಪದಿಗಳಿದ್ದವು. ಈ ಪುಟ್ಟ ಕವನ ಸಂಕಲನಗಳು ಉರ್ದು ಸಾಹಿತ್ಯದಲ್ಲೇ ಒಂದು ಅದ್ಭುತ ಸಾಧನೆಯೆನಿಸಿದವು. ಗಾಲಿಬ್ ಜೀವಿತ ಕಾಲದಲ್ಲಿ ಅಷ್ಟೊಂದು ಬೆಳಕಿಗೆ ಬಾರದ ಈ ಮಹೋನ್ನತ ಕೃತಿ ಅವರ ನಿಧನಾನಂತರ, ಉರ್ದು ಸಾಹಿತ್ಯದ ಬೈಬಲ್ ಎಂದು ಖ್ಯಾತಿಪಡೆಯಿತು.

ಗಾಲಿಬ್ ಪರ್ಷಿಯನ ಭಾಷೆಯ ಕೊನೆಯ ಶಾಸ್ತ್ರೀಯ ಕವಿ. ಆಧುನಿಕ ಉರ್ದು ಗದ್ಯ ಹಾಗೂ ಪದ್ಯ ಸಾಹಿತ್ಯದ ಕಾರಣ ಪುರುಷರಾಗಿದ್ದರು. ಉರ್ದು ಸಾಹಿತ್ಯ ಕ್ಷೇತ್ರದಲ್ಲಿ ನವ ಧಾರಣಾ ಚಳುವಳಿಗೂ ಅವರೇ ಕಾರಣರಾಗಿದ್ದರು. ಗಾಲಿಬ್ ಅವರ ನಿಧನಾನಂತರ ಅವರ ಶಿಷ್ಯರು ಈ ಚಳುವಳಿಯನ್ನು ಶ್ರದ್ಧೆಯಿಂದ ಮುಂದುವರಿಸಿಕೊಂಡು ಬಂದರು.

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾದ ಸಮಾಚಾರ

ಜನವರಿ ೧೯ರಿಂದ ಮಾರ್ಚ 30ನೇ ತಾರೀಖಿನ ವರೆಗೆ

300=00 ರೂ. ನಿಮ್ಮಳ ವ್ಯಾಪಾರ ಮಾಡಿದರೆ

ಒಂದು **Steel Desk** (ತೆರೆಯುವ-ಮುಚ್ಚುವ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ–	ಭಾಗ 1— ಸಾವಿತ್ರಿ ದೇವಿ ಆಯ್ಯು	2—50
ಕೆಸರಿನ ಕಮಲ–	ಭಾಗ 2— ”	2—50
ಉಂಡಾಡಿ ಗುಂಡ–	ಪರ್ವತವಾಣಿ	2—00
ಧರ್ಮದೇವತೆ–	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎಚ್. ನರಸಿಂಹಯ್ಯ	3—00
ಎರಡು ತಲೆ ಹಾವು –	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್ ಗಾಗಿ ತ್ವರೆ ಮಾಡಿರಿ :—

ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಮಿತ ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0–75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಬಾಲಕೋಟಿ, ಉಡುಪಿ, ದ. ಕ.

ರಾಜ್ಯಗಳಲ್ಲಿ ಬದಲಾದ ಚಲಚ್ಚಿತ್ರಪಟ

೧೯೬೯ರ ಸಾಂಸತ್ರಿಕ ಚಟುವಟಿಕೆಗಳೀಗ ಭರದಿಂದ ಮುಂದುವರಿಯತೊಡಗಿದೆ. ಈ ವರ್ಷ ಮಧ್ಯಾವಧಿ ಚುನಾವಣೆಗಳು ನಡೆದ ರಾಜ್ಯಗಳಲ್ಲಿ ಮತ್ತೆ ರಡು ರಾಜ್ಯಗಳಲ್ಲಿ ಭದ್ರ ಸರಕಾರಗಳು ನಿಲ್ಲುವ ಸಂಭವವಿದ್ದರೂ ಎರಡು ರಾಜ್ಯಗಳ ರಾಜ್ಯಕೀಯ ಗಾಳಿಯು ಎತ್ತ ಬೀಸುವುದೆಂದು ಹೇಳುವುದು ಸಾಧ್ಯವಿಲ್ಲ. ನಾಗಾಲ್ಯಾಂಡಿನಲ್ಲಿ ವಾಡಿಕೆಯ ಸಾರ್ವತ್ರಿಕ ಚುನಾವಣೆಗಳು ನಡೆದು ಅಲ್ಲಿ ಅಧಿಕಾರಾರೂಢ ಪಕ್ಷವೇ ಬಹುಮತವನ್ನು ಗಳಿಸಿ ಅಲ್ಲಿ ಅದು ಹೊಸ ನಾಯಕನ ನೇತೃತ್ವದಲ್ಲಿ ಸರಕಾರ ರಚಿಸಿದೆ. ಪಾಂಡಿಚೇರಿಯ ಮಧ್ಯಾವಧಿ ಚುನಾವಣೆಗಳು ಸದ್ಯದಲ್ಲೇ ನಡೆಯಲಿದ್ದು, ಕಾಂಗ್ರೆಸ್ಸು ಮತ್ತು ಡಿ.ಎಂ.ಕೆ.ಗಳ ದ್ವಂದ್ವ ಹೋರಾಟ ಅಲ್ಲಿ ಆರಂಭವಾಗಿದೆ.

ಬಂಗಾಳದಲ್ಲಿ ಗೌಡ ಬಂಗಾಳಿ

ಪಂಜಾಬದಲ್ಲಿ ಮತ್ತೊಮ್ಮೆ ಅಕಾಲಿ ದಳದ ಗುರ್ನಾಮ ಸಿಂಗರು ಸರಕಾರವನ್ನು ರಚಿಸಲು ಸಮರ್ಥರಾದರು. ವಿಧಾನ ಸಭೆಯಲ್ಲಿ ನಿಚ್ಚಳ ಬಹುಮತ ಗಳಿಸುವಲ್ಲಿ ಅಕಾಲಿದಳವು ಅಸಫಲವಾದರೂ ಜನಸಂಘ ಮತ್ತು ಕೆಲವು ಸ್ವತಂತ್ರರ ಬೆಂಬಲ ಅವರಿಗಿದೆ. ಕಾಂಗ್ರೆಸ್ಸನ್ನು ಗದ್ದುಗೆಗೇರಿಸಲೊಪ್ಪದ ಸಮಾನ ನೀತಿಯು ಸಾಮಾನ್ಯವಾಗಿರುವಷ್ಟು ಕಾಲ ಯಾವ ಗಂಡಾಂತರವೂ ಗುರ್ನಾಮ ಸಿಂಗರಿಗೆ ಬರಬಾರದು.

ಆದರೆ, ಸಂಯುಕ್ತರಂಗವು ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸನ್ನು ನೆಲಕ್ಕೆ ಅಪ್ಪಳಿಸಿ ಅತ್ಯಧಿಕ ಬಹುಮತಗಳಿಸಿ ಗೆದ್ದು ಬಂದರೂ ಅದರ ಸರಕಾರ ರಚನೆಯು ಸಲೀಸಾಗಿ ನಡೆಯಲಿಲ್ಲ. ವಿಧಾನ ಸಭಾ ನಾಯಕ ಸ್ಥಾನಕ್ಕೆ ಬಂಗ್ಲಾ ಕಾಂಗ್ರೆಸ್ ಮತ್ತು ಮಾರ್ಕ್ಸಿಸ್ಟ್ ಕಮ್ಯುನಿಸ್ಟರ ನಡುವೆ ನಡೆದ ಜಟಾಪಟಿ ಗೃಹಖಾತೆಯ ವಿಭಜನೆಯಲ್ಲಿ ಪರ್ಯವಸಾನ ಹೊಂದಿತು. ಪೋಲೀಸು ಖಾತೆಯನ್ನು ತಮ್ಮ ಕೈವಶ ಮಾಡಿಕೊಳ್ಳುವುದು ಈ ಕಮ್ಯುನಿಸ್ಟರ ಮನೋರಥವಿತ್ತು. ತಮ್ಮ ಸ್ವಾರ್ಥಸಾಧನೆಗೆ ಇದವರಿಗೆ ಅವಶ್ಯವಿತ್ತು. ಹಾಗಾಗಿ ಅಜಯ ಮುಖರ್ಜಿಯವರು ಆಂತರಿಕ ಆಡಳಿತ ವಿಭಾಗವನ್ನು ಮಾತ್ರ ಇಟ್ಟುಕೊಂಡು ಗೃಹಖಾತೆಯ ಉಳಿದ ವಿಭಾಗವನ್ನು ತನಗೆ ಬಿಟ್ಟುಕೊಡಲು ಒಪ್ಪುವುದಾದರೆ ತಾವು ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡುವುದಾಗಿ ಕಮ್ಯುನಿಸ್ಟರ ವಾದ. ಕೊನೆಗೂ ಅವರ ತಂತ್ರ ಫಲಿಸಿತು; ಅಜಯ ಮುಖರ್ಜಿಯವರು ಮುಖ್ಯಮಂತ್ರಿ ಸ್ಥಾನದ ಆಸೆಯಿಂದ ಗೃಹಖಾತಾ ವಿಭಜನೆಗೆ ಒಪ್ಪಿಕೊಂಡರು. ಅಧಿಕಾರದ ಮೋಹದಿಂದ ಅಜಯ ಮುಖರ್ಜಿಯವರು ಹಿಂದಿನ ಬಾರಿ ಪಟ್ಟ ಬವಣೆಯನ್ನು ಮರೆತು ಮತ್ತೊಮ್ಮೆ ಕಮ್ಯುನಿಸ್ಟರ ಗೊಂಬೆಯಾಗಿ ಕುಣಿದಾಡಲು ಸೊಂಟ ಕಟ್ಟಿದ್ದಾರೆ.

ಮಂತ್ರಿ ಖಾತೆಗಳ ವಿತರಣೆಯಲ್ಲೂ ಪ್ರಮುಖವಾದ ಖಾತೆಗಳನ್ನು ಮಾರ್ಕ್ಸಿಸ್ಟರೇ ಇಟ್ಟುಕೊಂಡಿರುವುದು ಇಲ್ಲಿ ಉಲ್ಲೇಖಾರ್ಹ.

ಇಷ್ಟು ಹೊತ್ತಿನಲ್ಲಿ ಮತ್ತೊಂದು ಯಕ್ಷಪ್ರಶ್ನೆಯೊಂದು ಮೂಲೆ ಮುಟ್ಟಲಿದೆ; ೧೯೬೭ರಲ್ಲಿ ರಾಜ್ಯಪಾಲ ಧರ್ಮವೀರರು ಅಜಯ ಮುಖರ್ಜಿಯವರ ಸಂಪುಟವು ಅಲ್ಪಮತೀಯವೆಂದು ತನಗೆ ಮನವರಿಕೆಯಾದ್ದರಿಂದ, ಅಜಯ ಮುಖರ್ಜಿಯವರು ರಾಜ್ಯಪಾಲರ ಸಲಹೆಯಂತೆ ವಿಧಾನಸಭೆಯಲ್ಲಿ ಬಲಾಬಲಗಳ ಪರೀಕ್ಷೆ ಬೇಡನೆ ಪಡೆಸಲು ನಿರಾಕರಿಸಿದ್ದರಿಂದ ಸಂಪುಟವನ್ನೇ ಕಿತ್ತು ಹಾಕಿದ್ದರಷ್ಟೆ? ಸಂಯುಕ್ತರಂಗಕ್ಕೂ ರಾಜ್ಯಪಾಲ ಧರ್ಮವೀರರಿಗೂ ಅಂದು ಆರಂಭವಾದ ಜಿದ್ದು ಮಧ್ಯಾವಧಿ ಚುನಾವಣೆಗಳ ನಂತರ ಮತ್ತಷ್ಟು ಹೆಚ್ಚಿತು. ಧರ್ಮವೀರರನ್ನು ಹಿಂದೆ ಕರೆದುಕೊಳ್ಳಬೇಕೆಂದು ಸಂಯುಕ್ತರಂಗದ ನೂತನ ಸಂಪುಟವು ಕೇಳಿಕೊಂಡಿತು. ಮಾರ್ಚ್ ೬ನೇ ದಿನಾಂಕ ವಿಧಾನಸಭೆ–ಪರಿಷತ್ತುಗಳು ಸೇರಲಿದ್ದು ಅದಕ್ಕೆ ಮೊದಲೇ ಧರ್ಮವೀರರ ಪದಚ್ಯುತಿಯಾಗಬೇಕೆಂದು ಅದರ ವಾದ. ಆದರೆ, ರಾಜ್ಯಪಾಲರು ರಾಷ್ಟ್ರಪತಿಗಳು ಬಯಸಿದಷ್ಟು ಸಮಯ ಅಧಿಕಾರದಲ್ಲಿರುವವರು. ಸಚಿವ ಸಂಪುಟಕ್ಕೆ ರಾಜ್ಯಪಾಲರನ್ನು ವಜಾಮಾಡಬೇಕೆನ್ನುವ ಅಧಿಕಾರವಿಲ್ಲ.

ಕೇಂದ್ರ ಸರಕಾರವು ಈ ಬಗ್ಗೆ ಪರಿಶೀಲನೆನಡೆಸಿತು. ರಾಜ್ಯಸಂಪುಟ ಅಸಹಕಾರ ತೋರಿಸಿದರೆ ರಾಜ್ಯಪಾಲರು ಆಡಳಿತೆಯನ್ನು ಸುಸೂತ್ರವಾಗಿ ನಡೆಸಲಾರರು. ಆದುದರಿಂದ, ಶ್ರೀ ಧರ್ಮವೀರರನ್ನು ಹಿಂದೆ ಕರೆದುಕೊಳ್ಳುವುದಕ್ಕೆ ಕೇಂದ್ರ ಸರಕಾರವು ನೈತಿಕವಾಗಿ ಸಿದ್ಧವಿದೆಯಾದರೂ ಇದನ್ನು ತಕ್ಷಣ ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲವೆಂದು ಕಂಠೋಕ್ತವಾಗಿ ಸಾರಿತು. ಹಾಗಾಗಿ ಮಾರ್ಚ್ ಆರು ಪಶ್ಚಿಮ ಬಂಗಾಳದ ಇತಿಹಾಸದಲ್ಲಿ ಮಹತ್ವದ ಇನ್ನೊಂದು ದಿನವೆನಿಸಲೂ ಬಹುದು. ಉಭಯ ಸದನಗಳನ್ನು ಉದ್ದೇಶಿಸಿ ಮಾಡುವ ರಾಜ್ಯಪಾಲರ ಭಾಷಣದಲ್ಲಿ ಸಂಯುಕ್ತರಂಗ ಸರಕಾರವನ್ನು ೧೯೬೭ರಲ್ಲಿ ಸಂವಿಧಾನ ಬಾಹಿರವಾಗಿ ವಜಾ ಮಾಡಿದ ಬಗ್ಗೆಯೂ ಉಲ್ಲೇಖವಿರಬಹುದೆಂದು ಸಂದೇಹವಿದೆ. ಆಗ ರಾಜ್ಯಪಾಲರು ತಮಗೊಪ್ಪದ ವಾಕ್ಯಗಳನ್ನು ಓದದಿರೇ ಇಲ್ಲವೇ, ಇಲ್ಲವಾದರೆ ಈ ಬಗ್ಗೆ ಸಂಯುಕ್ತ ರಂಗದ ಪ್ರತಿಕ್ರಿಯೆಯೇನು– ಇವೆಲ್ಲವೂ ಈಗಾಗಲೇ ಜಿಗಜ್ಞಾಸಿತವಾಗಿದೆ.

ತಮಗೊಪ್ಪಿಗೆಯಿಲ್ಲದ ಭಾಗವನ್ನು ಓದದೆ ಹಾಗೇ ಬಿಡುವ ಅಧಿಕಾರವು ಸಾಂವಿಧಾನಿಕವಾಗಿ ರಾಜ್ಯಪಾಲರಿಗಿದೆ ಎಂದು ಸಂವಿಧಾನ ತಜ್ಞರು ಹೇಳುತ್ತಾರೆ. ಅಂತೂ ಭಾರತದಲ್ಲಿ ಇಂದಿರುವ ಹಿಂದೆ ಆಗಿಹೋದ ರಾಜ್ಯಪಾಲರುಗಳಲ್ಲಿ ಯಾರೂ ಅನುಭವಿಸದ ಅನುಭವಗಳನ್ನು ಧರ್ಮವೀರರು ಅನುಭವಿಸಿದರು. ಇಂತಹ ಕೆಟ್ಟ ದೆಸೆಯನ್ನೊಬ್ಬ ರಾಜ್ಯಪಾಲರಾಗಿ ದೊರೆತದ್ದು ಬಂಗಾಳದ ಮತ್ತು ಕೇಂದ್ರದ ಭಾಗ್ಯ.

ಈ ಮಧ್ಯೆ ಒಂದು ಸಂಗತಿ ಬಹಿರಂಗವಾಯ್ತು. ರಾಜ್ಯಪಾಲ ಧರ್ಮವೀರರು ಕಳೆದ ಅಕ್ಟೋಬರದಲ್ಲಿಯೇ ಬದಲಾವಣೆ ಕೇಳಿದ್ದರಿಂದಲೂ ಆಗ ಕೇಂದ್ರವು ಮಧ್ಯಾವಧಿ ಚುನಾವಣೆಗಳು ಮುಗಿಯಲೆಂದು ಸೂಚಿಸಿತೆಂದೂ ಗೊತ್ತಾಗಿದೆ. ಇದೀಗ ವಿಧಾನ ಸಭೆಗಳು ಸಭೆ ಸೇರಲಿ; ಮತ್ತೆ ನೋಡೋಣವೆಂದದರ ನೀತಿ. ಇದು ಅಸಾಧ್ಯವೆಂದೂ ಹೇಳಲಾಗದು. ಸಂವಿಧಾನದ ರಕ್ಷಣೆಯ ಮಾತನ್ನು ಬದಿಗಿಟ್ಟರೂ ಹೊಸ ರಾಜ್ಯಪಾಲರ ನೇಮಕದ ಪ್ರಶ್ನೆ ಬಹಳ ಸುಲಭವಾಗಿಲ್ಲ. ಕೇಂದ್ರ–ರಾಜ್ಯಗಳೆರಡಕ್ಕೂ ಒಪ್ಪಿಗೆಯಾಗುವವರನ್ನೇ ನೇಮಿಸಬೇಕಷ್ಟೆ. ರಾಜ್ಯದ ಸಚಿವ ಸಂಪುಟದ ಒಪ್ಪಿಗೆ ಬರಿಯ ಔಪಚಾರಿಕ. ಆದರೂ ಆ ಶಾಸ್ತ್ರವನ್ನು ಮುಗಿಸಬೇಕಾಗಿದೆ? ಬಿಹಾರದ ರಾಜ್ಯಪಾಲರಾಗಿ ನಿತ್ಯಾನಂದ ಕಾನುಂಗೋರನ್ನು ನೇಮಕ ಮಾಡುವಲ್ಲಿ ರಾಜ್ಯ ಸರಕಾರದ ಅಸಮ್ಮತಿಯಿತ್ತು. ಮುಖ್ಯಮಂತ್ರಿಯವರಷ್ಟೇ ಅಲ್ಲದೆ ಮತ್ತಾರೂ ಅವರ ಸ್ವಾಗತಕ್ಕೆ ಹೋಗಬಾರದೆಂದು ಸಂಯುಕ್ತ ವಿಧಾಯಕ ದಳೀಯ ಸಚಿವ ಸಂಪುಟವು ನಿರ್ಧರಿಸಿತ್ತು. ಈಗ ಧರ್ಮವೀರರನ್ನು ಬೇರೆಡೆಗೆ ವರ್ಗಾಯಿಸುವುದು ಸಾಮಾನ್ಯವಾಗಿ ಖಂಡಿತ. ಅವರ ಸ್ಥಾನಕ್ಕೆ ಮೂವರ ಹೆಸರುಗಳು ಕೇಳಿಬರುತ್ತಿವೆ. ಬಿಹಾರದ ಈಗಿನ ರಾಜ್ಯಪಾಲ ನಿತ್ಯಾನಂದ ಕಾನುಂಗೋ, ಲೋಕಸಭೆಯ ಉಪಾಧ್ಯಕ್ಷ ಖಾಡಿಲ್ಕರ್ ಮತ್ತು ಸದ್ಯವೇ ನಿವೃತ್ತರಾಗಲಿರುವ ಮದ್ರಾಸು ದಂಡನಾಯಕ ಕೆ. ಪಿ. ಕುಮಾರ ಮಂಗಲಂ.

ಸಂಯುಕ್ತ ರಂಗ ಸರಕಾರವು ಧರ್ಮವೀರರ ಮೇಲೆ ವೈಯಕ್ತಿಕ ದ್ವೇಷವನ್ನು ಸಾಧಿಸುವಂತೆ ತೋರುತ್ತದೆ. ಅವರೆದುರು ಪ್ರತಿಜ್ಞಾವಿಧಿಯನ್ನು ಸಚಿವ ಸಂಪುಟವು ಸ್ವೀಕರಿಸಿತೆಂಬುದನ್ನು ನೆನೆದಾಗ, ಮುಂದಿನ ಘರ್ಷಣೆಗಳು ಕಾರಣಹೀನವೆಂದೇ ಹೇಳಬೇಕು. ಮಾರ್ಚ್ ೩ರ ವರೆಗೆ ಸೇವಾವಧಿಯಿದ್ದ ಐ.ಜಿ.ಪಿ. ಯವರನ್ನು ಇಪ್ಪತ್ತು ದಿನ ಮೊದಲೇ ನಿವೃತ್ತಗೊಳಿಸಿದ ಈ ಸಂಪುಟವು ತನ್ನ ಅಧಿಕಾರವನ್ನು ರಾಜ್ಯಕೀಯ ಪ್ರತೀಕಾರ ಮತ್ತು ಸ್ವಾರ್ಥಸಾಧನೆಗಾಗಿ ಬಳಸಿಕೊಳ್ಳತೊಡಗಿದೆಯೆಂದು ತಿಳಿದರೆ ತಪ್ಪಾದಂತೆನಿಸುವುದಿಲ್ಲ.

ಬಿಹಾರದಲ್ಲಿ ಅಂತರ್ಲಾಗವೆ?

ಬಿಹಾರದಲ್ಲಿ ಯಾವ ರಾಜ್ಯಕೀಯ ಪಕ್ಷವೂ ಬಹುಮತಗಳಿಸಲಿಲ್ಲ. ಅಧಿಕ ಸಂಖ್ಯಾಬಲ ಪಡೆದ ಕಾಂಗ್ರೆಸ್ಸು ಸ್ವತಂತ್ರರ ಮತ್ತಿತರ ಎಳೆಯ ಪಕ್ಷಗಳ ಬೆಂಬಲದಿಂದ ಸರಕಾರ ರಚಿಸಲು ಮುಂದೆ ಬಂದ ಶ್ರೀ ಹರಿಹರ ಸಿಂಗರು ಈ ಕಠಿಣ ಕಾರ್ಯಕ್ಕೆ ತೊಡಗಿದ್ದಾರೆ. ಆರಂಭದಲ್ಲಿ ಸಿಂಗರಿಗೆ ವಿರುದ್ಧವಾಗಿ ಸಂಯುಕ್ತದಳವು ತನಗೆ ಬಹುಮತವಿದೆಯೆಂದು ವಾದಿಸಿದಾಗ ರಾಜ್ಯಪಾಲ ಕಾನುಂಗೋ ಧರ್ಮಸಂಕಟಕ್ಕೆ ಬಿದ್ದರು. ಆದರೂ ಹರಿಹರ ಸಿಂಗರನ್ನು ಸರಕಾರ ರಚಿಸಲು ಆಹ್ವಾನಿಸಿದರು. ಸಿಂಗ್ ಸಚಿವ ಸಂಪುಟದಲ್ಲಿ ಮೂವತ್ತು ಜನ ಸದಸ್ಯರಿರಬಹುದೆಂದು ವರದಿಯಿದೆ. ಇಷ್ಟು ಜನ ಮಂತ್ರಿಗಳಿದ್ದರೂ ಇವರನ್ನು ಒಂದೇ ಸಲ ಆಯ್ದುಕೊಳ್ಳುವುದು ಮುಖ್ಯಮಂತ್ರಿಗಳಿಗೆ ಸಾಧ್ಯವಾಗಲಿಲ್ಲ. ಈ ನಡುವೆ ಸಿಂಗರ ಬಹುಮತವು ಪರೀಕ್ಷೆಗೆ ಒಳಗಾಗುವ ಭೀತಿ ದಿನೇ ದಿನೇ ಇದೆ. ಹಾಗಾಗಿ ವಿಧಾನ ಸಭೆಯು ಸೇರುವಾಗ ಸಿಂಗರ ಬಲಾಬಲ ಒರೆಗೆ ಹಚ್ಚುವ ಸಂಭವವೇ ಹೆಚ್ಚು.

ಯುಪಿಯಲ್ಲಿ ಸ್ಥಿರತೆ ಸಾಧ್ಯವೆ?

ಉತ್ತರ ಪ್ರದೇಶದಲ್ಲಿ ೬೬ ವರ್ಷದ ಚಂದ್ರಭಾನು ಗುಪ್ತರು ನಾಲ್ಕಾರು ಮಂದಿ ಸ್ವತಂತ್ರರ ಬೆಂಬಲದ ಆಶ್ರಯದಲ್ಲಿ

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೋಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—27

ಕಾಂಗ್ರೆಸ್ ಮಂತ್ರಿಮಂಡಳ ರಚಿಸಿದ್ದೇನೋ ನಿಜವೇ. ೧೯೬೭ರಲ್ಲಿ ಪರಪ್ರಾಂತರ ಪ್ರವೃತ್ತಿಯು ಆರಂಭವಾದದ್ದೂ ಇದೇ ಬ್ರಹತ್ ರಾಜ್ಯದಲ್ಲಿ ಚರಣಸಿಂಗರ ನೇತೃತ್ವದಲ್ಲಿ. ಚರಣಸಿಂಗರು ಆಮೇಲೆಯೂ ಹಲವಾರು ಅತೃಪ್ತ ಕಾಂಗ್ರೆಸಿಗರನ್ನು ತಮ್ಮ ಭಾರತೀಯ ಕ್ರಾಂತಿದಳಕ್ಕೆ ಎಳೆದರು. ಆದರೆ, ಅವರ ಪಕ್ಷವು ಜನಬಲ ಪಡೆಯುವಲ್ಲಿ ಸಶಕ್ತವಾಗಲಿಲ್ಲ. ಸಂಯುಕ್ತ ವಿಧಾಯಕ ದಳದ ಸರಕಾರ ಛಿದ್ರಯೋಜಕವೆಂಬ ಅನುಭವ ಅವರದ್ದು. ಪಕ್ಷಾಂತರದ ಪಿಡುಗು ಮತ್ತೊಮ್ಮೆ ತಲೆದೋರದೆ ಹೋದರೆ, ಉತ್ತರ ಪ್ರದೇಶದಲ್ಲಿ ಸರಕಾರ ಸುಭದ್ರವಾಗಬಹುದು; ಎರಡು ವರ್ಷಗಳ ಅಧಿಕಾರ ವಿಯೋಗದಿಂದ ಕಾಂಗ್ರೆಸ್ಸು ಈಗ ಮತ್ತೆ ನಿಜವಾದ ಜನಹಿತಕ್ಕೆ ತೊಡಗಬಹುದು.

ದಕ್ಷಿಣದ ಉತ್ಕ್ರಾಂತಿ

ಆಂಧ್ರ ಪ್ರದೇಶದಲ್ಲಿ ಪ್ರತ್ಯೇಕ ತೆಲಂಗಾಣ ರಚನೆಯ ಚಳವಳಿಯೊಂದು ಸ್ಫೋಟಕ್ಕೆ ಬಂದು ನಿಂತಿದೆ. ಅದರ ನಡುವೆ ನಕ್ಸಲೀಯರ ಹಾವಳಿಯೂ ತಲೆದೋರಿದೆಯೆಂದು ಸುದ್ದಿ. ಮುಖ್ಯಮಂತ್ರಿ ಬ್ರಹ್ಮಾನಂದ ರೆಡ್ಡಿಯವರು ಹಲವು ಅಮಾನುಷ ಅತ್ಯಾಚಾರಗಳನ್ನು ಕಂಡರು; ಕಾಣುತಿದ್ದಾರೆ. ದಕ್ಷಿಣದ ದೊಡ್ಡ ರಾಜ್ಯದಲ್ಲಿ ಆಂತರಿಕ ಅತೃಪ್ತಿ ಇರುವುದು ಯಾರಿಗೂ ಕ್ಷೇಮವಲ್ಲ. ಇದನ್ನು ಯಾವ ರೀತಿ ಹೋಗಲಾಡಿಸುವರು ಎಂಬುದನ್ನವಲಂಬಿಸಿ ಅಲ್ಲಿ ಬ್ರಹ್ಮಾನಂದ ರೆಡ್ಡಿಯವರ ಭವಿಷ್ಯವಿದೆ. ಇಲ್ಲಿ ಪ್ರಬಲ ಪ್ರಾದೇಶಿಕ ಪಕ್ಷವಿಲ್ಲವಾದುದರಿಂದ ಅವರಿಗೆ ಕೀಟಲೆ ಇಲ್ಲದಿರುವುದು ಸುಖ ನೆಮ್ಮದಿ. ಅಂತಹುದೊಂದಿರುತ್ತಿದ್ದರೆ, ಮಹಾರಾಷ್ಟ್ರದಂತೆ ನಗೆಗೇಡಿಗೆ ಬೀಳುತಿದ್ದರು.

ಶಿವಸೇನೆಯ ಶಕ್ತಿ

ಮುಖ್ಯಮಂತ್ರಿ ವಿ. ಪಿ. ನಾಯಕರೂ ಅವರ ಪಕ್ಷವೂ ಸರಕಾರವೂ ಶಿವಸೇನೆಯ ಕೃತ್ಯಗಳನ್ನು ಕಾಣುತ್ತ ಕೈಕಟ್ಟಿ ಕುಳಿತರು ಎಂದು ಹೇಳಲಾಗುತ್ತದೆ. ಅಂದರೆ, ಇವರೆಲ್ಲರ ಸಂಪೂರ್ಣ ಸಹಕಾರ ಶಿವಸೇನೆಗೆ ಇದೆಯೆಂದು ಅರ್ಥ. ಇತ್ತೀಚೆಗೆ ಮುಂಬಯಿ ನಗರದಲ್ಲಿ ದಾಕ್ಷಿಣಾತ್ಯರ ಮೇಲೆ ಶಿವಸೇನೆಯು ಮುಗಿದು ಬಿದ್ದು ಅವರನ್ನು ಹಿಂಸೆಗೆ ಗುರಿಮಾಡಿದ್ದು, ವಿತ್ತ-ಜೀವಿತಗಳಿಗೆ ಹಾನಿ ತಂದೊಡ್ಡಿದ್ದು ದೇಶಕ್ಕೆ ಅಗೌರವವೆಂದು ದಕ್ಷಿಣರಾಜ್ಯಗಳ ಅಭಿಪ್ರಾಯ. ಕರ್ನಾಟಕದಲ್ಲಿನ ಪ್ರಾದೇಶಿಕ ಕಾಂಗ್ರೆಸ್ಸನ್ನು ಖಂಡಿಸಿ ಗೊತ್ತುವಳಿ ಸ್ವೀಕರಿಸಿತು. ಇದನ್ನು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರೂ ಒಪ್ಪಲಿಲ್ಲ. ಒಂದು ರಾಜ್ಯದ ಕಾಂಗ್ರೆಸ್ಸು ಇನ್ನೊಂದು ರಾಜ್ಯದ ಕಾಂಗ್ರೆಸ್ಸನ್ನು ಖಂಡಿಸುವುದು ಶಿಷ್ಟಾಚಾರಕ್ಕೆ ವಿರೋಧವೆಂಬುದೇನೋ ನಿಜ. ಆದರೆ, ಕಾಂಗ್ರೆಸ್ ಪಕ್ಷದ ನೀತಿಯು ಅಖಿಲ ಭಾರತ ನೀತಿಯಿಂದ ಪ್ರಾದೇಶಿಕ ನೀತಿಯೊಳಗಿನವಾದರೆ, ಆಗ ಹಾಗೆ ಮಾಡದೆ ಇರುವುದೂ ಅಸಾಧ್ಯವಾಗುತ್ತದೆ. ಕನ್ನಡಿಗರಿಗೆ ಕರ್ನಾಟಕದ ಕಾಂಗ್ರೆಸ್ಸು ಉತ್ತರಕೊಡದಿರುವುದು ಸಾಧ್ಯವೇ?

ಶಿವಸೇನೆಯ ನಾಯಕ ಬಾಳಠಾಕ್ರೆಯನ್ನೇನೂ ಬಂಧಮುಕ್ತಗೊಳಿಸಿಲ್ಲ. ಲೋಕದ ಕಣ್ಣಿಗೆ ಮಣ್ಣೆರಚಲು ಇದು ನಾಯಕರಿಗೆ ಅಗತ್ಯವೆನಿಸಿರಬಹುದು. ಮರಾಠಿ ಕಾಂಗ್ರೆಸ್‌ನಲ್ಲೂ ವಿಪರೀತ ಪ್ರಾದೇಶಿಕತೆ ಬೆಳೆದಿರುವುದರಿಂದ ಅದು ಮಹಾಜನ ವರದಿಯನ್ನು ಒಪ್ಪುತ್ತಿಲ್ಲ. ಅಥವಾ ಅದಕ್ಕೂ ಶಿವಸೇನೆಯ ಹೆದರಿಕೆ ಇದೆಯೋ! ಇಲ್ಲಿ ನಡೆಯಬೇಕಾದುದು ಒಂದೇ. ನಾಯಕರು ಮಹಾಜನ ವರದಿಯನ್ನು ತಿಪ್ಪೆಗೆಸೆದರೆ, ಪಾಟೀಲರು ಅದನ್ನು ತಲೆಯ ಮೇಲಿರಿಸಿದ್ದಾರೆ; ನಂಬೂದರಿಯವರು ತಮಗೂ ವರದಿಗೂ ಯಾವ ಸಂಬಂಧವೂ ಇಲ್ಲವೆಂಬಂತೆ ವರ್ತಿಸಿದ್ದಾರೆ. ಹಾಗಾಗಿ ವರದಿಯ ಅಂಶಗಳೇನೇ ಇರಲಿ, ಯಾರ ವಾದವು ಹೇಗೇ ಇರಲಿ, ಕೇಂದ್ರ ಸರಕಾರವು ಒಂದು ರಾಜ್ಯಕೀಯ ನಿರ್ಧಾರವನ್ನು ಮಾಡುವ ಅಗತ್ಯ ಎಂದಿಗಿಂತ ಹೆಚ್ಚಾಗಿದೆ. ಹೀಗೆ ಶೀಘ್ರ ಕ್ರಮ ಕೈಕೊಳ್ಳದೆ ಹೋದರೆ, ಇನ್ನೂ ಇನ್ನೂ ದುರ್ಘಟನೆಗಳು ಮುಂದುವರಿಯುತ್ತ ಹೋಗಬಹುದು. ಇಂತಹ ನಿರ್ಧಾರದಿಂದ ಒಮ್ಮೆಗೇ ಬೆಂಕಿಯೇಳಬಹುದು; ಅದನ್ನು ಎದುರಿಸಲು ಹೆದರಿ ಕುಳಿತರೆ, ನಿತ್ಯ ಬೆಂಕಿಯ ಹಾವಳಿಯನ್ನು ಜನತೆ ಎದುರಿಸಬೇಕಾದೀತು. ಆದರೆ, ಇಲ್ಲಿರುವ ಆತಂಕವೆಂದರೆ, ರಾಜ್ಯ ನಿರ್ಧಾರ ಕೈಕೊಂಡರೂ ಅದು ಶಾಸನಗತವಾಗಬೇಕಾದರೆ, ವಿಧಾನಸಭೆಗಳಲ್ಲೂ ಬಹುಮತ ಗಳಿಸುವುದು ಅಗತ್ಯ. ಮಹಾರಾಷ್ಟ್ರ-ಕೇರಳಗಳಲ್ಲಿ ಇದು ಸಂಭವನೀಯವಾಗಲಾರದು. ಮತ್ತೆ ಕರ್ನಾಟಕದಲ್ಲಿ?

ಕಾನೊಪ್ಪದ ವಿ. ಕೆ. ಕೃಷ್ಣ ಮೆನನ್ನರನ್ನು ೧೯೬೭ರ ಚುನಾವಣೆಗಳಲ್ಲಿ ಸೋಲಿಸಲು ಎಸ್. ಕೆ. ಪಾಟೀಲರು ಶಿವಸೇನೆಯನ್ನು ಆರಂಭಿಸಿದರೆಂದು ಪ್ರತೀತಿ. ಶಿವಸೇನೆಯ ಜನ್ಮವು ಚುನಾವಣೆ ದಿನಗಳ ಪೂರ್ವಸಂಧ್ಯೆಯಲ್ಲಿ ಆದುದೇ ಇದಕ್ಕೆ ಮುಖ್ಯ ಕಾರಣವಿರಬಹುದು. ಚುನಾವಣೆಗಳಲ್ಲಿ ಮೆನನ್ನರೂ ಸೋತರು; ಪಾಟೀಲರು ಪರಾಜಿತರಾದರು; ಅವರ ಚುನಾವಣಾ ತಕರಾರು ಅರ್ಜಿಯು ಖರ್ಚು ಸಹಿತ ತಿರಸ್ಕೃತವಾಯಿತು. ಈಗ ಮತ್ತೆ ಎಲ್ಲಾದರೂ ಚುನಾವಣೆಗೆ ನಿಲ್ಲುವ ಗಾಳಿ ವರ್ತಮಾನ. ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರ ಹೃತ್ಪೂರ್ವಕ ಬೆಂಬಲ. ಇದೇ ವೇಳೆ ಪಾಟೀಲರು ತನಗೂ ಶಿವಸೇನೆಗೂ ಏನೇನೂ ಸಂಬಂಧವಿಲ್ಲವೆಂದೂ ತಾನದರ ಜನಕನಲ್ಲವೆಂದೂ ಘಂಟಾಘೋಷವಾಗಿ ಸಾರಿದರು. ಚುನಾವಣೆಯು ಮಾಸನೆ ಬಂದೊಡನೆ ಪಾಟೀಲರ ಅಬ್ಬರತಾಳ ಆರಂಭವಾಯಿತೆನ್ನುವವರು ದಾಕ್ಷಿಣಾತ್ಯರು ಮಾತ್ರ.

ಮದ್ರಾಸದ ಭವಿಷ್ಯ

ಅಣ್ಣಾದೊರೈಯವರ ಮರಣಾನಂತರ ಹೊಸ ನಾಯಕನ ಆಯ್ಕೆಯಲ್ಲಿ ನೆಡುಂಚೆಳಿಯನ್ ಕೈಕಟ್ಟಿ ಕೂತುಕೊಂಡದ್ದರಿಂದ ಕರುಣಾನಿಧಿಯವರ ಒಮ್ಮತದ ಆಯ್ಕೆ ನಡೆಯಿತು. ನೆಡುಂಚೆಳಿಯನ್‌ರನ್ನು ಸಚಿವ ಸಂಪುಟಕ್ಕೆ ಸೇರಿಸುವ ಅವರ ಭಗೀರಥ ಪ್ರಯತ್ನ ಅಸಫಲವಾಯಿತು. ಹಾಗಾಗಿ ಕರುಣಾನಿಧಿಯವರು ಬೇರೆಯೇ ಕೆಲವರನ್ನು ಆರಿಸಿ ತಂದರು. ಇತ್ತೀಚೆಗೆ ವಿಧಾನ ಪರಿಷತ್ತಿನಲ್ಲಿ ಅಧಿಕೃತ ಗೊತ್ತುವಳಿಗೆ ಮಂಡಿಸಿದ ತಿದ್ದುಪಡಿಯೊಂದನ್ನು ಡಿ. ಎಂ. ಕೆ. ವಿರೋಧಿಸಿದ್ದರೂ ಮತದಾನದಲ್ಲಿ ಅದು ಬಹುಮತಗಳಿಸಿದ್ದರಿಂದ ಸರಕಾರಕ್ಕೆ ಸೋಲಾಯಿತು. ವಿಧಾನಸಭೆಯ ಮಾಜಿ ಅಧ್ಯಕ್ಷ ಆದಿತ್ಯನ್ ಮೊದಲಾದವರನ್ನು ಸಚಿವರಾಗಿ ಮಾಡಿದ್ದರಿಂದ ಪಕ್ಷದ ಒಂದಂಗಕ್ಕೆ ತೀವ್ರ ಅಸಮಾಧಾನ ತಲೆದೋರಿದೆ. ನೆಡುಂಚೆಳಿಯನ್ ಸುಮ್ಮನಿದ್ದರೂ ಅವರಿಗೆ ತೀವ್ರ ಅಸಂತೋಷವಿದೆಯೆಂಬುದು ಸರ್ವವೇದ್ಯ. "ಪ್ರತಿಯೊಂದು ರಂಗದಲ್ಲೂ ಅಣ್ಣಾರಿಗೆ ಅನಂತರದ ಸ್ಥಾನದಲ್ಲಿ ನಾನಿದ್ದುದರಿಂದ ನಾನೇ ನಾಯಕನಾಗಬೇಕಿತ್ತು"; 'ನನ್ನನ್ನು ನೀವು ಆರಿಸಿಕೊಂಡಿದ್ದರೆ, ನಾನು ಮಂತ್ರಿಯಾಗಿರುತಿದ್ದೆ" ಎಂಬವರ ಉದ್ಗಾರಗಳು ನೋವಿನ ಪ್ರತಿಕ್ರಿಯೆ. ಇದರಿಂದ ಪಕ್ಷದಲ್ಲಿ ಆಂತರಿಕ ಸಂಘರ್ಷವು ತಲೆದೋರುತ್ತಿದೆ. ಇದನ್ನು ತಡೆಯುವ ಪ್ರಯತ್ನವಾಗಿಯೋ ಏನೋ ಅಣ್ಣಾರು ಗೆದ್ದು ಬಂದ ವಿಧಾನ ಸಭಾಕ್ಷೇತ್ರದ ಮರು ಚುನಾವಣೆಗೆ ಶ್ರೀಮತಿ ಅಣ್ಣಾರನ್ನು ನಿಲ್ಲಿಸುವ ಪ್ರಯತ್ನ ನಡೆಯುತ್ತಿದೆ.

ಉತ್ತರ ಭಾರತದ ರಾಜ್ಯಗಳಲ್ಲಿ ರಾಜ್ಯಕೀಯವೇ ಉಯ್ಯಾಲೆಯಾಡುತ್ತಿದ್ದರೆ, ದಕ್ಷಿಣ ಭಾರತದಲ್ಲಿ ಪಕ್ಷೀಯ ನೀತಿಗಳು ಉಯ್ಯಾಲೆಯಾಡುತ್ತಿವೆ. ಅಂತೂ ಮುಂಗಡ ಪತ್ರದ ಅಧಿವೇಶನಗಳು ಎಲ್ಲೆಡೆ ಸುಖ ಪ್ರಾರಂಭವಾದುವು....ಆದರೆ, ವಿವಿಧ ರಾಜ್ಯ ಸರಕಾರಗಳಿಗೆ ತಮ್ಮ ಭವಿಷ್ಯದ ಬಗ್ಗೆ ಉಜ್ವಲ ಕಲ್ಪನೆ ಮಾತ್ರ ಇಲ್ಲವೆಂದೇ ಹೇಳಬೇಕಾಗುತ್ತದೆ.

ಬೇಸಾಯದಿಂದ ಭಾಗ್ಯೋದಯ

ಗ್ರಾಮಾಂತರದ ರೇಡಿಯೋ ಗೋಷ್ಠಿಗಳ ಒಂಭತ್ತನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಪ್ರಸಾರ ಮಾಡಿದ ಸಂದೇಶ.

ಆಧುನಿಕ ಒಕ್ಕಲುತನಕ್ಕೆ ಕನ್ನಡ ರಾಜ್ಯದ ರೈತರಿಂದ ಮನ್ನಣೆ ದೊರೆತಿದ್ದರೆ ಅದಕ್ಕೆ ಆಕಾಶವಾಣಿಯ ಮೂಲಕ ಕೇಳಿಬರುತ್ತಿರುವ ಗ್ರಾಮಾಂತರ ರೇಡಿಯೋ ಗೋಷ್ಠಿಯ ವಿವರಗಳೇ ಆಧಾರ. ನಮ್ಮ ರೈತಬಂಧುಗಳು ತಮ್ಮ ಗ್ರಾಮಗಳಲ್ಲಿ ಪ್ರತಿಷ್ಠಿತವಾಗಿರುವ ಸಾಮೂಹಿಕ ಶ್ರವಣ ಯಂತ್ರಗಳ ಮೂಲಕ ಬೇಸಾಯದ ಬಗ್ಗೆ ಹೊಸ ವಿಷಯಗಳನ್ನು ಅರಿತು, ಅದಕ್ಕೆ ತಕ್ಕಂತೆ ಧಾನ್ಯೋತ್ಪತ್ತಿಯ ಪವಿತ್ರಕರ್ತವ್ಯದಲ್ಲಿ ನಿರತರಾಗಿದ್ದಾರೆ. ಹೆಚ್ಚಿನ ಆಹಾರಧಾನ್ಯಗಳು ಅಗತ್ಯವಾಗಿರುವ ಈ ಕಾಲದಲ್ಲಿ ರೈತರ ಮನಸ್ಸಿನಲ್ಲಿ ಉತ್ಸಾಹ ಭಾವನೆಗಳು ಮೂಡಿಬರಬೇಕು. ಯಾವುದೋ ಹಳೆಯ ಕಾಲದ ಬೇಸಾಯದ ಪದ್ಧತಿಗಳಿಗೆ ಅಂಟಿಕೊಂಡಿರುವ ಕಾಲವಿದಲ್ಲ.

ನಮ್ಮ ವ್ಯವಸಾಯ ವಿಜ್ಞಾನಿಗಳು ಅನೇಕ ಪರಿಶೋಧನೆಗಳಿಂದ, ಭೂಗುಣ, ಭೂಸಾರ, ಸುಧಾರಿತ ಬೀಜ, ಭೂಹದ ಗೊಬ್ಬರ, ಸಸ್ಯ ಸಂರಕ್ಷಣೆ, ಮುಂತಾದ ಅಂಶಗಳಲ್ಲಿ ಹೊಸ ದಾರಿ ಹಿಡಿದು, ಅದರ ಉಪಯೋಗಗಳನ್ನು ಗ್ರಾಮಾಂತರ ರೇಡಿಯೋ ಗೋಷ್ಠಿಯ ಮೂಲಕ ರೈತಾಪಿವರ್ಗಕ್ಕೆ ಸರಳಗನ್ನಡ ಭಾಷೆಯಲ್ಲಿ ತಿಳಿಸುತ್ತಿರುವುದು ಅತ್ಯಂತ ಸಂತೋಷದ ಸಂಗತಿ

ಕಳೆದ 9 ವರ್ಷಗಳಿಂದ ಈ ಕಾರ್ಯಕ್ರಮ, ಆಕಾಶವಾಣಿಯ ಮೂಲಕ ಲಕ್ಷಾಂತರ ರೈತರ ಗಮನಕ್ಕೆ ಬಂದು, ಅವರು ಬೇಸಾಯದ ಕ್ರಮಗಳಲ್ಲಿ ಕ್ರಾಂತಿ ಮಾಡುತ್ತಿದ್ದಾರೆ. ಆಕಾಶವಾಣಿಯ ಗ್ರಾಮಸ್ಥರ ಕಾರ್ಯಕ್ರಮಗಳು, ರಚನಾತ್ಮಕದಾರಿಹಿಡಿದು, ಪ್ರತಿರೈತನ ಮನಸ್ಸಿನಲ್ಲೂ ಹೊಸ ಭಾವನೆ ಮತ್ತು ಹೊಸಚೈತನ್ಯಗಳನ್ನು ಕೆರಳಿಸಿವೆ ಎಂಬ ಮಾತು ನಿಜ.

ಗ್ರಾಮಾಂತರ ರೇಡಿಯೋ ಗೋಷ್ಠಿಯ ಪ್ರಸಾರಗಳು ರೈತಾಪಿ ಜೀವನದಲ್ಲಿ ಅವರಿಗೆ ಹೊಸ ಉತ್ಸಾಹವನ್ನೂ, ನೂತನ ಕಾರ್ಯಚೇತನವನ್ನೂ ಒದಗಿಸಿಕೊಟ್ಟಿವೆ. ಆದರಿಂದ ಧಾನ್ಯಲಕ್ಷ್ಮಿಯು ಅವರಿಗೆ ಪ್ರಸನ್ನಳಾಗಿ, ದೇಶದ ಆರ್ಥಿಕ ಭದ್ರತೆಗೆ ಸಹಕಾರಿಯಾಗಿದೆ.

ಗ್ರಾಮಾಂತರಗಳ ಕಡೆ ಸಂಚಾರ ಹೋದಾಗ್ಗೆ, ನೂರಾರು ರೈತರು, ರೇಡಿಯೋ ಮುಂದೆ ಕುಳಿತು, ಗ್ರಾಮಾಂತರ ರೇಡಿಯೋಗೋಷ್ಠಿಯ ವಿವರಗಳನ್ನು ಆಸಕ್ತಿಯಿಂದ ಕೇಳಿ ಮಂದಹಾಸಯುಕ್ತರಾಗಿ, ತಮ್ಮ ಹೊಲಗದ್ದೆಗಳಲ್ಲಿ ನೂತನ ಪ್ರಯೋಗಗಳ ಫಲಿತಾಂಶಗಳನ್ನು ಕಂಡು ಆನಂದಪಡುತ್ತಿರುವುದು ನನಗೆ ಸಂತೋಷವನ್ನುಂಟುಮಾಡಿದೆ.

ರೈತರೇ ನಮ್ಮ ದೇಶದ ಬೆನ್ನುಮೂಳೆ. ಅವರ ಕಾಯಕವೇ ನಮ್ಮ ನಾಡಿನ ಉದ್ಧಾರಕ್ಕೆ ಅಡಿಪಾಯ ಹಾಕುವ ಕ್ರಮ. ಕರ್ಮಯೋಗಿಗಳೂ, ನೇಗಿಲಯೋಗಿಗಳೂ ಕಷ್ಟಪಟ್ಟು ದುಡಿದರೆ ದೇಶದ ಮಕ್ಕಳಿಗೆ ಹೊಟ್ಟೆಯ ತುಂಬ ಊಟ ಸಿಕ್ಕೀತು. ಅವರನ್ನು ಹೊಸ ವಿಧಾನಗಳಿಗೂ, ಪರಿಸ್ಥಿತಿಗಳಿಗೂ ಅಳವಡಿಸಿಕೊಳ್ಳಬೇಕು. ಪರಿಶೋಧನೆಗಳ ಬೇರೆಬೇರೆ ಅಂಶಗಳನ್ನು ಅವರಿಗೆ ಸಕಾಲದಲ್ಲಿ ತಿಳಿಸಬೇಕು. ನಮ್ಮ ವ್ಯವಸಾಯದ ಇಲಾಖೆಯವರೂ, ಪಶುಪಾಲನಾ ಇಲಾಖೆಯವರೂ, ಗ್ರಾಮಾಂತರ ರೇಡಿಯೋಗೋಷ್ಠಿಯ ಸಫಲತೆಗೆ ಸಹಕಾರ ನೀಡುತ್ತಿರುವುದು ಅಭಿನಂದನೀಯ. ವೈಜ್ಞಾನಿಕರು, ತಮ್ಮ ಭಾವನೆಗಳನ್ನು ಗ್ರಾಮಾಂತರ ರೇಡಿಯೋಗೋಷ್ಠಿಯ ಮೂಲಕ ಪ್ರಸಾರಪಡಿಸಬೇಕು. ರೈತರು ಅಪೇಕ್ಷಿಸುವ ಪ್ರಶ್ನೆಗಳಿಗೆ ಆಗಾಗ್ಗೆ ಉತ್ತರ ಹೇಳಿ ಅವರ ಒಕ್ಕಲುತನದ ಮಾರ್ಗವನ್ನು ಹುರಿದುಂಬಿಸಬೇಕು.

ಈ ಪವಿತ್ರ ಕಾರ್ಯದಲ್ಲಿ ಗ್ರಾಮಾಂತರ ರೇಡಿಯೋಗೋಷ್ಠಿಯು ಕಾರ್ಯವಿವರಗಳು ಒಳ್ಳೆಯ ಮಾರ್ಗದಲ್ಲಿದ್ದು ರೈತರಿಗೆ ಸಂತಸವುಂಟಾಗಿದೆ. ಅದರ ವ್ಯಾಪ್ತಿ ಇನ್ನೂ ಹೆಚ್ಚಬೇಕು, ಜನಪ್ರಿಯತೆ ಅಧಿಕವಾಗಬೇಕು.

ಕೃಷಿಕನ ಬಂಧು:--

ಪ್ರಕೃತಿಯ ನೇಗಿಲು ಎರೆಹುಳ

ಲೇಖಕರು: ಬಿ. ನರಸಿಂಗರಾವ್, ಕಾಸರಗೋಡು.

ಸುಂದರ ಹೂಗಳಿಂದ ನೆರೆಯುವ ಉದ್ಯಾನದಲ್ಲಾಗಲಿ, ಘೋರ ಅರಣ್ಯದಲ್ಲಿ ಬೇಕಿದ್ದರೆ ಇರಲಿ, ಮಣ್ಣನ್ನು ಸಸ್ಯಗಳಿಗೆ ಜೀವ ಯೋಗ್ಯಮಾಡುವುದು ಎರೆಹುಳುವಿನ "ಕರ್ತವ್ಯ". ಮಣ್ಣನ್ನು ಫಲವತ್ತಾಗಿಸುವುದರೊಂದಿಗೆ ವಾಯು ಸಂಚಾರಯುಕ್ತವಾಗಿಸುವುದರಿಂದ ಎರೆಹುಳುವನ್ನು 'ಪ್ರಕೃತಿಯ ನೇಗಿಲು' ಅನ್ನುವುದು ತೀರಾ ಯೋಗ್ಯವಿದೆ. ಮಣ್ಣಿನಲ್ಲಿನ ಹೆಚ್ಚಿನ ನೀರಿನ ಪಸೆಯನ್ನು ಆಲಗಿಟ್ಟು, ಮಣ್ಣು ಕೊಚ್ಚಿಹೋಗದಂತೆ ಎರೆಹುಳು ಸಹಾಯ ಮಾಡುತ್ತದೆ. ಇಂತಹ ಜೀವಿ 'ಕೃಷಿಕನ ಬಂಧುವೆ'ನ್ನುವದರಲ್ಲಿ ಅತಿಶಯವೇನಿದೆ?

ಮಣ್ಣಿನಡಿಯಲ್ಲಿ ವಾಸಿಸುವ ಅದ್ಭುತ ಜೀವಿಗಳಾಗಿವೆ—ಎರೆಹುಳುಗಳು. ಇವುಗಳಲ್ಲಿ ಸುಮಾರು ಎರಡು ಸಾವಿರ ವರ್ಗಗಳಿವೆ ಎಂದು ಅಂದಾಜು ಮಾಡಲಾಗಿದೆ. 'ರಾಕ್ಷಸ ವರ್ಗ'ಕ್ಕೆ ಸೇರಿದವುಗಳನ್ನು—ಹನ್ನೆರಡು ಅಡಿ ಉದ್ದ—ಆಸ್ಟ್ರೇಲಿಯಾದಲ್ಲಿ ಕಾಣಬಹುದು. ಸಾಮಾನ್ಯ ಎರೆಹುಳುವನ್ನು 'ಮಿಗೊಸ್ಕೊಲೆಕ್ಸ್' ಎಂಬ ವರ್ಗಕ್ಕೆ ಸೇರಿಸಲಾಗಿದೆ.

ಶರೀರ ರಚನೆ

ಇವುಗಳು ಹನ್ನೆರಡರಿಂದ ಇಪ್ಪತ್ತು ಸೆಂಟಿಮೀಟರ್ ವರೆಗೆ ಉದ್ದವಿರುತ್ತವೆ. ಪ್ರತ್ಯೇಕವಾದ 'ತಲೆ' ಎಂಬುದಿಲ್ಲ. ಆದರೆ ಬಾಯಿ ಹಾಗೂ ವಿಸರ್ಜನಾ ದ್ವಾರವು ಇವಕ್ಕೆ ಇವೆ. ಬಾಯಿಯಿರುವೆಡೆ ಚಿಕ್ಕ ಒಂದು ದೇಹರಚನೆ ಮುಂದಕ್ಕೆ ನೀಡಿಕೊಂಡಿರುವುದನ್ನು ಕಾಣಬಹುದು.

ಎರೆಹುಳಕ್ಕೆ ಐದು ಜೋಡಿ ಹೃದಯಗಳಿವೆ. ಶರೀರವು 1_0 ಖಂಡಗಳಾಗಿ ವಿಭಜಿಸಲ್ಪಟ್ಟಿದೆ. ಶರೀರಾವರಣವೆಂದರೆ ತೆಳುವಾದ ಚರ್ಮದ ಪರೆ. ಈ ಖಂಡಗಳ ಹೊರಗೆ— ಚರ್ಮದಮೇಲೆ— ಎಂಟು ಚಿಕ್ಕ ಮುಳ್ಳಿನಂತಹ ರಚನೆಯಿದೆ. ಇವನ್ನು 'ಸೀಟ' ಅನ್ನುವರು. ಎರೆಹುಳವು ಸಂಚರಿಸಲು ಇವುಗಳೇ ಸಹಾಯಕ.

ಎರೆಹುಳಕ್ಕೆ ಕಣ್ಣು, ಕಿವಿಯಿಲ್ಲ. ಆದರೆ ಚರ್ಮದ ಅಡಿಯಲ್ಲಿರುವ ಒಂದು ತರದ ಜೀವಕಣಗಳು ಬೆಳಕಿನ ಅಲ್ಪ ಪ್ರಭಾವವನ್ನೂ ಬೋಧ್ಯ ಮಾಡಬಲ್ಲುವು. ಹಕ್ಕಿಗಳೋ, ಇಲಿಗಳೋ ಹತ್ತಿರ ಸರಿಯುವಾಗ ಚಿಕ್ಕ ಸದ್ದುಂಟಾದರೆ, ಎರೆಹುಳಕ್ಕೆ ಅದು ತಿಳಿದು ಬಿಡುತ್ತದೆ; ಅದು ಮಣ್ಣಿನಡಿಯಲ್ಲಿ ಸರಿಯುತ್ತದೆ. ಚರ್ಮದಲ್ಲಿ ಧಾರಾಳ ರಕ್ತ ಸಂಚಾರವಿರುವುದರಿಂದ ಅದರ ಬಣ್ಣ ನಸು ಕೆಂಪಾಗಿದೆ. ಅಲ್ಲದೆ ಚರ್ಮವೇ ಶ್ವಸನೇಂದ್ರಿಯವೂ ಆಗಿದೆ.

ಎರೆಹುಳವು ಎರಡು ತರದ ಶ್ಲೇಷ್ಮದ್ರವಗಳನ್ನು ಉತ್ಪಾದಿಸುವುದು. ದುರ್ನಾತವುಳ್ಳ ಒಂದು ದ್ರವವು ವೈರಿಗಳನ್ನು ನಿಷ್ಕ್ರಿಯಗೊಳಿಸಲು ಉಪಕರಿಸುವುದು. ಮತ್ತೊಂದು ದ್ರವವು ಎರೆಹುಳದ ಶರೀರದಲ್ಲಿ ಒಳಸಂತತಿ ರಚನೆಗೆ ಕಾರಣವಾಗುತ್ತಾ, ರೋಗಾಣುಗಳಿಂದ ರಕ್ಷಿಸಲು ನೆರವಾಗುತ್ತದೆ.

ಎರೆಹುಳದ ತಲೆಯೋ ಬಾಲವೋ ತುಂಡಾದರೆ ತೊಂದರೆಯಿಲ್ಲ. ಆ ಸ್ಥಾನದಲ್ಲಿ ಹೊಸದಾಗಿ ಅವು ಮೂಡಿಬರುತ್ತವೆ. ಆದರೆ ಒಂದು ಎರೆಹುಳುವನ್ನು ಎರಡಾಗಿಸಲು ಅಸಾಧ್ಯ. ತಲೆಯಿರುವ ಭಾಗವು ಮಾತ್ರ—ಎರೆಹುಳುವನ್ನು ಸರಿಯಾಗಿ ಎರಡು ಭಾಗಮಾಡಿದರೆ—ಬದುಕಬಲ್ಲದು. ಮತ್ತೊಂದು ಭಾಗಕ್ಕೆ ಆಹಾರ ಸೇವನೆಗೆ ಕೊರತೆಯುಂಟಾಗುವುದರಿಂದ ಅದು ಸಾಯುತ್ತದೆ.

ವಾಸಸ್ಥಳ, ಆಹಾರ

ತೇವವುಳ್ಳ ಮಣ್ಣಿನಲ್ಲಿ ಚಿಕ್ಕ ಸುರಂಗಗಳನ್ನು ಸೃಷ್ಟಿಸಿ ಅವುಗಳಲ್ಲಿ ಎರೆಹುಳಗಳು ವಾಸಿಸುತ್ತವೆ. ಈ 'ಸುರಂಗ'ಗಳ ಪಾರ್ಶ್ವಗಳಲ್ಲಿ ಎರೆಹುಳುವು ಉತ್ಪಾದಿಸಿದ ಶ್ಲೇಷ್ಮದ್ರವವು ಒರಸಿರುವುದು. ಸುರಂಗದ ಮೇಲ್ಭಾಗದಲ್ಲಿ ಮಣ್ಣೋ, ಕೊಳೆತ ಎಲೆಗಳೋ ಮುಚ್ಚಲ್ಪಟ್ಟಿರುತ್ತವೆ.

ಶರೀರವನ್ನು ಮುಂದಕ್ಕೆ ನೂಕಿಯೇ ಎರೆಹುಳವು ಮಣ್ಣನ್ನು ಕೊರೆಯುವುದು. ಕೊರೆದ ತೆಗೆದ ಮಣ್ಣನ್ನು ಅದು ತಿಂದು ಹಿಂಭಾಗದಿಂದ ವಿಸರ್ಜಿಸುವುದು. ಈ ವಿಸರ್ಜಿತ ಮಣ್ಣು ಸುರಂಗದ ಮೇಲ್ಭಾಗದಲ್ಲಿ ನಿಕ್ಷೇಪಿಸಲ್ಪಡುವುದು. ಈ ಸೇವಿಸಿದ ಮಣ್ಣಿನಲ್ಲಿ ಅಡಗಿದ 'ಜೀವ ಪದಾರ್ಥ'ಗಳೇ ಎರೆಹುಳದ ಆಹಾರ.

ಹಗಲಿಡೀ ಎರೆಹುಳವು 'ಸುರಂಗ'ದಲ್ಲಿ ಅವಿತಿರುವುದು. ರಾತ್ರಿಯಲ್ಲಿ ಹೊರಬಂದ ಜೀರ್ಣಾವಸ್ಥೆಯಲ್ಲಿರುವ ಜೀವ ಪದಾರ್ಥಗಳನ್ನು ಸೇವಿಸುವುದು. ಜಡಿಮಳೆಯಿಂದಾಗಿದ್ದು ಮಣ್ಣು ಅಧಿಕ ತೇವಮಯವಾಗಿದ್ದರೆ, ಎರೆಹುಳವು ಗಾಳಿಯ ಕೊರತೆಯಿಂದಾಗಿ, ಹಗಲೂ ಹೊರಬರುವುದಿದೆ.

ಬೇಸಿಗೆ ಕಾಲದಲ್ಲಿ ಭೂತಲವು ತೇವರಹಿತವಾಗುವುದರಿಂದ ಎರೆಹುಳಗಳು ಮಣ್ಣಿನ ಅಡಿಗೆ ಹೋಗುತ್ತವೆ. ಅಲ್ಲಿ ನೂರಾರು ಎರೆಹುಳಗಳು ಒಂದುಗೂಡಿ ಒಂದು ಮುದ್ದೆಯಾಗಿರುತ್ತವೆ. ಚರ್ಮದ ಜಲಾಂಶವು ನಷ್ಟವಾಗದಂತೆ ಇದು ಸಹಾಯಕ. ಮಣ್ಣು ಮತ್ತೆ ತೇವಭರಿತವಾದಾಗ ಇವು ಮತ್ತೆ ಭೂತಲವನ್ನು ಸೇರುತ್ತವೆ.

ಪ್ರತ್ಯುತ್ಪಾದನೆ

ಎರೆಹುಳುವಿನಲ್ಲಿ ಸ್ತ್ರೀ ಪುರುಷ ಜನನಾಂಗಗಳು ಒಂದೇ ಜೀವಿಯಲ್ಲೇ ಸ್ಥಿತವಾಗಿರುತ್ತವೆ. 'ಸೀಟ'ಗಳನ್ನುಪಯೋಗಿಸಿ ಅದು 'ಜೋಡಿ'ಯ ಉದ್ದವನ್ನು ಅಳೆಯುತ್ತದೆ. ತುಸು ಉದ್ದವಿದ್ದರೆ ಅವು ಜೋಡಿಯಾಗುತ್ತವೆ. ಅವು ಶ್ಲೇಷ್ಮದ್ರವವನ್ನು ಉತ್ಪಾದಿಸಿ ಪರಸ್ಪರ ಬಂಧಿಸಲ್ಪಡುತ್ತವೆ. ಕೆಲದಿನಗಳ ನಂತರ ಎರಡರ ತಲೆಯಲ್ಲೂ ಒಂದು ಚಿಕ್ಕ 'ಗೂಡು' ಕಾಣಬರುತ್ತದೆ. ಇದರಲ್ಲಿ ಮೊಟ್ಟೆಗಳು ನಿಕ್ಷೇಪಿಸಲ್ಪಡುತ್ತವೆ. ಕ್ರಮೇಣ ಆ "ಮೊಟ್ಟೆಯ ಗೂಡು" ಬಿದ್ದುಹೋಗುತ್ತದೆ. ತೇವವುಳ್ಳ ಮಣ್ಣಿನಲ್ಲಿ ಅದನ್ನು ಮುಚ್ಚಿಟ್ಟು, ನಾಲ್ಕು ವಾರ ಕಳೆದಾಗ, 1—8ರ ವರೆಗೆ ಮರಿಗಳು ಹೊರಬರುತ್ತವೆ. ಆರು ತಿಂಗಳೊಳಗೆ ಇವುಗಳಿಗೆ ಪ್ರಾಯ ಪೂರ್ತಿಯಾಗುತ್ತದೆ. ಹಕ್ಕಿಗಳೋ, ಕಪ್ಪೆಗಳೊ, ಇಲಿಗಳೋ ಅವನ್ನು ನುಂಗದಿದ್ದರೆ ಸುಮಾರು ಆರು ವರ್ಷದ ವರೆಗೆ ಅವು ಬಾಳುತ್ತವೆ.

ಆಧುನಿಕ ಸಂಶೋಧನೆ

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರೊ| ಎಡ್ವಿನ್ ಕೂಪರ್ ಎರೆಹುಳುವಿನ ಕುರಿತಾದ ವಿಶೇಷ ಸಂಶೋಧನೆ ನಡೆಸುತ್ತಿದ್ದಾರೆ. ಮನುಷ್ಯ ಶರೀರದಲ್ಲಾಗುವಂತೆ, ಎರೆಹುಳುವಿನ ಶರೀರದಲ್ಲೂ, ಕೆಲವೊಂದು ಅಣುಗಳಲ್ಲಿ ಬದಲಾವಣೆಯುಂಟಾಗಿ, ಪ್ರಾಯವಾದಂತೆ ಅದು ದೇಹದಲ್ಲಿ ಊದ್ದು ರಚ್ಯವು (swelling) ವೆಂದೂ ತಿಳಿದುಬಂದಿದೆ. ಮನುಷ್ಯ ಶರೀರಕ್ಕೆ ಕಸಿ ಮಾಡಿದ ಅವಯವಗಳು, ತಿರಸ್ಕರಿಸಲ್ಪಡುವಂತೆ, ಎರೆಹುಳದಲ್ಲೂ ಆ ಕ್ರಿಯೆ ನಡೆಯುತ್ತದೆಂದು ತಿಳಿದು ಬಂದಿದೆ.

ನಾಟಕ ಪ್ರದರ್ಶನ

ಬೆಳ್ಮಣ್ಣು, ಫೆ. 3 ಕಳೆದವಾರ ಯುವಕ ಸಂಘ, ಬೆಳ್ಮಣ್ಣು ಇದರ ಸದಸ್ಯರಿಂದ ಈ ವರ್ಷದ ಮೊದಲ ಕಾಣಿಕೆಯಾಗಿ "ಬಯ್ಯಮಲ್ಲಿಗೆ" ಎಂಬ ತುಳು ಸಾಮಾಜಿಕ ನಾಟಕ ಪ್ರದರ್ಶನವು ಬೆಳ್ಮಣ್ಣು ಬೋರ್ಡು ಹಯರ್ ಸೆಕಂಡರಿ ಶಾಲಾ ರಂಗಮಂಟಪದಲ್ಲಿ ಪ್ರಸ್ತುತ ಶಾಲೆಯ ಹೆಡ್‌ಮಾಸ್ಟರ್ ಶ್ರೀ ರಾಮ ಭಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಯಶಸ್ವಿಯಾಗಿ ನಡೆಯಿತು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷ ಡಾ| ಕೊರಡ್ಕಲ್ ವೆಂಕಟರಾಯರು ಸ್ವಾಗತಭಾಷಣ ಮಾಡಿ ಸಂಘದ ಚಟುವಟಿಕೆಗಳ ವಿವರಗಳಿತ್ತರು. ಸಂಘದ ಪತಿಯಿಂದ ಏರ್ಪಡಿಸಲಾಗಿದ್ದ ಕ್ರೀಡಾಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಅಧ್ಯಕ್ಷರು ಬಹುಮಾನ ವಿತರಣೆಗೈದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸಂಘದ ಸದಸ್ಯರ ಉತ್ಸಾಹ, ಹುರುಪು ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚಿಕೆ ಸೂಚಿಸಿ ಸಂಘವು ಇಟ್ಟುಕೊಂಡಿರುವ ಧ್ಯೇಯ ಸಫಲವಾಗಲಿ ಎಂದು ಹಾರೈಸಿದರು.

ನಂತರ ಕು. ಸುಜಾತ, ಜೂಲಿಯೆಟ್, ಕು. ಆಲಿಸ್, ಇವರಿಂದ ನೃತ್ಯ ಪ್ರದರ್ಶನ ನಡೆಯಿತು.

ಅಮೇಲೆ ನಡೆದ ನಾಟಕ ಪ್ರದರ್ಶನದಲ್ಲಿ ಸರ್ವಶ್ರೀ ಸೋಮಪ್ಪ ಸಾಲಿಯಾನ, ಕೇಶವ, ಗಿರಿಯ, ಶಂಕರ ಬಲ್ಯಾಯ, ಮೈಕೆಲ್, ಡಿಸೋಜ, ಸನ್ನಿ ಡಿಸೋಜ, ಸಚ್ಚಿದಾನಂದ, ಜೋನ್ ಪಿಂಟೊ, ಶಾಮಣ್ಣ ಮೊದಲಾದವರು ಪಾತ್ರವಹಿಸಿದ್ದರು. ಮಾರ್ಗದರ್ಶನ — ಮೈಯುದ್ದೀನ್ ಸಾಬ್, ಹಲಿಮಾಲ್. ಸಂಗೀತ ಮತ್ತು ಹಿನ್ನೆಲೆ ಗಾಯನ — ಶ್ರೀ ಕೇಶವಾಚಾರ್, ಶ್ರೀ ಮನೋಹರ್ ಮತ್ತು ಮಾಸ್ಟರ್, ಮೋಹನ್ — ಸುವರ್ಣ ಮತ್ತು ಪಾರ್ಟಿ— ಇವರುಗಳು ಸಹಕರಿಸಿದ್ದರು.

ಕೊನೆಗೆ ಸುರತ ಅರ್ಥದಾರಿಗಳಿಂದ "ಸುಧನ್ವ ಕಾಳಗ" ಎಂಬ ಯಕ್ಷಗಾನ ಕೂಟವೂ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಬಿ. ದೇವರಾಜ್ ಕೃತಜ್ಞತೆಗಳನ್ನರ್ಪಿಸಿದರು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

I. A. 1/68 in O. S. 346/65.

ಮಾಮು ನ್ಯಾಕ ಕೂಡಾ— ಅರ್ಜಿದಾರರು, ವಾದಿರು

vs.

ಜಾನು ನ್ಯಾಕ ಕೂಡಾ—ಎದ್ರಿರು, ಪ್ರತಿವಾದಿರು

17ನೇ ಎದ್ರಿ ಮೋನಪ್ಪ ನ್ಯಾಕ, ಮಾನುನ ನ್ಯಾಕರ ಮಗ, ಪುತ್ತೂರು ತಾಲ್ಲೂಕು ಶಿಶಿಲ ಗ್ರಾಮದಲ್ಲಿರುವುದು, 19ನೇ ಎದ್ರಿ ಕೃಷ್ಣ ನ್ಯಾಕ, ಸೋಮ ನ್ಯಾಕರ ಮಗ, ಸುಳ್ಯ ತಾಲ್ಲೂಕು ಅಮರಪಡ್ನೂರು ಗ್ರಾಮದಲ್ಲಿರುವುದು, ಮತ್ತು 21ನೇ ಎದ್ರಿ ಅಂಗರಪ್ಪ ಗೌಡ, ಕುದ್ಯಕೋಡಿ ಕೋಗಪ್ಪ ಗೌಡರ ಮಗ, ಸುಳ್ಯ ತಾಲ್ಲೂಕು ಎಡಮಂಗಲ ಗ್ರಾಮದಲ್ಲಿರುವುದು.

ಮೇಲ್ಕಂಡ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ :—

ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಕ್ಯಾನಲ್ ಡಿಕ್ರಿ ವ್ಯವಹಾರದಲ್ಲಿ ತಾರೀಕು 21_3_69ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಆ ದಿನ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಉದಾಹರಣೆಗಳನ್ನು ದಾಖಲು ಮಾಡದಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ಏಕಪಕ್ಷವಾಗಿ ತೀರ್ಮಾನ ಮಾಡಲಾಗುವುದು. ತಿಳಿದಿರಲಿ.

(By order)

ಕೆ. ಯನ್. ಮಲ್ಯ,

Advocate for Petitioners.

ಪುತ್ತೂರು, 6_2.69.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—

ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—

ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 7.

HOTEL SHIVAPRASAD

High Class Boarding, Lodging & Restaurant

COONDAPUR, S. K.

ಪಿತೃಪಕ್ಷದಲ್ಲಿ ಕಾಗೆಗಳಿಗೇ ಸನ್ಮಾನ

(ನಾಲ್ಕನೇ ಕಾಲಮಿನಿಂದ)

ಯೇ ಮುಟ್ಟುತ್ತೆ....''

"ನೋಡಿ, ನಮ್ಮ ಹಿರಿಯ ವ್ಯಕ್ತಿಗಳೇ ಎಂತಹ ಪರಿಪಾಠ ಹಾಕಿಕೊಡ್ತಾರೇಂತ..."

"ಹ್ಞೂಂ....ಹೇಳು..."

"ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ-ಪರಿಷತ್ತುಗಳ ಜಂಟಿ ಅಧಿವೇಶನಕ್ಕೆ ರಾಜ್ಯಪಾಲರು ಬಂದಾಗ, ಮತ್ತು ಅಲ್ಲಿಂದ ಎದ್ದು ಹೋದಾಗ ಸಂಯುಕ್ತರಂಗದ ಸದಸ್ಯರು ಎದ್ದು ನಿಲ್ಲುವ ಸಂಪ್ರದಾಯವನ್ನು ಮುರಿದರಂತೆ—"

''ಅಯ್ಯೋ, ಇದರಲ್ಲೇನು ಬಂತೆ? ಗೂಗೆ ನೋಡಿದ ಹೋದರೆ, ಸೂರ್ಯನ ಪ್ರತಿಭೆಗೆ ವಿಘ್ನವೇನು ಬಂತು?"

"ಅದು ಸರಿಯನ್ನಿ. ಅಂತೂ ಧರ್ಮವೀರರು ನಿಜಕ್ಕೂ ವೀರರೇ. ಆದರೆ, ಸಂಯುಕ್ತರಂಗದವರು ತಮ್ಮ ಆಶ್ರಯಕ್ಕೆ ವಿರುದ್ಧವಾಗಿ ರಾಜ್ಯಪಾಲರು ನಡೆದಾಗ ಸಂತಾಪದಿಂದ ವರ್ತಿಸಿದ್ದು ಭಾರಿ ವಿಶೇಷವೇ ಅಲ್ಲವೆ?"

"ಅಲ್ಲದೆ ಮತ್ತೆ? ಏನೋ ಭವಿಷ್ಯದ ಚಿಂತನೆ ಮಾಡಿ ಭೂತವನ್ನು ನೆನೆದು ಸುಮ್ಮನಿದ್ದರೋ ಏನೋ!'

"ಹ್ಞೂಂ. ಇರಬಹುದೂನ್ನಿ. ರಾಜ್ಯಪಾಲರ ಮುಂದೆ ಪ್ರತಿಜ್ಞಾವಿಧಿ ಸ್ವೀಕರಿಸುವವರಿಗೆ ಅವರು ಬರುವಾಗ ಎದ್ದು ನಿಲ್ಲುವುದು ಅವಮಾನವೆನಿಸಿತು. ಇನ್ನು, ಶಾಲೆಗಳಲ್ಲಿ ಅಧ್ಯಾಪಕರು ಬರುವಾಗ ಮಕ್ಕಳು ಎದ್ದುನಿಲ್ಲುವ ಪರಿಪಾಠವನ್ನೂ ಬಿಟ್ಟುಬಿಟ್ಟರೆ ಸರಿ."

'ನೋಡ, ಅದೆಲ್ಲಾ ತಂತ್ರ. ತಮ್ಮ ಸ್ವಾಭಿಮಾನಲವನ್ನೂ ಅಂದ್ಲಾಂತ ತೋರಿಸಿಕೊಡೋ ಕುಸಂಪ್ರದಾಯ. ಇದರಿಂದ ನಮ್ಮ ಯಾರಿಗೆ? ಮೊನ್ನೆ ಸದಸ್ಯರು ಸನ್ಮಾನ್ಯ ರಾಜ್ಯಪಾಲರಿಗೆ ಗೌರವ ಕೊಡದೆ ಹೋದರೇನು? ಪಿತೃಪಕ್ಷದಲ್ಲಿ ಕಾಗೆಗಳಿಗೆ ಮಾತ್ರ ಸನ್ಮಾನ ತಾನೆ?"

"ಓ, ಭಾರಿ ದೊಡ್ಡ ಮಾತು ಹೇಳಿದ್ರಿ...."

''ಮತ್ತಿನ್ನೆಂಥದು? ಬಂಗಾಳದಲ್ಲಿ ಸಂಯುಕ್ತರಂಗ ಸರಕಾರ ಆರಂಭವಾದೊಡನೆಯೇ ಗೋಲಿಬಾರು-ಗಲಭೆ-ಘೇರಾವೊ ಎಲ್ಲ ಮತ್ತೊಮ್ಮೆ ಆರಂಭವಾದುವು. ವಿಧಾನಸಭಾಧ್ಯಕ್ಷರೂ ಕೂಡ ದಂತೆ ಸಂಯುಕ್ತರಂಗದ ಮೂವತ್ತು ಮೂರು ದೇವತೆಗಳು ಬಂಗಾಳದ ಭವಿಷ್ಯವನ್ನು ಹೇಗೆ ಬರೆಯುತ್ತಾರೆಯೋ ಕಾದು ನೋಡಬೇಕು...."

"ಇನ್ನೀಗ ಮಾತಾಡುವುದಾದರೂ ಏನ? ಜನ ಬಹುಮತದಿಂದ ಆಯ್ದು ಅಧಿಕಾರಕ್ಕೇರಿಸಿದಾಗ, ಅದೊಂದೇ ದಾರಿ..."

"ಹ್ಞೂಂ..."

"ಅಲ್ರಿ, ನಮ್ಮ ಕರ್ನಾಟಕ-ಮಹಾರಾಷ್ಟ್ರ ಗಡಿ ಸಂಗ್ತಿ ಪರಿಶೀಲನೆಯೂ ಯಿತ್ತಂತಲ್ಲಾ?"

"ಹ್ಞೂಂ, ಮಹಾಜನ ವರದಿಯ ಪರಿಶೀಲನೆ ನಡೆಯಿತು ಎಬಿಸಿಯಲ್ಲಿ. ನಿರ್ಧಾರ ಮಾತ್ರ ಮುಂದಕ್ಕಂತೆ...'

"ನೋಡಿ, ಮಹಾರಾಷ್ಟ್ರ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರು ವಿವಾದವನ್ನು ಮತ್ತೆ ಮಾತುಕತೆಗಳಿಂದ ಬಗೆಹರಿಸಬೇಕೆಂದು ಹೇಳಿದ್ದಾರಂತೆ..."

"ಹ್ಞೂಂ... ಅಲ್ಲ, ಹಿಂದೆ ಏನಾರು ಸುತ್ತು ಮಾತುಕತೆ ನಡೆದು ಅದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ಗ್ಯಾರಂಟಿ ಮಾಡಿಕೊಂಡ ಮುಖ್ಯಮಂತ್ರಿ ನಾಯಕರ — ಪ್ರಾದೇಶಿಕ ಕಾಂಗ್ರೆಸ್ ನಾಯಕರೂ ಸೇರಿ ಎಐಸಿಸಿಯಲ್ಲಿ ಒತ್ತಾಯ ಮಾಡಿ ಮಹಾಜನ ಆಯೋಗದ ನೇಮಕಕ್ಕೆ ಕಾರಣರಾದರು. ಈಗ ಮಹಾಜನರ ವರದಿಬೇಡ; ಮತ್ತೆ ಮಾತುಕತೆಯೇ ಆದೀತು ಅಂತ ಅನ್ನೋದು ಅಂದ್ರೆ"

"ಅಲ್ರಿ, ಇದ್ರಲ್ಲಿ ವಿಶೇಷವೇನೂಂತ? ಬಾನಪ್ರತಿಬಂಧ ತಂದ ಕಾಂಗ್ರೆಸ್ಸೇ ಅದನ್ನು ಕಿತ್ತುಹಾಕಲಿಲ್ಲವೆ?"

"ಹ್ಞೂಂ...ಅಂತೂ ನಿಶ್ಚಿತ ನೀತಿಯಿಲ್ಲಾಂತಾಯತ್ತು".

"ಹೌದು; ನಿಶ್ಚಿತ ನೀತಿ ಇಟ್ಟುಕೊಂಡವ್ರಕಡೆ ಸ್ವಲ್ಪ ನೋಡಿ. ಅವರ ಬಾಳು ಭಾರೀ ಗೋಳು..."

''ಅಂದ್ರೆ ಗಾಳಿ ಬಂದತ್ತ ತೂರಿಕೋ ಅಂತ ತಾನೇ ನೀನನ್ನೋದು?"

"ನಾನ್ಯಾಕೆ ಹೇಳ್ಬೇಕ? ಲೋಕದಲ್ಲಿ ಇಂದು ನಡಿಯುತ್ತಿರೋದು ಇದೇ ಕೃತ್ಯ..."

"ಅಂದ್ರೆ, ನಾವೂ..."

''ಆದೆಲ್ಲಿ ಸಾಧ್ಯ?"

''ಏಕೆ ಅಸಾಧ್ಯ?"

'ಇಷ್ಟು ದಿನಾ ಒಂದು ರೀತಿ ನಡೆದು ಬಂದ ಮೇಲೆ ಬೇಕಾದತ್ತ ತೂರಿಕೊಳ್ಳುವುದು ಹೇಗೆ ಸಾಧ್ಯ ಹೇಳ...."

"ಹ್ಞೂಂ...."

"ಬದುಕಲಿ—ಅಳಿಯಲಿ, ನಮಗಂತೂ ಇದೇ ದಾರಿ ನೇರವಾಗಿರಲೀಂತ, ಏನನ್ನುತ್ತೀರಿ...."

"ಅಲ್ಲವೇ ಮತ್ತೆ? ಲೋಕದ ಡೊಂಕು ತಿದ್ದುವುದಕ್ಕೆ ನಾವ್ಯಾರು? ನಮ್ಮ ನಮ್ಮ ಡೊಂಕನ್ನ ತಿದ್ದಿಕೊಂಡು ನೇರ ದಾರಿಯಲ್ಲಿ ನಡೆದರೆ, ನಮಗೇ ತೃಪ್ತಿ; ತೃಪ್ತಿಯೇ ಸುಖ..."

"ನಿಜವಾಗಿ..."

"ಹ್ಞೂಂ...."

"ಹ್ಞುಂ..."

— ಗೋರಾ.

ಶಾಲಾ ವರ್ಧಂತ್ಯುತ್ಸವ

ಎರ್ಮಾಳು, ಮಾರ್ಚ್ 2, ಎರ್ಮಾಳು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಕಳೆದ ತಾ. 27ರಂದು ಶ್ರೀ ಯಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಗಿರಿಯಣ್ಣ ಶೆಟ್ಟರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಪರಿಚಯಮಾಡಿ ಹಾರಾರ್ಪಣೆಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವೈ. ಭುಜಂಗ ರಾಯರು ಶಾಲಾ ವರದಿಯನ್ನೋದಿದರು. ಶ್ರೀ ರಾಜಾ ಸಟ್ಟರಿಂದ ಸಂದೇಶವಾಚನ, ಹಳೆವಿದ್ಯಾರ್ಥಿ ಶ್ರೀ ಸಂಕಪ್ಪ ಸೆಟ್ಟರಿಂದ ಸ್ವಸ್ತಿವಾಚನಗಳಾದ ಬಳಿಕ [illegible] ತಾಲೂಕು ಬೋರ್ಡ್ ಸದಸ್ಯ ಶ್ರೀ ಎ. ಶ್ರೀಧರ ಸೆಟ್ಟರು ಶ್ರೀ ವೈ. ಪ್ರಭಾಕರ ಇವರ ಕೊಡುಗೆಯಾದ ವಿಸ್ತರಣಗೊಳಿಸಲ್ಪಟ್ಟ ವಿದ್ಯುದ್ದೀಪಗಳನ್ನು ಉದ್ಘಾಟಿಸಿದರು.

ಶ್ರೀ ಯಂ. ಶಿವರಾಮ ಗೌಡರು ಶಾಲೆಗೆ ಎ. ವಿಠಲ ಸಟ್ಟರು ದಾನಮಾಡಿದ ಡೆಸ್ಕು ಬೆಂಚುಗಳು ಮತ್ತು ದಿ। ವೈ ನಾಗಪ್ಪ ಸೆಟ್ಟರ ಸ್ಮಾರಕವಾಗಿ ಅವರ ಮಕ್ಕಳು ಶ್ರೀ ವೈ. ಶಿವರಾಮ ಮತ್ತು ಸಹೋದರರ ಕೊಡುಗೆ ರೇಡಿಯೋವನ್ನು ಸ್ವೀಕರಿಸಿ, ಉದಾರದಾನಿಗಳಿಗೆ ಕೃತಜ್ಞತೆಯನ್ನು ಸೂಚಿಸಿದರು.

ಶ್ರೀ ಶ್ರೀಪತಿರಾವ್ ಫಲಿಮಾರುರವರು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಭಾವಚಿತ್ರವನ್ನೂ ಎರ್ಮಾಳು ಬೀಡಿನ ಶ್ರೀ ವೈ ಶಾಂತಿರಾಜ ಅರಸು ಮೂರಮ್ಮ ಹೆಗ್ಗಡೆಯವರು ಮಹಾತ್ಮ ಗಾಂಧೀಜಿಯವರ ಭಾವಚಿತ್ರವನ್ನೂ ಅನಾವರಣಗೊಳಿಸಿದರು. ತಾಲೂಕು ಬೋರ್ಡ್ ಸದಸ್ಯೆ ಶ್ರೀಮತಿ ಮನೋರಮಾ ಮಧ್ವರಾಜರು ಬಹುಮಾನ ವಿತರಣೆಯನ್ನು ಮಾಡಿದರು.

ಶ್ರೀ ಯಂ. ಮಧ್ವರಾಜರು ಅಧ್ಯಕ್ಷ ಭಾಷಣದಲ್ಲಿ ಶಾಲಾ ವರ್ಧಂತ್ಯುತ್ಸವವನ್ನು ಆಚರಿಸುವುದರ ಔಚಿತ್ಯವನ್ನು ತಿಳಿಸಿದ್ದಲ್ಲದೆ ಶಿಕ್ಷಕ—ರಕ್ಷಕ ಸಂಬಂಧದಿಂದಾಗುವ ಉಪಯುಕ್ತತೆಯನ್ನು ವಿವರಿಸಿ ಶಾಲಾ ಪ್ರಗತಿಗಾಗಿ ಮೆಚ್ಚುಗೆಯನ್ನು ಸೂಚಿಸಿದರು.

ಪೂರ್ವಾಹ್ನ ತಾಲೂಕುಬೋರ್ಡ್ ಸದಸ್ಯ ಶ್ರೀ ವೈ. ಹಿರಿಯಣ್ಣನವರು ಧ್ವಜವಂದನೆಯನ್ನು ನೆರವೇರಿಸಿದ್ದು, ದಿ। ಪೂರ್ಣಯ್ಯನವರ ಮಕ್ಕಳಿಂದ ಶಾಲಾ ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಲಾಗಿತ್ತು.

ವರ್ಷಾವಧಿ ಜಾತ್ರೆ

ನಾಯಕನಹಟ್ಟಿ ಶ್ರೀ ತಿಪ್ಪೇರುದ್ರಸ್ವಾಮಿಯ ಜಾತ್ರೆಯು ತಾ. 7-3-69ರಂದೂ ಮರಿಪರಿಷೆಯು ತಾ. 17-3-69ರಂದೂ ಬಹಳ ವಿಜೃಂಭಣೆಯಿಂದ ನಡೆಯುವುವು. ಭಕ್ತಾದಿಗಳಿಗೆ ಎಲ್ಲಾ ಸೌಲಭ್ಯವೂ ಇರುತ್ತದೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

P & S· C· 3/1969.

1 ಕೆ. ದಾಮೋದರ ಶ್ಯಾನುಭಾಗ, 2 ಕೆ. ಲಕ್ಷ್ಮಣ ಶೆಟ್ಟಿ, 3 ವೈಕುಂಟ N. ಶೆಟ್ಟಿ, 4 ಕೆ. ಕೃಷ್ಣ ಶೆಟ್ಟಿ, 5 ಸೀತಾರಾಮ N. ಶೆಟ್ಟಿ, 6 ಭಾಗೀರತಿಅಮ್ಮ —ಅರ್ಜಿದಾರರು.

ಈ ಮೂಲಕ ಸಕಲ ಜನರಿಗೆ ತಿಳಿಸುವುದೇನೆಂದ್ರೆ :

1ರಿಂದ 6ನೇ ವರೆಗಿನ ಅರ್ಜಿದಾರ್ರ ತಂದೆ 6ನೇ ಅರ್ಜಿದಾರಳ ಗಂಡ ಹಾಲಿ ಮೃತಪಟ್ಟಿರುವ ಕೆ. ನಾಗಪ್ಪ ಶ್ಯಾನುಭಾಗರಿಗೆ ಬರತಕ್ಕ ಅರ್ಜಿಯಲ್ಲಿ ಕಾಣ್ಸಿದ ಲೇವೇಜು ಗಳನ್ನು ವಸೂಲುಪಡಿಯುವರೆ ಅರ್ಜಿದಾರರ ಬಗ್ಗೆ 4ನೇ ಅರ್ಜಿದಾರನ ಹೆಸರಿಗೆ Succession Certificate ಕೊಡಿಸಬೇಕಾಗಿ ದಾಖ್ಲೆ ಮಾಡಿದ ಸದ್ರಿ ಅರ್ಜಿಯು ತಾರೀಖು 15-3-1969ಕ್ಕೆ ಇಟ್ಟಿದೆ. ಆಕ್ಷೇಪ ಉಳ್ಳವರು ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಮುಂದೆ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ಅಂತವರ ಗೈರಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K· S. Kamath,
Advocate for Petitioners.
Karkala, 6-3-69.

ಪುತ್ತೂರು ಲೇಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

R.P. 3107//68

ಚೆನ್ನಮ್ಮ ಸಹಾ — ಅರ್ಜಿದಾರರು

ಮತ್ತು

ದಿ. ಬಾಬುಮ್ಮ ಸಹಾ — ಎದ್ರಿರು

2ನೇ ಎದ್ರಿಳು ತಂಬು, ದಿ. ಇಬ್ರಾಹಿಮ್ ಬ್ಯಾರಿಗಳ ಹೆಂಡತಿ, ಪುತ್ತೂರು ತಾಲೂಕು ನೆಟ್ಟಣಿಗೆ ಮೂಡ್ನೂರು ಗ್ರಾಮದಲ್ಲಿ Post ವಾಸ (ದ. ಕ.)

ಅರ್ಜಿದಾರರು ಗೇಣಿ ವಸೂಲು ಬಗ್ಗೆ ಮಾಡಿದ ಮೇಲಿನ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 5.4.1969ಕ್ಕೆ ಮ್ಯಾದೆ ಇಟ್ಟಿರುತ್ತದೆ ಆ ದಿವಸ ನೀವು ಖುದ್ದು ಯಾ ವಕೀಲರ ಮುಖಾಂತರ ಉಪಸ್ಥಿತರಿರತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ತೀರ್ಮಾನಿಸಲಾದೀತೆಂತ ಈ ಮೂಲಕ ನಿಮಗೆ ತಿಳಿಸಲಾಗಿರುವುದೆ.

(By order of the Court)

(Sd.) U P, Shivarama,
B.A., B.L.
Advocate for Petitioners.
Puttur, S. K.
1-3-69.

ಪುತ್ತೂರು IInd A ಮುನ್ಸಿಫ್ ಕೋರ್ಟಿನಲ್ಲಿ

I. A· I O. S· 614/67

ಕುಮಾರ ರೈ— (ವಾದಿ) ಅರ್ಜಿದಾರ

ದೇಜಪ್ಪ ಆರಿಗ, ಚಂದಪ್ಪ ರೈಗಳ ಮಗ, ಪುತ್ತೂರು ತಾಲ್ಕು ಕಾಣಿಯೂರು ಗ್ರಾಮದ ಕುಂಡಾಳಿ ಎಂಬಲ್ಲಿ— (ಪ್ರತಿವಾದಿ) ಎದ್ರಿ

ಸದ್ರಿ ಎದ್ರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ :—

ಮೇಲಿನ ಅರ್ಜಿದಾರನು ಪಡೆದ ಪ್ರಿಲಿಮಿನರಿ ಡಿಕ್ರಿಗೆ ಜವಾಬ್ದಾರಿಯಿರುವ ಆಸ್ತಿ ಮೂಲಾಟದಿಂದ ಲೈವೇಜು ವಸೂಲು ಪಡಿಯುವರೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ದಾಖ್ಲೆ ಮಾಡಿದ ಮೇಲಿನ ಅರ್ಜಿಯು ತಾ. 25-3-1969ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಪೂರ್ವಾಹ್ನ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ನೀವು ಹಾಜರಾಗಿ, ನಿಂದು ಉದಾಹರಣೆಯನ್ನು ದಾಖ್ಲೆಮಾಡತಕ್ಕದ್ದೆಂತ ಈ ಮೂಲ್ಕ ತಿಳಿಸಲಾಗುತ್ತದೆ.

(ಕೋರ್ಟು ಹುಕುಂ ಪ್ರಕಾರ)

P. A· Ariga,
Advocate for Petitioner.
ಮೊಕ್ಕಾಂ. ಪುತ್ತೂರು
ತಾರೀಖು : 6.3-1969

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

P. & S. C. No. 4/1969

ಭಾರತಿ ಕುಮಾರಿ ಸಹಾ.. Applicants

ಮತ್ತು

1. ರತ್ನಮ್ಮ, 2. ಚಂಪಾವತಿ—A B. ನಾಚಪ್ಪ ಶೆಟ್ರ ಮಕ್ಕಳು. 1ನೇಯವಳು ಕಾರ್ಕಳ ತಾಲ್ಲು ಪ್ರಾಂತ್ಯ ಗ್ರಾಮದ ಬೆಟ್ಟೇರಿ ಮನೆಯಲ್ಲಿಯೂ, 2ನೇಯವಳು ಮಂಗಳೂರು ತಾಲ್ಲು ಕೂಳೂರು ದೇವು ಎಂಬಲ್ಲಿಯೂ ಇರುತ್ತಾರೆ. —Opponents

ಕೋರ್ಟು ಹುಕುಂ ಪ್ರಕಾರ ಈ ಮೂಲ್ಕ ಎಲ್ಲಾ ಜನರಿಗೆ ತಿಳಿಸುವುದೇನೆಂದ್ರೆ :—

ಕಾರ್ಕಳ ತಾಲ್ಕು ಪ್ರಾಂತ್ಯ ಗ್ರಾಮದಲ್ಲಿ ಯಿದ್ದು ಮೃತರಾದ A. B. ನಾಚಪ್ಪ ಶೆಟ್ರಿಗೆ ಬರಬೇಕಾದ ಅರ್ಜಿಯಲ್ಲಿ ಕಾಣ್ಸಿದ ಶೇರ್ ಸರ್ಟಿಫಿಕೇಟಿನ ಹಣ ವಸೂಲಾತಿ ಬಗ್ಗೆ ಅರ್ಜಿದಾರ್ರ ಬಗ್ಗೆ 2ನೇ ಅರ್ಜಿದಾರ್ರ ಹೆಸರಿಗೆ ಒಂದು ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ದಾಖ್ಲೆ ಮಾಡಿದ ಸದ್ರಿ ಅರ್ಜಿಯು ತಾರೀಖು 31.3.1969ಕ್ಕೆ ಯಿಟ್ಟಿರುತ್ತದೆ. ಅದ್ರಿಂದ ಆ ಕುರಿತು ಆಕ್ಷೇಪಯಿದ್ದವರು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿಯು ಅರ್ಜಿದಾರ್ರ ಗುಣಕ್ಕೆ ತೀರ್ಮಾನಿಸಲ್ಪಡುತ್ತದೆ.

(Sd.) H·K. Gopalkrishna Rao,
Vakil for Applicants.
Karkala, 5—3—69.

ಎಲ್ಲೆಲ್ಲಿ ಏನೇನು?

ಸಿಂಡಿಕೇಟ್ ಬ್ಯಾಂಕಿನ ಪ್ರಗತಿ

ಸಿಂಡಿಕೇಟ್ ಬ್ಯಾಂಕು 1968ರಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಠೇವಣಿಗಳು 112 ಕೋಟಿ ರೂಪಾಯಿ ಮಿಕ್ಕಿ (1967ರಲ್ಲಿ ರೂ. 80 ಕೋಟಿ)—ಸೇಕಡಾ 40ರಷ್ಟು ಹೆಚ್ಚಳವನ್ನು ತೋರಿವೆ. ಸಾಲಗಳು ರೂಪಾಯಿ 72 ಕೋಟಿಗೆ ಏರಿ (1967ರಲ್ಲಿ ರೂ. 46 ಕೋಟಿ)—ಸೇಕಡಾ 52ರಷ್ಟು ಹೆಚ್ಚಳವನ್ನು ಸಾಧಿಸಿವೆ.

ತೆರಿಗೆ, ಬೋನಸ್ಸು ಮತ್ತಿತರ ಖರ್ಚುಗಳಿಗಾಗಿ ಹಣವನ್ನು ನಿಗದಿಯಾಗಿ ತೆಗೆದಿಟ್ಟ ಮೇಲೆ ಉಳಿದ ನಿವ್ವಳ ಲಾಭವು ರೂಪಾಯಿ 31,26,000(1967ರಲ್ಲಿರೂ.25,25,000) ಅಂದರೆ ಲಾಭವು ಕಳೆದ ವರ್ಷಕ್ಕಿಂತ ಸೇಕಡಾ 24ರಷ್ಟು ಹೆಚ್ಚಿದಂತಾಯಿತು.

ಬ್ಯಾಂಕಿನ ಆಡಳಿತ ಮಂಡಳಿಯು ಇಕ್ವಿಟಿ ಶೇರುಗಳ ಮೇಲೆ ಸೇಕಡಾ 20ರ ಡಿವಿಡೆಂಡನ್ನು (ತೆರಿಗೆಗೊಳಪಟ್ಟು) ಸೂಚಿಸಿದೆ. ಇಕ್ವಿಟಿ ಮತ್ತು ಪ್ರಿಫರೆನ್ಸ್ ಶೇರುಗಳ ಮೇಲಿನ ಡಿವಿಡೆಂಡ್ ಪಾವತಿಗಾಗಿ ರೂ. 31,03,618 ವಿನಿಯೋಗವಾಗಿ ರೂಪಾಯಿ 10 ಲಕ್ಷ ಕಾದಿಟ್ಟ ನಿಧಿಗೆ ವರ್ಗಾಯಿಸಲಾಗುವುದು. ಉಳಿದ ಶಿಲ್ಕು ಮುಂದಿನ ವರ್ಷಕ್ಕೆ ವರ್ಗಾಯಿಸಲಾಗುವುದು.

ಮೇಲೆ ಹೇಳಲ್ಪಟ್ಟಂತೆ ಲಾಭವನ್ನು ಹಂಚಿ ಹಾಕಿದನಂತರ ಬ್ಯಾಂಕಿನ ಪಾವತಿಯಾದ ಬಂಡವಲು ಮತ್ತು ಕಾದಿಟ್ಟನಿಧಿಯು ರೂಪಾಯಿ 2,86,45,000 ಆಗುವುದು.

1968ರಲ್ಲಿ ಬ್ಯಾಂಕು 86 ಶಾಖೆಗಳನ್ನು ತೆರೆಯಿತು. ಅವುಗಳಲ್ಲಿ 22 ಶಾಖೆಗಳು ಈ ವರೆಗೆ ಬ್ಯಾಂಕಿಂಗ್ ಸೌಲಭ್ಯವಿಲ್ಲದ ಪ್ರದೇಶಗಳಲ್ಲಿ ತೆರೆಯಲ್ಪಟ್ಟವು. ಈ ರೀತಿ 1968ರಲ್ಲಿ ಒಟ್ಟು ಶಾಖೆಗಳು 264 ಆದಂತಾಯಿತು. (1967ರಲ್ಲಿ ಕೇವಲ ಒಂದು ಶಾಖೆಯನ್ನು ತೆರೆಯಲಾಗಿತ್ತು.) ಠೇವಣಿ ಮತ್ತು ಸಾಲದ ಖಾತೆಗಳ ಸಂಖ್ಯೆ ಕಳೆದ ವರ್ಷಕ್ಕಿಂತ ಎರಡು ಲಕ್ಷ ಹೆಚ್ಚಿದ್ದು ಈ ದಿಸೆಯಲ್ಲಿ ಬ್ಯಾಂಕು ಅಪೂರ್ವ ಪ್ರಗತಿಯನ್ನು ಸಾಧಿಸಿದೆ

ಬ್ಯಾಂಕುಗಳ ಮೇಲಿನ ಸಾಮಾಜಿಕ ನಿಯಂತ್ರಣದ ಉದ್ದೇಶಗಳು ಸಫಲವಾಗಿ, ಬ್ಯಾಂಕಿನ ಸೇವೆಯು ಎಲ್ಲ ವರ್ಗದ ಜನರಿಗೆ ಉಪಯುಕ್ತವಾಗುವಂತೆ ಈ ವರ್ಷ ಬ್ಯಾಂಕು ಹಲವಾರು ನೂತನ ಉಳಿತಾಯ ಮತ್ತು ಸಾಲ ನೀಡಿಕೆಯ ಯೋಜನೆಗಳನ್ನು ವಿಶೇಷ ಆಸಕ್ತಿಯಿಂದ ಕಾರ್ಯಗತಗೊಳಿಸುತ್ತದೆ

(ಮೊದಲನೇ ಪುಟದಿಂದ)

ಪ್ರತಿಪಕ್ಷೀಯರಿಗೆ ಸರಕಾರ ರಚಿಸುವ ಅವಕಾಶ ಮಾಡಿಕೊಡಬೇಕಾಗುತ್ತದೆ; ಅದೂ ವಿಫಲವಾದರೆ, ರಾಷ್ಟ್ರಪತಿ ಆಳಿಕೆಯೊಂದೇ ಮದ್ದು. ಪಾಳೆಯಗಾರಿಕೆಯ ಮನೋವೃತ್ತಿಯಿಂದ ಕೂಡಿದ ಜನತಾ ಪಕ್ಷದ ಸಖ್ಯ ಮತ್ತು ನ್ಯಾಯಾಲಯದಲ್ಲಿ ಶಿಕ್ಷಿತ ವ್ಯಕ್ತಿ ರಾಜರಿಗೆ ಮಂತ್ರಿಸ್ಥಾನ ನೀಡುವುದರಿಂದ ಬಿಹಾರದಲ್ಲೂ ಉಳಿದೆಡೆಗಳಲ್ಲೂ ಕಾಂಗ್ರೆಸ್ಸಿನ ಹೆಸರಿಗೆ ಮಸಿಬಳಿದಂತಾಗಿದೆಯೆನ್ನುತ್ತಾರೆ—ಸುಬ್ರಹ್ಮಣ್ಯಂ. ಇವರ ರಾಜೀನಾಮೆಯು ಜನೆ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರ ರಾಜೀನಾಮೆಯು ಸುದ್ದಿಯೂ ಇದೆ. ಇದು ಸುಬ್ರಹ್ಮಣ್ಯಂರ ರಾಜೀನಾಮೆಪತ್ರಕ್ಕೆ ಪ್ರತಿರಾಜೀನಾಮೆ. ಅಂತೂ ಕಾಂಗ್ರೆಸ್ ಬಿಕ್ಕಟ್ಟಿನ ಹೆಬ್ಬಾಗಿಲಲ್ಲಿ ನಿಂತಿದೆ.

ಶಾಲಾ ವರ್ಧಂತ್ಯುತ್ಸವ

ಉಡುಪಿ, ಮಾರ್ಚ್ 1, ಮೋರ್ಡನ್ ಹಾ. ಪ್ರಾ. ಶಾಲಾ ವಾರ್ಷಿಕೋತ್ಸವವು ಶ್ರೀ ಎ ಜೆ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿತು ಬಹುಮಾನ ವಿತರಣೆಯನ್ನು ಶ್ರೀ ಕೆ. ಪಿ. ಶೆಟ್ಟಿಯವರು ಮಾಡಿದರು ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯಕರು ಸ್ವಾಗತಿಸಿ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಲಕ್ಷ್ಮೀನಾರಾಯಣ ಭಟ್ಟರು ವರದಿ ಓದಿ ಸಂದೇಶಗಳನ್ನು ಓದಿದರು. ಶಾಲಾ ಹಳೇ ವಿದ್ಯಾರ್ಥಿಗಳಾದ ಶ್ರೀ ಎಂ. ಸೋಮಶೇಖರ ಭಟ್ ಶ್ರುಸ್ತಿವಾಚನ ಮಾಡಿ, ಶಾಲಾ ವಿದ್ಯಾರ್ಥಿ ಸುಧಾಕರ ಶೆಟ್ಟಿಯವರು ಸ್ವಸ್ತಿವಾಚನಕ್ಕೆ ಉತ್ತರಿಸಿದರು. ಮಕ್ಕಳಿಂದ ವಿವಿಧ ವಿನೋದಾವಳಿ, ನಾರದ ಗರ್ವಭಂಗವೆಂಬ ನಾಟಕದ ಬಳಿಕ ಶಾಲಾ ಮುಖ್ಯೋಪಾಧ್ಯಾಯರು ಧನ್ಯವಾದವಿತ್ತರು. ಈ ದಿನದ ಮುಂಜಾನೆ ಧ್ವಜಾರೋಹಣವನ್ನು ಉಡುಪಿ ನಗರಸಭಾ ಉಪಾಧ್ಯಕ್ಷರಾದ ಶ್ರೀ ಬಿ. ರಘುರಾಮ ಶೆಟ್ಟರು ಮಾಡಿದರು.

ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಉಡುಪಿ, ಮಾರ್ಚ್2, ಉಡುಪಿ ಮೋಡರ್ನ್ ಕಿರಿಯ ಬುನಾದಿ ಮತ್ತು ಹಾ. ಪ್ರಾ. ಶಾಲಾ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನಗರ ಸಭಾಧ್ಯಕ್ಷ ಡಾ। ವಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಮತಿ ಶಾಂತಾ ವಿ. ಎಸ್. ಆಚಾರ್ಯರು ಬಹುಮಾನ ವಿತರಣೆ ಮಾಡಿದರು ಸಂಘದ ಅಧ್ಯಕ್ಷ ಡಾ। ಮೋಹನ್‌ದಾಸ್ ಪೈಯವರು ಸ್ವಾಗತಿಸಿದರು

— 'ಗಾಳಿ! —

ಕಣ್ಣಿಗೆ ಕಾಣದ ನೀನು
 ಮಾನವಗಾಧಾರಿ!
ನಾರದನಂತೆ ನೀ ಸಂಚಾರಿ
ಮೆಲ್ಲ-ಮೆಲ್ಲನೆ ಚರಿಸಿ ಎಲ್ಲೆಲ್ಲೂ ಬೀಸಿ
ಸುತ್ತಲೆ ಹರಿದು ಒಡಲನು ಸೋಕಿ
ಏನೋ ಉಸಿರಿ ಎಂತೊ ನಲಿದು
 ಬೇಸರ ಓಡಿಸುವೆ
ಹಳುಕಿ ನೆಡೆಯುವ ಮುಗ್ಧೆಯರ
ಸೆರಗ ಜಾರಿಸಿ ಅವರ ನಾಚಿಸುವೆ
ಮನ ತಿಳಿದಾಗ ನೀ ಬಿಸಿ ತರುವೆ
ನೀ ಬೇಕೆಂದು ಜನ ಕಾತುರರಾಗಿ
 ನಿಂದಾಗ
 ನೀ ಬರುವೆಯಾ ಜಲುಗಾಟ
ಇಲ್ಲಿ ಅಲ್ಲಿ ಎನಿತೆಯೆಂದು
ಇಟಕಿ ನೋಡುವ ಮಾಟ
ಎಣೆಯಾಗಿಹ ಒಳ್ಳೆಯ ಜೊತೆಗಾಡಿ
ಓಡಾಡುಗಳ ಹಾಯ್ಕೆಯು ಕೂಡಿ
 ಒಪ್ಪೆ ತಂಗಾಳಿ ವ ತ್ತೊಮ್ಮೆ
 ಬಿರುಗಾಳಿ
 ತಂಗಾಳಿ ತಂಪು ಬಿರುಗಾಳಿ
 ಕಂದೂಳು
 ಬೀಸಿ ಕಣ್ಣು ಮಾಡುವೆ ಹಾಳು
ಮುಂದೆ ಎಂದೂ ಮುಳಿರುವ ಹೆಸರು
 ಸಿಲಿಗೆ
 ನೀ ನೀಡುವೆ ದಾಳಿ ಇದೆಯೇನು ನಿನ್ನ
 ಜಾಳಿ
 ಏ ಗಯ್ಯಾಳಿ!
ಪಡುಕಡಲ ಹಾಯುತ ಹಾಲಕಡಲ
 ಸೇರಿ
ಅಗ ಹೊಂದುವ ದಿವ್ಯ ಗಂಧವನು ಸೋಕಿ
 ಹರಿಯು ಒಡಲ
ಏ ಗಾಳಿ! ಎನೀ ನಿನ್ನ ಗಾವಳಿ
ಬೀಸಿ ಬಾ ಅಗಿ ತಂಗಾಳಿ!

—'ಮಲ್ಲಾರಿ'

ಶಾಲಾ ಹಳೇ ವಿದ್ಯಾರ್ಥಿಗಳಾಗಿದ್ದು ಉತ್ಕೃಷ್ಟ ಶ್ರೇಣಿಯಲ್ಲಿ ಎಂ. ಬಿ. ಬಿ. ಎಸ್. ಪದವಿ ಪಡೆದಹಳೆವಿದ್ಯಾರ್ಥಿ ಶ್ರೀ ಸಿ. ಲಕ್ಷ್ಮೀನಾರಾಯಣ ರಾವ್ ಮತ್ತು ಉಡುಪಿ ನಗರ ಸಭೆಗೆ ಚುನಾಯಿತರಾದ ಶ್ರೀ ಸೋಮಶೇಖರ ಭಟ್ಟರನ್ನು ಸಂಘದ ಉಪಾಧ್ಯಕ್ಷ ಶ್ರೀ ಶ್ರೀಪತಿ ಬಲ್ಲಾಳರು ಪರಿಚಯಮಾಡಿಸಿ ಕಾರ್ಯಕ್ರಮದ ಅಧ್ಯಕ್ಷರಿಂದ ಉಡುಗೊರೆ ಕೊಡಿಸಿ ಸನ್ಮಾನಿಸಿದರು. ಕಾರ್ಯದರ್ಶಿ ಶ್ರೀ ವೆಂಕಟೇಶ ಪೈಗಳು ವರದಿ ಓದಿದ ಬಳಿಕ ಮನರಂಜನಾ ಕಾರ್ಯಕ್ರಮ, "ಹಗಲಿಗೆ ಹಗಲು" ಎಂಬ ಸಾಮಾಜಿಕ ನಾಟಕ ಅಭಿನಯಿಸಲ್ಪಟ್ಟಿತು. ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಧನ್ಯವಾದವಿತ್ತರು.

ದ. ಕ. ಜಿಲ್ಲಾ ಪ್ರೌಢಶಾಲಾ ಕೆಳದರ್ಜೆ ನೌಕರರ ಸಂಘ

ದ. ಕ. ಜಿಲ್ಲಾ ಕೆಳದರ್ಜೆಯ ಪ್ರೌಢಶಾಲಾ ನೌಕರರ ಸಂಘದ ಸಭೆಯು ತಾರೀಕು 19-1-1969ರಂದು ಮಂಗಳೂರಿನಲ್ಲಿ ಶ್ರೀ ಜೋನ್ ಗೋನ್ಸಾಲ್ವಿಸರು ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ವರ್ಷದ ವರದಿ ಹಾಗೂ ಲೆಕ್ಕಪತ್ರ ಮಂಜೂರಾದ ಬಳಿಕ ಮುಂದಿನ ವರ್ಷಕ್ಕೆ ಶ್ರೀ ಕೆ. ವಾಸುದೇವ (ಗಣಪತಿ ಹೈಸ್ಕೂಲು) ಅಧ್ಯಕ್ಷರಾಗಿರುವ ಕಾರ್ಯಕಾರಿ ಸಮಿತಿ ರಚಿಸಲಾಯಿತು.

ಶ್ರೀ ಯಂ. ಭಾಸ್ಕರ ರಾಯರು ಈ ಸಂಘದ ಮುಂದಿನ ಚಟುವಟಿಕೆಗಳ ವಿಚಾರದಲ್ಲಿ ಯೋಗ್ಯ ಮಾರ್ಗದರ್ಶನ ಮಾಡಿದರು.

ಶಾಲೆಗಳಲ್ಲಿ ದುಡಿಯುತ್ತಿರುವ ನೌಕರರಿಗೆ ರಜಾಸೌಲಭ್ಯ, ಕೆಲಸದ ಸಮಯ, ಎಟೆಂಡರ್ ಮತ್ತು ಕ್ಲಾರ್ಕ್ ಹುದ್ದೆಗಳಿಗೆ ಪ್ರಮೋಶನ್, ವಿವಿಧ ಸೌಲಭ್ಯ, ಕೆಜ್ಯುವಲ್ ರಜೆ, ಸರ್ವಿಸ್ ರಜಿಸ್ಟರ್, ಬೋರ್ಡು ಶಾಲೆಗಳಲ್ಲಿ ದುಡಿಯುತ್ತಿರುವ ನೌಕರರಿಗೆ ಸಮವಸ್ತ್ರ ಇತ್ಯಾದಿ ವಿಷಯಗಳಲ್ಲಿ ನೌಕರರಿಗೆ ಆಗುತ್ತಿರುವ ತೊಂದರೆ ಮತ್ತು ಅನ್ಯಾಯಗಳನ್ನು ಮನವಿಯ ಮೂಲಕ ಜಿಲ್ಲಾ ವಿದ್ಯಾಧಿಕಾರಿಗಳ ಗಮನಕ್ಕೆ ತಂದು ಯೋಗ್ಯ ವ್ಯವಸ್ಥೆ ಮಾಡುವಂತೆ ವಿನಂತಿಸುವ ನಿರ್ಣಯ ಕೈಗೊಳ್ಳಲಾಯಿತು.

ಮಿಲಾಗ್ರಿಸ್ ಕಾಲೇಜಿನ ವಾರ್ಷಿಕ ಪತ್ರಿಕೆಯ ಉದ್ಘಾಟನೆ

ತಾ 28 ಫೆಬ್ರವರಿ 1969ರಂದು ಮಿಲಾಗ್ರಿಸ್ ಕಾಲೇಜಿನ ಎರಡನೆಯ ವಾರ್ಷಿಕ ಪತ್ರಿಕೆಯ ಉದ್ಘಾಟನೆಯು ಮಂಗಳೂರಿನ ಪರಮ ಪೂಜ್ಯ ಬಿಷಪರಿಂದ ನೆರವೇರಿತು. ಈ ಎರಡನೆಯ ವಾರ್ಷಿಕ ಪತ್ರಿಕೆಯು ಕಾಲೇಜಿನ ಕರೆಸ್ಪಾಂಡೆಂಟ್ ಮತ್ತು ಉದ್ಭವಕ್ಕೆ ಕಾರಣರಾದ ವ. ರೆ. ಫಾದರ್ ಡಿ ಜೆ. ಡಿ'ಸೋಜ ಅವರಿಗೆ ಅರ್ಪಿಸಲಾಗಿದೆ.

ಬೆಳಿಗ್ಗೆ 10-15ಕ್ಕೆ ಕಾಲೇಜಿನ ಧ್ವಜವನ್ನು ಬಿಷಪರು ಹಾರಿಸಿದರು. ತದನಂತರ ಪ್ರಿನ್ಸಿಪಾಲ್ ಡಾ. ಗುರುರಾಜಭಟ್ಟರು, ಪೂಜ್ಯ ಬಿಷಪ್ ಮತ್ತು ಇತರ ಅತಿಥಿಗಳನ್ನು ಸಾದರದಿಂದ ಸ್ವಾಗತಿಸಿದರು. ಅಧ್ಯಕ್ಷರಾದ ಬಿಷಪರು ಪತ್ರಿಕೆಯನ್ನು ಉದ್ಘಾಟಿಸುತ್ತಾ ಪ್ರಿನ್ಸಿಪಾಲ್ ಉಪಾಧ್ಯಾಯರುಗಳ ಮತ್ತು ವಿದ್ಯಾರ್ಥಿಗಳ ಕಾರ್ಯವನ್ನು ಪ್ರಶಂಶಿಸಿದರು ಕಾಲೇಜುಗಳು ಲಾಭವನ್ನು ತರುವಂತಹ ಸಂಸ್ಥೆಗಳಲ್ಲವೆಂದೂ ಎಲ್ಲಾ ಕೆಥೋಲಿಕ್ ಕಾಲೇಜುಗಳು ಬಹು ಕಷ್ಟವನ್ನು ಎದುರಿಸುತ್ತಿದ್ದರೂ ಉತ್ಕೃಷ್ಟ ವಿದ್ಯೆಯನ್ನು ನೀಡುವುದರಲ್ಲಿ ಮೇಲ್ಮಟ್ಟಕ್ಕೆ ಹೊಂದಿವೆ ಎಂದರು. ಮಕ್ಕಳಲ್ಲಿ ಹುದುಗಿರುವ ಶಕ್ತಿಯನ್ನು ಹೊರಕ್ಕೆ ತರುವುದು ವಿದ್ಯೆಯ ಮುಖ್ಯ ಉದ್ದೇಶ ಎಂದೂ, ಉಪಾಧ್ಯಾಯರು ಕೇವಲ ಕೈಕಂಬದಂತೆ ದಾರಿತೋರುವವರೆಂದೂ, ವಿದ್ಯಾರ್ಥಿಗಳು ತಾವಾಗಿಯೇ ನಡೆದು ಗುರಿ ಸೇರಬೇಕಾಗುತ್ತದೆ ಎಂದರು. ಉತ್ತಮ ಹಾಗೂ ಉಪಯುಕ್ತ ನಾಗರಿಕರಾಗಲು ವಿದ್ಯೆಯೇ ಒಂದು ಸಾಧನವೆಂದರು.

ಪೂಜ್ಯ ವೆಂ. ಟಿ. ಎಸ್. ಸಿ. ಜೆ. ಡಿ'ಸೋಜರು ತಮ್ಮ ಭಾಷಣದಲ್ಲಿ ಕಾಲೇಜನ್ನು ಹರಸು ಪತ್ರಿಕೆಯೂ ಮತ್ತು ಪ್ರೌಢ ವಿದ್ಯಾಭ್ಯಾಸದ

ನಿಧನ

ಕೊಟ್ಟಂ, ತಾ. 6-3-69ರಂದು ನವಯುಗ ಪ್ರೆಸ್ಸಿನಲ್ಲಿ ಕೆಲಸಗಾರರಾಗಿದ್ದ ಶ್ರೀ ಜೋನ್ ಪಾಯ್ಸರು ನಿಧನರಾದರೆನ್ನಲು ವಿಷಾದಿಸುತ್ತೇವೆ. ಅವರು ತನ್ನ ಹಿಂದ ಪತ್ನಿ, ಪುತ್ರರು ಮತ್ತು ಪುತ್ರಿಯರನ್ನು ಬಿಟ್ಟು ಹೋಗಿರುತ್ತಾರೆ.

ನ್ನು ಕಲ್ಯಾಣಪುರದಲ್ಲಿ ಮುಂದುವರಿಸಬೇಕೆಂದು ಬಿಷಪರನ್ನು ಕೇಳಿಕೊಂಡರು.

ಕೊನೆಯಲ್ಲಿ R. ರೆಬೆಲ್ಲೋ ಆನಗಲ್ಲಿ ಅವರು ಧನ್ಯವಾದಗಳನ್ನು ಸಮರ್ಪಿಸಿದರು. ಜನ ಗಣ ಮನದೊಂದಿಗೆ ಸಭೆಯು ಮುಕ್ತಾಯವಾಯಿತು.

ಹರಿಕಥೆ – ನೃತ್ಯಪ್ರದರ್ಶನ

ಕಾಸರಗೋಡು, ಕೋಟೂರು ಶ್ರೀ ಕಾರ್ತಿಕೇಯ ಬಡಿಗ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಂಡಕಜೆಯಲ್ಲಿರುವ ಹರಿದಾಸ ಶ್ರೀ ವೇರಿಯ ಗೋವಿಂದ ಭಟ್ಟರಿಂದ 25-2-69ರಂದು 'ಸಂಧ್ಯಾವಳೀ ಪತಿ ಚರಿತೆ' ಎಂಬ ಹರಿಕಥಾ ನಿರೂಪಣೆಯೂ, ವಿವಿಧ ನೃತ್ಯಪ್ರದರ್ಶನವೂ ಶಾಲಾ ಮೆನೇಜರ್ ಶ್ರೀ ಬಿ. ಕೇಶವ ಭಟ್ರ ಅಧ್ಯಕ್ಷತೆಯಲ್ಲಿ ನಡೆಯಲ್ಪಟ್ಟಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ ನಾರಾಯಣ ಭಟ್ಟರು ಅಭಿನಂದಿಸಿದರು.

Change of Name

1, (formerly known as) T. A Krishnappa, s/o Sri T. Anandai Moodanidamboor Ward, Udip have changed my name fro T. A. Krishnappa to 'T. A Krishnaraj' wef. 6-12-1968

(Sd) T. A Krishnara

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C 403/1968

ವಾದಿ — ವಾಸುದೇವ ಕಲ್ಕೂರ

ಪ್ರತಿವಾದಿರು—ದೇವಕಿಗ ಸೀತು ಹೆಂಗಸು

ಸದ್ರಿ ವ್ಯವಹರಣೆಯಲ್ಲಿ

3ನೇ ಪ್ರತಿವಾದಿ - ನಾರಾಯಣ ಯೂಸಿ ನರಸಿಂಹಯ್ಯ, 1ನೇ ಪ್ರತಿವಾದಿಯ ಮಗ ಪ್ರೊಪ್ರೈಟರ್, ಮಂಜುನಾಥ ಕೆಫೆ, ಅರಳಮೂರನೆ ಹಳ್ಳಿ ಕನಕಪುರ ತಾಲೂಕು (ಬೆಂಗಳೂರು ಡಿಸ್ಟ್ರಿಕ್ಟ್) —ಇವರಿಗೆ

ಮೇಲ್ಕಂಡ ದಾವೆಯಲ್ಲಿ ಕಾಣುವ ದಾವೆ ಕಟ್ಟಡವನ್ನು ಹಿಂದಿನ ಬಾಕಿ ಬಾಡಿಗೆ ವ ಮುಂದಿನ ಹುಟ್ಟುವಳಿ ಸಹಿತ ತನಗೆ ಬಿಡಿಸಿ, ಸ್ವಾಧೀನತೆ ಕೊಡಿಸಬೇಕಾಗಿ ವಾದಿ ದಾಖಲೆ ಮಾಡಿದ ಮೇಲ್ಕಂಡದಾವೆಯು ತಾ. 24-3-69ಕ್ಕೆ ಅಪ್ಸರೆ ಸಾರಿಗೆ ನಿಮ್ಮ ಹಾಜರಾತಿಗೆ ಇಟ್ಟಿರುತ್ತದೆ. ಈ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಈ ಕೋರ್ಟಿನ ಮುಂದೆ ನೀವು ಸ್ವತಃ, ವ ಪ್ಲೀಡರ ಮೂಲಕ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ಯೋಗ್ಯ ಪಕ್ಷವಾಗಿ ತೀರ್ಮಾನಿಸಲಾದೀತು ಎಂತ ತಿಳಿಯಪಡಿಸುತ್ತದೆ.

(ಕೋರ್ಟಿನ ಅಪ್ಪಣೆ ಪ್ರಕಾರ)

ನ್ಯಾ. ತೇಜಪ್ಪ ಶೆಟ್ಟಿ, ಬಿ.ಎ.ಬಿ.ಎಲ್.

ವಾದಿ ಪರ ಎಡ್ವಕೇಟ್.

ಕುಂದಾಪುರ.

6—3—1969

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ ೧೦.

ಅವಳೇಕೆ ಹುಚ್ಚಿಯಾದಳು?

(ಎರಡನೇ ಪುಟದಿಂದ)

ರು ಮುಂದೆ ಗಂಡ—ಹೆಂಡಿರು ಎಂದು ಆಲೋಚನೆಮಾಡಿದರು. ಮಾಲತಿಯನ್ನು ಚಂದ್ರಶೇಖರನಿಗೆ ಕೊಟ್ಟು ಮದುವೆ ಮಾಡುವ ಯೋಚನೆ ಅವರಿಗಿತ್ತು. ಈ ವಿಷಯ ಮಾಲತಿ-ಚಂದ್ರಶೇಖರರಿಗೂ ತಿಳಿಯಿತು. ಅವರಿಬ್ಬರೂ ಇದನ್ನು ಕೇಳಿ ಮತ್ತಷ್ಟು ಹಾಚಿಕೊಂಡಿದ್ದರು. ಅವರ ಬಹುದಿನದ ಆಸೆಗೆ ಮಾಲತಿಯ ತಂದೆತಾಯಿಯರ ಪ್ರೋತ್ಸಾಹ ದೊರಕಿತ್ತು. ಚಂದ್ರಶೇಖರ ಎಂ. ಬಿ. ಮುಗಿಸಿದ. ಮಾಲತಿಗೆ ಕಲಿಯುವುದರಲ್ಲಿ ಉತ್ಸಾಹವಿಲ್ಲದ್ದರಿಂದ ಆವಳ ಓದು ಪಿ. ಯು. ಸಿ ಗೇ ನಿಂತಿತ್ತು. ಚಂದ್ರಶೇಖರನೊಬ್ಬನಿದ್ದರೆ ಅವಳಿಗೆ ಮತ್ತೇನೂ ಬೇಕಿರಲಿಲ್ಲ! ಎಂ.ಬಿ.ಬಿ.ಎಸ್. ನಲ್ಲಿ ಚಂದ್ರಶೇಖರ ಫಸ್ಟ್‌ಕ್ಲಾಸ್ ಬಂದಿದ್ದ. ಸರಕಾರದಿಂದ ಫಾರಿನ್ನಿಗೆ ಉಚ್ಚ ಶಿಕ್ಷಣ ಪಡೆದು ಬರಲು ಕರೆ ಬಂತು. ಚಂದ್ರಶೇಖರನಿಗೆ ಬಂದ ಭಾಗ್ಯಕ್ಕೆ ರಾಯರ ಕುಟುಂಬವೇ ಹರ್ಷಗೊಂಡಿತ್ತು.

"ಚಂದ್ರಶೇಖರ ಉಚ್ಚಶಿಕ್ಷಣಕ್ಕಾಗಿ ಅಮೇರಿಕಕ್ಕೆ ತೆರಳಿದ. ತನ್ನ ಮಾಲತಿಯನ್ನು ಭಾರತದಲ್ಲೇ ಬಿಟ್ಟು ಹೋಗಲು ಮನಸ್ಸಿಲ್ಲದೆ ಆತ ಅಮೇರಿಕಕ್ಕೆ ತೆರಳಿದ. ಮಾಲತಿಗೆ ಜೀವನವೇ ಸಪ್ಪೆಯಾಗಿ ತೋರಿಬರುತ್ತಿತ್ತು. ಅಮೇರಿಕದಿಂದ ಬಂದ ಕಾಗದವನ್ನೇ ಚಂದ್ರಶೇಖರನೆಂಬ ಭಾವನೆಯಿಂದ ಮಾಲತಿ ಅಪ್ಪಿಕೊಳ್ಳುತ್ತಿದ್ದಳು. ತನ್ನ ಮತ್ತು ಚಂದ್ರಶೇಖರ ಬಾಳಿನ ಮುಂದಿನ ಸುಖದಿನಗಳ ಆಗಮನವನ್ನು ಕಾಯುತ್ತಾ ಮಾಲತಿ ದಿನಗಳೆಯುತ್ತಿದ್ದಳು. ಪಾಪ! ಮಾಲತಿ ಅದೇನೇನೋ ಕನಸು ಕಟ್ಟಿಕೊಂಡಿದ್ದಳು. ಆದರೆ, ಮಧ್ಯದಲ್ಲಿ ಬಿರುಗಾಳಿ ಎದ್ದು ಅವಳ ಆಶಾಗೋಪುರ ಕುಸಿದು ಬಿತ್ತು." ಎಂದು ಮೂರ್ತಿ ಅರ್ಧದಲ್ಲಿಯೇ ಮುಂದೆ ನಡೆದ. ಅದೇನೋ ಘಟನೆಯ ವಿಷಯ ತಿಳಿಸಿದ.

೦ ೦ ೦

"ಚಂದ್ರಶೇಖರ 'ನ್ಯೂಯಾರ್ಕ್' ಯುನಿವರ್ಸಿಟಿಯಲ್ಲಿ ಶಿಕ್ಷಣ ಪಡೆಯುತ್ತಿದ್ದ. ಅಲ್ಲಿನ ಮುಖ್ಯ ಪ್ರೊಫೆಸರ್ ಡಾ| ಫ್ಲೆಮನ್ನರಿಗೆ ಚಂದ್ರಶೇಖರನನ್ನು ಕಂಡು ಮೆಚ್ಚುಗೆಯಾಯಿತು. ಅವರಿಗೆ ಭಾರತೀಯರೆಂದರೆ ಅಪಾರ ವಾತ್ಸಲ್ಯ. ಚಂದ್ರಶೇಖರನ ಚುರುಕು ಬುದ್ಧಿ ಅವರಿಗೆ ಆಕರ್ಷಣೆ ಕೊಟ್ಟಿತ್ತು. ಅಮೇರಿಕಕ್ಕೆ ಹೋದ ಕಲವೇ ದಿನಗಳಲ್ಲಿ, ಚಂದ್ರಶೇಖರ ಡಾ| ಫ್ಲೆಮನ್ನರ ಮನೆಯಲ್ಲಿ ಪರಿಚಿತ ವ್ಯಕ್ತಿಯಾಗಿದ್ದ. ಪ್ರೊಫೆಸರ ಮಗಳು ರೆಹನ್ ಚಂದ್ರಶೇಖರನ ಆಪ್ತೆಯಾಗಿ ಹೋದಳು. ಚಂದ್ರಶೇಖರ ರೆಹನ್ನಳನ್ನು ತನ್ನ ಸಹೋದರಿಯಂತೆ ಪ್ರೀತಿಸಿದ. ಆದರೆ, ರೆಹನ್ಳ ಭಾವನೆ ಅದಕ್ಕೆ ವಿರುದ್ಧವಾಗಿತ್ತು. ರೆಹನ್, ಚಂದ್ರಶೇಖರನ ರೂಪ, ಗುಣ, ವ್ಯಕ್ತಿತ್ವಕ್ಕೆ ಮನಸೋತು ಪ್ರೇಮಿಸಿದ್ದಳು! ಆದರೂ, ಚಂದ್ರಶೇಖರನೇ ಇದರಲ್ಲಿ ದೊಡ್ಡ ತಪ್ಪುಗಾರ. ಭಾರತದಲ್ಲಿ ತನಗಾಗಿ ನಾನು ಪ್ರೀತಿಸಿದ ಮಾಲತಿ, ನನ್ನ ಬರುವಿಕೆಗಾಗಿ ಕಾದು ಕುಳಿತಿದ್ದಾಳೆ ಎಂದು ಹೇಳಿದ್ದರೆ ರೆಹನ್ನಳು ಚಂದ್ರಶೇಖರನನ್ನು ಪ್ರೇಮಿಸುವುದಿಲ್ಲವಿತ್ತು. ಆದರೆ, ರೆಹನಳ ರೂಪಕ್ಕೆ ಚಂದ್ರಶೇಖರ ಸೋತು ಅಂತಿಮ ನಿರ್ಣಯಕ್ಕೆ ಬಂದು ರೆಹನ್ನಳನ್ನೇ ತನ್ನ ಬಾಳಗೆಳತಿಯನ್ನಾಗಿ ಸ್ವೀಕರಿಸುವುದೆಂದು ಎಣಿಸಿದ.

"ಡಾ| ಫ್ಲೆಮನ್ನರು ಚಂದ್ರಶೇಖರನ ವಿಷಯವನ್ನು ಸೂಕ್ಷ್ಮವಾಗಿ ಕೇಳಿ ತಿಳಿದಿದ್ದರು. ಭಾರತದಿಂದ ಬರುವ ಹೆಚ್ಚಿನ ಯುವಕರು, ಮ್ಯಾರೇಜ್ ಮುಗಿಸಿಕೊಂಡೇ ಬರುತ್ತಿದ್ದರು. ಆದರೆ ಚಂದ್ರಶೇಖರ ಹೊರತಾಗಿ ಉಳಿದದ್ದು ಅವರಿಗೆ ಆಶ್ಚರ್ಯವಾಗಿದ್ದಿತ್ತು. ತಮ್ಮ ಮಗಳು ರೆಹನ್ಳೊಂದಿಗೆ ಚಂದ್ರಶೇಖರನ ಭವ್ಯ ಚಿತ್ರವನ್ನು ನಿರ್ಮಿಸಿ ತಮ್ಮ ಮನಸ್ಸಿನಲ್ಲಿ ಸಂತೋಷದ ಕಿರುನಗೆ ಬೀರಿದರು. ರೆಹನ್ ದಿನದ ಹೆಚ್ಚಿನ ವೇಳೆ ಯನ್ನು ಚಂದ್ರಶೇಖರನೊಡನೆ ಕಳೆಯುತ್ತಿದ್ದಳು. ಸ್ವಾಮಿ ವಿವೇಕಾನಂದರ ಚರಿತ್ರೆ ಕೇಳುವುದೆಂದರೆ ಅವಳಿಗೆ ತುಂಬಾ ಆಸಕ್ತಿ. ಚಂದ್ರಶೇಖರನಿಗೆ ಅವಳ ಆಸಕ್ತಿಯ ಬಗ್ಗೆ ಆಶ್ಚರ್ಯವಾಗಿತ್ತು. ಡಾ| ಫ್ಲೆಮನ್ನರಿಗೂ ಹಿಂದೂ ಧರ್ಮದ ಮೇಲೆ ಅಪಾರ ನಂಬಿಗೆಯಿತ್ತು.

"ಚಂದ್ರಶೇಖರನಿಗೆ ಡಾ| ಫ್ಲೆಮನ್ನರಿಂದ ರೆಹನ್ಳ ಮದುವೆ ವಿಚಾರ ತಿಳಿದು ಉಭಯ ಸಂಕಟಕ್ಕಿಟ್ಟುಕೊಂಡಿತು. ಆತನ ಮುಂದೆ ಮಾಲತಿಯ ಕಲ್ಪನಾ ಚಿತ್ರ ಕೇಳಿಬಂತು. ಎಷ್ಟೆಂದರೂ ರೆಹನ್ ಫಾರಿನ್ ಹುಡುಗಿಯಲ್ಲವೆ? ಆವೇಳೆಗೆ ರೆಹನ್ನಳೇ ಸುಂದರಿಯಾಗಿ ಕಂಡಳು. ರೆಹನ್ನಳನ್ನು ವಿವಾಹವಾಗುವುದಾಗಿ ಭಾರತದಲ್ಲಿ ಆತನಿಗಾಗಿ ಕಾದುಕುಳಿತ ಮಾಲತಿಗೆ ತಿಳಿಸದೇ ಚಂದ್ರಶೇಖರ ನಿರ್ಣಯಿಸಿದ್ದ. ಚಂದ್ರಶೇಖರನಿಗೆ ಗೋಪಾಲರಾಯರು ಮಾಡಿದ ಸಹಾಯ ಅದೆಂದೋ ಮರೆತುಹೋಗಿತ್ತು.

ಚಂದ್ರಶೇಖರನ ವಿದ್ಯಾಭ್ಯಾಸ ಮುಗಿದು ಆತ ಭಾರತಕ್ಕೆ ಹೊರಡಲು ಸಿದ್ಧನಾದ. ಪ್ರೊಫೆಸರ ಡಾ| ಫ್ಲೆಮನ್ನರು ಚಂದ್ರಶೇಖರ—ರೆಹನ್ನಳ ವಿವಾಹವನ್ನು ವೈಭವದಿಂದ ನಡೆಸಿ, ಶುಭಾಶಯದೊಂದಿಗೆ ಅವರನ್ನು ಭಾರತಕ್ಕೆ ಕಳುಹಿಸಿಕೊಡಲು ಸಿದ್ಧತೆ ನಡೆಸಿದರು. ಪ್ರೊಫೆಸರರಿಗೂ ಭಾರತಕ್ಕೆ ಹೋಗಿಬರಬೇಕೆಂಬ ಆಸೆಯಿತ್ತು. ಮಗಳನ್ನು ನೋಡಿಬರಲು ಹೋಗುವ ಅವಕಾಶ ಮುಂದೆ ಸಿಕ್ಕುವುದೆಂದು ಅವರಿಗೆ ಸಂತೋಷವಾಯಿತು. ಆದರೂ, ಒಮ್ಮೆಗೇ ಮಗಳನ್ನು ಬಿಟ್ಟಿರುವುದೂ ಅವರಿಗೆ ಅಸಾಧ್ಯವೆನಿಸಿತ್ತು. ಚಂದ್ರಶೇಖರ ಭಾರತಕ್ಕೆ ಬರುವ ದಿನವನ್ನು ಗೋಪಾಲರಾಯರಿಗೆ ಮೊದಲೇ 'ಕೇಬಲ್' ಮೂಲಕ ತಿಳಿಸಿದ್ದ.

ಚಂದ್ರಶೇಖರ ರೆಹನ್ನಳೊಂದಿಗೆ ಸ್ನೇಹಿತರನ್ನು, ಡಾ| ಫ್ಲೆಮನ್ನರನ್ನು ಬೀಳ್ಕೊಂಡು ವಿಮಾನವೇರಿದನು. ವಿಮಾನ ಭಾರತಕ್ಕೆ ಹೊರಡಲು ಮೆಲ್ಲ ಮೆಲ್ಲನೆ ಮೇಲಕ್ಕೇರಿ ಬಹುದೂರ ಬಂದಿತು. ರೆಹನ್ ಕಿಟಕಿಯಲ್ಲಿ ಮುಖಮಾಡಿ ಕೈಬೀಸಿ ತಂದೆಗೆ ಕೊನೆಯ ಸಂದೇಶ ತಿಳಿಸಿದಳು. ವಿಮಾನ ಭಾರತಾಭಿಮುಖವಾಗಿ ಮುಂದರಿಯಿತು.

೦ ೦ ೦ ೦

ವಿಮಾನ ನಿಲ್ದಾಣಕ್ಕೆ ಚಂದ್ರಶೇಖರನನ್ನು ಸ್ವಾಗತಿಸಲು ಗೋಪಾಲರಾಯರ ಕುಟುಂಬ ಆಗಮಿಸಿತ್ತು. ಮಗನ ಮೇಲಿನ ವಾತ್ಸಲ್ಯದಿಂದ ಚಂದ್ರಶೇಖರನ ತಂದೆಯೂ ಆಗಮಿಸಿದ್ದರು. ಮಾಲತಿಯ ಆಸೆ ಕೈಗೂಡುವ ದಿನ ಹತ್ತಿರವಾಗಿತ್ತು. ಮಾಲತಿಯ ಆಶಾಗೋಪುರ ಮತ್ತಷ್ಟು ಬೆಳೆಯಿತು. ಚಂದ್ರಶೇಖರನ ಭವ್ಯ ರೂಪಿನ ಚಿತ್ರಣವನ್ನು ಚಿತ್ರಿಸುತ್ತಾ ಮಾಲತಿ ತನ್ನನ್ನೇ ಮರೆತಳು. ಅಮೇರಿಕದಿಂದ ವಿಮಾನ, ನಿಲ್ದಾಣದಲ್ಲಿ ಇಳಿಯಲಿದೆ. ಎಂದು ಧ್ವನಿವರ್ಧಕದಿಂದ ಕೇಳಿ ಎಲ್ಲರೂ ಎಚ್ಚರಗೊಂಡು ಆಕಾಶದತ್ತ ದೃಷ್ಟಿಹೊರಳಿಸಿದರು. ತನ್ನ ಪ್ರಿಯತಮನನ್ನು ಹೊತ್ತುತಂದಿರುವ ವಿಮಾನವನ್ನು ಮಾಲತಿ ಆಸೆಯ ಕಣ್ಣಿನಿಂದ ನೋಡಿದಳು. ವಿಮಾನ ಮೆಲ್ಲ ಮೆಲ್ಲನೆ ಅಷ್ಟು ದೂರದಲ್ಲಿ ನಿಂತಿತು.

ವಿಮಾನದಿಂದ ಇಳಿಯುವವರನ್ನೇ ಕಣ್ಣಿಟ್ಟು ಮಾಲತಿ ಚಂದ್ರಶೇಖರನನ್ನು ಹುಡುಕುತ್ತಿದ್ದಳು. ಚಂದ್ರಶೇಖರ ವಿಮಾನದಿಂದ ನಗುತ್ತಾ ರೆಹನ್ನಳ ಕೈಹಿಡಿದು ಕೆಳಗಿಳಿದ. ತನಗಾಗಿ ಕಾದುಕುಳಿತ ಗೋಪಾಲರಾಯರ ಕುಟುಂಬವನ್ನು ಕಂಡು ಚಂದ್ರಶೇಖರ ಬೆರಗಾದ. ಚಂದ್ರಶೇಖರನೊಂದಿಗೆ ಬಂದಿದ್ದ ಫಾರಿನ್ನಿನ ಹುಡುಗಿಯನ್ನು ಎಲ್ಲರೂ ತದೇಕಚಿತ್ತದಿಂದ ನೋಡುತ್ತಿದ್ದರು. ಅವರ ದೃಷ್ಟಿಗೆ ಉತ್ತರ ಹೇಳಲು ಚಂದ್ರಶೇಖರ ಎಣಿಸಿದ. ರೆಹನ್ನಳತ್ತ ಕೈ ತೋರಿಸಿ ಇವಳು....ನಮ್ಮ ಪ್ರೊಫೆಸರ್ ಡಾ| ಫ್ಲೆಮನ್ನರ ಮಗಳು. ಮೊನ್ನೆ ತಾನೇ ನ್ಯೂಯಾರ್ಕ್‌ನಲ್ಲಿ ನಮ್ಮಿಬ್ಬರ ವಿವಾಹ ನಡೆಯಿತು...ರೆಹನ್ ಎಂದು ಇ...ವ...ಳ ಹೆಸರು..."

"ಖಟ್, ಖಟ್, ಖಡಲ್ ಎಂದು ದೂರದಲ್ಲೆಲ್ಲೋ ಭಾರೀ ಗುಡುಗು ಮಿಂಚಿನ ಆರ್ಭಟ. ಬಿರುಗಾಳಿ ಜೋರಾಗಿ ಬೀಸತೊಡಗಿತು. ಗುಡುಗು ಒಂದೇ ಅಲ್ಲ ಸಿಡಿಲೇ ಎರಗಿತ್ತು. ಚಂದ್ರಶೇಖರನಾಡಿದ ಮಾತು ಗುಡುಗು ಮಿಂಚಿಗಿಂತಲೂ ಕಠೋರವಾಗಿ ಮಾಲತಿಯ ಮೇಲೆ ಎರಗಿತ್ತು. ಮಾಲತಿ ಕುಸಿದಳು. ರಾಯರ ಕುಟುಂಬ ಅನಿರೀಕ್ಷಿತವಾದ ಸುದ್ದಿಗೆ ದಂಗಾಗಿತ್ತು."

೦ ೦ ೦

ಮೂರ್ತಿ ಕಥೆ ಮುಗಿಸಿ ಮನೆಗೆ ಹೊರಡಲು ಎದ್ದು ನಿಂತ. ನಾವು ಆ ಕಥೆಯಲ್ಲೇ ಮೈಮರೆತಿದ್ದೆ. ಕುತೂಹಲಕರವಾದ ಕಥೆ ಕೇಳಿ ನನ್ನ ಹೃದಯ ಮತ್ತೂ ಭಾರವಾದಂತಾಯಿತು. ಆತಳಿಸುತ್ತಾ ಎದ್ದು ನಿಂತೆ. "ಈಗ ರೆಹನ್ ಮತ್ತು ಚಂದ್ರಶೇಖರ ಇಲ್ಲೇ ಊರಲ್ಲಿದ್ದಾರೇನು?" "ಇಲ್ಲ ಶೇಖರ್, ಅವರಿಬ್ಬರೂ ಅದೇ ದಿನ ಕಲ್ಕತ್ತಕ್ಕೆ ತೆರಳಿದರು. ಚಂದ್ರಶೇಖರನಿಗೆ ಅಲ್ಲಿ ದೊಡ್ಡ ಹುದ್ದೆ ಸಿಕ್ಕಿದೆಯಂತೆ." "ಛೆ! ಚಿನ್ನದಂಥಾ ಹುಡುಗಿಯನ್ನು ಪ್ರೀತಿಸಿ, ಕೊನೆಗೆ ದ್ರೋಹಬಗೆದು ಅವಳಿಗೆ ಹುಚ್ಚು ಹಿಡಿಸಿದ, ಆತನ ಹುದ್ದೆ ತಪ್ಪು ಬೆಂಕಿಹಾಕ!" ಎಂದು ನನ್ನ ದ್ವೇಷವನ್ನು ಆತನ ಮೇಲೆ ಉಗುಳಿದೆ. ದಾರಿಯುದ್ದಕ್ಕೂ ಕೃತಘ್ನ ಚಂದ್ರಶೇಖರನ ಅಪರಾಧವನ್ನು ಯೋಚಿಸುತ್ತಾ ನಡೆದೆ. ಚಂದ್ರಶೇಖರ ಕ್ಷಮೆಗೆ ಅರ್ಹನಲ್ಲ. ಆತ ಅಕ್ಷಮ್ಯ ಅಪರಾಧಿ ಎಂದು ಮಾಲತಿಯ ವ್ಯಥೆ ತುಂಬಿದ ಕಥೆಯನ್ನು ಕೇಳಿ ನಾನು ಮೂರ್ತಿಗೆ ಹೇಳಿದೆ. ಆತ ಅದೇನೋ ಯೋಚಿಸುತ್ತ ಮುಂದೆ ಸಾಗಿದ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
91 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಜೀವನಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ—ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711
5712
5713 } 3 Lines.

READ &
ADVERTISE IN
NAVAYUGA WEEKLY

ಅಮೃತಾಂಜನ

● ತಲೆ ನೋವು ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಖಂಡಿತವಾಗಿ,
ಶೀಘ್ರವಾಗಿ, ನಿಜವಾಗಿಯೂ
ಗುಣಪಡಿಸುತ್ತದೆ.

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

NAVAYUGA 13-3-1969
Registered with the Registrar
of News Papers for India
under No. K. N. 3546/'57

REGD: No: B. G. 176
LICENCE No. 33
Licensed to Post without Prepayment

ಅಲ್ಪ ವೆಚ್ಚದಲ್ಲಿ ಅಧಿಕ ಸತ್ವ

ಕೆಂಪು ಮೂಲಂಗಿ

—ಎಂ. ವಿ. ಶರ್ಮಾ ಕದ್ದಲಸೆ

ಆಹಾರ ವಿಜ್ಞಾನವು ಕೆಲವು ಮೂಲಂಗಿಗೆ ಬಹಳ ಮಹತ್ವಕೊಟ್ಟಿದೆ. ಕೆಂಪು ಮೂಲಂಗಿಯು ಹೆಸರು ಶಾಶ್ವತವಾಗಿ ಉಳಿಯುವಂತೆ ಅದರಲ್ಲಿ ದೊರೆಯುವ ಹಳದಿ ಬಣ್ಣದ ದ್ರವ್ಯಕ್ಕಾಗಿ 'ಕ್ಯಾರೋಟಿನ್' ಎಂಬ ಇಂಗ್ಲಿಷ್ ಹೆಸರನ್ನು 'ಎ' ಅನ್ನಾಂಗಕ್ಕೆ ಉಪಯೋಗಿಸುತ್ತಿದ್ದಾರೆ. 'ಎ' ಅನ್ನಾಂಗವು ಕ್ರಮದ ಬೆಳವಣಿಗೆಗೂ ಪುಷ್ಟಿಗೂ ತುಂಬಾ ಸಹಕಾರಿ, ಪೂರ್ಣ ಬೆಳವಣಿಗೆ ಹೊಂದಲು ಯೌವನಸ್ಥರಿಗೆ ಬಹು ಫಲಕಾರಿಯಾಗಿದೆ. ಮನುಷ್ಯರಿಗೂ ಆರೋಗ್ಯ ಸಂರಕ್ಷಣೆಗೆ ಉಪಕಾರಿಯಾದುದು. ಇಂಡಿಯಾ ದೇಶೀಯರ ಆಹಾರದಲ್ಲಿ 'ಎ' ಅನ್ನಾಂಗದ ಕೊರತೆಯು ಬಹುವಾಗಿದೆ. ಕೇಂದ್ರ ಸರಕಾರದ ಆರೋಗ್ಯ ಶಾಖೆಯ ಮುಖ್ಯಾಧಿಕಾರಿಗಳು ಈ ಅಂಶವನ್ನು ಬಹಳವಾಗಿ ಒತ್ತಿಹೇಳಿರುತ್ತಾರೆ.

ಕುಂಠಿದ ಬೆಳವಣಿಗೆ ಬಹು ದೀರ್ಘಕಾಲ ವ್ಯಾಧಿಗ್ರಸ್ತರಾಗಿರುವುದು, ವ್ಯಾಧಿ ನಿರೋಧದ ಶಕ್ತಿಯಿಲ್ಲದಿರುವುದು, ಕಣ್ಣು, ಕಿವಿ, ಶ್ವಾಸ ಸಂಬಂಧವಾದ ರೋಗಗಳಿಗೀಡಾಗುವುದು, ಶರೀರದ ಅನ್ನಾಂಗಗಳು ವಕ್ರವಾಗುವುದು, ಈ ಎಲ್ಲ ವ್ಯಾಧಿಗಳು 'ಕೆರೋಟಿನ್' ಎಂಬ ವಸ್ತುವಿನ ಕೊರತೆಯಿಂದಲೇ ಸಂಭವಿಸುವುವು. 'ಎ' ಅನ್ನಾಂಗದ ಕೊರತೆಯಿಂದಾದ ಪರಿಣಾಮವನ್ನು ನಮ್ಮ ದೇಶದಲ್ಲಿ ಕಾಣಬಹುದು.

'ಎ' ಅನ್ನಾಂಗದ ನ್ಯೂನತೆಯನ್ನು ಹೇಗೆ ಕ್ರಮಪಡಿಸುವುದು ಎಂಬ ವಿಷಯಕ್ಕೆ ಕೂನೂರಿನ ಆಹಾರ ಸಂಶೋಧನಾ ಶಾಲೆಯು ಬಹಳ ಗಮನಕೊಟ್ಟಿದೆ. ಅಲ್ಲಿಂದ ಜನತೆಗೆ ಮೀನೆಣ್ಣೆ, ಕೆಂಪು ಮೂಲಂಗಿಗಳ ಸೇವನೆಯನ್ನು ಸೂಚಿಸಿರುತ್ತಾರೆ.

ಸಲಹೆ ಮಾಡಲ್ಪಟ್ಟಿರುವ ಈ ಎರಡು ವಸ್ತುಗಳಲ್ಲಿ ಯಾವುದೂ ಹೆಚ್ಚು ಫಲಕಾರಿಯಾಗುವುದಿಲ್ಲ, ಏಕೆಂದರೆ ಅವುಗಳು ಹೆಚ್ಚು ಬೆಲೆಯುಳ್ಳವು, ಸುಲಭವಾಗಿ ದೊರೆಯಲಾರದವುಗಳೂ ಆಗಿವೆ. ಹಾಲಿನಲ್ಲಿಯೂ 'ಎ' ಅನ್ನಾಂಗ ದೊರೆಯುವುದು. ಆದರೆ ಇದೂ ಹೆಚ್ಚು ಬೆಲೆಯುಳ್ಳ ವಸ್ತುವಾದುದರಿಂದ ಅನೇಕರಿಗೆ ದುರ್ಲಭವಾಗಿದೆ.

ಸ್ವಲ್ಪ ಖರ್ಚಿನಿಂದಲೇ 'ಎ' ಅನ್ನಾಂಗದ ಪೂರ್ಣ ಪರಿಣಾಮವನ್ನು ಕೆಂಪು ಮೂಲಂಗಿಯಿಂದ ಉಪಯೋಗ ಪಡೆಯಬಹುದು. ಕೆಂಪು ಮೂಲಂಗಿಯು ಮೀನೆಣ್ಣೆ, ಕೆಂಪು ಕಾಳೆಣ್ಣೆ ಮತ್ತು ಹಾಲಿನಷ್ಟೇ ಗುಣವುಳ್ಳ ವಸ್ತು. "ಕ್ಯಾರೋಟಿನ್" ಅಥವಾ 'ಎ' ಅನ್ನಾಂಗವನ್ನು ಕೆಂಪು ಮೂಲಂಗಿಯ ಉಪಯೋಗದಿಂದ ಪಡೆಯಬಹುದು. ಈ ಕೆಳಗೆ ಕಂಡ ವಸ್ತುಗಳ ಪಕ್ಕದಲ್ಲಿಯೇ ಸೂಚಿತವಾಗಿರುವ 'ಎ' ಅನ್ನಾಂಗ ಭಾಗವನ್ನು ವೀಕ್ಷಿಸಿದರೆ ಕೆಂಪು ಮೂಲಂಗಿಯಿಂದ ಸುಲಭ ಖರ್ಚಿನಿಂದಲೇ 'ಎ' ಅನ್ನಾಂಗವನ್ನು ಪಡೆಯಬಹುದೆಂಬ ಅಂಶವು ವ್ಯಕ್ತವಾಗುತ್ತದೆ.

ಮೀನೆಣ್ಣೆ +++, ಬೆಣ್ಣೆ +++, ಕೆನೆ ತೆಗೆಯದಿರುವ ಹಾಲು +++, ಕೆಂಪು ಮೂಲಂಗಿ ++, ತೆಂಗಿನಕಾಯಿ +, ಕಡಲೆಕಾಯಿ +, ಗೋಧಿಯ ಹಿಟ್ಟು.

ಕೆಂಪು ಮೂಲಂಗಿಯನ್ನು ಆಬಾಲವೃದ್ಧರಾದಿಯಾಗಿ ಸರ್ವರೂ ಉಪಯೋಗಿಸುವಂತೆ ಉತ್ತೇಜನ ಕೊಡಬೇಕು. ಮತ್ತು ಸರ್ವ ವಿಧದಲ್ಲೂ ಕೆಂಪು ಮೂಲಂಗಿಯ ಬೆಳೆಗೆ ಪ್ರೋತ್ಸಾಹಕೊಡಬೇಕು.

'ಎ' ಅನ್ನಾಂಗವು ಅಡಿಗೆಯ ಕಾರ್ಯದಲ್ಲಿ ಉಪಯೋಗಿಸುವ ಸಾಮಾನ್ಯವಾದ ಶಾಖದಿಂದ ಹೆಚ್ಚಾಗಿ ನಷ್ಟಹೊಂದುವುದಿಲ್ಲ. ಆದರೆ ಉಷ್ಣದ ಪರಿಮಾಣವನ್ನು ಹೆಚ್ಚು ಮಾಡಿದಾಗಲಿ ವಾಯುವಿಗೆ ತೆರೆದುಬಿಟ್ಟಿರುವುದರಿಂದಾಗಲೀ 'ಎ' ಅನ್ನಾಂಗವು ನಷ್ಟಹೊಂದುವುದು. ಈ ಕಾರಣದಿಂದ ಕೆಂಪು ಮೂಲಂಗಿಯನ್ನು ಭೂಮಿಯಿಂದ ಹೊರಕ್ಕೆ ತೆಗೆದ ಸ್ವಲ್ಪ ಕಾಲದೊಳಗಾಗಿಯೇ ಅಡುಗೆ ಮಾಡಿಬಿಡಬೇಕು. ಮುಚ್ಚಳ ಮುಚ್ಚಿದ ಪಾತ್ರೆಯಲ್ಲಿ ಬೇಯಿಸುವುದರಿಂದ 'ಎ' ಅನ್ನಾಂಗವು ನಷ್ಟವಾಗುವುದಿಲ್ಲ. ಕೆಂಪು ಮೂಲಂಗಿಯನ್ನು ಬಾಣಲೆಗಳಲ್ಲಿ ಹಾಕಿ ತುಪ್ಪದಲ್ಲಿ ಕರಿಯುವುದರಿಂದ ಅದರ ಮುಖ್ಯಾಂಶವಾದ 'ಎ' ಅನ್ನಾಂಗವು ಸಂಪೂರ್ಣವಾಗಿ ನಾಶವಾಗುವುದು.

ಒಂದು ಅಥವಾ ಎರಡು ಲೋಟದಷ್ಟು ಕೆಂಪು ಮೂಲಂಗಿ ರಸವನ್ನು ಪ್ರತಿದಿನವೂ ಸೇವಿಸುವುದರಿಂದ ಈ ತರಕಾರಿಯ ಪೂರ್ಣ ಉಪಯೋಗವನ್ನು ಪಡೆಯಬಹುದು.

ಕೆಂಪು ಮೂಲಂಗಿಯು ವಿಷಾಪಹಾರಿ ವಸ್ತು. ಪೂರ್ವಿಕರು ಮೊದಲು ಈ ತರಕಾರಿಯ ಕ್ರಿಮಿನಾಶಕ ಗುಣಗಳನ್ನು ಜನತೆಗೆ ತೋರಿಸಿಕೊಟ್ಟರು. ಪ್ರಾಣಿಗಳಿಗೆ ಕೆಂಪು ಮೂಲಂಗಿಯನ್ನು ತಿನ್ನಿಸಿ ಅವು ವಿಸರ್ಜಿಸಿದ ಮಲವನ್ನು ಪರೀಕ್ಷಿಸಲು ಅದರಲ್ಲಿರುವ ಕ್ರಿಮಿಗಳೆಲ್ಲವೂ ನಾಶಹೊಂದಿರುವುದನ್ನು ಕಂಡರು. ಕೆಂಪು ಮೂಲಂಗಿಯ ಈ ವಿಶೇಷ ಗುಣವನ್ನು ಈಗ ಸಾಮಾನ್ಯವಾಗಿ ಎಲ್ಲಾ ದೇಶದವರೂ ಮನಗಂಡಿರುವರು. ಯುರೋಪಿನ ಕೆಲವು ದೇಶಗಳಲ್ಲಿ ಕೆಂಪು ಮೂಲಂಗಿಯನ್ನು ಯಾವುದಾದರೊಂದು ರೀತಿಯಲ್ಲಿ ಊಟದ ಜೊತೆಯಲ್ಲಿ ಉಪಯೋಗಿಸುತ್ತಾರೆ.

[ಸಾಧಾರ]

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅಧ್ಯಾಪಕರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ.
ಬೆಲೆ : ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ದಿನವಹಿ ಪತ್ರ ಸಂಕಲನ. ಬೆಲೆ : ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ : ರೂ. 1—50

ಮನೆ-ಮದ್ದು Home Remedies
ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ.
ಹೇಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2—00

— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.
ಮಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಎಂ. ವೆಂಕಟರಾವ್, ಹಂಪನಕಟ್ಟೆ, ಮಂಗಳೂರು-1

ಋತು ಪ್ರಕೃತಿ

-೧-

ಹಾಡುತಿವೆ ಕೋಗಿಲೆಗ-
ಳಾಡುತಿವೆ ಕೋತಿಗಳು,
ನಲಿಯುತಿವೆ ನವಿಲುಗಳು
ಗರಿಗಳನು ಬಿಡಿಸಿ;
ಸುತ್ತೆಲ್ಲ ಓಡುತಿವೆ
ಚಿಗರಿಗಳು ಹರ್ಷದಲಿ,
ಧ್ವನಿಗುಡುತಲಿವೆ ತುಂಬಿ
ಸುಮಗಳನು ಬಳಸಿ

-೨-

ಚಿಗುರುತಿವೆ ತರುಲತೆಗ-
ಳರಳುತಿವೆ ಪುಷ್ಪಗಳು,
ಬೀಸುತಿದೆ ತಂಗಾಳಿ
ಸೌರಭವ ಸೂಸಿ,
ಕಾನನದೊಳಲೆದಲೆದು
ಬಳಲಿ ಬಾಯಾರಿದಗೆ
ತಿಳಿ ಜಲವನಿತ್ತು ತಾ-
ಸಲಹುತಿವೆ ಸರಸಿ

-೩-

ಋತುರಾಜ ಬರುತಿರಲು
ಬನದೇವಿ ಹಸಿರುಡೆಯ-
ನುಟ್ಟು ಕುಳಿತಿಹಳಲ್ಲಿ
ಶೃಂಗಾರದೊಳಗೆ,
ಫಲಪುಷ್ಪ ಬಂದಾಗ
ಇಳೆಯು ನಂದನದ ಪೋಲ್,
ವೈಭವದಿ ಕಂಗೊಳಿಸೆ
ಕವಿ ಮನಕೆ ಬೆರಗು!

-೪-

ಎಷ್ಟು ಸೌಂದರ್ಯವಿದು!
ಏನು ವೈಚಿತ್ರ್ಯವಿದು!
ಅತಿಶಯದಿ ಸೃಷ್ಟಿ ತಾ
ರಮ್ಯವಾಗಿಹುದು,
ಕಾಲ ಬದಲಾದಂತೆ
ಹೊಂದಿಕೊಳ್ಳುವುದೆಲ್ಲ
ವಿನಿದಚ್ಚರಿ ದೇವ
ಇದು ನಿನ್ನ ಲೀಲೆ!

ಕ. ಭ. ನೇಂಬು

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

Edited, Printed & Published by K. H. Shetty at the Navayuga Press, Udipi, 3, India.

ನವಯುಗ

20—3—1969

೨೦
ಪೈಸೆ

ಗೃಹಲಕ್ಷ್ಮಿ

ಬರೆದವರು:— ಟಿ. ಎಸ್. ಸೇತ್ರಾವತಿ

ಬಾಗಿಲು ವಿಶಾಲವಾಗಿ ತೆರೆದಿತ್ತು. ಒಳಗಿನ ಒಪ್ಪ ಓರಣ ಹೊರಗಿನಿಂದಲೇ ಕಾಣುತ್ತಿತ್ತು.

"ಪದ್ದೂ.... ಪದ್ದೂ...." ಮೂರ್ತಿ ಹೆಂಡತಿಯನ್ನು ಕರೆದ.

"ಇಷ್ಟು ಬೇಗ ಬಂದುಬಿಟ್ರಾ....?" ದನಿಯ ಹಿಂದೇ ಪದ್ಮಳೂ ಹೊರಗೆ ಬಂದಳು. ಗಂಡನ ಕೈಯಲ್ಲಿದ್ದ ಸಾಮಾನುಗಳನ್ನು ತೆಗೆದುಕೊಂಡು ಬಂದು ಒಳಗಿಟ್ಟಳು. ಮೂರ್ತಿ ಜೊತೆಯಲ್ಲಿ ಕರೆತಂದಿದ್ದ ಅತಿಥಿಯನ್ನು ಕರೆತಂದು ಒಳಗೆ ಕುಳ್ಳಿರಿಸಿದ.

"ಏನಮ್ಮಾ....ಚೆನ್ನಾಗಿದ್ದೀಯಾ....?" ಕೇಳಬೇಕು, ಕೇಳುತ್ತಿದ್ದೇನೆ. ಎನ್ನುವಂತಿತ್ತು, ಸುಬ್ಬುಕೃಷ್ಣನ ದನಿ.

"ಹೂಂ...ಏನೋ ಇಷ್ಟರಮಟ್ಟಿಗೆ" ಪದ್ಮ ಪೊಟರಾಗಿ ಉತ್ತರಿಸಿ ಪುನಃ ಅಡಿಗೆ ಮನೆ ಸೇರಿದಳು.

ಮೂರ್ತಿ ಕಾಲುತೊಳೆದುಕೊಂಡುಬಂದು ಕುಳಿತ. ಮಡದಿಯ ಒಪ್ಪ ಓರಣ ಅವನಿಗೆ ತುಂಬಾ ಮೆಚ್ಚಿಕೆಯಾಗಿತ್ತು. ಪದ್ಮಳನ್ನು ಮನದಲ್ಲೇ ಅಭಿನಂದಿಸಿದ, ಮೂರ್ತಿ.

"ಒಂದು ಲೋಟ ನೀರು ತಾ, ಮೂರ್ತಿ" ಸುಬ್ಬುಕೃಷ್ಣ ಕೇಳಿದ. ಮೂರ್ತಿ ತಂದಿತ್ತ ನೀರು ಕುಡಿದು ಕಾಲಿಗೆ ಹರಿಯಬಿಟ್ಟ.

'ಏನಾದರೂ ತೀರ್ಮಾನ ಮಾಡಿದ್ದೀರಾ?'

'ನನ್ನ ನಿರ್ಧಾರವ ಆಗಲೇ ತಿಳಿಸಿದೆನಲ್ಲಾ...'

"ಅದಂತೂ ಸಾಧ್ಯವೇ ಇಲ್ಲ...."

"ಇಲ್ಲ ನಾನೀಗ ಮನಸು ಬದಲಿಸೋದು ಸಾಧ್ಯವೇ ಇಲ್ಲ...."

ಪದ್ಮ ಕಾಫಿ, ತಿಂಡಿ ತಂದಿಟ್ಟಳು. ಕೆಲ ನಿಮಿಷಗಳ ಕಾಲ ವಾಗ್ಯುದ್ಧಕ್ಕೆ ಬಿಡುವು ಸಿಕ್ಕಿತು.

ಂ ಂ ಂ ಂ

ಹೊಸಹಳ್ಳಿಯ ಹಳೆಯ ಮನೆಯೊಂದರ ಕೋಣೆಯಲ್ಲಿ ಒಬ್ಬಾಕೆ ಮರಣಶಯ್ಯೆಯಲ್ಲಿ ಮಲಗಿದ್ದಳು. ಬಳಿಯಲ್ಲಿ ಇಪ್ಪತ್ತೈದರ ಹರೆಯದ ಯುವಕನೊಬ್ಬ, ಐದುವರ್ಷದ ಹುಡುಗಿಯೊಂದು ಆಕೆಯನ್ನೇ ದಿಟ್ಟಿಸುತ್ತ ನಿಂತಿದ್ದರು.

ಆಕೆ ಹುಡುಗನನ್ನು ಹತ್ತಿರ ಕರೆದು ಹೇಳಿದಳು—"ಮಗೂ, ಇನ್ನು ನಿನಗೆ ಸುಬ್ಬಣ್ಣನೇ ತಾಯಿ ತಂದೆ ಎಲ್ಲಾ... ಅವನ ಜತೇಲೇ ಇರಪ್ಪ, ಅವನು ತುಂಬಾ ಒಳ್ಳೆಯೋನು..."

"ಮತ್ತೆ.... ನಂಗೆ ಗಡಿಯಾರ ತೆಗ್ಸಿಕೊಡ್ತಾನೇನಮ್ಮ??"

"ನಿನಗೇನೇನು ಬೇಕೋ ಎಲ್ಲಾ ಕೊಡಿಸ್ತಾನೆ, ಮೂರ್ತಿ, ನೀನು ಮಾತ್ರ ಅವನಿಗೆ ಕೋಪ ಬರದ ಹಾಗೆ ನೋಡಿಕೋಬೇಕು ಮಗೂ—"

ಮೂರ್ತಿ ಕುಣಿದಾಡಿದ. ತಾಯಿಯ ಸ್ಥಿತಿ ಅವನಿಗೇನು ಗೊತ್ತು?

"ಅಕ್ಕಾ" —ಸುಬ್ಬುಕೃಷ್ಣ ಬಳಿಗೆ ಬಂದ. ಆದರೆ ಮಾತನಾಡುವ ಶಕ್ತಿ ಆಕೆಯಲ್ಲುಳಿದಿರಲಿಲ್ಲ. ಕಣ್ಣುಗಳಲ್ಲೇ ಕೃತಜ್ಞತೆ ಸೂಸುತ್ತ ಆಕೆ ಕಣ್ಣುಮುಚ್ಚಿದಳು.

ಅಕ್ಕನಿಗಾಗಿ ಸುಬ್ಬುಕೃಷ್ಣ ಗೋಳಾಡಿದ. ಅವನನ್ನು ನೋಡಿ ತಾನೂ ಅಳಬೇಕೆನಿಸಿತು ಮೂರ್ತಿಗೆ. ಎಲ್ಲ ಮುಗಿದ ನಂತರ ಸುಬ್ಬುಕೃಷ್ಣ ಆ ಮನೆ ಮಾರಿದ- ಹೊಸಹಳ್ಳಿಯಲ್ಲಿಯೇ ಬೇರೆ ಮನೆ ಹಿಡಿದು ವಾಸಿಸಲಾರಂಭಿಸಿದ. ನೋದರಮಾವನೆಂದು ಮೂರ್ತಿಗೆ ಈಗೀಗ ತಿಳಿಯಲಾರಂಭಿಸಿತು. ಅವರು ಬಯಸಿದ್ದೊಂದೂ ಸಿಗುತ್ತಿರಲಿಲ್ಲ. ಎಲ್ಲ ಬೈಗಳೇ! ಅದರಿಂದಲೇ ಮೂರ್ತಿಯ ಹೊಟ್ಟೆ ತುಂಬಿಹೋಗಿತ್ತು. ಗತಿಯಿಲ್ಲದೆ ತನ್ನ ಬಳಿಗೆ ಬಂದವನೆಂಬಂತೆ ಸುಬ್ಬುಕೃಷ್ಣ ಅವನನ್ನು ಕಾಣುತ್ತಿದ್ದ. ಆದರೆ ರೂಢಿಸಿಕೊಂಡಿದ್ದುದು ಮಾತ್ರ, ಮೂರ್ತಿಯು ಅಪ್ಪನ ಅಣ್ಣನನ್ನೇ.

ಮಿಡಲ್ ಸ್ಕೂಲು ಮುಗಿಯುವ ತನಕ ಹೇಗೋ ಹೊಸಹಳ್ಳಿಯಲ್ಲಿ ಕಾಲಹಾಕಿ ಮೂರ್ತಿ ಹೈಸ್ಕೂಲಿಗೆ ಬೆಂಗಳೂರಿಗೇ ಬಂದುಬಿಟ್ಟ. ಈಗಂತೂ ಲಂಗುಲಗಾಮಿಲ್ಲದ ಕುದುರೆಯೇ ಆಗಿಹೋದ ಸುಬ್ಬುಕೃಷ್ಣ.

ಬೆಂಗಳೂರಿನಲ್ಲಿ ಮೂರ್ತಿಯ ಬಾಳು ಮುಳ್ಳಿನ ಹಾದಿಯಲ್ಲೇ ಸಾಗುತ್ತಿತ್ತು. ಅವರಿವರ ಮಕ್ಕಳಿಗೆ ಪಾಠ ಹೇಳಿ ಬರುವ ಹಣದಲ್ಲಿಯೇ ಎರಡು ತುತ್ತು ಅನ್ನ ಕಾಣುತ್ತಿದ್ದ. ಕಷ್ಟದಿಂದಲೇ ಎಸ್. ಎಸ್. ಎಲ್. ಸಿ.ಯನ್ನು ಮಾಡಿಕೊಂಡ. ಇಷ್ಟಾದರೂ ಹಳ್ಳಿಯಿಂದ ಯಾವ ಕಾಗದವೂ ಇಲ್ಲ. ಮೂರ್ತಿ ಎಷ್ಟು ಕಾಗದ ಬರೆದರೂ ಉತ್ತರವೇ ಸಿಗುತ್ತಿರಲಿಲ್ಲ. ಬೇಸತ್ತ ಒಂಟಿ ಮೂರ್ತಿ.

ಇಷ್ಟರಲ್ಲೇ ಅವನಿಗೆ ಅಂಗಡಿಯೊಂದರಲ್ಲಿ ಲೆಕ್ಕ ಬರೆಯುವ ಗುಮಾಸ್ತೆ ಕೆಲಸ ಸಿಕ್ಕಿತ್ತು. ಆ ಅಂಗಡಿಯಲ್ಲಿ ಬೆಳಗ್ಗೆ ಸಂಜೆ ದುಡಿದು ಕಾಲೇಜಿಗೂ ಸೇರಿದ ಮೂರ್ತಿ.

"ವೀಳ್ಯದೆಲೆ ಕೊಡಿ..."

ಅಂಗಡಿಗೆ ಸ್ವಲ್ಪ ದೂರದಲ್ಲಿ ನಿಂತ ಹುಡುಗಿಯೊಬ್ಬಳ ಮೆಲುದನಿ ಮೂರ್ತಿಯ ಕಿವಿಗೆ ಬಿತ್ತು. ಸಾಮಾನು ಕೊಡುವ ಹುಡುಗ ನಿಧಾನವಾಗಿ ಏಳುವುದಕ್ಕೆ ಮುಂಚೆಯೇ ಮೂರ್ತಿ ತಾನೇ ಥಟ್ಟನೆ ಎದ್ದು ಅವಳಿಗೆ ವೀಳ್ಯದೆಲೆ ತೆಗೆದುಕೊಟ್ಟ. ಹಣ ಕೊಟ್ಟು ಆ ಹುಡುಗಿ ಸರಸರನೆ ಹೋಗಿಬಿಟ್ಟಳು. ಮೂರ್ತಿ ಪುನಃ ಪೆನ್ನು ಹಿಡಿದು ಲೆಕ್ಕಪುಸ್ತಕ ಮುಂದಿಟ್ಟುಕೊಂಡು ಕುಳಿತ. ಆದರೆ ಮನಸ್ಸು ಅದರೊಳಗೆ ಹೋಗಲೇ ಇಲ್ಲ. ಬೇರೆಲ್ಲೋ ಸುತ್ತಾಡತೊಡಗಿತು.

ಈಗ ಬಂದಿದ್ದ ಹುಡುಗಿ ಯಾರು? ಯಾರೋ ಅಂತೂ ಒಬ್ಬ ಗಿರಾಕಿ. ಅವಳು ಕೊಂಡುಹೋದದ್ದು ವೀಳ್ಯದೆಲೆಯನ್ನಲ್ಲ. ನನ್ನ ಹೃದಯವನ್ನ. ಅವಳೇನೂ ರೂಪಸಿಯಲ್ಲ. ಕಪ್ಪೂ ಅಲ್ಲದ ಬಿಳುಪೂ ಅಲ್ಲದ ಬಣ್ಣ ಸುಮಾರಾಗಿದ್ದಾಳೆ, ಅಷ್ಟೆ. ಅಷ್ಟೇನೂ ಸುಂದರಿಯಲ್ಲದಿದ್ದರೂ ಲಕ್ಷಣವಾಗಿದ್ದಾಳೆ...

ಮೂರ್ತಿಯ ತಲೆ ಕಾವಲಿಯಂತೆ ಕಾದುಹೋಯ್ತು.

ದಿನಗಳುರುಳಿದವು. ಮೂರ್ತಿಯಿದ್ದ ಅಂಗಡಿ ದಿವಾಳಿಯೆದ್ದಿತು. ಆದರ ಮಾಲೀಕನಿಗೆ ಮೈ ತುಂಬಾ ಸಾಲ. ಹೀಗಾಗಿ ಅಂಗಡಿ ಬಂದಾಗಿ ಹೋಯಿತು.

ಮೂರ್ತಿ ಬೇರೊಂದೆಡೆ ಕೆಲಸ ನೋಡತೊಡಗಿದ. ಕೊನೆಗೆ ಹತ್ತಿರವೇ ಇದ್ದ ಸೊಸೈಟಿಯೊಂದರಲ್ಲಿ ಬಿಲ್ ಬರೆಯುವವನಾಗಿ ಸೇರಿ ಕಾಲೇಜ್ ವಿದ್ಯಾಭ್ಯಾಸವನ್ನು ಮುಂದುವರಿಸಿದ.

ಆ ದಿನ! ಅದನ್ನವನೆಂದಿಗೂ ಮರೆಯಲಾರ.

ರೇಶನ್ ಅಕ್ಕಿ ಕೊಳ್ಳಲು ಅಂದು ದೊಡ್ಡ ಕ್ಯೂವೇ ನಡೆದಿತ್ತು. ಎಲ್ಲರಿಗೂ ಬಿಲ್ ಬರೆದು ಕೊಡುವ ಹೊತ್ತಿಗೆ ಮೂರ್ತಿಯ ಕೈ ಬಿದ್ದುಹೋಗಿತ್ತು. ಆದರೆ ಕೊನೆಯ ಗಿರಾಕಿ ನೋಡಿ ಅವನ ಕೈ ನೋವು ಮಾಯವಾಯಿತು.

'ನಿಮ್ಮ ಹೆಸರು?' ಅತ್ಯುತ್ಸಾಹದಿಂದ ಕೇಳಿದ, ಮೂರ್ತಿ.

"ಪದ್ಮ" ನಿಧಿಯಿಲ್ಲದೆ ಹೆಸರು ಹೇಳಿಕೊಳ್ಳುತ್ತಿದ್ದೇನೆ ಎನ್ನುವಂತಿತ್ತು, ಅವಳ ನೋಟ.

ಆ ಹೆಸರನ್ನೇ ಮನಸ್ಸಿನಲ್ಲಿ ಹೇಳಿಕೊಂಡು ಚಪ್ಪರಿಸ ತೊಡಗಿದ ಮೂರ್ತಿ. ರಸೀತಿ ತೆಗೆದುಕೊಂಡು ಹೋಗಿ ಅಕ್ಕಿ ಕೊಂಡುಹೋಗುತ್ತಿದ್ದ ಪದ್ಮಳನ್ನೇ ದಿಟ್ಟಿಸಿದ, ಮೂರ್ತಿ...ಮನಸ್ಸಿನಲ್ಲಿ ನಾನಾ ಭಾವನೆಗಳು ತಲೆಯೆತ್ತಿದವು....ನಾನೇಕೆ ಹೀಗಾದೆ? ಆ ಹುಡುಗಿಯನ್ನು ನೋಡಿದರೆ ಹೀಗೇಕೆ ಆಡುತ್ತಿದ್ದೇನೆ....?

ಆದೊಂದು ದಿನ ಮೂರ್ತಿಯ ಭಾಗ್ಯದ ಬಾಗಿಲು ತೆರೆಯಿತು.

ಯಾರೋ ರೂಮಿನ ಬಾಗಿಲು ತಟ್ಟಿದ್ದು ನೋಡಿ ಮೂರ್ತಿ ಗಡಿಬಿಡಿಯಿಂದ ಬಂದು ಬಾಗಿಲು ತೆರೆದ. ಸೊಸೈಟಿಯ ಸೆಕ್ರೆಟರಿ ಕೃಷ್ಣಮೂರ್ತಿ ನಿಂತಿದ್ದರು. ಮೂರ್ತಿ ಆದರದಿಂದ ಅವರನ್ನು ಒಳಗೆ ಕರೆದು ಕೂಡಿಸಿದ. ಅವನ ವಿನಯ ನೋಡಿ ಅವರಿಗೂ ಬಹಳ ಸಂತೋಷವಾಯಿತು. ಮೂರ್ತಿಗೋ, ಅವರು ತಂದೆಯ ಸಮಾನ. ತನ್ನ ಕಷ್ಟವನ್ನರಿತುಕೊಂಡು ಅವರು ಕೆಲಸ ಕೊಟ್ಟು ತನಗೆ ಮಹದುಪಕಾರ ಮಾಡಿದರೆಂದು ಮೂರ್ತಿ ಚಿರಋಣಿಯಾಗಿದ್ದ. ಅಂತೇ ಕೃಷ್ಣಮೂರ್ತಿಗಳೂ ಅವನನ್ನು ಸಲಿಗೆಯಿಂದ ಏಕವಚನದಲ್ಲೇ.

'ಮೂರ್ತಿ, ಎಷ್ಟು ದಿನಾಂತ ಹೀಗೆ ರೂಮು ಮಾಡಿಕೊಂಡು ಇರುತ್ತೀ? ಬೇಗ ಮದುವೆಮಾಡಿಕೊಂಡು ಒಂದು ಮನೆ ಮಾಡು."

"ಅಯ್ಯೋ ಅದಕ್ಕೇನವಸರ!" ಬಾಯಿಮಾತಿಗೆ ಹೇಳಿದರೂ

ಮೂರ್ತಿಯ ಮನಸ್ಸು ಪದ್ಮಳ ಸನಿಹವನ್ನೇ ಬೆನ್ನಟ್ಟಿ ಹೋಗಿತ್ತು.

"ನೋಡು ಮೂರ್ತಿ ನನ್ನ ಸ್ನೇಹಿತರೊಬ್ಬರಿದ್ದಾರೆ. ಅವರೂ ನನ್ನ ಹಾಗೇ ಬಡತನದಲ್ಲಿ ಕಾಲ ಹಾಕ್ತಿರೋ ಪ್ರಾಣಿ. ಮದುವೆಗೆ ಬಂದ ಮಗಳಿದ್ದಾಳೆ. ಇನ್ನೂ ಚಿಕ್ಕ ಚಿಕ್ಕ ಮಕ್ಕಳಿದ್ದಾರೆ ಆ ಮಗಳಿಗೆ

(ಹನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526
1921 ಸ್ಥಾಪನೆ
ಸಂಪುಟ ೪೮
ಸಂಚಿಕೆ ೨೭
VOL. 48
No. 27

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೦—೩—೧೯೬೯

ಸ್ಥಾಪಕರು: ಡಾ|| ಎ. ಬಿ. ಶೆಟ್ಟರು
ಸಂಪಾದಕರು: ಕೆ. ಹೊನ್ನಯ್ಯ ಶೆಟ್ಟಿ

ಎಚ್ಚರದ ಗಂಟೆ

ಸೋವಿಯತ್ ರಷ್ಯ ಮತ್ತು ಕೆಂಪು ಚೀನಾಗಳ ನಡುವಣ ಘರ್ಷಣೆ ಶಕ್ತಿಪ್ರದರ್ಶನದ ರೂಪದಲ್ಲಿ ಮತ್ತೆ ಆರಂಭವಾಗಿದೆ, ಅದು ಮುಂದುವರಿಯುತ್ತಲೂ ಇದೆ. ಇತ್ತೀಚಿಗೆ ನಡೆದೊಂದು ಘರ್ಷಣೆ ತುಂಬ ಭೀಕರವಾಗಿದ್ದು ಕೆಲವು ಸಾವುನೋವುಗಳಿಗೂ ಕಾರಣವಾಯಿತೆಂದು ತಿಳಿಯುತ್ತದೆ. ಸುಮಾರು ಐದಾರು ವಾರಗಳ ಹಿಂದೆ ಇಂತಹುದೇ ಒಂದು ಘರ್ಷಣೆ ನಡೆಯಿತು. ಈಯೆಲ್ಲ ಘರ್ಷಣೆಗಳಿಗೆ ಮೂಲ ಯಾರು ಎಂಬ ಪ್ರಶ್ನೆಗೆ ಉತ್ತರ ಸುನಿಶ್ಚಿತವೇ: ಅವರೆಂದು ಇವರು; ಇವರೆಂದು ಅವರು. ಆದರೆ ಕೆಂಪು ಚೀನಾದ ಪ್ರವೃತ್ತಿಯನ್ನು ಕಂಡವರು ರಷ್ಯ ಮತ್ತು ಅದರೊಳಗಿನ ಸಂಬಂಧವನ್ನು ಬಲ್ಲವರು ಕೆಂಪು ಚೀನದ್ದೇ ಮಂಗನಾಟವಿದ್ದಿರಬೇಕು ಎನ್ನಬಹುದು. ಉಭಯ ದೇಶಗಳ ನಡುವೆ ತೀವ್ರ ಪ್ರತಿಭಟನಾ ಪತ್ರಗಳ ವಿನಿಮಯವಾಗಿದೆ; ಆ ಪತ್ರಗಳಲ್ಲಿ ಹೇಳಲಾದ ಆರೋಪವನ್ನು ಇಬ್ಬರಲ್ಲೂ ತಲೆ ಬುಡವಿಲ್ಲದ ಉತ್ಪ್ರೇಕ್ಷೆಯೆಂದು ಕರೆದಿರಲೂ ಬಹುದು. ಆದರೆ, ಘರ್ಷಣೆ ನಡೆದದ್ದು ಮಾತ್ರ ಪ್ರಮಾಣಿತಸತ್ಯ; ಆರೋಪ ಮಾತ್ರ ರಾಜ್ಯಕೀಯ ಮಿಥ್ಯ!

ಕೆಂಪು ಚೀನಾ ಮತ್ತು ಸೋವಿಯತ್ತುಗಳ ನಡುವೆ ಉದ್ಭವವಾಗಿದ್ದ ತಾತ್ತ್ವಿಕ ಭಿನ್ನಾಭಿಪ್ರಾಯಗಳನ್ನು ಕೊನೆಗೂ ದೂರಮಾಡಲು ಉಭಯತ್ರ ನಾಯಕರು ಸಂಪೂರ್ಣ ಅಸಮರ್ಥರಾದರು. ಅಂದಿನಿಂದಲೂ ತಾತ್ತ್ವಿಕ ಭಿನ್ನಾಭಿಪ್ರಾಯವು ರಾಜ್ಯಕೀಯ ಭಿನ್ನಮತದಲ್ಲಿ ಗೊನೆಗೊಂಡಿತು. ಪಾಕಿಸ್ತಾನವು ಕೆಂಪು ಚೀನಾದ ಪ್ರಭಾವಕ್ಕೆ ತುತ್ತಾಗುವುದನ್ನು ಕಂಡು ಕೋಸಿಗಿನ್ ಮತ್ತು ಸೋವಿಯತ್ ನಾಯಕರು ಅದನ್ನು ತಮ್ಮ ಹಕ್ಕಿಯನ್ನಾಗಿರಿಸಲು ಬಯಸಿದರು. ಇದನ್ನು ಕಾರ್ಯಗತಗೊಳಿಸುವ ಯೋಜನೆಯಂತೆ ಶಸ್ತ್ರಾಸ್ತ್ರಗಳ ನೆರವನ್ನು ನೀಡಲು ಒಡಂಬಡಿಕೆ ಮಾಡಿಕೊಂಡದ್ದು ಇದರಂತೆ ಸುಮಾರು ೪೦ ಟ್ಯಾಂಕುಗಳನ್ನು ಈಗಾಗಲೇ ಪೂರೈಸಿದ್ದು ಎಲ್ಲರಿಗೂ ತಿಳಿದ ಸಂಗತಿ. ಕೆಂಪು ಚೀನಾದ ಪ್ರಭಾವದಿಂದ ಅಫ್ರೇಸ್ಯಾವನ್ನು ಮುಕ್ತಗೊಳಿಸುವ ನಾಯಕತ್ವವನ್ನು ತಾನೇ ಇಟ್ಟುಕೊಳ್ಳುವ ಹೇರಾಸೆ ಅದರದ್ದು. ಸೋವಿಯತ್–ಪಾಕ್ ಶಸ್ತ್ರಾಸ್ತ್ರ ಪೂರೈಕೆಯ ಒಡಂಬಡಿಕೆಯನ್ನು ಭಾರತ ವಿರೋಧಿಸಿತ್ತು. ಆದರೆ ಅದನ್ನು ತಡೆಯುವುದು ಸಾಧ್ಯವಾಗಲಿಲ್ಲ. ಮೊನ್ನೆ ಮೊನ್ನೆ ಸೋವಿಯತ್ ವಿದೇಶಮಂತ್ರಿಗಳು ದಹಲಿಗೆ ಬಂದಾಗಲೂ ಭಾರತದ ಕಳವಳವನ್ನು ಪ್ರತಿಬಿಂಬಿಸಲಾಯಿತು. ಆದರೆ ಕೇಳಿದ ಹಾಡು—ಹೇಳಿದ ಹಾಡು ಒಂದೇ–"ಸಾಮಾನ್ಯ ಶಸ್ತ್ರಾಸ್ತ್ರಗಳನ್ನು ಮಾತ್ರ ನಾವು ನೀಡುವುದು. ಇದರಿಂದ ಭಾರತಕ್ಕೆ ಯಾವ ಹಾನಿಯೂ ಆಗದು; ನಮ್ಮ ನಿಮ್ಮ ಸ್ನೇಹಕ್ಕೆ ಯಾವ ರೀತಿಯಿಂದಲೂ ಚ್ಯುತಿಬಾರದು" "ಅದು ಸರಿ; ಅಮೆರಿಕೆಯೂ ಮೊದಲು ಹೀಗೇ ಹೇಳಿತ್ತು. ಆದರೆ ಅದರಿಂದ ನಮ್ಮ ವಿರುದ್ಧ ಪಾಕ್ ತಾನು ನೀಡಿದ ಶಸ್ತ್ರಾಸ್ತ್ರ ಬಳಸಿದಾಗ ಏನು ಮಾಡುವುದೂ ಅಸಾಧ್ಯವಾಯಿತು."ಹಾಗಾಗದೆಂಬ ಭರವಸೆ. ಆದರೆ ಇಂದು ಪಾಕ್ ರಾಜ್ಯಕೀಯ ಬದಲಾಗಿದೆ. ಫೀಲ್ಡ್ ಮಾರ್ಶಲ್ ಅಯ್ಯೂಬ್ ಖಾನ್ ಮತ್ತವರ ಬೆಂಬಲಿಗರೂ ರಾಜ್ಯಕೀಯದಿಂದ ಸಂಪೂರ್ಣ ನಿವೃತ್ತರಾಗಲು ನಿರ್ಧರಿಸಿದ್ದಾರೆ. ಈ ನಿವೃತ್ತಿ ಸದ್ಯದಲ್ಲೇ ಆದರೂ ಆಗಬಹುದು, ಮುಂದಿನ ವರ್ಷಾರಂಭದಲ್ಲೂ ಆಗಬಹುದು. ಆದರೆ ಕೆಂಪು ಚೀನೀಯ ನಂಟರಕ್ಕೆ ಬಲವಾಗುವುದು ಅಸ್ವಾಭಾವಿಕವಲ್ಲ. ಅವರು ಸೋವಿಯತ್ ನೆರವನ್ನು ಎಂದಿಗೂ ಬಯಸದೆ ಕೆಂಪು ಚೀನವನ್ನೇ ನಂಬಿರುವವರು. ಭಾರತದೊಡನೆ ಹೋರಾಡಬೇಕಾದರೆ ಅಮೆರಿಕೆಯನ್ನೋ ರಷ್ಯವನ್ನೋ ನಂಬಿದರೆ ಕೆಲಸವಾಗದು—ಅದಕ್ಕಾಗಿ ಕೆಂಪು ಚೀನವನ್ನೇ ಹೊಂದಿಕೊಳ್ಳಬೇಕು.

ಕೆಂಪು ಚೀನಾ ಭಾರತವನ್ನು ಅಲುಗಾಡಿಸುವ ಪ್ರಯತ್ನ ನಡೆಸಿತು; ಅದರದು ರಾಜತಾಂತ್ರಿಕಗಳಿಂದ ಸಾಧ್ಯವಾಗಲಿಲ್ಲ. ನಾಗಾರನ್ನು ಭಾರತ ಸರಕಾರದ ವಿರುದ್ಧ ಎತ್ತಿಕಟ್ಟುವಲ್ಲಿ ನೆರವಾಯಿತು. ಅವರನ್ನು ತನ್ನಲ್ಲಿಗೆ ಕರೆದು ಕೂಟ ಯುದ್ಧಕಲೆ ತರಬೇತಿ ನೀಡಿ ಮರಳಿ ಕಳಿಸಿತು. ಈ ಕೂಟ ವಿದ್ಯಾಪಾರಂಗತರ ಹಲವು ಪಂಗಡಗಳು ನಾಗಾರಾಜ್ಯವನ್ನು ಪ್ರವೇಶಿಸಿ ತಮ್ಮ ವಿಧ್ವಂಸನ್ನು ಹೊರಗೆ ಹಾಕುವ ಪ್ರಯತ್ನದಲ್ಲಿದ್ದವು. ಪಾಪ, ಕೋಹಿಮಾದಿಂದ ಎಂಬತ್ತು ಮೈಲಿ ದೂರದಲ್ಲಿ ಭೂಗತ ನಾಗಾರ ದಂಡನಾಯಕ ಮೋವು ಅಂಗಾಮಿ ಮತ್ತು ಉಪನಾಯಕ ಲೋವಿ ಚಿ ಅಂಗಾಮಿಯವರನ್ನೂ ಸಶಸ್ತ್ರ ವಿದ್ರೋಹಿ ತಂಡವನ್ನೂ ಅಪಾರ ಚೀನೀ ಶಸ್ತ್ರಾಸ್ತ್ರಗಳೊಂದಿಗೆ ಬಂಧಿಸಲಾಯಿತು. ಇದರಿಂದಾಗಿ ಬಂಡುಗಾರ ನಾಗಾರ ಬೆಂಬಲ ಉಡುಗಿ ಹೋಯಿತೆನ್ನಬಹುದು. ಚೀನೀಯ ಬೇರು ಇನ್ನು ಅಲ್ಲಿ ಸರಿಯಾಗಿ ಬೆಳೆಯದು. ಕೆಂಪು ಚೀನಾವು ತನ್ನ ಮತ್ತು ಸೋವಿಯತ್‌ಗಳ ನಡುವಣ ಗಡಿ ಘರ್ಷಣೆಗೆ ಏನೇನೋ ರೂಪ ನೀಡುತ್ತಿದ್ದು, ರಷ್ಯ ಮತ್ತು ಭಾರತಗಳು ಒಂದಾಗಿ ನಡೆಸಿದ ಕುತಂತ್ರವೆಂದು ಕರೆಯುವಷ್ಟು ಅದು ಮುಂದುವರಿದಿದೆ. ಚೀನಾದ ದುರುದ್ದೇಶವನ್ನು ಪ್ರತಿಯೊಬ್ಬರೂ ಖಂಡಿಸುತ್ತಾರೆ — ಶಾಂತಿಪ್ರಿಯರು ಸದಾ ದಂಡ ಬೀಸುವ ಸುತ್ತಲೇ ಸಮಸ್ಯಾಪರಿಹಾರ ಕಾಣಬೇಕೆನ್ನುತ್ತಾರೆ; ಸಿಡಿಬಾಂಬು ಸಿಡಿಸಿಯಲ್ಲ. ಭಾರತದ ಉತ್ತರದಲ್ಲಿ ಗಡಿರಾಜ್ಯ ಪಶ್ಚಿಮ ಬಂಗಾಳ ಹಾಗೂ ದಕ್ಷಿಣದ ಕರಾವಳಿ ರಾಜ್ಯ ಕೇರಳದಲ್ಲಿ ಕೆಂಪು ಚೀನೀಯರ ಬಾಲಬಡುಕರ ಕೈವಾಡ ತುಂಬ ಇದೆ. ಇತ್ತೀಚೆಗೆ ಸಶಸ್ತ್ರ ಕ್ರಾಂತಿ ಮೂಲಕವೇ ದೇಶೋದ್ಧಾರ ಸಾಧ್ಯವೆಂದು ಕಾರಣ ನೀಡಿ ಕಮ್ಯೂನಿಸ್ಟ್ ಪಕ್ಷದ ಅಗ್ರ ನಾಯಕ ಶ್ರೀ ನಾಗಿರೆಡ್ಡಿಯವರು ರಾಜೀನಾಮೆ ನೀಡಿದ್ದಾರೆ. ಆಂಧ್ರದ ತೆಲಂಗಣದಲ್ಲಿಯೂ ನಕ್ಸಲೀಯರ ಕಾಟ ಹಬ್ಬಿದೆ— ಹೀಗೆ ಭಾರತದೊಳಗಡೆ ಕ್ರಾಂತಿಯ ಜ್ವಾಲೆಯುರಿಸಲು, ದಂಡ ಹಾರಿಸಿ ಭಾರತೀಯರನ್ನು ಬೆದರಿಸಲು ಕೆಂಪುಚೀನಾವು ಇಚ್ಛಿಸಿದರೆ, ಇಲ್ಲಿನ ಅವರ ಚೇಲರು ತುಪ್ಪ ಸುರಿಯಲು ಸಿದ್ಧರಿದ್ದಾರೆ. ಕೆಂಪುಚೀನಾವು ರಷ್ಯದ ಗಡಿಯಲ್ಲಿ ಆರಂಭಿಸಿದ ಘರ್ಷಣೆ ರಷ್ಯಕ್ಕೆ ಮಾತ್ರವಲ್ಲ; ಭಾರತ-ಪಾಕಿಸ್ತಾನಗಳಿಗೂ ಅಫ್ರೇಶ್ಯಾದ ಇತರ ದೇಶಗಳಿಗೂ ಬಾರಿಸಿದ ಎಚ್ಚರಿಕೆಯ ಗಂಟೆಯೆಂದರೂ ಸಲ್ಲುತ್ತದೆ. ಆದುದರಿಂದ ಕೆಂಪು ಚೀನಾ ಮತ್ತು ಪಾಕಿಸ್ತಾನಗಳು ಒಂದಾಗಿ ಭಾರತದ ಮೇಲೆ ಆಕ್ರಮಣ ನಡೆಸುವುದೂ ಸಂಭವನೀಯವೆಂದು ಇತ್ತೀಚೆಗೆ ಲೋಕಸಭೆಯಲ್ಲಿ ಹೊರಟ ಉದ್ಗಾರದಲ್ಲಿ ಕಿಂಚಿದಂಶವಾದರೂ ಸತ್ಯಾಂಶವಿದೆ. ಇದಕ್ಕೆಂದೇ ನಮ್ಮ ಸೇನೆ ಸದಾ ಸುಸಜ್ಜಿತವಾಗಿದೆಯೆಂಬ ಆಶ್ವಾಸನೆ ರಕ್ಷಣಾಮಂತ್ರಿಗಳ ಮಾತಿನಿಂದ ಹೊರಟಿದೆ. ಅಂತೂ ಭಿನ್ನತೆಯನ್ನು ದೂರಮಾಡಿ ಐಕ್ಯದಿಂದ ಬರುವೆಲ್ಲ ಶತ್ರುಗಳನ್ನು ಎಂಟೆದೆಯಿಂದೆದುರಿಸಲು ಭಾರತೀಯರೂ ಸಿದ್ಧರಾಗಬೇಕು.

ಇನ್ನೊಂದು ನಾಟಕ

ಮಧ್ಯಪ್ರದೇಶದ ರಾಜಮಾತೆ ಸಿಂಧಿಯಾ ಮತ್ತವರ ಕೂಟದವರು ಸಂಯುಕ್ತ ವಿಧಾಯಕ ದಳದಿಂದ ಹೊರಬಂದು ತಮ್ಮದೇ ಪಕ್ಷವೊಂದನ್ನು ಕಟ್ಟಿ ಕಾಂಗ್ರೆಸ್‌ನ ಸಹಕಾರದಿಂದ ಸಂಮಿಶ್ರ ಸರಕಾರ ರಚಿಸುವ ಇರಾದೆಯುಳ್ಳವರಾಗಿದ್ದಾರೆ. ಈ ಸಂಬಂಧದಲ್ಲಿ ಪ್ರಚಲಿತ ಮುಖ್ಯಮಂತ್ರಿ ಸಾರಂಗಘಡದ ರಾಜರೂ ರಾಜಮಾತೆ ಸಿಂಧಿಯಾರೂ ಮತ್ತಿತರ ನಾಯಕರೂ ಹೊಸದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರನ್ನು ಭೆಟ್ಟಿಮಾಡಿ ಮಾತುಕತೆ ನಡೆಸಿದರು. ಒಂದು ಸಮಯ ಕಾಂಗ್ರೆಸ್ ವಿರೋಧೀ ಶಕ್ತಿಗಳನ್ನು ಒಗ್ಗೂಡಿಸಿ ಸಂಯುಕ್ತ ವಿಧಾಯಕ ದಳೀಯ ಸರಕಾರ ಸ್ಥಾಪಿಸುವಲ್ಲಿಯೂ ಇವೇ ರಾಜಮಾತೆಯ ಕೈ ಹರಡಿತ್ತು. ಮಾಜಿ ಮುಖ್ಯಮಂತ್ರಿ ಗೋವಿಂದನಾರಾಯಣ ಸಿಂಗರು ಭೋಪಾಲದ ರಂಗಮಂಟಪದಲ್ಲಿ ಸುದೀರ್ಘ ರಾಜ್ಯಕೀಯ ನಾಟಕವಾಡಿ ಮೊನ್ನೆ ಮೊನ್ನೆ ಅಂಕದ ಪರದೆ ಇಳಿಬಿಟ್ಟರೂ ಈ ನಾಟಕದ ಸೂತ್ರಧಾರಿಣಿ ರಾಜಮಾತೆಯೇ ಎನ್ನಬೇಕು. ಆಕೆ ಈ ಕಾಂಗ್ರೆಸ್‌ನ ಬಾಲಹಿಡಿದು ಮತ್ತೊಂದು ನಾಟಕವಾಡಿಸಲು ನಿರ್ಧರಿಸಿದಂತೆ ತೋರುತ್ತದೆ. ಗೋವಿಂದ ನಾರಾಯಣ ಸಿಂಗರು ಸಂಯುಕ್ತರಂಗಕ್ಕೆ ಯಾವ ಗೊತ್ತುಗುರಿಯೂ ಇಲ್ಲದೆ ಇದ್ದುದರಿಂದ ಅದರ ಕಳೆ ಹೋಗಾಯ್ತು. ಆದರೆ ಕಾಂಗ್ರೆಸ್‌ಗೆ ತನ್ನ ಪಕ್ಷದ ನೀತಿಯಿದೆ–ಅದರ ಪರಿಪಾಲನೆ ಅದು ಮಾಡುತ್ತದೆ — ಬಿಹಾರ ಘಟನೆಯ ಉಲ್ಲೇಖವಿಲ್ಲಿ ಅಪ್ರಸ್ತುತವಲ್ಲ. ಆದುದರಿಂದ ರಾಜಮಾತೆಯು ಸೂತ್ರಧಾರಿಣಿಯೆನಿಸಿದರೂ ಮುಂದೆ ನಾಯಕಿಯಾದರೆನಿಸುವುದಿಲ್ಲ. ಅಂದು ಕಾಂಗ್ರೆಸ್ಸನ್ನು ಅಧಿಕಾರದಿಂದ ಕಡೆಯುವುದು ಆಕೆಯ ಗುರಿಯಾಗಿತ್ತು. ಇಂದು ಮಧ್ಯಂತರ ಚುನಾವಣೆಯು ನಡೆಯುವಂತೆ ನೋಡಿಕೊಳ್ಳುವುದೇ ಮಹೋದ್ದೇಶ. ರಾಜ್ಯಕೀಯದಲ್ಲಿ ಏನೆಲ್ಲಾ ಸಾಧ್ಯವೆಂಬುದಕ್ಕೆ ಇದೂ ಒಂದು ಉದಾಹರಣೆ.

ಕೋಟಿ–ಚೆನ್ನಯ ಉತ್ಸವ

ಶ್ರೀ ಎಣ್ಮೂರು ಬೀಡಿನ ಪೂರ್ವಪದ್ಧತಿ ಪ್ರಕಾರ ನಡೆಯುತ್ತಿರುವ ಉತ್ಸವಗಳು ತಾ. 30.3.69ನೇ ಆದಿತ್ಯವಾರ ಪ್ರಾರಂಭವಾಗಿ ತಾ. 1.4.69ನೇ ಮಂಗಳವಾರದ ವರೆಗೆ ಇಲ್ಲಿಯ ಪ್ರಸಿದ್ಧ ಎಣ್ಮೂರು ಆದಿ ಶ್ರೀ ಕೋಟಿ-ಚೆನ್ನಯ್ಯರೆಂಬ ದೈವದೇರುಗಳಿಗೆ ಉತ್ಸವವು ನಡೆಸಲ್ಪಡುವುದು.

ಈ ಸಂಬಂಧ ತಾವುಗಳು, ಬಂಧುಬಾಂಧವ, ಇಷ್ಟಮಿತ್ರರೊಡಗೂಡಿ ಇಲ್ಲಿಗೆ ದಯಮಾಡಿ ಬಂದು, ಸಹಕರಿಸಿ ಗಂಧಪ್ರಸಾದವನ್ನು ಸ್ವೀಕರಿಸಿ, ಶ್ರೀ ದೈವದೇರುಗಳ ಅನುಗ್ರಹಕ್ಕೆ ಪಾತ್ರರಾಗುವಂತೆ ಕಟ್ಟಬೀಡಿನ ಪರೇರ್ ಕೆ. ಬಿ. ವಿಠಲ್ ರೈಗಳು ಅಪೇಕ್ಷಿಸುತ್ತಾರೆ.

ನರಸಣ್ಣನ ಸರಸ

"ಎಂ.ಪಿ.ಸಿ.ಸಿ.ಯು ಶಿವಸೇನೆಯನ್ನು ಹಿಂದಿನಿಂದಲೂ ಖಂಡಿಸುತ್ತ ಬಂದಿದೆಯಂತೆ ಆದರ ಜೊತೆಗೆ ಶಿವಸೇನೆಯ ಹಿಂಸಾಚಾರವೂ ಬೆಳೆಯುತ್ತಲೇ ಬಂದಿದೆ "

ಗೇಹರಾಜ್ಯದಲ್ಲಿ

ಪರಿಣಾಮ ಮಾತ್ರವೇ ಕನ್ನಡಿ ತಾನೆ?

"ಕೇಳಿದ್ರ್ಯಾ?"

'ಏನು?'

"ಅಲ್ರಿ, ನೋಡಿ, ಅಮೇರಿಕೆಯಲ್ಲಿ ನೀಗ್ರೋ ನಾಯಕ ಮಾರ್ಟಿನ್ ಲೂಥರ್ ಕಿಂಗರನ್ನು ಕೊಲೆ ಮಾಡಿದ ಅರೋಪ ಹೊತ್ತವನಿಗೆ ದಂಡನೆಯಾಯಿತಂತೆ!'

"ಯಾರಿಗೆ? ಜೇಮ್ಸ್ ಅರ್ಲ್‌ರೇಗೆ?"

"ಹೌದೌದು, ಅವನಿಗೇನೇ, ಅಲ್ರಿ, ತೊಂಬತ್ತೊಂಭತ್ತು ವರ್ಷ ಕಾರಾಗೃಹವಾಸವಂತೆ!"

"ಹ್ಞಾಂ, ಪಾಪ್ಯಾಕೆ ಅಜೀವದಂಡನೆ ನೀಡಲಿಲ್ಲ ತಾನೆ?"

"ಇದೊಳ್ಳೆ ಕಥೆಯಾಯ್ತು..."

"ಯಾಕೆ?"

"ಮತ್ತೇಂಥದ್ರಿ? ತೊಂಬತ್ತೊಂಭತ್ತು ವರ್ಷಗಳ ತನಕ ಬದುಕುವ ಪ್ರಶ್ನೆಯೇ ಇಲ್ಲವಾಗಿರುವಾಗ......."

"ಪ್ರಾಯಃ ಅಮೇರಿಕೆಯಲ್ಲಿ ಇದಕ್ಕಿಂತ ಹೆಚ್ಚು ಕಾರಾಗೃಹವಾಸದ ದಂಡನೆ ನೀಡಲು ಅವಕಾಶವಿಲ್ಲಾಂತ ತೋರುತ್ತೆ. ಅಗಲಿ, ಅವನೆಷ್ಟು ಪಶ್ಚಾತ್ತಾಪ ಪಡುತ್ತಾನೆಯೋ!"

'ಪಾಪದ ಭಾರದಿಂದ ಆತನ ತಲೆ ಧರಾತಳಕ್ಕೆ ಕುಸಿದಿರಬಹುದು...'

"ಏನು ಪ್ರಯೋಜನ? ಈ ಪಾಪದ ಹೆದರಿಕೆ ಮೊದಲಿಗೆ ಇದ್ದಿದ್ದರೆ?"

'ಹಾಗಾಗುತ್ತಿರಲಿಲ್ಲ...'

"ಹ್ಞಾ...ನೋಡಿ, ಪಾಕಿಸ್ತಾನದಲ್ಲಿ ಅಧ್ಯಕ್ಷ ಅಯೂಬರು ಮುಂದಿನ ವರ್ಷ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸುವುದಿಲ್ಲಾಂತ..."

"ಅಯ್ಯೋ, ಅದು ಯಾವಾಗದ ಸುದ್ದಿ? ಅದಾಗಲೇ ಈಗಲೇ ಅವರು ನಿವೃತ್ತರಾಗಬೇಕೆಂತಲ್ಲ ಎಲ್ಲರೂ ಒಡೆಯುತ್ತ ಒತ್ತಾಯಿಸುತಿದ್ರು...."

'ಹತ್ತು ವರ್ಷಗಳ ಕಾಲ ಅನಭಿಷಿಕ್ತ ಸಾರ್ವಭೌಮರಾಗಿ ಮೆರೆದಾಡಿದವ್ರೀಗ, ವಯಸ್ಕರ ಮತದಾನ ಮತ್ತು ಸಾಂಸದೀಯ ಪ್ರಣಾಳಿಯ ಆಡಳಿತೆಯ ವ್ಯವಸ್ಥೆಗೆ ಸಂಪೂರ್ಣ ಒಪ್ಪಿಗೆ ನೀಡಿದ್ದಾರಂತೆ..."

"ಅಲ್ರಿ, ಮೊದಲಿಗೆ ಅವರೇ ವಿರೋಧಿಗಳ ಬೇಡಿಕೆಯನ್ನು ಮನ್ನಿಸಿದರೆ ಪಾಕಿಸ್ತಾನದ ಸರ್ವನಾಶ ಆಂತಿದ್ರಲ್ಲಾ?'

"ಹೌದು. ಆಗ, ತನಗೇ ಸಾರ್ವಭೌಮ ಪದದ ಬೇಕೆನಿಸಿತ್ತು, ಈಗದು ಸಾಕೆನಿಸಿತು. ಆದುದರಿಂದ ತನಗೆ ಬೇಡವಾದುದು ಹೇಗಾದರೇನ?

'ಅಂದರೆ, ಇಷ್ಟು ನಿವೃತ್ತರಾಗಿ.."

"ಚೀನಕ್ಕೋ, ರಷ್ಯಕ್ಕೋ, ಲಂಡನ್ನಿಗೋ, ಅಮೇರಿಕಕ್ಕೋ ಹೋಗಿ ಆರಾಮವಾಗಿರಬಹುದು...."

'ಎಲ್ಲಿಗೇ ಹೋದ್ರೂ ಕೆಂಪು ಚೀನಾಕ್ಕೆ ಮಾತ್ರ ಹೋಗಲಾರರು....'

'ಯಾಕೆ ಅಷ್ಟು ಗ್ಯಾರಂಟಿಯಾಗಿ....'

'ಅಲ್ರಿ ಮುಂದೆ ಅಧಿಕಾರಕ್ಕೆ ಬರೋರು ಚೀನೀಯರ ಜೊತೆಗಿನ ದಸ್ತಪತ್ರ ಭುಟ್ಟೋ. ಅಯೂಬರು ಅಲ್ಲಿ ನೆಲಸಿದರೆ, ಹಿಡಿದು ಕಟ್ಟಿ ಎಳೆದುತಂದರೆ?'

'ಹ್ಞಾಂ, ಒಳ್ಳೇ ಮಾತಾಡ್ತಿ.'

"ಹೌದೋ ಅಲ್ಲವೋ ಹೇಳಿ...."

"ಹ್ಞಾಂ, ರಾಜ್ಯಕೀಯದಲ್ಲಿ ಅಸಂಭವನೀಯವೇನೂ ಇಲ್ಲಾನ್ನಿ. ಇಲ್ಲವಾದರೆ, ಹೀಗೆಲ್ಲಾ ಯಾಕೆ ಆಗಬೇಕು?"

"ಹೇಗೆ?"

"ನೋಡು, ಪಂಜಾಬದ ಹಿಂದಿನ ಮುಖ್ಯಮಂತ್ರಿ ಲಚ್ಮಣಸಿಂಗ ಗಿಲ್‌ರನ್ನು ಈಗಿನ ಸರಕಾರ ಸೆರೆಹಿಡಿದಿದೆಯಂತೆ....'

"ಗಿಲ್ ಅಂದರೆ,... ಹ್ಞಾಂ, ಕಾಂಗ್ರೆಸ್ ನೊಡನೆ ಸೇರಿ ಸರಕಾರ ರಚಿಸಿದ ಭೂಪ — ಗುರ್ನಾಮ ಸಿಂಗರು ರಾಜಿನಾಮೆ ಕೊಟ್ಟ ಮೇಲೆ ಮುಖ್ಯಮಂತ್ರಿಯಾದವ್ರು..."

"ಹ್ಞಾಂ, ಅವರೇ. ಅವರು ನವದೆಹಲಿಯಿಂದ ಚಂಡಿಘಡಕ್ಕೆ ಬಂದ ಕೂಡಲೇ ಬಂಧಿಸಲಾಯಿತಂತೆ...'

"ಕಾರಣ?"

ಅವರು ಮುಖ್ಯಮಂತ್ರಿಗಳಾಗಿರುವಾಗ ಸಂಯುಕ್ತ ವಿಧಾಯಕ ದಳವುಲಂಚಸ್ವೀಕಾರಾದಿಗಳನ್ನು ಮಾಡಿದ್ದಾರೆಂದು ಕಳೆದ ವರ್ಷ ರಾಜ್ಯಪಾಲರಿಗೆ ಮನವಿ ಮಾಡಿ ವಿಚಾರಣೆ ನಡೆಸುವಂತೆ ಕೇಳಿತ್ತು..."

"ಅದನ್ನು ರಾಜ್ಯಪಾಲರ ಸಲಹೆಗಾರರು ವಿಚಾರಿಸಿ, ವರದಿ ನೀಡಿದ್ದಾರಂತಲ್ಲ?"

'ಹೌದು, ಈ ಬಂಧನ ಅದರ ಮೇಲಿನ ಮುಂದಿನ ಕ್ರಮ...."

"ಹ್ಞಾಂ..."

"ಜಾಮೀನಿನ ಮೇಲವರು ಬಿಡುಗಡೆ ಹೊಂದಿದರು....."

'ಆಗಲಿ...."

"ಅಂತೂ ಪಂಜಾಬದಲ್ಲೂ ಒಂದು ಕಥೆ..."

"ಏನು?"

"ವಿಧಾನ ಸಭಾಧಿವೇಶನದಲ್ಲಿ ರಾಜ್ಯಪಾಲರ ಭಾಷಣ ನಡೆಯಿತು.."

"ಮಾಮೂಲು ಮಾತು..."

"ಭಾಷಣದಲ್ಲಿ ಗೋಲರ ಬಜೆಟ್ ಅಧಿವೇಶನದ ವೇಳೆ ವಿಧಾನಸಭೆಯೊಳಗೆ ಪೋಲೀಸರನ್ನು ಕರೆತಂದುದರಿಂದ ಸಂವಿಧಾನಾತ್ಮಕ ತತ್ವಗಳ ಮತ್ತು ಪದ್ಧತಿಗಳ ಉಲ್ಲಂಘನೆ ಘಟಿಸಿದೆ. ಈ ಘಟನೆಯ ಬಗ್ಗೆ ಉನ್ನತಮಟ್ಟದಲ್ಲಿ ಪರಿಶೀಲಿಸಲು ತನ್ನ ಸರಕಾರ ನಿರ್ಧರಿಸಿದೆ ಎಂದು ರಾಜ್ಯಪಾಲರು ಹೇಳಿದರು'

"ಅಂದರೆ, ಆ ಅಧಿವೇಶನದ ವೇಳೆಯೂ ಈ ರಾಜ್ಯಪಾಲರೇ ಇದ್ದರಲ್ಲ?"

"ಹೌದು. ಆದರೆ, ಬಜೆಟ್ ಮಂಡಿಸುವಾಗ ಈ ದುರ್ಘಟನೆ ನಡೆದದ್ದು...."

"ಹ್ಞಾಂ ಅಂತೂ ಇನ್ನು ಇದೇ ಕೆಲಸವಾಯ್ತು..."

"ಏನು?"

"ನಾಲ್ಕು ದಿನಕ್ಕೊಂದು ಸರಕಾರ— ಹಿಂದಿನ ಸರಕಾರದ ಮೇಲೆ ಇಂದಿನ ಸರಕಾರದ ಅರೋಪ-ವಿಚಾರಣೆ..."

'ಅದೂ ಬೇಕು ನೋಡು, ತಪ್ಪು ಹುಡುಕುವುದು, ಪರರ ತೇಜೋಭಂಗ ಮಾಡಿ ತಮ್ಮ ತೇಜಸ್ಸು ಹೆಚ್ಚಿತೆಂದು ತಿಳಿದುಕೊಳ್ಳುವುದು ಈವ್ಮು ಹವ್ಯಾಸವಾಗಿರುವಷ್ಟು ಕಾಲ. ಇಲ್ಲವಾದರೆ ಎಲ್ಲರೂ ಪುಢಾರಿಗಳಾದಾರು..."

"ತೇಜೋಭಂಗವೆನ್ನುತ್ಲೂ ನೆನಪಾಯ್ತು, ಮುರಾರ್ಜಿ— ಚಂದ್ರಶೇಖರರ ಕಥೆ ಎಲ್ಲಿಗೆ ಬಂತು?"

"ಬರೋದೇನು? ಮುರಾರ್ಜಿ ತನ್ನ ಹೃದಯದ ಮಾತನ್ನು ಸರಿಯಾಗೇ ಆಡಿದ್ದಾರೆ."

"ಏನಂತೆ?"

"ತನಗೆ ಚಂದ್ರಶೇಖರರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳಬೇಕೆಂಬ ಆತುರವೇನೂ ಇಲ್ಲ. ಆದರೆ, ಇದೇ ರೀತಿ ತೇಜೋವಧೆ ಮಾಡುತ್ತ ಹೋಗುವುದಾದರೆ, ರಾಜ್ಯಕೀಯದಿಂದ ನಿವೃತ್ತನಾಗುವ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕಾಗುತ್ತೇಂತ ...."

"ಸರಿ. ಕಾರ್ಯಕಾರಿಣಿ ಏನನ್ನುತ್ತದೆ?"

"ಚಂದ್ರಶೇಖರರು ಕ್ಷಮಾಯಾಚನೆ....'

"ಅದು ಅಸಾಧ್ಯವೆಂದವರು ಹೇಳಿದ್ದಾರಲ್ಲಾ?'

'ಹ್ಞಾಂ. ಪಕ್ಷದ ಶಿಸ್ತು ಸಂಹಿತೆಯ ಆಧಾರದ ಮೇಲೆ ಪಾರ್ಲಿಮೆಂಟರಿ ಬೋರ್ಡ್ ಕ್ರಮ ಕೈಕೊಳ್ಳಬೇಕೆಂದು ಸೂಚಿಸಿದೆ..."

"ಹ್ಞಾಂ... ಅದು ಅಸಾಧ್ಯವಾದರೆ?'

"ಏಕೆ?'

"ಅಲ್ರಿ, ಸ್ವಯಂ ಮುರಾರ್ಜಿಯವ್ರು ಇದರಲ್ಲಿ ಹೆಚ್ಚು ಉತ್ಸಾಹ ತೋರಿಸಿದಂತಿಲ್ಲ...'

"ಅವರ ಆಶಯ ಬೇರೆಯೇ ಇರಬಹುದು."

"ಶಿಸ್ತಿನ ಕ್ರಮ ಬೇಡ; ಪಕ್ಷದಿಂದ ಹೊರದಬ್ಬುವುದೂ ಬೇಡ; ಇನ್ನು ಮುಂದೆ ತೇಜೋವಧೆಯಾಗಬಾರದು...."

'ಓ, ನಡೆದದ್ದಕ್ಕೆ ಕ್ಷಮಾಯಾಚನೆ ಕೋರುವುದಿಲ್ಲಾಂತಾದ ಮೇಲೆ, ಭವಿಷ್ಯದ ಬಗ್ಗೆ ಭರವಸೆ ನೀಡಬೇಕು. ಇದಕ್ಕೆ ತಯಾರಾದರೆ?'

'ಹೇಗೆ ಹೇಳುವುದು? ಆದರೂ ಆಗಬಹುದು. ನೋಡು ಸುಬ್ರಹ್ಮಣ್ಯಂ ಕಾಂಗ್ರೆಸ್ ಕಾರ್ಯಕಾರಿಣಿಗೆ ಕಾಗದ ನೀಡಿದ ರಾಜೀನಾಮೆಯನ್ನು ಹಿಂದೆ ಪಡೆದಿಲ್ಲವೆ?'

"ಏನಂತೀರಾ? ರಾಜಸ್ಥಾನದ ರಾಜರು ಮಂತ್ರಿಪದ ಬಿಟ್ರಾ?'

"ಬಿಡಲಿಲ್ಲಾನ್ನು ಆದ್ರೂ ಅವರನ್ನು ಹೇಗಾದರೂ ದೂರ ಮಾಡಲೇಬೇಕೆಂದು ಕಾರ್ಯಕಾರಿಣಿ ನಿರ್ಧರಿಸಿತಲ್ಲಾ?"

"ಒಂದು ವೇಳೆ ಅವರನ್ನು ದೂರಪಟ್ಟಾಗ ಹರಿಹರಸಿಂಗರ ಬಲ ಕಡಮೆಯಾದರೆ?"

"ಆಗಲಿ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ...."

"ಹಾಗಾದರೆ ಸುಬ್ರಹ್ಮಣ್ಯಂ ಮಾತಿದ್ದರಲ್ಲಿ ಸುಳು ನ್ಯಾಯವುಂಟು...."

'ಅದಲ್ಲವಾಗ ತಿಲ್ಲೀ ನೋಡೋಣ. ಅದ್ರ ಮಧ್ಯ ಬಿಹಾರ ಸಂಯುಕ್ತದ ಮೇಲೆ ಅವಿಶ್ವಾಸ ಸೂಚನೆ ಬೇರೆ ಮುಂದೆ ಬಂದಿದೆ."

'ಈಗಿನ ಕಾಲವೇ ಹಾಗೆ. ಮಕ್ಕಳು ಹುಟ್ಟುವಾಗಲೇ ಸರ್ವಸಂಸ್ಕಾರಗಳನ್ನೂ ಹೊಂದಿಕೊಂಡು ಬರುತ್ತವೆ. ಹಾಗೆಯೇ ಸರಕಾರಗಳೂ ಸ್ಥಾಪಿತವಾದೊಡನೆಯೇ ಅವಿಶ್ವಾಸ ನಿರ್ಣಯವೆದುರಿಸಲು ತಯಾರಿಲ್ಲ ನೀಡಿಸಿ ಬರಬೇಕು."

'ಮಧ್ಯಪ್ರದೇಶದಲ್ಲಿ ಸಾರಂಘಡದ ರಾಜರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು....'

"ಹ್ಞಾಂ ಗುರುನಾರಾಯಣ ಸಿಂಗರು ಕೊನೆಗೂ ಅಂಕದ ಪರದೆ ಹಾಕಿದರು. ಇನ್ನು ಮತ್ತೊಬ್ಬ ಸಿಂಗರ ಏಕಾಂಕ ನೋಡಬೇಕು...."

"ಓಹೋ, ಭಾರೀ ಭವಿಷ್ಯ ನ ಡಿಯುತ್ತಿ ಅಲ್ಲ?"

"ಇದ್ರಲ್ಲಿ ಭವಿಷ್ಯವೇನು ಬಂತ್ರಿ? ಪಕ್ಷಾಂತರದ ಪ್ರಭಾವದಿಂದಲೇ ಸಂಯುಕ್ತ ವಿಧಾಯಕದಳವು ಅಲ್ಲಿ ಅಧಿಕಾರಕ್ಕೇರಿತು. ಅದೇ ಪಕ್ಷಾಂತರದ ಸದ್ದಿ ದಬ್ಬುವಾಗಿ ಮತ್ತೆ ಹರಡುವುದರಿಂದ....'

"ಹ್ಞಾಂ, ಅದೂ ಅಸಾಧ್ಯವೇನೂ ಅಲ್ಲಾನ್ನು..."

(ಒಂಭತ್ತನೇ ಪುಟ ನೋಡಿರಿ)

ರಾಷ್ಟ್ರಭಕ್ತಿಶೂನ್ಯ ರಾಷ್ಟ್ರೀಯ ಐಕ್ಯ

ಬರೆದವರು: ಶ್ರೀ ಶಿವಶಂಕರ.

ಅದಲ್ಲಲ್ಲಿ ವಾದ್ಯಘೋಷಗಳು ಕೇಳಿಬರುತ್ತಿವೆ. ಮದುವೆಯ ಸಂಭ್ರಮವೇ ಸಂಭ್ರಮ. ಪುರೋಹಿತರು, ಪಾದ್ರಿಯವರು, ಖಾಜಿಯವರು ಮಂತ್ರತಂತ್ರ ಮತೀಯ ಗುರುಗಳು ಅವಸರಪಡಿಸುತ್ತಿದ್ದಾರೆ; ಅವರೆಲ್ಲರೂ ಕೇಳುತ್ತಿರುವ ಪ್ರಶ್ನೆ ಒಂದೇ —ವಧು ಎಲ್ಲಿ? ಅದಕ್ಕೆ ವರನ ಉತ್ತರ ಸಾಗೂ ಭಾಷಣದ ಸಾರಾಂಶ—ಮತೀಯ ದೃಷ್ಟಿಯ ಹಾಗೂ ಹಳೆಯ ಗೊಡ್ಡು ಸಂಪ್ರದಾಯದ ಮದುವೆ ಇದಲ್ಲ. ಇಲ್ಲಿ ವಧು-ವರರ ವಿವಾಹ ನಡೆಯುತ್ತಿಲ್ಲ. ಆದಕಾರಣ ವಧುವಿನ ಅವಶ್ಯಕತೆಯಿಲ್ಲ. ಗಂಡು ಹೆಣ್ಣಿಗೆ ಯುಗ-ಯುಗಗಳ ಹಿಂದಿನ ಕಾಲದಿಂದಲೂ ಮದುವೆ ಆಗುತ್ತಿದೆ. ಪ್ರಗತಿಗಾಮಿ ಪದ್ಧತಿಗೆ ಸೇರಿದವನು ನಾನು. ನಾನು ಪ್ರಗತಿಶೀಲ-ಪುರೋಗಾಮಿ. ಆ ಕಂದಾಚಾರದ ವೇದಯುಗದ, ಶಾಸ್ತ್ರಯುಕ್ತ ವಿವಾಹ ಇದಲ್ಲ. ಇದು ವಿಜ್ಞಾನ ಯುಗದ ವಿವಾಹ......ಭಾಷಣದ ಜಿಗಿ ಏರುತ್ತಾ ಇತ್ತು. ವಧು ಮಾತ್ರ ಅಲ್ಲಿಯೂ ಕಂಡುಬರಲಿಲ್ಲ. ಅದೊಂದು ವಧುವಿಲ್ಲದ ನವನಾಗರಿಕತೆಯ ಪ್ರಗತಿಪರ, ಕ್ರಾಂತಿಕರ ಸ್ವಯಂವರ.

ಈ ವಿಷಯವನ್ನು ಯೋಚಿಸುತ್ತ ಸಮಾಚಾರ ಪತ್ರಿಕೆಯ ಹಾಳೆಗಳನ್ನು ತಿರುವಿ, ಕೈ ಪುಟಗಳನ್ನು ತೆಗೆಯುತ್ತಿತ್ತು. ಕಣ್ಣು ಅದನ್ನು ನೋಡುತ್ತಿತ್ತು. ಆದರೆ ಮನಸ್ಸು ಮಾತ್ರ ಮೊದಲು......! ಕಂಡ ಸ್ವಪ್ನ? ತಟ್ಟನೆ ದೃಷ್ಟಿ ಒಂದೆಡೆ ನಿಂತಿತು, ಕೈ ಚಲಿಸಲಿಲ್ಲ. ಏನದು ಸಮಾಚಾರ?

ನಮ್ಮ ಅಳಿದುಳಿದಿರುವ ಇಂಡಿಯಾದ ಇತ್ತೀಚೆ ಭಾರತದ ರಾಜಧಾನಿ ಹೊಸ-ದಿಲ್ಲಿಯಲ್ಲಿ ಐಕ್ಯ ಮತ್ತು ಪ್ರಜಾ ಪ್ರಭುತ್ವದ ಮೇಲೆ ರಾಷ್ಟ್ರೀಯ ಸಭೆಯೊಂದು ಸೇರಿತ್ತು. ಅದರ ಪ್ರಭು ಶ್ರೀ ಜಯಪ್ರಕಾಶ ನಾರಾಯಣರು. ಅದರಲ್ಲಿ ಅನೇಕ ರಾಜಕೀಯ ಪಕ್ಷಗಳ ಪ್ರಮುಖರು ಭಾಗವಹಿಸಿದ್ದರು. ಕಾಂಗ್ರೆಸ್ಸಿಗರೂ ಜನಸಂಘದವರೂ ಕಮ್ಯೂನಿಸ್ಟರೂ ಅಲ್ಲಿ ಕಲೆತಿದ್ದರು. ಭಾಗವಹಿಸದವರಲ್ಲಿ ಪ್ರಮುಖರೆಂದರೆ ಸ್ವತಂತ್ರ ಪಾರ್ಟಿಯವರು. ಸುಮಾರು ಎಪ್ಪತ್ತು ಪ್ರತಿನಿಧಿಗಳು ಅದರಲ್ಲಿ ಭಾಗವಹಿಸಿದ್ದರು. ಮೂರು ದಿನ ಸಭೆ ನಡೆಯಿತು. ಜನಸಂಘದವರಿಗೂ ಸಂಯುಕ್ತ ಸೋಷಲಿಸ್ಟ್ ಪಾರ್ಟಿಯವರಿಗೂ ವಾಗ್ಯುದ್ಧ ನಡೆಯಿತು. ಕೊನೆಯಲ್ಲಿ ತೀರ್ಮಾನವನ್ನು ಶ್ರೀ ಜಯಪ್ರಕಾಶ ನಾರಾಯಣಜೀಯವರು ಪತ್ರಿಕೆಗಳಿಗೆ ತಿಳಿಸಿದರು.

ರಾಷ್ಟ್ರೀಯ ಐಕ್ಯ ಸಭೆಯಲ್ಲಿ ಶ್ರೀ ಜಯಪ್ರಕಾಶ ನಾರಾಯಣ! ಕೆಲವು ತಿಂಗಳುಗಳ ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಕಾಶ್ಮೀರದಲ್ಲಿ ರಾಷ್ಟ್ರೀಯ ಐಕ್ಯ ಸಭೆಯೊಂದನ್ನು ಕರೆದಿದ್ದಾಗ ಇದೇ ಶ್ರೀ ಲೋಕನಾಯಕ ಜಯಪ್ರಕಾಶ ನಾರಾಯಣರು ನಡೆಸಿರುವ ಮಾತುಗಳನ್ನ ಜನತೆ ಮರೆಯಲಾರದು. ಅವರು ಅಂತಹ ಸಭೆಗಳಿಂದ ಐಕ್ಯ ಸಾಧನೆ ನಡೆಸುವದು ಅಷ್ಟರಲ್ಲೇ ಇದೆಯೆಂದು ಹೇಳಿ, ಅದೊಂದು ಸರಕಾರೀ ಐಕ್ಯಸಭೆಯೆಂದು ಜರೆದಿರುವರು. ಈ ವಿಷಯದ ಮೇಲೆ 'ನವಯುಗ' ಪ್ರಕಟಿಸಿರುವ ಲೇಖನವೊಂದು ಶ್ರೀ ಜಯಪ್ರಕಾಶರ ಮನದಿಂಗಿತದ ಕುರಿತು ಅಂದೇ ಸ್ಪಷ್ಟಪಡಿಸಿರುತ್ತದೆ. ಇಂದದು ನಿಜವಾಗಿರುತ್ತದೆ. ತನಗೆ ಆಚಾರ್ಯ ಅಸ್ಥಾನವನ್ನ ಕೊಡದಿದ್ದುದರಿಂದಲೇ ಅವರು ಶ್ರೀಮತಿ ಇಂದಿರಾಜೀಯವರ ಮೇಲೆ ಸಂದೇಹ ವ್ಯಕ್ತಪಡಿಸಿದ್ದರೆಂಬುದನ್ನಿಂದು ಅವರೇ ತಿಳಿಯಪಡಿಸಿದ್ದಾರೆ. ಅವರ ಅಧ್ಯಕ್ಷತೆಯಲ್ಲೂ ಭಾರೀ ಭಾರೀ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಬಂದು ಐಕ್ಯದ ಬಗ್ಗೆ ಭಾಷಣಬಿಗಿಯುತ್ತಿರುವದು ವಿಚಿತ್ರವೇ ಸರಿ. ನಿಜವಾಗಿ ಅವರಿಗೆ ಭಾಷಣದ ಐಕ್ಯದ ಮೇಲೆ ನಂಬಿಕೆಯಾಗಲೀ, ಶ್ರೀ ಜಯಪ್ರಕಾಶರಿಂದ ಐಕ್ಯಕ್ಕೆ ಜಯವಾಗುವ ವಿಷಯದಲ್ಲಾಗಲೀ ಒಂದಿನಿತೂ ನಂಬಿಕೆಯಿರಲಾರದು. ತಮ್ಮ ಪಕ್ಷ ಐಕ್ಯ ವಿರೋಧಿಯಲ್ಲವೆಂಬುದನ್ನು ಪ್ರಕಟಪಡಿಸುವ ಸಲುವಾಗಿ ಅವರು ಅಲ್ಲಿ ಬಂದಿರುವರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಕಮ್ಯೂನಿಸ್ಟ್ ಪಾರ್ಟಿಗಳಂತಹ ಪಕ್ಷಗಳಿಗೆ ಭಾರತದ ಐಕ್ಯದ ಮೇಲೆ ಆಶೆಯಿದೆಯೇ? ಸಭೆಯ ಲಾಭ ಪಡೆದುಕೊಳ್ಳಲು ಅವರಲ್ಲಿ ಆಸೀನರಾಗಿದ್ದರು ಅಷ್ಟೇ.

ಆ ಮಹಾಸಭೆಯಲ್ಲಿ ಸ್ವೀಕೃತವೆನ್ನಲಾಗಿರುವ ಠರಾವಿನ ಸಾರಾಂಶ ಈ ರೀತಿ ಇದೆ:—

"ಈ ಮಹಾಸಭೆಯು ರಾಷ್ಟ್ರೀಯ ಒಕ್ಕಟ್ಟಿನ ವಿಷಯದ ಮೇಲೆ ಚರ್ಚೆ ಮಾಡಿರುತ್ತದೆ. ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ವ್ಯಕ್ತವಾಗಿರುವ ಇಂಡಿಯನ್ ಜನರ ಒಕ್ಕಟ್ಟನ್ನು ಏಕೀಕೃತಗೊಳಿಸಬೇಕು ಹಾಗೂ ಬಲಪಡಿಸಬೇಕೆನ್ನುವ ವಿಷಯದಲ್ಲಿ ಅದಕ್ಕೆ ದೃಢವಾದ ಅಭಿಪ್ರಾಯವಿದೆ. ರಾಷ್ಟ್ರೀಯತೆ ಹಾಗೂ ದೇಶಭಕ್ತಿಯ ಕುರಿತು ಹೇಳುವಾಗ ಗತ ಇತಿಹಾಸ ಹಾಗೂ ಪರಂಪರೆಯ ಕುರಿತು ಹೇಳಬೇಕಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಹಾಗಿದ್ದರೂ ಮತೀಯ ಮಾರಾಮಾರಿಗೆ ಆಸ್ಪದ ಕೊಡುವಂತಹ ವಿಷಯಗಳನ್ನ ಜಾಗರೂಕತೆಯಿಂದ ಬಿಟ್ಟುಬಿಡಬೇಕು. ಹಾಗೆಯೇ ಸಾಮಾಜಿಕ ಸಮತೆ ಮತ್ತು ಪ್ರಗತಿಗೆದರಾಗಿ ಉಕ್ಕಿಸುವಂತಹ ಕ್ರಾಂತಿಕಾರಿ ಮನೋಭಾವನೆಯನು ಎದುರಿಸಬೇಕು. ೧೯೪೭ರಲ್ಲಿ ಸ್ಥಾಪಿತವಾಗಿರುವಂತಹ ಇಂಡಿಯನ್ ರಾಜ್ಯಪದ್ಧತಿಯು ಹಲವಾರು ಭಾಷೆಗಳ ಮೇಲೆ ಮತ್ತು ಸಾಂಸ್ಕೃತಿಕ ಲಕ್ಷಣ ಅಲ್ಲದೆ ಮತೀಯ ನಂಬಿಕೆಗಳ ಮೇಲೆ ಉಂಟಾಗುವಂತಹದ್ದಿದೆ. ಇದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು ಮತ್ತು ಅದರಂತೆ ಸರ್ವಭಾಷಾ ಸಮಾನತೆ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಪ್ರಯತ್ನಿಸಬೇಕು. ಸಮಾಜದಲ್ಲಿರುವ ಆರ್ಥಿಕ ಅಲ್ಲದೆ ಸಾಮಾಜಿಕ ಅಸಮಾನತೆಯನ್ನು ತೆಗೆದುಹಾಕಬೇಕು. ಮತೀಯ ತಳಹದಿಯ ಮೇಲೆ ರಚಿತವಾದ ರಾಷ್ಟ್ರೀಯತೆಯು ದೇಶದ ಒಕ್ಕಟ್ಟಿಗೆ ಅಪಾಯಕಾರಿ ಇದೆ. ಅದು ಜನರಲ್ಲಿ ವಿರೋಧಿ ಗುಂಪುಗಳನ್ನು ಕಟ್ಟಿಕೊಳ್ಳುವಂತೆ ಪ್ರೋತ್ಸಾಹವನ್ನೀಯುತ್ತದೆ. ಇಂದು ಅದರ ಆಗತ್ಯ ಇರುವದಿಲ್ಲ. ಅನ್ಯಮತಗಳ ಮೇಲಿನ ಸಹನಶೀಲತೆ ಹಾಗೂ ಗೌರವವು ನಮ್ಮನ್ನು ಸರಿಯಾದ ಹಾದಿಯಲ್ಲಿ ಕೊಂಡೊಯ್ಯಬಲ್ಲದು. ರಾಜ್ಯವು ಎಲ್ಲಾ ಮತಗಳನ್ನು ಒಂದೇ ದೃಷ್ಟಿಯಿಂದ ಕಾಣಬೇಕು ಮತ್ತು ಕಾಪಾಡಬೇಕು."

ಬಹಳ ಚೆನ್ನಾಗಿದೆ, ಅಲ್ಲವೆ! ಜಯಪ್ರಕಾಶಜೀ ಅನ್ನಬೇಕನ್ನಿಸುತ್ತದೆ. ಶ್ರೀಮಾನ್ ಜಯಪ್ರಕಾಶ ಬಾಬುರವರು ಮಾಡಿದ್ದಾದರೂ ಏನು? ಕಾಶ್ಮೀರದಲ್ಲಿ ಶ್ರೀಮತಿ ಇಂದಿರಾಜೀ ಮಾಡಿದ್ದನ್ನೇ, ನಡೆಸಿದ ದರ್ಬಾರನ್ನೇ ದಿಲ್ಲಿಯಲ್ಲಿ ಶ್ರೀ ಜಯಪ್ರಕಾಶರು ನಡೆಸಿದ್ದಾರೆ. ಅಲ್ಲೂ "ಹಿಂದೂ ರಾಷ್ಟ್ರೀಯತೆ"ಯನ್ನು ಹೀಗಳೆಯಲಾಗಿರುತ್ತದೆ, ಇಲ್ಲೂ ನಡೆದಿರುವುದು ಅದೇ. ಏನೇ ಇರಲಿ. ಹಿಂದೂ ರಾಷ್ಟ್ರೀಯತೆಯೆಂದರೇನಿದೆ? ಅದು ಕಿವಿಗೆ ಬಿದ್ದೊಡನೆ ಮೂಗಿನ ಸೊಳ್ಳೆಗಳೇತಕ್ಕೆ ಅಷ್ಟು ದೊಡ್ಡದಾಗಬೇಕು? ಅಮೇರಿಕದ ಪ್ರಜೆ ಅಥವಾ ರಾಷ್ಟ್ರೀಯನು ಅಮೇರಿಕನ್, ಇಂಗ್ಲೆಂಡಿನವ ಇಂಗ್ಲೀಷಿನವ, ರಷ್ಯಾದವ ರಷ್ಯನ್, ಅರೇಬಿಯಾದವ ಅರಬ, ಜಪಾನಿನವ ಜಪಾನಿ, ಚೈನಾದವ ಚೈನೀ, ಫ್ರಾನ್ಸಿನವ ಫ್ರೆಂಚನಿರುವಂತೆ ಹಿಂದೂಸ್ಥಾನದವನ ಯಾರು ಇರಲು ಸಾಧ್ಯ?- ಭಾರತದವನು ಯಾರು ಇರಲು ಸಾಧ್ಯ? ಈ ಸತ್ಯಸೂರ್ಯನನ್ನು ಮರೆಯಿಸಲು ವಿಫಲವಾದ ಮೇಘಗಳು ಮಹಾಪ್ರಯತ್ನ ನಡೆಸುತ್ತಿವೆ. ಅದರಿಂದ ಪ್ರಯೋಜನ ಇದೆಯೇ? ಕಾಶ್ಮೀರ, ದಿಲ್ಲಿ, ಕನ್ಯಾಕುಮಾರಿ..... ಅದೆಲ್ಲಿ ಬೇಕಾದರೂ ಇಂದಿರಾಜಿ, ಜಯಪ್ರಕಾಶ ನಾರಾಯಣಜೀ ಅದ್ಯಾವ ಜೀ(ರೋ?) ಬೇಕಾದರೂ ಇದೆಂತಹ ಸಭೆಯ ಸಮಾರಂಭ ನಡೆಸಿದರೂ ಗೊಬೆಲ್ಸನನ್ನು ಗೋರಿಯಿಂದೇಳಿಸಲು ಅವರಿಂದ ಸಾಧ್ಯವಿರುವುದಿಲ್ಲ. ಇದು ಹಿಂದೂ ರಾಷ್ಟ್ರವಿದೆ. ಇದು ಭಾರತ ರಾಷ್ಟ್ರವಿದೆ. ಈ ದೇಶದ ರಾಷ್ಟ್ರೀಯರೆಲ್ಲರೂ ಹಿಂದೂಗಳಿದ್ದಾರೆ, ಭಾರತೀಯರೇ ಇದ್ದಾರೆ. ಅವರದ್ಯಾವ ಮತಾನುಯಾಯಿಗಳಾಗಿದ್ದರೂ ಸರಿ, ಅದ್ಯಾವ ಭಾಷೆಯನ್ನಾಡುವವರಾಗಿದ್ದರೂ ಸರಿ, ಅವರದ್ಯಾವ ವೇಶ-ಭೂಷಣಗಳನ್ನು ಧರಿಸಿಕೊಳ್ಳುವವರಾದರೂ ಸರಿ, ಅವರದ್ಯಾವ ಆಹಾರವನ್ನು ತಿನ್ನುವವರಾದರೂ ಸರಿ, ಈ ದೇಶಕ್ಕೆ ಸೇರಿದವರಾದಲ್ಲಿ, ಈ ದೇಶದ ಸಂಸ್ಕೃತಿಯ ಮೇಲೆ ಸದಭಿಮಾನ ಉಳ್ಳವರಾದಲ್ಲಿ, ನಾಗರೀಕತೆಯ ಮೇಲೆ ನಂಬಿಕೆ ಉಳ್ಳವರಾದಲ್ಲಿ, ಭಾರತಮಾತೆಯನ್ನು ನಮಸ್ಕರಿಸುವವರಾದಲ್ಲಿ ಸರಿ, ಅವರು ಭಾರತೀಯರೇ ಅಹುದು. ಈ ಸ್ಪಷ್ಟ ವಿಚಾರವನ್ನು ಜನತೆಯ ಮುಂದೆ ಮಡಗುವದರಲ್ಲಿ ವಿಫಲವೇಷ ಎಣಿಸುವವರು ರಾಷ್ಟ್ರೀಯ ಐಕ್ಯದ ಕುರಿತು ಯೋಚಿಸಲು ಯೋಗ್ಯರಿರುವುದಿಲ್ಲ.

ಸ್ವಾತಂತ್ರ್ಯ ಚಳುವಳಿಯ ಸಮಯ ಎಲ್ಲಾ ಮುಸ್ಲಿಮರೂ ಕ್ರಿಶ್ಚಿಯನರೂ ಅದರಲ್ಲಿ ಭಾಗವಹಿಸಿ ಭಾರತಮಾತೆಗೆ ಜಯವಾಗಲೆಂದು ವಂದೇಮಾತರಂ ಹಾಡಿರುವರೇನು? ಭಾರತದೊಳಗೆ ನಡೆದುದೇನು? ಖಿಲಾಫತ್ ಚಳವಳಿಯ ಬೇಡಿಕೆಗಳಿಗೆ ಬ್ರಿಟಿಷರು ಒಪ್ಪಿಕೊಂಡೊಡನೆ ಮಹಮ್ಮದೀಯರು ಸ್ವಾತಂತ್ರ್ಯ ಚಳವಳಿಯಿಂದಲೂ ದೂರವಾಗಿ ಬಿಟ್ಟರು. ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಸಹಾ ವಂದೇಮಾತರಂ ಹಾಡುವುದು ಹಾಗಿರಲಿ, ಬೇರೆಯವರು ಹಾಡುವಾಗ ಅದಕೂ ಎದ್ದುನಿಲ್ಲಲು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಅಲಿಯವರೇ ಒಪ್ಪಿರಲಿಲ್ಲ. ಖಿಲಾಫತ್‌ನ ಪರಿಣತಿಯ ಅನುಭವ ನೇತಾಜಿ ಸುಭಾಷ ಬಾಬುರವರಿಗೂ ಆಗಿರುತ್ತದೆ. ಇವೆಲ್ಲಕ್ಕಿಂತಲೂ ಇಂದು ನಮ್ಮ ಕಣ್ಮುಂದೆ ಇರುವದು ಕಾಂಗ್ರೆಸ್+ಮುಸ್ಲಿಂ ಲೀಗುಗಳ ಅನೈತಿಕ ಸಂ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
92 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ನೈಜಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711
5712 } 3 Lines
5713

ಇತಿಹಾಸದ ರೋಮಾಂಚಕ ಪುಟಗಳು: ೧.

ನೇಪಾಳದ ನರಕ ಪಂಜರ

ಬರೆದವರು: ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ

ಬಲಾಢ್ಯವಾದ ಒಂದು ಸ್ವತಂತ್ರ ದೇಶ. ಅದರ ಅರಸನು ಸಾಮಾನ್ಯನಲ್ಲ; ಸಾರ್ವಭೌಮ ಚಕ್ರವರ್ತಿತ್ವ ಹೊಂದಿದವನು. ಇಂತಹ ಸಾರ್ವಭೌಮ ಸತ್ತಾಧಿಕಾರಿ ತನ್ನರಮನೆಯೊಳಗೆ ತನ್ನವರ ರಹಸ್ಯ ಬಂಧನದಲ್ಲಿ ಒಬ್ಬ ಕೈದಿಯಂತಿರುವುದೆಂದರೆ ನಂಬತಕ್ಕ ವಿಷಯವೇ? ಆದರೆ ನಡೆದ ಘಟನೆ ಮಾನವ ಶರೀರದಲ್ಲಿ ರೋಮಾಂಚನೆಯುಂಟುಮಾಡುವಂತಹದ್ದು. ನಡೆದು ಹೋದ ಪ್ರತಿಯೊಂದು ಘಟನೆ ತ್ರಿಕಾಲ ಅಬಾಧಿತ ಸತ್ಯ.

ಈ ಜಗತ್ತಿನಲ್ಲಿ ಖ್ಯಾತಿವೆತ್ತ ವೀರ ವಸುಂಧರೆ ಭಾರತದೇಶ ಕೀರ್ತಿ ವೈಭವದ ಉತ್ತುಂಗ ಶಿಖರವನ್ನಡರಿದ ರಾಷ್ಟ್ರವೆಂದು ವೇದಕಾಲದಿಂದಲೂ ಗುಣಗಾನ ಕ್ಕೊಳಗಾದ ರಾಷ್ಟ್ರ. ಮಹಾಭಾರತದಂತಹ ಘೋರ ಸಂಗ್ರಾಮದ ತನಕ ಲೋಕದ ಎಲ್ಲಾ ರಾಷ್ಟ್ರಗಳು ಈ ಪುಣ್ಯ ಭೂಮಿಯ ಸಾಮಂತ ರಾಜ್ಯಗಳಾಗಿದ್ದುವೆಂದು ಅಂದಿನಿಂದ ಇಂದಿನ ತನಕ ನಿರಂತರವಾಗಿ ಸಾಕ್ಷಿಹೇಳುತ್ತಿವೆ. ಅಂತಹ ಸಾಮಂತ ರಾಜ್ಯಗಳಲ್ಲಿ "ನೇಪಾಳ"ವೂ ಒಂದು.

ಕಾಲಚಕ್ರದ ಉರುಳುವಿಕೆಯಿಂದಾಗಿ ಇಂದಿಗದು ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಿ ಜಗತ್ತಿನ ಮುಂದ ಶೋಭಿಸುತ್ತಾ ಭಾರತ ದೇಶದೊಂದಿಗೆ ಧಾರ್ಮಿಕ-ಸಾಮಾಜಿಕ-ಸಾಂಸ್ಕೃತಿಕ-ರಾಜನೈತಿಕ ಹಾಗೂ ಆರ್ಥಿಕವಾಗಿ ಆತ್ಮೀಯ ಬಾಂಧವ್ಯವನ್ನಿಟ್ಟುಕೊಂಡು ಮೆರೆಯುತ್ತಿದೆ. ನೇಪಾಳದ ರಾಜವಂಶಕ್ಕೆ ಒಂದು ಉತ್ಕೃಷ್ಟವಾದ ಪರಂಪರೆ ಇದೆ. ಒಂದು ಕಾಲದಲ್ಲಿ ಅಲ್ಲಿ ರಾಜರಿಗೆ ಪ್ರಜಾಪಾಲಿತದಲ್ಲಿ ಸರ್ವಾಂಗ ಸಂಪೂರ್ಣ ಅಧಿಕಾರವಿತ್ತು. ಬಹಳ ಕಾಲದಿಂದಲೂ ನೇಪಾಳದ ಅರಸರು ಸಾರ್ವಭೌಮ ಅಧಿಕಾರ ಪದವಿಯಿಂದಲೂ ಪ್ರಸಿದ್ಧರೆಂಬುದಕ್ಕೆ ಅತಿ ಪುರಾತನ ಇತಿಹಾಸಗಳು ಸಾಕ್ಷಿ ಹೇಳುತ್ತವೆ. ಇಂತಹ ಸ್ವತಂತ್ರ ದೇಶದ ಶಕ್ತಿಸಂಪನ್ನ ರಾಜರು ದೀರ್ಘಕಾಲದಿಂದಲೂ ಕಠೋರವಾದ ಬಂಧನಕ್ಕೊಳಗಾಗಿದ್ದು ನರಕ ಜೀವನ ಸಾಗಿಸಿಕೊಂಡಿದ್ದರೆಂದರೆ ಪ್ರತಿಯೊಬ್ಬ ಮಾನವನೂ ಆಶ್ಚರ್ಯಕ್ಕೊಳಗಾಗದಿರನು.

ಆದರೆ ಇದು ನಿತಾಂತ ವಾಸ್ತವವಾಗಿರುತ್ತದೆ. ರಾಮಾಯಣ ಮಹಾಭಾರತ ಮೊದಲಾದ ಅತಿ ಪುರಾತನ ಗ್ರಂಥಗಳಲ್ಲಿ ನಾಮನಿರ್ದೇಶನವಾಗಿರುವ "ಅಳಕಾವತಿ ನಗರ"ವೇ ಇಂದಿನ ಕಾಲದ ನೇಪಾಳ ದೇಶ. ಇಲ್ಲಿಯ ರಾಜಸಿಂಹಾಸನದಲ್ಲಿ "ಮಹಾರಾಜಾ ಮಹೇಂದ್ರ ಷಂಶೇರ್ ಜಂಗ್ಬಹಾದ್ದೂರ್"ರವರು ಶೋಭಿಸುತಿದ್ದಾರೆ. ಇವರ ತಂದೆಯ ಹೆಸರು "ಮಹಾರಾಜಾ ತ್ರಿಭುವನ ಶಮ್ಶೇರ್ ಜಂಗ್ ಬಹದ್ದೂರ್ ರಾಣಾ"ರವರ ಹೆಸರನ್ನು ನಮ್ಮ ಓದುಗರಾದ ತಾವುಗಳು ಕೇಳಿ ತಿಳಿದಿರಬಹುದು.

ಇವರು ನೇಪಾಳದ ಏಕಮೇವಾದ್ವಿತೀಯ ಶಾಸಕರಾಗಿದ್ದುದೂ ನಿಜ; ಪರಂತು ಅಲ್ಲಿಯ ರಾಜ್ಯಾಡಳಿತದ ಸರ್ವಾಧಿಕಾರ ಅಲ್ಲಿಯ ಅಮಾತ್ಯ ಶ್ರೇಷ್ಠ (ಪ್ರಧಾನ ಮಂತ್ರಿ) "ರಾಜಾ ಮೋಹನ್ ಶಮ್ಶೇರ್ ರಾಣಾ" ಎಂಬವರ ಕೈಯಲ್ಲಿತ್ತು. ರಾಜ್ಯಶಾಸನದ ಪ್ರತಿಯೊಂದು ವರಿಷ್ಠ ಪದವಿಯಲ್ಲಿ ರಾಣಾ ಪರಿವಾರದ ವಿಶ್ವಾಸಪ್ರಿಯ ವ್ಯಕ್ತಿಗಳೇ ನೇಮಿಸಲ್ಪಡುತ್ತಿದ್ದರು. ಪ್ರಧಾನಮಂತ್ರಿ "ರಾಜಾ ಮೋಹನ್ ಶಮ್ಶೇರ್ ರಾಣಾ"ರವರು ನೇಪಾಳ ರಾಷ್ಟ್ರದ ಸರ್ವಾಧಿಕಾರವನ್ನು ತನ್ನ ಮುಷ್ಟಿಯಲ್ಲಿಟ್ಟುಕೊಂಡಿದ್ದುದಲ್ಲದೆ ನೇಪಾಳದ ಸೇನೆಯೂ, ಸೇನಾಧ್ಯಕ್ಷರೂ ಕೂಡ ಇವರ ಸಂಪೂರ್ಣ ಹಿಡಿತಕ್ಕೊಳಗಾಗಿದ್ದರು. ಮಹಾರಾಜಾ ಮಹೇಂದ್ರರು ನೇಪಾಳದ ಸಮ್ರಾಟರೆಂದು ಕರೆಯಲ್ಪಡುತಿದ್ದರು; ಆದರೆ ಪ್ರಧಾನ ಮಂತ್ರಿ ತನ್ನ ರಾಕ್ಷಸೀಯ ಮಹತ್ವಾಕಾಂಕ್ಷೆಯನ್ನು ಪೂರೈಸಿ ಕೊಳ್ಳುವ ಕುತ್ಸಿತ ಉದ್ದೇಶದಿಂದ ಮಹಾರಾಜರನ್ನು ಹೊರಗಿನ ಜಗತ್ತಿಗೆ ಅರಿವಾಗದಂತಹ ವಿಚಿತ್ರ ವಿಧಾನದಲ್ಲಿ ಅರಮನೆಯೊಳಗೇನೇ ಅಪ್ರತ್ಯಕ್ಷ ಬಂಧನಕ್ಕೊಳಪಡಿಸಿಟ್ಟಿದ್ದರು. ಮಹಾರಾಜರ ಪ್ರತಿ ಕ್ಷಣದ ಚಲನವಲನಗಳನ್ನು ಕಣ್ಣಿಗೆ ಎಣ್ಣೆ ಎರೆದ ತೆರದಲ್ಲಿ ನಿರೀಕ್ಷಿಸಿಕೊಂಡಿರುವಂತೆ ಬಲವಾದ ಗುಪ್ತಚಾರರ ತಂಡವೊಂದು ಅರಮನೆಯೊಳಗೆ ಮಹಾರಾಜರ ಸುತ್ತಲೂ ಹರಡಿಕೊಂಡಿತ್ತು. ವಿಶಿಷ್ಟವಾದ ಪ್ರತಿಯೊಂದು ರಾಜಾಜ್ಞೆ ಪ್ರಧಾನ ಮಂತ್ರಿಯಿಂದಲೇ ಸಿದ್ಧಗೊಳಿಸಲ್ಪಟ್ಟು ಕೇವಲ ಹಸ್ತಾಕ್ಷರ (ಸಹಿ) ಮಾತ್ರ ಮಹಾರಾಜರು ಉಪಯೋಗಿಸದೆ, ಬಾಯಿ ಮುಚ್ಚಿಕೊಂಡು ನೋಡದೆ ಹಾಕಬೇಕಾಗಿತ್ತು.

"ಇಂತಹ ಬಂಧನದಲ್ಲಿ ತಾನು ಮಹಾರಾಜ ಪದವಿಯಲ್ಲಿದ್ದು ಅರಮನೆಯೊಳಗೇನೇ ಬಾಹ್ಯ ಪ್ರಪಂಚದ ಸಂಪರ್ಕ ಒಂದಿಷ್ಟೂ ಇಲ್ಲದೆ, ಪ್ರಜಾ ಸಮುದಾಯದ ಯೋಗಕ್ಷೇಮದ ಚಿಂತನೆ ಮಾಡುವ ಹಕ್ಕುಬಾಧ್ಯತೆಯಿಂದ ಸಂಪೂರ್ಣ ವಂಚಿತನಾಗಿರುವುದಕ್ಕಿಂತ ಈ ಸಾರ್ವಭೌಮ ರಾಜಪದವಿಗೆ ತಿಲಾಂಜಲಿಯಿತ್ತು ದೇಶಾಂತರಕ್ಕೆ ತೆರಳಿ ಒಬ್ಬ ಸಾಮಾನ್ಯ ನಾಗರಿಕನಾಗಿ ಜೀವನ ನಿರ್ವಾಹ ಮಾಡಿಕೊಂಡಿರುವುದೇ ಪರಮ ಲೇಸು' ಎಂಬ ಒಂದು ದುಃಖದ ಭಾವನೆ ಮಹಾರಾಜಾ ತ್ರಿಭುವನರ ಅಂತಃಕರಣದಲ್ಲಿ ನೆಲೆಗೊಂಡಿತ್ತು. ಮಹಾರಾಜರ ಈ ಮನೋಭಿಪ್ರಾಯವು ಪ್ರಧಾನ ಮಂತ್ರಿಗೆ ತಿಳಿಯದಿರಲಿಲ್ಲ.

ಯಾವುದಾದರೊಂದು ಉಪಾಯದಿಂದ ಈ ಬಂಧನದಿಂದ ಮಹಾರಾಜರು ತಪ್ಪಿಸಿಕೊಂಡು ಹೋಗದಿರಲಿಕ್ಕಿಲ್ಲವೆಂಬುದಾಗಿ ಮನಗಂಡು ಮಹಾರಾಜಾ ತ್ರಿಭುವನರ ಮೇಲೆ ಮಾತ್ರವಲ್ಲ ಅವರ ಪರಿವಾರದ ಸುತ್ತಲೂ ಕೂಡ ಪ್ರಧಾನ ಮಂತ್ರಿಯ ಆಜ್ಞಾನುಸಾರ ರಾತ್ರಿ ಹಗಲು ಗರಿಡಿವಾದ ಗೃಧ್ರದೃಷ್ಟಿಯ ಕಾವಲುಗಾರರು ಆವರಿಸಿಕೊಂಡಿದ್ದರು. ನೇಪಾಳದ ರಾಜಸಿಂಹಾಸನವನ್ನೇರಿದ ಪ್ರತಿಯೊಬ್ಬ ಮಹಾರಾಜರೂ ಕಳೆದ 106 ವರ್ಷಗಳಿಂದಲೂ ಸ್ವಾತಂತ್ರ್ಯ ರಹಿತರಾಗಿ ಪ್ರಧಾನ ಮಂತ್ರಿ ಇಲ್ಲವೇ ಸೇನಾಧ್ಯಕ್ಷರ ಬಂಧನದಲ್ಲಿ ಗೃಹಬಂಧಿಗಳಾಗಿರುತ್ತಿದ್ದರು. ಪ್ರಜೆಗಳಿಗೆ ತಮ್ಮ ಮಹಾರಾಜರನ್ನು ಕಾಣುವ ಯೋಗವೇ ಲಭಿಸುತ್ತಿರಲಿಲ್ಲ. ಆದರೆ ಪ್ರಪಂಚದಲ್ಲಿನ ಪ್ರತಿಯೊಂದು ಆಗುಹೋಗುಗಳಿಗೂ ಇತಿ-ಮಿತಿ ಇದೆಯೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. "ಅತೀ ಸರ್ವತ್ರ ವರ್ಜಯೇತ್" ಎಂಬ ಪೂರ್ವಿಕರ ಆದೊಂದು ಗಾದೆ ಅತಿ ಚಿಕ್ಕದಾಗಿದ್ದರೂ ತ್ರಿಕಾಲಕ್ಕೂ ಅನ್ವಯಿಸುವಂತಹ ಅರ್ಥಗರ್ಭಿತವಾಗಿರುತ್ತದೆ.

ದೈವಸಂಕಲ್ಪ

"ಒಲಿದರೆ ನಾರಿ ಮುನಿದರೆ ಮಾರಿ" ಎಂಬ ಲೋಕೋಕ್ತಿಯಂತೆ ಒಬ್ಬ ಸಾಮಾನ್ಯ ಸುಂದರ ಯುವತಿಯಿಂದ ನೇಪಾಳದ ಸಾರ್ವಭೌಮರ ಅದೃಷ್ಟ ಬದಲಾಗುವ ಸಮಯ ಸನ್ನಿಹಿತವಾಯಿತು. ಮಹಾರಾಜಾ ತ್ರಿಭುವನ ಷಂಶೇರ್ ಜಂಗ್ ಬಹದ್ದೂರ ರಾಣಾ"ರವರನ್ನು ಪ್ರಧಾನ ಮಂತ್ರಿ "ರಾಜಾ ಮೋಹನ್ ಷಮ್ಶೇರ್ ರಾಣಾ"ರವರ ವಜ್ರಮುಷ್ಟಿಯಿಂದ ಬಿಡುಗಡೆಗೊಳಿಸಿದ ಅಪೂರ್ವ ಯಶಸ್ಸು ಒಬ್ಬ ಆಂಗ್ಲ ಮಹಿಳೆಗೆ ದೊರಕಿತು. ಈಕೆಯ ಅದಮ್ಯ ಸಾಹಸ ಚತುರ ಕಾರಸ್ಥಾನದ ಬೆಂಬಲದಿಂದ ಮಹಾರಾಜರು ಅರಮನೆಯೊಳಗಿನ ಬಂಧನದಿಂದ ತಪ್ಪಿಸಿಕೊಂಡು ನೆರೆ ರಾಜ್ಯ ಭಾರತದ ಅತಿಥಿಯಾಗಿ ದಿಲ್ಲಿಯಲ್ಲಿ ವಿರಾಜಮಾನರಾಗುವ ಸುಯೋಗ ಸಮೀಪಿಸಿತು. ರಾಣಾ ಸಮುದಾಯದ ಎಲ್ಲಾ ಬೇಹುಗಾರಿಕೆಗೆ ಮತ್ತು ಅವರೆಲ್ಲರೂ ಹಗಲೂ ರಾತ್ರಿ ವಹಿಸುತ್ತಿದ್ದ ಪ್ರಬಲವಾದ ಎಚ್ಚರಿಕೆಯ ಮೇಲೆ ಒಬ್ಬ ಯುವತಿಯ ಬುದ್ಧಿ ಚಾತುರ್ಯ ಮತ್ತು ನಿರ್ಭೀತ ಸಾಹಸವು ನೀರೆರಚಿಬಿಟ್ಟಿತು. ಇದ್ದಕ್ಕಿದ್ದಂತೆ ಒಂದು ದಿನ ಮಹಾರಾಜಾ ತ್ರಿಭುವನರು ಪರಿವಾರ ಸಮೇತರಾಗಿ ರಾಜಭವನದಿಂದ ಕಣ್ಮರೆಯಾದರು. ಎಂದೆಂದಿಗೂ ಅಸಂಭವವೆಂದೇ ಎಲ್ಲರೂ ಎಣಿಸಿಕೊಂಡಿದ್ದುದು ಸಂಭವಿಸಿಯೇ ಹೋಯಿತು. ಅದನ್ನು ಕಂಡ ರಾಣಾಪರಿವಾರಕ್ಕೆ ದಿಕ್ಕು ತೋಚದಾಯಿತು.

ಡಾಕ್ಟರ್ ಕುಮಾರಿ ಎರಿಕಾ

1948ರಲ್ಲಿ ನೇಪಾಳದ ಮಹಾರಾಣಿ ಅಕಸ್ಮಾತ್ತಾಗಿ ಕಾಯಿಲೆಗೊಳಗಾದರು. ಮಹಾರಾಜಾ ತ್ರಿಭುವನರು ತನ್ನ ಪತ್ನಿಯ ಶುಶ್ರೂಷೆಗೆ ತನ್ನಿಚ್ಛೆಯಂತೆ ಡಾಕ್ಟರರನ್ನು ತರಿಸಲಿಕ್ಕೆ ಸಹ ಪ್ರಧಾನ ಮಂತ್ರಿ ಅಪ್ಪಣೆಕೊಡಲಿಲ್ಲ. ತನ್ನ ಮನಸ್ಸಿಗೆ ತೋರಿದ ಅಂದರೆ ತನ್ನ ಅಂಕಿತಕ್ಕೊಳಪಟ್ಟ ಚಿಕಿತ್ಸೆ ನಡೆಸಲಿಕ್ಕೆ ಸಮ್ಮತಿಸಿದ ಒಬ್ಬ ಲೇಡಿ ಡಾಕ್ಟರ್ "ಮಿಸ್ ಎರಿಕಾ ಲಾಯಿಶ್ಬಾಗ್" ಎಂಬವಳನ್ನು ಪ್ರಧಾನ ಮಂತ್ರಿಯ ಮೂಲಕ ನಿಯಮಿಸಲಾಯಿತು. ಸಿಮ್ಲಾದಲ್ಲಿದ್ದ ಈಕೆಯನ್ನು ನೇಪಾಳದ ರಾಜಧಾನಿ "ಕಠ್ಮಂಡು"ವಿಗೆ ತರಿಸಲಾಯಿತು. ಆಕೆ ಅಲ್ಲಿಗೆ ತಲ್ಪಿದ ಕ್ಷಣದಲ್ಲಿಯೇ ಅವಳನ್ನು ಯಾರೊಡನೆಯೂ ಮಾತನಾಡಲಿಕ್ಕೆ ಅವಕಾಶ ಕೊಡದೆ ಮೊಟ್ಟಮೊದಲು ನೇರವಾಗಿ ಪ್ರಧಾನಮಂತ್ರಿಯ ಸಮಕ್ಷಮಕ್ಕೆ ಕರಕೊಂಡು ಹೋಗಲಾಯಿತು ಪ್ರಧಾನ ಮಂತ್ರಿ ಅವಳನ್ನು ಒಳ್ಳೆಯ ಭಿಗುಮಾನ (ದಂಭಾಚರಣದ)ದಿಂದ ಸ್ವಾಗತಿಸಿ ಎಲ್ಲದಕ್ಕಿಂತ ಮೊದಲು ತನ್ನ ಪ್ರಥಮ ಪುತ್ರ "ಜನರಲ್ ವಿಜಯ ಶಮ್ಶೇರ್"ರವರ ಪರಿಚಯ ಮಾಡಿಸಿದರು. ಆಗ ಮಿಸ್ ಎರಿಕಾಳ ಬಾಯಿಯಿಂದ ಥಟ್ಟನೆ "ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಜನರಲ್ ಪದವಿಯಂತಹ ವರಿಷ್ಠ ಸ್ಥಾನಕ್ಕೇರ ಬೇಕಾದರೆ ನಿಮ್ಮ ಸುಪುತ್ರ ಬಹಳ ಬುದ್ಧಿಶಾಲಿಯಾಗಿರಬೇಕು." ಎಂಬ ಉದ್ಗಾರ ಹೊರಟಿತು. ಇದನ್ನು ಕೇಳಿದ ಪ್ರಧಾನಮಂತ್ರಿಯ ಮುಖದಲ್ಲಿ ಒಂದು ವಿಧದ ಗಂಭೀರತೆ ಆವರಿಸಿತು. ಅದು ಮತ್ತಷ್ಟು ಪ್ರಕಾಶವಾಗದಂತೆ ಕೂಡಲೇ ಮುಗುಳುನಗೆ

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ
ಹೊಟೆಲ್ ಸತ್ಕಾರ್
ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27
ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.
Phone: 28337
29887
HOTEL SATKAR
Boarding & Lodging
Near Corporation Office, 9, Mission Road
Bangalore—27

ನ್ನು ಹೊರ ಸೂಸಿ ಸುಮ್ಮನಾದರು. "ಈಕೆ ಒಬ್ಬ ಭೋಳೆ ಸ್ವಭಾವದ (ಯಾವ ತರದ ವಿಶೇಷ ಚಟುವಟಿಕೆ ಇಲ್ಲದ) ಆಂಗ್ಲ ಸ್ತ್ರೀ ಎಂಬುದಾಗಿ ಪ್ರಧಾನಮಂತ್ರಿ ಮತ್ತು ಅವರ ಮಗ ತಿಳಿದುಕೊಂಡಂತಿದೆ." ಎಂಬುದಾಗಿ ಡಾ| ಎರಿಕಾ ಕೂಡಲೇ ಮಂದಟ್ಟು ಮಾಡಿಕೊಂಡಳು.

ಪ್ರಥಮ ಗೆಲುವು

ಅವಳು ಅರಮನೆ ಪ್ರವೇಶಿಸುತ್ತಲೇ ಅವಳ ಕಣ್ಣು ಕುಕ್ಕುವಂತಾಯಿತು. ನೇಪಾಳದ ಅರಮನೆಯೆಂದರೆ ಪ್ರತ್ಯಕ್ಷ ಅಮರಾವತಿಯ ದೇವೇಂದ್ರನ ಅರಮನೆಗೆ ಮಿಗಿಲೆನಿಸುವಂತಿತ್ತು. ಓಲಗ ಚಾವಡಿಯ ಅಲಂಕಾರ ಅದೆಷ್ಟು ವೈಭವ ಪೂರ್ಣವಾಗಿತ್ತೆಂದರೆ ವರ್ಣಿಸಲಸದಳವಾಗಿತ್ತು. ಮಹಾರಾಣಿ, ಎರಡನೆಯ ರಾಣಿ, ಮತ್ತು ಮಹಾರಾಜರ ಸುಪುತ್ರಿ "ಭಾರತೀ ರಾಜಲಕ್ಷ್ಮಿ" ಇವರ ಹೊರತು ಇತರ ಯಾರೊಡನೆಯೂ ಡಾ| ಎರಿಕಾಗೆ ಮಾತುಕತೆಗೆ ಅವಕಾಶವಿರಲಿಲ್ಲ. ಮಹಾರಾಣಿಯವರ ಚಿಕಿತ್ಸೆಗೆ ಬೇಕಾದ ಅವಶ್ಯಕ ಸಲಕರಣೆಗಳೆಲ್ಲವನ್ನು ತರಿಸಿಕೊಳ್ಳುವ ಆದೇಶವಿತ್ತು. ಎರಿಕಾ ತನಗೆ ನಿಶ್ಚಯಿಸಲ್ಪಟ್ಟಿದ್ದ ಅತಿಥಿ ಗೃಹಕ್ಕೆ ಹೊರಟುಹೋದಳು.

ಪ್ರಥಮ ದಿವಸ ಡಾ| ಎರಿಕಾ ಅರಮನೆಗೆ ಹೋಗುವಾಗ ಅವಳ ಜೊತೆಯಲ್ಲಿ ಮತ್ತೊಬ್ಬ ಡಾಕ್ಟರನ್ನು ಕಳುಹಿಸಲಾಯಿತು; ಇದನ್ನು ಕಂಡು ಕುಮಾರಿ ಎರಿಕಾ ಪ್ರಬಲವಾಗಿ ಆಕ್ಷೇಪಿಸಿದಳು; ಇವಳ ಆಕ್ಷೇಪಣೆಯನ್ನು ತಾವು ಪ್ರತಿಭಟಿಸಿದರೆ ಈಕೆ ಹಿಂತಿರುಗಿ ಹೋಗಿಬಿಟ್ಟಾಳೆಂದೂ ಹಾಗೆ ಹೋದಲ್ಲಿ ನೇಪಾಳ ರಾಜಪರಿವಾರದೊಳಗಿನ ವೈದ್ಯ ಸ್ಥಿತಿಯ ಕುರಿತು ಭಾರತ ಸರಕಾರಕ್ಕೆ ಸಂಶಯ ಹುಟ್ಟಿಕೊಳ್ಳದಿರದೆಂದು ಕೂಡಲೇ ಮನವರಿಕೆ ಮಾಡಿಕೊಂಡು ಪ್ರಧಾನ ಮಂತ್ರಿ ಅವಳೊಬ್ಬಳನ್ನೇ ಅರಮನೆಗೆ ಹೋಗಗೊಡಿಸಿದರಲ್ಲದೆ ತನ್ನ ಇನ್ನೊಬ್ಬ ಡಾಕ್ಟರ ಬಗ್ಗೆ ಪತ್ತಾಯಪಡಿಸಲಿಲ್ಲ. ಈ ಒಂದು ಚಿಕ್ಕ ಘಟನೆ ಮಹಾರಾಜರ ಮನದೊಳಡಗಿಕೊಂಡಿದ್ದ ಒಂದು ಸೂಕ್ಷ್ಮ ಯೋಜನೆಯ ಪ್ರಥಮ ಗೆಲುವಿನಂತಾಯಿತು.

ಡಾ| ಎರಿಕಾ ತನ್ನ ವೈದ್ಯಕೀಯ ಉದ್ಯೋಗಕ್ರಮದ ಹೊರತು ಇತರ ಯಾವ ವಿಷಯದಲ್ಲಿಯೂ ಸ್ವಲ್ಪವೂ ಪರಿಜ್ಞಾನವಿಲ್ಲದ ಒಬ್ಬ ಅತಿ ಸಾಮಾನ್ಯ ಸರಳ ಸ್ವಭಾವದ ತರುಣಿ ಎಂಬುದಾಗಿ ಪ್ರಧಾನ ಮಂತ್ರಿಯ ಮನಸ್ಸಿಗೆ ಹೊಳೆಯಿತು. ಒಬ್ಬ ಸಾಮಾನ್ಯ ವಿದೇಶೀ ಸ್ತ್ರೀಯೊಬ್ಬಳು ಇಷ್ಟು ಬಲಾಢ್ಯವಾದ ರಾಣಾ ಸಮುದಾಯಕ್ಕೆ ಏನು ಮಾಡಬಲ್ಲಳು? ಮಹಾರಾಜರ ಸುತ್ತಮುತ್ತಲೂ ತಾವು ಹರಡಿಸಿರುವ ರಹಸ್ಯವಾದ ಸರ್ಪಗಾವಲು ಎಂತಹ ಬುದ್ಧಿವಂತ ಹಾಗೂ ಕಾರ್ಯ ಚತುರನನ್ನಾದರೂ ಕೂಡ ತನ್ನ ಹತೋಟಿಯಿಂದ ತಪ್ಪಿಹೋಗದಂತೆ ಮಾಡಲು ಅತ್ಯಂತ ಸಮರ್ಥವಾಗಿರುತ್ತದೆ. ಆದುದರಿಂದ ಈ ಹುಡುಗಿ ನನ್ನನ್ನು ಏನು ಮಾಡಬಲ್ಲಳು? ಎಂಬುದಾಗಿ ಪ್ರಧಾನ ಮಂತ್ರಿ ತಿಳಿದುಕೊಂಡಿದ್ದರು ಮತ್ತು ಡಾ| ಎರಿಕಾಳ ಕುರಿತು ನಿಶ್ಚಿಂತರಾಗಿದ್ದರು.

ಪ್ರತಿನಿತ್ಯ ಸಂಧ್ಯಾಕಾಲ ಒಂದು ಮೋಟಾರುಕಾರು ಬಂದು ಡಾ| ಎರಿಕಾಳನ್ನು ರಾಜಭವನಕ್ಕೆ ಕರೆದೊಯ್ಯುತ್ತಿತ್ತು. ಅಲ್ಲಿ ಮಹಾರಾಣಿಯ ಚಿಕಿತ್ಸೆಗೆ ಬೇಕಾಗುವ ಕೆಲಸ ಪೂರೈಸಿದ ಕೂಡಲೇ ಅವಳನ್ನು ಅದೇ ಕಾರು ಪುನಃ ಆಕೆ ಉಳಕೊಂಡಿರುವ ಅತಿಥಿ ಗೃಹಕ್ಕೆ ಕರೆದೊಯ್ದು ಹೋಗುತ್ತಿತ್ತು. ರಾಜಪರಿವಾರದ ಇತರ ಯಾವನೊಬ್ಬ ಪುರುಷ ಅಥವಾ ಸ್ತ್ರೀಯೊಡನೆ ಆಕೆ ಒಂದೇ ಒಂದು ಮಾತನ್ನಾಡುವ ಅವಕಾಶ ಎರಿಕಾಳಿಗೆ ದೊರಕುತ್ತಿದ್ದಿಲ್ಲ. ಒಂದು ಅಪರಿಚಿತ ದೇಶಕ್ಕೆ ಬಂದು ಜನಶೂನ್ಯವಾಗಿರುವ ಅತಿಥಿಗೃಹದಲ್ಲಿ ಏಕಾಂಗಿನಿಯಾಗಿ ಬಿದ್ದುಕೊಂಡಿರುವ "ಡಾ| ಎರಿಕಾ"ಳಿಗೆ ತಾನು ಅರಮನೆಯಲ್ಲಿ ಇರುವ ಸ್ವಲ್ಪ ಹೊತ್ತು ಮನಸ್ಸಿಗೆ ಅಪಾರವಾದ ನೆಮ್ಮದಿ ದೊರಕುತ್ತಿತ್ತು.

ಪ್ರಥಮ ಸಂದರ್ಶನ

ಡಾ. ಎರಿಕಾಳಿಗೆ ಒಂದು ದಿನ ಮಹಾರಾಜರ ಪ್ರಥಮ ಸಂದರ್ಶನ ಲಭಿಸಿತು. ಅವರು ಉತ್ತಮ ದೇಹದಾರ್ಢ್ಯತೆಯಿಂದಿದ್ದು ಒಳ್ಳೆಯ ಸ್ಫುರದ್ರೂಪಿಗಳೂ ಆಗಿದ್ದರೂ ಅವರ ಮುಖವನ್ನು ಚೆನ್ನಾಗಿ ಅವಲೋಕಿಸಿದರೆ ಅವರ ಮನಸ್ಸಿನೊಳಗೆ ಅದಾವುದೋ ಒಂದು ತೀವ್ರವಾದ ವೇದನೆ ಆವರಿಸಿಕೊಂಡಿದೆಯೆಂಬುದು ಡಾ. ಎರಿಕಾಳಿಗೆ ಗೊತ್ತಾಗದಿರಲಿಲ್ಲ. ಕೆಲವು ದಿನಗಳ ತನಕ ನಾಲ್ಕಾರು ಬಾರಿ ಮಹಾರಾಜರೊಡನೆ ಸಾಮಾನ್ಯ ಉಭಯ ಕುಶಲ ಸಂಭಾಷಣ ನಡೆಯಿತು. ಒಂದು ದಿನ ಡಾ| ಎರಿಕಾ ಮಹಾರಾಣಿಯವರ ಬಳಿಯಿಂದ ಹಿಂದಿರುಗುವಾಗ ಮಹಾರಾಜರು ತನ್ನ ಸಮೀಪ ಕುಳ್ಳಿರಿಸಿ ಮಾತನಾಡುತ್ತಾ "ನೀವು ನನಗೆ ಆಂಗ್ಲ ಪದ್ಧತಿಯ ನರ್ತನ ಕಲಿಸಬಲ್ಲಿರಾ?" ಎಂದು ಕೇಳಿದರು. ಮಹಾರಾಜರ ಈ ಪ್ರಶ್ನೆ ಎರಿಕಾಳಿಗೆ ಹೋಳಿಗೆ ತುಪ್ಪದಲ್ಲಿ ಬಿದ್ದಂತಾಯಿತು. ತನ್ನ ಜೀವಮಾನದಲ್ಲಿ ಇಂತಹ ಸ್ವರ್ಣ ಸಂದರ್ಭ ಇನ್ನೆಂದಾದರೂ ಒದಗಲಿಕ್ಕೆ ಸಾಧ್ಯವಿದೆಯೇ? ಸರ್ವಥಾ ಅಸಂಭವವೇಯೆಂದು ಆಕೆಗೆ ಮಂದಟ್ಟಾಯಿತು. ಈ ಅಮೂಲ್ಯ ಸನ್ನಿವೇಶವನ್ನು ಬಹಳ ಚಾಕಚಕ್ಯತೆಯಿಂದ ಚೆನ್ನಾಗಿ ಉಪಯೋಗಿಸಿಕೊಳ್ಳಬೇಕೆಂಬುದಾಗಿ ನಿರ್ಧರಿಸಿಕೊಂಡಳು.

ಗ್ರಾಮಫೋನ್ ರೆಕಾರ್ಡುಗಳ ಮೂಲಕ ವಿದೇಶಿ ಸಂಗೀತಗಳನ್ನು ನುಡಿಸಲು ಉಪಕ್ರಮಿಸಿದಳು. ಆಮೇಲೆ ಪ್ರತಿನಿತ್ಯ ಅವಳ ಅಧಿಕ ಸಮಯ ರಾಜಭವನದಲ್ಲಿ ಮಹಾರಾಜರ ಸಮಕ್ಷಮ ಗಾನನರ್ತನಾದಿಗಳಲ್ಲಿಯೇ ಕಳೆಯತೊಡಗಿತು. ಪ್ರಾರಂಭದಲ್ಲಿ ಅವಳು ಒಂದೆರಡು ಘಂಟೆಗಳ ಕಾಲ ಮಾತ್ರ ಈ ರೀತಿ ಮನೋರಂಜನೆಯಲ್ಲಿ ಭಾಗವಹಿಸುತ್ತಿದ್ದಳು; ಮಹಾರಾಜರೊಡನೆ ಮೈತ್ರಿ ಬೆಳೆದಂತೆಲ್ಲಾ ಬರಬರುತ್ತಾ ಒಂದೊಂದು ಸಲ ಇಡೀ ರಾತ್ರಿಯನ್ನು ಅರಮನೆಯಲ್ಲಿಯೇ ಕಳೆಯತೊಡಗಿದಳು. ಅಂತಹ ಸಂದರ್ಭದಲ್ಲಿ ಮಹಾರಾಣಿಯವರ ವಿಶೇಷ ಚಿಕಿತ್ಸೆಯ ಕಾರಣವನ್ನು ತೋರಿಸಲಾಗುತ್ತಿತ್ತು.

ಅರಮನೆಯೊಳಗಿನ ಕೈದಿ

ದಿನಗಳುರುಳತೊಡಗಿದವು. ಅದರೊಂದಿಗೆ ಡಾ| ಎರಿಕಾಳಿಗೆ ಅರಮನೆಯೊಳಗೆ ಅತಿ ವಿಸ್ಮಯಕಾರಕ ಅನುಭವಗಳು ದೊರಕುತ್ತಾ ಬಂದವು. ಅರಮನೆಯೊಳಗೆ ಹೊರಗಿನವನೊಬ್ಬನೇ ಒಬ್ಬ ಪುರುಷ ಅಥವಾ ಸ್ತ್ರೀಯ ಪ್ರವೇಶಕ್ಕೆ ಸ್ವಲ್ಪವೂ ಅವಕಾಶವಿದ್ದಿಲ್ಲ; ರಾಜಕುಮಾರರೂ ತಮ್ಮ ತಂದೆತಾಯಿಗಳೊಂದಿಗೆ ಇರಲಿಕ್ಕಾಗಲೀ ಮಾತನಾಡಲಿಕ್ಕಾಗಲೀ ಆಸ್ಪದವಿದ್ದಿಲ್ಲ. ರಾಜಕುಮಾರರು ಪ್ರತ್ಯೇಕವಾಗಿ ಬೇರೊಂದು ಅರಮನೆಯಲ್ಲಿ ವಾಸವಾಗಿರಬೇಕಾಗಿತ್ತು. ತಂದೆ ಮಗನೊಡನೆ ಅಥವಾ ಮಗ ತಾಯಿಯೊಡನೆ ಮಾತನಾಡಬೇಕಿದ್ದರೆ ಪ್ರಧಾನ ಮಂತ್ರಿಯಿಂದ ಮೊದಲಾಗಿ ಅನುಮತಿ ಪಡೆಯಲೇಬೇಕೆಂಬ ನಿರ್ಬಂಧವಿತ್ತು; ಈ ರೀತಿ ಅನುಮತಿ ಪಡೆದ ಅನಂತರ ಮಾತನಾಡುವಾಗ [illegible] ಒಬ್ಬ ರಾಣಾ (ಅಧಿಕಾರಿ) ಅವರ ಬಳಿ ಹಾಜರಿರುತ್ತಿದ್ದನು; ಅವರಿಬ್ಬರ ವಾರ್ತಾಲಾಪಗಳ ವಿವರಗಳನ್ನು ಪ್ರಧಾನ ಮಂತ್ರಿಗೆ ಅಕ್ಷರಶಃ ವರದಿಮಾಡುತ್ತಿದ್ದನು. ಮಹಾರಾಜರು ಎಲ್ಲಿಗಾದರೂ ಹೋಗಬೇಕಾಗುವ ಸಂದರ್ಭ ಒದಗಿದಾಗ ಒಬ್ಬ ರಾಣಾ ಅಧಿಕಾರಿಯ ಜೊತೆಯಲ್ಲಿಯೇ ಹೋಗಬೇಕಾಗಿತ್ತು. ಮಹಾರಾಜರಿಗಾಗಲೀ ಅವರ ಪರಿವಾರದವರಿಗಾಗಲೀ ಬರುವ ಪ್ರತಿಯೊಂದು ಪತ್ರಗಳನ್ನು ಮೊದಲು ಪ್ರಧಾನಮಂತ್ರಿ ಓದಿ ಮತ್ತೆ ಅವುಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಲಾಗುತ್ತಿತ್ತು. ಮಹಾರಾಜಾ ತ್ರಿಭುವನರು ಸಕಲ ಐಶ್ವರ್ಯ ಸಂಪನ್ನತೆಗೆ ಪೂರ್ಣ ಅಧಿಕಾರಸ್ಥರಾಗಿದ್ದರೂ ಪ್ರಧಾನ ಮಂತ್ರಿಯ ಸರ್ವಾಧಿಕಾರದ ವಜ್ರಮುಷ್ಟಿ ಅವರನ್ನು "ಅರಮನೆಯೊಳಗಿನ ಕೈದಿ"ಯನ್ನಾಗಿ ಗುಪ್ತಬಂಧನದಲ್ಲಿರಿಸಿತ್ತು.

ಪ್ರಧಾನಮಂತ್ರಿಯ ಈ ಎಲ್ಲಾ ಕ್ರೂರ ವರ್ತನೆಯಿಂದಾಗಿ ಮಹಾರಾಜರು ಹಗಲೂ ರಾತ್ರಿ ಒಳಗಿಂದೊಳಗೆ ಜಿಗುಪ್ಸೆ ತಾಳಿ ಬಹಳವಾಗಿ ದುಃಖಿತರಾಗಿದ್ದರು. ನೇಪಾಳ ದೇಶದ ರಾಜಭಕ್ತ ಪ್ರಜಾಜನವು ರಾಣಾ ಸಮುದಾಯದ ದಾರುಣವಾದ ಶಾಸನದ ಬಂಧನದಿಂದ ಮುಕ್ತಿ ಪಡೆಯಲು ಆತುರತೆಯಿಂದಿತ್ತು; ಕೆಲವು ಮಂದಿ ರಾಜಭಕ್ತರು ಪ್ರಧಾನ ಮಂತ್ರಿಯ ಕಠೋರ ಶಾಸನದ ದರ್ಪವನ್ನು ಮುರಿದಿಕ್ಕಲು ಆಂದೋಲನ ಹೂಡಿದರು; ಇವರೆಲ್ಲರಿಗೆ ಮಹಾರಾಜರಿಂದ ಅಪ್ರತ್ಯಕ್ಷವಾಗಿ ಆಶೀರ್ವಾದವೂ ಲಭಿಸಿತ್ತು. ಆದರೆ ದುರದೃಷ್ಟವಶಾತ್ ಪ್ರಧಾನಮಂತ್ರಿಗೆ ಇದರ ಎಲ್ಲಾ ರಹಸ್ಯ ತಿಳಿದುಹೋಯಿತು; ಇದನ್ನರಿತ ಮಹಾರಾಜರು ಕೂಡಲೇ ತಟಸ್ಥರಾದರು. ಎಲ್ಲಾ ವಿದ್ರೋಹಿಗಳಿಗೆ ಮರಣ ದಂಡನೆ ವಿಧಿಸಲಾಯಿತು; ಮರಣದಂಡನೆಯ ಆಜ್ಞೆಗೆ ಹಸ್ತಾಕ್ಷರ ಮಾಡುವ ಗುರುತರ ಕಾರ್ಯ ಮಹಾರಾಜರ ಮೇಲೆ ಇತ್ತು; ಅನ್ಯ ಗತ್ಯಂತರವಿಲ್ಲದೆ ನೊಂದ ಹೃದಯದಿಂದ ಹಸ್ತಾಕ್ಷರ ಮಾಡಿದರು.

ಈ ಎಲ್ಲಾ ವಿಕಟ ಪರಿಸ್ಥಿತಿಗಳನ್ನು ಅನುಭವ ಮಾಡಿಕೊಂಡ ಡಾ| ಎರಿಕಾ ಒಳಗಿಂದೊಳಗೇನೇ ಬಹಳ ಭಯಗ್ರಸ್ತಳಾಗಿದ್ದಳು. ತಾನು, ಪ್ರಧಾನಮಂತ್ರಿಯ ಪರವಾಗಿ ಮಹಾರಾಜರ ಬಳಿಗೆ ಕಳುಹಲ್ಪಟ್ಟ ಗೂಢಚಾರಳೋ ಎಂಬ ಅನುಮಾನವೂ ಆಕೆಯಲ್ಲಿ ಮೂಡಿಬಂದಿತ್ತು. ಆದರೂ ಇವರಿಬ್ಬರೊಳಗಿನ ಮೈತ್ರಿ ಗಾಢವಾಗಿ ಬೆಳೆಯತೊಡಗಿತು. ಪ್ರತಿನಿತ್ಯ ಸಾಯಂಕಾಲ ೫ ಘಂಟೆಯಾಗುತ್ತಲೇ ಡಾ. ಎರಿಕಾ ಮಹಾರಾಜರ ಕಾರು ಬರುವ ನಿರೀಕ್ಷಣೆಯಲ್ಲಿ ಉತ್ಸುಕಳಾಗಿರುತ್ತಿದ್ದಳು. ಇವರಿಬ್ಬರೊಳಗಿನ ಪ್ರೇಮ ಬಾಂಧವ್ಯದ ರಹಸ್ಯ ಪ್ರಣಯ ಚೇಷ್ಟೆಯ ವಿದರ್ಶನ ಅತ್ತ ಮಹಾರಾಣಿಗೂ ರಾಣಾಗಳಾರಿಗೂ ತಿಳಿಯದಿರಲಿಲ್ಲ. ಅಂತೂ ಅವರಾರೂ ಈ ಕುರಿತಾಗಿ ಯಾವ ವಿಧದ ಆತಂಕಗಳನ್ನೊಡ್ಡದೆ ಪದೇ ಪದೇ ವಿಧ ವಿಧದ ಉಪಹಾರಾದಿಗಳಿಂದ ಡಾ| ಎರಿಕಾಳನ್ನು ಸತ್ಕರಿಸುತ್ತಾ ಅವಳನ್ನು ಪ್ರಸನ್ನಗೊಳಿಸುವುದರಲ್ಲಿ ಆತುರರಾಗಿದ್ದರು; ಡಾ. ಎರಿಕಾಳ ಪ್ರಸನ್ನತೆಯಿಂದಲೇ ಮಹಾರಾಜರ ಮನಸ್ಸಿಗೆ ಒಂದು ವಿಧವಾದ ನೆಮ್ಮದಿ ದೊರಕುತ್ತದೆಂಬುದಾಗಿ ಅವರು ಅನುಭವ ಮಾಡಿಕೊಂಡಿದ್ದರು; ಮಹಾರಾಜರಿಗೆ ಸಹ ಎರಿಕಾಳ ಮೇಲೆ ಸಂಪೂರ್ಣ ಮಮಕಾರ ಮತ್ತು ವಿಶ್ವಾಸ ನೆಲೆಗೊಂಡಿತು. ಅವರ ಅಂತರಂಗದಲ್ಲಿನ ಸಕಲ ವಿಷಯಗಳನ್ನೂ ಡಾ. ಎರಿಕಾಳಿಗೆ ತಿಳಿಸತೊಡಗಿದರು.

(ಮುಂದುವರಿಯುವುದು)

ಪುಸ್ತಕ ವ್ಯಾಪಾರಿಗಳಿಗೆ ಪ್ರಿಯವಾದ ಸಮಾಚಾರ

ಜನವರಿ ೧೪ರಿಂದ ಮಾರ್ಚ 30ನೇ ತಾರೀಖಿನ ವರೆಗೆ

300=00 ರೂ. ಸಿಕ್ಕಿಳ ವ್ಯಾಪಾರ ಮಾಡಿದರೆ

ಒಂದು Steel Desk (ಬರೆಯುವ-ಮೇಟಿ ಮೇಜು) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ— ಭಾಗ 1—	ಸಾವಿತ್ರಿ ದೇವಿ ಸಾಯ್ಯು	2—50
ಕೆಸರಿನ ಕಮಲ— ಭಾಗ 2—	"	2—50
ಉಂಡಾಡಿ ಗುಂಡ—	ಪರ್ವತವಾಣಿ	2—00
ಧರ್ಮದೇವತೆ—	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು —	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—

ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ರಾಷ್ಟ್ರಭಕ್ತಿಶೂನ್ಯ ರಾಷ್ಟ್ರೀಯ ಐಕ್ಯ

(ಐದನೇ ಪುಟದಿಂದ)

ಬಂಧದ ಶಕ್ತಿಸಂತಾನ ಪಾಕಿಸ್ತಾನ. ಸ್ವಾತಂತ್ರ್ಯ ಚಳುವಳಿಯ ಸಮಯ ಕರಿತೊಗಲಿನ ಇಲ್ಲಿಯ ಬ್ರಿಟಿಷ್ ಬಾಂಧವರು ಮಾಡಿದ್ದಾದರೂ ಏನು? ಸ್ವಾತಂತ್ರ್ಯದಾಹದಿಂದ ಜನತೆ ತತ್ತರಿಸುತ್ತಿದ್ದಾಗ, ಬ್ರಿಟನರ ನೊಗದ ಭಾರವನ್ನು ಕಿತ್ತೊಗೆಯಲು ಭಾರತೀಯರು ಪ್ರಯತ್ನ ಮಾಡುತ್ತಿದ್ದಾಗ ಕ್ರಿಸ್ತೀಯ ಮತಪ್ರಸಾರಕರು ಮಾಡುತ್ತಿದ್ದದ್ದೇನು? ಅದರ ಘೋರ ಪರಿಣಾಮವಾಗಿ ನಾಗಾಲೇಂಡ್ ನರಕಯಾತನೆ ನೀಡುತ್ತಿದೆಯಾದಲ್ಲಿ ಝಾರ್ಖಂಡ ನಮ್ಮನ್ನು ಖಂಡಿಸಲು ಹರಿದಾಡುತ್ತಿದೆ. ಕಮ್ಯೂನಿಸ್ಟರೂ ಇದೇ ಸಾಲಿಗೆ ಸೇರಿದವರಿದ್ದಾರೆ. ಈ ಸತ್ಯವನ್ನು ಬದಿಗೆ ಸರಿಸುವದರಿಂದ ಲಾಭವೇನೂ ಇರುವದಿಲ್ಲ. ಭಾರತೀಯ ಜಡಜನತೆ ಸ್ವಾತಂತ್ರ್ಯದಾಹದಿಂದ ತತ್ತರಿಸುತ್ತಿದ್ದಾಗ, ಬ್ರಿಟನ್ ಮತ್ತು ರಷ್ಯಾ ಒಪ್ಪಂದ ಮಾಡಿಕೊಂಡದ್ದೇ ತಡ, ಇಲ್ಲಿಯ ಕಮ್ಯೂನಿಸ್ಟರು ತಮ್ಮ ಸುತ್ತಿಗೆಯಿಂದ ಜಡಜನತೆಯ ತಲೆಯ ಮೇಲೆ ದ್ರೋಹದ ಮೊಳೆಯನ್ನು ಹೊಡೆದುಬಿಟ್ಟರು. ಅಷ್ಟೇ ಅಲ್ಲ, ಅವರು ತಮ್ಮ ಕುಡುಗೋಲಿನಿಂದ ಜನತೆಯ ಕುತ್ತಿಗೆಯನ್ನು ಕೊಯ್ದುಬಿಟ್ಟರು. ಇಂತಹವರೆಲ್ಲರೂ ಇಂದು "ದೇಶಭಕ್ತ"ರಾಗಿದ್ದಾರೆ, ಆ ಜಡಜನತೆ "ಜಾತೀಯವಾದಿ"ಗಳಾಗಿಬಿಟ್ಟಿದ್ದಾರೆ! ಈ "ದೇಶಭಕ್ತ"ರು 'ಜಾತೀಯವಾದಿ'ಗಳನ್ನು ದಮನಗೊಳಿಸಿಬಿಡಬೇಕೆಂದು ಸರ್ವಪ್ರಯತ್ನ ನಡೆಸುತ್ತಿದ್ದಾರೆ, ಆದರೆ ಅದು ಸಾಧ್ಯವೇನು?

ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ವ್ಯಕ್ತವಾದ ಇಂಡಿಯನ್ ಜನರ 'ಒಕ್ಕಟ್ಟ'ದ ಫಲವನ್ನು ನಾವಿಂದು ಅನುಭವಿಸುತ್ತಿದ್ದೇವೆ. ಅದರ ಫಲವೇ ಪಾಕಿಸ್ತಾನ ಮತ್ತು ಇಂಡಿಯಾ. ಇದು ಈ "ದೇಶಭಕ್ತರು" ನಡೆಸಿದ "ಒಕ್ಕಟ್ಟ"ನ ಪರಿಣಾಮ. ಇವರು ಪಂಡಿತ ಮದನಮೋಹನ ಮಾಲವೀಯ, ಶ್ರದ್ಧಾನಂದ, ಲಾಲಾ ಲಜಪತರಾಯ್, ಬಾಲಗಂಗಾಧರ ಟಿಲಕ, ಸುಬ್ರಹ್ಮಣ್ಯ ಭಾರತಿ ಮುಂತಾದ ಮುಖಂಡರನ್ನು "ಜಾತೀಯವಾದಿ" ಗಳೆಂದು ಜರಿದು ಅವರನ್ನು ಜನತೆಯಿಂದ ದೂರವಾಗಿಡಲು ಪ್ರಯತ್ನಿಸಿದರು. ಸ್ವಚ್ಛ ರಾಷ್ಟ್ರೀಯತೆಯ ಪಂಚಾಂಗದ ಮೇಲೆ ಸ್ವಾತಂತ್ರ್ಯದ ಮಹಲನ್ನು ಕಟ್ಟುವ ಬದಲು ಕೃತಕ ಪಂಚಾಂಗದ ಮೇಲೆ ಹುಡಿಪುಡಿ ಸ್ವಾತಂತ್ರ್ಯದ ಚಪ್ಪರವನ್ನು ಹಾಕಿಬಿಟ್ಟು, ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು. ಇದರ ಉಪಟಳದಿಂದಾಗಿಯೇ ಅನೇಕ ನೈಜ ದೇಶಭಕ್ತರು ಪರರಾಷ್ಟ್ರಗಳಿಗೆ ಓಡಿಹೋಗಬೇಕಾಯಿತು. ಕೆಲವರು ಭೂಗತರಾಗಬೇಕಾಯಿತು. ಉಳಿದವರು ಫಾಸಿಗಂಭವನ್ನು ಕಾಣಬೇಕಾಯಿತು. ಸುಭಾಸಬಾಬು, ಅರವಿಂದ ಘೋಷ, ಸುಬ್ರಹ್ಮಣ್ಯ ಭಾರತಿ, ಭಗತ್‌ಸಿಂಘ.... ಉದಾಹರಣೆಗೇನು ಕೊರತೆ ಇಲ್ಲ. ಅವರಲ್ಲಿ ರಾಷ್ಟ್ರದ ಉಜ್ವಲ ಭವಿಷ್ಯಕ್ಕಾಗಿ ಪ್ರಯತ್ನಿಸಿದವರಲ್ಲಿ ಅಗ್ರೇಸರರು ಪರಮಪೂಜನೀಯ ಶ್ರೀ ಕೇಶವ ಬಲಿರಾಮ ಹೆಗ್ಡೇವಾರರು, ಅಧಿಕಾರದಾಹಿಗಳ ಅಂತರಂಗವನ್ನು ಅರಿತುಕೊಂಡು ಅವರು ತ್ಯಾಗಿಗಳ ಪಡೆಯೊಂದನ್ನು ಕಟ್ಟಲು ಕಂಕಣ ಕಟ್ಟಿಕೊಂಡರು. ರಾಷ್ಟ್ರದ ಇತಿಹಾಸದಲ್ಲಿ ಅವರೊಂದು ಹೊಸ ಅಧ್ಯಾಯವನ್ನು ಆರಂಭಿಸಿದರು. ಚಾಂದ್ರಮಾನ ಯುಗಾದಿಯ ಶುಭಪರ್ವದಂದು ಅವರ ಜನನವಾಯಿತು. ಹಿಂದೂ ರಾಷ್ಟ್ರದ ಸ್ಪಷ್ಟ ಚಿತ್ರವನ್ನು ಜನತೆಯ ಮುಂದೆ ಇಟ್ಟವರು ಅದೇ ಯುಗಪುರುಷ.

ಮಿಥ್ಯ ರಾಷ್ಟ್ರೀಯತೆಯ, ಕಲುಷ ರಾಷ್ಟ್ರೀಯತೆಯ ಇಂಡಿಯನ್ ಜನರ ಒಕ್ಕಟ್ಟಿಗಾಗಿ ಇನ್ನೂ ಯಾರಾದರೂ ಪ್ರಯತ್ನಿಸಲು ಮುಂದೆ ಬರುವರೆಂದಲ್ಲಿ ಅವರೇ ನಡುರಾತ್ರಿಯಲ್ಲಿ ತೋಡಿರುವ ಬಾವಿಯಲ್ಲಿ ಹಚ್ಚಹಗಲು ಹೊತ್ತಿನಲ್ಲೇ ಬೀಳುತ್ತಿದ್ದಾರೆನ್ನಲೇಬೇಕು. ಈ 'ಇಂಡಿಯನ್' ಪದವಾದರೂ ಎಲ್ಲಿದೆ? ಸಿಂಧೂ ನದಿಯನ್ನು ಇಂಡಸ್, ಗಂಗಾನದಿಯನ್ನು ಗೇಂಜಸ್ಸೆಂದು ಕರೆದಲ್ಲಿ ಆ ನೀರು ಬದಲಾಗುತ್ತದೇನು? ಅದರ ಪಾವಿತ್ರ್ಯಕ್ಕೆ ಕಳಂಕ ಬರುತ್ತದೇನು? ಅದರ ಜಾತೀಯತೆ ಹೋಗಿಬಿಡುತ್ತದೇನು? ಮತೀಯ ಮಹತ್ವ ಮರೆಯಾಗುತ್ತದೇನ? ನಮಗೆ ಅವು ಸಿಂಧೂ, ಗಂಗಾನದಿಗಳೇ ಇವೆ. ಹಾಗೆಯೇ ನಮ್ಮನ್ನು ಯಾರಾದರೂ ಇಂಡಿಯನರೆಂದರೂ ನಾವು ಹಿಂದೂಗಳು, ಭಾರತೀಯರೇ ಇದ್ದೇವೆ. ಹಿಂದೂ ಇಂಡಿಯನರೆಂಬ ಪದವನ್ನು ನಾವು ಪ್ರಯೋಗಿಸಿಕೊಂಡಲ್ಲಿ, ಪ್ರಪಂಚದ ಭೂಗೋಳ- ಚರಿತ್ರೆಗಳಿಗೆ ಮೋಸಮಾಡಬಾರದೆಂದಿದ್ದಲ್ಲಿ, ನಿಜವಾಗಿ ನಮ್ಮನ್ನು ನಾವು, ಶೇಕ್ಸ್‌ಪಿಯರನು ಕರೆದಿರುವಂತೆ, ಕಪ್ಪು ಇಂಡಿಯನರೆಂದು ಕರೆದುಕೊಳ್ಳಬೇಕು. ಅಮೆರಿಕದಲ್ಲಿ ಕೆಂಪು ಇಂಡಿಯನರು ಇರುವದರಿಂದ ಇಲ್ಲಿರುವವರು ಕಪ್ಪು ಇಂಡಿಯನರು ತಾನೇ? ಶೇಕ್ಸ್‌ಪಿಯರನ ಕೃತಿಗಳನ್ನಿಂದು ಕಡ್ಡಾಯವಾಗಿ ಕಲಿಸಲಾಗುತ್ತಿದೆಯಾದರೂ ಅದೆಷ್ಟು ವಿದ್ಯಾವಂತರಿಂದು ತಮ್ಮನ್ನು ತಾವು ಬ್ಲೇಕ್ ಇಂಡಿಯನ್ಸರೆಂದು ಕರೆದುಕೊಳ್ಳಲು ಮುಂದಕ್ಕೆ ಬಂದಿದ್ದಾರೆ?

ಮಹಮ್ಮದೀಯರಿಗೂ ಕ್ರಿಶ್ಚಿಯನರಿಗೂ ಹೆದರಿ ಇನ್ನು ಇಂಡಿಯನರೆಂದು ತಮ್ಮನ್ನು ನಾವು ಕರೆದುಕೊಳ್ಳುವದರ ಆಗತ್ಯವಾದರೂ ಏನು? ಆಕ್ರಮಣ ನಡೆಸಿದವರಲ್ಲಿ ಮುಸಲ್ಮಾನರು ಮೊದಲನೆಯವರಲ್ಲ. ಇದಕ್ಕಿಂತ ಹಿಂದೆ ಕುಶಾನರು ಯವನರು, ಹೂಣರು.... ಆಕ್ರಮಣ ನಡೆಸಿರುವರು. ಅನಂತರ ಏನಾಯ್ತು? ಅವರನ್ನು ಜೀರ್ಣಿಸಿಕೊಳ್ಳುವುದಕ್ಕಾಗಿ ಯಾಂಬ ಹೆಸರಿನಲ್ಲಿ, ಅವರಿಗೆ ಹೆದರಿ ನಮ್ಮ ಹೆಸರನ್ನು ನಾವು ಬದಲಾಯಿಸಿಕೊಳ್ಳಲಿಲ್ಲ. ಸೋಲು-ಗೆಲುವು ನಮ್ಮ ಭುಜದ ಮೇಲೆಯೇ ಇದೆ. ಕ್ರಮಶಃ ಈ ಆಕ್ರಮಣಕಾರರು ಹಿಂದೂ ರಾಷ್ಟ್ರದಲ್ಲಿ ಒಂದಾಗಿಬಿಟ್ಟರು. ಅವರನ್ನು ಇಂದು ಯಾರೂ ತುಚ್ಛದೃಷ್ಟಿಯಿಂದ ಕಾಣುತ್ತಿರುವುದಿಲ್ಲ. ಹಾಗೇನೇ ಈ ಮುಸಲ್ಮಾನರೂ ಕ್ರಿಶ್ಚಿಯನರೂ ಹಿಂದೂ ರಾಷ್ಟ್ರದಲ್ಲಿ ಒಂದಾಗಬಾರದೇತಕ್ಕೆ? ಅದರಲ್ಲೂ ಈಗಿನ ಮಹಮ್ಮದೀಯರೂ ಕ್ರಿಶ್ಚಿಯನರೂ ನೇರ ಮಕ್ಕಾದಿಂದಲೋ, ಮದೀನಾದಿಂದಲೋ, ಬೆತ್ಲೆಹೇಮಿನಿಂದಲೋ, ಜೆರೋಸಲೇಮಿನಿಂದಲೋ, ರೋಮಿನಿಂದಲೋ ಸಿರಿಯಾದಿಂದಲೋ ಬಂದವರಿರುವದಿಲ್ಲ ಎಲ್ಲಿಯಾದರೂ ಅಪವಾದಕ್ಕೆ ಅಲ್ಲಿ ಇಲ್ಲಿ ಸಿಗಬಹುದು, ಅಷ್ಟೇ ಅವರ ಹಿರಿಯರು ಕೆಲಕಾರಣಗಳಿಂದಾಗಿ ಆಕ್ರಮಣಗಾರರ ದೌರ್ಜನ್ಯ, ಆಶೆ ಆಮಿಷಗಳಿಗೆ ಬಲಿಯಾದ ಕಾರಣ ಈ ಪೀಳಿಗೆ ಇಂದು ಎದ್ದು ನಿಂತಿರುತ್ತದೆ. ಈಗ ಭಾರತ ಸ್ವತಂತ್ರವಾಗಿರುತ್ತದೆ. ಈ ಗುಲಾಮೀ ರೀತಿಯಲ್ಲಿ ಪರಮತಗಳಲ್ಲಿರುವವರು ಮತೀಯ ಸ್ವಾತಂತ್ರ್ಯವನ್ನೇತಕ್ಕೆ ಪಡೆಯಬಾರದು? ಆ ಗುಲಾಮೀತನದ ನೊಗವನ್ನು ಕಿತ್ತೊಗೆದು ಹಿಂದೂಧರ್ಮದ ಯಾವದಾದರೊಂದು ಮತದಲ್ಲಿ ಸೇರಬಹುದಲ್ಲವೆ? ಅವರು ನಮ್ಮಿಂದ ದೂರವೇ ಉಳಿಯಬೇಕೆಂಬ ಮನೋಭೀತಿಯಿಂದಲೋ ಏನೋ ದಿಲ್ಲಿ ದೊರೆಗಳು ಕೂಡಾ— ಕಾನೂನು ನಿರ್ಮಾಪಕರು. ಅವರ ಹತ್ತಿರ ಕೂಡಾ ಹೋಗುವುದಿಲ್ಲ. ಅವರನ್ನಿನ್ನು ಈ ದೇಶದ ಪೂರ್ಣಪ್ರಜೆಯೆಂದು ಪರಿಗಣಿಸುವುದಿಲ್ಲ. ಅದೇ ಸಮಯದಲ್ಲಿ ಅವರು ತಮ್ಮ ಅಧಿಕಾರ-ಅಂತಸ್ತಿನ ಬಲದಿಂದ ಪತ್ರಿಕೆ-ಸಭೆಗಳ ಸಹಾಯದಿಂದ ಒಕ್ಕಟ್ಟಿನ ಕೂಗನ್ನೆಬ್ಬಿಸಿ, ನೈಜ ದೇಶಭಕ್ತರ ತಲೆಗೆ ಬಿಕ್ಕಟ್ಟಿನ ಗೋಡು ಹಾಕಿಬಿಡುತ್ತಿದ್ದಾರೆ. ಈ ಮುಸಲ್ಮಾನರೂ ಕ್ರಿಶ್ಚಿಯನರೂ ಅಂದಿಗೆ ಅದೇ ಸುಖ ಇಂದಿಗೆ ಇದೇ ಸುಖವೆಂದರೂ ಕೂಡಾ ನಾವು ಅವರನ್ನು ದೂರ ಸರಿಸಬೇಕಾಗಿರುವುದಿಲ್ಲ. ಇಲ್ಲಿ ಸೋಷ್ಯಲಿಷ್ಟರೂ ಕಮ್ಯೂನಿಷ್ಟರೂ ಇಲ್ಲವೇನು? ಅದು ಮತ ಇದು ರಾಜಕೀಯ ಅಭಿಪ್ರಾಯ ಅಷ್ಟೇ ತಾನೆ. ಇವರು ಬಾಲ ಕಳೆದುಕೊಂಡ ನರಿಯ ಆಟವನ್ನು ಆಡದಂತೆ ನಾವು ಜಾಗರೂಕತೆಯಿಂದ ಇರಬೇಕು. ಬ್ರಿಟನ್, ರಷ್ಯಾ, ಚೈನಾ, ಜಪಾನ್, ಮುಂತಾದ ದೇಶಗಳಲ್ಲಿರುವವರು ತಾವು ಕ್ರಿಶ್ಚಿಯನರು, ಮುಸಲ್ಮಾನರು, ಬೌದ್ಧರೆಂದು ಹೇಳಿಕೊಳ್ಳದೆ, ಬ್ರಿಟಿಷ್, ರಷ್ಯನ್, ಚೈನೀ, ಜಪಾನೀಯೆಂದು ಹೇಳಿಕೊಳ್ಳುತ್ತಾರೆ. ಅದು ಅವರ ರಾಷ್ಟ್ರೀಯತೆ, ಇದೆ. ಇಲ್ಲೂ ಅದೇ ಅಭ್ಯಾಸವೇ ಆದೇತಕ್ಕೆ ಬರಕೂಡದು? ಇಲ್ಲಿಯವರೇತಕ್ಕೆ ತಾವು ಜೈನರು, ಸಿಖ್ಖರು, ತಮಿಳರು, ಮಹಮ್ಮದೀಯರು, ಕ್ರಿಸ್ತೀಯರು ಹೇಳಿಕೊಳ್ಳಬೇಕು. ಅವೆಲ್ಲವೂ ಮತೀಯ ಸೂಚಕ, ಭಾಷಾಸೂಚಕ ಪದಗಳಿವೆ. ನಿಜವಾಗಿ ನಾವೆಲ್ಲರೂ ಹಿಂದೂಗಳಿದ್ದೇವೆ. ಇದನ್ನು ಸ್ಪಷ್ಟವಾಗಿ ತಿಳಿಯಪಡಿಸಬೇಕು.

ಭಗವಾನ್ ಶಿವನ ಜಟೆಯಿಂದ ಪವಿತ್ರ ಗಂಗಾಮಾತೆ ಹರಿದುಕೊಂಡು ಬರುತ್ತಾಳೆ. ದಾರಿಯಲ್ಲಿ ಅನೇಕ ಚಿಕ್ಕಪುಟ್ಟ ನದಿಗಳು ಆಕೆಯ ಮಡಿಲನ್ನು ಸೇರುತ್ತವೆ. ಅಷ್ಟೇ ಅಲ್ಲ ಕೊಳಚೆಗಟಾರಗಳೂ ಬಂದು ಸೇರುತ್ತವೆ. ಹಾಗಿದ್ದರೂ ಅದು ನಮಗೆ ಗಂಗಾನದಿಯೇ ಇದೆ. ಗಂಗಾಜಲವಾದರೂ ತನ್ನ ಮಹಾನ್‌ಶಕ್ತಿಯನ್ನು ಕಳೆದುಕೊಳ್ಳುವುದಿಲ್ಲ. ಅದು ಪವಿತ್ರ ತೀರ್ಥವಾಗಿಯೇ ಇದೆ. ಅದೇ ರೀತಿ ಹಿಂದೂ ರಾಷ್ಟ್ರದೇವನ ಅಂಗಾಂಗಗಳಿಂದ ಪುಟಿದು ಚಿಮ್ಮಿ ಹೊಸಹೊಸದಾಗಿ ಹರಿದುಕೊಂಡು ಬರುತ್ತಿರುವ ಹಿಂದೂ ರಾಷ್ಟ್ರೀಯತೆಯೂ ಇದೆ. ಅದರೊಂದಿಗೆ ಕುಶಾನರು, ಹೂಣರು, ಯವನರು ಒಂದಾಗಿಬಿಟ್ಟಿದ್ದಾರೆ. ಅದೇ ರೀತಿ ಮಹಮ್ಮದೀಯರೂ ಕ್ರಿಸ್ತೀಯರೂ ಸೇರಿಕೊಳ್ಳಬೇಕು. ಅವರಂತೆ ಅಂಜಿ ಅಳುಕಿ ಹಿಂದೂಸ್ಥಾನವನ್ನು ಹೀಗಳೆದು ಇಂಡಿಯನ್ ರಾಷ್ಟ್ರವೆಂದು ಕರೆದರೂ ಅದು ಹಿಂದೂ ರಾಷ್ಟ್ರವೇ ಇರುತ್ತದೆ. ಅದು ತನ್ನ ಮಹಾನ್‌ಶಕ್ತಿಯನ್ನು ಕಳೆದುಕೊಳ್ಳುವುದಿಲ್ಲ.

ದೇಶಭಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಭಾರತದ ಗತ ಇತಿಹಾಸ ಹಾಗೂ ಪರಂಪರೆಯ ಕುರಿತು ಹೇಳುವಾಗ ಮತೀಯ ಸಂಘರ್ಷಕ್ಕೆ ಆಸ್ಪದವಾಗುವ ಅಂಶವನ್ನು ಬಿಟ್ಟುಬಿಡಬೇಕೆಂದು ಶ್ರೀ ಜಯಪ್ರಕಾಶ ನಾರಾಯಣರ ರಾಷ್ಟ್ರೀಯ ಸಭೆಯು ಸೂಚಿಸಿರುತ್ತದೆ. ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ ಮುಂತಾದ ರಾಷ್ಟ್ರಗಳಲ್ಲಿ ಆಕ್ರಮಣಗಾರರ ಚರಿತ್ರೆಯನ್ನು ಹೇಳಿಕೊಡಲಾಗುತ್ತಿದೆ. ಹಾಗಿರುವಾಗ ಭಾರತದಲ್ಲಿ ಆಕ್ರಮಣವನ್ನೆದುರಿಸಿದವರ ಚರಿತ್ರೆಯನ್ನೇತಕ್ಕೆ ಹೇಳಿಕೊಡಬಾರದು? ಅದರಲ್ಲಿ ತಪ್ಪೇನಿದೆ? ಜರ್ಮನರ ಕೈಯಲ್ಲಿ ಪರಾಜಿತವಾದಾಗ ಕಮ್ಯೂನಿಸ್ಟ್ ರಷ್ಯಾ ತಪ್ಪಿಸಿಕೊಂಡದ್ದೆಂತು? ಆಗ ಅದಕ್ಕೆ ರಾಷ್ಟ್ರೀಯತೆಯ ಪ್ರಜ್ಞೆ ಬಂತು. ಅದೇ ರೀತಿ ಇಂದು ಆಕ್ರಮಣಗಾರರನ್ನೆದುರಿಸಬೇಕಾಗುವಾಗ ನಾವು ರಾಣಾಪ್ರ

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ. 0—90 ಸ್ಟ್ಯಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಶಾಹ, ಶಿವಾಜಿ, ಗುರುಗೋವಿಂದ ಸಿಂಘ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮುಂತಾದ ರಾಷ್ಟ್ರೀಯ ವೀರರ ವಿಷಯ ಹೇಳದೆ ಅವರನ್ನು ಜಾತೀಯವಾದಿಗಳು, ಕಲಹಪ್ರಿಯರು, ತಪ್ಪು ರಾಷ್ಟ್ರ ಭಾವನೆಯವರು, ಮತಾಂಧರೆಂದು ಜರೆದುಬಿಟ್ಟು ಜನರಲ್ಲಿ ರಾಷ್ಟ್ರಭಕ್ತಿಯ ಜ್ಯೋತಿಯನ್ನುರಿಸಲು ಸಾಧ್ಯವೇನು? ಕಮ್ಯೂನಿಸ್ಟೀಕರಣದ ಹಾದಿಯಲ್ಲಿ ಮಿಥ್ಯಾರಾಷ್ಟ್ರೀಯತೆಯ ಅಮಲಿನಿಂದ ಸಿಕ್ಕಿಬಿಟ್ಟು ಕಾಲು ಹಾಕುತ್ತಿರುವವರ ಸಂಕೇತವಿದು.

ಹಿಂದೂ ರಾಷ್ಟ್ರೀಯತೆಯು ಮತೀಯ ತಳಹದಿಯ ಮೇಲೆ ರಚಿತವಾಗಿರುವುದಿಲ್ಲ. ಅದು ಕೃತಕವಿರುವುದಿಲ್ಲ, ಸಹಜ ಜೀವನ ಪ್ರವಾಹವಿದೆ. ಶಿವಾಜಿಯ ಸೈನ್ಯದಲ್ಲಿ ಮಹಮ್ಮದೀಯರೂ ಕ್ರಿಸ್ತೀಯನರೂ ಇದ್ದರು. ಶಿವಾಜಿಯು ಕೃಷ್ಣಪರಿಗಾಗಿ, ಗುರುಗೋವಿಂದ ಸಿಂಘರು ಸಿಖ್ಖರಿಗಾಗಿ ಹೋರಾಡಲಿಲ್ಲ. ಅವರು ಹಿಂದೂ ರಾಷ್ಟ್ರಕ್ಕಾಗಿ ಹೋರಾಡಿದವರು. ಅದೇ ರೀತಿ ಸ್ವಾಮಿ ವಿವೇಕಾನಂದರು ಕೇವಲ ಬಂಗಾಲಿಗಳ ಬಿಡುಗಡೆ ಹಾರೈಸಲಿಕ್ಕಾಗಿ ಅಮೇರಿಕಕ್ಕೆ ಹೋದದ್ದಲ್ಲ. ಅವರು ಭಾರತದ ಧರ್ಮಧ್ವಜವನ್ನು ಹಾರಿಸಲಿಕ್ಕಾಗಿ ಹೋದರು. ಅದೇರೀತಿ ಗಲ್ಲಿಗೇರಲಾಗಲೀ ಅನಂತರದ ಸ್ವಾತಂತ್ರ್ಯ ಚಳವಳಿಯಲ್ಲಾಗಲೀ ಮತೀಯ ಭಾವನೆಯಿಂದ ಭಾಗವಹಿಸಿರುವವರು ಕೇವಲ ಕೆಲವೇ ಮಂದಿ. ಅವನು ಬೇರೆ, ಇವನು ಬೇರೆಯೆಂಬ ಭಾವನೆಯೇ ಇಲ್ಲಿಯವರಲ್ಲಿ ಇರಲಿಲ್ಲ. ಎಲ್ಲರೂ ಹಿಂದೂ ಧರ್ಮದ ಅಡಿಯಲ್ಲಿ ಒಂದಾಗಿಬಿಡುತ್ತಿದ್ದರು. ಬ್ರಿಟಿಷ ರಾಜನೀತಿಯ ಕುಟಿಲೋಪಾಯದಿಂದಾಗಿ, ಆ ಗರಡಿಯಲ್ಲಿ ಬೆಳೆಗಿರುವವರು ಮುಸಲ್ಮಾನರಿಗೆ ಒಂದು, ಕ್ರಿಸ್ತೀಯರಿಗೆ ಒಂದು, ಸ್ತ್ರೀಯರಿಗೆ ಒಂದು, ಹರಿಜನರಿಗೆ ಒಂದು, ಗಿರಿಜನರಿಗೆ ಒಂದು, ಆದಿವಾಸಿಗಳಿಗೆ ಒಂದು....ಹೀಗೆ ಒಂದೊಂದೇ ಸ್ಥಾನಗಳನ್ನು ಬೇರ್ಪಡಿಸಿ ಬಂದಿರುವವರು ಮಾತ್ರ ಇಂದು ಕಲಸು ರಾಷ್ಟ್ರೀಯತೆಯ ರಕ್ಷಕ ಸದ್ದನ್ನೆಬ್ಬಿಸುತ್ತಿದ್ದಾರೆ. ಇದು ರಾಷ್ಟ್ರಭಕ್ತಿ ಶೂನ್ಯ ರಾಷ್ಟ್ರೀಯ ಐಕ್ಯಕ್ಕಾಗಿ ನಿಷ್ಫಲ ಪ್ರಯಾಸ. ಹಣತೆಯಲ್ಲಿ ಎಣ್ಣೆ ಸುರಿಯದೆ ಬತ್ತಿಯನ್ನು ಉರಿಸಿದಲ್ಲಿ ಏನು ಪ್ರಯೋಜನ? ಬೀಜ ಎಲ್ಲೋ ಇದೆ; ಇಲ್ಲಿಂದಲೇ ದಾಹ ಪರಿಹಾರವೆಂದರೆ, ಏನು ಪ್ರಯೋಜನ? ಇಂತಹ ಶುಷ್ಕವಾದ, ಮಿಥ್ಯಾಭಾವನೆ, ವಿಚಿತ್ರ ಕಲ್ಪನೆಗಳನ್ನು ಬದಿಗೆ ಸರಿಸಿಬಿಟ್ಟು ಅನುಭವದಿಂದ ಆದರೂ ಪಾಠ ಕಲಿತುಕೊಂಡು ರಾಷ್ಟ್ರಸಂಘಟನೆಗಾಗಿ ನಾವು ಒಂದಾಗಬೇಕು. ಯುಗಾದಿಯಿಂದ ಅಂತಹ ಒಂದು ಯುಗದ ಆದಿಯಾಗಿ ಬಿಟ್ಟಲ್ಲಿ—ಭಾರತದ ಭಾಗ್ಯದ ಬಾಗಿಲು ತೆರೆದಂತೆಯೇ ಸರಿ.

ರಾಷ್ಟ್ರಭಕ್ತಿ ಶೂನ್ಯ ರಾಷ್ಟ್ರೀಯ ಐಕ್ಯವೆಂದರೆ ವಧುವಿಲ್ಲದ ವಿವಾಹ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ ೧೧.

ಚಾರುಚಂದ್ರನ

ಸಂಕ್ರಾಂತಿಕಾಲದ ಗ್ರಹಚಾರ

ದೇಶದ ಪ್ರಬಲ ರಾಜಕೀಯ ಪಕ್ಷವಾದ ಕಾಂಗ್ರೆಸ್‌ನ ಪೂರ್ವ ದಾಖಲೆಗಳು ರೋಚಕವಿದ್ದರೂ ಇತ್ತೀಚೆಗೆ ಅದರ ಪ್ರಭಾವ ಕುಂದುತ್ತಿದೆ. ಸ್ವಾತಂತ್ರ್ಯಾನಂತರ ದೇಶದಲ್ಲಿ ಹಲವಾರು ಪಕ್ಷಗಳು ಸ್ಥಾಪನೆಗೊಂಡವು. ಇವುಗಳಿಗೆಲ್ಲ ಮೊದಲು ಕಾಂಗ್ರೆಸ್ಸಿನಲ್ಲಿದ್ದು ಪಕ್ಷತ್ಯಾಗ ಮಾಡಿದವರೇ ಮೂಲ ಪುರುಷರು. ಮೂರು – ಮತ್ತು ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ಮಧ್ಯಾವಧಿ ಭಾರತೀಯ ರಾಜಕೀಯ ಚರಿತ್ರೆಯಲ್ಲಿ ಮರೆಯಲಾಗದ ಸಮಯ. ಇದೇ ವೇಳೆಯಲ್ಲಿ ವಿಶ್ವಾಸಘಾತುಕಿಗಳಾಗಿದ್ದ ಕೆಂಪು ಚೀಣೀಯರು, ಉತ್ತರದ ನೇಫಾ—ಲಡಾಖ್ ಪ್ರದೇಶದಲ್ಲಿ ಆಕ್ರಮಣ ಮಾಡಿದರು. ಸ್ವಾತಂತ್ರ್ಯ ಹೋರಾಟಗಾರರಿಗೆ ಅಗ್ರಮಾನ್ಯರಾದ, ಸ್ವತಂತ್ರ ಭಾರತದ ಶಿಲ್ಪಿ, ವಿಶ್ವನಾಯಕ, ಪ್ರಧಾನಿ ಪಂಡಿತ ಜವಾಹರಲಾಲರು ಇದೇ ಅವಧಿಯಲ್ಲಿ ದಿವಂಗತರಾದರು. ಅವರ ಉತ್ತರಾಧಿಕಾರಿ ಲಾಲಬಹದ್ದೂರ್ ಶಾಸ್ತ್ರಿಗಳ ಅಧಿಕಾರಾವಧಿ ಚಿಕ್ಕದಿದ್ದರೂ ಪಾಕಿಸ್ತಾನದ ಆಕ್ರಮಣ, ಆಕ್ರಮಣವನ್ನು ಎದುರಿಸುವಲ್ಲಿ ಅವರ ಭಾರತೀಯರ ಸತ್ವ ಪರೀಕ್ಷೆಗೆ ತೊಡಗಿ ವಿಜಯಿಯಾದರು. ತಾಷ್ಕೆಂಟಿನಲ್ಲಿ ಒಡಂಬಡಿಕೆಗಾಗಿ ಹೋದವರು ಅಲ್ಲೇ ಇನ್ನಿಲ್ಲವೆಂದಾದರು.

ಪ್ರಾಯಃ ಈ ಅವಧಿಯಲ್ಲಿಯೇ ಕಾಂಗ್ರೆಸ್‌ನಲ್ಲಿ ಭಿನ್ನಮತಗಳು ಉದ್ಭವಿಸುವುದಕ್ಕೆ ಆರಂಭವಾಯಿತು. ನಾಲ್ಕನೆಯ ಚುನಾವಣೆಗಳ ಸಂಧ್ಯಾಕಾಲದಲ್ಲಿ ಹಲವಾರು ಸುಪ್ರಸಿದ್ಧ ಕಾಂಗ್ರೆಸ್ ನಾಯಕರು–ಕಾರ್ಯಕರ್ತರುಗಳು ಪಕ್ಷತ್ಯಾಗ ಮಾಡಿದರು. ಚುನಾವಣೆಗಳಲ್ಲಿ ತಮಗೆ ಸ್ಪರ್ಧಿಸಲು ಅವಕಾಶ ನೀಡಲಾಗುವುದೋ ಅಥವಾ ತಮ್ಮವರಿಗೆ ಅಂತಹ ಅವಕಾಶ ನೀಡದಿರುವುದೋ ಅಥವಾ ಇನ್ನಾವುದೋ ಇದಕ್ಕೆ ಕಾರಣವಿರಬಹುದು. ಚುನಾವಣೆಗಳಲ್ಲಿ ಕಾಂಗ್ರೆಸ್ಸು ಹಲವೆಡೆ ಸೋಲುಂಡಿತು. ಸರಕಾರ ರಚಿಸಲು ಅಸಾಧ್ಯವಾಯಿತು. ಕಾಂಗ್ರೆಸ್ ಟಿಕೇಟಿನಿಂದ ಆರಿಸಿ ಬಂದವರೂ ಪಕ್ಷಾಂತರಗೊಂಡು ಇತರ ಸಮಸ್ಯೆಗಳಿಗೆ ಕಾರಣರಾದರು. ಮೊನ್ನೆ ಮೊನ್ನೆ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿಯೂ ಈ ಪರಿಸ್ಥಿತಿ ದೂರವಾಗಲಿಲ್ಲ. ರಾಜಕೀಯ ಚಿತ್ರ ಬದಲಾಗಲಿಲ್ಲ.

ಇದೇ ವೇಳೆ ಕಾಂಗ್ರೆಸ್ ಸಂಸ್ಥೆ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಬಿಹಾರದಲ್ಲಿ ಮುಖ್ಯಮಂತ್ರಿ ಹರಿಹರಸಿಂಗರು ರಾಮಗಢದ ರಾಜರನ್ನು ತನ್ನ ಸಂಪುಟದಲ್ಲಿ ಸೇರಿಸಿಕೊಂಡುದನ್ನು ಪ್ರತಿಭಟಿಸಿ ಶ್ರೀ ಸಿ. ಸುಬ್ರಹ್ಮಣ್ಯಂ ಕಾರ್ಯಕಾರಿಣಿಗೆ ರಾಜೀನಾಮೆ ಸಲ್ಲಿಸಿದರು. ರಾಜರು ನ್ಯಾಯಾಲಯದಿಂದ ಶಿಕ್ಷೆ ಪಡೆದಿದ್ದರೆಂದೂ ಇಂತಹ ವಿವಾದಾಸ್ಪದ ವ್ಯಕ್ತಿಯನ್ನು ಕಾಂಗ್ರೆಸ್ಸು ಬೆಂಬಲಿಸುವುದು ಪಕ್ಷದ ಹಿತದೃಷ್ಟಿಯಿಂದ ಸಲ್ಲದೆಂದೂ ಅವರ ಅಭಿಪ್ರಾಯ. ರಾಜರನ್ನು ದೂರವಿಟ್ಟರೆ ತನ್ನ ರಾಜೀನಾಮೆಯನ್ನು ಮರಳಿ ಪಡೆಯುವ ಬಗ್ಗೆ ಆಲೋಚಿಸಬಹುದೆಂದ ಅವರ ನಿಲುವು. ಹಿಡಿದ ಪಟ್ಟು ಬಿಡದ್ದರಿಂದ ಸಮಜಾಯಿಷಿಯ ಯಾವ ಮಾತೂ ಪ್ರಯತ್ನವೂ ಫಲಿಸಲಿಲ್ಲ. ಹಾಗಾಗಿ ಕೊನೆಗೆ ಕಾಂಗ್ರೆಸ್ ಕಾರ್ಯಕಾರಿಣಿಯು ದಿಟ್ಟ ನಿರ್ಣಯವನ್ನೇ ಕೈಗೊಂಡಿತು. ರಾಜರನ್ನು ತಾವಾಗಿಯೇ ರಾಜೀನಾಮೆ ನೀಡುವಂತೆ ಪ್ರಯತ್ನ ಮಾಡಬೇಕು. ಅವರ ಬದಲಿಗೆ ಅವರ ಮಗನನ್ನೇ ಮಂತ್ರಿಯನ್ನಾಗಿ ನೇಮಿಸಬಹುದು. ಒಂದು ವೇಳೆ ರಾಜರು ತ್ಯಾಗಪತ್ರ ನೀಡದೆ ಹೋದರೆ, ಹರಿಹರ ಸಿಂಗರೇ ಸಚಿವ ಸಂಪುಟವನ್ನು ಪುನರ್ಘಟಿಸುವ ಸಲುವಾಗಿ ಸೂಕ್ತಕ್ರಮ ಕೈಕೊಳ್ಳಬೇಕು.

ಈ ಕ್ರಮ ವ್ಯವಸ್ಥಿತವಾದರೆ, ಸುಬ್ರಹ್ಮಣ್ಯಂ ಮತ್ತೆ ಕಾರ್ಯಕಾರಿಣಿಗೆ ಬಂದಾರು. ಆದರೆ, ರಾಜರು ತಾವಾಗಿಯೇ ರಾಜೀನಾಮೆ ನೀಡುವರೆ? ಹಾಗೆ ಮಾಡದೆ ಹೋದರೆ, ಹರಿಹರ ಸಿಂಗರಿಗೆ ವಿಧಾನಸಭೆಯಲ್ಲಿ ಬಹುಮತ ಲಭಿಸೀತೆ? ರಾಜರ ಅನುಯಾಯಿಗಳು ೧೨ ಜನ ಸದಸ್ಯರಿದ್ದಾರೆ. ಜನಸಂಘವು ಕಾಂಗ್ರೆಸ್ಸನ್ನು ವಿಧಾನಸಭೆಯಲ್ಲಿ ಬೆಂಬಲಿಸಿದರೆ, ಸಚಿವ ಸಂಪುಟಕ್ಕೆ ಹೆಚ್ಚಿನ ಗಂಡಾಂತರ ಬರಲಾರದು. ವಿಧಾನಸಭಾಧ್ಯಕ್ಷರಾಗಿ ಕಾಂಗ್ರೆಸ್ ಅಭ್ಯರ್ಥಿ ಬಹುಮತದಿಂದ ಆಯ್ಕೆಯಾದುದರಿಂದ ಹರಿಹರ ಸಿಂಗರಿಗೆ ತುಸು ಧೈರ್ಯ ಹೆಚ್ಚಿದೆ.

o o o

ಸುಬ್ರಹ್ಮಣ್ಯಂ ನಿಲುವೊಂದಾದರೆ, ಚಂದ್ರಶೇಖರ್‌ರ ನಿಲುವು ಮತ್ತೊಂದು. ಮೋಹನ ಧಾರಿಯಾ ಮತ್ತು ಚಂದ್ರಶೇಖರ್ ಹೊಸ ಪೀಳಿಗೆಯವರೆಂದರೂ ಸಲ್ಲಬಹುದು. ಇತ್ತೀಚೆಗೆ ಹಳೆಯ ನಾಯಕ ಉಪಪ್ರಧಾನಿ ವಿತ್ತ ಮಂತ್ರಿ ಮುರಾರ್ಜಿ ದೇಸಾಯರನ್ನು ಚಂದ್ರಶೇಖರ್ ಬಹಿರಂಗವಾಗಿ ಟೀಕಿಸಿದರು. ಈ ನಿಂದನೆಯಿಂದ ಮುರಾರ್ಜಿ ಬಹಳವಾಗಿ ನೊಂದರು. ಇದೇ ರೀತಿಯಲ್ಲಿ ತನ್ನ ವಿರುದ್ಧ ಮಸಿ ಬಳಿಯಲು ಪ್ರಯತ್ನ ನಡೆಯುವುದಾದರೆ ತಾನು ರಾಜಕೀಯದಿಂದಲೇ ನಿವೃತ್ತನಾಗುವ ಬಗ್ಗೆ ಆಲೋಚಿಸಬೇಕಾಗುತ್ತದೆ ಎಂದರು. ಕಾಂಗ್ರೆಸ್ ಕಾರ್ಯಕಾರಿಣಿಯು ಶ್ರೀ ಚಂದ್ರಶೇಖರರು ಕ್ಷಮೆಯಾಚನೆ ಕೇಳಬೇಕೆಂದು ಒತ್ತಾಯಿಸಿದರೂ ಇದನ್ನು ಅವರು ಮಾನ್ಯ ಮಾಡಲಿಲ್ಲ. ಹಳೆಯ–ಹೊಸ ತಲೆಮಾರಿನ ಸಂಘರ್ಷವೇ ಈಗ ಕಾಂಗ್ರೆಸ್ಸಿನಲ್ಲಿ ಬಹಳವಾಗಿ ಕಾಣಿಸಿಕೊಂಡಿದೆ. ಎನ್ನಬಹುದೆ? ಚಂದ್ರಶೇಖರರು ಕ್ಷಮಾಪಣೆ ಕೇಳುವಂತೆ ಮಾಡಲು ಬಹುವಿಧ ಪ್ರಯತ್ನಗಳೇನೋ ನಡೆಯುತ್ತಿವೆ. ಆದರೆ ಅದು ಸಫಲವಾಗುವುದೆಂದೇನೂ ನಂಬಿಕೆಯಿಲ್ಲ. ಆಗ ಮುರಾರ್ಜಿಯವರಿಗೆ ರಾಜಕೀಯದಿಂದ ನಿವೃತ್ತಿಯಾಗುವುದೇ ಅವಶ್ಯವೆನಿಸೀತೆ? ಪಕ್ಷೀಯ ಭಿನ್ನಮತದಿಂದ ಹಳೆಯ ಮೇಧಾವಿಗಳೆಲ್ಲರೂ ಮೂಲೆಗೆ ಸೇರಿದರೆ, ದೇಶದ ಪಾಡೇನು? ಏಕೆಂದರೆ ಈ ನಿಂದನೆಯ ಪ್ರವೃತ್ತಿ ಮುರಾರ್ಜಿಯವರನ್ನಾರಂಭದಿಂದಲೇ ಸ್ಪಷ್ಟವಾಗುತ್ತಿದ್ದಿತ್ತು. ಇಂದು ಅದಕ್ಕೆ ಬಲಿ ಮುರಾರ್ಜಿ. ನಾಳೆ ಇಂದಿರಾಜಿ....! ಹೀಗಾದರೆ ಕಾಂಗ್ರೆಸ್‌ನ ಭವಿಷ್ಯ—ಸಂಘಟನೆ ಎಲ್ಲಿ ಉಳಿದೀತು?

o o o

ಜಮ್ಮು ಮತ್ತು ಕಾಶ್ಮೀರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮಿರ್ ಕಾಸೀಂ ರಾಜೀನಾಮೆ ನೀಡಿದ್ದಾರೆ. ಇದಕ್ಕೆ ಕಾರಣಗಳು ವ್ಯಕ್ತಿಗತವಾದರೂ ಪರಿಸ್ಥಿತಿಗೆ ತಲೆಬಾಗಿ ಮಾಡಲು ಇದೇ ಸಾಕು. ಪಶ್ಚಿಮ ಬಂಗಾಳದ ರಾಜ್ಯಪಾಲ ಧರ್ಮವೀರರನ್ನು ಹಿಂದೆ ಕರೆಯುವುದು ರಾಜಕೀಯ ಕಾರ್ಯವಾದರೂ ಪಕ್ಷೀಯ ಗೊಂದಲಗಳ ಪರಿಣಾಮದಿಂದ ಕಾಂಗ್ರೆಸ್ ಪ್ರತಿಷ್ಠೆಗೆ ನೆಮ್ಮದಿಯಿಲ್ಲದಾಗಿದೆ. ಪಂಡಿಚೇರಿ ಎಲ್ಲೆನ ಸೋಲು, ಮಹಾಜನವರದಿ, ಮಧ್ಯಪ್ರದೇಶದಲ್ಲಿ ಗುರುನಾರಾಯಣ ಸಿಂಗ ನಾಮಪತ್ರ ನೀಡಿದ ರಾಜೀನಾಮೆ ಡಿ. ಪಿ. ಮಿಶ್ರರ ವಿರುದ್ಧ ಹೈಕೋರ್ಟಿನಲ್ಲಿ ತೀರ್ಪು ಹೀಗೆ ಒಂದೇ, ಎರಡೇ—ಎಲ್ಲವೂ ತಲೆತಿನ್ನುವ ಪ್ರಶ್ನೆಗಳೇ. ಹೀಗಾಗಿ ಈ ಸಂಕ್ರಾಂತಿ ಹೇಗೆ ಕಳೆಯುವುದೆಂಬ ಕಾಲವೇ ಹೇಳಬೇಕು.

ಪರಿಣಾಮ ಮಾತ್ರವೇ ಕನ್ನಡಿ ತಾನೆ?

(ನಾಲ್ಕನೇ ಪುಟದಿಂದ)

'ಅಲ್ರಿ, ಕೇಂದ್ರ ಮುಂಗಡ ಪತ್ರದಲ್ಲಿ ಕೃತಕ ಗೊಬ್ಬರಗಳ ಮೇಲೆ ಕರ ಹೇರಿದ್ದರಿಂದ ಆಹಾರೋತ್ಪಾದನೆಗೆ ಏಟು ಅಂತ__'

'ಹ್ಞಾ..ಮುರಾರ್ಜಿ ಪ್ರಥಮವೇ ಹಾಗೆ ತಾನೆ? ನೆಹರು ಕಾಲದಿಂದ ಒಂದನ್ನು ಕೈ ಬಿಡುವುದು, ಕೇಂದ್ರ ಕಾಂಗ್ರೆಸ್ ಸಾಂಸ್ಥಿಕ ಪಕ್ಷವೂ ಇದರ ಬಗ್ಗೆ ಅಸಮಾಧಾನದಿಂದಿದೆ ಅಂತ....

ಹ್ಞಾಂ...ಅಲ್ರಿ, ಮೊನ್ನೆ ಬೆಂಗಳೂರಲ್ಲಿ ಶಿಕ್ಷಣಮಂತ್ರಿಗಳು ಹೇಳಿದ್ರಂತೆ—ಇದುವರೆಗ ಸರಕಾರದ ಮಂಡಿಸಿದ್ದ ಒಂದು ಆವಶ್ಯತೆಯ ಸ್ಥಾನವನ್ನು ನಕ್ಷತ್ರ ಯಿಂದ ಬದಲಾಯಿಸುವುದು. ಅಷ್ಟು ಮುಂದೆ ಕಾಣಾ ಮತ್ತೆ ಅಂತ....'

'ಹ್ಞಾಂ ಅಂತೂ ಇದು ವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಗುಣ ...ಅಡಿರಲಿಲ್ಲ ಎನ್ನುವ ಮಾನ್ಯ ಮಂತ್ರಿಗಳೇ ಒಪ್ಪಿಕೆ ಅಂತ ಇಲ್ಲೇ?'

'ಅವ್ರು ಒಪ್ಪಿಕೊಂಡ್ರೇನು, ಬಿಟ್ರೇನು? ಸಾರ್ವಜನಿಕ ಪರೀಕ್ಷಾ ಪರಿಣಾಮವೇ ... ಕೈ ಕನ್ನಡಿಯಾಗಿದೆ....'

'ಇನ್ನು ಮುಂದೆ ಉತ್ತೀರ್ಣತಾ ಪ್ರಮಾಣ ಹೆಚ್ಚಬಹುದಲ್ಲ...'

'ಕಾದು ನೋಡಬೇಕಷ್ಟೆ!'

'ಏನ, ನಿಮಗೂ ಸಂದೇಹ....'

'ಸಂದೇಹವಿಲ್ಲ....'

'ಮತ್ತಾವ ಮೇಲೆ....'

'ಥೂ....ಅದು ಹೇಳುವಂತದ್ದೇ?'

'ತಪ್ಪಿದೆ ಕ್ಷಮಿಸಿ....'

'ಓ ಹೋ! ಭಾರಿ ದೊಡ್ಡ ಮಾತಾಯ್ತು...'

'ಹಾಗಾದರೆ...'

'ಹ್ಹ ಹ್ಹ ಹ್ಹ....'

—ಗೋರಾ

ವಿಷ್ಣುಮಂಗಲ ಶಾಲಾ ವಾರ್ಷಿಕೋತ್ಸವ

ವಿಟ್ಲ, ದಿವಂಗತ ರವಿವರ್ಮ ನರಸಿಂಹ ರಾಜರವರ ಸ್ಮಾರಕಾರ್ಥವಾಗಿ ಶ್ರೀ ಮುರಿಯಯ್ಯನವರ ಆಡಳಿತೆಯಲ್ಲಿ ನಡೆಯುತ್ತಿರುವ ವಿಟ್ಲ ವಿಷ್ಣುಮಂಗಲ ಹೈಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್. ಎಸ್. ಕೃಷ್ಣರಾವ್‌ರವರ ಅಧ್ಯಕ್ಷತೆಯಲ್ಲಿ 10-3-69ರಂದು ವೈಭವದಿಂದ ಜರಗಿತು.

ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಮಾಡಿಯಾಲ ನಾರಾಯಣ ಭಟ್ಟರು ಈ ಶಾಲಾ ಸ್ಮಾರಕಾರ್ಥರಾದ ದಿವಂಗತ ನರಸಿಂಹ ರಾಜರವರ ಮೊಮ್ಮಗ ಶ್ರೀ ವಿ. ನರಸಿಂಹ ವರ್ಮ, ಬಿ.ಎ.,ಎಲ್.ಎಲ್.ಬಿ., ಅವರು ಕಳೆದ ಸಪ್ಟಂಬರ 16ಕ್ಕೆ ಅಕಾಲಮೃತ್ಯುವಿಗೀಡಾದರು. ದಿವಂಗತರು ವಿವಿಧ ಮುಖಗಳ ಮಹಾಸಾಹಿತಿ, ಸಾಹಿತ್ಯಸೇವೆಯು ಈ ಶಾಲೆಗೂ ಆಗಾಗ ಸಲ್ಲುತ್ತಿತ್ತು. ಎಂದರು. ದಿವಂಗತರ ಆತ್ಮಕ್ಕೆ ಶಾಂತಿ ಕೋರಿದರು.

ಆಮೇಲೆ ಸದ್ರಿಯಂ ನಾರಾಯಣ ಭಟ್ಟರು ಸ್ಫೂರ್ತಿದಾಯಕ ಮತ್ತು ಬೋಧಪ್ರದವಾದ ಭಾಷಣವಿತ್ತರು. ಹಳೆ ವಿದ್ಯಾರ್ಥಿವೃಂದದ ಪರವಾಗಿ ಶ್ರೀ ಎಸ್. ಶಂಕರ ಭಟ್ಟರು ಸಹಕಾರಕೋರಿ ಭಾಷಣವಿತ್ತರು.

ಅಧ್ಯಕ್ಷರು ಮಾತಾಡುತ್ತ ಶಾಲೆಗಳಲ್ಲಿ ಮಕ್ಕಳಿಗೆ ನೈತಿಕ ಜ್ಞಾನದ ಅಭ್ಯಾಸವನ್ನುಂಟುಮಾಡಬೇಕು. ಈ ಶಾಲೆಯನ್ನು ಪೋಷಿಸಲು ಆ ದಾನಿಗಳಾದ ಹೆತ್ತವರ, ಸಾರ್ವಜನಿಕರ ಮತ್ತು ಹಳೆವಿದ್ಯಾರ್ಥಿಗಳ ಸಹಕಾರ ಅವಶ್ಯವಾಗಿದೆ. ಇವುಗಳನ್ನು ಇಂದು ಅಧಿಕ ಪ್ರಮಾಣದಲ್ಲಿ ಕಂಡೆನು ಎಂದು ಮುಂತಾಗಿ ಹೇಳಿದರು. ಆಮೇಲೆ ಮನರಂಜನಾ ಕಾರ್ಯಕ್ರಮಗಳಾದವು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 361/1964

ವೆಂಕಟೇಶ ಭಟ್ಟ — — — ವಾದಿ

ಎಸ್., ಕೇಶವ ಕಾಮತ್ ಕೂಡಾ —

—ಪ್ರತಿವಾದಿರು

ಪ್ರತಿವಾದಿರು :

2. Tallem Pictures. Gandhinagar, Bangalore—9.
5. Mysore Film's, Gandhinagar Bangalore—9.
9 Filmalaya. Gandhinagar, Bangalore—9.
10 Asiatic Film's Corporation, Private Ltd., Gandhinagar, Bangalore—9

ಇವರಿಗೆ—

ವಾದಿಯು 1ನೇ ಪ್ರತಿವಾದಿ ಕೇಶವ ಕಾಮತರ ಮೇಲೆ ರೂಪಾಯಿ 6,000-00 ಬರಬೇಕೆಂದು ಈ ಕೋರ್ಟಿನಲ್ಲಿ ಮೇಲ್ಕಂಡ ದಾವಾ ಹೂಡಿದ್ದಾರೆ. ಆ ಬಾಬು ಹಣಗಳಲ್ಲಿ ರೂ 2375-00 ನಿಮ್ಮಲ್ಲಿ ಇರುವುದಾಗಿ 2ರಿಂದ 10ನೇ ವರೆಗಿನ ಪ್ರತಿವಾದಿರ ವಶದಲ್ಲಿ ಇಟ್ಟ ಡಿಪೋಜಿಟ್ಟಿನ ಹಣ 1ನೇ ಪ್ರತಿವಾದಿ ವಸೂಲ್ ಮಾಡಿದ್ದಾಗಿಯೂ ಆ ಹಣ ಬಡ್ಡಿ ಕೋರ್ಟು ಖರ್ಚು ವಗೈರೆಗೆ 1ನೇ ಪ್ರತಿವಾದಿಯೂ 2ರಿಂದ 10ನೇ ವರೆಗಿನ ಪ್ರತಿವಾದಿ ಹಣ ತೆರುವಂತೆ ಡಿಕ್ರಿ ಕೊಡಿಸಬೇಕಾಗಿ ವಾದಿಯು ಹೂಡಿದ ಸದ್ರಿ ದಾವೆಯು, ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 14-4-1969ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಹಾಜ್ರು ಆಗಿ ಜ್ಯಾಹಿರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಪಸ್ಥಿತಿಯಿಲ್ಲದೆ ತೀರ್ಮಾನಿಸಲಾಗುವುದು ಎಂಬ ಸಂಗ್ತಿ ಕೋರ್ಟು ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಸಲಾಗಿದೆ.

K. Raghunath Shenoy,
Advocate for Plaintiff

ಕುಂದಾಪುರ, 18-3-69.

ಪರ್ಕಳದಲ್ಲಿ ರಥೋತ್ಸವ

ಪರ್ಕಳ ಶ್ರೀ ಮಹಾಲಿಂಗೇಶ್ವರ ಗಣಪತಿ ದೇವಸ್ಥಾನದಲ್ಲಿ ಇದೇ ಮಾರ್ಚ ತಾ. 2ರಲ್ಲು ಧ್ವಜಾರೋಹಣವೂ ತಾ. 4ರಲ್ಲು ರಥೋತ್ಸವವೂ 5ರಂದು ಧ್ವಜಾವರೋಹಣ, ಕಟ್ಟೆಪೂಜೆ, ಹುಲಿಚಾಮುಂಡಿ ದೈವದ ಕೋಲವು ಅದೇ ದಿನ ರಾತ್ರಿ ದೈವದ ಕೋಲ ಸಹಿತ ಮೆರವಣಿಗೆ ಕಟ್ಟೆದಾರವೂ ನಡೆಯಿತು ಈ ಸಂದರ್ಭದಲ್ಲಿ ಸಾರೆಕ್ಕಲ್ ದುರ್ಗಾಭವನ ಸುಬ್ರಹ್ಮಣ್ಯ ಭಟ್ಟರಿಂದ ಸೇವೆಯಾಗಿ ಕೊಡಲ್ಪಟ್ಟ ಹುಲಿಯ ಮೂರ್ತಿಯನ್ನೂ ದೈವದ ಮುಖ್ಯಾಲಿ ಶ್ರೀ ತಿಮ್ಮಪ್ಪ ಸೆಟ್ರು ದಾನವಾಗಿ ಕೊಟ್ಟ ಗೆಜ್ಜೆ, ಮಲ್ಲದೈವದ ಮೂರ್ತಿಯನ್ನೂ ವೆಂಕ್ಟೇಸರ್ ಗುರುರಾಜ ಜೋಯಿಸರ ನೇತೃತ್ವದಲ್ಲಿ ಮೆರವಣಿಗೆಯಿಂದ ದೇವಸ್ಥಾನಕ್ಕೆ ಕೊಂಡೊಯ್ದು ಪ್ರತಿಷ್ಠೆ ಮಾಡಿ ಕುಂಬಾಭಿಷೇಕ ಪೂಜೆ ವಗೈರೆ ನಡೆಸಲಾಯಿತು. ದೈವದ ಮೂರ್ತಿಗಳನ್ನು ಕೊಟ್ಟವರಿಗೆ ಈ ದೇವಸ್ಥಾನದ ಆಡಳಿತ ಮಂಡಳಿಯ ಪರವಾಗಿ ಶ್ರೀ ಗುರುರಾಜ ಜೋಯಿಸರು ಪ್ರಸಾದ ವಿತರಣೆಗೈದು ಧನ್ಯವಾದ ಸಮರ್ಪಿಸಿದರು.

ಜನ್ಮ ಮಹೋತ್ಸವ

ಹಿರಿಯಡ್ಕ, ಸ್ಥಳೀಯ ಪ್ರೇಮಾ ಮೆಡಿಕಲ್ ಹಾಲಿನ ಡಾ॥ ಯು. ಚಂದ್ರಶೇಖರರವರ 42ನೇ ವರ್ಷದ ಜನ್ಮ ಮಹೋತ್ಸವವು ಅವರ ಮಿತ್ರವೃಂದದವರಿಂದ ಸ್ಥಳೀಯ ಎಲ್. ಐ. ಸಿ.ಯ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಕೆ ಜಗನ್ನಾಥ ಶೆಟ್ಟರವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಇದೇ ಸಂದರ್ಭದಲ್ಲಿ ಕರ್ನಾಟಕದ ಹಾಗೂ ಜಿಲ್ಲೆಯ ಸುಪ್ರಸಿದ್ಧ ಹರಿದಾಸರಾದ ವಿದ್ವಾನ್, ಕೀರ್ತನಭೂಷಣ ಶ್ರೀ ಮಹಾದೇವಜೋಯಿಸರ 60ನೇ ವರ್ಷದ ಶ್ರೇಯೋಂತಿಯ ಸತ್ಕಾರ ಸಮಾರಂಭದ ವ್ಯವಸ್ಥೆಯನ್ನು ಶ್ರೀ ಡಾ॥ ಚಂದ್ರಶೇಖರರವರು ಏರ್ಪಡಿಸಿಕೊಂಡಿದ್ದರು. ಪ್ರಾತಃಕಾಲ ದೇವಪೂಜೆ, ಪ್ರಸಾದವಿತರಣೆ, ಮಧ್ಯಾಹ್ನ ಮಹಾಜನರಿಗೆ ಅನ್ನಸಂತರ್ಪಣೆ ನಡೆದು, ಸಂಜೆ ಸಾರ್ವಜನಿಕ ಸಭೆ ಜರಗಿತು, ಮೊದಲು ಕುಮಾರಿ ಸುಶೀನ್ಲರಿಂದ ಪ್ರಾರ್ಥನೆ, ಮುದ್ರಾಡಿ ಕೃಷ್ಣಯ್ಯ ಶೆಟ್ಟರಿಂದ ಸ್ವಾಗತಭಾಷಣ, ಬಳಿಕ ಸಭಿಕರಿಂದ ಹರಿದಾಸರ ಹಾಗೂ ಡಾ॥ ಯು. ಚಂದ್ರಶೇಖರರವರ ಗುಣಪ್ರಶಂಸೆಯ ಭಾಷಣಗಳಾದುವು. ಅಧ್ಯಕ್ಷರು ಮುಕ್ತಾಯ ಭಾಷಣದಲ್ಲಿ ನಮ್ಮಲ್ಲಿರುವ ಉತ್ತಮ ಚಾರಿತ್ರ್ಯ ಗುಣಶೀಲ ಸಂಪನ್ನರನ್ನು ಗುರುತಿಸಿ, ಅವರ ಸೇವಾ ಧರ್ಮಬುದ್ಧಿಯ ಆದರ್ಶಗಳನ್ನು ನಾವು ಸಂಗ್ರಹಿಸಿ, ಅವರುಗಳನ್ನು ಸತ್ಕರಿಸಿ, ಅವರ ಆಯುರಾರೋಗ್ಯಗಳಿಗಾಗಿ ಭಗವಂತನನ್ನು ಪ್ರಾರ್ಥಿಸಿಕೊಳ್ಳುವುದು ರಾಷ್ಟ್ರಜೀವನದಲ್ಲಿ ಹಿರಿಯರಾದವರ ಕರ್ತವ್ಯವೆಂದರು.

ನಂತರ ಮಹಾದೇವಜೋಯಿಸರಿಂದ "ಆದರ್ಶ ಭೀಷ್ಮ" ಎಂಬ ಹರಿಕಥೆಯು ಮೃದಂಗ ವಿದ್ವಾನ್ ಹಿರಿಯಡ್ಕ ಗೋಪಾಲರಾವ್, ಹಾರ್ಮೋನಿಯಂಪಟು ಉಪೇಂದ್ರ ಕಾಮತರ ಸಹಕಾರದೊಂದಿಗೆ ನಡೆಯಿತು.

ಹುರಿಗಡಲೆಗಾಳುಗಳು

ಚವಿಣಿ ಎಣ್ಣೆಗೆ ಹೆಚ್ಚಿನ ಕರ ಬೀಳುವುದರೊಳಗೇನೆ ಅದು ಮಾಯವಾಯಿತು ವಿದ್ಯುತ್ತಿನ ಮೇಲೆ ಸರ್‌ಚಾರ್ಜ್ ಹೊರಿಸಲಿರುವುದರಿಂದ ಅದೂ ಮಾಯವಾದೀತೆ?

೦೦ ೦೦ ೦೦

ಕೋರ್ಟಿನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಪೇದೆಗಳು ಕೋರ್ಟಿನಲ್ಲೇ ಕಳವು ಮಾಡಲು ಪ್ರಯತ್ನಿಸಿದರಂತೆ.

—ಕಮಾನವಿದ್ದಲ್ಲಿ ಕೆಸರು ಇದ್ದೇ ತೀರಬೇಕು ಎಂದಾಯಿತಲ್ಲ?

೦೦ ೦೦ ೦೦

ವಯಸ್ಕರ ಮತದಾನ ಮತ್ತು ಪಾರ್ಲಿಮೆಂಟರಿ ಪದ್ಧತಿಯ ಆಡಳಿತಕ್ಕೆ ಫೀಲ್ಡ್ ಮಾರ್ಶಲ್ ಅಯೂಬ್‌ಖಾನರು ಒಪ್ಪಿಗೆ ನೀಡಿದರು.

—ಸಾವ ಹೊತ್ತು ಪ್ರೊಷಧಿಯೊಡೆತನವುಳಿಸಿ ಫಲವೇನು?

೦೦ ೦೦ ೦೦

ಶಾಲ್ಮನೆಯ ಪಂಚವಾರ್ಷಿಕ ಯೋಜನೆಯನ್ನು ಒಂದು ವರ್ಷ ಮುಂದೂಡುವ ಪಶ್ಚಿಮ ಬಂಗಾಲದ ಸಲಹೆಯನ್ನು ಪ್ರಧಾನಿಯವರು ತಿರಸ್ಕರಿಸಿದರು.

—ಯೋಜನೆ ಇಲ್ಲದೇನೇ ವರ್ಷ ದೂಡುವವರಿಗೆ ಯಾವ ಯೋಜನೆ ಎಂದು ಆರಂಭವಾದರೇನು?

೦೦ ೦೦ ೦೦

ಪಾಠಶಾಲೆಗಳಲ್ಲಿ ಕಲಿಸುವ ಪಾಠಗಳ ಬದಲಿಗೆ ಮಕ್ಕಳು ಚಳುವಳಿ ಹೂಡುವುದನ್ನು ಹೆಚ್ಚಾಗಿ ಕಲಿಯುತ್ತಾರೆ ಎಂಬುದನ್ನು ಅನುಭವದಿಂದ ಕಂಡ ವಿವೇಕಿಯೊಬ್ಬರು ಉದ್ಗರಿಸಿದರು

—ಇನ್ನು ಮುಂದೆ ಚಳುವಳಿ ಹೂಡುವುದನ್ನೇ ಕಲಿಸಿದರೆ, ಶಿಕ್ಷಣ ಮಟ್ಟ ನಿಜಕ್ಕೂ ಹೆಚ್ಚಲಾರದೆ?

೦೦ ೦೦ ೦೦

ಪುತ್ತೂರು ರೇಂಟ್ ಟ್ರೈಬ್ಯುಲನ್ ಕೋರ್ಟಿನಲ್ಲಿ

Rent Petition No. 390/67

ನಟ್ಟೋಜಿ ಕಲ್ಯಾಣ ಆಮ್ಮ—

ಅರ್ಜಿದಾರರು

ಮತ್ತು

ಸರ್ಪಿನಟಾರೋ ಕೂಡಾ — ಎದ್ರಿಯರ್.

ಸದ್ರಿ ಅರ್ಜಿಯ ನಾಲ್ಕನೇ ಎದ್ರಿ ಪುತ್ತೂರು ಕಸಬಾ ಗ್ರಾಮದ ಬಪ್ಪಳಿಗೆ ಫ್ರಾನ್ಸಿಸ್ ಡಿ. ಸರ ಮಗಳು ಲೂಸೀ ಡಿಸೋಜ ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದ್ರೆ—

ಸದ್ರಿ ಅರ್ಜಿದಾರರು 1ನೇ ಎದ್ರಿ ವಗೈರೆ ಮೇಲೆ ಕೂಡಾ ದಾಖಲು ಮಾಡಿದ ಗೇಣಿ ವ್ಯಾಜ್ಯವು ಸದ್ರಿ 4ನೇ ಎದ್ರಿ ಲೂಸೀ ಡಿಸೋಜ ಆದ ನಿಮ್ಮ ಹಾಜ್ರಿ ಬಗ್ಗೆ ತಾ 10-4-69ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿದೆ. ಆ ದಿನ 10 ಗಂಟೆಗೆ ಸರಿಯಾಗಿ ನೀವು ಸ್ವತಃ ಯಾ ವಕೀಲರ ಮುಖಾಂತ್ರ ಹಾಜ್ರು ಆಗಿ ಪ್ರತಿಪಾದಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ವ್ಯಾಜ್ಯವನ್ನು ತೀರ್ಮಾನಮಾಡಲಾದೀತು. ತಿಳಿದಿರಲಿ.

(By order of Court)

Badekila Ishwara Bhat,
Advocate for Petitioner

ಪುತ್ತೂರು, ತಾ. 11-3-69.

In the Court of the Munsiff, Udipi

O. S. No. 231/1967

Padmaxi — — Plaintiff

Vs.

Haridas Bhat and others—

Defts.

The 1st defendant Haridas Bhatta is hereby informed that this suit filed by the Plaintiff for maintenance is posted to 26—3—1969 for his appearance. He is directed to appear before this Court on that day at 11 a.m and file his objection if any. Failing which the matter will be decided in his absence.

B. O.

K. L. AITHAL,
Vakil for Plaintiff

Udipi, 15-3-69.

ನಿಮ್ಮ ಮಗುವಿನ ದೃಢ ಹಾಗೂ ಭದ್ರ ಭವಿಷ್ಯತ್ತಿಗಾಗಿ ಸಿಂಡಿಕೇಟ್ ಬ್ಯಾಂಕಿನ ಹೊಸ ಮತ್ತು ಆಕರ್ಷಣೀಯ ಉಳಿತಾಯ ಯೋಜನೆ

ಚಿಲ್ಡ್ರನ್ಸ್ ವೆಲ್ಫೇರ್ ಸೆಕ್ಯೂರಿಟಿ ಸರ್ಟಿಫಿಕೇಟುಗಳು

ವಿಶಿಷ್ಟ ಅನುಕೂಲತೆಗಳು

1. ನಿಮ್ಮ ಮಗುವಿಗೆ ಯೋಗ್ಯವಾದ ಹುಟ್ಟುಹಬ್ಬದ ಉಡುಗೊರೆ.
2. ನಿಮ್ಮ ಮಕ್ಕಳಿಗೆ ಕಾಲೇಜು ವಿದ್ಯಾಭ್ಯಾಸವನ್ನು ದೊರಕಿಸಲಿಕ್ಕಾಗಿ ಅಥವಾ ನಿಮ್ಮ ಮಗಳ ಮದುವೆಗಾಗಿ ಒಂದು ಆದರ್ಶ ಯೋಜನೆ.
3 ರೂ. 10/-, ರೂ. 25/-, ರೂ. 50/-, ರೂ. 100/- ಮತ್ತು ರೂ 1000/- ದ ನಮೂದು ಬೆಲೆಯಲ್ಲಿ ಸಿಗುತ್ತವೆ. ಈಗ ರೂ. 1,000/-ವನ್ನು ವಿನಿಯೋಗಿಸಿದರೆ 18 ವರ್ಷಗಳ ಅಂತ್ಯದಲ್ಲಿ ರೂ 3,100/- ಸಿಗುತ್ತದೆ.
4. ಸರ್ಟಿಫಿಕೇಟನ್ನು ಮಗು ಪ್ರಾಯಕ್ಕೆ ಬರುವ ಮೊದಲು ಯಾವುದೇ ಅವಧಿಯಲ್ಲಿ ಖರೀದಿಸಬಹುದು.
5 ಸರ್ಟಿಫಿಕೇಟುಗಳನ್ನು ಖರೀದಿಸುವಾಗ ಇರುವ ಮಕ್ಕಳ ಪ್ರಾಯವನ್ನು ಹೊಂದಿಕೊಂಡು ಸರ್ಟಿಫಿಕೇಟುಗಳ ಅವಧಿಯು 1ರಿಂದ 18 ವರ್ಷಗಳ ವರೆಗೆ ಇದೆ.

ವಿವರಗಳಿಗೆ ದಯವಿಟ್ಟು ನಿಮ್ಮ ಸಮೀಪದ ಶಾಖೆಗಳೊಡನೆ ವ್ಯವಹರಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಗೃಹಲಕ್ಷ್ಮಿ
(ಎರಡನೇ ಪುಟದಿಂದ)

ಗಂಡು ನೋಡ್ತಿದ್ದಾರೆ. ನೋಡು ಅವರ ಮಗಳ ಫೋಟೋ...."

ಮೂರ್ತಿ ಆ ಫೋಟೋವನ್ನು ಕೈಗೆತ್ತಿಕೊಂಡ. ಪದ್ಮ! ಹೌದು—ಅವಳೇ! ಅವಳೇ! ಅವನ ಮುಖದಲ್ಲಿ ಆನಂದ ಚಿಮ್ಮಿತು.

"ಹೆಸರೇ?"

"ಪದ್ಮ"

ಅವಳೇ ಇವಳೆಂದು ಮೂರ್ತಿಗೆ ಖಚಿತವಾಯಿತು. ಕಣ್ಣುಗಳಾವಲೇ ಒಪ್ಪಿಗೆ ಸೂಚಿಸುತ್ತಿದ್ದವು. ಕೃಷ್ಣಮೂರ್ತಿಗಳಿಗೆ ಅವನಂತರಂಗ ತಿಳಿಯಲು ಹೆಚ್ಚು ಹೊತ್ತು ಬೇಕಾಗಲಿಲ್ಲ. ಮೂರ್ತಿ ಏನನ್ನೋ ಹೇಳುವ ಮೊದಲೇ ಅವರೇ ಎಂದರು— "ಹುಡುಗೀನ ನೋಡೋಕೆ ಎಂದು ಬರ್ತೀರಾಂತ ಕೇಳ್ತಿದ್ದಾರಪ್ಪ ಅವ..."

'ರಜಾ ಇರೋ ದಿನ ಹೋಗಬೇಕಷ್ಟೆ"

"ಹಾಗಿದ್ರೆ ನಾಳಿದ್ದು ಭಾನುವಾರ ಬರ್ತೀವೇಂತ ಹೇಳಿಬಿಡ್ತೀನೆ. ನಿಮ್ಮ ಊರಿನಿಂದ ಯಾರಾದರೂ ಬರ್ತಾರೇನು?'

"ನನಗೆ ನಿಮ್ಮನ್ನು ಬಿಟ್ಟರೆ ಬೇರೆ ಯಾವ ಬಂಧುವೂ ಇಲ್ಲ. ಬಳಗವೂ ಇಲ್ಲ—"

"ನಿಮ್ಮ ಮಾವ ಒಬ್ಬರಿದ್ದಾರೇಂತ ಹೇಳ್ತಿದ್ದ ಹಾಗಿತ್ತು..."

"ಸರಿ ಆ ಸೋದರ ಮಾವನೇ? ನಂಗೇನೂ ತಿಳೀದೂಂತ ಆಸ್ತೀನೆಲ್ಲಾ ನುಂಗಿ ಹಾಕೋ ಪ್ರಯತ್ನ ಮಾಡ್ತಾ ಇರೋರು ಅವರು."

ಕೃಷ್ಣಮೂರ್ತಿಯವರೊಡನೆ ಹೋಗಿ ಹುಡುಗಿಯನ್ನು ನೋಡಿದ್ದೂ ಆಯ್ತು. ಎಲ್ಲರೂ ಒಪ್ಪಿ ಮದುವೆಯೂ ಆಯಿತು. ಆದರೆ ಸುಬ್ಬಕೃಷ್ಣ ಮಾತ್ರ ಮದುವೆಗೆ ಬರಲಿಲ್ಲ.

ಆಗ ಅಷ್ಟು ದ್ವೇಷ ಸಾಧಿಸಿದವರು ಈಗೇಕೆ ಬಂದಿದ್ದಾರೆ? ಪದ್ಮಳಂತಹ ರತ್ನವನ್ನು ಇಟ್ಟುಕೊಂಡು ಸುಬ್ಬಕೃಷ್ಣನ ಮಗಳು ಕಪಿಲೆಯನ್ನು ಕಟ್ಟಿಕೊಳ್ಳಬೇಕಾಗಿತ್ತೆ? ಅದೇ ಕೋಪ ಸುಬ್ಬಕೃಷ್ಣನಿಗೆ. ಅದರೂ ಹೋಗಲಿ ಆಸ್ತಿ ಬಿಲ್ಲಾದರೂ ಪಾಲು ಸಿಗುತ್ತೇನೋ— ಎಂಬ ದುರಾಶೆ. ಇವೆಲ್ಲವನ್ನೂ ಯೋಚಿಸಿ ಮೂರ್ತಿ ತನ್ನ ದೃಢ ನಿರ್ಧಾರವನ್ನು ತಿಳಿಸಿಯೇ ಬಿಟ್ಟ.

ಒಂದು ದಿನ ಕಳೆಯಿತು. ಸುಬ್ಬಕೃಷ್ಣನ ಹೃದಯ ಪರಿವರ್ತನೆಗೊಂಡಿತ್ತು. ಪದ್ಮಳ ಅಡಿಗೆ, ಉಪಚಾರ, ನಯವಿನಯ, ಒಪ್ಪ ಓರಣ, ಸದ್ಗುಣ—ಅವನನ್ನು ಆಕರ್ಷಿಸಿತ್ತು. ಆ ದಿನ ಅವನು ಆಡಿದ ಮಾತನ್ನು ನಂಬುವುದೇ ಕಷ್ಟವಾಯಿತು, ಮೂರ್ತಿಗೆ

"ಮೂರ್ತಿ, ನಿನ್ನ ಹೆಂಡತೀನ ನೋಡಿದರೆ ನನಗೆ ನಮ್ಮಕ್ಕನ ನೆನಪು ಬರುತ್ತೆ. ಅವಳೂ ಹೀಗೆ ಒಪ್ಪ, ಓರಣ—ತುಂಬ ಅಚ್ಚುಕಟ್ಟಾಗಿದ್ದಳು. ಪಟ್ಟಣದ ಹುಡುಗಿ ಬಣ್ಣದ ಬೀಸಣಿಗೇಂತ ಅಂದುಕೊಂಡಿದ್ದೆ. ಆದರೆ ಇಲ್ಲಿ ಬಂದು ನಿಮ್ಮ ಸಂಸಾರ ನೋಡಿದ ಮೇಲೆ ನಿಜಸ್ಥಿತಿ ತಿಳೀತು. ಅವಳು ನಮ್ಮಕ್ಕನಿಗೆ ತಕ್ಕ ಸೊಸೆ, ನನ್ನನ್ನ ಕ್ಷಮಿಸಿಬಿಡಪ್ಪ..."

ಪದ್ಮ ಅಚ್ಚರಿಗೊಂಡಳು.

ಸುಬ್ಬಕೃಷ್ಣ ಕೇವಲ ಮೂರೇ ದಿವಸ ಅವರ ಅತಿಥಿಯಾಗಿದ್ದು ಹಳ್ಳಿಗೆ ಹಿಂತಿರುಗಿದ.

"ಪದ್ಮೂ.... ನೀನು ತುಂಬಾ ಜಾಣೆ ಕಣೇ, ನನ್ನ ಮನೆಯ ಬೆಳಕು—ಗೃಹಲಕ್ಷ್ಮಿ. ನೀನು ಈ ಮನೇನ ಮನೆ ಅಲ್ಲ-ಬಿಲಾನ ಆಗ್ತೀಗೆ ಒಪ್ಪ ಮಾಡ್ತೀಯೇಂತ ಹೆದರಿದ್ದೆ ಅಂತೂ ಒಂದು ಮನೆ ಉಳಿಯೋದೂ—ಅಳಿಯೋದು ಹೆಂಗಸರಿಂದಲೇ—ನಿನ್ನಂಥ ಗೃಹಲಕ್ಷ್ಮಿಗಿಂತ ಬೇರೆ ಆಸ್ತಿ ಯಾಕೆ?"

ಒಂದು ಕೃತಜ್ಞತಾಪೂರ್ವಕ ಮುಗುಳ್ನಗೆಯೊಂದೇ ಪದ್ಮ ಪತಿಗಿತ್ತ ಉತ್ತರ!

ಮೌನದ ಶಕ್ತಿ

ಮಾತನಾಡುವ ಪ್ರಾಣಿ ಮಾನವನೊಬ್ಬನೇ. ಮಾತು ಬಲ್ಲವನಿಗೆ ಜಗಳವಿಲ್ಲ, ಮಾತು ಬಲ್ಲವನಿಗೆ ಬದುಕಿಗೇನು ಎಂಬ ಕನ್ನಡ ನುಡಿಗಳನ್ನು ನೋಡಿದರೆ 'ಮಾತೇ ಮಾನವ ವೈಶಿಷ್ಟ್ಯ'ವೆಂದು ಹೊಳೆಯುವುದು ಸಹಜ. ಆದರೆ ಅದರಿಂದ ಮಾತೇ ಮಾನವನ ಬಾಳಿನ ಗುರಿಯಾಗಬಾರದಷ್ಟೇ!

ಆಗಬಾರದು, ಆದರೆ ಅನೇಕರು ಅವರ ಬಾಳಿನ ಗುರಿಯೇ ಮಾತೆಂಬಂತೆ ನಡೆದುಕೊಳ್ಳುತ್ತಾರೆ. ಮಾತು ಮೂಡಿದ ಮಾನವ ಪ್ರಾಣಿ ಪ್ರಪಂಚದ ಪ್ರಭುವೆನಿಸಿದನೆಂಬುದು ಹೆಮ್ಮೆಯ ಸಂಗತಿಯಾಗಿರಬಹುದು. ಆದರೂ ಮಾತಾಳಿಯಾದ ಮಾನವನಿಗಿಂತ ಮೂಕರಿರುವ ಪ್ರಾಣಿಗಳ ಪ್ರಾಣಶಕ್ತಿಯು ಪ್ರಬಲವಾಗಿದೆ ಎಂಬ ಸತ್ಯವನ್ನು ಲಕ್ಷಿಸಿದರೆ ಮಾತೇ ಮಾನವನ ಪ್ರಾಣಶಕ್ತಿಯನ್ನು ಕುಗ್ಗಿಸುತ್ತಿದೆಯೇ ಎಂದು ಅನುಮಾನಿಸುವಂತಾಗಿದೆ.

'ಪ್ರಾಣಶಕ್ತಿ'ಯೆಂದರೆ ಬರೀ ಬದುಕುವ ಶಕ್ತಿಯಲ್ಲ. 'ಪ್ರಾಣೋ ಬುದ್ಧಿ ಹೃದಯೇಂದ್ರಿಯ ಚಿತ್ತಧೃಕ್' ಎಂದು ಆಯುರ್ವೇದವು ಹೇಳುತ್ತದೆ. ಎಂದರೆ ಬದುಕಿಗೆ ಆಧಾರಗಳಾದ ಪಂಚವಾಯುಗಳಲ್ಲಿ ಒಂದಾದ ಪ್ರಾಣವಾಯುವು ಬುದ್ಧಿ, ಹೃದಯ, ಇಂದ್ರಿಯ, ಚಿತ್ತ ಶಕ್ತಿಗಳಿಗೂ ಆಧಾರವಾಗಿದೆ.

ಆಯುರ್ವೇದ ದೃಷ್ಟಿಯಿಂದ ಪ್ರಾಣಕ್ಕೂ ಮಾತಿನ ಶಕ್ತಿಗೂ ನಿಕಟ ಸಂಬಂಧವಿದೆ. ಮಾತಿನ ಶಕ್ತಿ ಶೈಲಿಗಳಿಗೆ, ಮೇಲೆ ಹೇಳಿದಂತೆ ಪ್ರಾಣವಾಯುವಿನ ಬುದ್ಧಿ, ಚಿತ್ತಗಳು ಜೀವಾಳವೆಂಬುದಂತೂ ಸರಿಯೇ. ಹಾಗೆ ಬುದ್ಧಿ ಚಿತ್ತಗಳಲ್ಲಿ ಮೂಡಿದ ವಿಚಾರಗಳು ಮಾತಿನ ರೂಪವನ್ನು ತಳೆಯಬೇಕಾದರೆ ಅದಕ್ಕೆ ಉದಾನ ವಾಯುವು ಸಹಕಾರಿಯಾಗಬೇಕಾಗುತ್ತದೆ. ಮತ್ತೆ ಪ್ರಾಣ ಸಂಚಾಲಿತವಾದ ಹೃದಯವು ಉದಾನ ವಾಯುವಿನ ನೆಲೆಯಾಗಿದೆ. "ಉರಸ್ಥಾನಮುದಾನಸ್ಯ ನಾಸಾ ನಾಭಿಗಲಾಂಶ್ಚರೇತ್| ವಾಕ್ ಪ್ರವೃತ್ತಿ ಪ್ರಯತ್ನೋರ್ಜಾ ಬಲವರ್ಣ ಸ್ಮೃತಿಕ್ರಿಯಾ" ಎಂದರೆ ಹೃದಯ ಪ್ರದೇಶದಲ್ಲಿದ್ದ ಉದಾನವಾಯುವು ವಾಕ್ ಪ್ರವೃತ್ತಿಯನ್ನುಂಟು ಮಾಡುವುದಲ್ಲದೆ ವಾಕ್‌ಶಕ್ತಿಗೆ ಸಂಬಂಧಿಸಿದ ಬಲ, ಶಬ್ದ ಸಂಪತ್ತು, ಭಾವ ಸಮೃದ್ಧಿಗಳಿಗೂ ಸಹಕಾರಿಯಾಗುವುದು.

ಆದ್ದರಿಂದ ಮಾತಿನ ಕ್ರಿಯೆಯು ಪ್ರಾಣವಾಯು ಮತ್ತು ಉದಾನ ವಾಯುವನ್ನು ದುಡಿಸುವ ಕೆಲಸವಾಗಿದೆ. ಅದ್ದರಿಂದಲೇ ಮಾತು ಮಿತವಾಗಿರಬೇಕು. ಅತಿಯಾದರೆ ಪ್ರಾಣವಾಯು, ಉದಾನವಾಯುಗಳಿಗೆ ದಣಿವಾಗುತ್ತದೆ. ತತ್ಪರಿಣಾಮವಾಗಿ ಮಾತಿನ ಶಕ್ತಿಯು ಕುಗ್ಗುವುದಲ್ಲದೆ ಪ್ರಾಣವಾಯುವಿನಿಂದ ಪ್ರೇರಿತವಾಗಬೇಕಾದ ಸಮಾನ, ಅಪಾನವಾಯುಗಳು ತಮ್ಮ ಕರ್ತವ್ಯಗಳಾದ ಆಹಾರ ಗ್ರಹಣ, ಪಚನ, ಸಾರಾಸಾರ ವಿಶ್ಲೇಷಣದ ಕೆಲಸಗಳನ್ನು ಸರಿಯಾಗಿ ಮಾಡಲಾರದಾಗುವುವು. ಮತ್ತೆ ಆರೋಗ್ಯದ ಬುನಾದಿಯೇ ಪಚನ ಶಕ್ತಿಯಾಗಿರುವುದರಿಂದ ಅದು ಕೆಟ್ಟರೆ ಯಾವ ರೋಗವಾದರೂ ಹುಟ್ಟಿಕೊಳ್ಳಬಹುದು.

ಇದುವರೆಗಿನ ವಿವೇಚನದ ಆಧಾರದ ಮೇಲೆ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಜಾಣ ನುಡಿಯನ್ನು ಮಾತು ಬಲ್ಲವನಿಗೆ ರೋಗವೂ ಇಲ್ಲ ಎಂದು ಹಿಗ್ಗಿಸಬಹುದು. ಎಂದರೆ ಮಾತುಗಳಲ್ಲಿ ಮಿತಿಯನ್ನಿಟ್ಟುಕೊಂಡರೆ ಸಂದರ್ಭಾನುಸಾರ ಕಾಲ-ಕಾಲಕ್ಕೆ ವಿಶಿಷ್ಟ ಅವಧಿಯವರೆಗೆ ಮೌನವನ್ನು ಆಚರಿಸಿದರೆ ಪ್ರಾಣವಾಯುವಿನ ಬಲರಕ್ಷಣೆಯಾಗಿ ಉದಾನ, ಸಮಾನ, ಅಪಾನವ್ಯಾನ ವಾಯುಗಳ ಸತ್ವರಕ್ಷಣೆಯೂ ಆಗುವುದು.

ಮಹಾತ್ಮಾ ಗಾಂಧೀಜಿಯವರು ಮತ್ತು ಸಂತ ವಿನೋಭಾ ಭಾವೆಯವರ ಅದ್ಭುತ ಕರ್ಮ ಶಕ್ತಿಗೆ ಅವರು ಕಾಲ-ಕಾಲಕ್ಕೆ ಅವಲಂಬಿಸುತ್ತಿದ್ದ ಮೌನವೇ ಕಾರಣವಾಗಿದೆ. ಮಲ್ಲಾಡಿಹಳ್ಳಿಯ ವಿವಿಧ ಮುಖದ ರಾಷ್ಟ್ರೋದ್ಧಾರದ ಅಪೂರ್ವ ಸಂಸ್ಥೆಗಳ ವಿಶ್ವಕರ್ಮರಾದ ಪೂಜ್ಯ ರಾಘವೇಂದ್ರ ಸ್ವಾಮಿಜಿಯವರ ದಣಿವರಿಯದ ಕರ್ಮಯೋಗಕ್ಕೆ ಕಾಲ—ಕಾಲಕ್ಕೆ ಅವರು ಆಚರಿಸುವ ಮೌನವ್ರತವೇ ಕಾರಣವಾಗಿದೆ.

ಅನೇಕ ರೋಗಗಳು ಬರೀ ಮೌನಾಚರಣೆಯಿಂದಲೇ ಗುಣವಾಗಬಲ್ಲವು. ಮಕ್ಕಳ ಮೊದಲ್ಗೊಂಡು ಮುದುಕರವರೆಗೆ, ಅಶಕ್ತಿ, ದಣಿವು, ಆಯಾಸ, ನಿತ್ರಾಣ ಎಂದು ನರಳುತ್ತಿರುವ ಈ ಕಾಲದಲ್ಲಿ ಮೌನವ್ರತವು ದಿವ್ಯವಾದ ಪೌಷ್ಟಿಕವೆನಿಸುವುದರಲ್ಲಿ ಸಂದೇಹವಿಲ್ಲ. ವಿಶೇಷವಾಗಿ ಬ್ಲಡ್ ಪ್ರೆಶರ್, ನಿದ್ರಾನಾಶ, ಹೃದಯರೋಗ, ಮನೋರೋಗಗಳ ಮಹಾಪೂರ ಬಂದಿರುವ ಈಗಿನ ಕಾಲದಲ್ಲಿ ವೈದ್ಯರು ರೋಗಿಗಳಿಗೆ ಟಾನಿಕ್ಕುಗಳನ್ನು ಮುಕ್ಕಲು ಹಂಚುವುದಕ್ಕಿಂತ ದಿನಾಲೂ ವಿಶಿಷ್ಟ ಅವಧಿಯವರೆಗೆ ಮೌನವನ್ನಾಚರಿಸುವ ಉಪದೇಶ ಕೊಡುವುದು ಶ್ರೇಯಸ್ಕರ.

ಟಾನಿಕ್ಕುಗಳು ಮೌನದ ಸತ್ಪರಿಣಾಮದ ವಿರುದ್ಧ ಪರಿಣಾಮವನ್ನುಂಟು ಮಾಡಬಹುದೆಂದು ಎಚ್ಚರಿಸುತ್ತೇನೆ. ಏಕೆಂದರೆ ಬಹುತರ ಟಾನಿಕ್ಕುಗಳೆಲ್ಲ ಹೃದಯ ಮಿದುಳುಗಳನ್ನು ಕೃತ್ರಿಮವಾಗಿ ಉತ್ತೇಜಿಸುವವು. ಅರ್ಥಾತ್ ಪ್ರಾಣ ಉದಾನ ವಾಯುಗಳನ್ನು ದಣಿಸುವವು. ತತ್ಫಲವಾಗಿ ಟಾನಿಕ ಸೇವನವನ್ನು ನಿಲ್ಲಿಸಿದೊಡನೆ ಇಮ್ಮಡಿ ದಣಿವೆನಿಸುವ ಸಂಭವವಿದೆ.

—ತಾರಾದಾಸ
(ದೀರ್ಘಾಯು)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು.
ಪ್ರಾಥಿಯುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಹೂವು ಹಣ್ಣು ತರಕಾರಿ ನಿರ್ಯಾತ

ನಮ್ಮ ದೇಶದಲ್ಲಿ ವಿವಿಧ ಬಗೆಯ ವಾಯುಗುಣದಿಂದಾಗಿ ಪ್ರತಿವರ್ಷ ಸುಮಾರು 20 ಮಿಲಿಯ ಟನ್ನುಗಳಷ್ಟು ಹಣ್ಣು ತರಕಾರಿ ಉತ್ಪಾದನೆಯಾಗುತ್ತಿದೆಯೆಂದು ಅಂದಾಜುಮಾಡಲಾಗಿದೆ. ಹಣ್ಣು ತರಕಾರಿಯನ್ನು ಹೆಚ್ಚಾಗಿ ಬೆಳೆದರೆ ಆಹಾರಾಭಾವ ತಡೆಗಟ್ಟಬಹುದು. ಹಾಗೂ ವಿದೇಶಕ್ಕೆ ರಫ್ತು ಮಾಡಿ ಸಾಕಷ್ಟು ಹಣವನ್ನು ಗಳಿಸಬಹುದು ಎಂಬ ಉದ್ದೇಶದಿಂದಾಗಿ ಇತ್ತೀಚೆಗೆ ಹಣ್ಣು ತರಕಾರಿ ಉತ್ಪಾದನೆಗಾಗಿ ಹೆಚ್ಚು ಗಮನಕೊಡಲಾಗುತ್ತಿದೆ. ಇಡೀ ಪ್ರಪಂಚ ಹಣ್ಣುತರಕಾರಿಗಳ ರಫ್ತುಗಾರಿಕೆಯು ಮೊತ್ತ ಏಳು ಬಿಲಿಯನ್‌ಗಳಾದರೆ ಭಾರತದ ಪಾಲು ಒಂಭತ್ತು ಬಿಲಿಯ ಟನ್ನುಗಳು (67 ಮಿಲಿಯ ಟನ್ನುಗಳು) ಮಾತ್ರ.

1967-68ರಲ್ಲಿ 48—8 ಮಿಲಿಯ ರೂ. ಬೆಲೆಬಾಳುವ 109,932 ಟನ್ನು ತರಕಾರಿ ಮತ್ತು ಹಣ್ಣುಗಳನ್ನು ರಫ್ತು ಮಾಡಲಾಯಿತು. ಇದು ದೇಶದ ಇಡೀ ಉತ್ಪಾದನೆಯ ಕೊಂಚಪಾಲು ಮಾತ್ರ. ಇದರ ಜೊತೆಗೆ ಸುಮಾರು ಶೇ. 93 ಭಾಗ ಈರುಳ್ಳಿಯನ್ನು (41.8 ಮಿಲಿಯ ರೂ. ಬೆಲೆಬಾಳುವ 103,362 ಟನ್ನು) ಸೌತ್ ಈಸ್ಟ್ ಏಷಿಯನ್ ಮಾರುಕಟ್ಟೆಗಳಿಗೆ ರಫ್ತು ಮಾಡಲಾಯಿತು. ಬಾಳೆಹಣ್ಣು (2,010 ಟನ್ನುಗಳು) ಮಾವು (1,072 ಟನ್ನುಗಳು) ಆಲೂಗಡ್ಡೆ (547 ಟನ್ನುಗಳು) ಉಳಿದುದು ಅನೇಕ ಬಗೆಯ ಪದಾರ್ಥಗಳು ರಫ್ತು ಸಾಗಾಣಿಕೆ ಪದಾರ್ಥಗಳಲ್ಲಿ ಮುಖ್ಯವಾದುವುಗಳು.

ಸಂಸ್ಕರಣ ಮಾಡಿದ ಹಣ್ಣು ತರಕಾರಿಗಳ ಒಟ್ಟು ಉತ್ಪಾದನೆಯಾದ 47,1[illegible] ಟನ್ನುಗಳಲ್ಲಿ [illegible] ಟನ್ನುಗಳಷ್ಟು ಮಾತ್ರವನ್ನು ([illegible]3.4 ಮಿಲಿಯ ರೂ. ಗಳು) 1967-68ರಲ್ಲಿ ರಫ್ತು ಮಾಡಲಾಯಿತು.

ವಿದೇಶೀ ಮಾರುಕಟ್ಟೆಗಳಲ್ಲಿ ಬೇಡಿಕೆಗೆ ಅನುಗುಣವಾದ ರೀತಿಯ ಹಣ್ಣು ತರಕಾರಿಗಳನ್ನು ಬೆಳೆಸುವುದು ಬಹಳ ಮುಖ್ಯವಾದುದು. ಉದಾಹರಣೆಗೆ ಇಂದು ಪ್ರಪಂಚದ ಮಾರುಕಟ್ಟೆಯಲ್ಲಿ ಕ್ಯಾವೆಂಡಿಸ್ ಬಾಳೆಹಣ್ಣಿಗೆ ಬಹಳ ಬೇಡಿಕೆಯಿದೆ. ಕ್ಯಾವೆಂಡಿಸ್ ತಳಿಯಾದ ಲ್ಯಾಕ್ಟನ್ ಪಚ್ಚೆ, ಜೈಂಟ್ ಕ್ಯಾವೆಂಡಿಸ್‌ಗಳನ್ನು ಸದ್ಯದಲ್ಲಿ ಭಾರತದಲ್ಲಿ ಬೆಳೆಯಲಾಗುತ್ತಿಲ್ಲ. ಅದೇ ರೀತಿಯಲ್ಲಿ ಇಂದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆಯಿರುವ ಶಾಮೌತಿ, ಸತ್ಸುಮ ಕಿತ್ತಳೆ ತಳಿಗಳು ಡಬ್ಬಿಗಳಲ್ಲಿ ಶೇಖರಿಸಿಡುವ ಸಲುವಾಗಿ ಭಾರತದಲ್ಲಿ ಸದ್ಯಕ್ಕೆ ಬೆಳೆಯುತ್ತಿಲ್ಲ. "ಪೀಚ್" ಹಣ್ಣು ಬೆಳೆಯುವುದು ಬಹಳ ಕಡಿಮೆ, ಹಫಿನ್ಯಾಬರ್ಗ್ ಮತ್ತು ಚರಕ್ ಹಾಲಿಯಸ್— ಕಲ್ಲಂಗಡಿ ಹಣ್ಣಿನ ತಳಿಗಳಿಗೆ ಯುರೋಪಿನ ಮಾರುಕಟ್ಟೆಯಲ್ಲಿ ಬೇಡಿಕೆಯಿದ್ದರೂ ಕೂಡಾ ಭಾರತದಲ್ಲಿ ಇವುಗಳನ್ನು ವಾಣಿಜ್ಯ ಉದ್ದೇಶದಿಂದಾಗಿ ಬೆಳೆಸುತ್ತಿಲ್ಲ. ಸ್ಪಾನಿಷ್ ತಳಿಯಾದ ಬಿಳಿ ಈರುಳ್ಳಿಯನ್ನು ಹೆಚ್ಚಾಗಿ ಬೆಳೆಯುತ್ತಿಲ್ಲ. ಇದಕ್ಕೂ ಪ್ರಪಂಚ ಮಾರುಕಟ್ಟೆಯಲ್ಲಿ ಗಿರಾಕಿಯಿದೆ. ಇಟಲಿ ಮತ್ತು ಅಮೇರಿಕಾದಲ್ಲಿ ಇಡೀ ಟೊಮ್ಯಾಟೋ ಹಣ್ಣಿನ ಸಿಪ್ಪೆ ತೆಗೆದು ಹಾಗೂ ಟೊಮೆಟೊ ಕಾನ್‌ಸ್ಟ್ರೇಟರ್‌ಗಾಗಿ ಬೆಳೆಯುವ ಸಾನ್ಮಾರ್ಜ್ಸನೋ ಮತ್ತು ರೋಮ ಟಮಟೋ ತಳಿಗಳನ್ನು ಕೂಡಾ ಭಾರತದಲ್ಲಿ ಇನ್ನೂ ಬೆಳೆಯುತ್ತಿಲ್ಲ. ದೇಶದಲ್ಲಿ ಹಣ್ಣು ತರಕಾರಿ ಕೈಗಾರಿಕೆಯು ಅಭಿವೃದ್ಧಿಗಾಗಿ ಯೋಗ್ಯವಾದ ಹಣ್ಣು ತರಕಾರಿಗಳ ತಳಿಗಳನ್ನು ಬೆಳೆಸುವುದು ಬಹು ಮುಖ್ಯ. ಬೆಳೆಯಲು ಆರಿಸಿಕೊಂಡ ತಳಿಗಳು ಹೆಚ್ಚು ಇಳುವರಿ ಕೊಡುವಂತಹುಗಳು ರೋಗ ಕೀಟಗಳನ್ನು ವಿರೋಧಿಸಬಲ್ಲ ಥವುಗಳಾಗಿರಬೇಕು.

ಮಾವಿನ ಹಣ್ಣು : ಇಡೀ ಪ್ರಪಂಚ

ದಲ್ಲಿ ಉತ್ಪಾದನೆಯಾಗುತ್ತಿರುವ 9.5 ಮಿಲಿಯ ಟನ್ನು ಮಾವಿನ ಹಣ್ಣನ್ನು ಭಾರತದಲ್ಲೇ ಬೆಳೆಯಲಾಗುತ್ತಿದೆ. ಪಾಕಿಸ್ತಾನ, ಥ್ಯಾಲೆಂಡ್, ಫಿಲಿಪೈನ್ಸ್, ದಕ್ಷಿಣ ಆಫ್ರಿಕಾ, ಯು.ಎ.ಆರ್. ಮತ್ತು ಕ್ಯೂಬ ದೇಶದಲ್ಲೂ ಕೂಡಾ ಕೊಂಚಮಟ್ಟಿಗೆ ಬೆಳೆಯಲಾಗುತ್ತಿದೆ. ಸುಮಾರು ಒಂದು ಸಾವಿರ ಬಗೆಯ ಮಾವಿನ ಹಣ್ಣು ಭಾರತದಲ್ಲಿ ಬೆಳೆಯಲಾಗುತ್ತಿದೆಯೆಂದು ವರದಿಯಾಗಿದೆ. ಆದರೆ ವಾಣಿಜ್ಯೋದ್ದೇಶದಿಂದ ಮುಖ್ಯವಾದ ತಳಿಗಳೆಂದರೆ ಅಲ್ಫೆನ್ಸೊ, ಬೆನಿಷಾನ್, ಲಂಗ್ರಾ, ದಶೇರಿ, ಚೌಸಾ ಮತ್ತು ನೀಲಂ ಮಾವಿನ ಕೊಯ್ಲು ಮಾರ್ಚ್ ತಿಂಗಳಿಂದ ಹಿಡಿದು ಸೆಪ್ಟೆಂಬರ್ ವರೆಗೂ ಸಾಗುತ್ತದೆ. ಕೊಯ್ಲುಕಾಲ ಬೇರೆಬೇರೆಯಾದ ಕಾರಣ ಪ್ರಪಂಚದ ಒಂದಲ್ಲ ಒಂದು ಭಾಗದಲ್ಲಿ ವರ್ಷಪೂರ್ತಿ ಮಾವು ದೊರೆಯುತ್ತದೆ. ಈಗ ಸಧ್ಯಕ್ಕೆ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಬೆಳೆಯುವ ಅಲ್ಫೆನ್ಸೊ ಮಾವಿನಹಣ್ಣನ್ನು ಹೆಚ್ಚಾಗಿ ರಫ್ತು ಮಾಡಲಾಗುತ್ತಿದೆ. ಮಾವನ್ನು ಆಮದು ಮಾಡಿಕೊಳ್ಳುತ್ತಿರುವ ದೇಶಗಳಲ್ಲಿ ಇಂತಹುದೇ ತಳಿಯ ಹಣ್ಣಿಗೆ ಬೇಡಿಕೆಯಿದೆಯೆಂದು ಹೇಳಲು ಇದುವರೆಗೂ ಸಾಧ್ಯವಾಗಿಲ್ಲ. ಇಂದು ಬೊಂಬಾಯಿಯಲ್ಲಿ ದೊರೆಯುವ ಅಲ್ಫೆನ್ಸೊ ಮಾವಿನಹಣ್ಣಿಗೆ ವಿಪರೀತ ಬೆಲೆ. ಈ ತಳಿಯ ಹಣ್ಣಿನಲ್ಲಿ ಒಂದು ನ್ಯೂನತೆಯಿದೆ. ಇದನ್ನು ಹೊರನೋಟಕ್ಕೆ ಕಂಡುಹಿಡಿಯಲು ಸಾಧ್ಯವಿಲ್ಲ. ಆದ್ದರಿಂದ ಇತರ ಬಗೆಯ ಮಾವಿನಹಣ್ಣನ್ನು ಅಲ್ಫೆನ್ಸೊ ತಳಿಯೊಂದಿಗೆ ರಫ್ತುಮಾಡಬೇಕು.

ಮಾವಿನಹಣ್ಣಿನ ಜೊತೆಗೆ ಭಾರತದಲ್ಲಿ ಬೆಳೆಯುವ ಬಾಳೆಹಣ್ಣಿಗೂ ವಿದೇಶದಲ್ಲಿ ಬಹಳ ಗಿರಾಕಿಯಿದೆ. ನಮ್ಮ ದೇಶದಲ್ಲಿ ಬೆಳೆಯುವ ಲೀಚಿ ಹಣ್ಣಿಗೆ ಸ್ವಿಟ್ಜರ್‌ಲೇಂಡ್ ಮತ್ತು ಜರ್ಮನಿಯಲ್ಲಿ ಬೇಡಿಕೆಯಿದೆ. ನಮ್ಮ ದೇಶದಲ್ಲಿ ಬೆಳೆಯುವ ಲೀಚಿ ಹಣ್ಣಿನ ತಳಿಗಳು ಬಹಳ ಉತ್ತಮವಾಗಿರುವುದರಿಂದ ಇದನ್ನು ಹೆಚ್ಚಾಗಿ ಬೆಳೆದ ಸಾಗಿಸುವ ಕಡೆ ಗಮನಕೊಡುವುದು ಉತ್ತಮ. ಡಿಸೆಂಬರ್-ಜನವರಿ ತಿಂಗಳಲ್ಲಿ ವಿಪರೀತ ಸೀಬೆಹಣ್ಣು ದೊರೆಯುವುದರಿಂದ ಇವುಗಳನ್ನು ಯುರೋಪಿಗೆ ರಫ್ತು ಮಾಡಬಹುದು. ಏಕೆಂದರೆ ಈ ತಿಂಗಳುಗಳಲ್ಲಿ ಯುರೋಪಿನಲ್ಲಿ ಸ್ಥಳೀಯ ಹಣ್ಣುಗಳು ದೊರೆಯುವದೇ ಇಲ್ಲ. ಕಿತ್ತಳೆ ಹಣ್ಣನ್ನು ಕೂಡಾ (ಸಂತ್ರಾ) ರಫ್ತು ಮಾಡಬಹುದು. ಪಶ್ಚಿಮ ಜರ್ಮನಿಯಲ್ಲಿ ಈ ಹಣ್ಣಿಗೆ ಬಹಳ ಬೇಡಿಕೆಯಿದೆ. ಹೂವನ್ನು ಕೂಡಾ ಅದರಲ್ಲೂ ರೋಜ್, ಗ್ಲಾಡಿಯೋಲಸ್ ಮತ್ತು ಕಾರ್ನೇಷನ್ ಅನ್ನು ರಫ್ತು ಮಾಡುವ ಸಾಧ್ಯತೆಯುಂಟು. ಯುರೋಪಿನ ಪ್ರತಿಯೊಂದು ದೇಶದಲ್ಲೂ ಬದನೆಕಾಯಿ ಮತ್ತು ದೊಡ್ಡ ಮೆಣಸಿನ ಕಾಯಿಗೆ ವಿಪರೀತ ಬೇಡಿಕೆಯಿದೆ. ಅನಾನಸ್ ಹಣ್ಣಿಗೂ (ಕ್ಯೂನ್ ತಳಿ) ಬೇಡಿಕೆಯಿದೆ.

ಹಣ್ಣು ತರಕಾರಿಗಳನ್ನು ರಫ್ತು ಮಾಡುವ ಉದ್ದೇಶದಿಂದ ಯಾವಾಗ ಕೊಯ್ಲು ಮಾಡಬೇಕು, ಅವುಗಳನ್ನು ತೋಟಗಳಿಂದ ಹಡಗುಗಳಿಗೆ ಸಾಗಿಸಲು ಬೇಕಾದ ವಾಹನ ಸೌಕರ್ಯ, ಸಾಗಿಸುವ ಸಮಯದಲ್ಲಿ ಬೇಕಾದ ಶೇಖರಣಾ ಆವಶ್ಯಕತೆಗಳು, ಅವು ವಿದೇಶೀ ಮಾರುಕಟ್ಟೆ ತಲುಪಿದ ನಂತರ ಅವುಗಳು ಮಾರುವುದಕ್ಕಾಗಿ ಒದಗಿಸಬೇಕಾದ ಆವಶ್ಯಕತೆಗಳು ಮುಂತಾದುವುಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುವುದು ಆವಶ್ಯಕ. ಹಣ್ಣು ತರಕಾರಿಗಳನ್ನು ಪ್ಯಾಕ್ ಮಾಡಲು ಉಪಯೋಗಿಸುವ ಸಾಮಾನುಗಳೂ ಒಳ್ಳೆ ದರ್ಜೆಯದಾಗಿರುವಂತೆ ನೋಡಿಕೊಳ್ಳಬೇಕು.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies
ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಪಥ್ಯ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.
ಮಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಎಂ. ವೆಂಕಟರಾವ್, ಹಂಪನಕಟ್ಟೆ, ಮಂಗಳೂರು-1

READ & ADVERTISE IN NAVAYUGA WEEKLY

ನವಯುಗ

27—3—1969

೧೦
ಪೈಸೆ

ಕುಟುಂಬ ಪರಿಮಿತಿ–ವೈಜ್ಞಾನಿಕ ವಿಧಾನ

ಬರೆದವರು: ಡಾ। ಎಂ. ಸಿರಸಿ.

ಜೀವ ಎಂದರೇನು ಎನ್ನುವುದರ ಅರ್ಥವನ್ನು ತಿಳಿಯುವುದು ಕೇವಲ ಜಿಜ್ಞಾಸೆಗಾಗಿ ಮಾತ್ರವಲ್ಲ. ಏಕೆಂದರೆ ಇದರ ಬಗ್ಗೆ ನಮ್ಮ ಭಾವನೆ ಮತ್ತು ನಂಬಿಕೆಗಳು "ಸಾವು" ಎಂದರೇನು? ಎನ್ನುವುದರ ಮೇಲೆ ಅತ್ಯಂತ ಪ್ರಭಾವವನ್ನು ಬೀರುತ್ತದೆ. 'ಜೀವ' 'ಸಾವು'ಗಳ ಸಮಸ್ಯೆಯು ಹೊಸದೇನೂ ಅಲ್ಲ. 'ಸಾವು' ಎನ್ನುವುದರ ನಿರ್ದಿಷ್ಟವಾದ ವಿವರಣೆಯನ್ನು ಕೊಡುವುದು ಈಗ ಅತ್ಯಂತ ಅವಶ್ಯಕವಾಗಿದೆ. ಏಕೆಂದರೆ ಖಚಿತವಾಗಿ ಜೀವ ಹೋಗಿದೆ ಎಂದು ತೀರ್ಮಾನಿಸಲ್ಪಟ್ಟ ದೇಹಗಳಿಂದ ಹೃದಯ, ಮೂತ್ರಜನಕಾಂಗ ಮೊದಲಾದ ಜೀವಿತಶಕ್ತಿಯುಳ್ಳ ಅಂಗಗಳನ್ನು ತೆಗೆದು, ಬೇರೊಬ್ಬರ ದೇಹದಲ್ಲಿ ಕಾರ್ಯಮಾಡಲು ಜೋಡಿಸಲಾಗುತ್ತಿದೆ. ಈ ರೀತಿ ಜೋಡಿಸಬೇಕಾದರೆ ಜೀವವು ಹೋದ ತಕ್ಷಣವೇ ಅಂಗಗಳನ್ನು ತೆಗೆಯಬೇಕು. ಆದುದರಿಂದ ಜೀವ ಹೋಯಿತೆನ್ನುವ ಕಾಲವನ್ನು ನಿರ್ದಿಷ್ಟವಾಗಿ ಗೊತ್ತುಮಾಡುವುದು ಅತ್ಯಂತ ಆವಶ್ಯಕ. ಇಷ್ಟು ನಿಖರವಾಗಿ ತಿಳಿಯುವ ಅನಿವಾರ್ಯತೆ ಹಿಂದೆ ಇರಲಿಲ್ಲ. ಬಹುಶಃ ಇದೇ ಕಾರಣದಿಂದ ಜೀವಹೋದ ಕಾಲವನ್ನು ನಿರ್ದಿಷ್ಟವಾಗಿ ಗೊತ್ತುಮಾಡುವ ರೀತಿಯನ್ನು ವಿವರಿಸಲ್ಲದಿರಬಹುದು. ಸತ್ತ ದೇಹದಲ್ಲಿ ಜೀವ ಚೈತನ್ಯವುಳ್ಳ ಅಂಗಾಂಗಗಳಿರುವುದು ಸಾಧ್ಯವೇ? ಪ್ರಾಣವಾಯುವು ದೇಹದಿಂದ ಹೋದ ಮೇಲೂ ಸಹ ಅಂಗಾಂಗಗಳು ಜೀವಿಸಿರಬಲ್ಲವೇ? ಮಾಂಸಖಂಡ ಅವಯವಗಳನ್ನು ತೆಗೆದು ಜೀವಿಸಿರುವ ಇನ್ನೊಬ್ಬ ವ್ಯಕ್ತಿಯ ದೇಹದೊಳಗೆ ಅಳವಡಿಸುವುದು ಧರ್ಮಸಮ್ಮತವೆ? ದೇಹದ ಅಂಗಾಂಗಗಳ ಕಾರ್ಯಕ್ಕೂ ವ್ಯಕ್ತಿಯ ಜೀವಕ್ಕೂ ಇರುವ ನಿಕಟ ಸಂಬಂಧವೇನು? ಇವೇ ಮೊದಲಾದ ಗಹನ ಪ್ರಶ್ನೆಗಳಿಗೆ ಈಗ ಉತ್ತರ ಬೇಕಾಗಿದೆ.

'ಜೀವ' 'ಸಾವು'ಗಳ ಬಗ್ಗೆ ಹಿಂದಿನ ತತ್ವಜಿಜ್ಞಾಸೆಗಳು ಕೊಟ್ಟಿರುವ ವಿವರಣೆ ಕೇವಲ ಆಧ್ಯಾತ್ಮಜಿಜ್ಞಾಸೆಗಾಗಿ ಮಾತ್ರವಾಗಿದೆ. ಜನನ ಮರಣಗಳ ವಿವಿಧ ಘಟ್ಟಗಳ ಬಗ್ಗೆ ಈಗ ತಿಳಿದಿರುವಷ್ಟು ವೈಜ್ಞಾನಿಕ ವಿವರಣೆ ಆಗ ಗೊತ್ತಿರಲಿಲ್ಲ. ಜೀವ ಎನ್ನುವುದರ ನಿರೂಪಣೆಯು ಆಧುನಿಕ ಜೀವ ವಿಜ್ಞಾನ ಶಾಸ್ತ್ರದ ತಿಳುವಳಿಕೆಯನ್ನು ಅವಲಂಬಿಸಿರುತ್ತದೆ.

ವೈಜ್ಞಾನಿಕ ಜ್ಞಾನ

ನಮ್ಮ ನಿರಾಧಾರವಾದ ನಂಬಿಕೆ ಮತ್ತು ಸಿದ್ಧಾಂತಗಳನ್ನು ತೊಡೆದು ಹಾಕಲು ಸಹಾಯ ಮಾಡಿದ ವೈಜ್ಞಾನಿಕ ಜ್ಞಾನವನ್ನು ವ್ಯಕ್ತಿಯ ಮತ್ತು ಸಮಾಜದ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳುವುದು ನಮ್ಮ ಕರ್ತವ್ಯ. ಹಿಂದಿನಿಂದಲೂ ಕೂಡ ಹೊಸ ತಿಳುವಳಿಕೆಯು ಬಂದಹಾಗೆ ಆಯಾ ಘಟ್ಟದಲ್ಲಿ ಅವನ್ನು ಗರ್ಭಧಾರಣೆ ತಡೆಗಟ್ಟಲು ಉಪಯೋಗಿಸುತ್ತಿದ್ದರು.

ಪ್ರಾಚೀನ

ಗರ್ಭಧಾರಣೆಗೆ ವೀರ್ಯಾಣುವು ಅಂಡದೊಂದಿಗೆ ಸಂಯೋಜಿಸುವುದು ಅಗತ್ಯ ಎಂಬುದನ್ನು ತಿಳಿದ ನಮ್ಮ ಪೂರ್ವಿಕರು ಸಂತಾನ ನಿಯಂತ್ರಣಕ್ಕೆ ಬ್ರಹ್ಮಚರ್ಯವೇ ಸರ್ವಶ್ರೇಷ್ಠ ಎಂದು ಹೇಳುವುದು ಆಶ್ಚರ್ಯವೇನೂ ಅಲ್ಲ. ತಮಗೆ ತಿಳಿದ ಖಚಿತವಾದ ಈ ಒಂದು ಮಾರ್ಗವನ್ನು ಅನುಸರಿಸುವಂತೆ ಮಾಡಲು ಬ್ರಹ್ಮಚರ್ಯದ ಮಹತ್ವಗಳನ್ನು ವರ್ಣಿಸಿ ಇದನ್ನು ಮತಾಚಾರದ ಮುಖ್ಯ ಅಡಿಗಲ್ಲು ಎಂದೂ ಬೋಧಿಸಿದ್ದಾರೆ

ಡಿಂಭವು ಫಲವಂತವಾಗುವುದಕ್ಕೆ ಒಂದು ನಿರ್ದಿಷ್ಟ ಕಾಲಾವಧಿ ಇದೆ. ಸ್ತ್ರೀಯು ಬಹಿಷ್ಠೆಯಾಗುವುದಕ್ಕೆ ಸುಮಾರು 14 ದಿನಗಳು ಪೂರ್ವಭಾವಿಯಾಗಿ ಅಂಡವು ಪಕ್ವವಾಗಿ ಅಂಡಕೋಶದಿಂದ ಹೊರಬೀಳುವುದು. ಆ ರೀತಿ ಬಂದ ಮೇಲೆ ಕೇವಲ 24ರಿಂದ 36 ಗಂಟೆಗಳ ಒಳಗೆ ಈ ಅಂಡವು ವೀರ್ಯಾಣುವಿನ ಜೊತೆ ಸಂಯೋಗವಾದರೆ ಮಾತ್ರ ಗರ್ಭಧಾರಣೆ ಸಾಧ್ಯ. ಈ ತಿಳುವಳಿಕೆಯು ಬಂದ ಕೂಡಲೇ ಗರ್ಭಧಾರಣೆಯನ್ನು ತಡೆಯಲು ಕ್ಷೇಮಕಾಲದ ಆಚರಣೆ ಅಗತ್ಯ. ಇವೆರಡಕ್ಕೂ ಗಂಡಸು ಮತ್ತು ಹೆಂಗಸಿನಲ್ಲಿ ಪ್ರಚಂಡವಾದ ಮನೋನಿಗ್ರಹ ಶಕ್ತಿ ಇದ್ದರೆ ಮಾತ್ರ ಸಾಧ್ಯ.

ವೀರ್ಯಾಣುವು ಅಂಡವನ್ನು ಫಲವಂತ ಮಾಡಲು ಯೋನಿ ಮತ್ತು ಗರ್ಭಕೋಶದಲ್ಲಿ ಹೋಗಬೇಕಾಗಿರುವುದರಿಂದ ಇವೆರಡರ ಸಂಯೋಜನೆಯನ್ನು ತಡೆಗಟ್ಟಲು ವೀರ್ಯಾಣುನಾಶಕ ಜೆಲ್ಲಿ ಮತ್ತು ಸರ್ವೈಕಲ್ ಕ್ಯಾಪ್‌ಗಳ ಉಪಯೋಗ ಕಳೆದ ಎರಡು ದಶಕಗಳಿಂದ ರೂಢಿಯಲ್ಲಿದೆ. ಈ ಪದ್ಧತಿಗಳು ಹೆಚ್ಚು ಪ್ರತಿಭಟನೆ ಇಲ್ಲದೆ ಜನಸಾಮಾನ್ಯರಿಂದ ಸ್ವೀಕೃತವಾಗಿವೆ.

ಸ್ತ್ರೀಯರಲ್ಲಿ ಅಂಡವು ಪಕ್ವವಾಗಿ ಹೊರಬೀಳುವುದರಲ್ಲಿ ಇರುವ ನಿಯಂತ್ರಕ ಸ್ರವಗಳು ಸರಿಯಾಗಿ ತಿಳಿದ ಕೂಡಲೇ ಅಂಡವು ಹೊರಬೀಳದಂತೆಯೇ ತಡೆಯುವ ವಿಧಾನದ ಪ್ರಯತ್ನ ನಡೆಯಿತು. ಈ ಸಂಶೋಧನೆಯ ಫಲಿತಾಂಶವಾಗಿ ನುಂಗುವ ಗುಳಿಗೆಗಳು ಉಪಯೋಗಕ್ಕೆ ಬಂದಿವೆ ಇವು ಪಿಟ್ಯುಟರಿ ಗ್ರಂಥಿಗಳ ಮೇಲೆ ಕಾರ್ಯಮಾಡಿ, ಅಂಡಾಶಯದಿಂದ ಅಂಡವು ಹೊರಬೀಳದಂತೆಯೇ ಮಾಡುವುದರಿಂದ ಗರ್ಭಧಾರಣೆಯು ಸಂಭವ ಇಲ್ಲ.

ಇದರ ಮುಂದಿನ ಘಟ್ಟವೆಂದರೆ ಫಲವಂತವಾದ ಡಿಂಭವು ಗರ್ಭಕೋಶದಲ್ಲಿ ನೆಲೆಗೊಳ್ಳಲು ಸಾಧ್ಯವಾಗದಂತೆ ಮಾಡುವುದು. ನುಂಗುವ ಗುಳಿಗೆಗಳು, ಅಂಡವು ಹೊರಬೀಳುವುದನ್ನು ನಿಲ್ಲಿಸುವುದಲ್ಲದೆ, ಗರ್ಭಕೋಶದ ಒಳಪದರದ ಪರಿಸ್ಥಿತಿಯನ್ನೂ ಬದಲಾಯಿಸಿ, ಫಲಿತ ಡಿಂಭವು ನೆಲೆಗೊಳ್ಳಲು ಅಸಾಧ್ಯವಾಗುವಂತೆ ಮಾಡುತ್ತವೆ. ಹೊಸದಾಗಿ ಉಪಯೋಗಕ್ಕೆ ಬಂದಿರುವ "ವಂಕಿ" (ಲೂಪ್) ಸಹ ಸಂತಾನ ನಿರೋಧವನ್ನು ಇದೇ ರೀತಿಯಲ್ಲಿ ಮಾಡುವುದು ಎಂದು ನಂಬಲಾಗಿದೆ. ಇದುವರೆಗೂ, ನುಂಗುವ ಗುಳಿಗೆ ಮತ್ತು "ವಂಕಿ"ಯ ಉಪಯೋಗದಿಂದ, ಅಂಡವು ಅಂಡಕೋಶದಿಂದ ಹೊರ ಬರದಂತೆ, ಅಥವ ಒಂದು ವೇಳೆ ಅದು ಫಲವಂತವಾದಲ್ಲಿ ಗರ್ಭಕೋಶದಲ್ಲಿ ನೆಲೆಗೊಂಡು ಬೆಳೆಯಲು ಅಸಾಧ್ಯವಾಗುವಂತೆ, ಮಾಡುವ ಸಂತಾನ ನಿಯಂತ್ರಣ ಪದ್ಧತಿಗಳು ನಮ್ಮ ಸಮಾಜದಲ್ಲಿ ಸರ್ವತ್ರಿಕವಾಗಿ ಒಪ್ಪಿಗೆ ಪಡೆದಿರುವುದಲ್ಲದೆ ಇತರ ದೇಶಗಳಲ್ಲಿಯೂ ಆಚರಣೆಯಲ್ಲಿದೆ.

ಗರ್ಭಪಾತ

ಈಗ ಜಿಜ್ಞಾಸೆ ಇರುವುದು ಮುಂದಿನ ಹಂತದಲ್ಲಿ ಎಂದರೆ ನೆಲೆಗೊಂಡ ಫಲಿತ ಡಿಂಭವನ್ನು ಗರ್ಭಕೋಶದಿಂದ ಹೊರತೆಗೆಯುವುದು. ಈ ಜಿಜ್ಞಾಸೆಗೆ ಕಾರಣವು ಬಹುಶಃ ಈ ಕಾರ್ಯ ವಿಧಾನಕ್ಕೆ (ಗರ್ಭಪಾತ) ಅಬಾರ್ಷನ್ ಎಂದು ಹೆಸರಿಟ್ಟಿರುವುದು. ಗರ್ಭಪಾತವು ಶಿಶುಹತ್ಯೆಕ್ಕೆ ಸಮಾನವೆಂದೇ ಒಂದು ಭಾವನೆ ಬಂದುಬಿಟ್ಟಿದೆ. ಆದರೆ ಇದುವರೆಗೆ ತಿಳಿಸಿರುವ ವೈಜ್ಞಾನಿಕ ವಿಷಯಗಳನ್ನು ಸರಿಯಾಗಿ ಪರೀಕ್ಷಿಸಿದರೆ ಮೊದಲ ಕೆಲವು ವಾರಗಳಲ್ಲಿ ಈ ಫಲಿತ ಡಿಂಭವು ಶ್ವಾಸೋಚ್ಛ್ವಾಸಗಳಿಲ್ಲದ ಸ್ವತಂತ್ರವಾಗಿ ಜೀವಿಸಲು ಅಶಕ್ಯವಾದ ಅಂಗಾಂಶ ಎಂದು ಕಂಡುಬರುತ್ತದೆ. ಫಲಿತ ಡಿಂಭವು ನೆಲೆಗೊಂಡು ಬೆಳೆಯುವುದನ್ನು ತಡೆಗಟ್ಟಲು ನುಂಗುವ ಗುಳಿಗೆ, ವಂಕಿಗಳನ್ನು ಉಪಯೋಗಿಸಲು ಒಪ್ಪಿರುವರು ಫಲಿತ ಡಿಂಭವನ್ನು ತೆಗೆದು ಹಾಕುವುದನ್ನು ನೀತಿಬಾಹಿರವೆಂದು ತಿಳಿಯಲು ಕಾರಣವಿಲ್ಲ. ಏಕೆಂದರೆ ಒಂದರಲ್ಲಿ ಫಲಿತ ಡಿಂಭ ಗರ್ಭಕೋಶದಲ್ಲಿ ನೆಲೆಗೊಳ್ಳದಂತೆ ಮಾಡುತ್ತೇವೆ. ಇನ್ನೊಂದರಲ್ಲಿ ನೆಲೆಗೊಂಡ ಡಿಂಭವನ್ನು ಕದಲಿಸಿ ಹೊರಹೊರಡುವಂತೆ ಮಾಡುತ್ತೇವೆ. ಎರಡು ವಿಧಾನಗಳಲ್ಲೂ ಆಗುವ ಕಾರ್ಯವೊಂದೇ.

ಸಂತಾನೋತ್ಪತ್ತಿ ಶಾಸ್ತ್ರದ ಜ್ಞಾನವನ್ನು ನೆನಪಿನಲ್ಲಿಟ್ಟುಕೊಂಡು ಗರ್ಭಕಾಲದ ಮೊದಲ ಭಾಗದಲ್ಲಿ ಫಲಿತ ಡಿಂಭವನ್ನು ತೆಗೆದುಹಾಕುವುದನ್ನು, ಅನೇಕ ದೇಶಗಳು ಜನಸಂಖ್ಯೆಯನ್ನು ತಡೆಗಟ್ಟಲು ಮತ್ತು ಉತ್ತಮ ಸಂತಾನೋತ್ಪತ್ತಿಯನ್ನು ಪಡೆಯಲು ಅನುಷ್ಠಾನಕ್ಕೆ ತಂದಿವೆ.

ಭಾರತದಲ್ಲಿ ಈಗ ಇರುವ ಕಾನೂನಿನ ಪ್ರಕಾರ ಗರ್ಭಪಾತವು ಶಿಕ್ಷಾರ್ಹ. ತಾಯಿಯ ಪ್ರಾಣಕ್ಕೆ ಅಪಾಯವಿರುವುದೆಂದು ಕಂಡು ಬರದ ಹೊರತು ಗರ್ಭಪಾತ ಮಾಡಿಸಿದರೆ, ತಾಯಿ ಮತ್ತು ಗರ್ಭಪಾತ ಮಾಡುವವರು ಇಬ್ಬರೂ ಶಿಕ್ಷೆಗೆ ಒಳಗಾಗುತ್ತಾರೆ. ಇಂತಹ ಕಾನೂನು ಇದ್ದರೂ, ಇದರ ಅನುಸರಣೆಗಿಂತ ಉಲ್ಲಂಘನೆಯೇ ದೇಶದಲ್ಲಿ ಸರ್ವೇಸಾಧಾರಣವಾಗಿದೆ. ಅನೇಕ ಗರ್ಭಿಣಿಯರು ಗರ್ಭಸಂರಕ್ಷಣೆಗೆ ಬದಲಾಗಿ, ತಮ್ಮ ಜೀವವನ್ನೇ ಒತ್ತೆಯಿಟ್ಟು ಗರ್ಭಪಾತವನ್ನು ಮಾಡಿಸಿಕೊಳ್ಳಲು ಸಿದ್ಧರಿರುವರೆಂಬುದು ಅನೇಕ ವೈದ್ಯರ ಅನುಭವ. ಇವರು ಹೀಗೆ ಮಾಡುವುದು ತಾವು ಗರ್ಭಿಣಿ ಎನ್ನುವುದನ್ನು ಮುಚ್ಚಿಟ್ಟುಕೊಳ್ಳುವುದಕ್ಕಲ್ಲ. ಇವರಲ್ಲಿ ಅನೇಕರು ವಿವಾಹಿತರಾಗಿ ತಮ್ಮ ಗಂಡಂದಿರ ಪೂರ್ಣ ಒಪ್ಪಿಗೆಯನ್ನು ಪಡೆದಿರುವವರು. ಅನೇಕರು ಅಹಿತಮಾರ್ಗಗಳಲ್ಲಿ ಗರ್ಭಪಾತ ಮಾಡಿಸಿಕೊಳ್ಳಲು ಪ್ರಯತ್ನಿಸಿ, ವಿಷಮ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗುವುದು ಅಪರೂಪವೇನಲ್ಲ.

ಈ ವಿಷಮ ಪರಿಸ್ಥಿತಿಯಿಂದಾಗುವ ಸಾವುನೋವುಗಳನ್ನು ತಡೆಗಟ್ಟಬೇಕಾದರೆ, ಗರ್ಭಪಾತದ ವಿಚಾರದಲ್ಲಿ ಮುಂದಿನ ವಿಧಾನವನ್ನು ಕೂಲಂಕುಷವಾಗಿ ಚರ್ಚಿಸಿ ಸೂಕ್ತ ಕ್ರಮವನ್ನು ಕೂಡಲೆ ತೆಗೆದುಕೊಳ್ಳುವುದು ಅನಿವಾರ್ಯ. ಈ ಸಂದರ್ಭದಲ್ಲಿ ಪರದೇಶದವರು, ಅನುಸರಿಸುವ ಎಲ್ಲಾ ಮಾರ್ಗಗಳನ್ನು ನಮ್ಮಲ್ಲಿಯೂ ಕಣ್ಣುಮುಚ್ಚಿಕೊಂಡು ಅನುಷ್ಠಾನಕ್ಕೆ ತರಬೇಕೆಂದು ನಾನು ಹೇಳುವುದಿಲ್ಲ. ನಮ್ಮ ಸಮಾಜದಲ್ಲಿ ಮಹತ್ತರವಾದ ಬದಲಾವಣೆಗಳು ಆಗದ ಹಾಗೆ, ಯಾವುದೋ ಕಾಲದಿಂದ ಬಂದಿರುವ ನಂಬಿಕೆ ಮತ್ತು ಪದ್ಧತಿಗಳು, ಈಗ ತುರ್ತಾಗಿ ಆಗಬೇಕಾದ ವ್ಯಕ್ತಿಯ ಮತ್ತು ಸಮಾಜದ ಸುಧಾರಣೆಗಳಿಗೆ ಅಡ್ಡಿಯಾಗಬಾರದು.

ವಿದೇಶಗಳ ವಿಧಾನ

ತಮ್ಮ ತಮ್ಮ ಸಮಾಜದ ಆವಶ್ಯಕತೆಯನ್ನು ಅರಿತು ಅನೇಕ ದೇಶಗಳು ತಮ್ಮ ಗರ್ಭಪಾತ ಶಾಸನಗಳನ್ನು ಬದಲಾಯಿಸಿ ವಿಸ್ತರಿಸಿವೆ. ಸಾಧಾರಣವಾಗಿ ಎಲ್ಲಾ ದೇಶಗಳೂ ಗರ್ಭಪಾತವು ಎರಡು ಸಂದರ್ಭಗಳಲ್ಲಿ ಮಾಡಬಹುದೆಂದು ಒಪ್ಪಿವೆ.

(ಹನ್ನೊಂದನೇ ಪುಟ ನೋಡಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
92 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ನೈಜಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-೧.

Phone— 5711, 5712, 5713 } 3 Lines.

ಫೋನ್ : 526

ಸಂಪುಟ ೪೮
ಸಂಚಿಕೆ ೨೮
VOL. 48
No. 28

ನವಯುಗ

1921 ಸ್ಥಾಪನೆ

ಸ್ಥಾಪಕರು: ದಿ|| ಎ. ಬಿ. ಶೆಟ್ಟರು
ಸಂಪಾದಕರು: ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೭—೩—೧೯೬೯

ಯಾದವೀ ಭವಿಷ್ಯತ್ತು!

ಒಂದು ದೇಶದ ಅಭಿವೃದ್ಧಿಯು ಸಾಧನೆಯಾಗಬೇಕಾದರೆ, ಪ್ರಜೆಗಳೆಲ್ಲರೂ ಏಕಮೇಯನ್ನೇ ಧ್ಯೇಯವಾಗಿಟ್ಟು ಮುಂದುವರಿಯಬೇಕು. ಅಂತರಿಕ ಸಮರಸವನ್ನು ಸ್ಥಾಪಿಸಿಯೇ ಈ ನಡಿಗೆ ಸಾಧ್ಯ. ಒಂದು ದೇಶ—ಒಂದು ಗುರಿ ಎಂಬುದು ನಮ್ಮ ಧ್ಯೇಯ ವಾಕ್ಯವೆನಿಸದೆ ಹೋದರೆ, ನಮ್ಮ ಉದ್ದೇಶ ಸಾಧನೆಯಾಗುವುದಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಇದೇ ನಮ್ಮ ಉದ್ದೇಶವಿತ್ತು; ಆಚರಣೆಯಿತ್ತು. ಆದುದರಿಂದಲೇ ಬ್ರಿಟಿಷರನ್ನು ನಾವು ಹೊಡೆದೋಡಿಸುವಲ್ಲಿ ಸಶಕ್ತರಾದೆವು. ಸ್ವಾತಂತ್ರ್ಯೋತ್ತರ ನಮ್ಮ ವಿಶಾಲದೃಷ್ಟಿ ಸಂಕುಚಿತವಾಗುತ್ತ ಬಂದು ಇದೀಗ ಇಪ್ಪತ್ತು ವರ್ಷಗಳಲ್ಲಿ ಬಹಳಷ್ಟು ಸಂಕುಚಿತವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಒಂದೇ ಬಗೆಯ ಹಕ್ಕಿಗಳು ಒಂದೇ ಸ್ಥಳದಲ್ಲಿ ವಾಸಿಸುತ್ತವೆಯೆಂಬುದೊಂದು ಗಾದೆಯ ಮಾತು. ಜನತೆಯನ್ನು ಬಂಧಿಸುವ ಸಾಧನವಾಗಿ ಹಿಂದೆ ಮತಸಂಪ್ರದಾಯಗಳಿದ್ದುವು. ಆದರೆ ಮತಾತೀತ ರಾಷ್ಟ್ರವೆಂದು ನಮ್ಮದನ್ನು ಘೋಷಿಸಿಕೊಂಡ ಮೇಲೆ ಮತೀಯ ಸೌಹಾರ್ದವೂ ದೂರವಾಗುತ್ತ ಬಂತು. ದೇಶದ ಬೇರೆ ಬೇರೆಡೆ ನಡೆದ ಜಾತೀಯ ಗಲಭೆಗಳೇನನ್ನು ತೋರಿಸಿಕೊಡುತ್ತವೆ? ಮತೀಯ ಸೌಹಾರ್ದವನ್ನು ಬಲವಾಗಿ ಸ್ಥಾಪಿಸದೇನೇ ನಾವು ಮತಾತೀತತೆಯನ್ನು ಬಿಗಿಹಿಡಿದೆವು; ಆದುದರಿಂದಲೇ ಜಾರಿಬಿದ್ದೆವೆನ್ನಬೇಕೆ?

ರಾಜಕೀಯವಾಗಿಯೂ ನಮ್ಮಲ್ಲಿ ಮತಾತೀತತೆಯೆಂಬುದಿಲ್ಲ. ಧಾರ್ಮಿಕವಾಗಿ ನೂರಾರು ಭಿನ್ನಮತಗಳಿರುವಂತೆಯೇ ರಾಜಕೀಯದಲ್ಲೂ ಭಿನ್ನಮತಗಳು ತಾಂಡವವಾಡುತ್ತವೆ. ಮತಗಳ ಸಂಖ್ಯೆಯಂತೆಯೇ ರಾಜಕೀಯ ಪಕ್ಷಗಳೂ ಹನುಮಂತನ ಬಾಲದಂತೆಯೇ ಬೆಳೆಯುತ್ತಿವೆ. ವ್ಯಕ್ತಿನಿಷ್ಠ ಮತಗಳಂತೆ ರಾಜಕೀಯದಲ್ಲೂ ಚುನಾವಣೆಗಳಲ್ಲಿ ಸರ್ವ ಸ್ವತಂತ್ರ ಅಭ್ಯರ್ಥಿಗಳೂ ನೂರಾರು ಸಂಖ್ಯೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಆರ್ಥಿಕ ಭಾಗಗಳಾದಿ ಅನೇಕ ಅಂಶಗಳಿಂದ ಮತಾಂತರದ ಕಾರ್ಯ ಹಿಂದಿನಿಂದಲೂ ನಡೆಯುತ್ತ ಬಂದಂತೆ ಇಂದು ಇದೇ ಕಾರಣಗಳಿಂದ ಪಕ್ಷಾಂತರಗಳೂ ಹೇರಳವಾಗಿವೆ. ಮತಾತೀತ ತತ್ತ್ವವನ್ನು ಒಪ್ಪಿಕೊಂಡಂತೆಯೇ ಪಕ್ಷಾತೀತ ತತ್ತ್ವವನ್ನೂ ದೇಶ ಒಪ್ಪಿಕೊಳ್ಳಬೇಕು ಅನ್ನುವ ಮೇಧಾವಿ ಬುದ್ಧಿಜೀವಿಗಳೂ ಕೆಲವರಿದ್ದಾರೆ. ಆದರೆ, ಮತಾತೀತತೆಯನ್ನು ನಾವು ಸಾಂವಿಧಾನಿಕವಾಗಿ ಒಪ್ಪಿಕೊಂಡಿದ್ದರೂ ಇದನ್ನು ಅನುಷ್ಠಾನಕ್ಕೆ ತರುವವರೆಷ್ಟು ಜನ? ಪ್ರತಿ ರಾಜಕೀಯ ಪಕ್ಷದಲ್ಲೂ ಚುನಾವಣೆಗಳಲ್ಲಿ ಸ್ಥಾನಗಳನ್ನು ಹಂಚುವಾಗ, ಮಂತ್ರಿಗಳ ನೇಮಕ ಮಾಡುವಾಗ, ಮತ್ತಿತರ ಅವಕಾಶ ಲಭ್ಯವಾದಾಗ ಈ ಬಗೆಯ ಮತೀಯ ಮನೋಭಾವನೆ ಅನಿವಾರ್ಯವೆಂಬಂತೆ ಮೂಡಿಯೇ ಬಿಡುತ್ತದೆ. ಅದೇ ಭಾವನೆ ಪಶ್ಚಿಮ ಬಂಗಾಳದ ಸಚಿವ ಸಂಪುಟ ರಚನೆಯಲ್ಲೂ ಮೂಡಿತ್ತು. ಪಕ್ಷೀಯ ಬಲದ ಆಧಾರದ ಮೇಲೆ 'ಸಚಿವ'ರನ್ನು ನೇಮಿಸಲಾಯಿತು. ಖಾತೆಗಳನ್ನು ಹಂಚಲಾಯಿತು. ಬಿಹಾರದಲ್ಲಿ ಸರ್ದಾರ ಹರಿಹರಸಿಂಗರು ಮಾಡಿದ್ದೂ ಹೆಚ್ಚೇನಲ್ಲ. ಅಲ್ಲಿ ಕಾಂಗ್ರೆಸ್ಸು ಸರಕಾರ ರಚಿಸಬೇಕಾದರೆ, ಕಾಮಾಖ್ಯ ನಾರಾಯಣ ಸಿಂಗರ 'ಕೌಟುಂಬಿಕ ಪಕ್ಷದ ಬೆಂಬಲ ಬೇಕೇ ಬೇಕು. ಹಾಗಿರುವಾಗ ಅವರನ್ನು ಮಂತ್ರಿ ಮಾಡದಿದ್ದರೆ ಹೇಗಾದೀತು? ಹೆಂಡತಿ ಬೇಕು, ಮಗ ಬೇಡವೆಂಬ ಪ್ರವೃತ್ತಿ. ಕಾಂಗ್ರೆಸ್ಸು ಕಾರ್ಯಕಾರಿಣಿ ಸುಬ್ರಹ್ಮಣ್ಯಂ ಮುಂದೆ ಬಾಗಿ ಹರಿಹರ ಸಿಂಗರನ್ನು ಬೆಟ್ಟು ಮಾಡಿತು. 'ರಾಜರನ್ನು ಬಿಟ್ಟು ಬಿಡಿ" ಎಂದು ಆದೇಶಿಸಿತು—ಮುಖ್ಯ ಮಂತ್ರಿಯವರಿಗೀಗ ನುಂಗಲಾರದ ತುತ್ತು. ಆದರೂ ಅವರು ಬುದ್ಧಿವಂತರು. "ತುಸು ತಾಳಿ ಸದ್ಯದ ವಿಧಾನ ಸಭೆಯ ಅಧಿವೇಶನ ಮುಗಿಯಲಿ" ಎಂದಿದ್ದಾರೆ. ನೇರವಾಗಿ ವಿಧಾನಸಭೆಯಲ್ಲೇ ಸೋಲುಣ್ಣಬಾರದೆಂಬ ಅಭಿಲಾಷೆ! ಮಧ್ಯಪ್ರದೇಶದಲ್ಲಿ ಗೋವಿಂದನಾರಾಯಣ ಸಿಂಗರೂ ಅವರ ಅನುಯಾಯಿಗಳೂ ಕಾಂಗ್ರೆಸ್ಸನ್ನು ಸೇರಿದ್ದು ಅಲ್ಲಿ ಅದು ಸರಕಾರ ರಚಿಸಲಿದೆ. ಆದರೆ ಡಿ. ಪಿ. ಮಿಶ್ರಾರ ಚುನಾವಣೆಯ ಸಂಬಂಧ ವಿವಾದದಿಂದಾಗಿ ಅವರು ಮುಖ್ಯಮಂತ್ರಿಯಾಗುವುದಿಲ್ಲ. ತನ್ನ ಉತ್ತರಾಧಿಕಾರಿಯನ್ನು ಅವರು ಸೂಚಿಸಬಯಸುತ್ತಾರೆ. ಇದು ಕೆಲವರಿಗೆ ಸಮಾಧಾನವಿಲ್ಲ. ಅಂದರೆ ಒಂದು ರಾಜಕೀಯ ಪಕ್ಷದಲ್ಲೇ ಇಷ್ಟೊಂದು ಭಿನ್ನ ಮತಗಳಿರುವಾಗ ವಿವಿಧ ಪಕ್ಷಗಳಲ್ಲಿ ಎಷ್ಟಿರಬೇಡ! ಆಂಧ್ರಪ್ರದೇಶದಲ್ಲಿ ತೆಲಂಗಾಣ ಪ್ರತ್ಯೇಕತಾ ಪ್ರವೃತ್ತಿ, ಮಹಾರಾಷ್ಟ್ರದಿಂದ ವಿದರ್ಭ ವಿಭಜನೆಯ ಚಳುವಳಿ, ಒಂದಾದ ಕರ್ನಾಟಕವನ್ನು ಎರಡಾದರೂ ಹೋಳು ಮಾಡುವ ಕೆಳಮಾತು.... ಇವೆಲ್ಲ ಏನನ್ನು ತೋರಿಸುತ್ತವೆ? ಭಾಷೆ ಮೂಲಕ ಐಕ್ಯವನ್ನು ಮೂಡಿಸಲೂ ನಮ್ಮಲ್ಲಿ ಸಶಕ್ತರಾರಿಲ್ಲವೆನ್ನಬೇಕಲ್ಲವೆ? ರಾಜ್ಯ-ರಾಜ್ಯಗಳ ಸೀಮಾ ವಿವಾದ, ಅಂತರಾಜ್ಯ ನದೀ ನೀರಿನ ಹಂಚಿಕೆ, ಚಲನ ವಲನ ಸ್ವಾತಂತ್ರ್ಯಾದಿಗಳಲ್ಲೂ ನಮ್ಮಲ್ಲಿ ಸಂಕುಚಿತ ಮನೋಭಾವನೆ ಮನೆಮಾಡಿದೆ—ಇವೆಲ್ಲವೂ ಇದುವರೆಗೆ ಒಂದು ದೇಶದವರೆಂದು ಕರೆದುಕೊಳ್ಳುವುದು ಅರಿಯ ತೋರಿಕೆಗೆ ಮಾತ್ರ, ಬೇರೆ ಬೇರೆಯಾಗುವರೇ ಇದ್ದೇವೆಯೆನ್ನಬೇಕು.

ನಮ್ಮ ದೇಶದ ವೈಶಿಷ್ಟ್ಯದ ಬಗ್ಗೆ ಒಂದು ಮಾತು ಹೇಳುತ್ತಾರೆ—ನಾವು ವಿಭಿನ್ನತೆಯಲ್ಲೂ ಏಕತೆಯನ್ನು ಕಂಡುಕೊಂಡವರು. ನಮ್ಮ ಆಚಾರ-ವಿಚಾರಗಳು, ಆಹಾರ-ವಿಹಾರಗಳು, ನಮ್ಮ ಉಡುಗೆ-ತೊಡಗೆಗಳು, ನಮ್ಮ ಮತ-ಸಂಪ್ರದಾಯಗಳು, ಭಾಷೆ-ಜಾತಿಗಳು ಬೇರೆ ಬೇರೆಯಾಗಿದ್ದರೂ ನಮ್ಮದು ಭಾರತೀಯ ಸಂಸ್ಕೃತಿಯೆಂಬ ಸೂತ್ರ ಬಂಧದಿಂದ ಸಾಂಸ್ಕೃತಿಕವಾಗಿ ಒಂದಾಗಿರುವ ದೇಶ. ಹಿಂದಿನ ಕಾಲದಲ್ಲಿ ಇದು ಸತ್ಯವಾಗಿದ್ದಿರಬಹುದು. ಆದರೆ, ಈಗ ನಮ್ಮ ಈ ಸಂಸ್ಕೃತಿ ಸೂತ್ರವು ಶಿಥಿಲವಾಗಿದೆ; ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ದೇಶವು ಬಹಳಷ್ಟು ಪ್ರಭಾವಿತವಾಗಿದೆ. ವಿಭಜನೆಗೆ, ವಿತಿಮೀರಿದ ಭೌತಿಕವಾದಕ್ಕೆ, ವ್ಯಕ್ತಿನಿಷ್ಠೆಗೆ ಹೇರಾದ ಪಾಶ್ಚಾತ್ಯ ಸಂಸ್ಕೃತಿಯು ಈ ಅನಿವಾರ್ಯ ಪ್ರಧಾನ ನಮ್ಮ ಏಕಸೂತ್ರತೆಯನ್ನು ಭಗ್ನಗೊಳಿಸಿದೆಯೆಂದರೆ ತಪ್ಪಲ್ಲ. ಇಂದು ದೇಶದೊಳಗೆ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡುವಾಗ ನಮ್ಮ ಭವಿಷ್ಯ "ಯಾದವೀ ಭವಿಷ್ಯ' ವೇ ಆದೀತೇ ಎಂಬ ಅಳುಕುಂಟಾಗುತ್ತದೆ. ಹಾಗಾಗದಂತೆ, ನಾವು ಒಂದಾಗಿರುವಂತೆ ಶ್ರಮಿಸುವುದು ರಾಜಕೀಯ ಪಕ್ಷಗಳ ಗುರಿಯಾಗಬೇಕು. ಏಕತೆಯು ಉಚ್ಚಾದರ್ಶ ಸೂತ್ರವಲ್ಲ, ಧ್ಯೇಯವೂ ಆಗಬೇಕು. ಇದಕ್ಕಾಗಿ ಪರಿಶ್ರಮಿಸಬೇಕು.

ಅಜಯರ ಅಪಜಯ

ಪಶ್ಚಿಮ ಬಂಗಾಲ ಮತ್ತು ಕೇಂದ್ರ ಸರಕಾರಗಳ ನಡುವಣ ಹೋರಾಟ ಒಂದು ಹಂತಕ್ಕೆ ಬಂದು ನಿಂತಿದೆ. ರಾಜ್ಯಪಾಲ ಧರ್ಮವೀರರನ್ನು ವಿಧಾನ ಸಭೆಗಳ ಸಮಾವೇಶಗೊಳ್ಳುವುದಕ್ಕೆ ಮೊದಲೇ ಹಿಂದೆ ಕರೆಸಿಕೊಳ್ಳಬೇಕೆಂಬ ಅಜಯರ ವಾದಕ್ಕೆ ಕೇಂದ್ರದಲ್ಲಿ ಬೆಲೆ ಬಂದಿಲ್ಲ. ಮುಂದೆ ತನಗಾರು ಹಿತವರು ಎಂಬ ಬಗ್ಗೆ ಅಜಯ ಸಂಪುಟವೇ ಒಂದು ಪಟ್ಟಿ ಮಾಡಿಕೊಟ್ಟಿತ್ತು. ಆದರೆ, ಈ ಪಟ್ಟಿಯಲ್ಲಿರುವವರು ತನಗೆ ಸಮ್ಮತವಲ್ಲವೆಂದು ಕೇಂದ್ರ ತಿಳಿಸಲೇಬೇಕಾಯಿತು; ಸದ್ಯ ಬ್ರಿಟನ್ನಿನಲ್ಲಿ ಭಾರತದ ಹೈಕಮಿಷನರ್ ಆಗಿರುವ ಶ್ರೀ ಎಸ್. ಎಸ್. ಧವನ್‌ರ ಹೆಸರನ್ನು ದಿಲ್ಲಿಯು ಸೂಚಿಸಿದರೆ ಅವರು ನಮಗೆ ಅಪರಿಚಿತರು ಎಂದು ಕಲಕತ್ತೆಯ ಉತ್ತರ. ಆದಷ್ಟು ತ್ವರಿತವಾಗಿ ಧರ್ಮವೀರರನ್ನು ಮರಳಿ ಕರೆಯಬೇಕೆಂಬ ಅಜಯರ ಬಯಕೆಯನ್ನು ಈಡೇರಿಸುವ ಆಶ್ವಾಸನವನ್ನು ಇಂದಿರಮ್ಮ ನೀಡಿದ್ದೇನೋ ನಿಜ. ಆದರೆ, ಇದು ನಿರೀಕ್ಷಿಸಿದಷ್ಟು ಶೀಘ್ರ ಆಗುವ ಕೆಲಸವಲ್ಲ. ಧರ್ಮವೀರರ ಉತ್ತರಾಧಿಕಾರಿಯ ಆಯ್ಕೆ ಗಡಚಾವನ್ನು ಅಜಯರಿಗೆ ಒಪ್ಪಿಸಿ; ಇಂದಿರಮ್ಮನಿಗೆ ಸಂತೋಷವೆನ್ನಲೆ? ಇವರಿಬ್ಬರ ನಡುವೆ ಧರ್ಮವೀರರ ಆಶಯಕ್ಕೆ ಮನ್ನಣೆಯಿಲ್ಲವೆ?

ವಿದಾಯ ಸತ್ಕಾರ

ಉಡುಪಿ, ತಾ. 21—ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯ ಏಳನೇ ತರಗತಿಯ ಮಕ್ಕಳ ವಿದಾಯ ಸತ್ಕಾರ ಸಮಾರಂಭವು ಉಡುಪಿ ವಿಭಾಗದ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಶ್ಯಾಮ ಭಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಶಾಲಾ ಮೆನೇಜರ್‌ರಾದ ಶ್ರೀ ಕೆ. ಜಗನ್ನಾಥ ನಾಯರ್‌ರವರು ಸ್ವಾಗತಿಸಿದರು. ವಿದ್ಯಾರ್ಥಿಗಳಲ್ಲಿ ಸುಧಾಕರ ಸೆಟ್ಟಿ, ಜಗದೀಶ ಮತ್ತು ಕುಮಾರಿ ಭಾಸಿನಿ ಪ್ರಭುರವರು ತಮ್ಮ ಶಾಲಾ ಜೀವನದ ಕುರಿತು ಮಾತನಾಡಿದರು. ತರುವಾಯ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್. ಎಲ್. ಭಟ್ ಮತ್ತು ಅಧ್ಯಾಪಕರುಗಳಾದ ಶ್ರೀ ಯು. ರತ್ನಾಕರ ಅಡಿಗ ಮತ್ತು ಶ್ರೀ ಕೆ. ಜನಾರ್ಧನ ರಾವ್‌ರವರು ಮಕ್ಕಳನ್ನು ಹರಸಿ ಮಾತನಾಡಿದರು. ಅಧ್ಯಕ್ಷರ ಭಾಷಣದ ತರುವಾಯ ಲಘೂಪಹಾರ ಹಾಗೂ ಫೋಟೋ ಕಾರ್ಯಕ್ರಮದೊಂದಿಗೆ ಸಭೆಯು ಮುಕ್ತಾಯವಾಯಿತು.

ಶ್ರೀಮತಿ ಚಂದ್ರಭಾಗಿ ಹೆಗ್ಗಡ್ತಿಯವರ ನಿಧನ

ಸುಪ್ರಸಿದ್ಧ ಬಂಟ ಮನೆತನದ ದಿ| ಅಂಬಾರು ಮೊಂಟೆಟ್ಟು ತಿಮ್ಮಪ್ಪ ಹೆಗ್ಗಡೆಯವರ ಪತ್ನಿ ಬಾಕ್ರೈಲು ಚಂದ್ರಭಾಗಿ ಹೆಗ್ಗಡ್ತಿಯವರು ತಾ. 10-3-69ರಂದು ಮಂಗಳೂರಿನಲ್ಲಿ ಅವರ ಪುತ್ರ ಡಾ| ಬಿ. ಆರ್. ಹೆಗ್ಡೆಯವರ ನಿವಾಸದಲ್ಲಿ ತಮ್ಮ 67ನೇ ವಯಸ್ಸಿನಲ್ಲಿ ನಿಧನರಾದರು. ದಿವಂಗತೆಯವರಿಗೆ [illegible] ಜನ ಗಂಡುಮಕ್ಕಳೂ 4 ಜನ ಹೆಣ್ಣುಮಕ್ಕಳೂ ಇದ್ದಾರೆ.

ನರಸಣ್ಣನ ಸರಸ



"ಪೂರ್ವಗಡಿಯಲ್ಲಿ ಪಾಕ್ ಸೇನೆಯ ಗುಂಡು ಹಾರಾಟ ಅಲ್ಲಿನ ರಾಜಕೀಯ ವಿರೋಧವನ್ನು ಭಾರತದತ್ತ ಹರಿಸುವ ಅಯೂಬ್ ಸಂಚೇಕಿರಬಾರದು?"

ಗೇಹರಾಜ್ಯದಲ್ಲಿ

ಹಕ್ಕಿ ಹಾರುತಿದೆ ನೋಡಿದಿರಾ?

"ಕೇಳಿದ್ಯೇನು?"

"ಏನನ್ನ....?"

"ಈ ವರ್ಷ ನಿರೀಕ್ಷೆಗಿಂತ ಹೆಚ್ಚು ಆಹಾರ ಧಾನ್ಯಗಳ ಉತ್ಪಾದನೆಯಾಗಿದೆಯಂತೆ..."

"ಅಂದರೆ ನಮ್ಮ ಸಂಕಟ ದೂರವಾಯ್ತೂಂತಾಯ್ತು... ಮತ್ತೆ ನೋಡಿ, ಮಂತ್ರಿಗಳು ಧಾಯಿಯಾಯಿಯವ್ರೂ ಜಗಜೀವನರಾಮ್ರೂ ಹೇಳ್ತಾ ಇದ್ದಾರಲ್ಲಾ..."

"ಏನೂಂತ?"

"ಮುಂದಿನ ಒಂದೆರಡು ವರ್ಷಗಳಲ್ಲೇ ನಾವು ಆಹಾರ ವಿಷಯದಲ್ಲಿ ಸ್ವಾವಲಂಬನೆಯನ್ನ ಸಾಧಿಸ್ತೇವೇಂತ...'

"ಅದು ಸರಿಯೇ. ಇದಕ್ಕೇಂತಲೇ ಕೃಷಿಗೆ ಅನುಕೂಲವಾದ ಗೊಬ್ಬರ, ಪಂಪು ಮೊದಲಾದುವುಗಳ ಮೇಲೆ ಹೊಸತಾಗಿ ಕರ ಹೇರಿದ್ದು...."

"ನೋಡಿ, ಮಂತ್ರಿಗಳ ಸ್ವಭಾವಾನೇ ಹಾಗೇಂತ ನೀವೇ ಹಿಂದೊಮ್ಮೆ ಅಂದಿದ್ರಲ್ಲಾ?"

"ಹೇಗೆ?"

"ಲೋಕಸಭೆಯಲ್ಲಿ ಹಿಂತೆಗೆಯುಕೊಳ್ಳುವ, ಕಡಿಮೆ ಮಾಡುವ ಕರಗಳನ್ನೂ ಅವ್ರು ಹೇರುತ್ತಾರೇಂತ...."

"ಓ, ಪರವ್ವಾಗಿಲ್ಲ ಕಣೋ, ಅಂದ್ರೆ ಈಗ ಈ ಕೃಷಿ ತೆರಿಗೆಯನ್ನ ಹಿಂದೆ ತೆಗೆದುಕೊಳ್ತಾರೆ.."

"ಮತ್ತೆ? ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದಲ್ಲೂ ಇದು ಚರ್ಚೆಯ ವಿಷಯವಾಯ್ತು. ಲೋಕಸಭೆಯಲ್ಲಿ ಈ ಬಗ್ಗೆ ಪ್ರಾರಂಭಿಸಿದ್ದ ಅಭ್ಯಾಸನ ಕೇಳಿದ್ರಲ್ಲಾ?"

"ಹೌದು....ಆದರೆ ನೋಡು ..."

"ಏನು?"

"ಈಗ ಒಂದೆರಡು ವರ್ಷಗಳಿಂದ ದೇಶದ ಆಹಾರ ಪರಿಸ್ಥಿತಿ ಸ್ವಲ್ಪ ಸಮಾಧಾನಕರ ಸ್ಥಿತಿಗೆ ಸುಧಾರಿಸಿದ್ದಾದರೆ, ಅದು ವರುಣದೇವನ ಕೃಪೆಯಿಂದ ......"

"ಹೌದು, ಯಾರಲ್ಲೇಂತ ಹೇಳ್ತಾರೆ? ಕೇಂದ್ರ ಸರಕಾರ ಹೋರಾಡಿದೆಯಂತೆ? ಸುಧಾರಿಸಿದ್ದು ನಿಜ ತಾನೆ?'

'ಜನರನ್ನ ರಾತ್ರಿಯೆನ್ನಬಹುದೆ?"

"ಅನ್ನವಹರೂ ಇದ್ದಾರೆನ್ನಿ..."

'ಅವರನ್ನು ದೂರವಿಡು.. ಸತ್ಯವನ್ನು ಹೇಳುವವರ ಸಂಗತಿ ನಮಗೆ ಬೇಡ.'

'ಆಯ್ತಪ್ಪಾ...."

"ಆದರೆ ನೋಡು....'

'ಏನು!"

"ವರುಣದೇವನ ಕೃಪೆ ನೀರ ಮೇಲಣ ಗುಳ್ಳೆಯಂತಲ್ಲವೆ?"

'ಹೌದು......'

"ಅದನ್ನೇ ನಂಬಿ ನಾವು ಉನ್ನತಿಪಥಗಾಮಿಗಳಾಗುವುದು ಸಾಧ್ಯವಿಲ್ಲ......"

'ಅದಕ್ಕೆಂದೇ ನೀರಾವರಿ ಯೋಜನೆ ....'

"ಏನು ಹೇಳ್ತೀಯೋ? ವರುಣ ನೆಲೆಯಿದೆ ಹೋದರೆ, ನದಿಗಳಲ್ಲಿ ನೀರೆಲ್ಲಿಯದು? ನಮ್ಮೂರ ಹೊಳೆಯನ್ನ ಕಂಡರೇ ಸಾಲದೇನು?"

'ಅದು ನಿಜಾನ್ನಿ, ಹಿಂದೆ ಈ ಸಮಯಕ್ಕೆ ಮೊಣಗಂಟು ತನಕವಾದ್ರೂ ನೀರಿರುತ್ತಿತ್ತು, ಈಗ ಬರಿಯ ಹಳ್ಳವಾಗಿದೆ, ಒಣಗಿಹೋಗಿದೆ.'

'ಇಂಥ ಕಡೆ ಪಂಪುಗಳಿಂದ ಹೊಯ್ಸುರಿಯುವುದೇನು?

'ಹಾಗಾದರೆ ಬಾವಿ ತೋಡಬೇಕೇನು?'

"ಬಾವಿಯ ಕತೆಯೂ ಅಷ್ಟೆ. ಹಿಂದೆ ಇಡೀ ವರ್ಷ ನೀರಿರುತ್ತಿದ್ದ ಬಾವಿಗಳು ಇಂದು ಎಪ್ರಿಲಿಗೆ ಮೊದಲೇ ಆರಿಹೋಗುತ್ತಿವೆ..."

"ಅದೂ ಹೌದು. ನಮ್ಮ ಮೇಲ್ಮನೆ ಸೀತಮ್ಮ ಹೇಳುತ್ತಿದ್ದಳು... ಇದಕ್ಕೆಲ್ಲಾ ಏನುಪಾಯ?"

"ಉಪಾಯವೇನು? ಅರಣ್ಯಗಳಿಗೆ ತಕ್ಕ ರಕ್ಷಣೆ ಮಾಡಿಕೊಳ್ಳುವುದು...."

"ಅಂದರೆ, ಹೆಚ್ಚಿನ ಉತ್ಪಾದನೆಯನ್ನು ಹಾಳಾಗದಂತೆ ಜೋಪಾನ ಮಾಡುವುದು..."

"ಹೌದು, ಆದರೆ, ಎಷ್ಟು ಸಮಯ ಹಾಗೆ ಸಾಗಿಸಲಾಗುತ್ತದೆ? ವರುಣನ ಕೃಪೆ ಹೇಳಿ ಕೇಳಿ ಸ್ಥಾಯಿಯಾಗುವುದಿಲ್ಲ..."

"ಅದಕ್ಕೆ?"

"ದೇಶದ ಸಾಂಪತ್ತಿಕ ಸ್ಥಿತಿಯನ್ನು ಉತ್ತಮ ಪಡಿಸುವುದೊಂದೇ ಉಪಾಯ. ಆದರೆ, ಇದು ಶಾಶ್ವತ ರೂಪದಲ್ಲಿರಬೇಕು ...."

"ಅಂದರೆ?"

"ಕೃಷಿ-ಕೈಗಾರಿಕೆಗಳೆರಡೂ ಬೆಳೆಯಬೇಕು...."

'ಬೆಳೆಯುತ್ತಿವೆಯಲ್ಲಾ?"

"ಇವೇನ್ನು, ಕುಂಟು ನಡಿಗೆ. ಅದಕ್ಕೆ ಇದಕ್ಕೆ ದೇಶಿಯ ಸಂಪತ್ತೇ ಬಂಡವಾಳವಾಗಬೇಕು."

"ಅಷ್ಟು ಬಂಡವಾಳ ಹೂಡಲು ನಮ್ಮದು ಬಡ ದೇಶತಾನೆ?

"ಹೌದು, ಉಳಿದ ದೇಶಗಳೊಡನೆ ಹೋಲಿಸಿದರೆ, ನಮ್ಮದು ಬಡದೇಶ. ಆದರೆ, ಇದನ್ನು ಕಂಡುಕೊಂಡವರು ಬರಿಯ ಬಡವರು ಮಾತ್ರ.'

"ಅಂದರೆ?"

'ಶ್ರೀಮಂತರನ್ನು ನೋಡು, ತಮ್ಮದು ಬಡದೇಶ ಅನ್ನುವ ಕಲ್ಪನೆಯೂ ಅವ್ರ ಕಲ್ಪನಾಪಟಲದಲ್ಲಿ ಮೂಡಿಲ್ಲ..."

'ಹೌದು'

'ನೋಡು ಪ್ರಸಿದ್ಧ ಅರ್ಥಶಾಸ್ತ್ರಜ್ಞರೊಬ್ಬರು ಹೇಳುತ್ತಾರೆ-ನಮ್ಮ ಇಂದಿನ ದುಸ್ಥಿತಿಗೆ ಚೀನೀ ಆಕ್ರಮಣ, ಪಾಕ್ ಯುದ್ಧ, ಬರಗಾಲ ಅಥವಾ ಜನಸಂಖ್ಯೆಯ ಹೆಚ್ಚಳ ಮಾತ್ರ ಕಾರಣವಲ್ಲ; ಜನಸಾಮಾನ್ಯರಿಂದ ಹಣವು ಶ್ರೀಮಂತರತ್ತ ಹರಿಯುತ್ತಿರುವುದೇ ಮುಖ್ಯ ಕಾರಣ."

"ಅಂದರೆ?"

"ಅಂದರೆ ಏನು? ಅವರೇ ಹೇಳುತ್ತಾರೆ— ಇತ್ತೀಚೆಗೆ ಬಟ್ಟೆ, ಆಹಾರ, ಎಣ್ಣೆ, ಮುಂತಾದ ಅವಶ್ಯಕ ವಸ್ತುಗಳ ಬೇಡಿಕೆ ಕಡಿಮೆಯಾಗಿದೆ. ಕಾರು, ರೆಫ್ರಿಜರೇಟರು, ರೇಡಿಯೋ ಮೊದಲಾದ ಭೋಗ ವಿಲಾಸದ ವಸ್ತುಗಳ ಬಗ್ಗೆ ಬೇಡಿಕೆ ಹೆಚ್ಚಾಗುತ್ತಿದೆ."

"ಇದೇನು ಹೇಳುತ್ತೀರಿ?"

"ನಾನಲ್ಲ, ಅರ್ಥಶಾಸ್ತ್ರಿಗಳೇ ಅನ್ನೋರು. ಅವರು ಹೇಳುತ್ತಾರೆ— ಅವರದು ಲೈಸನ್ಸ್ ನೀಡಿಕೆಯಿಂದಾಗಿ ಹಣದ ಹೊಳೆ ಹರಿಯುತ್ತದೆ. ಅದು ಶ್ರೀಮಂತರನ್ನು ಸೇರುತ್ತದೆ. ಇದರಿಂದ ವರ್ಷ ವರ್ಷಕ್ಕೂ ಬಡ ಸಂಸಾರಗಳ ಸಂಖ್ಯೆ ಬೆಳೆಯುತ್ತದೆ. ಉಳಿತಾಯ ಸೊನ್ನೆ— ಬಂಡವಾಳವಿಲ್ಲ. ಆದ್ದರಿಂದ ಹಣದ ಹೊಳೆ ಈ ಗತಿಯನ್ನು ಬದಲಾಯಿಸದೆ ಭವ್ಯ ಉದ್ಧಾರ ಸಾಧ್ಯವಿಲ್ಲ...."

"ಅದು ಸರೀರಿ.... ಬಡವನಾದ್ರೂ ಸುಖಭೋಗ ಬಯಸುವುದು ಸ್ವಾಭಾವಿಕ. ಅದರಿಂದಲೇ ನೋಡಿ, ಸರ್ಕಾರ ಯಾವಾಗ್ಲೂ ವಿಲಾಸದ ವಸ್ತುಗಳ ಮೇಲೇ ಕರ ಹೇರುತ್ತಾರೆ...."

"ಕೈಗಾರಿಕೆಗೆ ಬೇಕಾದ ಬಂಡವಾಳ ದೇಶೀಯ ಉಳಿತಾಯದಿಂದಲೇ ಬರಬೇಕು ಅಂದರೆ, ಜನತೆಯಲ್ಲಿ ಸರಳ ಜೀವನ ಒಲವು ಮೂಡಿ ಬರಬೇಕು; ಉಳಿತಾಯ ಮನೋವೃತ್ತಿ ಬೆಳೆಯಬೇಕು...."

"ಜನಸಾಮಾನ್ಯರು ತಮ್ಮ ಸಂಪಾದನೆಯಲ್ಲಿ ಕಾಲಕ್ಷೇಪ ಮಾಡುವುದೇ ಕಷ್ಟವಾಗಿರುವಾಗ...."

'ಯಾಕೆ ಹಾಗಂತೀಯ? ದಿನಾ ಐದಾರು ರೂಪಾಯಿ ಸಂಪಾದಿಸೋ ಕೂಲಿಗಾರನಾದ್ರೂ ಅಪವ್ಯಯ ಮಾಡದೆ ಇದ್ದರೆ, ದಿನಯಾಪನೆ ಸಾಧ್ಯವಿಲ್ಲವೇನು?"

"ಅದು ಆಚೆ ಇಡಿ. ಸಾಧ್ಯ ಎಲ್ಲಾ ಇದೆ. ಕುಡಿಯೋದು, ಸೇದೋದು, ಜೂಜಾಡುವುದು, ನಾಲಿಗೆ ವ್ಯಸನಗಳಲ್ಲಿ ತೊಳಲಾಡುವುದರಿಂದ ಭಾರಿ ಉಳಿತಾಯ ಸಾಧ್ಯ ..."

"ಅದೇ ಮುಖ್ಯ, ಸದ್ಗುಣಸಂಪನ್ನರಾದರೇನೆ ಉಳಿತಾಯ..."

"ಅಲ್ರಿ, ಫರಂಗಿಯವರ ಬಣ್ಣ ತಳುಕಿಗೆ ಮೈಸೋತು ನಾವೂ ಬಳಿದುಕೊಳ್ಳುವ ಅಭ್ಯಾಸ ಮಾಡಿಕೊಂಡೆವು. ಆದರೆ, ಕರಿಯ ಮೇಲೆ ಮತ್ಯಾವ ಬಣ್ಣವೂ ಪಕ್ಕನೇ ನಿಲ್ಲುವುದಿಲ್ಲ ತಾನೆ?

ಹೌದು...."

"ಅಲ್ರಿ, ಬಿಹಾರದ ಹರಿಹರಸಿಂಗರು ನಿಜಕ್ಕೂ ಬುದ್ಧಿವಂತ್ರು...."

"ಯಾಕೆ?'

"ಅವ್ರು ಭಾರಿ ವಿಜಯಗಳಿಸಿಯೇ ಬಿಟ್ರಲ್ಲಾ?

"ಹೌದು...ವಿಧಾನ ಸಭೆಯ ಸ್ಪೀಕರ್ ಕಾಂಗ್ರೆಸ್ ಅಭ್ಯರ್ಥಿ ಮಂಡಲ್ ಗೆದ್ದಾಗಲೇ ಅವರ ಜಯಭೇರಿ ಮೊಳಗಿತು...'

"ಮತ್ತೀಗ ಅವಿಶ್ವಾಸ ಧ್ವನಿಮತಗಳಿಂದಲೇ ಬಿದ್ದುಹೋಯ್ತು...."

"ಏನಿದ್ದರೂ ಅವರು ಕಾಂಗ್ರೆಸ್ ಕಾರ್ಯಕಾರಿಣಿಯ ಗೊತ್ತುವಳಿಯನ್ನು ಅನುಷ್ಠಾನಕ್ಕೆ ತರಬೇಕಲ್ಲ?"

"ತಾರದಿದ್ದರೆ?"

"ಮುಂದೆ ನೋಡಬೇಕು..."

(ಹತ್ತನೇ ಪುಟ ನೋಡಿರಿ)

ಸಿಂಡಿಕೇಟಿನ 'ಎಗ್ರಿಕಾರ್ಡ್' ಹೊಂದಿರುವವರ ಅವಗಾಹನೆಗಾಗಿ

1968ನೆಯ ವರ್ಷದಲ್ಲಿ 'ಎಗ್ರಿಕಾರ್ಡ್' ಪಡೆದವರು ತಮ್ಮ ಸಾಲದ ಬಾಕಿಯನ್ನು ಇದೇ ಮಾರ್ಚ ತಿಂಗಳ ಅಂತ್ಯದೊಳಗೆ ಬ್ಯಾಂಕಿಗೆ ಕಟ್ಟಿ ಕಾರ್ಡನ್ನು ಹಿಂತಿರುಗಿಸಬೇಕು. ಹೀಗೆ ಬಾಕಿಯನ್ನು ಸಂದಾಯ ಮಾಡಿದವರಿಗೆ ಎಪ್ರಿಲ್ ತಿಂಗಳಿನಲ್ಲಿ ಹೊಸ ಕಾರ್ಡುಗಳನ್ನು ನೀಡಲು ಅನುಕೂಲವಾಗುತ್ತದೆ.

ಎಗ್ರಿಕಾರ್ಡಿನ ಪ್ರಯೋಜನವನ್ನು ಪಡೆಯಲು ಅಧಿಕ ಸಂಖ್ಯೆಯಲ್ಲಿ ರೈತರು ಮುಂದೆ ಬಂದಿದ್ದಾರೆ. ಈ ವರ್ಷ ನಿರ್ದಿಷ್ಟ ಅವಧಿಯೊಳಗೆ ನಿಯಮಿತ ಸಂಖ್ಯೆಯಲ್ಲಿ ಮಾತ್ರ ಕಾರ್ಡುಗಳನ್ನು ಕೊಡಲಾಗುವುದು.

ಕೃಷಿ ಆರ್ಥಿಕ ನೆರವಿನ ವಿಭಾಗ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಗೆ ಪ್ರತಿಯೋರ್ವನ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶ್ರೀ ಟಿ. ಎ. ಪೈ
ಚೇರ್ಮನ್.

ಗಾಂಧೀಜಿ ಮತ್ತು ವಿದ್ಯಾರ್ಥಿಗಳು

ರಾಜಕಾರಣದಲ್ಲಿ ಪ್ರತ್ಯಕ್ಷ ಭಾಗವಹಿಸಿದ ವಿದ್ಯಾರ್ಥಿಯು ಅದೇ ಕಾಲಕ್ಕೆ ವಿದ್ಯಾರ್ಜನೆಯನ್ನು ಮುಂದುವರಿಸಲಾರ —ಎಂದರು ಗಾಂಧೀಜಿ.

ಗಾಂಧೀಜಿ ಅಸಹಕಾರ ಚಳುವಳಿಯನ್ನು ದೇಶವ್ಯಾಪಿಸಿ ನಡೆಸಿದರು. ಆ ದಿನಗಳಲ್ಲಿ ಶಾಲೆ ಕಾಲೇಜುಗಳನ್ನು ತ್ಯಜಿಸಲು ಗಾಂಧೀಜಿಯವರೇ ವಿದ್ಯಾರ್ಥಿಗಳನ್ನು ಕೇಳಿಕೊಂಡರು; ಅಥವಾ ರಾಷ್ಟ್ರೀಯ (ನ್ಯಾಷನಲ್ ಸರಕಾರೇತರ) ಶಾಲೆಗಳನ್ನು ಸೇರಲು ವಿದ್ಯಾರ್ಥಿಗಳಿಗೆ ಭಿನ್ನವಿಸಿದರು. ಆದರೆ ವಿದೇಶೀಯರ ವಿರುದ್ಧ ನಡೆದ ಸಾಮೂಹಿಕ ಅಸಹಕಾರ ಚಳುವಳಿಗೂ ಮತ್ತು ನಮ್ಮದೇ ಆದ ಸರಕಾರ ಅಧಿಕಾರದಲ್ಲಿರುವಾಗ ಅಸಹಕಾರ ಚಳುವಳಿಯನ್ನು ಪ್ರಾರಂಭಿಸುವಲ್ಲಿಯೂ ಮಹದಂತರವಿದೆ. ಕಲಿತವರ್ಗ ಅಥವಾ ಕಲಿಯುವ ವರ್ಗ 'ಜನ ವಿರೋಧಿ' ಎಂದ ಭಿನ್ನವಿದ ಎಂದು ಗಾಂಧೀಜಿ ಭಾವಿಸಿದರು. 1927ರಲ್ಲಿ ಬನಾರಸಿನಲ್ಲಿ ಗಾಂಧೀಜಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಹೀಗೆ ನುಡಿದರು "ನಿಮ್ಮ ಶಿಕ್ಷಣಕ್ಕೆ ಹಣ ನೀಡುವವರು ಬಡವರು ... ಹೊಟ್ಟೆ ಬಟ್ಟೆ ... ಪ್ರಯತ್ನ ... ಅವರ ... ಅವರಿಗೆ ನೀವು ಪಡೆಯುತ್ತಿರುವ ಶಿಕ್ಷಣಕ್ಕೆ ಎರವಾಗಿದ್ದಾರೆ. ಯಾವ ಶಿಕ್ಷಣವು ಕಡು ಬಡವರಿಗೆ ದೂರಕಲು ಅಸಾಧ್ಯವೋ ಅಂತಹ ಶಿಕ್ಷಣ ಹೊಂದಲು ನೀವು ಆಸೆಮಾಡಬೇಡಿ— ಆದರೆ ಹೀಗೆ ಮಾಡಿರೆಂದು ಈ ದಿನ ಉಪದೇಶಿಸಲಾರೆ, ಆದರೆ ಬಡವರಿಗೆ ಕಿಂಚಿತ್ ಸೇವೆ ಸಲ್ಲಿಸಲು ಮಾತ್ರ ನೀವು ಎಂದೂ ಮರೆಯಕೂಡದು."

ಈ ದಿನಗಳಲ್ಲಿಯಂತೂ ಸಾರ್ವತ್ರಿಕ ಶಿಕ್ಷಣ ವಿಷಯಕ್ಕೆಂದು ವೆಚ್ಚವಾಗುತ್ತಿರುವ ಹಣದ ಮೊತ್ತ ಗಣನೀಯವಾಗಿದೆ. ಚತುರ್ಥ ಯೋಜನೆಯಲ್ಲಿ ಕೇಂದ್ರ ರಾಜ್ಯ ಸರಕಾರಗಳು ಕೂಡಿ ಒಟ್ಟು 809 ಕೋಟಿ ರೂ.ಗಳಷ್ಟು ವೆಚ್ಚ ಮಾಡಬೇಕೆಂದು ಸೂಚಿಸಲಾಗಿದೆ. ಜನತೆಗೆ ಹೆಚ್ಚಾಗಿ ಗ್ರಾಮಸ್ಥರಿಗೆ ಈ ಋಣವನ್ನು ಎಂತು ತೀರಿಸಬೇಕು?

ಮೂಲ ಶಿಕ್ಷಣ

ಗಾಂಧೀಜಿಯವರು ಬೋಧಿಸಿರುವ ಶಿಕ್ಷಣ ಸೂತ್ರದ ಮೇರೆಗೆ ವಿದ್ಯಾರ್ಥಿ ಕಲಿಯುವಾಗಲೇ ತನ್ನ ಪರಿಶ್ರಮದಿಂದ ಮಾಡಿದ ಸಂಪತ್ತು ಹೆಚ್ಚಳಕ್ಕೆ ಕಾರಣವಾಗಬಲ್ಲ ಮೂಲಶಿಕ್ಷಣದ ಮುಖ್ಯ ಮಾತೇ ಇದಾಗಿತ್ತು. ಎಲ್ಲ ವಿದ್ಯಾರ್ಥಿಗಳೂ ಕಸುಬನ್ನು ಕಲಿತರೆ, ಶಾಲೆಯ ಶಿಕ್ಷಣದ ಪ್ರಾರಂಭದ ದೆಸೆಯಿಂದಲೇ ಅವರ ಶಿಕ್ಷಣವು ವೃತ್ತಿಮುಖಿಯಾಗಿದ್ದರೆ, ದೇಶಕ್ಕೆ ಶಿಕ್ಷಣವೆಚ್ಚ ಬೃಹತ್ ಪ್ರಶ್ನೆಯಾಗಬಾರದು. ವಿದ್ಯಾರ್ಥಿಗಳೂ ದೈಹಿಕ ಶ್ರಮದ ಬಗ್ಗೆ ಆದರಾಭಿಮಾನವುಳ್ಳವರಾಗುವರು. ಇಂತಹ ಹಿನ್ನೆಲೆಯಲ್ಲಿ ಬೆಳೆದು ಬಂದ ವಿದ್ಯಾರ್ಥಿಗಳು ಕಾಲೇಜು ಮಟ್ಟದಲ್ಲಿ ಬುದ್ಧಿ, ಹೃದಯ ಮತ್ತು ತೋಳ್ಬಲದ ಸಾಮರ್ಥ್ಯವನ್ನು ಸುಸಂಬದ್ಧ ರೀತಿಯಲ್ಲಿ ತೋರಿಸಲು ಶಕ್ತರಾಗುವರು.

ಬುದ್ಧಿ ಪ್ರಚೋದನೆಯ ಶಿಕ್ಷಣದ ಬಗ್ಗೆ ಗಾಂಧೀಜಿಯವರಿಗೆ ತಿರಸ್ಕಾರವಿತ್ತು ಎಂದೇನೂ ಅಲ್ಲ. ಆದರೆ ನೈಜ ಜೀವನದಿಂದ ದೂರವಾದ, ನೆಲದ ಗುಣಕ್ಕೆ ವಿರುದ್ಧವಾದ ಶಿಕ್ಷಣದ ಬಗ್ಗೆ ಅವರಲ್ಲಿ ಸಹಾನುಭೂತಿ ಇರಲಿಲ್ಲ. ಸಮಾಜದ ಋಣ ತೀರಿಸಲು ವಿದ್ಯಾರ್ಥಿಗಳು ಸಲಿಕೆ ಬುಟ್ಟಿ ಪೊರಕೆಗಳನ್ನು ಹಿಡಿದು ಕೆಲಸ ಮಾಡಲು ಸಿದ್ಧರಾಗಬೇಕು. ವಿದ್ಯಾರ್ಥಿಗಳು ತಮ್ಮ ರಜೆಯ ದಿನಗಳನ್ನು ಗ್ರಾಮಗಳ ವಿಕಾಸಕ್ಕೆ, ಹರಿಜನೋದ್ಧಾರಕ್ಕೆ ಮೀಸಲಾಗಿ ಇಡಬಹುದು. ಹಳ್ಳಿಯ ಜನರೊಂದಿಗೆ ಮಧುರ ಬಾಂಧವ್ಯ ಕಲ್ಪಿಸಲು ಖಾದೀ ಕಾರ್ಯಕ್ರಮವು ಪೋಷಕ. ಅಲ್ಲದೆ ತಮ್ಮ ಬಿಡುವಿನ ವೇಳೆಯಲ್ಲಿ ಬೇರೆಬೇರೆ ಸಾಮಾಜಿಕ ಕಾರ್ಯಗಳನ್ನು ವಿದ್ಯಾರ್ಥಿಗಳು ಮಾಡಬಲ್ಲರು.

ಜಾತೀಯತೆ ... ಕೋಮುವಾದಗಳನ್ನು ... ವಿದ್ಯಾರ್ಥಿಗಳು ಶಾಂತಿದಳವನ್ನು ಸ್ಥಾಪಿಸಬಲ್ಲರು. ದೀಪಾವಳಿ ಹಬ್ಬದ ಸಮಯದಲ್ಲಿ ತಮ್ಮ ... ನೆಗಳನ್ನು ಚೊಕ್ಕಟವಾಗಿಡಲೂ, ಸುಣ್ಣಬಣ್ಣ ಬಳಿಯಲೂ ವಿದ್ಯಾರ್ಥಿಗಳು ... ಸಹಾಯ ... ಬಲ್ಲರು. ತಮ್ಮ ಮದುವೆಯ ಸಮಯದಲ್ಲಿ ದುಂದುವೆಚ್ಚವಾಗದಂತೆ ತಡೆಯಬಲ್ಲರು. ವರದಕ್ಷಿಣೆಯನ್ನು ನಿರಾಕರಿಸಬೇಕು.

ಗಾಂಧೀಜಿಯವರಿಗೆ ಹಿಂದೂಸ್ಥಾನಿ ಭಾಷೆಯ ಬಗ್ಗೆ ವಿಶೇಷ ಗೌರವವಿತ್ತು. ಈ ವಿಷಯದಲ್ಲಿ ಅವರು ವಿದ್ಯಾರ್ಥಿಗಳಿಗೆ ಅನೇಕ ಸೂಕ್ತ ಸಲಹೆಗಳನ್ನು ನೀಡಿದರು.

ರಾಜಕಾರಣ

ರಾಷ್ಟ್ರೀಯ ಪ್ರಜ್ಞೆಯನ್ನು ಕುದುರಿಸಬಲ್ಲ ಶಿಕ್ಷಣವು ನಮ್ಮ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕೆಂದು ಗಾಂಧೀಜಿ ಬಯಸಿದರು. ಆದರೆ ವಿದ್ಯಾರ್ಥಿಗಳು ರಾಜಕಾರಣದಲ್ಲಿ ಪ್ರವೇಶಿಸುವುದನ್ನು ಬಲವಾಗಿ ಖಂಡಿಸಿದರು. "ವಿದ್ಯಾರ್ಥಿಗಳು ಏಕಕಾಲಕ್ಕೆ ಪ್ರತ್ಯಕ್ಷ ರಾಜಕಾರಣದಲ್ಲಿ ಭಾಗವಹಿಸಿ ತನ್ನ ಓದನ್ನು ಮುಂದುವರಿಸಲಾರ" —ಎಂಬುದು ಗಾಂಧೀಜಿಯವರ ಖಚಿತ ನಿಲುವು. ಬೇರೆಯವರು ವಿದ್ಯಾರ್ಥಿಗಳನ್ನು ತಮ್ಮ ಸಾಧನವನ್ನಾಗಿ ಉಪಯೋಗಿಸಿಕೊಳ್ಳುವ ವೃತ್ತಿಯನ್ನಂತೂ ಗಾಂಧೀಜಿ ಬಲವಾಗಿ ವಿರೋಧಿಸಿದರು. 1941ರಲ್ಲಿ ಅಖಿಲಭಾರತ ವಿದ್ಯಾರ್ಥಿ ಫೆಡರೇಶನ್ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಗಾಂಧೀಜಿ ಹೀಗೆ ಹೇಳಿದ್ದಾರೆ, "ಅಧಿಕಾರ ಗಳಿಕೆಯ ರಾಜಕಾರಣದಿಂದ ವಿದ್ಯಾರ್ಥಿಗಳು ದೂರವಿರಬೇಕು. ಒಂದು ವೇಳೆ ವಿದ್ಯಾರ್ಥಿಗಳು ... ಅವರು ವಿದ್ಯಾರ್ಜನೆಯನ್ನಂತೂ ಮಾಡಲಾರರು. ತುರ್ತು ಪರಿಸ್ಥಿತಿಯಲ್ಲಿ ದೇಶಸೇವೆ ಮಾಡಲು ತೆರಳಿದರೆ."

"ವಿದ್ಯಾರ್ಥಿಗಳ ... ಮುಷ್ಕರಗಳಿಂದ ವಿದ್ಯಾರ್ಥಿಗಳಿಗೆ ಯಾವ ಪ್ರಯೋಜನವಿಲ್ಲ. ಸಮ್ಯವಾಗಿ ವಿದ್ಯಾರ್ಥಿಗಳು ಶಿಸ್ತಿನ ನಿಯಮ ಗಳಿಸಬೇಕು. ವಿದ್ಯಾರ್ಥಿಗಳು ಕುಪಿತರಾದರೆ ಅದರ ಪರಿಣಾಮ ಅವರಿಗೇ ದೂರಗಾಮಿ. ಕೇವಲ ಅಸಾಮಾನ್ಯ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಸಂಪಿನ ಬೆದರಿಕೆ ಹಾಕಬಹುದು" ಎಂಬುದು ಗಾಂಧೀಜಿಯವರ ನಿಲುವು.

ವಿದ್ಯಾರ್ಥಿಗಳು ಶಿಸ್ತನ್ನು ಪಾಲಿಸದೆ ಹೋದರೆ ಅವರಲ್ಲಿ ಪುಂಡತನ ಸಹಜವಾಗಿ ಬೆಳೆಯಬಲ್ಲದು ಎಂದು ಗಾಂಧೀಜಿ ಅರಿತಿದ್ದರು. 1928ರಲ್ಲಿಯೇ ಗಾಂಧೀಜಿ ಹೇಳಿದರು, "ಅಹಿಂಸೆಯ ಆವಶ್ಯಕತೆಯನ್ನು ವಿದ್ಯಾರ್ಥಿಗಳು ಅರಿಯಬೇಕು. ಪುಂಡ ಟೊಳಿಗೆ ಎಡೆಕೊಡ ಬಾರದು."

ವರ್ಗ ಯುದ್ಧದ ಬಗ್ಗೆ ಮಾತನಾಡುವ ವಿದ್ಯಾರ್ಥಿಗಳನ್ನು ಕುರಿತು ಗಾಂಧೀಜಿ ಹೇಳಿದರು, "ಗಾಜಿನ ಮನೆಯಲ್ಲಿ ವಾಸಿಸುವ ನಾವು ಇತರರ ಕಡೆ ಕಲ್ಲೆಸೆಯಬಾರದು. ಬಂಡವಾಳದಾರರು ತಮ್ಮ ಎಂತಹ ಬದುಕಿನ ರೀತಿಯ ಬಗ್ಗೆ ಅಪಖ್ಯಾತಿ ಪಡೆದಿರುವರೋ ಅಂತಹ ಬದುಕಿನ ರೀತಿಯಲ್ಲಿಯೇ ನಮ್ಮಲ್ಲಿ ಬಹಳಷ್ಟು ಜನರು ಬದುಕುತ್ತಿದ್ದೇವೆ." ದೇಶದ ಆವಶ್ಯಕತೆಗಿಂತ ಭಿನ್ನವಾದ ಶಿಕ್ಷಣ ... ಶಿಕ್ಷಿತರ ನಿರುದ್ಯೋಗ ಸಮಸ್ಯೆಯನ್ನು ಸೃಷ್ಟಿಸಬಹುದು ಎಂದು ಗಾಂಧೀಜಿ ಮನಗಂಡಿದ್ದರು. "ಪದವೀಧರರು ಹಳ್ಳಿಗಳಿಗೆ ಹೋಗಿ ವಿದ್ಯಾಪ್ರಸಾರ ಏಕೆ ಮಾಡಬಾರದು? ಹಳ್ಳಿಯ ... ಧರಿಸಿ ... ಬಾರದೇಕೆ?" ಎಂದು ಗಾಂಧೀಜಿ ಪ್ರಶ್ನಿಸಿದ್ದಾರೆ.

ಮಹಿಳೆಯರ ವಿದ್ಯಾಭ್ಯಾಸದ ಬಗೆಗೂ ಗಾಂಧೀಜಿ ಹಲವಷ್ಟು ವಿಚಾರಿಸಿದರು. ಮಹಿಳೆಯರ ಸೇವಾಬುದ್ಧಿ ಅವರ ಮನೆಯ ಅಭಿವೃದ್ಧಿಗೂ ಮತ್ತು ಸಮಾಜದ ಅಭಿವೃದ್ಧಿಗೂ ಕಾರಣವಾಗಲಿ ಎಂದು ಗಾಂಧೀಜಿ ಆಶಿಸಿದರು.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕನ್ನಡಮ್ಮನ ಪೂಜೆ

ಎನ್ನಂತರಂಗದಲಿ ಕನ್ನಡಮ್ಮನನಿರಿಸಿ
ಅನುದಿನವು ಧ್ಯಾನವನು ಮಾಳ್ಪೆನವಳ.
ಯೆನ್ನ ಹೃದ್ಗತ ಭಾವಗಳ ಕಮಲಗಳನೆ ತಂದು
ಭಕ್ತಿಯಿಂದವಳ ಸನ್ನಿಧಿಗೆ
ಎನ್ನ ಹೃತ್ಕಮಲವನೆ ಸುಮಧುರ
ಹೂವೆಂದು
ಕನ್ನಡಾಂಬೆಯ ಅಡಿಗೆ ನಾ
ಮುಡಿಸುವೆ,
ಯೆನ್ನಂತರಂಗದಲಿ ಧೂಪ, ದೀಪವ
ಬೆಳಗಿ
ಕವನ ಕುಸುಮಗಳ ನೈವೇದ್ಯವೀವೆ.
ಎನ್ನ ದೇಶಾಭಿಮಾನದಿಂ ದಿವ್ಯ ಜ್ಯೋತಿಯ
ಬೆಳಗಿ
ವೇದೋಕ್ತ ಮಂಗಲಾರತಿಯ ಗೈವೆ,
ಯೆನ್ನ ಸರ್ವಸ್ವವನೆ ಫಲಪುಷ್ಪವೆಂದಿತ್ತು
ಕನ್ನಡಮ್ಮನ ಚರಣಕರ್ಪಿಸುವೆನು.
ಈ ವಿಧದಿ ದಿನದಿನವು ಕನ್ನಡಾಂಬೆಯ ಪೂಜೆ-
ಗೈದರೆನ್ನಾತ್ಮಕ್ಕೆ ಶಾಂತಿಯು ಸಿಗುವುದು,
ಕನ್ನಡದಯೆನ್ನನುಡಿ, ಕನ್ನಡಿಗ ನಾ
ನೆನ್ನುವುದು,
'ಕರ್ನಾಟಕಂ' ಎನಲು ಮನ ನಲಿ
ವುದು.।

—ನ. ಭ. ನೆಂಪು

READ &
ADVERTISE IN
NAVAYUGA WEEKLY

ಇತಿಹಾಸದ ರೋಮಾಂಚಕ ಪುಟಗಳು: ೧.

ನೇಪಾಳದ ನರಕ ಪಂಜರ

ಬರೆದವರು: ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ

ಗುಪ್ತ ಕಾರಸ್ಥಾನ

ಒಂದುದಿನ ಡಾ| ಎರಿಕಾ "ಶಿರುಳನ ಸ್ವಪ್ನ"ದಂತಹ ಒಂದು ವಿಚಿತ್ರ ಕಥೆಯನ್ನು ವಿರಚಿಸಿ ಮಹಾರಾಜರ ಮುಂದಿಟ್ಟಳು. ಕಾಲ್ಪನಿಕವಾದ ಆ ಕಥೆಯನ್ನು ಓದಿದಾಕ್ಷಣ ಮಹಾರಾಜರು ಆಶ್ಚರ್ಯಚಕಿತರಾಗಿ "ಅರೆ! ಈ ಕಥೆಯಲ್ಲಿರುವ ನಾಯಕ— ನಾಯಕಿಯರು ನಾವಿಬ್ಬರಲ್ಲವೇ" ಎಂದು ಉದ್ಗಾರವೆತ್ತಿ ಗಟ್ಟಿಯಾಗಿ ನಗಾಡಿದರು. ಡಾ| ಎರಿಕಾ ಭಾವಪರವಶಳಾಗಿ ತನ್ನ ಪಾಶ್ಚಾತ್ಯ ಸಂಸ್ಕಾರವೆಲ್ಲವನ್ನೂ ಮರೆತು ಭಾರತೀಯ ಪದ್ಧತಿಯಂತೆ ಬಗ್ಗಿ ಮಹಾರಾಜರ ಪಾದ ಮುಟ್ಟಿ ನಮಸ್ಕರಿಸಿದಳು. ದಿನ ಹೋದಂತೆಲ್ಲ ಎರಿಕಾಳ ಅಂತರ್ಯದಲ್ಲಿ ಒಂದು ವಿಧದ ಭಯ ಹೆಚ್ಚುತ್ತಾ ಬಂತು. ಅರಮನೆಯೊಳಗಿನ ಪ್ರಸ್ತುತದ ವಾತಾವರಣ ಎಲ್ಲಿಯಾದರೂ ಪ್ರಧಾನ ಮಂತ್ರಿಗೆ ತಿಳಿದುಹೋದರೆ ತನಗೆ ಕೂಡಲೇ ಇಲ್ಲಿಂದ ಸಿಮ್ಲಾಕ್ಕೆ ಹೋಗುವ ಪ್ರಸಂಗ ಬರಬಹುದು! ಅಂತಹ ಸಂದರ್ಭದಲ್ಲಿ ತನ್ನಿಂದ ಮಹಾರಾಜರಿಗೆ ಒದಗಬಹುದಾದ ಸಹಾಯವು ತಪ್ಪಿ ಹೋಗಬಹುದೇ? ಎಂಬ ಚಿಂತೆ ಎರಿಕಾಳನ್ನು ಬಾಧಿಸತೊಡಗಿತು. ಇತ್ತೀಚಿಗೆ ಕೆಲವು ದಿನಗಳಿಂದ ಊಟೋಪಚಾರಕ್ಕೂ ಅವಳಿಗೆ ಸಮಯ ದೊರಕುತ್ತಿದ್ದಿಲ್ಲ. ಬ್ರಿಟಿಷ್ ದೂತಾವಾಸದಿಂದ ಸಹಾಯ ಪಡೆಯುವ ಉದ್ದೇಶದಿಂದ ಅಲ್ಲಿಯ ವರಿಷ್ಠ ಅಧಿಕಾರಿ ಮೊದಲಾದವರ ಅಂತರ್ಯವನ್ನು ತಿಳಿದುಕೊಳ್ಳುವ ಪ್ರಯತ್ನವನ್ನೂ ಅತಿ ಸೂಕ್ಷ್ಮರೀತಿಯಲ್ಲಿ ಕೈಕೊಂಡಳು. ಆದರೆ ಅಲ್ಲಿಂದ ಯಾವತರದ ಆಸೆಯೂ ಕಂಡು ಬರುವಂತಿರಲಿಲ್ಲ. ಬ್ರಿಟಿಷ್ ದೂತಾವಾಸವು ಮಹಾರಾಜರು ಪತಿತರು, ಅಯೋಗ್ಯರೂ, ತೀರಾ ಚಾರಿತ್ರ್ಯಹೀನರೂ ಎಂಬ ಭಾವನೆ ತಳೆದಿತ್ತು. "ನೇಪಾಳದ ರಾಜನು ಒಬ್ಬ ಜಂಗ್ಲಿ, ಮಧ್ಯಪಾನ ಸ್ತ್ರೀಲೋಲುಪ್ತತೆಯ ಮೂಳನಾಗಿ ಹೋಗಿರುವನು" ಎಂಬ ಭಾವನೆಯನ್ನು ದೂತಾವಾಸದವರಲ್ಲಿ ಪ್ರಧಾನ ಮಂತ್ರಿಯು ಕಡೆಯಿಂದ ರಾಣಾ ಸಮುದಾಯದವರು ಸಾಕಷ್ಟು ಪ್ರಚಾರ ಮಾಡುತ್ತಲೇ ಇದ್ದರು.

ಅಪೂರ್ವ ಸಂಯೋಗ

ಆ ಸಮಯದಲ್ಲಿ "ಸರ್ದಾರ್ ಸುರ್ಜೀತ್ ಸಿಂಗ್ ಮಜೀಥಿಯ" ಎಂಬುವರು ನೇಪಾಲದಲ್ಲಿ ಭಾರತ ಸರಕಾರದ ರಾಯಭಾರಿಯಾಗಿದ್ದರು. ಡಾ| ಎರಿಕಾ ಸಿಮ್ಲಾದಲ್ಲಿದ್ದಾಗ ಪತಿಯಾಲಾದ ಮಹಾರಾಣಿಯವರೊಡನೆ ಈಕೆಗೆ ಗಾಢವಾದ ಮೈತ್ರಿ ಬೆಳೆದಿತ್ತು; ಎರಿಕಾ ನೇಪಾಳಕ್ಕೆ ಹೋಗುವ ಕುರಿತು ಆಕೆಯ ತಾಯಿ ಪ್ರಬಲವಾಗಿ ಆಕ್ಷೇಪಿಸಿದಾಗ ಮಹಾರಾಣಿ ಸಮಾಧಾನದ ಮಾತು ಹೇಳಿ ಭರವಸೆಕೊಟ್ಟಿದ್ದರೂ ಆ ದಿನಗಳಲ್ಲಿ ಎರಿಕಾ ಆಗಾಗ ಪತಿಯಾಲಾ ಮಹಾರಾಣಿಯವರಲ್ಲಿ ಹೋಗಿ ಬರುತ್ತಿದ್ದರಿಂದ ಈಕೆಗೆ ಪತಿಯಾಲಾ ಮಹಾರಾಜರ ಮತ್ತು ಸರ್ದಾರ್ ಸುರ್ಜೀತ್ ಸಿಂಗ್ ಮಜೀಥಿಯರ ಪರಿಚಯವೂ ಚೆನ್ನಾಗಿ ಆಗಿತ್ತು; ಸಿಖ್ಖರಲ್ಲಿದ್ದ ಸೌಹಾರ್ದ್ರಯುಕ್ತ ವ್ಯವಹಾರದಿಂದ ತುಂಬಾ ಪ್ರಭಾವಿತಳಾಗಿದ್ದಳು. ಸಿಖ್ಖರು ಒಳ್ಳೆಯ ನಿಷ್ಠಾವಂತರೂ, ಅತ್ಯಂತ ಪ್ರಾಮಾಣಿಕರೂ, ಕೊಟ್ಟ ಭಾಷೆಗೆ ಎಂದೂ ತಪ್ಪದವರೂ ಒಮ್ಮೆ ಭರವಸೆ ಕೊಟ್ಟರೆಂದರೆ ಪ್ರಾಣದ ಹಂಗು ತೊರೆದು ಅದನ್ನು ನೆರವೇರಿಸುವವರೂ ಎಂಬ ವಿಶ್ವಾಸ ಅವಳಲ್ಲಿ ನೆಲೆಗೊಂಡಿತ್ತು.

ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರಕಿದ ಕೂಡಲೇ ನೇಪಾಳದಲ್ಲಿ ಸಹ ರಾಣಾ ಪರಿವಾರದ ನಿರಂಕುಶ ಶಾಸನ ಪ್ರಣಾಳಿಗಳಲ್ಲಿ ಶಿಥಿಲತೆಯುಂಟಾಗುವುದು; ಆದುದರಿಂದ ರಾಣಾ ಆಡಳಿತದ ಕಠೋರತೆಯಿಂದ ಬಿಡುಗಡೆ ಹೊಂದುವ ಸಲುವಾಗಿ ನೇಪಾಳ ರಾಜ್ಯದ ಕಾಂಗ್ರೆಸ್ ಮುಖಂಡರು ಭಾರತೀಯ ಕಾಂಗ್ರೆಸ್ ಮುಖಂಡರೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು ಎಂಬುದನ್ನು ಡಾ| ಎರಿಕಾ ಚೆನ್ನಾಗಿ ಮನದಟ್ಟು ಮಾಡಿಕೊಂಡಳು. ಆ ಸಮಯದಲ್ಲಿ ನೇಪಾಳಿ ಕಾಂಗ್ರೆಸು ಭಾರತದಲ್ಲಿ ತಳವೂರಿಕೊಂಡು ರಾಣಾ ಸರದಾರರಿಂದ ಪ್ರಜಾ ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳುವ ಉಪಾಯದಲ್ಲಿ ತಲ್ಲೀನವಾಗಿತ್ತು.

ಅಂತರಿಕ ಪರಿಸ್ಥಿತಿ ಹೀಗಿತ್ತೆಂದರೆ ಸರ್ದಾರ್ ಸುರ್ಜೀತ್ ಸಿಂಗರು ಮಹಾರಾಜಾ ತ್ರಿಭುವನರ ಸಂದೇಶವನ್ನು ನೇಪಾಲ ಕಾಂಗ್ರೆಸಿಗೆ ತಲ್ಪಿಸುವುದು ಅಥವಾ ಪಂಡಿತ ನೆಹರೂರವರೊಡನೆ ಹೇಳುವುದಾದರೊಂದು ಪರಿಹಾರ ಮಾರ್ಗವನ್ನು ಕಂಡುಹಿಡಿಯುವ ಸನ್ನಿವೇಶವಿತ್ತು. ಈ ಎಲ್ಲಾ ಯೋಚನಾ ತರಂಗಗಳು ಡಾ| ಎರಿಕಾಳ ಮಾನಸಿಕ ಪರದೆಯ ಮೇಲೆ ಒಂದರ ಮೇಲೊಂದಾಗಿ ಪ್ರತಿಬಿಂಬಿತವಾಗುತಿದ್ದವು. ಕಟ್ಟಕಡೆಗೆ ಅವಳು ಒಂದು ದಿನ ಭಾರತೀಯ ದೂತಾವಾಸದ ಸಂದರ್ಶನ ಮಾಡಿಯೇಬಿಟ್ಟಳು.

ಒಂದು ದಿನ ಅವಳು ಸರ್ದಾರ್ ಸಿಂಗ್‌ರಲ್ಲಿ ಹೋದಾಗ ಆಕೆಯ ಚಿಂತಾಕ್ರಾಂತ ಮನೋಭಾವವನ್ನು ತಿಳಿದ ಅವರು "ಏನ! ನೀನು ಬಹಳ ವ್ಯಸನದಲ್ಲಿದ್ದಂತೆ ಕಂಡುಬರುತ್ತದೆ; ಯಾವ ತೊಂದರೆಗೆ ಒಳಗಾಗಿದ್ದೀ? ನನ್ನಿಂದ ನಿನಗೇನಾದರೂ ಸಹಾಯ ದೊರಕಬೇಕಾಗಿದೆಯೇ?' ಎಂದು ಪ್ರಶ್ನಿಸಿದರು. ಆದರೆ ಅಲ್ಲಿ ಅವಳು ಏನೊಂದೂ ಮಾತೆತ್ತಲಿಲ್ಲ. ಅವಳ ವಿಶೇಷ ಆಗ್ರಹದ ಮೇರೆಗೆ ಅವಳನ್ನು ಬೇರೊಂದು ಕೋಣೆಗೆ ಕರೆದೊಯ್ದರು. ಅಲ್ಲಿ ಅತ್ಯಂತ ಶಾಂತ ಹಾಗೂ ಏಕಾಂತ ವಾತಾವರಣವಿತ್ತು. ಸರ್ವಸಾಧಾರಣವಾಗಿ ದೂತಾವಾಸದ ಪ್ರತಿಯೊಂದು ಗೋಡೆಗೂ ಕಿವಿಗಳಿರುತ್ತವೆ. ಆದರೆ ಆ ಕೋಣೆ ನಿಶಾಂತಗೋಪನೀಯವಾಗಿತ್ತು. "ಇಲ್ಲಿ ನಮ್ಮ ಮಾತುಕತೆ ಯಾರೊಬ್ಬರಿಗೂ ಕೇಳಿಸುವಂತಿಲ್ಲ; ನಿನಗೇನು ವಿಪತ್ತು ಬಂದೊದಗಿದೆಯೆಂಬುದನ್ನು ಸ್ವಲ್ಪವೂ ಸಂಕೋಚಪಡದೆ ಹೇಳು" ಎಂಬುದಾಗಿ ಸರ್ದಾರರು ಆಶ್ವಾಸನೆ ಇತ್ತರು. ಆ ವೇಳೆ ಅವಳು ಅವರೊಡನೆ ಈ ರೀತಿ ಸಂಭಾಷಣೆ ನಡೆಸಿದಳು.

"ಸರ್ದಾರರೇ! ನೇಪಾಳದ ಮಹಾರಾಜರ ಕುರಿತು ತಮ್ಮ ಅಭಿಪ್ರಾಯವೇನಿದೆ?"

"ಮಹಾರಾಜರ ಕುರಿತು ನಾನು ಏನು ಯೋಚನೆ ಮಾಡಲಿಕ್ಕಿದೆ?"

"ತಾವು ಅವರ ಕುರಿತಾಗಿ ಎಂದಾದರೂ ಆಲೋಚಿಸುವುದೇ ಇಲ್ಲವೇ?"

"ಎರಿಕಾ ನೀವು ನೇಪಾಳ ದೇಶದ ವಿಷಯದಲ್ಲಿ ಚೆನ್ನಾಗಿ ಅನುಭವ ಮಾಡಿಕೊಂಡಿರುವಿಯಷ್ಟೆ! ನನಗೆ ಈ ವರೆಗೆ ಮಹಾರಾಜರ ಭೇಟಿ ಕೂಡ ಸರಿಯಾಗಿ ಆಗುವುದಿಲ್ಲ; ಹೀಗಿರುವಲ್ಲಿ ನಾನವರೊಡನೆ ಮಾತುಕತೆ ಬೆಳೆಸುವ ಸಂದರ್ಭ ದೊರಕಲು ಸಾಧ್ಯವಿಲ್ಲ" ಅವರ ಕುರಿತು ಈ ರೀತಿ ಏತಕ್ಕಾಗಿ ಪ್ರಶ್ನಿಸುತ್ತೀ! ಏನಾದರೂ ಹೆಚ್ಚಿನ ವಿಷಯವಿದೆಯೋ?"

"ಸರ್ದಾರರೇ! ಅತ್ಯಂತ ವಿಸ್ತಾರವಾದ ವಿಷಯವಿದೆ! ತಾವು ಮಹಾರಾಜರಿಗೆ ಸಹಾಯ ಮಾಡಬೇಕೆಂದು ನಮ್ರತಾಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತೇನೆ.'

ಘೋರ ಸಾಹಸ

ದೀರ್ಘ ಸಂಭಾಷಣೆ ನಡಿಸಿ, ಮಹಾರಾಜಾ ತ್ರಿಭುವನರು ನೇಪಾಳದ ಪ್ರಧಾನ ಮಂತ್ರಿಯಿಂದ ಬಂಧಿಸಲ್ಪಟ್ಟಿರುವ ಗೃಹಬಂಧನದಿಂದ ಬಿಡುಗಡೆ ಹೊಂದಲಿಕ್ಕಾಗಿ ಆತುರಪಡುತ್ತಿದ್ದಾರೆಂಬುದನ್ನು ಎರಿಕಾ ಸರ್ದಾರ್ ಸುರ್ಜೀತ್ ಸಿಂಗರಿಗೆ ಚೆನ್ನಾಗಿ ಮನವರಿಕೆ ಮಾಡಿಕೊಟ್ಟಳು. ಮಹಾರಾಜರು ಭಾರತದಿಂದ ಅನೇಕ ಗ್ರಂಥಗಳನ್ನು ತರಿಸಿ ಅಧ್ಯಯನ ಮಾಡಿ ತಾವು ಸುಶಿಕ್ಷಿತನೆಂಬುದನ್ನು ಸಿದ್ಧಗೊಳಿಸುವ ಪೂರ್ಣವಿವರವನ್ನು ಆಕೆ ಸರ್ದಾರರಿಗೆ ತಿಳಿಸಿ ಮಹಾರಾಜರ ಮನಸ್ಸಿನ ನಿಜವಾದ ಕಾಂಕ್ಷೆಯನ್ನು ಸರ್ದಾರರಿಗೆ ಪೂರ್ಣ ಮನವರಿಕೆ ಮಾಡಿ ಅದನ್ನು ಪಂ| ನೆಹರೂರವರಿಗೆ ತಿಳಿಸುವಂತೆ ಬಹಳವಾಗಿ ಕೇಳಿಕೊಂಡಳು. ಇವಳ ಆಗ್ರಹ ಕಂಡು ಸರ್ದಾರರು ಏನೋ ಯೋಚನೆ ಮಾಡುತ್ತ "ಮಹಾರಾಜರಿಗಾಗಿ ನೀನು ಇಷ್ಟೊಂದು ದುಃಖಿತಳಾಗಲು ಕಾರಣವೇನ?" ಎಂದು ಪ್ರಶ್ನಿಸಿದಾಗ ಡಾ| ಎರಿಕಾ ಕೂಡಲೆ ಉತ್ತರ ಕೊಡದೆ ಒಂದು ವಿಧದ ಭಾವಪರವಶಳಾಗಿ ಯೋಚನಾಮಗ್ನಳಾದಳು. ಆಕೆ ಮಹಾರಾಜರಲ್ಲಿ ಸಂಪೂರ್ಣ ಅನುರಕ್ತಳಾಗಿರುವಳೆಂಬುದು ಸರ್ದಾರರಿಗೆ ಪೂರ್ಣ ಮನವರಿಕೆಯಾಗಿದ್ದ ಕಾರಣ ತನ್ನ ಪ್ರಶ್ನೆಯ ಕುರಿತು ಪ್ರತ್ಯುತ್ತರಕ್ಕೆ ವಿಶೇಷ ಆಗ್ರಹ ಮಾಡದೆ ಅವಳನ್ನು ಕುರಿತು "ಎರಿಕಾ! ಎಲ್ಲವೂ ನಿನ್ನ ಮುಖಚರ್ಯೆಯಲ್ಲಿ ಹೊಳೆಯುತ್ತದೆ; ಒಳ್ಳೇದು. ನೀನು ನನ್ನ ಸರಕಾರವನ್ನು ಒಂದು ಗಂಭೀರವಾದ ಸಮಸ್ಯೆಯಲ್ಲಿ ಸಿಲುಕಿಸಲಿಕ್ಕೆ ತೊಡಗಿರುತ್ತಿ! ಇದು ಸಾಮಾನ್ಯ ಕೆಲಸವಲ್ಲ. ಇದಕ್ಕೆ "ಘೋರ ಸಾಹಸ"ವೆನ್ನಬೇಕು. ನನಗೆ ನಿನ್ನ ಮಾತಿನಲ್ಲಿ ಪೂರ್ಣ ವಿಶ್ವಾಸವಿದೆ; ಆದರೆ, ಪಂ| ನೆಹರೂರವರಿಗೆ ಸಂದೇಶ ಕಳುಹಿಸಬೇಕಾಗಿದೆ. ಈ ಬಗ್ಗೆ ನಿನ್ನ ಮಾತಿನ ಹೊರತು ಬೇರೆಯಾವುದಾದರೂ ದಾಖಲೆಗಳಿವೆಯೇ?" ಎಂದು ಸರ್ದಾರರು ಪ್ರಶ್ನಿಸಿದರು.

ಈ ಪ್ರಶ್ನೆಗೆ ಡಾ|| ಎರಿಕಾ "ಸರ್ದಾರರೇ! ತಾವು ಸ್ವತಃ ಮಹಾರಾಜರ ಭೇಟಿ ಮಾಡಿದರೆ ಎಲ್ಲವೂ ತಮಗೆ ಪ್ರತ್ಯಕ್ಷ ಅನುಭವವಾಗುವುದು" ಎಂದು ಹೇಳಿದಳು. ಕಟ್ಟಕಡೆಗೆ ಸರ್ದಾರರು ಮಹಾರಾಜರನ್ನು ಕಾಣಲು ಸಮ್ಮತಿಸಿದರು. ಎರಿಕಾಳಲ್ಲಿ ಆನಂದ ಸಾಗರವು ಉಕ್ಕಿಬಂತು. ರಾತ್ರಿವೇಳೆ ನಗರದ ಹೊರಗೆ ಮಹಾರಾಜರನ್ನು ಸರ್ದಾರ್ ಸಿಂಗರೊಡನೆ ಭೇಟಿ ಮಾಡಿಸುವುದಾಗಿ ನಿಶ್ಚಯಿಸಿದಳು. ಈ ವಿಚಾರವನ್ನು ಮಹಾರಾಜರಿಗೆ ತಿಳಿಸಲು ಎರಿಕಾ ಅತ್ಯಂತ ಉತ್ಸುಕಳಾದಳು, ಮಧ್ಯಾಹ್ನದ ಊಟ ತೀರಿಸಿ ತನ್ನ ಸವಾರಿ

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ
ಹೋಟೆಲ್ ಸತ್ಕಾರ್
ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27
ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.
Phone: 28837
29887
HOTEL SATKAR
Boarding & Lodging
Near Corporation Office, 9, Mission Road
Bangalore—27

ಬೇ ಇದ್ದ ೯ನೇ ನಂಬರಿನ ಅತಿಥಿಗೃಹ ವನ್ನು ಉಳಕೊಂಡಿದ್ದ ಡಾ| ದಾಸಗುಪ್ತರಲ್ಲಿಗೆ ಹೋದಳು. ಅವಳು ಗುಪ್ತರ ಮಕ್ಕಳಿಗೆ ಟ್ಯೂಷನ್ ಕಲಿಸಳಿಗಿದ್ದಳು. ಅಲ್ಲಿ ಮಹಾರಾಜರ ಆರತಿಯಾಗಿಯೇ ಸಂಭಾಷಣೆ ನೈಯ್ಯುತ್ತಾ ನಾಲ್ಕು ಘಂಟೆ ತನಕ ಅಲ್ಲಿಯೇ ಇದ್ದು ಅಲ್ಲಿಂದ ತನ್ನ ವಸತಿಗೆ ಬಂದು ಭಾರತೀಯ ಪದ್ಧತಿಯಲ್ಲಿ ಸೀರೆ ಉಟ್ಟು ಕುಪ್ಪಸ ತೊಟ್ಟುಕೊಂಡು ಹಣೆಗೆ ಕುಂಕುಮ ತಿಲಕ ಧರಿಸಿ ಪಾದರಕ್ಷೆ ತೊಟ್ಟುಕೊಂಡು ಸುಸಜ್ಜಿತಳಾಗಿರುವಾಗಲೇ ಎಂದಿನಂತೆ ಅರಮನೆಯಿಂದ ಬಂದ ಕಾರು ಅವಳ ಮನೆಬಾಗಿಲಲ್ಲಿ ಬಂದು ನಿಂತಿತು.

ವಿಚಿತ್ರ ಪ್ರೇಯಸಿ

ಆ ದಿವಸ ಮಹಾರಾಜರು ಬಹಳ ಪ್ರಸನ್ನತೆಯಿಂದಿದ್ದಂತೆ ಭಾಸವಾಗುತ್ತಿತ್ತು. ಡಾ| ಎರಿಕಾಳ ಕಾರು ಅವರ ಮನೆಗೆ ಬರುತ್ತಲೇ ರಾಜಪರಿವಾರದವರೆಲ್ಲರೂ ಅತಿ ಉತ್ಸುಕರಾಗಿ ಹೊರಗೆ ಬಂದರು. ಭಾರತೀಯ ಉಡುಗೆತೊಡುಗೆಗಳಿಂದ ಅಲಂಕೃತಳಾಗಿದ್ದ ಎರಿಕಾ ನವವಧುವಿನಂತೆ ಶಿಥಿಲವಾಗಿ ಕಾರಿನಿಂದಿಳಿದು ಮಂದನಡಿಗೆಯಿಂದ ಅರಮನೆಯೊಳಗೆ ಪ್ರವೇಶಿಸಿದಳು. ಮಹಾರಾಜರು ಆಕೆಯನ್ನು ನೋಡಿದ ಕ್ಷಣ ಪಕ್ಕನೆ ಭಾವಪರವಶರಾಗಿ ಮುಂದೆ ಬಂದು, ಎರಿಕಾ ನಮಸ್ಕರಿಸಲು ಜೋಡಿಸಿದ್ದ ಆಕೆಯ ಕೈಗಳನ್ನು ತಮ್ಮೆರಡೂ ಕೈಗಳಿಂದ ಬಿಗಿಯಾಗಿ ಹಿಡಿದು ಅವಳನ್ನು ತನ್ನ ಅತಿ ಸಮೀಪಕ್ಕೆ ಎಳೆದುಕೊಂಡರು; ಅಲ್ಲಿಯೇ ಇದ್ದ ಮಹಾರಾಣಿ—ರಾಜಕುಮಾರಿ ಮೊದಲಾದ ಸಮಸ್ತ ಪರಿವಾರದರು ಪರಿವೇಶವನ್ನು ಅರಿತವರಾಗಿ ಕ್ಷಣಾರ್ಧದಲ್ಲಿ ಎಲ್ಲರೂ ಅಲ್ಲಿಂದ ಹೊರಟು ಹೋದರು.

ಮಹಾರಾಜರ ತೆಕ್ಕೆಯೊಳಗೆ ಅದುಮಿಟ್ಟ ಎರಿಕಾಳ ಹೃದಯ ಆನಂದಾತಿರೇಕದಿಂದ ತುಂಬಿ ಬಂತು; ಅವಳು ಸಂತೋಷಬಾಷ್ಪಲತೆಯಿಂದ ಮಂತ್ರಮುಗ್ಧಳಾಗಿ ನಿಂತಿದ್ದಳು. ಅವಳ ಕೈಗಳನ್ನು ಮಹಾರಾಜರು ಬಿಡುತ್ತಲೇ ಅವಳು ನತಮಸ್ತಕಳಾಗಿ ಮಹಾರಾಜರ ಚರಣಸ್ಪರ್ಶಮಾಡಿ ನಮಸ್ಕರಿಸಿದಳು. ಕೂಡಲೇ ಮಹಾರಾಜರು ಅವಳ ಕೈ ಹಿಡಿದೆತ್ತಿ ನಿಲ್ಲಿಸಲು ಆಕೆಯ ಕಣ್ಣುಗಳಿಂದ ಕಂಬನಿ ತೊಟ್ಟಿಕ್ಕುತ್ತಿತ್ತು. ಅವಳು ತನಗಾದ ಅತಿರೇಕ ಆನಂದ ಧಾರೆಯನ್ನು ಸಹಿಸಲಾರದೆ ಹೋದಳು.

ಆ ಮೇಲೆ ಬಹಳ ಹೊತ್ತಿನ ವರೆಗೆ ಮೂಕಳಾಗಿದ್ದ ಎರಿಕಾ ಸರ್ದಾರ ಸ ಜೇರ್ ಸಿಂಗರೊಡನೆ ನಡೆಸಿದ ಎಲ್ಲಾ ವಿವರಗಳನ್ನೂ ಮಹಾರಾಜರಿಗೆ ವಿವರಿಸಿ ಹೇಳಿದಳು. ಸರ್ದಾರರ ಭೇಟಿ ಮಾಡುವ ಬಗೆ ಹೇಗೆ ಎಂಬುದರ ಕುರಿತು ಅವರಿಬ್ಬರೂ ಬಹಳ ಹೊತ್ತು ಯೋಚನಾಮಗ್ನರಾದರು. ಈ ಅವಧಿಯೊಳಗಾಗಿ ಡಾ. ಎರಿಕಾ ಮಹಾರಾಜರ ಸಂಪೂರ್ಣ ವಿಶ್ವಾಸಕ್ಕೆ ಪಾತ್ರಳಾಗಿದ್ದಳು. ಮಹಾರಾಜರು ಅವಳೊಡನೆ, "ಪ್ರಿಯ ಎರಿಕಾ! ನೀವು ನನ್ನ ಎಲ್ಲಾ ಪರಿಸ್ಥಿತಿಯನ್ನು ಚೆನ್ನಾಗಿ ಅನುಭವ ಮಾಡಿಕೊಂಡಿರುವಿ, ಯಾವ ವಿಷಯವನ್ನೂ ನಾನು ನಿನ್ನಲ್ಲಿ ಅಡಗಿಸಿಟ್ಟಿರುವುದಿಲ್ಲ. ನಾನು ಸಂಪೂರ್ಣವಾಗಿ ನಿನ್ನ ಕೈಗೊಂಬೆಯಾಗಿದ್ದೇನೆ" ಎಂದು ಹೇಳಿದರು.

ನೇಪಾಳದ ಅರಸುತನದ ಸಂಪ್ರದಾಯದಂತೆ ಅಲ್ಲಿಯ ಮಹಾರಾಜನು ಶ್ರೀ ವಿಷ್ಣುವಿಗೆ ಸಮಾನವಾಗಿ ಪೂಜಿಸಲ್ಪಡುವ ವ್ಯಕ್ತಿ. ಆದರೆ ಇಂದಿಗೆ ಅಂತಹ ಮಹಾನ್ ವ್ಯಕ್ತಿಗೆ ಒಬ್ಬ ಆಂಗ್ಲೇಯ ಸ್ತ್ರೀಯ ಸಹಾಯದ ಆಶ್ರಯವನ್ನು ಅವಲಂಬಿಸಬೇಕಾದ ದುರದೃಷ್ಟ ಒದಗಿಬಂದಿತ್ತು. ರಾಣಾ ವಂಶದವರ ಕಠೋರವಾದ ರಹಸ್ಯ ಬಂಧನದಿಂದ ಬಿಡುಗಡೆ ಹೊಂದಲು ಕಾತರರಾಗಿ ಬಹಳ ಹಿಂದಿನಿಂದಲೂ ಮಹಾರಾಜರು ಸಿದ್ಧತೆ ಮಾಡುತ್ತಾ ಇದ್ದರು. ಆದರೆ ಅದೆಲ್ಲವೂ ಈ ತನಕ ಅತ್ಯಂತ ಗೋಪ್ಯವಾಗಿತ್ತು. ಅರಮನೆಯ ಅತ್ಯಂತ ಒಳಭಾಗದಲ್ಲಿ ಡಾ| ಎರಿಕಾಳ ಹೊರತು ಈ ವರೆಗೆ ತನ್ನ ಪರಿವಾರದ ಜನರಿಗೂ ಪ್ರವೇಶಕ್ಕೆ ಅನುಮತಿ ಇರಲಿಲ್ಲ. ಆ ದಿನ ಮಹಾರಾಜರು ಎರಿಕಾಳನ್ನು ಅರಮನೆಯ ಏಕಾಂತ ಕೊಠಡಿಗಳಿಗೆ ಕರೆದುಕೊಂಡು ಹೋದರು. ಮಹಾರಾಣಿ, ರಾಜಕುಮಾರಿ ಮೊದಲಾದವರ ವೈಭವ್ಯ ಭವನಗಳನ್ನು ನೋಡು ಹೋದ ನಂತರ ಮಹಾರಾಜರ ಗ್ರಂಥಾಲಯ ಮತ್ತು ಪೂಜಾ ಮಾಡುವ ಕೋಣೆಯನ್ನು ಪ್ರವೇಶಿಸಿದಳು. ಹಿಂದೂಸ್ಥಾನದ ರಾಜಮಹಾರಾಜರ ವೈಭವದ ಇತಿಹಾಸವನ್ನು ಅವಳು ಈ ಮೊದಲು ಹಲವಾರು ಜನರಿಂದ ಕೇಳಿದ್ದಳು. ಕೆಲವು ಪುಸ್ತಕಗಳಿಂದ ಓದಿ ಅನುಭವ ಮಾಡಿಕೊಂಡಿದ್ದಳು. ಪಶ್ಚಿಮದ ಅರಮನೆಯಲ್ಲಿ ಕೆಲವನ್ನು ಕಣ್ಣಾರೆ ಕಂಡಿದ್ದಳು; ಆದರೆ ನೇಪಾಳದ ಆ ಮನೆಯ ಅಂತರಂಗದ ದೇವಸ್ಥಾನದ ವೈಭವಗಳು ಅವಳನ್ನು ಒಂದು ಕ್ಷಣ ಅತಿ ಭವ್ಯವಾದ ಸ್ವರ್ಗ ಸ್ವಪ್ನಲೋಕದಲ್ಲಿ ವಿಹರಿಸುವಂತೆ ಮಾಡಿತು. ಅಲ್ಲಿಂದ ಮತ್ತೆ ಮಹಾರಾಜರೂ ಅವಳೂ ಒಂದು ಚಿಕ್ಕ ಕೊಠಡಿಯ ದ್ವಾರದಲ್ಲಿ ಬಂದು ನಿಂತರು. ಇತರ ಎಲ್ಲಾ ಕೋಣೆಗಳ ಬೀಗದ ಕೈಗಳು ಚಿಕ್ಕರಾಣಿಯ ವಶದಲ್ಲಿದ್ದವು. ಪರಂತು ಈ ಚಿಕ್ಕ ಕೋಣೆಯ ಬೀಗದ ಕೈ ಮಾತ್ರ ಸ್ವತಃ ಮಹಾರಾಜರ ಅಧೀನದಲ್ಲಿಯೇ ಇರುತಿತ್ತು. ಮಹಾರಾಜರು ಆ ಕೋಣೆಯ ದ್ವಾರವನ್ನು ತೆರೆದು ವಿದ್ಯುದ್ದೀಪದ ಗುಂಡಿ ಒತ್ತುತ್ತಲೇ ಕೋಣೆ ಇಡೀ ಸೂರ್ಯಕಾಂತಿಗೆ ಮಿಗಿಲೆನಿಸುವಂತಹ ಪ್ರಕಾಶೋಜ್ವಲತೆಯಿಂದ ಝಗಝಗಿಸ ತೊಡಗಿತು. ಇತರ ಕೋಣೆಗಳಂತೆ ಇದು ಸಾಧಾರಣ ತರದ್ದಾಗಿದ್ದರೂ ಬಹಳ ಸ್ವಚ್ಛವೂ, ಅಲಂಕಾರಮಯವಾಗಿತ್ತು. ಅಲ್ಲಿಂದ ಅವಳನ್ನು ಅದೇ ಕೋಣೆಯ ಒಂದು ಗೋಡೆಯಲ್ಲಿದ್ದ ದೊಡ್ಡದೊಂದು ರಂಧ್ರದ ಬಳಿ ಕರೆದೊಯ್ದರು. ಈ ರಂಧ್ರದಿಂದಲೇ ಮಹಾರಾಜರು ಡಾ| ಎರಿಕಾಳ ಆಗಮನವನ್ನು, ಪ್ರತಿನಿತ್ಯ ಸಾಯಂಕಾಲ ಡಾ| ಎರಿಕಾಳ ಬರೋಣವನ್ನು ನಿರೀಕ್ಷಿಸುತ್ತಿದ್ದರು. ಆ ಕೊಠಡಿಯೊಳಗೆ ಹೋದ ಕೂಡಲೇ ಅಲ್ಲಿದ್ದ ತನ್ನ ಒಂದೊಂದೇ ಕಪಾಟುಗಳನ್ನು ತೆರೆದು ಅವುಗಳಲ್ಲಿದ್ದ ಚೀನಿ, ಮರಾಠಿ, ಬಂಗಾಲಿ, ಪಂಜಾಬಿ ಮೊದಲಾದ ವಿವಿಧ ದೇಶಗಳ ಜನರ ಉಡಿಗೆ ತೊಡಿಗೆಗಳನ್ನು ತೋರಿಸಿದರು. ಆ ವೇಷ ಪ್ರಸಾದ ಕೃತಕ ಗಡ್ಡಮೀಸೆಗಳೂ ಇದ್ದವು; ಅವೆಲ್ಲವನ್ನೂ ಅವಳಿಗೆ ವಿವರವಾಗಿ ತೋರಿಸಿದರು. ಇವೆಲ್ಲವನ್ನೂ ಕಂಡು ಎರಿಕಾಳಿಗೆ, ಮಹಾರಾಜರು ಅನೇಕ ವಿಧವಾದ ರೂಪ ಪ್ರಕಟಗೊಳಿಸುವುದರಲ್ಲಿ ಬಹಳ ನಿಪುಣರೆಂಬುದು ಮನವರಿಕೆಯಾಯಿತು. ಅವಳ ಸಮಕ್ಷಮದಲ್ಲಿಯೇ ಮಹಾರಾಜರು ಅನೇಕ ವಿಧದಲ್ಲಿ ರೂಪ ಬದಲಾಯಿಸಿ ಪ್ರದರ್ಶಿಸಿದರು. ರೂಪ ಬದಲಾಯಿಸಿಕೊಳ್ಳುವುದು ಸುಲಭವಿದ್ದರೂ ರಾಜಮಹಲ್‌ನಿಂದ ಹೊರಗಿನ ಪ್ರಪಂಚಕ್ಕೆ ಹೋಗುವ ಬಗೆ ಹೇಗೆಂಬುದೇ ಅವಳನ್ನು ದೊಡ್ಡ ಚಿಂತೆಗೀಡು ಮಾಡಿತು.

ರಾಜಕುಮಾರ ಮಹೇಂದ್ರ

ಅಂದಿನ ರಾತ್ರಿ ಬಹಳ ಆನಂದೋತ್ಸಾಹದಿಂದ ಕಳೆಯಿತು. ಮಹಾರಾಜರೊಡನೆ ಡಾ| ಎರಿಕಾ ಬಹಳ ಹೊತ್ತಿನ ವರೆಗೆ ಆಂಗ್ಲೇಯ ನರ್ತನದಲ್ಲಿ ಮಗ್ನಳಾಗಿದ್ದಳು. ಪ್ರಾತಃಕಾಲ ಸುಮಾರು ನಾಲ್ಕು ಗಂಟೆಗೆ ತನ್ನ ನಿವಾಸಕ್ಕೆ ಹಿಂದಿರುಗಿದಳು. ಮರುದಿನ ಸಾಯಂಕಾಲವೂ ಸೀರೆ ತೊಟ್ಟುಕೊಂಡು ಎಂದಿನಂತೆ ಕಾರಿನಲ್ಲಿ ಅರಮನೆಗೆ ಹೋಗಿ ಮಹಾರಾಜರ ಜೊತೆಯಲ್ಲಿ ಒಬ್ಬಳೇ ಇದ್ದಳು. ಸ್ವಲ್ಪ ಹೊತ್ತಾಗುತ್ತಲೇ ಅವಳನ್ನು ಉದ್ಯಾನವನದ ಕಡೆಗೆ ಮಹಾರಾಜರು ವಾಯು ಸೇವನಾ-

ಪುಸ್ತಕ ವ್ಯಾಪಾರಿಗಳಿಗೆ ಜನವರಿ ೧೯ರಿಂದ

ಪ್ರಿಯವಾದ ಸಮಾಚಾರ ಮಾರ್ಚಿ 30ನೇ ತಾರೀಖಿನ ವರೆಗೆ

300=00 ರೂ. ನಿವ್ವಳ ವ್ಯಾಪಾರ ಮಾಡಿದರೆ

ಒಂದು Steel Desk (ಬರೆಯುವ—ಪಾಟಿ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ—	ಭಾಗ 1— ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ—	ಭಾಗ 2— ”	2—50
ಉಂಡಾಡಿ ಗುಂಡ—	ಪರ್ವತವಾಣಿ	2—00
ಧರ್ಮದೇವತೆ—	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು —	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆ ಮಾಡಿರಿ :—

ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು

ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಲಭ್ಯವಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ರ್ಥ ಕರೆದುಕೊಂಡು ಹೋದರು. ಸ್ವಲ್ಪ ದೂರ ಹೋಗುವಷ್ಟರಲ್ಲಿ ಹುಲ್ಲಿನ ಪೊದೆಯೊಳಗೆ ಯಾರನೋ ಎಳೆಯುತ್ತಿರುವಂತೆ ಭಾಸವಾಯಿತು. ಎರಿಕಾ ಬೆಚ್ಚಿ ಬಿದ್ದಳು. ಆದರೆ ಮಹಾರಾಜರು ಅವಳ ಕೈ ಹಿಡಿದು ಧೈರ್ಯ ಸೂಚಿಸಿದರು. ಅಷ್ಟರಲ್ಲಿ ಸ್ವಾಸ್ಥ್ಯವಾಗಿ ಇಬ್ಬರು ಯುವಕರು ಪೊದರಿನೊಳಗಿಂದ ಹೊರಬಂದು ಅವರೆದುರಿಗೆ ನಿಂತುಕೊಂಡರು. ಆ ಯುವಕರೇ ಮಹಾರಾಜರ ಸುಪುತ್ರರು. ಮಹಾರಾಜರು ಅವರಿಬ್ಬರಿಗೂ ಡಾ. ಎರಿಕಾಳ ಪರಿಚಯ ಮಾಡಿಕೊಟ್ಟರು. ಅವರಿಬ್ಬರೂ ಅವಳನ್ನು ವಂದಿಸಿದರು. ಹಿರಿಯ ಪುತ್ರನ ಹೆಸರು ಮಹೇಂದ್ರನೆಂದಿತ್ತು. ಮಹಾರಾಜರು ಮಾತ್ರವಲ್ಲ ರಾಜಕುಮಾರರು ಸಹ ರಾಣಾ ಗುಂಪಿನ ಅಧಿಕಾರಿಗಳ ಬಂಧನದಿಂದ ಪಾರಾಗಲು ಹಗಲೂ ರಾತ್ರಿ ಪ್ರಯತ್ನಿಸುತ್ತಿದ್ದರು. ಸ್ವಲ್ಪ ಹೊತ್ತು ರಾಜಕುಮಾರರಿಬ್ಬರ ಜೊತೆಯಲ್ಲಿ ಮಾತನಾಡಿ ಎರಿಕಾ ಮಹಾರಾಜರೊಂದಿಗೆ ಅರಮನೆಗೆ ತೆರಳಿದಳು.

ಬಹುರೂಪಿ ಮಹಾರಾಜರು

ಕೆಲವು ಕೆಲವು ದಿನಗಳು ಅರಮನೆಯಲ್ಲಿ ಗಾನ—ನರ್ತನ ಇತ್ಯಾದಿ ಆಮೋದ-ಪ್ರಮೋದಗಳಿಂದ ಕಳೆದವು. ಒಂದು ದಿನ ಮಹಾರಾಜರು ತನ್ನ ಮಕ್ಕಳನ್ನು ನೋಡಬೇಕೆಂಬ ಅಪೇಕ್ಷೆಯನ್ನು ಪ್ರಧಾನ ಮಂತ್ರಿಗೆ ತಿಳಿಸಿದರು. ನಿಶ್ಚಿತ ಸಮಯಕ್ಕೆ ಕಾರು ಬಂತು. ಅದರಲ್ಲಿಯೂ ಒಬ್ಬ ರಾಣಾ ಅಧಿಕಾರಿ ಕುಳಿತಿದ್ದನು. ಅವನು ಕಾರಿನಿಂದಿಳಿದು ಮಹಾರಾಜರಿಗೆ ಬಗ್ಗಿ ನಮಸ್ಕರಿಸಿದನು. ಮಹಾರಾಜರೂ ಡಾ. ಎರಿಕಾ ಇಬ್ಬರೂ ಜೊತೆಯಾಗಿ ರಾಜಕುಮಾರರನ್ನು ಕಾಣಲಿಕ್ಕೆ ಹೋದರು. ಅಲ್ಲಿ ಅವರು ರಾಜಕುಮಾರರೊಂದಿಗೆ ಹೊರಗೆ ಬಂದು ಗೋಲಾಕಾರದ ಕೊಠಡಿಯಲ್ಲಿ ಕುಳಿತರು. ಸ್ವಲ್ಪ ಹೊತ್ತಾದ ಬಳಿಕ ರಾಣಾ ಅಧಿಕಾರಿಗಳನ್ನು ಕುಳಿತಿರಲು ಹೇಳಿ ಮಹಾರಾಜರು ಒಳಗೆ ಹೋದರು, ಅರ್ಧ ತಾಸಿನ ತನಕ ಅಲ್ಲಿನ ತನ್ನ ಪರಿವಾರದವರೊಂದಿಗಿದ್ದು ಹೊರಗೆ ಬಂದರು. ಒಳಗೆ ಮಹಾರಾಜರು ವೇಷ ಬದಲಾಯಿಸುತ್ತಿರುವರೆಂದು ಎರಿಕಾ ತಿಳಿದುಕೊಂಡಿದ್ದರು; ಮಹಾರಾಜರಿಗೆ ರಾಯಭಾರಿ ಸರ್ದಾರ್ ಸಜ್ಜನ್ ಸಿಂಗರ ಭೇಟಿಯಾಗಲು ಸುಗಮತೆ ಒದಗಬಹುದೆಂದು ಅವಳಿಗೆ ವಿಶ್ವಾಸವಾಯಿತು.

ಇದಾದ ಕೆಲವು ವಾರಗಳ ನಂತರ ಮತ್ತೊಮ್ಮೆ ಮಹಾರಾಜರು ರಾಜಕುಮಾರರನ್ನು ಕಾಣಲಿಕ್ಕಾಗಿ ಹೋದರು. ಈ ಸಾರಿ ಅವರು ತನ್ನ ಪರ ಒಂದು ವಸ್ತ್ರದ ಗಂಟನ್ನು ತೆಗೆದುಕೊಂಡು ಹೋದರು; ಈ ಸಲ ಎರಿಕಾ ಅವರ ಸಂಗಡ ಹೋಗದೆ ಮಹಾರಾಣಿ ಮತ್ತು ರಾಜಕುಮಾರಿಯರೊಂದಿಗೆ ಹರಟೆ ಹೊಡೆಯುತ್ತಾ ಕುಳಿತಳು. ಸುಮಾರು ಎರಡು ತಾಸುಗಳ ನಂತರ ಮಹಾರಾಜರು ತ್ರಿಭುವನರು ಹಿಂದಿರುಗಿದರು. ಹೋಗುವಾಗ ಧರಿಸಿಕೊಂಡಿದ್ದ ಉಡುಪುಗಳೇ ಅವರ ಮೈಮೇಲಿದ್ದವು ತಲೆಯ ಕೂದಲು ಮಾತ್ರ ಅಸ್ತವ್ಯಸ್ತವಾಗಿತ್ತು. ಕೈಯಲ್ಲಿ ಈ ಮೊದಲು ಎಂದೂ ಕಾಣದ

(ಬಳಿಕ್ಕನೇ ಪುಟ ನೋಡಿರಿ)

ಮಗುವಿನ ಜೀವನದಲ್ಲಿ ಮೊದಲ ನಾಲ್ಕೈದು ವರ್ಷಗಳು ಅತ್ಯಂತ ಮುಖ್ಯವಾದ್ದಾಗಿವೆ. ಈ ವಯಸ್ಸಿನಲ್ಲಿ ಮಕ್ಕಳ ಆರೈಕೆ ಚೆನ್ನಾಗಿದ್ದರೆ ಅವರ ಬೆಳವಣಿಗೆಯೂ ಯೋಗ್ಯ ರೀತಿಯಲ್ಲಿ ಆಗುತ್ತದೆ. ತಾಯಂದಿರ ಪುಷ್ಟಿಗೂ ಅಷ್ಟೇ. ಒಂದು ಮಗು ಜನಿಸಿದ ಬಳಿಕ ಇನ್ನೊಂದು ಮಗುವಾಗಲು ಕನಿಷ್ಟ ಮೂರು ಅಥವಾ ನಾಲ್ಕು ವರ್ಷ ಅಂತರವಿರುವುದು ಆಕೆಯ ಆರೋಗ್ಯದ ದೃಷ್ಟಿಯಿಂದ ತುಂಬಾ ಅಗತ್ಯ.

ಜನನ ನಿಯಂತ್ರಣಕ್ಕೆ ಸರಳವೂ ಸುಲಭವೂ ಆದ ಅನೇಕ ವಿಧಾನಗಳಿವೆ. ಕುಟುಂಬ ಯೋಜನೆ ಮಾಡುವುದರಿಂದ ನೀವು ಬಯಸಿದಾಗ ಮಾತ್ರ ಮಕ್ಕಳನ್ನು ಪಡೆಯಲು ಸಾಧ್ಯವಿದೆ.

ಕುಟುಂಬ ಯೋಜನೆಯ ಬಗ್ಗೆ ಉಚಿತ ಸಲಹೆ ಮತ್ತು ಸೇವೆಗಾಗಿ ನಿಮಗೆ ಸಮೀಪವಿರುವ ಕುಟುಂಬ ಯೋಜನಾ ಕೇಂದ್ರವನ್ನು ಸಂದರ್ಶಿಸಿರಿ.

ನೇಪಾಳದ ನರಕ ಪಂಜರ

(ಏಳನೇ ಪುಟದಿಂದ)

ಒಂದು ಪಿಸ್ತೂಲು ಇತ್ತು. ಮುಖದಲ್ಲಿ ಒಂದು ವಿಧದ ನಿರಾಶೆ ಆವರಿಸಿಕೊಂಡಿತ್ತು. ಮಹಾರಾಜರನ್ನು ಕಾಣುತ್ತಲೇ ಮಹಾರಾಣಿ ಮತ್ತು ರಾಜಕುಮಾರಿ ಅಲ್ಲಿಂದ ದೂರ ಸರಿದರು.

ಸರ್ದಾರ್ ಸುರ್ಜೀತ್‌ಸಿಂಗರೊಡನೆ ಭೇಟಿಯಾಗಲಿಲ್ಲವೆಂದು ಡಾ| ಎರಿಕಾಗೆ ಆತಂಕವಾಯಿತು. ನಿಶ್ಚಿತ ಸ್ಥಳದಲ್ಲಿ ಬಹಳ ಹೊತ್ತಿನ ವರೆಗೆ ನಿರೀಕ್ಷಿಸಿದರೂ ಸರದಾರರು ಅಲ್ಲಿಗೆ ಬರಲಿಲ್ಲ. ಡಾ| ಎರಿಕಾ ಬಹಳ ಚಿಂತಾಕ್ರಾಂತಳಾದಳು; ಅವಳಿಗೆ ಸರದಾರರಲ್ಲಿ ಪೂರ್ಣ ನಂಬಿಗೆ ಇತ್ತು. ಯಾವುದೋ ಒಂದು ಗಹನವಾದ ಕಾರಣದಿಂದಲೇ ಅವರು ಕ್ಲುಪ್ತ ಸಮಯಕ್ಕೆ ಬಾರದಿರಬೇಕೆಂಬುದಾಗಿ ಅವಳು ಊಹಿಸಿಕೊಂಡಳು. ಪ್ರಧಾನಮಂತ್ರಿ 'ರಾಣಾ ಸಂಷೇರ್ ಸಿಂಗ್'ರವರಿಗೆ ತನ್ನ ಈ ವರೆಗಿನ ತಂತ್ರೋಪಾಯಗಳು ತಿಳಿದು ಹೋಯಿತೇ ಎಂಬ ಭಯದಿಂದ ಕಾತರಳಾದಳು. ಅವಳ ಎಲ್ಲಾ ಕುತೂಹಲ, ಸಂತೋಷ ಮಣ್ಣುಪಾಲಾದಂತಾಯಿತು; ಆ ರಾತ್ರಿಯೆಲ್ಲಾ ಯೋಚನಾ ತರಂಗಗಳ ಹೊಡೆತದಿಂದಲೇ ಕಳೆಯಿತು. ಬೆಳಗಾಗುತ್ತಲೇ ಎರಿಕಾ ಬಹಳ ಆತುರತೆಯಿಂದ ಡಾ. ಗುಪ್ತಾರಲ್ಲಿಗೆ ಹೋಗಿ, ಸರ್ದಾರರಿಗೆ ಫೋನ್ ಮಾಡಿದಳು. ಅವರು ತನ್ನ ಮನೆಯಲ್ಲಿಯೇ ಇದ್ದಾರೆಂದು ತಿಳಿದುಬಂತು. ಕೂಡಲೇ ಅಲ್ಲಿಂದಲೇ ಸರ್ದಾರರನ್ನು ಕಾಣಲು ಅವರಲ್ಲಿಗೆ ಹೋದಳು. ಒಬ್ಬ ಸೇವಕನು ಅವಳನ್ನು ಒಂದು ಪ್ರತ್ಯೇಕ ಕೋಣೆಯಲ್ಲಿ ಕುಳ್ಳಿರಿಸಿದನು. ಅಲ್ಲಿಯೇ ಸರ್ದಾರರು ತೀವ್ರ ಜ್ವರ ಪೀಡಿತರಾಗಿ ಕಂಬಳಿ ಹೊದ್ದುಕೊಂಡು ಮಲಗಿದ್ದರು. ತಲೆಗೆ ಪಟ್ಟಿ ಸುತ್ತಿತ್ತು. ಇದೆಲ್ಲವನ್ನು ನೋಡಿದ ಕೂಡಲೇ ಮೊದಲಿನ ದಿವಸ ಸರ್ದಾರರಿಗೆ ಮಹಾರಾಜರನ್ನು ಭೇಟಿಯಾಗದಿರಲಿಕ್ಕೆ ಕಾರಣವೇನೆಂದು ಖಚಿತವಾಯಿತು. ಸರ್ದಾರರೊಡನೆ ಮಾತಾಡುತಿದ್ದಂತೆಯೇ ಅವಳಿಗೆ ಒಂದು ಸಂತೋಷದ ವಾರ್ತೆ ಸರ್ದಾರರಿಂದ ದೊರಕಿತು. ಸರ್ದಾರರ ವಿಶೇಷ ಶಿಫಾರಸಿನ ಮೇರೆಗೆ ಭಾರತ ಸರಕಾರ ನೇಪಾಳದಲ್ಲಿ 'ಗೋಚರ್' ಎಂಬಲ್ಲಿ ಒಂದು ವಿಮಾನ ನಿಲ್ದಾಣ ರಚಿಸುವ ಕಾರ್ಯ ಕೈಕೊಂಡಿದ್ದು, ಆದರ ಕಾರ್ಯ ಆಗಲೇ ಪ್ರಾರಂಭವಾಗಿಬಿಟ್ಟಿದೆ. ಸರ್ದಾರರು ಇದೇ ನಿಲ್ದಾಣದಿಂದ ಭಾರತಕ್ಕೆ ಹೋಗುವಾಗ ಮಹಾರಾಜರನ್ನು ತನ್ನೊಂದಿಗೆ ಕರೆದೊಯ್ಯುವ ಅತ್ಯಂತ ರಹಸ್ಯಮಯವಾದ ಒಂದು ಯೋಜನೆಯನ್ನು ಅವರು ನಿರೂಪಿಸಿಕೊಂಡಿದ್ದರು. ಮಹಾರಾಜರ ಭೇಟಿಗಾಗಿ ಮತ್ತೊಂದು ದಿವಸವನ್ನು ನಿಶ್ಚಿತಗೊಳಿಸಿ ಡಾ| ಎರಿಕಾ ಅಲ್ಲಿಂದ ಮರಳಿ ಬಂದಳು. ಅದೇ ಸಾಯಂಕಾಲ ಅರಮನೆಗೆ ಹೋಗಿ ಅತ್ಯಂತ ಚಿಂತಾತುರತೆಯಿಂದಿದ್ದ ಮಹಾರಾಜರನ್ನು ಕಂಡು ನಡೆದುಹೋದ ಎಲ್ಲಾ ಘಟನೆಗಳನ್ನು ವಿಸ್ತಾರವಾಗಿ ವಿವರಿಸಿದಳು.

ಅಪೂರ್ವ ಸಂದರ್ಶನ

ಮೊದಲೇ ನಿರ್ಣಯಿಸಿದ ಪ್ರಕಾರ ಮಹಾರಾಜರು ಬಟ್ಟೆಗಳ ಒಂದು ಗಂಟು ಸಹಿತ ಪುನಃ ರಾಜಕುಮಾರರನ್ನು ಕಾಣುವ ನೆಪವಾಗಿ ಅವರಿದ್ದ ಭವನಕ್ಕೆ ಹೋದರು. ರಾಣಾ ಅಧಿಕಾರಿಯನ್ನು ಹೊರಗಿನ ಬೈಠಕಿನಲ್ಲಿ ಕುಳ್ಳಿರಿಸಿ ಒಳಗೆ ಹೋದರು. ಸ್ವಲ್ಪ ಹೊತ್ತಿನಲ್ಲಿಯೇ ಅಚ್ಚುಕಟ್ಟಾದ ಛದ್ಮವೇಷ ಧರಿಸಿ ಕೈಯಲ್ಲಿ ಪಿಸ್ತೂಲು ಹಿಡಿದುಕೊಂಡು ಬೇರೊಂದು ದ್ವಾರದಿಂದ ಹೊರಗೆ ಹೊರಟು ಹೋದರು. ಸ್ವಲ್ಪ ದೂರ ಸಾಗಿ ಸ್ವಲ್ಪ ಹೊತ್ತಿನವರೆಗೆ ಒಂದು ಗದ್ದೆಯಲ್ಲಿ ಅವಿತುಕೊಂಡು ಮಲಗಿದ್ದಾಗ ಕಾರು ಬರುತ್ತಿರುವುದು ಕಂಡುಬಂತು. ಇದನ್ನು ಕಂಡಾಕ್ಷಣ ಮಹಾರಾಜರ ಎದೆಬಡಿತ ಇಮ್ಮಡಿಯಾಯಿತು. ಆದರೆ ಕಾರಿನ ದೀಪಗಳು ನಂದಿಸಲ್ಪಡಲಿಲ್ಲ. ಕಾರಿನಲ್ಲಿ ಬೇರೆ ಯಾರೋ ಬಂದಿರಬೇಕೆಂದು ಊಹಿಸುತ್ತಿದ್ದಂತೆಯೇ ಅದರೊಳಗೆ ಒಬ್ಬ ರಾಣಾ ಅಧಿಕಾರಿ ಕುಳಿತಿದ್ದುದು ಕಂಡುಬಂತು. ಆದರೆ ಆ ಕಾರು ಅಲ್ಲಿ ನಿಲ್ಲದೆ ಬರಬರುತ್ತಾ ಬೇರೆಲ್ಲಿಗೋ ವೇಗವಾಗಿ ಧಾವಿಸಿತು. ಇಷ್ಟಾದ ಮರುಕ್ಷಣದಲ್ಲಿ ಮತ್ತೊಂದು ಕಾರು ಬಂತು. ಕತ್ತಲೆ ಕವಿದಿದ್ದರೂ ಕೂಡ ಕಾರಿನಲ್ಲಿ ಕುಳಿತಿದ್ದ ವ್ಯಕ್ತಿ ತಲೆಗೆ ಪಂಜಾಬಿ ಪೇಟಾ ಸುತ್ತಿಕೊಂಡಿದ್ದುದನ್ನು ಮಹಾರಾಜರು ಚೆನ್ನಾಗಿ ಕಂಡುಕೊಂಡರು.

ರಾಜರ ಮನದೊಳಗೆ ಅಂಕುರಿಸಿದ್ದ ಸಂಶಯಗಳೆಲ್ಲವೂ ದೂರವಾದವು. ಗದ್ದೆಯಿಂದೆದ್ದು ಬಂದು ಕಾರಿನ ಬಾಗಿಲು ತೆರೆದರು. ಸಂಚಯವಾಗುತ್ತಲೇ ಇಬ್ಬರೂ ಪರಸ್ಪರ ಆಲಂಗಿಸಿಕೊಂಡರು. ಸ್ವಲ್ಪ ಹೊತ್ತಿನ ವರೆಗೆ ಇಬ್ಬರೂ ಒಂದು ಕಡೆ ಕುಳಿತು ಅತ್ಯಂತ ರಹಸ್ಯವಾಗಿ ವಿಚಾರ ವಿನಿಮಯ ಮಾಡಿಕೊಂಡ ಬಳಿಕ ಇಬ್ಬರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು. ಅಲ್ಲಿಂದ ಪರಸ್ಪರ ಅಗಲುವಾಗ "ನಾನು ಸದ್ಯದಲ್ಲಿಯೇ ಭಾರತಕ್ಕೆ ಹೋಗುವುದಾಗಿಯೂ ತನ್ನ ಸ್ಥಾನದಲ್ಲಿ ಬೇರೊಬ್ಬರು ರಾಯಭಾರಿಯಾಗಿ ಬರಲಿರುವುದಾಗಿಯೂ ಸರ್ದಾರರು ಮಹಾರಾಜರಿಗೆ ತಿಳಿಸಿದ್ದರು. ಅದರಂತೆಯೇ ಆಯಿತು. ವಿಮಾನ ನಿಲ್ದಾಣ ಪೂರ್ಣಗೊಂಡಿತು. ಅದೇ ನಿಲ್ದಾಣದಿಂದ ಮೊಟ್ಟಮೊದಲು ಸರ್ದಾರ್ ಸುರ್ಜೀತ್‌ಸಿಂಗರೇ ಭಾರತಕ್ಕೆ ಪ್ರಯಾಣ ಬೆಳೆಸಿದರು. ಸರ್ದಾರರೊಡನೆ ಭೇಟಿ ಮಾಡಿದ ದಿನವೇ ಮಹಾರಾಜಾ ತ್ರಿಭುವನರು ಡಾ| ಎರಿಕಾಳೊಡನೆ "ಎರಿಕಾ! ನನ್ನ ಅಂತಿಮ ಮಹತ್ವಾಕಾಂಕ್ಷೆಯೂ ಅದೇ ವಿಮಾನದೊಂದಿಗೆ ಹಾರಿಹೋಯಿತು. ನಾನು ಈ ಅರಮನೆಯೆಂಬ ಬಂದೀಖಾನೆಯಲ್ಲಿಯೇ ಸಿಲುಕಿಕೊಂಡು ಜೀವಮಾನವನ್ನು ಕೊನೆಗೊಳಿಸುವುದೇ ನನ್ನ ಪಾಲಿಗೆ ಬಿದ್ದಂತಾಯಿತು; ಇನ್ನು ನನ್ನ ಬಿಡುಗಡೆ ಎಂದೆಂದಿಗೂ ಆಗುತ್ತಿಲ್ಲ" ಎಂಬುದಾಗಿ ಬಹಳ ವಿಷಾದದಿಂದ ನುಡಿದರು.

(ಮುಂದುವರಿಯುವುದು)

ಅಮೇರಿಕೆಯಲ್ಲಿ ಭದ್ರಗಿರಿ ಕೇಶವದಾಸರು

ಬೆಂಗಳೂರು ಮಾರ್ಚ್, 16, ಎರಡು ತಿಂಗಳ ಕಾಲ ವೆಸ್ಟ್ ಇಂಡೀಸ್‌ನ ಟ್ರಿನಿಡಾಡ್‌ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರವೇರಿಸಿದ ಶ್ರೀ ಭದ್ರಗಿರಿ ಕೇಶವದಾಸರು ವಾಷಿಂಗ್ಟನ್‌ಗೆ ಮಾ. 6 ರಂದು ಆಗಮಿಸಿದರು. ಅಲ್ಲಿನ ಛೇಸ್ ಛೇಸ್ ರಸ್ತೆಯಲ್ಲಿರುವ "ಕೇಶವಾಶ್ರಮ ಅಂತರರಾಷ್ಟ್ರೀಯ ಕೇಂದ್ರ"ದಲ್ಲಿ ತಂಗಿದ್ದಾರೆ. ಅಂದಿನಿಂದ ಅಮೇರಿಕನ್ ವಿಶ್ವವಿದ್ಯಾಲಯದ ಕೇ ಅಧ್ಯಾತ್ಮ ಕೇಂದ್ರವು ಪ್ರತಿ ಸೋಮವಾರ ಮತ್ತು ಬುಧವಾರ ಸಂಜೆ 8½ ರವರೆಗೆ ಅವರ ಪ್ರವಚನವನ್ನು ಏರ್ಪಡಿಸಿದೆ. ಇದೇ ಅವಧಿಯಲ್ಲಿ ಮೇರಿಲ್ಯಾಂಡಿನ ಮಸಾಚ್ಯುಸೆಟ್ಸ್ ರಸ್ತೆಯಲ್ಲಿರುವ "ಲಿಟಲ್ ಪಾರ್ಕ್ಸ್ ಲೈಬ್ರರಿ"ಯಲ್ಲಿ ಪ್ರತಿ ಶುಕ್ರವಾರವೂ; ವಾಷಿಂಗ್ಟನ್ ಕ್ಯಾಥೆಡ್ರಲ್ ಛೇಪಲ್‌ನಲ್ಲಿ ಪ್ರತಿ ಶನಿವಾರವೂ ಅವರ ಭಾಷಣಗಳನ್ನು ಏರ್ಪಡಿಸಿವೆ.

ಈ ಎಡೆಗಳಲ್ಲಿ ಅವರು ಪ್ರವಚಿಸುವ ವಿಷಯಗಳೆಂದರೆ "ಓಂಕಾರ ಶಕ್ತಿ", "ಜಗತ್ತಿನ ಮತಗಳಲ್ಲಿ ಸಂತವಾಙ್ಮಯ" "ಕುಂಡಲಿನೀ ಯೋಗ", "ಲೋಕಗಳು ಮತ್ತು ಅವುಗಳ ಅಳತೆ", "ಭಾರತೀಯ ಸಂತರ ಬೋಧೆಗಳು" "ಧ್ಯಾನ ಸಾಧನ" ಮತ್ತು "ದಿವ್ಯ ಪ್ರೇಮದ ಮಾರ್ಗ". ತಾ. 6 ಮಾರ್ಚಿನಲ್ಲಿ ಹರೇಸ್ ಬಾರ್ಬರ್ ಅವರ ಅತಿಥಿಗಳಾಗಿ ಶ್ರೀ ಕೇಶವದಾಸರನ್ನು ಆಹ್ವಾನಿಸಿದ್ದರು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ವಾಸ್ತವ್ಯಕ್ಕೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. C. 636/68 O. S. 428/66

ಮೂಸ ಕುಂಞಿ ಬ್ಯಾರಿ — ಅರ್ಜಿದಾರ

ಅಮ್ಮಕ್ಕ ಕೂಡಾ — ಎದ್ರಿರು

3ನೇ ಎದ್ರಿ — ಪದ್ಮಾವತಿ,
ಚತ್ರಪ್ಪ ಗೌಡರ ಮಗಳು,
ಅಜ್ಜಾವರ ಗ್ರಾಮ.

ಸದ್ರಿ ಮೂರನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಈ ಅಮಲ್ದಾರಿಯಲ್ಲಿ ದಾಖಲಾದ ಯೋಲಂ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸುವ ಬಗ್ಗೆ ನಿಮ್ಮ ನೋಟೀಸಿನ ಬಗ್ಗೆ ತಾರೀಕು 3-4-69ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. SADASHIVA RAO

Vakil for Petitioner

Puttur,
18—3—69.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 405/1966

ಚಕ್ಕಯ್ಯ ನಾಯ್ಕ — ವಾದಿ

ವೆಂಕಮ್ಮ ಯಾನೆ ಕಮಲ ಕೂಡಾ 33 ಜನರು — ಪ್ರತಿವಾದಿರು

Defendants

30. ಮೈನರ್ ಸರೋಜಿನಿ ಪ್ರಸಾದ-ಗಾರ್ಡಿಯಾನಳು ತಾಯಿ 9ನೆ ಪ್ರತಿವಾದಿಳು ಸರೋಜಿನಿ ವೆಂಕಮ್ಮ ಯಾನೆ ಕಮಲನ ಮಗಳು, ಕಾಸರಗೋಡು ತಾಲೂಕು ಕಡಿಯಾಲು ಗ್ರಾಮದ ಕಾಜೂರು ಮನೆಯಲ್ಲಿ.

31. ನೇಮಿರಾಜ-ಮ್ಯಾನರ್ ಗಾರ್ಡಿಯಾನ ತಾಯಿ 7ನೇ ಪ್ರತಿವಾದಿಳು ರೇವತಿ— ವೆಂಕಮ್ಮ ಯಾನೆ ಕಮಲನ ಮಗಳು, ಬಂಟ್ವಾಳ ತಾಲೂಕು ಕೊಳನಾಡು ಗ್ರಾಮ.

32. ಮ್ಯಾನರ್ ಪ್ರಕಾಶ-ಗಾರ್ಡಿಯಾನ ತಾಯಿ 3ನೇ ಪ್ರತಿವಾದಿಳು ರತ್ನ ವೆಂಕಮ್ಮ ಯಾನೆ ಕಮಲನ ಮಗಳು ಕೊಳನಾಡು ಗ್ರಾಮ.

33. Doctor K. C. Nayak, Vice Chancellar, Mysore University Bangalore, Post Bangalore.

ಸಪ್ಲಿಮೆಂಟು 30ರಿಂದ 33ನೆ ಪ್ರತಿವಾದಿರಿಗೆ—

ವಾದಿಯು ಪ್ರತಿವಾದಿರ ಮೇಲೆ 1/30ಗೆ ಅಂಶದ ಪಿಕೆ ವಾದಿಗೆ ಕೊಡಿಸುವಂತೆಯೂ ಗತ ವ, ಮುಂದಿನ ಮಿಗ್ತೆಗೆ ಕೊಡಾ ಮಾಡಿದ ಪಿಕೆ ದಾವೆಯನ್ನು ಕೈಪೇತ, ನೋಟೀಸಿನ ವ್ಯಾದೆ ತಾ. 10—4—69ಕ್ಕೆ ಇಟ್ಟಿರುವುದರಿಂದ ಆ ಬಗ್ಗೆ ನಿಮ್ಮ ಉಜಾಹರಣೆಗಳಿದ್ದರೆ ಬರಹ ಮೂಲಕ ಆ ವ್ಯಾದೆ ದಿನ 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿವಾಯಿ ಎಂತ ಮಾಡಿ ಈ ದಾವೆಯನ್ನು ಮುಂಬರಿಸಲಾದೀತು, ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(Sd.) B. L. N. RAI

Advocate For Plaintiff

ತಾರೀಕು 17-3-1969

ಪುತ್ತೂರು, S. K.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಹಕ್ಕಿ ಹಾರುತಿದೆ ನೋಡಿದಿರಾ?

(ನಾಲ್ಕನೇ ಪುಟದಿಂದ)

"ಅಲ್ರಿ, ಕಾಮಾಕ್ಷ ನಾರಾಯಣ ಸಿಂಗರು ವಿವಾದಾಸ್ಪದ ವ್ಯಕ್ತಿಯಿರಬಹುದು; ನ್ಯಾಯಾಲಯದಿಂದ ಶಿಕ್ಷೆಗೂ ಒಳಪಟ್ಟಿರಬಹುದು. ಆದರೆ, ಈಗ ನೋಡಿ, ಅವರೂ ಸೇರಿದ ಸಂಪುಟ ವಿಶ್ವಾಸಗಳಿಸಿತು...."

"ವಿರೋಧಿಪಕ್ಷಗಳು ಸಭಾತ್ಯಾಗ ಮಾಡಿದ್ದರಿಂದ...."

"ಬಹುಮತದ ಧೈರ್ಯವಿಲ್ಲದ್ದರಿಂದಲೇ ಅವು ಜಾರಿಕೊಂಡವು....."

"ಆದರೂ ಅರಸರು ಸಂಪುಟದಲ್ಲಿರುವುದು ಸರಿಯಲ್ಲ—ಕಾನೂನಿನ ದೃಷ್ಟಿಯಿಂದಲ್ಲ......"

"ಅದು ಬೇರೆ ಕತೆ ತಮಗೇ ಬಹುಮತವಿದೆ ಇದೇಂತ ಹಾರುತ್ತಿದ್ದವರು....'

"ಹೋಗಲಿ ಬಿಡು, ನಮಗ್ಯಾಕೆ ಆ ಚಿಂತೆ?"

'ಅಲ್ರಿ, ಮಧ್ಯಪ್ರದೇಶದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬಂತಂತೆ....'

"ಹ್ಞಾಂ, ಅಂದು ಕಾಂಗ್ರೆಸ್ ಸರಕಾರದ ಪತನಕ್ಕೆ ಕಾರಣರಾದ ಗೋವಿಂದ ನಾರಾಯಣ ಸಿಂಹರೂ ಅವರ ಅನುಯಾಯಿಗಳೂ ಸಂಯುಕ್ತ ವಿಧಾಯಕ ದಳದ ಸರಕಾರಕ್ಕೂ ಮುಳುವಾದರು....'

'ಅಲ್ರಿ, ಪಕ್ಷಾಂತರ ಪ್ರವೃತ್ತಿಯಿಂದ ಏನೆಲ್ಲಾ ಆಗುತ್ತದೆ...."

"ಇದ್ರಲ್ಲಿ ವಿಶೇಷವೇನು ಬಂತು? ಹಕ್ಕಿ ಹಾರುತಿದೆ ನೋಡಿದಿರಾ ಅಂತ ದಾಸರು ಕೇಳಿಲ್ಲವೆ? ಹಾಗೆ ಅದಕ್ಕೆ ತನ್ನದೇ ಆದ ದಾರಿ. ಪೂರ್ವ ವಿವೇಚನೆಗೆ ಅವಕಾಶ ನೀಡದೆ, ತಾತ್ಕಾಲಿಕ ಪರಿಹಾರವನ್ನು ಮಾತ್ರ ಕಾಣುವವರಿಗೆ ಮತ್ತೇನು ಬೇಕು?"

"ಏನೂ ಅನ್ನುವುದು ಬೇಡ. ಅವ್ರು ಮಾಡಿದ್ದು ಅವ್ರಿಗೆ; ನಾವು ಮಾಡಿದ್ದು ನಮಗೆ...."

"ಇದು ದೊಡ್ಡ ವೇದಾಂತವಾಯ್ತು."

"ಏನು, ವೇದಾಂತ ಅಲ್ವೆ, ಮತ್ತೇನು?"

'ನಿಮಗೇನೂ ಇಲ್ಲವೆ?'

"... ಏನು ಹಾಗೆ ದುರುಗುಟ್ಟಿ ನೋಡ್ತೀರಿ?"

'ಏನೂ ಇಲ್ಲಪ್ಪ...'

"ಇಲ್ಲವೆ? ಸುಳ್ಳು ಹೇಳ್ತೀರಾ?"

"ಇಲ್ಲಾಂತಲ್ಲಂದೆ? ಇಲ್ಲಾ ಅನ್ಕೊಂಡೆ ...."

"ತಿಳೀತು ಬಿಡಿ, ಭಾರೀ ಬುದ್ಧಿವಂತ್ರು. ಅದ್ರೆ ನೋಡಿ, ಇರೋ ಬುದ್ಧಿಗೆಲ್ಲಾ ನೀವೊಬ್ರೇ ಕಂಟ್ರಾಕ್ಟರ್ ಅಲ್ಲ...."

"ಸುಮ್ಮನೆ ಯಾಕೆ ಚರ್ಚೆ?..."

"ಮತ್ತೇನು ಬೇಕು?"

"ಅದೂ...."

"ಶೂ...."

—ಗೋರಾ.

o o o o

ಶತ್ರುಗಳನ್ನು ಅಡಗಿಸುವ ಶೂರನಿಗಿಂತಲೂ ತನ್ನ ಆಸೆ, ಆಮಿಷಗಳನ್ನು ಹಿಡಿತದಲ್ಲಿಟ್ಟವನು ಹೆಚ್ಚು ಶೂರನು.

o o o

ಹುರಿಗಡಲೆಗಾಳುಗಳು

ಪಶ್ಚಿಮ ಬಂಗಾಳದಲ್ಲಿ ವಿಧಾನ ಪರಿಷತ್ತನ್ನು ರದ್ದುಪಡಿಸುವ ನಿರ್ಣಯವನ್ನು ವಿಧಾನ ಸಭೆಯಲ್ಲಿ ಅವಿರೋಧವಾಗಿ ಸ್ವೀಕರಿಸಲಾಯ್ತು.

—ಚೀನಿ ಚೀಲದ ಮಾರ್ಗ ಸುಗಮಗೊಳಿಸುವ ಮೊದಲ ಸುರಂಗ ದಾರಿಯೇ ಇದು?

o o o

ಅಯ್ಯೂಬಖಾನರು ಭೂಮಿಯ ತಳಕ್ಕೆ ಬಗ್ಗಿದರೂ ಪಾಕಿಸ್ತಾನದಲ್ಲಿ ಗಲಭೆ ಶಾಂತವಾಗಲಿಲ್ಲ.

—ಹೊತ್ತಿಸಿದ ಬೆಂಕಿ ಬೇಗನೆ ಹೇಗೆ ಆರಿ ಹೋಗುತ್ತೆ?

o o o

ತಾನು ದೇವರೆಂದು ಹೇಳಿಕೊಂಡಾಗ ಅದನ್ನು ನಂಬಲು ನಿರಾಕರಿಸಿದೊಬ್ಬನನ್ನು ಆ ದೇವರೇ ಕೊಂದು ಬಿಟ್ಟ ಆರೋಪದ ಮೇಲೆ ಆದೇ ದೇವರಿಗೆ ಮರಣ ದಂಡನೆಯನ್ನು ನ್ಯಾಯಾಲಯ ನೀಡಿತಂತೆ.

—ಇದಕ್ಕಾಗಿಯೇ ದೇವರು ಕಲ್ಲುಗೊಂಬೆಯಾಗಿ ಕುಳಿತಿದ್ದಾನೆಂಬುದು ಶುದ್ಧ ಕುಹಕ.

o o o

ಚಂದ್ರಶೇಖರ್‌ರವರ ಮೇಲೆ ಕ್ರಮ ಕೈಕೊಳ್ಳದೆ ಹೋದರೆ, ಮುರಾರ್ಜೀ ರಾಜಿನಾಮೆ ನೀಡುವರೆಂಬುದು ಒಂದು ವರ್ಗದ ಸಾಮಾನ್ಯ ಜನರ ಕಿವಿಪೂಜೆ ಮಾತ್ರ.

o o o

ಬೆಂಗಳೂರಿನ ವಿಧಾನ ಸಭೆಯಲ್ಲಿ ವಿರೋಧೀ ಪಕ್ಷೀಯರು ಧರಣಿ ಹೂಡಿ ಸ್ಪೀಕರರನ್ನು ಪೇಚಿಗೆ ಸಿಕ್ಕಿಸಿದರು.

—ಆದರೂ ಕೇರಳೀ ಮಾನವತೆಯನ್ನೇ ತೋರಿಸಿದರು.

o o o

ಕೊಚ್ಚಿಯಲ್ಲಿ ಕೊಂಕಣಿ ಭಾಷಾ ಪ್ರಚಾರ ಸಂಸ್ಥೆಯೊಂದು ಪರೀಕ್ಷೆಗಳನ್ನು ನಡೆಸುತ್ತಿದೆ.

—ಮಂಗಳೂರಲ್ಲಿ ತುಳು ಭಾಷಾ ಪ್ರಚಾರ ಸಂಸ್ಥೆಯೊಂದು ಸದ್ಯದಲ್ಲೇ ಸ್ಥಾಪಿತವಾಗಲಿದೆಯೆಂಬುದು ಇನ್ನೂ ದೃಢಪಟ್ಟಿಲ್ಲ.

o o o

ತೆಲಂಗಾಣಕ್ಕೆ ಪ್ರತ್ಯೇಕ ರಾಜ್ಯವನ್ನು ಕೊಡಬೇಕೆಂದು ಆಂಧ್ರದ ಮಾಜಿ ಮುಖ್ಯಮಂತ್ರಿಯೊಬ್ಬರು ಹೇಳಿದ್ದಾರೆ.

—ಪ್ರತ್ಯೇಕ ರಾಜ್ಯ ಬೇಡಿ ಯಶಗಳಿಸಿದ ಮೊತ್ತ ಮೊದಲಿಗರು ಆಂಧ್ರರೇ.

o o o

ಆಂಧ್ರ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಾದೇಶಿಕ ಸ್ವಾಯತ್ತ ತೆಲಂಗಾಣ ರಚಿಸಬೇಕೆಂದು ಸದ್ಯದ ಸಚಿವರೊಬ್ಬರು ಅಂದರು.

—ಅಸ್ಸಾಮದಲ್ಲಿ ನಾಗಾಲ್ಯಾಂಡು, ಆಂಧ್ರ ಪ್ರದೇಶದಲ್ಲಿ ತೆಲಂಗಾಣ...

o o o

ಸಾಮ್ಯ ಸಂವತ್ಸರ ಹೆಸರಿಗೆ ಪ್ರತಿರೋಧವಾಗಿರುವ ಸ್ವಭಾವದಂತೆ ಕಠೋರವಾಗಿಯೇ ಉಳಿಯುವುದೆಂದು ಇನ್ನೂ ದೃಢಪಟ್ಟಿಲ್ಲ.

ತಡೆಯಾಜ್ಞೆ ಸಿಗಲಿಲ್ಲ

ಉಡುಪಿಯ ಅಷ್ಟಮಠಗಳಿಗೆ ಸೇರಿದ ಸೋದೆ, ಕೃಷ್ಣಾಪುರ, ಪುತ್ತಿಗೆ, ಕಾಣಿಯೂರು ಹಾಗೂ ಶೀರೂರು ಮಠಗಳ ಪೀಠಾಧಿಪತಿಗಳು, ಫಲಿಮಾರು ಮಠಾಧಿಪತ್ಯದ ಹಸ್ತಾಂತರದ ಸಂಬಂಧದಲ್ಲಿ ಇಲ್ಲಿನ ಮುನ್ಸಿಫರ ಮುಂದೆ ಹೂಡಿದ್ದ ದಾವಾ ವಜಾ ಆಗಿದೆ.

ಈಗ ಪರ್ಯಾಯದಲ್ಲಿರುವ ಪೇಜಾವರ ಮಠದ ಶ್ರೀಗಳು, ಫಲಿಮಾರು ಮಠದ ಪೀಠವನ್ನು ವಹಿಸಿಕೊಂಡ ಭಂಡಾರಕೇರಿಯ ಶ್ರೀ ವಿದ್ಯಾಮಾನ್ಯ ತೀರ್ಥ ಸ್ವಾಮಿಜೀ ಅವರಿಗೆ ಇಲ್ಲಿನ ಶ್ರೀ ಕೃಷ್ಣ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಅಧಿಕಾರ ನೀಡುವುದನ್ನು ನಿಷೇಧಿಸಿ ಆಜ್ಞೆ ಮಾಡಬೇಕೆಂದು ನ್ಯಾಯಾಲಯವನ್ನು ಕೋರಲಾಗಿದ್ದಿತು.

ಮುನ್ಸೀಫ್ ಶ್ರೀ ಕೃಷ್ಣಪ್ಪ ಶೆಟ್ಟಿ ಅವರು, ತಮ್ಮ ತೀರ್ಪಿನಲ್ಲಿ ಮಠದ ಪೀಠವನ್ನು ಬೇರೆಯವರಿಗೆ ವಹಿಸಿಕೊಡುವ ಕ್ರಮವನ್ನು ಪ್ರಶ್ನಿಸದೆ ಹೊಸ ಪೀಠಾಧೀಶರು ಪೂಜೆಸಲ್ಲಿಸುವುದನ್ನು ತಡೆಹಿಡಿಯಬೇಕೆಂಬ ಕೋರಿಕೆ ಕ್ರಮಬದ್ಧವಲ್ಲವೆಂದು ಹೇಳಿದ್ದಾರೆ.

ಪರ್ಯಾಯ ಪೀಠಸ್ಥರು ಭಂಡಾರಕೇರಿ ಶ್ರೀಗಳಿಗೆ ಪೂಜೆ ಸಲ್ಲಿಸುವ ಅವಕಾಶ ಕೊಡುವುದನ್ನು ನಿರ್ಬಂಧಿಸಿದರೆ, ಅದು ಅವರು (ಪರ್ಯಾಯ ಸ್ವಾಮಿಗಳು) ತಮ್ಮ ಧರ್ಮಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅಡಚಣೆ ಮಾಡಿದಂತೆಂದು ಅಭಿಪ್ರಾಯಪಟ್ಟಿರುವ ಮುನ್ಸೀಫರು, ಒಬ್ಬ ಸ್ವಾಮೀಜಿ ಎರಡು ಮಠಗಳ ಮುಖ್ಯಸ್ಥರಾಗಿರಲು ಅಡ್ಡಿಯಿಲ್ಲವೆಂದು ಹೇಳಿದ್ದಾರೆ.

ಅರ್ಜಿದಾರರ ಪರವಾಗಿ ಶ್ರೀ ಪಿ. ವಿ. ಆಚಾರ್ ಹಾಗೂ ಶ್ರೀ ಯೋಗೀಶ್ವರ ಹೊಳ್ಳ ಮತ್ತು ಪ್ರತಿವಾದಿಗಳ ಪರವಾಗಿ ಶ್ರೀಧರ ರಾವ್, ಶ್ರೀ ಕೆ. ಬಾಲಚಂದ್ರ ರಾವ್ ಮತ್ತು ಶ್ರೀ ವಿ. ಆರ್. ಕದಿಯಾರ್ ಅವರು ವಕಾಲತ್ ವಹಿಸಿದ್ದರು.

ಯಾರೂ ಗಾಂಧಿ ಶಿಷ್ಯರಲ್ಲ

ಯಾರೊಬ್ಬರೂ ತಾನು ಗಾಂಧಿಯ ಅನುಯಾಯಿ ಎಂದು ಹೇಳಿಕೊಳ್ಳಬೇಡಿ. ನಾನೊಬ್ಬನೇ ನನ್ನ ಅನುಯಾಯಿಯಾದರೂ ಸಾಕು. ನಾನೂ ಸಹ ನನ್ನ ಅಪೂರ್ಣ ಅನುಯಾಯಿ ಎಂಬ ಸಂಪೂರ್ಣ ಅರಿವು ನನಗಿದೆ. ಯಾಕೆಂದರೆ ನನ್ನ ವಿಶ್ವಾಸಗಳಿಗೆ ತಕ್ಕಂತೆ ನಾನು ಇಂದು ಜೀವಿಸುತ್ತ ಇಲ್ಲ. ನೀವು ನನ್ನ ಅನುಯಾಯಿಗಳು ಅಲ್ಲವೇ ಅಲ್ಲ, ನೀವು ನನ್ನ ಸಹಕಾರಿಗಳು, ಸಹ ಯಾತ್ರಿಕರು, ಭಕ್ತಬಂಧುಗಳು, ಸಹ ಕಾರ್ಯಕರ್ತರು.

(ಗಾಂಧೀ ಸೇವಾಸಂಘದ ಸದಸ್ಯರನ್ನು ಕುರಿತು) (ಗಾಂಧೀ)

ಜನಶಕ್ತಿಯ ಸಂಘಟನೆ

ಭಾರತದಲ್ಲಿ ಸಮಗ್ರ ಮತ್ತು ಸಂಪೂರ್ಣ ಪರಿವರ್ತನವಾಗಬೇಕಾದರೆ ಜನಶಕ್ತಿಯನ್ನು ಸಂಘಟಿಸುವುದೊಂದೇ ಮಾರ್ಗವಿರುತ್ತದೆ. ಅದನ್ನು ಸಾಧಿಸಲಿಕ್ಕೆ ಸ್ಪಷ್ಟವಾದ ವಿಚಾರಾತ್ಮಕ ಗುರಿ ಮತ್ತು ರಚನಾತ್ಮಕ ಆಂದೋಲನವೇ ಬೇಕು. ಇವೆರಡೂ ಜತೆಗೂಡಿ ನಡೆದರೆಯೇ ಮಾತ್ರ ನಿಜವಾದ ಲೋಕಶಕ್ತಿ ನಿರ್ಮಾಣವಾದೀತು. ಮತ್ತು ಆ ಲೋಕಶಕ್ತಿಯಿಂದ ಸಂಪೂರ್ಣ ಪರಿವರ್ತನ ಸಾಧಿಸೀತು.

(ಧೀರೇಂದ್ರ ಮಜುಮದಾರ)

ವಾರ್ಷಿಕ ಮಹಾಸಭೆ

ಇದೇ ತಾ. 16-8-69ರಂದು ಲೋಕಸೇವಾವೃಂದದ ವಾರ್ಷಿಕ ಮಹಾಸಭೆಯನ್ನು ಸತ್ಯಸಾಯಿ ವಿಹಾರದ ಲೋಕಸೇವಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಜರಗಿಸಲಾಯಿತು. ಲೋಕ ಸೇವಾವೃಂದದ ಅಧ್ಯಕ್ಷ ಶ್ರೀ ಮುದಿಯಾಲ ನಾರಾಯಣ ಭಟ್ಟರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಲೋಕ ಸೇವಾ ಹೈಯರ್ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಂಸ್ಥೆಯ ಮಾರ್ಗದರ್ಶಿಗಳು ಆದ ಶ್ರೀ ಬಿ. ನಾರಾಯಣ ರಾಯರು, ಸಂಸ್ಥೆಯ ಕಳೆದ ವರ್ಷದ ವಿವಿಧ ಕಾರ್ಯಕ್ರಮಗಳ ವರದಿಯನ್ನು ಸಭೆಯ ಮುಂದಿಟ್ಟರು. ಲೋಕಸೇವಾವೃಂದದ 1969ನೇ ವರ್ಷಕ್ಕೆ ಈ ಕೆಳಕಂಡವರೊಡಗೂಡಿದ ಆಡಳಿತ ಸಮಿತಿಯನ್ನು ನೇಮಿಸಲಾಯಿತು. ಶ್ರೀ ಮುದಿಯಾಲ ನಾರಾಯಣ ಭಟ್—ಅಧ್ಯಕ್ಷರು, ಶ್ರೀ ವಿ. ಮೋಹನರಾಯರು—ಉಪಾಧ್ಯಕ್ಷರು, ಶ್ರೀ ಯಂ. ಈಶ್ವರ್ ಭಟ್ಟರು—ಕೋಶಾಧಿಕಾರಿಗಳು; ಶ್ರೀ ಯು. ಗಂಗಾಧರ ಭಟ್—ಕಾರ್ಯದರ್ಶಿ; ಶ್ರೀ ವೆಂಕಪ್ಪಯ್ಯ ಪಾರೆ, ಯಂ. ಯಸ್. ಸಿ., ಬಿ. ಟಿ., ಶ್ರೀ ಕೆ. ಸುಬ್ರಾಯ, ಎಂ. ಎ., ಶ್ರೀಮತಿ ಮುದಿಯಾಲ ಗೌರಮ್ಮ, ಶ್ರೀ ಯಂ. ಸುಬ್ರಾಯ ಭಟ್, ಶ್ರೀ ಯಂ. ನಾರಾಯಣ ಅಳ್ವ, ಶ್ರೀ ಕೆ. ತಿರುಮಲೇಶ್ವರ ಭಟ್, ಬಿ. ಎ., ಬಿ. ಟಿ., ಶ್ರೀ ಎನ್. ಸುಬ್ರಾಯ ಭಟ್, ಬಿ. ಯಸ್. ಸಿ., ಬಿ. ಟಿ., ಶ್ರೀ ಕೆ. ಯಂ. ರಾಮ ಭಟ್, ಡಾ| ಬಿ. ಯಸ್. ಈಶ್ವರ ಭಟ್, ಎಲ್. ಐ. ಯಮ್. ಮತ್ತು ಶ್ರೀ ಕೆ. ಕೋರಿಕ್ಕಾರು ಶಂಕರ ನಾರಾಯಣ ಭಟ್, ಇವರು ಸದಸ್ಯರುಗಳಾಗಿಯೂ, ಶ್ರೀ ಕೆ. ಯಸ್. ಕೃಷ್ಣ ಭಟ್, ಬಿ. ಎ., ಬಿ. ಯಲ್. ರವರು ಎಕ್ಸ್ ಅಫೀಶಿಯೋ ಸದಸ್ಯರಾಗಿಯೂ ಆರಿಸಲ್ಪಟ್ಟರು.

1969ನೇ ವರ್ಷಕ್ಕೆ ಆಡಿಟರಾಗಿ ಶ್ರೀ ಬಾಬು ರಾವ್, ಇವರು ನೇಮಿಸಲ್ಪಟ್ಟರು. ಅನಂತರ 1969ನೇ ವರ್ಷಕ್ಕೆ ಕಾರ್ಯಕ್ರಮಗಳ ಕುರಿತಾಗಿ ವಿಮರ್ಶಿಸಲ್ಪಟ್ಟಿತು. ಇದೇ ಜೂನ್ ತಿಂಗಳಿನಿಂದ ಒಂದು ಅನಾಥಾಶ್ರಮ ಮತ್ತು ಪ್ರೇಮ ಕುಟೀರವೆಂಬ ಆಶ್ರಮವನ್ನು ತೆರೆಯುವುದೆಂದು ನಿರ್ಧರಿಸಲಾಯಿತು. ಲೋಕಸೇವಾ ಹೈಯರ್ ಸೆಕೆಂಡರಿ ಶಾಲೆಯ ಲೋಕಸೇವಾ ವಿದ್ಯಾರ್ಥಿ ನಿಲಯಗಳ ಹಾಗೂ ಇತರ ಕಟ್ಟಡಗಳ ಅಭಿವೃದ್ಧಿಯ ಕುರಿತು ವಿಮರ್ಶಿಸಲಾಯಿತು. 1969ನೇ ವರ್ಷಕ್ಕೆ ಒಟ್ಟು ಎರಡೂವರೆ ಲಕ್ಷ ರೂಪಾಯಿಗಳ ಬಜೆಟ್ಟನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

ಮಹಾಸಭೆಯ ಅಂಗವಾಗಿ ಅಂತಿಮವಾಗಿ ತತ್ವ ಸಮಾಲೋಚನಾ ಸಭೆ ನಡೆಯಿತು. ಸಂಸ್ಥೆಯ ಉಪಾಧ್ಯಕ್ಷ ಶ್ರೀ ವಿ. ಮೋಹನ ರಾಯರು ತತ್ವಪ್ರಚಾರಕ್ಕಾಗಿ ಅಲ್ಲಲ್ಲಿ ತತ್ವಸಮಿತಿಗಳನ್ನು ನಡೆಸುವುದರ ಪ್ರಾಮುಖ್ಯತೆಯನ್ನು ಕುರಿತು ಮಾತನಾಡಿದರು. ಶ್ರೀ ಪಾರೆ ವೆಂಕಪ್ಪಯ್ಯನವರು ಸೌಜನ್ಯ ಹಾಗೂ ಭಗವದ್ಭಕ್ತಿಗಳ ಕುರಿತು ಮಾತನಾಡಿದರು.

ಅನಂತರ ಸಂಸ್ಥೆಯ ಅಧ್ಯಕ್ಷರು ಸುಮಾರು ಒಂದು ಘಂಟೆಯ ಕಾಲ ಸಂಸ್ಥೆಯ ಧ್ಯೇಯ ಧೋರಣೆಗಳನ್ನು ವಿವರಿಸಿ ಸಮಾಜದ ಇಂದಿನ ಪ್ರಕ್ಷುಬ್ಧ ವಾತಾವರಣವನ್ನು ಕುರಿತು ವಿವರಣೆ ನೀಡಿದರು.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ,

ತಯಾರಕರು:

ಅಮೃತಾಂಜನ ಲಿಮಿಟೆಡ್, ಮದ್ರಾಸು-4

ನಾಲ್ವರು ಒಂದು ಸಮಸ್ಯೆ ಎದುರಿಸಿದ ಬಗೆ

ಒಬ್ಬ ವ್ಯಕ್ತಿಯ ಕುಟುಂಬದ ಏಳಿಗೆ ಆ ವ್ಯಕ್ತಿಯ ವಿದ್ಯಾಭ್ಯಾಸದ ಮಟ್ಟವನ್ನಾಗಲೀ, ಅವನ ಆರ್ಥಿಕ ಮಟ್ಟವನ್ನಾಗಲೀ, ಅವಲಂಬಿಸುವುದಿಲ್ಲ. ಒಬ್ಬ ವಿಜ್ಞಾನಿಯಾಗಿರಬಹುದು, ಒಬ್ಬ ಗುಮಾಸ್ತನಾಗಿರಬಹುದು, ಒಬ್ಬ ಕಾರ್ಖಾನೆಯ ನೌಕರನಾಗಿರಬಹುದು, ಕೆಲಸಕ್ಕಾಗಿ ಅಲೆಯುತ್ತಿರುವ ನಿರುದ್ಯೋಗಿಯಾಗಿರಬಹುದು, ಅಥವಾ ಸಮಾಜದಲ್ಲಿ ಅವನ ಸ್ಥಾನ ಏನೇ ಆಗಿರಬಹುದು ಅವನ ಕುಟುಂಬದ ಪರಿಮಿತಿ ಅತ್ಯಂತ ಮುಖ್ಯವಾದದ್ದು.

ಇದನ್ನೇ ಅಹಮದಾಬಾದಿನ ದಾನಾಭಾಯ್ ಡಿರಾಭಾಯ್ ಬಾಂಕರಿಯಾ, ಶಾಂತಿಲಾಲ್ ಲಾವಜಿಭಾಯ್, ಹೀರಾಪರಾ, ಹರಸುಮನ್‌ರಾಯ್ ಸತ್ಯವಂತ್ರಿ ದೇಸಾಯ್, ಮತ್ತು ಪರಾಂತಪ್ ಪಾಠಕ್, ಈ ನಾಲ್ವರ ಮತ್ತು ಈ ಜಿಲ್ಲೆಯ ಅನೇಕರು ಅರಿತುಕೊಂಡಿದ್ದು, ಅವರು ಬೆಳೆಯುತ್ತಿದ್ದ ತಮ್ಮ ಕುಟುಂಬಗಳನ್ನು ನಿಯಂತ್ರಿಸಿಕೊಂಡು ಸುಖಸಂತೋಷ ಹಾಗೂ ಶ್ರೇಯೋಭಿವೃದ್ಧಿಗೆ ದಾರಿ ಮಾಡಿಕೊಂಡಿದ್ದಾರೆ.

ಕನಸು ನನಸಾಯಿತು

ವಿದ್ಯಾವಂತನೂ ಆದರ್ಶವಾದಿಯೂ ಆದ ದಾನಾಭಾಯ್ ಪ್ರಪಂಚದಲ್ಲಿರುವ ಬಡತನವೆಲ್ಲಾ ಮಾಯವಾಗಿ ಬಡವರ ಕಷ್ಟಗಳೆಲ್ಲಾ ನಿವಾರಣೆಯಾಗಬಾರದೇ? ಎಂದು ಆಲೋಚನೆ ಮಾಡುತ್ತಿದ್ದ. ತನ್ನ ಪೋಷಕರಿಂದ ದೂರ ಬಂದ ಅವನು ಒಂದು ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡ. ಆದರೆ ಆ ಕಾರ್ಖಾನೆಯೂ ಸಹ ಈಗ್ಗೆ ಎರಡು ವರ್ಷಗಳಿಂದ ಮುಚ್ಚಲಾಯಿತು. ಆದ್ದರಿಂದ ಅವನಿಗೆ ಇನ್ನು ಆರ್ಥಿಕ ಸಮಸ್ಯೆ ಒದಗಿತು. ನಂತರ ಮತ್ತೊಂದು ಕಡೆ ದಿನಕೂಲಿಯ ಮೇಲೆ ಕೆಲಸಕ್ಕೆ ಸೇರಿಕೊಂಡು ತಿಂಗಳಿಗೆ 100 ರೂ. ಸಂಪಾದಿಸುವವನಾದ. ಬಡತನದ ಬವಣೆಯಿಂದಾಗಿ ಅವನಿಗಿದ್ದ ಎಂಟು ಜನ ಮಕ್ಕಳಲ್ಲಿ ನಾಲ್ಕು ಜನರು ಸತ್ತರು. ಇದರಿಂದ ಅವನಿಗೆ ಅರಿವು ಉಂಟಾಯಿತು. ಅವನು ಕೆಲವು ದಿನಗಳಲ್ಲೇ ವ್ಯಾಸೆಕ್ಟಮಿ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಂಡ. ಇದರಿಂದಾಗಿ ಆಗಿಂದಾಗ್ಗೆ ಗರ್ಭವತಿಯಾಗುತ್ತಿದ್ದ ಅವನ ಹೆಂಡತಿಗೂ ಚಿಂತೆ ತಪ್ಪಿತು. ದಿನೇ ದಿನೇ ಅವನ ವರಮಾನವೂ ಹೆಚ್ಚಿತು. ಸುಖಜೀವನ ನಡೆಸಲು, ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲ ಮಾಡಿಕೊಡಲು, ಸಾಧ್ಯವಾಯಿತು. ಅವನಿಗೆ ವ್ಯಾಸೆಕ್ಟಮಿಯಿಂದಾಗಿ ದೈಹಿಕವಾಗಿ ಆಗಲಿ, ಮಾನಸಿಕವಾಗಿ ಆಗಲೀ ಯಾವ ತೊಂದರೆಗಳೂ ಉಂಟಾಗಲಿಲ್ಲ. ಅವನ ಹೆಂಡತಿಯ ಆರೋಗ್ಯ ಅಷ್ಟೇ ಚೆನ್ನಾಗಿ ಬೆಳೆಯಿತು. ಈ ಆರೋಗ್ಯ ಭಾಗ್ಯದಿಂದಾಗಿ ಹಾಗೂ ನಿಯಂತ್ರಿಸಿದ ಕುಟುಂಬದಿಂದಾಗಿ ಕುಟುಂಬದ ಭವಿಷ್ಯದ ಬಗ್ಗೆ ಪೂರ್ಣ ನಂಬಿಕೆ ಉಳ್ಳವನಾಗಿದ್ದಾನೆ.

ಸುಳ್ಳು ವದಂತಿ ನಂಬಬಾರದು

ಶಾಂತಿಲಾಲನು ಒಂದು ಹತ್ತಿಗಿರಣಿಯಲ್ಲಿ ಕೆಲಸ ಮಾಡುವ ನೌಕರ. ಅವನು ಅವಿದ್ಯಾವಂತನಾದರೂ ತುಂಬಾ ಬುದ್ಧಿವಂತ. ಒಂದು ದಿನ ಅವನು ಅಹಮದಾಬಾದಿನ ಹತ್ತಿಗಿರಣಿ ಕಾರ್ಖಾನೆಯ ಸಂಶೋಧನಾಲಯಕ್ಕೆ ಹೋದ. ಅಲ್ಲಿ ಹತ್ತಿ ಬಟ್ಟೆ ತಯಾರಿಕೆಯ ವಿಧಾನವನ್ನು ನೋಡಿ ತುಂಬಾ ಮೆಚ್ಚಿಕೊಂಡ. ಸ್ವಲ್ಪ ವಿದ್ಯಾವಂತನಾಗಿ ಅತಿ ಸೂಕ್ಷ್ಮವಾದ ಹತ್ತಿ ಬಟ್ಟೆ ತಯಾರಿಕೆಯನ್ನು ಚೆನ್ನಾಗಿ ಕಲಿಯಬಹುದೆಂದು ಭಾವಿಸಿದ. ತನ್ನ ಚಿಕ್ಕಂದಿನಲ್ಲಿ ತನ್ನ ಉತ್ತಮ ಭವಿಷ್ಯಕ್ಕೆ ಅಡ್ಡ ಬಂದ ತೊಂದರೆಗಳು ತನ್ನ ಮಕ್ಕಳಿಗೆ ಬಾರದಿರಲೆಂದು ಅವರಿಗೆ ಉನ್ನತ ಶಿಕ್ಷಣವನ್ನು ಕೊಡಬೇಕು ಎಂದು ಬಯಸಿದ.

ಆದರೆ ಅವನ ಆದಾಯ ಕೇವಲ ತಿಂಗಳಿಗೆ ಮುನ್ನೂರು ರೂ. ಮಾತ್ರ. ಈಗಾಗಲೇ ಅವನಿಗೆ ಇಬ್ಬರು ಗಂಡು ಮಕ್ಕಳು ಒಂದು ಹೆಣ್ಣು ಮಗುವೂ ಇವೆ. ಇದು ಸಾಧ್ಯವೇ? ಏನಾದರೂ ಮಾಡಿ ಇನ್ನು ಮುಂದೆ ತನ್ನ ಮಕ್ಕಳ ಭವಿಷ್ಯಕ್ಕಾಗಿಯಾದರೂ ಕುಟುಂಬವನ್ನು ನಿಯಂತ್ರಿಸಿಕೊಳ್ಳಬೇಕು ಎಂದು ನಿರ್ಧರಿಸಿದ. ತನ್ನ ಊರಿನ ಹತ್ತಿರದ ಕುಟುಂಬ ಯೋಜನಾ ಸಲಹೆಗಾರರೊಡನೆ ಸಂಪರ್ಕಿಸಿದಾಗ ವ್ಯಾಸೆಕ್ಟಮಿ ಇದಕ್ಕೆ ಸೂಕ್ತಮಾರ್ಗವೆಂದು ತಿಳಿಸಿದರು. ಆದರೆ ಅವನ ಗೆಳೆಯರನೇಕರು ವ್ಯಾಸೆಕ್ಟಮಿ ಮಾಡಿಸಿಕೊಂಡರೆ ಅವನು ಅಸಮರ್ಥನಾಗುವನೆಂದು ತಮ್ಮ ತಪ್ಪು ಕಲ್ಪನೆಯನ್ನು ಅವನಿಗೆ ತಿಳಿಸಿದರು.

ಆದರೆ ಶಾಂತಿಲಾಲನು ಒಂದು ದಿನ ಬೆಳಗ್ಗೆ ವೇದಿಲಾಲ್‌ನ ಆಸ್ಪತ್ರೆಗೆ ಹೋದನು. ಕೇವಲ ಐದು ನಿಮಿಷಗಳಲ್ಲಿ ವ್ಯಾಸೆಕ್ಟಮಿ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಂಡನು. ಆದರಿಂದ ಅವನಿಗೆ ಯಾವ ನೋವು ಕಂಡುಬರಲಿಲ್ಲ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಂಡ ಒಂದು ತಿಂಗಳಿನಲ್ಲೇ, ಅವನ ಗೆಳೆಯರಿಗೆಲ್ಲಾ ತನ್ನ ಅನುಭವವನ್ನು ವಿವರಿಸಿದನು.

ವ್ಯಾಸೆಕ್ಟಮಿಯಿಂದ ಯಾವ ವಿಧವಾದ ಕೆಟ್ಟ ಪರಿಣಾಮಗಳು ಉಂಟಾಗುವುದಿಲ್ಲವೆಂದೂ, ವೈವಾಹಿಕ ಜೀವನದ ಸುಖ ಸಂತೋಷಗಳಿಗೆ ಯಾವ ಅಡಚಣೆಯೂ ಉಂಟಾಗುವುದಿಲ್ಲವೆಂದೂ ಅವರಿಗೆ ತಿಳಿ ಹೇಳಿದನು. ಶಾಂತಿಲಾಲ್ ತನ್ನ ಕಾರ್ಖಾನೆಯ ಕೆಲಸವಾಗಿಸಿಕೊಂಡು ಬಿಡುವಿನ ವೇಳೆಯಲ್ಲಿ ಗಡಿಯಾರ ರಿಪೇರಿಯನ್ನು ಮಾಡುತ್ತಾನೆ. ಅವನ ಆದಾಯ ಹೆಚ್ಚಿದೆ. ಅವನ ಇಬ್ಬರು ಗಂಡುಮಕ್ಕಳು ಮತ್ತು ಒಂದು ಹೆಣ್ಣು ಮಗುವಿಗೆ ಉನ್ನತ ಶಿಕ್ಷಣ ಕೊಡುವ ಶಕ್ತಿ ಅವನಿಗಿದೆ. ಶಾಂತಿಲಾಲನ ಮನೆ ಈಗ ಸುಖಸಂತೋಷಗಳ ಬೀಡು.

ಪರಿವರ್ತನೆಯ ಪರ್ವಕಾಲ

ಹರಸುಮನ್‌ರಾಯ್ ದೇಸಾಯ್ ಒಬ್ಬ ಗುಮಾಸ್ತ. ಅವನ ತಿಂಗಳ ವರಮಾನ 1948ರಲ್ಲಿ ಕೇವಲ 83 ರೂ ಇತ್ತು. ಅವನ ಬ್ಯಾಂಕ್ ಲೆಕ್ಕದಲ್ಲಿ ಅವನ ತಾತ ಅವನಿಗಾಗಿ ಬಿಟ್ಟುಹೋದ 7000 ರೂ.ಗಳೂ ಇದ್ದವು. 12 ವರ್ಷಗಳಲ್ಲಿ ಅವನ ತಿಂಗಳ ವರಮಾನ 200 ರೂ.ಗಳಿಗೆ ಏರಿತು. ಆದರೆ ಈ ಕಾಲಾವಧಿಯಲ್ಲಿ ಅವನ ಹೆಂಡತಿ ನಾಲ್ಕು ಮಕ್ಕಳಿಗೆ ಜನ್ಮಕೊಟ್ಟಳು. ಒಂದೊಂದು ಮಗು ಹುಟ್ಟಿದಾಗಲೂ ಒಂದೊಂದು ಕಷ್ಟ ಅವನಿಗೆ ತಲೆದೋರಿತು. ಆದರಿಂದಾಗಿ ಅವನು ಔಷಧೋಪಚಾರಕ್ಕಾಗಿ ಹೆಚ್ಚು ಹಣವನ್ನು ವೆಚ್ಚ ಮಾಡಿದನು. ಬ್ಯಾಂಕಿನಲ್ಲಿದ್ದ ಹಣವೆಲ್ಲಾ ಖರ್ಚಾಯಿತು. ಕೊನೆಗೆ ಮನೆಯ ಖರ್ಚುಗಳಿಗಾಗಿ ಸಾಲವನ್ನೂ ಮಾಡಿದನು. ತನಗೆ ಕಷ್ಟನಷ್ಟಗಳ ಅನುಭವ ಆದ ಮೇಲೆ ಹರಸುಮನ್‌ರಾಯ್ ಕುಟುಂಬವನ್ನು ನಿಯಂತ್ರಿಸಿಕೊಳ್ಳಬೇಕು ಎಂದು ನಿಶ್ಚಯ ಮಾಡಿಕೊಂಡನು. 1960ರಲ್ಲಿ ವ್ಯಾಸೆಕ್ಟಮಿ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಂಡನು ಈ ಒಂದು ಘಟನೆ ಅವನ ಜೀವನದಲ್ಲಿ ಹೊಸಮಾರ್ಗವನ್ನೇ ತೋರಿಸಿಕೊಟ್ಟಿತು. ಅಂದಿನಿಂದ ಅವನ ಹೆಂಡತಿಗೂ ಹೆಚ್ಚಿನ ವೈದ್ಯಕೀಯ ನೆರವು ಬೇಕಾಗಲಿಲ್ಲ. ಅವನಿಗೆ ಬರುತಲಿದ್ದ ಎಲ್ಲ ಹಣವನ್ನು ತನ್ನ ಮಕ್ಕಳ ಪಾಲನೆಗಾಗಿಯೇ ಖರ್ಚುಮಾಡತೊಡಗಿದನು.

ಈಗ ಹರಸುಮನ್‌ರಾಯ್‌ಗೆ 40 ವರ್ಷ ಇನ್ನು 10 ವರ್ಷಗಳಲ್ಲಿ ಅವನ ಮಕ್ಕಳು ಪೂರ್ಣ ವಿದ್ಯಾವಂತರಾಗುತ್ತಾರೆ. ತದನಂತರವೂ ಅವನು ಕೆಲಸದಿಂದ ನಿವೃತ್ತನಾಗಲು ಇನ್ನು ಎಂಟು ವರ್ಷಗಳಿರುತ್ತದೆ. ಸುಖಜೀವನ ನಡೆಸಲು ಅವನಿಗೆ ಹೆಚ್ಚಿನ ಅವಕಾಶವಿದೆ. ಕ್ಷೇಮನಿಧಿಯಲ್ಲಿ ಹೆಚ್ಚಿನ ಹಣವನ್ನು ಕೂಡಿಟ್ಟಿದ್ದಾನೆ. ಅದೆಲ್ಲವೂ ಅವನ ಹೆಣ್ಣುಮಕ್ಕಳ ಮದುವೆಗೆ ಸಹಾಯವಾಗುತ್ತದೆ.

ಯೋಗ್ಯ ಮಾರ್ಗ

ಪರಾಂತಪ್ ಪಾಠಕ್ ಒಬ್ಬ ಶಾಲಾ ಉಪಾಧ್ಯಾಯರ ಮಗ. ಆತ ಎಂ. ಎಸ್. ಸಿ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಆತನಿಗೆ ಒಬ್ಬ ಗಣಿತಜ್ಞ ವಿಜ್ಞಾನಿಯಾಗಬೇಕು ಎಂದು ಅಪೇಕ್ಷೆ. ಅವನಿಗೆ ಮದುವೆಯಾಗಿ ಆಗಲೇ 9 ವರ್ಷಗಳಾಗಿದೆ. ತನ್ನ ಎಲ್ಲಾ ಸಂಪಾದನೆಯನ್ನು ಮತ್ತು ವೇಳೆಯನ್ನು ವ್ಯಾಸಂಗಕ್ಕಾಗಿಯೇ ಮುಡಿಪಾಗಿಡಲು ಮೂರು ವರ್ಷಗಳ ಕಾಲ ಸಂತಾನ ನಿರೋಧ ಸಾಧನಗಳನ್ನು ಉಪಯೋಗಿಸಿ ತನ್ನ ಮೊದಲನೇ ಮಗುವಿನ ಬರುವನ್ನು ತಡೆದಿದ್ದ. 'ಕಾಸ್ಮಿಕ್ ರೇಸ್' ವಿಷಯದ ಮೇಲೆ ಸಂಶೋಧನೆಯನ್ನು ನಡೆಸಿದಾಗ ತಾನು ಎರಡನೇ ಮಗುವಿನ ತಂದೆಯಾಗುವುದನ್ನೂ ತಡೆದ.

ಆರು ವರ್ಷಗಳ ನಂತರ ತಾನು ತೆಗೆದುಕೊಂಡಿದ್ದ ಸಂಶೋಧನೆಯ ಕಾರ್ಯ ಮುಗಿಯಿತು. ಈಗ ಆತನು ತನ್ನ ಎರಡನೇ ಮಗುವಿನ ಬರುವಿಕೆಗಾಗಿ ಕಾಯುತ್ತಿದ್ದಾನೆ. ಎರಡನೇ ಮಗುವೇನಾದರೂ ಗಂಡಾದರೆ ಅಲ್ಲಿಗೆ ತನ್ನ ಕುಟುಂಬವನ್ನು ನಿಯಂತ್ರಿಸಿಕೊಳ್ಳುತ್ತಾನೆ. ಹಾಗೆ ಆಗದೆ ಹೆಣ್ಣಾದರೆ ಮೂರನೇ ಮಗುವನ್ನು ಸ್ವಾಗತಿಸುತ್ತಾನೆ. ಮೂರಕ್ಕೇ ತನ್ನ ಕುಟುಂಬವನ್ನು ನಿಯಂತ್ರಿಸಿಕೊಳ್ಳುತ್ತಾನೆ.

ಕುಟುಂಬಯೋಜನೆಯೇ ಸುಖಸಂಸಾರಕ್ಕೆ ಯೋಗ್ಯ ಮಾರ್ಗವೆಂಬುದು ಪಾಠಕನಿಗೆ ಬಹಳ ಚೆನ್ನಾಗಿ ಮನವರಿಕೆಯಾಗಿದೆ.

ಕುಟುಂಬ ಪರಿಮಿತಿ – ವೈಜ್ಞಾನಿಕ ವಿಧಾನ

(ಎರಡನೇ ಪುಟದಿಂದ)

ಒಂದು ತಾಯಿಯ ಆರೋಗ್ಯ ದೃಷ್ಟಿಯಿಂದ ಮತ್ತು ಎರಡನೆಯದು ಕುಟುಂಬದ ಅಥವ ಸಾಮಾಜಿಕ ದೃಷ್ಟಿಯಿಂದ,

ಹಂಗೇರಿ ದೇಶಗಳಲ್ಲಿ ಈ ಕಾರಣಗಳಿಗೆ ಗರ್ಭಪಾತವನ್ನು ಮಾಡಿಸಬಹುದು: 1. ಗರ್ಭಿಣಿಯ ಪ್ರಾಣಕ್ಕೆ ಅಪಾಯವಿರುವುದೆಂದು ತೋರಿದಾಗ ಅಥವ ಅವಳಿಗೆ ಯಾವುದಾದರೂ ಖಾಯಿಲೆಯು ಉಲ್ಬಣವಾಗುವುದೆಂದು ಕಂಡುಬಂದಾಗ ಇಲ್ಲವೆ ಹುಟ್ಟುವ ಮಗುವಿಗೆ ವಂಶಾನುಗತವಾದ ಖಾಯಿಲೆ ಬರುವ ಸಂಭವವಿದ್ದರೆ. 2 ವೈಯಕ್ತಿಕವಾದ ಇಲ್ಲವೆ ಕುಟುಂಬದ ಹಿತಚಿಂತನೆಗಳಿಗಾಗಿ, ಅಥವಾ ಗರ್ಭಿಣಿಯು ಗರ್ಭಪಾತ ಮಾಡಿಸಿಕೊಳ್ಳಲೇ ಬೇಕೆಂದು, ಒತ್ತಾಯ ಮಾಡಿದಾಗ ಜಕೋಸ್ಲೋವೇಕಿಯಾದಲ್ಲಿ ಈ ಕಾರಣಗಳ ಜೊತೆಗೆ ಇನ್ನೂ ಕೆಲವು ಸಂದರ್ಭಗಳಲ್ಲಿಯೂ ಗರ್ಭಪಾತಕ್ಕೆ ಅವಕಾಶವಿದೆ. ಗರ್ಭಿಣಿಗೆ ವಯಸ್ಸಾಗಿರುವುದು, ಮೂರು ಮಕ್ಕಳು ಇರುವುದು, ಗಂಡನ ಇಲ್ಲದಿರುವುದ, ಅಥವ ದುರ್ಬಲನಾಗಿರುವುದು, ಅವಿವಾಹಿತೆಯು ಗರ್ಭಿಣಿಯಾಗುವುದು, ಗರ್ಭಧಾರಣೆಯು ಬಲಾತ್ಕಾರ ಅಥವ ದುಷ್ಕೃತ್ಯ ಸಂಭೋಗದಿಂದಾಗಿ ಗರ್ಭಪಾತಕ್ಕೆ ಕಾನೂನಿನ ಅವಕಾಶವಿದೆ. ಗರ್ಭಪಾತದ ಕಾನೂನುಗಳನ್ನು ಇದೇ ರೀತಿ ವಿಸ್ತರಿಸಿರುವ ಇತರ ದೇಶಗಳೆಂದರೆ ರುಮೇನಿಯ, ಜರ್ಮನ್, ಡೆಮೊಕ್ರಾಟಿಕ್ ರಿಪಬ್ಲಿಕ್, ಸೋವಿಯಟ್ ರಷ್ಯಾ, ಸ್ವೀಡನ್, ಡೆನ್ಮಾರ್ಕ್ ಮತ್ತು ಬ್ರಿಟನ್.

ಈ ಕಾರಣಗಳಲ್ಲದೆ ಜಪಾನ್ ದೇಶದವರು ತಮ್ಮ ಜನಾಂಗದ ಆರೋಗ್ಯಮಟ್ಟವನ್ನು ಉತ್ತಮ ಸ್ಥಿತಿಯಲ್ಲಿಡಲು ಕಾನೂನಿನಲ್ಲಿ ಗರ್ಭಪಾತಕ್ಕೆ ಇತರ ದೇಶಗಳಿಗಿಂತ ಬಹಳ ಮುಂಚೆಯೇ ಅನುಮತಿ ಕೊಟ್ಟಿದ್ದರು. ಇವೆಲ್ಲವನ್ನೂ ನೋಡಿದರೆ ಪ್ರಗತಿಪರ ದೇಶಗಳು ಸಮಾಜ ಕಲ್ಯಾಣಕ್ಕಾಗಿ ಗರ್ಭಪಾತದ ಕಾನೂನಿನ ವಿಸ್ತರಣೆಯು ಅತಿ ಅವಶ್ಯಕವೆಂದು ಭಾವಿಸಿ ಅನುಷ್ಠಾನಕ್ಕೆ ತಂದಿದ್ದಾರೆ ಎಂದು ತಿಳಿದುಬರುತ್ತದ.

ಈಗ ವೈದ್ಯಕೀಯ ವೃತ್ತಿಯಲ್ಲಿ ಎರಡು ವಿಧದ ಬಿಕ್ಕಟ್ಟಿನ ಸಮಸ್ಯೆಗಳು ತಲೆದೋರಿವೆ. ಮೊದಲನೆಯದು ಸಮಾಜದ ಅವಶ್ಯಕತೆ ಮತ್ತು ಗರ್ಭಪಾತದ ಕಾನೂನು ಇವುಗಳ ಘರ್ಷಣೆಯಲ್ಲಿ ವೈದ್ಯಕೀಯ ವೃತ್ತಿ ನೀತಿ, ಎರಡನೆಯದು ಜೀವಿತ ಶಕ್ತಿಯುಳ್ಳ ಅಂಗಗಳನ್ನು ಇನ್ನೊಬ್ಬರ ದೇಹದಲ್ಲಿ ಜೋಡಿಸುವುದಕ್ಕಾಗಿ, ಕೃತಕ ಶ್ವಾಸೋಚ್ಛ್ವಾಸ ರಕ್ತ ಚಲನೆಗಳನ್ನು ಮಾಡುತ್ತಿರುವಾಗ ವ್ಯಕ್ತಿಗೆ ಜೀವವು ಇದೆಯೇ ಇಲ್ಲವೇ? ಕೃತಕ ಶ್ವಾಸೋಚ್ಛ್ವಾಸ, ರಕ್ತ ಚಲನೆಗಳನ್ನು ನಿಲ್ಲಿಸಲು ಜೀವವು ಯಾವಾಗ ಹೋಯಿತೆಂದು ನಿರ್ಧರಿಸಬೇಕು?

(ಬೆಂಗಳೂರು ಆಕಾಶವಾಣಿಯಿಂದ ಪ್ರಸಾರಿತ)

NAVAYUGA 27—3—1969
Registered with the Registrar
of News Papers for India
under No. R. N. 3546/'57

REGD. No: B. G. 176
LICENCE No. 33
Licensed to Post without Prepayme .



ತೊಟ್ಟಿಲು ತೂಗಲಿಲ್ಲ

ಗೌತಮನಿಗೆ ಈಗ ಮೂರು ವರ್ಷ. ಆತ ಹುಟ್ಟಿದ ಮೂರನೇ ದಿವಸವೇ ತೊಟ್ಟಿಲು ಮನೆಗೆ ಬಂದಿತ್ತು. ಹುಡುಗ ಬೆಳೆಯುತ್ತಿದ್ದಂತೆ ತೊಟ್ಟಿಲು ಚಿಕ್ಕದಾಯಿತು. ಗೌತಮ ತೊಟ್ಟಿಲು ಬಿಟ್ಟ. ತೊಟ್ಟಿಲಿಗೆ ಈಗ ರಜೆ. ಗೌತಮನ ಆಟದ ಸಾಮಾನುಗಳು, ಬಣ್ಣದ ಬೊಂಬೆಗಳು, ಚಿತ್ರದ ಪುಸ್ತಕಗಳು, ಇನ್ನೂ ಏನೇನೋ ವಸ್ತುಗಳು ತೊಟ್ಟಿಲಲ್ಲಿ ತುಂಬಿಕೊಂಡಿವೆ. ತೊಟ್ಟಿಲು ತೂಗುತ್ತಿಲ್ಲ. "ನಮ್ಮ ಗೌತಮನಿಗೆ ಎಷ್ಟೊಂದು ಗೊತ್ತಾಗಲಿವೆ! ಬುದ್ಧಿಯಾಗಿದ್ದಾನೆ ಹುಡುಗ" ಎನ್ನುತ್ತಾಳೆ ಆತನ ತಾಯಿ. "ನಿಜ ಕಣೇ, ತೊಟ್ಟಿಲಿಗೆ ರಜೆ ಕೊಟ್ಟದ್ದು ಒಳ್ಳೇದಾಯಿತಲ್ಲ" ಎನ್ನುತ್ತಾನೆ ತಂದೆ.

ಗೌತಮನ ತಂದೆತಾಯಿ ಬುದ್ಧಿವಂತರು. ಬುದ್ಧಿವಂತರಾದ ತಂದೆತಾಯಿಗಳು ಬೇಕಾದಾಗ ತೊಟ್ಟಿಲಿಗೆ ರಜೆ ಕೊಡುತ್ತಾರೆ ಅಂದರೆ ಕುಟುಂಬ ಯೋಜನೆ ಮಾಡುತ್ತಾರೆ. ಕುಟುಂಬ ಯೋಜನೆ ಅಂದರೆ ಕೆಲವೇ ಮಕ್ಕಳನ್ನು ಪಡೆಯುವುದು ಮಾತ್ರವಲ್ಲ, ನಮಗೆ ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವುದು ಕೂಡ. ಮಕ್ಕಳನ್ನು ಪಡೆಯುವುದು ಈಗ ನಮ್ಮ ಇಚ್ಛೆಗೆ ಮೀರಿದ ವಿಷಯವೇನೂ ಅಲ್ಲ. ನಮಗೆ ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವ ಶಕ್ತಿ ನಮ್ಮ ಕೈಯಲ್ಲೇ ಇದೆ.

ಅದೇ ಕುಟುಂಬ ಯೋಜನೆ.

ಕುಟುಂಬ ಯೋಜನೆ ಹೇಗೆ ಮಾಡುವುದೆಂಬ ಬಗ್ಗೆ ಉಚಿತ ಸಲಹೆ ಪಡೆಯಲಿಕ್ಕಾಗಿ ನಿಮಗೆ ಸಮೀಪವಿರುವ ಕುಟುಂಬ ಯೋಜನಾ ಕೇಂದ್ರಕ್ಕೆ ಹೋಗಿ ವಿಚಾರಿಸಿರಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

3—4—1969

೨೦
ಪೈಸೆ

ಕಥಾಪ್ರಪಂಚ

ಚಾತಕ ಪಕ್ಷಿ

ಕತೆಗಾರ್ತಿ: ಬಿ. ಎಸ್. ನೇತ್ರಾವತಿ, ಬೆಂಗಳೂರು

ಲಾಲ್‌ಬಾಗ್ ಕೆರೆಯ ದಡದಲ್ಲಿ ಇಬ್ಬರು ಯುವಕರು ಅಡ್ಡಾಡುತ್ತಿದ್ದರು.

"ಸೂರ್ಯಾಸ್ತ ಎಷ್ಟು ಚೆನ್ನಾಗಿ ಕಾಣಿಸುತ್ತಿದೆ, ಕೆರೆಯ ನೀರಿನಲ್ಲಿ?"

ಇನ್ನೊಬ್ಬ ಏನೂ ಮಾತನಾಡಲಿಲ್ಲ.

'ಏನಾಗಿದೆ ರಘು, ಇವತ್ತು, ಬೇಸರ? ಪ್ರಕೃತಿಯನ್ನೇ ನೋಡುತ್ತಾ ಜೀವನವನ್ನೇ ಮರೆಯಬಹುದು__"

"ನನ್ನ ಪಾಲಿಗೆ ಅವುಗಳೊಂದೂ ಇಲ್ಲ, ಅಮರ, ನನ್ನ ಬಾಳಿನ ಸೂರ್ಯ ಎಂದೋ ಅಸ್ತಂಗತನಾದ"

"ಹಾಗಾದರೆ ಇಲ್ಲಿರೋದು ಬೇಡ... ಆಮೇಲೆ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡೀಯೆ, ಬಾ..." ಅಮರ ರಘುವನ್ನು ಲಾಲ್‌ಬಾಗಿನೊಳಕ್ಕೆ ಕರೆತಂದ.

'ಅಮರ್ ನೀನೇನೇ ಹೇಳು.... ನನಗೀ ಜೀವನದಲ್ಲಿ ಜಿಗುಪ್ಸೆ ಹುಟ್ಟಿಬಿಟ್ಟಿದೆ....'

"ಅಷ್ಟೊಂದು ನಿರಾಶನಾಗಬೇಡ ರಘು, ಇನ್ನೂ ನಿನ್ನ ಭಾಗ್ಯ ಸೂರ್ಯ ಉದಿಸಲಿಲ್ಲ"

ಇಬ್ಬರೂ ಮರವೊಂದರ ಕೆಳಗೆ ಕುಳಿತರು— ಆ ಮರದ ಮೇಲೆ ಎರಡು ಹಕ್ಕಿಗಳು.... ಒಂದು ಹಕ್ಕಿ ಬಚ್ಚಿಟ್ಟುಕೊಳ್ಳುತ್ತಿದೆ—ಇನ್ನೊಂದು ಅದನ್ನು ಕಾಣದೆ ಆರ್ತನಾದ ಮಾಡಿ ಕೂಗುತ್ತಿದೆ— ಆಗ ಆ ಹಕ್ಕಿ ಬಂದು ಇದನ್ನು ಸಮಾಧಾನಗೊಳಿಸುತ್ತದೆ....

ರಘು ನೋಡಿದ, ನಿಟ್ಟುಸಿರಿಟ್ಟ....

"ಅಮರ್, ಆ ಹಕ್ಕಿಗಳಾದರೂ ವಾಸಿ, ಮನುಷ್ಯನಿಗಿಂತ......ಅಲ್ಲಿ ನೋಡು ...."

ರಘು ಅಮರನಿಗೂ ತೋರಿಸಿದ ಆ ಹಕ್ಕಿಗಳ ಸಲ್ಲಾಪವನ್ನು.

'ನಾವೂ ಹಕ್ಕಿಗಳಾಗಿ ಹುಟ್ಟಿದ್ದರೇ ಚೆನ್ನಾಗಿರುತಿತ್ತು, ರಘು ..."

'ಹೌದು. ಈ ಮನುಷ್ಯ ಜಾತಿಯಲ್ಲೇ ಇಷ್ಟೊಂದು ಕಷ್ಟ—ದುಸ್ಸಹ ಜೀವನ—ದೀರ್ಘ ಬಾಳು....ಥತ್...'

ಗೆಳೆಯನ ಹೃದಯ ವೇದನೆ ಅರಿತು ಅಮರನಿಗೂ ವ್ಯಥೆಯಾಯಿತು. ಆದರೆ ಅವನೇನೂ ಅವನಿಗೆ ಹೊಸತಲ್ಲ. ಅವನು ಅನುಭವಿಸುತ್ತಿರುವುದನ್ನೇ ರಘುವೂ ಅನುಭವಿಸುತ್ತಿದ್ದಾನೆ.

o o o

ಅಮರ ಹಾಸ್ಟೆಲಿನಲ್ಲಿ ಅಡ್ಡಾಡುತ್ತಿದ್ದ. ಎದುರು ರಸ್ತೆಯಲ್ಲಿ...

ಕಾರು ಒಂದು ಕಡೆಯಿಂದ ಬಂದಿತು, ರಿಕ್ಷಾ ಒಂದು ಕಡೆಯಿಂದ ಬಂದಿತು.

ಎರಡೂ ಢಿಕ್ಕಿ ಹೊಡೆದವು. ಅಪಘಾತ ನಡೆದೇ ಹೋಯಿತು. ಅಮರ ಮಹಡಿಯ ಮೇಲಿನ ಬಾಲ್ಕನಿಯಿಂದಲೇ ನೋಡತೊಡಗಿದ....ಹಾ! ರಕ್ತದ ಮಡುವಿನಲ್ಲಿ ಒಬ್ಬಾತ ಬಿದ್ದಿದ್ದ...

"ಅವನ ಪ್ರಾಣ ಹೋದ ಹಾಗೇ...."

"ಇನ್ನೇನು ಅವನು ಬದುಕೋ ಆಸೆಯಿಲ್ಲ"

"ಆದರೂ ಒಂದು ಆ್ಯಂಬುಲೆನ್ಸ್ ತರಿಸೋದು ಒಳ್ಳೆಯದು...."

"ಏನು, ಸ್ಮಶಾನಕ್ಕೆ ಎತ್ತಿಕೊಂಡು ಹೋಗೋಕೆ ಆ್ಯಂಬುಲೆನ್ಸ್ ತರಿಸಬೇಕೇ?"

ರಸ್ತೆಯಲ್ಲಿ ಅಪಘಾತ ನೋಡುತ್ತಿದ್ದ ಜನ ಏನೇನೋ ಮಾತನಾಡಿಕೊಂಡರು. ಕೊನೆಯ ಮಾತು ಕೇಳಿ ನಕ್ಕುಬಿಟ್ಟರು.

ಆದರೆ ಅಮರನಿಗೆ ನಗು ಬರಲಿಲ್ಲ. ಅವನ ಹೃದಯ ಹಿಂದಿನದನ್ನು ನೆನೆದು ಗೋಳಿಡತೊಡಗಿತು ...

"ಅಮರಾ, ನೀನು ಹುಟ್ಟಿದಾಗ... ಅಪಘಾತ ಆಗಿ ನಿನ್ನ ಚಿಕ್ಕಪ್ಪ ಸತ್ತುಹೋದರು—ನೀನು ಹುಟ್ಟಿದ ಘಳಿಗೇ ಅಂಥದ್ದೂಂತಲೇ ಈಗ ನಿನ್ನ ತಂದೆ, ಅಜ್ಜಿ, ಚಿಕ್ಕಮ್ಮ ಎಲ್ಲರೂ ನಮ್ಮಿಬ್ಬರನ್ನ ಹೀಗೆ ಕಡೆಗಣಿಸುತ್ತಿರೋದು..."

"ಕಲ್ಯಾಣಿ, ತನ್ನ ತಾಯಿ, ತಾನು ಚಿಕ್ಕವನಿದ್ದಾಗ ಒಮ್ಮೆ ಹೀಗೆ ಹೇಳಿದ್ದ ನೆನಪು....

ತಾನು ಹುಟ್ಟಿದ್ದಕ್ಕೂ ಅಪಘಾತವಾದದ್ದಕ್ಕೂ ಏನು ಸಂಬಂಧ?

ಈಗ ತಾನು ನೋಡಿದಂತೆಯೇ ಕಾರೂ ಬಂದಿತು, ರಿಕ್ಷಾನೂ ಬಂದಿತು. ಎರಡೂ ಢಿಕ್ಕಿ ಹೊಡೆದವು; ಅಪಘಾತ ನಡೆಯಿತು— ಚಿಕ್ಕಪ್ಪ ಸತ್ತರು.... ಅದಕ್ಕೆ ತಾನು ಹೊಣೆಯೇ!

ತಪ್ಪು ತಪ್ಪು— ಲಾಜಿಕ್ ಪ್ರಕಾರ ಇದೊಂದು ಫ್ಯಾಲಸಿ— ಪೋಸ್ಟ್ ಹಾಕ್ ಎರ್ಗೋ ಪ್ರಾಪ್ಟರ್ ಹಾಕ್ ಫ್ಯಾಲಸಿ....

"ಅಮರ್......"

ನಿರಾಶೆ ತುಂಬಿದ ದನಿ ಕೇಳಿ ಅಮರ ಹಿಂತಿರುಗಿ ನೋಡಿದ— ರಘು ನಿಂತಿದ್ದ.

"ಒಳಗೆ ಬಾ ರಘು.... ನಾನು ಆ ಅಪಘಾತ ನೋಡುತ್ತ ನಿಂತುಬಿಟ್ಟಿದ್ದೆ...."

"ನಾನೂ ನೋಡಿದೆ ಅಮರ್.... ಅಲ್ಲಿ ಸತ್ತ ಮನುಷ್ಯ ನಾನೇ ಆಗಿದ್ದಿದ್ದರೆ ಎಷ್ಟು ಚೆನ್ನಾಗಿರ್ತಿತ್ತು ಅಂದುಕೊಂಡೆ ...."

"ಹಾಗೆ ಮಾತ್ರ ಹೇಳಬೇಡ ರಘು... ಇದೇನು, ನೀನು ಇತ್ತೀಚೆಗೆ ಬರೀ ಸಾವು ಸಾವು ಅಂತ ಜಪ ಮಾಡೋಕೆ ಪ್ರಾರಂಭಿಸಿದ್ದೀಯಲ್ಲ...."

"ಹೌದು ಅಮರ್, ನೀನಾದರೂ ನನಗೆ ಒಂದು ಚೂರಿಯನ್ನೋ, ಹಗ್ಗವನ್ನೋ, ವಿಷವನ್ನೋ ಕೊಡು.... ಬೇಗ ಸತ್ತುಹೋಗ್ತೀನಿ... ಯಾರೂ ನನಗೆ ಅವುಗಳನ್ನು ಕೊಡೋತಿಲ್ಲ.''

'ಹೌದು, ನಾನೂ ಕೊಡೋಲ್ಲ...... ನನ್ನ ಪ್ರಾಣಸ್ನೇಹಿತ ಕೊಂಡು ಕೊಳ್ತೀನೀಂದ್ರೆ ಆಗಲಿ ಸಾಯಿಂತ ಅವುಗಳನ್ನೆಲ್ಲ ಕೊಡೋಕೆ ನನಗೆ ಹುಚ್ಚು ಹಿಡಿದಿಲ್ಲ ...."

ಹಿಂತಿರುಗಿ ಹೋಗಲಿದ್ದ ರಘುವನ್ನು ಅಮರ ಎಳೆದುಕೊಂಡುಹೋಗಿ ತನ್ನ ರೂಮಿನಲ್ಲಿ ಕೂಡಿಸಿಕೊಂಡ.

"ಊಟವಾಯಿತೇ ರಘು?"

"ಏನೂಟವೋ ಒಂದೊಂದು ಅಗುಳೂ ನಮ್ಮಮ್ಮನ ಜ್ಞಾಪಿಸುತ್ತೆ.... ನಮ್ಮಮ್ಮ ಮಾಡಿಹಾಕ್ತಿದ್ದ ಅಡುಗೇನೂ ಇದಕ್ಕೂ ಎಲ್ಲಿಗೆಲ್ಲಿಗೆ"

ಅಮರನಿಗೆ ತನ್ನ ತಾಯಿಯ ನೆನಪಾಯಿತು.

"ಹೌದು ರಘು. ಅದಕ್ಕೇ ನಾನೂ ನಿನ್ನ ಹಾಗೆ ನಮ್ಮಜ್ಜಿ ಮಾಡಿದ ಅಡುಗೆ ತಿನ್ನಲಾರದೆ ಹಾಸ್ಟೆಲಿಗೆ ಬಂದದ್ದು...."

"ಈಗ ನನಗೂ ನಿನ್ನ ಹಾಗೇ ಇಲ್ಲೊಂದು ರೂಂ ಕೊಡಿಸು ಅಮರ್, ನಾನೂ ಇಲ್ಲೇ ಇದ್ದುಬಿಡ್ತೀನಿ...."

ಸ್ವತಃ ಅನುಭವಿಸಿದ್ದರಿಂದ ಗೆಳೆಯನ ಮನೋವೇದನೆಯನ್ನು ಸುಲಭವಾಗಿ ಅರಿತುಕೊಂಡ, ಅಮರ.

"ಆಗಲಿ ರಘು, ಈಗ ಹೋಟೆಲಲ್ಲಾದರೂ ಊಟ ಮಾಡುವಿಯಂತೆ, ಬಾ...." ಅಮರ ರಘುವನ್ನು ಕರೆದುಕೊಂಡು ಹೋಟೆಲಿಗೆ ನಡೆದ.

o o o

ಇದಕ್ಕೆ ಪರಿಹಾರವೇ ಇಲ್ಲವೆ?

ಗಂಡಸತ್ತಿಗೂ ಕಡೆಯಾಗಿ, ಕಾಲಕಸಕ್ಕೂ ಕಡೆಯಾಗಿ ಅಮ್ಮ ದುಡಿಯಬೇಕಾಗಿರುವುದೇತಕ್ಕೆ?

ಎದುರ ಗಿಡಮರಗಳು ತಾನು ಕುಳಿತಿದ್ದ ಪಾರ್ಕು ಯಾವುದೂ ಅಮರನ ಹೃದಯಕ್ಕೆ ತಂಪನ್ನು ನೀಡಲಾರದವು. ಅದೇ ಪ್ರಶ್ನೆ 'ಮನವನವ ಸುತ್ತಿ ಸುಳಿದು ತರ್ಕಿಸುವ ಫಲಿದು ತಿಂದು' ಮತ್ತೆ ಅವನ ತಲೆಯಲ್ಲೇ ಕಾಡತೊಡಗಿತ್ತು.

ವೃದ್ಧ ಸತಿಪತಿಯರ ಜೋಡಿಯೊಂದು ಅಮರನ ಕಣ್ಣಿಗೆ ಬಿತ್ತು. ಇಬ್ಬರೂ ನಿಧಾನವಾಗಿ ನಡೆದುಹೋಗಿ ಹುಲ್ಲಿನ ಮೇಲೆ ಕುಳಿತರು.

ಪಶ್ಚಾತ್ತಾಪ! ಅಪ್ಪನ ಶಬ್ದಕೋಶದಲ್ಲೇ ಇಲ್ಲ ಈ ಪದ!

"ಅಹ್ಹಹ್ಹ!"

ಸುತ್ತಲೂ ಜನರಿದ್ದಾರೆಂಬ ಅರಿವಿಲ್ಲದೆ ಯಾವನೋ ಎಳೆಯಂತೆ ಅಟ್ಟಹಾಸ ಮಾಡುತ್ತ ಮುನ್ನಡೆದಿದ್ದ.

ಅಮರ ಒಂದೆಡೆ ಕುಳಿತಿರಲಾರದೆ ಹೋದ.

ಅಮ್ಮ ಈಗ ಏನು ಮಾಡುತ್ತಿರಬಹುದು?

ಅವನ ದೃಷ್ಟಿ ಸಹಜವಾಗಿಯೇ ಕೈಗಡಿಯಾರದೆಡೆ ಹೊರಳಿತು—ಆರು ಗಂಟೆ!

ಅಮ್ಮ ಗಿಡಗಳಿಗೆ ನೀರ ಹಾಕುತ್ತಿರಬಹುದು......

ಅಜ್ಜಿ ಕಿಡಿಕಾರುತ್ತಿರಬಹುದು—— ಅಮ್ಮನ ಮೇಲೆ!

ಚಿಕ್ಕಮ್ಮ ಚಿಕ್ಕಪ್ಪನನ್ನು ನೆನೆಸುತ್ತಾ ಅಮ್ಮನ ಮೇಲೆ ಕೆಂಡಕಾರುತ್ತಿರಬಹುದು!

ವಾಣಿ?

ಓಹ್! ಅವಳಿಲ್ಲ, ಈಗ ನಮ್ಮ ಮನೆಯಲ್ಲಿ! ಅವಳು ಅತ್ತೆಮನೆಗೆ ಹೋಗಿ ತಿಂಗಳುಗಳುರುಳಿಹೋಗಿವೆ!

ಇಷ್ಟೇ....

ಕೇವಲ ಐದು ಜನರ ಸಂಸಾರ! ದುಡಿದು ಸಂಪಾದಿಸುವವರಿಬ್ಬರು — ನಾನು, ಅಪ್ಪ! ಹಣಕ್ಕೇನೂ ಕೊರತೆಯಿಲ್ಲ .... ಸುಖಶಾಂತಿಗಳಿಗೆ ಮಾತ್ರ ಕೊರತೆ ಬೇಕಾದಷ್ಟಿದೆ!

"ನಾಯಿಮರಿ ನಾಯಿಮರಿ ತಿಂಡಿ ಬೇಕೇ?"

ಎಷ್ಟು ಮುದ್ದಾಗಿ ಹಾಡುತ್ತಿದೆ—ಎದುರಿಗೆ ದೂರದಲ್ಲಿ ಕುಳಿತ ಆ ಮಗು! ಕೇವಲ ಐದೇ ಜನರ ಸಂಸಾರವದೂ ಕೂಡಾ ...ಅವ, ಆಕೆ ಸತಿಪತಿಯರಂತೆ ಕಾಣುತ್ತಾರೆ. ಆ ವೃದ್ಧೆ ಅತನ ತಾಯಿಯಂತೆ ಕಾಣುತ್ತಾರೆ, ಆ ಹುಡುಗಿ ಅವನ ತಂಗಿ ಅವಳ ಮಾತಿನಿಂದಲೇ ವ್ಯಕ್ತವಾಗುತ್ತಿದೆ ...ಆ ಗಂಡಹೆಂಡಿರ ಮುದ್ದು ಮಗುವದು!

ಎಲ್ಲರೂ ಹಾಸಿಗೆಯಿದ್ದಷ್ಟೇ ಕಾಲು ಚಾಚುತ್ತಾರೆ. ನಮ್ಮ ಮನೆಯಲ್ಲಿ? ನಿಲುಕದ ಸುಖದ ಬೆನ್ನಟ್ಟಿ ಹೋಗುವವರೇ, ನಮ್ಮಜ್ಜಿ, ಅಪ್ಪ, ಚಿಕ್ಕಮ್ಮ!

ಅಮ್ಮನಿಗೆ ತಕ್ಕ ನಾದಿನಿಯಾಗಿದ್ದವಳು-ವಾಣಿ, ಅವಳೂ ಹೊರಟುಹೋದ ಮೇಲೆ ಅಮ್ಮ ಹೀಗೆ ವಯಸ್ಸಾದವಳಂತೆ ಕಾಣುತ್ತಾಳೆ! "ಫ್ರೆಂಡ್ಸ್ ಹೀಲ್, ಬಟ್ ಡೋಂಟ್ ವರ್ಸ್" ಎಂಬುದಕ್ಕೆ ತಕ್ಕ ಉದಾಹರಣೆ. ಅಮ್ಮ! ಛೆ, ಇದನ್ನೆಲ್ಲ ನೋಡಿ, ವೇದನೆ ಅನುಭವಿಸುವುದೇ ನನ್ನ ಹಣೆಬರಹವಾಗಿದೆ! ರಘು ಕೂಡ ಹೀ

(ಹನ್ನೊಂದನೇ ಪುಟ ನೋಡಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
92 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711
5712
5713 } 3 Lines

ಫೋನ್ : 526

ಸಂಪುಟ ೪೮
ಸಂಚಿಕೆ ೨೯
VOL. 48
No. 29

1921 ಸ್ಥಾಪನೆ

ನವಯುಗ

ಸ್ಥಾಪಕರು:
ಡಾ|| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೩—೪—೧೯೬೯

ವಿಧಾನ ಪರಿಷತ್ತು ಬೇಕೆ?

ಭಾರತದ ಇತಿಹಾಸದಲ್ಲಿ ಬಂಗಾಳದ ಸ್ಥಾನಮಾನ ಹಿಂದಿನಿಂದಲೂ ಹಿರಿದು. ಬ್ರಿಟಿಷರು ಈ ದೇಶದಲ್ಲಿ ತಳವೂರಲು ಆರಂಭ ಮಾಡಿದ್ದೂ ಬಂಗಾಳದಲ್ಲೇ. ಬಂಗಾಳ ವಿಭಜನೆಗೆ ದೇಶಕ್ಕೆ ದೇಶವೇ ಪ್ರತಿರೋಧ ಮಾಡಿತ್ತು; ಸ್ವಾತಂತ್ರ್ಯ ದೊರೆತಾಗಲೂ ವಿಭಜನೆಯಾದದ್ದು ಬಂಗಾಳವೇ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬ್ರಹ್ಮಚಾರಿಗಳೇ ಮುಖ್ಯಮಂತ್ರಿಗಳಾಗಿರುವ ರಾಜ್ಯವಿದು. ಪ್ರಜಾತಂತ್ರವು ಎಲ್ಲೆಡೆಗಿಂತ ಹೆಚ್ಚಾಗಿ ಪರೀಕ್ಷೆಗೊಳಗಾದದ್ದು ಇಲ್ಲಿಯೇ. ರಾಜ್ಯಪಾಲ ಧರ್ಮವೀರರು ಮಂತ್ರಿಮಂಡಳವನ್ನು ವಿಸರ್ಜಿಸಿದ್ದು, ಇದು ನಾನಾ ಪ್ರಕಾರದ ಸಾಂವಿಧಾನಿಕ ಸಮಸ್ಯೆಗಳಿಗೆ ಕಾರಣವಾದದ್ದು ಇಲ್ಲಿ ಮಾತ್ರ. ಇದೀಗ ಇದೇ ಬಂಗಾಳ ಮತ್ತೊಂದು ಹೆಜ್ಜೆ ಮುಂದಿಟ್ಟಿದೆಯೆನ್ನಬೇಕು. ವಿಧಾನ ಪರಿಷತ್ತನ್ನು ರದ್ದುಪಡಿಸಬೇಕೆಂದು ಗೊತ್ತುವಳಿಯನ್ನು ಸ್ವೀಕರಿಸಿ ಅದು ಕ್ರಾಂತಿಕಾರಿ ನಿರ್ಣಯವನ್ನೇ ಕೈಗೊಂಡಿದೆಯೆಂದರೆ ತಪ್ಪಲ್ಲ.

ಪಶ್ಚಿಮ ಬಂಗಾಳದಲ್ಲಿ ಅಸ್ಪಷ್ಟ ಬಹುಮತ ಗಳಿಸಿದ ಸಂಯುಕ್ತ ರಂಗವು ಈ ನಿರ್ಣಯಕ್ಕೆ ಏಕೆ ಜೋತುಬಿತ್ತೆಂದು ಹೇಳುವುದು ಕಷ್ಟಸಾಧ್ಯ. ಆದರೆ ಹಿಂದಿನ ಸಂಯುಕ್ತರಂಗೀಯ ಸರಕಾರವನ್ನು ಪದಚ್ಯುತಿ ಮಾಡಿದಂದಿನಿಂದಲೂ ಅಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳ ನಡುವೆ ತಾಮುಂದೆನೇಳುತ್ತಲೇ ಇದೆ. ಕಾಂಗ್ರೆಸ್ ಬೆಂಬಲದಿಂದ ಅಲ್ಲಿ ಸರಕಾರ ಸ್ಥಾಪಿತವಾದಾಗ, ರಾಜ್ಯಪಾಲರ ಭಾಷಣವು ಕ್ರಮಪ್ರಾಪ್ತವಲ್ಲವೆಂದು ವಿಧಾನ ಸಭೆಯ ಅಧ್ಯಕ್ಷರು ತೀರ್ಪಿತ್ತರೆ, ವಿಧಾನ ಪರಿಷತ್ ಅಧ್ಯಕ್ಷರು ಸರಿಯಾಗಿದೆಯೆಂದರು. ಮೊನ್ನೆ ಮೊನ್ನೆ ವಿಧಾನ ಸಭೆಯು ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸುವುದರೊಂದಿಗೆ 'ತನಗೆ ಅನಪೇಕ್ಷಿತವೆಂದು ಕಂಡ ಭಾಗವನ್ನು ಓದದೆ ಇದ್ದುದರ ಬಗ್ಗೆ ಅವರನ್ನು ಖಂಡಿಸುವ ಗೊತ್ತುವಳಿಯನ್ನು ಸ್ವೀಕರಿಸಿದ್ದರೆ, ವಿಧಾನ ಪರಿಷತ್ತು ಈ ಖಂಡನಾ ಪರ ವಾಕ್ಯಗಳನ್ನು ತಿರಸ್ಕರಿಸಿತು. ಇದರಿಂದ ಆ ಗೊತ್ತುವಳಿ ಏನೂ ಬಿದ್ದು ಹೋಗುವುದಿಲ್ಲ; ಮತ್ತೊಂದು ಬಾರಿ ವಿಧಾನ ಸಭೆಯ ಮುಂದೆ ಬರಬೇಕಾಯಿತು; ಅಷ್ಟೆ.

ಇದಕ್ಕೆಲ್ಲಾ ಕಾರಣವಿಲ್ಲದಿಲ್ಲ. ಮುಖ್ಯವಾಗಿ ಉಭಯ ಸದನಗಳಲ್ಲಿಯೂ ಕಾಂಗ್ರೆಸ್ಸು ಬಹುಮತ ಪಡೆದಿದ್ದಾಗ ದಾರಿ ಸುಗಮವಾಗಿಯೇ ಇತ್ತು. ಈಗ, ವಿಧಾನ ಸಭೆಯಲ್ಲಿ ಕಾಂಗ್ರೆಸ್ಸು ಅಲ್ಪಸಂಖ್ಯಾತ ಬಲವಾದರೂ ಪರಿಷತ್ತಿನಲ್ಲಿ ಬಲಶಾಲಿಯಾಗಿಯೇ ಇದೆ. ಆದುದರಿಂದಲೇ ಇಲ್ಲಿಯೂ 'ಜಟ್ಟಿಕಾಳಗ' ಆರಂಭವಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಇಂತಹ ಕಾಳಗವನ್ನು ನಿಲ್ಲಿಸುವುದಕ್ಕೆ ಪರಿಷತ್ತನ್ನು ಬರ್ಖಾಸ್ತು ಮಾಡುವುದೇ ಸದ್ಯವಿರುವ ತಾರಕೋಪಾಯ. ಆದರೆ, ಇದು ತ್ರಿಕಾಲಾಬಾಧಿತವೆನ್ನುವುದು ಸಾಧ್ಯವಿಲ್ಲ. ಚುನಾವಣೆಗಳು ನಡೆದಾಗ, ವಿಧಾನ ಸಭೆಯಲ್ಲಿನ ಬಹುಮತೀಯ ಪಕ್ಷವೇ ಪರಿಷತ್ತಿನಲ್ಲೂ ಬಹುಮತ ಗಳಿಸುವ ಸಾಧ್ಯತೆಯಿರುವುದನ್ನು ಅಲ್ಲಗಳೆಯಲಸಾಧ್ಯ.

ಆದರೆ, ಈಗ ನಾವು ಯೋಚಿಸಬೇಕಾದ ಒಂದು ಪ್ರಶ್ನೆಯಿದೆ. ವಿಧಾನ ಪರಿಷತ್ತಿನ ಅವಶ್ಯವಿದೆಯೆ? ಇದು ತೋರಿಕೆಗೆ ಜಟಿಲ ಪ್ರಶ್ನೆಯೆನಿಸಬಹುದು; ಆದರೂ ನಿಜವಾಗಿ ಭಾವಿಸುವಷ್ಟು ಜಟಿಲವಲ್ಲವೆಂದೇ ಹೇಳಬೇಕು. ಶಾಸನಾಂಗದಲ್ಲಿನ ಎರಡು ಮನೆಗಳ ಅಸ್ತಿತ್ವವೇಕೆ ಬಂತು? ಕೆಳಮನೆಯು ಜನತಾ ಪ್ರತಿನಿಧಿಗಳಿಂದ ತುಂಬುವುದಾದರೆ, ಮೇಲ್ಮನೆಯು ಬುದ್ಧಿಜೀವಿಗಳ ಮನೆಯಾಗಬೇಕು. ಇದರಿಂದ ಪ್ರಜಾತಂತ್ರವು ನೇರ ದಾರಿಯಲ್ಲಿ ಮುಂದುವರಿಯುವುದು ಸಾಧ್ಯವಾದೀತು. ಆದರೆ, ಇಂದು ಪರಿಸ್ಥಿತಿ ಬದಲಾಗಿದೆ. ಮೇಲ್ಮನೆಯ ಅಸ್ತಿತ್ವದ ಬಗ್ಗೆ ಭಿನ್ನಾಭಿಪ್ರಾಯಗಳು ನಮ್ಮ ದೇಶದಲ್ಲಿ ತುಸು ತಡವಾಗಿಯೇ ಆರಂಭವಾಯಿತೆನ್ನಬೇಕು. ಪ್ರಜಾತಂತ್ರದ ರಾಣಿ ಬ್ರಿಟನ್ನಿನಲ್ಲಿಯೇ ಮೇಲ್ಮನೆಯ ಅಧಿಕಾರಗಳು ಕಾಲಕಾಲಕ್ಕೆ ಕುಂಠಿತವಾಗುತ್ತಲೇ ಬಂದಿವೆ. ಇದೀಗ ಅದು ನಾಮ ಮಾತ್ರಕ್ಕೆ ಇರುವಂತಹ ಪರಿಸ್ಥಿತಿಗೂ ಬಂದಿದೆ. ಅಮೇರಿಕೆಯಲ್ಲಿಯೂ ಇಂತಹ ಗಾಳಿ ಬೀಸದಿಲ್ಲ. ಫ್ರಾನ್ಸಿನಲ್ಲಿನ ರಾಜ್ಯಾಂಗ ವ್ಯವಸ್ಥೆಯನ್ನು ಪುನರ್ವಿಮರ್ಶಿಸಲು ಆಲೋಚಿಸಲಾಗುತ್ತಿದೆ. ನಮ್ಮ ರಾಜ್ಯಗಳಲ್ಲಿಯೂ ಎಲ್ಲೆಡೆ ಈ ಮೇಲ್ಮನೆಯಿರುವುದಿಲ್ಲ. ಹದಿನೇಳು ರಾಜ್ಯಗಳಲ್ಲಿ ಒಂಭತ್ತರಲ್ಲಿ ಮಾತ್ರ ವಿಧಾನ ಪರಿಷತ್ತು ಅಸ್ತಿತ್ವದಲ್ಲಿದೆ. ಪಶ್ಚಿಮ ಬಂಗಾಳವು ತನಗೆ ಈ ಪರಿಷತ್ತು ಅನಗತ್ಯವೆಂದು ಸಾರಿದರೆ, ಪಂಜಾಬವೂ ಇದೇ ರೀತಿಯ ನಿರ್ಧಾರ ಕೈಕೊಳ್ಳುವ ಅಭಿಲಾಷೆಯನ್ನು ತಳೆದಂತಿದೆ. ಆದರೆ ಉಳಿದ ಏಳು ರಾಜ್ಯಗಳು ತಮ್ಮ ಮೇಲ್ಮನೆಗಳನ್ನು ಎಷ್ಟು ಕಾಲ ಮುಂದುವರಿಸುವುದು ಸಾಧ್ಯವಾದೀತೆಂದು ಹೇಳಬರುವಂತಿಲ್ಲ. ನಮ್ಮ ದೇಶದ ಮಟ್ಟಿಗೆ ಹೇಳುವುದಾದರೆ, ಈ ಮೇಲ್ಮನೆಗಳು ಆರಂಭದಿಂದಲೂ ಒಂದು ಬಗೆಯ ರಾಜಕೀಯ ಅನಾಥಾಶ್ರಮಗಳಂತೆಯೇ ಇದ್ದವೆಂಬುದನ್ನು ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲ. ರಾಜಕೀಯ ಪುಢಾರಿಗಳನ್ನು ತೃಪ್ತಿಪಡಿಸುವುದಕ್ಕೆ, ಚುನಾವಣೆಗಳಲ್ಲಿ ಸೋತವರನ್ನು ಸಮಾಧಾನ ಮಾಡುವುದಕ್ಕೆ, ಹಿಂದಿನ ಬಾಗಿಲಿನಿಂದ ಸಚಿವಪದವನ್ನು ದಾನ ಮಾಡುವುದಕ್ಕೆ, ಮತದಾರರನ್ನೆದುರಿಸಲು ಹೆದರುವ ಅಂಜುಬುಳಿ ರಾಜಕಾರಣಿಗಳನ್ನು ಗೌರವಿಸುವುದಕ್ಕೆ— ಹೀಗೆ ಹಲವು ಬಗೆಯಾಗಿ ಇದರ ದುರುಪಯೋಗವಾದ ಸಂದರ್ಭಗಳು ಹಲವಾರು ಇವೆ. ಹಾಗಾಗಿ ಈ ಮೇಲ್ಮನೆಯಲ್ಲಿ ಗುಣಮೌಲ್ಯವು ಕಡಿಮೆಯೆಂದೇ ಹೇಳಬೇಕು; ಅಂದರೆ, ಇದು ನಿರುಪಯುಕ್ತವೆಂದಾಯಿತು.

ಒಂದು ರಾಜ್ಯವು ತನಗೆ ಮೇಲ್ಮನೆ ಬೇಡವೆಂದು ಹೇಳಿದಾಗ, ಅದನ್ನು ಕೇಂದ್ರ ಸರಕಾರವು ವಿರೋಧಿಸಲಾರದು. ರಾಜ್ಯದ ಇಚ್ಛೆಯನ್ನು ಕಾರ್ಯರೂಪಕ್ಕೆ ತರಲು ಅದು ಸಂಪೂರ್ಣ ನೆರವಾಗುವುದು. ಕೇಂದ್ರ ಕಾನೂನು ಮಂತ್ರಿ ಪಾನಂಪಳ್ಳಿ ಗೋವಿಂದ ಮೆನನ್ನರು ಇದೇ ಆಶ್ವಾಸನ ನೀಡಿದ್ದಾರೆ. ಮೇಲ್ಮನೆಯು ಇಲ್ಲವಾದಲ್ಲಿ ರಾಜ್ಯ ಸರಕಾರದ ಆರ್ಥಿಕ ಮತ್ತು ಸಮಯದ ಉಳಿತಾಯವಾಗುವುದು. ಮಿತವ್ಯಯವು ಅತ್ಯವಶ್ಯವಾಗಿರುವ ಈ ದಿನಗಳಲ್ಲಿ ಇದು ಗಮನಾರ್ಹ ನಿರ್ಣಯವೆಂದೆನ್ನಲೇಬೇಕು. ಸದ್ಯ ಮೇಲ್ಮನೆಯ ಸುಖವನುಭವಿಸುವ ರಾಜ್ಯಗಳೂ ತಮಗೂ ಮೇಲ್ಮನೆ ಬೇಕೆನ್ನುವವರೂ ಕಾಲಸ್ಥಿತಿಯನ್ನು ಅರಿತುಕೊಂಡು ಅದರ ಕರೆಗೆ ಓಗೊಡಲೇಬೇಕಾಗುವುದು. ಯಾವ ಅಧಿಕಾರವೂ ಇಲ್ಲದೆ ಬರಿಯ ಭೂಷಣಪ್ರಾಯವಾಗಿರುವ ಈ ಮೇಲ್ಮನೆಗಳು ಗಾಡಿಯ ಐದನೆ ಚಕ್ರ; ಕೈಯ ಆರನೆಯ ಬೆರಳು. ಇದನ್ನು ಕಿತ್ತೆಸೆದರೆ ಶಾಸನಾಂಗಕ್ಕೆ ಯಾವ ಚ್ಯುತಿಯೂ ತಟ್ಟದು. ಇದೇ ಮಾತು ಕೇಂದ್ರಕ್ಕೂ ಅನ್ವಯಿಸುತ್ತದೆ.

ಅಜ ಮತ್ತು ಗಜ

ಪಾರ್ಲಿಮೆಂಟ್ ಸಭಾಧಿವೇಶನ ಆರಂಭವಾಯಿತೆಂದರೆ ಅವಿಶ್ವಾಸ ಗೊತ್ತುವಳಿ ಮಂಡಿಸುವುದು ಕೇಂದ್ರದ ಪರಿಪಾಠ. ಇದು ಕೆಲವು ರಾಜ್ಯಗಳಿಗೂ ಈಗೀಗ ಹರಡಿದ್ದರೆ, ಅದು ಹಿರಿಯಕ್ಕನ ಚಾಳಿ. ತಮ್ಮ ರಾಜ್ಯದ ವಿಧಾನ ಮಂಡಳಗಳು ಸಭೆ ಸೇರಿದಾಗ ಬರುವ ಗೊತ್ತುವಳಿ —"ರಾಜ್ಯದ ಹೆಸರನ್ನು ಕರ್ನಾಟಕವೆಂದಿಡಬೇಕು." ಈ ಬಗ್ಗೆ ಹಲವು ಬಾರಿ ಗೊತ್ತುವಳಿಗಳು ಮಂಡಿತವಾದುವು, ಚರ್ಚೆಯೂ ಆರಂಭವಾಗಿತ್ತು, ಅದು ಕೊನೆಮುಟ್ಟಿದೆಯೇ ಹೇಳಲಾಗದು. ಈ ಬಾರಿ 'ಕರ್ನಾಟಕ'ವನ್ನು ದೂರತಳ್ಳಿ "ಕನ್ನಡನಾಡು" ಮುಂದೆ ಬಂದಿದೆ. ಮದ್ರಾಸವು ತನ್ನ ಹೆಸರನ್ನು ತಮಿಳುನಾಡೆಂದು ಬದಲಾಯಿಸಿದ್ದೇ ಇದಕ್ಕೆ ಪ್ರೇರಕ ಶಕ್ತಿ. ಆರಂಭದಲ್ಲಿ ಮದ್ರಾಸು ಭಾರಿ ದೊಡ್ಡ ರಾಜ್ಯವಾಗಿತ್ತು. ಆದರ ಒಂದೊಂದೇ ಭಾಗಗಳು ಒರಿಸ್ಸಾ, ಆಂಧ್ರ, ಕೇರಳ ಹಾಗೂ ಮೈಸೂರುಗಳಿಗೆ ಹಂಚಿ ಹೋದ ಮೇಲೆ, 'ಮದ್ರಾಸದ' ಗಂಭೀರ ರೂಪ ಮರೆಯಾದ ಮೇಲೆ ಹೆಸರಾದರೂ ದೊಡ್ಡದಿರಲಿ ಎಂಬ ಮನೋಭಾವ ತಮಿಳರದ್ದು. ಚಿಕ್ಕದಾಗಿದ್ದ ಮೈಸೂರು, ಮುಂಬಯಿ, ಮದ್ರಾಸು, ಹೈದರಾಬಾದುಗಳಿಂದ ಭೂಭಾಗ ಪಡೆದು ದೊಡ್ಡದಾದರೂ 'ಮೈಸೂರು' ಶಬ್ದದಲ್ಲಿನ ಶ್ರೀಗಾಂಭೀರ್ಯವೇ ಬೇಕು ಎನ್ನುವ ಮನೋಭಾವ ನಮ್ಮದು. ಮದ್ರಾಸು ತಮಿಳುನಾಡಾದಲ್ಲಿ ಕಾಂಗ್ರೆಸ್ಸು ವಿರೋಧ ಪಕ್ಷವಾಗಿ ನಿಲ್ಲಬೇಕಾಯಿತು. ಮೈಸೂರು ಕರ್ನಾಟಕ ಮತ್ತೀಗ ಕನ್ನಡ ನಾಡೆನಿಸಬೇಕಾದರೂ ಹಾಗೇ ಆಗಬೇಕೋ ಏನೋ! ಈ ಪರಿಸ್ಥಿತಿ ಉದ್ಭವಿಸುವ ಸ್ಥಿತಿಯಲ್ಲಿ ಕಾಣದು. ಆದರೂ ಅಮಾವರೆಗೂ ನಮ್ಮ ವಿಧಾನ ಸಭೆಗಳ ಕಾಲಹರಣ, ತತ್ಫಲಕ ರಾಜ್ಯದ ಸಂಪತ್ತು ಪೋಲಾಗಲು ಸದವಕಾಶ ಇದ್ದೇ ಇದೆ. 'ನಾಲ್ಕು ಮಳೆಗಾಲ ಕಳೆದ ಮೇಲಾದರೂ ಮಗ ದಾರಿಗೆ ಬಂದಾನ' ಎಂದು ಅಜ್ಜಿಯಲ್ಲಿ ಆತ್ಮವಿಶ್ವಾಸವಿತ್ತು ನಿಜ. ಈಗ ಹನ್ನೆರಡು ಮಳೆಗಾಲ ಕಳೆದರೂ ನಮಗೆ ಅಂತಹ ಆತ್ಮವಿಶ್ವಾಸ ಮೂಡಿದಂತಿಲ್ಲ. 'ವಿಶಾಲ ವಿಶ್ವವಿದೆ, ಕಾಲ ನಿರವಧಿಯಾಗಿದೆ! ಒಂದಲ್ಲ ಒಂದು ದಿನವಾದರೂ ನನ್ನ ಕಾವ್ಯವನ್ನು ಓದಿ ಅರ್ಥಮಾಡಿಕೊಳ್ಳಬಲ್ಲ ಸಮಧರ್ಮ ಜನಿಸಿಯಾನು' ಎಂಬ ಸಂಸ್ಕೃತ ಕವಿಯ ಆಶಯವೇ ಸದ್ಯ ನಮ್ಮದು.

ನರಸಣ್ಣನ ಸರಸ



"ಸಚಿವ ಸಂಪುಟ ಕಿರಿದಾಗಿರಬೇಕು; ಆದರೆ, ಪೂರ್ವದಿಂದ ಹೆಚ್ಚಿನದೆ ದೊಡ್ಡದಾಗಿಯೇ ಇದೆ......"

"ಹೇಳುವುದು ಶಾಸ್ತ್ರ; ಇಕ್ಕುವುದು ಗಾಳ, —— ಪರಿಸ್ಥಿತಿಗಳ ಒತ್ತಡವೆಂದರೆ ಇದೇ!"

ನೆರೆರಾಜ್ಯದಲ್ಲಿ

ಕಾಯಬೇಕು, ಕಾದು ನೋಡಬೇಕು

'ಓಯ್, ಇದೆಂಥದ್ರಿ?'

'ಯಾವುದು?'

'ಅಲ್ಲ, ಅಯ್ಯೂಬ ಖಾನರು ಅಧಿಕಾರ ತ್ಯಜಿಸಿದ್ರಂತೆ ನೋಡಿ....'

'ಹೌದು; ಇದ್ರಲ್ಲಿ ಆಶ್ಚರ್ಯವೇನು?'

"ಏನೂ ಇಲ್ಲವೆ?"

"ಇಲ್ಲ...."

"ಯಾಕೆ ಹಾಗಂತೀರಿ?"

"ಮತ್ತವರು ಮಾಡುವುದಾದ್ರೂ ಏನೂಂತ?"

"ಅಲ್ರಿ, ಪ್ರಜಾ ಸತ್ತಾತ್ಮಕ ಆಡಳಿತ ಹೊಸ ಸಂವಿಧಾನ ಮೊದಲಾದುವುಗಳ ಬಗ್ಗೆ ಇತ್ತೀಚೆಗೆ ತನ್ನ ವಿರೋಧಿಗಳ ಸಂಧಿ ರಾಜಿ ಮಾಡಿಕೊಂಡ್ರಲ್ಲಾ...."

"ಎಲ್ಲವೂ ಹೌದು. ಮೊದಲು ಅಧಿಕಾರದ ಗೋಪುರದಲ್ಲಿದ್ದವರು ಅಲ್ಲಿಂದ ಇಳಿದು ರಾವಲ್ಪಿಂಡಿಯ ನೆಲದಲ್ಲೂ ನಿಂತರು; ಆದರೆ, ಅಲ್ಲೂ ಅವರನ್ನು ನಿಲ್ಲಗೊಡದುದರಿಂದ ಈಗ ಕಡೆನೆಗೆ ಇಳಿಯಲೇ ಬೇಕಾಯ್ತು...."

"ಅಂಥದ್ದೇನು ಬಂತು?"

"ಇನ್ನೇನು ಬರಬೇಕು? ಅಯ್ಯೂಬ ಖಾನರು ಈಗಲೇ ಗದ್ದುಗೆ ಬಿಡಬೇಕು ಎಂದು ದೊಂಬಿಯೇಳತೊಡಗಿದರು...."

"ಅಂದರೆ ದೊಂಬಿಗೆ ಇವರು ಹೆದರಿದ್ರೂಂತ ಕಾಣುತ್ತದೆ..."

"ಹಾಗಲ್ಲವೇ, ಅಂಥಿಂಥ ದೊಂಬಿಗೆ ಹೆದರಲು ಅವರು ಫೀಲ್ಡ್ ಮಾರ್ಶಲ್ ತಾನೆ? ಇದಿ ಮುಳುಗದವನಿಗೆ ಚಳಿಯೇನೂಂತ ಅಧಿಕಾರ ತ್ಯಾಗ ಮಾಡಿದರು..."

"ಹ್ಞಾಂ, ಅಲ್ಲವೇ ಮತ್ತೆ? ಸಾವ ಹೊತ್ತ ಅಧಿಕಾರ ಮದದಿಂದೇಕೆ ಸಾಯಬೇಕು? ವೈರಾಗ್ಯ ತಾಳಿ ತಾನಾಗಿಯೇ ದೂರ ನಡೆಯುವುದು ಜಾಣತನ...."

"ಉದರ ವೈರಾಗ್ಯ; ನರಿಯ ಜಾಣತನ..."

"ಹ್ಞಾಂ, ಅಸಹಾಯಕ ತೋರಿಕೆಯೂ ಇರಬಹುದು...."

"ಇರಬಹುದು; ಇರಬಹುದು...."

"ಏನು ಹಾಗಂತೀರಿ?"

"ಏನೂ ಇಲ್ಲ....ಅಯ್ಯೂಬರೇನೋ ಹೋದರು; ಅವ್ರ ಹಿಂದೆ ಪಾಕಿಸ್ತಾನವೇನೂ ಹೋಗೋದಿಲ್ಲ ತಾನೆ?"

"ಅಂದರೆ?"

"ಅಧಿಕಾರಿಗಳಿಗೊಂದು ಚಟ ಇರುತ್ತೆ"

"ಏನು?"

"ತಾವು ಇಲ್ಲದೆ ಹೋದರೆ ಲೋಕವೇ ಮುಳುಗುತ್ತೆ ಅಂತ ಹೆದರಿಕೆ; ಈ ಹೆದ್ರಿಕೆಯಲ್ಲೇ ಅವ್ರು ಯಮನೂರಿಗೆ ಹೋಗ್ತಾರೇನ್ನಿ; ಆದ್ರೆ ಅವರು ನಿರೀಕ್ಷಿಸಿದ ಪ್ರಳಯವೂ ಅಷ್ಟರಲ್ಲೇ ಬಹಳಷ್ಟು ಮುಂದೆ ಹೋಗಿರುತ್ತೆ...."

"ಅದೆಲ್ಲಾ ಸರೀನ್ನಿ. ಯಾರೊಬ್ಬನನ್ನಾದರೂ ನಂಬಿ ಒಂದು ದೇಶ ಇರೋಲ್ಲ, ಅಂಥ ಮಹಾತ್ಮರನ್ನು ನಾವು ಕಳೆದುಕೊಂಡೆವು; ನಮಗಿನ್ನಾರು ಗತಿಯೆಂತ ಕಣ್ಣೀರು ಕರೆದೆವು. ಪಂಡಿತ ನೆಹರು, ನಮ್ಮ ಭಾಗ್ಯಸೂರ್ಯ, ಅಸ್ತಂಗತನಾದಾಗ ನಮ್ಮ ಪಥಪ್ರದರ್ಶಕರು ಯಾರೂಂತ ಹಲುಬಿದೆವು. ಶಾಸ್ತ್ರಿಗಳೂ ಹೋದರು. ಆದರೆ ನಾವಿನ್ನೂ ಇದ್ದೇವೆ."

"ಸರಿಯೇ. ಆದರೆ, ಆಡಳಿತ-ವ್ಯವಸ್ಥೆ ಹಿಂದಿನಂತಿಲ್ಲ..."

"ನೋಡಿ, ಅದು ಅಭಿಪ್ರಾಯದ ಮಾತು. ಒಬ್ಬೊಬ್ಬರ ಅಭಿಪ್ರಾಯ ಒಂದೊಂದಿರಬಹುದು. ಆದರೆ ನಮ್ಮ ದೇಶ ಇದೆ; ನಾವೂ ಇದ್ದೇವೆ; ನಮಗೊಂದು ಆಡಳಿತವೂ ಇದೆ ಅನ್ನೋದು ಮಾತ್ರ ಸತ್ಯ..."

'ಸರಿಯಪ್ಪ, ಇಂದಿರಾಗಾಂಧಿ ಪ್ರಧಾನಿಯಾದಮೇಲೆ ನಿಮ್ಮಂತೋರು ಇಂಥದೇ ಮಾತಾಡೋಕೆ ಆರಂಭಿಸಿದ್ದಾರೆ....'

'ನೋಡಿ ಹಾಗೆಲ್ಲಾ ಅನ್ನಬೇಡಿ. ನಿಮ್ಮ ನೆಹರೂ, ಶಾಸ್ತ್ರಿಗಳನ್ನು ನೀವು ಹೊಗಳುತ್ತಿಲ್ಲವೆ? ಅವರ ಆಡಳಿತೆಯ ಬಗ್ಗೆ ಲೋಕದಲ್ಲಿ ಭಿನ್ನಮತವಿಲ್ಲೆಂಬುದನ್ನು ಇಷ್ಟು ಬೇಗನೇ ಮರೆತು ಬಿಟ್ಟಿರಾ...?'

'ಆಯ್ತಮ್ಮ. ಅಭಿಪ್ರಾಯ ಭೇದವೇ ವೈಚಾರಿಕ ಕ್ರಾಂತಿಗೆ ಮೂಲ. ಈಗ ಪಾಕಿಸ್ತಾನದಲ್ಲಿ ನಡೆದದ್ದಾದರೂ ಇದೆ....'

'ಅಂದರೆ?'

'ಅಧ್ಯಕ್ಷ ಮಾದರಿಯ ಸರಕಾರ ಬೇಡ; ಸಂಪೂರ್ಣ ಪ್ರಜಾಪ್ರಭುತ್ವಾತ್ಮಕ ಆಡಳಿತ ಬೇಕು; ವಯಸ್ಕ ಮತದಾನ ಪದ್ಧತಿ ಬೇಕು; ಪಕ್ಷೀಯ ಆಡಳಿತ ಬೇಕು...ಇತ್ಯಾದಿ...'

'ಅಲ್ರಿ, ಇವೆಲ್ಲ ನಮ್ಮಲ್ಲಿವೆಯಲ್ಲಾ?'

"ಹ್ಞಾ, ಈಗ ಪಾಕಿಸ್ತಾನಿಗಳು ಬಯಸುವುದೂ ಇದನ್ನೇ, ಹಿಂದೆ ಇದೇ ಮಾದರಿಯದು ಇತ್ತಲ್ಲ...."

"ಹೌದು; ಅಯ್ಯೂಬಖಾನರು ಆ ಸಂವಿಧಾನವನ್ನು ಕಿತ್ತು ಹಾಕಿ ಹೊಸತನ್ನು ಘೋಷಿಸಿದ್ದರು...."

"ಈಗ ಅವರು ಘೋಷಿಸಿದ್ದನ್ನು ರದ್ದುಪಡಿಸಿ ಬೇರೊಂದನ್ನು ಪ್ರತಿಷ್ಠಾಪಿಸುವ ಕಾರ್ಯ ಅಧಿಕಾರಕ್ಕೆ ಬಂದವರದ್ದು."

"ಅಲ್ರಿ, ಈಗ ಅಧಿಕಾರಕ್ಕೆ ಬಂದವ್ರೂ ಅಯ್ಯೂಬರಂತೆಯೇ ದಂಡನಾಯಕರು."

"ಹೌದು. ಆದರೆ, ಹಿಂದಿನ ಪ್ರಜಾ ಸರಕಾರವನ್ನು ಬಗ್ಗುಬಡಿದು, ಅಯ್ಯೂಬರು ಅಧಿಕಾರಕ್ಕೆ ಬಂದರು. ಈಗ ತನ್ನ ಕೈಲಾಗದೆ ದಂಡನಾಯಕರನ್ನು ಕರೆದು ತಾನೇ ಅಧಿಕಾರ ಹಸ್ತಾಂತರಿಸಿದರು...."

"ಇರಬಹುದು. ಆದರೆ, ನೋಡಿ, ಇಲ್ಲಿ ಎರಡು ಸಂಗತಿಗಳಿವೆ...."

"ಏನು?"

"ಮೊದಲನೆಯದಾಗಿ, ತನ್ನ ಬಗ್ಗೆ ವ್ಯಾಪಕವಾಗಿ ಹರಡಿ ಉಲ್ಬಣಗೊಳ್ಳುತ್ತಿರುವ ವಿರೋಧ, ಶಾಂತಿ-ವ್ಯವಸ್ಥೆಗಳ ಸಂಪೂರ್ಣ ಅವ್ಯವಸ್ಥೆ—ಇವನ್ನು ದೂರ ಮಾಡುವಲ್ಲಿ ತನ್ನ ಅಸಹಾಯಕತೆ; ಎರಡನೆಯದಾಗಿ, ದೇಶದ ಆಂತರಿಕ ಅವ್ಯವಸ್ಥೆಯಿಂದ ಸೈನಿಕ ಅಧಿಕಾರಿಗಳಿಗೂ ಕು... ಸಿ ಅಸಮಾಧಾನ..."

"ಇದ್ದರೂ ಇರಬಹುದು. ಸೈನಿಕ ಅಧಿಕಾರಿಯಾದವನು ಅವರಿಗೆ ಅಧಿಕಾರ ... ಹೋದನೆಂಬುದು ಮಾತ್ರ ನಿಜ..."

'ಅಲ್ರಿ, ಇನ್ನು ಮುಂದೆ?'

"ಸೈನಿಕ ಆಡಳಿತೆ — ಮಾರ್ಶಲ್ ... ಮಿಲಿಟರಿ ಕೋರ್ಟ್ ಮೊದಲ್ಗೊಂಡು ನ್ಯಾಯ...."

'ಅದು ಹಾಗೆಯೇ ಅನ್ನಿ. ಆದರೆ, ಅಯ್ಯೂಬರು. ತನ್ನ ವಿರೋಧಿಗಳಿಗೆ ... ದ ಮಾಗ್ದಾನ ಅವರೊಂದಿಗೆ ಮಾಡಿಕೆ ... ಒಡಂಬಡಿಕೆ...."

'ಅದೆಲ್ಲ ಕಾದು ನೋಡಬೇಕು. ಅಂತ... ಹ ಒಡಂಬಡಿಕೆಯಾದ ವೇಳೆಯಲ್ಲಿ ... ಯ್ಯೂಬರ ಆಡಳಿತ ಸುಗಮವಾಗಲಿ... ವೆಂದ ಮೇಲೆ ಹೊಸ ಆಡಳಿತಕ್ಕೇ... ಸಂಬಂಧವಿದೆಯೆಂದರೆ ಇದೆ; ಇಲ್ಲವೆಂ... ರೆ ಇಲ್ಲ...."

"ಅಲ್ಲಿಗೆ ಸಂಪೂರ್ಣತ್ತು ಬಿಡಿ..."

"ಹಾಗಲ್ಲವೇ, ಈಗ ಅಧಿಕಾರ ವ... ಕೊಂಡವರು ಹೇಳ್ತಾರೆ— ಆಡಳಿತ... ಸುವ್ಯವಸ್ಥೆ ಆದ್ಯ ಕರ್ತವ್ಯ. ... ರಲ್ಲಿ ಆಂದೋಲನಗಳಿಗೆ ಅವಕಾ... ವಿಲ್ಲ. ಸಂವಿಧಾನಾತ್ಮಕ ಸರಕಾ... ವನ್ನು ಆದಷ್ಟು ಬೇಗನೇ ರಚಿಸಲು ... ಕ್ತ ಕ್ರಮ ಕೈಗೊಳ್ಳಲಾಗುವುದು. ... ರಲ್ಲಿ ಪ್ರಜೆಗಳ ಸಹಕಾರ ಅಗತ್ಯ...."

"ಸರಿ, ಹಾಗಾದರೆ...."

"ಹ್ಞಾಂ, ನೋಡು, ಮಿಲಿಟರಿ ಆ... ಳಿತ ಬಂದೊಡನೆಯೇ ಅದು ಹಾಲಿ ಸಂ... ಧಾನವನ್ನು ರದ್ದುಮಾಡಿದೆ, ಅಸೆಂ... ಯನ್ನು ಬರ್ಖಾಸ್ತುಗೊಳಿಸಿದೆ; ... ಸಂಪುಟವನ್ನು ಕಿತ್ತುಹಾಕಿದೆ, ... ಹೊಸ ಸಂವಿಧಾನದ ಘೋಷಣೆ ... ಬೇಕು; ಸಂವಿಧಾನವು ಜನಮತ ... ಬೇಕು....ಅಂತೂ ಆದೀತು. ... ವಾಗಿಯಾದರೂ...."

"ಹ್ಞಾಂ, ಈ ಯಹ್ಯಾಖಾನ್ ಅಂದ... ಅಯ್ಯೂಬರಿಗೆ ಬೇಕಾದವರಿರಬೇಕು."

"ಇದ್ದರೂ ಇರಬಹುದು..."

"ಹಾಗಾದರೆ, ಅವರ ವಿರೋಧಿಗಳ... ಪ್ರಾಬಲ್ಯಾವಶೇಷ ನಾಶಮಾಡಿದರೂ ... ಬಹುದು....'

'ರಾಜಕೀಯದಲ್ಲಿ ಯಾವುದೂ ಅ... ಭವನೀಯವಲ್ಲ; ಮತ್ತೆ ಕೆಲವು ದೇ... ಳು ರಾಜಕೀಯ ಕೊಲೆಗೆ ಹೆಸರಾ... ದವುಗಳು, ಪಾಕಿಸ್ತಾನದಲ್ಲೂ ಇಂ... ಕೊಲೆಗಳು ಹಿಂದೆ ನಡೆದಿವೆಯೆನ್ನಿ; ಮು... ನಡೆದರೂ ನಡೆಯಬಹುದು....'

'ಯಹ್ಯಾಖಾನರೇನು, ನಿಮ್ಮ... ಹತ್ತಿರದವರಾಗಬೇಕಾ...'

'ಹ್ಞಾ, ಅವರು ಹುಟ್ಟಿದ್ದು ... ಲ್ಲಿ; ಪ್ರಥಮ ಲೋಕಯುದ್ಧದ ಆ... ದಿನದಲ್ಲಿ, ಪೇಶಾವರದಲ್ಲಿ, ... ವಿಶ್ವವಿದ್ಯಾಲಯದ ಪದವೀಧರರು....

'ಅಲ್ರಿ, ಇವರ ಮಿಲಿಟರಿ ಶಿ... ಇಂಗ್ಲೆಂಡಿನಲ್ಲಾಯ್ತು ತೋರುತ್ತೆ...

"ಇಲ್ಲ, ನಮ್ಮ ಮುಂದಿನ ಮಹಾ... ದ ನಾಯಕ ಮಾಣೆಕ್‌ಶಾರಂತೆಯೇ ... ಯ್ಯಾ ಖಾನರೂ ಡೆಹ್ರಾಡೂನಿನಲ್ಲಿಯೇ ... ತರಬೇತಿ ಪಡೆದವರ.'

"ಅವರು ಸೈನ್ಯ ಸೇರಿದ್ದು?"

(ಹತ್ತನೇ ಪುಟ ನೋಡಿ)

(ಹತ್ತನೇ ಪುಟ ನೋಡಿ)

ಜನಪ್ರಿಯ ಕ—ಳ—ಗಿ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. and S. C. 8/1968.

ಕೇಶವ ... (ಪ್ರಾ) ... ಪರವಾಗಿ ... ಅರ್ಜಿದಾರರು

ಮತ್ತು

... ಉಡುಪಿ ತಾಲೂಕು ... ಗ್ರಾಮ ...

ಇವರಿಗೆ—

... ಅರ್ಜಿದಾರರ ... ರೂ. 1000/-ನ್ನು ... ಅರ್ಜಿದಾರರು ... ತಾ. 8-4-69ಕ್ಕೆ ...

H. Ramanatha Pai,
Advocate for Petitioner.

ಉಡುಪಿ,
ತಾ. 27-8-69.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್

ಫೋನ್: 77

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ಜಯಪ್ರಕಾಶ ನಾರಾಯಣರ ಜರಿದಾಟ

ಬರೆದವರು: ಶ್ರೀ ಶಿವಶಂಕರ

ನಮ್ಮ ನೆಚ್ಚಿನ ಭಾರತನಾದ್ಯಂತ ಶ್ರೀ ರಾಮನವಮಿ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಬಲಶಾಲಿ ರಾವಣನು ಎಲ್ಲಾ ದೇಶಗಳನ್ನು ಗೆದ್ದು, ತನ್ನ ಬಾಹುಬಲದ, ವಿಜ್ಞಾನದ ಪರಿಚಯ ಮಾಡಿಕೊಟ್ಟಿದ್ದನು. ದುರದೃಷ್ಟವಶಾತ್ ಅವನು ಋಷಿ-ಮುನಿಗಳಿಗೆ ತೊಂದರೆ ಕೊಡಲಾರಂಭಿಸಿದನು. ಯಜ್ಞ-ಯಾಗಾದಿಗಳಿಗೆ ಅಡ್ಡಿ ತಂದನು. ಸಾಧ್ವೀಮಣಿಗಳು ನಡುಗುವಂತೆ ನಡೆದುಕೊಂಡನು. ಸೀತೆಯನ್ನು ಕದ್ದೊಯ್ದು ಕಾರಣ ಪ್ರಭು ಶ್ರೀರಾಮಚಂದ್ರನು ಅವನ ಅವಸಾನಕ್ಕೆ ಕಾರಣಪುರುಷನಾಗಬೇಕಾಯಿತು; ಭಗವಾನ್ ಶ್ರೀರಾಮನು ಧರ್ಮ ಸಂಸ್ಥಾಪನಾ ಕಾರ್ಯವನ್ನು ನಡೆಸಿದನು. ದುಷ್ಟರನ್ನು ನಾಶಗೊಳಿಸಿ, ಶಿಷ್ಟರನ್ನು ಪರಿಪಾಲಿಸಿದನು. ಆದುದರಿಂದಲೇ ರಾಮನನ್ನು ಆದರ್ಶಪುರುಷ, ಮರ್ಯಾದಾ ಪುರುಷೋತ್ತಮನೆಂದು ಕರೆಯುತ್ತಾರೆ. ಅವನ ಜನ್ಮದಿನೋತ್ಸವವೆಂದು ರಾಮನವಮಿಯನ್ನು ಆಚರಿಸುತ್ತಾರೆ. ಕೆಲವರು ರಾಮನು ದಕ್ಷಿಣದವರ ಮೇಲೆ ಆಕ್ರಮಣ ನಡೆಸಿದವನು, ದಕ್ಷಿಣದವರನ್ನು ಮೋಸದಿಂದ ಕೊಂದವನು.... ಈ ರೀತಿ ತಮ್ಮ ತಮ್ಮ ಸ್ವಭಾವ ಗುಣಗಳಿಗೆ ಹಾಗೂ ಸಾಮರ್ಥ್ಯಕ್ಕನುಸಾರವಾಗಿ ಜರಿದಾಡುವುದುಂಟು. ಅವರು ಕಂಬರಸ, ಕೇವಲಾಯಣ ಮುಂತಾದ ಪುಂಡಾಸ್ಕರರ ಅಗ್ಗದ ಒಗ್ಗದ ಅಶ್ಲೀಲ ಸಾಹಿತ್ಯವನ್ನು ಬರೆದು ಪ್ರಕಟಿಸಿರುವರು. ಅವರಿಗೆ ರಾವಣನು ಮಹಾವೀರನಿದ್ದಾನೆ. ಆಕ್ರಮಣಕಾರನಲ್ಲ, ಆರ್ಷಣೀಯ ಅತಿರಥನಿದ್ದಾನೆ. ವಿಷಯ ಪರನಾರಿ ಚೋರನಲ್ಲ.

ಅದೇ ರೀತಿ ಇಂದು ಇನ್ನೊಂದು ರೀತಿಯ ಗುಂಪು ತಲೆಯೆತ್ತಲು ಪ್ರಯತ್ನಿಸುತ್ತಿದೆ. ಭಾರತದ ಮೇಲೆ ಆಕ್ರಮಣ ನಡೆಸಿರುವವರನ್ನು, ರಾಷ್ಟ್ರೀಯತೆಯನ್ನು ನಾಶಗೈಯ್ಯಲು ಪ್ರಯತ್ನಿಸಿರುವವರನ್ನು ಹೊಗಳುವಂತಹ ಪುಂಡಾಸ್ಕರರ ದುರ್ಘಟನೆಗಳಿಂದು ನಡೆಯುತ್ತಿವೆ. ರಾಜಕೀಯದಿಂದ ದೂರ ಸರಿದಿದ್ದೇನೆಂದು ಹೇಳಿಕೊಳ್ಳುತ್ತಿರುವ ಶ್ರೀ ಜಯಪ್ರಕಾಶ ನಾರಾಯಣರು ಅಂತಹ ಗುಂಪಿನ ಮಹಾನಾಯಕರಾಗಲು ಮುಂದೆ ಬಂದಿದ್ದಾರೆ. ಅವರು ಹೋದೆಡೆಯಲ್ಲೆಲ್ಲಾ ಆ ದುಷ್ಕಾರ್ಯದ ಪ್ರಚಾರವನ್ನು ಜೋರಾಗಿ ನಡೆಸುತ್ತಿದ್ದಾರೆ.

ಫೆಬ್ರವರಿ ತಿಂಗಳ ೨೧, ೨೨ ಮತ್ತು ೨೩ರಂದು ನವದೆಹಲಿಯಲ್ಲಿ ಶ್ರೀ ಜಯಪ್ರಕಾಶರ ನೇತೃತ್ವದಲ್ಲಿ ರಾಷ್ಟ್ರೀಯ ಸಭೆಯೊಂದು ಸೇರಿತ್ತು. ಅದರಲ್ಲಿ ಶ್ರೀ ಜಯಪ್ರಕಾಶರು ಬಹಳ ಬಲವಾಗಿ ತಮ್ಮ ಕೆಲಸವನ್ನು ಸ್ಪಷ್ಟಪಡಿಸಿರುವರು. ಅವರ್ ಹಿಂದೂ ರಾಷ್ಟ್ರದ ಕುರಿತು ಹೀನಾಯವಾಗಿ ಹೇಳಿರುವರು. ಅವರಿಗೆ ಹಿಂದೂ ರಾಷ್ಟ್ರವೆಂದರೆ ಜಾತೀಯ ವಾಚಕ, ಮತೀಯ ಸೂಚಕ ಪದ. ಹಿಂದೂಗಳ ಸಂಘಟನೆಯೆಂದರೆ ಸಹಿಸಿಕೊಳ್ಳಲು ಅವರಿಗೆ ಸಾಧ್ಯವಾಗುವುದಿಲ್ಲ. ಅವರು ಜಾತಿ, ಸಂಪ್ರದಾಯ, ಭಾಷೆ ಎಲ್ಲವನ್ನೂ ಬಿಟ್ಟು ಪಕ್ಷವನ್ನು ಮಾತ್ರ ಹಿಡಿದುಕೊಂಡು ಪಕ್ಷಪಾತಿಯಾಗಿಬಿಟ್ಟರು. ಪಕ್ಷಭೇದವನ್ನು ಬಿಟ್ಟು ಒಂದಾಗುವದೆಂದರೆ ಅವರ ಅರ್ಥ ಹಿಂದೂಗಳೆಲ್ಲರೂ ಒಂದೇ ಪಕ್ಷದ ಸದಸ್ಯರಾಗುವರೆಂದು! ಅದ್ಯಾವ ರಾಜಕೀಯ ಪಕ್ಷದ ಸದಸ್ಯನಾಗಿದ್ದರೂ ತಾನು ಹಿಂದೂ, ಭಾರತೀಯ, ಈ ರಾಷ್ಟ್ರದ ಪ್ರಜೆ, ಭಾರತಮಾತೆಯ ಮಗುವೆಂದು ಹೇಳಿಕೊಳ್ಳುವುದು ತಪ್ಪೇನು?

ರಾಷ್ಟ್ರೈಕ್ಯಕ್ಕೆ ಅವರೊಂದು ವಿಧಾನವನ್ನು ಕಂಡು ಹಿಡಿದಿರುವರು. ಇಂಡಿಯಾದ ನಾನಾ ವಿಧದ ಜನರು ಭಾವೈಕ್ಯವಾಗಿ ಒಂದು ರಾಷ್ಟ್ರವಾಗಬೇಕೆಂದಿದ್ದಲ್ಲಿ ಮತ್ತು ಅವರ ರಾಜಕೀಯ ಒಗ್ಗಟ್ಟನ್ನು ಕಾಪಾಡಬೇಕು ಅಲ್ಲದೆ ಬಲಪಡಿಸಬೇಕೆಂದಿದ್ದಲ್ಲಿ ಅವರಿಗಿರುವದ ಒಂದೇ ಒಂದು ದಾರಿ ಅವರದನ್ನು ಅರಿತುಕೊಳ್ಳಬೇಕು ಮತ್ತು ಉದ್ದೇಶಪೂರ್ವಕವಾಗಿ ಆ ಹಾದಿಯಲ್ಲಿ ಸಾಗಬೇಕು, ಅವರು ಮಿಶ್ರ ಅಪಾಂಥಿಕ ರಾಷ್ಟ್ರೀಯತೆಯ ವಿಚಾರವನ್ನು ಆರಿಸಿಕೊಂಡು ಅದಕ್ಕಾಗಿ ಸಕ್ರಿಯವಾಗಿ ಪ್ರಯತ್ನಿಸುವದೇ ಆ ದಾರಿ.

ಈ ಪ್ರಕಾಶಕ್ಕೆ ಜಯ ಸೂರ್ಯನಿಂದ ಬಂದಿದೆಯೇ? ಮಿಶ್ರ ಮತಕ್ಕಾಗಿ ಅಕ್ಬರನಿಂದ ಜವಾಹರಲಾಲರ ವರೆಗೆ ಬಹಳ ಜನರು ಪ್ರಯತ್ನಿಸಿರುವರು. ಅಕ್ಬರನ ದೀನ್-ಇಲಾಹಿ ಏನಾಯ್ತು? ಕಬೀರನ ಕಳೇಬರಕ್ಕಾಗಿ ಕಲಹವೇರ್ಪಡಲಿಲ್ಲವೇ? ಮಹಾತ್ಮಾ ಮೋಹನದಾಸ ಕರಮಚಂದ ಗಾಂಧೀಜಿಯವರ ಪಾತ್ರ ಕಿರಿದೇ? ಭಾರತದ ಸ್ವಾತಂತ್ರ್ಯ, ಐಕ್ಯಕ್ಕಾಗಿ ಅವಶ್ಯಕವಾದಲ್ಲಿ ಇಲ್ಲಿರುವವರೆಲ್ಲರೂ ಮುಸಲ್ಮಾನರಾದರೂ ಚಿಂತಿಲ್ಲವೆಂದು ಹೇಳಿದ ಗಾಂಧೀಜೀಯವರು ಕಂಡುಕೊಂಡದ್ದೇನು! ಸ್ವತಃ ಅವರ ಮಗನು ಮಹಮ್ಮದೀಯನಾದಾಗ ಅವರಿಂದ ಅದನ್ನು ತಡೆದುಕೊಳ್ಳಲಿಕ್ಕಾಗಲಿಲ್ಲ. ಅವನು 'ಶುದ್ಧ'ವಾದ ಮೇಲೆಯೇ ಅವರ ಮನಸ್ಸಿಗೆ ಸಮಾಧಾನವಾಯಿತು. ಪ್ರಗತಿವಾದಿ ಪಂಡಿತ ಜವಾಹರಲಾಲಜೀಯವರ ಮೆಚ್ಚಿನ ಮಗಳು ಇಂದಿರಾ ತನ್ನ ಪ್ರಿಯತಮನನ್ನು ತಾನೇ ಆರಿಸಿಕೊಂಡಾಗ ಅವರೆಂತು ವರ್ತಿಸಿದರು? ಫಿರೋಝ್ಖಾನ ಯಾರ! ಕಾಲ ಮೀರಿಹೋಗಿತ್ತು. ಅವರು ಒಪ್ಪಲೇ ಬೇಕಾಯಿತು. ಅವರ ಅಂತಿಮ ಆಶೆಯಾದರೂ ಅದೇನು? ತನ್ನ ಅಸ್ಥಿಯನ್ನು ತ್ರಿವೇಣಿಯಲ್ಲಿ ಬಿಡಬೇಕು! ಯಾಕೆ? ಅದೇಲ್ಲಾ? ಈ ದೇಶದ ರಾಷ್ಟ್ರೀಯನಿಗೆ ಮಾತ್ರ ಅಂತಹ ಆಶೆ ಬರಲು ಸಾಧ್ಯ. ಅನ್ಯರಿಗೆ ಮಕ್ಕಾ ಮದೀನಾ, ಜೆರೂಸಲೇಂ, ಬೆತ್ಲೆಹೇಂ, ರೋಮ್, ರಷ್ಯಾ, ಚೈನಾಗಳೇ ಸ್ಫೂರ್ತಿದಾಯಕ ಪುಣ್ಯಭೂಮಿ; ಇದು ಭೋಗ ಭೂಮಿ. ಆದುದರಿಂದ ಭಾರತವನ್ನು ಭೋಗ ಭೂಮಿಯೆಂದು ವರ್ತಿಸುವವರನ್ನೂ ಅದನ್ನು ಪುಣ್ಯಭೂಮಿಯೆಂದು ಪೂಜಿಸುವವರನ್ನೂ ಒಂದಾಗಿ ಸೇರಿಸಿ ಸಂಘಟಿತ ಮಿಶ್ರ ರಾಷ್ಟ್ರೀಯರನ್ನಾಗಿಸಲು ಸಾಧ್ಯವೇನು? ಅಕ್ಕಿ-ಕಲ್ಲು ಮಿಶ್ರಿತವಾಗಿರುವದಿಲ್ಲವೇ? ಅವು ಒಂದಾಗಿ ಬೆಂದು ಅನ್ನವಾಗಲು ಸಾಧ್ಯವೇನು? ಆಕ್ರಮಣ ಹಾಗೂ ಅಂತಹ ಭೀಕರ ಪರಿಸ್ಥಿತಿಯು ಸಮಯ ಬಟ್ಟು ಬಂದಲ್ಲದೆ ಇರವದಿಲ್ಲ. ಹಾಗಿರುವಾಗ ಅವರೆಲ್ಲರಿಂದಲೂ ಸಾಧ್ಯವಾಗದಿರುವದನ್ನು ಈ ವಯಸ್ಸಿನಲ್ಲಿ ಶ್ರೀ ಜಯಪ್ರಕಾಶ ನಾರಾಯಣರು ಅದೆಂತು ಸಾಧಿಸುತ್ತಾರೆ!

ಇರಾನ್ ಮತ್ತು ಇಜಿಪ್ಟಿನಲ್ಲಿದ್ದ ಜನರು ಮಹಮ್ಮದೀಯರಾಗಿ ಮತಾಂತರಗೊಂಡಿರುವರಾದರೂ ಅಲ್ಲಿಯ ವರೆಗೆ ಪ್ರಾಚೀನ ವೈಭವದ ಕುರಿತು ಸಂಶೋಧನೆ ನಡೆಸುತ್ತಿದ್ದಾರೆ. ಅವರಿಗೆ ತಮ್ಮ ಪೂರ್ವಜರ ಮೇಲೆ ಗೌರವ ಇದೆ. ಹಾಗೆಯೇ ಇಲ್ಲಿಯ ಮುಸಲ್ಮಾನರೂ ಕ್ರಿಶ್ಚಿಯನರೂ ಆಗಬೇಕೆಂಬುದು ಶ್ರೀ ಜಯಪ್ರಕಾಶರ ಹಿರಿಯಾಸೆ. ಈ ಉದಾಹರಣೆಗೆ ಕೂಡಾ ಅವರು ಪಶ್ಚಿಮದತ್ತವೇ ನೋಡುತ್ತಿದ್ದಾರೆ ಪೂರ್ವದತ್ತ ಅವರ ದೃಷ್ಟಿ ಅದೇಕೆ ಹೋಗುವದಿಲ್ಲವೋ! ದ್ವೀಪಾಂತರ ಅಂದರೆ ಇಂಡೋನೇಷ್ಯಾದಲ್ಲಿಂದು ಮಹಮ್ಮದೀಯರದ್ದೇ ಮೇಲುಗೈ. ಹಾಗಿದ್ದರೂ ಅಲ್ಲಿ ರಾಮಾಯಣ-ಮಹಾಭಾರತಗಳಿಗೆ ವಿಶಿಷ್ಟಸ್ಥಾನವಿದೆ. ಅವರು ಹಿಂದೂ ಹೆಸರುಗಳನ್ನೇ ಇಟ್ಟುಕೊಳ್ಳುತ್ತಾರೆ. ತಮ್ಮ ಪ್ರಜಾಪ್ರತಿನಿಧಿ ಸಭೆಯಲ್ಲಿ ಮನುವಿನ ವಿಗ್ರಹವನ್ನಿಟ್ಟಿದ್ದಾರೆ. ಆದರೆ ನಮ್ಮಲ್ಲಿ? ಈ ಮುಸ್ಲಿಮರಿಗೂ ಕ್ರಿಶ್ಚಿಯನರಿಗೂ ಹೆದರಿ ಶ್ರೀ ರಾಮನವಮಿ ಹಾಗೂ ಶ್ರೀ ಕೃಷ್ಣ ಜಯಂತಿಯನ್ನು ರಾಷ್ಟ್ರೀಯ ಉತ್ಸವವನ್ನಾಗಿ ಆಚರಿಸಲು ನಮ್ಮ ಪ್ರಜಾಪ್ರತಿನಿಧಿಗಳೇ ಒಪ್ಪುವದಿಲ್ಲವೆಂದ ಮೇಲೆ ಬೇರೇನು. ಬೇರೆ ಇತರ ದೇಶಗಳಲ್ಲಿರುವ ಮಹಮ್ಮದೀಯರು ಗೋವನ್ನು ಪೂಜಾರ್ಹವೆಂದು ಪರಿಗಣಿಸುತ್ತಿರುವರಾದಲ್ಲಿ ಇಲ್ಲಿನ ಮುಸಲ್ಮಾನರು ನಡುರಸ್ತೆಯಲ್ಲಿ ಗೋಮಾತೆಯನ್ನು ಭೀಕರವಾಗಿ ಕೊಲೆಗೈದು ಸಾರ್ವಜನಿಕ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯುವದಿಲ್ಲವೇನು? ಈಗೀಗ ಕ್ರಿಶ್ಚಿಯನರೂ ಇಂತಹ ಕೆಲಸಗಳಿಗೆ ಆರಂಭಿಸಿರುವರು. ಇಂತಹವರ ಜೊತೆ ಒಗ್ಗಟ್ಟಿಗಾಗಿ ಜನ್ನ ಒಂದಾಗೋಣವೆಂದರೆ ಅವರ ಉತ್ತರವೆಂದರೆ ಅಕ್ಬರನನ್ನು ಅನುಸರಿಸಿರೆಂದು ಅಕ್ಬರನ ದೀನ್ ಇಲಾಹಿ ಯ ವಿಷಯ ವಿವರಣೆ ಅನಗತ್ಯ. ಅಂತಹ ಒಗ್ಗಟ್ಟು ನಮಗೆ ಬೇಕೇನು? ಇದು ಕುರಿಮರಿಯು ತೋಳದ ಜೊತೆ ಒಗ್ಗಟ್ಟಿನ ಪ್ರಾರ್ಥನೆಯನ್ನು ಸಲ್ಲಿಸಿದಂತೆ ಇದೆ. ತೋಳ ಮಾಡಿದ್ದನ್ನೇ ಇವರು ಮಾಡುವ

(ಎಂಟನೇ ಪುಟ ನೋಡಿರಿ)

ಕುಂದಾಪುರ ಮು.ಎ. ಕೋರ್ಟಿನಲ್ಲಿ

O. S. 604/67 I.A. I.

ವಾದಿ— ಹೆನ್ರಿ ಮಸ್ಕ್ಯಾನ್

ಪ್ರತಿವಾದಿರು — ಪೆಟ್ರಿಕ್ ಡಿ'ಸೋಜ ಕೂಡಾ

2, 3ನೇ ಪ್ರತಿವಾದಿಗೆ ತಿಳಿಸುವುದೇನೆಂದರೆ;—

2ನೇ ಪ್ರ. ಲಕ್ಷ್ಮಿ ಹೆಂಗಸು, 3ನೇ ಪ್ರ. ಗಿರಿಜ ಹೆಂಗಸು — ಕೊರಾಗ ಹೆಂಗಸಿನ ಮಕ್ಕಳು, ಉಡುಪಿ ತಾಲ್ಲೂಕು ಹೊಸಾಳ ಗ್ರಾಮದ ಹೊಸಾಳ ರೋಡಿನಲ್ಲಿರುವ ನಿತ್ಯಾನಂದ ಹೋಟೆಲ್, ಬಾರಕೂರು.

ಮೇಲಿನ ದಾವೆಯಲ್ಲಿನ ಪ್ರಿಲಿಮಿನರಿ ಡಿಕ್ರಿಯ ಮೇಲೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ಅರ್ಜಿಕೊಟ್ಟಿರುವುದರಿಂದ ಸದ್ರಿ ಅರ್ಜಿಯು ತಾರೀಕು 14-4-69ಕ್ಕೆ ವಿಚಾರಣೆಗೆ ಇಟ್ಟಿರುವುದರಿಂದ ಆ ಕುರಿತು ನಿಂದು ಆಕ್ಷೇಪಣೆಯೇನಾದರೂ ಇದ್ದರೆ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನ್ಯಾಯ ಪಡಕೊಳ್ಳತಕ್ಕದ್ದು.

M. Madhava Rao,
Advocate for Pltf.

ತಾರೀಕು: 24-3-69.

ಇತಿಹಾಸದ ರೋಮಾಂಚಕ ಪುಟಗಳು: ೩.

ನೇಪಾಳದ ನರಕ ಪಂಜರ

ಬರೆದವರು: ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ

ರಾಯಭಾರಿಯ ಬದಲಾವಣೆ

ಭಾರತ ಸರಕಾರ ನೇಪಾಳಕ್ಕೆ 'ಸರ್ ಚಂದ್ರಶೇಖರ ಪ್ರಸಾದ್ ನಾರಾಯಣ ಸಿಂಹ' ಎಂಬವರನ್ನು ರಾಯಭಾರಿಯನ್ನಾಗಿ ನೇಮಿಸಿ ಕಳುಹಿಸಿತು. ಈ ವ್ಯಕ್ತಿ ದೊಡ್ಡ ಪದವೀಧರರಾಗಿದ್ದು ಬಹಳ ಚತುರರಿರಬಹುದೆಂದು ಡಾ। ಎರಿಕಾ ಭಾವಿಸಿದಳು. ಆದರೆ ಸರದಾರರು ವ್ಯಕ್ತಪಡಿಸಿದಂತಹ ಸೈನಿಕ ಎದೆಗಾರಿಕೆಯನ್ನು ಇವರು ತೋರಿಸಬಲ್ಲರೇ? ಎಂಬ ಸಂದೇಹ ಆಕೆಗೆ ಉಂಟಾಯಿತು. ಸರ್ದಾರರು ಸಮಸ್ತ ವಿಚಾರವನ್ನು ಪಂಡಿತ ನೆಹರುರವರಿಗೆ ಮನದಟ್ಟು ಮಾಡಬಹುದು; ಆದುದರಿಂದ ಮುಂದಿನ ಕಾರ್ಯವನ್ನು ಈ ಹೊಸ ರಾಯಭಾರಿ ಸಂಪೂರ್ಣಗೊಳಿಸಬಹುದು; ಎಂಬ ಬಲು ದೊಡ್ಡ ಆಶಾಜ್ಯೋತಿ ಆಕೆಯಲ್ಲಿ ಮೂಡದಿರಲಿಲ್ಲ. ಹಗಲೂ ರಾತ್ರಿ ಡೋಲಾಯಮಾನ ಸ್ಥಿತಿಯಲ್ಲಿ ಕಂಗೆಟ್ಟವಳಾಗಿ ಒಂದು ದಿನ ಹೊಸ ರಾಯಭಾರಿಯನ್ನು ಪ್ರತ್ಯಕ್ಷವಾಗಿ ನೋಡಿಯೇ ತೀರಬೇಕೆಂಬ ಸಾಹಸಕ್ಕೆ ಮುಂದಾದಳು. ದೂತಾವಾಸದಲ್ಲಿಯೇ ಸರ್ ನಾರಾಯಣಸಿಂಗರ ಭೇಟಿ ನಡೆಯಿತು. ಪರಂತು ಸರ್ದಾರ್ ಸುರ್ಜಿತ್ ಸಿಂಗರವರಲ್ಲಿ ಬಿಚ್ಚು ಮನಸ್ಸಿನಿಂದ ಮಾತನಾಡಿದಂತಹ ಅವಕಾಶ ಇವರಲ್ಲಿರಲಿಲ್ಲ. ಸರ್. ಚಂದ್ರಶೇಖರರು ಪ್ರತಿಯೊಂದು ವಿಷಯವನ್ನು ವಿವರವಾಗಿ ಕೇಳಿಕೊಳ್ಳುತ್ತಿದ್ದರೆಯೇ ವಿನಹ ಮರುತ್ತರ ಕೊಡದೆ ತನ್ನ ಮನಸ್ಸಿನಲ್ಲಿಯೇ ಒಂದು ನಿರ್ಧಾರ ಕೈಕೊಳ್ಳುವ ಒಬ್ಬ ನಿರ್ಧಾರ ಹಾಗೂ ಗಂಭೀರ ಸ್ವಭಾವದ ವ್ಯಕ್ತಿಯಾಗಿದ್ದರು. ಅವರು ಡಾ॥ ಎರಿಕಾಳೊಡನೆ ಹೆಚ್ಚು ಮಾತಾಡದೆ "ಮಗಳೇ! ನೀನೇನೂ ಭಯಪಡಬೇಡ! ಮಹಾರಾಜರಿಗೆ ಬೇಕಾದ ಆವಶ್ಯಕ ಸಹಾಯವನ್ನು ಮಾಡುವುದ [illegible] ಯೋಗ್ಯವಾದ ಉಪಾಯವನ್ನು ಹುಡುಕುತ್ತೇನೆ" ಎಂದಿಷ್ಟೇ ಉತ್ತರವಿತ್ತು ಸುಮ್ಮನಾದರು.

ನೀಲಕಂಠನ ಯಾತ್ರೆ

ಆ ಕಾಲದಲ್ಲಿ ಭಾರತ ಸರಕಾರದ ದೂತಾವಾಸದ ನಿವಾಸಸ್ಥಾನ ನೇಪಾಲದ ಪ್ರಧಾನ ಮಂತ್ರಿಯ ಅರಮನೆಯ ನೇರ ಮುಂಭಾಗದಲ್ಲಿತ್ತು. ಆದುದರಿಂದಲೇ ತನ್ನ ಮನೆಯಲ್ಲಿ ಸರ್. ಚಂದ್ರಶೇಖರರು ಎರಿಕಾಳೊಡನೆ ಹೆಚ್ಚು ಹೊತ್ತು ಮಾತನಾಡುತ್ತಿರುವುದು ಯೋಗ್ಯವಲ್ಲವೆಂದು ಅವರು ತಿಳಿದುಕೊಂಡಿದ್ದರು. ವಿಸ್ತಾರವಾದ ವಿಚಾರವಿನಿಮಯವನ್ನು ಪೂರ್ತಿಗೊಳಿಸಲಿಕ್ಕಾಗಿ ನೀಲಕಂಠ ಪರ್ವತದ ಯಾತ್ರಾ ಕಾರ್ಯಕ್ರಮವನ್ನು ಏರ್ಪಡಿಸಿದರು.

ಪೂರ್ವ ನಿರ್ಧಾರದಂತೆ ಸರ್. ಚಂದ್ರಶೇಖರಸಿಂಹ ಮತ್ತು ಅವರ ಆಪ್ತಕಾರ್ಯದರ್ಶಿ, ಡಾ॥ ಎರಿಕಾ ಮೂವರು ಕೂಡಿ ನೀಲಕಂಠ ಪರ್ವತದ ಯಾತ್ರೆ ಕೈಕೊಂಡರು. ಅಲ್ಲಿ ಸರ್. ಸಿಂಹರು ಮಹಾರಾಜರ ಹಿತವಾದ ಅಭಿಲಾಷೆ ಏನೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದರು. ಸಿಂಹರೊಡನೆ ನಡೆಸಿದ ವಾರ್ತಾಲಾಪದಿಂದ ಡಾ. ಎರಿಕಾ "ಇವರು ಪ್ರಕೃತದ ಕಠಿಣ ಸಮಸ್ಯೆಯನ್ನು ಈ ಮೊದಲೇ ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡಿರುತ್ತಾರೆ; ಕೇವಲ ಅಲ್ಲಿ ಉಳಿದಿರುವ ಒಂದೆರಡು ವಿಷಯಗಳಲ್ಲಿ ಮಾತ್ರ ಸ್ಪಷ್ಟೀಕರಣ ನಡೆಸಲಿಚ್ಛಿಸುತ್ತಿದ್ದಾರೆ" ಎಂಬುದನ್ನು ಮನದಟ್ಟು ಮಾಡಿಕೊಂಡಳು.

ಮಹಾರಾಜರು ನೇಪಾಲದ ಪ್ರಜಾತಂತ್ರಾತ್ಮಕ ವೈಧಾನಿಕ ಸಾರ್ವಭೌಮರಾಗಲು ಇಚ್ಛಿಸುತ್ತಿದ್ದಾರೆಂಬುದು ಸರ್. ಸಿಂಹರಿಗೆ ಎರಿಕಾಳಿಂದ ದೃಢವಾಗಿ ಮನವರಿಕೆಯಾಯಿತು. ಮಹಾರಾಜರು ತನ್ನ ದೃಢವಾದ ನಿಲುವನ್ನು ವಿವರಿಸಿ ಒಂದು ಪತ್ರವನ್ನು ಭಾರತ ಸರಕಾರಕ್ಕೆ ಬರೆಯಲಿ! ಅನಂತರದ ಎಲ್ಲಾ ಕಾರ್ಯವನ್ನು ತಾನು ನೆರವೇರಿಸುತ್ತೇನೆಂದು ಸರ್. ಸಿಂಹರು ಡಾ. ಎರಿಕಾಳಿಗೆ ನಿರ್ದಿಷ್ಟವಾದ ಆದೇಶವಿತ್ತರು.

ನೀಲಕಂಠ ಪರ್ವತ ವಿಹಾರದಿಂದ ಹಿಂತಿರುಗುವಾಗ ಸಾಯಂಕಾಲವಾಗಿತ್ತು. ಸರ್. ಸಿಂಹರು ಅವರ ನಿವಾಸಸ್ಥಾನಕ್ಕೆ ತೆರಳಿದರು. ಅದೇ ಕಾರಿನಲ್ಲಿ ಡಾ. ಎರಿಕಾ ನೇರವಾಗಿ ಅರಮನೆಗೆ ಹೋದಳು. ಆ ದಿನ ಎಂದಿಗಿಂತ ಬಹಳ ಹೊತ್ತು ಮೀರಿ ಹೋಗಿತ್ತು. ಅಲ್ಲಿ ಸಂದರ್ಭ ಸಾಧಿಸಿಕೊಂಡು ಎರಿಕಾ ಸಕಲ ವೃತ್ತಾಂತವನ್ನು ಮಹಾರಾಜರಿಗೆ ವಿಶದವಾಗಿ ತಿಳಿಸಿದಳು. ಮಹಾರಾಜರು ಭಾರತ ಸರಕಾರಕ್ಕೆ ಒಂದು ಪತ್ರ ಬರೆಯುವುದು ಒಂದು ಸಾಮಾನ್ಯ ಕೆಲಸವೆಂಬುದಾಗಿ ಅವಳು ತಿಳಿದುಕೊಂಡಿದ್ದಳು. ಮಾತ್ರವಲ್ಲ ಕೂಡಲೇ ಮಹಾರಾಜರಿಂದ ಪತ್ರ ಬರೆಸುವುದಾಗಿ ರಾಯಭಾರಿ ಸರ್ ಸಿಂಹರಿಗೆ ವಾಗ್ದಾನ ಸಹ ಮಾಡಿಬಿಟ್ಟಿದ್ದಳು. ಆದರೆ ಮಹಾರಾಜರು ಬಹಳ ಕಠಿಣವಾದ ಸಂದಿಗ್ಧ ಬಿಕ್ಕಟ್ಟಿಗೊಳಗಾದರು. ನೇಪಾಲದ ಒಬ್ಬ ಸರ್ವತಂತ್ರ ಸ್ವತಂತ್ರ ಹಾಗೂ ಸಾರ್ವಭೌಮ ಚಕ್ರವರ್ತಿ ತನ್ನ ಅಸಹಾಯಕ ಪರಿಸ್ಥಿತಿಯನ್ನು ಒಬ್ಬ ರಾಯಭಾರಿಗೆ ಪತ್ರ ಬರೆದು ತಿಳಿಸಿ ಭಾರತ ಸರಕಾರದಿಂದ ಸಹಾಯ ಬೇಡುವುದು ಚಕ್ರವರ್ತಿತ್ವದ ಪ್ರತಿಷ್ಠೆ ಹಾಗೂ ಕುಲಗೌರವಕ್ಕೆ ದೊಡ್ಡ ಅಪಮಾನಕರವಾದ ಸಮಸ್ಯೆಯಾಗಿತ್ತು. ಇನ್ನೊಂದು ಭಯವೇನೆಂದರೆ ದುರದೃಷ್ಟವಶಾತ್ ಎಲ್ಲಿಯಾದರೂ ಮಹಾರಾಜರ ಪತ್ರ ಪ್ರಧಾನ ಮಂತ್ರಿಯ ಕೈಸೇರಿತೆಂದರೆ ಅದರ ಪರಿಣಾಮವಾಗಿ ಮಹಾದುರಂತ ತಪ್ಪಿದ್ದಲ್ಲ. ಅನೇಕ ಸಲ ಎರಿಕಾ ಒತ್ತಾಯಪಡಿಸಿದರೂ ಮಹಾರಾಜರು ಪತ್ರ ಬರೆಯಲು ಮುಂದಾಗಲಿಲ್ಲ. ಕಟ್ಟಕಡೆಗೆ ರಾಜಜ್ಯೋತಿಷ್ಯರಿಂದ ಶುಭ ಮುಹೂರ್ತ ತಿಳಿದುಕೊಂಡು ಒಂದು ಪತ್ರ ಬರೆದು ಲಕೋಟೆಯೊಳಗೆ ಭದ್ರಗೊಳಿಸಿ ಜುಲೈ 4ರಂದು ಡಾ। ಎರಿಕಾಳ ಕೈಗೊಪ್ಪಿಸಿದರು.

ಮರುದಿನ ಪ್ರಾತಃಕಾಲ ಎರಿಕಾ ದೂತಾವಾಸಕ್ಕೆ ಹೋದಾಗ ರಾಯಭಾರಿಯವರು ಎಲ್ಲಿಗೋ ಹೊರಗೆ ಹೋಗಿದ್ದರು. ತನ್ನಲ್ಲಿದ್ದ ಲಕೋಟೆಯನ್ನು ಎರಿಕಾ ಅಲ್ಲಿದ್ದ ಒಬ್ಬ ಅಧಿಕಾರಿಯ ಕೈಯಲ್ಲಿ ಕೊಟ್ಟು ಬಂದಳು. ಈ ರೀತಿ ಒಬ್ಬ ಕ್ಲಾರ್ಕನ ವಶ ಮೊಹರು ಮಾಡಿದ್ದ ಅತ್ಯಂತ ರಹಸ್ಯ ಹಾಗೂ ಅತಿ ಮಹತ್ವಪೂರ್ಣವಾದ ಪತ್ರವನ್ನು ಕೊಟ್ಟದ್ದು ಮಹಾ ಅನರ್ಥಕ್ಕೆ ಕಾರಣವಾಯಿತೆಂದು ಆಕೆಗೆ ಮನೆಗೆ ಬಂದ ನಂತರ ಹೊಳೆಯಿತು. ವಿಷಯ ಎಲ್ಲಿಯಾದರೂ ಬಹಿರಂಗವಾಗಿಬಿಟ್ಟರೆ ಅಸಹನೀಯವಾದ ವಿಪತ್ತು ಸರ್ವತ್ರ ಆವರಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಆ ರಾತ್ರಿ ಅವಳಿಗೆ ಸ್ವಲ್ಪವೂ ನಿದ್ರೆ ಬೀಳಲಿಲ್ಲ. ಬೆಳಕು ಹರಿಯುತ್ತಲೇ ಸರ್ ಸಿಂಹರ ಒಬ್ಬ ಆಳಿನ ಮೂಲಕ ಎರಿಕಾಳಿಗೆ ಒಂದು ಪತ್ರ ಬಂತು. ಅದರಲ್ಲಿ 'ನೀವು ಕಳುಹಿಸಿಕೊಟ್ಟ ಉಪಹಾರ ತಲ್ಪಿರುತ್ತದೆ; ಬಹಳ ಸಂತೋಷವಾಯಿತು. ದಯವಿಟ್ಟು ನನ್ನ ಹಾರ್ದಿಕ ಧನ್ಯವಾದವನ್ನು ತಿಳಿಸು. ನಾವು ಮಹತ್ವಪೂರ್ಣವಾದ ಈ ಕಾರ್ಯವನ್ನು ಚೆನ್ನಾಗಿ ಬಲ್ಲೆವು' ಎಂಬುದಾಗಿ ಆ ಪತ್ರದಲ್ಲಿ ಬರೆದಿತ್ತು. ಇದನ್ನೋದುತ್ತಲೇ ಹೋದ ಪ್ರಾಣ ತಿರುಗಿಬಂದಂತಾಯಿತವಳಿಗೆ. ಇದೆಲ್ಲವನ್ನೂ ತಿಳಿದ ಮಹಾರಾಜರು ಸಂತೋಷಾತಿಶಯದಿಂದ ಹಿಗ್ಗಿ ಡಾ॥ ಎರಿಕಾಳನ್ನು ಥಟ್ಟನೆ ಬಲವಾಗಿ ಬಿಗಿದಪ್ಪಿಕೊಂಡರು.

ಡಾಕ್ಟರ್ ಎರಿಕಾ ನೃತ್ಯಮಂದಿರ

ಮರುದಿನ ಎರಿಕಾ ಅರಮನೆಗೆ ಹೋದಾಗ ಅಲ್ಲಿಯ ವಾತಾವರಣವೇ ಅಪೂರ್ವವಾದ ಬದಲಾವಣೆಗೆ ಒಳಗಾಗಿತ್ತು. ಅಲ್ಲಿದ್ದ ಎಲ್ಲಾ ಪರಿವಾರದವರು ಅತ್ಯಂತ ಸುಂದರವಾದ ಉಡಿಗೆ ತೊಡಿಗೆ, ನಯನಾಕರ್ಷಕವಾದ ಅತ್ಯಮೂಲ್ಯ ಆಭರಣಗಳಿಂದ ಬಹು ವಿಧದ ಭಂಗಿಯಲ್ಲಿ ಅಲಂಕೃತರಾಗಿ ಸಿದ್ಧರಾಗಿದ್ದರು. ಪ್ರತಿಯೊಬ್ಬರೂ ಮೌನದ ಮುದ್ರೆಯಿಂದಿರುವುದು ಮತ್ತು ಅದಾವುದೋ ಒಂದು ರಹಸ್ಯವಾದ ಸಂಭವನೀಯ ಘಟನೆಯ ಕುರುಹು ಕಂಡುಬರುತ್ತಿತ್ತು. ಮಹಾರಾಜರು ಮತ್ತು ಮಹಾರಾಣಿ ಹಾಗೂ ರಾಜಕುಮಾರಿಯರು ಸಮಸ್ತರೂ ಸೇರಿ ಎರಿಕಾಳನ್ನು ಭೋಜನಶಾಲೆಗೆ ಕರೆದೊಯ್ದರು. ಸಂಭ್ರಮದ ಭೋಜನ ತೀರಿಸಿ ಎರಿಕಾ ಸಹಿತ ಅಲ್ಲಿಂದ ಮತ್ತೊಂದು ಕೊಠಡಿಯ ದ್ವಾರದಲ್ಲಿ ನಿಂತು, ಚಕ್ರರಾಣಿ ನಗುನಗುತ್ತ ಬಂದು ಒಂದು ಬೆಳ್ಳಿಯ ಬೀಗದಕೈಯನ್ನು ಡಾ॥ ಎರಿಕಾಳ ಕೈಯಲ್ಲಿರಿಸಿದರು. ಮಹಾರಾಜರ ಸಂಕೇತದ ಮೇರೆಗೆ ಆಕೆ ಬೀಗ ತೆರೆದು ಆ ಕೋಣೆಯ ಬಾಗಿಲು ತೆರೆದಳು. ಆ ಕೊಠಡಿಯು ದೇವಲೋಕದ ಅಪ್ಸರೆಯರ ನಾಟ್ಯಮಂದಿರವನ್ನು ನಾಚಿಸುವಂತಿತ್ತು. ಬಣ್ಣಬಣ್ಣದ ವಿದ್ಯುದ್ದೀಪಗಳು ಝಗಝಗಿಸುತ್ತ ಕಣ್ಣುಗಳಿಗೆ ಪರಮಾನಂದವನ್ನುಂಟುಮಾಡುತ್ತಿತ್ತು. ರೇಶ್ಮೆಯ ಬಟ್ಟೆಗಳಿಂದ ಆಸನಗಳೆಲ್ಲವೂ ಅಲಂಕರಿಸಲ್ಪಟ್ಟಿದ್ದವು. ಆಸರ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮುಂಭಾಗದ ಎತ್ತರದ ಸ್ಥಳದಲ್ಲಿ "ಡಾ. ಎರಿಕಾ ಡ್ಯಾನ್ಸ್ ಹೌಸ್ ಹಾಲ್" ಎಂದು ಬರೆಯಲ್ಪಟ್ಟಿತ್ತು; ದ್ವಾರ ತೆರೆಯುತ್ತಲೇ ಎಲ್ಲರೂ ಸಂತೋಷವನ್ನು ವ್ಯಕ್ತಪಡಿಸಿದರು. ಮಹಾರಾಜರು ಸಾಯಂಕಾಲದಲ್ಲಿ ಹೊರ ಸೂಸಿದ ಮುಗುಳು ನಗುವಿನ ಕಾರಣವೇನೆಂಬುದು ಈಗ ಎರಿಕಾಳಿಗೆ ಮನವರಿಕೆಯಾಯಿತು. ಅವಳು ತನ್ನ ಮನದೊಳಗೇನೇ ಪರಮಾನಂದ ಸಾಗರದಲ್ಲಿ ತೇಲಿಹೋದಳು. ಅಂದಿನ ಇಡೀ ರಾತ್ರಿ ಎರಿಕಾ ನೂತನವಾದ ಆ ನೃತ್ಯ ಮಂದಿರದಲ್ಲಿ ಅನುಪಮವಾದ ಆಕರ್ಷಣೀಯವಾದ ನರ್ತನ ಸಮಾರಂಭದೊಡನೆ ಆಮೋದಪ್ರಮೋದದಲ್ಲಿದ್ದಳು.

ನಿರ್ಗಮನ

ಡಾ. ಎರಿಕಾ ಇಷ್ಟೆಲ್ಲಾ ಕಾರ್ಯಕಲಾಪಗಳಲ್ಲಿ ತಲ್ಲೀನಳಾಗಿದ್ದರೂ ಕೂಡ ಮಹಾರಾಣಿಯ ಚಿಕಿತ್ಸೆಯಲ್ಲಿ ಎಳ್ಳಷ್ಟೂ ಉದಾಸೀನಳಾಗಿರದೆ ಬಹಳ ಎಚ್ಚರಿಕೆ ಮತ್ತು ವಿಶೇಷ ದಕ್ಷತೆಯಿಂದ ಚಿಕಿತ್ಸೆ ಮಾಡುತ್ತಿದ್ದಳು; ಇದರಿಂದಾಗಿ ಮಹಾರಾಣಿಯವರ ದೀರ್ಘ ಕಾಲದ ಕಾಯಿಲೆ ಸಂಪೂರ್ಣ ನಿವಾರಣೆಯಾಗಿ ಅವರು ಪೂರ್ಣ ಆರೋಗ್ಯವಂತೆಯಾದರು. ಇದು ಎಲ್ಲರಿಗೂ ಬಹಳ ಸಂತೋಷವನ್ನುಂಟುಮಾಡಿತ್ತು. ಚಿಕಿತ್ಸಾ ಕಾರ್ಯ ಸಂಪೂರ್ಣವಾಗಿ ಪರಿಸಮಾಪ್ತಿಯಾಯಿತು. ಆದರೂ ಕೂಡ ಮಹಾರಾಜರನ್ನು ಅತ್ಯಂತ ಕಠಿಣವಾದ ವಿಪತ್ತಿನಿಂದ ಪಾರುಗೊಳಿಸುವ ಅತಿ ರಹಸ್ಯವಾದ ಯೋಚನೆಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಕೆಲವು ವಾರ ಅಲ್ಲಿರಬೇಕಾಯಿತು. ಆದುದರಿಂದ ಚಿಕಿತ್ಸೆ ನಿಲ್ಲಿಸಿದ ಕೆಲವು ವಾರಗಳ ವರೆಗೆ ಮಹಾರಾಣಿಯವರ ದೇಹಪ್ರಕೃತಿಯಲ್ಲಿ ಏನಾದರೂ ಬದಲಾವಣೆ ಹೊಂದಿರುವುದೋ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಲಿಕ್ಕಾಗಿ ಹಾಗೂ ಫಕ್ಕನೆ ಮಹಾರಾಣಿಯ ಕಾಯಿಲೆ ಮರುಕಳಿಸದಂತೆ ಪರಿಶೀಲನೆ ನಡೆಸುವ ಕಾರಣವನ್ನು ಮುಂದಿರಿಸಿ ಡಾ। ಎರಿಕಾ ಕೆಲವು ವಾರಗಳ ತನಕ ನೇಪಾಳದಲ್ಲಿ ಉಳಿದಳು.

ಈ ರೀತಿ ಮತ್ತೆ ಕೆಲವು ವಾರಗಳು ಕಳೆಯಲು ಮಹಾರಾಣಿಯವರು ಸಂಪೂರ್ಣ ಸ್ವಸ್ಥಚಿತ್ತರಾದುದರಿಂದ ಇನ್ನೂ ಅಲ್ಲಿರಲಿಕ್ಕೆ ಡಾ। ಎರಿಕಾಳಿಗೆ ಸಾಧ್ಯವಿರಲಿಲ್ಲ; ನೇಪಾಳವನ್ನು ಬಿಡಲೇಬೇಕಾಯಿತು. ಕೊನೆಯ ದಿನ ಅಲ್ಲಿಂದ ಸಮಸ್ತರನ್ನು ಬೀಳ್ಕೊಳ್ಳುವಾಗ ಡಾ॥ ಎರಿಕಾಳ ಹೃದಯ ತುಂಬಿ ಬಂತು. ತನ್ನಲ್ಲಿ ನಿಮಿಷನಿಮಿಷಕ್ಕೂ ಉಕ್ಕೇರಿ ಬರುತ್ತಿದ್ದ ದುಃಖದ ಆವೇಗವನ್ನು ಎಷ್ಟು ಬಲವಾಗಿ ಅದುಮಿಕೊಂಡರೂ ಕೊನೆಗಂತೂ ಒಂದೆರಡು ಕಂಬನಿಯ ಬಿಂದುಗಳು ಭೂಮಿಗೆ ಬೀಳದಿರಲಿಲ್ಲ; ತನ್ನಂತಃಕರಣದೊಳಗಿನ ವಿಹ್ವಲತೆಯಿಂದಾಗಿ ಮಹಾರಾಜರಿಗಾಗಲೀ ಮತ್ತಿತರರಿಗಾಗಲೀ ಕೊನೆಯ ವಂದನೆಯನ್ನು ಸಲ್ಲಿಸಲಿಕ್ಕೂ ಅವಳಿಂದಾಗದೇ ಹೋಯಿತು. ಮಹಾರಾಜರಲ್ಲಿ ತನಗೆ ಗಾಢವಾಗಿ ನೆಲೆಗೊಂಡಿದ್ದ ಮಧುರ ಸ್ನೇಹಸಂಬಂಧವನ್ನು ಬಲವಂತವಾಗಿ ಕಡಿದೊಗೆದು ಬೇರವಾಗಿ ಅರಮನೆಯಿಂದ ಹೊರನಡೆದಳು.

ಅವಳ ಪ್ರಯಾಣದ ಎಲ್ಲ ಏರ್ಪಾಡುಗಳನ್ನು ರಾಯಭಾರಿ ಸರ್ ಸಿಂಹರು ಮೊದಲೇ ಮಾಡಿದ್ದರು. ಆ ಪ್ರಕಾರ ಆಕೆ ಸಿಮ್ಲಕ್ಕೆ ತಲ್ಪಿದಳು. ಅಲ್ಲಿ ಮುಟ್ಟಿದ ಮೇಲೆ ಮಹಾರಾಜರೊಂದಿಗೆ ಪತ್ರವ್ಯವಹಾರಕ್ಕೆ ತೊಡಗಿದಳು. ಕೆಲವು ವಾರಗಳ ವರೆಗೆ ರಿಜಿಸ್ಟರ್ ಮೂಲಕ ಪತ್ರಬರೆದಳು, ಆದರೆ ಪ್ರತಿಯೊಂದು ಪತ್ರವೂ ಈ ರೀತಿಯಲ್ಲಿ ಬರುತ್ತಿರುವುದರಿಂದ ಸಂಶಯಕ್ಕೆ ಕಾರಣವಾಗಬಹುದೆಂದು ಭಾವಿಸಿ ಸಾಧಾರಣ ರೀತಿಯಲ್ಲಿಯೇ ಪತ್ರಬರೆಯಲುಪಕ್ರಮಿಸಿದಳು. ಆವಳ ಪತ್ರಗಳಿಗೆ ಮಹಾರಾಜರಿಂದ ಬಹಳ ವಿಳಂಬವಾಗಿ ಉತ್ತರ ಬರುತಿತ್ತು. ಇದರ ಮುಖ್ಯ ಕಾರಣವೇನೆಂದರೆ ಅವಳ ಪತ್ರಗಳು ಮೂರು-ನಾಲ್ಕು ವ್ಯಕ್ತಿಗಳ ಮುಖಾಂತರ ಮಹಾರಾಜರ ಕೈ ಸೇರಬೇಕಾಗಿದ್ದುದು ಆಕೆಗೆ ಮೊದಲೇ ತಿಳಿದಿತ್ತು. ಮಹಾರಾಜರ ಕುರಿತಾಗಿ ಭಾರತ ಸರಕಾರದ ಆದೇಶದ ಬಗ್ಗೆ ಆಕೆ ನಿರಂತರ ಚಿಂತಿತಳಾಗಿದ್ದಳು. ಕಟ್ಟಕಡೆಗೊಂದು ದಿನ ಮಹಾರಾಜರಿಂದ ಬಂದ ಒಂದು ಪತ್ರ "ಹಕ್ಕಿ ಈ ದಿವಸ ಬಂತು. ಡಾಕ್ಟರರು ಕಳುಹಿರುವ ಪುಷ್ಪವನ್ನು ತಂದುಕೊಟ್ಟಿತು. ಬೀಜವನ್ನು ಬಿತ್ತಿ ಗಿಡವನ್ನು ಹಸನಾಗಿ ಬೆಳೆಸಿ ಸಂರಕ್ಷಣೆ ಮಾಡಿದ ಸ್ತ್ರೀ ನೀನೇ ಧನ್ಯಳು. ಪುಷ್ಪವು ಅತಿ ಸುಂದರ ಹಾಗೂ ಸುಗಂಧ ಪೂರ್ಣವಾಗಿದೆ. ನಾನು ಮಾತ್ರವಲ್ಲ ನನ್ನ ಸಮಗ್ರ ಪರಿವಾರ ನಿನಗೆ ಅತ್ಯಂತ ಹಾರ್ದಿಕ ಧನ್ಯವಾದಗಳನ್ನರ್ಪಿಸುತ್ತದೆ; ಗಿಡವನ್ನು ನೀನು ಅದೆಷ್ಟು ಜತನದಿಂದ ಪೋಷಣೆ ಮಾಡಿರುತ್ತೀ ಎಂದರೆ ಅದು ಎಲ್ಲಾ ವಿಧಗಳ ಕಂಟಕಕಾರಕವಾದ ಕ್ರಿಮಿಕೀಟಗಳ ಬಾಧೆಯಿಂದ ಸುರಕ್ಷಿತವಾಗಿ ಬೆಳೆದಿದೆ." ಎಂಬುದಾಗಿ ದ್ವಯಾರ್ಥದಲ್ಲಿ ಬರೆಯಲ್ಪಟ್ಟಿತ್ತು.

ಡಾ। ಎರಿಕಾ ಈ ಪತ್ರವನ್ನು ಓದಿ ಪರಮಾನಂದಭರಿತಳಾದಳು. ಅಂದಿನ ಸಂತೋಷಾತಿಶಯವನ್ನು ತನ್ನ ಮನಮಂದಿರದೊಳಗೆ ಬಚ್ಚಿಡಲಾರದೆ ಹೋದಳು. ಆದರೆ ತನ್ನಲ್ಲಿ ಉಕ್ಕೇರುತ್ತಿರುವ ಈ ಸಂತೋಷವನ್ನು ಯಾರೊಡನೆಯಾದರೂ ಪ್ರಕಟಪಡಿಸಲಿಕ್ಕೆ ಸಹ ಅವಳಿಗೆ ಕಷ್ಟವಾಗಿ ಪರಿಣಮಿಸಿತು. ಭಾಗ್ಯವಶಾತ್ ಸರ್ದಾರ್ ಸುರಜೀತ್ ಸಿಂಗರು ಸಿಮ್ಲಾದಲ್ಲಿಯೇ ವಾಸವಾಗಿರುತ್ತಿದ್ದರು. ಎರಿಕಾ ಅವರ ಭೇಟಿ ಮಾಡಿ ಕೃತಾರ್ಥಳಾದಳು. ಸರ್ದಾರರು ಹಿಂದೂಸ್ಥಾನಕ್ಕೆ ನೇಪಾಳದ ಸಾರ್ವಭೌಮರಿಗೋಸ್ಕರ ಅತಿ ಮಹತ್ವಪೂರ್ಣವಾದ ಕಾರ್ಯ ಸಾಧಿಸಿದ್ದರು. ನೇಪಾಳಿ ರಾಜ್ಯ ಕಾಂಗ್ರೆಸಿನೊಡನೆ ಸಂಪರ್ಕ ಬೆಳೆಸಿಕೊಂಡು ನೇಪಾಳದಲ್ಲಿ ಮಹಾರಾಜರ ನೇತೃತ್ವದಲ್ಲಿ ಪ್ರಜಾರಾಜ್ಯ ಸ್ಥಾಪನೆಗಾಗಿ ಅಸ್ತಿವಾರ ಹಾಕಿದ್ದರು. ಈ ಎಲ್ಲಾ ರಹಸ್ಯಮಯ ಕಾರಸ್ಥಾನ ಯಾವ ವಿಧದಿಂದಲೂ ಬಹಿರಂಗವಾಗದಂತೆ ಬಹಳ ಎಚ್ಚರಿಕೆಯಿಂದಿರಬೇಕೆಂದು ಡಾ. ಎರಿಕಾಳಿಗೆ ವಿಶೇಷ ಎಚ್ಚರಿಕೆ ಕೊಟ್ಟಿದ್ದರು. ಮಹಾರಾಜರ ಕುರಿತು ಯಾರೊಬ್ಬರೊಡನೆಯೂ ಚಕಾರ ಶಬ್ದವನ್ನೆತ್ತಕೂಡದೆಂದು ಆಜ್ಞಾಪಿಸಿದ್ದರು.

ಸ್ತ್ರೀ ಹೃದಯದ ದೌರ್ಬಲ್ಯವನ್ನು ತಡೆಹಿಡಿದವರಾರು! ಪ್ರಕೃತಿಯೇ ಸ್ತ್ರೀಯರನ್ನು ತನ್ನಂತೆ ಚಂಚಲೆಯರನ್ನಾಗಿ ನಿರ್ಮಿಸಿರುತ್ತದೆ. ಅವಳು ತನ್ನ ಮನಸ್ಸನ್ನು ಅದೆಷ್ಟು ಬಲವಾಗಿ ಬಿಗಿಹಿಡಿದರೂ ಪಟಿಯಾಲದ ಮಹಾರಾಜರಲ್ಲಿ ಮತ್ತು ಮಹಾರಾಣಿಯವರಲ್ಲಿ ಎಲ್ಲವನ್ನೂ ಹೇಳಿಯೇ ಬಿಟ್ಟಳು. ಅದೃಷ್ಟವಶಾತ್ ಚೀನೀಯರು ಅಷ್ಟರ ತನಕ ಟಿಬೇಟಿಗೆ ಕಾಲಿಟ್ಟಿರಲಿಲ್ಲ; ಮತ್ತು ಹಿಮಾಲಯ ಪ್ರದೇಶವೆಲ್ಲಾ ಗುಪ್ತಚರರಿಂದ ಆವೃತವಾಗಿತ್ತು. ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಏನೆಲ್ಲಾ ನಡೆಯುತ್ತಿತ್ತೆಂಬುದು ಅದರ ಹೊರಗಿನ ಒಬ್ಬ ಮನುಷ್ಯನಿಗೂ ಕೂಡ ಗೊತ್ತಾಗುತ್ತಿರಲಿಲ್ಲ. ಸಿಮ್ಲಾದಲ್ಲಿರುವ ಒಬ್ಬ ಸಾಮಾನ್ಯ ಆಂಗ್ಲ ಮಹಿಳೆ ನೇಪಾಳದ ರಾಜಕೀಯದ ರಂಗಮಂಚದಲ್ಲಿ ಪ್ರಧಾನ ನಾಯಕಿ ಚದುರಂಗದ ಪಗಡೆ ಬಿಸಾಡಿ ಮಹಾರಾಜರ ಕೊರಳಿಗೆ ಜಯಮಾಲೆಯನ್ನು ಹಾಕುವುದೊಂದೇ ಉಳಿದಿತ್ತು.

ಈ ಮಧ್ಯದಲ್ಲಿ ಡಾ। ದಾಸಗುಪ್ತರು ಅಲ್ಲಿಂದ ವರ್ಗಾಯಿಸಲ್ಪಟ್ಟ ಕಾರಣ ಇನ್ನು ಮುಂದಕ್ಕೆ ಪತ್ರ ಬರೆಯಕೂಡದೆಂಬುದರ ಕುರಿತಾಗಿ ಸಾಂಕೇತಿಕವಾಗಿ ಒಂದು ತಂತಿವಾರ್ತೆ ಡಾ। ಎರಿಕಾಳಿಗೆ ಬಂತು. ಇಷ್ಟರೊಳಗಾಗಿ ಕೆಲವು ಪತ್ರಗಳು ಮಹಾರಾಜರ ಬಗ್ಗೆ ಅಲ್ಲಿಗೆ ಹೋಗಿದ್ದವು. ಆದುದರಿಂದಾಗಿ ಆ ಪತ್ರಗಳು ಸಂಬಂಧಪಟ್ಟವರಿಗೆ ತಲ್ಪಿಲ್ಲವಾದರೆ ಅವೆಲ್ಲವನ್ನೂ ಕೂಡಲೇ ಹಿಂದಕ್ಕೆ ರವಾನಿಸಿರೆಂದು ಅಲ್ಲಿಯ ಪೋಸ್ಟುಮಾಸ್ತರರಿಗೆ ಬರೆದುದಲ್ಲದೆ ಮಹಾರಾಜರಿಂದಲೂ ಒಂದು ಪತ್ರ ಮುಖೇನ "ಇನ್ನು ಮುಂದಕ್ಕೆ ಪತ್ರವ್ಯವಹಾರ ಮಾಡಬೇಡ" ಎಂಬ ಸೂಚನೆಯೂ ಬಂತು. ಈ ಎಲ್ಲಾ ಘಟನೆಗಳಿಂದಾಗಿ ಡಾ। ಎರಿಕಾ ಹಗಲೂ-ರಾತ್ರಿ ಬಹಳ ಚಿಂತಾಕ್ರಾಂತಳಾಗಿದ್ದಳು. ತಾನು ಬರೆದಿರುವ ಪತ್ರಗಳು ಯಾವ ಅಧಿಕಾರಿಯ ಕೈ ಸೇರಿತೋ ಎಂಬ ಭಯದಿಂದ ಆಕೆ ಪೀಡಿತಳಾಗಿ ಒಂದು ವಿಧ ಭ್ರಾಂತಳಂತಿದ್ದಳು. ಕೊನೆಗೆ ಮೂರು ವಾರಗಳು ಕಳೆದ ನಂತರ ಅಲ್ಲಿಯ ಪೋಸ್ಟುಮಾಸ್ತರರು "ಎಲ್ಲಾ ಪತ್ರಗಳೂ ಸಂಬಂಧಪಟ್ಟವರಿಗೇನೇ ತಲ್ಪಿವೆ" ಎಂದು ತಂತಿ ಮೂಲಕ ತಿಳಿಸಿದುದರಿಂದ ಡಾ। ಎರಿಕಾಳಿಗೆ ಸತ್ತು ಬದುಕಿದಂತಾಯಿತು.

ಮುಂದಕ್ಕೆ ದೊರಕಲಿರುವ ಶುಭ ಸಮಾಚಾರವನ್ನು ಅವಳು ಬಹಳ ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದಳು. "ನೇಪಾಳದ ಮಹಾರಾಜರು ತನ್ನ ಎಲ್ಲಾ ಪರಿವಾರ ಸಹಿತ ಭಾರತ ಸರಕಾರದ ದೂತಾವಾಸದಲ್ಲಿ ಆಶ್ರಯ ಪಡೆದಿರುತ್ತಾರೆ" ಎಂಬುದಾಗಿ ಒಂದು ದಿನ ಆಕಸ್ಮಾತ್ತಾಗಿ ತಿಳಿದುಬಂತು. ಮರುದಿನ ಎರಡನೆಯ ಸೂಚನೆಯಿಂದ, "ಮಹಾರಾಜರು ತನ್ನ ಪರಿವಾರದೊಂದಿಗೆ ದಿಲ್ಲಿಗೆ ಹೊರಟು ಹೋದರು" ಎಂಬುದಾಗಿ ತಿಳಿದು ಬಂತು.

ಡಾಕ್ಟರ್ ಎರಿಕಾಳ ಘೋರ ಪರಿಶ್ರಮವು ಸಂಪೂರ್ಣವಾಗಿ ಜಯಶೀಲವಾಯಿತು. ನೇಪಾಳದ ರಾಜಕೀಯ ಹಾಗೂ ರಾಜಮನೆತನದ ಅದ್ಭುತಕರವಾದ ಇತಿಹಾಸದಲ್ಲಿ ಒಂದು ನವೀನ ಅಧ್ಯಾಯವನ್ನು ನಿರ್ಮಾಣ ಮಾಡಿದ ಚರಿತ್ರಾರ್ಹವಾದ ಅಪೂರ್ವ ಶ್ರೇಯಸ್ಸು "ಡಾ। ಎರಿಕಾ ಲಿಯೂಶ್ಟಾಗ್"ಗೆ ಲಭಿಸಿತು. ಮಹಾರಾಜಾ ತ್ರಿಭುವನರ ಮಾತಿನಲ್ಲಿಯೇ ಹೇಳುವುದಾದರೆ "ಡಾಕ್ಟರ್ ಎರಿಕಾ ನೆಟ್ಟಿರುವ ಮರ ಇಂದು ನಮಗೆ 'ಪೂರ್ಣ ಸ್ವಾತಂತ್ರ್ಯ'ವೆಂಬ ಫಲವನ್ನು ಒದಗಿಸಿ ಕೊಟ್ಟಿತು" ಎಂಬುದರಲ್ಲಿ ಸಂದೇಹವಿಲ್ಲ.

ಕೊನೆಗೇನಾಯಿತು ?

ಆದರೆ ಇಂತಹ ಅಮೂಲ್ಯವಾದ ಬೀಜವನ್ನು ಬಿತ್ತಿ ಅದನ್ನು ಬಹಳ ಸಾಹಸ ಹಾಗೂ ಜತನದಿಂದ ಬೆಳೆಸಿ ತನ್ನ ಕೈಯಿಂದಲೇ ಎಂದೆಂದಿಗೂ ಮರೆಯಲಾಗದಂತಹ ಫಲವನ್ನು ತಂದು ಮಹಾರಾಜರಿಗೆ ಒಪ್ಪಿಸಿದ ತೋಟಗಾರ್ತಿ (ಡಾ। ಎರಿಕಾಳಿಗೆ) ದೊರೆತ ಪುರಸ್ಕಾರವಾದರೂ ಏನು? ಸತ್ಸಾಹಸ, ತ್ಯಾಗಪೂರಿತ ಬಲಿದಾನಕ್ಕೆ ದೊರೆತ ಪ್ರತಿಫಲ ಸಂತಸದಿಂದ ತುಂಬಿದ ಕಣ್ಣೀರ ಹನಿ ಹೊರತು ಮತ್ತೇನಾದರೂ ದೊರಕಿತೇ? ಒಂದು ದಿನ ತ್ರಿಭುವನರು ಸಂಪೂರ್ಣ ಅಧಿಕಾರ ಪಡೆದು ಮಹಾರಾಜ ಪದವಿಯಲ್ಲಿ ಸಿಂಹಾಸನಾರೂಢರಾದರು. ಆದರೆ ಇದರ ಸಲುವಾಗಿ ಪ್ರಾಣದ ಹಂಗುದೊರೆದು ಪ್ರಧಾನ ಪಾತ್ರ ವಹಿಸಿ ಅಭೂತಪೂರ್ವ ಸಾಹಸ ಮತ್ತು ತ್ಯಾಗದಿಂದ ಕೊನೆತನಕ ದುಡಿದ ಡಾಕ್ಟರ್ ಎರಿಕಾ ಒಬ್ಬ ವಿದೇಶೀಯ ಸಾಮಾನ್ಯ ಮಹಿಳೆಯಾಗಿಯೇ ಉಳಿದಳು.

ನೊಂದ ಮನಸ್ಸು ಹಿಂದೆ ಹೋಯಿತು

ಡಾ। ಎರಿಕಾಳ ಅತಿ ಕಠಿಣವಾದ ಪರಿಶ್ರಮ ಪರಿಪೂರ್ಣವಾಗಿ ಯಶಸ್ವಿಯಾಯಿತು. ಅವಳ ಮನಸ್ಸು ಎಷ್ಟು ಆನಂದಮಯವಾಗಿತ್ತೋ ಅದಕ್ಕಿಂತ ಸಹಸ್ರ ಪಾಲು ವೇದನೆಗೊಳಗಾಗಿ ಛಿದ್ರ ಛಿದ್ರವಾಗಿ ಹೋಯಿತು. ತಾನು ಇಷ್ಟೆಲ್ಲಾ ಘೋರ ಪರಿಶ್ರಮವಹಿಸಿ ಅತಿ ಕಠಿಣವಾದ ಹಾಗೂ ಯಾರಿಂದಲೂ ಕೈಗೂಡದಂತಹ ಕಾರ್ಯವನ್ನು ಸಾಧಿಸಿಕೊಟ್ಟರೂ ಎಲ್ಲವೂ ಫಲಕಾರಿಯಾದ ನಂತರ ತಾನು ಈ ರೀತಿ ಕ್ಷಣದೊಳಗಾಗಿ ಉಪೇಕ್ಷಿಸಲ್ಪಟ್ಟುದನ್ನು ತಿಳಿದು ದುಃಖವನ್ನು ಸಹಿಸಲಾರದೆ ನೊಂದ ಮನಸ್ಸಿನಿಂದ ಲಂಡನಿಗೆ ಹಿಂದೆ ಹೋದಳು.

ಇತ್ತ ಮಹಾರಾಜಾ ತ್ರಿಭುವನರು ಸಹ ಕೆಲವೇ ಸಮಯದ ವರೆಗೆ ರಾಜವೈಭವದ ಸುಖವನ್ನುಂಡು ಸ್ವಾರ್ಥ ಹಾಗೂ ಮಾತ್ಸರ್ಯಭರಿತವಾದ ಈ ಪ್ರಪಂಚವನ್ನು ಬಿಟ್ಟು ಪರಂಧಾಮವನ್ನೈದಿದರು. ಮರಣ ಶಯ್ಯೆಯಲ್ಲಿ ಮಲಗಿದ್ದ ಅಂತಿಮ ಘಳಿಗೆಯಲ್ಲಿ ಮಹಾರಾಜರ ಮನಮಂದಿರದಲ್ಲಿ "ಡಾಕ್ಟರ್ ಎರಿಕಾಳಂತಹ ಪರೋಪಕಾರಿಣಿ, ತ್ಯಾಗಿ, ನಿರ್ಭೀಕ ಹಾಗೂ ಅಪೂರ್ವ ಸಾಹಸಿ ಮಹಿಳೆ ತನಗೆ ದೊರಕದಿರುತ್ತಿದ್ದರೆ ಈ ಜನ್ಮದಲ್ಲಿ ನಾನು ರಾಣಾ ಸಮುದಾಯದ ನರಕ ಪಂಜರದಿಂದ ಮುಕ್ತನಾಗುತ್ತಿದ್ದನೇ? ನನಗಾಗಿ ತನ್ನ ಪ್ರಾಣವನ್ನು ಅಂಗೈಯಲ್ಲಿರಿಸಿಕೊಂಡು ದುಡಿದು ಬೆಂಡಾದ ಆ ಮಹಾ ಸಾಧ್ವಿಗೆ ಅಂತ್ಯದಲ್ಲಿ ನನ್ನಿಂದ ದೊರೆತ ಪ್ರತ್ಯುಪಕಾರವಾದರೂ ಏನು?" ಎಂಬ ನಿಗೂಢವಾದ ಒಂದು ಪ್ರಶ್ನೆ ಮಾತ್ರ ಅಚ್ಚಳಿಯದೆ ನೆಲೆನಿಂತಿತ್ತು.

(ಮುಗಿಯಿತು)

ಜಯಪ್ರಕಾಶ ನಾರಾಯಣರ ಜರಿದಾಟ

(ಐದನೇ ಪುಟದಿಂದ)

ರೆಂಬುದಕ್ಕೆ ಚರಿತ್ರೆಯೇ ಜೀವಂತ ಸಾಕ್ಷಿ. ನಾವು ಸಿಂಹದಂತೆ ತಲೆಯೆತ್ತಿ ನಿಂತಲ್ಲಿ ಮಾತ್ರ ರಾಷ್ಟ್ರೈಕ್ಯ ಸಾಧ್ಯ. ಮಹಮ್ಮದೀಯರ ಮತ್ತು ಕ್ರಿಸ್ತೀಯರ ಬಳಿ ಮಂಡಿಯೂರಿ ರಾಷ್ಟ್ರೈಕ್ಯದ ಭಿಕ್ಷೆಯನ್ನು ಯಾಚಿಸಬೇಕಾಗಿಲ್ಲ. ಹಿಂದೂಗಳು ಒಂದಾದಲ್ಲಿ ಅವರು ತಾವಾಗಿಯೇ, ಗಂಗಾ ನದಿಯೊಂದಿಗೆ ಇತರ ಕಾಲುವೆಗಳು ಬಂದು ಕೂಡುವಂತೆ ನಮ್ಮೊಡನೆ ಬಂದು ಸೇರುತ್ತಾರೆ.

ಶ್ರೀ ಜಯಪ್ರಕಾಶ ನಾರಾಯಣಜೀಯವರು ಸ್ವಲ್ಪ ಸಮಯ ಅವರು ಚೆನ್ನಾಗಿಯೇ ಇದ್ದರು. ಪುನಃ ಅವರಿಗೆ ಹಳೆಯ ಅಭ್ಯಾಸ ಮರುಕಳಿಸುತ್ತದೆ.

ಇಂಡಿಯಾದಲ್ಲಿರುವ ಕ್ರಿಶ್ಚಿಯನರು ಮತ್ತು ಮಹಮ್ಮದೀಯರು ಅವರ ರಕ್ತ, ರೂಪ, ಜೀವನ ವಿಧಾನ, ಜಾತಿಬೇಧ, ಭಾಷೆ, ಸಾಹಿತ್ಯ, ಕಲೆ, ತತ್ವಜ್ಞಾನ ಮತ್ತು ಭೌತಿಕ ಕಲಾಚಾರದಲ್ಲಿ ಬಹುತೇಕ ಇಂಡಿಯನರೇ ಇದ್ದಾರೆಂಬುದು ಶ್ರೀ ಜಯಪ್ರಕಾಶ ನಾರಾಯಣರ ನಂಬಿಕೆ. ರಕ್ತದ ವಿಷಯವನ್ನು ಬಿಟ್ಟಲ್ಲಿ ಇತರ ವಿಷಯಗಳ ಕುರಿತು ಹೇಳದಿರುವದೇ ಒಳ್ಳೆಯದು. ಭಾಷೆಯ ವಿಷಯ ಹೇಳುವದಿದ್ದಲ್ಲಿ ದೇವನಾಗರಿ ಲಿಪಿಯನ್ನು ತಲೆಕೆಳಗೆ ಮಾಡಿ ಬಲದಿಂದ ಎಡಕ್ಕೆ ಬರೆದಲ್ಲಿ ಉರ್ದು ಆಗುತ್ತದೆಂದು ಹೇಳಲಾಗುತ್ತದೆ. ಅದಕ್ಕಿಂತಲೂ ಕಾಶ್ಮೀರದಲ್ಲಿರುವ ಮಹಮ್ಮದೀಯನಾದರೂ ಸರಿ, ಕನ್ಯಾಕುಮಾರಿಯಲ್ಲಿರುವ ಮುಸಲ್ಮಾನನಾದರೂ ಸರಿ, ಅವರು ಉರ್ದು ಭಾಷೆಯನ್ನೇ ಆಡುತ್ತಾರೆ! ಆಯಾಯ ಸ್ಥಳದ ಭಾಷೆಯ ಮೇಲೆ ಅವರಿಗಷ್ಟು ಅಭಿಮಾನ ಇರುವದಿಲ್ಲ. ಕ್ರಿಶ್ಚಿಯನರು ಹೆಚ್ಚಾಗಿ ಸ್ಥಳೀಯ ಭಾಷೆಗಳನ್ನಾಡುತ್ತಿರಾದರೂ ಆಂಗ್ಲ ಭಾಷೆಯ ಮೇಲೆ ಹಾಗೂ ಫ್ರೆಂಚ್ ಮತ್ತು ಪೋರ್ಚುಗೀಸ್ ಭಾಷೆಗಳ ಮೇಲೆ ಅವರಿಗೆ ವಿಶೇಷ ಅಭಿಮಾನ ಇರುವದನ್ನು ಕಂಡುಕೊಳ್ಳಬಹುದು. ಅವರಲ್ಲಿರುವ ಎಂಗ್ಲೋಇಂಡಿಯನರ ವಿಷಯ ಹೇಳದಿರುವದೇ ಒಳ್ಳೆಯದು. ಈಗ ಆಳ್ವಿಕೆ ನಡೆಸುತ್ತಿರುವ ಆಂಗ್ಲೇಯರೆಂದೇ ಅವರಿನ್ನೂ ಭಾವಿಸಿಕೊಂಡಿರುವಂತಿದೆ. ಆಂಗ್ಲಭಾಷೆಯನ್ನು ಅಧಿಕಾರದ ಸ್ಥಾನದಿಂದ ಕೆಳಕ್ಕಿಳಿಸಬೇಕೆಂದು ಸ್ವರ ಕೇಳಬಂದಾಗ ಅದನ್ನೆದುರಿಸುವದು ಕಾನ್ವೆಂಟ್ ಶಾಲೆ ಹಾಗೂ ಇಗರ್ಜಿಗಳೆನ್ನುವದನ್ನು ಅಷ್ಟು ಬೇಗನೆ ಮರೆತು ಬಿಡಲು ಸಾಧ್ಯ ಆಗಲಾರದು. ಏನೇ ಇರಲಿ, ಅದನ್ನು ಬಹುತೇಕ ಇಂಡಿಯನೆಂದು ಶ್ರೀ ಜಯಪ್ರಕಾಶರು ಹೇಳಲು ಕಾರಣವೇನು? ಇಂಡಿಯನೆಂದು ಇಲ್ಲೇನಿದೆ. ಅವರಲ್ಲಿರುವ ರಕ್ತವು ಹಿಂದೂ ರಕ್ತವಿದೆಯೆಂದಲ್ಲಿ ಅವರಿಗೆ ಕೋಪ ಬರುತ್ತದೇಕೆ? ಶ್ರೀ ಜಯಪ್ರಕಾಶ ನಾರಾಯಣರಿಗೆ ಆ ಭಯ ಇದ್ದೇ ಇದೆ. ಮಹಾತ್ಮಾಜೀಯವರ ಕುರಿತು ಅತಿ ಅಭಿಮಾನ! ಕೊಲೆಗಡುಕ ಮುಸಲ್ಮಾನನು ಗಾಂಧೀಜಿಯವರಿಗಿಂತಲೂ ಶ್ರೇಷ್ಠನು! ಇದಕ್ಕಿಂತ ಒಳ್ಳೆಯ ಪ್ರಶಸ್ತಿ ಪತ್ರ ಬೇಕೇನು? ಮಹಾತ್ಮಾಜೀಯವರ ಮಹತ್ವವೇ ಅದಾದಲ್ಲಿ ಇನ್ನು ಪಾಮರರ ವಿಷಯ ಕೇಳಬೇಕೇನು? ಈ ಭಯದಿಂದಲೇ ಶ್ರೀ ಜಯಪ್ರಕಾಶರು ಜಾಗರೂಕತೆಯಿಂದ ಇಂಡಿಯನ್ನರೆಂಬ ಪದವನ್ನುಪಯೋಗಿಸಿದ್ದಾರೆ. ಇಷ್ಟು ಅವರಲ್ಲಿರುವ ರಕ್ತವು ಹಿಂದೂ ರಕ್ತವಾದಲ್ಲಿ ಅವರೇತಕ್ಕೆ ಹಿಂದೂ ರಾಷ್ಟ್ರಕ್ಕೆ ಶತ್ರುಗಳಾಗುತ್ತಾರೆ? ಇತರ ಕೆಲ ಮುಖಂಡರಲ್ಲಿರುವಂತೆ ಶ್ರೀ ಜಯಪ್ರಕಾಶಜೀಯವರ ಮನಸ್ಸಿನಲ್ಲಿನ್ನೂ ತಾವು ಕೀಳ್ತರದವರೆಂಬ ಗುಲಾಮ ಮನೋಭಾವನೆ ಮನೆಮಾಡಿಕೊಂಡಿದೆ. ಕ್ರಿಸ್ತೀಯರೂ ಮಹಮ್ಮದೀಯರೂ ನಮ್ಮನ್ನು ಆಳಿಕೊಂಡಿದ್ದವರು, ನಾವು ಗುಲಾಮರಾಗಿದ್ದವರು. ಅವರಿಗೆ ಕೋಪ ಬರಿಸಬಾರದು, ಅವರು ಆಳುವದಕ್ಕಾಗಿಯೇ ಇದ್ದಾರೆ ನಾವು ಗುಲಾಮರಾಗಿರಲಿಕ್ಕಾಗಿಯೇ ಇರುವವರು! ಆದುದರಿಂದ ಅವರನ್ನು 'ಹಿಂದೂ'ಗಳನ್ನಾಗಿ ಕರೆಯಬಾರದು! ಎಂತಹ ಸಮತಾವಾದಿಗಳಿವರು.!

ಸಮಾಜದಲ್ಲಿರುವ ವ್ಯಕ್ತಿಯು ತನ್ನ ಮತವನ್ನು ಅನುಸರಿಸುವಂತೆ, ಅದನ್ನೇ ಅತ್ಯುತ್ತಮವಾದುದೆಂದು ಹೇಳುವುದರೊಂದಿಗೆ ಇತರ ಮತಗಳನ್ನು ಗೌರವಿಸಬೇಕು ಮತ್ತು ಸಹನಶೀಲ ನಾಗಿರಬೇಕೆಂಬುದು ಶ್ರೀ ಜಯಪ್ರಕಾಶಜೀಯವರು ಒಗ್ಗಟ್ಟಿಗಾಗಿ ಕಂಡು ಹಿಡಿದಿರುವ ಸೂತ್ರ. ಅವರ ಮಾತನ್ನೇ ತೆಗೆದುಕೊಂಡರೂ ಕೂಡಾ ಅತ್ಯುತ್ತಮ ಮನುಷ್ಯನ ಕೂಡಾ ಬಿಕಾರಿಯನ್ನು ಗೌರವಿಸಲು ಸಾಧ್ಯವೇನು? ನೈಜತೆಯ ನೋಟದಿಂದ ನೋಡಬೇಕು, ವೇದಿಕೆಯ ಮೇಲಿನ ಭಾಷಣದ ಬಿಗುತ್ವದಿಂದಲ್ಲ. ಕ್ರಿಸ್ತೀಯರು ಬಾಯಿಬಲನ್ನು ನಂಬುತ್ತಾರೆ, ಮಹಮ್ಮದೀಯರು ಖುರಾನನ್ನು ನಂಬುತ್ತಾರೆ. ಈ ಮತೀಯ ಕೃತಿಗಳು ಏನು ಹೇಳುತ್ತವೆ? ಅನ್ಯರನ್ನು ಬಾಳಲು ಬಿಡುತ್ತವೆ ಏನು? ಈ ವಿಷಯವನ್ನು "ನವಯುಗ"ವು ಆದಾಗಲೇ ಧೈರ್ಯದಿಂದ ತನ್ನ ವಾಚಕಾಭಿಮಾನಿಗಳೆದುರು ಇಟ್ಟಿರುತ್ತದೆ. ಶ್ರೀ ಜಯಪ್ರಕಾಶ ನಾರಾಯಣರಿಗೆ ಕನ್ನಡ ಬರುತ್ತಿದ್ದು, ಅವರು "ನವಯುಗ"ವನ್ನು ಓದುವವರಾದಲ್ಲಿ ಇಂತಹ ಮಾತುಗಳನ್ನಾಡುತ್ತಿರಲಿಲ್ಲ. ಹಾಗಿದ್ದರೂ ಊರಿಗೆ ಉಪದೇಶ ಕೊಡುವದು ಕೆಲವರಿಗೆ ಆಳವಾಗಿ ಅಂಟಿರುವ ಅಭ್ಯಾಸವಿದೆ. ಶ್ರೀ ಜಯಪ್ರಕಾಶ ನಾರಾಯಣರು ಆ ಸಾಲಿನ ಅಗ್ರೇಸರರಿದ್ದಾರೆ. ಅವರದಕ್ಕೆ ಅದ್ವಿತೀಯ ಮಹಾನಾಯಕ.

ಅನಂತರ ಅವರು ಪೂನಾದಲ್ಲಿ ಮಾತಾಡುತ್ತ, ಮುಸಲ್ಮಾನರು ಮತ್ತು ಕ್ರಿಸ್ತೀಯರು ಆಕ್ರಮಣಗಾರರಿದ್ದು, ಹಿಂದೂಗಳು ಕೂಡ ಈ ಮಣ್ಣಿನ ಮಕ್ಕಳಿದ್ದಾರೆನ್ನುವುದು ಅಪಾಯಕಾರಿ ತತ್ವವಿದೆ, ಇದು ದೇಶದ ಯುವಕರ ಮನಸ್ಸನ್ನು ವಿಷಪೂರಿತ ಗೊಳಿಸುತ್ತಿದೆಯೆಂದು ಸೂಚಿಸಿದ್ದಾರೆ. ಇಂತಹ ಸತ್ಯವನ್ನೆನ್ನುವದು ಅಪಾಯಕಾರಿ ಸೂಚನೆ ಏನು? ಅವರು ಆಕ್ರಮಣಕಾರಿಗಳಲ್ಲವೇನು? ಹಿಂದೂಗಳು ಇಲ್ಲಿಯ ಪ್ರಜೆಗಳಲ್ಲವೇನು?

ಇವರ ದೃಷ್ಟಿಯಲ್ಲಿ ರಾವಣನು ಆಕ್ರಮಣಕಾರಿಯಲ್ಲ. ರಾಮನು ಆಕ್ರಮಣಕಾರಿ. ಯಜ್ಞ-ಯಾಗಾದಿಗಳಿಗೆ ಭಂಗತರುತ್ತಿದ್ದಾಗಲೂ, ತಪಸ್ಸಿಗೆ ತಡೆಯನ್ನುಂಟುಮಾಡಿದಾಗಲೂ, ಸ್ತ್ರೀಯರಿಗೆ ಅಪಮಾನಗೊಳಿಸಿದಾಗಲೂ, ಅದನ್ನು ರಾಮನು ಸಹಿಸಿಕೊಂಡಿದ್ದು ಅವರೊಂದಿಗೆ ಒಪ್ಪಂದ ಮಾಡಿಕೊಂಡು ಕಲಬೆರಕೆಯ ಕಾರ್ಯಗಳನ್ನು ಮಾಡಬೇಕಾಗಿತ್ತು. ಆದರೆ ಭಗವಾನ್ ಶ್ರೀ ರಾಮಚಂದ್ರನನ್ನು ಆದರ್ಶಪುರುಷನೆಂದು ಅನುಸರಿಸುವವರು, ಆ ದೇಶದ ಪ್ರಜೆಗಳು ಅದನ್ನು ಸಹಿಸಿಕೊಳ್ಳಲಾರರು, ಜಯಪ್ರಕಾಶ ನಾರಾಯಣರ ಪರಿಹಾಸ್ಯಕರ ಜರಿದಾಟದಿಂದ ನೈಜ ಭಾರತೀಯರು ಮನನೊಂದು ಪಥವಿಮುಖರಾಗುವದಿಲ್ಲ.

ಕವಿ ಮುದ್ದಣ್ಣ

ಲಕ್ಷ್ಮಿ ಸರಸ್ವತಿಯರ ಮತ್ಸರದ ಕಾಟ
ಮುದ್ದಣ್ಣಗಾಯ್ತು ಈ ಬದುಕೇ
ಪೇಚಾಟ!
ನೀರಿಳಿಯಲಾರದ ಗಂಟಲಲಿ ಕಡುಬು
ಸಿಲುಕೆ ಹಾರಿತು ಪ್ರಾಣ! ಕೊಡದೇ
ಜವಾಬು!

— "ದೇವಕಿನಂದ" ಮಿರ್ಜಾನ.

ಪುಸ್ತಕ ವ್ಯಾಪಾರಿಗಳಿಗೆ	ಜನವರಿ 69ರಿಂದ
ಪ್ರಿಯವಾದ ಸಮಾಚಾರ	ಮಾರ್ಚ 30ನೇ ತಾರೀಖಿನ ವರೆಗೆ

300=00 ರೂ. [illegible] ವ್ಯಾಪಾರ ಮಾಡಿದರೆ

ಒಂದು **Steel Desk** (ಬರೆಯುವ-ಮಾಟ ಮೇಜ) ಉಚಿತ

ನಮ್ಮ ಹೊಸ ಪುಸ್ತಕಗಳು

ಕೆಸರಿನ ಕಮಲ– ಭಾಗ 1—	ಸಾವಿತ್ರಿ ದೇವಿ ನಾಯ್ಡು	2—50
ಕೆಸರಿನ ಕಮಲ– ಭಾಗ 2—	"	2—50
ಉಂಡಾಡಿ ಗುಂಡ–	ಪರ್ವತವಾಣಿ	2—00
ಧರ್ಮದೇವತೆ–	ಕೃಷ್ಣಮೂರ್ತಿ ಪುರಾಣಿಕ	3—50
ಮಾಣಿಯ ರಾಣಿ—	ಎನ್. ನರಸಿಂಹಯ್ಯ	3—00
ಎರಡು ತಲೆ ಹಾವು –	ಎನ್. ನರಸಿಂಹಯ್ಯ	2—50

—: ಇದೀಗ ಲೈಬ್ರರಿ ಸೀಸನ್‌ಗಾಗಿ ತ್ವರೆಮಾಡಿರಿ :—
ವ್ಯಾಪಾರಿಗಳು, ಶಾಲೆಯ ಅಧಿಕಾರಿಗಳು, ಲೈಬ್ರರಿಯ ಅಧಿಕಾರಿಗಳು
ಬೇಕಾದ ಪಟ್ಟಿಗೆ ಬರೆಯಿರಿ—ಸಾವಿರಾರು ಪುಸ್ತಕ ಇಟ್ಟಿವೆ.

ಸುದರ್ಶನ ಪ್ರಕಾಶನ : ತಾರಾನಿವಾಸ : ತಿಪಟೂರು

ಹೊಡೆತ

ಸಹಸ್ರ ಸಹಸ್ರ ಸಹಸ್ರ ವರುಷ
ಕೋಟಿ ಕೋಟಿ ಕೋಟಿ ಹೊಡೆತ
ತಿಂದು ಕದಲಲಿಲ್ಲ ಮನವು
ಇನ್ನು ತಿನ್ನಲುಂಟು ಹಲವು.
ತುಂಬಿದ ಕೊಡ ತುಳುಕದಂತೆ
ತುಂಬದ ಕೊಡ ತುಳುಕುವಂತೆ
ತುಂಬಿ ಬಾರದಂಥ ನಿನಗೆ
ತುಳುಕದಿರಲು ಸಾಧ್ಯವೆ?
ನಿನ್ನ ಹೊಡೆತ ಅಗಣಿತ
ನನ್ನ ಬಾಳು ಅಚಲಿತ
ತಾಳಿದವನು ಬಾಳಿಯಾನು
ಎಂಬುದಂತೂ ನಿಶ್ಚಿತ.
ನನ್ನ ಬಾಳು ತುಂಬಿ ಇರಲು
ಇನ್ನು ತುಂಬಲಿರುವುದೆ ಇದಕೆ?
ನನ್ನ ಬಾಳು ನಿಶ್ಚಲ
ನಿನ್ನ ಬಾಳು ನಿಷ್ಫಲ.
ತೆರೆಯ ರೂಪದಿಂದ ಬಂದು
ಹೊಡೆತ ಹೊಡೆದು ಹೋದೆಯಾ?
ಕಲ್ಲ ರೂಪದಿಂದ ತಿಂದು
ಹೊಡೆತ ತಿಂದೆ ಕಂಡೆಯಾ?
ಸಹಸ್ರ ಸಹಸ್ರ ಸಹಸ್ರ ವರುಷ
ಕೋಟಿ ಕೋಟಿ ಕೋಟಿ ಹೊಡೆತ
ಬಂಡೆಗಲ್ಲ ಮೇಲೆ ನೀರು
ಸುರಿದ ತೆರದಿ ನಿಷ್ಫಲ!

—ಎಸ್. ಪದ್ಮನಾಭ ನಾಯಕ್,
ಉಡುಪಿ.

In the Court of the Munsif of Udipi, S. K.

P. & S. C. No. 3 of 1969.

In the matter of the estate of the late Ravivarma Hegde S/o Akkayya Heggadthy (and of P. O. Jaganath Hegde) of Bannampalli of Perdoor village of Udipi Taluk, S. K. District.

Between:—

1. Sulochana Heggadthi
2. Sarojini Heggadthi

—Petitioners

and

Dhanapala Hegde

—Repsondent

NOTICE

Is hereby given to whomsoever it may concern that the above application filed by the petitioners who are the sisters of the deceased praying for the grant of a succession certificate in respect of the debt mentioned in the application, in favour of the second petitioner on behalf of the parties hereto, stands posted to 9—4—1969 and that anybody interested may state his objection if any on that day at 11 a.m. before the above Court.

By Order:

P. N. Krishnamoorthy Rao
Advocate for Petitioners

Place: Udipi, S. K.
Dated: 23—3—1969.

ಚಾರುಚಿಂತನ

ಎರಡು ಬೇಕು, ಮೂರು ಸಾಕು

ಕುಟುಂಬ ಯೋಜನೆಯ ಪ್ರಚಾರ ಭರಾಟೆಯಿಂದ ದೇಶದಾದ್ಯಂತ ನಡೆಯುತ್ತಿರವಾದರೂ ಪಕ್ಷೋದಯಕ್ಕೆ ಪೂರ್ಣ ಚ್ಯುತಿ ಬಂದಿಲ್ಲ. ಇತ್ತೀಚಿನ ಬೆಳೆಗೆ ಕಡು ವರ್ಷಗಳಲ್ಲಿ ಈ ಬಗೆಯ ರಾಜಕೀಯ ಪಕ್ಷಗಳೂ ಗುಂಪುಗಾರಿಕೆಯೂ ರಕ್ತಬೀಜಾಸುರನ ಸಂತಾನವಾಗುತ್ತಿವೆ.

ಪುಣೆಯಲ್ಲಿ ಒಂದು ಹೊಸ ರಾಜಕೀಯ ಪಕ್ಷಕ್ಕೆ ಜನ್ಮ ಕೊಡಲಾಯಿತು. ಇದು ಅಖಿಲ ಭಾರತೀಯ ಪಕ್ಷ. ಪಕ್ಷದ ನಾಮಧೇಯವಿದು: "ಭಾರತೀಯ ಕ್ರೈಸ್ತ ಪ್ರಜಾತಾಂತ್ರಿಕ ಪಕ್ಷ." ಇಲ್ಲಿರುವ 'ಕ್ರೈಸ್ತ' ಪದಕ್ಕೆ ನಿರ್ದಿಷ್ಟ ಜಾತಿಯೆಂದು ಅರ್ಥವಲ್ಲ; ಉತ್ತಮ ತತ್ವಗಳೆಂಬ ಪರಿಭಾಷೆ. ಪಕ್ಷದ ರಚನೆಗೆ ಕಾರಣವಾದದ್ದು— ಪ್ರಚಲಿತ ಆಡಳಿತೆಯ ಶಿಥಿಲತೆ; ಒಂಚರುವ ವಸ್ತುಗಳ ಪ್ರಬಲತೆ, ರಾಜಕೀಯ ಪಕ್ಷಗಳ ನಡುವೆ ಎಡ-ಬಲವೆಂಬ ಎಳೆದಾಟದಿಂದ ನೇರ ಮಾರ್ಗಭ್ರಮಣದ ಅಸಾಧ್ಯತೆ, ಶಾಂತಿ ಭದ್ರತೆ, ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಗಳಿಗೆ ಭಗ್ನತೆ, ಜಾತೀಯತೆ, ವ್ಯವಹಾರಶೀಲತೆ ....

ಕ್ರೈಸ್ತ ಶಬ್ದಕ್ಕೆ ಪರಿಭಾಷೆ ನೀಡುವುದಕ್ಕಿಂತ, ಉತ್ತಮ ತತ್ವಗಳೆಂಬ ಅರ್ಥ ಬರುವಂತಹ ಪದವನ್ನೇ ಪಾವ ಧ್ಯೇಯದಲ್ಲಿ ಬಳಸಬಹುದಿತ್ತು. ಮುಸ್ಲಿಂ ಲೀಗಿನಂತೆಯೇ ಈ ಕ್ರಿಶ್ಚಿಯನ್ ಪಾರ್ಟಿಯೂ ಜಾತೀಯತೆಯಿಂದ ದೂರಹೋಗುವುದು ಅಸಾಧ್ಯ. ಇದರ ಸ್ಥಾಪನೆಯಾದುದು ಜಾತೀಯ ಸಂಘದಲ್ಲಿ. ಸ್ಥಾಪಕರಾದರೂ ಕ್ರಿಶ್ಚಿಯನ್ ಮತಕ್ಕೆ ಸೇರಿದವರು ಮಾತ್ರ. ಇದನ್ನು ಬೆಳೆಸುವವರೂ ಅವರೇ. ಆದುದರಿಂದ ಇದಕ್ಕೆ ಅನುಬಂಧರ ಸ್ವರೂಪ ಬಂದರೆ, ಇದರಿಂದ ರಾಷ್ಟ್ರೀಯತೆಗೆ ಭಂಗ ಬರುವ ಸಂಭವವೇ ಹೆಚ್ಚು.

ಪಕ್ಷದ ಉದ್ದೇಶಗಳನ್ನು ಗಮನಿಸುವುದಾದರೆ, ಎಲ್ಲ ರಾಜಕೀಯ ಪಕ್ಷಗಳೂ ಉನ್ನತೋನ್ನತ ಆದರ್ಶಗಳನ್ನು ಸಾಧಿಸುವುದಕ್ಕಾಗಿಯೇ ಜನಿಸುತ್ತವೆ. ಇದುವರೆಗೆ ಹುಟ್ಟಿರುವ ಪಕ್ಷಗಳೂ ಪ್ರತಿಜ್ಞೆ ಮಾಡಿದ್ದು ಇದನ್ನೇ. ಆದರೆ, ನಾವೇನು ನೋಡುತ್ತೇವೆ? ಅಶಾಂತಿಯನ್ನೇ ಶಾಂತಿಯೆಂದು, ಅವ್ಯವಸ್ಥೆಯನ್ನೇ ವ್ಯವಸ್ಥೆಯೆಂದು, ಅಭದ್ರತೆಯನ್ನೇ ಭದ್ರತೆಯೆಂದು, ಅಸ್ತಿಗಳನ್ನು ನಾಸ್ತಿಯೆಂದು, ನಾಸ್ತಿಗಳನ್ನು ಅಸ್ತಿಯೆಂದು ಕರೆಯತೊಡಗಿವೆ.

ಇಂದು ಜನಸಂಖ್ಯೆಯ ನಿಯಂತ್ರಣ ಬೇಕು; ಅದಕ್ಕಿಂತ ಜನರನ್ನು ಅಡ್ಡದಾರಿಗೆಳೆಯುವ ರಾಜಕೀಯ ಪಕ್ಷಗಳಿಗೂ ನಿಯಂತ್ರಣ ಬೇಕು. ದಂಪತಿಗಳಿಗೆ "ಎರಡು ಬೇಕು; ಮೂರು ಸಾಕು" ಎಂಬುದು ಧ್ಯೇಯ ವಾಕ್ಯವಾದರೆ ನಮ್ಮ ಪ್ರಜಾಪ್ರಭುತ್ವಕ್ಕೂ ಇದೇ ಧ್ಯೇಯವಾಕ್ಯವಾಗಬೇಕು: "ಎರಡು ರಾಜಕೀಯ ಪಕ್ಷಗಳು ಬೇಕು; ಮೂರು ಸಾಕೇ ಸಾಕು."

○ ○ ○

ಫೀಲ್ಡ್ ಮಾರ್ಷಲ್ ಅಯ್ಯೂಬ ಖಾನರು ತಮ್ಮ ಅಧಿಕಾರವನ್ನು ಭೂಸೇನೆ ಮಹಾದಂಡನಾಯಕ ಯಾಹ್ಯಾ ಖಾನರಿಗೆ ನೀಡಿ ತಾವು ಪಾಕ್ ರಾಜಕೀಯದಿಂದ ನಿರ್ಗಮಿಸಿದೆನೆಂದು ಹೇಳಿದ್ದಾರೆ ಅದರಂತೆ ಅವರು ಮಾಡಿದ್ದಾರೆ. ದಂಡಾಧಿಕಾರಿಗಳು ಸಂವಿಧಾನವನ್ನು ರದ್ದು ಮಾಡಿದ್ದಾರೆ; ಅಧಿಕಾರದಲ್ಲಿದ್ದ ಸಚಿವ ಸಂಪುಟವನ್ನು ಕಿತ್ತುಹಾಕಿದ್ದಾರೆ. ರಾಷ್ಟ್ರದಾದ್ಯಂತ ಮಾರ್ಷಲ್ ಲಾವನ್ನು ಘೋಷಿಸಿದ್ದಾರೆ.

ಅಯ್ಯೂಬಖಾನರು ತಮ್ಮ ಪ್ರತಿಸ್ಪರ್ಧಿಗಳ ಪ್ರತಿಯೊಂದು ಕೇಳಿಕೆಯನ್ನೂ ಮನ್ನಿಸಿ ತಲೆಬಾಗುತ್ತಲೇ ಬಂದರೂ ಪಾಕಿಸ್ತಾನದಲ್ಲಿ ಶಾಂತಿ ನೆಲಸಲಿಲ್ಲ; ಕೊನೆಗೆ ರಾಜ್ಯಾಂಗವನ್ನೇ ಬದಲಾಯಿಸಿ ನೋಡಿದರೂ ಅವರಿಗೆ ಯಶಸ್ಸು ಸಿಗಲಿಲ್ಲ. ಮುಂದಿನ ವರ್ಷದ ಚುನಾವಣೆಯ ವರೆಗಾದರೂ ಅಧಿಕಾರದಲ್ಲಿರುವ ಅವರ ಬಯಕೆ ನೀರು ಪಾಲಾಯಿತು. ಇನ್ನು ಅಯ್ಯೂಬರ ಭವಿಷ್ಯವೇನು?

ಸದ್ಯ ಅಯ್ಯೂಬರು ರಾವಲ್ಪಿಂಡಿಯಲ್ಲಿ ಮೂರು ತಿಂಗಳ ಕಾಲ ವಿರಾಮ ತೆಗೆದುಕೊಳ್ಳುವರೆಂದು ಹೇಳಲಾಗಿದೆ. ಅಂದರೆ, ಮೂರು ತಿಂಗಳ ನಂತರ ಅವರು ಮತ್ತೆ ಅಧಿಕಾರ ಸ್ವೀಕರಿಸುವರು. ತನ್ನ ವಿರಾಮಾವಧಿಯಲ್ಲಿ ಬದಲು ವ್ಯವಸ್ಥೆಯಾಗಿ ಈ ಸ್ವಪ್ನ ಆಡಳಿತಗ ಅವರು ಶರಣು ಹೋದರೆಂದಾಯಿತು. ಮಾಜಿ ವಿದೇಶ ಮಂತ್ರಿ ಶ್ರೀ ಜೆಡ್. ಎ. ಭುಟ್ಟೊರವರೂ ಆರೋಗ್ಯ ಲಾಭಕ್ಕಾಗಿ ಮೂರು ತಿಂಗಳ ಕಾಲ ರಜೆ ಪಡೆದು ವಿದೇಶಕ್ಕೆ ಹೋಗುವರೆಂದು ಮೊದಲು ಹೇಳಲಾಗಿತ್ತು. ಆದರೆ, ಮತ್ತೆ ಅವರನ್ನು ಅಯ್ಯೂಬರು ಬಳಸೇರಿಸಲಿಲ್ಲ. ಅಂದು ತಾವು ಮಾಡಿದ್ದನ್ನೇ ಇಂದು ತಾವೂ ಉಣ್ಣಬೇಕಾಗಿ ಬಂತೇನೋ! ಮಾಡಿದ್ದುಣ್ಣೋ ಮಹರಾಯಾ ಎಂದು ಭುಟ್ಟೊ ಎಣಿಸದಿರುವರೇ?

ಅಯ್ಯೂಬರ ನಿರ್ಗಮನ ತಾತ್ಕಾಲಿಕವೇ ಇರಬಹುದು; ಆದರೆ ಅವರ ಶಾಶ್ವತವಾಗಿ ನಿರ್ಗಮಿಸಲೇ ಬೇಕಾದ ದಿನ ದೂರವಿಲ್ಲವೆಂಬುದು ಸ್ಪಷ್ಟ. ಆದದ್ದರಿಂದ ಭಾರತವು ಎಚ್ಚರದಿಂದಲೇ ಇರಬೇಕಾದುದು ಅನಿವಾರ್ಯವಿದೆ.

ಅನ್ನದೊರೆ

ಪ್ರೀತಿಯಲಿ ಅನ್ನ ನೀತಿಯಲಿ
ದೊರೆಯು
ಬಾನ ಬೀರಿತು ಕೋಟಿ ಜನತೆಯ
ಮೊರೆಯು
ನಮ್ಮ ಧನ್ವಂತರಿಯ ಬಯಲಾಯ್ತು ವೇಷ
ನಮ್ಮ ಸಾಗರ ದಾಟಿ ಬಂತು ಯಮ ಪಾಶ

ನಿಮ್ಮ ಆಯುಷ್ಯವನ್ನು ಸರಿತೂಗಿಸಲಿಕ್ಕಾಗಿ



ಯೂನಿಟುಗಳನ್ನು ಕೊಳ್ಳಿ!

ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ

davp 69/650

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ಸುಲಭವಾಗಿಯೂ ಗುಣಪಡಿಸುತ್ತದೆ,
ತಯಾರಕರು:
ಅಮೃತಾಂಜನ ಲಿಮಿಟೆಡ್, ಮದ್ರಾಸು-4

ಕಾಯಬೇಕು, ಕಾದು ನೋಡಬೇಕು

(ನಾಲ್ಕನೇ ಪುಟದಿಂದ)

"ದ್ವಿತೀಯ ಲೋಕಯುದ್ಧದ ಬಿಸಿ ಲೋಕವನ್ನು ಸುಡುತಿದ್ದಾಗ, ೧೯೩೯ರಲ್ಲಿ."

"ಅಂದರೆ, ಎರಡನೆ ಯುದ್ಧದಲ್ಲಿ ಇವರು ಹೋರಾಡಿದ್ದಾರೆ...."

"ಇಲ್ಲದೆ ಉಂಟೆ? ಆಗ ಅವರು ಪಶ್ಚಿಮ ಏಶ್ಯ ಮತ್ತು ಇಟಲಿಗಳಲ್ಲಿ ಯುದ್ಧದಲ್ಲಿ ಸೇವೆ ಸಲ್ಲಿಸುತಿದ್ದರ ...."

"ಹ್ಞಾಂ, ಮುಂದೆ?

ಭಾರತ ವಿಭಜನಾನಂತರ ವಾಕಿಸ್ತಾನಿ ಸ್ಟಾಫ ಕಾಲೇಜಿನಲ್ಲಿ ದುಡಿದರು. ೧೯೫೧ರಲ್ಲಿ ಬ್ರಿಗೇಡಿಯರ್ ಸ್ಥಾನ ಪಡೆದರು. ೧೯೫೭ರಲ್ಲಿ ಮೇಜರ್ ಜನರಲ್ ಆದರು."

"ಭಾರತ–ಪಾಕ ಯುದ್ಧದಲ್ಲಿ ಇವರ ಕೈವಾಡವಿಲ್ಲದಿರಲಾರದು."

"ಮತ್ತೆ? ೧೯೬೫ರಲ್ಲಿ ಇವರು ಇನ್‌ಫೆಂಟ್ರಿ ಡಿವಿಜನ್ನಿನ ಅಧಿಕಾರಿಯಾಗಿದ್ದರು. ತನ್ನ ಕೆಚ್ಚಿದೆ, ತನ್ನಯತೆ ಮತ್ತು ಸೇವಾತತ್ಪರತೆಗಾಗಿ 'ಹಿಲಾಲ್-ಇ-ಜುರತ್' ಗೌರವವನ್ನು ಪಡೆದರು."

"ಓ...."

"ಯಹ್ಯಾಖಾನರು ೧೯೬೬ರಲ್ಲಿ ಉಪದಂಡನಾಯಕರಾಗಿ ಅದೇ ವರ್ಷದ ಉತ್ತರಾರ್ಧದಲ್ಲಿ ಮಹಾದಂಡನಾಯಕರಾದರು."

"ಹ್ಞಾಂ...."

'ಇದರ ಜೊತೆಯಲ್ಲೇ ೧೯೬೦ ರಿಂದ ಲೂ ಅವರು ಪೆಶಾವರ್ ಕ್ಯಾಪಿಟಲ್ ಕಮಿಶನ್‌ನ ಅಧ್ಯಕ್ಷರೂ ಆಗಿದ್ದಾರೆ....'

'ಅಂದರೆ, ಇವರು ಅಯೂಬರಿಗೆ ಬೇಕಾದವರು ಎಂದಾಯ್ತು....'

'ಹ್ಞಾ.... ಹೌದು.. ಆದರೆ, ಅಂದು ಯಹ್ಯಾಖಾನ್ ಅಯೂಬರನ್ನು ಮಾತ್ರ ಸಮಾಧಾನ ಗೊಳಿಸಿದರೆ ಸಾಕಿತ್ತು. ಈಗ ಇಡಿಯ ದೇಶವನ್ನು ತೃಪ್ತಿಪಡಿಸಬೇಕಲ್ಲ ತಾನೆ?'

'ಅದು ಸರಿಯೆನ್ನಿ. ಆದರೆ, ನೀವೆಂದಂತೆ ರಾಜ್ಯಕೀಯದಲ್ಲಿ ಏನೂ ನಡೆಯಬಹುದು...'

"ನಡೆಯಲಿ. ಆಕಾಶ ಬೀಳುವಾಗ ಹಿಡಿದ ಕೊಡೆ ಕಾಯುವುದೆ?"

'ಅದಿಲ್ಲಾ ಹ್ನಿ...'

'ಕಾಯಬೇಕು, ಕಾದು ನೋಡಬೇಕು."

"ಏನನ್ನು?'

"ಭವಿಷ್ಯವನ್ನು...'

"ಭವಿಷ್ಯವೆಂಬುದಿದೆಯೆ?

'ವರ್ತಮಾನವೆಂಬುದಿರುವವರಿಗೆಲ್ಲಾ ಭವಿಷ್ಯವೆಂಬುದು ಇದ್ದೇ ಇದೆ...'

"ಹ್ಞಾಂ... ಆದರೆ, ಅದರ ಸ್ವರೂಪ"

'ಕಾದು ನೋಡಬೇಕು...."

"ಅಷ್ಟೇ ತಾನೆ?"

"ಅಲ್ಲ...'

"ಮತ್ತೆ?"

"ಇಷ್ಟು!'

—ಗೋರಾ.

ಕೆಳನುಟ್ಟಿದವರನ್ನು ಉದ್ಧರಿಸಬೇಕು

ಕಳೆದ ತಾ. ೨೪ರಂದು ಎರ್ಮಾಳಿನಲ್ಲಿ ನಡೆದ ಎರ್ಮಾಳು ಗ್ರಾಮದ ಮಹಿಳಾ ಮಂಡಳಿಯ ಮತ್ತು ಫಿಶರೀಸ್ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಜತೆ ವಾರ್ಷಿಕೋತ್ಸವ ಸಮಾರಂಭದಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಎಂ. ಮಧ್ವರಾಜರು ಮಾತನಾಡುತ್ತಾ ದ. ಕ. ಜಿಲ್ಲೆಯ ಪ್ರಗತಿಗೆ ಮಹಿಳೆಯರೇ ಮೂಲ ಕಾರಣವೆಂದರು. ಶ್ರೀಮತಿ ಮನೋರಮಾ ಮಧ್ವರಾಜರು ವಿವಿಧ ಚಟುವಟಿಕೆಗಳಲ್ಲಿ ಪ್ರವೀಣರಾದ ಬಾಲಕಬಾಲಕಿಯರಿಗೆ ಪಾರಿತೋಷಕಗಳನ್ನು ವಿತರಣೆ ಮಾಡಿದರು. ಉಡುಪಿಯ ಮಹಿಳಾ ಮಂಡಲದ ಕಾರ್ಯಗಳನ್ನು ಶ್ರೀ ಮಧ್ವರಾಜರು ಶ್ಲಾಘಿಸುತ್ತಾ ಅಲ್ಲಿಯ ಮಂಡಳದ ಕಾರ್ಯ ನಿರ್ವಹಣೆ, ಹಲವಾರು ಚಟುವಟಿಕೆಗಳನ್ನು ನೆನೆದು ತನ್ನ ಹಾಗೂ ತನ್ನ ಪತ್ನಿಯ ಪರವಾಗಿ ರೂ. 1000/-ನ್ನು ಅದರ ಕಟ್ಟಡ ನಿಧಿಗೆ ಕೊಟ್ಟರು. ಸಮಾಜದ ಕೆಳಮಟ್ಟದಲ್ಲಿರುವವರು ಕೆಲ ಅಂತಸ್ತಿನವರನ್ನು ದುರ್ಲಕ್ಷಿಸಿದೆ, ಅವರ ಏಳಿಗೆಗಾಗಿ ದುಡಿಯಬೇಕೆಂದರು. ಶ್ರೀ ಭಾಸ್ಕರ ಶೆಟ್ಟಿ, ಯಂ. ಎಲ್. ಎ. ಯವರೂ ಮಾತನಾಡಿ ಎರಡೂ ಸಂಸ್ಥೆಗಳ ಉತ್ತಮ ಶೀಲತೆಯನ್ನು ಕೊಂಡಾಡಿದರು. ಆದಿಯಲ್ಲಿ ಶ್ರೀಮತಿ ಶಾರದಾ ಪುತ್ರನ್ (ಮಂಡಳದ ಅಧ್ಯಕ್ಷೆ) ಸ್ವಾಗತಿಸಿದರು. ಕಾರ್ಯದರ್ಶಿನಿ ಕುಮಾರಿ ವಸಂತಿ ವಾರ್ಷಿಕ ವರದಿ ಒಪ್ಪಿಸಿದರು. ಕೊನೆಯಲ್ಲಿ ವಿವಿಧ ವಿನೋದಾವಳಿಗಳು ನಡೆದುವು.

ಕ್ಷಯರೋಗ ಚಿಕಿತ್ಸೆಯ ಹೊಸ ಯೋಜನೆಯ ಉದ್ಘಾಟನೆ

ಉಡುಪಿ ಸರಕಾರಿ ಆಸ್ಪತ್ರೆಯ ವರಾಂಡದಲ್ಲಿ ತಾ. ೨೨ರಂದು ನಡೆದ ಉಡುಪಿ ತಾಲೂಕು ಟಿ. ಬಿ. ಎಸೋಸಿಯೇಶನ್‌ನ ಆಶ್ರಯದಲ್ಲಿ ಟಿ. ಬಿ. ರೋಗಿಗಳ ಪುನರ್ವಸತಿ ಚಿಕಿತ್ಸೆ ಮುಂದುವರಿಸುವ ನವೀನ ಯೋಜನೆಯೊಂದು ಶ್ರೀ ಮಧ್ವರಾಜರಿಂದ ಉದ್ಘಾಟಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಉಡುಪಿ ಸರಕಾರಿ ಆಸ್ಪತ್ರೆಯ ಮೆಡಿಕಲ್ ಆಫೀಸರ್ ಡಾ|| ಎಸ್. ಎಲ್. ಪೂಂಜಾರವರು ವಹಿಸಿದ್ದರು. ಉಡುಪಿ ರೋಟರಿ ಕ್ಲಬ್ಬಿನ ಅಧ್ಯಕ್ಷ ಡಾ|| ಪಿ. ಆರ್. ನಾಯ್ಕರು ಸ್ವಾಗತಿಸಿ ಯೋಜನೆಯ ಉದ್ದೇಶವನ್ನು ಸ್ಪಷ್ಟಪಡಿಸಿದರು. ಉಡುಪಿ ತಾಲ್ಲೂಕು ಟಿ. ಬಿ. ಎಸೋಸಿಯೇಶನ್ ಕಾರ್ಯದರ್ಶಿ ಡಾ|| ಕೆ. ಮೋಹನ್‌ದಾಸ್ ಪೈಯವರು ಸಂಘವು ಈ ರೋಗದ ವಿಷಯದಲ್ಲಿ ಕೈಗೊಂಡಿರುವ ಕಾರ್ಯಗಳನ್ನು ವಿವರಿಸಿದರು. ಜಿಲ್ಲಾ ಟಿ ಬಿ. ಎಸೋಸಿಯೇಶನ್ ಅಧ್ಯಕ್ಷ ಡಾ|| ಕಸ್ತೂರಿಯವರು ಜಿಲ್ಲಾ ಮಟ್ಟದಲ್ಲಿ ಸಂಘವು ಕೈಗೊಂಡಿರುವ ಕಾರ್ಯವನ್ನು ವಿವರಿಸಿದರು. ಶ್ರೀ ಎಂ. ಮಧ್ವರಾಜರು ಯೋಜನೆಯನ್ನು ಉದ್ಘಾಟಿಸಿ ರೋಟರಿ ಮತ್ತು ಲಯನ್ಸ್ ಕ್ಲಬ್ಬುಗಳವರು ಸಲ್ಲಿಸುತ್ತಿರುವ ಸೇವೆಯನ್ನು ಪ್ರಶಂಶಿಸಿದರು. ಅಧ್ಯಕ್ಷ ಡಾ|| ಎಸ್. ಎಲ್. ಪೂಂಜಾರವರು ಸಾರ್ವಜನಿಕರೆಯವರ ಬೆಂಬಲದಿಂದ ಯೋಜನೆ ಕಾರ್ಯಗತವಾಗಲು ಸಂಶಯವಿಲ್ಲವೆಂದರು. ಉಡುಪಿ ತಾಲ್ಲೂಕು ಟಿ. ಬಿ. ಎಸೋಸಿಯೇಶನ್ ಉಪಾಧ್ಯಕ್ಷೆ ಶ್ರೀಮತಿ ಸುನಂದಾ ಬಾಳಿಗಾರವರು ಧನ್ಯವಾದ ಸಮರ್ಪಿಸಿದರು.

VIIನೇ ಮಹಾರಾಷ್ಟ್ರ ಕ್ಷಯರೋಗ ಪರಿಷತ್ತು

ಇದೇ ಕಳೆದ ಮಾರ್ಚ ತಿಂಗಳ ತಾ. ೨೨ರಿಂದ ೨೪ರ ವರೆಗೆ VIIನೇ ಮಹಾರಾಷ್ಟ್ರ ರಾಜ್ಯದ ಕ್ಷಯರೋಗ ಮತ್ತು ಎದೆರೋಗ ಪರಿಷತ್ತು ಬೊಂಬಾಯಿಯಲ್ಲಿ ಮಹಾರಾಷ್ಟ್ರದ ರಾಜ್ಯಪಾಲ ಡಾ|| ಪಿ. ವಿ. ಚೆರಿಯನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಭಾರತದ ಕ್ಷಯರೋಗ ಸಮಿತಿಯ ಸೆಕ್ರೆಟರಿ-ಜನರಲ್ ಶ್ರೀ ಬಿ. ಎಮ್. ಕಾಯಕಿಣಿಯವರು ಈ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಇದು ಶ್ರೀ ಕಾಯ್ಕಿಣಿಯವರಿಗೆ ಮತ್ತು ಭಾರತದ ಕ್ಷಯರೋಗ ಸಮಿತಿಗೆ ದೊರೆತ ಉನ್ನತ ಗೌರವವಾಗಿದೆ. ಮುಖ್ಯವಾಗಿ ಮಹಾರಾಷ್ಟ್ರದ ಟಿ ಬಿ. ಕಾರ್ಯಕರ್ತರು ಮತ್ತು ಇತರ ರಾಜ್ಯಗಳ ಪರಿಣತರು ಈ ಪರಿಷತ್ತಿನಲ್ಲಿ ಭಾಗವಹಿಸಿದ್ದರು.

ಭಗಿನಿಯರು ಮತ್ತು ಮತಾಧಿಕಾರ

ಇಂಗ್ಲೆಂಡದಲ್ಲಿಯ ಭಗಿನಿಯರು ಮತಾಧಿಕಾರ ಪಡೆಯಲಿಕ್ಕೆ ಶೌರ್ಯದಿಂದ ಕಾದುತ್ತಿದ್ದಾರೆ! ಅನೇಕ ಕಷ್ಟಗಳನ್ನು ಸಹಿಸುತ್ತಲಿದ್ದಾರೆ! ಅದೆಲ್ಲ ಕಂಡರೆ ಅವರಿಗೆ ತಲೆಬಾಗಬೇಕು ಅನಿಸುತ್ತದೆ! ಅವರು ಒಂದು ಕ್ಷಣವೂ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ. ಹೊಡೆತ ಬೀಳಲಿ, ದಂಡ ವಿಧಿಸಲ್ಪಡಲಿ, ಜನರು ತಿರಸ್ಕಾರ ಮಾಡಲಿ-ಯಾವುದಕ್ಕೂ ಅವರು ಹಿಂಜರಿಯುತ್ತಿಲ್ಲ. ಅಧಿಕಾರ ದೊರಕಿಸಲಿಕ್ಕೆ ಈ ಜಗತ್ತಿನಲ್ಲಿ ಎಲ್ಲಿಯೂ ಸುಲಭ ಮಾರ್ಗ ಇಲ್ಲವೇ ಇಲ್ಲ.

(ಲಂಡನ್-೧೯೦೯) ಗಾಂಧೀ

ಉಡುಪಿ ಲ್ಯಾಂಡ್ ಟ್ರಿಬ್ಯುನಲ್ ಕೋರ್ಟಿನಲ್ಲಿ

Rent Case 183/1968

ಬಿ. ಪರಮೇಶ್ವರಯ್ಯ.... ... ಅರ್ಜಿದಾರ

ಮತ್ತು

ಜೆಫ್ರಿನ್ ಯೂಜ್ಞಾಲ್ ಡಿ'ಸೋಜ (ಪ್ರಾಯ) ಕೊಡ . . . .ಎದುರು

ಪಾರ್ಟಿಯವರಿಗೆ

ನೋಟೀಸು

1, ಜಜಿಂಟಾ ಓಲ ಲೂಸಿಸ್ — ಜೆಫ್ರಿನ್ ಇಜ್ಞಾಲ್ ಡಿ ಸೋಜರ ಹೆಂಡ್ತಿ, 2, ಕರ್ಲಿನ್ ಲೂಸಿಸ್, 3, ಎಡ್ವಿನ್ ಲೂಸಿಸ್, 4, ಜೆಸ್ಸಿ ಡಿ'ಸೋಜ, 5, ಲಾರ್ಡ್ ಡಿ'ಸೋಜ, 6, ಆಲ್ವಿ ಡಿ'ಸೋಜ, 7, ಸೆಲಿನಾ ಲೂಸಿಸ್— ಜೆಫ್ರಿನ್ ಯಜ್ಞಾಲ್ ಡಿ'ಸೋಜರ ಮಕ್ಕಳು, ಎಲ್ಲವರೂ ಉಡುಪಿ ತಾಲೂಕು, ಬೈಕಾಡಿ ಗ್ರಾಮದಲ್ಲಿರುವವರು.

ಅರ್ಜಿದಾರನು ತನಗೆ ಜೆಫ್ರಿನ್ ಯಜ್ಞಾಲ್ ಡಿ ಸೋಜರಿಂದ ಗೇಣಿಗೆ ದೊರೆತ ಸಂದಾಯದ ಬಗ್ಗೆ ಬಾಕಿ ಬಂದ ರೂ. 268-00ನ್ನು ಕೊಡಿಸಬೇಕಾಗಿ ಕೋರ್ಟಿಗೆ ಅರ್ಜಿಕೊಟ್ಟಿರುವಲ್ಲಿ, ಆ ಮೃತಪಟ್ಟದ್ದಾಗಿ ತಿಳಿದುಬಂದುದರಿಂದ ಸದ್ರಿಯವರ ಹೆಂಡ್ತಿ ಮಕ್ಕಳಾದ ನಿಮ್ಮನ್ನು ಸೇರಿಸಿಯದೆ. ಈ ಬಗ್ಗೆ ನೋಟೀಸು ಜಾರಿ ಆಗದ ಬಾಬ್ತಿನಲ್ಲಿ ಈ ಮೂಲಕ ಪ್ರಕಟನೆ ಮಾಡಿಯದೆ. ಆದ್ದರಿಂದ ತಾ. 24-5-1969ನೆ ದಿವಸ ನೀವು ಬೆಳಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ತಕರಾರು ಇರುವ ಪಕ್ಷ ತಿಳಿಸತಕ್ಕದ್ದು. ಇಲ್ಲದಿದ್ದ ಪಕ್ಷ ಒಂದು ನೇಲ ಎಕ್ಸ್‌ಪಾರ್ಟಿ ತೀರ್ಪು ಕೊಡಲಾಗುವುದು.

(ಕೋರ್ಟಿನ ಹುಕುಂ ಪ್ರಕಾರ)

B. Yogishwara Holla,

Advocate for Petitioner.

Udipi. 29—1—69.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

I. A. No. 2. O. S. No. 390/1968

ಜೈನುಲ್ಲಾ ಅಬುದ್ದೀನ್ ಸಾಹೇಬ್

—ವಾದಿ, ಅರ್ಜಿದಾರ

ಮತ್ತು

1 ಅಹಮ್ಮದ್ ಸಾಹೇಬ್,) ಸ್ವತಹಾ
2, ಮೋದಿನ್ ಸಾಹೇಬ್) ಮತ್ತು
ಬಳಪಟ್ಟಣ ಜುಮ್ಮಾ ಮಸೀದಿಯ ಜಮಾತಿನ ಪರವಾಗಿಯೂ ಮತ್ತು ಬಳಪಟ್ಟಣ ಮುಹಮ್ಮದಿಯರ ಪರವಾಗಿಯೂ ಸಹಾ
3, ಬಳಪಟ್ಟಣ ಜುಮ್ಮಾ ಮಸೀದಿ,
4, ಗೌಸ್ ಸಾಹೇಬ್
5, ಖಾಜಿ ಬಾಪು ಸಾಹೇಬ್

— ಪ್ರತಿವಾದಿಗಳು, ಎದ್ರಿಯವರಿಗೆ

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ: —

ಮೇಲ್ಕಂಡ ವ್ಯಾಜ್ಯವನ್ನು 1 ಮತ್ತು 2ನೇ ಪ್ರತಿವಾದಿಯು ಸ್ವತಹಾ ಮತ್ತು ಬಳಪಟ್ಟಣ ಜುಮ್ಮಾ ಮಸೀದಿಯ ಜಮಾತಿನ ಪರವಾಗಿಯೂ, ಬಳಪಟ್ಟಣ ಮುಹಮ್ಮದಿಯರ ಪರವಾಗಿಯೂ ಹರಿವ ಹಾಗೆ ವಾದಿಗೆ ಪರ್ಮಿಶನ್ ಕೊಡಬೇಕಾಗಿ ಕೇಳಿಕೊಂಡಿರುತ್ತಾನೆ. ಆಕಾರಣ ಆಕ್ಷೇಪ ಹೇಳಬಯಸುವವರು ವ್ಯಾಜ್ಯಕ್ಕೆ ಇಟ್ಟ ತಾ. 10—4—1969ನೇ ದಿವಸ ಬೆಳಗ್ಗೆ 11 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಪ್ರತಿಹೇಳುವುದಾದರೆ ಕೊಳ್ಳತಕ್ಕದ್ದು.

P. V. Acharya,

Vakil for Plaintiff

ಉಡುಪಿ, ತಾ. 29—3—69

IN THE COURT OF THE MUNSIFF, UDIPI.

S. C. No. 170/68

Sridhara Ballal, son of Puttanna Ballal, No. 76, Badagabettu village. ... .*Plaintiff*

vs.

Vishalaxiamma, wife of Krishnamurthi Rao, Bhagirathi Sadan, Flat No. 21—237, Cadill Road, Bombay-16 ....*Defendant*

In this suit filed by the Plaintiff the defendant is directed to appear before this Court on 11-4-69 at 11 a. m. either in person or by Pleader and file your statement if any. Failing which the matter will be decided in your absence.

B. O.

K. L. Aithal,

Vakil for Plaintiff.

Udipi, 27-3-69.

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

• ಮಿತ ಸಂತತಿ •

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಅಥಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕಭಂಡಾರ, ಉಡುಪಿ, ದ. ಕ.

ಚಾತಕ ಪಕ್ಷಿ

(ಎರಡನೇ ಪುಟದಿಂದ)

ಗೇ ಹೇಳುತ್ತಾನೆ. ಅವನ ಮನೆಯಲ್ಲೂ ಇದೇ ಗೋಳೇ! ಜನಗಿರುವುದೇ ಸಮಸ್ಯೆ ಅವನಿಗೂ ಇದೆ!

ರಘುರೋ ಭುಜದ ಮೇಲೆ ಕೈಯಿಟ್ಟದ್ದರಿಂದ ಅಮರ ಸರಕ್ಕನೆ ಹಿಂತಿರುಗಿ ನೋಡಿದ—ರಘು ನಿಂತಿದ್ದ!

"ನೂರು ವರ್ಷ ಆಯುಸ್ಸು ಕಣೋ, ನಿನಗೆ!"

"ಸದ್ಯ ಬೇಡಪ್ಪಾ, ಇನ್ನು ನೂರು ವರ್ಷ ಬದುಕಿರೋದೂ ನನ್ನಿಂದ ಸಾಧ್ಯವಿಲ್ಲ...."

"ಅಷ್ಟೊಂದು ನಿರಾಶನಾಗಬೇಡ, ರಘು...."

"ಇಲ್ಲೇ ಕೂತುಕೊಳ್ಳೋಣ ಬಾ..."

ಇಬ್ಬರೂ ಹೋಗಿ ಹುಲ್ಲಿನ ಮೇಲೆ ಕುಳಿತರು.

"ನೀನು ಬರುತ್ತಿರುತ್ತಾ ಮದುವೆ ಆಗಿದ್ದೀ, ರಘು."

"ಹಾಗಾದರೆ ವ್ಯತ್ಯಾಸ ಬಹಳ ದೂರವಿಲ್ಲ...."

ಅಮರನಿಗೆ ಏನು ಹೇಳಬೇಕೋ ತಿಳಿಯದಾಯಿತು—ರಘುವಿನ ವಾಸ್ತವ ಸ್ಥಿತಿಯೂ ಹಾಗೇ ಇತ್ತು. ರಘು, ಅಮರ ಒಂದೇ ಬಳ್ಳಿಯ ಎರಡು ಹೂಗಳಂತಿದ್ದರು. ಅವರೀರ್ವರ ತಾಯಂದಿರೂ ಅಷ್ಟೆ. ಅಮರ ಸ್ವಲ್ಪ ಆಶಾವಾದಿಯಾಗಿದ್ದ. ಎದೆಗುಂದದೆ ಮುನ್ನುಗ್ಗುತ್ತಿದ್ದ. ಇಂದಲ್ಲ ನಾಳೆಯಾದರೂ ತಾಯಿ ಸುಖದಿನಗಳನ್ನು ಕಾಣುವಳೆಂಬ ಭರವಸೆ ಅವನಿಗಿತ್ತು.

ರಘು ಬಹುಬೇಗ ಹತಾಶನಾಗಿ, ನಿರಾಶಾವಾದಿಯಾಗಿ ಬಿಡುತ್ತಿದ್ದ. ತನ್ನ ತಾಯಿ ಜೀವಮಾನ ಪರ್ಯಂತ ಹೀಗೇ ಇದ್ದುಬಿಡುತ್ತಾಳೆನ್ನುವ ತಪ್ಪು ಕಲ್ಪನೆ ಅವನಲ್ಲಿ ಮನೆಮಾಡಿತ್ತು.

ಇದೇ ಕಾರಣ, ಅವನಿಗಿರುವ ದುಃಖವೇ ತನಗೂ ಇದ್ದರೂ ಅಮರ ರಘುವನ್ನು ಸಾಂತ್ವನಗೊಳಿಸುತ್ತಿದ್ದ.

ಇಂದೂ ಅಮರ ರಘುವನ್ನು ಸಮಾಧಾನ ಮಾಡಿದ. ಆದರೆ ಅವನು ತಂದ ಸುದ್ದಿ ಸಿಡಿಲಿಗಿಂತಲೂ ಘೋರವಾಗಿತ್ತು.

"ಅಮರ್, ನಾನೀ ಯಾವ ಬಾಯಿಂದ ಹೇಳಲಿ, ಈ ಹಾಳು ಸುದ್ದೀನ- ನಮ್ಮಪ್ಪನಿಗೆ ಇನ್ನೊಂದು ಹೆಣ್ಣುಗೊತ್ತು ಮಾಡಿದಾರೆ - ನಮ್ಮಪ್ಪ - ಇನ್ನೇನು ಈಗವರು ನಮ್ಮಮ್ಮನ್ನ ಡೈವೋರ್ಸ್ ಪತ್ರಕ್ಕೆ ಸಹಿ ಹಾಕೂಂತ ಪೀಡಿಸ್ತಿರಬಹುದು ..." ರಘು ತಲೆಬಗ್ಗಿಸಿ ಕುಳಿತು ಬಿಟ್ಟ. ಅಮರ ನಿರ್ಜೀವ ಕಲ್ಲಿನಂತೆ ಕುಳಿತು ಬಿಟ್ಟ. ರಘುವಿನ ತಂದೆ ಅಗ್ನಿಸಾಕ್ಷಿಯಾಗಿ ಕೈಹಿಡಿದ ಹೆಂಡತಿಯನ್ನು ದೂರಮಾಡುವರೆ! ಛೆ! ಅನ್ಯಾಯ, ಆಕೆಯಲ್ಲಿ ಹೋಗಬೇಕು—ರಘು ಹೇಗೆ ಬದುಕಬೇಕು? ಕುರುಡು ಹಾದಿಯಂತೆ ಅವರೀರ್ವರ ಭಾವನೆಗಳು ಮುಂದೆ ಹೋಗಲಾರದೆ ಹಿಂದೆ ಬರಲಾರದೆ ಹೊಯ್ದಾಡಿದವು.

ರಘುವಿನ ಜೊತೆಗೆ ಅಮರ ತಾಯಿಯು ತವರು ಮನೆಯ ಹೊಸ್ತಿಲ ಮೇಲೆ ಕಾಲಿಟ್ಟ ಅಮರನ ತಾಯಿ, ಕಲ್ಯಾಣಿ ತಂಗಿ ಸುಶೀಲೆಯನ್ನು ಯಾರೋ ನೋಡಲು ಬಂದಿದ್ದರು, ಕಲ್ಯಾಣಿ ಹೆಚ್ಚು ಉತ್ಸಾಹದಿಂದಲೇ ಓಡಾಡ ತೊಡಗಿದ್ದಳು.

ವರನೆನಿಸಿಕೊಂಡು ಕುಳಿತಿದ್ದವರನ್ನು ನೋಡಿ ರಘು ನೆಲಕ್ಕೆ ಕುಸಿದು - ಅವರೇ ಅವನ ತಂದೆ!

ಅಮರ ಗೆಳೆಯನ ಸ್ಥಿತಿಗೆ ಮರುಗಿದ. ಕಲ್ಯಾಣಿಯ ಸಡಗರ, ಉತ್ಸಾಹ ಧುಮ್ಮನೆ ಇಳಿದು ಹೋದವು. ರಘುವಿನ ತಂದೆ ಅನಂತರ ಒಂದು ನಿಮಿಷವೂ ಅಲ್ಲಿರಲಿಲ್ಲ.

ಎಲ್ಲ ಹೋಗಿ ಏನಾಯಿತು!

ಮಗನ ಮರಣವಾರ್ತೆಯಿಂದಲೋ ತಿಳಿದು ರಘುವಿನ ತಾಯಿ ಭಾಗೀರಥಿ ಓಡಿಬಂದಳು. ನಡೆದ ಸಂಗತಿ ನೋಡಿ ಅವಳ ಎದೆಯೊಡೆಯಿತು! ರಘು ಕಂಡದ್ದು ಭಾಗೀರಥಿಯನ್ನಲ್ಲ, ಹೃದಯಸ್ತಂಭದಿಂದ ಸತ್ತ ಆಕೆಯ ಹೆಣವನ್ನು!

'ಇದೇ ಗತಿ ನನಗೂ ಬರಬಹುದು....' ಎಂದುಕೊಂಡಳು ದಿಗ್ಭ್ರಾಂತಳಾದ ಕಲ್ಯಾಣಿ.

o o o

ಚಾತಕ ಪಕ್ಷಿಗಳು! ಬಾಯಾರಿಕೆ ಇಂಗಿಸಿಕೊಳ್ಳಲು ಮಳೆ ಸುರಿಯುವುದನ್ನೇ ಎದುರು ನೋಡುವ ಚಾತಕ ಪಕ್ಷಿಗಳು! ಸುಖಕ್ಕಾಗಿ, ಒಳ್ಳೆಯ ದಿನಗಳಿಗಾಗಿ ಕಾದು ಕುಳಿತಿರುವ ಚಾತಕ ಪಕ್ಷಿಗಳು—ಅವರು!

• o o o

ರಾಷ್ಟ್ರದ ಶ್ರೇಯೋಭಿವೃದ್ಧಿಗೆ

ಮಿತ ಪರಿವಾರ ಅನಿವಾರ್ಯ

ಲೇ: ಡಾ। ಎಸ್. ಚಂದ್ರಶೇಖರ್ (ಕೇಂದ್ರ ಆರೋಗ್ಯ ಶಾಖೆ ಮಂತ್ರಿಗಳ)

ಭಾರತದ ಜನಸಂಖ್ಯಾ ಸಮಸ್ಯೆಯ ಸ್ವರೂಪವೇನು? ಇದು ನಮ್ಮ ಮುಂದಿರುವ ಪ್ರಶ್ನೆ. ಕಳೆದ ವರ್ಷ ಮಧ್ಯಂತರ ಹೊತ್ತಿಗೆ ನಮ್ಮ ದೇಶದ ಜನಸಂಖ್ಯೆ ಐವತ್ತೆರಡು ಕೋಟಿಯ ಗೆರೆಯನ್ನು ದಾಟಿತು. ವಿಶ್ವದ ಪ್ರತಿ ಏಳು ಜನರಲ್ಲಿ ಒಬ್ಬನು ಭಾರತೀಯನಾಗಿದ್ದಾನೆ. ವಿಶ್ವದ ಒಟ್ಟು ಭೂವಿಸ್ತಾರದಲ್ಲಿ ಭಾರತದ ಪಾಲು ನೂರಕ್ಕೆ 2.4ರಷ್ಟು ಮಾತ್ರ. ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ 14 ರಷ್ಟು ಜನ ಭಾರತದಲ್ಲಿದ್ದಾರೆ. ಈಗಿರುವ ಜನಸಂಖ್ಯೆಗೆ, ಪ್ರತಿವರ್ಷವೂ 21 ದಶಲಕ್ಷದಷ್ಟು ಜನಸಂಖ್ಯೆ ಸೇರುತ್ತಿದೆ. ಅಂದರೆ ನಮ್ಮ ದೇಶದಲ್ಲಿ ಪ್ರತಿ ಒಂದೂವರೆ ನಿಮಿಷಕ್ಕೆ ಒಂದು ಮಗು ಜನಿಸುತ್ತಿದೆ. ಜನನ ಪ್ರಮಾಣ ಪ್ರತಿವರ್ಷ ಒಂದು ಸಾವಿರಕ್ಕೆ 41ರಷ್ಟಿದೆ.

ನಮ್ಮ ದೇಶದಲ್ಲಿ ಪ್ರತಿವರ್ಷ 80 ಲಕ್ಷ ಜನ ಸಾಯುತ್ತಿದ್ದಾರೆ. ಅಂದರೆ ಪ್ರತಿವರುಷ ಪ್ರತಿ ಸಾವಿರ ಜನರಲ್ಲಿ ಹದಿನಾರು ಜನ ಸಾಯುತ್ತಾರೆ ಎಂದಾಯಿತು. ಜನನ ಪ್ರಮಾಣ ಹೆಚ್ಚಿ ಸಾಯುವವರ ಪ್ರಮಾಣ ತಗ್ಗಿರುವುದರಿಂದ ನಮ್ಮ ದೇಶದ ಜನಸಂಖ್ಯೆ ಪ್ರತಿವರ್ಷವೂ ಆಸ್ಟ್ರೇಲಿಯ ಖಂಡದ ಒಟ್ಟು ಜನಸಂಖ್ಯೆಯಷ್ಟು ಹೆಚ್ಚುತ್ತಿದೆ. ಅಂದರೆ ಹದಿಮೂರು ದಶಲಕ್ಷದಷ್ಟು ಹೆಚ್ಚುತ್ತಿದೆ. ಜನಸಂಖ್ಯೆ ಇದೇ ರೀತಿ ಹೆಚ್ಚುತ್ತ ನಡೆದರೆ ಈ ಶತಮಾನದಲ್ಲಿಯೇ ಅದು ದ್ವಿಗುಣಗೊಂಡು 100 ಕೋಟಿಯ ಮಿತಿಯನ್ನು ದಾಟುತ್ತದೆ.

ಅತಿದೊಡ್ಡ ಸಾಂಕ್ರಾಮಿಕ ರೋಗಗಳಾದ ಕಾಲರಾ, ಮಲೇರಿಯ ಮತ್ತು ಸಿಡುಬು ಬೇನೆಗಳ ಹಾವಳಿಯನ್ನು ಬಹುಮಟ್ಟಿಗೆ ನಿಯಂತ್ರಿಸಲಾಗಿದೆ. ನಮ್ಮ ದೇಶದಲ್ಲಿ ಕಳೆದ ಮೂರು ಯೋಜನೆಗಳ ಕಾಲದಿಂದಲೂ ಜನರ ಆರೋಗ್ಯ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ. ಪರಿಣಾಮ ಸ್ವರೂಪವಾಗಿ ಭಾರತೀಯರ ಸರಾಸರಿ ಆಯುಮಾನ 1950ರಲ್ಲಿ 32 ವರ್ಷವಾಗಿದ್ದರೆ 1968 ಹೊತ್ತಿಗೆ 51 ವರ್ಷಗಳಿಗೇರಿದೆ.

ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೊರತೆ ಕಂಡು ಬರಲು ಜನಸಂಖ್ಯೆಯಲ್ಲಾಗುತ್ತಿರುವ ಭಾರೀ ಹೆಚ್ಚಳವೇ ಮುಖ್ಯ ಕಾರಣ; ಭಾರತ 1947ರ ಮಧ್ಯಂತರ ಹೊತ್ತಿಗೆ ಸ್ವತಂತ್ರವಾಯಿತು. ಅಂದಿನಿಂದ 1968ರ ಮಧ್ಯಂತರ ಅವಧಿಯಲ್ಲಿ ಜನಸಂಖ್ಯೆ 182.7 ದಶಲಕ್ಷದಷ್ಟು ಏರಿದೆ. ನಮ್ಮ ದೇಶದಲ್ಲಿ ಮರಣ ಕಡಿಮೆಯಾಗಿ ಜನನ ಪ್ರಮಾಣವು ಹೆಚ್ಚುತ್ತಿದೆ. ಈ ಹೆಚ್ಚಳಕ್ಕೆ ಅನುಗುಣವಾಗಿ ಆಹಾರಧಾನ್ಯಗಳ ಉತ್ಪಾದನೆ ಹೆಚ್ಚುತ್ತಿಲ್ಲ. ಇದೇ ಸಮಸ್ಯೆಯ ಅಂತರಂಗ. ಭಾರತ ಸರ್ಕಾರವು ಜನಸಂಖ್ಯೆ ಹೆಚ್ಚಳದ ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಪ್ರತಿ ಒಂದು ಸಹಸ್ರಕ್ಕೆ 41ರಷ್ಟಿರುವ ಜನನ ಪ್ರಮಾಣವನ್ನು ಕೊನೆಯಪಕ್ಷ 20ಕ್ಕೆ ಅಲ್ಲದಿದ್ದರೂ 25ಕ್ಕೆ ಇಳಿಸಬೇಕೆಂದು ನಿರ್ಧರಿಸಿದೆ—ಭಾರತದ ಮೂಲಭೂತ ಸಮಸ್ಯೆ ಬೇರಾವುದೂ ಆಗಿರದೇ ಜನಸಂಖ್ಯೆಯ ಸಮಸ್ಯೆಯೇ ಆಗಿದೆ. ಜನಸಂಖ್ಯೆಯ ನಿಯಂತ್ರಣ ಮಾಡದಿದ್ದರೆ ಅಭಿವೃದ್ಧಿ ಯೋಜನೆಗಳಲ್ಲಿ ನಾವು ಸಾಧಿಸಿರುವುದೆಲ್ಲವೂ ನಿಷ್ಫಲವಾಗುತ್ತದೆ.

ಸರ್ಕಾರವು ಎಲ್ಲಾ ಮಟ್ಟಗಳಲ್ಲಿ ಅಂದರೆ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಕುಟುಂಬಯೋಜನಾ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಿ ಅದನ್ನು ಅನುಷ್ಠಾನಕ್ಕೆ ತರುತ್ತಿದೆ. ಕುಟುಂಬ ಯೋಜನೆಯು ಘನವಾದ ಉದ್ದೇಶ ಹೊಂದಿದೆ. ಮಹಿಳೆಯರ ಪುನರುದ್ಧಾರ ಹಾಗೂ ಜಾಗೃತಿ ಸಾಧಿಸುವುದು; ಕುಟುಂಬದ ಪರಿಮಿತಿ ಇಂತಿಷ್ಟೇ ಇರಬೇಕೆಂಬ ಬಗ್ಗೆ ದಂಪತಿಗಳ ಸ್ವಯಂ ನಿರ್ಧಾರ ಕೈಗೊಳ್ಳುವಂತೆ ಮಾಡುವುದು; ಕುಟುಂಬದ ಸದಸ್ಯರಿಗೆ ಸೂಕ್ತ ಪಾಲನೆ-ಪೋಷಣೆ ದೊರೆಯುವಂತೆ ಮಾಡುವುದೇ ಆಗಿದೆ.

ಕುಟುಂಬಯೋಜನೆಯ ಆವಶ್ಯಕತೆಯ ವಿಚಾರವಾಗಿ ನಮ್ಮ ಮಹಿಳೆಯರಿಗೆ ಸರಿಯಾದ ತಿಳುವಳಿಕೆ ಮಾಡಿಕೊಟ್ಟದ್ದೇ ಆದರೆ ನಮ್ಮ ಸಾಮಾಜಿಕ ಪ್ರಗತಿ ತ್ವರಿತಗೊಳ್ಳುವುದರಲ್ಲಿ ನನಗೆ ಸಂದೇಹವಿಲ್ಲ. ಸಾಮಾಜಿಕ ವಾತಾವರಣವನ್ನು ಬದಲಿಸುವ ಮೂಲಕ ಸದ್ದುಗದ್ದಲವಿಲ್ಲದೆ ಸಾಮಾಜಿಕ ಕ್ರಾಂತಿಯನ್ನು ಸಾಧಿಸಬಹುದಾಗಿದೆ ಕುಟುಂಬಯೋಜನೆಯ ಯಶಸ್ಸು ಈ ಪರಿವರ್ತನೆಯನ್ನೇ ಬಹುಮಟ್ಟಿಗೆ ಅವಲಂಬಿಸಿದೆ.

ಸಾಮಾಜಿಕ ಕ್ರಾಂತಿ ಮುಖ್ಯತಃ ಮಹಿಳೆಯರು ಸಂಕಲ್ಪದಿಂದ ಮಾಡಿದರೆ ಸಾಧ್ಯ. ನಮ್ಮ ದೇಶದಲ್ಲಿ ಯಾವ ಮಹಿಳೆಯೇ ಆಗಲಿ 20 ವರ್ಷದೊಳಗೆ ಕೊನೆಯ ಪಕ್ಷ 18ನೆಯ ವಯಸ್ಸಿಗೆ ಬರುವವರೆಗೆ ಮದುವೆಯಾಗಬಾರದು. ಅದೇ ರೀತಿ ಪುರುಷರೂ 25 ವರ್ಷದೊಳಗೆ ಕೊನೆಯ ಪಕ್ಷ 21 ವರ್ಷದೊಳಗೆ ಮದುವೆಯಾಗಬಾರದು. ಸಣ್ಣ ಕುಟುಂಬ ಮದುವೆಯಾದವರ ಆದರ್ಶವಾಗಬೇಕು. ಕುಟುಂಬದಲ್ಲಿರುವ ಪ್ರತಿಯೊಬ್ಬರೂ ಬಯಸಿ ಪಡೆದ ಮಗುವಾಗಬೇಕು. ಕುಟುಂಬ ಯೋಜನೆ ವೈವಾಹಿಕ ಜೀವನವು ಒಂದು ಅವಿಭಾಜ್ಯ ಅಂಗವಾಗಬೇಕು.

ಬೆಂಗಳೂರಿನಲ್ಲಿ

ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೊಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ

ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.

ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR

Boarding & Lodging

Near Corporation Office, 9, Mission Road

Bangalore—27

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

NAVAYUGA 3-4-1969
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಭಾನುಶಂಕರನ ಶ್ರಮದ ಫಲ

(ಒಬ್ಬ ಬಾತ್ಮೀದಾರರಿಂದ)

ಭಾನುಶಂಕರ ಲಕ್ಷ್ಮೀಶಂಕರ ರಾಜ್ಗೋರ ಭಾವನಗರದ ಸರಕಾರಿ ಕಚೇರಿಯೊಂದರಲ್ಲಿಯ ಗುಮಾಸ್ತ. ಆತನಿಗೆ ನಾಲ್ಕನೇ ಮಗುವು ಜನಿಸಿದಾಗ—ಏನು ಜಗತ್ತು ಎಷ್ಟೊಂದು ವಿಧದಲ್ಲಿ ಬದಲಾಯಿಸಿಬಿಟ್ಟಿದೆಯಲ್ಲ, ಎಂದೆನಿಸಿತು: ಇತ್ತೀಚಿನ ದಿನಗಳಲ್ಲಿ ಜೀವನರಥ ನಡೆದು ಹೋದ ದಾರಿ ಅಪರಿಚಿತವಾದಂತೆ ಭಾಸಿಸಿತು. ಹೆರಿಗೆಯ ಭಾರದಲ್ಲಿ ಅವನ ಹೆಂಡತಿ ತನ್ನ ಶಕ್ತಿಯನ್ನು ಕಳೆದುಕೊಂಡಿದ್ದಳು. ಅವನ ಆರ್ಥಿಕ ಪರಿಸ್ಥಿತಿ ಕೈಮೀರಿ ಹೋದಂತಾಗಿತ್ತು. ಅದು ಬೇಕು, ಇದು ಬೇಕು ಎಂಬ ಮಕ್ಕಳ ಕೂಗಾಟ ಅನುದಿನ ಹೆಚ್ಚುತ್ತಲಿತ್ತು.

ಭಾನುಶಂಕರ ಸುಶಿಕ್ಷಿತ. ಅವನಿಗೆ ತನ್ನ ಕುಟುಂಬದ ಆಯವ್ಯಯವನ್ನು ಬಾಯಿಗೂಡಿಸುವುದು ದುಸ್ತರವಾಗ ತೊಡಗಿತು. ಆದರೆ ಆಗ ಕುಟುಂಬ ಯೋಜನೆಯ ವಿಚಾರ ಅಷ್ಟಾಗಿ ತಿಳಿದಿರಲಿಲ್ಲ. ಆದರೆ ಮುಂದೆ ಮಕ್ಕಳಾಗದಂತೆ ಏನನ್ನಾದರು ಮಾಡಬೇಕೆಂಬ ವಿಚಾರ ಅವನ ಮನದಲ್ಲಿ ಅದೆಷ್ಟೋ ಸಲ ಸುಳಿದದ್ದುಂಟು. ನಿರೋಧಗಳನ್ನು ಉಪಯೋಗಿಸಲು ಪ್ರಾರಂಭಿಸಿದ. ಆದರೆ ಅದರ ವೆಚ್ಚ ಭಾರವೆನಿಸಿತು. ಮತ್ತೆ ಅವನ ಹೆಂಡತಿ ಗರ್ಭವತಿ ಆದಳು.

ಎಂಟು ಜನರನ್ನು (ತನ್ನನ್ನೂ ಹಿಡಿದು) ಸಾಕಬೇಕಲ್ಲಪ್ಪಾ ಎಂದು ಭಾನುಶಂಕರ ಮನದಲ್ಲೇ ಪರಿತಪಿಸಿದ. ಬರುವ ಸಂಬಳವಷ್ಟು—ಕಾಲಮಾನವೆಂಥದು— ಎಂಬ ವಿಚಾರಗಳು ಅವನನ್ನು ಮುತ್ತಿದವು. ಹುಡುಗರ ಬವಣೆ ಅವನನ್ನು ಕಾಡಿತು. ಆದರೆ ಅವನೇನು ಧೈರ್ಯಗುಂದಲಿಲ್ಲ. ಏನನ್ನಾದರೂ ಮಾಡಬೇಕು — ತೀವ್ರವಾಗಿ ಮಾಡಬೇಕು ಎಂದು ಯೋಚಿಸಿದ. ಎರಡು ರಂಗದಲ್ಲಿ ಬುದ್ಧಿ ಕೈಕೊಳ್ಳಬೇಕು, ಒಂದು ಸರ್ತಿ ಮಕ್ಕಳಾಗುವುದು ಬೇಡ ಎಂದು ನಿರ್ಧಾರವಾಗಿ ಇದ್ದ ಮಕ್ಕಳಿಗೆ ಉತ್ತಮ ಭವಿಷ್ಯ ಬೆಳಗಲು ಮನೆಯ ಆದಾಯ ಹೆಚ್ಚಬೇಕು.

ಇದೇ ಎರಡು ಉದ್ದೇಶಗಳನ್ನು ಸಾಧಿಸಲು ಅವನು ಸಿದ್ಧನಾಗ ತೊಡಗಿದ. ಯಾವ ಉದ್ದೇಶವನ್ನು ಪ್ರಥಮವಾಗಿ ಸಾಧಿಸಬೇಕು ಎಂಬುದು ಮುಖ್ಯವಲ್ಲ ಎಂದು ಅವನು ಯೋಚಿಸಿದ. ಅವನ ಹೆಂಡತಿ ಕೆಲಸಕ್ಕೆ ಹೋಗಲು ಒಪ್ಪಿದಳು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕುಟುಂಬ ಯೋಜನಾ ಕ್ಷೇತ್ರ ಕಾರ್ಯಕರ್ತೆಯೆಂದು ನೇಮಕಗೊಂಡಳು. ಆರು ಮಕ್ಕಳ ತಾಯಿಯಾದ ಅವಳಿಗೆ ಕೆಲಸ ಶ್ರಮದಾಯಕವೆಂದೂ ಕಠಿಣವೆಂದೂ ಅನಿಸಿತು. ಆದರೂ ಅವಳು ನಿಶ್ಚಲ ಮನೋಭಾವದಿಂದ ಕೆಲಸವನ್ನು ಮುಂದುವರಿಸಿದಳು.

ಭಾನುಶಂಕರ ತನ್ನ ಮಡದಿಗೆ ಸಹಕಾರಿಯಾಗಿ ಮನೆಯ ಕೆಲಸಗಳಲ್ಲಿ ಕೈ ನೀಡಿದ. ಅವಳ ಕ್ಷೇತ್ರ ಕೆಲಸದಲ್ಲಿ ನೆರವಾದ. ತನ್ನ ಕಚೇರಿಯ ಕೆಲಸವನ್ನೂ ಸಂಭಾಳಿಸಿಕೊಂಡ. 1960 ಅಕ್ಟೋಬರ್ 6ರಂದು ತಾನೇ ವೆಸೆಕ್ಟೆಮಿ ಮಾಡಿಸಿಕೊಂಡ. ತನ್ನ ಹೆಂಡತಿಗೆ ನೆರವಾಗುತ್ತಿದ್ದಂತೆ ಕುಟುಂಬ ಯೋಜನೆಯ ವಿಷಯದಲ್ಲಿ ಅವನ ಆಸಕ್ತಿ ಹೆಚ್ಚಾಗತೊಡಗಿತು. ಇತ್ತೀಚೆಗಾಗಿ ಕುಟುಂಬ ಯೋಜನೆಯ ಕಾರ್ಯವೇ ಅವನ ಆಸ್ಥೆಯ ಪ್ರಾಮುಖ್ಯ ವಿಷಯವೆನಿಸಿತು.

ಗಂಡ ಹೆಂಡತಿ ಇಬ್ಬರೂ ಮನಃಪೂರ್ವಕ ಕುಟುಂಬ ಯೋಜನೆಯ ಕಾರ್ಯದಲ್ಲಿ ದುಡಿದರು. ಅವನ ಮನದ ದುಗುಡ ದುಮ್ಮಾನಗಳು ಕಣ್ಮರೆಯಾದವು. ತಮ್ಮ ಸುತ್ತಮುತ್ತಲಿನ ಅನೇಕ ಕುಟುಂಬಗಳಲ್ಲಿ ಕಂಡುಬಂದ ದೈನ್ಯ, ಬಡತನ, ಹುಡುಗರ ಹಿಂಡು, ಅಜ್ಞಾನ, ಔದಾಸೀನ್ಯ ಮತ್ತು ಅತೃಪ್ತಿಗಳನ್ನು ನೋಡಿ, ನಾವೇಕೆ ಇವರಿಗೆ ಸಹಾಯ ಮಾಡಬಾರದು ಎಂದು ಭಾನುಶಂಕರ ದಂಪತಿಗಳು ಯೋಚಿಸಿದರು.

ಭಾನುಶಂಕರ ಸ್ವತಃ ಶಸ್ತ್ರಕ್ರಿಯೆ ಮಾಡಿಸಿಕೊಂಡ ಮೇಲೆ ಗರಿಯಾಧರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಟ್ಟು 2308 ಜನರನ್ನು—1374 ಪುರುಷರನ್ನು ವೆಸೆಕ್ಟಮಿಗೆಂದೂ, 832 ಮಹಿಳೆಯರನ್ನು ಟ್ಯುಬೆಕ್ಟಮಿಗೆಂದೂ—ಕರೆತಂದಿದ್ದಾನೆ. ವಂಕಿಗಾಗಿ ಅದೆಷ್ಟೋ ಮಹಿಳೆಯರನ್ನು ಕೇಂದ್ರಕ್ಕೆ ಕರೆತಂದುದುಂಟು. ಅವನ ಸಾಹಸ ಅನುಪಮವೆಂದೆನಿಸಿತು. ತನ್ನ ಸರಸದ ವಿವೇಕ ಬುದ್ಧಿಯನ್ನು ನೆಚ್ಚಿ, ತನ್ನ ನೆರೆಹೊರೆಯ ಸ್ನೇಹಿತರ ಮನವೊಲಿಸಿ ಸಮಾಜ ಸೇವೆ ಮಾಡಿದ.

ಅವನ ಪರಿಶ್ರಮವನ್ನು ಕಂಡು ಮೆಚ್ಚಿ ರಾಜ್ಯ ಸರಕಾರ ಅವನನ್ನು ಬ್ಲಾಕ್ ಎಕ್ಸ್‌ಟೆಂಶನ್ ಎಜ್ಯುಕೇಶನ್ ಸ್ಥಾನಕ್ಕೆ ಏರಿಸಿತು. ಅವನೇನು ಪದವೀಧರನಲ್ಲ. ಆದರೂ ತನ್ನ ಕರ್ತೃತ್ವ ಶಕ್ತಿಯಿಂದಲೇ ಉತ್ತಮ ಸ್ಥಾನಕ್ಕೆ ಏರಿದ.

ಭಾನುಶಂಕರ ದಂಪತಿಗಳಿಗೆ ಈಗ ಹಿಂದಿನ ಕಠಿಣ ದಿನಗಳ ನೆನಪು ಆಗಾಗ ಆಗುತ್ತದೆ. ಕುಟುಂಬ ಯೋಜನೆಯ ಬಗ್ಗೆ ಜನರ ಮನವೊಲಿಸಲು ದಂಪತಿಗಳು ಸದಾ ಸಿದ್ಧರಾಗಿ ಶ್ರಮಿಸುತ್ತಿದ್ದಾರೆ. ಹಳ್ಳಿಗಳಿಗೆ ಹೋಗಿ ಕುಟುಂಬ ಭಾರದಿಂದ ಬಳಲುವ ಜನರಿಗೆ ... ಕೆ ನೀತಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಹೋದಲ್ಲೆಲ್ಲ ಈ ದಂಪತಿಗಳಿಗೆ ಆದರ ಗೌರವಗಳು ಸಿಗುತ್ತಿವೆ. ಗ್ರಾಮಸ್ಥರ ವಿಶ್ವಾಸಕ್ಕೆ ಪ್ರೀತಿಗೆ ಪಾತ್ರರಾಗಿದ್ದಾರೆ.... ಈ ದಂಪತಿಗಳು.

| ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು |

ಸುಲಭದಲ್ಲಿ ಇಂಗ್ಲಿಷ್ English Made Easy

ಅಕ್ಷರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೇಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —

| ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ. |

ಮಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಎಂ. ವೆಂಕಟರಾವ್, ಹಂಪನಕಟ್ಟೆ, ಮಂಗಳೂರು- 1

ನನ್ನ ದಶಾವತಾರ

ಜಗದೊಳಗೆ ಜೀವನವ
ಮಥಿಸಲ್ಕೆ ಹೆಗಲಿಕ್ಕಿ
ಸಂಸಾರ ಸಾಗರದಿ ಕೂರ್ಮನಾದೆ

ಸುಖವರಸಿ ಮರಳುತ್ತ
ದುಃಖಸಾಗರದಲ್ಲಿ
ಸೀಳಿ ಸೀಳುತ ನಾನು ಮೀನನಾದೆ

ಬೇಕು ಬೇಕಾದಂಥ
ಅಶನಾರ್ಥ ವಸನಾರ್ಥ
ಸಿಗದುಗ್ರನಾಗಿ ನಾ ವರಾಹನಾದೆ

ನಾನು ನನ್ನವರೆಂದು
ಒಳಗೊಂದು ಹೊರಗೊಂದು
ಕಂಡು ನೊಂದೆನು ನಾನು ನರಸಿಂಹನಾಗಿ

ಸಿಕ್ಕ ಸಿಕ್ಕವರಲ್ಲಿ
ಭವತಿ ಭಿಕ್ಷಾಂದೇಹಿ
ಎಂದನುತ ತಿರುಗಿದೆನು ವಾಮನನಾಗಿ

ಮಿತ್ರದ್ರೋಹದ ಬಗೆಯ
ಕುಲಕುಠಾರರ ಬಗೆಗೆ
ಎಳ್ಳನಿತೂ ಕರುಣಿಸದೆ ಪರಶುರಾಮನಾದೆ

ನಡೆವ ಪರಿ ಇಂತೆಂದು
ನುಡಿವ ಪರಿ ಅಂತೆಂದು
ನುಡಿದಂತೆ ನಡೆ ನಡೆದು ರಾಮನಾದೆ

ದುಷ್ಟರಿಗೆ ಉಚ್ಛಿಷ್ಟನಾದರೂ
ಶಿಷ್ಟರಿಗೆ ವಿಶಿಷ್ಟನಾದೆ
ಇಷ್ಟಾರ್ಥ ಪಡೆವಂಥ ಕೃಷ್ಣನಾದೆ

ಕಾಲಧರ್ಮಕ್ಕೆ ತಕ್ಕ
ಕೋಲನೇಮಗಳಂತು
ನೇಮಾರ್ಥ ಕಾಮಾರ್ಥ ಬುದ್ಧನಾದೆ

ನ್ಯಾಯ ಕಿಸ್ತುರವಳಿಯ
ಕಾಮ ಕ್ರೋಧವ ಹಚ್ಚಿ
ನಾ ಮುಂದಾಗುವ ಭವದ ಕಲ್ಕಿಯಾದೆ

—ಮನೋಹರ ಶಾನೆಕರ್.

ಅಮೃತ ಬಿಂದು

ನಾಚಿಕೆ ಪಡುವ ಮತ್ತು ನಾಚಿಕೆ ಪಡಬೇಕಾದ ಪ್ರಾಣಿ ಮನುಷ್ಯನೊಂದೇ!

o o o

ಹೃದಯದಲ್ಲಿ ಕಲಂಕವಿರುವುದಕ್ಕಿಂತ ಮುಖದಲ್ಲಿ ನಾಚಿಕೆ ಇರುವುದು ಎಷ್ಟೋ ಮೇಲು.

o o o

ಸಕ್ರಿಯ ನೈಜ ಆಧ್ಯಾತ್ಮಿಕ ಜ್ಞಾನಕ್ಕೆ ಮೊದಲು ನಮಗೊಂದು ಶರೀರವಿದೆಯೆಂಬ ಜ್ಞಾನ ಪ್ರಥಮ ಬೇಕು.

o o o

ನಿರೋಗಿಯಾದ ಶರೀರವು ಆತ್ಮದ ಅತಿಥಿ ಗೃಹವಾದರೆ ರೋಗಪೀಡಿತ ಶರೀರವು ಆತ್ಮದ ಸೆರೆಮನೆ.

o o o

ಸಮಯವೆಂಬ ಸಾಗರದಲ್ಲಿ ನಿಂತು ಬೆಳಕಿತ್ತು ದಿಗ್ದರ್ಶನ ಮಾಡಬಲ್ಲ ಬೆಳಕಿನ ಮನೆಗಳೆಂದರೆ ಉತ್ತಮ ಪುಸ್ತಕಗಳು.

o o o

Edited, Printed & Published by K. H. Shetty, at the Navayuga Press, Udipi, S. India.

ನವಯುಗ

10—4—1969

೨೦ ಪೈಸೆ

ಅಶಿಕ್ಷಿತನ ಹೃದಯ

ಮೂಲ ಹಿಂದಿ: ಶ್ರೀ ವಿಶ್ವಂಭರನಾಥ ಶರ್ಮಾ 'ಕೌಶಿಕ್'
ಅನುವಾದ ಕನ್ನಡ:— 'ಮಲ್ಲಾರಿ'

"ಸ್ವಾಮಿ... ನನ ಹತ್ತಿರ ಈಗ ಹಣ ಇಲ್ಲ, ಇದ್ದಿದ್ದರೆ ಕೊಡುತ್ತಿದ್ದೆ. ನಿಮ್ಮ ಋಣ ತೀರಿಸದೆ ಇರೋಲ್ಲ ನಿಮ್ಮ ದುಡ್ಡಿನ ಬಗ್ಗೆ ಯೋಚಿಸಬೇಡಿ. ಈ ಬೇವಿನ ಮರ ಆಧಾರ, ಅದು ನನ್ನ ಜೀವಕ್ಕಿಂತ ಹೆಚ್ಚು. ಇಷ್ಟು ಹಳೆಯ ಮರ ಈ ಊರಲ್ಲೇ ಇಲ್ಲ; ಬೆಲೆ ಹತ್ತು-ಇಪ್ಪತ್ತು ಆಗಬಹುದು, ಆದರೆ ಅದಕ್ಕೆ ನಾನು ಬೆಲೆ ಕಟ್ಟಲಿಕ್ಕೆ ಸಾಧ್ಯವಿಲ್ಲ

"ಒಂದೂವರೆ ವರ್ಷದ ಬಡ್ಡಿ ಸೇರಿ ಇಪ್ಪತ್ತೈದು ರೂಪಾಯಿ ಆಗಿದೆ. ಈ ರೂಪಾಯಿ ಕೂಡಲೇ ಮುಟ್ಟಿಸಿ ಬಿಡು, ಇಲ್ಲದೆ ಇದ್ದರೆ ಮರ ಕಡಿಸೋದಂತೂ ಖಂಡಿತ" ಎಂದು ಠಾಕೂರ್ ಶಿವಪಾಲ ಸಿಂಹರು ರೇಗಿಯಿಂದ ಹೇಳಿದ.

'ಧಣಿಗಳೇ...! ದಯವಿಟ್ಟು ಹಾಗೆ ಮಾಡಬೇಡಿ, ಏನೋ ಬಡವ, ಮರ ಮಾತ್ರ ಕಡಿಸಬೇಡಿ, ಅದರ ಒಂದು ಎಲೆಯನ್ನ ಜಿಗುಟಿದರೆ ನನಗೆ ನೋವಾಗುತ್ತದೆ. ಅದನ್ನ ಕಡಿಸಿದರೆ ನಾನು ಉಳಿಯೋಲ್ಲ" ಎಂದು ದೈನ್ಯತೆಯಿಂದ ಮನೋಹರ ಸಿಂಹ ಬೇಡಿಕೊಂಡ.

"ಅರವತ್ತು ವರ್ಷದ ಮುದುಕನಾಗಿದ್ದೀಯ, ಮರ ಕಡಿಸದೇ ಹೋದರೆ ನಮ್ಮ ಹಣ ಮುಟ್ಟೋದು ಹೇಗೆ? 'ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ ಅನ್ನೋ ಹಾಗಾಯಿತಲ್ಲಯ್ಯ ನಿನ್ನ ಮಾತು!"

"ಅನ್ನದಾತ... ನಿನ್ನ ದುಡ್ಡು ಎಷ್ಟೇ ಆಗಲಿ, ನಾನು ಕೊಡುವೆನು ಮರ ಮಾತ್ರ."

'ಆಗಲಿ, ನೀನು ದುಡ್ಡು ಯಾವಾಗ ಕೊಡುವೆ ಹೇಳು?

"ಒಂದು ವಾರದಲ್ಲಿ ಏನಾದರೂ ಮಾಡಿ, ನನ್ನ ಜೀವವನ್ನಾದರೂ ಒತ್ತೆಯಿಟ್ಟು ತಂದುಕೊಡುವೆನು".

ಒಂದು ವಾರದಲ್ಲಿ ಕೊಡದೆ ಹೋದರೆ ಏನು ಗತಿ ಮಾಡುವುದು, ನನಗೆ ಇಷ್ಟೆ ಬರೋದು ಗೊತ್ತಾಯ್ತೆ, ಬೇರೆ ದಾರಿ, ಕಡಿಸುತ್ತೀನಿ, ಬೇಡವಾದರೆ...''

"ಏನಾದರೂ ಮಾಡಿ, ಮರ ಮಾತ್ರ... ಕಡಿಸಬೇಡಿ ಸ್ವಾಮಿ, ಕಾಲಿಗೆ ಬಿದ್ದು ಕೇಳುವೆನು."

"ಮರ ನಮ್ಮದಾದ ಮೇಲೆ ಏನೇನಾದರೂ ಮಾಡುವೆವು. ನೀನು ಕೇಳೋಕೆ ಅಧಿಕಾರ ಇಲ್ಲ."

ಮನೋಹರಸಿಂಹನ ವಯಸ್ಸು ಸುಮಾರು ಐವತ್ತೈದು ವರ್ಷವಿರಬಹುದು. ತನ್ನ ಯೌವನವನ್ನೆಲ್ಲಾ ಯುದ್ಧರಂಗದಲ್ಲಿ ಕಳೆದಿದ್ದ. ಒಂಟಿ ಜೀವನ, ಪರಿವಾರದವರು ಯಾರೂ ಇಲ್ಲ, ಹತ್ತಿರದಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಸಂಬಂಧಿಕರು ಇದ್ದಾರೆ, ಹೋಗೋಲ್ಲ-ಬರೋಲ್ಲ. ತನ್ನ ಮನೆಯಾಯಿತು, ತಾನಾಯಿತು ಹೀಗೆ ದೇವರ ಧ್ಯಾನಿಸುತ್ತ ಜೀವನ ನಡೆಸುತ್ತಿದ್ದಾನೆ ಈಗ.

ಒಂದು ವರ್ಷದ ಮುಂಚೆ ವ್ಯವಸಾಯದ ಹುಚ್ಚು ಹಿಡಿದು ಠಾಕೂರ್ ಶಿವಪಾಲ ಸಿಂಹರ ಜಮೀನನ್ನು ಗುತ್ತಿಗೆಯ ಮೇಲೆ ತೆಗೆದುಕೊಂಡು ವ್ಯವಸಾಯ ಮಾಡಿಸಿದ್ದಾಯಿತು. ದುರದೃಷ್ಟದಿಂದ ಆ ವರ್ಷ ಅನಾವೃಷ್ಟಿಯ ಕಾರಣ ಒಂದು ಕಾಳೂ ಬೆಳೆಯಾಗಲಿಲ್ಲ. ಶಿವಪಾಲ ಸಿಂಹರ ಗುತ್ತಿಗೆ ಹಣ ತಲುಪಲಿಲ್ಲ. ಪೆನ್ಶನ್‌ನಿಂದ ಬಂದ ಹಣ ಹೊಟ್ಟೆಬಟ್ಟೆಗೆ ಸಾಲುತ್ತಿರಲಿಲ್ಲ. ಅದಕ್ಕಾಗಿ ಅವರಪ್ಪ ಬೆಳೆಸಿದ ಬೇವಿನ ಮರವನ್ನು ಅಡವಾಗಿ ಇಡಬೇಕಾಗಿ ಬಂತು. ಅದನ್ನ ಅವರು ಈಗ ಕಡಿಸಬೇಕೆಂದಿದ್ದಾರೆ; ಇವನಿಗೆ ಇಷ್ಟವಿಲ್ಲ.

ಒಂದು ವಾರ ಅವಧಿಯಲ್ಲಿ ಮನೋಹರ ಸಿಂಹ, ಹಣಕ್ಕಾಗಿ ಯಾರಯಾರನ್ನೊ ಬೇಡಿದ ಪ್ರಯತ್ನ ವಿಫಲವಾಯಿತು. ಮೊದಲೆ ಮುದುಕ, ಯಾವಾಗ ಏನು ಎಂದು ಜನರು ಹಣ ಕೊಡಲು ಹಿಂಜರಿದರು. ಮನೋಹರಸಿಂಹನ ತಲೆಯಲ್ಲಿ ಅದೇ ಯೋಚನೆ, ಹೇಗೆ ತೀರಿಸಲಿ. ಮರ ಕಡಿಸಿಬಿಡ್ತಾರಲ್ಲ........ಏನು ಮಾಡೋದು?

ಮಧ್ಯಾಹ್ನದ ಸಮಯ, ಮನೋಹರ ಸಿಂಹ ಬೇವಿನ ಮರದ ಕೆಳಗೆ ಅಂಗಳದಲ್ಲಿ ಆರಾಮ ಕುರ್ಚಿಯಲ್ಲಿ ಒರಗಿದ್ದಾನೆ. ತಂಪಾದ ಗಾಳಿ ಬೀಸುತ್ತಿದೆ. ಮನೋಹರ ಸಿಂಹನ ಮನಸ್ಸಿನಲ್ಲಿ ಯೋಚನೆಗಳು ತರಂಗವಾಗಿ ಏಳುತ್ತಿವೆ ನಾಡಿದ್ದರಲ್ಲಿ ಹಣ ತಲುಪಿಸದಿದ್ದಲ್ಲಿ ಮರ ಉಳಿಯುವುದಿಲ್ಲ. ನಮ್ಮಪ್ಪ ಬೆಳೆಸಿದ ಈ ಮರ ಹಲ್ಲುಜ್ಜುವ ಕಡ್ಡಿ, ನೆರಳು ಇವನ್ನು ನನಗೆ ಮತ್ತು ನನ್ನ ಪರಿವಾರಕ್ಕೆ ನೀಡುತ್ತಾ ಬಂದಿದೆ. ಇಂತಹ ಮರವನ್ನು ಕಡಿಸಿಹಾಕುವರಲ್ಲ ಚಂಡಾಲರು!

ಈ ವಿಚಾರವೇ ಮನೋಹರನಿಗೆ ವ್ಯಥೆಯದಾಗಿ ಮಾಡಿದೆ. ಮರದ ಕಡೆ ನೋಡುತ್ತಾ—ಒಂದು ವೇಳೆ ನನ್ನ ಜೀವನದಲ್ಲಿ ಜೊತೆಗಿದ್ದವರು ಎಂದರೆ ನೀನೇ, ನಿಸ್ವಾರ್ಥ ಸೇವೆಯನ್ನು ಕಲ್ಪಿಸಿರುವರು ಎಂದು ಹೇಳಿದರೆ ನೀನೇ, ಈಗಲೂ ಕಣ್ಣಿಗೆ ಕಟ್ಟಿದಂತಿದೆ, ಆಗಿನ್ನೂ ನಾನು ಹುಡುಗ, ನಮ್ಮಪ್ಪ ನಿನಗೆ ನೀರುಣಿಸುತ್ತಿದ್ದರು. ಅವರು ಹೇಳುತ್ತಿದ್ದರು ಮನೋಹರ—ನನ್ನ ಕೈಯಿಂದ ಹಾಕಿದ ಮರ, ಮಕ್ಕಳು, ಮೊಮ್ಮಕ್ಕಳು ಜ್ಞಾಪಿಸುತ್ತಕ್ಕಂತ ನನ್ನ ವಸ್ತು ಎಂದರೆ ಇದೊಂದೆ. ಆಗಲೇ ಫಲವತ್ತು ಮರವಾಗಿರಬಹುದು. ಅವರು ಹೇಳಿದ ಪ್ರಕಾರ ನೀನು ಸೇವೆಯನ್ನು ಕಲ್ಪಿಸುತ್ತ ಬಂದಿದ್ದೀಯ? ನಿನ್ನನ್ನ ನಾಶಮಾಡಬೇಕೆಂದು ಕಾದಿದ್ದಾರೆ. ಏನು ಮಾಡಲಿ ಹೇಳು?

ಆ ಸಮಯಕ್ಕೆ ಒಬ್ಬ ಹದಿನೈದು ವರುಷದ ಹುಡುಗ ಇವನನ್ನು ನೋಡಿ—'ತಾತ, ಯಾರ ಜೊತೆ ಮಾತಾಡುತ್ತಾ ಇದ್ದೀರಾ, ಯಾರೂ ಇದ್ದಹಾಗೆ ಕಾಣಿಸೋಲ್ಲ' ಎಂದ,

ಇದನ್ನಕೇಳಿದ ಮುದುಕ ಬೆಚ್ಚಿ—ಏನು ಹೇಳಲಿ ಮಗ, ಇದು ನನ್ನ ಕರ್ಮದ ಮಾತು. ಶಿವಪಾಲ ಸಿಂಹನಿಗೆ ನಾನು ರೂಪಾಯಿಕೊಡಬೇಕು, ಹೋದ ವರ್ಷ ಹೊಲದಲ್ಲಿ ಒಂದು ಕಾಳೂ ಬೆಳೆಯಾಗಲಿಲ್ಲ, ನಿನಗೆ ಗೊತ್ತಲ್ಲ. ಬೆಳೆಯಾಗಿದ್ದರೆ ಅವರ ದುಡ್ಡು ಇಟ್ಟುಕೊಳ್ಳುತ್ತಿದ್ದೆನೆ? ರೂಪಾಯಿ ತಲುಪಿಸದೆ ಇದ್ದ ಪಕ್ಷದಲ್ಲಿ ಮರ ಕಡಿಸುವೆನು ಎಂದು ಹೇಳಿದ್ದಾನೆ, ಕಾಲದ ಮಹಿಮೆ ಹೇಳಬೇಕಾಯಿತು. ನನ್ನ ಮುಕ್ಕಾಲುವಯಸ್ಸನ್ನ ಸೈನ್ಯದಲ್ಲೇ ಕಳೆದೆ. ದೊಡ್ಡ ದೊಡ್ಡ ಯುದ್ಧಗಳನ್ನು ನೋಡಿದೆ. ಈಗ ಯಾರು ಕೇಳುವರು? ಈ ಹೊಲದ ಮೂಲಂಗಿಯನ್ನ ಮೈಯಲ್ಲಿ ಬಲವಿದ್ದಿದ್ದರೆ ಅದರ ಮಾತೆ ಬೇರೆಯಾಗುತ್ತಿತ್ತು. ಆ ಶಿವಪಾಲ ಸಿಂಹನನ್ನು ಒಂದು ಕೈ ನೋಡುತ್ತಿದ್ದೆ.'

"ಚುಚು, ಹೋಗಲಿ ಬಿಡು, ಆ ಮಾತಿನಿಂದೇನು? ಮರ ಕಡಿದರೂ ಕಡೀಲಿ, ಆ ಮರದೊಳಗೆ ಇಟ್ಟುಕೊಂಡಿರೋದು ಏನು ನೀನು?"

"ನೀನು ಇನ್ನೂ ಹುಡುಗ ಮಗ, ಅಂತಾ-ಇಂತಾ ಮರ ಅಲ್ಲ ಇದು. ಈ ಮರ ನನ್ನ ಸಹೋದರನ ಸಮಾನ, ಇದನ್ನು ನಮ್ಮಪ್ಪ ಬೆಳೆಸಿದ್ದು, ಇದರ ಜೊತೆಯಲ್ಲಿ ಆಡಿ ಕುಣಿದು ನಲಿದಿದ್ದೇನೆ. ಈಗಲೂ ಇದರ ಜೊತೆಯಲ್ಲೇ ನನ್ನ ನಿತ್ಯ ಜೀವನ. ಹಳ್ಳಿಯಲ್ಲಿ ನೂರಾರು ಮರಗಳಿವೆ. ಅವುಗಳಲ್ಲಿ ಒಂದು ಕಡ್ಡಿ ಕಿತ್ತು ಹಲ್ಲುಜ್ಜುವ ಕಡ್ಡಿ ಮಾಡಿಕೊಳ್ಳುವ ಮನ ಬರೋಕಿಲ್ಲ ನೋಡು ಮಗ..."

"ತಾತಾ..., ದುಡ್ಡು ಕೊಡದೆ ಮರ ಉಳಿ ಎಂದರೆ ಹೇಗೆ?"

"ಎಲ್ಲಿಂದ ತರಲಿ, ನನ್ನ ಹತ್ತಿರ ದುಡ್ಡಿದ್ದರೆ ಎಂದೊ ಬಿಸಾಡಿಬಿಡುತ್ತಿದ್ದೆ ಅದಕ್ಕಾಗಿ ಮರಗಿದ ಮುದುಕ ಆರಾಮಕುರ್ಚಿಗೆ ಒರಗುತ್ತಾ—ಕಣ್ಣಲ್ಲಿ ನೀರು ಹನಿಗೂಡಿತು.

"ಎಷ್ಟು ದುಡ್ಡು ಕೊಟ್ಟರೆ ಉಳಿಯುತ್ತೆ ತಾತ, ಇದು?'

'ಇಪ್ಪತ್ತೈದು ಕೊಡಬೇಕಪ್ಪ ಮಗ........'

"ಇಪ್ಪತ್ತೈದೇನು ಬಹಳ ಬಿಡು ತಾತ."

"ಹತ್ತಿರ ಇಲ್ಲದಿದ್ದರೆ ಬಹಳಾನೆ, ಇದ್ದರೆ ಸ್ವಲ್ಪವೇ." ಎಂದು ಮೆಲ್ಲನೆ ಗೊಣಗಿದ ಮುದುಕ,

"ಐದ ಹತ್ತು ರೂಪಾಯಿ ಆಗಿದ್ದಿದ್ದರೆ ನಾನೇ ಎಲ್ಲಾದರೂ ತರುತ್ತಿದ್ದೆ ತಾತ ಇಪ್ಪತ್ತೈದು ಅಂತೀಯ?"

'ಮಗ, ದೇವರು ಒಳ್ಳೇದು ಮಾಡಲಿ, ನಿನ್ನ ಬಾಯಿಂದ ಇಷ್ಟಾದರೂ ಬಂತು, ಹಳ್ಳಿಯಲ್ಲಿ ದೊಡ್ಡ-ದೊಡ್ಡ ಮನುಷ್ಯರು ಅಸ್ತಿಸಿಕೊಂಡಿದ್ದಾರಲ್ಲ, ಅವರ ಬಾಯಲ್ಲೆ....ಬರಲಿಲ್ಲ, ಹೋಗಲಿ ಬಿಡು, ದೇವರು ನಿನ್ನನ್ನ ಕಾಪಾಡಲಿ.'

ಮುದುಕನಿಗೆ ಹಗಲು ರಾತ್ರಿ ಅದೇ ಯೋಚನೆ ಅದರಲ್ಲೇ ದಿನಗಳನ್ನ ಕಳೆಯುತ್ತಿದ್ದಾನೆ.

ಒಂದು ವಾರ ತಡವಿಲ್ಲದೆ ಕಳೆಯಿತು. ಮನೋಹರ ಸಿಂಹನಿಗೆ ದುಡ್ಡನ್ನು ಜೋಡಿಸಲಾಗಲಿಲ್ಲ ಇನ್ನೇನು ಮರ ಉಳಿಯುತ್ತೆ ಅನ್ನುವ ನಂಬಿಕೆ ಇವನಲ್ಲಿ ಉಳಿಯಲಿಲ್ಲ, ನನ್ನ ಜೀವವಿರುವ ವರೆವಿಗೂ ಈ ಮರ ಕಡಿಯೋದಕ್ಕೆ ಬಿಡೋದಿಲ್ಲ, ಏನಾಗಿದ್ದಾಗಲಿ ಎಂದು ದೃಢ ನಿಶ್ಚಯದಿಂದ

(ಹನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526
1921 ಸ್ಥಾಪನೆ
ಸಂಪುಟ ೪೮
ಸಂಚಿಕೆ ೩೦
VOL. 48
No. 30

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೦—೪—೧೯೬೯

ಸ್ಥಾಪಕರು:
ದಿ|| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ತೆಲಂಗಾಣ ಪ್ರಶ್ನೆ

ಬಹು ಭಾಷೆಯ, ದ್ವಿಭಾಷೆಯ ರಾಜ್ಯಗಳನೆಲ್ಲ ವಿಭಜಿಸಿ ಏಕಭಾಷಾ ಪ್ರಧಾನ ರಾಜ್ಯಗಳ ರಚನೆಯು ಪ್ರಶ್ನೆಗೆ ಸಂಪೂರ್ಣ ಪರಿಹಾರ ನಿವಾರಣವೇ ಕೊನೆಯ ಉತ್ತರವೆಂದು ನಂಬಲಾಗಿತ್ತು. ಆದರೆ, ಭಾಷಾ ತಳಹದಿಯಲ್ಲಿ ಹೊಸ ರಾಜ್ಯಗಳನ್ನು ಬೇಡುವ ಬದಲು ಮತ್ತಿತರ ಕಾರಣಗಳನ್ನು ಮುಂದೊಡ್ಡಿ ತಮ್ಮ ಬೇಡಿಕೆಯನ್ನು ಮಂಡಿಸುವ ಹವ್ಯಾಸವಿನ್ನೂ ದೂರವಾಗಿಲ್ಲ. ಪ್ರತ್ಯೇಕ ವಿದರ್ಭ ರಾಜ್ಯದ ಬೇಡಿಕೆಯು ಬಹು ಕಾಲಕ್ಕೆ ಹಿಂದಿನದೇ; ಇದೊಂದು ಎಲ್ಲೆಕಟ್ಟೆಸೊಳಗೇನೇ ಮುಂದುವರಿದಿದೆ. ತೆಲಂಗಾಣ ಬೇಡಿಕೆ ಈಗಿನದು. ಇದು ಆರಂಭದಲ್ಲೇ ಬೆಂಕಿಯ ಊಟೆಯಂತೆಯೇ ಚೀರಿ ಬಂದಿದೆ; ಇದನ್ನು ಪ್ರಜ್ವಲಿಸುವಂತೆ ಮಾಡುವವರೂ ಹೇರಳವಿದ್ದಾರೆ. ಜನಸಾಮಾನ್ಯರು, ಚಳುವಳಿಕಾರರೊಡನೆ ರಾಜ್ಯದ ಪುಢಾರಿಗಳೂ ಇದರ ಹಿನ್ನೆಲೆಯಲ್ಲಿದ್ದಾರೆನ್ನುವಾಗ ತೆಲಂಗಾಣದ ಪ್ರಶ್ನೆ ಉಲ್ಬಣವಾಗುವ ಸಂಭವವೇ ಹೆಚ್ಚು.

ಶ್ರೀ ಪೊಟ್ಟಿ ಶ್ರೀರಾಮುಲುರವರು ವಯೋವೃದ್ಧರಾಗಿದ್ದರು; ಪ್ರತ್ಯೇಕ ಆಂಧ್ರ ರಾಜ್ಯವನ್ನು ಬಯಸಿ ಆಮರಣ ಉಪವಾಸವನ್ನಾರಂಭಿಸಿ ಅಸುನೀಗಿದ್ದರಿಂದಾಗಿ ಅಂದಿನ ಪ್ರಧಾನಿ ಪಂಡಿತ ನೆಹರು ಆಂಧ್ರ ರಾಜ್ಯವನ್ನು ಘೋಷಿಸಿದರು; ಇದುವೇ ಭಾಷಾವಾರು ರಾಜ್ಯಗಳ ರಚನೆಗೆ ಕಾರಣವಾಯಿತು. ಈ ಬಲಿದಾನಿ ಶ್ರೀ ರಾಮುಲುರವರೇನೂ ಹೆಸರಾಂತ ವ್ಯಕ್ತಿಯೂ ಆಗಿರಲಿಲ್ಲ; ಆದರೆ, ಆತ್ಮಾರ್ಪಣೆಯಿಂದಾಗಿ ಅವರು ಹುತಾತ್ಮರೆನಿಸಿದರು. ಅಂದರೆ, ಭಾಷಾರಾಜ್ಯಗಳ ಉದಯಕ್ಕೆ ಆರಂಭವಾದುದೇ ಆತ್ಮಾಹುತಿ, ಬಲಾತ್ಕಾರ, ಉಪವಾಸ, ಬೆದರಿಕೆಗಳಿಂದ. ಅದು ಮುಂದುವರಿದದ್ದೂ ಅದೇ ಹಾದಿಯಲ್ಲಿ. ದ್ವಿಭಾಷಾ ಮುಂಬಯಿ ರಾಜ್ಯದ ವಿಭಜನೆಗೆ ಸಂಯುಕ್ತ ಮಹಾರಾಷ್ಟ್ರ ಸಮಿತಿಯಿಂದ ಚುನಾವಣೆಗಳಲ್ಲಿ ಸೋಲುಣ್ಣುವ ಭೀತಿ ಕಾರಣವಾಯಿತು. ಸಂತ ಸಿಂಗರ ಆಮರಣ ಉಪವಾಸದ ಹಲವು ಪ್ರಯತ್ನ ಬೆದರಿಕೆಯಿಂದ ಪಂಜಾಬವು ಎರಡು ಹೋಳಾಯಿತು. ಇದುವರೆಗಿನವು ಭಾಷೆಯ ತಳಹದಿಯ ಮೇಲೆ ವಿಭಜನೆಗೊಂಡವೆನ್ನುವ ಸಮಾಧಾನವಾದರೂ ಇದೆಯೆನ್ನುವ; ಏಕೆಂದರೆ ಭಾಷಾವಾರು ರಾಜ್ಯ ರಚನೆಯ ತತ್ತ್ವವನ್ನು ಸರಿಯೆಂದಾಗಲೀ ತಪ್ಪೆಂದಾಗಲಿ, ನಾವೊಪ್ಪಿ ಆಲಿಂಗಿಸಿಕೊಂಡಿದ್ದೇವೆ. ಆದರೆ, ಇಂದು ನಾವಪ್ಪಿಕೊಂಡಿರುವುದು ಭಾರಿ ಮಾಣಿಕ್ಯವನ್ನಲ್ಲ, ಕ್ರೂರ ಸರ್ಪದ ಹೆಡೆಯನ್ನೆಂಬುದನ್ನು ಅರಿತರಿತೂ ಮತ್ತೂ ಅದಕ್ಕೂ ಮೀರಿದ ತತ್ತ್ವವನ್ನು ಮೀರಿ ಹೋಗುವುದೆಂದರೆ, ಅದೊಂದು ಹಟ ಮಾತ್ರ. ಅದರಲ್ಲೂ ಭಾಷೆಯ ತಳಹದಿಯ ಮೇಲೆ ನಿರ್ಮಾಣವಾದ ಆಂಧ್ರಪ್ರದೇಶವನ್ನು ಮತ್ತೆ ವಿಭಜಿಸುವುದೆಂದರೆ, ಅದು ರಾಷ್ಟ್ರಘಾತುಕ. ಏಕೆಂದರೆ, ಈ ವಿಭಜನೆಯ ಪ್ರಶ್ನೆ ಇಲ್ಲೇ ಕೊನೆಗೊಳ್ಳುವುದಿಲ್ಲ. ಒಂದು ಬಾರಿ ಏಕಭಾಷೀಯ ರಾಜ್ಯಗಳ ವಿಭಜನೆಯ ಬೇಡಿಕೆಗೆ ತಲೆದೂಗಿದರೆ, ಮತ್ತೆ ಇಂತಹ ಬೇಡಿಕೆಗಳಿಗೆ ಹೆಚ್ಚಿನ ಬಲಬರುವುದು. ತೆಲಂಗಾಣ ಪ್ರತ್ಯೇಕವಾಯಿತೆಂದರೆ ವಿದರ್ಭ ಬಯಸುವವರಿಗೆ ಸಿಂಹಬಲ ಬರುವುದು. ಕರ್ನಾಟಕದ ವಿಭಜನಾವಾದಿಗಳ ಧೈರ್ಯವೂ ಪೈಶಾಚಿಕ ಉತ್ತೇಜನ ಹೊಂದುವುದು; ಅತ್ತ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶಗಳಲ್ಲೂ ವಿಭಜನೆಯ ಬೇಡಿಕೆ ಮೂಡಲು ಆರಂಭವಾಗುತ್ತಲಿದೆ. ಆದ್ದರಿಂದ ತೆಲಂಗಾಣದ ಘಟನೆಯ ವಿಷದಂತಗಳನ್ನು ಕಿತ್ತುಬಿಡುವ ಸಾಹಸವನ್ನೀಗ ಆಡಳಿತದ ಉನ್ನತ ಪದದಲ್ಲಿರುವವರು ತೋರಿಸಬೇಕು.

ತೆಲಂಗಾಣವು ಪ್ರಾಯಃ ಆಂಧ್ರದ ಉಳಿದ ಭಾಗಗಳಿಗಿಂತ ಭಿನ್ನವಾದದು. ಅಲ್ಲಿ ಆರಂಭದಿಂದಲೂ ಕಮ್ಯೂನಿಸ್ಟರ ಪ್ರಾಬಲ್ಯವಿತ್ತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅವರ ಬಲ ತುಸು ಕಡಿಮೆಯಾದಂತೆನಿಸಿದರೂ ಇತ್ತೀಚಿನ ಕೆಲವು ವರ್ಷಗಳಿಂದ ಮತ್ತೆ ತಲೆಯೆತ್ತಿಕೊಂಡಿದ್ದಾರೆ. ಬಂಗಾಳದ ನಕ್ಸಲೀಯ ಕುತಂತ್ರಿಗಳು ಕೇರಳದಲ್ಲಿ ಗುಂಡು ಹಿಡಿದದ್ದನ್ನು ದೇಶ ಮರೆಯದ ಇದೇ ನಕ್ಸಲೀಯರು ತೆಲಂಗಾಣವನ್ನು ನುಗ್ಗಿದ್ದಾರೆಂದು ಕೇರಳದ ಮುಖ್ಯಮಂತ್ರಿ ನಂಬೂದರಿಯವರೇ ಅಂದಿದ್ದರು. ಆ ಸಮಯದಲ್ಲಿ ಇದನ್ನು ಆಂಧ್ರ ಮುಖ್ಯ ಮಂತ್ರಿ ಬ್ರಹ್ಮಾನಂದ ರೆಡ್ಡಿಯವರು ಅಲ್ಲಗಳೆದದ್ದೇನೋ ನಿಜ. ಆದರೆ, ಕಮ್ಯೂನಿಸ್ಟರು ರಾಜ್ಯದಲ್ಲಿ ದೊಂಬಿಯೇಳಿಸುವ ಸನ್ನಾಹ ನಡೆಸುತ್ತಿದ್ದರೆಂಬುದನ್ನು ಮರೆಯಲಾಗದು. ಇತ್ತೀಚಿಗೆ ಅಲ್ಲಿ ನಡೆದ ಹಿಂಸಾಕಾಂಡ ಚಳುವಳಿಯು ಜೋರಿನಲ್ಲಿ ನಡೆದ ಅವರ ಕೃತ್ಯ. ಆರಂಭದಲ್ಲಿ ಈ ಚಳುವಳಿಯಲ್ಲಿ ಲಾಭಪಡೆಯುವವರು ಮಾತ್ರ ಸೇರಿಕೊಂಡಿದ್ದರೆ, ಇದೀಗ ರಾಜ್ಯದ ಪುಢಾರಿಗಳೂ ನೇರವಾಗಿ ಸೇರಿಕೊಂಡಿದ್ದಾರೆ. ತೆಲಂಗಾಣದಿಂದ ಆಯ್ಕೆಯಾದ ಕಾಂಗ್ರೆಸ್ ಎಂ. ಪಿ.ಗಳೇ ಪ್ರತ್ಯೇಕ ತೆಲಂಗಾಣಕ್ಕೆ ಬೆಂಬಲವನ್ನು ನೀಡುತ್ತಿದ್ದಾರೆಂದು ವರದಿಯಾಗಿದೆ. ಹೀಗಾದಲ್ಲಿ ವಿರೋಧಿ ಪಕ್ಷಗಳ ಮಾತು ಕೇಳುವುದೇನು?

ತೆಲಂಗಾಣವನ್ನು ಆಂಧ್ರ ಪ್ರದೇಶವು ಅಲಕ್ಷಿಸುತ್ತಿದೆಯೆಂಬುದೊಂದೇ ಈ ಪ್ರತ್ಯೇಕತೆಯ ಬೇಡಿಕೆಯ ಹಿಂದಿರುವ ತತ್ತ್ವ. ಇದನ್ನು ಇಲ್ಲವಾಗಿಸುವುದಕ್ಕಾಗಿ ಮುಖ್ಯಮಂತ್ರಿಯವರು ಹಲವು ಕ್ರಮಗಳನ್ನು ಕೈಗೊಂಡರು. ತೆಲಂಗಾಣ ಪ್ರದೇಶದಿಂದ ಆಯ್ಕೆಯಾದ ಸರಕಾರಿ ನೌಕರರನ್ನು ಅಲ್ಲಿಂದ ಬೇರೆಡೆ ವರ್ಗಾಯಿಸಬಾರದ ಎಂಬವರ ಅಚ್ಚೆ ಬಿದ್ದುಹೋಯ್ತು. ತೆಲಂಗಾಣದ ಅಭಿವೃದ್ಧಿಗಾಗಿ ನಿರುದ್ಯೋಗ ಸಮಸ್ಯೆಯ ನಿವಾರಣೆಗಾಗಿ ಹಲವು ಕ್ರಮ ಕೈಕೊಳ್ಳಲು ಅವರು ಘೋಷಿಸಿದ್ದಾರೆ; ಇದನ್ನು ಕಾರ್ಯರೂಪಕ್ಕೂ ತರಲು ಆರಂಭ ಮಾಡಿದ್ದಾರೆ. ತೆಲಂಗಾಣದ ಪ್ರತಿನಿಧಿಯನ್ನು ಮುಂದಿಟ್ಟುಕೊಂಡ ಉಪಮುಖ್ಯಮಂತ್ರಿ ಪದಕ್ಕೆ ರಾಜೀನಾಮೆ ನೀಡಿ, ಸರಕಾರದ ನೀತಿಯನ್ನು ಪ್ರಕಟಿಸಿದ್ದಾರೆ. ಈ ನಡುವೆ ತೆಲಂಗಾಣದ ನಾಯಕರನ್ನು ಒಂದುಗೂಡಿಸಿ ಅವರ ಆಶಯಗಳನ್ನು ಮನವರಿಕೆ ಮಾಡಿಕೊಳ್ಳುವ ಕೆಲಸವಾಗಿ ಪ್ರಧಾನಿ ಇಂದಿರಾ ಗಾಂಧಿಯವರು ನಿರ್ಧರಿಸಿದ್ದಾರೆ. ಆದರೆ, ಈ ಆಶಯಗಳನ್ನು ಈಡೇರಿಸುವ ಕ್ರಮಗಳಲ್ಲಿ ಪ್ರತ್ಯೇಕತೆಗೆ ಸ್ಥಾನವಿರದು; ಏಕೆಂದರೆ, ಏಕಭಾಷಾ ರಾಜ್ಯವನ್ನು ಮತ್ತೆ ಎರಡು ಘಟಕವಾಗಿಸುವಲ್ಲಿ ನಾಂದಿಯಿಡಲು ದೇಶಪ್ರೇಮಿಗಳು ಇಚ್ಛಿಸಲಾರರು. ಆದೇಕೆ? ಇಷ್ಟರೂ ತೆಲಂಗಾಣ ಪ್ರಶ್ನೆಯಿಂದ ಆಡಳಿತದ ಸೂತ್ರಧಾರರು ಪಾಠ ಕಲಿಯಬೇಕಾಗಿದೆ. ರಾಜ್ಯದ ಸಂಪತ್ತನ್ನು ಕೆಲವೇ ಕಡೆ ವಿನಿಯೋಗಿಸಿ ಉಳಿದೆಡೆಗಳನ್ನು ಕಡೆಗಣಿಸಿದರೆ, ಜನ ಸುಮ್ಮನಿರರು. ಆದುದರಿಂದ, ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ, ನೌಕರಿಗಳನ್ನು ತುಂಬುವಾಗ, ಎಲ್ಲ ಸಂದರ್ಭದಲ್ಲೂ ಇಡಿಯ ರಾಜ್ಯದ ಹಿತವನ್ನು ಗಮನಿಸದೆ ಹೋದರೆ, ಅಶಾಂತಿ, ಗೊಂದಲ ತಪ್ಪಿದ್ದಲ್ಲ.

ಇದೊಂದು ಪ್ರೋತ್ಸಾಹ

ಕನ್ನಡದ ಚಲಚ್ಚಿತ್ರಗಳಿಗೆ ಸರಕಾರ ಉತ್ತೇಜನ ನೀಡುತ್ತಿದೆ. ಇದಕ್ಕಾಗಿ ಹಲವು ಕ್ರಮಗಳನ್ನು ಕೈಗೊಂಡಿದೆ. ರಾಜ್ಯದಲ್ಲೇ ನಿರ್ಮಾಣವಾಗುವ ಕನ್ನಡ ಚಿತ್ರ—ಅದರ ಗುಣಮಟ್ಟವೇನೇ ಇರಲಿ—ಐವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದೆ. ಇನ್ನು ಉತ್ತಮ ಚಿತ್ರಗಳಿಗೆ ನಟನಟಿ ಮೊದಲಾದವರಿಗೆ ಬಹುಮಾನಗಳನ್ನು ನೀಡುತ್ತಿದೆ. ಇದಾದ ಮೇಲೆ, ಈಗ ಮತ್ತೊಂದು ಪ್ರಶ್ನೆಯನ್ನದು ಪರಿಶೀಲಿಸುತ್ತಿದೆ— ಪ್ರತಿ ಸಿನೆಮಾ ಮಂದಿರವೂ ವರ್ಷದಲ್ಲಿ ಇಂತಿಷ್ಟು ದಿನ ಕನ್ನಡ ಚಿತ್ರಗಳನ್ನೇ ಪ್ರದರ್ಶಿಸಬೇಕು ಎಂಬ ನಿಯಮ ಮಾಡುವುದಂತೆ! ಒಳ್ಳೆಯ ಚಿತ್ರಗಳನ್ನು ಎಲ್ಲರೂ ಪ್ರದರ್ಶಿಸುತ್ತಾರೆ. ಕನ್ನಡ ನಾಡಿನ ರಾಜಧಾನಿಯಲ್ಲೇ ವರ್ಷಕ್ಕೊಂದಾದರೂ ಕನ್ನಡ ಚಿತ್ರ ಪ್ರದರ್ಶಿಸದ ಚಿತ್ರ ಮಂದಿರಗಳು ಹಲವಾರಿವೆ. ಚಿತ್ರಮಂದಿರಗಳ ಮಾಲಿಕರು ವ್ಯಾಪಾರಕ್ಕೆ ಕುಳಿತವರೇ ಹೊರತು ಕನ್ನಡ ಚಲಚ್ಚಿತ್ರಗಳ ಪ್ರಚಾರಕ್ಕಲ್ಲ. ತಮ್ಮ ಗಲ್ಲದ ಪೆಟ್ಟಿಗೆ ತುಂಬುವಂತಹ ಚಿತ್ರಗಳು ಅವರಿಗೆ ಬೇಕು. ಕನ್ನಡ ಚಿತ್ರಗಳನ್ನು ಅವರು ಪ್ರದರ್ಶಿಸದಿರುವುದಕ್ಕೆ ಹಲವಾರು ಕಾರಣಗಳಿರಬಹುದು. ತಮ್ಮ ಗಲ್ಲದ ಪೆಟ್ಟಿಗೆ ಬರಿದಾದೀತೆಂಬ ಹೆದರಿಕೆಯೂ ಇವುಗಳಲ್ಲಿ ಒಂದು. ಸರಕಾರವು ಕಾನೂನು ಬಲದಿಂದ ಅವುಗಳ ಮೇಲೆ ಕನ್ನಡ ಚಿತ್ರಗಳನ್ನು ಹೇರಿದರೆ, ಉಂಟಾಗುವ ನಷ್ಟವನ್ನು ತುಂಬಿ ಕೊಡಲು ಸಿದ್ಧವಿರುವುದೆ? ಕರ್ನಾಟಕದ ಜನರಲ್ಲಿ ಹೆಚ್ಚಿನವರು ಹಿಂದುಳಿದ ವರ್ಗ-ಜಾತಿಗಳಿಗೆ ಸೇರಿದವರು; ಆಡಳಿತದ ಹೆಚ್ಚಿನ ಭಾಗವು ಹಿಂದುಳಿದವದ್ದೇ ಆಸೆ? ಇಲ್ಲಿನ ಚಲಚ್ಚಿತ್ರಗಳೂ ಹಿಂದುಳಿದವೇ. ಆದುದರಿಂದ ಹಿಂದುಳಿದವರಿಗೆ ಕೆಲವು ಸ್ಥಾನಗಳನ್ನು ಕಾಯ್ದಿಡುವ ನಮ್ಮ ಸಂಪ್ರದಾಯದಂತೆ ಚಿತ್ರಮಂದಿರಗಳಲ್ಲೂ ಈ ಹಿಂದುಳಿದ ಚಿತ್ರಗಳಿಗೊಂದು ಪ್ರದರ್ಶನ ವ್ಯವಸ್ಥೆಯನ್ನು ಮೀಸಲಾಗಿಸುವುದು ಅನ್ಯಾಯವಲ್ಲ. ಏಕೆಂದರೆ, ಹಿಂದುಳಿದವರನ್ನು ಮುಂದೆ ತರಬೇಕಾದರೆ, ಮುಂದುವರಿದವರನ್ನು ಹಿಂದಿಡುವುದು ಒಂದು ಬಗೆಯ ಸಾಧನೆ. ಅಥವಾ ಸರಕಾರವೇ ಕನ್ನಡ ಚಿತ್ರ ಪ್ರದರ್ಶನಾಲಯ ತೆರೆದು ನಡೆಸಿದರೆ ಹೇಗೆ? ಆದರೆ, ಕಡ್ಡಾಯದ ಚಿತ್ರ ಪ್ರದರ್ಶನದಿಂದ ಅವುಗಳ ಗುಣಮಟ್ಟ ಹೆಚ್ಚಲು ಸಾಧ್ಯವೆ?

ನರಸಣ್ಣನ ಸರಸ



"ಬಿಹಾರದಲ್ಲಿ ಸಮ್ಮಿಶ್ರ, ಮಧ್ಯಪ್ರದೇಶದಲ್ಲಿ ಅನಿಶ್ಚಿತ ಸರಕಾರವಂತೆ! ಕಾಂಗ್ರೆಸ್ಸಿನಲ್ಲಿ ಭಾರೀ ಹೆಗ್ಗಣವಿರಬೇಕು......"

ಗೇಹರಾಜ್ಯದಲ್ಲಿ

ಕಾಳಸಂತೆಯೇನು, ಬೊಳ್ಳಸಂತೆಯೇನು?

'ಅಲ್ರೀ'

'ಎಂಥದ್ದು?'

'ಮತ್ತೀಗ ಉಳಿದಿರೋದೇನು?'

'ಯಾಕೆ, ಏನೂ ಉಳಿದಿಲ್ವೆ?'

'ಅಲ್ರಿ, ಈಗ ಪರೀಕ್ಷೆಗಳ ಸೀಜನ್ನು.'

'ಯಾವ ಪರೀಕ್ಷೆ?'

'ಯಾವುದೆಂದರೇನು? ಎಲ್ಲಾ ಪರೀಕ್ಷೆಗಳೂ ಆರಂಭವಾಗಿವೆ, ಮುಗಿಯುತ್ತಲೂ ಇವೆ...'

'ಹ್ಞಾಂ...'

"ಅದ್ದರಿಂದಲೇ ಇದು ಪರೀಕ್ಷೆಗಳ ಸೀಜನ್ನಾಂತೆ...'

"ಹ್ಞಾಂ..."

"ಅದ್ದರಿಂದ ಈಗ ಮತ್ಯಾವುದರ ಮಾತೂ ಇಲ್ಲ...."

"ಹ್ಞಾಂ ವಧೂ ಪರೀಕ್ಷೆಗೂ ಆರಂಭವಾಗಿದೆ...."

"ಮಾತ್ರವಲ್ಲ ವರಪರೀಕ್ಷೇನೂ...."

"ಸರಿಯಪ್ಪ, ಆದ್ರೂ ನಾನು ಕೇಳಿದ ಪಟ್ಟಿಗೆ ವರದಳ ಬೇಟೆಗೆ ಆರಂಭವಾಗಿದೆ...."

"ಅಲ್ರಿ, ಬೇಟೆಯಾಡೋದು ಜಂಗ್ಲಿಗಳನ್ನು..."

"ಇರಬಹುದು; ಇಂದಿನ ನವತರುಣಿಯರು ಕಾಡು ಪಾಸಿಗಳೇ ಅಂತಾಯ್ತು...'

'ಯಾರಾದ್ರೂ ಕಾಲೇಜು ಗರ್ಲ್ ಕೇಳಿದ್ರೆ ಪ್ಲಾಸ್ಟಿಕ್ ಚಪ್ಪಲಿ ಕೆನ್ನೆಗೆ ಬಿಡಿದೀತ....'

"ಅದೆಲ್ಲಾ ಸಿನೆಮಾದಲ್ಲಿ, ನಾಟಕದಲ್ಲಿ ನಿತ್ಯ ಜೀವನದಲ್ಲಿ ಅಲ್ಲವೇ ಅಲ್ಲ..."

"ಅದ್ಯಾಕೆ ಹಾಗಂತೀರಿ?"

"ಸಿನೆಮಾದ ಕಥೆಗಾರ ಹೆಳ್ಳ್ ತಿನ್ನೋದನ್ನು ಮಾತ್ರ ಬರದಿಂಪ್ಸನೆ; ನಿತ್ಯ ಜೀವನದಲ್ಲೂ ಹಿಂದೆ ಕೊಡದೇನಿರ್‍ತನೆಯೆ?"

'ಅಂತೂ ನೀವನ್ನೋದೇನೆಂದರೆ...'

'ಏನೂ ಇಲ್ಲ, ಬಿಟ್ಟು ಬಿಡಿ....'

'ಅಲ್ರಿ ಅದು ಹ್ಯಾಗಂತ?'

"ಮತ್ತಿನ್ನೆಂಥದು? ಪ್ರೈವರೇಟ್ ಸ್ವಾಗತಕ ದೊರವಾಗಿ ಪ್ರೈವೇಟಿನವುದ ರಲ್ಲಿ ಪ್ರವೇಶಾವಾಗಿದೆ...., ಕಾಡು ಇರ್ ಕಾಡುಪ್ರಾಣಿಗಳ....''

"ಅಲ್ರಿ, ಇದು ಹೆಂಗಸರಿಗೆ ಮಾತ್ರವಲ್ಲ; ಗಂಡಸರಿಗೂ ಅನ್ವಯಿಸುತ್ತೆ..."

"ಇಲ್ಲ, ಗಂಡಸರ ಪ್ರೈವೇಟಿನ ಒಟ್ಟಿಗಳು ಬೆಚ್ಚಾಗುತ್ತಾ ಇವೆ—ಉದ್ದವಾಗುತ್ತಾ ಇವೆ."

"ಅಯ್ಯಪ್ಪಾ; 'ಟೈಟ್‌ನೆಸ್'ನಲ್ಲಾದರೂ ಸಮಾನತೆ ಇದೆ ತಾನೆ!"

"ಹ್ಞಾಂ....ಇಲ್ಲಿ ಬಿಡ, ನಮಗೇಕೆ!"

"ಏನೋ ಹೇಳೋಕೆ ತೊಡಗಿ...."

"ಏನಿಲ್ಲ, ಇದು ಪರೀಕ್ಷೆಗಳ ಸೀಜನ್ನಂತಂತೆ......"

"ಹೌದು, ಪ್ರೈಮರಿ, ಅಪ್ಪರ್ ಪ್ರೈಮರಿ, ಸೆಕೆಂಡರಿ, ಯೂನಿವರ್ಸಿಟಿ ಪರೀಕ್ಷೆಗಳು, ವಧೂ-ವರ, ಮನೆ, ಆಳು, ಕಾಳು, ಮತ್ತೇನೇನೂ, ಆದು ಇದು......"

"ಅಯ್ಯಪ್ಪ, ಆಯ್ತು......"

'ಅಲ್ರಿ, ನೋಡಿ, ಮೊನ್ನೆ ವಿಧಾನ ಸಭೇಲಿ ಎಸೆಸ್ಸೆಲ್ಸಿ ಪರೀಕ್ಷೆಯ ಪ್ರಶ್ನಪತ್ರಿಕೆಗಳು ಸ್ಫೋಟವಾದ ಬಗ್ಗೆ ಭಾರೀ ಗೊಂದಲ ನಡೀತಂತೆ.......'

"ಗೊಂದಲವೇನು ಬಂತು? ಆಗಿಲ್ಲಾಂತ ಶಿಕ್ಷಣ ಸಚಿವರು ದೃಢವಾಗಿ ಹೇಳಿದರಲ್ಲಾ?"

"ಅದೇನು ಹೇಳ್ತೀರಾ?"

"ಯಾಕೆ?"

"ಅಲ್ರಿ, ನಮ್ಮೂರಿಗೂ ಕೆಲವು ಪೇಪರ್‌ಗಳು ಬಂದಿವೇಂತ ಸುದ್ದಿ...''

"ನಿಮ್ಮೂರೇನು ಸಾಮಾನ್ಯವೆ? ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ಗುಜರಾಥಿ, ಉರ್ದು, ತಮಿಳು, ತೆಲುಗು, ಮಲೆಯಾಳ ಎಲ್ಲಾ ಭಾಷೆಗಳ ಪೇಪರ್‌ಗಳೂ ಬರತ್ತೆ...."

"ಅಯ್ಯೋ, ನೀವೇನು ಹೇಳ್ತಿದೀರಾ? ನಾನು ಕೊಶ್ಚನ್ ಪೇಪರ್‍ಂದ್ರೆ....''

"ಓ ಹಾಗೆ...ಮತ್ತೆ ಕೆಲವು ಪೇಪರ್ ಬಂದಿದೆಯಂತೇಂದೆ—''

"ಬಂದದ್ದೇನೋ ಸರೀನೆ. ಆದ್ರೆ ಒಂದು ಮಾತ್ರ ತೊಂದ್ರೆಯಂತೆ...."

'ಏನ?'

"ಆದ್ರಲ್ಲಿದ್ದ ಪ್ರಶ್ನೆಗಳಲ್ಲಿ ನೂರಕ್ಕೆ ಇಪ್ಪತ್ತರಿಂದ ಹಿಡಿದು ಎಪ್ಪತ್ತರ ವರೆಗಿನವು ಸತ್ಯವಾಗಿ ಪರೀಕ್ಷೆಗೆ ಬಂದಿತ್ತಂತೆ...''

"ಅಲ್ವೇ, ಇದ್ರಿಂದ ಪ್ರಶ್ನೆಪತ್ರಿಕೆ ಬಹಿರಂಗವಾಗಿದೇಂತ ಹೇಳೋದು?"

"ಇಷ್ಟು ಪುರಾವೆ ಸಾಕಾಗದೆ?"

"ಅಯ್ಯೋ, ಏನು ಹೇಳ್ತೀರಾ ನೀವು?"

"ಯಾಕೆ?"

"ಅಲ್ವೇ, ಪರೀಕ್ಷಾ ಸೀಜನ್ನಿಗೆ ಮೊದಲೇ ಗೆಸ್ ಪೇಪರ್ ಸೀಜನ್ನು ಆರಂಭವಾಗಿರುತ್ತೆ. ಭಲೇ ಬುದ್ಧಿವಂತ್ರೆಲ್ಲಾ ಸೇರ್ಕೊಂಡು ಇವನ್ನ ತಯಾರಿಸ್ತಾರೆ. ಮತ್ತೆ ದುಡ್ಡು ಸುರೀವರ್‍ಗೆಲ್ಲಾ ಹಂಚ್ತಾರೆ. ನೀನು ಹೇಳಿದದ್ದು ಶಿವಪ್ಪನವ್ರು ವಿಧಾನ ಸಭೇ ಮುಂದೆ ಇಟ್ಟಿದ್ದು ಅಂಥದ್ದೇ ಯಾವುದೋ ಪೇಪರ್ರು ಇರ್‍ಬಹುದು. ...."

"ಅಲ್ಲ, ಅದೂ ಸಾಧ್ಯಾನೂ ಅಹ್ದು. ಪ್ರಮುಖ ಪ್ರಚಾರ ಪತ್ರಿಕೆಗಳಲ್ಲೂ ವಿದ್ಯಾರ್ಥಿ ಮಾರ್ಗದರ್ಶಿಕೇಂತ ಗೈಡುಗಳನ್ನು ಅಚ್ಚು ಹಾಕಿಸ್ತಾರೆ. ಆದ್ರೆ ಎಸ್ಸೆಸ್ಸೆಲ್ಸಿಯವ್ರು ಮಾತ್ರ ಅವ್ರ ವಿದ್ಯಾರ್ಥಿಗಳು ಸದ್ದಾನ್ನಿ. ಆದ್ರೂ ಏನೋ ಇದೆಲ್ಲಾ ಭಾರೀ ಇಂದ್ರಜಾಲಾಂತ ಅನ್ನಿಸ್ತದೆ...."

"ಹೋಡಮ್ಮ, ಇದ್ರಲ್ಲಿ ಇಂದ್ರಜಾಲಾನೂ ಇಲ್ಲ, ಮಹೇಂದ್ರಜಾಲಾನೂ ಇಲ್ಲ...."

"ಮತ್ತೆ?"

"ಒಂದು ವೇಳೆ ನೀನೂ ಶಿವಪ್ಪನವ್ರೂ ಹೇಳುವಂತೆ ಪ್ರಶ್ನಪತ್ರಿಕೆಗಳು ಬಹಿರಂಗವಾಗಿದ್ರೂ ಆಗಿರ್‍ಬಹುದು....''

"ಹಾಗೆ ಬನ್ನಿ ಮತ್ತೆ—"

''ಅವಸರ ಮಾಡ್ಬೇಡ್ವೆ—ಆದ್ರೆ, ಅದನ್ನು ಈ ಸಾರಿ ಬಹಿರಂಗ ಮಾಡಿರಬಹುದಾದವ್ರು ಬಾರೀ ಬಾರೀ ಬುದ್ಧಿವಂತ್ರು ತಾವು ಸಿಕ್ಕಿಬೀಳದಂತೆ ಅಂಶ-ಅಂಶವನ್ನ ಸೈಜ ಪತ್ರದಿಂದಾಯಕ್ತ. ಉಳಿದಂಶಗಳನ್ನು ಏನೇನೋ ತುಂಬಿಸಿಟ್ಟಿದ್ದಾರೆ."

'ಇದರಿಂದ ಲಾಭ?'

'ಲಾಭ? ಕಣಾ?'

"ಅಂದ್ರೆ ಪೂರ್ಣ ಬಹಿರಂಗ ಆಗ್ತಿಲ್ಲಾಂತೀರಾ?"

'ಅದೂ ಹೇಳನ್ನೋದು? ಮಂಗಳೂರ ಕಡೆ ಕಾಲಂಶ, ಬೆಂಗಳೂರ ಕಡೆ ಕಾಲಂಶ, ಬೆಳಗಾಂವಿ ಕಡೆ ಕಾಲಂಶ, ಬಿಜಾಪುರ ಕಡೆ ಕಾಲಂಶ—ಹೀಗೆ ಪೂರ್ಣವೂ ಆಗಿರೋದ. ಸಾಧ್ಯ. ತಕ್ಕ ಸಾಕ್ಷಿವೆ ದೊರೀದೆ ಹೋದ್ರೆ ಇದು ಸಿದ್ಧವಾಗೋದು ಹ್ಯಾಗೆ?''

"ಇದೊಳ್ಳೆ ಕಥೆ ಆಯ್ತು..."

"ಅದಕ್ಕೇ ಅಂದದ್ದು ಭಲೇ ಖದೀಮರೇ ಈ ಗ್ಯಾಂಗಿನಲ್ಲಿದ್ದಾರೇಂತ....ಪುರಾವೆ ದೊರೀದಿದ್ರೆ ಇವೆಲ್ಲಾ ಗೆಸ್ ಪೇಪರುಗಳೇ ತಾನೆ? ಏನುಮಾಡೋಕೆ ಸಾಧ್ಯ?"

"ಅಂತೂ ನಮ್ಗಂತೂ ಇಲ್ಲೀವರೆಗೂ ಬಂತ ....''

"ಏನು ಗತೀನೆತಿ ನಮ್ಮಕ್ಕಿಗೆ ಬೇಕಾಗಿತ್ತೋದ, ಪ್ಯಾಸು. ಅವ್ರ ಹೆತ್ತವ್ರಿಗೂ ಅದೇ ತಾನೆ?"

''ಹೌದ್ರಿ ಮೊನ್ನೆ ನಮ್ಮ ಹಿಕ್ಕವ ಸತಿಪ್ಪಮ್ಮ ಬಂದಿದ್ರು. ಅಚೆಮನೆ ಲಕ್ಷ್ಮವ್ವನವ್ರ ಮಗ ತರಗತಿಯಲ್ಲೇ ಕೇಳನೆ ಸುವನಂತೆ. ಮೊನ್ನೆ ಬಂದು ಗೋಳಿಟ್ಟಂತೆ. ಪರೀಕ್ಷೆ ಹ[illegible] ಬಂತು. ಏನಾದ್ರೂ, ಮಾಡಿ [illegible] ಸಲ ಒಂದು ಮೇಲೆ ಹಾಕ್ಸಿ. ಮುಂದಿನ ವರ್ಷ ಟ್ಯೂಶನ್ ಕೊಡಿಸ್ತೀನಂತ....'

'ಮತ್ತಿನ್ನೇನ? ಮಕ್ಳು ಹ್ಯಾಂಡ್ ಪ್ರ್ಯಾಕ್ಸ್ ಮಾಡೆಸ್ಕೊಳ್ಳಿ, ಪ್ರಯತ್ನ ಮಾಡ್ತಾರೆ,...... ಹಗಲೇನು, ರಾತ್ರಿಯೇನ?'

"ಸರ್ರಿ ಬೇರೊಂತಾದ ಮೇಲೆ ಕಾಳಸಂತೆಯೇನು? ಬೊಳ್ಳಸಂತೆಯೇನು?'

'ಅನ್ರೆ, ಈಗ ಸರ್‍ಗೆ ಕಾಳಸಂತೆಯಲ್ಲ......'

'ಯಾಕಿಲ್ಲ? ಕಂಟ್ರೋಲ್ ದರ ಎರಡು ರೂಪಾಯಿಗೂ ಕಮ್ಮಿ. ಅಂಗ್ಡಿಯವ್ರು ಮೂರೂವರೆಯಿಂದ ನಾಲ್ಕಂತಾರೆ...."

"ಅಲ್ವ, ಕಂಟ್ರೋಲಿದ್ದು ಸರ್ಕಾರ ಕೊಂಡ ಹಂಚೋ ಸಕ್ರೆ, ಅಂಗ್ಡೀದು ನೇರವಾಗಿ ಮಾರ್ಕೆಟ್ಟಿಗೆ ಬಂದ ಸಕ್ರೆ...''

"ಅಯ್ಯಪ್ಪ, ಮತ್ತೆ ನೋಡಿ, ಚಂದ್ರಶೇಖರರ ಕಥೆಯೇನಾಯ್ತು?"

''ಆಗೋದೇನು? ಚಂದ್ರಶೇಖರ ಚಂದ್ರಶೇಖರ ಚಂದ್ರಶೇಖರ ಪಾಹಿಮಾಂ ಅಂತ ಪ್ರಾರ್ಥಿಸುತ್ತಿದ್ದಾರಂತೆ.''

"ಯಾರು?"

''ಸುತ್ತ್ಯಾರು? ನಮ್ಮ ಇಂದಿರವ್ವ"

"ಯಾಕೆ ಅಂಥ ಗತಿ?''

"ಅಲ್ವೆ, ಇಲ್ವಾದ್ರೆ ಮರ್‍ಯಾದೆ ಹೋಗತ್ತೆ."

"ಏನು? ಯಾಕೆ?''

''ಚಂದ್ರಶೇಖರರು ತಾನು ಮಾಡಿದ್ದು ತಪ್ಪೂಂತ ಒಪ್ಪಿಕೊಳ್ಳೋಕೆ ಸಿದ್ಧರಿಲ್ಲ..

(ಒಂಭತ್ತನೇ ಪುಟ ನೋಡಿರಿ)

ನಿಮಗೆ ಕೊಡುಗೆಯ ಸಮಸ್ಯೆಯಿದೆಯೇ?

ನಿಮ್ಮ ಬಂಧುಗಳಿಗಾಗಲೀ ಮಿತ್ರರಿಗಾಗಲೀ, ನೀವು ಉಡುಗೊರೆಕೊಡಲು ಇಚ್ಛಿಸುವ ಸಂದರ್ಭಗಳಲ್ಲೆಲ್ಲಾ ಸಿಂಡಿಕೇಟ್ ಬ್ಯಾಂಕಿನ ಗಿಫ್ಟ್ ಸರ್ಟಿಫಿಕೇಟುಗಳು ಅತ್ಯಂತ ಪ್ರಶಸ್ತವೆನಿಸುವುವು

ಜಯಂತಿ ಶೇರ್ ಸರ್ಟಿಫಿಕೇಟುಗಳು	ಪಕ್ವಗೊಳ್ಳುವ ಅವಧಿ 5 ವರ್ಷಗಳು. 10, 100, 1000 ಗಳ ಮೌಲ್ಯಗಳಲ್ಲಿ ದೊರೆಯುತ್ತವೆ.
ಮಕ್ಕಳ ಹಿತರಕ್ಷಣೆಯ ಸರ್ಟಿಫಿಕೇಟುಗಳು	ಪಕ್ವಗೊಳ್ಳುವ ಅವಧಿ 18 ವರ್ಷಗಳವರೆಗೆ ವಿಸ್ತರಿಸಬಹುದು. ರೂ. 10, 25, 50, 100 ಮತ್ತು 1000 ಗಳ ಮೌಲ್ಯಗಳಲ್ಲಿ ದೊರೆಯುತ್ತವೆ.

ಈ ಸರ್ಟಿಫಿಕೇಟುಗಳನ್ನು ನೀವು ಹುಟ್ಟುಹಬ್ಬ ಉಪನಯನ, ವಿವಾಹ, ಪರ್ವದಿನ ಮತ್ತು ಇತರ ಸಂತೋಷ ಸಂದರ್ಭಗಳಲ್ಲಿ ನಿಮ್ಮ ಬಂಧುಗಳಿಗೆ ಮತ್ತು ಆಪ್ತರಿಗೆ ಉಡುಗೊರೆಯಾಗಿ ನೀಡಲು ಇದು ಉತ್ತಮ ಸಾಧನ

ಮಕ್ಕಳ ಹಿತರಕ್ಷಣೆಯ ಸರ್ಟಿಫಿಕೇಟುಗಳು ನಿಮ್ಮ ಮಕ್ಕಳ ಭವಿಷ್ಯದ ಅನುಕೂಲತೆಗಳಿಗೆ, ಮಕ್ಕಳ ಕಾಲೇಜು ವಿದ್ಯಾಭ್ಯಾಸಕ್ಕೆ, ಅವರ ವಿವಾಹಗಳಿಗೆ, ಅವರು ಪ್ರಾರಂಭವಾಗ ಯಾವುದಾದರೂ ಉದ್ಯಮಗಳಲ್ಲಿ ತೊಡಗುವುದಿದ್ದರೆ ಬಂಡವಾಳ ತೊಡಗಿಸಲು ಅತ್ಯಂತ ಪ್ರಯೋಜನದಾಯಕ ನಿಮ್ಮ ಅವಶ್ಯಕತೆಗಳಲ್ಲಿ ಈ ಸರ್ಟಿಫಿಕೇಟುಗಳು ತುಂಬ ಪ್ರಯೋಜನಕಾರಿಯಾಗುತ್ತವೆ.

ಸಿಂಡಿಕೇಟಿನ ಇತರ ಭದ್ರತಾ ಠೇವಣಿ ಯೋಜನೆಗಳು

ನಿವೃತ್ತಿ ಭದ್ರತಾ ಸರ್ಟಿಫಿಕೇಟುಗಳು	20 ವರ್ಷ
ಸ್ವಯಂ ನಿಸ್ತರಣಾ ಸರ್ಟಿಫಿಕೇಟ್	ಮಾಯದ ಸಂಕಲ್ಪ ತಾನಾಗಿ ಹೆಚ್ಚುವರಿಯುವ ಠೇವಣಾತಿ.
ಸಮಾಜ ಭದ್ರತಾ ಠೇವಣಾತಿಗಳು	ನಿವೃತ್ತಿಯ ನಂತರದ ವೇಳೆಯ ಅವಶ್ಯಕತೆಗಳನ್ನು ಪೂರೈಸಲು ತಿಂಗಳು ತಿಂಗಳು ಕಟ್ಟುವ ಯೋಜನೆಗಳು
ಆಸ್ತಿ ತೆರಿಗೆ ಠೇವಣಾತಿ	ಆಸ್ತಿ ತೆರಿಗೆ ಕರವು ಪಾವತಿಸಲು ಅನುಕೂಲವಾದ ಯೋಜನೆ.

ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರತಿಯೊಂದು ಬ್ಯಾಂಕಿಂಗ್ ವ್ಯವಹಾರಕ್ಕೆ
ಪ್ರತಿಯೊರ್ವನ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ	ಶಾಖೆಗಳು 262ಕ್ಕೂ ಮಿಕ್ಕಿವೆ.	ಶ್ರೀ ಟಿ. ಎ. ಪೈ ಚೇರ್ಮನ್.

ಗಾಂಧೀಜಿಯ ಜೀವನ ದರ್ಶನ

ಲೇ|| ಶ್ರೀ ಶ್ರೀಮನ್ನಾರಾಯಣ, ಗುಜರಾತ್ ರಾಜ್ಯಪಾಲ.

ಭಾರತೀಯರು ಗಾಂಧೀಜಿಯ ಉಜ್ವಲ ಆದರ್ಶಗಳನ್ನು ಕಾಲಾನುಕ್ರಮದಲ್ಲಿ ಮರೆತಿದ್ದಾರೆ. ಅವರ ಜೀವನ ಕೃತಿಗಳನ್ನು ಕಡೆಗಣಿಸಿದ್ದೇವೆಂದೂ ಅಭಿಪ್ರಾಯ ವ್ಯಾಪಿಸಿದೆ. ಇದರ ಬಗ್ಗೆ ಆತ್ಮಶೋಧನೆ, ಯಥಾರ್ಥ ಚಿಂತನೆ ಮಾಡಿ ರಾಷ್ಟ್ರೀಯ ಅಭಿವೃದ್ಧಿಗಾಗಿ ನೀತಿ ಪ್ರಣಾಳಿಕೆಗಳನ್ನು ರೂಪಿಸುವುದು ನಮ್ಮ ಪವಿತ್ರ ಕರ್ತವ್ಯವಾಗಿದೆ.

ಗಾಂಧೀಜಿ ಅನೇಕ ಜಟಿಲ ಸಮಸ್ಯೆಗಳನ್ನೂ, ಕಷ್ಟಕೋಟಲೆಗಳನ್ನೂ ವ್ಯಕ್ತಿನಿಷ್ಠವಾಗಿ, ಯಥಾರ್ಥವಾಗಿ ಪರಿಹರಿಸುತ್ತಿದ್ದ ಕಾರ್ಯಶೀಲ ಆದರ್ಶವಾದಿಯಾಗಿದ್ದರು. ಅವರು ದೇಶ ಸ್ವಾತಂತ್ರ್ಯಕ್ಕಾಗಿಯೂ ತ್ಯಾಗ ಮಾಡದಿರುವಂತಹ ಕೆಲವು ಮೂಲತತ್ವಗಳನ್ನು ಅನುಸರಿಸುತ್ತಿದ್ದರು.

ಗಾಂಧೀ ವಿಚಾರಧಾರೆ ಯಾವುದೋ ಭಾವನಾ ವೈಪರೀತ್ಯ ಅಥವ ಕಾಲ್ಪನಿಕತೆಯಿಂದ ಕೂಡಿದೆಯೆಂಬ ಭಾರತೀಯ ಹಾಗೂ ವಿದೇಶೀ ತಜ್ಞರ ಅಭಿಪ್ರಾಯ ಸರಿಯಲ್ಲ. ಕೆಲವು ಅನಂತ ಸತ್ಯತತ್ವಗಳ ಬುನಾದಿಯ ಮೇಲೆ ಬೆಳೆಸಿರುವ ಗಾಂಧಿ ವಿಚಾರಸರಣಿ ಅತ್ಯಂತ ವಾಸ್ತವವಾಗಿವೆ; ವ್ಯವಹಾರ್ಯ ಪೂರ್ಣವಾಗಿವೆ.

ನೈತಿಕ ಸುಧಾರಣೆ

ಮಾನವ ಜೀವನದ ಸುಖ ಶಾಂತಿಗಳ ಮಟ್ಟದ ಏರಿಕೆಗೆ ಪ್ರತಿ ಮಾನವನ ನೈತಿಕ ಮಟ್ಟದ ಸುಧಾರಣೆಗಾಗಿ ಗಾಂಧೀಜಿ ಹಗಲಿರುಳೂ ಶ್ರಮಿಸಿದರು. ಬೃಹತ್ ಯಂತ್ರಗಳ ರಚನೆಯಿಂದ, ರಾಕ್ಷಸಾಕಾರದ ಕಾರ್ಖಾನೆಗಳ ಸ್ಥಾಪನೆಯಿಂದ ಕ್ಷಿಪ್ರವಾಗಿ ಆರ್ಥಿಕ ಸಮೃದ್ಧಿಗಾಗಿ ಐಶ್ವರ್ಯ ಶೇಖರಿಸುವುದರಿಂದ ಯಾವುದೇ ದೇಶವೂ ಮಹೋನ್ನತಿಗೆ ಏರಲಾರದೆಂದು ಗಾಂಧೀಜಿ ನಿರಂತರ ಎಚ್ಚರಿಸುತ್ತಿದ್ದರು. ಜನತೆಯ ಜೀವನಮಟ್ಟದ ಏರಿಕೆಗೆ ಈ ಸಾಧನೆಗಳು ಮುಖ್ಯವಾದರೂ, ದೇಶದ ಜನತೆಯ ಪ್ರತಿಭೆ, ಹೃದಯ ಶ್ರೀಮಂತಿಕೆಗಳಿಂದ ದೇಶದ ಮುನ್ನತಿ, ಗೌರವಗಳು ಇಮ್ಮಡಿಸುತ್ತವೆ. ವೈಯಕ್ತಿಕ ಹಿತಾಸಕ್ತಿಗಳನ್ನು ದೇಶ ಹಿತದ ಸಲುವಾಗಿ ತ್ಯಾಗಮಾಡಲು ಸಿದ್ಧವಾಗಿರುವ ಜನತೆಯಿಂದ ದೇಶದ ಕೀರ್ತಿ ಉಜ್ವಲವಾಗುತ್ತದೆ.

ಗಾಂಧೀಜಿ ದೇಹ ದಾರ್ಢ್ಯತೆ ಹೊಂದಿರದಿದ್ದರೂ, ಸ್ಫೂರ್ತಿದಾಯಕ ರೂಪಿಲ್ಲದಿದ್ದರೂ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದವರಲ್ಲಿ ಗಾಢ ಪ್ರಭಾವ ಬೀರುವುದರಲ್ಲಿ ಯಶಸ್ವಿಯಾದರು. ಅವರ ಸತ್ಯಪ್ರಿಯತೆ, ಅಹಿಂಸೆ, ತ್ಯಾಗಶೀಲತೆ ಹಾಗೂ ಸೇವಾದೀಕ್ಷೆ ಅವರ ವ್ಯಾಪಕ ಪ್ರಭಾವದ ರಹಸ್ಯವಾಗಿತ್ತು. ಅವರು ದೇಶ ಸ್ವಾತಂತ್ರ್ಯಗಳಿಕೆಗಾಗಿ ಸರ್ವ ತ್ಯಾಗಕ್ಕೆ ಸಿದ್ಧರಾಗಿದ್ದರು. ಆದರೆ ಗಾಂಧೀಜಿ ಹೊಂದಿದ್ದ ಮೌಲಧರ್ಮಗಳ ಆದರ್ಶ ಭಾರತದ ಸ್ವರಾಜ್ಯದ ಗಳಿಕೆಗಿಂತಲೂ ಪ್ರಿಯವಾಗಿತ್ತು.

ಗುರಿಸಾಧನೆಗಾಗಿ ಯಾವುದಾದರೊಂದು ವಿಧಾನ ಅನುಸರಿಸುವ ತತ್ವವನ್ನು ಗಾಂಧೀಜಿ ಒಪ್ಪಲಿಲ್ಲ. ಅವರಿಗೆ ಗುರಿಸಾಧನೆಯಷ್ಟೇ ವಿಧಾನವೂ ಪವಿತ್ರವಾಗಿತ್ತು. ಅವರು ವಿಧಾನವನ್ನು ಬೀಜಕ್ಕೂ, ಗುರಿಸಾಧನೆಯನ್ನು ವೃಕ್ಷಕ್ಕೂ ಹೋಲಿಸುತ್ತಿದ್ದರು.

ಇಂದು ಶೀಘ್ರ ಫಲ ಬಯಸುವ ಅನೇಕರು ಲೂಟಿ, ಹಿಂಸಾಕೃತ್ಯಗಳಲ್ಲಿ ತೊಡಗಿ, ಜನಜೀವನವನ್ನು ಕಲಕಿ ಸಮಸ್ಯೆಯ ಮೇಲೆ ಗಮನ ಸೆಳೆಯಲು ಯತ್ನಿಸುತ್ತಾರೆ. ಇಂತಹ ಬಲಾತ್ಕಾರಗಳಿಗೆ ಬಲಿಯಾಗುವುದು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾಗುತ್ತವೆ. ಹಿಂಸಾಚಾರದಿಂದ ಅಧಿಕ ತೊಂದರೆಗಳುಂಟಾಗಿ ಪರಿಸ್ಥಿತಿ ಹದಗೆಡುತ್ತದೆ. ಮಿಲಿಟರಿ ಕಾರ್ಯಾಚರಣೆಯ ಮೂಲಕ ರಾಷ್ಟ್ರೀಯ ಅಂತರ್‌ರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರ ದೊರಕದೆಂಬ ಅರಿವು ಇಂದಿನ ವಿಶ್ವ ನಾಯಕರಲ್ಲಿ ಮೂಡಿರುವುದರಿಂದ ಸಂಧಾನ ಮಾರ್ಗಾನುಸರಣೆಗೆ ಒಲಿಯುತ್ತಿದ್ದಾರೆ. ಈ ಅನುಭವಗಳಿಂದ ಉದಾತ್ತ ಗುರಿ ಸಾಧನೆಗೆ ಪವಿತ್ರ ಮಾರ್ಗ ಅನುಸರಿಸುವ ಗಾಂಧೀಜಿ ತತ್ವದ ಯಥಾರ್ಥತೆಯು ಅಗತ್ಯದ ಅರಿವಾಗುತ್ತಿದೆ.

ಅಚಲ ದೈವ ನಂಬಿಕೆ

ಗಾಂಧೀಜಿಯು ಸತ್ಯ, ಅಹಿಂಸೆಗಳ ಪ್ರೇಮ, ಅವರು ಹೊಂದಿದ್ದ ಅಚಲ ದೈವ ನಂಬಿಕೆ ಹಾಗೂ ಪ್ರಾರ್ಥನಾ ಶಕ್ತಿಯ ಬುನಾದಿಯಾಗಿದ್ದಿತು. ಅವರ ದೃಷ್ಟಿಯಲ್ಲಿ ದೇವರೆಂದರೆ ಸತ್ಯ, ಸತ್ಯವೆಂದರೆ ದೇವರು; ಜೀವ, ಬೆಳಕು, ಪ್ರೇಮಗಳ ಮೂಲ. ಅವರ ದೈವನಂಬಿಕೆ ಕುರುಡು ನಂಬಿಕೆಯಾಗಿರಲಿಲ್ಲ.

ಆಧುನಿಕ ಯುಗದ ಹೆಸರಾಂತ ವಿಜ್ಞಾನಿಗಳೂ ರಹಸ್ಯ ಶಕ್ತಿ ರಹಸ್ಯ ಜ್ಞಾನಗಳು ಅಸ್ತಿತ್ವದಲ್ಲಿರುವುದನ್ನು ಒಪ್ಪಿದ್ದಾರೆ. ನಿರಂತರ ಆತ್ಮದ ಅಸೀಮ ಶಕ್ತಿಯ ಕಿರು ಪರಿಚಯವನ್ನು ಪರಮಾಣು ಶಕ್ತಿ ಮಾಡಿಕೊಡುತ್ತದೆ. ಗಾಂಧೀಜಿ ಅಚಲ ದೈವ ನಂಬಿಕೆ ಹೊಂದಿದ್ದುದರಿಂದಾಗಿ ನಿರ್ಭೀತಿಯಿಂದ, ಅಪೂರ್ವ ಸ್ಥೈರ್ಯದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿಂಸಾಚಾರ ಎದುರಿಸಲು ಸಾಧ್ಯವಾಯಿತು. ಈ ಆತ್ಮಶಕ್ತಿ ಅವರ ನಿರಂತರ ಹೋರಾಟ, ಯಶಸ್ಸುಗಳಿಗೆ ಮಾರ್ಗ ತೋರಿತು. ಈ ಆಧ್ಯಾತ್ಮಿಕ, ನೈತಿಕ ಮೌಲ್ಯಗಳನ್ನು ಪುನಶ್ಚೇತನ ಗೊಳಿಸದಿದ್ದರೆ, ನಮ್ಮ ದೇಶದಲ್ಲಿ ವ್ಯಾಪಿಸಿರುವ ನಿರಾಶೆ, ಗೊಂದಲ, ಭ್ರಷ್ಟಾಚಾರಗಳಿಂದ ಮುಕ್ತಿ ಪಡೆಯಲಾಗುವುದಿಲ್ಲ. ಇದೊಂದು ನಿರರ್ಥಕ ಶ್ರಮವಾಗುತ್ತದೆ.

ಬೆಳಗು—ಸಂಜೆಯ ಪ್ರಾರ್ಥನೆ ಗಾಂಧೀಜಿಯ ಸಾರ್ವಜನಿಕ ಜೀವನದ ಅಖಂಡತೆಯಲ್ಲಿ ಸ್ಥಾನ ಪಡೆದಿತ್ತು. ಅವರು ದೇಶ ಸ್ವಾತಂತ್ರ್ಯಕ್ಕಾಗಿ ಜೀವನ್ಮರಣ ಹೋರಾಟ ನಡೆಸಿದಾಗಲೂ ಪ್ರಾರ್ಥನೆಯನ್ನು ಕೈಬಿಡಲಿಲ್ಲ. ಗಾಂಧೀಜಿಗೆ ಪ್ರಾರ್ಥನೆ 'ಪರಿಶುದ್ಧತೆ'ಯ ಸ್ನಾನವಾಗಿತ್ತು.

ಬಾಪುವಿನ ವೈಯಕ್ತಿಕ ಜೀವನ ಸರಳತನ, ಉಪವಾಸ ಚಿಂತನೆಗಳು ಜ್ವಲಂತ ದೃಷ್ಟಾಂತವಾಗಿತ್ತು. ಜಾತ್ಯತೀತತೆಯೆಂದರೆ ಜೀವನದಲ್ಲಿ ಧರ್ಮಕ್ಕೆ ಸ್ಥಾನ ನೀಡದಿರುವುದೆಂಬ ನಂಬಿಕೆಯನ್ನು ಗಾಂಧೀಜಿ ಹೊಂದಿರಲಿಲ್ಲ. ಆದರೆ ಸರ್ಕಾರ ಯಾವುದೊಂದು ಧರ್ಮಕ್ಕೂ ವಿಶೇಷ ಆಶ್ರಯ ನೀಡುವಂತಿಲ್ಲ. ಜನತೆ ನಂಬಿಕೆಗನುಸಾರವಾಗಿ ಧರ್ಮಾಚರಣೆ ಮಾಡುವ ಸ್ವಾತಂತ್ರ್ಯವಿದೆ ಎನ್ನುವ ಅಭಿಪ್ರಾಯ ಹೊಂದಿದ್ದರು.

ವಸುಧೈವ ಕುಟುಂಬಕಂ

ಗಾಂಧೀಜಿಗೆ ಯಾವುದೊಬ್ಬ ವ್ಯಕ್ತಿಯೂ ಅಪರಿಚಿತನಾಗಿರಲಿಲ್ಲ; ವಿದೇಶೀಯನಾಗಿರಲಿಲ್ಲ. ಎಲ್ಲ ಮಾನವರನ್ನೂ ದೇವರು ಒಂದುಗೂಡಿಸಿರುವನೆಂದೂ ಬಾಪೂ ತಿಳಿದಿದ್ದರು. 'ವಸುಧೈವ ಕುಟುಂಬಕಂ' ಎಂಬ ನುಡಿಯು ಆದರ್ಶ ಬಾಪುವಿನ ಉದಾತ್ತ ವ್ಯಕ್ತಿತ್ವದ ಸಂಘಟಿತ ಶಕ್ತಿಯಾಗಿತ್ತು. ಬಾಪೂ ಇತರ ದೇಶಗಳಿಂದ ಕಲಿತುಕೊಂಡು ಅದರ ಒಳ್ಳೆಯ ಶೀಲಗಳನ್ನು ಅನುಸರಿಸುವ ಗುಣ ಹೊಂದಿದ್ದರು.

ಗಾಂಧೀಜಿ ದಯಾಳುವಾಗಿದ್ದರೂ, ಸಹಾನುಭೂತಿಯಾಗಿದ್ದರೂ ಅನ್ಯಾಯದ ವಿರುದ್ಧ ಅವಿಶ್ರಾಂತ ಚಳವಳಿ ಹೂಡಲು ಹಿಂಜರಿಯಲಿಲ್ಲ. ಗಾಂಧೀಜಿ ಅತ್ಯಗಾಧ ಪ್ರೇಮದೊಂದಿಗೆ, ಅನ್ಯಾಯದ ವಿರುದ್ಧ ಅತೀವ ಪ್ರತಿಭಟನೆಯನ್ನು ಮಾಡುವ ಶಕ್ತಿಹೊಂದಿದ್ದರು.

ಭಾರತದ ವಿವಿಧ ಭಾಗಗಳಲ್ಲಿದ್ದ ಸಹಸ್ರಾರು ಸಾಮಾಜಿಕ, ರಾಜಕೀಯ ಕಾರ್ಯಕರ್ತರೊಂದಿಗೆ ಬಾಪೂ ಹೊಂದಿದ್ದ ಬಾಂಧವ್ಯದಲ್ಲಿ ಮಾನವೀಯತೆಯಿತ್ತು. ಸಾಧಾರಣ ಕಾರ್ಯಕರ್ತನೊಬ್ಬನು ಗಾಂಧೀಜಿಯ ಸ್ವಂತ ಬರಹದ ಅನೇಕ ಪತ್ರಗಳನ್ನು ಪಡೆಯುತ್ತಿದ್ದುದು ಅದ್ಭುತ ಅಂಶವಾಗಿತ್ತು.

ಬಾಪೂ ದೈನಂದಿನ ಜೀವನದ ವಿವಿಧ ಕಾರ್ಯಗಳಲ್ಲಿ ತೀವ್ರ ಎಚ್ಚರಿಕೆ ವಹಿಸುತ್ತಿದ್ದರು ಅವರು ಯಾವೊಂದು ಅಂಶವನ್ನೂ ಕಡೆಗಣಿಸದೆ ಮಿತ್ರರಿಗೂ, ಕಾರ್ಯಕರ್ತರಿಗೂ ಸವಿವರ ಸಲಹೆ ನೀಡುತ್ತಿದ್ದರು. ಸಹಾಯಕರ್ತರ ಮಾಡುವ ಅನಾಚರಣೆಯ, ಅಲಕ್ಷ್ಯದ ಕೆಲಸವನ್ನು ಬಾಪೂ ಸಹಿಸುತ್ತಿರಲಿಲ್ಲ.

ಆತ್ಮಶುದ್ಧಿ

ಗಾಂಧೀಜಿ ವೈಯಕ್ತಿಕ ಜೀವನದಲ್ಲಿ ಅಸಾಧಾರಣ ವಿನಮ್ರಿಯಾಗಿದ್ದರು. ಗಾಂಧೀಜಿ ವಿನಯಶೀಲರಾಗಿದ್ದರು. ಅವರು ಪ್ರತಿ ಸೋಮವಾರವೂ 'ಮೌನಾಚರಣೆ' ಮಾಡುತ್ತಿದ್ದರು. ಇದರಿಂದ ಅವರು ಅತಿಥಿಗಳನ್ನು ಭೇಟಿಯಾಗದಿರುವುದರಿಂದ ವಿಶ್ರಾಂತಿ ದೊರಕಿ 'ಹರಿಜನ ಪತ್ರಿಕೆ'ಗೆ ಲೇಖನ, ಟಿಪ್ಪಣಿ ಬರೆಯಲು ಕಾಲಾವಕಾಶ ದೊರಕುತ್ತಿತ್ತು.

ಗಾಂಧೀಜಿ ಇತರ ನ್ಯೂನತೆಗಾಗಿ ದೋಷ ಹುಡುಕುವವರ ಬದಲು, ವಿಫಲತೆಗಾಗಿ ತಮ್ಮಲ್ಲೇ ಕಾರಣ ಶೋಧಿಸುತ್ತಿದ್ದರು. ಆಶ್ರಮದ ಕಾರ್ಯಕರ್ತರಲ್ಲಿರುವ ನ್ಯೂನತೆಯನ್ನು ಪತ್ತೆ ಮಾಡಿದಾಗ ಅವರನ್ನು ದಂಡಿಸದೆ ಆತ್ಮಶುದ್ಧಿಗಾಗಿ ಉಪವಾಸ ಮಾಡುತ್ತಿದ್ದರು. ಆದ್ದರಿಂದ ಗಾಂಧೀ ಜನ್ಮಶತಾಬ್ದಿ ಸಂವತ್ಸರದಲ್ಲಿ ಅವರ ಭೌತಿಕ ಸ್ಮಾರಕ ರಚನೆಗಾಗಿ ನಿಧಿ ಕೂಡಿಸದೆ, ನಮ್ಮ ಆತ್ಮಶೋಧನೆ ಮಾಡಿಕೊಂಡು, ಉದಾತ್ತ ಪರಿಶುದ್ಧ ಜೀವನ ನಡೆಸಲು ಯತ್ನಿಸುವುದೇ ಅತ್ಯುತ್ತಮ ಮಾರ್ಗವಾಗುತ್ತದೆ.

ಇಂದಿನ ಸಾರ್ವಜನಿಕ ಜೀವನವು ಅಸತ್ಯ, ಅನೈತಿಕತೆಗಳಿಂದ ದೂರವಾಗಿದೆ. ನಾವೆಲ್ಲರೂ ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನದಲ್ಲಿ ಸರಳತೆ, ಸಜ್ಜನಿಕೆ ಮತ್ತು ಪಾರದರ್ಶಕ ಪ್ರಾಮಾಣಿಕತೆ ಪ್ರಾಚೀನ ಮೌಲ್ಯಗಳನ್ನು ಅರಿತುಕೊಂಡು ಅನುಸರಿಸಿದ್ದರೆ ಗಾಂಧೀಜಿಯ ಕನಸು ಸಾಕಾರವಾಗುತ್ತದೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
92 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711, 5712, 5713 } 3 Lines.

ಮಾಸ್ತಿ ಶ್ರೀನಿವಾಸ ಅಯ್ಯಂಗಾರ
ಕಿರುಕತೆ 'ಶ್ರೀರಾಂ' ಹೇ! ಶ್ರೀನಿವಾಸ!
ತಮ್ಮನ ನಗುವಿನಲ್ಲೇ ಕರಗುತಿಹ
ವಾಸ
ಕನ್ನಡದ ಕಣ್ವ ಹೇ! ಹಿರಿಯಣ್ಣ 'ಮಾಸ್ತಿ'
ಸಾಹಿತ್ಯ ಬಳಗಕ್ಕೆ ತಾವೇ 'ಮಹಾ ಆಸ್ತಿ'.

ಕಾಮರಾಜ

ಕಾಮರಾಜನ ಮಗನೆಂದ, ಬ್ರಹ್ಮಚಾರಿ
ಆಗಲಾರನ. "ರಾಜಕೀಯ ವ್ಯಭಿಚಾರಿ"
ಆದಲೂ ಕೊರಳಿಗೆ ಬೀಳ ಜಯಮಾಲೆ
ಬಯಸಿದನು ತಾ ಮಂತ್ರಿ ಪದವಿಯ
ಬಾಲೆ.

—"ಜೀವಕಿನಂದ" ಮಿರ್ಜಾನ.

ಟಿಪ್ಪಣಿಗಳು

ಕಾಂಗ್ರೆಸ್ಸ್ ಭಸ್ಮಾಸುರನಲ್ಲ

ಅಹಮ್ಮದಾಬಾದಿನಲ್ಲಿ ಭಾರತದ ಗೃಹ ಮಂತ್ರಿ ಶ್ರೀ ಯಶವಂತರಾವ್ ಚವಾಣರು ಕಾಂಗ್ರೆಸ್ಸ್ ಭವನದಲ್ಲಿ ಕಾಂಗ್ರೆಸ್ಸಿಗರ ಮಧ್ಯೆ ಮಾತಾಡುತ್ತ ಕಾಂಗ್ರೆಸ್ಸ್ ಆತ್ಮಹತ್ಯೆ ಮಾಡಿಕೊಳ್ಳಲು (ಭಸ್ಮಾಸುರ?) ಹುಟ್ಟಿರುವ ಪಕ್ಷವಲ್ಲ, ಅದು ಕಾರ್ಯಪೂರ್ತಿಗಾಗಿ ಹುಟ್ಟಿರುವ ಪಕ್ಷವೆಂದರು. ಮಹಾತ್ಮಾ ಗಾಂಧೀಜೀಯವರು ಸ್ವಾತಂತ್ರ್ಯ ಪ್ರಾಪ್ತಿಯಾದೊಡನೆ ಕಾಂಗ್ರೆಸ್ಸನ್ನು ವಿಸರ್ಜಿಸಬೇಕೆಂದು ಹೇಳಿದ್ದರು. ಅದಕ್ಕೆ ಅವರ ಜನ್ಮಶತಾಬ್ದಿ ಆಚರಿಸುವ ವೇಳೆಯಲ್ಲಿ ಕಾಂಗ್ರೆಸ್ಸಿಗರ ಪರವಾಗಿ ಶ್ರೀ ಚವಾಣರು ತಕ್ಕ ಬದಲಿತ್ತಿದ್ದಾರೆ.

ಕಾಂಗ್ರೆಸ್ಸ್ ಹುಟ್ಟಿದ್ದುದು ಏತಕ್ಕಾಗಿ? ೧೮೫೭ರ ಸ್ವಾತಂತ್ರ್ಯ ಸಮರಾಗ್ನಿಯ ಬಿಸಿ ಕಂಡಿದ್ದ ಬ್ರಿಟಿಷನೊಬ್ಬನು, ಆ ರಾಷ್ಟ್ರೀಯತೆಯ ಜ್ಯೋತಿಯನ್ನಾರಿಸಿ ಬಿಡಲಿಕ್ಕಾಗಿ ಇಂಡಿಯನ್ ನೇಶನಲ್ ಕಾಂಗ್ರೆಸ್ಸೆಂಬ ಕಾಸರಕದ ವಿಷಬೀಜವನ್ನು ಬಿತ್ತಿದನು. ಜನತೆಯನ್ನು ರಾಜಕೀಯ ಭಿಕ್ಷುಕರನ್ನಾಗಿ ಮಾಡುವ ಉದ್ದೇಶದಿಂದ ಉದ್ಭವಿಸಿದ ಕಾಂಗ್ರೆಸ್ಸ್ ನಗರಸಭೆ, ನ್ಯಾಯಾಂಗಗಳಲ್ಲಿ ಭಾರತೀಯರಿಗೆ ಸ್ಥಾನ ಕೇಳುವ ಕೆಲಸವನ್ನು ಮಾಡುತ್ತಿತ್ತು. [illegible] ಕಬ್ಬಿಣವನ್ನೂ ಚಿನ್ನವನ್ನಾಗಿಸುವ ಭಾರತೀಯರು ಕಾಂಗ್ರೆಸ್ಸ್ ಕಾರ್ಯದಿಂದ ಸಿಹಿ ಫಲವನ್ನು ತೆಗೆಯಲು ಪ್ರಯತ್ನಿಸಿದರು.

ಲೋಕಮಾನ್ಯ ಬಾಲಗಂಗಾಧರ ತಿಲಕರವರು 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕೆಂದರು, ಕಾಂಗ್ರೆಸ್ಸ್ ಒಂದು ಪಕ್ಷವಲ್ಲ, ಪಕ್ಷಗಳ ಪಕ್ಷ—ಹೀಗಾಗಿ ರಾಜಕೀಯ ಪಕ್ಷಗಳ ಕಾಂಗ್ರೆಸ್ಸ್, ಅದನ್ನು ಸ್ವರಾಜ್ಯ ಪ್ರಾಪ್ತಿಯ ನಂತರ ವಿಸರ್ಜಿಸಬೇಕೆಂದು ಮಹಾತ್ಮಾ ಗಾಂಧೀಜಿ ಅಂದೇ ಹೇಳಿ ಅನ್ಯಾನ್ಯ ರಾಜಕೀಯ ಮುಖಂಡರನ್ನು ಒಲಿಸಿಕೊಂಡಿದ್ದರು.

೧೯೪೭ರ ನಂತರ ನಡೆದದ್ದಾದರೂ ಏನು? ಗಾಂಧೀಜಿಯವರ ಕೊಲೆಯೊಂದಿಗೆ ಆ ಕಾಂಗ್ರೆಸ್ಸಿನ ಕೊಲೆಯೂ ನಡೆದು ಹೋಗಿದೆ.

೧೯೪೭ರ ನಂತರ ಅದ್ಯಾವ ಉದ್ದೇಶಕ್ಕಾಗಿ ಅದು ಉಳಿಯಬೇಕಾಗಿತ್ತು? ಸ್ವಾತಂತ್ರ್ಯಸಮರವೇ (ಶಾಂತಿಪೂರ್ಣ) ಅದರ ಗುರಿಯಾಗಿತ್ತು. ಓಹೋ! ಪಾಕಿಸ್ತಾನ, ಅರ್ಧ ಕಾಶ್ಮೀರ್, ನೇಫಾ....... ಬಿಡುಗಡೆ ಆಗಬೇಕೇನು? ಅಖಂಡ ಭಾರತದ ನಿರ್ಮಾಣ ಕಾಂಗ್ರೆಸ್ಸಿನ ಗುರಿ ಏನು? ಪೂರ್ಣ ಸ್ವಾತಂತ್ರ್ಯ ಸಿಕ್ಕಿದೊಡನೆ ಅದನ್ನು ವಿಸರ್ಜಿಸಲಾಗುತ್ತದೇನು?

ಅದಲ್ಲವಾದಲ್ಲಿ ಕಾಂಗ್ರೆಸ್ ಯಾವ ಗುರಿಯಿಂದ ಹುಟ್ಟಿರುತ್ತದೆ? ಅದೆಂದು ತನ್ನ ಗುರಿಯನ್ನು ಸೇರಿತು? ಅದಕ್ಕೆ ಶ್ರೀ ಚವಾಣರೇ ಬದಲೀಯಲು ಶಕ್ತರು. ಅವರು ಮುಂದೆಂದೂ ಅದು ಆತ್ಮಹತ್ಯೆ ಮಾಡಿಕೊಳ್ಳಲು (ಭಸ್ಮಾಸುರನಂತೆ) ಹುಟ್ಟಿರುವ ಪಕ್ಷವಲ್ಲವೆಂದಿದ್ದಾರೆ. ಹಾಗಾದರೆ ಯಾವುದಾದರೊಂದು ರಾಷ್ಟ್ರೀಯ ಪಕ್ಷವು ಅದನ್ನು ನಾಶಮಾಡಬೇಕೆಂದಾಯಿತು. ಈ ರಾಜಕೀಯ ಬಕಾಸುರನನ್ನು ಬಡಿದುಹಾಕುವ ಭೀಮನೆಲ್ಲಿದ್ದಾನೆ?

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

I. A. 2 in R.L.P. 140/67.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್,
ಮಣಿಪಾಲ ... ಅರ್ಜಿದಾರ

ವಿರುದ್ಧ

1) [illegible] — ಅಬ್ದುಲ್ [illegible] ಸಾಹೇಬರ ಮಗ, [illegible] ಗ್ರಾಮ, ಉಡುಪಿ ತಾಲೂಕು.
2) [illegible] — [illegible] ಮಗ, [illegible] ಗ್ರಾಮ, ಉಡುಪಿ ತಾಲೂಕು.
3) [illegible] — [illegible] ಅಬ್ದುಲ್ [illegible] ಸಾಹೇಬರ ಮಗ, [illegible] ಗ್ರಾಮ, ಉಡುಪಿ ತಾಲೂಕು.
—ಪ್ರತಿವಾದಿ

ಈ ಮೇಲಿನ ಕೇಸಿನ ಪ್ರತಿವಾದಿಗಳೇ, ಮೇಲ್ಕಂಡ ಅಮಲ್ಜಾರಿಯಲ್ಲಿ ತಾ. 26.7.68 ರಂದು ಕೋರ್ಟಿನವರು ಮಾಡಿದ ಹುಕುಂನ್ನು ರಿವ್ಯೂ (review) ಮಾಡಿ ಪುನಃ ಸದರಿ ಅಮಲ್ಜಾರಿ "closed" ಎಂಬ ಹುಕುಂ ರದ್ದು ಮಾಡಬೇಕಾಗಿ ಮೇಲಿನ ಅರ್ಜಿ ಹಾಕಿದ್ದು ಇದರಿಂದ ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ನೀವು ಈ ಕೋರ್ಟು ಮುಂದೆ ತಾ. 30-6-69 ನೇ ದಿವಸ ಹಗಲು ಗಂಟೆ 11ಕ್ಕೆ ಹಾಜರಾಗಿ ಹಾಜರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವುದು.

M. DAMODAR KAMATH,
Advocate for Petitioner.

ಉಡುಪಿ, ತಾ. 1.4.69.

ಸಂಪ್ರದಾಯಿಕತಾ ವಿರೋಧಿ ಪಕ್ಷವು ಸಾಂಪ್ರದಾಯಿಕ ಪಕ್ಷವಾಗುತ್ತಿದೆ

ಶ್ರೀಮತಿ ಸುಭದ್ರಾ ಜೋಷಿಯವರು ಸಾಂಪ್ರದಾಯಿಕತಾ ವಿರೋಧಿ ಪಕ್ಷವನ್ನು ಆರಂಭಿಸಿ ಕೆಲವು ಸಮ್ಮೇಳನಗಳನ್ನು ನಡೆಸಿದ್ದಾರೆ. ಯಾವ ಸಂಪ್ರದಾಯವನ್ನು ಶ್ರೀಮತೀಜೀಯವರು ವಿರೋಧಿಸುತ್ತಾರೆಯೋ ಗೊತ್ತಾಗುವದಿಲ್ಲ. ಗಂಡನ ಹೆಸರನ್ನು (ಅದರಲ್ಲೂ ಕುಟುಂಬದ ಹೆಸರು) ಸೇರಿಸಿಯೇ ತನ್ನ ಹೆಸರಿನೊಂದಿಗೆ ಸೇರಿಸಿಕೊಳ್ಳುವದು ಒಂದು ಸಂಪ್ರದಾಯ. ಸುಭದ್ರಾವತಿ ಜೋಷಿಯವರನ್ನು ಮದುವೆಯಾದ ಮೇಲೆ ಸುಭದ್ರಾ ಜೋಷಿಯಾಗುತ್ತಾರೆ. ಮದುವೆಯೇ ಒಂದು ಸಂಪ್ರದಾಯ. ಇದನ್ನು ಎದುರಿಸಲು ಶ್ರೀಮತೀಜೀಯವರಿಗೆ ಸಾಧ್ಯವಾಗಿರುವದಿಲ್ಲ. ಈ ರೀತಿ ಇದೆ ಸಂಪ್ರದಾಯಿಕತಾ ವಿರೋಧಿ ಸಮಿತಿಯ ಆರಂಭ.

ಶ್ರೀಮತೀಜೀಯವರು ಈ ಸಮಿತಿಯನ್ನು ಆರಂಭಿಸಿರುವದು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಎದುರಿಸುವ ಉದ್ದೇಶದಿಂದ ಇದೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಅದರ ಸಮ್ಮೇಳನದಲ್ಲಿ ಕೇಳಿ ಬಂದ ಮಾತು ಅಷ್ಟೇ. ಸಂಪ್ರದಾಯಿಕತಾ ವಿರೋಧಿ ಪಕ್ಷವು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನೇ ಗುರಿಯಾಗಿಟ್ಟುಕೊಂಡಿದ್ದು, ಆ ರೀತಿಯ ಸಾಂಪ್ರದಾಯಿಕ ಪಕ್ಷವಾಗುತ್ತಿದೆ.

ಸಂಘದ ಕುರಿತು ಕೇವಲವಾಗಿ ಮಾತಾಡುವದೇ ಅವರ ಸಂಪ್ರದಾಯ. ಕಾಂಗ್ರೆಸ್ಸ್-ಸೆಕ್ಯುಲರಿಸಮಿನ ಕಾಮಾಲೆ ದೃಷ್ಟಿಯಿಂದ ಕಂಡಲ್ಲಿ ಮಾತ್ರ ಸಂಘವು ದೇಶ ವಿರೋಧಿ ಸಂಸ್ಥೆಯಂತೆ ಕಂಡುಬರುತ್ತದೆನ್ನುವದು ಭಾರತದ ಗೃಹಮಂತ್ರಿ ಶ್ರೀ ಯಶವಂತರಾವ್ ಚವಾಣರ ಅಭಿಪ್ರಾಯ. ಸಂಘವನ್ನು ತಡೆಗಟ್ಟಲು ತಾವು ಅಸಮರ್ಥರಿದ್ದು, ಅದರ ಬೆಳವಣಿಗೆಯನ್ನು ತಗ್ಗಿಸಲು—ಕೃಷ್ಣನನ್ನು ಕೊಲ್ಲಲು ಕಂಸನಿಗೆ ಸಾಧ್ಯವಾಗದಿರುವಂತೆ—ತಮ್ಮಿಂದ ಸಾಧ್ಯವಿಲ್ಲವೆಂದು ಕಾಂಗ್ರೆಸ್ ಮಂತ್ರಿಮಂಡಳ ಏಕಕಂಠದಿಂದ ಬಿಡದೆ ಘೋಷಿಸುತ್ತಿದೆಯಾದರೂ ಶ್ರೀಮತೀಜೀಯವರು "ಹೆಂಗಸಿನ ಬುದ್ಧಿ"ಯನ್ನು ತೋರಿಸುತ್ತಿದ್ದಾರೆ. ಅದು ಕಾಂಗ್ರೆಸ್ಸಿನ ಪ್ರಳಯಕ್ಕೇ ದಾರಿ ಇದೆ.

ಮೂಲತಃ ಮತಗಳು ಹಗೆತನವನ್ನು ಹೇಳಿಕೊಡುವುದಿಲ್ಲ

ಇದು ಭಾರತದ ಗೃಹಮಂತ್ರಿ ಶ್ರೀ ಯಶವಂತರಾವ್ ಚವಣರ ಅಭಿಪ್ರಾಯ. ಶ್ರೀ ಚವಾಣರು ಅದೆಷ್ಟು ಮತಗಳ ಅಭ್ಯಾಸ ನಡೆಸಿರುವರೋ ಗೊತ್ತಿಲ್ಲ. ಅವರಿಗೆ ಗೊತ್ತಿರುವದು ಒಂದೇ ಒಂದು ಮತ, ಅದನ್ನೇ ಅವರು ಓಟು ಎಂಬ ಹೆಸರಿನಿಂದ ಕರೆಯುತ್ತಾರೆ. ಅಂತಹವರು ಮೂಲತಃ ಮತಗಳು ಹಗೆತನವನ್ನು ಹೇಳಿಕೊಡುವದಿಲ್ಲವೆನ್ನುವಾಗ ಮೂಲತಃ ಅದೇನೋ, ಹಗೆಯು ಹೊಗೆ ಆಡುತ್ತಿದೆನ್ನುವದು ತಿಳಿದುಬರುತ್ತದೆ. ಶ್ರೀ ಚವಣರು ಯಾವ ಮತಗಳ ವಿಷಯ ಹೇಳಿರುವರು?—ಭಾರತೀಯ ಮತಗಳ ವಿಷಯವೇ? ಅನ್ಯ ದೇಶಗಳಿಂದ ಬಂದಿರುವ ಮತಗಳ ವಿಷಯವೇ?

ಬಾಯಿಬಲಿನ ಹೊಸ ಒಡಂಬಡಿಕೆಯಲ್ಲಿ ಯೇಸುವು ತಂದೆಯ ರಾಜ್ಯಕ್ಕೆ ತನ್ನ ಮೂಲಕ ಮಾತ್ರ ಹೋಗಲು ಸಾಧ್ಯವೆಂದೂ, ಸ್ವರ್ಗದ ಬೀಗದ ಕೈ ತನ್ನ ಬಳಿ ಇದೆಯೆಂದೂ ಹೇಳಿರುವನು. ರೋಮನ್ ಕೆಥೋಲಿಕರು ತಮ್ಮ ಪ್ರಾರ್ಥನೆಯಲ್ಲಿ ದೇವರ ಬಳಿ—ಪ್ರಪಂಚದಲ್ಲೆಲ್ಲಾ ಇರುವ ಜನಾಂಗಗಳನ್ನು ಹೇಗಾದರೂ ಕೆಥೋಲಿಕರನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾರೆ. ಹಾಗೆಯೇ ಕ್ರಿಸ್ತೀಯರ ಆತ್ಮಗಳಿಗೆ ಶಾಂತಿ ಸಿಗಲೆಂದು ಬೇಡಿಕೊಳ್ಳುತ್ತಾರೆ.

ಮುಸಲ್ಮಾನರ ಪ್ರಕಾರ ಅಲ್ಲಾ ಅಲ್ಲದೆ ಅದ್ಯಾವ ದೇವರೂ ಇರುವದಿಲ್ಲ.

ಯೆಹೋದ್ಯರೂ, ಕ್ರಿಸ್ತೀಯರೂ, ಮುಹಮ್ಮದೀಯರೂ ಕೊನೆಯ ದಿನ ಅಥವಾ ವರು. ಅಂದು ನಗಾರಿಯ ಶಬ್ದ ಕೇಳಬರುತ್ತದೆ. ಯೆಹೋದ್ಯರ ನಂಬಿಕೆಯ ಪ್ರಕಾರ ಯೆಹೋವಾನೂ, ಕ್ರಿಸ್ತೀಯರ ನಂಬಿಕೆಯಂತೆ ಕ್ರಿಸ್ತನೂ, ಮುಹಮ್ಮದೀಯರ ನಂಬಿಕೆಯಂತೆ ಅಲ್ಲಾನೂ ಬಂದು ವಿಚಾರಣೆಗೆ ಆರಂಭಿಸುತ್ತಾನೆ. ಆಯಾಯಾ ಮತದ ಮೇಲಿನ ನಂಬಿಕೆ ಇರುವವರಿಗೆ ಮಾತ್ರ ಸ್ವರ್ಗ ಸಿಗುತ್ತದೆ. ಉಳಿದವರು ನರಕಕ್ಕೆ ಹೋಗುತ್ತಾರೆ.

ಇವು ಹಗೆತನವನ್ನು ಹೇಳಿಕೊಡದ ನೀತಿಯೇನು? ಜಿಹಾದ್ ಏನಿದೆ? ಕಾಫಿರರನ್ನು ಕಡಿದು ಹಾಕಲು ಹೇಳುತ್ತಿಲ್ಲವೇನು? ಇದಕ್ಕಿಂತಲೂ ಭಿನ್ನವಾದ ಹಗೆತನವೆಂದರೇನು? ಅದು ಶ್ರೀ ಚವಾಣರಿಗೇನು ಗೊತ್ತು.

ಕಾಂಗ್ರೆಸ್ ಮುಂದಾಳು ಅಲಿ ಸಹೋದರರು ಮಹಾತ್ಮಾ ಗಾಂಧೀಜೀಯವರ ವಿಷಯದಲ್ಲಿ ಹೇಳಿದ್ದೇನು? ಕೊಲೆಗಡುಕ ಮುಹಮ್ಮದೀಯನೂ ಮಹಾತ್ಮರಿಗಿಂತ ಮಹತ್ವ ಉಳ್ಳವನಾಗಿದ್ದಾನೆ! ವಂದೇ ಮಾತರಂ ಹಾಡಬಾರದು. ಲೋಕಸಭೆ, ರಾಜ್ಯಸಭೆಗಳಲ್ಲೂ ಅಧ್ಯಕ್ಷರಿಗೆ ತಲೆಬಾಗಕೂಡದು......

ಶ್ರೀ ಚವಾಣರೆಂಬ ಉಷ್ಟ್ರಪಕ್ಷಿಯು ಹೊಂಡದೊಳಗೆ ಮುಖ ಮುಚ್ಚಿಕೊಂಡು ತನ್ನನ್ನಾರೂ ಕಾಣುವದಿಲ್ಲವೆಂದು ಭಾವಿಸಿಕೊಂಡಂತಿದೆ.

ಮತಗಳ ಮೂಲವೆಂದಲ್ಲಿ ಆಯಾಯ ಮತೀಯ ಗ್ರಂಥಗಳನ್ನು ನಾವು ಕಡೆಗಣಿಸುವಂತಿಲ್ಲ. ನಿಜವಾಗಿ ಅವೇ ಅವರ ಆಧಾರಶಿಲೆ ಇರುತ್ತವೆ. ಹಾಗೆ ಇರುವಾಗ ಬೈಬಲ್ ಮತ್ತು ಕುರಾನನ್ನು ಕ್ರಿಸ್ತೀಯರ ಹಾಗೂ ಮುಹಮ್ಮದೀಯರ ಮೂಲ ಆಧಾರಗಳೆನ್ನದೆ ಇರುವದು ಸರಿಯಲ್ಲ. ಅವುಗಳಲ್ಲಿ ಈ ರೀತಿ ಹಗೆಯು ಹೊಗೆ ಆಡುತ್ತಿರುವಾಗ ಇನ್ನು ಹಗೆತನವೇ ಅದರಲ್ಲಿಲ್ಲವೆಂದು ಅಂದುಬಿಟ್ಟರದೆಂತು ಆ ಮತೀಯ ಕೃತಿಗಳಿಗೆ ಅಪಚಾರವೆಸಗಲಿ, ಅನ್ಯಾಯ ಮಾಡಲಿ? ಶ್ರೀ ಯಶವಂತರಾಯರಿಗೆ ಇದು ಸಾಧ್ಯವಾಗಬಹುದು, ಕೆಲವರಿಗೆ ನಡುಬಿಸಿಲೂ ಹುಣ್ಣಿಮೆಯ ಬೆಳದಿಂಗಳಿನಂತೆ ಇರುತ್ತದಂತೆ! ಶ್ರೀ ಚವಾಣ್ ಆ ಗುಂಪಿಗೆ ಸೇರಿದವರೆಂಬರು. ಅದೇ ಗುಂಪು ಚೀನಿಂದ ಅಪಾಯವೇ ಇಲ್ಲವೆಂದು ಹಿಂದೆ ಹೇಳಿಲ್ಲವೇನು? ಇದೂ ಅದೇ ರೀತಿಯ ರಾಜಕೀಯ ಅಷ್ಟೇ.

ಶ್ರೀ ಚವಾಣರಿಗೆ ಬೇರೆ ಯಾವುದಾದರೂ ಮೂಲ ಇದೆಯೋ ಗೊತ್ತಿಲ್ಲ.

ಹುಬ್ಬಳ್ಳಿ ದುರ್ಘಟನೆ-ಹಿಂದೂ ಸಂಘಟನೆ

ರಾವಣ ದಹನದ ಕಾಲದಲ್ಲಿ ಹುಬ್ಬಳ್ಳಿಯಲ್ಲಿ ನಡೆದಿರುವ ದುರ್ಘಟನೆಯು ರಾಷ್ಟ್ರೀಯರೆಲ್ಲರ ಕಣ್ತೆರೆಸುವಂತಹುದಿದೆ. ಅಲ್ಲಲ್ಲಿ ನಡೆದಿರುವ ದುರ್ಘಟನೆಗಳಿಗೂ ಇದಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಪಥಸಂಚಲನ ಹೋಗುವಾಗ ಮತೀಯ ಭಿನ್ನ ಭಾವವಿಲ್ಲದೆ ಜನರೆಲ್ಲರೂ ದಾರಿಯನ್ನು ಅಲಂಕರಿಸಿ

[illegible]

ಸ್ಥಿದ್ದರಲ್ಲದೆ ಪರಮ ಪವಿತ್ರ ಭಗವಾಧ್ವಜಕ್ಕೆ ಪುಷ್ಪ ಹಾಕಿ ಗೌರವಿಸುತ್ತಿದ್ದರು. ಅಂತಹ ಸ್ಥಳದಲ್ಲಿ ಈ ದುರ್ಘಟನೆ ನಡೆದಿರುವುದು, ರಾಷ್ಟ್ರೀಯರ ರಾಷ್ಟ್ರಭಕ್ತಿ ಹಾಗೂ ದೇಶಪ್ರೇಮದ ಕತ್ತರಿಸುವಂತಹದ್ದಿದೆ.

ಈ ದುರ್ಘಟನೆ ನಡೆಯುವ ಕೆಲವೇ ದಿನಗಳ ಹಿಂದೆ ಅಲ್ಲಿ ಮರಾಟಿ—ಕನ್ನಡ ಕಟಿಪಿಟಿ, ಮೂರಾಮೂರಿ ಸಣ್ಣ ಪ್ರಮಾಣದಲ್ಲಿ ನಡೆದಿತ್ತು. ಅಂದರೆ ಹಿಂದೂಗಳು ಅಲ್ಲಿ ಕಚ್ಚಾಡಿಕೊಂಡಿದ್ದರು. ಇದು ದುಷ್ಟಶಕ್ತಿಗಳಿಗೆ ಪ್ರೇರಣೆಯನ್ನುಂಟು ಮಾಡುವ ಘಟನೆಯೇ ಇದೆ.

ಅಲ್ಲದೆ ನಗರ ಸಭಾ ಚುನಾವಣೆಯ ಸಮಯ ಈ ಸ್ಥಾನವನ್ನು, ಅಧಿಕಾರವನ್ನು, ಗಳಿಸುವ ಮಹತ್ವಾಕಾಂಕ್ಷೆಯಿಂದ ಕಾಂಗ್ರೆಸ್ಸಿಗರು ಟಿಪ್ಪು ಸೇನೆಯವರಿಗೆ ಸಮುಹತ್ತ್ರಗಳನ್ನು (ರಾಮುನಿಪ್ರೋಗ್ರಂ) ಹಂಚಿ ಪ್ರೋತ್ಸಾಹ ಕೊಟ್ಟಿದ್ದಾರೆಂಬ ಸುದ್ದಿ ಪ್ರಕಟವಾಗಿದೆ. ಇಲ್ಲಿ ಕಮ್ಯೂನಿಸ್ಟರು ಬೇಳೆ ಬೇಯಿಸಿಕೊಳ್ಳಲು ಮುಂದಕ್ಕೆ ಬರುವುದರಲ್ಲೇನೂ ಆಶ್ಚರ್ಯವಿಲ್ಲ. ಪೀಕಿಂಗ್-ಪಿಂಡಿ ಋಣಯುಪ್ರಹೇನ ಪ್ರಗತಿಪಾಲ್ಗಿರುವಾಗ ಇಲ್ಲಿ ಕಮ್ಯೂನಿಸ್ಟ್-ಮುಸ್ಲಿಂ ಲೀಗಿಗಳು ಕರಮಿಲಾಯಿಸಿಕೊಳ್ಳುವುದರಲ್ಲಿ ವಿಶೇಷವೇನಿಲ್ಲ. ಅವರು ಟಿಪ್ಪು ಸೇನೆಗೆ ಬೆಂಬಲವನ್ನೀಯುವುದು ಸ್ವಾಭಾವಿಕವೇ ಇದೆ.

ಅಂದು ನಮ್ಮ ವಾತ್ಸಲ್ಯಮಯಿ ಮಾತೃಭೂಮಿಯ ಮೇಲೆ ಆಕ್ರಮಣ ನಡೆಸಲು ಹೆದರಿಕೊಂಡಿದ್ದ ಘೋರಿಯನ್ನು ಜಯಚಂದನು ಕರೆದುಕೊಂಡು ಬಂದು ತನ್ನ ಗೋರಿಯನ್ನೇ ಕಟ್ಟಿಕೊಂಡನು. ಅದೇ ರೀತಿ ಇಂದು ಇಲ್ಲಿಯ ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಕೊಡೆದಾಡಿಕೊಳ್ಳುತ್ತ ಗೋರಿ ಸಂತಾನವನ್ನು ತಮ್ಮ ಸಹಾಯಕ್ಕೆಂದು ಕರೆದುಕೊಂಡು ತಮ್ಮ ಗೋರಿಯನ್ನು ಕಟ್ಟಿಕೊಳ್ಳುವ ಕಾತುರದಿಂದಿವೆ. ಈ ದುರ್ಘಟನೆಗೆ ಮುಸ್ಲಿಂ ಮತಾಂಧರನ್ನು (ಟಿಪ್ಪು ಸೇನೆಯನ್ನು) ಬೆಳೆಸಿ, ಪ್ರೋತ್ಸಾಹಿಸಿ, ಪ್ರಚೋದಿಸಿ ಬಿಟ್ಟದ್ದು ಇಲ್ಲಿಯ ರಾಜಕೀಯ ಪಕ್ಷಗಳು. ಹಿಂದೂಗಳಲ್ಲಿರುವ ಬಿಕ್ಕಟ್ಟಿನ ಪೂರ್ಣ ಲಾಭವನ್ನು ಮತಾಂಧರು ಪಡೆಯುವ ಮಹದಾಶೆಯಿಂದ ಎದುರು ನೋಡುತ್ತಿದ್ದಾರೆ. ತಿಳಿದೂ ತಿಳಿದೂ, ಚರಿತ್ರೆಯ ಪುಟಗಳನ್ನು ನೋಡಿಯೂ ಮೇಲೂ, ತಾತ್ಕಾಲಿಕ ಭೋಗಕ್ಕಾಗಿ ನಮ್ಮ ರಾಜಕೀಯ ಪಕ್ಷಗಳು ಇಂತಹ ದೇಶವಿಘಾತಕ ನಿಮಾಜಪ್ರೇರಿತ ಕುಕೃತ್ಯಗಳನ್ನು ನಡೆಸುತ್ತಿವೆ. ಇನ್ನಾದರೂ ಹುಬ್ಬಳ್ಳಿ ದುರ್ಘಟನೆಯಿಂದ ಹಿಂದೂಗಳು ಪಾಠ ಕಲಿತುಕೊಂಡು ಹಿಂದೂ ಸಂಘಟನೆಗಾಗಿ ಮುಂದೆ ಬಾರದಿದ್ದಲ್ಲಿ ಅವರಿಗಾಗಿ ಗೋರಿ ಕಾದುಕೊಂಡಿದೆ, ಅಧಿಕಾರ, ವೈಯಕ್ತಿಕ ಆಕಾಂಕ್ಷೆಯೆಂಬ ಕಾಮ(ನೆ)ವನ್ನು ಭಾವುದೇಶಭಕ್ತಿಯೆಂಬ ಕಣ್ಣಿನ ನೋಟದಿಂದ ಸುಟ್ಟು ಭಸ್ಮೀಭೂತಗೊಳಿಸಿ; ಐಕ್ಯ-ಸಂಘಟನೆಗಾಗಿ ಎದ್ದೇಳಬೇಕಾಗಿದೆ. ಇದು ರಾಜಕೀಯ ಉದ್ಯಮಿಗಳ ಗಮನವನ್ನು ಸೆಳೆದೀತೇ?

ಹುಬ್ಬಳ್ಳಿ ದುರ್ಘಟನೆಯು ಹಿಂದೂ ಸಂಘಟನೆಗೆ ಒಂದು ಸೂಚನೆ ಇದೆ. ಈ ಮುನ್ಸೂಚನೆಯಂತೆ ನಡೆದುಕೊಳ್ಳದಿದ್ದಲ್ಲಿ, ಆಶೆಯ ಬಂಡಿ ಹಳಿತಪ್ಪಿ ಬೀಳುವದರಲ್ಲಿ ಆಶ್ಚರ್ಯವಿಲ್ಲ. ದುರ್ಘಟನೆ ನಮ್ಮ ಹುಬ್ಬಿನ ಬಳಿಯೇ ನಡೆದಿವೆ. ಆ ದೃಷ್ಟಿಯಿಂದ ಇನ್ನು ಇದ್ದಲ್ಲಿ ಕಣ್ಣೇ ಹೋದೀತು. ಅನಂತರ ಅಕ್ಕಿನ ಫಲ?

— ಶಿವಶಂಕರ

ಪವಿತ್ರ ಕ್ಷೇತ್ರ - ಸಬರಮತಿ ಆಶ್ರಮ

ಲೇ: ಎಸ್. ಗೋವಿಂದ್.

ಸಬರಮತಿ ನದಿಯ ದಂಡೆಯ ಮೇಲಿರುವುದರಿಂದ ಗಾಂಧೀಜಿಯವರ ಆಶ್ರಮಕ್ಕೆ ಸಬರಮತಿ ಆಶ್ರಮವೆಂದು ಹೆಸರು ಬಂದಿತು. ಭಾರತದ ವಿಮೋಚನೆಗಾಗಿ ಗಾಂಧೀಜೀಯವರು ಸತ್ಯ ಮತ್ತು ಅಹಿಂಸೆಯ ಅಪೂರ್ವ ಪ್ರಯೋಗವನ್ನು ಆರಂಭಿಸಿದ್ದು ಇಲ್ಲಿಯೇ.

1916ರಲ್ಲಿ ಅಹಮದಾಬಾದ್ ಕೊಚರಬ್‌ನಲ್ಲಿ ಸತ್ಯಾಗ್ರಹ ಆಶ್ರಮವೆಂದು ಹೆಸರು ಪಡೆದು ಈ ಆಶ್ರಮ ಪ್ರಾರಂಭವಾಯಿತು. ಆದರೆ ರಾಷ್ಟ್ರೀಯ ಚಳುವಳಿಗಳ ದೃಷ್ಟಿಯಿಂದ ಇದನ್ನು 1917ರಲ್ಲಿ ಸಬರಮತಿಗೆ ಸ್ಥಳಾಂತರಿಸಲಾಯಿತು. ಈ ಆಶ್ರಮ ಮುಂದೆ ರಾಷ್ಟ್ರೀಯ ಚಟುವಟಿಕೆಗಳ ಕೇಂದ್ರವಾಯಿತು.

ಉಪ್ಪಿನ ಸತ್ಯಾಗ್ರಹ ಕೈಗೊಳ್ಳಲು ಚರಿತ್ರಾತ್ಮಕ ಗಾಂಧೀಜೀಯವರ ದಂಡಿ ಯಾತ್ರೆ 1930ರ ಮಾರ್ಚಿಯಲ್ಲಿ ಇದೇ ಸಬರಮತಿಯಿಂದ ಪ್ರಾರಂಭವಾದದ್ದು. ಈ ದಂಡಿಯಾತ್ರೆ ಸಾರ್ವಜನಿಕ ಜನಜಾಗೃತಿಯ ಪ್ರತೀಕವಾಯಿತು. ಇದು ಸಾಮ್ರಾಜ್ಯಶಾಹಿಯನ್ನು ಎದುರಿಸಿ ನಿಲ್ಲಲು ಬೇಕಾದ ಶಕ್ತಿಯನ್ನು ನೀಡಿತು. ಬ್ರಿಟಿಷ್ ಸರ್ಕಾರವು ಈ ಜನತಾ ಚಳುವಳಿಯನ್ನು ಅಡಗಿಸಲು ಪ್ರಯತ್ನಪಟ್ಟಿತು. ಇದರಲ್ಲಿ ಭಾಗವಹಿಸಿದವರ ಆಸ್ತಿಪಾಸ್ತಿಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಆದರೆ ಗಾಂಧೀಜಿಯವರು ತಮ್ಮದೇ ಆದ ರೀತಿಯಲ್ಲಿ ಈ ಬಗ್ಗೆ ಪ್ರತಿಕ್ರಿಯೆಯನ್ನು ತೋರಿಸಿದರು. ಈ ಚಳುವಳಿಯಲ್ಲಿ ಭಾಗವಹಿಸಿ ಆಸ್ತಿಯನ್ನು ಕಳೆದುಕೊಂಡವರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲು ಗಾಂಧೀಜಿಯವರು ತಮ್ಮ ಆಶ್ರಮವನ್ನೇ ವಶಪಡಿಸಿಕೊಳ್ಳುವಂತೆ ಸರ್ಕಾರವನ್ನು ಬಲವಂತಪಡಿಸಿದರು. ಆದರೆ ಬ್ರಿಟಿಷ್ ಸರ್ಕಾರ ಆಶ್ರಮವನ್ನು ವಶಪಡಿಸಿಕೊಳ್ಳಲಿಲ್ಲ. ಆಗ ಗಾಂಧಿಯವರು ಆಶ್ರಮವನ್ನು ಆಶ್ರಮನಿವಾಸಿಗಳಿಗೆ ತೊರೆದು ಗುಜರಾತಿನ ಖೈರಾಜಿಲ್ಲೆಯಲ್ಲಿರುವ 'ರಾಸ್' ಎಂಬ ಹಳ್ಳಿಗೆ ಕಾಲುನಡಿಗೆಯಲ್ಲಿ ಹೋಗುವಂತೆ ತಿಳಿಸಿದರು. ಆದರೆ "ರಾಸ್" ಹಳ್ಳಿಗೆ ಚಲಿಸುವ ಮುನ್ನವೆ ಅವರನೆಲ್ಲಾ 1930 ಆಗಸ್ಟ್ 1ರಂದು ಬ್ರಿಟಿಷ್ ಸರ್ಕಾರ ಬಂಧಿಸಿತು. ಗಾಂಧಿಯವರು ಹದಿನೆಂಟು ವರ್ಷಗಳಿಂದ—ತಾವು ಯಾವ ಸಮರ್ಪಣಾ ಭಾವದಿಂದ ತಮ್ಮ ನೆಚ್ಚಿನ ಸಬರಮತಿ ಆಶ್ರಮವನ್ನು ಪ್ರವೇಶಿಸಿದ್ದರೋ, ಅದೇ ಸಮರ್ಪಣಾ ಭಾವದಿಂದ ಅದನ್ನು ತೊರೆದರು.

ಕೆಲವು ಕಾಲ ಆ ಆಶ್ರಮವು ನಿರ್ಜನವಾಗಿತ್ತು. ನಂತರ ಹರಿಜನರ ಮತ್ತು ದೀನದಲಿತರ ಕಲ್ಯಾಣಕ್ಕಾಗಿ ಆ ಆಶ್ರಮವನ್ನು ವಿದ್ಯಾಕೇಂದ್ರವನ್ನಾಗಿ ಮಾರ್ಪಡಿಸಲಾಯಿತು.

ಮಹಾತ್ಮಾ ಗಾಂಧಿಯವರು ಮಡಿದ ನಂತರ ಅವರ ನೆನೆಪಿಗಾಗಿ ರಾಷ್ಟ್ರೀಯ ಸ್ಮಾರಕ ನಿಧಿಯೊಂದು ಆರಂಭವಾಯಿತು. ನಿಧಿಯು ಇತಿಹಾಸ ಪ್ರಸಿದ್ಧವಾದ ಈ ಸಬರಮತಿ ಆಶ್ರಮದ ಬಳಿ ಅದೇ ರೀತಿಯ ಇತರ ಸ್ಮಾರಕ ಕಟ್ಟಡಗಳನ್ನು ಕಾಪಾಡಲು ತೀರ್ಮಾನಿಸಿತು. ಹೀಗೆ ಸಬರಮತಿ ಆಶ್ರಮದ ರಕ್ಷಣೆ ಹಾಗೂ ಸ್ಮಾರಕ ಟ್ರಸ್ಟ್ 1951ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸಬರಮತಿ ಆಶ್ರಮವನ್ನು ಪುನರುಜ್ಜೀವನಗೊಳಿಸಲಾಯಿತು. ಈ ಟ್ರಸ್ಟ್ ಗಾಂಧಿಯವರ ನಿವಾಸವಾದ 'ಹೃದಯಕುಂಜ'ವನ್ನು, ಅವರ ಪ್ರಾರ್ಥನಾ ಸ್ಥಳವಾದ 'ಉಪಾಸನ ಭೂಮಿ'ಯನ್ನು ಮತ್ತು 'ಮಗನ್ ನಿವಾಸ್' ವನ್ನು ಹೆಚ್ಚಿನ ಮಟ್ಟದ ಪರಿಶ್ರಮ ವಹಿಸಿ ರಕ್ಷಿಸಿಕೊಂಡು ಬರುತ್ತಿದೆ.

ಈ 'ಹೃದಯಕುಂಜ'ದಲ್ಲಿ ಗಾಂಧೀಜಿಯವರು ಮತ್ತು ಕಸ್ತೂರಿಬಾರವರು ಸುಮಾರು ಹನ್ನೆರಡು ವರ್ಷಗಳ ಕಾಲ ನೆಲೆಸಿದ್ದರು. ಈ ನಿವಾಸವು ಗಾಂಧಿಯವರ ಆದರ್ಶ ಹಾಗೂ ಸರಳ ಜೀವನಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಈ 'ಹೃದಯಕುಂಜ್' ಬಳಿಯಲ್ಲಿಯೇ ಗಾಂಧಿ ಸ್ಮಾರಕ ವಸ್ತು ಸಂಗ್ರಹಾಲಯ ಹೊಂದಿದೆ. ಇದನ್ನು ಜವಾಹರಲಾಲ್ ನೆಹರೂರವರು 1963ರ ಮೇ 10ರಂದು ಪ್ರಾರಂಭಿಸಿದರು.

ಈ ವಸ್ತು ಸಂಗ್ರಹಾಲಯದಲ್ಲಿ ಮಹಾತ್ಮ ಗಾಂಧಿಯವರಿಗೆ ಸಂಬಂಧಪಟ್ಟ ಪತ್ರಗಳ, ಛಾಯಾಚಿತ್ರಗಳು ಮತ್ತಿತರ ಕಾಗದಪತ್ರಗಳು ಮುಂತಾದವುಗಳನ್ನು ಸಂಗ್ರಹಿಸಲಾಗಿದೆ. ಅವರ ಲೇಖನದ ಸುಮಾರು ನಾಲ್ಕು ನೂರಕ್ಕೂ ಮಿಗಿಲಾದ ಹಸ್ತಪ್ರತಿಗಳನ್ನೂ, ವಿದೇಶದಲ್ಲಿ ಹಾಗೂ ಭಾರತದಲ್ಲಿ ಅವರು ಪ್ರವಾಸಗಳನ್ನು ಕೈಗೊಂಡಾಗ ಅವರಿಗೆ ಸಲ್ಲಿಸಿದ ಸುಮಾರು ಒಂದು ನೂರು ಭಾಷಣದ ಪ್ರತಿಗಳನ್ನೂ ಅವರ ಜೀವನಚಿತ್ರವನ್ನು ಪ್ರತಿಬಿಂಬಿಸುವ ಛಾಯಾಚಿತ್ರಗಳನ್ನೂ ಇಲ್ಲಿ ಸಂಗ್ರಹಿಸಲಾಗಿದೆ. ಅಲ್ಲದೆ ಸಬರಮತಿ ಆಶ್ರಮದಲ್ಲಿ ವಿಶೇಷ ಪುಸ್ತಕ ಭಂಡಾರವೊಂದಿದೆ. ಅಲ್ಲಿ ಆಶ್ರಮಕ್ಕೆ ಸೇರಿದ ನಾಲ್ಕು ಸಾವಿರ ಪುಸ್ತಕಗಳೂ, ಗಾಂಧಿಯವರ ಕಾರ್ಯದರ್ಶಿಯೂ ಹಾಗೂ ಪ್ರೀತಿಯ ಸಂಗಡಿಗರಾದ ಶ್ರೀ ಮಹದೇವ್ ದೇಸಾಯಿರವರು ಸಂಗ್ರಹಿಸಿದ ಸುಮಾರು ಮೂರು ಸಹಸ್ರ ಪುಸ್ತಕಗಳೂ, ಇವು ಅಲ್ಲಿನ ಮಹತ್ವವನ್ನು ಎತ್ತಿತೋರಿಸುತ್ತವೆ.

ಗಾಂಧಿಯವರಿಗೆ ಅವರ ಮಿತ್ರರೂ, ಹಿತೈಷಿಗಳೂ, ಅವರ ಅನುಯಾಯಿಗಳೂ ಬರೆದ, ಹಾಗೂ ಗಾಂಧಿಯವರು ಇತರರಿಗೆ ಬರೆದ ಪತ್ರಗಳಲ್ಲಿ ಸುಮಾರು ಮೂವತ್ತು ಸಹಸ್ರ ಪತ್ರಗಳನ್ನು ಇಲ್ಲಿ ಸಂಗ್ರಹಿಸಿಡಲಾಗಿದೆ. ಅದರಲ್ಲಿ ಕೆಲವು ಪತ್ರಗಳ ಮೂಲ ಪ್ರತಿಗಳನ್ನು, ಕೆಲವು ಮೈಕ್ರೋಫಿಲ್ಮ ಪ್ರತಿಗಳನ್ನು ಕಾದಿಡಲಾಗಿದೆ. ಇದು ಅಲ್ಲಿನ ಮತ್ತೊಂದು ಮಹತ್ವದ ವಿಷಯವಾಗಿದೆ.

ಈ ಸಂಗ್ರಹಣಾಕಾರ್ಯ ದಿನೇದಿನೇ ಬೆಳೆಯುತ್ತಿರುವುದರಿಂದ ಸಂಗ್ರಹಾಲಯಕ್ಕಾಗಿ ಹೊಸ ಯೋಜನೆಯನ್ನು ರೂಪಿಸಲಾಗಿದೆ.

ವರ್ಷಗಳು ಕಳೆದಂತೆ ಈ ಸಬರಮತಿ ಆಶ್ರಮ ಸಮೃದ್ಧವಾಗುತ್ತಿದೆ. ಅಲ್ಲಿ ವಸ್ತು ಭಂಡಾರ ಬೆಳೆಯುತ್ತಿದೆ. ಆಶ್ರಮ ಮತ್ತು ಇತರ ಸಂಸ್ಥೆಗಳು ಉತ್ಕರ್ಷ ಹೊಂದುತ್ತಿವೆ.

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—70 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಸುಖ ಸಂತಸದ ನೆಲೆಗಟ್ಟು-ಕುಟುಂಬಯೋಜನೆ

ಬರೆದವರು: ಪ್ರಧಾನಿ ಶ್ರೀಮತಿ ಗಾಂಧಿ

ತೀವ್ರತೆಯ ಬೇಸಾಯ ಹಾಗೂ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಸಮಾನ ಪ್ರಗತಿ ಸಾಧಿಸುವುದರಿಂದ ಗ್ರಾಮೀಣ ಬಡತನ ಜಯಿಸಲು ನಮಗೆ ಅವಕಾಶ ಸಿಗುತ್ತದೆ. ಈ ಕಾರ್ಯದಲ್ಲಿ ಒಂದರ ಸ್ಥಾನದಲ್ಲಿ ಮತ್ತೊಂದನ್ನು ಬದಲಾಯಿಸುವಂತಿಲ್ಲ

ಕುಟುಂಬಯೋಜನೆ ಫಲವಾಗಲೂ ಜನತಾ ಕಾರ್ಯಕ್ರಮವಾಗಿದೆ. ಇದರ ಯಶಸ್ಸು ವ್ಯಕ್ತಿಗಳನ್ನು ಅವಲಂಬಿಸಿದೆ. ಅವರನ್ನು ಭೇಟಿಯಾಗಿ ಮನವೊಲಿಸಿ, ಸಹಾಯ ಹಸ್ತ ನೀಡಿ ಕುಟುಂಬ ಯೋಜನೆ ಅನುಸರಿಸುವಂತೆ ಮಾಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಟ್ಟದಲ್ಲಿರುವ ಸಮಸ್ತ ಸರ್ಕಾರಿ ಕುಟುಂಬ ಯೋಜನಾ ಕಾರ್ಯಕರ್ತರು ಜನತೆಯ ಮನವೊಲಿಸಿ, ಸಹಾಯ ನೀಡಲು ಸನ್ನದ್ಧರಾಗಿದ್ದಾರೆ

ಕಲ್ಯಾಣ ಸಾಧನೆ

ನಾವು ಈ ಬೆಳೆಯುವ ಜನಸಂಖ್ಯಾ ನಿಯಂತ್ರಣವೆಂದು ಕರೆಯದೆ ಕುಟುಂಬ ಯೋಜನೆ ಎಂದು ಕರೆದಿರುವ ಉದ್ದೇಶ ಜನತೆಯ ಕಲ್ಯಾಣ ಸಾಧನೆಯೇ ಆಗಿದೆ. ಮಾನವ ನಿರ್ಮಿತ ಸಂಸ್ಥೆಗಳಲ್ಲಿ ಕುಟುಂಬವೇ ಅತ್ಯಂತ ನೈಜವಾದ ಹಾಗೂ ಅನಂತ ವ್ಯಾಪಿಯಾಗಿರುವುದರಿಂದ ಗಂಡ, ಹೆಂಡತಿ ಹಾಗೂ ಮಕ್ಕಳ ಸುಖ-ಸಂತೋಷ ಸಾಧನೆಯೇ ಈ ಕಲ್ಯಾಣ ಕಾರ್ಯಕ್ರಮದ ಗುರಿ. ಭಾರತೀಯ ಮಹಿಳೆಯರು ಮಕ್ಕಳ ಆರೋಗ್ಯ ಹಾಗೂ ಉತ್ತಮ ಭವಿಷ್ಯ ಸಂವರ್ಧನೆಯ ಕಾರ್ಯಕ್ರಮಕ್ಕೆ ಶೀಘ್ರವಾಗಿ ಒಗ್ಗೊಡುವರು.

"ನಾವು ಈಗ ಮೂರು-ನಾಲ್ಕು ವರ್ಷಗಳಿಂದೀಚೆಗೆ ಶ್ರದ್ಧೆ, ಉತ್ಸಾಹ ಹಾಗೂ ಸ್ಥಿರತೆಯಿಂದ ಕೈಗೊಂಡಿರುವ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಸಾಕಷ್ಟು ಪ್ರಮಾಣದ ಯಶಸ್ಸಿನ ಸಾಧನೆಯಾಗಿದೆ. ಆದರೆ ನನ್ನ ದೃಷ್ಟಿಗೆ ಅದು ಕೇವಲ ಫಲದಾಯಕಗಳಿಗೆ ಸೀಮಿತಗೊಂಡಿದೆ. ನಮ್ಮ ಪ್ರಜಾಕೋಟಿಯಲ್ಲಿ ಅತ್ಯಂತ ಶ್ರೀಮಂತ ವರ್ಗ, ಜೀವನ ಮಟ್ಟದಲ್ಲಿ ಸುಧಾರಣೆಗಾಗಿ ಆಶಿಸುವ ನಗರಗಳ ಮಧ್ಯಮವರ್ಗ ಹಾಗೂ ಕುಶಲ ಕೈಗಾರಿಕಾ ಉದ್ಯೋಗಿಗಳು ಸರ್ಕಾರ ನೀಡುತ್ತಿರುವ ಸೌಲಭ್ಯಗಳ ಪ್ರಯೋಜನ ಪಡೆಯುತ್ತಿದ್ದಾರೆ."

ಪ್ರಚಾರದ ಅಗತ್ಯ

ಕುಟುಂಬ ಯೋಜನೆ ಅನುಸರಿಸುವವರಿಗೆ ಸೂಕ್ತ ಸಲಹೆ, ಮಾರ್ಗದರ್ಶನ ಮತ್ತು ಸಹಾಯವನ್ನು ನೀಡಬೇಕಾಗಿದೆ. ಅತ್ಯಂತ ಹಿಂದುಳಿದಿರುವ ಹಾಗೂ ಜನಸಾಂದ್ರತೆ ದಟ್ಟವಾಗಿರುವ ಪ್ರದೇಶಗಳಲ್ಲಿ ತೀವ್ರತರ ಪ್ರಚಾರ ಕಾರ್ಯ ಹೆಚ್ಚು ಅಗತ್ಯವಾಗುತ್ತದೆ.

ಅನನುಭವಿ ನಿರೀಕ್ಷಕರು ನಮ್ಮ ಸಮಸ್ಯೆಗಳು ಹಾಗೂ ನ್ಯೂನತೆಗಳ ಬಗ್ಗೆ ಆಗಾಗ್ಗೆ ಮಾಡುವ ನಿರುತ್ಸಾಹಜನಕ ಮುನ್ಸೂಚನೆಗಳ ಬಗ್ಗೆ ನಾವು ಅನಗತ್ಯವಾಗಿ ಪ್ರಭಾವಿತರಾಗಬೇಕಾಗಿಲ್ಲ. ನಮ್ಮ ಅತ್ಯುತ್ತಮ ನಿರ್ಣಯದಂತೆ ನಾವು ಕಾರ್ಯೋದ್ಯುಕ್ತರಾಗಬೇಕಾಗಿದೆ.

ಸಾಮೂಹಿಕ ಬಡತನವಿರುವ ನಮ್ಮ ದೇಶದಲ್ಲಿ ಈ ಕಾರ್ಯವನ್ನು ವೈಯಕ್ತಿಕ ಪ್ರೇರೇಪಣೆಗೆ ಬಿಡುವಂತಿಲ್ಲ. ಒಂದು ನಿರ್ದಿಷ್ಟ ಮಟ್ಟದ ಸಾಕ್ಷರತೆ ಹಾಗೂ ಆರ್ಥಿಕ ಉನ್ನತಿ ಸಾಧನೆಯಾದ ನಂತರ ವೈಯಕ್ತಿಕ ಪ್ರೇರೇಪಣೆ, ಮನವೊಲಿಕೆಗೆ ಅವಕಾಶ ನೀಡುವುದು ಸಾಧ್ಯವಾಗುತ್ತದೆ. ಸಾಮೂಹಿಕ ಸಾಕ್ಷರತೆಯ ಸಾಧನ ಮತ್ತು ಅಭಿವೃದ್ಧಿ ಸಂವರ್ಧನೆಯ ಮೂಲಕ ಜಪಾನ್ ಕಳೆದ ಎರಡು ದಶಕಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ.

ದೃಢ ಅನುಷ್ಠಾನ

ಇಂತಹ ಮನೋಧರ್ಮ ವ್ಯಾಪಕವಾಗಿ ಹರಡುವವರೆಗೆ ಕಾಯುವುದು ಅಸಾಧ್ಯವಾದ್ದರಿಂದ, ಭಾರತದಲ್ಲಿ ದೃಢ ನಿರ್ಧಾರದಿಂದ ಅನುಷ್ಠಾನ ಮಾಡುತ್ತಿರುವ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮ ಅಗತ್ಯವಾಗುತ್ತದೆ.

ನಮಗೆ ಅನೇಕ ಅನುಕೂಲಗಳಿವೆ. ನಮ್ಮಲ್ಲಿ ಈ ಕಾರ್ಯಕ್ರಮಕ್ಕೆ ಪಾಶ್ಚಾತ್ಯ ದೇಶಗಳಲ್ಲಿರುವಂತೆ ವ್ಯವಸ್ಥಿತ ಧಾರ್ಮಿಕ ವಿರೋಧವಿಲ್ಲ; ಇಲ್ಲಿ ವಿದ್ಯಾವಂತರಾದ ವೈದ್ಯರಿಗೆ ಉನ್ನತ ಗೌರವ, ಆದರ ಸಲ್ಲುತ್ತದೆ. ಆದ್ದರಿಂದ ಪುರುಷ ಅಥವಾ ಮಹಿಳಾ ವೈದ್ಯರ ನಿರ್ಣಯಕ್ಕೆ ಬೆಲೆಯಿದೆ.

ನಮ್ಮ ಜನತೆಯು ಅನಾದರವೇ ಕುಟುಂಬ ಯೋಜನೆಯ ಪ್ರಚಾರಕರು. ಜನತೆಗೆ ವಿಧಾನವೊಂದರ ಸೌಲಭ್ಯಗಳ ಅರಿವಾದರೂ, ಸ್ವಂತ ಶ್ರಮ ವಹಿಸಲು ಮುಂದೆ ಬರುವುದಿಲ್ಲ. ಅವರ ಉತ್ಸಾಹ ಅಲ್ಪಾಯುವಾಗಿದೆ. ಇನ್ನೊಂದು ಮಹಾ ಸಮಸ್ಯೆ. ಈ ಕಾರಣಕ್ಕಾಗಿಯೇ ದೀರ್ಘಕಾಲೀನ ಪ್ರಭಾವವಿರುವ ಮಾಧ್ಯಮಕ್ಕಾಗಿ ಶೋಧನೆ ನಡೆದಿದೆ.

ಇತ್ತೀಚೆಗೆ ಕುಟುಂಬಯೋಜನಾ ಚಳುವಳಿಗೆ ಹೊಸ ಆಧಾರವೊದಗಿರುವುದು ಕಂಡುಬಂದಿದೆ. ಜೀವನದ ಇತರ ವ್ಯಾಪಾರಗಳಲ್ಲಿರುವಂತೆಯೇ [illegible] ಯು ಸಂಪರ್ಕವಿರುವುದು ಗೋಚರವಾಗಿದೆ. ಕುಟುಂಬ ಯೋಜನೆಯಿಂದ ನಮ್ಮ ದೇಶದಲ್ಲಿರುವ ವಿವಿಧ ಧಾರ್ಮಿಕ ಪಂಗಡಗಳ ಜನಸಂಖ್ಯಾ ಪ್ರಮಾಣದಲ್ಲಿ ಏರುಪೇರಾಗುವುದೆಂದೂ, ಆ ಮೂಲಕ ಧಾರ್ಮಿಕ ಪಂಗಡಗಳ ರಾಜಕೀಯ ಶಕ್ತಿ ಅಥವಾ ಸೌಲಭ್ಯದ ಪ್ರಮಾಣ ದುರ್ಬಲಗೊಳ್ಳುವುದೆಂದೂ ಪ್ರಚಾರ ನಡೆಯುತ್ತಿದೆ. ಇಂತಹ ಮಾರಕತತ್ವದ ತಪ್ಪು ಅಭಿಪ್ರಾಯವೇ ಜನತೆಗೆ ಒಪ್ಪಿಗೆಯಾಗಬಹುದು. ಸುಳ್ಳು ಅಭಿಪ್ರಾಯ, ನಂಬಿಕೆಗಳ ಹರಡುವಿಕೆ ಹಾಗೂ ಪ್ರಭಾವಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ. ಕುಟುಂಬ ಯೋಜನಾ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಇಂತಹ ಅಪಪ್ರಚಾರದ ವಿರುದ್ಧ ಹೋರಾಡಿ, ಕಾಲ್ಪನಿಕ ಭಯಗಳನ್ನು ಹೋಗಲಾಡಿಸಲು ಅತ್ಯಧಿಕ ಶ್ರಮ ವಹಿಸಬೇಕಾಗಿದೆ.

ಒಂದು ಕುಟುಂಬದ ನಿಯಂತ್ರಣ, ಶಿಕ್ಷಣ, ಆದರ ಹಾಗೂ ವೈದ್ಯ ಶುಶ್ರೂಷೆಗೆ ಹೆಚ್ಚಿನ ಅವಕಾಶ ನೀಡುತ್ತದೆ. ಇದು ಅಲ್ಪಸಂಖ್ಯಾತರ ಹಾಗೂ ಮತ್ತಿತರ ಪಂಗಡಗಳಿಗೂ ಪ್ರಮುಖಾಂಶವಾಗಿದೆ.

ಜೀವ ಸೃಷ್ಟಿಯ ರಹಸ್ಯಗಳ ಬಗ್ಗೆ ಈಗ ವಿಜ್ಞಾನದ ಗಮನ ಕೇಂದ್ರೀಕೃತವಾಗಬೇಕು. ಇದರಿಂದ ಕುಟುಂಬಗಳ ಸದಸ್ಯಸಂಖ್ಯೆ ಮಿತಗೊಳ್ಳುತ್ತದೆ; ದೇಶದ ಪ್ರಜಾಸಂಖ್ಯೆ ಸೀಮಿತವಾಗುತ್ತದೆ. ಈ ಭೂಗ್ರಹ ಎಷ್ಟು ಜನರಿಗೆ ಅವಕಾಶ ನೀಡಿ ಏನೇನು ಸುಖ, ಸಂತೋಷ ನೀಡಬೇಕೆಂಬುದನ್ನು ನಿರ್ಧರಿಸುತ್ತದೆ.

(ಚಂಡೀಗಡದಲ್ಲಿ ಮಾಡಿದ ಭಾಷಣದಿಂದ)

ರೈತರೇ ಭಾಗ್ಯವಿಧಾತರು

(ದ. ಮಂ. ಬಾರಡೆ)

ರೈತರು ಎಚ್ಚತ್ತಾಗಲೇ ಭಾರತದ ದುರ್ಭಾಗ್ಯ ಕೊನೆಗೊಂಡೀತು. ಭಾರತವು ಗ್ರಾಮಗಳ ದೇಶ. ರೈತನೇ ಗ್ರಾಮಗಳ ಯಜಮಾನ. ನವಜಾಗ್ರತಿಯ ಯಜ್ಞದ ಯಜಮಾನ ರೈತನೇ. ಗಾಂಧಿಯವರು ರಾಮರಾಜ್ಯದ ಮಂತ್ರ ಜಪಿಸಿ ಯಜ್ಞದ ಪೌರೋಹಿತ್ಯ ಮಾಡಿಯೇ ಇದ್ದಾರೆ! ಇಂದು ಭಾಗ್ಯವಿಧಾತನಾದ ರೈತನೇ ಗ್ರಹಗ್ರಸ್ತನಾಗಿದ್ದಾನೆ ಭಾರತದ ನವನಿರ್ಮಾಣವಾಗಬೇಕಾದರೆ ರೈತನೇ ಏ[illegible] ಮಾಡಬೇಕು?

೧. ಶಹರಗಳ ವೈಭವಕ್ಕೆ ಮರುಳಾಗಬಾರದು. ಗ್ರಾಮಗಳೇ ಶಹರೀ ಜೀವನದ ತಳಪಾಯ. ಶಹರಗಳು ಗ್ರಾಮೀಣರ ಋಣವಾಗಲೇಬೇಕು.

೨. ರೈತರು ಕೇವಲ ಅನ್ನಧಾನ್ಯ ಹಾಗೂ ಜೀವನೋಪಯೋಗಿ ವಸ್ತುಗಳನ್ನೇ ಬೆಳೆಸಲು ಪ್ರತಿಜ್ಞಾಬದ್ಧರಾಗಬೇಕು.

೩. ಶಹರಗಳನ್ನು ದ ವ್ಯಸನಕ್ಕೆ ಪುಷ್ಟಿ ದುರ್ದೆಶೆಗೆ ಈಡುಮಾಡುವ ತಂಬಾಕು ಹಾಗೂ ಮದ್ಯೋಪಯೋಗಿ ಶೇಂದಿ, ದ್ರಾಕ್ಷಿಗಳನ್ನು ಬೆಳೆಸಬಾರದು. ಇಂಥ ವ್ಯವಹಾರಗಳಲ್ಲಿ ಕೂಲಿಗಳಾಗಿಯೂ ದುಡಿಯಬಾರದು.

೪. ವಿಲಾಸ, ಕಾಮುಕತೆ, ಗನ್ನಗಾರಿಕೆಗಳನ್ನು ಪ್ರೇರೇಪಿಸುತ್ತಿರುವ ಚಿತ್ರಪಟ, ನಾಟಕ, ಸಿನೆಮಾ ಮೊದಲಾದ ಹಳ್ಳಿಗಳ ಸತ್ಯಾನಾಶ ಮಾಡುವ ಪ್ರವೃತ್ತಿಗಳ ಬಗ್ಗೆ ಒಂದು ಪೈಸಾ ಕೂಡ ಖರ್ಚು ಮಾಡಬಾರದು!

೫. ರೈತರು ಇಂದಿನ ಹೈಸ್ಕೂಲು ಕಾಲೇಜು ಶಿಕ್ಷಣದಲ್ಲಿ ಸಹಕರಿಸಬಾರದು. ಮಕ್ಕಳಿಗೆ ತಕ್ಕಷ್ಟು ಓದುಬರಹ ಕಲಿಸಿದರೆ ಸಾಕು.

೬. ಸರಕಾರದಿಂದ ಹೆಚ್ಚಿನ ಆರ್ಥಿಕ ಸಹಾಯ ಅಪೇಕ್ಷಿಸದೆ ಸ್ವಾವಲಂಬಿಯಾದ ಬಡತನದ ಜೀವನವನ್ನೇ ನಡೆಸಬೇಕು.

೭. ಎಲ್ಲ ರಾಜಕೀಯ ಪಕ್ಷಗಳ ಜನರ ಹೇಳಿಕೆಗಳನ್ನು ಕೇಳಿಕೊಳ್ಳಬೇಕು. ಆದರೆ ಸ್ವತಂತ್ರ ವಿಚಾರ ಮಾಡಿ ಯುಕ್ತ ಕಂಡಂತೆಯೇ ಮಾಡಬೇಕು.

೮. ಭಾರತವು ಶಾಕಾಹಾರಿ ಪ್ರಧಾನ ದೇಶ. ಮಾಂಸಾಹಾರವು ಒಂದು ವಿಕೃತಿ ಪರದೇಶ ಹಾಗೂ ಪರಕೀಯ ಸಂಸ್ಕೃತಿಯ ಅಂಧಾನುಕರಣ. ರೈತರು ಇದರಿಂದ ಮುಕ್ತರಾಗಲು ಪ್ರಯತ್ನಿಸಬೇಕು! ತಮ್ಮ ಬೇಸಾಯದಿಂದಲೇ ಉತ್ತಮ ಧಾನ್ಯ, ಹಣ್ಣುಹಂಪಲು, ಕಾಯಿಪಲ್ಯ ಬೆಳೆಸಬೇಕು. ಗೋಪಾಲನೆ ಮಾಡಿ ಹಾಲು ಮೊಸರು ಮಜ್ಜಿಗೆ ಬೆಣ್ಣೆ ಬೆಳೆಸಿಕೊಳ್ಳಬೇಕು. ಸಸ್ಯಪಾಲಕ ಕೃಷಿಯನ್ನೇ ನಾಶಮಾಡುತ್ತಿರುವ ಕುರಿ ಗೋಪನೆಗೆ ಬೀಳಬಾರದು, ಅನಿವಾರ್ಯವೇ ಆಗಿದ್ದರೆ ಸ್ವಂತ ಉಪಯೋಗದ ಮಟ್ಟಿಗೆ ಮಾತ್ರ ಕೋಳಿ ಸಾಕಿಕೊಳ್ಳಬೇಕು! ವರ್ಣಸಂಕರದ ಕೋಳಿಸಾಕಣೆಯು ಒಂದು ವ್ಯಸನವಾಗಿದೆ! ಕಸಕಡ್ಡಿ ಕ್ರಿಮಿಕೀಟಗಳನ್ನು ತಿಂದು ಬೆಳೆಯುವ ಕೋಳಿ ಸಾಕಣೆಯು ಒಂದು ಗೃಹಉದ್ಯೋಗವೆಂದೇನೋ ತಿಳಿಯಲಾಗುತ್ತದೆ ಆದರೆ ಗ್ರಾಮಸ್ವಚ್ಛತೆ ಇರಬೇಕಿದ್ದರೆ ಕೋಳಿಗಳ ಆಹಾರದ ಬಗ್ಗೆ ಪ್ರತ್ಯೇಕ ಖರ್ಚು ಮಾಡಬೇಕಾಗಿಯೇ ಬಂದೀತು. ಶಾಕಾಹಾರವೇ ಭಾರತೀಯ ಪ್ರಾಣವಾಗಿದೆ. ಮಾಂಸಾಹಾರವನ್ನು ಎಲ್ಲಿಯೂ ಹೊಗಳಿಲ್ಲ.

೯. ಗ್ರಾಮಪರಿವಾರ, ಗ್ರಾಮಸಂಘಟನ, ಗ್ರಾಮರಾಜ್ಯಗಳೇ ರಾಮರಾಜ್ಯದ ತಳಪಾಯ! ಮತ್ತು ರೈತರೇ ಅದನ್ನು ಕಟ್ಟಬಲ್ಲರು. ಜೈ ಕಿಸಾನ!

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ

ಹೋಟೆಲ್ ಸತ್ಕಾರ್

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27

ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ಸಕಲ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.

Phone: 28837
29887

HOTEL SATKAR
Boarding & Lodging
Near Corporation Office, 9, Mission Road
Bangalore—27

ಕಾಳಸಂತೆಯೇನು, ಬೊಳ್ಳಸಂತೆಯೇನು?

(ನಾಲ್ಕನೇ ಪುಟದಿಂದ)

"ಹೌದು...ತಾನು ಮಾಡಿದ್ದೇ ನ್ಯಾಯ ಅನ್ನುತ್ತಾರೆ...."

"ಇನ್ನು ಮುಂದೆ ಹಾಗೆ ಮಾಡೋದಿಲ್ಲಾಂತ ಹೇಳೋಕೂ ತಯಾರಿಲ್ಲ...."

"ಹ್ಞಾಂ...."

"ಈಗ ಇಂದಿರಮ್ಮ ಏನು ಮಾಡೋದು?"

"ಓ...."

"ಸುಮ್ಮನೆ ಕುಳಿತರೆ ಪ್ರಧಾನಿ ಪದವಿಗೆ ಅಪಮಾನ; ಬಾಯಿ ಮುಚ್ಚಿಕೊಳ್ಳೋಕೆ ಮನಸ್ಸಿಲ್ಲ. ಏನಾದರೂ ಕ್ರಮ ಕೈಕೊಳ್ಳಬೇಕವರಿಗೆ...."

'ಅದು ಹಾಗಾಯ್ತು.... ಮತ್ತೆ ಬಿಹಾರದಲ್ಲಿ?'

'ರಾಜಾ ಕೆ. ಎನ್. ಸಿಂಗರು ರಾಜೀನಾಮೆ ಕೊಡಿ ಸುಗಮ ದಾರಿ ತೋರಿಸಿದರು.......'

'ಅದೀಗ ಚಲೋದು....'

'ಯು.ಪಿ.ಯಲ್ಲಿ ಕಾಂಗ್ರೆಸ್ಸು ಬೇಗ ಪದವಿ ಉಳಿಸಿಕೊಂಡಿತು.........'

'ಭಾರಿ ವಿಶೇಷ....'

"ನಂಬೂದಿರಿಪಾದರು ಮುಂದೆ ದೇಶದಲ್ಲಿ ಎರಡೇ ರಾಜಕೀಯ ಪಕ್ಷಗಳಿರುವುವೆಂದಿದ್ದಾರೆ...."

'ಅಂದರೆ?'

"ಕಾಂಗ್ರೆಸ್ ಮುಂದಾಳುತನದ ಸಂಯುಕ್ತರಂಗವೊಂದು, ಕಮ್ಯುನಿಸ್ಟ್ ನೇತಾರರ ಸಂಯುಕ್ತರಂಗವಿನ್ನೊಂದು...."

"ಹ್ಞಾಂ...ಆದರೆ, ಇದರಿಂದೇನೂ ದೇಶಕ್ಕೆ ಹಿತವಾಗೋಕಿಲ್ಲ..."

"ಯಾಕೆ?"

"ಈಗ ಪಕ್ಷಾಂತರವಿರುವಂತೆಯೇ ಆಗ ರಂಗಾಂತರ ನಡೆಯುತ್ತೆ."

"ಭಾರೀ ಭೇಟಿ ಕಣೋ ನೀನು..."

"ಹ್ಞಾಂ, ಇಲ್ಲಾಂದ್ರೆ ಶಿವಣ್ಣ...."

"ಏನು?"

"ಏನೂ ಇಲ್ಲಣ್ಣ. ಅದೆಲ್ಲಾ ಬಾಯಲ್ಲಿ ಹೇಳೋಕೆ ಸಾಧ್ಯವಿಲ್ಲ...."

"ಬೇಡ ಕೃತಿಯಲ್ಲೇ...."

—ಗೋರಾ.

ಗ್ರಾಮೀಣ ಪ್ರದೇಶದಲ್ಲಿರುವ ವೈದ್ಯಕೀಯ ವಿದ್ಯಾರ್ಥಿಗಳ ಸೌಲಭ್ಯ

ಮಣಿಪಾಲ, ಮಾ. ೩೧—ಇಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜು ಗ್ರಾಮೀಣ ಪ್ರದೇಶದಲ್ಲಿರುವುದರಿಂದ ಅಸಾಮಾನ್ಯವಾದುದಾಗಿದೆ ಎಂದು ನವದೆಹಲಿಯ ಸಫ್ದರ್ ಜಂಗ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಾ ಸಲಹೆಗಾರರೂ, ವಿಶೇಷ ಅಧಿಕಾರಿಯೂ ಆಗಿರುವ ಡಾ| ಆರ್. ಡಿ. ಅಯ್ಯರ್ ನಿನ್ನೆ ಇಲ್ಲಿ ಅಭಿಪ್ರಾಯಪಟ್ಟರು.

ಗ್ರಾಮಾಂತರ ಜನರಿಗೆ ಹತ್ತಿರ ಇರುವುದರಿಂದ ಈ ಕಾಲೇಜಿನ ವಿದ್ಯಾರ್ಥಿಗಳು ಪಟ್ಟಣಗಳಲ್ಲಿರುವ ವೈದ್ಯಕೀಯ ವಿದ್ಯಾರ್ಥಿಗಳಿಗಿಂತ ಹೆಚ್ಚು ಸೌಲಭ್ಯವೊಂದಿದ್ದಾರೆಂದು, ಕಾಲೇಜ್ ದಿನೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಅವರು ಹೇಳಿದರು. ಡೀನ್ ಡಾ| ಕೃಷ್ಣರಾವ್‌ರವರು ವರದಿ ಓದುತ್ತಾ ಕಾಲೇಜಿನ ಪ್ರಿ-ಕ್ಲಿನಿಕಲ್ ವಿಭಾಗ ಮಣಿಪಾಲದಲ್ಲೂ ಕ್ಲಿನಿಕಲ್ ವಿಭಾಗ ಮಂಗಳೂರಿನಲ್ಲೂ ಇದ್ದು, ಪದವಿಪೂರ್ವ ಶಿಕ್ಷಣವಲ್ಲದೆ ವೈದ್ಯಕೀಯ ಹಾಗೂ ವೈದ್ಯಕೀಯೇತರ ಪದವೀಧರರಿಗಾಗಿ ಪದವಿಯೋತ್ತರ ಶಿಕ್ಷಣ ನೀಡುತ್ತಿದೆ ಎಂದರು. ಪದವಿ ಹಾಗೂ ಡಿಪ್ಲೊಮಾ ಶಿಕ್ಷಣ ಕೊಡುವ ಫಾರ್ಮಸಿ ಕಾಲೇಜು ಹಾಗೂ ಡೆಂಟಲ್ ಸರ್ಜರಿ ಕಾಲೇಜು ಈ ಕಾಲೇಜಿನ ಮಣಿಪಾಲ ವಿಭಾಗಕ್ಕೆ ಸೇರಿಕೊಂಡಿವೆ ಎಂದು ಹೇಳಿದರು.

ಕಾಲೇಜಿನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿದರು. ಪ್ರಿನ್ಸಿಪಲ್ ಡಾ|| ಎಂ. ವಿ. ಚಾರಿಯವರು ಆಭಾರ ಮನ್ನಿಸಿದರು.

ಪಡುಬಿದ್ರೆ ಆರೋಗ್ಯ ಕೇಂದ್ರದ ಹೊಸ ಕಟ್ಟಡ ಉದ್ಘಾಟನೆ

ಕಳೆದ ತಾ. ೩೦ರಂದು ಪಡುಬಿದ್ರೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ಕಟ್ಟಡದ ಉದ್ಘಾಟನೆಯು ಶ್ರೀ ಟಿ. ಎ. ಪೈಗಳವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಎಂ. ಮಧ್ವರಾಜರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಿ. ವೆಂಕಟ್ರಮಣ ರಾಯರು ಸ್ವಾಗತಿಸಿದರು. ಸಮಿತಿಯು ಕಟ್ಟಡದ ಸಹಾಯಾರ್ಥ ರೂ. ೧೨ ಸಾವಿರವನ್ನು ಸಂಗ್ರಹಿಸಿ ಕೊಟ್ಟಿದೆಯೆಂದು ಡಾ|| ಕೆ. ಕೆ. ಶೆಟ್ಟರು ವರದಿಯೊಪ್ಪಿಸಿದರು. ಶ್ರೀ ಟಿ. ಎ. ಪೈಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ಸರಕಾರವು ಕ್ಷಯ ಮೊದಲಾದ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಸರಕಾರೀ ವೈದ್ಯರನ್ನವಲಂಬಿಸಿರದೇ ಖಾಸಗೀ ವೈದ್ಯರನ್ನೂ ವಿಶ್ವಾಸದಿಂದ ಕಾಣಬೇಕೆಂದೂ, ಈ ಸಮಯದಲ್ಲಿ ಇಂತಹ ಆರೋಗ್ಯ ಖಾತೆ ತೆರೆದುದು ಪ್ರಶಂಸನೀಯವೂ ಆಗಿದೆಂದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ| ಕೆ. ಎಸ್. ಶ್ರೀನಿವಾಸ ರಾಯರು ಸರಕಾರ ನೇಮಿಸಿರುವ ಸಂಸ್ಥೆಯು ಸರಿಯಾಗಿ ಉಪಯೋಗಿಸಲ್ಪಡದೆ ಬೇರೆ ರೀತಿಯಲ್ಲೇ ಉಪಯೋಗಿಸಲ್ಪಡುತ್ತದೆಂದರು. ಶ್ರೀ ಎಂ. ಮಧ್ವರಾಜರು ಈ ಸಂಸ್ಥೆ ಬಡವರ ಮೇಲೆ ಅನುಕಂಪವನ್ನಿಟ್ಟು ಆದಷ್ಟು ಅವರ ಸೇವೆಯಲ್ಲಿ ಪಾಲುಗೊಳ್ಳಬೇಕೆಂದರು. ಶ್ರೀ ಪೈ. ಕಾಳಪ್ಪ ಶೆಟ್ಟರು ಸಭಿಕರ ಪರವಾಗಿ ಭಾಷಣ ಮಾಡಿದ ತರುವಾಯ ಶ್ರೀ ಶಿವಣ್ಣ ಹೆಗ್ಡೆಯವರು ಧನ್ಯವಾದ ಸಮರ್ಪಿಸಿದರು. ಶ್ರೀ ಥೋಮಸ್ ಅಂದ್ರಾದೆಯವರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು. ಶ್ರೀ ಕೆ. ದೇವದಾಸ್ ಶೆಣೈಯವರು ಅರ್ಪಿಸಿದ್ದ ಮಹಾತ್ಮಾ ಗಾಂಧಿಯವರ ಭಾವಚಿತ್ರವು ಶ್ರೀ ಮಧ್ವರಾಜರಿಂದ ಅನಾವರಣಗೊಳಿಸಲ್ಪಟ್ಟಿತು.

ಇಂಗ್ಲಿಷ್ ತ್ಯಜಿಸುವುದರಿಂದ ಭಾವ ಭಂಗವಾಗುವುದು

ಉಡುಪಿ—ಇಲ್ಲಿಯ ಬಾಸ್ ಟುಟೋರಿಯಲ್ ಕಾಲೇಜಿನ ವಿದ್ಯಾರ್ಥಿ ವಿದಾಯ ಕೂಟದ ಅಧ್ಯಕ್ಷ ಸ್ಥಾನವನ್ನು ವಹಿಸಿದ ಪ್ರಿನ್ಸಿಪಲ್ ಮುಲ್ಕಿ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಶ್ರೀ ಪಿ. ಕೆ. ಸೆಟ್ಟಿ ವಿದ್ಯಾರಂಗದಲ್ಲಿ ಇಂಗ್ಲಿಷನ್ನು ಮುಂದುವರಿಸುವುದನ್ನು ಬಲವಾದ ಉದಾಹರಣೆಗಳ ಮೂಲಕ ಸಮರ್ಥಿಸಿದರು. ಭಾಷಾವಾರು ಪ್ರಾಂತ್ಯ, ಭಾಷಾ ಶಿಕ್ಷಣದ ಸಮಸ್ಯೆಗಳು, ಭಾಷೆಗಳು ಸಾಧನಗಳೆಂದು ತಿಳಿದಿದ್ದರೂ, ಈಗ ಬಹುಭಾಷಾ ಗೊಂದಲವು ಭಾವಭಂಗದ ಕಾರಣವಾಗಿ ದೇಶದ ಒಕ್ಕಟ್ಟಿಗೆ ಒಂದು ಸಮಸ್ಯೆಯಾಗಿ ಪರಿಣಮಿಸಿದೆ. ಆದುದರಿಂದ ರಾಜಕಾರಣಿಗಳು ಭಾಷಾ ವಿಷಯದಲ್ಲಿ ಕೈಹಾಕದೆ, ಐಕ್ಯಸಾಧನೆಗಾಗಿ ವಿಶ್ವಭಾಷೆಯಾದ ಇಂಗ್ಲಿಷನ್ನು ಕಲಿಸುವ ಶಾಲೆಗಳಲ್ಲಿ ಮುಖ್ಯ ಅಭ್ಯಾಸ ವಿಷಯವನ್ನಾಗಿ ಇಟ್ಟುಕೊಳ್ಳಲೇಬೇಕೆಂದು ಪ್ರತಿಪಾದಿಸಿದರು.

ಮುಖ್ಯ ಅತಿಥಿ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಸ್. ಗೋಪಾಲಕೃಷ್ಣ ಅಡಿಗರು ಬಾಳಿದರೆ ನಾಳೆ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿರುವ ಈ ಕಾಲದಲ್ಲಿ ಪರೀಕ್ಷೆಗೆ ಬೇಕಾದುದನ್ನು ಮಾತ್ರ ಸಂಕ್ಷಿಪ್ತವಾಗಿ ವಿವರಿಸಿ ಅತೀ ಸುಲಭದಲ್ಲಿ 2.3 ವರ್ಷಗಳಲ್ಲೇ ಎಸ್.ಎಸ್.ಎಲ್.ಸಿ. ಪಾಸಾಗುವಂತೆ ಶಿಕ್ಷಣವೀಯುವ, ಬಾಸ್ ಕಾಲೇಜಿನ ಕ್ರಮ ಅನುಕರಣೀಯವೆಂದರು.

ಶ್ರೀ ಮುಚ್ಚೈಲ್ ಭಾಸ್ಕರ ಭಂಡಾರಿಗಳು ವಯಸ್ಕರ ಶಿಕ್ಷಣದಲ್ಲಿ ಸರಕಾರೀ ಸಹಾಯವಿಲ್ಲದೆ ಪಾಸ್ ಕಾಲೇಜ್ ಮಾಡುವ ವಿದ್ಯಾಪ್ರಚಾರದ ಕ್ರಮವನ್ನು ಕೊಂಡಾಡಿದರು. ಶ್ರೀ ಬಿ. ರಾಮರಾಯ ಶೆಟ್ಟಿ ವಿದ್ಯಾರ್ಥಿಗಳಲ್ಲಿ ನಶಿಸಿಹೋಗುತ್ತಿರುವ ಶಿಸ್ತು, ವಿನಯ, ಜೀವನದ ಉದ್ದೇಶ ಸಾಧನೆಯ ಮಾರ್ಗಗಳ ತಿಳಿಗೇಡಿತನದ ವಿಷಯವಾಗಿ ಆಂಗ್ಲ ಕವಿಗಳ ನಾಟಕಗಳ ಉದಾಹರಣೆಗಳಿಂದ ವಿವರಿಸಿದರು.

ಶ್ರೀ ಕೂರಾಡಿ ಸದಾಶಿವ ಕಲ್ಕೂರರು ಈಗಿನ ಕಾಲದ ವಿದ್ಯೆಯ ಲೋಪದೋಷಗಳನ್ನು ಎತ್ತಿ ಹೇಳಿದರು. ಸನ್ಮಾನ್ಯ ಅತಿಥಿಗಳಾಗಿ ಆಗಮಿಸಿದ ಸಿವಿಲ್ ಜಡ್ಜ್ ಶ್ರೀ ಅಂಗಡಿ ಮತ್ತು ಜಗದೀಶ್ವರನು ನಿಷ್ಕರ್ಷೆ ಮಾಡಿದಂತೆ ಈ ದಿನದ ಛದ್ಮವೇಷ ಮತ್ತು ಹಾಡುಗಾರಿಕೆಯಲ್ಲಿ ಗೆದ್ದವರಿಗೆ ಜೋರ್ಜ್ ಹಾಯಿಸ್ ಸೆಕೆಂಡರಿ ಶಾಲಾ ಹೆಡ್ ಮಾಸ್ತರ್ ಶ್ರೀ ಎಮ್. ಮಹಾಬಲ ಶೆಟ್ಟಿ ಬಹುಮಾನ ವಿತರಣೆ ಮಾಡುತ್ತಾ, ಜೀವನದಲ್ಲಿ ಸೋಲು ಗೆಲುವು ಎಂಬುದನ್ನು ಸಂತೋಷದಿಂದ ಸ್ವೀಕರಿಸಿ ಸಮಾನ ನಿಲುವಿನ ಮಾರ್ಗವನ್ನು ವಿದ್ಯಾರ್ಥಿಗಳು ಅನುಸರಿಸಬೇಕೆಂದರು. ಆಯುರ್ವೇದ ಕಾಲೇಜಿನ ಲೆಕ್ಚರರ್ ಡಾ| ಭಾಗವತರ ಸಣ್ಣದಾದರೂ ಸಹಜವಾಗಿ ಸರ್ವಜನ ಪ್ರಿಯವಾದ ಬಾಸ್ ಕಾಲೇಜಿನ ಶಿಕ್ಷಣ ಕ್ರಮವನ್ನು ಶ್ಲಾಘಿಸಿದರು.

ಕೆಲ ವಿದ್ಯಾರ್ಥಿಗಳು ಮಾತನಾಡಿದ ಬಳಿಕ ಅಗಲುವಿಕೆಯು ಬಹಳ ಕಷ್ಟವೆಂದು ಹೇಳಿ ಆಶೀರ್ವಚನ ಬೇಡಿದರು.

ಜನರಲ್ ಮೆನೇಜರ್ ಡಾ| ಕೆ. ಕೆ. ಕಲ್ಕೂರರು ಧನ್ಯವಾದಗಳನ್ನಿತ್ತರು.

ಃ ಹುರಿಗಡಲೆಗಾಳುಗಳು ಃ

ಪಾಕಿಸ್ತಾನದಲ್ಲಿ ಯಹ್ಯಾಖಾನರು ಮಿಲಿಟರಿ ಅಧಿಕಾರದಿಂದ ಅಧ್ಯಕ್ಷಪದವಿಯನ್ನು ಏರಿದರು.

—ವಿನಾಸೆ ಹೊಕ್ಕ ಬಳಿಕ.......

o o o

ಅಯ್ಯೂಬ ಖಾನರು ಏರಿಸಿದ್ದ ವೇತನವನ್ನು ಯಹ್ಯಾಖಾನರು ಹಿಂತೆಗೆದುಕೊಂಡರು.

—ಯಾರು ಹಿತವರು ಪಾಕಿಗಳಿಗೆ ಈ ಇಬ್ಬರೊಳಗೆ?

o o o

ತಾನು ದೇಶದ ಪ್ರಜೆಯಾದುದರಿಂದ ಕಾನೂನನ್ನು ಗೌರವಿಸುತ್ತೇನೆಂದೂ ಹಿಂದೂ ಧರ್ಮವು ಅಸ್ಪೃಶ್ಯತೆಯನ್ನು ಮನ್ನಿಸುವುದರಿಂದ ಅದನ್ನೂ ಒಪ್ಪಿಕೊಳ್ಳುವುದಾಗಿಯೂ ಪುರಿ ಜಗದ್ಗುರು ಹೇಳಿದ್ದಾರೆ.

—ಪರಸ್ಪರ ವಿರುದ್ಧ ಹರಿಯುವ ದೋಣಿಗಳಲ್ಲಿ ಅವರು ಕಾಲಿಟ್ಟಿದ್ದಾರೆಯೆ?

o o o

ತೆಲಂಗಾಣವಾದಿಗಳ ಚಳುವಳಿ, ಕೊಂಡ ಲಕ್ಷ್ಮಣರ ರಾಜೀನಾಮೆ, ಬಸ್ಸು ರೈಲುಗಳಿಗೆ ಬೆಂಕಿ, ಪರೀಕ್ಷೆಗಳಿಗೆ ಬಹಿಷ್ಕಾರ........

—ತೆಲಂಗಾಣವು ಭದ್ರವಾಗಿ ತಳವೂರಿದಂತೆಯೇ.

o o o

ಕೇಂದ್ರದ ಸುಮಾರು ಹದಿನಾರು ಮಾಜಿ ಮಂತ್ರಿಗಳು ಒಂದಲ್ಲ ಒಂದು ಹುದ್ದೆಯಲ್ಲೇ ಇದ್ದು ವೇತನ-ಭತ್ತೆ ಪಡೆಯುತ್ತಾರೆ.

—ರಾಜಕೀಯದ ಅನಾಥಾಲಯದ ಪರಿಭಾಷೆಯೇನ?

o o o

ಐಕರ ಮೃತ್ಯುವಾರ್ತೆಯನ್ನು ಕೇಳಿದೊಡನೆ ಶ್ರೀ ಸಾಮಾನ್ಯ ಉದ್ಗರಿಸಿದನಂತೆ— ಐಕರು ಏನೇ ಮಾಡಲಿ, ಏನೇ ಬಿಡಲಿ, ಪಾಕಿಗೆ ಶಸ್ತ್ರಾಸ್ತ್ರ ಕೊಟ್ಟು, ಅದನ್ನು ಭಾರತದೆದುರು ಬಳಸಬೇಡಿಯೆಂದು ಭಾರಿ ಉಪಕಾರ ಮಾಡಿದರು. ಮಂಗನ ಕೈಯಲ್ಲಿ ಪಂಜು ನೀಡಬೇಡಿ ಎಂಬ ಭಾರತದ ವಾದಕ್ಕೆ ಹಾಗೆ ಮಾಡದಿರುತ್ತಿದ್ದರೆ ಬೆಲೆಯುಂಟೆ?

o o o

ಇಂದಿರಾ ಗಾಂಧಿಯವರ ಬರ್ಮಾ ಭೇಟಿ ಸಂಪೂರ್ಣ ಜಯಪ್ರದವಾಯಿತು.

ಅಂದರೆ, ನೆಮ್ಮದಿಯಾಗಿ ಸ್ವದೇಶಕ್ಕೆ ಮರಳಿದರು. (?)

o o o

ಬಂಗಾಳದ ಕಾಂಗ್ರೆಸ್ ಕಾರ್ಯದರ್ಶಿ ಪದವಿಗೆ ಅತುಲ್ಯ ಘೋಷರು ರಾಜಿ ನೀಡಿದ್ದಾರೆ.

— ಒಂದು ಕಿಸೆಯಲ್ಲಿ ರಾಜೀನಾಮೆ, ಇನ್ನೊಂದರಲ್ಲಿ ಹಿಂತೆಗೆವ ಪತ್ರ ಅವರ ಬಳಿ ಸದಾ ಸಿದ್ಧ— ತಾರೀಖು ಹಾಕಿಕೊಂಡರೆ ಸರಿ.

o o o

ಕೇರಳ ಸರಕಾರದ ವಿರುದ್ಧ ಸರಕಾರಿ ಅಂಗ ಪಕ್ಷಗಳೇ ಚಳುವಳಿ ಹೂಡುವ ಬೆದರಿಕೆ ಹಾಕಿವೆ.

—ತನ್ನ ಮರಿಯನ್ನೇ ತಿನ್ನುವುದು ಹುಲಿಗೆ ಅಭ್ಯಾಸ.

o o o

ಕೇಂದ್ರವು ಶ್ರೀ ಧಾವನ್‌ರನ್ನು ಪಶ್ಚಿಮ ಬಂಗಾಳದ ರಾಜ್ಯಪಾಲ ಪದ ಸ್ವೀಕರಿಸಲು ಕೇಳಿಕೊಂಡಿದೆ.

—ಅವರೀಗ ಯೋಚಿಸುತ್ತಿದ್ದಾರೆ; ಹೆದರಿಕೆಯಿಂದಲ್ಲ, ಕೌಟುಂಬಿಕ ವ್ಯವಸ್ಥೆಗಾಗಿ.

o o o

ತಮಿಳುನಾಡಿನಲ್ಲಿ ಎನ್‌ಸಿಸಿಯ ಬದಲು ಟಿ.ಸಿ.ಸಿ. ಆರಂಭವಾಗುವುದು.

—'ಎನ್' ಹೋಗಿ 'ಟಿ'ಯು ಸ್ಪಿರಿಟ್ ಈಗಲಾದರೂ ಬಂತು ಎಂಬುದನ್ನು 'ದ್ರಾಮುಕ' ಅಲ್ಲಗಳೆಯುವುದು ಸಾಧ್ಯವಿಲ್ಲ.

o o o

ಕಾರ್ಕಳ ಮುನ್ಸೀಫ ಕೋರ್ಟಿನಲ್ಲಿ

R.E.P. No. 622/1967.
S. C. 296/1965.

ಸಿವಂಣ ಶೆಟ್ಟಿ...........................ಅರ್ಜಿದಾರ

ಮತ್ತು

1. ದೊಡ್ಡಣ್ಣ ಶೆಟ್ಟಿ, D2
2. ಕುಟ್ಟಿ ಶೆಟ್ಟಿ, D3,—1ನೆ ಪ್ರ. ನರಸಿ ಶೆಟ್ಟರ ಮಕ್ಕಳು, ಉಡುಪಿ ತಾಲ್ಲೂಕು ನಂದಿಕೂರು ಗ್ರಾಮದ ಪಟ್ಟಂಜೆ ಗುತ್ತು .... ಎದುರರು

ಇವರೊಳಗೆ

ಈ ಮೂಲಕ ನಿಮ್ಮ ಎದುರಿಗೆ ತಿಳಿಸುವುದೇನೆಂದ್ರೆ—

ಮೇಲಿನ ಅಮಲ್ಜಾರಿ ಅರ್ಜಿಯ ನೋಟೀಸು ಬಗ್ಗೆ ತಾರೀಕು 26-6-1969ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10-30 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ಸದ್ರಿ ಅಮಲ್ಜಾರಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court

N. M. Adyanthaya,
Advocate for Petitioner.

Karkala, 2-4-69.

ಸಿಂಡಿಕೇಟಿನ ಹೆದ್ದಾರಿಗಳು

ಶ್ರೀ ಟಿ. ಎ. ಪೈ

ಸಿಂಡಿಕೇಟ್ ಬ್ಯಾಂಕಿನ ಪಾಲುದಾರರ ಸಾಮಾನ್ಯ ಸಭೆಯಲ್ಲಿ ಅದರ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಬ್ಯಾಂಕಿಂಗ್ ಉದ್ಯಮಕ್ಕೆ ಹೊಸ ಮಾರ್ಗದರ್ಶನ ನೀಡುವಂತಹ ಹೇಳಿಕೆಗಳನ್ನು ಮಾಡಿದರು.

"ಬಂಗಾರ ಮುಂತಾದ ನಿರುಪಯುಕ್ತ ಸ್ವತ್ತುಗಳಲ್ಲಿ ಜನತೆ ತನ್ನ ಸಂಪತ್ತನ್ನು ವಿನಿಯೋಗಿಸುತ್ತದೆ. ಜನತೆಯ ಈ ಅಭ್ಯಾಸವನ್ನು ಬದಲಾಯಿಸುವ ಹೊಣೆಗಾರಿಕೆಯನ್ನು ಬ್ಯಾಂಕುಗಳು ಹೊರಬೇಕು. ಹಾಗೆಯೇ ಧಾರ್ಮಿಕ ಮತ್ತು ಸಾಮಾಜಿಕ ಕಟ್ಟುಕಟ್ಟಲೆಗಳಿಂದಾಗಿ ವ್ಯರ್ಥವಾಗಿ ಖರ್ಚು ಮಾಡಿ ಬಡತನದಲ್ಲೇ ಜನಿಸಿ, ಬಡತನದಲ್ಲೇ ನಶಿಸುವ ಪ್ರವೃತ್ತಿಯನ್ನು ದೂರ ಕೊಡುವ ಜವಾಬ್ದಾರಿಯನ್ನು ಬ್ಯಾಂಕು ವಹಿಸಬೇಕು"- ಇದು ಶ್ರೀ ಪೈಯವರ ಬಂಗಾರದಂತಹ ಒಂದು ಸಲಹೆ.

ಇನ್ನೊಂದು ಇದು: "ದೇಶದಲ್ಲಿ ಡೆಗಳಲ್ಲಿ ಸಾಹುಕಾರರು ಇನ್ನೂ ಜನತೆಯ ಶೋಷಣೆಯಲ್ಲಿ ಮುಳುಗಿದ್ದಾರೆ. ಇದನ್ನು ಕಾನೂನಿನ ಬಲದಿಂದ ಮಾತ್ರ ತಡೆಯುವುದು ಸಾಧ್ಯವಿಲ್ಲ. ದೇಶದ ಮೂಲೆಮೂಲೆಯಲ್ಲೂ ಸುಸಂಘಟಿತ ರೂಪದಲ್ಲಿ ಬ್ಯಾಂಕ್‌ಗಳ ಮೂಲಕ ಸಾಲ ವ್ಯವಸ್ಥೆಯು ಶ್ರೀಸಾಮಾನ್ಯನಿಗೆ ದೊರೆಯುವಂತಾಗುವ ತನಕ ಈ ಆಶಯವೀಡೇರದು. ಬ್ಯಾಂಕುಗಳು ನಗರಗಳ ಕೇಂದ್ರದಲ್ಲೇ ಸ್ಥಾಪಿತವಾಗದೆ ೫ರಿಂದ ೧೦ ಸಾವಿರ ಜನಸಂಖ್ಯೆಯಿರುವ ಹಳ್ಳಿಗಳಿಗೂ ಕಾಲಿಡಬೇಕು. ಇದರಿಂದ ಹಳ್ಳಿಗರಿಗೆ ಬ್ಯಾಂಕಿಂಗ್ ಸೌಲಭ್ಯ ದೊರೆಯುವುದರೊಂದಿಗೆ ಸುಶಿಕ್ಷಿತ ನಿರುದ್ಯೋಗ ಸಮಸ್ಯೆಯೂ ದೂರವಾಗುವುದು."—ಆರಂಭದಿಂದಲೂ ಗ್ರಾಮೀಣ ಪ್ರದೇಶಗಳತ್ತ ಗಮನ ಹರಿಸಿದ ಸಿಂಡಿಕೇಟು ಇಂದು ಅದರ ೨೭೧ ಶಾಖೆಗಳಲ್ಲಿ ೭೫ ಶಾಖೆಗಳು ೧೦ ಸಾವಿರಕ್ಕೂ ಕಡಿಮೆ ಜನಸಂಖ್ಯೆ ಇರುವ ಗ್ರಾಮೀಣ ಪ್ರದೇಶಗಳಲ್ಲೇ ಇವೆಯೆಂಬುದನ್ನು ಮರೆಯಬಾರದು. ೬೮ ಸ್ಥಳಗಳಲ್ಲಿ ಸಿಂಡಿಕೇಟ್ ಜನತೆಗೆ ಬ್ಯಾಂಕಿಂಗ್ ಸೌಲಭ್ಯ ನೀಡುವ ಏಕಮೇವ ಸಂಸ್ಥೆಯಾಗಿದೆ.

ಬ್ಯಾಂಕ್ ನೌಕರರ ತರಬೇತಿಗಾಗಿ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಸ್ನಾತಕೋತ್ತರ 'ಬ್ಯಾಂಕಿಂಗ್ ಡಿಪ್ಲೊಮಾ' ವರ್ಗ ಪ್ರಾರಂಭಿಸಲು ಸಿಂಡಿಕೇಟ್ ನಿರ್ಧರಿಸಿದೆ. ಇದಕ್ಕಾಗಿ ರೂ. ೫೦ ಸಾವಿರವನ್ನು ರೂ. ೧೦ ಸಾವಿರದ ೫ ಕಂತುಗಳಲ್ಲಿ ನೀಡಲಿದೆ. ಇದು ಬ್ಯಾಂಕುಗಳ ಆಡಳಿತ ವರ್ಗದ ತರಬೇತಿಗೊಂದು ಸಾಧನವಾಗುವುದು.

ಸಿಂಡಿಕೇಟ್ ಬ್ಯಾಂಕು ಮೊದಲಿನಿಂದಲೂ ಜನಸಾಮಾನ್ಯರಲ್ಲಿ ಆಸಕ್ತಿ ಇಟ್ಟುಕೊಂಡ ಬ್ಯಾಂಕು. ಜನತೆ ಸುಲಭವಾಗಿ ಹಣವನ್ನು ತೊಡಗಿಸಲು, ಅಥವಾ ತನ್ನ ಅವಶ್ಯಕತೆಗಾಗಿ ಬ್ಯಾಂಕಿನಿಂದ ಸಾಲ ಪಡೆಯುವ ಹತ್ತಾರು ಯೋಜನೆಗಳು ಸಿಂಡಿಕೇಟ್‌ನಲ್ಲಿವೆ. ಇದರಿಂದಾಗಿಯೇ ಅದು ಬೆಳೆದು ನಿಂತಿದೆ. ಈ ವರ್ಷ ಅದು ೧೦೦ ಕೋಟಿ ರೂಪಾಯಿಗಳಿಗೂ ಮೀರಿದ ಠೇವಣಾತಿ ಇರುವ ಬ್ಯಾಂಕುಗಳ ಸಾಲಿಗೆ ಸೇರಿ ಹೊಸತೊಂದು ವೈಭವವನ್ನು ಮುಟ್ಟಿದೆ. ಸಾಮಾಜಿಕ ನಿಯಂತ್ರಣವನ್ನು ಸ್ವಾಗತಿಸಿ, ಅದಕ್ಕೆ ಹೊಂದಿಕೊಂಡು ದೇಶದ ಆರ್ಥಿಕ ಪುನರುತ್ಥಾನ ಕಾರ್ಯದಲ್ಲಿ ಸಾಹಸದಿಂದ ಮುಂದುವರಿಯುವ ಸಿಂಡಿಕೇಟ್ ಬ್ಯಾಂಕ್ ಅದರ ಆಡಳಿತ ವರ್ಗ, ನೌಕರವರ್ಗಗಳು, ಜನತಾಸೇವೆಯನ್ನೇ ತಮ್ಮ ಧ್ಯೇಯವಾಗಿಟ್ಟುಕೊಂಡು ಮುಂದುವರಿಯುತ್ತವೆಂಬುದರಲ್ಲಿ ಸಂದೇಹವಿಲ್ಲ.

ಒಂದು ತುತ್ತು — ಹತ್ತು ಬಾಯಿ

ಬೆಂಗಳೂರಿನಿಂದ ಹದಿನಾರು ಮೈಲಿ ದೂರದಲ್ಲಿದೆ ನೆಲಮಂಗಲ. ನೆಲಮಂಗಲದಿಂದ ಕೇವಲ ನಾಲ್ಕು ಮೈಲಿನಾಚೆ ಇರುವ ಹಳ್ಳಿಯೇ ಮೈಲಾನಹಳ್ಳಿ. ಒಂದು ಪ್ರಾಥಮಿಕ ಶಾಲೆ ಹಾಗೂ ಒಂದು ಮಿಡಲ್ ಸ್ಕೂಲ್ ಇಲ್ಲಿವೆ. ಮಿಡಲ್ ಸ್ಕೂಲ್‌ನ ಆವರಣದಲ್ಲಿದೆ ಸಾರ್ವಜನಿಕ ಕುಡಿಯುವ ನೀರಿನ ಬಾವಿ.

ಹಳ್ಳಿಗರ ಬದುಕಿನ ಭಾಗವಾಗಿ

ಈ ಹಳ್ಳಿಯ ಒಂದೆಡೆ ಒಂದು ವಿಶಾಲ ಆಲದ ಮರ ಹಬ್ಬಿದೆ. ಇದರ ಸುತ್ತಲೂ ಕಟ್ಟೆ ಕಟ್ಟಲಾಗಿದೆ. ಹಳ್ಳಿಗರಿಗೆ ಈ ಕಟ್ಟೆಯೇ ಒಂದು ವೇದಿಕೆ. ಈ ಮರದ ನೆರಳಿನಲ್ಲಿ ಹಳ್ಳಿಗರು ಎಷ್ಟೋ ಕಾಲದಿಂದ ತಮ್ಮ ಸುಖದುಃಖಗಳ ಆಗುಹೋಗುಗಳ ಕುರಿತು ಮಾತುಕತೆ ನಡೆಸಿದ್ದಾರೆ. ಮೈಲಾನಹಳ್ಳಿಯ ಜನರು ಕಷ್ಟಪಟ್ಟು ದುಡಿಯುವವರು. ಆದರೂ ಅವರ ಜೀವನ ಸುಖಮಯವಾಗಿಲ್ಲ. ಸರ್ಕಾರದ ಕೆಲವು ಅಭಿವೃದ್ಧಿ ಕಾರ್ಯಗಳು ಇಲ್ಲಿ ನಡೆದಿದ್ದರೂ ಇವರ ಜೀವನ ಮಾತ್ರ ಇದ್ದಂತೆ ಇತ್ತು. ಅದಕ್ಕೆಲ್ಲ ಹೆಚ್ಚುತ್ತಿರುವ ಜನಸಂಖ್ಯೆಯೇ ಕಾರಣ.

ಗ್ರಾಮದ ಪಟೇಲರು

ಗ್ರಾಮದ ವಯೋವೃದ್ಧ ಪಟೇಲರಾದ ಶ್ರೀ ಮರುಳಸಿದ್ಧಯ್ಯನವರು "ಮಳೆಯಿಲ್ಲದಿದ್ದರೆ ಬೆಳೆಯೂ ಇಲ್ಲ. ಮಳೆ ಬಂದರೂ ಬೆಳೆಯುವ ಬೆಳೆ ಸಾಕಾಗುತ್ತಿಲ್ಲ. ನೋಡಿ. ನನ್ನ ಮಗ ಸದಾಶಿವಯ್ಯನಿಗೆ ಮೂರು ಮಕ್ಕಳು. ಅವನೀಗ ಆಪರೇಷನ್ ಮಾಡಿಸಿಕೊಂಡಿದ್ದಾನೆ. ಅದರಂತೆ ನನ್ನ ಉಳಿದ ಇಬ್ಬರು ಮಕ್ಕಳೂ ಈಗಾಗಲೇ ನಿಯೋಜಿತ ಸಂಸಾರ ಹೊಂದಿದ್ದಾರೆ. ನನಗೋ ಕೇವಲ ಆರು ಎಕರೆ ಭೂಮಿ. ಮಕ್ಕಳು, ಮೊಮ್ಮಕ್ಕಳು ಹೆಚ್ಚಿದಂತೆ ಭೂಮಿಯೇನೂ ಹೆಚ್ಚುವುದಿಲ್ಲ. ನನ್ನ ಭೂಮಿಯನ್ನು ಪಾಲು ಮಾಡಿದರೆ ನನ್ನ ಕುಟುಂಬದ ಜನರಿಗೆ ತಲಾ ಅರ್ಧ ಎಕರೆ ಭೂಮಿ ಕೂಡ ಸಿಗುವುದಿಲ್ಲ. ಬೇರೆ ಕೆಲಸ ಹುಡುಕಿಕೊಂಡು, ನಮ್ಮೂರನ್ನು ಬಿಟ್ಟು ಇವರು ಪಟ್ಟಣಕ್ಕೆ ತೆರಳಬೇಕು......." ಎಂದು ಕಳಕಳಿಯಿಂದ ತಮ್ಮ ವಿಚಾರ ಹೇಳಿದರು.

ಮೈಲಾನಹಳ್ಳಿಯ ಹತ್ತಿರದಲ್ಲಿ ಒಂದು ತೋಪು ಇದೆ. ಇದರ ಸಮೀಪದಲ್ಲಿಯೇ ಇದೆ ಆದಿಕರ್ನಾಟಕರ ಮನೆಗಳ ಸಾಲು. ಈ ಮಹಾಶಯನ ಬೈಲ ಎಲ್ಲಯ್ಯ, "ನಮಗೆ ಭೂಮಿಯಿಲ್ಲ; ನಾವು ಬಡವರು. ಒಂದು ತುತ್ತಿಗೆ ಹತ್ತು ಬಾಯಿಯಿದ್ದರೆ ನಾವು ಬದುಕುವುದು ಹೇಗೆ? ನಮಗೆ ಒಂದು ಅಥವಾ ಎರಡು ಮಕ್ಕಳಿದ್ದರೆ ಅವರನ್ನು ಚೆನ್ನಾಗಿ ನೋಡಿಕೊಳ್ಳಬಹುದು. ಅವರಿಗೆಲ್ಲ ಹೊಟ್ಟೆಬಟ್ಟೆ ಹಾಕಿ, ಶಾಲೆಗೆ ಕಳುಹಿಸಬಹುದು" ಎಂದು ಹೇಳಿದಾಗ ಅವನಲ್ಲಿ ಭಾವಾವೇಶ ತುಂಬಿತ್ತು.

ಆಚೇ ಮಹಾಶಯನ ನೋಟಯ್ಯನಿಗೆ ಎಂಟು ಮಕ್ಕಳಾಗಿದ್ದವು. ಅವುಗಳ ಪೈಕಿ ಈಗ ನಾಲ್ಕು ಮಕ್ಕಳು ಮಾತ್ರ ಬದುಕಿವೆ. "ಇಷ್ಟು ಮಕ್ಕಳನ್ನು ಕೂಡ ಸಲಹುವುದು ಕಷ್ಟವಾಗುತ್ತಿದೆ" ಎಂದು ನೋಟಯ್ಯ ನಿಟ್ಟುಸಿರು ಬಿಟ್ಟ. ನನಿಹದಲ್ಲಿಯೇ ನಿಂತ ಚಿಕ್ಕಲಿಂಗಪ್ಪ, "ನಮಗೆ ಹೆಚ್ಚು ಮಕ್ಕಳು ಬೇಡವೇ ಬೇಡ. ಅವರನ್ನೆಲ್ಲ ಸರಿಯಾಗಿ ಸಾಕಿ ಸಲಹುವುದು ಸಾಧ್ಯವಾಗುತ್ತಿಲ್ಲ. ಅವರು ಹೊಟ್ಟೆಪಾಡಿಗಾಗಿ ಅಲೆಯುವುದನ್ನು ನಾವು ನೋಡಲಾರೆವು" ಎಂದು ಹೇಳಿದಾಗ, 'ಹೌದು' ಎಂದೆನಿಸಿತು.

ಚಿಕ್ಕಲಿಂಗಪ್ಪನ ನೆರೆಮನೆಯವನೆ ಮೋದಯ್ಯ. ಇವನಿಗೆ ಒಂದು ಹೆಣ್ಣು ಎರಡು ಗಂಡು ಮಕ್ಕಳು. "ಇದ್ದ ಮಕ್ಕಳನ್ನು ಚೆನ್ನಾಗಿ ನೋಡಿಕೊಂಡರೆ ಸಾಕು. ಕುಟುಂಬ ಯೋಜನೆಯ ವಿಷಯವನ್ನು ಬಡಜನರಿಗೆ ತಿಳಿಸಿ ಹೇಳುವುದಕ್ಕಿಂತ ಹೆಚ್ಚಿನ ಪುಣ್ಯ ಬೇರೆ ಇಲ್ಲ" ಎನ್ನುತ್ತಾ ತೋಪಿನ ಕಡೆ ಸಾಗಿದ.

ಕುಂದಾಪುರ ಮುಂ. ಕೋರ್ಟಿನಲ್ಲಿ

O.S 426/1968,

ವಾದಿ— ಬಿ. ಅಪ್ಪು ಶೆಟ್ಟಿ

ಪ್ರತಿವಾದಿ— ಬಾಬ್ಬು ಸ್ವಾಲ

ಸದ್ರಿ ಪ್ರತಿವಾದಿಗೆ ತಿಳಿಸುವುದೇನೆಂದರೆ-

ಪ್ರತಿವಾದಿ— ದಾಬ್ಬು ಸಾಹೇಬ, ಕರೀಂ ಸಾಹೇಬರ ಮಗ, ಕುಂದಾಪುರ ತಾಲ್ಲೂಕು ಗಂಗೊಳ್ಳಿ ಗ್ರಾಮಸ್ಥ.

ವಾದಿಯು ತಾರೀಕು 7.4.1969ನೆ ರಿಜಿಸ್ಟ್ರಿ ದೊರಕುವ ಅವಧಿ ದಸ್ತಾವೇಜಿನ ಆಸ್ತಿಯ ವಿಷಯ ಒಂದು ದಾವೆಯನ್ನು ದಾಖಲು ಮಾಡಿದ್ದು ಸದ್ರಿ ದಾವೆಯು ತಾ. 6.6.69ಕ್ಕೆ ಕಟ್ಟಿಗೆ ಬರುವುದರಿಂದ ಸದ್ರಿ ದಾವೆಯಲ್ಲಿ ನಿಂತು ನಿಮ್ಮಿಂದ ಉತ್ತರ ದಾಖಲು ಮಾಡುವುದಾದಲ್ಲಿ ಯುದ್ಧ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರಾಗಿ ಹಾಜರಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ದಾವೆಯನ್ನು ಜರಿದು ವಿಚಾರಣೆ ಮಾಡಲಾದೀತೆಂತ ಈ ಮೂಲಕ ತಿಳಿಸಲಾಗುತ್ತದೆ.

M. Madhava Rao,
Advocate for Plff.

ಸ್ಥಳ: ಕುಂದಾಪುರ
ತಾರೀಕು: 4-4-1969

ಬಿಲ್ಲವ ಸಂಘದ ನೂತನ ಸಭಾಗೃಹದ ಉದ್ಘಾಟನೆ

ಉದ್ಯಾವರ, ಉದ್ಯಾವರ ಬಿಲ್ಲವ ಮಹಾಜನ ಸಂಘದ ನೂತನ ಸಭಾಗೃಹವು ತಾ. ೩ರಂದು ಶ್ರೀ ಬಿ. ಕಾಳಪ್ಪ ಶೆಟ್ಟರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಂ. ಮಧ್ವರಾಜರು ಉದ್ಘಾಟನಾ ಸಮಾರಂಭದ ಅಧ್ಯಕ್ಷ ಭಾಷಣ ಮಾಡುತ್ತಾ ಸಮಾಜದ ಶ್ರೇಯೋಭಿವೃದ್ಧಿಗಾಗಿ ದುಡಿದ ಬಿಲ್ಲವ ಮತ್ತು ಮೊಗವೀರರಿಗೆ ದೊರಕಬೇಕಾದ ಪ್ರಾತಿನಿಧ್ಯವು ಇನ್ನೂ ದೊರಕಿಲ್ಲವೆಂದು ತಿಳಿಸಿದರು. ಮುಖ್ಯವಾಗಿ ಜನರು ಒಟ್ಟುಗೂಡಿ ಸರಿಯಾಗಿ ಸಹಕರಿಸದಿದ್ದಲ್ಲಿ ಸಮಾಜದ ಭವಿಷ್ಯವು ಉಜ್ವಲವಾಗಲು ಸಾಧ್ಯವೇ ಇಲ್ಲವೆಂದರು. ನಾಡಿನ ಹಿತದೃಷ್ಟಿಯಿಂದ, ಜಿಲ್ಲೆಯ ಅಭ್ಯುದಯ ದೃಷ್ಟಿಯಿಂದ ಬಿಲ್ಲವರಿಗೆ ಮತ್ತು ಮೊಗವೀರರಿಗೆ ರಾಜಕೀಯ ಪ್ರಾತಿನಿಧ್ಯ ದೊರಕಬೇಕೆಂದು ಆಶಿಸಿದರು.

ಆರಂಭದಲ್ಲಿ ಗರಡಿಮಜಲಿನವರಾದ ಸಂಕರ ಶ್ರೀ ಎ. ಸಾಲಿಯಾನ್—ಉದ್ಯಾವರ ಸಂಘದ ಅಧ್ಯಕ್ಷರು ಸ್ವಾಗತಿಸಿದರು. ಶ್ರೀ ಯು. ಎಸ್. ಗಿರಿಯಪ್ಪನವರ ನೇತೃತ್ವದಲ್ಲಿ ಮನರಂಜನಾ ಕಾರ್ಯಕ್ರಮಗಳು ನಡೆದವು.

ಅಧ್ಯಾಪಕರ ಅಭಿಮಾನದ ಅಭಿನಂದನಾ ಸಮಾರಂಭ

ಕಾರ್ಕಳ, ರಾಜ್ಯ ಪ್ರಶಸ್ತಿ ವಿಜೇತರಾದ ಕಾಪು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಭೋಜರಾಜ ಶೆಟ್ಟರನ್ನು ಆದರದಿಂದ ಗೌರವಿಸುವ ಸನ್ಮಾನ ಸಮಾರಂಭವೊಂದು ಕಳೆದ ತಾ. ೮ರಂದು ಕಾರ್ಕಳ ಬಿ. ಇ. ಯಂ. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಉಡುಪಿ ಶ್ರೇಣಿಯ ಶಾಲೆಗಳ ಹಿರಿಯ ಪರೀಕ್ಷಾಧಿಕಾರಿಗಳಾದ ಶ್ರೀ ಶ್ರೀಪತಿರಾವ್ ಪಲಿಮಾರ್‌ರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ವತ್ಸಲಾ ಇವರಿಂದ ಪ್ರಾರ್ಥನೆಯಾದ ಬಳಿಕ ಶ್ರೀ ರಾಜೀವ ಕೋಟ್ಯಾನ್ ಇವರು ಸ್ವಾಗತ ಭಾಷಣ ಮಾಡಿದರು. ಕಾರ್ಕಳ ಅಧ್ಯಾಪಕರ ಕೇಂದ್ರದ ಕಾರ್ಯದರ್ಶಿ ಶ್ರೀ ಯಸ್. ರಘುನ ಸೆಟ್ಟಿಗಾರರು ಕಾರ್ಕಳ ಕೇಂದ್ರದ ಅಧ್ಯಾಪಕರ ಸಾಥವು ಶ್ರೀ ಭೋಜರಾಜ ಸೆಟ್ಟರಿಗೆ ನೀಡುವ ಆದರದ ಹಾಗೂ ಅಭಿಮಾನದ ಅಭಿನಂದನಾ ಪತ್ರವನ್ನು ಓದಿದರು. ಶ್ರೀ ಯಂ. ಆರ್. ಶ್ಯಾನುಭಾಗ ಮತ್ತು ಶ್ರೀ ವೈ. ಭಾಸ್ಕರ ರಾಯರು ಮುಖ್ಯ ಅತಿಥಿಗಳ ಗುಣಗಾನ ಮಾಡಿದರು. ಶ್ರೀ ಭೋಜರಾಜ ಸೆಟ್ಟರ ನಾತ್ಸ ಉತ್ತರ, ಅಧ್ಯಕ್ಷರ ಸಂದರ್ಭೋಚಿತ ಭಾಷಣ, ಧನ್ಯವಾದ ಸಮರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

READ &
ADVERTISE IN
NAVAYUGA WEEKLY

ಅಶಿಕ್ಷಿತನ ಹೃದಯ

(ಎರಡನೇ ಪುಟದಿಂದ)

ತನ್ನ ಕತ್ತಿಯನ್ನು ಫಳ-ಫಳನೆ ಹೊಳೆಯುವಂತೆ ಮಾಡಿ, ಹಿಡಿದು ಕೂತ ಮುದುಕ.

ಮೂರನೇ ದಿವ ಶಿವಪಾಲ ಸಿಂಹನಿಂದ ಬಂತು ಕರೆ. ಮುದುಕ ಕೈಯಲ್ಲಿ ಕತ್ತಿ ಹಿಡಿದೆ ಹೊರಟ, ಇವನ ರೀತಿಯನ್ನು ನೋಡಿದ ಜನರು ನಗಲು ಪ್ರಾರಂಭಿಸಿದರು.

"ಒಂದ ವಾರದ ಅವಧಿ ಮುಗಿಯಿತಲ್ಲ ಇನ್ನು ಮರವನ್ನು ಕತ್ತರಿಸುತ್ತೇವೆ" ಎಂದು ರೀತಿಯಿಂದ ನಗಲು ಪ್ರಾರಂಭಿಸಿದ ಶಿವಪಾಲ ಸಿಂಹ.

"ತಮ್ಮ ಅಧಿಕಾರ, ದುಡ್ಡು ಸಿಕ್ಕಿದ್ದರೆ ಕೊಡುತ್ತಿದ್ದೆ, ಈಗಲೂ ಸಿಕ್ಕರೆ ಕೊಡುವೆನು. ಆಡಿದ ಮಾತಿಗೆ ತಪ್ಪುವವನಲ್ಲ ನಾನು."

"ಹಾಗಾದರೆ ನಾಳೆ ಕಡಿಯೋದಕ್ಕೆ ಪ್ರಾರಂಭಿಸುವುದೇ?"

"ನಾನು ಹೇಗೆ ಹೇಳಲಿ; ನಿಮ್ಮ ಇಷ್ಟ. ನಿಮ್ಮ ಅಧಿಕಾರ" ಎಂದು ಹೇಳುತ್ತಾ ಅಷ್ಟು ನಿಲ್ಲದೆ ಹೊರಟೇ ಹೋದ ಮುದುಕ.

ಮಧ್ಯಾಹ್ನ ಮುಗಿಯುತ್ತಲೆ ನಾಲ್ಕಾರು ಜನರು ಕೊಡಲಿ ಹೊತ್ತು ತನ್ನ ಮನೆಯ ಕಡೆಗೆ ಬರುತ್ತಿರುವುದನ್ನು ಕಟ್ಟೆಯ ಮೇಲೆ ಕುಳಿತು ವಿಶ್ರಮಿಸುತ್ತಿದ್ದ ಮನೋಹರಸಿಂಹನಿಗೆ ಕಾಣಿಸಿತು, ನೋಡಿದವನೆ, ಕೈಯಲ್ಲಿ ಕತ್ತಿ ಹಿಡಿದು ಎದ್ದು ಕುಳಿತ, ಎರಡ ಹೆಜ್ಜೆ ನಡೆದ, ಹಿಂತಿರುಗಿದ, ಏನ ಮಾಡಿದರೂ ಅವನಿಗೆ ಮನಸ್ಸಿಗೆ ಸಮಾಧಾನವಿಲ್ಲ. "ಯಾರಾದರೂ ಮರಕ್ಕೆ ಕೊಡ್ಲಿ ಹಾಕಿದರೂ ತಿಮ್ಮ ಗ್ರಹಚಾರ ನೆಟ್ಟಗಿರೋಲ್ಲ, ಹುಷಾರ್" ಎಂದು ಮುದುಕ ಬೆದರಿಸಿದ.

ಮುದುಕನ ಬೆದರಿಕೆಗೆ ಹೆದರಿದ ಅವರು ತೆಪ್ಪನೆ ಧಣಿಯ ಮನೆ ಕಡೆಗೆ ಸಾಗಿದರು..

ಶಿವಪಾಲ ಸಿಂಹನಿಗೆ ವಿಷಯ ತಿಳಿದು "ಮುದುಕನಿಗೆ ಹೆದರಿ ಹಿಂತಿರುಗಿದಿರಾ? ಬನ್ನಿ ನಾನು ಜೊತೆಯಲ್ಲಿ ಬರುವೆನು" ಎನ್ನುತ್ತಾ ಜೊತೆಯಲ್ಲಿ ಹೊರಟ,

"ಏಕೆ ಮನೋಹರ, ಏನು ವಿಷಯ? ಮರ ಕಡಿಯಲು ಬಿಡಲಿಲ್ಲವಂತಲ್ಲ? ಏಕೆ ಅದು ತಮ್ಮ ಮರ ಆದ ಮೇಲೆ ನಾವೇ ನಾದರೂ ಮಾಡುತ್ತೇವೆ."

"ಏನು ನೋಡುತ್ತಾ ನಿಂತಿದ್ದೀರಾ? ಕಡಿದೆಳೆಯಲಿ" ಎಂದು ಗದರು ಹಾಕಿದ ಶಿವಪಾಲ ಸಿಂಹ.

"ನೀನು ನಿಜವಾದ ರಾಕೂರ್ ಸಾಹೇಬನೇ ಆಗಿದ್ದರೆ ಈ ಮರವನ್ನು ಕಡಿಸು. ನಾನೇ ನಿಜವಾದ ರಾಕೂರ್ ಆದರೆ ಮರ ಕಡಿಯಲು ಬಿಡೋಲ್ಲ......ಬಿಡೋದೇ ಇಲ್ಲ."

ಆಳುಗಳು ಕಡಿಯಲು ಮುಂದೆ ಬರುವರು, ಅಷ್ಟರಲ್ಲಿ ತೇಜಸಿಂಹ ಓಡುತ್ತಾ—"ಚಾಚಾ, ರೂಪಾಯಿ....ರೂಪಾಯಿ, ನಿನ್ನ ಮರ ಉಳೀತ!"

ಮನೋಹರಸಿಂಹ ದುಡ್ಡನ್ನು ಎಣಿಸಿ ಶಿವಪಾಲಸಿಂಹನಿಗೆ ಕೊಡಲು,

"ವಾಯಿದೆ ಮುಗಿದಿದೆ, ಈಗ ಕೊಟ್ಟರೆ ತೆಗೆದುಕೊಳ್ಳುವವರು ಯಾರು?" ಎಂದನು ಶಿವಪಾಲ.

"ನಿನ್ನ ಮುಖದಲ್ಲಿ ಇರುವುದು, ಮರ ಕಡಿದು ನನ್ನನ್ನು ದುಃಖಕ್ಕೀಡು ಮಾಡ ಬೇಕೆನ್ನುವುದೇ?"

ಶಿವಪಾಲ ಸಿಂಹ ಮರ ಕಡಿಸುವ ವಿಚಾರ, ಮನೋಹರ ಸಿಂಹ ತಡೆಯುವ ವಿಚಾರಗಳು ಊರಿನಲ್ಲೆಲ್ಲಾ ಹರಡಿತು. ಹಳ್ಳಿಯ ಮುಖ್ಯಸ್ಥರೆಲ್ಲಾ ಬಂದು ಸೇರಿದರು.

ಮುದುಕ ಎಲ್ಲಾ ವಿಷಯವನ್ನು ವಿವರವಾಗಿ ತಿಳಿಸುತ್ತಾ, 'ನಾನು ದುಡ್ಡು ಹಿಂದಿರುಗಿಸಲು ಹೋದರೂ ಅವನು ಸ್ವೀಕರಿಸುತ್ತಿಲ್ಲ; ನೀವೆ ನೋಡಿ."

"ನಿನ್ನೆಯೇ ವಾಯಿದೆಗೆ ಕೊನೆಯ ದಿನ, ನಿನ್ನೆ ಕೊಡಲಿ ಹಿಡಿದಿದ್ದರೆ ನಾನು ಮರ ಕಡಿಸುತ್ತಿದ್ದೆನೆ—ಹೇಳಿ?'

"ನಿನ್ನೆಯ ವರೆವಿಗೆ ಬಾರದ ದುಡ್ಡು ಈ ದಿನ ಎಲ್ಲಿಂದ ಬಂತು?" ಎಂದು ಯಾರೋ ಮಧ್ಯದಲ್ಲಿ ಅಂದರು.

"ತೇಜಸಿಂಹ, ತಾನು ಕೊಟ್ಟಿದ್ದಾನೆ ಈಗ" ಎಂದ ಮುದುಕ ನೇರವಾಗಿ.

ಆ ಜನಗಳಲ್ಲಿ ತೇಜಸಿಂಹನ ತಂದೆಯೂ ಬಂದಿದ್ದ. ತೇಜಸಿಂಹನ ಹೆಸರು ಕೇಳುತ್ತಲೆ, 'ಎಷ್ಟು ದುಡ್ಡು, ಕದ್ದು ತಂದೆಯೊ....?' ಎಂದು ಗದರಿಸಿದನು.

'ಮಗ ನಾನು ದುಡ್ಡನ್ನು ಕದ್ದು ತಾ ಎಂದು ಹೇಳಿದೆನೆ, ರಾಮ.... ರಾಮ.... ತೆಗೆದುಕೊ ಈ ದುಡ್ಡನ್ನ"

"ಇಲ್ಲ ಚಾಚಾ, ನೀನೇನು ಹೇಳಲಿಲ್ಲ, ನಾನೆ ತಂದೆ"

ಶಿವಪಾಲ ಸಿಂಹ ನಗುತ್ತಾ, ಎಲ್ಲಿ ತಾ ದುಡ್ಡನ್ನು, ಹೋಗಲಿ ಮುದುಕನನ್ನೇನು ಪೀಡಿಸುವುದು. ಕೊಡು ಕೊಡು...ನಿನ್ನ ಮರ ನಿನಗೇ ಇರಲಿ" ಎಂದ, ಕೈ ಚಾಚಿದ,

'ಹೇಗೆ ಕೊಡಲಿ ಸ್ವಾಮಿ? ಆಗ ಕೊಡಲು ಬಂದಾಗ ಬೇಡ ಎಂದಿರಿ. ನನ್ನಲ್ಲಿ ಇಲ್ಲದ್ದನ್ನು ನೋಡಿ ಕೇಳುತ್ತಿರುವಿರಲ್ಲ?"

"ನೆರೆದ ಜನಗಳೇ ನೀವೇ ಇದರ ಇತ್ಯರ್ಥ ಮಾಡಬೇಕು. ಈ ಮುದುಕನ ಕೈಲಿ ವ್ಯವಹಾರ ಮಾಡಿ ನನಗೆ ಸಾಕಾಯಿತು" ಎಂದ ಶಿವಪಾಲ.

ಅಷ್ಟರಲ್ಲಿ ತೇಜಸಿಂಹ ಮುಂದೆ ಬಂದು, "ತೆಗೆದುಕೊಳ್ಳಿ ಈ ಉಂಗುರವನ್ನು" ಎನ್ನುತ್ತಾ ತನ್ನ ಬೆರಳಲ್ಲಿ ಹೊಳೆಯುತ್ತಿದ್ದ ಕೆಂಪು ಹರಳಿನ ಮುದ್ದಾದ ಉಂಗುರವನ್ನು ಹೊರತೆಗೆದ. ಇದ ನಮ್ಮಪ್ಪನಿಗೆ ಸೇರಿದ್ದಲ್ಲ. ನಮ್ಮ ಅಜ್ಜ ಕೊಟ್ಟದ್ದು ಯಾರಿಗೂ ಕೇಳಲು ಅಧಿಕಾರವಿಲ್ಲ."

"ಶಿವಪಾಲಸಿಂಹರೆ, ತೆಗೆದುಕೊಳ್ಳಿ ಒಂದು ತೊಲದ ತೂಕ ಇದೆ. ಆ ರೂಪಾಯಿಗಳಿಗೆ ಸರಿಸಮಾನವಾಗುತ್ತದೆ. ಮರವನ್ನು ಕಡಿಸಬೇಡಿ" ಎನ್ನುತ್ತಾ ಅವರ ಕೈಗೆ ಕೊಡುತ್ತಿದ್ದಂತೆ ಅವರ ತಂದೆ ಮುಂದೆ ಬಂದ, ತನ್ನ ದುಡ್ಡಿನ ಚೀಲವನ್ನು ಮನೋಹರನಿಗೆ ಕೊಟ್ಟ.

ನೆರೆದ ಜನರು ಕಣ್ಣು ಬಿಡುತ್ತಾ ಇದನ್ನೆಲ್ಲಾ ನೋಡುತ್ತಾ ನಿಂತಿದ್ದಾರೆ, ಮನೋಹರ ಸಿಂಹ ತೇಜನನ್ನು ಅಪ್ಪಿ ಆಲಂಗಿಸಿದ. 'ಮಗ ಇದ್ದರೆ ನಿನ್ನಂಥ ಮಗನಿರಬೇಕು. ಎಲ್ಲರೂ ಆಲಿಸಿ, ಇವತ್ತಿನಿಂದ ಈ ಮರ ತೇಜಸಿಂಹನಿಗೆ ಸೇರಿದ್ದು.?

"ಮಗ, ಇದನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಈ ಮರಕ್ಕಾಗಿ ಎಷ್ಟು ಪೇಚಾಡಿದ್ದಾಯಿತು. ನೀನೇ ನೋಡಿದೆಯಲ್ಲ. 'ಮರವೇ ನನ್ನ ಪ್ರಾಣ'

'ದೇವರು ನಿನ್ನನ್ನು ಕಾಪಾಡಲಿ' ಎಂದನು ಮುದುಕ ತೇಜನಿಗೆ ಆಶೀರ್ವದಿಸುತ್ತಾ.

ಎಲ್ಲವೂ ಹೆಚ್ಚಿದೆ- ಪ್ರೇಮ ಮಾತ್ರ ಕಡಿಮೆಯಾಗಿದೆ

ಗುಜರಾತದ ಒಂದು ಹಳ್ಳಿಯಲ್ಲಿ ೯೪ ವರ್ಷ ವಯಸ್ಸಿನವನೊಬ್ಬ ಇನ್ನೂ ದುಡಿಯುತ್ತಿದ್ದಾನೆ. ಅವನಿಗೆ ೧೦೪ ವರ್ಷದ ಒಬ್ಬ ಅಕ್ಕನೂ ಇದ್ದಾಳೆ! ನಾವು ಅವನ ಭೆಟ್ಟಿಗೆ ಹೋಗಿದ್ದೆವು. ಆದೇ ಆಗ ಆತ ಅಡವಿಗೆ ಹೋಗಿ ಬಂದಿದ್ದ. ಕೈಕಾಲು ತೊಳೆದುಕೊಂಡು ಬಂದು ನಮ್ಮ ಪರಿಚಯ ಕೇಳಿದ. "ಇಂದಿನ ಕಾಲ ನಿನಗೆ ಹೇಗೆ ಅನಿಸುತ್ತದೆ" ಎಂದು ಕೇಳಿದೆ! ಅದಕ್ಕೆ ಆತ ಹೇಳಿದ "ನನಗೇನೂ ಸರಿ ಅನಿಸುವದಿಲ್ಲ. ನನ್ನ ಮೊಮ್ಮಗ ಟ್ರ್ಯಾಕ್ಟರ ನಡೆಸುತ್ತಾನೆ. ಬಾವಿಗಳಿಗೆ ಪಂಪು ಎಂಜಿನ ಹಾಕಿದ್ದಾನೆ. ಬೆಳೆ ಸಾಕಷ್ಟು ಬರುತ್ತದೆ. ಎಲ್ಲವೂ ಬೆಳೆದಿದೆ. ಆದರೆ ಪ್ರೇಮವೊಂದೇ ಕಡಿಮೆಯಾಗಿದೆ! ದಾನ ಧರ್ಮ ಕಡಿಮೆಯಾಗುತ್ತಲಿದೆ, ಪ್ರೇಮವಿಲ್ಲದ ಜನರಿಂದ ಸಮಾಜಕ್ಕೇನು ಪ್ರಯೋಜನ? ನನ್ನ ಬಾಲ್ಯದಲ್ಲಿ ಅತಿಥಿಗಳು ಬಂದರೆ ಆಗ್ರಹಮಾಡಿ ೪-೬ ದಿನ ನಿಲ್ಲಿಸಿಕೊಳ್ಳುತ್ತಿದ್ದೆವು. ಮತ್ತು ಅವರಿಂದ ಮನೆಯವರಿಗೂ ಊರಿನವರಿಗೂ ಆನಂದ ಅನಿಸುತ್ತಿತ್ತು. ಆದರೆ ಇಂದು ಎಲ್ಲಾ ತರದ ಸುಖಗಳಿದ್ದೂ ಕೂಡ ಯಾರಾದರೂ ಮನೆಗೆ ಬಂದರೆ ಸೇರುವದಿಲ್ಲ. ಇದರಿಂದ ಸುಖಶಾಂತಿ ಲಭಿಸುವದಿಲ್ಲ ಎಂಬುದು ನನ್ನ ಅನುಭವ" ಎಂದು.

ಮಾಹಿತಿಯೇ ಶಿಕ್ಷಣವಲ್ಲ

ಇಂದು ಶಿಕ್ಷಣವೆಂದರೆ ಕೇವಲ ಮಾಹಿತಿ ಎಂದಾಗಿಬಿಟ್ಟಿದೆ. ಇನಸ್ಪೆಕ್ಟರರು ಪರೀಕ್ಷೆ ತೆಗೆದುಕೊಳ್ಳಲಿಕ್ಕೆ ಬಂದಾಗ ಮಾಹಿತಿಯ ಪ್ರಶ್ನೆಗಳನ್ನೇ ಕೇಳುತ್ತಾರಲ್ಲದೆ ಅವರಿಗೆ ಬೇರೆ ಏನೂ ಸೂಚಿಸುವದೇ ಇಲ್ಲ! ಹುಡುಗರು ಕಂಠಪಾಠ ಮಾಡಿದ್ದು ಕಲ್ಪೊಂದು ಮಾಹಿತಿಯೇ ಶಿಕ್ಷಣವೆಂದು ತಿಳಿಯಲಾಗುತ್ತದೆ ಹೆಚ್ಚಾಗಿ ಇಂಥ ಮಾಹಿತಿಗೂ ಪ್ರತ್ಯಕ್ಷ ಜೀವನಕ್ಕೂ ಏನೊಂದೂ ಸಂಬಂಧವೂ ಕೂಡ ಇರುತ್ತಿರುವದಿಲ್ಲ. ಇದರಿಂದ ನಿಜವಾದ ಶಿಕ್ಷಣ ಹೇಗಾದೀತು? ರಕ್ತ ತಯಾರಾಗದ ಆಹಾರ ಸೇವಿಸಿಯೂ ವ್ಯರ್ಥ! ಅದೇ ಅವಸ್ಥೆ ಮಾಹಿತಿಯದೂ. ಬಾಲಕರ ಶಿಕ್ಷಣದಲ್ಲಿ ಮಾಹಿತಿಗಿಂತ ಬಾಲಕರ ಹೃದಯಕ್ಕೆ ಯಾವ ತರಹದ ಸಂಸ್ಕಾರ ಮಾಡಬೇಕು. ಎಂಬುವೇ ಮುಖ್ಯ ವಿಚಾರ. ಅಂಥ ಸಂಸ್ಕಾರಗಳಿಂದಲೇ ಅವರ ಜೀವನ ಪದ್ಧತಿ ತಯಾರಾಗುತ್ತದೆ. ಸರಿಯಾದ ಸಂಸ್ಕಾರ ಮೂಡಿಸಿ ತನ್ಮೂಲಕ ಸರಿಯಾದ ಜೀವನಪದ್ಧತಿ ರೂಢಿಸಲಿಕ್ಕೆ ಶಿಕ್ಷಣದಿಂದ ಸಾಧ್ಯವಾಗಬೇಕು. ಸತ್ಯ ಸಹಜವಾಗುವಂತೆ, ಸ್ವಚ್ಛತೆ, ಪ್ರಾರ್ಥನೆ, ಮಾಲುವಾದ, ಉಪಾಹಾರ, ಆಟ ಮೊದಲಾದ ಪ್ರಕ್ರಿಯೆಗಳ ಮುಖಾಂತರ ಸರಿಯಾದ ಶಿಕ್ಷಣ ಕೊಡಬಹುದಾಗಿರುತ್ತದ! ಮಾಹಿತಿಯೇ ಮುಖ್ಯ ಶಿಕ್ಷಣವಲ್ಲ, ಜೀವನ ಸಂಸ್ಕಾರವೇ ನಿಜವಾದ ಶಿಕ್ಷಣ.

(ಮನುಭಾಯಿ ಪಂಚೋಲಿ)

○ ○ ○ ○

ಉತ್ತಮ ಗೆಳೆಯರಾಗಬೇಕೆಂದು ನೀವು ಎಷ್ಟು ಎಚ್ಚರ ವಹಿಸುವಿಯೋ ಹಾಗೆಯೇ ಉತ್ತಮ ಪುಸ್ತಕಗಳ ಬಗ್ಗೆಯೂ ಎಚ್ಚರ ವಹಿಸಬೇಕು.

○ ○ ○ ○

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದ.

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-೪

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಕೀಸುಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೇಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

NAVAYUGA 10-4-1969
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಕುಟುಂಬಯೋಜನೆ–

ಕೆಲವು ವಾಸ್ತವಾಂಶಗಳು

ಭಾರತದ ಜನಸಂಖ್ಯೆ 1969ರ ಜನವರಿ ಒಂದನೆಯ ತಾರೀಖಿನ ದಿನ ಸುಮಾರು ಐವತ್ತೈದು ಕೋಟಿ ಇತ್ತೆಂದು ಅಂದಾಜು ಮಾಡಲಾಗಿದೆ. ಇದು ವಿಶ್ವದ ಒಟ್ಟು ಜನಸಂಖ್ಯೆಯ ಶೇಕಡ 14 ರಷ್ಟಾಗುತ್ತದೆ. ವಿಶ್ವದ ಒಟ್ಟು ಭೂವಿಸ್ತಾರದಲ್ಲಿ ಭಾರತದ ಪಾಲು ಶೇಕಡ 2.4ರಷ್ಟಿದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ನಮ್ಮ ದೇಶದ ಜನಸಂಖ್ಯೆ ಒಂದು ವರ್ಷಕ್ಕೆ ಶೇಕಡ 2 ರಷ್ಟು ಹೆಚ್ಚುತ್ತಿದೆ. ನಿವ್ವಳ ಹೆಚ್ಚಳ, ಒಂದು ವರ್ಷಕ್ಕೆ ಹದಿಮೂರು ದಶಲಕ್ಷದಷ್ಟು. ಸಾವಿನ ಪ್ರಮಾಣ ಒಂದು ಸಹಸ್ರ ಜನರಿಗೆ 16ರಂತೆ ಇದೆ.

1921ರಿಂದೀಚೆಗೆ ಭಾರತದ ಜನಸಂಖ್ಯೆ ಎರಡರಷ್ಟು ಹೆಚ್ಚಿದೆ. ಜನಸಂಖ್ಯೆ ಈಗಿನ ವೇಗದಲ್ಲೇ ಹೆಚ್ಚುತ್ತ ನಡೆದರೆ 1994ರ ಹೊತ್ತಿಗೆ ನಮ್ಮ ಜನಸಂಖ್ಯೆ 100 ಕೋಟಿಯಷ್ಟಾಗುವುದು.

ಸಾರ್ವಜನಿಕ ಆರೋಗ್ಯ ಸ್ಥಿತಿ— ಗತಿಗಳ ಸುಧಾರಣೆಗಾಗಿ ಕೈಕೊಂಡ ವ್ಯಾಪಕ ಕ್ರಮಗಳಿಂದಾಗಿ ಮರಣ ಪ್ರಮಾಣ ಪ್ರತಿಸಾವಿರಕ್ಕೆ 48ರಿಂದ 16ಕ್ಕೆ ಇಳಿದಿದೆ. ಜನರ ಸರಾಸರಿ ಆಯುರ್ಮಾನವು 29 ವರ್ಷಗಳಿಂದ 51 ವರ್ಷಗಳಿಗೆ ಏರಿದೆ.

ಸ್ವಾತಂತ್ರ್ಯಾನಂತರ ಭಾರತ ಅನೇಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದೆ. ಭಾರತದ ಕೈಗಾರಿಕಾ ಉತ್ಪಾದನೆ ಶೇಕಡ 150 ರಷ್ಟು ಶಿಕ್ಷಣ ಸೌಕರ್ಯಗಳು ಶೇಕಡ 300ರಷ್ಟು ಹೆಚ್ಚಿವೆ. ಕೃಷಿ ಉತ್ಪಾದನೆಯು ದ್ವಿಗುಣಗೊಂಡಿದೆ.

ಜನಸಂಖ್ಯೆ ಒಂದೇ ಸಮನೆ ಹೆಚ್ಚುತ್ತ ನಡೆದಿರುವುದರಿಂದ ಈ ಎಲ್ಲಾ ಸಾಧನೆಗಳ ಫಲ ನಮಗೆ ದೊರೆಯದಂತಾಗಿದೆ. ನಮ್ಮ ರಾಷ್ಟ್ರೀಯ ವರಮಾನವು ಈ ಅವಧಿಯಲ್ಲಿ ನೂರಕ್ಕೆ 64ರಷ್ಟು ಏರಿದ್ದರೂ ತಲಾ ವರಮಾನದ ಹೆಚ್ಚಳ 21ರಷ್ಟು ಮಾತ್ರ. ಇನ್ನು ಪ್ರತಿಯೊಬ್ಬರಿಗೆ ದೊರೆಯುತ್ತಿದ್ದ ಆಹಾರಪ್ರಮಾಣದಲ್ಲೂ ಸಹ ಕೊಂಚ ಹೆಚ್ಚಳವಾಗಿದೆ. ಅಂದರೆ 12.8 ಔನ್ಸ್‌ಗಳಿಂದ 13.4 ಔನ್ಸ್ ಗಳಷ್ಟಾಗಿದೆ. ನಮ್ಮ ದೇಶದಲ್ಲಿ ಸರ್ಕಾರ ಕುಟುಂಬಯೋಜನಾ ಕಾರ್ಯಕ್ರಮವನ್ನು ಕೈಗೊಂಡಿದೆ. ಮುಂದಿನ ಹತ್ತು ವರ್ಷಗಳಲ್ಲಿ ಅಥವಾ ಅದಕ್ಕಿಂತ ಮೊದಲೆ ದೇಶದಲ್ಲಿ ಜನನಪ್ರಮಾಣವನ್ನು ಪ್ರತಿ ಒಂದು ಸಾವಿರಕ್ಕೆ 41ರಿಂದ 25ಕ್ಕೆ ಇಳಿಸಲು ಉದ್ದೇಶಿಸಲಾಗಿದೆ. ಈ ಗುರಿಸಾಧಿಸಲು ಈಗ ಸಂತಾನಪಡೆಯಲು ಸಮರ್ಥರಾಗಿರುವ 10ಕೋಟಿ ದಂಪತಿಗಳು ಕುಟುಂಬಯೋಜನೆ ಅನುಸರಿಸಬೇಕು. ನಾವು ಅವರಿಗೆ ಅಗತ್ಯವಾದ ಎಲ್ಲಾ ಸೇವೆಯನ್ನು, ಸಾಧನ ಸೌಕರ್ಯಗಳನ್ನು ಒದಗಿಸಬೇಕು.

ದೇಶದಲ್ಲಿ ಈಗ 1775 ನಗರ ಕುಟುಂಬಗಳ ಕಲ್ಯಾಣಕೇಂದ್ರಗಳೂ, ಗ್ರಾಮಾಂತರ ಪ್ರದೇಶದಲ್ಲಿರುವ 24,191 ಕೇಂದ್ರಗಳೂ ಮತ್ತು ಉಪಕೇಂದ್ರಗಳು ಈ ದಿಶೆಯಲ್ಲಿ ಜನರ ಮನವೊಲಿಸುವ ಹಾಗೂ ಅವರಿಗೆ ಅಗತ್ಯವಾದ ಸೇವಾ ಸೌಕರ್ಯಗಳನ್ನು ಒದಗಿಸುವ ಕಾರ್ಯದಲ್ಲಿ ನಿರತವಾಗಿವೆ. 7031 ಗ್ರಾಮಾಂತರ ವೈದ್ಯಕೀಯ ಸೇವಾಕೇಂದ್ರಗಳೂ ಈ ಕಾರ್ಯದಲ್ಲಿ ನೆರವಾಗುತ್ತಿವೆ.

ಕುಟುಂಬಯೋಜನಾ ಕಾರ್ಯಕ್ರಮ ಸಂಪೂರ್ಣವಾಗಿ ಸ್ವಯಂ ಪ್ರೇರಣೆಯನ್ನೆ ಅವಲಂಬಿಸಿದ ಕಾರ್ಯಕ್ರಮವಾಗಿದೆ; ಯಶಸ್ಸಿಗಾಗಿ ವ್ಯಕ್ತಿಗಳನ್ನೇ ಅವಲಂಬಿಸಿದೆ. ಈ ಕಾರ್ಯಕ್ರಮ ಕಳೆದ ನಾಲ್ಕು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ ಗಮನಾರ್ಹ. ಈವರೆಗೆ ಸುಮಾರು 53,17,987 ಜನ ಸಂತಾನ ಶಕ್ತಿ ಹರಣ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಂಡಿದ್ದಾರೆ. 26,90,123 ಮಂದಿ ಮಹಿಳೆಯರು ವಂಕಿಯನ್ನು ಧರಿಸಿದ್ದಾರೆ. ಅಂದರೆ ಮಕ್ಕಳನ್ನು ಪಡೆಯಲು ಸಮರ್ಥರಾದ ಒಟ್ಟು ದಂಪತಿಗಳಲ್ಲಿ ನೂರಕ್ಕೆ 11.6ರಷ್ಟು ದಂಪತಿಗಳು ಇನ್ನು ಮಕ್ಕಳಾಗದಂತೆ ಉಪಾಯಗಳನ್ನು ನಿಯೋಜಿಸಿಕೊಂಡಿದ್ದಾರೆ. ಇದರಿಂದಾಗಿ ಒಂದು ವರ್ಷದಲ್ಲಿ ಜನಿಸಬಹುದಿದ್ದ ಹತ್ತು ಲಕ್ಷ ಮಕ್ಕಳು ಜನಿಸಲಿಲ್ಲ.

ಕುಟುಂಬಯೋಜನೆಗಾಗಿ ಅನೇಕ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಉದಾಹರಣೆಗೆ ವಂಕಿ, ಸಂತಾನಹರಣ ಚಿಕಿತ್ಸೆ, ನಿರೋಧ ಇವು ಜನಪ್ರಿಯ ವಿಧಾನಗಳಲ್ಲಿ ಕೆಲವು. ಸರಕಾರವು ಕುಟುಂಬ ಯೋಜನಾ ವಿಷಯವಾಗಿ ದಂಪತಿಗಳಿಗೆ ಉಚಿತ ಸಲಹೆ ದೊರೆಯುವ ಏರ್ಪಾಟು ಮಾಡಿದೆ. ನಿರೋಧ ಸಾಂಕೇತಿಕ ಬೆಲೆಯಲ್ಲಿ ಚಿಲ್ಲರೆ ಅಂಗಡಿಗಳಲ್ಲಿ ಇತರ ಕಡೆಗಳಲ್ಲೂ ದೊರೆಯುತ್ತಿದೆ. ಅದರ ಬೆಲೆಯೂ ಅತೀ ಕಡಿಮೆ, ಮೂರರ ಒಂದು ಪ್ಯಾಕೆಟ್ಟಿಗೆ ಹದಿನೈದು ಪೈಸೆಗಳು.

ಕುಟುಂಬ ಯೋಜನಾ ಕ್ಷೇತ್ರದಲ್ಲಿ 1,25,000 ಮಂದಿ ಕಾರ್ಯಕರ್ತರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ ತರಬೇತಿ ಕೊಡಲು ಐದು ಕೇಂದ್ರ ತರಬೇತಿ ಸಂಸ್ಥೆಗಳು ಮತ್ತು 13 ಪ್ರಾದೇಶಿಕ ತರಬೇತಿ ಕೇಂದ್ರಗಳಿವೆ.

ಕುಟುಂಬಯೋಜನೆಯನ್ನು ಅನುಸರಿಸಲು ಜನರು ಸ್ವಯಂಪ್ರೇರಣೆಯಿಂದ ಮುಂದೆ ಬರುವಂತೆ ಮಾಡಲು ಎಲ್ಲಾ ವಿಸ್ತರಣಾ ಹಾಗೂ ಜನಸಂಪರ್ಕ ಮಾಧ್ಯಮಗಳ ನೆರವನ್ನು ಪಡೆಯಲಾಗುತ್ತಿದೆ. ಇದಲ್ಲದೇ ರೇಡಿಯೋ ಟೆಲಿವಿಷನ್, ಚಲನ ಚಿತ್ರಗಳು, ವೃತ್ತ ಪತ್ರಿಕೆಗಳು, ಮುದ್ರಿತ ಸಾಹಿತ್ಯ, ಮತ್ತು ಗೊಂಬೆಯ ಆಟಗಳು ಇವೇ ಮೊದಲಾದ ಸಾಧನಗಳನ್ನು ಬಳಸಿಕೊಳ್ಳಲಾಗುತ್ತಿದೆ. ದೇಶದ 25 ಲಕ್ಷ ಮಂದಿ ಜನಾಭಿಪ್ರಾಯ ಪ್ರತಿನಿಧಿಗಳಿಗೆ ನೇರವಾಗಿ ಕುಟುಂಬಯೋಜನಾ ಸಾಹಿತ್ಯವನ್ನು ಒದಗಿಸುವ ವಿಚಾರವಿದೆ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ : ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಪಥ್ಯ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2 —00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಎಂ. ವೆಂಕಟರಾವ್, ಕಂಪನಕಟ್ಟೆ, ಮಂಗಳೂರು-1

ಚುಟುಕಗಳು

[illegible] ವರದಿ

ಬಾಯ್ದೆರೆದು ಹಾರೈಸಿ ಸಾಕಾಯ್ತು ಮುಗಿಲೇ
ಮಂತ್ರಿದೇವರಿಗಿನ್ನೂ ಬಾರದು ಕರುಣೆ
ಹಸಿದ ಹೊಟ್ಟೆಗೆ ಪೊಳ್ಳು ಭರವಸೆಯೇ
ಗತಿಯು

'ಕ್ಯಾನ್ಸರಿಗೆ ತುತ್ತಾದ ಸರಕಾರ ಸ್ಥಿತಿಯು'

ರಕ್ತ ಸನ್ಯಾಸಿ

ಕೊಯನಾದ ಭೂಕಂಪ ಸಹಜ ಹೇ ಮಗನೇ
ಶಿವಸೇನೆ ಚಳುವಳಿಯು "ಹೆಮ್ಮಾರಿ"ಯಂತೆ
ಕನ್ನಡಿಗರನು ಹಿಸುಕಿ ನುಣಿ ಮಠವ ಉರಿಸಿ
ಧಿಕ್ಕಿಗೆ ಬಂದಿಹನು ರಕ್ತ ಸನ್ಯಾಸಿ
[illegible]

ಆಯೂಬನ ಆಸೆ!

ಸರ್ವಾಧಿಕಾರಿ ಶಕ್ತಿಯ ರಾಜದಂಡ
ಹಿಡಿಯಲಿಗೆ ಆಯೂಬನಾದನು ಷಂಡ
ದಾರಿ ಹಾರಿಯೂ ಎಟಕದಿರೆ ದ್ರಾಕ್ಷಿ
ಬೇಡೆಂದು ಸಾರಿದನು ತನ್ನ ಮನಕಾಂಕ್ಷೆ

ಜೀವನ ನಾಟಕ

ಜೀವನದ ನಾಟಕದಿ ವಿಧ ವಿಧದ ವೇಷ
ಪರದೆ ಬೀಳುವ ತನಕ ಹುಚ್ಚು ಆವೇಶ
ಮಗನ ಕೊಲೆಯನು ತಂದೆ ಬಯಸುವುದೂ
ಉಂಟು
ಅಕ್ಕಬಲಿ ಬಿಗಿಯೊಗೆ ಪ್ರೇಮದಗಂಟು!

ಹೋಳಿ ಹಬ್ಬ

ಮದನ ದಹನದ ಹಬ್ಬ ಸಂತಸದ ಹೋಳಿ
ಬಣ್ಣ ಬಳಿಯಲು ಜನಕೆ ಮದಬಂದ ಗೋಳಿ'
ಬಾಗಿಲನು ಒಡೆವರದೋ ಬೋರ್ಡುಗಳ ಕಿತ್ತು
ಕೊರಗು ಜನತೆಗೆ ಮಗನೆ ಆಯ್ತು ಗಮ್ಮತ್ತು

—"ದೇವಕಿನಂದನ" ವಿಜಾಪುರ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

17–4–1969

೨೦
ಪೈಸೆ

'ಪರದೆಯ ಹಿಂದೆ ಕೋಕಿಲೆ!'

(ತೆಲುಗು ಕಥೆ)

ಮೂಲ:
ಇಛ್ಛಾಪುರಪು ಜಗನ್ನಾಥರಾವ್.

ಕನ್ನಡಕ್ಕೆ—ಮಲ್ಲಾರಿ,
ರಾಮಗಿರಿ.

ಸುಜಾತ ದೆಹಲಿಗೆ ಹೋಗಿ ಒಂದು ವಾರವಾಯಿತು. ತಾನೂ ಹಿಂದಿರುಗಲಿಲ್ಲ, ಮೋಟಾರನ್ನೂ ಕಳುಹಿಸಲಿಲ್ಲ. ಅನೇಕ ಸಾರಿ ಹೀಗೆ ಸಿಟ್ಟಾಗಿ ಹೋದವಳು ಬೇಗ ಹಿಂದಿರುಗುತ್ತಿದ್ದಳು. ಆದರೆ ಈ ಸಾರಿ ಏಕೋ ಹಿಂದಿರುಗಿರಲಿಲ್ಲ!

"..............."

"ಹಾಂ! ಇದು ಹೊಸದೇನಲ್ಲ. ನಾವು ಅನೇಕ ಬಾರಿ ಜಗಳ ಕಾಯುತ್ತಲೇ ಇರುತ್ತಿದ್ದೆವು. ಮತ್ತೆ ಒಂದಾಗುವುದು. ಆದರೆ ಈ ಸಾರಿ ತನ್ನ ಸಹೋದರನೊಂದಿಗೆ ಹೋದವಳು ಹಿಂದಿರುಗಲಿಲ್ಲವೇಕೆ? ಅದೇ ನನ್ನ ಮನದಲ್ಲಿ ಕೊರೆಯುತ್ತಿದ್ದ ವಿಷಯ. ನಮ್ಮಿಬ್ಬರ ಜಗಳಕ್ಕೆ ಕಾರಣವಿಷ್ಟೆ—ಅವಳೊಂದು ಹೇಳುವುದು ನಾನೊಂದು ಹೇಳುವುದು. ಒಬ್ಬರಿಗೊಬ್ಬರು ತದ್ವಿರುದ್ಧ. ದೆಹಲಿಗೆ ಹೋದವಳು ರೂಢಿಯ ಟೆಲಿಫೋನ್ ಮಾಡುತ್ತಿದ್ದಳು.

"ಗುಡ್ ಮಾರ್ನಿಂಗ್!"

ನಾನು ಉತ್ತರಿಸುವಷ್ಟರಲ್ಲಿ, ಅನೇಕ ಮಾತಾಡುವಳು.

"ರಾತ್ರಿ ಊಟ ಮಾಡಿದ್ರಾ.... ಅಥವಾ ಉಪವಾಸವೇ" ಎಂದು ಕೇಳುವಳು.

"ಊಟ ಮಾಡಿದ್ದೆ!"

"ನಾವು ಸುಳ್ಳು ಹೇಳುತ್ತಿರುವಿರಿ! ಅಲ್ಲವೆ?"

"ನಿಜ! ಊಟ ಮಾಡಿದ್ದೆ, ಆದರೆ ಮನೆಯಲ್ಲಿ ಅಲ್ಲ, ಹೋಟೆಲಿನಲ್ಲಿ!"

"ಮೈ ಗಾಡ್! ನಾನು ಬರಲೇಬೇಕಾಯಿತು, ಶುಕ್ರವಾರ ಜಿ. ಟಿ. ಗೆ ಬರುವೆನು."

ಆ ದಿನ ಆಫೀಸಿಗೆ ಯಾವುದೋ ಕೆಲಸದ ನಿಮಿತ್ತ ಹೋಗಿದ್ದೆ. ಅಲ್ಲಿ ಊಟ ಮಾಡಿಕೊಂಡು ಬಂದೆ. ನಾನು ಮನೆಗೆ ಬರುತ್ತಲೇ ರಾಜಸಾಹೇಬರು ಹಾಜರಾಗಿದ್ದರು. ಅಲ್ಲದೇ ನಾನು ಬರುತ್ತಲೇ "ಏಳಿ ಊಟಕ್ಕೆ, ತಟ್ಟೆ ಹಾಕಿದೆ" ಎಂದರು.

"ಸಾರೀ......! ಸುಜೀ."

"ನಾನು ಆಫೀಸಿನಲ್ಲಿ ಕುಮಾರನ ಜೊತೆ ಊಟ ಮಾಡಿದ್ದೇನೆ" ಎಂದು ಹೇಳಿದ್ದೆ ತಡ.

ಸುಜಾತಳಿಗೆ ಬಹಳ ಸಿಟ್ಟು ಬಂತು.

"ಇದಕ್ಕೇನೇನೂ ನಾನು ಇಷ್ಟೊತ್ತೂ ಕಷ್ಟಪಟ್ಟು ಸ್ವತಃ ಅಡಿಗೆ ಮಾಡಿದ್ದು!"

"ಇಲ್ಲಾ ಸುಜೀ! ನಿಜವಾಗಿಯೂ ಇಲ್ಲ. ಒಂದು ವೇಳೆ ನೀನೇ ಅಡಿಗೆ ಮಾಡುವೆಯೆಂದು ತಿಳಿದಿದ್ದರೆ ನಾನು ಕುಮಾರನ ಜೊತೆ ಊಟಮಾಡಿ ಬರುತ್ತಿರಲಿಲ್ಲ."

"ಒಳ್ಳೆಯದು. ಸಾಹೇಬರ ಊಟ ಕುಮಾರನ ಜೊತೆ! ಸುಶೀಲ ಎಲ್ಲಾ ಚನ್ನಾಗಿ ಅಡಿಗೆ ಮಾಡಿರಬೇಕು ಅಲ್ಲವೆ?" ಎಂದು ಅಣಕವಾಡಿದಳು.

"ಸುಶೀಲ ಅಡಿಗೆ ಚನ್ನಾಗಿ ಮಾಡುತ್ತಾಳೆ" ಎಂದೆ ನಾನು ಮೆಲ್ಲನೆ.

ನಾನು ಇಷ್ಟು ಹೇಳಿದ್ದೇ ತಡ ಸುಜಾತ ಒಳಗಿನಿಂದ ಮಲಗುವ ಕೋಣೆಗೆ ನಡೆದು ಒಳಗಿನಿಂದ ಬಾಗಿಲಿನ ಚಿಲಕ ಹಾಕಿಕೊಂಡಳು. ನಾನು ಹೊರಗೆ ಅರ್ಧ ಘಂಟೆಯವರೆವಿಗೂ ಬಾಗಿಲನ್ನು ತೆಗೆಯಬಹುದೆಂದು ಕಾದು ಕಾದು ಸಾಕಾಯಿತು. ಸಿಗರೇಟ್ ಕೇಸಿನೊಳಗಿನ ಸಿಗರೇಟುಗಳೆಲ್ಲ ಒಂದೊಂದಾಗಿ ಖಾಲಿಯಾಗತೊಡಗಿದವು. ಅಷ್ಟಾದರೂ ಅವಳು ಬಾಗಿಲು ತೆಗೆಯುವ ಸುಳಿವು ಕಾಣಲಿಲ್ಲ. ಕೊನೆಗೆಬೇಜಾರಾಗಿ ಬಾಗಿಲನ್ನು ಬಡಿಯತೊಡಗಿದೆ.

"ಸುಜೀ....! ಸುಜೀ.. !! ಬಾಗಿಲು ತೆಗೆ"

"ಇಲ್ಲ, ನಾನು ಬಾಗಿಲು ತೆಗೆಯುವುದಿಲ್ಲ" ಎಂದು ಸಿಡಿದು ಬಂತು ಉತ್ತರ.

"ಗುಡ್" ನನ್ನ ನೈಟ್ ಡ್ರೆಸ್‌ನನ್ನಾದರೂ ಹೊರಗೆ ಎಸೆ ಹೋಗಲಿ" ಎಂದೆ.

'ಇಲ್ಲ!' ಎಂದಳು.

ನಾನು ಮಹಡಿಯಿಂದ ಕೆಳಗಿನ ಹಜಾರಕ್ಕೆಬಂದು ಲೈಟ್ ಹೊತ್ತಿಸಿ ಕೋಟನ್ನು ಬಿಚ್ಚಿ ಗೂಟಕ್ಕೆ ನೇತು ಹಾಕಿದೆ. ಹಾಗೆಯೇ ಸೋಫಾದ ಮೇಲೆ ಒರಗಿದೆ, ಚಳಿಗಾಲ, ಚಳಿಗಾಳಿ ಸುಳಿದು ಕಿಟಕಿಯಿಂದ ಬೀಸತೊಡಗಿತು. ಕಿಟಕಿಗೆ ಹಾಕಿದ್ದ ಪರದೆಗಳನ್ನು ಬಿಚ್ಚಿ ಅವುಗಳನ್ನೆ ಹೊದೆದು ಮಲಗಿದೆ. ಈಗ ಸ್ವಲ್ಪ ಚಳಿ ಕಡಿಮೆಯಾಗಿ ಹಾಯಾಗಿ ನಿದ್ರಿಸಿದೆ.

ಮಧ್ಯ ರಾತ್ರಿ ತಟ್ಟನೆ ಎಚ್ಚರವಾಯಿತು. ಹೊದೆದಿದ್ದ ಪರದೆಗಳು ತಣ್ಣಗಾಗಿದ್ದವು. ಎದ್ದು ಕುಳಿತೆ ಗೋಡೆಯ ಮೇಲಿನ ಗಡಿಯಾರ ಎರಡು ಘಂಟೆ ಹೊಡೆಯಿತು.

ಲೈಟ್ ಹೊತ್ತಿಸಿ ಹೊರಗೆ ಹೋಗಿ ಬಂದೆ. ನಾನು ಮಲಗಲು ಹವಣಿಸುವುದರಲ್ಲಿ ಸುಜಾತ ಕೆಳಗಿಳಿದು ಬಂದಳು.

"ಬೀಗದ ಕೈ ಕೊಡಿ ಸ್ವಲ್ಪ, ಪ್ಲೀಸ್....!" ಎಂದು ಕೇಳಿದಳು.

"ಯಾವ ಬೀಗದ ಕೈ?" ಎಂದು ಉಲ್ಟ ಪ್ರಶ್ನೆ ಹಾಕಿದೆ.

"ಡೈನಿಂಗ್ ಹಾಲಿಂದ್ರಿ!" ಎಂದಳು ಮತ್ತೆ.

"ಏಕೆ?"

"ನನಗೆ ಹಸಿವೆಯಾಗುತ್ತಿದೆ!" ಊಟ ಮಾಡಬೇಕು.

ಬೀಗದ ಕೈ ತೆಗೆದುಕೊಂಡು ಡೈನಿಂಗ್ ರೂಮಿನತ್ತ ಬಳುಕುತ್ತಾ ನಡೆವಾಗ ಆವಳ ಕೈಯ ಬಳೆಗಳು ಅನಿಶ್ಚಬ್ದ ವಾತಾವರಣದಲ್ಲಿ ಶಬ್ದ ಮಾಡಿದವು.

ನನಗೆ ನಿದ್ರೆ ಬರಲಿಲ್ಲ. ಸಿಗರೇಟು ಹೊತ್ತಿಸಿ ಹೊಗೆಯುಗುಳುತ್ತಾ, ಯೋಚಿಸತೊಡಗಿದೆ." ನನ್ನಿಂದ ಆದ ಅಪರಾಧ ಏನಾದರೂ ಏನ?" ಅವಳಿಗೆ ಮೂಗಿನ ಮೇಲೆ ಸಿಟ್ಟು, ಯಾವಾಗಲೂ ಅಸಮಾನ!

ಊಟ ಮುಗಿಸಿ ಬಂದ ಸುಜಾತಾ ನನ್ನ ಪಕ್ಕಕ್ಕೆ ಬಂದು ಕುಳಿತಳು. ಈಗ ಸ್ವಲ್ಪ ಸಮಾಧಾನದಿಂದಿದ್ದಾಳೆ ಎನ್ನಿಸುತ್ತಿತ್ತು. ಅವಳ ಮುಖ.

'ಸುಜೀ, ಈಗ ನನ್ನಿಂದ ಆದ ಅಪರಾಧವಾದರೂ ಏನು? ಹೇಳು' ಎನ್ನುತ್ತಾ ನನ್ನ ಕೋಟನ್ನು ಅವಳಿಗೆ ಹೊದಿಸುತ್ತಾ ಪ್ರಶ್ನಿಸಿದೆ.

'ನೀವು ಸುಶೀಲಳ ಅಡಿಗೆ ಹುನ....' ಎಂದು ಕಿಟಕಿಯ ಹೊರಗೆ ನೋಡುತ್ತಾ ಮೆತ್ತನೆ ಉತ್ತರಿಸಿದಳು.

"ಇಷ್ಟಕ್ಕೇನೆಯೋ?"

"ಹಾಂ, ಹೌದು!" ಎಂದು ಮುಖವನ್ನು ಬಿಚಿಕೊಂಡು ಹೇಳುತ್ತಾ ಅಲ್ಲಿ ನಿಲ್ಲದೇ ಎದ್ದು ನಡೆದಳು.

ನಾನು ಅದೇ ಸೋಫಾದ ಮೇಲೆ ಮಲಗಿ ರಾತ್ರಿಯೆಲ್ಲಾ ಕಳೆಯಬೇಕಾಯಿತು.

ಮುಂಜಾನೆ—

ನಾನು ಸಕ್ಕರೆ ನಿದ್ದೆಯಿಂದ ಎದ್ದು ಕಣ್ಣು ತೆರೆದೆ. ಆಗಲೇ ಸುಜೀ ಚಹದ ಲೋಟಾ ಹಿಡಿದು ಹಾಜರಾದಳು.

"ಸುಜೀ, ಇಷ್ಟು ಬೇಗ ಎದ್ದಿದ್ದೀಯಲ್ಲ, ಏಕೆ?" ಎಂದು ಕಿಟಕಿಯ ಪರದೆಗಳನ್ನು ಸರಿಸುತ್ತಾ ನಾನು ಕೇಳಿದೆ.

"ಚಹ ಕುಡಿಯಿರಿ ಮೊದಲು, ಆಮೇಲೆ ಹೇಳುವೆನು" ಎಂದಳು.

"ಸುಜೀ, ಸ್ವಲ್ಪ ಇತ್ತ ಬಾ ಇಲ್ಲಿ" ಎಂದು ಬರಸೆಳೆದು ಸಾಲ ತೀರಿಸಿಕೊಂಡೆ. ಚಹ ಕುಡಿದು ಮುಗಿಸಿದ್ದಾಯಿತು.

ಒಂದು ವರ್ಷ ಕಳೆದಿದೆ. ಹೀಗೆಯೇ ನಮ್ಮಿಬ್ಬರಲ್ಲಿ ಅನೇಕ ಸವಿಘಟನೆಗಳಿಂದ, ಮಧುರ ಅನುಭೂತಿಗಳಿಂದ ಕಾಲ ಕಳೆಯುತ್ತಿತ್ತು. ಆದರೆ ಈಗ ಒಂದು ವಾರದ ಹಿಂದೆ ದೆಹಲಿಗೆ ಹೋದವಳು ಹಿಂದಿರುಗಿಯೂ ಇಲ್ಲ. ಮೋಟಾರನ್ನು ಕಳುಹಿಸಲೂ ಇಲ್ಲ.

"ಆ ದಿನ! ಬೆಳಗಿನಿಂದಲೇ ಮಳೆ 'ಜಿ' ಎಂದು ಪ್ರಾರಂಭವಾಗಿ ಸುರಿಯತೊಡಗಿತು. ತುಂತುರು ಹನಿಗಳು ಗಾಳಿಯ ಜೊತೆ ಸೇರಿ ಒಳಗೆಲ್ಲಾ ಸಿಡಿಯಿತು. ಆಗ ಚಹ ತಂದು ಕೊಟ್ಟ. ನಾನು ಚಹ ಕುಡಿದ. ಮುಖ ಕ್ಷೌರ ಮಾಡಿಕೊಳ್ಳಲು ತಯಾರಿ ನಡೆಸತೊಡಗಿದೆ. ಮುಖಕ್ಷೌರ ಮಾಡಿಕೊಳ್ಳದೆ ಸುಲೇಖಳನ್ನು ಕಾಣಲು ಹೋಗುವಂತಿಲ್ಲ. ಆದರೆ ಏನು ಮಾಡುವುದು? ಹೋಗಲೇ ಬೇಕಾಯಿತು. ಟೆಲಿಫೋನ್ ರಿಸೀವ್ ಮಾಡಿದೆ."

"ಹಲೋ ನೋಡಿ! ನಾನು ದೆಹಲಿಯಿಂದ ತಾಜ ಮಹಲ್ ನೋಡಲು ಇಲ್ಲಿಗೆ ಬಂದೆ. ಒಂದೇ ಸಮನೆ ಬೆಳಗಿನಿಂದ ಮಳೆ ಸುರಿಯುತ್ತಿದೆ. ನನಗೆ ಒಂದು ಟ್ಯಾಕ್ಸಿಯಾದರೂ ಸಿಕ್ಕಲಿಲ್ಲ. ಈಗ ನಾನೇನು ಮಾಡಲಿ?" ಎಂದು ಸುಲೇಖ ಕೇಳಿದಳು.

"ಸುಲೇಖಾ! ಅವಳ ವಿಚಾರವಾಗಿ ಎರಡು ಮಾತು ಹೇಳುವೆ... ಇಂದಿಗೆ ಎರಡು ವರ್ಷದ ಮೊದಲು ಒಂದುದಿನ ಯಾವುದೋ ಒಂದು ಇಂಗ್ಲಿಷ್ ಪಿಕ್ಚರ್ ನೋಡಿಕೊಂಡು ಇಬ್ಬರೂ ರಿಟರ್ನ ನಲ್ಲಿ ಊಟ

(ಹನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526
1921 ಸ್ಥಾಪನೆ
ಸಂಪುಟ ೪೮
ಸಂಚಿಕೆ ೩೧
VOL. 48
No. 31

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೭—೪—೧೯೬೯

ರುದ್ರವಿಡಂಬನೆ

ಬಿಹಾರದಲ್ಲಿ ಮುಖ್ಯಮಂತ್ರಿ ಹರಿಹರ ಸಿಂಗರು ಎಂತಾದರೂ ರಾಮಲಖನ ನಾರಾಯಣ ಸಿಂಗರಿಂದ ರಾಜೀನಾಮೆ ಪಡೆದು ಕಾಂಗ್ರೆಸ್ ಹೈಕಮಾಂಡಿನ ಮಾನ್ಯತೆಯನ್ನೇನೋ ಉಳಿಸಿದರು. ಆದರೆ, ಅವರ ಸ್ಥಾನ ಭದ್ರವಾಗಿದೆಯೆ? ಪ್ರಥಮದಲ್ಲೇ ಪ್ರಮಾಣ ವಚನ ಸ್ವೀಕಾರದ ಹೊತ್ತು ಅವರಿಗೆ ಅಪಶಕುನವಾಗಿತ್ತು. ಇದಕ್ಕೆ ರಾಜಾ ಕೆ. ಎನ್. ಸಿಂಗರು ಕಾರಣವೆನ್ನಲಾಗಿತ್ತು. ಈಗ ಕೆ. ಎನ್. ಸಿಂಗರು ಇಲ್ಲ; ಆದರೂ ಕಾಂಗ್ರೆಸ್ ಪಕ್ಷೀಯ ಶಾಸಕರಲ್ಲಿ ಸುಮಾರು ೨೦-೨೫ ಸದಸ್ಯರು ಕಾಂಗ್ರೆಸ್ ಪಕ್ಷವನ್ನೇ ತ್ಯಾಗ ಮಾಡುವರೆಂಬ ವದಂತಿ ಹುಟ್ಟಿತು. ಇವರಿಗೆ ಶ್ರೀ ಶಿವಲಖಪತಿ ಸಿಂಗರು ನಾಯಕರೆಂದೂ ಹೇಳಲಾಯಿತು. ಆದರೆ, ಈ ವರದಿಯನ್ನು ತನ್ನ ವಿರೋಧಿಗಳು ಯಾರೋ ಹಬ್ಬಿಸಿದ್ದು ಎಂದೂ ತಾನು ಮೂವತ್ತೆರಡು ವರ್ಷಗಳಿಂದಲೂ ನಿಷ್ಠಾವಂತ ಕಾಂಗ್ರೆಸಿಗನಾಗಿದ್ದು ಮುಂದೆಯೂ ಕಾಂಗ್ರೆಸಿಗನಾಗಿಯೇ ಉಳಿಯುವೆನೆಂದೂ ಸ್ವಯಂ ಶಿವಲಖಪತಿ ಸಿಂಗರು ಹೇಳಿಕೆ ಹೊರಡಿಸಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿಯೇ ಗುಂಪುಗಾರಿಕೆ ಇದೆಯೆಂಬುದಕ್ಕೆ ಇಂತಹ ವರದಿಗಳೇ ಸಾಕ್ಷಿ. ಶಿವಲಖಪತಿ ಸಿಂಗರು ಪಕ್ಷತ್ಯಾಗ ಮಾಡುವುದಿಲ್ಲವಾದರೂ ಅಲ್ಲಿ ಕಾಂಗ್ರೆಸ್ಸಿನ ಸಮ್ಮಿಶ್ರ ಸರಕಾರದ ಅಸ್ತಿತ್ವ ಭದ್ರ ಬುನಾದಿಯ ಮೇಲೆ ನಿಂತಿಲ್ಲವೆಂಬುದೂ ಸತ್ಯವೇ. ಈ ಕಾರಣದಿಂದಲೇ ಕಾಂಗ್ರೆಸ್ ಅಧ್ಯಕ್ಷರು ಸುಮಾರು ೪೦ ಸದಸ್ಯರ ಸಂಪುಟ ರಚಿಸಲು ಅವರಿಗೆ ಅಧಿಕಾರ ನೀಡಿದ್ದಾರೆ. ಮಧ್ಯ ಪ್ರದೇಶದ ಮಾಜಿ ಮುಖ್ಯಮಂತ್ರಿ ಜಿ. ಎನ್. ಸಿಂಗರು ತಮ್ಮ ಅನುಯಾಯಿಗಳೊಂದಿಗೆ ಮತ್ತೆ ಕಾಂಗ್ರೆಸ್ ಸೇರಿದ್ದರಿಂದ ಸಂಯುಕ್ತ ವಿಧಾಯಕ ದಳವು ಸರಕಾರ ಮುರಿದು ಅಲ್ಲಿ ಕಾಂಗ್ರೆಸ್ಸು ಸರಕಾರ ರಚಿಸುವಂತಾಯಿತು. ಮುಖ್ಯಮಂತ್ರಿ ಪದವಿಗಾಗಿ ಸ್ಪರ್ಧೆ ಅನಿವಾರ್ಯವಾಗಿ ಶ್ರೀ ಶುಕ್ಲರು ಗೆದ್ದು ಬಂದರು. ಇವರಿಗೂ ತನ್ನ ಸರಕಾರವನ್ನು ಭದ್ರ ಬುನಾದಿಯ ಮೇಲೆ ನಿಲ್ಲಿಸಬೇಕಾದರೆ, ಸಚಿವ ಪದವನ್ನು ಉದಾರವಾಗಿ ಹಂಚಬೇಕಾಗುವುದು. ಪರಿಸ್ಥಿತಿಯನ್ನು ಮನಗಂಡ ಕಾಂಗ್ರೆಸ್ ಅಧ್ಯಕ್ಷರು ಇದಕ್ಕೂ ತಮ್ಮ ಸಮ್ಮತಿ ನೀಡಿದ್ದಾರೆ.

ಈಗ ತಿಳಿದು ಬಂದಿರುವಂತೆ ಮಧ್ಯಪ್ರದೇಶ ಮತ್ತು ಬಿಹಾರಗಳ ಸಚಿವ ಸಂಪುಟ ಮಂತ್ರಿಗಳು, ರಾಜ್ಯಮಂತ್ರಿಗಳು, ಉಪಮಂತ್ರಿಗಳು, ಸಾಂಸದೀಯ ಕಾರ್ಯದರ್ಶಿಗಳು—ಹೀಗೆಲ್ಲಾ ಒಟ್ಟು ೪೦ರ ಸಂಖ್ಯೆ ಮುಟ್ಟುವುದು ನಿಶ್ಚಿತವೇ. ಮಧ್ಯಪ್ರದೇಶದಲ್ಲಿ ಗೋವಿಂದ ನಾರಾಯಣ ಸಿಂಗರು ತಮ್ಮ ಸಂಪುಟವನ್ನು ಇಂಡಿಯಾ ರಬ್ಬರಿನಂತೆ ಬೇಕಾದಾಗ ಉಬ್ಬಿಸುತ್ತಿದ್ದರು. ಯಾರನ್ನು ಯಾವ ಕಾಲದಲ್ಲಾದರೂ ಮಂತ್ರಿಯನ್ನಾಗಿ ಮಾಡುವ ವಿದ್ಯೆ ಅವರಿಗೆ ಮಾತ್ರ ಕರಗತವೆಂದು ತಿಳಿಯಲಾಗಿತ್ತು. ಇದರ ಉದ್ದೇಶ ಅಲ್ಲಾಡುತ್ತಿರುವ ಸರಕಾರವನ್ನು ಭದ್ರಗೊಳಿಸುವುದು. ಆದರೆ, ಊದು ಮಂತ್ರಿಗಳಿಂದಲೂ ಸಂಪುಟವನ್ನು ಆಧರಿಸುವುದು ಅಸಾಧ್ಯವಾಗಿ ಅದು ಉರುಳಿಯೇ ಹೋಯಿತು. ಈಗ, ಮಧ್ಯ ಪ್ರದೇಶದಲ್ಲಾಗಲೀ ಬಿಹಾರದಲ್ಲಾಗಲೀ ದೊಡ್ಡ ಪ್ರಮಾಣದ ಅಥವಾ ವಿಶಾಲ ತಳಹದಿಯ ಸಂಪುಟ ರಚನೆಯಿಂದ ಭದ್ರ ಸರಕಾರವು ನಿರ್ಮಾಣವಾಗುವುದು ಸಾಧ್ಯವೇ ಎಂಬ ಸಂದೇಹ ವಾಸ್ತವಿಕ. ಭದ್ರ ತಳಹದಿಯಲ್ಲಿ ಸರಕಾರ ರಚಿಸುವ ನೆಪದಲ್ಲಿ ಇಂತಹ ಗಾತ್ರದ ಸಚಿವ ಸಂಪುಟ ಸ್ಥಾಪನೆ ಭೂಷಣಪ್ರಾಯವೇ ಎಂಬುದು ನೈತಿಕ ಪ್ರಶ್ನೆ. ಹಿಂದಿನ ಪಂಜಾಬದಲ್ಲಿ ಪ್ರತಾಪಸಿಂಹ ಕೈರೋನರು ಇಂತಹ ವಿಶಾಲ ತಳಹದಿಯಲ್ಲಿ ಕೊನೆಕಂಡವರು. ಉತ್ತರ ಪ್ರದೇಶದ ಸಚಿವ ಸಂಪುಟ ಯಾವಾಗಲೂ ದೊಡ್ಡದೇ. ಮೊನ್ನೆ ಮೊನ್ನೆ ಪಶ್ಚಿಮ ಬಂಗಾಲದಲ್ಲಿ ಸಂಯುಕ್ತ ರಂಗವು ತನ್ನ ಅಂಗ ಪಕ್ಷಗಳನ್ನು ತೃಪ್ತಿಪಡಿಸಲು ದೊಡ್ಡ ಗಾತ್ರವನ್ನೇ ನೆಮ್ಮಿತು. ಕರ್ನಾಟಕದ ಕಾಂಗ್ರೆಸ್ ಸರಕಾರ ಭಿನ್ನಮತೀಯರ ತೃಪ್ತಿಗಾಗಿ ತನ್ನದೇ ದಾರಿಯಲ್ಲಿ ಮುಂದುವರಿಯುತ್ತಿದೆ. ಹಿಂದೆ ಇಂತಹ ವೈಶಾಲ್ಯದಿಂದಾಗಿ ಸರಕಾರದ ಪಂಚಾಂಗವು ಕುಸು ಬಟ್ಟೆಯಾಗುತ್ತಿತ್ತು. ಇಂದು ಕಾಲ ಬದಲಾಗಿದೆ. ಸರಕಾರೀ ಪಕ್ಷವು ಅಲ್ಪ ಬಹುಮತದಿಂದಿರುವಾಗ ಬೆರಳೆಣಿಕೆಯಷ್ಟು ಸದಸ್ಯರು ಪಕ್ಷಾಂತರ ರೋಗಕ್ಕೆ ತುತ್ತಾದರೆ, ಎಂತಹ ಬುನಾದಿಯೂ ದಂಡಾ ಅಲುಗುತ್ತದೆ. ಆದುದರಿಂದ ಇಂದಿನ ದಿನಗಳಲ್ಲಿ ಈ ಬಗೆಯ ಸಂಪುಟಗಳು ಅಪೇಕ್ಷಣೀಯವೆ? ಅದರಲ್ಲೂ ದೇಶದ ಬಹುದೊಡ್ಡ ರಾಜಕೀಯ ಪಕ್ಷವಾದ ಕಾಂಗ್ರೆಸ್ಸು ಇಂತಹ ನಿರ್ಧಾರಕ್ಕೆ ಬರುವುದು ಸಮಂಜಸವೆ? ಕಾಲದ ಪರಿಸ್ಥಿತಿಗೆ ತಲೆಬಾಗುವುದು ಅನಿವಾರ್ಯವೆಂಬ ಒಂದೇ ಒಂದು ಕಾರಣವನ್ನು ಬಿಟ್ಟರೆ, ಇದಕ್ಕೆ ಮತ್ತಾವ ಸಮರ್ಥನೆಯೂ ಇರುವುದಿಲ್ಲ.

ಪಕ್ಷಾಂತರ ಪ್ರವೃತ್ತಿಯ ಬಗ್ಗೆ ಅಧ್ಯಯನ ಮಾಡಿದ ಉಚ್ಚಮಟ್ಟದ ಸಮಿತಿಯೊಂದು ಕಳೆದ ವರ್ಷ ತನ್ನ ವರದಿ ಸಲ್ಲಿಸಿತ್ತು. ಇದರ ಅಭಿಪ್ರಾಯದಂತೆ ಪಕ್ಷಾಂತರದ ಪಿಡುಗಿಗೆ ಅಧಿಕಾರ ಲಾಲಸೆಯೇ ಮುಖ್ಯ ಕಾರಣ. ಅಧಿಕಾರದ ಆಮಿಷ ಇಂದ್ರಜಾಲ ವಿದ್ಯೆಯನ್ನು ಪ್ರದರ್ಶಿಸಬಲ್ಲುದು. ದೊಡ್ಡ ಪ್ರಮಾಣದ ಸಚಿವ ಸಂಪುಟಗಳು ಪಕ್ಷಾಂತರ ಪ್ರವೃತ್ತಿಯನ್ನು ತಡೆಯುತ್ತವೆಯೆಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳು ಇದುವರೆಗೂ ಲಭ್ಯವಾಗಿಲ್ಲ; ಇಂತಹ ಕೃತ್ಯಗಳಿಂದ ಅಧಿಕಾರದ ಉಳಿವಿನ ಚಿಂತೆಯಲ್ಲೇ ಸಂಪುಟ ಮಗ್ನವಾಗುವುದಲ್ಲದೆ, ಜನಹಿತ ಚಿಂತನೆಯುಳ್ಳಲ್ಲ. ಹಾಗಾಗಿ ಇವು ತಮ್ಮ ಜನಪ್ರಿಯತೆಯನ್ನು ಅನಿವಾರ್ಯವಾಗಿ ಕಳೆದುಕೊಳ್ಳುತ್ತವೆ. ಇದಕ್ಕೆ ಜ್ವಲಂತ ನಿದರ್ಶನ ಮಧ್ಯ ಪ್ರದೇಶ. ಅಲ್ಲಿ ಕಳೆದೆರಡು ವರ್ಷ ನಡೆದುದು ಆಡಳಿತವಲ್ಲ; ಪ್ರಜಾಪ್ರಭುತ್ವದ ರುದ್ರ ವಿಡಂಬನಾತ್ಮಕ ನಾಟಕ. ಆದುದರಿಂದಲೇ ಸಮಿತಿಯು ರಾಜ್ಯಗಳಲ್ಲಿನ ಸಚಿವ ಸಂಖ್ಯೆಗೊಂದು ಮಿತಿ ಹೇರಿದೆ. ಏಕ ಶಾಸಕಾಂಗವಿರುವಲ್ಲಿ ಒಟ್ಟು ಸದಸ್ಯ ಸಂಖ್ಯೆಯ ಸೇ. ೧೦ ಇರಬೇಕೆಂದೂ ದ್ವಿಶಾಸನಾಂಗರಾಜ್ಯಗಳಲ್ಲಿ ಇದು ಸೇ. ೧೧ ಇರಬೇಕೆಂದೂ ಈ ಸಮಿತಿಯ ಬಹುಮತದ ಅಭಿಪ್ರಾಯ; ಈ ಮಿತಿಯೊಳಗೇನೇ ಎಲ್ಲ ತರದ ಸಾಮಂಜಸ್ಯ ಮತ್ತು ಸಮತೋಲನವನ್ನು ಕಾಪಾಡಿ ಭದ್ರ ಸರಕಾರವನ್ನು ರಚಿಸಬೇಕು ಎಂಬುದು ಸಮಿತಿಯ ಅಭಿಪ್ರಾಯ. ಆದರೆ, ಈ ಅಭಿಪ್ರಾಯವನ್ನು ಮನ್ನಿಸಿದ ರಾಜ್ಯಗಳೆಷ್ಟು? ಕಾಂಗ್ರೆಸ್ಸಿನಂತಹ ಪಕ್ಷವೇ ಪೇಚಿನಿಂದ ತಪ್ಪಿಸಿಕೊಳ್ಳಲಾಗದೆ ಏಲಿಏಲಿ ಒದ್ದಾಡುತ್ತಿರುವಾಗ ಉಳಿದವರ ಪಾಡೇನು? ಆದರೂ ಕಾಂಗ್ರೆಸ್ಸು ಪ್ರಜಾಶಕ್ತಿಯ ಉಳಿವಿಗಾಗಿ ಸೂಕ್ತ ಮಾರ್ಗದರ್ಶನ ನೀಡುವ ಆವಶ್ಯಕತೆಯಿರುವಂತೆಯೇ ಈ ದಿಸೆಯಲ್ಲಿ ಅದು ಮುಂದುವರಿದು ಉಳಿದವರಿಗೆ ಮಾದರಿಯಾಗಿರುವುದು ಅವಶ್ಯವೆನಿಸಿದೆ.

ಹಳೆಯ ರಾಗ

ಪಾಕಿಸ್ತಾನದ ಹೊಸ ಸೈನಿಕ ಅಧ್ಯಕ್ಷ ಯಹ್ಯಾಖಾನರು ಪಾಕಿಸ್ತಾನಿ ಪತ್ರಿಕಾ ಪ್ರತಿನಿಧಿಗಳನ್ನು ಮಾತ್ರ ಆಮಂತ್ರಿಸಿ ತನ್ನ ಮೊತ್ತಮೊದಲ ಹೇಳಿಕೆ ನೀಡಿದರು. ಆವಾಗ ಸಮಗ್ರ ವಿಶ್ವದಲ್ಲಿ ಶಾಂತಿ ಸ್ಥಾಪನೆಯ ಆವಶ್ಯಕತೆಯನ್ನು ಪ್ರತಿಬಿಂಬಿಸಿ, ಭಾರತದೊಡನೆಯೂ ನಿಕಟ ಮತ್ತು ಉತ್ತಮ ಸಂಪರ್ಕವನ್ನು ಸ್ಥಾಪಿಸಲು ಬಯಸಿದರು. ಇಂತಹ ಅಭಿಪ್ರಾಯವನ್ನು ರಾಷ್ಟ್ರಾಧ್ಯಕ್ಷರು ವ್ಯಕ್ತಪಡಿಸುವುದು ಸಹಜವೇ. ಭಾರತ ಮತ್ತು ಪಾಕಿಸ್ತಾನಗಳ ನಡುವಣ ಎಲ್ಲ ಸಮಸ್ಯೆಗೂ ಮೂಲ ಜಮ್ಮು ಮತ್ತು ಕಾಶ್ಮೀರದ ಪ್ರಶ್ನೆ ಎಂದು ಹಿಂದಿನೆಲ್ಲಾ ಪಾಕ್ ವರಿಷ್ಠರ ಅಭಿಮತ. ಯಹ್ಯಾಖಾನರು ಈ ಅಭಿಪ್ರಾಯವನ್ನು ಸ್ಪಷ್ಟ ವಾಕ್ಯಗಳಿಂದ ಪುನರುಚ್ಚರಿಸಿದರೇ ಇಲ್ಲವೇ ತಿಳಿದಿಲ್ಲ. ಆದರೂ ಜಮ್ಮು-ಕಾಶ್ಮೀರ ಪ್ರಶ್ನೆಯನ್ನೂ ಒಳಗೊಂಡು ಎಲ್ಲ ಪ್ರಶ್ನೆಗಳನ್ನೂ ಶಾಂತಿಯಿಂದ ಗೌರವಯುತವಾಗಿ ಪರಿಹರಿಸಿಕೊಳ್ಳುವಲ್ಲಿ ಅವರು ಉತ್ಸಾಹ ತೋರಿಸಿದ್ದಾರೆ. ಇದು ಶುಭ ಚಿಹ್ನೆಯೆಂದು ಹೇಳಲಾಗದು; ಜತೆಗೆ ಅಶುಭವೆಂದೂ ಹೇಳಲಾಗದು. ಭಾರತವು ಪಾಕಿಸ್ತಾನದೊಡನೆ ಹಿಂದಿನಿಂದಲೂ ಸಮರಸದ ಭಾವನೆಯನ್ನೇ ಇಟ್ಟುಕೊಂಡಿದೆ. ಒಂದಕ್ಕಿಂತ ಹೆಚ್ಚು ಬಾರಿ ಸಮರ ನಿಷೇಧ ಒಡಂಬಡಿಕೆಗೆ ಕರೆನೀಡಿದೆ. ತಾಷ್ಕೆಂಟ್ ಘೋಷಣೆಯನ್ನು ಪ್ರಕರಣಪೂರ್ವಕವಾಗಿ ಮನ್ನಿಸಿದೆ; ತನಗೆ ವಿರುದ್ಧವಾಗಿದ್ದರೂ ಕಚ್—ರಾಣದ ಗಡಿ ನಿರ್ಣಯವನ್ನು ಒಪ್ಪಿಕೊಂಡಿದೆ. ಇವೆಲ್ಲ ಕೆಲವು ಸಂಗತಿಗಳು. ಜಮ್ಮು ಕಾಶ್ಮೀರದ ಬಗ್ಗೆ ಭಾರತದ ನೀತಿ ಅಚಲ. ಐತಿಹಾಸಿಕ ಸತ್ಯಗಳನ್ನು ಮೂಲೆಗೆ ತಳ್ಳಿ ಈ ನೀತಿಯಲ್ಲಿ ಬದಲಾವಣೆ ಮಾಡದೆ ಪಾಕಿಸ್ತಾನದೊಡನೆ ನಿಕಟ ಸಂಪರ್ಕ ಸಾಧ್ಯವಿಲ್ಲವೆಂದಾದರೆ, ಅದರಲ್ಲಿ ಭಾರತದ್ದೇನೂ ತಪ್ಪಿಲ್ಲ. ಯಹ್ಯಾಖಾನರು ಐತಿಹಾಸಿಕ ಸತ್ಯಗಳನ್ನು ಮನವರಿಕೆ ಮಾಡಿಕೊಂಡು ಉಭಯ ದೇಶಗಳ ಗೌರವವನ್ನು ರಕ್ಷಿಸಲು ಮುಂದಾದಾರೆ?

ಶ್ರೀ ನರಸಿಂಹ ಜಯಂತೀ ಮಹಾರಥೋತ್ಸವ

ಶ್ರೀ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದಲ್ಲಿ ವರ್ಷಂಪ್ರತಿ ನಡೆಯುವ "ಶ್ರೀ ನರಸಿಂಹ ಜಯಂತಿ ಮಹೋತ್ಸವ"ವು ಶ್ರೀ ದೇವರ ಸನ್ನಿಧಿಯಲ್ಲಿ 29-4-69ರಿಂದ 7-5-69ರ ವರೆಗೆ ಸಾಮಾನ್ಯದಂತೆ ನಡೆಯುವುದರಿಂದ ಸದರಿ ಪೂಜಾ ಉತ್ಸವ, ವಸಂತ, ಸಂತರ್ಪಣಾದಿ ಸತ್ಕಾರ್ಯಗಳ ಬಗ್ಗೆ ನೀವು ನಿಮ್ಮ ಬಂಧು ಮಿತ್ರರಿಂದೊಡಗೂಡಿ ಬಂದು, ಶ್ರೀ ದೇವರ ಸಂದರ್ಶನಾದಿಗಳನ್ನು ತೀರ್ಥಪ್ರಸಾದ ಮುಂತಾದುವುಗಳನ್ನು ಸ್ವೀಕರಿಸಿ, ಇತೋಪ್ಯತಿಶಯವಾಗಿ ಶ್ರೀ ದೇವರ ಪರಮಾನುಗ್ರಹಕ್ಕೆ ಪಾತ್ರರಾಗಿ ಶ್ರೇಯೋವಂತರಾಗಬೇಕಾಗಿ ಶ್ರೀ ವಿದ್ಯಾಸಿಂಧುತೀರ್ಥ ಶ್ರೀಪಾದಂಗಳವರು ಅಪೇಕ್ಷಿಸುತ್ತಾರೆ.

ನರಸಣ್ಣನ ಸರಸ

"ಕಲ್ಕತ್ತೆಗೆ ಸಮ್ಮೇಳನವೊಂದಕ್ಕೆ ತೆರಳಿದ ಮುಂಬೈಯ ಅರ್ಥಶಾಸ್ತ್ರಿಯೊಬ್ಬ ಕಣ್ಮರೆಯಾಗಿದ್ದಾನಂತೆ......... ಹೇಗಿದೆ ಕಲ್ಕತ್ತೆ?"

ಮುಂದು

ಗೇಹರಾಜ್ಯದಲ್ಲಿ

ಕೆಸರಿಲ್ಲದಲ್ಲಿ ಇಳಿಯಬಾರದೇಕೆ?

"ಹಾದ್ರಿ, ಇದೆಂಥದೂಂತ?"

"ಯಾವುದು?"

"ಅಲ್ರಿ, ಸುಸಂಸ್ಕೃತವೆಂದು ಕರೆವ ಅಮೆರಿಕೆಯ ಕತೆ...."

"ಏನು?"

"ಅಲ್ಲಿನ ಮಹಾನಗರ ನ್ಯೂಯಾರ್ಕ್‌ನಲ್ಲಿ ಎರಡು ದಿನಗಳಲ್ಲಿ ಐದು ಕೊಲೆಗಳಾಗುತ್ತಂತೆ..."

"ಬರೋಬರಿ...."

"ಪ್ರತಿದಿನವೂ ೧೪೯ ವ್ಯಕ್ತಿಗಳ ಲೂಟಿ ನಡೆಯುತ್ತಿದೆಯಂತೆ. ಐದು ಸ್ತ್ರೀಯರ ಮೇಲೆ ಬಲಾತ್ಕಾರ ನಡೆಯುತ್ತಂತೆ, ೭೩ ವ್ಯಕ್ತಿಗಳ ಮೇಲೆ ಆಕ್ರಮಣ ಆಗುತ್ತಂತೆ..."

"ಹ್ಞಾಂ...."

"ಪ್ರತಿದಿನ ೪೭೫ ಸುಲಿಗೆ, ಕಳ್ಳತನಗಳ ಘಟನೆಗಳ ವರದಿ ಬರುತ್ತಂತೆ. ೧೯೭೬ರಲ್ಲಿ ೭೭,೪೪೪ ಮೋಟಾರು ಕಾರುಗಳು ಕಳವಾದ ವಂತೆ."

"ಭೇಷ್..."

"ಈ ಸಂಖ್ಯೆ ೧೯೬೭ಕ್ಕಿಂತ ಸೇ. ೩೩ ರಷ್ಟು ಅಧಿಕವಂತೆ...."

"ಶಹಭಾಸ್...."

"ನ್ಯೂಯಾರ್ಕಿನ ಸರಾಸರಿ ಕೊಲೆಗಳ ಸಂಖ್ಯೆ ಅಮೆರಿಕೆಯ ಉಳಿದ ಹತ್ತು ಮಹಾ ನಗರಗಳ ಸರಾಸರಿಗಿಂತ ಕಡಿಮೆಯಂತೆ. ನ್ಯೂಯಾರ್ಕಿಗಿಂತ ಬಾಲ್ಟಿಮೋರ್ ಮತ್ತು ವಾಶಿಂಗ್‌ಟನ್‌ಗಳು ಮುಂದಿದ್ದರೆ, ಇವುಗಳಿಗಿಂತ ಡಾಲ್ಲಾಸ್ ಮತ್ತು ಟೆಕ್ಸಾಸುಗಳು ಅಗ್ರಗಾಮಿಯಂತೆ..."

"ಯಾವುದರಲ್ಲಿ?"

"ಕೊಲೆಯಲ್ಲಿ...."

"ಹ್ಞಾಂ....."

"ಇಂಥಹ ದೇಶವನ್ನು ಸುಸಂಸ್ಕೃತ ಎಂದು ಕರೆಯುತ್ತಾರೆ..."

'ಹೌದು, ಸಂಸ್ಕೃತಿಯು ಅಭಿವೃದ್ಧಿಗೊಳ್ಳುತ್ತ ಹೋಗುತ್ತೆ; ಅದು ಇವಕ್ಕೆ ಅನಿವಾರ್ಯವೇ ಆಗುತ್ತೆ...'

'ಅಂದರೆ ಬಂಗವಾಡುವುದು ಸಂಸ್ಕೃತಿಯೇನು?'

'ಹಾಗಲ್ಲದಿರಬಹುದು, ಆದರೆ ಇತ್ತೀಚಿನ ದಿನಗಳಲ್ಲಿ ಪಾಶ್ಚಾತ್ಯರಲ್ಲಿಯೂ ಸಂಸ್ಕೃತಿ ರೂಪ ಪರಿವರ್ತನೆಗೊಳ್ಳತೊಡಗಿದ್ದು ಇದನ್ನೇ 'ಪ್ರಗತಿ' ಎನ್ನುವುದು— ವೈಜ್ಞಾನಿಕ ಭಾಷೆಯಲ್ಲಿ..."

'ಅಂದರೆ?'

ಒಂದು ಕಾಲದಲ್ಲಿ ಸಂಸ್ಕೃತ ಭಾಷೆ ಸುಸಂಸ್ಕೃತವೆನಿಸಿತ್ತು. ಈ ಭಾಷೆ ವಿಕೃತರೂಪ ತಾಳುತ್ತ ತಾಳುತ್ತ ಬಂದು ಹಲವು ಕವಲುಗಳಾಗಿ ಒಡೆದುವು. ಅಂದಿನ ಸಂಪ್ರದಾಯವಾದಿಗಳು ಇವನ್ನು ಅಪಭ್ರಂಶವೆಂದು ನಿಂದಿಸಿದರೇನೋ ನಿಜ. ಆದರೆ ಇಂದಿಗವು ಪ್ರಗತಿಪರ ಭಾಷೆಗಳೆನಿಸಿವೆ. ಅವುಗಳ ಗತಿಯನ್ನು ಪ್ರಗತಿಯೆಂದು ಭಾಷಾ ವಿಜ್ಞಾನಿಗಳು ಹೇಳುತ್ತಾರೆ."

"ಅಂದರೆ, ಅಂದಿಗೆ ಅದು ಸುಸಂಸ್ಕೃತಿ ಇಂದಿಗೆ ಇದು ಅಂತ."

"ಮತ್ತಿನ್ನೆಂಥದು? ಒಕ್ಕಣ್ಣರ ಊರಿನಲ್ಲಿ ಒಂದು ಕಣ್ಣು ಮುಚ್ಚಿ ನಡೆಯಬೇಕು....."

"ಹ್ಞಾಂ, ಅಂತ್ರಪ್ಪ."

"ಅಷ್ಟೇಕೆ ವೈರಾಗ್ಯ? ನೋಡು, ಮೂಢಾಚಾರವೇ ತುಂಬಿದ ಜಗತ್ತಿನಲ್ಲಿ ನಾವೂ ಪಾಮರಜೀವಿಗಳಂತೆ ತೋರಿಸಿಕೊಂಡರೇನೇ ಸ್ಥಾನ-ಮಾನ...."

"ಹ್ಞಾಂ, ಅದೂ ಹೌದೆನ್ನಿ. ಸತ್ಯವಂತರನ್ನು, ನೀತಿವಂತರನ್ನು ಯಾರು ಕೇಳುತ್ತಾರೆ?....'

"ನೋಡಿ, ಗಾಜಿನ ಮನೆಯೊಳಗೆ ವಾಸಿಸುವುದು ದೊಡ್ಡಸ್ತನ ನಿಜ; ಆದನ್ನು ಕಾಯಲಿಕ್ಕೆ ಕಾವಲುಗಾರರನ್ನೂ ನೇಮಿಸಬೇಕಾಗುತ್ತದೆ. ಅಪಾಯವನ್ನೂ ಎದುರಿಸಬೇಕಾಗುತ್ತೆ...."

"ಮತ್ತೆ ದೊಡ್ಡಸ್ತಿಕೆ ಸುಮ್ಮನೆ ಬರುತ್ತೇನು? ಆಳ ಸಮುದ್ರದಲ್ಲಿ ಮುಳುಗಿದರೆ ಮುತ್ತು ದೊರೆಯುತ್ತೆ..."

"ಹ್ಞಾಂ...."

"ಅಲ್ರಿ, ಅಂತಹ ಅಮೆರಿಕವನ್ನು ಸುಸಂಸ್ಕೃತ ದೇಶವೆಂದು ಲೋಕವೇ ಕರೆಯುತ್ತಲ್ಲಾಂತ...."

"ಅವರಿಗೆ ಅದೇ ಸಂಸ್ಕೃತಿ....'

"ಅಂದ್ರೆ ಅಲ್ಲಿ ಕೊಲೆ-ಸುಲಿಗೆ-ಸ್ತ್ರೀ ಬಲಾತ್ಕಾರ, ಕಳ್ಳತನ ಮೊದಲಾದುವು ನಡೆಯದಿದ್ದರೆ, ಪ್ರಗತಿಯೇ ಕುಂಠಿತವಾಗುವುದ..."

"ಅಲ್ಲವೇ ಮತ್ತೆ? ಮನಶ್ಶಾಸ್ತ್ರ ಮತ್ತು ಆದರ್ಶವಾದವುಗಳು ಉತ್ತರ ಮತ್ತು ದಕ್ಷಿಣ ಧ್ರುವಗಳು. ಆದರ್ಶ ಪಾಲನೆಯಾಗಬೇಕಾದರೆ ಮನವನ್ನು ದಮನಿಸಲೇಬೇಕು. "ಇರುವುದು" ಮನಶ್ಶಾಸ್ತ್ರದೊಡನೆ ಸಂಬಂಧಪಟ್ಟರೆ, "ಇರಬೇಕಾದುದು" ಆದರ್ಶವಾದವಾಯಿತು."

"ಹೋಗಲಿ ಬಿಡಿ, ಅವರವರ ಪಾಡು ಅವರವರಿಗೆ. ಎಲ್ಲಿವರೆಗೆ ಅಂದರೆ ಇಂದು ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚುತ್ತಿದೆ ಎಂದು ದೂರುವವರು ಹೆಚ್ಚಿನವರಾದರೆ, ಇದು ಶಿಸ್ತಿನ ಪ್ರಗತಿಪರ ರೂಪ' ಎನ್ನುವವರೂ ಇದ್ದಾರೆ....'

'ಇದೊಳ್ಳೇದಾಯ್ತು....'

"ಯಾಕೆ?"

"ಅಶಿಸ್ತನ್ನು ಶಿಸ್ತು ಎನ್ನುವುದೆಂದರೆ?"

"ಅಲ್ರಿ, ಒಂದು ಕಾಲಕ್ಕೆ ಅಶ್ಲೀಲವಾಗಿದ್ದನ್ನು ಈಗ ಶ್ಲೀಲವಾಗಿದೆ; ಹಿಂಸೆ-ಶಬ್ದಗಳ ಅರ್ಥ ಬದಲಾಗಿದೆ. ಹಾಗೇ ಶಿಸ್ತಿನ ಅರ್ಥವೂ ಯಾಕೆ ಬದಲಾಗಬಾರದು? ನಮ್ಮ ಶಾಸಕರು ಶಾಸನ ಸಭೆಗಳಲ್ಲಿ ಅಧ್ಯಕ್ಷರ ಮಾತುಗಳನ್ನು ಕೇಳೋದಿಲ್ಲ, ಗೌರವಿಸೋದಿಲ್ಲಾಂತಾದ ಮೇಲೆ ಮಕ್ಕಳು ಉಪಾಧ್ಯಾಯರ ಮಾತನ್ನೇಕೆ ಕೇಳಬೇಕು? ಗೌರವಿಸಬೇಕು?"

'ಅದು ಬೇರೆ ಕತೆ..."

"ಯಾಕೆ?"

'ಅವರು ಆಳುವವರು; ಇವರು ಆಳಿಸಿಕೊಳ್ಳುವವರು....'

'ನೋಡಿ, ಇದು ಪ್ರಜಾಸತ್ತೆ. ಇಲ್ಲಿ ಆಳುವವರೂ ಆಳಿಸಿಕೊಳ್ಳುವವರೂ ಒಬ್ಬರೇ...."

"ಇದು ಆದರ್ಶವಾದವಾಯ್ತು.... ಮನಶ್ಶಾಸ್ತ್ರವು ಪ್ರತ್ಯೇಕವಾದದನ್ನೇ ಪ್ರತಿಪಾದಿಸುತ್ತದೆಯೆನ್ನಬಹುದು."

'ಇರಲಿ, ನಮಗೇನಂತೆ?'

"ಅಲ್ವೆ, ನೋಡು ನಿನ್ನ ಇಂದಿರಮ್ಮ ಭಾರೀ ಪೇಚಿನಲ್ಲಿ ಸಿಕ್ಕಿ ಬಿದ್ದಿದ್ದಾರಂತೆ.."

'ಏನು?'

"ಅದೇ ಚಂದ್ರಶೇಖರ ಪ್ರಕರಣ."

'ಏನಾಯ್ತು?'

"ಎಳೆ ರಕ್ತದ ಯುವಕರು ಹಳೆಯವರ ಮೇಲೆ ಏರಿಹೋಗುತ್ತಿದ್ದಾರೆ...."

"ಅಂದರೆ?"

"ನೋಡು, ಚಂದ್ರಶೇಖರರು ಈಗ ವಿರೋಧಿಯರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ...."

"ಯಾಕೆ?"

"ಅವರು ಮಾಡಬೇಕಾದ, ಆದರೆ ಅವರಿಂದಾಗದ ಕೆಲಸವನ್ನ ಚಂದ್ರಶೇಖರರು ಮಾಡಿದ್ದಾರೆ."

"ಸರಿ, ಇರಲಿ; ಅದರಿಂದೇನು?"

"ಅಷ್ಟೇ ಆದರೆ ತೊಂದರೆ ಇಲ್ಲವಿತ್ತು. ಆದರೆ ವಿರೋಧಿ ಪಕ್ಷೀಯರು ಇಂದಿರಮ್ಮನಿಗೊಂದು ಆಹ್ವಾನವನ್ನೇ ನೀಡಿದ್ದಾರೆ..."

"ಏನಂತೆ?"

"ಮೊದಲನೆಯದಾಗಿ ಚಂದ್ರಶೇಖರ ಪ್ರಕರಣ ಇಡಿಯ ಕಾಂಗ್ರೆಸ್ ಇತಿಹಾಸಕ್ಕೆ ಕಳಂಕಪ್ರಾಯವಂತೆ, ಈ ಕಳಂಕ ಕಟ್ಟಿದ್ದು ಇಂದಿರಮ್ಮ ನಾಯಿಕೆಯಾದಾಗ...."

"ಅದೆಲ್ಲ ಅವರಿಗೇಕೆ?"

"ರಾಜ್ಯಕೀಯದಲ್ಲಿ ಯಾಕೆ ಏನು ಎಂಬುದೆಲ್ಲ.... ಮತ್ತೆ ನೋಡು, ಆರೋಪ ಹಿರಿಯ ಮಂತ್ರಿಯೊಬ್ಬರ ಮೇಲೆ, ಅದರಿಂದ ಅದನ್ನು ಅಷ್ಟು ಲಘುವಾಗಿ ತಿಳಿಯಬಾರದು. ತನಿಖೆಗೆ ಒಪ್ಪಿಸಿ ತನ್ನ ಪರಿಶುದ್ಧತೆಯನ್ನು ಬಹಿರಂಗಪಡಿಸದೆ ತನಿಖೆಯ ಬೇಡಿಕೆಯನ್ನು ತಿರಸ್ಕರಿಸುವುದೆಂದರೆ, ಕರ್ತವ್ಯದಿಂದ ದೂರವುಳಿದಂತೆ....'

"ತನಿಖೆ ಮಾಡಬೇಕಾದ ಕಾರಣವೇ ಇಲ್ಲವೆಂದಾದರೆ..."

"ಸೀತೆ ತನ್ನ ಪಾತಿವ್ರತ್ಯವನ್ನು ತೋರಿಸುವುದಕ್ಕೆ ಅಗ್ನಿ ಪರೀಕ್ಷೆಗೆ ಒಪ್ಪಲಿಲ್ಲವೆ-"

'ಹ್ಞಾಂ...'

"ಇನ್ನೂ ಮುಂದೆ ಹೋಗಿದ್ದಾರೆ, ವಿರೋಧಿಗಳು...'

"ಆಗಲಿ, ಏನಂತೆ?''

"ಬಿರ್ಲಾಗಳು ಇಂದಿರಮ್ಮನು ನಾಯಕಿಯಾಗಿ ಆಯ್ಕೆಯಾಗುವಲ್ಲಿ ಎರಡು ಬಾರಿಯೂ ಅವರಿಗೆ ಸಹಾಯ ಮಾಡಿದ್ದಾರಂತೆ ಮಧ್ಯಂತರ ಚುನಾವಣೆಗಳಲ್ಲಿ ಇಂದಿರಮ್ಮನ ಪಾರ್ಟಿಗೆ ಹಣ ಸಹಾಯ ಮಾಡಿದ್ದಾರಂತೆ...... ಬಿರ್ಲಾಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡು, ಅದರಿಂದ ಮುರಾರ್ಜಿ ಭಾಯಿಯವರನ್ನ ಹಿಮ್ಮೆಟ್ಟಿಸಿ ತಾನು ಅಧಿಕಾರದಲ್ಲಿ ಉಳಿಯಲು ಆಕೆ ಬಯಸಿದ್ದಾರಂತೆ..."

'ಓ, ಇದು ಭಾರೀ ಗಂಭೀರ ಆರೋಪವಾಯಿತು....'

'ಹ್ಞಾಂ.... ರಾಜ್ಯಕೀಯ ನಾಯಕರ ಚಾರಿತ್ರ್ಯ ತೆರೆದ ಪುಸ್ತಕವಾಗಿರದೆ ಹೋದರೆ, ಜನತೆಯಲ್ಲಿ ಸಂದೇಹ ಮೂಡುವುದು ಸಹಜ...."

"ಅಂದರೆ, ಇಂದಿರಮ್ಮನ ಮುರಾರ್ಜಿಯವರ ಮೇಲಿನ ಆರೋಪಗಳನ್ನು ವಿಚಾರಿಸಲು ಏರ್ಪಾಟು ಮಾಡಬೇಕಾಗುತ್ತಂತೀರಾ?"

"ಮಾಡುತ್ತಿದ್ದರೆ, ಈಗ ಇಂತಹ ಆರೋಪ ಹೊರುವ ಪ್ರಸಂಗ ಬರುತ್ತಿರಲಿಲ್ಲ...."

'ಅದು ಸರಿ. ಆದರೆ ಮುರಾರ್ಜಿ ಭಾಯಿಗೆ ಅಸಮಾಧಾನ..."

"ಮುರಾರ್ಜಿ ಯಾಕೆ ಹೆದರಬೇಕು? ಅವರು ದುರ್ವ್ಯವಹಾರದಲ್ಲಿ ತೊಡಗಿದ್ದರೆ ತಾನೆ ಅಂಜಿಕೆ?"

"ಅದೂ ಹೌದೆನ್ನಿ. ಆದರೆ ನೋಡಿ, ಫಕ್ರುದ್ದೀನ್ ಅಲಿಯವರು ಎರಡನೆಯ ವಿವಾಹವಾದರೆಂಬ ಆರೋಪ ಬಂತಲ್ಲ... ಇಂಥ ಸುಳ್ಳುಪೂರ್ಣ ಆರೋಪಗಳನ್ನೆಲ್ಲ ವಿಚಾರ ಮಾಡುತ್ತ ಕುಳಿತರೆ ಅದಕ್ಕೆ ಕೊನೆಯೆಲ್ಲಿ?'

"ಆ ಮಾತು ಬೇರೆ. ಆದರೆ, ಸೀತೆ ಪೂತೆ ಪುನೀತೆಯೆಂದು ಆಕಾಶದಲ್ಲಿ ದೇವತೆಗಳು ಕೂಗಾಡಿದರೂ ರಾಮನೊಪ್ಪಲಿಲ್ಲ. ಆತ ಸೀತೆಯನ್ನು ಅಗ್ನಿಪ್ರವೇಶ

(ಹತ್ತನೇ ಪುಟ ನೋಡಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
93 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೧.

Phone— 5711, 5712, 5713 } 3 Lines.

ಮಹಾಕವಿ ಕಾಳಿದಾಸ ಕುರುಬನೇ?

ಸಾಹಿತ್ಯ ವಿಜ್ಞಾನಿ ಸೋಮಯಾಜೀ ಅವರು, ಈ ವೇಲಿನ ಪ್ರಶ್ನೆಯನ್ನು ಸುಂದರವಾಗಿ ಬಿಡಿಸಿದ್ದಾರೆ. ಹೇಗೆಂಬುದನ್ನು ಓದಿ ನೋಡಿ!

ಬರೆದವರು:— ಶ್ರೀ ಕೆ. ಎಸ್. ಭಟ್, ಶಿರಾಡಿಪಾಲ್

ಮಹಾಕವಿ ಕಾಳಿದಾಸ ಕುರುಬನಾಗಿದ್ದ. ಶತಮೂರ್ಖನಾಗಿದ್ದ. ಕಾಳಿಯ ವರದಾನದಿಂದ ಕವಿಯಾದ! ಮಹಾಕವಿಯಾದ! ಕವಿಸಾರ್ವಭೌಮನಾದ! ಕಾಳಿದಾಸನ ಜೀವನದ ಕುರಿತು ಇಂತಹ ದಂತಕಥೆಗಳು ಲಿಪಿಬದ್ಧವಾಗಿವೆ. ಆದರೆ ಕುರುಬನಾಗಿದ್ದವನು ಆ ಕ್ಷಣವೇ ಕಾಳಿಯ ವರದಿಂದ ಕವಿ, ಮಹಾಕವಿಯಾಗಬಲ್ಲನೇ? ಆತನಿಂದ ಅಮರರಸಸ್ನಿಗ್ಧ ಕಾವ್ಯಗಳ ರಚನೆ ಆಗಬಲ್ಲುದೇ? ಈ ಪ್ರಶ್ನೆ ಬಹುಮಂದಿ ಸಾಹಿತ್ಯ ಸಂಶೋಧಕರ ತಲೆ ಕೆಡಿಸಿದೆ. ಇಷ್ಟಾದರೂ ಈ ಪ್ರಶ್ನೆಯನ್ನು ಇದುವರೆಗೆ ಯಾರೂ ಸಮರ್ಪಕವಾಗಿ ಬಿಡಿಸಿಲ್ಲ! ಆದರೆ ಇದೀಗ ದಕ್ಷಿಣ ಕನ್ನಡದ ಕಡಲ ಕರೆಯ ಕವಿಯೊಬ್ಬರು ಈ ಪ್ರಶ್ನೆಯನ್ನು ತಮ್ಮ "ಮಹಾಕವಿ ಕಾಳಿದಾಸ" ಎಂಬ ಕೃತಿಯ ಮೂಲಕ ಸಮರ್ಪಕವಾಗಿ ಬಿಡಿಸಿ ತೋರಿಸಿ ಕೊಟ್ಟಿದ್ದಾರೆ.

ಕಾಳಿಯ ವರದಿಂದ ಕುರುಬನು ಕೂಡಲೇ ಕವಿಯಾದ! ಎಂಬ ಮಾತು ಆಧುನಿಕ ಸಮಾಜಕ್ಕೆ ಸಮ್ಮತವಾಗದು. ಆದರೆ ಬೇಡನಾಗಿದ್ದವನು ಹೀಗೆಯೇ ಆದಿಕವಿಯಾಗಲಿಲ್ಲವೇ? ವಾಲ್ಮೀಕಿ ಮಹರ್ಷಿಯಾಗಲಿಲ್ಲವೇ? ಎಂಬ ಪ್ರಶ್ನೆ ಉದಿಸಿದರೆ ಅದಕ್ಕೆ ಸಮಾಧಾನಕರವಾದ ಉತ್ತರವೂ ಅದೇ ಕಥೆಯಲ್ಲಿದೆ. ಬೇಡನು ದುಷ್ಕರ್ಮ ಹಾಕಿ ರಾಮಧ್ಯಾನಕ್ಕೆ ಕುಳಿತ. ನಾರದರ ಉಪದೇಶದಂತೆ ನೂರಾರು ವರ್ಷ ಧ್ಯಾನರೂಪದ ತಪಸ್ಸು ಮಾಡಿದ. ಆತನ ಸುತ್ತಮುತ್ತ ಗೆದ್ದಲು ಗೂಡುಕಟ್ಟಿ ಆ ಬೇಡ ಗೆದ್ದಲ ಗೂಡಿನೊಳಗೆ ಮುಳುಗಿಹೋದ! ಹಾಗೆ ವಾಲ್ಮೀಕಿಯೆನಿಸಿದ, ಬಳಿಕ ಹೊಸ ಜನ್ಮ ಪಡೆದವನಂತೆ ದಿವ್ಯ ಜ್ಞಾನಿಯಾದ. ಈ ಕಥೆಯಾದರೂ ಸಮರ್ಪಕವಾಗಿ ತೋರುತ್ತಿದೆ. ಆದರೆ, ಕಾಳಿದಾಸನ ಕಥೆ ಹೀಗೂ ಇಲ್ಲವಲ್ಲ? ಎಂಬ ಭಾವನೆ ಈ ಕಾದಂಬರಿಕಾರರಿಗೆ ಬಂದಿರಬೇಕು. ಅದಕ್ಕಾಗಿಯೇ ಅವರು ಕಾಳಿದಾಸನ ಜೀವನ ವೃತ್ತಾಂತವನ್ನು ಆತನ ಕಾವ್ಯಗಳಿಂದಲೇ ಸಂಶೋಧಿಸಿ ಸಮರ್ಪಕವಾಗಿ ರೂಪಿಸಿದ್ದಾರೆಂಬುದು ಸ್ಪಷ್ಟವಾಗಿ ತೋರುವುದು. ಕವಿಯ ಜೀವನೇತಿಹಾಸವನ್ನು ಕಂಡು ಹಿಡಿಯಲು ಬೇರಾವ ಆಧಾರವೂ ಇಲ್ಲದಾಗ, ಕವಿಯ ಕಾವ್ಯಗಳಿಂದಲೇ ಆತನ ಜೀವನೇತಿಹಾಸವನ್ನು ಶೋಧಿಸುವುದು, ಮತ್ತು ಪ್ರತಿಭೆಯಿಂದ ಅದನ್ನು ರೂಪಿಸುವುದು, ಇದೇ ನಿಜವಾದ ಹೆದ್ದಾರಿಯಾಗುತ್ತದೆ. ಶ್ರೀ ... ಪಿ. ಸೋಮಯಾಜಿಯವರು ಈ ಮಾರ್ಗವನ್ನೇ ಅನುಸರಿಸಿ ಕಾಳಿದಾಸನ ಅಸಮರ್ಪಕವಾಗಿದ್ದ ಜೀವನ ವೃತ್ತಾಂತಕ್ಕೆ ಒಂದು ಹೊಸ ಬೆಳಕನ್ನು ನೀಡಿದ್ದಾರೆ. ಈ ಸಂಶೋಧನೆಯನ್ನು ಸಾಧಿಸಿ ಸಫಲರಾಗಿದ್ದಾರೆ.

ಮಡಿಕೆಗೆ ಮೂಲವಸ್ತು ಮಣ್ಣು. ಮಣ್ಣಿಲ್ಲದೆ ಮಡಿಕೆ ಆದೀತೇ? ಮಣ್ಣು ಬೇಕು. ಅದನ್ನು ಹದಕ್ಕೆ ತಂದು ಕಲಾತ್ಮಕವಾಗಿ ರೂಪಿಸಬಲ್ಲ ಕುಲಾಲಕಾರನೂ ಬೇಕು. ಹೀಗೆಯೇ ಕವಿಯಾಗಲು ಮೂಲದ್ರವ್ಯವಾದ ಸ್ವಾನುಭವಯುಕ್ತವಾದ ಭಾವನೆ ಬೇಕು. ಭಾವನೆಗಳಿದ್ದರೂ ಸಾಕೇ? ಆ ಭಾವನೆಗಳು ಸ್ವಾನುಭವದ ಕುಲುಮೆಯಲ್ಲಿ ಪುಟಕೊಟ್ಟ ಚಿನ್ನದಂತೆ ಸ್ಪಷ್ಟವಾಗಿ ಮೂಡಿ ನಿಲ್ಲಬೇಕು. ಇಷ್ಟಿದ್ದರೂ ಸಾಲದು; ಆ ಸ್ವಾನುಭವದ ರಸಾನುಭವಗಳನ್ನು ಚಿತ್ರಿಸುವ ಪ್ರತಿಭೆ ಕುಶಲತೆಯೂ ಬೇಕು. ಅಂತರ್ಬಹಿರ್ನಿರೀಕ್ಷಣ ಶಕ್ತಿಯೂ ಬೇಕು. ಇದೆಲ್ಲವೂ ಇದ್ದುದಾದರೆ, ಆ ಕವಿಯ ಕಾವ್ಯ ಅಮರ ಕಾವ್ಯವಾಗಬಹುದು. ಕುಂಬಾರನ ಮಡಿಕೆಯ ಆಯುಷ್ಯಕ್ಕೂ ಕವಿಯ ಕಾವ್ಯದ ಆಯುಷ್ಯಕ್ಕೂ ಅಜಗಜಾಂತರ! ಆದರೂ ಆ ಕುಶಲ ಕರ್ಮದಲ್ಲಿ ಸಮಾನತೆ ಇದ್ದೇ ಇರುವುದು. ಕಾಳಿದಾಸನ ರಸಪೂರ್ಣವಾಗಿರುವ ಕಾವ್ಯಗಳು ಸ್ವಾನುಭವದ ಮೂಲದ್ರವ್ಯ ಹಾಗೂ ಪ್ರತಿಭೆಯಿಂದ ಕಲಾಕುಶಲತೆಯಿಂದ ತುಂಬಿರುವಾಗ, ಆ ಕಾವ್ಯಗಳ ಹಿನ್ನೆಲೆ ಅಷ್ಟು ಚೆನ್ನಾಗಿ ಇರಲೇಬೇಕು. ತನ್ನ (ವಿರಹದ) ವಿರಹ ವೇದನೆಯನ್ನು ಕಾಳಿದಾಸನು, ತನ್ನ ಮೇಘದೂತದ ಮೂಲಕ ಅಷ್ಟು ಹೃದಯಂಗಮವಾಗಿ ಚಿತ್ರಿಸಬೇಕಾದರೆ ಆ ಸ್ವಾನುಭವದ ಪರಿಪಕ್ವತೆ ಇಲ್ಲದೆ ಅದು ಸಾಧ್ಯವೇ? ಇಂತಹ ಪ್ರಶ್ನೆಗಳಿಗೆ ಸಹಜವಾದ ಹಿನ್ನೆಲೆಯುಳ್ಳ ಉತ್ತರವನ್ನು ಶ್ರೀ ಸೋಮಯಾಜಿಯವರು ಬಹಳ ಚೆನ್ನಾಗಿ ಕೊಟ್ಟಿದ್ದಾರೆ.

ಕವಿಯ ಪ್ರತಿಯೊಂದು ಕಾವ್ಯದ ಮೂಲಕವೇ ಕವಿಯ ಜೀವನ ವೃತ್ತಾಂತವನ್ನು ಕಂಡ ಶ್ರೀ ಸೋಮಯಾಜಿಯವರು, ಆ ಮಹಾ ಕವಿಯ "ಋತು ಸಂಹಾರ, ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ರಘುವಂಶ, ಮೇಘದೂತ ಹಾಗೂ ಕುಮಾರ ಸಂಭವ, ಶಾಕುಂತಲ, ಮೊದಲಾದ ಈ ಅಮರ ಕೃತಿಗಳ ರಚನೆಗೆ ಬೇಕಾದ ಹಿನ್ನೆಲೆಯನ್ನು ಕಾದಂಬರಿಯುದ್ದಕ್ಕೂ ಬಹಳ ಚೆನ್ನಾಗಿ ಒದಗಿಸಿಕೊಟ್ಟಿದ್ದಾರೆ. 'ಋತು ಸಂಹಾರ', ಶಾಕುಲನ ಸ್ಪರ್ಧಾ ಮನೋಭಾವಕ್ಕೆ ಉತ್ತರವೆಂಬಂತೆ ರಚಿತವಾದರೆ, ವಿಕ್ರಮೋರ್ವಶೀಯ ಆಸ್ಥಾನದ ಸಾಹಿತ್ಯೋತ್ಸವಕ್ಕಾಗಿ ಸಿದ್ಧವಾಯಿತು. 'ಮೇಘದೂತ'ದ ಕಥೆಯೇ ಬೇರೆ. ಕಾದಂಬರಿಯನ್ನು ಓದುವಾಗ ಓದುಗರು ಹಲವೆಡೆಗಳಲ್ಲಿ ರೋಮಾಂಚಿತರಾಗುತ್ತಾರೆ. ಕೆಲವೆಡೆಗಳಲ್ಲಂತೂ ವಿರಹ, ಪ್ರೇಮ, ಮಿಲನಗಳ ದೃಶ್ಯ ಚಿತ್ರಾವಳಿಯು ಶಬ್ದಗಳ ಮೂಲಕ ವ್ಯಕ್ತವಾಗಿದ್ದರೂ ವಾಚಕರು ಗದ್ಗದಿತರಾಗುವಷ್ಟು ಮಾರ್ಮಿಕವಾದ ಘಟನೆಗಳು ಓದುಗರನ್ನು ಸೆರೆಹಿಡಿದುಬಿಡುತ್ತವೆ!

ಕಾಳಿದಾಸನು ವೇದಾಂತ ಪಾರಂಗತರಾಗಿದ್ದ ಜ್ಯೋತಿಷಿಗಳೊಬ್ಬರ ಸುಪುತ್ರ. ಭಗವಂತನ ಕರುಣೆಯಿಂದ ಹುಟ್ಟಿದ ಏಕಮಾತ್ರ ಪುತ್ರ ಆದರೇನು? ಅಮಾವಾಸ್ಯೆಗೆ ಹುಟ್ಟಿದ ಮಗನಂತೆ ಆತನ ಜನನ ತಂದೆತಾಯಂದಿರಿಗೆ ಕೇಡನ್ನುಂಟುಮಾಡಿತು. ಮಗುವಿನ ಸಮೇತವಾಗಿ ಅಮರನಾಥನ ದರ್ಶನಕ್ಕೆಂದು ಹೋದ ಆ ಮಾತಾಪಿತೃಗಳು ಹಿಮಪರ್ವತದಿಂದ, ಅದರಡಿಯಲ್ಲಿ ಅಮರರಾದರು. ಮಗು ಬದುಕಿ ಉಳಿಯಿತು. ಕುರುಬರೊಡೆಯನೊಬ್ಬ ಅದನ್ನು ರಕ್ಷಿಸಿದ. ಮತ್ತೆ ಆ ಮಗು ಕಾಶೀಕ್ಷೇತ್ರದಲ್ಲಿ ಗುರುಗಳ ಸಾನ್ನಿಧ್ಯದಲ್ಲಿ ಸತ್ಸಂಸ್ಕಾರಗಳೊಡನೆ ಬೆಳೆಯಿತು. ಮಗು ಹುಡುಗನಾದ! ಶಾಸ್ತ್ರ ಉಪನಿಷತ್ತುಗಳು ಆತನಿಗೆ ಕರತಲಾಮಲಕವಾದುವು. ಹುಡುಗ ಯುವಕನಾದ! ಆಗಲೇ ಆತ ಕವಿಯೂ ಆಗಿ ಕೀರ್ತಿವಂತನಾಗತೊಡಗಿದ. ಆತನೇ ಮಹಾಕವಿ ಕಾಳಿದಾಸ!

ಕಾಳಿದಾಸನಿಗೆ ತನ್ನ ಸರ್ವಸ್ವವನ್ನೂ ಅರ್ಪಿಸಿದ ಕಾಳಿದಾಸನ ಕಾವ್ಯ ಸ್ಫೂರ್ತಿಯ ಚಿಲುಮೆಯಾಗಿದ್ದ ನಿರ್ಮಲೆ ಅಚಲಾ! ಈ ಕಾದಂಬರಿಯಲ್ಲಿ ಅಚಲವಾಗಿ ಜೀವ ತುಂಬಿ ನಿಂತಂತೆ ಕಾಣುತ್ತಾಳೆ! ಓದುಗರ ಮನದಲ್ಲೂ ಈ ಅಚಲೆ ಅಚಲವಾಗಿ ನಿಲ್ಲುತ್ತಾಳೆ! ಕಾಮ! ಖಂಡವಾದುದು; ಪ್ರೇಮ ಅಖಂಡವಾದುದು. ಕಾಮವು ನಾಶಕ! ಪ್ರೇಮವು ಮೋಹಕ. ಕಾಮವು ವಿಷಪಾನವಾದರೆ ಪ್ರೇಮವು ಅಮೃತ ಸಮಾನ! ಎಂಬ ತತ್ವವನ್ನು ಈಕೆ ತನ್ನ ಆಚರಣೆಯಿಂದಲೇ ತೋರಿಸಿ ಕೊಡುತ್ತಾಳೆ. ಇಂತಹ ಕಿಶೋರಿ, ಅಚಲೆ ಯುವತಿಯಾಗಿ ಕಾಳಿದಾಸನ ಪ್ರೀತಿಯ ಪತ್ನಿಯಾಗುತ್ತಾಳೆ! ಅವಳ ರೂಪ! ಅದು ಮೋಹಕ, ಲಾವಣ್ಯ! ಆಕರ್ಷಕ! ಅವಳ ನುಡಿಯೆಂದರೆ, ಅದು ಅಮೃತ ಪ್ರವಾಹ! ಮೃದು ಮಧುರ ನಡೆನುಡಿಗಳು ಶುದ್ಧ, ನಿರ್ಮಲ! ಇಂತಹ ತರುಣಿ ಅಚಲೆ ಕಾಳಿದಾಸನ ಜೀವನದ—ಕಾವ್ಯದ ಸರ್ವಸ್ವವಾಗುತ್ತಾಳೆ! ಆದರೆ ಮುಂದೆ ಸೌಂದರ್ಯ ಗರ್ವಿತೆ ರಾಜಪುತ್ರಿ, ವಾಸಂತಿಯನ್ನು ನಿರೂಪಾಯನಾಗಿ ಮದುವೆಯಾದ ಕಾಳಿದಾಸ, ಆ ವಿರಸದಾಂಪತ್ಯ ಜೀವನದಲ್ಲಿ ನೊಂದ ಬೆಂದು ಬೇಗುದಿಗೊಂಡು ಚಡಪಡಿಸುತ್ತಾನೆ. ಹಿಮಾಲಯದ ತಪ್ಪಲಿನ ಅಚಲೆಯ ಅಕ್ಕಯ್ಯ(?) ದಿಂದ ದೂರ ಮನೆಗೆ ಹೋದ ಕವಿಯು ಅಚಲೆಯ ನೆನಪಿನಿಂದ ವಿರಹ ವೇದನೆಯಿಂದ ಬಳಲುತ್ತಾನೆ. ಈ ಪರಿಯ ವಿರಹ ದಗ್ಧ ಹೃದಯದಿಂದ ತನ್ನ ಪ್ರಿಯೆಗಾಗಿ ಕೊರಗುತ್ತದೆ. 'ಮೇಘಸಂದೇಶ' ಎಂಬ ಕಾಳಿದಾಸನ 'ಮೇಘದೂತ' ಲೋಕೋತ್ತರವಾದ ಮಹಾ ಕಾವ್ಯ!

"ಕಶ್ಚಿತ್ ಕಾಂತಾ ವಿರಹಗುರುಣಾ ಸ್ವಾಧಿಕಾರಾತ್ ಪ್ರಮತ್ತಃ" ಈ ವಿರಹ ವೇದನೆಯ ಸ್ವಾನುಭವದಿಂದ "ಮೇಘದೂತ ಮಹಾಕಾವ್ಯದ ರಚನೆಯಾಯಿತು, ಕವಿಯು ರೂಢಿಸಿದ್ದ ದಾಂಪತ್ಯ ಸುಖದಿಂದ ಬೇಸತ್ತು ವಾಸಂತಿ ಪ್ರಿಯಳಿಂದ ಪ್ರಿಯೆಗೆ ಹೊರಟ "ಮೇಘಸಂದೇಶ"ವ ನೋಡಿ ಸಂದೇಹಪಡುತ್ತಿದ್ದಾಗಲೇ ಖಳನಾಯಕ ನಿಚುಲ—ದಿಙ್ನಾಗರು ಉರಿವ ವಾಸಂತಿಯ ಕಿಚ್ಚಿಗೆ ತುಪ್ಪವನ್ನೆರೆಯುತ್ತಾರೆ.

ಕಾಳಿದಾಸನು ವಾಸಂತಿಯನ್ನು ಬಿಟ್ಟು ಅಚಲೆಯನ್ನು ಕಾಣುವ ಉತ್ಕಟೇಚ್ಛೆಯಿಂದ, ವಿರಹ ವೇದನೆಯಿಂದ ನೂರಾರು ಮೈಲು ದೂರದ ಹಿಮಾಲಯದ ತಪ್ಪಲಿಗೆ ರಾತ್ರಿ ಹಗಲೆನ್ನದೆ ನಡೆದು ಬರುತ್ತಾನೆ! ಆಗ ಅಲ್ಲಿ ಅಚಲೆಯಿಲ್ಲ! ಆಕೆ, ಆಗಲೇ ವಿರಹ ವ್ಯಥೆಯನ್ನು ತಾಳದೆ ಮೇಲೇರಿ ಸನ್ಯಾಸಿನಿಯಾಗಿರುತ್ತಾಳೆ! ಇಲ್ಲಿ ವ್ಯಕ್ತವಾಗಿರುವ ಕವಿಯ ವಿರಹ ವೇದನೆ ಓದುಗರನ್ನು ಸ್ವಾನುಭವದ ಸಂಶಯಕ್ಕೆಳೆಯುತ್ತದೆ!

ಇತ್ತ ತನ್ನ ಗರ್ವದಿಂದ ಕುಸಿದ, ಮೋದ ವಾಸಂತಿಯು ಆತ್ಮಹತ್ಯೆಗೆ ಪ್ರಯತ್ನಿಸುತ್ತಿದ್ದಾಗಲೇ ಸನ್ಯಾಸಿನಿ, ಅಚಲೆ ಅ...

(ಎಂಟನೇ ಪುಟ ನೋಡಿ)



ನಿರೋಧ್ - ಕುಟುಂಬ ಯೋಜನೆಯ ಕ್ರಿಪಾರಿ

ಲೇಖಕರು:—
ಡಾ। ನೀಪಕ್ ಭಾಟಿಯಾ, ಕುಟುಂಬ ಯೋಜನಾ ಕಮಿಷನರ್

ಕುಟುಂಬ ಯೋಜನೆ ಸಾಮಾಜಿಕ ಬದಲಾವಣೆಗಾಗಿ ಕೈಗೊಂಡಿರುವ ಚಳುವಳಿಯಾಗಿದೆ; ವ್ಯಕ್ತಿಗಳು ಮನೋಭಾವ ಬದಲಾಯಿಸಿಕೊಳ್ಳುವಂತೆ ಸಹಾಯ ಮಾಡಿ ಆ ಮೂಲಕ ಜೀವನ ಅರ್ಥಪೂರ್ಣವಾಗುವಂತೆ ಮಾಡಿ, ಕುಟುಂಬದ ಸದಸ್ಯರಿಗೆ ವರಮಾನದ ಅತ್ಯಧಿಕ ಪಾಲು ಸಿಗುವಂತೆ ಪ್ರಯತ್ನಿಸುತ್ತದೆ; ಕುಟುಂಬ ಮಿತಗೊಳಿಸುವಂತೆ ಸಹಾಯವೆಸಗಿ ಅವರ ಆರ್ಥಿಕ, ಸಾಮಾಜಿಕ ಅಗತ್ಯಗಳನ್ನು ಪೂರೈಸುವಂತೆ ಕುಟುಂಬ ಯೋಜನೆ ಪ್ರಯತ್ನಿಸುತ್ತಿದೆ.

ಕುಟುಂಬ ಯೋಜನೆ ಮತ್ತು ಸಾಮಾಜಿಕ— ಆರ್ಥಿಕ ಕಾರ್ಯಕ್ರಮದ ಮೂಲಕ ಸಂತಾನೋತ್ಪಾದನೆ ನಿಯಂತ್ರಿಸುವುದೇ ಇಂದು ನಮ್ಮ ಮುಂದಿರುವ ಹೊಣೆಗಾರಿಕೆಯಾಗಿದೆ. ಇವೆರಡರ ಯಥಾರ್ಥ ಸಂಯೋಜನೆಯಿಂದ ಸಂತಾನ ಸಂಖ್ಯೆ ತಗ್ಗಿಸುವ ಗುರಿ ಸಾಧನೆಯಾಗುತ್ತದೆ.

ವಿವಿಧ ವಿಧಾನಗಳ ಪರಿಣಾಮಗಳ ಬಗ್ಗೆ ತೃಪ್ತಿಪಟ್ಟುಕೊಂಡ ನಂತರವೇ ಅವುಗಳನ್ನು ಕುಟುಂಬ ಯೋಜನೆಗೆ ಅಳವಡಿಸಲಾಗಿದೆ. ಇವುಗಳಲ್ಲಿ ಸಾಂಪ್ರದಾಯಿಕ ಗರ್ಭನಿರೋಧಕಗಳು, ವಂಕಿಧಾರಣೆ, ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸಾ ವಿಧಾನಗಳೂ ಸೇರಿವೆ.

ನಿರೋಧ್ ಜನಪ್ರಿಯತೆ

ಗರ್ಭನಿರೋಧಕವು ವಿಶ್ವದಾದ್ಯಂತ ಜನಪ್ರಿಯತೆ ಗಳಿಸಿದೆ. ನಿರೋಧ್ ನವವಿವಾಹಿತರಿಗೆ ಆದರ್ಶಪ್ರಾಯವಾಗಿದೆ. ಇದರ ಬಳಕೆಯಿಂದ ಪ್ರಥಮ ಶಿಶುವಿನ ಜನನವನ್ನು ಮುಂದೂಡಬಹುದು. ಇದರ ಬಳಕೆಗೆ ವೈದ್ಯರ ಸಲಹೆ ಬೇಕಾಗಿಲ್ಲ. ಇದರ ಬಳಕೆಗೆ ಮುಂಚೆ ಅಥವಾ ಅನಂತರ ಸಂಗ್ರಹಿಸಬೇಕಾಗಿರುವ ಸಮಸ್ಯೆಯಿಲ್ಲ. ಅತ್ಯಧಿಕ ಗ್ರಾಮೀಣ ಜನತೆಯುಳ್ಳ ಭಾರತದಲ್ಲಿ ನಿರೋಧ್ ಬಳಕೆಗೆ ಉಜ್ವಲ ಭವಿಷ್ಯವಿದೆ. ವಂಕಿಧಾರಣೆ ಅಥವಾ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಅಗತ್ಯವಾಗುವಂತಹ ವೈದ್ಯಕೀಯ ಸೌಲಭ್ಯ, ಉಪಕರಣಗಳು ಇದಕ್ಕೆ ಅಗತ್ಯವಾಗಿಲ್ಲ.

ನಿರೋಧ್‌ಗಳ ನಿರಂತರ ಬಳಕೆಗೆ ಉತ್ಸಾಹದ ಪ್ರೇರೇಪಣೆ ಅಗತ್ಯ. ನಿರೋಧ್ ಬಳಸದಿದ್ದರೆ ಗರ್ಭಧಾರಣೆಯಾಗುವ ಸಂಭವವಿರುತ್ತದೆ. ಆದ್ದರಿಂದ ನಿರೋಧ್ ಬಳಸುವ ಬಗ್ಗೆ ಪ್ರೇರೇಪಣೆ ಪ್ರಮುಖ ಅಗತ್ಯ.

ನಿರೋಧ್‌ಗಳನ್ನು ದೇಶಾದ್ಯಂತ ಸ್ಥಾಪಿಸಿರುವ ಕುಟುಂಬ ಯೋಜನಾ ಕೇಂದ್ರಗಳಲ್ಲಿ ಉಚಿತವಾಗಿ ಹಂಚಲಾಗುತ್ತಿದೆ. ಸುಮಾರು ಆರು ಹೆಸರಾಂತ ವಾಣಿಜ್ಯ ಸಂಸ್ಥೆಗಳ ಮೂಲಕ ಮೂರು ನಿರೋಧ್‌ಗಳಿಗೆ 15 ಪೈಸೆ ಬೆಲೆಯಂತೆ ಮಾರಾಟ ಮಾಡಲಾಗುತ್ತಿದೆ. ನಿರೋಧ್ ಸಂಗ್ರಹಿಸಿರುವ ಡಿಪೋಗಳ ಮೂಲಕ 5 ಪೈಸೆಗೆ ಮೂರು ನಿರೋಧ್‌ಗಳ ಮಾರಾಟ ಮಾಡಲಾಗುತ್ತಿದೆ. ಇದೀಗ ಇವುಗಳ ವ್ಯವಸ್ಥೆ ಪೂರ್ಣಗೊಳ್ಳುತ್ತಿದೆ. ದೇಶಾದ್ಯಂತ ಇರುವ ಕ್ಷೇತ್ರ ಕಾರ್ಯಕರ್ತರು ಜನತೆಗೆ ಪ್ರೇರೇಪಣೆ ಮಾಡುತ್ತಿದ್ದಾರೆ. ಅಂಚೆ ಅಧಿಕಾರಿಗಳು ಮತ್ತು ದೇಶೀಯ ವೈದ್ಯರನ್ನು ಈ ಯೋಜನೆಯಲ್ಲಿ ಪಾತ್ರ ವಹಿಸುವಂತೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

50 ಕೋಟಿ ನಿರೋಧ್

ವಂಕಿಧಾರಣೆ, ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ವಿಧಾನಗಳೊಂದಿಗೆ ನಿರೋಧ್ ಬಳಕೆಯ ಪರಿಣಾಮ ಅಲ್ಪ. ವಂಕಿಧಾರಣೆ, ಶಸ್ತ್ರಚಿಕಿತ್ಸೆ ರೂಢಿಗೆ ಬರದಿದ್ದಾಗ, ಶಿಕ್ಷಣ, ಆರ್ಥಿಕ ಪ್ರಗತಿ ಹಾಗೂ ನಿರೋಧ್‌ಗಳ ಬಳಕೆಯಿಂದ ಜನನ ನಿಯಂತ್ರಣಕ್ಕೆ ಅಮೂಲ್ಯ ಸಹಾಯವಾಗಿದೆಯೆಂಬುದು ಪಾಶ್ಚಾತ್ಯ ದೇಶಗಳ ಅನುಭವದಿಂದ ಗೊತ್ತಾಗಿದೆ. ಆದ್ದರಿಂದ ದೇಶದೆಲ್ಲೆಡೆಗಳಲ್ಲಿ ಜೀವಿಸುವ ಜನತೆ ಕ್ರಮವಾಗಿ ನಿರೋಧ್ ಬಳಸಲಾರಂಭಿಸಿದರೆ ಜನಸಂಖ್ಯಾ ಸ್ಫೋಟನೆಗೆ ಪರಿಣಾಮಕಾರಿ ನಿಯಂತ್ರಣ ಮಾಡಬಹುದು. ಈಗ ದೇಶದಲ್ಲಿ ವರ್ಷಂಪ್ರತಿ 5 ಕೋಟಿ ನಿರೋಧ್‌ಗಳನ್ನು ಬಳಸಲಾಗುತ್ತಿದೆ. ಪ್ರತಿ ಸಹಸ್ರ ಜನಸಂಖ್ಯೆಗೆ 18 ಮಂದಿ ನಿರೋಧ್ ಬಳಸುವಂತೆ ಮಾಡಲಾಗುತ್ತಿದೆ. ಮುಂದಿನ ಕೆಲವು ವರ್ಷಗಳಲ್ಲಿ 80 ಲಕ್ಷ ಜನತೆ ಬಳಸಲು 50 – 60 ಕೋಟಿ ನಿರೋಧ್‌ಗಳನ್ನು ಪ್ರತಿವರ್ಷ ತಯಾರಿಸಬೇಕಾಗುತ್ತದೆ.

ಸ್ವಂತ ಹಿತಕ್ಕಾಗಿ ಕುಟುಂಬ ನಿಯಂತ್ರಿಸುವ ಪರಿಜ್ಞಾನ ಬೆಳೆದಂತೆ ಕುಟುಂಬ ಯೋಜನೆ ಸಂತತ ಪ್ರವಾಹವೆಂಬುದನ್ನು ಜನತೆ ಅರಿಯುತ್ತಾರೆ. ಈ ಧಾರೆಯು ಎರಡು ತುದಿಗಳಲ್ಲಿ ನಿರೋಧ್ ಮತ್ತು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾರ್ಗಗಳಾಗಿರುತ್ತವೆ. ಅಲ್ಲದೆ ದಂಪತಿಗಳ ಹೊಣೆಗಾರಿಕೆಯು ಅದನ್ನು ಪ್ರದರ್ಶಿಸುತ್ತದೆ. ಅಲ್ಪ ಹೊಣೆಗಾರಿಕೆಯ ದ್ವಾರ ನಿರೋಧ್ ಬಳಸಲಾಗುತ್ತದೆ. ಹೊಣೆ ಹೆಚ್ಚಿದಂತೆ ವಂಕಿಯ ಬಳಕೆ ಆರಂಭವಾಗಿ ಪೂರ್ಣ ಹೊಣೆಗಾರಿಕೆಯ ದ್ವಾರ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಪೂರ್ಣಗೊಳ್ಳುತ್ತದೆ. ಆದರಿಂದ ಆದರ್ಶ ಕುಟುಂಬದ ಗುರಿಸಾಧನೆಯಾಗಿ ಉತ್ತಮ ಜೀವನಮಟ್ಟ ಹೊಂದಲು ಸಾಧ್ಯವಾಗುತ್ತದೆ.

ಶಿಶುಜನನದ ತಡೆ

ಇದುವರೆಗೆ ಸುಮಾರು 47 ಲಕ್ಷ ಸ್ತ್ರೀ ಪುರುಷರು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಸುಮಾರು 26 ಲಕ್ಷ ಮಹಿಳೆಯರು ವಂಕಿಧಾರಣೆ ಮಾಡಿಸಿಕೊಂಡಿದ್ದಾರೆ. ಸುಮಾರು 50 ಲಕ್ಷ ಜನರು ಕ್ರಮಾಗತವಾಗಿ ನಿರೋಧ್ ಉಪಯೋಗಿಸುತ್ತಿದ್ದಾರೆ. ಸಫಲವಾಗಿ ಸಂತಾನಶಕ್ತಿ ಹೊಂದಿರುವ ದಂಪತಿಗಳಲ್ಲಿ ಶೇಕಡ 11.6ರಷ್ಟು ಜನರು ಸುರಕ್ಷತೆ ಹೊಂದಿದ್ದಾರೆ. ಇದರಿಂದ ವರ್ಷಂಪ್ರತಿ ಸುಮಾರು 10 ಲಕ್ಷ ಶಿಶು ಜನನವನ್ನು ತಡೆಯಲಾಗುತ್ತಿದೆ.

ತಿರುವನಂತಪುರದಲ್ಲಿ ಹಿಂದೂಸ್ತಾನ್ ಲೇಟೆಕ್ಸ್ ಕಾರ್ಖಾನೆ ಕಾರ್ಯಾರಂಭ ಮಾಡುವುದರಿಂದ ಪ್ರತಿವರ್ಷವೂ 11 ಕೋಟಿ 40 ಲಕ್ಷ ನಿರೋಧ್ ತಯಾರಿಸಲಾಗುತ್ತದೆ. ನಿರೋಧ್ ತಯಾರಿಕೆಯಲ್ಲಿ ಸ್ವಪರಿಪೂರ್ಣತೆ ಸಾಧಿಸುವಂತೆ ಮಾಡಲು ಮತ್ತೊಂದು ವರ್ಷದ ಅವಧಿಯಲ್ಲಿ ಉತ್ಪಾದನಾ ಮಟ್ಟವನ್ನು ದ್ವಿಗುಣಗೊಳಿಸಲಾಗುತ್ತದೆ. ಈ ಕಾರ್ಖಾನೆಯನ್ನು ಜಪಾನೀಯರ ಸಹಯೋಗದಿಂದ ಸ್ಥಾಪಿಸಲಾಗಿದೆ. ಕಾರ್ಖಾನೆ ಪೂರ್ಣಮಟ್ಟದ ಉತ್ಪಾದನಾ ಆರಂಭಿಸುವ ವರೆಗೆ ನಿರೋಧ್‌ಗಳನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ.

ತಿರುವನಂತಪುರದ ಕಾರ್ಖಾನೆಯ ಉತ್ಪಾದನೆ ಈ ಕಾರ್ಯಕ್ರಮದಲ್ಲಿ ಕೈಗಾರಿಕೆಯ ಪಾತ್ರವನ್ನು ಬೆಳಕಿಗೆ ತಂದಿದೆ. ಈ ಕಾರ್ಖಾನೆಯ ಯಶಸ್ಸು ಕೈಗಾರಿಕಾ, ಆರ್ಥಿಕ, ಪ್ರಗತಿಗೆ ಆದರ್ಶ ಪರಿಸ್ಥಿತಿ ಸೃಷ್ಟಿಸಿ, ಅಧಿಕ ಸಂಪತ್ತಿನ ಹೀರಿಕೆಗೂ ವೃದ್ಧಿಗೆ ಪೂರಕವಾಗುತ್ತದೆ. ಜನಸಂಖ್ಯೆ ತಡೆಗಟ್ಟಲು ಸಾಧ್ಯವಾಗುತ್ತದೆ.

ಈ ಕಾರ್ಖಾನೆಯು ಆರಂಭ ಸ್ವಯಂಪೂರ್ಣತೆಯ ಮುನ್ನಡೆಗೆ ಕೈಗನ್ನಡಿಯಾಗುತ್ತದೆ. 1978-79ನೆಯ ವಾರ್ಷಿಕ ಸಾಲಿನಲ್ಲಿ ಜನನ ಪ್ರಮಾಣವನ್ನು ಪ್ರತಿ ಸಹಸ್ರ ಜನಸಂಖ್ಯೆಗೆ 41ರಿಂದ 23ಕ್ಕೆ ಇಳಿಸುವ ಯತ್ನದಲ್ಲಿ ಮೈಲಿಗಲ್ಲಾಗುತ್ತದೆ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies
ಡಾ। ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.
ಮಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಎಂ. ವೆಂಕಟರಾವ್, ಹಂಪನಕಟ್ಟೆ, ಮಂಗಳೂರು-1

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
I. A. I in O. S. No. 518/1969
ತುಂಗಯ್ಯ ಪೂಜಾರಿ, ವೆಂಕಪ್ಪ ಪೂಜಾರಿಯ ಮಗ, ವಸಂತ ನಿಲಯ, ಕಾರ್ಕಳ ತಾಲ್ಲೂಕು ಮೂಡುಮಾರ್ನಾಡು ಗ್ರಾಮಸ್ಥ
—ವಾದಿ, ಅರ್ಜಿದಾರ
ಮತ್ತು
1. ಚನ್ನಪ್ಪ ಆಚಾರಿ, 2. ಸುಬ್ರಾಯ ಆಚಾರಿ, 3. ಕೃಷ್ಣಯ್ಯ ಆಚಾರಿ, 4. ಸಂಜೀವ ಆಚಾರಿ, 5. ದಾಮೋದರ ಆಚಾರಿ — — ಪ್ರತಿವಾದಿಗಳು, ಎದುರು
ಇದರ ಪ್ರತಿವಾದಿಯು 2ನೇ ಪ್ರತಿವಾದಿ 2ನೇ ಎದುರು ಸುಬ್ರಾಯ ಆಚಾರಿ, ಚನ್ನಪ್ಪ ಆಚಾರಿ ಮಗ ಕಾರ್ಕಳ ತಾಲ್ಲೂಕು ಮೂಡುಮಾರ್ನಾಡು ಗ್ರಾಮದಲ್ಲಿರುವವರಿಗೆ—

ಮೇಲ್ಕಂಡ ದಾವೆಯಲ್ಲಿ ಕೋರ್ಟಿನ ಪ್ರತಿಬಂಧಕ ಆಜ್ಞೆಯ ಹಣದ ವ್ಯವಸ್ಥೆಯ ಬಗ್ಗೆ ದಾವಾ ಆಧಾರದ ಆಸ್ತಿಯ ಮೇಲೆ ... ಬಗ್ಗೆ ಅರ್ಜಿದಾರನ ಗುಣಕ್ಕೆ ಫೈನಲ್ ಡಿಕ್ರಿ ಕೊಡಬೇಕೆಂತ ಕೊಟ್ಟ ಮೇಲಿನ ಅರ್ಜಿಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 2-6-1969ನೇ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ವಿಚಾರಣೆಗಿರುತ್ತದೆ. ಆ ವಿಷಯದಲ್ಲಿ ನಿಮ್ಮ ಉದಾಹರಣೆಯಿದ್ದಲ್ಲಿ ನೀವು ಸದರಿ ತಾರೀಕಿನಲ್ಲಿ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಪ್ರತಿಪಾದಿಸಿಕೊಳ್ಳಬಹುದಾಗಿಯೂ ತಪ್ಪಿದರೆ ಸದರಿ ಅರ್ಜಿಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈ ಮೂಲಕ ನಿಮಗೆ ತಿಳಿಸಲಾಗುತ್ತದೆ.

S. Rajagopal Achar
Advocate for Petitioner
Karkala, 9—4—1969.

ಚಾರುಚಯನ

ಸಂತೆ ನೆರೆಯಿತ್ತು ನಾನಾ ಪರಿಯಲಿ

ಪರೀಕ್ಷೆಗಳ ಸೀಜನ್ನು ಈಗ ಮಧ್ಯ ದಾಟಿದೆ. ಪರೀಕ್ಷಾಜ್ವರವಿಳಿಯುತ್ತಾ ಬಂದಿದೆ. ಮಧ್ಯರಾತ್ರಿಯ ವರೆಗೂ ಸಿನಿಮಾ ಮಂದಿರಗಳ ಸುತ್ತ ತಿರುಗಾಡುತ್ತಿದ್ದರೂ ಸೂರ್ಯ ಎರಡು ಮಾರು ಏರದೆ ಹಾಸಿಗೆ ಬಿಡದವರು ಪುಸ್ತಕದ ಪರಪಂಜರದಲ್ಲಿ ಕೊಳಲಾಡುತ್ತಾರೆ. ಅಂತೂ ಇದೊಂದು ವರ್ಷ ದಾಟಿದರೆ ಸಾಕು, ಮುಂದೆ? ಯಾರಿಗೆ ಬೇಕು ಈ ಪುಸ್ತಕದ ಸಹವಾಸ? ಎನ್ನುವ ನೀವು ಉಳಿದವರ ಸವಾಲು. ಹೀಗೆ ಕಂಡಿತವಾಗಿ ಮಾಡುವುದಿಲ್ಲ—ಹೆಚ್ಚಿನವರ ತೀರ್ಮಾನ.—ಇದು ಭಾನುವಾರದ ಗೊತ್ತುವಳಿಯೆಂಬ ದಕ್ಕೆ ಅವಶ್ಯಕ ಪ್ರಮಾಣ ಮುಂದಿನ ಜೂನ್–ಜುಲೈ ತಿಂಗಳುಗಳಲ್ಲಿ.

ಪರೀಕ್ಷಾ ಜ್ವರ ಪೀಡಿತರನ್ನೂ ರೊಚ್ಚಿಗೇಳಿಸುವ ಅವಕಾಶಗಳು ಹಲವು. ಮನೆಯ ಹಿರಿಯರು ಏನಾದರೂ ಚಿಕ್ಕಪುಟ್ಟ ಕೆಲಸವನ್ನು ಈ ರೋಗಿಗೆ ಹೇಳಲಾರರ, ಪಾಪ, ಓದುತ್ತಿದ್ದಾನೆ. ಕ್ಲಾಸ್ ಬಂದರೇನೇ ಪ್ರಯೋಜನ. ಅವನಿಗೇಕೆ ಉಪದ್ರ?—ಈ ಶಾರೀರಿಕ-ಶಾರೀರಿಕವೆಯುಳು ಅಭ್ಯಾಸ ಮಾಡುವಂತೆ ಬಲವಂತ ಮಾಡಲಾರದ ಅಸಹಾಯಕ ಹೆತ್ತವರು ಈಗ ಅವರು ಸ್ವೇಚ್ಛೆಯಿಂದ ಅಧ್ಯಯನ ಮಗ್ನರಾದಾಗ ಬೇಡವೆಂದಾರೆ? ನೋಟ್ಸು, ಗೈಡುಗಳ ಎರವಲುಗಾರನಿಗೆ ಶಾಪದ ಸುರಿಮಳೆ, ವಿದ್ಯುತ್ ದೀಪದ ನೆಲ ಶಾಪ, ಪ್ರಶ್ನಪತ್ರಿಕೆ ಮುಂಡಿಸುವವನಿಂದ ಹಿಡಿದು ಫಲಿತಾಂಶ ಪ್ರಕಟ ಮಾಡುವವನ ವರೆಗಿನ ರಾಜನಿಂದ ಹಿಡಿದು ರಂಕನ ವರೆಗೂ ಶಾಪಾಕಾಂಕ್ಷೆ.......

ವಿದ್ಯಾರ್ಥಿಗಳ ಗೋಳು ಅಲ್ಲಾದರೆ, ಅಧ್ಯಾಪಕರ ಗೋಳೇ ಬೇರೆಯೇ. 'ನೀನು ಫೇಲಾಗೇ ಹೋಗು' ಎಂದು ಹಿಂದೆ ಆಶೀರ್ವಾದಮಾಡಿದ್ದರೂ ಅದೀಗ ಮರೆತುಹೋಗಿರುತ್ತದೆ. 'ಹೇಗಾದರೂ ನಮ್ಮ ವಿದ್ಯಾರ್ಥಿಗಳು ಪಾಸಾಗಿ ಶಾಲೆಗೆ ಕಾಲೇಜಿಗೆ ಕೀರ್ತಿ ತರುವಂತಾಗಲಿ' ಎಂಬ ಹಾರೈಕೆ. ಶಾಸಕರಿಂದ ತೊಡಗಿ ಬೀದಿಬಸವಣ್ಣನ ವರೆಗೂ ನಾನಾ ಬಗೆಯ ರಂಗುರಂಗಿನ ಮಾತು—ಪ್ರಶ್ನೆಪತ್ರಿಕೆ ಸ್ಫೋಟವಾಗಿದೆ! ಇದೇಕೋ ಪ್ರಶ್ನೆಪತ್ರಿಕೆ-ಬೀದಿಸುಲ್ಲೂ ಕೆಲವೊಮ್ಮೆ ಮಾರಾಟ!

ಇದನ್ನು ಕೇಳಿದ, ಓದಿದ ಅಭ್ಯರ್ಥಿಗಳ ಎದೆಯಲ್ಲಿ ಎಂಬು ಬನಕೆಗಳ ಬಡಿದಾಟ! ಅಲ್ಲಿ ಇಲ್ಲಿ ಅವನನ್ನು ಇವನನ್ನು ಅರಸುವುದರಲ್ಲೇ ಸಮಯ ಹಾಳು, ಓದು ಕೇಳು—ಚಿಂತೆ!

'ಪ್ರಶ್ನಪತ್ರಿಕೆ ಬಹಿರಂಗವಾಗಿಲ್ಲ, ಅವೆಲ್ಲ ಊಹಾ ಪತ್ರಗಳು'—ಎಸ್ಸೆಸ್ಸೆಲ್ಸಿಯ ಬಗ್ಗೆ ಸಚಿವರ ಘೋಷಣೆ. "ಅನುಭವಿ ಉಪಾಧ್ಯಾಯರು ಪ್ರಶ್ನ ಪತ್ರಿಕೆಯ ಬಹ್ವಂಶವನ್ನು ಊಹಿಸಿಯೇ ತಿಳಿದುಕೊಳ್ಳಬಲ್ಲರು"—ಇದಕ್ಕೆ ಅಧಿಕಾರಿಗಳ ಘೋಷಣೆ ಪುರಸ್ಕಾರ. ಅನಗತ್ಯ—ವಿದ್ಯಾರ್ಥಿ ಬಂಧುಗಳಿಗೂ ಅನವಶ್ಯ. ಇನ್ನೊಂದು ಬಾರಿ ರೋಗಕ್ಕೆ ಆಹುತಿಯಾಗಲು ಯಾರು ತಾನೇ ಬಯಸಿಯಾರು? ಒಮ್ಮೆಗೆ ಹಿಡಿದ ಭೂತ ಹಿಂಬಾಲಿಸಿದ ಭೂತದೊಡನೆಯೇ ಬಿಟ್ಟುಹೋಯಿತು.

ಫಲಿತಾಂಶ? ಅದೇನೂ ಅರಿಯದ.ದಿಲ್ಲ. ಫಲಾಗಲೀ ಬೇಕಾದವನೂ ಪಾಸಾಗುವಾಗ ಪಾಸಾಗುವನು?

○ ○ ○ ○

ಗಾಂಧೀ ಶತಮಾನೋತ್ಸವ-ಸಭೆ, ಅನಾವರಣ, ಭಾಷಣ, ಮೂರ್ತಿ ಸ್ಥಾಪನೆ, ಪುಸ್ತಕ ಪ್ರಕಟಣೆ ಒಕ್ಕೊಣಲಲ್ಲಿ ರೂಪಾಯಿಗಳ ಸದ ಪಯೋಗ

ಇದರಿಂದ ಲಾಭ? ಸಂತೆ ನೆರೆಯಿತು ನಾನಾ ಪರಿಯಲ್ಲಿ, ಪಂಥಕ್ಕೆ ರ್ಹೋದರು ತಂತಮ್ಮ ದಾರಿಯಲಿ." ಶತಮಾನೋತ್ಸವ ವಿಜೃಂಭಣೆಯಿಂದ ಎಲ್ಲೆಲ್ಲೂ ಆಚರಿಸಲಾಯಿತು. ಇಲ್ಲಿ 'ವಿಜೃಂಭಣೆ'ಯೆಂಬ ಪದಕ್ಕೇ ಬೆಲೆ ಹೆಚ್ಚು. ಪ್ರಜಾಪ್ರಭುತ್ವದ ರಾಜಕೀಯ ಪುಢಾರಿಗಳ ಪ್ರಾಧಾನ್ಯದ ಯುಗದಲ್ಲಿ 'ಪಬ್ಲಿಕ್' ಮಾಡುವುದು ಮುಖ್ಯವೇ ಹೊರತು ಅದರಿಂದ ಫಲ ನಿರೀಕ್ಷಣೆ ಸಲ್ಲ. ಶ್ರೀಕೃಷ್ಣ ಪರಮಾತ್ಮನೇ ಗೀತೆಯಲ್ಲಿ ಸಾರಿದ್ದಾನೆ— ಕರ್ಮ ಮಾಡುವುದು ನಿನ್ನ ಧರ್ಮ; ಫಲಾಪೇಕ್ಷೆಯಿಟ್ಟು ಕೆಲಸ ಮಾಡಬಾರದು. ಇಂತಹ ನಿಷ್ಕಾಮ ಕರ್ಮದಿಂದಾಗಿಯೇ ನಮ್ಮ ಸ್ವಾತಂತ್ರ್ಯದ ಇಪ್ಪತ್ತೆರಡು ವರ್ಷಗಳು ಕಳೆದಿವೆ—ನಾವಾಡಿದ ಕರ್ಮ ಬಲವಂತವಾದರೆ ನೀಮಾಡುವದೇನು ಕೃಷ್ಣಾ? ಎಂದು ಗೋಳಿಡುವ ಸ್ಥಿತಿಗೆ ಮುಟ್ಟಿದ್ದೇವೆ.

ಮದ್ಯಪಾನ ನಿರೋಧವು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಒಂದು. ಹರಿಜನೋದ್ಧಾರವಿನ್ನೊಂದು. ಶರೀರಶ್ರಮ ಬೇರೊಂದು...

ಜ್ಯಾರಿಯಲ್ಲಿದ್ದ ಪಾನನಿರೋಧವನ್ನು ರಾಜ್ಯ ಸರಕಾರಗಳು ಕಿತ್ತು ಹಾಕಿದವು; ಹಾಕುತ್ತಿವೆ. ಪುರಿಯ ಶಂಕರಾಚಾರ್ಯರು ಅಸ್ಪೃಶ್ಯತೆಯ ಬಗ್ಗೆ ಮತ್ತೆ ಪ್ರಶ್ನೆ ಎತ್ತಿದ್ದಾರೆ. ರಾಜ್ಯದ ಆರ್ಥಿಕ ಸ್ಥಿತಿ ಸುಧಾರಿಸಲು ಜನತೆಗೆ ಕಳ್ಳು ಕುಡಿಸಿದರೆ, ಜನರಿಂದ ಬಹಿಷ್ಕೃತರಾದವರು ಅಸ್ಪೃಶ್ಯರಾಗಲೇಬೇಕು. ಶ್ರಮವನ್ನು ನಾವಂದೇ ದೂರವಿಟ್ಟಿದ್ದೇವೆ ಸತ್ಯ—ಅಹಿಂಸೆ, ಬ್ರಹ್ಮಚರ್ಯ ಮೊದಲಾದ ಇತರ ವಿಷಯಗಳ ವ್ಯಾಖ್ಯಾನ ನಾವು ಪ್ರತಿನಿತ್ಯ ಸಮಾಚಾರ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಹಿಂದಿಯ ಕುತ್ತಿಕೆಯನ್ನು ಅದುಮಿ ಹಿಡಿದ. ಪ್ರಚಾರ ಮಾಡುವ ನಾಟಕವಾಡುತ್ತಿದ್ದೇವೆ—ಹೀಗೆ ಗಾಂಧಿ ಶತಮಾನಾಚರಣೆ ಸು ಹೆಸರಿಗೆ ಪೂರೈಸುತ್ತಿದ್ದೇವೆ.

ಪಾನ ಪ್ರತಿಬಂಧ ಬೇಕು ಎಂದವರೇ ಬೇಡವೆಂದರು. ಈಗ ಮತ್ತೆ ಕೆಲವರು ಬೇಕೆನ್ನತೊಡಗಿದ್ದಾರೆ. (ಅಭಿಪ್ರಾಯ ಸ್ವಾತಂತ್ರ್ಯದ ಸದುಪಯೋಗ.) ಮದ್ಯಪಾನದ ಹಾನಿಗಳನ್ನು ಜನತೆಗೆ ತಿಳಿಸಿ ಹೇಳಲು ಸಮಿತಿ ರಚನೆಯಾಗಬೇಕೆನ್ನುತ್ತಾರೆ. ಆದರೆ ಇರುಳು ಕಂಡ ಬಾವಿಗೆ ಹಗಲು ಬೀಳುವವರನ್ನು, ಅನ ಭವದಿಂದ ಪರ ತಿಳಿಯಲಾರದ ಅಂಧರನ್ನು ಸರಿದಾರಿಗೆ ತರಲು ಒಬ್ಬ ಗಾಂಧಿಯಿಂದ ಸಾಧ್ಯವಾಗಲಿಲ್ಲ.

"ನೀನಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕೋ" ಎಂದರು ಭಕ್ತವರೇಣ್ಯ ಪುರಂದರದಾಸರು. ಗಾಂಧೀ ನಾಮಿನವರೂ ಹಾಗೆ ಹಾಡಬಹುದು. ಆದರೆ, ಗಾಂಧೀ ನಿಷ್ಠೆಯಿಲ್ಲದ ನಮ್ಮಹಾಡು ಬಕಧ್ಯಾನವೂತ್ರ. ನಿಷ್ಠೆಯಿಲ್ಲದ ಭಕುತಿಯೆಷ್ಟು ಮಾಡಿದರೇನು? ಕಪ್ಪಡವ ಕೊಳುವ ಮಾನ್ ನೀನೆನ್ನ ಕೊಲ್ಲು' ಎಂದೊಬ್ಬ ಕನ್ನಡ ಕವಿ ಕರೆ ನೀಡಿದ್ದಾರೆ. ಗಾಂಧೀಜಿಗೆ ಗುಂಡಿಡುವುದಕ್ಕೆ ಮೊದಲು ನಾವೂ ಅವರ ನಿಷ್ಠೆಗೆ ಗುಂಡಿಟ್ಟಿದ್ದೇವೆ.

○ ○ ○

ಆಡಳಿತ ಸುಧಾರಣಾ ಆಯೋಗವೊಂದು ವರದಿಯಲ್ಲಿ ಜೀವವಿಮಾ ಕಾರ್ಪೊರೇಶನ್ ತನ್ನ ಪ್ರೀಮಿಯಂ ದರವನ್ನು ಇಳಿಸಬೇಕೆಂದು ಸಲಹೆ ಮಾಡಿತ್ತು. ಇದೀಗ, ಭಾರತೀಯರ ಆಯುರ್ಮಾನವು ಬಹಳಷ್ಟು ಏರಿರುವುದರಿಂದ ಜನ ಸೇವಾ ದೀಕ್ಷೆ ತೊಟ್ಟ ಕಾರ್ಪೊರೇಶನ್ ಅದರ ಲಾಭವನ್ನು ಜನತೆಗೆ ನೀಡಬೇಕಾದುದು ನ್ಯಾಯ. ಪ್ರೀಮಿಯಂ ದರವನ್ನಿಳಿಸುವ ಸಾಧ್ಯಾಸಾಧ್ಯತೆಯನ್ನು ಪರ್ಯಾಲೋಚಿಸಿ ತೀರ್ಮಾನ ಕೈಕೊಳ್ಳುವ ಬಗ್ಗೆ ವಿತ್ತ ಸಚಿವ ಸೇಥಿ ಆಶ್ವಾಸನೆ ನೀಡಿದ್ದಾರೆ. ಇದರ ಜತೆಗೇ ಕಾರ್ಪೊರೇಶನ್‌ನ ವ್ಯಯವನ್ನೂ ಕಡಿಮೆ ಮಾಡುವ ಬಗ್ಗೆ ಇನ್ನೊಂದು ಸಮಿತಿಯ ವರದಿಯ ನಿರೀಕ್ಷೆಯೂ ಇದೆ. ಆಡಳಿತ ವೆಚ್ಚವನ್ನು ಇಳಿಸುವುದು ಹೇಗೆ?

ಈ ಪ್ರಶ್ನೆ ಎಲ್ಲ ಸಂಘಸಂಸ್ಥೆ, ಸರಕಾರಗಳಿಗೂ ಸಾಮಾನ್ಯವೇ. ಸರಕಾರವು ಅಧಿಕ ಕರಭಾರ ಹೇರಿ (ವಸೂಲಾದಾಗ) ಬೊಕ್ಕಸ ತುಂಬಿಕೊಂಡರೆ, ಉಳಿದವರು ಏನು ಮಾಡಬೇಕು? ಬ್ಯಾಂಕುಗಳು ಬಡ್ಡಿ ದರ ಏರಿಸಬಹುದು. ಉತ್ಪಾದಕರು ವಸ್ತುಗಳ ಬೆಲೆ ಏರಿಸಬಹುದು. ಕೊಳ್ಳುವವರು? ಇಂದಿನ ಪ್ರಶ್ನೆಯೂ ಇದೇ. ಬಳಕೆದಾರನ ಕೈಗೆ ನಿಲುಕದಂತೆ ಎಲ್ಲವೂ ಆಕಾಶ ಯಾತ್ರೆಯಾಗಿವೆ.

ಎಲ್ಲೈಸಿಯು ಸಾರ್ವಜನಿಕ ಸೇವಾ ಸಂಸ್ಥೆ. ಪಾಲಿಸಿದಾರರ ಹಿತ ಅದರ ಪರಮ ಧ್ಯೇಯ. ಆದುದರಿಂದ ಪಾಲಿಸಿದಾರರಿಗೆ ಆರ್ಥಿಕ ಲಾಭ ನೀಡುವುದು ಅತ್ಯವಶ್ಯ. ಪ್ರೀಮಿಯಂ ದರಗಳನ್ನು ಇಳಿಸುವ ಬಗ್ಗೆ ಸೂಚನೆಗಳು ಅಲ್ಲಿ ಇಲ್ಲಿ ಹಲವು ಬಾರಿ ಬಂದಿದ್ದರೂ ಅದಕ್ಕೆ ಅಧಿಕೃತ ಬಲ ಬಂದಿಲ್ಲ. ಆಡಳಿತ ಸುಧಾರಣಾ ಆಯೋಗದ ವರದಿಯು ಮಾಡಿದ ಈ ಅಧಿಕೃತ ಸಲಹೆಯ ಬಗ್ಗೆ ತೀವ್ರ ಕ್ರಮ ಕೈಕೊಳ್ಳುವುದು ಅಗತ್ಯ.

ಖಂಡಿತ ಮಾಡಿಸಿಕೊಳ್ಳುತ್ತೇನೆ

"ಇಂದು ಶಿವನಹಳ್ಳಿ, ನಾಳೆ ದೇವಿನಹಳ್ಳಿ ಎಂದು ಹಳ್ಳಿಯಿಂದ ಹಳ್ಳಿಗೆ ಅಲೆದಾಟ, ಪೇಟೆ ಪಟ್ಟಣಗಳ ಸುತ್ತಾಟ. ಇದುವೇ ನಮ್ಮ ವೃತ್ತಿ. ಇದುವೆ ನಮ್ಮ ಬದುಕು.

"ಅಲ್ಲಿ ಇಲ್ಲಿ ಸುತ್ತಿ, ಹಕ್ಕಿ ಹಿಡಿದು ಮಾರಿ ಬಂದ ಬಿಡಿಕಾಸು, ಹಳ್ಳಿಗರ ಕೆಲವು ರೋಗಗಳಿಗೆ ಬೇರು ಕಡ್ಡಿ ಸೊಪ್ಪೆಂದು ಕೊಟ್ಟು ದೊರೆಯುವ ಕಾಲು-ಅರ್ಧ ರೂಪಾಯಿ ನಮ್ಮ ಸಂಪಾದನೆ.

"ಹೌದು, ಹೀಗೆಯೇ ಮರದ ಕೊಂಬೆಗೆ ಕಟ್ಟಿದ ಬಟ್ಟೆಯೇ ತೊಟ್ಟಿಲು, ಮರದ ನೆರಳೇ ನಮ್ಮ ಬಿಡಾರ, ಅಲ್ಲೇ ಅಡಿಗೆ.

"ಹೆಣ್ಣು ಗಂಡು ಜೋಡಿ ಬಗ್ಗೆ ಭವಿಷ್ಯ ಕೇಳಲು ಬರುವ ತಾಯಂದಿರು, ನೆಚ್ಚಿದ ಹೆಣ್ಣು ಬೇರೆಯವರ ಕಡೆಗೆ ಒಲಿದಾಗ, ಇಲ್ಲವೇ ಹೆಂಡತಿ ಮಕ್ಕಳನ್ನು ಸಾಕಲಾರದೆ ಗಂಡ ಊರು ಬಿಟ್ಟು ಓಡಿಹೋದಾಗ ಭವಿಷ್ಯ ಕೇಳಲು ಬರುವ ಅಮ್ಮಂದಿರು. ಯಾವಾಗ ಮದುವೆ? ಹೆಣ್ಣು ಯಾವ ದಿಕ್ಕಿನಿಂದ? ಯಾವ ಬಣ್ಣದ್ದು? ಎಂದು ಪ್ರಶ್ನೆ ಕೇಳಲು ಬರುವ, ಬೆಳೆದ ಹುಡುಗರ–ಇವರೆಲ್ಲ ನಮ್ಮ ಒಡಗಾಡಿಗಳು.

"ಏನೇ ಇರಲಿ, ಎಷ್ಟೇ ದುಡಿಯಲಿ ಕೈಗೆ ಬಂದರೆ ಬಾಯಿಗೆ ಸಾಲುವುದಿಲ್ಲ. ನಡುವಿನಲ್ಲೇ ಸುತ್ತಮುತ್ತ ಅಪ್ಪ ಅಮ್ಮ ಎಂದು ಹಸಿವಿನಿಂದ ಚಡಪಡಿಸುವ ಚಿಕ್ಕ ಪುಟ್ಟ ಮಕ್ಕಳು— ಒಂದೇ ಎರಡೇ, ಕಡಿಮೆಯೆಂದರೆ ಐದಾರು—ಹೆಚ್ಚೆಂದರೆ ಎಂಟೊಂಬತ್ತು.

ಕೆಂಪು ತ್ರಿಕೋನ ನೋಡಿದ್ದೇನೆ, ಅಲ್ಲಿ ಇಲ್ಲಿ ಮಕ್ಕಳಾಗದಂತೆ ಔಷಧಿ ಮಾಡಿಸಿಕೊಂಡ ಸುದ್ದಿ ಕೇಳಿದ್ದೇನೆ ಆದರೆ ಅದು ಎಂತಹ ಔಷಧಿ! ಎಲ್ಲಿ ಸಿಗುತ್ತೆ? ಎಂದು ಇನ್ನೂ ನನಗೆ ಗೊತ್ತಿಲ್ಲ.

"ನಮ್ಮ ಔಷಧಿಯೆಲ್ಲ ಮಕ್ಕಳಾಗುವುದಕ್ಕೆ ಮಕ್ಕಳೇ ಬೇಡ ಎನ್ನುವವರಿಗೆ ಕೊಡುವ ಔಷಧಿ ನನಗೆ ತಿಳಿದಿಲ್ಲ.

"ಒಂದೋ ಎರಡೋ ಮಕ್ಕಳಿರುತ್ತಿದ್ದರೆ ಹೇಗೋ ಸಾಕಿಕೊಳ್ಳಬಹುದಿತ್ತು. ಅವು ಸ್ವಲ್ಪ ರೆಕ್ಕೆ ಬಲಿತು ದೊಡ್ಡವಾದರೆ ನಮ್ಮ ಹೊರೆ ಕಡಿಮೆಯಾಗುತ್ತಿತ್ತು.

"ಬೆಳಗ್ಗೆಯಿಂದ ಇಲ್ಲಿ ಜನ ಬಂದು ಹೋಗುತ್ತಿದ್ದಾರೆ. ನರಸಮ್ಮ–ಡಾಕ್ಟರರು ಎಲ್ಲಾ ಅತ್ತಿತ್ತ ಓಡಾಡುತ್ತಿದ್ದಾರೆ. ಏನೋ ಆಸ್ಪತ್ರೆ ಇರಬೇಕು. ಮಕ್ಕಳಾಗದಂತೆ ಇಲ್ಲಿ ಮದ್ದು ಸಿಗುತ್ತದಂತೆ— ನಮ್ಮ ಲಿಂಗಣ್ಣ ಹೋಗಿ ನೋಡಿ ಬಂದ.

"ನಿಜವಾಗಿಯೂ ನಂಬಿಕೆ ಇದೆ. ಡಾಕ್ಟರರೆಂದರೆ ಜೀವಕೊಡುವವರು— ಅವರ ಮಾತಿನಲ್ಲಿ ಖಂಡಿತ ನಂಬಿಕೆ ಇದೆ.

"ಆಪರೇಷನೇ ಮಾಡಿಸಿಕೊಳ್ಳುತ್ತೇನೆ ಬಿಡಿ, ನಾನೊಬ್ಬನೇಕೆ— ಈ ಲಿಂಗಣ್ಣನೂ ಮಾಡಿಸಿಕೊಳ್ಳುತ್ತಾನೆ. ಮಕ್ಕಳು ಆದಿವೆ. ಇದ್ದರೆ ಅಲೆದಾಡಲೂ ಅನುಕೂಲ—ಬದುಕೂ ಅನುಕೂಲ. ಖಂಡಿತ ಮಾಡಿಸಿಕೊಳ್ಳುತ್ತೇನೆ."

ಕುಟುಂಬ ಯೋಜನೆ ಏಕೆ ಬೇಕು?

ಲೇಖಕರು: ಶ್ರೀ ಆರೂರು ಲಕ್ಷ್ಮಣ, ಕುಂಜಾಲು

ಪಾರತಂತ್ರ್ಯದ ಬಂಧನದ ಬೇಡಿಯಲ್ಲಿ ಸಿಲುಕಿಕೊಳ್ಳಲಾಗುತ್ತಿದ್ದ ನಮ್ಮ ದೇಶ ಸ್ವಾತಂತ್ರ್ಯವನ್ನು ಗಳಿಸಿ ಈಗಾಗಲೇ ೨೧ ವರುಷಗಳು ಸಂದು ಹೋದುವು. ಆದರೆ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ನಮ್ಮ ಪಾಲಿಗೆ ಸುದಿನಗಳು ಇನ್ನೂ ಹಗಲುಗನಸುಗಳಾಗಿಯೇ ಉಳಿದಿವೆ. ಇದೇಕೆ ಹೀಗೆ? ಎಲ್ಲಿದೆ ಪರಿಪೂರ್ಣ ಸ್ವಾತಂತ್ರ್ಯ? ಇದೇ ಏನು ಬಾಪೂಜಿ ಕನಸಿದ ರಾಮರಾಜ್ಯ? — ಎಂಬಿತ್ಯಾದಿ ಪ್ರಶ್ನೆಗಳು ಬುದ್ಧಿಜೀವಿಗಳ ತಲೆ ತಿನ್ನುತ್ತಿರುವುದರಲ್ಲಿ ಸೋಜಿಗವೇನಿಲ್ಲ.

ದೇಶದ ಪ್ರಗತಿಯನ್ನು ಕುಂಠಿತಗೊಳಿಸುತ್ತಿರುವ ಸಮಸ್ಯೆಗಳು ನಾನಾ ತೆರನಾದವುಗಳು. ಅವುಗಳಲ್ಲಿ ಜನಸಂಖ್ಯೆಯ ಸಮಸ್ಯೆ ಅತ್ಯಂತ ಕ್ಲಿಷ್ಟವಾದುದೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಪತ್ರಿಕೆಗಳ ಪುಟ ತಿರುಗಿಸುವಾಗ ದಪ್ಪಕ್ಷರಗಳಲ್ಲಿ ಹೊಳೆಯುವ "ಹೆಚ್ಚು ಯಾಕೆ ಬೇಕು? ಎರಡು ಮಕ್ಕಳು ಸಾಕು"; "ಒಂದು ಮಗು ಬೇಕು, ಎರಡು ಇದ್ದರೆ ಸಾಕು; ಮುಂದಕ್ಕೆ ನಿಲ್ಲಿಸಬೇಕು" — ಮೊದಲಾದ ವಾಕ್ಯಗಳೇ ಈ ಸಮಸ್ಯೆಯ ಜಟಿಲತೆಗೆ ಸಾಕ್ಷಿ.

ಈ ಸಮಸ್ಯೆಯ ಉದ್ಭವಕ್ಕೆ ಕಾರಣವಾದರೂ ಏನು? ಇಂದು ಭಾರತದ ಸರಾಸರಿ ಜನಸಾಂದ್ರತೆ ಚದರ ಮೈಲಿಗೆ ೩೯೦. ವಾರ್ಷಿಕ ಜನನ ಸಂಖ್ಯೆ ಸಾವಿರಕ್ಕೆ ೪೦ ಆದರೆ ಮರಣ ಸಂಖ್ಯೆ ಸಾವಿರಕ್ಕೆ ೧೮. ಜನನ ಮತ್ತು ಮರಣ ಸಂಖ್ಯೆಗಳಲ್ಲಿರುವ ಈ ಅಪಾರ ಅಂತರವೇ ಈ ಸಮಸ್ಯೆಗೆ ಕಾರಣವಾಗಿದೆ. ವಿಜ್ಞಾನರಂಗದಲ್ಲಿ ಮಾನವನು ಸಾಧಿಸಿದ ಅಪೂರ್ವ ಪ್ರಗತಿಯಿಂದಾಗಿ ಹಾಗೂ ಹಲವಾರು ಜೀವನಾವಶ್ಯಕ ಸಾಮಗ್ರಿಗಳ ಸಂಶೋಧನೆಯಿಂದಾಗಿ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿನ ಮುನ್ನಡೆಯಿಂದಾಗಿ ಸಾಂಕ್ರಾಮಿಕ ರೋಗಗಳಿಂದ ಉಂಟಾಗುವ ಸಾವಿನ ಸಂಖ್ಯೆಯನ್ನು ಕಡಿಮೆಗೊಳಿಸಲು ಸಾಧ್ಯವಾಯಿತು. ರೋಗರುಜಿನಗಳೊಡನೆಯ ಹೋರಾಟದಲ್ಲಿ ಮಾನವನ ಕೈ ಮೇಲಾಯಿತು. ಆದರೆ ಏರುತ್ತಿರುವ ಜನನ ಸಂಖ್ಯೆಯ ತ್ವರಿತಗತಿಯನ್ನು ತಡೆಯುವತ್ತ ಮಾನವನ ಗಮನವನ್ನು ಹೆಚ್ಚಾಗಿ ಹಾಯಿಸಲಿಲ್ಲ. ಆದುದರಿಂದಾಗಿ ಜನಸಂಖ್ಯೆಯ ಸಮಸ್ಯೆ ಉದ್ಭವಿಸಿರುತ್ತದೆ.

ಇಲ್ಲದೆ ಇನ್ನೂ ಹಲವಾರು ಕಾರಣಗಳಿವೆ. ಬಡ ಭಾರತೀಯರ ಆಸ್ತಿಯೆಂದರೆ ಮಕ್ಕಳು ಮಾತ್ರ. ಉಳಿದೆಲ್ಲಾ ಸುಖಗಳಿಂದ ವಂಚಿತರಾದ ಅವರು ತಮ್ಮ ವಂಶೋದ್ಧಾರಕ್ಕಾಗಿ ಕೆಲವಾರು ಮಕ್ಕಳನ್ನು ಪಡೆಯಲೆಳಸುವುದು ಅಸ್ವಾಭಾವಿಕವೇನಲ್ಲ. ಭಾರತದಲ್ಲಿ ಮದುವೆ ಸಾರ್ವತ್ರಿಕವಾಗಿದೆ. ೧೦ರಲ್ಲಿ ೮ ಮಂದಿ ಹೆಣ್ಣುಮಕ್ಕಳು ಮದುವೆಯಾಗುತ್ತಾರೆ. ಇದಲ್ಲದೆ ಹಿಂದೂ ಧರ್ಮದ ಪ್ರಕಾರ ಪುತ್ರಸಂತಾನವಿಲ್ಲದವನಿಗೆ ಮರಣಾನಂತರ ಸದ್ಗತಿ ದೊರಕಲಾರದೆಂಬ ನಂಬಿಕೆಯೂ ಇದೆ. ಮುಕ್ತಿಯನ್ನೈದಲೆಳಸುವ ೧೦ ಹೆಣ್ಣುಮಕ್ಕಳ ತಂದೆ ಸುಪುತ್ರನೋರ್ವನ ಜನನಕ್ಕಾಗಿ ಮರುಪ್ರಯತ್ನವನ್ನು ಮಾಡುವುದು ಸ್ವಾಭಾವಿಕವೇ ಆಗಿದೆ. ಭಾರತದಲ್ಲಿನ ಅತೀವ ಉಷ್ಣ ಹವಾಮಾನವೂ ತರುಣ ಪೀಳಿಗೆಯ ಮನಸ್ಸಿನ ಉದ್ರೇಕಕ್ಕೆ ಕಾರಣವಾಗಿದೆ. ಜತೆಗೆ ಜನಮನದಲ್ಲಿ ಬೇರೂರಿರುವ ಕೆಲವಾರು ಮೂಢನಂಬಿಕೆಗಳು ಹಾಗೂ ಅಂಧಾನುಕರಣೆಗಳು ಇದಕ್ಕೆ ಪ್ರೇರಕವಾಗಿವೆ.

ಇದಕ್ಕೆ ಅತ್ಯಂತ ಉತ್ಕೃಷ್ಟ ಪರಿಹಾರೋಪಾಯವೆಂದರೆ "ಕುಟುಂಬ ಯೋಜನೆ" ಎಂಬುದನ್ನು ಅರಿತಿರುವ ಮಂದಿಗೇನೂ ಕಡಿಮೆಯಿಲ್ಲ. ಮಿತಸಂತಾನ ಹಿತವಾದ ಬಾಳಿಗೆ ಸಹಕಾರಿ ಎಂಬುದನ್ನು ತಿಳಿದಿರುವ ಮಂದಿಗೇನೂ ಕೊರತೆಯಿಲ್ಲ. ಆದರೆ ಅದನ್ನು ಅನುಷ್ಠಾನಕ್ಕೆ ತರಲಿಚ್ಛಿಸುವವರು ಮಾತ್ರ ವಿರಳ. "ಕುಟುಂಬ ಯೋಜನೆ"ಗೆ ರಾಷ್ಟ್ರೀಯ ಪ್ರಾಧಾನ್ಯವಿತ್ತು, ತನ್ನ ಯೋಜನೆಗಳಲ್ಲಿ ಆ ಉದ್ದೇಶಕ್ಕಾಗಿ ಹೇರಳ ಹಣವನ್ನು ವ್ಯಯಿಸಿದ ರಾಷ್ಟ್ರಗಳಲ್ಲಿ ಭಾರತಕ್ಕೆ ಪ್ರಥಮ ಸ್ಥಾನ ಸಲ್ಲುತ್ತದೆ. ಆದರೂ ಪಾಶ್ಚಾತ್ಯ ದೇಶಗಳಲ್ಲಿ ಯಶಸ್ವಿಯಾದ ಈ ವಿಧಾನ ನಮ್ಮ ದೇಶದಲ್ಲಿ ಮಂದಗತಿಯಲ್ಲಿ ಮುಂದುವರಿಯುತ್ತಿದೆ. ಇದೇಕೆ ಹೀಗೆ? ಬುದ್ಧಿಜೀವಿಗಳು ಚಿಂತಿಸತಕ್ಕ ವಿಷಯವಿದು.

ಎಲ್ಲ ಮೂಢನಂಬಿಕೆಗಳನ್ನೂ ಕಿತ್ತೊಗೆದು ನಾವು ಬದುಕುವ ದೇಶದ ಜನ ಎಂಬುದನ್ನು ತೋರಿಸಿಕೊಡುವ ಕಾಲವೀಗ ಸನ್ನಿಹಿತವಾಗಿದೆ. ಮಿತ ಸಂತಾನಕ್ಕೆ ಸಹಕಾರಿಯಾದ ಸಾಧನಗಳ ಕುರಿತಾದ ಸುಳ್ಳು ಊಹಾಪೋಹಗಳನ್ನು ಬದಿಗೊತ್ತಿ ನಾವಿಂದು ಅವುಗಳ ಪೂರ್ಣ ಉಪಯೋಗವನ್ನು ಹೊಂದಬೇಕಾಗಿದೆ. ಸಂಪ್ರದಾಯವಾದಿಗಳ ನಂಬುಗೆಯಂತೆ ಮಕ್ಕಳು ದೇವರ ಪ್ರಸಾದ. ವಂಕಿ, ನಿರೋಧ್ ಮುಂತಾದ ಗರ್ಭನಿರೋಧಕ ಸಾಧನಗಳ ಬಳಕೆ ಅವರ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ. ಆದರೆ ಇದನ್ನು ಪಾಪವೆಂದು ಕರೆಯುವ ಜನ, ಇದರಿಂದ ಶಾಪ ತಗಲಿದೆ ಎಂದು ನಂಬಿರುವ ವೇದಾಂತಿಗಳು ಕಣ್ಣು ತೆರೆದು ಸುತ್ತಣ ಪ್ರಪಂಚವನ್ನು ವೀಕ್ಷಿಸಬೇಕಾಗಿದೆ. ತಿನ್ನುವ ಅನ್ನದಲ್ಲಿರುವ [illegible]ದ ಅಂಶವನ್ನು ಯೋಚಿಸಬೇಕಾಗಿದೆ.

ನಮ್ಮ ದೇಶದಲ್ಲಿ ಕುಟುಂಬ ಯೋಜನೆ ಪ್ರಗತಿಪಥದಲ್ಲಿ ಮುಂದುವರಿಯುತ್ತಿದೆ ಎಂಬುದು ನಿರ್ವಿವಾದ. ಕೇಂದ್ರ ಕುಟುಂಬ ಯೋಜನಾ ಶಾಖಾ ರಾಜ್ಯ ಸಚಿವ ಡಾ| ಚಂದ್ರಶೇಖರ್ ಆ ದಿಸೆಯಲ್ಲಿ ಗಮನಾರ್ಹ ಪ್ರಯತ್ನ ಕೈಗೊಂಡಿರುವುದು ಸರ್ವವಿದಿತ. ಸರಳ ಹಾಗೂ ಸುಲಭಸಾಧ್ಯವಾದ ಸಂತತಿ ನಿಯಂತ್ರಣ ಸಾಧನಗಳ ಸರಬರಾಜು ಹೆಚ್ಚಿರುವುದರಿಂದಾಗಿ ಜನಸಾಮಾನ್ಯರ ಆಸಕ್ತಿ ಹೆಚ್ಚಿರುತ್ತದೆ. "ಕುಟುಂಬ ಯೋಜನಾ ತರಬೇತಿ ಶಿಬಿರ", "ಕುಟುಂಬ ಯೋಜನಾ ಕೇಂದ್ರ"—ಮೊದಲಾದವುಗಳನ್ನು ದೇಶದಾದ್ಯಂತ ತೆರೆದಿರುವುದರಿಂದಾಗಿ ಜನತೆಗೆ ಅದರ ಅಗತ್ಯತೆಯ ಅರಿವು ಉಂಟಾಗಿದೆ. ಕಳೆದ ಕೆಲ ವರ್ಷಗಳಲ್ಲಿ ಜನನ ಪ್ರಮಾಣವು ಇಳಿಮುಖವಾಗಿದೆ. ಅಸ್ಸಾಂ ಚಹಾ ತೋಟಗಳಲ್ಲಿ ಜನನ ಪ್ರಮಾಣ ೧೯೬೦ರಲ್ಲಿ ಪ್ರತಿ ಸಹಸ್ರ ಸಂಖ್ಯೆಗೆ ೪೩.೪ ಇದ್ದುದು ೧೯೬೭ರಲ್ಲಿ ೨೯.೩ಕ್ಕೆ ಇಳಿದಿರುವುದನ್ನು ಗಮನಿಸಬಹುದಾಗಿದೆ.

ಇದೇ ರೀತಿ ಮಧುರೈ ಜಿಲ್ಲೆಯ ಘಟಕವೊಂದರಲ್ಲಿ ಕಳೆದ ೫ ವರ್ಷಗಳ ಅವಧಿಯಲ್ಲಿ ಜನನ ಪ್ರಮಾಣ ಪ್ರತಿ ಸಹಸ್ರ ಜನಸಂಖ್ಯೆಗೆ ೪೦ ಇದ್ದುದು ಈಗ ೩೪ಕ್ಕೆ ಇಳಿದಿದೆ. ಕಳೆದ ಜನಗಣತಿಯನುಸಾರ ಮೈಸೂರು, ಮಹಾರಾಷ್ಟ್ರ, ಕೇರಳ ರಾಜ್ಯಗಳಲ್ಲಿ ಜನನ ಪ್ರಮಾಣ ಬಹುತೇಕ ಇಳಿದಿದೆ. ಮಹಾರಾಷ್ಟ್ರದಲ್ಲಿ ಪ್ರತಿ ಸಹಸ್ರ ಸಂಖ್ಯೆಗೆ ಜನನ ಪ್ರಮಾಣ ೪೧.೩ರಿಂದ ೩೩.೮ಕ್ಕೂ, ಮೈಸೂರಿನಲ್ಲಿ ೪೧.೭ರಿಂದ

ಮಹಾಕವಿ ಕಾಳಿದಾಸ ಕುರುಬನೇ?

(ಐದನೇ ಪುಟದಿಂದ)

ಳನ್ನು ರಕ್ಷಿಸುತ್ತಾಳೆ. ಮೊದಲು ಆಚಲೆಯನ್ನು ಮತ್ಸರದಿಂದ ನೋಡಿದ ಈಕೆ ಈಗ ಆಕೆಯ ಕಾಲಿಗೆರಗುತ್ತಾಳೆ. ಕವಿಯು ವಿರಹ ವೇದನೆಯನ್ನು ನೀಗುವುದಕ್ಕಾಗಿ ಆಶ್ರಮದ ಗುರುಗಳು ಕವಿಗೆ, ಪಾರ್ವತೀ ಪರಮೇಶ್ವರರ ಕುರಿತಾದ ಕಾವ್ಯ ರಚನೆ ಮಾಡುವಂತೆ ಹೇಳುತ್ತಾರೆ. ಆಗಲೇ ಕವಿ ಹೃದಯದಿಂದ, 'ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ'— ಕಾವ್ಯ ಮೂಡುತ್ತದೆ. ಆಚಲೆಯ ಭೇಟಿಯಾದಾಗ ಕಾಳಿದಾಸ ಆಕೆ ಸನ್ಯಾಸಿಯಾದುದನ್ನು ಗಮನಿಸಿ ಕೊರಗುತ್ತಾನೆ. ಮುಂದೆ, ವಾಸಂತಿ ಕಾಳಿದಾಸರ ಪುನರ್ಮಿಲನವಾಗಿ ಕಾದಂಬರಿ ಮುಕ್ತಾಯಗೊಳ್ಳುತ್ತದೆ.

ಕಾದಂಬರಿಯನ್ನು ಓದುತ್ತ ಮುಂದುವರಿದಂತೆ 'ಅಯ್ಯೋ ಇಷ್ಟು ಬೇಗ ಮುಗಿಯಿತೇ!' ಎನಿಸುತ್ತದೆ. ಪುಟ ತೆರೆದರೆ ಸಾಕು, ಕಾದಂಬರಿಯೇ ನಮ್ಮನ್ನು ಮುಂದೆ ಓದಿಸಿಕೊಂಡು ಹೋಗುತ್ತದೆ! ಸಮರ್ಥ ಪ್ರಯೋಗ ಗಂಭೀರವಾದ ಸಂಸ್ಕೃತನಿಷ್ಠವಾದ ಭಾಷಾಶೈಲಿ! ಹೃದಯವನ್ನು ಸ್ಪರ್ಶಿಸಬಲ್ಲ ಭಾವಾಭಿವ್ಯಕ್ತಿ! ಇವುಗಳಿಂದೊಡಗೂಡಿದ ಈ ಕಾದಂಬರಿಯನ್ನು ನೀಡಿದ ಕವಿ [illegible] ಇವರು ಕಾಳಿದಾಸನ ಜೀವನ ವೃತ್ತಾಂತದ ಕುರಿತು ಕನ್ನಡ ಮಾತ್ರವಲ್ಲ; ಕನ್ನಡೇತರ ಸಾಹಿತ್ಯಕ್ಕೂ ಸಹ ತಮ್ಮ ಈ ಕೃತಿಯ ಮೂಲಕ ಅಮೂಲ್ಯವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ, ಅಭಿನಂದನೀಯರಾಗಿದ್ದಾರೆ!

ಈ ಕೃತಿಯು ಹಿಂದೀ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟು ವಿಶ್ವಮಾನ್ಯನಾದ ಮಹಾಕವಿ ಕಾಳಿದಾಸನ ಜೀವನ ವೃತ್ತಾಂತದ ಮೇಲೆ ಹೊಸ ಬೆಳಕು ಬೆಳಗಲಿ! ಎಂದು ಹಾರೈಸುತ್ತೇನೆ.

The Herga Co-op. Agricultural Bank Limited.

L. No 3225, PARKALA, S K.

ಏಲಂ ನೋಟೀಸು

ಈ ಕೆಳಗಿನವರು ಮೇಲ್ಕಾಣಿಸಿದ ಬೇಂಕಿನಿಂದ ಚಿನ್ನಾಭರಣ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡದೆ ಬಾಕಿ ಇರುವುದರಿಂದ ಸದ್ರಿಯವರಿಗೆ ಕ್ರಮಪ್ರಕಾರ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಜಾರಿಯಾಗಿಯೂ ಜಾರಿಯಾಗದೆ ವಾಪಾಸು ಬಂದಿರುವುದರಿಂದ ಸದ್ರಿಯವರಿಗೆ ಯಾ ಅವರು ಮೃತಪಟ್ಟಲ್ಲಿ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 30—4—1969ನೇ ಬುಧವಾರ ಅಪರಾಹ್ನ ಘಂಟೆ 6—00ರ ಒಳಗೆ ಬಿಡಿಸದೆ ಇದ್ದಲ್ಲಿ ತಾ. 10—5—1969ನೇ ಶನಿವಾರ ಯಾ ಬೇಂಕಿಗನುಕೂಲ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಕಛೇರಿಯಲ್ಲಿ ಬಹಿರಂಗ ಏಲಂ ಮಾಡಲಾಗುವುದು.

ಅಂಕ ಸಂಖ್ಯೆ	ಸಾಲದ ಸಂಖ್ಯೆ	ಮೆ. ಸಂಖ್ಯೆ, ಹೆಸರು ಮತ್ತು ವಿಳಾಸ	ಮೊಬಲಗು ರೂ. ಪೈ.
1.	934/67—68	C. 218 ಎಸ್. ಜಿ. ನಾಯಕ್, S/o ಗೋಪಾಲ ನಾಯಕ್, ಪೆರ್ಣ, ಹಿರೆಬೆಟ್ಟು ಗ್ರಾಮ, P. O. ಬೈರಂಪ, ದ. ಕ.	156—98
2.	994/67—69	C. 319 ನಾರಾಯಣ ಆಚಾರಿ, S/o ತಿಮ್ಮ ಆಚಾರಿ, ಮುಕ್ಕಾ: ಕುಕ್ಕೆಕಟ್ಟೆ, ಕುಕ್ಕೆಹಳ್ಳಿ ಗ್ರಾಮ, P. O. ಕುಕ್ಕೆಕಟ್ಟೆ, ದ. ಕ.	89—68

ಪರ್ಕಳ,
ತಾ. 7—4—1969.

(ಸಹಿ) ವೇದಮೂರ್ತಿ ಭಟ್ ಯನ್.
ಕಾರ್ಯದರ್ಶಿ

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ತಲೆಯೆತ್ತಿ ನಿಲ್ಲು

ತಲೆಯು, ತನುವಿನ ಕಳಶ. "ಶಿರಃ ಪ್ರಧಾನಂ ಶರೀರಂ" ತಲೆಯು ಉನ್ನತವಾದರೆ ತನುವೂ ಉನ್ನತವಾಗುವುದು, ಮನವೂ ಉನ್ನತವಾಗುವುದು. ಮಾನವ ವ್ಯಕ್ತಿಯಾಗದವರು ತಲೆಯನ್ನೆತ್ತಿ ನೋಡರು.

ತಲೆಯು ಉನ್ನತವಾಗಿರುವಾಗ ಮನವು ಅವನತವಾಗಿರಬಾರದು. ಮಾನವನ್ನೆತ್ತಲು ಸಂಯಮ, ಸಾಧನಗಳು ಬೇಕು. ತಲೆ ಮೇಲೆತ್ತಲು ತನುವಿನ ಸ್ನಾಯುಗಳ ಸಂಚಾಲನ ಮಾತ್ರ ಸಾಕು. ಮನವನ್ನೆತ್ತುವುದು ಮಹಾಬಲರಿಗೇ ಸಾಧ್ಯ, ಆದರೆ ತಲೆಯನ್ನೆತ್ತುವುದು ದುರ್ಬಲರಿಗೂ ಸಾಧ್ಯ.

ತಲೆಯೆತ್ತಿದರೆ ನೋಟ ಎತ್ತರವಾಗುವುದು. ಮರದೆತ್ತರ! ಪರ್ವತದೆತ್ತರ! ಗಗನದೆತ್ತರ!! ಕಣ್ಣು ಎತ್ತರವಾದರೆ ಕಲ್ಪನೆ ಎತ್ತರವಾಗುವುದು, ವಿಶ್ವದ ದೂರ ದೂರದ ವರೆಗೆ ಹೋಗುವುದು.

ತಲೆಯೆತ್ತಿ ನಿಂತಾಗ ದೃಷ್ಟಿ ಎತ್ತರವಾದಾಗ ಮನವು ಕಲ್ಪನೆಯ ಗರಿಯೇರಿ ಕೊನೆಯಿಲ್ಲದ ದೂರಕ್ಕೆ ಸಾಗುವುದು. ಆಗ ವೈಮನಸ್ಯ ಮರೆವುದು, ಕೋಪ ಕರಗುವುದು, ಬಾಳಿನಲ್ಲಿ ಗೆಲುವಿನ ನಿಲುವು ಮೂಡುವುದು, ಸೋಲಿನ ಭಾವ ಭಗ್ನವಾಗುವುದು.

ತಲೆಯೆತ್ತಿದರೆ ಎದೆ ಸಟೆಯುವುದು, ಬೆನ್ನು ನೆಟ್ಟಗಾಗಿ ಆತ್ಮವಿಶ್ವಾಸದ ಪ್ರಕಾಶ ಏರುವ ಭವ್ಯ ದೀಪಸ್ತಂಭವಾಗುವುದು. ಕಾರ್ಯೋತ್ಸಾಹದ ಭಾವ ಬೆಳಗುವುದು.

ತಲೆ ತಗ್ಗಿದರೆ ಮನ ಕುಗ್ಗುವುದು, ಮೈ ಬಗ್ಗುವುದು, ನಿಂತರೆ ನುಗ್ಗುವುದು, ಕಾಯಿಲೆ ಹಿಗ್ಗುವುದು.

ಎತ್ತಿದ ತಲೆ ಸತ್ವದ ನೆಲೆ, ಸ್ವಾತಂತ್ರ್ಯದ ನೆಲೆ. ತಲೆ ಎತ್ತಿ ನಿಲ್ಲು! ಅದುವೆ ಗೆಲುವಿನ ಸೊಲ್ಲು!!

—ತಾರಾದಾಸ (ದೀರ್ಘಾಯು)

-: ಸಂಪತ್ತು-ವಿಪತ್ತು :-

ಪ್ರಶ್ನೆ—ಸಂಪತ್ತು ಹೇಗೆ ಹುಟ್ಟುತ್ತದೆ?

ಉತ್ತರ— ಉದ್ಯೋಗದಿಂದ, ನೀತಿಯಿಂದ

ಪ್ರಶ್ನೆ— ಸಮಾಜದ ಧಾರಣ ಪೋಷಣ ಯಾರಿಂದ ಆಗುತ್ತದೆ?

ಉತ್ತರ— ಕಡಿಮೆ ವೇತನದಲ್ಲಿ ಹೆಚ್ಚು ದುಡಿಯುವವರಿಂದ, ಕಡಿಮೆ ತೆಗೆದುಕೊಂಡು ಹೆಚ್ಚು ಕೊಡುವವರಿಂದ.

ಪ್ರಶ್ನೆ— ಸಂಪತ್ತು ಹೇಗೆ ನಾಶವಾಗುತ್ತದೆ?

ಉತ್ತರ— ಕಳವು, ಕುಡುಕತನ, ಕೋರ್ಟುಬಾಜಿ, ಕಾಯಿಲೆ ಮತ್ತು ಚಾರಿತ್ರ್ಯಭ್ರಷ್ಟತೆಯಿಂದ.

ಪ್ರಶ್ನೆ— ನಿಜವಾದ ಸಂಪತ್ತಿಗೆ ಆಧಾರ ಯಾರು?

ಉತ್ತರ— ಆರೋಗ್ಯವಂತ ಬಾಲಕರು, ನಿರೋಗಿ ಯುವಕ ಯುವತಿಯರು, ಶೀಲವಂತ ಸ್ತ್ರೀಯರು, ಸತ್ಯಾಗ್ರಹೀ ಪುರುಷರು, ಮತ್ತು ಉದ್ಯಮಶೀಲ ಮದುಕರು.

ಪ್ರಶ್ನೆ— ಸಂಪತ್ತು ಹುಟ್ಟುವದನ್ನೇ ಕೆಡಿಸುವವರು ಯಾರು?

ಉತ್ತರ— ಸೋಮಾರಿ ರೈತರು, ಅಪ್ರಾಮಾಣಿಕ ವ್ಯಾಪಾರಿಗಳು, ಲೋಭೀ ಶಿಕ್ಷಕರು, ಡಾಂಭಿಕ ಮದುಕರು, ದಯಾಹೀನ ಡಾಕ್ಟರರು, ಕೋರ್ಟು ವ್ಯವಹಾರಕ್ಕೆ ಉತ್ತೇಜನ ಕೊಡುವ ವಕೀಲರು.

ಪ್ರಶ್ನೆ— ದೇಶದ ವೈರಿ ಯಾರು?

ಉತ್ತರ— ಭೂಮಿ, ಧಾನ್ಯ ಮತ್ತು ನೀರು ಕಡಿಸುವವರು.

ಪ್ರಶ್ನೆ— ದೇಶವಾಘಾತ ಯಾರು?

ಉತ್ತರ— ವ್ಯಸನಿಗಳು, ನಿಷ್ಕಾರಣ ನಿದ್ದೆಗೆಡುವವರು, ಬಾಯಿರುಚಿಗೆ ತಿನ್ನುವವರು, ದುಂದುವೆಚ್ಚ ಮಾಡುವವರು, ಕ್ರೋಧಿಗಳು, ಸಾಲ ಮುಳುಗಿಸುವವರು, ಧನಲೋಭಿಗಳು.

(ಲೋಕ ಜೀವನ)

ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ರಜತಮಹೋತ್ಸವ

"ಜನಸಾಮಾನ್ಯರಿಗೂ ಪುರಾಣದ ಕಥೆಗಳ ನೆನಪನ್ನುಂಟುಮಾಡುವ ಯಕ್ಷಗಾನವು ಎಲ್ಲ ಕಾಲದಲ್ಲಿ ಸರ್ವರಿಗೂ ಸಂತೋಷವನ್ನುಂಟು ಮಾಡುವ ಕಲೆ. ಈ ಕಲೆಗಾಗಿ ಜೀವನವನ್ನೇ ಮುಡಿಪಾಗಿರಿಸಿದ ಕಲಾವಿದರಿಗೆ ಸಮಾಜ, ಸರಕಾರಗಳು ನೀಡುವ ಗೌರವ ಹೆಚ್ಚಬೇಕು" ಎಂದು ತಾ: 29.3.69ರಂದು ಕಾಸರಗೋಡಿನ ದೇಲಂಪಾಡಿಯಲ್ಲಿ ಜರಗಿದ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ರಜತ ಮಹೋತ್ಸವದ ಅಧ್ಯಕ್ಷ ಸ್ಥಾನದಿಂದ ಎಡ್ವೋಕೇಟ್ ಶ್ರೀ ಕಳ್ಳಿಗೆ ಮಹಾಬಲ ಭಂಡಾರಿ, ಎಂ.ಎಲ್.ಎ. ಅವರು ಹೇಳಿದರು. ಅವರು ಮುಂದುವರಿಸಿ ಸಂಘದ ಸ್ಥಾಪಕರೂ ಅಧ್ಯಕ್ಷರೂ ಆದ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಕಲಾಸೇವೆಯನ್ನು ಶ್ಲಾಘಿಸುತ್ತಾ "ಯಕ್ಷಗಾನಕ್ಕೆ ಅವರು ನೀಡಿದ ಮಾರ್ಗದರ್ಶನ ದೀರ್ಘಕಾಲ ಬಾಳಲಿ" ಎಂದು ಹಾರೈಸಿದರು.

ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಡಾ| ರಮಾನಂದ ಬನಾರಿಯವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಅತಿಥಿಗಳಿಗೆ ಹಾರಾರ್ಪಣೆ ಮಾಡಿ ಗೌರವಿಸಿದರು. ಕಳೆದ ಇಪ್ಪತ್ತೈದು ವರ್ಷಗಳ ಸಂಕ್ಷಿಪ್ತ ವರದಿಯನ್ನು ಶ್ರೀ ಯು. ಗೋವಿಂದ ಭಟ್ಟರು ಸಭೆಯ ಮುಂದಿರಿಸಿದರು. ಡಾ| ರಮಾನಂದ ಬನಾರಿ ಸಂದೇಶಗಳನ್ನು ಓದಿದರು.

ರಜತ ಮಹೋತ್ಸವವನ್ನು ಉದ್ಘಾಟಿಸುತ್ತ ಎಡ್ವೋಕೇಟ್ ಶ್ರೀಯುತ ಪಿ. ಕೆ. ಪೆರುಮಾಳ್ಳಾಯ, ಎಂ. ಎಲ್. ಎ. ಅವರು ಯಕ್ಷಗಾನದ ಮಹತ್ವವನ್ನು ವಿವರಿಸಿ ಈ ದೆಸೆಯಲ್ಲಿ ಶ್ರೀ ಕೀರಿಕ್ಕಾಡು ವಿಷ್ಣು ಭಟ್ಟರು ಮಾಡಿದ ಪ್ರಯತ್ನಕ್ಕೆ ಅಖಿಲ ಕರ್ನಾಟಕವೇ ಅವರಿಗೆ ಚಿರಋಣಿಯಾಗಿರಬೇಕೆಂದು ಹೇಳಿದರು.

"ಜನತೆಗೆ ಸಂತೋಷವನ್ನು ನೀಡುವುದೇ ಈಶ್ವರಪೂಜೆ" ಎಂದು ಹೇಳಿದ ಪ್ರಿನ್ಸಿಪಾಲ್ ಶ್ರೀ ಪಿಂಡಿಗೆ ಶ್ಯಾಮಭಟ್ಟರು 'ಬಳಲಿದ ಮನಸ್ಸಿಗೂ ಶರೀರಕ್ಕೂ ಆನಂದವನ್ನುಂಟುಮಾಡುವುದಕ್ಕಾಗಿ ದೇವತೆಗಳ ಕೋರಿಕೆಯಂತೆ ಹೇಗೆ ಬ್ರಹ್ಮನಿಂದ ಕಲೆ ಸೃಷ್ಟಿಯಾಯಿತು ಎನ್ನುವುದನ್ನು ಸ್ವಾರಸ್ಯವಾಗಿ ವಿವರಿಸಿ, ಯಕ್ಷಗಾನ ಕಲೆಯು ಜೀವನದ ಮೇಲೆ ಮಾಡುವ ಪರಿಣಾಮವನ್ನು ಮನೋಜ್ಞವಾಗಿ ಬಣ್ಣಿಸಿದರು.

ಕವಿ ಕಯ್ಯಾರ ಕಿಂಞಣ್ಣ ರೈಗಳು ಮಾತನಾಡಿ, "ಯಕ್ಷಗಾನವು ನಮ್ಮ ಜನತೆಗೆ ದೇವರು ಕೊಟ್ಟ ವರ, ಅದು ಭಕ್ತಿ, ಧರ್ಮ, ನೀತಿ, ಸತ್ಯಗಳನ್ನು ಬೋಧಿಸುವ ಸಾಧನ" ಎಂದು ವಿವರಿಸಿದರು. ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿಗಳ ವಿಚಾರದಲ್ಲಿ ತೆಂಕುತಿಟ್ಟಿಗೆ ಆಗುತ್ತಿರುವ ಅನ್ಯಾಯದ ಕುರಿತು ಅವರು ಪ್ರಸ್ತಾಪಿಸಿದರು. ಶ್ರೀ ಕೀರಿಕ್ಕಾಡು ಮಾಸ್ತರರಷ್ಟು ವಿಪುಲವಾಗಿಯೂ ವಿಸ್ತಾರವಾಗಿಯೂ ಯಕ್ಷಗಾನ ಕೃತಿಗಳನ್ನು ಬರೆದವರು ವಿರಳ, ಅವರೋರ್ವ ಕಲಾಯೋಗಿ, ತಾಪ್ಯ ತಪಸ್ವಿ, ಅವರ ಸಂಸ್ಥೆಗೆ ಕೇರಳ ಕಲಾಮಂಡಲದಂತೆ ಅಂತರಾಷ್ಟ್ರೀಯ ಯಶಸ್ಸು ಬರಲಿ" ಎಂದು ಹಾರೈಸಿದರು. ಸಭಿಕರ ಪರವಾಗಿ ವಿದ್ವಾನ್ ಕೊಳಂಬೆ ಪುಟ್ಟಣ್ಣ ಗೌಡರು ಸಂಘಕ್ಕೆ ಶುಭ ಕೋರಿದರು.

ಸಮಾರಂಭದ ತರುವಾಗಿ 'ಕೃಷ್ಣ ಸಂಧಾನ, ಭೀಷ್ಮ ಪರ್ವ' ಎಂಬ ಯಕ್ಷಗಾನ ಕೂಟ ಜರಗಿತು.

ಕುಮಾರಿ ಶಶಿಕಲಾ ಪುಷ್ಪಗಂಧಿನಿಯರ ಹಿನ್ನೆಲೆ ಸಂಗೀತದೊಂದಿಗೆ ಕಿಶೋರ ಚಂದ್ರಕಾಂತ ನೃತ್ಯಪ್ರದರ್ಶನ, ಶ್ರೀ ಯಸ್. ಗೋವಿಂದ ಭಟ್ಟರಿಂದ ಏಕಪಾತ್ರಾಭಿನಯ, ಮನಮೋಹನ ಬನಾರಿಯವರಿಂದ ಲಘುಸಂಗೀತ ಕಾರ್ಯಕ್ರಮಗಳು ನಡೆದವು.

. ಲಕ್ಷ್ಯ ಕೇಂದ್ರದಲ್ಲಿ ೩೦ ಕ್ಕಿಂತ ... ಹೆಚ್ಚು, ಇಳಿದಿದೆ. ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ ರಾಜ್ಯಗಳ ೨೦ ಗ್ರಾಮಗಳಲ್ಲಿ ಪ್ರಾಯೋಗಿಕ ಯೋಜನೆ ಕೈಗೊಳ್ಳಲಾಗಿದ್ದು, ಅಲ್ಲಿನ ಜನನ ಪ್ರಮಾಣ ಇಳಿಮುಖವಾಗಿರುವುದು ಗೋಚರವಾಗಿದೆ.

ಆದರೆ ಈ ಅಲ್ಪಸ್ವಲ್ಪ ಸಾಧನೆ ಅಭಿಮಾನಪಡುವಂತಹದೇನಲ್ಲ. ಇಷ್ಟೊಂದು ಪ್ರಚಾರ ನಡೆದ ಮೇಲೂ ಅದನ್ನು ಕಾರ್ಯಗತಗೊಳಿಸಿದವರ ಸಂಖ್ಯೆ ನಿರೀಕ್ಷಿಸಿದ ಮಟ್ಟದಲ್ಲಿಲ್ಲ. ಬರಿಯ ಕಾನೂನುಗಳಿಂದ ಜನಸಂಖ್ಯೆಯ ಸಮಸ್ಯೆಯನ್ನು ನಿಯಂತ್ರಿಸಲು ಅಸಾಧ್ಯ. ಸ್ವಪ್ರೇರಣೆಯಿಂದಲೇ ಎಲ್ಲವೂ ಸುಗಮವಾಗಿ ಸಾಗಲು ಸಾಧ್ಯ. ಯುವಜನಾಂಗ ೨೫ ವರ್ಷದೊಳಗೆ ಮದುವೆಯಾಗದಂತೆ ಸ್ವೇಚ್ಛೆಯಿಂದ ನಿರ್ಣಯ ಕೈಗೊಂಡರೆ ಕಾನೂನಿನಿಂದ ಸಾಧಿಸುವುದಕ್ಕಿಂತಲೂ ಉತ್ತಮ ಫಲ ಪಡೆಯಬಹುದಾಗಿದೆ. ಅಂತಹ ನಿರ್ಣಯದ ಸಫಲತೆಗೆ ಆತ್ಮಸಂಯಮ ಅತಿಮುಖ್ಯ. ಜೀವನದ ವ್ಯವಹಾರಗಳನ್ನು ನಿರ್ವಹಿಸುವಲ್ಲಿ ಆತ್ಮಸಂಯಮಕ್ಕಿಂತ ಉತ್ಕೃಷ್ಟವಾದ ನಿಯಮ ಬೇರೊಂದಿಲ್ಲ. ಅದನ್ನು ನಾವು ಸಿದ್ಧಿಸಿಕೊಂಡಂದೇ ನಮ್ಮ ಜೀವನ ಅರ್ಥಪೂರ್ಣವಾಗಬಲ್ಲುದು. ನಾವು ಗಳಿಸಿದ ಸ್ವಾತಂತ್ರ್ಯ ಸಾರ್ಥಕವಾಗಬಲ್ಲದು. ನಮ್ಮ ಕಾಲಮೇಲೆ ನಾವು ನಿಲ್ಲಲು ಕಲಿತಾಗಲೇ ರಾಮರಾಜ್ಯದ ಕನಸಿನ ಕೆಲ ಅಂಶ ನನಸಾಗಬಲ್ಲುದು.

ಸಿಂಡಿಕೇಟ್ ಬ್ಯಾಂಕ್
ಲಿ
ಮೈಸೂರು ರಾಜ್ಯದಲ್ಲಿ ಈ ಕೆಳಗಿನ ಸ್ಥಳಗಳಲ್ಲಿ
ಆರು ಹೊಸ ಶಾಖೆಗಳನ್ನು ತೆರೆಯಲಿದೆ.

15—4—1969ರಂದು

1. ಸೂಪರ್ ಮಾರ್ಕೆಟ್ ದಾಜಿಬಾ ಪೇಟೆ **ಹುಬ್ಬಳ್ಳಿ**
2. ಪೂನಾ-ಬೆಂಗಳೂರು ರೋಡ್ ವಿದ್ಯಾನಗರ **ಹುಬ್ಬಳ್ಳಿ**

17—4—1969ರಂದು

3. ಟಿ. ಪಿ. ಸಿ. ನಂ. 1048, ವಾರ್ಡ್ ನಂ. 2 ಜೈನ್ ಪೇಟೆ **ಚಿಕ್ಕೋಡಿ** (ಬೆಳ್ಗಾಂ ಜಿಲ್ಲೆ)
4. ಟಿ. ಪಿ. ಸಿ. ನಂ. 939, ವಾರ್ಡ್ ನಂ. 4 ದುರದುಂಡಿ ರೋಡ್ **ಮೂಡಲಗಿ** (ಬೆಳ್ಗಾಂ ಜಿಲ್ಲೆ)

18—4—1969ರಂದು

5. ಸವಣೂರು ಬಿಲ್ಡಿಂಗ್ ಗುರುವಾರ ಪೇಟೆ **ಗೋಕಾಕ** (ಬೆಳ್ಗಾಂ ಜಿಲ್ಲೆ)

21—4—1969ರಂದು

6. ಬಜಾರ್ ರೋಡ್ **ಮುರ್ಡೇಶ್ವರ** (ಉತ್ತರ ಕನ್ನಡ ಜಿಲ್ಲೆ)

ಯಾರೊಬ್ಬನೂ ಸಿಂಡಿಕೇಟ್ ಬ್ಯಾಂಕಿನಲ್ಲಿ ಬ್ಯಾಂಕ್ ಖಾತೆ ತೆರೆಯಲು ಅತಿ ಸಣ್ಣವನೆನಿಸಲಾರ,
ಯಾವ ಸ್ಥಳವೂ ಸಿಂಡಿಕೇಟ್ ಬ್ಯಾಂಕಿಗೆ ಸೇವೆಸಲ್ಲಿಸಲು ಅತಿ ಸಣ್ಣದೆನಿಸಲಾರದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ಲಿ
(ರಜಿಸ್ಟರ್ಡ್ ಆಫೀಸು: ಮಣಿಪಾಲ, ದಕ್ಷಿಣಭಾರತ)

"ಪ್ರತಿಯೊಂದು ಬ್ಯಾಂಕಿಂಗ್ ವ್ಯವಹಾರಕ್ಕೆ ಪ್ರತಿಯೋರ್ವನ ಬ್ಯಾಂಕ್"

ಸಾಧನ ಸಂಪತ್ತು	ಶಾಖೆಗಳು	ಶ್ರೀ ಟಿ. ಎ. ಪೈ
ರೂ. 140 ಕೋಟಿಗಳಿಗೂ ಮಿಕ್ಕಿ	260ಕ್ಕೂ ಮಿಕ್ಕಿ.	ಚೇಯರ್‌ಮೆನ್

ಸದ್ಗತಿಯ ಸಾಧನ

ಹೇ ಮಗನೆ ನೀ ಎನ್ನ ವನ ನಂದನದ ಕುಡಿಯು
ಬೆಳೆದು ಬೆಳಗಲು ಧನ್ಯ ಸಂಸ್ಕಾರ ಗುಡಿಯು
ನೀನೇ ಬಾಳಿನ ಬೆಳಕು ಸರ್ವ ಸಂಪತ್ತು
ಸದ್ಗತಿಯ ಸಾಧನವು ನಿನಗೇನು ಗೊತ್ತು!

ನೂತನ ಬಯಕೆ

ಹೇ ಸ್ವಾಮಿ ಈಗಿನದು ಆಟಂ ಯುಗವು
ಚಂದ್ರಲೋಕದ ಸುತ್ತು ಸಾಧಿಸಿದೆ ಜಗವು!
ಒಂಭತ್ತು ತಿಂಗಳಿನ ಹೊತ್ತು ಬೇಸತ್ತೆ
ಕೃತಕ ಉಪಕಾರವೇನಾದರೂ ಗೊತ್ತೆ?

—'ದೇವಕಿನಂದ' ಮಿಜಾರ್‌ನ

ಮಿಲಿಟರಿ ಇಂಜಿನಿಯರಿಂಗ್ ಕಾಲೇಜ್

ನಮ್ಮ ದೇಶದ ಇಂಜಿನಿಯರಿಂಗ್ ಶಿಕ್ಷಣ ರಂಗದಲ್ಲಿ ಆರಂಭದ ಕೆಲಸವನ್ನು ಮಿಲಿಟರಿ ಇಂಜನಿಯರುಗಳು ಮಾಡಿದ್ದಾರೆ. ಕಳೆದ ಶತಮಾನದ ಮಧ್ಯಕಾಲದಲ್ಲಿ ರೂರ್ಕಿ, ಮದ್ರಾಸ್ ಮತ್ತು ಪುಣೆಗಳಲ್ಲಿ ಸ್ಥಾಪಿತವಾದ ದೇಶದ ಮೂರು ಇಂಜನಿಯರಿಂಗ್ ಕಾಲೇಜುಗಳ ಮುಖ್ಯಾಧಿಕಾರಿಗಳು ಬಹಳ ಕಾಲದವರೆಗೆ ಮಿಲಿಟರಿ ಇಂಜನಿಯರುಗಳೇ ಆಗಿದ್ದರು. ಆದರೆ ಮಿಲಿಟರಿ ಇಂಜಿನಿಯರುಗಳಿಗೆ ತಮ್ಮದೇ ಆದ ಕಾಲೇಜೊಂದು ದೊರಕಿದ್ದು ೧೯೪೩ರಲ್ಲಿ. ದ್ವಿತೀಯ ಮಹಾಯುದ್ಧಕ್ಕಿಂತ ಪೂರ್ವದಲ್ಲಿ ಇಂಜಿನಿಯರಿಂಗ್ ದಳದ ಅಧಿಕಾರಿಗಳು ಊಲ್ವಿಚ್‌ದಲ್ಲಿನ ರಾಯಲ್ ಮಿಲಿಟರಿ ಅಕಾಡಮಿಯಲ್ಲಿ ಶಿಕ್ಷಣ ಪಡೆದು ಬರುತ್ತಿದ್ದರು. ೧೯೩೪ರಿಂದ ೧೯೩೯ರ ಅವಧಿಯಲ್ಲಿ ಡೆಹರಾಡೂನಿನಲ್ಲಿರುವ ಇಂಡಿಯನ್ ಮಿಲಿಟರಿ ಅಕಾಡಮಿಯಲ್ಲಿ ತರಬೇತಿ ಹೊಂದಿದ ಅಧಿಕಾರಿಗಳು ಮುಂದಿನ ಅಭ್ಯಾಸಕ್ಕಾಗಿ ರೂರ್ಕಿಯಲ್ಲಿರುವ ಥಾಮ್‌ಸನ್ ಕಾಲೇಜನ್ನು ಸೇರುತ್ತಿದ್ದರು. ದ್ವಿತೀಯ ಮಹಾಯುದ್ಧ ಪ್ರಾರಂಭವಾದ ಮೇಲೆ ರೂರ್ಕಿ, ಬೆಂಗಳೂರು ಮತ್ತು ಕರ್ಕಿ ಕೇಂದ್ರಗಳಲ್ಲಿ ಅಲ್ಪಾವಧಿಯ ಸೈನಿಕ ಮತ್ತು ಇಂಜನಿಯರಿಂಗ್ ಕೋರ್ಸುಗಳನ್ನು ಶುರುಮಾಡಲಾಯಿತು.

ಯುದ್ಧದ ಜ್ವಾಲೆ ಹಬ್ಬಿದಂತೆ ಮಿಲಿಟರಿ ಇಂಜನಿಯರುಗಳ ಸೇವೆಗಾಗಿ ಬೇಡಿಕೆ ಹೆಚ್ಚಾಯಿತು. ಪರಿಸ್ಥಿತಿಯ ಒತ್ತಡದಿಂದಾಗಿ ಮಿಲಿಟರಿ ಇಂಜಿನಿಯರರಿಗೆಂದು ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸುವದು ಅನಿವಾರ್ಯವಾಯಿತು. ಈ ರೀತಿ ೧೯೪೩ರಲ್ಲಿ ರೂರ್ಕಿ ನಗರದಲ್ಲಿ ದಿ ಸ್ಕೂಲ್ ಆಫ್ ಮಿಲಿಟರಿ ಇಂಜನಿಯರಿಂಗ್ ಸಂಸ್ಥೆ ಪ್ರಾರಂಭವಾಯಿತು. ಈ ಸಂಸ್ಥೆಯನ್ನು "ಕಾಲೇಜ್ ಆಫ್ ಮಿಲಿಟರಿ ಇಂಜನಿಯರಿಂಗ್" ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಈ ಕಾಲೇಜು ರಜತಮಹೋತ್ಸವವನ್ನು ಆಚರಿಸಿದೆ.

೧೯೪೮ರಲ್ಲಿ ಈ ಸಂಸ್ಥೆಯನ್ನು ಕರ್ಕಿ ಎಂಬ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಮಿಲಿಟರಿ ಇಂಜನಿಯರುಗಳ ಮೂಲ ವಿದ್ಯಾಪೀಠವಾಗಿ ಕರ್ಕಿ ಸಂಸ್ಥೆ ಇದುವರೆಗೆ ಸಹಸ್ರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದೆ. ಕಾಲೇಜು ಈಗ ವಿಸ್ತಾರವಾಗಿ ಹಬ್ಬಿದೆ. ಒಂದೇ ವೇಳೆಗೆ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳಿಗೆ ಇಲ್ಲಿ ತರಬೇತಿ ಸಿಗುವ ಸೌಲಭ್ಯಗಳಿವೆ. ಕಳೆದ ವರುಷ ಈ ಕಾಲೇಜು ಸುಮಾರು ನಾಲ್ಕು ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಸಮರ್ಥವಾಯಿತು. ಸೈನ್ಯದ ಇಂಜನಿಯರಿಂಗ್, ಸಿಗ್ನಲ್ ಹಾಗೂ ಇಲೆಕ್ಟ್ರಿಕಲ್ ಮತ್ತು ಇಂಜನಿಯರಿಂಗ್ ದಳಗಳಿಗೆಂದು ಈ ಕಾಲೇಜು ಮೂರು ವರ್ಷಗಳ ಪದವಿ ಇಂಜನಿಯರಿಂಗ್ ಕೋರ್ಸುಗಳನ್ನು ನಡೆಸುತ್ತದೆ. ಇಲ್ಲಿನ ಶಿಕ್ಷಣಕ್ರಮದಲ್ಲಿ ಪ್ರತ್ಯಕ್ಷ ಕೆಲಸದ ಜ್ಞಾನದ ಬಗ್ಗೆ ಹೆಚ್ಚು ಮಹತ್ವ ಕೊಡಲಾಗಿದೆ. ಈ ಕಾಲೇಜು ಉತ್ತಮ ಇಂಜನಿಯರುಗಳನ್ನಲ್ಲದೆ ಕಾರ್ಯಕ್ಷಮತೆಯ ಅಧಿಕಾರಿಗಳನ್ನೂ ತರಬೇತಿ ಕೊಟ್ಟು ಕಳಿಸಿದೆ.

ಪದವಿ ಇಂಜಿನಿಯರಿಂಗ್ ಕೋರ್ಸ್ ಅಲ್ಲದೆ, ಇಂಜಿನಿಯರಿಂಗ್ ದಳಕ್ಕಾಗಿ ಅನೇಕ ವಿಶಿಷ್ಟ ಬಗೆಯ ವರ್ಗಗಳನ್ನೂ ಅಧೀನ ದರ್ಜೆಯ ಜನರಿಗಾಗಿ ಡಿಪ್ಲೋಮಾ ಕೋರ್ಸುಗಳನ್ನು, ತರುಣ ಅಧಿಕಾರಿಗಳಿಗಾಗಿ ಮತ್ತು ಸೈನ್ಯದ ಇತರ ಸಿಬ್ಬಂದಿಗಾಗಿ ಫೀಲ್ಡ್ ಇಂಜಿನಿಯರಿಂಗ್ ಕೋರ್ಸುಗಳನ್ನು ಇಲ್ಲಿ ಕಲಿಸಲಾಗುವದು. ನೌಕಾ ಮತ್ತು ವಿಮಾನದಳದ ಸಿಬ್ಬಂದಿಗೆ ಬಾಂಬುಗಳ ಸಾಗಾಟದ ಬಗೆಗೂ ಇಲ್ಲಿ ತರಬೇತಿಯನ್ನು ಕೊಡಲಾಗುವದು. ೧೯೬೭ರಲ್ಲಿ ಸುಮಾರು ೧೭೦ ವಿವಿಧ ಕೋರ್ಸುಗಳ ಅಧ್ಯಯನಕ್ಕೆ ಇಲ್ಲಿ ಏರ್ಪಾಟು ಮಾಡಲಾಗಿತ್ತು. ಸಿವಿಲ್, ಸ್ಟ್ರಕ್ಚರಲ್, ಇಲೆಕ್ಟ್ರಿಕಲ್ ಮತ್ತು ಮ್ಯಾಕ್ಯಾನಿಕಲ್ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಸ್ನಾತಕೋತ್ತರ ಪದವಿ ಅಭ್ಯಾಸ ನಡೆಸಲು ಪುಣೆ ವಿಶ್ವವಿದ್ಯಾನಿಲಯವು ಈ ಕಾಲೇಜಿಗೆ ಅನುಮತಿ ನೀಡಿದೆ. ಸೈನಿಕ ವಿಷಯದ ಸ್ನಾತಕೋತ್ತರ ತರಗತಿಯನ್ನೂ ಈ ಕಾಲೇಜು ನೀಡಲು ಸಮರ್ಥವಾಗಿದೆ. ಆಧುನಿಕ ತಂತ್ರಗಳ ಬಗೆಗೂ ಭವಿಷ್ಯದ ಬೇಕು-ಬೇಡಗಳ ಬಗೆಗೂ ಈ ಕಾಲೇಜು ವಿಶೇಷಲಕ್ಷ್ಯವಿತ್ತಿದೆ.

ಕಾಲೇಜಿನಲ್ಲಿ ಕಾಂಬಟ್, ಸಿವಿಲ್, ಇಲೆಕ್ಟ್ರಿಕಲ್-ಮ್ಯಾಕ್ಯಾನಿಕಲ್ ಇಂಜನಿಯರಿಂಗ್ ಹಾಗೂ ಸಾರಿಗೆ ವಿಭಾಗಕ್ಕೆ ಸಂಬಂಧಿಸಿದ ವಿಭಾಗ ಹೀಗೆ ನಾಲ್ಕು ವಿಭಾಗಗಳು ಕೆಲಸ ಮಾಡುತ್ತಿವೆ. ಸಾರಿಗೆ ವಿಭಾಗದ ಅಭ್ಯಾಸ ಘಟಕವು ಹದಿನೈದು ಮೈಲು ಉದ್ದದ ರೇಲ್ವೆ ಮಾರ್ಗವನ್ನು ಪಡೆದಿದ್ದು, ಲೋಕೋಮೋಟಿವ್ ಇಂಜನ್‌ಗಳನ್ನೂ ಹೊಂದಿದೆ. ಇಂಜಿನಿಯರಿಂಗ್ ದಳಕ್ಕೆ ಬೇಕಾದ ಅನೇಕ ಸಂಶೋಧನಾ ಕಾರ್ಯಯೋಜನೆಗಳನ್ನೂ ಈ ಕಾಲೇಜು ಕೈಗೆತ್ತಿಕೊಂಡಿದೆ.

ಮುಳಾ ನದಿಯ ತಟದಲ್ಲಿ ಈ ಕಾಲೇಜು ಹಬ್ಬಿದೆ. ಸೇತುವೆ ನಿರ್ಮಾಣ ಮತ್ತು ಜಲಪರ್ಯಟನ ಮುಂತಾದ ವಿಷಯಗಳಲ್ಲಿ ತರಬೇತಿ ನೀಡಲು ಈ ನದಿಯಿಂದ ಬಹು ಪ್ರಯೋಜನವಾಗಿದೆ. ಸೈನ್ಯದ ಶ್ರೇಷ್ಠ ಇಂಜನಿಯರಿಂಗ್ ಅಧಿಕಾರಿಗಳೇ ಈ ಕಾಲೇಜಿನ ಮುಖ್ಯಸ್ಥರೆಂದು ಮೊದಲಿನಿಂದಲೂ ನೇಮಕಹೊಂದಿದ್ದಾರೆ. ತರಬೇತಿ ಕಾಲದಲ್ಲಿ ಪ್ರತಿಯೊಂದು ವಿಷಯದ ಬಗೆಗೂ ಸೂಕ್ಷ್ಮ ಗಮನವಿತ್ತು ತರಬೇತಿ ಶ್ರೇಷ್ಠ ಮಟ್ಟದ್ದಾಗುವಂತೆ ಎಚ್ಚರ ವಹಿಸಲಾಗಿದೆ.

ಕಾಲೇಜಿನಿಂದ ಹೊರಬಂದ ಇಂಜನಿಯರುಗಳು ಮಿಲಿಟರಿ ಇಂಜಿನಿಯರಿಂಗ್ ಸೇವೆಯಲ್ಲಿರಬಹುದು, ರಕ್ಷಣಾ ಕಾರ್ಖಾನೆಗಳನ್ನು ಕಟ್ಟುತ್ತಿರಬಹುದು ಅಥವಾ ಅವುಗಳ ಉಸ್ತುವಾರಿ ನೋಡಿಕೊಳ್ಳುತ್ತಿರಬಹುದು. ಈ ಇಂಜಿನಿಯರುಗಳು ಸಲ್ಲಿಸುತ್ತಿರುವ ಉತ್ತಮ ಸೇವೆ ಅವರ ಕಾಲೇಜು ನೀಡಿದ ಉತ್ತಮ ತರಬೇತಿಗೆ ಸಾಕ್ಷಿಯಾಗಿದೆ. ಈ ಕಾಲೇಜಿನಲ್ಲಿ ಶಿಕ್ಷಣ ಪಡೆದ ಹಲವಾರು ಇಂಜನಿಯರುಗಳು ಗಡಿಪ್ರದೇಶದ ರಸ್ತೆ ನಿರ್ಮಾಣ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಜಗತ್ತಿನಲ್ಲಿಯೇ ದುರ್ಗಮವಾದ ಪ್ರದೇಶಗಳಲ್ಲಿ ಹೊಸ ರಸ್ತೆಗಳನ್ನು ರಚಿಸುವಲ್ಲಿ ಮಗ್ನರಾಗಿದ್ದಾರೆ. ಈ ಕಾಲೇಜಿನ ಇನ್ನೂ ಹಲವಾರು ಇಂಜನಿಯರುಗಳು ಸರ್ವೇ ಆಫ್ ಇಂಡಿಯಾ ವಿಭಾಗದಲ್ಲಿ ಮಹತ್ವದ ಹುದ್ದೆಗಳನ್ನು ಅಲಂಕರಿಸಿ ಉತ್ತರ ಭಾರತದ ಪರ್ವತಮಯ ಪ್ರದೇಶಗಳ ನಕ್ಷೆ ತಯಾರಿಸುವಲ್ಲಿ ನಿರತರಾಗಿದ್ದಾರೆ. ಯುದ್ಧ ಕಾರ್ಯಾಚರಣೆಯ ಸಮಯದಲ್ಲಿ ಇರಬೇಕಾದ ಕಾರ್ಯಸಾಮರ್ಥ್ಯವನ್ನೂ ಈ ಇಂಜಿನಿಯರುಗಳು ಪಡೆದಿದ್ದಾರೆ. ಶತ್ರುಗಳು ಎರಬಂದಾಗ ಈ ಇಂಜನಿಯರುಗಳು ಸಿಡಿಮದ್ದುಗಳನ್ನು ಹಾರಿಸಿ ಸೇತುವೆಗಳನ್ನು ಉರುಳಿಸಬಲ್ಲರು ಅಥವಾ ನಮ್ಮ ರಕ್ಷಣಾ ಪಡೆಗಳು ಮುಂದುವರಿದಾಗ ಬಿದ್ದ ಸೇತುವೆಯನ್ನು ಶೀಘ್ರದಲ್ಲಿ ಮರಳಿ ರಚಿಸಬಲ್ಲರು; ಹೊಸ ವಿಮಾನ ಮತ್ತು ಹೆಲಿಕಾಪ್ಟರ್ ನಿಲ್ದಾಣಗಳನ್ನು ಸೃಜಿಸಬಲ್ಲರು. ಇಂಜನಿಯರಿಂಗ್ ಕ್ಷೇತ್ರದ ಯಾವ ಕೆಲಸವೂ ನಮ್ಮ ಸೈನ್ಯದ ಇಂಜನಿಯರಿಂಗ್ ಅಧಿಕಾರಿಗಳಿಗೆ ನೀಗದ ಕೆಲಸವಲ್ಲ. ಬೇಕಾದ ವೇಳೆಗೆ ಅವರು ಸಿದ್ಧರು. ಅವರು ಇಟ್ಟುಕೊಂಡಿರುವ ಧ್ಯೇಯ ಮಂತ್ರದ ಹೆಸರು 'ಸರ್ವತ್ರ'. ಆ ಹೆಸರು ಸಾರ್ಥಕವಾಗುವ ರೀತಿಯಲ್ಲಿಯೇ ಅವರು ಕೆಲಸ ಮಾಡುತ್ತಿದ್ದಾರೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 204/1968 I. A. 1/1968.

ಕೃಷ್ಣ ಕಾಮಂಡಿರ — ವಾದಿ, ಅರ್ಜಿದಾರರು

ಮತ್ತು

ಮಹಾಬಲ ಕಾಮಂಟ ಸಹಾ— ಪ್ರತಿವಾದಿಗಳು, ಎದುರು.

ಇವರೊಳಗೆ

ಈ ಮೊಕದ್ದಮೆಯ 1ನೇ ಎದುರು ಮಹಾಬಲ ಕಾಮಂಟ, ಮಂಕಮ್ಮ ಕಾಮಂಟರ ಮಗ, ಕಾರ್ಕಳ ತಾಲ್ಲೂಕು ಹಿರ್ಗಾನ ಗ್ರಾಮದ ಪುತ್ತುಬೈಲು ಎಂಬಲ್ಲಿರುವವರಿಗೆ ತಿಳಿಸುವುದೇನೆಂದರೆ :—

ಮೇಲ್ಕಂಡ ಡಿಕ್ರಿಯಲ್ಲಿ ಜಪ್ತಿ ಮಾಡಿದ ಸ್ವತ್ತಿಗೆ ಸಂಬಂಧಿಸಿ ಅರ್ಜಿದಾರರು ದಾಖಲು ಮಾಡಿದ ಮೇಲಿನ I. A. 1/68 ವಿಚಾರಣೆ ಬಗ್ಗೆ 12.6.69ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10—30 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಸದ್ರಿ ವ್ಯವಹಾರ ಏಕಪಕ್ಷವಾಗಿ ತೀರ್ಮಾನವಾಗಲಾದೀತು.

(By order of the Court.)

N. M. Adyanthaya,
Advocate for Petitioner.

Karkala, 11—4—69.

ಕೆಸರಿಲ್ಲದಲ್ಲಿ ಇಳಿಯಬಾರದೇಕೆ?

(ನಾಲ್ಕನೇ ಪುಟದಿಂದ)

ಕ್ಕೆ ಗುರಿಮಾಡಿಯೇ ಬಿಟ್ಟ...."

"ಅಂದರೆ, ನೀವನ್ನೋದೇನು? ಇಂದಿರಮ್ಮ ಮುರಾರ್ಜಿಯನ್ನು ವಿಚಾರಣೆಗೆ ಗುರಿಪಡಿಸಬೇಕೂಂತ.'

'ಹಾಗಲ್ಲ, ಕೆಸರಿಲ್ಲದಲ್ಲಿ ಇಳಿಯಲೇಕೆ ಹೆದರಬೇಕು?"

"ಅದೂ ಹೌದೂನ್ನಿ. ನೀವಂದಂತೆ ಪರಿಶುದ್ಧ ಹೃದಯದವರಿಗೇ ಧಾಷ್ಟ್ರ್ಯ ಹೆಚ್ಚು. ಪ್ರಾಮಾಣಿಕರಿಗೆ ಸೇವಾ ಮನೋಭಾವನೆಗೆ ಈಗ ಅವಕಾಶವಿಲ್ಲ..."

"ಸತ್ಯವಂತರಿಗಿದು ಕಾಲವಲ್ಲಾಂತ ದಾಸರು ಹಿಂದೆಯೇ ಘೋಷಿಸಿದ್ದಾರೆ.."

"ಈಗ ಸತ್ಯವಂತರು ಯಾರಂತ?"

"ನಾನ್...."

"ಬರೀ ಸ್ವಾರ್ಥ...."

"ಏನ ?...."

"ಹಾಗೆ ಬನ್ನಿ ಮತ್ತೆ..."

"ಮತ್ಯಾಕೆ? ಈಗಲೇ...."

"ಹಲ್ಲಾಂ—"

—ಗೋರಾ.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 28337, 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸಂಗ್ರಾಹ್ಯ ಸಂಕಲನಗಳು

ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಕಂಚಗನ್ನಡಿ ಯು	2—00
ಮಧುವನ	3—00
ಪುಷ್ಪಾರ್ಪಣ	2—00
ಸರಸ್ವತಿ	1—50
ವಿಚಿತ್ರ ಕಳ್ಳಪೇಟೆ	1—50

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪರದೆಯ ಹಿಂದೆ ಕೋಕಿಲೆ !

(ಎರಡನೇ ಪುಟದಿಂದ)

ಮಾಡಿಕೊಂಡು ಟ್ಯಾಕ್ಸಿಯಲ್ಲಿ ಹಾವರಾ ಬ್ರಿಡ್ಜ್‌ನ ಮುಖವಾಗಿ ಬರುತ್ತಾ ಇದ್ದೆವು. ಇಬ್ಬರಲ್ಲೂ ಸ್ವಲ್ಪ ಹೊತ್ತು ಮೌನ. ನಾನು ಮಧ್ಯೆ ಮೌನವನ್ನು ಮುರಿಯುತ್ತಾ "ಸುಲೇಖಾ! ನಾನು ನಿನ್ನನ್ನು ಮದುವೆಯಾಗಲು ಬಯಸುತ್ತೇನೆ" ಎಂದು ಅಕಸ್ಮಾತ್ತಾಗಿ ಕೇಳಿದೆ."

"ಐಯಾಮ್ ಸಾರಿ ಜಗನ್! ವೇಣು ಚಟರ್ಜಿಯವರಿಗೆ ನಾನು ಮಾತು ಕೊಟ್ಟಿದ್ದೇನೆ...." ಎಂದಳು. ನನ್ನಿಂದ ಮತ್ತೆ ಮಾತು ಹೊರಡಲಿಲ್ಲ; ಸುಮ್ಮನಾದೆ. ಅದರ ನಂತರ ಎರಡು ತಿಂಗಳ ವರೆಗೂ ನಾವು ಸೇರುತ್ತಲೇ ಇದ್ದೆವು. ಆದರೆ ಮದುವೆಯ ಪ್ರಸ್ತಾಪ ಒಬ್ಬರೂ ಎತ್ತಲಿಲ್ಲ. ಆ ವಿಷಯ ಮರೆಯಾಗತೊಡಗಿತು. ನಾನು ಕಲ್ಕತ್ತಾ ಬಿಟ್ಟು ಆಗ್ರಾಕ್ಕೆ ನಡೆದೆ. ಮುಂದೆ ನನ್ನ ಮದುವೆ ಸುಜಾತಾಳ ಜೊತೆ—

ನನ್ನ ಜೀವನ ಚಕ್ರ ಉರುಳತೊಡಗಿತು.

ಹತ್ತು ನಿಮಿಷದಲ್ಲಿ ನಾನು ಬಟ್ಟೆಗಳನ್ನು ಧರಿಸಿಕೊಂಡು ತಯಾರಾದೆ ಮತ್ತು ಮೋಟಾರನ್ನು ತೆಗೆದುಕೊಂಡು ವಿಮಾನ ನಿಲ್ದಾಣವನ್ನು ತಲುಪಿದೆ. ಅಷ್ಟೊತ್ತಿಗೆ ಮಳೆ ಸ್ವಲ್ಪ ಕಡಿಮೆಯಾಗಿತ್ತು. ಮೋಟಾರನ್ನು ಹೊರಗೆ ನಿಲ್ಲಿಸಿ ಒಳ ನಡೆದೆ.

ಸುಲೇಖಾ ಚಹ ಕುಡಿಯುತ್ತಿದ್ದಳು. ಅವಳು ನನ್ನನ್ನು ನೋಡುತ್ತಲೇ "ಹಲೋ ಜಗನ್!" ಎಂದಳು. ಸುಲೇಖಾ ಮೊದಲಿಗಿಂತ ದಪ್ಪವಾಗಿದ್ದಳು. ವ್ಯಾಪಸೇಬಲ್ ಸಹ! ನಾನು ಅವಳ ಹತ್ತಿರ ಹೋಗಿ ಕುಳಿತೆ. ಸುಂದರ ಉಡುಪಿನಲ್ಲಿ ಅವಳು ಬಹಳ ಸ್ಮಾರ್ಟ್ ಆಗಿ ಕಾಣುತ್ತಿದ್ದಳು. ಅವಳ ಮುಂಗುರುಳು ಗಾಳಿಗೆ ಅಲುಗುತ್ತಾ ಗಲ್ಲಕ್ಕೆ ಮುತ್ತಿಡುತ್ತಿದ್ದವು. ಆ ದಿನ ಇದೇ ಸುಲೇಖಾಳನ್ನು ನಾನು ಪಡೆಯಬೇಕೆಂಬ ಬಯಕೆ! ಈಗ ಅವಳು ಬೇರೆಯವರ ಹೆಂಡತಿಯಾಗಿದ್ದಾಳೆ. ಅವಳ ಬಗ್ಗೆ ಏನನ್ನೂ ಯೋಚಿಸುವ ಹಾಗಿಲ್ಲ.

"ಏನು ಯೋಚಿಸುತ್ತಿರುವೆ ಜಗನ್? ನೀನೇನಾದರೂ ಬದಲಾವಣೆ ಹೊಂದಿದ್ದೀಯೇ?" ಎಂದ ನನ್ನ ಕಣ್ಣೊಡೆದು ಕೇಳಿದಳು.

"ಹಾಂ!" ಎಂದು ಇಷ್ಟೆ ಉತ್ತರಿಸಿದೆ. ಸುಲೇಖಾ ಒಬ್ಬ ಹುಡುಗನನ್ನು ಕರೆದು ಚಹಕ್ಕೆ ಆರ್ಡರ್ ಕೊಟ್ಟಳು.

"ನಿನ್ನ ಪ್ರೋಗ್ರಾಮ್ ಏನು? ಹೇಗೆ?" ಎಂದು ನಾನು ಕೇಳಿದೆ.

"ಫತಹ್‌ಪುರ ಶಿಕ್ರಿ, ಫೋರ್ಟ್, ಎತ್ಮಾದೌಲ್ ಮುಂತಾದುವುಗಳನ್ನು ನೋಡಿ ನಮ್ಮ ಪ್ರವಾಸ ತಾಜಮಹಲ್ ಕಡೆಗೆ ಅನಂತರ ರಾತ್ರಿನೇ ದೆಹಲಿಗೆ ಹಿಂತಿರುಗುವುದು" ಎಂದು ವಿನಂತಿಸಿದಳು.

"ರಾತ್ರಿಗೇ ದೆಹಲಿಗೆ ಹಿಂತಿರುಗುವುದೇ? ಆದರೆ ದೆಹಲಿಯ ಪ್ಲೇನ್ ಇಲ್ಲಿಂದ ನಾಲ್ಕು ಘಂಟೆಗೇನೇ ಹೊರಡುವುದಲ್ಲ, ಅಷ್ಟರಲ್ಲಿ ತಾಜಮಹಲ್..."

ಮಧ್ಯದಲ್ಲಿ ತಡೆದು "ನಾವು ಪ್ಲೇನಿನಲ್ಲಿ ಅಲ್ಲ ಹೋಗುವುದು, ಮೋಟಾರಿನಲ್ಲಿ" ಎಂದಳು.

"ಏನು ಹೇಳಿದೆ? ಮೋಟಾರಿನಲ್ಲಿ ನೀನೊಬ್ಬಳೇ ಹೋಗುವೆಯಾ?"

"ಇಲ್ಲ ವೇಣುವಿನ ಜೊತೆ. ಅವರು ನಾಲ್ಕು ಗಂಟೆಗೇ ಇಲ್ಲಿಗೆ ಬರುವರು. ಅವರಿಗೆ ಯುನಿವರ್ಸಿಟಿಯಲ್ಲಿ ಸ್ವಲ್ಪ ಕೆಲಸವಿತ್ತು. ದೆಹಲಿಯಲ್ಲಿ ಉಳಿದರು. ಕೆಲಸ ಮುಗಿದ ನಂತರ ನನ್ನನ್ನು ಕರೆದೊಯ್ಯಲು ಇಲ್ಲಿಗೆ ಬರುವರು."

"ಗುಡ್! ಹಾಗಾದರೆ ಸರಿ" ಎಂದಿಷ್ಟೇನೋ ಹೇಳಿದೆ. ಆದರೆ ವೇಣುವಿನ ಹೆಸರು ನನ್ನ ಕಿವಿಗೆ ಬೀಳುತ್ತಲೇ ಆ ಸಮಾಚಾರ ನನ್ನನ್ನು ನಿರಾಶೆಗೊಳಿಸಿತು. ಏಕೋ ನನಗೆ ಗೊತ್ತಿಲ್ಲ!

ಶಿರೋಜಿನಲ್ಲಿ ಮೊದಲೇ ರೂಮ್ ರಿಸರ್ವ್ ಮಾಡಲಾಗಿತ್ತು. ಆದ್ದರಿಂದ ನಾವು ನೇರವಾಗಿ ಅಲ್ಲಿಗೇ ತಲುಪಿದೆವು. ಹೋಗುತ್ತಲೇ ಸುಲೇಖಾ ಉಪಹಾರ ಸ್ವೀಕರಿಸಿದಳು.

"ಮೊದಲು ಫತೆಪುರದ ಶಿಕ್ರಿಗೆ ಹೋಗೋಣ!" ಎಂದು ಮೊದಲಿಟ್ಟಳು ಸುಲೇಖಾ. ನಾನು ಒಪ್ಪಿದೆ. ಹೋಗುವುದಕ್ಕೆ ಮುಂಚೆ ನಾನು ಟೆಲಿಫೋನ್ ಮಾಡಿದೆ. ಆದರೆ ಅಲ್ಲಿಂದ ಯಾವ ಉತ್ತರವೂ ಸಿಗಲಿಲ್ಲ.

ಟ್ಯಾಕ್ಸಿಯಲ್ಲಿ ತಿರುಗಿ ತಿರುಗಿ ತಾಜಮಹಲನ್ನು ತಲುಪಿದೆವು. ಅಲ್ಲಿಗೆ ಹೋಗುವಷ್ಟರಲ್ಲಿ ಸುಲೇಖಾ ಬಹಳ ಸುಸ್ತಾಗಿದ್ದಳು. ಹೇಳಬೇಕೆಂದರೆ ಫೋರ್ಟಿನ ಮೆಟ್ಟಿಲುಗಳನ್ನು ಹತ್ತಲೂ ಬೇಡ, ಬೇಡ! ನಾವು ಇಷ್ಟೊಂದು ಹತ್ತಲಾರೆ ಎನ್ನುವಂತಾಗಿದ್ದಳು.

ನಾನೆ ಒತ್ತಾಯಪಡಿಸಿದ ಮೇಲೆ ಹತ್ತಿದರು. ತಾಜಮಹಲಿನ ಹಸಿರು ಹುಲ್ಲಿನ ಮೇಲೆ ಕುಳಿತುಕೊಳ್ಳುತ್ತಾ "ಸಾಕಾಗಿ ಹೋಯಿತು! ನಾನು ಇನ್ನೆಲ್ಲಿಗೂ ಹೋಗಲಾರೆ; ನನ್ನನ್ನು ಹೋಟೆಲಿಗೆ ತಲುಪಿಸಿಬಿಡು; ಬಹಳ ಉಪಕಾರವಾಗುತ್ತೆ" ಎಂದು ಹೇಳಿದಳು.

"ಏಕೆ ಅಷ್ಟು ಸುಸ್ತಾಯಿತೆ?" ಎಂದೆ.

"ಹೌದು" ಎಂದು ತಲೆಹಾಕಿದಳು.

ಅಷ್ಟು ಹೊತ್ತಿಗೆ ವೇಣು ಬಂದರು. ಮೂರೂ ಜನ ಕೂಡಿ ರೂಮಿನೊಳಗೆ ನಡೆದೆವು. ಸುಲೇಖಾ ಸೋಫಾದ ಮೇಲೆ ಒರಗಿದಳು. ವೇಣು ಹೊರಗೆ ಬಂದು ನನ್ನ ಜೊತೆ ಕುಳಿತು ಆಗ್ರಾದ ಹವಾಗುಣ, ನನ್ನ ನೌಕರಿಯ ಬಗ್ಗೆ ಪ್ರಶ್ನಿಸುತ್ತಾ ಬಹಳ ಹೊತ್ತು ಮಾತನಾಡಿದರು.

ನಾನು ಸಹ ಬಳಲಿದ್ದ ಕಾರಣ ವೇಣುವಿನಿಂದ ಅನುಮತಿ ಪಡೆದು ಕ್ವಾಲಿಟಿಗೆ ಹೋದೆ. ಬರುವಾಗ ಸುಲೇಖಾಳನ್ನು ಕಾಣದೆ ಬಂದೆ. ಆಗ ಅವಳು ವಿಶ್ರಾಂತಿ ಪಡೆಯುತ್ತಿದ್ದಳು. ನಾನು ಮನೆ ತಲುಪಿದಾಗ ಒಂಭತ್ತು ಘಂಟೆ.

"ನಾನು ಟೆಲಿಫೋನ್ ಮಾಡಿದ್ದೆ. ಆದರೆ ನೀನು ರಿಸೀವ್ ಮಾಡಲಿಲ್ಲ' ಎಂದು ಕೊಠಡಿಯನ್ನು ಪ್ರವೇಶಿಸುತ್ತಲೇ ಸುಜಾತಳನ್ನು ಕೇಳಿದ.

ಸುಜಾತಾ ಕೇಳಿಸಲಿಲ್ಲವೇನೋ ಅನ್ನುವಂತೆ ಸುಮ್ಮನಿದ್ದಳು. ಆ ರಾತ್ರಿ ಹಾಗೆ ಕಳೆಯಿತು.

'ಮಾರನೇ ದಿನ ಮುಂಜಾನೆ ಏಳೂವರೆಗೆ ದೆಹಲಿಯಿಂದ ಅವಳ ಸಹೋದರನ ಡ್ರೈವರ್ ಬಂದಿದ್ದನ್ನು ನಾವು ನೋಡಿದೆ, ಎಂಟು ಹೊಡೆದು ಹದಿನೈದು ನಿಮಿಷಕ್ಕೆ ಮೋಟಾರನ್ನು ಹೊರಗೆ ತರುತ್ತಲೂ ನೋಡಿದೆ! ಎಂಟು ಹೊಡೆದು ಇಪ್ಪತ್ತು ನಿಮಿಷಕ್ಕೆ ಆಗಲೇ ಇಲ್ಲ.

ಆ ದಿನದಿಂದ ಒಂದು ವಾರ ಹೀಗೆ ಕಳೆಯಿತು. ಅವಳೂ ಬರಲಿಲ್ಲ. ಮೋಟಾರನ್ನೂ ಹಿಂದಕ್ಕೆ ಕಳುಹಿಸಲಿಲ್ಲ! ನಿರಾಶನಾಗಿ ಕೊನೆಗೆ ದೆಹಲಿಯ ನಂಬರನ್ನು ಹುಡುಕಿದೆ. ನನ್ನ ಅದೃಷ್ಟ ಚೆನ್ನಾಗಿತ್ತು. ಸ್ವತಃ ಸುಜಾತಾನೇ ರಿಸೀವ್ ಮಾಡಿದಳು.

"ಸುಜೀ! ಹೇಳು ಹೇಗಿದ್ದಿ? ಏನು ಸಮಾಚಾರ? ಬರ ಪೆಯತ ಇಲ್ವೊ? ನೀನೂ ಬರಲಿಲ್ಲ, ಮೋಟಾರನ್ನೂ ಕಳುಹಿಸಲಿಲ್ಲ!" ಎಂದು ಕೇಳಿದೆ.

"ಸಾರಿ! ನಾನು ಮೋಟಾರಿನ ಸಮಾಚಾರ ಮರೆತೇ ಬಿಟ್ಟಿದ್ದೆ. ಈ ದಿನ ಕಳುಹಿಸಲೇನು?" ಎಂದಳು.

"ಅರೇ! ನೀನು ಬರುವುದಿಲ್ಲವೇ? ಇನ್ನು ಎಷ್ಟು ದಿನ ಕಳೆಯುತ್ತಿ?"

"ಕ್ಷಮಿಸಿದರೆ ಬರುವೆನು."

"ವೆಲ್ ಅಂಡ್ ಗುಡ್! ಎಸ್........ ಸರೀನಾ?"

"ಹಾಂ, ಸರಿ."

"ಆದರೆ, ಇದೇಕೆ ಈ ಬಂಧನ ಗೊತ್ತಾಗಲಿಲ್ಲವಲ್ಲ?"

'ನಾನು ಆಗ್ರಾಕ್ಕೆ ಬಂದಾಗ— ಆಲ್ ಇನ್ ಪರ್ಸನ್' ಎಂದಳು.

"ಬರುವುದು ಯಾವಾಗ?"

"ಇದೇ ಊಟ ಮಾಡಿ ಹೊರಟೆ' ಎಂದು ಹೇಳಿ ರಿಸೀವರನ್ನು ಕೆಳಗಿಟ್ಟಳು.

"ಇಷ್ಟು ಬೇಗ ಅವಳು ಒಪ್ಪಿ ಆಗ್ರಾಕ್ಕೆ ಹಿಂದಿರುಗುವುದು ನನ್ನನ್ನು ಆಶ್ಚರ್ಯಗೊಳಿಸಿತು.

ಅವಳು ಬಂದಾಗ ಆರುವರೆ. ಮೋಟಾರಿನಿಂದ ಇಳಿದು ಒಳಗೆ ನಡೆದು ಬಂದಾಗ; ಇಲ್ಲಿ ಎಲ್ಲಿ ಹೊರಗೆ ಐದು ನಿಮಿಷ ಹೊರಗಿದ್ದವಳು ಬಂದಳೇನೋ ಅನ್ನುವ ಹಾಗೆ ಬಂದಳು.

ರಾತ್ರಿ ಡೈನಿಂಗ್ ಟೇಬಲ್ಲಿನ ಮುಂದೆ ಕುಳಿತಿದ್ದಾಗ

"ನಿಮಗೆ ಗೊತ್ತಾಗಲಿಲ್ಲವೇನು ನಿಮ್ಮ ಅಪರಾಧ ಏನೆಂದು?" ಎಂದು ಪ್ರಶ್ನಿಸಿದಳು.

"ಇಲ್ಲ" ಎಂದು ತಲೆಯಲ್ಲಾಡಿಸಿದೆ.

"ನಿನ್ನೆ ನನ್ನ ಸಹೋದರ ಸುಲೇಖಾಳನ್ನು ಡಿನ್ನರಿಗೆ ಆಹ್ವಾನಿಸಿದ್ದ."

....

"ಅವಳು ನಿಮ್ಮ ಮೇಲೆ ಬಹಳ ಸಿಟ್ಟಾಗಿದ್ದಾಳೆ. ನೀವು ಬಲವಂತವಾಗಿ ಅವಳನ್ನು ತಿರುಗಾಡಿಸಿಕೊಂಡು ಬಂದಿರಂತೆ."

"ಓ ಮೈ ಗಾಡ್! ಇಷ್ಟೊಂದು ಮಾತ್ರ ನೆನಪಿರಲಿ ನಿಮ್ಮ ಒಂದು ದಿನದ ಪ್ರೇಯಸಿ ಅಷ್ಟು ಜಬರ್ದಸ್ತ್!"

"ನನ್ನ ಅಪರಾಧ ಏನ ಅಂತ ನೀವು ಹೇಳಲೇ ಇಲ್ಲ" ಎಂದು ಮತ್ತೆ ಪ್ರಶ್ನಿಸಿದೆ.

"ಇದೇ ನೀವು ಅವಳನ್ನು ನನಗೆ ಪರಿಚಯಮಾಡಿ ಕೊಡಲಿಲ್ಲ! ತಮ್ಮ ಸುಲೇಖಾ, ಯಾರನ್ನು ರಿಸೀವ್ ಮಾಡಲು ಏರೋಡ್ರೋಮ್‌ಗೆ ಹೋಗಿದ್ದಿರೋ, ಯಾರ ಜೊತೆ ಆಗ್ರಾವನ್ನೆಲ್ಲಾ ಸುತ್ತಾಡಿದಿರೋ, ಯಾರ ಜೊತೆ ನೀವು ದೆಹಲಿಯಲ್ಲಿ ಪ್ರೀತಿಸಿದ್ದಿರೋ!'

'ಇಷ್ಟೇ, ನನ್ನ ಅಪರಾಧ?"

"ಹಾಂ!"

ಸುಜಾತಾ ಮೆಲ್ಲನೆ ಬಂದು ನನ್ನ ಪಕ್ಕದಲ್ಲಿ ಕುಳಿತಳು. ಸಿಗರೇಟ್ ಕೇಸಿನಿಂದ ಒಂದು ಸಿಗರೇಟ್ ತೆಗೆದು ನನ್ನ ಕೈಲಿಟ್ಟಳು. ಹೊಗೆಯನ್ನು ಬಿಡುತ್ತಾ ನಾನು ಹೊರ ನಡೆದೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಕೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL—4.17—4/65—66 dated 26—4—1966.

NAVAYUGA 1/—4—1969
Registered with the Registrar
of News Papers for India
under No. R. N. 3546/'57

REGD: No: B. G: 176
LICENCE No. 33
Licensed to Post without Prepayment

ಗಾಂಧಿ ದೃಷ್ಟಿಯಲ್ಲಿ ಮುಷ್ಕರ ಮೀಮಾಂಸೆ

ಇಂದು ಎಲ್ಲೆಲ್ಲೂ ಮುಷ್ಕರಗಳ ತಾಂಡವ ನಡೆದಿದೆ. ಇತರ ಕಡೆಗಳಂತೆಯೇ ಇಲ್ಲೂ ಜೀವನದ ನೆಲೆಗಟ್ಟು ಹಾಗೂ ಧರ್ಮ ಬುಡಮೇಲಾಗಿರುವುದರಿಂದ, ಅದರ ಸ್ಥಾನದಲ್ಲಿ ಹಣದ ಬೇಡಿಕೆಯೇ ಪ್ರಧಾನವಾಗಿರುವುದರಿಂದ ಮುಷ್ಕರದ ಸಾಂಕ್ರಾಮಿಕ ಹರಡುತ್ತಿದೆ.

ಮುಷ್ಕರವು ಸ್ವಪ್ರೇರಿತವಾಗಿರಬೇಕು; ಯಾವುದೊಂದು ಕೈವಾಡದಿಂದ ಸ್ಫೂರ್ತಿ ಹೊಂದಬಾರದು. ಒತ್ತಾಯ, ಕಡ್ಡಾಯಗಳಿಲ್ಲದೆ ಮುಷ್ಕರ ವ್ಯವಸ್ಥೆಗೊಳಿಸಿದರೆ ಗೂಂಡಾಗಿರಿ ಹಾಗೂ ಲೂಟಿಗೆ ಅವಕಾಶವಿರುವುದಿಲ್ಲ. ಮುಷ್ಕರಗಾರರ ಸಂಪೂರ್ಣ ಸಹಕಾರವಿದ್ದರೆ, ಇದು ಸಾಧ್ಯವಾಗುತ್ತದೆ. ಮುಷ್ಕರ ಹಿಂಸಾಚಾರದಿಂದ ಕೂಡಿರದೆ ಶಾಂತ ರೀತಿಯಿಂದಿರಬೇಕು.

ಮುಷ್ಕರಗಾರರು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಯಾವುದಾದರೊಂದು ಕಾರ್ಯಕೈಗೊಂಡು ಸಂಪಾದನೆ ಮಾಡಬೇಕು. ನ್ಯಾಯೋಚಿತವಲ್ಲದ ಮುಷ್ಕರಗಳನ್ನು ನಡೆಸಬಾರದು. ಅನ್ಯಾಯದ ಮುಷ್ಕರಗಳು ಯಶಸ್ವಿಯಾಗಬಾರದು. ಅಂತಹ ಮುಷ್ಕರಗಳಿಗೆ ಸಾರ್ವಜನಿಕರ ಸಹಾನುಭೂತಿಯಿರಬಾರದು.

ಮುಷ್ಕರದ ಹಕ್ಕು

ನ್ಯಾಯೋಚಿತವಾದ, ಸರ್ವಾನುಮತದ ಮುಷ್ಕರ ಸಫಲವಾಗುತ್ತದೆ. ಮುಷ್ಕರದಲ್ಲಿ ಭಾಗವಹಿಸದಿರುವವರ ವಿರುದ್ಧ ಹಿಂಸಾಚಾರದಲ್ಲಿ ತೊಡಗಬಾರದು. ಮುಷ್ಕರಕಾಲದಲ್ಲಿ ಕಾರ್ಮಿಕ ಸಂಘದ ನಿಧಿಯನ್ನು ವೆಚ್ಚಮಾಡದೆ ಸ್ವಂತಹಣದಿಂದ ಜೀವನ ನಿರ್ವಹಣೆ ಮಾಡಿಕೊಳ್ಳಬೇಕು.

ನ್ಯಾಯಸಾಧನೆಗಾಗಿ ಕಾರ್ಮಿಕರು ಮುಷ್ಕರ ಹೂಡುವ ಮೂಲಭೂತ ಹಕ್ಕು ಉಳ್ಳವರೆಂಬುದು ನನಗೆ ಗೊತ್ತಿದೆ. ಬಂಡವಾಳಗಾರರು ಪಂಚಾಯಿತಿಯ ತತ್ವವನ್ನು ಒಪ್ಪಿಕೊಂಡರೆ ಮುಷ್ಕರ ಹೂಡುವುದು ಅಪರಾಧವಾಗುತ್ತದೆ.

ಸಾರ್ವಜನಿಕ ಮನ್ನಣೆಗೆ ಪಾತ್ರರಾಗಿರುವ ನಿಷ್ಪಕ್ಷಪಾತ ವ್ಯಕ್ತಿಗಳಿಂದ ಮುಷ್ಕರಕ್ಕೆ ಬೆಂಬಲ ದೊರೆಯದಿದ್ದರೆ ಜನತೆ ಯಥಾರ್ಥತೆ ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಹಿತಾಸಕ್ತರು ತಮ್ಮ ಹೋರಾಟದ ಔಚಿತ್ಯದ ಬಗ್ಗೆ ನಿರ್ಣಯ ಕೈಗೊಳ್ಳಲಾರರು. ಆದ್ದರಿಂದ ಮಾಲೀಕ-ಉದ್ಯೋಗಿ ಪಂಗಡಗಳ ನಡುವೆ ಪಂಚಾಯಿತಿ ನಡೆಸಬೇಕು ಅಥವಾ ನ್ಯಾಯಾಂಗ ತೀರ್ಪು ಅಂಗೀಕೃತವಾದರೆ ಮುಷ್ಕರ ಸಾರ್ವಜನಿಕರ ಗಮನ ಸೆಳೆಯುವುದಿಲ್ಲ. ಆದರೆ ವ್ಯಗ್ರ ಬಂಡವಾಳಗಾರರು ತಮ್ಮ ಶಕ್ತಿಯ ಅರಿವಿನಿಂದ ಪ್ರೇರಿತರಾಗಿ ಪಂಚಾಯಿತಿಯ ತೀರ್ಪುಗಳನ್ನು ಕಡೆಗಣಿಸಿ, ಉದ್ಯೋಗಿಗಳನ್ನು ತಪ್ಪು ದಾರಿಗೆ ಎಳೆಯುತ್ತಾರೆ. ಉದ್ಯೋಗಿಗಳನ್ನು ಬಲಾತ್ಕಾರದಿಂದ ಸುಲಿಗೆ ಮಾಡುತ್ತಾರೆ.

ಹಿಂಸೆಗೆ ಸ್ಥಾನವಿಲ್ಲ

ನಾನು ವರ್ಣಿಸಿರುವಂತಹ ನಾಗರಿಕ ಮುಷ್ಕರದಲ್ಲಿ ಬೆದರಿಕೆ, ಉದ್ರಿಕ್ತತೆ ಮುಂತಾದ ಹಿಂಸಾಕೃತ್ಯ ಪ್ರಚೋದನೆಗೆ ಅವಕಾಶವಿರುವುದಿಲ್ಲ. ಕಾಲಚಕ್ರ ಉರುಳಿದಂತೆ ಕಾರ್ಮಿಕ ಚಳುವಳಿಯಲ್ಲಿ ದಿನಂಪ್ರತಿ ಹೆಚ್ಚುತ್ತಿರುವ ಬೇಡಿಕೆಗಳ ಪೂರೈಕೆಗೆ ಒತ್ತಾಯ ಹೆಚ್ಚುತ್ತಿವೆ. ಈ ಬೇಡಿಕೆಗಳನ್ನು ಕಾರ್ಯಗತಗೊಳಿಸಬೇಕೆಂಬ ಅಸಹನೀಯ ಸನ್ನಿವೇಶದಲ್ಲಿ ಹಿಂಸಾಕೃತ್ಯಕ್ಕೆ ಕೈಹಾಕಲು ಹಿಂಜರಿಯುತ್ತಿಲ್ಲ. ಮುಷ್ಕರಗಾರರು ಬಂಡವಾಳಗಾರರ ಆಸ್ತಿನಾಶ ಮಾಡುವ, ಯಂತ್ರಸಲಕರಣೆಗಳನ್ನು ಹಾಳುಮಾಡುವ ಹೊಸ ವಿಧಾನಗಳನ್ನು ಅನುಸರಿಸುತ್ತಿದ್ದಾರೆ.

ಕಾರ್ಮಿಕರನ್ನು ಶ್ರೇಷ್ಠವೆಂದು ಪರಿಗಣಿಸಿದ್ದರೂ ಬಂಡವಾಳಗಾರರೂ ಉದ್ಯೋಗಿಗಳೂ ಸಮಾನ ಸಂಗಾತಿಗಳೆಂದು ನನ್ನ ಭಾವನೆ. ಆದರೆ ಇಂದು ತದ್ವಿರುದ್ಧ ಸನ್ನಿವೇಶವಿದೆ. ಉದ್ಯೋಗಸ್ಥರು ತಮ್ಮ ಕಡೆ ಬೌದ್ಧಿಕ ಕೌಶಲ ಹೆಚ್ಚುಗೊಳಿಸಿರುತ್ತಾರೆ. ಅಧಿಕ ಬಂಡವಾಳ ಶೇಖರಣೆಯಿಂದ ಸ್ಫುರಿಸುವ ಸೌಭಾಗ್ಯ, ಆಳಿಕೆಗಳ ತಂತ್ರ ಪ್ರಯೋಗದಿಂದ ಬಂಡವಾಳಗಾರರಿಗೆ ಬೆಂಬಲ ಹೆಚ್ಚುತ್ತದೆ.

ಬಂಡವಾಳಗಾರರು ಸ್ವಯಂ ಸೃಷ್ಟಿಸಿರುವುದಾಗಿ ನಂಬಿರುವ ಸಂಸ್ಥೆಗಳ ಕಾರ್ಮಿಕರನ್ನು ನೈಜ ಮಾಲೀಕರೆಂದು ಪರಿಗಣಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಕಾರ್ಮಿಕರಿಗೆ ಉತ್ತಮ ಶಿಕ್ಷಣ ನೀಡುವುದು ತಮ್ಮ ಕರ್ತವ್ಯವೆಂದು ಬಂಡವಾಳಗಾರರು ಭಾವಿಸಬೇಕು. ಇದರಿಂದ ಕಾರ್ಮಿಕರಲ್ಲಿರುವ ಸುಪ್ತ ಪ್ರತಿಭೆ ವಿಕಾಸಗೊಂಡು ಅದರಿಂದ ಹೊಮ್ಮುವ ಶಕ್ತಿಯನ್ನು ಸಹಯೋಗದ ಪಡೆಯಬಹುದು. ಇದರಿಂದ ಏನೂ ನಷ್ಟವಾಗದೆಂಬುದು ಬಂಡವಾಳಗಾರರಿಗೆ ಅರಿವಾಗುತ್ತದೆ. ಇದನ್ನು ಅವರು ಉಪಕಾರವೆಂದು ತಿಳಿಯಬಾರದು. ಇದರಿಂದ ಬಂಡವಾಳಗಾರರ ಸಂಪನ್ಮೂಲದ ಬಳಕೆ ಜಾಸ್ತಿಯಾಗುತ್ತದೆ. ಕೈಗಾರಿಕೆಯ ಗೌರವಸ್ಥ ಸಂಗಾತಿಗಳಾಗಿರುವ ಕಾರ್ಮಿಕರೊಂದಿಗೆ ಪ್ರಾಮಾಣಿಕವಾಗಿ ವರ್ತಿಸಲು ಸಾಧ್ಯವಾಗುತ್ತದೆ.

ಭಾರತದ ಕಾರ್ಮಿಕರು

ಆರ್ಥಿಕ ಉನ್ನತಿಗಾಗಿ ಹೂಡುವ ಮುಷ್ಕರದಲ್ಲಿ ರಾಜಕೀಯದ ಗಂಧವಿರಬಾರದು. ಮುಷ್ಕರದಲ್ಲಿ ರಾಜಕೀಯ ಪ್ರಭಾವವಿದ್ದರೆ ಮುಷ್ಕರಗಾರರಿಗೆ ತೊಂದರೆಯಾಗುತ್ತದೆ. ಮುಷ್ಕರದಿಂದ ಸಾರ್ವಜನಿಕ ಜೀವನಕ್ಕೆ ಧಕ್ಕೆಯಾದರೂ ಮುಷ್ಕರಗಾರರಿಗೆ ಸಹಾನುಭೂತಿ ದೊರಕಲಾರದು.

ಭಾರತದ ಕಾರ್ಮಿಕ ಜಗತ್ತು ಇತರ ದೇಶಗಳಲ್ಲಿರುವಂತೆಯೇ ಸ್ವಯಂ ಸೃಷ್ಟಿಗೊಂಡಿರುವ ಸಲಹೆಗಾರರು, ಮಾರ್ಗದರ್ಶಕರ ಹಿಡಿತಕ್ಕೆ ಸಿಲುಕಿದೆ. ಸಲಹೆಗಾರ, ಮಾರ್ಗದರ್ಶಕರಲ್ಲಿ ಯಾವಾಗಲೂ ಧರ್ಮ, ನೀತಿ, ಜಾಣ್ಮೆಗಳಿರುವುದಿಲ್ಲ. ಕಾರ್ಮಿಕರು ತಮ್ಮ ಸ್ಥಿತಿಗಳ ಬಗ್ಗೆ ಅತೃಪ್ತರಾಗಿರುತ್ತಾರೆ ಆದ್ದರಿಂದ ಅವರನ್ನು ವಿಶೇಷ ಪ್ರಯಾಸವಿಲ್ಲದೆ ಮುಷ್ಕರ ಹೂಡಲು ಪ್ರೇರೇಪಿಸಲು ಸಾಧ್ಯ. ರಾಜಕೀಯ ಕಾರಣಕ್ಕಾಗಿ ಮುಷ್ಕರ ಹೂಡಿಕೆಗೆ ಸನ್ನಾಹ ಹೂಡುವ ಕಾರ್ಮಿಕ ನಾಯಕರ ಅಭಾವವಿಲ್ಲ.

ಈ ಕಾರಣಗಳಿಗಾಗಿ ಕಾರ್ಮಿಕ ಮುಷ್ಕರವನ್ನು ಆಯುಧವಾಗಿ ಬಳಸುವುದು ಅತ್ಯಂತ ದೊಡ್ಡ ತಪ್ಪೆಂದು ನನ್ನ ಭಾವನೆ. ಕಾರ್ಮಿಕರು ದೇಶದ ರಾಜಕೀಯ ಪರಿಸ್ಥಿತಿ ಅರಿತುಕೊಂಡು, ದೇಶ ಕಲ್ಯಾಣಕ್ಕಾಗಿ ದುಡಿಯಲು ಸಿದ್ಧರಾಗುವವರೆಗೆ ಕಾರ್ಮಿಕರನ್ನು ರಾಜಕೀಯ ಪಗಡೆಗಳಾಗಿ ಬಳಸುವುದು ಅತ್ಯಂತ ಅಪಾಯಕಾರಿ.

ನಾವು ಆ ರೀತಿ ಮಾಡಲು ಅರ್ಹತೆ ಪಡೆದಿವೆಯೆಂದಲ್ಲ; ಆದರೆ ನಾವು ಅದಕ್ಕೆ ಸಿದ್ಧರಾಗಿಲ್ಲ. ನಾವು ದೀರ್ಘಾವಧಿಯ ಕಾರ್ಮಿಕರ ರಾಜಕೀಯ ಶಿಕ್ಷಣವನ್ನು ಕಡೆಗಣಿಸಿದ್ದೇವೆ. ಈ ದೇಶ ಬಾಂಧವರ ಮೇಲೆ ಪ್ರಭಾವಬೀರುವಂತಹ ಪ್ರಾಮಾಣಿಕರಾದ, ನಂಬಿಕಸ್ಥರಾದ, ಜ್ಞಾನಶೀಲರಾದ ಹಾಗೂ ಎದೆಗಾರಿಕೆಯುಳ್ಳ ಕಾರ್ಯಕರ್ತರು ನಮ್ಮಲ್ಲಿಲ್ಲ.

ರಾಜಕೀಯ ಮುಷ್ಕರಗಳನ್ನು ಅರ್ಹತೆಯ ಪ್ರಕಾರ ಪರಿಗಣಿಸಬೇಕು. ಆರ್ಥಿಕ ಕಾರಣದ ಮುಷ್ಕರದೊಂದಿಗೆ ಸೇರಿಸಬಾರದು. ಅಹಿಂಸಾತ್ಮಕ ಕಾರ್ಯಕ್ರಮದಲ್ಲಿ ರಾಜಕೀಯ ಮುಷ್ಕರಗಳಿಗೆ ಖಚಿತ ಸ್ಥಾನವಿದೆ. ಅವುಗಳನ್ನು ಅವ್ಯವಸ್ಥಿತವಾಗಿ ಕೈಗೊಳ್ಳುವುದಿಲ್ಲ. ಈ ಮುಷ್ಕರಗಳು ಬಹಿರಂಗವಾಗಿರಬೇಕು; ಗೂಂಡಾಗಿರಿಯಿಂದ ಪ್ರತ್ಯೇಕವಾಗಿರಬೇಕು. ಹಿಂಸೆಗೆ ಮಾರ್ಗದರ್ಶಿಯಾಗದಂತಿರಬೇಕು.

ಸಾರ್ವತ್ರಿಕ ಮುಷ್ಕರದಿಂದ ಅಧಿಕಾರ ಸಂಪಾದನೆಗಾಗಿ ಹಿಂಸಾತ್ಮಕ ಅಥವಾ ಅಹಿಂಸಾತ್ಮಕ ಮಾ[illegible] ನಡೆಸುವುದರಲ್ಲಿ ನಾನು ಭಾಗಿ [illegible]ದಿಲ್ಲ.

ಅತ್ಯಗತ್ಯ ಸೇವೆ

ಕೆಲವು ವಿಭಾಗಗಳಲ್ಲಿ ಮುಷ್ಕರ ಅಕ್ರಮವಾಗುತ್ತದೆ. ಭಂಗಿಗಳು ಈ ವರ್ಗಕ್ಕೆ ಸೇರುತ್ತಾರೆ. ನಾನು ಭಂಗಿಗಳೊಡನೆ ನಿಕಟ ಸಂಪರ್ಕ ಹೊಂದಿದ್ದರೂ ಅವರು ಬಳಸುವ ಬಲಾತ್ಕಾರದ ವಿಧಾನಗಳನ್ನು ನಾನು ಖಂಡಿಸುತ್ತೇನೆ. ಬಲಾತ್ಕಾರ ಅಂತಿಮವಾಗಿ ಅವ್ಯವಸ್ಥೆಯಲ್ಲಿ ಮುಕ್ತಾಯವಾಗುತ್ತದೆ. ವಿವಾದ ಪರಿಹಾರಕ್ಕೆ ನಿಷ್ಪಕ್ಷಪಾತ ಪಂಚಾಯಿತಿಯನ್ನು ಯಾವಾಗಲೂ ಅಂಗೀಕರಿಸಬೇಕು. ಅದನ್ನು ನಿರಾಕರಿಸುವುದು ದೌರ್ಬಲ್ಯದ ಗುರುತು ಆಗುತ್ತದೆ. ಒಂದು ದಿನ ಕೂಡ ಭಂಗಿ ಕಾರ್ಯ ತ್ಯಾಗ ಮಾಡಬಾರದು. ಅವರ ನ್ಯಾಯ ಸಾಧನೆಗೆ ಅನೇಕ ಮಾರ್ಗಗಳಿವೆ.

ಭಂಗಿಗಳಂತೆಯೇ ಪೋಲೀಸರೂ ಮುಷ್ಕರ ಹೂಡಬಾರದು. ಅವರು ಅತ್ಯಗತ್ಯ ಸೇವಾಕರ್ತರು, ವೇತನ ವ್ಯತ್ಯಾಸವಿದ್ದರೂ ಸದಾ ಸೇವಾಬದ್ಧರಾಗಿರಬೇಕು. ಸಾರ್ವಜನಿಕ ಸೇವಾ ವಿಭಾಗಕ್ಕೆ ಸೇರಿದ ಅಂಚೆ ಕಾರ್ಮಿಕರು ಮುಷ್ಕರದಿಂದ ಸರಕಾರಕ್ಕೆ ಅಡಚಣೆ ಎದುರಿಸಿದರೂ ಕಷ್ಟವಾಗುವುದಿಲ್ಲ. ಶ್ರೀಮಂತ ವ್ಯಕ್ತಿಗಳು ವೆಚ್ಚದಾಯಕವಾದ ಅಂಚೆಸೇವೆಯ ಮುಷ್ಕರ ಎದುರಿಸಿದರೂ, ಬಡ ಜನಸ್ತೋಮ ಮುಷ್ಕರದ ಕಾಲದಲ್ಲಿ ಕಷ್ಟ ಎದುರಿಸಬೇಕಾಗುತ್ತದೆ. ವರ್ಷಾನಂತರಗಳಿಂದ ಪ್ರಯೋಜನ ಪಡೆಯುತ್ತಿದ್ದ ಪ್ರಮುಖ ವಾರ್ತಾ ಮಾಧ್ಯಮದಿಂದ ವಂಚಿತವಾಗುತ್ತದೆ.

ಬೆಂಗಳೂರಿನಲ್ಲಿ
ನಿಮ್ಮ ಸ್ವಾಗತ—ಸತ್ಕಾರಕ್ಕೆ ಸಿದ್ಧವಿರುವ
ಹೊಟೆಲ್ ಸತ್ಕಾರ್
ಕಾರ್ಪೊರೇಶನ್ ಅಫೀಸಿನ ಬಳಿ, 9, ಮಿಶನ್ ರಸ್ತೆ
ಬೆಂಗಳೂರು — 27
ಇಲ್ಲಿಗೆ ಸಂದರ್ಶನ ನೀಡಲು ಮರೆಯದಿರಿ.
ಏಕೆಂದರೆ ಇಲ್ಲಿ ವಸತಿ ಸೌಕರ್ಯವಿದೆ; ಊಟ, ಉಪಾಹಾರದ ವ್ಯವಸ್ಥೆಯಿದೆ.
Phone: 28837
29887
HOTEL SATKAR
Boarding & Lodging
Near Corporation Office, 9, Mission Road
Bangalore—27

READ &
ADVERTISE IN
NAVAYUGA WEEKLY

Edited, Printed & Published by K. H. Shetty, at the Navayuga Press,Udipi, S. India.

ನವಯುಗ

24-4-1969

NAVAYUGA

೨೦ ಪೈಸೆ

ಕಥಾಪ್ರಪಂಚ

ಅವಳ ಮಗು

ಬರೆದವರು: ಶ್ರೀ ಕೆ. ಆರ್. ವಿಜಯಾ

ಥೂ, ಹಾಳು ಬಸ್ಸುಗಳನ್ನು ಕಾದು ಸಾಕೋ ಸಾಕಾಯಿತು. ಕಾಲೇಜು ಇರುವ ಸಮಯವಾಗಿದ್ದರೆ... ಕಾಲೇಜು ಹುಡುಗಿಯರನ್ನಾದರೂ ನೋಡಿ ಹೊತ್ತು ಹೋಗುತ್ತಿತ್ತೋ.... ಏನೋ.... ಆದ್ದರಿಂದಲೇ ಬಸ್ಸು ತಡವಾಗಿ ಬರಲಿ ಎಂದು ಬಯಸುತ್ತಿದ್ದೆ.... ಥಟ್ಟನೆ ಬಸ್ಸು ಬೇಗ ಬಂದರೆ ಮನಸ್ಸಿಲ್ಲದ ಮನಸ್ಸಿನಿಂದ ಮೆಲ್ಲನೆ ಬಸ್ಸು ಹತ್ತಿ.... ಬಸ್ ಹತ್ತಿದರೂ ಬಸ್ ಸ್ಟ್ಯಾಪಿನ ವ್ಯಾಮೋಹ ಬಿಡುತ್ತಿರಲಿಲ್ಲ... ಫುಟ್ ಬೋರ್ಡಿನ ಮೇಲೆ ನಿಂತು ಸ್ಟ್ಯಾಪಿನಲ್ಲಿ ಮತ್ತೂ ಕಾಯುತ್ತಿದ್ದ ಹಾಫ್ ಸ್ಕರ್ಟಿನ ಅರ್ಧ ಸೆರಗಿನ ಸ್ಲೀವ್ ಲೆಸ್ ಬ್ಲೌಸಿನ ಹುಡುಗಿಯರ ಕಡೆಗೊಮ್ಮೆ ನೋಡಿ ಚಿಕ್ಕ ನಗು ಬೀರಿ ಅದಾವುದೋ ಒಂದು ಹೊಸ ಭಂಗಿಯಲ್ಲಿ ಕುತ್ತಿಗೆ ಬಗ್ಗಿಸಿ... ಬಸ್ಸಿನ ಹೊರಗೆ ಇಣುಕಲು ಅನುಕೂಲವಾಗುವಂತೆ ನಿಲ್ಲುವುದು ನನ್ನ ಅಭ್ಯಾಸ...

ಆದರೆ.... ಈಗ ಈ ಹಾಳು ಬಸ್ಸು ಬರುವುದು ತಡವಾದರೆ ಕೊಳಕು ಭಿಕ್ಷುಕರ ಹಾವಳಿ... ಈ ಭಿಕ್ಷುಕರಿಂದಲೇ ನಮ್ಮ ದೇಶ ದಿನೇ ದಿನೇ ಹಾಳಾಗಿ ಹೋಗುತ್ತಿದೆ... ತಮ್ಮ ಹೊಟ್ಟೆ ತುಂಬಿಸಲಿಕ್ಕೆಯೇ ಗತಿಯಿಲ್ಲದ ಭಿಕ್ಷುಕರಿಗೆ ಮಕ್ಕಳು ಬೇರೆ ಕೇಡು... ಫ್ಯಾಮಿಲಿ ಪ್ಲಾನಿಂಗ್ ....ಎಂದು ಸರಕಾರದವರು ಗೋಳಿಡುತ್ತಾರಲ್ಲಾ... ಈ ಭಿಕ್ಷುಕರಿಗಾದರೂ ಸ್ವಲ್ಪ ಫ್ಯಾಮಿಲಿ ಪ್ಲಾನಿಂಗ್ ಮಾಡಿದರೆ, ಅವರ ಜೊತೆಗೆ ಬರುವ ಮಕ್ಕಳ ಹಾವಳಿಯೂ ತಪ್ಪಿಹೋಗುತ್ತಿತ್ತು.... ನಮ್ಮ ದೇಶದ ಜನಸಂಖ್ಯೆಯ ಸಮಸ್ಯೆಯೂ ಪರಿಹಾರವಾಗುತ್ತಿತ್ತು.

ಅಯ್ಯೋ.... ದೂರ ಸರಿದಷ್ಟೂ ಹತ್ತಿರ ಬರುತ್ತಾಳಲ್ಲಾ ಇವಳು! ಸ್ವಲ್ಪ ಮುದಿ [illegible] ಅವಳ ಮೈ ಮುಚ್ಚುವ ಬಟ್ಟೆಯೇ ಇಲ್ಲ. ಇನ್ನು ಆ ಮಗುವಿಗೆ ಬಟ್ಟೆ ಎಲ್ಲಿಂದ ತರಬೇಕು? ಭೂಮಿಗೆ ದೇವರು ಬೇರೆ [illegible] ಹಾಗೆಯೇ ಇದೆ ಆ ಮಗು... ಎತ್ತಲು [illegible] ಆ ಮಗುವನ್ನು ಆಕೆ ತನ್ನ ಬಂದಿ [illegible] ನಡೆಸುತ್ತಿದ್ದಳು.... ಅವಳ ಗೋಳಾಟ ಕೇಳುವುದೇ ಕಷ್ಟವಾಗುತ್ತಿದೆ... ಈಗ ಅವಳ ಜೊತೆ ಆ ಮಗುವೂ ತನ್ನ ಕೀರಲು ದನಿ ಸೇರಿಸಿ ರೋದಿಸತೊಡಗಿತು.

ಅವಳು ಕೇಳುತ್ತಿದ್ದಳು "ಸ್ವಾಮಿ, ಏನಾದರೂ ಕೊಡಿರಿ. ಎರಡು ದಿನವಾಯಿತು ಏನೂ ತಿಂದಿಲ್ಲ.... ಹಸಿವಿನ ತಾಪ ಬೇರೆ.... ನಾನಾದರೂ ಹೇಗಾದರೂ ಇರುತ್ತೇನೆ. ಈ ಮಗು ಬೇರೆ ಇದೆಯಲ್ಲಾ .... ಮಗುವಿನ ಮುಖ ನೋಡಿಯಾದರೂ ಕೊಡಿ ಸ್ವಾಮಿ...." ಅವಳು ಏನೇನೋ ಹೇಳಿ ಅಂಗಲಾಚುತ್ತಿದ್ದಳು.

.... ಬಟ್ಟೆಗಳಿಲ್ಲದ ಆ ಭಿಕ್ಷುಕಿಯ ಅರೆ ನಗ್ನತೆಯನ್ನು ನೋಡುವುದು ನನಗೆ ಸಾಧ್ಯವಿಲ್ಲದ ಕೆಲಸ... ಒಂದು ಐದು ಪೈಸೆ ಹಾಕಿ ಅವಳನ್ನು ಅಲ್ಲಿಂದ ಸಾಗಹಾಕಲು ನಿಶ್ಚಯಿಸಿ ಪ್ಯಾಂಟಿನ ಕಿಸೆಯಲ್ಲಿ ಹುಡುಕತೊಡಗಿದೆ.

ಪಕ್ಕದಲ್ಲಿ ನಿಂತ ಗೆಳೆಯ ಹರೀಶ್ ನನ್ನನ್ನು ಥಟ್ಟನೆ ತಿವಿಯುತ್ತಾ ಪಕ್ಕದಲ್ಲಿ ನಡೆದು ಹೋಗುತ್ತಿದ್ದ ಹುಡುಗಿಯರ ಗುಂಪೊಂದನ್ನು ತೋರಿಸಿದ, ಎಲ್ಲಾ ಬೆಳೆದ ಹುಡುಗಿಯರು, ಉದ್ದೇಶಪೂರ್ವಕವಾಗಿ ಅವರ ಬಟ್ಟೆಗಳಿಗೆಲ್ಲಾ ಕತ್ತರಿ ಪ್ರಯೋಗವಾಗಿತ್ತು. ಎದುರಿನಿಂದ ಅರ್ಧ ಎದೆಯ ಪ್ರದರ್ಶನ ನಡೆಸಿದರೆ ಹಿಂದಿನ ಬೆನ್ನಿನ ಮೇಲೆ ಬಟ್ಟೆ ಇದೆಯೋ ಇಲ್ಲವೊ ಎಂದು ಸಂಶಯದೃಷ್ಟಿಯಿಂದ ನೋಡಬೇಕಾಗಿತ್ತು. ಸೆರಗು ಭುಜ ದಾಟಿ ಬೆನ್ನ ಮೇಲೆ ಬಂದರೆ ಈಗ ಹಳೆ ಫ್ಯಾಷನ್. ಈ ಆಧುನಿಕ ಶಕುಂತಲೆಯರ ಹಿಂದೆ ಹಾಕಿದ ಪ್ಯಾಂಟು ಪೈಜಾಮ ಸರಿಯಾಗಿ ಹೆಜ್ಜೆ ಹಾಕಲೂ ಆಗದೆ ಕಾಲೆಳೆದು ನಡೆಯುತ್ತಿರುವ ತರುಣರು. ತಮ್ಮ ಮುಂದಿರುವ ಹುಡುಗಿಯರನ್ನು ವರಿಸಲು ಅವರು ಪ್ರಯೋಗಿಸುತ್ತಿದ್ದ ಮಾತಿನ ಬಾಣಗಳು ... ನಾನೇನೂ....ಆಧುನಿಕ ಯುಗದ ವಿಶ್ವಾಮಿತ್ರನಲ್ಲ... ವಿಶ್ವಾಮಿತ್ರನ ಸುದ್ದಿ ಈಗೇಕೆ? ವಿಶ್ವಾಮಿತ್ರನೇ ಮೇನಕೆಗೆ ಮರುಳಾಗಿ ತನ್ನ ತಪಸ್ಸನ್ನೆಲ್ಲಾ ಹಾಳು ಮಾಡಿಕೊಳ್ಳಲಿಲ್ಲವೇ....

ಹಾಗೆಯೇ.......ಆಲೋಚಿಸಿದೆ...... ಒಂದು ಕಡೆ ಬಡತನದಿಂದ ಬಟ್ಟೆಯ ಅಭಾವದಿಂದ ಅಂಗಾಂಗಗಳ ಪ್ರದರ್ಶನ ನಡೆದಿತ್ತು. ಅದನ್ನು ಕಂಡವರು ಅಸಹ್ಯದಿಂದ ಮೂಗು ಮುರಿಯುತ್ತಿದ್ದರು. ಇನ್ನೊಂದು ಕಡೆ ಸಂಪತ್ತಿದ್ದರೂ ಆಧುನಿಕತೆಯ ಸೋಗಿನಿಂದ ಅಂಗಾಂಗಗಳ ಪ್ರದರ್ಶನ ನಡೆಸಿದ್ದರು. ಆ ಪ್ರದರ್ಶನವನ್ನು ನಾಗರಿಕತೆ ಕುತೂಹಲದಿಂದ ನೋಡುತ್ತಿತ್ತು. ಕಾಣುವ ಕಣ್ಣಿಗೆ ಎರಡೂ ಒಂದೇ ರೀತಿಯ ನೋಟಗಳು. ಆದರೆ ಅವುಗಳಲ್ಲಿಯೂ ಭಿನ್ನತೆ ಅವುಗಳಲ್ಲೂ ಪೂರ್ವ ಪಶ್ಚಿಮಗಳ ಅಂತರ. ಯೋಚಿಸಿ ನಿಟ್ಟುಸಿರಿಟ್ಟೆ. ಕಿಸೆಯಿಂದ ಐದು ಪೈಸೆ ತೆಗೆದು ಕೈಯೊಡ್ಡಿನಿಂತ ಅವಳ ಕೈಗೆ ಹಾಕಿದೆ. ಅವಳು ಆ ಮಗುವನ್ನು ಎದೆಗವಚಿ ಸಂತೈಸುತ್ತಾ ಪಕ್ಕದಲ್ಲಿ ನಿಂತ ಅನೆಕ್ಸಿನ ಒಳಗೆ ಹೊರಟುಹೋದಳು. ಈಗ ಆ ಭಿಕ್ಷುಕಿಯು ಸೋಗಿಗೆ ಮರುಳಾದ ತಾಯಂದಿರು ತಮ್ಮ ತಾಯಿತನವನ್ನೇ ಮರೆತು ನಡೆಯುತ್ತಾರೆ. ಮಗು ಅವರಿಗೆ ಕಾಲ್ತೊಡಕು. ಮಗುವನ್ನು ಎತ್ತುವುದು, ಆಡಿಸುವುದು, ಲಲ್ಲೆಗರೆಯುವುದೂ ಅವರಿಗೆ ಹಳೆಯ ಕ್ರಮ. ಆದರೆ ದಿಕ್ಕಿಲ್ಲದ ಹೀನಳಾದ ಆ ಭಿಕ್ಷುಕಿಗೆ ತನ್ನ ಮಗುವಿನಲ್ಲಿ ಎಷ್ಟು ಮಮತೆ! ಇಂದಿನ ನಾಗರಿಕತೆಯ ಸಮಾಜದಲ್ಲಿ ಕ್ರಮಗಳು ರೀತಿನೀತಿಗಳು, ಪ್ರೀತಿ ವಾತ್ಸಲ್ಯಗಳೂ ಕರುಳಿನ ಬಾಂಧವ್ಯವೂ ಸ್ವಂತ ಸುಖಕ್ಕೆ, ಸ್ವಾರ್ಥಕ್ಕೆ ತಕ್ಕಂತೆ ಬದಲಾಗುತ್ತವೆ. ಆದರೆ ಕೇವಲ ಭಿಕ್ಷೆ ಬೇಡಿ ಜೀವಿಸುವ ಭಿಕ್ಷುಕಿಯಲ್ಲಿ ತನ್ನ ಮಗುವಿನ ಬಗೆಗೆ ಅದೆಷ್ಟು ಮಮತೆ, ಎಷ್ಟೊಂದು ವಾತ್ಸಲ್ಯ! ತನ್ನ ಜೀವವನ್ನೇ ಪಣವಾಗಿಟ್ಟು ನಾಚಿಕೆ ಮರ್ಯಾದೆಯನ್ನು ತೊರೆದು ಆಕೆ ಮಗುವಿಗಾಗಿ ಭಿಕ್ಷೆ ಬೇಡುತ್ತಿದ್ದಾಳೆ ಎನಿಸಿತು. ಏಕೋ ....ಆ ಕ್ಷಣ ನನ್ನ ಹೃದಯ ಆ ಭಿಕ್ಷುಕಿಗಾಗಿ ಅವಳ ಏಳಿಗೆಗಾಗಿ ಚೀರಿಟ್ಟಿತ್ತು.

ಓ! ಬಸ್ಸು ಬಂದೇಬಿಟ್ಟಿತು. ಎಲ್ಲಾ ಯೋಚನೆಗಳಿಗೂ ಕೊನೆ.

○ ○ ○ ○

ಅಂದು.... ನಾನು, ನನ್ನ ಗೆಳೆಯ ರಮೇಶ, ಕೃಷ್ಣಭವನದಿಂದ ಕಾಫಿ ಕುಡಿದು ಹೊರಗೆ ಬರುತ್ತಿದ್ದೆವು. ಅದೇ ಭಿಕ್ಷುಕಿ ...... ಅಲ್ಲೇ ಚರಂಡಿಯ ಪಕ್ಕದಲ್ಲಿ ಕುಳಿತು ಏನನ್ನೋ ಗಬ ಗಬನೆ ತಿನ್ನುತ್ತಿದ್ದಳು. ಅವಳ ಮಗು ಒಂದೇ ಸಮನೆ ಚೀರಿಡುತ್ತಿತ್ತು. ಅದರ ಗೊಡವೆ ಅವಳಿಗೆ ಇದ್ದಂತಿರಲಿಲ್ಲ. ನಿನ್ನೆ ಮಗುವಿಗಾಗಿ ಬೇಡುತ್ತಿದ್ದವಳು ಇಂದು ಮಗು ಒದ್ದಾಡುತ್ತಿದ್ದರೂ ಗಬಗಬನೆ ತಿನ್ನುತ್ತಿದ್ದಳು...... ಎಷ್ಟೊಂದು ವಿಚಿತ್ರ! ಲೋಕವೇ ವಿಚಿತ್ರ. ಪಾಪ, ಆಕೆಯೂ ಮನುಷ್ಯಳಲ್ಲವೆ? ಎಷ್ಟು ಹಸಿದಿರುವಳೋ ಏನೋ! ತಾನೇ ಹಸಿವಿನಿಂದ ಸಾಯುತ್ತಿರುವಾಗ ಮಗುವಿನ ಗೊಡವೆ ಎಲ್ಲಿಯದು ಎಂದು ಮರುಗಿದೆ. ಗೆಳೆಯ ರಮೇಶ ಅಂಥ ಭಿಕ್ಷುಕರನ್ನು ಕಂಡರೆ ಮೂಗು ಮುರಿಯುತ್ತಿದ್ದ. ಇವೆಲ್ಲಾ ಹೃದಯಹೀನರು. ಮೋಸಗಾರರು ಎಂದು ಹೀಯಾಳಿಸುತ್ತಿದ್ದ. ಇವಕ್ಕೆ ಮಕ್ಕಳು ಬೇರೆ ಕೇಡು ಎಂದು ಜರೆಯುತ್ತಿದ್ದ. ರಮೇಶನ ಮಾತನ್ನು ಕೇಳಿಯೂ ನಾನು ಆ ಭಿಕ್ಷುಕಿಗಾಗಿ ಅವಳ ಮಗುವಿಗಾಗಿ ಅನುಕಂಪ ವ್ಯಕ್ತಪಡಿಸುತ್ತಿದ್ದೆ.

○ ○ ○ ○

ಭಾನುವಾರ ಮನೆಯಲ್ಲಿ ಯಾವುದೋ ಪತ್ರಿಕೆ ಹಿಡಿದು ಓದುತ್ತಿದ್ದೆ. ಅಮ್ಮಾ ಭಿಕ್ಷೆ" ಎನ್ನುವ ದನಿ ಕೇಳಿಸಿತು. ಪತ್ರಿಕೆ ಸರಿಸಿ ತಲೆಯೆತ್ತಿ ನೋಡಿದೆ. ಅವಳೇ ಆ ಭಿಕ್ಷುಕಿ....... ಬಸ್‌ಸ್ಟ್ಯಾಪಿನಲ್ಲಿ ಬೇಡುವುದನ್ನು ಬಿಟ್ಟು ಮನೆ ಮನೆ ಬೇಡಲು ತೊಡಗಿದ್ದಳೇನೋ ಎಂದುಕೊಂಡು ಎದ್ದು ಬಂದೆ. ಅವಳ ಬಳಿ ಆಕೆಯ ಮಗು ಇರಲಿಲ್ಲ. ನನಗೆ ಆಶ್ಚರ್ಯವಾಯಿತು. ಮಗುವೇನಾಯಿತು ಹಸಿವಿನಿಂದ ಸತ್ತೇ ಹೋಯಿತೇ? ಅಯ್ಯೋ ಪಾಪ ಎಂದು ಅವಳನ್ನು ವಿಚಾರಿಸಿದೆ,

ಅವಳು ಉದಾಸೀನಳಾಗಿ ಉತ್ತರಿಸಿದಳು. ಅಯ್ಯೋ ಅದು ನನ್ನ ಮಗುವೇ ಸ್ವಾಮೀ? ಹೊಟ್ಟೆಯ ಪಾಡಿಗಾಗಿ ನನ್ನದಾಗಿ ಮಾಡಿಕೊಂಡ ಕೂಸು. ನನ್ನನ್ನು ನೋಡಿ ಯಾರು ಭಿಕ್ಷೆ ಕೊಡುತ್ತಾರೆ? ಯಾರಾದರೂ ಮಗುವಿನ ಮುಖನೋಡಿಯಾದರೂ ನನಗೆ ಒಂದಿಷ್ಟು ಭಿಕ್ಷೆ ನೀಡುತ್ತಿದ್ದರು... ಏನೋ ಒಂದೇ ದಿನದ ಜ್ವರದಲ್ಲಿ ಆ ಕೂಸೂ ಹೊರಟುಹೋಯಿತು. ಯಾರಿಗೂ ಬೇಡದ ಕೂಸು.... ಅನ್ಯಾಯದ ಬಸಿರು....ಯಾರೋ ಆಸ್ಪತ್ರೆಯಲ್ಲಿ ತೊರೆದು ಹೋಗುತ್ತಿದ್ದರು. ಅದು ಕೆಲವು ದಿನ ಅವಳ ಉದರ ನಿರ್ವಹಣೆಯ ಸಾಧನವಾಯಿತು. ತನ್ನ ಕೆಲವು ದಿನಗಳ ಲೋಕದ ಆಟ ಮುಗಿಸಿ ಹೊರಟುಹೋಯಿತು....ಅವಳಿಗೆ ಅದರ ಕುರಿತು ಚಿಂತೆಯೂ ಇರಲಿಲ್ಲ. ಬೇಸರವೂ ಇರಲಿಲ್ಲ. ಆದರೆ ಆಕೆ ಕೇಳಿದ್ದಳು.... ಕೊಡುವವಳಿಗೇನು ಸ್ವಾಮಿ? ಬೇಡದ ಮಕ್ಕಳಿಗೆ ಕೊರತೆಯೋ...? ಹೆತ್ತವರಿಗಿಲ್ಲದ ವ್ಯಾಮೋಹ ನಮಗೆ ಹೊಟ್ಟೆಗೆ ಗತಿಯಿಲ್ಲದ ಭಿಕ್ಷುಕರಿಗೆಯೆ.....?

ಹೌದು ಆಕೆಯ ಮಾತು ನಿಜ ಎನಿಸಿತು.... ನಾನು ನಿಶ್ಚಲನಾಗಿ ಕಂಬದಂತೆ ನಿಂತು ನಿಟ್ಟುಸಿರಿಟ್ಟೆ. ನನಗರಿವಿಲ್ಲದಂತೆಯೇ ಎರಡು ಹನಿ ಕಂಬನಿ ನನ್ನ ಕಣ್ಣಿಂದ ಉದುರಿತು....ಅದು ಯಾರಿಗಾಗಿ.... ಆ ಅನಾಥ ಭಿಕ್ಷುಕಿಗಾಗಿಯೋ, ಅಲ್ಲ ಹೆತ್ತವರಿಗೇ ಬೇಡದ ಮಕ್ಕಳಿಗಾಗಿಯೋ!

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾರ್ಟಿಯವರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಫೋನ್ : 526

ಸಂಪುಟ ೪೮
ಸಂಚಿಕೆ ೩೨
VOL. 48
No. 32

1921 ಸ್ಥಾಪನೆ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೪—೪—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಈ ಅಶಿಸ್ತಿಗೆ ಕೊನೆ ಎಲ್ಲಿ?

ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ವಿದ್ಯಾರಂಗದಲ್ಲಿ ನಾವು ಅಪಾರವಾದ ಪ್ರಗತಿ ಸಾಧಿಸಿದ್ದೇವೆ; ಶಾಲೆ ಕಾಲೇಜುಗಳ ಸಂಖ್ಯೆ ಭರದಿಂದ ಹೆಚ್ಚುತ್ತಿದೆ; ಲಕ್ಷೋಪಲಕ್ಷ ಮಕ್ಕಳು ವಿದ್ಯಾವಂತರಾಗುತ್ತಿದ್ದಾರೆ ಎಂಬ ಪ್ರಗತಿಯ ಚಿತ್ರವನ್ನು ಸರಕಾರ ನಮ್ಮ ಕಣ್ಣ ಮುಂದೆ ಇಡುತ್ತಿರುವ ವೇಳೆಯಲ್ಲೇ ವಿದ್ಯಾಮಟ್ಟದ ಕುಸಿತ, ವಿದ್ಯಾರ್ಥಿಗಳಲ್ಲಿ ಅಶಿಸ್ತು, ಪ್ರಶ್ನಪತ್ರಿಕೆಗಳು ಪರೀಕ್ಷೆಗೆ ಮೊದಲೇ ಬಯಲಾಗುವುದೇ ಮೊದಲಾದ ಅನಿಷ್ಟಕಾರಕ ಸುದ್ದಿಗಳನ್ನು ನಾವು ಕೇಳುತ್ತಿದ್ದೇವೆ. ಇತ್ತೀಚೆಗೆ ಹಾಸನದಲ್ಲಿ ಕಾಲೇಜಿನ ಅಧ್ಯಾಪಕರೊಬ್ಬರ ಮೇಲೆ ರಾತ್ರಿ ಕೆಲವು ವಿದ್ಯಾರ್ಥಿಗಳು ಹಲ್ಲೆ ನಡೆಸಿ ಅಧ್ಯಾಪಕರು ತೀವ್ರವಾಗಿ ಗಾಯಗೊಂಡು ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತೆಂಬ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಸುದ್ದಿ ನಮ್ಮ ಯುವ ಜನಾಂಗದ ಅಧಃಪತನಕ್ಕೆ ಸಾಕ್ಷಿ ನೀಡುತ್ತಿದೆ. ಎಲ್ಲರೂ ನಾಚಿಕೆ ಪಡಬೇಕಾದ ಘಟನೆ ಇದು ಎನ್ನದೆ ಗತ್ಯಂತರವಿಲ್ಲ.

'ಆಚಾರ್ಯ ದೇವೋ ಭವ' ಎಂದು ಶಾಸ್ತ್ರಕಾರರು ನುಡಿದ ಈ ದೇಶದಲ್ಲಿ ಆ ಪುರಸ್ಕರಿಸಿದವರ ಪ್ರಾಣಕ್ಕೇ ಸಂಚಕಾರ ತರುವಂತಹ ಈ ಘಟನೆ ನಡೆಯಿತೆಂದ ಮೇಲೆ ಇದು ಎಲ್ಲರೂ ಗಂಭೀರವಾಗಿ ಪರಿಶೀಲಿಸಬೇಕಾದ ವಿಷಯ. ಅಧ್ಯಾಪಕರೆಂದರೆ ಗೌರವ, ಅಂಜಿಕೆ, ಭಯ, ಭಕ್ತಿ ಮೂಡುತ್ತಿತ್ತು ಒಂದು ಕಾಲ ವಿದ್ಯಾರ್ಥಿಗಳ ಮನಸ್ಸಿನಲ್ಲಿ. ಇಂದು ಅಧ್ಯಾಪಕರೆಂದರೆ ಸಂಬಳ ಪಡೆದು ಪಾಠ ಹೇಳುವ ಕೂಲಿಗಾರರುಗಳು ಎಂದು ವಿದ್ಯಾರ್ಥಿಗಳು ಭಾವಿಸಿದಂತಿದೆ. ಶಾಲೆ ಕಾಲೇಜುಗಳಲ್ಲಿ ಮುಷ್ಕರದ ಮಾತು ದಿನೇ ದಿನೇ ಹೆಚ್ಚುತ್ತಿದೆ. ವಿದ್ಯಾರ್ಥಿಗಳ ಸಂಘಟನೆಗಳು ಅಪಾಯಕಾರಿ ಸ್ವರೂಪದಲ್ಲಿ ಸಾಗುತ್ತಿವೆ. ದೇಶದ, ಮುಖ್ಯವಾಗಿ ವಿದ್ಯಾರಂಗದ ಭವಿಷ್ಯವನ್ನೇ ಹಾಳುಗೆಡಹುವ ಪಥದಲ್ಲಿ ಅದು ಮುಂದುವರಿಯುತ್ತಿದೆ.

ಪರೀಕ್ಷೆಯಲ್ಲಿ ಕಾಪಿ ಮಾಡಿದ ವಿದ್ಯಾರ್ಥಿಗಳ ಕುರಿತು ಪ್ರಿನ್ಸಿಪಾಲರಲ್ಲಿ ದೂರಿತ್ತುದು ಆ ವಿಭಾಗದ ಕಾಲೇಜು ಅಧ್ಯಾಪಕರು ಮಾಡಿದ 'ಅನ್ಯಾಯ' ವಿದ್ಯಾರ್ಥಿಗಳ ದೃಷ್ಟಿಯಲ್ಲಿ. ಇದಕ್ಕಾಗಿ ಬಡ ಅಧ್ಯಾಪಕರಿಗೆ ಆಸ್ಪತ್ರೆಯ ವಾಸ. ತಪ್ಪು ಮಾಡಿದವನನ್ನು ಕಂಡೂ ನಿಯಮ ವಿರೋಧವನ್ನು ನೋಡಿಯೂ ಸುಮ್ಮನಿರಬೇಕೆಂಬುದೇ ಇದರ ಅರ್ಥ. ಇದೇ ರೀತಿಯ ಮನೋಭಾವ ನಮ್ಮ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬೆಳೆಯುತ್ತಾ ಬಂದರೆ ಇದು ಭವಿಷ್ಯವನ್ನು ಎಲ್ಲಿಗೆ ತಂದು ಮುಟ್ಟಿಸೀತೆಂಬುದು ಎಲ್ಲರೂ ಯೋಚಿಸಬೇಕಾದ ವಿಷಯ.

ವಿದ್ಯಾರ್ಥಿಗಳ ಈ ಗೂಂಡಾವೃತ್ತಿಗೆ ಕಾರಣವೇನು? ಮುಖ್ಯವಾಗಿ ಹೇಳುವುದಾದರೆ ಇದು ನಮ್ಮ ಸರಕಾರದ ಧರ್ಮಾರ್ಥ ಶಿಕ್ಷಣದ ಪ್ರಭಾವ. ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾರ್ಥಿ ಶಾಲಾ ಶುಲ್ಕ ತೆರಬೇಕಾಗಿಲ್ಲ. ಎಲ್ಲರಿಗೂ ಧರ್ಮಾರ್ಥ ಶಿಕ್ಷಣ. ಇದರಿಂದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮಹಾಪೂರ. ಎಸ್.ಎಸ್.ಎಲ್.ಸಿ. ಪಾಸಾದನೆಂದರೆ ಕಾಲೇಜು ತುಳಿಯದೆ ಯಾರೂ ಬಿಡುವಂತಿಲ್ಲ. ಧರ್ಮಾರ್ಥ ಶಿಕ್ಷಣದಿಂದ ವಿದ್ಯಾರ್ಥಿಗಳ ರಕ್ಷಕರಿಗೆ, ತಮ್ಮ ಮಕ್ಕಳ ವಿದ್ಯೆಯ ಕುರಿತು ಹೆಚ್ಚಿನ ಗಮನವಿಲ್ಲ. ಕಾರಣ, ವಿದ್ಯೆಗಾಗಿ ಖರ್ಚು ಮಾಡುವ ವೆಚ್ಚದ ಬಿಸಿ ಅವರಿಗೆ ತಗಲುವುದಿಲ್ಲ. ಜತೆಯಲ್ಲೇ ಮಕ್ಕಳ ಅಭಿವೃದ್ಧಿಯ ಕುರಿತು ಅವರು ಅಜ್ಞಾನಿಗಳು. ಬಹುತೇಕ ರಕ್ಷಕರಿಗೆ ತಮ್ಮ ಮಕ್ಕಳು ಯಾವ ತರಗತಿಯಲ್ಲಿ ಕಲಿಯುತ್ತಿರುವರೆಂಬುದೇ ತಿಳಿದಿರುವುದಿಲ್ಲ.

ಈ ಕಾರಣದಿಂದ ವಿದ್ಯಾರ್ಥಿಗಳು ಸರ್ವಸ್ವತಂತ್ರರು. ಅವರು ಕಡಿವಾಣವಿಲ್ಲದ ಕುದುರೆಗಳು, ಅದರ ಫಲ ಈ ಎಲ್ಲಾ ಅಪ್ರಿಯಕಾರಕ ಘಟನೆಗಳು. ಎರಡನೆಯದಾಗಿ ಇಂದು "ಪರೀಕ್ಷೆ" ಎನ್ನುವುದು ವಿದ್ಯಾರ್ಥಿಗಳ ಪಾಲಿಗೆ ಒಂದು ಮಹಾಭೂತವಾಗಿ ಪರಿಣಮಿಸಿದೆ. ಇದಕ್ಕೆ ಇಂದಿನ ಪರೀಕ್ಷಾ ಪದ್ಧತಿಯೇ ಕಾರಣವಾಗಿರಲೂ ಬಹುದು. ವರ್ಷವಿಡೀ ಕಾಲೇಜಿನಲ್ಲಿ ಮಜಾಮಾಡಿ, ಕ್ಲಾಸುಗಳಿಗೆ ಚಕ್ಕರ್ ಹೊಡೆದು ಕಾಲ ತಳ್ಳಿದ ವಿದ್ಯಾರ್ಥಿಗೂ ತಾನು ಪರೀಕ್ಷೆಯಲ್ಲಿ ಪಾಸಾಗಬೇಕೆಂಬ ಹಂಬಲ. ಈ 'ಪಾಸು' ಗಳ ಸಲುವಾಗಿ ಇನ್ನಿಲ್ಲದ ಒದ್ದಾಟ. ಒಂದೇ ಪ್ರಶ್ನಪತ್ರಗಳ ಬೇಟೆ, ಇಲ್ಲವೇ ಎಕ್ಸಾಮಿನರುಗಳ ಬೇಟೆ, ಇಲ್ಲದೆ ಹೋದರೆ ಇವೆಲ್ಲವುಗಳಿಗಿಂತ ಸುಲಭವಾದ 'ಕಾಪಿ' ಹೊಡೆಯುವ ರೀತಿ. ಇದಕ್ಕೆ ಅಡ್ಡ ಬಂದವನಿಗೆ ಹಾಸನದ ಅಧ್ಯಾಪಕರಿಗಾದ ಗತಿಯೇ ಆದೀತೆಂಬ ಮುನ್ನೆಚ್ಚರಿಕೆ. 'ಮಗ ಹೇಗಾದರೂ ಪಾಸಾದರೆ ಸರಿ' ಎಂಬ ತಂದೆತಾಯಿಗಳ ಆಸೆ ಇದಕ್ಕೆ ಪೂರಕ. ಹೀಗಾದರೆ ಮುಂದೇನು?

ವಿದ್ಯಾರ್ಥಿಗಳು ಇಂದು ರಾಜಕಾರಣಿಗಳ ದಾರಿ ತುಳಿಯುತ್ತಿದ್ದಾರೆ. ಪ್ರತಿಯೊಂದಕ್ಕೂ ಮುಷ್ಕರ, ಉಪವಾಸ, ಧರಣಿ ಮುಷ್ಕರ. ಪರೀಕ್ಷೆಗಳು ಬೇಡ, ಪ್ರಶ್ನಪತ್ರಿಕೆಗಳು ಕಠಿಣ, ಸಿಲೆಕ್ಷನ್ ಕೊಡಬೇಕು. ಇವೆಲ್ಲ ಅವರ ಬೇಡಿಕೆಗಳು. ಶಿಸ್ತುಪಾಲನೆಗೆ ಇದರಿಂದಾಗಿ ಮಹಾಗಂಡಾಂತರ. ತಂದೆತಾಯಿಗಳು ಈ ಕಲುಷಿತಕ್ಕೆ ದೂರವಾದವರಲ್ಲ. ಬುದ್ಧಿ ಹೇಳದ, ಶಿಕ್ಷಿಸದ ತಂದೆತಾಯಿಗಳಿಗೆ ಮಕ್ಕಳಿಂದ 'ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂಬ ಬೆದರಿಕೆ! ಈ ಬೆದರಿಕೆಯ ಬಿಸಿಯಿಂದ ತಂದೆತಾಯಿಗಳು ನಿಸ್ಸಹಾಯಕರು. ನಮ್ಮ ಯುವಜನದ ಬುದ್ಧಿಮಟ್ಟ ಈ ದಿಸೆಯಲ್ಲಿ ಸಾಗುತ್ತಿದೆ.

ಈ ಅಶಿಸ್ತಿಗೆ ಕೊನೆಯೆಲ್ಲಿ? ಇದೇ ಪರಿಸ್ಥಿತಿ ಮುಂದುವರಿದರೆ ನಮ್ಮ ಶಾಲೆ ಕಾಲೇಜುಗಳ ಗತಿ ಏನು? ವಿದ್ಯಾರಂಗದ ಭವಿಷ್ಯ ಹೇಗೆ ನಿಂತೀತು. ಕಾಲೇಜುಗಳ ಅಧ್ಯಾಪಕರು ಇನ್ನು ಪರೀಕ್ಷೆಗಳ ಮೇಲ್ವಿಚಾರಕರಾಗಿ ಕೆಲಸ ಮಾಡಲು ಖಂಡಿತಾ ಒಪ್ಪಲಿಕ್ಕಿಲ್ಲ. ಅಂದರೆ, ಪರೀಕ್ಷೆಯ ಕಾಲ ಬಂದೂಕುಧಾರಿಗಳಾದ ಮಿಲಿಟರಿ ಜನರನ್ನೇ ಮೇಲ್ವಿಚಾರಕರಾಗಿ ನೇಮಿಸಬೇಕಾದೀತೆ? ಆದರೂ ಈ ಘಟನೆ ನಡೆಯದೆ ಇರಲಾರದು ಎಂಬ ಭರವಸೆಗೆ ಎಡೆಯಿಲ್ಲ.

ಪ್ರತಿಯೊಂದಕ್ಕೂ ಹಿಂಸಾಚಾರವೇ ಮದ್ದು ಎಂಬ ಭಾವ ಇಂದು ಜನರಲ್ಲಿ ವಿದ್ಯಾರ್ಥಿಗಳಲ್ಲಿ ಬಲಿತಿದೆ. ಈ ತಪ್ಪು ಭಾವನೆಯನ್ನು ಕಿತ್ತೊಗೆಯದೆ ಗತ್ಯಂತರವಿಲ್ಲ. ತಪ್ಪಿತಸ್ಥರಿಗೆ ಘೋರ ಶಿಕ್ಷೆಯಾಗದ ಹೊರತು ಕಾಲೇಜು ಅಧ್ಯಾಪಕರಿಗೆ ಉಳಿಗಾಲವಿಲ್ಲ. ಅವರ ಜೀವಕ್ಕೆ ಭದ್ರತೆಯಿಲ್ಲ. ಅಂತಹ, ಬುದ್ಧಿವಂತರ ಶಿಕ್ಷಣ ತಜ್ಞರು ಕಾಲೇಜು ಅಧ್ಯಾಪಕರ ಹುದ್ದೆಗೆ ಬರುವುದು ಕಡಿಮೆಯಾಗಿ ವಿದ್ಯಾಮಟ್ಟ ಇನ್ನಷ್ಟು ಕುಸಿಯುತ್ತದೆ.

ಸರಕಾರ, ವಿಶ್ವವಿದ್ಯಾಲಯದವರು ಹಾಗೂ ರಕ್ಷಕರು ಈ ಕುರಿತು ತೀವ್ರವಾಗಿ ಯೋಚಿಸಬೇಕು. ಅಧ್ಯಾಪಕರಿಗೆ ರಕ್ಷಣೆ ಒದಗಿಸಬೇಕು. ಪರೀಕ್ಷೆಗಳಲ್ಲಿ ನಡೆಯುವ ತೆರೆಯ ಮರೆಯ ಕಾರ್ಯಗಳಿಗೆ ಕೊಡಲಿಯೇಟು ಹಾಕಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಇಲ್ಲವಾದರೆ, ಈ ಪರಂಪರೆ ಮುಂದಕ್ಕೂ ಬೆಳೆದು, ಇತರ ಕಡೆಗಳಿಗೂ ವ್ಯಾಪಿಸಬಹುದು. ಪರೀಕ್ಷೆಗಳಲ್ಲಿ ಸ್ಥಳೀಯ ಅಧ್ಯಾಪಕರಿಗೆ ಪ್ರಾಶಸ್ತ್ಯವಿರಬೇಕು. ವಿದ್ಯಾರ್ಥಿಯ ಇಡೀ ವರುಷದ ಪ್ರಗತಿಯನ್ನಾಧರಿಸಿ ಡಿಗ್ರಿಗಳನ್ನು ಕೊಡುವ ಕ್ರಮ ಅನುಸರಿಸಿದರೆ ಸ್ವಲ್ಪವಾದರೂ ಅಧ್ಯಾಪಕರಲ್ಲಿ ಭಯ, ವಿದ್ಯಾರ್ಥಿಗಳಿಗೆ ಮೂಡೀತು. ಹೆತ್ತವರೂ ತಮ್ಮ ಮಕ್ಕಳ ಗುಣನಡತೆಗಳತ್ತ ತುಸು ಹೆಚ್ಚಿನ ಜಾಗ್ರತೆ ವಹಿಸುವುದು ಒಳ್ಳೆಯದು. ಇಲ್ಲವಾದರೆ ಮುಂದೆ ನಮಗೆ ದೇವರೇ ಗತಿ!

ಹಾಸನದಲ್ಲಿ ನಡೆದಂತಹ ಅಪ್ರಿಯ ಘಟನೆಗಳಿಗೆ ಕಾರಣರಾದವರ ಮೇಲೆ ಸರಕಾರ ಹಾಗೂ ವಿಶ್ವವಿದ್ಯಾಲಯದವರು ಗಂಭೀರವಾದ ಕ್ರಮಕೈಕೊಳ್ಳುವುದರಲ್ಲಿ ವಿಳಂಬ ಮಾಡಬಾರದು. ನಮ್ಮ ಭವಿಷ್ಯವನ್ನೇ ಅಡಿಮೇಲು ಮಾಡುವ, ವಿದ್ಯಾರಂಗವನ್ನು ಹಾಳುಗೆಡಹುವ ಈ ರಾಕ್ಷಸ ಪ್ರವೃತ್ತಿಗೆ ಮುಟ್ಟುಗೋಲು ಹಾಕಲೇಬೇಕು. ಇದರಲ್ಲಿ ಯಾವ ರಾಜಕೀಯಕ್ಕೂ ಎಡೆ ಇರಬಾರದು, ದಾಕ್ಷಿಣ್ಯ ಇರಬಾರದು. ಉದಾಸೀನ ಭಾವದಿಂದ ಈ ಘಟನೆಯನ್ನು ಬಿಟ್ಟುಬಿಟ್ಟರೆ, ಅದೇ ನಮಗೆ ಮುಂದೆ ನಮ್ಮ ಪ್ರಗತಿಯ ಹಾದಿಯಲ್ಲಿ ಕಂಟಕವಾಗಿ ನಿಂತೀತು ಎಂಬುದನ್ನು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು.

Hindu Higher Elementary School, Kemmannu (S K.)

Applications are invited from Secondary Grade Trained and untrained Teachers (from the School locality) to serve in vacancies likely to occur during the year 1969—70 so as to reach the undersigned on or before 15—5—1969 Selected candidates are expected to report for duty on 1—6—'69. Untrained teachers will be appointed after the receipt of formal exemption from the Inspector of Schools, Udipi

P. K Venkata Rao.
Manager and Correspondent,
Hindu (Aided) Higher Ele.School,
P. O Kemmannu Udipi, S-K.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

P. & S C No 5/69.

1. Mrs. ಎಲಿಜಾ ಡಿ'ಸೋಜ, ಮಾರ್ಸೆಲ್ ರುಫ್ರಿನ್ನ ಮಗಳು; 2 ಗ್ರೆಗೊರಿ ಡಿ'ಸೋಜ, 3 ಜುಲ್ಯೆಟ್ ಡಿ'ಸೋಜ, 4. ಎಗ್ನೆಟ್ ಡಿ'ಸೋಜ, 5. ಯಿಡಾ ಡಿ'ಸೋಜ; 6. ವಿಲಿಯಮ್ ಡಿ'ಸೋಜ; 7. ಅನಿತಾ ಡಿ'ಸೋಜ—ವೆಲೆರಿನ್ ಜಾಕೋಬ್ ಡಿ'ಸೋಜರ ಮಕ್ಕಳು, ಉಡುಪಿ ತಾಲೂಕು ಮೂಡುತೋನ್ಸೆ ಗ್ರಾಮದ ಕಲ್ಯಾಣಪುರದಲ್ಲಿರುವವರು. —ಅರ್ಜಿದಾರರು

ಯಿದಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದ್ರೆ—

ಮೃತ ವೆಲೆರಿನ್ ಜಾಕೋಬ್ ಡಿ'ಸೋಜರಿಗೆ ಅರ್ಜಿಯಲ್ಲಿ ವಿವರಿಸಿದಂತೆ ಬಹಾಸಾಲ ವಗೈರೆಯನ್ನು ವಸೂಲು ಪಡೆಯುವರೆ 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ 1ನೇ ಅರ್ಜಿದಾರಳು ಸ್ವತಃ ಮತ್ತು ತನ್ನ ಮೈನರ್ ಮಕ್ಕಳಾದ ಮಿಕ್ಕ ಅರ್ಜಿದಾರರ ಗಾರ್ಡಿಯನಳಾಗಿ ಸಹಾ ದಾಖಲು ಮಾಡಿದ ಅರ್ಜಿಯು ತಾ. 15-6-1969ಕ್ಕೆ ಇಟ್ಟಿದೆ. ಆಕ್ಷೇಪವುಳ್ಳವರು ಆ ದಿವಸ ಬೆಳಿಗ್ಗೆ 10 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉಜಾರು ಸಲ್ಲಿಸತಕ್ಕದ್ದು.

By order of Court.
Sd / Sri D. P. KOTIANKAR.
B A., L.L. B,
ಅರ್ಜಿದಾರರ ಕಡೆ ಎಡ್ವೊಕೇಟ್.
ಉಡುಪಿ, D/19-4-69.

ಪ್ರಾಣಿಯು ಸತ್ತ ಬಳಿಕ ಏನು?

ಆತ್ಮಸಮೂಹದಲ್ಲಿ ಸಂಯೋಗ ರಸ-ರೂಪ ವಿಜ್ಞಾನಾತ್ಮವು ಅಸಂಗವಾಗಿದೆಯೆಂದು ನಂಬಿದರೂ ಅದರ ವ್ಯತ್ಯಾಸ ಪ್ರಸಂಗವು ಆಸಕ್ತಿಯ ವ್ಯಕ್ತವಾಗಿದೆ. ಇದರಲ್ಲಿ ಪ್ರಜ್ಞಾನಾತ್ಮದ ಸಂಬಂಧವೂ ಇದೆ. ಆದದರಿಂದಲೇ ಈ ವಿಜ್ಞಾನಾತ್ಮವು ಶರೀರದಲ್ಲಿ ನೆಲಸಿರುವವರೆಗೆ ದಿನ ಕರ್ಮಗಳು ಅನುಭವಕ್ಕೆ ಬರುತ್ತಿರುತ್ತವೆ; ವಿಸ್ಮೃತಿಯ ಮಾಲಿನ್ಯದಲ್ಲಿ ಇವುಗಳು ಇನ್ನೂ ಅದೂ ವಿಲೀನವಾಗುತ್ತದೆ; ಅಲ್ಪವಾಗಿರುತ್ತದೆ. ಆದರೆ, ಮೃತ್ಯುವಿನ ಸಮಯದಲ್ಲಿ ತನ್ನ ಅಂಗಾಂಗಗಳ ಸಂಬಂಧವನ್ನು ಮುರಿದು, ಪ್ರಜ್ಞಾನಾತ್ಮ ಸಹಿತ ಎಲ್ಲಾ ಇಂದ್ರಿಯಗಳನ್ನು ಕೂಡಿಕೊಂಡು ಹೃದಯದ ತುದಿ ಭಾಗಕ್ಕೆ ಬಂದು ಮುಟ್ಟುತ್ತದೆ. ಆ ಸಮಯ ಶರೀರದ ಯಾವುದೇ ಅಂಗದಲ್ಲಿ ಅದು ಗೋಚರವಾಗುವುದಿಲ್ಲ. ಅದು ಮಾತಾಡುವುದಿಲ್ಲ, ಕೇಳುವುದಿಲ್ಲ. ಹೃದಯದ ಬಡಿತವೇ ಆತ್ಮದ ಇರುವಿಕೆಯನ್ನು ಸೂಚಿಸುತ್ತದೆ.

ಆ ವೇಳೆಯಲ್ಲಿ ವಿಜ್ಞಾನಾತ್ಮ ಮತ್ತು ಪ್ರಜ್ಞಾನಾತ್ಮಗಳೊಡನೆ ಮುಖ್ಯ ಪ್ರಾಣಾತ್ಮವು ತನ್ನ ಸಂಪೂರ್ಣ ಕಲಾ ಸಮೇತವಾಗಿ ಹೃದಯದಲ್ಲಿ ತನ್ನ ಕಾರ್ಯ ಮಾಡುತ್ತಿರುತ್ತದೆ. ಆದುದರಿಂದಲೇ ಸಾಯುವುದಕ್ಕೆ ಮೊದಲು ಸಾಯುವವನ ಹೃದಯದಲ್ಲಿ ಜ್ಞಾನವಿರುತ್ತದೆ. ಈ ಜ್ಞಾನ ಪ್ರಕಾಶದೊಡನೆ ಎಲ್ಲ ಇಂದ್ರಿಯ ಮತ್ತು ಪ್ರಾಣಗಳೊಡನೆ ಕೂಡಿಕೊಂಡು ಮುಖ್ಯ ಪ್ರಾಣಾತ್ಮವು ಬ್ರಹ್ಮರಂಧ್ರದ ಮೂಲಕ ಹೊರಹೋಗುತ್ತದೆ. ವಿಜ್ಞಾನದಿಂದ ಕೂಡಿದ ಪ್ರಜ್ಞಾನಾತ್ಮದಲ್ಲಿ ಪಾಪ ಮತ್ತು ದುರ್ವಾಸನೆಗಳು ತುಂಬಿದ್ದರೆ, ಅದರ ಪ್ರಮಾಣಕ್ಕನುಸಾರವಾಗಿ ವಿಜ್ಞಾನವು ಮತ್ತು ಪ್ರಾಣಾತ್ಮವು ಕೆಳಗೆ ಬಾಗಬೇಕಾಗುತ್ತದೆ. ಆದುದರಿಂದಲೇ ಅದು ಬ್ರಹ್ಮರಂಧ್ರವನ್ನು ಬಿಟ್ಟು ಕಣ್ಣು, ಬಾಯಿ, ಮೂಗು ಮೊದಲಾದುವುಗಳಿಂದ ಹೊರಹೋಗುತ್ತದೆ. ಮರಣ ವೇಳೆ ಯಾವ ಅಂಗದಲ್ಲಿ ಪ್ರಾಣಾತ್ಮವು ಉತ್ಕ್ರಮಣವಾಗುತ್ತದೆಯೋ ಅದು ವಿಕೃತವಾಗುತ್ತದೆ. ಎಲ್ಲ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಪಾಪಿಷ್ಠ ಪ್ರಾಣಾತ್ಮ, ವಿಜ್ಞಾನಾತ್ಮ ಮತ್ತು ಪ್ರಜ್ಞಾನಾತ್ಮಗಳು ಉತ್ಕ್ರಮಿತ ಪ್ರಾಣಾತ್ಮದಲ್ಲಿ ಉತ್ಕ್ರಮಣ ಮಾಡುತ್ತಿರುತ್ತವೆ. ಇತರ ಭೂತಗಳ ಅನುಶಯವೂ ಉತ್ಕ್ರಮಿತವಾಗುತ್ತದೆ. ಉತ್ಕ್ರಮಣಾನಂತರ ಸ್ವಲ್ಪಕಾಲದಲ್ಲಿ ಮಾನವನಾಗಿರುವವನು ಪ್ರಜ್ಞೆ ಮಾತ್ರ ಇರುತ್ತದೆ.

ಈ ರೀತಿಯಾಗಿ ಶರೀರವನ್ನು ಬಿಟ್ಟು ಹೊರಟ ಪ್ರಾಪಂಚಿಕ ಆತ್ಮಸಮೂಹವು ಕೃಷ್ಣ-ಶುಕ್ಲ ಮತ್ತು ಉತ್ಪತ್ತಿ-ವಿನಾಶ ಮಾರ್ಗದಲ್ಲಿ ಮುಂದುವರಿಯುತ್ತದೆ. ಈ ಪ್ರಾಣಾತ್ಮ, ಪ್ರಜ್ಞಾನಾತ್ಮ ವಿಜ್ಞಾನಾತ್ಮ ಮತ್ತು ಮಹಾ ಆತ್ಮಗಳ ಸಮೂಹವನ್ನು ಸೂಕ್ಷ್ಮ ಶರೀರವೆಂಬ ಹೆಸರಿನಿಂದ ಕರೆಯುತ್ತಾರೆ. ಈ ದೇವಚಿತಿ-ರೂಪ ಕ್ಷರ ಪುರುಷರಲ್ಲಿ, ಇವುಗಳಲ್ಲಿ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತೈದು ಪ್ರಾಣಗಳಲ್ಲದೆ ಮನಸ್ಸು ಹಾಗೂ ಬುದ್ಧಿ—ಈ ಹದಿನೇಳು ತತ್ತ್ವಗಳು ಕೂಡಿರುತ್ತವೆ.

ಈ ತತ್ತ್ವಗಳು ಎಲ್ಲಿ ಹೋಗುತ್ತವೆ? ಅವುಗಳಿಗೆ ಪ್ರತಿಕ್ಷಣವೂ ಯಾರು ಆಕರ್ಷಣ ಗತಿ ಕೊಡುತ್ತಿರುತ್ತಾರೆ?

ವೈಜ್ಞಾನಿಕ ಪ್ರಕ್ರಿಯೆಯಿಂದ ವಿಚಾರಿಸುವಾಗ ಸಜಾತೀಯ ಆಕರ್ಷಣೆಯ ಸಿದ್ಧಾಂತವು ಮುಂದೆ ನಿಲ್ಲುತ್ತದೆ. ವ್ಯಕ್ತಿಯು ಸಮಷ್ಟಿಯತ್ತಲೇ ಹರಿಯುತ್ತದೆ. ಸೂಕ್ಷ್ಮ ಶರೀರದ ಹದಿನೇಳು ತತ್ತ್ವಗಳಲ್ಲಿ ಮನಸ್ಸು ಪ್ರಧಾನವಾದುದು. ಅದು ಚಂದ್ರನ ಅಂಶ. ಆದುದರಿಂದ ಚಂದ್ರನ ಆಕರ್ಷಣೆಯಿಂದ ಅದು ಚಂದ್ರಲೋಕದತ್ತ ಸರಿಯುವುದು ಸ್ವಾಭಾವಿಕ. ಅದು ಕೃಷ್ಣ ಮಾರ್ಗವನ್ನು ಅನುಸರಿಸುವುದು. ಅದುವೇ ದಿವ್ಯ ಪಿತೃಗಳ ಲೋಕ; ಪಿತೃನಿವಾಸ. ಮನಸ್ಸುಮೊದಲಿಗೆ ಮೃತ ಪ್ರಾಣಿಗೆ ಪಿತೃಲೋಕ ಪ್ರಾಪ್ತಿಯಾಗುತ್ತದೆ. ಆದರೆ, ಮನಸ್ಸಿನ ಪ್ರಾಧಾನ್ಯವನ್ನು ಬುದ್ಧಿಜ್ಞಾನಗಳಿಗೆ ನೀಡುವುದಾದರೆ, ಬುದ್ಧಿಯು ಸೂರ್ಯನ ಅಂಶವಾದುದರಿಂದ ಅದು ಸೂರ್ಯನ ಆಕರ್ಷಣೆಗೊಳಗಾಗುವುದು. ಯೋಗಿ, ತಪಸ್ವಿ, ಪ್ರಬಲ ಸಾಧಕ ವಿಜ್ಞಾನಾತ್ಮವನ್ನು ವಿಕಸಿತಗೊಳಿಸಿ ಸೂರ್ಯಮಂಡಳದತ್ತ ಸರಿಯಬಲ್ಲರು. ಸೂರ್ಯಮಂಡಳವು ದೇವಪ್ರಾಣಗಳ ಸಮಷ್ಟಿ; ಅದು ಸದಾ ಪ್ರಕಾಶಮಾನವಾಗಿದೆ. ಆದುದರಿಂದಲೇ ಅದನ್ನು ಶುಕ್ಲ ಮಾರ್ಗವೆನ್ನುತ್ತಾರೆ.

ಈ ಯೆರಡು ಊರ್ಧ್ವ ಮಾರ್ಗಗಳನ್ನು ಬಿಟ್ಟು ಭೂಸಂಬಂಧದಿಂದಾಗುವ ಮೂರನೆಯ ಮಾರ್ಗ ಉತ್ಪತ್ತಿ-ವಿನಾಶ ಮಾರ್ಗ. ವೇದಗಳು ಇದು ಅಧೋಮಾರ್ಗವೆಂದು ಇದಕ್ಕೆ ಒಪ್ಪಿಗೆ ಕೊಡುವುದಿಲ್ಲ. ಅವು ಸ್ಪಷ್ಟವಾಗಿ ಹೇಳುತ್ತವೆ—

> ದ್ವೇ ಸೃತೀ ಅಶೃಣವಂ ಪಿತೄಣಾಂ
> ಅಹಂ ದೇವಾನಾಮುತ ಮರ್ತ್ಯಾನಾಂ
> ತಾಭ್ಯಾಮಿದಂ ವಿಶ್ವಮೇಜತ್ ಸಮೇತಿ
> ಯದಂತರಾ ಪಿತರಂ ಮಾತರಂ ಚ ||
> (ಋಗ್ವೇದ ೧೦-೮೮-೧೫)

"ತಂದೆ ಸೂರ್ಯ ಮತ್ತು ತಾಯಿ ಭೂಮಿಗಳ ಮಧ್ಯೆಯಿರುವುದು ವಿಶ್ವ. ಈ ವಿಶ್ವವು ಭೂಮಿಯನ್ನು ತ್ಯಜಿಸಿದರೆ, ಅದಕ್ಕಾಗಿ ನಾನು ಎರಡು ದಾರಿಗಳನ್ನು ಕೇಳಿದ್ದೇನೆ. ಒಂದು ಪಿತೃಮಾರ್ಗ; ಇನ್ನೊಂದು ದೇವಮಾರ್ಗ. ಅಂದರೆ, ಕೃಷ್ಣ ಮತ್ತು ಶುಕ್ಲ ಈ ಎರಡೇ ದಾರಿಗಳು ಮೃತ್ಯುಹೊಂದುವ ಜೀವಿಗಳಿಗೆ ನಿಶ್ಚಿತವಾದುವುಗಳು."

ಭೂಮಿಯ ಪದಾರ್ಥಗಳು ಧನ, ಪಶು, ಗೃಹ ಆದಿಗಳಲ್ಲಿಯೇ ಆಸಕ್ತಿತ ಮನಸ್ಸುಳ್ಳವನು, ಮಾನವಜೀವನವನ್ನೇ ಭೋಗಿಸುವ ಅತೃಪ್ತಿ ತುಂಬಿರುವವನು ಶುಕ್ಲ ಅಥವಾ ಕೃಷ್ಣ ಮಾರ್ಗಗಳಲ್ಲಿ ನಡೆಯಲಾರನು. ಭೂಮಿಯ ಪದಾರ್ಥಗಳ ಮೇಲೆ ಅತ್ಯಂತ ವಾಸನೆಯುಳ್ಳವನಾದದರಿಂದ ಬುದ್ಧಿಯು ಹ್ರಾಸ ಹೊಂದುತ್ತದೆ, ಮಾನಸಿಕ ಶಕ್ತಿಯು ಶಿಥಿಲವಾಗುತ್ತದೆ. "ಜಾಯಸ್ವ ಮ್ರಿಯಸ್ವ" ಚಕ್ರವು ಮತ್ತೆ ಮತ್ತೆ ಮುಂಬರುತ್ತದೆ. ಆದುದರಿಂದಲೇ ಮುಮುಕ್ಷುವಿನ ಬಳಿ ಭೂಮಿಯೊಡನೆ ಮೋಹ ಬೆಳೆಸುವಂತಹ ಯಾವ ಸಂಗ್ರಹವೂ ಇಲ್ಲ.

ಮೋಕ್ಷದ ದಾರಿ ಹಿಡಿಯುವ ಸಮಯದಲ್ಲಿಯೂ ಮುಖ್ಯಜೀವಾತ್ಮನು ಯಾವುದೇ ರೀತಿಯಲ್ಲಿ "ಅಥರ್ವ ಪ್ರಾಣ ಸಂಸ್ಥಾನ"ದ ಅವಸ್ಥೆಯನ್ನು ಹೊಂದಿದರೆ, ಸಂಪೂರ್ಣ ಹೊಸ ದೃಶ್ಯವೆಂದು ಗೋಚರಿಸುವುದು. ಆಕರ್ಷಣೆಯು ಈ ಪ್ರತ್ಯಭಿಜ್ಞೆಯ ರೂಪ ಹೊಂದುವುದು. ಪಾಪ ಮತ್ತು ದುರ್ವಾಸನೆಗಳ ಅಂಧಕಾರದಲ್ಲಿ ಅಡಗಿದ ಅವನ ಉಪಾಸ್ಯವು ಪರಮ ಜ್ಯೋತಿರೂಪದಲ್ಲಿ ಅತನೆದುರು ಬಂದು ನಿಲ್ಲುವುದು. ಆಸಕ್ತಿಯು ಭಕ್ತಿಯೆನಿಸುವುದು.

ಚರಾಚರ ವಿಶ್ವದಲ್ಲಿ ಪರಮಾತ್ಮನ ರೂಪ ನೋಡುವ, ಸುಗುಣ ರೂಪದ ಉಪಾಸಕ ಸಂತ ತುಳಸಿದಾಸರು ಭೂಮಿ ಸಂಬಂಧದಿಂದ ದೂರ ಸರಿಯುವುದಿಲ್ಲ. ಕೃಷ್ಣ ಮತ್ತು ಶುಕ್ಲ ಮಾರ್ಗಗಳ ಸಾಮಾನ್ಯ ಜ್ಞಾನ ಹೊಂದಿಯೂ ಅವರು ಮುಕ್ತಿಗಾಗಿ ಆ ಮಾರ್ಗಗಳಲ್ಲಿ ಮುಂದುವರಿಯುವುದಿಲ್ಲ. ಅವರಿಗೆ ರಾಮನನ್ನು ಸಾಕೇತದಿಂದ ದೂರ ಭೂಮಿಗಿಳಿಸಬೇಕಾಯಿತು.

ತುಳಸೀದಾಸರು ಭಗವಾನ್ ಶಂಕರನನ್ನು ತನ್ನ ಗುರುವೆಂದು ತಿಳಿದಿದ್ದರು. ಶಂಕರನು ಕಾಶಿ—ಮುಕ್ತಿಯಲ್ಲಿ ಎಂತಹ ಪ್ರಕ್ರಿಯೆ ಕೊಡುತ್ತಾನೆಂದು ಅವರಿಗೊತ್ತು. "ರಾಮ"ನೆಂಬ ಎರಡಕ್ಷರದ ತಾರಕ ಮಂತ್ರ ಲಕ್ಷೋಪಲಕ್ಷ ಪ್ರಾಣಿಗಳಿಗೆ ಮುಕ್ತಿ ನೀಡುತ್ತದೆ, ಆ ಜೀವಗಳಿಗೆ ಭಗವಾನ್ ಶಂಕರನು ಕ್ರಮಮುಕ್ತಿಯ ಮಾರ್ಗವನ್ನು ಹೇಳುತ್ತಿದ್ದನೆ, ಕೃಷ್ಣ ಮತ್ತು ಶುಕ್ಲ ಮಾರ್ಗಗಳಲ್ಲಿ ಸಾಗುವ ಪ್ರೇರಣೆ ನೀಡುತ್ತಿದ್ದರೆ ಅವರ ಉದ್ಧಾರವಾಗುವುದೂ ಕಠಿಣವಾಗುತ್ತಿತ್ತು. ಮುಮುಕ್ಷುವಿನ ಕರ್ಣಗಳಲ್ಲಿ ಭಗವಾನ್ ಶಂಕರನ ತಾರಕ ಮಂತ್ರ ಮುಖ್ಯ ಪ್ರಾಣಾತ್ಮವನ್ನು "ಅಥರ್ವ ಪ್ರಾಣ ಸಂಸ್ಥಾನ"ದ ಅವಸ್ಥೆಗೆ ತಂದು ಮುಟ್ಟಿಸುತ್ತದೆ. ಆಕರ್ಷಣೆಯ ಮೇಲೆ ಪ್ರತ್ಯಭಿಜ್ಞೆಯಲ್ಲಿ 'ರಾಮ' ಅವರ ಕಣ್ಣುಗಳ ಮುಂದೆ ಸಾಕಾರವಾಗಿ ಕಾಣುತ್ತಾನೆ. ಬಳಿಕ ಬ್ರಹ್ಮತಿಂದ ಬ್ರಹ್ಮನ ವಿನಿಮಯವಾಗುತ್ತದೆ.

ಸೂಕ್ಷ್ಮ ಶರೀರದ ಈಯೆಲ್ಲಾ ಅವಸ್ಥೆಗಳಲ್ಲಿಯೂ ಆಕರ್ಷಣ ಸಿದ್ಧಾಂತವೊಂದೇ ಸಮನಾಗಿ ಅನ್ವಯಿಸುತ್ತದೆ. ಕೃಷ್ಣ-ಶುಕ್ಲ ಮಾರ್ಗ ಮತ್ತು 'ಜಾಯಸ್ವ ಮ್ರಿಯಸ್ವ' ಮಾರ್ಗವೇ ಮಾತ್ರವಲ್ಲ, "ಅಥರ್ವ ಪ್ರಾಣ ಸಂಸ್ಥಾನ"ದ ಅವಸ್ಥೆಯಲ್ಲಿ ಮುಟ್ಟಿಸುವುದೂ ಸಜಾತೀಯ

(ಒಂಭತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕ್

ದಕ್ಷಿಣ ಮತ್ತು ಉತ್ತರಕ್ಕೂ ಹಬ್ಬಿದೆ

1969 ಪ್ರಥಮ ತ್ರೈಮಾಸಿಕಾವಧಿಯಲ್ಲಿ ಸಿಂಡಿಕೇಟ್ ಬ್ಯಾಂಕ್ ದಕ್ಷಿಣ ಭಾರತದಲ್ಲಿ ಐದು ಮತ್ತು ಉತ್ತರ ಭಾರತದಲ್ಲಿ ಎರಡು ಹೀಗೆ ಒಟ್ಟು ಏಳು ಹೊಸ ಶಾಖೆಗಳನ್ನು ತೆರೆದಿದೆ.

1.	ಕಲ್ಕತ್ತಾ—ದಕ್ಷಿಣ (ಮಹಿಳಾಶಾಖೆ)	22—1—1969ರಂದು
2	ಅಗಸಿಯಂ (ಗೋವಾ)	12—2—1969ರಂದು
3.	ಕರಂಜಾಲೆಂ (ಗೋವಾ)	12—2—1969ರಂದು
4.	ತಿರುವಳ್ಳೂರು (ತಮಿಳುನಾಡು)	20—2—1969ರಂದು
5.	ಕಾಂಚೀಪುರಂ (ತಮಿಳುನಾಡು)	22—2—1969ರಂದು
6.	ಸೂರತ್ (ಗುಜರಾತ್)	3—3—1969ರಂದು
7.	ತಿರುಪತಿ ..	14—3—1969ರಂದು

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಗಾಗಿ ಪ್ರತಿಯೋರ್ವನ ಬ್ಯಾಂಕು

ಸಾಧನ ಸಂಪತ್ತು ರೂ. 140 ಕೋಟಿಗಳಿಗೂ ಮಿಕ್ಕಿ — ಶಾಖೆಗಳು 270ಕ್ಕೂ ಮಿಕ್ಕಿ — ಶ್ರೀ ಕೆ. ಕೆ. ಪೈ, ಚೇರ್ಮನ್

ಪುನರ್ಜನ್ಮವನ್ನು ನಂಬಿಬಿಡಿ

ಜನನ–ಮರಣಗಳು ಪ್ರಾಣಿಸಹಜ. ಇವು ಅನಿವಾರ್ಯ. ಇವುಗಳ ರಹಸ್ಯವೇನು? ಚಿರಕಾಲದಿಂದಲೂ ಮಾನವನು ತಿಳಿಯಬಯಸುತ್ತಿದ್ದ ಈ ಪ್ರಶ್ನೆಯ ಉತ್ತರ ಸ್ಪಷ್ಟವಾಗಿ ಇದುವರೆಗೂ ಹೊಳೆದಿಲ್ಲ. ಮನುಷ್ಯ–ಮನುಷ್ಯರಲ್ಲಿ ಕಂಡು ಬರುವ ಅಂತರವೇಕೆ? ಪ್ರತಿಯೊಬ್ಬರೂ ಒಂದಲ್ಲ ಒಂದು ಬಗೆಯ ಶಾರೀರಿಕ ಪೀಡೆ, ಮಾನಸಿಕ ದುಃಖಗಳನ್ನು ಅನುಭವಿಸುವ ಪ್ರಮೇಯವೇಕೆ ಬರಬೇಕು?—ಇವೆಲ್ಲವೂ ಮತ್ತೆ ಕೆಲವು ಪ್ರಶ್ನೆಗಳು—ಸಮರ್ಪಕ ಉತ್ತರ ದೊರೆಯದವುಗಳೇ ಇವೆ.

ವಿವಿಧ ಧರ್ಮಧುರಂಧರರು ಸಂಪ್ರದಾಯ ಪ್ರವರ್ತಕರು ಈ ಪ್ರಶ್ನೆಗಳನ್ನು ಬೆಳಕು ಹಾಕಿದರು- ಅವುಗಳ ಬಗ್ಗೆ ವಿಚಾರಿಸಿದರು. ತಮ್ಮ ತಮ್ಮ ಬುದ್ಧಿಗೆ ತೋಚಿದ ಉತ್ತರಗಳನ್ನು (ಊಹಾಪೋಹಗಳ ಆಧಾರದಿಂದ) ಅನುಯಾಯಿಗಳ ಮುಂದಿಟ್ಟರು; ಅವರವನ್ನು ನಂಬುವಂತೆ ಮಾಡಿದರು; ಒಂದು ಬಗೆಯ ತೃಪ್ತಿಯನ್ನು ಅವರಿಗೆ ನೀಡುವಲ್ಲಿ ಸಹಾಯಕರಾದರು.

ಆದರೆ, ಜನನ–ಮರಣಗಳ ಪ್ರಶ್ನೆ ಒಂದು ಘೋರ ರಹಸ್ಯ. ವಾಸ್ತವವಾಗಿ ಅವೇನು? ಇದು ಯಕ್ಷ ಪ್ರಶ್ನೆ. ಯಾವ ಧರ್ಮರಾಯನೂ ಸಮರ್ಪಕವಾದ ಉತ್ತರ ನೀಡಿಲ್ಲ. ಭಗವಾನ್ ಬುದ್ಧದೇವನು ಹೇಳಿದ್ದಾನೆ— "ಇಂಥ ಪ್ರಶ್ನೆಗಳನ್ನು ಕೇಳುವುದು ತಪ್ಪು; ಅದಕ್ಕೆ ಉತ್ತರ ಹೇಳುವುದೂ ತಪ್ಪು." ಯುರೋಪಿನ ಮಹಾ ವೈಜ್ಞಾನಿಕ ಹಾಗೂ ದಾರ್ಶನಿಕ ಹರ್ಬರ್ಟ್ ಸ್ಪೆನ್ಸರ್ ಹೇಳಿದ: "ಈ ಸಂಗತಿಗಳು ಅನಭಿಜ್ಞವಿವೆ. ಅವು ತಿಳಿಯಲಾರದಂಥವು." ಮುಸಲ್ಮಾನರು ಇವನ್ನು "ಅದೃಷ್ಟದ ಬಲ"ವೆಂದು ನಂಬಿದರೆ, ಕ್ರೈಸ್ತರು "ಭಗವಂತನ ಇಚ್ಛೆ"ಯೆಂದು ವಿಶ್ವಾಸವಿಡುತ್ತಾರೆ.

ಆದರೆ, ಹಿಂದು ಮತೀಯರ ವಿಶ್ವಾಸ ಇವಕ್ಕಿಂತ ಭಿನ್ನ. "ನಾವು ಅನುಭವಿಸುವ ಸುಖದುಃಖಗಳೆಲ್ಲವೂ ನಮ್ಮ ಕರ್ಮಫಲ"ವೆಂದು ಪ್ರತಿ ಹಿಂದೂವೂ ನಂಬುತ್ತಾನೆ. "ಜೀವವು ಹೊಸದೇ ಶರೀರ ಧರಿಸುತ್ತದೆ, ತನ್ನ ಪೂರ್ವಪ್ರಭಾವದಿಂದಲೇ ಅದು ಹುಟ್ಟುತ್ತದೆ; ಸಾಯುತ್ತದೆ; ಅದು ಸುಖದುಃಖಗಳನ್ನು ಅನುಭವಿಸಬೇಕಾಗುತ್ತದೆ."—ಇದು ಹಿಂದುವಿನ ಸ್ಪಷ್ಟ ನಂಬಿಕೆ.

ಭಗವಾನ್ ಶ್ರೀಕೃಷ್ಣನು ತನ್ನ ಗೀತೆಯಲ್ಲಿ ಸ್ಪಷ್ಟಪಡಿಸಿದ್ದಾನೆ:

'ಜಾತಸ್ಯ ಹಿ ಧ್ರುವೋ ಮೃತ್ಯುಃ |
ಧ್ರುವಂ ಜನ್ಮ ಮೃತಸ್ಯ ಚ ||''

ಅಂದರೆ, ಹುಟ್ಟಿದವನಿಗೆ ಸಾವು, ಸತ್ತವನಿಗೆ ಹುಟ್ಟು ಅನಿವಾರ್ಯ.

ಜೀವವು ತಾನು ಗೈದ ಕರ್ಮಗಳಿಗನುಸಾರವಾಗಿ ಬೇರೆಬೇರೆ ಲೋಕಗಳಲ್ಲಿ ಸಂಚರಿಸುತ್ತದೆಂದು ಹಿಂದುವಿನ ವಿಶ್ವಾಸ. ಇಹಲೋಕ, ಪರಲೋಕಗಳ ಮಾತು ನಾವು ಹಲವಾರು ಬಾರಿ ಆಡುತ್ತಿರುತ್ತೇವೆ. ಹಿಂದೂ ಮತದ ಬೇರೆ ಬೇರೆ ಸಂಪ್ರದಾಯಗಳಲ್ಲಿಯೂ ಧಾರ್ಮಿಕ, ಆಧ್ಯಾತ್ಮಿಕ ಮತ್ತು ದಾರ್ಶನಿಕ ವಿಚಾರಗಳಲ್ಲಿ ಅಂತರವಿರುವುದು ನಿಜವಾದರೂ ಪ್ರತಿಯೊಂದರಲ್ಲಿಯೂ ಕರ್ಮ ಮತ್ತು ಪುನರ್ಜನ್ಮಗಳಲ್ಲಿ ವಿಶ್ವಾಸವಿದ್ದೇ ಇದೆ. ಇಹಲೋಕ–ಪರಲೋಕಗಳೆರಡರಲ್ಲಿಯೂ ಏಕಪ್ರಕಾರವಾದ ಆಸ್ಥೆಯಿದ್ದೇ ಇದೆ.

"ನಾವೆಲ್ಲಿಂದ ಬಂದೆವು? ಎಲ್ಲಿಗೆ ಹೋಗುವೆವು?"—ಇದೇ ಇಲ್ಲಿನ ಪ್ರಧಾನ ಪ್ರಶ್ನೆ. ಉತ್ತರರೂಪವಾಗಿ ಅನೇಕರು ಅನೇಕ ಪ್ರಕಾರವಾಗಿ ಊಹನಾಶಕ್ತಿಯನ್ನು ಹರಿಸಿದರು. ಲಭ್ಯ ಪ್ರಮಾಣಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದರು; ಈ ಸಾಹಸದಲ್ಲಿ ಎಲ್ಲರಿಗೂ ಫಲ ದೊರೆಯಲಿಲ್ಲ.

"ಎಲ್ಲ ಜೀವಗಳು ಹುಟ್ಟುತ್ತವೆ; ಹುಟ್ಟಿದ ಜೀವಿಗಳು ಸಾಯುತ್ತವೆ''—ಇದರಲ್ಲಿ ಯಾವ ಸಂದೇಹಕ್ಕೂ ಆಸ್ಪದವಿಲ್ಲ. ಎಲ್ಲ ಜೀವಿಗಳಿಗೂ ಸುಖದುಃಖಗಳಿವೆ ಎಂಬುದು ಅನುಭವವೇದ್ಯ. ವಿಚಾರವಂತರು ಉಳಿದ ವಿಷಯಗಳ ಚರ್ಚಿಸಿದರೂ ಇದಮಿತ್ಥಂ ಎಂದು ನಿರ್ಧರಿಸಲು ಇದುವರೆಗೂ ಅಶಕ್ತರಾಗಿಯೇ ಉಳಿದಿದ್ದಾರೆ. "ಯೌವನದಲ್ಲಿ ನಾನು ಬಹಳ ಉತ್ಸಾಹದಿಂದ ವಿದ್ವಾಂಸರ ಬಳಿಗೆ ಹೋಗುತ್ತಿದ್ದೆ. ಅವರ ಬಳಿ ಬಹು ಪರಿಯ ಚರ್ಚೆ ನಡೆಸುತ್ತಿದ್ದೆ....ಯಥಾರ್ಥದ ಅರಿವಾಗಬೇಕೆಂಬ ಆಸೆಯಿಂದ—ಆದರೆ, ನನಗಾವ ಲಾಭವೂ ದೊರೆಯಲಿಲ್ಲ. ನಾನೆಲ್ಲಿದ್ದೆನೋ ಅಲ್ಲಿಯೇ ಕೊನೆಗೂ ಉಳಿದುಬಿಟ್ಟೆ. ನನ್ನ ಪ್ರಶ್ನೆಗಳಿಗೆ ಉತ್ತರವೇ ದೊರೆಯಲಿಲ್ಲ'' ಎಂದು ಉಮರ್ ಖಯಾಂ ಹೇಳಿದ್ದಾನೆ

ಉತ್ತರ ದೊರೆಯಲಿ ದೊರೆಯದಿರಲಿ, ಜನನ-ಮರಣ, ಸುಖ-ದುಃಖಗಳ ಆಂತರಿಕ ರಹಸ್ಯಗಳನ್ನು ವಿಚಾರಕರು ತಿಳಿಯಬಯಸುತ್ತಾರೆ; ಹಿಂದೂ ಮತದ ದಾರ್ಶನಿಕರು ಈ ಬಗ್ಗೆ ಬಹಳಷ್ಟು ವಿವೇಚನೆ ಮಾಡಿದ್ದಾರೆ. ಉಪನಿಷತ್ತುಗಳೂ, ಯೋಗವಾಸಿಷ್ಠ ಮೊದಲಾದುವು ಈ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನ ಮಾಡಿವೆ, ಈ ಉತ್ತರಗಳಿಂದ ಎಲ್ಲರೂ ತೃಪ್ತರಾಗಿಲ್ಲ....ಈ ಮಾತು ಬೇರೆ. ಅದರಿಂದಲೇ ಇಂದೂ ಈ ಪ್ರಶ್ನೆಗಳಿಗೆ ಉತ್ತರ ಅರಸುವ ಪ್ರಯತ್ನ ಸಾಗುತ್ತಲೇ ಇದೆ, ವಿಚಾರಕರಿಗೆ ತೃಪ್ತಿಯಿನ್ನೂ ಲಭಿಸಿಲ್ಲ.

ವಿಚಾರವಂತರು ವಿಚಾರಲಹರಿ, ಊಹಾಪೋಹಗಳ ಆಧಾರದಿಂದ ಜನನ–ಮರಣ ರಹಸ್ಯ ಪ್ರಶ್ನೆಗಳಿಗೆ ನೀಡಿದ ಉತ್ತರಗಳಲ್ಲಿ ಪ್ರಾಯಃ ಅಧಿಕ ಸಂತೋಷಪ್ರದವಾದ, ನ್ಯಾಯಸಂಗತವಾದ ಉತ್ತರವೆಂದರೆ, ಕರ್ಮ ಮತ್ತು ಪುನರ್ಜನ್ಮ ವಿಚಾರಧಾರೆಯೆನ್ನಬಹುದು. ಇಹಲೋಕ ಮಾತ್ರವಲ್ಲದೆ ಪರಲೋಕದಲ್ಲಿ ವಿಶ್ವಾಸವಿಡುವುದರಿಂದ ಮಾನವ ತನ್ನ ಜೀವನವನ್ನು ಸುವ್ಯವಸ್ಥಿತಗೊಳಿಸಬಲ್ಲ, ಸಮಾಜ ಸಂಘಟನೆಯಲ್ಲೂ ನೆರವಾಗಬಲ್ಲ.

ತಾನು ಜೀವನದಲ್ಲಿ ಸುಖಪಡಬೇಕು, ಸಾಂತ್ವನ ಹೊಂದಬೇಕು, ತನ್ನ ಸಮಾಜವನ್ನು ಸುಸಂಘಟಿತಗೊಳಿಸಬೇಕು— ಇದು ಪ್ರತಿಯೊಬ್ಬನ ಅಭಿಲಾಷೆ. ಈ ಇಚ್ಛೆಯಿಂದಲೇ ಮಾನವನು ಆಧ್ಯಾತ್ಮಿಕ ಮತ್ತು ದಾರ್ಶನಿಕ ವಿಚಾರಗಳತ್ತ ಮನ ಹರಿಸುತ್ತಾನೆ. ಸಮಾಜದ ಅಂಗವಾದ ಪ್ರತಿಯೊಬ್ಬ ವ್ಯಕ್ತಿಯೂ ಸಮುಚಿತವಾಗಿ ವ್ಯವಹರಿಸುವುದರಿಂದ ಅದು ಉನ್ನತವಾಗುತ್ತದೆ. ಇದಕ್ಕಾಗಿಯೇ ಶಾಸನ—ಕಟ್ಟಲೆಗಳ ನಿರ್ಮಾಣವಾಗಿವೆ, ಆಗುತ್ತಿವೆ. ಇಷ್ಟರಿಂದಲೇ ತೃಪ್ತವಾಗದ ಜನತೆ ಲೋಕ–ಪರಲೋಕಗಳ ಬಗ್ಗೆ ವಿಚಾರಿಸಲಾರಂಭಿಸಿತು.

"ಒಳ್ಳೆಯ ಕೆಲಸಗಳ ಪುಣ್ಯಫಲ ಇಹಲೋಕದಲ್ಲಿ ಅನುಭವಕ್ಕೆ ಬಾರದಿದ್ದರೆ, ಅದು ಪರಲೋಕದಲ್ಲಿ ಖಂಡಿತಕ್ಕೂ ಸಿಗುವುದು" ಎಂದು ಆಧ್ಯಾತ್ಮಿಕ ಗುರುಗಳು ಹೇಳಬಯಸಿದರು. ದುಷ್ಟ ಕಾರ್ಯಗಳ ಫಲದಿಂದ ಇಹಲೋಕದಲ್ಲಿ ನಾವು ವಂಚಿತರಾದರೂ ಪರಲೋಕದಲ್ಲಿ ಇದಕ್ಕೆ ಸೂಕ್ತ ಶಿಕ್ಷೆ ಲಭಿಸಿಯೇ ತೀರುವುದೆಂದು ಹೇಳಿದರು. ಈ ಬಗೆಯ ಸಂಸ್ಕಾರ ಎಳೆಹರೆಯದಲ್ಲೇ ಮಗುವಿಗೆ ದೊರೆತರೆ, ಮುಂದದು ತನ್ನ ಆಚರಣೆಯನ್ನು ಸ್ವ-ಪರಹಿತಚಿಂತನೆಗನುಸಾರವಾಗಿ ರೂಪಿಸಿಕೊಳ್ಳುವುದು ಸಾಧ್ಯವಾಗುವುದು.

ಪರಲೋಕವಿದೆಯೋ ಇಲ್ಲವೆ? ಪುನರ್ಜನ್ಮವಿದೆಯೇ? ಇಲ್ಲವೆ?— ಈ ಬಗ್ಗೆ ನಮ್ಮ ಬಳಿ ಪ್ರತ್ಯಕ್ಷ ಪ್ರಮಾಣಗಳು ಇಲ್ಲವೇ ಇಲ್ಲ. ಇತ್ತೀಚೆಗೆ "ಪುನರ್ಜನ್ಮ"ದಲ್ಲಿ ವಿಶ್ವಾಸ ವಿಡುವಂತಹ ಹಲವು ಘಟನೆಗಳು ಅಲ್ಲಲ್ಲಿ ನಡೆಯುತ್ತಿವೆ. ಈ ಸಂಬಂಧದಲ್ಲಿ ಸಂಶೋಧನೆಗಳು ನಡೆಯುತ್ತಿವೆ. ನಿಜವಾಗಿಯೂ ಇವು 'ಪುನರ್ಜನ್ಮ'ದ ಘಟನೆಗಳೇ ಅಥವಾ ಮತ್ತಾವುದಾದರೂ 'ಅದ್ಭುತ ಶಕ್ತಿ'ಯ ಕೈವಾಡವೇ ಸಿದ್ಧವಾಗಿಲ್ಲ, ಹಾಗಾಗಿ 'ಪುನರ್ಜನ್ಮ ಸಿದ್ಧಾಂತ'ವನ್ನು 'ಅಂಧಾನುಕರಣೆ' ಎಂಬಲ್ಲಿಂದ ಎತ್ತರಿಸಲು ಆಧುನಿಕ ವೈಜ್ಞಾನಿಕರು ಈಗಲೇ ಸಿದ್ಧರಿಲ್ಲ.

ಆದರೆ, ಅಜ್ಞಾನದಲ್ಲಿಯೂ ಒಂದು ಬಗೆಯ ಸುಖವಿದೆ; ಅಂಧಾನುಕರಣೆಯಿಂದಲೂ ಸಾಂತ್ವನೆ ದೊರೆಯುತ್ತದೆ. ಆದುದರಿಂದ, ಕರ್ಮ ವಿಚಾರ ಮತ್ತು ಪುನರ್ಜನ್ಮ ಸಿದ್ಧಾಂತಗಳಿಂದ ಮಾನವನಿಗೆ ಶಾಂತಿ ಮತ್ತು ಸಾಂತ್ವನೆಗಳು ಲಭಿಸುತ್ತವೆಂಬುದೂ ನಿಜ—ಈ ಶಾಂತಿ ಮತ್ತು ಸಾಂತ್ವನೆಗಳಿಗಾಗಿ ನಾವೆಷ್ಟು ಕಷ್ಟಪಡುವುದಿಲ್ಲ? ಸಮಾಜ ಸಂಘಟನೆಗೆ ಈ ಬಗೆಯ ವಿಶ್ವಾಸ ಸಹಾಯಕವೇ. ಸುಸಂಘಟಿತ ಸಮಾಜರಚನೆಯ ಅವಶ್ಯಕತೆಯನ್ನು ಅಲ್ಲಗಳೆಯುವ ಧಾರ್ಷ್ಟ್ಯವನ್ನು ಯಾರು ತೋರಿಸುತ್ತಾರೆ?

ಬೌದ್ಧಿಕವಾಗಿ ಕರ್ಮಫಲ ಮತ್ತು ಪುನರ್ಜನ್ಮ ಸಿದ್ಧಾಂತವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲವಾದರೆ, ಈ ಸಂಬಂಧದ ಸಂಶೋಧನೆಗಳು ಮುಂದುವರಿಯಲಿ. ಇತರ ಸಿದ್ಧಾಂತವನ್ನು ಹೊರಗೆಡಹುವವರೆಗೆ ಈ ಸಿದ್ಧಾಂತವನ್ನೇ ನಂಬಿದರೆ ಹಾನಿಯಿಲ್ಲ. ವ್ಯಕ್ತಿಯ ವ್ಯವಹಾರ, ಸಮಾಜದ ಸಂಘಟನ, ವ್ಯಕ್ತಿಗತ ಸುಖ, ಸಮಷ್ಟಿಗತ ಶಾಂತಿ—ಎಲ್ಲವೂ ಈ ವಿಶ್ವಾಸದಿಂದ ಲಭ್ಯಮಾನವಾಗುವುದು; ನಮ್ಮ ಪೂರ್ವಜರು ಸಾಮಾಜಿಕತೆಯನ್ನು ಆಧ್ಯಾತ್ಮಿಕತೆಯಲ್ಲಿ ಸಮಾವಿಷ್ಟಗೊಳಿಸಿರುವುದು ಹಲವಾರು ಆಚಾರಗಳಲ್ಲಿ ದೃಗ್ಗೋಚರವಾಗುತ್ತದೆ. ಅಂತೆಯೇ ಐಹಿಕ ಸುಖಶಾಂತಿಗಳಿಗಾಗಿಯೇ ಪಾರಲೌಕಿಕ ದುಃಖ ಅಶಾಂತಿಗಳ ಕಲ್ಪನೆಯನ್ನು ಮಾಡಿದ್ದರೆ ಆಶ್ಚರ್ಯವಿಲ್ಲ. ಇಲ್ಲದೆ ಇದ್ದುದನ್ನಾದರೂ ನಂಬುವುದರಿಂದ ಸುಖಶಾಂತಿ ದೊರೆಯುವಾಗ ನಂಬುವುದರಿಂದ ಹಾನಿಯಿಲ್ಲ.

(ಸಂಗ್ರಹ)

HOTEL SATKAR

Boarding, Lodging & Restaurant
Behind Corporation Office,
9 Mission Road — **Bangalore—27**

Phone No.— 1 28337 2 29887 — Grams. HOST SATKAR

Vegetarian Cuisine
Attached Bath Rooms and Phones
Running H and C water.
Moderate Charges
Railway Station, Laundry Post office and Entertainment Area Nearby
Large airy Rooms. Roof garden
Quiet. Calm Atmosphere
Personalised Service.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಶ್ರೀ ಶಂಕರಾಚಾರ್ಯರ ತತ್ವಸಾರ

ಲೇಖಕರು ಡಾ|| ಡಿ. ವಿ. ಗುಂಡಪ್ಪ

ಶ್ರೀ ಶಂಕರಾಚಾರ್ಯರಿಂದ ಲೋಕಕ್ಕೆ ಮಹೋಪಕಾರವಾಗಿದೆಯೆಂದು ಪಂಡಿತ ಪ್ರಪಂಚ ಹೊಗಳುತ್ತದೆ. ಅವರ ಗ್ರಂಥಗಳು ವಿದ್ವಾಂಸರಿಗೆ ಪ್ರಿಯವಾಗಿವೆ. ಅವರ ಸಿದ್ಧಾಂತಗಳನ್ನು ಶಾಸ್ತ್ರಜ್ಞರು ಗೌರವಿಸಿದ್ದಾರೆ. ಆದರೆ ಅವರಿಂದ ಸಾಮಾನ್ಯ ಜನಕ್ಕೆ ಏನಾದರೂ ಪ್ರಯೋಜನವಾಗಿದೆಯೇ? ನಮ್ಮ ನಿತ್ಯ ಜೀವನಕ್ಕೆ ಉಪಯುಕ್ತವಾಗುವ ಉಪದೇಶ ಅದರಲ್ಲೇನಾದರೂ ಉಂಟೆ?

ಉಂಟು— ಬಹುವಾಗಿ ಉಂಟು ಎಂದು ನಂಬಿಕೊಂಡಿರುವವರಲ್ಲಿ ನಾನೂ ಒಬ್ಬ. ಅವರ ಬೋಧನೆಯ ಸಾರಾಂಶವನ್ನು ಸಾಮಾನ್ಯವಾಗಿ ತಿಳಿದ ಮಟ್ಟಿಗೆ, ನನ್ನ ಭಾಷೆಯಲ್ಲಿ ಅರಿಕೆಮಾಡಬೇಕೆಂದು ಈಗ ನನ್ನ ಪ್ರಯತ್ನ.

ಮನುಷ್ಯನ ಜೀವನ ಎರಡು ಗುಂಪುಗಳ ನಡುವಣ ಉಯ್ಯಾಲೆಯಾಟ. ಅದು ಒಮ್ಮೆ ಈ ಕಡೆ ಇನ್ನೊಮ್ಮೆ ಆ ಕಡೆ ತೂಗಾಡುತ್ತಿರುತ್ತದೆ. ಆ ಎರಡು ದುರಿಗಳಲ್ಲಿ ಒಂದು ಸತ್ಯ— ಎಂದರೆ ಇರುವ ವಸ್ತು; ಇನ್ನೊಂದು ಸತ್ಯಾಭಾಸ— ಎಂದರೆ ಸತ್ಯದ ತೋರಿಕೆ. ಈ ಎರಡರಲ್ಲಿ ಯಾವುದನ್ನು ನಂಬೋಣ? ಯಾವುದು ಸತ್ಯ? ಇದು ಆಚಾರ್ಯರು ಎತ್ತಿಕೊಂಡಿರುವ ಪ್ರಶ್ನೆ.

ಸತ್ಯ ವಸ್ತುವು ಬ್ರಹ್ಮ ಅಥವಾ ಭಗವಂತ. ಸತ್ಯಾಭಾಸವು ಜಗತ್ತು ಅಥವಾ ಸಂಸಾರ. ಈಗ ಬ್ರಹ್ಮಕ್ಕೂ ಜಗತ್ತಿಗೂ ಇರುವ ವಿಲಕ್ಷಣಗಳನ್ನು ಗಮನಕ್ಕೆ ತಂದುಕೊಳ್ಳೋಣ.

1. ಬ್ರಹ್ಮವು ಅರೂಪಿ, ನಿರಾಕಾರಿ, ಜಗತ್ತು ಸರೂಪಿ, ಸಾಕಾರಿ.

2. ಬ್ರಹ್ಮವು ಅವಿಕಾರಿ, ನಿತ್ಯ. ಜಗತ್ತು ಸವಿಕಾರಿ, ಅನಿತ್ಯ.

3. ಬ್ರಹ್ಮವು ಏಕವಾದದ್ದು; ಜಗತ್ತು ಅನೇಕವಾದದ್ದು—ಅನೇಕ ಪ್ರಾಕೃತ ಪದಾರ್ಥ ಸಮುದಾಯ.

ಹೀಗೆ ಅನ್ಯೋನ್ಯ ಪ್ರತಿಪಕ್ಷಗಳಾದ ಬ್ರಹ್ಮಕ್ಕೂ ಜಗತ್ತಿಗೂ ಸಂಬಂಧವೇನಾದರೂ ಉಂಟೆ? ಉಂಟು, ಅದು ಬೇರ್ಪಡಿಸಲಾಗದ ಸಂಬಂಧ. ಸಮುಂದ್ರಕ್ಕೂ ಅದರಲ್ಲಿ ತೇಲಾಡುವ ನೊರೆಗೂ ಇರುವ ಸಂಬಂಧ ಎಂಥದ್ದೋ ಅಂಥದ್ದು ಬ್ರಹ್ಮಕ್ಕೂ ಜಗತ್ತಿಗೂ ಇರುವ ಸಂಬಂಧ. ಜಗತ್ತು ಬ್ರಹ್ಮದಲ್ಲಿಯೇ ಹುಟ್ಟಿ ಬ್ರಹ್ಮದಲ್ಲಿಯೇ ಇದ್ದುಕೊಂಡು ಬ್ರಹ್ಮದಲ್ಲಿಯೇ ಕಡೆಗೆ ಸೇರಿಕೊಳ್ಳತಕ್ಕದ್ದು. ಬ್ರಹ್ಮಚೈತನ್ಯದ ಲೀಲಾವಿಲಾಸವೇ ಜಗತ್ತು. ಜಗತ್ತೆಂಬ ನಾಟಕಕ್ಕೆ ಸೂತ್ರಧಾರನು ಬ್ರಹ್ಮ. ಅವನ ಶಕ್ತಿ ಬ್ರಹ್ಮಶಕ್ತಿ; ಆ ಜೋಡಿಯನ್ನು ಬ್ರಹ್ಮದಿಂದ ಬೇರೆ ಮಾಡಲಾಗದ್ದು.

ಬ್ರಹ್ಮವು ರೂಪವಿಲ್ಲದ್ದು ಎಂದು ಹೇಳಿದೆ. ಹಾಗೆಂದರೆ ಅದು ರೂಪರೇಖೆ ಲಿಂಗವರ್ಣ ಮೊದಲಾದ ಗುಣಪರಿಮಿತಿಗಳಿಗೆ ಸಿಕ್ಕದ್ದು ಎಂದು ಅರ್ಥ. ಅದು ಯಾವ ಕಟ್ಟಿಗೂ ಕಟ್ಟಲೆಗೂ ಒಳಪಟ್ಟಿದ್ದಲ್ಲ. ಅದು ಸ್ವತಂತ್ರ ಚೇತನ. ಮಿತಿಯಿಲ್ಲದ ಚೈತನ್ಯವೂ ಮಿಶ್ರವಿಲ್ಲದ ಆನಂದವೂ ಅದರ ಸ್ವಭಾವದಲ್ಲಿರುತ್ತವೆ. ಕಾಲ ದೇಶ ಮೊದಲಾದ ಬಂಧನಗಳು ಬ್ರಹ್ಮಕ್ಕಿಲ್ಲ. ಅದು ನಿರುಪಾಧಿಕ ಮತ್ತು ಶಾಶ್ವತ. ಅದು ವಿಕಾರ ವ್ಯತ್ಯಾಸಗಳಿಲ್ಲದೆ ಸರ್ವದಾ ಏಕಸ್ಥಿತಿಯಲ್ಲಿರತಕ್ಕದ್ದು.

ಈ ಬ್ರಹ್ಮವನ್ನೇ ಶಾಸ್ತ್ರವು ಪರಬ್ರಹ್ಮ ಎಂದೂ ಪರಮಾತ್ಮ ಎಂದೂ ಕರೆದಿದೆ. ಅದನ್ನೇ ನಾವು ಭಗವಂತ, ದೇವರು, ಈಶ್ವರ, ಸ್ವಾಮಿ ಎಂದು ಮೊದಲಾಗಿ ಕರೆಯುತ್ತೇವೆ. ಈ ಬ್ರಹ್ಮ ವಸ್ತುವೇ ಪರಮ ಸತ್ಯ.

ಬ್ರಹ್ಮವನ್ನು ಬಿಟ್ಟು ಬ್ರಹ್ಮದ ಹೊರಗೆ ಬ್ರಹ್ಮದಿಂದ ಬೇರೆಯಾಗಿ ಯಾವ ಪದಾರ್ಥವೂ ಇರದು. ಯಾವ ಯಾವುದಕ್ಕೆ ಅಸ್ತಿತ್ವವುಂಟೋ ಅದು ಬ್ರಹ್ಮದ ಒಳಗಡೆ ಇರುತ್ತದೆ. ಬ್ರಹ್ಮವು ಜಗತ್ತಿನ ಎಲ್ಲವನ್ನೂ ಆವರಿಸಿಕೊಂಡು ಎಲ್ಲದರ ಒಳಗಡೆಯೂ ಹರಡಿಕೊಂಡು ಇರುತ್ತದೆ. ಅದು 'ಏಕಮೇವಾ ದ್ವಿತೀಯಮ್'.

ಸತ್ಯವು ಏಕವಾದರೂ ಸತ್ಯಾಭಾಸವು ಅನೇಕವೆಂದು ಮೇಲೆ ಹೇಳಿದೆ. ಇರುವುದು ಒಂದು; ತೋರುವುದು ಸಾವಿರ. ಈ ಅನೇಕತೆಯಿಂದ ಅನರ್ಥ. ನಮ್ಮ ಜೀವನದಲ್ಲಿ ಪ್ರತಿಯೊಬ್ಬನೂ—'ನಾನು ಬೇರೆ, ನೀನು ಬೇರೆ' ಎಂದು ಭೇದವೆಣಿಸುವುದು ನಮ್ಮ ನಾನಾತ್ವ ಗ್ರಹಣದಿಂದ. ಮೂಲದಲ್ಲಿರುವ ಏಕತ್ವವು ಜಗದ್ವಿಸ್ತಾರದ ಬಹುತ್ವದಲ್ಲಿ ನಮಗೆ ಮರೆತುಹೋಗುತ್ತದೆ. ಬುಡದಲ್ಲಿ ಒಂದಾಗಿರುವ ಮರ ಮೇಲ್ಗಡೆ ಕೊಂಬೆರೆಂಬೆಗಳಾಗಿ ಒಡೆದು ಕಾಣುತ್ತದೆ. ನಾವು ಚಿಗುರು ಮೊಗ್ಗುಗಳನ್ನೂ ಹೂವು ಹಣ್ಣುಗಳನ್ನೂ ನೋಡಿ, ಮನಸೋತು, ಒಂದಾಗಿರುವ ಬುಡ ಬೇರುಗಳನ್ನು ಮರೆಯುತ್ತೇವೆ. ಇದೇ ಮೋಹ, ಇದೇ ಭ್ರಾಂತಿ, ಅದೇ ಮಿಥ್ಯೆ; ಅದರ ಕಾರಣವೇ ಮಾಯೆ ಅಥವಾ ಅವಿದ್ಯೆ. ಸತ್ಯಾಭಾಸವು ಸತ್ಯವನ್ನು ಮರೆಯಿಸುತ್ತದೆ.

ಜಗತ್ತಿನ ನಾನಾತ್ವದಿಂದ ನಮ್ಮಲ್ಲಿ ಬರುವ ಭೇದವಿಭೇದ ಬುದ್ಧಿಯು ಮುಖ್ಯರೂಪವೇ ಅಹಂಕಾರ. ನಾನು ಪ್ರಪಂಚದಿಂದ ಬೇರೆ ಎಂಬ ಬುದ್ಧಿ ಅದೇ ಸ್ವಾರ್ಥಮೂಲ. ಅದರಿಂದ ಮತ್ಸರ, ಅದರಿಂದ ಅಭಿಮಾನ ಅಸೂಯೆಗಳು. ಆ ಕಾರಣದಿಂದ ಪರಹಿಂಸೆ, ಅಸತ್ಯ, ಅನ್ಯಾಯ, ಪಾಪ, ದುಃಖ. ಇವುಗಳನ್ನು ಮರೆತು ಸತ್ಯಾಭಾಸವನ್ನು ಸೇವಿಸಿದ್ದರ ವಿಫಲ ಪರಂಪರೆ.

ಈ ಪ್ರಮಾದಕ್ಕೆ ಮದ್ದು ಸತ್ಯಗ್ರಹಣ. ಸತ್ಯಸ್ವರೂಪದ ಸಂತತ ಸ್ಮರಣೆಯೂ ಅನುಸರಣೆಯೂ ಸತ್ಯಾಭಾಸ ನಿಷ್ಠೆಯ ದೋಷಗಳನ್ನು ನಿವಾರಣೆ ಮಾಡುತ್ತದೆ.

ಹಾಗಾದರೆ ಸತ್ಯದ ಸ್ವರೂಪವೆಂಥಾದ್ದು? ಸತ್ಯ ವಸ್ತುವಾದ ಬ್ರಹ್ಮವನ್ನು ಗುರುತಿಸುವುದು ಹೇಗೆ? ಆಚಾರ್ಯರ ಉತ್ತರ ಹೀಗಿದೆ:—

'ತ್ವಯಿ ಮಯಿ ಸರ್ವತ್ರೈಕೋ ವಿಷ್ಣುಃ
ಸರ್ವಸ್ಮಿನ್ನಪಿ ಪಶ್ಯಾತ್ಮಾನಂ
ಸರ್ವತ್ರೋತ್ಸೃಜ ಭೇದ ಜ್ಞಾನಂ

"ಸರ್ವವ್ಯಾಪಿಯಾದ ವಿಷ್ಣು ಭಗವಂತನು ತಾನೊಬ್ಬನೇ ನಿನ್ನಲ್ಲೂ ನನ್ನಲ್ಲೂ ಎಲ್ಲರಲ್ಲೂ ಇದ್ದಾನೆ. ಹಾಗಿರಲಾಗಿ ನೀನು ಎಲ್ಲಿ ಡೆಯುಲ್ಲೂ ನಿನ್ನ ಆತ್ಮವನ್ನು—ನಿನ್ನನ್ನೇ ಕಂಡುಕೋ."

ನಿನ್ನಿಂದ ಬೇರೆಯಾದರೂ ಯಾರಾದರೂ ಇದ್ದಾರೆಂಬ ಭೇದಭಾವನೆಯನ್ನು ತ್ಯಜಿಸು. ಬೇರೆಯಾದವನಿದ್ದರಲ್ಲವೆ, ಅವನೊಡನೆ ರಾಗದ್ವೇಷಗಳು? ನಿನ್ನಲ್ಲಿರುವ ಆತ್ಮವೇ ಎಲ್ಲ ಪ್ರಾಣಿಗಳಲ್ಲೂ ವ್ಯಾಪಿಸಿಕೊಂಡಿದೆ. ನಿನ್ನ ವಿಷಯದಲ್ಲಿ ನೀನು ಇರಿಸಿಕೊಂಡಿರುವುದಕ್ಕೆ ಸಮನಾದ ಪ್ರೀತಿವಾತ್ಸಲ್ಯಗಳನ್ನು ಅನ್ಯರೆಂಬುವರಲ್ಲೂ ತೋರಿಸು. ಲೋಕದಲ್ಲಿ ಯಾರು ಸಂತೋಷಿಸುತ್ತಿದ್ದರೂ ಅದು ನಿನ್ನದೆಂಬಂತೆ ಆ ಸಂತೋಷದಲ್ಲಿ ಸೇರಿಕೋ, ಯಾರು ದುಃಖಿಸುತ್ತಿದ್ದರೂ ಅವರ ದುಃಖದಲ್ಲಿ ಭಾಗಿಯಾಗು. ಇತರರ ಸಂಪತ್ತು ವಿಪತ್ತುಗಳು ನಿನ್ನ ಸಂಪತ್ತು ವಿಪತ್ತುಗಳಾಗಲಿ.

ಮಾಯಾಮಯಮಿದಮಖಿಲಂ ಹಿತ್ವಾ ।
ಬ್ರಹ್ಮಪದಂ ತ್ವಂ ಪ್ರವಿಶ ವಿದಿತ್ವಾ ।

"ನಿನಗೆ ಕಾಣುವ ಪ್ರಪಂಚದ ನಾನಾತ್ವವೂ ಭೇದ ವಿಭೇದಗಳೂ ಭ್ರಾಂತಿಯಿಂದ ಉಂಟಾದವು. ಆ ಮಾಯೆಯನ್ನು ದೂರ ಬಿಟ್ಟು, ಬ್ರಹ್ಮ ಸ್ಥಿತಿಯನ್ನು ವಿಚಾರದಿಂದ ತಿಳಿದುಕೊಂಡು ಅದರಲ್ಲಿ ಸೇರಿಕೋ."
—ಇದು ಅದ್ವೈತದ ನೀತಿಸಾರ.

ಆದರೆ ಈ ಬ್ರಹ್ಮದರ್ಶನವು ಅದರ ಫಲಿತಾಂಶವಾದ ಸರ್ವತ್ರ ಸ್ವಾತ್ಮಾನ ಭಾವವೂ ಬೇಕೆಂದ ಮಾತ್ರದಿಂದ ಬರತಕ್ಕದ್ದಲ್ಲ. ಅದು ಮನುಷ್ಯನಿಗಿರುವ ಪರಸಿದ್ಧಿ. ಅದಕ್ಕೆ ಅರ್ಹತೆ ಬರುವುದು, ಬಹುಕಾಲದ, ಬಹುಪ್ರಯತ್ನದಿಂದ. ಅಂಥ ಅರ್ಹತೆಯನ್ನು ಉಂಟುಮಾಡಿಕೊಡಬಲ್ಲ ಜೀವಸಂಸ್ಕಾರವೇ ಧರ್ಮ. ಮನುಷ್ಯ ಜೀವಕ್ಕೆ ಸಹಸ್ರಾರು ಜನ್ಮಾಂತರಗಳಿಂದ ಮಲವಾಸನೆಗಳು ಅಂಟಿಕೊಂಡು ಬಂದಿರುತ್ತವೆ. ಈ ಮಲಗಳನ್ನು ತೊಳೆದು ಜೀವನವನ್ನು ಶುದ್ಧಪಡಿಸುವುದಕ್ಕಾಗಿ ಧರ್ಮ.

ಧರ್ಮವು ಪ್ರವೃತ್ತಿಯೆಂದೂ ನಿವೃತ್ತಿಯೆಂದೂ ಎರಡು ವಿಧ.

(1) ಲೋಕವ್ಯವಹಾರದಲ್ಲಿದ್ದುಕೊಂಡ, ವಿಹಿತ ಕರ್ಮಗಳನ್ನಾಚರಿಸುತ್ತ ಕುಟುಂಬ ಸಮಾಜಗಳ ಹಿತಕ್ಕಾಗಿ ವಿವಿಧ ಕರ್ತವ್ಯಗಳನ್ನು ಪರಿಪಾಲಿಸುತ್ತ, ವ್ರತ ನಿಯಮ ವಿಧೇಯತೆಯಿಂದ ಸ್ವಾರ್ಥಂಕಾರವನ್ನು ಸವೆಯಿಸಿ, ಕಾಮಕ್ರೋಧ ಕಾಮನ್ನಿಳಿಸಿಕೊಳ್ಳುವುದು ಪ್ರವೃತ್ತಿ ಮಾರ್ಗ. (2) ಲೋಕದಿಂದ ದೂರವಾಗಿ, ವಿರಕ್ತನಾಗಿ, ಏಕಾಂತವಾಸದಲ್ಲಿರುತ್ತ ವ್ರತದೀಕ್ಷೆಗಳಿಂದ ದೇಹೇಂದ್ರಿಯಗಳನ್ನು ದಂಡಿಸುತ್ತ ಮನಸ್ಸನ್ನು ಸಮಾಧಾನ ಸ್ಥಿತಿಗೆ ತಂದುಕೊಳ್ಳುವುದು ನಿವೃತ್ತಿ ಮಾರ್ಗ. ಪ್ರವೃತ್ತಿ ನಿವೃತ್ತಿಗಳು ಪರಸ್ಪರ ವಿರೋಧಿಗಳಲ್ಲ; ಸಮಾನೋದ್ದೇಶಗಳು. ಚಿತ್ತ ಶುದ್ಧಿ ಸಮಾಧಾನಗಳೇ ಎರಡಕ್ಕೂ ಉದ್ದೇಶ. ಜಗತ್ತನ್ನು ಬಿಡಬೇಕಾದದ್ದಿಲ್ಲ. ಜಗತ್ತಿನಲ್ಲಿ ಬಾಳಿಕೊಂಡೇ ಬ್ರಹ್ಮಾಭ್ಯಾಸಮಾಡುವುದು ಸಾಧ್ಯ. ಪ್ರವೃತ್ತಿಯಿಂದಾಗಲಿ ನಿವೃತ್ತಿಯಿಂದಾಗಲಿ ಅದನ್ನಿಷ್ಟು ಇದನ್ನಿಷ್ಟು ಬೆರಸಿಕೊಂಡಾಗಲಿ ಜೀವ ಸಂಸ್ಕಾರ ಪಡೆದು ಪರಮಾತ್ಮ ದರ್ಶನಕ್ಕೆ ಅರ್ಹನಾಗಬೇಕೆಂಬುದು ಉಪದೇಶ.

ಬಹುಮಂದಿಗೆ ಯುಕ್ತವಾದದ್ದು ಪ್ರವೃತ್ತಿಮಾರ್ಗ. ಅದು ನಿವೃತ್ತಿಗಿಂತ ಸುಲಭ ಏಕೆಂದರೆ, ಪ್ರಕೃತಿಯೇ ಪ್ರವೃತ್ತಿಗೆ ಪ್ರೇರಕಳು. ಪ್ರವೃತ್ತಿ ಮಾರ್ಗದಲ್ಲಿ ಭೋಗಕ್ಕೆ ಮಿತವಾಗಿಯಾದರೂ ಅವಕಾಶ ಉಂಟು. ಕಷ್ಟಕರವಾದ ನಿವೃತ್ತಿ ಮಾರ್ಗದಲ್ಲಿ ವಿಘ್ನಭಯವುಂಟು. ಹಾಗೆ ಭಂಗವಾದಾಗ ಮನುಷ್ಯನು ಮರಳಿ ಪ್ರವೃತ್ತಿ ಮಾರ್ಗಕ್ಕೆ ಬರಬೇಕಾಗುತ್ತದೆ.

ಪ್ರವೃತ್ತಿ ಮಾರ್ಗದಲ್ಲಿಯೂ ಅಪಾಯಗಳುಂಟು. ಲೋಕದ ಆಕರ್ಷಣೆಗಳು ಮನುಷ್ಯನನ್ನು ಮೋಹದ ಬಲೆಗೆ ಸಿಕ್ಕಿಸುತ್ತವೆ. ಆಗ ಅವನು ತನ್ನ ಲಕ್ಷ್ಯವನ್ನೇ ಮರೆತಾನು. ಇಂಥ ಅಪಾಯ

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

•: ಮಿತ ಸಂತತಿ :•

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—75 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕಡಿಯಲು ಎರಡು ಉಪಾಯಗಳಿರು ತ್ತವೆ—ಒಂದು ಸತ್ಸಂಗ ಇನ್ನೊಂದು ಸಂತೃಪ್ತಿ.

ಸತ್ಸಂಗತ್ವೇ ನಿಸ್ಸಂಗತ್ವಮ್ ।
ನಿಸ್ಸಂಗತ್ವೇ ನಿರ್ಮೋಹತ್ವಮ್ ॥
ತ್ರಿಜಗತಿ ಸಜ್ಜನ ಸಂಗತಿರೇಕಾ ।
ಭವತಿ ಭವಾರ್ಣವತರಣೇ ನೌಕಾ ॥

"ಸಾಧುಸಜ್ಜನರ ಸಹವಾಸ, ಭಗವದ್ಭಕ್ತರ ಸ್ನೇಹ, ತತ್ವವಿಚಾರಿಗಳ ಸಂಸರ್ಗ ಇದರಿಂದ ಮಾನವನು ಜಗತ್ತಿನಿಂದ ಭಗವಂತನ ಕಡೆಗೆ ತಿರುಗಿ ಉನ್ನತ ಸ್ಥಿತಿಗೇರುತ್ತಾನೆ. ಹಾಗೆಯೇ ಅಪ್ರಮಾಣಿಕವಾದ ಜೀವಿಕೆ—

ಯಲ್ಲಭಸೇ ನಿಜಕರ್ಮೋಪಾತ್ತಮ್ ।
ವಿತ್ತಂ ತೇನ ವಿನೋದಯ ಚಿತ್ತಮ್ ॥

"ನಿನ್ನ ದುಡಿಮೆಯು ಪ್ರತಿಫಲವಾಗಿ ಎಷ್ಟು ನಿನಗೆ ದೊರಕುತ್ತದೆಯೋ ಅಷ್ಟರಿಂದ ತೃಪ್ತನಾಗಿ ಸಂತೋಷಿಸು. ಹೆಚ್ಚಿನ ಆಶೆಯೇ ಪಾಪವು ಇಲ."

ಭೋಗ ಭಾಗ್ಯಗಳ ಅಪೇಕ್ಷೆ ಮಿತವಾಗಿರಬೇಕೆಂದು ತಾತ್ಪರ್ಯ. ಅವು ಧರ್ಮ ವಿಧಿಗೆ ಒಳಪಟ್ಟಿರಬೇಕು. ದೋಷವಿರುವುದು ಭೋಗದಲ್ಲಲ್ಲ; ವ್ಯಾಮೋಹದಲ್ಲಿ. ಎಲ್ಲ ಸೌಖ್ಯ ಸಂಪತ್ತುಗಳನ್ನೂ ಭಗವತ್ಪ್ರಸಾದವೆಂದು ಸ್ವೀಕರಿಸತಕ್ಕದ್ದು.

ಯೋಗರತೋ ವಾ ಭೋಗರತೋ ವಾ ।
ಸಂಗರತೋ ವಾ ಸಂಗವಿಹೀನಃ ॥
ಯಸ್ಯ ಬ್ರಹ್ಮಣಿ ರಮತೇ ಚಿತ್ತಮ್ ।
ನಂದತಿ ನಂದತಿ ನಂದತ್ಯೇವ ॥

"ಯೋಗಿಯಾಗಲಿ, ಭೋಗಾಸಕ್ತನಾಗಲಿ, ಸಂಗಸುಖಿ ಆಗಲಿ, ನಿಸ್ಸಂಗನಾಗಲಿ, ಯಾವ ಮನುಷ್ಯನ ಮನಸ್ಸು ಬ್ರಹ್ಮಧ್ಯಾನದಲ್ಲಿರುತ್ತದೆಯೋ ಅವನು ಲೋಕದ ಪಾಪ ದುಃಖಗಳಿಗೆ ಸಿಕ್ಕದೆ ನಿರಂತರವಾದ ಆನಂದದಲ್ಲಿರುತ್ತಾನೆ.

ಹೀಗೆ ಬ್ರಹ್ಮಕರ್ತೃಗಳಾಗಲು ಸಂಪಾದಿಸಿಕೊಳ್ಳಬೇಕಾದ ಪೂರ್ವಸಿದ್ಧತೆಗಳನ್ನು ಆಚಾರ್ಯಕೃತವೆಂಬ ಒಂದು ಪದ್ಯವು ಸಂಗ್ರಹವಾಗಿ ಸೂಚಿಸುತ್ತದೆ:—

ಅವಿನಯಮಪನಯ ವಿಷ್ಣೋ ।
ದಮಯ ಮನಃ ಶಮಯ ವಿಷಯ
ಮೃಗತೃಷ್ಣಾಮ್ ॥
ಭೂತದಯಾಂ ವಿಸ್ತಾರಯ ॥
ತಾರಯ ಸಂಸಾರ ಸಾಗರತಃ ॥

"ಓ ಸರ್ವವ್ಯಾಪಿಯಾದ ಸ್ವಾಮಿಯೇ, ನನ್ನ ಅಹಂಕಾರವನ್ನು ಹೋಗಲಾಡಿಸು; ಮನಸ್ಸನ್ನು ನೆಮ್ಮದಿಗೊಳಿಸು; ಇಂದ್ರಿಯಗಳ ಹಸಿವನ್ನು ಮಿತಿಯಲ್ಲಿರಿಸು; ಜೀವಸ್ನೇಹವನ್ನು ವಿಸ್ತಾರಪಡಿಸು; ಜೀವನ ವಿಕಾಸವನ್ನೂ ಮನಶ್ಶಾಂತಿಯನ್ನೂ ನನಗೆ ಕೊಟ್ಟು ಇಹಲೋಕದ ಕಷ್ಟನಿಷ್ಠುರಗಳಿಂದ ನನ್ನನ್ನು ಪಾರುಮಾಡು."

ಇದು ಶಂಕರರ ತತ್ವದ ಸಂಗ್ರಹ. ಮಾನವನ ಜೀವವನ್ನು ಅಲ್ಪದಿಂದ ಅನಂತಕ್ಕೂ ದೇಹಭೋಗದಿಂದ ಭೂಮಾನಂದಕ್ಕೂ ಸೇರಿಸುವ ದಾರಿಯನ್ನು ತೋರಿಸಿ ಕೊಟ್ಟಿದ್ದು ಶಂಕರಾಚಾರ್ಯರಿಂದ ನಮಗೆ ಆಗಿರುವ ಉಪಕಾರ.

(ಆಕಾಶವಾಣಿಯ ಕೃಪೆಯಿಂದ)

ಪ್ರಜಾಪ್ರಭುತ್ವದಲ್ಲಿ ಪೌರತನ ಶಿಕ್ಷಣದ ಸ್ಥಾನ

[ಲೇಖಕ— ಶ್ರೀ ಕೆ. ಪದ್ಮನಾಭಯ್ಯ ಬಲ್ಲಾಳ; ಅಧ್ಯಾಪಕ, ವಿಟ್ಲ ಅರಮನೆ]

ಮಾನವನು ಜೀವನದ ನಾನಾರಂಗಗಳಲ್ಲಿ ಯಶಸ್ವಿಯಾಗಿ ಬಾಳಿ ಬದುಕಬೇಕಾದರೆ, ಬಹುಮುಖವಾಗಿ ಶಾರೀರಿಕ, ನೈತಿಕ, ಸಾಮಾಜಿಕ ವ್ಯವಹಾರಗಳಲ್ಲಿ ಪರಿಣತಿಯನ್ನು ಹೊಂದಬೇಕಾಗಿದೆ. ವ್ಯಕ್ತಿಯಲ್ಲಿ ಒಂದು ಅಂತಿಮ ಗುರಿ ಇರುತ್ತದೆ. ಆತನು ತನ್ನ ಸಮಾಜಕ್ಕೆ ನೀಡಬೇಕಾದ ಸಂದೇಶವೊಂದಿರುತ್ತದೆ. ಅದನ್ನು ಪೂರ್ಣಗೊಳಿಸಬೇಕಾದ ಒಂದು ಜೀವಿತ ಉದ್ದೇಶವಿರುತ್ತದೆ. ಅದರ ಆ ಉದ್ದೇಶವೇನು? ಅದನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕಾದ ಬಗೆ ಹೇಗೆ? ಎಂಬುದೇ ವ್ಯಕ್ತಿಯಲ್ಲಿರತಕ್ಕ ಉತ್ತಮ ಗುಣಗಳು.

ಮಾನವ ಲೌಕಿಕ ಪ್ರಪಂಚಕ್ಕೆ ಸಿಕ್ಕಿ, ಸಿಕ್ಕವರ ಒದೆತ ತಿನ್ನುತ್ತ ಅವರ ಕಾಲ್ತುಳಿತಕ್ಕೆ ಸಿಕ್ಕಿ, ಮನಸ್ಸಿಗೆ ಒಗ್ಗದ ಅವಮಾನಗಳನ್ನು ನುಂಗುತ್ತಾ ಸಾಗುವ ಜೀವನ ಕೇವಲ ಮಾನಗೆಟ್ಟಬದುಕು. ಆಗ ಅವನ ಇಹದ ಬದುಕು ನರಕವಾಗುತ್ತದೆ. ಮುಂದೆ ಪರಲೋಕದಲ್ಲೂ ಅದೇ ಗತಿಯಾಗುತ್ತದೆ. ನಮ್ಮ ಶಾಸ್ತ್ರಗಳೂ ಹೇಳುವುದು ಇದನ್ನೇ. ಸಾಮಾಜಿಕ ಹೊಣೆ ಮನ್ನಿಸತಕ್ಕವರು ಈ ಹೊಲಸು ಜೀವನಕ್ಕೆ ಅಸ್ಪದ ಕೊಡಬಾರದು. ಸಮಾಜ ಉದ್ಧಾರಕರು ಸಮಾಜದ ಸುಖಕ್ಕಾಗಿ ದುಡಿಯಬೇಕು. ಪ್ರತಿಯೊಬ್ಬನು ಜೀವನದಲ್ಲಿ ಸುಖವಾಗಿ ಬಾಳಿ ಬದುಕಲು ಅಶಿಸುತ್ತಾನೆ. ಮಾನವ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಮಾನವನ ಸಹಜ ಪ್ರವೃತ್ತಿಯನುಸಾರವಾಗಿ ಸಂಘ ಜೀವನವೇ ಆತನಿಗೆ ಹಿತಕರವಾದದ್ದು. ಇಂದಿನ ಪ್ರಜಾಸತ್ತೆಯ ಈ ಕಾಲದಲ್ಲಿ ಸಂಘ ಶಕ್ತಿಗಿರುವಷ್ಟು ಪ್ರಾಧಾನ್ಯತೆಯೂ ಪ್ರಿಯತೆಯೂ ಅಮೋಘವಾದುದು; ಅದ್ವಿತೀಯವಾದುದು. ಈ ಸಂಘಶಕ್ತಿಯ ಸದ್ವಿನಿಯೋಗದಿಂದಾಗಿ ರಾಷ್ಟ್ರಕಲ್ಯಾಣಕಾರ್ಯವು ಸಾಧ್ಯವು. ರಾಷ್ಟ್ರೀಯ ಜೀವನದಲ್ಲಿ ಅದರಲ್ಲೂ ಈ ಪ್ರಜಾಸತ್ತೆಯ ಕಾಲದಲ್ಲಿ ನಾಗರಿಕನ ಸ್ಥಾನಮಾನಗಳು, ಬಹಳ ಗಮನಾರ್ಹವಾದುದು. ಇಂದಿನ ನಾಗರಿಕನ ಕರ್ತವ್ಯವು ಬಹುಮುಖವಾದುದು, ಜವಾಬ್ದಾರಿಯಿಂದ ಕೂಡಿದುದು. ಇವುಗಳನ್ನು ಬಗೆಹರಿಸಬೇಕಾದರೆ ಶೈಕ್ಷಣಿಕ ಕ್ಷೇತ್ರಗಳಲ್ಲಿ ಯೋಗ್ಯ ಸುಧಾರಣೆಯು ಅಗತ್ಯ.

ಈಗ ಸಾರ್ವತ್ರಿಕವಾಗಿರುವುದು ಸರಿಯಾದ ಶಿಕ್ಷಣವಲ್ಲವೆಂದೂ, ಅದು ಅಸಮರ್ಪಕವೆಂದೂ, ಅಪೂರ್ಣವೆಂದೂ, ತಜ್ಞರ ಅಭಿಪ್ರಾಯ. ಇದರಿಂದ ಮಕ್ಕಳ ಹೆತ್ತವರು ಇಂದಿನ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಲು ಅಸಮಾಧಾನವನ್ನು ತೋರಿಸುವರು. ಅವರು ತಮ್ಮ ಜೀವನವನ್ನು ಸಾಗಿಸಲು ಸಹಕಾರಿಯಾಗುವ ಶಿಕ್ಷಣವನ್ನು ಮಕ್ಕಳಿಗೆ ಕೊಡಲು ಆಶಿಸುತ್ತಾರೆ. ಅದುವೇ ಕಸುಬು ಕೈಗಾರಿಕೆಗಳ ಶಿಕ್ಷಣ. ಇಂದು ಇದಕ್ಕೆ ಹೆಚ್ಚಿನ ಸ್ಥಾನವಿದೆ. ಆದರೆ ನೈತಿಕ ಮತ್ತು ಸಮಾಜದೃಷ್ಟಿಯಿಂದ ಈ ರೀತಿಯ ಶಿಕ್ಷಣವಾದರೂ ಬಹಳ ಸಂಕುಚಿತ. ಇದು ತನ್ನನ್ನು ತಾನೇ ನೋಡಿಕೊಳ್ಳುವ ಸ್ವಾರ್ಥ ವೃತ್ತಿಯಾಗಿದೆ. ಒಳಹೊಕ್ಕು ನೋಡುವ, ಅಂತರಂಗ ಕಾಣುವ ದೃಷ್ಟಿ ಬೇಕು. ವ್ಯಕ್ತಿಯು ಒಳಗಿರುವ ಜೀವಿತೋದ್ದೇಶವು ಪ್ರಕಟಗೊಳ್ಳುವ ಭಾಷೆಯೇ ಆತನ ಹೊರಗಿನ ವ್ಯಕ್ತಿತ್ವ. ಇದಕ್ಕಾಗಿ ವ್ಯಕ್ತಿಗೆ ಸಾಂಸ್ಕೃತಿಕ ಶಿಕ್ಷಣದ ಅಗತ್ಯವಿದೆ. ಇದಕ್ಕಿರುವ ಬೆಲೆಯು ಮುಖ್ಯವಾಗಿದೆ. ಈ ಶಿಕ್ಷಣದಿಂದ ಉದ್ಯೋಗ, ಬುದ್ಧಿ, ಜ್ಞಾನ, ಕಲೆ, ಮೊದಲಾದವುಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು. ಸಾಂಸ್ಕೃತಿಕ ಶಿಕ್ಷಣವು ಆನಂದವನ್ನುಂಟುಮಾಡುವುದು. ಆದರೆ ಈ ಸಾಂಸ್ಕೃತಿಕ ಶಿಕ್ಷಣವು ಸಾಮಾಜಿಕ ಕರ್ತವ್ಯ, ಅದರ ಧರ್ಮ, ಉತ್ತಮ ನಾಗರಿಕನಾಗಿ ಬಾಳುವ ಧರ್ಮ, ಮೊದಲಾದ ಉತ್ತಮ ಗುಣಗಳನ್ನು ಪ್ರಕಾಶಕ್ಕೆ ತರುವುದಿಲ್ಲ. ಇಂದಿನ ಪ್ರಜಾಸತ್ತೆಯ ಕಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಜವಾಬ್ದಾರಿ ಹೆಚ್ಚಿದೆ. ಪ್ರತಿಯೊಂದು ರಂಗದಲ್ಲೂ ರಾಜಕೀಯ ಸಂಸ್ಥೆಗಳು ತುಂಬಿ ಹೋಗಿವೆ. ಈ ಸಮಸ್ಯೆಗಳು ಬಹಳ ತೊಡಕಿನವು. ಇವುಗಳನ್ನು ಬಗೆಹರಿಸುವುದು ಬಹಳ ಕಷ್ಟದಾಗಿದೆ. ಇವುಗಳನ್ನು ವೃತ್ತಿಪರ ಶಿಕ್ಷಣದಿಂದಾಗಲೀ, ಸಾಂಸ್ಕೃತಿಕ ಶಿಕ್ಷಣದ ಮೂಲಕವಾಗಲೀ ಕಲಿಯಲು ಸಾಧ್ಯವಿಲ್ಲ. ಈ ರೀತಿಯ ಶಿಕ್ಷಣದಿಂದ ಹಣವನ್ನು ಕೂಡಿಟ್ಟ ವರ್ತಕರು ಮತ್ತು ಉದ್ಯೋಗಸ್ಥರು ಇದಕ್ಕೆ ಗಮನವನ್ನೇ ಕೊಡದವರಾಗಿದ್ದಾರೆ.

ಪ್ರಜಾಸತ್ತೆಯ ಅರಿವನ್ನು ಸರಿಯಾಗಿ ತಿಳಿದ, ಅದರಲ್ಲಿ ಸಹಭಾಗಿಗಳಾಗಿ, ದುಡಿಯಬೇಕಾದರೆ "ಪೌರತನ" ಶಿಕ್ಷಣದತ್ತ ಗಮನಹರಿಸಬೇಕು. ಇದರಿಂದ ದೇಶದಲ್ಲಿ ಒಗ್ಗಟ್ಟು ಒಮ್ಮನಸ್ಸು ಹುಟ್ಟಿ ಪ್ರಜಾಸತ್ತೆಯ ಅರಿವುಂಟಾಗಲು ಸಾಧ್ಯವಿದೆ. ಸಮಾಜವನ್ನು ನಾಗರಿಕನನ್ನಾಗಿ ಮಾಡುವುದೇ ಪೌರತನ ಶಿಕ್ಷಣದ ಗುರಿ. ಇದಕ್ಕೆ ಶಿಕ್ಷಣ ಕ್ಷೇತ್ರಗಳಲ್ಲಿ ಯೋಗ್ಯ ಸ್ಥಾನಕೊಡಬೇಕು. ಶಿಕ್ಷಕನು ತನಗೆ ಸಿಕ್ಕಿದ ಮಕ್ಕಳನ್ನು ಯೋಗ್ಯ ನಾಗರಿಕರನ್ನಾಗಿ ಮಾಡುವುದು ಅವನ ಸ್ಥಾನದ ಬಹುದೊಡ್ಡ ಹೊಣೆಗಾರಿಕೆ. ಹಲವು ವೇಳೆ ಗುರುವಿನ ಪ್ರಭಾವ ಶಿಷ್ಯನಲ್ಲೂ ಬೀರುವುದುಂಟು. ಆದಕಾರಣ ಆತನು ಎಲ್ಲರಿಗಿಂತಲೂ ಉತ್ಕೃಷ್ಟವು ಮಾದರಿ ವ್ಯಕ್ತಿಯಾಗಿರುವುದು ಅವಶ್ಯ.

ಪೌರತನ ಒಂದು ಭಾರವೆಂದು ತಿಳಿಯಬಾರದು. ಪೌರತನವೆಂದರೆ ಬಾಳಿನ ಬಟ್ಟೆ. ಅದು ಒಂದು ಉತ್ತಮ ಗುಣ. ಉತ್ತಮ ವ್ಯಕ್ತಿಯಲ್ಲಿರಬೇಕಾದ ಉತ್ತಮ ಗುಣ. ಅದು ಬಾಳಿನ ಬಟ್ಟೆಯ ಪರಮಾವಧಿ. ಅದು ಜೀವನದ ಒಂದು ಹಾದಿಯಾಗಿರುವುದರಿಂದ ಪೌರತನವು ವ್ಯಕ್ತಿಯಲ್ಲಿರುವ ಉತ್ತಮವಾದುವುಗಳೆಲ್ಲವನ್ನು ಬೆಳಕಿಗೆ ತರುವುದು. ಇದನ್ನು ತಿಳಿದು ಅದರಂತೆ ತ್ರಿಕರಣಪೂರ್ವಕವಾಗಿ ಆಚರಿಸುವವನೆ ಯೋಗ್ಯ ನಾಗರಿಕನೆನ್ನಿಸಿಕೊಳ್ಳಲು ಅರ್ಹನು. ಪೌರನವನು ನೆರೆಕರೆಯವರಲ್ಲಿ ಯೋಗ್ಯ ರೀತಿಯಲ್ಲಿ ವರ್ತಿಸಬೇಕು. ಸಾಮಾಜಿಕ ಹೊಣೆಗಾರಿಕೆಯನ್ನು ತೋರಿಸಬೇಕು. ತನ್ನ ಸುಖವನ್ನು ವಿಶೇಷ ಬಯಸದೆ, ಸಮಾಜದ ಹಿತಕ್ಕಾಗಿ ದುಡಿಯಬೇಕು. ಸಮಾಜದ ಏಳಿಗೆಗಾಗಿ ತನ್ನ ಅಭಿರುಚಿಯನ್ನು ತ್ಯಾಗಮಾಡುವವನಾಗಬೇಕು. ಸತ್ಯಾಸತ್ಯವನ್ನು ಶೋಧನೆ ಮಾಡುವ ಪ್ರಾಮಾಣಿಕತೆ ಆತನಲ್ಲಿರಬೇಕು. ದೇಶವಿದೇಶಗಳ ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಹಾರಗಳನ್ನು ಅವನು ತಿಳಿದು, ದೇಶದ ಮುಂದಾಳು ತನಕ್ಕೆ ಯೋಗ್ಯವಾದ ಬುದ್ಧಿ, ಸತ್ಯಸಂಧತೆ, ಕಾರ್ಯನಿಷ್ಠತೆ, ಮತ್ತು ಧೈರ್ಯ ಮೊದಲಾದ ಯೋಗ್ಯ ಗುಣಗಳುಳ್ಳ ಮುಂದಾಳುಗಳನ್ನು ಆರಿಸುವುದಕ್ಕೆ ನಾಗರಿಕನಿಗೆ ತಿಳಿದಿರಬೇಕು. ಇದು ಪ್ರತಿಯೊಂದು ನಾಗರಿಕನ ಹೊಣೆಗಾರಿಕೆ ಹಾಗೂ ಹಕ್ಕುಬಾಧ್ಯತೆ. ಹಕ್ಕುಬಾಧ್ಯತೆ ಎಂದರೆ ಮುಖ್ಯವಾಗಿ ಓಟಿನ ಹಕ್ಕು. ಇದು ವಿವೇಕದಿಂದಮಾಡುವ ಹಕ್ಕು. ಇದನ್ನು "ಪಾತ್ರ ನೋಡಿ ದಾನ ಮಾಡು" ಎಂಬಂತೆ ಮುಂದಾಳುಗಳನ್ನು ಓಟಿನ ಮೂಲಕ ಆರಿಸುವಾಗ ತುಂಬಾ ವಿಚಾರ ಅಗತ್ಯ. ಇದೇ ಪ್ರತಿಯೊಬ್ಬನ ಹಕ್ಕುಬಾಧ್ಯತೆ. ಓಟು ಕೊಡಲು ನನಗೆ ಹಕ್ಕು ಇದೆಯಾದರೂ ನಮ್ಮ ಓಟಿಗೆ ವಿಶೇಷ ಬೆಲೆ ಇದೆ. ತನ್ನ ಓಟಿಗೆ ಯಾರು ಬಾಧ್ಯನೆಂದು ವಿಚಾರ ಪೂರ್ವಕ ತನ್ನೊಳಗೆ ಚರ್ಚಿಸಿ ಅತನಿಗೆ ತನ್ನ ಓಟನ್ನು ಕೊಡಬೇಕು. ಲೋಕದಲ್ಲಿ ಅಲ್ಲಲ್ಲಿ ಕೆಲವು ಅಧಿಕಾರ ಲಾಲಸೆಯುಳ್ಳವ ಚುನಾವಣೆಯ ಸಮಯ ಹಣವನ್ನು ನೀರಿನಂತೆ ಖರ್ಚುಮಾಡಿ, ತಾವು ಗಣ್ಯರೆಂದು ಜನತೆಯನ್ನು ವಂಚಿಸಿ ಮುಂದಾಳುಗಳಾಗಿ ಬರುವರು. ಆ ಮೇಲೆ ಅಧಿಕಾರವ ಅಮಲೇರಿ ಮಹಾಸ್ವಾರ್ಥಿಗಳಾಗುವರು. ಚುನಾವಣೆಯ ವೇಳೆ ಅವರು ಮಾಡಿದಂತೆ ಮಾಡಿದರೆ ಇಡೀ ಸಮಾಜವನ್ನೇ ಹಾಳುಮಾಡಿದಂತಾಗುವುದು. ಆದುದರಿಂದ ನಾಗರಿಕನು ತನ್ನ ಹೊಣೆಗಾರಿಕೆಯನ್ನು ಜಾಣ್ಮೆಯಿಂದ ಉಪಯೋಗಿಸಿಕೊಳ್ಳಬೇಕು. ಉತ್ತಮ ನಾಗರಿಕನು ಬೇರೆಯವರ ಹಕ್ಕುಗಳಿಗೆ ಹೆಚ್ಚಿನ ಬೆಲೆ ಕೊಡುವನು. ಆತನು ತನ್ನ ನೆರೆಕರೆಯವರೊಡನೆ ಪ್ರೀತಿಯಿಂದ ಪ್ರಯೋಜನಕರವಾದ ರೀತಿಯಲ್ಲಿ ಬಾಳುವನು. ತನ್ನಲ್ಲಿರುವ ಒಳ್ಳೆಯತನವನ್ನು ಎಲ್ಲಾ ನೆರೆಕರೆಯವರಿಗೆ ನೀಡುವನು. ಇವನೇ ಉತ್ತಮ ಪೌರನು. ನಾಗರಿಕನಿಗೆ ತನ್ನ ಧರ್ಮ ಕರ್ತವ್ಯ ಗೊತ್ತಿರಬೇಕು. ಸಾಮಾಜಿಕ ಕರ್ತವ್ಯ ಗೊತ್ತಿರಬೇಕು. ಆದ್ದರಿಂದ ನಾಗರಿಕನಿಗೆ ತನ್ನ ಕರ್ತವ್ಯ, ಸ್ವತಃ ತನ್ನ ಸಮಾಜದ ಕರ್ತವ್ಯದ ಅರಿವು ಇರಬೇಕು. ನಮ್ಮ ಪ್ರಜಾಪ್ರಭುತ್ವದ ಮೇಲ್ಮೆಗಾಗಿ ಪೌರತನ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಡುವುದು ಅಗತ್ಯ.

ಫರಕ್ಕಾ ಅಣೆಕಟ್ಟು

ಫರಕ್ಕಾ ಅಣೆಕಟ್ಟು ೧೯೭೦ರ ಅಕ್ಟೋಬರಿಗೆ ಪೂರ್ತಿಗೊಳ್ಳಲಿದೆ. ಅದು ಪೂರ್ಣಗೊಂಡ ಮೇಲೆ ವರುಷದ ಹನ್ನೆರಡು ತಿಂಗಳುಗಳಲ್ಲಿಯೂ ಕಲ್ಕತ್ತೆಯ ಬಂದರವು ನೌಕಾಯಾನಕ್ಕೆ ಸುಯೋಗ್ಯವಾಗುವದು ಮತ್ತು ಕಲ್ಕತ್ತೆಯ ಮಹಾನಗರದ ಜನರಿಗೆ ಕುಡಿಯುವ ಶುದ್ಧ ನೀರು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುವದು. ಪ್ರಸ್ತುತ ವರುಷದ ಕೊನೆಗೇನೇ ಫರಕ್ಕಾ ಅಣೆಕಟ್ಟು ಹೆಚ್ಚುಕಡಿಮೆ ಪೂರ್ಣಗೊಳ್ಳಲಿದೆ. ದೇಶದ ಇಂಜನಿಯರಿಂಗ್ ಕೌಶಲ್ಯದ ಮೇರುವಾಗಿ ಮೆರೆಯಲಿದೆ.

ಭಾಗೀರಥಿ-ಹುಗಳೀ ನದಿಯ ಎಡದಂಡೆಯ ಮೇಲಿನ ಮಹತ್ವದ ಬಂದರು ಕಲ್ಕತ್ತಾ. ಭಾಗೀರಥಿ-ಹುಗಳೀ ಪ್ರವಾಹವು ಅತ್ಯಂತ ಪುರಾತನ ಜಲಮಾರ್ಗ. ಪವಿತ್ರ ಗಂಗಾ ನದಿಯು ಇಲ್ಲಿ ಹರಿದು ಮುಂದೆ ಸಾಗಿ ಬಂಗಾಲ ಉಪಸಾಗರದ ಗಂಗಾಸಾಗರದಲ್ಲಿ ಸಮುದ್ರವನ್ನು ಸೇರುವದು. ನಾನಾ ದೇಶದ ಧ್ವಜಗಳಿಂದ ಅಲಂಕೃತವಾದ ನೂರಾರು ಹಡಗುಗಳು ಪ್ರತಿವರುಷವೂ ಕಲ್ಕತ್ತೆಯ ಬಂದರಿನಲ್ಲಿ ಬಂದಿಳಿಯುವವು. ಭಾರತ ದೇಶಕ್ಕೆ ಅವಶ್ಯಕ ಸರಕುಗಳನ್ನು ಹೊತ್ತುಕೊಂಡು ಬಂದು, ಇಲ್ಲಿಂದ ಚಹ, ಸೆಣಬು ಮತ್ತು ಇತರ ಸರಕುಗಳನ್ನು ಒಯ್ಯುವವು.

ಭಾಗೀರಥಿ—ಹುಗಳಿ ಜಲಮಾರ್ಗದಲ್ಲಿ ಹಡಗುಗಳು ೧೨೫ ಮೈಲು ಪ್ರಯಾಣ ಮಾಡಿ ಕಲ್ಕತ್ತ ಬಂದರವನ್ನು ತಲಪುವವು. ಆದರೆ ಮೇನ್ಸೂನ್ ತಿಂಗಳುಗಳನ್ನು ಬಿಟ್ಟು ಉಳಿದ ತಿಂಗಳುಗಳಲ್ಲಿ ಈ ಜಲಮಾರ್ಗದಲ್ಲಿ ಸಾಕಷ್ಟು ನೀರು ಜಲಪರ್ಯಟನಕ್ಕೆ ಲಭ್ಯವಾಗುತ್ತಿಲ್ಲ. ಜಲಮಾರ್ಗದ ಸ್ಥಿತಿ ವರುಷದಿಂದ ವರುಷಕ್ಕೆ ಹದಗೆಡುತ್ತಿದೆ. ಹರಿದು ಬರುವ ನೀರಿನ ಪೂರೈಕೆ ಕಡಿಮೆಯಾಗಿರುವುದರಿಂದ, ಸಮುದ್ರ ಭರತಿಗಳ ಒತ್ತಡ ಹೆಚ್ಚಾಗಿ ಈ ಜಲಮಾರ್ಗವು ಹೂಳು ಅಥವಾ ಕೆಸರಿನಿಂದ ತುಂಬಿಹೋಗಿದೆ. ಕಲ್ಕತ್ತೆಯ ಇಳಿಹಾಯ್ದು ಪ್ರತಿವರುಷಕ್ಕೆ ಏನಿಲ್ಲೆಂದರೂ ಒಂದೂವರೆ ದಶಲಕ್ಷ ಘನ ಅಡಿಯಷ್ಟು ಕೆಸರು ಮತ್ತು ಮಳಲು ಇಲ್ಲಿ ಹರಿದು ಹೋಗುತ್ತದೆ. ಇದಲ್ಲದೆ ಸಮುದ್ರ ಭರತಗಳಿಂದ ಈ ಜಲಮಾರ್ಗ ಹೂತ ಹೋಗುತ್ತಿದೆ. ಈ ಹೂಳು ನದಿಯ ಪಾತ್ರದಲ್ಲಿ ಸಂಗ್ರಹವಾಗುತ್ತಲೇ ಹೋಗಿದೆ. ಇತ್ತೀಚಿನ ವರುಷಗಳಲ್ಲಿಯಂತೂ ಭರತಿಗಳು ತಂದೊಡ್ಡುವ ಹೂಳಿನ ಪ್ರಮಾಣ ನಿರೀಕ್ಷಣೆಯನ್ನು ಮೀರಿದೆ. ೧೯೬೭ರಲ್ಲಿ ವರುಷದ ೭೦ ದಿನಗಳಲ್ಲಿ ಇಂತಹ ಭರತಿಗಳು ಕಾಣಿಸಿಕೊಂಡಿದ್ದರೆ, ಈಗ ವರುಷದ ೧೬೦-೧೭೦ ದಿನಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಹೀಗಾಗಿ ೨೬ ಅಡಿಯ ಡ್ರಾಫ್ಟಿನ ಹಡಗುಗಳು ವರುಷದ ಕೆಲವೇ ದಿನಗಳ ವರೆಗೆ ಮಾತ್ರ ಕಲ್ಕತ್ತೆಯ ವರೆಗೆ ಬರುತ್ತಿವೆ.

ಶಿರೋಭಾಗದ ನೀರಿನ ಒತ್ತಡವನ್ನೇ ಎಲ್ಲ ಬಂದರುಗಳೂ ಅವಲಂಬಿಸಿವೆ. ಈ ಮಾತನ್ನು ಜಗತ್ತಿನ ಇಂಜನಿಯರಿಂಗ್ ಪರಿಣತರೆಲ್ಲ ಒಪ್ಪಿದ್ದಾರೆ. ಕಲ್ಕತ್ತೆಯ ಬಂದರಿನ ವಿಷಯದಲ್ಲಿಯಂತೂ ಈ ಮಾತು ಶತಶಃ ಸತ್ಯ.

ಕಲ್ಕತ್ತಾ ಬಂದರದ ಜಲಮಾರ್ಗವು ಹೂತು ಹೋಗುತ್ತಿರುವುದರಿಂದ ನೌಕಾಯಾನಕ್ಕೆ ಅಡ್ಡಿಯಾಗುತ್ತ ನಡೆದಿದೆ. ಹುಗಳೀ ನದಿಯ ನೀರು ಹೆಚ್ಚು ಹೆಚ್ಚು ಉಪ್ಪುಮಯವಾಗ ಹತ್ತಿದೆ. ಕಲ್ಕತ್ತೆಯ ಮಹಾನಗರಕ್ಕೆ ನೀರನ್ನು ಪೂರೈಸುತ್ತಿರುವ ಪಾಲ್ತಾ ಪಂಪಿಂಗ್ ಸ್ಟೇಶನ್ನಿನಲ್ಲಿ ಲವಣಾಂಶವು ಕಳವಳಕಾರಿ ರೀತಿಯಲ್ಲಿ ಹೆಚ್ಚಾಗುತ್ತ ನಡೆದಿದೆ. ಕೂಡಲೇ ಕ್ರಮಕೈಕೊಳ್ಳದಿದ್ದರೆ, ಈ ನೀರು ಕುಡಿಯಲಿಕ್ಕೆ ಯೋಗ್ಯವಾಗಿ ಉಳಿಯುವುದಿರಲಿ, ಕೈಗಾರಿಕೆಗಳ ಬಳಕೆಗೂ ಬರುವದಿಲ್ಲ.

ಈ ರೀತಿ ಭಾರತದ ರಫ್ತು ವ್ಯಾಪಾರದ ಶೇಕಡ ಐವತ್ತರಷ್ಟು ಭಾಗವನ್ನು ವ್ಯವಸ್ಥೆಗೊಳಿಸುವ ಕಲ್ಕತ್ತೆಯ ಬಂದರಕ್ಕೆ ಬಂದೊದಗಿರುವ ಗಂಡಾಂತರ ಕಟು ಸತ್ಯ. ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಕೂಡಿ ಆಗುವಷ್ಟು ದೊಡ್ಡ ಹಿನ್ನಾಡಿನ ಪ್ರದೇಶವನ್ನು ಕಲ್ಕತ್ತೆಯ ಬಂದರವು ಹೊಂದಿದ್ದು, ಈಗ ಅದರ ಜಲಮಾರ್ಗವು ಹೂತುಹೋಗ ಹತ್ತಿರುವದು ತೀರ ಕಳವಳಕಾರಿ ಸಂಗತಿ.

ಭಾಗೀರಥಿ....ಹುಗಳೀ ನದೀ ಮಾರ್ಗದಲ್ಲಿ ಯೋಗ್ಯ ಪ್ರಮಾಣದ ಶುದ್ಧ ನೀರು ಪ್ರವಹಿಸಿದರೆ ಮಾತ್ರ ಮೇಲಿನ ಗಂಡಾಂತರವನ್ನು ತಪ್ಪಿಸಬಹುದಾಗಿದೆ. ಫರಕ್ಕಾ ಅಣೆಕಟ್ಟು ಯೋಜನೆಯು ಈ ಕೆಲಸಕ್ಕಾಗಿಯೇ ಅಣಿಯಾಗುತ್ತಿದೆ. ಕಲ್ಕತ್ತೆಯ ಬಂದರಿನ ಸರ್ವನಾಶವನ್ನು ತಪ್ಪಿಸಲೆಂದೇ ಫರಕ್ಕಾ ಅಣೆಕಟ್ಟು ತಲೆಎತ್ತುತ್ತಲಿದೆ.

ಈ ಅಣೆಕಟ್ಟನ್ನು ತೀವ್ರವಾಗಿ ಕಟ್ಟಬೇಕಾದುದರ ಅವಶ್ಯಕತೆಯನ್ನು ಇಡೀ ಪ್ರಪಂಚವೇ ಒಪ್ಪಿಕೊಂಡಿದೆ. ಅದಕ್ಕೆಂದೇ ಭಾರತ ಸರಕಾರವು ೧೯೬೦ರಲ್ಲಿ ಈ ಯೋಜನೆಯನ್ನು ಆರಂಭಿಸಿದೆ.

ಬಾಹ್ಯಜ್ಞಾನ ಸಾಲದು - ಅಂತರ್ಜ್ಞಾನಬೇಕು

(ಭವಾನೀದಾಸ ವೋರಾ)

ಮನೆಯತುಂಬ ಹಾಹಾಕಾರವೆದ್ದಿತು. ಎಲ್ಲ ಕಡೆಗಳಲ್ಲಿ ಶೋಕ ಮತ್ತು ಆಕ್ರಂದನ ಕೇಳಿಸಹತ್ತಿತು. ಆಪ್ತೇಷ್ಟರೆಲ್ಲರೂ ಮೋಹನಭಾಯಿಗೆ ಸಮಾಧಾನ ಹೇಳಲು ಬರಹತ್ತಿದರು. ಅದೇ ಆಗ ಅಮೇರಿಕೆಯಿಂದ ಒಂದು ಕೇಬಲಗ್ರಾಮು ಬಂದಿತ್ತು! ಅದರಲ್ಲಿ ಅವರ ಮಗ ರಮೇಶ ಒಂದು ಬೋಯಿಂಗ ವಿಮಾನ ಅಪಘಾತದಲ್ಲಿ ಸತ್ತನೆಂದು ತಿಳಿಸಲಾಗಿತ್ತು. ವಿಮಾನದಲ್ಲಿಯ ೮೦ ಜನ ದುರ್ದೈವಿ ಪ್ರಯಾಣಿಕರಲ್ಲಿ ರಮೇಶನೂ ಇದ್ದ. ಈ ಸುದ್ದಿ ಕೇಳಿ ಮನೆಯ ಜನರಿಗೆಲ್ಲ ವಜ್ರಾಘಾತವಾಯಿತು! ರಮೇಶನ ತಾಯಿಯಂತೂ ಮೂರ್ಛಿತಳಾಗಿ ಬಿದ್ದುಬಿಟ್ಟಿದ್ದಳು! ಮಗಳು ಸುಮಿತ್ರಾ ಅವಳ ಬಳಿ ಕುಳಿತು ಉಪಚಾರ ನಡಿಸಿದ್ದಳು! ಅತ್ಯಂತ ಧೈರ್ಯಶಾಲಿ ಎನಿಸುತ್ತಿದ್ದ ಮೋಹನಭಾಯಿಯೂ ಇಂದು ಚಿಂತಾಗ್ರಸ್ತನಾಗಿದ್ದ. ೩೫ ವರ್ಷ ಅವನು ಸತತವಾಗಿ ಗೀತಾಪಾರಾಯಣ ಮಾಡಿದ್ದೂ ಇಂದು ಅವನಿಗೆ ಪ್ರಯೋಜನಕ್ಕೆ ಬೀಳಲಿಲ್ಲ. "ಕರುಣಾಮಯ ದೇವನೇ, ಇಂಥ ಕಠೋರ ಶಿಕ್ಷೆ ನನಗೇಕೆ ಕೊಟ್ಟೆ?" ಎಂಬ ಒಂದೇ ವಾಕ್ಯ ಪುನಃ ಪುನಃ ಉಚ್ಚರಿಸುತ್ತಿದ್ದ.

ಸಾಯಂಕಾಲವಾಯಿತು. 'ಕಾಲ್ ಬೆಲ್' ಬಾರಿಸಿತು. ಬಾಗಿಲು ತೆರೆಯುತ್ತಲೇ ತಾರಿನವ ಸುಮಿತ್ರಾಳ ಕೈಯಲ್ಲೊಂದು ಕೇಬಲ್ ಕೊಟ್ಟ. ಓದಿ ನೋಡಿದವಳೇ ಅವಳು ಆನಂದಾತಿಶಯದಿಂದ ಕುಣಿಯಹತ್ತಿದಳು! ಅದು ರಮೇಶನದೇ ಕೇಬಲ್ ಆಗಿತ್ತು. ಅವನು ಕೊನೆಯ ಗಳಿಗೆಯಲ್ಲಿ ಆ ವಿಮಾನದಲ್ಲಿಯ ಪ್ರವಾಸ ರದ್ದುಪಡಿಸಿದ್ದ ಮತ್ತು ಹೀಗಾಗಿ ಸುರಕ್ಷಿತನಿದ್ದ.

ಇದನ್ನು ಕೇಳುತ್ತಲೇ ನಿಮಿಷಾರ್ಧದಲ್ಲಿ ಮನೆಯ ವಾತಾವರಣ ಬದಲಾಗಿಬಿಟ್ಟಿತು! ಶೋಕ ಆಕ್ರಂದನಗಳ ಬದಲು ಆನಂದ ಕಲ್ಲೋಲ ವ್ಯಾಪಿಸಿತು! ರಮೇಶನ ತಾಯಿಯೂ ಎದ್ದು ತಿರುಗಾಡಹತ್ತಿದಳು! ಮೋಹನಭಾಯಿಯೂ ಆನಂದಭರಿತನಾದ. ಆ ತಾಯಿ ಅಂಗಡಿಯಿಂದ ಪೇಡೆ ತಂದು ಎಲ್ಲರಿಗೂ ಹಂಚಹತ್ತಿದರು! ಮೋಹನಭಾಯಿಯೂ ತನ್ನ ಕೈಯಲ್ಲಿಯ ಪೇಡೆ ಬಾಯಿಯಲ್ಲಿ ಹಾಕಲಿದ್ದ. ಅಷ್ಟರಲ್ಲಿ ಅವನ ಮನಸ್ಸಿಗೆ ಹೊಳೆಯಿತು—"ಇದೆಂಥ ಮೂರ್ಖತನ! ಇದೆಂಥ ಉಲ್ಲಾಸ! ಇದೆಂಥ ಆನಂದ! ವಿಮಾನ ಅಪಘಾತದಲ್ಲಿ ನಿನ್ನ ರಮೇಶ ಇರಲಿಲ್ಲ—ಇಷ್ಟೇ ಅಲ್ಲವೇ? ಆದರೆ ವಿಮಾನವೇನೂ ಖಾಲಿ ಇರಲಿಲ್ಲವಷ್ಟೇ! ಅದರಲ್ಲಿ ಬೇರೆ ೮೦ ಜನ ಇದ್ದರಲ್ಲ! ಅವರು ಪ್ರತಿಯೊಬ್ಬರೂ ಯಾರೊಬ್ಬರ ಮಕ್ಕಳೋ, ಅಕ್ಕತಂಗಿಯರೋ, ತಂದೆತಾಯಿಯರೋ, ಪತಿಪತ್ನಿಯರೋ ಇದ್ದೇಇದ್ದರಲ್ಲ. ಅವರೂ ನಿನ್ನ ಸ್ವಜನರೇ ಅಲ್ಲವೇ? ೩೫ ವರ್ಷ ಗೀತಾಧ್ಯಯನ ಮಾಡಿ ನೀನು ಕಲಿತುಕೊಂಡಿದ್ದು ಇಷ್ಟೇ ತಾನೆ? ವಸುಧೈವ ಕುಟುಂಬಕಂ ಎಂಬ ವಿಶ್ವಕುಟುಂಬದ ಗಿಳಿಪಾಠ ಜೀವನದುದ್ದಕ್ಕೂ ಮಾಡುತ್ತ ಬಂದೆ! ಹೀಗಿದ್ದೂ ಅದೇ ಕುಟುಂಬೀಯರ ಮರಣವಾರ್ತೆ ಕೇಳಿಯೂ ಪೇಡೆ ತಿನ್ನಲು ತಯಾರಾದೆಯಾ? ನಿನ್ನ ಜ್ಞಾನವೆಲ್ಲವೂ ಮೇಲಿಮೇಲಿನದು ಮಾತ್ರವೆಂದಾಯಿತು." ಎಂದು!

ಹೀಗೆಂದವನೇ ಮೋಹನಭಾಯಿ ಎದ್ದು ಸುಮಿತ್ರಾಳ ಹತ್ತಿರ ಹೋಗಿ ಅವಳ ಕೈಯಲ್ಲಿಯ ಪೇಡೆಗಳ ಪೊಟ್ಟಣ ಕಸಿದುಕೊಂಡು, ತನ್ನ ಕೈಯಲ್ಲಿಯ ಪೇಡೆಯನ್ನೂ ಅದರಲ್ಲಿ ಹಾಕಿ ಮಡಚಿ ಕಿಡಕಿಯ ಹೊರಗೆ ಬಿಸಾಡಿಬಿಟ್ಟ. ಎಲ್ಲರೂ ನೋಡಿ ಸ್ತಬ್ಧರಾದರು. ಮೋಹನಭಾಯಿಯ ಈ ವಿಚಿತ್ರ ವರ್ತನದ ಕಾರಣವು ಯಾರಿಗೂ ಗೊತ್ತಾಗಲಿಲ್ಲ.

(ಜನಕಲ್ಯಾಣದಿಂದ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ಪ್ರಾಣಿಯು ಸತ್ತಬಳಿಕ ಏನು?

(ನಾಲ್ಕನೇ ಪುಟದಿಂದ)

ಆಕರ್ಷಣೆಯೋ. ಎಲ್ಲ ಆತ್ಮಗಳಲ್ಲಿ ಅಭೇದದ ಸಂಸ್ಕಾರವಿರುತ್ತದೆ. ಭೇದದ ಅಭೇದ ಸ್ಥಿತಿಯಲ್ಲಿ ಆಕರ್ಷಣೆ ಎಂಬೂ ಅಸ್ವಾಭಾವಿಕವೆಂದು ಹೇಳಲಾಗದು.

ಆಕರ್ಷಣೆಗೆ ವಿರುದ್ಧ ಆಕರ್ಷಣೆ ವಸ್ತು ಯಥಾಸ್ಥಿತಿಯ ಸಂಗತಿ ಇನ್ನು ಇಯಿತು. ಜೀವಾಳದ ಸೂಕ್ಷ್ಮ ಶರೀರದ ಸಂಗಡೆ ಉತ್ಕ್ರಮಣ ಕಾಲದಲ್ಲಿ ಪೃಥ್ವಿಯ ಆಕರ್ಷಣೆಗೆ ಪ್ರತಿಯಾಗಿ ಉದ್ವೇಗಾತ್ಮಕ ಆಕರ್ಷಣೆಯಿಂದ ಶಕ್ತಿ ಪ್ರಾಪ್ತವಾಗುವುದು. ದೇವಚಿತಿರೂಪಕ್ಕಾಗ ಮನುಷ್ಯನನ್ನು ರಾಗ ದ್ವೇಷಗಳ ಆಧಿಕ್ಯವು ಯಥಾ ಸ್ಥಿತಿಯಲ್ಲಿರುವಂತೆ ಮಾಡುತ್ತದೆ. ಈ ಸ್ಥಿತಿಗಳಲ್ಲಿ ವಾಯು ತತ್ವದ ಪ್ರಾಬಲ್ಯವು ಎದ್ದು ಕಾಣುವುದು. ಅತಿ ಜೀವಿತವ್ಯವು ವಾಯುವಿನಲ್ಲಿ ಅಲ್ಲಿಂದಿಲ್ಲಿ ಸಂಚರಿಸ ತೊಡಗುವ ವಾಯುವಿನ ಶರೀರವು ಪ್ರೇತ ಪಿಶಾಚಗಳದ್ದು. ಆದುದರಿಂದ ಇವನ್ನು ಪ್ರಾಯಶಃ ಪ್ರೇತ-ಪಿಶಾಚಿಗಳೆಂದು ಸ್ವೀಕರಿಸಲಾಗುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಶ್ರಾದ್ಧಕ್ಕೆ ಗೌರವದ ಸ್ಥಾನವಿದೆ. ಪ್ರೇತ-ಪಿಶಾಚ ಹಾಗೂ ಪಿತೃ ಜೀವನಗಳಿಗೆ ಮನ್ನಣೆ ನೀಡುವುದಲ್ಲದೆ ಮತ್ತು ಈ ಜೀವನದಿಂದ ಅವುಗಳನ್ನು ಮೇಲೆತ್ತುವುದಕ್ಕೆ ಈ ಶ್ರಾದ್ಧಪದ್ಧತಿಯು ಅನುಕೂಲವಿದೆ. ವಿಶೇಷವಾಗಿ, ಕೃಷ್ಣ ಮಾರ್ಗದಿಂದ ಉತ್ಕ್ರಮಣ ಮಾಡುವ ಆತ್ಮಗಳಿಗೆ ವೇದಾಜ್ಞೆಯಂತೆ ಅನ್ನಾದಿಗಳ ಪಿಂಡಗಳಿಂದ ಸೋಮ ಭಾಗವನ್ನು ಮುಟ್ಟಿಸಿ ಶ್ರದ್ಧಾರೂಪದ ಅಪುಃಶಯ ಪುಷ್ಟಿಯೇ 'ಗಾತ್ರಪಿಂಡ'ದ ಉದ್ದೇಶ.

ಯದ್ ವೋ ಅಗ್ನಿರಜಹಾ ದೇಕಮಂಗಂ
ಪಿತೃಲೋಕಂ ಗಮಯಂ ಜಾತವೇದಾಃ
ತದ್ ವ ಏತತ್ ಪುನರಾಪ್ಯಾಯಯಾಮಿ
ಸಾಂಗಾಃ ಸ್ವರ್ಗೇ ಪಿತರೋ ಮಾ
ದಯಧ್ವಮ್ ॥

ಎಲೈ ಪಿತೃಲೋಕದ ಪಥಿಕನೇ, 'ಅಗ್ನಿಯು ನಿನ್ನ ಒಂದು ಶರೀರವನ್ನು ಸುಟ್ಟು, ನಿನ್ನಿಂದ ಅಪಹರಿಸಿದ್ದಾನೆ. ಸೂಕ್ಷ್ಮ ಶರೀರದೊಡನೆ ನಿನ್ನನ್ನು ಪಿತೃಲೋಕಕ್ಕೆ ಕಳಿಸಿದ್ದಾನೆ. ನಾನು ನಿನ್ನ ಆ ಅಪಹೃತ ಶರೀರವನ್ನು ಇಷ್ಟೋಪ್ಯ ಪುಷ್ಟಗೊಳಿಸುತ್ತಿದ್ದೇನೆ. ನೀನು ಸಾಂಗವಾಗಿ ಸ್ವರ್ಗದಲ್ಲಿ ಆನಂದಿಸು.' ಇದು ಅಥರ್ವ ವೇದದ ಒಂದು ಮಂತ್ರ (೧೮-೪-೬೪)

ತಪಸ್ವಿ, ಸನ್ಯಾಸಿ ಮೊದಲಾದ ಶುಕ್ಲ ಮಾರ್ಗದಲ್ಲಿ ಉತ್ಕ್ರಮಣ ಮಾಡುವವರಿಗೆ ಈ ಬಗೆಯಾಗಿ ಶರೀರ ಪುಷ್ಟಿಯ ಆವಶ್ಯಕತೆಯಿರುವುದಿಲ್ಲ. ಅವರು ಸ್ವಯಂ ಅಗ್ನಿರೂಪರು. ಅವರ ಮೇಲಾಗುವ ಸೂರ್ಯನ ಆಕರ್ಷಣೆಯನ್ನು ಯಾವುದೇ ಭೌತಿಕ ವ್ಯವಧಾನವು ತಡೆಯಲಾರದು. ಆದುದರಿಂದ ಅಂತಹ ಪ್ರಾಣಿಗಳಿಗೆ ಗಾತ್ರಪಿಂಡ ವಿಧಾನವಿಲ್ಲ. ಸಾಮಾನ್ಯ ಉತ್ಕ್ರಮಿತ ಆತ್ಮಗಳಿಗೆ ಭೂ-ವಾಯುಗಳ ಸಂಬಂಧವಿರುವವರಿಗೆ ಶಕ್ತಿಪ್ರಧಾನಕ್ಕಾಗಿ ಸೋಮಪುಷ್ಟಿ ಆವಶ್ಯಕ. ಹತ್ತು ದಿವಗಳಲ್ಲಿ ಆತ್ಮವು ಈ ವಾಯುಕ್ಷೇತ್ರವನ್ನು ದಾಟಿ ಪಿತೃಲೋಕದ ದಾರಿಯಲ್ಲಿ ಮುಂದುವರಿಯುವುದು. ಆದುದರಿಂದಲೇ ಹತ್ತು ದಿನಗಳ ವರೆಗೆ ಶ್ರಾದ್ಧದ ಪುಷ್ಟಿಕ್ರಿಯೆಗಳು ನಡೆಯುತ್ತವೆ.

ಪ್ರೇತಜೀವನವೆಂಬುದಿದೆಯೇ? ಇಂತಹ ಜೀವನವನ್ನು ಶ್ರೀಮದ್ಭಾಗವತ ಮಹಾಪುರಾಣ ಸಮರ್ಥಿಸುತ್ತದೆ. ಇತರ ಭಾರತೀಯ ಪುರಾಣಗಳಲ್ಲಿಯೂ ಪ್ರಸಂಗವಶದಿಂದ ಪ್ರೇತಜೀವನದ ವರ್ಣನೆಗಳು ಬರುತ್ತವೆ. ಬೌದ್ಧ ಮತ್ತು ಜೈನಮತಗಳ ಕಥಾಸೂತ್ರಗಳಲ್ಲಿಯೂ ಪ್ರೇತಪಿಶಾಚಿಗಳ ಉಲ್ಲೇಖ ಬಹಳವಾಗಿದೆ. ನಾಲ್ನೂರು ವರ್ಷಗಳಿಗೆ ಮೊದಲು ಸಂತ ತುಳಸೀದಾಸರ ಮೂಲಕ ಕವಿವರ ಕೇಶವನ, ಪ್ರೇತಜೀವನದಿಂದ ಮುಕ್ತನಾದನು. ಪ್ರೇತಜೀವನ ಸಂಬಂಧದ ಸಾಕ್ಷ್ಯಗಳ ಸರಣಿ ಬಹಳ ದೀರ್ಘವೂ ಅವಿಚ್ಛಿನ್ನವೂ ಆಗಿದೆ. ಇದರಿಂದಾಗಿ ಸ್ವಾಭಾವಿಕವಾಗಿ ಸಂದೇಹವಾದಿಗಳು ಇವುಗಳನ್ನು ತುಳ್ಳಾಗಿಸಲು ಇನ್ನೂ ಅಶಕ್ತರಾಗಿಯೇ ಉಳಿದಿದ್ದಾರೆ.

ಇಂಟಗೆ ಕೇವಲ ಮೂವತ್ತು ವರ್ಷಗಳಿಗೆ ಮೊದಲು ಲಂಡನ್ ಮಹಾನಗರದ ಪ್ರಮುಖ ವರ್ತಮಾನ ಪತ್ರಿಕೆಗಳಲ್ಲಿ ಕೇಪ್ಟನ್ ಡೇವಿಡನ ಒಂದು ಪ್ರಸಂಗ ಮುದ್ರಿತವಾಯಿತು. ಆತನು ಚೀನಾದಿಂದ ಮರಳಿದ ಬಳಿಕ ಐಗುಪ್ತದೇಶದಲ್ಲಿ ಒಂದು ಛಾಯಾರೂಪದ ಭೀಷಣ ಆಕೃತಿ ಆತನ ನಾಲ್ಕೂ ಪಕ್ಕದಲ್ಲಿ ತಿರುಗುತ್ತಿರುವುದು ಗೋಚರವಾಯಿತು. ಈ ಅಪರಿಚಿತ ಆಕೃತಿಯಿಂದಾಗಿ ಡೇವಿಡ್ ಬಹಳ ಸಂಕಟಗೊಳ್ಳಗಾದನು; ಒಂದು ತಿಂಗಳು ಮುಗಿಯುವಷ್ಟರಲ್ಲೇ ಆತ ಮರಣೋನ್ಮುಖನಾದನು. ಬಹಳವಾಗಿ ಪ್ರಯತ್ನ ನಡೆಸಿದ ಬಳಿಕವೂ ಡಾಕ್ಟರರು ಆತನ ರೋಗವನ್ನು ಕಂಡುಹಿಡಿಯಲು ಅಶಕ್ತರಾದರು. ಡೇವಿಡನ ಪತ್ನಿ ಪತಿಯ ದುರವಸ್ಥೆಯಿಂದ ಸಹಜವಾಗಿಯೇ ಖಿನ್ನಳಾದಳು. ಒಂದು ದಿನ ಆಕೆಗೆ ಪರಿಚಯಸ್ಥಳೊಬ್ಬಳಿಂದ ನೆರೆಗ್ರಾಮದ ಜಾದೂಗಾರ್ತಿ ಮಹಿಳೆ ಫಾತಿಮಾಳ ಹೆಸರು ತಿಳಿಯಿತು. ಆಕೆ ಫಾತಿಮಾಳ ಗುಡಿಸಲು ಹೊಕ್ಕಳು. ಡೇವಿಡನಿಗೆ ಸಂಭವಿಸಿದ ಘಟನೆಗಳನ್ನು ನಿರ್ವಂಚನೆಯಿಂದ ಆಕೆಗೆ ನಿರೂಪಿಸಿದಳು. ಅಲ್ಲೇ ಮಳಲಿನಲ್ಲಿ ನಾಲ್ಕಾರು ಗೀಟೆಳೆದ ಬಳಿಕ ಫಾತಿಮಾ ಕೇಳಿದಳು —"ನಿನ್ನ ಪತಿಯು ಚೀನಾದೇಶದಿಂದ ಯಾವುದಾದರೂ ಉಪಯುಕ್ತ ಕೋಟನ್ನು ತಂದಿದ್ದಾನೆಯೇ?" ಡೇವಿಡನ ಪತ್ನಿ ಹೇಳಿದಳು: "ಕೋಣೆಯೊಳಗೊಂದು ಕೋಟು ಗೂಟದಲ್ಲಿ ತೂಗುತ್ತಿದೆ. ಅದನ್ನು ತನ್ನ ಪತಿ ಚೀನಾದಲ್ಲಿ ಹರಾಜಿನಲ್ಲಿ ಕೊಂಡು ಕೊಂಡಿದ್ದನು." "ಅಂಜಬೇಡ, ನಾನು ನಿನ್ನೊಡನೆ ಬರುತ್ತೇನೆ. ನಿನ್ನ ಪತಿಯ ಜೀವವುಳಿಯುವುದು."— ಫಾತಿಮಾಳು ಆಶ್ವಾಸನೆ ನೀಡಿದಳು.

ಸೈನಿಕರ ವಸತಿಗೆ ಫಾತಿಮಾ ಡೇವಿಡನ ಪತ್ನಿಯೊಂದಿಗೆ ಬಂದಳು. ಗೂಟದಿಂದ ಕೋಟು ಎತ್ತಿಕೊಂಡು ಆಕೆ ಡೇವಿಡನಿಗೆ ಅದರಲ್ಲಿದ್ದ ಹಲವಾರು ಅಸ್ಪಷ್ಟ ರಕ್ತದ ಕಲೆಗಳನ್ನು ತೋರಿಸಿದಳು. "ಈ ಕೋಟು ಚೀನಾದ ರಾಜವಂಶದ ಒಬ್ಬ ಪ್ರಮುಖನದ್ದು. ಇದು ಆತನಿಗೆ ಅತ್ಯಂತ ಪ್ರಿಯವಾಗಿತ್ತು. ಆದುದರಿಂದ ಮರಣಗೊಂಡ ಬಳಿಕವೂ ಆ ಪ್ರೇತಾತ್ಮವು ಕೋಟನ್ನು ಬಿಡಲಿಲ್ಲ. ನಿನಗೆ ಗೋಚರಿಸಿದ ಅಪರಿಚಿತನ ಛಾಯೆಯೇ ಆ ಪ್ರೇತಾತ್ಮನದ್ದು. ಸ್ಥೂಲವಾದ ಕೋಟನ್ನು ಸೂಕ್ಷ್ಮ ಆತ್ಮವು ತನ್ನದನ್ನಾಗಿ ಮಾಡಿಕೊಳ್ಳಲು ಅಸಮರ್ಥವಾಯಿತು. ಆದುದರಿಂದ ಅದು ಕೋಟಿನ ಬೆನ್ನ ಹಿಂದೆಯೇ ಇದ್ದು ದೂರ, ಐಗುಪ್ತ ದೇಶಕ್ಕೂ ಬಂತು." ಎಂದಳಾಕೆ.

ಫಾತಿಮಾ ಆ ಕೋಟನ್ನು ಉರಿಯುವ ಬೆಂಕಿಗೆಸೆದಳು. ಸ್ಥೂಲವಾದ ಕೋಟು ಈಗ ನಿರಾಕಾರಗೊಂಡಿತು. ಕೋಟು ಭಸ್ಮೀಭೂತವಾದ ನಂತರ ಡೇವಿಡನಿಗೆ ಆ ಪರಿಚಿತ ಛಾಯೆಯು ದೃಗ್ಗೋಚರವಾಗಲಿಲ್ಲ. ಕೋಟಿನ ಮೇಲಿದ್ದ ಉತ್ಕಟ ಮೋಹವೇ ಅದರೊಂದಿಗೆ ಪ್ರೇತಾತ್ಮವನ್ನು ಚೀನದಿಂದ ಐಗುಪ್ತಕ್ಕೆ ಎಳೆದು ತಂದಿತು; ಪ್ರೇತಾತ್ಮವು ಕೋಟಿನ ಸುತ್ತ ತಿರುಗಾಡುತಿತ್ತು; ಕೋಟಿನ ನಾಶದೊಡನೆ ಪ್ರೇತಾತ್ಮದ ಮೋಹವೂ ನಾಶವಾಯಿತು.

ಯಾವುದಾದರೊಂದು ವಸ್ತುವಿನ ಬಗೆಗಿದ್ದ ಉತ್ಕಟ ಮೋಹ ಮತ್ಸರದಿಂದ ಉಂಟಾದ ಉದ್ವೇಗವು ಜೀವಾತ್ಮನನ್ನು ಉತ್ಕ್ರಮಣ ಮಾರ್ಗಗಮನ ಮಾಡದಂತೆ ತಡೆಯೊಡ್ಡುತ್ತದೆ. ಅದು ಯಥಾಸ್ಥಿತಿಯಲ್ಲಿದ್ದು ಉದ್ವೇಗಪೂರ್ಣ ಪ್ರೇತಜೀವನದಲ್ಲಿಯೇ ಉಳಿಯುವಂತೆ ಮಾಡುತ್ತದೆ. ಕೆಲವೊಮ್ಮೆ ಶ್ರೇಷ್ಠ ಆತ್ಮಗಳೂ ಈ ಚಕ್ರದಲ್ಲಿ ಸಿಲುಕಿದ ಸಂಗತಿಗಳನ್ನು ಕೇಳುತ್ತೇವೆ. ಒಬ್ಬನಿಗೆ ವಿಧವೆ ತಂಗಿಯಿದ್ದಳು. ಆಕೆಯನ್ನು ದೊಡ್ಡಮ್ಮನೆಂದು ಕರೆಯುತ್ತಿದ್ದರು. ಆಕೆ ಅತ್ಯಂತ ಸಾತ್ವಿಕ ವ್ಯಕ್ತಿಯವಳು. ಹಗಲಿರುಳು ಪೂಜೆ-ಉಪಾಸನೆಗಳಲ್ಲಿಯೇ ನಿರತಳಾಗುತ್ತಿದ್ದಳು. ಕುಟುಂಬದ ಮಕ್ಕಳಿಗೆ ಆಕೆ ತಾಯಿಗೂ ಮಿಗಿಲು. ಮರಣಾನಂತರ ಆಕೆಗೆ ಸದ್ಗತಿ ಲಭಿಸುವುದೆಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಆದರೆ, ಮಕ್ಕಳ ಮೇಲಿನ ಮಮತೆ ಮತ್ತು ಉತ್ಕಟ ಆಸಕ್ತಿ ಮೃತ್ಯುವಿನ ಬಳಿಕವೂ ಆಕೆಗಿತ್ತೆಂಬುದು ತೋರುತ್ತದೆ. ಮರಣದ ಎರಡು ಮೂರು ತಿಂಗಳುಗಳ ಬಳಿಕ ಆಕೆಯ ಛಾಯಾಮೂರ್ತಿ ಬಿಳಿಯ ವಸ್ತ್ರ ಧರಿಸಿ ಅಲ್ಲಿಂದಿಲ್ಲಿ ಅಂಗಳದಲ್ಲಿ ತಿರುಗಾಡುತ್ತಿರುವುದು ಗೋಚರಿಸಿತು. ಅದನ್ನು ನೋಡಿದ ಪರಿವಾರದ ಸದಸ್ಯರು ಶ್ರದ್ಧಾಭಾವದಿಂದ ಮೂಕರಾಗಿದ್ದರು. ಕುಟುಂಬದ ಯಾವುದಾದರೂ ಮಗು ಕಾಯಿಲೆ ಬಿದ್ದಾಗಲೇ ಆಕೆಯ ಛಾಯಾರೂಪ ತೋರಿಬರುತ್ತಿತ್ತು. ಈ ಛಾಯಾರೂಪ ಕಂಡು ಬರುತ್ತಲೇ ರೋಗಿ ಮಗು ತಡವಿಲ್ಲದೆ ಗುಣಮುಖವಾಗುತ್ತಿತ್ತು. ಆಕೆಯ ರೂಪದರ್ಶನ ಹತ್ತು ವರ್ಷಗಳ ವರೆಗಾಯಿತು. ಆ ಮೇಲೆ ಮಾತ್ರ ಯಾರೂ ಛಾಯಾಮೂರ್ತಿಯನ್ನು ಕಂಡದ್ದಿಲ್ಲ. ಇದೊಂದು ಕುಟುಂಬದ ಸತ್ಯಕಥೆ.

ಇಂತಹುದೇ ಘಟನೆಗಳು ಹಲವಾರು ಕುಟುಂಬಗಳಲ್ಲಿ ನಡೆದ ಪ್ರತ್ಯಕ್ಷ ಉದಾಹರಣೆಗಳಿವೆ.

ಭೌತಿಕ ವಿಜ್ಞಾನವಾದಿಗಳು ಸಂಪೂರ್ಣ ಬ್ರಹ್ಮಾಂಡ, ಪ್ರತಿಯೊಂದು ಗ್ರಹ ನಕ್ಷತ್ರಗಳು ಆಕರ್ಷಣ ಸಿದ್ಧಾಂತದ ಎಲ್ಲೆಯೊಳಗೆ ಕಾರ್ಯಶೀಲವಾಗಿವೆ ಎಂಬುದನ್ನು ತಿರಸ್ಕರಿಸುವುದಿಲ್ಲ. ಹಾಗಿರುವಾಗ ಆಧ್ಯಾತ್ಮಿಕ ವಿಜ್ಞಾನದ ಸೂಕ್ಷ್ಮ ಜಗತ್ತಿನಲ್ಲಿ ನಡೆಯುತ್ತಿರುವ ಆಕರ್ಷಣ ಸಿದ್ಧಾಂತವನ್ನು ಸ್ವೀಕರಿಸದಿರಲು ಕಾರಣವಿಲ್ಲ. ಪರಮಾಣು ತತ್ತ್ವದ ಅನ್ವೇಷಕರಿಗೆ ಪ್ರಾಣ ತತ್ತ್ವವೂ ಅನ್ವೇಷಣೆಯ ವಿಷಯವಾಗಬೇಕು. ತಮ್ಮ ಆಕರ್ಷಣ ಸಿದ್ಧಾಂತವು ಬಾಹ್ಯ ಜಗತ್ತಿಗಿಂತ ಅಂತರ್ಜಗತ್ತಿನಲ್ಲಿ ಹೆಚ್ಚು ಕಾರ್ಯಶೀಲವಾಗಿದೆಂಬುದನ್ನು ಅನುಭವಕ್ಕೆ ತಂದುಕೊಂಡಾಗ, ಅವರಿಗೆ ಹೆಚ್ಚಿನ ಆನಂದವಾಗುವುದು.

ಸಮಸ್ತ ಗೂಢ ರಹಸ್ಯಗಳನ್ನು ಅರಿತ ಆಧ್ಯಾತ್ಮಿಕ ವಿಜ್ಞಾನದ ಪ್ರಧಾನಾಚಾರ್ಯ ಭಗವಾನ್ ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ್ದಾನೆ—

ಯಾಂತಿ ದೇವವ್ರತಾ ದೇವಾನ್
ಪಿತೄನ್ಯಾಂತಿ ಪಿತೃವ್ರತಾಃ
ಭೂತಾನಿ ಯಾಂತಿ ಭೂತೇಜ್ಯಾ
ಯಾಂತಿ ಮದ್ಯಾಜಿನೋಽಪಿ ಮಾಮ್ ॥

೯-೨೫

ಅಂದರೆ, ದೇವತೆಗಳನ್ನು ಪೂಜಿಸುವವರು ದೇವತೆಗಳನ್ನು ಹೊಂದುವರು. ಪಿತೃಗಳನ್ನು ಪೂಜಿಸುವವರು ಪಿತೃಗಳನ್ನು ಹೊಂದುವರು. ಭೂತಗಳನ್ನು ಪೂಜಿಸುವವರು ಭೂತಗಳನ್ನೂ, ನನ್ನ ಭಕ್ತರು ನನ್ನನ್ನು ಹೊಂದುವರು.

ಅಂತಕಾಲೇ ಚ ಮಾಮೇವ
ಸ್ಮರನ್ಮುಕ್ತ್ವಾ ಕಲೇವರಂ
ಯಃ ಪ್ರಯಾತಿ ಸ ಮದ್ಭಾವಂ
ಯಾತಿ ನಾಸ್ತ್ಯತ್ರ ಸಂಶಯಃ ॥

೮-೫

ಯಾರು ಅಂತ್ಯ ಕಾಲದಲ್ಲಿ ನನ್ನನ್ನೇ ಸ್ಮರಿಸುತ್ತ ಶರೀರ ತ್ಯಾಗಮಾಡುವರೋ ಅವರು ನನ್ನ ಸಾಕ್ಷಾತ್ ಸ್ವರೂಪವನ್ನು ಹೊಂದುತ್ತಾರೆ. ಇದರಲ್ಲಿ ಏನೇನೂ ಸಂದೇಹವಿಲ್ಲ.

(ವಿವಿಧ ಮೂಲಗಳಿಂದ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
S. C. 14/69.
ಬಿ. ಕೃಷ್ಣ ಭಟ್ — — — ವಾದಿ
ಮತ್ತು
ಮಹಾಬಲ ಶೆಟ್ಟಿ — — ಪ್ರತಿವಾದಿ
ಇವರೊಳಗೆ

ಪ್ರತಿವಾದಿ- ಮಹಾಬಲ ಶೆಟ್ಟಿ, ದುಗ್ಗಪ್ಪ ಶೆಟ್ಟಿರವರ ಮಗ, ಉಡುಪಿ ತಾಲ್ಲೂಕು ಮಲ್ಲಾರು ಗ್ರಾಮದಲ್ಲಿರುವವರು, ಪೋಸ್ಟ್ ಕಾಪು.

ವಾದಿಯು ಪ್ಲೈಂಟು ನಿವೃತ್ತಿ ಬಗ್ಗೆ ದಾಖಲುಮಾಡಿದ ಮೇಲಿನ ದಾವೆಯು ತಾರೀಕು 27-5-1969ಕ್ಕೆ ಖಂಡ ಹಾಜರಿ ಬಗ್ಗೆ ಇಟ್ಟಿರುವುದರಿಂದ ಅದರಲ್ಲಿ ಉಪಾಹರಿಸುವುದಿದ್ದರೆ ಸದ್ರಿ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಹಾಜರು ಮಾಡಿಕೊಳ್ಳತಕ್ಕದ್ದು.

Y. C. S. Hegde,
Advocate for Plaintiff
ತಾ. 10-4-69)
Udipi)

ಗಾಂಧೀಜಿ ದೃಷ್ಟಿಯಲ್ಲಿ ಶಿಸ್ತಿನ ಮಹಿಮೆ

ಮಹೋನ್ನತವಾದ, ಶಾಶ್ವತವಾದ ಸಾಧನೆ ಮಾಡಲು ಕಠಿಣ ಶಿಸ್ತು ಅತ್ಯಗತ್ಯ. ಕೇವಲ ಬೌದ್ಧಿಕ ಚರ್ಚೆ, ವಿಚಾರಪರತೆ ಹಾಗೂ ತರ್ಕದಿಂದ ಶಿಸ್ತು ರೂಪುಗೊಳ್ಳಲಾರದು. ಕಷ್ಟ, ವಿಪತ್ತುಗಳನ್ನು ಎದುರಿಸುವುದರಿಂದ ಶಿಸ್ತಿನ ಆವಿರ್ಭಾವವಾಗುತ್ತದೆ.

ತ್ಯಾಗ, ಶಿಸ್ತು ಮತ್ತು ಆತ್ಮಸಂಯಮವಿಲ್ಲದೆ ಬಿಡುಗಡೆಯು ಅಶಾಂತಿಕರವಾಗದು. ನಿಜವಾದ ಯೋಧನು ಮುನ್ನಡೆಯುತ್ತಿರುವಾಗ ಅಂತಿಮ ಜಯ ಸಾಧಿಸುವ ಬಗ್ಗೆ ಚರ್ಚಿಸುವುದಿಲ್ಲ. ತಾನು ಕೈಲಾದಷ್ಟು ಚೆನ್ನಾಗಿ ಶ್ರಮಿಸಿದರೆ ಹೇಗಾದರೂ ಕಡೆಗಳಲ್ಲಿ ಜಯಶೀಲನಾಗಬಹುದೆಂಬ ಧೈರ್ಯವಿರುತ್ತದೆ. ಎಲ್ಲರೂ ಇಂತಹ ಉತ್ಸಾಹದಿಂದ ಕಾರ್ಯವೆಸಗಬೇಕು. ನಮಗೆ ಭವಿಷ್ಯದ ವಿಚಾರ ತಿಳಿಯುವುದಿಲ್ಲ. ಆದರೆ ನಮ್ಮ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಬೇಕೆಂಬ ಅರಿವಿರಬೇಕು. ಆದ್ದರಿಂದ ಮನಸ್ಸಿಟ್ಟು ಸಾಧ್ಯವಾದುದಂತಹ ಕಾರ್ಯವನ್ನು ಮಾಡೋಣ.

ವಿಧೇಯತೆಯ ಶೀಲ

ನೈಜ ಶಿಸ್ತು ವಿಚಾರಶೀಲತೆಗೆ ಸೃಷ್ಟಿ ನೀಡದಿರುವಂತಹ ಆಜ್ಞೆಗಳಿಗೆ ವಿಧೇಯವಾಗಿರಲು ಉತ್ಸಾಹ ನೀಡುತ್ತದೆ. ಸ್ವಯಂ ಸೇವಕನು ತನ್ನ ನಾಯಕನನ್ನು ಆಯ್ಕೆಮಾಡಿಕೊಳ್ಳುವಾಗ ವಿಚಾರ ಮಾಡಿ ನೋಡುತ್ತಾನೆ; ಆಯ್ಕೆ ಮಾಡಿದ ನಂತರ ನಾಯಕನು ನೀಡುವ ಆಜ್ಞೆಗಳನ್ನು ವಿಚಾರದ ಒರೆಗಲ್ಲಿಗೆ ಹಚ್ಚಿನೋಡಿ ವಿಮರ್ಶಿಸಲು ಕಾಲ, ಶಕ್ತಿಗಳನ್ನು ವ್ಯಯ ಮಾಡುವುದಿಲ್ಲ.

ಚಂಡಮಾರುತ, ಮಹಾಪೂರಗಳಿಗೆ ದಿಟ್ಟ ಹಾಗೂ ಕಟ್ಟಿರಸ್ತೆಯಾಗಿರುವಂತೆ ಆವ್ಯವಸ್ಥೆಗೆ ಶಿಸ್ತು ದಿವ್ಯರಕ್ಷೆಯಾಗಿರುತ್ತದೆ.

ನಾವು ಶಿಸ್ತು ಪಾಲಿಸದಂತಹ ಜನರಿಂದ ಮಾತು ಕೇಳಬರದಿರಲಿ. ಅಶಿಸ್ತು ವಿನಾಶದ ಹೆದ್ದಾರಿ. ನಾವು ಒತ್ತಾಯದಿಂದ ಶಿಸ್ತು ಕಲಿಸಲಾರೆವು ಶಿಸ್ತಿಗೆ ಸ್ಥಾನಮಾನಗಳ ಅಡ್ಡಿಯಿಲ್ಲ. ಶಿಸ್ತಿನ ಮೌಲ್ಯದ ಅರಿವಿರುವ ದೊರೆ ತಾನೇ ನೇಮಿಸಿದ ನ್ಯಾಯಾಧೀಶನ ತೀರ್ಪಿಗೆ ಮಣಿಯುತ್ತಾನೆ.

ಅಹಿಂಸೆಯ ಬುನಾದಿಯ ಮೇಲೆ ಕಟ್ಟಿದ ಸ್ವರಾಜ್ಯದಲ್ಲಿ ಜನತೆ ತಮ್ಮ ಹಕ್ಕಿನ ಅರಿವು ಹೊಂದಿರಬೇಕಾಗಿಲ್ಲ. ಆದರೆ ಕರ್ತವ್ಯಗಳ ಜ್ಞಾನ ಪಡೆದಿರುವುದು ಅತ್ಯಗತ್ಯ. ತತ್ಸಹೂನ ಹಕ್ಕನ್ನು ಸೃಷ್ಟಿಸದಿರುವ ಕರ್ತವ್ಯವಿಲ್ಲ. ಸ್ವಂತ ಕರ್ತವ್ಯ ನಿರ್ವಹಣೆಯಿಂದ ನೈಜ ದಿಕ್ಕುಗಳು ಹೊಮ್ಮುತ್ತವೆ. ನೆಲೆಸಿರುವ ನಾಡಿಗೆ ಸೇವೆ ಮಾಡುವವರಿಗೆ ಮಾತ್ರವೇ ಪೌರತ್ವದ ಹಕ್ಕುಗಳು ಸಿಗುತ್ತವೆ. ಅವರು ಹಕ್ಕುಗಳಿಗೆ ನ್ಯಾಯಪರತೆಯ ಕಂಕಣ ತೊಡಿಸುತ್ತಾರೆ.

ಅಸಭ್ಯತೆಯ ಕುರುಹು

ಉತ್ತುಂಗ ಸ್ವಾತಂತ್ರ್ಯ ಮಹಾಶಿಸ್ತು ಹಾಗೂ ನಮ್ರತೆಯೊಂದಿಗೆ ಸಮನಾಗಿ ಹೆಜ್ಜೆ ಹಾಕುತ್ತದೆ. ಶಿಸ್ತು ನಮ್ರತೆಗಳಿಂದ ಬರುವ ಸ್ವಾತಂತ್ರ್ಯವನ್ನು ನಿರಾಕರಿಸುವಂತಿಲ್ಲ, ಕಡಿವಾಣವಿಲ್ಲದ ಸ್ವೇಚ್ಛಾಚಾರ ಅಸಭ್ಯತೆಯ ಕುರುಹು. ಇದರಿಂದ ವ್ಯಕ್ತಿಗೂ, ನೆರೆಯವರಿಗೂ ಸಮಾನವಾಗಿ ಕೆಡುಕು ಮಾಡುತ್ತದೆ.

ಜನ್ಮತಃ ಪ್ರಜಾತಂತ್ರವಾದಿಯಾದವನು ಜನ್ಮತಃ ಶಿಸ್ತುಗಾರನಾಗಿರುತ್ತಾನೆ. ಸಾಮಾನ್ಯವಾಗಿ ಸ್ವಯಿಚ್ಛೆಯಿಂದ ಮಾನವ ನಿರ್ಮಿತ ಹಾಗೂ ದೈವಿಕ ಕಾನೂನುಗಳಿಗೆ ತಲೆಬಾಗುವವನಿಗೆ ಸ್ವಭಾವತಃ ಪ್ರಜಾರಾಜ್ಯದಲ್ಲಿ ಸೇವೆಸಲ್ಲಿಸಲು, ಮಹತ್ವಾಕಾಂಕ್ಷಿಗಳವರು, ಮೊದಲ ಪ್ರಜಾಸತ್ತಾ ಈ ಅಗ್ನಿಪರೀಕ್ಷೆಗಳಿಗಾಗಿ ತೃಪ್ತಿಪಡೆಸಲಿ.

ಮಹಾಮಂತ್ರ

ಇಡೀ ಸಮಾಜದ ಹಿತಕ್ಕಾಗಿ ಸಮಾಜದ ಕಟ್ಟುಪಾಡುಗಳಿಗೆ ಸ್ವಯಿಚ್ಛೆಯಿಂದ ಮಣಿಯುವುದರಿಂದ, ವ್ಯಕ್ತಿ ಹಾಗೂ ಸಮಾಜಕ್ಕೆ ಶ್ರೇಯಸ್ಸಾಗುತ್ತದೆ.

ಕರ್ತವ್ಯ ನಿರ್ವಹಣೆ ಮಾಡುವವರಿಗೆ ತಾನಾಗಿ ಹಕ್ಕುಗಳ ಬೆಂಬಲ ಸಿಗುತ್ತದೆ. ಕರ್ತವ್ಯ ನಿರ್ವಹಣೆಯ ಹಕ್ಕಿಗಾಗಿ ಶ್ರಮಿಸಿ ಜೀವಿಸುವುದೇ ಏಕೈಕ ಹಕ್ಕಾಗಿದೆ.

ಕರ್ತವ್ಯವೇ ಹಕ್ಕುಗಳ ನೈಜ ನೆಲೆಯಾಗಿದೆ ನಾವು ಕರ್ತವ್ಯ ನಿರ್ವಹಣೆಮಾಡಿದರೆ ಹಕ್ಕುಗಳ ಅನ್ವೇಷಣೆ ದೂರಗಾಮಿಯಾಗುವುದಿಲ್ಲ. ಕರ್ತವ್ಯ ನಿರ್ವಹಿಸದೆ ಹಕ್ಕುಗಳನ್ನು ಪಡೆಯಲು ಅದರ ಬೆನ್ನು ಹತ್ತಿದರೆ ಅವು ಮರೀಚಿಕೆಯಾಗುತ್ತವೆ. ಅವುಗಳನ್ನು ಅನ್ವೇಷಿಸಿದಷ್ಟೂ ದೂರದಲ್ಲಿರುತ್ತವೆ.

ಸ್ವಾತಂತ್ರ್ಯದ ದೇಗುಲಕ್ಕೆ ಕೋಟ್ಯಂತರ ಹಿರಿಯ ಕಿರಿಯ ಪುರುಷ, ಮಹಿಳೆಯರ ತ್ಯಾಗದಿಂದ ಕೂಡಿದ ಜಾಣ್ಮೆಯ ರಚನಾತ್ಮಕ ಪ್ರಯತ್ನ ಅಗತ್ಯ.

ಪಂಜಾಬ 1919

[ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನವು ಅಮೃತಸರದಲ್ಲಿ ನೆರವೇರಿದಾಗ, ದಿವಂಗತ ಶ್ರೀಮತಿ ಸರೋಜಿನಿ ನಾಯ್ಡು ಅವರು ರಚಿಸಿ ಹಾಡಿದ ಇಂಗ್ಲಿಷ್ ಗೀತೆಯ ಭಾವಾನುವಾದ :—]

ನಿನ್ನ ಮನದಳಲನು ನಮ್ಮ ಪ್ರೀತಿಯುದೆಂದು
ಸಂತೈಸಬಲ್ಲುದು?
ನಿನ್ನ ದುರದೃಷ್ಟದ ದುಃಖವನ್ನು ಅದು
ಹೇಗೆ ಶಮನಗೊಳಿಸಬಲ್ಲುದು?
ತಮ್ಮ ಕೋಪಾಗ್ನಿಯಿಂದ ನಿನ್ನ
ಸೌಂದರ್ಯವನ್ನೇ
ಸುಟ್ಟು ಸೂರೆಗೊಂಡ, ನಿನ್ನನ್ನು ಹೊಡೆದ
ಬಡಿದ,
ಆ ಪಾಪಾತ್ಮರ ವಿರುದ್ಧ ಪ್ರತೀಕಾರ
ಮಾಡುವೆವೆ?
ನಿನ್ನ ದಾರುಣ ದುಃಖವನು ಕಂಡು ಪುಂಡ-
ತನದಿಂದ ನಕ್ಕ
ನಿರಂಕುಶ ಪ್ರಭುವಿನ ಭಯೋತ್ಪಾದಕ
ಚಟುವಟಿಕೆಗಳನ್ನು
ನುಚ್ಚುನೂರು ಮಾಡಲು,
ನಮ್ಮ ಉಮ್ಮಳಿಸುವ ದುಃಖದ ವ್ಯಾಪ್ತಿ
ನಿನ್ನ ನಾಳಿನ ರಣರಂಗವಾಗಲಿ
ಓ ಸೌಂದರ್ಯ ನಿಧಿಯೇ, ಭಗ್ನ ಮನೋ-
ರಥಳೇ,
ವಿಶ್ವಾಸಘಾತಕನಿಗೆ ಬಲಿಯಾದ
ದೇವಿಯೇ,
ದುಃಖಿಸುವ ರಾಣಿಯೇ, ಬಲಿದಾನಗೈದ
ದ್ರೌಪದಿಯೇ,
ಓ ಅಪಮಾನಿತೇ, ನಿರ್ಭೀತಿಯ ವನಿತೇ,
ಸಹಿಸು ಸಹಿಸು.
ನೀ ಸುರಿಸಿದ ರುಧಿರದ ಹೊಳೆ
ಸ್ವಾತಂತ್ರ್ಯ ಸಂಗ್ರಾಮದ ಪ್ರವಾಹಕ್ಕೆ,
ಮಹಾಪೂರವನೇ ತರುವುದು,
ಸ್ವಾತಂತ್ರ್ಯ ಗೋಪುರದ
ಪಹರೆ ಮಾಡುವದು.

— ಶ್ರೀಮತಿ ಸರೋಜಿನಿ ನಾಯ್ಡು

ಬಂಟರ ಯಾನೆ ನಾಡವರ ಸಂಘ, ಮುಂಬಾಯಿ

ಮೈಸೂರು ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆಯ ಮಂತ್ರಿ ಶ್ರೀ ಬಿ. ವಿಠಲದಾಸ ಶೆಟ್ಟಿಯವರಿಗೆ ಸಂಘದ ಅಧ್ಯಕ್ಷ ಡಾ| ಪಡುಬಿದ್ರಿ ಜಗನ್ನಾಥ ಶೆಟ್ಟಿ ಅಧ್ಯಕ್ಷತೆಯಲ್ಲಿ ತಾ. 6-4-69ರಂದು ಸತ್ಕಾರಕೂಟವನ್ನಿತ್ತು ಅಭಿನಂದಿಸಲಾಯಿತು. ಅಧ್ಯಕ್ಷರು ಮಂತ್ರಿಯವರ ಸಂಕ್ಷಿಪ್ತ ಪರಿಚಯ ಮಾಡಿ ಅವರಿಗೂ ಅವರ ಪತ್ನಿ ಶ್ರೀಮತಿ ಕಮಲಾಕ್ಷಿ ಶೆಟ್ಟಿಯವರಿಗೂ, ಶ್ರೇಯಸ್ಸನ್ನು ಕೋರಿದರು. ಮಂತ್ರಿಗಳು ಸಂಘದ ಏಳಿಗೆಯನ್ನುದ್ದೇಶಿಸಿ ಸಂಘವು ಇನ್ನಷ್ಟು ಸಾರ್ವಜನಿಕ ಹಿತೋಪದೇಶಿ ಕಾರ್ಯಗಳನ್ನು ಮಾಡುವಂತೆ ಸಮಾಜ ಬಂಧುಗಳು ಸಂಘಕ್ಕೆ ಪ್ರೋತ್ಸಾಹಕೊಡಬೇಕೆಂದು ಹಿತೋಕ್ತಿಗಳನ್ನಾಡಿದರು. ಕಾರ್ಯದರ್ಶಿಗಳಾದ ಎಂ. ಗಂಗಯ್ಯ ಶೆಟ್ಟಿಯವರು ಧನ್ಯವಾದವನ್ನರ್ಪಿಸಿದರು.

"ಭೂತಾರಾಧನೆ" ಯಲ್ಲಿ ದೋಷಗಳು

1969ನೇ ಎಪ್ರಿಲ್ ತಿಂಗಳ 13ನೇ ತಾರೀಕಿಗೆ ಪ್ರಕಟವಾದ ಬೆಂಗಳೂರಿನ "ಸುಧಾ" ಎಂಬ ವಾರಪತ್ರಿಕೆಯಲ್ಲಿ "ಭೂತಾರಾಧನೆ" ಎಂಬ ಲೇಖನದಲ್ಲಿ ನಮ್ಮ ಅನಂತಾಡಿಯ "ಶ್ರೀ ಉಳ್ಳಾಕ್ಲು" ದೈವದ ಫೋಟೋವನ್ನು ಪ್ರಕಟಿಸಿ ಜಿಲ್ಲೆಯಲ್ಲೇ ಖ್ಯಾತಿ ಪಡೆದ ಅರಂತಾಡಿಯ "ಲೆಕ್ಕೇಸಿರಿ" ಎಂದು ಪ್ರಕಟಿಸಿರುತ್ತಾರೆ. ಫೋಟೋವನ್ನು ಕೊಂಡುಹೋಗಿ ಲೇಖನ ಬರೆದ ಲೇಖಕರು ಊರಿನ ಹೆಸರು ಮತ್ತು ದೈವದ ಹೆಸರುಗಳನ್ನು ತಪ್ಪಾಗಿ ಬರೆದಿರುತ್ತಾರೆ. ಈ ರೀತಿಯ ಅಜಾಗರೂಕತೆಯನ್ನು ಮಾಡಿದರೆ ದೈವದ ಪ್ರಚಾರಕ್ಕೆ ತುಂಬಾ ತೊಂದರೆಯಾಗುತ್ತದೆ. ದಯವಿಟ್ಟು ಮುಂದೆ ಲೇಖಕರುಗಳು ತಪ್ಪನ್ನು ತಿದ್ದಿ ಓದಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಇತಿ
ಅನಂತಾಡಿ ಗ್ರಾಮಸ್ಥ

ಉಡುಪಿ ಸಿವಿಲ್ ಜಡ್ಜ್ ಕೋರ್ಟಿನಲ್ಲಿ

O. S 8/66 R. E. P. 51/1967

The Canara Banking Corporation Ltd., Udipi by its Agent
— ಅರ್ಜಿದಾರ

ಮತ್ತು

1. ದಯಾನಂದ ನಾಯಕ, 2 ಸತ್ಯಾನಂದ ನಾಯಕ, 3. ನಿತ್ಯಾನಂದ ನಾಯಕ, 4. ಪ್ರೇಮಾನಂದ ನಾಯಕ, 5. ಸದಾನಂದ ನಾಯಕ, 6 ಸಚ್ಚಿದಾನಂದ ನಾಯಕ (ಮೈನರ್) ಗಾರ್ಡಿಯನ್ 1ನೇ ಯದ್ದಿ, 7. ಸುನಂದ ಯಾನೆ ಸುಲೋಚನ ಬಾಯಿ, 8. ಸುಶೀಲ, 9. ಸುಗುಣ, 10. ಸುಮತಿ, 11. ಸುಲತ (ಮೈನರ್) ಗಾರ್ಡಿಯನ್ 12ನೇ ಯದ್ದಿಳು — ಅಮ್ಮುಂಜೆ ನಾರಾಯಣ ನಾಯಕರ ಮಕ್ಕಳು.

12. ರತ್ನಾಬಾಯಿ ಯಾನೆ ಲಕ್ಷ್ಮೀದೇವಿ— ನಾರಾಯಣ ನಾಯಕರ ವಿಧವೆ, 13. ಸುಭದ್ರ ಅಂಮ— ವಾಮನ ನಾಯಕರ ವಿಧವೆ, —ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಕಿಂಜಬೆಟ್ಟು —ಯದ್ದಿರು.

ಸದ್ರಿಯದ್ದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :—

ಮೇಲ್ಕಂಡ ಡಿಕ್ರಿ ಅಮಲುದಾರಿ ಅರ್ಜಿಗೆ ಜವಾಬ್ದಾರಿಯಾಗಿರುವ ಸ್ಥಿರಾಸ್ತಿ ಯೇಲಂ ಯಿಸ್ತ್ಯಾರಿನ ಮೇಲೆ ತಕರಾರು ಸಲ್ಲಿಸುವುದರ ತಾರೀಕು 28-5-1969ಕ್ಕೆ ಮುಂದೋಡಾಗಿ ಯದೆಂತ ಯದ್ದಿರಿಗೆ ಯಿ ಮೂಲ್ಯ ತಿಳಿಸಲಾಗಿಯದೆ.

N. V. Kamath,
Advocate for Petitioner.

ಉಡುಪಿ, 18-4-1969.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 252/68

ಕೇಶವ ಶೆಟ್ಟಿ — — ವಾದಿ

ಮತ್ತು

ಆನಂದ ಶೆಟ್ಟಿ ಕೂಡಾ— —ಪ್ರತಿವಾದಿ

1ನೇ ಪ್ರತಿವಾದಿ—ಆನಂದ ಶೆಟ್ಟಿ, ಮಂಜಯ್ಯ ಶೆಟ್ರ ಮಗ, ಉಡುಪಿ ತಾಲ್ಲೂಕು ಆರೂರು ಗ್ರಾಮದ ಪಡುಬೆಟ್ಟಿನಲ್ಲಿರುವವರು.

ಈ ಮೂಲಕ 1ನೇ ಪ್ರತಿವಾದಿಗೆ ತಿಳಿಸುವುದೇನೆಂದರೆ—

ವಾದಿರು ಪ್ಲೇಂಟು ನಿವೃತ್ತಿ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯ ತಾರೀಕು 26-5-69ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುವುದರಿಂದ ಅದರಲ್ಲಿ ಉದಾಹರಿಸುವುದಿದ್ದರೆ ಸದ್ರಿ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Y. C. S. Hegde
Advocate for Plaintiff.

ಉಡುಪಿ, ತಾ. 10-4-69.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—5
ಪ್ರತಿಜ್ಞಾ ಪೂರ್ತಿ	1—0
ನೀತಿ ವಿನೋದ ಕತೆಗಳು	1—00
ಕಥಾವಳಿ	2—0
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—0
ಅನುವಾದಿತ ಕತೆಗಳು	1—2
ಪಂಚ ಸುಮನ	1—20
ಮುತ್ತಿನ ಮಾಲೆ	1—8
ಹೂ ಗೊಂಚಲು	1—7
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಪಂಚಗಜ್ಜಾಯ	2—0
ಮಧುವನ	3—00
ಪುಷ್ಪಕನ	2—00
ಸರಸ್ವತಿ	1—5
ವಿಚಿತ್ರ ಕಳ್ಳಪೇಟೆ	1—50

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ
ವಾರ್ಷಿಕ ಚಂದಾ ರೂ. ೧೦

ಆದರ್ಶ ದಂಪತಿಗಳು : ಬಾ ಮತ್ತು ಬಾಪು

ಲೇಖಕರು: ಡಾ। ಸುಶೀಲಾ ನಯ್ಯಾರ್

ಮಾತಾ ಕಸ್ತೂರ್‌ಬಾ ನಮ್ಮನ್ನು ಅಗಲಿ ಇಂದಿಗೆ ಇಪ್ಪತ್ತೈದು ವರ್ಷಗಳಾದುವು. 1944ರ ಫೆಬ್ರವರಿ 22ರಂದು ಸ್ಥಾನವಾದ ಆಗಾಖಾನ್ ಅರಮನೆಯ ಬಂಧನದ ಶಿಬಿರದಲ್ಲೇ ಅವರು ಇಹಲೋಕ ಯಾತ್ರೆಯನ್ನು ಮುಗಿಸಿದರು. ಅಂದು ಮಹಾಶಿವರಾತ್ರಿಯ ಪುಣ್ಯದಿನ. ಮಾತಾ ಕಸ್ತೂರಬಾ ಅವರ ಆತ್ಮದ ಜ್ಯೋತಿ ಮಹಾಬೆಳಕಿನಲ್ಲಿ ಲೀನವಾಯಿತು.

ಕಸ್ತೂರಬಾ ಅವರು ತಮ್ಮ ಪ್ರತಿಭಾವಂತ ಪತಿ ಗಾಂಧೀಜಿಯವರು ಜನಿಸಿದ ವರ್ಷದಲ್ಲೇ ಜನಿಸಿದರು. ಈ ಕಾರಣದಿಂದಾಗಿಯೇ ಗಾಂಧೀಜಿ ಮತ್ತು ಕಸ್ತೂರಬಾ ಅವರ ಜನ್ಮಶತಾಬ್ಧಿಯನ್ನು ಒಂದೇ ಕಾಲಕ್ಕೆ ಆಚರಿಸಲಾಗುತ್ತಿದೆ.

ಮೋಹನದಾಸ ಕರಮಚಂದ ಗಾಂಧಿ ಇಡೀ ವಿಶ್ವದಲ್ಲೇ ಮಹಾತ್ಮ ಗಾಂಧಿ ಎಂದು ಖ್ಯಾತರಾದರು. ಭಾರತಕ್ಕೆ ಅವರು ರಾಷ್ಟ್ರಪಿತ. ಗಾಂಧೀಜಿಯವರ ಜೀವನ ಮತ್ತು ಸಂದೇಶವನ್ನು ಕುರಿತು ದೇಶವಿದೇಶಗಳಲ್ಲಿ ಅನೇಕ ಗ್ರಂಥಗಳು ಪ್ರಕಟವಾಗಿವೆ. ಗಾಂಧೀಜಿ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದರು. ವಿದ್ಯಾರ್ಥಿಯಾಗಿದ್ದಾಗ ಸಾಧಾರಣ ಹುಡುಗನಾಗಿದ್ದ ಅವರು ನಿರಂತರ ಸತ್ಯಶೋಧನೆಯಿಂದ, ವಿಶ್ವದಲ್ಲೇ ಅತ್ಯಂತ ಪ್ರತಿಭಾವಂತ ಮುತ್ಸದ್ದಿ ಹಾಗೂ ಸಂಘಟನಾ ಚತುರ ಮಾನವತೆಯ ಮಹಾಸೇವಕನೆನಿಸಿದರು. ಮಾನವ ಜೀವನದ ಮೌಲ್ಯದ ರಕ್ಷಕರಾದ ಅವರು ಮಾನವ ಜನಾಂಗಕ್ಕೆ ಹೊಸ ದಾರಿಯನ್ನು ತೋರಿದರು. ಇದೇ ಗಾಂಧೀಜಿಯವರ ಘನತೆ.

ಮೋಹನದಾಸ ಮಹಾತ್ಮರಾದರು. ಮೋಹನದಾಸ ಮಹಾತ್ಮಾ ಗಾಂಧಿಯಾಗಲು, ರಾಷ್ಟ್ರಪಿತನ ಘನತೆಗೇರಲು ಕಸ್ತೂರ್‌ಬಾ ತುಂಬಾ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸಿದರು. ಗಾಂಧೀಜಿ ಅವತಾರ ಪುರುಷನಾಗಿಯೇ ಈ ಧರೆಗೆ ಇಳಿದಿರಲಿಲ್ಲ. ಅವರು ಸಾಮಾನ್ಯರಂತೆಯೇ ಜನ್ಮತಾಳಿದರು. ಪ್ರತಿಯೊಬ್ಬ ಮಾನವನ ಹೃದಯದಲ್ಲಿ ಪ್ರಜ್ವಲಿಸುತ್ತಿದ್ದ ದೈವಾಂಶಕ್ಕೆ ಕತ್ತಲು ಮುಸುಕಿದ್ದಿತು. ಗಾಂಧೀಜಿ ಈ ಕತ್ತಲೆಯನ್ನು ಹೊಡೆದೋಡಿಸಿದರು. ದೈವಾಂಶ ಜ್ಯೋತಿ ಆಗ—ಬೆಳಗಲಾರಂಭಿಸಿತು. ಮಾನವ ಮಹಾದೇವನಂತಾದನು. ಗಾಂಧೀಜಿ ಕೃಪಿಯಾದರು.

ಪ್ರತಿಯೊಬ್ಬ ಮನುಷ್ಯನಲ್ಲಿಯೂ ದೇವಾಂಶ ಹಾಗೂ ಪಾಶವೀಯ ಗುಣ ಎರಡೂ ಇರುತ್ತವೆ. ಗಾಂಧೀಜಿ ಮಾನವನ ಪಾಶವಿ ಗುಣವನ್ನು ಕಳೆದ, ಅವನ ದೃಷ್ಟಿ ದೈವಾಂಶಕ್ಕೆ ಪುಷ್ಟಿ ನೀಡಿದರು. ಈ ಕಾರ್ಯದಲ್ಲಿ ಗಾಂಧೀಜಿಯವರಿಗೆ ಸಹಧರ್ಮಿಣಿ ಮಾತಾ ಕಸ್ತೂರಬಾ ಹೆಜ್ಜೆ—ಹೆಜ್ಜೆಗೂ ನೆರವಾದರು. ಸತ್ಯ ಮತ್ತು ಅಹಿಂಸೆಯ ಆಚರಣೆಯಿಂದ ಒಬ್ಬ ಮನುಷ್ಯ ಏನೆಲ್ಲ ಸಾಧಿಸಬಹುದು? ಎಂಬುದಕ್ಕೆ ಗಾಂಧೀಜಿಯವರ ಜೀವನ ಹಾಗೂ ಅವರ ಸಾಧನೆಯೇ ಒಂದು ಅತ್ಯುತ್ತಮ ನಿದರ್ಶನ. ಗಾಂಧೀಜಿಯವರ ಬಾಳು, ಎಲ್ಲ ವ್ಯಕ್ತಿಗಳಿಗೂ ಎಲ್ಲ ಕಾಲಕ್ಕೂ ತೋರಿಸುವ ದಾರಿದೀಪ.

ಬಹುಶೇಕ ಓದುಬರಹ ಬಾರದ ಒಬ್ಬ ಸಾಧಾರಣ ಮಹಿಳೆ, ತನ್ನ ಪತಿಯ ವ್ಯಕ್ತಿತ್ವದ ವಿಕಾಸಕ್ಕೆ ಎಷ್ಟುಮಟ್ಟಿಗೆ ನೆರವಾಗಬಲ್ಲಳು? ಎಂಬುದನ್ನು ನಾವು ಕಸ್ತೂರ್‌ಬಾ ಅವರ ಜೀವನದಿಂದ ಕಲಿತುಕೊಳ್ಳಬಹುದಾಗಿದೆ.

ಮಹಿಳೆ ಪತ್ನಿಯಾಗಿ ಗಂಡನ ಮೇಲೆ ಸತ್ಪ್ರಭಾವ ಬೀರುತ್ತಾಳೆ. ಮಾತೆಯಾಗಿ ಮಗುವಿನ ಎಳೆಯ ಮನಸ್ಸನ್ನು ತಿದ್ದುತ್ತಾಳೆ. ಮಗಳಾಗಿ, ಸೊಸೆಯಾಗಿ, ಸಹೋದರಿಯಾಗಿ ಅವಳು ಸತ್ಪರಿಣಾಮಕಾರಿಯಾದ ಸಂಯಮವನ್ನು ಸಾಧಿಸುತ್ತಾಳೆ. ಅವಳಲ್ಲಿ ಈ ಅದ್ಭುತ ಶಕ್ತಿಯಿದೆ. ಇಷ್ಟುಮಟ್ಟಿಗೆ ಇಡೀ ಸಮಾಜವನ್ನೇ ಸುಖ ಸಂತೋಷದ ಬೀಡಾಗಿ ಪರಿವರ್ತಿಸಬಲ್ಲಳು. ಕಸ್ತೂರಬಾ ಅವರ ಜೀವನವು ನಮಗೆ ನೀಡಿದ ಸಂದೇಶವಾದರೂ ಇದೇ ಆಗಿದೆ. ಎಂದಿಗಿಂತಲೂ ಈಗ ನೂತನ ಜನಾಂಗಕ್ಕೆ ಈ ಸಂದೇಶದ ಅಗತ್ಯ ಹೆಚ್ಚಾಗಿದೆ.

ವಿಶಿಷ್ಟ ಹಿಂದೂ ಗೃಹಿಣಿ

ಕಸ್ತೂರಬಾ ವಿಶಿಷ್ಟ ಹಿಂದೂ ಗೃಹಿಣಿಯಾಗಿದ್ದರು. ಪತಿಯ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಡೆದರು. ಅವರ ಸುಖದುಃಖಗಳಲ್ಲಿ ಸಮಭಾಗಿಯಾದರು. ಪತಿಸೇವೆಯೇ ಕಸ್ತೂರ್‌ಬಾ ಜೀವನದ ಸಾರ—ಸರ್ವಸ್ವವಾಗಿದ್ದಿತು. ಹಾಗೆಂದ ಮಾತ್ರಕ್ಕೆ ಕಸ್ತೂರಬಾ ಅಂಧಾನುಕರಣೆ ಮಾಡುತ್ತಿರಲಿಲ್ಲ. ತನ್ನ ಹೃದಯ-ಮನಸ್ಸುಗಳಿಗೆ ಸರಿಯೆಂದು ತೋರದ ಯಾವ ಕೆಲಸವನ್ನೂ ಅವರು ಮಾಡಲಿಲ್ಲ.

"ಕಸ್ತೂರ್‌ಬಾ ಅವಳ ಈ ಗುಣವನ್ನು ನಾನು ಹಠಮಾರಿತನವೆಂದು ತಪ್ಪು ಭಾವಿಸಿದೆ. ಅವಳ ಇಚ್ಛೆಗೆ ಪ್ರತಿಯಾಗಿ ಯಾವ ಕೆಲಸವನ್ನೂ ನಾನು ಹೇಳಲಿಲ್ಲ. ಕಸ್ತೂರಬಾ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ಸಿದ್ಧಳಾಗುವ ಮುನ್ನ ಕರ್ತವ್ಯದ ಬಗ್ಗೆ ಸ್ಪಷ್ಟವಾಗಿ ಮನವರಿಕೆಯಾದ ಬಳಿಕವೇ ಸಿದ್ಧಳಾಗುತ್ತಿದ್ದಳು" ಎಂದು ಗಾಂಧೀಜಿ ಒಂದು ಕಡೆ ತಮ್ಮ ವೈವಾಹಿಕ ಜೀವನದ ಪ್ರಾರಂಭಿಕ ದಿನಗಳ ಬಗ್ಗೆ ಪ್ರಸ್ತಾಪಿಸುತ್ತ ಅಭಿಪ್ರಾಯಪಟ್ಟಿದ್ದಾರೆ. ಸತ್ಯಾಗ್ರಹ ಮಹಾ ಆಯುಧ ದೊರಕುಗೊಳ್ಳಲು ತಮ್ಮ ಧರ್ಮಪತ್ನಿಯೇ ಕಾರಣ ವೆಂದು ಅವರು ಹೇಳಿದ್ದಾರೆ.

ಪ್ರೇಮ ಗೌರವ ಮತ್ತು ಸದ್ಭಾವನೆ ಗುಣಗಳು ಇದ್ದ ಕಡೆ, ವಿರೋಧಿಗಳ ಬಗ್ಗೆ ದುರಭಿಪ್ರಾಯವಿಲ್ಲದ ಕಡೆ, ಸಂಘರ್ಷಕ್ಕೆ ಯಾವಾಗಲೂ ಆಸ್ಪದವಿರುತ್ತದೆ ಎಂದೂ ಗಾಂಧೀಜಿ ಸ್ಪಷ್ಟಪಡಿಸಿದ್ದಾರೆ. ಸತ್ಯಾಗ್ರಹದ ಕಲೆ ಮತ್ತು ವಿಜ್ಞಾನದ ಪ್ರೌಢಿಮೆ ಸಾಧಿಸುವಲ್ಲಿ ಬಾ, ತಮ್ಮ ಶಿಕ್ಷಕಿ ಎಂದೂ ಗಾಂಧೀಜಿ ಕರೆದಿದ್ದಾರೆ.

ಮಹಿಳಾ ಪ್ರಪಂಚದ ಗುರು

ಕಸ್ತೂರಬಾ ಇಂದಿನ ಭಾರತೀಯ ಮಹಿಳಾ ಪ್ರಪಂಚಕ್ಕೆ ಮಹಾನ್ ಗುರು ಎಂಬುದರಲ್ಲಿ ಸಂದೇಹವಿಲ್ಲ. ಪ್ರತಿಯೊಬ್ಬ ಮಹಿಳೆಯೂ ತನ್ನ ಗಂಡನಿಗೆ ಎಲ್ಲಾ ಪ್ರೀತಿ ಹಾಗೂ ನಿಷ್ಠೆ ತೋರಿಸಬೇಕು ನಿಜ. ಆದರೆ ಅವನು ಮಾಡುವ ತಪ್ಪುಗಳಿಗೆ ಮಾತ್ರ ಮೌನ ಸಾಕ್ಷಿಯಾಗಿರಕೂಡದು. ಸ್ತ್ರೀ ಪುರುಷನ ಅರ್ಧಾಂಗಿ ಎಂದು ಹೇಳಲಾಗುತ್ತದೆ. ಅವಳು ಪುರುಷನ ಮನಸ್ಸನ್ನು ತಿದ್ದುತ್ತಾಳೆ. ಪುರುಷನ ಮನ ಪರಿವರ್ತನೆ ಮಾಡುವ ಅವಳು ಸಮಾಜವನ್ನೇ ಪರಿವರ್ತಿಸುವ ಶಕ್ತಿಯುಳ್ಳವಳಾಗಿದ್ದಾಳೆ.

ಸರಳ ಜೀವನ, ಉನ್ನತ ವಿಚಾರ, ಪರಸ್ಪರ ಪ್ರೇಮ, ಕುಟುಂಬದ ದುರ್ಬಲರ ಬಗ್ಗೆ ಅನುಕಂಪ, ಮೌನವಾದ ನಿಸ್ವಾರ್ಥ ಸೇವೆ—ಇವು ಗಾಂಧೀಜಿ ಮತ್ತು ಕಸ್ತೂರಬಾ ನಮಗೆ ಬಿಟ್ಟುಹೋಗಿರುವ ಅಮೂಲ್ಯ ತತ್ವಗಳು. ಗಾಂಧೀಜಿ ಮತ್ತು ಕಸ್ತೂರಬಾ ಅವರ ಈ ಅಭಿಲಾಷೆ ಕೈಗೂಡ ಬೇಕೆಂದರೆ ಭಾರತದ ಪ್ರತಿಯೊಬ್ಬ ಮಹಿಳೆಯ ಕರ್ತವ್ಯವಾಗಿದೆ.

ನಾವು ಬಾ ಮತ್ತು ಬಾಪು ಎಂದು ಪ್ರೀತಿಯಿಂದ ಕರೆಯುತ್ತಿರುವ ಗಾಂಧೀಜಿ ದಂಪತಿಗಳು ತಮ್ಮಲ್ಲಿ ಈ ಗುಣಗಳನ್ನು ಅಳವಡಿಸಿಕೊಂಡು ಅದರಂತೆ ನಡೆದರು.

ನಮ್ಮ ಅಗತ್ಯಗಳನ್ನು ಇಚ್ಛಾಪೂರ್ವಕವಾಗಿ ಕಡಿಮೆ ಮಾಡಿಕೊಳ್ಳುವಲ್ಲಿಯೇ ನಮ್ಮ ಪ್ರಗತಿಯಿದೆ ಎಂದು ಗಾಂಧೀಜಿ ಅನೇಕಬಾರಿ ಹೇಳಿದ್ದಾರೆ. ಇಂದು ನಾವು ನಮ್ಮ ಜನರ ಜೀವನದ ಸ್ಥಿತಿ-ಗತಿಗಳನ್ನು ಸುಧಾರಿಸಲು ಹೆಣಗುತ್ತಿದ್ದೇವೆ. ಈ ಒಂದು ಯತ್ನದಲ್ಲಿ ನಾವು ನೈತಿಕ ಮೌಲ್ಯಗಳನ್ನು, ನಮ್ಮ ಸಂಸ್ಕೃತಿಯ ವೈಶಿಷ್ಟ್ಯಕ್ಕೆ ಕಾರಣವಾದ ಭಾವನೆಗಳನ್ನೂ ಕಡೆಗಣಿಸುತ್ತಿದ್ದೇವೆ.

ಉನ್ನತ ಜೀವನದ ಅನುಕರಣೆಯ ಲ್ಲಿ ತೊಡಗಿದ ನಾವು ಉನ್ನತ ವಿಚಾರಗಳನ್ನು ಮರೆಯುವ ಸಂಭವವೂ ಉಂಟು ಎಂದು ಗಾಂಧೀಜಿ ನಮ್ಮನ್ನು ಅನೇಕ ಬಾರಿ ಎಚ್ಚರಿಸಿದ್ದಾರೆ. ನಮ್ಮ ಜನತೆಗೆ ಉನ್ನತ ಜೀವನ ಮಟ್ಟವನ್ನು ಕಲ್ಪಿಸಿಕೊಡುವುದು ಈಗಲೇ ಸಾಧ್ಯವಾಗಲಾರದ, ಪರಿಸ್ಥಿತಿ ಹೀಗಿರುವಾಗ ಜನ-ಜೀವನ ಸ್ಥಿತಿ-ಗತಿಗಳ ಸುಧಾರಣೆಗೆ ನಾವು ಯತ್ನಿಸಬೇಕಾಗಿದೆ. ಈ ಒಂದು ಕಾರ್ಯದಲ್ಲಿ ನಿರತರಾದ ನಾವು ಉನ್ನತ ವಿಚಾರಗಳನ್ನು ಮರೆಯದಂತೆ ನೋಡಿಕೊಳ್ಳುವುದು ಭಾರತೀಯ ಮಹಿಳೆಯ ಆದ್ಯ ಕರ್ತವ್ಯವಾಗಿದೆ.

ಕಸ್ತೂರಬಾ ಅವರ ಸರಳತೆಗೆ ಅವರದೇ ಆದ ಸೊಬಗು ಇದೆ. ಸಿರಿವಂತಿಕೆ ಇರದಿದ್ದರೂ ಜೀವನದಲ್ಲಿ ಸಮೃದ್ಧಿ ಸಾಧ್ಯ"ವೆಂಬುದನ್ನು ನಾವು ಕಸ್ತೂರಬಾ ಅವರ ಬದುಕಿನಲ್ಲಿ ಕಂಡುಕೊಳ್ಳುತ್ತೇವೆ.

ಈ ವರ್ಷದಿಂದ ಮುಂದೆ ಪ್ರತಿವರ್ಷವೂ ಫೆಬ್ರವರಿ 22ರಂದು "ಮಾತೆಯರ ದಿನ"ವನ್ನು ಆಚರಿಸಬೇಕೆಂದು ನಿರ್ಧರಿಸಲಾಗಿದೆ. ಮಹಾಮಾತೆಯಾದ ಕಸ್ತೂರಬಾ ಅವರಿಗೆ ನಾವು ಈ ಮೂಲಕ ಗೌರವವನ್ನು ಸಲ್ಲಿಸುತ್ತೇವೆ. ಭಾರತೀಯರು ಅವರ ಧರ್ಮ-ಜಾತಿ-ಮತಗಳು ಯಾವುದೇ ಇರಲಿ—ಗಾಂಧೀಜಿ ಮತ್ತು ಕಸ್ತೂರ್‌ಬಾ ಬೋಧಿಸಿದಂತೆ ನಡೆದರೆ ನಾವು ಭಾರತಮಾತೆಯ ಪ್ರೀತಿಪಾತ್ರರಾಗುತ್ತೇವೆ. (ಆಕಾಶವಾಣಿ ಕೃಪೆಯಿಂದ)

ಅನುವಾದ

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ : ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಎಂ. ವೆಂಕಟರಾವ್, ಹಂಪನಕಟ್ಟೆ, ಮಂಗಳೂರು-1

NAVAYUGA 24-4-1969
Registered with the Registrar of News Papers for India under No. R. N. 3546/'57

REGD: No: B. G. 176
LICENCE No. 33
Licensed to Post without Prepayment

ಗಾಲಿಬ್ : ಕವಿ - ಕಾವ್ಯ ಪರಿಚಯ

ಲೇಖಕರು: ಶ್ರೀ ಮಲ್ಲಿಕ್‌ರಾವ್

ಖ್ಯಾತ ಕವಿ ಅಸದುಲ್ಲಾ ಗಾಲಿಬ್, ಕ್ರಿಸ್ತ ಶಕ 1797ರ ಡಿಸೆಂಬರ್ 27ರಂದು ಆಗ್ರಾದಲ್ಲಿ ಜನಿಸಿದರು. ಗೌರವಸ್ಥ ತುರ್ಕಮೇನ್ ಕುಟುಂಬದಲ್ಲಿ ಅವರ ಜನನವಾಯಿತು. ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಈ ಕುಟುಂಬದವರು ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದು ಇಲ್ಲಿಯೇ ವಾಸಿಸತೊಡಗಿದರು. ಹೀಗೆ ಭಾರತಕ್ಕೆ ಬಂದು ನೆಲೆಸಿದವರಲ್ಲಿ ಗಾಲಿಬ್ ಅವರ ತಾತ ಮೊದಲಿಗರು. ಅವರು ಭಾರತಕ್ಕೆ ಬಂದು ಆಗ ಲಾಹೋರಿನ ಗವರ್ನರ ಆಗಿದ್ದ ಮೊಯಿನ್-ಉಲ್-ಮುಲ್ಕ್ ಅವರ ಬಳಿ ಕೆಲಸಕ್ಕೆ ನಿಂತರು. ಕೆಲ ಕಾಲದ ನಂತರ ಅವರು ದೆಹಲಿಗೆ ಹೋದರು. ಅಲ್ಲಿ ಎರಡನೆಯ ಶಹಾ ಆಲಮ್ ಅವರ ಆಸ್ಥಾನದ ಸೇವೆಯನ್ನು ಸೇರಿದರು. ದೆಹಲಿಯಲ್ಲಿ ಸ್ವಲ್ಪ ಕಾಲ ಇದ್ದ ಬಳಿಕ ಮತ್ತೆ ತಮ್ಮ ಕಚೇರಿಯನ್ನು ಆಗ್ರಾಕ್ಕೆ ಸ್ಥಳಾಂತರಿಸಿದರು. ಅಲ್ಲಿಯೇ ಅವರ ಹಿರಿಯ ಮಗ ಅಬ್ದುಲ್ಲಾ ಬೇಗ ಖಾನ ಅವರು ಆಗ್ರಾದ ನಿವೃತ್ತ ಸೇನಾಪತಿಯ ಮಗಳನ್ನು ಮದುವೆಯಾದರು. ಅಸದುಲ್ಲಾ ಖಾನ್ ಅವರ ಜ್ಯೇಷ್ಠ ಪುತ್ರನಾಗಿ ಜನಿಸಿದರು. ಆಗ ಪರ್ಶಿಯನ್ ಸುಸಂಸ್ಕೃತರ ಹಾಗೂ ಪಂಡಿತರ ಭಾಷೆಯಾಗಿತ್ತು. ಶಿಷ್ಟ ಮಾಧ್ಯಮವೂ ಗ್ರಂಥದ ಭಾಷೆಯೂ ಆಗಿದ್ದಿತು. ಸಂಪ್ರದಾಯದ ಪ್ರಕಾರ ಗಾಲಿಬ್ ಅವರು ಖಾಸಗಿ ಶಾಲೆಯೊಂದರಲ್ಲಿ ಪರ್ಶಿಯನ್ ಭಾಷೆಯ ಶಾಸ್ತ್ರೀಯ ಗ್ರಂಥಗಳನ್ನು ಅಭ್ಯಾಸಮಾಡಿದರು.

ಸುದೈವವಶಾತ್ ಇರಾನಿನ ಪಂಡಿತ ಅಬ್ದುಲ್ ಸಮದ್ ಪ್ರವಾಸ ಮಾಡುತ್ತ 1810ರಲ್ಲಿ ಆಗ್ರಾಕ್ಕೆ ಬಂದರು. ಹನ್ನೆರಡು ವರ್ಷದ ಬಾಲಕ ಗಾಲಿಬ್ ಅವರು ಪರ್ಶಿಯನ್ ಮತ್ತು ಅಲ್ಪಸ್ವಲ್ಪ ಅರಬ್ಬಿ ಭಾಷೆ ಕಲಿತುಕೊಳ್ಳುವ ಸುಯೋಗ ಒದಗಿತು.

ಇಷ್ಟರಲ್ಲೇ ಗಾಲಿಬ್ ಅವರು ದೆಹಲಿಯಲ್ಲಿ ಲೋಹರು ಸಂಸ್ಥಾನದ ದೊರೆಯ ಮಗಳನ್ನು ಮದುವೆಯಾದರು. ರಾಜಧಾನಿಯು ಹೆಚ್ಚು ಆಕರ್ಷಕವಾಗಿ ಕಂಡುಬಂದಿದ್ದರಿಂದಾಗಿ ಗಾಲಿಬ್ ಅವರು 1812ರಿಂದ ದೆಹಲಿಯಲ್ಲೇ ವಾಸಿಸಲಾರಂಭಿಸಿದರು. ಅನೇಕ ರಾಜಮನೆತನಗಳ ಏಳು—ಬೀಳುಗಳನ್ನು ಕಂಡ ಐತಿಹಾಸಿಕ ನಗರವಾದ ದೆಹಲಿಯಲ್ಲೇ ತಮ್ಮ ಜೀವಮಾನದ ಶೇಷ ಅವಧಿಯನ್ನು ಕಳೆದರು.

ಲೋಹರು ರಾಜಮನೆತನದ ಕನ್ಯೆಯೊಂದಿಗೆ ವಿವಾಹ ಅವರಿಗೆ ಅನುಕೂಲವಾಗಿಯೇ ಪರಿಣಮಿಸಿತು. ಅವರ ಮಾವ, ಇಲಾಹಿ ಭಕ್ಷಖಾನ್ ಲೋಹರು ಸಂಸ್ಥಾನದ ನವಾಬರಾದ ಅಹ್ಮದ ಭಕ್ಷಖಾನರ ಕಿರಿಯ ಸೋದರ. ದೆಹಲಿಯ ಸುಪ್ರಸಿದ್ಧ ಕವಿ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಇದರಿಂದಾಗಿ ಗಾಲಿಬ್ ಅವರಲ್ಲಿ ಸಾಹಿತ್ಯದ ಅಭಿರುಚಿ ಬೆಳೆಯಿತು. ಕ್ರಮೇಣ ಆಸ್ಥಾನದಲ್ಲಿ ಅವರ ಖ್ಯಾತಿ ಹೆಚ್ಚಿತು. ದೆಹಲಿಯ ಸುಸಂಸ್ಕೃತರ ಪಂಡಿತ ಶ್ರೇಷ್ಠರ ಪರಿಚಯವಾಯಿತು. ಈ ಘಟನೆಯೇ ಮುಂದೆ ಅವರ ಜೀವನದಲ್ಲಿ ಸಾಮಾಜಿಕ ಹಾಗೂ ಬೌದ್ಧಿಕ ಕಾರಣಗಳಿಂದಾಗಿ ಅನುಕೂಲವೆನಿಸಿತು. ಜೀವನದ ಸುಖ ದುಃಖಗಳು, ಸೋಲು-ಗೆಲವುಗಳ ಪರಿಚಯ ಅವರಿಗೆ ಆಗತೊಡಗಿತು.

ಧನವಂತ ಅಕ್ಬರ ಹಾಗೂ ತಾಜಮಹಲ ನಿರ್ಮಿಸಿದ ಶಹಾ ಜಹಾನರ ಜೊತೆ ಅವರ ವಂಶದವರೊಬ್ಬರು ಆಗ ಮೊಗಲ ಸಿಂಹಾಸನವನ್ನು ಏರಿದ್ದರು. ಮೊಗಲ ರಾಜವಂಶದ ಮೊದಲಿನ ವೈಭವವಿರಲಿಲ್ಲ. ಆದರೂ ಸಾಮ್ರಾಟ ಪದವಿ ಅವರ ಸಮಾಜದ ಮಹತ್ವಾಕಾಂಕ್ಷಿಗಳನ್ನು ಆಕರ್ಷಿಸುತ್ತಿತ್ತು. ಈ ಹೊತ್ತಿಗಾಗಲೇ ವಾಸ್ತವವಾಗಿ ಸಾಮ್ರಾಜ್ಯದ ಅಧಿಕಾರ ಸೂತ್ರಗಳೆಲ್ಲ ಬ್ರಿಟಿಷರ ಕೈವಶವಾಗಿದ್ದವು. ಬ್ರಿಟಿಷರು ಮೊದಲು ವ್ಯಾಪಾರಿಗಳಾಗಿ ಭಾರತಕ್ಕೆ ಬಂದು ಜಹಗೀರುದಾರರಾಗಿ ಸ್ಥಾನ ಬಲಪಡಿಸಿಕೊಂಡರು. ಸಾಮ್ರಾಜ್ಯದ ಸೂತ್ರಗಳನ್ನು ಕೈಗೆ ತೆಗೆದುಕೊಂಡರು.

ಆಗ ದೆಹಲಿಯ ಬಾದಶಹಾ ಬ್ರಿಟಿಷರ ಕೈಗೊಂಬೆಯಾಗಿದ್ದರು. ರಾಜನ ದರ್ಬಾರು ಮೊದಲಿನ ಶ್ರೀಮಂತಿಕೆಯನ್ನೂ ದರ್ಪವನ್ನೂ ಕಳೆದುಕೊಂಡು ಕಳಾಹೀನವಾಗಿತ್ತು.

ಹದಿನೈದರ ಪ್ರಾಯದಲ್ಲಿ ಗಾಲಿಬ್ ದೆಹಲಿಗೆ ಬಂದರು. ಆಗ್ರಾದಲ್ಲಿದ್ದಾಗಲೇ ಅವರು ಉರ್ದು ಮತ್ತು ಪರ್ಶಿಯನ್ ಭಾಷೆಯಲ್ಲಿ ಬರೆಯಲಾರಂಭಿಸಿದ್ದರು. ಸಾಹಿತ್ಯದ ಮೇರುಗಿರಿಯನ್ನು ಏರುವ ಮಹತ್ವಾಕಾಂಕ್ಷೆಯನ್ನು ಗಾಲಿಬ್ ಅವರ ಸ್ನೇಹಿತರು ಅವರ ಮನದಲ್ಲಿ ಮೂಡಿಸಿದರು. 'ಅಸದ' ಅವರ ಕಾವ್ಯನಾಮವಾಯಿತು.

ಗಾಲಿಬ್ ಅವರು ಆಗ ಪರ್ಶಿಯದ ಖ್ಯಾತ ಕವಿ "ಬೇದಿಲ್" ಅವರ ಶೈಲಿಯನ್ನು ಅನುಸರಿಸುತ್ತಿದ್ದರು. ಪರ್ಶಿಯನ್ ಸಾಕಷ್ಟು ಅಭಿವೃದ್ಧಿ ಹೊಂದಿದ ಭಾಷೆಯಾಗಿತ್ತು. ಉರ್ದು ಭಾಷೆ ಆಗಿನ್ನು ಬೆಳೆದಿರಲಿಲ್ಲ. ಭಾವಗಳನ್ನು ಪರಿಣಾಮಕಾರಿಯಾಗಿ ಪ್ರಕಟಪಡಿಸಲು ಭಾಷೆ ಇನ್ನು ಬೆಳವಣಿಗೆಯ ಅನೇಕ ಹಂತಗಳನ್ನು ದಾಟಬೇಕಾಗಿದ್ದಿತು. ಇಂತಹ ಒಂದು ಸನ್ನಿವೇಶದಲ್ಲಿ ಗಾಲಿಬ್ ತಮ್ಮ ಭಾವನೆಗಳನ್ನು ಉರ್ದು ಕವನಗಳಲ್ಲಿ ಪ್ರಕಟಿಸಲು ಹೊಸ ಮಾರ್ಗವನ್ನು ತುಳಿಯುವುದು ಅನಿವಾರ್ಯವಾಯಿತು. ಅವರು ಇದೇ ದಾರಿಯಲ್ಲಿ ಮುಂದುವರಿದಿದ್ದ ಪಕ್ಷದಲ್ಲಿ ಅವರ ಖ್ಯಾತರಾಗುವುದು ಅಸಂಭವವಾಗಿತ್ತು. ಸುದೈವವಶಾತ್ ಭಾಷೆ ಹಾಗೂ ಸಾಹಿತ್ಯ ಅವರ ಈ ಮುಕ್ತಮಾರ್ಗಾನುಸರಣೆಗೆ ಪ್ರತಿಬಂಧ ಹಾಕಿತು.

ಗಾಲಿಬ್ ಅವರ ಭಾಷೆ ಅಸ್ಪಷ್ಟವೆಂದು ಅವರ ಮಿತ್ರರು ಹಾಗೂ ಶತ್ರುಗಳು ಟೀಕಿಸುತ್ತಿದ್ದರು. ಗಾಲಿಬ್ ಅವರು ಮೊದಮೊದಲು ಈ ಟೀಕೆಗೆ ಕಿವಿಗೊಡಲಿಲ್ಲವಾದರೂ, ಅವರ ಆತ್ಮೀಯ ಮಿತ್ರರೇ ಶೈಲಿ ಸರಳವಾಗಬೇಕೆಂದು ಹೇಳಿದಾಗ ತಲೆತಗ್ಗಿಸಿ ಒಪ್ಪಿಕೊಂಡರು.

ಮೊಗಲ ಸಾಮ್ರಾಜ್ಯದ ನಾಮಮಾತ್ರ ದೊರೆಯಾಗಿದ್ದ ಬಹಾದ್ದೂರ್ ಶಹಾ ಸ್ವತಃ ಉರ್ದು ಕವಿಯಾಗಿದ್ದರು. ಆದರೂ ಅವರಿಂದ ಕವಿಗಳಿಗೆ ಹೇಳಿಕೊಳ್ಳುವಂತಹ ರಾಜಾಶ್ರಯ ದೊರೆಯುವಂತಿರಲಿಲ್ಲ. ಪರಿಸ್ಥಿತಿ ಹೀಗಿದ್ದಾಗಲೂ ಬಾದಶಹ ಕವಿಗಳ ಕಾವ್ಯ ಸ್ಫೂರ್ತಿಗೆ ನೆಲೆಯಾಗಿದ್ದರು. ಗಾಲಿಬ್ ಅವರು ಚಿಕ್ಕಂದಿನಿಂದಲೇ ತಮ್ಮ ಸಾಹಿತ್ಯದ ವಿಚಾರವಾಗಿ ಮೊಹಮ್ಮದ ಇಬ್ರಾಹಿಂ "ಝೌಕ್" ಅವರೊಂದಿಗೆ ವಿಚಾರ ವಿಮರ್ಶೆ ನಡೆಸುತ್ತಿದ್ದರು. ಮುಂದೆ ಗಾಲಿಬ್ ಬಹಾದ್ದೂರ್ ಶಹಾ ಅವರ ಪಂಡಿತರ ಶ್ರೇಣಿಯನ್ನೂ ಸೇರಿದರು. 'ಝೌಕ್' ಅವರು 1854ರಲ್ಲಿ ನಿಧನ ಹೊಂದಿದಾಗ ಗಾಲಿಬ್ ಅವರು ಬಹಾದ್ದೂರ್ ಶಹಾ ಅವರ ಸಾಹಿತ್ಯ ವಿಷಯಕ ಸಲಹೆಗಾರರಾಗಿ ಸೇರಬೇಕಾಗಿ ಬಂತು.

ಬಾದಶಹಾ ಈ ಹೊತ್ತಿಗ [illegible] ಲಿಬ್ ಅವರಿಗೆ ರಾಜವಂಶದ [illegible] ಬರೆಯುವ ಕೆಲಸವನ್ನು [illegible] ದ್ದಿತು. ಇದಕ್ಕಾಗಿ ಅವರಿಗೆ [illegible] 50 [illegible] ಸಂಭಾವನೆ ಸಿಗುತ್ತಿ [illegible] ಲಿಬ್ ಅವ [illegible] ಈ ಕೃತಿ [illegible] ಜತೆಗೆ ಬಹದ್ದೂರ ಅವರ ಸಾಹಿತ್ಯ [illegible] ಗಾರರಾಗಿ ಕೆಲಸ ಮಾಡಿದ [illegible] ದೀನನೂ ಆದ [illegible] ರ ಚಿಕ್ಕಪ್ಪನ ಕಾಲದಿಂದ [illegible] 750 ರೂ. ವಾರ್ಷಿಕ ನಿವೃತ್ತಿ ವೇತನ ಜೊತೆಗೆ ಬಾದಶಹರು ನೀಡಿ 600 ಇದಿಷ್ಟು ಮೊತ್ತ [illegible] ಗಾಲಿಬ್ ಅವರ ನಿರ್ವಹಣೆ [illegible]

1857ರಲ್ಲಿ ಭಾರತದ ಮೊದಲ [illegible] ತಂತ್ರ ಹೋರಾಟ ನಡೆಯಿತು. ಗಾಲಿಬ್‌ರ ಮಟ್ಟಿಗೆ ಇದು ದೀರ್ಘ ವಿಷಾದದ ಕಾಲವಾಯಿತು. ಜೊತೆಗೆ ಅನೇಕ ಕಷ್ಟ ಪರಂಪರೆಗಳನ್ನು ತಂದಿತು. ಬ್ರಿಟಿಷರು ಅವರಿಗೆ ಸಲ್ಲುತ್ತಿದ್ದ ನಿವೃತ್ತಿ ವೇತನಕ್ಕೆ ಕೊಡಲಿ ಹಾಕಿದರು. ಬಹದ್ದೂರ್ ಶಹಾ ಅವರು ನೀಡುತ್ತಿದ್ದ ಸಂಭಾವನೆಯೂ ನಿಂತುಹೋಯಿತು.

1857ರ ಕೊನೆಯ ಹೊತ್ತಿಗೆ ಬ್ರಿಟಿಷರು ಇಡೀ ದೇಶದ ಮೇಲೆ ತಮ್ಮ ಪ್ರಭುತ್ವವನ್ನು ಪುನರ್ ಸ್ಥಾಪಿಸಿಕೊಂಡರು. ಬಂಡಾಯದಲ್ಲಿ ಭಾಗವಹಿಸಿಲ್ಲವಾದ ಕಾರಣ ತನಗೆ ಪುನಃ [illegible] ಸಿಗಬಹುದೆಂದು ಗಾಲಿಬ್ ಎಣಿಸಿದರು. ಆದರೆ ಅವರ ಆಶೆ ನಿರಾಶೆಯಾಯಿತು. ಒಮ್ಮೆ ನಿಂತುಹೋದ ಪೆನ್‌ಶನ್ ಪುನಃ ಪಡೆಯಲು ಅವರು ದೊಡ್ಡ ಹೋರಾಟವನ್ನೇ ಮಾಡಬೇಕಾಗಿ ಬಂತು. ಕೊನೆಗೆ 1860ರಲ್ಲಿ ಅವರಿಗೆ ಮತ್ತೆ ಪೆನ್‌ಶನ್ ದೊರೆಯಿತು.

ಸಾಹಿತ್ಯದ ಸಂಪ್ರದಾಯವನ್ನು ಬಿಟ್ಟುಕೊಟ್ಟು ಹೊಸ ಮಾರ್ಗಾನುಸರಣೆ ಮಾಡಿದುದು ಗಾಲಿಬ್ ಅವರ ಶ್ರೇಷ್ಠತೆಯ ದ್ಯೋತಕ. ಸಂಪ್ರದಾಯ ಹಾಗೂ ಪರಂಪರಾಗತವಾದ ಉರ್ದು ಸಾಹಿತ್ಯದ ವಿರುದ್ಧ ಬಂಡೆದ್ದ ಕೆಚ್ಚೆದೆಯ ಕವಿ ಗಾಲಿಬ್, ಉರ್ದು ಸಾಹಿತ್ಯದ ಬೆಳವಣಿಗೆಗೆ ಅನೋಘವಾದ ಸೇವೆ ಸಲ್ಲಿಸಿ ಅಮರರಾದರು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರಹದ ಬ್ಯಾಂಕಿಂಗ್ ವ್ಯವಹಾರಗಳಿಗೆ
93 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸ್:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
Phone— 5711, 5712, 5713 } 3 Lines.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

1—5—1969

೨೦
ಪೈಸೆ

ಕಥಾಪ್ರಪಂಚ

ಹೊಣೆಗಾರನಾರು?

ಬರೆದವರು: ಶ್ರೀ ಕೊತ್ತ್ಯಾರು ವಾಸು ಶೆಟ್ಟಿ

"ನಾನು ಒಮ್ಮೆ ಹೇಳಿದ್ದಲ್ಲ— ಮುಡಿಗೆ ನಲ್ವತ್ತೈದು ಕೊಟ್ಟರೆ ಕೊಡುತ್ತೇನೆ. ಇಲ್ಲವಾದರೆ ಬಂದ ಹಾಗೆ ಹಿಂದೆ ಹೋಗು"—ಅಂಗಡಿಯ ಸಾಹುಕಾರರದ್ದು ಒಂದೇ ಮಾತು "ನಲ್ವತ್ತೈದು?"..ಕಾಳು ಬೆಚ್ಚಿಬಿದ್ದ. "ಹೌದೌದು, ನಾಲ್ವತ್ತೈದು. ಈಗ ಅಕ್ಕಿಗೆ ಎಷ್ಟು ಬೆಲೆ ಏರಿದೆ ಗೊತ್ತಾ? ಮೂರು ಕಾಸು ಹಿಡಿದುಕೊಂಡು ಅಂಗಡಿಗೆ ಬಂದರೆ ಮೂಗಿಗೆಳೆಯುವ ನಶ್ಯವೂ ಸಿಗುವುದಿಲ್ಲ. ಹಾಗಿರುವಾಗ ಅಕ್ಕಿ ಮುಡಿಗೆ ನಲ್ವತ್ತೈದು ಏನು ಮಹಾ? ಬೇಕಾದರೆ ಒಯ್ಯು, ಇಲ್ಲವಾದರೆ ಬಿಡು, ನಾವು ಅಂಗಡಿಯವರೆ—ನಂಟರಿಗೂ ಕಡಿಮೆ ಬೆಲೆಯಲ್ಲಿ ಕೊಡುವುದಿಲ್ಲ"—ಎಂದ ಸಾಹುಕಾರರ ತಕ್ಷಣ ಮಾತನ್ನೇ ಮುಂದುವರಿಸಿದರು. "ನನ್ನ ಸಾಯುವ ಮಕ್ಕಳನ್ನು ಬದುಕಿಸಬೇಕಾದರೆ ಅಕ್ಕಿ ಒಯ್ಯಲೇ ಬೇಕಾಗಿದೆ ಸಾಹುಕಾರರೇ, ನಲ್ವತ್ತೈದು ಆದರೆ ನಲ್ವತ್ತೈದು—ಅಂತೂ ಒಂದು ಮುಡಿ ಕೊಟ್ಟುಬಿಡಿ. ಹಣವನ್ನು ಒಂದು ತಿಂಗಳ ಮೇಲೆ ಚಾಕರಿ ಮಾಡಿಯಾದರೂ ತೀರಿಸಿಬಿಡುತ್ತೇನೆ"—ಎಂದು ಕಾಳು ಬಹಳ ಕಾಳಜಿಯಿಂದ ನುಡಿದ. 'ಅಹ್ಹಹ್ಹಾ'—ಸಾಹುಕಾರರು ಹೊಟ್ಟೆ ಬಿರಿಯುವಂತೆ ನಕ್ಕರು; "ಏನು ಕಾಳೂ, ಯಾವ ಮಾತಾಡುತ್ತಿರುವೆ? ನೀನು ಹೇಳುವ ಸಾಲದ ಮಾತು ಹತ್ತು ವರ್ಷ ಹಿಂದಿನದ್ದಾಯ್ತು. ಅದಕ್ಕೀಗ ಕಾಸಿನ ಬೆಲೆಯೂ ಇಲ್ಲ. ಈಗಿನ ಅಂಗಡಿ ಸಾಹುಕಾರರ ಮಾತು ನಗದು, ನಗದು'—ಎಂದರು ಸಾಹುಕಾರರು ದರ್ಪದಿಂದ. ಸಾಹುಕಾರರ ಮಾತು ಕೇಳಿ ಕಾಳುವಿನ ತಲೆ ಗಿರ್ರೆಂದಿತು. ಹುಚ್ಚು ಹಿಡಿದವನಾದ ಕಾಳು. ನಗದು ಹಣವನ್ನು ತರುವುದಾದರೂ ಎಲ್ಲಿಂದ? "ದಮ್ಮಯ್ಯ ಸಾಹುಕಾರರೇ, ಒಂದು ಮುಡಿ ಅಕ್ಕಿ ಕೊಡಿ, ತಪ್ಪಿದರೆ ಒಂದು ಸೇರಿಂದ ಆದರೂ ಕೊಡಿ. ಒರಮ ತಿಂಗಳಲ್ಲಿ ಬೇಗಾದರೂ ಹಣ ಮುಟ್ಟಿಸುತ್ತೇನೆ. ಈಗ ನೀವು ಅಕ್ಕಿ ಕೊಡದಿದ್ದರೆ ನನ್ನ ಹಸಿದ ಮಕ್ಕಳು ಪ್ರಾಣ ನೀಗಬೇಕಾಗುತ್ತದೆ"—ಎಂದು ಹೇಳುವಾಗ ಕಾಳುವಿನ ಸ್ವರ ಗದ್ಗದವಾಗಿತ್ತು. ಕಾಳನ ಮಾತು ಕೇಳಿ ಸಾಹುಕಾರರು ಮತ್ತೊಮ್ಮೆ ಗಹಗಹಿಸಿ ನಕ್ಕರು. "ಕಾಳೂ, ನಿನ್ನ ಮಕ್ಕಳಿಗಾಗಿ ನಾವು ನಷ್ಟ ಮಾಡಿಕೊಳ್ಳಬೇಕೆಂದಿಯಾ? ಒಂದೆರಡು ಮಕ್ಕಳು ಸತ್ತರೆ ನಮ್ಮಲ್ಲಿ ಮಕ್ಕಳಿಗೆ ಕೊರತೆಯೇನಾಗದು. ತಂದಿದ್ದರೆ ನಮ್ಮಲ್ಲಿ ನೋಡು. ಸಾಕ್ಯಾದರೆ ಬೇರೆಡೆ ನೋಡು." ಎಂದು ಸಾಹುಕಾರರು ನಿರ್ಧಾರಪೂರ್ವಕವಾಗಿ ಹೇಳಿದರು. ಕಾಳುವಿಗೆ ದುಃಖ ಉಕ್ಕಿ ಬಂತು. "ಅಬ್ಬಾ ಈ ಸಾಹುಕಾರನ ಹೃದಯವೇ! ಬಡವರ ಈ ದೀನ ಸ್ಥಿತಿಯು ಇನ್ನೂ ಈ ಹೊಲೆಯನಿಗೆ ಅರ್ಥವಾಗಲಿಲ್ಲವಲ್ಲಾ!" ಎಂದುಕೊಂಡ ಕಾಳು, ಕಣ್ಣೀರನ್ನೊರಸುತ್ತಾ, ಸರಸರನೆ ಹೊರನಡೆದ.

ಕಾಳು ಎಂದರೆ ಒಬ್ಬ ಕೂಲಿಯಾಳು. ಅವನ ಹೆಂಡತಿ ನೀಲು. ಮದುವೆಯ ಪ್ರಾರಂಭದಲ್ಲಿ ಇದ್ದದ್ದು ಅವರಿಬ್ಬರೇ. ಆ ಮೇಲೆ ಹುಟ್ಟಿದರು ಐವರು ಮಕ್ಕಳು. ಹಲವು ವರ್ಷದ ಮೇಲೆ ನೀಲು ಮೃತ್ಯುವಶಳಾದ್ದರಿಂದ ದೇವರ ದಯೆಯಿಂದ ಮಕ್ಕಳ ಸಂಖ್ಯೆ ಅಲ್ಲಕ್ಕೆ ನಿಂತುಬಿಟ್ಟಿತು. ನೀಲು ತೀರಿಹೋಗಿ ಇಂದಿಗೆ ಎರಡು ವರ್ಷವಾಗಿದೆ. ಅಂದಿನಿಂದ ಕಾಳು ಮಕ್ಕಳ ಪೋಷಣೆಯನ್ನು ತಾನೇ ವಹಿಸಿಕೊಳ್ಳಬೇಕಾಯ್ತು. ಮಕ್ಕಳಲ್ಲಿ ದೊಡ್ಡವ ಸುಕುಟ—ಅವನಿಗೆ ಪ್ರಾಯ ಹತ್ತು ವರ್ಷ. ಅವನು ಊಟದ ಹೊಟೆಲೊಂದರಲ್ಲಿ ಎಲೆ ತೆಗೆಯುವ ಕೆಲಸದಲ್ಲಿದ್ದ. ಆದರಿಂದ ತಿಂಗಳಿಗೆ ಮೂರು ರೂಪಾಯಿ ಸಂಪಾದಿಸಿ ತಂದೆಗೆ ಕೊಡುತ್ತಿದ್ದ. ಅಕ್ಕಿ ದೊರೆಯದೆ ಹೊಟೆಲು ಮುಚ್ಚಲ್ಪಟ್ಟಾಗ ನಿರುದ್ಯೋಗಿಯಾದ ಸುಕುಟು ತನ್ನ ಗುಡಿಸಲಿಗೆ ಬರುವಂತಾಯ್ತು. ಹೋಗುವಾಗ ಸುಮ್ಮನೆ ಒಬ್ಬನೇ ಹೋಗಿದ್ದ, ಆದರೆ ಬರುವಾಗ ಜೊತೆಗೆ ಜ್ವರವನ್ನೂ ತಂದಿದ್ದ. ಸುಕುಟುವಿಗೆ ಜ್ವರ ಹಿಡಿದು ಐದಾರು ದಿನವಾಗಿದೆ. ಮದ್ದು ಮಾಡಲು ಕಾಳುವಲ್ಲಿ ಕಾಸಿಲ್ಲ. ಈಚಿನ ಮೂರು ದಿನಗಳಲ್ಲಿ ಕಾಳುವಿನ ಗುಡಿಸಲಲ್ಲಿ ಅನ್ನ ಬೆಂದಿಲ್ಲ. ಮಗನ ಶುಶ್ರೂಷೆಯಿಂದಾಗಿ ಕಾಳುವಿಗೆ ಕೂಲಿ ಕೆಲಸ ಮಾಡಿ ಹಣ ತರಲೂ ಪುರುಸೊತ್ತು ಇಲ್ಲ. ಚಿಲ್ಲರೆ ಅಕ್ಕಿ ಯಾರೂ ಕೊಡುತ್ತಿಲ್ಲ. ಮುಡಿ ಕೇಳಿದರೆ ನಗದು ಕೇಳುತ್ತಾರೆ. ಹಾಗಾಗಿ ಕಾಳುವಿನ ಸಂಸಾರ ಮೂರು ದಿನದಿಂದ ಹಸಿದಿದೆ. ಅವರ ಹೊಟ್ಟೆ ಬೆನ್ನಿಗೆ ಅಂಟಿಕೊಂಡಿದೆ. ಹಸಿದ ಮಕ್ಕಳು ತಾಳೇ ಹಣ್ಣುಗಳನ್ನು ಬೇಕಾದಷ್ಟು ತಿಂದವು. 'ದಿನವೂ ಸಿಗುತ್ತಿದ್ದ ಹಣ್ಣು ಇಂದೇಕೆ ನಮಗೆ ಸಿಗಲಿಲ್ಲ?' ಎಂದುಕೊಂಡು ನಾಯಿಗಳು ಸಿಟ್ಟಾಗಿ, ತಾಳೇ ಮರಕ್ಕೆ ಮೂತ್ರಹೊಯ್ದು ಹೊರಟು ಹೋದವು. ಮಕ್ಕಳು ಕೂಡಿದಷ್ಟು ಆ ಹಣ್ಣು ತಿಂದವು. ಮಡಕೆಯಲ್ಲಿದ್ದ ನೀರನ್ನು ಗಟಗಟನೆ ಬಗ್ಗಿಸಿ ಕುಡಿದವು. ಹೇಗಾದರೂ ಹಸಿವನ್ನು ತಣಿಸಿಕೊಳ್ಳಲು ಪ್ರಯತ್ನಿಸಿದವು.

ಬಡತನದಿಂದ ಬಳಲಿದ ಕಾಳು "ನಗದು ಹಣ ಸಾಲ ತರುವೆ"ನೆಂದು ಊರಿನ ಧನಿಕರೊಬ್ಬರ ಮನೆಗೆ ನಡೆದನು. ಧನಿಕರ ಮಾತೂ ಅದೇ ಆಯ್ತು. "ಆಭರಣ ಒತ್ತೆ ಇಟ್ಟರೆ ಹಣ ಕೊಡುತ್ತೇನೆ. ಇಲ್ಲವಾದರೆ ಇಲ್ಲ. ಪುಕ್ಕಟೆ ವ್ಯಾಪಾರ ನಮ್ಮಲ್ಲಿಲ್ಲ" ಎಂದರು. ಕಾಳುವಲ್ಲಿ ಆಭರಣವೆಲ್ಲಿಂದ ಬರಬೇಕು? "ಪ್ರಾಣ ಹೋಗುವ ಕಾಲ ಬಂದಿದೆ, ಕಾಲು ಬೀಳುತ್ತೇನೆ, ಒಂದು ಹತ್ತು ರೂಪಾಯಿಯಾದರೂ ಕೊಡಿ. ನಿಮ್ಮ ಚಾಕರಿ ಮಾಡಿಯಾದರೂ ತೀರಿಸಿಬಿಡುತ್ತೇನೆ' ಎಂದ ಕಾಳು ಬಿಕ್ಕುತ್ತಲೇ. "ಹೋಗಯ್ಯ, ಪರದೇಶಿ, ನಿನಗೆ ಕೊಡೋದಕ್ಕಿಂತ ಬ್ಯಾಂಕಿನಲ್ಲಿಟ್ಟರೆ ಅದೇ ಹಣಕ್ಕೆ ಬಡ್ಡಿ ಬರುತ್ತದೆ. ಮೊದಲು ಹೋಗಯ್ಯ ಇಲ್ಲಿಂದ"—ಎಂದು ಹೇಳಿ ಆ ಶ್ರೀಮಂತರು ದಢಾರನೆ ಮನೆಯ ಬಾಗಿಲು ಮುಚ್ಚಿಕೊಂಡರು, ಕಾಳು ಅಂಗಳದಿಂದಲೇ ಹಿಂದಿರುಗಬೇಕಾಯ್ತು.

ದಾರಿಯಲ್ಲಿ ತರಕಾರಿ ತೋಟವೊಂದರಲ್ಲಿ ಬಗೆಬಗೆಯ ತರಕಾರಿಗಳನ್ನು ಕಂಡಾಗ ಕಾಳುವಿಗೆ ತನ್ನ ಹಸಿದ ಮಕ್ಕಳು ಎದುರಿಗೆ ಬಂದು ಕಿರುಚಿದಂತಾಯ್ತು. ತೋಟಕ್ಕೆ ಹೊಕ್ಕು ಮಕ್ಕಳಿಗಾಗಿ ಒಂದು ಕುಂಬಳಕಾಯಿಯನ್ನು ಕದ್ದುಕೊಂಡು ಹೊರಬಂದ. "ಕಳ್ಳ, ಕಳ್ಳ, ಹಿಡಿಯಿರಿ"—ಎನ್ನುತ್ತಾ ತೋಟದ ಯಜಮಾನ ದೊಣ್ಣೆಯೊಂದಿಗೆ ಕಾಳುವನ್ನು ಓಡಿಸಿಕೊಂಡು ಬಂದ. ಕಾಳು ಕುಂಬಳಕಾಯಿಯನ್ನು ಅಲ್ಲಿಯೇ ಎಸೆದು ಧಾವಿಸಿದ. ಕಾಯಿ ಸಿಕ್ಕಿದ್ದರಿಂದ ಯಜಮಾನನಿಗೆ ಸಂತೋಷವಾಗಿದ್ದಿರಬೇಕು. ಸ್ವಲ್ಪ ದೂರ ಓಡಿಸಿ ಹಿಂತಿರುಗಿದ. ಹಸಿದ ಹೊಟ್ಟೆಯ ಕಾಳು ಸುಮಾರು ದೂರ ಓಡಿ ಒಂದು ಮನೆಯ ಅಂಗಳದಲ್ಲಿ ದಬ್ಬನೆ ಬಿದ್ದ. ಮನೆಯಲ್ಲಿದ್ದವರು ಕಾಳನ್ನು ಉಪಚರಿಸಿ, ಅವನಿಗೆ ಊಟಕ್ಕೆ ಗಂಜಿ ಕೊಟ್ಟರು. ಗಬಗಬನೆ ತಿನ್ನಬೇಕೆಂದು ಅನ್ನಕ್ಕೆ ಕೈಹಾಕುವಷ್ಟರಲ್ಲಿ ಕಾಳುವಿಗೆ ತನ್ನ ಮಕ್ಕಳ ನೆನಪಾಗಿ, ಗಂಜಿಯನ್ನು ಹಿಡಿದುಕೊಂಡು, ತನ್ನ ಗುಡಿಸಲಿನತ್ತ ಓಡಿದ.

ಮನೆಗೆ ಬಂದಾಗ ಕಾಳು ಕಂಡದ್ದೇನು? ಹಿರಿಯ ಮಗ ಸುಕಟು ಗೋಣುಚೆಲ್ಲಿ ಮಲಗಿದ್ದಾನೆ. ಹೊದೆಯಲು ಬಟ್ಟೆಯಿಲ್ಲದೆ ಚಳಿಯಿಂದ ನಡುಗುತ್ತಿದ್ದಾನೆ. ಉಳಿದ ಮಕ್ಕಳು ಅಣ್ಣನ ಸುತ್ತ ಸೇರಿದಿವೆ. ಜ್ವರದ ಮೂರು ದಿನಗಳಲ್ಲಿ ಅನ್ನದ ಬದಲು ನೀರು ಕುಡಿದ ಪರಿಣಾಮ ಇದು. ಕಾಳು ಗಂಜಿಯನ್ನು ಸುಕಟುವಿಗೆ ಕೊಡಲು ಹೋದ. ಆದರೆ ಸುಕಟು ಒಂದೇ ಸವನೆ ಅಳುತ್ತಾ ಹೇಳಿದ—"ನಾನು ಸಾಯುತ್ತೇನೆ ಅಪ್ಪಾ. ಡಾಕ್ಟ್ರನ್ನು ಕರೆದು ತಾ. ಆ ಗಂಜಿಯನ್ನು ನನ್ನ ತಮ್ಮ, ತಂಗಿಯರಿಗೆ ಕೊಡು. ಅವರಾದರೂ ಬದುಕಿ ನಿನ್ನನ್ನು ಕಡೆಗಾಲದಲ್ಲಿ ಕಾಪಾಡಲಿ." "ಹಾಗೆ ಹೇಳಬೇಡ ಮಗಾ" ಎಂದು ಕಾಳು ಮಗನ ಮುಖ ನೋಡಲು ಸಹಿಸದ. ಕಟ್ಟಿದ್ದ ಮುಂಡಾಸನ್ನು ತೆಗೆದು, ಮಗನಿಗೆ ಹೊದಿಸಿ ಅಳುತ್ತ ಓಡಿದ.

ಉರಿಬಿಸಿಲಿಗೆ ಓಡಿದ ಕಾಳು, ಡಾಕ್ಟರ ಕಾಲಿಗೆ ಬಿದ್ದು "ಕಾಪಾಡ್ಬೇಕು ದೇವ್ರು ನನ್ನ ಸುಕಟುವನ್ನು ಕಾಪಾಡ್ಬೇಕು.." ಎಂದು "ಗೋಳೋ" ಎಂದು ಅತ್ತ. ಆ ಗೋಳಿನ ಪ್ರಾಣಿ ತನ್ನಂತಹ ಪ್ಯಾಂಟು ಹಾಕಿದ ವ್ಯಕ್ತಿಯ ಕಾಲನ್ನು ಮುಟ್ಟಿದ್ದು ಡಾಕ್ಟ್ರಿಗೆ ಹೇಸಿಗೆನಿಸಿತು. ಕಾಲುಗಳನ್ನು ಹಿಂದಕ್ಕೆಳೆದರು. ಆದರೂ ಬಡವನ ಬರಿಗೈಯಲ್ಲಿ ಕಳಿಸದೆ ಸೀಸೆಯಲ್ಲಿ ಬಣ್ಣದ ನೀರು ತುಂಬಿ ಕೊಟ್ಟರು. ಬಡವರ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷಸ್ಥಾನವನ್ನು ವಹಿಸಲು ಹೊರಟರು.

ಕಾಳು ಸೀಸೆಯೊಂದಿಗೆ ಮನೆಕಡೆ ತಿರುಗಿ ಓಡಿದ, ಮಗನ ಮುಖ ನೋಡಿದ. ಸುಕಟು ಕಣ್ಣು ಬಿಚ್ಚಿ ತಂದೆಯನ್ನು ನೋಡಿದ. "ಡಾಕ್ಟ್ರು ಬರಲಿಲ್ಲವೇ ಅಪ್ಪಾ?" ಎಂದು ಕೇಳಿದ. ಅಷ್ಟರಲ್ಲಿ ತುಂಬಿತ್ತು ಆ ಜೀವಿತನಕ್ಕೆ! ಕಾಳು ಇಲ್ಲವೆಂಬಂತೆ ತಲೆಯಾಡಿಸಿದ. ಆದು ತನಗೆ ಡಾಕ್ಟ್ರು ಬಂದು ತನ್ನನ್ನು ಉಳಿಸುವೆಂದು ಆಸೆಯಿರಿಸಿಕೊಂಡಿದ್ದ ಮಗು "ಗೊತ್ತಿತ್ತೆ ಅಪ್ಪ, ಗೊತ್ತಿತ್ತು ಆ ಡಾಕ್ಟ್ರಿಗೆ—ನಮ್ಮಲ್ಲಿ ಹಣವಿಲ್ಲವೆಂದು. ನಾವು ಬಡವರು ಯಾಕೆ ಹುಟ್ಟಿದೆವಪ್ಪಾ?" ಎಂದು ನಿರಾಶೆಯನ್ನು ತಡೆಯಲಾರದಾದ. ವಿಧಿ ಕೊಟ್ಟಿದ್ದಾರೆ' ಎಂದು ಕಾಳು ಶಾಂತಿಸಲು ತೊಡಗಿದ. ಆದರೆ ಸುಕಟುವಿನ ದೇಹ ತಣ್ಣಗಾಗುತ್ತ ಬಂತು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಆತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪ್ರಾಶಿಯರುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

READ &
ADVERTISE IN
NAVAYUGA WEEKLY

ಫೋನ್ : ೨೭೦
ಸಂಪುಟ ೪೮
ಸಂಚಿಕೆ ೩೩
VOL. 48
No. 33

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧–೫–೧೯೬೯

ರಾಜ್ಯಕೀಯ ಪ್ರಗತಿ

ದೆಹಲಿಯ ಬಳಿಯಲ್ಲಿ ಕಾಂಗ್ರೆಸ್‌ನ, ಬೊಂಬಾಯಿಯಲ್ಲಿ ಭಾರತೀಯ ಜನಸಂಘದ ಅಧಿವೇಶನಗಳು ಜರಗಿದ ದೇಶ ನಿಜ. ಅಧಿವೇಶನದ ಅಂತ್ಯದಲ್ಲಿ ಕೆಲವಾರು ಗೊತ್ತುವಳಿಗಳು ಪ್ರಚಂಡ ಬಹುಮತದಿಂದ ಸ್ವೀಕೃತವಾದದ್ದೂ ಅಷ್ಟೇ ಸತ್ಯ. ಕಾಂಗ್ರೆಸ್ ಅಧಿವೇಶನದ ಪ್ರಾರಂಭದಲ್ಲೇ ಬೆಂಕಿಗೀಡಾದುದು ವಿಸ್ಮಯ ಮತ್ತು ಸಂಕಟದ ಸಂಗತಿಯಾದರೂ ಅಂತಹ ದುರ್ಘಟನೆ ನಡೆದದು ಇದೇ ಮೊದಲ ಬಾರಿಗಲ್ಲವೆಂಬುದು ಸಮಾಧಾನ. ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಮತ್ತು ಮುಂದೆ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸು ಅಧಿಕಾರ ಪಡೆಯಲು ಸೋತ ಘಟನೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದೊಳಗಡೆ ಎದ್ದಿರುವ ಎಳೆ–ಹಳೆ ರಕ್ತಗಳ ಸಂಘರ್ಷದಲ್ಲಿ ಈ ಅಧಿವೇಶನಕ್ಕೆ ಬೆಲೆ ಹೆಚ್ಚು. ೧೯೭೨ರಲ್ಲಿ ದೇಶದ ಹೆಚ್ಚಿನ ರಾಜ್ಯಗಳಲ್ಲಿ ಐದನೆಯ ಮಹಾ ಚುನಾವಣೆಗಳೂ ಸಾಂಸತ್ತಿಕ ಚುನಾವಣೆಗಳೂ ನಡೆಯಲಿವೆ. ರಾಜ್ಯ ಮತ್ತು ಕೇಂದ್ರಗಳಲ್ಲಿ ಪಕ್ಷದ ಸ್ಥಾನವನ್ನು ಭದ್ರಪಡಿಸುವ ತಂತ್ರಗಳು ಈಗಿಂದೀಗಲೇ ಆರಂಭವಾಗಬೇಕಾಗಿದೆ. ಇಂದು ಉತ್ತರ ಪ್ರದೇಶದಲ್ಲಿರುವ ಪರಿಸ್ಥಿತಿಯೇ ಅಂದು ಕೇಂದ್ರ ಸಂಸತ್ತಿನಲ್ಲಿ ತಲೆದೋರಬಹುದೆಂಬ ಭೀತಿ. ಕಾಂಗ್ರೆಸ್ ಬಹುಸಂಖ್ಯಾಕ ಪಕ್ಷವಾದರೂ ಅದು ಸ್ಪಷ್ಟ ಬಹುಮತ ಪಡೆಯಲಾರದೆಂಬ ಸಂದೇಹ.

ಕಾಂಗ್ರೆಸ್ ಪಕ್ಷವು ಶಿಥಿಲವಾಗುತ್ತಿದೆಯೆಂಬುದು ಬಹಿರಂಗ ಸತ್ಯ. ಇದಕ್ಕೆ ಹತ್ತಾರು ಕಾರಣಗಳಿರಬಹುದು. ಅಧಿಕಾರ ಮೋಹ, ಸ್ವಾರ್ಥಭಾವನೆ ಮೊದಲಾದ ದುಷ್ಟಭಾವಗಳು ಅಧಿಕಾರಿ ಪಕ್ಷಗಳಲ್ಲಿ ಮೂಡುವುದು ಸಹಜವೆಂಬುದಕ್ಕೆ ಕಾಂಗ್ರೆಸ್ಸೇತರ ಪಕ್ಷಗಳು ಸಾಕ್ಷಿಯಾಗಿವೆ. ಆದರೂ ಜನ ಬಹಳಷ್ಟನ್ನು ನಿರೀಕ್ಷಿಸಿದ್ದರಿಂದ, ಅದನ್ನು ಈ ಅಲ್ಪಾವಧಿಯಲ್ಲಿ ಸಾಧಿಸುವಲ್ಲಿ ಕಾಂಗ್ರೆಸ್ ವಿಫಲವಾದುದರಿಂದ ಅಸಮಾಧಾನಗೊಂಡುದೂ ಸಹಜವೆನ್ನಬೇಕು. ತಿರುಕನೂ ರಾಜಭವನದಲ್ಲಿ ನೆಲಸಿ ಸುಖಭೋಗಗಳನ್ನು ಅನುಭವಿಸುವ ಹೇರಾಸೆಯಿಟ್ಟು ಅದು ನಿರಾಸೆಯೆನಿಸಿದರೆ ರೊಚ್ಚಿಗೇಳುತ್ತಾನೆ. ರಾತ್ರಿ ಬೆಳಗಾಗುವುದರೊಳಗೆ ಸ್ವರ್ಗವನ್ನು ಭಾರತಕ್ಕೆ ತಂದಿಳಿಸಲು ರಾಜ್ಯಕೀಯ ಪಕ್ಷ ಶಕ್ತವಾಗುವುದು ಇಲ್ಲವೆಂದೇ ಹೇಳಬೇಕು. ಆದರೂ ದೇಶವನ್ನು ಮುಂದೊಯ್ಯುವ ನಾಯಕತ್ವದ ಬಗ್ಗೆ ಹಲವಾರು ಟೀಕೆಗಳು ಸ್ವಪಕ್ಷೀಯರಿಂದಲೇ ಹೊರಡುತ್ತಿವೆ. ಡಾ| ಚಂದ್ರಶೇಖರ್, ಮೋಹನ್ ಧಾರಿಯಾ ಎಳೆರಕ್ತದ ಪ್ರತಿನಿಧಿಗಳು. ಆರ್ಥಿಕ ವಿಚಾರಗಳಲ್ಲಿ ಹಳೆ-ಎಳೆ ಪೀಳಿಗೆಗಳ ನಡುವಣ ಅಂತರ ದೂರಮಾಡುವುದು ಬಹಳ ಕಷ್ಟಸಾಧ್ಯ. ಪ್ರಗತಿ ಕಾರ್ಯಗಳ ಸಾಧನೆಗೂ ಅಷ್ಟೇ. ಭಾವೋದ್ವೇಗದಿಂದ ಗೊತ್ತುವಳಿ ಸ್ವೀಕಾರ ಮಾಡುವುದರಿಂದ ಏನೂ ಸಾಧಿತವಾಗುವುದಿಲ್ಲ. ದಶಾಂಶ ಪ್ರಣಾಳಿಯನ್ನು ಸ್ವೀಕರಿಸಿ ವರ್ಷಗಳು ಸಂದರೂ ಅದರ ಪ್ರಗತಿ ಸಾಧ್ಯವಾಗಿದೆಯೇ ಎಂಬ ಪ್ರಶ್ನೆಗೆ ಉತ್ತರ ಬಂದಿಲ್ಲ. ಸಮಾಜವಾದವನ್ನು ಅನುಷ್ಠಾನಕ್ಕೆ ತರುವುದನ್ನು ಕಾಂಗ್ರೆಸ್ಸಿಗೆ ಸಾಧ್ಯವಾಗಿಲ್ಲ. ಭಾರತದ ಸಾಮಾಜಿಕ ಪರಿಸ್ಥಿತಿಯು ಮೊದಲಿಂದಲೂ ವಿಲಕ್ಷಣವೇ. ಇಲ್ಲಿ ರಾಜರೂ ಇದ್ದಾರೆ, ರಂಕರೂ ಇದ್ದಾರೆ. ಇದೇ ಪರಿಸ್ಥಿತಿ ಇಂದಿಗೂ ಮುಂದುವರಿಯುತ್ತ ಬಂದಿದೆ. ಆದುದರಿಂದಲೇ ಇನ್ನೂ ಆಡಳಿತ ಪಕ್ಷವು ಬಂಡವಾಳಗಾರರದ್ದು ಎಂಬ ಮನೋಭಾವನೆ ಬೆಳೆದಿದ್ದು, ಅದರ ಕಾರ್ಯವಿಧಾನವೆಲ್ಲ ಅವರ ಏಳಿಗೆಗಾಗಿಯೇ ಎಂಬ ಅಸಮಾಧಾನ ಜನಸಾಮಾನ್ಯನಲ್ಲಿ ಬೇರೂರಿದೆ. ಇದಕ್ಕೆ ಅನಕ್ಷರತೆ, ಅಜ್ಞಾನ, ವಿಶಾಲ ಪ್ರಪಂಚ ಜ್ಞಾನದ ಅಭಾವ, ಬಡತನಗಳೂ ಕಾರಣ. ಹಾಗಾಗಿ, ಕಾಂಗ್ರೆಸ್ ಜನವಿಶ್ವಾಸವನ್ನು ಉಳಿಸಿಕೊಳ್ಳಬೇಕಾದರೆ, ಕ್ರಾಂತಿಕಾರಕ ಕಾರ್ಯಕ್ರಮಗಳನ್ನೇ ಕೈಕೊಳ್ಳಬೇಕು— ಇದು ಎಳೆಯ ಜನಾಂಗದ ವಾದವಾದರೆ, ಇಂತಹ ಕ್ರಮವನ್ನು ವ್ಯವಸ್ಥೆಗೊಳಿಸುವುದು ಹೇಗೆ? ಎಂಬುದು ಹಳೆಯ ಜನಾಂಗದ ಚಿಂತೆ. ಇದಕ್ಕೆ ಪರಿಹಾರ ದೊರೆಯದೆ ಹೋದರೆ, ಕಾಂಗ್ರೆಸ್ಸಿನ ಎರಡೂ ಪಂಗಡಗಳು ಒಂದಾಗುವುದಿಲ್ಲ. ಪರಸ್ಪರ ಭಿನ್ನರಾಗುತ್ತ ಹೋದರೆ, ದೇಶದ ಭವಿಷ್ಯವನ್ನಷ್ಟೇ ಕೇಳಬೇಕಾದೀತು. ಫರೀದಾಬಾದ ನಗರದ ಅಧಿವೇಶನಾನಂತರವಾದರೂ ಕಾಂಗ್ರೆಸ್ಸು ಸುಭದ್ರವಾಗಿ ದೇಶವನ್ನು ಪ್ರಗತಿಪಥದಲ್ಲಿ ಒಯ್ಯುವಲ್ಲಿ ಸಮರ್ಥವಾದೀತೆ?

ಜನಸಂಘವು ಭಾರತೀಯ ಐಕ್ಯವನ್ನು ಮತ್ತು ಪೂರ್ಣತೆಗೂ ಪ್ರತಿಪಾದಿಸುತ್ತ ಬಂದ ಪಕ್ಷ. ಭಾಷಾವಾರು ರಾಜ್ಯ ಘಟನೆಯನ್ನು ವಿರೋಧಿಸುತ್ತಿತ್ತು. ಆದರೆ, ಇದೀಗ ಅದರಲ್ಲೂ ಪರಿಸ್ಥಿತಿಯ ಒತ್ತಡ ಪರಿಣಾಮ ಬೀರಿದಂತಿದೆ. ರಾಜ್ಯಗಳನ್ನು ಮತ್ತೆ ಪುನರ್ರಚಿಸಬೇಕೆಂಬುದರಲ್ಲಿ ಹಲವರ್ಥವಿದೆ. ಭಾಷಾರಾಜ್ಯ ಸ್ಥಾಪನೆಯಿಂದ ಜನ ತೃಪ್ತರಾಗಿಲ್ಲ. ಪ್ರತ್ಯೇಕ ತೆಲಂಗಾಣದ ಬೇಡಿಕೆಯನ್ನು ಮನ್ನಿಸುತ್ತ ಹೋದರೆ ಕೊನೆಯೆಲ್ಲಿ? ಆಡಳಿತ ಸೌಕರ್ಯಕ್ಕೆ ವಿಭಾಗಗಳಾಗಿ ಪುನರ್ಘಟಿಸುವ ಇನ್ನೊಂದು ಮಾತು.— ಇದಕ್ಕೆ ವಿರೋಧ— ಇದೆಲ್ಲವೂ ಪರಿಸ್ಥಿತಿಯ ಪ್ರಭಾವ. ಮಹಾಜನ ವರದಿಯ ಸಂಬಂಧದಲ್ಲಿಯೂ ಏಕಸ್ವರ ಮೂಡಿಸಲು ಅಸಮರ್ಥರಾದ ಪಕ್ಷಗಳೇ ಅನೇಕ. ಸಾಮಯಿಕ ಪರಿಸ್ಥಿತಿಗಳ ಪ್ರಭಾವದಿಂದ ವಂಚಿತನಾಗಿ ದ್ವಿಧ ನೀತಿ ತಳೆಯುವುದು ರಾಜಕೀಯ ಕಂದಾಚಾರವೂ ಆಗಬಹುದು. ದೂರಾಲೋಚನೆಯ ಹೆಜ್ಜೆಯೂ ಆಗಬಹುದು. ವಸ್ತುಸ್ಥಿತಿಯೆಂದರೆ, ಜನಸಂಘದಲ್ಲೂ ಈ ಬಗೆಯ ಅಭಿಪ್ರಾಯ ಮಂಡಿಸಲ್ಪಟ್ಟಿರುವುದೆಂದರೆ ಅದರಲ್ಲೂ ಭಿನ್ನಮತವಿದೆಯೆಂದೇ ಹೇಳಬೇಕು. ಹಿಂದೆ ಕಾಂಗ್ರೆಸ್ ಇಂತಹ ಅಪಸ್ವರಗಳನ್ನು ಅದುಮಿ ಹಿಡಿದು ಕೆಲಕಾಲ ಮುಂದುವರಿಯಿತು; ಅದೀಗ ಅಪಸ್ವರ ಅಟ್ಟಹಾಸವಾಗಿ ಪರಿಣಮಿಸಿದೆ. ಇದೇ ಪರಿಸ್ಥಿತಿಯನ್ನೇ ಉಳಿದ ಪಕ್ಷಗಳೂ ಎದುರಿಸಬೇಕಾಗಿ ಬರಬಹುದು. 'ರಾಜ್ಯಕೀಯ ಪ್ರಗತಿ' ಎಂದರೆ ಇದೇ ಇರಬೇಕೇನೋ ಎಂಬ ಸಂದೇಹ ಬರುತ್ತದೆ.

ನವಯುಗ
ಔದ್ಯಮಿಕ, ವಾಣಿಜ್ಯ ಪುರವಣಿ

ಉಡುಪಿ ಮೇ 1969

ಈ ಪುರವಣಿಯ ಗೌರವ ಸಂಪಾದಕ: ಪ್ರೊ| ಕು. ಶಿ. ಹರಿದಾಸ ಭಟ್, ಎಂ.ಎ.

ಮೈಸೂರು ರಾಜ್ಯದ ಪ್ರಸಿದ್ಧ ಸಾಪ್ತಾಹಿಕ 'ನವಯುಗ' 'ಉದ್ದಿಮೆ ಮತ್ತು ವ್ಯಾಪಾರ'ದ ಒಂದು ವಿಶೇಷ ಪುರವಣಿಯನ್ನು ಹೊರಡಿಸಿ ರಾಜ್ಯದ ಔದ್ಯಮಿಕ ಮತ್ತು ವಾಣಿಜ್ಯ ಸಮಸ್ಯೆಗಳನ್ನೂ ಆಶೋತ್ತರಗಳನ್ನೂ ಪ್ರಕಟಿಸಲು ನಿರ್ಧರಿಸಿದೆ.

೧೫೦ ಮೈಲು ದೂರದ ಕರಾವಳಿ, ವಿಪುಲವಾದ ನೈಸರ್ಗಿಕ ಸಾಧನಗಳು, ವಿದ್ಯುತ್ತಿನ ಹೇರಳ ಸೌಲಭ್ಯ— ಹೀಗೆ ನಾನಾ ತರದ ಸಂಪನ್ಮೂಲಗಳನ್ನು ಪಡೆದ ನಮ್ಮ ರಾಜ್ಯ ಉದ್ದಿಮೆ, ವ್ಯಾಪಾರಗಳ ದೃಷ್ಟಿಯಿಂದ ಹಿಂದುಳಿಯಲು ಕಾರಣವೇನಿರಬಹುದೆಂಬುದನ್ನು ಕೂಲಂಕಷವಾಗಿ ಚರ್ಚಿಸುವ ಸಮಯ ಸನ್ನಿಹಿತವಾಗಿದೆ. ಎರಡು ದಶಕಗಳ ಸ್ವಾತಂತ್ರ್ಯಯುಗದಲ್ಲಿಯೂ ಬೆಂಗಳೂರು — ಭದ್ರಾವತಿಯಂಥ ಎರಡು ಕೇಂದ್ರಗಳನ್ನು ಬಿಟ್ಟರೆ ಉಳಿದ ಕಡೆ ಔದ್ಯಮಿಕ ಪ್ರಗತಿಯ ಲಕ್ಷಣಗಳು ಕಾಣಿಸದಿರಲು ನಮ್ಮ ಸಂಘಟನಾ ದೌರ್ಬಲ್ಯ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಮೈಸೂರಿನ ಮುಖ್ಯ ಸಚಿವರೇ ಕೇಂದ್ರದ ಬಗ್ಗೆ ತಮ್ಮ ನಿರಾಶೆಯನ್ನೂ ಆತಂಕವನ್ನೂ ಈಚೆಗೆ ವ್ಯಕ್ತಪಡಿಸಿರುವುದನ್ನು ನಾವು ಇಲ್ಲಿ ಸ್ಮರಿಸಬಹುದು.

ಸಾರ್ವಜನಿಕರ ಮನಸ್ಸು ಇಂಥ ಮಹತ್ತ್ವದ ಆರ್ಥಿಕದ ವಿಷಯಗಳ ಬಗ್ಗೆ ಒಲಿಯುವಂತೆ ಮಾಡಿ ಜನಾಭಿಪ್ರಾಯದ ಒತ್ತಡದಿಂದ ನಾವು ನಮ್ಮ ಮೂಲಭೂತ ಸಮಸ್ಯೆಗಳಿಗೆ ಪರಿಹಾರವನ್ನು ಶೋಧಿಸದಿದ್ದರೆ ಭಾರತೀಯ ಔದ್ಯಮಿಕ ರಂಗದಲ್ಲಿ ನಾವು ಇನ್ನಷ್ಟು ಹಿಂಜರಿಯಬೇಕಾದೀತು.

ರಾಜ್ಯದ ಸಚಿವೋತ್ತಮರು, ಬುದ್ಧಿಶಾಲಿಗಳು, ಬ್ಯಾಂಕ್ ಇತ್ಯಾದಿ ಸಂಸ್ಥೆಗಳ ನೇತಾರರು ಈ ವಿಶೇಷ ಪುರವಣಿಯಲ್ಲಿ ಲೇಖನಗಳನ್ನಿತ್ತು ಸಹಕರಿಸಲು ಒಪ್ಪಿದ್ದಾರೆ. ಸಚಿತ್ರವಾಗಿ ಹೊರಡುವ ಈ ಪುರವಣಿ ತಮ್ಮ ಸರಕು ಮತ್ತು ಸೇವೆಯ ಜಾಹೀರಾತಿಗೆ ಉತ್ತಮ ಸಾಧನವೆಂಬುದನ್ನು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಲ್ಲ ವರ್ಗದ ಜನರ ಮನೆಯನ್ನೂ ಮನವನ್ನೂ ಮುಟ್ಟುವ 'ನವಯುಗ'ವು ಈ ವಿಶೇಷ ಪುರವಣಿಯ ಮೂಲಕ ನಿಮ್ಮ ಔದ್ಯಮಿಕ ಉತ್ಕರ್ಷಕ್ಕೆ ನೆರವಾಗುವುದು.

ಬ್ಲಾಕ್, ಸ್ಟೀರಿಯೋಗಳಿಂದ ಯುಕ್ತವಾದ ನಿಮ್ಮ ಜಾಹೀರಾತುಗಳನ್ನು ಇದೇ ಮೇ 15ರ ಒಳಗೆ ನಮಗೆ ಕಳುಹಿಸಿ. ಮೇ 25, 1969ಕ್ಕೆ ಸಂಚಿಕೆ ಹೊರಡಲಿದೆ.

ದಿ| ಡಾ. ಎ. ವಿ. ಬಾಳಿಗಾರವರ ಗುಣಗಾನ

ಮಣಿಪಾಲ, ಏ. ೨೯– ಬೈಲೋರಷ್ಯಾದ ಮಂತ್ರಿಮಂಡಲದ ಅಧ್ಯಕ್ಷ ಶ್ರೀ ಬೋರಿಸ್ ಪಾಪ್ಲೆನಾಕ್ ಹಾಗೂ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್‌ನ ಅಧ್ಯಕ್ಷ ಡಾ| ಟಿ. ಎಂ. ಎ. ಪೈಯವರು ನಿನ್ನೆ ಇಲ್ಲಿ ಮುಂಬಯಿಯ ಖ್ಯಾತ ಶಸ್ತ್ರವೈದ್ಯರೂ, ಭಾರತ-ರಷ್ಯಾ ಸಾಂಸ್ಕೃತಿಕ ಮೈತ್ರಿ ಬೆಳೆಸಿದವರೂ ಆದ ಡಾ| ಎ. ವಿ. ಬಾಳಿಗಾರವರ ಗುಣಗಾನ ಮಾಡಿದರು.

ಉಡುಪಿಯ ರೋಟರಿ ಕ್ಲಬ್ ಹಾಗೂ ಇಲ್ಲಿಯ ಕಸ್ತೂರ್ ಬಾ ಜನರಲ್ ಆಸ್ಪತ್ರೆಯ ಡಾ| ಎ. ವಿ. ಬಾಳಿಗಾ ಶಸ್ತ್ರಚಿಕಿತ್ಸಾ ಸಂಸ್ಥೆಯ ಆಶ್ರಯದಲ್ಲಿ ವ್ಯಾಲಿ ವ್ಯೂ ಅಂತರ್ರಾಷ್ಟ್ರೀಯ ಆರೋಗ್ಯಧಾಮದಲ್ಲಿ ಡಾ| ಬಾಳಿಗಾರವರ ೬೫ನೇ ಜನ್ಮದಿನೋತ್ಸವ ಆಚರಣಾ ಸಂದರ್ಭದಲ್ಲಿ ಅವರು ಮಾತನಾಡುತ್ತಿದ್ದರು.

ರಷ್ಯಾ ಮತ್ತು ಭಾರತದ ಚಿತ್ರಗಳ ಪ್ರದರ್ಶನವನ್ನು ಶ್ರೀ ಪಾಪ್ಲೆನಾಕ್ ಉದ್ಘಾಟಿಸಿದರು. ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಕೆ. ಕೃಷ್ಣಸ್ವಾಮಿಯವರಿಗೆ ಅವರು ಕಾಣಿಕೆಯೊಂದನ್ನು ಅರ್ಪಿಸಿದರು.

ರಷ್ಯಾದ ಚಲಚ್ಚಿತ್ರ ನಟ ನಿಕೊಲಾಯ್ ಯೆರಿಮೆಂಕೊ ಹಾಗೂ ಬೈಲೊರಷ್ಯಾ ತಂಡದ ಕಾರ್ಯದರ್ಶಿ ಕುಮಾರಿ ಫಿನೆಲ್ ಲೆವಿನೋವಿಚ್‌ರವರು ಸಭೆಯಲ್ಲಿ ಹಾಜರಿದ್ದರು.

ಬೆಂಗಳೂರಿನ ಬೃಹತ್ ಯಂತ್ರಾಗಾರ

ಭಾರತ ಅರ್ಥಮೂವರ್ಸ್ ಕಾರ್ಖಾನೆ

ಬೆಂಗಳೂರಿನ ಭಾರತ ಅರ್ಥ ಮೂವರ್ಸ್ ಕಾರ್ಖಾನೆಯು ಈ ವರೆಗೆ ಹದಿನೆಂಟು ಕೋಟಿ ರೂ. ಮೌಲ್ಯದ ಮಣ್ಣೆತ್ತುವ ಸಲಕರಣೆಗಳನ್ನು ಮತ್ತು ರೈಲ್ವೆ ಕೋಚುಗಳನ್ನು ನಿರ್ಮಿಸಿ ಪ್ರಗತಿಪಥದ ಬೃಹತ್ ಕಾರ್ಖಾನೆ ಎಂದೆನಿಸಿಕೊಂಡಿದೆ. ಭಾರತ ಅರ್ಥಮೂವರ್ಸ್ ಕಾರ್ಖಾನೆಯು ಕೋಲಾರದ ತನ್ನ ಯಂತ್ರಾಗಾರದಲ್ಲಿ ಕ್ರಾಲರ್-ಟ್ರ್ಯಾಕ್ಟರ್‌ಗಳನ್ನು ದಿನಕ್ಕೆ ಒಂದರಂತೆ ತಯಾರಿಸುತ್ತಿದೆ. ಮಣ್ಣೆತ್ತುವ ಭಾರೀ ಯಂತ್ರೋಪಕರಣಗಳೂ ಇಲ್ಲಿಯೇ ಸಿದ್ಧವಾಗುತ್ತಿವೆ.

ಬಿಇಎಂಎಲ್

ಮೈಸೂರು ರಾಜ್ಯದ ಕೋಲಾರದಲ್ಲಿ ಭಾರತ ಅರ್ಥ ಮೂವರ್ಸ್ ಕಾರ್ಖಾನೆಯು ರಕ್ಷಣಾ ಶಾಖೆಗೆ ಸೇರಿದ ಸರಕಾರೀ ರಂಗದ ಉತ್ಪಾದನಾ ಘಟಕವಾಗಿದೆ. ಬಿಇಎಂಎಲ್ ಎಂಬುದು ಭಾರತ ಅರ್ಥ ಮೂವರ್ಸ್ ಲಿಮಿಟೆಡ್ ಕಂಪೆನಿಯ ಸಂಕ್ಷಿಪ್ತ ಹೆಸರು. ಮೂರು ವರ್ಷದ ಅವಧಿಯಲ್ಲಿ 40 ಕೋಟಿ ರೂ. ಮೌಲ್ಯದ ಕ್ರಾಲರ್-ಟ್ರ್ಯಾಕ್ಟರ್, ಸ್ಕ್ರೇಪರ್, ರಿಯರ್-ಡಂಪರ್ ಮುಂತಾದ ವಸ್ತುಗಳನ್ನು ತಯಾರಿಸುವ ಗುರಿಯನ್ನು ಮುಟ್ಟುವ ಹಂತದಲ್ಲಿದೆ ಈ ಕಾರ್ಖಾನೆ.

ಬಿಇಎಂಎಲ್ ಸಂಸ್ಥೆಯು ಕೋಲಾರ ಚಿನ್ನದ ಗಣಿಯು ಉತ್ಪಾದನೆ ಇಳಿಮುಖವಾದ ವೇಳೆಯಲ್ಲಿ ಕೋಲಾರ ಪ್ರದೇಶದಲ್ಲಿ ಸರಕಾರೀ ಕ್ಷೇತ್ರದ ದೊಡ್ಡ ಉದ್ಯಮವಾಗಿ ತಲೆ ಎತ್ತಿದೆ. ಈ ಸಂಸ್ಥೆಯ ರೈಲ್-ಕೋಚ್ ವಿಭಾಗವು ಬೆಂಗಳೂರಿನಲ್ಲಿ ಕಾರ್ಯ ಆರಂಭ ಮಾಡಿದೆ, ವರ್ಷಕ್ಕೆ ನಾಲ್ಕು ನೂರು ಕೋಚುಗಳನ್ನು ರಚಿಸುವ ಮಹತ್ವಾಕಾಂಕ್ಷಿ ಕಾರ್ಯಯೋಜನೆಯನ್ನು ಈ ಸಂಸ್ಥೆ ಇರಿಸಿಕೊಂಡಿದೆ.

ರಚನಾ ಕ್ರಮದಲ್ಲಿ ಕ್ರಾಂತಿ

ಪಿರಾಮಿಡ್ ರಚನಾ ಕಾಲದಿಂದಲೂ ಮಣ್ಣನ್ನು ಬೃಹತ್ ಪ್ರಮಾಣದಲ್ಲಿ ಸಾಗಿಸಲು ಮನುಷ್ಯ ಸುಲಭ ಸಲಕರಣೆಯೊಂದಕ್ಕೆ ಪ್ರಯತ್ನಿಸುತ್ತಲೇ ಇದ್ದಾನೆ. ಭಾರತದಲ್ಲಿ ವೈಭವ ಪೂರ್ಣವಾಗಿ ಮೆರೆಯುತ್ತಿರುವ ಗುಡಿ ಗೋಪುರಗಳು, ಇಜಿಪ್ತ ಮತ್ತು ಮೆಸೊಪೊಟೊಮಿಯಾಗಳಲ್ಲಿನ ಭವ್ಯ ಕಟ್ಟಡಗಳು ರಚಿತಗೊಂಡ ಕಾಲಕ್ಕೆ ಮನುಷ್ಯ ಕೈಯಿಂದ ಭೂಮಿ ಅಗಿದು, ಮಣ್ಣನ್ನು ಹೊತ್ತು ರಚನಾ ಸ್ಥಳಕ್ಕೆ ಆ ಮಣ್ಣನ್ನು ಸುರಿದಿದ್ದಾನೆ. ಇಂದು ಮಣ್ಣೆತ್ತಿ ಇಳಿಸುವ ಕಾರ್ಯದಲ್ಲಿ ಮಹತ್ ಕ್ರಾಂತಿ ಆಗಿದೆ. ಅರ್ಥಮೂವಿಂಗ್ ಯಂತ್ರ (ಮಣ್ಣನ್ನೆತ್ತಿಕೊಂಡು ಇಳಿಸಬಲ್ಲ ಯಂತ್ರ ವಿಶೇಷ) ಬಳಕೆಯಲ್ಲಿ ಬಂದು ಅತ್ಯಂತ ಬೃಹತ್ ಪ್ರಮಾಣದಲ್ಲಿ ಮಣ್ಣನ್ನು ಎತ್ತಿಕೊಂಡು ಬಂದು ಬೇಕಾದ ಸ್ಥಳಕ್ಕೆ ಇಳಿಸಬಲ್ಲುದು. ಹೀಗಾಗಿ ಭವ್ಯ ಇಮಾರತುಗಳೂ, ದೊಡ್ಡದೊಡ್ಡ ಸೇತುವೆಗಳೂ ಪರಿಮಿತ ಅವಧಿಯಲ್ಲಿಯೇ ತಲೆಯೆತ್ತಲು ಸಾಧ್ಯವಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ಆರ್ಥಿಕ ಚಟುವಟಿಕೆಗಳು ತೀವ್ರಗೊಂಡಂತೆ ಅರ್ಥಮೂವರ್ಸ್ ಯಂತ್ರಗಳಿಗೆ ಬೇಡಿಕೆ ದಿನೇದಿನೇ ಹೆಚ್ಚುತ್ತಿದೆ. ಹೊಸ ಹೊಸ ನೀರಾವರಿ ಯೋಜನೆಗಳು, ಜಲವಿದ್ಯುತ್ ಜನಕಘಟ್ಟಗಳು, ಮಾರ್ಗಗಳ, ರೈಲುಮಾರ್ಗಗಳು, ಕಲ್ಲಿದ್ದಲು ಮತ್ತಿತರ ಖನಿಜಗಳನ್ನು ಹೊರತೆಗೆಯುವ ಕೆಲಸ, ರಕ್ಷಣಾ ವ್ಯೂಹಗಳು, ಭಾರೀ ಕೈಗಾರಿಕೆಗಳು ಮತ್ತು ಅತಿ ವೇಗದಲ್ಲಿ ಬೆಳೆಯುತ್ತಿರುವ ನಗರಗಳ – ಇವುಗಳಿಗೆಲ್ಲ ಆಧುನಿಕ ಅರ್ಥಮೂವರ್ಸ್ ಯಂತ್ರೋಪಕರಣ ಅಗತ್ಯ ಬಹಳವಾಗಿದೆ. ಕಾರಣ ದೇಶದಲ್ಲಿಯೇ ಇಂತಹ ಯಂತ್ರೋಪಕರಣಗಳನ್ನು ಸೃಜಿಸುವುದು ಅತ್ಯಗತ್ಯವಾಯಿತು. ಮೋಟರ ಮತ್ತು ಟ್ರ್ಯಾಕ್ಟರುಗಳಿಂದ ನಡೆಯುವ ಸ್ಕ್ರೇಪರಗಳು ರಬ್ಬರ್ ಟಾಯರ್‌ನಿಂದ ನಡೆಯುವ ಬುಲ್‌ಡೋಜರುಗಳು ಕ್ರಾಲರ್-ಟ್ರ್ಯಾಕ್ಟರುಗಳು ಮುಂತಾದ ವಸ್ತುಗಳನ್ನು ಶೀಘ್ರವಾಗಿ ದೇಶದಲ್ಲಿಯೇ ಉತ್ಪಾದಿಸುವ ಅವಶ್ಯಕತೆ ಕಂಡುಬಂದಿತು.

ಬಿಇಎಂಎಲ್ ಉದಯ

ದೇಶದ ಬೇಡಿಕೆ – ಅಗತ್ಯತೆಗಳನ್ನು ಪರೀಕ್ಷಿಸಿ ಭಾರತ ಸರಕಾರವು 1962ರಲ್ಲಿ ಅಮೇರಿಕೆಯ ಟೋರ್ನರ್-ವೆಸ್ಟಿಂಗ್ ಹೌಸ್ ಎಂಬ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ನಮ್ಮ ದೇಶದಲ್ಲಿ ಅರ್ಥಮೂವಿಂಗ್ ಯಂತ್ರಗಳನ್ನು ತಯಾರಿಸಲು ಬೆಂಗಳೂರಿನಲ್ಲಿ ಕಾರ್ಖಾನೆಯ ಕಚೇರಿಯನ್ನು ಪ್ರಾರಂಭಿಸಿತು. ಅರ್ಥ-ಮೂವಿಂಗ್ ಯಂತ್ರ ನಿರ್ಮಾಣದಲ್ಲಿ ಹಿಂದಸ್ತಾನ್ ಏರೋನಾಟಿಕ್ಸ್ ಸಂಸ್ಥೆಗೆ ಅನುಭವವಿದ್ದುದರಿಂದ, ಈ ಕಾರ್ಖಾನೆಗೆ ಅರ್ಥಮೂವರ್ಸ್ ಸಂಸ್ಥೆಯ ನಿರ್ಮಾಣ ಕಾರ್ಯವನ್ನು ವಹಿಸಿಕೊಡಲಾಯಿತು. ಎರಡು ವರುಷಗಳ ನಂತರ ಈ ಸಂಸ್ಥೆಯನ್ನು ಸರಕಾರೀ ರಂಗದ ಕಾರ್ಖಾನೆಯನ್ನಾಗಿ ಪರಿವರ್ತಿಸಲಾಯಿತು. ಈ ರೀತಿಯಾಗಿ ಭಾರತ ಅರ್ಥ-ಮೂವರ್ಸ್ ಸಂಸ್ಥೆಯು ಮೂಡಿ ಬಂದಿದೆ. ಕೋಲಾರದಲ್ಲಿ ಈ ಸಂಸ್ಥೆಯು ಕಾರ್ಖಾನೆ ಕೆಲಸ ಮಾಡುತ್ತಿದೆ.

ಅರ್ಥ-ಮೂವಿಂಗ್ ಸಲಕರಣೆಗಳನ್ನಲ್ಲದೆ ಕ್ರಾಲರ್-ಟೈಪ್ ಟ್ರ್ಯಾಕ್ಟರುಗಳನ್ನು ಉತ್ಪಾದಿಸಲೂ ಈ ನವೀನ ಕಾರ್ಖಾನೆಗೆ ವಹಿಸಿಕೊಡಲಾಯಿತು. ಜಪಾನಿನ ತಾಂತ್ರಿಕ ಸಹಕಾರದೊಂದಿಗೆ ಕ್ರಾಲರ್-ಟ್ರ್ಯಾಕ್ಟರ್‌ಗಳನ್ನು ಉತ್ಪಾದಿಸಲಾಗುತ್ತಿದೆ. ಕಾರ್ಖಾನೆಯ ನಿರ್ಮಾಣ ಯೋಜನೆ ಪೂರ್ಣಗೊಂಡಾಗ ವರುಷಕ್ಕೆ ಡಿ-80 ಮತ್ತು ಡಿ—120 ಎಂಬ ಎರಡು ಮಾದರಿಗಳು ಒಟ್ಟು 500 ಟ್ರ್ಯಾಕ್ಟರುಗಳನ್ನು ಉತ್ಪಾದಿಸಲಾಗುವದು. ಡಿ-50 ಮಾದರಿಯ ಟ್ರ್ಯಾಕ್ಟರುಗಳನ್ನು ಕೃಷಿ ಕೆಲಸಕ್ಕೆಂದು ಉತ್ಪಾದಿಸಲು ಯತ್ನ ನಡೆದಿದೆ. 1967 ಏಪ್ರಿಲ್ ತಿಂಗಳಲ್ಲಿ ಕೋಲಾರದಲ್ಲಿ ಸಿದ್ಧಗೊಂಡ ಪ್ರಥಮ ಕ್ರಾಲರ್-ಟ್ರ್ಯಾಕ್ಟರ್ ಕಾರ್ಖಾನೆಯಿಂದ ಹೊರಬಿದ್ದಿದೆ.

ಹೆಚ್ಚು ಪ್ರಮಾಣದಲ್ಲಿ ದೇಶೀಯ ವಸ್ತುಗಳನ್ನೇ ಉಪಯೋಗಿಸಿ ಅರ್ಥಮೂವಿಂಗ್ ಸಲಕರಣೆಯನ್ನು ಉತ್ಪಾದಿಸಲು ಪ್ರಾರಂಭಿಸಲಾಗಿದೆ. ಅರ್ಥಮೂವಿಂಗ್ ಸಲಕರಣೆಯಲ್ಲಿ ಸ್ಕ್ರೇಪರ್ ಎಂಬ ಭಾಗವು ಅತಿ ಮುಖ್ಯವಾದದ್ದು. ಬಿಇಎಂಎಲ್ ಕಾರ್ಖಾನೆಯು ಸ್ಕ್ರೇಪರಗಳನ್ನು ತಯಾರಿಸಲು ಸಿದ್ಧತೆ ಮಾಡಿಕೊಂಡಿದೆ. ಕಡಿಮೆ ಅಂತರದ ಸ್ಥಳಗಳಲ್ಲಿ ಅತಿ ಕಡಿಮೆ ವೆಚ್ಚದಲ್ಲಿ ಗಣಿಗಳಿಂದ ಅದಿರು ಮುಂತಾದುವುಗಳನ್ನು ಸಾಗಿಸಲು ರಿಯರ್ ಡಂಪರ್ ಸಲಕರಣೆ ಬಹಳ ಪ್ರಯೋಜನಕಾರಿಯಾಗಿದೆ. ಸ್ಕ್ರೇಪರ್ ಅಥವಾ ರಿಯರ್‌ಡಂಪರ್ ಮಾಡಲಾಗದ ಕಾರ್ಯವನ್ನು ಹಾಲಪ್ಯಾಕ್ ಟ್ರಕ್ ಮಾಡಬಲ್ಲುದ. ಇಂತಹ ಟ್ರಕ್‌ಗಳ ರಚನೆಯನ್ನು ಈ ಕಾರ್ಖಾನೆ ಕೈಗೊಳ್ಳಲಿದೆ.

ಬಿಡಿ ಭಾಗಗಳು

ಬಿಇಎಂಎಲ್ ಕಾರ್ಖಾನೆ ತಲೆ ಎತ್ತುವದಕ್ಕಿಂತ ಮುಂಚೆ ಸುಮಾರು 40 ರಾಷ್ಟ್ರಗಳಿಂದ ವಿವಿಧ ಯಂತ್ರಗಳನ್ನು ತರಿಸಿ ಮಣ್ಣೆತ್ತುವ ಕಾರ್ಯವನ್ನು ಸಾಗಿಸಬೇಕಾಗಿತ್ತು. ಬೇರೆಬೇರೆ ದೇಶಗಳ ಉಪಕರಣಗಳನ್ನು ಜೋಡಿಸಿ ಕೆಲಸ ಮಾಡಬೇಕಾಗಿತ್ತು, ಹೀಗಾಗಿ ತರಬೇತಿ, ಯಂತ್ರಗಳ ಉಸ್ತುವಾರಿ ಕೆಲಸ—ಇವೆಲ್ಲ ಗಡಚಿನ ವಿಷಯಗಳಾಗಿದ್ದವು. ಭಾರತ ಅರ್ಥಮೂವಿಂಗ್ ಸಲಕರಣೆ ಕಾರ್ಯ ಮಾಡತೊಡಗಿದಾಗ ಅದಕ್ಕೆ ಬಿಡಿಭಾಗಗಳು ಮೇಲಿಂದ ಮೇಲೆ ಬೇಕಾಗುತ್ತವೆ. ಕಾರಣ ಇಂತಹ ಬಿಡಿಭಾಗಗಳ ರಚನೆಗಳನ್ನು ಬಿಇಎಂಎಲ್‌ದಲ್ಲಿ ಕೈಕೊಳ್ಳಲು ಯೋಜಿಸಲಾಗಿದೆ. ಈ ಕಾರ್ಖಾನೆಯ ರಚನೆ ವಿಷಯದಲ್ಲಿ ಉಪಯೋಗಿಸಲಾದ ದೇಶೀಯ ವಸ್ತುಗಳ ಅಂಶವು ಈ ವರುಷದ ಅಖೈರಿಗೆ ಶೇಕಡ 65ಕ್ಕೆ ಏರಬಹುದು ಎಂದು ಅಂದಾಜು ಮಾಡಲಾಗಿದೆ. ಶೇಕಡ 90 ಭಾಗಗಳನ್ನು ದೇಶೀಯ ವಸ್ತುಗಳಿಂದಲೇ ಪಡೆದು ಕಾರ್ಖಾನೆಯು ಉತ್ಪಾದನಾ ಕಾರ್ಯವನ್ನು ಮುಂದುವರಿಸಬೇಕು ಎಂದು ಪ್ರಯತ್ನಗಳು ನಡೆದಿವೆ.

ಈ ಕಾರ್ಖಾನೆಗೆ ಹೂಡಿದ ಬಂಡವಾಳ ಕೇವಲ ನಾಲ್ಕು ಕೋಟಿ 1967-68ರ ಸಾಲಿನಲ್ಲಿ ಇಲ್ಲಿ 150 ಯಂತ್ರಗಳು ಸಿದ್ಧವಾಗಿ ಹೊರಬಿದ್ದಿವೆ. ಪ್ರಸ್ತುತ ವರುಷದಲ್ಲಿ 400 ಯಂತ್ರಗಳನ್ನು ತಯಾರಿಸಲು ಗುರಿ ಇರಿಸಿಕೊಳ್ಳಲಾಗಿದೆ.

ಇಲ್ಲಿ 1972-73 ಸಾಲಿನಲ್ಲಿ ಮೋಟರ ಚಾಲಿತ 615 ಯಂತ್ರಗಳನ್ನು ನಿರ್ಮಿಸಲು ಯೋಜನೆ ಇದೆ. ಕಾರ್ಖಾನೆಯ ರಚನೆ ಪೂರ್ಣಗೊಂಡಾಗ ದೇಶಕ್ಕೆ ಸುಮಾರು 15 ಕೋಟಿ ರೂ. ಗಳ ವಿದೇಶಿ ವಿನಿಮಯ ಉಳಿಯುವದು ಮತ್ತು 6000 ಜನರಿಗೆ ನೇರವಾಗಿ ಉದ್ಯೋಗ ದೊರೆಯುವದು. ಭಾರತದಲ್ಲಿ ಆರ್ಥಿಕ ಚಟುವಟಿಕೆಗಳು ತೀವ್ರಗೊಂಡಾಗ ಬೇಕಾದ ಅರ್ಥಮೂವಿಂಗ್ ಸಲಕರಣೆಗಳನ್ನು ನೀಡಿ ಬಿಇಎಂಎಲ್ ತನ್ನ ಪಾಲಿನ ಸವಾಲನ್ನು ಸಮರ್ಥ ರೀತಿಯಲ್ಲಿ ಎದುರಿಸಿ, ದೇಶದ ಭವ್ಯ ಭವಿಷ್ಯ ರಚನೆಗೆ ನೆರವಾಗುವದು ಎಂಬುದರಲ್ಲಿ ಸಂದೇಹವಿಲ್ಲ.

ಬೆಳ್ತಂಗಡಿ ಮುನ್ಸೀಫ ಕೋರ್ಟಿನಲ್ಲಿ
O S. 26/69

ಶ್ರೀ ಆದೀಶ್ವರ ಸ್ವಾಮಿ ದೇವರ ಭಂಡಾರದ ಆಡಳಿತದಾರರಾದ ರಮಾದೇವಿ
— ವಾದಿಗಳು

ವಿರುದ್ಧ

ಬಾಬು ಯಾನೆ ಜಿನರಾಜ ಶೆಟ್ಟಿ ಸಹಾ —
ಪ್ರತಿವಾದಿಗಳು.

ಬೆಳ್ತಂಗಡಿ ತಾಲ್ಲೂಕು ಹೊಸಂಗಡಿ ಗ್ರಾಮದ ಪೆರಿಂಜೆ ಎಂಬಲ್ಲಿರುವ ಸಿದ್ದಪ್ಪ ಮೆಲಂಟರ ಮಗ 8ನೇ ಪ್ರತಿವಾದಿ ಚನ್ನಪ್ಪ ಸೆಟ್ರಿಗೆ,

ಮೇಲ್ಕಂಡ ವ್ಯವಹರಣೆಯಲ್ಲಿ ಪ್ರತಿವಾದಿ ರವರಿಂದ ವಿನಿಯೋಗದ ಬಗ್ಗೆ ಬಡ್ಡಿ ಅಕ್ಕಿ ಮುಡಿ ವಸೂಲಾತಿನ ಬಗ್ಗೆ ವಾದಿಗಳು ಹೂಡಿದ ದಾವೆಯು ತಾ. 30—5—1969ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತಾರೆ. ಆ ದಿವಸ ನೀವು ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಸ್ವತಹಾ ಯಾ ವಕೀಲರ ದ್ವಾರ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಆ ದಿವಸ ಸಿವಾಯಿಗೊಳಿಸಿ ದಾವೆಯನ್ನು ಮುಂದುವರಿಸಲಾಗುವುದು. ತಿಳಿದಿರಲಿ.

(By court order)
N. J. Kadamba,
Advocate,
Beltangady.

ಬೆಳ್ತಂಗಡಿ, 26–4–69

ಸಣ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—70 ಪೈಸೆ ಮಾತ್ರ. 0—90 ಸ್ಟಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ನಿಮ್ಮ ಮಗು ಬುದ್ಧಿವಂತನಾಗಬೇಕೆ?

ಮನೆಯ ಹುಡುಗರ ಬುದ್ಧಿಯನ್ನು ಅವರು ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ಅನುತ್ತೀರ್ಣರಾಗುವುದರಿಂದ ಊಹಿಸುತ್ತಾರೆ. ಎಳೆತನದಲ್ಲಿ ಆತನಿಷ್ಟ ರೀತಿ-ನೀತಿಗಳನ್ನು ತಿಳಿದುಕೊಂಡು ಅವನ ಬುದ್ಧಿ ಎಷ್ಟು ಪ್ರಖರವಾಗಿದೆಯೆಂದೂ ತಿಳಿಯುತ್ತಾರೆ. ಭಾರವನ್ನು ತಕ್ಕಡಿಯಲ್ಲಿ ಎತ್ತರವನ್ನು ಮೀಟರುಗಳಲ್ಲಿ ಅಳೆವಂತೆ ಮಕ್ಕಳ ಬುದ್ಧಿಶಕ್ತಿಯನ್ನು ಅಳೆಯುವ ವಿಧಾನ ಪರೀಕ್ಷೆ.

ಆದರೆ, ಇಂದಿನ ಸಮಯ ಬದಲಾಗಿದೆ. ಪ್ರತಿರಂಗದಲ್ಲೂ ವಿಜ್ಞಾನ ತನ್ನ ಪ್ರಭಾವವನ್ನು ಬೀರಿದೆ. ಹಾಗಾಗಿ ಬುದ್ಧಿಯೂ ಇದರಿಂದ ಅಸ್ಪೃಶ್ಯವಾಗಿಲ್ಲ. ವೈಜ್ಞಾನಿಕರು ಈ ಸಂಬಂಧದಲ್ಲಿ ಸಂಶೋಧನೆ ನಡೆಸಿ, ನಿಶ್ಚಯಕ್ಕೆ ಬಂದಿದ್ದಾರೆ—"ಬುದ್ಧಿಯ ನಿಶ್ಚಯ ಯತ್ನಿಸಿದರೆ ಬೆಳೆಸಬಹುದು; ತೀಕ್ಷ್ಣಗೊಳಿಸಬಹುದು."

ಇದು ಹೇಗೆ?

ನಮ್ಮ ಬುದ್ಧಿ ನಮ್ಮ ಮೆದುಳಿನ ಒಂದು ಗುಣ. ಇದನ್ನು ನಾವು ಬುದ್ಧಿ ಪರೀಕ್ಷೆಯಿಂದ ಅಳೆಯಬಹುದು. ಇಂತಹ ಪರೀಕ್ಷೆಗಳಿಂದ ಮನೋವೈಜ್ಞಾನಿಕರು ಬುದ್ಧಿಯ ಬಗ್ಗೆ ಬಹಳ ವಿಷಯಗಳನ್ನು ಅರಿತುಕೊಂಡಿದ್ದಾರೆ. ತಮ್ಮ ತಿಳುವಳಿಕೆ ಬೆಳೆದಂತೆ ಅವರು ಬುದ್ಧಿ ಪರೀಕ್ಷಾ ವಿಧಾನದಲ್ಲಿಯೂ ಪರಿಷ್ಕಾರ ಮಾಡುತ್ತ ಬಂದಿದ್ದಾರೆ. ಪಶ್ಚಿಮದ ದೇಶಗಳ ಶಾಲೆಗಳಲ್ಲಿ ವಿದ್ಯಾರ್ಥಿಗಳ ಬುದ್ಧಿ ಪರೀಕ್ಷೆಯೂ ನಡೆಯುತ್ತದೆ. ನಮ್ಮಲ್ಲೂ ಒಂದು ರೀತಿಯಿಂದ ನಡೆಯುತ್ತಿದೆಯೆನ್ನೋಣ. ಒಳ್ಳೆಯ ಅಥವಾ ಕೆಟ್ಟ ಬುದ್ಧಿಯೆಂದು ನಿಶ್ಚಯಿಸುವ ಮಾನದಂಡವೊಂದಿದೆ. ಆದರೆ, ಈ ಮಾನದಂಡವು ಇಂದಿನ ವೈಜ್ಞಾನಿಕ ಯುಗದಲ್ಲಿ ಬದಲಾಗಲೇ ಬೇಕಾಗಿದೆ.

ನಮ್ಮ ಸಾಫಲ್ಯ ಮತ್ತು ಬುದ್ಧಿಗಳ ಮೇಲೆ ವಾತಾವರಣದ ಪ್ರಭಾವ ಬಹಳವಾಗಿ ಬೀಳುತ್ತದೆ. ಉತ್ತಮ ವಾತಾವರಣವಿಲ್ಲದ ಮನೆಯ ಮಕ್ಕಳು ಶಾಲೆಯಲ್ಲಿ ಉತ್ತಮ ರೀತಿಯಾಗಿ ಕೆಲಸ ಮಾಡುವುದಿಲ್ಲ. ಬುದ್ಧಿ ಪರೀಕ್ಷೆಗಳಲ್ಲೂ ಉತ್ತಮ ಗುಣಗಳನ್ನು ಪಡೆಯುವುದಿಲ್ಲ. ಇದು ಆನುವಂಶಿಕ ಬುದ್ಧಿಯಿರಬಹುದು. ಇದಲ್ಲದೆ ಇನ್ನೊಂದು ಬಗೆಯ ಬುದ್ಧಿಯಿದೆ. ಇದನ್ನು ನಾವು ಪ್ರೇಕ್ಷಿತ ಬುದ್ಧಿಯೆನ್ನಬಹುದು. ಇವೆರಡರ ನಡುವೆ ನಿಕಟ ಸಂಬಂಧವಿದೆ. ಆನುವಂಶಿಕ ಬುದ್ಧಿ ಇದ್ದಂತೆಯೇ ಪ್ರೇಕ್ಷಿತ ಬುದ್ಧಿಯೂ ಆಗುತ್ತದೆ.

'ಆನುವಂಶಿಕತೆ'ಯಿಂದ ನಮಗೆ ತಾಯ್ತಂದೆಯರ ಹಲವು 'ಜೀನ್'ಗಳು ಲಭಿಸುತ್ತವೆ. ಇದರಿಂದ ನಮ್ಮ ಮಟ್ಟವು ಬಹುಮಟ್ಟಿಗೆ ನಿರ್ಧಾರಿತವಾಗಿರುತ್ತದೆ. ಆಹಾರಾದಿಗಳ ಅಭಾವದಿಂದ ನಮ್ಮ ಶರೀರದ ಬೆಳವಣಿಗೆಯು ಕುಂಠಿತವಾಗುವಂತೆಯೇ ಕೆಟ್ಟ ಪರಿಸ್ಥಿತಿಗಳಿಂದಾಗಿ ನಮ್ಮ ಬುದ್ಧಿಶಕ್ತಿಯೂ ಕುಂಠಿತವಾಗುತ್ತದೆ. ಆದರೆ, ಆನುವಂಶಿಕ ಬುದ್ಧಿಯು ಮಹತ್ವಪೂರ್ಣವಾದುದು. 'ಜೀನ್'ಗಳ ಕೊರತೆ ತಲೆದೋರಿದರೆ, ನಮ್ಮ ವಿಕಾಸದಲ್ಲಿ ತಡೆ ಕಾಣಿಸುವುದು. ವಾತಾವರಣವು ಉತ್ತಮವಾಗಿದ್ದರೂ 'ಜೀನ್'ಗಳ ಅಭಾವದಿಂದ ವಿಕಾಸವು ನಿಂತೇ ಹೋಗುವುದು. ಆನುವಂಶಿಕ ಬುದ್ಧಿಯನ್ನು ಅಳೆಯುವುದು ಇನ್ನೂ ಸಾಧ್ಯವಾಗಿಲ್ಲ. ವೈಜ್ಞಾನಿಕರು ಆನುವಂಶಿಕ ಮತ್ತು ವಾತಾವರಣ ಪ್ರೇರಿತ ಬುದ್ಧಿಯ ಒಟ್ಟು ಅಂಶವನ್ನಷ್ಟೇ ಇಂದು ಅಳೆಯಬಲ್ಲರು. ವಾತಾವರಣ ಅಥವಾ ಪರಿಸ್ಥಿತಿಯನ್ನು ಬದಲಿಸಿದರೆ, ನಮ್ಮ ಅಳತೆಯಲ್ಲೂ ಪರಿವರ್ತನೆ ಕಾಣುತ್ತದೆ. ಆದುದರಿಂದ ಬುದ್ಧಿಯ ಮಟ್ಟವು ಎಂದಿಗೂ ಸ್ಥಿರವಾಗಿರುವುದಿಲ್ಲ ಎಂಬುದಕ್ಕೆ ಮತ್ತೊಂದು ಪ್ರಮಾಣ ದೊರೆಯುತ್ತದೆ.

ಮೇಲಿನ ಆನುವಂಶಿಕ ಮತ್ತು ಪ್ರೇಕ್ಷಿತ ಬುದ್ಧಿಗಳ ನಡುವಣ ಸಂಬಂಧದ ಬಗ್ಗೆ ಅಮೇರಿಕೆಯಲ್ಲಿ ಕಳೆದ ಐದು-ಹತ್ತು ವರ್ಷಗಳಿಂದ ಬಹಳ ಸಂಶೋಧನೆ ನಡೆಯುತ್ತಿದೆ. ಪ್ರೇಕ್ಷಿತ ಬುದ್ಧಿಯನ್ನು ಬೆಳೆಯುವಂತೆ ಮಾಡುವ ಯಾವ ಶಕ್ತಿ ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿದೆ? ಯಾವ ಪ್ರಾಯದಲ್ಲಿ ಈ ಬೆಳವಣಿಗೆಯು ಹೆಚ್ಚಾಗಿರುತ್ತದೆ? ಈ ಬಗ್ಗೆ ಶೋಧನೆಗಳು ನಡೆಯುತ್ತವೆ.

ಇದು ವರೆಗಿನ ಅಧ್ಯಯನಗಳಿಂದ ಎರಡು ಮುಖ್ಯ ಸಂಗತಿಗಳು ತಿಳಿದುಬಂದಿವೆ—

೧) ಪ್ರೇಕ್ಷಿತ ಬುದ್ಧಿಯು ಜೀವನದ ಆರಂಭಾವಸ್ಥೆಯಲ್ಲೇ ಹೆಚ್ಚಾಗಿ ವಿಕಾಸಗೊಳ್ಳುತ್ತದೆ. ಚಿಕಾಗೋ ವಿಶ್ವವಿದ್ಯಾಲಯದ ಪ್ರೊ| ಬ್ಲೂಮ್ ಎಂಬವರು ೧೭ ವರ್ಷ ಪ್ರಾಯದಲ್ಲಿನ ಸೇಕಡಾ ೫೦ ರಷ್ಟು ಪ್ರೇಕ್ಷಿತ ಬುದ್ಧಿಯು ಮಗುವಿನ ೪ನೆಯ ವರ್ಷ ಪ್ರಾಯದಲ್ಲೇ ಮೂಡಿರುತ್ತದೆ ಎಂದು ಹೇಳುತ್ತಾರೆ. ಅಂದರೆ, ಜನ್ಮದಾರಭ್ಯ ನಾಲ್ಕೇ ವರ್ಷಗಳಲ್ಲಿ ಅರ್ಧಾಂಶದಷ್ಟು ಬುದ್ಧಿಯು ಮೂಡುತ್ತದೆ. ಆದುದರಿಂದ ಮಗುವನ್ನು ಉತ್ತಮ ಆಹಾರ ಹಾಗೂ ಉತ್ತಮ ವಾತಾವರಣದಲ್ಲಿ ಇರಿಸುವುದು ೪ ವರ್ಷಗಳ ವರೆಗಾದರೂ ಅವಶ್ಯಕ. ಇಂತಹ ಪರಿಸ್ಥಿತಿಯಿಂದ ಈ ಪ್ರಾಯದಲ್ಲಿ ಮಗು ವಂಚಿತವಾದರೆ, ಮುಂದೆ ವಂಚಿತವಾಗುವುದಕ್ಕಿಂತ ಹೆಚ್ಚು ಅಪಾಯ ತಟ್ಟುವುದು.

೨) ಸಂಪೂರ್ಣ ಬೌದ್ಧಿಕ ವಿಕಾಸಕ್ಕೆ ಅವಶ್ಯಕವಾದ ವಾತಾವರಣದಲ್ಲಿ ಭಾಷೆ ಮತ್ತು ತಾಯ್ತಂದೆಗಳು ಹಾಗೂ ಮಗುವಿನ ಸಂಬಂಧಗಳು ಮಹತ್ವದ್ದಾಗಿವೆ. ನಮ್ಮ ದೇಶದಲ್ಲಿ ನಡೆದ ಒಂದು ಅಧ್ಯಯನದಲ್ಲಿ ನಮ್ಮ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ನೀಡುವುದರಿಂದ ಅವರ ಬುದ್ಧಿಯು ಸಂಕುಚಿತವಾಗಿದೆಯೆಂದು ಗೊತ್ತಾಗಿದೆ.

ವೈಜ್ಞಾನಿಕರು ಇದರೊಂದಿಗೆ ಎಚ್ಚರಿಕೆಯೊಂದನ್ನು ನೀಡಿದ್ದಾರೆ— ಬುದ್ಧಿಯ ಅನುವಂಶಿಕ ಶಕ್ತಿಗೆ ಮಹತ್ವ ಕೊಡದಿದ್ದರೆ, ಇನ್ನೊಂದು ಶಕ್ತಿಗೆ ಮಹತ್ವ ಕೊಡಬಾರದು. ಅಥವಾ ಎರಡನೆಯದಕ್ಕೆ ಮಹತ್ವ ನೀಡಿದರೆ, ಮೊದಲನೆಯದನ್ನು ಉಪೇಕ್ಷಿಸಬಾರದು. ಮಕ್ಕಳು ಬುದ್ಧಿ ವಿಕಾಸದಲ್ಲಿ ಅನುವಂಶಿಕತೆಯ ಉಪಯೋಗವನ್ನು ಏಕಸಮವಾಗಿ ಮಾಡುವುದಿಲ್ಲ. ಆದುದರಿಂದಲೇ ಒಂದೇ ತಾಯ್ತಂದೆಗಳ ಮಕ್ಕಳ ಬುದ್ಧಿಯ ಮಟ್ಟದಲ್ಲಿ ಅಸಮಾನತೆಯು ತೋರುತ್ತದೆ.

ಈಗಿನ ವೈಜ್ಞಾನಿಕ ಸಂಶೋಧನೆಗಳಿಂದ ಬುದ್ಧಿಯ ಪ್ರವೃತ್ತಿಯ ಬಗ್ಗೆ ವಿಷಯಗಳು ತಿಳಿದಿವೆ. ಮೊದಲೆಂಬುದು ಆನುವಂಶಿಕ ನಿಶ್ಚಿತ ಶಕ್ತಿಯಲ್ಲ, ವಿಕಸಿತ ನೈಪುಣ್ಯಗಳ ಒಂದು ಸಮೂಹ. ಈ ನೈಪುಣ್ಯವು ಅಧ್ಯಯನದಿಂದ ಪ್ರಾಪ್ತವಾಗುತ್ತದೆ; ಇದರಲ್ಲಿ ಒಂದು ಆಧಾರಭೂತ ನೈಪುಣ್ಯವಿದೆ. ಅಧ್ಯಯನಬುದ್ಧಿ ಹೇಗೆ ಬರುತ್ತದೆ? ಹುಟ್ಟಿನಿಂದಲೂ ಮಕ್ಕಳು ತಮ್ಮ ವಾತಾವರಣದಿಂದ ಕಲಿಯುತ್ತಿರುತ್ತವೆ. ಅನುಭವಕ್ಕೆ ಬಾರದುದನ್ನು ಅವು ಕಲಿಯವು. ಪುಸ್ತಕವೊಂದನ್ನು ನೋಡದ ವರೆಗೆ ಅವು ಅದು ಪುಸ್ತಕವೆಂಬುದನ್ನು ಅರಿತುಕೊಳ್ಳವು. ಪ್ರತ್ಯಕ್ಷ ಅನುಭವಗಳಿಂದಲೇ ಅವರು ಪ್ರತ್ಯಕ್ಷ ಜ್ಞಾನದ ಒಂದು ಭಂಡಾರವನ್ನೇ ಪಡೆಯುತ್ತವೆ.

ಪ್ರತ್ಯಕ್ಷ ಜ್ಞಾನಾತ್ಮಕ ಅನುಭವಗಳು ಮಕ್ಕಳಿಗೆ ದೊರೆಯದೆ ಹೋದರೆ, ಪುಸ್ತಕ ಜ್ಞಾನವು ಕುಂಠಿತವಾಗುತ್ತದೆ ಎಂದಾಯ್ತು. ಸಮುಚಿತ ಪ್ರೇರಣೆಯ ಅಭಾವದಿಂದ ಪುಸ್ತಕಜ್ಞಾನ ಪ್ರವಾಹವು ಸ್ಥಗಿತಗೊಳ್ಳುವುದು. ಈ ಬಗೆಯ ಪ್ರೇರಣೆಯು ಮಗುವಿಗೆ ಅದರ ಭಾಷೆಯಲ್ಲೇ ದೊರೆಯುತ್ತದೆ. ಜ್ಞಾನವು ಸ್ಥಗಿತಗೊಳ್ಳುವುದರಿಂದ ಮಕ್ಕಳು ಮುಂದಾಗುವ ಅನುಭವಗಳನ್ನು ಪಡೆಯುವ ಶಕ್ತಿ ಕಳೆದುಕೊಳ್ಳುತ್ತವೆ. ಪ್ರಾರಂಭದ ಶಿಕ್ಷಣಾನುಭವಗಳನ್ನು ಪಡೆಯದ ಮಕ್ಕಳು ಮುಂದಿನ ಪ್ರತ್ಯಕ್ಷ ಜ್ಞಾನಾತ್ಮಕ ಪ್ರೇರಣೆಗಳನ್ನು ಅರ್ಥ ಮಾಡಿಕೊಳ್ಳಲಾರವು. ಮಕ್ಕಳ ಪೂರ್ಣ ಬೌದ್ಧಿಕ ವಿಕಾಸವನ್ನು ನಾವು ಬಯಸುವುದಾದರೆ, ನಾವು ಮೊದಲು ಈ ಮಗುವಿನ ಅಪೂರ್ಣ ಜ್ಞಾನವನ್ನು ತುಂಬಿಸಿ ಕೊಡಬೇಕಾಗುವುದು.

ಮಕ್ಕಳ ಆರಂಭ ಜೀವನದಲ್ಲಿ ಅವುಗಳ ಶಿಕ್ಷಣಕ್ಕಾಗಿ ಪ್ರೇರಣೆ ದೊರೆಯುತ್ತಿರಬೇಕು. ಹೊಸ ಹೊಸ ಸಂಗತಿಗಳು ಅವಕ್ಕೆ ಗೊತ್ತಾಗುವಂತಿರಬೇಕು. ಅವುಗಳಲ್ಲಿ ಸದಾ ಜಿಜ್ಞಾಸೆಯು ಬೆಳೆಯುತ್ತಿರಬೇಕು. ಮಗುವು ಹೆಚ್ಚೆಚ್ಚು ವಸ್ತುಗಳನ್ನು, ವಿಷಯಗಳನ್ನು ನೋಡುತ್ತ ಹೋದಂತೆ ಅವುಗಳ ಬಗ್ಗೆ ಅರಿತುಕೊಳ್ಳುವ ಪ್ರೇರಣೆ ಅವರಲ್ಲಿ ಜಾಗೃತವಾಗುತ್ತ ಬರುತ್ತದೆ.

ಬುದ್ಧಿ ಸಂಬಂಧದ ಈ ಸಂಶೋಧನೆಗಳು ನಮ್ಮ ಶಿಕ್ಷಣ ಮತ್ತು ಕುಟುಂಬ ವಾತಾವರಣಗಳಿಗೆ ಬಹಳ ಸಹಾಯಕವಾಗುವುವು. ಶಾಲಾಪೂರ್ವ ಶಿಕ್ಷಣದತ್ತ ಅಧಿಕ ಗಮನವನ್ನು ನಾವು ಕೊಡಬೇಕು. ಹುಡುಗರ ಮಾನಸಿಕವಾಗುವಂತಹ ವಾತಾವರಣವನ್ನು ನಾವು ನಿರ್ಮಿಸಬೇಕು. ಊಟೋಪಚಾರಗಳಿಂದಲೇ ಮಗುವಿನ ಬುದ್ಧಿ ಬೆಳೆಯುವುದಿಲ್ಲ; ತಮ್ಮ ವಿಕಾಸವನ್ನು ಮಾಡಿಕೊಳ್ಳುವಂತಹ ಅಭ್ಯಾಸ ಅವರಲ್ಲಿ ಬೆಳೆಸುವಂತಾಗಬೇಕು. ನಮ್ಮಲ್ಲಿ ಏನಾಗುತ್ತಿದೆ? ಓದು-ಬರಹದಲ್ಲಿ ಮಗು ಹಿಂದುಳಿದಿದೆಯೆಂದರೆ, ಮನೆಯಲ್ಲಿ ಟ್ಯೂಶನ್ ಶುರುವಾಗುತ್ತದೆ. ದಿನದ ಹೆಚ್ಚು ಕಾಲವನ್ನು ಮನೆಯಲ್ಲೇ ಕಳೆಯುವ ಬಾಲಕನು ಒಂದೆರಡು ತಾಸುಗಳ ಕಲಿಕೆಯಿಂದ ಏನು ಗಳಿಸಿಯಾನು? ತಾಯ್ತಂದೆಗಳ ಹೊಣೆಗಾರಿಕೆ ಹಿರಿದು. ಆರಂಭದಿಂದಲೇ ಬೆಳವಣಿಗೆ ಕುಂಠಿತವಾದ ಮಗುವಿನ ಬಗ್ಗೆ ಹೆಚ್ಚಿನ ಎಚ್ಚರಿಕೆ ಅಗತ್ಯ. ಆದರೆ, ಸಮಾಜ ಇಂತಹ ಮಗುವನ್ನು ಹೀನ ದೃಷ್ಟಿಯಿಂದ ಕಾಣುತ್ತದೆ. ಶಾಲಾ ಪರೀಕ್ಷೆಯಲ್ಲಿ ಫೇಲಾದರೆ ಆತನನ್ನು ಅಪಹಾಸ್ಯ ಮಾಡುತ್ತವೆ. ಇಂತಹ ಮಗುವಿಗೆ ಕಲಿಯುವ ಶಕ್ತಿ ಬರಬೇಕು. ಇದಕ್ಕಾಗಿ ನಮ್ಮ ಶಿಕ್ಷಣ ಪ್ರಣಾಲಿಯಲ್ಲಿ ಬದಲಾವಣೆ ಮಾಡಬೇಕಾಗಿ ಬಂದರೂ ಹಿಂಜರಿಯಬಾರದು. ಅವನಿಗೆ ಕಲಿಯಲು ತುಂಬ ಸಮಯ ಅಗತ್ಯಬೇಕು. ಕಲಿಯತಕ್ಕಂಥ ಸಮಯ ಮತ್ತು ಸಾಧನಗಳು ಅದಕ್ಕೆ ದೊರೆಯಬೇಕು.

(ಸಂಗ್ರಹ)

ಗಾಂಧಿ ದೃಷ್ಟಿಯಲ್ಲಿ

ಸಹಿಷ್ಣುತೆಯ ರೂಪ

ನಾವು ನೈಜ ಪ್ರಜಾಸತ್ತಾತ್ಮಕ ಧರ್ಮವನ್ನು ಬೆಳೆಸಿಕೊಳ್ಳಬೇಕಾದರೆ ಅಸಹಿಷ್ಣುಗಳಾಗಿರುವಂತಿಲ್ಲ. ಅಸಹಿಷ್ಣುತೆ ವ್ಯಕ್ತಿಗೆ ಕಾರ್ಯದ ಬಗೆಗಿರುವ ಅವನಂಬಿಕೆಯನ್ನು ವ್ಯಕ್ತಪಡಿಸುತ್ತದೆ.

ಅಸಹಿಷ್ಣುತೆ ಹಿಂಸೆಯ ಒಂದು ರೂಪ; ಹಾಗೂ ನೈಜ ಪ್ರಜಾವಾದಿ ಧರ್ಮದ ಬೆಳವಣಿಗೆಗೆ ಒಂದು ಅಡಚಣೆ.

ನನ್ನ ಕನಸಿನ ಭಾರತದಲ್ಲಿ ಹಿಂದೂ ಅಥವ ಕ್ರಿಸ್ತಾನ ಅಥವ ಮುಸಲ್ಮಾನ ಧರ್ಮವೊಂದನ್ನೇ ಬೆಳೆಸಲು ಅವಕಾಶವಿರಬಾರದು; ಎಲ್ಲ ಧರ್ಮಗಳೂ ಪರಸ್ಪರ ಸಹಿಷ್ಣುತೆಯಿಂದ ಕಾರ್ಯಮಗ್ನವಾಗಿರಬೇಕೆಂಬುದು ನನ್ನ ಇಚ್ಛೆ.

ಶಾಂತದ ಭವಿತವ್ಯ ಪಶ್ಚಿಮ ದೇಶಗಳ ರಕ್ತಮಯ ಹಾದಿಯಲ್ಲಿಲ್ಲ; ಪಾಶ್ಚಿಮಾತ್ಯ ದೇಶಗಳೂ ಇದರಿಂದ ಆಯಾಸಗೊಂಡಿವೆ. ಭಾರತದ ಭವಿತವ್ಯ ಸರಳ, ದೈವಿಕ ಜೀವನದಲ್ಲಿ, ರಕ್ತರಹಿತ ಶಾಂತಿಯುತ ಪಥದಲ್ಲಿ ಅಡಗಿದೆ.

ನನ್ನ ಕನಸಿನ ಸ್ವರಾಜ್ಯದಲ್ಲಿ ಜನಾಂಗ ಅಥವಾ ಧಾರ್ಮಿಕ ಭೇದಗಳಿಗೆ ಸ್ಥಾನವಿಲ್ಲ. ನಾವು "ಸಹಿಷ್ಣುತೆ" ಎಂಬ ಪದವನ್ನು ಅಷ್ಟೊಂದು ಪ್ರೀತಿಸುವುದಿಲ್ಲ. ಆದರೆ ಅದಕ್ಕಿಂತ ಉತ್ತಮವಾದ ಪದವಿಲ್ಲ. ಸಹಿಷ್ಣುತೆ ಎಂಬ ಪದದಲ್ಲಿ ಸ್ವಂತ ಧರ್ಮವು ಇತರ ಧರ್ಮಗಳಿಗಿಂತ ಶ್ರೇಷ್ಠ ಎಂಬ ಅಭಿಪ್ರಾಯ ಧ್ವನಿತವಾಗುತ್ತದೆ. ಆದರೆ "ಅಹಿಂಸೆ" ಸ್ವಧರ್ಮದಂತೆಯೇ ಇತರ ಧರ್ಮಗಳಿಗೂ ಸಮಾನ ಗೌರವ ನೀಡಬೇಕೆಂದು ಬೋಧಿಸುತ್ತದೆ.

ಅಲ್ಪಸಂಖ್ಯಾತರಿಗೆ ಮನ್ನಣೆ

ಸ್ವತಂತ್ರ ಭಾರತದಲ್ಲಿ ಸಮಾನತೆಯ ಬುನಾದಿಯ ಮೇಲೆ ಸಮೃದ್ಧಿ ಹೊಂದಬೇಕು. ಸಹಿಷ್ಣುತೆ ಸರಿ-ತಪ್ಪು, ಒಳಿತು-ಕೆಡುಕುಗಳ ನಡುವೆ ಭೇದ ಮಾಡುವುದಿಲ್ಲ. ಬಹುಮತದ ಆಡಳಿತ ದಬ್ಬಾಳಿಕೆಯಾದರೆ ಸಹಿಸುವುದು ಎಷ್ಟು ಕಠಿಣವೋ ಅಲ್ಪಸಂಖ್ಯಾತ ಕೇಂದ್ರೀಕೃತ ಪ್ರಭುತ್ವವೂ ಅಸಹನೀಯವಾಗುತ್ತದೆ. ಆದ್ದರಿಂದ ಅಲ್ಪಸಂಖ್ಯಾತರನ್ನು ಸಹೃದಯ ಪ್ರೇರಣೆ, ಚರ್ಚೆ ಮತ್ತು ತಾಳ್ಮೆಯಿಂದ ತಮ್ಮ ದೃಷ್ಟಿಕೋನಕ್ಕೆ ಸೆಳೆಯಬೇಕು.

ಅಲ್ಪಸಂಖ್ಯಾತರು ಆಸಕ್ತಿಯಿಂದ ಆಲಿಸುವಂತೆ ಮಾಡುವುದು ಬಹುಸಂಖ್ಯಾತರ ಕರ್ತವ್ಯವಾಗುತ್ತದೆ. ಬಹುಸಂಖ್ಯಾತರು ಶ್ರದ್ಧೆಯನ್ನು ತಯಾರಿಸಲಾರರು. ಅಲ್ಪಸಂಖ್ಯಾತರು ಗೌರವಮಾರ್ಗದಿಂದ ಯಾವುದಾದರೊಂದು ವಿಚಾರವನ್ನು ವಿರೋಧಿಸಿದರೆ, ಬಹುಸಂಖ್ಯಾತರು ಅದಕ್ಕೆ ತಲೆಬಾಗುವುದು ಉಚಿತವೆಂದು ನನ್ನ ಖಚಿತ ಭಾವನೆಯಾಗಿದೆ. ಅಲ್ಪಸಂಖ್ಯಾತರ ಪ್ರಬಲ ಅಭಿಪ್ರಾಯವನ್ನು ಸಂಪೂರ್ಣವಾಗಿ ಕಡೆಗಣಿಸಿದರೆ ಅದು ಸಂಖ್ಯಾಬಲದ ಹಿಂಸಾಚಾರವಾಗುತ್ತದೆ.

ಅಭಿಪ್ರಾಯಭೇದ ವ್ಯಕ್ತಪಡಿಸುವವರು ದೃಢವಾಗಿ ಒತ್ತಾಯಮಾಡದಿದ್ದರೆ ಹಾಗೂ ಅಂತಹವರು ಬಹುಸಂಖ್ಯಾತರ ಅಭಿಪ್ರಾಯಕ್ಕೆ ಉದಾರವಾಗಿ ಒಪ್ಪಿಗೆ ನೀಡಿದರೆ ಆಗ ಬಹುಸಂಖ್ಯಾತರ ಆಡಳಿತ ಸುಗಮವಾಗಿರುತ್ತದೆ.

ಒಂದೇ ಮಾತೆಯ ಮಕ್ಕಳು

ನಾವು ಜಾತೀಯ ಭಾವನೆಯನ್ನು ಕೊಡೆದುಹಾಕಬೇಕು. ಆದ್ದರಿಂದ ಬಹುಸಂಖ್ಯಾತರು ಅಲ್ಪಸಂಖ್ಯಾತರಲ್ಲಿ ಧೈರ್ಯ ನಂಬಿಕೆ ಮೂಡಿಸಬೇಕು. ದುರ್ಬಲ ವ್ಯಕ್ತಿಗಳ ಪ್ರತಿಕ್ರಿಯೆಗಾಗಿ ಕಾಯದೆ ಶಕ್ತಿಶಾಲಿಗಳು ಉತ್ಸಾಹ ತೋರಿಸಿದರೆ ಮಾತ್ರ ಹೊಂದಾಣಿಕೆ ಸಾಧ್ಯವಾಗುತ್ತದೆ.

ಭಾರತದಲ್ಲಿ ಜತೆಸಿ ಸಮೂಹದಲ್ಲಿ ಕಷ್ಟ-ಸುಖ ಎದುರಿಸಿ ಆಕಾಂಕ್ಷೆಗಳನ್ನು ರೂಪಿಸಿಕೊಳ್ಳುತ್ತಿರುವ ಹಿಂದೂ—ಮುಸಲ್ಮಾನರು ಶಾಶ್ವತವಾಗಿ ಮಿತ್ರರಾಗಿರುವುದಕ್ಕಿಂತ ಸ್ವಾಭಾವಿಕವಾದುದು ಮತ್ತೊಂದಿರಲಾರದು.

ನಾವು ಅನೈಕ್ಯಮತ್ಯದಿಂದ ಬದುಕುತ್ತಿದ್ದರೆ ಅದು ಸಾವಿಗಿಂತಲೂ ಹೀನವಾದದ್ದು. ಮುಸ್ಲೀಮನೊಂದಿಗೆ ಜಗಳ ಕಾಯುವುದರಿಂದ ಹಿಂದೂ ಧರ್ಮಕ್ಕೆ ಸಹಾಯಕವಾಗುವುದೆಂದು ಹಿಂದೂ ಧರ್ಮೀಯನು ಯೋಚಿಸುತ್ತಾನೆ. ಅದೇ ರೀತಿ ಹಿಂದೂವಿನೊಂದಿಗೆ ಹೋರಾಡುವುದರಿಂದ ಇಸ್ಲಾಂ ಧರ್ಮಕ್ಕೆ ಸೇವೆ ಸಲ್ಲಿಸುತ್ತಿರುವುದಾಗಿ ಮುಸಲ್ಮಾನ ನಂಬುತ್ತಾನೆ. ಆದರೆ ಇಬ್ಬರೂ ಸ್ವಧರ್ಮವನ್ನು ನಾಶ ಮಾಡುತ್ತಾರೆ.

ಹಿಂದೂ, ಮುಸ್ಲಿಂ, ಪಾರ್ಸಿ, ಸಿಖ್, ಕ್ರಿಸ್ತಾನ—ನಾವೆಲ್ಲ ಭಾರತೀಯರು; ತಾಯಿನಾಡಿಗಾಗಿ ಜೀವ ಅರ್ಪಿಸಲು ಕಂಕಣಬದ್ಧರಾಗೋಣ. ನಾವೆಲ್ಲರೂ ಒಂದೇ ವೃಕ್ಷದ ಅಸಂಖ್ಯ ಎಲೆಗಳಂತೆ ಸ್ವಧರ್ಮ ಪರಿಪಾಲಿಸಿಕೊಂಡು ಒಂದೇ ಮಾತೆಯ ಮಕ್ಕಳಂತೆ ಬದುಕುವುದು ನಮ್ಮ ಮಹತ್ವಾಕಾಂಕ್ಷೆಯಾಗಿರಲಿ.

ಹೃದಯದ ಏಕತೆ

ಜಾತೀಯ ಸೌಹಾರ್ದತೆಯ ಬಗ್ಗೆ ಎಲ್ಲರೂ ಒಪ್ಪುತ್ತಾರೆ. ಆದರೆ ಈ ಏಕತೆ, ಸೌಹಾರ್ದತೆಗಳನ್ನು ರಾಜಕೀಯ ಏಕತೆಯಂತೆ ಹೇರಲಾಗುವುದಿಲ್ಲವೆಂಬ ಅಂಶವನ್ನು ಎಲ್ಲರೂ ಅರಿತುಕೊಂಡಿಲ್ಲ. ಈ ಏಕತೆಗೆ ಹೃದಯದ ಅಖಂಡ ಏಕತೆ ಅತ್ಯಗತ್ಯ.

ಈ ಏಕತೆಯನ್ನು ನಮಗೆ ಒಪ್ಪಿಗೆಯಾಗದಿದ್ದಾಗ ಅನಗತ್ಯ ನೀತಿ ಪ್ರಜಾಳಿಕೆಯಂತೆ ಸೃಜಿಸಲಾಗುವುದಿಲ್ಲ. ನಮಗೆ ಸ್ವರಾಜ್ಯದ ಬಗ್ಗೆ ನಿರಾಸಕ್ತಿ ಒಂದಾದ ಮಾತ್ರ ಈ ಏಕತೆಯನ್ನು ಕೈಬಿಡಬಹುದು. ಸರ್ವಕಾಲದಲ್ಲೂ, ಸರ್ವರೀತಿಯ ಸನ್ನಿವೇಶದಲ್ಲೂ ಹಿಂದೂ—ಮುಸ್ಲಿಂ ಏಕತೆ ನಮ್ಮ ಜೀವನಧರ್ಮವಾಗಬೇಕು.

ನಾಯಕರು ಹೋರಾಡಲು ಇಚ್ಛಿಸದಿದ್ದರೆ ಜನತೆಯೂ ಇಚ್ಛಿಸದಿರುವ ಬಗ್ಗೆ ನನಗೆ ನಂಬಿಕೆಯಿದೆ. ಆದ್ದರಿಂದ ಸರ್ವ ಪ್ರಗತಿಶೀಲ ರಾಷ್ಟ್ರಗಳಲ್ಲಿರುವಂತೆಯೇ ನಮ್ಮಲ್ಲಿಯೂ ನಾಯಕರು ಘರ್ಷಣೆಯ ಮನೋಭಾವವನ್ನು ಸಾರ್ವಜನಿಕ ಜೀವನದಿಂದ ತೊಡೆದುಹಾಕಲು ಒಪ್ಪಿಗೆ ನೀಡಬೇಕು. ಏಕೆಂದರೆ ಈ ಘರ್ಷಣೆಗಳು ಧರ್ಮ ವಿರೋಧಿ ಹಾಗೂ ಅನಾಗರಿಕವೆನಿಸುತ್ತವೆ. ಜನತೆ ನಾಯಕರನ್ನು ಶೀಘ್ರವಾಗಿ ಅನುಸರಿಸುವರೆಂಬುದರ ಬಗ್ಗೆ ನನಗೆ ಸಂಶಯವಿಲ್ಲ.

"ಇದು ಬ್ರಿಟಿಷರಿಗೆ ಒಪ್ಪುವ ಮಾರ್ಗವಲ್ಲ"

ಅಮೃತಸರದ ಗೋಲೀಬಾರಿನ ಬಗ್ಗೆ ಚರ್ಚಿಲ್ಲರ ಅಭಿಪ್ರಾಯ

ಪಂಜಾಬದಲ್ಲಿ ನಡೆದ ಘಟನೆಗಳು ಇಂಗ್ಲೆಂಡಿನಲ್ಲಿ ದೀರ್ಘ ಚರ್ಚೆಗೆ ಎಡೆಗೊಟ್ಟಿದ್ದವು. ಹಾಮನ್ಸ್ ಸಭೆಯಲ್ಲಿ ಸಂಸ್ಮರಣೀಯ ಚರ್ಚೆ ನಡೆಯಿತು. ಆಗ ಶ್ರೀ ವಿನ್‌ಸ್ಟನ್ ಚರ್ಚಿಲರೂ ವಿಚಾರಪ್ರಚೋದಕ ಭಾಷಣ ಮಾಡಿದರು.

ಪಂಜಾಬಿನಲ್ಲಿ ಒಂದೆರಡು ಇಂಗ್ಲಿಷ್ ದಂಪತಿಗಳ ಕೊಲೆಯಾಗಿತ್ತು. ಇಂಗ್ಲೀಷ್ ಸರಕಾರ ತೀಕ್ಷ್ಣ ಪ್ರತೀಕಾರ ಭಾವನೆಯನ್ನು ತಾಳಿತ್ತು. ಕೊಲೆಯಾದ ಸ್ಥಳದಲ್ಲಿ ಹಾಯ್ದು ಹೋಗುವ ಭಾರತೀಯರು ನಡುಗಿಕೊಂಡ —ಅಂಬೆಗಾಲಿಕ್ಕಿ— ಸಾಗಬೇಕು. ಇದು ಸರಕಾರದ ಆಜ್ಞೆ. "ಈ ಆಜ್ಞೆ ನಾಗರಿಕತೆಯ ನಿಯಮವನ್ನೇ ಭಂಗಗೊಳಿಸುವಂಥದು" ಎಂದು ಶ್ರೀ ಚರ್ಚಿಲ್ ತಮ್ಮ ಸರಕಾರದ ಆಜ್ಞೆಯನ್ನು ಖಂಡಿಸಿದರು.

ತಮ್ಮ ಭಾಷಣದಲ್ಲಿ ಅವರು ಇನ್ನೂ ಹೇಳಿದರು:

"ಇದರಿಂದ ಒಂದು ಮಾತು ಸ್ಪಷ್ಟವಾಗುತ್ತದೆ: ಏಪ್ರಿಲ್ 13ರಂದು ಜಾಲಿಯನ್‌ವಾಲಾಬಾಗದಲ್ಲಿ 400 ಭಾರತೀಯರ ಕಗ್ಗೊಲೆಯಾಗಿದೆ. ಈ ಸಂಖ್ಯೆಯ ಮೂರು ಪಾಲು ಪಟ್ಟು ಜನರಿಗೆ ಗಾಯಗಳಾಗಿವೆ. ನನಗೆ ತಿಳಿದಿರುವಂತೆ ಬಹುಶಃ ಬ್ರಿಟಿಶ್ ಸಾಮ್ರಾಜ್ಯದ ಇತಿಹಾಸದಲ್ಲಿಯೇ ಇಂತಹ ಘಟನೆ, ಇದಕ್ಕೆ ಸರಿಸಮಾನ ಘಟನೆ ಹಿಂದೆಂದೂ ನಡೆದಿಲ್ಲ. ನಾಗರಿಕ ಜನತೆಯ ವಿರುದ್ಧ ಸೈನ್ಯಪಡೆಯೊಂದನ್ನು ನುಗ್ಗಿಸಿ ಮಾಡಿದ ಅನಾಹುತಗಳಿಂದ ಬೇರೆಯಾದ ದಾರುಣ ಪ್ರಸಂಗವಿದು.

ಇದೊಂದು ಅಸಾಮಾನ್ಯ ಘಟನೆ. ರಾಕ್ಷಸೀ ಪ್ರಸಂಗ. ದುರ್ಭಾವನೆಯ ಪ್ರತೀಕ.

ಒಂದೆಡೆಯಲ್ಲಿ ಕೂಡಿದ ಜನಸಮುದಾಯದ ಮೇಲೆ ಜ. ಡಾಯರ್ ಮಾಡಿದ ಗೋಲೀಬಾರು ಒಂದು ಕಗ್ಗೊಲೆ. ಇಂತಹ ಕಗ್ಗೊಲೆಯಿಂದ ಒಂದು ಸ್ಥಳದ ಅಥವಾ ಜಿಲ್ಲೆಯ ಅಥವಾ ದೇಶದ ಜನರನ್ನು

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ! ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಎಂ. ವೆಂಕಟರಾವ್, ಹಂಪನಕಟ್ಟೆ, ಮಂಗಳೂರು-1

ಭಾರತೀಯ ವೈದ್ಯ ಸಂಶೋಧನೆಯ ವಿಕಾಸ

ಬರೆದವರು : ಕರ್ನಲ್ ಬಿ. ಎಲ್. ತನೇಜ

ಭಾರತದಲ್ಲಿ ಆಧುನಿಕ ವೈದ್ಯ ವಿಜ್ಞಾನದ ವ್ಯವಸ್ಥಿತ ಸಂಶೋಧನಾ ಕಾರ್ಯ 1911ನೇ ಇಸವಿಯಲ್ಲಿ ಆರಂಭಗೊಂಡಿತು. ಆಗ ಭಾರತ ಸರಕಾರವು "ಭಾರತೀಯ ಸಂಶೋಧನಾ ನಿಧಿ ಸಂಸ್ಥೆ"ಯನ್ನು ರಚಿಸಿತು.

ಇದಕ್ಕೆ ಪೂರ್ವದಲ್ಲಿ ಕೆಲವು ವೈದ್ಯಾಧಿಕಾರಿಗಳ ಸ್ವಂತ ಪರೀಕ್ಷಣೆ, ಸಂಶೋಧನೆಗಳಿಂದ ಸಾರ್ವಜನಿಕ ಆರೋಗ್ಯಕ್ಕೆ ಸವಾಲೆಸಿದ್ದ ಕೆಲವು ಸಮಸ್ಯೆಗಳನ್ನು ಉದ್ಯೋಗ ಕ್ಷೇತ್ರದಲ್ಲೇ ಪರಿಹರಿಸಲು ಶೋಧನೆಗೆ ಆಯ್ಕೆ ಮಾಡಿಕೊಳ್ಳುತ್ತಿದ್ದರು.

ಉಷ್ಣವಲಯ ರೋಗಗಳಿಗೆ ಸಂಬಂಧಿಸಿದಂತೆ ಸೂಕ್ಷ್ಮಾಣುಗಳು ಹಾಗೂ ಸಾರ್ವಜನಿಕ ಆರೋಗ್ಯ ಸಮಸ್ಯೆಗಳ ಶೋಧನೆಯನ್ನು ಈ ಶತಮಾನದ ಆರಂಭದಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಪ್ರಯೋಗಾಲಯಗಳಲ್ಲಿ ಕೈಗೊಳ್ಳಲಾಯಿತು. ಈ ಅವಧಿಯಲ್ಲಿ ಬೊಂಬಾಯಿಯಲ್ಲಿ ಹ್ಯಾಫ್‌ಕಿನ್ ಸಂಸ್ಥೆ, ಕೂನೂರುವ ತ್ತತಿಲಾಂಗ್‌ಗಳಲ್ಲಿ ಪ್ಯಾಸ್ಚರ್ ಸಂಸ್ಥೆಗಳು, ಮದ್ರಾಸ್‌ನಲ್ಲಿ ಪ್ರತಿರೋಧ ವೈದ್ಯದ ಕಿಂಗ್ ಸಂಸ್ಥೆ ಮತ್ತು ಕಸೌಲಿಯಲ್ಲಿ ಕೇಂದ್ರ ಸಂಶೋಧನ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಅನಂತರ ಕಲ್ಕತ್ತದಲ್ಲಿ ಉಷ್ಣವಲಯ ವೈದ್ಯಶಾಲೆ ಮತ್ತು ಅಖಿಲ ಭಾರತ ಸಾರ್ವಜನಿಕ ಆರೋಗ್ಯ ಸಂಸ್ಥೆಯನ್ನೂ ಮತ್ತು ದೆಹಲಿಯಲ್ಲಿ ಮಲೇರಿಯಾ ಸಂಸ್ಥೆಯನ್ನೂ ಆರಂಭಿಸಲಾಯಿತು. 1929ನೇ ಇಸವಿಯ ಆರಂಭದಲ್ಲಿ ಕೂನೂರಿನಲ್ಲಿ ದೇಶದ ಪೋಷಕ ಆಹಾರ ಸಮಸ್ಯೆಯ ಅಧ್ಯಯನಕ್ಕಾಗಿ ಸ್ವಯಂಪೂರ್ಣ ಸಂಸ್ಥೆಯೊಂದನ್ನು ಆರಂಭಿಸಲಾಯಿತು.

ಸ್ವಾತಂತ್ರ್ಯಕ್ಕೆ ಮುಂಚೆ

ಸ್ವಾತಂತ್ರ್ಯಪೂರ್ವದಲ್ಲಿ ಸಂಶೋಧನಾ ಕಾರ್ಯಗಳಿಗೆ ನೀಡುವ ಸಹಾಯಧನಕ್ಕೆ ಕೇಂದ್ರ ಹಾಗೂ ಪ್ರಾಂತೀಯ ಪ್ರಯೋಗಾಲಯದಲ್ಲಿದ್ದ ವಿಜ್ಞಾನಿಗಳು ಅರ್ಜಿ ಸಲ್ಲಿಸುತ್ತಿದ್ದರು. ವೈದ್ಯಕೀಯ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಂದ ಅತ್ಯಲ್ಪ ಅರ್ಜಿಗಳು ಬರುತ್ತಿತ್ತು. ಸ್ವಾತಂತ್ರ್ಯೋದಯದ ನಂತರ ಬದಲಾಗುತ್ತಿರುವ ಆರೋಗ್ಯ ಸಮಸ್ಯೆ ಹಾಗೂ ವಿಶೇಷ ರೀತಿಯ ಸೌಲಭ್ಯಗಳ ಅಗತ್ಯತೆಯ ಪೂರೈಕೆಗಾಗಿ ವಿಶ್ವವಿದ್ಯಾಲಯಗಳು ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಸಂಶೋಧನೆಗೆ ಉತ್ತೇಜನ ನೀಡಬೇಕಾದುದು ಅತ್ಯಗತ್ಯವೆಂಬ ಅಂಶ ಭಾರತೀಯ ವೈದ್ಯ ಸಂಶೋಧನಾ ಪರಿಷತ್ತಿಗೆ ಅರಿವಾಯಿತು.

ವೈದ್ಯ ಸಂಶೋಧನ ಪರಿಷತ್ತು ದೇಶಾದ್ಯಂತ ಏಳು ಶಾಶ್ವತ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಿದೆ. ಹೈದರಾಬಾದಿನ ಪೋಷಕ ಆಹಾರ ಸಂಶೋಧನಾಲಯ (1952), ಪೂನಾದ ವೈರಸ್ ಸಂಶೋಧನ ಕೇಂದ್ರ (1953), ಮದ್ರಾಸಿನ ಕ್ಷಯರೋಗ ಕೇಂದ್ರ (1956), ಕಲ್ಕತ್ತದ ಕಾಲರಾ ಸಂಶೋಧನ ಕೇಂದ್ರ (1962), ನವದೆಹಲಿ ಭಾರತೀಯ ರೋಗ ದಾಖಲೆ ಕೇಂದ್ರ (1966), ಅಹಮದಾಬಾದಿನ ಔದ್ಯೋಗಿಕ ಆರೋಗ್ಯ ಸಂಸ್ಥೆ (1967), ಬೊಂಬಾಯಿಯ ಶರೀರಶಾಸ್ತ್ರ ಸಂಸ್ಥೆ (1968)—ಇವುಗಳು ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ವಿಶೇಷ ಸಂಶೋಧನೆಗೆ ಪ್ರೇರಕವಾಗಿವೆ. ಈ ಸಂಸ್ಥೆಗಳಲ್ಲಿ ಮೂಲ ಸಂಶೋಧನೆ ಹಾಗೂ ಪ್ರಚಲಿತ ಸಮಸ್ಯೆಗಳ ಶೋಧನೆ ನಡೆಯುತ್ತಿದೆ. ಪೋಷಕ ಆಹಾರ ಸಂಶೋಧನಾಗಾರ, ವೈರಸ್ ಸಂಶೋಧನ ಕೇಂದ್ರ ಹಾಗೂ ಕ್ಷಯರೋಗ ಕೇಂದ್ರಗಳು ವಿಶ್ವಾದ್ಯಂತ ಅಗ್ರಗಾಮಿಯಾದ ಸಂಸ್ಥೆಗಳಾಗಿವೆ.

ಹೊಸ ಅಧ್ಯಾಯ

60 ವರ್ಷದ ಸೇವೆ ಮಾಡಿರುವ ಭಾರತೀಯ ವೈದ್ಯ ಸಂಶೋಧನಾ ಪರಿಷತ್ತು 1964-65ನೇ ಇಸವಿಯಲ್ಲಿ ಹೊಸ ಅಧ್ಯಾಯ ಆರಂಭಿಸಿತು. ಈ ಪರಿಷತ್ತಿನಲ್ಲಿ ಶಾಶ್ವತ ಸೇವೆ ಸಲ್ಲಿಸುವ ವೈದ್ಯ ಹಾಗೂ ವೈದ್ಯೇತರ ವಿಜ್ಞಾನಿಗಳ ಸೇವಾ ವಿಭಾಗ ಸೃಷ್ಟಿಯಾಯಿತು. ಈ ಮೂಲಕ ಸಂಶೋಧನಾ ಜೀವನ ಅಭಿವೃದ್ಧಿಗೊಳಿಸಿ ದೆ ಪ್ರಗತಿ ಸಾಧಿಸಲು ಪ್ರೋತ್ಸಾಹಿಸಲಾಯಿತು.

ವಿದೇಶಗಳಿಂದ ಉನ್ನತ ತರಬೇತಿ ಪಡೆದು ಹಿಂದಿರುಗಿದ ನಂತರ 'ಬಯೊಮೆಡಿಕಲ್' ಕ್ಷೇತ್ರದ ಮೇಧಾವಿ ವಿಜ್ಞಾನಿಗಳು ಕಾರ್ಯ ಮುಂದುವರಿಸಲು ಅನುಕೂಲವಾಗುವಂತೆ ಈ ಪರಿಷತ್ತಿನಲ್ಲಿ ಸಂಶೋಧನಾ ಸೇವಾ ವಿಭಾಗವನ್ನು ರಚಿಸಲಾಗಿದೆ.

ಈ ಶತಮಾನದ ಆದಿಭಾಗದಲ್ಲಿ ಸಾಂಕ್ರಾಮಿಕ ರೋಗ ಪ್ಲೇಗ್, ಪ್ಲೇಗ್, ಮಾಂತಿಬೇಧಿ, ಸಿಡುಬು, ಕಾಲರಾ, ಕ್ಷಯ, ಕುಷ್ಠರೋಗ ಮುಂತಾದ ಸೋಂಕು ರೋಗಗಳ ನಿಯಂತ್ರಣ ಮತ್ತು ಶುಶ್ರೂಷೆಯ ಬಗ್ಗೆ ಮೂಲ ಸಂಶೋಧನೆ ಕೈಗೊಳ್ಳಲಾಯಿತು. ಈ ರೋಗಗಳ ನಿವಾರಣೆಯಲ್ಲಿ ಬಹುತೇಕ ವಿಜಯ ಸಾಧಿಸಲು ಸಾಧ್ಯವಾಗಿದೆ. ಅಲ್ಲದೆ ಸಂಶೋಧನೆಗಳ ಫಲಗಳಿಂದ ರಾಷ್ಟ್ರೀಯ ಮಟ್ಟದಲ್ಲಿ ಕ್ಷಯರೋಗ, ಕಣ್ಣಿನರೋಗ, ಗಳಗಂಡ ರೋಗಗಳ ನಿಯಂತ್ರಣ ಸಾಧಿಸಲು ಹಾಗೂ ಮುಂಚಿತವಾಗಿ ಕಾರ್ಯ ಕೈಗೊಳ್ಳಲು ಸಾಧ್ಯವಾಗಿದೆ. ಈ ಸಂಸ್ಥೆಯ ಕಾರ್ಯ ದೇಶಕ್ಕೆ ಪರಿಣಾಮಕಾರಿಯಾಗಿ, ಪ್ರಯೋಜನಕಾರಿಯಾಗಿದ್ದು ಜನತೆಯ ಸಾಮಾಜಿಕ, ಆರ್ಥಿಕ ಪ್ರಗತಿಗೆ ಪ್ರೇರಕವಾಗಿದೆ.

ಪ್ರಮುಖ ಸೋಂಕುರೋಗಗಳ ವಿರುದ್ಧ ವಿಜಯ ಪಡೆದಿರುವುದರಿಂದ ಕಳೆದ ಒಂದೆರಡು ದಶಕಗಳಲ್ಲಿ ಸಂಶೋಧಕರು ಇತರ ಸಾಂಕ್ರಾಮಿಕ ರೋಗಗಳ ಬಗ್ಗೆ ಶೋಧನೆ ಕೈಗೊಳ್ಳಲು ಅವಕಾಶ ಕೂಡಿ ಕೊಟ್ಟಿದೆ. ಪೋಲಿಯೊ, ಹೆಪಾಟೈಟಿಸ್, ಇನ್‌ಫ್ಲುಯೆಂಜ ಮುಂತಾದ ರೋಗಗಳ ನಿಯಂತ್ರಣದ ಬಗ್ಗೆ ಯೋಜನಾಬದ್ಧ ಅಧ್ಯಯನ ನಡೆದಿದೆ. ಅನೇಕ ವಿಷಾಣು (ವೈರಸ್) ಪೀಡಿತ ಹೊಸ ಅನಾಮಿಕ ರೋಗಗಳ ಬಗ್ಗೆ (ಉದಾ: ಕ್ಯಾಸನೂರು ಅರಣ್ಯರೋಗ ಮತ್ತಿತರ ರಕ್ತಸ್ರಾವದ ಜ್ವರಗಳು) ಅಧ್ಯಯನ ನಡೆದು ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಪೋಷಕ ಆಹಾರ

ಬಡತನ, ಅಜ್ಞಾನಗಳಿಂದ ಪೋಷಕ ಆಹಾರದ ಅಭಾವ ತಲೆದೋರಿರುವುದು ಒಂದು ಪ್ರಮುಖ ವಿಷಯವಾಗಿದೆ. ಆಹಾರ ಉತ್ಪಾದನೆಯಲ್ಲಿ ನವೀನ ವೈಜ್ಞಾನಿಕ ವಿಧಾನ ಬಳಸುವ ಅಗತ್ಯದ ಅರಿವು ಮೂಡಿದೆ. ದೇಶದ ಪೋಷಕ ಆಹಾರ ಸಮಸ್ಯೆಯನ್ನು ಅರಿತುಕೊಂಡ ವಿಜ್ಞಾನಿಗಳು ವಿಶೇಷ ಕಾಣಿಕೆ ಸಲ್ಲಿಸಿದ್ದಾರೆ.

ಅನೇಕ ವರ್ಷಗಳಿಂದ ದೇಶೀಯ ವೈದ್ಯ ವಿಭಾಗದ ಸಂಶೋಧನೆ ಮತ್ತೊಂದು ಮುಖ್ಯ ಪ್ರಕಾರವಾಗಿದೆ. ಕೇಂದ್ರ ವೈದ್ಯ ಸಂಶೋಧನಾ ಪರಿಷತ್ತು ಹಾಗೂ ಆಯುರ್ವೇದ ಸಂಶೋಧನಾ ಪರಿಷತ್ತಿನ ಜಂಟಿ ಆಶ್ರಯದಲ್ಲಿ ದೇಶದ ವಿವಿಧ ಸಂಸ್ಥೆಗಳಲ್ಲಿ ದೇಶೀಯ ಸಸ್ಯಗಳು ಹಾಗೂ ಔಷಧಗಳನ್ನು ಕುರಿತು ತೀಕ್ಷ್ಣ ಸಂಶೋಧನೆ ಕಳೆದ ಮೂರು ವರ್ಷಗಳಿಂದ ನಡೆದಿದೆ; ತತ್ಫಲವಾಗಿ ಅಶ್ವಗಂಧ, ಜಟಮಾನ್ಸೀನೆ, ಗುಗುಲ್, ಪಟವಾಗಿ ಮತ್ತು ಶಕ್ತಿಯುಂತಹ ಸಸ್ಯ ಔಷಧಿಗಳ ಬಗ್ಗೆ ವಿಶೇಷ ಬೆಳಕು ಚೆಲ್ಲಿದೆ. ಕೇಂದ್ರ ವೈಜ್ಞಾನಿಕ, ಕೈಗಾರಿಕಾ ಸಂಶೋಧನಾ ಪರಿಷತ್ತಿನ ಆಶ್ರಯದಲ್ಲಿ ಔಷಧ ಸಂಶೋಧನೆಯ ಬಗ್ಗೆ ವ್ಯವಸ್ಥಿತ ಪ್ರಗತಿಯಾಗಿದೆ.

ರಾಷ್ಟ್ರದ ಯೋಧಾಗ್ರಣಿಗಳು ಎತ್ತರದ ಪ್ರದೇಶದಲ್ಲಿ ಯುದ್ಧ ಮಾಡಲು ಸನ್ನದ್ಧರಾಗಿರುವಂತೆ ಮಾಡುವ ಬಗ್ಗೆ ಸಂರಕ್ಷಣಾ ವಿಭಾಗದ ವೈದ್ಯ ಸಂಶೋಧನೆಯನ್ನು ಭಾರತೀಯ ವಿಜ್ಞಾನಿಗಳು ಕೈಗೊಂಡಿದ್ದಾರೆ. ಭೂ ವಾಯು ಹಾಗೂ ನಾವಿಕ ಪಡೆಗಳ ವಿಶೇಷ ಆರೋಗ್ಯ ಸಮಸ್ಯೆಗಳ ಬಗ್ಗೆ ಜಂಟಿ ಅಧ್ಯಯನವನ್ನು ಕೈಗೊಳ್ಳಲಾಗುತ್ತಿದೆ.

ಕದರಿಸಲು ಜ! ಡಾಯರ್ ಪ್ರಯತ್ನ ಮಾಡಿದ್ದಾನೆ. ಆದರೆ ಇಂತಹ ಮಾರ್ಗದಿಂದ ಜನತೆಯನ್ನು ಹೆದರಿಸುವ ಮೂರ್ಖತನ ಬ್ರಿಟಿಶ್ ಜನತೆ ಅರಿಯರು.

ಬ್ರಿಟಿಶ್ ಸಾಮ್ರಾಜ್ಯದ ಅಥವಾ ಬ್ರಿಟಿಶ್ ಸೈನ್ಯದ ಹಿತಾಸಕ್ತಿಗೆ ಇಂತಹ ಕ್ರಮ ಕೈಕೊಂಡದ್ದು ಯೋಗ್ಯವಾದದ್ದು ಎಂದು ನಮಗೆನಿಸುವದಿಲ್ಲ. ಇದು ಹತ್ಯಾಕಾಂಡದ ಹೊಸ ನಮ್ಮ ಚಿನ್ನ ಮೇಲೆ ಸದಾಕಾಲವೂ ಉಳಿಯುವದು. ಇದು ಬ್ರಿಟಿಶರಿಗೆ ಒಪ್ಪುವ ಮಾರ್ಗವಲ್ಲ—ಎಂದು ನಾವು ಘೋಷಿಸಿ ಗೌರವದಿಂದ ರೀತಿಯಲ್ಲಿ ನಡೆದುಕೊಂಡು ತೋರಿಸಬೇಕು."

ಸಿಂಡಿಕೇಟ್ ಬ್ಯಾಂಕ್

ಈ ಕೆಳಗಿನ ಸ್ಥಳಗಳಲ್ಲಿ ಅವರ ಎಂಟು ಹೊಸ ಶಾಖೆಗಳನ್ನು ತೆರೆದಿರುತ್ತಾರೆಂದು ತಿಳಿಸಲು ಸಂತೋಷ ಪಡುತ್ತಾರೆ.

22—4—1969ರಂದು
1. ಬನವಾಸಿ (ಉತ್ತರ ಕನ್ನಡ ಜಿಲ್ಲೆ— ಮೈಸೂರು ರಾಜ್ಯ)

23—4—1969ರಂದು
2. ಅವರ್ಸ (ಉತ್ತರ ಕನ್ನಡ ಜಿಲ್ಲೆ— ಮೈಸೂರು ರಾಜ್ಯ)

25—4—1969ರಂದು
3. ವಾರಂಗಲ್ (ವಾರಂಗಲ್ ಜಿಲ್ಲೆ—ಎ.ಪಿ.)
4. ಗುಲ್ಬರ್ಗಾ—ಸ್ಟೇಷನ್ ಬಜಾರ್ (ಗುಲ್ಬರ್ಗಾ ಜಿಲ್ಲೆ — ಮೈಸೂರು ರಾಜ್ಯ)

26—4—1969ರಂದು
5. ಸಿಂಧನೂರು (ರಾಯಚೂರ್ ಜಿಲ್ಲೆ— ಮೈಸೂರು ರಾಜ್ಯ)

28—4—1969ರಂದು
6. ನಾಗಪುರ (ನಾಗಪುರ ಜಿಲ್ಲೆ— ಮಹಾರಾಷ್ಟ್ರ ರಾಜ್ಯ)

28—4—1969ರಂದು
7. ಪೆರ್ಲ ಮೈನ್ ರೋಡ್ ಕಣ್ಣಾನೂರ್ ಜಿಲ್ಲೆ— ಕೇರಳ ರಾಜ್ಯ)
8. ಮಂಜೇಶ್ವರ (ಕಣ್ಣಾನೂರು ಜಿಲ್ಲೆ— ಕೇರಳ ರಾಜ್ಯ)

ಯಾರೊಬ್ಬನೂ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಬ್ಯಾಂಕ್ ಖಾತೆ ತೆರೆಯಲು ಅತಿ ಸಣ್ಣವನೆನಿಸಲಾರ.

ಯಾವ ಸ್ಥಳವೂ ಸಿಂಡಿಕೇಟ್ ಬ್ಯಾಂಕಿಗೆ ಸೇವೆ ಸಲ್ಲಿಸಲು ಅತಿ ಸಣ್ಣದೆನಿಸಲಾರದು.

FAITHFUL FRIENDLY SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ದಕ್ಷಿಣ ಭಾರತ

"ಪ್ರತಿಯೊಂದು ಬ್ಯಾಂಕಿಂಗ್ ವ್ಯವಹಾರಕ್ಕೆ ಪ್ರತಿಯೋರ್ವನ ಬ್ಯಾಂಕ್"

ಸಾಧನ ಸಂಪತ್ತು	ಶಾಖೆಗಳು	ಶ್ರೀ ಟಿ. ಎ. ಪೈ
ರೂ. 140 ಕೋಟಿಗೂ ಮಿಕ್ಕಿ	278	ಚೇಯರ್‌ಮೇನ್

ಕೃಷಿ ಪ್ರಗತಿಪಥದಲ್ಲಿ ಮಂಡ್ಯ

ಇಂದು ಮಂಡ್ಯದ ರೈತರು ಸಂತೃಪ್ತರು. ಜಿಲ್ಲೆಗೆ ಪ್ಯಾಕೇಜ್ ಪದ್ಧತಿಯು ವ್ಯವಸಾಯ ರೂಢಿಗೆ ಬಂದ ಮೇಲೆ ಧಾನ್ಯಗಳ ಉತ್ಪಾದನೆ ಶೇ. 40 ಭಾಗದಷ್ಟು ಹೆಚ್ಚಿದೆ. ಜಿಲ್ಲೆಗೆ ಪ್ಯಾಕೇಜ್ ಪದ್ಧತಿಯು ವ್ಯವಸಾಯ ರೂಢಿಗೆ ಬಂದು ಏಳು ವರ್ಷ ಮಾತ್ರ ಆಗಿದೆ. ಇಂದು ಎಕರೆಗೆ ಸರಾಸರಿ ಇಳುವರಿಯು ಬತ್ತದಿಂದ 10·6 ಕ್ವಿಂಟಾಲಿನಿಂದ 14·5 ಕ್ವಿಂಟಾಲುಗಳಷ್ಟು ಆಗುತ್ತಿದೆ. ರಾಗಿ ಇಳುವರಿಯೂ ಕೂಡಾ ಒಂದು ಕ್ವಿಂಟಾಲಿನಷ್ಟು ಹೆಚ್ಚಿದೆ. ಕಬ್ಬಿನ ಬೆಳೆ ಕೂಡಾ ಎಕರೆಗೆ ಸರಾಸರಿ 40 ಟನ್ನುಗಳಷ್ಟು ಹೆಚ್ಚಿದೆ. ಇಷ್ಟೇ ಅಲ್ಲದೆ ಈ ಪ್ಯಾಕೇಜ್ ಪದ್ಧತಿಯಿಂದ ರೈತರು ಎಕರೆಗೆ 12 ಕಿಲೋ ಬಿತ್ತನೆಯನ್ನು ಉಪಯೋಗಿಸುತ್ತಾರೆ. ಇದಕ್ಕೆ ಮೊದಲು ಅವರು ಸಾಮಾನ್ಯವಾಗಿ ಎಕರೆಗೆ ಮೂವತ್ತು ಕಿಲೋ ಬಿತ್ತನೆ ಉಪಯೋಗಿಸುತ್ತಿದ್ದರು. ಹೀಗಾಗಿ ವರ್ಷಕ್ಕೆ 3000 ಟನ್ನು ಬತ್ತದ ಬಿತ್ತನೆ ಉಳಿತಾಯ ಮಾಡುತ್ತಿದ್ದಾರೆ. ಅವರು ನಾಲ್ಕು ಬಗೆಯ ಬತ್ತದ ತಳಿಗಳನ್ನು ಮಾತ್ರ ಉಪಯೋಗಿಸುತ್ತಿದ್ದಾರೆ.

ಇಷ್ಟೆಲ್ಲಾ ಬೆಳೆ ತೆಗೆಯಲು ಅರ್ಧ ಕಾರಣ ಜಮೀನಿಗೆ ಹಸಿರು ಗೊಬ್ಬರ ಮತ್ತು ಕಂಪೋಸ್ಟ್ ಒದಗಿಸುತ್ತಿರುವುದು. ಕಳೆದ ವರ್ಷ ಮಂಡ್ಯದ ರೈತರು 2,90,000 ಟನ್ನುಗಳಷ್ಟು ಕಂಪೋಸ್ಟನ್ನು ಉಪಯೋಗಿಸಿದರು. ಇದು ರೈತರು ಆರು ವರ್ಷದ ಹಿಂದೆ ಉಪಯೋಗಿಸಿದ ಕಂಪೋಸ್ಟ್ ಗೊಬ್ಬರಕ್ಕಿಂತ ಮೂರು ಪಾಲು ಹೆಚ್ಚು. ಪ್ಯಾಕೇಜ್ ಪದ್ಧತಿ ಪ್ರಾರಂಭಿಸಿದಾಗ ಹಸಿರು ಗೊಬ್ಬರವನ್ನು 9000 ಎಕರೆಗೆ ಮಾತ್ರ ಹಾಕಲಾಗುತ್ತಿತ್ತು. ಇವತ್ತು ಇದರ ಪಟ್ಟು ಹೆಚ್ಚಿದೆ.

ಇಂದು ಈ ರೈತರು ಹೆಚ್ಚು ಇಳುವರಿ ಕೊಡುವ ತಳಿಗಳನ್ನು ಬೆಳೆಯುತ್ತಿರುವುದರಿಂದ ಅವುಗಳಿಗೆ ತಕ್ಕಂತೆ ಉಪ್ಪುಗೊಬ್ಬರವನ್ನು ಬಳಸುತ್ತಿದ್ದಾರೆ. 1961-62 ರಲ್ಲಿ 20,000 ಟನ್ನುಗಳಷ್ಟು ಉಪ್ಪುಗೊಬ್ಬರ ಉಪಯೋಗಿಸಿದ್ದವರು ಇಂದು 60,000 ಟನ್ನು ಉಪ್ಪುಗೊಬ್ಬರ ಉಪಯೋಗಿಸುತ್ತಿದ್ದಾರೆ.

ಈ ಜಿಲ್ಲೆಯಲ್ಲಿ ಹೆಚ್ಚು ಇಳುವರಿ ಕೊಡುವ ತಳಿಗಳನ್ನು ಬೆಳೆಯಲು ಪ್ರಾರಂಭಿಸಿದುದು 1965-66ರಲ್ಲಿ. ಇಂದು ಸಂಕರ ಮೆಕ್ಕೆಜೋಳವನ್ನು 6000 ಎಕರೆಗಳಲ್ಲೂ ಸಂಕರ ಜೋಳವನ್ನು 3000 ಎಕರೆಗಳಲ್ಲೂ ಬೆಳೆಯುತ್ತಿದ್ದಾರೆ.

ರೈತ ನರಸಿಂಹಯ್ಯ ಎ.ಡಿ.ಟಿ. ಬತ್ತದ ತಳಿಯನ್ನು ಬೆಳೆದು ಎಕರೆಗೆ 3150 ಕಿಲೋ ಇಳುವರಿ ಪಡೆದಿದ್ದಾರೆ. ರೈತ ನಂಜುಂಡಯ್ಯ ಎ.ಆರ್. 8 ಬತ್ತದ ತಳಿ ಬೆಳೆದು 3600 ಕಿಲೋ ಇಳುವರಿ ಪಡೆದಿದ್ದಾರೆ. ಇಂತಹ ಹೆಚ್ಚು ಫಸಲಿನ ಪರಿಣಾಮದಿಂದ ಇತರ ರೈತರೂ ಈ ತಳಿಗಳನ್ನೇ ಬೆಳೆಯಲಾರಂಭಿಸಿದ್ದಾರೆ.

ಮಂಡ್ಯ ಕೃಷಿಶಾಲೆಯ ಮತ್ತೊಂದು ಬದಲಾವಣೆಯೆಂದರೆ ಬೇಸಿಗೆಯಲ್ಲಿ ನೀರು ಹಾಯಿಸಿ ರಾಗಿ, ಸಂಕರಜೋಳ ಮತ್ತು ಮೆಕ್ಕೆಜೋಳ ಬೆಳೆಯುವುದು. ಇದು ಅಲ್ಲಿನ ರೈತರಿಗೆ 'ವರ'ವಿತ್ತಂತೆ.

ನೀರಾವರಿ ಪ್ರದೇಶಗಳಲ್ಲಿ ಕಬ್ಬು ಬೆಳೆಯೊಡನೆಯೇ ಸಂಕರ ಮೆಕ್ಕೆಜೋಳ ಬೆಳೆಯುವಂತೆ ಪ್ರೋತ್ಸಾಹವಿತ್ತು, ಅದು ಜನಾದರಣೀಯವಾಗುವಂತೆ ಮಾಡಿದವರು ವಿಸ್ತರಣಾಧಿಕಾರಿಗಳು. ಬಲ್ಲೇನಹಳ್ಳಿಯ ರೈತ ಮೋಟೇಗೌಡರು ತಮ್ಮ 45 ಎಕರೆ ಜಮೀನಿನಿಂದ ಎಂಬತ್ತು ಕ್ವಿಂಟಾಲುಗಳಷ್ಟು ಸಂಕರ ಮೆಕ್ಕೆಜೋಳ ಬೆಳೆದರು. ಇದರಿಂದ ಕಳೆದ ವರ್ಷ 5000 ಎಕರೆಯಲ್ಲಿ ಜೋಳ ಬೆಳೆಯಬೇಕೆಂದಿದ್ದ ಗುರಿಯು 1000ಕ್ಕೆ ಏರಿತು.

ಸಂಕರ ಜೋಳ ಬೆಳೆಯುವುದು ರೈತರಿಗೆ ಹೊಸದ ಮೊದಲು ಸಮಸ್ಯೆಯಾಗಿ ಕಂಡಿತು. ಏಕೆಂದರೆ ಕೊರೆಯುವ ಹೊಣ ಬಿದ್ದು ಬೆಳೆ ಹಾಳಾಗುತ್ತಿತ್ತು. ಆದರೆ ಜೋಳವನ್ನು ಜನವರಿಯಿಂದ ಮೇ ತಿಂಗಳ ವರೆಗೆ ಬೆಳೆಯಲಾರಂಭಿಸಿದ ಮೇಲೆ ರೈತರಿಗೆ ಈ ಕಾಟವೂ ತಪ್ಪಿತು. ಏಕೆಂದರೆ ಈ ಅವಧಿಯಲ್ಲಿ ಜೋಳಕ್ಕೆ ಈ ಕೀಟ ಹತ್ತುವುದು ಕಡಿಮೆ. ಸಿಂಗಾರಿ ಗೌಡ ಮುಂತಾದ ರೈತರು ಎಕರೆಗೆ ಮೂವತ್ತೆರಡು ಕ್ವಿಂಟಾಲುಗಳಷ್ಟು ಬೆಳೆ ತೆಗೆದರು. ಕಾಳ ಬೆಳೆಯನ್ನು ಕೂಡಾ ರೈತರು ತೆಗೆಯಲಾರಂಭಿಸಿದ್ದಾರೆ. ಈ ಜಿಲ್ಲೆಯಲ್ಲಿ ಮುಂಗಾರು ಮಳೆಯ ಮೊದಲ್ಲೇ ಖುಷ್ಕಿ ಬೆಳೆಯಾಗಿ ಸಂಕರ ಜೋಳ ಬೆಳೆದಾಗ ಸ್ಥಳೀಯ ತಳಿಗಿಂತ ಹೆಚ್ಚು ಇಳುವರಿಯನ್ನೇ ಕೊಟ್ಟಿದೆ.

ಅಲ್ಪ ಕಾಲಾವಧಿಯ ತಳಿಗಳಾದ ತಾಯ್‌ಚುಂಗ್-65 ಮುಂತಾದವುಗಳು ನೀರಾವರಿ ಪ್ರದೇಶಗಳಲ್ಲಿ ಎರಡು ಬೆಳೆ ತೆಗೆಯಲಿಕ್ಕೆ ಅನುಕೂಲ. ಪಕವಳ್ಳಿ ರೈತ ಎಮ್. ಎಸ್. ಕೃಷ್ಣಪ್ಪ ಗೌಡರು ಒಂದೇ ಜಮೀನಿನಲ್ಲಿ ವರ್ಷದಲ್ಲಿ ತಾಯ್‌ಚುಂಗ್-65, ಪೂರ್ಣ ರಾಗಿ, ನೆಲಗಡಲೆ ಬೆಳೆದಿದ್ದಾರೆ. ಇವರಿಗೆ ಎಕರೆಗೆ 3300 ರೂ. ಲಾಭ ದೊರೆಯಿತು. ತಾಯ್‌ಚುಂಗ್-65ನ್ನು ಮೆಕ್ಕೆಜೋಳ ಕೊಯ್ಲಾದ ಕೂಡಲೇ ಆಗಸ್ಟ್‌ನಿಂದ— ಡಿಸೆಂಬರ್‌ನಲ್ಲಿ ಬೆಳೆದರು. ಇದಾದ ನಂತರ ಜೋಳ ಅಥವಾ ನೆಲಗಡಲೆ ಬೆಳೆದರು. ಇದರ ಬದಲು ದ್ವಿದಳ ಧಾನ್ಯವನ್ನೇ ಹಾದರೂ ಬೆಳೆದರೆ ಎಕರೆಗೆ 65 ಕ್ವಿಂಟಾಲು ಕಾಳು ಮತ್ತು 4000—5000 ರೂ. ಲಾಭ ಪಡೆಯಲು ಸಾಧ್ಯ.

ತಾಯ್‌ಚುಂಗ್-65ನ್ನು ಕಬ್ಬಿನ ಬೆಳೆ ತೆಗೆದ ಕೂಡಲೇ ಎರಡನೇ ಬೆಳೆಯಾಗಿ ಬೆಳೆಯಲು ಸಿಫಾರಸ್ಸು ಮಾಡಿದೆ. (ಆಗಸ್ಟ್ ತಿಂಗಳು) ಈ ಸಮಯದಲ್ಲಿ ಸಂಕರ ಮೆಕ್ಕೆಜೋಳ ಅಥವಾ ರಾಗಿ ಬೆಳೆಯಲು ಸಾಧ್ಯವಿಲ್ಲ. ರೈತ ಬೋರೆ ಗೌಡರೆಂಬವರು ಎಕರೆಗೆ 28 ಕ್ವಿಂಟಾಲು ಬೆಳೆ ಪಡೆದರು.

ಇಂದು ಮಂಡ್ಯದಲ್ಲಿ ಮಣ್ಣು ಪರೀಕ್ಷಿಸುವ ಪ್ರಯೋಗ ಶಾಲೆಯೂ ಇದೆ. ಈಗ ಇಲ್ಲಿ ವರ್ಷಕ್ಕೆ ಏನಿಲ್ಲವೆಂದರೂ 12,000 ಮಣ್ಣಿನ ಸ್ಯಾಂಪಲ್ಲುಗಳನ್ನು ಪರೀಕ್ಷಿಸುತ್ತಿದ್ದಾರೆ. ಇದಕ್ಕೆ ಮೊದಲೇ ಈ ಪರೀಕ್ಷೆಗಾಗಿ ಮಣ್ಣನ್ನು ಬೆಂಗಳೂರಿನ ಹೆಬ್ಬಾಳಕ್ಕೆ ಕಳುಹಿಸಬೇಕಿತ್ತು.

ಇಂದು ಮಂಡ್ಯದಲ್ಲಿನ ಮುಕ್ಕಾಲು ಪಾಲು ರೈತರೆಲ್ಲಾ ಸುಧಾರಿತ ಮರಮುಟ್ಟುಗಳನ್ನೇ ಉಪಯೋಗಿಸುತ್ತಿದ್ದಾರೆ. ಮಂಡ್ಯದಲ್ಲಿರುವ "ರೈತರ ಕೃಷಿ ಉತ್ಪಾದನಾ ಸಹಕಾರ ಮಾರುಕಟ್ಟೆ ಸಂಘ"ವು ಸುಧಾರಿತ ಮರಮುಟ್ಟುಗಳನ್ನು ತಯಾರಿಸಿ ಸಹಕಾರ ಸಂಘಗಳ ಮೂಲಕ ರೈತರಿಗೆ ಒದಗಿಸುತ್ತಿದ್ದಾರೆ.

ಉಪ್ಪುಗೊಬ್ಬರ ಹಾಗೂ ಸುಧಾರಿತ ಮರಮುಟ್ಟುಗಳನ್ನು ಬಳಸುವುದು ಹೆಚ್ಚುತ್ತಿದ್ದಂತೆ ಕೀಟ ಸಂರಕ್ಷಣಾ ಕಾರ್ಯವು ಹಿಂದುಳಿಯಲು ಸಾಧ್ಯವೇ? ಕಳೆದ ವರ್ಷ 35000 ಹೆಕ್ಟೇರು ಜಮೀನಿನಲ್ಲಿ ಕೀಟ ಸಂರಕ್ಷಣಾ ಕಾರ್ಯವನ್ನು ಕೈಕೊಳ್ಳಲಾಯಿತು. ಸುಮಾರು 30 ಹಳ್ಳಿಗಳಲ್ಲಿ ಗಾಳಿ ಸಿಂಪರಣಾ ವಿಧಾನವನ್ನು ಪ್ರಯುಕ್ತಿಸಲಾಯಿತು.

ಸಂಕರ ಮೆಕ್ಕೆಜೋಳ ಹಾಗೂ ಜೋಳದ ಬಿತ್ತನೆಯನ್ನು ಜಿಲ್ಲೆಯಲ್ಲೇ ಬೆಳೆಯಲಾರಂಭಿಸಿದ್ದಾರೆ. ಗಿಡ್ಡ ತಳಿ ಗೋಧಿಯನ್ನು ಬೆಳೆಯಲಾರಂಭಿಸಿದ್ದಾರೆ. ಈ ಬೆಳೆ ಚೆನ್ನಾಗಿ ಆದ ಪಕ್ಷದಲ್ಲಿ ತಾಯ್‌ಚುಂಗ್-65 ಅಥವಾ ಎಡಿಟಿ-27 ಬೆಳೆದ ಕೂಡಲೇ ಎರಡನೇ ಬೆಳೆಯಾಗಿ ಬೆಳೆಯಬಹುದೆನ್ನುತ್ತಾರೆ.

ಸಹಕಾರ ಚಳುವಳಿಯಂತೂ ಜಿಲ್ಲೆಯಾದ್ಯಂತ ಹಬ್ಬಿದೆಯೆನ್ನಬಹುದು. ಸಾವಿರಕ್ಕಿಂತಲೂ ಹೆಚ್ಚು ಹಳ್ಳಿಗಳು ಸಹಕಾರ ಸಂಸ್ಥೆಗಳಿಗೊಳಪಟ್ಟು ಇದರಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಸದಸ್ಯರಿದ್ದಾರೆ. ಕಳೆದ ವರ್ಷ 229 ಲಕ್ಷ ರೂ.ಗಳನ್ನು ಅಲ್ಪ ಕಾಲಾವಧಿಯ ಸಾಲವಾಗಿ ರೈತರಿಗೆ ಕೊಡಲಾಯಿತು. 22 ಲಕ್ಷ ರೂ.ಗಳನ್ನು ಮಧ್ಯಮ ಕಾಲಾವಧಿಯ ಸಾಲವಾಗಿ ರೈತರಿಗೆ ಕೊಡಲಾಯಿತು. ಎಲ್ಲಾ ತಾಲ್ಲೂಕುಗಳು ಮತ್ತು ಕೃಷಿ ಉತ್ಪಾದನಾ ಸಹಕಾರಿ ಮಾರುಕಟ್ಟೆ ಸಂಘಗಳು ಉಪ್ಪುಗೊಬ್ಬರ, ಬಿತ್ತನೆ, ಕೀಟನಾಶಕಗಳು, ಮರಮುಟ್ಟುಗಳನ್ನು ಹಂಚುತ್ತಿವೆ. ಇವುಗಳಲ್ಲಿ ಆರು ಸೊಸೈಟಿಗಳಲ್ಲಿ ಬಿತ್ತ ಹದಮಾಡುವ ಅನುಕೂಲವಿವೆ.

ಮಂಡ್ಯದ ರೈತರ ವ್ಯವಸಾಯ ಸಂಘದವರಿಗೆ ಸುಧಾರಿತ ಮರಮುಟ್ಟು ತಯಾರಿಸಲು ವರ್ಕ್‌ಷಾಪು ಇದೆ. ದನಕರುಗಳಿಗೆ ಮೇವು ಒದಗಿಸುವ ಯೂನಿಟ್, ಕೋಳಿ ಆಹಾರದ ಯೂನಿಟ್, ಗೊಬ್ಬರ ಮಿಶ್ರಮಾಡುವ ಯೂನಿಟ್ ಇದೆ. ಕಳೆದ ವರ್ಷ ಈ ಸೊಸೈಟಿಯು 75 ಲಕ್ಷ ರೂ. ಬೆಲೆಬಾಳುವ ಮರಮುಟ್ಟುಗಳು, ದನಕರುಗಳು, ಕೋಳಿಗಳ ಆಹಾರ, ಗೊಬ್ಬರದ ಮಿಶ್ರಣವನ್ನು ಮಾರಿತು. ಮೆಕ್ಕೆಜೋಳದ ಬಿತ್ತನೆಯನ್ನು ಸಂಸ್ಕರಿಸುವ ಯೂನಿಟ್ ಒಂದನ್ನು ಬರುವ ವರ್ಷದಿಂದ ಪ್ರಾರಂಭಿಸುವ ಉದ್ದೇಶವಿದೆ.

ಹೀಗೆ ಕಳೆದ ಏಳು ವರ್ಷಗಳಿಂದೀಚೆಗೆ ಮಂಡ್ಯದ ವ್ಯವಸಾಯ ಕ್ಷೇತ್ರದಲ್ಲಾಗಿರುವ ಪ್ರಗತಿಯನ್ನು ಪರಿಶೀಲಿಸಿದರೆ ರೈತರಿಗೆ ಬಹಳ ಉತ್ತೇಜನ ನೀಡುವಂತಿದೆ. ಸದ್ಯದ ಪರಿಸ್ಥಿತಿಯನ್ನು ಪರಿಶೀಲಿಸಿದಾಗ ಜಿಲ್ಲೆಯು ಇನ್ನಷ್ಟು ಪ್ರಗತಿಪಥದಲ್ಲಿ ಸಾಗದೇ ಇರದು ಎನ್ನಿಸುತ್ತದೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
93 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ [illegible] ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711, 5712, 5713 } 3 Lines.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. C. 4/1969

N. J. ಕಡಂಬ — — ವಾದಿ

M. ವಿಠಲ್ ರೈ ಕೂಡಾ — ಪ್ರತಿವಾದಿಗಳು

1ನೇ ಪ್ರತಿವಾದಿ M. ವಿಠಲ್ ರೈ, ಡೆಪ್ಯುಟಿ ನಾಝರ್, ಮುನ್ಸಿಫ್ ಕೋರ್ಟು, ಚಿಕ್ಕಮಗಳೂರು, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಇವರಿಗೆ ಕೋರ್ಟಿನಿಂದ ಪ್ರಕಟಿಸುವುದೇನೆಂದರೆ—

ವಾದಿಯು ನಿಮ್ಮ ವಗೈರೆರ ಮೇಲೆ ಹಾಕಿದ ಮೇಲ್ಕಂಡ ದಾವೆಯು ತಾ. 2-6-'69ಕ್ಕೆ ಇಟ್ಟಿರುವುದರಿಂದ ಅದ್ಯೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ನೀವು ಸ್ವತಹ ವ ವಕೀಲರ ಮೂಲಕ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾಗುವುದು ಎಂತ ಈ ಮೂಲಕ ತಿಳಿಸಲಾಗಿದೆ.

(Sd.) B. Ishwara Bhat
Advocate for Pltf.

ಬೆಳ್ತಂಗಡಿ, ತಾ. 13.4.69.

ಗಾಂಧೀಜಿ - ನಾನು ಕಂಡಂತೆ

ಲೇಖಕಿ : ಶ್ರೀಮತಿ ವೆರಾಬ್ರಿಟನ್

ನಾನು ಗಾಂಧೀಜಿಯವರನ್ನು ಭೇಟಿ ಮಾಡಿದ್ದು ಒಮ್ಮೆ ಮಾತ್ರ. ಆಗ ನಾನಿನ್ನೂ ಯುವತಿ. ಭಾರತವನ್ನು ನೋಡಿರದಿದ್ದರೂ, ಅಗಾಥಾ ಹ್ಯಾರಿಸನ್, ಫೆನ್ನರ್ ಬ್ರಾಕ್‌ವೇ ಮತ್ತು ಅಮಿಯ ಚಕ್ರವರ್ತಿ ಇವರೇ ಮುಂತಾದ ಮಹಾನುಭಾವರು ಭಾರತದ ಬಗ್ಗೆ ಬರೆದ ಗ್ರಂಥಗಳಿಂದ ನಾನು ಪ್ರಭಾವಿತಳಾಗಿದ್ದೆ. ನಾನಾಗಲೇ ಭಾರತದ ಸ್ವಾತಂತ್ರ್ಯ ಚಳುವಳಿಯ ಕಾರ್ಯಕರ್ತಳಾಗಿದ್ದೆ. 1931ರಲ್ಲಿ ಗಾಂಧೀಜಿಯವರು ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್ನಿಗೆ ಬಂದಿದ್ದರು. ಅವರ ಆಗಮನ ನಮ್ಮಲ್ಲಿ ಈ ಬದಲಾವಣೆಯ ಸುಯೋಗವನ್ನು ತಂದಿತ್ತು.

ನಾನು ಈ ಮೊದಲೇ ಗಾಂಧೀಜಿಯವರ ಭಾವಚಿತ್ರಗಳನ್ನು ನೋಡಿದ್ದೆ. ಲಂಡನ್ನಿನಲ್ಲಿ ನವೆಂಬರ್ ಮಾಸದಲ್ಲಿ ಅತಿಶಯ ಚಳಿ ಬೀಳುತ್ತದೆ. ಅಂತಹ ಸಮಯದಲ್ಲಿ ಗಾಂಧೀಜಿ ಮೈಮೇಲೆ ಸಾಕಷ್ಟು ಬಟ್ಟೆ ಧರಿಸದಿರುವುದು ನನಗೆ ಆಘಾತ ಉಂಟುಮಾಡಿತ್ತು. ಗಾಂಧೀಜಿಯವರ ಉಡುಗೆ-ತೊಡುಗೆ ಏನೇ ಇರಲಿ ಅವರ ಸರಳ ಸಹೃದಯ ವ್ಯಕ್ತಿತ್ವ ನನ್ನ ಮೇಲೆ ಅಳಿಯದ ಪ್ರಭಾವವನ್ನು ಬೀರಿತು.

ಭಾರತದ ಆಪ್ತಮಿತ್ರ ಲಾರ್ಡ್ ಅಟ್ಲೀ ನಿಧನಹೊಂದಿದಾಗ ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಪ್ರತಿಕ್ರಿಯೆ ವ್ಯಕ್ತಪಡಿಸಿತು. ಚರ್ಚಿಲ್ ಅವರು ಬ್ರಿಟನ್ನಿನ ಮಾಜಿ ಪ್ರಧಾನಿ ಲಾರ್ಡ್ ಅಟ್ಲೀಯವರನ್ನು "ಕುರಿಯ ವೇಷದ ಕುರಿ" ಎಂದು ಟೀಕಿಸಿದರು. ಈ ಟೀಕೆ "ಅಪಕ್ವ ನಿರ್ಣಯದ ಅವರ ಪ್ರತೀಕ ಎಂದು ಅಭಿಪ್ರಾಯಪಟ್ಟಿತು. ಚರ್ಚಿಲರು ಗಾಂಧೀಜಿಯವರನ್ನು 'ಅರೆನಗ್ನ ಫಕೀರ' ಎಂದು ಕರೆದರು. ಅವರ ಈ ನಿರ್ಣಯವೂ ಅಷ್ಟೇ ಅಸಮಂಜಸವಾಗಿತ್ತು. ಚರ್ಚಿಲರು ಗಾಂಧೀಜಿಯವರನ್ನು ಒಂದು ಸಲವಾದರೂ ಭೇಟಿಯಾಗಿದ್ದರೆ ಖಂಡಿತವಾಗಿಯೂ ಇಂತಹ ಟೀಕೆ ಮಾಡುತ್ತಿರಲಿಲ್ಲವೆಂದು ನನಗೆ ಅನಿಸುತ್ತದೆ. ಗಾಂಧೀಜಿಯವರನ್ನು ಒಂದೇ ಒಂದು ಸಲ ಮಾತ್ರ ಭೇಟಿಯಾಗಿದ್ದರೂ ತಮ್ಮ ಜೀವಮಾನದುದ್ದಕ್ಕೂ ಅವರಿಂದ ಪ್ರಭಾವಿತರಾದ ಕೆಲವೇ ವ್ಯಕ್ತಿಗಳಲ್ಲಿ ನಾನೂ ಒಬ್ಬಳು. ಅವರು ಯಾವ ಯುಗವನ್ನು ನಿರ್ಮಿಸಲು ಹೆಣಗಿದರೂ ಈಗ ಸ್ವಯಂ ಅದೇ ಯುಗದ ಯುಗಪುರುಷರು.

ಇತ್ತೀಚಿನ ಮಾತು. ನಾನು ಕೃಷ್ಣ ಕೃಪಲಾನಿ ಅವರು ಬರೆದ ರವೀಂದ್ರನಾಥ ಠಾಕೂರ್ ಅವರ ಜೀವನ ಚರಿತ್ರೆಯನ್ನು ಓದುತ್ತಿದ್ದೆ. ಗಾಂಧೀಜಿಯವರು ಶಾಂತಿನಿಕೇತನಕ್ಕೆ ಭೇಟಿ ನೀಡಿದ ಸಂದರ್ಭ. ಕವಿ ರವೀಂದ್ರರು ಭೋಜನ ಶಾಲೆಯಲ್ಲಿ ಬ್ರಾಹ್ಮಣ ಹುಡುಗರಿಗಾಗಿ ಪ್ರತ್ಯೇಕ ಸ್ಥಳ ಕಲ್ಪಿಸಿದ್ದನ್ನು ಗಾಂಧೀಜಿ ಅವರು ಖಂಡಿಸಿದರು.

ಗಾಂಧೀಜಿಯವರು ಲಂಡನ್ನಿನಲ್ಲಿದ್ದಾಗ ಪ್ರತಿಷ್ಠಿತ ಪೂಜಕರನ್ನು ಖಂಡಿಸಿದುದು ನನಗೆ ನೆನಪಿಗೆ ಬಂದಿತು. ಗಾಂಧೀಜಿಯವರಿಗಾಗಿ ವೈಭವೋಪೇತವಾದ ಅನೇಕ ಹೋಟೆಲ್‌ಗಳಿದ್ದವು. ಆದರೆ ಅವರು ಅವೆಲ್ಲವುಗಳನ್ನು ಬಿಟ್ಟು, ಮ್ಯೂರಿಯಲ್ ಮತ್ತು ಡೋರಿಸ್ ಲೆಸ್ಟರ್ ಅವರು ಬೋನಲ್ಲಿ ನಡೆಸುತ್ತಿದ್ದ, ಈಸ್ಟ್ ಎಂಡ್ ಸೆಟ್ಲ್‌ಮೆಂಟಿನ ಮೊದಲ ಮಹಡಿಯನ್ನು ತಮ್ಮ ವಾಸಕ್ಕಾಗಿ ಆರಿಸಿಕೊಂಡರು. ಲಂಡನ್ನಿನ ಸಧಾರಿಸಿದ ಶ್ರಮಿಕ ವರ್ಗದವರಿಗೆ ಇದು ಶಿಕ್ಷಣ ಹಾಗೂ ಆಧ್ಯಾತ್ಮ ಕೇಂದ್ರ. ಬ್ರಿಟನ್ನಿನ ಪತ್ರಿಕಾ ವರದಿಗಾರರು ಹಾಗೂ ಪ್ರತಿಷ್ಠಿತ ಅಧಿಕಾರಿಗಳು ಗಾಂಧೀಜಿಯವರನ್ನು ಕಾಣಲು ಬೋ ವರೆಗೂ ಹೋಗಬೇಕಾಗಿತ್ತು. ಅದು ಅವರ ದುರ್ದೈವವೇ ಸರಿ. ಶ್ರೀ ಕೃಪಲಾನಿ ಗಾಂಧೀಜಿಯವರ ಬಗ್ಗೆ ಒಂದು ಕಡೆ ಸಿ.ಎಫ್. ಅಂಡ್ರ್ಯೂಸ್ ಅವರ ಉಕ್ತಿಯನ್ನು ಪುನರುದ್ಧರಿಸಿದ್ದಾರೆ.

ಸಿ.ಎಫ್. ಅಂಡ್ರ್ಯೂಸ್ ಗಾಂಧೀಜಿಯವರ ವಿಷಯವಾಗಿ ಪ್ರಸ್ತಾಪಿಸುತ್ತ "ಠಾಕೂರರು ವಾಸ್ತವವಾಗಿ ಆಧುನಿಕ ಯುಗದವರು. ಗಾಂಧೀಜಿಯವರು ನಮ್ಮ ಕಾಲದ ಅಸ್ಸಿಸ್ಸಿಯ ಸಂತ ಫ್ರಾನ್ಸಿಸ್ ಇದ್ದಂತೆ" ಎಂದು ಹೇಳಿದ್ದಾರೆ.

1949ರಲ್ಲಿ ಗಾಂಧೀಜಿಯವರ ಶಿಷ್ಯರ ಆಹ್ವಾನದ ಮೇರೆಗೆ ಭಾರತಕ್ಕೆ ಭೇಟಿ ನೀಡಿದ ಪುಟ್ಟ ಬ್ರಿಟಿಷ್ ನಿಯೋಗದಲ್ಲಿ ನಾನೂ ಇದ್ದೆ. ನಿಯೋಗದ ಪ್ರತಿನಿಧಿಗಳು ಶಾಂತಿನಿಕೇತನ, ಹಾಗೂ ಸೇವಾಗ್ರಾಮಗಳಿಗೆ ತೆರಳಿ ಶ್ರದ್ಧಾಂಜಲಿ ಸಲ್ಲಿಸಿದರು. ಭಾರತದಲ್ಲಿ ಆ ಸಮಯದಲ್ಲಿ ಸಮಾವೇಶಗೊಂಡಿದ್ದ ಅಂತಾರಾಷ್ಟ್ರೀಯ ಪ್ರತಿನಿಧಿಗಳ ಸಮ್ಮೇಳನ ವಿಶ್ವ ಶಾಂತಿವಾದಿಗಳ ಸಮ್ಮೇಳನವೆಂದು ಖ್ಯಾತವಾಯಿತು.

ಅನೇಕ ದೇಶಗಳ ಕೆಲವು ಜನರು ತಮ್ಮನ್ನು ಭಾರತದಲ್ಲೇ ಭೇಟಿಯಾಗಬೇಕೆಂದು ತಮ್ಮ ಎರಡು ಆಶ್ರಮಗಳಲ್ಲಿ ಕೆಲ ಕಾಲದ ವರೆಗೆ ಇದ್ದು ತಮ್ಮ ಸಂದೇಶವನ್ನು ಅರ್ಥಮಾಡಿಕೊಳ್ಳಬೇಕೆಂಬುದು ಗಾಂಧೀಜಿಯವರ ಆಶಯವಾಗಿದ್ದಿತು. ಈ ಅಪೂರ್ವ ಸಮ್ಮೇಳನದ ದಿನ ನಿಗದಿಯಾಗುವ ಮೊದಲೇ ಗಾಂಧೀಜಿ ನಾಥೂರಾಮ್ ವಿನಾಯಕ ಗೋಡ್ಸೆ ಎಂಬ ರಾಜಕೀಯ ಹುಚ್ಚನೋರ್ವನ ಗುಂಡಿಗೆ ಆಹುತಿಯಾದರು.

ಗಾಂಧೀಜಿಯವರ ಕಲ್ಪನೆಯ ಈ ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳು ಮರಣ ದಂಡನೆಯ ವಿಷಯದಲ್ಲಿ ಗಾಂಧೀಜಿಯವರ ಅಭಿಪ್ರಾಯಗಳನ್ನು ಲಕ್ಷ್ಯದಲ್ಲಿಟ್ಟು ಅವರ ಹಂತಕನಿಗೆ ಮರಣ ದಂಡನೆಯಾಗದಂತೆ ವಿಫಲ ಯತ್ನ ನಡೆಸಿದರು.

ಇದಾದ ಹದಿನಾಲ್ಕು ವರ್ಷಗಳ ಬಳಿಕ 1963ರಲ್ಲಿ ನಾನು ಸೇವಾಗ್ರಾಮಕ್ಕಲ್ಲದಿದ್ದರೂ ಶಾಂತಿನಿಕೇತನಕ್ಕೆ ಭೇಟಿ ನೀಡಿದ್ದೆ. ಗಾಂಧೀಜಿಯವರೊಂದಿಗೆ ವಿಶೇಷ ಸಂಪರ್ಕದಲ್ಲಿ ಬಂದ ಕೆಲವೊಂದು ಪ್ರದೇಶಗಳಲ್ಲಿ ಪ್ರವಾಸ ಮಾಡಿದೆ. ಭಾರತದ ಜನತೆಯ ಹೃದಯ—ಮನಸ್ಸುಗಳ ಮೇಲೆ ಜವಾಹರಲಾಲರ ಪ್ರಭುತ್ವ ಮುಗಿಯುತ್ತ ಬಂದಿದ್ದ ಕಾಲವದು. ನೆಹರೂ ಅವರ ಸರ್ಕಾರವೇ ನಾನು ಮತ್ತು ನನ್ನ ಪತಿ ಭಾರತವನ್ನು ಸಂದರ್ಶಿಸಬೇಕೆಂದು ಆಹ್ವಾನ ನೀಡಿದ್ದಿತು.

ನನ್ನ ಭಾರತದ ಎರಡನೆಯ ಭೇಟಿ ಮೊದಲ ಭೇಟಿಗಿಂತಲೂ ಭಿನ್ನವಾಗಿದ್ದಿತು. ನಾವು ಈಗ ಕುಟೀರಗಳಲ್ಲಿ ಅಥವಾ ಶಿಬಿರಗಳಲ್ಲಿ ವಾಸಿಸದೇ ಭವ್ಯವಾದ ಬಂಗಲೆಗಳಲ್ಲಿ ಭಾರತದ ಗೌರವಾನ್ವಿತ ಅತಿಥಿಗಳಾಗಿ ವಾಸಿಸುತ್ತಿದ್ದೆವು. ಸ್ವತಂತ್ರ ಭಾರತದಲ್ಲಿ ಎಲ್ಲ ಕಡೆಗಳಲ್ಲಿ ಗಾಂಧೀಜಿ ಪ್ರತಿಮೆಗಳು ದೃಷ್ಟಿಗೆ ಬೀಳುತ್ತಿದ್ದವು. ಇದು ನಾವು ಗಮನಿಸಿದ ಒಂದು ಮಹತ್ವದ ಬದಲಾವಣೆ.

ಇಷ್ಟೆಲ್ಲ ಆತ್ಮೀಯ ಹಾಗೂ ಆದರದ ಸ್ವಾಗತ ಸತ್ಕಾರದ ಮಧ್ಯದಲ್ಲೂ, ನನಗೆ ನನ್ನ ಎರಡನೆಯ ಭೇಟಿಗಿಂತಲೂ ಮೊದಲ ಭಾರತ ಭೇಟಿಯ ಕಾಲದಲ್ಲೇ ಅಹಿಂಸಾತ್ಮಕವಾದ ಅಸಹಕಾರ ಆಂದೋಲನದ ಬಗ್ಗೆ ಹೆಚ್ಚು ಪರಿಣಾಮಕಾರಿ ಕಲ್ಪನೆಯಾಯಿತೆಂದು ಅನ್ನಿಸಿತು. ಯುದ್ಧರಹಿತ ವಿಶ್ವದ ಕಲ್ಪನೆ ಗಾಂಧೀಜಿಯವರ ಕಲ್ಪನೆ ಮಾತ್ರವಾಗಿರಲಿಲ್ಲ. ರವೀಂದ್ರನಾಥ ಠಾಕೂರ್ ಹಾಗೂ ಜವಾಹರಲಾಲ ನೆಹರೂ ಅವರೂ ಈ ಕಲ್ಪನೆಯಲ್ಲಿ ಪಾಲ್ಗೊಂಡಿದ್ದರು; ಸ್ವಾತಂತ್ರ್ಯದ ಶೈಶವಾವಸ್ಥೆಯಲ್ಲಿ ಮಹಾನಾಯಕರ ಮಾರ್ಗದರ್ಶನ ಅತ್ಯವಶ್ಯವಾಗಿದ್ದಿತು. ಮೂವರು ಮಹಾನಾಯಕರಿಗೆ ಜನ್ಮ ನೀಡಿದ ಭಾರತವೇ ಧನ್ಯ. ಅದಕ್ಕಾಗಿ ಪಶ್ಚಿಮದ ರಾಷ್ಟ್ರಗಳು ಭಾರತವನ್ನು ಅಭಿನಂದಿಸುತ್ತವೆ. ಅಹಿಂಸೆಯು ಗುರಿ ಸಾಧನೆಯ ಮಾರ್ಗದಲ್ಲಿ, ಮಾನವ ಜನಾಂಗದ ಆಧ್ಯಾತ್ಮಿಕ ಏಳಿಗೆಗೆ ಶ್ರಮಿಸಿದ ಈ ನಾಯಕತ್ರಯರ ಸೇವೆಯನ್ನು ಗೌರವದಿಂದ ಸ್ಮರಿಸಿಕೊಳ್ಳುತ್ತದೆ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ
Mis Case 20/68 in O.S. /1969.

ಮಹಾಲಕ್ಷ್ಮಿ ... ... ಅರ್ಜಿದಾರಳು ವಾದಿಳು

ಮತ್ತು

... ಸತ್ಯನಾಥಯ್ಯ .... ಎದುರು ಪ್ರತಿವಾದಿ

ಇವರೊಳಗೆ

ಎದುರು-ಪ್ರತಿವಾದಿಯಾದ ಕುಂದಾಪುರ ತಾಲೂಕು ನೂಜಾಡಿ ಗ್ರಾಮದಲ್ಲಿಯಿರುವ ಪರಮೇಶ್ವರಯ್ಯನವರ ಮಗ— ಟೀಚರ್ ಎನ್. ಸತ್ಯನಾಥಯ್ಯನವರಿಗೆ—

ವಾದಿಳು ತನ್ನಿಂದ ಪ್ರತಿವಾದಿಯಾದ ನೀವು ಮಾಡಿಕೊಂಡದ್ದೆಂಬ ಧರ್ಮಸಾಧನವನ್ನು ಕ್ಯಾನ್ಸಲ್ ಮಾಡಿ ಅಥವಾ ಅಸಿಂಧುವಾದದ್ದೆಂತ ಡಿಕ್ಲೇರ್ ಮಾಡಿಸಿ ಅದ್ಕೆ ಕಾರಣ [illegible] ಕೃಪೇತನ ಬಿ. ಶೆಡ್ಯೂಲು ಆಸ್ತಿ [illegible] ವಾದಿಳಿಗೆ ಸ್ವಾಧೀನ ಕೊಡಿಸಬೇಕಾ [illegible] ಕೊಡಿಸಬೇಕಾಗಿಯೂ ವ [illegible] ಕೇಳಿ ಮಾಡಿದ ದಾವೆಯು ತಾ. [illegible] 6-60ಕ್ಕೆ ನಿಂಮ ನೋಟೀಸಿನ ಬಗ್ಗೆ [illegible]. ನಿಂಮದೇನಾದರೂ ಆಕ್ಷೇಪ [illegible] ನೀವು ಆ ದಿವಸ ಬೆಳಿಗ್ಗೆ 10 [illegible] ಯಾ ಕೋರ್ಟಿನ ಮುಂದೆ ಹಾಜರಾಗಿ [illegible] ಮಾಡಿಕೊಳ್ಳತಕ್ಕದ್ದು. ಇಲ್ಲ [illegible] ನಿಂಮನ್ನು ಎಕ್ಸ್‌ಪಾರ್ಟಿ ಮಾಡಿ ನಂ [illegible] ಮಾಡಲಾಗುವದು.

(ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.)

B. Yogishwara Holla,
Advocate for Plaintiff.

ಉಡುಪಿ ಕರ್ನಾಟಕ ಸಂಘದ
ಜನಪ್ರಿಯ ಪ್ರಕಟಣೆಗಳು

***

೧ ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು

(ಡಾ। ಕೆ. ಎಲ್. ಐತಾಳ, ಎಂ. ಬಿ., ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ

(ಬಡೆಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಭದ್ರಾವತಿ)

ಸರ್ವರೂ ಓದಲೇ ಬೇಕಾದ ಭೌತಿಕದರ್ಶನದ ಸ್ಥೂಲ ಪರಿಚಯ. ಬೆಲೆ ರೂ. ಒಂದು

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ ೨೦ ಪೈಸೆ ಪ್ರತ್ಯೇಕ

ನವಭಾರತ ಪುಸ್ತಕ ಭಂಡಾರ,
ಪಾಲುಕೋಟಿ, ಉಡುಪಿ, ದ. ಕ.

ಮಾರ್ಶಲ್ ಲಾ ಆಡಳಿತದಲ್ಲಿ

ವಿಚಾರಣೆಯ ವೈಖರಿ

ಲೇ: ನಿರಂಜನ ಪ್ರಸಾದ

ಅದೊಂದು ಬಹು ದೊಡ್ಡ ತಮಾಷೆ ಯಾಗಿದ್ದಿತು. ಹಾಸ್ಯ ಅದರ ಗುರಿಯಲ್ಲ, ಭಯೋತ್ಪಾದನೆಯೇ ಅದರ ಗುರಿ. ಈ ಘಟನೆಗಳು ಸಂಭವಿಸಿ ಈಗಾಗಲೇ ಐವತ್ತು ವರ್ಷಗಳು ಕಳೆದಿವೆ; ನಾನು ಈ ಬಗ್ಗೆ ವಿಚಾರ ಮಾಡಿದಾಗಲೆಲ್ಲ ಇದೀ ಚಿತ್ರವೇ ನನ್ನ ಕಣ್ಣು ಮುಂದೆ ಬಂದು ನಿಲ್ಲುತ್ತವೆ. ಮಹಾತ್ಮಾ ಗಾಂಧೀಜಿಯವರು 1919ರ ಮಾರ್ಚ್ 30ರಂದು ಅಮೃತಸರದಲ್ಲಿ ಹಾಗೂ ಏಪ್ರಿಲ್ 6 ರಂದು ಲಾಹೋರಿನಲ್ಲಿ ಹರತಾಳವನ್ನು ಆಚರಿಸಲು ಕರೆಕೊಟ್ಟಿದರು.

ಬ್ರಿಟಿಷ್ ಆಡಳಿತಗಾರರು ಈ ಹರತಾಳಗಳ ಸಂಬಂಧದಲ್ಲಿ ಅನೇಕರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿದರು. ಪಂಜಾಬಿನಲ್ಲಿ ಅನಂತರ ಭಾರೀ ಭಯಾನಕ ವಾತಾವರಣವಿದ್ದಿತು. ಆಗ ಪಂಜಾಬಿನಲ್ಲಿದ್ದವರಿಗೆ ಮತ್ತು ಒಂದಿಲ್ಲೊಂದು ರೀತಿಯಲ್ಲಿ ಸ್ವಾತಂತ್ರ್ಯ ಚಳುವಳಿಗಾರರ ವಿಚಾರಣೆಯ ಪ್ರಕರಣಗಳೊಂದಿಗೆ ಸಂಬಂಧವುಳ್ಳವರಿಗೆ ಅಥವಾ ಪ್ರೌಢ ವ್ಯಕ್ತಿಗಳಿಗೆ ಪಂಜಾಬಿನಲ್ಲಿ ಆಗ ನೆಲೆಸಿದ್ದ ಭಾರೀ ಭಯಾನಕ ವಾತಾವರಣದ ಸ್ಪಷ್ಟ ಕಲ್ಪನೆಯಿರಬೇಕು.

ಈ ಹರತಾಳಗಳ ಸಂಬಂಧದಲ್ಲಿ ಬಂಧನಕ್ಕೆ ಒಳಗಾದವರ ವಿಚಾರಣೆ ನಡೆಯಿತು. ವ್ಯಕ್ತಿಗಳೂ ಪಕ್ಷಗಳೂ ಈ ವಿಚಾರಣೆಗೆ ಒಳಗಾದವು. ಕಲವು ಪ್ರಕರಣಗಳ ವಿಚಾರಣೆಯಂತೂ ಕೇವಲ ಒಂದು ನೆಪ ಮಾತ್ರ. ಮಾರ್ಶಲ್‌ಲಾನಿಯಮಗಳ ಘೋಷಣೆಯಿಂದಾಗಿ ಜನರನ್ನು ಬೆದರಿಸುವುದೇ ಈ ವಿಚಾರಣೆಗಳ ಉದ್ದೇಶವಾಗಿತ್ತು. ಬಹಳ ಜನರನ್ನು ಸಾರ್ವಜನಿಕ ಸ್ಥಳಗಳಲ್ಲಿ ಗಲ್ಲಿಗೆ ಏರಿಸಲಾಯಿತು. ಬ್ರಿಟಿಷ್ ಆಡಳಿತಗಾರರ ವಿಚಾರಣಾ ವೈಖರಿ ವಿಲಕ್ಷಣವಾಗಿತ್ತು. ಲಾಹೋರ್ ಷಡ್ಯಂತ್ರ ಪ್ರಕರಣ ಇದಕ್ಕೆ ಒಂದು ಉತ್ತಮ ನಿದರ್ಶನ.

ಲಾಹೋರಿನಲ್ಲಿ ಒಂದು ಮದುವೆಯ ಸಮಾರಂಭ. ವಧುವರಗಳು, ಮದುಮಗ, ಅವರ ಬಂಧುಗಳು ಮತ್ತು ಇಬ್ಬರು ಸಾಕ್ಷಿಗಳು ಇವರೆಲ್ಲರನ್ನು ಬ್ರಿಟಿಷರು ಬಂಧಿಸಿ ಗಲ್ಲಿಗೇರಿಸಿದರು. ಅದಕ್ಕೆ ಅವರು ಕೊಟ್ಟಿದ ಕಾರಣ ಇವರೆಲ್ಲರ ಸಂಖ್ಯೆ ಏಳಕ್ಕಿಂತ ಹೆಚ್ಚಿದ್ದಿತಂತೆ! ಮಾರ್ಶಲ್ ಲಾ ಆಡಳಿತದಲ್ಲಿ ಇದೇ ವಿಚಾರಣೆಯ ಒಂದೇ ಉದಾಹರಣೆ ಮಾತ್ರ. ಇನ್ನೊಂದು ಪ್ರಕರಣ ಸ್ವಲ್ಪ ತಮಾಷೆಯದು. ಸುದೀರ್ಘ ಹರತಾಳಗಳಿಂದಾಗಿ ಕೆಲಸವಿರಲಿಲ್ಲ. ಇದರಿಂದ ಬೇಸರದಿಂದ ನಾಲ್ವರು—ಅವರಲ್ಲಿ ಒಬ್ಬಳು ಗಾಯಕಿ—ಹೇಗೋ ಸ್ವಲ್ಪ ದುಡ್ಡು ಸಂಪಾದಿಸಿಕೊಂಡು, ಅದರಿಂದ ದೇಶೀ ಮದ್ಯವನ್ನು ಕೊಂಡರು. ಒಂದು ವಾಹನವನ್ನು ಬಾಡಿಗೆಗೆ ತೆಗೆದುಕೊಂಡು ಮಿಸ್ಟರ್ ವಿಲಿಯಂ ಬಾಲುವೆಯ ಕಡೆಗೆ ಜಲ ವಿಹಾರಕ್ಕೆಂದು ಹೊರಟರು. ವಾಹನದ ಡ್ರೈವರನನ್ನು ಅವರು ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲವೇನೋ; ಆವನೂ ಸೇರಿದಂತೆ ವಾಹನದಲ್ಲಿ ಒಟ್ಟು ಐದು ಜನರಿದ್ದರು. ಬ್ರಿಟಿಷ್ ಆಡಳಿತಗಾರರ ದೃಷ್ಟಿಯಲ್ಲಿ ಇದು ಅಕ್ರಮ ಸಮಾವೇಶವಾಗಿತ್ತು; ಬ್ರಿಟಿಷರು ಈ ಐವರನ್ನು ಬಂಧಿಸಿ ಅವರನ್ನು ಗಲ್ಲಿಗೇರಿಸಿದರು. ಮೃತದೇಹಗಳ ಹತ್ತಿರವಿದ್ದ ಮದ್ಯದ ಶೀಷೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಈ ದಂಡನೆ ಘಟನೆಯ ನಂತರ ಘೋಷಣೆ ಮಾಡಿದರು. ಇದು ವ್ಯಕ್ತಿಗಳ ವಿಷಯವಾಯಿತು.

ರಾಜಕೋಟ್, ಅಮೃತಸರ, ಮತ್ತು ಗುಜರನ್‌ವಾಲ ಈ ಮೂರು "ಒಳಸಂಚಿನ ಪ್ರಕರಣಗಳು" ಮೊದಲ ಪ್ರಕರಣಗಳಾಗಿದ್ದವು. ನಾನು ಈ ಮೂರು ಪ್ರಕರಣಗಳಲ್ಲೂ ಸಹ ಆಗಾಗ್ಗೆ ನನ್ನ ಕಕ್ಷಿಗಾರರ ಪರವಾಗಿ ವಾದಿಸಬೇಕಾಗಿದ್ದಿತು. ಹಿರಿಯ ವಕೀಲರುಗಳು "ಪಿತೂರಿಯ ಪ್ರಕರಣ"ಗಳ ಪರವಾಗಿ ವಕಾಲತ್ತು ಮಾಡಲು ಅಂಜುತ್ತಿದ್ದರು. ಆದರೂ ಕೆಲವು ಜನ ಕಿರಿಯ ವಕೀಲರು ಮಾತ್ರ ಯಾರಿಗೂ ಅಂಜದೆ ಧೈರ್ಯದಿಂದ "ಪಿತೂರಿ ಪ್ರಕರಣ"ದ ಆರೋಪಿಗಳ ಪರವಾಗಿ, ಯಾವ ಶುಲ್ಕವನ್ನೂ ಪಡೆಯದೇ ವಾದಿಸಲು ಮುಂದೆ ಬಂದರು.

ಪಿತೂರಿ ಪ್ರಕರಣಗಳ ವಿಚಾರಣೆಯಲ್ಲೆಲ್ಲ "ಅಮೃತಸರ ಪ್ರಕರಣ" ಭಾರೀ ಭಯಾನಕವಿದ್ದಿತು.

ಲಾಹೋರ ಪಿತೂರಿ ಪ್ರಕರಣದಲ್ಲಿ ನಾನು ವಿಶೇಷವಾಗಿ ಹಾಜರಾಗಬೇಕಾಗುತ್ತಿತ್ತು. ಎಲ್. ಹರಿಕಿಶನಲಾಲ್, ಎಲ್. ದುನಿಚಂದ್, ಪಂಡಿತ ರಾಮಭಜದತ್ತ, ಗೋಕುಲಸಿಂಗ್ ಮತ್ತು ಇತರ ಮುಖಂಡರು ಈ ಪ್ರಕರಣದಲ್ಲಿ ವಿಚಾರಣೆಗೆ ಗುರಿಯಾಗಿದ್ದರು.

ಈ ಪಿತೂರಿ ಪ್ರಕರಣಗಳಲ್ಲಿ ವಿಚಾರಣಾ ತಂಡಗಳ ಅಧ್ಯಕ್ಷರುಗಳು ಮಾರ್ಶಲ್ ಲಾ ಆಡಳಿತದ ಪ್ರತಿನಿಧಿಗಳಾಗಿದ್ದರಿಂದ, ಅವರು ಸಾಕ್ಷಿದಾರರ ಪುರಾವೆಗಳನ್ನು ದಾಖಲು ಮಾಡಿಕೊಳ್ಳುತ್ತಿರಲಿಲ್ಲ. ತಮಗೆ ಅನುಕೂಲವೆಂದು ಕಂಡು ಬಂದವುಗಳನ್ನು ಮಾತ್ರ ದಾಖಲು ಮಾಡಿಕೊಳ್ಳುತ್ತಿದ್ದರು. ವಿಚಾರಣೆ ಕೇವಲ ಒಂದು ಘಟನೆಯಾಗಿತ್ತು. ನಾವು ಒಂದು ದಿನ ಈ ನಾಟಕದ ತೆರೆಯನ್ನು ಎಳೆಯಲು ನಿರ್ಧರಿಸಿದೆವು. ಭಾರತೀಯ ವಾದ ವಿಚಾರಣೆಯ ಕ್ರಮವನ್ನು ಪ್ರತಿಭಟಿಸಿ ವಕೀಲರಿಂದ ನಾವೆಲ್ಲರೂ ಕೋರ್ಟಿನಿಂದ ಹೊರಟು ಹೋಗುವುದಾಗಿ ಪಿತೂರಿ ಪ್ರಕರಣದ ನ್ಯಾಯಾಧೀಶರಿಗೆ ಹೇಳಿದೆವು. ಈ ಘಟನೆಯ ಬಳಿಕ ವಿಚಾರಣೆಗಳು ವಾಸ್ತವದ ರೂಪಕ್ಕೆ ಬಂದವು. ಸಾಕ್ಷಿಗಳು ನಿರ್ಭಯವಾಗಿ ತಮಗೆ ಸರಿ ಕಂಡದ್ದನ್ನು ಹೇಳಲಾರಂಭಿಸಿದರು.

ಈ ಮೂರು ಪಿತೂರಿ ಪ್ರಕರಣಗಳ ವಿ

NAVAYUGA

Supplement on

INDUSTRY & TRADE

Prof. K. S. Haridas Bhat, M. A., Guest Editor for the Industrial and Trade Supplement of Navayuga

'NAVAYUGA', one of the most reputed weeklies of Mysore State proposes to issue a supplement on INDUSTRY & TRADE with a view to highlight the problems of and prospects for industrial and commercial development of the State of Mysore

You are certainly aware that the State of Mysore with 150 miles of coast line, rich natural resources and an abundant supply of electricity, still languishes for lack of industrial leadership. Inspite of 20 years of independence and the few pockets of industrial prosperity like Bangalore and Bhadravathi, the impact of industrial development is least felt in the State. The Government also has been finding it difficult to make compelling and adequate case in the Centre for industrial licensing in the State. The net result has been a classic example of "poverty in the midst of plenty".

It is therefore essential that the public should be well impressed of the issues involved so that their attitude may become development-oriented and the hands of the Government strengthened in its fight for rights.

Our supplement will consist of important contributions from State Ministers, Industrial executives, bankers and other businessmen. It will be fully illustrated and brought out according to high standards of journalism that this weekly has attained over the years

Needless to say that a supplement like this would form an effective medium to advertise your goods and services. It will reach both the classes and the masses of Mysore State.

We are glad to accept a brief account of your firm, its Directors and leaders (Limit: 100 words). Please send in your material, blocks and stereos if any on or before May 10th 1969. The supplement will come out on May 25th 1969.

ADVT. MANAGER

NAVAYUGA

UDIPI, S K

ಧರ್ಮಗಳ ಅವಸ್ಥೆ

ಭಾರತದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಪ್ರಭಾವ ಧರ್ಮಕ್ಕಿದೆ. ಆದರೆ ಧರ್ಮವು ಇಂದು ಒಂದು ಸಂಪ್ರದಾಯವಾಗಿ ಬಿಟ್ಟಿದೆ. ಹಿಂದೂ ಧರ್ಮದಲ್ಲಿ ಜ್ಞಾನಕ್ಕೆ ಕೊಟ್ಟಷ್ಟು ಮಹತ್ವ ಬೇರೆ ಯಾವ ಧರ್ಮವೂ ಕೊಟ್ಟಿಲ್ಲ. ಆದರೆ ಇಂದು ಹಿಂದುಗಳಲ್ಲಿಯಷ್ಟು ಅಜ್ಞಾನಿಗಳ ಸಂಖ್ಯೆ ಬೇರೆ ಯಾವುದರಲ್ಲಿಯೂ ಇಲ್ಲ. ಮುಹಮ್ಮದ್ ಸ್ಥಾಪನೆಗೆ ಬದ್ಧ ಧರ್ಮವು ಮಾಡಿದಷ್ಟು ವಿರೋಧ ಬೇರೆ ಯಾರೂ ಮಾಡಿಲ್ಲ. ಆದರೆ ಬೌದ್ಧರು ಸ್ಥಾಪಿಸಿದಷ್ಟು ಮಠಗಳನ್ನು ಬೇರೆ ಯಾವ ಧರ್ಮದವರೂ ಸ್ಥಾಪಿಸಿಲ್ಲ. ಪ್ರಾಮಾಣಿಕತನಕ್ಕೆ ಮುಸಲ್ಮಾನ ಧರ್ಮದಷ್ಟು ಪ್ರಾಧಾನ್ಯ ಬೇರೆ ಯಾರೂ ಕೊಟ್ಟಿಲ್ಲ. ಆದರೆ ಭಾರತದಲ್ಲಿ ಮುಸಲ್ಮಾನರ ಪ್ರಭಾವದ ಕಾಲದಲ್ಲಿ ಪ್ರಾಮಾಣಿಕತನಕ್ಕೆ ಒಂದಿಷ್ಟೂ ಮಹತ್ವ ಕೊಡುತ್ತಿರಲಿಲ್ಲ. ಜೈನಧರ್ಮವು ಅಪರಿಗ್ರಹ ವಿಚಾರವನ್ನೇ ಹೆಚ್ಚಾಗಿ ಹೇಳಿತು. ಆದರೆ ಇಂದು ಜೈನಧರ್ಮೀಯರಲ್ಲೇ ಪರಿಗ್ರಹಿಗಳು ಹೆಚ್ಚು. ಕ್ರಿಶ್ಚಿಯನ್ ಧರ್ಮದ ಗ್ರಂಥಗಳಲ್ಲಿಯಷ್ಟು ಯುದ್ಧ ನಿಷೇಧ ಇನ್ನೆಲ್ಲೂ ಕಾಣುವುದಿಲ್ಲ. ಆದರೆ ಈ ವರೆಗೆ ಜಗತ್ತಿನಲ್ಲಿ ಎಲ್ಲಕ್ಕಿಂತ ಹೆಚ್ಚಿನ ಯುದ್ಧ ಕ್ರಿಶ್ಚಿಯನ್ನರೇ ಮಾಡಿದ್ದಾರೆ.

—ನಾರಾಯಣ ದೇಸಾಯಿ.

ವಿಚಾರಣೆಯ ಸುದ್ದಿ ಹಬ್ಬಿದಂತೆಲ್ಲ ವಾತಾವರಣ ಪೂರ್ಣ ಬದಲಾಯಿಸಿತು. ಎಲ್ಲೆಡೆಗೂ ಸ್ವಾತಂತ್ರ್ಯಕ್ಕಾಗಿ ಹೆಚ್ಚಿನ ಹುಮ್ಮಸ್ಸು ಕಂಡು ಬಂದಿತು. ಹಿಂದುಗಳು, ಮುಸ್ಲಿಮರು ಮತ್ತು ಸಿಕ್ಖರು ಹೋರಾಟಕ್ಕಾಗಿ ಒಂದಾದರು. ಈ ಹೋರಾಟವೇ ಭಾರತದ ಸ್ವಾತಂತ್ರ್ಯಕ್ಕೆ ಅಡಿಪಾಯ ಹಾಕಿತು.

ಶಕ್ತಿಯು ಹೊರಗಿನ ಮಾತು

ಹಾತಿಮ ಹಾತೀನ ವಿದೇಶಕ್ಕೆ ಹೊರಟಿದ್ದ. ಹೊರಡುವಾಗ ಆತ ಹೆಂಡತಿಗೆ ಕೇಳಿದ "ನಿನ್ನ ಹೊಟ್ಟೆಬಟ್ಟೆಯ ಖರ್ಚು ಎಷ್ಟು ದಿನ ಹಣ ಸಂಗ್ರಹಿಸಿ ಕೊಡಲಿ? ಹೋಗಲಿ?" ಎಂದು.

"ನನ್ನ ಆಯುಷ್ಯ ಇರುವವರೆಗೆ ಸಾಲುವಷ್ಟು" ಎಂದು ಹೇಳಿ ಹೆಂಡತಿ ಸುಮ್ಮನಾದಳು!

"ನಿನ್ನ ಆಯುಷ್ಯ ಗೊತ್ತಾಗುವುದು ನನ್ನ ಶಕ್ತಿಯ ಹೊರಗಿನ ಮಾತು" ಎಂದು ಹಾತಿಮ ಹೇಳಿದ.

"ಹಾಗಾದರೆ ನನ್ನ ಹೊಟ್ಟೆಬಟ್ಟೆಯ ವ್ಯವಸ್ಥೆ ಮಾಡುವುದು ಸಹ ನಿಮ್ಮ ಶಕ್ತಿಯ ಹೊರಗಿನ ಮಾತು. ಈ ಕೆಲಸ ಯಾರದೋ ಅವನೇ ವ್ಯವಸ್ಥೆ ಮಾಡಲಿ" ಎಂದ ಅವಳು ಉತ್ತರ ಕೊಟ್ಟಳು.

ಹೆಂಡತಿಯ ಆತ್ಮ ವಿಶ್ವಾಸ ಕಂಡು ನಿಶ್ಚಿಂತನಾಗಿ ಹಾತಿಮ ವಿದೇಶಕ್ಕೆ ಹೋಗಿಬಿಟ್ಟ.

"ತಂಗೀ, ನಿನ್ನ ಬಗ್ಗೆ ಹಾತಿಮ ಏನು ವ್ಯವಸ್ಥೆ ಮಾಡಿಟ್ಟು ಹೋಗಿದ್ದಾನೆ?" ಎಂದು ನೆರೆಯ ಹೆಂಗಸೊಬ್ಬಳು ಅವನ ಪತ್ನಿಗೆ ಕೇಳಿದಳು.

"ನನ್ನ ಗಂಡನೇನು ವ್ಯವಸ್ಥೆ ಮಾಡ್ಯಾನು? ಅವನದೂ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ನಮ್ಮೆಲ್ಲರಿಗೂ ಹೊಟ್ಟೆಗೆ ಕೊಡುವಾತ (ದೇವರು) ಇನ್ನೂ ಇಲ್ಲಿಯೇ ಇದ್ದಾನೆ" ಎಂದು ಅವಳು ನಕ್ಕು ಹೇಳಿಬಿಟ್ಟಳು.

ಗಂಗೆಮೂಲೆ ಮಾಲಿಂಗ ಭಟ್ರು

ಲೇಖಕರು: ದಿ। ವಿ. ನರಸಿಂಹ ವರ್ಮ, ಬಿ.ಎ.ಎಲ್.ಎಲ್.ಬಿ., ವಿಟ್ಲ ಅರಮನೆ

ಎಂಭತ್ತರ ಗಡಿ ದಾಟಿದರೂ ಅವರಿಗಿನ್ನೂ ಹರೆಯದ ಹುಮ್ಮಸ್ಸು. ಹಣೆಯಲ್ಲಿ ಚಿಟ್ಟಿನಗಲದ ಅಕ್ಷತೆ. ಮುಖದಲ್ಲಿ ಮಾಗುಳು ನಗೆ. ತಲೆ ನರೆತರೂ ಶರೀರದಲ್ಲಿ ಬೇರೆಲ್ಲೂ ಜರೆಯು ಕಾಣಿಸಿಲ್ಲ. ಕಂಚಿನ ಕಂಠ. ಸೊಂಟಕ್ಕೆ ಸುತ್ತಿದ ಕೆಂಪಂಚಿನ ಧೋತ್ರ. ಹೆಗಲಲ್ಲಿ ಉತ್ತರೀಯ. ಅವರನ್ನು ಇದಕ್ಕಿಂತ ಹೆಚ್ಚಿನ ಉಡಿಗೆಯಲ್ಲಿ ಯಾರೂ ಎಂದೂ ಕಂಡಿಲ್ಲ. ಮೊನ್ನೆ ಮೊನ್ನೆ ಕಾರಣಾಂತರದಿಂದ ಗಂಗೆಮೂಲೆಗೆ ಹೋದಾಗ ಅವರ ಗದ್ದೆಯ ಕಟ್ಟಹುಣಿಯಲ್ಲಿ ಎದುರುಗಡೆಯಿಂದ ಅವರ ಸವಾರಿ ಬಂತು.

"ನೀವಾ! ಎತ್ತ ಸವಾರಿ? ಮನೆಯ ಕಡೆಗೆ ಹೋಗುವ. ಏನು! ನಮ್ಮಲ್ಲಿ ಬರಬಾರದೆಂದೇ ನಿಶ್ಚಯಮಾಡಿ ಬಿಟ್ಟಿರಾ! ಕಳೆದ ವರ್ಷ ವೈಶಾಖದಲ್ಲಿ ನಮ್ಮಲ್ಲಿ ಆದ ತಾಳಮದ್ದಳೆ ಕೂಟಕ್ಕೆ ಬಂದವರು ಇಂದೇ ಈ ಕಡೆ ಬಂದಿರಿ! ನಾನು ಕಾಣದಿರುತ್ತಿದ್ದರೆ! ಖಂಡಿತ ಮನೆಯ ಕಡೆ ನೋಡದೇ ಅತ್ತಲೇ ಹೋಗುತ್ತಿದ್ದಿರಿ. ಆಗಲಿ! ಇನ್ನು ಬಿಡುವುದಿಲ್ಲ" ಎಂದು ಕರೆದುಕೊಂಡೇ ಹೋದರು.

ಇದನ್ನು ಯಾಕೆ ಹೇಳಿದೆನೆಂದರೆ ಸಾಮಾನ್ಯವಾಗಿ ಯುವಕರೆಂದರೆ ಅವರಲ್ಲಿ ಒಂದು ರೀತಿಯ ವಾತ್ಸಲ್ಯ ಅವರಿಗೆ. ಯುವಕರನ್ನು ಕಂಡರೆ ಜಟಿಗಟ್ಟುವ ಕುಳ ಅಲ್ಲವರು. ಹಾಗೆಂದು ಅವರ ಮೂರು ಮಂದಿ ಮಕ್ಕಳಲ್ಲಿ! ಒಂದು ತರದ ಬಿಗಿತದಿಂದಲೇ ಇದೆ; ಅವರ ನಡೆ ನುಡಿ.

ನಮ್ಮ ಹಳ್ಳಿಯ ಪಟ್ಟಿಗೆ ಅವರೆಂದರೆ ಅಜಾತಶತ್ರುಗಳೆಂದರೇನೂ ಅತಿಶಯೋಕ್ತಿಯಾಗಲಾರದು. ಅವರ ಬಾಯಿಯಿಂದಲೇ ಕೇಳಿದಂತೆ; ಅವರು ಏಗಳ ಪಾಠಶಾಲೆಗೆ ಹೋಗುತ್ತಿದ್ದ ಕಾಲದಿಂದ ಇಂದಿನ ವರೆಗೆ ಜ್ವರದಲ್ಲೂ ನಿಸ್ತ್ರಾಣರಾಗಿದ್ದಿಲ್ಲ. ವೈರ ದ್ವೇಷಗಳಿಂದ ಐಹಿಕ ಆಮುಷ್ಮಿಕಗಳೇ ಕೆಡುತ್ತವೆಂಬ ತತ್ವದ ಪ್ರಬಲ ಪ್ರತಿಪಾದಕರವರು. ಅವರ ಸಿದ್ಧಾಂತಕ್ಕೆ ಮೊದಲೇ ಹೇಳಿದಂತೆ ಅವರ ಶ್ರೀಮುಖದ ಮುಗುಳು ನಗೆಯೇ ಸಾಕ್ಷಿ. ಆ ನಗೆಯು ಎಂಥ ಎದುರಾಳಿಯನ್ನೂ ಬಲೆಗೆ ಬೀಳಿಸುವುದೆಂಬುದು ಅವರನ್ನು ಕಂಡವರಿಗೆ ಸೂರ್ಯಪ್ರಕಾಶದಷ್ಟು ಸ್ಪಷ್ಟ.

ಊರಲ್ಲಿ ಎಲ್ಲರೂ ಅವರ ಸಲಹೆ ಸೂಚನೆಗಳನ್ನು ಕೇಳುವವರೇ. ತಮ್ಮ ತಮ್ಮ ಕಷ್ಟಕಾರ್ಪಣ್ಯಗಳ ಪರಿಹಾರಕ್ಕೆ ಅವರಲ್ಲೇ ಬರಬೇಕು. ವ್ಯಾಜ್ಯ ಮಾಡಿಕೊಂಡು ಜನರು ಕೋರ್ಟುಕಟ್ಟೆಗೆ ಹತ್ತುವುದು ಸರ್ವಥಾ ಅವರಿಗೆ ಸಮ್ಮತವಲ್ಲ. ಅವರ ಮನೆಯ ಜಾವಡಿಯೇ ಅಂಥ ವ್ಯಾಜ್ಯಗಳ ಪರಿಹಾರ ಸ್ಥಳ. ಕಾರಣ ಊರವರಿಗೆ ಅವರ ನ್ಯಾಯನಿರ್ಣಯದಲ್ಲಿ ಅಷ್ಟೊಂದು ನಂಬಿಕೆ. ಅವರಾದರೂ ಊರವರಲ್ಲಿ ಒಗ್ಗಟ್ಟನ್ನು ಹೇಗಾದರೂ ಸಾಧಿಸಬೇಕೆಂಬ ಉತ್ಕಟೇಚ್ಛೆಯುಳ್ಳವರು. ಹಳ್ಳಿಯವರ ವೈಯಕ್ತಿಕ ಸಮಸ್ಯೆಗಳಲ್ಲಿ ಅವರ ಹಿಡಿತ ಅಷ್ಟಿದೆ. ಆದರೆ ಅವರೊಡನೆ ಕೇಳಿದರೆ ಈಗಿನ ರಾಜಕೀಯದಿಂದ ಪ್ರಜಾತಂತ್ರವಾಗಿ ಇಂದು ಶಾಂತಿಯೇ ಹಾರಿ ಹೋಗುತ್ತಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಮಣಿ ಮಂತ್ರೌಷಧಿಗಳ ಪ್ರಯೋಗದಲ್ಲೂ ಅವರದು ಎತ್ತಿದ ಕೈ. ಅವರು ಕೊಟ್ಟ ಚೂರ್ಣ ಕಷಾಯ ಲೇಹಗಳಿಂದ ಗುಣಹೊಂದಿದ ಹಳ್ಳಿಯ ರೈತರು ಅವರನ್ನು ಕೊಂಡಾಡಿದರೆ ತಪ್ಪೇ? ಮಾಲಿಂಗಣ್ಣರ ಮಟ್ಟು ಮನೆಮನೆಯ ಮಾತು. ಆದರೆ ಯಾರಾದರೂ ಅವರನ್ನು ಒಂದು ಗುಲಗುಂಜಿಯಷ್ಟು ಅವರ ಮುಂದೆ ಹೊಗಳಿದರೆ ಮಾತ್ರ ಉರಿದು ಕೆಂಡವಾಗುತ್ತಾರೆ. ಥಟ್ಟನೆ ಹೇಳಿಬಿಡುತ್ತಿದ್ದಾರೆ. "ಛೇ! ಏನು ಅಸಂಬದ್ಧ! ನಾನು ಈ ಕೆಲಸವನ್ನು ಈಗಿಂದಲೇ ಬಿಡುತ್ತೇನೆ. ನಿಮ್ಮ ಕೀರ್ತನೆ ನನಗೆ ಬೇಡ. ನನ್ನ ಹಳ್ಳಿ, ನೆರೆಹೊರೆ ಎಂದು ಕೈಲಾದುದನ್ನು ಮಾಡಿದರೆ, ನನ್ನನ್ನು ಅಟ್ಟಕೇರಿಸಿ ಕೆಡಿಸುತ್ತೀರಿ. ಇದೆಲ್ಲ ಒಳ್ಳೆಯದಲ್ಲ". ಕಡ್ಡಿ ಮುರಿದಂತೆ ಮಾತು.

ಇವರ ಪ್ರೀತಿ, ಭೂತಾನುಕಂಪಗಳು ಕೇವಲ ತಮ್ಮ ಹಳ್ಳಿಗೇ ಸೀಮಿತವೆಂದು ತಿಳಿದರೆ ನಾವು ತಪ್ಪು ತಿಳಿದಂತೆಯೇ ಸರಿ. ಏನೋ ಈಗ ಎರಡು ದಶಕಗಳಿಂದ ಮಾಲಿಂಗ ಭಟ್ರು ಮಕ್ಕಳ ಮಾತಿಗೆ ಮನ್ನಣೆ ಕೊಟ್ಟು ಅವರ ಕಲೆಯಲ್ಲಿ ಲೌಕಿಕವನ್ನು ತೊರೆದು "ರಾಮಕೃಷ್ಣ" ಅಂತ ಮನೆಯಲ್ಲೇ ಇದ್ದಾರೆ. ಅವರ ತೀರ್ಥಯಾತ್ರಾ ಪ್ರಸಂಗವನ್ನು ಆದಿಯಿಂದ ಇತಿಯ ವರೆಗೆ ಅವರ ಬಾಯಿಯಿಂದ ಕೇಳಿದರೇನೇ ಸ್ವಾರಸ್ಯ. ಬದರಿಯಿಂದ ರಾಮೇಶ್ವರದ ವರೆಗಿನ ಯಾತ್ರೆಯನ್ನು ವಿವರ ವಿವರವಾಗಿ ಇಂದು ಸ್ಮರಿಸುತ್ತಿರುತ್ತಾರೆ.

ಇನ್ನು ಅವರನ್ನು ಮೈಮರೆಸುವ ವಿಷಯವೆಂದರೆ "ಗಂಗೆಮೂಲೆ"ಯ ವಿಷಯ. ಜೀವನ್ಮುಕ್ತ ವಿಷಯ. ಒಮ್ಮೆ ನಾನೇ ಆ ಪ್ರಸ್ತಾಪವೆತ್ತಿದೆ. ಆ ಉದ್ಗಾರ, ಹ್ಹ! ಯಾವ ಮಹಾನುಭಾವ ನಮ್ಮ ಈ ಆಸ್ತಿಗೆ ಈ ಹೆಸರಿಟ್ಟನೋ! ಸ್ವರ್ಗದ ಗಂಗೆ ಪ್ರಥಮತಃ ಭೂಸ್ಪರ್ಶ ಮಾಡಿದ ಸ್ಥಳ ಇದೇ ಎಂದೇ ನನ್ನ ಭಾವನೆ. ನೋಡಿ! ನನ್ನ ಹದಿನಾರನೆ ವರ್ಷಕ್ಕೆ ತೀರ್ಥರೂಪರು ತೋಡಿಸಿದ ಕೆರೆ. ಎಂಥಹ ವೈಶಾಖದಲ್ಲೂ ತುಂಬು ನೀರು. ತಂದೆಯವರ ಕಾಲ ಕಳೆದ ಮೇಲೆ ನಾನೇ ಇಟ್ಟ ಹನ್ನೆರಡು ಖಂಡಿಯ ತೋಟ ನೋಡಿದ್ದೀರಷ್ಟೇ. ಈ ಜಾಗ ಒಳ್ಳೆಯ ಕೃಷಿಕನ ಕೈಗೆ ಸಿಕ್ಕರೆ ಏನು ಬೆಳೆ ಬಂದೀತು! ಎಂದು ಹೇಳುತ್ತಾ ಮೈಮರೆಯುತ್ತಾರೆ.

ಹಾ! ಹೀಗೆ ಹೇಳುವಾಗ ಜ್ಞಾಪಕಕ್ಕೆ ಬಂತು. ಅವರಿಗೆ ಸಾಹಿತ್ಯವೆಂದರೆ ಪ್ರಾಣ. ಸಂಸ್ಕೃತ ಅಭ್ಯಾಸ ಅವರ ತೀರ್ಥರೂಪರಿಂದಲೇ ಅವರಿಗೆ ನಡೆಯಿತಂತೆ. "ಶ್ರೀ ಮದ್ಭಗವದ್ಗೀತೆ" ಅವರ ತುದಿ ನಾಲಗೆಯಲ್ಲಿ ನೆಲಸಿದೆ. ಕನ್ನಡ ಜೈಮಿನಿ, ಗದುಗಿನ ಭಾರತ, ರಾಜಶೇಖರ ವಿಲಾಸ, ಹಾಗೆ ಯಕ್ಷಗಾನ ಪ್ರಸಂಗಗಳು, ಪದ್ಯಗಳನ್ನು ಉದಾಹರಣೆಗೆ ಸಂದರ್ಭಕ್ಕೆ ಸರಿಯಾಗಿ ಮಾತಿನ ಮಧ್ಯೆ ಹೃದ್ಯವಾಗಿ ಹೇಳುವುದುಂಟು. ತಮ್ಮ ಕಂಚಿನ ಕಂಠದಿಂದ. ನಾನು ಹೇಳಿದೆನಲ್ಲ! ಮೊನ್ನೆ ಮೊನ್ನೆ ಅವರಲ್ಲಿಗೆ ಹೋಗಿದ್ದೆನೆಂದು. ಆಗ ಆ ಮಾತು. ಈ ಮಾತು ಬಂದು ಅವರೇ ರಚಿಸಿದ ಯಕ್ಷಗಾನ ರೀತಿಯ ಒಂದು ತುಳು ಪದ್ಯವನ್ನು ಹಾಡಿದರು. ಅದನ್ನಾಗಲೇ ಬರಕೊಂಡೆ. ಅದು ಹೀಗಿದೆ—

ರಾಗ— ಕೇದಾರಗೌಳ; ಝಂಪೆತಾಳ

ನೀರ ನಿಧಿ ಗಂಗೆಮೂಲೆ| ಬಲೆಯಂಚಿ
ಪೂರ ಪೂಲ್ಯಂಟಿ ಸೂಲೆ||
ಸಾರ ದಾರೆಗ್ ಪೂರ್ಲ| ತ್ತು ಎಪ್ಪ|
ಸಾರ ಸಸ್ಯಸ್ವ ಕಲ್ ||೧||
ಕಂಗ್‌ಗ್ ಕಟೆ ಸೂಳೆಯೇ |
ವಾ ಸೇಬಿ|
ಬಿಂಗಾರೊ ಸಿರಿಕ ನಿಲೆಯೆ,
ನರಮಾನಿಟ ಪುಣ್ಯಮಾಂಪ್ರ|
ಮಣ್ಣ್ ಬ.|
ಸರಿ ಪುಣೆಲೆ-ಕವಿ ದಾನೆ ||

ಇಬ್ಬರೂ ಘೊಳ್ಳೆಂದು ನಕ್ಕೆವು.

ಎರಡು ವರ್ಷಗಳ ಹಿಂದೆ ಅವರಲ್ಲಿಗೆ ಅವರ ಹಳೆಯ ಮಿತ್ರ ಕಾಶಿಯ ವಿದ್ವಾಂಸರಾದ ತರ್ಕ ಪಂಚಾನನ ಮಹೇಶ್ವರ ಶಾಸ್ತ್ರಿಗಳು ಬಂದು ಎರಡು ದಿನವಿದ್ದು

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಶುದ್ಧವಾಗಿಯೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
O. S. 118/1968.

ಸುಶೀಲ — —ವಾದಿ
ಉಮಣ ಯಾನೆ ಮೋಂಟ ಶೆಟ್ಟಿ ಕೂಡಾ — —ಪ್ರತಿವಾದಿರು

ಸದ್ರಿ ದಾವೆಯ 23ರಿಂದ 27ನೇ ವರೆಗಿನ ಪ್ರತಿವಾದಿರು
23. ಗಂಗಮ್ಮ, ಕೊರಗು ಯಾನೆ ಅಕ್ಕಮ್ಮನ ಮಗಳು.
24. ಅಂಬು, 25. ಶಾಂತ, 26. ಮೋಹನ, 27. ಶುಭೋದ್ಯ — ಗಂಗಮ್ಮನ ಮಕ್ಕಳು, ಮೈನರರು, ಗಾರ್ಡಿಯನ್ ತಾಯಿ, 23ನೇ ಪ್ರತಿವಾದಿ ಗಂಗಮ್ಮ *C/o K. L. Shetty, Air India Quarters, 13/18 Kalina, Bombay—29.*

ಯವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ —

ವಾದಿಯು ನೀವು ವಗೈರೆರ ಮೇಲೆ ಹಿಸೆ ಬಗ್ಗೆ ಹಾಕಿದ ಮೇಲ್ಕಂಡ ದಾವೆಯು ತಾ. 2.6.69ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ದ ಸದ್ರಿ ದಿವಸ ಮಾಜ್ಕೂರು ಕೋರ್ಟು ಮುಂದೆ ನೀವು ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉಜರಿಸಿಕೊಳ್ಳತಕ್ಕದ್ದು. ತಪ್ಪಿದ್ದ ನಿಂಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿಯದೆ.

(Sd.) B. Ishwara Bhat,
Advocate for Pltf.
ಬೆಳ್ತಂಗಡಿ, ತಾ. 19.4.69.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
O. S. No. 109/1968

ರತಿದೇವಿ — —ವಾದಿ
ಮತ್ತು
ಸುಶೀಲ ಕೂಡಾ — —ಪ್ರತಿವಾದಿ 1,
2, 3ನೇ ಪ್ರತಿವಾದಿರು —
1. ಅರವಿಂದ್ರ, ಜಗದೀಶ — ಸುಶೀಲನ ಮಗಂದಿರು, ಬಂಟ್ವಾಳ ತಾಲ್ಲೂ ಬಿಳಿಯೂರು ಗ್ರಾಮದಲ್ಲಿರುವವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ—

ವಾದಿಯು ನೀವು ವಗೈರೆಯರ ಮೇಲೆ ಹಾಕಿದ ಮೇಲ್ಕಂಡ ದಾವೆಯು ತಾರೀಕು 2.6.1969ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ದ ಸದ್ರಿ ದಿವಸ ಮಾಜ್ಕೂರು ಕೋರ್ಟು ಮುಂದೆ ನೀವು ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉಜರಿಸಿಕೊಳ್ಳತಕ್ಕದ್ದು. ತಪ್ಪಿದ್ದ ನಿಂಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು.

(Sd.) B. Ishwara Bhat,
Advocate for Pltf.
ಬೆಳ್ತಂಗಡಿ, ತಾ. 19.4.69.

ಹೆಸ್ಸುಂದ,

NAVAYUGA 1—5—1969
Registered with the Registrar
of News Papers for India
under No. R. N. 3546/'57

REGD. No: B. G. 176
LICENCE No. 33
Licensed to Post without Prepayment

ತೆ. ಆ ಎರಡು ದಿನಗಳಲ್ಲಿ ಗೀತೆಯ ಮೇಲೆ ಚರ್ಚೆಯಂತೆ. ಕಡೆಗೆ ಶಾಸ್ತ್ರಿಗಳು ಭಟ್ಟರ ತರ್ಕ ಹಾಗೂ ಅವರು ವ್ಯಂಗ್ಯದಿಂದ ಕೊಂಡ ಪ್ರಶ್ನೆಗಳಿಗೆ ಮೆಚ್ಚುಗೆ ಸೂಚಿಸಿ "ನೀವು ನುಡಿಸುವ ತೀರ್ಮಾನ ಸರಿಯಿಲ್ಲ; ನಾನು ಕೇವಲ ಹಳ್ಳಿ" ಎಂದರಂತೆ. ಆದೆಗೆ ಮಣ್ಣಿನೊಡನೆ ಹೆಣಗಬೇಕು. ಮನುಷ್ಯರೊಡನಲ್ಲ. ಮಣ್ಣಿನೊಡನೆ ಹೋರಾಡಿದರೆ ಮನುಷ್ಯನಿಗೆ ಏನೂ ಕೊರತೆಯಿಲ್ಲ. ಆಗ ನನ್ನಷ್ಟಕ್ಕೆ ನಾನು ಅಂದುಕೊಂಡೆ, ಹೌದು. "ಕೃಷಿತೋ ನಾಸ್ತಿ ದುರ್ಭಿಕ್ಷಂ" ಎಂಬ ನಾಣ್ಣುಡಿಯಲ್ಲಿ ಅವರ ಪಾಲನ ಕವನ ಎಂಬ ಪದ ಪ್ರಯೋಗ ಬಹಳ ಹಿಡಿಸಿತು.

ಇನ್ನು ಅವರ ಜಪದ ವಿಚಾರ. ಸೂರ್ಯೋದಯಕ್ಕೆ ಮುಂಚಿತವಾಗಿ ಎದ್ದು ಕಾರ್ಯಗಳನ್ನು ತೀರಿಸಿ, ಸ್ನಾನ ಮಾಡಿ, ಮಡಿಯುಟ್ಟು, ದೇವರಕೋಣೆಗೆ ಹೋದರೆ; ಹೊರಬರುವಾದ ಗಂಟೆ ಏಳು! ಅಷ್ಟು ಹೊತ್ತು ಜಪ ಪೂಜೆಯಲ್ಲೇ ತನ್ಮಯರಾಗುವರು. ಮತ್ತೆ ಹೊರಗೆ ಬಂದು ಚಾವಡಿಯಲ್ಲಿ ಕುಳಿತು ಬ್ರಹ್ಮಸೆದ್ರೇಶ್ರ ರತ್ನಾಕರದ ಒರನ, ಸುಮಾರು ಎಂಟರ ಹೊತ್ತಿಗೆ ಅಲ್ಪ ಉಪಹಾರ, ಮಕ್ಕಳಿಗೆ ಪಾಠಿಯಾದರೆ ಅವರಿಗೆ ಕೊತ್ತಂಬರಿ ಕಷಾಯವಾಗಬೇಕು. ಅದನ್ನು ತೀರಿಸಿ ಹಟ್ಟಿಯನ್ನು ನೋಡಿಕೊಂಡು ದನಕರುಗಳಲ್ಲಿ ಸಂಭಾಷಣೆ ನಡೆಸಿ, ಗದ್ದೆ ತೋಟಗಳ ಕಡೆಗೆ ನಡೆವರು. ಆ ವೇಳೆಗೆ ಅವರ ಆಳುಗಳು ಗದ್ದೆಗೆ ಅಲ್ಲಿ ಹಾಜರಿ. ಅವರಿಗೆ ಬೇಕಾದ ಸೂಚನೆ ಹೇಳಿ, ಅವರನ್ನು ಕೆಲಸಕ್ಕೆ ಹಚ್ಚಿ ಬರುವರು. [illegible] ಕಳುಹಿಸುತ್ತಾರೆ.

ಅಷ್ಟು ಕಾರ್ಯ ಮಾಡಿದರೆ ಹಣದ ಲೇವಾದೇವಿಯಿಂದ [ಸ್ವಾಭಾವಿಕವಾಗಿ ಅಪಸ್ವರಕ್ಕೆ ಎಡೆ] ಯಾರೊಡನೆಯೂ ಎಂದೂ ಅವರಿಗೆ ವಿರಸವಿಲ್ಲ. ಈ ಕುರಿತು ಅವರನ್ನೇ ಕೇಳಿದರೆ, ಯಾರೊಬ್ಬನೂ ನನ್ನ ಬಾಕಿಯನ್ನು ಇಟ್ಟುಕೊಂಡಿಲ್ಲ. ಸಂತೋಷದಿಂದ ಕಡ ಕೇಳಿಕೊಂಡು ಹೋದವರು ಅಷ್ಟೇ ಸಂತೋಷದಿಂದ ಮರಳಿ ತಂದು ಕೊಟ್ಟಿದ್ದಾರೆ. ಕೊಡುವಾಗ ಕೇವಲ ಓ! ನಾವು ಸದಾ ಋಣಿಗಳು! ಎಂದು ಕೊಟ್ಟರೆ, ಯಾರ ತಿರುಗಿ ಕೊಡುವುದಿಲ್ಲ! ಎಂದೇ ಅವರ ಸವಾಲು.

ನೋಡಿ ಮೊನ್ನೆ ಏನೋ ಕಾರ್ಯ ನಿಮಿತ್ತ ನಮ್ಮ ಮಾಸ್ತರ್ ಕೃಷ್ಣಯ್ಯನವರಲ್ಲಿಗೆ ಹೋದಾಗ ನಾವು ಆ ಪುಣ್ಯಾತ್ಮ ಗಂಗೆಮೂಲೆ ಮಾಲಿಂಗ ಭಟ್ರ ದೆಸೆಯಿಂದ ಈ ಊರಲ್ಲಿ ಸ್ವಲ್ಪ ನೆಮ್ಮದಿಯಿಂದಿದ್ದೇವೆ. ಪಾಪ ಹಳೆಯ ಭಟ್ರು ಇವರಿರುವಷ್ಟು ದಿನ ಏನೋ ಒಂದು ಸಮಾಧಾನ, ಈಗ ಈ ಹಳ್ಳಿಯಲ್ಲಿ ಎರಡು ದಿನಗಳ ಮಧ್ಯೆ ಒಂದು ರಾತ್ರಿ, ಅವರು ಕಣ್ಮುಚ್ಚಿದರೆ ಸದಾ ಕತ್ತಲೆಯೇ ಸರಿ ಎಂದು ಹೇಳಿದರು.

ಶ್ರೀ ಭಟ್ಟರ ಕೆಲವೇ ವರ್ಷಗಳ ಪರಿಚಯವು ನನಗೂ ಮಾಸ್ತರರ ಮಾತು [illegible]

(ಸಂಗ್ರಹ — ಶ್ರೀ ಕೆ. ಪದ್ಮನಾಭಯ್ಯ ಬಲ್ಲಾಳ್, ಅಧ್ಯಾಪಕ)

ಗಾಂಧೀಜಿ ದೃಷ್ಟಿಯಲ್ಲಿ

ಸಾಧನೆಯ ವಿಧಾನ ಹಾಗೂ ಗುರಿ

ನನ್ನ ಜೀವನ ವೇದಾಂತದಲ್ಲಿ ವಿಧಾನ ಹಾಗೂ ಗುರಿ ಪರಸ್ಪರ ಬದಲಾಗುವ ಪದಗಳಾಗಿವೆ. "ವಿಧಾನವೆಂದರೆ ವಿಧಾನ" ಎಂದು ಹೇಳುವವರಿದ್ದಾರೆ. ಆದರೆ ನನಗೆ "ವಿಧಾನವೇ ಸರ್ವಸ್ವವಾಗಿದೆ." ವಿಧಾನಕ್ಕೆ ತಕ್ಕಂತೆ ಗುರಿಸಾಧನೆ. ಸೃಷ್ಟಿಕರ್ತನು ನಮಗೆ ವಿಧಾನದ ಬಗ್ಗೆ ಅತ್ಯಂತ ಸೀಮಿತವಾದ ಹತೋಟಿ ನೀಡಿದ್ದಾನೆ; ಆದರೆ ಗುರಿಯ ಬಗ್ಗೆ ಏನನ್ನೂ ನೀಡಿಲ್ಲ. ಗುರಿಸಾಧನೆ ವಿಧಾನಕ್ಕೆ ಅತ್ಯಂತ ಅನುರೂಪವಾಗಿರುತ್ತದೆ. ಈ ಸೂತ್ರಕ್ಕೆ ಏನೊಂದು ರಿಯಾಯಿತಿಯೂ ಇಲ್ಲ.

ಅಹಿಂಸೆ ಹಾಗೂ ಸತ್ಯ ಯಾವ ಪ್ರಮಾಣದಲ್ಲಿ ಪರಸ್ಪರಾವಲಂಬಿಗಳಾಗಿವೆಯೆಂದರೆ, ಅದನ್ನು ಪ್ರತ್ಯೇಕಿಸುವುದೇ ಅಸಾಧ್ಯವಾಗಿದೆ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಇದರಲ್ಲಿ ಯಾವುದು ಹೊರಮೈ ಎಂಬುದನ್ನು ಯಾರು ಹೇಳಬಲ್ಲರು? ಅಹಿಂಸೆಯೇ ವಿಧಾನ; ಸತ್ಯವೇ ಗುರಿ. ವಿಧಾನದ ವಿಧಾನ ನಮಗೆ ನಿಲುಕುವಂತಿರಬೇಕು. ಆದ್ದರಿಂದ ಅಹಿಂಸೆಯೇ ನಮ್ಮ ಪರಮ ಕರ್ತವ್ಯ. ನಾವು ವಿಧಾನದ ಬಗ್ಗೆ ಎಚ್ಚರಿಕೆ ವಹಿಸಿದರೆ ನಾವು ಗುರಿ ಸಾಧಿಸುವುದು ಖಚಿತ. ನಾವು ಈ ಅಂಶವನ್ನು ಸರಿಯಾಗಿ ಅರಿತುಕೊಂಡರೆ ಅಂತಿಮ ವಿಜಯ ಪ್ರಶ್ನಾತೀತವಾಗುತ್ತದೆ. ನಾವು ಎಷ್ಟೇ ಕಷ್ಟ ಎದುರಿಸಿದರೂ, ಎಷ್ಟೇ ಸೋಲು ರಾಶಿಗಳನ್ನು ಸಂಭವಿಸಿದರೂ ದೈವಸ್ವರೂಪಿಯಾದ ಸತ್ಯದ ಅನ್ವೇಷಣೆ ಕೈಬಿಡುವಂತಿಲ್ಲ.

ಸುಲಭದ ಹಿಂಸಾಮಾರ್ಗ

ಯಶೋ ಸಾಧನೆಯಲ್ಲಿ ಕ್ಷಿಪ್ರವಾದ ಹಿಂಸಾ ಮಾರ್ಗ ಅನುಸರಿಸುವುದರಲ್ಲಿ ನನಗೆ ನಂಬಿಕೆಯಿಲ್ಲ. ಅಮೂಲ್ಯ ಉದ್ದೇಶಗಳ ಬಗ್ಗೆ ನಾನು ಮೆಚ್ಚುಗೆ, ಸಹಾನುಭೂತಿಗಳನ್ನು ವ್ಯಕ್ತಪಡಿಸಿದರೂ, ಅತ್ಯಮೋಘ ಗುರಿ ಸಾಧನೆಗಾಗಿ ಹಿಂಸಾ ವಿಧಾನಗಳನ್ನು ಬಳಸುವುದನ್ನು ನಾನು ಸರ್ವಥಾ ವಿರೋಧಿಸುತ್ತೇನೆ. ಆದ್ದರಿಂದ ನನಗೂ ಹಿಂಸಾವಿಧಾನಗಳಿಗೂ ಎಂದಿಗೂ ಸಮಾಗಮವಾಗದು. ಆದರೆ ಅರಾಜಕತೆ ಪ್ರಚೋದಕರ, ಹಾಗೂ ಹಿಂಸಾಮಾರ್ಗದಲ್ಲಿ ನಂಬಿಕೆಯಿಟ್ಟಿರುವವರೊಂದಿಗೆ ಸಂಪರ್ಕ ಹೊಂದಿರಲು ನಾನು ಪಾಲಿಸುವ ಅಹಿಂಸಾ ಧರ್ಮ ಅಡ್ಡಿಪಡಿಸುವುದಿಲ್ಲ. ಹಿಂಸಾಚಾರಿಗಳನ್ನು ತಪ್ಪುಮಾರ್ಗದಿಂದ ಹೊರಕ್ಕೆಳೆಯುವುದೇ ಈ ಸಂಪರ್ಕದ ಮಹೋದ್ದೇಶ. ಅಸತ್ಯ ಹಾಗೂ ಹಿಂಸಾಮಾರ್ಗದಿಂದ ಶಾಶ್ವತ ಕಲ್ಯಾಣವಾಗಲಾರದೆಂಬುದನ್ನು ನಾನು ಸ್ವಾನುಭವದಿಂದ ಅರಿತಿದ್ದೇನೆ.

ಮಹಾದೋಷ

ವಿಧಾನ ಹಾಗೂ ಗುರಿಗೆ ಯಾವುದೇ ಸಂಪರ್ಕವಿಲ್ಲವೆಂಬ ನಮ್ಮ ಭಾವನೆ ಮಹಾದೋಷವಾಗಿದೆ. ಇಂತಹ ದೋಷದಿಂದ ಧಾರ್ಮಿಕ ಶ್ರದ್ಧೆ ಹೊಂದಿರುವ ವ್ಯಕ್ತಿಗಳೂ ಮಹಾಪರಾಧ ಮಾಡಿದ್ದಾರೆ. ವಿಷಬೀಜ ಬಿತ್ತನೆಯಿಂದ ಗುಲಾಬಿ ಹೂ ಪಡೆಯಬಹುದೆಂಬ ಭ್ರಾಮಕದಂತೆಯೇ ನಮ್ಮ ಈ ವಿಚಾರಧಾರೆಯಿರುತ್ತದೆ. ನಾನು ಸಮುದ್ರವನ್ನು ನೌಕೆಯಿಂದ ದಾಟಬಲ್ಲೆ. ಇದಕ್ಕೆ ವಿರುದ್ಧವಾಗಿ ಗಾಡಿಯನ್ನು ಬಳಸಿದರೆ, ಗಾಡಿಯೊಂದಿಗೆ ನಾನೂ ಸಮುದ್ರದಲ್ಲಿ ಮುಳುಗುತ್ತೇನೆ. "ದೇವರಂತೆ ಭಕ್ತ" ಎಂಬ ನಾಣ್ಣುಡಿಯನ್ನು ನಾವು ಪರಿಶೀಲಿಸಬೇಕಾಗಿದೆ. ಈ ನುಡಿಯ ಅಪಾರ್ಥ ಕಲ್ಪಿಸಿ ಅನೇಕರು ತಮ್ಮ ಹಾದಿ ಹಿಡಿದಿದ್ದಾರೆ.

ವಿಧಾನವನ್ನು ಬೀಜಕ್ಕೂ, ಗುರಿಯನ್ನು ವೃಕ್ಷಕ್ಕೂ ಹೋಲಿಸಬಹುದು. ಬೀಜ ಹಾಗೂ ವೃಕ್ಷಕ್ಕಿರುವ ಸಂಬಂಧವಂತೆಯೇ ವಿಧಾನ ಹಾಗೂ ಗುರಿ ಪ್ರತ್ಯೇಕಿಸಲಾಗದಂತಹ ಬಾಂಧವ್ಯವಿದೆ. ಸೈತಾನನಿಗೆ ದೀರ್ಘದಂಡ ಪ್ರಣಾಮ ಮಾಡಿ ದೈವಾರಾಧನೆಯಿಂದ ಹೊಂದುವ ಫಲಗಳನ್ನು ನಾನು ಪಡೆಯಲಾರೆ. ಆದ್ದರಿಂದ ಯಾರಾದರೂ "ಸೈತಾನನ ಮೂಲಕ ನಾನು ದೈವಾರಾಧನೆ ಮಾಡುವೆ" ಎಂದು ಹೇಳಿದರೆ ಅದನ್ನು ಪರರು ಅಜ್ಞಾನದ ಅಪರಾಧವೆಂದು ಪರಿಗಣಿಸಲಾಗುತ್ತದೆ. ನಾವು ಏನು ಬಿತ್ತನೆ ಮಾಡುವೆವೋ ಅದೇ ಫಲಗಳನ್ನು ಪಡೆಯುತ್ತೇವೆ.

ವಿಧಾನದ ಶುದ್ಧಿ

ಫಲದ ಬಗ್ಗೆ ಆಸಕ್ತಿ ತೋರದಿರುವಂತೆ ನಾನು ಐದು ದಶಕಗಳಿಂದಲೂ ತರಬೇತಿ ಹೊಂದಿದ್ದೇನೆ. ನನಗೆ ವಿಧಾನದ ಬಗ್ಗೆ ಎಚ್ಚರ; ವಿಧಾನದ ಪಾವಿತ್ರ್ಯತೆಯ ಬಗ್ಗೆ ನನಗೆ ಖಚಿತವಾದಾಗ ಶ್ರದ್ಧೆ ನನ್ನನ್ನು ಕೈಹಿಡಿದು ಮುನ್ನಡೆಸುತ್ತದೆ. ಈ ಶ್ರದ್ಧೆಯ ಎದುರು ಎಲ್ಲ ರೀತಿಯ ಭಯ, ಹೆದರಿಕೆಗಳೂ ಮಂಜಿನಂತೆ ಕರಗಿ ಹೋಗುತ್ತದೆ.

ನಾವು ಭಗವಂತನ ಇಚ್ಛೆಯ ಸಾಧನಗಳಾಗಿದ್ದೇವೆ. ಆದ್ದರಿಂದಲೇ ನಮ್ಮ ಮುನ್ನಡೆಗೆ ಯಾವುದು ಸಹಾಯ ಮಾಡುವುದೆಂಬ ಅಂಶದ ಬಗ್ಗೆ ಹಾಗೂ ಯಾವುದು ಅಡಚಣೆ ಒಡ್ಡುವುದೆಂಬ ಬಗ್ಗೆ ಅಜ್ಞಾನಿಗಳಾಗಿದ್ದೇವೆ. ನಾವು ವಿಧಾನದ ಬಗ್ಗೆ ಜ್ಞಾನಹೊಂದಿ ತೃಪ್ತರಾಗಬೇಕು. ವಿಧಾನದಲ್ಲಿ ಶುದ್ಧಿ ಪಾವಿತ್ರ್ಯತೆಗಳಿದ್ದರೆ ಯಾವೊಂದು ಹೆದರಿಕೆಯಿಲ್ಲದೆ ಗುರಿಸಾಧನೆಯ ಬಗ್ಗೆ ಚಿಂತಿಸಬೇಕಾಗುವುದಿಲ್ಲ

HOTEL SATKAR
Boarding, Lodging & Restaurant
Behind Corporation Office,
9 Mission Road — **Bangalore—27.**
Phone No.— 1 28337 / 2 29887   Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.
ತಯಾರಕರು:
ಅಮೃತಾಂಜನ ಲಿಮಿಟೆಡ್, ಮದ್ರಾಸು-4

Edited, Printed & Published by K. H. Shetty, at the Navayuga Press, Udipi, S. India.

ನವಯುಗ

8—5—1969

೨೦
ಪೈಸೆ

ಶರ್ತ

ಬರೆದವರು:— ಶ್ರೀ ಮಾವಮಾಪನಾಸೆಕರ್

ಬೆಂಗಳೂರು
1—1—1969

ಮುಂಬಯಿಯಲ್ಲಿರುವ ವಿಠಲರಾವ್ ಶೇರಜಿ ಅವರಿಗೆ ಬೆಂಗಳೂರಿನಲ್ಲಿರುವ ಹೆಡ್‌ಕ್ಲಾರ್ಕ್ ಕೃಷ್ಣಮೂರ್ತಿಯು ಬರೆದುಕೊಳ್ಳುವುದು ಏನೆಂದರೆ—

ನಾವು—ನೀವು ಬಾಲ್ಯ ಸ್ನೇಹಿತರು. ಒಂದೇ ಶಾಲೆಗೆ ಹೋಗುತ್ತಿದ್ದ ಒಂದೇ ಬೆಂಚಿನಲ್ಲಿ ಕೂತು ಕಲಿತ ವಿದ್ಯಾರ್ಥಿಗಳು. ನಾನು ಸ್ನೇಹ. ನೀವೂ ಸ್ನೇಹ ಎಂದು ತಿಳಿಯುತ್ತೇನೆ.

ನಾನು ಈ ಕಾಗದ ಬರೆಯಲು ಕಾರಣವೇನೆಂದರೆ ನನ್ನ ಮಗಳ ವಿವಾಹವಾಗಿ ಕೆಲವಾರು ತಿಂಗಳಿಂದ ಮುಂಬಾಯಿಯಲ್ಲಿದ್ದಾರೆ. ಅಳಿಯನಿಗೆ ಬೇರೆ ಮನೆ ಮಾಡಿ ವಾಸಿಸುವ ಮನಸ್ಸು ಬಂದಿದೆಯಂತೆ.

ಮುಂಬಾಯಿಯಲ್ಲಿ 'ಖೋಲಿ'ಗಳು ಸಿಕ್ಕುವುದು ಕಷ್ಟ. ಏನಾದರೂ ಮಾಡಿ ನನ್ನ ಸ್ನೇಹಿತರ ಬೆನ್ನು ಹಿಡಿದಾದರೂ ಸಣ್ಣ ಮಟ್ಟಿಗೆ ಅಂದರೆ ಐವತ್ತು—ಅರವತ್ತು ರೂಪಾಯಿ ಬಾಡಿಗೆಯಾದರೂ ಚಿಂತಿಲ್ಲ, ಒಂದು 'ಖೋಲಿ' ಗೊತ್ತುಮಾಡಿಸಿಕೊಡಬೇಕು ಎಂದು ಅಳಿಯನ ಪತ್ರ ಬಂದಿದೆ.

ನನಗೆ ತಿಳಿದ ಮಟ್ಟಿಗೆ ಮುಂಬಾಯಿಯಲ್ಲಿ ನನ್ನ ಪರಿಚಯದವರಾರೂ ಇಲ್ಲವಲ್ಲ ಎಂದು ಕೊರಗುತ್ತಿರುವಾಗ ನಿಮ್ಮ ನೆನಪಾಯಿತು.

ಏನಾದರೂ ಬಾಲ್ಯದಲ್ಲಿ ಸ್ನೇಹಿತರಾಗಿದ್ದವರಲ್ಲವೆ? ಮರೆಯುವುದೆಂತು? ನೀವೀಗ ಹಲವಾರು ಜನರಿಗೆ ಖೋಲಿ ತೆಗಸಿ ಕೊಟ್ಟಿದ್ದೀರಿ ಎಂದು ಕೂಡಾ ತಿಳಿದು ಬಂದಿದೆ. ಆದುದರಿಂದ ನನ್ನ ಅಳಿಯನಿಗಾಗಿ ಒಂದು ಸಣ್ಣ ಮಟ್ಟದ 'ಖೋಲಿ' ಯನ್ನು ಗೊತ್ತುಮಾಡಿ ನನಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇನೆ.

ಇತಿ ನಿನ್ನ ಬಾಲ್ಯ ಸ್ನೇಹಿತ,
ಕೃಷ್ಣಮೂರ್ತಿ.

o o o

ಮುಂಬಾಯಿ
4—1—1969

ಮುಂಬಾಯಿಯಲ್ಲಿರುವ ಶೇರ್ ವಿಠಲರಾವಜೀ ಅವರು ಬೆಂಗಳೂರಿನ ಹೆಡ್‌ಕ್ಲಾರ್ಕ್ ಕೃಷ್ಣಮೂರ್ತಿರಾಯರಿಗೆ ಬರೆಯುವ ಪತ್ರ, ಏನೆಂದರೆ—

ಆದಾಗಿ ನಿಮ್ಮ 1ನೇ ತಾರೀಕಿನ ಪತ್ರ ಬಂದು ತಲುಪಿತು. ನೀವು ಹೇಳಿದಂತೆ ನಾನೇನೋ ಬೆಂಗಳೂರಿನವನೇ. ಬಸವನಗುಡಿ ಪ್ರೈಮರಿ ಸ್ಕೂಲಿನಲ್ಲಿ ಕಲಿತುದನ್ನು ಎಂದೆನಿಸಿಕೊಂಡು ಹೇಗಾದರೂ ಪಾಸು ಮಾಡಿ ನ್ಯಾಷನಲ್ ಹೈಸ್ಕೂಲ್‌ನಲ್ಲಿ ಓದು ಮುಂದರಿಸಿದ್ದು ಸರಿ. ಆದರೆ ನನ್ನ ಕ್ಲಾಸುಮೇಟುಗಳಲ್ಲಿ ಕೃಷ್ಣಮೂರ್ತಿ ಎನ್ನುವ ವ್ಯಕ್ತಿ ಇದ್ದುದು ನೆನಪಿಲ್ಲ. ಅದೇನೇ ಇರಲಿ,

ಸದ್ಯಕ್ಕೆ ಇಲ್ಲಿ ಖಾಲಿಬಿದ್ದಿರುವ "ಖೋಲಿ"ಗಳು ಇಲ್ಲ. ಹಾಗಾಗಿ ನಿಮ್ಮ ಅಳಿಯನಿಗೆ "ಖೋಲಿ" ಗೊತ್ತುಮಾಡುವ ವಿಚಾರ ಬರುವುದಿಲ್ಲ

ಕ್ಷಮಿಸಿರಿ. ಇತಿ ನಮಸ್ಕಾರಗಳು.
ಶೇರ್ ವಿಠಲರಾವ್.

o o o

ಬೆಂಗಳೂರು,
7—1—1969

ಶೇರ್ ವಿಠಲರಾವ್‌ಜೀ ಅವರಿಗೆ—

ಕೃಷ್ಣಮೂರ್ತಿಯ ನಮಸ್ಕಾರಗಳು.

ಪ್ರಿಯ ಮಿತ್ರ, ನಿಮಗೆ ಈಗ ನನ್ನ ಹೆಸರೇ ನೆನಪಿಲ್ಲದಿರುವಿಕೆಗೆ ಅನೇಕ ಕಾರಣವಿರಬಹುದು. ಆದರೆ ಶಾಲೆಯಲ್ಲಿ ನಡೆದ ಘಟನೆ ಒಂದು ಹೇಳುವೆ.

ನೀವು ಏಪ್ರಿಲ್ ಫೂಲ್ ದಿವಸ ರಾಮುವಿಗೆ ಬೆನ್ನ ಮೇಲೆ ದಪ್ಪ ಅಕ್ಷರಗಳಿದ್ದ ಬೋರ್ಡ್ ಒಂದನ್ನು ತಗಲಿಸಿದುದರ ಪರಿಣಾಮವಾಗಿ ಹೆಡ್‌ಮಾಸ್ಟರರಿಂದ ಏಳು ಛಡಿ ಏಟು ತಿಂದದ್ದು ನೆನಪಿಲ್ಲವೆ?

ಕಡ್ಲೆಪುರಿ ಮಾರುವಾತನಿಗೆ ಖೊಟ್ಟಿ ನಾಣ್ಯ ಕೊಟ್ಟು ಕಡ್ಲೆಪುರಿ ಪೊಟ್ಟಣವನ್ನು ಬಿಚ್ಚಿದಾಗ ಬರೇ ಕಲ್ಲು ಎಂದು ಬಿಸಾಕಿದ್ದು ನೆನಪಿಲ್ಲವೆ? ಕನ್ನಡ ಪಂಡಿತರು ಕುಳಿತುಕೊಳ್ಳುವ ಕುರ್ಚಿಗೆ ಕಾಲು ಮುರಿಸಿ ಜೋಡಿಸಿಟ್ಟು ಪಂಡಿತರು ಬಿದ್ದಾಗ ಹಾರಿಹಾರಿ ಕುಣಿದದ್ದು ನೆನಪಿಲ್ಲವೆ?

ಈಗಲಾದರೂ ನೆನಪಾದೀತೆ? ಅಂತೂ ನನ್ನ ಅಳಿಯನಿಗಾಗಿ ಒಂದು ಒಳ್ಳೆಯ ವಸತಿಯಿರುವ "ಖೋಲಿ"ಯನ್ನು ಗೊತ್ತುಮಾಡಿ ನನಗೆ ತಿಳಿಸಬೇಕಾಗಿ ಕೋರುತ್ತೇನೆ. ಜರೂರು.

ಇತಿ ನಿಮ್ಮ ಬಾಲ್ಯದ ಸ್ನೇಹಿತ,
ಕೃಷ್ಣಮೂರ್ತಿ.

o o o

ಮುಂಬಾಯಿ,
11—1—69

ಮುಂಬಾಯಿಯಿಂದ ಶೇರ್ ವಿಠಲರಾವ್‌ಜೀ ತಿಳಿಸುವುದೇನೆಂದರೆ—

ನನ್ನ ಮಿತ್ರರು, ಸಂಬಂಧಿಕರು ಎಂದು ದಿನವೂ ನೂರಾರು ಜನರು ನನ್ನ ಮನೆಗೆ ಬರುವವರಂತೆ ನೀವೂ ಒಬ್ಬರಲ್ಲ ತಾನೆ?

ತಮ್ಮ ಕೆಲಸವಾಗುವ ತನಕ ಮಾತ್ರ ನನ್ನ ಸಂಬಂಧಿಕ — ಮಿತ್ರ ಎನ್ನುವ ನೋಗು ಹಾಕಿ ನಂತರ ನನ್ನ ಹತ್ತಿರ ಬರುವವರೇ ಇಲ್ಲ.

ಪ್ರಕೃತ ನಿಮಗೆ ಮುಂಬಾಯಿಯಲ್ಲಿ ಖೋಲಿ ಬೇಕಾಗಿದೆ. ಅದಕ್ಕಾಗಿ ನೀವು ನನ್ನ ಮಿತ್ರತ್ವವನ್ನು ನೆನಪು ಹುಟ್ಟಿಸಲು ಅನೇಕ ಕಥೆ ಕಟ್ಟಿ ಕಾಗದ ಬರೆದಿದ್ದೀರಿ. ನನಗೆ ನಿಜವಾಗಿಯೂ ನೀವು ಹೇಳಿದ್ದು ಯಾವುದೂ ನೆನಪಿಲ್ಲ. ಅವು ಬರೀ ಕಟ್ಟುಕತೆಗಳೇ ಆಗಿವೆ.

ಸದ್ಯಕ್ಕೆ ನನ್ನ ಸುಪರ್ದಿಯಲ್ಲಿ ಯಾವ "ಖೋಲಿ"ಗಳೂ ಇಲ್ಲ. ದಯವಿಟ್ಟು ಇನ್ನು ತೊಂದರೆ ಕೊಡಬೇಡಿ.

ನಮಸ್ಕಾರ,
ಶೇರ್ ವಿಠಲರಾವ್

o o o

ಬೆಂಗಳೂರು,
15—1—69

ಮುಂಬಾಯಿಯ ಶೇರ್‌ಜೀ ಅವರಿಗೆ ಬೆಂಗಳೂರು ಹೆಡ್‌ಕ್ಲಾರ್ಕನ ನಮಸ್ಕಾರಗಳು,

ನೀವು ಎಷ್ಟೇ ನೆನಪಿಲ್ಲವೆಂದರೂ ಈ ಒಂದು ನೆನಪಿನ ಘಟನೆ ತಿಳಿಸಿದರೆ ಖಂಡಿತವೂ ನಿಮಗೆ ನನ್ನ ನೆನಪಾಗುವುದರಲ್ಲಿ ಸಂದೇಹ ಇಲ್ಲ. ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ನೀವು ನನ್ನ ಪರೀಕ್ಷೆ ಉತ್ತರಗಳನ್ನು ಕಾಪಿ ಹೊಡೆಯುವಾಗ ಶೇಷಾದ್ರಿ ಮಾಸ್ತರರು ನಿಮ್ಮನ್ನು ಹೊರ ಹಾಕಿದಾಗ ನಾನು ಪ್ರತಿಭಟಿಸಿ ನಾನೇ ನಿಮ್ಮ ಮರ್ಯಾದೆ ಉಳಿಸಿದ್ದು, ಅದರೂ ನಾವಿಬ್ಬರೂ ಫೇಲ್ ಆಗಿ ರಾತ್ರಿ ಶಾಲೆಗೆ ಹೋಗಿ ಪಾಸಾದೆವು.

ಏನೇ ಇರಲಿ—ಹೇಳಿದಂತೆ ಈಗ ನೆನಪಾಯಿತು. "ಪಾಗಡಿ"ಬೇಕಾದರೆ ಒಂದು ಸಾವಿರವೊ ಎರಡು ಸಾವಿರವೊ ಎಷ್ಟು ಬೇಕು, ಅಷ್ಟು ಕೊಡಲು ನನ್ನ ಅಳಿಯ ಸಿದ್ಧನಿದ್ದಾನೆ ಎಂದು ಬರೆದಿದ್ದಾನೆ. ಆದುದರಿಂದ ಆದಷ್ಟು ಒಳ್ಳೆಯ ವಸತಿಯಿರುವಲ್ಲಿ "ಖೋಲಿ" ಗೊತ್ತುಮಾಡಿ ತಿಳಿಸಬೇಕಾಗಿ ಬಾಲ್ಯಸ್ನೇಹಿತ ವಿನಯಪೂರ್ವಕದಿಂದ ಕೇಳಿಕೊಳ್ಳುತ್ತಿದ್ದಾನೆ.

ಇತಿ ನಿಮ್ಮ ಸ್ನೇಹಿತ
ಕೃಷ್ಣಮೂರ್ತಿ.

o o o

ಮುಂಬಾಯಿ,
20—1—1969

ಒಲವಿನ ಕಿಟ್ಟಣ್ಣನಿಗೆ ಮುಂಬಾಯಿಯಿಂದ ವಿಠಲರಾವ್ ಮಾಡುವ ನಮಸ್ಕಾರಗಳು.

ನಿನ್ನ ಪತ್ರ ತಲುಪಿತು. ಅಭಿಪ್ರಾಯ ಹಾಯಿತು. ಈಗ ನೆನಪಾಯಿತು. ಕಿಟ್ಟಣ್ಣ ಎಂದು ಒಬ್ಬ ಕ್ಲಾಸುಮೇಟು ಇದ್ದುದು ಸತ್ಯ. ನಿನ್ನ ಹೆಸರು ಕೃಷ್ಣಮೂರ್ತಿ ಎಂದಾಗ ನೆನಪಾಗಲಿಲ್ಲ. ಏನು?

ಹೌದು. ನಾವಿಬ್ಬರೂ ರಸ್ತೆಯಲ್ಲಿ ಅಂದ ಚಂದದ ಹುಡುಗಿಯರು ಅತ್ತಿತ್ತ ಹೋಗುವಾಗ "ಏನು?" ಎಂದು ತಮಾಷೆ ಮಾಡುತ್ತಿದ್ದಾಗ್ಗೆ ಕೆಲವು ಸಲ ಕಪಾಳ ಮೋಕ್ಷ ಮಾಡಿಸಿಕೊಂಡದ್ದು—ಕೆಲವು ಸಲ ತಪ್ಪಿಸಿಕೊಂಡದ್ದು—ಎಲ್ಲಾ ನೆನಪಾಗುತ್ತಿದೆ.

ನಿನ್ನ ಅಳಿಯನಿಗಾಗಿ ಒಳ್ಳೆಯ 'ಖೋಲಿ'ಯನ್ನು ಗೊತ್ತುಮಾಡಿ ಇಟ್ಟಿದ್ದೇನೆ ಏನೂ ಗಾಬರಿ ಮಾಡುವ ಅವಶ್ಯವಿಲ್ಲ. "ಪಾಗಡಿ" ಮಾತ್ರ 1500 ರೂಪಾಯಿ ಜರೂರು ರವಾನಿಸು.

ನಿನ್ನ ಪತ್ರ ಹಾಗೂ M. O. ಗಾಗಿ ಕಾದಿರುತ್ತೇನೆ.

ಇಂತಿ ನಿನ್ನ ಮಿತ್ರ
ವಿಠಲರಾವ್.

o o o

ಮುಂಬಾಯಿ
21—2—1969

ಮುಂಬಾಯಿಯಿಂದ ವಿಠಲರಾಯರು ಬೆಂಗಳೂರಿನ ಕಿಟ್ಟಣ್ಣನಿಗೆ ಮಾಡುವ ನಮಸ್ಕಾರಗಳು.

ತರುವಾಯ ನಾನು ನಿನಗೆ ಕಾಗದ ಬರೆದು ಒಂದು ತಿಂಗಳು ಸಂದರೂ ನಿನ್ನ ಉತ್ತರ ಇಲ್ಲ. ಪತ್ರಕ್ಕಾಗಿ ದಿನವೂ ಪೋಸ್ಟ್‌ಮ್ಯಾನ್ ಬರುವ ತನಕ ಎಲ್ಲಾ ಕೆಲಸ ಬಾಕಿ ಇಟ್ಟು ಕಾದು ಕುಳಿತುಕೊಳ್ಳುತ್ತಿದ್ದೆ. ನಿನ್ನ ಪತ್ರ ಮತ್ತು M.O. ಬಾರದೆ ಇದ್ದುದನ್ನು ನೋಡಿ ನನಗೆ ಆ ಕಾಗದ ಬರೆದದ್ದು ತಲುಪಿದೆಯೋ ಇಲ್ಲವೊ ಸಂದೇಹವಾಗುತ್ತಿದೆ.

ಏನೇ ಆಗಲಿ, ನಿನ್ನ ಅಳಿಯನ ವಿಳಾಸ ಕೊಡು. ನಾನೇ ಸ್ವತಃ ಅಲ್ಲಿಗೆ ಹೋಗಿ ಅವರನ್ನು ಕಂಡು ರೂ. 1500 ಪಾಗಡಿ ಪಡೆದುಕೊಂಡು 'ಖೋಲಿ' ಒಪ್ಪಿಸುತ್ತೇನೆ. ಅದಕ್ಕಾಗಿ ನೀನು ಚಿಂತಿಸುವುದು ಬೇಡ. ಮುಂಬಾಯಿಯಲ್ಲಿ 'ಪಾಗಡಿ' ಬಿಟ್ಟು ಕೆಲಸವಾಗುವುದಿಲ್ಲ ಎಂದು ನಿನಗೂ ಗೊತ್ತಿರಬಹುದು. ಎಷ್ಟೋ ವರ್ಷದಿಂದ ಬಂದ ಈ ಪದ್ಧತಿ ಮುರಿಯುವುದು ಹೇಗೆ ಸಾಧ್ಯ? ಏನು ಸಂತಾಪ? ಆದುದರಿಂದ ವಿಳಾಸ ಜರೂರು ತಿಳಿಸು.

ನಮಸ್ಕಾರಗಳು.
ವಿಠಲರಾವ್.

o o o

(ಜನಪ್ರಗತಿ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
93 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದ್ವೈವಾರ್ಷಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸ್:— ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711, 5712, 5713 } 3 Lines.

ಫೋನ್: 526 | 1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೩೪
VOL. 48
No. 34

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೮-೫-೧೯೬೯

ಸ್ಥಾಪಕರು:
ದಿ। ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಡಾ। ಜಾಕೀರ್ ಹುಸೇನ್

ಭಾರತದ ಲೌಕಿಕ ಪ್ರಜಾತಂತ್ರದ ರಾಷ್ಟ್ರಪತಿಯಾಗಿ ಎರಡು ವರ್ಷಗಳ ಹಿಂದೆ ಆಯ್ಕೆಯಾದ ಡಾ। ಜಾಕೀರ್ ಹುಸೇನರು ಹೃದಯಾಘಾತಕ್ಕೆ ಅನಿರೀಕ್ಷಿತವಾಗಿ ಗುರಿಯಾಗಿ ನಮಗೂ ಹೃದಯಾಘಾತವಿತ್ತು ಮರಳಿ ಬಾರದೂರಿಗೆ ಹೋದರು. ಒಂದು ವಾರ ಮೊದಲಿಗೆ ಅಸ್ಸಾಂ ಮತ್ತು ನಾಗಾಲ್ಯಾಂಡ್‌ಗಳ ಸಂದರ್ಶನ ಮುಗಿಸಿ ಬಂದ ರಾಷ್ಟ್ರಪತಿಯವರು ಆರೋಗ್ಯವಂತರಾಗಿಯೇ ಇದ್ದರೆಂದೂ ಅವರ ನಿಧನ ತೀವ್ರ ಅನಿರೀಕ್ಷಿತವೆಂದೂ ಹೇಳಬಹುದು. ಮೃತ್ಯುವುಂಟಾಗುವ ವೇಳೆ ಅವರ ಬಳಿ ನಂಬಿಗೆಯ ಸೇವಕನಲ್ಲದೆ ಮತ್ತಾರೂ ಇರಲಿಲ್ಲವೆಂದೂ ತಿಳಿಯುತ್ತದೆ. ರಾಷ್ಟ್ರಪತಿಯವರ ಖಾಸಗಿ ವೈದ್ಯರೂ ಮತ್ತಿತರರೂ ಒಂದಾಗಿ ಅರ್ಧ ತಾಸು ಕಾಲ ಪುನಃ ಪ್ರಯತ್ನ ನಡೆಸಿದ್ದರೂ ಸಂತ ಹೃದಯ ಮತ್ತೆ ಮಿಡಿಯಲಿಲ್ಲ. ಕ್ಷಣಾರ್ಧದಲ್ಲಿ ಈ ದುಃಖವಾರ್ತೆ ಎಲ್ಲೆಲ್ಲೂ ಹಬ್ಬಿತು. ಉಪರಾಷ್ಟ್ರಪತಿ ವಿ. ವಿ. ಗಿರಿಯವರು ಭೋಪಾಲದಿಂದ, ಗೃಹ ಮಂತ್ರಿ ಚವ್ಹಾಣರು ಮುಂಬಯಿಯಿಂದ, ಪ್ರಧಾನಿ ಬಿಕಾನೀರದಿಂದ ನವದೆಹಲಿಗೆ ಧಾವಿಸಿದರು. ರಾಷ್ಟ್ರಪತಿಯವರ ನಿಧನದ ವೇಳೆ ದಿಲ್ಲಿಯಲ್ಲಿದ್ದ ಪ್ರಮುಖರೆಂದರೆ ಉಪಪ್ರಧಾನಿ ಮೊರಾರ್ಜಿ ಭಾಯಿ ಮತ್ತು ಲೋಕಸಭಾಪತಿ ಸಂಜೀವರೆಡ್ಡಿ. ರಾಷ್ಟ್ರಪತಿಯವರ ಅಂತ್ಯಸಂಸ್ಕಾರವು ಅವರ ಬಯಕೆಯಂತೆ ಜಾಮಿಯಾ ಮಿಲಿಯಾದಲ್ಲಿ ನಡೆಯಿತು.

ಡಾ। ಜಾಕೀರ್ ಹುಸೇನರು ಅವಿಭಾಜ್ಯ ಭಾರತದ ವಾಯುವ್ಯ ಗಡಿನಾಡಿನ ಬುಡಕಟ್ಟಿಗೆ ಸೇರಿದ ಧೀಮಂತ ವ್ಯಕ್ತಿ. ಪ್ರೌಢ ಶಿಕ್ಷಣದ ಬಳಿಕ ಇವರು ವೈದ್ಯಶಾಸ್ತ್ರವನ್ನು ಅಧ್ಯಯನ ಮಾಡಲು ಬಯಸಿದ್ದರು. ಅದು ಕೈಗೂಡದಾಗ, ವಕೀಲಶಾಸ್ತ್ರವನ್ನಾದರೂ ಕಲಿಯೋಣವೆಂದುಕೊಂಡರು; ಆದರೆ, ಅವರ, ಈ ಆಸೆಯೂ ಈಡೇರಲಿಲ್ಲ. ಮಹಾತ್ಮಾ ಗಾಂಧಿಯವರ ನಿಕಟ ಸಂಪರ್ಕ ಇವರಿಗೆ ದೊರೆತದ್ದರಿಂದ ಸ್ವಾತಂತ್ರ್ಯ ಚಳುವಳಿಯ ರಚನಾತ್ಮಕ ಕಾರ್ಯಗಳಲ್ಲಿ ಡಾ। ಜಾಕೀರ್ ಹುಸೇನರು ತಮ್ಮೆಲ್ಲ ಜೀವನವನ್ನು ಮುಡುಪಿಟ್ಟರು. ಬದುಕಿನಲ್ಲಿ ಇವರು ಹಲವು ಕೋಟಲೆಗಳನ್ನುಂಡರು. ತಾಯ್ತಂದೆಯೊಡನೆ ಇಬ್ಬರು ಸಹೋದರರು ಕ್ಷಯರೋಗಕ್ಕೆ ಬಲಿಯಾಗಿ ತೀರಿಹೋದರು. ಆದರೂ ಡಾ। ಜಾಕೀರ್‌ರು ಎದೆಗೆಡದೆ ತನ್ನ ದೇಶ ಕಲ್ಯಾಣ ಮಾರ್ಗದಲ್ಲಿ ಕೊನೆಯವರೆಗೂ ಮುಂದುವರಿದರು.

ಮಹಾತ್ಮರ ವಿಚಾರಧಾರೆಯನ್ನು ಶೈಕ್ಷಣಿಕ ಪ್ರಣಾಳಿಯಲ್ಲಿ ರೂಪಿಸಲು ಅಲಿಘರ್‌ನಲ್ಲಿ ಜಾಮಿಯಾ ಮಿಲಿಯಾ ಸ್ಥಾಪನೆಯಾಯಿತು. ಡಾ॥ ಜಾಕೀರ್‌ರು ಅದರೊಡನೆ ಸಂಪರ್ಕವಿಟ್ಟುಕೊಂಡಿದ್ದು, ಮುಂದದರ ಉಪಕುಲಪತಿಯಾಗಿ ಬಹುಕಾಲವಿದ್ದು ಅದನ್ನು ಬೆಳೆಸಿ ಪೋಷಿಸಿದರು. ಆಳವಾದ ಅಧ್ಯಯನ, ಅಪಾರವಾದ ಜ್ಞಾನ, ಅರ್ಥ-ಸಮತೋಲನ ದೃಷ್ಟಿಗೆ ಹೆಸರಾದ ಜಾಕೀರ್‌ರು ಮಹಾತ್ಮರ ಇಚ್ಛೆಯಂತೆ ೧೯೩೭ರಲ್ಲಿ ಶೈಕ್ಷಣಿಕ ರಂಗಕ್ಕೆ ಹಲವು ಬಗೆಯ ಸೇವೆಸಲ್ಲಿಸಿದ್ದರು. ಮೂಲ ಶಿಕ್ಷಣ ಯೋಜನೆಯನ್ನು ಬಹು ಶ್ರಮ ಪೂರ್ವಕವಾಗಿ ರೂಪಿಸಿಕೊಟ್ಟರು. 'ಕೆಲಸವನ್ನು ಶಿಕ್ಷಣದ ಮಾಧ್ಯಮವಾಗಿರುವುದೆಂದರೆ, ಯಾವ ಉದ್ದೇಶವೂ ಇಲ್ಲದೆ ಹೊತ್ತು ಕಳೆಯುವುದಲ್ಲ; ಅದು ಉದ್ದೇಶ ಪೂರ್ಣ ಶ್ರಮ'ವೆಂಬವರ ಅಭಿಪ್ರಾಯ. ಶಿಕ್ಷಣದ ಬಗ್ಗೆಯೇ ಶಿಕ್ಷಿತರೂ ಪೇಳಲು ಇಂದಿನ ರಾಜ್ಯಸರಕಾರಗಳು ಅಸಫಲವಾಗಿರುವಾಗ ಮೂಲ ಶಿಕ್ಷಣ ಪದ್ಧತಿಯು ಮೂಲೆ ಸೇರದೆ ಮತ್ತೇನಾದೀತು?— ಈ ಮಾತು ಬೇರೆ. ಆದರೆ ಡಾ। ಜಾಕೀರರು ಈ ದಿಸೆಯಲ್ಲಿ ದೇಶಕ್ಕೆ ಸಲ್ಲಿಸಿದ ಸೇವೆ ಅನುಪಮವಾದುದು, ಪ್ರಶಂಸಾರ್ಹವಾದುದು; ಅಜರಾಮರವಾದುದು. ಪಕ್ಷ ರಾಜಕೀಯದಿಂದ ದೂರವುಳಿದು ಮಹಾತ್ಮರ ಪ್ರಭಾವದಿಂದ ಆಕರ್ಷಿತರಾಗಿ, ಅವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ನಿರತರಾದ ಜಾಕೀರ್ ಹುಸೇನರು ಪಂಡಿತ ನೆಹರುರವರ ಕರ್ತವ್ಯಪರಾಯಣತೆಯಿಂದಲೂ ಪ್ರಭಾವಿತರಾಗಿದ್ದರು. ತನ್ನ ಅಪಾರ ರಾಷ್ಟ್ರಸೇವೆಯ ಫಲವಾಗಿ ಅವರು ೧೯೬೨ರಲ್ಲಿ ಭಾರತದ ಉಪರಾಷ್ಟ್ರಪತಿಯಾಗಿ ಆಯ್ಕೆಗೊಂಡರು. ೧೯೬೭ರಲ್ಲಿ ಅವರು ರಾಷ್ಟ್ರಪತಿಯಾಗಿ ಪ್ರಚಂಡ ಬಹುಮತದಿಂದ ಆಯ್ಕೆಯಾದರು. ಅವರ ವ್ಯಕ್ತಿತ್ವ ನಿತ್ಯ ಭಾರತೀಯ ಮನೋಧರ್ಮವೊಂದು ಪ್ರದರ್ಶನ. ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದೊಡನೆಯೇ ಅವರು ದೇಶಕ್ಕೆ ನೀಡುವ ಮೊದಲ ಸಂದೇಶದಲ್ಲಿ ಅಂದಿದ್ದರು. 'ಭಾರತವೇ ನನ್ನ ಮನೆ; ಭಾರತೀಯರೆಲ್ಲರೂ ನನ್ನ ಕುಟುಂಬಿಕರು.'— ಈ ಭಾವನೆಯನ್ನವರು ಹಿಂದೆಯೂ ತೋರಿಸಿದ್ದರು. ನಡೆದಂತೆ ನುಡಿದರು, ನುಡಿದಂತೆ ನಡೆದರು.

ಭಾರತವು ಜಾತ್ಯಾತೀತ ಪ್ರಜಾರಾಜ್ಯ. ಇದರ ಜ್ವಲಂತ ಸಂಕೇತಗಳಲ್ಲಿ ಡಾ। ಜಾಕೀರ್ ಹುಸೇನರೂ ಒಬ್ಬರು. ಮಹಾ ಮೇಧಾವಿ, ಸುಪ್ರಸಿದ್ಧ ಲೇಖಕರು, ಸುವಿಖ್ಯಾತ ಶಿಕ್ಷಣವೇತ್ತರು, ಸ್ವಾತಂತ್ರ್ಯ ಹೋರಾಟಗಾರರು, ಉಜ್ವಲ ದೇಶಪ್ರೇಮಿ; ಅಜಾತಶತ್ರುವೆಂದರೂ ಸಲ್ಲುವುದು. ಭಾರತ ಮಾತೆಯು ಈ ಸುಪುತ್ರ ಇನ್ನೂ ಬಹುಕಾಲ ಬದುಕ ಬೇಕಿತ್ತು. ಆದರೆ ಕ್ರೂರ ದೈವವು ಅಕಾಲದಲ್ಲಿ ಅನಿರೀಕ್ಷಿತವಾಗಿ ಅವರನ್ನು ಬರಸೆಳೆಯಿತು. ಡಾ॥ ಜಾಕೀರ್ ಹುಸೇನ್ ಸ್ವಪ್ರಯತ್ನದಿಂದ ಬೆಳೆದು ಬದುಕಿ ದೇಶದ ಪ್ರಥಮ ಪ್ರಜೆಯೆನಿಸುವ ಭಾಗ್ಯವನ್ನು ಪಡೆದ ಹೆಮ್ಮೆಯ ಪ್ರಜೆ, ಭಾರತೀಯ ಸಂಸ್ಕೃತಿಯ ಭವ್ಯ ಮೂರ್ತಿ.

ಡಾ। ಜಾಕೀರ್ ಹುಸೇನರ ನಿಧನದಿಂದ ದೇಶಕ್ಕೆ ತುಂಬ ನಷ್ಟವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ದಿವಂಗತರ ಮೃತಾತ್ಮವು ಚಿರಶಾಂತಿಯನ್ನು ಹೊಂದಲಿ; ಅವರ ಅಗಲಿಕೆಯ ಶೋಕವನ್ನು ಸಹಿಸುವ ಶಕ್ತಿ ನಮಗೆಲ್ಲ ಲಭಿಸಲಿ. ಭಾರತವು ಜಾತ್ಯಾತೀತ ಲೌಕಿಕ ರಾಷ್ಟ್ರವಾಗಿರುವಷ್ಟು ಸಮಯ ಡಾ। ಜಾಕೀರ್ ಹುಸೇನರ ವ್ಯಕ್ತಿತ್ವ ಭಾರತೀಯರ ಹೃದಯದಿಂದ ದೂರವಾಗದು. ಆದುದರಿಂದಲೇ ಜಾಕೀರ್ ಹುಸೇನರು ಅಮರರು.

ಮುಂದಾರು?

ರಾಷ್ಟ್ರಪತಿ ಡಾ। ಜಾಕೀರ್‌ರ ನಿಧನದಿಂದ ಉಪರಾಷ್ಟ್ರಪತಿ ವಿ. ವಿ. ಗಿರಿಯವರು ಸ್ಥಾನಬಲದಿಂದ ಹಂಗಾಮಿ ರಾಷ್ಟ್ರಪತಿಯಾದರು. ಸಂವಿಧಾನ ರೀತ್ಯಾ ಆದಷ್ಟು ಬೇಗನೇ, ಆರು ತಿಂಗಳುಗಳೊಳಗೆ, ಹೊಸ ಚುನಾವಣೆಗಳು ನಡೆಯಬೇಕು. ಎರಡು ವರ್ಷಗಳಿಗೆ ಮೊದಲು ವಿರೋಧೀ ಪಕ್ಷಗಳು ಸಂಯುಕ್ತವಾಗಿ ತಮ್ಮ ಅಭ್ಯರ್ಥಿಗಳನ್ನು ರಾಷ್ಟ್ರಪತಿ ಉಪರಾಷ್ಟ್ರಪತಿ ಸ್ಥಾನಕ್ಕೆ ನಿಲ್ಲಿಸಿದಾಗ ಶ್ರೀಮತಿ ಇಂದಿರಾಗಾಂಧಿಯವರ ಪಟ್ಟು ಸಡಿಲಗೊಳ್ಳಲಿಲ್ಲ. ಇದರಲ್ಲಿ ಭಾರತೀಯ ಜಾತ್ಯಾತೀತತೆಯು ದೃಢೀಕೃತವೆಂಬಂತೆ ಡಾ। ಜಾಕೀರ್‌ರು ಜಯಭೇರಿ ಬಾರಿಸಿದರು. ಬಲ್ಲ ಮೂಲಗಳೆನ್ನುವಂತೆ ಮುಂದಿನ ಆಯ್ಕೆಯನ್ನು ಅವಿರೋಧವಾಗಿ ಮಾಡುವ ಇರಾದೆಯಿಂದ ಪಕ್ಷ-ಪ್ರತಿಪಕ್ಷಗಳ ನಡುವೆ ಸಮಾಲೋಚನೆ ನಡೆಸಿ ಸರ್ವ ಸ್ವೀಕೃತ ವ್ಯಕ್ತಿಯನ್ನು ಆರಿಸು

(ಹತ್ತನೇ ಪುಟ ನೋಡಿರಿ)

NAVAYUGA
Supplement on
INDUSTRY & TRADE

Prof K. S. Haridas Bhat, *M. A.*, Guest Editor for the Industrial and Trade Supplement of Navayuga.

'NAVAYUGA', one of the most reputed weeklies of Mysore State proposes to issue a supplement on INDUSTRY & TRADE with a view to highlight the problems of and prospects for industrial and commercial development of the State of Mysore.

You are certainly aware that the State of Mysore with 1⟨?⟩0 miles of coast line, rich natural resources and an abundant supply of electricity, still languishes for lack of industrial leadership. Inspite of 20 years of independence and the few pockets of industrial prosperity like Bangalore and Bhadravathi, the impact of industrial development is least felt in the State. The Government also has been finding it difficult to make compelling and adequate case in the Centre for industrial licensing in the State. The net result has been a classic example of "poverty in the midst of plenty".

It is therefore essential that the public should be well impressed of the issues involved so that their attitude may become development-oriented and the hands of the Government strengthened in its fight for rights.

Our supplement will consist of important contributions from State Ministers, Industrial executives, bankers and other businessmen. It will be fully illustrated and brought out according to high standards of journalism that this weekly has attained over the years.

Needless to say that a supplement like this would form an effective medium to advertise your goods and services. It will reach both the classes and the masses of Mysore State.

We are glad to accept a brief account of your firm, its Directors and leaders. (Limit. 100 words).

Please send in your material with blocks and stereos if any on or before May 15th 1969. The supplement will come out on May 25th 1969.

ADVT. MANAGER,
NAVAYUGA,
UDIPI, S. K.

ಗೋಹರಾಜ್ಯದಲ್ಲಿ

ರಾಜಕೀಯ ಪ್ರಗತಿಯ ಮೆಟ್ಟಿಲುಗಳು

"ತುಸು ಇಲ್ಲಿ ಕೇಳ್ತೀರಾ!"

'ಏನು?"

'ಅಲ್ಲಾ, ನೋಡಿ, ಕಮ್ಯೂನಿಸ್ಟ್ ಪಾರ್ಟಿಯ ಕಥೆ...."

'ಏನಾಯ್ತು?"

'ಆಗೋದೇನು? ಒಂದಿದ್ದದ್ದು ಎರಡಾಯ್ತು; ನಿನ್ನೆ ಮೊನ್ನೆ ಎರಡಿದ್ದದ್ದು ಮೂರಾಯ್ತಂತೆ..."

"ಅಲ್ವೆ, ಅದು ಭಾರೀ ಹಿಂದಿನ ಕತೆ."

'ಯಾವುದು?'

"ಮೂರಾಗುತ್ತೇರಂತ__'

'ಈಗ ಆಗ್ತಿಲ್ಲ?'

'ಆಗಲಿ ಬಿಡು, ಹಿಂದೆ ಒಂದು ಭಾಷೆಯಿದ್ದದ್ದು ಇಂದು ನೂರಾಗಿಲ್ಲವೆ? ಒಂದು ದೇಶ ಎರಡು ಹೋಳಾಗಿಲ್ಲವೆ?"

'ಅಂತ ಸಮಾಧಾನ ಪಟ್ಕೊಳ್ಳೋದೆ?"

"ಅಲ್ವೆ, ಹಿಂದೆ ಒಂದಿದ್ದ ಕಾಂಗ್ರೆಸ್ಸು ಇಂದು ಛಿದ್ರ ವಿಛಿದ್ರವಾಗಿಲ್ವೇನೆ? ಮತ್ತೆ ಇಂದು ನಮ್ಮ ಎಲ್ಲ ರಾಜಕೀಯ ಪಕ್ಷಗಳ ನೇತಾರರು ಒಂದು ಸಮಯದಲ್ಲಿ ಕಾಂಗ್ರೆಸ್ಸಿನ ಬಲಗೈ ಬಂಟರಾಗಿದ್ದವರೇ ತಾನೆ?"

"ಅದು ಸರೀನ್ನಿ...."

"ರಾಜಕೀಯ ಬೆಳೆದಂತೆ ಭಿನ್ನಮತ ಸಹಜ. ಆಗ, ಪಕ್ಷ ಒಡೆಯುವುದೂ ಸಾಧ್ಯವೇ. ವೈಜ್ಞಾನಿಕ ಭಾಷೆಯಲ್ಲಿ ಹೇಳುವುದಾದರೆ, ಇದು ರಾಜಕೀಯ ಪ್ರಗತಿಯ ಮೈಲುಗಲ್ಲು...."

'ಮೈಲುಗಲ್ಲೋ ಇಲ್ಲಾ ಮೆಟ್ಟಿಲುಗಳೇನ್ರಿ?"

"ನೋಡಿ, ಇಲ್ಲೂ ಗತಿ ಪ್ರಗತಿ ಇರುವಾಗ, ರಾಜಕೀಯದಲ್ಲಿ ಅದು ಬೇಡವೇ?"

"ಅದೆಲ್ಲಾ ಹಂಗೋತ್ತಿಲ್ಲ. ಆದರೆ ನೋಡಿ, ಈ ಮನುಷ್ಯನ ಬಾಳು ಮರ್ಕಟದಿಂದಂತೆ, ಪಿತ್ರಾರ್ಜಿತ ಆದಿಂದಲೇ ಅಧಿಕಾರದಾಹವ ಹಬ್ಬಿಸುತ್ತದಂತೆ. ಮೂರ್ಖರು ಕೆಂಪು ಮುಸ್ತಕವೇ ಇವರ ವೇದಸಾರವಂತೆ..."

'ಸರಿ, ಬಿಡ, ಇಂಥ ಪ್ರಗತಿ ಹುಟ್ಟಿನೆ. ಬೇರಾಗಿಯೋ ದೇವರಾಗಿಯೋ ಜನಕೃತ್ತಿಗೆ ಹತ್ತಿರ ಹೋಗಿ ಹನ್ನೊಂದು."

'ಅಲ್ರಿ, ನಿಮಗೆ ದಯ್ವ ಸಾಗರವೆ?"

'ಸಾಗರವೇನು ಒಂದೇ ತಲೆಗೆ ಹಸ್ತ ಬಂದ ವಿಚಾರಧಾರೆಯನ್ನು ಹೊಂದಲು ಅಧಿಕಾರ ಅವರಿಗೂ ಇದೆ. ಪಕ್ಷದೊಳಗಿದ್ದೂ ಒಂದು ವಿಚಾರಧಾರೆ ಅದು ಜನತೆಗೆ ಒಪ್ಪಿಗೆಯಾಗದೆ ಹೋದರೆ, ಸ್ವತಂತ್ರ ನಾಶವಾಗುತ್ತೆ. ನೋಡು, ಅಂದಿನ ದೇವ ದೇವಿಯರ ಯುಗದಲ್ಲೂ ನಾಸ್ತಿಕ ಪಂಥ ಇತ್ತು ತಾನೆ?"

"ಅದು ಸರೀನ್ನಿ. ಆದ್ರೆ, ಇದರಿಂದ ದೇಶ ನಾಶವಾದೀತೋ ಎಂಬ ಭಯ...."

"ಮತ್ತೆ ದೇಶ ಅನ್ನೋದು ಸರೋವರವಾಗಿರಬೇಕೇನು? ಬಹುಕಾಲ ನೀರು ಹರಿಯದೆ ಹೋದರೆ, ನುಸಿ ಕ್ರಿಮಿ ಹುಟ್ಟುತ್ತೆ, ನಾರುತ್ತೆ; ಅನಾರೋಗ್ಯಕರವಾಗುತ್ತೆ."

"ಹ್ಞೂಂ....ಹರಿಯುವ ನೀರಾದರೆ ಪರಿಶುದ್ಧವಿರುತ್ತೆ. ಆದರೆ, ಅದ್ರಲ್ಲಿ ರಕ್ತವೂ ಹರಿಯೋಕೆ ಆರಂಭವಾದರೆ...?"

"ಇದನ್ನೇ ಪ್ರಗತಿ ಅನ್ನೋದು. ಪ್ರಗತಿಶೀಲ ದೇಶ ತನ್ನ ಉಳಿವಿಗಾಗಿ ನಡೆಸುವ ಹೋರಾಟದಲ್ಲಿ ಯಶಗಳಿಸುತ್ತದೆ."

"ಅಲ್ರಿ, ದೇಶದಲ್ಲಿ ಪ್ರಬಲ ರಾಜಕೀಯ ಪಕ್ಷಗಳ ಅಭಾವವಿದ್ದು ಆಡಳಿತೆಯೇ ದುರ್ಭರವೆನಿಸಿರುವಾಗ, ಈ ಬಗೆಯಾಗಿ ನಾಯಿಕೊಡೆಗಳಂತೆ ಹೊಸ ಪಕ್ಷಗಳು ತಲೆಯೆತ್ತುತ್ತ ಬಂದರೆ...."

"ಅಷ್ಟು ಲಘುವಾಗಿ ಹೇಳಬೇಡ. ನೋಡೋಣ; ಕಾದು ನೋಡೋಣ. ಹಿಂದಿನ ಕಾಲದಿಂದಲೂ ನಮ್ಮದು ವೈವಿಧ್ಯಮಯ; ಅದು ಇಂದು ದೂರವಾಗುವುದೆ?"

"ಮತ್ತೆ ನೋಡಿ ಕೇರಳದ ಎಡ-ಬಲ ಕಮ್ಯುನಿಸ್ಟರು ಹೊಡೆದಾಡಿಕೊಳ್ಳತೊಡಗಿದ್ದಾರೆ."

"ಹ್ಞೂಂ, ಇಎಂಎಸ್‌ಗೆ ಅಲ್ಪಮೋಟಂ ನೀಡಿದ್ದ ಬಗ್ಗೆ ತಾನೇ ಹೇಳನ್ನೋದು?'

'ಹ್ಞೂಂ....'

'ಅದು ಮೂನಸೂಲಿ ಬಿಡು, ಗಂಡ-ಹೆಂಡಿರ ಜಗಳದಂತೆ. ಅಧಿಕಾರದ ಲಾಲಸೆ ಇರುವ ವರೆಗೆ ಇದರಿಂದೇನೂ ಆಗೋದಿಲ್ಲ..."

"ಒಂದು ರೀತಿಯಿಂದ ಇದೂ ಸರಿಯಿರಬಹುದು. ಆದರೆ ನೋಡಿ, ಪಶ್ಚಿಮ ಬಂಗಾಳದ ಉಪ ಮುಖ್ಯಮಂತ್ರಿ ಬಸು ಪಕ್ಷದವರ ಚಟುವಟಿಕೆಗಳು ಸಮಾಜದ್ರೋಹಿಯೆಂದೂ ಸರಕಾರ ಬಯಸಿದರೆ, ಒಂದೇ ದಿನದಲ್ಲಿ ಅವನ್ನು ಬಡಿದು ಬಡೆಯಬಹುದೆಂದು ಗದರಿಸಿದ್ದಾರಲ್ಲಾ?"

"ಹ್ಞೂಂ, ಅಧಿಕಾರಸ್ಥಾನದಲ್ಲಿರುವವರ ಅಬ್ಬರ ತಾಳವಿದು. ಆದರೆ, ಅವರ ಸರಕಾರ...."

"ಛೆ, ಅವರ ಸರಕಾರವೆಲ್ಲೀರಿ? ಅಜಯ ಮುಖರ್ಜಿ...."

"ಅಯ್ಯೋ, ಪೆದ್ದೀ, ಅಜಯ ಮುಖರ್ಜಿಯವರು ಈಗ ಮಠದ ಸನ್ಯಾಸಿ ಮಾತ್ರ. ಅವರ ಪವರ್ ಅಫ್ ಅಟರ್ನಿಯಿರುವುದು ಬಸು ಮಹಾಶಯರೊಡನೆ."

"ಆಯ್ತಪ್ಪ, ಅದೂ ಸರೀಂತನ್ನಿಸುತ್ತೆ ......"

"ಅದೇ, ಅವ್ರ ಸರಕಾರ ನಕ್ಸಲೀಯರನ್ನ ಹಿಡಿಯಲಿಕ್ಕೇ ಬಯಸುವುದಿಲ್ಲ...."

"ಅದೇಗ ಕತೆ........ ಅದ್ರೂ ನೋಡಿ ಕಲ್ಕತ್ತೆಯಲ್ಲಿ ಮೇ ದಿನದಂದು ಕಮ್ಯೂನಿಸ್ಟ ಬಣ್ಣಗಳು ತಂತಮ್ಮಲ್ಲೇ ಹೊಡೆದಾಡಿದುವಂತೆ....ಹೈದರಾಬಾದದಲ್ಲಿ ತೆಲಂಗಾಣ ಬೇಡಿಕೆಯ ದಿನದಂದೂ ರಕ್ತ ಹರಿಯಿತಂತೆ...."

'ಹ್ಞೂಂ...'

'ಅಲ್ರಿ, ತೆಲಂಗಾಣದ ಶುಭಕ್ಕಾಗಿ ಕಾರ್ಯಕ್ರಮ ರೂಪಿಸಲು ಒಪ್ಪಿರುವಾಗ......'

"ಪ್ರತ್ಯೇಕ ರಾಜ್ಯವೇ ಬೇಕೆಂಬ ಹಠ."

'ಅಲ್ರಿ, ಹೀಗೆಲ್ಲಾ ಮಕ್ಕಳಿಗೆ ಮೂರು ರಾಜ್ಯ ಮಾಡುತ್ತ ಹೋದರೆ,...."

"ಅದೂ ಒಂದು ಬಗೆಯ ಪ್ರಗತಿ."

'ಇದೊಳ್ಳೇ ಪ್ರಗತಿಯಾಯ್ತು."

"ಯಾಕೆ?"

"ಅಲ್ರಿ, ಮತ್ತಿನ್ನೆಂಥದು?"

"ನೋಡು, ಕಂಸಾರ ವಿಭಜನೆ ಸ್ವಾಭಾವಿಕವಾಗಿರುವಂತೆಯೇ ಇದೂ ಯಾಕೆ ಆಗಬಾರದ?"

'ಪ್ರಾಯಃ ರಾಜಾಜಿ ತಲೆಗೆ ಕೈಯಿಟ್ಟರೆಂದು ತೋರುತ್ತೆ...'

"ಮತ್ಯಾರು ರಾಜೀಜಿ ಇದ ಬೇಕಿತ್ತೇನು?"

"ಸಾಕು ಸುಮ್ಮನಿರೀಂದ್ರೆ..."

"ಇನ್ನೊಂದು ಸುದ್ದಿ ಕೇಳಿದ್ರಾ?"

"ಏನಂತೆ?"

"ಧವಳಗಿರಿಯನ್ನು ಹತ್ತಹೋದ ಐವರು ಅಮೇರಿಕನ್ನರೂ ಇರ್ವರು ಶೇರ್ಪಾಗಳೂ ಕುಸಿದುಹೋದರಂತೆ!"

"ಅಯ್ಯೋ ಪಾಪವೇ! ಕಾರಣ?"

"ಪ್ರಾಯಃ ವಿಪರೀತ ಮಂಜು ಇರಬೇಕು; ಕಾಲು ಜಾರಿಹೋಯಿತ್ತೋ ಏನೋ!"

"ಹ್ಞೂಂ...ಅಂತೂ ಇದೂ ಒಂದ ವೀರಮರಣ ..."

"ಹಾದು...."

"ಎಂಥದು?"

"ವೀರಮರಣಾಂತಂದದ್ದು..."

"ಆಯ್ತು....'

"ಆಯ್ತೇ...."

'ಅಯ್ಯೋ, ಏನಿದ....'

"ಏನೂ ಇಲ್ಲ, ಬಿಡು...."

'ಬಿಡೋಲ್ಲ..."

"ಹ್ಞಾಂ...."

—ಗೋರಾ

ಡಾ| ಎಂ. ಉಮೇಶ ರಾವ್

ದಕ್ಷಿಣ ಕನ್ನಡ ಜಿಲ್ಲೆಯ ಕ್ಷಯರೋಗ ಸಂಘದ ಪ್ರಧಾನ ಕಾರ್ಯದರ್ಶಿ ಡಾ| ಎಂ. ಉಮೇಶ ರಾಯರು ೧೯೬೯-೭೦ನೇ ವರ್ಷಕ್ಕೆ ಭಾರತೀಯ ಕ್ಷಯರೋಗ ಸಂಸ್ಥೆಯ ತಾಂತ್ರಿಕ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆ ಹೊಂದಿದ್ದಾರೆ. ಡಾ| ಉಮೇಶರಾಯರು ಹಲವು ಕಾಲದಿಂದ ಕ್ಷಯ ನಿರೋಧ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ಈ ಹೊಸ ಪದವು ಅವರ ಸೇವೆಗೆ ಸಿಕ್ಕ ಗೌರವವಾಗಿದೆ. ೧೯೭೦ರ ಆರಂಭದಲ್ಲಿ ಕ್ಷಯ ಮತ್ತು ಪಕ್ಷರೋಗಗಳಿಗೆ ಸಂಬಂಧಿಸಿದ ೨೫ನೆಯ ರಾಷ್ಟ್ರೀಯ ಸಮ್ಮೇಳನವು ಪಾಟಿಯಾಲದಲ್ಲಿ ಸೇರಲಿದ್ದು ಡಾ| ಉಮೇಶರಾಯರು ಇದರ ಅಧ್ಯಕ್ಷರಾಗುತ್ತಾರೆ. ಈ ಸಮ್ಮೇಳನದಲ್ಲಿ ದೇಶದ ಎಲ್ಲ ಭಾಗಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಡಾ| ಉಮೇಶರಾಯರಿಗೆ ದೊರೆತ ಗೌರವಕ್ಕಾಗಿ 'ನವಯುಗ'ವು ಅವರನ್ನು ಅಭಿನಂದಿಸುತ್ತದೆ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು ● ಉಳುಕು ● ಕೆಮ್ಮು ಮತ್ತು ನೆಗಡಿ ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.

ತಯಾರಕರು: ಅಮೃತಾಂಜನ ಲಿಮಿಟೆಡ್, ಮದ್ರಾಸು-4

ದಿ. ಕೆನರಾ ಬ್ಯಾಂಕಿಂಗ್ ಕೋಪೊರೇಷನ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲವನ್ನು, ಬ್ಯಾಂಕಿನ ನಿಬಂಧನೆಗಳಿಗನುಗುಣವಾಗಿ, ಅಸಲು ಯಾ ಬಡ್ಡಿಯನ್ನು ಗಡುವಿನ ತಾರೀಕಿಗೆ ಸರಿಯಾಗಿ ಪಾವತಿ ಮಾಡದೆ ಇದ್ದುದರಿಂದ ಸದ್ರಿ ಇವರಿಗೆ ಟಪ್ಪಾಲು ಮೂಲಕ ಕಳುಹಿಸಿಕೊಟ್ಟ ನೋಟೀಸು ಕೂಡಾ, ಸದ್ರಿ ಸಾಲಗಾರರು ಸಾಲಪಡೆಯುವಾಗ ತಿಳಿಸಿದ ವಿಳಾಸದಲ್ಲಿ ಇಲ್ಲದೆ ಇರುವುದರಿಂದ, ಪಾವತಿಯಾಗದೆ ಮರಳಿ ವಾಪ್ಪು ಬಂದಿರುತ್ತದೆ. ಸದ್ರಿ ಸಾಲದ ಅಸಲು ಬಡ್ಡಿ ಏನೇನನ್ನು ತಾ. 15—6—1969ರೊಳಗೆ ಬ್ಯಾಂಕಿಗೆ ಪಾವತಿ ಮಾಡದಿದ್ದಲ್ಲಿ ಸದ್ರಿ ಸಾಲಗಾರರು ಬ್ಯಾಂಕಿನಲ್ಲಿ ಅಡವಿಟ್ಟ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 17ನೇ ಶನಿವಾರ ಅಪರಾಹ್ನ ಘಂಟೆ 1ಕ್ಕೆ ಸರಿಯಾಗಿ, ಯಾ ಮುಂದಕ್ಕೆ ಯಾವುದಾದರೊಂದು ದಿನದಲ್ಲಿ ಪುನಃ ನೋಟೀಸುಕೊಡದೇನೇ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ.

ಸಾಲದ ನಂಬ್ರ	ಹೆಸರು	ಸಾಲದ ಮೊಬಲಗು
132/68	ಯು. ನರಸಿಂಹ ಭಟ್, ಯು. ಸುಬ್ರಾಯ ಭಟ್ಟರ ಮಗ, ಕೋಟದಪೇಟೆ, ಉಡುಪಿ.	ರೂ 3,000/.

ಕೋಪೊರೇಷನ್ ಬ್ಯಾಂಕ್ ಆಫೀಸ
ಉಡುಪಿ
1—6—1969

ಎ. ಲಕ್ಷ್ಮಣ ನಾಯಕ್,
ಏಜಂಟ್

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು, ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

READ &
ADVERTISE IN
NAVAYUGA WEEKLY

ಹಿಂದೂ ಧರ್ಮದ ಐಕ್ಯತೆಗಾಗಿ ಅವತರಿಸಿದ-

ಶ್ರೀ ಶಂಕರಾಚಾರ್ಯರು

ಬರೆದವರು: ಶ್ರೀ ಮುಜಿಬೈಲು ಭಾಸ್ಕರ ಭಂಡಾರಿ

ಸ್ವರ್ಗಗರೀಯಸೀ ಭರತ ಮಾತೆಯು ಮಹಾಪುರುಷರೆಂಬ ಹೊನ್ನುಗಳ ಗಣಿ. ಜಗತ್ತಿನಲ್ಲಿ ಅನೇಕ ರಾಷ್ಟ್ರಗಳು ತಾವು ಚಂದ್ರಲೋಕಕ್ಕೆ ಹಾರಿದೆವೆಂದೋ ಮಾನವ ಕೋಟಿಯನ್ನು ಕ್ಷಣಾರ್ಧದಲ್ಲಿ ನಾಶಗೊಳಿಸಬಲ್ಲ ಅಣು ಪರಮಾಣುಗಳನ್ನು ಸಂಶೋಧಿಸಿದೆವೆಂದೋ ಕುಣಿದಾಡಬಹುದು. ಆದರೆ ಜಗತ್ತಿನ ಜನತೆಗೆ ಚೈತನ್ಯ, ಬಲಗಳನ್ನಿತ್ತು ವಿಶ್ವ ಶಾಂತಿ, ವಿಶ್ವ ಪ್ರೇಮಗಳ ಸಂದೇಶವನ್ನು ಸಾರುತ್ತಾ ವಿಶ್ವ ವ್ಯಾಪಕವೂ ವಿಶ್ವ ವಂದಿತವೂ ಆದ ವಿಶ್ವತೋಮುಖ ವ್ಯಕ್ತಿತ್ವವನ್ನು ಪಡೆದ ತೇಜಸ್ವಿಗಳನ್ನು ಭಾರತ ಮಾತೆಯಲ್ಲದೆ ಇನ್ನಾರು ಕೋಟಿ ಸಂಖ್ಯೆಯಲ್ಲಿ ಹೆತ್ತು ಧನ್ಯಳಾಗಿದ್ದಾಳೆ? ರಾಮ, ಕೃಷ್ಣ, ಬುದ್ಧ, ಗಾಂಧಿ, ಜವಾಹರ, ವಿವೇಕ, ಬಸವಣ್ಣ, ನಾನಕ್, ಮೀರಾ, ಕಬೀರ, ರಹೀಮ ಮೊದಲ್ಗೊಂಡು ಎಲ್ಲರೂ ವಿಶ್ವವಂದಿತರೆ! ಆದುದರಿಂದಲೇ ಭಗವಂತನು ಹಾಡಿದ

"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"

ಎಂಬ ಅಮರವಾಣಿಗೆ ಮತ್ತಷ್ಟು ಬಲವೂ ಕಳೆಯೂ ಕೂಡಿಬಂದಿದೆ.

ಭಾರತಾಂಬೆಯ ಪುತ್ರರತ್ನಗಳಲ್ಲಿ ಶಂಕರಾಚಾರ್ಯರೂ ಒಬ್ಬರು. ಅವರ ಕಾಲವನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನಿರ್ಧರಿಸಬಯಸಿದ್ದಾರೆ. ಕೆಲವರು ಕ್ರಿಸ್ತಪೂರ್ವಕ್ಕೊಯ್ದರೆ ಕೆಲವರು ಕ್ರಿಸ್ತಶಕದ ಏಳನೇ ಶತಮಾನಕ್ಕೊಯ್ಯುತ್ತಾರೆ. ಎರಡನೆಯ ನಿರ್ಧಾರವೇ ಹೆಚ್ಚು ಮಾನ್ಯವೆಂದು ತೋರುತ್ತದೆ. ಹೇಗಿದ್ದರೂ ಅವರ ಕಾಲವಿಚಾರ, ಕುಲಗೋತ್ರ ಇವಾವುವೂ ನಮಗೆ ಮುಖ್ಯವಲ್ಲ, ಜಗತ್ತಿನಲ್ಲಿ ಬೆರಳೆಣಿಕೆಯವರು ಮಾತ್ರ ಸಾಧಿಸಿದ ಅಥವಾ ಸಾಧಿಸಬಲ್ಲ ಮಹತ್ಕಾರ್ಯಗಳನ್ನು ಮಹಾ ಕೀರ್ತಿಯನ್ನು ಅವರು ತಮ್ಮ ಕೇವಲ ಮೂರು ದಶಕಗಳ ಜೀವನಾವಧಿಯಲ್ಲಿ ಸಾಧಿಸಿದ್ದಾರೆಂಬುದು ಮಾತ್ರ ಗಣನೀಯ! ಅಖಂಡ ಭಾರತವನ್ನು ಕಾಲ್ನಡಿಗೆಯಲ್ಲಿಯೇ ಧರ್ಮ ಪ್ರಚಾರ ಮಾಡುತ್ತಾ ಸುತ್ತಬೇಕಾದರೆ ಸಾಮಾನ್ಯನಿಗೆ ಮೂರು ದಶಕಗಳೇ ಸಾಲವು! ಆದರೆ ಶ್ರೀ ಶಂಕರಾಚಾರ್ಯರು ಇಂತಹ ಮಹತ್ಕಾರ್ಯಗಳನ್ನು ಸಾಧಿಸುವುದರೊಂದಿಗೆ ಹಿಂದೂ ಧರ್ಮದ ಪುನರುತ್ಥಾನವನ್ನು ಮಾಡುತ್ತಾ ಅದರ ಮೇಲಿನ ಅಸಮಾದ(?) ಕುಂದುಕೊರತೆಗಳನ್ನು ನಿವಾರಿಸುತ್ತ ಆ ಧರ್ಮಕ್ಕೆ ಒಂದು ಹೊಸ ಚೈತನ್ಯ ಕಳೆ ಮತ್ತು ಬಲವನ್ನು ಕೊಟ್ಟು ಬೆಳಗಿಸಿದರು! ಇಂದಿನ ಈ ವಿಜ್ಞಾನ ಯುಗದಲ್ಲಿಯೂ ಬ್ರಾಹ್ಮಣ-ಶೂದ್ರ, ಜಾತಿ-ನೀತಿ, ಪಕ್ಷ-ಪಂಗಡ ಎಂದು ಬಡಿದಾಡುವ ನಮ್ಮ ಸಮಾಜದ ಸ್ಥಿತಿಗತಿ ಆದಿ ಶಂಕರಾಚಾರ್ಯರ ಕಾಲದಲ್ಲಿ ಹೇಗಿದ್ದಿರಬಹುದೆಂದು ಪ್ರಾಯಶಃ ನೀವೇ ಊಹಿಸಬಹುದು. ಅನ್ಯ ಹಾಗೂ ಪರಧರ್ಮಗಳ ಅವಹೇಳನ, ಅಪಪ್ರಚಾರಗಳಿಗೆ ಎದ್ದು ನಿಂತು ಸಿಂಹ ಸದೃಶವಾಗಿ ಉತ್ತರಿಸಬಲ್ಲ ಪಂಡಿತರಾರೂ ಆಗ ಇರಲಿಲ್ಲ. ತಮ್ಮತಮ್ಮೊಳಗೆ, ಮೇಲು—ಕೀಳು ಎಂಬ ಅಸ್ತ್ರಗಳನ್ನು ಹಿಡಿದುಕೊಂಡು ಜಗಳಾಡುತ್ತಾ ವ್ಯವಹರಿಸುತ್ತಿದ್ದ ಹಿಂದೂ ಜನಾಂಗವನ್ನು ಹೊಡೆದೆಬ್ಬಿಸಿದ ಮಹಾಶಕ್ತಿಯೆಂದರೆ ಶ್ರೀ ಆದಿ ಶಂಕರಾಚಾರ್ಯರ!

ಅದ್ವೈತ ತತ್ವದ ಪ್ರತಿಪಾದನೆಯನ್ನು ಮಾಡಿದ ಶಂಕರ ಭಗವತ್ಪಾದರು ಪ್ರತಿಯೊಂದು ಜೀವಿಯಲ್ಲೂ ನಶ್ವರವಾದ ದೇಹದಿಂದ ವಿಭಿನ್ನವಾದ, ಶಾಶ್ವತವೂ, ನಿರ್ಲಿಪ್ತವೂ ಆದ ಆತ್ಮವೊಂದನ್ನು ಕಂಡರು. ಈ ಆತ್ಮದಲ್ಲೇ ಪರಮಾತ್ಮನ ಅಸ್ತಿತ್ವವನ್ನು ಮನಗಂಡರು! ಜ್ಞಾನ ಮಾರ್ಗದ ಪ್ರತಿಪಾದನೆಯಂತೆ ಆತ್ಮವೇ ಪರಮಾತ್ಮ! ಪರಮಾತ್ಮನು ವಿದ್ಯುಚ್ಛಕ್ತಿಯ ಉತ್ಪನ್ನ ಸ್ಥಾನವಾದರೆ ಆತ್ಮಗಳು ವಿವಿಧ ಬಣ್ಣ ಆಕಾರಗಳನ್ನು ಧರಿಸಿದ ವಿದ್ಯುದ್ದೀಪಗಳು! ಗುಂಡಿ ಒತ್ತಿದರೆ ಮಾತ್ರ ಬೆಳಕು! ಒತ್ತದಿದ್ದರೆ ಶಕ್ತಿ ಉಗಮ ಸ್ಥಾನದಲ್ಲಿಯೇ ಕೇಂದ್ರೀಕೃತ. ಆತ್ಮದ ಮೇಲೆ ಶ್ರದ್ಧೆಯಿಟ್ಟು ಆದರ್ಶ ದ್ರೋಹ ಬಗೆಯದೆ ಸರ್ವಜೀವ ಕೋಟಿಗಳಲ್ಲಿಯೂ ಅದರ ಅಸ್ತಿತ್ವವನ್ನು ಮನಗಾಣಬಲ್ಲವನೇ ಬ್ರಹ್ಮದ ಅಸ್ತಿತ್ವವನ್ನು ತಿಳಿಯಬಲ್ಲ. ಅಂಥವನು ತಿಳಿದವನೇ ನಿಜವಾದ ಬ್ರಾಹ್ಮಣನೆಂದು ಕರೆಯಲ್ಪಡುತ್ತಾನೆ.

ಆದರೆ ಆದಿಶಂಕರಾಚಾರ್ಯರು ಸುಮಾರು ಸಾವಿರದ ಇನ್ನೂರು ವರ್ಷಗಳ ಹಿಂದೆ ಮನಗಂಡು ಸಾರಿದ ಈ ತತ್ವವನ್ನು ನಮ್ಮ ಹಿಂದೂ ಜನತೆ ಇನ್ನೂ ಸರಿಯಾಗಿ ಜೀರ್ಣಿಸಿಕೊಂಡಿಲ್ಲ. ಜ್ಞಾನ ವಿಜ್ಞಾನಗಳು ಹೆಚ್ಚಿದಂತೆ ಒಂದು ಕಡೆ ಜಾತೀಯತೆ, ವರ್ಣಬೇಧಗಳ ಕಟ್ಟು ಸಡಿಲುತ್ತಿದ್ದಂತೆ, ಇನ್ನೊಂದೆಡೆಯಲ್ಲಿ ಆ ಕುರಿತಾದ ಸ್ವಾರ್ಥಸಾಧಕರ ಸಂಖ್ಯೆಯೂ ಬೆಳೆಯುತ್ತಿದೆ. ಜಾತಿಯ, ಧರ್ಮದ, ದೇವರ ಹೆಸರಿನಲ್ಲಿ ರಕ್ತದ ತರ್ಪಣವಾಗುತ್ತಿದೆ. ಯಾವ ರಾಷ್ಟ್ರೀಯ ಭಾವೈಕ್ಯತೆ, ಒಗ್ಗಟ್ಟುಗಳಿಗಾಗಿ ಶ್ರೀ ಆದಿಶಂಕರಾಚಾರ್ಯರು ದೇಶದ ಮೂಲೆ ಮೂಲೆಗಳಲ್ಲಿಯೂ ಮಠಗಳನ್ನು ಸ್ಥಾಪಿಸಿ ದುಡಿದರೋ ಆ ಒಗ್ಗಟ್ಟು ಭಾವೈಕ್ಯತೆ ಇಂದು ಕನಸಿನ ಗಂಟಾಗಿದೆ. ಉನ್ನತ ಮತಾಧೀಶ ಪೀಠವನ್ನೇರಿದವರೂ ಸಂಕುಚಿತ ಭಾವನೆಗಳಿಗೆ ಎಡೆಕೊಟ್ಟು ದೇಶದಲ್ಲಿ ಗೊಂದಲಕ್ಕೆ ಕಾರಣರಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ನಾವು ಈ ಭೇದ ಭಾವಗಳನ್ನು ತೊರೆದು ಅಖಂಡ ಭಾರತದಲ್ಲಿ ಐಕ್ಯತೆ ಒಗ್ಗಟ್ಟುಗಳನ್ನು ಕಾಪಾಡಿಕೊಂಡು ಬರಲು ಬಯಸಬೇಕು. "ಹಿಂದೂಗಳೆಲ್ಲರೂ ಒಂದು" ಎಂಬ ಹೊಸ ಘೋಷಣೆಯೊಂದಿಗೆ ನಮ್ಮ ಸಮಾಜದ ಪುನಾರಚನೆಗೆ ನಾವು ದುಡಿಯಬೇಕು!



ಧಾನ್ಯ ಸಂಗ್ರಹಕ್ಕೆ ನೀವು ಉಗ್ರಾಣವನ್ನು ಉಪಯೋಗಿಸುತ್ತಿದ್ದಲ್ಲಿ ಹೀಗೆ ಮಾಡಿ

ಉಗ್ರಾಣವನ್ನು ಸ್ವಚ್ಛವಾಗಿಡಿ ಎಲ್ಲಾ ತೂತುಗಳನ್ನು ಮುಚ್ಚಿಡಿ

ಗೋಡೆಯಿಂದ ಎರಡು ಅಡಿ ದೂರದಲ್ಲಿ ಎತ್ತರಿಸಿದ ಮರದ ಹಲಿಗೆಗಳ ಮೇಲೆ ಅಥವಾ ನೆಲದಲ್ಲಿ ಪಾಲಿಥೀನ್ ಹಾಳೆಗಳ ಮೇಲೆ ಗೋಣಿ ಚೀಲಗಳನ್ನು ಇಡಿ

ಕಿಟಕಿಗಳಿಗೂ ಗಾಳಿಕಿಂಡಿಗಳಿಗೂ ಸರಿಗೆ ಬಲೆ ಹಾಕಿ ಹಕ್ಕಿಗಳಿಂದ ಕಾಪಾಡಿ

ಕ್ರಿಮಿಕೀಟಗಳು ಕಂಡುಬಂದಲ್ಲಿ ಕೀಟನಾಶಕ ಔಷಧಿಗಳನ್ನು ಉಪಯೋಗಿಸಿ

ಇಲಿಗಳಿಗೆ ವಿಷಯುಕ್ತ ಆಹಾರ ಕೊಟ್ಟು ನಾಶಮಾಡಿ.

ಇತ್ತೀಚೆಗೆ ಹೊಸದಾಗಿ ರೂಪಿಸಲಾಗಿರುವ ಲೋಹದ ಮುಚ್ಚು ಡಬ್ಬಿಯಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವುದರಿಂದ ತೇವ, ಕ್ರಿಮಿಕೀಟ, ಇಲಿ, ಹಕ್ಕಿ ಮುಂತಾದ ಎಲ್ಲಾ ತೊಂದರೆಗಳಿಂದ ಪಾರಾಗಬಹುದು

ಬೇಕಾದ ಡಬ್ಬಿಗಳು ಹಗುರವಾಗಿವೆ ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲು ಸುಲಭ ಬೆಲೆಯೂ ಕಡಿಮೆ.

ಉಳಿಸಿದ ಧಾನ್ಯ
ಗಳಿಸಿದ ಧಾನ್ಯ

ಹೆಚ್ಚಿನ ಮಾಹಿತಿ ಬೇಕಾದರೆ ಇಲ್ಲಿ ವಿಚಾರಿಸಿ
ಡೈರೆಕ್ಟೊರೇಟ್ ಆಫ್ ಸ್ಟೋರೇಜ್ ಆಂಡ್ ಇನ್ಸ್ಪೆಕ್ಷನ್,
ಡಿಪಾರ್ಟ್‌ಮೆಂಟ್ ಆಫ್ ಫುಡ್,
ಕೃಷಿ ಭವನ, ನ್ಯೂಡೆಲ್ಲಿ.

davp 80/618

ಬಾಪೂವಾಣಿ

ವರ್ಗ ಯುದ್ಧದ ಕಲ್ಪನೆ
ಭಾರತೀಯ ಬುದ್ಧಿಮತ್ತೆಗೆ ಹಿಡಿಸದು

ಅಹಿಂಸಾತ್ಮಕ ಸ್ವಾತಂತ್ರ್ಯವನ್ನು ಪಡೆಯಲು ಆರ್ಥಿಕ ಸಮಾನತೆ ಒಂದು ಮಹತ್ವದ ಸಾಧನ. ಆರ್ಥಿಕ ಸಮಾನತೆ ಎಂದರೆ, ಬಂಡವಾಳ ಮತ್ತು ಶ್ರಮ ಇವುಗಳ ನಡುವಿನ ನಿರಂತರದ ದ್ವಂದ್ವವನ್ನು ತೊಡೆದುಹಾಕುವ ಕೆಲಸವೇ ಆಗಿದೆ.

ದುರ್ದೈವದಿಂದ, ನಾವು ಬಂಡವಾಳದ ಮೋಹಮಂತ್ರಕ್ಕೆ ವಶವರ್ತಿಯಾಗಿದ್ದೇವೆ. ಈ ಪ್ರಪಂಚದಲ್ಲಿ ಹಣ ಗಳಿಕೆಯ ವಿಷಯವನ್ನು ಬಿಟ್ಟು ಬೇರೇನೂ ಮಹತ್ವದ್ದಿಲ್ಲ ಎಂಬ ಭಾವನೆಗೆ ಬಲಿಯಾಗಿದ್ದೇವೆ. ಆದರೆ ಒಂದು ಕ್ಷಣ ಶಾಂತ ಚಿತ್ತದಿಂದ ಯೋಚಿಸಿದರೆ, ಶ್ರಮಕ್ಕೆ ಇರುವ ಸಂಪತ್ತು ಯಾವ ಕೋಟ್ಯಾಧೀಶನೂ ಪಡೆದಿಲ್ಲ ಎಂಬುದು ಹೊಳೆಯದಿರಲಾರದು.

ನನ್ನ ಅಭಿಪ್ರಾಯದಲ್ಲಿ, ಆತ್ಮತ್ಯಾಗ ಮಾಡಬಲ್ಲ ಒಕ್ಕಟ್ಟಿನಿಂದ ಕೂಡಿದ ಶ್ರಮಜೀವಿಗಳು ತಮ್ಮ ನಿಲುವನ್ನು ಅನುಗಾಲವೂ ಯಶಸ್ವಿಯಾಗಿ ಸಮರ್ಥಿಸಿಕೊಳ್ಳಬಲ್ಲರು. ಬಂಡವಾಳಗಾರರ ದಬ್ಬಾಳಿಕೆ ಎಂಥದೇ ಇರಲಿ, ಕೆಲಸಗಾರರನ್ನು ಮತ್ತು ಅವರ ಚಳುವಳಿಯನ್ನು ನಿಯಂತ್ರಿಸುವ ಸಾಮರ್ಥ್ಯವು ಬಂಡವಾಳಗಾರರಿಗೇ ಶ್ರಮಜೀವಿಗಳು ಹೊಂದಿದ ಶಕ್ತಿಯ ಬಗ್ಗೆ ಅರಿವಿಲ್ಲದವರಾಗಿದ್ದಾರೆ. ಕೆಲಸಗಾರರಿಲ್ಲದ ಸಂಪತ್ತು ಅಸಹಾಯ ವಸ್ತು—ಎಂಬ ಅರಿವು ಶ್ರಮಜೀವಿಗಳಿಗೆ ಮೂಡಿದಾಗ ಅವರು ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳಬಲ್ಲರು.

ವರ್ಗಕಲಹದ ಮೂಲ

ವರ್ಗಕಲಹ ಅಥವಾ ಬಡವಬಲ್ಲಿದರ ನಡುವಿನ ಯುದ್ಧದ ಕಲ್ಪನೆ ಭಾರತೀಯ ಬುದ್ಧಿಮತ್ತೆಗೆ ತೀರ ಅಪರಿಚಿತ ವಿಷಯ. ನನ್ನ ಕಲ್ಪನೆಯ ರಾಮರಾಜ್ಯದಲ್ಲಿ ರಾಜ ರಂಕರಿಬ್ಬರೂ ಸಮಾನ ಹಕ್ಕುಗಳನ್ನು ಹೊಂದಿದ್ದಾರೆ.

ನಮ್ಮ ಮುಂದಿರುವ ಪ್ರಶ್ನೆ ಒಂದು ವರ್ಗದ ವಿರುದ್ಧ ಮತ್ತೊಂದು ವರ್ಗವನ್ನು ಎತ್ತಿಕಟ್ಟುವುದಿರದೆ, ಕೆಲಸಗಾರರಿಗೆ ಆತ್ಮಗೌರವದ ಶಿಕ್ಷಣ ನೀಡುವುದೇ ಆಗಿದೆ. ಅಪಾರ ದುಡ್ಡನ್ನು ಸಂಗ್ರಹಿಸಿದವರು ಎಷ್ಟು ಜನರಿದ್ದಾರೆ ಈ ಲೋಕದಲ್ಲಿ? ಅಂತಹವರನ್ನು ಕೇವಲ ಕೈಬೆರಳಿನಿಂದ ಎಣಿಸಬಹುದು. ಧನಿಕರ ವಿರುದ್ಧ ಕೆಲಸಗಾರರನ್ನು ಉದ್ರೇಕಿಸಿ ರೊಚ್ಚಿಗೆಬ್ಬಿಸುವುದರಿಂದ, ವರ್ಗದ್ವೇಷವನ್ನೂ, ಅದರಿಂದ ಉಂಟಾಗುವ ದುಷ್ಪರಿಣಾಮಗಳನ್ನೂ ನಿರಂತರ ಮುಂದುವರಿಸಿದಂತೆಯೇ. ಈ ಕಲಹ ವಿಷಚಕ್ರವಿದ್ದಂತೆ. ಯಾವ ಬೆಲೆಯನ್ನು ತೆತ್ತಾದರೂ ಈ ವಿಷಚಕ್ರವನ್ನು ನಿರ್ನಾಮ ಮಾಡಬೇಕು. ವರ್ಗ ಕಲಹ ದಾರ್ಬಲ್ಯದ, ಸ್ವೈಚ್ಛ ಭಾವನೆಯ ದ್ಯೋತಕವಾಗಿದೆ. ಕೆಲಸಗಾರರಿಗೆ ತಮ್ಮ ಘನತೆಯ ಅರಿವು ಮೂಡಿದೊಡನೆ, ಹಣ ತನ್ನ ದಾರಿಯನ್ನು ತಾನೇ ಕಂಡುಕೊಳ್ಳುವುದು. ಆರ್ಥಿಕ ಆಗ ಕಾರ್ಮಿಕ ಕಲ್ಯಾಣಕ್ಕಾಗಿ ಆ ಹಣ ಧರ್ಮದರ್ಶಿಯಾಗಿ ಕೆಲಸ ಮಾಡುವುದು. ಏಕೆಂದರೆ ಶ್ರಮ ಧನಕ್ಕಿಂತ ಹೆಚ್ಚಿನದೇ.

ಈ ವರ್ಗಯುದ್ಧದ ಕಲ್ಪನೆಯೇ ನನಗೆ ಹಿಡಿಸದು. ಭಾರತದಲ್ಲಿ ಈ ವರ್ಗಯುದ್ಧ ಅನಿವಾರ್ಯವಾದುದೇನೂ ಅಲ್ಲ. ಅಹಿಂಸೆಯ ಸಂದೇಶವನ್ನು ನಾವು ಪೂರ್ತಿ ಅರಿತಿದ್ದೇ ಆದರೆ ಈ ವರ್ಗಯುದ್ಧವನ್ನು ಸಹಜವಾಗಿ ತಪ್ಪಿಸಬಹುದು. ವರ್ಗಯುದ್ಧ ಅನಿವಾರ್ಯವೆಂದು ಗಳಹುವ ಜನರು ಅಹಿಂಸೆಯ ಮರ್ಮವನ್ನೇ ಅರಿತಿಲ್ಲ.

ಪಶ್ಚಿಮದಿಂದ ಆಮದು ಮಾಡಿಕೊಂಡ ಕೆಲ ಆಕರ್ಷಕ ಪದ ಪುಂಜಗಳಿಂದಾಗಲೀ ಇಲ್ಲವೆ ಘೋಷಣೆಗಳಿಂದಾಗಲೀ ನಾವು ಮತಿಗೆಡಬಾರದು. ನಮ್ಮದೇ ಆದ ಶುದ್ಧ ಪೌರ್ವಾತ್ಯದ ಸಂಪ್ರದಾಯವೆಂಬುದೊಂದು ಇಲ್ಲವೇ? ಶ್ರಮ ಮತ್ತು ಸಂಪತ್ತಿನ ಪ್ರಶ್ನೆಯ ಪರಿಹಾರವನ್ನು ನಾವೇ ಕಂಡುಕೊಳ್ಳುವ ಸಾಮರ್ಥ್ಯವನ್ನು ನಾವು ಪಡೆದಿಲ್ಲವೆ?

ಪಶ್ಚಿಮದ ಸಾಮಾಜಿಕ ಪದ್ಧತಿಯನ್ನು ಸಹಾನುಭೂತಿಯಿಂದ ಅಭ್ಯಾಸಮಾಡಿದವರಲ್ಲಿ ನಾನೊಬ್ಬ. ಪಶ್ಚಿಮದ ಜನತೆಯ ಹೃದಯಾಂತರಾಳದ ತಳಮಳದ ಹಿಂದೆ ಸತ್ಯಶೋಧನೆಯ ಕೆಲಸ ನಡೆದಿದೆ ಎಂಬುದನ್ನೂ ನಾನು ಗುರುತಿಸಿದ್ದೇನೆ. ಆ ಸತ್ಯಶೋಧನೆಯ ಪ್ರವೃತ್ತಿಯನ್ನು ನಾನು ಮೆಚ್ಚುತ್ತೇನೆ. ಶಾಸ್ತ್ರೀಯ ರೀತಿಯಲ್ಲಿ ಪೌರ್ವಾತ್ಯದ ಸಂಪ್ರದಾಯಗಳನ್ನು ಅಭ್ಯಸಮಾಡಿ ಜಗತ್ತು ಎಂದೂ ಕಾಣದ ನೈಜ ಸೊಸ್ಯಾಲಿಜಂ ಮತ್ತು ಕಮ್ಯೂನಿಜಂಗಳನ್ನು ರೂಪಿಸೋಣ. ಜನಪದ ದಾರಿದ್ರ್ಯ ಪ್ರಶ್ನೆಯ ಬಗೆಗೆ ಪಶ್ಚಿಮದ ಸೊಸ್ಯಾಲಿಜಂ ಅಥವಾ ಕಮ್ಯೂನಿಜಂ ಹೇಳಿದ್ದೇ ಚರಮ ವಾಕ್ಯ ಎಂದು ಭಾವಿಸುವುದು ಮೂರ್ಖತನದ ಮಾತು.

ಸ್ವಪ್ರಯೋಜನಕ್ಕಾಗಿ ಮಾತ್ರ ದುಡಿಸಿಕೊಳ್ಳುವ ಪ್ರವೃತ್ತಿ ಮುಂದುವರೆಯುವಾಗ ಕೆಲಸಗಾರರ ಮತ್ತು ಮಾಲೀಕರ ನಡುವೆ ಸಹಕಾರ ಏರ್ಪಡಿಸಬೇಕು ಎಂದು ನಾನು ನಂಬಲಾರೆ. ಆದರೆ ಬಂಡವಾಳಗಾರರಾಗಲೀ ಅಥವಾ ಹೊಲದೊಡೆಯರಾಗಲೀ ಸ್ವಪ್ರಯೋಜನಕ್ಕಾಗಿ ಕೆಲಸಗಾರರನ್ನು ದುಡಿಸಿಕೊಳ್ಳುವ ವರ್ಗಕ್ಕೇ ಅವಶ್ಯವಾಗಿ ಸೇರಿದವರು ಎಂದು ನಾನು ನಂಬಲಾರೆ. ಅಥವಾ ಅವರಿಬ್ಬರ ನಡುವೆ ಹೊಂದಾಣಿಕೆಗೆ ನಿಲುಕದ ಬದ್ಧ ವೈರವಿದೆ ಎಂದೂ ನನಗೆನಿಸದು.

ಬಂಡವಾಳಗಾರರು ಮತ್ತು ಹೊಲದೊಡೆಯರ ನಾಶಬೇಕಾಗಿಲ್ಲ. ಆದರೆ ಅವರ ಮತ್ತು ದುಡಿಯುವ ಜನರ ಮಧ್ಯೆ ಇನ್ನೂ ಪರಿಶುದ್ಧ ಬಾಂಧವ್ಯ ಬೆಳೆದು ಬರಬೇಕಾದುದು ಅವಶ್ಯ.

ಕೇವಲ ಕೆಲವು ಕೋಟ್ಯಾಧೀಶರನ್ನು ನಾಶ ಮಾಡುವುದರಿಂದ ಬಡವರ ಶೋಷಣೆ ನಿಲ್ಲಲಾರದು. ಶೋಷಣೆ ಮಾಡುವ ಧನಿಕರೊಂದಿಗೆ ಅಸಹಕಾರ ಮಾಡುವುದನ್ನು ಕೆಲಸಗಾರರಿಗೆ ತಿಳಿಸಿಕೊಡಬೇಕು. ಕೆಲಸಗಾರರ ಅಜ್ಞಾನವನ್ನು ಹೊಡೆದೋಡಿಸಲು ಪ್ರಯತ್ನಿಸಬೇಕು. ಹೀಗೆ ಮಾಡುವುದರಿಂದ ಧನಿಕರ ಮನಸ್ಸನ್ನು ಪರಿವರ್ತನೆಮಾಡುವುದೂ ಸಾಧ್ಯ. ಇಂತಹ ಪರಿವರ್ತನೆಯಿಂದ ಕೊನೆಗೆ ಬಂಡವಾಳದಾರರೂ ಕೆಲಸಗಾರರೂ ಸಮಾನ ಪಾಲುಗಾರರಾಗಿ ಕಾರ್ಯ ಸಾಗಿಸುವ ಸ್ಥಿತಿಯನ್ನು ಮುಟ್ಟುವರು ಎಂದು ನಾನು ಸೂಚಿಸುವೆ.

ಬಂಡವಾಳವೆಂದಾಕ್ಷಣ ಅದು ಕೇಡಿನ ಮೂಲ ಎಂದೇನೂ ಅಲ್ಲ. ಆದರೆ ಅದನ್ನು ವಾಮ ಮಾರ್ಗಕ್ಕೆ ಬಳಸಿದರೆ ಮಾತ್ರ ಅದು ಕೇಡಿನ ಆಗರವಾಗುವುದು. ಒಂದಿಲ್ಲೊಂದು ರೀತಿಯಲ್ಲಿ ಬಂಡವಾಳದ ಅವಶ್ಯಕತೆ ಉಳಿಯುತ್ತದೆ.

ಬಂಡವಾಳ ಮತ್ತು ದುಡಿಮೆ ಒಂದಕ್ಕೊಂದು ನೆರವು ನೀಡಬೇಕು ಎಂಬುದೇ ನನ್ನ ವಿಚಾರ. ಒಂದೇ ಕುಟುಂಬದ ಸದಸ್ಯರಂತೆ ಅನ್ಯೋನ್ಯವಾಗಿ ಅವು ಬಾಳಬೇಕು. ಕೆಲಸಗಾರರ ಐಹಿಕ ಮತ್ತು ನೈತಿಕ ಕಲ್ಯಾಣದ ಬಗೆಗೆ ಬಂಡವಾಳಗಾರರು ಗಮನ ಕೊಡಬೇಕು. ಕೆಲಸಗಾರರ ಧರ್ಮದರ್ಶಿಗಳಂತೆ ಧನಿಕರು ವರ್ತಿಸಬೇಕು.

ಮುಷ್ಕರಕ್ಕೆ ಜಯ ವಿಲ್ಲ

ಯೋಗ್ಯರೀತಿಯಲ್ಲಿ ಸಮರ್ಥಿಸಿಕೊಳ್ಳಲಾಗದ ಮುಷ್ಕರವನ್ನು ಹೂಡಲೇ ಬಾರದು. ಅನ್ಯಾಯದ ಯಾವುದೇ ಮುಷ್ಕರಕ್ಕೆ ಜಯ ದೊರೆಯ ಬಾರದು.

ಆರ್ಥಿಕ ಲಾಭಕ್ಕಾಗಿ ನಡೆಸುವ ಮುಷ್ಕರಗಳು ಎಂದೂ ರಾಜಕೀಯ ಗುತ್ತಿಗಾರಿಕೆಗಳಿಗೆ ಅಧೀನವಾಗಿರಕೂಡದು. ಸಾರ್ವಜನಿಕ ಸೇವೆಗಳಲ್ಲಿ ಒಂದಾನ ಒಂದು ಶಾಖೆ ಸಂಬಂಧಿಸಿದ ಹೂಡಿದ ಮುಷ್ಕರಗಳು, ಸಾರ್ವಜನಿಕ ಜೀವನಕ್ಕೆ ಬಹಳ ವ್ಯತ್ಯಯ ತರಬಲ್ಲದಾದರೂ, ರಾಜಕೀಯ ಉದ್ದೇಶಗಳನ್ನು ಸಾಧಿಸಲಾರವು. ಸರಕಾರಕ್ಕೆ ತೊಂದರೆ ಆಗುವುದು ನಿಜ. ಆದರೆ ಇಂತಹ ಮುಷ್ಕರಗಳಿಂದ ಸರಕಾರದ ಕೇಂದ್ರ ನಿಂತುಹೋಗಲಾರದು. ಅಂಚೆ ಸೇವೆಯ ಲಾಭವನ್ನು ತಲೆಕಲಾಂತರಗಳಿಂದ ಪಡೆಯುತ್ತಿದ್ದ ಬಡಜನರು ಮಾತ್ರ ಅಂಚೆ ಶಾಖೆಯ ಮುಷ್ಕರದಿಂದ ಬಹಳಷ್ಟು ತೊಂದರೆ ಅನುಭವಿಸ ಬೇಕಾಗುವುದು. ನ್ಯಾಯ ಸಮ್ಮತವಾದ ಎಲ್ಲ ಸಾಧನೆಗಳು ಮುಗಿದು ಅವು ಅಪಜಯ ಹೊಂದಿದಾಗ, ಕೊನೆಯದಾಗಿ ಮುಷ್ಕರವನ್ನು ಹೂಡಬಹುದು.

ರಾಜಕೀಯ ಉದ್ದೇಶಗಳಿಗಾಗಿ ಸಂಪು ಅಥವಾ ಮುಷ್ಕರಗಳನ್ನು ಸಂಘಟಿಸಬಹುದು ಎಂದು ಭಾವಿಸಿರುವ ಕಾರ್ಮಿಕ ಧುರೀಣ ಸಂಖ್ಯೆ ಸಾಕಷ್ಟಿದೆ. ನನ್ನ ದೃಷ್ಟಿಯಲ್ಲಿ, ರಾಜಕೀಯ ಗುತ್ತಿಗಾರಿಕೆಗಾಗಿ ಮುಷ್ಕರವನ್ನು ಬಳಸಿಕೊಳ್ಳುವುದು ಮಹಾಪರಾಧ. ಅಂತಹ ಮುಷ್ಕರಗಳು ರಾಜಕೀಯ ಪುರಸ್ಸಾಧನೆಗೆ ಸಹಾಯಕವಾಗುವ ವಿಷಯವನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಅಹಿಂಸಾತ್ಮಕ ಆಚಾರದ ಕಲ್ಪನೆಯ ಚೌಕಟ್ಟಿನಲ್ಲಿ ಈ ಮುಷ್ಕರಗಳು ಬರಲಾರವು. ದೇಶದ ರಾಜಕೀಯವನ್ನು ಅರಿತುಕೊಳ್ಳುವ ಸಾಮರ್ಥ್ಯ ಕೆಲಸಗಾರರಿಗೆ ಬಂದು, ಅವರು ಸ್ವಯಂಪ್ರೇರಿತ ಸಾಧನಗಳು ಸಿದ್ಧರಾಗುವವರೆಗೆ, ಕೆಲಸಗಾರರನ್ನು ರಾಜಕೀಯ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುವ ಹವ್ಯಾಸ ಅತ್ಯಂತ ಅಪಾಯಕಾರಿಯಾದುದು ಎಂದು ಬುದ್ಧಿಬಲ್ಲವರೆಲ್ಲರೂ ಗುರುತಿಸಬಲ್ಲರು.

ಮುಷ್ಕರ, ಕೆಲಸದ ನಿಲುಗಡೆ ಮತ್ತು ಹರತಾಳಗಳು ಔದ್ಯಮಿಕ ಸಂಗತಿಗಳೇನೋ ನಿಜ. ಆದರೆ ಅವುಗಳನ್ನು ದುರುಪಯೋಗ ಮಾಡಿಕೊಳ್ಳುವುದು ದುಸ್ತರವೇನೂ ಅಲ್ಲ. ಕೆಲಸಗಾರರು ಸುಸಂಘಟಿತ ಸಂಘಗಳನ್ನು ರಚಿಸಿಕೊಳ್ಳಬೇಕಾದುದು ಅವಶ್ಯ. ಆದರೆ ಸಂಘದ ಪೂರ್ತಿ ಅನುಮತಿ ಇಲ್ಲದೆ ಕೆಲಸಗಾರರು ಮುಷ್ಕರವನ್ನು ಆರಂಭಿಸ ಕೂಡದು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಆತ್ಮೀಯ ಆಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪ್ರವಾಸಿಯಾತ್ರಿಕರ ಉಪಚಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಚಾರುಚಿಯನ

ಫರೀದಾಬಾದದ ಫಲಶ್ರುತಿ!

ಫರೀದಾಬಾದದಲ್ಲಿ ಸೇರಿದ ಕಾಂಗ್ರೆಸ್ಸಿನ ಮಹಾಧಿವೇಶನ ಮತ್ತು ಬೊಂಬಾಯಿಯಲ್ಲಿ ಕೂಡಿದ ಜನಸಂಘದ ಅಧಿವೇಶನಗಳು ಬೇರೆ ಬೇರೆ ದಾರಿಯಲ್ಲಿ ನಡೆದು ಕೊನೆಗೊಂಡುವು. ಈ ಎರಡು ರಾಜಕೀಯ ಪಕ್ಷಗಳು ಮೆಟ್ಟಿದ ದಾರಿಯು ರಾಜಕೀಯವನ್ನೂ ಜನತೆಯನ್ನೂ ಎತ್ತ ಒಯ್ಯುತ್ತದೆ—ಎಂಬ ಬಗ್ಗೆ ರಾಜಕೀಯ ವೀಕ್ಷಕರು ದೂರಾಲೋಚನೆಯಲ್ಲಿ ತತ್ಪರರಾಗಿದ್ದಾರೆ. ಎಪ್ಪತ್ತೆರಡು ವರ್ಷ ಪ್ರಾಯದ ಕಾಂಗ್ರೆಸ್ಸು ತನ್ನ ಉಳಿವಿಗಾಗಿ ಅಹೋರಾತ್ರಿ ಹೋರಾಡುತ್ತಿರುವಾಗ, ಹದಿನೈದರ ಜನಸಂಘದಲ್ಲಿ ಉತ್ಸಾಹ ಹುಮ್ಮಸ್ಸು ಮಿತಿಮೀರಿ ಇನ್ನೊಂದು ನೆಗೆತ ನೆಗೆಯಲು ಸನ್ನದ್ಧವಾಗಿ ನಿಂತಿರುವುದು ಅಸಹಜವಲ್ಲ. ಒಂದು ಮುಳುಗು ತಾರೆಯಾದರೆ, ಇನ್ನೊಂದು ಏಳು ತಾರೆ.

ಗಿರಣಿಗಳ ಒಡೆಯರೊಂದಿಗೆ ಮಾತುಕತೆ ನಡೆಸದೆ ಬಹಿಷ್ಕಾರವನ್ನು ಆರಂಭಿಸುವ ಸಾಹಸಕ್ಕೆ ಹೋಗಬಾರದು. ಗಿರಣಿ ಮಾಲೀಕರ ಮಧ್ಯಸ್ಥಿಕೆಗೆ ಒಪ್ಪದಿರೆ, ಪಂಚಾಯ್ತಿ ತತ್ವಗಳನ್ನು ಒಪ್ಪಿಕೊಳ್ಳಬೇಕು. ಒಮ್ಮೆ ಪಂಚರನ್ನು ನಿಯಮಿಸಿದ ಮೇಲೆ ಅವರ ನಿರ್ಧಾರವನ್ನು-ಅದು ಹೇಗೆ ಇರಲಿ— ಉಭಯ ಪಕ್ಷದವರು ಒಪ್ಪಿಕೊಳ್ಳಬೇಕು.

ಸತ್ಯಾಗ್ರಹದಲ್ಲಿ ಹಿಂಸೆಗೆ ಸ್ಥಾನವಿಲ್ಲ, ಸುಳ್ಳಿಗೆ ಜಾಗವಿಲ್ಲ. ಕಿಚ್ಚು ಹಚ್ಚಲು ಎಡೆಯಿಲ್ಲ.

ತಮ್ಮ ಸಂಖ್ಯೆ ಅಥವಾ ಪಾಶವೀ ಶಕ್ತಿಯನ್ನು-ಅರ್ಥಾತ್ ಹಿಂಸೆಯನ್ನು ಕಾರ್ಮಿಕರು ನಚ್ಚಿ ಕೆಲಸ ಪ್ರಾರಂಭ ಮಾಡಿದರೆ ಅದಕ್ಕಿಂತ ಆತ್ಮಹತ್ಯೆಯ ಕೆಲಸ ಬೇರೊಂದಿರಲಾರದು. ಪಾಶವೀ ಬಲದ ಬೆಂಬಲದಿಂದ ಕಾರ್ಮಿಕರು ಕಾರ್ಯಾಚರಣೆಗೆ ಇಳಿದರೆ ಅದರಿಂದ ದೇಶದ ಕೈಗಾರಿಕೆಗಳಿಗೆ ಅತೀವ ಹಾನಿ ತಟ್ಟುವುದು. ಅದರ ಬದಲು, ಕಾರ್ಮಿಕರು ಪೂರ್ಣ ನ್ಯಾಯದ ಫಲವನ್ನು ತಾಳಿ ವೈಯಕ್ತಿಕವಾಗಿ ಕಷ್ಟಸಹಿಸಲು ಸಿದ್ಧರಾದರೆ ಅವರಿಗೆ ಜಯವು ಯಾವಾಗಲೂ ಕಟ್ಟಿಟ್ಟದ್ದು. ಆಗ ಅವರು ಮಾಲೀಕರನ್ನು ಸುಧಾರಿಸಬಲ್ಲರು, ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಲ್ಲರು, ಮಾಲೀಕರೂ, ಕೆಲಸಗಾರರೂ ಒಂದೇ ಕುಟುಂಬದ ಸದಸ್ಯರಂತೆ ಬಾಳಬಲ್ಲರು.

ತಮ್ಮ ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಂಡು, ಹೆಚ್ಚಿನ ಪರಿಜ್ಞಾನವನ್ನು ಸಂಪಾದಿಸಿ, ತಮ್ಮ ಹಕ್ಕುಗಳ ಬಗ್ಗೆ ಪ್ರತಿಪಾದಿಸುವುದರ ಮೂಲಕ ಕೆಲಸಗಾರರು ಮಹತ್ವದ ರಾಜಕೀಯ ಕೊಡುಗೆಯೊಂದನ್ನು ನೀಡಬಲ್ಲರು. ಸಹ ಮಾಲೀಕತ್ವದ ಸ್ಥಿತಿಗೆ ಏರಲು ಕೆಲಸಗಾರರು ಶ್ರಮಿಸಿದಾಗಲೇ ಯೋಗ್ಯ ವಿಕಾಸದ ಹೊಸ ದಿಗಂತವು ಗೋಚರಿಸ ತೊಡಗುವದು.

ತನ್ನ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಸಿದ್ಧವ್ವನಹಳ್ಳಿ ನಿಜಲಿಂಗಪ್ಪನವರು ಕನಿಕರ ವ್ಯಥೆಗಳಿಂದ ನೊಂದು ನುಡಿದರು— “ಕಾಂಗ್ರೆಸಿಗರು ಸಾರ್ವತ್ರಿಕವಾಗಿಯೂ ಸಂಸತ್ತಿನಲ್ಲಿಯೂ ಪಕ್ಷೀಯ ನಾಯಕರನ್ನು ಟೀಕಿಸತೊಡಗಿದ್ದಾರೆ. ಇದರಿಂದ ಪಕ್ಷದ ಗೌರವವು ಇಳಿಮುಖವಾಗುವುದಲ್ಲದೆ ಮತ್ತಾವ ಲಾಭವೂ ಅಲಭ್ಯ.” ಇದೇ ಸಮಯದಲ್ಲಿ ಅಟಲ ಬಿಹಾರಿ ವಾಜಪೇಯಿಯವರು ಹೇಳಿದರು — “೫೦ ಕೋಟಿ ಪ್ರಜಾಜನರಿರುವ ಇಡೀ ದೇಶವೇ ನಮ್ಮ ಕಾರ್ಯಕ್ಷೇತ್ರ. ಇದೇ ನಮ್ಮ ಪ್ರಾಮಾಣಿಕತೆ ಮತ್ತು ತತ್ವರೀತಿಗಳಿಗೆ ಆಕರ.”

ತನ್ನ ಪಕ್ಷವು ಇತ್ತೀಚಿನ ವರ್ಷಗಳಲ್ಲಿ ಅಧಿಕಾರಕ್ಕೇರುತ್ತಿರುವುದನ್ನು ಕಂಡ ಶ್ರೀ ನಿಜಲಿಂಗಪ್ಪನವರಿಗೆ ೧೯೭೨ರ ಹೊತ್ತಿಗೆ ಕೇಂದ್ರದಲ್ಲೂ ಅದಕ್ಕೆ ಸ್ಪಷ್ಟ ಬಹುಮತ ಬಾರದೆಂಬ ಅಂಜಿಕೆ ಇದ್ದುದರಿಂದಲೇ ಅವರು ಫರೀದಾಬಾದದಲ್ಲಿ ಕರೆನೀಡಿದರು— “ಪಕ್ಷವು ಭೀಕರ ಗಂಡಾಂತರವನ್ನೆದುರಿಸುತ್ತಿದೆ. ವ್ಯಕ್ತೀಕತೆಯನ್ನು ದೂರವಿಟ್ಟು ಅಧಿಕಾರ ಲಾಲಸೆಯನ್ನು ತ್ಯಜಿಸಿ ಒಂದಾಗಿ ದುಡಿಯುವ ಕಾಲ ಸಂಪ್ರಾಪ್ತವಾಗಿದೆ.’ ಇದೇ ವೇಳೆ ಮುಂಬಯಿಯಲ್ಲಿ ಶ್ರೀ ವಾಜಪೇಯಿ ಹೇಳಿದರು — “ಬಡತನ ಮತ್ತು ಅನ್ಯಾಯ, ಆರ್ಥಿಕ ಅಸಮತೋಲನ ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧ ನಮ್ಮ ಹೋರಾಟವನ್ನು ಮುಂದುವರಿಸೋಣ”

ಒಂದರಲ್ಲಿ ಮೃತ್ಯುವಿನ ದವಡೆಯಲ್ಲಿ ಸಿಲುಕಿದ ಚೀತ್ಕಾರವಿದ್ದರೆ, ಇನ್ನೊಂದರಲ್ಲಿ ಚಿಗುರಿದ ಮರದ ಗಾಂಭೀರ್ಯವಿದೆ.

“ಅಧಿಕಾರಗ್ರಹಣಕ್ಕಾಗಿ ನಾವು ಅಸತ್ಯವಂತರಾಗೆವು. ಅಧಿಕಾರವು ಒಂದಲ್ಲ ಒಂದು ದಿನ ಕೊನೆಗೊಳ್ಳುವುದು” ವಾಜಪೇಯಿಯವರ ಅಭಿಪ್ರಾಯವಿದು.

ಫರೀದಾಬಾದಿನ ಕಾಂಗ್ರೆಸ್ ಸಮ್ಮೇಳನದ ವರದಿಯನ್ನು ನೋಡಿದಾಗ ಒಂದು ಮಾತು ಸುಸ್ಪಷ್ಟ. ಕಾಂಗ್ರೆಸ್ಸು ಅವಶ್ಯಕವಾದ ಕ್ರಮಗಳನ್ನು ಕೈಕೊಂಡು ಅಧಿಕಾರದಲ್ಲಿ ಉಳಿಯಲು ಬಯಸುತ್ತದೆ. ಪಕ್ಷೀಯ ನಾಯಕಾಗ್ರಣಿಗಳು ನಾಲ್ಕು ದಿನಗಳಲ್ಲಿ ಹಲವು ಕಾಲ ಒಂದು ಸೇರಿ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದ ಗೊತ್ತುವಳಿಯೊಂದನ್ನು ಸಿದ್ಧಪಡಿಸಿದರೇನೋ ನಿಜ, ಆದರೆ, ಇದರಲ್ಲಿ ಒಮ್ಮತವನ್ನು ಸಾಧಿಸುವಲ್ಲಿ ಅವರು ಸಂಪೂರ್ಣ ಅಸಮರ್ಥರಾದರು.

ವಿಷಯ ನಿಯಾಮಕ ಸಮಿತಿಗೂ ಮಹಾಧಿವೇಶನಕ್ಕೂ ಹಳೆಯ ನೀರನ್ನೇ ಮತ್ತೊಂದು ಬಟ್ಟಲಿನಲ್ಲಿ ತುಂಬಿಸಿ ಮುಂದಿಟ್ಟರು. ಇದಕ್ಕೆ ಜೀವವಿದೆಯೇ ಎಂಬುದೂ ಸಂದೇಹ. ಇದರ ವಿಷಯ “ರಾಜಕೀಯ ಪರಿಸ್ಥಿತಿ ಮತ್ತು ಕೇಂದ್ರ ರಾಜ್ಯ ಸಂಬಂಧ.” ಕೇಂದ್ರ ಗೃಹ ಮಂತ್ರಿ ಯಶವಂತರಾವ್ ಬಲವಂತರಾವ್ ಚವಣರು ಈ ಗೊತ್ತುವಳಿಯನ್ನು ಮಂಡಿಸಿದಾಗ ತಮ್ಮ ಜೇಬಿನೊಳಗಿನ ಬೆಕ್ಕನ್ನು ಹೊರಬಿಟ್ಟೇ ಬಿಟ್ಟರು— ವಿರೋಧೀ ಪಕ್ಷಗಳೆಲ್ಲವೂ ಆ ಜಾತೀಯ ಪಕ್ಷಗಳು ಅಥವಾ “ಸ್ಟ್ಯಾಟಿಕ್” ವರ್ಗಕ್ಕೆ ಸೇರಿದವು. ಕಾಂಗ್ರೆಸ್ಸಿನೊಳಗಿರುವ ಹೊಸ ವಿಚಾರಧಾರೆಯವರು “ಯುವ ತುರುಕ”ರು. ಈ ವರ್ಗವನ್ನು ಆಗ್ರಹದಿಂದಲೇ ಮೌನವಾಗಿರಿಸಿ ಇವರನ್ನು ಪ್ರತ್ಯೇಕೀಕರಿಸಲಾಯ್ತು. ಧ್ರುವೀಕರಣ ಅಥವಾ ಸಮೀಕರಣಗಳೆರಡನ್ನೂ ತಿರಸ್ಕರಿಸಿತೇನೋ ನಿಜ. ಆದರೆ, ಫರೀದಾಬಾದ ಅಧಿವೇಶನವು ನಾಯಕರಲ್ಲಿಯೇ ಮತ್ತಷ್ಟು ಬಿರುಕುಗಳನ್ನು ಹುಟ್ಟಿಸಿತು. ಹಿಂದಿನ ಅಧಿವೇಶನಗಳಲ್ಲಿ ತಮಿಳುನಾಡಿನ ಶ್ರೀ ಸಿ. ಸುಬ್ರಹ್ಮಣ್ಯಂರವರು ಮಹತ್ವಪೂರ್ಣ ಪಾತ್ರ ವಹಿಸುತ್ತಿದ್ದರು. ಆದರೆ, ಫರೀದಾಬಾದದಲ್ಲಿ ಅವರನ್ನು ಸಂಪೂರ್ಣ ನಿರ್ಲಕ್ಷಿಸಲಾಗಿತ್ತು. ಅಷ್ಟು ಮಾತ್ರವಲ್ಲ, ಅವರ ಮುಖವನ್ನು ಪಾತಾಳದಲ್ಲೇ ಹೂಳಲಾಯ್ತು. ಏಕೆಂದರೆ, ಅವರು ತಯಾರಿಸಿದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಸಂಬಂಧದ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಲಾಯಿತು. ೧೯೬೭ರ ‘ಕೀಲಿಯಿಲ್ಲದ ಬೀಗ’ದಂತಹ ಸಂಸತ್ತಿನ ಸಂಭಾವ್ಯತೆ ಬರಿಯ ಅಂಧಸೃಷ್ಟಿಯೆಂಬ ಅವಹೇಳನಕ್ಕೆ ನಾಂದಿ ರೂಪಾಯ್ತು.

ಶ್ರೀ ಸುಬ್ರಹ್ಮಣ್ಯಂರವರ ಮೇಲೆ ನೇರ ಪೆಟ್ಟು ಬಿದ್ದಿತು ನಿಜ; ಪ್ರಧಾನಿ ಗಾಂಧಿಯವರ ಮೇಲೆಯೂ ಅಪ್ರತ್ಯಕ್ಷ ಆಘಾತವಾಗದೆ ಬಿಡಲಿಲ್ಲ. ಸಾರ್ವಜನಿಕ ರಂಗದ ಸಂಬಂಧದಲ್ಲಿ ಗಾಂಧಿ ಮತ್ತು ನಿಜಲಿಂಗಪ್ಪನವರ ನಡುವೆಯೂ ಬಿರುಕು.

(ಒಂಭತ್ತನೇ ಪುಟ ನೋಡಿರಿ)

ಸಂತೃಪ್ತರ ನೆರವಿಗೆ
ಸಿಂಡಿಕೇಟ್ ಬ್ಯಾಂಕ್

ಟಿಬೇಟಿನ ನಿರಾಶ್ರಿತರ ಪುನರ್ವಸತಿ ವಸತಿ ಬೈಲಕುಪ್ಪೆಯಲ್ಲಿ ಬ್ಯಾಂಕಿನ ಹೊಸ ಶಾಖೆಯೊಂದು ತಾರೀಕು 9-5-196 ರಂದು ತೆರೆಯಲ್ಪಡುವುದು.

ಈ ನಾಳಿನ ಜನಾಂಗದ ಮುಖದ ಮೇಲಿನ ಹಾಸಗಳಿಗಾಗಿ
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ಶ್ರಮಿಸುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
(ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗೆ ಪ್ರತಿಯೋರ್ವನ ಬ್ಯಾಂಕು)

ಸಂಪನ್ಮೂಲಗಳು: ರೂ. 140 ಕೋಟಿಗಳಿಗೂ ಮಿಕ್ಕಿ | ಶಾಖೆಗಳು 280ಕ್ಕೂ ಮಿಕ್ಕಿ | ಶ್ರೀ ಟಿ. ಎ. ಪೈ ಚೇರ್‌ಮನ್

ಇಂದಿನ ಜಗತ್ತಿಗೆ

ಜಲಿಯನ್‌ವಾಲಾಬಾಗ್ ಸಂದೇಶ

ಲೇಖಕರು: ಶ್ರೀ ಭೀಮಸೇನ್ ಸಾಚಾರ್

ಅನಗತ್ಯವಾದ, ಅನ್ಯಾಯಕರವಾದ ಹಾಗೂ ಅಪಮಾನಕಾರಿಯಾದ ರೌಲಟ್ ಶಾಸನದ ವಿರುದ್ಧ ಹೋರಾಡಲು ಗಾಂಧೀಜಿ ರಾಷ್ಟ್ರವ್ಯಾಪಿ ಹರತಾಳ ಆಚರಣೆಗೆ ಕರೆಯಿತ್ತಿದ್ದರು. "ಸತ್ಯಾಗ್ರಹ ಸ್ವಯಂಶುದ್ಧೀಕರಣ ಕ್ರಿಯೆ. ನಮ್ಮದು ಪವಿತ್ರ ಹೋರಾಟ. ಆದ್ದರಿಂದ ಸ್ವಯಂ ಶುದ್ಧೀಕರಣದಿಂದ ಈ ಹೋರಾಟ ಆರಂಭಿಸೋಣ. ಆದ್ದರಿಂದ ಅಂದು ಭಾರತೀಯರೆಲ್ಲರೂ ಕಾರ್ಯಹೀನರಾಗಿ ಉಪವಾಸ, ಪ್ರಾರ್ಥನೆಗಳಲ್ಲಿ ಮಗ್ನರಾಗಿರಲಿ" ಎಂದು ಗಾಂಧೀಜಿ ಹೇಳಿದ್ದರು.

ಮೊದಲು 1919ನೇ ಇಸವಿ ಮಾರ್ಚಿ 30ರಂದು ಹರತಾಳ ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಅದನ್ನು ಏಪ್ರಿಲ್ 6ನೇ ದಿನಾಂಕಕ್ಕೆ ಬದಲಾಯಿಸಲಾಯಿತು. ಸ್ಥಳೀಯ ಅಧಿಕಾರಿಗಳ ಬೆದರಿಕೆಯಿದ್ದರೂ ಹರತಾಳದ ಕರೆಗೆ ಇಡೀ ಜನಕೋಟಿ ಓಗೊಟ್ಟದ್ದು ಶಾಸಕರ ಕಣ್ಣಿಗೆ ಕಟ್ಟಿದಂತಿದೆ.

ಸಾರ್ವತ್ರಿಕ ಹರತಾಳ

ಈ ಮಧ್ಯದಲ್ಲಿ ಏಪ್ರಿಲ್ 6ರಂದು ಹರತಾಳ ಆಚರಿಸಬೇಕೆಂದು ಕಳುಹಿಸಿದ್ದ ತಂತಿ ಸಮಾಚಾರ ದೆಹಲಿ ಜನರ ಕೈಸೇರದೆ ಮಾರ್ಚಿ 30ನೇ ದಿನಾಂಕದಂದೇ ಹರತಾಳ ಆಚರಿಸಿದ್ದರು. ಇದರಿಂದ ಅಧಿಕಾರಿಗಳು ಕಂಗಾಲಾಗಿದ್ದರು. ಹರತಾಳದ ಮೆರವಣಿಗೆಯಲ್ಲಿ ಭಾಗವಹಿಸಿದವರ ಮೇಲೆ ಗೋಳಿಬಾರುಮಾಡಿ ಅನೇಕರನ್ನು ಕೊಲ್ಲಲಾಯಿತು. ದೆಹಲಿಯ ಘಟನೆಯಿಂದ ಲಾಹೋರ್, ಅಮೃತಸರದಲ್ಲಿ ಪರಿಣಾಮ ತೀವ್ರಗೊಂಡಿತು. ಗಾಂಧೀಜಿ ಅಮೃತಸರಕ್ಕೆ ಭೇಟಿನೀಡಬೇಕೆಂದು ಒತ್ತಾಯಪಡಿಸಲಾಯಿತು. ಏಪ್ರಿಲ್ 6ನೇ ದಿನಾಂಕದ ನಂತರ ಗಾಂಧೀಜಿ ಅಮೃತಸರಕ್ಕೆ ಭೇಟಿನೀಡುವುದಾಗಿ ಭರವಸೆಯಿತ್ತರು.

ಈ ಸನ್ನಿವೇಶದಲ್ಲಿ 1919ನೇ ಇಸವಿ ಏಪ್ರಿಲ್ 13 ಭಾನುವಾರದಂದು ಜಲಿಯನ್‌ವಾಲಾಬಾಗ್‌ನಲ್ಲಿ ಸಾರ್ವಜನಿಕ ಸಭೆ ನಡೆಯಿತು. ಮಾರ್ಷಲ್ ಲಾ ಘೋಷಿಸಿದ್ದರೂ, ವೀರಜನತೆ ಅದನ್ನು ಉಲ್ಲಂಘಿಸಿ ಸಭೆಗೆ ಆಗಮಿಸಿತು. ಅಂದು ನಡೆದ ಹೃದಯವಿದ್ರಾವಕ ಕಗ್ಗೊಲೆ ಹಾಗೂ ಹೇಡಿತನದ ಅಜ್ಞೆಗಳಿಂದ ಜನತೆ ಕಂಗೆಡದೆ ಸಾಮ್ರಾಜ್ಯಶಾಹಿಯ ವಿರುದ್ಧ ಗಾಂಧೀಜಿ ನಡೆಸುತ್ತಿದ್ದ ಹೋರಾಟಕ್ಕೆ ಬೆಂಬಲನೀಡಿತು.

ಪಂಜಾಬ್ ಪ್ರಾಂತ್ಯದ ಎಲ್ಲ ಜನನಾಯಕರನ್ನು ಬಂಧಿಸಲಾಗಿತ್ತು. ಅಧಿಕಾರಶಾಹಿಯ ದಬ್ಬಾಳಿಕೆಗೆ ಕೊನೆಮೊದಲಿರಲಿಲ್ಲ. ಲಾಲಾಲಜಪತರಾಯ್ ಇನ್ನೂ ಹಿಂದಿರುಗಿರಲಿಲ್ಲ. ಗಾಂಧೀಜಿ ಪಂಜಾಬಿಗೆ ಭೇಟಿ ನೀಡಲು ವೈಸರಾಯ್ ಅನುಮತಿ ನೀಡುತ್ತಿರಲಿಲ್ಲ. ಗಾಂಧೀಜಿ ಪಂಜಾಬಿಗೆ ಹೋಗಲು 1919ನೇ ಇಸವಿ ಅಕ್ಟೋಬರ್ ಮಧ್ಯದಲ್ಲಿ ಅನುಮತಿ ದೊರಕಿತು.

ಸಿ. ಎಫ್. ಆಂಡ್ರೂಸ್ ಗಾಂಧೀಜಿಗಿಂತಲೂ ಮುಂಚೆಯೇ ಪಂಜಾಬಿಗೆ ಹೋಗಿ ಅಲ್ಲಿನ ಜನತೆಯ ಮೇಲೆ ಮಾಡಿದ್ದ ಅತ್ಯಾಚಾರದ ಬಗ್ಗೆ ಗಾಂಧೀಜಿಗೆ ವಿಚಾರ ತಿಳಿಸಿದ್ದರು. ಗಾಂಧೀಜಿ ಪಂಜಾಬಿಗೆ ಹೋಗುವ ವೇಳೆಗೆ ಅಲ್ಲಿನ ಸರ್ಕಾರದ ದಬ್ಬಾಳಿಕೆಯ ಬಗ್ಗೆ ತನಿಖೆ ಮಾಡಲು ಹಂಟರ್ ಸಮಿತಿ ರಚಿಸಿರುವ ಬಗ್ಗೆ ಪ್ರಕಟಣೆ ಹೊರಡಿಸಲಾಯಿತು. ಗಾಂಧೀಜಿಯನ್ನು ರೈಲ್ವೇ ನಿಲ್ದಾಣದಲ್ಲಿ ಬೃಹತ್ ಜನಸ್ತೋಮ ಸ್ವಾಗತಿಸಿತು.

ಗಾಂಧಿ ನಿರ್ಣಯ

ಪಂಡಿತ ಮದನಮೋಹನ ಮಾಳವೀಯ, ಪಂಡಿತ ಮೋತಿಲಾಲ ನೆಹರೂ ಮತ್ತು ಸ್ವಾಮಿ ಶ್ರದ್ಧಾನಂದರು ಪಂಜಾಬ್ ಪರಿಸ್ಥಿತಿ ಬಗ್ಗೆ ಪರಿಶೀಲಿಸುತ್ತಿದ್ದರು. ಅವರೊಂದಿಗೆ ಗಾಂಧೀಜಿಯೂ ಸೇರಿದರು. ಹಂಟರ್ ಸಮಿತಿಯ ಮುಂದೆ ಸಾಕ್ಷ್ಯ ನೀಡಬಾರದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಅದೇ ಕಾಲದಲ್ಲಿ ಕಾಂಗ್ರೆಸ್ ಪರವಾಗಿ ತನಿಖೆ ಮಾಡಲು ಖಾಸಗಿ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಗಾಂಧೀಜಿ ಅಸಂಖ್ಯ ಜಾಗಗಳಲ್ಲಿ ತನಿಖೆ ನಡೆಸಿದರು. ಅವರು ಜಲಿಯನ್‌ವಾಲಾಬಾಗ್‌ನಲ್ಲೂ ತನಿಖೆ ನಡೆಸಿದರು. ಅದು ನನಗೆ ಗಾಂಧೀಜಿಯ ಪ್ರಥಮ ಪರಿಚಯವಾಯಿತು.

ಅನಂತರ ಅಮೃತಸರದಲ್ಲಿ ಕಾಂಗ್ರೆಸಿನ ವಾರ್ಷಿಕಾಧಿವೇಶನ ನಡೆಯಿತು. ಬ್ರಿಟಿಷ್ ಸರ್ಕಾರ ದಬ್ಬಾಳಿಕೆ ನಡೆಸಿದ್ದರೂ, ಲೆಕ್ಕಿಸದೆ ರಾಷ್ಟ್ರಪ್ರೇಮಿ ಜನತೆ ಅಧಿವೇಶನದಲ್ಲಿ ಭಾಗವಹಿಸಿತು. ಪಂಜಾಬಿನ ಸ್ತ್ರೀ ಪುರುಷ, ಮಕ್ಕಳು ಖಿಲಾಫತ್ ಚಳುವಳಿ, ಪಂಜಾಬಿಗೆ ಮಾಡಿದ್ದ ಅನ್ಯಾಯದ ಪರಿಹಾರಕ್ಕಾಗಿ ಹಾಗೂ ಸ್ವರಾಜ್ಯ ಸ್ಥಾಪನೆಯ ಬಗ್ಗೆ ಪೂರ್ಣ ಬೆಂಬಲ ನೀಡಿದರು. ರಾಷ್ಟ್ರೀಯ ವಿಮೋಚನೆಗಾಗಿ ನಡೆಸುವ ಹೋರಾಟದಲ್ಲಿ ನೋವು ನರಳಿಕೆ ಎದುರಿಸಲು ಪಂಜಾಬಿಗಳು ಸದಾ ಸಿದ್ಧರಾಗಿದ್ದರು.

ಈ ಕಾಲದಲ್ಲಿ ಸಮುದ್ರದಾಚೆಯಿಂದ "ಜಾಗೃತವಾಗಿ, ಎಚ್ಚರಗೊಳ್ಳಿ, ಗುರಿಸಾಧಿಸುವವರೆಗೆ ಶ್ರಮಿಸಿರಿ" ಎಂಬ ದಿವ್ಯ ಸಂದೇಶ ಮೊಳಗಿತು. ಅದೇ ಸಮಯದಲ್ಲಿ ಪಂಜಾಬ್ ರಾಜಕೀಯ ಸಭೆಯಲ್ಲಿ ಲಜಪತರಾಯರ ಪುತ್ರಕಾರಿ ಗೋಚರಿಸಿತು. ಅವರು ಸಿಂಹದಂತೆ ಗರ್ಜಿಸಿದರು.

1920ನೇ ಇಸವಿ ಸೆಪ್ಟೆಂಬರ್ ಮಾಹೆಯಲ್ಲಿ ಕಲ್ಕತ್ತದಲ್ಲಿ ನಡೆದ ವಿಶೇಷ ಕಾಂಗ್ರೆಸ್ ಅಧಿವೇಶನಕ್ಕೆ ಲಾಲಾಜಿ ಅಧ್ಯಕ್ಷರಾಗಿ ಆಯ್ಕೆಯಾದದ್ದು ಅದು ಸ್ವರಾಜ್ಯ ಸಾಧನೆ ಹಾಗೂ ಪಂಜಾಬಿನ ಅನ್ಯಾಯ ಪರಿಹರಿಸುವಿಕೆಗಾಗಿ ಅಸಹಕಾರ ಚಳುವಳಿ ನಡೆಸಲು ಒಪ್ಪಿಗೆ ನೀಡಲಾಯಿತು.

ಆದರೆ ಇಂದೇನು ನಡೆದಿದೆ? ಇಂದು ಜಲಿಯನ್‌ವಾಲಾಬಾಗ್ ದುರಂತ ನಮ್ಮ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆಯೇ? ಆ ಘಟನೆಯ ಸ್ವರ್ಣ ಮಹೋತ್ಸವವನ್ನು ಸಾಧಾರಣವಾಗಿ ಆಚರಿಸುವುದೇ? ಜಲಿಯನ್‌ವಾಲಾಬಾಗ್ ದುರಂತದಲ್ಲಿ ಹುತಾತ್ಮರಾದ ವೀರರು ಬಿಟ್ಟುಹೋಗಿರುವ ಅಮೂಲ್ಯ ಪರಂಪರೆಯನ್ನು ಮುಂದುವರಿಸಲು ಕಂಕಣಬದ್ಧರಾಗಿ ಹೊಸ ಅಧ್ಯಾಯ ರೂಪಿಸಲು ಯತ್ನಿಸೋಣ.

ನವಯುಗ

ಔದ್ಯಮಿಕ, ವಾಣಿಜ್ಯ ಪುರವಣಿ

ಉಡುಪಿ ಮೇ 1969

ಈ ಪ್ರಕಟಣೆಯ ಗೌರವ ಸಂಪಾದಕ: ಪ್ರೊ|| ಎ. ಕೆ. ಹರಿದಾಸ ಭಟ್, ಎಂ.ಎ.

ಮೈಸೂರು ರಾಜ್ಯದ ಪ್ರಸಿದ್ಧ ಸಾಪ್ತಾಹಿಕ 'ನವಯುಗ' 'ಉದ್ದಿಮೆ ಮತ್ತು ವ್ಯಾಪಾರ'ದ ಒಂದು ವಿಶೇಷ ಪುರವಣಿಯನ್ನು ಹೊರಡಿಸಿ ರಾಜ್ಯದ ಔದ್ಯಮಿಕ ಮತ್ತು ವಾಣಿಜ್ಯ ಸಮಸ್ಯೆಗಳನ್ನೂ ಆಶೋತ್ತರಗಳನ್ನೂ ಪ್ರಕಟಿಸಲು ನಿರ್ಧರಿಸಿದೆ.

ಗಣಿ ಸಂಪದ್ಭರಿತವಾದ ಕರಾವಳಿ, ವಿಪುಲವಾದ ನೈಸರ್ಗಿಕ ಸೌಕರ್ಯಗಳು, ವಿದ್ಯುತ್ತಿನ ಹೇರಳ ಸೌಲಭ್ಯ — ಹೀಗೆ ನಾನಾ ತರದ ಸಂಪನ್ಮೂಲಗಳನ್ನು ಪಡೆದ ನಮ್ಮ ರಾಜ್ಯ ಉದ್ದಿಮೆ, ವ್ಯಾಪಾರಗಳ ದೃಷ್ಟಿಯಿಂದ ಹಿಂದುಳಿಯಲು ಕಾರಣವೇನಿರಬಹುದೆಂಬುದನ್ನು ಕೂಲಂಕಷವಾಗಿ ಚರ್ಚಿಸುವ ಸಮಯ ಸನ್ನಿಹಿತವಾಗಿದೆ. ಎರಡು ದಶಕಗಳ ಸ್ವಾತಂತ್ರ್ಯಯುಗದಲ್ಲಿಯೂ ಬೆಂಗಳೂರು—ಭದ್ರಾವತಿ ಇಂಥ ಎರಡು ಕೇಂದ್ರಗಳನ್ನು ಬಿಟ್ಟರೆ ಉಳಿದ ಕಡೆ ಔದ್ಯಮಿಕ ಪ್ರಗತಿಯ ಲಕ್ಷಣಗಳು ಕಾಣಿಸದಿರಲು ನಮ್ಮ ಸಂಘಟನಾ ಚಾತುರ್ಯದ ಕೊರತೆಯೆಂಬುದರಲ್ಲಿ ಸಂದೇಹವಿಲ್ಲ. ಮೈಸೂರಿನ ಮುಖ್ಯ ಸಚಿವರೇ ಕೇಂದ್ರದ ಬಗ್ಗೆ ತಮ್ಮ ನಿರಾಸೆಯನ್ನೂ, ಆತಂಕವನ್ನೂ ಈಚೆಗೆ ವ್ಯಕ್ತಪಡಿಸಿರುವುದನ್ನು ನಾವು ಇಲ್ಲಿ ಸ್ಮರಿಸಬಹುದು.

ಸಾರ್ವಜನಿಕರ ಮನಸ್ಸು ಇಂಥ ಮಹತ್ವದ ಆರ್ಥಿಕ ವಿಷಯಗಳ ಬಗ್ಗೆ ಒಲಿಯುವಂತೆ ಮಾಡಿ ಜನಾಭಿಪ್ರಾಯದ ಒತ್ತಡದಿಂದ ನಾವು ನಮ್ಮ ಮೂಲಭೂತ ಸಮಸ್ಯೆಗಳಿಗೆ ಪರಿಹಾರವನ್ನು ಶೋಧಿಸದಿದ್ದರೆ ಭಾರತೀಯ ಔದ್ಯಮಿಕ ರಂಗದಲ್ಲಿ ನಾವು ಇನ್ನಷ್ಟು ಹಿಂದುಳಿಯಬೇಕಾದೀತು.

ರಾಜ್ಯದ ಸಚಿವೋತ್ತಮರು, ಬುದ್ಧಿಶಾಲಿಗಳು, ಬ್ಯಾಂಕ್ ಇತ್ಯಾದಿ ಸಂಸ್ಥೆಗಳ ನೇತಾರರು ಈ ವಿಶೇಷ ಪುರವಣಿಯಲ್ಲಿ ಲೇಖನಗಳನ್ನಿತ್ತು ಸಹಕರಿಸಲು ಒಪ್ಪಿದ್ದಾರೆ. ಸಚಿತ್ರವಾಗಿ ಹೊರಡುವ ಈ ಪುರವಣಿ ತಮ್ಮ ಸರಕು ಮತ್ತು ಸೇವೆಯ ಜಾಹೀರಾತಿಗೆ ಉತ್ತಮ ಸಾಧನವೆಂಬ ದನ್ನು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಲ್ಲ ವರ್ಗದ ಜನರ ಮನೆಯನ್ನೂ ಮನವನ್ನೂ ಮುಟ್ಟುವ 'ನವಯುಗ'ವು ಈ ವಿಶೇಷ ಪುರವಣಿಯ ಮೂಲಕ ನಿಮ್ಮ ಔದ್ಯಮಿಕ ಉತ್ಕರ್ಷಕ್ಕೆ ನೆರವಾಗುವುದು. ಜಾಹೀರಾತು ಲೇಖನ ಬೆಳೆಸಿ

ಬ್ಲಾಕು, ಸ್ಟೀರಿಯೋಗಳಿಂದ ಯುಕ್ತವಾದ ನಿಮ್ಮ ಜಾಹೀರಾತುಗಳನ್ನು ಇದೇ ಮೇ 15ರ ಒಳಗೆ ನಮಗೆ ಕಳುಹಿಸಿ. ಮೇ 25, 1969ಕ್ಕೆ ಸಂಚಿಕೆ ಹೊರಡಲಿದೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫರೀದಾಬಾದದ ಫಲಶ್ರುತಿ

(ಏಳನೇ ಪುಟದಿಂದ)

ಗೋಚರವಾಯ್ತು.

ಖಾಸಗಿ ರಂಗದಲ್ಲಿ ಹಿಂತಹ್ಯುದಿಂದ ವಸ್ತುಗಳನ್ನು ತಯಾರಿಸುವುದು ಸಾಧ್ಯವಾದರೆ, ಸಾರ್ವಜನಿಕ ವಿಭಾಗವನ್ನು ಪ್ರೋತ್ಸಾಹಿಸುವುದು ಅಗತ್ಯವಿಲ್ಲವೆಂಬರ್ಥದಲ್ಲಿ ನಿಜಲಿಂಗಪ್ಪನವರ ಉದ್ಗಾರವಿತ್ತು. ಈ ಭಾಷಣದ ಪ್ರತಿಯನ್ನು ಮುಂದಾಗಿಯೇ ನೋಡಿದ ಶ್ರೀಮತಿ ಗಾಂಧಿಯವರು ಸಾರ್ವಜನಿಕ ರಂಗದ ಹಿಂದಕನ್ನ ಕಟು ಎಚ್ಚರಿಯೇ ಗಣಿಸಿದರು. ಬಹಿರಂಗಾಧಿವೇಶನದಲ್ಲಿ ನಿಜಲಿಂಗಪ್ಪನವರು ತಮ್ಮ ಅಧ್ಯಕ್ಷ ಭಾಷಣವನ್ನು ಓದುವುದಕ್ಕೆ ಮೊದಲೇ ಶ್ರೀಮತಿ ಗಾಂಧಿಯವರು ವಿಷಯ ನಿಯಾಮಕ ಸಭೆಯಲ್ಲಿ ಸವಿಸ್ತಾರವಾಗಿ ಮಾತನಾಡಿ ಯೋಜನೆಗಳನ್ನೂ ಸಾರ್ವಜನಿಕ ರಂಗದ ಉತ್ತೇಜನೀಕರಣವನ್ನೂ ಬಹವಾಗಿ ಸಮರ್ಥಿಸಿಕೊಂಡರು.

ಶ್ರೀ ನಿಜಲಿಂಗಪ್ಪನವರು ಬಂದ. ಬಗೆಯ 'ಹಿಂದ್ಯ'ವನ್ನೇ ಪಡೆಸಿದರು, ತಮ್ಮಾತ್ಮಶಕ್ತಿ ಮುಸೆಯುತಿದ್ದ ಬಂದ. ತುಂಗಡವನ್ನು ಗುರಿಯಿಟ್ಟು ಅವರು ಸೂಕ್ಷ್ಮನಿನಿಸಿದರ. ಗುಪ್ತವಾಗಿ ನಡೆದ ಸಾವರ್ಜನಿಕ ವಿಚಾರ ವಿನಿಮಯದಲ್ಲಿ "ಹಿತಸಂರಕ್ಷಕರ ವಿರುದ್ಧ "ಯುವಕ ತುರುಕರ" ಹೊಡೆ ಮಾಡಿದರೇನೇ ನಿಜ. ಆದರೆ, ಅವರದ್ದು ಏನೂ ನಡೆಯದಂತೆ, ಅಧ್ಯಕ್ಷರು ನೋಡಿಕೊಂಡರು. ಇದರ ಇದಿರಾ ಗಾಂಧಿಯವರ ಕೈದಳನ್ನು ತುಸು ಬಲಗೊಳಿಸಿತು.

ಫರೀದಾಬಾದದ ಅಧಿವೇಶನವು ಕಾಂಗ್ರೆಸ್‌ನ ಒಳಗಡೆ ಪ್ರಚ್ಛನ್ನ ಯುದ್ಧಕ್ಕೆ ನಾಂದಿಯೊಯಿತು ಎನ್ನಬಹುದು. ಇದರ ಸೂಚನೆಯನ್ನು ಮೊದಲೇ ಅರಿತುಕೊಂಡವರು ಹಿಂದಿನ ಗೃಹ (ಪ್ರಧಾನ ಮಂತ್ರಿ) ಗುಲ್ಜಾರಿಲಾಲ ನಂದರು ವಿಷಯ ನಿಯಾಮಕ ಸಮಿತಿಯ ಸಭೆಯಲ್ಲಿ ಎದ್ದು ಹಿಂತು ಸ್ಪಷ್ಟವಾಗಿ ಉದ್ಗರಿಸಿದರು—'ಕೋಟೆಯ ಇಟ್ಟಿಗೆಗಳು ಉದುಳ ತೊಡಗಿವೆ ಇದನ್ನು ತ್ವರಿತವಾಗಿ ಬೆಸೆಯುವ ಪ್ರಯತ್ನ ಕೈಕೊಳ್ಳಬೇಕು. ಮೊರೆಕೆ ಒಡೆದು ಜಾರಿದಾಗ ದೂರ ಹೋಗಬಲ್ಲ ಬಿರುಕು ಧೂಳ ಕಣವಿದಲ್ಲ ಎಚ್ಚರಿಕೆ!"

ನಾಲ್ಕು ದಿನಗಳ ಫರೀದಾಬಾದ ಜಾತ್ರೆಯಲ್ಲಿ ಶ್ರೀ ನಿಜಲಿಂಗಪ್ಪನವರು ತಮ್ಮ ಅಪ್ರಮಾಣಿಕತೆಯೊಡನೆ ಜಯಗಳಿಸಿ ಹೊರಬಂದರು. ಶ್ರೀ ಎಸ್. ಕೆ. ಪಾಟೀಲರ ಗೈರುಹಾಜರಿಯಲ್ಲಿ ಇದು ಸಾಧ್ಯವಾದುದು ಪ್ರಶಂಸಾರ್ಹವೇ. ಈ ತುಂಗಡವು ಶ್ರೀ ಪಾಟೀಲರು ಲೋಕಸಭೆಗೆ ಆಯ್ಕೆಯಾಗಿ ಬರುವುದನ್ನೇ ಉತ್ಕಂಠತೆಯಿಂದ ಎದುರು ನೋಡುತ್ತಿದೆ.

ಸುಬ್ರಹ್ಮಣ್ಯಂ ಸಂಪೂರ್ಣವಾಗಿ ನಿರ್ವೀರ್ಯರಾದರು. ಯುವಕ ತುರುಕರದ್ದು ಏನೂ ನಡೆಯಲಿಲ್ಲ. ತೋರಿಕೆಗೆ ನಿಜಲಿಂಗಪ್ಪನವರು ಗೆದ್ದರು. ಆದರೆ ಇಂದಿರಾ ಗಾಂಧಿಯವರಿಗಿದು ಸಿಕ್ಕಿನ ಸಮಯ. ಬಿರುಸಾದ ಓರ್ವ ಸದಸ್ಯ ಉದ್ಗರಿಸಿದ— "ಶ್ರೀಮತಿ ಇಂದಿರಾಗಾಂಧಿಯವರು ಏಕ ರಾಜ್ಯಕೀಯ ಪಕ್ಷದ ಸರಕಾರದ ಕೊನೆಯ ಪ್ರಧಾನಮಂತ್ರಿಯಾಗದಿರಲಿ." ಇದೇ ಸಮಯ ಪೆಟ್ರೋಲಿಯಂ ಮತ್ತು ಕೆಮಿಕಲ್ ಖಾತೆಯ ಹಿಂದಿನ ಮಂತ್ರಿಗಳಾದ ಅಶೋಕ ಮೆಹತಾರು ಹೇಳಿದರು— "ಇಂತಹ ಸಮಯದಲ್ಲಿ ಶ್ರೀಮತಿ ಗಾಂಧಿ ದೇಶವನ್ನಾಳಲಾರರು..."

ಶ್ರೀಮತಿ ಗಾಂಧಿಯವರು ಫರೀದಾಬಾದಲ್ಲಿ "ಸಮಾಜವಾದ" ಪದವನ್ನು ಪದೇಪದೇ ಉದ್ಗರಿಸಿದರು. ಆದರೆ, ಇದರಿಂದ ಕಾಂಗ್ರೆಸಿನ ಎಡ ಗುಂಪು ಕೂಡಾ ಪ್ರಭಾವಿತವಾಗಲಿಲ್ಲವೆಂಬುದು ಗಣನೀಯ. ಸ್ವಾತಂತ್ರ್ಯೋತ್ತರ ಪೂರ್ವಾರ್ಧ ವಿನೂಗಿಯೇ ಪಂ. ಜವಾಹರಲಾಲರು ಸಮ್ಮೇಳನಗಳಿಗೂ ಸಮಾಜವಾದ ಪೊಂದಿ ರಾಮಬಾಣವೆಂದ ಉದ್ಘೋಷಿಸಿದ್ದರೆಂಬುದನ್ನು ಕಲವು ಎತ್ತಿ ತೋರಿದರು. ಅದೇ ಪದವನ್ನು ಸ್ವಾತಂತ್ರ್ಯೋತ್ತರದಲ್ಲಿ ಅನೇಕ ವರ್ಷ ಭಜನೆ ಮಾಡಿದ ಕಾಂಗ್ರೆಸ್ಸು ಪುನರುಚ್ಚರಿಸಲಿಕ್ಕೆ ಇನ್ನೂ ಸಿದ್ಧವಾಗಿದೆಯೇ?

ಜನ ಗಣ ಮನ ಪ್ರತಿನಿಧಿಗಳ ಸಭೆಯಲ್ಲಿ ಕಾಂಗ್ರೆಸ್ಸಿನ ಬಲವಾದೀತೇ ಎಂಬ ಸಂದೇಹ ಜನಮನದಲ್ಲಿ ಮೂಡಿದೆ. ಈ ದೇಶದ ಜನತೆ ಕಾಂಗ್ರೆಸ್ಸಿನ ಧ್ಯೇಯವನ್ನು ತಿರಸ್ಕರಿಸಲಿಲ್ಲವೆಂಬುದು ಶ್ರೀ ಚವನರ ನಂಬಿಕೆ. ಇದು ನಿಜ. ಆದರೆ, ತನ್ನ ನೀತಿಯನ್ನು ಕಾರ್ಯಕ್ಕೆ ತರುವಲ್ಲಿ ಕಾಂಗ್ರೆಸ್ಸು ಅಸಮರ್ಥವಾಗಿದೆಯೆಂದು ಜನಮತ. ಈ ನೀತಿಗಳು ಕಾಗದದ ಮೇಲೆ ಗೂಡ್ಸುವಳಿಗಳ ರೂಪದಲ್ಲಿ ಮಾತ್ರವೇ ಇವೆ—ಇದ ಲೋಕಾಭಿಪ್ರಾಯ. ಇವನ್ನು ಕಾರ್ಯಗತಗೊಳಿಸುವಲ್ಲಿ ಕಾಂಗ್ರೆಸ್ಸು ತನ್ನ ಅಸಮರ್ಥತೆಯನ್ನು ಇದುವರೆಗೂ ಪ್ರದರ್ಶಿಸಿದೆ. ಈ ದೇಶದ ಮತದಾರರು ಈ ಅಸಮರ್ಥತೆಯನ್ನು ಇನ್ನು ಮುಂದೆ ಸಹಿಸಲಾರರು—ಇದು ಚವನರ ಪ್ರಸ್ತಾಪ.

ರಾಜ್ಯಕೀಯ ಅಂತರಂಗ ತಿಳಿದವರ ಹೇಳಿಕೆಯಂತೆ ಕಾಂಗ್ರೆಸ್ಸಿನೊಳಗಿನ ಸಮಾಜವಾದಿ ಶಕ್ತಿಗಳ ಧ್ರುವೀಕರಣ ಆಗುತ್ತಿದೆ. ಇದಕ್ಕೆ ಮಾಜಿ ಮಂತ್ರಿಗಳಾದ ಕೃಷ್ಣ ಮೆನನ್ ಮತ್ತು ಮಾಳವೀಯ ಪ್ರಭೃತಿಗಳೇ ಉದಾಹರಣೆ. ನೆಹರೂ ಮಾರ್ಗದಲ್ಲಿ ಎಡ ಪಂಥದ ಕಾರ್ಯಕ್ರಮಗಳನ್ನು ಈ ಶಕ್ತಿಗಳು ಸಮರ್ಥಿಸುತ್ತಿವೆ. ಎಂದರೆ ಕಾಂಗ್ರೆಸ್ಸಿನ ಸಮಾಜವಾದಿಗಳು ಒಟ್ಟಾಗಿ ಬರುತ್ತಿದ್ದಾರೆ. ಸಂಯುಕ್ತ ಸೋಷಲಿಸ್ಟ್ ಪಕ್ಷವೂ ಈಗ ಒಂದಾಗುತ್ತಿದೆ. ಇದರಿಂದಾಗಿ ಒಂದು ಹೊಸ ಸಂಘಟನೆಯಾಗಬಹುದು. ಎಡ ಸಂಘಟನೆ ರೂಪುಗೊಳ್ಳುವ ಕೈವಾಡ ಹೀಗಿದೆ— ಇದು ಹಲವು ಕಾಂಗ್ರೆಸ್ಸಿಗರ ಅಂಬೋಣ—ಇದ ಒಟ್ಟು ಸಹಜಾಭಿಪ್ರಾಯ.

'ಸಮಾಜವಾದಿ'ಯ ಪ್ರಮುಖ ಧೋರಣೆಗಳನ್ನು ಫರೀದಾಬಾದು ತಿರಸ್ಕರಿಸಿದರೂ, ಇದು ಬಹುಕಾಲ ಮುಂದುವರಿಯಲಾರದೆಂದು ಉನ್ನತ ಮಟ್ಟದಲ್ಲಿ ಕೆಲವರ ಅಂಬೋಣ. ದೇಶದ ಬಲಪಂಥೀಯ ಪಕ್ಷಗಳೆನಿಸಿದ ಜನಸಂಘ, ಸ್ವತಂತ್ರ ಮತ್ತು ಭಾರತೀಯ ಕ್ರಾಂತಿದಳಗಳು ಒಂದಾಗುವ ಮಾತುಗಳು ಕೇಳಬರುತ್ತಿವೆ. ಇದು ಸಾಧ್ಯವಾದಲ್ಲಿ ಕಾಂಗ್ರೆಸ್ಸು ನಿಜವಾಗಿಯೂ ಮಹಾಪ್ರಶ್ನೆಯೊಂದನ್ನೆತ್ತರಿಸಬೇಕಾಗುತ್ತದೆ. ಈ ಬಲಪಂಥೀಯರನ್ನು ಅಪ್ಪಿಕೊಳ್ಳುವುದೇ ಅಥವಾ ಕಮ್ಯುನಿಸ್ಟರನ್ನು ಆಲಿಂಗಿಸುವುದೆ?

ಹೆಚ್ಚಿನ ಕಾಂಗ್ರೆಸ್ಸಿಗರು ಬಲಪಂಥೀಯರನ್ನು ಮೆಚ್ಚುತ್ತಾರೆ. ಕೃಷ್ಣ ಮೆನನ್ನರಂಥವರು ದೇಶದೊಳಗೆ ಅಪಹಾಸ್ಯಯವಾಗಿ ಪರಿಣಮಿಸಿದ್ದಾರೆ. ಪೀಕಿಂಗ್, ಮಾಸ್ಕೋಗಳತ್ತ ವಾಲಿದ್ದಾರೆ—ಇದೇ ಇದಕ್ಕೆ ಕಾರಣ. ಇದರಿಂದ ಈ ಗುಂಪು ನೆಂದಿದೆ; ಕಳವಳಗೊಂಡಿದೆ. ಫರೀದಾಬಾದ ಅಧಿವೇಶನವು ಬಲಪಂಥೀಯರಿಗೆ ಕೂಡ ಪ್ರೋತ್ಸಾಹ ನೀಡಿದೆ. ಅದೇ ಸಮಯದಲ್ಲಿ ಬಂದ ಅಧಿವೇಶನವು ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬದಲಾಯಿಸಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದೆ. ಇದಕ್ಕೆ ಎರಡೂ ಅಧಿವೇಶನಗಳ ಅಧ್ಯಕ್ಷರ ಭಾಷಣಗಳು ಸಾಕ್ಷಿಯಾಗುತ್ತವೆ. ಶ್ರೀ ನಿಜಲಿಂಗಪ್ಪನವರು ಭಾರತೀಯ ಸಮುದ್ರದ ಸಮಾಜವಾದವನ್ನು ಮೆಚ್ಚಿದರೆ, ವಾಜಪೇಯಿಯವರು ಅಂತರಿಕ ತಿಕ್ಕಾಟಗಳನ್ನು ಬಗೆಹರಿಸಲು ರಾಷ್ಟ್ರೀಯ ಮತ್ತು ಪ್ರಜಾತಾಂತ್ರಿಕ ಶಕ್ತಿಗಳು ಒಂದಾಗಬೇಕು ಎಂದರು.

ಪಕ್ಷದ ಚುನಾವಣೆಗಳನ್ನು ಮುಂದೂಡಿದರ ಪರಿಣಾಮವಾಗಿ ಶ್ರೀ ನಿಜಲಿಂಗಪ್ಪನವರು ಇನ್ನೊಂದು ವರ್ಷವೂ ಕಾಂಗ್ರೆಸ್ ಅಧ್ಯಕ್ಷರಾಗಿ ಮುಂದುವರಿಯುವರು. ಆದದರಿಂದ ದೇಶವನ್ನು ಸರಿದಾರಿಯಲ್ಲಿ ಮುಂದುವರಿಸಲು ನಾಯಕರನ್ನು ಉತ್ತೇಜಿಸಲು ಅವರಿಗೆ ಸಮಯ ದೊರೆಯಿತು. ಇದರಿಂದಾಗಿ 'ಸಿಂಡಿಕೇಟ್'—ಪ್ರಧಾನಿಯವರ ಮಹಾಮಾನ್ಯ ಶೀಘ್ರದಲ್ಲೇ ಸಂಭವಿಸುವ ಸಂಭವವಿದೆ.

ಫರೀದಾಬಾದವು ಗೃಹಮಂತ್ರಿ ಚವನನ್ನು ಪ್ರಧಾನಿಯವರ ಒಹಳ ಹತ್ತಿರಕ್ಕೆ ಎಳೆದು ತಂದಿತು. ಕಾಮರಾಜರು ಮಾತ್ರ ಅಧ್ಯಕ್ಷ ಸಹಾಯಿದ್ದರೆ. ಸಿಂಡಿಕೇಟಿನ ಸ್ವಾಭಾವಿಕ ಸದಸ್ಯರೆನಿಸಿಕೊಂಡವರಾದುದರಿಂದ ಅವರ ಕೃಪೆ ನಿಜಲಿಂಗಪ್ಪನವರ ಪಕ್ಷಕ್ಕೆ. ಆದರೆ, ಪರಿಶುದ್ಧ ಸಮಾಜವಾದಿಯಾದುದರಿಂದ ಶ್ರೀಮತಿ ಗಾಂಧಿಯವರ ಮೇಲವರಿಗೆ ಅನುಕಂಪವಿದೆ. ಸಿಂಡಿಕೇಟಿನ ಒಳಗಿರುವ ಶಕ್ತಿಗಳು ಏಕನಾಯಕತ್ವವನ್ನು ಹರಿಸಲು ರಂಗಸಿದ್ಧವೆ? ಅಥವಾ ಎಲ್ಲ ಎರಡೆಯ ತಟ್ಟು, ಹೊಸ ನೀತಿಗಳೆಡೆಗೆ ಸಾಗುವರೆ? ಇದಕ್ಕೆ ಮುಂದಿನ ಕೆಲವು ತಿಂಗಳುಗಳಲ್ಲಿ ಸಮರ್ಪಕವಾದ ಉತ್ತರ ದೊರೆಯಬಹುದು.

ವಿನೋಬಾ ಮುದುಕರಲ್ಲ

ನಾನಿನ್ನೂ ಮುದುಕನೆಂದು ಕಾಣುವುದಿಲ್ಲ. ಯಾಕೆಂದರೆ ನನ್ನ ತಲೆಯ ಕೂದಲು ಕಪ್ಪು ಇವೆ! ಗಡ್ಡಮೀಸೆ ಮಾತ್ರ ಬೆಳ್ಳಗಾಗಿವೆ. ಗಡ್ಡಮೀಸೆ ಬೆಳ್ಳಗೆ ಮಾಡಿದವರು ಗಾಂಧಿಯವರು. ಹೇಗೆಂದರೆ—ನಾನು ಗಾಂಧಿಯವರ ಆಶ್ರಮದಲ್ಲಿದ್ದೆ. ಅಲ್ಲಿ ಗುಂಗಾಡುಗಳ ಕಾಟ ಬಹಳ ಇತ್ತು. ಸೊಳ್ಳೆ ಪರದೆಯಂತೂ ಇರಲೇ ಇಲ್ಲ. ರಾತ್ರಿಗೆಯು ತನಗ ಜಾದರ ಹೊದ್ದು ಕೊಳ್ಳುತ್ತಿದ್ದೆವು. ಮೋರೆಯನ್ನು ತೆರೆದಿಡಬೇಕಾಗುತ್ತಿತ್ತು. ಕಲ್ಲೆಣ್ಣೆ ಮೋರೆಗೆ ಹಚ್ಚಿಕೊಂಡರೆ ಗುಂಗಾಡು ಕಚ್ಚುವದಿಲ್ಲ ಎಂದ ಗಾಂಧಿಯವರು ಹೇಳಿದ್ದರು. ಹಚ್ಚಿಕೊಂಡ ಕಲ್ಲೆಣ್ಣೆ ಒಂದು ಘಂಟೆಯಲ್ಲಿ ಹಾರಿಹೋಗುತ್ತಿತ್ತು. ಮತ್ತು ನನಗೆ ನಿದ್ದೆ ಬಂದನಂತರ ಗುಂಗಾಡು ನನಗೆ ಕಚ್ಚುತ್ತಲೂ ಇದ್ದಿರಬಹುದು. ಹೀಗೆ ಎಷ್ಟೋ ದಿನ ಮಾಡಿದ್ದರಿಂದ ನನ್ನ ಗಡ್ಡಮೀಸೆಗಳು ಬೆಳ್ಳಗಾಗಿವೆ.

—ವಿನೋಬಾ

ಜನಜಾಗೃತಿಯ ಆವಶ್ಯಕತೆ

ಅತಿ ಪ್ರಾಚೀನ ಕಾಲದಿಂದಲೂ ಜನತೆಯು ತನ್ನ ಸಮಸ್ಯೆಗಳ ಕುರಿತು ವಿಚಾರ ಮಾಡುವದ, ಪರಿಹಾರ ಹುಡುಕುವದ, ಮತ್ತು ತನ್ನನ್ನು ನಡೆಸಿಕೊಂಡ ಹೋಗುವದು ತನ್ನದೇ ಜವಾಬುದಾರಿ ಎಂದ ತಿಳಿಯುತ್ತಲೇ ಇಲ್ಲ. ರಾಜರ, ಗುರುಗಳು, ಸಂತ ಮಹಾತ್ಮರು, ಸೇವಾಸಂಸ್ಥೆಗಳ ಇಲ್ಲವೆ ಸರಕಾರವೊಂದು ಪಕ್ಷಕ್ಕೆ ತನ್ನ ಬಗ್ಗೆ ವಿಚಾರಮಾಡಬೇಕು ಮತ್ತು ತನ್ನ ಸಮಸ್ಯೆಗಳನ್ನು ಬಿಡಿಸಬೇಕು ಎಂದೇ ಜನತೆಯು ಸಾವಿರಾರು ವರ್ಷಗಳಿಂದಲೂ ತಿಳಿಯುತ್ತ ಬಂದಿದೆ. ಆದರೆ ಶಾಂತಿ ವಿಚಾರಸಂತೆ ಜನತೆಯು ಈ ವೇಳೆಯ ಮಾನವೇ ವಿಚಾರವನ್ನು ಅವಲಂಬಿಸದೆ ಸಾಮೂಹಿಕ ಸಂಕಲ್ಪ, ಸಮ್ಮತಿ ಹಾಗೂ ಪರಸ್ಪರ ಸಹಕಾರದಿಂದ ಸ್ವಾವಲಂಬಿಯಾಗಿ ನಿಜವಾದ ಸ್ವರಾಜ್ಯವನ್ನು ಸ್ಥಾಪಿಸುವ ಅಭ್ಯಾಸ ಮಾಡಬೇಕಾಗಿದೆ. ಆದರೆ ಸಾವಿರಾರು ವರ್ಷಗಳಿಂದ ಇಂಥ ಅಭ್ಯಾಸವೇ ಇಲ್ಲದ್ದರಿಂದ, ವಿಚಾರವು ತಿಳಿದರೂ ಕೂಡ ಜನತೆಯು ಸ್ವಯಂಪ್ರೇರಣೆಯಿಂದ ಏನೊಂದೂ ಮಾಡಲಾರದಂತಾಗಿದೆ. ಯಾಕೆಂದರೆ ಹಿಂದಿನಿಂದ ಇಂದಿನ ವರೆಗೂ ಇನ್ನೊಬ್ಬರನ್ನು ಅವಲಂಬಿಸಿಯೇ ಇರುತ್ತ ಬಂದದ್ದರಿಂದ ಜನತೆಯ ಆತ್ಮಶಕ್ತಿಯೇ ಕುಂಗಿಬಿಟ್ಟಿದೆ. ಆದ್ದರಿಂದ ಜನತಾರೂಪಿ ಜನಾರ್ದನನಿಗೆ ಅವನ ಶಕ್ತಿಯ ಅರಿವು ಮಾಡಿಕೊಡಲಿಕ್ಕೆ ದೀರ್ಘಕಾಲದ ಮತ್ತು ಸತತ ಲೋಕಸೇವಕರ ಆವಶ್ಯಕತೆ ಇರುತ್ತದೆ.

—ಶ್ರೀನಾಥ ಮುಣ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ಕೃಷಿಯೂ ಉದ್ಯಮವೇ



— ಶ್ರೀ ಟಿ. ಎ. ಪೈ.

“ಕೃಷಿ ವಿಭಾಗಕ್ಕೆ ವಾರ್ಷಿಕ ರೂ. ೩೩೦೦ ಕೋಟಿ ರೂ. ಅಗತ್ಯವಿದೆ ಇದರಲ್ಲಿ ಬರೀ ೩೦೦ ಕೋಟಿ ರೂ. ಮಾತ್ರ ಕಡಿಮೆ ಬಡ್ಡಿಯಲ್ಲಿ ದೊರೆಯುತ್ತಿದೆ, ಉಳಿದದ್ದನ್ನು ರೈತರು ಅಧಿಕ ಬಡ್ಡಿದರದಲ್ಲಿ ಪಡೆಯುತ್ತಾರೆ. ಈ ಪರಿಸ್ಥಿತಿ ತಪ್ಪಿ ರೈತರಿಗೆ ನ್ಯಾಯ ಬಡ್ಡಿಯಲ್ಲಿ ಸಾಲನೀಡುವ ಸಂಸ್ಥೆಯೊಂದರ ಅಗತ್ಯವಿದೆ. ಕೈಗಾರಿಕೆಯಂತೆಯೇ ಕೃಷಿರಂಗವನ್ನೂ ಉದ್ಯಮವೆಂದು ಬಗೆದು ಅದಕ್ಕೆ ಹಣ ಪೂರೈಕೆಯಾಗಬೇಕು. ಸರಕಾರ ಮತ್ತು ಬ್ಯಾಂಕುಗಳು ಹಣ ಒದಗಿಸಲು ಮುಂದೆ ಬಂದರೆ, ರೈತರುಗಳು ಉತ್ಸಾಹಿಗಳಾಗಿ ಮುಂದೆ ಬರುವರು. ಕೃಷಿಯನ್ನು ಯಂತ್ರೀಕರಣ ಮಾಡಲು ಬ್ಯಾಂಕುಗಳು ನೆರವಾಗಬೇಕು. ಭಾರತದಲ್ಲಿ ಬ್ಯಾಂಕಿಂಗ್ ಉದ್ಯಮವನ್ನು ವಿಸ್ತರಿಸಿ ಬ್ಯಾಂಕಿಂಗ್‌ನ ಮೂಲಕ ಆರ್ಥಿಕ ಬೆಳವಣಿಗೆ ಮತ್ತು ಸುಭದ್ರತೆಯನ್ನು ಸಾಧಿಸಬಹುದು. ಆಹಾರಧಾನ್ಯಗಳ ಸಂಗ್ರಹಕ್ಕೆ ಉತ್ತಮ ವ್ಯವಸ್ಥೆಯಾಗಬೇಕು, ಒಳ್ಳೆಯ ಸಾರಿಗೆ ವ್ಯವಸ್ಥೆಯಾಗಬೇಕು, ಮಾರಾಟ ಕಟ್ಟೆಯ ಸೌಲಭ್ಯ ಬೇಕು. ಹೀಗಾದಲ್ಲಿ ಮಾತ್ರ ಹಿಡಿತದಲ್ಲಿಟ್ಟುಕೊಳ್ಳಬಹುದು; ರೈತರಿಗೂ ನ್ಯಾಯವಾದ ಬೆಲೆ ದೊರೆಯುವಂತೆ ಮಾಡಬಹುದು”— ಎಂದು ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಶ್ರೀ ಟಿ. ಎ. ಪೈ ಅವರು ಮಡಿಕೇರಿಯ ವಾಣಿಜ್ಯ ಸಂಸ್ಥೆಯಲ್ಲಿ ಮಾತನಾಡುತ್ತ ಅಭಿಪ್ರಾಯಪಟ್ಟರು.

(ಮೊದಲನೇ ಪುಟದಿಂದ)

ಪ ಯೋಜನೆಯುದ್ದೇಶವಿದೆ. ಶ್ರೀ ಗಿರಿಯವರು ರಾಷ್ಟ್ರಪತಿ, ಜಗಜೀವನರಾಂ ಅವರನ್ನು ಕೇಳಿಕೊಳ್ಳುವ ಸಂಭವವಿದೆ. ಇವರ ದೇಶಸ್ಥಿತಿಯನ್ನರಿತವರೆಂದು ಒಪ್ಪುವರು, ಶ್ರೀ ಗಿರಿಯವರಿಗೆ ಪ್ರಬಲ ವಿರೋಧ ಕಂಡುಬಂದಿಲ್ಲ. ಆದರೆ, ಉಪರಾಷ್ಟ್ರಪತಿ ಸ್ಥಾನವೂ ಆಗ ತೆರವಾಗುವುದರಿಂದ ಇದಕ್ಕೂ ಚುನಾವಣೆ ನಡೆಸಬೇಕಾಗುತ್ತದೆ. ಕೇಂದ್ರಮಂತ್ರಿ ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದ್ ಹೆಸರು ಒಂದು ವರ್ಗದಲ್ಲಿ ಕೇಳಿಬರುತ್ತಿದೆ. ಶ್ರೀ ಫಕ್ರುದ್ದೀನರು ಈ ಸಂಬಂಧದಲ್ಲಿ ಆಸಕ್ತಿ ತೋರಿಸುವರೆಂಬುದು ಇನ್ನೂ ಸ್ಪಷ್ಟವಿಲ್ಲ. ಒಂದು ವೇಳೆ ಅವರು ಒಪ್ಪಿದರೂ ರಾಷ್ಟ್ರೀಯ ಪಕ್ಷಗಳಲ್ಲಿ ಭಿನ್ನಮತ ಏರಿದೀತು. ಆಗ ಶ್ರೀಮತಿ ಇಂದಿರಾಗಾಂಧಿಯವರ ಮತ್ತೊಂದು ತೀರ್ಮಾನ ಕಾಲದಲ್ಲಿ ದುಮುಕಬೇಕಾಗಿ ಬಂದುದು ಯೋಗಾಯೋಗ, ಇಷ್ಟರಲ್ಲೊಂದು ನಾಡದೊಳಗೆ ಈ ಸಂಬಂಧದಲ್ಲಿ ಹೆಚ್ಚಿನ ಚಟುವಟಿಕೆಗಳು ಆರಂಭಗೊಂಡಾವು. ಮುಂದೇನು ಮುಂದಾರು ಎಂಬುದೀಗ ಬರಿಯ ಊಹಾಪೋಹ ಮಾತ್ರ.

ಕನ್ನಡ ಸಾಂಸ್ಕೃತಿಕ ಮಹೋತ್ಸವ

ಮದ್ರಾಸಿನಲ್ಲಿ ಒಂಭತ್ತು ದಿವಸಗಳ ಭಾಷಾ ಸಾಂಸ್ಕೃತಿಕ ಮಹೋತ್ಸವವು ತಾರೀಖು 12-4-69ರಿಂದ ಆರಂಭವಾಗಿ 20-4-69ರ ತನಕ ಜರಗಿತು. ಮದ್ರಾಸಿನ ಕನ್ನಡ ಭಾಷಾ ಪ್ರಚಾರ ಕಾರ್ಯ ಚಟುವಟಿಕೆಯಲ್ಲಿ ನಿರತರಾದ ಕನ್ನಡ ಟೀಚಿಂಗ್ ಕಾಂಪ್ಲೆಕ್ಸಿನವರ ಬಲವಿನಿಂದಲೂ ಇನ್ನಿತರ ಕಲಾ ಸಾಂಸ್ಕೃತಿಕ ಸಂಸ್ಥೆಗಳ ಸಹಾಯದಿಂದಲೂ ಏರ್ಪಡಿಸಲ್ಪಟ್ಟ ಈ ಮಹೋತ್ಸವವು ಕನ್ನಡ ಭಾಷಾ ಕಾರ್ಯ ಸಂಸ್ಕೃತಿಗೆ ದುಡಿಯುತ್ತಿದ್ದ ದಿವಂಗತ ಬಿ. ಕೆ. ಸರ್ವೋತ್ತಮ ರಾಯರ ಸ್ಮಾರಕವಾಗಿ ಅರ್ಪಿಸಲ್ಪಟ್ಟಿತ್ತು. ಮದ್ರಾಸಿನ ಆದ್ಯ ಕನ್ನಡ ಮಹನೀಯರೂ ಇತರ ಗಣ್ಯವ್ಯಕ್ತಿಗಳೂ ಸಹಕರಿಸಿ ಕನ್ನಡ ಕಲ್ಚರಲ್ ಫೆಸ್ಟಿವಲ್ ಕಮಿಟಿಯ ಮೇಲ್ವಿಚಾರದಿಂದ ಡಾ| ಎಮ್. ಆರ್. ಬೈಲ್ (ಚೇರ್‌ಮನ್) ಮತ್ತು ಆರೂರು ಶ್ರೀನಿವಾಸರಾವ್ ಇವರುಗಳ ಉತ್ಸಾಹದಿಂದ ಮೊಟ್ಟಮೊದಲನೆಯದಾಗಿ ಏರ್ಪಡಿಸಲ್ಪಟ್ಟ ಈ ಹಬ್ಬವು ಮದ್ರಾಸು ಜನರಲ್ಲಿ ಒಂದು ನವಚೇತನವನ್ನುಂಟುಮಾಡಿಯದೆಂದರೆ ಅತಿಶಯೋಕ್ತಿಯಲ್ಲ.

12-4-69 ಮಿನರ್ವ ಕಾಲೇಜಿನಲ್ಲಿ ಶ್ರೀ ಸಿ. ಆರ್. ಬಸಪ್ಪ, ಚೇರ್‌ಮನ್, ರೈಲ್ವೆ ಸರ್ವಿಸು ಕಮಿಶನ್ ಇವರಿಂದ ಉದ್ಘಾಟಿಸಲ್ಪಟ್ಟಿತು. ಹೈಕೋರ್ಟ್ ಜಡ್ಜ ಹಾನರೆಬಲ್ ಶ್ರೀ ಕೆ. ಎಸ್. ವೆಂಕಟರಾಮನ್ ಇವರು ಅಧ್ಯಕ್ಷತೆವಹಿಸಿದ್ದರು. ಶ್ರೀ ಜಿ. ಲಕ್ಷ್ಮಿನಾರಾಯಣನ್— ಇಂಡಿಯನ್ ಬೇಂಕಿನ ಚೇರ್‌ಮನ್ ಇವರು ದಿ| ಬಿ. ಕೆ. ಸರ್ವೋತ್ತಮರಾಯರ ಭಾವಚಿತ್ರವನ್ನು ಅನಾವರಣಮಾಡಿದರು. ಡಾ| ಹಂಡೆ ಎಂ. ಎಲ್. ಎ., ಸರ್ವಶ್ರೀ ಎ. ಎನ್. ಪರಶುರಾಮನ್, ಜಿ. ವಸಂತ ಪೈ, ಸಂಪತ್ಕುಮಾರನ್, ಯು. ಆನಂದರಾವ್ ಮುಂತಾದವರು ಮಾತನಾಡಿದರು. ಶ್ರೀ ಆರೂರು ಶ್ರೀನಿವಾಸರಾಯರು ಬಂದ ಅತಿಥಿಗಳನ್ನು ಆಹ್ವಾನಿಸಿದರು. ಡಾ| ಬೈಲರು ವಂದನಾರ್ಪಣೆ ಗೈದರು. ಕುಮಾರಿ ಪೂನ ಎಲ್. ರಾಜಲಕ್ಷ್ಮಿಯವರ ಕೀರ್ತನೆ ಗಾಯನದೊಡನೆ ಕಾರ್ಯಕ್ರಮವು ಕೊನೆಗೊಂಡಿತು.

13-4-69, ಕುಮಾರಿ ಚಂದ್ರಕಲಾರವರ ನೃತ್ಯ. ಹೈಕೋರ್ಟ್ ಜಡ್ಜ ಶ್ರೀ ಎ. ಅಳಗಿರಿಸ್ವಾಮಿಯವರು ಅಧ್ಯಕ್ಷತೆವಹಿಸಿದ್ದರು.

14-4-69 ಕಲಾವತಿ ಕಲಾಕ್ಷೇತ್ರದವರ ಭಕ್ತಿಮಯ ಭಜನೆ, ಶ್ರೀ ವೆಂಕಟೇಶ್ವರ ಜಿನಂದ ಇವರ ಭಾಷಣವಿತ್ತು.

15-4-69 ಬೆಂಗಳೂರಿನ ಭಾರತೀಯ ವಿದ್ಯಾ ಸಂಸ್ಕೃತಿಯ ಶ್ರೀ ಕೆ. ಎನ್. ಹತ್ವಾರರವರು ಕನ್ನಡ ಭಾಷಾ ಸಂಸ್ಕೃತಿಯ ವಿಷಯ ಭಾಷಣ, ಪ್ರೊ| ಎಮ್. ಎಮ್. ಭಟ್ಟರು ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಈ ಸಂಸ್ಥೆಯ ಅಧ್ಯಾಪಕ ವಿದ್ಯಾರ್ಥಿಗಳಿಂದ ಮನೋರಂಜನ ಕಾರ್ಯಕ್ರಮ.

16-4-69 ಬೆಂಗಳೂರಿನ ಶ್ರೀ ಟಿ. ಆರ್. ಜಯರಾಯರ ಆಧುನಿಕ ಮತ್ತು ಪ್ರಾಚೀನ ಕಾವ್ಯ ವಾಚನವು ಶ್ರೀ ಬಿ. ರಾಮಮೂರ್ತಿಯವರ ಹಿಮ್ಮೇಳ ವಾದ್ಯಗಳಿಂದ ನಡೆಯಿತು.

17-4-69—16ನೇ ಕಾರ್ಯಕ್ರಮವೇ ಮುಂದುವರಿಯಿತು.

18-4-69 ಇಲ್ಲಿಯ ಸ್ಥಳೀಯ ಕಲಾವಿದರಿಂದ “ದಕ್ಕಿ ಕೊಟ್ಟ ಕೈ” ಎಂಬ ನಾಟಕವು, ಶ್ರೀ ಎ. ಆರ್. ನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು.

19-4-69 ಬೆಂಗಳೂರಿನ ಚಿತ್ರ ಕಲಾವಿದ ಶ್ರೀ ಎ. ಎಸ್. ಮೂರ್ತಿಯವರ ಜಗಜ್ಜಾತಕ ನಾಟಕವೂ ಅದೇ ವೃಂದದ ಶ್ರೀ ಶ್ರೀನಿವಾಸ ವರ್ಣನವರ ಚಿತ್ರಪ್ರದರ್ಶನವೂ ಆಕರ್ಷಣೀಯವಾಗಿತ್ತು.

20-4-69 ಬಸವೇಶ್ವರ ಹುಟ್ಟುದಿನವಾದ್ದರಿಂದ ಅವರ ಸ್ಮಾರಕವಾಗಿ ಆಚರಿಸಲ್ಪಟ್ಟಿತು. ಡಾ| ವಿ. ರಂಘವನ್ ಅವರು ಅಧ್ಯಕ್ಷತೆವಹಿಸಿದ್ದರು. ಮದ್ರಾಸಿನ ಡಾ. ಎ. ಎಸ್. ಕೆದಿಲಾಯ, ಶ್ರೀ ಸಿ. ಆರ್. ಬಸಪ್ಪ, ಇವರು ಬಸವೇಶ್ವರನ ವಿಷಯ ಮಾತನಾಡಿದರು. ವಿದ್ವಾನ್ ಶ್ರೀ ಬಿ. ರಾಮಮೂರ್ತಿಯವರ ವಚನ, ಸಂಗೀತ ಕೀರ್ತನೆಗಳೊಂದಿಗೆ ಇಂದಿನ ಕಾರ್ಯಕ್ರಮವು ಕೊನೆಗೊಂಡಿತು. ಶ್ರೀ ಶ್ರೀನಿವಾಸರಾಯರು ಕಮಿಟಿಯ ಪರವಾಗಿ, ಈ ಹಬ್ಬವನ್ನು ಸಾಂಗವಾಗಿ ನಡೆಸಲು ಸಹಾಯಮಾಡಿದ ಮಹನೀಯರಿಗೂ ಸಂಘಸಂಸ್ಥೆಗಳಿಗೂ ತಮ್ಮ ಧನ್ಯವಾದಗಳನ್ನರ್ಪಿಸಿದರು.

ಸ್ಥಾಪಕರ ದಿನಾಚರಣೆ

ಎಪ್ರಿಲ್ 30ರಂದು ಉಡುಪಿ ಲಾ ಕಾಲೇಜಿನಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನ್ನಿನ ಸಂಸ್ಥಾಪಕರ ದಿನಾಚರಣೆಯಲ್ಲಿ ಅಮೆರಿಕದ ಶ್ರೀ ಮುನಿಫಿಯವರು ಬರೆದ “ಪ್ರೈಸ್ ಆಫ್ ಮಣಿಪಾಲ್” ಎಂಬ ಗ್ರಂಥವನ್ನು ಉದ್ಘಾಟಿಸುತ್ತಾ ಡಾ|| ಶಿವರಾಮ ಕಾರಂತರು ಒಬ್ಬ ವ್ಯಕ್ತಿ ನಿರ್ಮಿಸಿದ ಸಂಸ್ಥೆ ಮತ್ತು ಅದರ ವಿಕಾಸವನ್ನು ನಮ್ಮ ಕಣ್ಣ ಮುಂದೇ ಡಾ| ಮಾಧವ ಪೈಗಳ ನಿದರ್ಶನದಲ್ಲಿ ಕಂಡುಕೊಂಡಿರುತ್ತೇವೆ, ಕಂಡ ಮಾಡಿದ್ದನ್ನು ಬೆಳೆಸಿಕೊಂಡು ಹೋದರೆ ಅದು ದೊಡ್ಡ ವಿಷಯವೇನಲ್ಲ, ತನ್ನ ಸ್ವಪ್ರಯತ್ನದಿಂದಲೇ ಮೇಲೆಬಂದರೆ ಉತ್ತಮ ಎಂದರು. ಮುಂದುವರಿಯುತ್ತಾ ಅವರು ವಿದೇಶೀ ಮಿತ್ರರಲ್ಲೊಬ್ಬರಾದ ಶ್ರೀ ಮುನಿಫಿಯವರು ಡಾ| ಮಾಧವ ಪೈಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ವಿವರವಾಗಿ ಈ ಗ್ರಂಥವನ್ನು ಬರೆದಿರುತ್ತಾರೆ. ಅವರ ಈ ಕೃತಿಯು ಪ್ರಶಂಸನೀಯವೆಂದರು. ಡಾ|| ಮಾಧವ ಪೈಗಳು ಮಾತನಾಡುತ್ತ ವಿದ್ಯೆ ರಾಷ್ಟ್ರದ ಬಹುದೊಡ್ಡ ಸಂಪತ್ತು ಮತ್ತು ಶಕ್ತಿ ಇದರ ವೃದ್ಧಿ ಕಾರ್ಯವನ್ನೇ ತಮ್ಮ ಗುರಿಯಾಗಿಟ್ಟುಕೊಂಡು ಎಕೆಡೆಮಿ ಕಾರ್ಯವೆಸಗುತ್ತಿದೆಯೆಂದರು. ಎಕೆಡೆಮಿಯ ವಿವಿಧ ಸಂಸ್ಥೆಗಳಿಂದ ಡಾ|| ಪೈಗಳವರಿಗೆ ಆರಂಭದಲ್ಲಿ ಹೂಹಾರಗಳನ್ನರ್ಪಿಸಲಾಯಿತು. ಇದೇ ಸಮಯದಲ್ಲಿ ನಿವೃತ್ತ ಅಧ್ಯಾಪಕರಿಗೆ ಪ್ರಶಸ್ತಿಪತ್ರ ವಿತ್ತರಿಸಲಾಯಿತು. ಅಧ್ಯಕ್ಷಸ್ಥಾನದಿಂದ ಶ್ರೀ ಟಿ. ಎ. ಪೈಗಳು ಮಾತನಾಡುತ್ತ ಡಾ| ಪೈಗಳ ದೂರಾಲೋಚನೆಯನ್ನು ಪ್ರಶಂಸಿಸಿ, ಎಕೆಡೆಮಿಯಿಂದ ಹೊರಬರುತ್ತಿರುವ 10,000 ವಿದ್ಯಾರ್ಥಿಗಳೂ “ಈ ಒಬ್ಬ ವ್ಯಕ್ತಿ”ಯ ಶಕ್ತಿ ಸಾಮರ್ಥ್ಯ ಹೊಂದಿದರೆಂದರೆ ದೇಶದ ಚಿತ್ರವೇ ಬದಲಾಗಬಹುದೆಂದರು. ಶ್ರೀ ಟಿ. ರಮೇಶ ಪೈಗಳು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿ ಧನ್ಯವಾದಗಳನ್ನರ್ಪಿಸಿದರು. ಪ್ರಾರಂಭದಲ್ಲಿ ಶ್ರೀ ಪಿ. ಶ್ರೀಪತಿ ಆಚಾರ್ಯರು ಸ್ವಾಗತಿಸಿ ಸಂಸ್ಥೆಯ ಪ್ರಗತಿಯನ್ನೂ ಕಾರ್ಯವನ್ನೂ ಚುಟುಕಾಗಿ ವಿವರಿಸಿದರು.

ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಗಳು

ಸಿಂಡಿಕೇಟ್ ಬ್ಯಾಂಕು ತನ್ನ ಶಾಖಾವಿಸ್ತರಣಾ ಕಾರ್ಯಕ್ರಮವನ್ನು ತ್ವರಿತಗತಿಯಿಂದ ಕೈಗೊಂಡಿದೆ. ಈ ವರ್ಷದ ಆರಂಭದಿಂದ ಎಪ್ರಿಲ್ ಅಂತ್ಯದ ವರೆಗೆ 25 ಶಾಖೆಗಳು ತೆರೆಯಲ್ಪಟ್ಟವು, ಮತ್ತು ಮೇಯಲ್ಲಿ ಹಲವು ತೆರೆಯಲ್ಪಡಲಿವೆ. ತೆರೆಯಲ್ಪಟ್ಟ 25 ಶಾಖೆಗಳಲ್ಲಿ 5 ಗೋವಾದಲ್ಲಿ, 10 ಮೈಸೂರು ರಾಜ್ಯದಲ್ಲಿ, 2 ಆಂಧ್ರಪ್ರದೇಶದಲ್ಲಿ, 4 ಮಹಾರಾಷ್ಟ್ರದಲ್ಲಿ, 2 ಕೇರಳದಲ್ಲಿ 2, ತಮಿಳುನಾಡಿನಲ್ಲಿ, 1 ಗುಜರಾತಿನಲ್ಲಿ ಮತ್ತೊಂದು ವೆಸ್ಟ್ ಬೆಂಗಾಲ್‌ನಲ್ಲಿಯೂ ಇವೆ.

2-5-69ರಲ್ಲಿ ಮಡಿಕೇರಿಯಲ್ಲಿ 3ನೇ ಸರ್ವ ಮಹಿಳಾ ಶಾಖೆಯು ತೆರೆಯಲ್ಪಟ್ಟದ್ದು ಬ್ಯಾಂಕಿನ ಒಟ್ಟು ಶಾಖೆಗಳು 280 ಆಗಿವೆ.

26-5-69ರಂದು 4 ಹೆಚ್ಚಿನ ಶಾಖೆಗಳು ಬೆಂಗಳೂರಿನಲ್ಲಿ ತೆರೆಯಲ್ಪಡಲಿವೆ.

ಟೈಲರ್‌ಶಾಪ್ಪ್ ಎಂಬ ಟಿಬೇಟನ ನಿರಾಶ್ರಿತರ ಪುನರ್ವಸತಿ ನೆಲೆಯಲ್ಲಿ ಒಂದು ಶಾಖೆಯನ್ನು ತೆರೆಯುವುದು ಶಾಖಾ ವಿಸ್ತರಣ ಕಾರ್ಯಕ್ರಮದ ವಿಶಿಷ್ಟ ಲಕ್ಷಣವಾಗಿದೆ.

ಸ್ವರ್ಣ ಸಂಸಾರ — ಸುಖದ ಆಗರ

ಮಿತ ಕುಟುಂಬ ಯೋಜನೆಗೆ ಸಹಕಾರಿಯಾಗಲೆಂಬ ಸದುದ್ದೇಶದಿಂದ

— ಇದೀಗ ಪ್ರಕಟವಾಗಿದೆ —

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ವಿವರಿಸುವ ಕೈಪಿಡಿ.

ಪ್ರತಿಯೊಂದರ ಬೆಲೆ 0—70 ಪೈಸೆ ಮಾತ್ರ. 0—90 ಸ್ಟ್ಯಾಂಪು ಕಳಿಸಿದರೆ ಯಾ M. O. ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಸಂಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಕುಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ಪುಡಿಮುತ್ತುಗಳು	1—50
ಕಂಚಗಜ್ಜಾಯ	2—00
ಮಧುವನ	3—00
ಪುಷ್ಪವನ	2—00
ಸರಸ್ವತಿ	1—50
ವಿಚಿತ್ರ ಕಳ್ಳಪೇಟೆ	1—50

ನವಭಾರತ ಪುಸ್ತಕ ಭಂಡಾರ, ಉಡುಪಿ.

ತ್ಯಾಗ—ಬಲಿದಾನಗಳಿಂದ ಪುನೀತಗೊಂಡ

ಜಾಲಿಯನ್‌ವಾಲಾಬಾಗ್

(ಜಾಲಿಯನ್‌ವಾಲಾಬಾಗಿನಲ್ಲಿ ಎಪ್ರಿಲ್ 13-1919ರಂದು ನಡೆದ ಹತ್ಯಾಕಾಂಡದ ಬಗ್ಗೆ ಮಹಾತ್ಮಾ ಗಾಂಧೀಜಿಯವರು ಬರೆದ ಲೇಖನದ ಮುಖ್ಯಾಂಶಗಳು:-)

ಜಾಲಿಯನ್‌ವಾಲಾಬಾಗ್ ನಮ್ಮದು ಎಂದು ಹೇಳಿಕೊಳ್ಳಲು ದೇಶಕ್ಕೆ ದೇಶವೇ ಹೆಮ್ಮೆ ಪಡುವದು. ಬಾಗ್ ... ...ಇದೆ. ಅದಕ್ಕೆ ಯಾರೊಡನೆಯೂ ವೈರತ್ವವಿಲ್ಲ. ನೂರಾರು ನಿರಪರಾಧಿಗಳ ಸಾವಿನ ಬಲಿದಾನದ ದಾರುಣ ಕಥೆಯನ್ನು ಅದು ಹೇಳುವದು. ಜನತೆಯ ದುಃಖದ ಪ್ರತೀಕವಾಗಿ, ಹಿಂದೂ-ಮುಸ್ಲಿಂ ಏಕತೆಯ ಕುರುಹಾಗಿ ಅದು ಮೆರೆಯುವದು.

ಜಾಲಿಯನ್‌ವಾಲಾ ಎಂಬುದು ಒಬ್ಬರ ಅಡ್ಡ ಹೆಸರು. ಈ ಬಾಗ್ (ತೋಟ) ಅವರಿಗೆ ಒಂದಾನೊಂದು ಕಾಲದಲ್ಲಿ ಸೇರಿತ್ತು. ಇದೊಂದು ಬೈಲು ಪ್ರದೇಶ. ಇಕ್ಕಟ್ಟಾದ ದಾರಿ ನಿಮ್ಮನ್ನು ಈ ಬಾಗಿಗೆ ತಂದು ಬಿಡುತ್ತದೆ. ಈ ಇಕ್ಕಟ್ಟಾದ ದಾರಿಯಿಂದಲೇ ಜನರಲ್ ಡಾಯರ್ ನುಸುಳಿ ಬಂದದ್ದು. ಈ ಬಾಗಿನಿಂದ ಹೋಗಲು ಇದೊಂದೇ ದಾರಿ. ಹೀಗಾಗಿ ಏಪ್ರಿಲ್ 13, 1919ರಂದು ಇಲ್ಲಿ ಸೇರಿದ್ದ ಜನರು ಬಲೆಯಲ್ಲಿ ಸಿಕ್ಕ ಪ್ರಾಣಿಗಳಂತೆ ಜವ ತೆತ್ತರು. ಮೂರು ನಾಲ್ಕು ಕಡೆಗಳಿಂದ ಈ ಬಾಗಿನಲ್ಲಿನ ಜನರು ಹೊರಗೆ ಹೋಗಲು ಸಾಧ್ಯವಿತ್ತು. ಆದರೆ ಈ ಕಡೆಗಳಿಂದ ಹೋಗುವ ಜನರು ಗೋಡೆಗಳನ್ನು ಹಾರಿ ಹೋಗಬೇಕಾಗಿತ್ತು. ಸಾವಿರಾರು ಜನರು ಗೋಡೆಯನ್ನು ಜಿಗಿದು ಜೀವ ಉಳಿಸಿಕೊಂಡರು. ಅಂತೂ ಈ ಬಾಗಿನಲ್ಲಿ ನಿರಪರಾಧಿಗಳ ರಕ್ತ ಹೊಳೆಯಾಗಿ ಹರಿಯಿತು. ಜಾಲಿಯನ್‌ವಾಲಾಬಾಗ್ ಇಂದು ಹುತಾತ್ಮರ ರಕ್ತದಿಂದ ಪುನೀತಗೊಂಡಿತು.

ಈ ಸಲದ (1920ರ) ಅಮೃತಸರದ ಕಾಂಗ್ರೆಸ್ ಅಧಿವೇಶನ ನಮ್ಮಲ್ಲಿ ಬಹಳಷ್ಟು ಜನರಿಗೆ ಯಾತ್ರೆಯ ಪುಣ್ಯವನ್ನು ನೀಡಿತು. ನೂರಾರು ಜನರು ಅಮೃತಸರಕ್ಕೆ ಬಂದವರು ನೇರವಾಗಿ ಜಾಲಿಯನ್‌ವಾಲಾಬಾಗಿಗೆ ಹೋಗಿ ಆ ಬಾಗಿನ ಹುಡಿಯನ್ನು ತಮ್ಮ ಹಣೆಗೆ ಹಚ್ಚಿಕೊಂಡರು. ಇನ್ನು ಕೆಲವರು ಬಾಗಿನ ಮಣ್ಣನ್ನು—ಹುತಾತ್ಮರು ಬಲಿದಾನಗೈದ ಸ್ಥಳದ ಹುಡಿಯನ್ನು ಬೊಗಸೆಯಲ್ಲಿ ಹಿಡಿದು ತಮ್ಮ ಸೆರಗಿನಲ್ಲಿ ಕಟ್ಟಿಕೊಂಡು ತಮ್ಮ ತಮ್ಮ ಊರುಗಳಿಗೆ ಒಯ್ದರು. ಭಾರತದ ಎಲ್ಲ ದಿಕ್ಕುಗಳಿಂದ ಬಂದ ಜನರು ತಮ್ಮ ಗೌರವವನ್ನು ಸಲ್ಲಿಸಿದರು.

ಓಡ್ವಾಯರ್

ಮೈಕೆಲ್ ಓಡ್ವಾಯರ್‌ನು ಪಂಜಾಬದ ಘಟನೆಗಳಿಗೆಲ್ಲ ತಾನೇ ಜವಾಬ್ದಾರನೆಂದು ಆರೋಪಿಸಿದ ಕೆಲವು ಪಂಜಾಬ ಯುವಕರು ಪಂಜಾಬಿನಲ್ಲಿ ದಂಡಿನ ಕಾಯ್ದೆ ಜಾರಿಯಲ್ಲಿ ಬರಲು ತಾನೇ ಕಾರಣ ಎಂದು ಒಪ್ಪಿಕೊಡಗಿದರು. ಆ ಸಹಕಾರ ಚಳುವಳಿಯನ್ನು ನಾನು ನಿಲ್ಲಿಸದೇ ಇದ್ದಿದ್ದರೆ, ಜಾಲಿಯನ್‌ವಾಲಾಬಾಗ್ ನರಮೇಧ ಆಗುತ್ತಿರಲಿಲ್ಲವೆಂದೇ ಅವರು ವಾದಿಸಿದರು. "ಪಂಜಾಬಿಗೆ ನೀವು ಬಂದರೆ, ನಿಮ್ಮನ್ನು ಕೊಂದೇ ಹಾಕುತ್ತೇನೆ" ಎಂದು ಸಹ ಕೆಲವು ಜನರು ಬೆದರಿಕೆ ಹಾಕಿದರು. ಆದರೆ ನನ್ನ ನಿಲುವು ಯೋಗ್ಯವಾದದ್ದು ಎಂದೇ ನನ್ನ ಹುತಾತ್ಮರ ಸಾಕ್ಷಿ ಹೇಳಿತು. ಯಾವ ಬುದ್ಧಿವಂತ ಭಾರತೀಯನೂ ನನ್ನ ನಿಲುವನ್ನು ಅಪಾರ್ಥ ಮಾಡಿಕೊಳ್ಳಲಾರ ಎಂದು ನಾನು ಭಾವಿಸಿದೆ.

ಹಂಟರ ಸಮಿತಿ

ದಂಡಿನಾಳಿಕೆಯಲ್ಲಿ ಪಂಜಾಬ ಸರಕಾರ ಎಸಗಿದ ಕೃತ್ಯಗಳ ವಿಚಾರಣೆಗೆಂದು ಅಷ್ಟರಲ್ಲೇ ಹಂಟರ್ ಸಮಿತಿ ನೇಮಿಸಿದ್ದನ್ನು ಘೋಷಿಸಲಾಯಿತು. ಶ್ರೀ ಸಿ. ಎಫ್. ಆ್ಯಂಡ್ರ್ಯೂಸರು ಆಗಲೇ ಪಂಜಾಬನ್ನು ತಲುಪಿದ್ದರು. ಪಂಜಾಬಿನಲ್ಲಿ ನಡೆದ ದೌರ್ಜನ್ಯವನ್ನು ವಿವರಿಸಿ ಅವರು ನನಗೆ ಕಾಗದ ಬರೆದಿದ್ದರು. ವೃತ್ತಪತ್ರಿಕೆಗಳಲ್ಲಿ ಬಂದ ವರದಿಗಳಿಗಿಂತ, ದಂಡಿನ ಆಳ್ವಿಕೆಯು ಪಂಜಾಬಿನಲ್ಲಿ ನಡೆಸಿದ್ದ ದೌರ್ಜನ್ಯ ಹೆಚ್ಚು ದಾರುಣವಾಗಿತ್ತು ಎಂಬುದು ನನಗೆ ಸ್ಪಷ್ಟವಾಗಿ ಗೊತ್ತಾಯಿತು. ಪಂಜಾಬಿಗೆ ಬೇಗನೆ ಬರಲು ಅವರು ನನಗೆ ಒತ್ತಾಯಿಸಿದರು. ಶ್ರೀ ಮಾಳವೀಯರೂ ನನಗೆ ಪಂಜಾಬಿಗೆ ಹೊರಡಬೇಕೆಂದು ತಂತೀ ಕಳಿಸಿದ್ದರು. ವೈಸರಾಯರಿಗೆ ನಾನು ತಂತೀ ಕಳಿಸಿ, "ನಾನು ಪಂಜಾಬಿಗೆ ಹೋಗಬಹುದೆ?" ಎಂದು ಕೇಳಿದೆ. ಕೆಲ ತಾರೀಕಿನ ನಂತರ ನಾನು ಪಂಜಾಬಿಗೆ ಹೋಗಬಹುದು ಎಂದು ವೈಸರಾಯರು ನನಗೆ ಉತ್ತರ ಕಳಿಸಿದರು.

ಹಂಟರ ಸಮಿತಿಯ ಎದುರು ನಾವು ಸಾಕ್ಷ್ಯ ಹೇಳಬಾರದು ಎಂದು ಹೇಗೆ ಏಕಾಭಿಪ್ರಾಯ ತಳೆದೆವು ಎಂಬುದು ಈಗ ಇತಿಹಾಸದ ಮಾತಾಗಿದೆ. ನಾವು ಹಾಗೇಕೆ ನಿರ್ಣಯ ಕೈಕೊಂಡೆವು ಎಂಬುದನ್ನು ಕಾಲಕಾಲಕ್ಕೆ ಪತ್ರಿಕೆಗಳ ಮೂಲಕ ನಾವು ಸ್ಪಷ್ಟಪಡಿಸಿದೆವು. ಇಷ್ಟು ಕಾಲಾವಧಿಯ ನಂತರ, ಹಿಂದಿನ ಸಂಗತಿಗಳ ಸಿಂಹಾವಲೋಕನ ಮಾಡಿದಾಗ, ಹಂಟರ ಸಮಿತಿಗೆ ಬಹಿಷ್ಕಾರ ಹಾಕಲು ನಾವು ನಿರ್ಧರಿಸಿದ್ದು ಉಚಿತ, ಯೋಗ್ಯ ಎಂದು ಈಗಲೂ ನನಗೆ ಅನಿಸುತ್ತದೆ.

ಕಾಂಗ್ರೆಸ್ಸಿನಿಂದ ವಿಚಾರಣೆ

ಹಂಟರ ಸಮಿತಿಗೆ ಬಹಿಷ್ಕಾರ ಹಾಕಿದ ಮೇಲೆ, ತನ್ನದೇ ಆದ ಅಧಿಕಾರೇತರ ವಿಚಾರಣಾ ಸಮಿತಿಯೊಂದನ್ನು ಕಾಂಗ್ರೆಸ್ ನೇಮಿಸಬೇಕೆಂದು ನಿರ್ಧರಿಸಲಾಯಿತು. ಈ ಸಮಿತಿಯಲ್ಲಿ ಪಂಡಿತ ಮೋತಿಲಾಲ ನೆಹರೂ, ದೀನಬಂಧು ಸಿ. ಆರ್. ದಾಸ್, ಅಬ್ಬಾಸ್ ತಯ್ಯಬ್ಜಿ, ಎಂ. ಆರ್. ಜಯಕರ ಮತ್ತು ನನ್ನನ್ನು ಸೇರಿಸಲಾಯಿತು. ಪಂಡಿತ ಮಾಳವೀಯರೇ ಈ ಸಮಿತಿಯನ್ನು ನಿಯಮಿಸಿದರು. ಸಮಿತಿಯನ್ನು ಸಂಘಟಿಸುವ ಕರ್ತವ್ಯ ನನ್ನ ಪಾಲಿಗೆ ಬಿದ್ದಿತು. ಅನೇಕ ಕಡೆಗಳಲ್ಲಿ ಸ್ವತಃ ನಾನೇ ಹೋಗಿ ವಿಚಾರಣಾ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಯಿತು. ಆ ಕಾಲಕ್ಕೆ ಪಂಜಾಬಿನ ಜನರನ್ನು ತೀರ ಸಮೀಪದಿಂದ ನೋಡಲು ನನಗೆ ಅವಕಾಶ ಸಿಕ್ಕಿತು. ಪಂಜಾಬಿನ ಅನೇಕಾನೇಕ ಹಳ್ಳಿಗಳ ವಿಚಾರಣಾ ಕಾರ್ಯದಲ್ಲಿ ನೆರವಾದರು. ಅತ್ಯಂತ ಪ್ರೀತಿ ವಿಶ್ವಾಸಗಳಿಂದ ಅವರು ಸಹಕರಿಸಿದರು. ನಾವು ಹೋದಕಡೆ ಎಲ್ಲ ಜನ ಬೆಂಬತ್ತಿ ಬಂದು, ತಮ್ಮ ಗೋಳಿನ ಕಥೆಯನ್ನು ನಿವೇದಿಸಿದರು.

ಪಂಜಾಬ್ ಜನತೆಯ ಮೇಲೆ ಬ್ರಿಟಿಶ್ ಸರಕಾರ ನಡೆಸಿದ ಅತ್ಯಾಚಾರದ ವಿಚಾರಣಾ ಕಾರ್ಯವನ್ನು ನಾನು ಮುಂದುವರಿಸಿದಂತೆ, ಬ್ರಿಟಿಶ್ ನಿರಂಕುಶ ಪ್ರಭುತ್ವದ ದಬ್ಬಾಳಿಕೆಯ ಸ್ಪಷ್ಟ ಸ್ವರೂಪವು ನನಗೆ ವೇದ್ಯವಾಯಿತು. ಕಾಂಗ್ರೆಸ್ ನಡೆಸಿದ ವಿಚಾರಣಾ ಸಮಿತಿಯ ವರದಿಯನ್ನು ನಾನೇ ಸಿದ್ಧಗೊಳಿಸಬೇಕೆಂದು ನಿರ್ಧರಿಸಲಾಯಿತು. ಪಂಜಾಬ ಜನತೆಯ ಮೇಲೆ ಆದ ಅತ್ಯಾಚಾರದ ಚಿತ್ರವು ಯಾರಿಗಾದರೂ ಬೇಕಾಗಿದ್ದರೆ ಅವರು ನಮ್ಮ ಈ ವರದಿಯನ್ನು ಅಭ್ಯಸಿಸಲಿ. ಈ ವರದಿಯಲ್ಲಿ ಎಲ್ಲಿಯೂ ಅತಿಶಯೋಕ್ತಿಯ ಒಂದು ನುಡಿಯೂ ಇಲ್ಲ ಎಂದು ನಾನು ಇಲ್ಲಿ ಸಾರಬಯಸುತ್ತೇನೆ. ನಮ್ಮ ಮಾತನ್ನು ಪುಷ್ಟೀಕರಿಸಲು ಪುರಾವೆಗಳನ್ನು ಒದಗಿಸಿದ್ದೇವೆ. ಯಾವ ಮಾತಿನ ಬಗ್ಗೆ ನಮಗೆ ಅನುಮಾನ ಬಂದಿದೆಯೋ ಆ ಯಾವ ಮಾತನ್ನೂ ವರದಿಯಲ್ಲಿ ಸೇರಿಸಲಿಲ್ಲ. ಕೇವಲ ಸತ್ಯ, ಕಟು ಸತ್ಯವನ್ನು ಬಯಲಿಗೆಳೆಯುವದೇ ನಮ್ಮ ಉದ್ದೇಶವಾಗಿತ್ತು. ತನ್ನ ಸತ್ತೆಯನ್ನು ಉಳಿಸಿಕೊಳ್ಳಲು ಬ್ರಿಟಿಶ್ ಸರಕಾರ ಎಂಥ ಹೀನ ಅಮಾನುಷ ಕೃತ್ಯಗಳನ್ನು ಎಸಗಿತು ಎಂಬುದನ್ನು ತೋರಿಸಲು ನಮ್ಮ ವರದಿ ಪ್ರಾಮಾಣಿಕ ಪ್ರಯತ್ನ ಮಾಡಿದೆ. ನನ್ನ ಮಟ್ಟಿಗೆ ಹೇಳುವದಾದರೆ, ನಮ್ಮ ವರದಿಯ ಯಾವ ಅಂಶವನ್ನು ಇದುವರೆಗೂ ಸುಳ್ಳೆಂದು ಯಾರೂ ಸಿದ್ಧಮಾಡಿಲ್ಲ.

ಪತ್ರ

(ಎರಡನೇ ಪುಟದಿಂದ)

ಬೆಂಗಳೂರು
25-2-1969

ಮಾನ್ಯ ಮಿತ್ರ ವಿಠಲನಿಗೆ ನಮಸ್ಕಾರಗಳು.

ಏಕವಚನದಲ್ಲಿ—ವಿಠಲನಿಗೆ—ಎಂದು ಹೇಳಲು ಮೊದಲು ಹೆದರಿಕೆ ಆದ ಕಾರಣ ಶ್ರೀರಜ ವಿಠಲರಾಯರಿಗೆ ಎಂದು ಬರೆದೆ. ಈಗ ನೀನೇ ಕಿಟ್ಟಣ್ಣ ಎಂದು ನೆನಪಿನಿಂದ ಬರೆದುದರಿಂದ ನನಗೆ ನಿನ್ನನ್ನು ಏಕವಚನದಿಂದ ಕರೆಯಲು ಧೈರ್ಯ ಬಂತು.

ನಿನ್ನ ಹಿಂದಿನ ಪತ್ರ ಬಂದು ತಲುಪಿದೆ. ನನಗೂ ನಂಜುಂಡನಿಗೂ ಒಂದು ಶರ್ತ ಬಿದ್ದಿತ್ತು. ನಾನು ಹೇಳಿದೆ—ಮುಂಬಯಿಯಲ್ಲಿ 'ಪಾಗಡಿ' ಸಿವಾಯ ಮನೆ-ಅಂಗಡಿ ಸಿಗುವುದಿಲ್ಲ. ಪಾಗಡಿ ಇಲ್ಲದಿದ್ದರೆ ಯಾವ ಕೆಲಸವಾಗುವುದಿಲ್ಲ. ಹೆಚ್ಚೇಕೆ ಜನರ ಪಂಚಾಯಿತೇ ಆಗುವುದಿಲ್ಲ. ಹಣ ಕಂಡರೆ ಮಾತ್ರ ಹೆಣವೂ ಬಾಯಿ ಬಿಡುತ್ತದೆ ಎಂಬ ಗಾದೆಯಿಲ್ಲವೇ? ಹಾಗೆ—ಆದಕ್ಕೆ ನಂಜುಂಡ ಎಂದ—ಆದಾಗ್ಯೂ ನಮ್ಮ ವಿಠಲರಾವ್ ಅಂತಹ ವ್ಯಕ್ತಿ ಆಗಲಾರ. ಬೇಕಾದರೆ ನನಗೂ ನಿನಗೂ ಶರ್ತ.

ನಾನೆಂದೆ—ಎಷ್ಟಕ್ಕೆ ಶರ್ತ? ಒಂದೆರಡು ರೂಪಾಯಿಯಾದರೆ ಮಜಾ ಇರುವುದಿಲ್ಲ. ಕನಿಷ್ಠ ನೂರು ರೂಪಾಯಿ ಆದರೂ....

ನಂಜುಂಡ, "ನೂರೇಕೆ? ಇನ್ನೂರು! ವಿಠಲರಾವ್ ಖಂಡಿತ ನಿನಗೆ ಮನೆ ಹುಡುಕಿ ಕೊಡುವನು. ಒಂದು ಪೈಸೆ ಪಾಗಡಿ ತೆರಬೇಕಾಗಿಲ್ಲ" ಎಂದ.

ನನಗೆ ಮಗಳೂ ಇಲ್ಲ—ಅಳಿಯನೂ ಇಲ್ಲ. ಹೆಚ್ಚೇಕೆ, ಮದುವೆಯೇ ಆಗಿಲ್ಲ. ನಿನ್ನ ಒಪ್ಪಿಗೆ ಪತ್ರ ಬಂದೊಡನೆ ನಂಜುಂಡನಿಂದ ಇನ್ನೂರು ರೂಪಾಯಿ ಪಡೆದುಕೊಂಡು ಶರ್ತದಲ್ಲಿ ಜಯಶಾಲಿ ಆಗಿದ್ದೇನೆ. ನಾನು ಗದ್ದ ಅವಸರದಲ್ಲಿ ನಿನಗೆ ಪತ್ರ ಬರೆಯಲು ತಡವಾದುದಕ್ಕೆ ಕ್ಷಮಿಸು.

ಇತಿ ನಮಸ್ಕಾರಗಳು.

ನಿನ್ನ ಬಾಲ್ಯದ ಸ್ನೇಹಿತ,

ಕಿಟ್ಟಣ್ಣ.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 28337 Grams: HOST SATKAR
2 29887

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby

Large airy Rooms, Roof garden

Quiet, Calm Atmosphere

Personalised Service.

NAVAYUGA 8—5—1969
Registered with the Registrar
of News Papers for India
under No. R. N. 3546/'57

REGD: No: B. G. 176
LICENCE No. 33
Licensed to Post without Prepayment

ಸಹಜೀವನದ ಪಾಠ

(ಪತ್ರಿಕೋದ್ಯಮಿ ಶ್ರೀ ಎಸ್. ಆರ್. ಟಿಕೇಕರ ಅವರು, ಮಹಾತ್ಮ ಗಾಂಧೀಜಿಯವರು ಕೈಕೊಂಡ ದಂಡೀಯಾತ್ರೆಯ ಕೆಲವು ಮುಖಗಳನ್ನು ಈ ಲೇಖನದಲ್ಲಿ ವಿವರಿಸಿದ್ದಾರೆ)

ಭಾರತದ ಸ್ವಾತಂತ್ರ್ಯ ಯುದ್ಧದಲ್ಲಿ ದಂಡೀ ಯಾತ್ರೆ ಒಂದು ಮೈಲುಗಲ್ಲು.

ಸಾಬರ್‌ಮತಿಯಿಂದ ದಂಡೀಗೆ ಕಾಲ್ನಡಿಗೆಯಿಂದ ಸಾಗಬೇಕು. ಕ್ರಮಿಸಬೇಕಾದ ದಾರಿ 241 ಮೈಲಿ ಉದ್ದ. ಕಾರ್ಯಕ್ರಮದಂತೆ ದಂಡೀ ಯಾತ್ರೆ ಬೆಳಗಿನ ಉಪಹಾರ ಮುಗಿದೊಡನೆ ಪ್ರಾರಂಭವಾಯಿತು. ಉರಿಯುತ್ತಿರುವ ಬಿಸಿಲು, ಯಾತ್ರಾರ್ಥಿಗಳು ಒಂದೇ ಸವನೆ ದಾರಿ ಕ್ರಮಿಸುತ್ತಿದ್ದಾರೆ. ಮಹಿ ನದಿಯನ್ನು ತಲುಪಿದ್ದಾರೆ. ರಾತ್ರಿಯಲ್ಲಿ ಮಹೀ ನದಿಯ ಪ್ರವಾಹ ಇಳಿಯುವದು. ಕಾರಣ ರಾತ್ರಿಯವರೆಗೆ ನದಿಯ ದಂಡೆಯ ಮೇಲೆ ತಳ ಊರಬೇಕು.

ಸ್ವಯಂಸೇವಕರಿಗೆಲ್ಲ ಹೊಸ ಅನುಭವ. ಹೆಗಲ ಮೇಲೆ ತಮ್ಮ ಸಾಮಾನುಗಳ ಗಂಟನ್ನು ಹೊತ್ತುಕೊಂಡು ಸಾಗಬೇಕು. ಹಳ್ಳಿಗಾಡಿನ ಧೂಳಿಮಯ ಪ್ರದೇಶದಲ್ಲಿ, ಸುಡುಬಿಸಿಲಿನಲ್ಲಿ ನಡೆದುಕೊಂಡು ಹೋಗಬೇಕು. ಇಬ್ಬಿಬ್ಬರಂತೆ ಕೈಹಿಡಿದು ಸಾಲಿನಲ್ಲಿ ಶಿಸ್ತಿನಿಂದ ಸಾಗಬೇಕು. ಯಾತ್ರಾರ್ಥಿಗಳಿಗೆ ಬಿಸಿಲಿನ ಬೇಗೆಯ ಪರಿವೆಯಿಲ್ಲ. ಅವರ ದೃಢ ನಿರ್ಧಾರಕ್ಕೆ ಯಾವ ಅಡೆತಡೆ ಇಲ್ಲ.

ಒಂದು ಆಶ್ರಮವೇ ಚಲಿಸುತ್ತಿರುವ ದೃಶ್ಯ. ಸ್ವಯಂಸೇವಕರಿಗೆ ದಣಿವೆನಿಸ ತೊಡಗಿದೆ. ಆನಂದ ಎಂಬ ಊರಲ್ಲಿ ವಿಶ್ರಮಿಸಿಕೊಳ್ಳಲು ಗಾಂಧೀಜಿಯವರಿಂದ ಆದೇಶ.

ಪೂರ್ವಸಿದ್ಧತೆ

ಗುಜರಾತ ವಿದ್ಯಾಪೀಠಕ್ಕೆ ಸೇರಿದ ಸುಮಾರು ಹತ್ತು-ಹನ್ನೆರಡು ವಿದ್ಯಾರ್ಥಿಗಳು ಆಶ್ರಮದ ವತಿಯಿಂದ ದಂಡಿಯತ್ತ ಮೊದಲೇ ಹೊರಟುಹೋಗಿ ಪೂರ್ವಸಿದ್ಧತೆಯಲ್ಲಿ ತೊಡಗಿದ್ದರು. ಇವರು ದಂಡೀ ಯಾತ್ರೆಯ ಯಾತ್ರಾರ್ಥಿಗಳ ಗುಂಪು ಬರುವದಕ್ಕಿಂತ ಮೊದಲು ಒಂದು ದಿನ ಮುಂಚೆ ಕಾರ್ಯಕ್ರಮದ ಪಟ್ಟಿಯಲ್ಲಿದ್ದ ಸ್ಥಳಗಳನ್ನು ಮುಟ್ಟಿರುತ್ತಿದ್ದರು. ತಂಗಿಕೊಳ್ಳಬೇಕಾದ ಹಳ್ಳಿಯ ಸ್ಥಳದಲ್ಲಿ ಸೂಕ್ತ ಜಾಗೆಯನ್ನು ಆರಿಸಿ, ಹಳ್ಳಿಗರಿಗೆ ಯಾತ್ರೆಯ ಉದ್ದೇಶ ತಿಳಿಸಿ ಅವರ ಸಹಕಾರವನ್ನು ಪಡೆಯುವ ಕೆಲಸ ಈ ಮುಂಗಡ ತಂಡದವರ ಕಾರ್ಯವಾಗಿತ್ತು.

ಆಶ್ರಮದಲ್ಲಿ ಬೆಳೆದ ತರಕಾರಿಯನ್ನು ಬೇಯಿಸಿ, ಯಾವ ಮಸಾಲೆಯನ್ನು ಬೆರಸದೆ, ಊಟಕ್ಕೆ ಬಳಸಲಾಗುತ್ತಿತ್ತು. ಈರುಳ್ಳಿ, ಬೆಳ್ಳುಳ್ಳಿಗಳನ್ನು ವರ್ಜಿಸಲಾಗಿತ್ತು. ಗಾಂಧೀಜಿಯವರ ಮೆಚ್ಚಿನ ಸಾದಾ ಊಟ ಅದಾಗಿತ್ತು. ಬೆಳಗ್ಗೆ ರೊಟ್ಟಿಯ ಊಟ ಮಾಡಿ ಸ್ವಯಂಸೇವಕರು ಮುಂದಿನ ಪ್ರಯಾಣ ಬೆಳೆಸುವರು. ಮಧ್ಯಾಹ್ನ ಹತ್ತಿರದ ಊರಲ್ಲಿ ಊಟಕ್ಕಾಗಿ ನಿಲ್ಲುವರು. ಬಾವಿಗಳ ನೀರನ್ನು ಜಗ್ಗಿ ಸ್ವಯಂಸೇವಕರು ಸಹಾಯ ಮಾಡುವರು. ಬಾಲ ಕಾಲೇಲಕರ ಇವರು ಕ್ಷೌರದ ಕೆಲಸ ಮಾಡಲೂ ಇವರು ಸಿದ್ಧ. ಇವರು ಕಾಕಾ ಕಾಲೇಲಕರರ ಮಗ. ಇವರು ಸದ್ಯಕ್ಕೆ ಭಾರತ ಸರಕಾರಕ್ಕೆ ಕೈಗಾರಿಕಾ ವಿಷಯದ ಸಲಹೆಗಾರರಾಗಿದ್ದಾರೆ.

ವಿದೇಶಿ ವಸ್ತ್ರಗಳಿಗೆ ಬಹಿಷ್ಕಾರ

ಸ್ವಯಂಸೇವಕರಿಗೆ ಸಾಬೂನನ್ನು ಹಂಚಲಾಗುತ್ತಿತ್ತು. ಇದನ್ನು ಹಳ್ಳಿಗರೇ ನೀಡಿದ್ದರು. ಆದರೆ ಇದು ವಿದೇಶಗಳಿಂದ ಆಮದು ಮಾಡಿದ ಸಾಬೂನಾಗಿತ್ತು. ಬಾಪೂಜಿಗೆ ಈ ವಿಷಯವನ್ನು ತಿಳಿಸಲಾಯಿತು. ವಿದೇಶಿ ವಸ್ತ್ರಗಳ ಬಗ್ಗೆ ಸ್ವಯಂಸೇವಕರ ತಿರಸ್ಕಾರ ಭಾವನೆಯನ್ನು ಗಾಂಧೀಜಿ ಮೆಚ್ಚಿದರು, "ಆದರೆ ಸದ್ಯಕ್ಕೆ ನಾವು ವಿದೇಶಿ ವಸ್ತ್ರಗಳನ್ನು ಮಾತ್ರ ಬಹಿಷ್ಕರಿಸಿದ್ದೇವೆ" ಎಂದು ಗಾಂಧೀಜಿ ಹೇಳಿದರು. ಗಾಂಧೀಜಿಯವರು ಸಾಧ್ಯವಿದ್ದಷ್ಟು ಸ್ವದೇಶಿ ವಸ್ತುಗಳನ್ನೇ ಬಳಸಲು ಅಪೇಕ್ಷಿಸಿದರು. 'ಕಿಟ್ಸನ್' ಎಂಬ ವಿದೇಶೀ ಕಂದೀಲನ್ನು (ಲಾಂಟನ) ಗಾಂಧೀಜಿ ಉಪಯೋಗಿಸುತ್ತಿದ್ದರು. ಸ್ವದೇಶಿ ಕಂದೀಲು ಇದೆಯೇ ಎಂದು ಅವರು ಒಮ್ಮೆ ಪ್ರಶ್ನಿಸಿದರು. "ಇದೆ. ಓಗ್ಲೇ ವಾಡಿಯ ಪ್ರಭಾಕರ ಛಾಪಿನದು" ಎಂದು ಸ್ವಯಂಸೇವಕನೊಬ್ಬನಿಂದ ಬಂದ ಉತ್ತರ. ಗಾಂಧೀಜಿಯವರಿಗೆ ಪರಮಾನಂದ ನೀಡಿತು. "ಪ್ರಭಾಕರ" ಛಾಪಿನ ಕಂದೀಲನ್ನೇ ಉಪಯೋಗಿಸಲು ಗಾಂಧೀಜಿ ಎಲ್ಲರಿಗೂ ಕರೆ ಇತ್ತರು.

ಪತ್ರಿಕಾಕರ್ತರು

ಮೂರು ಜನ ಪತ್ರಿಕಾಕರ್ತರು ಯಾತ್ರೆಯ ಜನರೊಡನೆ ಸಾಗಲು ತಮಗೆ ಅನುಮತಿ ನೀಡಬೇಕೆಂದು ಗಾಂಧೀಜಿಯವರನ್ನು ಕೇಳಿಕೊಂಡರು. ಶ್ರೀ ಬಿ. ಆರ್. ಧುರಂಧರ (ನವಾಕಾಳ, ಮುಂಬೈ), ಶ್ರೀ ವಾಮನ ಕಬಾಡಿ (ಫ್ರೀಪ್ರೆಸ್ ಜರ್ನಲ್, ಮುಂಬೈ) ಮತ್ತು ಶ್ರೀ ಎಸ್. ಆರ್. ಟೀಕೇಕರ (ಕೇಸರಿ, ಪುಣೆ) ಇವರು ಮಾತ್ರ ಸ್ವಯಂಸೇವಕರೊಂದಿಗೆ ಸಾಗಲೂ, ಅವರೊಂದಿಗೆ ಊಟಮಾಡಲೂ ತಂಗಲೂ ಅನುಮತಿಯನ್ನು ಪಡೆದಿದ್ದರು. ಆದರೆ ಅವರಿಗೆ ಊಟ 'ಪುಕಟ್ಟಾ' [illegible]. ದಿನವೂ ಇಷ್ಟು ಎಂದು ಗೊತ್ತುಮಾಡಿದ ಹಣವನ್ನು ಅವರು ನೀಡಬೇಕು ಎಂದು ಗಾಂಧೀಜಿ ಷರತ್ತು ಹಾಕಿದರು. ಆದರೆ ಪತ್ರಿಕಾಕರ್ತರ ಯೋಗಕ್ಷೇಮವನ್ನು ಕೇಳಲು ಗಾಂಧೀಜಿ ಮರೆಯುತ್ತಿರಲಿಲ್ಲ.

ಸಂಕ್ಷಿಪ್ತ ಭಾರತ

ದಂಡೀಯಾತ್ರೆ ಸಂಕ್ಷಿಪ್ತ ಭಾರತವನ್ನೇ ಹೋಲುತ್ತಿತ್ತು. ಎಲ್ಲರೂ ಖಾದೀ ಸಮವಸ್ತ್ರ ಧರಿಸಿದ್ದರು. ಆದರೆ ಯಾತ್ರಾರ್ಥಿಗಳು ಆಡುವ ಬೇರೆಬೇರೆ ಭಾಷೆಗಳು ಯಾತ್ರೆಯ ಸಮಯದಲ್ಲಿ ನಗೆಯ ಬುಗ್ಗೆಯನ್ನು ಸೃಜಿಸುತ್ತಿದ್ದವು. ಒಬ್ಬರಿಗೆ ಉಪ್ಪು ಬೇಕಾಗಿತ್ತು. ಅವರು ತಮ್ಮ ಭಾಷೆಯಲ್ಲಿ ಕೇಳಿದರು. ಮತ್ತೊಂದು ಭಾಷೆಯ [illegible] ಎಂಬ ಶಬ್ದಕ್ಕೆ ಅವರ ಉಚ್ಚಾರ ಹೋಲುತ್ತಿತ್ತು. ಬಹಳಷ್ಟು ಸ್ವಯಂಸೇವಕರು ನಕ್ಕರು. ಒಬ್ಬರು ತಮ್ಮ ಕಳೆದುಹೋದ 'ಧೋತಿ' [illegible] ಹುಡುಕುತ್ತಿದ್ದರು. ಮತ್ತೊಂದು [illegible] ಸ್ತ್ರೀಯ ವಸ್ತ್ರವಿಶೇಷಕ್ಕೆ 'ಧೋತಿ' ಎಂಬ ಹೆಸರು. ನಗೆಯ ಹೊನಲು [illegible]ಯಿತು.

ಸಹಜೀವನ ನಡೆಸಲು ದಂಡೀಯಾತ್ರೆ ಮಾರ್ಗ ತೋರಿಸಿಕೊಟ್ಟಿತು. ಶಿಬಿರ ಜೀವನದಲ್ಲಿ ಅನೇಕ ಅಡಚಣೆಗಳು, [illegible] ಎಲ್ಲರೂ ಕೂಡಿಕೊಂಡು ಸಾಗುವ ಮನೋಧರ್ಮವನ್ನು ಪಾಲಿಸಿ [illegible] ಕೊಟ್ಟರು.

ಮಹಾತ್ಮರೊಡನೆ ಜತೆಯಲ್ಲಿ ಸಾಗುವುದು, ಅವರ ಸಾನ್ನಿಧ್ಯದ ಲಾಭ ಪಡೆಯುವುದು ಒಂದು ಅಪೂರ್ವ ಭಾಗ್ಯ. ಆ ಗೌರವ ದಂಡೀಯಾತ್ರೆಯ ಸ್ವಯಂಸೇವಕರಿಗೂ, ಪತ್ರಿಕಾಕರ್ತರಿಗೂ ದೊರೆಯಿತು.

ಕಾರ್ಯಕರ್ತರಿಗೆ

ನಾವು ನಮ್ಮ ಕೆಲಸಕ್ಕೆ ನಮ್ಮ ಜೀವನವನ್ನೇ ರೂಪಿಸಿಕೊಳ್ಳಬೇಕು! ಗ್ರಾಮಗಳಲ್ಲಿ ನಾವು ನಮ್ಮ ಜೀವನ ನೆಲೆಗೊಳಿಸಬಯಸುತ್ತಿದ್ದರೆ, ನಮ್ಮಲ್ಲಿ ನವಜೀವನ ತಂದುಕೊಳ್ಳಬೇಕಾಗುತ್ತದೆ. "ನವಜೀವನ" ಇದು ಗಾಂಧೀಯವರು ಕೊಟ್ಟ ಶಬ್ದ. ರವೀಂದ್ರನಾಥ ಟಾಗೋರರೂ "ನವಜೀವನ ರಚಿಸಬೇಕು" ಎಂದು ಹೇಳಿದ್ದಾರೆ. ಇದೇ ಸಮಾಜದ ಹಳೇ ರೂಪವನ್ನು ಬದಲಿಸಿ ಅದಕ್ಕೆ ಹೊಸರೂಪ ಕೊಡಬೇಕೆಂದು ನಾವು ಯೋಚಿಸುತ್ತಿದ್ದೇವೆ. ಆದ್ದರಿಂದ ನಾವೂ ಈ ಹೊಸ ರೂಪ ಹೊಂದಲೇಬೇಕು. ನಾವು ಹಳೆಯ ರೂಪದಲ್ಲೇ ಇದ್ದುಬಿಟ್ಟರೆ ಸಮಾಜಕ್ಕೆ ಹೊಸ ರೂಪ ಕೊಡಲಿಕ್ಕೆ ನಮ್ಮಿಂದ ಹೇಗೆ ಸಾಧ್ಯ?

—ವಿನೋಬಾ

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies
ಡಾ| ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಸ್ವಯಂವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲಿ ಮದ್ದು ಮಾಡುವ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳಿಗೆ ಬರೆಯಿರಿ —

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ:
ಎಂ. ವೆಂಕಟರಾವ್, ಹಂಪನಕಟ್ಟೆ, ಮಂಗಳೂರು-1

Edited, Printed & Published by K. H. Shetty, at the Navayuga Press, Udipi, S. India.

ನವಯುಗ

15—5—1969

೨೦
ಪೈಸೆ

ದಕ್ಷಿಣ ಆಫ್ರಿಕಾ: ಸತ್ಯಾಗ್ರಹದ ನಾಂದಿ

ಲೇಖಕರು: ಶ್ರೀಮತಿ ಪುಷ್ಪಾರಾಣಿ

೧೮೯೩ ಮೇ ತಿಂಗಳಲ್ಲಿ ಮೆಚ್ಚಿನ ಮಡದಿ ಮಕ್ಕಳನ್ನು ಬಿಟ್ಟು ಆಫ್ರಿಕೆಗೆ ಬಂದಾಗ ಗಾಂಧೀಜಿಯವರಿಗೆ ಕೇವಲ ೨೪ ವರ್ಷ. ಭಾರತೀಯ ಮುಸ್ಲಿಂ ದಾದಾ ಅಬ್ದುಲ್ ಸೇಠ ಅವರ ಒಂದು 'ಕೇಸನ್ನು' ನಡೆಸಲು ಗಾಂಧೀಜಿಯವರು ವಕೀಲರಾಗಿ ಬಂದಿದ್ದರು. ಆಫ್ರಿಕೆಯಲ್ಲಿ ಒಂದು ವರ್ಷ ಮಾತ್ರ ಇರಬೇಕೆಂಬ ತಯಾರಿಯಿಂದ ಗಾಂಧೀಜಿ ಬಂದರು. ಆದರೆ ಅಲ್ಲಿ ಅವರು ಉಳಿದದ್ದು ಎರಡು ದಶಕಗಳ ವರೆಗೆ (೧೯೧೪ರ ವರೆಗೆ). ಆಫ್ರಿಕದಲ್ಲಿನ ವಾಸ್ತವ್ಯ ಗಾಂಧೀಜಿಯವರ ಜೀವನದಲ್ಲಿ ಬೃಹತ್ ಬದಲಾವಣೆಯನ್ನು ತಂದಿತು. ನಿಜವಾಗಿ ಹೇಳಬೇಕೆಂದರೆ, ಹೊಸ ಗಾಂಧೀಜಿಯವರು ಹುಟ್ಟಿದ್ದು ದಕ್ಷಿಣ ಆಫ್ರಿಕೆಯಲ್ಲಿಯೇ.

ಗಾಂಧೀಜಿಯವರು ದರ್ಬಾನಕ್ಕೆ ಬಂದಿಳಿದ ಕೂಡಲೇ ಅವರಿಗೆ ಸಂಕಟಗಳ ಮೇಲೆ ಸಂಕಟಗಳು ಬಂದು ಎರಗಿದವು. ಆಗ ದಕ್ಷಿಣ ಆಫ್ರಿಕೆಯಲ್ಲಿ ವರ್ಣ, ವರ್ಗ, ಧರ್ಮ ಮತ್ತು ವೃತ್ತಿಗೆ ಸಂಬಂಧಿಸಿದ ವಿಷಯದಲ್ಲಿ ಪೂರ್ವಗ್ರಹದೂಷಿತ ವಾತಾವರಣ ಹಬ್ಬಿತ್ತು. ಜನಾಂಗ ದ್ವೇಷದ ವಾತಾವರಣ ತುಂಬಿತ್ತು.

ಆದರೆ ಗಾಂಧೀಜಿಯವರು ಇಂತಹ ವಾತಾವರಣದಿಂದ ವಿಚಲಿತರಾಗಲಿಲ್ಲ. ಪರಿಸ್ಥಿತಿಯನ್ನು ಎದುರಿಸಲು ಟೊಂಕ ಕಟ್ಟಿದರು.

ಏಕೈಕ ನೇತಾರ

ದಕ್ಷಿಣ ಆಫ್ರಿಕೆಗೆ ಬಂದ ಮೇಲೆ ಗಾಂಧೀಜಿಯವರು ಕೂಡಲೇ ಸಭೆಗಳನ್ನು ಏರ್ಪಡಿಸಿದರು. ಕೇವಲ ಸತ್ಯವನ್ನೇ ನುಡಿಯಬೇಕೆಂದು ಜನರಿಗೆ ಒತ್ತಾಯ ಮಾಡಿದರು. ಮನೆಯ ಒಳಗೆ ಹೊರಗೆ ನೈರ್ಮಲ್ಯದ ಜೀವನ ನಡೆಸಲು ಕೇಳಿಕೊಂಡರು. ಜಾತಿಮತ ಪಂಥಗಳ ಭೇದವನ್ನು ಮರೆಯಹೇಳಿದರು. ದಕ್ಷಿಣ ಆಫ್ರಿಕೆಯ ಭಾಷೆಗಳನ್ನು ಕಲಿಯಬೇಕೆಂದು ಬೋಧಿಸಿದರು.

ಭಾರತೀಯರಿಗೆ ಮತ ಚಲಾಯಿಸುವ ಹಕ್ಕು ಇರಲಿಲ್ಲ. ಗಾಂಧೀಜಿಯವರ ಅವಿಶ್ರಾಂತ ಹೋರಾಟದ ಫಲವಾಗಿ ೧೮೯೭ರಲ್ಲಿ ಭಾರತೀಯರು ಮೊದಲ್ಗೊಂಡು ಎಲ್ಲ ನಾಗರಿಕರು ಮತದಾನದ ಹಕ್ಕನ್ನು ಪಡೆದರು. ಇಂತು ಗಾಂಧೀಜಿ ದಕ್ಷಿಣ ಆಫ್ರಿಕೆಯಲ್ಲಿನ ಭಾರತೀಯರ ಏಕಮೇವಾದ್ವಿತೀಯ ನೇತಾರರಾದರು.

ಗಾಂಧೀಜಿಯವರು ಎದುರಾಳಿಯ ಸದ್ವಿವೇಕ ಬುದ್ಧಿಗೆ ಮುಟ್ಟುವಂತೆ ಮಾಡಿದರು. ಅಹಿಂಸೆಯನ್ನು ಪ್ರತಿಪಾದಿಸಿದರು. ಸತ್ಯವನ್ನು ಅಸ್ತ್ರವನ್ನಾಗಿ ಪರಿವರ್ತಿಸಿದರು. ಆಗ ಗಾಂಧೀಜಿಯವರಿಗೆ ಪರಿಮಿತ ಗುರಿ ಇತ್ತು. ಕಪ್ಪು ಜನಾಂಗದ ವಿರುದ್ಧ ಬಿಳಿಯರು ನಡೆಸುತ್ತಿದ್ದ ಭೇದ ನೀತಿಯನ್ನು ಕೊನೆಗಾಣಿಸಬೇಕೆಂಬುದಷ್ಟೇ ಗಾಂಧೀಜಿಯವರ ಸಂಕಲ್ಪವಾಗಿತ್ತು. ಈ ಗುರಿಯನ್ನು ಸಾಧಿಸಲು ಅವರು ಸತ್ಯಾಗ್ರಹ ಮಾರ್ಗವನ್ನು ಅನುಸರಿಸಿದರು. ದಕ್ಷಿಣ ಆಫ್ರಿಕೆಯಲ್ಲಿ ಇದ್ದಾಗಲೇ ಗಾಂಧೀಜಿಯವರು ಸತ್ಯಾಗ್ರಹದ ಪದಗಳನ್ನು ಶೋಧಿಸಿದರು ಮತ್ತು ಅದನ್ನು ಬಲಶಾಲಿಗಳ ಅಸ್ತ್ರವೆಂದು ಘೋಷಿಸಿದರು. ಸತ್ಯಾಗ್ರಹದಲ್ಲಿ ಯಾವದೇ ಬಗೆಯ ಹಿಂಸೆಗೆ ಎಡೆಯಿರಲಿಲ್ಲ. ತಮ್ಮ ಜತೆ ಅವಿವೇಕತನದಿಂದ ವರ್ತಿಸಿದ, ತಮ್ಮನ್ನು ಕೊಲ್ಲಬೇಕೆಂದು ಬಂದ ಬಿಳಿಯರನ್ನೆಲ್ಲ ಗಾಂಧೀಜಿ ಕ್ಷಮಿಸಿದರು.

ಬೋರಯುದ್ಧ

೧೮೯೯ರಿಂದ ೧೯೦೨ರ ವರೆಗೆ ನಡೆದ ಬೋರ ಯುದ್ಧದಲ್ಲಿ ಗಾಂಧೀಜಿಯವರು ಹನ್ನೊಂದುನೂರು ಜನ ಭಾರತೀಯರ ಅಂಬುಲನ್ಸ್ ದಳವನ್ನು ಸಂಘಟಿಸಿ ಬ್ರಿಟಿಷ್ ಮತ್ತು ದಕ್ಷಿಣ ಆಫ್ರಿಕೆ ಸರಕಾರಗಳ ಮೆಚ್ಚುಗೆಯನ್ನು ಗಳಿಸಿದರು. ಆದರೆ ಬೋರ್ ಯುದ್ಧದಲ್ಲಿ ಭಾರತೀಯರು ಸಲ್ಲಿಸಿದ ಸೇವೆಯನ್ನು ದಕ್ಷಿಣ ಆಫ್ರಿಕೆ ಸರಕಾರ ಮರೆಯಿತು. ಭಾರತೀಯರ ಸ್ಥಿತಿ ದಿನೇ ದಿನೇ ಹದಗೆಟ್ಟಿತು.

೧೯೦೩ರಲ್ಲಿ "ಭಾರತೀಯರ ಅಭಿಪ್ರಾಯ" ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿ ಭಾರತೀಯರ ಕಷ್ಟಕಾರ್ಪಣ್ಯಗಳನ್ನು ದಕ್ಷಿಣ ಆಫ್ರಿಕೆಯ ಸರಕಾರದ ಗಮನಕ್ಕೆ ತಂದರು. ಗಾಂಧೀಜಿಯವರೇ ಈ ಪತ್ರಿಕೆಯನ್ನು ನಡೆಯಿಸಿ, ವೆಚ್ಚವನ್ನು ವಹಿಸಿ, ಸಂಪಾದಕರಾಗಿ ದುಡಿದರು.

ಏಶಿಯದ ಮಹಾರೋಗ

ಟ್ರಾನ್ಸವಾಲ ಸರಕಾರವು ಭಾರತೀಯರ ಬಗ್ಗೆ ಒಂದು ಏಶಿಯಾಟಿಕ ವಿಭಾಗವನ್ನು ಪ್ರಾರಂಭಿಸಿತು. ೧೯೦೪, ೧೯೦೫, ೧೯೦೬ರಲ್ಲಿ ಈ ವಿಭಾಗವು ಭಾರತೀಯರ ವಿರುದ್ಧ ಅನೇಕ ನಿರ್ಬಂಧಗಳನ್ನು ಹೇರಿತು. ೧೯೦೬ರಲ್ಲಿ ಸ್ಮಟ್ಸ್ ಮಹಾಶಯ ಏಶಿಯಾಟಿಕ ಕಾನ್ಸರ್ ನಿರ್ಮೂಲನೆಗೆ ಪಣತೊಟ್ಟ. ೧೯೦೭ರಲ್ಲಿ ಬೋರ ಪ್ರಮುಖ ಜನರಲ್ ಬೋಥಾ "ನನ್ನ ಪಕ್ಷವು ಅಧಿಕಾರಕ್ಕೆ ಬಂದರೆ ನಾಲ್ಕು ವರ್ಷಗಳಲ್ಲಿ (ಭಾರತೀಯ) ಕೂಲಿಗಳನ್ನು ದೇಶ ಬಿಟ್ಟು ಹೊರಗೆ ಹಾಕುವೆ" ಎಂದು ಘೋಷಿಸಿದ. ೧೯೦೭ರಲ್ಲಿ ಟ್ರಾನ್ಸವಾಲ ಸರಕಾರವು ಒಂದು ಕರಡು ಸುಗ್ರೀವಾಜ್ಞೆಯನ್ನು ಹೊರಡಿಸಿ ಭಾರತೀಯರೆಲ್ಲ ರಿಜಿಸ್ಟ್ರೇಶನ್ ಸರ್ಟಿಫಿಕೇಟನ್ನು ಹೊಂದಿರಬೇಕೆಂದೂ, ಅದನ್ನು ಸದಾ ತಮ್ಮ ಹತ್ತಿರ ಇಟ್ಟುಕೊಳ್ಳಬೇಕೆಂದೂ, ಪೋಲೀಸ ಅಧಿಕಾರಿಯು ಮನೆಯಲ್ಲಿ, ಬೀದಿಯಲ್ಲಿ ಭಾರತೀಯ ಮಹಿಳೆಯನ್ನು ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ತೋರಿಸೆಂದು ಒತ್ತಾಯಿಸಬಹುದೆಂದು ಸಾರಿತು.

೧೯೦೬ ಸೆಪ್ಟೆಂಬರ್ ೧೧ರಂದು ಜೋಹಾನ್ಸ್‌ಬರ್ಗ್‌ನಲ್ಲಿ ಭಾರತೀಯರ ಸಭೆಯೊಂದು ಕೂಡಿತು. ಸೂಚಿತ ವಿಧೇಯಕವನ್ನು ಪ್ರತಿಭಟಿಸಲಾಯಿತು. ಗಾಂಧೀಜಿಯವರ ನೇತೃತ್ವದಲ್ಲಿ ಹೋರಾಟ ಪ್ರಾರಂಭವಾಯಿತ. ಭಾರತೀಯರು ಅಧಿಕ ಸಂಖ್ಯೆಯಲ್ಲಿ ಜೇಲಿಗೆ ಹೋಗಲು ಮುಂದಾದರು. ಗಾಂಧೀಜಿಯವರನ್ನು ಬಂಧಿಸಲಾಯಿತು. ಮುಂದೆ ಕೆಲದಿನಗಳ ನಂತರ ಭಾರತೀಯ ಮಹಿಳೆಯರನ್ನು ಸೂಚಿತ ವಿಧೇಯಕದ ವ್ಯಾಪ್ತಿಯಿಂದ ಮುಕ್ತ ಮಾಡಲಾಯಿತು.

ದುಷ್ಟ ಧೋರಣೆ

೧೯೦೭ರಲ್ಲಿ ಟ್ರಾನ್ಸ್‌ವಾಲ ಸ್ವತಂತ್ರವಾದಾಗ ರಜಿಸ್ಟ್ರೇಶನ್ ವಿಧೇಯಕ ಮಂಜೂರಾಯಿತು. ಗಾಂಧೀಜಿಯವರು ಇದನ್ನು ಮೋಸದ ಕಾನೂನು ಎಂದು ಖಂಡಿಸಿದರು. ಜನವರಿ ೩೦ರಂದು ನಡೆದ ಗಾಂಧೀಜಿ-ಸ್ಮಟ್ಸ್ ಒಪ್ಪಂದದ ಪ್ರಕಾರ, ಭಾರತೀಯರು ಸ್ವಂತದ ಇಚ್ಛೆಯಿಂದ ರಜಿಸ್ಟರ ಮಾಡಿಸಿಕೊಳ್ಳಬಹುದು ಎಂಬ ತೀರ್ಮಾನಕ್ಕೆ ಬದಲಾಯಿತು. ಇದಕ್ಕೆ ಪ್ರತಿಯಾಗಿ ಏಶಿಯಾಟಿಕ ಕಾಯ್ದೆಯನ್ನು ವಾಪಸ್ ಪಡೆಯುವದಾಗಿ ಸ್ಮಟ್ಸ್ ಆಶ್ವಾಸನವಿತ್ತ. ಆದರೆ ಸ್ಮಟ್ಸ ತನ್ನ ವಚನ ಪಾಲಿಸಲಿಲ್ಲ. ಸ್ವೇಚ್ಛೆಯಿಂದ ರಜಿಸ್ಟರ ಮಾಡಿಸಿಕೊಂಡ ಭಾರತೀಯರ ಹೆಸರುಗಳನ್ನು ಕಾಯ್ದೆಬದ್ಧ ರಜಿಸ್ಟರ ಮಾಡಿದ. ಅಲ್ಲದೆ ಭಾರತೀಯರು ಹೊಸದಾಗಿ ಟ್ರಾನ್ಸವಾಲಕ್ಕೆ ಬಾರದಂತೆ ಪ್ರತಿಬಂಧಿಸಿದ.

೧೯೦೮ ಆಗಸ್ಟ ೧೬ರಂದು ಜೋಹಾನ್ಸಬರ್ಗದಲ್ಲಿ ಸಭೆ ನಡೆಯಿತು. ಸಾವಿರಾರು ರಜಿಸ್ಟ್ರೇಶನ್ ಸರ್ಟಿಫಿಕೇಟುಗಳನ್ನು ಸುಡಲಾಯಿತು. ಸತ್ಯಾಗ್ರಹ ಬೆಳೆಯುತ್ತ ಹೋಯಿತು. ಭಾರತೀಯರ ಬಂಧನ ನಡೆಯಿತು. ಗಾಂಧೀಜಿಯವರನ್ನು ಕೈಸೆರೆ ಮಾಡಲಾಯಿತು. ಅನೇಕ ಭಾರತೀಯರನ್ನು ದೇಶ ಬಿಟ್ಟು ಹೊರಗೆದಬ್ಬಲಾಯಿತು.

೧೯೧೩ರಲ್ಲಿ ಗಾಯದ ಮೇಲೆ ಬರೆ ಕೊಟ್ಟಂತೆ ಕೇಪಕಾಲನಿ ಸುಪ್ರೀಮಕೋರ್ಟ್ ಒಂದು ತೀರ್ಪಿತ್ತಿತ್ತು. ಕ್ರಿಸ್ತ ಧರ್ಮಕ್ಕೆ ಅನುಗುಣವಾದ ರೀತಿಯಲ್ಲಿ ನಡೆದ ಮದುವೆಗಳನ್ನಷ್ಟೇ ಮನ್ನಿಸಲಾಗುವದೆಂದು ಸಾರಿತು.

ದಕ್ಷಿಣ ಆಫ್ರಿಕೆಯಲ್ಲಿ ಪ್ರಚಂಡ ಹೋರಾಟ ಮೊದಲಿಟ್ಟಿತು. ಅನೇಕಾನೇಕ ಭಾರತೀಯರನ್ನು ಬಂಧಿಸಿ ಅವರಿಗೆ ಚಿತ್ರಹಿಂಸೆ ಕೊಡಲಾಯಿತು. ಮಹಿಳೆಯರೂ ಬಹುಸಂಖ್ಯೆಯಲ್ಲಿ ಹೋರಾಟದಲ್ಲಿ ಪಾಲ್ಗೊಂಡರು. ಈ ಹೋರಾಟದ ಪ್ರಭಾವ ಅತ್ತ ಇಂಗ್ಲೆಂಡಿನಲ್ಲಿ ಇತ್ತ ಭಾರತದಲ್ಲಿ ಕಾಣಿಸಿಕೊಂಡಿತು. ಭಾರತದ ವಾಯಿಸರಾಯ ಲಾರ್ಡ ಹಾರ್ಡಿಂಜ್ ದಕ್ಷಿಣ ಆಫ್ರಿಕೆ ಸರಕಾರವನ್ನು ಕಟುವಾಗಿ ಟೀಕಿಸಿ ವಿಚಾರಣಾ ಸಮಿತಿಯೊಂದನ್ನು ನೇಮಿಸಲು ಸೂಚಿಸಿದರು.

ವಿಚಾರಣಾ ಆಯೋಗವನ್ನು ನೇಮಿಸಲಾಯಿತು. ಗಾಂಧೀಜಿ-- ಸ್ಮಟ್ಸ ನಡುವೆ ಸುದೀರ್ಘ ಮಾತುಕತೆ ನಡೆಯಿತು. ತತ್ಪರಿಣಾಮವಾಗಿ ಇಂಡಿಯನ್ ರಿಲೀಫ್ ಬಿಲ್ ೧೯೧೪ರ ಜುಲೈ ತಿಂಗಳಲ್ಲಿ ಪಾಸಾಯಿತು. ಭಾರತೀಯರ ಮದುವೆಗೆ ಮಾನ್ಯತೆ ದೊರೆಯಿತು. ನಾತಾಳದಲ್ಲಿ ಇರಲು ಬಂದಿರುವವರ ಮೇಲೆ ವಿಧಿಸಲ್ಪಟ್ಟ ಮೂರು ಪೌಂಡು ಕರವನ್ನು ತೆಗೆದು ಹಾಕಲಾಯಿತು. ಗಾಂಧೀಜಿಯವರು ಈ ವಿಜಯವನ್ನು ಸತ್ಯ ಅಹಿಂಸೆಯ ಮಾರ್ಗದಿಂದಲೇ ಸಂಪಾದಿಸಿದರು.

ತದನಂತರ ಗಾಂಧೀಜಿ ದಕ್ಷಿಣ ಆಫ್ರಿಕೆಯನ್ನು ಸದಾ ಕಾಲಕ್ಕೂ ಬಿಟ್ಟು ಭಾರತಕ್ಕೆ ಬಂದರು. ಆಫ್ರಿಕೆಯನ್ನು ಬಿಟ್ಟು ಬರುವಾಗ ಗಾಂಧೀಜಿಯವರು ಒಂದು ಜತೆ ಪಾದರಕ್ಷೆಗಳನ್ನು ಜನರಲ್ ಸ್ಮಟ್ಸ್‌ಗೆ ಪ್ರೀತಿಯ ಕಾಣಿಕೆಯೆಂದು ಕಳಿಸಿಕೊಟ್ಟರು. ಸ್ಮಟ್ಸ ಅತ್ಯಾದರದಿಂದ ಕಾಣಿಕೆ ಸ್ವೀಕಾರ ಮಾಡಿದರು. ಮುಂದೆ ಕೆಲ ವರ್ಷಗಳ ನಂತರ ಸ್ಮಟ್ಸ—

"ಗಾಂಧೀಜಿ ಕಳಿಸಿಕೊಟ್ಟ ಪಾದರಕ್ಷೆಗಳನ್ನು ಅನೇಕ ವರ್ಷ ಉಪಯೋಗಿಸಿದೆ. ಗಾಂಧೀಜಿಯವರಂತಹ ಮಹಾಮಹಿಮಾನ್ವಿತ ಪುರುಷನೊಬ್ಬ ನೀಡಿದ ಕಾಣಿಕೆಯನ್ನು ಸ್ವೀಕರಿಸಲು ನಾನು ಅನರ್ಹ ಎಂದು ನನಗೆ ಅನಿಸಿದೆ" ಎಂದು ಉದ್ಗಾರವೆತ್ತಿದರು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
93 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದ್ವೈಫಲ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711, 5712, 5713 } 3 Lines.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಸಂಪುಟ ೪೮
ಸಂಚಿಕೆ ೩೫
VOL. 48
No. 35

1921 ಸ್ಥಾಪನೆ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೫—೫—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಕಷಾಯವು ಕುಡಿಸೋಣ

ಮಾವೋ ಮಾವಯ್ಯನ ಅಳಿಯಂದಿರ ಗುಂಪೊಂದು ಭಾರತದಲ್ಲಿದ್ದು ಇದು ತನ್ನದೇ ದಾರಿಯಲ್ಲಿ ಮುಂದುವರಿಯುತ್ತಲಿದೆ. ಮಾವೋ ಸಿದ್ಧಾಂತಗಳ ಆಧಾರದ ಮೇಲೆ ಹುಟ್ಟಿಕೊಂಡ ಕಮ್ಯೂನಿಸ್ಟ್ ಪಕ್ಷದ ಈ ಪಂಗಡವು ತನ್ನನ್ನು ಮಾರ್ಕ್ಸ್ ವಾದಿ, ಲೆನಿನ್ನರ ಅಪ್ಪಟ ಶಿಷ್ಯ ಸಮೂಹವೆಂದು ಕರೆದುಕೊಂಡಿದೆ. ಕಮ್ಯೂನಿಜಂನ ಮೂಲ ತತ್ವಗಳ ವಿಚಾರದಲ್ಲಿ ಹಿರಿಯ ರಾಷ್ಟ್ರಗಳಾದ ಸೋವಿಯತ್ತು ಮತ್ತು ಚೀನಾಗಳ ನಡುವಣ ಭಿನ್ನಾಭಿಪ್ರಾಯ ವ್ಯತ್ಯಾಸಗಳ ಬಲಗೊಳ್ಳದ ಪರಿಣಾಮವಾಗಿ ಪರಿಣಮಿಸಿ ಅವುಗಳ ನಡುವಣ ಸೈದ್ಧಾಂತಿಕ ವಿವಾದ, ಗುಂಡಿನ ವಿನಿಮಯ ಆರಂಭವಾದದ್ದನ್ನು ಮರೆಯಬಾರದು. ಭಾರತದಲ್ಲಿನ ಕಮ್ಯೂನಿಸ್ಟ್ ಪಕ್ಷವು ಕೆಲವು ವರ್ಷಗಳ ಹಿಂದೆ ಎಡ—ಬಲಗಳೆಂದು ವಿಭಜನೆ ಹೊಂದಿದ್ದನ್ನು ಇವೆರಡರ ಮಧ್ಯೆಯೂ ತಾತ್ವಿಕ ಭಿನ್ನಮತವಿದೆಯೆಂಬುದನ್ನೂ ನೆನಪಿಟ್ಟುಕೊಳ್ಳಬೇಕು. ಇವೆರಡೂ ಪ್ರಜಾಪ್ರಭುತ್ವದಲ್ಲಿ ತಮ್ಮ ವಿಶ್ವಾಸವಿದೆಯೆಂದು ಹೇಳಿಕೊಂಡು ಅಲ್ಲಲ್ಲಿ ಅಧಿಕಾರದಲ್ಲೂ ಆರೂಢವಾಗಿವೆ. ಇವೆರಡೂ ಸೌಮ್ಯ ನೀತಿಯವೆಂದು ಕರೆದು ಒಂದು ಗುಂಪು ತನ್ನನ್ನು ನಕ್ಸಲೀಯರೆಂದೇ ಕರೆದು ಉಗ್ರಗಾಮಿಗಳೆಂದು ಹೇಳಿಕೊಳ್ಳುತ್ತಿದೆ. ದೇಶದಲ್ಲಿ ಪ್ರಜಾಪ್ರಭುತ್ವವನ್ನು ತಪ್ಪಿಸಿ ಸಶಸ್ತ್ರ ಕ್ರಾಂತಿಯ ಜ್ವಾಲೆಯನ್ನೆಬ್ಬಿಸುವುದೇ ಈ ಹೊಸ ಪಕ್ಷದ ಮುಖ್ಯೋದ್ದೇಶವೆಂಬುದಾಗಿ ಅದರ ಸ್ಥಾಪಕರ ಶ್ರೀ ಸನ್ಯಾಲ್ ಬಹಿರಂಗವಾಗಿಯೇ ಉದ್ಘೋಷಿಸಿದ್ದಾರೆ. ಮೇ ದಿನದಂದೇ ಇವರು ಹೊಡೆದಾಟಕ್ಕೆ ಆರಂಭ ಮಾಡಿದ್ದಾರೆ. ಇದನ್ನು ಆರಂಭಶೂರತನವೆಂದು ಕರೆಯುವ ಟೀಕೆಯು ಸರಿ ಎಂದು ನಂಬುವುದಾದರೆ, ನಕ್ಸಲೀಯರ ಹಾವಳಿ ಅನುವು ನೀಡಿದರೆ ರಕ್ತನದಿ ಹರಿಯುವ ದಿನ ನಿಕಟ ಭವಿಷ್ಯದಲ್ಲಿದೆ ಎಂದು ಅನಿವಾರ್ಯವಾಗಿಯೇ ಹೇಳಬೇಕು.

ಆದರೆ, ವಸ್ತುಸ್ಥಿತಿಯನ್ನು ಅವಲೋಕಿಸುವಾಗ, ಇದಕ್ಕೆ ಸದ್ಯ ಅವಕಾಶವಿಲ್ಲವೆಂದೇ ತೋರುತ್ತದೆ. ಇದಕ್ಕಿರುವ ಆಧಾರವೆಂದರೆ, ಈ ಹೊಸ ಪಕ್ಷವು ಅಖಿಲ ಭಾರತ ಮಟ್ಟವನ್ನು ತಲುಪಲಿಲ್ಲ. ಇದರ ನಾಯಕರಾದರೂ ಅಖಿಲ ಭಾರತೀಯ ಖ್ಯಾತರಲ್ಲ. ಆದುದರಿಂದ ಇದಕ್ಕಾಗಿ ಬೆದರುವ ಅಗತ್ಯವಿಲ್ಲವೆಂದು ಹಲವರ ಅಭಿಪ್ರಾಯ. ಏನಿದ್ದರೂ ಈ ಮಾರನೆಯ ಕಮ್ಯೂನಿಸ್ಟ್ ಪಕ್ಷವು ಬೆಂಕಿಯ ಕಿಡಿ. ಅದು ಎಂದಾದರೂ ಹೇಗಾದರೂ ದೇಶವ್ಯಾಪಿಯಾಗಿ ನಿಂತೀತು; ಪ್ರಾದೇಶಿಕ ಗೊಂದಲಗಳಿಗೆ ಕಾರಣೀಭೂತವಾದೀತು. ಆದುದರಿಂದ ಅದನ್ನು ಸಣ್ಣದಿರುವಾಗಲೇ ನಂದಿಸಿಬಿಡುವುದು ಅಪೇಕ್ಷಣೀಯವೇ. ನಕ್ಸಲೀಯ ಪಂಗಡದ ಮುಖ್ಯೋದ್ದೇಶಗಳನ್ನು ಈ ರೀತಿ ಸಂಕ್ಷೇಪಿಸಬಹುದು— ದೇಶದ ರೈತ ಜನರನ್ನು ಕೆರಳಿಸುವುದು. ಅವರು ದಂಗೆಯೇಳುವಂತೆ ಮಾಡಿ, ಗೆರಿಲ್ಲಾ ವಿಧಾನದಲ್ಲಿ ಹೋರಾಟ ನಡೆಸುವುದು, ಗ್ರಾಮೀಣ ನೆಲೆಗಳನ್ನು ಕಟ್ಟುವುದು—ನಗರಗಳನ್ನು ಆಕ್ರಮಿಸಲು ಹಳ್ಳಿಗಳಲ್ಲಿ ಭದ್ರವಾಗಿ ನೆಲೆಯೂರುವುದು—ಈ ವಿಧಾನಗಳಿಂದ ಕಾಲಕ್ರಮೇಣ ದೇಶದಲ್ಲಿ ಸಶಸ್ತ್ರ ದಂಗೆಯೆಬ್ಬಿಸುವುದು. ಕಾರ್ಮಿಕ ವರ್ಗದ ಮುಷ್ಟಿಗಳಿಗೆ ಆಡಳಿತ ಸೂತ್ರಗಳನ್ನು ಒಪ್ಪಿಸುವುದು. ಈ ಪಕ್ಷದ ಪ್ರಭಾವವು ಪಶ್ಚಿಮ ಬಂಗಾಳದಲ್ಲಿಯೇ ಸಾಕಷ್ಟು ಬಿದ್ದಿಲ್ಲವೆಂಬುದು ನಿಜವಾದರೂ ಇಂತಹ ಭಯಾನಕ ಮನೋವೃತ್ತಿಯನ್ನು ಬೆಳೆಯಗೊಡದಂತೆ ಈಗಿಂದೀಗಲೇ ನೋಡಿಕೊಳ್ಳುವುದು ಅತ್ಯವಶ್ಯವಾಗಿದೆ. ಪಶ್ಚಿಮ ಬಂಗಾಳದಲ್ಲೇ ಜನ್ಮವೆತ್ತಿದ ಈ ನಕ್ಸಲೀಯರ ಪ್ರಭಾವ ದೇಶದ ಇತರತ್ರವೂ ಹಬ್ಬಿಯೇ ಇದೆ. ಕೇರಳದಲ್ಲಿನ 'ಪುಲ್ಪಳ್ಳಿ ಪ್ರಕರಣ'ವನ್ನು ಯಾರೂ ಮರೆಯಲಾರರು. ನಂಬೂದಿರಿಪಾದರ ಸರಕಾರವನ್ನು ಇದು ಒಂದಲ್ಲ ಒಂದು ಬಗೆಯಲ್ಲಿ ಪೀಡಿಸುತ್ತಲೇ ಇದೆ. ಆಂಧ್ರದಲ್ಲಿಯೂ ಇದು ಅನಪೇಕ್ಷಿತ ಲಾಭ ಗಳಿಸುತ್ತಲೇ ಇದೆ. ಉತ್ತರ ಪ್ರದೇಶದಲ್ಲಿ ೧೦ ಪ್ರದೇಶಗಳನ್ನೊಳಗೊಂಡ ಹೊಸ ರಾಜ್ಯ ಬೇಡಿಕೆಯ ಹಿಂದೆಯೂ ನಕ್ಸಲೀಯ ಪ್ರಭಾವವಿದೆ. ಬಿಹಾರ, ಪಂಜಾಬ, ಅಸ್ಸಾಂಗಳಲ್ಲೂ ಇವರ ಕೈವಾಡವಿದೆಯೆಂದು ಕೇಳಲಾಗುತ್ತಿದೆ. ಉಳಿದ ಬೇರೆ ಬೇರೆ ರಾಜ್ಯಗಳಲ್ಲಿ ಇದ್ದಿಲ್ಲವೆಂದು ಎದೆತಟ್ಟಿ ಹೇಳುವಂತಿಲ್ಲ. ಅಂತೂ ಅಲ್ಪ ಪ್ರಮಾಣದಲ್ಲಾದರೂ ದೇಶವ್ಯಾಪಿಯಾಗಿ ಹರಡಿರುವ ಈ ಕ್ರಾಂತಿರಂಗವು ದೇಶಕ್ಕೆ, ಪ್ರಜಾಸತ್ತೆಗೆ ಅಪಾಯಕಾರಿ; ಅದರ ಕಾರ್ಯಗಳು ದೇಶದ್ರೋಹಕಾರಕ ಮತ್ತು ಸಂವಿಧಾನ ಬಾಹಿರವೆಂದು ಪಶ್ಚಿಮ ಬಂಗಾಳದ ಉಪ ಮುಖ್ಯಮಂತ್ರಿ ಜ್ಯೋತಿಬಸು ಘೋಷಿಸಿದ್ದಾರೆ. ತನ್ನ ಸರಕಾರ ಬದುಕಿದರೆ ೩೦ ತಾಸುಗಳೊಳಗೆ ಈ ನಕ್ಸಲೀಯರನ್ನು ನಾಮಾವಶೇಷ ಮಾಡಬಲ್ಲೆನೆಂದೂ ಅವರು ಸಾರಿದ್ದಾರೆ. ಆದರೆ, ಇದರ ಜತೆಗೆ ಅವರು ಮುಂದೇನೆಂದು ಹೇಳಿದ್ದಾರೆ: ನಕ್ಸಲೀಯರ ಚಟುವಟಿಕೆಗಳು ಈಗ ಮಿತಿ ಮೀರಿಲ್ಲ. ಅದು ಅಗತ್ಯ. ಅವರ ಉಗ್ರತೆಯನ್ನು ಮುಖ್ಯಮಂತ್ರಿ ಅಜಯ್ ಕುಮಾರ್ ಮುಖರ್ಜಿಯವರೂ ಅನುಮೋದಿಸಿದ್ದಾರೆ.

ನಕ್ಸಲೀಯ ಕಮ್ಯೂನಿಸ್ಟ್ ಪಕ್ಷವು ಚೀನೀ ನಿಷ್ಠೆಯಿಂದ ಕೂಡಿದ್ದೆಂಬುದಕ್ಕೆ ಸೂರ್ಯ ಚಂದ್ರರೇ ಸಾಕ್ಷಿ. ಇದು ತನ್ನ ರಹಸ್ಯ ಕಾರ್ಯಕ್ರಮಗಳಿಗೆ ಬಾಹ್ಯ ದೇಶಗಳಿಂದ ಶಸ್ತ್ರಾಸ್ತ್ರಗಳನ್ನೂ ತರಿಸಿಕೊಂಡಿದೆಯೆಂಬುದಕ್ಕೆ ಅಲ್ಪಸ್ವಲ್ಪ ಆಧಾರಗಳು ದೊರೆತಿವೆಯೆನ್ನುತ್ತಾರೆ. ನಂಬೂದಿರಿಪಾದರೂ ಜ್ಯೋತಿಬಸುಗಳೂ ಕ್ರಾಂತಿ ವಿರೋಧಿಯೆಂದು ಕರೆಯಲಾರಂಭಿಸಿರುವ ಚೀನೀ ನಾಯಕರು ಈ ಹೊಸ ಕ್ರಾಂತಿಕಾರರಿಗೆ ಅಂತರಂಗ—ಬಹಿರಂಗಗಳಲ್ಲಿ ಸಹಕಾರ ನೀಡುವುದು ಸತ್ಯಕ್ಕೆ ಬಹಳ ದೂರದ ಮಾತಲ್ಲ. ಈ ಸಹಕಾರವು ಶಸ್ತ್ರಾಸ್ತ್ರಗಳಿಗೂ ಅನ್ವಯವಾಗುವುದು ಆಶ್ಚರ್ಯವಲ್ಲ. ಆದುದರಿಂದಲೇ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿರುವವರೆಲ್ಲರೂ ಈಗ ಎಚ್ಚರಿಕೆಯ ಕ್ರಮ ಕೈಕೊಳ್ಳಬೇಕಾಗಿದೆ. ಜ್ಯೋತಿಬಸುರವರ ಅಭಿಪ್ರಾಯದಲ್ಲಿ ಈ ಹೊಸ ಪಕ್ಷವನ್ನು ನಿಷೇಧಿಸುವುದು ಸಾಧ್ಯವಿಲ್ಲ. ಏಕೆಂದರೆ, ಪ್ರಜಾಸತ್ತೆಯಲ್ಲಿ ಪ್ರತಿಯೊಬ್ಬರಿಗೂ ವಿಚಾರ ಸ್ವಾತಂತ್ರ್ಯವಿದೆ; ನಕ್ಸಲೀಯರದ್ದು ಒಂದು ವಿಚಾರಧಾರೆ. ಆದರೆ, ಜನ-ಜನಂಗೆ ಹಾನಿ ತಂದೊಡ್ಡುವ ವಿಚಾರಧಾರೆಯನ್ನು ತಡೆಗಟ್ಟಲೇ ಬೇಕು; ಹರಿಯತೊಡಗಿರುವ ಲಾವಾದ್ರವವು ದೇಶವನ್ನು ಸುಟ್ಟುರುಹುವುದಕ್ಕೆ ಮೊದಲೇ ಅದನ್ನು ತಣ್ಣಗಿರಿಸುವುದಕ್ಕೆ ತೊಡಗಬೇಕು; ಇದಕ್ಕಾಗಿ ಚವನರು ಕಾರ್ಯಶೀಲರಾಗಿದ್ದಾರೆ. ಪ್ರಜಾತಂತ್ರವಾದಿಗಳೆಲ್ಲರೂ ಒಂದಾಗಿ ಈ ಕ್ರಾಂತಿರಾಕ್ಷಸನನ್ನು ಸದೆ ಬಡಿಯುವುದು ಅತ್ಯವಶ್ಯ. ಉಲ್ಬಣಿಸಿದ ಮೇಲೆ ಮದ್ದು ಅರಸುವುದಕ್ಕಿಂತ ರೋಗ ಬಡಲ್ಲೇ ಕಷಾಯ ಕುಡಿಸುವುದು ಲಾಭಕಾರಿ.

ಹೃದಯ ಕಂಪನ

ಲಂಡನ್ ನಗರದಲ್ಲಿ ಹೃದಯ ಕಂಪನ, ಯಾರ ಸಾವು ಯಾವ ಗಳಿಗೆಯಲ್ಲಿ ಬರುವುದೆಂದು ಹೇಳಲಾಗಲ್ಲ. ಅಲ್ಲಿ ಯಾವ ಮಹಾಮಾರಿಯೂ ಹಬ್ಬಿಲ್ಲ; ಭೂಕಂಪವೂ ಆಗಿಲ್ಲ; ರಾಜ್ಯಕೀಯವಾಗಿ ವಿಲ್ಸನ್ನರೇನೋ ಪತನ ಬಿಂದುವಿನತ್ತ ಸರಿಯತೊಡಗಿದ್ದಾರಾದರೂ ಇದಕ್ಕೆಲ್ಲ ಇಂಗ್ಲಿಷರು ಎಂದೋ ಹೊಂದಿಕೊಂಡಿದ್ದಾರೆ. ಇದೀಗ ಹೃತ್ಕಂಪಕ್ಕೆ ಕಾರಣವಾದದ್ದು, ಆರ್ಥ ಲಂಡನ್ ನಗರವನ್ನೇ ನಾಶಮಾಡಬಲ್ಲ ವಿಷದ ನಾಪತ್ತೆಯಾದದ್ದು. ಲಂಡನ್‌ನ ಜನಸಂಖ್ಯೆ ಎಂಭತ್ತು ಲಕ್ಷ. ಅಲ್ಲಿನ ಕಾರ್ಖಾನೆಯೊಂದರಲ್ಲಿಂದ ಕುಮಾರರು ಎರಡು ಗೆಲನ್ನುಗಳಷ್ಟು ಸಿಯೊನೈಡು ಕಳ್ಳತನವಾಗಿದೆ. ಬಹಳ ಜಾಣಾಕ್ಷತನದಿಂದಲೇ ಈ ಕಳ್ಳತನ ನಡೆದಿದೆ. ಈ ವಿಷ ತುಂಬಿದ ಡಬ್ಬಿಯು ಇದ್ದಕ್ಕಿದ್ದಂತೆ ಹಿಂದೆ ಅಂಗಡಿಯಲ್ಲಿ ಕಳವಿನ ಸಂಬಂಧದಲ್ಲಿ ಯಾವ ವಿಚಾರಣೆಯೂ ನಡೆಯುತ್ತಿಲ್ಲವೆಂದು ಕಳಕಳಿಯ ಹೇಳಿಕೆ ಹೊರಟಿದೆ. ಜನತೆಯನ್ನು ಸಮಾಧಾನಪಡಿಸಲು ಇದು ಅಷ್ಟು ತೀಕ್ಷ್ಣವಾಗಿಲ್ಲ ಎಂದು ಮುಂತಾಗಿ ಭರವಸೆ ನೀಡಿರಲು ಇದರಿಂದ ಹೆಚ್ಚು ಸಮಾಧಾನವಾಗದು. ಏಕೆಂದರೆ ವಿಷ ವಿಷವೇ. ಅದೀಗ ಯಾವ ರೀತಿ ಉಪಯೋಗವಾಗುತ್ತದೆಂದು ಹೇಳುವವರು ಯಾರು? ಲಂಡನ್ ಪೋಲೀಸರು, ವಿಲ್ಸನ್ ಸರಕಾರ ಈ ಕಳ್ಳತನದಿಂದ ಜನತೆಗೆ ಹಾನಿಯಾಗದಂತೆ ನೋಡಿಕೊಳ್ಳಲ್ಲಿ ಸಮರ್ಥರಾದಾರೆ?

ಸೂಚನೆ

ತಾ. 29-5-1969ರ 'ನವಯುಗದ' ಸಂಚಿಕೆಯು "ಔದ್ಯಮಿಕ, ವಾಣಿಜ್ಯ ಪುರವಣಿ" ಯಾಗಿ ಪ್ರಕಟವಾಗಲಿರುವ ಸಂಗತಿ ನಿಮಗೆ ಈಗಾಗಲೇ ವೇದ್ಯವಿದೆ. ಈ ಸಂಚಿಕೆಯ ಮುದ್ರಣಕಾರ್ಯ ಬಾಹುಲ್ಯದಿಂದ "ನವಯುಗ"ದ ತಾ. 22-5-1969ರ ಸಂಚಿಕೆಯು ಪ್ರಕಟವಾಗುವುದಿಲ್ಲ ಮತ್ತು ತಾ. 15ರ ಸಂಚಿಕೆಯು ಬರಿಯ ಎಂಟು ಪುಟಗಳನ್ನಷ್ಟೆ ಹೊತ್ತು ತಂದಿದೆ. —ಸಂ. ನ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 430/1968

ಪ್ರಭಾವತಿ ಹೆಗ್ಗಡ್ತಿ — ತನ್ನ ಕುಟುಂಬದ ಯಜಮಾನ್ತಿಯಾಗಿ— ವಾದಿಳು

ಮತ್ತು

ರಘುರಾಮ ಶೆಟ್ಟಿ ಕೂಡಾ —ಪ್ರತಿವಾದಿಯು

ಇವರೊಳಗೆ

ಉಡುಪಿ ತಾಲ್ಲೂಕು ಅಂಜಾರು ಗ್ರಾಮದ ಪತ್ತು ಅಂಜಾರು ದೊಡ್ಡಮನೆ ರಾಘು ಶೆಟ್ಟಿಯ ಮಕ್ಕಳು, ೩ನೇ ಪ್ರತಿವಾದಿಳು ರತ್ನ ಶೆಟ್ಟಿ ಮತ್ತು ೪ನೇ ಪ್ರತಿವಾದಿಳು ಗಿರಿಜಾ ಶೆಟ್ಟರಿಗೆ ಸಹಾ ಪ್ರತಿವಾದಿರಿಂದಾ ಕಳ್ದ ಕರಾರಿನ ಮತ್ತು ಪ್ಲವಂಗ ಸಂವತ್ಸರಗಳ ಬಾಬ್ತು ವಾದಿಗೆ ಬರಬೇಕಾದ ಗೇಣಿಯ ಭತ್ತದ ಬದ್ದಿ ವಗೈರೆ ರೂಪಾಯಿ 1388-80 ಪ್ರತಿ ಬಗ್ಗೆ ಹೂಡಿದ ಮೇಲಿನ ನ್ಯಾಯವು ತಾರೀಖು 30-5-1969ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟಿರುವುದರಿಂದಾ ಆ ತಾರೀಖು ನಿಮ್ಮ ಉಜ್ರದಾರಿಯಿದ್ದರೆ, ಆ ದಿವಸ ಕೋರ್ಟು ಮುಂದೆ ಹಗಲು ಗಂಟೆ 11ಕ್ಕೆ ನೀವು ಹಾಜರಾಗಿ ವ್ಯಾಜ್ಯ ನಡೆಸತಕ್ಕದ್ದು. ತಪ್ಪಿದ್ದ, ನಿಮ್ಮ ಗೈರು ಹಾಜರಿಯಲ್ಲಿ ಈ ವ್ಯಾಜ್ಯ ತೀರ್ಮಾನಿಸಲ್ಪಡುವುದು.

B. S. Hegde,
Vakil for Plaintiff,

ಉಡುಪಿ,
D/ 30-4-69.

ಮಧ್ಯಾವಧಿಯ ಊಹಾಪೋಹ

ರಾಷ್ಟ್ರಪತಿ ಡಾ| ಜಾಕೀರ್ ಹುಸೇನರ ಅಕಾಲ ಮತ್ತು ಅನಿರೀಕ್ಷಿತ ನಿಧನವು ಭಾರತಕ್ಕೊಂದು ಬಲವಾದ ಆಘಾತವೆನ್ನಲಡ್ಡಿಯಿಲ್ಲ. ಡಾ| ಹುಸೇನ ಸಾಹೇಬರ ಗುಣ—ಸ್ವಭಾವ, ದೇಶನಿಷ್ಠೆ—ದೇಶಸೇವೆಗಳ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳೂ ಮುಕ್ತ ಕಂಠದಿಂದ ಪ್ರಶಂಸಿಸಿವೆ. ಈ ಪ್ರಶಂಸೆ 'ಸತ್ತ ಎಮ್ಮೆಗೆ ಬೇಳೆ ಹಾಲು' ಎಂಬ ನೀತಿಯಲ್ಲ; ಹುಸೇನ ಸಾಹೇಬರ ವ್ಯಕ್ತಿತ್ವವೇ ಹಾಗೆ. ದೇಶ ವಿದೇಶಗಳ ನಾಯಕ ಮಣಿಗಳ ಸೇರಿಕೆಯೊಡನೆ ರಾಷ್ಟ್ರಗೌರವದೊಡನೆ ಡಾ| ಹುಸೇನರ ಅಂತ್ಯ ಸಂಸ್ಕಾರವನ್ನು ಮಾಡಿ ಮುಗಿಸಲಾಯಿತು. ಹದಿಮೂರು ದಿನಗಳ ಶೋಕವೂ ಕೊನೆಯ ಘಟ್ಟದಲ್ಲಿ ಬಂದು ನಿಂತಾಯ್ತು. ಗಣ್ಯ ರಾಜಕೀಯ ಅತಿಥಿಗಳು ತಂತಮ್ಮ ದೇಶಗಳಿಗೆ ಎಂದೋ ಮರಳಲಾಯಿತು. ಇನ್ನು ಉಳಿದಿರುವುದು ಒಂದೇ ಪ್ರಶ್ನೆ—ಡಾ| ಜಾಕೀರ್ ಸಾಹೇಬರ ಉತ್ತರಾಧಿಕಾರಿ ಯಾರು?

ಈ ಪ್ರಶ್ನೆಯ ಬಗ್ಗೆ ವಿವೇಚಿಸುವುದಕ್ಕೆ ಮೊದಲು ತುಸು ಪರಿಶೀಲನೆ ಅನಗತ್ಯವಾಗದು. ಸ್ವತಂತ್ರವಾದೊಡನೆಯೇ ಲಾರ್ಡ್ ಮೌಂಟ್ ಬ್ಯಾಟನವರನ್ನೇ ಗವರ್ನರ ಜನರಲರೆಂದು ನಾವಿಟ್ಟುಕೊಂಡೆವು. ಮುಂದೆ ಭಾರತೀಯ ಪ್ರಥಮ ಗವರ್ನರ ಜನರಲ್ಲಾಗಿ ಚಕ್ರವರ್ತಿ ರಾಜಗೋಪಾಲಾಚಾರಿಯವರು ನಿಯುಕ್ತರಾದರು. ರಾಜಾಜಿಯವರು ಗಾಂಧೀಜಿಯ ಶಿಷ್ಯರು, ಸ್ವಾತಂತ್ರ್ಯ ಯುದ್ಧದಲ್ಲಿ ಸಕ್ರಿಯವಾಗಿ, ರಚನಾತ್ಮಕವಾಗಿ ಹೋರಾಡಿದವರು. ದೇಶ ಸ್ವತಂತ್ರ ಸಾರ್ವಭೌಮ ರಾಷ್ಟ್ರವಾದಾಗ ಗವರ್ನರ ಜನರಲ್ ಹುದ್ದೆಯು ರದ್ದಾಗಿ ರಾಷ್ಟ್ರಪತಿಗಳ ಆಯ್ಕೆ ನಡೆಯಬೇಕಾಯ್ತು.

ಆ ಸಮಯದಲ್ಲಿ ಕಾಂಗ್ರೆಸ್ಸು ರಾಜ್ಯಗಳಲ್ಲೂ ಕೇಂದ್ರದಲ್ಲೂ ಪ್ರಚಂಡ ಬಹುಮತ ಪಡೆದಿತ್ತು. ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳ ಸದಸ್ಯರ ಮತದಿಂದ ಆಯ್ಕೆಯಾಗುವ ರಾಷ್ಟ್ರಪತಿ ಅಥವಾ ಉಪರಾಷ್ಟ್ರಪತಿ ಪದಗಳ ಮೇಲೆ ರಾಜಕೀಯ ಪಕ್ಷದ ಪ್ರಭಾವವು ಬೀಳುವುದು ಅನಿವಾರ್ಯ. ರಾಜಾಜಿಯವರ ಸರ್ವೋಚ್ಚ ಹುದ್ದೆಗೆ ಡಾ| ರಾಜೇಂದ್ರ ಬಾಬುರವರ ಆಯ್ಕೆಯಾಯಿತು. ಡಾ| ರಾಧಾಕೃಷ್ಣನ್ ಉಪರಾಷ್ಟ್ರಪತಿಗಳಾದರು. ಈ ಇವರೂ ತಮ್ಮ ಹುದ್ದೆಯಲ್ಲಿ ಎರಡು ಅವಧಿಗಳಷ್ಟು ಕಾಲ ಮುಂದುವರಿದರೆಂಬುದು ಉಲ್ಲೇಖಾರ್ಹ (೧೦ ವರ್ಷಗಳು).

ಡಾ| ರಾಜೇಂದ್ರ ಪ್ರಸಾದರು ರಾಜಕೀಯವಾಗಿಯೇ ಮೇಲೆ ಬಂದ ವ್ಯಕ್ತಿ. ಮಹಾತ್ಮರ ಅನುಚರರಾಗಿ ಸತ್ಯಾಗ್ರಹ—ಅಹಿಂಸೆಯ ಕೈವಾರಿಗಳಾಗಿ ಪ್ರಸಿದ್ಧಿಗೆ ಬಂದವರು. ಕಾಂಗ್ರೆಸ್ ಪಕ್ಷಯೇ ಉಳಿದುಕೊಂಡು ದೇಶಸೇವೆ ಮಾಡಿದವರು. ಆರೋಗ್ಯದ ದೃಷ್ಟಿಯಿಂದ ಅವರು ನೆಮ್ಮದಿಯಲ್ಲಿರಲಿಲ್ಲವಾದರೂ ಹತ್ತು ವರ್ಷಗಳ ಕಾಲ ಪಂಡಿತ ನೆಹರೂರವರ "ಪ್ರಜಾಸತ್ತಾತ್ಮಕ ಸರ್ವಾಧಿಕಾರ"ವನ್ನು ಪುರಸ್ಕರಿಸುತ್ತ ಮುಂದುವರಿದರು.

ಮುಂದೆ ರಾಷ್ಟ್ರಪತಿಯಾದ ಡಾ| ರಾಧಾಕೃಷ್ಣನ್ ರಾಜಕಾರಣಿಯಲ್ಲ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸೋವಿಯತ್‌ನಲ್ಲಿ ಭಾರತದ ರಾಯಭಾರಿಯಾಗಿ ಅವರು ಅಧ್ಯಾಪನ ವೃತ್ತಿಯಿಂದ ರಾಜಕೀಯಕ್ಕಿಳಿದರು. ರಾಜೇನ್ ಬಾಬುಗಳು ರಾಷ್ಟ್ರಪತಿಗಳಾಗಿದ್ದಾಗ, ಉಪರಾಷ್ಟ್ರಪತಿಯಾಗಿ, ಅವರು ನಿವೃತ್ತರಾದಾಗ, (ಅಥವಾ ತಾವಿನ್ನು ಎಷ್ಟು ಮಾತ್ರಕ್ಕೂ ಮುಂದುವರಿಯಲಾರೆನೆಂದು ಹಟ ತೊಟ್ಟಾಗ) ಆ ಹುದ್ದೆಗೇರಲು ಒಪ್ಪಿದರು—ಪಂಡಿತ ನೆಹರೂರವರ ನಾಯಕತ್ವದಲ್ಲಿ ಅವರು ರಾಷ್ಟ್ರಪತಿಗಳಾದರು. ಡಾ| ಜಾಕೀರ್ ಹುಸೇನ್ ಸಾಹೇಬರು ಉಪರಾಷ್ಟ್ರಪತಿಗಳಾದರು.

ಈ ಜೋಡಿಯು ಒಂದು ಅವಧಿಯಲ್ಲೇ ತೃಪ್ತವಾಯಿತು. ಈ ಐದು ವರ್ಷಗಳ ಕಾಲ ದೇಶದ ಪರೀಕ್ಷಾರಂಗವೇ ಆಗಿತ್ತೆನ್ನಬಹುದು. ಚೀನಾದ ಗಡಿತಂಟೆ, ಪಾಕ್ ಆಕ್ರಮಣ, ಪ್ರಧಾನಿಗಳಾಗಿದ್ದ ಪಂಡಿತ ನೆಹರು ಮತ್ತು ಲಾಲಬಹದ್ದೂರು ಶಾಸ್ತ್ರಿಗಳವರ ನಿಧನ, ದೇಶದಲ್ಲಿ ಬರಗಾಲ, ಕೈಗಾರಿಕೆಯ ಕುಸಿತ....ರಾಜಕೀಯ ಅಭದ್ರತೆ...ಒಂದೇ, ಎರಡೇ, ಹತ್ತಾರು ಸಂಕಟಗಳು ದೇಶವನ್ನು ಕಾಡಿದವು. ಇವುಗಳನ್ನು ಎದುರಿಸಲು ಕೇಂದ್ರ-ರಾಜ್ಯಸರಕಾರಗಳು ಅನುಸರಿಸಿದ ಮಾರ್ಗ ಸೃಷ್ಟಿಸಲಿಲ್ಲವಾದರೂ ಭಿನ್ನಾಭಿಪ್ರಾಯಗಳಿದ್ದುವು; ಆದರೆ, ದೇಶದ ರಾಜಕೀಯ ಪರಿಧಿಯಲ್ಲಿ ನಡೆದ ಸಂಘರ್ಷಗಳು ಸಂದೇಹಕ್ಕೆ ಕೇವಲ ಮಾರ್ಗವಾಯ್ತು. ಹಿರಿಯ ರಾಜಕೀಯ ಪಕ್ಷ ಕಾಂಗ್ರೆಸ್ಸು ಸೂಕ್ತ ಮಾರ್ಗದರ್ಶನ—ವಿವೇಚನೆಯಿಲ್ಲದೆ ಗಾಳಿ ಬಂದತ್ತ ತೂರಿಕೊಳ್ಳುವ ಜಾಡ್ಯಕ್ಕೆ ಗುರಿಯಾಯಿತು. ಪರಸ್ಪರ ಅಧಿಕಾರ ದಾಹ, ವೈಮನಸ್ಯ, ದ್ವೇಷ, ಸ್ವಾರ್ಥಗಳು ಎಲ್ಲ ರಾಜಕೀಯ ಪಕ್ಷಗಳಲ್ಲೂ ಹಾಸುಹೊಕ್ಕಾಗಿ ದೇಶದ ಪ್ರಗತಿಗೆ, ಸರ್ವಾಂಗೀಣ ಉನ್ನತಿಗೆ ಭಾದಕವಾದುವು.

ಡಾ| ರಾಧಾಕೃಷ್ಣನ್ ಎರಡನೆಯ ಅವಧಿಗೆ ರಾಷ್ಟ್ರಪತಿಯಾಗಿರಲು ಒಪ್ಪಲಿಲ್ಲ. ಕಾರಣ? ತನ್ನ ಆರೋಗ್ಯ—ದೇಹಸ್ಥಿತಿ ನೆಟ್ಟಗಿಲ್ಲವೆಂಬುದು ಅವರು ಮುಂದೆ ಮಾಡಿದ ಕಾರಣ. 'ಬಹುಮತವನ್ನು ಮುಷ್ಟಿಯಲ್ಲಿ ಬಿಗಿಹಿಡಿದುಕೊಂಡಿರುವ' ಕಾಂಗ್ರೆಸ್ ಪಕ್ಷದ ಪ್ರಧಾನಿ ಇಂದಿರಾ ಗಾಂಧಿಯವರು ಅವರ ಮೇಲೆ ಒತ್ತಾಯ ಹೇರಲಿಲ್ಲವೇನೋ? ಕೆಲವಾರು ರಾಜಕೀಯ ಪಕ್ಷಗಳು ಡಾ| ರಾಧಾಕೃಷ್ಣನ್ನರೇ ಮತ್ತೊಂದು ಅವಧಿ ಮುಂದುವರಿಯಲಿ ಎಂಬ ಆಶಯ ಹೊಂದಿದ್ದರೂ ಕಾಂಗ್ರೆಸ್ಸಿನ ಅಪೇಕ್ಷೆ ಮತ್ತು ರಾಧಾಕೃಷ್ಣನ್ನರ ಅಚಲ ನಿರ್ಧಾರದಿಂದಾಗಿ ಅದು ಈಡೇರಲಿಲ್ಲ. ತನ್ನ ನಿವೃತ್ತಿಗೆ ಮೊದಲು ಪ್ರಜಾರಾಜ್ಯ ದಿನದಂದು ಅವರು ಮಾಡಿದ ಭಾಷಣ ವಿದಾಯ ಭಾಷಣವನ್ನೇ ಹೋಲುತಿತ್ತು—ಸರಕಾರದ ವರ್ತನೆಯ ಬಗ್ಗೆ ಅಸಮಾಧಾನವೂ ಇತ್ತು ಎಂಬುದು ಒಂದು ಅಭಿಪ್ರಾಯ.

ಅಂತೂ 'ಗಂಡಾಂತರ ಕಾಲದ' ರಾಷ್ಟ್ರಪತಿಯವರು ನಿವೃತ್ತರಾದಾಗ, ಮುಂದಾರು? ಆಗ ಉಪಾಧ್ಯಕ್ಷರಾಗಿದ್ದ ಡಾ| ಹುಸೇನ ಸಾಹೇಬರನ್ನು ಪ್ರಧಾನಿ ಗಾಂಧಿಯವರು ಬೆಂಬಲಿಸಿದರು. ಪಕ್ಷದೊಳಗೆ ತುಸು ಭಿನ್ನಮತ ತಲೆದೋರಿದರೂ ಅದನ್ನು ಅಣಗಿಸುವಲ್ಲಿ ಅವರು ಸಮರ್ಥರಾದರು. 'ವಿರೋಧ ಪಕ್ಷೀಯರ ಅಭ್ಯರ್ಥಿಯಾಗಿದ್ದ, ಇದಕ್ಕಾಗಿಯೇ ರಾಜಿನಾಮೆಯಿತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಪತಿ ಕೋಕಾ ಸುಬ್ಬರಾಯರ ಮೇಲೆ ಡಾ| ಹುಸೇನ ಸಾಹೇಬರು ಪ್ರಚಂಡ ವಿಜಯ ಗಳಿಸುವಂತೆ ಮಾಡುವಲ್ಲಿಯೂ ಶ್ರೀಮತಿ ಗಾಂಧಿ ಯಶಗಳಿಸಿದರು. 'ಕಾಫಿರ'ರ ದೇಶದಲ್ಲಿ ಮುಸಲ್ಮಾನನೊಬ್ಬನು ರಾಷ್ಟ್ರಪತಿಯಾದ ಘಟನೆ ವಿದೇಶಗಳಲ್ಲೂ ಪ್ರಶಂಸೆಗೆ ಗುರಿಯಾಯಿತು; ಭಾರತದ ಜಾತ್ಯತೀತ ಅಥವಾ ಧರ್ಮ ನಿರಪೇಕ್ಷ ನೀತಿಗೊಂದು ಜ್ವಲಂತ ನಿದರ್ಶನವಾಯ್ತು. ಭಾರತದ ಆದರ್ಶ ವಿಶ್ವ ಜನಾದರಣೀಯವಾಯ್ತು.

ಇದೀಗ ಅನಿರೀಕ್ಷಿತವಾಗಿ ಮತ್ತೊಂದು ಬಾರಿ ರಾಷ್ಟ್ರಪತಿ ಆಯ್ಕೆ ನಡೆಯಬೇಕಾದ ಸಂದರ್ಭ. ಭಾರತದ ಇದುವರೆಗಿನ ಸಂಪ್ರದಾಯ—ಎರಡೂ ಬಾರಿಯೂ—ಉಪರಾಷ್ಟ್ರಪತಿಗಳನ್ನೇ ರಾಷ್ಟ್ರಪತಿಗಳನ್ನಾಗಿ ಆಯ್ದುಕೊಳ್ಳುವುದು—ಇದನ್ನೇ ಮುಂದುವರಿಸಬೇಕೆ? ಅಥವಾ ಬೇರೆಯೇ ದಾರಿ ತುಳಿಯಬೇಕೆ?

'ಬಹುಮತ'ಯ ಕಾಂಗ್ರೆಸ್ಸು ತಳೆ

IN THE COURT OF THE CIVIL JUDGE, UDIPI

I. A. 1 in Unregistered Appeal

Between

Laxminarayana Hebbara, S/O Annappa Hebbara, Siddapur village, Kundapur Taluk.

—*Petitioner (Appellant.*

and

1 Sooramma Shedthi D/o Kaveri Shedthi 2. Ananda Shetty, 3 Jalajakshi Shedthi —Children of No 1. All are residing Kirladi Hosamane of Siddapur village, Kundapur Taluk.

—*Respondents.*

To

The Respondents.

The above petition filed by the petitioner for extension of time for representing the appeal is posted to 4-6-1969 and you are therefore called upon to appear before this court that day at 10 A.M. Please take notice that if you fail to appear, the court will proceed ex-parte in the matter

(By order of the Court)

Y. T. Shetty, B. A., B. L.,
Advocate for Petitioner.

Udipi, 10-5-1969.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

...ವ ನಿರ್ಧಾರವನ್ನು ಉಳಿದ ಪಕ್ಷಗಳು ...ತ್ರಿಸಿವೆ. ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ಕಾಲದಲ್ಲಿ ಕಾಂಗ್ರೆಸ್ ... ತಂಬಿಕೊಳ್ಳುವ ಬಹುಮತ ಪಡೆದಿದ್ದರೂ ಒಟ್ಟಿನಲ್ಲಿ ಬಹುಮತವನ್ನು ಪ್ರಚಂಡವೆಂಬಂತೆಯೇ ಉಳಿಸಿಕೊಂಡಿತ್ತು. ಈ ಎರಡು ವರ್ಷಗಳಲ್ಲಿ ಮತ್ತೆ ಹಲವು ಸ್ಥಾನಗಳನ್ನು ಕಾಂಗ್ರೆಸ್ಸು ಕಳೆದುಕೊಂಡಿದ್ದರೂ ಅದು ಬಹುಮತವನ್ನು ಬಿಗಿಹಿಡಿದುಕೊಂಡೇ ಇದೆ. ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳಲ್ಲಿ ... ಮತಗಳ ಮೌಲ್ಯ ... ಕಾಂಗ್ರೆಸ್ ... ಮತ ಮೌಲ್ಯವನ್ನು ಕೂಡಿದರೆ, ಅಂದರೆ, ಸುಮಾರು ೫೦,೦೦೦ದಷ್ಟು ಬಹುಮತ ಪಡೆದಿದೆ. ಆದುದರಿಂದ ಇಂದಿನ ಪರಿಸ್ಥಿತಿಯೇ ಮುಂದುವರಿದರೆ, ಕಾಂಗ್ರೆಸ್ ಪಕ್ಷವು ಆಯ್ಕೆಮಾಡುವ ಅಭ್ಯರ್ಥಿ ಗೆದ್ದು ಬರುವುದು ಖಂಡಿತ.

ಇದ್ದ ಪರಿಸ್ಥಿತಿಯೇ ಮುಂದುವರಿಯುವುದೇ ಎಂದರೇನು? ಕಳೆದೆರಡು ವರ್ಷಗಳ ... ಪಕ್ಷಾಂತರ—ಪ್ರತಿ ಪಕ್ಷಾಂತರಗಳು ನಡೆದು ರಾಜಕೀಯ ವಾತಾವರಣವನ್ನು ಅಸ್ತವ್ಯಸ್ತಗೊಳಿಸಿವೆ. ಪಕ್ಷಗತ... ಹೋದ ಈ ಗುಂಪಿನಿಂದಾಗಿ ಕಾಂಗ್ರೆಸ್ಸು ಅಂಜಲೇಬೇಕಾಗಿದೆ. ಮಧ್ಯಪ್ರದೇಶದ ರಾಜಕೀಯ ನಾಟಕದಲ್ಲಿ ... ಹೊಸ ... ಈಗ ತಾನೇ ಆರಂಭವಾಗಿದ್ದು ಯಾವಾಗಲಾದರೂ ಮರಳಿ ... ಬಹುದು. ಆದರೆ ಇಲ್ಲಿಯೂ ... ಪ್ರವೃತ್ತಿ ಪದೋಭಿವೃದ್ಧಿಯಲ್ಲ ... ಎಂದು ... ಬಹುದು. ಆದುದರಿಂದ ರಾಷ್ಟ್ರಪತಿಗಳ ಆಯ್ಕೆಯು ಪ್ರಶ್ನೆಯು ಕಾಂಗ್ರೆಸ್ ಪಕ್ಷದ 'ಆಂತರಿಕ ಪ್ರಶ್ನೆ' ಎಂಬ ವಿರೋಧ ಪಕ್ಷಗಳ ವಾದದಲ್ಲಿ ... ಕಾಂಗ್ರೆಸ್ ಪಕ್ಷವು ಯಾವ ನಿರ್ಧಾರವನ್ನು ಮಾಡಲಿದೆ ಎಂಬುದನ್ನೇ ಅವರು ... ನೋಡುತ್ತಾರೆ.

ರಾಷ್ಟ್ರಪತಿಗಳ ಆಯ್ಕೆಯು ಆಗಸ್ಟ್ ... ಗಳಲ್ಲಿ ನಡೆಯುವ ನಿರೀಕ್ಷೆ ಇರುವುದರಿಂದ ಆ ಸಂಬಂಧದಲ್ಲಿ ... ಅನಗತ್ಯವೆಂಬಂತೆ ಕಾಂಗ್ರೆಸ್ಸಿನ ... ಜೂನ್ ತಿಂಗಳ ಕೊನೆಯೊಳಕ್ಕೆ ಕಾಂಗ್ರೆಸ್ಸು ಈ ವಿಷಯದಲ್ಲಿ ಗಂಭೀರವಾಗಿ ಆಲೋಚಿಸಬೇಕಾದ ... ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ವಿದೇಶೀ ಪ್ರವಾಸಕ್ಕೆ ಹೊರಡಲಿದ್ದು ಆ ವೇಳೆಗೆ ಮರಳಿ ಬರಲಿರುವರು.

ಈ ನಡುವೆ ಏನೇ ನಡೆದರೂ ಅದು ಕುರಿತು ಊಹಾಪೋಹ. ಇದಕ್ಕೆ ಒಂದೊಂದು ವರ್ಗದ ಬೆಂಬಲವಿರುವಂತಾದರೂ ಅಧಿಕೃತ ಊಹೆ ... ಶಕ್ತಿಯಿಲ್ಲ. ಕಾಂಗ್ರೆಸ್‌ನ ... ಡಾ। ಹುಸೇನ ಸಾಹೇಬರನ್ನು ಸರ್ವೋಚ್ಚ ಸ್ಥಾನಕ್ಕೇರಿಸಿ, ಭಾರತವು ತನ್ನ ಜಾತ್ಯತೀತತೆಯನ್ನು ಪ್ರಬಲವಾಗಿ ಪ್ರತಿಪಾದಿಸಿದಂತೆಯೇ ಈಗ ಶ್ರೀ ಜಗಜ್ಜೀವನರಾಮರನ್ನು ಆರಿಸಿ ಜಾತ್ಯತೀತತೆಯನ್ನು ಮತ್ತೊಮ್ಮೆ ಎತ್ತಿಹಿಡಿಯಬೇಕೆನ್ನುವವರ ಕೆಲವ... ಮಹಾತ್ಮರ ಜನ್ಮಶತಾಬ್ದಿಯನ್ನು ದೇಶ ವಿದೇಶಗಳಲ್ಲಿ ಆಚರಿಸುವ ಈ ವರ್ಷ ಅವಶ್ಯವಾಗಿ ರಾಷ್ಟ್ರಪತಿಗಳನ್ನು ಆರಿಸುವ ... ಒದಗಿದ್ದು, ಮಹಾತ್ಮರ ಅಪೇಕ್ಷೆಯಂತೆ ಹರಿಜನನನ್ನು ಆ ಸ್ಥಾನಕ್ಕೆ ಏರಿಸಬೇಕೆಂಬುದು ಇದಕ್ಕೆ ... ಗಾಂಧಿ ಆದರ್ಶಗಳನ್ನು ಎತ್ತಿಹಿಡಿಯುವುದರಿಂದಲೇ ಏನೂ ಸಾಧಿಸಿದಂತಾಗದು; ಹಾಗೆಂದು ಆದರ್ಶಗಳನ್ನು ಸಂಪೂರ್ಣವಾಗಿ ಒಲಿಗೊಡುವುದೂ ಆಗದ ಮಾತು. ಶ್ರೀ ಜಗಜ್ಜೀವನರಾಮರ ... ಹರಿಜನ ... ಬೆಂಬಲಿಸುತ್ತಾರೆ, ... ಬಲ ... ದಿಂದ, ಬುದ್ಧಿ, ... ಆದರ್ಶದ ... ಇದನ್ನು ಸಮರ್ಥಿಸುವರು. ಆದರೆ, ರಾಷ್ಟ್ರಪತಿ ಆಯ್ಕೆಯಲ್ಲಿ ವರ್ಗ, ರಾಜ್ಯ ಮತ್ತು ಆದರ್ಶಗಳು ಮಾತ್ರ ಪರಿಗಣಿಸಲ್ಪಡುವುದೇ? ದೇಶದ ಪ್ರಥಮ ಪ್ರಜೆಯ ... ಗೌರವಾರ್ಹ... ಬೇಕೆಂಬುದನ್ನು ಮರೆಯಬಾರದು.

ಕಾಂಗ್ರೆಸ್ಸಿನ ಇನ್ನೊಂದು ವರ್ಗ ಸಂಪ್ರದಾಯವನ್ನು ಬಿಗಿಹಿಡಿದು ಉಪರಾಷ್ಟ್ರಪತಿಗಳಾಗಿದ್ದು, ಸದ್ಯ ಹಂಗಾಮಿ ರಾಷ್ಟ್ರಪತಿಯಾಗಿರುವ ಶ್ರೀ ವಿ. ವಿ. ಗಿರಿಯವರನ್ನೇ ಏರಿಸಿಬಿಡಬೇಕು ಎಂದಿದೆ. ಆಗ, ಉಪರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆ ನಡೆಯಬೇಕಾಗುತ್ತದೆ. ಮುಂದೆ ಏಕಕಾಲದಲ್ಲಿಯೇ ಎರಡೂ ಸ್ಥಾನಗಳನ್ನು ತುಂಬಲು ಅನುಕೂಲವಾಗುತ್ತದೆ.

ಇನ್ನು, ಸದ್ಯ ಕಾಂಗ್ರೆಸ್ ಅಧ್ಯಕ್ಷರಾಗಿರುವ ಶ್ರೀ ನಿಜಲಿಂಗಪ್ಪ, ಲೋಕಸಭೆಯ ಅಧ್ಯಕ್ಷರಾಗಿರುವ ನೀಲಂ ಸಂಜೀವರೆಡ್ಡಿ, ಕಾಂಗ್ರೆಸ್‌ನ ಹಿಂದಿನ ಅಧ್ಯಕ್ಷ ಕಾಮರಾಜ, ಮಾಜಿ ಸುಪ್ರೀಂಕೋರ್ಟ್ ನ್ಯಾಯಾಲಯದ ನ್ಯಾಯಪತಿ ಗಜೇಂದ್ರಗಡಕರ್ ಹೀಗೆ ಕೆಲವು ಹೆಸರುಗಳು ಮುಂದೆ ಬಂದಿವೆ. ಜಗಜ್ಜೀವನರಾಮರು ಸಕ್ರಿಯ ರಾಜಕೀಯದಿಂದ ದೂರ ಸರಿಯಲು ತಯಾರಿದ್ದಾರೆಯೆ ಎಂಬುದೊಂದು ಪ್ರಶ್ನೆ. ಇದಕ್ಕೆ ಅವರೇ ಉತ್ತರ ನೀಡಬೇಕು. ನಿಜಲಿಂಗಪ್ಪನವರೂ ಅಷ್ಟೆ. ರಾಜಕೀಯದಿಂದಲೇ ದೂರ ಸರಿದು ... ಗಜೇಂದ್ರಗಡಕರ— ರಾ... ರ ಬಗ್ಗೆ ಈಗೇನೂ ಹೇಳಲಾಗದು. ಒಟ್ಟು ಸಿಕ್ಕನ್ನು ಈ ಸ್ಥಾನಕ್ಕೇರಿಸಬೇಕೆಂಬ ಹಿಂದಿ ಮತ್ತು ಪ್ರಾದೇಶಿಕ ಭಾವನೆಯ ಸಂಕೇತ. ಅಖಿಲ ಭಾರತದಲ್ಲಿ ... ಯಾರು? ... ಸ್ಥಾನವೇರುವವರು ಇನ್ನು ಮುಂದೆ ದೊರೆಯಲಾರರು ... ರಾಷ್ಟ್ರಪತಿಗಳ ಆಯ್ಕೆ ಯೋಗ್ಯತೆಯ ... ಆಗಬೇಕು, ಅಂತಹವರಿಗೆ ... ಪ್ರಭುತ್ವದಲ್ಲಿ ಅಚಲ ನಿಷ್ಠೆಯಿರಬೇಕು ಎಂಬುದು ನಿಜ.

ಲಂಡನ್ ನಗರದ ವಾರ್ತಾಪತ್ರಿಕೆಗಳಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಹೆಸರು ಪ್ರಕಟವಾಗಿದೆ. ಆದರೆ, ಇದಕ್ಕೆ ಮತ್ತಾವ ಬೆಂಬಲವೂ ಇದ್ದಂತಿಲ್ಲ. ವಿರೋಧ ಪಕ್ಷೀಯರು ಒಂದಾಗಿ ಯಾರನ್ನಾದರೂ ನಿಲ್ಲಿಸುವರೆ? ಹಿಂದೊಮ್ಮೆ ಸ್ಪರ್ಧಿಸಿದ್ದ ನಿವೃತ್ತ ನ್ಯಾಯಾಧೀಶ ಕೋಕಾ ಸುಬ್ಬರಾಯರನ್ನೇ ಅವು ನಿಲ್ಲಿಸಿಯಾವೆ? ಸರ್ವೋದಯ ನಾಯಕ ಶ್ರೀ ಜಯಪ್ರಕಾಶನಾರಾಯಣರ ಹೆಸರೂ ಕೇಳಿಬರುತ್ತಿದೆ. ಗೌರವವಿದ್ದರೂ ಅವರ ಬಗ್ಗೆ ಕಾಂಗ್ರೆಸ್ ತಳೆಯುವ ನೀತಿ ... ಜಯಪ್ರಕಾಶ ... ಅರಿಕೆಯಿಂದ ಬಾರದು.

ಈ ಮಧ್ಯೆ ಇನ್ನೊಂದು ಪ್ರಶ್ನೆಯೂ ಇದೆ. ಸದ್ಯ ಹಂಗಾಮಿ ... ರಾಷ್ಟ್ರಪತಿಗಳಾದ ಶ್ರೀ ಗಿರಿಯವರು ಇಚ್ಛಿಸಿದಲ್ಲಿ, ಅವರನ್ನು ರಾಷ್ಟ್ರಪತಿಯಾಗಿ ಆಯ್ಕೆ ಮಾಡಲು ಕಾಂಗ್ರೆಸ್ಸು ನಿರಾಕರಿಸಿದರೆ, ಅವರು ಉಪರಾಷ್ಟ್ರಪತಿಯಾಗಿಯೇ ಮುಂದುವರಿದಾರೆ? ಇಲ್ಲವೆಂಬ ಉತ್ತರದಲ್ಲಿ ಬಹಳಷ್ಟು ಸತ್ಯಾಂಶವಿದೆ. ಹಾಗಾದಲ್ಲಿ ಏನು ಮಾಡಬೇಕು?

ದಕ್ಷಿಣ ಭಾರತದ ಗಿರಿಯವರು ರಾಷ್ಟ್ರಪತಿಯಾದರೆ ಉತ್ತರ ಭಾರತದ ಜಗಜ್ಜೀವನರಾಮರು ಉಪರಾಷ್ಟ್ರಪತಿಯಾಗಬಹುದು. ಅಥವಾ ಪ್ರತ್ಯೇಕವಾಗಿಯೂ ಮಾಡಬಹುದು. ಆದರೆ, ಶ್ರೇಷ್ಠ ನ್ಯಾಯಾಧೀಶ ಹಿದಾಯತುಲ್ಲಾ ಆಯ್ಕೆ ಮಾತ್ರ ಅಸಂಭವವೆಂದೇ ಹೇಳಬೇಕು.

ಇವೆಲ್ಲ ಬರಿಯ ಊಹಾಪೋಹ. ನಿಜಸ್ಥಿತಿಯೇನು? ಕಾದು ನೋಡಬೇಕು.



NAVAYUGA

Supplement on

INDUSTRY & TRADE

Prof K S Haridas Bhat, M A
Guest Editor for the Industrial
and Trade Supplement of
Navayuga

'NAVAYUGA' one of the most reputed weeklies of Mysore State proposes to issue a supplement on INDUSTRY & TRADE with a view to highlight the problems of and prospects for industrial and commercial development of the State of Mysore

You are certainly aware that the State of Mysore with 1?0 miles of coast line rich natural resources and an abundant supply of electricity, still languishes for lack of industrial leadership Inspite of 20 years of independence and the few pockets of industrial prosperity like Bangalore and Bhadravathi, the impact of industrial development is least felt in the State The Government also has been finding it difficult to make compelling and adequate case in the Centre for industrial licensing in the State The net result has been a classic example of "poverty in the midst of plenty".

It is therefore essential that the public should be well impressed of the issues involved so that their attitude may become development-oriented and the hands of the Government strengthened in its fight for rights.

Our supplement will consist of important contributions from State Ministers, Industrial executives bankers and other businessmen It will be fully illustrated and brought out according to high standards of journalism that this weekly has attained over the years

Needless to say that a supplement like this would form an effective medium to advertise your goods and services It will reach both the classes and the masses of Mysore State

We are glad to accept a brief account of your firm, its Directors and leaders (Limit 100 words). Please send in your material with blocks and stereos if any on or before May 15th 1969. The supplement will come out on May 25th 1969

ADVT MANAGER,
NAVAYUGA,
UDIPI, S. K.

ಜರ್ಮನಿಯಲ್ಲಿ ಸಂಸ್ಕೃತ ತಜ್ಞರು

ಜರ್ಮನರು ಕಳೆದ ೨೦೦ ವರುಷಗಳಿಂದ ಭಾರತೀಯ ಸಾಹಿತ್ಯ ಮತ್ತು ಜ್ಞಾನಕ್ಕೆ ಆಕರ್ಷಿತರಾಗಿದ್ದಾರೆ. ಜರ್ಮನಿಯಲ್ಲುದ್ಭವಿಸಿದ ಅದ್ಭುತ ಚಳವಳಿ (ರೋಮೆಂಟಿಕ್ ಚಳವಳಿ) ಇತರ ರಾಷ್ಟ್ರಗಳಲ್ಲಿರುವ ಕಲೆ ಸಾಹಿತ್ಯ ಮತ್ತು ಜ್ಞಾನಾತ್ಮಕ ಶೋಧಗಳನ್ನು ನಡೆಯಿಸಲು ಪ್ರಚೋದಿಸಿತು. ಈ ಚಳವಳಿಯಿಂದಾಗಿ ಜರ್ಮನಿಯಲ್ಲಿ ಭಾರತೀಯ ಸಾಹಿತ್ಯ, ಭಾಷೆ ಕಲೆ ಎತ್ತತೊಡಗಿತು. ಯುರೋಪಿನಲ್ಲಿ ಮೊತ್ತಮೊದಲಾಗಿ ಕಾಣಿಸಿಕೊಂಡ ಸಂಸ್ಕೃತ ವ್ಯಾಕರಣವನ್ನು ಬರೆದವರು ಜರ್ಮನಿಯ ಪಾದ್ರಿ ಪೀಟರ್ ಹೆನ್‌ಲೀಟ್‌ರೋಡ್. ಅನಂತರದ ಸಂಸ್ಕೃತ ವ್ಯಾಕರಣದ ಪ್ರಖ್ಯಾತ ಕರ್ತರು ಕೂಡಾ ಜರ್ಮನಿಯ ಜೊಹೆನ್ನೀಸ್ ಅರ್ನೆಸ್ಟ್ ಹನ್ಕ್ಸ್‌ಲೆಡನ್. ಇವರಿಬ್ಬರೂ ತಮ್ಮ ಜೀವಮಾನವನ್ನು ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಕಲಿಯಲು ವಿನಿಯೋಗಿಸಿರುವರು.

೧೮೦೨ರಲ್ಲಿ ಜರ್ಮನಿಯಲ್ಲಿ ಮೊತ್ತಮೊದಲಾಗಿ ಸಂಸ್ಕೃತವನ್ನು ಕಲಿತ ವಿದ್ವಾಂಸ ಫ್ರೆಡ್ರಿಚ್ ಓನ್ ಶ್ಲೇಗೆಲ್. ಈತ ಶಿಕ್ಷಣದ ತರುವಾಯ 'ಭಾರತೀಯ ಭಾಷೆ ಮತ್ತು ಜ್ಞಾನ' ಎಂಬ ಹೆಸರಿನಲ್ಲಿ ಪುಸ್ತಕವನ್ನು ಬರೆದನು. ಈ ವಿದ್ವಾಂಸರ ಹಿರೇ ಸಹೋದರ ಅಗಸ್ಟಸ್ ವಿಲ್‌ಹೆಲ್ಮ್ ಓನ್ ಶ್ಲೇಗಲ್, ಶೇಕ್ಸ್‌ಪಿಯರ್ ನಾಟಕಗಳ ಭಾಷಾಂತರವನ್ನು ಮಾಡಿದರು. ೧೮೧೮ರಲ್ಲಿ ಬೋನ್ ವಿಶ್ವವಿದ್ಯಾಲಯದಲ್ಲಿ ಇವರು ಪ್ರಥಮ ಸಂಸ್ಕೃತ ಪ್ರೊಫೆಸರರಾಗಿದ್ದರು. ಇವರು ಕೂಡಾ ಭಾರತೀಯ 'ಸಂಸ್ಕೃತಿ ಮತ್ತು ಜ್ಞಾನ'ದ ಪರವಾಗಿ ಒಂದು ಪುಸ್ತಕವನ್ನು ಹುರುಪಿನಿಂದ ಬರೆದಿರುವರು. ಇಷ್ಟಲ್ಲದೆ ತಾವೇ ಸ್ವತಃ ಸಂಗ್ರಹಿಸಿ 'ಭಾರತ ಪುಸ್ತಕ ಭಂಡಾರ'ವೆಂಬ ಪುಸ್ತಕವನ್ನು ಬರೆದಿರುವರು. ಭಾರತೀಯ ತತ್ವಜ್ಞಾನವನ್ನು ಜರ್ಮನಿಯಲ್ಲಿ ಸ್ಥಾಪಿಸಿದ ಪ್ರಥಮ ಜ್ಞಾನಿ ಎಂಬುದಾಗಿ ಇವರನ್ನು ಕರೆಯುತ್ತಾರೆ.

ಜರ್ಮನಿಯಲ್ಲಿ ಭಾರತೀಯ ತತ್ವಜ್ಞಾನವನ್ನು ಅಭ್ಯಸಿಸಿದ ಇನ್ನೊಬ್ಬ ಪ್ರಮುಖ ವ್ಯಕ್ತಿ 'ವಿಲ್‌ಹೆಲ್ಮ್ ವಾನ್ ಹಂಬೋಲ್ಟ್'. 'ಗೀತೆ'ಯ ವಿಷಯವಾಗಿ ಇವರು ಬರೆದ ಸಾರಾಂಶ ಯಾವ ಭಾರತೀಯನನ್ನೂ ಆಕರ್ಷಿಸುತ್ತದೆ. ತಮ್ಮ ಒಂದು ಪತ್ರದಲ್ಲಿ ಭಾರತೀಯ ಜ್ಞಾನದ ಕುರಿತಾಗಿ ಅವರು ಈ ರೀತಿಯಲ್ಲಿ ಬರೆದಿರುವರು—

"ಭಾರತದ ಒಂದು ಪದ್ಯವನ್ನು ಓದುತ್ತಿರುವಾಗ ನನ್ನ ಅದೃಷ್ಟವನ್ನೂ ನಾನು ಸ್ತುತಿಸಿದೆ. ಕಾರಣ ಇಷ್ಟರವರೆಗೆ ನನ್ನನ್ನು ಬದುಕಿಸಿ ಈ ಪದ್ಯವನ್ನು ಓದುವ ಭಾಗ್ಯ ಅದು ನನಗೆ ಕಲ್ಪಿಸಿದೆ."

ಭಾರತೀಯ ಸಂಸ್ಕೃತಿಯನ್ನು ಎತ್ತಿಹಿಡಿದು ಅನುಸರಿಸಿದ ಜರ್ಮನಿಯ ಇನ್ನೊಬ್ಬ ವ್ಯಕ್ತಿ ಅರ್ಥರ್ ಶೋಪೆನ್‌ಹರ್. ಇವರ ಜೀವನದಲ್ಲಿ ಆಕರ್ಷಿಸಿದ ತತ್ವ ಭಾರತದ ಬೌದ್ಧ ಧರ್ಮ. ಈ ತತ್ವವನ್ನು ಓದಿದಂತೆ ಇವರು ಸ್ವತಃ ಬೌದ್ಧ ಮತೀಯರಾಗಿದ್ದಾರೆ.

ಪಾಶ್ಚಾತ್ಯ ಮತ್ತು ಪೌರ್ವಾತ್ಯ ತತ್ವಜ್ಞಾನಗಳಲ್ಲಿ ವ್ಯತ್ಯಾಸವನ್ನು ಕಂಡು ಹುಡುಕಿ ಭಾರತೀಯರು ಪ್ರಕೃತಿಗೆ ಕೊಡುವ ಪ್ರಾಮುಖ್ಯತೆಯನ್ನು ಗಣಿಸಿ ಪಾಶ್ಚಾತ್ಯರೂ ಇದನ್ನು ಅನುಕರಿಸುವಂತೆ ಪ್ರಯತ್ನಿಸಿದ ಜರ್ಮನಿಯ ಇನ್ನೊಬ್ಬ ಜ್ಞಾನಿ ಹೇಗೆಲ್.

ಭಾರತೀಯ ತತ್ವಜ್ಞಾನವನ್ನೂ ಧರ್ಮವನ್ನೂ ಅಭ್ಯಸಿಸಿ ಮನ್ನಡೆಸಿದ ಜರ್ಮನ್ ತತ್ವಜ್ಞಾನಿ ಶೆಲ್ಲಿಂಗ್ ಈ ವಿಷಯವಾಗಿ ಒಂದು ಗ್ರಂಥವನ್ನು ಬರೆದಿರುವರು. ಇವರ ತತ್ವದಲ್ಲಿ ಭಾರತೀಯ ಜ್ಞಾನದ ಪದ್ಧತಿ ತುಂಬಿದೆ.

ಗೋಟೆ ಜರ್ಮನಿಯ ವಿಶ್ವಜ್ಞಾನಿ, ಕವಿ ಮತ್ತು ತತ್ವಜ್ಞಾನಿ. ತಮ್ಮ ಗ್ರಂಥದಲ್ಲಿ ಇವರು ಕಾಳಿದಾಸನ "ಶಕುಂತಳ"ಕ್ಕೆ ಮನ್ನಣೆಯನ್ನು ಕೊಟ್ಟಿರುವರು.

ಶ್ರದ್ಧಾಂಜಲಿ

ಉಡುಪಿ ಬ್ಲಾಕ್ ಕಾಂಗ್ರೆಸ್ ತಾ. ೬ರಂದು ಶ್ರೀ ಪಿ. ರಂಗನಾಥ ಶೆಣೈ ಅವರ ಅಧ್ಯಕ್ಷತೆಯಲ್ಲಿ ಸಭೆಸೇರಿ ರಾಷ್ಟ್ರಪತಿ ಡಾ| ಜಾಕೀರ್ ಹುಸೇನರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸಿತು. "ರಾಷ್ಟ್ರಪತಿ ಡಾ| ಜಾಕೀರ್ ಹುಸೇನರ ಆಕಸ್ಮಿಕ ನಿಧನದಿಂದ ದೇಶಕ್ಕೆ ಅಪಾರ ನಷ್ಟವಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮಾ ಗಾಂಧಿಯವರನ್ನು ಸಂಪೂರ್ಣವಾಗಿ ಬೆಂಬಲಿಸಿದ, ಮೂಲ ಶಿಕ್ಷಣಕ್ಕೆ ಬಹಳವಾಗಿ ಸೇವೆ ಸಲ್ಲಿಸಿದ ಶಿಕ್ಷಣವೇತ್ತರೂ ರಾಜಕಾರಣಿಗಳೂ ಆಗಿ ದೇಶಕ್ಕೆ ಗೌರವ ತಂದ" ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ ಗೊತ್ತುವಳಿಯನ್ನು ಡಾ| ವಿ.ಎಸ್. ಶೆಟ್ಟರು ಮಂಡಿಸಿದರು. ಶ್ರೀಗಳಾದ ಪಿ. ಶಿವಾಜಿ ಶೆಟ್ಟಿ, ಅಪ್ಪಾಜಿರಾವ್, ಶ್ರೀನಿವಾಸ ಶೆಟ್ಟಿ ಮೊದಲಾದವರು ದಿವಂಗತರ ಗುಣಗಾನ ಮಾಡಿದರು.

ಉಡುಪಿಯ ಕಲಾವೃಂದದಲ್ಲಿ

ಅಧ್ಯಕ್ಷ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯು ಡಾ| ಜಾಕೀರ್ ಹುಸೇನರಿಗೆ ತನ್ನ ಶ್ರದ್ಧಾಂಜಲಿಯನ್ನರ್ಪಿಸಿತು.

ಸೇವೆಗಾಗಿ ಮುನ್ನಡೆ!

ಸಿಂಡಿಕೇಟ್ ಬ್ಯಾಂಕು

ಈ ಕೆಳಗಿನ ಹೊಸ ಶಾಖೆಗಳನ್ನು ತೆರೆಯುತ್ತಿರುವುದನ್ನು ತಿಳಿಸಲು ಹರ್ಷಿಸುತ್ತದೆ.

1) ಡೊಂಬಿವಿಲಿ, ಮುಂಬಯಿ.
ವಿಳಾಸ,
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್,
ಗುಲಾಬಿ ನಿವಾಸ,
ಶಿವಾಜಿ ಪ್ರತಿಮೆ ಹಿಂದುಗಡೆ,
ಮಾನಪಾಡಾ ರಸ್ತೆ,
ಡೊಂಬಿವಿಲಿ ಈಸ್ಟ್,
ಥಾಣಾ ಜಿಲ್ಲೆ,
ಮಹಾರಾಷ್ಟ್ರ. ತಾರೀಕು: 17-5-69ರಂದು ಉದ್ಘಾಟನೆ

2) ಘಟಪ್ರಭಾ,
ಮೈಸೂರು ರಾಜ್ಯ. ತಾರೀಕು: 19-5-69ರಂದು ಉದ್ಘಾಟನೆ.

3) ರಿಬಂಡರ್—ಗೋವಾ. ತಾರೀಕು: 29-5-69ರಂದು ಉದ್ಘಾಟನೆ.

4) ತಿರುತ್ತಣಿ.
ವಿಳಾಸ,
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್,
ನಂಬ್ರ 261, ಎಂ. ಪಿ ಸಲಾಯಿ,
ತಿರುತ್ತಣಿ, ಚೆಂಗಲ್ಪೇಟೆ ಜಿಲ್ಲೆ,
ತಮಿಳುನಾಡು. ತಾರೀಕು 24-5-69ರಂದು ಉದ್ಘಾಟನೆ.

ನಿಮ್ಮ ಭವಿಷ್ಯದ ಭದ್ರತೆಗಾಗಿ ಸಿಂಡಿಕೇಟ್ ಬ್ಯಾಂಕಿನ ಹಲವು ಉಳಿತಾಯ ಯೋಜನೆಗಳಲ್ಲಿ ಒಂದನ್ನು ಆರಿಸಿರಿ.

ನಮ್ಮ ಕ್ಯಾಶ್ ಸರ್ಟಿಫಿಕೇಟುಗಳು:

ವಿವಾಹ, ಉಪನಯನ, ಜನ್ಮದಿನೋತ್ಸವ, ಇತ್ಯಾದಿ ಶುಭಸಮಾರಂಭಗಳಲ್ಲಿ ನಿಮ್ಮ ನಚ್ಚಿನ ಬಂಧುಗಳಿಗೆ ನೀಡಬಹುದಾದ ಒಂದು ಶ್ರೇಷ್ಠ ಉಡುಗೊರೆಯಾಗಿದೆ.

ವಿವರಗಳಿಗೆ ವಿಚಾರಿಸಿರಿ:

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಮಣಿಪಾಲ, ದ. ಭಾರತ)

1969ರಲ್ಲಿ ತೆರೆಯಲಾದ ಹೊಸ ಶಾಖೆಗಳು: 28.

ಸಂಪನ್ಮೂಲಗಳು:	ಶಾಖೆಗಳು	ಶ್ರೀ ಟಿ. ಎ. ಪೈ
ರೂ. 140 ಕೋಟಿ.	282	ಚೇರ್‌ಮನ್

ಉಡುಪಿ ನಗರ ಸಭೆಯ ಮುಂಗಡ ಪತ್ರ

ಇದೇ ದಿನಾಂಕ 6-5-69ರಂದು ಉಡುಪಿ ನಗರ ಸಭೆಯ ಸಾಮಾನ್ಯ ಸಭೆಯು ನಗರ ಸಭಾಧ್ಯಕ್ಷ ಡಾ| ವಿ.ಎಸ್. ಆಚಾರ್ಯ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ 69-70ರ ಅಂದಾಜು ಮುಂಗಡ ಪತ್ರವನ್ನು ಮಂಡಿಸಲಾಯಿತು.

1969-70ಕ್ಕೆ ನಗರ ಸಭೆಯ ಅಂದಾಜು ಆದಾಯ ರೂ. 13,88,830 ಮತ್ತು ಅಂದಾಜು ವೆಚ್ಚ ರೂ. 13,47,810 ಮಿಗತೆ ರೂ. 41,020. ಯಾವುದೇ ರೀತಿಯ ಹೆಚ್ಚಿನ ತೆರಿಗೆಯನ್ನು ನಗರವಾಸಿಗಳ ಮೇಲೆ ಚಾಲ್ತಿ ವರ್ಷದಲ್ಲಿ ಹೊರಿಸಲಾಗಿಲ್ಲ. ಜನ ಸಾಮಾನ್ಯರ ವಾಹನವಾದ ಸೈಕಲು ಮತ್ತು ಗಾಡಿ ತೆರಿಗೆಯಲ್ಲಿ ಸೇಕಡಾ 75ರಷ್ಟು ರಿಯಾಯತಿ ಮಾಡಲಾಗಿದೆ.

ಸಾರ್ವಜನಿಕ ಆರೋಗ್ಯ ಖಾತೆಯಿಂದ "ಟ್ರಿಪಲ್ ಎಂಟಿಜನ್" ಮತ್ತಿತರ ಆರೋಗ್ಯ ರಕ್ಷಣೆ ವ್ಯವಸ್ಥೆಗಳ ಖರ್ಚಿನ ಬಗ್ಗೆ ಬಜೆಟಿನಲ್ಲಿ ಸಾಕಷ್ಟು ಅವಕಾಶ ಮಾಡಲಾಗಿದೆ.

ನಳ್ಳಿ ನೀರಿನ ಬಗ್ಗೆ ಚಾಲ್ತಿ ವರ್ಷದಲ್ಲಿ ರೂ. 2,89,000 ಒದಗಿಸಲಾಗಿದೆ. ರಸ್ತೆ ಮತ್ತಿತರ ಸಾರ್ವಜನಿಕ ಕಾಮಗಾರಿಯ ಬಗ್ಗೆ ರೂ. 1.5 ಲಕ್ಷದ ಅವಕಾಶ ಮಾಡಲಾಗಿದೆ. ನಗರ ಸಭೆಗೆ ಒಂದು ಸ್ವಂತ ಕಟ್ಟಡದ ಬಗ್ಗೆ ಚಾಲ್ತಿ ವರ್ಷದಲ್ಲಿ 1 ಲಕ್ಷದಷ್ಟು ಒದಗಿಸಲಾಗಿದೆ. ಈ ಯೋಜನೆ ಈಗ ಸರಕಾರದ ಮಂಜೂರಾತಿ ಹಂತದಲ್ಲಿದೆ. ವಧ್ಯಾಗೃಹದ ಬಗ್ಗೆ ನಗರದ ಗಡಿಯಲ್ಲಿ ಒಂದು ಯೋಗ್ಯ ಸ್ಥಳವನ್ನು ಸರಕಾರದಿಂದ ಪಡೆಕೊಳ್ಳುವರೆ ಪ್ರಯತ್ನಿಸಿದ್ದು ಈ ಬಗ್ಗೆ ಖರ್ಚಿಗೆ ಬಜೆಟಿನಲ್ಲಿ ಅವಕಾಶಮಾಡಲಾಗಿದೆ. ನಗರ ಸಭೆಯ ಅಧೀನದಲ್ಲಿರುವ ಎರಡು ಶಾಲೆಗಳ ಹೆಚ್ಚಿನ 6 ಕೋಣೆಗಳು ನಿರ್ಮಾಣದ ಹಂತದಲ್ಲಿದೆ.

ನಗರ ಸಭೆಯ ಆರ್ಥಿಕ ಸುಧಾರಣೆಯ ಬಗ್ಗೆ ತೆರಿಗೆ ರೂಪದಲ್ಲಿ ಅಲ್ಲದೆ ಇತರ ರೂಪದಲ್ಲಿರುವ ಸಂಪನ್ಮೂಲಗಳ ಬಗ್ಗೆ ಈ ಮುಂಗಡ ಪತ್ರದಲ್ಲಿ ಅನೇಕ ಯೋಜನೆಗಳನ್ನು ಕೂಡಾ ರೂಪಿಸಲಾಗಿದೆ. ನಗರ ಸಭೆಯು ನಡೆಸುತ್ತಿರುವ ಪ್ರಾಥಮಿಕ ವಿದ್ಯಾಭ್ಯಾಸ ಶಾಲೆಗಳಿಗೆ ಖಾಸಗಿ ಶಾಲೆಗಳಿಗೆ ಕೊಡುವ ರೀತಿಯಲ್ಲಿಯೇ ಸರಕಾರದ ನೆರವು ಕೊಟ್ಟಲ್ಲಿ ಈ ವಿಭಾಗದಲ್ಲಿ ಈಗ ನಗರಸಭೆಗೆ ಖರ್ಚಾಗುತ್ತಿರುವ ಸುಮಾರು 1 ಲಕ್ಷ ರೂಪಾಯಿಯನ್ನು ಇತರ ನಾಗರಿಕ ಸೌಲಭ್ಯದ ಬಗ್ಗೆ ವಿನಿಯೋಗಿಸುವರೆ ಅವಕಾಶ ಮಾಡಿಕೊಡಲು ಸರಕಾರವನ್ನು ಪ್ರಾರ್ಥಿಸಲಾಗಿದೆ.

ಮೋಟಾರು ವಾಹನ ತೆರಿಗೆ ಬಗ್ಗೆ ಕನಿಷ್ಠ ರೂ. 1,26,000 ಅಷ್ಟಾದರೂ ನಗರ ಸಭೆಯ ಪಾಲಿಗೆ ನೀಡಬೇಕೆಂದು ಪ್ರಾಂತ ಸರಕಾರವನ್ನು ಕೇಳಿಕೊಳ್ಳಲಾಗಿದೆ.

ನಗರ ಸಭೆಯ ಸದಸ್ಯರ ಆರ್ಥಿಕ ಪರಿಸ್ಥಿತಿಯಲ್ಲಿ ಇದೊಂದು ಸಮಾಧಾನಕಾರಕವಾಗಿ ರೂಪಿಸಲಾದ ಮುಂಗಡಪತ್ರವೆಂದು ಸದಸ್ಯರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ ಕೆಲವೊಂದು ಸಣ್ಣ ತಿದ್ದುಪಡಿಗಳೊಂದಿಗೆ ಈ ಅಂದಾಜು ಮುಂಗಡಪತ್ರವನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ತಿದ್ದುಪಡಿ

ನಮ್ಮ ತಾ. 1-5-69ರ ಸಂಚಿಕೆಯ 8ನೇ ಪುಟದಲ್ಲಿ ಪ್ರಕಟವಾಗಿರುವ ಶ್ರೀ ಬಿ. ಈಶ್ವರ ಭಟ್‌ರವರ ಕೋರ್ಟು ನೋಟೀಸು ನಂ. S. C. 4/1969ರಲ್ಲಿ ಪ್ರತಿವಾದಿಯ ಹೆಸರು M. ವಿಠಲ ಪೈ ಬದಲಿಗೆ M. ವಿಠಲ ರೈ ಎಂದು ತಪ್ಪಾಗಿ ಪ್ರಕಟವಾಗಿರುತ್ತದೆ. ಅದನ್ನು M. ವಿಠಲ ಪೈ ಎಂದು ತಿದ್ದಿ ಓದಬೇಕಾಗಿ ವಿನಂತಿ.

ಸಂ. ನ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦

ರಾಷ್ಟ್ರಪತಿಗಳ ದೃಷ್ಟಿಯಲ್ಲಿ—

ಕುಟುಂಬ ಯೋಜನೆ

ನಮ್ಮ ಕುಟುಂಬ ಯೋಜನಾ ಕಾರ್ಯಕ್ರಮ ಅನೇಕ ಕಾರಣಗಳಿಂದಾಗಿ ಅಪೂರ್ವದೆನಿಸಿದೆ. ನಾವು ಕೈಗೊಂಡಂತೆ ದೊಡ್ಡ ಪ್ರಮಾಣದಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮವನ್ನು ವಿಶ್ವದಲ್ಲಿ ಬೇರೆ ಯಾವ ರಾಷ್ಟ್ರವೂ ಕೈಗೊಂಡಿಲ್ಲ. ನಮ್ಮ ಪ್ರಜಾತಂತ್ರದ ತತ್ವ ಹಾಗೂ ಸೌಲಭ್ಯಗಳಿಗೆ ಯಾವುದೇ ರೀತಿಯಲ್ಲಿ ಚ್ಯುತಿ ಬಾರದಂತೆ ನಾವು ಕುಟುಂಬ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ. ಇಡಿ ವಿಶ್ವದ ದೃಷ್ಟಿ ಈಗ ನಮ್ಮ ಕಡೆಗೇ ಹೊರಳಿದೆ. ನಾವು ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಸಾಧಿಸುವ ಯಶಸ್ಸು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ದಾರಿದೀಪವಾಗಬಲ್ಲುದು. ಇದರಿಂದಾಗಿ ನಮ್ಮ ಮೇಲೆ ವಿಶೇಷ ಹೊಣೆಗಾರಿಕೆಯಿದೆ.

ವೈಯಕ್ತಿಕವಾಗಿ ಮತ್ತು ರಾಷ್ಟ್ರಪತಿಯಾಗಿ ನಾನು ಈ ಸಮಸ್ಯೆಗೆ ವಿಶೇಷ ಮಹತ್ವಕೊಡುತ್ತೇನೆ. ಈ ಸಮಸ್ಯೆ ಪ್ರತಿ ವ್ಯಕ್ತಿಯ,ಅದರಂತೆ ರಾಷ್ಟ್ರದ ಮೇಲೆ ಪರಿಣಾಮ ಮಾಡುತ್ತದೆ. ಆದಕ್ಕಾಗಿ ಈ ಸಮಸ್ಯೆಗೆ ನಾನು ಹೆಚ್ಚಿನ ಪ್ರಾಧಾನ್ಯ ನೀಡುತ್ತಿದ್ದೇನೆ.

ಕಳೆದ ಇಪ್ಪತ್ತೊಂದು ವರ್ಷಗಳಲ್ಲಿ ನಾವು ಸಾಮಾಜಿಕ-ಆರ್ಥಿಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದ್ದೇವೆ ಈ ಅವಧಿಯಲ್ಲಿ ನಮ್ಮ ಬೇಸಾಯ ಉತ್ಪಾದನೆ ಹೆಚ್ಚಿದೆ. ವಾಸ್ತವವಾಗಿ ಈ ಕ್ಷೇತ್ರದಲ್ಲಿ ನಾವು ಮುನ್ನಡೆದಿದ್ದೇವೆ. ನಮ್ಮ ದೇಶದ ಆರೋಗ್ಯ ಸೇವೆಗಳಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಕಾಲರಾ, ಸಿಡುಬು, ಮಲೇರಿಯ ಮುಂತಾದ ಸಾಂಕ್ರಾಮಿಕ ರೋಗಗಳಿಂದ ಸಾಯುವವರ ಸಂಖ್ಯೆಯನ್ನು ನಾವು ಯಶಸ್ವಿಯಾಗಿ ನಿಯಂತ್ರಿಸಿದ್ದೇವೆ. ಉತ್ತಮ ವೈದ್ಯಕೀಯ ಸೌಕರ್ಯಗಳಿಂದಾಗಿ ಜನರ ಆಯುರ್ಮಾನದಲ್ಲಿ ಏರಿಕೆಯಾಗಿದೆ.

ಸಾಧನೆಯ ನವದಿಗಂತಗಳು

1947ರಲ್ಲಿ ಒಬ್ಬ ವ್ಯಕ್ತಿಯ ಸರಾಸರಿ ಆಯುರ್ಮಾನ 27 ವರ್ಷಗಳಿದ್ದರೆ, ಇಂದು ಐವತ್ತು ವರ್ಷಗಳಷ್ಟಾಗಿದೆ. ಆದರೆ ಈ ಅವಧಿಯಲ್ಲಿ ಜನನ ಪ್ರಮಾಣ ಹೇಳಿಕೊಳ್ಳುವಷ್ಟು ಕಡಿಮೆಯಾಗಲಿಲ್ಲ. ಫಲಸ್ವರೂಪವಾಗಿ ನಾವು "ಜನಸಂಖ್ಯಾ ಸ್ಫೋಟ"ದ ಸಮಸ್ಯೆಯನ್ನು ಎದುರಿಸಬೇಕಾಯಿತು. 1947ರಲ್ಲಿ 34 ಕೋಟಿ 40 ಲಕ್ಷದಷ್ಟಿದ್ದ ಜನಸಂಖ್ಯೆ ಇಂದು 52 ಕೋಟಿ 80 ಲಕ್ಷಕ್ಕೂ ಹೆಚ್ಚಾಗಿದೆ. ಜನಸಂಖ್ಯೆಯ ಈ ಅದ್ಭುತ ಹೆಚ್ಚಳ ವಿವಿಧ ಕ್ಷೇತ್ರಗಳಲ್ಲಿನ ನಮ್ಮ ಎಲ್ಲಾ ಸಾಧನೆಗಳನ್ನು ನಿಷ್ಕ್ರಿಯೆಗೊಳಿಸಿದೆ. ಇದರಿಂದಾಗಿ ನಮ್ಮ ಜೀವನದ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳುವ ನಮ್ಮ ಯತ್ನಕ್ಕೆ ವಿಘ್ನವನ್ನು ಒಡ್ಡಿದೆ.

ಮರಣ ಹೊಂದುವವರ ಸಂಖ್ಯೆಯನ್ನು ಕಡಿಮೆ ಮಾಡುವ ನಮ್ಮ ಯತ್ನಗಳನ್ನು ಮುಂದುವರಿಸುವುದರ ಜೊತೆಗೆ ಜನನಗಳನ್ನು ನಿಯಂತ್ರಿಸುವುದು ಈಗ ಅತ್ಯವಶ್ಯವಾಗಿದೆ. ನಾವು ಈ ಕಾರ್ಯದಲ್ಲಿ ವಿಫಲರಾದದ್ದೇ ಆದರೆ ನಮ್ಮ ಜನಸಂಖ್ಯೆ ಮುಂದಿನ ಮೂವತ್ತು ವರ್ಷಗಳಲ್ಲಿ 100 ಕೋಟಿಗೂ ಹೆಚ್ಚಾಗುತ್ತದೆ. ನಮ್ಮ ಎಲ್ಲಾ ಅಭಿವೃದ್ಧಿ ಯತ್ನಗಳೂ ವಿಫಲವಾಗುತ್ತವೆ.

ನಾವು ನಿರಾಶರಾಗಬೇಕಿಲ್ಲ. ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಯತ್ನಗಳಿಂದಾಗಿ ಕುಟುಂಬ ಯೋಜನೆಯ ಬಗ್ಗೆ ಇಡೀ ದೇಶದಲ್ಲಿ ಹೊಸ ಸಾಮಾಜಿಕ ಜಾಗೃತಿ ಮೂಡಿಬಂದಿದೆ. ಇದು ನನಗೆ ಹೆಚ್ಚಿನ ಸಂತೋಷವುಂಟುಮಾಡಿದೆ. ದೇಶದ ವಿವಿಧ ಭಾಗಗಳಲ್ಲಿ ನಡೆಸಿದ ಅಧ್ಯಯನ ಮತ್ತು ಸಮೀಕ್ಷೆಗಳು, ಜನತೆ ಕುಟುಂಬ ಯೋಜನೆಯ ಆವಶ್ಯಕತೆಯನ್ನು ಅರಿತುಕೊಂಡಿದ್ದಾರೆಂದೂ, ಎರಡು ಅಥವಾ ಮೂರು ಮಕ್ಕಳಿರುವ ಸಣ್ಣ ಕುಟುಂಬದ ವಿಚಾರ ಹೆಚ್ಚು ಜನಪ್ರಿಯವಾಗತೊಡಗಿದೆಯೆಂದೂ ಸ್ಪಷ್ಟಪಡಿಸಿವೆ.

ಜನಪ್ರಿಯ ಕಾರ್ಯಕ್ರಮ

ಇಂದು ಕುಟುಂಬಯೋಜನೆಗೆ ಅರ್ಹರಾದ ದಂಪತಿಗಳ ಪೈಕಿ ನೂರಕ್ಕೆ 11ರಷ್ಟು ಅಂದರೆ 90 ಲಕ್ಷ ದಂಪತಿಗಳು ಕುಟುಂಬ ಯೋಜನೆಯ ಒಂದಲ್ಲ ಒಂದು ವಿಧಾನವನ್ನು ಅನುಸರಿಸುತ್ತಿದ್ದಾರೆ. ಸಣ್ಣ ಕುಟುಂಬದಿಂದ ಸುಖ-ಸಂತೋಷ ಪಡೆಯುವುದೇ ಅವರ ಗುರಿ. ಇದು ಖಂಡಿತವಾಗಿಯೂ ಒಂದು ಗಮನಾರ್ಹ ಸಾಧನೆಯೇ ಸರಿ. ನಮ್ಮ ಸಹಸ್ರಾರು ಕಾರ್ಯಕರ್ತರು ಈ ದಿಸೆಯಲ್ಲಿ ಬಹಳಷ್ಟು ಪರಿಶ್ರಮ ಪಟ್ಟಿದ್ದಾರೆ. ಅವರ ಈ ಕಾರ್ಯತತ್ಪರತೆ, ಕಾರ್ಯಕರ್ತರ ಉತ್ಸಾಹ ಹಾಗೂ ಕರ್ತವ್ಯನಿಷ್ಠೆಗಳೇ ಇಂದಿನ ಸಾಮಾಜಿಕ ಕ್ರಾಂತಿಯನ್ನು ತಂದಿದೆ.

ಮೂರು ವರ್ಷಗಳ ಹಿಂದೆ ನಾವು ಈ ಭಾರೀ ಕಾರ್ಯಕ್ರಮವನ್ನು ಕೈಗೊಂಡಾಗ ಈ ಕಾರ್ಯಕ್ರಮದ ಯಶಸ್ಸಿನ ಬಗ್ಗೆ ನಮ್ಮಲ್ಲಿ ಅನೇಕರಿಗೆ ಸಂದೇಹವಿದ್ದಿತು. ಆದರೆ ಇಂದ ಪ್ರಗತಿ ಸ್ಪಷ್ಟವಾಗಿ ಗೋಚರಿಸುತ್ತಿದೆ. ಕುಟುಂಬ ಯೋಜನಾ ಕಾರ್ಯಕ್ರಮ ಈಗ ಪಡೆದಿರುವ ಚಾಲನಶಕ್ತಿ ನಾವು ಈ ದಿಶೆಯಲ್ಲಿ ಯಶಸ್ವಿಯಾಗುವೆವೆಂಬ ಆತ್ಮವಿಶ್ವಾಸವನ್ನು ಮೂಡಿಸಿದೆ.

ಆದರೆ ಒಂದು ಎಚ್ಚರಿಕೆಯ ನುಡಿ. ಕಳೆದ ಮೂರು ವರ್ಷಗಳಲ್ಲಿ ನಾವು ಕುಟುಂಬ ಯೋಜನಾ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿದ್ದೇವೆ ನಿಜ. ಈ ಸಾಧನೆಯಿಂದ ನಾವು ಮೈಮರೆಯಬಾರದು. ನಾವು ಈ ದಿಶೆಯಲ್ಲಿ ಇನ್ನು ಬಹು ದೂರ ನಡೆಯಬೇಕಾಗಿದೆ. ನಮ್ಮ ಅಭಿವೃದ್ಧಿ ಯತ್ನಗಳು ಅರ್ಥಪೂರ್ಣವಾಗಬೇಕಾದರೆ, ಅಂದರೆ ನಮ್ಮ ಪರಿಶ್ರಮಕ್ಕೆ ಯೋಗ್ಯ ಪ್ರತಿಫಲ ದೊರೆಯಬೇಕಾದರೆ, ಸಂತಾನಶಕ್ತಿಯುಳ್ಳ ದಂಪತಿಗಳೆಲ್ಲರೂ ಎರಡು ಅಥವಾ ಮೂರು ಮಕ್ಕಳು ಸಾಕು ಎಂಬ ನಿರ್ಧಾರಕ್ಕೆ ಬರಬೇಕು. ಈಗಾಗಲೇ ಮೂರಕ್ಕಿಂತ ಹೆಚ್ಚು ಮಕ್ಕಳಿರುವವರು ಮಕ್ಕಳಾಗದಂತೆ ಕ್ರಮ ಕೈಗೊಳ್ಳಬೇಕು.

ತಾಯಿಯ ಆರೋಗ್ಯ ಹಾಗೂ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಮಕ್ಕಳ ಜನನದ ಅವಧಿಯಲ್ಲಿ ಸಾಕಷ್ಟು ಅಂತರವಿರಬೇಕು. ದೇಶದಲ್ಲಿ ಸಂತಾನ ಪಡೆಯಲು ಸಮರ್ಥರಾಗಿರುವ 90 ದಶಲಕ್ಷ ದಂಪತಿಗಳಿಗೆ ನಾವು ಈ ಸಂದೇಶವನ್ನು ತಲುಪಿಸಬೇಕು. ಕುಟುಂಬ ಯೋಜನೆಯ ವಿಧಾನಗಳನ್ನು ಅನುಷ್ಠಾನಕ್ಕೆ ತರುವಂತೆ ನಾವು ಅವರ ಮನವೊಲಿಸಬೇಕು. ನಾವು ಈ ಕಾರ್ಯದಲ್ಲಿ ಯಶಸ್ವಿಯಾದಾಗಲೇ ಅಭಿವೃದ್ಧಿ ಯತ್ನಗಳ ಫಲ ದೇಶದ ಎಲ್ಲ ಜನರಿಗೂ ದೊರಕಬಲ್ಲುದು.

ಇದೊಂದು ಮಹತ್ತರವಾದ ಕಾರ್ಯ. ಸರಕಾರವೊಂದರಿಂದಲೇ ಈ ಕಾರ್ಯಕ್ರಮದ ಯಶಸ್ಸು ಸಾಧ್ಯವಾಗಲಾರದು. ದೇಶದ ಕೋಟಿಕೋಟಿ ದಂಪತಿಗಳ ನಿರ್ಧಾರದ ಮೇಲೆ ಹಾಗೂ ಅವರ ಅನುಷ್ಠಾನದ ಮೇಲೆ ಈ ಕಾರ್ಯಕ್ರಮದ ಯಶಸ್ಸು ಅವಲಂಬಿಸಿದೆ. ಕಾರಣ ಈ ಕಾರ್ಯಕ್ರಮ ಜನತಾ ಕಾರ್ಯಕ್ರಮವಾಗಬೇಕು.

ಈ ಒಂದು ಹಂತದಲ್ಲಿ, ಇತರರ ವಿಚಾರಧಾರೆಯ ಮೇಲೆ ಪ್ರಭಾವ ಬೀರುವ ಸ್ಥಾನದಲ್ಲಿರುವ ನಾವು ವಿಶೇಷ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವವರು, ಈ ಕಾರ್ಯಕ್ರಮದೊಂದಿಗೆ ನಿಕಟ ಸಂಪರ್ಕ ಹೊಂದಬೇಕೆಂದೂ ನಾನು ಸೂಚಿಸುತ್ತೇನೆ.

ನಮ್ಮ ದೇಶದಲ್ಲಿ ಎಲ್ಲಾ ಜನರು ಅವರ ಧರ್ಮ—ಸಾಮಾಜಿಕ ಸ್ಥಾನಮಾನ—ರಾಜಕೀಯ ಶ್ರದ್ಧೆ—ಏನೇ ಇರಲಿ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಹೆಚ್ಚು ಉತ್ಸಾಹದಿಂದ ಅಂಗೀಕರಿಸಿದ್ದಾರೆ ಮತ್ತು ಅದಕ್ಕೆ ಉತ್ತೇಜನ ನೀಡುತ್ತಿದ್ದಾರೆ. ಇದು ನಮ್ಮೆಲ್ಲರ ಸುದೈವ.

ನಾವು ಕೈಗೊಂಡಿರುವ ಈ ಕುಟುಂಬ ಯೋಜನಾ ಕಾರ್ಯಕ್ರಮ ವಿಶ್ವದಲ್ಲೇ ಅತಿ ದೊಡ್ಡದು ಎಂಬುದು ನಿಸ್ಸಂದೇಹ. ಈ ಕಾರ್ಯಕ್ರಮದ ಯಶಸ್ಸಿನ ಮೇಲೆಯೇ ನಮ್ಮ ಜನತೆಯ ಕಲ್ಯಾಣ ಅವಲಂಬಿಸಿದೆ. ಆದಕಾರಣ ನಾನು ನನ್ನ ದೇಶಬಾಂಧವರಿಗೆ ಎಲ್ಲ ರೀತಿಯಿಂದಲೂ ಈ ಕಾರ್ಯಕ್ರಮದ ಯಶಸ್ಸಿಗಾಗಿ ಶ್ರಮಿಸುವಂತೆ ಕೇಳಿಕೊಳ್ಳುತ್ತಿದ್ದೇನೆ. ಈ ಗುರಿ ಕೈಗೂಡಿದಾಗಲೇ ನಮ್ಮ ಭವಿಷ್ಯ ಉಜ್ವಲವಾಗುತ್ತದೆ.

ನೂತನ ಬಯಕೆ

ಹೇ ಸ್ವಾಮಿ ಈಗಿನದು ಅಟಂ ಯುಗವು
ಚಂದ್ರಲೋಕದ ಸುತ್ತ ಸಾಧಿಸಿದೆ ಜಯವು
ಒಂಭತ್ತು ತಿಂಗಳೂ ಹೊತ್ತು ಬೇಸತ್ತೆ
ಕೃತಕ ಉಪಚಾರವೇನಾದರೂ ಗೊತ್ತೆ ?

ಪಾಪದ ದಂಧೆ

ವಿವಾಹ ಇಲಾಖೆಗೂ ಸಂಸಾರ ಭಾರ
ಅರಿತೊಟ್ಟು ಊಟವು ಗ್ರಂಟು ವ್ಯವಹಾರ
"ಅಬಲ ಮಕ್ಕಳ" ಕೊಲೆಗೆ ಮುಂದಾದ ತಂದೆ
'ಫ್ಯಾಮಿಲಿ ಪ್ಲಾನಿಂಗೆಂದು' ಈ ಪಾಪ ದಂಧೆ

ಬಂಟ್ವಾಳ ಮುನ್ಸಿಫ್ ಕೋರ್ಟಿನಲ್ಲಿ

O. S 140/67.

ವಿ. ನಾರಾಯಣ ಭಟ್ಟ —ವಾದಿ
ಮತ್ತು
ಅಬ್ದುಲ್ಲಾ ಬ್ಯಾರಿ ಸಹಾ—ಪ್ರತಿವಾದಿರು

2ನೇ ಪ್ರತಿವಾದಿ: ಮಮ್ಮುನ್ನಿ ಬ್ಯಾರಿ, ಅಬ್ದುಲ್ಲಾ ಬ್ಯಾರಿಗಳ ಮಗ, ಬಂಟ್ವಾಳ ತಾಲೂಕು ಕರೋಪಾಡಿ ಗ್ರಾಮದ ಒಡಿಯೂರಲ್ಲಿರುವವರು—ಇವರಿಗೆ ಕೋರ್ಟು ಮುಖಾಂತರ ತಿಳಿಸುವುದೇನೆಂದರೆ:

ವಾದಿಯು ನೀವು ವಗೈರೆರ ಮೇಲೆ ಅದರಿನ ಹಣಗಳನ್ನು ಬರಸೂಡಿಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯು ತಾ.17-6-1969ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದರೂ ಸದ್ರಿ ದಿವಸ ಮುಜ್ಯರು ಕೋರ್ಟಿನ ಮುಂದೆ ನೀವು ಸ್ವತಃ ವಕೀಲರ ದ್ವಾರಾ ಹಾಜರಾಗಿ ಉಜ್ಜಾಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂದು ಈ ಮೂಲಕ ತಿಳಿಸಲಾಗಿದೆ.

(Sd)M. N. Shanker Bhat
Advocate for plaintiff
B. C. Road, 2-5-69.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಕೀಯುಕ್ತ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD
High-Class Boarding, Lodging & Restaurant
COONDAPUR, S. K.

NAVAYUGA 15—5—1969
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ನೇಫಾದ ಸಿಯಾಂಗ್ ತುಳಿದ ದಾರಿ

ಸಿಯಾಂಗ್ ಜಿಲ್ಲೆ ನೇಫಾದಲ್ಲಿದೆ. ಪಶ್ಚಿಮಕ್ಕೆ ಸುಬನಸಿರಿ ಮತ್ತು ಕಾಮೆಂಗ ಜಿಲ್ಲೆಗಳೂ ಪೂರ್ವಕ್ಕೆ ಲೋಹಿತ್ ಮತ್ತು ತಿರಪ್ ಜಿಲ್ಲೆಗಳೂ ಈ ಜಿಲ್ಲೆಯನ್ನು ಸುತ್ತುವರಿದಿವೆ. ಸಿಯಾಂಗ್ ಜಿಲ್ಲೆ ನೇಫಾದ ಜಿಲ್ಲೆಗಳಲ್ಲೆಲ್ಲ ಹೆಚ್ಚು ಮುಂದುವರಿದ ಜಿಲ್ಲೆಯೆಂದು ಹೇಳಬಹುದು. ಪಾಸಿಘಾಟ್ ಜಿಲ್ಲೆಯ ಮುಖ್ಯಪಟ್ಟಣ, ಪ್ರಥಮ ದರ್ಜೆಯ ಕಾಲೇಜು ಇರುವುದು ಈ ಕೇಂದ್ರದ ವೈಶಿಷ್ಟ್ಯ. ಉಪಮಂತ್ರಿ ಡಿ. ಎರಿಂಗ್ ಅವರು ಈ ಜಿಲ್ಲೆಗೆ ಸೇರಿದವರು. ಈ ಜಿಲ್ಲೆಯ ಇತರ ನಲ್ವತ್ತು ಮಂದಿ ಪದವೀಧರರು ಈಗ ಉದ್ಯೋಗದಲ್ಲಿದ್ದಾರೆ.

ಆಲಾಂಗ್, ಸಿಯಾಂಗ್ ಜಿಲ್ಲೆಯ ಪ್ರಧಾನ ಕಚೇರಿಯ ಸ್ಥಳ. ಇಲ್ಲಿಯ ಹೈಯರ್ ಸೆಕೆಂಡರಿ ಶಾಲೆಯಲ್ಲಿ ೨೦೦ ಮಂದಿ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಆದಿ ಮತ್ತು ಗಾಲಾಂಗ್ ಗಿರಿಜನರಿಗೆ ಈ ಸಂಸ್ಥೆ ತುಂಬಾ ಅಚ್ಚುಮೆಚ್ಚಿನದಾಗಿದೆ. ಇಂತಹದೇ ಶಿಕ್ಷಣ ಸಂಸ್ಥೆಯನ್ನು ಬೇರೆ ಕಡೆಯೂ ಸ್ಥಾಪಿಸುವಂತೆ ಅವರು ಆಗ್ರಹ ಮಾಡುತ್ತಿದ್ದಾರೆ.

ಆಲಾಂಗ್‌ನಲ್ಲಿ ವೈದ್ಯಕೀಯ ಸೌಕರ್ಯಗಳು ಸಾಕಷ್ಟಿವೆ. ೪೦ ಜನರಿಗೆ ಚಿಕಿತ್ಸಾ ಸೌಕರ್ಯಗಳನ್ನು ನೀಡಬಲ್ಲ ಸುಸಜ್ಜಿತ ಆಸ್ಪತ್ರೆಯಿದೆ. ವಿದ್ಯುಚ್ಛಕ್ತಿ ಹಾಗೂ ನಲ್ಲಿಯ ನೀರಿನ ಸೌಕರ್ಯಗಳೂ ಈ ಪಟ್ಟಣದಲ್ಲಿವೆ.

ಆಲಾಂಗಿನಲ್ಲಿ ಇತ್ತೀಚೆಗೆ ದೋಣಿ ಪೋಲೋ ದೇವಾಲಯವನ್ನು ನಿರ್ಮಿಸಲಾಗುವುದು. ದೋಣಿಪೋಲೋ ಎಂದರೆ ಸೂರ್ಯ ಮತ್ತು ಚಂದ್ರ ಎಂದು ಅರ್ಥ. ತಾ.ಪಿ. ಮಾ ಅವರ ಪಂಥದ ಬೌದ್ಧ ಧರ್ಮವು ಆಚರಣೆಯಲ್ಲಿರುವ ಉತ್ತರದ ಗಡಿಯ ಕೆಲವೊಂದು ಪ್ರದೇಶಗಳನ್ನು ಬಿಟ್ಟರೆ ಇತರ ಎಲ್ಲಾ ಪ್ರದೇಶಗಳಲ್ಲಿ ಸೂರ್ಯ ಮತ್ತು ಚಂದ್ರ ಆರಾಧ್ಯ ದೈವಗಳಾಗಿವೆ.

ಪ್ರಾಚೀನ ಕಾಲದಲ್ಲಿಯೂ ಸೂರ್ಯ ಮತ್ತು ಚಂದ್ರನ ಆರಾಧನೆ ರೂಢಿಯಲ್ಲಿತ್ತು. ಸಿಯಾಂಗ್, ಲೋಹಿತ್ ಮತ್ತು ಸುಬನ್‌ಸಿರಿ ಜಿಲ್ಲೆಗಳಲ್ಲಿ ವೈಷ್ಣವ ಭಗ್ನಾವಶೇಷಗಳನ್ನು ಅಗೆದಾಗ ಕಂಡುಬಂದಿರುವ ಅವಶೇಷಗಳು ಈ ಊಹೆಯನ್ನು ದೃಢಪಡಿಸಿವೆ.

ತಮ್ಮ ಜಿಲ್ಲೆಯಲ್ಲಿ ನಿರ್ಮಿಸಲಾಗುವ ಸೂರ್ಯ ಹಾಗೂ ಚಂದ್ರ ದೇವಾಲಯದ ಮಾದರಿಗಳನ್ನು ಅಂತಿಮವಾಗಿ ನಿರ್ಧರಿಸಲು, ಸಿಯಾಂಗ್ ಜಿಲ್ಲೆಯ ನಾಯಕರು ದೇಶದ ಇತರ ಕಡೆಗಳಲ್ಲಿರುವ ಸೂರ್ಯ ಹಾಗೂ ಚಂದ್ರ ದೇವಾಲಯಗಳನ್ನು ಸಂದರ್ಶಿಸಿದರು. ಈ ದೇವಾಲಯಗಳು ನೇಫಾದ ಗಿರಿಜನರ ಸಮ್ಮೇಳನದ ಸ್ಥಳವಾಗುವುವು.

ಆದಿ ಪಂಗಡದ ಗಿರಿಜನರಿಂದ ಮತ್ತು ಮಿಶಿಶಾಂಗ್, ಗ್ಯಾಲಾಂಗ್, ಇವೇ ಮುಂತಾದ ಉಪಪಂಗಡಗಳ ಗಿರಿಜನರು ಹಳೆಯ ಸಂಚಾರಿ ಬೇಸಾಯ ಪದ್ಧತಿಯನ್ನು ಬಿಟ್ಟುಕೊಟ್ಟಿದ್ದಾರೆ. ಕಾಯಂ ಆಗಿ ಒಂದು ಕಡೆ ಇದ್ದು ಭೂಮಿಯನ್ನು ಸಾಗುವಳಿಗೆ ತಂದಿದ್ದಾರೆ. ಹೀಗೆ ಸಾಗುವಳಿಗೆ ತರಲಾಗಿರುವ ಭೂಮಿಯು ಈಗ ಗಮನಾರ್ಹ. ಇದರ ವೈಶಾಲ್ಯವೂ ಈಗ ಹೆಚ್ಚಿದೆ. ಇದು ಜಿಲ್ಲೆಯ ೪೫ ಸಹಸ್ರ ಗಿರಿಜನರ ಆಹಾರ ಸಂಬಂಧವಾದ ಆವಶ್ಯಕತೆಗಳನ್ನು ಪೂರೈಸಲು ಸಾಕಾಗುತ್ತದೆ. ಅಲ್ಲದೆ ಈ ಜಿಲ್ಲೆಯಲ್ಲಿ ೩೫ ಚಿಕ್ಕ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ.

ಕಂಪೋಸ್ಟ್ ಹಾಗೂ ಅಧಿಕ ಇಳುವರಿ ಕೊಡುವ ಬಿತ್ತನೆಯ ಬೀಜಗಳು ಈಗ ನೇಫಾದಲ್ಲಿ ಹೆಚ್ಚು ಜನಪ್ರಿಯವಾಗಿವೆ.

ವಿದ್ಯುಚ್ಛಕ್ತಿ, ಆಧುನಿಕತೆಯ ಸಂಕೇತವಾಗಿದೆ. ಜಿಲ್ಲೆಯ ಎಂಟು ಹಳ್ಳಿಗಳಿಗೆ ಈಗ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ.

ನೂರು ಕಿಲೋವ್ಯಾಟ್ ಸಾಮರ್ಥ್ಯದ ಪುಟ್ಟ ಜಲವಿದ್ಯುತ್ ಯೋಜನೆಯೊಂದು ಈಗ ಭರದಿಂದ ರೂಪುಗೊಳ್ಳುತ್ತಿದೆ. ಬೇಸಾಯ-ಕೈಗಾರಿಕೆಗಳ ಸ್ಥಾಪನೆಯ ಮಾತೂ ಕೇಳಬರುತ್ತಿದೆ.

ನೇಫಾದ ಕೆಲ ಪ್ರದೇಶಗಳ ಮತ್ತು ಕೇರಳದ ಹವಾಮಾನ ಬಹುಮಟ್ಟಿಗೆ ಒಂದೇ ವಿಧವಾಗಿರುವುದರಿಂದ, ಕರಿ ಮೆಣಸಿನ ಕೃಷಿಗೆ ಯತ್ನಗಳು ನಡೆದಿವೆ, ಪೈನಾಪಲ್ ಮತ್ತು ಕಿತ್ತಳೆ ಈ ಪ್ರದೇಶದಲ್ಲಿ ವಿಶೇಷವಾಗಿ ಬೆಳೆಯುತ್ತವೆ. ಬಾಳೆಹಣ್ಣುಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದ್ದರೂ ಕೇರಳದ ಕೆಲವೊಂದು ಜಾತಿಯ ಬಾಳೆ ಹಣ್ಣಿನ ಕೃಷಿ ವಿಶೇಷವಾಗಿ ಯಶಸ್ವಿಯಾಗಿದೆ. ನೇಫಾದ ರೈತನೊಬ್ಬ ಬಾಳೆ ಹಣ್ಣಿನ ಬೆಳೆಯಿಂದ ಎಕರೆ ೫೦೦೦ ರೂ. ಸಂಪಾದಿಸಿದ್ದು ಇಲ್ಲಿ ಉಲ್ಲೇಖನೀಯವಾಗಿದೆ.

ಎಲ್ಲಾ ದೃಷ್ಟಿಯಿಂದಲೂ ನೇಫಾ ಭಾರತದ ಅತಿ ದೊಡ್ಡ ಹಣ್ಣಿನ ತೋಟವಾಗುವ ಸಂಭವವಿದೆ.

ಭಾರತ ಮತ್ತು ಜೆಕೋಸ್ಲೋವಾಕಿಯಾದ ಆರ್ಥಿಕ ಸಹಕಾರ

ಇತ್ತೀಚೆಗೆ ಅನೇಕ ದೇಶಗಳು 'ತಮಗೆ ನೆರವು ಬೇಡ ವ್ಯಾಪಾರ ಬೇಕು.' ಎಂಬ ಪ್ರವೃತ್ತಿಯನ್ನು ಹೆಚ್ಚಾಗಿ ಬೆಳೆಸಿಕೊಳ್ಳುತ್ತಿವೆ. ಏಕೆಂದರೆ ಭಾರತದಂತೆ ವಿದೇಶೀ ಸಾಲದ ಹೊರೆಯನ್ನು ತಾಳಲಾರದಷ್ಟು ಹೊರಬೇಕಾಗುವುದು. ಕೆಲವು ಸಂದರ್ಭಗಳಲ್ಲಂತೂ ಹೊಸ ಸಾಲದ ಹಣವು ಹಳೆಯ ಸಾಲದ ಹಣವನ್ನು ತೀರಿಸಲು ಮಾತ್ರ ಸಾಕಾಗುತ್ತದೆ. ಪಡೆದ ಹಣಕ್ಕೆ ಬಡ್ಡಿ ತೆರಬೇಕಲ್ಲವೆ? ಹೀಗಾಗಿ ಸಾಲ ತೀರಿಸುವುದು ಬಾಕಿಯಾಗೇ ಉಳಿಯುವ ಸಂಭವ ಹೆಚ್ಚು.

ಇತ್ತೀಚೆಗೆ ವಿದೇಶೀ ನೆರವನ್ನು ಆದಷ್ಟು ಕಡಿಮೆ ಮಾಡುವುದು ಉತ್ತಮವೆಂದು ಭಾರತ ಸರ್ಕಾರ ಯೋಚಿಸುತ್ತಿದೆ. ಮೊದಲ ಹಂತದಲ್ಲಿ ಅನೇಕ ಭಾರೀ ಕಾರ್ಖಾನೆಗಳನ್ನು ರಾಂಚಿ, ಹೈದರಾಬಾದು, ತಿರುಚಿರಾಪಳ್ಳಿ ಮುಂತಾದೆಡೆಯಲ್ಲಿ ಸ್ಥಾಪಿಸಲಾಯಿತು. ಈ ಕಾರ್ಖಾನೆಗಳ ಉತ್ಪಾದನೆಯಿಂದ ಭಾರತ ಸ್ವಾವಲಂಬಿಯಾಗಲು ನೆರವಾಗುವುದು. ಈ ಕಾರ್ಖಾನೆಗಳನ್ನು ಸ್ಥಾಪಿಸಲು ಭಾರತ ಸರ್ಕಾರವು ಜೆಕ್ ಸರ್ಕಾರದಿಂದ ನೂರು ಕೋಟಿ ರೂ. ಸಾಲ ಪಡೆಯಿತು. ಈ ಕಾರ್ಖಾನೆಗಳಿಗೆ ಮಾತ್ರವೇ ಅಲ್ಲದೆ ಜೆಕ್ ಸರ್ಕಾರವು ಅನೇಕ ಉಪಕರಣಗಳು, ತಾಂತ್ರಿಕ ತಜ್ಞರುಗಳು ಮತ್ತು ಇತರ ವಾಣಿಜ್ಯ ಸಾಲಗಳನ್ನು ಖಾಸಗಿ ಸಂಸ್ಥೆಗಳಿಗೆ ಒದಗಿಸಿತು. ಉದಾಹರಣೆಗೆ; ಸಕ್ಕರೆ ಕಾರ್ಖಾನೆಗಳು, ಪವರ್‌ಹೌಸ್, ಟ್ರ್ಯಾಕ್ಟರ್, ಸಿಮೆಂಟ್ ಕಾರ್ಖಾನೆ, ಮೋಟಾರ್ ಸೈಕಲ್, ಗಡಿಯಾರ ಮುಂತಾದ ಕಾರ್ಖಾನೆಗಳಿಗೆ ನೆರವು ನೀಡಿದೆ. ಜೆಕ್ ಸರ್ಕಾರ, ೧೯೬೩ ನವೆಂಬರ್‌ನಲ್ಲಿ ನಡೆದ ಭಾರತ-ಜೆಕ್ ನಡುವಣದ ಒಪ್ಪಂದದಂತೆ ಭಾರತವು ತಾನು ಜೆಕ್ ಸರ್ಕಾರದಿಂದ ಕೊಂಡುಕೊಂಡ ವಸ್ತುಗಳಿಗೆ ರೂಪಾಯಿಗಳ ಮೂಲಕ ಹಣ ನೀಡುತ್ತದೆ.

ಈ ದಿಸೆಯಲ್ಲಿ ಜೆಕ್ ಸರ್ಕಾರವು ಭಾರತಕ್ಕೆ ಹೆಚ್ಚು ನೆರವುಕಾರಿಯಾಗಿದೆ ಎನ್ನಬೇಕು. ಜೆಕ್ ಸರ್ಕಾರ ಭಾರತದಿಂದ ಕಬ್ಬಿಣದ ಅದಿರನ್ನು ಮಾತ್ರವಲ್ಲದೆ ಭಾರತದಲ್ಲೇ ತಯಾರಿಸಿದ ಪದಾರ್ಥಗಳನ್ನು ತರಿಸಿಕೊಳ್ಳುವುದನ್ನು ಹೆಚ್ಚಿಸಿತು. ಉದಾ: ೧೯೫೩ರಲ್ಲಿ ಕಬ್ಬಿಣದ ಅದಿರನ್ನು ೬೦೦೦೦ ಟನ್ನು ಕೊಳ್ಳುತ್ತಿದ್ದು ೧೯೬೩ರ ವೇಳೆಗೆ ೪೫೦,೦೦೦ ಟನ್ನಿಗೆ ಏರಿಸಿತು. ೧೯೬೩ರಲ್ಲಿ ಬಟ್ಟೆ ಮತ್ತು ಸೆಣಬಿನ ಪದಾರ್ಥಗಳನ್ನು ತರಿಸಿಕೊಳ್ಳಲಾರಂಭಿಸಿತು. ೧೯೬೩ರಲ್ಲಿ ಎರಡು ದೇಶಗಳ ನಡುವೆ ನಡೆದ ವ್ಯಾಪಾರ ಒಪ್ಪಂದದ ಪರಿಣಾಮವಾಗಿ ಜೆಕ್ ಸರ್ಕಾರವು ಭಾರತದಿಂದ ಉಣ್ಣೆಬಟ್ಟೆ, ಕಾಲುಚಪ್ಪಲಿಗಳು, ಸಿಗರೇಟ್, ರತ್ನಗಂಬಳಿ, ಆಟದ ಸಾಮಾನುಗಳು, ಬ್ಲೇಡುಗಳು, ಬ್ರಷ್‌ಗಳು, ಕೈ ಉಪಕರಣಗಳು, ಟೈರುಗಳು, ಟ್ಯೂಬುಗಳು, ಬೋಲ್ಟ್ ನಟ್ಸ್, ಎಲೆಕ್ಟ್ರಿಕಲ್ ಉಪಕರಣಗಳು, ಮುಂತಾದ ಸಿದ್ಧಗೊಳಿಸಿದ ಪದಾರ್ಥಗಳನ್ನು ತರಿಸಿಕೊಳ್ಳಲಾರಂಭಿಸಿತು.

ಭಾರತದ ಪದಾರ್ಥಗಳನ್ನು ತರಿಸಿಕೊಳ್ಳುತ್ತಿರುವ ಸಮಾಜವಾದೀ ದೇಶಗಳಲ್ಲಿ ಜೆಕೋಸ್ಲೋವಾಕಿಯಾವೇ ಮೊದಲನೆಯದು, ಜೆಕ್ ದೇಶವು ಭಾರತದ ವಸ್ತುಗಳಿಗೆ ಉತ್ತಮ ಮಾರುಕಟ್ಟೆಯಾಗಿದೆ. ಆದ್ದರಿಂದಲೇ ಈ ಎರಡೂ ದೇಶಗಳ ನಡುವೆ ವ್ಯಾಪಾರವು ತ್ವರಿತಗೊಳ್ಳುತ್ತಿರುವುದು. ೧೯೬೪ರ ಜನವರಿಯಲ್ಲಿ ನಡೆದ ವ್ಯಾಪಾರ ಒಪ್ಪಂದದ ಪ್ರಕಾರ ೮೦ ಕೋಟಿರೂಗಳ ವ್ಯಾಪಾರವು ಸಾಗುವುದು.

ಕಳೆದ ದಶಕದಿಂದೀಚೆಗೆ ಎರಡು ದೇಶಗಳ ನಡುವಣ ವ್ಯಾಪಾರ ೧೧ ಪಟ್ಟು ಹೆಚ್ಚಿದೆ. ೧೯೬೬ರಲ್ಲಿ ಆರಂಭವಾದ ಆರ್ಥಿಕ, ವ್ಯಾಪಾರ ಮತ್ತು ತಾಂತ್ರಿಕ ಸಹಕಾರ ಸಮಿತಿಯು ಎರಡೂ ದೇಶಗಳಲ್ಲಿ ಅಧ್ಯಯನ ನಡೆಸಿ ಪರಸ್ಪರ ಸಹಕರಿಸಲು ಅದರಲ್ಲೂ ಉತ್ಪಾದನೆ ದಿಶೆಯಲ್ಲಿ ಸಹಕರಿಸಲು ಸಾಧ್ಯವಿರುವ ಸಾಧ್ಯತೆಗಳನ್ನು ಕಂಡುಹಿಡಿದಿದೆ. ಏನೇ ಆದರೂ, ಜೆಕ್ ಸರ್ಕಾರವು ಹೊಸ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವುದರಿಂದ ಭಾರತದ ಪದಾರ್ಥಗಳಿಗೆ ಒಳ್ಳೆಯ ಮಾರುಕಟ್ಟೆ ದೊರೆಯುವುದು. ಪರಿಣಾಮವಾಗಿ ಭಾರತವು ಜೆಕೋಸ್ಲೋವಾಕಿಯಾದಿಂದ ಇತರ ಮಷಿನರಿಗಳನ್ನು ತರಿಸಿಕೊಳ್ಳಲು ಸಾಧ್ಯವಾಗುವುದು.

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No — 1 28337
2 29887
Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

29—5—1969

೨೦
ಪೈಸೆ

ಜಾಕೀರ್ ಹುಸೇನ್‌ರಿಗೆ ಶ್ರದ್ಧಾಂಜಲಿ

—ಶ್ರೀ ಜಗಜೀವನರಾಮ್.

ಡಾ|| ಜಾಕೀರ್ ಹುಸೇನ್ ಅವರು ಇನ್ನಿಲ್ಲ. ಅವರ ನಿಧನ ನಮ್ಮ ದೇಶಕ್ಕೆ ಬಹು ದೊಡ್ಡ ನಷ್ಟ. ಆದರೂ ದುಃಖದ ಈ ಸನ್ನಿವೇಶದಲ್ಲಿ ನಾವು ಒಂದು ಮಹಾ ಸತ್ಯವನ್ನು ಮರೆಯಬಾರದು. ಡಾ|| ಜಾಕೀರ್ ಹುಸೇನ್ ಅವರ ಪಾರ್ಥಿವ ಶರೀರ ನಮ್ಮಿಂದ ಕಣ್ಮರೆಯಾದರೂ, ಅವರ ಮಾನವೀಯತೆ ನಮಗೆ ಸದಾ ಮಾರ್ಗದರ್ಶನ ನೀಡುತ್ತದೆ. ಈ ಕಾರಣದಿಂದಾಗಿ ಇಂತಹ ಒಂದು ದಾರುಣ ಪ್ರಸಂಗದಲ್ಲಿ ನಾವು ದಿವಂಗತ ರಾಷ್ಟ್ರಪತಿಗಳ ಜೀವನ ಹಾಗೂ ಸಾಧನೆಗಳಿಂದ ಸ್ಫೂರ್ತಿಯನ್ನು ಪಡೆಯಬೇಕು. ಇದುವೇ ನಮ್ಮ ಮಾರ್ಗದರ್ಶನ ಮಾಡುವ ತತ್ವವಾಗಿದೆ.

ಡಾ|| ಜಾಕೀರ್ ಹುಸೇನ್‌ರವರು ಓರ್ವ ಬಹು ದೊಡ್ಡ ರಾಷ್ಟ್ರೀಯ ವಾದಿ. ಅವರ ರಾಷ್ಟ್ರೀಯ ವಾದ ಸರ್ವಶ್ರೇಷ್ಠವಾದದ್ದು. ಅಂತರ್‌ರಾಷ್ಟ್ರೀಯ ವಾದವನ್ನೂ ಮಾನವತಾ ವಾದವನ್ನೂ ಅಳವಡಿಸಿಕೊಂಡ ಒಂದು ಉದಾರ ವ್ಯಕ್ತಿತ್ವ ಅವರದಾಗಿತ್ತು. ಡಾ|| ಹುಸೇನ್ ಅವರಿಗೆ ಇತಿಹಾಸದಲ್ಲಿನ ಪ್ರಸ್ತುತ ಬಿಕ್ಕಟ್ಟಿನ ಅರಿವು ಚೆನ್ನಾಗಿಯೇ ಇದ್ದಿತು. ಬಾಹ್ಯಾಕಾಶ ಶೋಧನೆಗಾಗಿ ಮಾನವನು ನಡೆಸಿದ ವಿಸ್ಮಯಕಾರಿ ಸಾಧನೆಗಳು ಹಾಗೂ ಈ ವಿಶ್ವದಲ್ಲಿ ಅವನೇ ನಿರ್ಮಿಸಿದ ಸಮಸ್ಯೆಗಳು—ಇವೇ ಮೊದಲಾದ ಅನೇಕ ವಿಷಯಗಳನ್ನು ಕುರಿತು ಅವರು ಯಾವಾಗಲೂ ಚಿಂತಿಸುತ್ತಿದ್ದರು. ವಿಜ್ಞಾನ, ಹಾಗೂ ತಂತ್ರಶಾಸ್ತ್ರದ ಏಳಿಗೆ ಮಾನವ ಜನಾಂಗದ ಅಸ್ತಿತ್ವಕ್ಕೇ ಮಾರಕವಾಗಿ ಬೆಳೆಯುತ್ತಿರುವುದನ್ನು ಅವರು ಗಮನಿಸದಿರಲಿಲ್ಲ. ಇದನ್ನು ಅರಿತೇ ಅವರು ವಿಜ್ಞಾನ ಹಾಗೂ ತಂತ್ರಶಾಸ್ತ್ರಗಳ ಬೆಳವಣಿಗೆಯಿಂದ ನಮ್ಮ ಸಾಮಾಜಿಕ ಜವಾಬ್ದಾರಿ ಮೊದಲಿಗಿಂತ ಹೆಚ್ಚಿದೆ ಎಂದೂ ನೈತಿಕ ಹಾಗೂ ಆಧ್ಯಾತ್ಮಿಕ ಶಕ್ತಿಯ ಅಭಿವೃದ್ಧಿಯಿಂದ ವಿಶ್ವದ ಏಳಿಗೆ ಸಾಧ್ಯವೆಂದೂ ಹೇಳುತ್ತಿದ್ದರು. ಗಾಂಧೀಜಿಯವರೊಂದಿಗೆ ನಿಕಟ ಸಂಪರ್ಕದಲ್ಲಿ ಬಂದದ್ದು ಅವರ ಅದೃಷ್ಟವಂತಿಕೆ. ಮಾನವ ಜನಾಂಗವನ್ನು ಉದ್ಧಾರ ಮಾಡಲು ಹಾಗೂ ಈ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಇರುವ ಒಂದೇ ಒಂದು ದಾರಿಯೆಂದರೆ ನಾವು ಗಾಂಧೀಜಿಯವರು ಹೇಳಿದಂತೆ ನಡೆದುಕೊಳ್ಳುವುದೇ ಆಗಿದೆ. ಆತ್ಮಬಲ ಅಣುಬಾಂಬಿಗಿಂತಲೂ ಹೆಚ್ಚು ಬಲಿಷ್ಠವಾದದ್ದು ಎಂದು ಡಾ|| ಜಾಕೀರ್ ಹುಸೇನ್ ಹೇಳುತ್ತಿದ್ದರು.

ಶಿಕ್ಷಣ ಕ್ಷೇತ್ರದ ಮಹಾ ಮೇಧಾವಿ

ಡಾ|| ಜಾಕೀರ್ ಹುಸೇನ್ ಅವರು ಶಿಕ್ಷಣ ತಜ್ಞರಾಗಿ ತಮ್ಮ ಜೀವನವನ್ನು ಆರಂಭಿಸಿದರು. ಶಾಲೆ ಹಾಗೂ ಕಾಲೇಜ್ ಅಧ್ಯಯನ ಪೂರ್ಣಗೊಂಡಾಕ್ಷಣ ಶಿಕ್ಷಣ ಮುಗಿಯಿತೆಂದು ಭಾವಿಸಲಿಲ್ಲ. ಅವರ ಅಭಿಪ್ರಾಯದಲ್ಲಿ ಶಿಕ್ಷಣವು ಜೀವನದೊಂದಿಗೆ ಬೆಳೆಯುತ್ತ ಹೋಗುತ್ತದೆ. ಹಾಗೂ ಜೀವನದ ಪರಿಪೂರ್ಣತೆಯೊಂದಿಗೆ ಅದೂ ಪರಿಪೂರ್ಣವಾಗುತ್ತದೆ. ರಾಷ್ಟ್ರಪತಿ ಡಾ|| ಜಾಕೀರ್ ಹುಸೇನ್‌ರು ಶಿಸ್ತು, ಸ್ವಪರಿಪೂರ್ಣ ಹಾಗೂ ಕರ್ತವ್ಯನಿಷ್ಠೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು. ವೈಯಕ್ತಿಕ ಹಿತಕ್ಕಿಂತಲೂ ಜನಹಿತ ಸಾಧನೆಯೇ ಅವರ ಬದುಕಿನ ಗುರಿಯಾಗಿದ್ದಿತು. ತಮ್ಮ ಈ ಆದರ್ಶಕ್ಕೆ ಭಂಗ ಬಂದಾಗಲೆಲ್ಲಾ ಅವರು ಕಳವಳಗೊಂಡರು. ದಿವಂಗತರು ರಾಷ್ಟ್ರದ ಐಕ್ಯಮತ್ಯಕ್ಕಾಗಿ ಎಲ್ಲರೂ ಶ್ರಮಿಸಬೇಕೆಂದೂ ಪ್ರತಿಯೊಬ್ಬರೂ ತಮಗೆ ಇಷ್ಟ ಬಂದಂತೆ ಮಾಡುತ್ತ ಹೋದರೆ ರಾಷ್ಟ್ರದ ಕಲ್ಯಾಣ ಸಾಧ್ಯವಾಗಲಾರದೆಂದೂ ನಮಗೆ ಎಚ್ಚರಿಕೆ ನೀಡಿದ್ದಾರೆ. ನಮ್ಮ ನಡವಳಿಕೆಯಲ್ಲಿ ಬದಲಾವಣೆಗಳು ತರಬೇಕಾದರೆ ನಮ್ಮ ಆತ್ಮಶೋಧನೆ ಆಗಬೇಕು. ಉದಾಹರಣೆಗೆ, ಅಸ್ಪೃಶ್ಯತೆಯನ್ನೇ ತೆಗೆದುಕೊಳ್ಳಿ. ಡಾ|| ಜಾಕೀರ್ ಹುಸೇನ್ ಅವರು ಈ ಬಗ್ಗೆ ಹೀಗೆ ಹೇಳಿದ್ದಾರೆ. "ಅಸ್ಪೃಶ್ಯತೆ ಸಂಪೂರ್ಣವಾಗಿ ನಿವಾರಣೆಯಾಗಬೇಕು. ನಮ್ಮ ಶಾಸನ ಪುಸ್ತಕಗಳಲ್ಲಿ ಅಸ್ಪೃಶ್ಯತೆಯನ್ನು ಒಂದು ಅಪರಾಧ ಎಂದು ಸಾರಲಾಗಿದೆ. ನಿಜ. ಆದರೂ ನಾವು ಅಸ್ಪೃಶ್ಯತೆಯ ಕುರುಹನ್ನು ನಮ್ಮ ದೈನಂದಿನ ಜೀವನದಿಂದ ಹಾಗೂ ನಮ್ಮ ಮನಸ್ಸಿನಿಂದ ತೆಗೆದುಹಾಕಬೇಕಾಗಿದೆ. ನಮ್ಮ ಸಮಾಜ ಜೀವನವನ್ನು ಬದಲಿಸಬೇಕಾದರೆ ಹಾಗೂ ನಮ್ಮ ಸುಖೀರಾಜ್ಯದ ಆದರ್ಶವನ್ನು ಸಾಧಿಸಬೇಕಾದರೆ ವಿಶಾಲ ಪ್ರವೃತ್ತಿ ಹಾಗೂ ಜನಸೇವೆ ಗುಣಗಳು ಅತ್ಯಮೂಲ್ಯ. ಈ ಒಂದು ಸಾರ್ವಕಾಲಿಕ ಸತ್ಯ ಮನವರಿಕೆಯಾದಾಗ, ಜನರು ತಮಗಾಗಿ ಆರಿಸಿಕೊಳ್ಳುವ ಸರಕಾರವು ಈ ಸತ್ಯದಿಂದ ಸ್ಫೂರ್ತಿಯನ್ನು ಪಡೆಯುತ್ತದೆ. ಫಲಸ್ವರೂಪವಾಗಿ, ಇಂದು ನಮ್ಮ ರಾಷ್ಟ್ರೀಯ ರಂಗದಲ್ಲಿ ಕಂಡುಬರುತ್ತಿರುವ ಅನೇಕ ಲೋಪದೋಷಗಳು ನಿವಾರಣೆಗೊಳ್ಳುತ್ತವೆ.

ವಿಶಿಷ್ಟ ಮಾನವತಾವಾದಿ

ಡಾ|| ಜಾಕೀರ್ ಹುಸೇನ್ ಖ್ಯಾತ ಶಿಕ್ಷಣ ತಜ್ಞರು ಹಾಗೂ ವಿಶಿಷ್ಟ ಮಾನವತಾವಾದಿ. ರಾಜಕೀಯವು ಜೀವನದ ಸರ್ವಸ್ವವೆಂದು ಅವರು ಭಾವಿಸಲಿಲ್ಲ. ಹೆಚ್ಚೆಂದರೆ ಮಾನವನಿಗೆ ಅದು ದೊಡ್ಡ ಗುರಿಗಳನ್ನು ಸಾಧಿಸಲು ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ರೂಪಿಸಲು ನೆರವಾಗುತ್ತದೆ. ಇಲ್ಲಿಯೂ ಡಾ|| ಜಾಕೀರ್ ಹುಸೇನರ ವಿಚಾರಗಳಲ್ಲಿ ಅವರ ವ್ಯಕ್ತಿತ್ವದ ದರ್ಶನವಾಗುತ್ತದೆ. ನಾವು ಇಂದು ಬಳುವಳಿಯಾಗಿ ಪಡೆದಿರುವ ಸಂಸ್ಕೃತಿಯಲ್ಲಿ ಶ್ರೇಷ್ಠವಾದದ್ದೆಲ್ಲವೂ ಮಾನವನ ನಿರ್ಮಿತವೇ. ಮಾನವ ಸಂಸ್ಕೃತಿಯನ್ನು ನಿರ್ಮಿಸಿದ ಮಾತ್ರಕ್ಕೆ ಅದು ಅವನಿಗೆ ವಂಶಪಾರಂಪರ್ಯವಾಗಿ ಲಭಿಸುತ್ತದೆ ಎಂದಲ್ಲ. ನಾವು ಅದನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಮ್ಮೊಂದಿಗೆ ನಮ್ಮ ಸಂಸ್ಕೃತಿಗೂ ಜೀವ ತುಂಬಬೇಕು. ಈ ಪ್ರಕಾರ ನಡೆದಾಗಲೇ ನಾವು ಇಂದಿನ ಜಗತ್ತಿನಲ್ಲಿ ಸಂಸ್ಕೃತಿಯ ನಿರ್ಮಾಪಕರಾಗಬಲ್ಲೆವು. ಡಾ|| ಜಾಕೀರ್ ಹುಸೇನ್ ಅವರು ಸ್ವಾತಂತ್ರ್ಯ ರಕ್ಷಣೆಯ ವಿಷಯವಾಗಿ ನಮಗೆ ಎಚ್ಚರಿಕೆ ನೀಡಿದ್ದಾರೆ. ಸ್ವಾತಂತ್ರ್ಯವನ್ನು ಎಂದೂ ಯಾರೂ ನಮಗೆ ಕೊಡುವುದಿಲ್ಲ. ಅದನ್ನು ನಾವು ಕಷ್ಟಪಟ್ಟು ಸಂಪಾದಿಸಬೇಕಾಗುತ್ತದೆ. ಹಾಗೂ ನಮ್ಮ ಜೀವನದಲ್ಲಿ ಪ್ರತಿಯೊಂದು ಕ್ಷಣವೂ ಅದನ್ನು ಗಳಿಸಲು ಹೋರಾಡುವುದರಿಂದಲೇ ಸ್ವಾತಂತ್ರ್ಯದ ರಕ್ಷಣೆ ಆಗುತ್ತದೆ—ಎಂದು ಹೇಳುತ್ತಿದ್ದರು. ನಾವು ಈ ಒಂದು ಆದರ್ಶವನ್ನು ಪೂರೈಸಿದರೆ ದಿವಂಗತ ರಾಷ್ಟ್ರಪತಿಗಳ ಬಯಕೆಯನ್ನು ಈಡೇರಿಸಿದಂತಾಗುತ್ತದೆ.

ಇಡೀ ಭಾರತವೇ ನನ್ನ ಮನೆ ಭಾರತೀಯರು ನನ್ನ ಕುಟುಂಬ, ಈ ಮನೆ ಹೆಚ್ಚು ಬಲಿಷ್ಠವಾಗಿ, ಹೆಚ್ಚು ಸುಂದರವಾಗಿ ಸಮೃದ್ಧ ಭಾರತದ ನಿರ್ಮಾಣಕ್ಕಾಗಿ ಶ್ರಮಿಸುವ ಮಹತ್ತರ ಕಾರ್ಯದಲ್ಲಿ ತೊಡಗಿದ ಭಾರತೀಯರ ವಾಸಕ್ಕೆ ಯೋಗ್ಯವಾದ ಮನೆಯಾಗಿ ಮಾಡುವುದೇ ನನ್ನ ಮುಖ್ಯ ಗುರಿ— ಎಂದ ಡಾ|| ಜಾಕೀರ್ ಹುಸೇನ್ ಹೇಳಿದ್ದಾರೆ. ದಿವಂಗತ ರಾಷ್ಟ್ರಪತಿಗಳ ಈ ಆದರ್ಶವನ್ನು ಸಾಧಿಸಲು ನಾವು ಸಮರ್ಪಣಾ ಭಾವದಿಂದ ಸಂಕಲ್ಪ ಮಾಡುವುದೇ ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ.

ಗ್ರಾಮೀಣ ಅಭಿವೃದ್ಧಿಗಾಗಿ

ಸಿಂಡಿಕೇಟ್ ಬ್ಯಾಂಕು

ಇದೇ ತಾರೀಕು 30—5—1969ರಂದು
ದಕ್ಷಿಣ ಕನ್ನಡದಲ್ಲಿ 4 ಮತ್ತು ಕೊಡಗಿನಲ್ಲಿ 1 ಹೀಗೆ 5 ಹೊಸ ಶಾಖೆಗಳನ್ನು ತೆರೆಯಲಿರುವುದೆಂದು ತಿಳಿಸಲು ಸಂತೋಷವಾಗುತ್ತದೆ.

1) ಉದ್ಯಾವರ
2) ಹೆಜಮಾಡಿ
3) ಕಲ್ಲಮುಂಡ್ಕೂರು
4) ಸಾಸ್ತಾನ
} ದಕ್ಷಿಣ ಕನ್ನಡ
5) ಚೆಟ್ಟಳ್ಳಿ : ಕೊಡಗು

ಏಪ್ರಿಲ್ ತಿಂಗಳಲ್ಲಿ ತೆರೆದ ಹೊಸ ಶಾಖೆಗಳು 18

"ಸಿಂಡಿಕೇಟ್ ಬ್ಯಾಂಕಿಗೆ ಶಾಖೆ ತೆರೆಯಲು ಯಾವ ಸ್ಥಳವೂ ಚಿಕ್ಕದಲ್ಲ"

"ಸಿಂಡಿಕೇಟ್ ಬ್ಯಾಂಕಿನಲ್ಲಿ ಖಾತೆ ತೆರೆಯಲು ಯಾವ ಮನುಷ್ಯನೂ ಚಿಕ್ಕವನಲ್ಲ"

ನಿಮ್ಮ ಭವಿಷ್ಯದ ಭದ್ರತೆಗಾಗಿ
ಸಿಂಡಿಕೇಟ್ ಬ್ಯಾಂಕಿನ ಹಲವು ಉಳಿತಾಯ ಯೋಜನೆಗಳಲ್ಲಿ ಒಂದನ್ನು ಆರಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು. ಮಣಿಪಾಲ, ದ. ಭಾರತ)

ಸಂಪನ್ಮೂಲಗಳು: ರೂ. 140 ಕೋಟಿಗೂ ಮಿಕ್ಕಿದೆ. | ಶಾಖೆಗಳು 280ಕ್ಕೂ ಹೆಚ್ಚು. | ಶ್ರೀ ಟಿ. ಎ. ಪೈ ಚೆಯರ್‌ಮನ್

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ನಿವರಿಸುವ ಕೈಪಿಡಿ
ಬೆಲೆ 0-75 ಪೈಸೆ ಮಾತ್ರ.
0-90ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ,
ತಾಲೂಕೋಟೆ, ಉಡುಪಿ, ದ. ಕ.

ಬಂಟ್ವಾಳ ಮುನ್ಸಿಫ್ ಕೋರ್ಟಿನಲ್ಲಿ
O. S. 190/1968.

ಪೊನ್ನಕ್ಕೆ ಹೆಂಗಸು — — ವಾದಿ
ಬಾಬು ಗೌಡ, ಶೀನಪ್ಪ ಗೌಡನ ಮಗ, ಕನ್ಯಾನ ಗ್ರಾಮದ ಬಸ್ತಿಮೂಲೆ—ಪ್ರತಿವಾದಿ
ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿಯು ನಿಂಮ ಮೇಲೆ ಹೂಡಿದ ಮೇಲ್ಕಂಡ ದಾವೆಯು ತಾ. ೮-6-69ಕ್ಕೆ ನಿಂಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಆದ್ಯ ನಿಂಮದೇನಾದರೂ ಆಕ್ಷೇಪಣೆಗಳಿದ್ದರೆ ಆದಿನ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿದೆ.

/By order of the Court/
(Sd) M. N. SHANKAR BHAT,
Advocate for Plff.
B. C. Road,)
17—5—69)

ಫೋನ್ : 526
1921 ಸ್ಥಾಪನೆ
ಸಂಪುಟ ೪೮
ಸಂಚಿಕೆ ೩೬
VOL. 48
No. 36
ಸ್ಥಾಪಕರು: ದಿ| ಎ. ಬಿ. ಶೆಟ್ಟರು
ಸಂಪಾದಕರು: ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೯—೫—೧೯೬೯

ರಾಜಕೀಯ ಹೆಳವತನ

"ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು" ಎಂಬ ಗಾದೆ ಮಾತು ಗೃಹಾಂಗಣಕ್ಕೂ ರಾಷ್ಟ್ರಾಂಗಣಕ್ಕೂ ಏಕಸಮವಾಗಿ ಅನ್ವಯಿಸುತ್ತದೆ. ಗಂಡನು ಒಲ್ಲದವನಾಗಬೇಕಾದರೆ, ಹೆಂಡತಿಯು ಮೇಲೆ ಅನಾದರ ಮಾಡಲೇಬೇಕು. ಈ ಅನಾದರ ಸಾತ್ವಿಕವಿರಬಹುದು ಇಲ್ಲವೆ ತಾಮಸವೂ ಇರಬಹುದು. ಹೆಂಡತಿ ಸಾವಿತ್ರಿಯಾಗಿದ್ದು ಗಂಡನು ಒಳ್ಳೆಯವನಾಗದೆ ಒಲ್ಲದವನಾಗಿ ಬಿಟ್ಟರೆ, ಅಲ್ಲಿನ ಅನಾದರ ತಾಮಸವಲ್ಲದೆ ಮತ್ತೇನು? ತಾಮಸಾನಾದರ ಪ್ರೇರಕವಾದ ಒಲ್ಲದಗಂಡ ಸತೀ ಸಾವಿತ್ರಿಯ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೇರಿ ಅವನ್ನು ಬಣ್ಣ ಬಣ್ಣಗಳಿಂದ ಅಲಂಕರಿಸಿ ಊರವರ ಕಣ್ಣಿಗೆ ಪಥ್ಯಗೊಳಿಸಿ ಸತಿಯನ್ನು ಸ್ಮಶಾನಕ್ಕೆ ಕಳಿಸಿ ತನ್ನ ಲಾಲಸೆಯನ್ನು ತೀರಿಸಿಕೊಳ್ಳುವ ಸಂಗಚಪಲತೆಯಿಂದ ತುಂಬಿರುತ್ತಾನೆ. ಉಪಪ್ರಧಾನಿ ಮುರಾರ್ಜಿ ಭಾಯಿಯವರ ಮೇಲೆ ಕಾಂಗ್ರೆಸ್ಸಿನ ಒಳಗೂ ಹೊರಗೂ ನಡೆಯುತ್ತಿರುವ ಆರೋಪಗಳು ಇಂಥ ಒಲ್ಲದ ಗಂಡನ ಚಪಲ ಕೃತಿಗಿಂತ ಬೇರೆಯಲ್ಲವೆಂದೇ ಹೇಳಬೇಕು. ಯಾವ ರಾಯನಿಗೂ ಸೊಪ್ಪುಹಾಕದ ಸಾವಿತ್ರಿ ಈ ಒಲ್ಲದ ಗಂಡನೆಂಬ ಟೀಕಾಸ್ತ್ರಗಳಿಗೆ ಬೆದರಿಯಾಳೆ?

ಮುರಾರ್ಜಿ ದೇಸಾಯಿಯವರು ಅಧಿಕಾರದಲ್ಲಿರುವ ಬೆರಳೆಣಿಕೆಯ ಹಳೆಯ ಸಾಧಕರಲ್ಲಿ ಒಬ್ಬರು. ಕಾಂಗ್ರೆಸ್ಸಿನ ಧ್ಯೇಯ-ಗುರಿ-ಸಾಧನೆಗಳಲ್ಲಿ ಅವರಿಗಿರುವಷ್ಟು ಶ್ರದ್ಧೆ-ವಿಶ್ವಾಸ ಮತ್ತು ನಿಷ್ಠೆಗಳು ಪ್ರಾಯಃ ಪ್ರಧಾನಿ ಇಂದಿರಮ್ಮನಿಗೂ ಇರಲಾರದು. ಏಕೆಂದರೆ, ಇಂದಿರಮ್ಮ ಇನ್ನೂ ಎಳೆಯರು; ತನ್ನ ಸ್ಥಿರವನ್ನು ಅವಲಂಬಿಸಬಹುದಾದ ವರ್ಗಗಳ ಮೇಲೆಯೇ ಅವರ ನಿಗಾ ಹೆಚ್ಚು. ದೇವರು ಅವಕಾಶ ನೀಡಿದರೆ ಇನ್ನೂ ಹಲವು ಕಾಲ ಪೀಠಾರೂಢರಾಗುವ ಹಂಬಲವುಳ್ಳವರು. ಆದರೆ ಹಳೆಯ ಹುಲಿ ಮುರಾರ್ಜಿಗೆ ಅಧಿಕಾರದ ಹಂಬಲವಿದೆಯೆನ್ನುವಂತಿಲ್ಲ; ಒಂದು ವೇಳೆ ಅದಿರುತ್ತಿದ್ದರೆ, ಕಳೆದ ಬಾರಿ ತನ್ನ ಬಲಗಾಲನ್ನು ತುಸು ಒತ್ತಿದ್ದರೆ, ಪ್ರಧಾನ ಮಂತ್ರಿಯಾಗುವ ಯೋಗವಿತ್ತು. ಆದರೆ, ಪಕ್ಷದಲ್ಲಿ ವಿಚ್ಛಿದ್ರ ಮಾಡಿಸುವುದು ಅವರಿಗೆ ಬೇಡವಿತ್ತು; ಸ್ಪರ್ಧೆಯಿಂದವರು ಹಿಂದೆ ಸರಿದರು. ಮುರಾರ್ಜಿಯವರ ಚಿಂತನ-ಮಂಥನ ಪದ್ಧತಿ ಅವರದ್ದೇ, ಟೀಕೆ ಪ್ರವೃತ್ತಿಯಿಂದ ಪ್ರೇರಿತವಾದದ್ದು. ಅವರು ಹಿಡಿಯುವ ದಾರಿಯೂ ನೇರವಾದದ್ದು, ನಡೆಯುವುದೂ ನೇರವಾಗಿಯೇ. ತಂತ್ರಶೀಲರು ಅವರು ಹೌದಾದರೂ ಕುತಂತ್ರದಿಂದ ಸದಾ ದೂರವಿರುವವರು. ಹಾಗಿರುವಾಗ ಅಧಿಕಾರ ಮೋಹ—ಲಾಲಸೆಗಳಿಂದ ತುಂಬಿ ತುಳುಕಾಡುತ್ತಿರುವ ದೇಶದ ರಾಜಕೀಯ ರಂಗದಲ್ಲಿ ಅವರು ಮಿತ್ರರಿಗಿಂತಲೂ ಹೆಚ್ಚಾಗಿ ಶತ್ರುಗಳನ್ನೇ ಸಂಪಾದಿಸಿಕೊಂಡಿದ್ದಾರೆಂದರೆ ಸತ್ಯಕ್ಕೆ ತುಂಬಾ ಹತ್ತಿರವೇ ಆದೀತು. ಸ್ವಯಂ ಇಂದಿರಮ್ಮನೂ ಮುರಾರ್ಜಿಯವರನ್ನು ಇಷ್ಟಾಗಿ ಮೆಚ್ಚುವುದಿಲ್ಲವಾದರೂ ತನ್ನ ಸಿಂಹಾಸನದ ಒಂದು ಗಟ್ಟಿ ಕಂಬವನ್ನಾಗಿ ಇರಿಸಿಕೊಂಡದ್ದು ಸರ್ಕಾರದ ದೃಢತೆಗಾಗಿ. ಸೂತ್ರ ಹಿಡಿದವನ್ನು ಮತ್ತಷ್ಟು ಭದ್ರಗೊಳಿಸುವ ಮತ್ತೊಂದು ಗಾಳಿ ದೊರಕಿದರೆ, ಅದನ್ನು ಕಿತ್ತೆಸೆಯಲೂ ಅವರು ಸಿದ್ಧರೇ. ಅಧಿಕಾರದ ಲಾಲಸೆ ಎಲ್ಲ ಪಕ್ಷಗಳಲ್ಲಿಯೂ ಮಿತಿಮೀರುವಾಗ ಕಾಂಗ್ರೆಸ್ಸು ಅದಕ್ಕೆ ಅಪವಾದವಾಗಿ ಉಳಿಯುವುದು ಸಾಧ್ಯವಿಲ್ಲ. ಇಂತಹ ಸಂದರ್ಭಶೀಲರೂ ಅವಕಾಶವಾದಿಗಳೂ ರಾಜಕೀಯ ಸ್ವಾರ್ಥಲೋಲುಪ ಪರಿಚಾರಕರುಗಳು ಸಾತ್ವಿಕ ಧ್ಯೇಯವಾದಿ ನಿಷ್ಠಾವಂತ ಮುರಾರ್ಜಿಯನ್ನು ಕಂಡು ಬೊಗಳುವುದು ಅಸಂಭವವೇನಲ್ಲ. ದೇಸಾಯಿ ಸರಕಾರದಲ್ಲಿರುವಷ್ಟು ಸಮಯ ತಮ್ಮ ಯಾವ ಕುತಂತ್ರವೂ ನಡೆಯಲಾರದೆಂದು ಪ್ರತಿಪಕ್ಷೀಯರಿಗೆ ಚಿಂತೆಯಾದರೆ, ಸ್ವಪಕ್ಷೀಯರಿಗೆ ಅಧಿಕಾರ ಗದ್ದುಗೆಗೇರುವ ಹಬ್ಬಿದ ಬಳ್ಳಿಗೆ ಇವರೊಂದು ತಡೆ. ಹಾಗಾಗಿ ಸ್ವಪಕ್ಷೀಯರೂ ವಿಪಕ್ಷೀಯರೂ ಒಂದಾಗಿ ಬೇರೆ ಬೇರೆ ವಿಧಾನಗಳಿಂದ ಮುರಾರ್ಜಿ ತೇಜೋವಧೆಯಲ್ಲಿ ತೊಡಗಿದ್ದಾರೆ. ತನ್ನ ಮೇಲಿನ ಆರೋಪಗಳಲ್ಲಿ ಹುರುಳಿಲ್ಲವೆಂಬುದನ್ನು ಸಂಸತ್ತಿನಲ್ಲಿಯೂ ಹೊರಗಡೆಯೂ ಮುರಾರ್ಜಿ ಹಲವಾರು ಬಾರಿ ಪ್ರಾಮಾಣಿಕವಾಗಿ ನಿರಾಕರಿಸಿ ತನ್ನ ನಿಶ್ಚಲ ವಿಶುದ್ಧ ಚರಿತ್ರವನ್ನು ಮನಗಾಣಿಸಿ ಕೊಟ್ಟರೂ ಅವರ ದ್ವೇಷಿಗಳು ಮತ್ತೂ ಮತ್ತೂ ಮೊಸರಲ್ಲಿ ಕಲ್ಲೆಂದು ಬೇರೆ ಬೇರೆ ರೀತಿ-ವಿಧಾನಗಳಿಂದ ಕೂಗಾಡ ತೊಡಗಿದ್ದಾರೆ. ಈ ಬಗೆಯಲ್ಲಿ ತನ್ನ ತೇಜೋವಧೆಯ ಪ್ರಯತ್ನ ಇನ್ನೂ ಮುಂದುವರಿದರೆ, ತಾನು ಅಧಿಕಾರದಲ್ಲಿರುವುದು ಅಸಾಧ್ಯವಾಗಬಹುದೆಂದ ಅವರ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಎಚ್ಚರಿಸಿದ್ದರು. ಅವರ ವಿರೋಧಿಗಳಿಗೂ ಬೇಕಾಗಿರುವುದೂ ಇದುವೇ ಏನೋ! ಈಗ ದೇಸಾಯಿಯವರು ಪತ್ರಿಕಾ ಪರಿಷತ್ತೊಂದನ್ನು ಕರೆದು ಆರೋಪಗಳ ಮೇಲೆ ಬಹುವಾದ ಜೋಳಿಗೆಯನ್ನು, ತನ್ನ ಚರಿತ್ರೆಯ ಪುಟಗಳನ್ನು ಮತ್ತೊಮ್ಮೆ ತೆರೆದಿಟ್ಟರು. ಈ ಪರಿಷತ್ತು ಸ್ವತಂತ್ರ ವಾತಾವರಣದಲ್ಲಿ ನಡೆಯಿತು; ಯಾರೂ ಯಾವ ಪ್ರಶ್ನೆಯನ್ನಾದರೂ ಕೇಳಬಹುದಿತ್ತು. ಆದ್ದರಿಂದ, ಮುರಾರ್ಜಿಯವರ ಆರೋಪ ನಿರಾಕರಣೆಗೆ ಸೂಕ್ತ ಆಧಾರಗಳೆಲ್ಲವೂ ದೊರೆಯುವುದು ಸಾಧ್ಯವಾಯಿತು.

ಹತ್ತಿಯಂತಹ ಕೋಮಲ ವಸ್ತುವಾದರೂ ಬಹಳ ಒತ್ತಿದರೆ, ಕಬ್ಬಿಣಕ್ಕಿಂತಲೂ ಗಟ್ಟಿಯಾಗುತ್ತದೆ; ಮುರಾರ್ಜಿಯವರಲ್ಲಿ ಈಗ ಅಂತಹ ಗಟ್ಟಿತನ ಮೂಡಿದೆ. 'ಇಂತಹ ಅಪಪ್ರಚಾರ ಮತ್ತು ತನ್ನ ಮೇಲಿನ ತೇಜೋವಧೆಯ ಪ್ರಕರಣ'ಗಳನ್ನು ತಾನು ಕೆಚ್ಚೆದೆಯಿಂದ ಎದುರಿಸುತ್ತೇನೆಂದವರು ದಿಟ್ಟತನದಿಂದಲೇ ಹೇಳಿದ್ದಾರೆ. ಈ ಬಗೆಯ ಪ್ರಕರಣಗಳು ಕ್ರಮಾಗತವಾಗಿ ಒಂದರ ಹಿಂದೊಂದರಂತೆ ನಡೆಯುತ್ತ ಬರುತ್ತಿವೆ; ಒಮ್ಮೆ ನಿರಾಕೃತವಾದ ಆರೋಪಗಳಿಗೇ ಬೇರೊಂದು ಬಣ್ಣ ನೀಡಿ ಮತ್ತೂ ಮತ್ತೂ ಹೇರಲಾಗುತ್ತಿದೆ—ಇದಕ್ಕೆಲ್ಲ ಸೊಪ್ಪು ಹಾಕುವವ ತಾನಲ್ಲವೆಂದೂ ಅವರು ಸ್ಪಷ್ಟವಾಗಿ ಘೋಷಿಸಿದ್ದಾರೆ. ಮುರಾರ್ಜಿಯವರ ಪ್ರಾಮಾಣಿಕತೆ-ಕಾರ್ಯದಕ್ಷತೆ ನೇರ ದಾರಿಗಳ ಬಗ್ಗೆ ಯಾರೊಬ್ಬರೂ ಸಂದೇಹಪಡುವುದಿಲ್ಲ; ಆದರೆ, ರಾಜಕೀಯ ಸ್ವಾರ್ಥಿಗಳು ಮಾತ್ರ ಇದರಿಂದ ಕರುಬುವಂತಾಗಿದೆ. ಪರರನ್ನು ದೂಷಿಸುವ ಪ್ರವೃತ್ತಿ ಮಾನವನಲ್ಲಿ ರಕ್ತಗತವಾಗಿಯೇ ಬಂದಿರಬೇಕು. ಅದರಿಂದ ದೊರೆಯುವ ಆನಂದ ಬ್ರಹ್ಮಾನಂದ ಸಹೋದರವೆನ್ನಲೂ ಬಹುದೋ ಏನೋ! ಮುರಾರ್ಜಿ ತೇಜೋವಧೆಯ ಹಿಂದೆ ಎರಡು ಉದ್ದೇಶಗಳಿರುವಂತೆ ತೋರುತ್ತದೆ. ಒಂದು, ಟೀಕಾಸ್ತ್ರ ಪ್ರಯೋಗಾನಂದ; ಎರಡು, ಅಧಿಕಾರ ಅಪ್ರಾಪ್ತಿಯ ಬಗ್ಗೆ ಅಸಮಾಧಾನಾನಂದ. ಸ್ವಯೋಗ್ಯತೆಯಿಂದ ಮೇಲೇರಲಾಗದ ರಾಜಕೀಯ ಹೆಳವರು ಮೇಲಿದ್ದವರನ್ನು ಹೆಳವರೆಂದು ದೂರಿ ಅವರನ್ನು ಕೆಳಗಿಳಿಸುವ ಚಪಲತೆ ತೋರಿಸುತ್ತಿರುವುದು, ತಮ್ಮ ಅಸಮರ್ಥತೆಯನ್ನು ವ್ಯಕ್ತವಾಗಿ ಪ್ರಕಟಿಸುತ್ತವೆಯೇ ಹೊರತು 'ತಾನು ಹೆಳವನಲ್ಲ'ನೆಂಬುದನ್ನು ತೋರಿಸುವ ನೈತಿಕ ಬಲ ಮುರಾರ್ಜಿಭಾಯಿಯವರಲ್ಲಿದೆ; ಆದುದರಿಂದಲೇ ಸೂರ್ಯನನ್ನು ಕವಿದ ಮೋಡಗಳಂತೆ ಅವರ ಮೇಲಿನ ಮಿಥ್ಯಾರೋಪಗಳು ಚೆಲ್ಲಾಪಿಲ್ಲಿಯಾಗುತ್ತವೆ. 'ದುರ್ದಿನ'ವೂ ಅಪರೂಪವಲ್ಲ; ತೇಜೋವಧಕರೆಲ್ಲಾ ಮುರಾರ್ಜಿಯವರ ಘೆರಾವೋ ಮಾಡಲು ಸೊಂಟಕಟ್ಟಿದರೆ? ಇಂತಹ ದುರ್ದಿನವೂ ಬಂದುಬಿಟ್ಟರೆ, ಅಲ್ಲಿಗೆ ದೇಶದ ಗತಿ ಪಕ್ಕಾಯಿತೆಂದಂತೆ. 'ಸತ್ಯವಂತರಿಗಿದು ಕಾಲವಲ್ಲ'ವೆಂಬುದು ಸತ್ಯವಾದಂತೆ ತೇಜೋವಧೆಯ ಚಪಲ ಯಾರಿಗೂ ಶೋಭನೀಯವಲ್ಲ. ಸ್ವತೇಜವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವೇ ಇದಕ್ಕಿಂತ ಲೇಸು. 'ಗೆಜ್ಜೆ ಕಟ್ಟಲರಿಯದವನು ಹೆಜ್ಜೆಯನ್ನು ತಪ್ಪೆಂ'ದಂತೆ ಆಗಬಾರದು. ಭಾರತೀಯರು ಈ ಬಗ್ಗೆ ಈಗಿಂದೀಗಲೇ ಜಾಗೃತರಾಗಬೇಕು.

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 28337
2 29837
Grams HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry Post office and Entertainment Area Nearby
Large airy Rooms, Roof garden
Quiet, Calm Atmosphere
Personalised Service.

ಮತ್ತೆ ಲೋಕಸಭೆಯಲ್ಲಿ

ಒಂದು ಕಾಲದಲ್ಲಿ ಕಾಂಗ್ರೆಸ್ಸಿನ ಜೋಡೆತ್ತುಗಳಾಗಿದ್ದ ಎಸ್. ಕೆ. ಪಾಟೀಲ ಮತ್ತು ವಿ. ಕೆ. ಕೃಷ್ಣಮೆನನ್ನರು ರಾಜಕೀಯ ಅಜ್ಞಾತವಾಸವನ್ನು ಮುಗಿಸಿ ಮತ್ತೆ ಲೋಕಸಭೆಗೆ ಬಂದಿದ್ದಾರೆ. ಈ ಅತಿರಥ ಮಹಾರಥರಿಬ್ಬರೂ ೧೯೬೭ ರ ಚುನಾವಣೆಗಳಲ್ಲಿ ಬೊಂಬಾಯಿಯ ಜನತೆಯಿಂದ ತಿರಸ್ಕರಿಸಲ್ಪಟ್ಟವರು. ಮೆನನ್ನರು ತನ್ನ ಹಿಂದಿನ ಮತದಾರ ಕ್ಷೇತ್ರವನ್ನೇ

(ಆರನೇ ಪುಟ ನೋಡಿರಿ)

ಎರಡು ಮಹಾ ಅಧಿವೇಶನಗಳು

ಜೋಡಾಟ, ವಿವಿಧ ಸ್ಪರ್ಧೆಗಳ, ಉತ್ಸವಗಳು, ಮದುವೆ-ಮುಂಜಿ ಮುಂತಾದ ಸಂಭ್ರಮದ ಕಾರ್ಯಕ್ರಮಗಳು ಜರಗುವ ಕಾಲವಿದು. ಎಪ್ರಿಲ್ ತಿಂಗಳ ಕೊನೆಯ ಭಾಗದಲ್ಲಿ ಎರಡು ರಾಜಕೀಯ ಪಕ್ಷಗಳ ಮಹಾಧಿವೇಶನಗಳು ಇದೇ ದೃಷ್ಟಿಯಿಂದ ನಡೆದುವು. ಹೆಚ್ಚಾಗಿ ಚುನಾವಣೆಯ ಕಾಲದಲ್ಲಿ ಮಾತ್ರ ರಾಜಕೀಯ ಪಕ್ಷಗಳಿಗೆ ತಮ್ಮ ಪ್ರಭಾವ, ಪರಾಕ್ರಮ ಬಲವನ್ನು ಪ್ರಕಟಿಸುವ ಸುಯೋಗ ಲಭಿಸುವದು. ಈ ಸಲ ಕಾಂಗ್ರೆಸ್ಸ್ ಮತ್ತು ಜನಸಂಘಗಳು ತಮ್ಮ ತಮ್ಮ ಪರಾಕ್ರಮ ವಗ್ಗೈರೆಗಳನ್ನು ಪ್ರಕಟಿಸಲು ಮುಂದೆ ಬಂದುವು. ಈ ಕಂಬಳವು ರಾಜಕೀಯ ಕಳದಲ್ಲಿ ನಡೆಯಿತು. ಕಾಂಗ್ರೆಸ್ಸ್ ಕೋಣದ ಮುಂದಾಳುತನವನ್ನು ವಹಿಸಿದವರು ಶ್ರೀ ನಿಜಲಿಂಗಪ್ಪ. ಜನಸಂಘದ ಕೋಣದ ಮುಂದಾಳುತನವನ್ನು ವಹಿಸಿದವರು ಶ್ರೀ ಅಟಲ ಬಿಹಾರಿ ವಾಜಪೇಯಿಯವರು. ಇಬ್ಬರೂ ವಿದ್ಯಾವಂತರೇ. ಇಬ್ಬರೂ ಮಾತಿನ ಮಲ್ಲರು.

ಕೇಂದ್ರದ ಕೀಲಿ ಕಾಂಗ್ರೆಸ್ಸಿನ ಕೈಯಲ್ಲಿದೆಯಾದರೂ ಅದು ಕೆಲ ಕೋಣೆಗಳ ಕೀಲಿಯನ್ನು ಬಿಟ್ಟುಕೊಡಬೇಕಾಗುತ್ತದೆ. ಕೇರಳ, ತಮಿಳ್ನಾಡು, ಪೋಂಡಿಚೇರಿ, ಗೋವೆ, ನಾಗಾಲೇಂಡ್, ಬಂಗಾಲ, ಒರಿಸ್ಸಾ, ಪಂಜಾಬ ಮುಂತಾದುವನ್ನು ಅದು ಕಳೆದುಕೊಂಡಿರುತ್ತದೆ. ತನ್ನ ಪಕ್ಷದ ಪ್ರಭಾವವನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ರಾಜಕೀಯ ಪಕ್ಷಗಳು ಅಲ್ಲಿ ಅಧಿವೇಶನಗಳನ್ನು ನಡೆಸುವುದು ಸ್ವಾಭಾವಿಕ. ಕಾಂಗ್ರೆಸ್ ಹಾಗೆ ಮಾಡದೆ ಅಧಿಕಾರ ಇರುವ ಹರಿಯಾಣದಲ್ಲಿ ತನ್ನ ಅಧಿವೇಶನವನ್ನು ನಡೆಸಿರುತ್ತದೆ. ಭಾರತೀಯ ಜನಸಂಘವು ತನ್ನ ಆಡಳಿತ ಇರುವ ದಿಲ್ಲಿ ಹಾಗೂ ಪಂಜಾಬಿನಲ್ಲಿ ಅಧಿವೇಶನವನ್ನು ನಡೆಸದೆ, ಮಹಾರಾಷ್ಟ್ರದಲ್ಲಿ ನಡೆಸಿರುತ್ತದೆ. ಜನಸಂಘವು ತನ್ನ ಹುತಾತ್ಮ ದೀನದಯಾಳ ಉಪಾಧ್ಯಾಯರ ಹೆಸರಿನಲ್ಲಿ ನಗರವನ್ನು ನಿರ್ಮಿಸಿ, ತನ್ನ ಅಗಲಿದ ಮಹಾನ್ ಮುಂದಾಳುವಿಗೆ ಗೌರವವನ್ನು ಸಲ್ಲಿಸಿದೆ. ಈ ದೃಷ್ಟಿಯಲ್ಲಿ ಕಾಂಗ್ರೆಸ್ಸು ಒಳ್ಳೆಯ ಹೆಸರನ್ನು ಆರಿಸಿಕೊಂಡಿದೆಯಾದರೂ ಆಯಾರಾಮ್-ಗಯಾರಾಮರ ಕಾಲದಲ್ಲಿ ನೇಕಿರಾಮ ಪಾಪ ಏನು ಮಾಡಲು ಸಾಧ್ಯ?

ಕಾಂಗ್ರೆಸ್ ಉತ್ತರ ಪ್ರದೇಶ ಮತ್ತು ಬಿಹಾರಿನಲ್ಲಿ ಮಂತ್ರಿಮಂಡಲವನ್ನು ರಚಿಸಿರುತ್ತದೆ. ಅಲ್ಲದೆ ಇನ್ನೂ ಕೆಲವು ನಡು ಚುನಾವಣೆಯಲ್ಲಿ ಗೆದ್ದಿರುತ್ತದೆ. ತಿರು ಕಾಮರಾಜರು ಲೋಕಸಭೆಯನ್ನು ಪ್ರವೇಶಿಸಿದ್ದಾರೆ. ಅಂತಹ ಸ್ಥಿತಿಯಲ್ಲಿ ಭಾರೀ ಪ್ರತಿನಿಧಿಗಳು ಬರಬಹುದೆಂದು ಭಾವಿಸಿಕೊಂಡು ಕಾಂಗ್ರೆಸ್ ಭಾರೀ ಏರ್ಪಾಡು ಮಾಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅಂತೆಯೇ ಒಂದು ಲಕ್ಷ ಜನರಿಗಾಗಿ ಅಲ್ಲಿ ಏರ್ಪಾಡಾಗಿತ್ತು. ಉತ್ತರ ಪ್ರದೇಶದಲ್ಲಿ ಜನಸಂಘ ಸೋತಿರುತ್ತದೆ. ಮಧ್ಯಪ್ರದೇಶದಲ್ಲಿ ಅದು ಮಂತ್ರಿಮಂಡಲವನ್ನು ಬಿಟ್ಟುಕೊಡಬೇಕಾಯಿತು. ಆದುದರಿಂದ ಸುಮಾರು ಹದಿನೈದು ಸಾವಿರ ಪ್ರತಿನಿಧಿಗಳಿಗೆ ಅಲ್ಲಿ ಏರ್ಪಾಡಾಗಿತ್ತು. ಆದರೆ ಲಕ್ಷ ಹೆಚ್ಚಾಯಿತು; ಹದಿನೈದು ಸಾವಿರ ಸಾಕಾಗಲಿಲ್ಲ.

ಈ ಎರಡು ಅಧಿವೇಶನಗಳು ಶುಕ್ರವಾರ ಬೆಳಗ್ಗೆ ೯ ಘಂಟೆಗೆ ಆರಂಭ ಆದುವು. ಭಾರತೀಯ ಜನಸಂಘದ ಅಧಿವೇಶನದ ಆರಂಭದಲ್ಲಿ ಅದರ ಅಧ್ಯಕ್ಷ ಶ್ರೀ ಅಟಲ ಬಿಹಾರಿ ವಾಜಪೇಯಿಯವರು ದೀಪವನ್ನು ಪ್ರಜ್ವಲಿಸಿ ದೀಪ ಪೂಜೆಯನ್ನು ಮಾಡಿದರು. ಅತ್ತ ಫರೀದಾಬಾದಿನಲ್ಲಿ ಅದೇ ಸಮಯ ಪ್ರಧಾನ ಕಾರ್ಯದರ್ಶಿ ಶ್ರೀ ಸದೀಕ್ ಅಲಿಯವರು ಕಾರ್ಯಕ್ರಮಗಳ ಕುರಿತು ಪ್ರತಿನಿಧಿಗಳಿಗೆ ತಿಳಿಸುತ್ತಿದ್ದಾಗ ದಾಂಧಲೆ ಎದ್ದಿತು. ಭಾರೀ ದೊಡ್ಡ ಚಪ್ಪರದಲ್ಲಿ ಅಲ್ಪ ಜನರಿದ್ದುದರಿಂದ ಎಲ್ಲರಿಗೂ ತಪ್ಪಿಸಿಕೊಳ್ಳಲು ಸಾಧ್ಯವಾಯಿತು.

ನೇಕಿರಾಮನಗರದ ದಹನಕಾಂಡದ ಸುದ್ದಿಯನ್ನು ಕೇಳಿದೊಡನೆ ದೀನ ದಯಾಳು ನಗರದಲ್ಲಿದ್ದ ಜನಸಂಘದ ಅಧ್ಯಕ್ಷರು ಕಾಂಗ್ರೆಸಿನ ಅಧ್ಯಕ್ಷರಿಗೆ ಸಂತಾಪ ಸೂಚಕ ತಂತಿಯನ್ನು ಕಳುಹಿಸಿದರು. ದಿಲ್ಲಿ ಮಹಾನಗರದ ಮುಖ್ಯಮಂತ್ರಿ ಅಂತಸ್ಥಾನಸ್ಥರಾದ ಶ್ರೀ ವಿಜಯ ಕುಮಾರ ಮಲ್ಹೋತ್ರರವರು ಅಧಿವೇಶನಕ್ಕೆ ದಿಲ್ಲಿಯಲ್ಲಿ ಒಡನೆ ಏರ್ಪಾಡು ಮಾಡಿಕೊಡುವುದಾಗಿ ತಂತಿ ಕಳುಹಿಸಿದರು. ಜನಸಂಘದ ಲೋಕಸಭಾ ಸದಸ್ಯ ಶ್ರೀ ಯಜ್ಞದತ್ತ ಶರ್ಮರವರು ಅಧಿವೇಶನದ ಮಂಟಪದ ಪುನರ್ ನಿರ್ಮಾಣಕ್ಕೆ ಸಹಾಯ ಮಾಡುವದಾಗಿ ಮುಂದಕ್ಕೆ ಬಂದರು. ಕಾಂಗ್ರೆಸ್ ಅದಕ್ಕೆಲ್ಲಾ ಮಂಡಿಯೂರದೆ ಒಂದೇ ದಿನದೊಳಗೆ ಏರ್ಪಾಡು ಮಾಡಿಕೊಂಡಿತು.

ಎರಡೂ ಅಧಿವೇಶನಗಳಲ್ಲಿ ೧೯೭೨ರ ಕುರಿತು ಮಾತುಕತೆ ಬಂದಿರುತ್ತದೆ. ೧೯೭೨ರಲ್ಲಿ ಕಾಂಗ್ರೆಸ್ಸ್ ಭಾರೀ ಅಘಾತವನ್ನೆದುರಿಸಬೇಕಾಗುತ್ತದೆಂಬುದನ್ನು ಕಾಂಗ್ರೆಸ್ಸಿಗರೂ ಜನಸಂಘದವರೂ ಒಪ್ಪಿಕೊಂಡಿದ್ದಾರೆ. ಕಾಂಗ್ರೆಸ್ಸನ್ನು ಮುಳುಗುತ್ತಿರುವ ಹಡಗೆಂದು ಕಾಂಗ್ರೆಸ್ಸಿಗರೇ ಕರೆದಿದ್ದಾರೆ. ಅದನ್ನು ೧೯೭೨ರಲ್ಲಿ ಪೂರ್ಣ ಮುಳುಗದಂತೆ ಮಾಡಲು ಈಗಿನಿಂದಲೇ ಕೆಲ ರಾಜಕೀಯ ಪಕ್ಷಗಳೊಂದಿಗೆ ಸಂಬಂಧ ಬೆಳೆಸಿಕೊಳ್ಳಬೇಕೆಂದು ಕೆಲವರು ಸಲಹೆಯನ್ನಿತ್ತಿರುವರು. ಆದರೆ ಅಧ್ಯಕ್ಷರು ಅದನ್ನು ಅಲಕ್ಷಿಸಿಲ್ಲವಾದರೂ ಸದ್ಯಕ್ಕೆ ಆ ಸಂಬಂಧದ ಮಾತು ಬೇಡವೆಂದಿದ್ದಾರೆ. ೧೯೭೨ರಲ್ಲಿ ಅಧಿಕಾರ ತಮ್ಮ ಕೈಗೆ ಬರುತ್ತದೆಯೆಂದೂ ಅದನ್ನು ಹಿಡಿದುಕೊಳ್ಳಲು ನಾವು ಸಿದ್ಧತೆಗೆ ಈಗಿನಿಂದಲೇ ಆರಂಭಿಸಬೇಕೆಂದು ಜನಸಂಘದ ಅಧ್ಯಕ್ಷರೇ ಹೇಳಿರುವರು.

ಭಾಷಾವಾರು ಪ್ರಾಂತ್ಯಗಳು ದೇಶದಲ್ಲಿ ಬಿಕ್ಕಟ್ಟಿನ ಬೀಜವನ್ನು ಬಿತ್ತಿವೆಯಾದಲ್ಲಿ ಅದನ್ನು ತೆಗೆದುಹಾಕಿ ಆರ್ಥಿಕ ತಳಹದಿಯ ಮೇಲೆ ಪುನರ್ರಚನೆ ಮಾಡಬೇಕಾಗಿ ಶ್ರೀ ನಿಜಲಿಂಗಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿರುವರು. ಭಾಷಾವಾರು ಪ್ರಾಂತ್ಯ ವಿಂಗಡಣೆಯನ್ನು ವಿರೋಧಿಸಿದ ರಾಜಕೀಯ ಪಕ್ಷಗಳಲ್ಲಿ ಭಾರತೀಯ ಜನಸಂಘದ ಪಾತ್ರ ಹಿರಿದು. ಆದರೂ ಪ್ರಾಂತ್ಯರಚನೆ ಎದುರಿಗಿದೆ. ಜಗಳ ನಡೆಯುತ್ತಿದೆ. ಅದನ್ನು ಹೋಗಲಾಡಿಸಲು ಪ್ರಾಂತ್ಯಗಳ ಪುನರ್ರಚನೆಯಾಗುವಂತೆ ಘಟನೆಯನ್ನು ಬದಲಾಯಿಸಬೇಕೆಂದೂ, ಅದಕ್ಕಾಗಿ ಸರಕಾರವು ಒಂದು ದ್ವಿತೀಯ ಸಮಿತಿಯನ್ನು ರಚಿಸಬೇಕೆಂದೂ ಜನಸಂಘ ಅಭಿಪ್ರಾಯಪಟ್ಟಿತ್ತು. ಸಮಿತಿಯ ವಿಷಯವನ್ನು ಹಲವಾರು ಸದಸ್ಯರು ಎದುರಿಸಿದ್ದರಿಂದ ಆ ಮಾತು ಅಲ್ಲೇ ಅಡಗಿಹೋಯಿತು. ಅದರ ಬದಲು ಅಲ್ಲಿ ಕೇಳಿಬಂದಿರುವ ಮಾತು ಬಹಳ ಮುಖ್ಯ ಇದೆ. ಭಾರತವು ರಾಜ್ಯಗಳ ಒಕ್ಕೂಟ (ಯೂನಿಯನ್ ಆಫ್ ಸ್ಟೇಟ್ಸ್) ಅನ್ನುವದನ್ನು ತೆಗೆದುಹಾಕಿ ಭಾರತವು ಒಂದು ರಾಜ್ಯ (ಸ್ಟೇಟ್) ಆಗಬೇಕೆಂಬ ಮಾತು ಕೇಳಿ ಬಂದಿರುತ್ತದೆ.

ಹೀಗೆ ಹೋಲಿಕೆ ಇರುವ ಮಾತುಕತೆಗಳು ಎರಡೂ ರಂಗಗಳಲ್ಲಿ ಕೇಳಿಬಂದಿವೆ. ಅದೇ ರೀತಿ ತೀರಾ ವಿರುದ್ಧವಾದ (ಬೇಂಕ್ ರಾಷ್ಟ್ರೀಕರಣ, ಅಣುಗುಂಡು ತಯಾರಿಕೆ) ಮಾತುಗಳೂ ಕೇಳಿಬಂದಿವೆ. ಎಂತಲೇ ಇದೊಂದು ಜೋಡಾಟ.

— ಶಿವಶಂಕರ

ದಿ ಕರ್ಣಾಟಕ ಬೇಂಕ್ ಲಿ., ಮಂಗಳೂರು

ಉಡುಪಿ ಶಾಖೆ

ನಮ್ಮ ಗ್ರಾಹಕರ ಅನುಕೂಲತೆಗಾಗಿ ನಮ್ಮ ಆಫೀಸನ್ನು ಉಡುಪಿ ರಥಬೀದಿಯಲ್ಲಿರುವ ಶ್ರೀ ಭೀಮನಕಟ್ಟೆ ಮಠದ ಕಟ್ಟೋಣದ ಉಪ್ಪರಿಗೆಗೆ ತಾ. 26—5—1969ರಂದು ಸ್ಥಳಾಂತರಿಸಿರುತ್ತೇವೆ. ನಿಮ್ಮ ಸೇವಾವಕಾಶವನ್ನು ಸದಾ ನಮಗೆ ಒದಗಿಸಬೇಕಾಗಿ ಹೃತ್ಪೂರ್ವಕವಾಗಿ ವಿನಂತಿಸುತ್ತೇವೆ.

"KARNATAKA BANK"

ಟಿಬೇಟಿನ ನಿರಾಶ್ರಿತರ ಸೇವೆಯಲ್ಲಿ ಸಿಂಡಿಕೇಟ್ ಬ್ಯಾಂಕ್

"ಟಿಬೇಟಿನಲ್ಲಿ ಬ್ಯಾಂಕುಗಳಿಲ್ಲ. ಆದರೆ ಬೈಲಕುಪ್ಪೆಯ 'ಕಿರಿಟಿಬೇಟಿ'ನಲ್ಲಿ ಸಿಂಡಿಕೇಟ್ ಬ್ಯಾಂಕಿನ ಆದರ್ಶ".

ಸಿಂಡಿಕೇಟ್ ಬ್ಯಾಂಕ್ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯಲ್ಲಿ ಮೂರು ಸಾವಿರಕ್ಕಿಂತಲೂ ಅಧಿಕ ನಿರಾಶ್ರಿತ ಟಿಬೇಟನರು ಶಾಶ್ವತವಾಗಿ ನೆಲೆನಿಂತ ಪುನರ್ವಸತಿ ನಿವೇಶನದಲ್ಲಿ ಮೇ ದಿನಾಂಕ 9ರಂದು ತನ್ನ ನೂತನ ಶಾಖೆಯೊಂದನ್ನು ಟಿಬೇಟನರ ಸೇವೆಗಾಗಿಯೇ ಪ್ರಾರಂಭಿಸುವುದರೊಂದಿಗೆ ವಾಸ್ತವವಾಗಿ ಒಂದು ದಾಖಲೆಯನ್ನು ಸ್ಥಾಪಿಸಿದೆ. ಈ ಪುನರ್ವಸತಿ ನಿವೇಶನದಲ್ಲಿ ವಾಸಿಸುವವರೆಲ್ಲರೂ ಟಿಬೇಟಿನ ನಿರಾಶ್ರಿತರು. ಅವರ ಕೃಷಿ ವ್ಯವಸಾಯಕ್ಕಾಗಿಯೇ ಮೀಸಲಾಗಿರಿಸಿದ್ದ ಈ ಜಮೀನು ಭೂಮಿಯ ಪ್ರದೇಶದಲ್ಲಿ ಸುಮಾರು 600 ಕುಟುಂಬಗಳಿದ್ದು ಅವರ ಜನಸಂಖ್ಯೆ 3421ರಷ್ಟಿದೆ. ನಿವೇಶವೊಂದರಲ್ಲಿ ನೂರರಂತೆ ಮನೆಗಳಿರುವ ಆರು ನಿವೇಶಗಳು ಸಾಧಾರಣ ನಾಲ್ಕೈದು ಮೈಲುಗಳ ಪರಿಸರದಲ್ಲಿವೆ.

ಭಾರತ ಸರ್ಕಾರದಿಂದ ರೂಪಿಸಲ್ಪಟ್ಟು ಅಸ್ತಿತ್ವಕ್ಕೆ ಬಂದ ಈ ಯೋಜನೆಯು 1960ರಲ್ಲಿ ಮೊದಲ್ಗೊಂಡು ಟಿಬೇಟನರು ಸಂಗಡ ಸಂಗಡವಾಗಿ ಬಂದು ನೆಲಸುವುದರೊಂದಿಗೆ ಕಾರ್ಯವೆಸಗಲು ಪ್ರಾರಂಭಿಸಿತು. ಕೃಷಿಮಾಡುವ ಸಲುವಾಗಿ ಪ್ರತಿಯೊಂದು ಕುಟುಂಬಕ್ಕೆ 5 ಎಕ್ರೆ ಜಮೀನನ್ನೂ ಒಂದು ಸೆಟ್ಟು ಬೇಸಾಯ ಸಾಮಗ್ರಿಯನ್ನೂ ಮತ್ತು ಎರಡು ಕುಟುಂಬಕ್ಕೊಂದು ಜೋಡಿಯಂತೆ ಎತ್ತುಗಳನ್ನೂ ನಿವೇಶಕ್ಕೆ 5ರಂತೆ ಗಾಡಿಗಳನ್ನೂ ಒದಗಿಸಲಾಗಿದೆ. ಇಲ್ಲಿನ ಕೃಷಿಪದ್ಧತಿಯನ್ನು ಅಂಶಿಕವಾಗಿ ಯಂತ್ರೀಕೃತಗೊಳಿಸಲಾಗಿದೆ. ಸದ್ಯ ಇಲ್ಲಿ ಉದಾರ ಸಂಸ್ಥೆಗಳಿಂದ ದಾನರೂಪವಾಗಿ ಕೊಡಲ್ಪಟ್ಟ 14 ಟ್ರಾಕ್ಟರುಗಳು ಕೆಲಸಕ್ಕಾಗಿ ಬಳಸಲ್ಪಡುತ್ತಿವೆ. ಟಿಬೇಟಿನ ನಿರಾಶ್ರಿತರು ಈ ರೀತಿಯಾಗಿ ತಮಗೆ ನೀಡಿದ ಭೂಮಿಯನ್ನು ಸಾಗುವಳಿ ಮಾಡುತ್ತಾರೆ. ಇಲ್ಲಿ ಮುಖ್ಯವಾಗಿ ಭತ್ತ, ರಾಗಿ, ಜೋಳ, ಬಟಾಟೆ, ನೆಲಕಡಲೆ, ಹುರುಳಿ, ತಂಬಾಕು ಇತ್ಯಾದಿಗಳನ್ನು ಬೆಳೆಯಲಾಗುತ್ತದೆ. ಇಲ್ಲಿಯ ವಿಸ್ತಾರವಾದ ಭಾಗದ ಬಹ್ವಂಶದಲ್ಲಿ ಮಿಶ್ರತಳಿಯ ಜೋಳದ ಉತ್ಪಾದನೆಯನ್ನು ಮಾಡುತ್ತಿರುವುದು ಒಂದು ವಿಶಿಷ್ಟ ಸಾಧನೆಯಾಗಿದ್ದು, ಅದು ಮೈಸೂರು ಜಿಲ್ಲೆಯ ಕೃಷಿ ಉತ್ಪಾದನೆಯು ಹೆಚ್ಚುವಕ್ಕೆ ಅಧಿಕ ಸಹಾಯಕವಾಗಿದೆ. ಬೈಲಕುಪ್ಪೆಯ ಟಿಬೇಟನ್ ನಿರಾಶ್ರಿತರ ಪುನರ್ ನಿವೇಶನವು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮತ್ತು ಅನೇಕ ಉ

ಪುಸ್ತಕ ಪರಿಚಯ

ತಬ್ಬಲಿಯು ನೀನಾದೆ ಮಗನೆ

ಲೇಖಕರು: ಡಾ| ಎಸ್. ಎಲ್. ಭೈರಪ್ಪ.

ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ.

ಪುಟಗಳು: ೪೦೯, ಬೆಲೆ: ರೂ. ೯-೦೦

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ತನ್ನ ವಿಚಾರ ಪ್ರಚೋದಕ ಕಾದಂಬರಿಗಳಿಂದ ದಿಗ್ವಿಜಯ ಸಾಧಿಸುವುದರಲ್ಲಿ ಯಶಸ್ವಿಯಾದ ಡಾ| ಭೈರಪ್ಪನವರ ಈ ಕಾದಂಬರಿಯು ಗೋವಿನ ಕತೆಯು ಹುತ್ತವು ಹೆತ್ತ ಹಂದಿದೆ. ಪುಣ್ಯಕೋಟಿಯ ಕುಲದ ದನಗಳ ಹಟ್ಟಿಯ ಗೊಲ್ಲರ ಕುಲದ ಕಾಳಿಂಗರೇ ಈ ಕಾದಂಬರಿಯ ನಾಯಕರು. ಗೊಲ್ಲರ ಒಡೆಯ ಕಾಳಿಂಗ, ಅವನ ಮಗ, ನಡುಹರೆಯದಲ್ಲೇ ದೈವಾಧೀನನಾದ ಕೃಷ್ಣ, ಕೃಷ್ಣನ ಮಗ ಕಾಳಿಂಗ್—ಹೀಗೆ ಮೂರು ತಲೆಮಾರುಗಳ ವರೆಗೆ ಕಾದಂಬರಿ ಓಡುತ್ತದೆ. ಕೃಷ್ಣನು ಕಾಲಾಧೀನನಾದರೂ ಆತನ ಮಡದಿ ಕಾಳಿಂಗ್‌ನ ತಾಯಿ ಪಾಶ್ಚಾತ್ಯ ತಾಯುವ್ವ ಪೂರ್ವ ಪಶ್ಚಿಮದ ಭಾವನೆಯಲ್ಲೇ ಬೆಳೆಯುತ್ತಾಳೆ. ವಾಸ್ತವಿಕವಾಗಿ ಇದು ಮೂರು ತಲೆಮಾರುಗಳ ಕಥೆಯಾದರೂ ನೋಟ ಸ್ಥ ದನಗಳ ಬಗ್ಗೆ ಇರುವ ಪ್ರಾಚೀನ ಭಾರತೀಯ ಮತ್ತು ಅರ್ವಾಚೀನ ಪಾಶ್ಚಾತ್ಯ ನಂಬಿಕೆ— ನಡೆವಳಿಕೆಗಳ ನಡುವಿನ ಹೋರಾಟದ ಕಥೆಯೆನ್ನಬಹುದು.

ಕಾಳಿಂಗ ಗೌಡಜ್ಜ, ಆತನ ಮಡದಿ, ಕೃಷ್ಣ, ತಾಯವ್ವ, ಊರಿನ ಇತರ ಗೊಲ್ಲರು, ಪುರೋಹಿತ ನರಸಪ್ಪ ಮತ್ತಿತರರು ಹಳೆಯ 'ಜಾಡಿ'ನವರು. ಗೋಮಾತೆಯಲ್ಲಿ ಮೂವತ್ತಮೂರು ದೇವತೆಗಳೂ ಆವಾಸ ಮಾಡಿದ್ದಾರೆಂದು ಬಲವಾಗಿ ನಂಬಿದವರು. ಅದನ್ನು ಹಿಂಸಿಸುವುದು, ನೋಯಿಸುವುದು ಮಹಾಪರಾಧ, ಗೋಮಾಳವನ್ನು ನಿರ್ಬಂಧಿಸುವುದು ಮಹಾಪಾಪ—ಇತ್ಯಾದಿ ಇತ್ಯಾದಿಯಾಗಿ ನಂಬಿದವರು. ಹಾಲಿಗಾಗಿ ದನ ಸಾಕುವುದಲ್ಲ; ವೃದ್ಧ ತಾಯಿಯನ್ನು ಸಾಕುವಂತೆಯೇ ಅಕ್ಕರೆಯಿಂದ ಆತ್ಮೀಯತೆಯಿಂದ ಗೋಮಾತೆಯನ್ನು (ಹಾಲು ಕೊಡದಿದ್ದರೂ) ಸಾಕಬೇಕು— ಇದವರ ಆದರ್ಶ. ಕೃಷ್ಣ ಪುಣ್ಯಕೋಟಿ ತಳಿಯ ದನವನ್ನು ರಕ್ಷಿಸ ಹೋಗಿ ಹುಲಿಯ ಬಾಯಿಗೆ ತುತ್ತಾದಾಗ ಚಿಂತಾಗ್ರಸ್ತರಾದರೂ ಗೋರಕ್ಷಣೆಗಾಗಿ ಬಲಿದಾನಗೈದ ಆತ್ಮತೃಪ್ತಿಯಿಂದ ನಿಟ್ಟುಸಿರು ಬಿಟ್ಟ ಗೋಸೇವಕರು, ಗೋಭಕ್ತರು.

ನರಸಪ್ಪನ ಮಗ ವೆಂಕಟರಮಣನು ಮೈಸೂರಲ್ಲಿ ಹುಡುಗಿ ಇಂಗ್ಲೀಷನ್ನೂ ಹೆಚ್ಚಿನ ಸಂಸ್ಕೃತ ಕಲಿತ. ಊರ ಪುರೋಹಿತನಾಗಿ, ಶಾಲಾ ಮಾಸ್ತರನಾಗಿ ತಂದೆಯಂತೆಯೇ ಊರವರಿಗೆ ಬೇಕಾದವನಾಗಿ ಅವರದೇ ವಿಚಾರಧಾರೆಯಿಂದ ಪಂಡಿತನಾಗಿ ಮುಂದುವರಿದ. ಕಾಳಿಂಗಜ್ಜ ಪುಣ್ಯಕೋಟಿಯ ಗುಡಿಯನ್ನು ಕಟ್ಟಿಸಿ, ಅದರ ಪೂಜಾವಿನಿಯೋಗಾದಿಗಳಿಗೆ ಉಂಬಳಿ ಬಿಟ್ಟು ವೆಂಕಟರಮಣನನ್ನು ಪೂಜಾರಿಯಾಗಿ ನೇಮಿಸಿ ಕಾಲವಾದ. ಪೂಜಾರಿ ಧರ್ಮ—ಗೋರಕ್ಷಣೆಯಲ್ಲೇ ನಿರತನಾಗಿ ಊರವರಿಗೆ ಬೇಕಾದವನಾಗಿದ್ದ.

ಪುಟ್ಟ ಕಾಳಿಂಗನನ್ನು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿದವ ನರಸಪ್ಪ. ಅವನ ಮಗನ ಆದೇಶದಂತೆಯೇ ಪದವಿಯನ್ನು ಗಳಿಸಿದ ಪಟ್ಟಣಕಾಳಿಂಗ ಅಮೇರಿಕೆಗೂ ಹೋಗುವಂತಾಯ್ತು — ಹೈನಾಭಿವೃದ್ಧಿಯ ಅಧ್ಯಯನದ ಉದ್ದೇಶದಿಂದ. ಆದರೆ, ಆತ ಮರಳಿ ಬಂದಾಗ, ಜತೆಗಾತಿ ಹಿಲ್ಡಾ ಮತ್ತು ಮಕ್ಕಳನ್ನೂ ಕರೆತಂದಿದ್ದ. ಆತನ ವಿಚಾರವೇ ಬದಲಾಗಿತ್ತು. ಗೋವುಗಳ ಸಾಕಣೆ ಆರ್ಥಿಕ ಲಾಭಕ್ಕಾಗಿಯೆಂದೇ ಅವನ ನಂಬಿಕೆ. ಇದರಿಂದಾಗಿ ಕಾಳೇನ ಹಳ್ಳಿಗೆ ಕಾಳೇನ ಹಳ್ಳಿಯೇ ಆತನಿಗೆ ವಿರುದ್ಧ ನಿಂತಿತು. ತಾಯುವ್ವನೇ ಮಗನನ್ನು ಪ್ರತಿಭಟಿಸಿದಳು. ಕಾಳೇನ ಹಳ್ಳಿಯ ಅಶಿಕ್ಷಿತ ಗೊಲ್ಲರಿಗೆ ಗುರುವಾಗಿರಲು ಬಂದ ಹಿಲ್ಡಾಳು ಗೊಲ್ಲರಿಂದ ಕಪಾಳಮೋಕ್ಷವನ್ನೇ ಪಡೆದಳು. ತನ್ನನ್ನು ಗೌರವಭಾವನೆಯಿಂದ ನೋಡುವವರು ಯಾರೂ ಇಲ್ಲವೆಂಬ ಕೊರಗು ಆಕೆಯನ್ನು ಕಾಡಿದಾಗ ಪ್ರತಿಹಿಂಸೆಯ ವಿಕಾರದಿಂದ ಗೋವು ದೇವತಾ ಸ್ವರೂಪಿಯಲ್ಲವೆಂಬುದನ್ನು ಪ್ರತ್ಯಕ್ಷ ತೋರಿಸಿಕೊಡುವ ಸಾಹಸಕ್ಕೂ ಆಕೆ ಕೈಹಾಕಿ ಮತ್ತಷ್ಟು ಕಳಪೆಯಾದಳು. ಕಾಳಿಂಗ ಆರ್ಥಿಕವಾಗಿ ಸೋತು ಸಂಕಟ ಸನ್ನಿವೇಶದಲ್ಲಿ ಊರವರ ದೂಷಣೆ, ದ್ವೇಷ, ಅತ್ತ ಪತ್ನಿಯಿಂದ ಊಗೆ ಮರಳುವ ಬೆದರಿಕೆ. ಕೊನೆಗೂ ಕಾಳಿಂಗ ತಬ್ಬಲಿಯೇ ಆದ. ಆತನಿಗೆ ಆ ಪಾರವೂ ಇಲ್ಲ; ಈ ತೀರವೂ ಇಲ್ಲವಾಯಿತು.

ಇದು ಎರಡು ವಿಶ್ವಾಸಗಳ ಹೊಡೆದಾಟದ ಜೀವಂತ ವಸ್ತು. ಕಾಳಿಂಗಜ್ಜ ವಿದ್ಯಾವಂತನಲ್ಲ, ಆದರೆ, ಆತನ ಜ್ಞಾನ ಪರಂಪರಾಗತವಾಗಿ ಬಂದದ್ದು. ಹಟ್ಟಿ, ದನವು, ಗೋಮಾತೆ, ಗೋರಕ್ಷಣೆ, ಮೊದಲಾದವುಗಳ ಬಗ್ಗೆ ಆತನ ಪ್ರಜ್ಞೆ ಭಾರತೀಯ ಸಂಸ್ಕೃತಿಯ ಪ್ರತೀಕ. ಅನಕ್ಷರಸ್ಥರಾದರೂ ವಿದ್ಯಾವಂತರಾದ ಭಾರತೀಯರಲ್ಲಿ ಸಂಸ್ಕೃತಿ ಪ್ರಜ್ಞೆ ಹೇಗೆ ಉಳಿದು ಬಂದಿದೆಯೆಂಬುದಕ್ಕೆ ಆತನೊಂದು ಉದಾಹರಣೆ. ತಾಯುವ್ವ ಹುಟ್ಟು ಮೂಕಿಯಾದರೂ ಆತ್ಮೀಯವಾದ ಮಂದಿರ, ಪತಿ ಯ, ಊರವರ ಮನೋಗತವನ್ನರಿತು ನಡೆಯಬಲ್ಲ ಜಾಣೆ. ಕಾಳಿಂಗಜ್ಜನ ಮರಣಾನಂತರ ಮನೆಯನ್ನು, ಕುಲಗೌರವಗಳಿಗೆ ಧರ್ಮ ಕರ್ಮಗಳಿಗೆ ಚ್ಯುತಿಯಿಲ್ಲದಂತೆ ಮುನ್ನಡೆಸಿದ ಧೀರೆ. ತನ ಮಗನ ವರ್ತನೆ ತನ್ನ — ತನ್ನವರ ವಿಶ್ವಾಸಕ್ಕೆ ಎದುರಾದಾಗ ಪ್ರತಿಭಟಿಸಿದ ಎದೆಗಾರ್ತಿ. ಮಗನೊಂದಿಗೆ ಎಲ್ಲ ಸಂಬಂಧವನ್ನೂ ಕಡಿದುಕೊಂಡ ಧೀಮಂತೆ. ನರಸಪ್ಪ — ವೆಂಕಟರಮಣರೂ ಇದೇ ವರ್ಗದವರಾದರೂ ವೆಂಕಟರಮಣನು ಆಧುನಿಕ ವಿಚಾರಗಳನ್ನೂ ಮನ್ನಣೆ ನೀಡಿದವ. ಗೋವಿನ ವಿಷಯದಲ್ಲಿ ಭಾರತೀಯ-ಪಾಶ್ಚಾತ್ಯ ವಿಚಾರಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿ ಭಾರತೀಯ ವಿಶ್ವಾಸವೇ ಹೆಚ್ಚಿನದು ಎಂಬ ತೀರ್ಮಾನಕ್ಕೆ ಬಂದವ. 'ವೇದ ವೇದಾಂತ ನಂಬದವರಿಗೆ ಪ್ರಸಾದವೂ ಇಲ್ಲ'ವೆಂದವನ ನೀತಿ ಹಿಲ್ಡಾ ಮತ್ತು ವೆಂಕಟರಮಣರ ವಿಚಾರ ವಿನಿಮಯ ಮನೋಜ್ಞ ಮತ್ತು ಸಾರಗರ್ಭಿತ.

ಪುಟ್ಟಕಾಳಿಂಗನ ರಕ್ತ ಭಾರತೀಯ ಇಂಗ್ಲಿಷ್ ಓದುತಿದ್ದಾಗ ತಪ್ಪಿ ಗೋಮಾಂಸ ಭಕ್ಷಣೆ ಮಾಡಿದ್ದಕ್ಕೆ ಪ್ರಾಯಶ್ಚಿತ್ತವನ್ನೂ ಮಾಡಿಕೊಂಡವ. ಆದರೆ ಕಾಲಕ್ರಮೇಣ ವಾತಾವರಣ ಮತ್ತು ಪಾಶ್ಚಾತ್ಯ ವಿಚಾರಧಾರೆಯ ಪ್ರಭಾವದಿಂದ ಆತ ಹಿಲ್ಡಾಳಂತೆಯೇ ಪೂರ್ಣ ಪರಂಗಿಯಾದ. ಊರಿಗೆ ಮರಳಿದ ನಂತರ ಮತ್ತೆ ಪರಿಸ್ಥಿತಿ ಬದಲಾಯಿಸಿದ್ದರಿಂದ ಆತ ಹೊಂದಿಕೊಳ್ಳಲೇ ಬೇಕಾಯಿತು. ಊರವರ ನಂಬಿಕೆಗೆ ವಿರುದ್ಧವಾಗಿ ನಡೆಯುವುದು ಆತನಿಗೆ ಅಶಕ್ಯವೆನಿಸಿತು. ತಾಯಿಯೇ ತನ್ನನ್ನು ಪ್ರತಿಭಟಿಸಿದಾಗ ಆತ ಅಪ್ರತಿಭನಾಗಲೇ ಬೇಕಾಯ್ತು. ಇತ್ತ ಧರ್ಮ ಭ್ರಷ್ಟ ತತ್ತ ಭ್ರಷ್ಟನಾಗಿ ಕಾಳಿಂಗ ತಬ್ಬಲಿಯಾಗಲೇ ಬೇಕಾಯ್ತು.

ಕಾದಂಬರಿಯ ವಸ್ತು ಸಾಮಾಜಿಕ ಕಥೆಯ ಹಿನ್ನೆಲೆಯಿಂದ ಕೂಡಿದ್ದು. ಮೇಲೆ ಹೇಳಿದ ಮುಖ್ಯ ಪಾತ್ರಗಳಲ್ಲದೆ ಉಳಿದ ಹತ್ತಾರು ಪಾತ್ರಗಳೂ ಉಚಿತವಾಗಿಯೇ ಚಿತ್ರಿತವಾಗಿವೆ. ಭಾಷೆ ಸರಳವೂ ಪ್ರಭಾವೋತ್ಪಾದಕಾರಿಯೂ ಆಗಿದೆ. ಕಥೆಯ ಓಟ ಚೆನ್ನಾಗಿದೆ. ಕೆಲವೆಡೆ ವಾಚಕರ ಕಣ್ಣುಗಳಲ್ಲಿ ನೀರೂರಿಸುವಷ್ಟು ಪರಿಣಾಮಕಾರಿಯಾಗಿದೆ. ಸಂಘರ್ಷವೇ ಉದ್ದೇಶವಿರುವುದರಿಂದ ಆದು ಯುಕ್ತವಾಗಿದೆ.

ಡಾ| ಭೈರಪ್ಪನವರ ಆಳವಾದ ಅಧ್ಯಯನ ಮತ್ತು ಭಾರತೀಯ ಸಂಸ್ಕೃತಿಯ ಪ್ರಜ್ಞೆಯ ಯಥಾರ್ಥ ಚಿತ್ರ ಈ ಕಾದಂಬರಿಯಲ್ಲಿ ಒಡಮೂಡಿದೆ. 'ಗೋಹತ್ಯೆ'ಯ ಸಂಬಂಧದಲ್ಲಿ ಭಾರತದಲ್ಲಿ ಅವರೋಧ ಪ್ರತಿರೋಧರೂಪಿ ಚಳುವಳಿಯು ನಡೆದ— ನಡೆಯುತ್ತಿರುವ ಈ ಸಮಯದಲ್ಲಿ ಕಾದಂಬರಿಯು ಸಕಾಲವೂ ಆಗಿದೆ. ಪ್ರತಿಯೊಂದು ರಂಗದಲ್ಲಿಯೂ ನಾವೀಗ ಕವಲು ದಾರಿಯಲ್ಲಿ ನಿಂತಿದ್ದೇವೆ. ಯಾವ ದಾರಿ ನೇರವೆಂಬುದನ್ನು ತಿಳಿಯಲು ಅಶಕ್ತರಾಗಿದ್ದೇವೆ. ಅಂತಹದರಲ್ಲಿ ಸಾಹಿತ್ಯಕಾರರು ಜನತೆಗೆ ಮಾರ್ಗದರ್ಶಿಗಳಾಗಬಲ್ಲರು. ಡಾ| ಭೈರಪ್ಪರ "ತಬ್ಬಲಿಯು ನೀನಾದೆ ಮಗನೆ" ಎಂಬುದು ಉಚ್ಚ ಆದರ್ಶದಿಂದ ಪ್ರೇರಿತವಾದ ಹೊಚ್ಚ ಹೊಸ ಕಾದಂಬರಿ; ಕನ್ನಡ ಸಾರಸ್ವತ ಲೋಕಕ್ಕೆ ಇದೊಂದು ಉತ್ತಮ ಕಾಣಿಕೆ

—ಗೋರಾ.

...ರ ಸಂಸ್ಥೆಗಳ ಸಹಕಾರದಿಂದ ತ್ವರಿತಗತಿಯಿಂದ ಅಭಿವೃದ್ಧಿ ಹೊಂದುತ್ತಿದೆ. ಸ್ಥಳೀಯ ಭಾರತೀಯ ಗ್ರಾಮೀಣ ಜೀವನ ಮಟ್ಟವನ್ನು ಈ ನಿರಾಶ್ರಿತರ ಜೀವನ ಮಟ್ಟದೊಂದಿಗೆ ತುಲನಾತ್ಮಕವಾಗಿ ವಿವೇಚಿಸಿದರೆ, ಟಿಬೇಟನ್ ಪುನರ್ವಸತಿಗಾರರು ಆರ್ಥಿಕ ಸಾಧನೆಯಲ್ಲಿ ಮುಂದುವರಿದಿದ್ದು ಸ್ವಾವಲಂಬನೆಯನ್ನು ಪಡೆದಿರುತ್ತಾರೆ ಎನ್ನಬಹುದು.

ಬೈಲಕುಪ್ಪೆಯಲ್ಲಿ ತೆರೆಯಲ್ಪಟ್ಟ ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಯು ಟಿಬೇಟನ್ ನಿರಾಶ್ರಿತ ಜನರ ಸರ್ವತೋಮುಖ ಉನ್ನತಿಯನ್ನು ಸಾಧಿಸುವ ದಿಶೆಯಲ್ಲಿ ಶಕ್ತಿಯುತವಾಗಿ ಸಹಭಾಗಿಯಾಗುವುದೆಂದು ನಿರೀಕ್ಷಿಸಬಹುದು.

ಟಿಬೇಟನರ ಧಾರ್ಮಿಕ ರಾಜಕೀಯ ಗುರುಗಳಾದ ದಲ್ಯೈಲಾಮಾರವರು ಸಿಂಡಿಕೇಟ್ ಬ್ಯಾಂಕಿನ ಬೈಲಕುಪ್ಪೆಯ ಶಾಖೆಯ ಉದ್ಘಾಟನಾ ಸಮಾರಂಭಕ್ಕೆ ಶುಭ ಕೋರಿ ಕಳುಹಿಸಿದ ಸಂದೇಶದಲ್ಲಿ "ಸಿಂಡಿಕೇಟ್ ಬ್ಯಾಂಕ್ ಹೊಸದಾಗಿ ತನ್ನ ಶಾಖೆಯೊಂದನ್ನು ಬೈಲಕುಪ್ಪೆಯಲ್ಲಿ ಪ್ರಾರಂಭಿಸುವ ವಾರ್ತೆಯನ್ನು ಕೇಳಿ ನನಗೆ ಅತ್ಯಾನಂದವಾಗುತ್ತಿದೆ. ಈ ಶಾಖೆಯು ಅಲ್ಲಿ ವಾಸವಾಗಿರುವ ನನ್ನ ಟಿಬೇಟನರ ಜೀವನದ ಹಿತಸಾಧನೆಯಲ್ಲಿ ಅಧಿಕ ಸಹಾಯಕವಾಗಬಲ್ಲುದೆಂಬ ಸಂಪೂರ್ಣ ಹಾಗೂ ದೃಢವಿಶ್ವಾಸ ನನಗಿದೆ" ಎಂದು ಹರಸಿದ್ದಾರೆ.

ಈ ಶಾಖೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಇಲ್ಲಿಯ ಟಿಬೇಟನ್ ಪುನರ್ವಸತಿಯ ನಿವೇಶನದಲ್ಲಿ ದಲ್ಯೈಲಾಮಾರವರ ಪ್ರತಿನಿಧಿಯಾಗಿರುವ ಜಂಪಾ ತ್ಸೊಂಡುರವರು ವಹಿಸಿದ್ದರು. ಸಿಂಡಿಕೇಟ್ ಬ್ಯಾಂಕಿನ ಚೆಯರ್‌ಮೇನ್ ಶ್ರೀ ಟಿ. ಎ. ಪೈಯವರು ಅತಿಥಿ ಅಭ್ಯಾಗತರನ್ನು ಸ್ವಾಗತಿಸಿ ಬ್ಯಾಂಕಿನ ಮುನ್ನಡೆಯ ಹಾಗೂ ಕೃಷಿ ಜನತೆಗೆ ಅದು ನೀಡುತ್ತಿರುವ ವಿವಿಧ ಸೇವೆಗಳ ಪರಿಚಯವನ್ನು ಇತ್ತರು. ಸ್ವಿಸ್ ಟೆಕ್ನಿಕಲ್ ಕೋಓಪರೇಶನ್ ಸಂಸ್ಥೆಯ ಪ್ರೊಜೆಕ್ಟ್ ಡೈರೆಕ್ಟರರಾದ ಎಚ್. ಲೂಥಿಯವರು ಮಾತನಾಡಿದರು. ಸಮಾರಂಭಕ್ಕೆ ಆತ್ಮೀಯರ ಪ್ರತಿಷ್ಠಿತರಲ್ಲಿ ಶ್ರೀಗಳಾದ ಎಚ್. ಎಂ. ಚೆನ್ನಬಸಪ್ಪ, ಎಂ.ಎಲ್.ಎ., ಮೈಸೂರು, ರಿಹಬಿಲಿಟೇಶನ್ ಮತ್ತು ಡೆವಲಪ್‌ಮೆಂಟ್ ವಿಭಾಗದ ಸೆಕ್ರೆಟರಿ ಡಬ್ಲ್ಯು. ಡೇವಿಸ್‌ನ್ ಮುಂತಾದವರಿದ್ದರು.

ಚೆಯರ್‌ಮೇನ್ ಶ್ರೀ ಟಿ. ಎ. ಪೈಯವರು ಈ ಪುನರ್ವಸತಿ ನಿವೇಶನದಲ್ಲಿರುವ ಟಿಬೇಟನರ ಐದು ದೇವಾಲಯಗಳಿಗೆ ತಲಾ ರೂ. 101ರಂತೆ ದೇಣಿಗೆಯನ್ನು ಸಲ್ಲಿಸಿದರು. ಬ್ಯಾಂಕ್ ಮ್ಯಾನೇಜರ್ ಶ್ರೀ ಯು. ಜಿ. ವಿ. ಮಲ್ಯರವರು ಕೃತಜ್ಞತೆಗಳನ್ನು ಅರ್ಪಿಸಿದರು.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆ

ತಾ. 17-5-69ರಂದು ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆಯು ಪುತ್ತೂರಿನಲ್ಲಿ ಜ್ಯೂನಿಯರ್ ಸೆಕೆಂಡರಿ ಶಾಲೆಯ ಸ್ವರ್ಣೋತ್ಸವ ಭವನದಲ್ಲಿ ಮಾಜಿ ಎಂ.ಎಲ್.ಎ. ಶ್ರೀ ಯೆಡ್ತರೆ ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರು ಉದ್ಘಾಟಿಸುತ್ತ ಈಗಿನ ತರುಣರು ತಮ್ಮ ಕಾಲ ಮೇಲೆ ತಾವೇ ನಿಲ್ಲುವಂತಾಗ ಬೇಕಲ್ಲದೆ, ಸರಕಾರೀ ಉದ್ಯೋಗಗಳ ಕಡೆಗೆ ಗಮನ ಹರಿಸುತ್ತಿರುವುದು ಯೋಗ್ಯವಲ್ಲವೆಂದರು. ಸ್ವಾಗತ ಸಮಿತಿಯ ಪರವಾಗಿ ಸಮಿತಿಯ ಅಧ್ಯಕ್ಷ ಶ್ರೀ ಉಗ್ಗಪ್ಪ ಶೆಟ್ಟರು ಸ್ವಾಗತ ಬಯಸಿದರು. ಶ್ರೀ ಯೆಡ್ತರೆ ಮಂಜಯ್ಯ ಶೆಟ್ಟರು ಆರು ದಶಕಗಳಲ್ಲಿ ಸಂಘ ಸಾಧಿಸಿದ ಸಮಾಜ ರಚನಾ ಕಾರ್ಯಗಳ ಕುರಿತು ವಿಮರ್ಶಿಸಿದರು. ಬದಲಾಗುತ್ತಿರುವ ಸಮಾಜ ವ್ಯವಸ್ಥೆಗೆ ನಾವೂ ಸರಿಯಾಗಿ ಹೊಂದಿಕೊಳ್ಳ ಬೇಕೆಂದರು. ಕಾರ್ಯದರ್ಶಿ ಡಾ| ಕೆ. ಬಾಲಪ್ಪ ಶೆಟ್ಟರು ಶುಭ ಸಂದೇಶಗಳನ್ನೋದಿದರು. ಡಾ| ಜಿ ಸಂಜೀವ ಮಲ್ಲಿಯವರು ಬಡ ವಿದ್ಯಾರ್ಥಿ ಫಂಡಿನ, ಶ್ರೀ ಎಸ್. ಆರ್. ಹೆಗ್ಡೆಯವರು ಮಂಗಳೂರು ವಿದ್ಯಾರ್ಥಿ ನಿಲಯದ, ಶ್ರೀಮತಿ ಕಲ್ಯಾಣಿ ಶೆಟ್ಟಿಯವರು ವಿದ್ಯಾರ್ಥಿನೀ ಭವನದ, ಶ್ರೀ ಬಿ. ಎಸ್. ಭಂಡಾರಿಯವರು ಕಾರ್ಕಳ ವಿದ್ಯಾರ್ಥಿ ನಿಲಯದ, ಶ್ರೀ ಶಿವಾಜಿ ಶೆಟ್ಟರು ಉಡುಪಿ ವಿದ್ಯಾರ್ಥಿ ನಿಲಯದ, ಡಾ|| ಎಸ್. ಎಮ್. ರೈಯವರು ಪುತ್ತೂರು ವಿದ್ಯಾರ್ಥಿ ನಿಲಯದ, ಶ್ರೀ ಕೆ. ಶಿಲ ಹೆಗ್ಡೆಯವರು ಕುಂದಾಪುರ ವಿದ್ಯಾರ್ಥಿನಿಲಯಗಳ ವರದಿಯನ್ನೂ, ಕೋಶಾಧಿಕಾರಿ ಶ್ರೀ ಎಂ. ಯು. ಸೇಸಪ್ಪ ರವರು ಕಳೆದ ಸಾಲಿನ ಜಮಾ ಖರ್ಚುಗಳ ಪಟ್ಟಿಯನ್ನೂ ಸಭೆಯ ಮುಂದಿಟ್ಟರು. ಅವುಗಳು ಸರ್ವಾನುಮತದಿಂದ ಅಂಗೀಕೃತವಾದುವು. ಭೂಸುಧಾರಣೆಗೆ ಉಪಯೋಗವಾಗುವಂತೆ ಪ.ಸೊಡೆಯಲ್ಲಿ ತಿದ್ದುಪಡಿ ಮಾಡುವರೆ ಸರಕಾರಕ್ಕೆ ಒತ್ತಾಯಪಡಿಸುವಂತೆ ನಿರ್ಣಯಿಸಲಾಯಿತು. ನಂತರ ಶ್ರೀ ಕೆ. ಅಂಕೇಗೌಡರು ಹಿತವಚನಗಳನ್ನಿತ್ತರು. ಉತ್ತಮ ಸಮಾಜ ಸೇವೆ ಸಲ್ಲಿಸಿದುದಕ್ಕಾಗಿ ಸ್ವರ್ಣ ಪದಕವನ್ನು ಮುಲ್ಕಿಯ ಡಾ|| ಕೆ. ಬಾಬು ಶೆಟ್ಟರಿಗೆ ನೀಡಲಾಯಿತು. ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಅವರ ಪರಿಚಯ ಮಾಡಿಕೊಟ್ಟರು. ಪುತ್ತೂರು ವಿದ್ಯಾರ್ಥಿಭವನಕ್ಕೆ ಒಂದು ಗಡಿಯಾರವನ್ನು ನೀಡಲಾಯಿತು. ಡಾ| ಕೆ. ಬಿ ಶೆಟ್ಟರು ಸಂಘದ ಪರವಾಗಿಯೂ ಶ್ರೀ ಪುರಂದರ ರೈಗಳು ಸ್ವಾಗತ ಸಮಿತಿಯ ಪರವಾಗಿಯೂ ವಂದನೆಗಳನ್ನಿತ್ತರು.

ನಿಧನ

ಕೆ.ತ್ಯಾರುಗುತ್ತು ತಿಮ್ಮಪ್ಪ ಶೆಟ್ಟಿ ಇದೇ ತಾ. 16.6.1969ರಂದು ದಿವಂಗತರಾಗಿರುವರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಕುತ್ಯಾರು ಸಹಕಾರಿ ಸಂಘ ಮತ್ತು ಯುವಕ ಮಂಡಳದ ಅಧ್ಯಕ್ಷರಾಗಿಯೂ, ಪಂಚಾಯತಿನ ಸದಸ್ಯರಾಗಿಯೂ, ಶಿರ್ವ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿಯೂ ನಿಸ್ವಾರ್ಥ ಸೇವೆಗೈದು ಜನಪ್ರಿಯರಾಗಿದ್ದರು.

ವಿದಾಯ ಕೂಟ

ಬೇಲಂಜಾಡಿ ಗ್ರಾಮದಲ್ಲಿ ಹಲವು ಸಮಯಗಳಿಂದ ಉಗ್ರಾಣಿಯಾಗಿದ್ದು ಸೇವೆ ಸಲ್ಲಿಸಿ ಈಗ ನಿವೃತ್ತಿಹೊಂದಿದ ಶ್ರೀ ಟಿ. ಕೆ. ಪರಮೇಶ್ವರನವರಿಗೆ ವಿದಾಯಕೂಟವೊಂದನ್ನು ಬಸಾರ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ನಡೆಸಲಾಯಿತು.

ಶ್ರೀ ಗೋಪಾಲಕೃಷ್ಣ ಯಕ್ಷಗಾನಸಂಘದ ಆಶ್ರಯದಲ್ಲಿ ನಡೆಯಲ್ಪಟ್ಟ ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಯು. ಬಿ. ಗೋವಿಂದ ಭಟ್ಟರು ವಹಿಸಿದ್ದು, ಶ್ರೀಗಳಾದ ಸಾಂತಪ್ಪ ಮಾಸ್ತರ್, ಗೋಪಣ್ಣ ಗೌಡ, ಶಿವರಾಮ ಪ್ರಭು, ಮುಂತಾದವರು ಶ್ರೀ ಪರಮೇಶ್ವರನವರಿಗೆ ಯಶಸ್ಸನ್ನು ಕೋರಿದರು. ಸಮಾರಂಭದ ಅಂಗವಾಗಿ "ಸಂಜಯ ರಾಯಭಾರ" ಎಂಬ ಯಕ್ಷಗಾನ ತಾಳಮದ್ದಳೆಯೂ ಜರಗಲ್ಪಟ್ಟಿತು. ಆರಂಭದಲ್ಲಿ ಡಾ| ವಿಶ್ವವಿನೋದ ಬನಾರಿಯವರು ಸ್ವಾಗತ ಬಯಸಿ ಕೊನೆಯಲ್ಲಿ ನಾರಾಯಣ ನಾಯಕ್ ಮಾಸ್ತರರವರು ಅಭಿನಂದಿಸಿದರು.

ತ್ಯಾಗವೇ ಜೀವನ, ಭೋಗವೇ ಮರಣ.

oo o o oo

ಸತ್ಯದಲ್ಲಿ ಸೌಂದರ್ಯವನ್ನು ಕಾಣಶಕ್ತರಾಗಲೇ ನಿಜವಾದ ಕಲೆಯ ಸೃಷ್ಟಿಯಾಗುತ್ತದೆ.

oo o o oo

NAVAYUGA

Supplement on Trade & Industry will be published on 12—6—1969

ನವಯುಗದ

ಔದ್ಯಮಿಕ ಮತ್ತು ವಾಣಿಜ್ಯ ಸಂಚಿಕೆಯು

ತಾ. 29—5—69ರ ಬದಲು

ತಾ. 12—6—1969ರಂದು

ಪ್ರಕಟವಾಗುವುದು.

(ಮೂರನೇ ಪುಟದಿಂದ)

ಕೇಳಿ ಆಗ ಪ್ರತಿರೋಧ ಹಾಕಿದ್ದರೂ ಪಾಟೀಲರೆ ನನ್ನ ಪ್ರಶಂಸಣಗಳಿಂದ ಕಾಂಗ್ರೆಸ್ಸು ಅದನ್ನು ನಿರಾಕರಿಸಿತು. ಮೊನ್ನೆ ಮೊನ್ನೆ 'ಕೇಳದವರು, ಬೊಂಬಾಯಿಗರು ಬೋಂಬೇನ-ಬರಸ್ಸೇ ಬರುತ್ತಾರೆಂದು ಪಾಟೀಲರ ಕೇಳು. ಆದದರಿಂದ ಜನತಾ ಕಾಂಗ್ರೆಸ್ ಬಿಟ್ಟು (ಅವರು ಕಾಂಗ್ರೆಸ್ ಸೇರಲಾರರು, ಕಾಂಗ್ರೆಸ್ಸೇ ಅವರನ್ನು ಸೇರಿಸಿಕೊಂಡರಬೇಕು) ಹಠವಾಗಿ ಅಲ್ಲೇ ನಿಂತು ಒಂದಲ್ಲ ಎರಡು ಬಾರಿ ಸೋತರು. ಮೂರನೆಯ ಬಾರಿಗೆ ಬಂಗಾಳ ಅವರಿಗೆ ಅನುವು ಮಾಡಿಕೊಟ್ಟಿತು. ಪಾಟೀಲರು ಅಪಕಾಶ ಕಾದು ಗುಜರಾತದಿಂದ ಲೋಕಸಭೆಯತ್ತ ಕಾಲು ಚಾಚಿದರು. (ಗುಜರಾತಿಗಳಿಗೆ ಗುಜರಾತಿಗಳು ಬೇಕಾಗಿರಬೇಕು, ಅವರು ಜಾತೀಯವಾದಿಗಳಲ್ಲ). ಮೊನ್ನೆಯ ಆಗಮನದಿಂದ ವಿರೋಧ ಪಕ್ಷೀಯರ ಬಲ ಹೆಚ್ಚಿತು. ಸಂಸತ್ತಿನ ಮೊಗಸಾಲೆಯ ಅಧಿವೇಶದಲ್ಲಿ ಭಾರೀ ಗುಡುಗು ಒಡೆಯುವ ಸಾಧ್ಯತೆ ಪಾಟೀಲರ ಪ್ರವೇಶಾಗಮನ ಮೊರಾರ್ಜಿ ಭಾಯಿಯ ಕೈಬಲಪಡಿಸಿತು; ಇಂದಿರಮ್ಮನಿಗೆ ಮಾತ್ರ ಆನಾಸಿನ್ ಬೇಕಾದೀತೆಂದು ಕೆಲವರ ಊಹೆ. "ಇಂದಿರಮ್ಮ ರಾಷ್ಟ್ರಪತಿಯಾಗುತ್ತಾರೆ ಮುರಾರ್ಜಿ ಪ್ರಧಾನ ಮಂತ್ರಿಯಾಗುತ್ತಾರೆ" ಎಂಬ ಜೋಯಿಸರ ಜ್ಯೋತಿಷ್ಯದೊಳ್ಳಿಯ ಹೇಳಿಕೆಗೆ ಇಂದಿರಮ್ಮ ವಿಚಲಿತರಾದಂತಿಲ್ಲ. ಆದರೆ ಪಾಟೀಲರ ಪುನರಾಗಮನವೇ ಈ ಭವಿಷ್ಯದ ಹಿನ್ನೆಲೆ ಎಂಬುದು ಊಹೆ ಮಾತ್ರ. ಯಾವುದೇ ಕೆಲಸವಿಲ್ಲದೆ ಸುಮ್ಮನಿರಲಾರದ ಪಾಟೀಲರಿಗೇನಾದರೂ ಕೆಲಸ ಕೊಡಬೇಕು ಎಂಬುದಾಗ ಇಂದಿರಮ್ಮನಿಗೆ ಚಿಂತೆ. ಎಲ್ಲಾದರೂ ರಾಜ್ಯಪಾಲರನ್ನಾಗಿ ಮಾಡೋಣವೆಂದರೆ, ಅದು ಅಕ್ರಿಯ ರಾಜಕೀಯ. ಸದ್ಯೋಭಾವಿಗೆ ಸಕ್ರಿಯವೇ ಬೇಕು ತಾನೆ?

ವಿಜ್ಞಾಪನೆ

ನಮ್ಮ ಇಷ್ಟಮಿತ್ರ ಬಂಧು ಬಾಂಧವರಲ್ಲಿ ಅರಿಕೆಮಾಡುವುದೇನೆಂದರೆ ನಾವು 20 ವರ್ಷದಿಂದ ಶಿರ್ವದಲ್ಲಿದ್ದು ಈಗ ಫಲಿಮಾರಿಗೆ ನಮ್ಮ ಬಿಡಾರವನ್ನು ವರ್ಗಾಯಿಸಿರುವುದರಿಂದ ನಮಗೆ ಬರೆಯುವ ಎಲ್ಲಾ ಪತ್ರ ವ್ಯವಹಾರವನ್ನು ಈ ಕೆಳಗಿನ ವಿಳಾಸಕ್ಕೆ ಬರೆಯುವಂತೆ ವಿಜ್ಞಾಪಿಸುವೆನು.

ಶ್ರೀ ಕೆ. ಹರಿಹರ ಶರ್ಮ,
"ವಾಗ್ವೀಶ್ವರಿ ನಿಲಯ",
P. O. ಫಲಿಮಾರು, ದ. ಕ.



ಲೇಖಕ-ದಾರ್ಶನಿಕ: ಗಾಂಧೀಜಿ

ಲೇಖಕರು: ಪ್ರೊ|| ಚಿತ್ತಾ ಆರ್. ಮುಜುಂದಾರ್

ಪದದ ಸಾಂಪ್ರದಾಯಿಕ ಅರ್ಥದಲ್ಲಿ ಹೇಳುವುದಾದರೆ, ಗಾಂಧೀಜಿ ವಿದ್ವಾಂಸರೂ ಅಲ್ಲ; ದಾರ್ಶನಿಕರೂ ಅಲ್ಲ. ಆದರೆ ಅವರೊಬ್ಬ ಸತ್ಯಾನ್ವೇಷಿ ಸತ್ಯದ ಪ್ರಚಾರಕ. ಗಾಂಧೀಜಿ ಅವರ ದೃಷ್ಟಿಯಲ್ಲಿ ಸತ್ಯವೇ ದೇವರು. ದೇವರೇ ಸತ್ಯ. "ನನ್ನಲ್ಲಿರುವ ಒಳ್ಳೆಯ ಗುಣವೆಂದರೆ ಸತ್ಯ—ಅಹಿಂಸೆ. ನಾನು ಅತಿಮಾನವನಲ್ಲ. ಹಾಗೆ ಆಗಬೇಕೆಂಬ ಆಸೆಯೂ ನನಗಿಲ್ಲ" ಎಂದು ಗಾಂಧೀಜಿ ಒಂದು ಕಡೆ ಹೇಳಿದ್ದಾರೆ.

ಅಹಿಂಸೆಯ ಹೋರಾಟಗಾರ ಕಾರಣಪುರುಷ ಗಾಂಧೀಜಿ. ಸತ್ಯ ಹಾಗೂ ಸದಾಚಾರಗಳಿಂದಲೇ ಅಹಿಂಸಾ ಪಥವನ್ನು ರೂಪಿಸಿಕೊಂಡರು. ಇದು ಅವರ ಆಳವಾದ ಮಾನವೀಯತೆಯ ದ್ಯೋತಕ.

'ಸೃಷ್ಟಿಸಲು ಹೇಗೆ ಅಧಿಕಾರವಿಲ್ಲವೋ ಹಾಗೆ ನಾಶಗೊಳಿಸಲೂ ನಮಗೆ ಅಧಿಕಾರವಿಲ್ಲ' ಎಂದು ಗಾಂಧೀಜಿ ಹೇಳುತ್ತಿದ್ದರು.

ಗಾಂಧೀಜಿ ರಾಜಕೀಯ ಹಾಗೂ ಸಾಮಾಜಿಕ ನಾಯಕರಾಗಿ ಮಹಾತ್ಮರಾಗಿದ್ದರೆಂಬಲ್ಲಿ ಸಂದೇಹವಿಲ್ಲ. ಗಾಂಧೀಜಿಯವರ ಮಾನವೀಯತೆ ಇತಿ—ಮಿತಿಗಳಿಗೆ ನಿಲುಕದಂತಿದ್ದಿತು. ಅವರ ವ್ಯಕ್ತಿತ್ವ ಅಷ್ಟು ಘನವಾಗಿದ್ದಿತು. ಗಾಂಧೀಜಿಯವರು ತಮ್ಮ ಜೀವನದ ಬಗ್ಗೆ ಪ್ರಸ್ತಾಪಿಸುತ್ತ, 'ನನ್ನ ಜೀವನ ವಿಂಗಡಿಸಲು ಬಾರದಂತೆ ಸಮಗ್ರವಾಗಿದೆ. ನನ್ನ ಎಲ್ಲಾ ಕಾರ್ಯ ಚಟುವಟಿಕೆಗಳೂ ಒಂದರಲ್ಲೊಂದು ಸೇರಿಕೊಂಡಿದೆ. ಮಾನವ ಜನಾಂಗದ ಬಗ್ಗೆ ನನ್ನಲ್ಲಿರುವ ಪ್ರೇಮವೇ ಈ ಕಾರ್ಯ ಚಟುವಟಿಕೆಗಳ ಉಗಮಸ್ಥಾನವಾಗಿದೆ' ಎಂದು ಗಾಂಧೀಜಿ ಹೇಳುತ್ತಿದ್ದರು.

ಮಾರ್ಗ ಶುದ್ಧವಿರಬೇಕು

ಗಾಂಧೀಜಿಯವರ ನಡೆ—ನುಡಿಗಳು ಒಂದನ್ನೊಂದು ಪ್ರತಿಬಿಂಬಿಸುತ್ತಿದ್ದವು. ನಾವು ಆರಿಸಿಕೊಳ್ಳುವ ಗುರಿಯೇ ನಮ್ಮ ಮಾರ್ಗಗಳ ಪಾವಿತ್ರ್ಯವನ್ನು ನಿರ್ಧರಿಸುತ್ತದೆ, ಎಂಬ ಮೆಕಿಯವೆಲಿಯನ್ ವಾದವನ್ನು ಹಾಗೂ ಮಾರ್ಕ್ಸ್ ವಾದವನ್ನು ಅವರು ಖಂಡಿಸುತ್ತಿದ್ದರು. ಗಾಂಧೀಜಿಯವರ ದೃಷ್ಟಿಯಲ್ಲಿ, ಸಾಧನೆ ಹಾಗೂ ಗುರಿ ಇವೆರಡೂ ಬೇರೆ ಬೇರೆಯಾಗಿರಲಿಲ್ಲ. "ಸಾಧನೆಯ ಮಾರ್ಗವನ್ನು ಒಂದು ಬೀಜಕ್ಕೆ ಹೋಲಿಸಬಹುದು. ಗುರಿಯನ್ನು ವೃಕ್ಷಕ್ಕೆ ಹೋಲಿಸಬಹುದು. ಬೀಜ ಹಾಗೂ ವೃಕ್ಷಗಳ ನಡುವಣ ಸಂಬಂಧ ಯಾವ ರೀತಿ ಅವಿಭಾಜ್ಯವಾದುದೆಯೋ ಅದೇ ರೀತಿ, ಸಾಧನೆಯ ಮಾರ್ಗ ಹಾಗೂ ಗುರಿ ಇವುಗಳ ಸಂಬಂಧವೂ ಅವಿಭಾಜ್ಯ" ಎಂದು ಗಾಂಧೀಜಿ ಸ್ಪಷ್ಟಪಡಿಸಿದ್ದಾರೆ.

ಆತ್ಮಶಕ್ತಿ ಅರಿವೇ—ಅಂತಿಮ ಗುರಿ

ಆತ್ಮಸಾಕ್ಷಾತ್ಕಾರವೇ ಮಾನವ ಜೀವನದ ಅಂತಿಮ ಗುರಿ. ಆತ್ಮ-ಸಾಕ್ಷಾತ್ಕಾರವೆಂದರೆ ಪರಮಾತ್ಮ ದರ್ಶನ ಪಡೆಯುವುದೇ ಆಗಿದೆ. ಅಂದರೆ ಸಂಪೂರ್ಣ ಸತ್ಯದ ಸಾಕ್ಷಾತ್ಕಾರವನ್ನು ಪಡೆಯುವುದೇ ಆಗಿದೆ—ಎಂದು ಗಾಂಧೀಜಿ ಹೇಳುತ್ತಿದ್ದರು. ಪರಮಾತ್ಮನ ಸಾಕ್ಷಾತ್ಕಾರವೇ ನಮ್ಮ ಗುರಿ ಎಂದಾಗ ಈ ಗುರಿ ಸಾಧಿಸುವ ನಮ್ಮ ಮಾರ್ಗವೂ ಅಷ್ಟೇ ಶುದ್ಧವಾಗಿರಬೇಕು. ಗಾಂಧೀಜಿ ಈ ಗುರಿಸಾಧನೆಗಾಗಿ ಸೂಚಿಸಿದ ಮಾರ್ಗ ಸಮಾಜ ಸೇವೆ ಗಾಂಧಿವಾದಿ ನಿಸ್ವಾರ್ಥ ಕರ್ತವ್ಯ ಹಾಗೂ ಸೇವೆಯಿಂದ, ಅಂತರಂಗ ಶಕ್ತಿಯಿಂದ ಸ್ಫೂರ್ತಿ ಪಡೆಯುತ್ತಾನೆ.

ಅಹಿಂಸೆ, ಸತ್ಯ, ನಿಷ್ಕಾಮ ಕರ್ಮ ಅಂದರೆ ಅಹಿಂಸೆ, ಸತ್ಯ ಹಾಗೂ ನಿಸ್ವಾರ್ಥ ಸೇವೆಯ ಮಾರ್ಗದಲ್ಲಿ ನಡೆಯುವ ವ್ಯಕ್ತಿಗೆ ಆತ್ಮದ ಸಾಕ್ಷಾತ್ಕಾರವಾಗುತ್ತದೆ. ಅಹಿಂಸೆ ಸತ್ಯದ ಗುರಿಯನ್ನು ತಲುಪಿಸುವ ಮಾರ್ಗ ಇದೇ ರೀತಿ ಸತ್ಯಾಗ್ರಹದ ಇಡೀ ತತ್ವವೇ "ನಾನು ಶ್ರೇಷ್ಠ ಉದ್ದೇಶ ಸಾಧನೆಯಲ್ಲಿ ಯಾವ ಹಿಂಸಾತ್ಮಕ ಮಾರ್ಗಗಳ ಕಟ್ಟಾ ವಿರೋಧಿ" ಎಂಬ ಆದರ್ಶದ ಮೇಲೆಯೇ ರೂಪುಗೊಂಡಿದೆ. ಇಲ್ಲಿಯೇ ಗಾಂಧೀಜಿಯವರ ತತ್ವಗಳಿಗೂ ಕಮ್ಯೂನಿಸಂಗೂ ಘರ್ಷಣೆ.

ಹಿಂಸೆಯಿಂದಲೇ ಕ್ಷಿಪ್ರದಲ್ಲಿ ಯಶಸ್ಸು ಗಳಿಸಬಹುದು ಎಂಬ ವಾದವನ್ನು ಗಾಂಧೀಜಿ ಖಂಡಿಸುತ್ತಿದ್ದರು. ಬಲ ಪ್ರಯೋಗವನ್ನು ಅನುಸರಿಸುವ ಕಮ್ಯೂನಿಸಂ ಧೋರಣೆಗೆ ಅವರು ವಿರುದ್ಧವಾಗಿದ್ದರು.

ಗಾಂಧೀಜಿ ಕಮ್ಯುನಿಸಂ ಧೋರಣೆಯ ಬಗ್ಗೆ ಪ್ರಸ್ತಾಪಿಸುತ್ತ, 'ಅಂತಿಮ ವಿಶ್ಲೇಷಣೆಯಲ್ಲಿ ಕಮ್ಯೂನಿಸಂ ಗುರಿಯೂ ದರೂ ಏನು? ವರ್ಗರಹಿತ ಸಮಾಜ ವ್ಯವಸ್ಥೆಯೇ ಕಮ್ಯೂನಿಸಂ ಗುರಿ. ಇದು ನಿಜಕ್ಕೂ ಸಾಧಿಸಬೇಕಾದ ಆದರ್ಶವೇ. ಆದರೆ ಈ ಆದರ್ಶ ಸಾಧಿಸುವುದಕ್ಕಾಗಿ ಬಲವನ್ನು ಪ್ರಯೋಗಿಸಬೇಕೆಂದು ಕಮ್ಯೂನಿಸಂ ಸಿದ್ಧವಾದಾಗ ಅದಕ್ಕೆ ನನ್ನ ಬೆಂಬಲವಿಲ್ಲ'—ಎಂದು ಗಾಂಧೀಜಿ ಕಮ್ಯುನಿಸಂ ಬಗ್ಗೆ ತಮ್ಮ ನಿಲುವನ್ನು ಪ್ರಕಟಿಸಿದ್ದರು.

ನಾವೆಲ್ಲರೂ ಸಮಾನರಾಗಿಯೇ ಜನಿಸಿದ್ದೇವೆ. ಆದರೆ ಶತಮಾನಗಳ ಕಾಲ ದೇವರ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡಿದ್ದೇವೆ. ಅಸಮಾನತೆಯ ವಿಚಾರಧಾರೆ, ಮೇಲು-ಕೀಳು ಭಾವನೆಯಾಗಲಿ ಒಂದು ರೋಗ. ಮಾನವರ ಹೃದಯದಿಂದ ಈ ರೋಗವನ್ನು ನಿವಾರಿಸಲು ಬಂದೂಕಿನ ಬಲವನ್ನು ಅವಲಂಬಿಸಬೇಕೆಂಬ ತತ್ವವನ್ನು ನಾನೆಂದೂ ಒಪ್ಪುವುದಿಲ್ಲ.

ಗಾಂಧೀಜಿ ಆತ್ಮಸಾಕ್ಷಾತ್ಕಾರವಾದಾಗಲೇ ವಿಶ್ವದ ಏಳಿಗೆ ಸಾಧ್ಯ ಎಂದು ಹೇಳುತ್ತಿದ್ದರು. ಪ್ರಸ್ತುತ ಶಿಕ್ಷಣ ವ್ಯವಸ್ಥೆ ಮಾನವನ ಭೌತಿಕ ಹಾಗೂ ಮಾನಸಿಕ ಶಕ್ತಿಯ ಬೆಳವಣಿಗೆಗೆ ಸಂಪೂರ್ಣ ಅವಕಾಶ ಕಲ್ಪಿಸುತ್ತಿಲ್ಲವೆಂದು ಟೀಕಿಸಿದ್ದರು. ಮಕ್ಕಳಿಗೆ ಶಿಕ್ಷಣ ನೀಡುವಾಗ ಹಸ್ತಕುಶಲ ಕಲೆಗೆ ವಿಶೇಷ ಗಮನ ಕೊಡಬೇಕೆಂದು ಅವರು ಹೇಳಿದ್ದಾರೆ.

ಸರಳ—ಸುಂದರ ಶೈಲಿ

ಸ್ಪಷ್ಟವಾದ ವಿಚಾರ ಸರಣಿ ಗಾಂಧೀಜಿ ಲೇಖನ ಕಲೆಯ ವೈಶಿಷ್ಟ್ಯ. ಗಾಂಧೀಜಿ ಲೇಖನ ಶೈಲಿ ಸರಳ. ಹೇಳುವುದನ್ನು ಅವರು ನೇರವಾಗಿಯೇ ಸರಳವಾದ ಭಾಷೆಯಲ್ಲಿಯೇ ಹೇಳುತ್ತಿದ್ದರು. ತಮ್ಮ ಲೇಖನ ಅಥವಾ ಭಾಷಣಗಳು ಜನಸಾಮಾನ್ಯರಿಗೆ ತಿಳಿಯಬೇಕಾದರೆ, ಸರಳ ಹಾಗೂ ಸುಲಭವಾಗಿರುವುದು ಅತ್ಯಗತ್ಯವೆಂದು ಗಾಂಧೀಜಿ ಅರಿತುಕೊಂಡಿದ್ದರು. ಗಾಂಧೀಜಿಯವರ ಕೃತಿಗಳ 20 ಸಂಕಲನಗಳನ್ನು ಸಂಗ್ರಹಿಸಿ ಭಾರತ ಸರ್ಕಾರದವರು ಪ್ರಕಟಿಸಿದ್ದಾರೆ.

ಗಾಂಧೀಜಿ ಅವರು ಯಾವಾಗಲೂ ಗಂಭೀರ ಸ್ವಭಾವದವರಾಗಿದ್ದರೆಂದು ನಮ್ಮಲ್ಲಿ ಅನೇಕರಿಗೆ ತಪ್ಪು ಕಲ್ಪನೆಯಿದೆ. ಸತ್ಯ ಸಂಗತಿಯೆಂದರೆ ಗಾಂಧೀಜಿ ಹಾಸ್ಯ ಪ್ರವೃತ್ತಿಯವರಾಗಿದ್ದರು. ಗಾಂಧೀಜಿಯವರು ಜೀವನದ ಕೊನೆಯ ಕ್ಷಣದ ವರೆಗೂ ಮಾನವ ಜನಾಂಗದ ಹಕ್ಕುಗಳಿಗಾಗಿ ಹೋರಾಡಿದರು. "ಮನುಷ್ಯನೆಂದೂ ಸೋಲಿಗಾಗಿ ಹುಟ್ಟಿದಂತವನಲ್ಲ. ಮಾನವನನ್ನು ನಾಶಗೊಳಿಸಬಹುದು, ಆದರೆ ಸೋಲಿಸಲು ಸಾಧ್ಯವಿಲ್ಲ" ಎಂಬ ಹೆಮಿಂಗ್‌ವೇ ಅವರ 'ಓಲ್ಡ್ ಮನ್' ಕಾದಂಬರಿಯ ಸಂದೇಶವನ್ನು ನಾವು ಗಾಂಧೀಜಿಯವರ ಮರಣದಲ್ಲಿ ಕಾಣುತ್ತೇವೆ.

(ಆಕಾಶವಾಣಿ ಕೃಪೆಯಿಂದ)

ಕೃತಜ್ಞತಾ ಸಮರ್ಪಣೆ

ಮೈಸೂರಿನ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಈ ರೀತಿ ಬರೆಯುತ್ತಾರೆ—

ನಿಲಯದ ಕಟ್ಟಡದ ನಿಧಿಗಾಗಿ ಹಣ ಶೇಖರಿಸಲು ನಾನು ಮತ್ತು ನಿಲಯದ ಖಜಾಂಚಿ ಶ್ರೀ ಎಸ್. ಭೈರಪ್ಪನವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸಮಾಡಿದಾಗ ಹಣಕೊಟ್ಟು ಹಾಗೂ ಹಣಕೊಡುವಂತೆ ಪ್ರೋತ್ಸಾಹಿಸಿ ಸಹಕರಿಸಿದ ಸಮಸ್ತರನ್ನು ಈ ಮೂಲಕ ವಂದಿಸಿ ಅವರು ಇದೇ ರೀತಿಯ ಸಹಕಾರ ಮುಂದೆಯೂ ನೀಡಬೇಕೆಂದು ಕೋರುತ್ತೇನೆ.

ಎ. ರಾಮಣ್ಣ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾರ್ಟಿಯುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 94 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು ಸಂಪರ್ಕಿಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

Phone— 5711, 5712, 5713 } 3 Lines.

NAVAYUGA 29—5—1969
Registered with the Registrar
of News Papers for India
under No. R. N. 3646/'57

REGD: No: B. G: 176
LICENCE No. 33
Licensed to Post without Prepayment

ಲಕ್ಷ ಬಂದಾಗ

ಲೇಖಕರು: ಶ್ರೀ "ನವಗಿರಿನಂದ"

ಪೇಪರ್ ಅಂಗಡೀಲಿ ಒಂದೇ ರಶ್ಶು. ಆ ರಶ್ಶಿನಲ್ಲಿ ನುಗ್ಗಿ ಒಂದು ಪೇಪರ್ ಕೊಂಡುಕೊಂಡು, ಮುದ್ದೆಯಾಗಿ ಹಿಡಿದು ಹೊರಗೆ ಬರುವಾಗ, ಕಾಲಗಂಟಿನ ಕೆಳಗೆ ಭಗಭಗ ಅಂತಿತು. ಯಾವುದೋ ಸೈಕಲ್ ಢಿಕ್ಕೀತಾಗಿ ಅಂಟಿಕೊಂಡಿತ್ತು. ಅದನ್ನು ಲಕ್ಷ್ಯ ಮಾಡದೆ ಮನೆಗೆ ಬಂದು ಬೇಗಬೇಗನೆ ಟಿಕೆಟ್ ಕೈಯಲ್ಲಿಟ್ಟುಕೊಂಡು ನಂಬ್ರ ನೋಡಿದೆ. ನನಗೆ ಬೇಕಾದ್ದು ಎ-ಸೀರೀಸ್.

ಅದೇ ನನ್ನ ಕಣ್ಣಿಗೆ ಹೊಡೆಯಿತು. ಮೂರ್ಛೆ ಬಂದ ಹಾಗಾಯಿತು. ಫಸ್ಟ್ ಪ್ರೈಜ್. ಒಂದೂಕಾಲು ಲಕ್ಷ

ಮೂರ್ಛೆಗೀರ್ಛೆ ಬಿದ್ದು ಹಾರ್ಟ್‌ಫೈಲ್ ಆಗಬಾರದೆಂತ, ಎರಡು ದಿನಗಳ ಮೊದಲೇ ಲಕ್ಷ ರೂಪಾಯಿ ಬಂದ ಹಾಗೂ, ಅದನ್ನು ಹೇಗೆ ಹೇಗೆ ಖರ್ಚು ಮಾಡುತ್ತೇನೆಂಬ ಹಾಗೂ ಲೆಕ್ಕ ಹಾಕಿಕೊಂಡಿದ್ದೆ. ಆ ಲೆಕ್ಕ ಪ್ರಕಾರ ಒಂದೂಕಾಲು ಲಕ್ಷ ಕೂಡಾ ಸಾಕಾಗಲಾರದೆಂದು ಗೊತ್ತಾಗಿತ್ತು. ಅದೇನು ದೊಡ್ಡ ಪ್ರೈಜು ಮಹಾ! ಅಕಸ್ಮಾತ್ ಬೀದಿಯಲ್ಲಿ ಒಂದು ನೂರು ರೂಪಾಯಿ ಸಿಕ್ಕಿದ ಹಾಗೆ.

ಈ ನಿರ್ಧಾರದಲ್ಲಿದ್ದುದರಿಂದ ನಾನು ನೈನುರಿಯುವ ಹಾಗೆ ಮೂರ್ಛೆಹೋಗಲಿಲ್ಲ. ಇನ್ನು ಹಾರ್ಟ್‌ಫೈಲ್ ಎಲ್ಲಿಬಂತ?

ನಾನು ಎಚ್ಚರತಪ್ಪಿದ್ದೇನೆಂದು ಹೇಗೆ ಗೊತ್ತಾಯಿತೆಂದರೆ, ನನ್ನ ಕೈಯಲ್ಲಿದ್ದ ಪೇಪರ್ ನೋಡಿ ನನ್ನವಳು. "ರಿಸಲ್ಟ್ ಬಂತಲ್ಲಾ, ನಮ್ಮ ನಂಬ್ರ ನೋಡಿದಿರಾ?" ಎನ್ನುತ್ತಾ ಓಡಿಬಂದಾಗ.

"ತಡೀ, ನೋಡುವಾ, ಎಲ್ಲಿಗೆ ಓಡಿಹೋಗುತ್ತೆ?" ಅಂತ ಟಿಕೆಟ್ ಅಡಗಿಸಿಟ್ಟುಕೊಂಡೆ.

ಪಕ್ಕನೆ ಹೇಳಿದರೆ ಅವಳ ಉಸಿರು ನಿಂತುಬಿದ್ದರೆ?

ಆ ಮೇಲೆ ನಿಧಾನವಾಗಿ ಅವಳ ಹತ್ತಿರ ಹೋಗಿ ಗಟ್ಟಿಯಾಗಿ ಹಿಡಿದಪ್ಪಿಯಂದ, "ಒಮ್ಮೆಲೆ ನಂಬಬಾರದು ಕಣೇ. ನಮಗೆ ಫಸ್ಟ್ ಪ್ರೈಸ್ ಬಿದ್ದಹಾಗೋದರಲ್ಲೇ ತೋರುತ್ತೆ. ಆದರೂ ಗಜೆಟ್ಟಿನಲ್ಲಿ ಬರುವ ನಂಬ್ರಗಳೇ ಸರಿಯಾದದ್ದು ಅಂತ ಒಂದು ಕೇಲು ಜಡಿದಿದ್ದಾರೆ" ಅಂದೆ.

ಇಲ್ಲ. ಅವಳಿಗೆ ತಲೆ ತಿರುಗಲಿಲ್ಲ. 'ನಿಮಗೊಂದು ಭ್ರಮೆ ಅಂದ್ರೆ. ಅಂಥಾ ತಪ್ಪು ತುಂಬಾ ನಂಬ್ರಗಳಿರು: ನಾಲ್ಕನೇ ಪ್ರೈಜಿನವರೆಯುದಕ್ಕೆ ಬಿದ್ದೀತು: ಫಸ್ಟ್ ಪ್ರೈಜಿನಲ್ಲಿ ತಪ್ಪುನಂಬ್ರ ಬೀಳಲಿಕ್ಕೇ ಇಲ್ಲ" ಅಂತ ಟಿಕೆಟ್ಟನ್ನು ನನ್ನ ಕೈಯಿಂದ ಕಸಿದುಕೊಂಡು, ಆನಂದಾತಿರೇಕದಿಂದ ನನ್ನ ಕಣ್ಣು... ಅದೆಲ್ಲ ಹೇಳಬಾರದು ಬಿಡಿ.

"ಶ್ಯಾ! ಬಿಡೇ, ಗದ್ದಲಗದ್ದಲ ಮಾಡಬೇಡ್ವೆ. ಮಕ್ಕಳಿಗೆಲ್ಲ ತಿಳೀಬಾರದು, ಈ ಟಿಕೆಟನ್ನು ಅಡಗಿಸಿಡಬೇಕು. ಕದ್ದುಕೊಂಡು ಹೋದಾರ." ಅಂತ ಅವಳಿಂದ ಬಿಡುಗಡೆ ಹೊಂದಿ ಟಿಕೆಟನ್ನು, ಭದ್ರ—ಬಹು ಭದ್ರವಾಗಿ ಅಡಗಿಸಿಟ್ಟೆ.

ಆದರೆ ಇದು ಗೊತ್ತಾಗದೆ ಇರುತ್ತದೆಯೇ? ಆ ಟಿಕೆಟ್ ಮಾರಿದ ಅಂಗಡಿಯವ ನನ್ನ ಮನೆಗೆ ಬಂದು, "ನಿಮಗೂ ಅದೃಷ್ಟ, ನನಗೂ ಅದೃಷ್ಟ" ಅಂತ ಅಭಿನಂದನೆ ಸಲ್ಲಿಸಿ ಹೋದ.

ಏಕೆಂದರೆ ಅವನಿಗೆ ಬೋನಸ್ ಪ್ರೈಸ್ ಉಂಟು.

ಅದು ಹೇಗೋ?.... ಪತ್ರಿಕೆಯವರ ಚುರುಕುತನವನ್ನು ಹೊಗಳಲೇ ಬೇಕು. ನನ್ನ ಭೇಟೀ ತೆಕ್ಕೊಳ್ಳಲಿಕ್ಕೆ ಬಂದೇ ಬಂದರು. ಅವರ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಉಸಿರು ಸಿಕ್ಕಿಕೊಂಡ ಹಾಗಾಯಿತು.

"ಏನು ಕೆಲಸ ಮಾಡ್ತೀರಿ?"

"ಊರ ಶಾಲೇಲಿ ಮಾಸ್ತ್ರಾಗಿದ್ದೇನೆ".

'ನಿಮ್ಮ ಹಾಬೀ?"

"ಹಾಬೀ ಎಂಥಾದ್ದು ಮಣ್ಣು? ಕಥೆ ಗಿತೆ, ಕಾದಂಬ್ರೀ ಗೀದಂಬ್ರಿ'.

"ಓ! ಬರೆಹಗಾರರೂ ಅನ್ನಿ".

"ಹಿ ಹ್ಹಿ ಹ್ಹಿ!"

"ನಮ್ಮ ಪತ್ರಿಕೆಗೆ ನಿಮ್ಮ ಲೇಖನ ಕಳಿಸಿಕೊಡಲೇ ಇಲ್ವಲ್ಲಾ!" ಇತ್ಯಾದಿ, ಇತ್ಯಾದಿ.

ನನ್ನ ಹೆಂಡ್ತಿಮಕ್ಕಳ ಫೋಟೋ ಕೂಡಾ ಹಿಡಿದುಕೊಂಡು ಹೋದರು ಪತ್ರಿಕಾ ಉಸಾಬರಿಗರು.

ನಾನು ಅನುಮಾನಪಟ್ಟಹಾಗೇ ಆಯಿತು. ಅದುವರೆಗೂ ನಾನು ತೀರ ಬಡ ಉಪಾಧ್ಯಾಯ. ಎಷ್ಟೋ ಜನರ ಋಣಕ್ಕೆ ಪಾತ್ರನಾಗಿದ್ದೆ. ಹಣದ ರೂಪದ ಋಣ ಆಗಿದ್ದೇ ಹೆದರುತ್ತಿದ್ದಿಲ್ಲ. ಅವರಿವರಿಂದ ಪಡೆದ ಐದೂ ಹತ್ತೂ ಸಾಲಗಳನ್ನು ಸಂತೋಷವಾಗಿ ಕೊಟ್ಟು ಮುಗಿಸಿಯೇಬಿಟ್ಟೆ. ಆದರೆ ಬೇರೆ ಬಗೆಯಿಂದ, ನನ್ನ ಮಗಳ ಮದುವೆಯ ಸಮಯಕ್ಕೆ, ನನಗಾಗಿ ಕುಂಟ ದಣಿದವರು, ಮಳೆಬರುವಾಗ ತಮ್ಮ ಕೊಡೆಯಲ್ಲೇ ನನ್ನನ್ನು ಕರೆತಂದು ಮನೆಗೆ ಬಿಟ್ಟು ಹೋಗುವ ಮೂರನೇ ಮನೆಯ ಸುಬ್ಬಶೆಟ್ರು, "ಟೌನಿಗೆ ಹೋಗುತ್ತೇನೆ, ನಿಮಗೇನಾದರೂ ಬೇಕೆ?" ಎಂದು ಕೇಳಿ ಬೇಕೆಂದುದನ್ನು ತಂದುಕೊಡುವ ಸಹೋಪಾಧ್ಯಾಯ ಶ್ರೀಕಂಠ ಮಾಸ್ತ್ರು, ಈ ಬಗೆಗೆ ಸೇರಿದ ಇನ್ನೂ ಅನೇಕರು ಬಂದು ನನಗೆ ಅಭಿನಂದನೆ ಹೇಳಿಹೋದರು. "ಇನ್ನು ನಮ್ಮನ್ನೆಲ್ಲ ಮರೆತುಬಿಡ್ತೀರಿ" ಅಂತ ಒಬ್ಬರು. "ಎಲ್ಲಿಯಾದ್ರೂ ಲಕ್ಷಾಧಿಪತಿಗಳ ಮನೇ ಸ್ವೀಟು?" ಅಂತ ಇನ್ನೊಬ್ಬರು. "ಹೋಗಲಿ, ಒಂದು ಕಾಫಿ ಕುಡಿಸಿಬಿಡಿ ಬನ್ನಿ. ನಾಳೆ ಆಪಲ್ ಜ್ಯೂಸ್ ಕುಡೀವಾಗ ನಾವು ಹೇಗೆ ನಿಮ್ಮ ಜತೆ ಸೇರಿಕೊಳ್ಳಿಕೆ ಆಗುತ್ತೆ?" ಅಂತ ಮತ್ತೊಬ್ಬರು.

ಅವರೆಲ್ಲರೂ ಹಣದ ಆಸೆಯವರಲ್ಲವೆಂಬುದೂ ನನಗೆ ಗೊತ್ತು. ಅಂಥವರು ಮುಂದೆ ನನ್ನ ಹತ್ತಿರ ಬಂದು ಸಾಲ, ಸಹಾಯ ಅದೂ ಇದೂ ಅಂತ ಕೇಳಿದರೆ,-ಏನು ಅಂತು?—ಕೇಳುತ್ತಾರೆ. ಇಲ್ಲಾ ಅನ್ನಲಿಕ್ಕಾಗುತ್ತೆಯೆ? ಹೇಗೆ ಅವರೆಲ್ಲರ ಉಪಕಾರ ಮರೆತು ಇಲ್ಲಾ ಅನ್ನುವುದು. ಕೊಟ್ಟರೆ ಬಿಟ್ಟಹಾಗೇ, ಕೊಡುತ್ತಾ ಹೋದರೆ ಮೂರೇ ದಿವಸಗಳಲ್ಲಿ ಲಕ್ಷ ಪೂರಾ ಖಾಲಿಯೇ. ಅಬ್ಬ! ಏಕೆ ಬಂತೋ ಹಾಳು ಲಕ್ಷ? ಅದಕ್ಕಿಂತ ಹತ್ತು ಸಾವಿರವೋ ಸಾವಿರವೋ ಬರಬಾರದಿತ್ತೆ? ನನ್ನ ಕಷ್ಟಕ್ಕೇ ಸರಿಹೋಗೋ ಹಾಗೆ.

ರಾತ್ರಿ-ಕತ್ತಲೆ ಕಟಕಟಾ ಶಬ್ದ ಕೇಳಿ ಎಚ್ಚರವಾಯಿತು. ಬಡ ಮನೆಯ ಕಿಟಕಿಯ ಕಂಬಿಗಳನ್ನು ಎಬ್ಬಿಸಿ ಒಬ್ಬ ಒಳನುಗ್ಗಿ ಬೆವತು ನಡುಗುತ್ತಿರುವ ನನ್ನ ಕುತ್ತಿಗೆ ಒತ್ತಿ, ಕತ್ತಿ ಎತ್ತಿ 'ನಿನ್ನ ಲಾಟ್ರೀ ಟಿಕೆಟ್ ಎಲ್ಲಿಟ್ಟಿದ್ದಿ? ತೆಗೆದು ಕೊಡುತ್ತೀಯಾ. ಜೀವ ಬಿಡುತ್ತೀಯಾ?' ಎಂದ.

ಮಣ್ಣಾಕಾಲ! ಇವೆಲ್ಲಾ ರಿಸಲ್ಟ್ ಬರುವ ಮುಂಚಿನ ದಿನ ನನಗಾದ ಕನಸು. ಆ ವೇಳೆ ಪೇಪರ್ ನೋಡಿದ್ದು, ಏನೂ ಇಲ್ಲವೆಂತ ಆಕಳಿಸಿ ಕೂತದ್ದು ಆಯಿತು.

ಆಕಳಿಸುವಾಗ ಕಾಲ ಗಂಟಿನ ಹತ್ತಿರ ಸೊಳ್ಳೆ ಕೊಲೆಯಿಂದಾದ ರಕ್ತನಿರುವುದನ್ನು ನೋಡಿದೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
I. A. II O. S. 200/1968
ಅಪ್ಪಯ್ಯ ನಾಯ್ಕ — ಅರ್ಜಿದಾರ.
V.
ನಾರ್ಣ ನಾಯ್ಕ — ಎದ್ರಿ.

ಪುತ್ತೂರು ತಾಲೂಕು ಆರಿಯಡ್ಕ ಗ್ರಾಮದ ಪಲತಡ್ಕ ಕಂಡ ನಾಯ್ಕರ ಮಗ ನಾರ್ಣ ನಾಯ್ಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲೆ ಕಾಣಿಸಿದ ದಾವೆಯಲ್ಲಿ ಆದ ಪ್ರಿಲಿಮಿನರಿ ಡಿಕ್ರಿ ವಿಧಿ ಮೇರೆಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ, ಆ ಬಗ್ಗೆ ನಿಮ್ಮ ಹಾಜರಾತಿಗೆ, ಮತ್ತು ಉದಹರಿಸಲು ಕೂಡಾ ತಾ. 5-6-1969ಕ್ಕೆ ಮೇಲೆ ಹೇಳಿದ ಕೋರ್ಟಿನಲ್ಲಿ ಇಟ್ಟಿರುವುದರಿಂದ ಆ ದಿನ ಹಾಜರಾಗಿ ಉದಹರಿಸಲು ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನವಾದೀತೆಂದು ತಿಳಿಸಿದೆ.

/By order/
ವೆಂಕಟ್ರಮಣ ಬಿ. ಯಸ್.
ಅರ್ಜಿದಾರ ಕಡೆ ವಕೀಲ,
Puttur, 8—5—1969.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

Edited, Printed & Published by K. H. Shetty, at the Navayuga Press, Udipi, S. India.